ಕರ್ನಾಟಕ ಸರ್ಕಾರ

ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ

# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು



೫


ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಮತ್ತು

ಕುವೆಂಪು ಭಾಷಾ ಭಾರತಿ ಪ್ರಾಧಿಕಾರ

ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣ ಹಿಂಭಾಗ

ಮಲ್ಲತ್ತಹಳ್ಳಿ, ಬೆಂಗಳೂರು-560 056

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಪ್ರಕಟಣೆ - ೯೨
ವಿಚಾರ ಸಾಹಿತ್ಯಮಾಲೆ - ೧೪

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು
ಮತ್ತು
# ಭಾಷಣಗಳು

ಸಂಪುಟ ೫

# ಸಂಪಾದನ ಸಮಿತಿ

| | |
|---|---|
| **ಅಧ್ಯಕ್ಷರು,** ಕುವೆಂಪು ಭಾಷಾ ಭಾರತಿ ಪ್ರಾಧಿಕಾರ | ಅಧ್ಯಕ್ಷರು |
| **ಡಾ. ಸಿದ್ಧಲಿಂಗಯ್ಯ** | ಸದಸ್ಯರು |
| **ಡಾ. ದೇವನೂರ ಮಹದೇವ** | ಸದಸ್ಯರು |
| **ನಿರ್ದೇಶಕರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ | ಸದಸ್ಯ ಕಾರ್ಯದರ್ಶಿಗಳು |

# ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ
# ಸಮಗ್ರ ಬರೆಹಗಳು

ಮತ್ತು

# ಭಾಷಣಗಳು

(ಸಂಪುಟ ೫)


**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**

ಮತ್ತು

**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**

ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ
ಬೆಂಗಳೂರು – ೫೬೦ ೦೫೬

**Dr. Baba Saheb Ambedkar Avara Samagra Barehagalu Mattu Bhashanagalu: Samputa 5** — Kannada translation of Collected Works of Baba Saheb Ambedkar; Published by **Kannada Mattu Samskruti Ilakhe**; **Kuvempu Bhasha Bharati Pradhikara**, Kalagrama, Jnanabharathi, Behind Bangalore University Campus, Mallattahalli, Bangalore - 560 056; Third Edition: 2015; Pp. xxviii + 674; Price: Rs. 50/-.

© : ಹಕ್ಕುಗಳನ್ನು ಕಾದಿರಿಸಿದೆ

ಮೂರನೇ ಮುದ್ರಣ: ೨೦೧೫
ಪುಟಗಳು : xxviii + ೬೭೪
ಬೆಲೆ : ರೂ. ೫೦/-
ಪ್ರತಿಗಳು : ೫೦೦೦

ಪ್ರಕಾಶಕರು :
**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಮತ್ತು
**ಕುವೆಂಪು ಭಾಷಾ ಭಾರತಿ ಪ್ರಾಧಿಕಾರ**
ಕಲಾಗ್ರಾಮ, ಜ್ಞಾನಭಾರತಿ
ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ
ಮಲ್ಲತ್ತಹಳ್ಳಿ, ಬೆಂಗಳೂರು - ೫೬೦ ೦೫೬
ದೂ. : ೨೩೧೮೩೩೧೧, ೨೩೧೮೩೩೧೨

ಮುಖಪುಟ ವಿನ್ಯಾಸ: **ಮೆ॥ ರಾಜಾ ಪ್ರಿಂಟರ್ಸ್**

**ISBN : 978-81-906513-5-6**

ಮುದ್ರಕರು :
**ಮೆ॥ ರಾಜಾ ಪ್ರಿಂಟರ್ಸ್**
ನಂ. ೫೯, ೪ನೇ ಕ್ರಾಸ್, ಲಾಲ್‌ಬಾಗ್ ರಸ್ತೆ
ಕೆ.ಎಸ್. ಗಾರ್ಡನ್, ಗಂಗಾಧರಪ್ಪ ಬ್ಲಾಕ್
ಬೆಂಗಳೂರು - ೫೬೦ ೦೨೭
ದೂ: ೦೮೦-೨೨೨೩೪೦೬೭, ೦೮೦-೨೨೨೧೯೯೬೫

ಕರ್ನಾಟಕ ಸರ್ಕಾರ

**ಸಿದ್ದರಾಮಯ್ಯ**
ಮುಖ್ಯಮಂತ್ರಿಗಳು

ವಿಧಾನಸೌಧ
ಬೆಂಗಳೂರು – ೫೬೦ ೦೦೧

ಸಿಎಂ/ಪಿಎಸ್/೧೫೦/೨೦೧೫

ದಿನಾಂಕ : ೦೫.೦೬.೨೦೧೫

# ಸಂದೇಶ

ಆಧುನಿಕ ಕನ್ನಡ ಸಾಹಿತ್ಯದ ಅತ್ಯುನ್ನತ ಸಾಹಿತ್ಯಕ ಸಾಧನೆಯ ಪ್ರತೀಕವಾಗಿರುವ ರಾಷ್ಟ್ರಕವಿ ಡಾ. ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಸಾಹಿತ್ಯಕ, ಸಾಂಸ್ಕೃತಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಮಹತ್ವದ ಗ್ರಂಥಗಳನ್ನು ಹೊರತರುವ ದಿಕ್ಕಿನಲ್ಲಿ ಹೊಸ ದಾಖಲೆಯನ್ನು ಸ್ಥಾಪಿಸುತ್ತ ಮುನ್ನಡೆಯುತ್ತಿರುವುದು ಅತ್ಯಂತ ಸಂತಸದ ಸಂಗತಿಯಾಗಿದೆ.

ವಿವಿಧ ವಿದೇಶೀ ಮತ್ತು ಭಾರತೀಯ ಭಾಷೆ–ಸಾಹಿತ್ಯಗಳ ಅತ್ಯುತ್ತಮ ಕೃತಿಗಳನ್ನು ಕನ್ನಡ ಭಾಷೆಯಲ್ಲಿ ಹಾಗೂ ಕನ್ನಡದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಲ್ಲಿ ಹೊರತರುತ್ತಿರುವ ನಮ್ಮ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ರಾಷ್ಟ್ರ ಪ್ರಶಸ್ತಿ ಪುರಸ್ಕೃತ ಲೇಖಕರ ಹಾಗೂ ಕನ್ನಡದ ಇತರ ಪ್ರತಿಷ್ಠಿತ ಲೇಖಕರ ಅತ್ಯುತ್ತಮ ಪ್ರಾತಿನಿಧಿಕ ರಚನೆಗಳ ಸಂಚಯಗಳನ್ನು ಹೊರತರುತ್ತಿರುವುದು ಅಭಿನಂದನೀಯ ಮತ್ತು ಅನುಕರಣ ಯೋಗ್ಯ. ಕುವೆಂಪು, ಪು. ತಿ. ನರಸಿಂಹಾಚಾರ್ ಮತ್ತು ಜಿ. ಎಸ್. ಶಿವರುದ್ರಪ್ಪ ಅವರ ಸಂಚಯಗಳನ್ನು ಈಗಾಗಲೇ ಪ್ರಕಟಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಇನ್ನಿತರ ಜ್ಞಾನಪೀಠ ಪ್ರಶಸ್ತಿ ಹಾಗೂ ಸರಸ್ವತೀ ಸಮ್ಮಾನ್ ಪ್ರಶಸ್ತಿ ಪುರಸ್ಕೃತರ ಸಂಚಯಗಳನ್ನೂ ಸಿದ್ಧಪಡಿಸುತ್ತಿರುವುದು ನನ್ನಲ್ಲಿ ಅಭಿಮಾನ ಮತ್ತು ಹೆಮ್ಮೆ ಮೂಡಿಸಿದೆ.

ಇವುಗಳೆಲ್ಲದರ ಹಿಂದಿ ಮತ್ತು ಇಂಗ್ಲಿಷ್ ಆವೃತ್ತಿಗಳು ಪ್ರಕಟವಾದಾಗ ಕನ್ನಡದ ಹಿರಿಮೆ ಮತ್ತು ಗರಿಮೆ ಸಾರಸ್ವತ ಲೋಕದಲ್ಲಿ ಮತ್ತಷ್ಟು ಪ್ರಜ್ವಲಿಸಲಿದೆ. ಜ್ಞಾನ, ವಿಜ್ಞಾನ ಹಾಗೂ ತಂತ್ರಜ್ಞಾನ ಕ್ಷೇತ್ರಗಳಿಗೂ ಕೊಡುಗೆಯಾಗಬಲ್ಲ ಮಹತ್ವದ ಮೌಲಿಕ ಕೃತಿಗಳನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಮತ್ತಷ್ಟು ಹೊರತರಲಿ ಎಂಬುದೇ ನಮ್ಮ ಸರ್ಕಾರದ ಸದಾಶಯ.

**ಭಾರತದ ಸಂವಿಧಾನ ಶಿಲ್ಪಿ** ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಎಲ್ಲಾ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡ ಭಾಷೆಗೆ ಅನುವಾದಿಸಿ ಪ್ರಕಟಿಸುವ ಯೋಜನೆಯನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸಿದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹಾಗೂ ಭಾಷಾಂತರದ ಹೊಣೆ ಹೊತ್ತು ಅನುವಾದದ ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಿದ ಎಲ್ಲಾ ಸದಸ್ಯರಿಗೂ ನನ್ನ ಅಕ್ಕರೆಯ ಅಭಿನಂದನೆಗಳು ಹಾಗೂ ಆತ್ಮೀಯ ವಂದನೆಗಳು.

**(ಸಿದ್ದರಾಮಯ್ಯ)**

ಕರ್ನಾಟಕ ಸರ್ಕಾರ

**ಹೆಚ್. ಆಂಜನೇಯ**
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
ಹಾಗೂ
ಚಿತ್ರದುರ್ಗ ಜಿಲ್ಲಾ ಉಸ್ತುವಾರಿ ಸಚಿವರು

ದೂ.ಸಂ. ೦೮೦ ೨೨೩೫ ೩೧೦೪
೨೨೦೩ ೩೯೮೮
ಕೊಠಡಿ ಸಂಖ್ಯೆ: ೩೪೦/೩೪೦ಎ,
೩ನೇ ಮಹಡಿ, ವಿಧಾನ ಸೌಧ,
ಬೆಂಗಳೂರು – ೫೬೦ ೦೦೧
ದಿನಾಂಕ: ೧೨.೧.೨೦೧೬

## ಸಂದೇಶ

ನಮ್ಮ ಸುತ್ತಣ ಸಮಾಜದಲ್ಲಿ ಇರುವ ಅಸಮಾನತೆಗಳಿಗೆ ಕಾರಣಗಳೇನೇ ಇರಲಿ, ಆ ಅಸಮಾನತೆಯು ಬೆಳೆಯುವ ಮಕ್ಕಳ ದೈಹಿಕ ಮತ್ತು ಮಾನಸಿಕ ವಿಕಾಸಕ್ಕೆ ಅಡ್ಡಿಗಳನ್ನು ಉಂಟು ಮಾಡಬಾರದು. ಇಂತಹ ಅಡ್ಡಿಗಳು ಇರದಂತೆ ನೋಡಿಕೊಳ್ಳಲು ಸರ್ಕಾರಗಳು ತಕ್ಕ ಯೋಜನೆಗಳನ್ನು ರೂಪಿಸಿಕೊಂಡು ಜಾರಿಗೆ ಕೊಡುತ್ತಿವೆ. ಕರ್ನಾಟಕ ಸರಕಾರವೂ ಕೂಡ ತನ್ನ ಸಮಾಜ ಕಲ್ಯಾಣ ಇಲಾಖೆಯ ಮೂಲಕ ಈ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ಅನುಷ್ಠಾನಗೊಳಿಸಿದೆ. ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮಕ್ಕಳು ಓದನ್ನು ಮುಂದುವರಿಸಲು ಅನುಕೂಲವಾಗುವಂತೆ ವಿದ್ಯಾರ್ಥಿನಿಲಯಗಳನ್ನು ನಡೆಸುತ್ತಿದೆ. ಲಕ್ಷಾಂತರ ಮಕ್ಕಳು ಈ ವಿದ್ಯಾರ್ಥಿನಿಲಯ ಗಳಲ್ಲಿದ್ದುಕೊಂಡು ತಮ್ಮ ಶಿಕ್ಷಣವನ್ನು ಮುಂದುವರೆಸುತ್ತಿದ್ದಾರೆ. ಅವರ ಭೌತಿಕ ಅಗತ್ಯಗಳಿಗೆ ಬೇಕಾದ ಎಲ್ಲ ಸೌಲಭ್ಯಗಳು ಅಲ್ಲಿ ದೊರಕುವಂತೆ ನೋಡಿಕೊಳ್ಳಲಾಗಿದೆ.

ಇವೆಲ್ಲದರ ಜೊತೆಗೆ ಆ ವಿದ್ಯಾರ್ಥಿಗಳಿಗೆ ಬೌದ್ಧಿಕ ಬೆಳವಣಿಗೆಗೆ ಬೇಕಾದ ಅವಕಾಶಗಳನ್ನು ಕಲ್ಪಿಸುವುದು ಕೂಡ ಇಲಾಖೆಯ ಹೊಣೆಯಾಗಿದೆ. ಈ ನಿಟ್ಟಿನಲ್ಲಿ ಇಪ್ಪತ್ತನೆಯ ಶತಮಾನದ ಧೀಮಂತ ಚಿಂತಕರಾಗಿ ಎಲ್ಲ ಬಗೆಯ ಅಸಮಾನತೆಗಳ ವಿರುದ್ಧ ನಿರಂತರ ಹೋರಾಟ ಮಾಡಿದ ಬಾಬಾಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ವಿಚಾರಗಳ ಪರಿಚಯ ಮಾಡಕೊಡುವುದು ಅಗತ್ಯವೆನಿಸಿ ಇಲಾಖೆ ಒಂದು ಯೋಜನೆಯನ್ನು ರೂಪಿಸಿತು. ಅಂಬೇಡ್ಕರ್ ಅವರ ಎಲ್ಲ ಬರೆಹಗಳು ಮತ್ತು ಭಾಷಣಗಳು ಕನ್ನಡ ಅನುವಾದದ ಸಂಪುಟಗಳನ್ನು ಈ ವಿದ್ಯಾರ್ಥಿನಿಲಯಗಳಿಗೆ ಒದಗಿಸುವುದೇ ಈ ಯೋಜನೆ. ರಾಜ್ಯದ ಮಾನ್ಯ ಮುಖ್ಯಮಂತ್ರಿಗಳು ೨೦೧೫–೧೬ನೇ ಸಾಲಿನ ವರ್ಷದ ತಮ್ಮ ಆಯವ್ಯಯವನ್ನು ಮಂಡನೆ ಮಾಡುವಾಗ ಈ ಯೋಜನೆಯನ್ನು ಘೋಷಿಸಿದರು. ಅದರಂತೆ ಈ ಸಂಪುಟಗಳನ್ನು ಅಚ್ಚುಮಾಡಿ ವಿದ್ಯಾರ್ಥಿನಿಲಯಗಳಿಗೆ ಒದಗಿಸುವ ಹೊಣೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ವಹಿಸಲಾಯಿತು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಈ ಸಂಪುಟಗಳನ್ನು ಅನುವಾದಿಸಿ ಪ್ರಕಟಿಸುವ ಕೆಲಸವನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ವಹಿಸಿತು. ಈಗ ಈ ಸಂಪುಟಗಳನ್ನು ಸಿದ್ಧಗೊಳಿಸಿ ಪ್ರಾಧಿಕಾರವು ತನ್ನ ಹೊಣೆಯನ್ನು ಯಶಸ್ವಿಯಾಗಿ ಪೂರೈಸಿದೆ.

ಈ ಯೋಜನೆಗೆ ಚಾಲನೆಯನ್ನು ನೀಡಿದ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಕಾರ್ಯರೂಪಕ್ಕೆ ತಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಿಗೆ ಮತ್ತು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

(ಹೆಚ್.ಆಂಜನೇಯ)

ಕರ್ನಾಟಕ ಸರ್ಕಾರ

**ಉಮಾಶ್ರೀ**

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ, ಕನ್ನಡ ಮತ್ತು ಸಂಸ್ಕೃತಿ ಸಚಿವರು

ದೂರವಾಣಿ: ಕಛೇರಿ : ೨೨೨೫೫೨೮೨
೨೨೦೩೩೪೮೯
ಕೊಠಡಿ ಸಂಖ್ಯೆ: ೨೫೨, ೨ನೇ ಮಹಡಿ
ವಿಧಾನ ಸೌಧ, ಬೆಂಗಳೂರು

ಸಂ: ಮ.ಮ.ಅ.ಕ.ಸಂ.ಸ/೨೪೮/೨೦೧೫

ದಿನಾಂಕ: ೦೪.೬.೨೦೧೫

## ಸಂದೇಶ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಕರ್ನಾಟಕ ಸರ್ಕಾರ ಸ್ಥಾಪಿಸಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ವಿಜ್ಞಾನ – ತಂತ್ರಜ್ಞಾನ ಮತ್ತು ಸಾಹಿತ್ಯ ವಿಷಯಗಳಿಗೆ ಸಂಬಂಧಿಸಿದಂತೆ ನೂರಾರು ಮಹತ್ವದ ಮೌಲಿಕ ಹಾಗೂ ಅನುವಾದಿತ ಗ್ರಂಥಗಳನ್ನು ಹೊರತಂದಿರುವುದು ತುಂಬ ಶ್ಲಾಘನೀಯ ವಿಚಾರವಾಗಿದೆ. ಕನ್ನಡಿಗರಿಗೆ ಭಾರತೀಯ ಸಾಹಿತ್ಯದ ಮತ್ತು ವಿಶ್ವಸಾಹಿತ್ಯದ ಮಹತ್ವದ ಕೃತಿಗಳನ್ನು ಪರಿಚಯಿಸಿಕೊಡುವ ಕಾರ್ಯಗಳ ಜೊತೆಗೆ ರಾಷ್ಟ್ರೀಯ ಪ್ರಶಸ್ತಿ–ಪುರಸ್ಕಾರಗಳನ್ನು ಗಳಿಸಿರುವ ನಮ್ಮ ಲೇಖಕರ ಪ್ರಾತಿನಿಧಿಕ ಸಂಕಲನಗಳನ್ನು ಹೊರತಂದು ಅವುಗಳನ್ನು ಬೇರೆ ಭಾಷೆಗಳಲ್ಲಿ ಪ್ರಕಟಿಸುತ್ತಿರುವುದು ತುಂಬ ಮಹತ್ವದ ಕಾರ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಹತ್ವಾಕಾಂಕ್ಷೆಯ ಯೋಜನೆಗಳಲ್ಲಿ ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸುವುದು ಒಂದಾಗಿದೆ. ಈ ಯೋಜನೆಯನ್ನು ನಿರ್ವಹಿಸಲು ಸಲಹಾ ಸಮಿತಿಯೊಂದನ್ನು ರೂಪಿಸಲಾಗಿದೆ. ಈ ಸಮಿತಿಯ ನೇತೃತ್ವದಲ್ಲಿ ಅನುವಾದಿತ ಕೃತಿಗಳನ್ನು ಹೊರತಂದಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ. ಪ್ರಕಟವಾದ ಎಲ್ಲ ಸಂಪುಟಗಳು ಜನಮನ್ನಣೆ ಗಳಿಸಿವೆ. ಅವುಗಳನ್ನು ಮರುಮುದ್ರಿಸಿ ಓದುಗರಿಗೆ ಒದಗಿಸಲು ನಮ್ಮ ಇಲಾಖೆಯು ಮುಂದಾಗಿದೆ ಮತ್ತು ಈ ಹೊಣೆಯನ್ನು ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ನೀಡಿದೆ. ಪ್ರಾಧಿಕಾರವು ಈಗ ಈ ಸಂಪುಟಗಳನ್ನು ಓದಗರ ಮುಂದೆ ಇರಿಸಿದೆ. ಇದಕ್ಕಾಗಿ ಸಂಬಂಧಿಸಿದ ಎಲ್ಲರನ್ನೂ ಇಲಾಖೆಯ ಪರವಾಗಿ ಅಭಿನಂದಿಸುತ್ತೇನೆ.

(ಉಮಾಶ್ರೀ)

ಕರ್ನಾಟಕ ಸರ್ಕಾರ

**ಡಾ. ಎನ್.ಎಸ್. ಚನ್ನಪ್ಪಗೌಡ,** ಭಾ.ಆ.ಸೇ.,
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆ

ಕೊಠಡಿ ಸಂಖ್ಯೆ: ೩, ನೆಲಮಹಡಿ
ವಿಕಾಸಸೌಧ
ಬೆಂಗಳೂರು – ೫೬೦ ೦೦೧
ಮೊ.: +೯೧ ೮೦ ೨೨೦೩೪೦೦೨
ಫ್ಯಾಕ್ಸ್: +೯೧ ೮೦ ೨೨೩೫೩೧೦೫

# ಹಾರೈಕೆ

ರಾಷ್ಟ್ರಕವಿ ಶ್ರೀ ಕುವೆಂಪು ಅವರ ಹೆಸರಿನಲ್ಲಿ ಸ್ಥಾಪಿತವಾಗಿರುವ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕುವೆಂಪು ಅವರ ಆಶಯದಂತೆ ಸಾಹಿತ್ಯ, ಸಂಸ್ಕೃತಿ ಮತ್ತು ಜ್ಞಾನ–ವಿಜ್ಞಾನ ಕ್ಷೇತ್ರಗಳಿಗೆ ಮಹತ್ವದ ಕೊಡುಗೆಯಾಗಬಲ್ಲಂಥ ಗ್ರಂಥಗಳನ್ನು ಹೊರತರುತ್ತಿರುವುದು ತುಂಬ ಮಹತ್ವದ ಸಂಗತಿಯೇ ಆಗಿದೆ. ಇತರ ಯಾವ ಭಾಷೆಗಳಲ್ಲೂ ಇನ್ನೂ ಹೊರಬರದೇ ಇರುವ ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಕಥೆ', ಜೆ. ಡಿ. ಬರ್ನಾಲ್ ಅವರ 'ಇತಿಹಾಸದಲ್ಲಿ ವಿಜ್ಞಾನ'ದಂಥ ಮಹತ್ವದ ಸಂಪುಟಗಳನ್ನೂ, ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರ ಮಹತ್ವದ ರಚನೆಗಳನ್ನು ಒಳಗೊಂಡ ಸಂಚಯಗಳನ್ನೂ ಹೊರತರುತ್ತಿರುವುದೂ, ನಾಡಿನ ಇತರ ಪ್ರತಿಷ್ಠಿತ ಸಂಸ್ಥೆಗಳೊಂದಿಗೆ ಸಂಬಂಧವನ್ನು ಏರ್ಪಡಿಸಿಕೊಂಡು ಮಹತ್ವದ ಕೃತಿಗಳನ್ನು ಬೆಳಕಿಗೆ ತರುತ್ತಿರುವುದೂ ಕರ್ನಾಟಕ ಸರ್ಕಾರಕ್ಕೆ ಮಾತ್ರವಲ್ಲದೆ, ಕನ್ನಡ ಜನತೆಗೆ ಹೆಮ್ಮೆಯನ್ನು ತರುವಂಥ ಸಂಗತಿಯಾಗಿರುತ್ತದೆ.

ಇದುವರೆಗೆ ಪ್ರಕಟವಾಗಿರುವ ಡಾ. ಬಿ. ಆರ್. ಅಂಬೇಡ್ಕರ್ ಅವರ ಬರೆಹ ಮತ್ತು ಭಾಷಣಗಳನ್ನು ಕನ್ನಡಕ್ಕೆ ಅನುವಾದಿಸುವ ಯೋಜನೆಯನ್ನು ಕೈಗೊಂಡು, ಅವುಗಳನ್ನು ಹೊರತರುತ್ತಿರುವುದು ಹಾಗೂ ಇದುವರೆಗೆ ಪ್ರಕಟವಾಗದಿರುವ ಅಂಬೇಡ್ಕರ್ ಅವರ ಚಿಂತನೆಗಳನ್ನೊಳಗೊಂಡ ಇತರ ಸಂಪುಟಗಳನ್ನು ಹೊರತರುವ ಕಾರ್ಯವನ್ನು ಹಮ್ಮಿಕೊಂಡಿರುವುದು ವಿಶೇಷವಾಗಿ ಸ್ತುತ್ಯರ್ಹವಾದ ಕಾರ್ಯವಾಗಿದೆ. ಇಪ್ಪತ್ತೆರಡು ಸಂಪುಟಗಳಲ್ಲಿ ಹಲವು ಈಗಾಗಲೇ ಹೊರಬಂದಿದ್ದು ಕನ್ನಡ ಓದುಗರ ಮೆಚ್ಚುಗೆಗೆ ಪಾತ್ರವಾಗಿವೆ. ಕರ್ನಾಟಕ ಸರ್ಕಾರವು ಈ ಸಂಪುಟಗಳನ್ನು ಮರು ಮುದ್ರಿಸುವ ಯೋಜನೆಗೆ ಅಗತ್ಯವಾದ ಅನುದಾನವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ಕುವೆಂಪು ಭಾಷಾ ಭಾರತಿ ಪ್ರಾಧಿಕಾರಕ್ಕೆ ಒದಗಿಸಿದೆ. ಈಗ ಈ ಎಲ್ಲ ಸಂಪುಟಗಳು ಹೊಸ ಮೆರುಗಿನೊಂದಿಗೆ ಪ್ರಕಟಗೊಳ್ಳುತ್ತಿರುವುದು ಸಂತಸದ ಸಂಗತಿಯಾಗಿದೆ.

ಒಟ್ಟಿನಲ್ಲಿ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯೊಂದಿಗೆ ಆದರ್ಶ ರೀತಿಯಲ್ಲಿ ಪ್ರಾಧಿಕಾರ ಹೆಜ್ಜೆ ಹಾಕುತ್ತಾ ಮುನ್ನಡೆಯಲೆಂದೂ, ಹೊಸ–ಹೊಸ ವಿಕ್ರಮಗಳನ್ನು ಸ್ಥಾಪಿಸಲೆಂದೂ ಹಾರೈಸುತ್ತೇನೆ.

(ಡಾ. ಎನ್.ಎಸ್. ಚನ್ನಪ್ಪಗೌಡ)

ಕರ್ನಾಟಕ ಸರ್ಕಾರ

**ಶ್ರೀ ಕೆ. ಎ. ದಯಾನಂದ**
ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಭವನ, ಜೆ.ಸಿ. ರಸ್ತೆ,
ಬೆಂಗಳೂರು – ೫೬೦ ೦೦೨
ದಿನಾಂಕ : ೧೦.೬.೨೦೧೫

# ಸಂದೇಶ

ಕರ್ನಾಟಕ ಸರ್ಕಾರ ಕುವೆಂಪು ಭಾಷಾ ಭಾರತಿ ಪ್ರಾಧಿಕಾರವನ್ನು ಸ್ಥಾಪಿಸಿ ಸಾಹಿತ್ಯಿಕ–ಸಾಂಸ್ಕೃತಿಕ ಚಟುವಟಿಕೆಗಳಿಗೆ ಹೊಸ ಆಯಾಮಗಳನ್ನು ನೀಡಿದೆ. ಕನ್ನಡದೊಡನೆ ಭಾರತೀಯ ಹಾಗೂ ವಿದೇಶೀಯ ಭಾಷೆಗಳ ನಡುವಣ ಸಂಬಂಧಗಳನ್ನು ಬೆಳೆಸಿಕೊಂಡು ಬರುವುದು, ಆ ಭಾಷೆಗಳ ಶ್ರೇಷ್ಠ ಕೃತಿಗಳನ್ನು ಕನ್ನಡಕ್ಕೆ ತರುವುದರ ಮೂಲಕ ಕನ್ನಡ ಸಾಹಿತ್ಯವನ್ನು ಸಂವೃದ್ಧಿಗೊಳಿಸುವುದು; ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳನ್ನು ಇತರ ಭಾಷೆಗಳಿಗೆ ಕೊಂಡೊಯ್ಯುವುದು; ಮಾನವಿಕ, ವೈಜ್ಞಾನಿಕ ಮತ್ತು ತಾಂತ್ರಿಕ ಕ್ಷೇತ್ರಗಳಲ್ಲಿ ಕನ್ನಡದ ಬಳಕೆಗೆ ಪ್ರೋತ್ಸಾಹ ನೀಡುವಂಥ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಮತ್ತು ಸೂಕ್ತ ಪ್ರಕಟಣೆಗಳನ್ನು ಹೊರತರುವುದು ಈ ಪ್ರಾಧಿಕಾರದ ಮುಖ್ಯ ಧ್ಯೇಯೋದ್ದೇಶವಾಗಿರುತ್ತದೆ. ಇದಕ್ಕೆ ಪೂರಕವಾಗಿ ಮತ್ತು ಪೋಷಕವಾಗಿ ರಾಷ್ಟ್ರೀಯ ಪ್ರಾದೇಶಿಕ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು ಈ ಧ್ಯೇಯಗಳ ಅಂಗವೇ ಆಗಿದೆ. ಇಂತಹ ಕಾರ್ಯಕ್ರಮಗಳನ್ನು ಯೋಜಿಸುತ್ತಿರುವ ಹಾಗೂ ವಿಶ್ವವಿದ್ಯಾಲಯಗಳ ಮಾನ್ಯತೆಯನ್ನು ಪಡೆದುಕೊಂಡು ಈ ಶೈಕ್ಷಣಿಕ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗುತ್ತಿರುವ ವಿಚಾರ ನನಗೆ ವೈಯಕ್ತಿಕವಾಗಿಯೂ ತುಂಬ ಸಂತೋಷವನ್ನುಂಟುಮಾಡಿದೆ.

ಈ ಕೆಲವೇ ವರ್ಷಗಳಲ್ಲಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಹೊರತಂದಿರುವ ಪ್ರಕಟಣೆಗಳು ತುಂಬ ಮಹತ್ವದವೇ ಆಗಿವೆ. ವಿಲ್ ಡ್ಯೂರಾಂಟ್ ಅವರ 'ನಾಗರಿಕತೆಯ ಇತಿಹಾಸ', ಜೆ.ಡಿ.ಬರ್ನಾಲ್ ಅವರ 'ವಿಜ್ಞಾನದ ಇತಿಹಾಸ' ಸಂಪುಟಗಳು ಯಾವುದೇ ಭಾಷೆಗೆ ಗೌರವಪ್ರಾಯವಾದ ಕೃತಿಗಳೇ ಆಗುತ್ತವೆ. ಅಂಥ ಸಾಹಸವನ್ನು ಭಾರತೀಯ ಭಾಷೆಗಳಲ್ಲಿ ಮೊದಲ ಬಾರಿಗೆ ಆಗುಮಾಡುತ್ತಿರುವುದು ವಿಶೇಷವಾಗಿ ಅಭಿನಂದನೀಯವಾದ ಕಾರ್ಯವಾಗಿದೆ. ಭಾರತರತ್ನ ಡಾ. ಬಿ. ಆರ್. ಅಂಬೇಡ್ಕರ್ ಅವರ ಅನುವಾದಿತ ಕೃತಿಗಳ ಪರಿಷ್ಕರಣ ಯೋಜನೆ ಮತ್ತು ಅವರ ಇತರ ಸಂಪುಟಗಳ ಹೊಸ ಅನುವಾದದ ಪ್ರಕಟಣೆ ಯೋಜನೆ, ಕೃಷ್ಣಾ ಐತೀರ್ಪಿನ ಕನ್ನಡ ಅನುವಾದ ಯೋಜನೆ ಮುಂತಾದವು – ಹೊಸ ವಿಕ್ರಮವನ್ನು ಸ್ಥಾಪಿಸಲಿವೆ.

ಪ್ರಾಧಿಕಾರವು ಪ್ರಕಟಿಸಿದ್ದ 'ಡಾ. ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳು' ಮಾಲಿಕೆಯ ಹಲವು ಸಂಪುಟಗಳು ಈಗ ಮರಳಿ ಮುದ್ರಿತವಾಗುತ್ತಿವೆ. ಈ ಸಂಪುಟಗಳು ಓದುಗರಿಗೆ ಸದಾಕಾಲವು ದೊರೆಯುತ್ತಿರಬೇಕೆಂಬುದು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಗುರಿಯಾಗಿದೆ. ಅದಕ್ಕಾಗಿ ಅಗತ್ಯವಾದ ಅನುದಾನವನ್ನು ಇಲಾಖೆಯು ಪ್ರಾಧಿಕಾರಕ್ಕೆ ನೀಡಿದೆ. ಈ ಸಂಪುಟಗಳನ್ನು ಸಿದ್ಧಪಡಿಸಲು ನೆರವಾದ ಸಲಹಾ ಸಮಿತಿಯ ಸದಸ್ಯರಿಗೆ, ಅನುವಾದಕರಿಗೆ ಮತ್ತು ಪ್ರಾಧಿಕಾರಕ್ಕೆ ನನ್ನ ಅಭಿನಂದನೆಗಳು ಸಲ್ಲುತ್ತವೆ.

ಮುಂದೆಯೂ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಇಂಥ ವಿಶಿಷ್ಟ ಕಾರ್ಯಕ್ರಮಗಳನ್ನು, ಮಹತ್ವದ ಪ್ರಕಟಣೆಗಳನ್ನು ಹೊರತರುವ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಡೆಸಿಕೊಂಡು ಬರಲಿ, ಕನ್ನಡ ನಾಡಿನ ಮೆಚ್ಚಿನ ಸಾಹಿತ್ಯಕ–ಸಾಂಸ್ಕೃತಿಕ ಸಂಸ್ಥೆಯಾಗಿ ಬೆಳೆಯಲಿ ಎಂದು ಹಾರೈಸುತ್ತೇನೆ.

10/6/15

ಕೆ. ಎ. ದಯಾನಂದ

# ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ

ಡಾ. ಬಾಬಾ ಸಾಹೇಬ್ ಅಂಬೇಡ್ಕರ್ (೧೮೯೧ ರಿಂದ ೧೯೫೬) ತಮ್ಮ ಕಾಲಮಾನವನ್ನು ಮೆಟ್ಟಿನಿಂತು ಗೋಪುರೋಪಮವಾಗಿ ಬೆಳೆದುನಿಂತ ಮಹಾಮಾನವರಲ್ಲಿ ಒಬ್ಬರು. ರಾಷ್ಟ್ರೀಯತಾವಾದಿಯಾಗಿ, ಕಾನೂನು ತಜ್ಞರಾಗಿ, ರಾಜಕೀಯ ನೇತಾರರಾಗಿ, ಕ್ರಿಯಾಶೀಲ ಸಾಮಾಜಿಕ ಕಾರ್ಯಕರ್ತರಾಗಿ, ಶ್ರೇಷ್ಠ ಇತಿಹಾಸಕಾರರಾಗಿ, ಮಹಾ ದಾರ್ಶನಿಕರಾಗಿ, ಅಪ್ರತಿಮ ಚಿಂತಕರಾಗಿ, ಮಾನವಶಾಸ್ತ್ರಜ್ಞರಾಗಿ, ಖ್ಯಾತ ಅರ್ಥಶಾಸ್ತ್ರಜ್ಞರಾಗಿ, ಸಮೃದ್ಧ ಬರೆಹಗಾರರಾಗಿ, ಕ್ರಾಂತಿಕಾರಿಯಾಗಿ, ಅಸಾಮಾನ್ಯ ವಾಕ್ಪಟುವಾಗಿ, ಬೌದ್ಧ ಧರ್ಮದ ಪುನರುಜ್ಜೀವಕರಾಗಿ, ಭಾರತೀಯ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಅವರು ಮಾಡಿರುವ ಮಹತ್ತರ ಸಾಧನೆಗಳನ್ನು ಗಮನಿಸಿದರೆ, ಒಬ್ಬ ವ್ಯಕ್ತಿ ಒಂದು ಜೀವಮಾನದಲ್ಲಿ ಇಷ್ಟೆಲ್ಲ ಸಾಧನೆಗಳನ್ನು ಮಾಡಲು ಸಾಧ್ಯವೇ ಎಂದು ಬೆರಗಾಗಿ ನಿಲ್ಲುವಂತೆ ಆಗುತ್ತದೆ. ಆಧುನಿಕ ಅರ್ಥದಲ್ಲಿ ಅವರನ್ನು 'ಪವಾಡ ಪುರುಷ'ರೆಂದೇ ಹೆಸರಿಸಬೇಕಾಗುತ್ತದೆ.

ಸಾಮಾಜಿಕ ಭೇದಭಾವಕ್ಕೊಳಗಾಗಿ ನರಳುತ್ತಿದ್ದ ಬಡ ಕುಟುಂಬದಲ್ಲಿ ಹುಟ್ಟಿದ ಅವರು ತಮ್ಮ ಇಡೀ ಜೀವಮಾನವನ್ನು ಈ ಸಾಮಾಜಿಕ ಭೇದಭಾವಕ್ಕೆ, ಸಮಾಜದ ಎಲ್ಲ ಪಿಡುಗುಗಳಿಗೂ ಕಾರಣವಾಗಿರುವ ಜಾತಿಪದ್ಧತಿಯ ವಿರುದ್ಧವಾಗಿ ಹೋರಾಡುವುದಕ್ಕೆ ಮೀಸಲಾಗಿ ಇಡಬೇಕಾಯಿತು. ತಮ್ಮ ಈ ಅವಿರತ ಹೋರಾಟದಿಂದ, ಈ ಹಿಂದಿನ ಸಮಾಜ ಸುಧಾರಕರು ಯಾರೂ ಸಾಧಿಸದಿದ್ದಂಥ ಮಹಾಕ್ರಾಂತಿಯನ್ನು ಎಸಗಿ ಹೊಸ ಇತಿಹಾಸವನ್ನೇ ಸೃಷ್ಟಿಸಿದರು. ಸಾಮಾಜಿಕ–ಆರ್ಥಿಕ ಸಂಕಷ್ಟಗಳನ್ನು ಮೀರಿ ನಿಂತು ಅನೇಕ ಪ್ರಥಮಗಳನ್ನೂ ಅವರು ಸಾಧಿಸಿದರು. ಕಾಲೇಜು ಶಿಕ್ಷಣವನ್ನು ಪಡೆದ ದಲಿತರಲ್ಲಿಯೂ ಮೊದಲಿಗರಾಗಿದ್ದವರಲ್ಲಿ ಅವರು ಪ್ರಮುಖರಾದರು. ನ್ಯಾಯಶಾಸ್ತ್ರ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ ಸಂಬಂಧವಾದ ತಮ್ಮ ಅಧ್ಯಯನ ಮತ್ತು ಸಂಶೋಧನೆಗಳಿಂದಾಗಿ ಕೊಲಂಬಿಯಾದಂಥ ವಿಶ್ವವಿದ್ಯಾನಿಲಯದಿಂದ, ಲಂಡನ್ನಿನ ಅರ್ಥಶಾಸ್ತ್ರ ಶಾಲೆಯಿಂದ ಡಾಕ್ಟೊರೇಟ್ ಪದವಿಗಳನ್ನು ಪಡೆದ ಮಹಾಮೇಧಾವಿಗಳಲ್ಲೂ ಅವರೊಬ್ಬರಾದರು. ಹೀಗೆ ಶ್ರೇಷ್ಠ ವಿದ್ವಾಂಸರಾಗಿ ಭಾರತಕ್ಕೆ ಹಿಂದಿರುಗಿ ಬಂದ ಅವರು ಸಮಾಜದ ಕೆಳವರ್ಗಗಳ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ, ರಾಜಕೀಯ ಹಕ್ಕುಗಳಿಗಾಗಿ ಅಹರ್ನಿಶಿ ದುಡಿದರು. ಬರೆಹಗಳ–ಭಾಷಣಗಳ ಮೂಲಕ, ವೈಚಾರಿಕ ಚರ್ಚೆ–ಸಂವಾದಗಳ ಮೂಲಕ ಸಾಮಾಜಿಕ–ರಾಜಕೀಯ ಜಾಗೃತಿಯನ್ನೇ ಮೂಡಿಸಿದರು; 'ಆಧುನಿಕ ಬೋಧಿಸತ್ವ'ರೆಂಬ ಕೀರ್ತಿಗೂ ಪಾತ್ರರಾದರು. ಸಮಾಜದ ಎಲ್ಲ ವರ್ಗಗಳಲ್ಲಿ, ವಿವಿಧ ಧರ್ಮಗಳಲ್ಲಿ ಪ್ರತ್ಯಕ್ಷವಾಗಿ, ಪ್ರಚ್ಛನ್ನವಾಗಿ ಬೇರುಬಿಟ್ಟಿದ್ದ ಸಾಮಾಜಿಕ ಕೆಡಕುಗಳ ವಿರುದ್ಧ ದನಿಯೆತ್ತಿದ ಹಿರಿಮೆಯೂ ಅವರದಾಗಿದೆ. ಅಂತಿಮವಾಗಿ ದೇಶ ವಿಭಜನೆಯ ಅನಿವಾರ್ಯತೆಯನ್ನು ಒಪ್ಪಿದರಾದರೂ, ಅದರ ಭಯಾನಕ ಪರಿಣಾಮಗಳ ವಿರುದ್ಧ ಎಚ್ಚರಿಕೆಯ ಗಂಟೆಯನ್ನೂ ಅವರು ಮೊದಲೇ ಮೊಳಗಿಸಿದ್ದರೆಂಬುದು ಗಮನಾರ್ಹವಾದ ಸಂಗತಿ.

ಬುದ್ಧ, ಕಬೀರ್, ಏಸು, ಅಶೋಕ, ಶಿವಾಜಿ, ಜಾರ್ಜ್ ವಾಷಿಂಗ್‌ಟನ್, ಥಾಮಸ್ ಪೇನ್, ಅಬ್ರಹಾಂ ಲಿಂಕನ್, ಎಡ್ಮಂಡ್ ಬರ್ಕ್, ಮಾರ್ಟಿನ್ ಲೂಥರ್, ಶಾಹೂ ಮಹಾರಾಜ್, ಮಹಾರಾಜ ಸಯ್ಯಾಜಿರಾವ್ ಗಾಯಕ್‌ವಾಡ್–III ಮುಂತಾದವರ ಚಿಂತನೆಗಳಿಂದ ಪ್ರಭಾವಿತರಾಗಿದ್ದ ಅಂಬೇಡ್ಕರ್ ಅವರು ಈಚಿನ ತಲೆಮಾರಿನ ಶ್ರೀ ಎ.ಎಚ್. ಸಾಳುಂಕೆ ಅವರಿಂದ ಹಿಡಿದು ಕು. ಮಾಯಾವತಿಯವರ ವರೆಗೆ ಅನೇಕ ಸಮಾಜ ಚಿಂತಕರು ಮತ್ತು ರಾಜಕೀಯ ನೇತಾರರ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿದ್ದಾರೆ. ಅವರ ಅಸಾಮಾನ್ಯ

ಜೀವಿತ-ಸಾಧನೆಗಳನ್ನು ಕುರಿತಂತೆ ವಿವಿಧ ಭಾಷೆಗಳಲ್ಲಿನ ಹಿರಿ-ಕಿರಿಯ ಲೇಖಕರುಗಳು ಹತ್ತಾರು ಜೀವನ-ಚರಿತ್ರೆಗಳನ್ನು ರಚಿಸಿರುವುದು ಆಶ್ಚರ್ಯದ ಸಂಗತಿಯೇನೂ ಅಲ್ಲ. ದೆಹಲಿಯೂ ಸೇರಿದಂತೆ ನಾಡಿನ ಅನೇಕ ಕಡೆಗಳಲ್ಲಿ ಅವರ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೈದರಾಬಾದಿನಲ್ಲಿ 'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಮುಕ್ತ ವಿಶ್ವವಿದ್ಯಾನಿಲಯ', ಮುಜಫ್ಫರ್‌ಪುರದಲ್ಲಿನ 'ಬಿ.ಆರ್. ಅಂಬೇಡ್ಕರ್ ಬಿಹಾರ್ ವಿಶ್ವವಿದ್ಯಾನಿಲಯ'ಗಳು ಸ್ಥಾಪನೆಗೊಂಡಿರುವುದಲ್ಲದೆ, ನಾಗಪುರದಲ್ಲಿನ ಅಂತರ-ರಾಷ್ಟ್ರೀಯ ವಿಮಾನ ನಿಲ್ದಾಣಕ್ಕೂ ಅಂಬೇಡ್ಕರ್ ಅವರ ಹೆಸರನ್ನಿಡಲಾಗಿದೆ. ಸಂಸತ್ ಭವನದಲ್ಲಿಯೂ ಅವರ ಭಾವಚಿತ್ರವನ್ನು ಅನಾವರಣಗೊಳಿಸಲಾಗಿದೆ. ಅವರ ಹುಟ್ಟುಹಬ್ಬವನ್ನು (ಏಪ್ರಿಲ್ ೧೪) ಮತ್ತು ಪರಿನಿರ್ವಾಣ ದಿನವನ್ನು (ಡಿಸೆಂಬರ್ ೬) ನಾಡಿನಾದ್ಯಂತ ಆಚರಿಸಲಾಗುತ್ತಿದೆ. ಅವರ ಬಹುಮುಖೀ ಸಾಧನೆಯನ್ನು ಗುರುತಿಸಿ, ಮರಣೋತ್ತರವಾಗಿ ೧೯೯೦ರಲ್ಲಿ ಅವರಿಗೆ 'ಭಾರತ ರತ್ನ' ಪ್ರಶಸ್ತಿಯನ್ನೂ ನೀಡಲಾಗಿದೆ. ಅಂಬೇಡ್ಕರ್ ಅವರು "ಶಿಕ್ಷಣ ! ಸಂಘಟನೆ !! ಹೋರಾಟ !!! (Educate ! Organize !! Agitate !!!) ಎಂಬ ತತ್ವಗಳನ್ನು ತಮ್ಮ ಅನುಯಾಯಿಗಳಿಗೆ ಹಾಗೂ ನಾಡಿಗೆ ನೀಡಿದ್ದಾರೆ.

ಮಹಾಮಾನವರೇ ಆಗಿದ್ದ ಅಂಬೇಡ್ಕರ್ ಸಮೃದ್ಧವಾಗಿ ಬರೆವಣಿಗೆಯನ್ನೂ ಮಾಡಿದ್ದಾರೆ-ಸಂಸತ್ತಿನ ಒಳಗೆ, ಹೊರಗೆ ಹಾಗೂ ಪತ್ರಿಕೋದ್ಯಮದ ಮೂಲಕ. ಇವೆಲ್ಲ ಐತಿಹಾಸಿಕ ಪ್ರಾಮುಖ್ಯದ ಬರೆವಣಿಗೆಗಳೇ ಆಗಿವೆ. ಇವುಗಳ ಐತಿಹಾಸಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿದ ಮುಂಬಯಿ ಸರ್ಕಾರ ಡಾ. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಇಪ್ಪತ್ತೊಂದು ಸಂಪುಟಗಳಲ್ಲಿ ಹೊರತಂದಿದೆ. ಈ ಸಂಪುಟಗಳನ್ನು ಕನ್ನಡದಲ್ಲಿಯೂ ಹೊರತರಬೇಕೆಂದು, ಆ ಮೂಲಕ ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಿಗರಿಗೂ ಅವರದೇ ಭಾಷೆಯಲ್ಲಿ ಮುಟ್ಟಿಸಬೇಕೆಂದು ಸಂಕಲ್ಪಿಸಿದ ಕರ್ನಾಟಕ ಸರ್ಕಾರ, ಕರ್ನಾಟಕ ವಿಶ್ವ ವಿದ್ಯಾನಿಲಯದ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ. ಎ.ಎಂ. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಅನುವಾದ ಸಂಪಾದನ ಸಮಿತಿಯೊಂದನ್ನು ನೇಮಿಸಿ, ೧೪ ಸಂಪುಟಗಳ ಕನ್ನಡ ಆವೃತ್ತಿಯನ್ನು ಹೊರತಂದಿತು. ಡಾ. ಅಂಬೇಡ್ಕರ್ ಅವರ ವಿಚಾರಧಾರೆಯನ್ನು ಕನ್ನಡಕ್ಕೆ ಅಳವಡಿಸುವ ಮಹಾಸಾಹಸದ ಕಾರ್ಯವನ್ನು ಆ ಸಮಿತಿ ನಿರ್ವಹಿಸಿತು. ನಾಡಿನ ಹಲವಾರು ಗಣ್ಯ ವಿದ್ವಾಂಸರು ಆ ಮಹಾಕಾರ್ಯದಲ್ಲಿ ಸಹಕರಿಸಿದರು. ಅಂಬೇಡ್ಕರ್ ಅವರ ಇಂಗ್ಲಿಷ್ ಅತ್ಯಂತ ವಿದ್ವತ್‌ಪೂರ್ಣವೂ, ವಿಶಿಷ್ಟವೂ ಆಗಿದ್ದು, ಅನೇಕ ಬಗೆಯ ಸವಾಲುಗಳನ್ನು ಒಡ್ಡುವಂಥದಾಗಿದ್ದುದರಿಂದ, ಕನ್ನಡ ಅನುವಾದದಲ್ಲಿ ಕೆಲವೊಂದು ಅರೆಕೊರೆಗಳು ಉಳಿದುಕೊಂಡು ಬಿಟ್ಟುದು ಸಹಜವೇ ಆಗಿತ್ತು. ತಜ್ಞ ವಿದ್ವಾಂಸರು ಇಂಥ ಅರೆಕೊರೆಗಳತ್ತ ಬೆಟ್ಟುಮಾಡಿ ತೋರಿಸಿದ್ದೂ ಉಂಟು. ಈ ಆವೃತ್ತಿಯ ಪ್ರತಿಗಳೂ ಮುಗಿದು ಹೋಗಿ, ಅಂಬೇಡ್ಕರ್ ಅವರ ಕೃತಿಗಳಿಗೆ ಇದ್ದ ಬೇಡಿಕೆಯನ್ನು ಗಮನಿಸಿ, ಇದರ ಪರಿಷ್ಕೃತ ಆವೃತ್ತಿಯೊಂದನ್ನು ಹೊರತರುವ ಯೋಜನೆಯನ್ನು ಕರ್ನಾಟಕ ಸರ್ಕಾರ ಹಮ್ಮಿಕೊಂಡಿತು. ಈ ಹೊತ್ತಿಗೆ 'ಕುವೆಂಪು ಭಾಷಾ ಭಾರತಿ'ಯ ಅಂಗವಾಗಿ ಕರ್ನಾಟಕ ಅನುವಾದ ಸಾಹಿತ್ಯ ಅಕಾಡೆಮಿ ಅಸ್ತಿತ್ವಕ್ಕೆ ಬಂದಿದ್ದುದರಿಂದ, ಈ ಹೊಣೆಯನ್ನು ಸದರಿ ಅಕಾಡೆಮಿಗೆ ವಹಿಸಬೇಕೆಂದು ತೀರ್ಮಾನಿಸಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಈ ಸಂಬಂಧವಾಗಿ ಮಂಜೂರು ಮಾಡಲಾಗಿದ್ದ ೯೫ ಲಕ್ಷ ರೂಪಾಯಿಗಳ ಸಹಾಯಧನವನ್ನೂ ಕಾರ್ಯನಿರ್ವಹಣೆಯ ಹೊಣೆಯನ್ನೂ ಅನುವಾದ ಸಾಹಿತ್ಯ ಅಕಾಡೆಮಿಗೆ ವರ್ಗಾಯಿಸಲಾಯಿತು. ಈ ಸಂಬಂಧವಾಗಿ ಅನುವಾದ ಸಂಪಾದನ ಸಮಿತಿಯನ್ನು ನೇಮಿಸಲಾಯಿತು. ಅನುವಾದ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಡಾ. ಪ್ರಧಾನ್ ಗುರುದತ್ತ ಅವರ ಅಧ್ಯಕ್ಷತೆಯಲ್ಲಿ ರಚಿಸಲಾದ ಈ ಸಮಿತಿಯಲ್ಲಿ ಈ ಕೆಳಕಂಡ ಮಹನೀಯರನ್ನು ಸದಸ್ಯರಾಗಿ ನಾಮಕರಣ ಮಾಡಲಾಯಿತು (ಆದೇಶ ಸಂಖ್ಯೆ: ಸಂ ವಾ ಪ್ರ ೨೮ ಕರಹ ೨೦೦೮ ದಿನಾಂಕ ೨೪-೩-೨೦೦೮)

೧. ಡಾ. ಸಿದ್ಧಲಿಂಗಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ; ೧೨-೬-೨೦೦೮ರಿಂದ ಈಚೆಗೆ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರು

೨. ಶ್ರೀ ದೇವನೂರ ಮಹದೇವ, ಖ್ಯಾತ ಸಾಹಿತಿಗಳು

೩. ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಅನುವಾದ ಅಕಾಡೆಮಿಯನ್ನು ವಿಧ್ಯುಕ್ತವಾಗಿ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದಲ್ಲಿ ವಿಲೀನಗೊಳಿಸಿದ್ದರಿಂದ ಹಾಗೂ ಡಾ. ಪ್ರಧಾನ್ ಗುರುದತ್ತ ಅವರನ್ನೇ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಿದ್ದರಿಂದ ಇದೇ ಸಂಪಾದನ ಸಮಿತಿ ಡಾ. ಅಂಬೇಡ್ಕರ್ ಅವರ ಸಮಗ್ರ ಕೃತಿಗಳ ಸಂಪಾದನೆ ಮತ್ತು ಪ್ರಕಟಣೆಯ ಕಾರ್ಯಗಳನ್ನು ಮುಂದುವರಿಸಿಕೊಂಡುಬರುತ್ತಿದೆ.

ಸಂಪುಟಗಳ ಪರಿಷ್ಕರಣ ಕಾರ್ಯದ ಸ್ವರೂಪದ ಬಗ್ಗೆಯೂ ವ್ಯಾಪಕವಾದ ಚರ್ಚೆಯನ್ನು ನಡೆಸಲಾಯಿತು. ಖ್ಯಾತ ವಿದ್ವಾಂಸರುಗಳೇ ಈ ಅನುವಾದ ಕಾರ್ಯದಲ್ಲಿ ಭಾಗಿಯಾಗಿರುವುದನ್ನು ಗಮನಿಸಿ, ಎದ್ದು ಕಾಣುವಂಥ ಲೋಪದೋಷಗಳು ಇರುವಲ್ಲಿ ಮಾತ್ರವೇ ಅವುಗಳನ್ನು ಸರಿಪಡಿಸುವ, ಓರೆಕೋರೆಗಳನ್ನು ತಿದ್ದುವ ಕೆಲಸಮಾಡಬೇಕೆಂದೂ ನಿರ್ಧರಿಸಲಾಯಿತು. ಅದರಂತೆ, ಮೊದಲ ಪರಿಷ್ಕೃತ ಸಂಪುಟವನ್ನು ೧೯-೮-೨೦೦೯ರಂದು ಹೊರತರಲಾಯಿತು. ಈ ಕಾರ್ಯವನ್ನು ಮುಂದುವರಿಸಿ ೨, ೩ ಮತ್ತು ೪ನೇ ಸಂಪುಟಗಳ ಪರಿಷ್ಕತ ಆವೃತ್ತಿಯನ್ನು ೬.೧೨.೨೦೧೦ ರಂದು ಬಿಡುಗಡೆ ಮಾಡಲಾಯಿತು. ಈ ಕಾರ್ಯದಲ್ಲಿ ಈ ಕೆಳಕಂಡ ವಿದ್ವಾಂಸರು ಸಹಕರಿಸಿದ್ದರು.

೧. ಶ್ರೀ ವಿ. ಕೃಷ್ಣ, ಬೆಂಗಳೂರು (೨ನೆಯ ಸಂಪುಟ)

೨. ಶ್ರೀ ಕೇಶವ ಮಳಗಿ, ಬೆಂಗಳೂರು (೩ನೆಯ ಸಂಪುಟ)

೩. ಶ್ರೀ ಜೆ.ಎನ್. ಶಾಮರಾವ್, ಬೆಂಗಳೂರು (೪ನೆಯ ಸಂಪುಟ)

ಕೆಲಮಂದಿ ಪರಿಷ್ಕರಣಕಾರರ ಅತಿವ್ಯಸ್ತತೆಯಿಂದಾಗಿ, ಪರಿಷ್ಕರಣ ಕಾರ್ಯದಲ್ಲಿಯೂ ವಿಳಂಬವಾಯಿತು. ನಮ್ಮ ಒತ್ತಾಯ-ಒತ್ತಡಗಳನ್ನು ಮನ್ನಿಸಿ ಅವರು ನಮಗೆ ನೆರವು ನೀಡಿದ್ದಾರೆ. ಈ ವಿದ್ವಾಂಸರು ಸಾಧ್ಯವಿದ್ದಷ್ಟು ಮಟ್ಟಿಗೆ ಈ ಸಂಪುಟಗಳನ್ನು ಪರಿಷ್ಕರಿಸಿದ್ದಾರೆ. ಈಗ ೫, ೬, ೭, ೮ ಮತ್ತು ೯ ಸಂಪುಟಗಳ ಪರಿಷ್ಕೃತ ಆವೃತ್ತಿಯನ್ನು ಹೊರತರಲಾಗುತ್ತಿದೆ. ಇವುಗಳ ಪರಿಷ್ಕರಣ ಕಾರ್ಯದಲ್ಲಿ ಈ ಕೆಳಕಂಡ ಮಹನೀಯರು ಸಹಕರಿಸಿದ್ದಾರೆ.

೧. ಶ್ರೀಮತಿ ಬಿ.ಎನ್. ಶಾಂತಾ (ಸಂ. ೫)

೨. ಶ್ರೀ ವಿ. ಕೃಷ್ಣ (ಸಂ. ೬)

೩. ಶ್ರೀ ಕೆ.ಎಲ್. ಚಂದ್ರಶೇಖರ (ಸಂ. ೭)

೪. ಶ್ರೀ ಬಾಲಸುಬ್ರಹ್ಮಣ್ಯ ಕಂಜರ್ಪಣೆ (ಸಂ. ೮)

೫. ಶ್ರೀ ಜೆ.ಎನ್. ಶಾಮರಾವ್ (ಸಂ. ೯)

ಅವರ ಈ ಸಹಾಯ-ಸಹಕಾರಗಳಿಗಾಗಿ ನಾವು ಕೃತಜ್ಞರಾಗಿದ್ದೇವೆ. ಅವರ ಗಮನವನ್ನು ತಪ್ಪಿಸಿ ಬಿಟ್ಟು ಹೋಗಿದ್ದ ಭಾಗಗಳನ್ನು ಸೇರಿಸಲಾಗಿದೆ; ಸಾರಣಿಗಳ ಮಾಹಿತಿಯನ್ನು ಸರಿಪಡಿಸಲಾಗಿದೆ; ಉಲ್ಲೇಖಗಳನ್ನು, ಅಂಕಿತನಾಮಗಳನ್ನು ಪರಿಷ್ಕರಿಸಲಾಗಿದೆ. ಹೀಗೆ ಪರಿಷ್ಕೃತವಾದ ಪಠ್ಯದ ಪ್ರಕಟಣೆಗೆ ಅನುವಾದ ಸಂಪಾದನ ಸಮಿತಿಯ ಒಪ್ಪಿಗೆಯನ್ನೂ ಪಡೆದುಕೊಳ್ಳಲಾಗಿದೆ.

ಹೊಸ ಆಕಾರದಲ್ಲಿ ಹಾಗೂ ಸ್ವರೂಪದಲ್ಲಿ ಹೊರತರಲಾದ ಮೊದಲನೆಯ ಸಂಪುಟ ಸಾರ್ವತ್ರಿಕ ಮೆಚ್ಚುಗೆಯನ್ನು ಗಳಿಸಿದ್ದರಿಂದ, ಅದೇ ವಿನ್ಯಾಸವನ್ನು ಇತರ ಸಂಪುಟಗಳಿಗೂ ಅವಳವಡಿಸಿಕೊಳ್ಳಲಾಗಿದೆ.

ಈ ದಿಕ್ಕಿನಲ್ಲಿ ನಮಗೆ ಎಲ್ಲ ಸಹಾಯ ಸಹಕಾರ ಮಾರ್ಗದರ್ಶನಗಳನ್ನು ಇತ್ತಿರುವ ಕನ್ನಡ ಮತ್ತು

ಸಂಸ್ಕೃತಿ, ಹಾಗೂ ವಾರ್ತಾ ಇಲಾಖೆಯ ಸನ್ಮಾನ್ಯ ಕಾರ್ಯದರ್ಶಿಗಳಾದ ಶ್ರೀ ರಮೇಶ್ ಬಿ. ಝಳಕಿ ಅವರಿಗೆ ನಮ್ಮ ಕೃತಜ್ಞತೆಗಳು.

ವಿಳಂಬಗೊಂಡಿದ್ದ ಈ ಯೋಜನೆ ಸ್ಫೂರ್ತಿಯುತವಾಗಿ ಹಾಗೂ ಶೀಘ್ರಾತಿಶೀಘ್ರವಾಗಿ ಮುನ್ನಡೆಯುವುದಕ್ಕೆ ಕಾರಣರಾಗಿರುವವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸನ್ಮಾನ್ಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು. ಅವರಿಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ.

ಅಂಬೇಡ್ಕರ್ ಅವರ ಬರೆಹಗಳು ಮತ್ತು ಭಾಷಣಗಳ ಮೂಲ ಪ್ರತಿಗಳು ಹಾಗೂ ಅನುವಾದದ ಎಲ್ಲ ಸಂಪುಟಗಳು ನಮ್ಮಲ್ಲಿಯಾಗಲೀ, ಹೊರಗಾಗಲೀ ಲಭ್ಯವಿಲ್ಲದೆ ಇದ್ದುದರಿಂದ, ಅನಿವಾರ್ಯವಾದ ವಿಳಂಬಕ್ಕೆ ಎಡೆದೊರೆಯಿತು. ಅಂಬೇಡ್ಕರ್ ಸಾಹಿತ್ಯಾಸಕ್ತ ಕೆಲವು ಮಿತ್ರರ ಖಾಸಗಿ ಗ್ರಂಥ ಸಂಗ್ರಹಗಳಿಂದ ಕೆಲವು ಸಂಪುಟಗಳನ್ನು ಸಂಗ್ರಹಿಸಲಾಯಿತು. ಸಂಪಾದನ ಸಮಿತಿಯ ಮಾನ್ಯ ಸದಸ್ಯರುಗಳು ತಮ್ಮ ಮಿತ್ರರುಗಳ ಖಾಸಗಿ ಸಂಗ್ರಹಗಳಿಂದಲೂ ಕೆಲವು ಸಂಪುಟಗಳನ್ನು ಒದಗಿಸಿಕೊಡುವ ಕೃಪೆಯನ್ನು ತೋರಿದರು. ಅವರ ಈ ಕೃಪೆಗಾಗಿ ಹಾಗೂ ಸಂಪಾದನ ಕಾರ್ಯದಲ್ಲಿ ಅವರು ನೀಡುತ್ತಿರುವ ಆತ್ಮೀಯ ಸಹಕಾರಕ್ಕಾಗಿ ವಂದನೆಗಳನ್ನು ಸಲ್ಲಿಸಬಯಸುತ್ತೇನೆ.

ಕರಡು ಪರಿಶೀಲನೆಯಲ್ಲಿ ನಮಗೆ ನೆರವಾಗಿರುವ ಡಾ. ಎಚ್.ಎಂ. ನಾಗರಾಜರಾವ್ ಮತ್ತು ಶ್ರೀಮತಿ ಆರತಿ ನಾಗೇಶ್ ಅವರಿಗೆ ನಮ್ಮ ವಂದನೆಗಳು ಸಲ್ಲುತ್ತವೆ.

ಪ್ರಾಧಿಕಾರದ ಕೆಲಸ-ಕಾರ್ಯಗಳಲ್ಲಿ ಹಾಗೂ ಪ್ರಕಟಣೆಯ ವಿಚಾರದಲ್ಲಿ ಹೃತ್ಪೂರ್ವಕವಾಗಿ ತಮ್ಮನ್ನು ತೊಡಗಿಸಿಕೊಂಡಿರುವ ಪ್ರಾಧಿಕಾರದ ರಿಜಿಸ್ಟ್ರಾರ್ ಪಿ. ನಾರಾಯಣಸ್ವಾಮಿ ಮತ್ತು ಇತರ ಸಿಬ್ಬಂದಿ ವರ್ಗದವರಿಗೂ ಹಾಗೂ ಸುಂದರವಾಗಿ ಮುದ್ರಿಸುವಲ್ಲಿ ಸಹಕರಿಸಿರುವ ಮೆ॥ ಮಯೂರ ಪ್ರಿಂಟ್ ಆಡ್ಸ್‌ನ ಶ್ರೀ ಬಿ.ಎಲ್. ಶ್ರೀನಿವಾಸ ಮತ್ತು ಅವರ ಸಿಬ್ಬಂದಿ ವರ್ಗದವರಿಗೂ ನಮ್ಮ ವಂದನೆಗಳು.

**ಪ್ರಧಾನ್ ಗುರುದತ್ತ**
ಅಧ್ಯಕ್ಷ
ಸಂಪಾದನ ಸಮಿತಿ

## ಎರಡನೇ ಮುದ್ರಣಕ್ಕೆ ಮುನ್ನುಡಿ

'ಡಾ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳು' ಮಾಲೆಯ ಹಲವು ಹೊತ್ತಗೆಗಳು ಅಚ್ಚಾಗಿ ಕನ್ನಡ ಓದುಗರ ಕೈಸೇರಿವೆ. ಪ್ರತಿಗಳು ಮುಗಿದಿರುವ ಹಿನ್ನೆಲೆಯಲ್ಲಿ ಮರುಮುದ್ರಣ ಕೈಗೊಳ್ಳುವ ಯೋಜನೆಗೆ ಕರ್ನಾಟಕ ಸರ್ಕಾರ ಅನುದಾನ ಮತ್ತು ಅನುಮತಿ ನೀಡಿದೆ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರವು ಈ ಹೊಸ ಆವೃತ್ತಿಯಲ್ಲಿ ಸಂಪುಟಗಳ ಅಳವಡಿಕೆ ಮತ್ತು ಹೊದಿಕೆಯ ವಿನ್ಯಾಸದಲ್ಲಿ ಕೊಂಚ ಬದಲಾವಣೆ ಮಾಡಿದೆ. ಈ ಸಂಪುಟಗಳು ಓದುಗರಿಗೆ ಆಪ್ತವಾಗುತ್ತವೆಂಬ ನಂಬಿಕೆ ನಮ್ಮದು. ಈ ಕಾರ್ಯದಲ್ಲಿ ನೆರವಾದ ಎಲ್ಲರಿಗೂ ಪ್ರಾಧಿಕಾರದ ಪರವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

**ಕೆ.ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

## ಮೂರನೇ ಮುದ್ರಣಕ್ಕೆ ಮುನ್ನುಡಿ

ಕರ್ನಾಟಕ ಸರ್ಕಾರವು ಭಾರತರತ್ನ ಬಾಬಾ ಸಾಹೇಬ್ ಡಾ. ಬಿ. ಆರ್. ಅಂಬೇಡ್ಕರ್ ಅವರ ಸಮಗ್ರ ಬರೆಹಗಳು ಮತ್ತು ಭಾಷಣಗಳನ್ನು ಕನ್ನಡದಲ್ಲಿ ಪ್ರಕಟಿಸಲು ಯೋಜಿಸಿ ಅದನ್ನು ಯಶಸ್ವಿಯಾಗಿ ಪೂರೈಸಿದೆ. ಹಲವು ಸಂಪುಟಗಳಲ್ಲಿ ಪ್ರಕಟಗೊಂಡಿರುವ ಅಂಬೇಡ್ಕರ್ ಅವರ ಬರೆಹಗಳ ಕನ್ನಡ ಅನುವಾದ ಪರಿಷ್ಕರಣಗೊಂಡು ಮತ್ತೆ ಮತ್ತೆ ಅಚ್ಚಾಗುತ್ತಿವೆ. ಇದೀಗ ಎಲ್ಲ ಸಂಪುಟಗಳು ಒಮ್ಮೆಗೆ ಮತ್ತೊಮ್ಮೆ ಅಚ್ಚಾಗಿ ಪ್ರಕಟಗೊಳ್ಳುತ್ತಿವೆ. ಈವರೆಗೆ ಕನ್ನಡದಲ್ಲಿ ದೊರಕದೇ ಇದ್ದ ಅಂಬೇಡ್ಕರ್ ಅವರ ಮರಾಠಿ ಬರೆಹಗಳು ಮತ್ತು ಭಾಷಣಗಳು ಈಗ ಮೊದಲ ಬಾರಿಗೆ ಅಚ್ಚಾಗುತ್ತಿವೆ. ಒಟ್ಟು ಇಪ್ಪತ್ತೆರಡು ಸಂಪುಟಗಳನ್ನು ಈಗ ವಿಷಯಸೂಚಿಯೊಂದಿಗೆ ಪ್ರಕಟಿಸಲಾಗುತ್ತಿದೆ. ಹಿಂದಿನ ಮುದ್ರಣಗಳಲ್ಲಿ ವಿಷಯಸೂಚಿಗಳು ಇಲ್ಲದಿದ್ದುದರಿಂದ ಸಂಪುಟಗಳನ್ನು ಓದುವವರಿಗೆ ಅಗತ್ಯ ವಿಷಯಗಳನ್ನು ಗುರುತಿಸಲು ಕಷ್ಟವಾಗುತ್ತಿದ್ದುದನ್ನು ಗಮನಿಸಿ ಈ ಕ್ರಮ ಕೈಗೊಳ್ಳಲಾಗಿದೆ. ಅಲ್ಲದೆ ಎಲ್ಲ ಸಂಪುಟಗಳ ವಿಷಯಸೂಚಿಗಳ ಸಂಕಲನವೂ ಈಗ ಹೊರಬಂದಿದೆ. ಇದರಿಂದ ಯಾವ ಸಂಪುಟದಲ್ಲಿ ಯಾವ ವಿಷಯದ ಬಗೆಗೆ ಮಾಹಿತಿ ಇದೆ ಎಂಬುದನ್ನು ಗುರುತಿಸಿಕೊಳ್ಳುವುದು ಓದುಗರಿಗೆ ಸುಲಭವಾಗಲಿದೆ. ಹಿಂದೆ ಪ್ರಕಟಗೊಂಡಿದ್ದ ಸಂಪುಟಗಳಲ್ಲಿ ಅಲ್ಲಲ್ಲಿ ಉಳಿದಿದ್ದ ಅಚ್ಚಿನ ತಪ್ಪುಗಳನ್ನು ತಿದ್ದಿ ಸರಿಪಡಿಸಲು ಕ್ರಮ ವಹಿಸಲಾಗಿದೆ.

ಈ ಸಂಪುಟಗಳನ್ನು ಅಚ್ಚು ಮಾಡಲು ಕರ್ನಾಟಕ ಸರ್ಕಾರವು ವಿಶೇಷ ಅನುದಾನವನ್ನು ಒದಗಿಸಿದೆ. ಅಚ್ಚಾದ ಸಂಪುಟಗಳು ರಾಜ್ಯದ ಎಲ್ಲೆಡೆ ಇರುವ ಸಮಾಜ ಕಲ್ಯಾಣ ಇಲಾಖೆಯ ವ್ಯಾಪ್ತಿಯ ಪರಿಶಿಷ್ಟ ಜಾತಿ

ಮತ್ತು ಪರಿಶಿಷ್ಟ ಜನಾಂಗಗಳ ವಿದ್ಯಾರ್ಥಿನಿಲಯಗಳಿಗೆ ಉಚಿತವಾಗಿ ದೊರಕಬೇಕೆಂಬುದು ಸರ್ಕಾರದ ಸದಾಶಯ. ಇದರಿಂದ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಮುಂದಿನ ತಲೆಮಾರಿಗೂ ಹರಿಯುವ ಅವಕಾಶ ಸೃಷ್ಟಿಯಾಗಿದೆ. ಕುವೆಂಪು ಭಾಷಾ ಭಾರತಿಗೆ ಇಂತಹ ಅಪೂರ್ವ ಹೊಣೆಯನ್ನು ನೀಡಿದ ಕರ್ನಾಟಕ ಸರ್ಕಾರಕ್ಕೆ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ನಮ್ಮ ಕೃತಜ್ಞತೆಗಳು ಸಲ್ಲುತ್ತವೆ. ಈ ಸಂಪುಟಗಳ ಸಿದ್ಧತೆಗೆ ನಿಯುಕ್ತಿಗೊಂಡಿರುವ ಸಂಪಾದಕ ಮಂಡಲಿಯ ಸದಸ್ಯರಾದ ಡಾ. ದೇವನೂರ ಮಹಾದೇವ, ಡಾ. ಸಿದ್ಧಲಿಂಗಯ್ಯ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಕೆ. ಎ. ದಯಾನಂದ ಅವರು ತಮ್ಮ ಸಕಾಲಿಕ ಸೂಕ್ತ ಸಲಹೆಗಳ ಮೂಲಕ ನಮ್ಮ ಕೆಲಸ ಹೆಚ್ಚು ಪರಿಪೂರ್ಣವಾಗುವಂತೆ ಮಾಡಿದ್ದಾರೆ.

**ಕೆ. ವಿ. ನಾರಾಯಣ**
ಅಧ್ಯಕ್ಷ
ಸಂಪಾದನ ಸಮಿತಿ

# ಸಂಪಾದಕೀಯ

ಸ್ವಾತಂತ್ರ್ಯಪೂರ್ವ ಭಾರತದ ರಾಜಕೀಯ ಕ್ಷಿತಿಜದಲ್ಲಿ ಅನೇಕ ಉದ್ದಾಮ ವ್ಯಕ್ತಿಗಳು, ಪ್ರತಿಭಾನ್ವಿತ ಮುಖಂಡರು, ರಾಜಕಾರಣಿಗಳು, ಮುತ್ಸದ್ದಿಗಳು ಮತ್ತು ದೇಶಪ್ರೇಮಿಗಳು ಕಾಣಿಸಿಕೊಂಡು ದೇಶದ ವಿಮೋಚನೆಗಾಗಿ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ಚಿರಸ್ಮರಣೀಯರಾಗಿದ್ದಾರೆ. ಡಾ॥ ಭೀಮರಾವ್ ರಾಮ್‌ಜಿ ಅಂಬೇಡ್ಕರ್ ಅವರು ದೇಶದ ಇಂಥ ನಾಯಕರಲ್ಲಿ ಒಬ್ಬರಾಗಿದ್ದರು. ಅವರು ಭಾರತದ ದೀನದಲಿತರ ವಿಮೋಚನೆಗಾಗಿ ತಾವು ನಡೆಸಿದ ಹೋರಾಟವನ್ನು ದೇಶದ ಸ್ವಾತಂತ್ರ್ಯ ಹೋರಾಟದ ಅಂಗವಾಗಿಯೇ ಸಂಘಟಿಸಿ ಅಸ್ಪೃಶ್ಯತಾ ನಿವಾರಣೆ ಮತ್ತು ಎಲ್ಲಾ ದುರ್ಬಲ ವರ್ಗಗಳ ವಿಮೋಚನೆಯಾಗದ ಹೊರತು ದೇಶದ ಸ್ವಾತಂತ್ರ್ಯ ಅರ್ಥರಹಿತ ಎಂಬ ಮೂಲತತ್ವವನ್ನು ಪ್ರತಿಪಾದಿಸಿದ ಏಕೈಕ ನಾಯಕರಾಗಿದ್ದರು. ಅವರು ಕೇವಲ ಅಸ್ಪೃಶ್ಯರ ನಾಯಕರಾಗಿರದೆ ಇಡೀ ಮಾನವ ಕುಲದ ಹಕ್ಕುಗಳು, ಸ್ವಾತಂತ್ರ್ಯ ಸಮಾನತೆ ಮತ್ತು ಭ್ರಾತೃತ್ವದ ಸ್ಥಾಪನೆಗಾಗಿ ಹೋರಾಡಿದ ಮಹಾನುಭಾವರಾಗಿದ್ದರು. ಅವರು ತಮ್ಮ ಇಡೀ ಜೀವನವನ್ನು ಈ ಗುರಿಸಾಧನೆಗಾಗಿ ಮುಡಿಪಾಗಿಟ್ಟರು.

ಅವರು ಜಾತ್ಯತೀತ ಸಮಾಜವಾದಿ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಚಲವಿಶ್ವಾಸ ಹೊಂದಿದ್ದರು. ಅವರು ಮಾನವೀಯತೆಯ ಸಾಕಾರಮೂರ್ತಿಗಳಾಗಿದ್ದು ದೀನದಲಿತರ ನೋವಿಗೆ ಸದಾ ಸ್ಪಂದಿಸುತ್ತಿದ್ದ ಮಹಾಪುರುಷರಾಗಿದ್ದರು.

ಡಾ॥ ಅಂಬೇಡ್ಕರ್ ಅವರು ಕೇವಲ ರಾಜಕೀಯ ಮುಖಂಡರಾಗಿರದೇ, ಆಧುನಿಕ ಭಾರತದ ನಿರ್ಮಾಪಕರೂ ಆಗಿದ್ದರೆಂದರೆ ಅತಿಶಯೋಕ್ತಿಯಾಗಲಾರದು. ಅವರು ಒಬ್ಬ ಘನ ವಿದ್ವಾಂಸರೂ, ವಿಚಾರವೇತ್ತರೂ, ಪ್ರೌಢ ಲೇಖಕರೂ, ಕಾನೂನು ಪಂಡಿತರೂ ಹಾಗೂ ಸಂವಿಧಾನತಜ್ಞರೂ ಆಗಿದ್ದರಲ್ಲದೆ ಗಣ್ಯ ಸಮಾಜಶಾಸ್ತ್ರಜ್ಞರೂ, ಖ್ಯಾತ ಸಂಶೋಧಕರೂ ಆಗಿದ್ದರು. ಜಾತಿ ಪದ್ಧತಿ, ಅಸ್ಪೃಶ್ಯತೆ, ಬಡತನ ಮುಂತಾದ ಸಾಮಾಜಿಕ ಆರ್ಥಿಕ ಸಮಸ್ಯೆಗಳ ಆಳವಾದ ಅಧ್ಯಯನ ಮಾಡಿ ಇವುಗಳ ಉಗಮ, ಬೆಳವಣಿಗೆ ಮತ್ತು ವಸ್ತುಸ್ಥಿತಿಯ ಬಗ್ಗೆ ವಿಶಿಷ್ಟ ಸಿದ್ಧಾಂತಗಳನ್ನು ತಮ್ಮದೇ ಆದ ರೀತಿಯಲ್ಲಿ ಪ್ರಸ್ತುತಪಡಿಸಿದರಲ್ಲದೆ ಇವುಗಳ ನಿವಾರಣೆಯ ವಿಧಾನಗಳನ್ನು ನಿರೂಪಿಸಿದರು. ಅದೃಷ್ಟವಶಾತ್ ಅವರು ತಮ್ಮ ಅಮೂಲ್ಯವಾದ ವಿಚಾರಗಳನ್ನು ತಮ್ಮ ಅನೇಕ ಸಂಶೋಧನಾತ್ಮಕ ಗ್ರಂಥಗಳು, ಲೇಖನಗಳು ಮತ್ತು ವಿದ್ವತ್ಪೂರ್ಣ ಭಾಷಣಗಳಲ್ಲಿ ವ್ಯಕ್ತಪಡಿಸಿದ್ದಾರೆ. ಅವರ ಜೀವಿತ ಕಾಲದಲ್ಲಿಯೇ ಸುಮಾರು ಹದಿಮೂರು ಗ್ರಂಥಗಳು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು, ಇವುಗಳಲ್ಲಿ ಜಾತಿ ನಿರ್ಮೂಲನೆ; ಶೂದ್ರರು ಯಾರು; ಅಸ್ಪೃಶ್ಯರು ಯಾರು– ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು?; ರೂಪಾಯಿಯ ಸಮಸ್ಯೆ; ಪಾಕಿಸ್ತಾನ ಅಥವಾ ಭಾರತದ ವಿಭಜನೆ – ಪ್ರಮುಖವಾಗಿವೆ. 'ಬುದ್ಧ ಮತ್ತು ಅವನ ಧಮ್ಮ' ಅವರ ಮರಣೋತ್ತರ ಪ್ರಕಟಣೆ. ಇವುಗಳೂ ಅಲ್ಲದೇ ಅವರ ಅಪ್ರಕಟಿತ ಬರಹಗಳು ಅಸಂಖ್ಯಾತ. ಅವರ ಮರಣಾನಂತರ ಇವು ಆಸ್ತಿ ವಿವಾದದಲ್ಲಿ ಸಿಲುಕಿಕೊಂಡಿದ್ದರಿಂದ ಇತ್ತೀಚಿನವರೆಗೆ ಅವುಗಳ ಪ್ರಕಟಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಅವುಗಳ ಅಧ್ಯಯನ ಸಾಧ್ಯವಿರಲಿಲ್ಲ. ಆದರೆ ಮಹಾರಾಷ್ಟ್ರ ಸರ್ಕಾರದ ಸತತ ಪ್ರಯತ್ನ, ಪರಿಶ್ರಮದಿಂದಾಗಿ ಮತ್ತು ಡಾ. ಅಂಬೇಡ್ಕರ್ ಅವರ ಕುಟುಂಬದ ಸದಸ್ಯರ ಸಹಕಾರ, ಸಮ್ಮತಿಯಿಂದಾಗಿ ಈಗ ಇವುಗಳ ಪ್ರಕಟಣೆಯೂ ಸಾಧ್ಯವಾಗಿದೆ.

ಡಾ. ಅಂಬೇಡ್ಕರ್ ಅವರು ಹೆಚ್ಚಾಗಿ ಇಂಗ್ಲಿಷ್ ಭಾಷೆಯಲ್ಲಿಯೆ ಬರೆದಿದ್ದಾರೆ. ಅವರ ಬರವಣಿಗೆಯ ಕೆಲ ಭಾಗಗಳು, ಅದರಲ್ಲಿಯೂ ಅವರು ತಾವೇ ಆರಂಭಿಸಿ ನಡೆಸಿಕೊಂಡು ಬಂದ ಪಾಕ್ಷಿಕಗಳಾದ ಸಮತಾ, ಜನತಾ

ಮತ್ತು ಬಹಿಷ್ಕೃತ ಭಾರತ ಇವುಗಳಲ್ಲಿ ಮರಾಠಿಯಲ್ಲಿಯೂ ಅಗ್ರ ಲೇಖನಗಳಾಗಿ ಬಂದಿವೆ. ಅವರು ಮಾಡಿದ ಅನೇಕ ಸಾರ್ವಜನಿಕ ಭಾಷಣಗಳೂ ಮರಾಠಿ ಭಾಷೆಯಲ್ಲಿಯೇ ಇವೆ.

ಡಾ. ಅಂಬೇಡ್ಕರ್ ಅವರು ತಮ್ಮ ಕೆಲವು ವಿದ್ವತ್ಪೂರ್ಣ ಪ್ರಬಂಧಗಳನ್ನು ತಾವು ಅಮೆರಿಕದಲ್ಲಿ ವಿದ್ಯಾರ್ಥಿಯಾಗಿದ್ದಾಗಲೇ ಸಿದ್ಧಪಡಿಸಿ ೧೯೧೮ ರಿಂದಲೇ ಪ್ರಕಟಿಸಿದರು. ನಂತರ ೧೯೨೩ ರಿಂದ ೧೯೫೬ರ ವರೆಗೆ ಅವರ ಇತರ ಗ್ರಂಥಗಳು ಪ್ರಕಟವಾದವು. ಅವೂ ಅಲ್ಲದೆ ತಮ್ಮ ಸಾರ್ವಜನಿಕ ಜೀವನದ ಸುಮಾರು ಮೂರು ದಶಕಗಳ ಅವಧಿಯಲ್ಲಿ ಅವರು ಅನೇಕ ಸಮಿತಿಗಳು, ಆಯೋಗಗಳು ಮತ್ತು ದುಂಡುಮೇಜಿನ ಪರಿಷತ್ತುಗಳಿಗೆ ಸಲ್ಲಿಸಿದ ಮನವಿಗಳು, ವಿಜ್ಞಾಪನಾ ಪತ್ರಗಳು, ಮಾಡಿದ ಭಾಷಣಗಳು, ಅವರ ರಾಜಕೀಯ ಮತ್ತು ಸಂವಿಧಾನದ ವಿಚಾರಗಳು ಮಹತ್ವದವುಗಳಾಗಿವೆ ಮತ್ತು ಅವರು ಮುಂಬಯಿ ಪ್ರಾಂತ್ಯ ಮತ್ತು ಕೇಂದ್ರ ಶಾಸನಸಭೆಗಳಲ್ಲಿ, ನಂತರ ಸಂವಿಧಾನ ಸಭೆಯ ಸದಸ್ಯರಾಗಿ, ಕರಡು ಸಮಿತಿಯ ಅಧ್ಯಕ್ಷರಾಗಿ ಸಿದ್ಧಪಡಿಸಿ, ಮಂಡಿಸಿದ ಕರಡು ಸಂವಿಧಾನ ಮತ್ತು ಅದರ ಮೇಲೆ ನಡೆದ ಚರ್ಚೆಗೆ ಅವರು ನೀಡಿದ ಉತ್ತರ, ಸಮಾಧಾನ, ವಿವರಣೆಗಳು ಮತ್ತು ಸ್ವತಂತ್ರ ಭಾರತದ ಪ್ರಥಮ ಕಾನೂನು ಮಂತ್ರಿಯಾಗಿ ಅವರು ವ್ಯಕ್ತಪಡಿಸಿದ ವಿಚಾರಗಳು, ಮಂಡಿಸಿದ ಮಸೂದೆಗಳು, ಮುಂತಾದವು ಒಬ್ಬ ಮೇಧಾವಿ ಹಾಗೂ ಮುತ್ಸದ್ದಿ ವ್ಯಕ್ತಪಡಿಸಿದ ಅಮೂಲ್ಯ ವಿಚಾರಗಳಾಗಿದ್ದು ಇಂದಿಗೂ ಸಂವಿಧಾನದ ಪ್ರಸ್ತಾಪ ಬಂದಾಗಲೆಲ್ಲಾ ಅವರು ಅಂದು ನೀಡಿದ ವಿವರಣೆಗಳೇ ಕೊನೆಯ ಮಾತೆಂದು ಪರಿಗಣಿಸಲಾಗಿದೆ. ಆದ್ದರಿಂದ ಡಾ. ಅಂಬೇಡ್ಕರ್ ಅವರ ವಿಚಾರಗಳು ಅಂದಿಗೂ ಅಲ್ಲದೆ ಇಂದಿಗೂ ಪ್ರಸ್ತುತವಾಗಿದ್ದು ಅವುಗಳ ಅಧ್ಯಯನ ಮತ್ತು ಪರಿಚಯ ಅನಿವಾರ್ಯ.

ಆದರೆ ಇತ್ತೀಚೆಗೆ ಅವರ ಪ್ರಕಟಿತ ಕೃತಿಗಳು ಲಭ್ಯವಾಗುತ್ತಿಲ್ಲ ಮತ್ತು ಅವು ಮುಂದೆ ದೊರೆಯುವ ಸಾಧ್ಯತೆಯೂ ಇಲ್ಲವಾಗುತ್ತಿತ್ತು. ಅವುಗಳೆಲ್ಲವು ಸಂಪೂರ್ಣವಾಗಿ ಅಳಿದುಹೋಗುವ ಅಪಾಯವಿತ್ತು. ಅದನ್ನರಿತ ಮಹಾರಾಷ್ಟ್ರ ಸರ್ಕಾರದವರು ಡಾ. ಅಂಬೇಡ್ಕರ್ ಅವರ ಇಂಗ್ಲಿಷಿನಲ್ಲಿರುವ ಎಲ್ಲಾ ಪ್ರಕಟಿತ ಮತ್ತು ಅಪ್ರಕಟಿತ ಕೃತಿಗಳನ್ನು ಸಂಗ್ರಹಿಸಿ, ಮುದ್ರಿಸಿ, ಪ್ರಕಟಿಸುವ ಅತ್ಯಂತ ಆವಶ್ಯಕ ಮತ್ತು ಉಪಯುಕ್ತ ಯೋಜನೆಯನ್ನು ಹಾಕಿಕೊಂಡಿದ್ದು, ಈ ಯೋಜನೆಯ ರೂಪುರೇಷೆಗಳನ್ನು ಸಿದ್ಧಪಡಿಸಿ ಕಾರ್ಯಗತಗೊಳಿಸಲು ಆ ರಾಜ್ಯದ ಶಿಕ್ಷಣ ಸಚಿವರ ಅಧ್ಯಕ್ಷತೆಯಲ್ಲಿ ಡಾ. ಅಂಬೇಡ್ಕರ್ ಅವರ ಒಡನಾಡಿಗಳು, ತಜ್ಞರು ಮತ್ತು ಮುಖಂಡರುಗಳಿಂದ ಕೂಡಿದ "ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಮೂಲ ವಿಷಯಗಳ ಪ್ರಕಟನಾ ಸಮಿತಿ, ಮಹಾರಾಷ್ಟ್ರ ಸರ್ಕಾರ" ಎಂಬ ಸಮಿತಿಯನ್ನು ರಚಿಸಿದರು. ಅದು ಕಾರ್ಯತತ್ಪರವಾಯಿತು. ಈ ಸಮಿತಿಯನ್ನು ೧೯೭೮ರಲ್ಲಿ ಅಂದಿನ ಮುಖ್ಯಮಂತ್ರಿ ಶ್ರೀ ಶರದ್ ಪವಾರ್ ಅವರ ನೇತೃತ್ವದಲ್ಲಿ ರಚಿಸಲಾಯಿತು. ಈ ಸಮಿತಿಯ ಯಶಸ್ಸಿಗೆ ಅದರ ವಿಶೇಷ ಅಧಿಕಾರಿ ಶ್ರೀ ವಸಂತ ಮೂನ್ ಅವರ ಪರಿಶ್ರಮ ಮುಖ್ಯಕಾರಣ. ಈ ಸಮಿತಿಯು ಡಾ. ಅಂಬೇಡ್ಕರ್ ಅವರ ಎಲ್ಲಾ ಬರಹಗಳನ್ನೂ ಸಂಗ್ರಹಿಸಿ ಒಟ್ಟು ಹದಿನಾಲ್ಕು ಬೃಹತ್ ಸಂಪುಟಗಳಲ್ಲಿ "ಡಾ. ಬಾಬಾಸಾಹೇಬ್ ಅಂಬೇಡ್ಕರ್ ಬರಹಗಳು ಮತ್ತು ಭಾಷಣಗಳು" ಎಂಬ ಶೀರ್ಷಿಕೆಯಲ್ಲಿ ಪ್ರಕಟಿಸುವ ಯೋಜನೆ ಹಾಕಿಕೊಂಡು ಇದುವರೆಗೆ ಒಟ್ಟು ಹದಿಮೂರು ಸಂಪುಟಗಳನ್ನು ಪ್ರಕಟಿಸಿದೆ. ಇನ್ನೂ ಒಂದು ಸಂಪುಟ ಬರಬೇಕಾಗಿದೆ. ಇದುವರೆಗೆ ಪ್ರಕಟಿತವಾದ ಹದಿಮೂರು ಸಂಪುಟಗಳಲ್ಲಿ ಬಹಳಷ್ಟು ಅವರ ಪ್ರಕಟಿತ ಮತ್ತು ಅಪ್ರಕಟಿತ ಬರಹಗಳು ಸೇರಿವೆ. ೧೯೭೯ರಲ್ಲಿ ಬಿಡುಗಡೆಯಾದ ಒಂದನೆಯ ಸಂಪುಟದಲ್ಲಿ ಜಾತಿ ನಿರ್ಮೂಲನೆ; ಭಾಷಾವರು ಪ್ರಾಂತ್ಯಗಳು; ರಾನಡೆ, ಗಾಂಧಿ, ಜಿನ್ನಾ; ರಾಜ್ಯಗಳು ಮತ್ತು ಅಲ್ಪಸಂಖ್ಯಾತರು; ಸಂಯುಕ್ತ ರಾಜ್ಯವೇ ಅಥವಾ ಸ್ವಾತಂತ್ರ್ಯವೇ ಮುಂತಾದ ಪರಿಚಿತ ಮತ್ತು ಪ್ರಕಟಿತ ಕೃತಿಗಳು ಸೇರಿವೆ. ಎರಡನೆಯ ಸಂಪುಟ (೧೯೮೨)ದಲ್ಲಿ ಮುಂಬಯಿ ಶಾಸಕಾಂಗದಲ್ಲಿ ಮತ್ತು ದುಂಡುಮೇಜಿನ ಪರಿಷತ್ತುಗಳಲ್ಲಿ ಅವರು ಮಾಡಿದ ಭಾಷಣಗಳೂ ಅಲ್ಲದೆ ಸೈಮನ್ ಆಯೋಗಕ್ಕೆ ಅವರು ನೀಡಿದ ಹೇಳಿಕೆಗಳೂ

ಮನವಿಗಳೂ ಸೇರಿವೆ. ಮೂರನೆಯ ಸಂಪುಟ (೧೯೮೭)ದಲ್ಲಿ ಅವರ ಅಪ್ರಕಟಿತ ಕೃತಿಗಳಾದ ಹಿಂದೂಧರ್ಮ ದರ್ಶನ; ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿಕ್ರಾಂತಿ; ಭಾರತ ಮತ್ತು ಸಮತಾವಾದದ ಪೂರ್ವಭಾವಿ ಆವಶ್ಯಕತೆಗಳು; ಬುದ್ಧ ಅಥವಾ ಕಾರ್ಲ್‌ಮಾರ್ಕ್ಸ್, ಮುಂತಾದವು ಸೇರಿವೆ. ೧೯೮೭ರಲ್ಲಿಯೇ ಅಪ್ರಕಟವಾದ ನಾಲ್ಕನೆಯ ಸಂಪುಟ ಮಹಾರಾಷ್ಟ್ರದಲ್ಲಿ ವಿವಾದದ ಅಲೆಯನ್ನೇ ಎಬ್ಬಿಸಿತು. ಇದರಲ್ಲಿ ಅವರ ಇನ್ನೊಂದು ಅಪ್ರಕಟಿತ ಬರಹ ಮಾಲೆ 'ಹಿಂದೂ ಧರ್ಮದ ಸಂದಿಗ್ಧಗಳು' ಪ್ರಕಟವಾಗಿದ್ದೇ ಆಂದೋಲನಕ್ಕೆ ಪ್ರಚೋದನೆಯಾಯಿತು. ಇದರಿಂದಾಗಿ ಮಹಾರಾಷ್ಟ್ರ ಸರ್ಕಾರ ಈ ಸಂಪುಟದ ಮಾರಾಟವನ್ನು ಕೆಲಕಾಲ ತಡೆಹಿಡಿಯಬೇಕಾಯಿತು. ನಂತರ ಆದ ಒಪ್ಪಂದದಿಂದ ಪುನಃ ಅದರ ಮಾರಾಟ ಮುಂದುವರಿಯಿತು. ೧೯೮೯ರಲ್ಲಿ ಪ್ರಕಟವಾದ ಐದನೆಯ ಸಂಪುಟವು ಸಂಪೂರ್ಣವಾಗಿ ಅಪ್ರಕಟಿತ ಬರಹಗಳಿಂದ ಕೂಡಿದ್ದು, ಇದರಲ್ಲಿ ಅಸ್ಪೃಶ್ಯರು ಮತ್ತು ಅಸ್ಪೃಶ್ಯತೆಯ ಬಗ್ಗೆ ಅವರ ಸಾಮಾಜಿಕ, ರಾಜಕೀಯ, ಧಾರ್ಮಿಕ ವಿಶ್ಲೇಷಣೆಯ ಲೇಖನಗಳಿವೆ. ಅದೇ ವರ್ಷ ಪ್ರಕಟವಾದ ಆರನೆಯ ಸಂಪುಟದಲ್ಲಿ ಸೇರಿರುವ ಎಲ್ಲಾ ಲೇಖನಗಳೂ ಅರ್ಥಶಾಸ್ತ್ರ ಸಂಬಂಧವಾಗಿದ್ದು 'ರೂಪಾಯಿಯ ಸಮಸ್ಯೆ'ಯೂ ಇದರಲ್ಲಿ ಸೇರಿದೆ. ೧೯೯೦ರಲ್ಲಿ ಪ್ರಕಟವಾಗಿರುವ ಏಳನೆಯ ಸಂಪುಟದಲ್ಲಿ ಶೂದ್ರರು ಯಾರು? ಮತ್ತು ಅಸ್ಪೃಶ್ಯರು ಯಾರು? ಅವರು ಹೇಗೆ ಮತ್ತು ಏಕೆ ಅಸ್ಪೃಶ್ಯರಾದರು ಎಂಬ ಅವರ ಈ ಎರಡು ಸಂಶೋಧನಾತ್ಮಕ ಮತ್ತು ಅತಿ ಮಹತ್ವದ ಗ್ರಂಥಗಳನ್ನು ಪುನರ್‌ಮುದ್ರಿಸಲಾಗಿದೆ. ಇದೇ ವರ್ಷ ಪ್ರಕಟಿಸಲಾಗಿರುವ ಎಂಟನೆಯ ಸಂಪುಟದಲ್ಲಿ ಡಾ. ಅಂಬೇಡ್ಕರ್ ಅವರ ಅತ್ಯಂತ ವಿವಾದಾತ್ಮಕ, ಆದರೆ ಅಷ್ಟೇ ವಿದ್ವತ್‌ಪೂರ್ಣ ಹಾಗೂ ವಾಸ್ತವಿಕತೆಯಿಂದ ಪ್ರೇರಿತವಾದ ಅವರ ಗ್ರಂಥ 'ಪಾಕಿಸ್ತಾನ ಅಥವಾ ಭಾರತದ ವಿಭಜನೆ'ಯ ಪುನರ್ ಮುದ್ರಣವಾಗಿದೆ. ಇದು ಅವರ ಮೇರುಕೃತಿ. ಮುಂಬರುವ ಸಂಪುಟಗಳಲ್ಲಿ ಗವರ್ನರ್-ಜನರಲ್ ಪರಿಷತ್ತು. ಸಂವಿಧಾನ ಸಭೆ ಮತ್ತು ಸಂಸತ್ತಿನಲ್ಲಿ ಡಾ. ಅಂಬೇಡ್ಕರ್ ಅವರು ಭಾಗವಹಿಸಿರುವುದು (೧೯೪೨ ರಿಂದ ೧೯೫೬), ಕಾಂಗ್ರೆಸ್ ಮತ್ತು ಮಿಸ್ಟರ್ ಗಾಂಧಿ ಅಸ್ಪೃಶ್ಯರಿಗೆ ಮಾಡಿದುದು ಏನು?; ಹಾಗೂ ಮಿಸ್ಟರ್ ಗಾಂಧಿ ಹಾಗೂ ಅಸ್ಪೃಶ್ಯರ ವಿಮೋಚನೆ (೯ನೆಯ ಸಂಪುಟ, ೧೯೯೧), ಮುಂಬಯಿಯ ಪೀಪಲ್ಸ್ ಎಜ್ಯುಕೇಶನ್ ಸೊಸೈಟಿ ನೀಡಿರುವ ಇನ್ನೂ ಕೆಲವು ಅಪ್ರಕಟಿತ ಬರಹಗಳು ಮತ್ತು ಇತರ ಸಮ್ಮಿಶ್ರ ಬರಹಗಳು ಪ್ರಕಟವಾಗಿವೆ. ಹತ್ತನೆಯ ಸಂಪುಟದಲ್ಲಿ (೧೯೯೧) ಅವರು ಗವರ್ನರ್ ಜನರಲ್‌ರವರ ಕಾರ್ಯಕಾರಿ ಸಮಿತಿಯ ಸದಸ್ಯರಾಗಿದ್ದಾಗಿನ ದಾಖಲೆಗಳಿವೆ. ೧೯೯೨ರಲ್ಲಿ ಪ್ರಕಟವಾಗಿರುವ ೧೧ನೆಯ ಸಂಪುಟವು "ಬುದ್ಧ ಮತ್ತು ಅವನ ಧಮ್ಮ" ಗ್ರಂಥದ ಪುನರ್ ಮುದ್ರಣ. ೧೯೯೩ರಲ್ಲಿ ಪ್ರಕಟವಾಗಿರುವ ೧೨ನೆಯ ಸಂಪುಟದಲ್ಲಿ ಅವರ ಅಪ್ರಕಟಿತ ಕೃತಿಗಳಾದ 'ಪ್ರಾಚೀನ ಭಾರತದ ವಾಣಿಜ್ಯ'; 'ಅಸ್ಪೃಶ್ಯರು ಮತ್ತು ಬ್ರಿಟಿಷ್ ಸಾಮ್ರಾಜ್ಯ'; 'ಇಂಗ್ಲಿಷ್ ಸಂವಿಧಾನದ ಮೇಲೆ ಉಪನ್ಯಾಸಗಳು'; 'ಕಾಯ್ದೆ ಮತ್ತು ಕಾನೂನುಗಳ ಮೇಲೆ ಟಿಪ್ಪಣಿಗಳು'; 'ವೀಸಾಕ್ಕಾಗಿ ಕಾದಿದ್ದು' ಮತ್ತು ಇತರ ಸಮ್ಮಿಶ್ರ ಲೇಖನಗಳು ಸೇರಿವೆ. ೧೯೯೪ರಲ್ಲಿ ಪ್ರಕಟವಾಗಿರುವ ಹದಿಮೂರನೆಯ ಸಂಪುಟವು ಬಹಳ ಮಹತ್ವದ್ದಾಗಿದ್ದು ಅತ್ಯಂತ ಉಪಯುಕ್ತವೂ ಆಗಿದೆ. ಇದರಲ್ಲಿ ಡಾ. ಅಂಬೇಡ್ಕರ್‌ರವರು ಭಾರತ ಸಂವಿಧಾನದ ಪ್ರಮುಖ ಶಿಲ್ಪಿಯಾಗಿ ಭಾರತ ಸಂವಿಧಾನ ಸಭೆಯಲ್ಲಿ ನಿರ್ವಹಿಸಿದ ಜವಾಬ್ದಾರಿಯ ಸಂಪೂರ್ಣ ಪರಿಚಯವನ್ನು ದಾಖಲೆಗಳೊಂದಿಗೆ ಮಾಡಲಾಗಿದೆ. ಇದರಲ್ಲಿ ಸಂವಿಧಾನದ ಸಿದ್ಧಾಂತಗಳು ಮತ್ತು ನಿಯಮಗಳು ಹಾಗೂ ಅವುಗಳಿಂದ ಉದ್ಭವಿಸಬಹುದಾದ ಸಮಸ್ಯೆಗಳನ್ನು ಮುಂಗಂಡು ಅವುಗಳಿಗೆ ಡಾ. ಅಂಬೇಡ್ಕರ್‌ರವರು ನೀಡಿದ ವಿವರಣೆಗಳೂ ಸೇರಿವೆ. ಇಂಥ ಸ್ತುತ್ಯ ಉಪಕ್ರಮಕ್ಕಾಗಿ ಮಹಾರಾಷ್ಟ್ರ ಸರ್ಕಾರ ಅಭಿನಂದನಾರ್ಹ. ಅಲ್ಲದೆ ಪ್ರತಿ ಸಂಪುಟ ಸರಾಸರಿ ೫೦೦ ಪುಟಗಳಿಗಿಂತ ಹೆಚ್ಚಿದ್ದಾಗ್ಯೂ ಪ್ರತಿಯೊಂದರ ಬೆಲೆ ಕೇವಲ ನಲವತ್ತು ರೂಪಾಯಿಗಳಿರುವುದು (ಮೊದಲನೆಯ ಸಂಪುಟದ ಬೆಲೆ ಕೇವಲ ಹತ್ತು ರೂಪಾಯಿ) ಅತ್ಯಂತ ಸ್ವಾಗತಾರ್ಹ ಸಂಗತಿಯಾಗಿದೆ. ಡಾ. ಅಂಬೇಡ್ಕರ್ ಅವರ ಈ ಅಮೂಲ್ಯ ಮತ್ತು ಸಮಗ್ರ

ವೈಚಾರಿಕ ಸಾಹಿತ್ಯವನ್ನು ಒಂದೆಡೆ ಸಂಗ್ರಹಿಸಿ ಓದುಗರಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ದೊರಕುವಂತೆ ಮಾಡುವ ಮೂಲಕ ಮತ್ತು ವೈಚಾರಿಕ ಸಾಹಿತ್ಯಕ್ಕೆ ಹಾಗೂ ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ವಿಚಾರಗಳನ್ನು ಇಂದಿನ ಹಾಗೂ ಮುಂದಿನ ಪೀಳಿಗೆಗಳಿಗೆ ನೀಡುವ ಮೂಲಕ ಮಹಾರಾಷ್ಟ್ರ ಸರ್ಕಾರವು ಮಹತ್ತರವಾದ ಸೇವೆ ಸಲ್ಲಿಸಿದೆ.

ಡಾ. ಬಾಬಾಸಾಹೇಬ್ ಅಂಬೇಡ್ಕರ್ ಅವರ ಈ ಸಮಗ್ರ ಸಾಹಿತ್ಯ ಇಂಗ್ಲಿಷ್ ಭಾಷೆಯಲ್ಲಿ ಪ್ರಕಟವಾಗಿರುವುದರಿಂದ ಈ ಭಾಷೆಯನ್ನು ಚೆನ್ನಾಗಿ ಬಲ್ಲವರು ಮಾತ್ರ ಇದರ ಉಪಯೋಗ ಹೊಂದಬಹುದಾಗಿದೆ. ಆದ್ದರಿಂದ ಈ ಭಾಷೆಯಲ್ಲಿ ಪರಿಶ್ರಮವಿಲ್ಲದ ಇತರ ಭಾಷಿಕರಿಗೆ ಡಾ. ಅಂಬೇಡ್ಕರ್‌ರವರ ಉಪಯುಕ್ತ ಸಾಮಾಜಿಕ, ಆರ್ಥಿಕ, ರಾಜಕೀಯ ವಿಚಾರಗಳು ಲಭ್ಯವಿಲ್ಲ. ಇದು ಒಂದು ದೊಡ್ಡ ಕೊರತೆ. ಇದನ್ನು ನಿವಾರಿಸುವ ಏಕೈಕ ಮಾರ್ಗವೆಂದರೆ ಎಲ್ಲಾ ಬರಹಗಳನ್ನು ಭಾರತದ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಅನುವಾದಿಸಿ ಪ್ರಕಟಿಸುವುದು. ಈ ಕೆಲಸ ಎಲ್ಲಾ ಭಾಷೆಗಳಲ್ಲಿ ತುರ್ತಾಗಿ ಆಗಬೇಕಾಗಿದೆ.

ಈ ಆವಶ್ಯಕತೆಯನ್ನು ಮೊಟ್ಟಮೊದಲು ಮನಗಂಡ ಕರ್ನಾಟಕ ರಾಜ್ಯ ಸರ್ಕಾರ ೧೯೮೮ರ ಜೂನ್ ತಿಂಗಳಲ್ಲಿ ಡಾ. ಅಂಬೇಡ್ಕರ್ ಅವರ ಕೃತಿಗಳನ್ನು ಕನ್ನಡಕ್ಕೆ ಭಾಷಾಂತರಿಸುವ ಮಹತ್ವದ ನಿರ್ಣಯ ತೆಗೆದುಕೊಂಡು ಈ ಕೆಳಕಂಡವರನ್ನೊಳಗೊಂಡ ಸಂಪಾದಕ ಸಮಿತಿಯನ್ನು ನೇಮಿಸಿ ಆದೇಶ ಹೊರಡಿಸಿತು.

| | | |
|---|---|---|
| ೧) ಡಾ.ಎ.ಎಂ. ರಾಜಶೇಖರಯ್ಯ | – | ಸಂಪಾದಕರು |
| ೨) ಡಾ. ಸಿದ್ದಲಿಂಗಯ್ಯ | – | ಸದಸ್ಯರು |
| ೩) ಶ್ರೀ ದೇವನೂರ ಮಹಾದೇವ | – | ಸದ್ಯಸರು |
| ೪) ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | – | ಸದಸ್ಯ-ಕಾರ್ಯದರ್ಶಿ |

ಸಮಿತಿಯ ಪ್ರಥಮ ಸಭೆ ೩೦-೮-೧೯೮೮ ರಂದು ಬೆಂಗಳೂರಿನಲ್ಲಿ ಸೇರಿ ಡಾ. ಅಂಬೇಡ್ಕರ್ ಅವರ ಪ್ರಕಟಿತ, ಸುಪರಿಚಿತವಾದ ಹದಿನಾಲ್ಕು ಬಿಡಿ ಕೃತಿಗಳನ್ನು ಮಾತ್ರ ಭಾಷಾಂತರ ಮಾಡದೆ, ಮತ್ತು ಅವುಗಳಲ್ಲಿ ಕೆಲವು ಲಭ್ಯವಿಲ್ಲದಿರುವ ಕಾರಣದಿಂದಲೂ, ಮಹಾರಾಷ್ಟ್ರ ಸರ್ಕಾರದ ಯೋಜನೆಯಂತೆ ಪ್ರಕಟಿತವಾಗುತ್ತಿರುವ ಎಲ್ಲಾ ಸಂಪುಟಗಳನ್ನು ಮಹಾರಾಷ್ಟ್ರ ಸರ್ಕಾರದ ಅನುಮತಿ ಪಡೆದುಕೊಂಡು ಕನ್ನಡಕ್ಕೆ ಭಾಷಾಂತರಿಸಬೇಕೆಂದು ನಿರ್ಣಯ ತೆಗೆದುಕೊಂಡಿತು. ಈ ಪ್ರಕಾರ ಮಹಾರಾಷ್ಟ್ರ ಸರ್ಕಾರದ ಅನುಮತಿ ಕೋರಿ ಪತ್ರ ಬರೆಯಲಾಯಿತು. ಮಹಾರಾಷ್ಟ್ರ ಸರ್ಕಾರದವರು ದಿನಾಂಕ ೨-೫-೧೯೮೯ರ ಪತ್ರದಲ್ಲಿ ತಮ್ಮ ಅನುಮತಿ ನೀಡಿ, ಕರ್ನಾಟಕ ಸರ್ಕಾರಕ್ಕೆ ತಿಳಿಸಿದರು. ಆನಂತರವೇ ಭಾಷಾಂತರ ಕಾರ್ಯವನ್ನು ವ್ಯವಸ್ಥಿತವಾಗಿ ಕೈಗೆತ್ತಿಕೊಳ್ಳಲಾಯಿತು.

ನಮ್ಮ ಸಂಪಾದಕ ಸಮಿತಿಯು ಭಾಷಾಂತರ ಕಾರ್ಯಕ್ಕಾಗಿ ನಾಡಿನ ಗಣ್ಯ ವಿದ್ವಾಂಸರನ್ನು ಗುರುತಿಸಿ ಅವರ ಸಮ್ಮತಿ, ಸಹಕಾರ ಕೋರಿತು.* ಅವರ ಒಪ್ಪಿಗೆ ಪಡೆದ ನಂತರ ಪ್ರತಿಯೊಬ್ಬರಿಗೂ ಮೂಲ

---

ಭಾಷಾಂತರ ಕಾರ್ಯದಲ್ಲಿ ಭಾಗಿಗಳಾಗಿದ್ದವರು : (೧) ಡಾ.ಜಿ. ರಾಮಕೃಷ್ಣ, (೨) ಶ್ರೀ ಕೆ.ವಿ. ಸುಬ್ಬಣ್ಣ, (೩) ಡಾ.ಎಸ್.ಜಿ. ಜೈನಾಪುರ (೪) ಪ್ರೊ॥ ಎ.ಎಲ್. ಶಿವರುದ್ರಪ್ಪ (೫) ಶ್ರೀ ಎಚ್.ಎಸ್. ಶಿವಪ್ರಕಾಶ್ ಮತ್ತು (೬) ಡಾ. ದೇವೇಂದ್ರ ಕುಮಾರ ಹಕಾರಿ (೫ನೆಯ ಸಂಪುಟ); (೭) ಪ್ರೊ.ಕು.ಶಿ. ಹರಿದಾಸ ಭಟ್ಟ, (೮) ಡಾ.ಸಿ.ಕೆ. ರೇಣುಕಾರ್ಯ, (೯) ಡಾ.ಎಂ.ಸಿ. ಕೊಡ್ಲಿ (೧೦) ಪ್ರೊ. ಎನ್.ಬಿ. ಘೋಡ್ಕೆ, (೧೧) ಡಾ. ಜಿ.ಟಿ. ಮರುಳಸಿದ್ಧಪ್ಪ, (೧೨) ಡಾ. ಎಂ.ಎಸ್. ಕಲ್ಲೂರ, (೧೩) ಡಾ.ಆರ್. ಕೇಶವ, (೧೪) ಪ್ರೊ॥ ಡಿ.ಎಸ್. ಕುರ್ತಕೋಟಿ (೬ನೆಯ ಸಂಪುಟ: ಭಾಗ-೧ ಮತ್ತು ಭಾಗ-೨);

ಕೃತಿಯ ಸುಮಾರು ಒಂದು ನೂರು ಪುಟಗಳನ್ನು ವಹಿಸಲಾಯಿತು. ಡಾ. ಅಂಬೇಡ್ಕರ್ ಅವರ ಬರಹಗಳು ಭಾಷೆ ಮತ್ತು ವಿಚಾರಗಳು ಅತ್ಯಂತ ಕ್ಲಿಷ್ಟ ಹಾಗೂ ಗಹನವಾದುವುಗಳಾಗಿರುವುದರಿಂದ ಅವುಗಳ ಭಾಷಾಂತರ ಸುಲಭ ಸಾಧ್ಯವಲ್ಲ. ಭಾಷಾಂತರ ಮಾಡುವ ಮೊದಲು ಅದರ ಆಳವಾದ ಅಧ್ಯಯನ ಮತ್ತು ಮನನ ಆವಶ್ಯಕ. ಆದ್ದರಿಂದ ಭಾಷಾಂತರಕಾರರಿಗೆ ಹೆಚ್ಚು ಅವಧಿ ಬೇಕಾಯಿತು. ಕೆಲವರು ಭಾಷಾಂತರ ಮಾಡಿ ಕಳುಹಿಸಿದ ನಂತರ ಭಾಷೆ ಶೈಲಿ, ಪಾರಿಭಾಷಿಕ ಪದಗಳು ಮುಂತಾದವುಗಳ ಪರಿಶೀಲನೆ ಅಗತ್ಯವೆನಿಸಿತು. ಈ ಕಾರ್ಯದಲ್ಲಿ ಭಾಷಾತಜ್ಞರ ನೆರವು ಪಡೆಯಬೇಕೆಂದು ಸಂಪಾದಕ ಸಮಿತಿ ತೀರ್ಮಾನಿಸಿ ಕೆಳಕಂಡ ಮಹನೀಯರನ್ನು ಆಹ್ವಾನಿಸಲಾಯಿತು.

೧) ಡಾ. ಆರ್. ಸಿ. ಹಿರೇಮಠ, ಮಾಜಿ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ೨) ಡಾ. ದೇ. ಜವರೇಗೌಡ, ಮಾಜಿ ಕುಲಪತಿಗಳು, ಮೈಸೂರು ವಿಶ್ವವಿದ್ಯಾಲಯ, ಮೈಸೂರು ಮತ್ತು ೩) ಶ್ರೀ ವೈ.ಎಂ.ಸಿ. ಶರ್ಮ ಅಂದಿನ ಅಧ್ಯಕ್ಷರು, ಕರ್ನಾಟಕ ರಾಜಭಾಷಾ ಆಯೋಗ, ಬೆಂಗಳೂರು, ನಂತರ ದಿ. ಶ್ರೀ ಕಂಠೀರಾವ್ ಇವರು ಅನುವಾದಿತ ಭಾಗಗಳ ಪರಿಶೀಲನೆ ಮಾಡಲು ಒಪ್ಪಿಕೊಂಡರು. ಅನುವಾದ ಮಾಡಿದ ಭಾಗಗಳಲ್ಲಿ ಪದ ಬಳಕೆ, ಭಾಷೆ, ಶೈಲಿ ಮುಂತಾದವುಗಳಲ್ಲಿ ಸಾಧ್ಯವಾದಷ್ಟು ಏಕರೂಪತೆ ತರುವ ಕಾರ್ಯ ಭಾಷಾಂತರ ಮಾಡುವುದಕ್ಕಿಂತಲೂ ಹೆಚ್ಚು ಕಠಿಣ ಮತ್ತು ಪ್ರಯಾಸಕರ. ರಾಜ್ಯದ ವಿವಿಧ ಭಾಗಗಳ ಅನುವಾದಕರು ತಮ್ಮತಮ್ಮ ಪ್ರಾದೇಶಿಕ ಭಾಷೆ, ಶೈಲಿಯನ್ನನುಸರಿಸುವುದು ಸಹಜ. ಆದಷ್ಟು ಈ ಪ್ರಾದೇಶಿಕ ವೈವಿಧ್ಯವನ್ನು ಉಳಿಸಿಕೊಂಡು ಬರಲಾಗಿದೆ. ಈ ಹಿರಿಯ ತಜ್ಞರು ತಮ್ಮ ಅಮೂಲ್ಯ ಸಮಯವನ್ನು ಈ ಕಾರ್ಯಕ್ಕಾಗಿ ಸುಧಾರಿಸುವ ಪ್ರಯತ್ನ ಮಾಡಿದ್ದಾರೆ. ಇವರ ಸಹಕಾರವಿಲ್ಲದೆ ಈ ಕಾರ್ಯ ಸುಗಮವಾಗುತ್ತಿರಲಿಲ್ಲ. ಇವರು ಮೊದಲು ಮೈಸೂರು ಆಡಳಿತ ತರಬೇತಿ ಸಂಸ್ಥೆಯಲ್ಲಿ ನಂತರ ಬೆಂಗಳೂರಿನಲ್ಲಿ ಏರ್ಪಡಿಸಲಾಗಿದ್ದ ಮೂರು ದಿನಗಳ ಭಾಷಾಂತರ ಕಮ್ಮಟದಲ್ಲಿ ಭಾಗವಹಿಸಿ ಮಾರ್ಗದರ್ಶನ ಮಾಡಿದರು. ಈ ತಜ್ಞರಿಗೆ ಸಂಪಾದಕ ಸಮಿತಿ ಅತ್ಯಂತ ಋಣಿಯಾಗಿದೆ.

ಈಗ ಪ್ರಕಟವಾಗುತ್ತಿರುವ ಆರನೆಯ ಸಂಪುಟದಲ್ಲಿ ಡಾ. ಅಂಬೇಡ್ಕರ್‌ರವರು ಅರ್ಥಶಾಸ್ತ್ರ ಮತ್ತು ಹಣಕಾಸು ವ್ಯವಸ್ಥೆಯ ಬಗ್ಗೆ ರಚಿಸಿದ ಗ್ರಂಥಗಳು ಸೇರಿವೆ. ಈ ಸಂಪುಟವು ಸಂಪೂರ್ಣವಾಗಿ ಹಣಕಾಸು ವ್ಯವಸ್ಥೆಯ ಬಗ್ಗೆ, ಅದರಲ್ಲಿಯೂ ಮುಖ್ಯವಾಗಿ ಭಾರತದ ಅರ್ಥವ್ಯವಸ್ಥೆ ಹಾಗೂ ಹಣಕಾಸಿನ ವ್ಯವಸ್ಥೆ ಮತ್ತು ಆಡಳಿತವನ್ನು ಕುರಿತಂತೆ ಗಂಭೀರ, ವೈಜ್ಞಾನಿಕ ಮತ್ತು ವಸ್ತುನಿಷ್ಠ ವಿಶ್ಲೇಷಣೆಯನ್ನೊಳಗೊಂಡಿದೆ. ಈ ಹಿಂದೆಯೇ ಪ್ರಕಟವಾಗಿದ್ದ, ಆದರೆ ನಂತರ ಲಭ್ಯವಿರದ ಅವರ ಎರಡು ಕೃತಿಗಳಾದ ೧) ದಿ ಎವೊಲ್ಯೂಷನ್ ಆಫ್ ಪ್ರೊವಿನ್ಷಿಯಲ್ ಫೈನಾನ್ಸ್ ಇನ್ ಬ್ರಿಟಿಷ್ ಇಂಡಿಯಾ (ಬ್ರಿಟಿಷ್ ಇಂಡಿಯಾದಲ್ಲಿ ಪ್ರಾಂತೀಯ ಹಣಕಾಸಿನ ವಿಕಾಸ), ಮತ್ತು ೨) ದಿ ಪ್ರಾಬ್ಲಮ್ ಆಫ್ ದಿ ರುಪೀ (ರೂಪಾಯಿಯ ಸಮಸ್ಯೆ) ಇವುಗಳ ಪುನರ್ ಪ್ರಕಟಣೆ ಮಾಡಲಾಗಿದೆ. ಇವುಗಳೂ ಅಲ್ಲದೆ ಇಲ್ಲಿಯವರೆಗೂ ಪ್ರಕಟವಾಗದೇ ಇದ್ದ, ಅವರು ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯದ ವಿದ್ಯಾರ್ಥಿಯಾಗಿದ್ದಾಗ ಎಂ.ಎ.ಪದವಿಯ ಅಗತ್ಯತೆಗಳ ಭಾಗಶಃ ಪೂರೈಕೆಗಾಗಿ ತಮ್ಮ ೨೪ನೆಯ ವಯಸ್ಸಿನಲ್ಲಿಯೇ ಸಲ್ಲಿಸಿದ್ದ 'ಅಡ್‌ಮಿನಿಸ್ಟ್ರೇಷನ್ ಆ್ಯಂಡ್ ಫೈನಾನ್ಸ್ ಆಫ್ ದಿ ಈಸ್ಟ್ ಇಂಡಿಯಾ ಕಂಪನಿ' (ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮತ್ತು ಹಣಕಾಸು ವ್ಯವಸ್ಥೆ) ಎಂಬ ಅವರ ಪ್ರೌಢ ಪ್ರಬಂಧವನ್ನು ಈ ಸಂಪುಟದಲ್ಲಿ ಪ್ರಥಮ ಬಾರಿ ಪ್ರಕಟಿಸಲಾಗಿದೆ. ಈ ಮೂರೂ ಕೃತಿಗಳು ಇಂದಿನ ಭಾರತದ ಹಣಕಾಸು ವ್ಯವಸ್ಥೆಯ ಸಮಸ್ಯೆಗಳನ್ನು ಅರಿತುಕೊಳ್ಳಲು ಆವಶ್ಯಕವಾದ ಹಿನ್ನೆಲೆಯನ್ನು ವೈಜ್ಞಾನಿಕ ರೂಪದಲ್ಲಿ ಒದಗಿಸುತ್ತವೆ. ಸ್ವತಂತ್ರ ಭಾರತದ ಸಂವಿಧಾನವನ್ನು ರೂಪಿಸುವಲ್ಲಿ ಮಹತ್ತರ ಪಾತ್ರವಹಿಸಿದ ಅವರಿಗೆ ತಮ್ಮ ಶೈಕ್ಷಣಿಕ ಜೀವನದಾದ್ಯಂತ ಅರ್ಥಶಾಸ್ತ್ರಜ್ಞರಾಗಿ ಪಡೆದುಕೊಂಡ ಜ್ಞಾನ ಹಾಗೂ ಪರಿಣತಿ ಬಹಳ ಉಪಯುಕ್ತವಾಯಿತು. ಅವರು ನಮ್ಮ ರಾಜ ವ್ಯವಸ್ಥೆಯನ್ನು ಫೆಡರಲ್ ಮಾದರಿಯಲ್ಲಿ

ನಿರೂಪಿಸುವಾಗ ಅದರಂಗವಾಗಿ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ಮತ್ತು ಘಟಕ ರಾಜ್ಯಗಳಿಗೆ ಸಬಲ ಕೇಂದ್ರ ಸರ್ಕಾರದಲ್ಲಿ ನಿರ್ದಿಷ್ಟ ಅಧಿಕಾರಗಳನ್ನು ಕೊಡಮಾಡುವ ವ್ಯವಸ್ಥೆ ಮಾಡಿದರು. ಅದರಲ್ಲಿಯೂ ದೇಶದ ಅರ್ಥವ್ಯವಸ್ಥೆಯನ್ನು ರೂಪಿಸುವಲ್ಲಿ ಈಗ ಪ್ರಕಟವಾಗುತ್ತಿರುವ ಅವರ ಮೂರು ಕೃತಿಗಳಲ್ಲಿ ಪ್ರತಿಪಾದಿಸಲಾದ, ತತ್ವಗಳ ಪ್ರಭಾವವನ್ನು ಕಾಣಬಹುದು. ಅವರು 'ರಾಯಲ್ ಕಮಿಷನ್ ಆನ್ ಇಂಡಿಯನ್ ಕರೆನ್ಸಿ' ಎದುರು ನೀಡಿದ ಸಾಕ್ಷ್ಯ ಅವರು ಸಾರ್ವಜನಿಕ ಹಣಕಾಸು ವ್ಯವಸ್ಥೆಯಲ್ಲಿ ಹೊಂದಿದ್ದ ಪರಿಣತಿ ಮತ್ತು ಅಗಾಧ ಜ್ಞಾನವನ್ನು ಎತ್ತಿ ತೋರಿಸುವಂಥದಾಗಿತ್ತು. ಈ ಎಲ್ಲಾ ವಿಚಾರಗಳ ಕಾರಣ ಅವರು ಅಂದಿನ ಆಂಗ್ಲ ಅರ್ಥಶಾಸ್ತ್ರ ಪಂಡಿತರೆಲ್ಲರ ಗಮನ ಸೆಳೆದಿದ್ದರಲ್ಲದೆ ಅವರ ಪ್ರಶಂಸೆಗೂ ಪಾತ್ರರಾಗಿದ್ದರು.

ಅವರು ತಮ್ಮ ಚಿಕ್ಕವಯಸ್ಸಿನಲ್ಲಿಯೇ ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ೧೯೧೫ರಲ್ಲಿ ಸಲ್ಲಿಸಿದ ಪ್ರಬಂಧವಾದ "ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮತ್ತು ಹಣಕಾಸು ವ್ಯವಸ್ಥೆ"ಯಲ್ಲಿ ಅವರು ತೋರಿದ ಪ್ರೌಢಿಮೆ ಮತ್ತು ವ್ಯಕ್ತಪಡಿಸಿದ ರಾಷ್ಟ್ರೀಯತೆಗಳು ಉಲ್ಲೇಖನೀಯ. ಈ ಕೃತಿ ಈಸ್ಟ್ ಇಂಡಿಯಾ ಕಂಪನಿಯ ಆಡಳಿತದ ಒಂದು ತುಲನಾತ್ಮಕ ವಿವೇಚನೆಯಾಗಿತ್ತು. ಇದು ಬ್ರಿಟಿಷ್ ಚಕ್ರಾಧಿಪತ್ಯದ ಇಡೀ ವ್ಯವಸ್ಥೆಯ ವಿಮರ್ಶಾತ್ಮಕ ಮೌಲೀಕರಣದ ರೂಪದಲ್ಲಿತ್ತು. ಇದರಲ್ಲಿ ಅವರು ಹೇಳಿದ ಮಾತುಗಳು ಗಮನಾರ್ಹ.

"ಭಾರತಕ್ಕೆ ಇಂಗ್ಲೆಂಡಿನ ಕೊಡುಗೆಯನ್ನು ವಿವೇಚಿಸಬೇಕಾಗಿದೆ. ಇದರಲ್ಲಿ ಎದ್ದುಕಾಣುವ ಅಂಶವೆಂದರೆ ಆರ್ಥಿಕವಾಗಿ ಭಾರತಕ್ಕೆ ಇಂಗ್ಲೆಂಡಿನ ಕೊಡುಗೆಗಿಂತಲೂ ಇಂಗ್ಲೆಂಡಿಗೆ ಭಾರತವು ನೀಡಿದ ಕೊಡುಗೆ ಅಗಾಧವಾದದ್ದು. ಇದು ದಿಗ್ಭ್ರಮೆಗೊಳಿಸುವ ಅಂಶವಾದರೂ ಸತ್ಯಸಂಗತಿಯಾಗಿದೆ. ಇಂಗ್ಲೆಂಡಿನ ಕೊಡುಗೆ ಶೂನ್ಯವೆಂದೇ ಹೇಳಬಹುದು." ಈ ಎರಡೂ ಮಾತುಗಳು ಆರ್ಥಿಕವಾಗಿ ಸತ್ಯಸಂಗತಿಗಳಾಗಿವೆ. ಇಂಗ್ಲೆಂಡ್ ಭಾರತದ ಬೆಳ್ಳಿ ಮತ್ತು ಬಂಗಾರದ ಸಂಗ್ರಹಕ್ಕೆ ಒಂದು ಚಿಕ್ಕಾಸನ್ನೂ ನೀಡಿಲ್ಲ, ಆದರೆ ಅದು ಭಾರತವನ್ನು ಎಷ್ಟರಮಟ್ಟಿಗೆ ಬರಿದು ಮಾಡಿದೆಯೆಂದರೆ ಅದು ಭಾರತವನ್ನು ಇಡೀ ಪ್ರಪಂಚದಲ್ಲೇ ಒಂದು ಬತ್ತಿಹೋದ ಸ್ಥಳವನ್ನಾಗಿಸಿದೆ.

ಡಾ. ಅಂಬೇಡ್ಕರರೇ ಮುಂದುವರಿದು ಹೇಳಿರುವಂತೆ ಇಂಗ್ಲೆಂಡ್ ಭಾರತಕ್ಕೆ ಶಾಂತಿಯನ್ನು ಒದಗಿಸಿದೆ. ತಾನು ಸ್ಥಾಪಿಸಿದ ಆಡಳಿತ ವ್ಯವಸ್ಥೆ, ನ್ಯಾಯಾಂಗ ಪದ್ಧತಿ ಮುಂತಾದವು ಅದರ ಕೊಡುಗೆಯಾಗಿವೆ. ಆದರೆ "ಮೃಗ ಜೀವನದ ಶಾಂತಿಗಾಗಿ ಆರ್ಥಿಕ ದಾರಿದ್ರ್ಯಕ್ಕೆ ಪ್ರಾಶಸ್ತ್ಯ ಕೊಡಬೇಕೇ ಹೇಗೆ ಎಂಬುದನ್ನು ಪ್ರತಿಯೊಬ್ಬನೂ ಆಲೋಚಿಸಬೇಕಾದ ಸಂಗತಿ."

ಇತರ ಬರಹಗಳಂತೆ ಈ ಸಂಪುಟದಲ್ಲಿರುವ ಬರಹಗಳೂ ಡಾ. ಅಂಬೇಡ್ಕರ್‌ರವರ ವರ್ಣಮಯ ವ್ಯಕ್ತಿತ್ವದ ಪರಿಚಯ ಮಾಡಿಕೊಳ್ಳುವುದಕ್ಕೆ ಸಹಕಾರಿಯಾಗಿವೆ. ಅವರ ಬರಹಗಳಲ್ಲಿ ವ್ಯಕ್ತವಾಗುವ ಅವರ ದೇಶಪ್ರೇಮ, ರಾಷ್ಟ್ರೀಯ ಭಾವನೆ ಮತ್ತು ಭಾರತದ ಅಭಿವೃದ್ಧಿಗಾಗಿ ಅವರ ಉತ್ಕಟೇಚ್ಛೆ ಎಲ್ಲರಿಗೂ ಮಾದರಿಯಾಗಿವೆ. ಅವರು ಆರ್ಥಿಕ ವಿಷಯಗಳಲ್ಲಿ ಹೊಂದಿದ್ದ ಪ್ರೌಢಿಮೆ ಎಷ್ಟು ಉನ್ನತ ಮಟ್ಟದ್ದಾಗಿತ್ತೋ ಅಷ್ಟೇ ರಾಷ್ಟ್ರೀಯತೆಯ ದ್ಯೋತಕವಾಗಿತ್ತು. ಈ ಬರಹಗಳು ಅಂದಿನ ಆರ್ಥಿಕ ವ್ಯವಸ್ಥೆಯ ದೋಷಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಬರೆದವುಗಳಾಗಿದ್ದು ಹಾಗೂ ಅವುಗಳಿಗೆ ನಿವಾರಣೋಪಾಯಗಳ ರೂಪದಲ್ಲಿದ್ದರೂ ಇಂದೂ ಸಹ ಅವು ನಮ್ಮ ದೇಶದ ಇಂದಿನ ಸಾರ್ವಜನಿಕ ಹಣಕಾಸು ವ್ಯವಸ್ಥೆಯ ಹಾಗೂ ಅರ್ಥ ವ್ಯವಸ್ಥೆಯ ವಿದ್ಯಾರ್ಥಿಗಳಿಗೆ ಮತ್ತು ದೇಶದ ಆಗುಹೋಗುಗಳಲ್ಲಿ ಆಸಕ್ತರಾದ ಎಲ್ಲರಿಗೂ ಈ ಆರನೆಯ ಸಂಪುಟದಲ್ಲಿ ಪ್ರಕಟವಾಗಿರುವ ಡಾ. ಅಂಬೇಡ್ಕರ್‌ರವರ ವಿದ್ವತ್ಪೂರ್ಣ ಬರಹಗಳು ಸಹಾಯಕವಾಗುವುವೆಂದು ಆಶಿಸಲಾಗಿದೆಯಲ್ಲದೆ ಈ ಬರಹಗಳು ಈ ಕ್ಷೇತ್ರದಲ್ಲಿ ಸಂಶೋಧಕರಿಗೂ ಉಪಯುಕ್ತವಾಗುವುವೆಂದು ಭಾವಿಸಲಾಗಿದೆ.

ಈ ಸಂಪುಟದ ಭಾಷಾಂತರಕಾರರೆಲ್ಲರೂ ಅರ್ಥಶಾಸ್ತ್ರಜ್ಞರಾಗಿದ್ದು ಸಮರ್ಥರೀತಿಯಲ್ಲಿ ತಮ್ಮ ಕಾರ್ಯವನ್ನು ಮಾಡಿಕೊಟ್ಟಿರುತ್ತಾರೆ. ಅವರೆಲ್ಲರಿಗೂ ಸಂಪಾದಕ ಸಮಿತಿ ಋಣಿಯಾಗಿದೆ. ಈ ಸಂಪುಟದ ಪ್ರಕಟಣೆಗಾಗಿ ಶ್ರಮಿಸಿದ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ನಿರ್ದೇಶಕರಾದ ಶ್ರೀ ವೈ.ಕೆ. ಮುದ್ದುಕೃಷ್ಣ ಅವರಿಗೆ ಮತ್ತು ಅವರ ಸಿಬ್ಬಂದಿಯವರಿಗೆ ಸಂಪಾದಕ ಸಮಿತಿ ಆಭಾರಿಯಾಗಿದೆ. ಸಂಪುಟದ ಮುದ್ರಣಕಾರ್ಯವನ್ನು ನಿರ್ವಹಿಸಿದ ಓಂಕಾರ್ ಆಫ್‌ಸೆಟ್ ಪ್ರಿಂಟರ್ಸ್‌ರವರನ್ನು ನಾವು ಸ್ಮರಿಸುತ್ತೇವೆ.

ಧಾರವಾಡ
೨೮–೭–೯೫

**ಡಾ. ಎ.ಎಂ. ರಾಜಶೇಖರಯ್ಯ**
ಸಂಪಾದಕ ಸಮಿತಿಯ ಪರವಾಗಿ

# ಪರಿವಿಡಿ


ಸಂದೇಶಗಳು v

ಪರಿಷ್ಕೃತ ಮುದ್ರಣಕ್ಕೆ ಮುನ್ನುಡಿ x

ಎರಡನೇ ಮುದ್ರಣಕ್ಕೆ ಮುನ್ನುಡಿ xiv

ಮೂರನೇ ಮುದ್ರಣಕ್ಕೆ ಮುನ್ನುಡಿ xiv

ಸಂಪಾದಕೀಯ xvi

**ಕಾಂಡ – ೧**

ಈಸ್ಟ್ ಇಂಡಿಯಾ ಕಂಪನಿಯ ಆಡಳಿತ ಮತ್ತು ಹಣಕಾಸು ವ್ಯವಸ್ಥೆ ೩

**ಕಾಂಡ – ೨**

ಬ್ರಿಟಿಷ್ ಇಂಡಿಯಾದಲ್ಲಿ 'ಪ್ರಾಂತೀಯ ಹಣಕಾಸು ವ್ಯವಸ್ಥೆಯ ವಿಕಾಸ'
ದಿ ಜರ್ನಲ್ ಆಫ್ ರಾಯಲ್ ಎಕನಾಮಿಕ್ ಸೊಸೈಟಿ, ಲಂಡನ್ ಇದರಲ್ಲಿ ವಿಮರ್ಶೆ ೪೭

ಲೇಖಕನಮೊದಲ ಮಾತು ೪೯

ಮುನ್ನುಡಿ : ಎಡ್ವಿನ್ ಆರ್.ಎ. ಸೆಲಿಗ್ಮನ್ ೫೧

ಪ್ರಸ್ತಾವನೆ : ವಿಷಯದ ವ್ಯಾಖ್ಯೆ ಮತ್ತು ಸ್ಥೂಲ ನಿರೂಪಣೆ ೫೩

**ವಿಭಾಗ – I**

**ಪ್ರಾಂತೀಯ ಹಣಕಾಸು ವ್ಯವಸ್ಥೆಯ ಮೂಲ**

ಅಧ್ಯಾಯ ೧. ಸಾಮ್ರಾಜ್ಯ ಪದ್ಧತಿ : ಅದರ ವಿಕಾಸ ಮತ್ತು ವಿನಾಶ ೫೭

ಅಧ್ಯಾಯ ೨. ಸಾಮ್ರಾಜ್ಯವಾದದ ವಿರುದ್ಧ ಫೆಡರಲ್‌ವಾದ ೭೯

ಅಧ್ಯಾಯ ೩. ಕೇಂದ್ರ ಹಾಗೂ ಪ್ರಾಂತ್ಯಗಳ ನಡುವಣ ಹೊಂದಾಣಿಕೆ–
ಸಾಮ್ರಾಜ್ಯ ನಿರ್ವಹಿಸದ ಸಾಮ್ರಾಜ್ಯದ ಹಣಕಾಸು ೮೭

**ವಿಭಾಗ – II**

**ಪ್ರಾಂತೀಯ ಹಣಕಾಸು : ಅದರ ಬೆಳವಣಿಗೆ**

ಅಧ್ಯಾಯ ೪. ಹಣಹಂಚಿಕೆ ಆಧಾರಿತ ಮುಂಗಡಪತ್ರ ೯೯

ಅಧ್ಯಾಯ ೫. ನಿಗದಿತ ಆದಾಯ ಮೂಲದ ಮುಂಗಡಪತ್ರ ೧೨೪

ಅಧ್ಯಾಯ ೬. ಆದಾಯ ಹಂಚಿಕೆಯ ಮುಂಗಡಪತ್ರ ೧೪೬

## ವಿಭಾಗ – III

**ಪ್ರಾಂತೀಯ ಹಣಕಾಸು, ಅದರ ರಚನೆ**

ಅಧ್ಯಾಯ ೭. ಪ್ರಾಂತೀಯ ಹಣಕಾಸಿನ ಮಿತಿಗಳು ೧೯೦

ಅಧ್ಯಾಯ ೮. ಪ್ರಾಂತೀಯ ಹಣಕಾಸಿನ ಸ್ವರೂಪ ೨೦೨

ಅಧ್ಯಾಯ ೯. ಪ್ರಾಂತೀಯ ಹಣಕಾಸಿನ ವ್ಯಾಪ್ತಿಯ ವಿಸ್ತರಣೆ ೨೧೭

## ವಿಭಾಗ – IV

**ಭಾರತ ಸರ್ಕಾರದ ೧೯೧೯ನೆಯ ಕಾಯಿದೆಯ ಪ್ರಕಾರ ಪ್ರಾಂತೀಯ ಹಣಕಾಸು**

ಅಧ್ಯಾಯ ೧೦. ಬದಲಾವಣೆಯ ಆವಶ್ಯಕತೆ ೨೨೭

ಅಧ್ಯಾಯ ೧೧. ಬದಲಾವಣೆಯ ಸ್ವರೂಪ ೨೪೪

ಅಧ್ಯಾಯ ೧೨. ಬದಲಾವಣೆಯ ವಿಮರ್ಶೆ ೨೭೫

ಅಧ್ಯಾಯ ೧೩. ದ್ವಿಪ್ರಮಿತಿಯಿಂದ ಬೆಳ್ಳಿಯ ಪ್ರಮಿತಿಗೆ ೩೦೦

ಅಧ್ಯಾಯ ೧೪. ಬೆಳ್ಳಿಯ ಪ್ರಮಿತಿ ಮತ್ತು ಅದರ ವಿನಿಮಯ ಮೌಲ್ಯದಲ್ಲಿನ ಸ್ಥಾನಪಲ್ಲಟ ೩೪೫

ಅಧ್ಯಾಯ ೧೫. ಬೆಳ್ಳಿಯ ಪ್ರಮಿತಿ ಮತ್ತು ಅದರ ಅಸ್ಥಿರತೆಯ ದುಷ್ಪರಿಣಾಮಗಳು ೩೮೪

ಅಧ್ಯಾಯ ೧೬. ಸುವರ್ಣ ಪ್ರಮಿತಿಯ ಕಡೆಗೆ ೪೧೫

ಅಧ್ಯಾಯ ೧೭. ಸುವರ್ಣ ಪ್ರಮಿತಿಯಿಂದ ಸುವರ್ಣ ವಿನಿಮಯ ಪದ್ಧತಿಗೆ ೪೫೭

ಅಧ್ಯಾಯ ೧೮. ವಿನಿಮಯ ಪ್ರಮಿತಿಯ ಸ್ಥಿರತೆ ೪೭೨

ಅಧ್ಯಾಯ ೧೮. ಮರಳಿ ಸುವರ್ಣ ಪ್ರಮಿತಿಗೆ ೫೩೩

## ವಿಭಾಗ – V

**ಸಂಕೀರ್ಣ ಲೇಖನಗಳು**

೧. ಹಿಲ್ಟನ್ ಯಂಗ್ ಆಯೋಗವು ಭಾರತದ ಸಾಕ್ಷಿಗಳಿಗೆ ಹಂಚಿದ ಮನವಿ ಪತ್ರದ ಪ್ರತಿ ೫೮೯

೨. ಲಿಖಿತ ಹೇಳಿಕೆ ೫೯೧

೩. ಸಾಕ್ಷ್ಯಾಧಾರ ೫೯೯

೪. ಭಾರತದ ಹಣದ–ವ್ಯವಸ್ಥೆಯಲ್ಲಿ ಸದ್ಯದ ಸಮಸ್ಯೆ – I ೬೩೫
೫. ಭಾರತದ ಹಣದ–ವ್ಯವಸ್ಥೆಯಲ್ಲಿ ಸದ್ಯದ ಸಮಸ್ಯೆ – II ೬೪೦

**ದಿ ಇಕನಾಮಿಕ್ ಜರ್ನಲ್** **೬೪೬**

**ವಿಮರ್ಶೆ**

೧. ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಣಕಾಸಿನ ವಿಚಾರ ೬೪೬
೨. ಕರೆನ್ಸಿ ಅಂಡ್ ಎಕ್ಸ್‌ಚೇಂಜಸ್* ೬೪೮
೩. ತೆರಿಗೆ ವಿಚಾರಣಾ ಸಮಿತಿಯ ವರದಿ–೧೯೨೬(೧) ೬೫೩

**ಮುನ್ನುಡಿಗಳು**

೧. ಕಮೋಡಿಟಿ ಎಕ್ಸ್‌ಛೇಂಜ್ ೬೫೬
೨. ಭಾರತದಲ್ಲಿ ಸಾಮಾಜಿಕ ವಿಮೆ ೬೫೭

**ಒಂದು ಎಚ್ಚರಿಕೆ** ೬೫೯

**ವಿಷಯಸೂಚಿ** ೬೬೧

# ಡಾ॥ ಬಾಬಾಸಾಹೇಬ್ ಅಂಬೇಡ್ಕರ್
# ಬರೆಹಗಳು ಮತ್ತು ಭಾಷಣಗಳು

## ಸಂಪುಟ ೫

## ಅರಾಜಕತೆಯ ಪ್ರಥಮ ಪಾತ

ನಮ್ಮ ಸಾಮಾಜಿಕ ಮತ್ತು ಆರ್ಥಿಕ ಧ್ಯೇಯಗಳನ್ನು ಸಾಧಿಸಲು ನಾವು ಸಂವಿಧಾನಾತ್ಮಕ ಮಾರ್ಗಗಳನ್ನೇ ಅವಲಂಬಿಸಬೇಕು. ಸವಿನಯ ಅವಿಧೇಯತೆ, ಅಸಹಕಾರ ಮತ್ತು ಸತ್ಯಾಗ್ರಹ ಮಾರ್ಗಗಳನ್ನು ತ್ಯಜಿಸಬೇಕೆಂಬುದೇ ಇದರ ಅರ್ಥ. ಸಾಮಾಜಿಕ ಮತ್ತು ಆರ್ಥಿಕ ಧ್ಯೇಯಗಳನ್ನು ಸಾಧಿಸಲು ಸಂವಿಧಾನಾತ್ಮಕ ಮಾರ್ಗಗಳು ಲಭ್ಯವಿಲ್ಲದಿದ್ದಾಗ ಅಸಾಂವಿಧಾನಿಕ ಮಾರ್ಗಗಳನ್ನುಸರಿಸುವುದು ಒಂದು ರೀತಿ ಸಮರ್ಥನೀಯವಾಗಿತ್ತು. ಆದರೆ ಸಂವಿಧಾನಾತ್ಮಕ ಮಾರ್ಗಗಳು ಮುಕ್ತವಾಗಿರುವಾಗ ಅಸಾಂವಿಧಾನಿಕ ಮಾರ್ಗಗಳನ್ನನುಸರಿಸಲು ಯಾವುದೇ ರೀತಿಯ ಸಮರ್ಥನೆ ಇರುವುದಿಲ್ಲ ಮತ್ತು ಅದು ಸಮ್ಮತವೂ ಅಲ್ಲ. ಇಂತಹ ಮಾರ್ಗಗಳು ಅರಾಜಕತೆಯ ಪ್ರಥಮಪಾತಗಳಲ್ಲದೇ ಮತ್ತೇನೂ ಅಲ್ಲ. ನಾವು ಅವುಗಳನ್ನು ಎಷ್ಟು ಬೇಗ ತೊರೆಯುತ್ತೇವೆಯೋ ಅಷ್ಟೂ ಕ್ಷೇಮಕರ.

**ಡಾ.ಬಿ.ಆರ್.ಅಂಬೇಡ್ಕರ್**
ಸಂವಿಧಾನ ಸಭೆಯಲ್ಲಿ
ನವೆಂಬರ್ ೨೫,೧೯೪೯ ರಂದು.

# ಕಾಂಡ – ೧

# ಈಸ್ಟ್ ಇಂಡಿಯಾ ಕಂಪನಿ ಆಡಳಿತ
# ಮತ್ತು
# ಹಣಕಾಸು ವ್ಯವಸ್ಥೆ

**ಭೀಮರಾವ್ ಆರ್. ಅಂಬೇಡ್ಕರ್**

**ಮಾಸ್ಟರ್ ಆಫ್ ಆರ್ಟ್ಸ್ ಪದವಿಯ ಅಗತ್ಯತೆಗಳ ಭಾಗಶಃ**
**ಪೂರೈಕೆಗಾಗಿ ಸಲ್ಲಿಸಲಾದ ಪ್ರೌಢ ಪ್ರಬಂಧ**

ಮೇ ೧೫, ೧೯೧೫

# ಈಸ್ಟ್ ಇಂಡಿಯಾ ಕಂಪನಿಯ ಆಡಳಿತ
# ಮತ್ತು
# ಹಣಕಾಸು ವ್ಯವಸ್ಥೆ

ಈ ಪ್ರೌಢ ಪ್ರಬಂಧದ ಪ್ರತಿಯನ್ನು ಅಮೆರಿಕದ ವಾಷಿಂಗ್‌ಟನ್ ವಿಶ್ವವಿದ್ಯಾಲಯದ ಇತಿಹಾಸ ವಿಭಾಗದ ಡಾ. ಫ್ರ್ಯಾಂಕ್ ಎಫ್. ಕೋನ್‌ಲನ್‌ರವರು ಕೊಲಂಬಿಯಾ ವಿಶ್ವವಿದ್ಯಾಲಯದಿಂದ ಪಡೆದುಕೊಂಡು ನಾಗಪುರದ ಡಾ. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ಶ್ರೀ ವಸಂತ್ ಮೂನ್‌ರವರಿಗೆ ೧೯೭೯ರಲ್ಲಿ ಕೊಟ್ಟರು.

ಈ ಅಪ್ರಕಟಿತ ಪ್ರೌಢ ಪ್ರಬಂಧದ ಹಕ್ಕನ್ನು ಮತ್ತು ಒಡೆತನವನ್ನು ಹೊಂದಿದ್ದ ಅಮೆರಿಕದ ಕೊಲಂಬಿಯಾ ವಿಶ್ವವಿದ್ಯಾಲಯದವರು ಇದರ ಪ್ರಕಟಣೆಗೆ ಅನುಮತಿ ಕೊಟ್ಟಿದ್ದಕ್ಕಾಗಿ ಸಂಪಾದಕರು ಕೊಲಂಬಿಯಾ ವಿಶ್ವವಿದ್ಯಾಲಯಕ್ಕೆ ಕೃತಜ್ಞರಾಗಿದ್ದಾರೆ ಮತ್ತು ಈ ಪ್ರಬಂಧದ ಮುದ್ರಣಕ್ಕೆ ಮಹಾರಾಷ್ಟ್ರ ಸರ್ಕಾರಕ್ಕೆ ಅನುವು ಮಾಡಿಕೊಟ್ಟ ಡಾ. ಕೋನ್‌ಲನ್‌ರವರ ಔದಾರ್ಯ ಮತ್ತು ನಾಗಪುರದ ಡಾ. ಅಂಬೇಡ್ಕರ್ ಸಂಶೋಧನಾ ಸಂಸ್ಥೆಯ ಸಹಾಯವನ್ನೂ ಕೂಡ ಸಂಪಾದಕರು ಸ್ಮರಿಸುತ್ತಾರೆ.

# I

ಈಸ್ಟ್ ಇಂಡಿಯಾ ಕಂಪನಿಯ ಆಡಳಿತವನ್ನು ಅದರ ಚಾರಿತ್ರಿಕ ಬೆಳವಣಿಗೆಯನ್ನು ಗಮನಿಸದೆ ವಿವರಿಸುವುದಾದರೆ ಸುಲಭದಲ್ಲಿ ಹೀಗೆ ಉಲ್ಲೇಖಿಸಬಹುದು:

**I. ಮಾಲೀಕ ಮಂಡಳಿ (ಕೋರ್ಟ್ ಆಫ್ ಪ್ರೊಪ್ರೈಟರ್ಸ್)**

ಇದರಲ್ಲಿ "ಒಂದು ನಿರ್ದಿಷ್ಟ ಮೊಬಲಗಿನ ಬಂಡವಾಳಕ್ಕೆ ಶೇರುದಾರರು ಸದಸ್ಯರಾಗಿದ್ದು ಅವರು ತಮ್ಮೊಳಗಿನ ಕೆಲವು (ಇಪ್ಪತ್ನಾಲ್ಕು) ಪ್ರತಿನಿಧಿಗಳನ್ನು ಆರಿಸಿಕೊಳ್ಳುತ್ತಾರೆ. ಇಂಡಿಯಾ ಹಾಗೂ ಇಂಗ್ಲೆಂಡಿನ ಹಿತವನ್ನು ರಕ್ಷಿಸಲು ಅಗತ್ಯವಿರುವ ಕಾರ್ಯಕಾರಣಗಳನ್ನು ವಿಧಾನಗಳನ್ನು ಯೋಜಿಸುವುದೂ ಮತ್ತು ಅನುಷ್ಠಾನಕ್ಕೆ ತರುವುದೂ ಈ ಪ್ರತಿನಿಧಿಗಳ ಕರ್ತವ್ಯವಾಗಿರುತ್ತದೆ. ಹೀಗೆ ವರ್ಗಾಯಿಸಲ್ಪಟ್ಟ ಅಧಿಕಾರದ ಚಲಾವಣೆಯ ವಿಷಯದಲ್ಲಿ ಪರಿವೀಕ್ಷಣೆ ಹಾಗೂ ಮಿತವಾದ ನಿಯಂತ್ರಣವನ್ನು ಮಾಲೀಕ ಮಂಡಳಿ ತನ್ನ ಬಳಿ ಇಟ್ಟುಕೊಂಡಿರುತ್ತದೆ."

ಮಂಡಳಿಯಲ್ಲಿ ಸ್ಥಾನ ಮತ್ತು ಮತ ಲಭಿಸಬೇಕಾದರೆ ಈ ಕೆಳಗಿನ ಷರತ್ತುಗಳನ್ನು ಪಾಲಿಸಬೇಕು:

೫೦೦ ಪೌಂಡು ಬಂಡವಾಳವುಳ್ಳ ಮಾಲೀಕನಿಗೆ ಮಂಡಳಿಯಲ್ಲಿ ಒಂದು ಸ್ಥಾನದ ಹಕ್ಕು

೧೦೦೦ ಪೌಂಡು ಬಂಡವಾಳವುಳ್ಳ ಮಾಲೀಕನಿಗೆ ಒಂದು ಮತದ ಹಕ್ಕು

೩೦೦೦ ಪೌಂಡು ಬಂಡವಾಳವುಳ್ಳ ಮಾಲೀಕನಿಗೆ ಎರಡು ಮತಗಳ ಹಕ್ಕು

೬೦೦೦ ಪೌಂಡು ಬಂಡವಾಳವುಳ್ಳ ಮಾಲೀಕನಿಗೆ ಮೂರು ಮತಗಳ ಹಕ್ಕು

೧೦,೦೦೦ ದಿಂದ ೧,೦೦,೦೦೦/– ಅಥವಾ ಅದಕ್ಕೂ ಹೆಚ್ಚು ಪೌಂಡು ಬಂಡವಾಳವುಳ್ಳ ಮಾಲೀಕನಿಗೆ ನಾಲ್ಕು ಮತಗಳ ಹಕ್ಕು.

ಇದಲ್ಲದೆ ಮತದಾನಕ್ಕಿಂತ ಕೊನೆಯ ಪಕ್ಷ ಒಂದು ವರ್ಷಕ್ಕಿಂತ ಮೊದಲು ಪಾಲು ಬಂಡವಾಳವನ್ನು ಪಡೆದಿದ್ದರೆ ಮಾತ್ರವೇ ಮತದಾನದ ಹಕ್ಕು ಲಭ್ಯ. ಒಬ್ಬರು ಇನ್ನೊಬ್ಬರ ಪರವಾಗಿ (ಪ್ರಾಕ್ಸಿ) ಮತ ನೀಡಲು ಸಾಧ್ಯವಿಲ್ಲ. ಹಾಗೆಯೇ ಅಪ್ರಾಪ್ತ ವಯಸ್ಕರು ಮತ ಚಲಾಯಿಸಲು ಅರ್ಹರಾಗಿರುವುದಿಲ್ಲ ಎಂದು ವಿಧಿಸಲಾಗಿದೆ.

ಅರಸೊತ್ತಿಗೆಗೂ ಕಂಪನಿಗೂ ಸೇರಿದ ಲಾರ್ಡ್‌ಗಳು, ಸಾಮಾನ್ಯ ಪ್ರಜೆಗಳು, ಸ್ತ್ರೀಯರು, ಧರ್ಮಗುರುಗಳು, ಮಿಲಿಟರಿ ಮತ್ತು ಸಿವಿಲ್ ಅಧಿಕಾರಿಗಳು ಇದರಲ್ಲಿ ಮತದಾರರಾಗಿದ್ದರು.

ಮಂಡಳಿಯ ಅಧಿವೇಶನಗಳು ಮಾರ್ಚ್, ಜೂನ್, ಸೆಪ್ಟೆಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ನಡೆಯುತ್ತಿದ್ದವು. ಅರ್ಹರಾದ ಒಂಬತ್ತು ಮಂದಿ ಮಾಲೀಕ–ಸದಸ್ಯರು ಮಂಡಳಿಯ ವಿಶೇಷ ಅಧಿವೇಶನಕ್ಕೆ ಕರೆಕೊಡಬಹುದಾಗಿತ್ತು. ಅಧಿವೇಶನಗಳಲ್ಲಿ ಪದನಿಮಿತ್ತ ಅಧ್ಯಕ್ಷತೆ ವಹಿಸುವ ಸ್ಪೀಕರ್ ಮಂಡಳಿಯ ಮಂಜೂರಾತಿ ಅಗತ್ಯವಿರುವ ಎಲ್ಲ ಠರಾವುಗಳನ್ನು ಪ್ರಸ್ತುತಪಡಿಸುತ್ತಿದ್ದರು ಮತ್ತು ಕಂಪನಿಯ ವ್ಯವಹಾರದ ಲೆಕ್ಕಪತ್ರಗಳನ್ನು ಸದಸ್ಯರ ಮುಂದೆ ಇರಿಸುತ್ತಿದ್ದರು.

ಮಂಡಳಿಗೆ ನೀಡಿದ ಅಧಿಕಾರಗಳು ಯಾವುವೆಂದರೆ –

(೧) ಮಾಲೀಕ ಮಂಡಳಿ – ಕೋರ್ಟ್ ಆಫ್ ಡೈರೆಕ್ಟರ್ಸ್ – ರಚನೆಗೆ ಅರ್ಹರಾದ ವ್ಯಕ್ತಿಗಳನ್ನು ಆರಿಸುವುದು.

(೨) ಕೆಲವು ಸಂಸದೀಯ ನಿರ್ಬಂಧಗಳಿಗೊಳಪಟ್ಟು ಕಂಪನಿಯ ಶೇರು ಬಂಡವಾಳಕ್ಕೆ ಡಿವಿಡೆಂಡ್ ಘೋಷಿಸುವುದು.

(೩) ಈಸ್ಟ್ ಇಂಡಿಯಾ ಕಂಪನಿಯ ಸೂಕ್ತ ನಿರ್ವಹಣೆಗೆ ಬಾಧಕವೆನಿಸಬಹುದಾದ ಉಪನಿಯಮಗಳನ್ನು ತಿದ್ದುವುದು, ರದ್ದುಗೊಳಿಸುವುದು ಅಥವಾ ಪುನಾರಚಿಸುವುದು. ಇವು ಸಂಸದೀಯ ಕಾಯಿದೆಗಳಿಗೆ ವಿರೋಧವಾಗಿರದಂತೆ ನೋಡಿಕೊಳ್ಳುವುದು.

(೪) ವಾರ್ಷಿಕ ೨೦೦ ಪೌಂಡುಗಳಿಗಿಂತ ಮೇಲ್ಪಟ್ಟು ಸಂಬಳವನ್ನು ಮತ್ತು ನಿವೃತ್ತಿವೇತನ ಹಾಗೂ ೬೦೦ ಪೌಂಡುಗಳಿಗಿಂತ ಮೇಲ್ಪಟ್ಟು ಗ್ರಾಚ್ಯುಟಿಯನ್ನು ಏರಿಸುವುದನ್ನು ನಿಯಂತ್ರಿಸುವುದು.

(೫) ಒಳ್ಳೆಯ ಸೇವಾಕಾರ್ಯಕ್ಕಾಗಿ ನಗದು ಬಹುಮಾನ ಕೊಡುವುದು.

**II. ನಿರ್ದೇಶಕ ಮಂಡಳಿ (ಕೋರ್ಟ್ ಆಫ್ ಡೈರೆಕ್ಟರ್ಸ್)**

ಮಂಡಳಿಯಲ್ಲಿ ೨೪ ಸದಸ್ಯರು ಇರುತ್ತಿದ್ದರು. ಮತ ನೀಡುವ ಅರ್ಹತೆ ಪಡೆದ ಮಾಲೀಕರು ನಿರ್ದೇಶಕರನ್ನು ಚುನಾಯಿಸುತ್ತಿದ್ದರು. ನಿರ್ದೇಶಕ ಮಂಡಳಿಯ ಸದಸ್ಯನಾಗಲು ಬೇಕಾದ ಅರ್ಹತೆಗಳು ಯಾವುವೆಂದರೆ –

(೧) ಆತ ಹುಟ್ಟಿನಿಂದಲೋ ಅಥವಾ ಅಂಗೀಕೃತ ವಿಧಾನಗಳಿಂದಲೋ ಗ್ರೇಟ್ ಬ್ರಿಟನ್ನಿನ ಪ್ರಜೆಯಾಗಿರತಕ್ಕದ್ದು.

(೨) (ಎಷ್ಟು ಪೂರ್ವದಿಂದ ಎಂಬುದನ್ನು ಗಣನೆಗೆ ತಾರದೆ) ಆತ ೨೦೦೦ ಪೌಂಡುಗಳ ಶೇರು ಬಂಡವಾಳ ಉಳ್ಳವನಾಗಿರಬೇಕು.

(೩) ಆತ ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಸೌಥ್‌ಸೀ ಕಂಪನಿಯ ನಿರ್ದೇಶಕನಾಗಿರಬಾರದು.

(೪) ಮಂಡಳಿಯಲ್ಲಿ ಅಧಿಕಾರ ಪಡೆದ ಮೇಲೆ ಎರಡು ವರ್ಷಕಾಲ ಇಂಗ್ಲೆಂಡಿನಲ್ಲಿ ವಾಸ ಮಾಡುವಂಥವನಾಗಿರಬೇಕು.

(೫) ಚುನಾವಣೆಗೆ ಪೂರ್ವದ ಎರಡು ವರ್ಷಗಳಲ್ಲಿ ಆತ ಕಂಪನಿಯ ನೌಕಾಧಿಕಾರಿ ಯಾಗಿದ್ದಿರಬಾರದು.

(೬) ತನ್ನ ಅಥವಾ ಇತರರ ಚುನಾವಣೆಗಾಗಿ ಯಾವುದೇ ಕಾರಣ ಅಥವಾ ನೆಪ ಹಿಡಿದು ಮತಯಾಚನೆಯ ಪ್ರಯತ್ನವನ್ನು ಮಾಡಿರಬಾರದು – ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೂಡ.

(೭) (ಅ) ಯಾವುದೇ ಖಾಸಗೀ ವ್ಯಾಪಾರ ಮಾಡುವುದಿಲ್ಲ

(ಆ) ಕಂಪನಿಯೊಡನೆ ವೈಯಕ್ತಿಕ ನೆಲೆಯಲ್ಲಿ ಹೊರತು ಬೇರಾವ ನೆಲೆಯಲ್ಲಿಯೂ ವ್ಯವಹಾರ ಇಟ್ಟಿರುವುದಿಲ್ಲ.

(ಇ) ಪ್ರತಿಫಲ ಪಡೆಯುವ ಯಾವುದೇ ಉದ್ಯೋಗ ಅಥವಾ ಸ್ಥಾನವನ್ನು ಆಧಿಪತ್ಯದ ಕೆಳಗೆ ಸ್ವೀಕರಿಸುವುದಿಲ್ಲ– ಎಂಬುದಾಗಿ ಪ್ರಮಾಣವಚನವನ್ನು ತೆಗೆದುಕೊಳ್ಳಬೇಕು.

ಬೇರೆ ಬೇರೆ ಕರ್ತವ್ಯಗಳನ್ನು ನಿರ್ವಹಿಸುವ ದೃಷ್ಟಿಯಿಂದ ನಿರ್ದೇಶಕ ಮಂಡಳಿಯನ್ನು ಅನೇಕ ಸಮಿತಿಗಳಾಗಿ ವಿಭಜಿಸಲಾಗಿತ್ತು. ಅವುಗಳೆಂದರೆ–

| | | | |
|---|---|---|---|
| ೧. | ರಹಸ್ಯ ಸಮಿತಿ | ೨. | ಪತ್ರವ್ಯವಹಾರ ಸಮಿತಿ |
| ೩. | ಖಜಾನೆ ಸಮಿತಿ | ೪. | ಸರ್ಕಾರಿ ಸೇನೆ ಮತ್ತು ಉಗ್ರಾಣ ಸಮಿತಿ |
| ೫. | ಕಾಯಿದೆ ಕಾರ್ಯಕ್ರಮ ಸಮಿತಿ | ೬. | ಮಿಲಿಟರಿ ಕಾರ್ಯಕ್ರಮ ಸಮಿತಿ |
| ೭. | ಲೆಕ್ಕಪತ್ರ ಸಮಿತಿ | ೮. | ಖರೀದಿ ಸಮಿತಿ |
| ೯. | ಗೋದಾಮು ಸಮಿತಿ | ೧೦. | ಇಂಡಿಯ ಹೌಸ್ ಸಮಿತಿ |
| ೧೧. | ಕಡಲ ಸಾಗಾಟ ಸಮಿತಿ | ೧೨. | ಖಾಸಗಿ ವ್ಯಾಪಾರ ಸಮಿತಿ |
| ೧೩. | ಸಿವಿಲ್ ಕಾಲೇಜು | ೧೪. | ಮಿಲಿಟರಿ ಕಾಲೇಜು |

ಕಾರಕೂನರು, ಕೆಡೆಟ್‌ಗಳು, ಅಸಿಸ್ಟೆಂಟ್ ಸರ್ಜನ್‌ಗಳು ಮುಂತಾದ ನೇಮಕಾತಿಗಳನ್ನು ನಿರ್ದೇಶಕರೇ ಮಾಡುತ್ತಿದ್ದರು. ಆಡಳಿತ (ಸಿವಿಲ್) ಮತ್ತು ಮಿಲಿಟರಿ ಸೇವೆಗೆ ಬೇಕಾದ ಅಭ್ಯರ್ಥಿಗಳನ್ನು ಕಂಪನಿಯ ಆದಾಯಕ್ಕೆ ಹೊರೆಯಾಗಿದ್ದ ಎರಡು ಕಾಲೇಜುಗಳ ಸ್ನಾತಕರಿಂದಲೇ ಆರಿಸಿಕೊಳ್ಳಲಾಗುತ್ತಿತ್ತು.

## III. ಇಂಡಿಯಾ ವ್ಯವಹಾರಗಳ ಆಯುಕ್ತರ ಮಂಡಳಿ (ನಿಯಂತ್ರಕ ಮಂಡಳಿ) – (ಬೋರ್ಡ್ ಆಫ್ ಕಮಿಷನರ್ಸ್ ಫಾರ್ ದಿ ಅಫೇರ್ಸ್ ಆಫ್ ಇಂಡಿಯಾ) :

**ಮಂಡಳಿಯ ಅಧಿಕಾರಿಗಳು :**

(೧) "ಈಸ್ಟ್ ಇಂಡೀಸ್‌ನಲ್ಲಿ ಬ್ರಿಟಿಷರ ಸ್ವಾಧೀನ ಪ್ರದೇಶಗಳ ಮೇಲ್ವಿಚಾರಣೆ ಮತ್ತು ನಿಯಂತ್ರಣ, ಹಾಗೆಯೇ ಅಲ್ಲಿನ ವ್ಯಾಪಾರಿಗಳ ಸಂಘ, ಯುನೈಟೆಡ್ ಕಂಪನಿಯ ವ್ಯವಹಾರಗಳ ಮೇಲ್ವಿಚಾರಣೆ, ನಿಯಂತ್ರಣ"

(೨) "ಮುಂದೆ ಸೂಚಿಸಲಾಗುವ ಕ್ರಮದಂತೆ ಈಸ್ಟ್ ಇಂಡೀಸ್‌ನಲ್ಲಿ ಬ್ರಿಟಿಷರ ಅಧೀನತೆಗೊಳಪಟ್ಟ ಭೂಪ್ರದೇಶಗಳ ಸಿವಿಲ್ ಅಥವಾ ಮಿಲಿಟರಿ ಸರ್ಕಾರಕ್ಕೆ, ಅವುಗಳ ಆದಾಯಕ್ಕೆ ಸಂಬಂಧಿಸಿದ ಎಲ್ಲ ಕಾರ್ಯ, ಆಚರಣೆ ಮತ್ತು ವಿಷಯಗಳನ್ನು ನಿರ್ದೇಶಿಸುವ, ನಿಯಂತ್ರಿಸುವ ಮತ್ತು ಮೇಲ್ವಿಚಾರಣೆ ನೋಡಿಕೊಳ್ಳುವ ಕೆಲಸ".

"ಮೇಲ್ಕಂಡ ಮಂಡಳಿಯ ಎಲ್ಲ ಸದಸ್ಯರಿಗೂ ಎಲ್ಲ ಸೂಕ್ತ ಸಮಯದಲ್ಲೂ ಈ ಯುನೈಟೆಡ್ ಕಂಪನಿಯ ಕಾಗದಪತ್ರ ಮತ್ತು ಹಕ್ಕುಪತ್ರಗಳನ್ನು ನೋಡುವ ಹಕ್ಕುಂಟು. ಅವರಿಗೆ ಬೇಕಾದ ದಸ್ತಾವೇಜುಗಳ ನಕಲನ್ನು ಅವರಿಗೆ ಒದಗಿಸತಕ್ಕದ್ದು. ಮಂಡಳಿಯು ಸಮಾವೇಶವಾದ ಎಂಟು ದಿನಗಳೊಳಗಾಗಿ ಬ್ರಿಟಿಷ್ ಸ್ವಾಧೀನತೆಯಲ್ಲಿರುವ ಭೂಪ್ರದೇಶದ ಸಿವಿಲ್ ಮತ್ತು ಮಿಲಿಟರಿ ಆದಾಯಕ್ಕೆ ಸಂಬಂಧಿಸಿ ಕಂಪನಿಯ ಸಾಮಾನ್ಯ ಅಥವಾ ವಿಶೇಷ ಸಭೆಯ ನಡಾವಳಿಗಳ ವರದಿಗಳು, ಅನುಜ್ಞೆಗಳು, ಠರಾವುಗಳು ಅಥವಾ ಇತರ ನಿರ್ವಹಣೆಗಳ ಪ್ರತಿಗಳನ್ನು ನಿರ್ದೇಶಕ ಮಂಡಳಿಯು ಸದರಿ ಆಯುಕ್ತ ಮಂಡಳಿಗೆ ಒದಗಿಸಿಕೊಡಲು ಬದ್ಧವಾಗಿದೆ. ಅಂತೆಯೇ ಈಸ್ಟ್ ಇಂಡೀಸ್‌ನ ನೌಕರರಿಂದ ನಿರ್ದೇಶಕರಿಗೆ ಬರುವಂಥ ಪತ್ರವ್ಯವಹಾರದ ಪ್ರತಿಗಳನ್ನು ಬಂದ ತಕ್ಷಣ ಆಯುಕ್ತ ಮಂಡಳಿಗೆ ಒದಗಿಸತಕ್ಕದ್ದು. ಅದಲ್ಲದೆ ಬ್ರಿಟಿಷ್ ಸ್ವಾಧೀನತೆಯ ಭೂಪ್ರದೇಶದ ಸಿವಿಲ್ ಅಥವಾ ಮಿಲಿಟರಿ ಸರ್ಕಾರಗಳ ಬಗ್ಗೆ, ಅವುಗಳ ಆದಾಯದ ಬಗ್ಗೆ ಈಸ್ಟ್ ಇಂಡೀಸ್ ಕಂಪನಿಯ ಯಾವನೇ ನೌಕರನಿಗೆ ನಿರ್ದೇಶಕ ಮಂಡಳಿ ಕಳಿಸಲುದ್ದೇಶಿಸಿರುವ ಪತ್ರಗಳು, ಅನುಜ್ಞೆಗಳು ಅಥವಾ ಸೂಚನೆಗಳ ಪ್ರತಿಗಳನ್ನೂ ಅವರಿಗೆ ಒದಗಿಸತಕ್ಕದ್ದು."

ಈ ಮೇಲ್ಕಂಡ ವಿಷಯಗಳಿಗೆ ಸಂಬಂಧಿಸಿದ ಹಾಗೆ, ಮಂಡಳಿಯು ಕಾಲಕಾಲಕ್ಕೆ ನೀಡುವ ಆಜ್ಞೆ, ನಿಯಮಗಳ ಅನುಸಾರವಾಗಿ ಮಾಲೀಕ ಮಂಡಳಿಯು ನಡೆದುಕೊಳ್ಳತಕ್ಕದ್ದು ಮತ್ತು ಅವುಗಳಿಗೆ ಬದ್ಧವಾಗಿರತಕ್ಕದ್ದು.

"ನಿರ್ದೇಶಕ ಮಂಡಳಿ ತಾನು ಕಳಿಸಲುದ್ದೇಶಿಸಿರುವ ಪತ್ರವ್ಯವಹಾರವನ್ನು ಹದಿನಾಲ್ಕು ದಿನಗಳೊಳಗೆ ನಿಯಂತ್ರಣ ಮಂಡಳಿಗೆ ರವಾನಿಸದಿದ್ದಲ್ಲಿ (ನಿರ್ದೇಶಕ ಮಂಡಳಿಯ ಪತ್ರವ್ಯವಹಾರದ ಪ್ರತಿಗಳು ಮುಟ್ಟದಿರುವಾಗಲೂ ಅದಕ್ಕೋಸ್ಕರ ಕಾಯದೆ) ಈಸ್ಟ್ ಇಂಡೀಸ್ ಸ್ವಾಧೀನತೆಯ ಪ್ರದೇಶಗಳ ಸಿವಿಲ್ ಮತ್ತು ಮಿಲಿಟರಿ ಆಡಳಿತಕ್ಕೆ ಸಂಬಂಧಪಟ್ಟಂತೆ ಯಾವುದೇ ಅಧೀನ ಸರ್ಕಾರ ಅಥವಾ ಪ್ರಾಂತ್ಯ (ಪ್ರೆಸಿಡೆನ್ಸಿ)ಗಳಿಗೆ ಹುಕುಂ ಮತ್ತು ಸೂಚನೆಗಳನ್ನು ನಿಯಂತ್ರಕ ಮಂಡಳಿ ಸಿದ್ಧಗೊಳಿಸಿ ರವಾನಿಸುವುದು ನ್ಯಾಯ ಸಮ್ಮತವೆನಿಸುವುದು. ನಿರ್ದೇಶಕರು ಯಥಾಪೂರ್ವ ಕ್ರಮದಂತೆ ಈ ಪತ್ರವ್ಯವಹಾರಗಳನ್ನು ಆಯಾ ಸರ್ಕಾರಗಳಿಗೆ, ಸಂಸ್ಥಾನಗಳಿಗೆ ಮೇಲ್ಕಂಡ ಹುಕುಂ ಅಥವಾ ಸೂಚನೆಗಳ ಧಾಟಿಯನ್ನನುಲಕ್ಷಿಸಿ ರವಾನಿಸತಕ್ಕದ್ದು. ಒಂದು ಪಕ್ಷ ನಿರ್ದೇಶಕರು ಮೇಲ್ಕಂಡ ಹುಕುಂ ಅಥವಾ ಸೂಚನೆಗಳ ಬಗ್ಗೆ ಯಾವುದಾದರೂ ಮನವಿಯನ್ನು ನಿಯಂತ್ರಣ ಮಂಡಳಿಗೆ ಸಲ್ಲಿಸಿದಲ್ಲಿ ನಿಯಂತ್ರಕರು ಅದರಲ್ಲಿ ಬದಲಾವಣೆ ಮಾಡಬಹುದಾಗಿದೆ. ಅಲ್ಲದೇ ಇದನ್ನು ನಿಯಂತ್ರಣ ಮಂಡಳಿ ಚಾಚೂ ತಪ್ಪದೆ ಪಾಲಿಸಲು ಬದ್ಧವಾಗಿದೆ."

ನಿಯಂತ್ರಣ ಸಮಿತಿಯನ್ನು ಕರ್ತವ್ಯಾನುಸಾರ ಆರು ಇಲಾಖೆಗಳಾಗಿ ವಿಭಜಿಸಲಾಗಿತ್ತು:

(೧) ಲೆಕ್ಕಪತ್ರ (೨) ಕಂದಾಯ (೩) ನ್ಯಾಯ (೪) ಮಿಲಿಟರಿ (೫) ರಹಸ್ಯ ಮತ್ತು ರಾಜಕೀಯ (೬) ವಿದೇಶೀಯ ಮತ್ತು ಸಾರ್ವಜನಿಕ.

ಇಂಡಿಯಾದ ಸ್ಥಳೀಯ ಆಡಳಿತ ಕ್ರಮ ಹೇಗಿತ್ತೆಂದರೆ :

ದೇಶವನ್ನು ಬಂಗಾಳ, ಮದರಾಸು ಮತ್ತು ಮುಂಬಯಿ ಎಂಬ ಮೂರು ಪ್ರಾಂತ್ಯಗಳಾಗಿ (ಪ್ರೆಸಿಡೆನ್ಸಿ) ವಿಭಜಿಸಲಾಗಿತ್ತು. ಫೋರ್ಟ್ ವಿಲಿಯಮ್, ಫೋರ್ಟ್ ಸೈಂಟ್ ಜಾರ್ಜ್ ಮತ್ತು ಮುಂಬಯಿ – ಈ ಮೂರು ಸ್ಥಳಗಳು ಕ್ರಮವಾಗಿ ಇವುಗಳ ರಾಜಧಾನಿಗಳು.

ಮೊದಮೊದಲು ಭಾರತದ ಪರಮೋಚ್ಚ ಸ್ಥಳೀಯ ಆಡಳಿತವನ್ನು ಈ ಮೂರು ಸರ್ಕಾರಗಳಿಗೆ ಸಮಾನವಾಗಿ ಹಂಚಿಕೊಡಲಾಗಿತ್ತು. ಅರ್ಥಾತ್ ಮೂರೂ ಒಂದಕ್ಕೊಂದು ಸಮಾನಸ್ತಂಭವೆನಿಸಿದ್ದುವು. ನಂತರ ಕೇಂದ್ರೀಕರಣದ ದೃಷ್ಟಿಯಿಂದ ಪರಮೋಚ್ಚ ಸ್ಥಾನವನ್ನು ಫೋರ್ಟ್ ವಿಲಿಯಮ್‌ನಲ್ಲಿರುವ ಬಂಗಾಳದ ಗವರ್ನರ್‌ಗೆ ನೀಡಿ ಅವನನ್ನು ಗವರ್ನರ್–ಜನರಲ್–ಆಫ್–ಇಂಡಿಯಾ ಎಂಬುದಾಗಿ ಕರೆದು ಉಳಿದ ಇಬ್ಬರು ಗವರ್ನರುಗಳನ್ನು ಅವನ ಅಧೀನದಲ್ಲಿರಿಸಲಾಯಿತು.

ಬ್ರಿಟಿಷ್ ಆಳರಸರ ಸಮ್ಮತಿ ಪಡೆದು ನಿಯಂತ್ರಣ ಮಂಡಳಿ ಗವರ್ನರ್–ಜನರಲ್‌ನ ನೇಮಕ ಮಾಡುತ್ತಿತ್ತು. ಆತನ ಸಹಾಯಕ್ಕೆಂದು ಒಂದು ಸುಪ್ರೀಮ್ ಕೌನ್ಸಿಲ್ (ಪರಮೋಚ್ಚ ಸಮಿತಿ) ಸಂಘಟಿತವಾಯಿತು. ಅದರಲ್ಲಿ ಮೊಟ್ಟಮೊದಲಿಗೆ ಕಂಪನಿಯಲ್ಲಿ ಹತ್ತು ವರ್ಷ ಅನುಭವ ಪಡೆದ ಮೂವರು ನೌಕರರೂ ಸೇರಿದಂತೆ ನಾಲ್ವರು ಸದಸ್ಯರಿರುತ್ತಿದ್ದರು. ನಾಲ್ಕನೆಯವನು ಕಂಪನಿಯ ಸೇವೆಯ ಹೊರಗಿನವನಾಗಿರಬೇಕು. ಇಂಡಿಯಾದ ಸೇನೆಯ ಕಮಾಂಡರ್–ಇನ್–ಚೀಫ್, ಗವರ್ನರ್–ಜನರಲ್ ಅವರು ಕೌನ್ಸಿಲಿನ ಪದನಿಮಿತ್ತ ಸದಸ್ಯರಾಗಿರುತ್ತಿದ್ದರು. ೧೮೫೩ರಲ್ಲಿ ಈ ಸುಪ್ರೀಮ್ ಕೌನ್ಸಿಲಿನ ಸಂಖ್ಯೆಯನ್ನು ವಿಸ್ತರಿಸಲಾಯಿತು. ಆಗ ಅದರಲ್ಲಿ ಆರು ಮಂದಿ ಶಾಸನಕರ್ತ ಸದಸ್ಯರಿಗೆ ಅನುವು ಮಾಡಿಕೊಟ್ಟು ಅವರು ಕೇವಲ ಶಾಸನ ಮತ್ತು ನಿಯಮಗಳ ರಚನೆಯ ಕಾಲಕ್ಕೆ ಹಾಜರಿದ್ದು ಮತದಾನಮಾಡಬೇಕೆಂದು ನಿಶ್ಚಯಿಸಲಾಯಿತು. ಆರು

ಮಂದಿಯ ಪೈಕಿ ನಾಲ್ವರು ಮುಂಬಯಿ, ಮದರಾಸು, ಬಂಗಾಳ ಮತ್ತು ವಾಯವ್ಯ ಗಡಿನಾಡ ಪ್ರಾಂತ (NWFP)ಗಳಲ್ಲಿ ಕನಿಷ್ಠ ಹತ್ತು ವರ್ಷ ಸೇವಾನುಭವವುಳ್ಳ ಸಿವಿಲ್ ಸರ್ವಿಸ್ ಅಧಿಕಾರಿಗಳಾಗಿರಬೇಕು. ಉಳಿದೆರಡು ಸ್ಥಾನಗಳನ್ನು ಕಲ್ಕತ್ತದಲ್ಲಿರುವ ವರಿಷ್ಠ ನ್ಯಾಯಾಲಯದ ವರಿಷ್ಠ ನ್ಯಾಯಮೂರ್ತಿಯವರೂ, ಇನ್ನೊಬ್ಬ ನ್ಯಾಯಮೂರ್ತಿಯೂ ಅಲಂಕರಿಸುತ್ತಿದ್ದರು. ಸ್ಟ್ಯಾಚೂಟ್ ೧೬ ಮತ್ತು ೧೭ ವಿಕ್ಟೋರಿಯಾ ಅಧ್ಯಾಯ ೯೫ರ ಸೆಕ್ಷನ್ ೨೨ರಲ್ಲಿ ಪ್ರಣೀತವಾದಂತೆ ಹನ್ನೊಂದು ಮಂದಿಯ ಈ ಕೌನ್ಸಿಲಿಗೆ ಇನ್ನಿಬ್ಬರನ್ನು ಗವರ್ನರ್ ಜನರಲ್ ಸೇರಿಸಿಕೊಳ್ಳಬಹುದಾಗಿತ್ತು. ಆದರೆ ಸಿಪಾಯಿದಂಗೆಯ ಕಾಲದವರೆಗೆ ಈ ಸವಲತ್ತನ್ನು ಗವರ್ನರ್–ಜನರಲ್ ಬಳಸಿಕೊಳ್ಳಲಿಲ್ಲ.

ಕಾರ್ಯನಿರ್ವಾಹಕ ಸರ್ಕಾರದ ಮಟ್ಟಿಗೆ ಗವರ್ನರ್ ಜನರಲ್ ಮತ್ತು ಕಮಾಂಡರ್–ಇನ್–ಚೀಫ್‌ಗಳು ಸೇರಿದಂತೆ ಆರು ಸದಸ್ಯರ ಸುಪ್ರೀಮ್ ಕೌನ್ಸಿಲ್ ಆಫ್ ಇಂಡಿಯಾ ಎಂಬುದಿತ್ತು; ಏಳು ಮಂದಿಯ ಹಾಜರಾತಿಯು ಕೋರಂಗೆ ಸಾಕಾದಷ್ಟು ಎಂಬಂತಿದ್ದ, ಹನ್ನೆರಡು ಮಂದಿಯ ಶಾಸಕಾಂಗ ಇದ್ದಿತು.

ಗವರ್ನರ್–ಜನರಲ್‌ನ ಅಧಿಕಾರ ಎಷ್ಟಿತ್ತೆಂದರೆ ನಿಜಕ್ಕೂ ಅವನು ನಿರಂಕುಶ ಪ್ರಭುತ್ವಕ್ಕೆ ಸಮೀಪದಲ್ಲೇ ಇರುತ್ತಿದ್ದ. ಕೌನ್ಸಿಲ್‌ನ ನಿರ್ಣಯಗಳನ್ನು ತಳ್ಳಿಹಾಕುವುದಲ್ಲದೆ ಕೌನ್ಸಿಲನ್ನು ಕೇಳದೆಯೆ ಬೇಕಾದ ತೀರ್ಮಾನಗಳನ್ನು ತಾನೇ ರೂಪಿಸಿ ಅನುಷ್ಠಾನಕ್ಕೆ ತರಬಹುದಾಗಿತ್ತು. ಸರ್ವ 'ರಾಜಕೀಯ' ನೇಮಕಾತಿಗಳ ಅಧಿಕಾರವೂ ಆತನ ಕೈಯೊಳಗಿತ್ತು. ದೇಶೀಯ ರಾಜ್ಯಗಳಿಗೆ ರೆಸಿಡೆಂಟರನ್ನು ನೇಮಕ ಮಾಡುವುದಾಗಲಿ, ಹತೋಟಿಗಾಗಿ ಹೊರಗಿನ ಸಂಸ್ಥಾನಗಳಿಗೆ ಕಮಿಷನರುಗಳನ್ನು ನೇಮಿಸುವುದಾಗಲಿ ಆತನದೇ ಅಧಿಕಾರ. ಬಂಗಾಳ ಮತ್ತು ವಾಯವ್ಯ ಗಡಿನಾಡು ಪ್ರಾಂತದ ಲೆಫ್ಟಿನೆಂಟ್–ಗವರ್ನರ್‌ಗಳನ್ನು ನೇಮಿಸುವುದು, ಕೆಳಕೋರ್ಟುಗಳ ನ್ಯಾಯಮೂರ್ತಿಗಳನ್ನು ನೇಮಿಸುವುದು ಹಾಗೂ ಬಂಗಾಳ ಮತ್ತು ವಾಯವ್ಯ ಪ್ರಾಂತದಲ್ಲಿ ಮಿಲಿಟರಿ ಸಹಾಯದ ನಿಯಂತ್ರಣವೂ ಆತನಿಗೇ ಸೇರಿದ ವಿಷಯವೆನಿಸಿತ್ತು.

ನಾಲ್ಕು ಅಧೀನ ಸರ್ಕಾರಗಳ ವಲಯದ ಹೊರಗಿನ ಎಲ್ಲ ಜಿಲ್ಲೆಗಳ ಆಡಳಿತ ನೇರವಾಗಿ ಗವರ್ನರ್–ಜನರಲ್–ಇನ್–ಕೌನ್ಸಿಲ್ಲನಿಗೆ ಸೇರಿದುದಾಗಿತ್ತು, ಅಂತೆಯೇ ಒಡಂಬಡಿಕೆಗಳಿಗನುಗುಣವಾಗಿ ಒದಗಿಬರುವ ದೇಶೀರಾಜ್ಯಗಳ ಮೇಲೂ ಗವರ್ನರ್–ಜನರಲ್‌ನೇ ನಿಯಂತ್ರಣವುಳ್ಳವನಾಗಿದ್ದ. ಆತನ ಸಿಬ್ಬಂದಿಯನ್ನು ನಾಲ್ಕು ವಿಭಾಗಗಳಾಗಿ ಮಾಡಿದ್ದರು ಮತ್ತು ಪ್ರತಿಯೊಂದು ವಿಭಾಗಕ್ಕೂ ಒಬ್ಬೊಬ್ಬ ಕಾರ್ಯದರ್ಶಿ ನೇಮಕಗೊಂಡಿರುತ್ತಿದ್ದ.

(೧) ವಿದೇಶೀಯ ವಿಭಾಗ (ದೇಶೀರಾಜ್ಯಗಳಿಗೆ ಸಂಬಂಧಿಸಿದಂತೆ 'ವಿದೇಶೀಯ')

(೨) ನ್ಯಾಯಾಂಗ ಮತ್ತು ಕಂದಾಯವನ್ನೊಳಗೊಂಡಿದ್ದ ಗೃಹ ವಿಭಾಗ

(೩) ಹಣಕಾಸಿನ ವಿಭಾಗ

(೪) ಮಿಲಿಟರಿ ವಿಭಾಗ

ಇಷ್ಟಲ್ಲದೆ ರಾಜಕೀಯ ಮತ್ತು ಹಣಕಾಸಿನ ಕಾರ್ಯದರ್ಶಿಯ ಅಧೀನದಲ್ಲಿ ರಹಸ್ಯ ವ್ಯವಹಾರಗಳನ್ನು ನೋಡಿಕೊಳ್ಳಲು ರಹಸ್ಯ ಇಲಾಖೆಗಳಿರುತ್ತಿದ್ದವು.

ಮದರಾಸು ಮತ್ತು ಮುಂಬಯಿಯ ಅಧೀನ ಸರ್ಕಾರಗಳ ಆಡಳಿತ ಹೀಗಿರುತ್ತಿತ್ತು: ಅಂಥ ಪ್ರತಿ ಅಧೀನ ಸರ್ಕಾರಕ್ಕೂ ಒಬ್ಬೊಬ್ಬ ಗವರ್ನರ್, ಕಮಾಂಡರ್–ಇನ್–ಚೀಫನ್ನು ಒಳಗೊಂಡಂತೆ ತ್ರಿಸದಸ್ಯರ ಒಂದು ಕೌನ್ಸಿಲ್. ಗವರ್ನರ್‌ಗಳನ್ನೂ ಕೌನ್ಸಿಲ್‌ಗಳನ್ನೂ ನಿರ್ದೇಶಕ ಮಂಡಳಿಯೇ ನೇಮಿಸುವುದು. ಗವರ್ನರ್ ಜನರಲ್‌ನಿಂದ ನೇಮಕವಾದ ಲೆಫ್ಟಿನೆಂಟ್ ಗವರ್ನರ್‌ಗಳು ಬಂಗಾಳ ಮತ್ತು ವಾಯವ್ಯ

ಗಡಿನಾಡ ಪ್ರಾಂತಗಳಲ್ಲಿ ಆಡಳಿತ ನಡೆಸುತ್ತಿದ್ದರು. ಅಧೀನ ಸರ್ಕಾರಗಳಿಗೆ ಶಾಸನ ರಚನೆ ಮತ್ತು ಹೊಸ ಹುದ್ದೆಗಳಿಗೆ ನೇಮಕ ಮಾಡುವ ಅಧಿಕಾರವಿರಲಿಲ್ಲ. ಹಾಗೆಯೇ ಕೌನ್ಸಿಲ್‌ನ ಗವರ್ನರ್–ಜನರಲ್‌ನ ಪೂರ್ವಸಮ್ಮತಿ ಇಲ್ಲದೆ ಅವು ಸಂಬಳ, ಗ್ರಾಚ್ಯುಯಿಟಿ ಅಥವಾ ಭತ್ಯೆಗಳನ್ನೂ ಮಂಜೂರು ಮಾಡುವಂತಿರಲಿಲ್ಲ. ಕಾನೂನು ಕಠಿಣವೆಂದು ಕಂಡರೂ ಅದರ ಪಾಲನೆಯಲ್ಲಿ ನಿಷ್ಠುರತೆಗಿಂತ ಸಂಪ್ರದಾಯಕ್ಕೆ ಹೆಚ್ಚು ಬೆಲೆ ಇತ್ತು. ಗವರ್ನರ್–ಜನರಲ್‌ನ ಹೊರೆ ಇಳಿಸುವ ನಿಟ್ಟಿನಲ್ಲಿ ಸಣ್ಣಪುಟ್ಟ ವಿಷಯಗಳಲ್ಲಿ ಗವರ್ನರನೇ ನಿರ್ಣಯ ಕೈಗೊಂಡು ಅವನ್ನು ತ್ರೈಮಾಸಿಕ ವರದಿಯಲ್ಲಿ ಸೇರಿಸಿದರೆ ಅವನ್ನು ಗವರ್ನರ್–ಜನರಲ್ ಸಾಮಾನ್ಯವಾಗಿ ಮಂಜೂರು ಮಾಡಿಯೇ ಮಾಡುತ್ತಿದ್ದರು. ಮುಂಬಯಿ ಮತ್ತು ಮದರಾಸು ಸರ್ಕಾರಗಳು ತಮ್ಮ ವರದಿಗಳ ಮುಖ್ಯಾಂಶಗಳನ್ನು ನಿರ್ದೇಶಕಮಂಡಳಿಗೂ, ಇಂಡಿಯಾ ಸರ್ಕಾರಕ್ಕೂ ನೇರವಾಗಿ ಕಳುಹಿಸಿಕೊಡಬಲ್ಲವಾಗಿದ್ದವು. ಲಿಖಿತ ಅಥವಾ ಅಲಿಖಿತ ಒಪ್ಪಂದ ಸಹಿತವಾದ ಸಿವಿಲ್, ಮಿಲಿಟರಿ, ನೌಕಾ ಮತ್ತು ಧಾರ್ಮಿಕ ಸೇವೆಗಳು ಭಾರತ ಸರ್ಕಾರದ ಉಪಕರಣಗಳೆನಿಸಿದ್ದುವು. ಕಂದಾಯ ಸಂಗ್ರಹಿಸಿ ಕೊಡುವುದು ಮತ್ತು ನ್ಯಾಯದಾನ ಮಾಡುವುದು ಸಿವಿಲ್ ಸೇವೆಯ ಹೊಣೆಯಾಗಿರುತ್ತಿತ್ತು.

ಸಿವಿಲ್ ಮತ್ತು ಮಿಲಿಟರಿ ಅಭ್ಯರ್ಥಿಗಳ ಸೇವಾಭರ್ತಿಗಾಗಿ ಈಸ್ಟ್ ಇಂಡಿಯಾ ಕಂಪನಿ ಇಂಗ್ಲೆಂಡಿನಲ್ಲಿ (೧) ಹೆಯಿಲಿಬರ್ಗ್ ಕಾಲೇಜು ಮತ್ತು (೨) ಎಡಿಸ್ಕಾಂಬೆ ಅಕಾಡೆಮಿ ಎಂಬೆರಡು ಕಾಲೇಜುಗಳನ್ನು ನಡೆಸುತ್ತಿತ್ತು. ಪ್ರತಿ ಅಭ್ಯರ್ಥಿಯ ತರಬೇತಿಗಾಗಿ ವರ್ಷ ಒಂದಕ್ಕೆ ೯೬ ಪೌಂಡ್ ವೆಚ್ಚ ಬರುತ್ತಿತ್ತು.

ಎಲ್ಲ ಕಂದಾಯವನ್ನು ಭಾರತದ ಪರಮೋಚ್ಚ ಸರ್ಕಾರದ ಹೆಸರಿನಲ್ಲೇ ಸಂಗ್ರಹಿಸಿ ಪರಮೋಚ್ಚ ಖಜಾನೆಗೆ ವರ್ಗಾಯಿಸಬೇಕಾಗುತ್ತಿತ್ತು ಮತ್ತು ಹಾಗೆ ಸಂಗ್ರಹಿಸಿದ ಕಂದಾಯದ ಹಣವು ಪರಮೋಚ್ಚ ಖಜಾನೆಯ ನಿಯಂತ್ರಣದಲ್ಲಿ ಇರುತ್ತಿತ್ತು. ಹಣಕಾಸಿನ ವಿಷಯದಲ್ಲಿ ಸ್ಥಳೀಯ ಪ್ರಾಂತಗಳಿಗೆ ಸ್ವಾತಂತ್ರ್ಯವಿರಲಿಲ್ಲ. ಒಂದು ಪ್ರಾಂತ್ಯದ ಕೊರತೆಯನ್ನು ಇನ್ನೊಂದು ಪ್ರಾಂತ್ಯದ ಹೆಚ್ಚುವರಿಯಿಂದ ತುಂಬಿಸಿಕೊಳ್ಳಬಹುದಾಗಿತ್ತು. ಒಂದು ಪ್ರಾಂತ್ಯವು ಯುದ್ಧ ವೆಚ್ಚಕ್ಕಾಗಿ ಮಾಡಿದ ಸಾಲವನ್ನು ಇಡೀ ಭಾರತ ಸರ್ಕಾರದ ಕಂದಾಯಕ್ಕೆ ಜಮಾಮಾಡಬಹುದಾಗಿತ್ತು. ಅರ್ಥಾತ್ ಫ್ರಾನ್ಸ್ ದೇಶದ ಪ್ರಾಚೀನ ರಾಜ್ಯಪದ್ಧತಿಯಂತೆ (ಎನ್ಷಿಯಂಟ್ ರೆಜೀಮ್) ಹಣಕಾಸು ಹಾಗೂ ಆಡಳಿತಗಳು ಸಂಪೂರ್ಣವಾಗಿ ಕೇಂದ್ರೀಕೃತವಾಗಿದ್ದವು.

ಶುದ್ಧ ಆಡಳಿತದ ಬಗ್ಗೆ ಸದ್ಯ ಇಷ್ಟು ಸಾಕು – ಮುಂದಿನ ಅಧ್ಯಾಯದ ತನಕ ಇದರ ವಿಮರ್ಶೆಯನ್ನು ತಡೆಹಿಡಿಯೋಣ.

ಹಿಂದಿನ ಅಧ್ಯಾಯದಲ್ಲಿ ಪಶ್ಚಿಮ ಯುರೋಪಿನ ದೇಶಗಳು ಭಾರತವನ್ನು ವಶಪಡಿಸಿಕೊಳ್ಳಲು ಅದೇಕೆ ಭೀಕರ ಹೋರಾಟ ನಡೆಸಿದವೆಂಬುದು ಸ್ಪಷ್ಟವಾಯಿತಲ್ಲವೆ? ಶೇಕ್ಸ್‌ಪಿಯರನ ಮ್ಯಾಕ್‌ಬೆತ್‌ನಿಗೆ ಹುಚ್ಚು ಹಿಡಿಸಿದ ಬ್ಯಾಂಕೋನ ಮಾತಿನ ಭೂತಗಳ ಸೈನ್ಯದಂತೆ ನಾನಾ ದೇಶದ ಕಾಮಾ, ಆಲ್ಬುಕರ್ಕ್, ಬುಸ್ಸೇ, ದಿಲಾಲೀ, ಕ್ಲೈವ್, ಮಾಲ್ಕೋಮ್ ಮುಂತಾದವರು ಕರೆತಂದ ಸೇನೆಗಳ ಕಾರ್ಯನೀತಿಯನ್ನು ಆಗಲೇ ಅವಲೋಕಿಸಿದ್ದೇವೆ.

## II

ಈ ಅಧ್ಯಾಯದಲ್ಲಿ ಈಸ್ಟ್ ಇಂಡಿಯಾ ಕಂಪನಿ ವ್ಯಾಪಾರೀ ಸಂಸ್ಥೆಯಾಗಿದ್ದು ರಾಜಕೀಯ ಸಾರ್ವಭೌಮವಾಗಿ ವಿಕಾಸಗೊಂಡದ್ದನ್ನು ವಿಶೇಷವಾಗಿ ಬಣ್ಣಿಸದೆ ಕೇವಲ ಅದರ ರಾಜಕೀಯ ಸಾರ್ವಭೌಮತೆಯ ಸ್ವರೂಪವನ್ನು ವಿಶದೀಕರಿಸಬೇಕಾಗಿದೆ.

ಹಿಂದಿನ ವಿವರಣೆ ಸೂಚಿಸುವಂತೆ ಭಾರತದ ಮೇಲೆ ಕಂಪನಿ ತನ್ನ ಆಧಿಪತ್ಯವನ್ನು ಸ್ಥಾಪಿಸಿದ್ದರಲ್ಲಿ ಯಾವ ಆಶ್ಚರ್ಯವೂ ಇಲ್ಲ. ಬೇರೆ ಬೇರೆ ಪ್ರಾಂತ್ಯಗಳಲ್ಲಿ ನೆಲೆಸಿಕ್ಕಿದ ಮೇಲೆ ಬ್ರಿಟಿಷ್ ಇಂಡಿಯಾ ಸರ್ಕಾರವೆಂಬ ಹೆಸರಲ್ಲಿ ಇಡೀ ಪರ್ಯಾಯದ್ವೀಪದ ಮೇಲೆ ನ್ಯಾಯಬದ್ಧವಾಗಿ ಪರಮಾಧಿಕಾರ ಸ್ಥಾಪಿಸುವುದು ಸುಲಭವೇ ಆಗಿತ್ತು. ಒಂದು ಪ್ರಭುತ್ವ (ರಾಜ್ಯ)ವನ್ನು ಸ್ಥಾಪಿಸಿ ರಾಜಕೀಯ ಮತ್ತು ವಾಣಿಜ್ಯ ಎರಡೂ ಕರ್ತವ್ಯಗಳನ್ನು ಒಟ್ಟಾಗಿ ನಿರ್ವಹಿಸಲು ಅದು ತೊಡಗಿತು. ಆದರೆ ತತ್ಪರಿಣಾಮವಾಗಿ ಅರ್ಥಾತ್ ಇಂಥ ಸಂಯುಕ್ತ ಕಾರ್ಯಭಾರದಿಂದಾಗಿಯೇ ಕಂಪನಿಯ ಹಣಕಾಸಿನ ವ್ಯವಹಾರ ಗೋಜಲುಗೋಜಲಾದದ್ದು ಸಹಜ. ವ್ಯಾಪಾರೀ ಆದಾಯವನ್ನು ಕಂದಾಯ ವಸೂಲಿಯಿಂದ ಬೇರ್ಪಡಿಸದೆ ಇದ್ದಂಥ ೧೮೧೪ರ ವರೆಗಿನ ಅವಧಿಯನ್ನು ಸೂಕ್ಷ್ಮ ವಿಮರ್ಶೆಗೆ ಒಳಪಡಿಸದಿರುವುದೇ ಒಳ್ಳೆಯದೆಂದು ತೋರುತ್ತದೆ. ೧೮೧೪ರಲ್ಲಿ, ಪಾರ್ಲಿಮೆಂಟಿನ ಕಾನೂನಿನಂತೆ, ಹಣಕಾಸಿನ ಲೆಕ್ಕವನ್ನು ಮತ್ತು ವಾಣಿಜ್ಯದ ಲೆಕ್ಕಗಳನ್ನು ಬೇರೆ ಬೇರೆಯಾಗಿ ಬರೆದಿಡುವ ರೂಢಿ ಜಾರಿಗೆ ಬಂದಿತು.

ಇಷ್ಟನ್ನು ಪರಿಗಣನೆಗೆ ತಂದುಕೊಂಡಮೇಲೆ ನಾವೀಗ ಕಂದಾಯದ ಬಾಬತ್ತುಗಳ ಕಡೆಗೆ ಹೊರಡೋಣ;

## ೧) ಭೂಕಂದಾಯ

ಭಾರತದ ಕೆಲ ಪ್ರದೇಶಗಳಲ್ಲಿ ಔದ್ಯಮೀಕರಣ ಸಾಕಷ್ಟು ಪೂರ್ವದಲ್ಲಿಯೇ ನಡೆದಿದ್ದು ಇಡೀ ದೇಶ ಒಂದು ಕೃಷಿ ದೇಶವೆಂದು ಈ ಹಿಂದೆ ಪರಿಗಣಿತವಾಗಿದ್ದಂತೆ ಇಂದಿಗೂ ಪರಿಗಣಿತವಾಗಬೇಕಾಗಿದೆ. ಸರ್ಕಾರಿ ಆದಾಯದ ದೊಡ್ಡ ಭಾಗ ಭೂಮಿಯಿಂದಲೇ ಬರುತ್ತಿದೆ.

ಅದು ಸರಿಯೋ ಅಥವಾ ತಪ್ಪೋ, ಆದರೂ ಖಾಸಗಿ ಒಡೆತನಕ್ಕೆ ವಿರುದ್ಧವಾಗಿ ಸರ್ಕಾರಿ ಒಡೆತನವನ್ನು ಕಾರ್ಯಗತಗೊಳಿಸುವುದಕ್ಕೆ ಬ್ರಿಟಿಷ್ ಸರ್ಕಾರವು ನಿರ್ಧಾರ ಕೈಗೊಂಡಿತು.

ಭಾರತದ ಭೂಕಂದಾಯದಲ್ಲಿ ನಾನಾ ಭೇದಗಳಿವೆ. ಪಾರ್ಲಿಮೆಂಟಿನ ನೀಲ ನಕ್ಷೆಗಳಿಗನುಸಾರವಾಗಿ ಅವುಗಳನ್ನು ವಿವರಿಸುವುದು ಇಲ್ಲಿ ಸೂಕ್ತವೆಂದು ತೋರುತ್ತದೆ.

## I. ಕಾರ್ನವಾಲೀಸನ ಜಮೀನ್ದಾರಿ ತೀರ್ಮಾನ

ಇದರಲ್ಲಿ ಕಂದಾಯ ಸಂಗ್ರಹವನ್ನು ಸುಲಭದಲ್ಲಿ ಮಾಡಬಹುದಾಗಿತ್ತು. ಏಕೆಂದರೆ ದೊಡ್ಡ ಜಿಲ್ಲೆಯೊಂದರಲ್ಲಿ ಕೆಲವೇ ಮಂದಿ ಜಮೀನ್ದಾರರೋ, ನೌಕರರೋ ಸಂಗ್ರಹಮಾಡಿಕೊಡುವುದು ಹೆಚ್ಚು ಜನರನ್ನು ನಂಬುವುದಕ್ಕಿಂತ ಒಳ್ಳೆಯದು. ಎರಡನೆಯದಾಗಿ ೧೮೩೧ ಸಿ ೩೩೯ರಲ್ಲಿ ಉಕ್ತವಾದಂತೆ ಕಂದಾಯ ಸಂಗ್ರಹದಲ್ಲಿ ಹೆಚ್ಚು ನಿಶ್ಚಿತತೆ ಇರುತ್ತಿತ್ತು.

ಈ ಭೂಹಿಡುವಳಿ ಪದ್ಧತಿ ತಲೆ ಎತ್ತಿದ್ದು ಹೇಗೆಂದರೆ : ಬಂಗಾಳ, ಬಿಹಾರ ಮತ್ತು ಒರಿಸ್ಸಾದ ದಿವಾನಿಗಳ ಕಂದಾಯದ ಹಕ್ಕು ಈಸ್ಟ್ ಇಂಡಿಯಾ ಕಂಪನಿಗೆ ಪ್ರಾಪ್ತವಾದ ಸಂದರ್ಭದಲ್ಲಿ ಆಗಿನ ಮಹಮ್ಮದೀಯ ಸರ್ಕಾರಕ್ಕೆ ಅಧೀನರಾದ ಸುಬೇದಾರರು ಕಂದಾಯ ಸಂಗ್ರಹಮಾಡಿಕೊಡುತ್ತಿದ್ದರು. ಈ ಸುಬೇದಾರರ ಕಣ್ಣಿಗೆ ಕೆಲವೊಮ್ಮೆ ದೊಡ್ಡ ಹಿಡುವಳಿಗಳೂ, ಕೆಲವೊಮ್ಮೆ ಸಣ್ಣ ಹಿಡುವಳಿಗಳೂ ಕಂಡುಬರುತ್ತಿದ್ದು ಅವರನ್ನು ಜಮೀನ್ದಾರರೆಂದೂ, ತಾಲ್ಲೂಕದಾರರೆಂದೂ ಕರೆಯುತ್ತಿದ್ದರು. ಕಂಪನಿ ಖಜಾನೆಗೆ ಒಂದು ಗಂಟಿನಲ್ಲಿ ಕಂದಾಯ ಒಪ್ಪಿಸುವ ಹೊಣೆಯನ್ನು ಹೊತ್ತಿದ್ದ ಇವರಿಗೆ ವರ್ಷಂಪ್ರತಿ ಸಾಕಷ್ಟು ಕಂದಾಯ ಕೊಡುತ್ತಿದ್ದ ಪ್ರದೇಶದ ಭೂಮಿಯ ಮೇಲೆ ಆಡಳಿತಾಧಿಕಾರವೂ ಇತ್ತು. ಈ ಅಧಿಕಾರ ಎಷ್ಟೋ ಪ್ರಸಂಗಗಳಲ್ಲಿ

ಪಾರಂಪರಿಕವಾಗಿ, ಆನುವಂಶಿಕವಾಗಿ ಹರಿದು ಬರುತ್ತಿತ್ತು. (೧೮೩೧ ಸಿ ೩೧೧೪, ೩೧೧೫, ೩೨೧೫ ಇವುಗಳನ್ನು ನೋಡಿ). ಈಸ್ಟ್ ಇಂಡಿಯಾ ಕಂಪನಿಯು ಬಂಗಾಳವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ಮೇಲೆ ಈ ಪದ್ಧತಿಯನ್ನು ಕಾರ್ಯರೂಪಕ್ಕೆ ತರುವ ಹೊಣೆಯುಳ್ಳ ಅರ್ಥಾತ್ ಕಂದಾಯ ಸಂಗ್ರಹದ ಜವಾಬ್ದಾರಿ ಹೊತ್ತಂಥ ಜನರ ದೆಸೆಯಿಂದ ಇಡೀ ಪದ್ಧತಿಯೇ ಕಲುಷಿತವಾಗಿತ್ತೆಂಬುದನ್ನು ಅವರು ಗಮನಿಸಿದರು. ಕಂದಾಯ ಸಂಗ್ರಹದ ಸಂಕೀರ್ಣತೆಯನ್ನು ಪರಿಶೀಲಿಸಿ ಒಂದು ರೀತಿಯಲ್ಲಿ ಬೆದರಿದ ಕಾರ್ನವಾಲಿಸ್ ಮತ್ತು ಸರ್ಕಾರ ಸಣ್ಣ ಹಿಡುವಳಿದಾರರು ಮತ್ತು ರೈತರ ಸಂರಕ್ಷಣೆಗಾಗಿ ಒಂದು ಜಮೀನ್ದಾರ ವರ್ಗವನ್ನೇ ಸೃಷ್ಟಿಸುವುದು ಸಾಧುವೆಂಬ ತೀರ್ಮಾನಕ್ಕೆ ಬಂದರು. ಭೂಮಿಯ ಮೇಲೆ ಕಾಯಂ ಆಸಕ್ತಿ ಸಂಬಂಧವುಳ್ಳ ಜಮೀನ್ದಾರರು ತನ್ನ ರೈತರ ಶ್ರೇಯಸ್ಸನ್ನು ಇಂಗ್ಲೆಂಡಿನ ಭೂಮಾಲೀಕನಂತೆ ಗಮನಿಸಿಯೇ ಗಮನಿಸುತ್ತಾನೆ. ಇದರಿಂದ ಎರಡು ಲಕ್ಷ್ಯಗಳು ಸಾಧಿತವಾದಂತಾಗುತ್ತದೆ. ಭಾರತ ದೇಶದಲ್ಲಿ ಭೂಮಾಲೀಕರ (ಜಮೀನ್ದಾರ) ವರ್ಗವೊಂದು ಸೃಷ್ಟಿಗೊಳ್ಳುತ್ತದೆ. ಎರಡನೆಯದಾಗಿ ಜಮೀನ್ದಾರರು ರೈತರನ್ನು ತಮ್ಮ ಮಕ್ಕಳಂತೆ ನೋಡುವುದರಿಂದ ಅವರ ಸಂರಕ್ಷಣೆಯನ್ನು ಮಾಡಿದಂತೆ ಆಗುತ್ತದೆ. (೧. ನೋಡಿ, ೧೮೩೧ ಸಿ ೩೧೩೬) ಹಳ್ಳಿಗಳಲ್ಲಿರುವ ರೈತಾಪಿ ಜನಸಮುದಾಯವನ್ನು ಸಂರಕ್ಷಣೆ ಮಾಡುವ ದೃಷ್ಟಿಯಿಂದ, ಅಥವಾ ಸದುದ್ದೇಶದಿಂದಲೇ ಎನ್ನೋಣ, ೧೭೯೩ರಲ್ಲಿ ಕೃಷಿಕರು, ಜಿಲ್ಲಾಡಳಿತ ನಡೆಸುತ್ತಿರುವ ನೌಕರರು ವಂಶಪಾರಂಪರ್ಯ ಹಕ್ಕಿನಿಂದಲೋ, ವಿಶೇಷಾಜ್ಞೆಯಿಂದಲೋ ಭಾರತದ ಭೂಮಿಯಲ್ಲಿ ಇಂಗ್ಲೆಂಡಿನ ಒಂದು ಫೀ–ಸಿಂಪಲ್ (Fee-Simple) ಪದ್ಧತಿಯ ಮಾದರಿಯಲ್ಲಿ ಒಡೆತನದ ಹಕ್ಕು ಪಡೆಯುವಂತೆ ಆಯಿತು. ಹಿಂದಿನ ವರ್ಷಗಳಲ್ಲಿ ಜಮೀನ್ದಾರನು ಕೊಡುತ್ತಿದ್ದ ಕಂದಾಯವನ್ನು ಪರಿಶೀಲಿಸಿ ಹೊಸ ಭೂಕಂದಾಯವನ್ನು ಎಲ್ಲ ಕಾಲಕ್ಕೂ ಸ್ಥಿರವಾಗಿರುವಂತೆ ನಿರ್ಧರಿಸಲಾಯಿತು. ಯಾವುದೇ ಸಂದರ್ಭದಲ್ಲಾದರೂ ಕಂದಾಯವನ್ನು ಹೆಚ್ಚುಮಾಡುವ ಪ್ರಮೇಯವೇ ಇಲ್ಲದಿರುವ ಈ ಪದ್ಧತಿಯನ್ನು "ಜಮೀನ್ದಾರಿ ಪದ್ಧತಿ ಅಥವಾ ಶಾಶ್ವತ ಸೆಟಲ್‌ಮೆಂಟ್ ಪದ್ಧತಿ" ಎಂದು ಕರೆದರು. (೨. ನೋಡಿ, ೧೮೩೧ಸಿ, ೩೧೧೫, ೩೧೧೬, ೩೨೧೫, ೧೮೩೨, ಆರ್.ಸಿ. ಪು. ೨೧.)

## II. ಗ್ರಾಮ ಭೂಕಂದಾಯ ಪದ್ಧತಿ

ಗ್ರಾಮ ಸಮುದಾಯ ಪದ್ಧತಿಯನ್ನು ಮುಖ್ಯವಾಗಿ ಉತ್ತರ ಭಾರತದಲ್ಲಿ ಕಾಣಬಹುದು. ಆಸ್ತಿಯ ಒಡೆತನದ ಹಕ್ಕು ಇಡೀ ಗ್ರಾಮ ಸಮುದಾಯಕ್ಕೆ ಸೇರಿದ್ದು. ಗ್ರಾಮಾಡಳಿತವು ಜನರಿಂದಲೇ ಚುನಾಯಿಸಲ್ಪಟ್ಟು ಅವರಿಂದಲೇ ವಜಾ ಮಾಡಲಾಗುವ ಒಬ್ಬ ಮುಖಿಯನ ಕೈಯಲ್ಲಿರುತ್ತದೆ. ಈ ಪದ್ಧತಿಯಂತೆ ಗ್ರಾಮದೊಳಗಿನ ಭೂಮಿಯನ್ನು ಗ್ರಾಮಸ್ಥರಿಗೆ ಗೇಣಿಗೆ ಕೊಡುತ್ತಾರೆ, ಕೆಲವೊಮ್ಮೆ ನೆರೆಯ ಗ್ರಾಮದ ಭೂಮಿಯನ್ನು ಕೊಡಬಹುದು. ಕೆಲವೊಂದು ಭಾಗದ ಮೇಲೆ ಗ್ರಾಮದ ಶಾಲಾ ಉಪಾಧ್ಯಾಯ, ಅಗಸ, ಕ್ಷೌರಿಕ, ಬಡಗಿ, ಕಮ್ಮಾರ, ಕಾವಲುಗಾರ, ಗ್ರಾಮಕರಣಿಕ ಪ್ರತಿಯೊಬ್ಬನೂ ಗ್ರಾಮದ ಅಂಗೀಕೃತ ವೆಚ್ಚದಲ್ಲಿ ಹಕ್ಕು ಪಡೆದಿರುತ್ತಾನೆ. ಅತಿಥಿಗಳ ಉಪಚಾರದ ವೆಚ್ಚವೂ ಇದರಲ್ಲಿ ಸೇರಿಕೊಳ್ಳುತ್ತದೆ. (೧. ನೋಡಿ, ೧೮೩೦ಎಲ್, ೩೭೮, ೩೭೯, ೪೦೫, ೪೦೬, ೫೨೯). ಗ್ರಾಮದ ಸಕಲ ಅಗತ್ಯಗಳನ್ನು ಗ್ರಾಮದೊಳಗೇ ಪೂರೈಸಲು ಸಾಧ್ಯವಾಗುವ ಗ್ರಾಮ ಸಮುದಾಯ ವ್ಯವಸ್ಥೆ ನಿಜಕ್ಕೂ ಗ್ರಾಮ ಸ್ವರಾಜ್ಯವೇ ಆಗಿತ್ತೆಂದು ಹೇಳಬಹುದು. ಹೊರಗಿನ ಯಾವ ನೆರವೂ ಅಗತ್ಯವಿಲ್ಲದಿರುವ ಈ ಪದ್ಧತಿಯು ದೇಶದ ರಾಜಕೀಯದಲ್ಲಿ ಎಂತೆಂಥ ಕ್ರಾಂತಿಗಳು ನಡೆದರೂ, ಹಿಂದೂ, ಪಠಾಣ, ಮೊಗಲ, ಮರಾಠಾ, ಸಿಖ್, ಇಂಗ್ಲಿಷ್ ಯಾರು ಆಳರಸರಾಗಿ ಬಂದರೂ

ಹೋದರೂ ಇದಾವುದರ ಪರಿವೆಯೂ ಇಲ್ಲದೆ ಸ್ಥಿರವಾಗಿರುತ್ತಿತ್ತು. ಕಷ್ಟ ಕಾಲದಲ್ಲಿ ಆಯುಧಗಳನ್ನು ತಯಾರಿಸಿಕೊಂಡು ಗ್ರಾಮದ ಭದ್ರತೆಯನ್ನು ಸಮುದಾಯವೇ ನೋಡಿಕೊಳ್ಳುವುದು (೨. ನೋಡಿ, ಕಾಮನ್ಸ್ ೧. ಕಮಿಟಿ, ಪುಟ ೨೯). ಗ್ರಾಮದ ಉತ್ಪನ್ನದಲ್ಲಿ ಎಷ್ಟು ಭಾಗ ಸರ್ಕಾರಕ್ಕೆ ಸಲ್ಲುತ್ತಿತ್ತೆಂದು ಹೇಳುವುದು ಕಷ್ಟ. ಅಧಿಕಾರಿಗಳಿಗೆ ಯಾವ ಮಾಲೀಕನ ಹತ್ತಿರ ಎಷ್ಟು ಭೂಮಿ ಇತ್ತೆಂಬುದು ಗೊತ್ತಿರಲಿಲ್ಲ; ಈ ಬಗ್ಗೆ ಸರ್ಕಾರ ಸೂಕ್ಷ್ಮವಾಗಿ ಪರಿಶೀಲಿಸುವುದು ಗ್ರಾಮಗಳವರಿಗೆ ಬೇಡವಾಗಿತ್ತು. ಯಾರಾದರೂ ಒಬ್ಬ ತನ್ನ ಪಾಲಿನ ಸರ್ಕಾರಿ ತೀರುವೆಯನ್ನು ಕೊಡದೆ ಹೋದಲ್ಲಿ ಗ್ರಾಮಸ್ಥರು ತಾವೇ ಮುಂದೆ ಬಂದು ಅದನ್ನು ಸರ್ಕಾರಕ್ಕೆ ಪಾವತಿ ಮಾಡುತ್ತಿದ್ದರು. ಪ್ರತಿ ಗ್ರಾಮಸ್ಥನು ತೆರಬೇಕಾದದ್ದೆಷ್ಟೆಂಬುದು ಗ್ರಾಮದ ಆಂತರಿಕ ಆಡಳಿತಕ್ಕೆ ಸೇರಿದ ವಿಷಯ, ಸರ್ಕಾರ ಇದರಲ್ಲಿ ಹಸ್ತಕ್ಷೇಪ ಮಾಡಬಾರದು. ಇದುವರೆಗೆ ತೆತ್ತದ್ದೆಷ್ಟು? ತೆರುವ ಶಕ್ತಿ ಎಷ್ಟಿದೆ? ಗ್ರಾಮದ ಭೂಮಿಯ ಸ್ಥಿತಿ ಹೇಗಿದೆ? ಫಸಲಿನ ಆಧಾರದ ಮೇಲೆ ಎಷ್ಟು ತೀರ್ವೆಯನ್ನು ಹೊರಿಸಬಹುದು? ಇತ್ಯಾದಿಗಳ ಮೇಲೆ ಅವಲಂಬಿಸಿ ಗ್ರಾಮ ಸಮುದಾಯವೇ ಅಥವಾ ಗ್ರಾಮಸ್ಥರೇ ಗ್ರಾಮದ ಸ್ಥಿತಿಗತಿಯನ್ನು ಅನುಲಕ್ಷಿಸಿ ತೀರ್ವೆ ಮೊತ್ತವನ್ನು ನಿರ್ಣಯ ಮಾಡುವುದು.

ಸಾಕಷ್ಟು ವೆಚ್ಚದಲ್ಲಿ ಸರ್ಕಾರ ಮೋಜಣಿ (ಸರ್ವೆ)ಗಳನ್ನು ಏರ್ಪಾಟು ಮಾಡುತ್ತದೆ. ಇದರಲ್ಲಿ ಪ್ರತಿಯೊಂದು ಗ್ರಾಮದ ಭೂಮಿಯ ಸವಿವರ ಉಲ್ಲೇಖವಿರುತ್ತದೆ. ಸರ್ವೆ ಅಧಿಕಾರಿಗಳು ಹೊಲಗಳ ತನಿಖೆ ಮಾಡುವಾಗ ತಮ್ಮ ನೌಕರರು ಮಾತ್ರವಲ್ಲದೆ ಗ್ರಾಮ ಸಮುದಾಯವನ್ನೂ, ಪ್ರತ್ಯೇಕ ಹಿಡುವಳಿದಾರರನ್ನೂ, ರೈತರನ್ನೂ, ನೆರೆಗ್ರಾಮದ ಜನರನ್ನೂ ಕರೆಸಿ ಅವರ ಸಮಕ್ಷಮದಲ್ಲಿಯೆ ಎಲ್ಲವನ್ನೂ ಮಾಡುತ್ತಾರೆ. ಗ್ರಾಮದ ಗಡಿ ಯಾವುದು? ಅದರೊಳಗಿನ ಭೂಮಿಯ ವಿವರಗಳೇನು? ಫಸಲಿನ ವಿವರಗಳೇನು? ಮನೆಗಳು, ಮರಮುಟ್ಟು ಏನಿವೆ?–ಇಂಥ ಎಲ್ಲ ವಿವರಗಳ ಮೇಲೆ ತೀರ್ವೆ ನಿರ್ಣಯಿಸಲ್ಪಡುವುದಾಗಿದೆ (೧. ನೋಡಿ, ೧೮೩೧ ಸಿ. ೩೪೯೨)

## III. ರೈತವಾರಿ ಪದ್ಧತಿ

ದೇಶದಲ್ಲಿರುವ ಎಲ್ಲ ಭೂಮಿಯ ಮೇಲೆ ಪರಮಾವಧಿ ತೀರ್ವೆ (ಅಸೆಸ್‌ಮೆಂಟ್)ಯನ್ನು ಹೇರುವುದು ಮೂರನೆಯ ವಿಶೇಷ ತೀರ್ವೆಯ ಸೂತ್ರವಾಗಿದೆ (೧. ನೋಡಿ, ೧೮೩೧ ಸಿ.೪೫, ೬೫). ಪ್ರತಿಯೊಬ್ಬ ರೈತನ ವಶದಲ್ಲಿರುವ ಭೂಮಿಗೆ ಸಾಧ್ಯವಾದಷ್ಟು ಕಾಯಂ ಗೇಣಿಯನ್ನು ಹಣರೂಪದಲ್ಲಿ ನಿರ್ಧರಿಸುವುದು ಈ ಪದ್ಧತಿಯ ಲಕ್ಷಣ. ಇಂಥ ಗೇಣಿಗಳನ್ನೇ ಕೂಡಿಸಿದರೆ ಒಟ್ಟು ತೀರ್ವೆ ನಿರ್ಧಾರಿತವಾಗುತ್ತದೆ. ಕೃಷಿಕಾರ್ಯ ಹೆಚ್ಚೋ ಕಡಿಮೆಯೋ ಆದಂತೆ ತೀರ್ವೆಯಲ್ಲೂ ಹೆಚ್ಚು ಕಡಿಮೆ ಆಗುತ್ತದೆ. ಗ್ರಾಮದಲ್ಲಿ ಸದ್ಯ ಪ್ರಚಲಿತವಿರುವ ರೈತರ ಅಥವಾ ಕೃಷಿಕರ ಹಕ್ಕುಗಳನ್ನು ಸಂರಕ್ಷಿಸುವುದು, ಯಾರೂ ಇದರ ಮೇಲೆ ಹಸ್ತಕ್ಷೇಪ ಮಾಡದಂತೆ ತಡೆಯುವುದು ಈ ಸೂತ್ರದಲ್ಲಡಕವಾಗಿದೆ (೩. ನೋಡಿ, ೧೮೩೧ ಸಿ ೫೧೫೬).

ಹೀಗಾಗಿ ರೈತವಾರಿ ಪದ್ಧತಿಯಲ್ಲಿ ರೈತನಿಗೆ ಭೂಮಿಯ ಮೇಲಿರುವ ಹಕ್ಕಿನ ಸಂಪೂರ್ಣ ವ್ಯಾಪ್ತಿಯ ತಿಳಿವು ಬರುತ್ತದೆ. ಜಮೀನ್ದಾರಿ ಪದ್ಧತಿಯಲ್ಲಿ ಇದು ಇರುವುದೇ ಇಲ್ಲ. ಹೀಗೆ ಮಾಡುವುದೇ ತನ್ನ ಉದ್ದೇಶವೆಂದು ಹೇಳಿಕೊಂಡರೂ ಜಮೀನ್ದಾರಿ ಪದ್ಧತಿಗೆ ಇಂಥ ನಿಷ್ಕರ್ಷೆ ಸಾಧ್ಯವಾಗಲಿಲ್ಲ, ಸಾಧ್ಯವಾಗುವುದೂ ಇಲ್ಲ. ದೇಶದಲ್ಲಿರುವ ಎಲ್ಲ ಭೂಮಿಯ ತೀರ್ವೆ ನಿರ್ಧಾರ ಜಮೀನ್ದಾರಿಯಲ್ಲಿ ಶಕ್ಯವಾಗಲೇ ಇಲ್ಲ. ಪ್ರತಿ ರೈತನ ಭೂಮಿಯಿಂದ ತೊಡಗಿ ಜುಮಲಾ ಕೂಡಿಸಿದರೆ ತೀರ್ವೆ ನಿಶ್ಚಿತವಾಗಿಬಿಡುತ್ತದೆ. ದೊಡ್ಡ ಹಿಡುವಳಿದಾರನಷ್ಟೇ ಸಣ್ಣವನೂ ಗಣನೆಗೆ ಪಾತ್ರನಾಗುತ್ತಾನೆ; ಹಿಡುವಳಿಯ ಪ್ರತಿಯೊಂದು ಭಾಗವನ್ನೂ

ಪರಾಮರ್ಶೆಗೆ ಸ್ವೀಕರಿಸಲಾಗುತ್ತದೆ; ಇದರಿಂದಾಗಿ ಭೂಮಿಯನ್ನು ಪರಭಾರೆ ಮಾಡುವಾಗ ತುಂಬಾ ಅನುಕೂಲ. ಏಕೆಂದರೆ ಮಾರಾಟದ ವೇಳೆ ಭೂಮಿಯ ಮೇಲಿನ ತೀರ್ವೆ ಎಷ್ಟೆಂದು ಕೇಳುತ್ತಾರೆ, ಅಲ್ಲದೆ ರೈತವಾರಿ ಪದ್ಧತಿಯನ್ನು ಎಂಥ ಸಂದರ್ಭದಲ್ಲಿಯೂ ಬಳಸಿಕೊಳ್ಳಬಹುದು. ರೈತರು ಅಥವಾ ಕೃಷಿಕರ ಜತೆಗೇ ಕರಾರು ಮಾಡಿಕೊಳ್ಳಬಹುದು. ಹಿಡುವಳಿಯ ಪ್ರಮಾಣ ದೊಡ್ಡದಿರಲಿ, ಸಣ್ಣದಿರಲಿ – ಲಕ್ಷಾಂತರ ಎಕರೆಯಿರಲಿ, ಕೆಲವೇ ಎಕರೆ ಇರಲಿ – ರೈತವಾರಿಯನ್ನು ಅನ್ವಯ ಮಾಡಬಹುದು. ಒಂದೇ ಒಂದು ಹೊಲ ಇರುವ ರೈತನಾದರೂ ಒಮ್ಮೆ ಸರ್ಕಾರದೊಡನೆ ಕರಾರು ಮಾಡಿಕೊಂಡನೆಂದರೆ ಆಮೇಲೆ ನಿಶ್ಚಿಂತೆಯಿಂದ ಬೇಸಾಯದಲ್ಲಿ ತೊಡಗಬಹುದು, ಏಕೆಂದರೆ ಅವನಿಂದ ಸರ್ಕಾರ ನಿಶ್ಚಿತ ಪಾವತಿಗಿಂತ ಹೆಚ್ಚು ಬೇಡುವಂತಿಲ್ಲ. ಭೂಮಿಯ ಬೆಲೆ, ಮಣ್ಣಿನ ಗುಣವ್ಯತ್ಯಾಸ, ಜನಸಂಖ್ಯೆ, ಸನ್ನಿವೇಶ ಹಾಗೂ ಸ್ಥಳೀಯ ತಾರತಮ್ಯದ ದೆಸೆಯಿಂದ ತೀರ್ವೆ ಮೊತ್ತ ವ್ಯತ್ಯಾಸವಾಗಬಹುದು, ಕೆಳದರ್ಜೆ ಭೂಮಿಯಾದರೂ ಅದನ್ನು ಅಭಿವೃದ್ಧಿಗೊಳಿಸಿದಾಗ ಹೆಚ್ಚು ದರದ ತೀರ್ವೆ ಕೊಡಬೇಕಾಗಿ ಬರಬಹುದು ನಿಜ. ಆದರೆ ಉತ್ತಮ ಭೂಮಿಯ ಮೇಲೆ ಹೇರಲಾದ ತೀರ್ವೆಗಿಂತ ಹೆಚ್ಚು ಉತ್ಪನ್ನ ಬಂದರೆ ಅದು ಹಿಡುವಳಿದಾರನಿಗೆ ಸೇರಿದ್ದಾಗುತ್ತದೆ. ಕಷ್ಟಕಾಲದಲ್ಲಿ ತೀರ್ವೆಯ ಮಾಫಿಯೂ ಇರುತ್ತದೆ. ಜಮೀನ್ದಾರಿ ಪದ್ಧತಿಯಲ್ಲಿರುವಾಗ ಕೆಲವೇ ಮಂದಿ ನಾಮಕಾವಸ್ತೇ ಭೂಮಾಲೀಕರಿಗಿಂತ ರೈತವಾರಿ ಪದ್ಧತಿಯಲ್ಲಿ ಸೃಷ್ಟಿಗೊಳ್ಳುವ ಅಸಂಖ್ಯಾತ ಭೂ ಹಿಡುವಳಿದಾರರು ವಾಸಿ. ಜಮೀನ್ದಾರಿ ಪದ್ಧತಿಯಲ್ಲಿ ಬಂಡವಾಳ ಶೇಖರಣೆ ಕೇವಲ ಕೆಲಮಂದಿಯ ಹಿತಾರ್ಥವಾಗಿ ಇರುತ್ತದೆ. ರೈತವಾರಿ ಪದ್ಧತಿಯಲ್ಲಿಯೂ ಬಂಡವಾಳ ಸಂಚಯನ ನಡೆದೇ ನಡೆಯುತ್ತದೆ (೨. ನೋಡಿ, ೧೮೩೧ ಸಿ ೪೫೭೭, ೪೫೭೮, ೪೫೭೯).

ಇದು ಈಸ್ಟ್ ಇಂಡಿಯಾ ಕಂಪನಿಯ ಆಡಳಿತಕಾಲದಲ್ಲಿದ್ದ ಮತ್ತು ಈಗಲೂ ಇರುವ ಭೂಮಿ ತೀರ್ವೆ ಪದ್ಧತಿ. ಇದರ ವಿಮರ್ಶೆ ಮೌಲ್ಯಾಂಕನವನ್ನು ಮುಂದಿನ ಅಧ್ಯಾಯಗಳಿಗೆ ಮೀಸಲಿಡೋಣ.

ಮುಂದಿನ ಮುಖ್ಯ ಕಂದಾಯದ ಬಾಬತ್ತೆಂದರೆ ಅಫೀಮಿನಿಂದ ಬರುವ ಆದಾಯ. ಭೂಕಂದಾಯಕ್ಕೆ ಎರಡನೇ ಸ್ಥಾನದಲ್ಲಿ ನಿಲ್ಲುವ ಅಫೀಮು ಆದಾಯವನ್ನು ಎರಡು ವಿಧವಾಗಿ ಸಂಗ್ರಹಿಸಲಾಗುತ್ತಿತ್ತು.

೧) "ಸರ್ಕಾರ ಬಂಗಾಳ ಪ್ರಾಂತದಲ್ಲಿ ತಾನೇ ಬೆಳೆದು ತಾನೇ ಮಾರಾಟ ಮಾಡುವುದರಿಂದ ಬರುವ ಉತ್ಪನ್ನ"

೨) "ಮಾಳವದ ದೇಶೀ ರಾಜ್ಯಗಳು ಬೆಳೆಸಿ ಮುಂಬಯಿಯಿಂದ ರಫ್ತುಮಾಡುವ ಅಫೀಮಿನ ಮೇಲೆ ಹೇರುವ ರಫ್ತುಸುಂಕದ ಮೌಲ್ಯ"

೧೭೯೯ರ ರೆಗ್ಯುಲೇಶನ್ ೬, ಸೆ. ೩ರ ಪ್ರಕಾರ ಬಂಗಾಳದಲ್ಲಿ ಅಫೀಮು ಗಿಡಗಳನ್ನು ಬೆಳೆಸುವುದನ್ನು ನಿಷೇಧಿಸಲಾಯಿತು. ಹಾಗೆಯೇ ರೆಗ್ಯುಲೇಶನ್ XLI ೧೮೦೩ರ ಸೆಕ್ಷನ್ ೨ರ ಪ್ರಕಾರ ಗಡಿನಾಡು ಪ್ರಾಂತದಲ್ಲಿ ಅಫೀಮು ಬೆಳೆಯ ಮೇಲೆ ನಿಷೇಧ ಹೇರಲಾಯಿತು.

"ಕೆಲವು ಆರಿಸಿದ ಜಿಲ್ಲೆಗಳಲ್ಲಿ ಸರ್ಕಾರವು ರೈತರೊಡನೆ ವಾರ್ಷಿಕ ಕರಾರು ಮಾಡಿಕೊಂಡು ಇಂತಿಷ್ಟೇ ವಿಸ್ತಾರದ ಕ್ಷೇತ್ರದಲ್ಲಿ ಬಿಳಿ ಅಫೀಮು ಗಿಡಗಳನ್ನು ಬೆಳೆಸಬಹುದೆಂದು ಪರವಾನಿಗೆ ಕೊಟ್ಟು ಮುಂಗಡ ಪ್ರೋತ್ಸಾಹ ಧನದ ನೆರವು ನೀಡಿತು. ಈ ರೈತರು ಗಿಡಗಳಿಂದ ಅಫೀಮು ತಯಾರಿಸಿ ಸರ್ಕಾರಕ್ಕೆ ನಿಶ್ಚಿತ ಬೆಲೆಗೆ ಮಾರಬೇಕು. ಬಂಗಾಳದಲ್ಲಿನ ಅಫೀಮು ಸರ್ವಸ್ವಾಮ್ಯದ ನಿವ್ವಳ ಆದಾಯ ೧೮೫೬ರಲ್ಲಿ ರೂ. ೨,೭೬೭,೧೩೬ ಆಗಿತ್ತು".

ಅಫೀಮು ಸಾಗಾಟದ ಆದಾಯಕ್ಕೆ ಸುಂದರವಾದ ಒಂದು ಸಣ್ಣ ಇತಿಹಾಸವೇ ಇದೆ. ೧೮೩೧ಕ್ಕೆ

ಪೂರ್ವದಲ್ಲಿ ಬ್ರಿಟಿಷರು ಅಫೀಮನ್ನು ದೇಶೀರಾಜ್ಯಗಳಿಂದ ಪಡೆದು, ಅಲ್ಲಿಂದ ತನ್ನ ರೆಸಿಡೆಂಟ್‌ನ ಮೂಲಕ, ಸರ್ವಸ್ವಾಮ್ಯದ ನೆಲೆಯಲ್ಲಿ, ಖರೀದಿ ಮಾಡಿ ಮುಂಬಯಿ, ಕಲ್ಕತ್ತಗಳಲ್ಲಿ ಅದರ ವಿಲೇವಾರಿ ಮಾಡುತ್ತಿದ್ದರು. ಪೋರ್ಚುಗೀಸರ ಆಳ್ವಿಕೆಯ ಪ್ರದೇಶಗಳಿಗೆ ಕಳ್ಳಸಾಗಣೆ ಆಗುತ್ತಿದ್ದ ಅಫೀಮು ಸರಬರಾಜನ್ನು ತಪ್ಪಿಸಲು ಸರ್ವಸ್ವಾಮ್ಯ ಪದ್ಧತಿಯನ್ನು ಕೈಬಿಟ್ಟು ಸಾಗಣೆ ಕರದ ದಾರಿಯನ್ನು ಹಿಡಿಯಬೇಕಾಯಿತು. ಒಂದು ನಿಶ್ಚಿತ ದರದ ಪಾಸುಗಳನ್ನು ಕೊಟ್ಟು ಮುಂಬಯಿಯವರೆಗೆ ಅಫೀಮು ಸಾಗಾಟ ಮಾಡುವ ಸಂದರ್ಭದಲ್ಲಿ ಸರ್ಕಾರ ತನ್ನ ಸಾಗಾಟ ಸುಂಕವನ್ನು ವಸೂಲು ಮಾಡಿಕೊಂಡುಬಿಡುತ್ತಿತ್ತು. ೧೪೦ ರಾತಲಿನ (ಪೌಂಡು) ಒಂದು ಡಬ್ಬಿಗೆ ೧೭೫ ರೂಪಾಯಿ ಸಾಗಾಟ ಸುಂಕ ವಿಧಿಸಿದುದರಿಂದ ಕಾಲಾನಂತರ ಆದಾಯ ಕುಸಿದದ್ದನ್ನು ಕಂಡು ಅದನ್ನು ೧೨೫ ರೂಪಾಯಿಗಳಿಗಿಳಿಸಲಾಯಿತು. ಸಿಂಧ್ ಪ್ರಾಂತದ ಮೇಲೆ ಬ್ರಿಟಿಷರು ಆಧಿಪತ್ಯವಹಿಸಿದ ಮೇಲೆ ಪೋರ್ಚುಗೀಸರ ಆಳ್ವಿಕೆಯ ಪ್ರದೇಶಗಳಿಗೆ ಕಳ್ಳಸಾಗಣೆಯ ಪ್ರಶ್ನೆ ಇರಲಿಲ್ಲವಾದ್ದರಿಂದ ಇದೇ ಸಾಗಾಟ ಸುಂಕವನ್ನು ಹೆಚ್ಚಿಸಲು ಸೂಕ್ತ ಸಂದರ್ಭವೆಂದು ಬಗೆದು ಅಕ್ಟೋಬರ್ ೧೮೪೩ರಲ್ಲಿ ಡಬ್ಬಿಗೆ ೨೦೦ ರೂಪಾಯಿ, ೧೮೪೫ರಲ್ಲಿ ೩೦೦ ರೂಪಾಯಿ ಹಾಗೂ ೧೮೪೭ರಲ್ಲಿ ೪೦೦ ರೂಪಾಯಿಗಳಿಗೆ ಏರಿಸಲಾಯಿತು.

## IV. ಉಪ್ಪಿನ ತೆರಿಗೆ

ಭಾರತದಲ್ಲಿ ಉಪ್ಪನ್ನು ಬೇರೆ ಬೇರೆ ರೀತಿಯಲ್ಲಿ ತಯಾರಿಸುತ್ತಾರೆ, ಬೇರೆ ಬೇರೆ ರೀತಿಯಲ್ಲಿ ಅದರ ಮೇಲೆ ತೆರಿಗೆ ವಿಧಿಸುತ್ತಾರೆ.

ಬಂಗಾಳದಲ್ಲಿ ಕಡಲಿನ ನೀರನ್ನು ಬಿಸಿಮಾಡಿ ಉಪ್ಪು ತಯಾರಿಸಿದರೆ ಮುಂಬಯಿ, ಮದರಾಸುಗಳಲ್ಲಿ ಸೂರ್ಯನ ಬಿಸಿಲಿಗೆ ನೀರನ್ನು ಆವಿಮಾಡಿ ಉಪ್ಪು ತೆಗೆಯುತ್ತಾರೆ. ಪಂಜಾಬಿನಲ್ಲಿ ಉಪ್ಪನ್ನು ಗಣಿಗಳಿಂದ ಅಗೆಯುತ್ತಾರೆ. ರಾಜಪುತಾನದಲ್ಲಿ ಉಪ್ಪು ನೀರಿನ ಸರೋವರಗಳು ಉಪ್ಪು ತಯಾರಿಕೆಗೆ ಆಧಾರ.

ಬಂಗಾಳದಲ್ಲಿ ಕಂಪನಿಗೆ ಉಪ್ಪಿನ ಮೇಲೆ ಸರ್ವಸ್ವಾಮ್ಯವಿತ್ತು. ದೇಶೀಯರು ತಾವು ತಯಾರಿಸಿದ ಉಪ್ಪನ್ನು ಸರ್ಕಾರಕ್ಕೆ ಒಂದು ನಿಶ್ಚಿತವಾದ ಕಡಿಮೆ ದರಕ್ಕೆ ಮಾರಬೇಕಾಗಿತ್ತು. ಸರ್ಕಾರ ಹೀಗೆ ಪಡೆದುಕೊಂಡ ಉಪ್ಪನ್ನು ಹಿಜಲೀ, ತಾಮಲುಕ್, ಚಿತ್ತಗಾಂವ್, ಹಿರಾಕಾವ್, ಕಟಕ್, ಬಲಾಸೋರ್ ಮತ್ತು ಖೋರೆದಾಗಳಲ್ಲಿರುವ ತನ್ನ ಪ್ರತಿನಿಧಿಯ ಮೂಲಕ ಮಾರುತ್ತಿತ್ತು. ನಿಜವಾದ ಉತ್ಪಾದನಾ ವೆಚ್ಚಕ್ಕೆ ಆಮದು ಉಪ್ಪಿನ ಮೇಲೆ ಆಮದು ಸುಂಕವನ್ನು ಕೂಡಿಸಿ ಬರುವ ದರವೇ ಈ ಉಪ್ಪಿನ ಮಾರಾಟದರವೆನಿಸುತ್ತದೆ. ಇದರಿಂದ ಗಿರಾಕಿಗೆ ರಾತಲಿಗೆ ಒಂದು ಪೆನ್ನಿ ದರದಲ್ಲಿ ಉಪ್ಪು ಸಿಗುವಂತಾಯಿತು.

ಕಲ್ಕತ್ತಾದಲ್ಲಿ ಉಪ್ಪಿನ ಖಾಸಗಿ ಉತ್ಪಾದನೆಗೂ ಪರವಾನಿಗೆ ಇತ್ತು. ಆಮದು ಸುಂಕಕ್ಕೆ ಸಮನಾದ ಉತ್ಪಾದನಾ ಸುಂಕವನ್ನು ಈ ಉಪ್ಪು ತಯಾರಕರು ಸರ್ಕಾರಕ್ಕೆ ತೆರಬೇಕಾಗುತ್ತಿತ್ತು.

೧೮೩೬ರಲ್ಲಿ ಹೌಸ್ ಆಫ್ ಕಾಮನ್ಸ್‌ನ ಆಯ್ಕೆ ಸಮಿತಿಯ ಶಿಫಾರಸ್ಸಿನನ್ವಯ ಒಂದೇ ದರ ಮತ್ತು ಸರ್ವದಾ ತೆರೆದಿರುವ ಉಗ್ರಾಣಗಳ ಹೊಸಪದ್ಧತಿಯನ್ನು ಜಾರಿಗೊಳಿಸಿದಾಗ ಕಾಲಾವಧಿ ನಡೆಯುವ ಮಾರಾಟದ ಬದಲು ವರ್ಷದ ಹನ್ನೆರಡು ತಿಂಗಳೂ ತೆರೆದಿರುವ ಮಾರಾಟದ ಪದ್ಧತಿ ಆರಂಭವಾಯಿತು.

ಮದರಾಸಿನಲ್ಲಿ ಸರ್ಕಾರದ ಪರವಾಗಿ ಉಪ್ಪನ್ನು ತಯಾರಿಸಿ ಒಳನಾಡಿನ ಗ್ರಾಹಕರಿಗೆ ಒದಗಿಸುತ್ತಿದ್ದರು. ಪೌಂಡಿಗೆ ೩ ರೂಪಾಯಿ ಇದ್ದಂಥ ಆಮದು ಸುಂಕವನ್ನು ಇಳಿಸಿ ಉತ್ಪಾದನಾ ವೆಚ್ಚಕ್ಕೂ ಮಾರಾಟ ಬೆಲೆಗೂ ನಡುವಿನ ವ್ಯತ್ಯಾಸದ ಮೊತ್ತದಷ್ಟು ಎಂದು ದರ ನಿಗದಿಮಾಡಲಾಯಿತು.

ಮುಂಬಯಿಯಲ್ಲಿ ಉಪ್ಪಿನ ಆಮದು ಸುಂಕಕ್ಕೆ ಸರಿಸಮನಾದ ಉತ್ಪಾದನಾ ಸುಂಕವನ್ನು ಹೊರಬಲ್ಲ ಖಾಸಗಿ ವ್ಯಕ್ತಿಗಳಿಗೆ ಉಪ್ಪಿನ ತಯಾರಿಕೆಯನ್ನು ವಹಿಸಿಕೊಡಲಾಯಿತು.

ವಾಯವ್ಯ ಗಡಿನಾಡು ಪ್ರಾಂತಕ್ಕೆ ಬಂಗಾಳದ ತೆಂಕಣ ಪ್ರದೇಶಗಳು, ರಾಜಪುತಾನದ ಸಾಂಭೂರ್ ಉಪ್ಪಿನ ಸರೋವರ ಹಾಗೂ ಪಶ್ಚಿಮ ಭಾರತದ ಭಾಗಗಳು ಉಪ್ಪಿನ ಸರಬರಾಜು ಮಾಡುತ್ತಿದ್ದವು. ಈ ಮೂರು ದಾರಿಗಳಲ್ಲಿ ಬರುವ ಉಪ್ಪಿನ ಬೆಲೆ ಏಕರೂಪವಾಗಿರುವಂತೆ ಆಯಾ ಸುಂಕದಲ್ಲಿ ಹೆಚ್ಚುಕಡಿಮೆ ಮಾಡಲಾಗುತ್ತಿತ್ತು.

## IV. ಸುಂಕಗಳು

ಪ್ರತಿ ಪಟ್ಟಣದಲ್ಲೂ ರಸ್ತೆಯಲ್ಲೂ ದಾರಿ ಸುಂಕ ಮತ್ತು ಒಳನಾಡಿನ ಸುಂಕಗಳು ಅಸಂಖ್ಯರೂಪದಲ್ಲಿ ವಿಜೃಂಭಿಸುತ್ತಿದ್ದ ಕಾಲ ಅದು. ಆದರೆ ಇವನ್ನೆಲ್ಲ ೧೮೩೬ರಲ್ಲಿ (ಆಕ್ಟ್ ೧೪) ಬಂಗಾಳದಲ್ಲೂ, ೧೮೩೮ರಲ್ಲಿ (ಆಕ್ಟ್ ೧೯ರ ಪ್ರಕಾರ) ಮುಂಬಯಿಯಲ್ಲೂ, ೧೮೪೪ರಲ್ಲಿ (ಆಕ್ಟ್ ೬ರಂತೆ) ಮದರಾಸಿನಲ್ಲೂ ತೆಗೆದುಹಾಕಲಾಯಿತು. ಇಡೀ ಬ್ರಿಟಿಷ್ ಭಾರತದಲ್ಲಿ ಒಂದೇ ಬಗೆಯ ಸುಂಕಪದ್ಧತಿ ಜಾರಿಗೆ ಬಂದಿತು. ಒಳನಾಡಿನ ಸಾಗಾಟ ಸುಂಕದ ದುಷ್ಪರಿಣಾಮಗಳನ್ನು ಆಮೇಲೆ ಚರ್ಚಿಸೋಣ.

ಸುಂಕದ ಆದಾಯಕ್ಕೆ ಎರಡು ಮೂಲಗಳಿರುತ್ತಿದ್ದವು.

(೧) ರಫ್ತು ಮತ್ತು ಆಮದಿನ ಮೇಲಣ ಕಡಲ ಸುಂಕಗಳು, ಅನುಕ್ರಮವಾಗಿ ಉಪ್ಪು ಮತ್ತು ನೀಲಿಯ ಮೇಲಿನ ಸುಂಕಗಳು.

(೨) ಮುಖ್ಯವಾಗಿ ಬ್ರಿಟಿಷ್ ಆಡಳಿತ ಪ್ರದೇಶಕ್ಕೂ, ದೇಶೀರಾಜ್ಯಗಳಿಗೂ ನಡುವೆ ಗಡಿಯಲ್ಲಿ ಹಾಯುವ ಪದಾರ್ಥಗಳಿಗೆ ಹೇರುವ ನೆಲಸುಂಕಗಳು.

**V.** ಉಪ್ಪು ಮತ್ತು ಅಫೀಮಿನ ಸರ್ವಸ್ವಾಮ್ಯದಂತೆ ತಂಬಾಕಿನಲ್ಲೂ ಈಸ್ಟ್ ಇಂಡಿಯಾ ಕಂಪನಿಗೆ ಸರ್ವಸ್ವಾಮ್ಯ ಇರುತ್ತಿತ್ತು.

**VI.** ಅಬಕಾರಿ : ಮಾದಕದ್ರವ್ಯಗಳ ಮಾರಾಟವನ್ನು ಹರಾಜಿನಲ್ಲಿ ಅತಿ ಹೆಚ್ಚು ಪಣವಿಡುವವರಿಗೆ ಸರ್ವಸ್ವಾಮ್ಯದ ಹಕ್ಕಿನೊಡನೆ ಕೊಡುವುದು. ಮದ್ಯದಂಗಡಿಗಳು ತೆರೆದಿರುವ ಅವಧಿ ಮತ್ತು ಅವುಗಳೆಲ್ಲಿರಬೇಕೆಂಬ ಸ್ಥಾನವನ್ನು ನಿರ್ಣಯಿಸುವುದು ಸರ್ಕಾರದ ಹಕ್ಕು ಆಗಿರುತ್ತಿತ್ತು.

**VII.** ಕುದುರೆಬಂಡಿ, ಸಾರೋಟು ಇತ್ಯಾದಿಗಳ ಮೇಲೆ ಹೇರಿದ ಗಾಲಿತೆರಿಗೆ.

**VIII.** 'ಸೇಯರ್ ತೆರಿಗೆ'ಯಲ್ಲಿ ವರ್ಗೀಕರಣಕ್ಕೆ ಒಳಪಡದ ಹಲವಾರು ತೆರಿಗೆಗಳು ಸೇರಿಕೊಳ್ಳುತ್ತಿದ್ದವು. ದೇಶೀ ನೌಕರರು ಮಾಡಿಕೊಳ್ಳುತ್ತಿದ್ದ ಅನಿಯತ ವಸೂಲಾತಿಗಳನ್ನೂ ಒಂದು ಸಂದರ್ಭದಲ್ಲಿ ಸೇಯರ್ ತೆರಿಗೆಯಲ್ಲಿ ಅಡಕಗೊಳಿಸಿದ್ದರು. ಮದರಾಸಿನಲ್ಲಿ ಸಾಗಣೆ ತೆರಿಗೆ ಇದರಲ್ಲಿ ಸೇರಿಕೊಂಡರೆ ಬಂಗಾಳದಲ್ಲಿ ಯಾತ್ರಿಕರ ಮೇಲೆ ತೆರಿಗೆ ಸೇರಿಕೊಳ್ಳುತ್ತಿತ್ತು. ಡೆಕ್ಕನ್ ಪ್ರದೇಶದಲ್ಲಿ ಈ ಆದಾಯ ಮೂಲದಲ್ಲಿ ಎರಡು ದೊಡ್ಡ ಭಾಗಗಳಿದ್ದವು: ಅಂಗಡಿ, ವ್ಯಾಪಾರ ಮುಂತಾದವುಗಳ ಮೇಲೆ ಹೇರಲಾಗುವ 'ಮೊಹ್ತುರ್ಫಾ', ಹಳ್ಳಿಯ ಕರಕುಶಲ ಕಸುಬುದಾರರಿಗೆ ರೈತರು ವಸ್ತುರೂಪದಲ್ಲಿ ಕೊಡುವ ಫೀಸಿನ ಮೇಲೂ ಅಥವಾ ಅವರಿಗೆ ಕೊಡಮಾಡಿದ ಗೇಣಿರಹಿತ ಇನಾಂ ಭೂಮಿಯ ಮೇಲೂ ವಿಧಿಸುವ 'ಬಲ್ಲೂತಾ', ಹಾಗೂ ಒಮ್ಮೆ ಸವಕಲು ನಾಣ್ಯಗಳ ಮೇಲಿನ ಶೇಕಡಾವಾರು ಕಡಿತವನ್ನೂ ಸೇಯರ್ ತಲೆಪಟ್ಟಿಯಲ್ಲಿ ಸೇರಿಸಲಾಗಿತ್ತು.

**IX.** ಕಾನೂನು ನಿರ್ವಹಣೆಗಾಗಿ ತಗಲುವ ವೆಚ್ಚವನ್ನು ಅರ್ಥಾತ್ ಜುಡಿಶಿಯಲ್ ಫೀಯನ್ನು ಬೇರೆ ಬೇರೆ ಮೊತ್ತದ ಸ್ಟ್ಯಾಂಪುಗಳ ಮೂಲಕ ವಸೂಲು ಮಾಡುವುದು ಜಾರಿಯಲ್ಲಿತ್ತು. ಸ್ಟ್ಯಾಂಪು ಬೆಲೆ ವ್ಯಾಜ್ಯದ ಮೊತ್ತವನ್ನವಲಂಬಿಸುತ್ತಿತ್ತು.

| **೧೬ ರೂಪಾಯಿವರೆಗಿನ ವ್ಯಾಜ್ಯ** | **ಸ್ಟಾಂಪು ೧ ರೂಪಾಯಿ** |
|---|---|
| ರೂಪಾಯಿ ೧೬ ರಿಂದ ೩೨ | ೨ ರೂಪಾಯಿ |
| ರೂ. ೩೨ ರಿಂದ ೬೪ | ೪ ರೂಪಾಯಿ |
| ರೂ. ೬೪ ರಿಂದ ೧೫೦ | ೮ ರೂಪಾಯಿ |
| ರೂ. ೧೫೦ ರಿಂದ ೩೦೦ | ೧೬ ರೂಪಾಯಿ |
| ರೂ. ೩೦೦ ರಿಂದ ೮೦೦ | ೩೨ ರೂಪಾಯಿ |
| ರೂ. ೮೦೦ ರಿಂದ ೧,೬೦೦ | ೫೦ ರೂಪಾಯಿ |
| ರೂ. ೧,೬೦೦ ರಿಂದ ೩,೦೦೦ | ೧೦೦ ರೂಪಾಯಿ |
| ರೂ. ೫,೦೦೦ ರಿಂದ ೧೦,೦೦೦ | ೨೫೦ ರೂಪಾಯಿ |
| ರೂ. ೧೦,೦೦೦ ರಿಂದ ೨೫,೦೦೦ | ೫೦೦ ರೂಪಾಯಿ |
| ರೂ. ೨೫,೦೦೦ ರಿಂದ ೫೦,೦೦೦ | ೭೫೦ ರೂಪಾಯಿ |
| ರೂ. ೫೦,೦೦೦ ರಿಂದ ೧,೦೦,೦೦೦ | ೧೦೦೦ ರೂಪಾಯಿ |
| ರೂ. ೧,೦೦,೦೦೦ಕ್ಕಿಂತ ಮೇಲ್ಪಟ್ಟು | ೨೦೦೦ ರೂಪಾಯಿ |

ಇಷ್ಟಲ್ಲದೆ ಹಾಜರುಪಡಿಸಿದ ಸಾಕ್ಷ್ಯವಸ್ತುಗಳು, ಸಮನ್ಸ್, ಸವಾಲುಗಳು, ಜವಾಬುಗಳು, ಪೂರಕ ಅಭ್ಯರ್ಥನೆಗಳು, ವಕಾಲತು ಪತ್ರ (ಸನದು)ಗಳು ಇಂಥ ಎಲ್ಲ ಪತ್ರಗಳ ಮೇಲೂ ಸ್ಟ್ಯಾಂಪು ಅಂಟಿಸಬೇಕಾಗುತ್ತಿತ್ತು. ನ್ಯಾಯಾಲಯದ ಹಂತ ಯಾವುದೆಂಬುದನ್ನನುಸರಿಸಿ ಸ್ಟ್ಯಾಂಪು ವೆಚ್ಚ ಹೆಚ್ಚು ಕಡಿಮೆ ಆಗುತ್ತಿತ್ತು.

**X.** **ಸ್ಟ್ಯಾಂಪುಕರ :** ೧೭೯೭ರಲ್ಲಿ ಬಂಗಾಳದಲ್ಲಿ ಜಾರಿ ಮಾಡಲಾದ ಸ್ಟ್ಯಾಂಪ್ ಡ್ಯೂಟಿಯನ್ನು ಎಲ್ಲ ಬಗೆಯ ಕರಾರು, ದಸ್ತಾವೇಜು, ಬಾಡಿಗೆ ಪತ್ರ, ಪವರ್ ಆಫ್ ಅಟಾರ್ನಿ, ವಿಮಾಪಾಲಿಸಿ, ಪ್ರಾಮಿಸರಿನೋಟು, ರಸೀದಿ, ಜಾಮೀನು ಪತ್ರ ಹಾಗೂ ಯಾವತ್ತೂ ಕೋರ್ಟು ವ್ಯವಹಾರಗಳ ಸಂದರ್ಭದಲ್ಲಿ (೨೫ ರೂಪಾಯಿಗಿಂತ ಕೆಳಗಿನ ಮೊತ್ತದ ಹುಂಡಿಗಳು ಮತ್ತು ೫೦ ರೂಪಾಯಿಗಳಿಗಿಂತ ಕಡಿಮೆ ಮೊತ್ತದ ರಸೀದಿಗಳನ್ನು ಹೊರತುಪಡಿಸಿ) ತೆರಬೇಕಾಗುತ್ತಿತ್ತು.

ಮದರಾಸಿನಲ್ಲಿ ಸ್ಟ್ಯಾಂಪ್ ಪತ್ರಗಳನ್ನು ಜಾರಿಗೆ ತರಲಾಯಿತು. ೧೮೦೮ರಲ್ಲಿ, ಮುಖ್ಯವಾಗಿ ನ್ಯಾಯಾಲಯದ ವ್ಯವಹಾರಗಳಲ್ಲಿ, ಜಾರಿಗೆ ತರಲಾಯಿತು. ೧೮೧೬ರಲ್ಲಿ ಕರಾರು, ಒಡಂಬಡಿಕೆಗಳು, ಬಾಡಿಗೆ ಪತ್ರಗಳು, ಅಡವುಪತ್ರಗಳು, ಹುಂಡಿ ಮತ್ತು ರಸೀದಿಗಳಿಗೂ ಸ್ಟ್ಯಾಂಪ್ ಡ್ಯೂಟಿ ಅನ್ವಯಿಸುವುದು ಆರಂಭವಾಯಿತು.

ಮುಂಬಯಿಯಲ್ಲಿ ಸ್ಟ್ಯಾಂಪ್‌ಡ್ಯೂಟಿ ತೊಡಗಿದ್ದು ೧೮೧೫ರಲ್ಲಿ.

ಸ್ಟ್ಯಾಂಪು ವಿತರಣೆಗೆ ಇಂಗ್ಲೆಂಡಿನಲ್ಲಿರುವ ಪದ್ಧತಿಯನ್ನೇ ಆರಂಭಿಸಲಾಯಿತು. ಸ್ಟ್ಯಾಂಪು ವೆಂಡರುಗಳು (ಮಾರಾಟಗಾರರು) ಜಿಲ್ಲಾ ಕಲೆಕ್ಟರುಗಳಿಂದ ಸ್ಟ್ಯಾಂಪುಗಳನ್ನು ಪಡೆದುಕೊಳ್ಳುತ್ತಿದ್ದರು (ವೆಂಡರನು ಸೆಕ್ಯೂರಿಟಿ ಹಣ ಕೊಡಬೇಕಾಗುತ್ತಿತ್ತು). ತದನಂತರ ಅವುಗಳನ್ನು ಸ್ಟ್ಯಾಂಪ್ ಅಗತ್ಯವಿರುವ ವ್ಯಕ್ತಿಗಳಿಗೆ

ಮಾರಾಟ ಮಾಡುತ್ತಿದ್ದರು. ಮಾರಾಟದಲ್ಲಿ ಶೇಕಡಾ ಇಂತಿಷ್ಟರಂತೆ ಮಾರಾಟಗಾರರಿಗೆ ಪ್ರತಿಫಲ ದೊರಕುತ್ತಿತ್ತು.

**XI.** **ಟಂಕಸಾಲೆ ಆದಾಯ (ಮಿಂಟ್ ರೆವಿನ್ಯೂ):** ಇದು ಎರಡು ಶೇಕಡಾ ಸೆನೊರೇಜ್ ಮೂಲಕ, ಹಾಗೂ ಮಾನಗಳ ವ್ಯತ್ಯಾಸವನ್ನು ಶುದ್ಧೀಕರಿಸುವ ವೆಚ್ಚವನ್ನು ಪರಿಗಣನೆಗೆ ತಂದುಕೊಂಡು ಬರತಕ್ಕ ಆದಾಯ.

**XII.** **ಕಡಲ ಆದಾಯ :** ಇವು ಬಂದರಿನ ಸವಲತ್ತಿಗಾಗಿ ಹೇರುತ್ತಿದ್ದ ಶುಲ್ಕಗಳು. ಕಲ್ಕತ್ತಾ, ಮುಂಬಯಿ, ಮದರಾಸು ಬಂದರುಗಳನ್ನು ವ್ಯವಸ್ಥಿತವಾಗಿರಿಸಲು ಇವುಗಳನ್ನು ಬಳಸಲಾಗುತ್ತಿತ್ತು.

**XIII.** **ಪರಿಹಾರಧನ (ಸಬ್ಸಿಡಿ):** ಇದನ್ನು ಆಶ್ರಿತ ದೇಶೀರಾಜ್ಯಗಳಿಂದ ಅವು ಕಂಪನಿಯೊಡನೆ ಮಾಡಿಕೊಂಡ ಕರಾರಿನ ಪ್ರಕಾರ ವಿಧಿಸುತ್ತಿದ್ದರು. ಇದರ ಮೊತ್ತ ಸುಮಾರು ಅರ್ಧ ಮಿಲಿಯ ಪೌಂಡಿನಷ್ಟು ಇದ್ದಿತು.

ಇವು ಈಸ್ಟ್ ಇಂಡಿಯಾ ಕಂಪನಿಯ ಆದಾಯ ಮೂಲಗಳು. ಇವುಗಳ ಪೈಕಿ ಹೆಚ್ಚಿನವು ಇಂದಿಗೂ ಪ್ರಚಲಿತವಾಗಿದೆ.

## III

ಇನ್ನು ಬೇರೆ ಬೇರೆ ಮೂಲಗಳಿಂದ ಬರುವ ಆದಾಯವನ್ನೂ, ಒಟ್ಟು ಆದಾಯ ಮತ್ತು ಪ್ರತ್ಯೇಕ ಇಸಮಿನ ನಡುವಣ ದಾಮಾಷಾ ಶೇಕಡಾವಾರನ್ನೂ ಪರಿಶೀಲಿಸೋಣ:

ಮೊದಲನೆಯದಾಗಿ ಭೂಮಿಯ ಮೇಲಿನ ತೆರಿಗೆ: ಭೂಕಂದಾಯದಿಂದ ಬರುವ ಆದಾಯಕ್ಕೂ ಬ್ರಿಟಿಷ್ ಭಾರತದ ಒಟ್ಟು ಆದಾಯಕ್ಕೂ ಇರುವ ದಾಮಾಷಾ:

| **ಅವಧಿ** | **ಭೂ ತೆರಿಗೆ: ಸರಾಸರಿ ವಾರ್ಷಿಕ ಆದಾಯ** | **ಒಟ್ಟು ಆದಾಯದ ದಾಮಾಷಾ (ಶೇಕಡಾ)** |
|---|---|---|
| ೧೭೯೨–೯೩ ರಿಂದ ೧೭೯೬–೯೭ | ೪,೦೬೮,೦೦೦ | ೫೦.೩೩ |
| ೧೭೯೭–೯೮ ರಿಂದ ೧೮೦೧–೦೨ | ೪,೧೨೬,೦೦೦ | ೪೨.೦೨ |
| ೧೮೦೨–೦೩ ರಿಂದ ೧೮೦೬–೦೭ | ೪,೫೮೨,೦೦೦ | ೩೧.೯೯ |
| ೧೮೦೭–೦೮ ರಿಂದ ೧೮೧೧–೧೨ | ೫,೦೭೮,೦೦೦ | ೩೧.೬೮ |
| ೧೮೧೨–೧೩ ರಿಂದ ೧೮೧೬–೧೭ | ೯,೦೧೮,೦೦೦ | ೫೨.೩೩ |
| ೧೮೧೭–೧೮ ರಿಂದ ೧೮೨೧–೨೨ | ೧೩.೨೬೩,೦೦೦ | ೬೬.೧೭ |
| ೧೮೨೨–೨೩ ರಿಂದ ೧೮೨೬–೨೭ | ೧೩,೫೬೭,೦೦೦ | ೬೧.೮೩ |
| ೧೮೨೭–೨೮ ರಿಂದ ೧೮೩೧–೩೨ | ೧೩,೧೧೨,೦೦೦ | ೬೦.೯೦ |
| ೧೮೩೨–೩೩ ರಿಂದ ೧೮೩೬–೩೭ | ೧೧,೯೪೨,೦೦೦ | ೫೭.೦೦ |
| ೧೮೩೭–೩೮ ರಿಂದ ೧೮೪೧–೪೨ | ೧೨,೩೮೦,೦೦೦ | ೫೯.೦೫ |
| ೧೮೪೨–೪೩ ರಿಂದ ೧೮೪೬–೪೭ | ೧೩,೪೩೨,೦೦೦ | ೫೫.೮೫ |

| | | |
|---|---|---|
| ೧೮೪೭-೪೮ ರಿಂದ ೧೮೫೧-೫೨ | ೧೪,೯೪೭,೦೦೦ | ೫೬.೦೬ |
| ೧೮೫೨-೫೩ ರಿಂದ ೧೮೫೫-೫೬ | ೧೬,೧೮೩,೦೦೦ | ೫೫.೪೦ |
| ೧೭೯೨-೯೩ ರಿಂದ ೧೮೫೫-೫೬ | ೧೦,೩೪೯,೦೦೦ | ೫೪.೦೭ |

**ಅಫೀಮು ಆದಾಯ : ಅಫೀಮಿನಿಂದ ಬರುವ ಆದಾಯಕ್ಕೂ ಮತ್ತು ಬ್ರಿಟಿಷ್ ಭಾರತದ ಆದಾಯಕ್ಕೂ ಇರುವ ದಾಮಾಷಾ (ಶೇಕಡಾ)**

| ಅವಧಿ | ಸರಾಸರಿ ವಾರ್ಷಿಕ ಆದಾಯ | ಒಟ್ಟು ಆದಾಯದ ಶೇಕಡಾ |
|---|---|---|
| ೧೭೯೨-೯೩ ರಿಂದ ೧೭೯೬-೯೭ | ೨೬೪,೦೦೦ | ೩.೨೭ |
| ೧೭೯೭-೯೮ ರಿಂದ ೧೮೦೧-೦೨ | ೩೧೨,೦೦೦ | ೩.೧೮ |
| ೧೮೦೨-೦೩ ರಿಂದ ೧೮೦೬-೦೭ | ೫೭೯,೦೦೦ | ೪.೦೪ |
| ೧೮೦೭-೦೮ ರಿಂದ ೧೮೧೧-೧೨ | ೭೬೭,೦೦೦ | ೪.೭೯ |
| ೧೮೧೨-೧೩ ರಿಂದ ೧೮೧೬-೧೭ | ೯೫೮,೦೦೦ | ೫.೫೬ |
| ೧೮೧೭-೧೮ ರಿಂದ ೧೮೨೧-೨೨ | ೧,೦೯೦,೦೦೦ | ೫.೪೪ |
| ೧೮೨೨-೨೩ ರಿಂದ ೧೮೨೬-೨೭ | ೧,೬೪೧,೦೦೦ | ೭.೪೭ |
| ೧೮೨೭-೨೮ ರಿಂದ ೧೮೩೧-೩೨ | ೧,೭೪೭,೦೦೦ | ೮.೧೨ |
| ೧೮೩೨-೩೩ ರಿಂದ ೧೮೩೬-೩೭ | ೧,೬೭೭,೦೦೦ | ೮.೦೦ |
| ೧೮೩೭-೩೮ ರಿಂದ ೧೮೪೧-೪೨ | ೧,೫೪೭,೦೦೦ | ೭.೩೮ |
| ೧೮೪೨-೪೩ ರಿಂದ ೧೮೪೬-೪೭ | ೨,೯೬೫,೦೦೦ | ೧೨.೩೩ |
| ೧೮೪೭-೪೮ ರಿಂದ ೧೮೫೧-೫೨ | ೩,೮೪೦,೦೦೦ | ೧೪.೫೦ |
| ೧೮೫೨-೫೩ ರಿಂದ ೧೮೫೫-೫೬ | ೪,೯೪೩,೦೦೦ | ೧೬.೯೧ |
| ೧೭೯೨-೯೩ ರಿಂದ ೧೮೫೫-೫೬ | ೧,೬೬೭,೦೦೦ | ೮.೭೧ |

**ಉಪ್ಪಿನ ತೆರಿಗೆ : ಇದರಿಂದ ಬರುವ ಆದಾಯಕ್ಕೂ ಮತ್ತು ಬ್ರಿಟಿಷ್ ಭಾರತದ ಆದಾಯಕ್ಕೂ ಇರುವ ದಾಮಾಷಾ (ಶೇಕಡಾ)**

| ಅವಧಿ | ಸರಾಸರಿ ವಾರ್ಷಿಕ ಆದಾಯ | ಒಟ್ಟು ಆದಾಯದ ಶೇಕಡಾ |
|---|---|---|
| ೧೭೯೨-೯೩ ರಿಂದ ೧೭೯೬-೯೭ | ೧,೨೦೭,೦೦೦ | ೧೪.೯೩ |
| ೧೭೯೭-೯೮ ರಿಂದ ೧೮೦೧-೦೨ | ೧,೧೮೮,೦೦೦ | ೧೨.೧೦ |
| ೧೮೦೨-೦೩ ರಿಂದ ೧೮೦೬-೦೭ | ೧,೫೮೯,೦೦೦ | ೧೧.೦೯ |

| | | |
|---|---|---|
| ೧೮೦೭-೦೮ ರಿಂದ ೧೮೧೧-೧೨ | ೧,೭೮೫,೦೦೦ | ೧೧.೧೪ |
| ೧೮೧೨-೧೩ ರಿಂದ ೧೮೧೬-೧೭ | ೧,೮೮೨,೦೦೦ | ೧೦.೯೨ |
| ೧೮೧೭-೧೮ ರಿಂದ ೧೮೨೧-೨೨ | ೨,೨೫೬,೦೦೦ | ೧೧.೨೫ |
| ೧೮೨೨-೨೩ ರಿಂದ ೧೮೨೬-೨೭ | ೨,೬೦೩,೦೦೦ | ೧೧.೮೭ |
| ೧೮೨೭-೨೮ ರಿಂದ ೧೮೩೧-೩೨ | ೨,೫೯೦,೦೦೦ | ೧೨.೦೩ |
| ೧೮೩೨-೩೩ ರಿಂದ ೧೮೩೬-೩೭ | ೨,೦೩೬,೦೦೦ | ೯.೭೨ |
| ೧೮೩೭-೩೮ ರಿಂದ ೧೮೪೧-೪೨ | ೨,೫೯೩,೦೦೦ | ೧೨.೩೭ |
| ೧೮೪೨-೪೩ ರಿಂದ ೧೮೪೬-೪೭ | ೨,೭೯೮,೦೦೦ | ೧೧.೬೫ |
| ೧೮೪೭-೪೮ ರಿಂದ ೧೮೫೧-೫೨ | ೨,೪೩೮,೦೦೦ | ೯.೧೪ |
| ೧೮೫೨-೫೩ ರಿಂದ ೧೮೫೫-೫೬ | ೨,೬೭೭,೦೦೦ | ೯.೧೭ |
| ೧೭೯೨-೯೩ ರಿಂದ ೧೮೫೫-೫೬ | ೨,೧೧೮,೦೦೦ | ೧೧.೦೭ |

**ಸುಂಕದ ಆದಾಯ : ಸುಂಕದಿಂದ ಬರುವ ಆದಾಯ ಮತ್ತು ಬ್ರಿಟಿಷ್ ಭಾರತದ ಒಟ್ಟು ಆದಾಯದಲ್ಲಿ ಅದರ ಶೇಕಡಾ ದಾಮಾಷಾ**

| ಅವಧಿ | ಸರಾಸರಿ ವಾರ್ಷಿಕ ಆದಾಯ | ಒಟ್ಟು ಆದಾಯದ ಶೇಕಡಾ |
|---|---|---|
| ೧೭೯೨-೯೩ ರಿಂದ ೧೭೯೬-೯೭ | ೧೯೨,೦೦೦ | ೨.೩೮ |
| ೧೭೯೭-೯೮ ರಿಂದ ೧೭೮೧-೮೨ | ೩೦೪,೦೦೦ | ೩.೧೦ |
| ೧೮೦೨-೦೩ ರಿಂದ ೧೮೦೬-೦೭ | ೫೯೬,೦೦೦ | ೪.೧೬ |
| ೧೮೦೭-೦೮ ರಿಂದ ೧೮೧೧-೧೨ | ೮೦೭,೦೦೦ | ೫.೦೪ |
| ೧೮೧೨-೧೩ ರಿಂದ ೧೮೧೬-೧೭ | ೧,೧೫೯,೦೦೦ | ೬.೬೮ |
| ೧೮೧೭-೧೮ ರಿಂದ ೧೮೨೧-೨೨ | ೧,೬೬೭,೦೦೦ | ೮.೩೨ |
| ೧೮೨೨-೨೩ ರಿಂದ ೧೮೨೬-೨೭ | ೧,೬೬೩,೦೦೦ | ೭.೫೮ |
| ೧೮೨೭-೨೮ ರಿಂದ ೧೮೩೧-೩೨ | ೧,೭೪೭,೦೦೦ | ೮.೧೨ |
| ೧೮೩೨-೩೩ ರಿಂದ ೧೮೩೬-೩೭ | ೧,೫೦೬,೦೦೦ | ೭.೧೯ |
| ೧೮೩೭-೩೮ ರಿಂದ ೧೮೪೧-೪೨ | ೧,೪೧೮,೦೦೦ | ೬.೭೬ |
| ೧೮೪೨-೪೩ ರಿಂದ ೧೮೪೬-೪೭ | ೧,೪೪೯,೦೦೦ | ೬.೦೨ |
| ೧೮೪೭-೪೮ ರಿಂದ ೧೮೫೧-೫೨ | ೧,೪೩೯,೦೦೦ | ೫.೪೦ |
| ೧೮೫೨-೫೩ ರಿಂದ ೧೮೫೫-೫೬ | ೧,೬೧೧,೦೦೦ | ೫.೫೨ |
| ೧೭೯೨-೯೩ ರಿಂದ ೧೮೫೫-೫೬ | ೧,೧೯೦,೦೦೦ | ೬.೨೨ |

**ಇತರೇ ಬಾಬುಗಳಿಂದ ಬರುವ ಆದಾಯ ಹಾಗೂ ಬ್ರಿಟಿಷ್ ಭಾರತದ ಒಟ್ಟು ಆದಾಯದಲ್ಲಿ ಅವುಗಳ ಶೇಕಡಾ**

| ಅವಧಿ | ಸರಾಸರಿ ವಾರ್ಷಿಕ ಆದಾಯ | ಒಟ್ಟು ಆದಾಯದ ಶೇಕಡಾ |
|---|---|---|
| ೧೭೯೨–೯೩ ರಿಂದ ೧೭೯೬–೯೭ | ೨೩,೧೫,೦೦೦ | ೨೮.೬೪ |
| ೧೭೯೭–೯೮ ರಿಂದ ೧೮೦೧–೦೨ | ೩೮,೦೯,೦೦೦ | ೩೮.೭೯ |
| ೧೮೦೨–೦೩ ರಿಂದ ೧೮೦೬–೦೭ | ೬೮,೫೭,೦೦೦ | ೪೭.೮೭ |
| ೧೮೦೭–೦೮ ರಿಂದ ೧೮೧೧–೧೨ | ೭೪,೫೨,೦೦೦ | ೪೬.೪೯ |
| ೧೮೧೨–೧೩ ರಿಂದ ೧೮೧೬–೧೭ | ೩೯,೯೦,೦೦೦ | ೨೩.೧೬ |
| ೧೮೧೭–೧೮ ರಿಂದ ೧೮೨೧–೨೨ | ೧೩,೯೨,೦೦೦ | ೬.೯೪ |
| ೧೮೨೨–೨೩ ರಿಂದ ೧೮೨೬–೨೭ | ೧೯,೮೬,೦೦೦ | ೯.೦೫ |
| ೧೮೨೭–೨೮ ರಿಂದ ೧೮೩೧–೩೨ | ೧೭,೮೯,೦೦೦ | ೮.೩೧ |
| ೧೮೩೨–೩೩ ರಿಂದ ೧೮೩೬–೩೭ | ೩೦,೫೯,೦೦೦ | ೧೪.೬೦ |
| ೧೮೩೭–೩೮ ರಿಂದ ೧೮೪೧–೪೨ | ೧೪,೩೪,೦೦೦ | ೬.೮೪ |
| ೧೮೪೨–೪೩ ರಿಂದ ೧೮೪೬–೪೭ | ೧೬,೩೬,೦೦೦ | ೬.೮೦ |
| ೧೮೪೭–೪೮ ರಿಂದ ೧೮೫೧–೫೨ | ೧೯,೭೭,೦೦೦ | ೭.೪೦ |
| ೧೮೫೨–೫೩ ರಿಂದ ೧೮೫೫–೫೬ | ೧೫,೭೫,೦೦೦ | ೫.೩೯ |
| ೧೭೯೨–೯೩ ರಿಂದ ೧೮೫೫–೫೬ | ೩೦,೪೩,೦೦೦ | ೧೫.೯೦ |

ಆದಾಯದ ಮೂಲಗಳ ಬಗ್ಗೆ, ಬರುವ ಮೊಬಲಗಿನ ಬಗ್ಗೆ ಹಾಗೂ ಒಟ್ಟು ಆದಾಯದಲ್ಲಿ ಅವುಗಳ ಶೇಕಡಾ ಪ್ರಮಾಣದ ಬಗ್ಗೆ ಇಷ್ಟನ್ನು ಹೇಳಿದ ಮೇಲೆ ವೆಚ್ಚದ ಕಡೆಗೆ ದೃಷ್ಟಿ ಹಾಯಿಸೋಣ.

(೧) ಆದಾಯ ಸಂಗ್ರಹಿಸಲು ತಗಲುವ ವೆಚ್ಚಗಳು

(೨) ಮಿಲಿಟರಿ ಮತ್ತು ನೌಕಾ ವೆಚ್ಚಗಳು

(೩) ಆಡಳಿತ (ಸಿವಿಲ್), ನ್ಯಾಯಾಲಯ ಮತ್ತು ಪೊಲೀಸ್

(೪) ಸಾರ್ವಜನಿಕ ಕಾಮಗಾರಿ

(೫) ಭಾರತದೊಳಗೆ ಎತ್ತಿದ ಸಾಲಪತ್ರಗಳ ಮೇಲಿನ ಬಡ್ಡಿ.

(೬) ಆಶ್ರಿತರಾಜರ ಜತೆ ಮಾಡಿಕೊಂಡ ಒಡಂಬಡಿಕೆ ಅಥವಾ ಕರಾರಿನ ಪ್ರಕಾರ ಸಲ್ಲಿಸಬೇಕಾದ ಭತ್ಯೆ, ಇತ್ಯಾದಿ ಮೊಬಲಗು

(೭) ಕೆಳಕಂಡ ಬಾಬ್ತುಗಳನ್ನೊಳಗೊಂಡ ಸ್ವದೇಶೀ ವೆಚ್ಚ

  (ಅ) ದೇಶೀ ಸಾಲಪತ್ರದ ಮೇಲಿನ ಬಡ್ಡಿ

  (ಆ) ಈಸ್ಟ್ ಇಂಡಿಯಾ ಕಂಪನಿ ಬಂಡವಾಳದ ಮಾಲೀಕರಿಗೆ ತೆರುವ ಲಾಭಾಂಶ (ಡಿವಿಡೆಂಡ್)

(ಇ) ಬ್ರಿಟಿಷ್ ಚಕ್ರವರ್ತಿನಿಯ ಸೈನ್ಯ ಮತ್ತು ಸೇನಾಧಿಕಾರದ ವೆಚ್ಚಗಳು

(ಈ) ಈಸ್ಟ್ ಇಂಡಿಯಾ ಹೌಸ್ ಮತ್ತು ನಿಯಂತ್ರಣ ಮಂಡಳಿಯ ಚಾರ್ಜುಗಳು.

ಕಾಲಾನುಕ್ರಮ ರೀತಿಯಲ್ಲಿ ವೆಚ್ಚಗಳನ್ನು ಕೋಷ್ಟಕ ರೂಪದಲ್ಲಿ ಇದೀಗ ಬಿತ್ತರಿಸೋಣ.

೧೮೦೦ ರಿಂದ ೧೮೫೭ರ ನಡುವಣ ಅವಧಿಯಲ್ಲಿ ಪ್ರತಿ ಹತ್ತನೇ ವರ್ಷವನ್ನು ಪ್ರಾತಿನಿಧಿಕ ವರ್ಷವೆಂಬುದಾಗಿ ಪರಿಗ್ರಹಿಸಿ ಆ ವರ್ಷದ ಆದಾಯದಲ್ಲಿ ವೆಚ್ಚದ ಪ್ರಮಾಣವನ್ನು (ಶೇಕಡಾವಾರು) ನಮೂದಿಸಿದರೆ ಹೀಗಿರುತ್ತದೆ.

| ವರ್ಷ | ನಿವ್ವಳ ಆದಾಯ | ವೆಚ್ಚ | ಮಿಲಿಟರಿ ವೆಚ್ಚ % | ಸಾಲದ ಮೇಲಿನ ಬಡ್ಡಿ % | ಆಡಳಿತ ಮತ್ತು ರಾಜ್ಯ ಭಾರ ವೆಚ್ಚಗಳು % | ನ್ಯಾಯ ಪಾಲನಾ ವೆಚ್ಚಗಳು % | ಪ್ರಾಂತೀಯ ಪೋಲೀಸ್ ವೆಚ್ಚ % | ಕಟ್ಟಡ ಕೋಟೆ ಕೊತ್ತಲ % |
|---|---|---|---|---|---|---|---|---|
| ೧೮೦೯–೧೦ | ೧೧,೨೩೮.೦೦೦ | ೧೧,೦೭೬.೦೦೦ | ೫೮.೮೭೭ | ೧೮.೦೧೦ | ೭.೨೨೧ | ೭.೫೨೫ | ೧.೯೯೧ | ೧.೬೩೯ |
| ೧೮೧೯–೨೦ | ೧೩,೦೧೬.೦೦೦ | ೧೨,೯೩೪.೦೦೦ | ೬೪.೨೯೦ | ೧೨.೮೦೫ | ೮.೯೦೦ | ೬.೮೦೦ | ೨.೦೯೩ | ೧.೭೫೬ |
| ೧೮೨೯–೩೦ | ೧೪,೨೦೦.೦೦೦ | ೧೩,೧೦೭.೦೦೦ | ೫೩.೭೫೪ | ೧೨.೧೨೪ | ೯.೫೭೫ | ೭.೧೦೭ | ೧.೫೩೫ | ೨.೮೧೦ |
| ೧೮೩೯–೪೦ | ೧೩,೭೪೨.೦೦ | ೧೩,೦೦೪.೦೦೦ | ೫೭.೭೨೧ | ೯.೭೫೬ | ೧೨.೨೯೬ | ೯.೫೬೫ | ೨.೦೬೨ | ೧.೪೨೮ |
| ೧೮೪೯–೫೦ | ೧೯,೫೧೦.೦೦೦ | ೧೬,೪೦೪.೦೦೦ | ೫೧.೬೬೨ | ೧೦.೫೧೨ | ೮.೯೦೨ | ೭.೧೦೦ | ೨.೦೬೨ | ೧.೬೬೧ |
| ೧೮೫೭ | ೩೩,೩೦೩.೦೦ | ೨೮,೦೭೯.೦೦೦ | ೪೫.೫೫ | ೭.೧೯ | ೯.೬೨ | ೯.೩೮ | | |

## ಸಾರ್ವಜನಿಕ ಕಾಮಗಾರಿ

ಪ್ರೊ. ಅಡಮ್ಸ್ ಅಭಿಪ್ರಾಯದಲ್ಲಿ ಒಂದು ದೇಶದ ಹಣಕಾಸು ಪರಿಸ್ಥಿತಿಯನ್ನು ಅಭಿವೃದ್ಧಿ ವೆಚ್ಚಗಳ ದೃಷ್ಟಿಯಿಂದ ನೋಡುವುದು ಸೂಕ್ತವಾಗಿದೆ. ಇಂಥ ಅಭಿವೃದ್ಧಿ ವೆಚ್ಚಗಳಲ್ಲಿ ಸಾರ್ವಜನಿಕ ಕಾಮಗಾರಿ ಪ್ರಮುಖವಾಗಿದೆ.

ಈ ಅಳತೆಗೋಲನ್ನು ಇಟ್ಟುಕೊಂಡು ನೋಡಿದ ಪಕ್ಷದಲ್ಲಿ ಇಡೀ ಈಸ್ಟ್ ಇಂಡಿಯಾ ಕಂಪನಿಯ ಹಣಕಾಸು ಪದ್ಧತಿಯನ್ನು ಖಂಡಿಸದೆ ಉಪಾಯವಿಲ್ಲ.

೧೮೫೩ರ ಪೂರ್ವದಲ್ಲಿ ಯುದ್ಧಗಳನ್ನು ಮಾಡುವುದೇ ಕಂಪನಿ ಆಡಳಿತದ ಕೆಲಸವಾಗಿದ್ದುದರಿಂದ ಯಾವ ಹೊಸ ಸಾರ್ವಜನಿಕ ಕಾಮಗಾರಿಯನ್ನೂ ಅದು ಕೈಗೆ ತೆಗೆದುಕೊಳ್ಳದಿದ್ದುದು ಮಾತ್ರವಲ್ಲ ಹಳೆಯವುಗಳನ್ನು ಹಾಳಾಗಲು ಬಿಟ್ಟದ್ದೂ ಇದೆ.

ಡಾ. ಸ್ಪ್ರೇ 'ಆಧುನಿಕ ಭಾರತ' ಎಂಬ ತಮ್ಮ ಪುಸ್ತಕದಲ್ಲಿ (೧೮೩೭) "ಉಪಯುಕ್ತ ಕಾಮಗಾರಿಗಳನ್ನು ಸುಸ್ಥಿತಿಯಲ್ಲಿಟ್ಟಿರುವುದನ್ನು ನೋಡಬೇಕಾದರೆ ನಾವು ಆಶ್ರಿತ ಸಂಸ್ಥಾನಗಳ ರಾಜರುಗಳ ಆಡಳಿತ ಪ್ರದೇಶಕ್ಕೆ ಹೋಗಬೇಕಾಗುತ್ತದೆ. ಕಾಮಗಾರಿಗಳಿಗೋಸ್ಕರ ಮುದ್ದಾಂ ಸಂಗ್ರಹಿಸಿದ ಹಣವಿದ್ದೂ ನಮ್ಮ ಅಧೀನ

ಪ್ರದೇಶದಲ್ಲಿ ಕಾಲುವೆಗಳು, ಸೇತುವೆಗಳು, ಜಲಾಶಯಗಳು, ಬಾವಿಗಳು, ತೋಪುಗಳು ಮುಂತಾದ ಎಲ್ಲವೂ ಅನಾಥವಾಗಿ ಪಾಳುಬಿದ್ದಿವೆ" ಎಂದು ಬರೆದಿದ್ದಾರೆ.

ಸಾರ್ವಜನಿಕ ಕಾಮಗಾರಿಗಳ ಬಗ್ಗೆ ಜಾನ್ ಬ್ರೈಟ್ ಹೀಗೆ ಹೇಳಿದ್ದುಂಟು: – 'ಭಾರತದ ನಿವಾಸಿಗಳ ಪರವಾಗಿ ಮಾತಾಡುವುದಾದರೆ ಇಲ್ಲಿನ ಇಡೀ ದೇಶದ ಸಾರ್ವಜನಿಕ ಕಾಮಗಾರಿ ಇಂಗ್ಲೆಂಡಿನ ಒಂದು ಜಿಲ್ಲೆಯ ಕಾಮಗಾರಿಗೆ ಸಮನಾಗದು. ಒಳ್ಳೆಯ ಪ್ರವಾಸಯೋಗ್ಯ ರಸ್ತೆಗಳು ಇಲ್ಲಿರುವವುಗಳಿಗಿಂತ ಅಲ್ಲಿ ಎಷ್ಟೋ ಪಾಲು ಹೆಚ್ಚಾಗಿದೆ. ೧೮೩೪ರಿಂದ ೧೮೪೮ರ ವರೆಗಿನ ೧೪ ವರ್ಷಗಳ ಅವಧಿಯಲ್ಲಿ ದೇಶಾದ್ಯಂತ ಈಸ್ಟ್ ಇಂಡಿಯಾ ಕಂಪನಿ ನೀರು ಸರಬರಾಜಿಗೆ ಮಾಡಿದ ವೆಚ್ಚಕ್ಕಿಂತ ಹೆಚ್ಚು ವೆಚ್ಚವನ್ನು ಮೆಂಚೆಸ್ಟರ್ ನಗರ ಒಂದೇ ನಾಗರಿಕರ ಸಲುವಾಗಿ ಮಾಡಿರುವುದನ್ನು ಗಮನಿಸಬೇಕು. ಭಾರತ ಸರ್ಕಾರದ ನಿಜವಾದ ಚಟುವಟಿಕೆ ಎಂದರೆ ಯುದ್ಧ ಮಾಡಿ ಇಂಡಿಯಾವನ್ನು ವಶಪಡಿಸಿಕೊಳ್ಳುವುದು ಮಾತ್ರವೇ ಆಗಿತ್ತು.'

ಸಾರ್ವಜನಿಕ ಕಾಮಗಾರಿ ಇಲಾಖೆ ಎಂಬುದು ಏಕರೂಪವಾಗಿ ಭಾರತದ ಪ್ರಾಂತ್ಯಗಳಿಗೆ (ಪ್ರೆಸಿಡೆನ್ಸಿಗಳಿಗೆ) ಅನ್ವಯಿಸುವುದಕ್ಕೆ ಮುನ್ನ ಈ ಕೆಲಸವನ್ನು ಮಾಡುವ ವಿಧಾನ ಬೇರೆ ಬೇರೆ ಕಡೆಗೆ ಬೇರೆ ಬೇರೆ ಆಗಿತ್ತು.

ಮುಂಬಯಿಯಲ್ಲಿ ಇದು ಮಿಲಿಟರಿ ಬೋರ್ಡ್‌ನ ಅಧೀನದಲ್ಲಿತ್ತು. ರಸ್ತೆ ಮತ್ತು ಕೆರೆಗಳ ಸೂಪರಿಂಟೆಂಡೆಂಟನು ಬೋರ್ಡ್‌ನ ಅಧೀನ ಅಧಿಕಾರಿಯಾದರೂ ಹೊರಗಡೆ ಅದರ ವ್ಯಾಪ್ತಿಗೆ ಸೇರದ ಕರ್ತವ್ಯಗಳನ್ನೂ ಮಾಡುತ್ತಿದ್ದನು. ಬಂಗಾಳದಲ್ಲಿ ಮಿಲಿಟರಿ ಬೋರ್ಡಿಗೆ ನಿಯಂತ್ರಣ ವಹಿಸಿ ಕೊಡಲಾಗಿತ್ತು. ಮದರಾಸಿನಲ್ಲಿ ಇಲಾಖೆಯನ್ನು ಆಡಳಿತ ದೃಷ್ಟಿಯಿಂದ ಮೂರು ವಿಭಾಗಗಳಾಗಿ ಹಂಚಲಾಗಿತ್ತು (೧) ರೆವಿನ್ಯೂ ಬೋರ್ಡಿನ ಸಾರ್ವಜನಿಕ ಕಾಮಗಾರಿ (೨) ರಸ್ತೆಗಳ ಸೂಪರಿಂಟೆಂಡೆಂಟ್ (೩) ಮಿಲಿಟರಿ ಬೋರ್ಡ್.

ಈ ವ್ಯವಸ್ಥೆಯೊಳಗಿನ ತಾರತಮ್ಯವನ್ನು ನಿವಾರಿಸಲು ಲಾರ್ಡ್ ಡಾಲ್‌ಹೌಸಿ ಒಂದು ಪ್ರತ್ಯೇಕ ವಿಭಾಗವನ್ನು ನಿರ್ಮಿಸಿ ಸಾರ್ವಜನಿಕ ಕಾಮಗಾರಿಗೆ ಸಂಬಂಧಿಸಿದ ಸರ್ವ ವಿಷಯಗಳನ್ನು ಅದರ ವ್ಯಾಪ್ತಿಯಲ್ಲಿ ಅಳವಡಿಸಿದನು.

ಈಸ್ಟ್ ಇಂಡಿಯಾ ಕಂಪನಿಯ ಆಳ್ವಿಕೆಯ ಕಾಲದಲ್ಲಿ ಕೈಗೊಂಡ ಸಾರ್ವಜನಿಕ ಕಾಮಗಾರಿಯ ಒಂದು ಸಂಕ್ಷಿಪ್ತ ಸಿಂಹಾವಲೋಕನ ಹೀಗಿದೆ.

**೧) ಕಾಲುವೆಗಳು**

**ಗಂಗಾ ಕಾಲುವೆ** – ೪೪೯ ೧/೩ ಮೈಲು

ಪೂರ್ವ ಮತ್ತು ಪಶ್ಚಿಮ ಯಮುನಾ ಕಾಲುವೆ – ಪಶ್ಚಿಮ ಯಮುನಾ ಕಾಲುವೆಯ ಕೆಲಸ ೪೪೫ ಮೈಲು ಉದ್ದ ಪೂರ್ಣಗೊಂಡಿತ್ತು.

ಪಂಜಾಬ್ ಕಾಲುವೆಗಳು – ಮೇ ೧೮೫೬ರಲ್ಲಿ ಬೋರಿ–ದುವಾಬ್ ಕಾಲುವೆಯ ಕೆಲಸ ೪೨೫ ಮೈಲು ಸಂಪೂರ್ಣಗೊಂಡಿತ್ತು.

ಮದರಾಸು ನೀರಾವರಿ ಕಾಮಗಾರಿಗಳು – ಕಾವೇರಿ, ಗೋದಾವರಿ, ಕೃಷ್ಣಾ ನದಿಗಳ ಪಾತ್ರದಲ್ಲಿ ಕೆರೆಗಳು, ಜಲಾಶಯಗಳು, ಅಣೆಕಟ್ಟುಗಳು, ಕೆರೆ ಏರಿಗಳು ಮುಂತಾದವುಗಳ ನಿರ್ಮಾಣ.

**೨) ಟ್ರಕ್ ರಸ್ತೆಗಳು**

| | ಮೈಲಿಗಳು | ವೆಚ್ಚ |
|---|---|---|
| ಕಲ್ಕತ್ತದಿಂದ ಪೇಶಾವರ | ೧,೪೨೩ | ೧,೪೨೩,೦೦೦ |
| ಕಲ್ಕತ್ತದಿಂದ ಮುಂಬಯಿ | ೧,೦೦೨ | ೫೦೦,೦೦೦ |
| ಮದರಾಸಿನಿಂದ ಬೆಂಗಳೂರು | ೨೦೦ | ೩೭,೧೨೧ |
| ಮುಂಬಯಿಯಿಂದ ಆಗ್ರಾ | ೭೩೪ | ೨೪೩,೬೭೬ |
| ರಂಗೂನ್‌ನಿಂದ ಪ್ರೋಮ್ | ೨೦೦ | ೧೬೦,೦೦೦ |
| **೩) ರೈಲ್ವೆ** | | |
| ಕಲ್ಕತ್ತದಿಂದ ಬರ್ದ್ವಾನ್ | ೧೨೦ | |
| ಮುಂಬಯಿಯಿಂದ ವಾಸ್ಸಿಂದ | ೫೦ | |
| ಮುಂಬಯಿಯಿಂದ ಕಂಪೂಯಿ | ೧೦ | |
| ಮದರಾಸಿನಿಂದ ವೆಲ್ಲೂರು | ೮೧ | |

**(೪) ಇಲೆಕ್ಟ್ರಿಕ್ ಟೆಲಿಗ್ರಾಫ್**

| | |
|---|---|
| ಕಲ್ಕತ್ತದಿಂದ ಪೇಶಾವರ<br>ಆಗ್ರಾದಿಂದ ಮುಂಬಯಿ<br>ಮುಂಬಯಿಯಿಂದ ಮದರಾಸು | ಒಟ್ಟು ೪೦೦೦ ಮೈಲುಗಳು |

ಶ್ರೀ ಹೆಂಡಿಕ್ಸ್ ಹೇಳುತ್ತಾರೆ : ದೇಶದ ವಿಸ್ತಾರ ಮತ್ತು ಜನಸಂಖ್ಯೆಗೆ ಹೋಲಿಸಿದರೆ ಕಾಮಗಾರಿಗಳ ಹರವು ಮತ್ತು ನಿರಂತರತೆ ಅಪೇಕ್ಷಣೀಯ ಪ್ರಮಾಣದಲ್ಲಿರುವಂತೆ ಕಾಣುವುದಿಲ್ಲ. ಕೇವಲ ಮಿಲಿಟರಿ ಉದ್ದೇಶದ ಕಾಮಗಾರಿಗಳನ್ನು ಹೊರತುಪಡಿಸಿದರೆ ಭೂಸಾರಿಗೆ ಮತ್ತು ನೀರಾವರಿಯನ್ನೊಳಗೊಂಡ ಸಾರ್ವಜನಿಕ ಕಾಮಗಾರಿಗೆ ಈಚೆಗಿನ ಕೆಲ ವರ್ಷಗಳಲ್ಲಿ ವೆಚ್ಚಮಾಡಿದ್ದು ವಾರ್ಷಿಕ ಒಂದೂವರೆ ಮಿಲಿಯ ಪೌಂಡ್ ಮಾತ್ರ. ಕೂಡಲೇ ಫಲನೀಡುವ ಕೆಲಸಗಳಾದ ಕಾಲುವೆ ಮತ್ತು ನೀರಾವರಿಯನ್ನಷ್ಟೆ ತೆಗೆದುಕೊಂಡರೆ ೧೮೫೩-೫೪ರಲ್ಲಿ ರೂ. ೭೩೮,೦೧೫ ಮತ್ತು ೧೮೫೪-೫೫ರಲ್ಲಿ ರೂ.೫೪೩,೩೩೩ಗಳಿಗಿಂತ ಹೆಚ್ಚು ವೆಚ್ಚವನ್ನು ಮಾಡಲಿಲ್ಲ.

"ದೇಶದ ೮೩೭,೦೦೦ ಚದರ ಮೈಲು ವಿಸ್ತಾರ ಮತ್ತು ೧೩೨ ಮಿಲಿಯ ಜನಸಂಖ್ಯೆಯನ್ನು ಗಮನಿಸಿದಾಗ ಇದು ಅಂಥದೇನೂ ದೊಡ್ಡ ಮೊತ್ತ ಆಗಲಿಲ್ಲವೆಂದು ಟೀಕಿಸುವವರಿಗೆ ಯಾವತ್ತೂ ಕೊಡುತ್ತಿದ್ದ ಉತ್ತರವೆಂದರೆ ಆದಾಯದ ಕೊರತೆಯಷ್ಟೇ. ಆದರೆ ನಿಜಕ್ಕೂ ಆದಾಯದ ಕೊರತೆ ಇದಕ್ಕೆ ಕಾರಣವಲ್ಲ. ಹಿಂದೆ ಕೊಟ್ಟಿರುವ ತಃಖ್ತೆಗಳ ಮೇಲಿಂದಲೂ, ವಸಾಹತುಶಾಹಿ ಸಾಮ್ರಾಜ್ಯದ ಇತರ ಶಾಖೆಗಳ ಇತಿಹಾಸ ಮತ್ತು ಧೋರಣೆಗಳ ಮೇಲಿನಿಂದಲೂ ನೋಡುವುದಾದರೆ ಮಾತ್ರವಲ್ಲ, ಫಲವತ್ತತೆಯ ದೃಷ್ಟಿಯಿಂದ ನೋಡಿದರೂ ಈ ಆಕ್ಷೇಪ ಅರ್ಥಹೀನವಾಗುತ್ತದೆ. ಅಲ್ಲದೆ ಈಸ್ಟ್ ಇಂಡಿಯಾ ಕಂಪನಿಯ ಇತಿಹಾಸವನ್ನಾಗಲಿ, ಇತರ ದೇಶಗಳಲ್ಲಿ ಕಾರ್ಯಪ್ರವೃತ್ತವಾಗಿರುವ ಕಂಪನಿಗಳನ್ನಾಗಲಿ ಪರಿಶೀಲಿಸಿದಲ್ಲಿ ಎಲ್ಲೂ ಜಾಗರೂಕತೆಯಿಂದ

ಆಯ್ದುಕೊಂಡ ಫಲದಾಯಕ ಸಾಹಸಗಳು ಹೊರನೋಟಕ್ಕೆ ಅಪವ್ಯಯವೆಂದು ಕಂಡರೂ ಪ್ರಯೋಜನದ ದೃಷ್ಟಿಯಿಂದ ಸ್ವಾಗತಾರ್ಹವಾಗಿರುತ್ತವೆ. ಹೊಲದಲ್ಲಿ ಬೆಳೆಯುವ ಉತ್ಪನ್ನವು ಈ ವೆಚ್ಚಗಳನ್ನು ಸಮರ್ಥಿಸುವ ಅಂಶವೇ ಹೊರತು ಬರೇ ಹೊಲ ತೋರಿಸಿದರೆ ಸಾಲದು."

## ಆದಾಯ ಆಕರಣೆಯ ಒತ್ತಡ

ಆದಾಯ ಆಕರಣೆಯ ಭಾರದ ಅಥವಾ ಒತ್ತಡದ ಬಗ್ಗೆ ಏನು ಹೇಳಲೂ ಸಾಧ್ಯವಿಲ್ಲವಾಗಿದೆ. ಇದು ನಮ್ಮ ಅಧ್ಯಯನದ ವ್ಯಾಪ್ತಿಗೆ ಒಳಪಟ್ಟ ವಿಷಯವಾದರೂ ಇದರ ವಿಮರ್ಶೆ ಮಾಡಲು ಹಲವಾರು ಅಡೆತಡೆಗಳಿವೆ. ಪ್ರಥಮತಃ ನಮ್ಮಲ್ಲಿ ಜನಸಂಖ್ಯಾ ಖಾನೇಶುಮಾರಿ ಸಮರ್ಪಕವಾಗಿಲ್ಲ. ಅಷ್ಟೇ ಏಕೆ ಖಾನೇಶುಮಾರಿ ಎಂಬುದೇ ಆ ಕಾಲದಲ್ಲಿ ಇರಲಿಲ್ಲ. ಜನಸಂಖ್ಯೆಯ ಬಗ್ಗೆ ಊಹಾಪೋಹ ಮಾಡುವುದರಿಂದ ಯಾವ ವೈಜ್ಞಾನಿಕ ತೀರ್ಮಾನಕ್ಕೂ ಉಪಯೋಗವಾಗದು ತಾನೇ?

ಇನ್ನೊಂದು ದೊಡ್ಡ ಅಡ್ಡಿಯೇನೆಂದರೆ : ಈಸ್ಟ್ ಇಂಡಿಯಾ ಕಂಪನಿ ಪ್ರತಿವರ್ಷವೂ ತನ್ನ ಗಡಿಗಳನ್ನು ವಿಸ್ತರಿಸುತ್ತಾ ಹೋಗುತ್ತಿದ್ದುದರಿಂದ ಆದಾಯದಲ್ಲಿ ತೋರುವ ಹೆಚ್ಚುವರಿಯು ತೆರಿಗೆ ಹೆಚ್ಚಳದಿಂದ ಆದದ್ದೇ ಅಥವಾ ದೇಶದ ಗಡಿ ವಿಸ್ತರಣೆಯಿಂದಾಗಿ ಆದದ್ದೇ ಎಂದು ನಿರ್ಣಾಯಕವಾಗಿ ಹೇಳುವುದು ಕಷ್ಟ.

ಮೂರನೆಯದಾಗಿ, ಕಂಪನಿಯ ಆದಾಯದ ಲೆಕ್ಕಾಚಾರವೂ ದೋಷರಹಿತವಾದದ್ದಾಗಿರಲಿಲ್ಲ. ೧೮೧೩ರವರೆಗೆ ವ್ಯಾಪಾರೀ ಲೆಕ್ಕಾಚಾರದೊಡನೆ ಕಲೆಸಿ ಗೋಜಲು ಮಾಡಿದರೆ, ತದನಂತರ ರೆವಿನ್ಯೂ ಲೆಕ್ಕವನ್ನು ವ್ಯಾಪಾರಿ ಲೆಕ್ಕದಿಂದ ಬೇರ್ಪಡಿಸಿ ಉಲ್ಲೇಖಿಸಿದರೂ ಗೋಜಲು ಏನೂ ಕಡಿಮೆಯಾಗಲಿಲ್ಲ.

ಆದ್ದರಿಂದ ನಮ್ಮ ಅಧ್ಯಯನದ ಒಂದು ಪ್ರಮುಖ ಅಂಗವನ್ನು ನಾವು ವಿಮರ್ಶಿಸದೆಯೆ ಮುಂದುವರಿಸಬೇಕಾಗಿದೆ. ಆದರೆ ಕೆಲವು ಪ್ರತ್ಯೇಕ ಹೇಳಿಕೆಗಳನ್ನು ಒಟ್ಟು ಸೇರಿಸಿದರೆ ಒಂದಷ್ಟು ಬೆಳಕು ಈ ಸಮಸ್ಯೆಯ ಮೇಲೆ ಬಿದ್ದೀತು ಎಂದು ಭಾವಿಸಿ ಭೂಕಂದಾಯ ಒಂದನ್ನೇ ಆಯ್ದು ಆರ್.ಸಿ.ದತ್ತ ಅವರಂತಹ ಅದ್ವಿತೀಯ ಪಂಡಿತರ ವಿಶ್ಲೇಷಣೆಯನ್ನು ನೋಡಬಹುದು. ದತ್ತ ಹೇಳುತ್ತಾರೆ: ಬ್ರಿಟಿಷರು ವಿಧಿಸಿದ ಭೂಕಂದಾಯ ಅತಿಯಾಗಿರುವುದು ಮಾತ್ರವಲ್ಲದೆ ಎಷ್ಟೋ ಪ್ರಾಂತಗಳಲ್ಲಿ ಒಮ್ಮೆ ಏರುತ್ತ ಒಮ್ಮೆ ಇಳಿಯುತ್ತ ಅನಿಶ್ಚಿತವೂ ಆಗಿರುವುದುಂಟು. ಇಂಗ್ಲೆಂಡಿನಲ್ಲಾದರೋ ೧೭೯೮ಲಕ್ಕಿಂತ ಹಿಂದಿನ ನೂರು ವರ್ಷ ಕಾಲ ಭೂಕಂದಾಯ ಪೌಂಡಿಗೆ ಒಂದು, ಷಿಲಿಂಗಿನಿಂದ ನಾಲ್ಕು ಷಿಲಿಂಗ್‌ಗಳವರೆಗೆ ಅರ್ಥಾತ್ ಗೇಣಿಯ ಶೇಕಡಾ ೫ ರಿಂದ ೨೦ ರವರೆಗೆ ಇರುತ್ತಿತ್ತು. ೧೭೯೮ರಲ್ಲಿ ವಿಲಿಯಂ ಪಿಟ್ ಇದನ್ನು ಇದ್ದಷ್ಟರಲ್ಲೇ ಸ್ಥಿರಗೊಳಿಸಿದ್ದಲ್ಲದೆ ವಿಮೋಚನೆಗೂ ಅವಕಾಶ ಮಾಡಿಕೊಟ್ಟನು. ೧೭೯೩ರಿಂದ ೧೮೨೨ರವರೆಗೆ ಬಂಗಾಳದಲ್ಲಿ ಗೇಣಿಯ ಶೇಕಡಾ ೯೦ ಭಾಗವನ್ನೂ, ಉತ್ತರ ಇಂಡಿಯಾದಲ್ಲಿ ಶೇಕಡಾ ೮೦ ಭಾಗವನ್ನು ಕಂದಾಯ ರೂಪದಲ್ಲಿ ಸರ್ಕಾರ ಸಂಗ್ರಹಿಸುತ್ತಿತ್ತು. ತಮ್ಮ ಹಿಂದಿನ ಮುಸಲ್ಮಾನ ಅರಸರು ಮಾಡಿದ್ದನ್ನೇ ಬ್ರಿಟಿಷರು ಮಾಡಿದರು ಎಂದು ಹೇಳುವಂತಿಲ್ಲ. ಆ ಅರಸರು ವಿಧಿಸಿದ್ದನ್ನೆಲ್ಲ ಸಂಗ್ರಹಿಸಲು ಶಕ್ತರಾಗಿರಲಿಲ್ಲ. ಬ್ರಿಟಿಷರು ವಿಧಿಸಿದ್ದನ್ನು ಪೂರ್ತಿ ವಸೂಲಿ ಮಾಡಬಲ್ಲವರಾಗಿದ್ದರು. ಬಂಗಾಳದ ಮಹಮ್ಮದೀಯ ಅರಸನು ತನ್ನ ಆಡಳಿತದ ಕೊನೆಯ ವರ್ಷದಲ್ಲಿ (೧೭೬೪) ವಸೂಲಿ ಮಾಡಿದ ಕಂದಾಯದ ಮೌಲ್ಯ £ ೮೧೭,೫೫೩, ಮುಂದಿನ ೩೦ ವರ್ಷಗಳ ಕಾಲ ಬ್ರಿಟಿಷರು ಸಂಗ್ರಹಿಸಿದ ಇದೇ ಮೊತ್ತ £ ೨,೬೮೦,೦೦೦ ಪೌಂಡ್. ೧೮೦೨ರಲ್ಲಿ ಅವಧದ ನವಾಬನು ಉತ್ತರ ಇಂಡಿಯಾದ ಅಲಹಾಬಾದ್ ಮತ್ತು ಇತರ ಕೆಲ ಜಿಲ್ಲೆಗಳನ್ನು ಬ್ರಿಟಿಷರಿಗೆ ಒಪ್ಪಿಸಿಕೊಟ್ಟ ಮೇಲೆ ಅವರು ಅಲ್ಲಿ ಕೂಡಿಹಾಕಿದ ಕಂದಾಯ ಮೂರೇ ಮೂರು ವರ್ಷಗಳಲ್ಲಿ

£ ೧,೬೮೨,೩೦೬ ಪೌಂಡ್ ಆಗಿಬಿಟ್ಟಿತು.ಮದರಾಸಿನಲ್ಲಿ ಭೂಮಿಯಲ್ಲಿ ಬೆಳೆದ ಒಟ್ಟು ಫಸಲಿನ (ಗ್ರಾಸ್) ಅರ್ಧಾಂಶವನ್ನೇ ಈಸ್ಟ್ ಇಂಡಿಯಾ ಕಂಪನಿ ಕಂದಾಯವಾಗಿ ವಿಧಿಸಿತು. ೧೮೧೭ರಲ್ಲಿ ಮರಾಠರಿಂದ ಗೆದ್ದುಕೊಂಡ ಪ್ರದೇಶದ ವಾರ್ಷಿಕ ಭೂಕಂದಾಯ ೮೦೦,೦೦೦ ಇದ್ದದ್ದು ಕೆಲವೇ ದಿನಗಳಲ್ಲಿ ೧,೫೦೦,೦೦೦ ಕ್ಕೇರಿಸಲ್ಪಟ್ಟಿತು, ಇನ್ನೂ ಮುಂದೆ ಹೋಗುತ್ತಲೇ ಇದೆ. ಇಡೀ ಭಾರತದಲ್ಲಿ ಸಂಚರಿಸಿ ಆಶ್ರಿತ ದೇಸೀ ಸಂಸ್ಥಾನಗಳನ್ನು, ಬ್ರಿಟಿಷ್ ಆಧಿಪತ್ಯಗಳನ್ನು ಪರಿವೀಕ್ಷಣೆ ಮಾಡಿದಮೇಲೆ ೧೮೨೬ರಲ್ಲಿ ಬಿಶಪ್ ಹೀಬರ್ ಹೇಳಿದ : "ಯಾವ ಆಶ್ರಿತ ಸಂಸ್ಥಾನದ ಅರಸನೂ ನಾವು ಹೇರುವ ಕಂದಾಯವನ್ನು ಹೇರಿಲ್ಲ." ೧೮೩೦ರಲ್ಲಿ ಕರ್ನಲ್ ಬ್ರಿಗ್ಸ್ ಎಂಬುವನು "ಭೂಮಾಲೀಕನಿಗೆ ಬರುವ ಸಕಲ ಗೇಣಿಯನ್ನು ಆಪೋಷಣೆಯಾಗಿ ತೆಗೆದುಕೊಳ್ಳುವಂತಹ ಇಂತಹ ಕಂದಾಯ ಪದ್ಧತಿಯನ್ನು ಯಾವ ಏಷಿಯನ್ ಅಥವಾ ಐರೋಪ್ಯ ಸರ್ಕಾರದಲ್ಲೂ ನಾವು ಕಾಣಲಾರೆವು" ಎಂದು ಬರೆದಿದ್ದಾನೆ.

"ಬಂಗಾಳ ಪ್ರಾಂತ ಹಾಗೂ ಉತ್ತರ ಇಂಡಿಯಾದ ಭಾಗಗಳಿಗೆ ಬ್ರಿಟಿಷ್ ಆಳ್ವಿಕೆಯ ಪ್ರಥಮ ಹಂತದಲ್ಲಿದ್ದ ಕಂದಾಯ ಹೇರಿಕೆಯಲ್ಲಿ ತುಸು ರಿಯಾಯಿತಿ ಕಾಲಕ್ರಮೇಣ ದೊರೆಯಿತು. ಬಂಗಾಳದಲ್ಲಿನ ಹೇರಿಕೆಯನ್ನು ಶಾಶ್ವತಗೊಳಿಸಲಾಯಿತು, ಅಂದರೆ ಹೊಲಗಳು ವಿಸ್ತಾರವಾದಂತೆ ಹೇರಿಕೆ ಹೆಚ್ಚುತ್ತಿರಲಿಲ್ಲ. ಪರಿಣಾಮವಾಗಿ ರಸ್ತೆ ಮತ್ತು ಸಾರ್ವಜನಿಕ ಕಾಮಗಾರಿಯ ಹೇರಿಕೆಗಳನ್ನು ಸೇರಿಸಿದರೂ ಕೂಡ ಕಂದಾಯದ ಭಾಗ ಶೇ ೩೫ಕ್ಕಿಂತ ಹೆಚ್ಚು ಇರುವುದಿಲ್ಲ. ಉತ್ತರ ಭಾರತದಲ್ಲಿ ಹೇರಿಕೆಯನ್ನು ಶಾಶ್ವತಗೊಳಿಸದೆ ಹೋದರೂ ೧೮೫೫ರಲ್ಲಿ ಕಂದಾಯ ಶೇ.೫೦ಕ್ಕಿಂತ ಹೆಚ್ಚು ಇರಲಿಲ್ಲ; ಆದರೆ ಹೇರಿಕೆಯನ್ನು ಚಾಲೂಗೇಣಿಯ ಮೇಲಲ್ಲದೆ ಭಾವೀ ಉತ್ಪನ್ನದ ಮೇಲೆ ವಿಧಿಸಿದುದರಿಂದ ಕಂದಾಯದ ಪ್ರಮಾಣ ಶೇಕಡಾ ಐವತ್ತಲ್ಲ ಅರವತ್ತೇ ಆಗಿತ್ತು ಎನ್ನಲು ಅಡ್ಡಿ ಇರಲಿಲ್ಲ."

ಮುಂಬಯಿ, ಮದರಾಸುಗಳಲ್ಲೂ ಇದೇ ಕತೆ. ಇವೆರಡೂ ರೈತವಾರಿ ಪದ್ಧತಿಯುಳ್ಳ ಪ್ರಾಂತಗಳು. ಈ ಪದ್ಧತಿಯನ್ನು ಮದರಾಸು ಸರ್ಕಾರದ ಸದಸ್ಯನಾಗಿದ್ದ ಫಲ್ಲರ್ಟನ್ ಎಂಬುವನು ವರ್ಣಿಸಿದ ಬಗೆ ಹೀಗೆ :

"ಭೂಮಿಯ ಮೇಲೆ ಅವಲಂಬಿಸಿರುವ ಎಲ್ಲ ಹಿತಾಸಕ್ತಿಗಳೂ – ಅರ್ಥಾತ್ ಬ್ರಿಟನ್ನಿನ ಭೂ ಮಾಲೀಕರು ಹೂಡಿರುವ ಬಂಡವಾಳ ರೈತರು ಕೂಡ ಭೂಮಂಡಲದಿಂದ ಮಾಯವಾದರು ಎಂದು ಭಾವಿಸೋಣ. ರಾಜ್ಯದ ಪ್ರತಿಯೊಂದು ತುಂಡು ಭೂಮಿಯ ಮೇಲೂ ಅದರ ತೆರುವ ಶಕ್ತಿಗಿಂತ ಮೀರಿ ನಿಂತ ಕಂದಾಯವನ್ನು ಹೊರಿಸಿತು ಎಂದು ಭಾವಿಸೋಣ: ಅಂಥ ತುಂಡುಗಳನ್ನು ಗ್ರಾಮಸ್ಥರ ಕೈಯಲ್ಲಿರುವ ಜಾನುವಾರು ಸಂಖ್ಯೆ ಮತ್ತು ನೇಗಿಲುಗಳ ಸಂಖ್ಯೆಗೆ ಅನುಗುಣವಾಗಿ ೪೦–೫೦ ಎಕರೆಯಂತೆ ಬಟವಾಡೆ ಮಾಡಿದೆವು ಎನ್ನೋಣ. ಮೇಲ್ಕಂಡ ಕಂದಾಯವನ್ನು ಒಂದು ಲಕ್ಷಮಂದಿ ರೆವಿನ್ಯೂ ಅಧಿಕಾರಿಗಳು ತಮ್ಮ ಸ್ವೇಚ್ಛೆಯಂತೆ ಗೇಣಿದಾರನ ಕೃಷಿಭೂಮಿಯ ಉತ್ಪನ್ನದ ಮೇಲೋ ಅಥವಾ ಬೇರೆ ಆಸ್ತಿಪಾಸ್ತಿಗಳ ಆಧಾರದಲ್ಲೋ ವಸೂಲು ಮಾಡಲು ನಿಯುಕ್ತರಾದರೆಂದು ಭಾವಿಸೋಣ. ತನ್ನ ಮೇಲಿನ ಹೆಚ್ಚುವರಿ ಆಕರಣೆಯನ್ನು ತಪ್ಪಿಸಿಕೊಳ್ಳಬಹುದಾದ ಕಾರಣಕ್ಕಾಗಿ ಒಬ್ಬನು ಇನ್ನೊಬ್ಬನ ಮೇಲೆ ಗುಪ್ತಚಾರನಂತೆ ಅವನ ತೆರುವ ಸಾಮರ್ಥ್ಯದ ಬಗ್ಗೆ ಮಾಹಿತಿ ಕೊಡಲು ಪ್ರಚೋದಿತನಾದನೆಂದು ತಿಳಿಯೋಣ. ಯಾವುದೋ ಒಂದು ಮಂಡಳಿಯ ಹುಕುಂ ಜಾರಿಯನ್ನು ಅವಲಂಬಿಸಿ ಪ್ರತಿಯೊಬ್ಬ ಕಲೆಕ್ಟರನೂ ಆಕರಣೆಯನ್ನು ಸಮಾನೀಕರಿಸಿ ಕೆಲಸಗಾರರಿಗೆ ಯಾವ ಆಕರ್ಷಣೆಯೂ ಇಲ್ಲದಂತೆ ಮಾಡಿದರೆಂದು ಭಾವಿಸೋಣ; ಕಲೆಕ್ಟರನೇ ನ್ಯಾಯಮೂರ್ತಿಯೂ ಆಗಿದ್ದು ಪ್ರಜಾಜನರ ಯಾವತ್ತೂ ಕ್ರಿಮಿನಲ್ ಅಥವಾ ವೈಯಕ್ತಿಕ ಪ್ರಕರಣಗಳು

ಆತನ ಮೂಲಕವೇ ಮೇಲಿನ ಕೋರ್ಟುಗಳಿಗೆ ತಲುಪುವ ಪ್ರಮೇಯವಿರುತ್ತದೆಂದು ಕಲ್ಪಿಸಿಕೊಳ್ಳೋಣ. ಹಾಗೆಯೇ ಭೂಕಂದಾಯವನ್ನು ಸಂಗ್ರಹಿಸುವ ಸಣ್ಣಪುಟ್ಟ ಅಧಿಕಾರಿಗಳಿಗೆ ಲಿಖಿತ ಆಧಾರಗಳೋ ಪ್ರಮಾಣಗಳೋ ಇಲ್ಲದೆ ಜುಲ್ಮಾನೆ ವಿಧಿಸುವ ಪೊಲೀಸು ಅಧಿಕಾರವನ್ನು ಕೊಟ್ಟರೆಂದೂ ಊಹಿಸೋಣ. ಇದಕ್ಕೆ ಮಿಸ್ಟರ್ ಮಾರ್ಟಿನ್ ಇನ್ನಷ್ಟು ಕೂಡಿಸಿ ಹೇಳುತ್ತಾರೆ : ಮದರಾಸಿನ ರೈತವಾರಿ ಪದ್ಧತಿಯನ್ನು ಪುರಸ್ಕರಿಸುವವರ ಕಣ್ಣನ್ನು ತೆರೆಯಲು ಇಂಥ ಚಿತ್ರಹಿಂಸೆಯ ಕಥೆಗಳನ್ನು ಉದಾಹರಿಸಬಹುದು. ಮದರಾಸಿನ ಕೌನ್ಸಿಲಿನ ಮಾಜಿ ಸದಸ್ಯ ಸುಲಿವಾನ್ ಸದರಿ ಲೇಖಕನಿಗೆ ತಿಳಿಯದಂತೆ ಆತನ ಜಿಲ್ಲಾ ಖಜಾನೆಯಿಂದ ಮದರಾಸಿಗೆ ಹೋಗುವ ಬೆಳ್ಳಿ ತುಂಬಿದ ಬಂಡಿಗಳನ್ನು ಅದನ್ನು ಸಂಗ್ರಹಿಸಿದ ರೈತಾಪಿ ಜನರ ಬಡತನದೊಡನೆ ಹೋಲಿಸಿದಾಗ ಮುಂದಿನ ವರ್ಷವೂ ಅವರಿಂದ ಹೀಗೆಯೇ ವಸೂಲಿ ಮಾಡುವ ಸಂದರ್ಭದಲ್ಲಿ ಅವರನ್ನು ಎಷ್ಟು ಹಿಂಡಿ ಹಿಪ್ಪೆ ಮಾಡಬೇಕಾಗುವುದೋ ಎಂದು ಯೋಚಿಸುವಾಗ ನಿಜಕ್ಕೂ ಭಯವಾಗುತ್ತದೆ.”

ಕಂಪನಿ ಆಳಿಕೆಯ ಕಾಲದ ಆರ್ಥಿಕ ಪರಿಸ್ಥಿತಿಯ ಬಗ್ಗೆ ವಿಮರ್ಶಿಸುವಾಗ ಒಳನಾಡಿನ ಸಾಗಣೆ ಸುಂಕಗಳ ಒತ್ತಡವನ್ನು ಚರ್ಚಿಸೋಣ.

ಕರತೆರಿಗೆಯ ಹೊರೆಯ ಬಗ್ಗೆ ಇಷ್ಟು ಮಾಹಿತಿ ಒದಗಿತಷ್ಟೇ. ಆದರೆ ಜನರ ವರಮಾನದ ಬಗ್ಗೆ ಯಾವ ಮಾಹಿತಿಯೂ ನಮಗೆ ಸಿಗುವುದಿಲ್ಲ. ಬೇಸಾಯದಲ್ಲಿ ನಿಯುಕ್ತನಾದವನಿಗೆ ತಿಂಗಳೊಂದಕ್ಕೆ ೪ ಷಿಲಿಂಗ್‌ನಿಂದ ೬ ಷಿಲಿಂಗ್‌ವರೆಗೆ ಕೂಲಿ ದರ ಸಿಗುತ್ತಿದ್ದರೆ ಆತನಿಗೆ ವಾರ್ಷಿಕ ಜೀವನ ವೆಚ್ಚ ೧೮ ಷಿಲಿಂಗ್‌ನಿಂದ ೨೭ ಷಿಲಿಂಗ್‌ವರೆಗೆ ಇರುತ್ತಿತ್ತೆಂದು ಮನ್ರೋ ವರದಿ ಮಾಡಿದ್ದಾನೆ.

ಕರಭಾರ ಎಷ್ಟಿತ್ತೆಂದು ಕರಾರುವಾಕ್ಕಾಗಿ ಹೇಳಲಸಾಧ್ಯವಾದರೂ ಅದು ಅತ್ಯಧಿಕವಾಗಿತ್ತೆಂದು ಖಂಡಿತವಾಗಿ ಹೇಳಬಹುದು.

## IV

ಭಾರತದ ಹಣಕಾಸಿನ ಇತಿಹಾಸವನ್ನು ಮಿ. ಮಾರ್ಟಿನ್ ಅವರು ಅರ್ಥಪೂರ್ಣವಾಗಿ ಸಂಗ್ರಹಿಸಿ ಹೀಗೆ ಹೇಳಿದ್ದಾರೆ :

“ಕಂಪನಿಯ ಭೌಗೋಳಿಕ ವಿಸ್ತರಣೆಯಿಂದಾಗಿ ಸುಖಸಮೃದ್ಧಿಯ ಸಾಮ್ರಾಜ್ಯ ದೊರಕುವುದೆಂದು ಕ್ಲೈವ್ ಕಟ್ಟಿದ ಆಶೋತ್ತರ ಈಡೇರುವುದು ಬಿಟ್ಟು (ಬಂಗಾಳ ಮತ್ತು ಬಿಹಾರಗಳ ದಿವಾನಿ ಕಂಪನಿಗೆ ದಕ್ಕುವುದು ಖಚಿತಗೊಂಡಂತೆ) ಆದಾಯದ ಹೆಚ್ಚಳವನ್ನು ಅದರ ಬೆನ್ನಲ್ಲಿಯೇ ಬಂದ ಖರ್ಚುವೆಚ್ಚದ ಹೆಚ್ಚಳವು ನುಂಗಿಹಾಕಿತು. ಐರೋಪ್ಯ ಜನರ ಆಳಿಕೆಯ ವೆಚ್ಚಗಳು, ಪ್ರತಿ ಪ್ರಾಂತ್ಯ (ಪ್ರೆಸಿಡೆನ್ಸಿ)ದಲ್ಲೂ ಇರಿಸಬೇಕಾದ ಸೈನ್ಯದ ವೆಚ್ಚಗಳು, ಅಲ್ಲದೆ ಉಳಿದ ಹಲವು ಬಗೆಯ ನ್ಯಾಯವಾದ ಮತ್ತು ಅನ್ಯಾಯದ ವೆಚ್ಚಗಳ ದೆಸೆಯಿಂದ ಉಳಿತಾಯವೆಂಬುದೇ ಇಲ್ಲದಿದ್ದುದರಿಂದ ದೇಶವನ್ನು ಅಭಿವೃದ್ಧಿಗೊಳಿಸಲು ಏನೇನೂ ಹಣ ಉಳಿಯುತ್ತಿರಲಿಲ್ಲ. ಹಿಂದಿನ ಕಾಲದ ಅರಸರು ಕಟ್ಟಿದ ರಸ್ತೆ, ಕಾಲುವೆ ಹಾಗೂ ಇತರ ಸಾರ್ವಜನಿಕ ಕಟ್ಟಡಗಳನ್ನು ಸುಸ್ಥಿತಿಯಲ್ಲಿಡುವುದಕ್ಕೂ ಹಣ ಇರುತ್ತಿರಲಿಲ್ಲ.”

ಇದರಲ್ಲಿ ಆಶ್ಚರ್ಯವೇನೆಂದರೆ ಕಂಪನಿಯ ಹಣಕಾಸಿನ ವ್ಯವಸ್ಥೆ ಕೇವಲ ಅವ್ಯವಸ್ಥೆಯ ಆಗರವಾಗಿದ್ದುದು. ಸಮಕಾಲೀನ ಲೇಖಕನೊಬ್ಬ ಹೀಗೆ ಬರೆದಿಟ್ಟಿದ್ದಾನೆ: ನಮ್ಮ ಸೇನೆ ಬ್ರಿಟಿಷ್ ಮಿಲಿಟರಿ ವಿಜ್ಞಾನದ ಪ್ರಕಾರ ಶಿಕ್ಷಣ ಪಡೆದವರಿಂದ ನಡೆಸಲ್ಪಡುವ ಸೇನೆ. ನಮ್ಮ ಕಾನೂನು ಪದ್ಧತಿಯ ಹೆಚ್ಚಿನಂಶಕ್ಕೆ ಇಂಗ್ಲಿಷ್ ಕಾನೂನೇ ಮಾದರಿ. ನಮ್ಮ ಆದಾಯದ ಆಕರಣೆ ಆ್ಯಡಂ ಸ್ಮಿತ್ ಮತ್ತು ಆತನ ಅನುಯಾಯಿಗಳ ಸಿದ್ಧಾಂತದ ಮೇಲೆ

ಅವಲಂಬಿಸಿದ್ದು. ನಮ್ಮ ಹಣಕಾಸಿನ ವ್ಯವಸ್ಥೆ ಒಂದೇ ಅಪ್ಪಟ ಇಂಡಿಯಾ ಮೂಲದ ವ್ಯವಸ್ಥೆ. ನಮ್ಮ ಮಿಲಿಟರಿ ಅಧಿಕಾರಿಗಳು ಜೊಮಿನಿಯ ಯುದ್ಧ ತಂತ್ರಗಳಲ್ಲಿ ತಜ್ಞರು; ನಮ್ಮ ಸಿವಿಲ್ ಸರ್ವಿಸ್ ಅಧಿಕಾರಿಗಳು ಬೆಂಥಾಮ್, ಮಿಲ್, ರಿಕಾರ್ಡೋ ಅಂಥವರ ಪಠ್ಯಗಳನ್ನೋದಿದವರು; ನಮ್ಮ ಹಣಕಾಸಿನ ಆಡಳಿತ ಮಾತ್ರ ಮೂರು ಶತಮಾನ ಪೂರ್ವದ ಅಕ್ಬರ್ ಸಾಮ್ರಾಟನ ಮಂತ್ರಿ ಅಬುಲ್ ಫ಼ಜಲ್‌ನ ಆಡಳಿತಕ್ಕಿಂತ ಒಂದು ಹೆಜ್ಜೆಯೂ ಮುಂದೆ ಹೋಗಿಲ್ಲ.

| ವರ್ಷ | ಒಟ್ಟು ಆದಾಯ<br>ಪೌಂಡ್ | ಒಟ್ಟು ವೆಚ್ಚ<br>ಪೌಂಡ್ |
|---|---|---|
| ೧೭೯೨-೯೩ | ೫,೫೧೨,೭೬೧ | ೩,೮೭೩,೮೫೯ |
| ೧೭೯೩-೯೪ | ೮,೨೭೬,೭೭೦ | ೬,೫೯೩,೧೨೯ |
| ೧೭೯೪-೯೫ | ೮,೦೨೬,೧೯೩ | ೬,೫೬೭,೮೦೮ |
| ೧೭೯೫-೯೬ | ೭,೮೬೬,೦೯೪ | ೬,೮೮೮,೯೯೭ |
| ೧೭೯೬-೯೭ | ೮,೦೧೮,೧೭೧ | ೭,೫೦೮,೦೩೮ |
| ೧೭೯೭-೯೮ | ೮,೦೫೯,೮೮೦ | ೮,೦೧೫,೩೨೭ |
| ೧೭೯೮-೯೯ | ೮,೬೫೨,೦೩೩ | ೯,೧೩೯,೩೬೩ |
| ೧೭೯೯-೧೮೦೦ | ೯,೭೩೬,೬೭೨ | ೯,೯೫೫,೩೯೦ |
| ೧೮೦೦-೦೧ | ೧೦,೪೮೫,೦೫೯ | ೧೧,೪೬೮,೧೮೫ |
| ೧೮೦೧-೦೨ | ೧೨,೧೬೩,೫೮೯ | ೧೨,೪೧೦,೦೪೫ |
| ೧೮೦೨-೦೩ | ೧೩,೪೬೪,೫೩೭ | ೧೨,೩೨೬,೮೮೦ |
| ೧೮೦೩-೦೪ | ೧೩,೨೭೧,೩೮೫ | ೧೪,೩೯೫,೪೦೫ |
| ೧೮೦೪-೦೫ | ೧೪,೯೪೯,೩೯೫ | ೧೬,೧೧೫,೧೮೩ |
| ೧೮೦೫-೦೬ | ೧೫,೪೦೩,೪೦೯ | ೧೭,೪೨೧,೪೧೮ |
| ೧೮೦೬-೦೭ | ೧೪,೫೩೫,೭೩೯ | ೧೭,೫೦೮,೮೬೪ |
| ೧೮೦೭-೦೮ | ೧೫,೬೬೯,೯೦೫ | ೧೫,೮೫೦,೨೯೦ |
| ೧೮೦೮-೦೯ | ೧೫,೫೨೫,೦೫೫ | ೧೫,೩೯೨,೮೮೯ |
| ೧೮೦೯-೧೦ | ೧೫,೬೫೫,೯೮೫ | ೧೫,೫೩೪,೭೧೧ |
| ೧೮೧೦-೧೧ | ೧೬,೬೭೯,೧೯೭ | ೧೩,೯೦೯,೯೮೧ |
| ೧೮೧೧-೧೨ | ೧೬,೬೦೫,೬೧೫ | ೧೩,೨೨೦,೯೬೬ |
| ೧೮೧೨-೧೩ | ೧೬,೩೩೬,೨೯೦ | ೧೩,೫೧೫,೮೨೮ |
| ೧೮೧೩-೧೪ | ೧೭,೨೨೮,೭೧೧ | ೧೩,೬೧೭,೭೨೫ |
| ೧೮೧೪-೧೫ | ೧೭,೨೯೭,೨೮೦ | ೧೫,೯೫೫,೦೦೬ |
| ೧೮೧೫-೧೬ | ೧೭,೨೩೭,೮೧೯ | ೧೭,೦೫೯,೯೬೮ |

| ವರ್ಷ | ಒಟ್ಟು ಆದಾಯ ಪೌಂಡ್ | ಒಟ್ಟು ವೆಚ್ಚ ಪೌಂಡ್ |
|---|---|---|
| ೧೮೧೬–೧೭ | ೧೮,೦೭೭,೫೭೮ | ೧೭,೩೦೪,೧೬೨ |
| ೧೮೧೭–೧೮ | ೧೮,೩೭೫,೮೨೦ | ೧೮,೦೪೬,೧೯೪ |
| ೧೮೧೮–೧೯ | ೧೯,೪೫೯,೦೧೭ | ೨೦,೩೯೬,೫೮೭ |
| ೧೮೧೯–೨೦ | ೧೯,೨೩೦,೪೬೨ | ೧೯,೬೮೯,೧೦೭ |
| ೧೮೨೦–೨೧ | ೨೧,೩೫೨,೨೪೧ | ೨೦,೦೫೭,೨೫೨ |
| ೧೮೨೧–೨೨ | ೨೧,೮೦೩,೧೦೮ | ೧೯,೮೫೬,೪೮೯ |
| ೧೮೨೨–೨೩ | ೨೧,೧೭೧,೭೦೧ | ೨೦,೦೮೩,೭೪೧ |
| ೧೮೨೩–೨೪ | ೨೧,೨೮೦,೩೮೪ | ೨೦,೮೫೩,೯೯೭ |
| ೧೮೨೪–೨೫ | ೨೦,೭೫೦,೧೮೩ | ೨೨,೫೦೪,೧೫೬ |
| ೧೮೨೫–೨೬ | ೨೧,೧೨೮,೩೮೮ | ೨೪,೧೬೮,೦೧೩ |
| ೧೮೨೬–೨೭ | ೨೨,೩೮೩,೪೯೭ | ೨೩,೩೧೨,೨೯೫ |
| ೧೮೨೭–೨೮ | ೨೨,೮೬೩,೨೬೩ | ೨೪,೦೫೩,೮೩೭ |
| ೧೮೨೮–೨೯ | ೨೨,೭೪೦,೬೯೧ | ೨೧,೭೧೮,೫೬೦ |
| ೧೮೨೯–೩೦ | ೨೧,೬೯೫,೨೦೮ | ೨೦,೫೬೮,೩೫೮ |
| ೧೮೩೦–೩೧ | ೨೨,೦೧೯,೩೧೦ | ೨೦,೨೩೩,೮೯೦ |
| ೧೮೩೧–೩೨ | ೧೮,೩೧೭,೨೩೭ | ೧೭,೦೪೮,೧೭೩ |
| ೧೮೩೨–೩೩ | ೧೮,೪೭೭,೯೨೪ | ೧೭,೫೧೪,೭೨೦ |
| ೧೮೩೩–೩೪ | ೧೮,೨೬೭,೩೭೮ | ೧೬,೯೨೪,೩೩೨ |
| ೧೮೩೪–೩೫ | ೨೮,೮೫೬,೬೪೭ | ೧೬,೬೮೪,೪೯೬ |
| ೧೮೩೫–೩೬ | ೨೦,೧೪೮,೧೨೫ | ೧೫,೯೯೪,೮೦೪ |
| ೧೮೩೬–೩೭ | ೨೦,೯೯೯,೧೩೦ | ೧೭,೩೬೩,೩೬೮ |
| ೧೮೩೭–೩೮ | ೨೦,೮೫೮,೮೨೦ | ೧೭,೫೫೩,೫೨೫ |
| ೧೮೩೮–೩೯ | ೨೧,೧೫೮,೦೯೯ | ೨೧,೩೦೬,೨೩೨ |
| ೧೮೩೯–೪೦ | ೨೦,೧೨೪,೦೩೮ | ೨೨,೨೨೮,೦೧೧ |
| ೧೮೪೦–೪೧ | ೨೦,೮೫೧,೦೭೩ | ೨೨,೫೪೬,೪೩೦ |
| ೧೮೪೧–೪೨ | ೨೧,೮೩೭,೮೨೩ | ೨೩,೫೩೪,೪೪೬ |
| ೧೮೪೨–೪೩ | ೨೨,೬೧೬,೪೮೭ | ೨೩,೮೮೮,೫೨೬ |
| ೧೮೪೩–೪೪ | ೨೩,೫೮೬,೫೭೩ | ೨೪,೯೨೫,೩೭೧ |
| ೧೮೪೪–೪೫ | ೨೩,೬೬೬,೨೪೬ | ೨೪,೨೯೩,೬೪೭ |
| ೧೮೪೫–೪೬ | ೨೪,೨೭೦,೬೦೮ | ೨೫,೬೬೨,೭೩೮ |

| ವರ್ಷ | ಒಟ್ಟು ಆದಾಯ ಪೌಂಡ್ | ಒಟ್ಟು ವೆಚ್ಚ ಪೌಂಡ್ |
|---|---|---|
| ೧೮೪೬–೪೭ | ೨೬,೦೮೪,೬೮೧ | ೨೬,೯೧೬,೧೮೮ |
| ೧೮೪೭–೪೮ | ೨೪,೯೦೮,೩೦೨ | ೨೬,೭೪೭,೪೭೪ |
| ೧೮೪೮–೪೯ | ೨೫,೩೯೬,೩೮೬ | ೨೬,೭೬೬,೮೪೮ |
| ೧೮೪೯–೫೦ | ೨೭,೫೨೨,೩೪೪ | ೨೬,೯೬೦,೯೮೮ |
| ೧೮೫೦–೫೧ | ೨೭,೬೨೫,೩೬೦ | ೨೭,೦೦೦,೬೨೪ |
| ೧೮೫೧–೫೨ | ೨೭,೮೩೨,೨೩೭ | ೨೭,೯೮೮,೪೬೨ |
| ೧೮೫೨–೫೩ | ೨೮,೬೦೯,೧೦೯ | ೨೭,೯೭೬,೭೩೫ |
| ೧೮೫೩–೫೪ | ೨೮,೨೭೭,೫೩೦ | ೩೦,೨೪೦,೪೩೫ |
| ೧೮೫೪–೫೫ | ೨೯,೧೩೩,೦೫೦ | ೩೦,೭೫೩,೪೫೬ |
| ೧೮೫೫–೫೬ | ೩೦,೮೧೭,೫೨೮ | ೩೧,೬೩೭,೫೩೦ |
| ೧೮೫೬–೫೭ | ೩೧,೬೯೧,೦೧೫ | ೩೧,೬೦೮,೮೭೫ |
| ೧೮೫೭–೫೮ | ೩೧,೭೦೬,೭೭೬ | ೪೧,೨೪೦,೫೭೧ |

೧೭೯೨ ರಿಂದ ೧೮೫೭ರ ಅವಧಿಯನ್ನು ಗಮನಿಸಿ ಮಿ. ರಮೇಶಚಂದ್ರ ದತ್ತ ಹೇಳುತ್ತಾರೆ : ಈ ಅವಧಿಯಲ್ಲಿ ಕೊರತೆಯ ೧೪ ವರ್ಷಗಳಿಗೆ ಸಂವಾದಿಯಾಗಿ ಹೆಚ್ಚುವರಿಯ ೩೨ ವರ್ಷಗಳಿರುವುದನ್ನು ಕಾಣಬಹುದು. ೧೭ ಮಿಲಿಯ ರೂಪಾಯಿಗಳ ಕೊರತೆಯೊಂದಿಗೆ ೪೯ ಮಿಲಿಯ ಹೆಚ್ಚುವರಿಯನ್ನು ಹೋಲಿಸಬಹುದು. ಆದ್ದರಿಂದ ಭಾರತದ ಆಡಳಿತಕ್ಕೆ ೪೬ ವರ್ಷಗಳ ಅವಧಿಯಲ್ಲಿ ಸಿಕ್ಕಿದ ೩೨ ಮಿಲಿಯ ಮೊತ್ತವನ್ನು ಅದರ ನಿವ್ವಳ ಅಧಿಕಾರ ಪ್ರತಿಫಲವೆಂದು ಹೇಳಬಹುದಾಗಿದೆ. ಆದರೆ ಇದು ಭಾರತದಲ್ಲಿ ಇರಲಿಲ್ಲ, ಈ ದೇಶದ ನೀರಾವರಿ ಅಥವಾ ಇತರ ಉಪಯುಕ್ತ ಕಾರ್ಯಕ್ರಮಗಳಲ್ಲಿ ಇದನ್ನು ತೊಡಗಿಸಲಿಲ್ಲ. ಕಂಪನಿಯ ಶೇರುದಾರರಿಗೆ ನಿರಂತರವಾಗಿ ಕೊಡತಕ್ಕ ಲಾಭಾಂಶ (ಡಿವಿಡೆಂಡ್) ರೂಪದಲ್ಲಿ ಅರ್ಥಾತ್ ಕಪ್ಪಕಾಣಿಕೆಯ ಪ್ರವಾಹದ ರೂಪದಲ್ಲಿ ಇದು ಇಂಗ್ಲೆಂಡಿಗೆ ಹರಿದುಹೋಯಿತು. ಇದನ್ನೇ ಭಾರತದ ಸಾರ್ವಜನಿಕ (ಸರ್ಕಾರಿ) ಸಾಲವೆಂದು ಕರೆಯಲಾಯಿತು. (**೧. ಆರ್.ಸಿ.ದತ್ತ. "ಬ್ರಿಟಿಷರ ಆಡಳಿತದ ಆದಿ ಭಾಗದಲ್ಲಿ ಇಂಡಿಯಾ" ಪುಟ ೪೦೮**).

ಇಂಗ್ಲೆಂಡ್‌ನಲ್ಲಿಯೂ ಭಾರತದಲ್ಲಿಯೂ ಸಾಲ ಎತ್ತಲು ಬೇರೆ ಬೇರೆ ವಿಧಾನಗಳನ್ನು ಬಳಸಲಾಯಿತು.

ಭಾರತದಲ್ಲಿ ಸರ್ಕಾರಕ್ಕೆ ಸಾಲ ಬೇಕೆನಿಸಿದಾಗ ಅದು ಕೆಲವೊಂದು ದರದಲ್ಲಿ ಹಾಗೂ ಕರಾರುಗಳೊಡನೆ ಖಜಾನೆಯನ್ನು ತೆರೆದಿಟ್ಟು ಸಾಲ ಸ್ವೀಕರಿಸುವುದೆಂದು ಜಾಹೀರುಪಡಿಸುತ್ತದೆ. ಸಾಲದ ದಿನಗಳಲ್ಲಿ ಯಾವ ಮೊತ್ತವನ್ನು ಬೇಕಾದರೂ ಜನರು ಪಾವತಿ ಮಾಡಿ ಸಾಲದ ಪತ್ರಗಳನ್ನು ಪಡೆದುಕೊಳ್ಳಬಹುದು. ಎಲ್ಲ ಸಾಲವೂ ಭಾರತದ ಒಳಗಿನವರಿಂದಲೇ ಬರತಕ್ಕದ್ದು.

ಇಂಗ್ಲೆಂಡಿನಲ್ಲಿ ಸಾಲ ಎತ್ತುವುದಕ್ಕೆ ಬೇರೆಯ ಕ್ರಮವನ್ನು ಅನುಸರಿಸುತ್ತಿದ್ದರು : ಅಲ್ಲಿನ ಇತರ ಕಂಪನಿಗಳು ಹೇಗೆ ಸಾಲ ಎತ್ತುವವೋ ಅದೇ ಕ್ರಮವನ್ನು – ಅಂದರೆ ಬಾಂಡ್ ಮೂಲಕ ಸಾಲ

ತೆಗೆಯುವ ಕ್ರಮವನ್ನು ಈಸ್ಟ್ ಇಂಡಿಯಾ ಕಂಪನಿ ಅನುಸರಿಸಬೇಕಾಗುತ್ತಿತ್ತು. ಹೀಗಾಗಿ ಎಲ್ಲ ಸ್ವದೇಶೀ ಸಾಲವೂ (ಹೋಮ್ ಡೆಟ್) ಬಾಂಡ್ ಮೂಲಕವೇ ಬರುತ್ತಿತ್ತು.

ಕಂಪನಿ ಆಡಳಿತಕಾಲದಲ್ಲಿ ಭಾರತದ ಸಾರ್ವಜನಿಕ ಸಾಲ ಸಂಪೂರ್ಣವಾಗಿ ಯುದ್ಧಗಳ ಕಾರಣಕ್ಕಾಗಿ ಹುಟ್ಟಿಕೊಂಡದ್ದು.

ಈ ಸಾಲಗಳ ಪ್ರಗತಿಯನ್ನು ಪ್ರತ್ಯೇಕವಾಗಿ ಪರಿಶೀಲಿಸೋಣ.

**ಭಾರತದಲ್ಲಿ ಸಾಲ :**

೧೭೯೨ ರಲ್ಲಿ ಭಾರತದ ಸಾಲ ೭ ಮಿಲಿಯ ಪೌಂಡಿಗಿಂತ ತುಸು ಹೆಚ್ಚಾಗಿತ್ತು. ಏಳೇ ವರ್ಷದಲ್ಲಿ ಅದು ೧೦ ಮಿಲಿಯದಷ್ಟು ಗಾತ್ರಕ್ಕೆ ಬೆಳೆಯಿತು. ೧೮೦೦ರಲ್ಲಿ ಅದು ೧೪,೬೨೫,೩೮೪ ಅದರ ಮೇಲಿನ ಬಡ್ಡಿ Σ೧,೩೪೨,೮೫೪. ವೆಲ್ಲೆಸ್ಲಿಯ ಮರಾಠಾ ಯುದ್ಧಗಳ ದೆಸೆಯಿಂದ ೧೮೦೭–೦೮ರಲ್ಲಿ ಭಾರತದ ಸಾಲ ಒಂದೇ ಬಾರಿಗೆ Σ೩೦,೯೮೮,೮೫೭ಕ್ಕೂ ವಾರ್ಷಿಕ ಬಡ್ಡಿಯ ಮೊತ್ತ Σ೨,೩೩೯,೦೮೭ ಪೌಂಡಿಗೆ ನೆಗೆಯಿತು. ಯುದ್ಧಾನಂತರದ ಕಾಲದಲ್ಲಿ ಈ ಸಾಲಗಳನ್ನು ಋಣವಿಮೋಚನಾ ವಿಧಿಗಳ ಮೂಲಕ ಇಳಿಸಿಕೊಳ್ಳಲು ಪ್ರಯತ್ನ ನಡೆಯಿತು. ತತ್ಪರಿಣಾಮವಾಗಿ ೧೮೧೦–೧೧ ರಲ್ಲಿ ಸಾಲದ ಮೊತ್ತ Σ೨೨,೫೪೫,೮೪೩ಕ್ಕೂ ಬಡ್ಡಿ ೧,೫೦೩,೪೩೪ಕ್ಕೂ ಇಳಿಯಿತು. ಆದರೆ ಆ ಕಾಲದಲ್ಲಿ ಶಾಂತಿ ಅಪರೂಪ, ಯುದ್ಧಕಾಂಡಗಳೇ ಸಾಮಾನ್ಯ. ಹೀಗಾಗಿ ೧೮೧೯–೨೦ರಲ್ಲಿ ನೇಪಾಳಯುದ್ಧ, ಪ್ರಥಮ ಮರಾಠ ಯುದ್ಧಗಳ ಕಾರಣವಾಗಿ ಮತ್ತೆ ೩೧,೩೩೮,೮೫೦ಕ್ಕೆ ಸಾಲದ ಉಬ್ಬರವಾಯಿತು. ೧೮೨೩–೨೪ರ ವರೆಗೆ ಶಾಂತಿಯ ಮಧ್ಯಂತರ ಸಾಲ ಮತ್ತೆ ಇಳಿದಂತೆ ಕಂಡರೂ ೧೮೨೪–೨೫ರ ಬರ್ಮಾ ಯುದ್ಧದ ದೆಸೆಯಿಂದ ಅದು ಮರಳಿ Σ೩೮,೩೧೬,೪೮೬ಕ್ಕೆ ಏರಿತು. ೧೮೩೫–೩೬ರಲ್ಲಿ ಸಾಲವು Σ೩೧,೮೨೧,೧೧೮ಕ್ಕೆ ಇಳಿಯಿತು. ಅಫಘಾನಯುದ್ಧ, ಸಿಂಧ್‌ಯುದ್ಧ, ಎರಡೆರಡು ಸಿಖ್ಖಯುದ್ಧಗಳು, ಎರಡನೇ ಬರ್ಮಾಯುದ್ಧ ಹೀಗೆ ಯುದ್ಧಗಳ ಸರಣಿಯ ಕಾರಣವಾಗಿ ಸಾಲದ ಅಬ್ಬರ ಇನ್ನಷ್ಟು ಅತಿಶಯವಾಯಿತು. ೧೮೫೨–೫೩ರಲ್ಲಿ ಸಾಲ ಮತ್ತು ಬಡ್ಡಿಯ ಮೊತ್ತ Σ೫೨,೩೧೩,೦೯೪ ಮತ್ತು ೨,೪೭೯,೧೩೩ಕ್ಕೆ ಏರಿದವು. ೧೮೫೩–೫೪ ರಲ್ಲಿ ಸಾಲವು ೪೯,೭೬೨,೮೭೬ಕ್ಕೆ ಇಳಿಯಿತು. ೧೮೫೩–೫೪ರಲ್ಲಿ ಸಾರ್ವಜನಿಕ ಕಾಮಗಾರಿಯ ಬಗ್ಗೆ ಸರ್ಕಾರ ಸ್ವೀಕರಿಸಿದ ಧೋರಣೆಯ ಪ್ರಯುಕ್ತ ಸಾಲವು Σ೫೫,೫೪೬,೬೫೦ಕ್ಕೆ ಏರಿತು. ೧೮೫೭–೫೮ರಲ್ಲಿ ಸಿಪಾಯಿದಂಗೆ ಎಂದು ಗುರುತಿಸಲ್ಪಡುವ ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾರತದ ಸಾಲ Σ೬೦,೭೦೪,೦೮೪ ಆಯಿತು.

**(ಇಂಗ್ಲೆಂಡಿನಲ್ಲಿ) ಸ್ವದೇಶೀ (ಹೋಮ್) ಬಾಂಡ್ ಸಾಲ**

೧೮೦೦ರಲ್ಲಿ ಶೇ.೫ರ ಬಡ್ಡಿಯಂತೆ ಹೋಮ್ ಬಾಂಡ್ ಸಾಲದ ಮೊತ್ತ ೧,೪೮೭,೧೧೨ ಆಗಿತ್ತು. ವೆಲ್ಲೆಸ್ಲಿಯ ಯುದ್ಧಗಳು ಇದರ ಮೇಲೂ ಪರಿಣಾಮ ಮಾಡಿದ್ದರಿಂದಾಗಿ ೧೮೦೭–೦೮ರಲ್ಲಿ ಇದರ ಪ್ರಮಾಣ Σ೪,೨೦೫,೨೭೫ ಆಯಿತು; ೧೮೧೧–೧೨ ರಲ್ಲಿ ಅದು ತನ್ನ ಪರಮಾವಧಿ ಮಿತಿಯಾದ ೬,೫೬೫,೯೦೦ (ಬಡ್ಡಿ ಶೇ. ೫ರ ದರದಲ್ಲಿ) ತಲಪಿತು. ೧೮೧೬–೧೭ರಲ್ಲಿ ಬಡ್ಡಿಯನ್ನು ೪ ಶೇಕಡಾಗೆ ಇಳಿಸಲಾಯಿತು ಮತ್ತು ಅಲ್ಲಿಂದ ಮುಂದಕ್ಕೆ ಅದನ್ನು ಏರಿಸಲಿಲ್ಲ. ೧೮೧೪–೧೫ರಲ್ಲಿ ಸ್ವದೇಶೀ ಬಾಂಡ್ ಸಾಲವನ್ನು ೪,೩೭೬,೯೭೬ಕ್ಕೆ ಇಳಿಸಿದರು. ಸಾಲ ಸ್ವಲ್ಪ ಸ್ವಲ್ಪವಾಗಿ ಕಡಿಮೆಮಾಡುತ್ತಾ ಬಂದುದರಿಂದ ಅದು

೧೮೪೦–೪೧ರಲ್ಲಿ ೭೧,೭೩೪,೩೦೦ಕ್ಕೆ ಇಳಿಯಿತು. ಆದರೆ ಅಫಘಾನ ಯುದ್ಧ ಹಾಗೂ ದಂಗೆಯ ಕಾರಣವಾಗಿ ಇದು ೩,೮೯೪,೪೦೦ಕ್ಕೆ ಏರಿ ನಿಂತಿತು. ದಂಗೆಯ ವೆಚ್ಚ ೪೦,೦೦೦,೦೦೦ ಆಗಿತ್ತು.

ಭಾರತದ ಸ್ವದೇಶೀ (ಹೋಮ್) ಬಂಡವಾಳದ ಸಣ್ಣಮೊತ್ತವನ್ನು ಭಾರತದ ಸಾಲದ ಬೃಹತ್ ಮೊತ್ತದೊಡನೆ ಹೋಲಿಸುವಾಗ ಆಶ್ಚರ್ಯವಾಗಬಹುದು. ಆದರೆ ಪಾರ್ಲಿಮೆಂಟಿನ ಶಾಸನದಿಂದ ಇಂಗ್ಲೆಂಡಿನಲ್ಲಿ ಕಂಪನಿಯ ಸಾಲ ಎತ್ತುವ ಸಾಮರ್ಥ್ಯವನ್ನು ನಿಯಂತ್ರಿಸುತ್ತಿದ್ದುದನ್ನು ಗಮನಿಸಿದರೆ ಆಶ್ಚರ್ಯವಾಗುವುದಿಲ್ಲ. ಕಂಪನಿ ಆಡಳಿತದ ಲಾಭಗಳಿಗೆ ಮಾತ್ರ ಬ್ರಿಟಿಷ್ ಸರ್ಕಾರ ಆಸೆಪಟ್ಟಿತ್ತೇ ವಿನಾ ಅದರ ಕಷ್ಟಗಳಿಗಲ್ಲ. ಭಾರತದಲ್ಲಿ ಬ್ರಿಟಿಷ್ ಆಧಿಪತ್ಯ ನಡೆಸುವುದು ಇಷ್ಟವಾದರೂ ಅದು ಸಂಪೂರ್ಣ ಕಾರ್ಯಗತವಾಗುವವರೆಗೆ ಅದರ ಸಮಸ್ಯೆಗಳಲ್ಲಿ ಸಿಲುಕಿಕೊಳ್ಳುವುದು ಇಷ್ಟವಾಗಲಿಲ್ಲ. ಕಂಪನಿ ಇಡೀ ಭಾರತದಲ್ಲಿ ಯಶಸ್ಸಿನ ತೂತ್ತೂರಿ ಮೊಳಗಿಸಿದರೂ ವಿಜಯಾಂತ್ಯದಲ್ಲಿ ಕೈಗೆ ಬರುವ ಸಾಮ್ರಾಜ್ಯ ತನಗೆ ಅನುಕೂಲವೋ ಪ್ರತಿಕೂಲವೋ ಎಂಬ ಬಗ್ಗೆ ನಿಶ್ಚಿತತೆಯಿರಲಿಲ್ಲ. ಆದ್ದರಿಂದ ಎಲ್ಲಾದರೂ ಕಂಪನಿಗೆ ಭಾರತದ ಮೇಲಿನ ಪ್ರಭುತ್ವ ಅಥವಾ ಹಿಡಿತ ಕಳಚಿಹೋದಲ್ಲಿ ಅದು ಸ್ವದೇಶದಲ್ಲಿ (ಇಂಗ್ಲೆಂಡಿನಲ್ಲಿ) ಎತ್ತಿದ ಸಾಲಗಳಿಂದ (ಹೋಮ್‌ಬಾಂಡ್) ಇಂಗ್ಲಿಷ್ ಬಂಡವಾಳಕ್ಕೆ ತೊಂದರೆ ಆಗಬಾರದೆಂದು ಅದರ ಎತ್ತುವಳಿ ಮಿತಿಯನ್ನು ಹತೋಟಿಯಲ್ಲಿಡಲಾಗಿತ್ತು.

## V

## ಭಾರತ ಮತ್ತು ೧೮೫೮ರ ಶಾಸನ

ಇಂಗ್ಲೆಂಡಿನ ಸುಖಸಮೃದ್ಧಿಗೆ ಬೇಕಾದಷ್ಟು ಪೋಷಣೆ ಒದಗಿಸಿದ ಈಸ್ಟ್ ಇಂಡಿಯಾ ಕಂಪನಿ ಬ್ರಿಟಿಷ್ ಸಂಸತ್ತು ಹಾಗೂ ಪ್ರಜೆಗಳ ಕೈಯಿಂದ ಅಪಮಾನಕ್ಕೆ ಒಳಗಾಗಬೇಕಾಯಿತು.

ಭಾರತದ ಮೇಲೆ ವ್ಯಾಪಾರದ ವಿಷಯದಲ್ಲಿ ಸರ್ವಸ್ವಾಮ್ಯವನ್ನು ಕಾಪಾಡಿಕೊಳ್ಳಲು ಈಸ್ಟ್ ಇಂಡಿಯಾ ಕಂಪನಿ ಹಂಬಲಿಸುತ್ತಿರುವುದೆಂದು ತಿಳಿದು ಬ್ರಿಟಿಷ್ ಸರ್ಕಾರ ಇದರ ಸಂಪೂರ್ಣ ಪ್ರಯೋಜನವನ್ನು ಪಡೆಯಲು ಹವಣಿಸಿತು. ಕಂಪನಿ ಆಡಳಿತದ ಪ್ರತಿಯೊಂದು ನ್ಯೂನತೆಯನ್ನು ಅದರ ಕಾರ್ಯಕಲಾಪಗಳಲ್ಲಿ ಹಸ್ತಕ್ಷೇಪಕ್ಕೂ ಸಂಪತ್ತಿನ ಶೋಷಣೆಗೂ ಬಳಸಿಕೊಂಡಿತು. ಪ್ರತಿಯೊಂದು ಸಲವೂ ವ್ಯಾಪಾರದ ಸನದನ್ನು ಕಂಪನಿಗೆ ಕೊಡುವ ಸಂದರ್ಭದಲ್ಲಿ ಸರ್ವಸ್ವಾಮ್ಯದಿಂದ ಕಂಪನಿಗೆ ದಕ್ಕಿದ ಲಾಭವನ್ನು ಕಕ್ಕಿಸಲು ಇದೇ ಒಳ್ಳೆಯ ಸಮಯವೆಂದು ಸರ್ಕಾರ ತೀರ್ಮಾನಿಸಿದಂತೆ ಕಾಣುತ್ತಿತ್ತು.

ಕಂಪನಿಯ ಇತಿಹಾಸದ ಪ್ರಥಮಘಟ್ಟದಲ್ಲಿಯೇ ಕಂಪನಿಗೆ ಕೊಡಮಾಡಿದ ಸರ್ವಸ್ವಾಮ್ಯದ ಪರವಾಗಿ, ವಿರೋಧವಾಗಿ ತೀವ್ರ ಆಕ್ರೋಶಯುಕ್ತ ವಾದವಿವಾದಗಳು ಮಸಗುತ್ತಿದ್ದವು. ೧೮೩೩ರವರೆಗೆ ಹೇಗೋ ಸವ್ಯ ಮತ್ತು ಅಪಸವ್ಯಮಾರ್ಗಗಳನ್ನು ಬಳಸಿ ಬ್ರಿಟಿಷ್ ರಾಜಕೀಯಸ್ಥರನ್ನು ಒಲಿಸಿಕೊಂಡು ವ್ಯಾಪಾರಿ ಸರ್ವಸ್ವಾಮ್ಯವನ್ನು ಉಳಿಸಿಕೊಂಡಿತು. ಆದರೆ ೧೮೩೩ ರಲ್ಲಿ ಉಂಟಾದ ಘನ ಗಂಭೀರ ಚರ್ಚೆಗಳ ಕೋಲಾಹಲದಲ್ಲಿ ಬ್ರಿಟಿಷ್ ಸಚಿವರೂ, ಕಂಪನಿಯೂ ಸರ್ವಸ್ವಾಮ್ಯಕ್ಕೆ ಪೂರ್ಣವಿರಾಮವಿತ್ತು ಈ ವ್ಯಾಪಾರವನ್ನು ಎಲ್ಲರಿಗೂ ತೆರವು ಮಾಡಿಕೊಡುವ ಪ್ರಸಂಗ ಇದಿರಾಯಿತು.

೧೮೩೪ರ ಶಾಸನದಂತೆ ಕಂಪನಿ ವ್ಯಾಪಾರಿ ಸಂಸ್ಥೆಯಾಗಿ ಉಳಿಯಲಿಲ್ಲ. ಕಂಪನಿಯ ಸಾಲಗಳನ್ನು ಚುಕ್ತಮಾಡಿದ ರೀತಿ ಹೇಗೆಂದರೆ : "೧೮೩೪ರ ಶಾಸನದ ರೀತ್ಯಾ ಕಂಪನಿಯ ವ್ಯಾಪಾರಿ ಸೊತ್ತುಗಳನ್ನೂ ಆಸ್ತಿಗಳನ್ನೂ ಮಾರಿದ್ದರಿಂದ ದೊರಕಿದ ೧೫,೨೨೩,೪೮೦ ಮೊತ್ತವನ್ನು ಸಾಲಪರಿಹಾರಕ್ಕಾಗಿ ಬಳಸಿದ್ದು ಹೀಗೆ:– ಭಾರತದ ಸಾಲದ ಲೆಕ್ಕ ಚುಕ್ತಾ ಮಾಡಲು ೮,೯೯೧,೩೬೬: ಇಂಗ್ಲೆಂಡಿನ ಪ್ರಾದೇಶಿಕ ವೆಚ್ಚಗಳಿಗಾಗಿ (ಟೆರಿಟೋರಿಯಲ್ ಚಾರ್ಜಸ್) ೨,೨೧೮,೮೩೦: ಸ್ವದೇಶೀ ಬಾಂಡ್ ಸಾಲದ ವಿಲೆವಾರಿಗಾಗಿ ೧,೭೮೮,೫೨೫: ಬ್ಯಾಂಕ್ ಆಫ್ ಇಂಗ್ಲೆಂಡಿನಲ್ಲಿ ೧೮೭೪ಕ್ಕೆ ಅಂತಿಮವಾಗಿ ಕಂಪನಿಯ ಬಂಡವಾಳವಾದಕ್ಕೆ ೬,೦೦೦,೦೦೦ಗಳ ವಿಮೋಚನೆಗೆ (ರಿಡೆಂಶನ್) ಅನುಕೂಲವಾಗುವಂತೆ ಚಕ್ರಬಡ್ಡಿಯ ಮೇಲೆ ಒಂದು ಭದ್ರತಾನಿಧಿಯ (ಸೆಕ್ಯೂರಿಟಿ ಫಂಡ್) ಏರ್ಪಾಟಿಗಾಗಿ £೨,೦೦೦,೦೦೦ಗಳನ್ನು ತುಂಬುವುದು; ಹಡಗುಗಳ ಮಾಲೀಕರಿಗೂ ಇತರ ಜನಗಳಿಗೂ ನೀಡಿದ ಪರಿಹಾರ ಮೊತ್ತ ೫೬೧,೦೦೦; ಬಾಕಿ ಉಳಿದ ೪೬೩,೧೩೫ ಭಾರತದಲ್ಲಿರುವ ಸರ್ಕಾರದ ಹೆಸರಿನಲ್ಲಿ ನಗದು ಹಣವಾಗಿ ಕಾಯ್ದಿಡಲಾಯಿತು. ವ್ಯಾಪಾರಿ ಆಸ್ತಿಗಳ ಪೈಕಿ ಕಂಪನಿಯ ವಶ ಉಳಿದದ್ದೆಂದರೆ ಲಿಡನ್ ಹಾಲ್ ಬೀದಿಯ ಇಂಡಿಯಾ ಹೌಸ್, ಒಂದು ಮಿಲಿಟರಿ ಉಗ್ರಾಣ, ಇಂಡಿಯಾದಲ್ಲಿನ ಮನೆಮಾರುಗಳು, ಒಟ್ಟು ೬೩೫,೪೪೫ ಬೆಲೆಯ ಸೊತ್ತುಗಳು, ಇಷ್ಟನ್ನೂ ಭಾರತ ಸರ್ಕಾರದ ಪ್ರಯೋಜನಕ್ಕೆ ಬಳಸಬಹುದು."

ಅಂತೂ ವ್ಯಾಪಾರಿ ಸಂಸ್ಥೆಯ ರೂಪವನ್ನು ಕಂಪನಿ ಕಳೆದುಕೊಂಡರೂ ರಾಜಕೀಯ ಸ್ವರೂಪದ ಪ್ರಭುತ್ವವನ್ನು ಮುಂದುವರಿಸಿಕೊಂಡು ಹೋಗಲು ಶಾಸನದಲ್ಲಿ ಎಡೆ ಇದ್ದಿತಾದರೂ ಕಂಪನಿಯ ಕೊನೆಗಾಲ ಸಮೀಪಿಸಿತೆಂದೇ ಹೇಳಬೇಕು.

೧೮೫೭ರ ದಂಗೆಯ ಕಾಲದಲ್ಲಿ ಕಂಪನಿ ತೋರಿಸಿದ ಅದಕ್ಷತೆಗಾಗಿ ಈಸ್ಟ್ ಇಂಡಿಯಾ ಕಂಪನಿಯನ್ನು ರದ್ದುಮಾಡಿದರೆಂದು ಭಾವಿಸುವುದು ತಪ್ಪಾದೀತು. ದಂಗೆಗೆ ಮೊದಲೇ ಇಂಡಿಯಾದ ಆಡಳಿತವನ್ನು ಬ್ರಿಟಿಷ್ ಪ್ರಭುತ್ವ ನೇರವಾಗಿ ಕರವಶಮಾಡಿಕೊಳ್ಳುವ ವಿಷಯ ಕುರಿತು ಸಾಕಷ್ಟು ಚರ್ಚೆ ನಡೆದಿತ್ತು. ದಂಗೆ ಬಂದರೂ ಬರದಿದ್ದರೂ ಬ್ರಿಟಿಷ್ ರಾಜಕೀಯಸ್ಥರು ಬಂದು ವ್ಯಾಪಾರಿ ಕಂಪನಿಯನ್ನು ಅಪ್ರತ್ಯಕ್ಷ ರೀತಿಯಲ್ಲಿ ಹಿಂಡಿ ಲಾಭದೋಚುವುದರ ಬಗ್ಗೆ ಅಸಂತೃಪ್ತರಾಗಿ ತಾವೇ ನೇರವಾಗಿ ತುಪ್ಪದ ಬಟ್ಟಲಿಗೆ ಕೈಹಾಕಲು ಸಿದ್ಧತೆ ಮಾಡುತ್ತಿದ್ದರು.

ಸುತ್ತುಬಳಸಿನ ದಾರಿಯಲ್ಲಿ ಸಿಗುವ ಪ್ರಯೋಜನ ಕುರಿತು ಅವರಿಗೆ ತಾಳ್ಮೆ ಇರಲಿಲ್ಲ. ೧೮೫೭ರಲ್ಲಿ ಬಲವಾದ ಸಂಖ್ಯೆಯಲ್ಲಿ ಚುನಾವಣೆ ಗೆದ್ದ ಲಾರ್ಡ್ ಪಾಮರ್ಸಟನ್ ಕಂಪನಿಯ ನಿರ್ದೇಶಕರಿಗೆ ಅಚ್ಚರಿ ಹುಟ್ಟಿಸುವ ಒಂದು ನಿರೂಪ ಕಳಿಸಿಕೊಟ್ಟನು. ಅದೇನೆಂದರೆ ಕಂಪನಿಯನ್ನು ರದ್ದುಗೊಳಿಸಿ ಭಾರತ ಸರ್ಕಾರವನ್ನು ನೇರವಾಗಿ ಸ್ವಾಧೀನಪಡಿಸಿಕೊಳ್ಳುವುದು.

ದುರದೃಷ್ಟದಿಂದ ೧೮೫೭ರಲ್ಲಿ ಭುಗಿಲೆದ್ದ ದಂಗೆಯ ದೆಸೆಯಿಂದ ಕಂಪನಿ ರದ್ದುಗೊಳಿಸುವ ಸೂಚನೆಗೆ ಇನ್ನಷ್ಟು ಪುಷ್ಟಿ ದೊರೆಯಿತು.

೩೧ನೇ ಡಿಸೆಂಬರ್ ೧೮೫೭ ರಂದು ಕಂಪನಿಯ ನಿರ್ದೇಶಕ ಮತ್ತು ಉಪನಿರ್ದೇಶಕರು ಭಾರತದ ಆಡಳಿತಕ್ಕಾಗಿ ಒಂದು ಮಧ್ಯಂತರದ, ರಾಜಕೀಯ ಲೇಪವಿಲ್ಲದ, ಸಂಪೂರ್ಣಸ್ವತಂತ್ರ, ಸ್ವಾಯತ್ತ ಉಪಕರಣ ಅತ್ಯಾವಶ್ಯಕವೆಂದು ಮಾರೋಲೆ ಕಳಿಸಿಕೊಟ್ಟರು.

ಇಷ್ಟಲ್ಲದೆ ಪಾರ್ಲಿಮೆಂಟಿನ ಉಭಯ ಸದನಗಳಿಗೂ ಕಂಪನಿ ಪ್ರಾರ್ಥನಾ ಪತ್ರವನ್ನು ಕಳಿಸಿಕೊಟ್ಟಿತು. ಪ್ರಾರ್ಥನಾ ಪತ್ರವನ್ನು ರಚಿಸಿಕೊಟ್ಟ ಜಾನ್ ಸ್ಟುವರ್ಟ್ ಮಿಲ್ ಕಂಪನಿ ನಿರ್ಮೂಲನೆ ಮಂಡಳಿಯ

ಅಧ್ಯಕ್ಷತೆ ವಹಿಸುವ ಸಚಿವನ ಮೂಲಕ ಬ್ರಿಟಿಷ್ ಪ್ರಭುತ್ವವೇ ಭಾರತದ ಸರ್ಕಾರದ ನಿಯಂತ್ರಣ ಮಾಡುತ್ತಿರಲಿಲ್ಲವೇ? ಇಂಡಿಯಾ ಸರ್ಕಾರಕ್ಕೂ ಬ್ರಿಟಿಷ್ ಚಕ್ರವರ್ತಿಯ ಸಚಿವನಿಗೂ ನಡುವೆ ಇರುತ್ತಿದ್ದ ನಿರ್ದೇಶಕ ಮಂಡಳಿಯ (ಈಸ್ಟ್ ಇಂಡಿಯಾ ಕಂಪನಿಯ ಪ್ರತಿನಿಧಿಯಾಗಿ) ಅನುಭವಗಳು ಸಚಿವನಿಗೆ ನಿಜಕ್ಕೂ ಒಳ್ಳೆಯ ಮಾರ್ಗದರ್ಶಕಗಳಾಗಿದ್ದುವು ಎನ್ನಬೇಕಲ್ಲವೇ? ಈ ಪದ್ಧತಿಯಲ್ಲಿ ಆಡಳಿತದಿಂದ ದುಷ್ಪರಿಣಾಮಗಳುಂಟಾಗಿದ್ದರೆ ನಿರ್ದೇಶಕ ಮಂಡಳಿಯನ್ನು ರದ್ದುಗೊಳಿಸಿದ್ದರಿಂದ ಒಳ್ಳೆಯ ಪರಿಣಾಮ ಉಂಟಾಗಲಾರದು. ನಿರ್ದೇಶಕ ಮಂಡಳಿ ಇರುವಾಗ ಬ್ರಿಟಿಷ್ ಪ್ರಭುತ್ವ ಆಡಳಿತದಲ್ಲಿ ಎಡವಿದೆ ಎಂದು ಹೇಳುವುದೂ ಸಲಹೆಗಾರರುಳ್ಳ ಸ್ವತಂತ್ರ ಸಚಿವನು ಎಡವುತ್ತಾನೆಂದು ಹೇಳುವುದೂ ಒಂದೇ.

ಭವಿಷ್ಯದಲ್ಲಿ ಭಾರತಕ್ಕೂ ಇಂಗ್ಲೆಂಡಿಗೂ ಇರಬೇಕಾದ ಸಂಬಂಧದ ಕುರಿತು ಭಿನ್ನಾಭಿಪ್ರಾಯಗಳು ಮೂಡಿ ಬಂದಿದ್ದವು.

ದಿ ಸ್ಟ್ರ್ಯಾನ್ಲೇ ರಿವ್ಯೂ ಎಂಬ ಒಂದು ಆಂಗ್ಲ ಪತ್ರಿಕೆ ಭಾರತವನ್ನು ಇಂಗ್ಲೆಂಡಿನ ರಾಜಕೀಯದಿಂದ ದೂರವಿಡುವುದು ಯುಕ್ತವಾಗಿದೆ ಎಂದು ವಾದಿಸಿತು. ಭಾರತಕ್ಕೆ ಹೋದ ಇಂಗ್ಲಿಷ್ ಜನ ನಿರಂಕುಶ ಆಡಳಿತಗಾರರಾಗುತ್ತಾರೆಂದೂ; ಪ್ರಜಾಪ್ರಭುತ್ವಕ್ಕೆ ಕುತ್ತಾಗುವರೆಂದೂ ಬಣ್ಣಿಸಿತು. ಇಂಗ್ಲೆಂಡಿನಲ್ಲಿ ನಡೆಯುತ್ತಿರುವ ಶ್ರೇಯಸ್ಸು, ಚಟುವಟಿಕೆಗಳನ್ನು, ಇಂಗ್ಲೆಂಡಿನ ನೈತಿಕ ಜೀವನವನ್ನೂ ಭಾರತವು ಒಂದು ಬೃಹತ್ ಟಾರ್ಪೆಡೋದಂತೆ ಹತವೀರ್ಯವನ್ನಾಗಿ ಮಾಡಲಿದೆ. ಭಾರತ ವೈಖರಿಯ ಸ್ಪಷ್ಟವಾದ ಸ್ವರೂಪದರ್ಶನದಿಂದ ಇಂಗ್ಲೆಂಡಿಗೆ ನೇಪಲ್ಸ್ ದೊರೆಯ ನಿರಂಕುಶತೆ ಹಾಗೂ ಶ್ರೀಮತಿ ಸ್ಟೋವೆ ಲೆಗ್ರಿಯ ದುರಾಚರಣೆಗಳ ಪಾಠ ದೊರೆಯಬಹುದು– ಎಂದೂ ಧೈರ್ಯವಾಗಿ ನುಡಿಯಿತು.

ಇತರರು, ಮುಖ್ಯವಾಗಿ ಕೊಂತೆಯ (Conte) ಶಿಷ್ಯನಾದ ರಿಚರ್ಡ್ ಕಾಂಗ್ರೇವ್ ತನ್ನ ಭವಿಷ್ಯವನ್ನು ತಾನೇ ನಿರ್ಮಾಣಮಾಡಿಕೊಳ್ಳಲು ಭಾರತವನ್ನು ಅದರ ಪಾಡಿಗೆ ಅದನ್ನು ಬಿಡಬೇಕೆಂಬ ಸೂಚನೆ ಮುಂದಿಟ್ಟನು. ಒಂದು ಜನಪದವನ್ನು ಇನ್ನೊಂದು ಜನಪದ ಆಳುವುದು ಮಾನವಜಾತಿಯ ಉತ್ಕರ್ಷದ ಸೂಚಿಯಲ್ಲ. ಇಂಗ್ಲಿಷರು ಬಿಟ್ಟುಹೋದ ಮೇಲೆ ಬೇರಾವುದಾದರೂ ದೇಶ ಅವರ ಸ್ಥಳದಲ್ಲಿ ಭಾರತವನ್ನು ಆಕ್ರಮಣಮಾಡಲು ಬಯಸುವುದನ್ನು ತಪ್ಪಿಸಲು ಒಂದು ಅಂತರರಾಷ್ಟ್ರೀಯ ಮಂಡಳಿಯನ್ನು ಸಂಘಟಿಸಿ ಭಾರತೀಯರು ತಮ್ಮನ್ನು ತಾವೇ ಆಳಿಕೊಳ್ಳಲು ಸಮರ್ಥರಾಗುವತನಕ ಅದರ ಆಡಳಿತವನ್ನು ನಿಯಂತ್ರಿಸಬಹುದೆಂದು ಕಾಂಗ್ರೇವ್ ಸೂಚಿಸಿದನು.

ಇಂಥ ಯಾವ ಅಭಿಪ್ರಾಯವೂ ಬ್ರಿಟಿಷ್ ಸಂಸದರ ಮನವನ್ನು ಕದಲಿಸಲಿಲ್ಲ. ಅವರು ಭಾರತ ಸರ್ಕಾರದ ನೇರ ಆಡಳಿತವನ್ನು ಕೈಗೆ ತೆಗೆದುಕೊಳ್ಳಲು ಕಟಿಬದ್ಧರಾಗಿದ್ದರು. ಎರಡೆರಡು ಅಥವಾ ಅಪ್ರತ್ಯಕ್ಷ ಆಡಳಿತದ ಬದಲು ಒಂದೇ ಆಡಳಿತ ಅವರ ಗುರಿಯಾಗಿತ್ತು. ಆದ್ದರಿಂದ ಪ್ರಾರ್ಥನಾಪತ್ರಗಳಾಗಲಿ, ಸಾರ್ವಜನಿಕ ಅಭಿಪ್ರಾಯಗಳಾಗಲಿ ಲಾರ್ಡ್ ಪಾಮರ್ಸ್ಟನ್ ಅವರ ದಾರಿಗೆ ಅಡ್ಡಬರಲಿಲ್ಲ. ಕಂಪನಿಯ ನಿರ್ಮೂಲನ ಮತ್ತು ಭವಿಷ್ಯದ ಭಾರತ ಸರ್ಕಾರವನ್ನು ಕುರಿತ ಮಸೂದೆ ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪಟ್ಟಿತು. ಆದರೆ ಅದು ಪಾಸಾಗುವುದಕ್ಕೆ ಮೊದಲೇ ಪಾಮರ್ಸ್ಟನ್ ಸರ್ಕಾರ ಒಳಸಂಚು ಮಸೂದೆಯ ಆಘಾತಕ್ಕೆ ತತ್ತರಿಸಿ ಕುಸಿದುಬಿತ್ತು. ಪಾಮರ್ಸ್ಟನ್ ಅವರ ಬಳಿಕ ಬಂದ ಕನ್ಸರ್ವೆಟಿವ್ ಪಕ್ಷದ ಲಾರ್ಡ್ ಡರ್ಬಿಯ ಸರ್ಕಾರದಲ್ಲಿ ಚಾನ್ಸಲರ್‌ನಾದ ಡಿಸ್ರೇಲಿ ತನ್ನದೇ ಆದ ಭಾರತ ಮಸೂದೆಯನ್ನು ಮಂಡಿಸಿದನು. ಈ ಎರಡು ಮಸೂದೆಗಳನ್ನು ಹೋಲಿಸಿ ಜಾನ್ ಸ್ಟುವರ್ಟ್‌ಮಿಲ್ ಆಡಿದ ಮಾತುಗಳು ಮಹತ್ವಪೂರ್ಣವಾಗಿರುವುದು ಮಾತ್ರವೇ ಅಲ್ಲ, ಭವಿಷ್ಯದ ಘಟನೆಗಳ ಮುನ್ಸೂಚನೆಯನ್ನೂ ಕೊಡುತ್ತವೆ.

"ಒಂದು ರಾಷ್ಟ್ರ ಇನ್ನೊಂದನ್ನಾಳುವ ಸಂದರ್ಭದಲ್ಲಿ ಬರುವ ಸಂಕಷ್ಟಗಳಿಗೆ ಎರಡು ಮಸೂದೆಗಳಲ್ಲಿಯೂ ಸೂಚಿಸಿದ ಉತ್ತರ ಒಂದೇ: ಸಚಿವನಿಗೆ ನಿರಂಕುಶ ಅಧಿಕಾರ ನೀಡುವುದು. ಸಚಿವನಿಗೆ ಒಂದು ಸಲಹಾ ಮಂಡಳಿ ಇರುತ್ತದೆ ಎಂದರೆ ಅದೇನೂ ವಿಶೇಷವಲ್ಲ. ಎಂಥ ನಿರಂಕುಶ ಪ್ರಭುವಿಗೂ ಸಲಹೆಗಾರರಿರುವುದಿಲ್ಲವೆ? ನಿರಂಕುಶ ಪ್ರಭುವಿನ ಸಲಹಾ ಮಂಡಳಿಗಳಿಗೂ ಹಾಗಲ್ಲದ ಪ್ರಭುತ್ವಕ್ಕೂ ವ್ಯತ್ಯಾಸವೆಂದರೆ ಒಂದರಲ್ಲಿ ಸಲಹಾ ಮಂಡಳಿಯನ್ನು ನಿರಂಕುಶಪ್ರಭುವೇ ನೇಮಿಸಿಕೊಳ್ಳುತ್ತಾನೆ, ಇನ್ನೊಂದರಲ್ಲಿ ಅವರು ಸ್ವತಂತ್ರರಾಗಿರುತ್ತಾರೆ. ಲಾರ್ಡ್ ಪಾಮರ್ಸ್ಟನ್ ಮಸೂದೆಯಲ್ಲಿ ಸಲಹಾ ಮಂಡಳಿಯನ್ನು ಸಚಿವನೇ ನಾಮಕರಣ ಮಾಡುತ್ತಾನೆ, ಡಿಸ್ರೇಲಿ ಮಸೂದೆಯಲ್ಲಿ ಅರ್ಧಮಂಡಳಿಯನ್ನಷ್ಟೇ ಆತ ನಾಮಕರಣ ಮಾಡಬಹುದು. ಮಂಡಳಿಗೆ ವಹಿಸಿಕೊಡುವ ಕರ್ತವ್ಯಗಳು ಎರಡೂ ಮಸೂದೆಯಲ್ಲಿ ಕೆಲವು ಅಪವಾದಗಳನ್ನು ಹೊರತುಪಡಿಸಿ ಸಚಿವನ ವಿವೇಚನೆಗೆ ಸೇರಿದ ವಿಷಯವಾಗಿದೆ.

ಡಿಸ್ರೇಲಿಯ ಮಸೂದೆಗೆ ಪಾಮರ್ಸ್ಟನ್ ಮಸೂದೆಗಿಂತಲೂ ಹೆಚ್ಚಿನ ದುರ್ಗತಿ ಪ್ರಾಪ್ತವಾಯಿತು – ಅದು ಪಾರ್ಲಿಮೆಂಟಿನಲ್ಲಿ ಬಿದ್ದುಹೋಯಿತು. ಆಮೇಲೆ ಆಗಸ್ಟ್ ೧೮೫೮ರಲ್ಲಿ 'ಭಾರತ ಸರ್ಕಾರದ ಉತ್ತಮ ಆಡಳಿತಕ್ಕಾಗಿ ಇರುವ ಶಾಸನ' (Act for the better Government of India) ಎಂಬ ಮಸೂದೆ ಪಾರ್ಲಿಮೆಂಟಿನಲ್ಲಿ ಮಂಡಿಸಲ್ಪಟ್ಟು ಪಾಸಾಯಿತು.

ಈ ಶಾಸನದ ಸೆಕ್ಷನ್ ೭೫ರಲ್ಲಿ ನಮೂದಿಸಲ್ಪಟ್ಟಂತೆ ಭಾರತ ಸರ್ಕಾರದ ಆಡಳಿತವನ್ನು ಅದರ ಸ್ವರೂಪಕ್ಕನುಗುಣವಾಗಿ ಎರಡು ರೀತಿ ವರ್ಗೀಕರಿಸಬಹುದು: (೧) ಹಿಂದಿನ ವಿಷಯ ವಿದ್ಯಮಾನಗಳನ್ನು ಕುರಿತ ಸಂಗತಿಗಳು (೨) ಮುಂದಿನ ವಿಷಯ ವಿದ್ಯಮಾನಗಳನ್ನು ಕುರಿತ ಸಂಗತಿಗಳು.

ಹಿಂದಿನ ವಿದ್ಯಮಾನಗಳು ಅಂದರೆ ಹಣಕಾಸು ಮತ್ತು ವ್ಯಾಪಾರಿ ವಿಷಯಗಳ ಒಪ್ಪಂದಗಳು, ಹೊಣೆಗಾರಿಕೆಗಳು. ಶಾಸನದ ಸೆಕ್ಷನ್ ೪೨ರಲ್ಲಿ ಈಸ್ಟ್ ಇಂಡಿಯಾ ಕಂಪನಿಯ ಬಂಡವಾಳದ ಮೇಲಿನ ಲಾಭಾಂಶವನ್ನು ಭಾರತದ ಆದಾಯದಿಂದಲೇ ತೆರತಕ್ಕುದು ಎಂದು ವಿಧಿಸಲಾಗಿತ್ತು.

ಭಾರತ ಮತ್ತು ಇಂಗ್ಲೆಂಡಿನ ನಡುವೆ ಸಮಾನ ನ್ಯಾಯದ ನೆಲೆಯಲ್ಲಿ ತೀರ್ಮಾನವಾಗಬೇಕಾಗಿದ್ದ ಪ್ರಶ್ನೆ, ಭಾರತದ ಸಾಲವನ್ನು ಕುರಿತಾದ ಪ್ರಶ್ನೆಯಾಗಿತ್ತು. ಭಾರತದ ಸಾಲವನ್ನು ತೀರಿಸುವುದು ಯಾರ ಹೊಣೆ? ಅದನ್ನು ಉಂಟುಮಾಡಿದ ಹೊಣೆ ಯಾರದು? ಯಾತಕ್ಕಾಗಿ ಈ ಸಾಲ ಹುಟ್ಟಿಕೊಂಡಿತು? ಎಂಬಂಥ ಸೂಕ್ಷ್ಮ ಸವಾಲುಗಳು ಇದರೊಳಗೆ ಸೇರಿಕೊಂಡಿದ್ದವು.

ದಂಗೆಯು ಮುಗಿದ ಕೂಡಲೇ ಮೇಜರ್ ವಿನ್‌ಗೇಟ್ ಎಂಬುವನು ಈ ವಿಷಯದಲ್ಲಿ ಸಮರ್ಪಕ ವಿಮರ್ಶೆಯೊಂದನ್ನು ಮುಂದಿಟ್ಟನು:–

"ಬ್ರಿಟಿಷ್ ಸರ್ಕಾರದ ಹಸ್ತಕ್ಷೇಪವಿಲ್ಲದೆ ಭಾರತದ ಜನ ತಮ್ಮನ್ನು ತಾವೇ ಆಳಿಕೊಳ್ಳುವ ಪ್ರಮೇಯ ಎಂದಾದರೂ ಇತ್ತೇ? ಅರ್ಥಾತ್ ಭಾರತದ ಜನರ ಕಲ್ಯಾಣಕ್ಕಾಗಿ ಭಾರತದ ತೆರಿಗೆ ಮತ್ತು ವೆಚ್ಚಗಳ ನಿರ್ಣಯ ಕೈಗೊಳ್ಳುತ್ತಿದ್ದರೇ? ಎಂಬ ಪ್ರಶ್ನೆ ಇಲ್ಲಿ ಪ್ರಸ್ತುತವಾಗುತ್ತದೆ. ಜನ್ಮವೆತ್ತಿದ ಗಳಿಗೆಯಿಂದ ಇಂದಿನ ದಿನದವರೆಗೂ ಅದರ ರಚನೆಯಲ್ಲಿ, ಅಧಿಕಾರ ಸ್ವರೂಪದಲ್ಲಿ ಭಾರತ ಸರ್ಕಾರ ಬ್ರಿಟಿಷ್ ಪಾರ್ಲಿಮೆಂಟಿನ ಕೂಸಾಗಿದೆ. ಇಂಡಿಯಾ ಸರ್ಕಾರ ಸಾಲ ತೆಗೆಯಬೇಕಾದರೆ ಬ್ರಿಟಿಷ್ ಪಾರ್ಲಿಮೆಂಟಿನ ಅನುಜ್ಞೆ ಅಗತ್ಯ. ಇತ್ತೀಚಿನ ಡಿಬೆಂಚರ್ ಸಾಲವನ್ನು ಪರಿಶೀಲಿಸಿದರೂ ಬ್ರಿಟಿಷ್ ಸರ್ಕಾರದ ಪ್ರಭಾವ ಕಂಡುಬರುವುದಿಲ್ಲವೆ? ಬ್ರಿಟಿಷ್ ರಾಷ್ಟ್ರದ ಟ್ರಸ್ಟಿ ಆಗಿ ಮಾತ್ರವೇ ಈಸ್ಟ್ ಇಂಡಿಯಾ ಕಂಪನಿ ವ್ಯವಹರಿಸಲು ಸಾಧ್ಯ. ಎಂತಲೇ ಅದರ ವ್ಯವಹಾರಗಳಲ್ಲಿ ಆಗಿಂದಾಗ್ಗೆ ಹಸ್ತಕ್ಷೇಪ ಮಾಡುತ್ತ ಕೊನೆಗೆ ಅದರ ಅಧಿಕಾರವನ್ನು ರದ್ದುಮಾಡುವುದು

ಸಾಧ್ಯವಾಯಿತು. ಎಚ್ಚರದಿಂದ ಪರೀಕ್ಷೆ ಮಾಡಿದಲ್ಲಿ ಮೊದಲಿನಿಂದಲೂ ಭಾರತ ಸರ್ಕಾರ ಒಂದು ಪ್ರತ್ಯೇಕ ರಾಷ್ಟ್ರದ ಸರ್ಕಾರವಾಗಿರುವುದರ ಬದಲು ಬ್ರಿಟಿಷ್ ಸರ್ಕಾರದ ಒಂದು ಇಲಾಖೆಯಾಗಿತ್ತು ಎನ್ನಬೇಕಾಗುತ್ತದೆ. ನಿಯಂತ್ರಣ ಮಂಡಳಿಯ ಅಧ್ಯಕ್ಷನ ಮೂಲಕವಾಗಿ ಪ್ರವರ್ತಿಸುವ ಬ್ರಿಟಿಷ್ ಸಚಿವ ಸಂಪುಟವೇ ಭಾರತದ ಆಡಳಿತ ಧೋರಣೆಗಳನ್ನು ರೂಪಿಸುತ್ತಿತ್ತು. ಈಸ್ಟ್ ಇಂಡಿಯಾ ಕಂಪನಿಯ ಮುಸುಕಿನಲ್ಲಿ ಸ್ವಂತ ಅಧಿಕಾರವನ್ನು ಚಲಾಯಿಸುತ್ತಿತ್ತು. ವಸ್ತುಸ್ಥಿತಿ ಹೀಗಿರುತ್ತ ಭಾರತ ಸರ್ಕಾರ ಕೈಗೊಂಡ ಪ್ರತಿಯೊಂದು ಕರ್ತವ್ಯವು ಯಾವ ಸಂವಿಧಾನವೂ ಇಲ್ಲದೆ, ರಾಷ್ಟ್ರೀಯ ಸರ್ಕಾರವೂ ಇಲ್ಲದೆ ಬ್ರಿಟಿಷ್ ಪಾರ್ಲಿಮೆಂಟ್ ಮತ್ತು ಬ್ರಿಟಿಷ್ ಆಡಳಿತ ತಾನು ಗೆದ್ದುಕೊಂಡು ಪರಾಧೀನತೆಯಲ್ಲಿಟ್ಟ ಒಂದು ದೇಶವನ್ನು ಆಳಿದ್ದ ಪರಿಯನ್ನು ಗಮನಿಸಿದರೆ ಇಂಡಿಯಾದ ಸಾಲಕ್ಕೆ ನಮ್ಮಲ್ಲಿನ ಸರ್ಕಾರವೇ ಹೊಣೆ ಹೊರಬೇಕಾಗುತ್ತದೆ. ಭಾರತ ಸಾಲ ಜವಾಬುದಾರಿಗಳಿಂದ ನಾವು ಏನು ಮಾಡಿದರೂ ಕೊಡಹಿಕೊಳ್ಳಲಾರೆವು."

ಇಂಗ್ಲೆಂಡಿಗೆ ದೊರೆತ ಲಾಭಗಳನ್ನೂ ಭಾರತಕ್ಕೆ ಆದ ನಷ್ಟಗಳನ್ನೂ ವಿನ್‌ಗೇಟ್ ಮಾನವೀಯ ನೆಲೆಯಲ್ಲಿ ಬ್ರಿಟಿಷ್ ಸಾರ್ವಜನಿಕರಿಗೆ ತಿಳಿಹೇಳಲು ಪ್ರಯತ್ನಿಸಿದನು:

"ಬ್ರಿಟಿಷ್ ಜನಾಂಗಕ್ಕೆ ಒದಗಿದ ಲಾಭಗಳ ಬಗ್ಗೆ ಯೋಚಿಸುವಾಗ ಓದುಗರು ಒಂದು ಮಾತನ್ನು ಮರೆಯಬಾರದು. ಈ ಲಾಭ ಎಷ್ಟೇ ಸಣ್ಣದಿರಲಿ ದೊಡ್ಡದಿರಲಿ ಇದನ್ನು ಗಳಿಸಲು ನಮಗೆ ಒಂದು ಚಿಕ್ಕಾಸೂ ವ್ಯಯವಾಗಲಿಲ್ಲ. ಇದು ಈ ತಲೆಮಾರಿನ ಇಂಗ್ಲಿಷ್ ಜನರಿಗೆ ಅಚ್ಚರಿಯನ್ನುಂಟುಮಾಡೀತು. ಕಾರಣ ಅವರು ಕೆನಡಾ ದಂಗೆಗಳು, ಕಾಫರ್ (Caffre) ಯುದ್ಧಗಳು, ಸಿಲೋನ್ ದಂಗೆಗಳು, ವೆಸ್ಟ್‌ಇಂಡಿಯನರನ್ನು ಗುಲಾಮಗಿರಿಯಿಂದ ಬಿಡುಗಡೆ ಮಾಡುವ ಸಂದರ್ಭಗಳಲ್ಲಿ ತಮ್ಮ ಕೈಯಿಂದಲೇ ಕೊಟ್ಟಂಥ ದೊಡ್ಡ ದೊಡ್ಡ ಮೊತ್ತಗಳನ್ನು ಮರೆಯಬಾರದು. ನಮ್ಮ ಆಶ್ರಿತ ಅಧೀನ ರಾಜ್ಯಗಳ ಖರ್ಚುವೆಚ್ಚದ ಲೆಕ್ಕವನ್ನು ಪಾರ್ಲಿಮೆಂಟಿಗೆ ಒಪ್ಪಿಸುವುದನ್ನು ಅವರು ಬಲ್ಲರು. ವಸಾಹತುಗಳನ್ನು ಗಳಿಸುವುದಕ್ಕೂ, ಉಳಿಸಿಕೊಳ್ಳುವುದಕ್ಕೂ ಅದೆಷ್ಟೋ ದುಬಾರಿ ಯುದ್ಧಗಳನ್ನು ಹೂಡಿರುವ ನಾವು ಅದು ಹೇಗೆ ಭಾರತದ ಮಹಾ ಸಾಮ್ರಾಜ್ಯವನ್ನು ಚಿಕ್ಕಾಸು ವೆಚ್ಚವಿಲ್ಲದೆ ಕರವಶಮಾಡಿಕೊಂಡೆವು ಎಂದರೆ ನಂಬುವುದು ಕಷ್ಟವಲ್ಲವೆ? ನಂಬಿಕೆಗೆ ಬಾರದ ಇನ್ನಷ್ಟು ಆಶ್ಚರ್ಯಜನಕ ಸುದ್ದಿ ಎಂದರೆ ಒಂದು ಷಿಲಿಂಗೂ ವೆಚ್ಚಮಾಡದೆ ನಮಗೆ ದೊರೆತ ಈ ಭಾರತೀಯ ಸಾಮ್ರಾಜ್ಯವೆ. ನಮಗೆ ಇದು ವರ್ಷಂಪ್ರತಿ ಇದುವರೆಗೆ ಸಲ್ಲಿಸಿದ ಕಾಣಿಕೆಯನ್ನು ಒಟ್ಟು ಕೂಡಿಸಿದರೆ ೧೦೦ ಮಿಲಿಯ ಪೌಂಡ್ ಈ ಒಂದು ಶತಮಾನದಲ್ಲಿ ಸಲ್ಲಿಸಿದಂತಾಗುತ್ತದೆ. ಇದು ಪರಮಾಶ್ಚರ್ಯವಲ್ಲವೆ? ಇದು ಯಾವ ನ್ಯಾಯ? ನಮ್ಮ ಹಿತಾಸಕ್ತಿಯ ದೃಷ್ಟಿಯಿಂದ ನೋಡಿದರೂ ಕೂಡಾ, ಮಾನವೀಯ ದೃಷ್ಟಿಯಿಂದ ನೋಡಿದರೂ, ಆರ್ಥಿಕ ತತ್ವಗಳ ಆಧಾರದಲ್ಲಿ ಗಮನಿಸಿದರೂ, ಬರಿದೆ ಸಾಮಾನ್ಯ ತಿಳಿವಳಿಕೆಯ ಮೇಲಿಂದಲೂ ಇದು ಶುದ್ಧ ಅನ್ಯಾಯವೆನಿಸುತ್ತದೆ."

ಭಾರತದ ಕುಂದುಕೊರತೆಗಳ ಬಗ್ಗೆ ಬರೆಯುತ್ತ ಬ್ರಿಟಿಷ್ ಜನಾಂಗಕ್ಕೆ ಮಿ.ವಿನ್‌ಗೇಟ್ ಈ ಸವಾಲೆಸೆಯುತ್ತಾರೆ:

"ಭಾರತದ ಜನರ ಕಲ್ಯಾಣಕ್ಕಾಗಿ, ಹಿತಕ್ಕಾಗಿ ನಿಸ್ವಾರ್ಥ ದೃಷ್ಟಿಯಿಂದ, ನಮ್ಮ ದೇಶದ ಕಿಂಚಿತ್ ಹಿತವನ್ನೂ ಲಕ್ಷಿಸದೆ ಭಾರತದಲ್ಲಿನ ನಮ್ಮ ಧೋರಣೆ ರೂಪಿತವಾಯಿತೇ ಹೇಗೆ? ಭಾರತವು ನಮಗೆ ಕಳಿಸುವ ಸರಕುಗಳಿಗೆ ಹೊರಲಾರದ ಸುಂಕ ವಿಧಿಸುತ್ತ, ನಾವು ಅಲ್ಲಿಗೆ ಕಳಿಸುವ ಸರಕುಗಳಿಗೆ ನಾಮಕಾವಸ್ತೆ ಕನಿಷ್ಠ ಸುಂಕ ವಿಧಿಸುವ ನೀತಿ ಭಾರತದ ಹಿತಕ್ಕಾಗಿ ಎನ್ನಲಾದೀತೆ? ಬ್ರಿಟನ್ನಿಗೆ ರಫ್ತುಮಾಡಿದ ಹತ್ತಿಗೆ ಪೂರ್ತಿ ರಫ್ತು ಸುಂಕ ವಿನಾಯಿತಿ ಕೊಟ್ಟು ಜಗತ್ತಿನ ಇತರ ಕಡೆಗಳಿಗೆ ಹೋಗುವ ಹತ್ತಿಯ ಮೇಲೆ ಸುಂಕ ವಿಧಿಸಿದ್ದು

ಭಾರತದ ಲಾಭಕ್ಕಾಗಿಯೋ? ವಿದೇಶೀ ಸರಕುಗಳು ಬ್ರಿಟಿಷ್ ಹಡಗುಗಳಲ್ಲಿ ಭಾರತದೊಳಕ್ಕೆ ಬರುವಾಗ ಉಳಿದ ಹಡಗುಗಳಲ್ಲಿ ಬರುವ ಸರಕುಗಳಿಗಿಂತ ಅರ್ಧವಾಸಿ ಆಮದು ಸುಂಕ ತೆರುವುದು ಭಾರತದ ಲಾಭಕ್ಕಾಗಿ ನಡೆಯುವ ತಾರತಮ್ಯ ನೀತಿಯೋ? ಐರೋಪ್ಯರನ್ನು ಸಾಮಾನ್ಯ ಕ್ರಿಮಿನಲ್ ಕೋರ್ಟುಗಳ ವ್ಯಾಪ್ತಿಯಿಂದ ಹೊರಗಿಟ್ಟು ಶೇಕಡಾ ೯೯ ಸಂದರ್ಭಗಳಲ್ಲಿ ದೇಶೀಯ ಜನರಿಗೆ ಅಪರಾಧಿ ಬ್ರಿಟಿಷರ ವಿರುದ್ಧ ಗೆಲ್ಲಲಸಾಧ್ಯವಾಗುವಂತೆ ವ್ಯವಸ್ಥೆಗೊಳಿಸಿದ್ದು ದೇಶೀಯ ಹಿತಾಕಾಂಕ್ಷೆಯಿಂದ ಮಾತ್ರವೋ? ಐರೋಪ್ಯ ಅಧಿಕಾರಿಗಳಿಗೆ ಶಿಕ್ಷಣ ಮತ್ತು ಜ್ಞಾನಸಂವರ್ಧನೆಗೆ ಮುನ್ನವೇ ಧಾರ್ಮಿಕ ವ್ಯವಸ್ಥೆಯನ್ನು ನೇರ್ಪುಗೊಳಿಸಿ ಬೆಂಬಲಿಸಿದ್ದು ತೆರಿಗೆದಾರ ಹಿಂದೂ ಮತ್ತು ಮಹಮ್ಮದೀಯ ಜನರ ಮೇಲಿನ ಪ್ರೀತಿ ವಿಶ್ವಾಸ ಗಳಿಕೆಗಾಗಿ ಇರಬಹುದೇ? ಬ್ರಿಟಿಷ್ ಖಜಾನೆಯಿಂದ ರಕ್ಷಣಾ ವೆಚ್ಚಗಳಿಗಾಗಿ ಹಣನಿಗದಿ ಮಾಡುವ ವ್ಯವಸ್ಥೆಯುಳ್ಳ ಇತರ ಬ್ರಿಟಿಷ್ ಆಧಿಪತ್ಯಗಳಂತಲ್ಲದೆ ಭಾರತದಲ್ಲಿ ಬ್ರಿಟಿಷ್ ಸಾಮ್ರಾಜ್ಯ ವಿಸ್ತರಣೆಗೆ ತೆರಿಗೆ ವಿಧಿಸುವುದರಿಂದ ವೆಚ್ಚವನ್ನು ಭರಿಸಿಕೊಂಡದ್ದು ದೇಶೀಜನರ ಮೇಲಿನ ಕಾಳಜಿಯ ದ್ಯೋತಕವಾಗಿ ಎನ್ನಬಹುದೇ? ಕೊನೆಯದಾಗಿ 'ಹೋಮ್ ಛಾರ್ಜಸ್' ಎಂಬ ಹೆಸರಲ್ಲಿ ಈ ಶತಮಾನದಲ್ಲಿ ೧೦೦ ಮಿಲಿಯ ಪೌಂಡುಗಳನ್ನು ಭಾರತದಿಂದ ಬ್ರಿಟನ್ನಿಗೆ ವರ್ಗಾಯಿಸಿದ್ದು ಭಾರತದ ಜನರ ಹಿತಾರ್ಥವಾಗಿ ಮಾತ್ರವೆಯೋ? ಪ್ರಾಮಾಣಿಕ ವಾಚಕನು ವಿಚಾರಮಾಡಿ ಆತ್ಮಸಾಕ್ಷಿಯಿಂದ ಇಂಥ ಪ್ರಶ್ನೆಗಳನ್ನು ಕೇಳಿಕೊಂಡು ಉತ್ತರ ಹುಡುಕಲು ಪ್ರಯತ್ನ ಮಾಡಿದರೆ ನಮ್ಮ ಭಾರತದ ಧೋರಣೆ ಭಾರತದ ಜನರು ಮಾತ್ರವಲ್ಲದೆ ಬ್ರಿಟಿಷರ ಹಿತಾರ್ಥವಾಗಿಯೂ ಇರುತ್ತಿತ್ತೆಂಬುದು ಗೋಚರವಾದೀತು."

ನ್ಯಾಯನೀತಿಪರವೂ ಮಾನವೀಯ ಗುಣಮೂಲವೂ ಆದ ಇಂಥ ವಾದಗಳು ಆಗ ಗೆಲ್ಲುವುದು ಅಸಂಭವವಾಗಿತ್ತು. ಬ್ರಿಟಿಷ್ ಸಾಮ್ರಾಜ್ಯವನ್ನು ಗಳಿಸಿಕೊಟ್ಟಂಥ ಭಾರತದ ಸಾಲದ ಹೊರೆಯನ್ನು ವಹಿಸಿಕೊಳ್ಳಲು ಬ್ರಿಟಿಷ್ ಸರಕಾರ ಸುತರಾಂ ಸಿದ್ಧವಾಗಿರಲಿಲ್ಲ. ಕಂಪನಿಯ ೬೯,೪೭೩,೪೮೪ ಪೌಂಡ್‌ಗಳಷ್ಟು ದೊಡ್ಡ ಅನುತ್ಪಾದಕ ಸಾಲದ ಹೊರೆಯನ್ನು ಕಂಪನಿಯ ವ್ಯವಹಾರಗಳಲ್ಲಿ ಒಂದಿನಿಸೂ ದನಿ ಇಲ್ಲದ ಬಡ ಭಾರತದ ಜನರ ಹೆಗಲ ಮೇಲೆ ಹೇರಲಾಯಿತು. ಸಿಪಾಯಿ ದಂಗೆಯಂಥ ದೌರ್ಭಾಗ್ಯಕ್ಕೆ ವೆಚ್ಚಮಾಡಿದ ೪೦ ಮಿಲಿಯ ಹಣವನ್ನಾದರೂ ಸಾಮ್ರಾಜ್ಯಗಳಿಕೆಗೆ ಪ್ರತಿಯಾಗಿ ಇಂಗ್ಲೆಂಡ್ ನ್ಯಾಯವಾಗಿ ವಹಿಸಿಕೊಳ್ಳಬೇಕಾಗಿತ್ತಲ್ಲವೆ? ಅದೂ ಇಲ್ಲ. ಭಾರತದ ತೆರಿಗೆದಾರರ ಪರವಾಗಿ ಪಾರ್ಲಿಮೆಂಟಿನಲ್ಲಿ ವಾದಹೂಡಿದ ಜಾನ್ ಬ್ರೈಟ್ 'ದಂಗೆಯ ವೆಚ್ಚಭಾರವನ್ನು ಭಾರತದ ಜನರ ಮೇಲೆ ಹೊರಿಸುವುದು ಅಕ್ಷಮ್ಯ. ಈ ಸಾಲಕ್ಕೆ ಹೊಣೆ ಹೊರಬೇಕಾದವರು ಬ್ರಿಟಿಷ್ ಪಾರ್ಲಿಮೆಂಟ್ ಮತ್ತು ಇಂಗ್ಲೆಂಡಿನ ಪ್ರಜೆಗಳು. ಸಾಲ ತೀರಿಸಬೇಕಾದವರೂ ಅವರೇ–ಇಂಗ್ಲೆಂಡಿನ ಪ್ರಜೆಗಳೇ– ಎಂಬುದು ನ್ಯಾಯವಾದ ಸೊಲ್ಲು' – ಎಂದು ಹೇಳಿದರು.

ಒಟ್ಟಿನಲ್ಲಿ ಭಾರತದ ಜನರು ಎಷ್ಟೋ ಮಿಲಿಯ ಹಣತೆತ್ತು ಸಾಮ್ರಾಜ್ಯವನ್ನು ಖರೀದಿಮಾಡಿ ಬ್ರಿಟಿಷ್ ಅರಸರಿಗೆ ಉಡುಗೊರೆ ಇತ್ತರೆಂದು ಹೇಳಬಹುದು ಅಥವಾ ಬ್ರಿಟಿಷ್ ಸಾಮ್ರಾಜ್ಯವೆಂಬುದು ಉಡುಗೊರೆಯಾಗಿ ಅಥವಾ ನ್ಯಾಸವಾಗಿ (ಟ್ರಸ್ಟ್) ಬಂದ ಒಂದು ಪದಾರ್ಥವಾಗುತ್ತದೆ.

ಈಸ್ಟ್ ಇಂಡಿಯಾ ಕಂಪನಿಯ ಬಂಡವಾಳದ ವ್ಯವಸ್ಥೆಯೂ ಇದೇ ಬಗೆಯ ಅನ್ಯಾಯಮೂಲವಾದ ವ್ಯವಸ್ಥೆಯಾಗಿದ್ದಿತು. ಕಂಪನಿಯ ಸಾಲ ವಿಮೋಚನೆಗೆ ತೆಗೆದ ಸಾಲವನ್ನು ಮತ್ತೆ ಭಾರತ ಸಾಲಕ್ಕೇ ಕೂಡಿಸಿ ಈ ಬೃಹತ್ ಸಾಲವನ್ನು ಭಾರತ ಸರ್ಕಾರದ ಸಾಲಕ್ಕೇ ಜಮಾ ಮಾಡಲಾಯಿತು.

ನಿಯಂತ್ರಣ ಮಂಡಳಿಯನ್ನು ಶಾಸನವು ರದ್ದುಮಾಡಿತೆಂದು ಹೇಳಬಹುದು. ಇಷ್ಟರಿಂದಾಗಿ ಕಂಪನಿ

ಕಾನೂನುಬದ್ಧವಾಗಿ ನಿರ್ನಾಮವಾಯಿತು ಎನ್ನಬಹುದಾದರೂ ಭಾರತದ ಆದಾಯದಿಂದ ಲಾಭಾಂಶದ ಬಡ್ಡಿ ಪಡೆಯುತ್ತಿರುವುದು ನಿಂತಿಲ್ಲವಾದ್ದರಿಂದ ಸತ್ತರೂ ಅದು ಬದುಕಿರುವಂತೆಯೇ ಸರಿ. ಫಲಸ್ವರೂಪವಾಗಿ ಇಂಗ್ಲೆಂಡಿಗೆ ಲಾಭ, ಭಾರತಕ್ಕೆ ವೆಚ್ಚ. ಭಾರತಕ್ಕೆ ನ್ಯಾಯ ದೊರಕಿಸುವ ಪ್ರಯತ್ನಗಳು ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಸೋತುಹೋದ ಮೇಲೆ ಈ ಬೃಹತ್ ಸಾಲಕ್ಕೆ ಬ್ರಿಟಿಷ್ ಪಾರ್ಲಿಮೆಂಟು ಗ್ಯಾರಂಟಿ ನಿಲ್ಲಬೇಕೆಂಬ ಆಶಯದ ಗೊತ್ತುವಳಿಯನ್ನು ಪಾರ್ಲಿಮೆಂಟಿನಲ್ಲಿ ಮಂಡಿಸಿದರು. ಇದರಿಂದ ಭಾರತದಲ್ಲಿ ಬಡ್ಡಿಯದರ ಇಳಿಸಿಬಿಟ್ಟು ಭಾರತದ ತೆರಿಗೆದಾರನಿಗೆ ಹೊರೆ ಹಗುರವಾಗುವಂತೆ ಮಾಡಲು ಅನುಕೂಲವಾಗುವುದೆಂದು ಭಾವಿಸಬಹುದಾಗಿತ್ತು.

ಅವರ ವಾದ ಹೀಗಿತ್ತು : "ಸಾಲದ ಹೊರೆಯನ್ನು ಭಾರತ ಒಂದೇ ಹೊರಬೇಕು, ನಾವು ಅದನ್ನು ಸುತರಾಂ ಹೊರುವುದಿಲ್ಲವೆಂಬ ನಿರ್ಧಾರವನ್ನು ನಮ್ಮ ಪಾರ್ಲಿಮೆಂಟ್ ಏಕರೀತಿಯಾಗಿ ಪಾಲಿಸಿಕೊಂಡು ಬಂದದ್ದನ್ನು ನೋಡುತ್ತೇವೆ. ಈ ಧೋರಣೆಗೆ ಯಾವ ವ್ಯತ್ಯಯವನ್ನು ಮಾಡಲು ನಾನು ಇಚ್ಛಿಸುವುದಿಲ್ಲ. ಹಾಗೇನಾದರೂ ಸೂಚಿಸಿದಲ್ಲಿ ನನ್ನ ಗೊತ್ತುವಳಿ ಸರ್ವತ್ರಭೀತಿಯ ಹೊರತು ಗೆಲುವಿನ ದಾರಿ ಕಾಣಿಸಲಾರದು. ಆದರೂ ಮೇಲಿಂದ ಮೇಲೆ ಈ ಪ್ರಶ್ನೆ ನಮ್ಮನ್ನು ಬಾಧಿಸಲಿರುವುದರಿಂದ ಇನ್ನು ಮುಂದಕ್ಕೆ ಮತ್ತು ಈಗಲೂ ನಮಗೆ ಇದು ಪ್ರಸ್ತುತವೆನಿಸುತ್ತದೆ.

ಯಾವುದೊ ಒಂದು ಕಾಲದಲ್ಲಿ ಪಟ್ಟಭದ್ರವಾಗಿಬಿಟ್ಟಂಥ ಈ ಧೋರಣೆಯಲ್ಲಿ ಬದಲಾವಣೆ ಉಂಟಾಗುವುದಾದರೆ ಆ ಕಾಲಕ್ಕೆ ದೇಣಿ ಜವಾಬುದಾರಿಗಳಿಗೆ ನಾವು ರಾಷ್ಟ್ರೀಯ ಗ್ಯಾರಂಟಿ ಒದಗಿಸಿ ಬಡ್ಡಿಯನ್ನು ೭೫೦,೦೦೦ಗಳಿಂದ ೧,೦೦೦,೦೦೦ ಪೌಂಡ್‌ಗಳಷ್ಟು ಇಳಿಸುವಂಥ ಒಂದು ವಿಮೋಚನಾ ನಿಧಿ (ಸಿಂಕಿಂಗ್ ಫಂಡ್)ಯನ್ನು ಉಂಟುಮಾಡಿ ಸಾಲವನ್ನು ತೀರಿಸುವ ವ್ಯವಸ್ಥೆಯನ್ನು ಕೈಗೊಳ್ಳಬೇಕು."

ಗೊತ್ತುವಳಿಯ ದೂರದೃಷ್ಟಿಯನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಾರದ ಜಾನ್ ಬ್ರೈಟ್ ಈ ಸೂಚನೆಯನ್ನು ವಿರೋಧಿಸುತ್ತಾ ಹೇಳಿದ್ದೇನೆಂದರೆ:-

"ಇಂಪೀರಿಯಲ್ ಗ್ಯಾರಂಟಿ ಕೊಡುವ ಸೂಚನೆಯನ್ನು ನಾನು ಈ ಆಧಾರದ ಮೇಲೆ ವಿರೋಧಿಸುತ್ತೇನೆ. ನಾವು ಭಾರತದ ಸಂಪನ್ಮೂಲಗಳನ್ನು ಸಂಪೂರ್ಣವಾಗಿ ಹೀರಿದ ನಂತರ ಭಾರತವನ್ನು ಬಿಟ್ಟು ಬಂದರೆ, ಅವರು ತಮ್ಮ ಕೈಗಳನ್ನು ಇಂಗ್ಲಿಷರ ಕಿಸೆಗೆ ಹಾಕುವಂತಾದರೆ, ಭಾರತದ ವೆಚ್ಚಗಳ ಮೇಲೆ ಇಂಗ್ಲೆಂಡಿನ ಜನರಿಗೆ ಯಾವ ನಿಯಂತ್ರಣವೂ ಇಲ್ಲವಾದಾಗ ಅವರು ದುಂದುವೆಚ್ಚದ ಊಹಾತೀತವಾದ ಯಾವ ಮಟ್ಟಕ್ಕೆ ಹೋಗುವರೆಂದು ಹೇಳುವುದು ಅಸಾಧ್ಯ ಮತ್ತು ಭಾರತವನ್ನು ಉಳಿಸುವ ನಮ್ಮ ಯತ್ನದಲ್ಲಿ ಇಂಗ್ಲೆಂಡನ್ನು ವಿನಾಶಗೊಳಿಸುವತ್ತ ನಾವು ಸಾಗಿದಂತಾಗುವುದಿಲ್ಲವೆ?"

ಮಿಸ್ಟರ್ ಬ್ರೈಟ್‌ರವರು ಮುಂಬರುವ ಅಪಾಯವನ್ನು ಈ ರೀತಿ ಉತ್ಪ್ರೇಕ್ಷಿಸುವ ಆವಶ್ಯಕತೆ ಇರಲಿಲ್ಲ. "ಭಾರತದ ಸಾಲದ ಹೊರೆಯ ಕೆಲ ಭಾಗವನ್ನು ಇಂಗ್ಲೆಂಡಿನ ಜನರ ಮೇಲೆ ಹೊರಿಸಿದ್ದೇ ಆದರೆ ಅವರು ಭಾರತದ ವ್ಯವಹಾರಗಳನ್ನು ನಿರ್ಲಕ್ಷಿಸದೆ ಅದರ ವೆಚ್ಚಗಳ ಮೇಲೆ ವಾಸ್ತವಿಕ ನಿಯಂತ್ರಣವನ್ನು ಪಡೆದುಕೊಳ್ಳುತ್ತಿದ್ದರು" ಎಂಬುದನ್ನು ಅರಿತುಕೊಳ್ಳುವಲ್ಲಿ ಬ್ರೈಟರು ವಿಫಲರಾದರು.

ಇಡೀ ಚರ್ಚೆ ನಿಷ್ಪ್ರಯೋಜಕವಾಗಿದ್ದು ಅದು ವೃಥಾ ಕಂಠಶೋಷಣೆಯಾಯಿತು. ಇದರಿಂದ ಯಾವುದೇ ವಿಧದಲ್ಲಿ ದೇಶೀಯರಿಗೆ ತಮ್ಮ ಅಸಂಖ್ಯಾತ ದಾರುಣ ಸಂಕಷ್ಟಗಳಿಂದ ಮುಕ್ತಿ ದೊರೆಯಲಿಲ್ಲ.

ಈ ಶಾಸನ ಭವಿಷ್ಯತ್ತಿಗಾಗಿ ಯಾವ ಉದ್ದೇಶ ಹೊಂದಿತ್ತೆಂದು ಇನ್ನು ಪರಿಶೀಲಿಸೋಣ. ೫೫ನೆಯ ಪ್ರಕರಣ ಅಥವಾ ವಿಭಾಗ (ಸೆಕ್ಷನ್)ದಲ್ಲಿ ಹೇಳಿರುವಂತೆ: "ಮಹಾರಾಣಿಯವರ ಒಡೆತನದ ಭಾರತದ

ಭಾಗಗಳ ಮೇಲೆ ಸಂಭವಿಸಬಹುದಾದ ದಾಳಿಗಳನ್ನು ತಪ್ಪಿಸುವುದಕ್ಕಾಗಿ, ಅಥವಾ ಇನ್ನಾವುದೇ ಕ್ಷಿಪ್ರ ಮತ್ತು ತುರ್ತು ಪರಿಸ್ಥಿತಿಗಳ ಹೊರತು ಭಾರತದ ಆದಾಯಗಳನ್ನು ಪಾರ್ಲಿಮೆಂಟಿನ ಎರಡೂ ಸದನಗಳ ಒಪ್ಪಿಗೆ ಪಡೆಯದೆ, ಅಂತಹ ಆಧಿಪತ್ಯಗಳ ಬಾಹ್ಯ ಗಡಿಗಳಿಗಾಗಿ ಕೈಗೊಳ್ಳುವ ಯಾವುದೇ ಸೈನ್ಯ ಕಾರ್ಯಾಚರಣೆಗಾಗಿ ವೆಚ್ಚ ಮಾಡುವಂತಿಲ್ಲ".

ಮಿಸ್ಟರ್ ಆರ್.ಸಿ. ದತ್ತರವರ ಬುದ್ಧಿಮತ್ತೆಗೆ ಅಗಾಧ ಗೌರವ ತೋರಿದಾಗ್ಯೂ ಅವರು ಈ ವಿಭಾಗ (೫೫)ವನ್ನು ಯಾವ ಆಧಾರದ ಮೇಲೆ "ಇದು ಒಂದು ಸತ್ಪರಿಣಾಮಕಾರಿ ಅಥವಾ ಹಿತಕಾರಿ ಹಣಕಾಸಿನ ಉಪಬಂಧ" ಎಂದು ಕರೆದರೋ ತಿಳಿಯದಾಗಿದೆ. ಇದೇನೋ ಈಸ್ಟ್ ಇಂಡಿಯಾ ಕಂಪನಿಯ ಹಣಕಾಸು ಆಡಳಿತದಲ್ಲಿ ಒಂದು ಸುಧಾರಣೆಯಾಗಿತ್ತೆಂಬುದು ನಿಸ್ಸಂಶಯ. ಆದರೆ ಶಾಸನ ಜಾರಿಗೆ ಬಂದ ನಂತರವೂ ಇಂಡಿಯಾದ ಆದಾಯವನ್ನು ಇಂಡಿಯಾದ ಹೊರಗಡೆ ಮತ್ತು ಇಂಡಿಯಾದ ಹಿತಕ್ಕಾಗಿ ವೆಚ್ಚ ಮಾಡದೇ ಇರುವಾಗ ಈ ವಿಭಾಗ (೫೫)ವು ಇಂಡಿಯಾಕ್ಕೆ ಯಾವ ವಿಧದಲ್ಲಿಯೂ ಹಿತಕಾರಿಯಾಗಲಾರದು. ಮೇಲೆ ಹೇಳಲಾದ ವಿಭಾಗದಲ್ಲಿ ಭಾರತದ ಹೊರಗಡೆ ಭಾರತದ ಆದಾಯಗಳಿಂದ ಖರ್ಚನ್ನು ಮಂಜೂರು ಮಾಡುವ ವಿನಾಯಿತಿ ಖಂಡದಲ್ಲಿ ಮುಖ್ಯವಾದ 'ಪೂರ್ವ' ಎಂಬ ಪದವನ್ನು ಬಿಟ್ಟಿರುವುದು ಅದರ ಪ್ರಮುಖ ದೋಷವೆನಿಸಿದೆ. ಈ ಖಂಡವು ಸತ್ಪರಿಣಾಮಕಾರಿ ಎನಿಸಬೇಕಾಗಿದ್ದರೆ ಅದರ ಒಕ್ಕಣೆ ಈಗಿರುವಂತಿರದೇ ಹೀಗಿರಬೇಕಾಗಿತ್ತು – "ಭಾರತದ ಆದಾಯಗಳನ್ನು ಪಾರ್ಲಿಮೆಂಟಿನ ಎರಡೂ ಸದನಗಳ ಪೂರ್ವಸಮ್ಮತಿ ಇಲ್ಲದೇ...." ಮುಂತಾಗಿ. ಒಬ್ಬ ಅಜ್ಞಾತ ಬರಹಗಾರ ಹೇಳುವಂತೆ: "ಈ ಆವಶ್ಯಕವಾದ ಉಪಬಂಧ ಮೂಲ ಕರಡಿನಲ್ಲಿದ್ದಿರಬಹುದು, ಆದರೆ, ನಂತರ ಯಾವುದೋ ಕಾಣದ ಕಿಡಿಗೇಡಿಗಳ ಕೈ ಅದನ್ನು ತೆಗೆದುಹಾಕಿರುವ ಸಾಧ್ಯತೆ ಇದೆ. ಅದೇ ಕಿಡಿಗೇಡಿಗಳ ಕೈಯೇ ಸೆಕ್ಷನ್ ೨೬, ೨೭, ಮತ್ತು ೨೮ರ ಮೂಲಕ ಸೆಕ್ರೆಟರಿ–ಆಫ್–ಸ್ಟೇಟ್ ರವರಿಗೆ ಬೇಜವಾಬ್ದಾರಿ ಮತ್ತು ವೈಯಕ್ತಿಕ ನಿರಂಕುಶಾಧಿಕಾರ ಮತ್ತು ರಕ್ಷಣೆಯನ್ನು ಒದಗಿಸಿರಲಿಕ್ಕೆ ಸಾಕು."

ಲಾರ್ಡ್ ಸ್ಟ್ಯಾನ್ಲೀ ಮತ್ತು ಅರ್ಲ್ ಆಫ್ ಡರ್ಬಿ ಇವರಿಬ್ಬರೂ ಈ ವಿಷಯದಲ್ಲಿ ಏಕಾಭಿಪ್ರಾಯವುಳ್ಳವರಾಗಿದ್ದರೆಂಬುದನ್ನು ಸೂಚಿಸಿ ಸೆಕ್ಷನ್ ೫೫ನ್ನು ಕುರಿತು ಮಿ. ಗ್ಲ್ಯಾಡ್‌ಸ್ಟನ್ ಕೊಡುವ ಅಭಿಪ್ರಾಯವನ್ನು ಇದೇ ಅಜ್ಞಾತ ಲೇಖಕ ನಮೂದಿಸುತ್ತಾನೆ:

'ಭಾರತದ ಗಡಿಗಳ ಹೊರಗಡೆ ಯುದ್ಧಕಾರ್ಯವನ್ನು ನಡೆಸುವ ಸಲುವಾಗಿ ತಗಲುವ ವೆಚ್ಚವನ್ನು ಭರಿಸಲು ಭಾರತದ ಹಣವನ್ನು ತೊಡಗಿಸುವುದಕ್ಕೆ ಪೂರ್ವದಲ್ಲಿ (ಕೆಲ ನಿರ್ದಿಷ್ಟವಾಗಿ ಸೂಚಿತವಾದ ಸಂದರ್ಭಗಳನ್ನು ಹೊರತುಪಡಿಸಿ) ಪಾರ್ಲಿಮೆಂಟಿನ ಸಮ್ಮತಿಯನ್ನು ಪಡೆದುಕೊಳ್ಳುವುದಗತ್ಯ. ಮಿಲಿಟರಿ ಕಾರ್ಯಾಚರಣೆಗಳಿಗಾಗಿ ಭಾರತದ ಹಣ ದುರುಪಯೋಗವಾಗಕೂಡದೆಂಬುದು ಇಲ್ಲಿನ ಸದುದ್ದೇಶ. ಇದು ನನಗೆ ಚೆನ್ನಾಗಿ ನೆನಪಿದೆ–ಏಕೆಂದರೆ ನಾನೇ ಈ ಶಾಸನ ಭಾಗದ ರಚಯಿತನಾಗಿದ್ದೇನೆ. ಆಗ ಸೆಕ್ರೆಟರಿ ಆಫ್ ಸ್ಟೇಟ್ ಆಗಿದ್ದ ಲಾರ್ಡ್ ಡರ್ಬಿ ಕೂಡ ಈ ಸೂಚನೆ ಅನುಮೋದಿಸಿದ್ದರು.

ಗೊತ್ತುವಳಿಯ ಈ ತಿರಸ್ಕೃತ ಅಂಶಗಳನ್ನು ಗಮನಿಸದಿರುವುದರಿಂದ ಮಹಾರಾಣಿಯ ಭಾರತಕ್ಕೆ ಉಂಟಾದ ಆರ್ಥಿಕ ದುರವಸ್ಥೆ ಅವರ್ಣನೀಯವಾದದ್ದೇ ಸರಿ. ಪೂರ್ವದಲ್ಲಿ (ಸಮ್ಮತಿ ಪಡೆಯಬೇಕು) ಎಂಬ ಅಂಶವನ್ನು ಸೇರಿಸಿದರೂ ಸಂದರ್ಭ ಬಂದಾಗ ಭಾರತದ ಹಿತವನ್ನು ಅಪೇಕ್ಷಿಸಿ ಬ್ರಿಟಿಷ್ ಸಾಮ್ರಾಜ್ಯಶಾಹೀ ಹಿತವನ್ನೂ, ಯೋಜನೆಗಳನ್ನೂ ಪುರಸ್ಕರಿಸಲು ಸಾಧ್ಯವಾಗುತ್ತಿತ್ತು ಎನ್ನಬಹುದು. ಆದರೆ ಈ ಒಂದು ಪದದ ಸೇರ್ಪಡೆಯಿಂದ ಸದಸದ್ವಿವೇಚನೆಗೆ ಒಂದು ನಿಶ್ಚಿತವಾದ ಕಾಲಾವಕಾಶವನ್ನು ಒದಗಿಸಿಕೊಟ್ಟಂತೆ

ಆಗಬಹುದಿತ್ತೋ ಏನೋ.

ಹಣಕಾಸಿಗಿಂತ ಹೊರಗಿನ ವಿಷಯಗಳನ್ನು ಸೂಚಿಸುವ ಶಾಸನಭಾಗದಲ್ಲಿ ಉಕ್ತವಾದದ್ದಿಷ್ಟು:-

(೧) ಈಸ್ಟ್ ಇಂಡಿಯಾ ಕಂಪನಿಯ ವಶದಲ್ಲಿದ್ದ ಭೂಪ್ರದೇಶಗಳೆಲ್ಲವೂ ಬ್ರಿಟಿಷ್ ಮಹಾರಾಣಿಯ ಸೊತ್ತು; ಈಸ್ಟ್ ಇಂಡಿಯಾ ಕಂಪನಿ ಮತ್ತು ನಿಯಂತ್ರಣ ಮಂಡಳಿಯ ಅಧಿಕಾರಗಳನ್ನು ಸೆಕ್ರೆಟರಿ-ಆಫ್-ಸ್ಟೇಟ್ ಫಾರ್ ಇಂಡಿಯಾ ನಿರ್ವಹಿಸುವನು. ಗೌರವಾರ್ಹರಾದ ೧೫ ಮಂದಿ ಸದಸ್ಯರ ಒಂದು ಮಂಡಳಿಯನ್ನು ಅವನಿಗೆ ಸಲಹೆ ನೀಡಲು ನೇಮಿಸಲಾಗಿದೆ. ಪ್ರತಿಯೊಬ್ಬ ಸದಸ್ಯನಿಗೆ ವಾರ್ಷಿಕ ೧೨೦೦ ಪೌಂಡ್ ಸಂಬಳವನ್ನು ಭಾರತದ ಆದಾಯದಿಂದಲೇ ಕೊಡತಕ್ಕದ್ದು. ಸೆಕ್ರೆಟರಿ-ಆಫ್-ಸ್ಟೇಟ್‌ನ ಸಂಬಳವೂ ಭಾರತದ ಲೆಕ್ಕಕ್ಕೇ.

(೨) ಸಲಹಾಮಂಡಳಿಯ ಬಹುಮತವನ್ನು ಸೆಕ್ರೆಟರಿ ಆಫ್ ಸ್ಟೇಟ್ ಕೆಲವೊಂದು ನಿರ್ದಿಷ್ಟ ಸಂದರ್ಭಗಳನ್ನು ಬಿಟ್ಟು ಉಲ್ಲಂಘಿಸಬಹುದಾಗಿತ್ತು. (ಇಲ್ಲಿಯತನಕ ನಿಯಂತ್ರಕ ಮಂಡಳಿ ಅಥವಾ ನಿರ್ದೇಶಕ ಮಂಡಳಿಯ ರಹಸ್ಯಸಮಿತಿಯ ವಶದಲ್ಲಿದ್ದ) ಯುದ್ಧ ಮತ್ತು ಶಾಂತಿಯ ನಿರ್ಣಯಗಳಲ್ಲಿ ಸೆಕ್ರೆಟರಿ-ಆಫ್-ಸ್ಟೇಟ್ ಮಹಾಶಯನು ಸಲಹಾಮಂಡಳಿಯನ್ನು ಕೇಳದೆ, ಅವರಿಗೆ ತಿಳಿಸದೇ ಭಾರತಕ್ಕೆ ಹುಕುಂ ಕಳಿಸಿಕೊಡಬಹುದಾಗಿತ್ತು.

(೩) ಭಾರತದ ಗವರ್ನರ್ ಜನರಲ್ ಮತ್ತು ಮದರಾಸು ಮತ್ತು ಮುಂಬಯಿ ಪ್ರಾಂತಗಳ ಗವರ್ನರ್‌ಗಳನ್ನು ಬ್ರಿಟಿಷ್ ಮಹಾರಾಣಿ ನಿಯುಕ್ತಿ ಮಾಡುವರು. ಲೆಫ್ಟಿನೆಂಟ್-ಗವರ್ನರ್‌ಗಳನ್ನು ಗವರ್ನರ್-ಜನರಲ್‌ನು ಮಹಾರಾಣಿಯ ಸಮ್ಮತಿಯಿಂದ ನೇಮಿಸಬಹುದು. ಭಾರತದ ಸಿವಿಲ್ ಸರ್ವೀಸ್‌ಗೆ ಉದ್ಯೋಗಿಗಳನ್ನು ಸ್ಪರ್ಧಾತ್ಮಕ ತಳಹದಿಯ ಮೇಲೆ ಸೇರಿಸಿಕೊಳ್ಳಲು ಸೆಕ್ರೆಟರಿ ಆಫ್ ಸ್ಟೇಟ್ ನಿಯಮಾವಳಿ ರಚಿಸುವನು.

ಮೇಲ್ಕಂಡ ಆಡಳಿತ ಸೂತ್ರಗಳಲ್ಲಿ ಅಡಕವಾಗಿರುವ (ಅ) ನಿರಂಕುಶ ಅಧಿಕಾರ ಪ್ರವೃತ್ತಿ (ಆ) ರಹಸ್ಯ ಮತ್ತು (ಇ) ಹೊಣೆರಾಹಿತ್ಯ ಯಾವುದೇ ದೇಶಕ್ಕೆ ಒಳ್ಳೆ ಆಡಳಿತವನ್ನು ಒದಗಿಸಲಾರವು. ತಮ್ಮದೇ ದೇಶದ ಆಡಳಿತದಲ್ಲಿ ಪಾಲ್ಗೊಳ್ಳಲು, ಅಭಿಪ್ರಾಯ ಸೂಚಿಸಲು ಅವಕಾಶವಿಲ್ಲದ ಪರಿಸ್ಥಿತಿ ಅಲ್ಲಿನ ಜನರಿಗೆ ಶೋಚನೀಯವಾದದ್ದಲ್ಲವೆ? ಅಂದರೆ ಕಂಪನಿಯ ಆಡಳಿತಕ್ಕಿಂತ ಮಹಾರಾಣಿಯ ಆಧಿಪತ್ಯ ಭಿನ್ನವಾದದ್ದೆಂದು ಹೇಗೆ ಹೇಳೋಣ?

ಶಾಸನಕ್ಕೆ ಪ್ರಚಾರ ಕೊಡುವ ದೃಷ್ಟಿಯಿಂದ ಬಹುಶಃ ಅದರ ಮೊದಲ ಕರಡು ಪ್ರತಿಯಿಂದ ಅಸಂತೃಪ್ತರಾದ ಮಹಾರಾಣಿ ವಿಕ್ಟೋರಿಯಾ ಒಂದು ಘೋಷಣೆ ಸಾರುವಂತೆ ಲಾರ್ಡ್ ಡರ್ಬಿಗೆ ಸೂಚಿಸಿದರು. ಘೋಷಣೆಯಲ್ಲಿ ಸದಾಶಯ, ಔದಾರ್ಯ, ಮತೀಯ ಅಥವಾ ಧಾರ್ಮಿಕ ಸಹನಾಭಾವಗಳು ಪ್ರತಿಬಿಂಬಿತವಾಗಬೇಕು. ಬ್ರಿಟಿಷ್ ಆಧಿಪತ್ಯದ ಪ್ರಜೆಗಳಿಗೆ ಸಮಾನವಾಗಿ ಸೌಲಭ್ಯಗಳನ್ನು ಪಡೆಯಲೂ ಮತ್ತು ನಾಗರಿಕ ಜಗತ್ತಿನ ಶ್ರೇಯೋಭಿವೃದ್ಧಿಗಳೂ ಭಾರತದ ಪ್ರಜೆಗಳಿಗೆ ಲಭ್ಯವಾಗುವ ಅವಕಾಶಗಳ ಬಗ್ಗೆ ನಂಬಿಕೆ ಬರುವಂತೆ ಅದರಲ್ಲಿ ಸೊಲ್ಲುಗಳಿರಬೇಕು.

ಬ್ರಿಟಿಷ್ ಇತಿಹಾಸದಲ್ಲಿ ನಾವು ಕಾಣುವ 'ಮೆಗ್ನಾಕಾರ್ಟಾ' (ಜನರ ಹಕ್ಕುಗಳನ್ನೊಳಗೊಂಡ ಮಹಾಪತ್ರ)ದಂತೆ ಇದೊಂದು ಭಾರತದ ಮೆಗ್ನಾಕಾರ್ಟಾ ಎಂಬಂತೆ ಘೋಷಣೆಯೇನೋ ಪ್ರಕಟವಾಯಿತು – ಆದರೆ ಈ ಮಹಾಪತ್ರದಲ್ಲಿ ಜನರ ಹಕ್ಕುಗಳಿಗೆ ಸ್ಥಾನವಿರಲಿಲ್ಲ – ಆದರೂ ಇದನ್ನೇ 'ಮಹಾ' ಎಂದು ತಿಳಿಯಬೇಕೆಂದು ಒತ್ತಾಸೆ.

ಭಾರತಕ್ಕೆ ಇಂಗ್ಲೆಂಡಿನ ಕೊಡುಗೆ ಏನೆಂಬುದನ್ನು ಪರಿಶೀಲಿಸುವುದಷ್ಟೇ ಇನ್ನುಳಿದ ಭಾಗ. ಭಾರತ ಎಷ್ಟೊಂದು ಬೃಹತ್ತಾದ ಮತ್ತು ಮಹತ್ತರವಾದುದನ್ನು ಬ್ರಿಟಿಷರಿಗೆ ಕೊಟ್ಟಿದೆ ಎಂಬುದರ ಬಗ್ಗೆ ಮೂಡಬಹುದಾದ ಅಚ್ಚರಿಯಷ್ಟೇ ಅಚ್ಚರಿ ಎಂದರೆ ಇದಕ್ಕೆ ಪ್ರತಿಯಾಗಿ ಬ್ರಿಟಿಷರು ಭಾರತಕ್ಕೆ ಏನನ್ನೂ ಕೊಡದೆ ಇರುವುದು. ಈ ಎರಡೂ ಮಾತುಗಳು ಆರ್ಥಿಕ ದೃಷ್ಟಿಯಿಂದ ತೀರಾ ಸತ್ಯ.

ಇನ್ನೊಂದು ರೀತಿಯಾಗಿ ನೋಡುವುದಾದರೆ ಭಾರತದ ಕೊಡುಗೆಯನ್ನು ನ್ಯಾಯ, ನೀತಿ ಹಾಗೂ ಮಾನವೀಯತೆಯ ತಕ್ಕಡಿಯಲ್ಲಿ ತೂಗುವುದು ಅಶಕ್ಯ. ಇಂಗ್ಲೆಂಡಿನ ಕೊಡುಗೆಯನ್ನು ಚಿನ್ನಬೆಳ್ಳಿಯ ತೂಕದಲ್ಲಿ ಅಳೆಯುವುದಶಕ್ಯ. ನಿಜಕ್ಕೂ ಈ ಎರಡನೆಯ ಹೇಳಿಕೆ ಹದಿನಾರಾಣೆ ಸತ್ಯ–ಆಲಂಕಾರಿಕವಾಗಿಯೂ, ವಾಸ್ತವವಾಗಿಯೂ ಇಂಡಿಯಾದ ಚಿನ್ನ, ಬೆಳ್ಳಿ ಸಂಗ್ರಹಕ್ಕೆ ಇಂಗ್ಲೆಂಡ್ ಚಿಕ್ಕಾಸನ್ನೂ ಸೇರಿಸಲಿಲ್ಲ – ಬದಲು ಜಗತ್ತಿನ ಚಿನ್ನರನ್ನಗಳ ಭಂಡಾರವೆಂದು ಪ್ರಖ್ಯಾತವಾಗಿದ್ದ ಭಾರತದ ಚಿನ್ನವನ್ನು ಲೂಟಿಮಾಡಿ ಅದನ್ನು ಕೂಪದಲ್ಲಿ ಮುಳುಗಿಸುವ ಸ್ಥಿತಿಗೆ ತಂದರು.

ಹೌದು, ಇಂಗ್ಲೆಂಡಿನ ಕೊಡುಗೆ ಚಿನ್ನಬೆಳ್ಳಿಯ ಲೆಕ್ಕಕ್ಕೆ ಸಿಗಲಾರದ ಆರ್ಥಿಕವೂ ಅಲ್ಲದ ಯಾವುದೋ ಕ್ಷೇತ್ರಕ್ಕೆ ಸಂಬಂಧಿಸಿದ್ದು ಎನ್ನುತ್ತಾರೆ, ಕೇಳಿ.

ಇಂಗ್ಲಿಷ್ ಜನ ಭಾರತದಲ್ಲಿ ತಮ್ಮ ಕೆಲಸದ ಬಗ್ಗೆ ಅಕಲಂಕ ಸಂತೃಪ್ತಿಯನ್ನು ಪಡೆಯದಿದ್ದರೂ ನ್ಯಾಯವಾದ ಹೆಮ್ಮೆಪಡಬಹುದೆಂದು ತೋರುತ್ತದೆ. ಭಾರತದ ಜನಸಾಮಾನ್ಯರಿಗೆ ಅವರು ಅತಿದೊಡ್ಡ ಕೊಡುಗೆ ನೀಡಿದ್ದಾರೆ – ಅದೇನೆಂದರೆ ಶಾಂತಿ. ಪಾಶ್ಚಿಮಾತ್ಯ ಶಿಕ್ಷಣವನ್ನು ಪ್ರಚುರಿಸುತ್ತ ಒಂದು ಪ್ರಾಚೀನ ಸುಸ್ಥಿತಿಯನ್ನು ಆಧುನಿಕ ಜೀವನದೊಡನೆ, ಸಂಸ್ಥಾವಿಶೇಷಗಳೊಡನೆ ಜೋಡಿಸಲು ಪ್ರಯತ್ನಿಸಿದ್ದಾರೆ. ಕಾಲಕ್ರಮೇಣ ಸುಧಾರಣೆಗಳು ಬೇಕೆನಿಸಿದರೂ ಸದ್ಯಕ್ಕೆ ಒಂದು ಗಟ್ಟಿಮುಟ್ಟಾದ ದಕ್ಷ ಆಡಳಿತ ಪದ್ಧತಿಯನ್ನು ಅಳವಡಿಸಿದ್ದಾರೆ. ವಿವೇಕಯುತ ನ್ಯಾಯಪಾಲನೆಗಾಗಿ ಜಗತ್ತಿನ ಯಾವುದೇ ಭಾಗದಲ್ಲಿರುವಂಥ ಪರಿಶುದ್ಧವಾದ ನ್ಯಾಯಾಲಯಗಳನ್ನು ನೀಡಿದ್ದಾರೆ. ಭಾರತದಲ್ಲಿ ಬ್ರಿಟಿಷರು ಸಾಧಿಸಿದ ಈ ಸತ್ಪರಿಣಾಮಗಳನ್ನು ಯಾವ ವಿಮರ್ಶಕನೂ ಪ್ರಶಂಸಿಸದೆ ಇರಲಾರ.

ಸರಿ, ಪ್ರಾಣಿ ಜೀವನದ ಶಾಂತಿಯೋ? ಆರ್ಥಿಕವಾಗಿ ದಟ್ಟ ದಾರಿದ್ರ್ಯವೋ? – ಇವುಗಳಲ್ಲಿ ಯಾವುದು ಬೇಕೆಂದು ಪ್ರತಿಯೊಬ್ಬನೂ ನಿರ್ಧರಿಸಲಿ.

* * * *

# ಕಾಂಡ – ೨

# ಬ್ರಿಟಿಷ್ ಇಂಡಿಯಾದಲ್ಲಿ ಪ್ರಾಂತೀಯ ಹಣಕಾಸು ವ್ಯವಸ್ಥೆಯ ವಿಕಾಸ

(ಸಾಮ್ರಾಜ್ಯದ ಹಣಕಾಸು ವ್ಯವಸ್ಥೆಯ ಪ್ರಾಂತೀಯ ಮಟ್ಟದ
ವಿಕೇಂದ್ರೀಕರಣದ ಬಗ್ಗೆ ಒಂದು ಅಧ್ಯಯನ)


**ಬಿ.ಆರ್ ಅಂಬೇಡ್ಕರ್**

ಸಿಡೆನಾಮ್ ಕಾಲೇಜ್ ಆಫ್ ಪೊಲಿಟಿಕಲ್ ಇಕನಾಮಿಕ್ಸ್‌ನಲ್ಲಿ
ಪ್ರೊಫೆಸರ್ ಆಗಿದ್ದವರು
ಮತ್ತು
'ರೂಪಾಯಿಯ ಸಮಸ್ಯೆ', 'ಭಾರತದಲ್ಲಿ ಜಾತಿಗಳು'
'ಭಾರತದ ಸಣ್ಣ ಹಿಡುವಳಿಗಳು ಮತ್ತು ಅವುಗಳಿಗೆ ಪರಿಹಾರ'
ಈ ಗ್ರಂಥಗಳ ಲೇಖಕರು

**ಎಡ್ವಿನ್ ಆರ್. ಎ. ಸೆಲಿಗ್ಮನ್**

ಅರ್ಥಶಾಸ್ತ್ರದ ಪ್ರೊಫೆಸರ್ – ಕೊಲಂಬಿಯಾ ಯುನಿವರ್ಸಿಟಿ, ನ್ಯೂಯಾರ್ಕ್
**ಇವರ ಮುನ್ನುಡಿಯೊಂದಿಗೆ**



**(ಪಿ.ಎಸ್.ಕಿಂಗ್ ಅಂಡ್ ಸನ್ಸ್, ವೆಸ್ಟಮಿನ್‌ಸ್ಟರ್,
ಗ್ರೇಟ್‌ಬ್ರಿಟನ್ ಇವರಿಂದ ಪ್ರಕಟಿತವಾದ ಕೃತಿಯ ಪುನರ್ಮುದ್ರಣ)**

# ಅರ್ಪಣೆ

ಬರೋಡಾದ ಮಹಾರಾಜರಾದ ಹಿಸ್ ಹೈನೆಸ್

**ಶ್ರೀ ಸಯ್ಯಾಜಿರಾವ್ ಗಾಯಕವಾಡ್**

ಇವರ ಸನ್ನಿಧಿಗೆ

ಅವರು ನನ್ನ ಶಿಕ್ಷಣಕ್ಕೆ ನೆರವು ನೀಡಿದ ಸ್ಮರಣೆಯ ಸಂಕೇತವಾಗಿ

# ಲೇಖಕನ ಮೊದಲ ಮಾತು

ಇನ್ನೊಂದಷ್ಟು ಕಾಲ ಭಾರತದ ಹಣಕಾಸು ವ್ಯವಸ್ಥೆ (ಫೈನಾನ್ಸ್) ಅಥವಾ ಅರ್ಥಶಾಸ್ತ್ರ ಅಧ್ಯಯನವೊಂದನ್ನು ಸಾದರಪಡಿಸುವ ಅಭ್ಯರ್ಥಿ ಅಥವಾ ಲೇಖಕ ಕ್ಷಮಾಯಾಚನೆ ಮಾಡುವ ಸಂದರ್ಭದಿಂದ ತಪ್ಪಿಸಿಕೊಳ್ಳಲು ಸಾಧ್ಯವೆಂದು ಭಾವಿಸಲು ಈ ಪುಸ್ತಕ ನೆರವಾದೀತು ನಿಜ. ಆದರೆ ತಮ್ಮ ಅನ್ವೇಷಣೆಯ ಲೋಪಗಳ ಬಗ್ಗೆ ಅವರು ಮುಂದೆಷ್ಟೋ ಕಾಲ ಕ್ಷಮೆ ಯಾಚಿಸದೆ ಇರಲು ಸಾಧ್ಯವಾಗದು. ಏಕೆಂದರೆ ಒಂದು ಅಧ್ಯಯನವು ವಿಶ್ಲೇಷಣಾತ್ಮಕವಾಗಿದ್ದರೂ ಕೂಡ ಅದಕ್ಕೆ  ಚಾರಿತ್ರಿಕ ಹಿನ್ನೆಲೆಯೊಂದು ಇರಬೇಕಾಗುತ್ತದೆ. ದುರದೃಷ್ಟವಶಾತ್ ಭಾರತದ ಹಣಕಾಸು ವ್ಯವಸ್ಥೆಯ ಬಗ್ಗೆ ಆರಂಭಿಕ ಕೆಲಸಗಳೇ ನಡೆದಿಲ್ಲವಾದ್ದರಿಂದ ಈ ಕ್ಷೇತ್ರಕ್ಕೆ ಮೊದಲ ಹೆಜ್ಜೆ ಇಡುವವನಿಗೆ ಎದುರಾಗುವ ಕೋಟಲೆಗಳು ಹಲವು. ಒಮ್ಮೆ ವಿಚಾರದ ಹಿನ್ನೆಲೆ ಅಸ್ಪಷ್ಟವಾಗಿರುವುದರಿಂದ ಅದರ ಸಂಪೂರ್ಣ ವಿವರ ಇಲ್ಲಿ ಕಾಣದೆ ಹೋಗಬಹುದು. ಇನ್ನೊಮ್ಮೆ ಈ ಸ್ಥಳದಲ್ಲೇನೋ ತಪ್ಪಾಗಿದೆ ಎಂಬಂತೆ ಭಾಸವಾದರೂ ಅದರ ಬಗ್ಗೆ ಹೇಳಲು ಕೇಳಲು ಯಾವುದೇ ಆಧಾರವಿಲ್ಲದಿರುವುದರಿಂದ ಅನ್ವೇಷಕನು ಏನು ಮಾಡವುದೆಂದು ತೋಚದೆ ತಲೆ ಚಚ್ಚಿಕೊಳ್ಳಬೇಕಾಗುವುದು. ಇನ್ನೇನು ಅಧ್ಯಯನ ವಿಷಯದಲ್ಲಿ ಸಾಕಷ್ಟು ಮಾಹಿತಿ ಸಂಗ್ರಹವಾಯಿತೆಂದು ಹಿಗ್ಗುವಷ್ಟರಲ್ಲಿ ಸಮೃದ್ಧವಾಗಿ ದೊರೆತ ಈ ಮಾಹಿತಿಯಲ್ಲಿ ಕಾಳನ್ನು ಜೊಳ್ಳಿನಿಂದ ಬೇರ್ಪಡಿಸುವ ದುಸ್ತರ ಕೆಲಸಕ್ಕೆ ಆತ ಕೈಯಿಕ್ಕಬೇಕಾಗಬಹುದು. ಇನ್ನೂ ಕೆಲವೊಮ್ಮೆ ಸಿಕ್ಕಿತು ಎಂದುಕೊಂಡ ಮೂಲಸಾಮಗ್ರಿ ನಿರುಪಯುಕ್ತವಾಗಿಬಿಟ್ಟು, ಅದರ ಸಂಗ್ರಹಕ್ಕಾಗಿ ದುಡಿದ ಸಮಯವೂ ಶಕ್ತಿಯೂ ವೃಥಾವ್ಯಯವಾದಂತೆ ಅನಿಸಬಹುದು.

ಪ್ರಸ್ತುತ ಕೃತಿರಚನೆಯಲ್ಲಿ ನನ್ನನ್ನು ಬಾಧಿಸಿದ ಕಷ್ಟಗಳು ಮೇಲ್ಕಂಡ ಮಾದರಿಯವು. ಅನ್ವೇಷಕನನ್ನು ಕೆಲಸಕ್ಕೆ ತೊಡಗಿಸಲು ಅಥವಾ ಕೆಲಸದ ಹೊರೆ ತಗ್ಗಿಸುವ ನಿಟ್ಟಿನಲ್ಲಿ ಮಾರ್ಗದರ್ಶನ ಮಾಡಲು ಯಾರೂ ಇಲ್ಲದಿದ್ದರೂ ಈ ನನ್ನ ಕೃತಿಯಲ್ಲಿ ಸಂಪೂರ್ಣ ವಿವರಗಳ ಹೊರತು ಸಮಗ್ರತೆಯನ್ನು ಸಾಧಿಸಲು ಪ್ರಯತ್ನಿಸಲಾಗಿದೆ. ಈ ದೆಸೆಯಿಂದ ಕೆಲಸ ಇನ್ನಷ್ಟು ಶ್ರಮದಾಯಕವಾಯಿತೆಂದು ಬೇರೆ ಹೇಳುವುದು ಬೇಡ. ಆ ಶ್ರಮದ ವಿವರಗಳನ್ನಾಗಲಿ ನಾನು ಓದಲು ಬಳಸಿಕೊಂಡಿರುವ ಆಧಾರಗ್ರಂಥಗಳ ಉದ್ದವಾದ ಪಟ್ಟಿಯನ್ನಾಗಲಿ ಇಲ್ಲಿ ಕೊಡುವುದಿಲ್ಲ. ನನ್ನ ಈ ಕೃತಿಯ ಲೋಪಗಳ ಕುರಿತು ಎರಡು ಮಾತು ಹೇಳುವುದಷ್ಟೇ ಅವಶ್ಯವೆಂದು ನನಗೆ ಕಾಣಿಸುತ್ತದೆ. ಬಲ್ಲಿದ ವಿಮರ್ಶಕರಿಗೆ ಅವು ಏನೆಂದು ತಿಳಿದೇ ಇದೆ ಎಂಬುದು ನಿಜವಾದರೂ ಅವು ಕೃತಿಯ ಬೆಲೆಗೆ ಬಾಧಕ ಬರುವಷ್ಟು ಗಂಭೀರವಾದ ದೋಷಗಳಲ್ಲವೆಂದು ನಾನು ಅರಿಕೆ ಮಾಡಿಕೊಳ್ಳಬೇಕಾಗಿದೆ. ಹೀಗಿದ್ದೂ ಕೆಲವು ಲೋಪಗಳನ್ನು ಬೊಟ್ಟುಮಾಡಿ ತೋರಿಸದೆ ಗತ್ಯಂತರವಿಲ್ಲ. ಹಣಕಾಸು ವ್ಯವಸ್ಥೆಯ ಸ್ಥಾನೀಯ ಮಟ್ಟದ ವಿಕೇಂದ್ರೀಕರಣ ಯಾವಾಗ ಆಯಿತೆಂಬುದಕ್ಕೆ ನಾನೊಂದು ದಿನಾಂಕವನ್ನು ನಿಶ್ಚಿತಗೊಳಿಸಿದರೂ ಈ ದಿನಾಂಕವನ್ನು ಇನ್ನಷ್ಟು ಪೂರ್ವಕಾಲಕ್ಕೆ ತಳ್ಳಬಹುದೆಂದು ನನಗೆ ಸಂದೇಹವುಂಟಾಗಿದೆ. ಇದನ್ನು ಇಲ್ಲೇ ನಿರ್ಧಾರವಾಗಿ ಹೇಳಿಬಿಡುವುದು ಚೆನ್ನಾಗಿತ್ತು ನಿಜ. ಆದರೆ ಹಾಗೆ ಮಾಡುವ ಶ್ರಮವನ್ನು ಬರುವ ಪ್ರಯೋಜನದೊಡನೆ ಹೋಲಿಸಿ ನೋಡಿದರೆ ಅದು ಹುಲ್ಲಿನ ಬಣವೆಯೊಳಗೆ ಸೂಜಿಯನ್ನು ಹುಡುಕುವ ಕೆಲಸದಂತೆ ಆಗಿಬಿಟ್ಟೀತೆಂದು ಅಂಜಿ ಹಿಂಜರಿದೆ. ನಾನು ನಿರ್ಧರಿಸಿದ ದಿನಾಂಕ ನನಗೆ ಅನಿಶ್ಚಿತವೆನಿಸಿದರೂ ಮುಂದಿನ ಸಂಶೋಧಕರು, ನನ್ನ ಶೋಧನೆಯನ್ನು ದೃಢೀಕರಿಸಬಹುದೆಂತಲೂ ಒಮ್ಮೊಮ್ಮೆ

ಅನಿಸುತ್ತದೆ. ಇನ್ನೊಂದು ವಿಚಾರವನ್ನು ನಾನು ಇಲ್ಲಿ ಎತ್ತಿಕೊಂಡಿಲ್ಲ; ಎತ್ತಿಕೊಳ್ಳಬೇಕಾಗಿತ್ತೇನೋ ಎಂದು ಅನಿಸುವ ಪ್ರಾಂತೀಯ ಮತ್ತು ಸ್ಥಾನೀಯ ಹಣಕಾಸು ವ್ಯವಸ್ಥೆಗಳ ಅನ್ಯೋನ್ಯ ಸಂಬಂಧದ ವಿಷಯ ಅದು. ಇದು ಆರಂಭದಲ್ಲಿ ನನ್ನ ಮನಸ್ಸಿನೊಳಗಿದ್ದರೂ ಆಮೇಲೆ ಅದನ್ನು ಕೈಬಿಟ್ಟೆ. ಕಾರಣ: ಚರ್ಚೆಗೆ ಸಂಬಂಧವಿಲ್ಲದ ವಿವರಗಳೂ ವಾದವಿವಾದಗಳೂ ಇದರಲ್ಲಿ ಬಂದು ಸೇರಿಕೊಂಡಿದ್ದವು. 'ಓದುಗರಿಗೆ ಇದೊಂದು ಲೋಪವೆಂದು ಕಂಡರೂ ಇದೀಗ ನಾನೇ ಸಿದ್ಧಗೊಳಿಸುತ್ತಿರುವ 'ಬ್ರಿಟಿಷ್ ಭಾರತದ ಸ್ಥಾನೀಯ ಹಣಕಾಸು ವ್ಯವಸ್ಥೆ' ಎಂಬ ಪ್ರಬಂಧವು ಪ್ರಕಟಗೊಂಡಾಗ ಈ ಬಗ್ಗೆ ನನ್ನ ವಿಚಾರಗಳೇನೆಂದು ಜ್ಞಾತವಾದೀತು. ಇಲ್ಲಿನ ಅನೇಕ ವಿಷಯಗಳು ಪುನರಾವರ್ತನೆಯಾಗಿ ಬಂದಂತೆ ಕಂಡರೆ ಅದು ವಿಶದೀಕರಣಕ್ಕಾಗಿ ಬಂದವೆಂದು ಭಾವಿಸಬೇಕೆಂದು ಬಿನ್ನವಿಸುತ್ತೇನೆ.

ಭಾರತ ಆಫೀಸಿನ ಹಣಕಾಸು ಕಾರ್ಯದರ್ಶಿ ರಾಬಿನ್ಸನ್ ಅವರು ಹಲವಾರು ಸೂಚನೆಗಳನ್ನು ಕೊಟ್ಟಿದ್ದಲ್ಲದೆ ವಿಷಯಕ್ಕೆ ಸಂಬಂಧಿಸಿದ ಅಮೂಲ್ಯವಾದ ದಾಖಲೆಗಳನ್ನೂ ಒದಗಿಸಿದ್ದಕ್ಕಾಗಿ ಅವರಿಗೆ ನನ್ನ ಕೃತಜ್ಞತೆ ಸಲ್ಲಿಸುತ್ತೇನೆ. ಹಸ್ತಪ್ರತಿಯ ಕರಡಿನ ಒಂದು ಚಿಕ್ಕಭಾಗವನ್ನೋದಿ ಸಲಹೆ ನೀಡಿದ ಲಂಡನ್ ವಿಶ್ವವಿದ್ಯಾಲಯದ ಪ್ರೊಫೆಸರ್ ಕ್ಯಾನನ್ ಅವರಿಗೆ ನಾನು ಋಣಿ. ಕೊಲಂಬಿಯಾ ವಿಶ್ವವಿದ್ಯಾಲಯದಲ್ಲಿ ನನ್ನ ಗುರುಗಳಾದ ಪ್ರೊ. ಸೆಲಿಗ್ಮನ್ ಅವರ ಋಣಭಾರವಂತೂ ಅಪಾರವಾದದ್ದು, ಸಾರ್ವಜನಿಕ ಹಣಕಾಸಿನ ವಿಷಯದಲ್ಲಿ ಪ್ರಥಮ ಪಾಠದ ಸುಯೋಗ ಈ ಮಹಾನುಭಾವರಿಂದಲೇ ನನಗೆ ಲಭಿಸಿದ್ದು. ಮುದ್ರಣಾಲಯದ ಕರಡು ತಿದ್ದುವ ಬೇಸರದ ಕೆಲಸವನ್ನು ಮಾಡಿದ ಮಿತ್ರ ಸಿ.ಎಸ್. ದೇವಳೆ ಅವರಿಗೆ ನನ್ನ ವಂದನೆ.

♦

# ಮುನ್ನುಡಿ

ಮಿ. ಅಂಬೇಡ್ಕರ್ ತಮ್ಮ ಉತ್ಕೃಷ್ಟ ಪ್ರಬಂಧದಲ್ಲಿ ಚರ್ಚಿಸಿರುವ ಸಮಸ್ಯೆಯು ಜಗತ್ತಿನ ಎಲ್ಲೆಡೆಗೂ ಆಸಕ್ತಿ ಕೆರಳಿಸುವ ಒಂದು ಸಮಸ್ಯೆಯಾಗಿದೆ. ಮೊದಲಿನಿಂದಲೂ ಕೇಂದ್ರೀಯ ಮತ್ತು ಸ್ಥಾನೀಯ ಸರ್ಕಾರಗಳು ಕರಭಾರ ಹೊರಿಸುತ್ತಿರುವುದನ್ನು ನಾವು ನೋಡುತ್ತಿದ್ದೇವಷ್ಟೇ. ಒಂದು ರಾಜಕೀಯ ವ್ಯವಸ್ಥೆ ಹುಟ್ಟಿಕೊಂಡ ತಕ್ಷಣ ಯುದ್ಧಕಾರ್ಯಗಳಿಗಾಗಿಯೂ ಸ್ಥಾನೀಯ ಸಂರಕ್ಷಣೆ ಮತ್ತು ಅನುಕೂಲಕ್ಕಾಗಿಯೂ ಕೇಂದ್ರೀಯ ಮತ್ತು ಸ್ಥಾನೀಯ ಸರ್ಕಾರಗಳು ವೆಚ್ಚಮಾಡಲು ತೊಡಗುತ್ತವೆ. ಇದಾಗಿ ಬಹಳ ಕಾಲದ ಮೇಲೆ ಕೇಂದ್ರೀಯ ಮತ್ತು ಸ್ಥಾನೀಯಗಳ ನಡುವೆ ಅಂಬೇಡ್ಕರ್ 'ಪ್ರಾಂತೀಯ' ಎಂದು ಕರೆಯುವ ಏರ್ಪಾಟು ತಲೆ ಎತ್ತಿದ್ದು, ಈ ವಿವಿಧ ವೆಚ್ಚಗಳಿಗೆ ಕೊಟ್ಟ ಹೆಸರು ಆ ವ್ಯವಸ್ಥೆಗೆ ಕೊಟ್ಟ ಹೆಸರೇ ಆಗಿರುತ್ತದೆ. ಭಾರತದಲ್ಲಿ ಇದಕ್ಕೆ ಸ್ಥಾನೀಯ, ಪ್ರಾಂತೀಯ ಮತ್ತು ಸಾಮ್ರಾಜ್ಯ ಸಂಬಂಧಿ ವೆಚ್ಚ ಎನ್ನುತ್ತೇವೆ, ಜರ್ಮನಿಯಲ್ಲಿ ಇದನ್ನೇ ಸ್ಥಾನೀಯ, ರಾಜ್ಯ ಮತ್ತು ಸಾಮ್ರಾಜ್ಯ ಸಂಬಂಧಿ ವೆಚ್ಚವೆನ್ನುತ್ತಾರೆ. ಅಮೆರಿಕದ ಸಂಯುಕ್ತ ಸಂಸ್ಥಾನ ಮತ್ತು ಸ್ವಿಟ್ಸರ್ಲೆಂಡಿನಲ್ಲಿ ಸ್ಥಾನೀಯ, ರಾಜ್ಯ ಮತ್ತು ಫೆಡರಲ್ ವೆಚ್ಚವೆಂದು ಕರೆಯುತ್ತಾರೆ; ಆಸ್ಟ್ರೇಲಿಯಾದಲ್ಲಿ ಇದು ಸ್ಥಾನೀಯ, ರಾಜ್ಯ ಮತ್ತು ಕಾಮನ್ವೆಲ್ತ್ ವೆಚ್ಚವಾಗುತ್ತದೆ, ದಕ್ಷಿಣ ಆಫ್ರಿಕಾದಲ್ಲಿ ಸ್ಥಾನೀಯ, ಪ್ರಾಂತೀಯ ಮತ್ತು ಫೆಡರಲ್ ವೆಚ್ಚವೆಂದು ಇದಕ್ಕೆ ಹೆಸರು: ಫ್ರಾನ್ಸಿನಲ್ಲಿ ಸ್ಥಾನೀಯ, ಇಲಾಖಾ ಮತ್ತು ಸಾಮಾನ್ಯ ವೆಚ್ಚ ಎನ್ನುತ್ತಾರೆ. ಬ್ರಿಟಿಷ್ ಸಾಮ್ರಾಜ್ಯದ ಉದಾಹರಣೆ ಕೊಡುವುದಾದರೆ ಅಲ್ಲಿ ಇನ್ನೂ ಒಂದು ಬಗೆಯ ವೆಚ್ಚದ ವಿಭಾಗ ತೋರಿಬರುತ್ತದೆ. ಅದನ್ನು ಸರ್ವಂಕಷವಾಗಿರುವ ಸಾಮ್ರಾಜ್ಯವೆಚ್ಚವೆಂದು ಕರೆಯಬಹುದು.

ಸರ್ಕಾರ ನಿರ್ವಹಿಸುವ ಕೆಲಸಕಾರ್ಯಗಳು ಬದಲಾದಂತೆ ಈ ವಿವಿಧ ವರ್ಗದ ವೆಚ್ಚಗಳ ಸ್ವರೂಪವೂ ಮಹತ್ವವೂ ಬದಲಾಗುತ್ತವೆ. ಸಾಮಾನ್ಯ ಆರ್ಥಿಕ ಪರಿಸ್ಥಿತಿಯ ದೆಸೆಯಿಂದಾಗಿ ಕಾಲಕ್ರಮೇಣ ರಾಜಕೀಯ ಸಂರಚನೆಗಳು ಮತ್ತು ಆಡಳಿತಾತ್ಮಕ ಕ್ರಿಯಾವಿಧಿಗಳು ಬದಲಾವಣೆ ಪಡೆಯುವಾಗ ಹೀಗಾಗುವುದು ಸ್ವಾಭಾವಿಕ. ಕೆನಡಾ, ಅರ್ಜೆಂಟೈನಾ, ಬ್ರೆಜಿಲ್ ಅಂಥ ದೇಶಗಳಲ್ಲಿ ಕೇಂದ್ರ ಸರ್ಕಾರವೇ ಪ್ರಾಂತೀಯ ಘಟಕಗಳನ್ನೂ ಸೃಷ್ಟಿಮಾಡುತ್ತದೆ; ಅಮೆರಿಕ, ಜರ್ಮನಿ, ಸ್ವಿಟ್ಸರ್ಲೆಂಡ್‌ಗಳಲ್ಲಿ ಪರಮಾಧಿಕಾರವುಳ್ಳ ರಾಜ್ಯಗಳು ಫೆಡರಲ್ ಸರ್ಕಾರವನ್ನು ನಿರ್ಮಿಸಿಕೊಳ್ಳುತ್ತವೆ. ಕೆಲವು ದೇಶಗಳಲ್ಲಿ ಈ ಎರಡರ ನಡುವಿನ (ಪ್ರಾಂತೀಯ ರಾಜ್ಯ) ಘಟಕದ ಮಹತ್ವ ಕೇಂದ್ರೀಯ ಸ್ಥಾನೀಯ ಘಟಕಗಳಿಗಿಂತ ಕ್ಷೀಣವಾಗಿರುತ್ತವೆ; ಕೆಲವು ದೇಶಗಳಲ್ಲಿ ಅದು ಬಲಗೊಳ್ಳುತ್ತ ಹೋಗುವುದೂ ಉಂಟು.

ಆಧುನಿಕ ಪ್ರಜಾಪ್ರಭುತ್ವಗಳಲ್ಲಿ ತೆರಿಗೆಯ ಭಾರ ಹೆಚ್ಚಿದಂತೆ ಹಾಗೂ ಸರ್ಕಾರದ ಅಭಿವೃದ್ಧಿಪರ ಚಟುವಟಿಕೆಗಳು ಹೆಚ್ಚಿದಂತೆ ಇಂಥ ವಿವಿಧ ಸರ್ಕಾರಗಳಲ್ಲಿ ಕರಭಾರವನ್ನು ಹಂಚಿ ಕೊಡುವ ಅಗತ್ಯ ತೀವ್ರತರವಾಗುತ್ತಿದೆ. 'ನಿಗದಿತ ಆದಾಯ'ವೆಂದು ಅಂಬೇಡ್ಕರ್ ಹೆಸರಿಸಿರುವ ವಿಷಯ ಕರಭಾರವಿತರಣೆಯಲ್ಲಿ ಯಾವುದನ್ನು ಆಯ್ದುಕೊಳ್ಳಬೇಕೆಂಬ ಸಮಸ್ಯೆಯ ಕಡೆಗೆ ಗಮನಹರಿಸುತ್ತದೆ. ಇದಕ್ಕಾಗಿ ಮೂರು ಮೂಲಭೂತ ಮಾರ್ಗಗಳನ್ನು ಅನುಸರಿಸಬಹುದೆಂದು ಕಾಣುತ್ತದೆ. ಮೊದಲನೆಯದಾಗಿ ಕೇಂದ್ರ ಇಲ್ಲವೇ ಪ್ರಾಂತೀಯ ಸರ್ಕಾರಗಳಲ್ಲಿ ಒಂದು ಇನ್ನೊಂದನ್ನು ನಡೆಸಿಕೊಡಬಹುದು. ಹಿಂದಿನ ಕಾಲದಲ್ಲಿ ಅಮೆರಿಕ ಸಂಯುಕ್ತ ಸಂಸ್ಥಾನ ಮತ್ತು ಜರ್ಮನಿಯಲ್ಲಿ ಕೇಂದ್ರವನ್ನು ರಾಜ್ಯಗಳು ನಡೆಸಿಕೊಡುವ ದೃಶ್ಯ ಕಂಡರೆ ಇತ್ತೀಚೆಗೆ ಕೆನಡಾ,

ಆಸ್ಟ್ರೇಲಿಯಾಗಳಲ್ಲಿ ತದ್ವಿರುದ್ಧವಾದ ದೃಶ್ಯ ಕಾಣಿಸಿಕೊಂಡಿದೆ. ಎರಡನೆಯದಾಗಿ, ಪ್ರತ್ಯೇಕ ಆದಾಯದ ಬಾಬುಗಳನ್ನು ಈ ಎರಡರ ನಡುವೆ ಹಂಚಿಕೊಡಬಹುದು, ಉದಾ:– (ಸಂ.ಸಂ) ಜರ್ಮನಿ ಮತ್ತು ಸ್ವಿಟ್ಸರ್ಲೆಂಡಿನಲ್ಲಿ ಈಚೆಗಿನ ತನಕವೂ ಫೆಡರಲ್ ಸರ್ಕಾರ ಅಪ್ರತ್ಯಕ್ಷ ತೆರಿಗೆಗಳನ್ನು ಆಕರಣೆ ಮಾಡುತ್ತಿತ್ತು, ರಾಜ್ಯಗಳು ಪ್ರತ್ಯಕ್ಷ ತೆರಿಗೆಯನ್ನು ಅವಲಂಬಿಸಿದ್ದವು. ಮೂರನೆಯದಾಗಿ, ಆದಾಯವನ್ನು ಒಂದು ಸರ್ಕಾರ ಸಂಗ್ರಹಮಾಡಿ ಅದರಲ್ಲಿನ ಒಂದು ನಿಶ್ಚಿತ ಭಾಗವನ್ನು ಇನ್ನೊಂದಕ್ಕೆ ವರ್ಗಾಯಿಸಿಕೊಡಬಹುದು. ರಾಜ್ಯ ಮತ್ತು ಸ್ಥಾನೀಯ ತೆರಿಗೆಗಳು ತಾವು ಸಂಗ್ರಹಿಸಿದ ತೆರಿಗೆಯನ್ನು ಕೇಂದ್ರದೊಡನೆ ಹಂಚಿಕೊಳ್ಳುವ ಅನೇಕ ಉದಾಹರಣೆಗಳು ಹೇಗೆ ಧಾರಾಳವಾಗಿ ಸಿಗುತ್ತವೋ ಹಾಗೆಯೇ ಕೇಂದ್ರವು ಸಂಗ್ರಹಿಸಿ ಸ್ಥಾನೀಯ ಸರ್ಕಾರಗಳಿಗೆ ಕೊಡುವ ಪರಿಪಾಠವೂ ರೂಢಿಯಲ್ಲಿದೆ. ಇದೀಗ ವಾರಸು ತೆರಿಗೆಯನ್ನು ಫೆಡರಲ್ ಮತ್ತು ರಾಜ್ಯ ಸರ್ಕಾರಗಳಲ್ಲಿ ಹಂಚಿಕೊಳ್ಳುವ ಸಮಸ್ಯೆ ಅಮೆರಿಕ (ಸಂ.ಸಂ.)ದಲ್ಲಿ ಒಂದು ಗಂಭೀರ ಪ್ರಶ್ನೆಯಾಗಿದೆಯಂತೆ. ಹಾಗೆಯೇ ಜರ್ಮನಿಯಲ್ಲಿ ರಾಜ್ಯ ಸರ್ಕಾರಗಳಿಗೂ ಫೆಡರಲ್ ಸರ್ಕಾರಕ್ಕೂ ನಡುವಿನ ಹಣಕಾಸು ವ್ಯವಸ್ಥೆಯ ಸಂಬಂಧಗಳು ವಿವಾದಾಸ್ಪದ ಪ್ರಶ್ನೆಯಾಗಿಬಿಟ್ಟಿವೆಯಂತೆ.

ತಮ್ಮ ಸ್ವದೇಶದಲ್ಲಿ ಈ ಕ್ಷೇತ್ರದಲ್ಲಿ ನಡೆಯುತ್ತಿರುವ ವಿದ್ಯಮಾನಗಳನ್ನು ವಸ್ತುನಿಷ್ಠವಾಗಿ ಪ್ರಸ್ತುತಗೊಳಿಸುವುದಲ್ಲದೆ ಪಕ್ಷಪಾತರಹಿತವಾಗಿ ವಿಶ್ಲೇಷಿಸುವುದರ ಮೂಲಕ ಅಂಬೇಡ್ಕರ್ ಒಳ್ಳೆಯ ಕೊಡುಗೆ ನೀಡಿರುತ್ತಾರೆ. ಬೇರೆ ದೇಶಗಳಿಗೂ ಅನ್ವಯವಾಗತಕ್ಕ ಈ ಸೂತ್ರಗಳು ಇಷ್ಟು ವಿವರವಾಗಿ ಇದುವರೆಗೆ ಎಲ್ಲೂ ಚರ್ಚಿತವಾದಂತೆ ನನಗೆ ಕಾಣುವುದಿಲ್ಲ.

ಇಷ್ಟಾಗಿಯೂ ಚಿತ್ರದ ಅರ್ಧಾಂಶ ಮಾತ್ರ ಅನಾವರಣಗೊಂಡಿದೆ. ನಡುವೆ ಸ್ಥಾನೀಯ(ಲೋಕಲ್) ಸರ್ಕಾರಗಳು ಹಾಯ್ದಿರುವುದರಿಂದ, ಅಂದರೆ ಪ್ರಾಂತೀಯ ಹಾಗೂ ಕೇಂದ್ರ ಸರ್ಕಾರಗಳಂತೆ ತಮಗೂ ಹಣಕಾಸು ವ್ಯವಸ್ಥೆಯಲ್ಲಿ ಪಾಲುಕೊಡಬೇಕೆಂದು ಅವು ಆಗ್ರಹಿಸಲು ಹೊರಟಿರುವುದರಿಂದ, ಸಮಸ್ಯೆ ಇನ್ನಷ್ಟು ಜಟಿಲವಾಗಿದೆ. ಉದಾ :– ಅಮೆರಿಕದಲ್ಲಿ ಇದೀಗ ಶಾಲೆಗಳಿಗೆ ಹಣಕಾಸು ಸರಬರಾಜು ಮಾಡುವ ಬಗ್ಗೆ ಎದ್ದಿರುವ ವಿವಾದಕ್ಕೆ ಪರಿಹಾರ ಸಿಗಬೇಕಾದರೆ ಹಣಕಾಸು ವ್ಯವಸ್ಥೆಯ ಅನ್ಯೋನ್ಯ ಸಂಬಂಧವನ್ನು ನಿರ್ದಿಷ್ಟಗೊಳಿಸಬೇಕಾಗುತ್ತದೆ. ಅಂಬೇಡ್ಕರ್ ಅವರೇ ತಮ್ಮ ಇನ್ನೊಂದು ಬರಹದಲ್ಲಿ ಈ ವಿಷಯ ಪ್ರಸ್ತಾಪಿಸುವ ಆಲೋಚನೆ ಮಾಡಿದ್ದರಂತೆ. ಅದೇನೇ ಇರಲಿ ಮೂಲಪ್ರಶ್ನೆಯನ್ನು ಚರ್ಚಿಸುವ ಈ ಪ್ರಸ್ತುತ ಬರವಣಿಗೆಯಲ್ಲಿ ಅವರು ಸಾಧಿಸಿರುವಷ್ಟು ಯಶಸ್ಸನ್ನು ಅಲ್ಲಿಯೂ ಅವರು ಗಳಿಸಿದರೆ ಎಲ್ಲರೂ ಅವರಿಂದ ಉಪಕೃತರಾಗಿರುತ್ತಾರೆಂದು ನಾನೆಂದುಕೊಂಡಿದ್ದೇನೆ.

ಕೊಲಂಬಿಯಾ ಯೂನಿವರ್ಸಿಟಿ **ಎಡ್ವಿನ್ ಆರ್.ಎ. ಸೆಲಿಗ್ಮನ್**

ನ್ಯೂಯಾರ್ಕ್

ಅಕ್ಟೋಬರ್ ೧೯೨೪

# ಪ್ರಸ್ತಾವನೆ

**ವಿಷಯದ ವ್ಯಾಖ್ಯೆ ಮತ್ತು ಸ್ಥೂಲ ನಿರೂಪಣೆ**

ಭಾರತದ ಹಣಕಾಸು ವ್ಯವಸ್ಥೆಯನ್ನು ಅಭ್ಯಸಿಸುವ ವಿದ್ಯಾರ್ಥಿಗೆ ಎರಡು ಮುಖ್ಯ ಮಾಹಿತಿ ಮತ್ತು ಮಾರ್ಗದರ್ಶಕ ಆಧಾರಗಳು ಸಿಗುತ್ತವೆ : ಒಂದು–ವಾರ್ಷಿಕ ಬಜೆಟ್ ಪ್ರಕಟನೆ, ಎರಡು–ವಾರ್ಷಿಕ ಹಣಕಾಸು ಮತ್ತು ಆದಾಯದ ಕುರಿತು ಪ್ರಕಟವಾಗುವ ಸಂಪುಟಗಳು. ಬೇರೆ ಬೇರೆಯಾಗಿ ಪ್ರಕಟಿತವಾದರೂ ಇವುಗಳನ್ನು ಜಂಟಿ ಅಥವಾ ಪೂರಕ ಪ್ರಕಟನೆಗಳಂತಲೇ ಕರೆಯಬಹುದು. ವಾರ್ಷಿಕ ಹಣಕಾಸು ವ್ಯವಹಾರದಲ್ಲಿನ ಹಣಕಾಸು ಹಾಗೂ ಆದಾಯದ ವಿಸ್ತೃತ ವಿವರಣೆಗಳನ್ನೊಳಗೊಂಡ ಸಂಪುಟವು ಯಾವತ್ತೂ ಬಜೆಟಿಗೆ ಪೂರಕವಾಗಿಯೇ ಇರುತ್ತದೆ.

ಈ ಮೂಲಗಳು ಅಧ್ಯಯನ ಕಾರ್ಯಕ್ಕೆ ಸಾಕಷ್ಟು ನೆರವು ನೀಡಿದರೂ, ಜೊತೆಗೆ ಕೆಲವು ಸಮಸ್ಯೆಗಳನ್ನೂ ಒಡ್ಡುತ್ತವೆ. ತೀರ ಈಚೆಗಿನ ಹಣಕಾಸು – ಆದಾಯಗಳ ಪ್ರಕಟನೆಯಲ್ಲಿ ನಾಲ್ಕು ಬಗೆಯ ಲೆಕ್ಕ ತೋರಿಸಿದ್ದಾರೆ:

(೧) ಬ್ರಿಟಿಷ್ ಸಾಮ್ರಾಜ್ಯಕ್ಕೆ ಸಂಬಂಧಿಸಿದ್ದು

(೨) ಪ್ರಾಂತೀಯ

(೩) ಸ್ಥಾನೀಯವಾದುದನ್ನು ಒಳಗೊಂಡಿರುವುದು.

(೪) ಸ್ಥಾನೀಯವಾದುದನ್ನು ಒಳಗೊಳ್ಳದೆ ಇರುವುದು.

ಇದು ಸದಾಕಾಲ ಈ ರೀತಿಯದೇ ಆಗಿತ್ತೆಂದು ಹೇಳುವ ಹಾಗಿಲ್ಲ. ೧೮೭೦ಕ್ಕೆ ಹಿಂದೆ 'ಪ್ರಾಂತೀಯ' ಎಂಬುದು ಇರಲಿಲ್ಲ; ೧೮೬೩ಕ್ಕೆ ಹಿಂದೆ ಸ್ಥಾನೀಯ ಲೆಕ್ಕಾಚಾರವೂ ಇದ್ದಿರಲಿಲ್ಲ. ೧೮೭೦ಕ್ಕೆ ಪೂರ್ವದಲ್ಲಿ ಸಾಮ್ರಾಜ್ಯ ಸಂಬಂಧ ಹಾಗೂ ಸ್ಥಾನೀಯ ಇವು ಎರಡೇ ಸಾಕಾಗಿತ್ತು. ೧೯೦೦ರ ನಂತರದ ಒಂದು ಪ್ರಕಟನೆಯಲ್ಲಿ ಈ ವರ್ಗೀಕರಣದ ಪ್ರಸ್ತಾಪವೇ ಇರಲಿಲ್ಲ, ಬದಲಿಗೆ, ೧) ಸಾಮ್ರಾಜ್ಯ ಸಂಬಂಧಿ ಎಂದೂ ೨) ಪ್ರಾಂತೀಯವೆಂದೂ ೧೯೨೧ರ ನಂತರ ಕೇವಲ ಸಾಮ್ರಾಜ್ಯ ಸಂಬಂಧಿ ಲೆಕ್ಕಾಚಾರವೆಂದೂ ತೋರಿಸಲಾಗಿತ್ತು. ಹೊಸತಾಗಿ ಈ ವಿಷಯ ಅಭ್ಯಾಸ ಮಾಡಹೊರಟವರಿಗೆ ಹಳೇ ವರ್ಗೀಕರಣ ಅದೃಶ್ಯಗೊಂಡು ಹೊಸತು ತಲೆ ಎತ್ತಿದರೆ ಗೊಂದಲ ಹೆಚ್ಚದೆ ಇದ್ದೀತೆ?[೧] ಸ್ವಾಭಾವಿಕವಾಗಿ ಆಗ ಈ ವರ್ಗೀಕರಣಗಳು ಹುಟ್ಟಿಕೊಂಡದ್ದಾದರೂ ಹೇಗೆ? ಅವುಗಳ ಪರಸ್ಪರ ಸಂಬಂಧವೇನು ಎಂದು ಮುಂತಾಗಿ ಪ್ರಶ್ನೆ ಕೇಳಬಹುದು.

---

೧. ಹಣಕಾಸು ಮತ್ತು ಆದಾಯದ ಬಾಬಿನಲ್ಲಿ ತೋರಿಬರುವ 'ಹಾಗೆ ಸೇರಿಸದ ಸ್ಥಾನೀಯ'ವೆಂಬ ವರ್ಗೀಕರಣ 'ಹಣಕಾಸು ವರದಿಯಲ್ಲಿ' ಅಳವಡಿಸಿದಂತೆ ಕಾಣಿಸದು. ಇದನ್ನೇಕೆ ಕೈಬಿಟ್ಟರೆಂಬುದು ಈ ಲೇಖಕನಿಗೆ ಅರ್ಥವಾಗುತ್ತಿಲ್ಲ. ಮದರಾಸು ಕೈಪಿಡಿ ಸಂಪುಟ ೧, ಅಧ್ಯಾಯ ೫, ಪುಟ ೪೬೭–೯ರಲ್ಲಿ ಸಾಮಾನ್ಯ ಕಂದಾಯ ಅಧಿಕಾರಿಗಳು ಇದನ್ನು ವಸೂಲು ಮಾಡುವುದಿಲ್ಲವೆಂಬ ತಾಂತ್ರಿಕ ಕಾರಣಕ್ಕಾಗಿ ಇದನ್ನು ಕೈಬಿಟ್ಟಂತೆ ಕಾಣುತ್ತದೆ. ಹಣಕಾಸು ವರದಿಯಲ್ಲಿ ಕೈಬಿಟ್ಟ 'ಹಾಗಲ್ಲದ' ವರ್ಗದ, ಹಣವನ್ನು ಸರ್ಕಾರಿ ಖಜಾನೆಯಲ್ಲಿ ಜಮೆಮಾಡುವ ಅಗತ್ಯವಿಲ್ಲದಿರುವುದು ಇನ್ನೊಂದು ತಾಂತ್ರಿಕ ಕಾರಣವಿರಬಹುದೋ ಏನೋ'. ಇತ್ತೀಚಿನದಾದ ಏಳನೇ ವರದಿಯಲ್ಲಿ ಯಾವುದೇ ಸರ್ಕಾರಿ

ಪ್ರಸ್ತುತ ಅಧ್ಯಯನದಲ್ಲಿ ಪ್ರಾಂತೀಯ ಹಣಕಾಸು ವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಲಾಗುವುದು. ಇಲ್ಲಿ ಮಂಡಿಸಿರುವ ವಾದವನ್ನು ಅರ್ಥೈಸಿಕೊಳ್ಳಲು ಅನುಕೂಲವಾಗುವಂತೆ ವಿಷಯದ ಬೇರೆ ಬೇರೆ ಅಂಗಗಳಿಗಿರುವ ಅನ್ಯೋನ್ಯ ಸಂಬಂಧವನ್ನು ಪ್ರಾರಂಭಿಕವಾಗಿ ನಿರೂಪಿಸಲಾಗಿದೆ. ಸಂಪೂರ್ಣ ತಿಳಿವಳಿಕೆಗೆ ಅನುವಾಗುವ ನಿಟ್ಟಿನಲ್ಲಿ ಅಧ್ಯಯನ ವಸ್ತುವನ್ನು ನಾಲ್ಕು ಭಾಗಗಳಾಗಿ ವಿರಳವಾಗಿ ವಿಂಗಡಿಸಿ ಮೂಲ, ಅಭಿವೃದ್ಧಿ, ಸಂಘಟನೆ ಮತ್ತು ೧೯೧೯ರ ಸಾಂವಿಧಾನಿಕ ಪರಿವರ್ತನೆಗಳ ಪರಿಣಾಮವಾಗಿ ಏನಾಯಿತು ಎಂಬುದನ್ನು ಬಿಡಿಸಿ ಹೇಳಲಾಗಿದೆ. ಭಾಗ ೧ರಲ್ಲಿ ಪ್ರಾಂತೀಯ ಹಣಕಾಸು ವ್ಯವಸ್ಥೆಯ ಸಂಪೂರ್ಣ ಕಲ್ಪನೆ ಬರುವಂತೆ ಇದುವರೆಗೆ ಯಾರೂ ಕಾಲಿಡದಿದ್ದ, ಸಿಕ್ಕುಸಿಕ್ಕಾದರೂ ಅನಿವಾರ್ಯವಾದ ಪ್ರದೇಶಗಳ ಮೇಲೆ ಬೆಳಕುಚೆಲ್ಲುವ ಪ್ರಯತ್ನ ನಡೆದಿದೆ. ಇಂದಿನ ವಿದ್ಯಾರ್ಥಿ ಹಿಂದಿನ ಇತಿಹಾಸವನ್ನು ಅರಿತವನಾಗಿರಬೇಕು ಎಂಬ ಉಕ್ತಿಯಂತೆ ಹಿಂದಿನದರಲ್ಲಿ ಇಂದಿಗೆ ಬೇಕಾದಷ್ಟನ್ನು ಇಲ್ಲಿ ಪರಿಭಾವಿಸಲಾಗಿದೆ.

ಪ್ರಥಮಭಾಗದ ೧ನೇ ಅಧ್ಯಾಯದಲ್ಲಿ ಪ್ರಾಂತೀಯ ಹಣಕಾಸು ವ್ಯವಸ್ಥೆಯ ಉದಯವಾಗುವುದಕ್ಕೆ ಹಿಂದಿನ ಪರಿಸ್ಥಿತಿಯನ್ನು ವಿವರಿಸಿ ಇದರಲ್ಲಿ ಪರಿವರ್ತನೆಯ ಅಗತ್ಯವೇನೆಂಬುದನ್ನು ವರ್ಣಿಸಲಾಗಿದೆ. ೨ನೇ ಅಧ್ಯಾಯದಲ್ಲಿ ಪುನಾರಚನೆಯ ಕಾಲಘಟ್ಟದಲ್ಲಿ ಮಂಡಿಸಿದ ಇನ್ನೊಂದು ಹಣಕಾಸು ಪ್ರಣಾಳಿಕೆಯನ್ನೂ ಮತ್ತು ಅದು ಅಸ್ವೀಕೃತವಾಗಲು ಕಾರಣಗಳನ್ನೂ ನಮೂದಿಸಲಾಗಿದೆ. ಪ್ರಚಲಿತ ವ್ಯವಸ್ಥೆ ಹೊಸದರೊಡನೆ ಹೊಂದಾಣಿಕೆ ಮಾಡಿಕೊಂಡಿದ್ದರಿಂದ ಅದು ಹೇಗೆ ಹೊಸ ವ್ಯವಸ್ಥೆ ಅಂಗೀಕಾರ ಪಡೆಯಿತೆಂಬ ವಿಷಯವನ್ನೂ ನಿರೂಪಿಸಲಾಗಿದೆ.

ಭಾಗ ೧ರಲ್ಲಿ ಮೂಲದ ಬಗೆ ಹೇಳಿದರೆ ಭಾಗ ೨ರಲ್ಲಿ ಪ್ರಾಂತೀಯ ಹಣಕಾಸು ವ್ಯವಸ್ಥೆಯ ಅಭಿವೃದ್ಧಿ ಮತ್ತು ಬೆಳವಣಿಗೆಯ ಹಂತಗಳನ್ನು ಗುರುತಿಸಲಾಗಿದೆ. ಒಂದನೆಯ ಭಾಗವನ್ನು ತುಲನೆ ಮಾಡಲು ಬೇರಾವ ಅಧ್ಯಯನವೂ ಇಲ್ಲದಿರುವುದರಿಂದ ಅದನ್ನು ಓದಿದವರೇ ಅದರ ಪ್ರಯೋಜನವನ್ನು ಕುರಿತು ಹೇಳಬೇಕು. ಭಾಗ ೨ನ್ನು ತುಲನೆ ಮಾಡಲು ೧೮೮೭ರಲ್ಲಿ ನ್ಯಾಯಮೂರ್ತಿ ರಾನಡೆಯವರ ಪ್ರಾಂತೀಯ ಹಣಕಾಸನ್ನು ಕುರಿತ ಕೃತಿ ಅದೆಷ್ಟೇ ಹರುಕುಮುರುಕು ವಿವೇಚನೆಯಾಗಿದ್ದರೂ, ಅದು ನಮಗೆ ಸಿಗುವುದಾದ್ದರಿಂದ ನಮ್ಮ ನಿರೂಪಣೆ ಅಲ್ಲಿಗಿಂತ ಎಷ್ಟು ಭಿನ್ನವಾಗಿದೆ ಎಂದು ವಿದಿತವಾಗಬಹುದು.

ಭಾಗ ೨ನ್ನು ಅವಲೋಕಿಸಿದರೆ ಐದು ವರ್ಷಕ್ಕೊಮ್ಮೆ ಪ್ರಾಂತೀಯ ಬಜೆಟ್‌ಗಳ ಆದಾಯ ಮತ್ತು ವೆಚ್ಚಗಳ ಬಾಬನ್ನು ಪುನರ್ವಿಮರ್ಶಿಸಿರುವುದು ಗೋಚರವಾಗುತ್ತದೆ. ಪ್ರಸ್ತುತ ಅಧ್ಯಯನದ ಎರಡನೇ ಭಾಗವು ಅದರಲ್ಲೂ ೧೮೮೨ರ ವರೆಗಿನ ಕಾಲಾವಧಿಯವರೆಗೆ ಮಾತ್ರ ನ್ಯಾಯಮೂರ್ತಿ ರಾನಡೆಯವರ ಕೃತಿಯನ್ನು ಉಲ್ಲೇಖಿಸುತ್ತದೆ. ರಾನಡೆಯವರು ಈ ಪಂಚವಾರ್ಷಿಕ ಪುನರ್ವಿಮರ್ಶೆಯ ಮೂಲಕ ಪ್ರಾಂತೀಯ ಹಣಕಾಸು ವ್ಯವಸ್ಥೆಯ ವಿವಿಧ ಹಂತಗಳನ್ನು ಗುರುತಿಸಬಹುದೆಂದು ಭಾವಿಸುತ್ತಾರೆ. ಅರ್ಥಾತ್ ಪ್ರಾಂತೀಯ ಹಣಕಾಸು ವ್ಯವಸ್ಥೆಯ ಇತಿಹಾಸವನ್ನು ಐದೈದು ವರ್ಷಗಳಲ್ಲಿ ವಿಂಗಡಿಸಬಹುದು, ಅದನ್ನೇ ಅದರ ಬೆಳವಣಿಗೆಯ ಘಟ್ಟಗಳೆಂದು ಭಾವಿಸಬಹುದು ಎಂಬುದು ರಾನಡೆಯವರ ತಾತ್ಪರ್ಯ. ಪ್ರತಿ ಹಂತದ ಪುನರ್ವಿಮರ್ಶೆಯಲ್ಲಿ ಪ್ರಾಂತೀಯ ವ್ಯವಸ್ಥೆಯು ಮೂಲಭೂತವಾಗಿ ವ್ಯತ್ಯಾಸಗೊಂಡಿದ್ದರೆ ರಾನಡೆಯವರ

---

ಹಣ ಖಜಾನೆಯೊಳಗೆ ಲೆಕ್ಕ ನಮೂದಿಸಲ್ಪಡಬೇಕೆಂಬ ಕಡ್ಡಾಯವಿರುವುದನ್ನು ಗಮನಿಸಿದರೆ ಹೀಗೆ ಹೇಳಲು ಸಾಧ್ಯವಾಗುವುದಿಲ್ಲ. ಬಹುಶಃ ೧೮೮೨–೩ (ಭಾಗ ೧ ಪು.೧೦೭)ರ 'ನೈತಿಕ ಭೌತಿಕ ಪ್ರಗತಿ ವರದಿ'ಯಲ್ಲಿ 'ವಿಶೇಷ ನ್ಯಾಸಗಳು ಮತ್ತು ಪುದುವಟ್ಟುಗಳು' ಎಂಬ ವಿಶೇಷ ನಿಧಿಗಳಿಗೆ ಸಾಮಾನ್ಯ ಹಣಕಾಸು ವ್ಯವಸ್ಥೆಯೊಳಗೆ ಸ್ಥಾನಕೊಡಬಾರದೆಂದು ಈ ರೀತಿ ಕೈಬಿಟ್ಟಿರಬಹುದೆಂದು ಊಹಿಸಬಹುದು.

ವಾದವನ್ನಿಟ್ಟುಕೊಳ್ಳಬಹುದಾಗಿತ್ತು. ವಾಸ್ತವವಾಗಿ ಐದು ವರ್ಷಗಳಿಗೊಮ್ಮೆ ನಡೆದ ಪುನರ್ವಿಮರ್ಶೆಯಲ್ಲಿ ಯಾವ ಮೂಲಭೂತ ಬದಲಾವಣೆಯೂ ಇರುತ್ತಿರಲಿಲ್ಲ. ಪ್ರಾಂತೀಯ ಹಣಕಾಸು ವ್ಯವಸ್ಥೆಯ ಇತಿಹಾಸವನ್ನು ಮೂಲಭೂತ ಪರಿವರ್ತನೆಗಳ ಆಧಾರದಲ್ಲಿ ವಿಂಗಡಿಸಬೇಕಾದರೆ ನಾವು ಒತ್ತುಕೊಡಬೇಕಾದ ಲಕ್ಷಣಗಳು ಬೇರೆಯೇ ಆಗಿರಬೇಕಾಗುತ್ತದೆ. ಸಾರ್ವಜನಿಕ ಹಣಕಾಸು ವ್ಯವಸ್ಥೆಯ ಬಗ್ಗೆ ಬರೆಯುವ ಲೇಖಕರಿಗೆ ಕಣ್ಣಿಗೆ ಕಾಣುವ ವಿಷಯಗಳು ಎಂದರೆ ಎರಡೇ ಎರಡು–ಕರಭಾರದಲ್ಲಿ ಸಮಾನ ನ್ಯಾಯ (ಇಕ್ವಿಟಿ) ಮತ್ತು ವೆಚ್ಚದಲ್ಲಿ ಮಿತವ್ಯಯ. ಆದರೆ ಅರ್ಥಸಚಿವನಿಗೆ ಇದೊಂದು ವ್ಯಾವಹಾರಿಕ ವಿಷಯ, ಇಲ್ಲಿ ಎದುರಾಗುವ ಒಂದು ಸಮಸ್ಯೆ ವಾರ್ಷಿಕ ಬಜೆಟಿನ ಸಮತೋಲನವನ್ನು ಸಾಧಿಸುವುದು. ಸಮತೋಲ ಸಾಧನೆಯ ಪ್ರಾಂತೀಯ ಬಜೆಟುಗಳು ಅನುಸರಿಸಿದ ವಿವಿಧ ನೀತಿಗಳನ್ನೂ ಅವುಗಳು ಬದಲುಗೊಂಡ ವಿಧಾನಗಳನ್ನೂ ಅವಲೋಕಿಸಿದರೆ ಪ್ರಾಂತೀಯ ಹಣಕಾಸು ವ್ಯವಸ್ಥೆಯಲ್ಲಿ ಮೂರು ಸ್ಪಷ್ಟ ಹಂತಗಳನ್ನು ಗುರುತಿಸಲು ಬರುತ್ತದೆ. ಪ್ರತಿ ಹಂತದಲ್ಲೂ ಸರಬರಾಜಿನ ವಿಧಾನ ಬೇರೆಯಾಗಿದ್ದು ಗೋಚರವಾಗುತ್ತದೆ. – ಅರ್ಥಾತ್ ವರ್ಗಾವಣೆ (ಅಸೈನ್‌ಮೆಂಟ್ಸ್), ವರ್ಗಾವಣೆ ಆದಾಯ (ಅಸೈನ್ಡ್ ರೆವಿನ್ಯೂ) ಮತ್ತು ಹಂಚಿಕೊಂಡ ಆದಾಯ (ಶೇರ್‌ಡ್ ರೆವಿನ್ಯೂಸ್). ಪ್ರಾಂತೀಯ ಸರ್ಕಾರಗಳಿಗೆ ಭಾರತ ಸರ್ಕಾರ ಹಣಕಾಸು ಒದಗಿಸಿದ ವಿಧಾನದ ಆಧಾರದಲ್ಲಿ ಪ್ರಾಂತೀಯ ಹಣಕಾಸು ಬೆಳವಣಿಗೆಯ ಹಂತಗಳನ್ನು ಗುರುತಿಸುವುದು ರಾನಡೆ ಅವರ ವಿಧಾನಕ್ಕಿಂತ ಶ್ರೇಷ್ಠವಾದದ್ದು. ಆದ್ದರಿಂದಲೇ ಭಾಗ ೨ರಲ್ಲಿ (೧) ವರ್ಗಾವಣೆಯ ರೂಪದಲ್ಲಿ ಬಜೆಟ್ (೨) ವರ್ಗಾವಣೆ ಆದಾಯದ ರೂಪದ ಬಜೆಟ್ (೩) ಹಂಚಿಕೊಳ್ಳುವ ಆದಾಯದ ರೂಪದ ಬಜೆಟ್ ಎಂಬ ಮೂರು ಅಧ್ಯಾಯಗಳಿವೆ.

ಪ್ರಾಂತೀಯ ಹಣಕಾಸು ವ್ಯವಸ್ಥೆಯ ಮೂಲ ಹಾಗೂ ಬೆಳವಣಿಗೆಗಳನ್ನು ಚರ್ಚಿಸಿದ ಬಳಿಕ ಭಾಗ ೩ರಲ್ಲಿ ಅದರ ಸಂಘಟನೆಯ ಕಡೆಗೆ ಲಕ್ಷ್ಯ ಕೊಡಲಾಗಿದೆ. ೩ನೇ ಭಾಗದ ೭ನೇ ಅಧ್ಯಾಯದಲ್ಲಿ ಪ್ರಾಂತೀಯ ಹಣಕಾಸು ವ್ಯವಸ್ಥೆಯ ಸಂಘಟನೆಯ ದೃಷ್ಟಿಯಿಂದ ಸ್ವತಂತ್ರವಾಗಿರಲಿಲ್ಲವೆಂಬುದನ್ನು ಸಾಬೀತುಗೊಳಿಸುವ ಸಲುವಾಗಿ ಇದುವರೆಗೆ ನಿರ್ಲಕ್ಷ್ಯಕ್ಕೊಳಗಾಗಿದ್ದ ಬಾಧಕಸೂತ್ರಗಳನ್ನು ವಿಶ್ಲೇಷಣೆಗೆ ತೆಗೆದುಕೊಳ್ಳುತ್ತೇನೆ. ಪ್ರಾಂತೀಯ ಹಣಕಾಸು ವ್ಯವಸ್ಥೆಯ ವಾಸ್ತವ ಸ್ವರೂಪ ಅರಿಯಲು ೮ನೇ ಅಧ್ಯಾಯಕ್ಕೆ ಬರಬೇಕು. ಅದರಲ್ಲಿ ಬಾಧಕಗಳನ್ನು ಬಿಡಿಸಿ ತೋರಿಸಲಾಗುವುದು. ನಿಜಕ್ಕೂ ಅಲ್ಲಿ ಇದ್ದುದು ಸಾಮ್ರಾಜ್ಯದ ಆದಾಯ ಮತ್ತು ಸಾಮ್ರಾಜ್ಯ ವೆಚ್ಚವೇ ವಿನಾ ಪ್ರತ್ಯೇಕವಾದ ಪ್ರಾಂತೀಯ ಆದಾಯವೆಂಬುದಾಗಲೀ, ಪ್ರಾಂತೀಯ ವೆಚ್ಚವೆಂಬುದಾಗಲೀ ಇರಲೇ ಇಲ್ಲವೆಂಬುದೂ, ಯಾವತ್ತೂ ಸಾಮ್ರಾಜ್ಯದ ವಿಜೃಂಭಣೆಯೇ ವಿನಾ ಫೆಡರಲ್ ಪದ್ಧತಿಯ ಸಂಘಟನೆ ಮೂಡಿಬರಲೇ ಇಲ್ಲವೆಂದೂ ಖಚಿತವಾಗುವುದು. ೯ನೇ ಅಧ್ಯಾಯದಲ್ಲಿ ಹಳೇ ಶಾಸನವನ್ನೇ ಇರಿಸಿಕೊಂಡು ಭಾರತ ಸರ್ಕಾರದ ಸಂವಿಧಾನಾತ್ಮಕ ಜವಾಬುದಾರಿಗಳಿಗೆ ಧಕ್ಕೆ ತಾರದೆ, ಪ್ರಾಂತೀಯ ಹಣಕಾಸು ವ್ಯವಸ್ಥೆಯನ್ನು ವಿಶಾಲಗೊಳಿಸಬಹುದಾಗಿತ್ತು ಎಂಬುದರ ಚರ್ಚೆ ಇದೆ.

ಭಾಗ ೪ರಲ್ಲಿ ೧೯೧೯ರ ಸುಧಾರಣಾ ಶಾಸನದ ಮೂಲಕ ಪ್ರಾಂತೀಯ ಹಣಕಾಸು ವ್ಯವಸ್ಥೆಯ ರಚನಾ ಸ್ವರೂಪದಲ್ಲಿ ಉಂಟುಮಾಡಿದ ಬದಲಾವಣೆಗಳನ್ನು ಚರ್ಚಿಸಲಾಗಿದೆ. ಈ ಬದಲಾವಣೆಗಳಿಗೇನು ಕಾರಣವೆಂಬುದನ್ನು ಈ ಭಾಗದ ೧೦ನೇ ಅಧ್ಯಾಯದಲ್ಲಿ ಉಲ್ಲೇಖಿಸಲಾಗಿದೆ. ೧೧ನೇ ಅಧ್ಯಾಯದಲ್ಲಿ ಹೊಸ ಶಾಸನದೊಳಗಿನ ಬದಲಾವಣೆಗಳ ಪೂರ್ಣ ವಿವರಗಳಿವೆ. ೧೨ನೇ ಅಧ್ಯಾಯದಲ್ಲಿ ನೂತನ ಪದ್ಧತಿಯನ್ನು ವಿಮರ್ಶೆ ಮಾಡಲಾಗಿದೆ.

ಪ್ರಾಂತೀಯ ಹಣಕಾಸು ವ್ಯವಸ್ಥೆಯನ್ನು 'ಹಣಕಾಸು ವ್ಯವಸ್ಥೆಯ ವಿಕೇಂದ್ರೀಕರಣ'ವೆಂಬ ಹೆಸರಿನಲ್ಲಿ

ಕರೆಯುವುದು ಭಾರತದ ಹಣಕಾಸನ್ನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ವಾಡಿಕೆಯಾಗಿರುವುದರಿಂದ ಇಲ್ಲಿನ ಕ್ಲಿಷ್ಟಕರವಾದ ಶಿರೋನಾಮೆಗೆ ಕಾರಣಗಳನ್ನು ಕೊಡಬೇಕಾದೀತು. ನಾನಾ ಮುಖವಾಗಿ ಹರಿದು ಶಾಖೋಪಶಾಖೆಯಾಗಿ ಬೆಳೆಯುವ ಇಂಡಿಯನ್ ಹಣಕಾಸು ವ್ಯವಸ್ಥೆಯನ್ನು ಹಣಕಾಸು ವ್ಯವಸ್ಥೆಯ ವಿಕೇಂದ್ರೀಕರಣವೆಂದು ಅಡಕವಾಗಿ ಹೇಳುವುದು ಕಷ್ಟವೇ ಸರಿ. ಇಂಡಿಯನ್ ಪದ್ಧತಿಯಲ್ಲಿ ಬರೇ ಪ್ರಾಂತೀಯ ವಿಕೇಂದ್ರೀಕರಣ ಅಷ್ಟೇ ಇದ್ದಿದ್ದರೆ ಹೊಸ ಶಿರೋನಾಮೆಗಾಗಿ ಕಷ್ಟಪಡುವ ಅಗತ್ಯವಿರಲಿಲ್ಲ. ನಿಜಕ್ಕೂ ನೋಡಿದರೆ ವಿಕೇಂದ್ರೀಕರಣವು ಪ್ರಾರಂಭವಾಗುವ ಸಂದರ್ಭಗಳು ಬೇರೆಬೇರೆ, ಅವು ಉಂಟುಮಾಡುವ ಪದ್ಧತಿಗಳ ಲಕ್ಷಣಗಳೂ ಬೇರೆಬೇರೆಯಾಗಿರುತ್ತವೆ. ೧೮೩೩ರ ಧೋರಣೆಯಲ್ಲಿ ಮೂಡಿದ ವಿಕೇಂದ್ರೀಕರಣ ೧೮೭೦ರ ಧೋರಣೆಯಲ್ಲಿ ಮೂಡಿದುದಕ್ಕಿಂತ ಭಿನ್ನ. ೧೮೯೨ರಿಂದ ವಿಕೇಂದ್ರೀಕರಣಕ್ಕೆ ಒಳಗಾಗಿರುವ ಧೋರಣೆ ೧೮೩೩ ಅಥವಾ ೧೮೭೦ರ ಕೇಂದ್ರ ಧೋರಣೆಗಿಂತ ಭಿನ್ನ. ಸ್ಪಷ್ಟವಾಗಿ ಹೇಳಬೇಕೆಂದರೆ, ೧೮೩೩ರ ವಿಕೇಂದ್ರೀಕರಣದ ಪ್ರಕ್ರಿಯೆಯೇ ಭಾರತೀಯ ಹಣಕಾಸು ವ್ಯವಸ್ಥೆಯ ವಿಕೇಂದ್ರೀಕರಣವಾಗಿತ್ತು ಮತ್ತು ಇದರ ಪರಿಣಾಮವೆಂದರೆ, ಸಾಮ್ರಾಜ್ಯ ಹಣಕಾಸು ವ್ಯವಸ್ಥೆಯಿಂದ ಸ್ಥಾನೀಯ ವ್ಯವಸ್ಥೆಯನ್ನು ಪ್ರತ್ಯೇಕಿಸಿದುದು.

೧೮೭೦ರ ವಿಕೇಂದ್ರೀಕರಣದ ಪರಿಣಾಮವೆಂದರೆ ಸಾಮ್ರಾಜ್ಯದ ಹಣಕಾಸು ವ್ಯವಸ್ಥೆಯಿಂದ ಪ್ರಾಂತೀಯ ವ್ಯವಸ್ಥೆಯನ್ನು ಬೇರ್ಪಡಿಸಿದುದು.

೧೮೮೨ರ ವಿಕೇಂದ್ರೀಕರಣದ ಪ್ರಕ್ರಿಯೆಯ ಪರಿಣಾಮವಾಗಿ ಪ್ರಾಂತೀಯ ಹಣಕಾಸು ವ್ಯವಸ್ಥೆಯಿಂದ ಸ್ಥಾನೀಯ ವ್ಯವಸ್ಥೆಯು ಬೇರ್ಪಟ್ಟಿತು.

ಹಣಕಾಸು ವ್ಯವಸ್ಥೆಯ ವಿಕೇಂದ್ರೀಕರಣವೆಂಬುದನ್ನು ಒಂದು ಸಾಮಾನ್ಯ ಶಿರೋನಾಮೆಯಾಗಿ ಬಳಸಿದರೆ ಅದರಲ್ಲಿ ಅಡಕಗೊಂಡ ನಾನಾ ಪ್ರಕಾರದ ವಿಕೇಂದ್ರೀಕರಣಗಳ ಬಗ್ಗೆ ಸಂದೇಹ ಉಂಟಾಗುವ ಸಾಧ್ಯತೆ ಇರುವುದರಿಂದ ಈ ಕೃತಿಗೆ 'ಬ್ರಿಟಿಷ್ ಇಂಡಿಯಾದಲ್ಲಿ ಪ್ರಾಂತೀಯ ಹಣಕಾಸು ವ್ಯವಸ್ಥೆಯ ವಿಕಾಸ'ವೆಂಬ ಮೂಲ ತಲೆಬರಹದಡಿಯಲ್ಲಿ 'ಸಾಮ್ರಾಜ್ಯದ ಹಣಕಾಸು ವ್ಯವಸ್ಥೆಯ ಪ್ರಾಂತೀಯ ವಿಕೇಂದ್ರೀಕರಣ'ವೆಂಬ ಎರಡನೆಯ ತಲೆಬರಹವನ್ನೂ ಕೊಡಲಾಗಿದೆ. ಇಲ್ಲಿ 'ಪ್ರಾಂತೀಯ' 'ಸಾಮ್ರಾಜ್ಯ' ಎಂಬ ಪದಗಳಿಗೆ ಯುಕ್ತ ಒತ್ತು ಕೊಡಬೇಕು. ರಾನಡೆಯವರ ಶಿರೋನಾಮೆ 'ಪ್ರಾಂತೀಯ ಹಣಕಾಸು ವ್ಯವಸ್ಥೆಯ ವಿಕೇಂದ್ರೀಕರಣ'ದಲ್ಲಿ ಪ್ರಾಂತೀಯತೆಗೆ ಒತ್ತು ಬೀಳದೆ ಹೋಗುವ ಸಂಭವವಿದೆ. ವಿಕೇಂದ್ರೀಕರಣದಲ್ಲಿ ಹಲವು ಪ್ರಕಾರಗಳಿರುವುದು ರಾನಡೆಯವರ ಗಮನಕ್ಕೆ ಬಂದಿದ್ದರೆ ಅವರಿಗೂ ತಮ್ಮ ಕೃತಿಯ ಶಿರೋನಾಮೆ ಪರ್ಯಾಪ್ತವಲ್ಲವೆಂಬುದು ವಿದಿತವಾಗುತ್ತಿತ್ತು.

♦♦

# ಭಾಗ – I

# ಪ್ರಾಂತೀಯ ಹಣಕಾಸು ವ್ಯವಸ್ಥೆ: ಅದರ ಪ್ರಾರಂಭ

## ಅಧ್ಯಾಯ ೧

## ಸಾಮ್ರಾಜ್ಯ ಪದ್ಧತಿ: ಅದರ ವಿಕಾಸ ಮತ್ತು ವಿನಾಶ

ಭಾರತದಲ್ಲಿ ಸಾಮ್ರಾಜ್ಯ ಪದ್ಧತಿಯ ಸರ್ಕಾರ ತೊಡಗಿದ್ದು ೧೮೩೩ರಲ್ಲಿ. ನ್ಯಾಯಪಾಲನೆ ಹಾಗೂ ಶಾಂತಿಪಾಲನೆಯ ವಿಷಯಗಳಲ್ಲೇ ಇದ್ದ ಪ್ರಭೇದಗಳನ್ನು ವರ್ಗೀಕರಿಸಿಕೊಂಡು ಸಾಧ್ಯವಾದಷ್ಟು ಏಕರೂಪತೆಯನ್ನು ಸಾಧಿಸುವುದು ಪಾರ್ಲಿಮೆಂಟು ಸಾಮ್ರಾಜ್ಯ ಪದ್ಧತಿಯನ್ನು ಸ್ಥಾಪಿಸಿದ ಮುಖ್ಯವಾದ ಎರಡು ಕಾರಣಗಳಲ್ಲಿ ಒಂದು. ಅಂದಿನ ವ್ಯವಸ್ಥೆಯಲ್ಲಿ ಬಹುರೂಪತೆ ತೀರಾ ಸಾಮಾನ್ಯವಾದುದಾಗಿತ್ತು. ಬಂಗಾಳ[೧], ಮದರಾಸು[೨], ಮುಂಬಯಿ[೩] ಪ್ರಾಂತಗಳ ಸಿವಿಲ್ ಮತ್ತು ಮಿಲಿಟರಿ ಆಡಳಿತಗಳು ಮೂವರು ಪ್ರತ್ಯೇಕ ಗವರ್ನರುಗಳ ವಶದಲ್ಲಿದ್ದದ್ದು ಮಾತ್ರವಲ್ಲ ಪ್ರತಿ ಗವರ್ನರನು ತನ್ನ ಪ್ರದೇಶ ವ್ಯಾಪ್ತಿಗೊಳಪಟ್ಟಂತೆ ನ್ಯಾಯಪೂರ್ವಕವಾಗಿಯೂ, ಸಕಾರಣವಾಗಿಯೂ, ಬ್ರಿಟಿಷ್ ಆಧಿಪತ್ಯದ ಕಾಯಿದೆ ಕಾನೂನಿಗೆ ಬಾಧಕವಲ್ಲದಂತಹ ಯಾವುದೇ ನಿಯಮವನ್ನಾಗಲಿ ಶಾಸನವನ್ನಾಗಲಿ ವಿರಚಿಸಲು ಶಕ್ತನಾಗಿದ್ದನು.ಈ ಮೂವರು ಅಧಿಪತಿಗಳು ಹೊರಡಿಸಿದ ಕಾಯಿದೆ – ಕಾನೂನು ಸಂಹಿತೆಯ ಜೊತೆಯಲ್ಲಿ ೧೭೨೬ರ ಸನದು ಪತ್ರದಂತೆ ಬ್ರಿಟಿಷ್ ಇಂಡಿಯಾಕ್ಕೆ ಅನ್ವಯಿಸಲಾದ ಇಂಗ್ಲಿಷ್ ಸ್ಟಾಟ್ಯೂಟ್ ಕಾಯ್ದೆಯ ಸಂಹಿತೆಗಳನ್ನೂ, ಆ ತರುವಾಯ ದೇಶದ ಬೇರೆಬೇರೆ ಭಾಗಗಳಿಗೆ ಕಾಲಕಾಲಕ್ಕೆ ಅಳವಡಿಸಿದ ಆಂಗ್ಲ ಶಾಸನಿಕ ಸೂತ್ರಗಳನ್ನೂ ಸೇರಿಸಿದರೆ ಬಹುರೂಪತೆ ಬೃಹದಾಕಾರ ತಳೆಯುತ್ತದೆ. ಇಂತಹ ವೈವಿಧ್ಯತೆಯಿಂದ ಕೂಡಿದ್ದ ಕಾನೂನುಗಳನ್ನು ಜಾರಿ ಮಾಡುವ ಕೆಲಸ ಎಷ್ಟು ಮುಜುಗರದಿಂದ ಕೂಡಿತ್ತೆಂಬುದನ್ನು ಕುರಿತ ಕಲ್ಕತ್ತದ ಸರ್ವೋಚ್ಚ ನ್ಯಾಯಾಲಯದ ಅಭಿಪ್ರಾಯ ಹೀಗಿತ್ತು:– "ಇಂಥ ಸಂಕೀರ್ಣ ಸನ್ನಿವೇಶದಲ್ಲಿ ಯಾವ ವೈಯಕ್ತಿಕ ಹಕ್ಕಿಗೆ ಸಂಬಂಧಿಸಿದ ತಗಾದೆಯ ಬಗೆಗೂ ಶಾಸನಿಕವಾಗಿ ಇದಮಿತ್ಥಂ ಎಂದು ತೀರ್ಮಾನ ಕೊಡುವುದು ಯಾವನಿಂದಲೂ ಶಕ್ಯವಾಗುತ್ತಿರಲಿಲ್ಲ. ಸ್ವತಃ ಇಂಗ್ಲೆಂಡಿನಲ್ಲಿರುವ ಕಾನೂನು ಇಲಾಖೆಯ ಅಧಿಕಾರಿವರ್ಗಕ್ಕೂ ಇಂಡಿಯನ್ ಕಾನೂನು ಪದ್ಧತಿಯಲ್ಲಿ ಒಂದು ಶಾಸನ ಇನ್ನೊಂದರ ಮೇಲೆ ಬೀರುವ ಪ್ರಭಾವದ ವ್ಯಾಪ್ತಿಯನ್ನು ತೀರ್ಮಾನಿಸುವುದು ಸಾಧ್ಯವಾಗುತ್ತಿರಲಿಲ್ಲ."[೪]

---

೧. ೧೩ ಜಿಯೋ. III, ಸಿ ೬೩, ಎಸ್.೩೬
೨. ೩೯ಮತ್ತು ೪೦ ಜಿಯೋ. III, ಸಿ. ೭೯, ಎಸ್. ೧೧
೩. ೪೭ ಜಿಯೋ. III, ಸೆಸ್.೨, ಸಿ೬೮, ಎಸ್. ೩
೪. ಹರ್ಬರ್ಟ್ ಕೋವೆಲ್ಲರ (ಪ್ಯಾರಾ) ದಿ ಹಿಸ್ಟರಿ ಆಫ್ ದಿ ಕಾನ್‌ಸ್ಟಿಟ್ಯೂಷನ್ ಆಫ್ ಕೋರ್ಟ್ಸ್ ಅಂಡ್ ಲೆಜಿಸ್ಲೇಟಿವ್ ಅಥಾರಿಟೀಸ್ ಇನ್ ಇಂಡಿಯಾ, ಕಲ್ಕತ್ತ

ದೇಶದೊಳಗಿರುವ ಐರೋಪ್ಯ ನೆಲಸಿಗರೊಂದಿಗೆ ಪರಿಣಾಮಕಾರಿಯಾಗಿ ವ್ಯವಹರಿಸಲು ಶಕ್ತವಾದ ಒಂದು ಬಲಿಷ್ಠ ಕೇಂದ್ರ ಸರ್ಕಾರವನ್ನು ಸ್ಥಾಪಿಸುವುದು ಎರಡನೇ ಉದ್ದೇಶ ಎನ್ನಬಹುದು. ಇಂಡಿಯಾದ ಸ್ವದೇಶವಾಸಿಗಳು ಕಾಯಿದೆ ಕಾನೂನಿನ ಸಂದಿಗ್ಧತೆಗಳಲ್ಲಿ ತೊಳಲಾಡಿದರೆ ಭಾರತದಲ್ಲಿದ್ದ ಬ್ರಿಟಿಷ್ ನೆಲಸಿಗರು ಅಸಹನೀಯ ನಿರ್ಬಂಧಗಳ ಹಿಡಿತದಲ್ಲಿ ಬದುಕಿರಬೇಕಾಗಿತ್ತು. ೧೭೭೧ರಲ್ಲಿ ಕಾಮನ್ಸ್ ಸಭೆ ನೇಮಕಮಾಡಿದ ರಹಸ್ಯ ಸಮಿತಿ ಒಪ್ಪಿಸಿದ ವರದಿಯಲ್ಲಿ ಕಾಣಿಸಿದ ಈಸ್ಟ್ ಇಂಡಿಯಾ ಕಂಪನಿಯ ದಬ್ಬಾಳಿಕೆಯ ಕತೆಗಳ ಹಿನ್ನೆಲೆಯಲ್ಲಿ ಭಾರತದ ಬ್ರಿಟಿಷ್ ಪ್ರಜೆಗಳ ವಿಷಯವಾಗಿ ಅವರ ಪ್ರವೇಶ ಮತ್ತು ನೆಲಸಿಕೆಯ ವಿಷಯದಲ್ಲಿ ಕಠಿಣ ಶಾಸನವನ್ನು ಹೇರಲಾಯಿತು. ಐರೋಪ್ಯ ಸಂಜಾತನೆನಿಸುವ ಯಾವನೇ ಬ್ರಿಟಿಷ್ ಪ್ರಜೆ ಮುಖ್ಯ ಕೇಂದ್ರಗಳಿಗೆ ಹತ್ತು ಮೈಲಿಗಿಂತ ಹೆಚ್ಚಿನ ದೂರದಲ್ಲಿ ವಾಸಮಾಡಲು ಕಂಪನಿ, ಗವರ್ನರ್ ಅಥವಾ ಗವರ್ನರ್–ಜನರಲ್‌ನಿಂದ ಪ್ರತ್ಯೇಕ ಲೈಸೆನ್ಸ್ ಪಡೆದುಕೊಳ್ಳಬೇಕಾಗಿತ್ತು.[೧]

ನಿಯಂತ್ರಕ ಮಂಡಳಿಯ ಹಕ್ಕಿಗೆ ಒಳಪಟ್ಟು, ಕಂಪನಿಯ ನಿರ್ದೇಶಕ ಮಂಡಳಿ ಅಂತಹ ಲೈಸನ್ಸನ್ನು ನಿರಾಕರಿಸುವ ಹಕ್ಕನ್ನು ಹೊಂದಿತ್ತು.[೨] ಸರ್ಕಾರ ನೆಲಸಿಗ ಲೈಸೆನ್ಸ್ ಮಂಜೂರಾತಿ ವಿಷಯದಲ್ಲಿ ವಿಶೇಷ ಸಂದರ್ಭಗಳನ್ನು ಹೊರತುಪಡಿಸಿ ಉಳಿದಂತೆ ಉದಾರವಾಗಿರಬಾರದು ಎಂದು ವಿಧಿಸಲಾಗಿತ್ತು ಮತ್ತು ಮಂಜೂರುಮಾಡಿದ ಲೈಸೆನ್ಸನ್ನು ರದ್ದುಮಾಡುವ ಹಕ್ಕುಳ್ಳದ್ದಾಗಿತ್ತು.[೩] ಖೋಟಾ ಲೈಸೆನ್ಸ್ ಮತ್ತು ಲೈಸೆನ್ಸ್ ವಿನಾ ವಸತಿ ಹೂಡುವುದು ಕ್ರಿಮಿನಲ್ ಅಪರಾಧವೆನಿಸಿ ಅಂತಹವರು ದಂಡ ಮತ್ತು ಕಾರಾಗೃಹವಾಸದ ಶಿಕ್ಷೆಗೆ ಒಳಪಡುತ್ತಿದ್ದರು.[೪] ಸೇವೆಯಿಂದ ವಜಾಮಾಡಲ್ಪಟ್ಟವರು ಅಥವಾ ನಿವೃತ್ತರಾದವರು ಎಲ್ಲಾದರೂ ಹತ್ತು ಮೈಲು ವ್ಯಾಪ್ತಿಗಿಂತ ಹೊರಗೆ ಕಾಣಿಸಿದರೆ ದಂಡನೆಗೆ ಅರ್ಹರಾಗುತ್ತಿದ್ದರು[೫]. ಲೈಸೆನ್ಸ್ ಇಲ್ಲದಿರುವ ಬ್ರಿಟಿಷರನ್ನು ಅವರ ದೇಶಕ್ಕೆ ಕಡ್ಡಾಯವಾಗಿ ಮರಳಿಸಲಾಗುತ್ತಿತ್ತು[೬]. ಲೈಸೆನ್ಸ್ ಪಡೆದವರಾದರೂ ತಾವಿರುವ ಜಿಲ್ಲೆಯ ಕಚೇರಿಯಲ್ಲಿ ನೊಂದಣಿ ಮಾಡಿಕೊಳ್ಳಲು ಬದ್ಧರಾಗಿದ್ದರು[೭]. ಇವರುಗಳು ಬ್ರಿಟಿಷ್ ಇಂಡಿಯಾ[೮] ಮತ್ತು ಆಶ್ರಿತ ಸಂಸ್ಥಾನಗಳಲ್ಲಿ[೯] ಮಾಡುವ ಅಪರಾಧಗಳಿಗೆ ಇಂಡಿಯಾದಲ್ಲೂ ಬ್ರಿಟನಿನಲ್ಲೂ ಎರಡೂ ಕಡೆ ದಂಡನೆ ವಿಧಿಸಬಹುದಾಗಿತ್ತು.[೧೦] ಅವರ ದೆಸೆಯಿಂದ ಯಾವುದೇ ತೊಡಕು ತೊಂದರೆಬಾರದಂತೆ ಅವರು ಹಣದ ಲೇವಾದೇವಿ ಮಾಡಕೂಡದೆಂದೂ, ಆಶ್ರಿತ ಸಂಸ್ಥಾನಗಳ ರಾಜರುಗಳೊಂದಿಗೆ, ವಿದೇಶೀ ಕಂಪನಿಗಳೊಂದಿಗೆ,[೧೧] ಐರೋಪ್ಯ ವ್ಯಾಪಾರಿಗಳೊಂದಿಗೆ ಹಣಕಾಸಿನ ವ್ಯವಹಾರವನ್ನು ಅವರು ಮಾಡಬಾರದು ಎಂಬ ನಿರ್ಬಂಧ ಅವರನ್ನು ಹತವೀರ್ಯರನ್ನಾಗಿ ಮಾಡಿತ್ತೆಂದೇ ಹೇಳಬೇಕು. ಭಾರತೀಯರು ಅವರ

---

೧. ೩೩ ಜಿಯೋ. ||| ಸಿ೫೨, ಎಸ್. ೯೮
೨. ೩೩ ಜಿಯೋ, ||| ಸಿ ೫೨. ಎಸ್. ೩೮
೩. ಅದೇ, ಎಸ್. ೩೩
೪. ಅದೇ, ಎಸ್. ೩೭
೫. ೩೩. ಜಿಯೋ ||| ಸಿ. ೫೨ ಎಸ್. ೧೩೪
೬. ೫೩ ಜಿಯೋ ||| ಸಿ. ೧೫೫ ಎಸ್. ೧೦೪
೭. ಅದೇ ಸಿ. ೧೦೮
೮. ೨೪, ಜಿಯೋ ||| ಸಿ. ೨೫ ಎಸ್.೪೪
೯. ೭೬, ಜಿಯೋ ||| ಸಿ. ೫೭, ಎಸ್. ೬೭
೧೦. ೫೩ ಜಿಯೊ |||ಸಿ. ೧೫೫, ಎಸ್ ೩೫
೧೧. ೩೭ ಜಿಯೋ ||| ಸಿ. ೧೪೨ ಎಸ್ ೩೦

ದಬ್ಬಾಳಿಕೆಗೆ ಒಳಗಾಗದಂತೆ ತಡೆಯಲು ಶೇ.೧೨ಕ್ಕಿಂತ ಹೆಚ್ಚುಬಡ್ಡಿಯನ್ನು ವಸೂಲು ಮಾಡಬಾರದೆಂಬ, ಹಾಗೇನಾದರೂ ಮಾಡಿದಲ್ಲಿ ಪ್ರತಿ ಅಪರಾಧಕ್ಕೆ ಮೂರುಪಟ್ಟು ಜುಲ್ಮಾನೆ ವಿಧಿಸುವುದಾಗಿಯೂ ಶಾಸನವಿತ್ತು.[೧] ಭಾರತೀಯ ಪ್ರಜೆಗಳ ಮೇಲೆ ಬ್ರಿಟಿಷರು ವೈಯಕ್ತಿಕವಾಗಿ ದೈಹಿಕ ಅಕ್ರಮ,[೨] ಕೈಸಾಲಗಳ ವಿಷಯದಲ್ಲಿ[೩] ಅಪರಾಧಗಳನ್ನೆಸಗಿದಲ್ಲಿ ಅಂಥ ಬ್ರಿಟಿಷ್ ಪ್ರಜೆ ಸಂಬಂಧಪಟ್ಟ ನ್ಯಾಯಪಾಲಕರ (ಜಸ್ಟಿಸ್ ಆಫ್ ದ ಪೀಸ್) ವ್ಯಾಪ್ತಿಯಲ್ಲಿ ಬರುತ್ತಿದ್ದರು. ಅಲ್ಲದೆ ಐರೋಪ್ಯ ಸಂಜಾತನಾದ ಪ್ರತಿಯೊಬ್ಬ ಬ್ರಿಟಿಷ್ ಪ್ರಜೆ ಜಿಲ್ಲಾ ಕಚೇರಿಯಲ್ಲಿ ತನ್ನ ದೇಶೀ ಚಾಕರರು, ದಲ್ಲಾಳಿಗಳು ಮತ್ತು ಪಾಲುಗಾರರ[೪] ಹೆಸರನ್ನು ನೊಂದಾಯಿಸಬೇಕಾಗಿತ್ತು. ಹಾಗೆ ಮಾಡದಿದ್ದಲ್ಲಿ ದೇಶೀಯರ ಮೇಲೆ ಹಣದ ವ್ಯವಹಾರದ ತಕ್ಸೀರುಗಳನ್ನು ಹೂಡುವುದಕ್ಕೂ, ಅವರಿಂದ ಹಣ ಪಡೆಯುವುದಕ್ಕೂ, ಬ್ರಿಟಿಷರಿಗೆ ಸಾಧ್ಯವಾಗದ ಪರಿಸ್ಥಿತಿ ಇತ್ತು.[೫]

ಆಳರಸ ಜನಾಂಗವು ತನ್ನ ಮೇಲೆಯೆ ಹೊರಿಸಲ್ಪಟ್ಟಿದ್ದ ಇಂಥ ನಿಷ್ಠುರ ನಿರ್ಬಂಧಗಳ ಬಗ್ಗೆ ಅದು ಅಸಮಾಧಾನಪಟ್ಟುಕೊಂಡಿದ್ದರೂ ತಾನಾಗಿ ಏನನ್ನೂ ಮಾಡುವ ಸ್ಥಿತಿಯಲ್ಲಿರಲಿಲ್ಲ. ಭಾರತದಲ್ಲಿನ ತಮ್ಮ ಸಾಮ್ರಾಜ್ಯದ ಸ್ಥಿರತೆಗೆ ಭಂಗತರುವಂತಹ ಶಕ್ತಿಗಳನ್ನು ಹೊರಗಿಡುವ ಸಲುವಾಗಿ ಈ ನಿರ್ಬಂಧಗಳನ್ನು ವಿಧಿಸಿದ್ದಾರೆಂದು ಮೊದಮೊದಲು ಭಾವಿಸಿದರೂ, ಕಾಲಕಳೆದಂತೆ, ಸ್ಥಳೀಯ ರಾಜರುಗಳನ್ನು ಒಬ್ಬೊಬ್ಬರನ್ನಾಗಿ ಗೆದ್ದು, ಭಾರತದ ಸಾಮ್ರಾಜ್ಯ ಸಾಕಷ್ಟು ಬಲಯುತವಾದ ಮೇಲೆ ಈ ನಿರ್ಬಂಧಗಳ ವಿರುದ್ಧ ಟೀಕೆಗಳು, ಕೋಪ ಇವುಗಳನ್ನು ಈ ಮೊದಲು ಅದಕ್ಕೆ ಬೆಂಬಲವಾಗಿದ್ದವರೇ ಹೊರಹಾಕಲಾರಂಭಿಸಿದರು. ಇಂಥ ಭಾವನೆಗಳನ್ನು ಬ್ರಿಟಿಷ್ ಸರ್ಕಾರ ಅರ್ಥಮಾಡಿಕೊಂಡರೂ ಅಂದಿನ ಸರ್ಕಾರಿ ಪದ್ಧತಿಯಲ್ಲಿ ಇಂಥ ನಿರ್ಬಂಧಗಳಿಲ್ಲದೆ ಒಳಪ್ರವೇಶ ಬಯಸಿ ಬರುವ ಬ್ರಿಟಿಷ್ ನೆಲಸಿಗರನ್ನು ತಹಬಂದಿಯಲ್ಲಿಡುವುದು ಸಾಧ್ಯವಾಗದೆ ಹೋದೀತೆಂಬ ಅಂಜಿಕೆ ಇತ್ತು. ಸರಿಸಮಾನದ್ದಾಗಿದ್ದು ಸ್ವತಂತ್ರವಾಗಿ ಶಾಸನ ನಿರ್ಮಾಣದ ಹಕ್ಕು ಪಡೆದಿರುವ ಬ್ರಿಟಿಷ್ ಆಧಿಪತ್ಯಗಳು ನೆಲಸಿಗರಿಗೆ ಒಂದೊಂದು ಬಗೆಯಾಗಿ ಪ್ರವೇಶ ನೀಡಿ ಅಥವಾ ನೀಡದೆ ತಮ್ಮ ಮಡಿಲಲ್ಲಿ ಒಂದು ಅಸಂತೃಪ್ತ ಜನಸಂದೇಹವನ್ನು ಸೃಷ್ಟಿಮಾಡೀತೆಂಬ ಭಯ ಬ್ರಿಟಿಷ್ ಪಾರ್ಲಿಮೆಂಟನ್ನು ತಡೆಹಿಡಿದಿತ್ತು. ಭಾರತಕ್ಕೆ ವಲಸೆ ಬರುವವರೊಡನೆ ಸೌಹಾರ್ದವಾಗಿರುವುದೂ ಮತ್ತು ಅವರ ಮೇಲೆ ಹಿಡಿತವನ್ನು ಹೊಂದಿರುವುದೂ – ಈ ಎರಡನ್ನೂ ಅತ್ಯಗತ್ಯವೆಂದು ಅದು ಭಾವಿಸಿತ್ತು. ಸಮಾನಾಧಿಕಾರ ಹಾಗೂ ಕಾನೂನಿನ ಅಧಿಕಾರವನ್ನು ಹೊಂದಿರುವ ಸರ್ಕಾರಗಳು ಇಂತಹ ವಲಸೆಗಾರರ ವಿರುದ್ಧ ತಮ್ಮ ರಾಜ್ಯಗಳಲ್ಲಿ ವಿವಿಧ ರೀತಿಯ ಕಾನೂನಿನಡಿಯಲ್ಲಿ ಕ್ರಮ ತೆಗೆದುಕೊಂಡರೆ, ಇದರಿಂದ ನೊಂದವರು ತಮ್ಮ ವಿರುದ್ಧ ಒಟ್ಟುಗೂಡಬಹುದು ಎಂಬ ಶಂಕೆಯೂ ಸಂಸತ್ತಿಗೆ ಇದ್ದಿತು. ಅದೇ ಸಮಯದಲ್ಲಿ ಎಲ್ಲಾ ಕಡೆಗಳಿಗೂ ಅನ್ವಯವಾಗುವಂತಹ ಕಾನೂನನ್ನು ಜಾರಿಗೆ ತಂದುದು ಇಂಗ್ಲಿಷ್ ವಲಸೆಗಾರರಿಗೆ ದ್ವಾರವನ್ನು ಮುಕ್ತವಾಗಿ ತೆರೆದರೆ, ಅದರಿಂದ ಸ್ಥಳೀಯರ ಮೇಲೆ ದಬ್ಬಾಳಿಕೆ ಹೆಚ್ಚಾಗಬಹುದು ಎಂಬ ಹೆದರಿಕೆಯನ್ನು ಅಲ್ಲಗೆಳೆಯಲು ಸಾಧ್ಯವಿರಲಿಲ್ಲ. ನೆಲಸಿಗರು ದೇಶೀಯರ ಮೇಲೆ ದಬ್ಬಾಳಿಕೆ ನಡೆಸುವ ಪ್ರಸಂಗ ಮರುಕಳಿಸದಂತೆ ಏಕರೂಪಿ ಶಾಸನರಚನೆ ಮತ್ತು ಸಮನ್ವಯಮುಖೀ ಧೋರಣೆಗಳು ಅಗತ್ಯವಾಗಿದ್ದವು. ಕೇಂದ್ರೀಕರಣ

---

೧. ೧೩, ಜಿಯೋ III ಸಿ. ೬೩, ಎಸ್. ೩೦

೨. ೫೩, ಜಿಯೋ III ಸಿ ೧೫೫ಮ ಎಸ್ ೧೦೫

೩. ಅದೇ ಎಸ್. ೧೬

೪. ೨೧ ಜಿಯೋ. III ಸಿ ೭೦ ಎಸ್.೧೩

೫. ಅದೇ ಸೆ. ೧೬

ಅವಶ್ಯವಾಗಿತ್ತು. ಒಂದು ಕಡೆಯ ಶಾಸನದ ಹಿಡಿತದಿಂದ ತಪ್ಪಿಸಿಕೊಳ್ಳಲು ಇನ್ನೊಂದು ಪ್ರಾಂತಕ್ಕೆ ಪರಾರಿಯಾಗಲು ಸಾಧ್ಯವಿಲ್ಲದಂಥ ಸನ್ನಿವೇಶ ತರಬೇಕಾಗಿತ್ತು. ಅಂತೂ ಇಡೀ ಭಾರತವನ್ನು ತನ್ನ ಕ್ಷೇತ್ರವೆಂದು ಪರಿಭಾವಿಸಿ ಶಾಸನ ರಚನೆಯಲ್ಲೂ, ವಿದ್ಯಮಾನಗಳ ನಿಯಂತ್ರಣದಲ್ಲೂ ಸರ್ವಶಕ್ತವೆನಿಸುವ ಒಂದು ಕೇಂದ್ರ ಸರ್ಕಾರವೇ ಸಮಸ್ಯೆಗೆ ಪರಿಹಾರವೆಂದು ಕಂಡುಬಂದ ಕಾರಣದಿಂದ ೧೮೩೩ರಲ್ಲಿ ಬ್ರಿಟಿಷ್ ಪ್ರಜೆಗಳು, ಇತರ ವಿದೇಶೀಯರು, ಸ್ಥಳೀಯರು, ಸಾರ್ವಭೌಮರಿಂದ ನೇಮಕವಾದ ನ್ಯಾಯಾಲಯಗಳು, ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಪ್ರದೇಶಗಳು ಅಥವಾ ಇತರ ಪ್ರದೇಶಗಳು ಕಂಪನಿಯ ನೌಕರರು– ಇವರೆಲ್ಲರಿಗೂ ಅನ್ವಯವಾಗುವಂತೆ ಹೊಸದಾಗಿ ಕಾನೂನು ಮತ್ತು ನಿಯಮಗಳನ್ನು ಮಾಡಲು, ಈಗಿರುವುದನ್ನು ತಿದ್ದುಪಡಿಮಾಡಲು ಅಥವಾ ರದ್ದು ಮಾಡಲು ಬಂಗಾಳದ ಫೋರ್ಟ್ ವಿಲಿಯಂನಲ್ಲಿರುವ ಗವರ್ನರ್ ಜನರಲ್ ಇನ್ ಕೌನ್ಸಿಲ್ ಅಧಿಕಾರವನ್ನು ಪಡೆದನು.[೧]

ಶಾಸನಿಕ ಅಧಿಕಾರವನ್ನು ಭಾರತದ ಗವರ್ನರ್ ಜನರಲ್ ಇನ್‌ಕೌನ್ಸಿಲ್‌ನಿಗೆ ಮಾತ್ರವೇ ಒಪ್ಪಿಸುವ ಮೂಲಕವಾಗಿ ಒಂದು ಕೇಂದ್ರ ಸರ್ಕಾರ ಜನ್ಮವೆತ್ತಿತು. ಆದರೆ ಮುಂಬಯಿ ಮತ್ತು ಮದರಾಸು ಸಂಸ್ಥಾನಗಳು ತಮ್ಮ ತಮ್ಮ ಕ್ಷೇತ್ರದಲ್ಲಿ ಇದುವರೆಗಿನಂತೆ ಶಾಸನಿಕವಾಗಿ ಸಿವಿಲ್ ಮತ್ತು ಮಿಲಿಟರಿ ಸರ್ಕಾರದ ಪರಮಾಧಿಕಾರವನ್ನು ಪಡೆದಿರುವ ತನಕ ಕೇಂದ್ರವು ಸರ್ವಶಕ್ತವೆಂದು ಹೇಳುವುದು ಶಕ್ಯವಿರಲಿಲ್ಲ. ಹೊಸದಾಗಿ ಸೃಷ್ಟಿಗೊಂಡ ಕೇಂದ್ರಾಧಿಕಾರಕ್ಕೂ ಈ ಆಡಳಿತಾಧಿಕಾರಗಳಿಗೂ ನಡುವೆ ಸಂಘರ್ಷದ ಸಾಧ್ಯತೆ ಇರುತ್ತಿತ್ತು. (ಇವುಗಳ ಕೈಯಲ್ಲಿನ ಶಾಸನಿಕ ಅಧಿಕಾರವನ್ನು ಕಸಿದುಕೊಳ್ಳದೆ ಹೋಗಿದ್ದಲ್ಲಿ) ಶಾಂತಿ ಮತ್ತು ಸುಗಮ ಆಡಳಿತದ ಸಲುವಾಗಿ ರೂಪಿಸಿದ ಧೋರಣೆಯ ಮೂಲಕ ಕೇಂದ್ರೀಯವೂ ಪ್ರಬಲವೂ ಆದ ಒಂದು ಸರ್ಕಾರ ಸೃಷ್ಟಿಗೊಳ್ಳುವುದು ತಪ್ಪಿಹೋಗುತ್ತಿತ್ತು.

ಹೊಸದಾಗಿ ರೂಪಿತವಾದ ಭಾರತೀಯ ರಾಜ್ಯಭಾರ ಪದ್ಧತಿಯ ಈ ದೌರ್ಬಲ್ಯವನ್ನು ಹತ್ತಿಕ್ಕುವ ಸಲುವಾಗಿ ಈತನಕ ಜವಾಬ್ದಾರಿ ಸರ್ಕಾರದ ಉನ್ನತ ಪೀಠದಲ್ಲಿ ಆಸೀನರಾಗಿದ್ದ ಮುಂಬಯಿ ಮತ್ತು ಮದರಾಸು ಸರ್ಕಾರಗಳನ್ನು ಅಲ್ಲಿಂದ ಇಳಿಸಿ' ಪ್ರತಿ ಸಂಸ್ಥಾನವೂ ಗವರ್ನರ್ ಮತ್ತು ಮೂವರು ಕೌನ್ಸಿಲರುಗಳುಳ್ಳ ಕಾರ್ಯಾಂಗ ಸರ್ಕಾರವನ್ನು ಹೊಂದಿ ಆಡಳಿತ ನಡೆಸಲು ಬಾಧ್ಯವಾದದ್ದೆಂದು ಸಾರಲಾಯಿತು. ಅದಕ್ಕೆ ಸರ್ಕಾರದ ಅಧಿಕಾರವನ್ನು ವಹಿಸಿಕೊಡುವ (ವೆಸ್ಟೆಡ್ ಇನ್) ಪ್ರಶ್ನೆ ಇರಲಿಲ್ಲ. ಅಂತೆಯೇ ಇಡೀ ಸಿವಿಲ್ ಮತ್ತು ಮಿಲಿಟರಿ ಆಡಳಿತದ ಸರ್ವ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣವನ್ನು ಗವರ್ನರ್ ಜನರಲ್ ಇನ್ ಕೌನ್ಸಿಲ್‌ನಿಗೆ ವಹಿಸಿಕೊಡಲಾಯಿತು.[೨]

ಇದುವೇ ಭಾರತದಲ್ಲಿ ಸಾಮ್ರಾಜ್ಯಶಾಹಿ ಪದ್ಧತಿಯ ಸರ್ಕಾರ ಎಂದು ಕರೆಯಲ್ಪಡುವಂಥದ್ದು. ಇದರ ಸ್ಥಾಪನೆಗೆ ಎಷ್ಟೋ ಮುನ್ನವೇ ಯುದ್ಧ, ಸಂಧಿ ಒಡಂಬಡಿಕೆಗಳ ವಿಷಯದಲ್ಲಿ (ತುರ್ತು ಪರಿಸ್ಥಿತಿಯೊಂದನ್ನು ಹೊರತುಪಡಿಸಿ) ಮೊದಲಿಂದಲೂ, ತರುವಾಯದ ಶಾಸನಗಳ ಮೂಲಕ ಕರತೆರಿಗೆ ಸಂಗ್ರಹ ಮತ್ತು ವಿಲೇವಾರಿ ವಿಷಯದಲ್ಲಿಯೂ, ಅಲ್ಲಿನ ಸಿವಿಲ್ ಮತ್ತು ಮಿಲಿಟರಿ ಸರ್ಕಾರದ ವಿಷಯದಲ್ಲಿಯೂ ಬಂಗಾಳ

---

೧. ಈಸ್ಟ್ ಇಂಡಿಯಾ ಕಂಪನಿಯ ಜೊತೆಗೊಂದು ವ್ಯವಸ್ಥೆಗಾಗಿಯೂ ಹಿಸ್ ಮೆಜಸ್ಟಿಯವರ ಇಂಡಿಯನ್ ಪ್ರದೇಶಗಳ ಉತ್ತಮ ಆಡಳಿತಕ್ಕಾಗಿಯೂ ಮಾಡಿ ಒಂದು ಶಾಸನದ ಸೆಕ್ಷನ್ ೩ ಮತ್ತು ೪ರ ೪೩ವಿಲ್ ಸಿ ೮೫

೨. ವಿಲಿಯಮ್ IV ಸಿ ೮೫ರಲ್ಲಿ ೩ ಮತ್ತು ೪ರ ಸೆಕ್ಷನ್ ೪೩, ಈಸ್ಟ್ ಇಂಡಿಯಾ ಕಂಪನಿ ಜೊತೆ ಏರ್ಪಾಟಿನ ಬಗ್ಗೆ ಹಾಗೂ ಸಾರ್ವಭೌಮನ ಇಂಡಿಯನ್ ಪ್ರದೇಶಗಳ ಉತ್ತಮ ಆಡಳಿತದ ಬಗ್ಗೆ ಶಾಸನ

ಸರ್ಕಾರಕ್ಕೆ[೧] ಮುಂಬಯಿ, ಮದರಾಸು ಸರ್ಕಾರಗಳಿಗಿಂತ ಹೆಚ್ಚಿನ ಅಧಿಕಾರ ವಹಿಸಿಕೊಟ್ಟದ್ದು ಕಂಡುಬರುತ್ತದೆ[೨]. ಹಾಗಿದ್ದರೂ ಕೂಡ ಈ ದೆಸೆಯಿಂದ ಮುಂಬಯಿ ಮದರಾಸುಗಳು ೧೮೩೩ಕ್ಕೆ ಪೂರ್ವದಲ್ಲಿ ಆಂತರಿಕ ವಿಷಯಗಳಲ್ಲಿ ಬಂಗಾಳ ಸರ್ಕಾರಕ್ಕಿಂತ ಕಮ್ಮಿಯಾಗಿದ್ದವೆಂದು ಊಹಿಸಬಾರದು[೩]. ತಮ್ಮ ಸರ್ಕಾರದ ಎಲ್ಲ ಹುಕುಂ ಮತ್ತು ಠರಾವುಗಳ ಪ್ರತಿಗಳನ್ನು ಬಂಗಾಳ ಸರ್ಕಾರಕ್ಕೆ ಕಳಿಸಿದ್ದರಿಂದ ಅವುಗಳು ನಿಮ್ನ ಸ್ಥಾನದಲ್ಲಿದ್ದುವೆಂದೂ ತೀರ್ಮಾನಿಸಲಾಗದು. ತನ್ನ ಗಡಿ ಪ್ರದೇಶದ ಹೊರಗಿನ ರಾಜ್ಯಗಳ ಮೇಲಣ ಅಧಿಕಾರವನ್ನು ಬಂಗಾಳ ಸರ್ಕಾರ ಪಡೆದಿದ್ದರೂ ಮುಂಬಯಿ ಮದರಾಸು ಸರ್ಕಾರಗಳಿಗೆ ತಂತಮ್ಮ ಕ್ಷೇತ್ರದಲ್ಲಿ ಸಿವಿಲ್ ಮತ್ತು ಮಿಲಿಟರಿ ಆಡಳಿತ ನಡೆಸುವುದಕ್ಕೂ, ಸ್ವಾರ್ಜಿತ ಭೂಪ್ರದೇಶದಲ್ಲಿ ಆಡಳಿತ ನಡೆಸುವುದಕ್ಕೂ, ಆದಾಯ ಸಂಗ್ರಹಣೆಗೂ ಅಧಿಕಾರ ಕೊಡಲಾಗಿತ್ತು. ತಂತಮ್ಮ ಕ್ಷೇತ್ರದಲ್ಲಿ ಅವು ಬಂಗಾಳ ಸರ್ಕಾರಕ್ಕೆ ಸರಿಸಮನಾಗಿ[೪] ಮತ್ತು ಸ್ವತಂತ್ರವಾಗಿ ಶಾಸನ ರಚಿಸಬಲ್ಲವಾಗಿದ್ದವು. ಆದ್ದರಿಂದ ಅವು ತಮ್ಮ ಹುಕುಂ ಪ್ರತಿಗಳನ್ನು ಬಂಗಾಳಕ್ಕೆ ಕಳಿಸಿದ್ದು ಕೇವಲ ಮಾಹಿತಿಗಾಗಿ ಹೊರತು ಅದರ ಅಂತಿಮ ಅನುಜ್ಞೆಗಾಗಿ ಅಲ್ಲವೆಂದು ನಾವು ತಿಳಿಯಬಹುದು. ಬಂಗಾಳ ಸರ್ಕಾರದ ನಡತೆಯನ್ನು ಗಮನಿಸಿದರೂ ಇದೇ ಅಂಶ ಪ್ರಕಟವಾಗುತ್ತದೆ. 'ಇದು ಸರಿಯಲ್ಲ, ಮುಂದಕ್ಕೆ ಹೀಗೆ ಮಾಡಬೇಡಿ,' ಎಂದು ಸೂಚಿಸುವುದಕ್ಕಿಂತ ಹೆಚ್ಚಿನ ಅಧಿಕಾರ ಚಲಾವಣೆಯುನ್ನು ಬಂಗಾಳ ಎಂದೂ ಮಾಡಲಿಲ್ಲ. ಹಾಗೆ ಮಾಡುವುದು ಸಂವಿಧಾನದ ಉಲ್ಲಂಘನೆ ಆಗುತ್ತಿತ್ತೋ ಇಲ್ಲವೋ,[೫] ಏನಿದ್ದರೂ ಅದು ವಿವೇಕಯುತವಾದದ್ದಲ್ಲವೆಂದು ಭಾವಿಸಲಾಗಿತ್ತು.[೬]

ಸರ್ಕಾರದಲ್ಲಿ ಸಾಮ್ರಾಜ್ಯ ಪದ್ಧತಿ ಸ್ಥಾಪನೆಗೊಂಡದ್ದರ ಜೊತೆಗೇ ಹಣಕಾಸು ವ್ಯವಸ್ಥೆಯಲ್ಲೂ ಸಾಮ್ರಾಜ್ಯ ಪದ್ಧತಿ ಸ್ಥಾಪಿತವಾಯಿತು. ಇದಕ್ಕೆ ಮೊದಲು ಭಾರತದ ಪ್ರಾಂತ್ಯಗಳನ್ನು ಗಡಿಯಾರಗಳಿಗೆ ಹೋಲಿಸಬಹುದಾಗಿತ್ತು – ಪ್ರತಿಯೊಂದಕ್ಕೂ ಅದರದ್ದೇ ಮೇನ್‌ಸ್ಪ್ರಿಂಗ್ ಇರುತ್ತಿತ್ತು. ಶಾಸನಿಕ ಅಧಿಕಾರ, ಶಿಕ್ಷಿಸುವ ಅಧಿಕಾರ ಹಾಗೂ ಕರಭಾರ ವಿಧಿಸುವ ಅಧಿಕಾರವುಳ್ಳ ಸಾರ್ವಭೌಮ ಪ್ರಭುತ್ವದ ಅಧಿಕಾರವನ್ನು ಅವುಗಳಿಗೆ ಕೊಡಲಾಗಿತ್ತು. ಹಣಕಾಸಿನ ಮಟ್ಟಿಗೆ ಅವು ಸ್ವತಂತ್ರವೆಂದೇ ಹೇಳಬಹುದಾಗಿತ್ತು. ಪ್ರತಿ ಪ್ರಾಂತ್ಯವೂ ತನ್ನ ವಲಯದೊಳಗಡೆ ಶಾಂತಿ, ಶಿಸ್ತುಗಳ ಪಾಲನೆಮಾಡಿ ಒಳ್ಳೆಯ ಆಡಳಿತ ನಡೆಸುವುದಕ್ಕೂ ಕರ ತೆರಿಗೆಗಳನ್ನು ವಿಧಿಸುತ್ತ, ಬದಲಾಯಿಸುತ್ತ ಅಗತ್ಯವಿದ್ದಷ್ಟು ಆದಾಯವನ್ನು ಸಂಗ್ರಹಿಸುವುದಕ್ಕೂ ಬದ್ಧವಾಗಿರುತ್ತಿತ್ತು.

---

೧. ಅದೇ ಸೆಕ್ಷನ್ ೫೬. ಸೆ ೫೭ ರಂತೆ ಸಂಸ್ಥಾನಗಳಲ್ಲಿನ ಕೌನ್ಸಿಲರ್ ಸಂಖ್ಯೆಯನ್ನು ಕಡಿಮೆ ಮಾಡುವುದೂ ಅಥವಾ ಕೌನ್ಸಿಲರ್‌ಗಳಿಲ್ಲದೆ ಗವರ್ನರ್ ಒಬ್ಬನೇ ಆಡಳಿತ ನಡೆಸುವುದೂ ಸಾಧ್ಯವಾಗುತ್ತಿತ್ತು. ೧೮೩೩ರಲ್ಲಿ ಕೌನ್ಸಿಲರ್ ಸಂಖ್ಯೆಯನ್ನು ೩ರಿಂದ ೨ಕ್ಕೆ ಇಳಿಸಿದ್ದು ಇದೇ ಅಧಿಕಾರದ ಅನುಷ್ಠಾನವೆಂದು ತಿಳಿಯತಕ್ಕದ್ದು

೨. ವಿಲಿಯಮ್ IV, ೩ ಮತ್ತು ೪, ಸಿ ೮೫ ಎಸ್ ೩೯

೩. ೧೩ ಜಿಯೋ 111ಸಿ ೫೨ ಎಸ್ ೪೦

೪. ೧೩. ಜಿಯೋ III ಸಿ. ೬೩ ಎಸ್. ೭

೫. ಆಡಳಿತ ಮಂಡಳಿಯು ಬಂಗಾಳ ಸರ್ಕಾರಕ್ಕೆ ಬರೆದ ೧೮೩೪ರ ಡಿಸೆಂಬರ್ ೧೦ನೇ ದಿನಾಂಕದ ೪೪ನೆಯ ಕ್ರಮಸಂಖ್ಯೆಯ ಪತ್ರವನ್ನು ನೋಡಿ (ಅದರ ಮೂಲಪ್ರತಿ ಇಂಡಿಯಾ ಆಫೀಸ್ ರೆಕಾರ್ಡ್ಸ್‌ನಲ್ಲಿದೆ)

೬. ೧೮೩೧ರ ಸೆಪ್ಟೆಂಬರ್ ೧೪ರಂದು ಲಾರ್ಡ್ ವಿಲಿಯಂ ಬರೆದ ಪತ್ರವನ್ನು ನೋಡಿ. ಎಚ್ ಆಫ್. ಸಿಯಲ್ಲಿರುವ ೧೮೬೧ರ ೩೦೭ನೆಯ ರಿಟರ್ನ್‌ನಲ್ಲಿ ಪ್ರಕಟವಾಗಿರುವ ಸರ್ಕಾರದ ಕಾರ್ಯದರ್ಶಿಯವರು ಬಂಗಾಳದ ಸರ್ಕಾರಕ್ಕೆ ಬರೆದು ಲಾರ್ಡ್ ಕ್ಯಾನಿಂಗ್ ಅವರ ಪತ್ರದೊಂದಿಗೆ (ದಿ. ಡಿಸೆಂಬರ್ ೯, ೧೮೫೯) ಕಳುಹಿಸಿದ್ದ ಪತ್ರವನ್ನೂ ನೋಡಿ

ಅಗತ್ಯಬಿದ್ದಾಗ ಒಂದರಿಂದ ಇನ್ನೊಂದು ಹಣ ಸಾಲ ಪಡೆಯುವಾಗ ಕಂಪನಿಯ ಖಜಾನೆ ಎಲ್ಲರಿಗೂ ಸೇರಿದ್ದು ಎಂಬ ಭಾವನೆ ಇರುತ್ತಿತ್ತು. ಇದೆಲ್ಲ ೧೮೩೩ರ ಶಾಸನದಲ್ಲಿ ಮಾರ್ಪಾಟಾಯಿತು. ಪ್ರತಿಯೊಂದು ಪ್ರಾಂತ್ಯದ ಆಡಳಿತ ಮತ್ತು ಆದಾಯ ಎರಡನ್ನೂ ಸಮಿತಿ ಸಮೇತನಾದ ಗವರ್ನರ್–ಜನರಲ್‌ನಿಗೆ ವಹಿಸಿಕೊಡಲಾಯಿತು. ಅಂದಿನಿಂದ ಪ್ರಾಂತದ ಆದಾಯ ಮತ್ತು ಸೇವೆಗಳು ಭಾರತ ಸರ್ಕಾರದ ಸೊತ್ತಾದವು. ಪ್ರಾಂತಗಳು ಭಾರತ ಸರ್ಕಾರಕ್ಕಾಗಿ ಕರಗಳನ್ನು ಎತ್ತುವ ಮತ್ತು ವೆಚ್ಚಮಾಡುವ ಉಪಕರಣಗಳಾದವು. ತಮ್ಮ ಹೆಸರಲ್ಲಿಯೇ ಹೊಸ ಕರಭಾರ ಹೊರಿಸುವುದಾಗಲಿ ಹಳೆಯವನ್ನು ಸಂಗ್ರಹಿಸುವುದಾಗಲಿ ಅವುಗಳ ಕರ್ತವ್ಯವಾಗಿ ಉಳಿಯಲಿಲ್ಲ. ಇದೇ ರೀತಿಯಾಗಿ ಅವುಗಳು ನೀಡುವ ಸೇವೆಗಳ ಹೊಣೆಗಾರಿಕೆ ಭಾರತ ಸರ್ಕಾರಕ್ಕೆ ಸೇರಿದುದರಿಂದ ಸಂಚಯನ ನಿಧಿಯಿಂದ (ಕನ್ಸಾಲಿಡೇಟೆಡ್ ಫಂಡ್) ಇದಕ್ಕಾಗಿ ಮೊತ್ತಗಳನ್ನು ವಿತರಣೆ ಮಾಡುವ ಹೊಣೆಯೂ ಭಾರತ ಸರ್ಕಾರದ್ದೇ ಆಗಿಬಿಟ್ಟಿತು. ಭಾರತ ಸರ್ಕಾರದ ಪೂರ್ವಾನುಮತಿ ಇಲ್ಲದೆ ಯಾವುದೇ ಹೊಸ ಹುದ್ದೆಯನ್ನು ಸೃಷ್ಟಿಸುವುದಾಗಲಿ, ಸಂಬಳಸಾರಿಗೆ, ಅಶನಾರ್ಥ, ಗ್ರಾಚುಟಿಗಳನ್ನು ಕೊಡುವುದಾಗಲಿ ಪ್ರಾಂತ್ಯಗಳಿಗೆ ಸಾಧ್ಯವಾಗದಂತೆ ನಿರ್ಬಂಧವಿರುತ್ತಿತ್ತು.[೧] ಸಾರ್ವಜನಿಕ ಸಾಲ ಪ್ರತ್ಯೇಕವಾಗಿ ಯಾವುದೇ ಒಂದು ಸಂಸ್ಥಾನದ ಹೊಣೆಯಲ್ಲವೆಂದು ನಿರ್ಣಯಿಸಿದ್ದರಿಂದ ಅದನ್ನು ಭಾರತ ಸರ್ಕಾರದ ಒಟ್ಟು ಆದಾಯದಿಂದಲೇ ತೀರಿಸಬಹುದಾಯಿತು.

ಆದಾಯ ಮೂಲಗಳನ್ನು ವಿಂಗಡಿಸುವುದೂ ತದನಂತರ ದೇಣಿಗೆಯ ಮೇಲೆ ಅವಲಂಬಿಸಿರುವುದೂ ಒಂದು ಪದ್ಧತಿ ಎನಿಸಿದ ಕಾಲ ಮುಗಿದು ಆದಾಯ ಮೂಲಗಳನ್ನು ಕ್ರೋಡೀಕರಿಸಿ ಬಂದ ಉತ್ಪತ್ತಿಯನ್ನು ಹಂಚಿಕೊಳ್ಳುವ ಹೊಸ ಪದ್ಧತಿ ಪ್ರಚಾರಕ್ಕೆ ಬಂದಿತು. ಇದು ೧೮೩೩ರ ಶಾಸನದ ಸಾರ. ಸವಿವರವಾಗಿ ಹೇಳಬೇಕೆಂದರೆ ಅನುಕೂಲತೆಯ ಸಲುವಾಗಿ ಬ್ರಿಟಿಷ್ ಭಾರತವನ್ನು ಪ್ರಾಂತ್ಯಗಳಾಗಿ ವಿಂಗಡಿಸಿರುವುದು ನಿಜವಾದರೂ ವಾಸ್ತವವಾಗಿ ಅದು ಗ್ರೇಟ್ ಬ್ರಿಟನನ್ನು ಆಧರಿಸಿ ಇರುವಂಥ, ಗವರ್ನರ್–ಜನರಲ್–ಇನ್–ಕೌನ್ಸಿಲ್ ಆಳುವಂಥ ಒಂದು ಏಕಾಧಿಪತ್ಯವೇ ಆಗಿರುತ್ತದೆ. ಭಾರತದ ಸರ್ವಸಂಪತ್ತಿಗೂ (ಆದಾಯಗಳಿಗೆ) ಇದ್ದ ಒಂದೇ ಒಂದು ಗುರಿ ಎಂದರೆ ಭಾರತದ ಕರ್ತವ್ಯಗಳನ್ನು ಈಡೇರಿಸುವುದು, ಆದಾಯ ಯಾವ ಮೂಲದಿಂದ ಬಂದಿರಬಹುದೆಂಬುದನ್ನು ವಿಚಾರಿಸದೆ ವೆಚ್ಚಕ್ಕೆ ಹಣವನ್ನು ಸಲುವಳಿ ಮಾಡುವುದು.[೨]

ಈ ಪರಿಯಾದ ಸಾಮ್ರಾಜ್ಯ ಹಣಕಾಸು ವ್ಯವಸ್ಥೆ ಎಷ್ಟು ಸಮಗ್ರವಾಗಿತ್ತೆಂದರೆ ೧೮೫೮ರಲ್ಲಿ ಬ್ರಿಟಿಷ್ ರಾಣಿ ಕಂಪನಿ ಆಡಳಿತವನ್ನು ಕೈವಶ ಮಾಡಿಕೊಳ್ಳುವಾಗ "ಯಾವ ಪ್ರಾಂತಕ್ಕೂ ಶಾಸನ ರಚಿಸುವ ಪ್ರತ್ಯೇಕ ಹಕ್ಕು ಇರಲಿಲ್ಲ, ಪ್ರತ್ಯೇಕ ಹಣಕಾಸು ಮೂಲವಿರಲಿಲ್ಲ, ಸಾರ್ವಜನಿಕ ಸೇವಾ ನೇಮಕಾತಿಯ ಸ್ವಾತಂತ್ರ್ಯವಿರಲಿಲ್ಲ. ಬದಲು ಪ್ರಾಂತೀಯ ಸರ್ಕಾರದ ಎಲ್ಲ ಆಡಳಿತ ವಿವರಗಳಲ್ಲಿಯೂ ಭಾರತ ಸರ್ಕಾರ ತಾನು ಹಸ್ತಕ್ಷೇಪ ಮಾಡುವ ಸಂದರ್ಭಗಳಿದ್ದುವು."[೩]

ಮಿಲಿಟರಿ, ರಾಜಕೀಯ, ಶಾಸನಿಕ ಮತ್ತು ಆಡಳಿತ ದೃಷ್ಟಿಕೋನದಿಂದ ಈ ಸಾಮ್ರಾಜ್ಯ ಪದ್ಧತಿ ಎಷ್ಟೇ ಪ್ರಯೋಜನಕಾರಿ ಎಂದು ಕಂಡರೂ ಹಣಕಾಸು ವ್ಯವಸ್ಥೆಯ ದೃಷ್ಟಿಯಿಂದ ಅದೊಂದು ಶೋಚನೀಯ ವ್ಯವಸ್ಥೆಯಾಗಿತ್ತೆಂದು ಹೇಳಬೇಕಾಗುತ್ತದೆ. ಹಣಕಾಸಿನ ಅಪರ್ಯಾಪ್ತತೆಯು ಅದನ್ನು ಬಾಧಿಸುತ್ತಿದ್ದ ಮಾರಿಬೇನೆಯಾಗಿತ್ತು. ಆರ್ಥಿಕ ಆಪತ್ಕಾಲಗಳನ್ನು ಹಿಮ್ಮೆಟ್ಟಿಸಿ ಸಮತೋಲವನ್ನು ಪ್ರತಿಷ್ಠಿಸುವ ಕಾರ್ಯದಲ್ಲಿ

---

೧. ೩ ಮತ್ತು ೪ವಿಲ್ IVಸಿ ೮೫ ಎಸ್ ೫೯

೨. ಇಂಡಿಯಾ ಸರ್ಕಾರದ ಹಣಕಾಸು ಇಲಾಖೆಯ ನವೆಂಬರ್ ೨೨, ೧೮೪೩ರ ಠರಾವು

೩. ರಾಯಲ್ ಕಮಿಷನ್ ಆಫ್ ಡಿಸೆಂಟ್ರಲೈಜೇಷನ್ ಇನ್ ಬ್ರಿಟಿಷ್ ಇಂಡಿಯಾದ ವರದಿ

ಅರ್ಥಸಚಿವರು ಯಶಸ್ವಿಯಾದದ್ದು ಕೆಲವೇ ಕೆಲವು ಸಂದರ್ಭಗಳಲ್ಲಿ ಮಾತ್ರ. ಹಣಕಾಸಿನ ಕೊರತೆ ಎಂಬ ನಿತ್ಯರೋಗ ಸಾಮ್ರಾಜ್ಯ ಪದ್ಧತಿಯನ್ನು ಬಾಧಿಸದಿರುವ ವರ್ಷಗಳು ಕಡಿಮೆ. ಕೊರತೆ ಎಷ್ಟು ಗಂಭೀರವಾಗಿತ್ತೆಂಬ ಅಂಶ ಈ ಕೆಳಗಿನ ಅಂಕಿಸಂಖ್ಯೆಗಳಿಂದ ತಿಳಿಯುತ್ತದೆ:–[೧]

## ಸಾಮ್ರಾಜ್ಯ ಹಣಕಾಸು ವ್ಯವಸ್ಥೆಯ ಅಪರ್ಯಾಪ್ತತೆ

| ವರ್ಷ | ಉಳಿತಾಯ | ಕೊರತೆ | ವರ್ಷ | ಉಳಿತಾಯ | ಕೊರತೆ |
|---|---|---|---|---|---|
| ೧೯೩೪–೩೫ | | ೧೯೪,೪೭೭ | ೧೯೪೬–೪೭ | | ೯೭೧,೩೨೨ |
| ೧೯೩೫–೩೬ | ೧,೪೪೧,೫೧೩ | | ೧೯೪೭–೪೮ | | ೧,೯೧೧,೯೮೬ |
| ೧೯೩೬–೩೭ | ೧,೨೪೮,೨೨೪ | | ೧೯೪೮–೪೯ | | ೧,೪೭೩,೨೨೫ |
| ೧೯೩೭–೩೮ | ೭೮೦,೩೧೮ | | ೧೯೪೯–೫೦ | ೩೫೪,೧೮೭ | |
| ೧೯೩೮–೩೯ | | ೩೮೧,೭೮೭ | ೧೯೫೦–೫೧ | ೪೧೫,೪೪೩ | |
| ೧೯೩೯–೪೦ | | ೨,೧೩೮,೭೧೩ | ೧೯೫೧–೫೨ | ೫೩೧,೨೮೫ | |
| ೧೯೪೦–೪೧ | | ೧,೭೫೪,೮೫೨ | ೧೯೫೨–೫೩ | ೪೨೪,೨೫೭ | |
| ೧೯೪೧–೪೨ | | ೧,೭೭೧,೬೦೩ | ೧೯೫೩–೫೪ | | ೨,೦೪೪,೧೧೭ |
| ೧೯೪೨–೪೩ | | ೧,೩೪೬,೦೧೧ | ೧೯೫೪–೫೫ | | ೧,೭೦೭,೩೬೪ |
| ೧೯೪೩–೪೪ | | ೧,೪೪೦,೨೫೯ | ೧೯೫೫–೫೬ | | ೯೭೨,೭೯೧ |
| ೧೯೪೪–೪೫ | | ೭೪೩,೮೯೩ | ೧೯೫೬–೫೭ | | ೧೪೩,೫೯೭ |
| ೧೯೪೫–೪೬ | | ೧,೪೯೬,೮೬೫ | ೧೯೫೭–೫೮ | | ೭,೮೬೪,೨೨೨ |

ಭಾರತದ ಹಣಕಾಸು ವ್ಯವಸ್ಥೆಯ ಈ ದಯನೀಯ ಅವಸ್ಥೆಯನ್ನು ಗಮನಿಸಿದವರಿಗೆ ಡಿಸ್ರೇಲಿಯವರ ಹೌಸ್ ಆಫ್ ಕಾಮನ್ಸ್‌ನಲ್ಲಿ ಮಾಡಿದ ಭಾಷಣದ ಸತ್ಯಾಂಶದ ಬಗ್ಗೆ ಆಶ್ಚರ್ಯವಾಗದಿರಲಾರದು:

'ಎಷ್ಟೊಂದು ಮಂದಿ ಸಮರ್ಥ ಆಡಳಿತಗಾರರು ಹುಟ್ಟಿಕೊಂಡರೂ, ಎಂತೆಂಥ ದಕ್ಷರು ಬಂದರೂ, ಸೇನಾಪತಿಗಳು, ರಾಯಭಾರಿಗಳು, ಮುತ್ಸದ್ದಿಗಳು, ಜಿಲ್ಲಾಡಳಿತಾಧಿಕಾರಿಗಳು ಎಷ್ಟು ಶ್ರೇಷ್ಠ ದರ್ಜೆಯವರಾಗಿದ್ದರೂ ಭಾರತದ ಹಣಕಾಸು ವ್ಯವಸ್ಥೆ ಯಾವಾಗಲೂ ಸಮಸ್ಯಾಪೂರಿತವಾಗಿಯೇ ಇರುತ್ತಿತ್ತು. ಎಂತೆಂಥ ದೊಡ್ಡ ಮನುಷ್ಯರನ್ನು ಸೃಷ್ಟಿಸಿದ ಭಾರತದಲ್ಲಿ ಒಬ್ಬನೇ ಒಬ್ಬ ಅರ್ಥಸಚಿವ ಉದಯವಾಗಲಿಲ್ಲವೆಂದರೆ ಆಶ್ಚರ್ಯವೇ ಸರಿ.[೨]

ಇಂಥ ಅವನತಿಗೆ ಕಾರಣ ಹುಡುಕಲು ದೂರ ಹೋಗಬೇಕಾಗಿರಲಿಲ್ಲ. ಅಸಮರ್ಪಕ ಹಣಕಾಸು

---

೧. ಮಿಸ್ಟರ್ ವಿಲ್ಸನ್ ರವರ ೧೮೬೦–೧೧ರ ಬ್ರಿಟಿಷ್ ಭಾರತದ ಹಣಕಾಸು ಘೋಷಣೆಯಿಂದ, ಹೌಸ್ ಆಫ್ ಕಾಮನ್ಸ್, ರಿಟರ್ನ್ ೩೩, ೧೮೬೦ ಪು. ೧೦೦

೨. *'ಚಾರ್ಲ್ಸ್ ವುಡ್ಸ್ ಅಡ್‌ಮಿನಿಸ್ಟ್ರೇಷನ್' ವೆಸ್ಟ್, ಪು. ೬೫–೬*

ಧೋರಣೆಯೇ ಹಣಕಾಸಿನ ಅಪರ್ಯಾಪ್ತತೆಗೆ ಮೂಲ ಕಾರಣ. ಏತಕ್ಕಾಗಿ ಅಸಮರ್ಪಕವೆಂಬ ಪ್ರಶ್ನೆಗೆ ಉತ್ತರ ಹಲವು. ಒಂದು ರಾಷ್ಟ್ರದ ಆರ್ಥಿಕತೆಯಲ್ಲಿ ವೆಚ್ಚವನ್ನು ನೋಡಿಕೊಂಡು ಅದಕ್ಕೆ ತಕ್ಕುದಾದ ಆದಾಯವನ್ನು ಗಳಿಸಿಕೊಳ್ಳುವುದು ಒಂದು ತತ್ವ ನಿಜ. ಆದರೆ ಈ ತತ್ವದ ಮಿತಿಯನ್ನರಿಯದಿರುವುದು ಅನಾಹುತಕ್ಕೆ ಎಡೆಕೊಡುತ್ತದೆ ಎಂಬುದು ಅನುಭವದ ಮಾತು. ರಾಷ್ಟ್ರದ ವೆಚ್ಚದಲ್ಲಿ ಅಭಿವೃದ್ಧಿ ಕಾಣಬೇಕಾದರೆ ಸಮಾಜದ ಸಂಪತ್ತು ಬೆಳೆಯಬೇಕೆಂದು ಬೇರೆ ಹೇಳುವುದು ಬೇಡವಷ್ಟೇ. ಅದರಂತೆ ಸಾಕಷ್ಟು ಆದಾಯವನ್ನು ತೆರಿಗೆ ಮೂಲಕವಾಗಿ ಎತ್ತುವಳಿ ಮಾಡುವುದಷ್ಟೇ ಆರೋಗ್ಯಶಾಲಿ ಹಣಕಾಸು ವ್ಯವಸ್ಥೆಯ ಪರಮೋದ್ದೇಶವಲ್ಲ. ಒಂದು ದೇಶದ ಸ್ಥಿರತೆ ಹಾಗೂ ಉತ್ಪಾದಕ ಶಕ್ತಿಯ ಮೇಲೆ ಅತ್ಯಂತ ಪ್ರಭಾವ ಬೀರುವ ವಿಷಯ ತೆರಿಗೆಯ ಮೊತ್ತ ಮಾತ್ರವೇ ಅಲ್ಲ. ಅದನ್ನು ಹೇಗೆ ಆಕರಣೆ ಮಾಡುತ್ತಾರೆ ಎಂಬುದನ್ನೂ ಗಮನಕ್ಕೆ ತರಬೇಕಾಗುತ್ತದೆ. ತೆರಿಗೆ ಪದ್ಧತಿಯ ಅಸಮಾನ ಹೊರೆ (ಇನ್ಸಿಡೆನ್ಸ್) ಒಂದೇ ಸಾಮಾಜಿಕ ವಿಪ್ಲವಕ್ಕೆಡೆ ಮಾಡಬಹುದು ಅಥವಾ ಆರ್ಥಿಕ ಯಂತ್ರದ ಕೀಲುಗಳನ್ನು ಮುರಿದು ವ್ಯಾಪಾರ ವಾಣಿಜ್ಯಗಳಿಗೆ ಹಾನಿಯುಂಟುಮಾಡಿ, ಉತ್ಪಾದಕ ಶಕ್ತಿಯನ್ನೇ ಹ್ರಾಸಗೊಳಿಸಿ ಸಮಾಜವನ್ನು ಬಡತನದಲ್ಲಿ ಅದ್ದಬಹುದು. ರಾಷ್ಟ್ರದ ಆರ್ಥಿಕ ಕರ್ಣಧಾರತ್ವ ವಹಿಸಿಕೊಂಡವರು ಇಂತಿಷ್ಟು ವೆಚ್ಚಗಳನ್ನು ನಿಭಾಯಿಸುತ್ತೇವೆನ್ನುವ ಸಮೀಪದೃಷ್ಟಿಯವರಾಗದೆ ತೆರಿಗೆ ಎತ್ತುವ ವಿಷಯದಲ್ಲಿ ಸಾಧಕ-ಬಾಧಕಗಳನ್ನೂ ಗಣನೆಗೆ ತಂದುಕೊಳ್ಳುವವರಾಗಬೇಕು. ಸಮಾಜದ ಸಂಪತ್ತು ರಾಷ್ಟ್ರದ ಅಭ್ಯುದಯದ ಆಕರ, ಆ ಸಂಪತ್ತನ್ನು ಒದೆಯುವ ರಾಷ್ಟ್ರ ಆತ್ಮವಿನಾಶದ ಹಾದಿಯಲ್ಲಿ ಸಾಗಿದೆ ಎಂದರ್ಥ. ಅಂಗೈಹುಣ್ಣಿನಂತೆ ಕಾಣುವ ಇಂತಹ ಸತ್ಯಗಳನ್ನು ಗಮನಿಸದೆ ಹಾಳಾಗಿ ಹೋದ ಸರ್ಕಾರಗಳು ಇತಿಹಾಸದಲ್ಲಿ ಅದೆಷ್ಟೋ ಆಗಿ ಹೋಗಿವೆ. ಅಂಥದ್ದೇ ಒಂದು ಅಚ್ಚುಕಟ್ಟಾದ ಉದಾಹರಣೆ ಬೇಕಿದ್ದರೆ ಭಾರತದ ಸಾಮ್ರಾಜ್ಯ ಪದ್ಧತಿಯ ಹಣಕಾಸು ವ್ಯವಸ್ಥೆಯನ್ನು ಬೊಟ್ಟು ಮಾಡಿ ತೋರಿಸಬಹುದು.

ಸಾಮ್ರಾಜ್ಯದ ಆದಾಯದಲ್ಲಿ ಅತಿದೊಡ್ಡ ಭಾಗವೆಂದರೆ ಭೂಕಂದಾಯ. ಭೂಮಿಯು ರಾಷ್ಟ್ರದ ಸೊತ್ತೆಂಬ ಅನೂಚಾನ ತತ್ವದ ಮೇಲೆ ಇಲ್ಲಿನ ಕೃಷಿಕರು ಸರ್ಕಾರಕ್ಕೆ ಕೊಡಬೇಕಾದ ಕಂದಾಯ ಅವಲಂಬಿಸಿರುವಂತೆ, ಕೃಷಿಕರು ಭೂಮಿಗೆ ಒಡೆಯರಲ್ಲ, ಅವರು ಬಾಡಿಗೆದಾರರು. ಅವರು ಭೂಮಿಯನ್ನು ಲಾವಣಿಗೆ (ಗೇಣಿಗೆ) ಪಡೆಯುವುದರಿಂದ ಉತ್ಪತ್ತಿಯ ಒಂದು ಭಾಗವನ್ನು ಸರ್ಕಾರಕ್ಕೆ ಒಪ್ಪಿಸುವುದು ಕಡ್ಡಾಯ. ಕಂದಾಯ ಆರ್ಥಿಕವಾಗಿ ಅಗತ್ಯವೇ, ಅದು ನ್ಯಾಯಸಮ್ಮತವಾದ ಹೊರೆಯಾಗಿದೆಯೆ? ಎಂಬುದನ್ನು ಪರಿಗಣಿಸದೆ ಕಂದಾಯವನ್ನು ನಿಗದಿಗೊಳಿಸಲಾಯಿತು.

ರಾಷ್ಟ್ರವೇ ಭೂಮಾಲೀಕನೆಂಬ ಶಾಸನಿಕ ಕಟ್ಟುಕತೆಯ ಸಂಗಡ ಭೂಕಂದಾಯ ಹೆಚ್ಚಳಕ್ಕೆ ಇನ್ನೊಂದು ಆರ್ಥಿಕ ಸೂತ್ರದ ಬೆಂಬಲ ಕೋರಲಾಗುತ್ತಿತ್ತು. ಇಂಡಿಯಾದ ಕಂದಾಯ ನಿಗದಿ ಮಾಡುವ ಕಾಲಕ್ಕೆ ಇಲ್ಲಿನ ಫ್ರೆಂಚ್ ನಿಸರ್ಗವಾದಿ ಅರ್ಥಶಾಸ್ತ್ರಜ್ಞರ ಪ್ರೊದ್ವೀನೆಟ್ (Produitnet) (ನಿವ್ವಳ ಉತ್ಪತ್ತಿ) ತತ್ವವನ್ನು ಬಳಸಿಕೊಂಡರೇ ಹೇಗೆ? ಕಂದಾಯ ಆಡಳಿತದ ಆರಂಭಿಕ ಕಾಲಘಟ್ಟದಲ್ಲಿ ಸರ್ಕಾರದ ಉನ್ನತಾಧಿಕಾರಿಗಳು ಸರ್ವತೆರಿಗೆಗಳನ್ನು ಭೂಮಿಯ ಮೇಲೆ ಹೊರಿಸಬಹುದೆಂಬ ಫ್ರೆಂಚ್ ಆರ್ಥಿಕ ತತ್ವ - ಅದು ತಪ್ಪೋ ಸರಿಯೋ ಎಂದು ವಿಚಾರಿಸದೆ ಭಾರತದ ಪ್ರಸ್ತುತ ಪರಿಸ್ಥಿತಿಗಂತೂ ಇದನ್ನು ಅನ್ವಯ ಮಾಡಿಯೇಬಿಡೋಣ ಎಂದುಕೊಂಡರು. ಎಲ್ಲ ತೆರಿಗೆಗಳು ಆತ್ಯಂತಿಕವಾಗಿ ಭೂಮಿಯ ಉತ್ಪತ್ತಿಗಳ ಮೇಲೆಯೇ ಬೀಳುವುದರಿಂದಲೂ, 'ರಾಷ್ಟ್ರಗಳ ಸಂಪತ್ತು' (ವೆಲ್ತ್ ಆಫ್ ನೇಷನ್ಸ್) ಗ್ರಂಥದ ರಚಕನು ಬೇರೆ ಕರಮಾರ್ಗಗಳನ್ನು ತೋರಿಸಿಕೊಟ್ಟಿದ್ದರೂ ಆ ಗ್ರಂಥ ಆಡಂ ಸ್ಮಿತ್ ಕೊಟ್ಟ ಪುರಾವೆಗಳು 'ಏಕತೆರಿಗೆ' (ಭೂಕಂದಾಯ) ವಾದಿಗಳ ಮಾತಿಗೇ ಒತ್ತುಕೊಡುವಂಥದ್ದಾಗಿರುವುದನ್ನು ಇಂಗ್ಲೆಂಡಿನ ಆ ಕಾಲದ ಅರ್ಥಶಾಸ್ತ್ರಜ್ಞರು ಗಮನಿಸಿದ್ದುಂಟು[೨].

ಭೂಕಂದಾಯ ಹೆಚ್ಚಳಕ್ಕೆ ಒಡ್ಡುವ ವಾದಗಳೇನೇ ಇದ್ದರೂ ಒಂದು ಉದ್ಯಮದ ಪರಿಶ್ರಮದ ಉತ್ಪತ್ತಿಯ ಲಾಭವನ್ನು ಸಂಪೂರ್ಣವಾಗಿ ಹೇರಿಕೊಳ್ಳುವಂಥ ಕರಭಾರವನ್ನು ವಿಧಿಸುವುದು ವಿವೇಕಹೀನ ಮತ್ತು ಆತ್ಮನಾಶಕ ಧೋರಣೆಯೇ ಸರಿ. ವೈಯಕ್ತಿಕ ಸಂಪತ್ತು ಸಾರ್ವಜನಿಕ ಆದಾಯಗಳು ವರ್ಧಿಸಲು ಅಗತ್ಯವಿರುವ ಸಂಪನ್ಮೂಲಗಳನ್ನು ಮಿತಿ ಇಲ್ಲದೆ ದೋಚುವ ನೀತಿ ದೇಶದ ಬೇಸಾಯವನ್ನು ಬಡವಾಗಿಸಿ ಉದ್ಯಮವನ್ನು ಉಪವಾಸಗೆಡಹುವ ನೀತಿಯಾಗುತ್ತದೆ. ಭಾರತದ ಭೂಕಂದಾಯ ವ್ಯವಸ್ಥೆಯ ಭಾರವನ್ನು ಗಣನೆಗೆ ತೆಗೆದುಕೊಂಡಲ್ಲಿ 'ಏಕತೆರಿಗೆ ಪದ್ಧತಿ'ಯೇ ಇಲ್ಲಿ ಚಲಾವಣೆಯಲ್ಲಿತ್ತೆಂದು ಭಾವಿಸಬೇಕಾಗುತ್ತದೆ[೨].

ಭೂಕಂದಾಯ ದೇಶದ ಕೃಷಿ ಉನ್ನತಿಗೆ ಬಾಧಕವಾದಂತೆ ಔದ್ಯಮಿಕ ಮುನ್ನಡೆಗೆ ಸುಂಕಗಳು (ಸೀಮಾಶುಲ್ಕ) ಕಾಲ್ತೊಡಕಾಗಿದ್ದವು. ಒಳನಾಡಿನ ಸುಂಕ ಬೇರೆ, ಹೊರನಾಡಿನದು ಬೇರೆ–ಎರಡೂ ವ್ಯಾಪಾರಕ್ಕೂ, ಉದ್ಯಮಕ್ಕೂ ಹಾನಿಕರವಾಗಿದ್ದವು. ಸಾಗಣೆ ಸುಂಕ ಮತ್ತು ಪಟ್ಟಣ ಸುಂಕ (ಜಕಾತಿ)ಒಳನಾಡಿನ ಸುಂಕ ಎನಿಸಿಕೊಂಡವು.[೩] ಸಾಗಣೆ ಸುಂಕಕ್ಕಾಗಿ ದೇಶವನ್ನು ಹಲವಾರು ಚಿಕ್ಕಚಿಕ್ಕ ಕೃತಕ ಸುಂಕ ವಲಯಗಳಾಗಿ ವಿಭಜಿಸಲಾಯಿತು. ಸರಕುಸಾಮಾಗ್ರಿಗಳನ್ನು ಹೇಗೆಂದರೆ ಹಾಗೆ ಒಂದು ಸುಂಕ ವಲಯದೊಳಗಡೆ ಉತ್ಪಾದಿಸಬಹುದಿತ್ತು; ಕೊಂಡು ಮಾರಬಹುದಿತ್ತು. ಆದರೆ ವಲಯದಿಂದ ಹೊರಬಿದ್ದರೆ ಸಾಕು ಅವುಗಳಿಗೆ

---

೧. ಬೇಡೆನ್ ಪೊವೆಲ್‌ರಂತಹವರ ಸಮಗ್ರ ದೃಷ್ಟಿಯೂ ಕಾಣದಂತಹ ಈ ಗಹನವಾದ ವಿವಾದಕ್ಕಾಗಿ ಹೌಸ್ ಆಫ್ ಕಾಮನ್ಸ್‌ನ ೧೮೧೨–೧೩ರ ಪೇಪರ್ ೩೦೬ ನ್ನು ನೋಡಿ.

೨. ಭಾರತದ ಒಟ್ಟು ಆದಾಯದಲ್ಲಿ ಭೂ ಕಂದಾಯದ ಪ್ರಮಾಣ ಈ ಕೆಳಗೆ ನಮೂದಿಸಿದಂತಿತ್ತು:

| ವರ್ಷ | ಪ್ರಮಾಣ | ವರ್ಷ | ಪ್ರಮಾಣ | ವರ್ಷ | ಪ್ರಮಾಣ |
|---|---|---|---|---|---|
| ೧೭೯೨–೩ ರಿಂದ ೧೭೯೬–೭ ರವರೆಗೆ | ೫೦.೩೩ | ೧೮೧೭–೮ ರಿಂದ ೧೮೨೧–೨ ರವರೆಗೆ | ೬೬.೧೭ | ೧೮೪೨–೩ ರಿಂದ ೧೮೪೬–೭ ರವರೆಗೆ | ೫೫.೮೫ |
| ೧೭೯೭–೮ ರಿಂದ ೧೮೦೧–೨ ರವರೆಗೆ | ೪೨.೦೨ | ೧೮೨೨–೩ ರಿಂದ ೧೮೨೬–೭ರವರೆಗೆ | ೬೧.೮೩ | ೧೮೪೭–೮ ರಿಂದ ೧೮೫೧–೨ರವರೆಗೆ | ೫೬.೦೬ |
| ೧೮೦೨–೩ ರಿಂದ ೧೮೦೬–೭ರವರೆಗೆ | ೩೧.೯೯ | ೧೮೨೭–೮ ರಿಂದ ೧೮೩೧–೨ರವರೆಗೆ | ೬೦.೯೦ | ೧೮೫೨–೩ ರಿಂದ ೧೮೫೫–೬ರವರೆಗೆ | ೫೫.೦೪ |
| ೧೮೦೭–೮ ರಿಂದ ೧೮೧೧–೨ ರವರೆಗೆ | ೩೧.೬೮ | ೧೮೩೧–೩ ರಿಂದ ೧೮೩೬–೭ರವರೆಗೆ | ೫೭.೦೦ | ೬೪ ವರ್ಷಗಳ ಸರಾಸರಿ | ೫೫.೦೭ |
| ೧೮೧೨–೩ ರಿಂದ ೧೮೧೬–೭ರವರೆಗೆ | ೫೨.೩೩ | ೧೮೩೭–೮ ರಿಂದ ೧೮೪೧–೨ ರವರೆಗೆ | ೫೯.೦೫ | | |

೩. ಈ ಸಮಸ್ಯೆಯನ್ನು ಆಮೂಲಾಗ್ರವಾಗಿ ಅಭ್ಯಸಿಸಿದ ಮಿ. ಪ್ರವೆಲ್ಯಾನ್‌ನು ಇದರ ಹಾನಿಕಾರಕ ಪರಿಣಾಮಗಳಿಂದ ಎಷ್ಟರಮಟ್ಟಿಗೆ ದಿಗಿಲುಗೊಂಡಿದ್ದನೆಂಬುದು ಅವನ ಈ ಮಾತುಗಳಿಂದ ತಿಳಿದು ಬರುತ್ತದೆ. "ಈಗ ನಮ್ಮೆದುರಿಗೆ ಇದರ ಪ್ರತ್ಯಕ್ಷ ಅನುಭವ ಇದೆಯಾದರೂ, ಇದು ರದ್ದಾದಾಗ ಇಂತಹ ಒಂದು ವ್ಯವಸ್ಥೆಯನ್ನು ನಾವು ಒಂದು ಶತಮಾನದಲ್ಲಿ ಬಹುಕಾಲ ಸಹಿಸಿಕೊಂಡಿದ್ದೇವೆಂಬುದನ್ನು ನಂಬಲು ಪ್ರಪಂಚಕ್ಕೆ ಕಷ್ಟವಾಗುವುದು."

ಸುಂಕವನ್ನು ವಿಧಿಸಲಾಗುತ್ತಿತ್ತು. ತೋರಿಕೆಗೆ ನಿರುಪದ್ರವಿ ಎಂದು ತೋರುತ್ತಿದ್ದ ಈ ಸುಂಕ ವಾಸ್ತವವಾಗಿ ಹಾನಿಕರವಾಗಿತ್ತು. ವ್ಯಾಪಾರ ಕುಂಠಿತಗೊಂಡು ಉದ್ಯಮಗಳ ಮೇಲೂ ದುಷ್ಪ್ರಭಾವ ಬೀರುತ್ತಿದ್ದ ಈ ಧೋರಣೆ 'ಉದ್ಯಮಗಳ ಬೆಳವಣಿಗೆ ಮಾರುಕಟ್ಟೆಯ ವಿಶಾಲತೆಯ ಮೇಲೆ ಅವಲಂಬಿಸಿದೆ' ಎಂದು ಹೇಳಿದ ಆಡಂಸ್ಮಿಥ್ ಅವರ ಅಭಿಪ್ರಾಯಕ್ಕೆ ವಿರುದ್ಧವಾಗಿತ್ತು. ಇಡಿ ದೇಶವನ್ನೇ ಮಾರುಕಟ್ಟೆಯ ದೃಷ್ಟಿಯಿಂದ ಪಗಡೆಯಾಟದ ಮನೆಯಂತೆ ಚಿಕ್ಕಚಿಕ್ಕ ತುಣುಕುಗಳನ್ನಾಗಿ ಮಾಡಿದ್ದರಿಂದ ವ್ಯಾಪಾರ ಮತ್ತು ಉದ್ಯಮ ಎರಡೂ ಕುಂದಿಹೋದದ್ದರಲ್ಲಿ ಏನಾಶ್ಚರ್ಯವಿದೆ? ಸಾಗಣೆ ಸುಂಕದ ಹಾನಿಗಳನ್ನು ಇನ್ನೊಂದು ದೃಷ್ಟಿಯಿಂದಲೂ ಪರಿಶೀಲಿಸಬಹುದು. ಔದ್ಯಮಿಕವಾಗಿ ಪ್ರಗತಿ ಪಡೆದ ದೇಶಗಳಲ್ಲಿ ಸಾಮಾಜಿಕ ಶ್ರಮ ವಿಭಜನೆಯಂತೆ ಭೌಗೋಳಿಕವಾದ ಅಥವಾ ಪ್ರಾದೇಶಿಕವೆನಿಸುವ ಇನ್ನೊಂದು ಶ್ರಮ ವಿಭಜನೆ ಇರುವುದು ಸರ್ವವಿದಿತವಷ್ಟೆ.[೧] ಭಾರತದಲ್ಲಿ ಇಂಥ 'ಔದ್ಯಮಿಕ ಸ್ಥಳೀಕರಣ' ಸಾಕಷ್ಟು ಪ್ರಮಾಣದಲ್ಲಿ ಪ್ರಚುರಗೊಂಡಿತ್ತು. ಉದಾ : ಹತ್ತಿಯನ್ನೇ ತೆಗೆದುಕೊಳ್ಳೋಣ. ಹತ್ತಿ ಬೆಳೆಯುವುದು ಒಂದು ಕಡೆ, ಅದನ್ನು ಹಿಂಜಿ ನೂಲುಮಾಡುವುದು ಇನ್ನೊಂದು ಕಡೆ, ಬಟ್ಟೆನೇಯುವುದು ಮತ್ತೊಂದು ಕಡೆ. ಇವು ಮೂರು ಬೇರೆ ಬೇರೆ ಸುಂಕ ವಲಯಗಳಿಗೆ ಸೇರಿಬಿಟ್ಟರೆ ಸಾಗಾಟ ಸುಂಕದ ಹೊರೆ ದುರ್ಭರವಾಗದೆ ಇರದು. ಇನ್ನು ಸಾಗಾಟ ಸುಂಕವನ್ನು ತಪ್ಪಿಸಿಕೊಳ್ಳಬೇಕೆಂದು ಎಲ್ಲ ಹಂತಗಳಲ್ಲೂ ಒಂದು ಪ್ರದೇಶ (ಸ್ಥಾನ) ಕೈಯಾಡಿಸಿದರೆ ಅದು ಆರ್ಥಿಕವಾಗಿ ಫಲಪ್ರದವಾಗುತ್ತದೆಯೆ?

ಒಳನಾಡು ಸುಂಕದ ಒಂದು ಭಾಗವೇ ಪಟ್ಟಣ ಸುಂಕ (ಜಕಾತಿ). ಇದು ಕೂಡ ಪಟ್ಟಣ ನಾಶಕ್ಕೆ ಕಾರಣವಾದದ್ದು ಗಮನಾರ್ಹ. ಪಟ್ಟಣವೆಂದರೆ ವ್ಯಾಪಾರ ಕೇಂದ್ರ ತಾನೇ. ಅಲ್ಲಿ ಬೇಕಾದ ಪ್ರಮಾಣದಲ್ಲಿ ಪದಾರ್ಥಗಳನ್ನು ಕೊಳ್ಳಬಹುದು, ಮಾರಬಹುದು ಮಾತ್ರವೇ ಅಲ್ಲ, ಸಾಲಮೂಲಗಳೂ ಸಿಗುತ್ತವೆ. ವ್ಯಾಪಾರೀ ಸುದ್ದಿಸಂಗತಿಗಳು ಲಭ್ಯವಾಗುತ್ತವೆ. ಒಂದೇ ಸ್ಥಳದಲ್ಲಿ ಇಷ್ಟೆಲ್ಲಾ ಅನುಕೂಲತೆಗಳಿರುವುದರಿಂದಲೇ ಪಟ್ಟಣಗಳಲ್ಲಿ ವ್ಯಾಪಾರವು ಕೇಂದ್ರೀಕರಿಸುತ್ತದೆ. ಪಟ್ಟಣ ಸುಂಕ ಮಾಡುವ ನೇರ ಕೆಲಸವೆಂದರೆ ವ್ಯಾಪಾರವನ್ನು ಪಟ್ಟಣಗಳಿಗೆ ಬಾರದಂತೆ ತಡೆಯುವುದು. ಪ್ರವೇಶ ಮಾಡುವ ಮೊದಲೇ ಕೊಡುವ ಸಾಗಣೆ ಸುಂಕ, ಒಳಗೆ ಪ್ರವೇಶ ಮಾಡುವಾಗ ಕೊಡಬೇಕಾದ ಜಕಾತಿ (ಪ್ರವೇಶ ಸುಂಕ), ಆಮೇಲೆ ಅದರಿಂದ ಏನಾದರೂ ತಯಾರಿಸಿ ಬೇರೆ ಪ್ರದೇಶಕ್ಕೆ ಕಳಿಸುವಾಗ ಮತ್ತೆ ಬೆಲೆ ಹೆಚ್ಚಾದ ಸರಕುಗಳ ಮೇಲೆ ಹೊರಿಸಲ್ಪಡುವ ವಿವಿಧ ಸುಂಕಗಳ ಭಾರ ಸಹಿಸಿಕೊಳ್ಳುವುದು ಕಷ್ಟವಾಗುತ್ತಿತ್ತು. ಪರಿಣಾಮವಾಗಿ ವ್ಯಾಪಾರಿಗಳು ಪಟ್ಟಣಕ್ಕೆ ಬರುವುದು ಕಡಿಮೆಯಾಯಿತು, ಪಟ್ಟಣಗಳಲ್ಲಿ ವ್ಯಾಪಾರವೂ ಇಲ್ಲ, ಉದ್ಯಮವೂ ಇಲ್ಲ ಎನ್ನುವ ಪರಿಸ್ಥಿತಿ ಬಂತು. ಊರಿನೊಳಗೆ ಮಾರಾಟಕ್ಕೆ ಬೇಕಾದಷ್ಟು ಉತ್ಪಾದನೆ ಮಾತ್ರ ಸಾಧ್ಯ ಎನ್ನುವಂತಾದರೆ ಪಟ್ಟಣ ಬೆಳೆಯುವುದೆಂತು?

ಇಂಥ ಅವನತ ಸ್ಥಿತಿಯೊಳಗಿದ್ದ ಭಾರತೀಯ ಉದ್ಯಮಗಳು ವಿದೇಶೀ ಪೈಪೋಟಿಯನ್ನೂ ಎದುರಿಸಬೇಕಾಗಿತ್ತು. ಹೊರನಾಡಿನ ಸುಂಕವು (ಕಸ್ಟಮ್ಸ್ ಡ್ಯೂಟೀಸ್) ಸ್ವದೇಶೀಯ ಉದ್ಯಮಗಳನ್ನು ಬಳಸುವ ನಿಟ್ಟಿನಲ್ಲಿ ಬಿಡಿ ರಕ್ಷಣೆ ಕೊಡುವುದಕ್ಕಾಗಿ ವಿಧಿಸುವುದಾಗಿರಲಿಲ್ಲ. ಸರಕು ಪೈಪೋಟಿಯನ್ನು ನಿರ್ಬಂಧಿಸುವುದಕ್ಕಾಗಿ ತಾನೇ ವಾಣಿಜ್ಯ ಸುಂಕಗಳನ್ನು ಹೇರುತ್ತಾರೆ? (ಇದಕ್ಕೆ

---

೧. ಎಮ್. ಮಾರ್ಟ್‌ನ್ಸ್‌ರವರ ***ಈಸ್ಟರ್ನ್ ಇಂಡಿಯಾದ*** ೩ ಸಂಪುಟಗಳನ್ನು ನೋಡಿ.

ಸರಕು ಪೈಪೋಟಿಯ ಸೂತ್ರವೆನ್ನುತ್ತಾರೆ). ವಿದೇಶಗಳಿಂದ ಬರುವ ಸರಕು ಸ್ವದೇಶೀ ಸರಕಿನೊಡನೆ ಪೈಪೋಟಿ ಮಾಡದ ರೀತಿಯಲ್ಲಿ ವಿದೇಶೀ ಸರಕಿನ ಮೇಲೆ ಹೆಚ್ಚು ಆಮದು ಸುಂಕವನ್ನು ವಿಧಿಸುವುದು ರೂಢಿ. ಹಾಗೆಯೇ ನಮ್ಮ ಸರಕು ವಿದೇಶಕ್ಕೆ ಹೋಗುವ ವೇಳೆ ಸುಂಕವನ್ನಿಳಿಸಿ ನಿರ್‍ಯಾತವನ್ನು ಪ್ರೋತ್ಸಾಹಿಸುವುದು ಸಾಮಾನ್ಯ; ಅರ್ಥಾತ್ ವಿದೇಶೀ ಮಾರುಕಟ್ಟೆಯಲ್ಲಿ ನೆಲೆಯೂರಲು ಶಕ್ತವಾದ ಸರಕುಗಳಿಗೆ ಬೆಂಬಲಕೊಡುವುದು ನಿರ್‍ಯಾತ ಸುಂಕದ ಕೆಲಸ. ಇಂಥ ಯಾವ ಸೂತ್ರವನ್ನೂ ಭಾರತದ ಸುಂಕ ಧೋರಣೆಯಲ್ಲಿ ಅಳವಡಿಸಿದಂತೆ ಕಾಣಿಸದು. ಸರಕು ಪೈಪೋಟಿಯ ಸೂತ್ರಕ್ಕೆ ಇಲ್ಲಿ ಆಸ್ಪದವಿರಲಿಲ್ಲ. ಇಲ್ಲಿನ ಧೋರಣೆಯನ್ನು ಹೋಲಿಸಿ ನೋಡಿದರೆ ಸಂರಕ್ಷಕ ಧೋರಣಾವಾದಿಯೂ ಕೂಡ (ಪ್ರೊಟಕ್ಷನಿಸ್ಟ್) ಮುಕ್ತ ವ್ಯಾಪಾರವನ್ನೇ ಭಾರತಕ್ಕೆ ಅನ್ವಯಿಸಲು ಮುಂದಾಗುತ್ತಿದ್ದ, ಏಕೆಂದರೆ ಭಾರತದಲ್ಲಿ ಸುಂಕಗಳಿಗೆ ಕಾರಣ ಆರ್ಥಿಕವಾದುದಲ್ಲ, ರಾಜಕೀಯವಾದದ್ದು. ಆಕೃತಿಯಲ್ಲೂ ರಾಚನಿಕವಾಗಿಯೂ ಭಾರತೀಯ ಸೀಮಾಶುಲ್ಕ ಪಕ್ಷಪಾತದ ಒಂದು ಮಾದರಿಯಾಗಿತ್ತು. ಭಾರತದ ಸರ್ಕಾರಕ್ಕೂ ಇಲ್ಲಿನ ಪ್ರಜೆಗಳಿಗೂ ಅಪಾರ ನಷ್ಟವನ್ನುಂಟು ಮಾಡಿದ ಈ ವ್ಯವಸ್ಥೆ ಶೋಚನೀಯವಾಗಿತ್ತು. ಇಂಗ್ಲೆಂಡಿನಲ್ಲಿ ತಯಾರಾದ ಸರಕುಗಳನ್ನು ಅಲ್ಲಿಯ ಹಡಗುಗಳಲ್ಲಿಯೇ ತರಿಸಿಕೊಳ್ಳುವಾಗ ಇಂಗ್ಲೆಂಡೇತರ ದೇಶಗಳು ಕೊಡಬೇಕಾದುದಕ್ಕಿಂತ ಸುಂಕದಲ್ಲಿ ಅರ್ಧದಷ್ಟು ರಿಯಾಯಿತಿ ತೋರಿಸಿದರೆ ಹೋಗಲಿ ಬಿಡಿ ಎನ್ನಬಹುದು. ಆದರೆ ಭಾರತದಲ್ಲಿ ತಯಾರಾದ ಸರಕುಗಳು ತೆರುವ ಒಳನಾಡಿನ ಸುಂಕಗಳಿಗಿಂತಲೂ ಕಡಿಮೆ ದರದಲ್ಲಿ ಭಾರತವನ್ನು ಪ್ರವೇಶಿಸುವ ಇಂಗ್ಲಿಷ್ ತಯಾರಿಕೆಗಳಿಗೆ ಆಯಾತಗಳಿಗೆ ಸುಂಕ ವಿಧಿಸುವ ಧೋರಣೆ ಅಕ್ಷಮ್ಯವೆಂದು ಹೇಳದೆ ವಿಧಿ ಇಲ್ಲ. ಇದೇ ಕಾಲಕ್ಕೆ ಭಾರತದ ಸರಕುಗಳು ಮತ್ತು ಭಾರತದ ಹಡಗು ಬ್ರಿಟಿಷ್ ಸೀಮೆಯೊಳಗೆ ಪ್ರವೇಶಿಸುವಾಗ ತೆರಬೇಕಾದ ಸುಂಕ ಎಷ್ಟು ಅತಿಶಯವಾಗಿತ್ತೆಂದರೆ ಪ್ರವೇಶವೇ ದುಸ್ತರವೆನಿಸುವಷ್ಟರ ಮಟ್ಟಿಗಿತ್ತು ಎಂಬುದನ್ನು ನೆನಪಿಗೆ ತಂದುಕೊಂಡಲ್ಲಿ ಘೋರ ಅನ್ಯಾಯವಾಗಿತ್ತೆಂದೂ ಹೇಳಬಹುದು. ರಿಯಾಯಿತಿಯ ಸುಂಕದ ಸುಲಭ ದರಗಳ ದೆಸೆಯಿಂದ ವಿದೇಶೀ ಸರಕುಗಳು ಒಳನಾಡ ತೆರಿಗೆಯ ಭಾರದಿಂದ ಬಳಲುತ್ತಿದ್ದ ಸ್ವದೇಶೀ ಸರಕುಗಳೊಡನೆ ಪೈಪೋಟಿಯಲ್ಲಿ ಗೆಲುವು ಪಡೆಯುತ್ತಿರುವ ಕಾಲದಲ್ಲಿ ನಮ್ಮ ಸರಕುಗಳಿಗೆ ವಿಧಿಸಿದ ನಿರ್‍ಯಾತ ಸುಂಕದ ಭಾರಕ್ಕೆ ನಮ್ಮ ನಿರ್‍ಯಾತಗಳು ವಿದೇಶೀ ಮಾರುಕಟ್ಟೆಯಲ್ಲಿ ಸೋಲನ್ನನುಭವಿಸುತ್ತಿದ್ದವು. ಇಂಥ ಏಕಪಕ್ಷೀಯ, ಪಕ್ಷಪಾತಪೂರಿತವಾದ ಸುಂಕನೀತಿ ೧೯ನೇ ಶತಮಾನದಲ್ಲೂ ಮುನ್ನಡೆಯಿತೆಂದರೆ ಅಚ್ಚರಿ ಆಗಬಹುದು.[೧] ಆಂತರಿಕ ಹಾಗೂ ವಿದೇಶೀಯ ಸುಂಕ ನೀತಿ ನಮ್ಮ ವ್ಯಾಪಾರವನ್ನು ನಿರ್ಬಂಧಿಸಿ ಉದ್ಯಮಗಳನ್ನು ಉಸಿರುಕಟ್ಟಿಸಿದವು. ಸರ್ಕಾರಕ್ಕೆ ದೊರೆತ ಅಲ್ಪಾದಾಯವೇ ದೇಶದ ಸರಕುಗಳು ಬಳಲಿಬೆಂಡಾದುದಕ್ಕೆ ಸಾಕ್ಷಿ.[೧]

೧. ಮೇಲೆ ಹೇಳಲಾದ ಎಲ್ಲಾ ವ್ಯಾಖ್ಯೆಗಳಿಗೂ ದಾಖಲೆಗಳನ್ನು ಕೊಡವುದು ದುಸ್ತರ. ಭಾರತದ ಸುಂಕ ಪದ್ಧತಿಯ ಇತಿಹಾಸವನ್ನು ಇನ್ನೂ ಬರೆಯಲಾಗಿಲ್ಲ. ಆದರೆ ಈ ವಿಷಯದ ಮೇಲೆ ೧೮೨೧ರ ಪಾರ್ಲಿಮೆಂಟರಿ ಕಮಿಟಿ ಆನ್ ಟ್ರೇಡ್ ಮತ್ತು ಈಸ್ಟ್ ಇಂಡಿಯಾ ಕಂಪೆನಿಯ ವ್ಯವಹಾರಗಳನ್ನು ತನಿಖೆ ಮಾಡಲು ೧೮೧೩ ಮತ್ತು ೧೮೫೩ರಲ್ಲಿ ಪಾರ್ಲಿಮೆಂಟ್ ನೇಮಿಸಿದ್ದ ಸಮಿತಿಗಳೆದುರು ನೀಡಲಾಗಿದ್ದ ಸಾಕ್ಷ್ಯಗಳಿಂದ ಸಾಕಷ್ಟು ಪುರಾವೆ ಸಿಗುತ್ತದೆ. ೧೮೪೦ರ ಈಸ್ಟ್ ಇಂಡಿಯಾ ಪ್ರೊಡ್ಯೂಸ್ ಸಮಿತಿಯ ವರದಿ ಮತ್ತು ಸಾಕ್ಷ್ಯಗಳತ್ತ ವಿಶೇಷ ಗಮನ ಸೆಳೆಯಲಾಗಿದೆ.

ಈ ಆದಾಯ ಮೂಲ ಸೊರಗಿದ್ದನ್ನು ಕಂಡ ಸರ್ಕಾರ ಹೆಚ್ಚು ಆದಾಯಗಳಿಸುವ ಸಲುವಾಗಿ ಕೆಲ ತೀರಾ ಪ್ರಶ್ನಾರ್ಹ ಹೆಜ್ಜೆಗಳನ್ನಿಟ್ಟಿತು.

ಸಾಮ್ರಾಜ್ಯ ಪದ್ಧತಿಯ ಪಕ್ಷಪಾತರಹಿತ ಸಮೀಕ್ಷೆ ಮಾಡಿದರೆ ಅದರಲ್ಲಿ ಅಡಕಗೊಂಡ ಆ ಕಂದಾಯ ಪದ್ಧತಿಯಲ್ಲಿ ನ್ಯಾಯನೀತಿ ಎಂಬುದಕ್ಕೆ ಅವಕಾಶವೇ ಇರಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಇಂಥ ಕ್ರೂರ ವ್ಯಂಗ್ಯ ಅಥವಾ ಅರ್ಥರಹಿತ ಉಲ್ಲೇಖ ಬೇರೊಂದಿರಲಾರದು. ಇಂತಹ ಹೊರೆಯನ್ನು ಹೊರಬಲ್ಲ ಸಾಮರ್ಥ್ಯವಿರುವವರನ್ನು ಬಿಟ್ಟು, ಅತಿ ದುರ್ಬಲವಾಗಿದ್ದವರ ಮೇಲೆ ಬಿದ್ದು ಮರ್ಮಾಘಾತ ಮಾಡಿದರು ಎನ್ನಬಹುದು. ಕಣ್ಣುಕುಕ್ಕುವಂತೆ ದುಂದುವೆಚ್ಚಮಾಡಿ ತಿಂದುಂಡು ತೇಗುತ್ತ ಒಕ್ಕಲು ಮಕ್ಕಳ ಕಷ್ಟಾರ್ಜಿತದ ಮೇಲೆ ಆರಾಮ ಜೀವನವನ್ನು ನಡೆಸುವ ಭೂಮಾಲೀಕ ಜಮೀನ್ದಾರರುಗಳೂ ಸಂಬಳಸಾರಿಗೆ ಮತ್ತು ಲಂಚ ತಿಂದು ಕೊಬ್ಬಿದ ಐರೋಪ್ಯ ಆಡಳಿತಾಧಿಕಾರಿಗಳೂ ಸರ್ಕಾರದ ದುಂದುವೆಚ್ಚಕ್ಕಾಗಿ ಯಾವ ತೆರಿಗೆಯನ್ನೂ ಕೊಡಬೇಕಾಗಿರಲಿಲ್ಲ.

ಉಪ್ಪಿನ ತೆರಿಗೆ[೧] ಮೊತುರ್ಫಾ (Moturpha)[೨] ಮುಂತಾದ ಇತರ ದಮನಕಾರಿ

---

೧. ಈ ಕೆಳಗಿನ ಪಟ್ಟಿಯಲ್ಲಿ ಒಟ್ಟು ಆದಾಯಕ್ಕೆ ಸುಂಕದ ಆದಾಯದ ಪ್ರಮಾಣವನ್ನು ಕೊಡಲಾಗಿದೆ.

| ವರ್ಷ | ಪ್ರಮಾಣ | ವರ್ಷ | ಪ್ರಮಾಣ | ವರ್ಷ | ಪ್ರಮಾಣ |
|---|---|---|---|---|---|
| ೧೭೯೨–೩ ರಿಂದ ೧೭೯೬–೭ ರವರೆಗೆ | ೨.೩೮ | ೧೮೧೭–೮ ರಿಂದ ೧೮೨೧–೨ ರವರೆಗೆ | ೮.೩೩ | ೧೮೪೨–೩ ರಿಂದ ೧೮೪೬–೭ ರವರೆಗೆ | ೬.೦೨ |
| ೧೭೯೭–೮ ರಿಂದ ೧೮೦೧–೨ ರವರೆಗೆ | ೩.೧೦ | ೧೮೨೨–೩ ರಿಂದ ೧೮೨೬–೭ರವರೆಗೆ | ೭.೫೮ | ೧೮೪೭–೮ ರಿಂದ ೧೮೫೧–೨ರವರೆಗೆ | ೫.೪೦ |
| ೧೮೦೨–೩ ರಿಂದ ೧೮೦೬–೭ರವರೆಗೆ | ೪.೧೬ | ೧೮೨೭–೮ ರಿಂದ ೧೮೩೧–೨ರವರೆಗೆ | ೮.೧೨ | ೧೮೫೨–೩ ರಿಂದ ೧೮೫೫–೬ರವರೆಗೆ | ೫.೫೨ |
| ೧೮೦೭–೮ ರಿಂದ ೧೮೧೧–೨ ರವರೆಗೆ | ೫.೦೪ | ೧೮೩೨–೩ ರಿಂದ ೧೮೩೬–೭ರವರೆಗೆ | ೭.೧೬ | ೬೪ ವರ್ಷಗಳ ಸರಾಸರಿ | ೬.೨೨ |
| ೧೮೧೨–೩ ರಿಂದ ೧೮೧೬–೭ರವರೆಗೆ | ೬.೬೮ | ೧೮೩೭–೮ ರಿಂದ ೧೮೪೧–೨ ರವರೆಗೆ | ೬.೭೬ | | |

ಹೆಂಡ್ರಿಕ್ಸ್: ಪೂರ್ವೋಕ್ತ, ಪು. ೨೮೬.

ಕರಗಳನ್ನು[೩] ತರುವ ಮೂಲಕ ಬಡಜನರೇ ಸರ್ಕಾರದ ಸರ್ವ ಖರ್ಚುಗಳನ್ನೂ ನೋಡಿಕೊಳ್ಳುತ್ತಿದ್ದರು. ದೇಶೀ ಆಳಿಕೆಯಲ್ಲಿದ್ದ ಕೆಲವು ಸಣ್ಣಪುಟ್ಟ ಪ್ರಮಾಣದ ತೆರಿಗೆಗಳನ್ನು ರದ್ದುಮಾಡಿದರೂ ಅವುಗಳಿಂದ ಬರುತ್ತಿದ್ದ ಆದಾಯ ತುಂಬಿಸಿಕೊಳ್ಳಲು ತೆರಿಗೆಗಳನ್ನು, ಮುಖ್ಯವಾಗಿ ಭೂಕಂದಾಯವನ್ನು

---

**೧. ಒಟ್ಟು ಆದಾಯಕ್ಕೆ ಉಪ್ಪಿನ ತೆರಿಗೆಯ ಶೇಕಡಾವಾರು ಪ್ರಮಾಣ ಬೇರೆಬೇರೆ ಕಾಲದಲ್ಲಿ ಹೀಗಿತ್ತು.**

| ವರ್ಷ | ಶೇಕಡಾವಾರು ಪ್ರಮಾಣ | ವರ್ಷ | ಶೇಕಡಾವಾರು ಪ್ರಮಾಣ | ವರ್ಷ | ಶೇಕಡಾವಾರು ಪ್ರಮಾಣ |
|---|---|---|---|---|---|
| ೧೭೯೨–೩ ರಿಂದ ೧೭೯೬–೭ ರವರೆಗೆ | ೫೦.೩೩ | ೧೮೧೭–೮ ರಿಂದ ೧೮೨೧–೨ ರವರೆಗೆ | ೬೬.೧೭ | ೧೮೪೨–೩ ರಿಂದ ೧೮೪೬–೭ ರವರೆಗೆ | ೫೫.೮೫ |
| ೧೭೯೭–೮ ರಿಂದ ೧೮೦೧–೨ ರವರೆಗೆ | ೪೨.೦೨ | ೧೮೨೨–೩ ರಿಂದ ೧೮೨೬–೭ ರವರೆಗೆ | ೬೧.೮೩ | ೧೮೪೭–೮ ರಿಂದ ೧೮೫೧–೨ ರವರೆಗೆ | ೫೬.೦೬ |
| ೧೮೦೨–೩ರಿಂದ ೧೮೦೬–೭ ರವರೆಗೆ | ೩೧.೯೯ | ೧೮೨೭–೮ ರಿಂದ ೧೮೩೧–೨ ರವರೆಗೆ | ೬೦.೯೦ | ೧೮೫೨–೩ ರಿಂದ ೧೮೫೫–೬ ರವರೆಗೆ | ೫೫.೦೪ |
| ೧೮೦೭–೮ ರಿಂದ ೧೮೧೧–೨ ರವರೆಗೆ | ೩೧.೬೮ | ೧೮೩೨–೩ ರಿಂದ ೧೮೩೬–೭ ರವರೆಗೆ | ೫೭.೦೦ | ೬೪ ವರ್ಷಗಳ ಸರಾಸರಿ | ೫೪.೦೭ |
| ೧೮೧೨–೩ ರಿಂದ ೧೮೧೬–೭ ರವರೆಗೆ | ೫೨.೩೩ | ೧೮೩೭–೮ ರಿಂದ ೧೮೪೧–೨ ರವರೆಗೆ | ೫೯.೦೫ | | |

ಹೆಂಡ್ರಿಕ್ಸ್, ಪೂರ್ವೋಕ್ತ ಪು. ೨೮೩

೨. ಮದರಾಸ್ ನೇಟೀವ್ ಅಸೋಸಿಯೇಷನ್‌ದವರು ಹೌಸ್ ಆಫ್ ಕಾಮನ್ಸ್‌ಗೆ ಸಲ್ಲಿಸಲು ೧೮೫೮ ರಲ್ಲಿ ಸಿದ್ಧಪಡಿಸಿದ ಮನವಿಯಲ್ಲಿ ಇದನ್ನು (ಮೊತುರ್ಫಾ) ಹೀಗೆ ವಿವರಿಸಲಾಗಿತ್ತು. ಇದು ನೇಕಾರರು, ಬಡಗಿ, ಎಲ್ಲಾ ವಿಧದ ಲೋಹಗಳ ಕೆಲಸಗಾರರು, ಪ್ರತ್ಯೇಕ ತೆರಿಗೆಗೊಳಗಾದ ಅಂಗಡಿ ಇರುವ ಅಥವಾ ರಸ್ತೆ ಬದಿಯಲ್ಲಿ ಮಾರುವವರು ಒಳಗೊಂಡಂತೆ ಎಲ್ಲಾ ಮಾರಾಟಗಾರರು ಇತ್ಯಾದಿ ತಮ್ಮ ಉಪಕರಣಗಳ ತೆರಿಗೆ ಕೊಡುವವರು ಮತ್ತು ಕಸುಬಿನ ನಿಕೃಷ್ಟ ವಸ್ತುಗಳ ಮೇಲೆ ತೆರಿಗೆ ಕೊಡುವವರು ಮತ್ತು ಕಾರ್ಯಾಗಾರರು ಉಪಯೋಗಿಸುವ ಅತಿಕಡಿಮೆ ಬೆಲೆಯ ಉಪಕರಣಗಳು, ಅವುಗಳು ಮೊತುರ್ಫಾಕ್ಕಿಂತ ಪದೇ ಪದೇ ಆರುಪಟ್ಟು ಹೆಚ್ಚಾಗಿದ್ದು ಅವುಗಳ ಉಪಯೋಗಕ್ಕೆ ಪರವಾನಿಗೆ ಕೊಡಲಾಗಿರುವಂತಹ ಕಸುಬುಗಳು ಮತ್ತು ಉದ್ಯೋಗಗಳ ಮೇಲೆ ವಿಧಿಸಲಾಗುವ ತೆರಿಗೆ (ರಾಘವಯ್ಯಂಗಾರರು ತಮ್ಮ ಪ್ರೋಗ್ರೆಸ್ ಆಫ್ ಮದರಾಸ್ ಪ್ರೆಸಿಡೆನ್ಸಿ (೧೮೯೩) ಪುಟ ೧೧೩ರಲ್ಲಿ. ಉಲ್ಲೇಖಿಸಿದ್ದಾರೆ).

೩. ಡಾ. ಫ್ರಾನ್ಸಿಸ್ ಬುಷಾನನ್‌ರು ತಮ್ಮ ಜರ್ನಿ ಫ್ರಂ ಮದರಾಸ್, ಸಂ ॥ರಲ್ಲಿ ಈ ರೀತಿ ಬರೆದಿದ್ದಾರೆ. "ದಕ್ಷಿಣ ಹಿಂದೂಸ್ತಾನದ ಕೊಯಮತ್ತೂರು ಜಿಲ್ಲೆಯ ಸತ್ಯಮಂಗಲಮ್‌ನಲ್ಲಿ ಪ್ರತಿ ಎರಡು ಥಾನು ಉತ್ತಮ ಬಟ್ಟೆಯ ಮೇಲೆ ೩/೪ + ೧/೩, ರಷ್ಟು ವೀರರಾಯ ಪಣಮ್, ಅಥವಾ ಸುಮಾರು ೫ ೧/೪ ಪೆನ್ಸ್, ಮತ್ತು ಪ್ರತಿ ಎರಡು ಥಾನು ಒರಟು ಬಟ್ಟೆಯ ಮೇಲೆ ೩ + ೩/೪ರಷ್ಟು ವೀರರಾಯ ಪಣಮ್ ಅಥವಾ ಸುಮಾರು ೨ ೩/೪ ಪೆನ್ಸ್‌ನಷ್ಟು ಹೊಸ ಸ್ಟ್ಯಾಂಪ್ ಕರವನ್ನು ಹೇರಲಾಗಿತ್ತು. ಇದರ ಪರಿಣಾಮವಾಗಿ ನೇಕಾರರು ತಮ್ಮ ಕೆಲಸ ಬಿಟ್ಟು ತಮ್ಮ ಪ್ರಕರಣವನ್ನು ಕಲೆಕ್ಟರರ ಗಮನಕ್ಕೆ ತರಲು ಒಟ್ಟಾಗಿ ತೆರಳಿದರು. ಈ ತೆರಿಗೆಯನ್ನು ಪ್ರತಿಯೊಂದು ಮಗ್ಗದ ಮೇಲೆ ಮೊದಲು ಹೇರಲಾಗಿದ್ದ ವರ್ಷಕ್ಕೆ ೪ ಅಥವಾ ೫ ಪಣಮ್‌ಗಳ ಬದಲಾಗಿ ಹೇರಲಾಗಿತ್ತು. ಇದೂ ಸಹ ಹೊರೆಯಾಗಿತ್ತೆಂದು ನೇಕಾರರು ಭಾವಿಸಿದ್ದರು", ಪುಟಗಳು ೨೪೦–೧, ಅವರು ಮುಂದುವರಿದು ಹೀಗೆ ಬರೆದಿದ್ದಾರೆ. "೫೦ ನೇಕಾರರ ಮನೆಗಳಿದ್ದಂತಹ ದೊಡ್ಡರ ಪಾಳ್ಯಂನಲ್ಲಿ ಈ ಹೊಸ ಸ್ಟಾಂಪ್ ತೆರಿಗೆಯ ಬಗ್ಗೆ ಬಹಳ ವಿರೋಧವಿದ್ದು ಅವರ ಪ್ರಕಾರ ಇದರಿಂದಾಗಿ ಪ್ರತಿಯೊಂದು ಮಗ್ಗಕ್ಕೆ ಅವರು ಮೊದಲು ಕೊಡುತ್ತಿದ್ದ ೫ ರ ಬದಲು ೨೦ ಪಣಮ್ ಬೀಳುತ್ತದೆ" (ಅದೇ. ಪು. ೨೪೨).

ಹೆಚ್ಚುಮಾಡಲಾಯಿತು. ಈ ಆಪಾದನೆಯನ್ನು ಸರ್ಕಾರ ಅಧಿಕೃತವಾಗಿ ಅಲ್ಲಗಳೆದರೂ[೧] ಭೂಕಂದಾಯ ಅದಕ್ಕೆ ಸಮಾನಾಂತರವಾಗಿಯೋ ಅಥವಾ ಫಲಸ್ವರೂಪವಾಗಿಯೋ ಹೆಚ್ಚಿರುವುದಂತೂ ನಿಜವಾಗಿದೆ.

---

೧. ಹೇರಲಾದ ತೆರಿಗೆಗಳ ಒಂದು ಚಿತ್ರಣವನ್ನು ಇಲ್ಲಿ ಕೊಡಲಾಗಿದೆ.

| **ಆದಾಯದ ಮೂಲ** | **ಸಂಗ್ರಹಿಸಿದ ಕಂದಾಯದ ಮೊತ್ತ ದಶ ಲಕ್ಷಗಳಲ್ಲಿ** | **ಅವಧಿ** | | **ಸ್ಥಳ ಮತ್ತು ಆರಂಭ ಕಾಲ** |
|---|---|---|---|---|
| | | **ವರ್ಷ ಗಳು** | **ಇಸ್ವಿಗಳು** | |
| ಭೂ ಕಂದಾಯ | ೬೬೨.೩೦೮ | ೬೪ | ೧೭೯೨–೩ರಿಂದ ೧೮೫೫–೬ ರವರೆಗೆ | ಬಂಗಾಳ, ಮುಂಬಯಿ ಮತ್ತು ಮದರಾಸುಗಳಲ್ಲಿ ೧೮೩೪–೫ರ ಲಾಗಾಯಿತು ವಾಯವ್ಯ ಪ್ರಾಂತ್ಯಗಳಲ್ಲಿ ಮತ್ತು ೧೮೪೯–೫೦ರಿಂದ ಪಂಜಾಬಿನಲ್ಲಿ. |
| ಸೆಕೈರ್ ಮತ್ತು ಅಬಕಾರಿ | ೯.೭೨೯ | ೨೦ | ೧೮೩೬–೭ರಿಂದ ೧೮೫೫–೬ ರವರೆಗೆ | ಇಡೀ ಅವಧಿಯಲ್ಲಿ ಬಂಗಾಳ, ವಾಯವ್ಯ ಪ್ರಾಂತ್ಯಗಳು ಮದರಾಸು ಮತ್ತು ಮುಂಬಯಿಯಲ್ಲಿ ಹಾಗೂ ೧೮೪೯–೫೦ ರಿಂದ ಪಂಜಾಬಿನಲ್ಲಿ. |
| ಎಕ್ಸೈಜ್ | ೪.೯೮೭ | ೨೦ | " | ಪ್ರತ್ಯೇಕವಾಗಿ ಬಂಗಾಳದಲ್ಲಿ ಮಾತ್ರ. |
| ಮೊತುರ್ಫಾ | ೬.೪೫೫ | ೨೦ | " | ಪ್ರತ್ಯೇಕವಾಗಿ ಮದರಾಸಿನಲ್ಲಿ ಮಾತ್ರ. |
| ಉಪ್ಪು ೧೮೫೩ | ೧೩೫.೫೩೨ | ೬೪ | ೧೭೯೨–೩ರಿಂದ ೧೮೫೫–೬ ರವರೆಗೆ | ೧೭೯೨ರಿಂದ ಬಂಗಾಳದಲ್ಲಿ, ೧೮೨೨ರಿಂದ ಮದರಾಸಿನಲ್ಲಿ, ೧೮೨೨ರಿಂದ ಮುಂಬಯಿಯಲ್ಲಿ, ರಿಂದ ವಾಯವ್ಯ ಪ್ರಾಂತ್ಯಗಳಲ್ಲಿ. |
| ಅಫೀಮು | ೧೦೬.೭೦೭ | ೬೪ | " | ೧೭೯೨ರಿಂದ ಬಂಗಾಳದಲ್ಲಿ, ೧೮೨೦ರಿಂದ ಮುಂಬಯಿಯಲ್ಲಿ. |
| ಅಂಚೆ ಕಛೇರಿ | ೮.೮೮೮ | ೬೪ | " | ೧೭೯೨ರಿಂದ ಬಂಗಾಳ ಮತ್ತು ಮದರಾಸುಗಳಲ್ಲಿ, ೧೮೧೩ರಿಂದ ಮುಂಬಯಿಯಲ್ಲಿ, ೧೮೪೯ರಲ್ಲಿ ಪಂಜಾಬ್ ಮತ್ತು ೧೮೩೫ರಲ್ಲಿ ವಾಯವ್ಯ ಪ್ರಾಂತ್ಯದಲ್ಲಿ |
| ಸ್ಟಾಂಪುಗಳು | ೧೬.೭೯೭ | ೫೯ | ೧೭೯೭–೮ರಿಂದ ೧೮೫೫–೬ ರವರೆಗೆ | ಬಂಗಾಳದಲ್ಲಿ ೧೭೯೭ರಿಂದ, ಮದರಾಸಿನಲ್ಲಿ ೧೮೧೩ ರಿಂದ, ಮುಂಬಯಿಯಲ್ಲಿ ೧೮೧೯ರಿಂದ ವಾಯವ್ಯ ಪ್ರಾಂತ್ಯದಲ್ಲಿ ೧೮೩೪ರಿಂದ, ಪಂಜಾಬಿನಲ್ಲಿ ೧೮೪೯ರಿಂದ. |
| **ಸುಂಕ ತೆರಿಗೆಗಳು** | | | | |
| ಆಂತರಿಕ ಸಾಗಣೆ ಪಟ್ಟಣ | ೭೬.೧೭೯ | ೬೪ | ೧೭೯೨–೩ರಿಂದ ೧೮೫೫–೬ ರವರೆಗೆ | ಬಂಗಾಳ, ಮದರಾಸು ಮತ್ತು ಮುಂಬಯಿಯಲ್ಲಿ ೧೭೯೨–೩ರಿಂದ, ವಾಯವ್ಯ ಪ್ರಾಂತ್ಯದಲ್ಲಿ ೧೮೩೪–೫ರಿಂದ ಪಂಜಾಬಿನಲ್ಲಿ ೧೮೪೯–೫೦ರಿಂದ. |
| ಬಾಹ್ಯ ಆಮದು ರಫ್ತು | | | | |
| ಟಂಕಸಾಲೆ ಆದಾಯ | ೩.೨೨೧ | ೬೪ | ೧೭೯೨–೩ರಿಂದ ೧೮೫೫–೬ರವರೆಗೆ | ಬಂಗಾಳದಲ್ಲಿ ೧೭೯೨ ರಿಂದ, ಮದರಾಸು ಮತ್ತು ಮುಂಬಯಿಯಲ್ಲಿ ೧೮೧೩ರಿಂದ |
| ತಂಬಾಕು | ೧.೪೩೨ | ೧೮ | ೧೮೩೬–೭ರಿಂದ ೧೮೫೩–೪ರವರೆಗೆ | ಮದರಾಸಿನಲ್ಲಿ ೧೮೩೬ರಿಂದ. |
| ಇತರೆ | ೧೯೪.೭೭೭ | ೬೪ | ೧೭೯೨–೩ರಿಂದ ೧೮೫೫–೬ರವರೆಗೆ | ಭೂಕಂದಾಯದಲ್ಲಿದ್ದ ಹಾಗೆಯೇ |

ಮೇಲೆ ವಿವರಿಸಿರುವ ಹಾನಿಕಾರಕ ಆದಾಯ (ಕಂದಾಯ) ಪದ್ಧತಿಯಲ್ಲಿ ಜನರ ತೆರಿಗೆ ಹೊರಬಲ್ಲ ಶಕ್ತಿ ಕುಂದಿದ್ದರ ಪರಿಣಾಮವಾಗಿ ಅದೆಷ್ಟು ವಿವಿಧ ಮೂಲಗಳಿಂದ ಕರಾಕರಣೆ ಮಾಡಿಯೂ ಸಾಮ್ರಾಜ್ಯ ಸರ್ಕಾರಕ್ಕೆ ಆದಾಯ ವೆಚ್ಚಗಳನ್ನು ಸರಿದೂಗಿಸಲು ಸಾಧ್ಯವಾಗುತ್ತಿರಲಿಲ್ಲ.[೧] ಜನರ ಸಂಪತ್ತಿನ ಬೇರಿಗೇ ಕುಠಾರಘಾತ ಮಾಡುವಂಥ ಆಕರ ನೀತಿಯನ್ನು ಅನುಸರಿಸುವ ಯಾವುದೇ ಸರ್ಕಾರ ತನ್ನ ಖಾಲಿ ಖಜಾನೆಗೆ ತಾನೇ ಹೊಣೆ ಎಂಬುದನ್ನರಿಯಬೇಕು. ದೇಶದ ಉತ್ಪಾದನೆಯ ಮೇಲಾಗುವ ಪರಿಣಾಮವನ್ನು ಲೆಕ್ಕಿಸದೆ ವಿಧಿಸುವ ಈ ಬಗೆಯ ತೆರಿಗೆಯನ್ನು ತೆರಿಗೆದಾರರ ಆರ್ಥಿಕ ಜೀವನವನ್ನು ಉತ್ತಮಗೊಳಿಸುವ ಕಾಮಗಾರಿಗಳಲ್ಲಾದರೂ ವಿನಿಯೋಗ ಮಾಡಿದರೋ ಹೇಗೆಂಬುದನ್ನು ಈಗ ಪರಿಶೀಲಿಸೋಣ. ಈ ಕೆಳಗಿನ ತಃಖ್ತೆಯನ್ನು ಪರಿಶೀಲಿಸಿದರೆ ವಿವಿಧ ಬಾಬ್ತುಗಳಿಗಾಗಿ ಕೆಲವು ದಶಕಗಳಲ್ಲಿ ಮಾಡಿರುವ ಖರ್ಚಿನ ವಿವರಗಳನ್ನು ತಿಳಿದುಕೊಳ್ಳಬಹುದು.

## ವೆಚ್ಚದ ವಿಂಗಡಣೆ ಹೀಗಿತ್ತು.*

| ಖರ್ಚಿನ ಬಾಬತ್ತು | ಈ ವರ್ಷದ ಒಟ್ಟು ಆದಾಯದಲ್ಲಿ ಶೇಕಡಾ ಪ್ರಮಾಣ | | | | | |
|---|---|---|---|---|---|---|
| | ೧೮೦೯–೧೦ | ೧೮೧೯–೨೦ | ೧೮೨೯–೩೦ | ೧೮೩೯–೪೦ | ೧೮೪೯–೫೦ | ೧೮೫೭ |
| ಮಿಲಿಟರಿ | ೫೮.೮೭೭ | ೬೪.೨೯೦ | ೫೩.೭೫೪ | ೫೭.೭೨೧ | ೫೧.೬೬೨ | ೪೫.೫೫ |
| ಸಾಲದ ಮೇಲಿನ ಬಡ್ಡಿ | ೧೮.೦೧೦ | ೧೨.೮೦೫ | ೧೨.೧೨೪ | ೯.೭೫೬ | ೧೦.೫೧೨ | ೭.೧೯ |
| ಸಿವಿಲ್ ಮತ್ತು ರಾಜಕೀಯ ವೆಚ್ಚ | ೭.೨೨೧ | ೮.೯೦೦ | ೯.೫೭೫ | ೧೨.೨೯೬ | ೮.೯೦೨ | ೯.೬೨ |
| ನ್ಯಾಯವಿತರಣೆ | ೭.೫೨೫ | ೬.೮೦೦ | ೭.೧೦೭ | ೯.೫೬೫ | ೭.೧೮೦ | ೯.೩೮ |
| ಪ್ರಾಂತೀಯ ಪೊಲೀಸ್ ಪಡೆ | ೧.೯೯೧ | ೨.೦೯೩ | ೧.೫೩೫ | ೨.೦೬೨ | ೨.೦೬೨ | |
| ಕಟ್ಟಡಗಳು, ಕೋಟೆ ಕೊತ್ತಳಗಳು | ೧.೬೩೯ | ೧.೭೫೬ | ೨.೮೧೦ | ೧.೪೨೮ | ೧.೬೬೧ | |

೧. ಪಾರ್ಲಿಮೆಂಟರಿ ಪೇಪರುಗಳು, ಸಂ.V (೧೮೩೧). ಈಸ್ಟ್ ಇಂಡಿಯಾ ಕಂಪನಿಯ ವ್ಯವಹಾರಗಳ ಮೇಲಿನ ಸಾಕ್ಷ್ಯಗಳ ನಡವಳಿಕೆಗಳು ೩೮೬೪–೬೬.

* ಬ್ರಿಟಿಷ್ ಇಂಡಿಯಾದ ಹಣಕಾಸು ಪರಿಸ್ಥಿತಿ – ಅಂದು, ಇಂದು, ಮುಂದು: ಕರ್ನಲ್ ಸೈಕ್ಸ್; 'ಜರ್ನಲ್ ಆಫ್ ರಾಯಲ್ ಸ್ಟ್ಯಾಟಿಸ್ಟಿಕಲ್ ಸೊಸೈಟಿ', ೧೮೫೯ ಸಂಪುಟ XXII ಪುಟ ೪೫೭.

ಇಲ್ಲಿ ಮುಖ್ಯವಾಗಿ ಎದ್ದುತೋರುವುದು ಮಿಲಿಟರಿ ವೆಚ್ಚ. ವರ್ಷ ಕಳೆದಂತೆ ಇದು ಕಡಿಮೆ ಆಗುತ್ತಿರುವಂತೆ ಕಂಡರೂ ಒಟ್ಟು ವೆಚ್ಚದಲ್ಲಿ ಅರ್ಧಾಂಶವನ್ನು ಮಿಲಿಟರಿಯೇ ಕಬಳಿಸುವುದನ್ನು ಗಮನಿಸದಿರಲಾಗುವುದಿಲ್ಲ. ಈ ಭಾರಿ ಮಿಲಿಟರಿ ವೆಚ್ಚದಲ್ಲೂ ಒಟ್ಟು ಮಿಲಿಟರಿ ವೆಚ್ಚದ ಪೂರ್ತಿ ಭಾರದ ಅರಿವಾಗುವುದಿಲ್ಲ. ಇದಕ್ಕೆ ಸಾರ್ವಜನಿಕ ಸಾಲದ ಮೇಲೆ ತೆರಬೇಕಾದ ಬಡ್ಡಿಯ ಮೊತ್ತವನ್ನು ಸೇರಿಸಬೇಕು. ಏಕೆಂದರೆ ಪೂರ್ತಿಸಾಲ ಯುದ್ಧದ ವೆಚ್ಚಕ್ಕಾಗಿ ಮಾಡಿದ ಸಾಲವಾಗಿತ್ತು. ಆ ಕಾಲದಲ್ಲಿ ದೇಶೀಯ ಆಳರಸರಿಗೂ ಈಸ್ಟ್ ಇಂಡಿಯಾ ಕಂಪನಿಗೂ ನಡುವೆ ಆಗಿಂದಾಗ ಯುದ್ಧಗಳು ಜರುಗುತ್ತಿದ್ದವು. ಎರಡು ಮರಾಠಾ ಯುದ್ಧಗಳು, ಮೂರು ಮೈಸೂರು ಯುದ್ಧಗಳು, ಎರಡು ಬರ್ಮಾ ಯುದ್ಧಗಳು, ಎರಡು ಆಫ್ಘನ್ ಯುದ್ಧಗಳು, ಕರ್ನಾಟಕ ಯುದ್ಧಗಳು ಅಲ್ಲದೆ ಚಿಲ್ಲರೆ ಪಲ್ಲರೆ ಹೊಡೆದಾಟಗಳು ಎಲ್ಲವೂ ಕಂಪನಿ ಮತ್ತು ಬ್ರಿಟಿಷ್ ಆಧಿಪತ್ಯಕ್ಕೆ ಹೊಸ ಭೂಭಾಗಗಳನ್ನು ಸಂಪಾದಿಸಿ ಕೊಡುವ ಸಲುವಾಗಿಯೇ ನಡೆದಂಥವು. ಈಸ್ಟ್ ಇಂಡಿಯಾ ಕಂಪನಿಯ ಭೂಪ್ರದೇಶಗಳೆಲ್ಲವೂ ಬ್ರಿಟಿಷ್ ರಾಣಿಯ ಸೊತ್ತುಗಳೆಂದು ವಾದಿಸಿದ ಸರ್ಕಾರ ಇದಕ್ಕಾಗಿ ತನ್ನ ಒಂದೇ ಒಂದು ಪುಡಿಕಾಸನ್ನೂ ವೆಚ್ಚಮಾಡಲಿಲ್ಲ. ಭಾರತವೇ ಈ ಯುದ್ಧಗಳ ಸಕಲ ಭಾರವನ್ನೂ ಹೊರಬೇಕಾಗಿತ್ತು. ಅಷ್ಟೇ ಏನು, ಕಟ್ಟಡ ಮತ್ತು ಕೋಟೆ ಕೊತ್ತಳಗಳೂ ಯುದ್ಧಸೇವೆಗಾಗಿ ತಾನೇ ಬೇಕಾದವು? ಆ ವೆಚ್ಚವೂ ಮಿಲಿಟರಿ ವೆಚ್ಚದೊಡನೆ ಬೆರೆತಲ್ಲಿ ೫೨ ಶೇಕಡಾದಿಂದ ಶೇಕಡಾ ೮೨ರ ವರೆಗೆ ವೆಚ್ಚಮಾಡುವ ಅಪೂರ್ವ ದೃಶ್ಯವನ್ನು ಭಾರತ ನಮ್ಮ ಮುಂದೆ ತೆರೆದಿಡುತ್ತದೆ. ಭಾರತದ ಮಿಲಿಟರಿ ಸೇವೆಯಲ್ಲಿ ಬಹುತೇಕ ಭಾರತದ ಜನರೇ ಇರುವುದರಿಂದ ಈ ಹಣದ ಪಾಲು ಅವರಿಗೂ ಸಿಕ್ಕಿಲ್ಲವೇ ಎಂದು ಯೋಚಿಸುವಾಗ ಐರೋಪ್ಯರಿಗೂ ಭಾರತದ ಸೈನಿಕರಿಗೂ ಇರುವ ಸಂಬಳದ ಗಮನಾರ್ಹ ವ್ಯತ್ಯಾಸ ಕಣ್ಣಮುಂದೆ ತೋರುತ್ತದೆ.[೧] ಒಬ್ಬ ಐರೋಪ್ಯ ಸೈನಿಕರ ವೇತನಶ್ರೇಣಿ ಭಾರತೀಯ ಸೈನಿಕರಿಗಿಂತ

---

೧. ಈ ಕೆಳಗಿನ ಅಂಕಿಸಂಖ್ಯೆಗಳಿಂದ ಇದನ್ನು ಕಾಣಬಹುದು :

**ದಂಗೆಗೆ ಮುಂಚೆ ಭಾರತೀಯ ಸೈನ್ಯ ಬಲ.**

| | ಐರೋಪ್ಯರು | ದೇಶೀಯರು | ಒಟ್ಟು |
|---|---|---|---|
| (ಫಿರಂಗಿ ದಳ) | ೬,೪೧೯ | ೯,೧೩೮ | ೧೫,೫೭೭ |
| (ಸುರಂಗ ದಳ) | ೧೧೦ | ೩,೦೪೩ | ೩,೧೫೩ |
| (ಅಶ್ವದಳ) | ೩,೪೫೬ | ೩೦,೫೩೩ | ೩೨,೯೮೯ |
| (ಪದಾತಿ ಸೈನ್ಯ) | ೨೯,೭೬೦ | ೧೮೮,೬೫೦ | ೨೧೮,೪೨೦ |
| ಒಟ್ಟು | ೩೮,೭೮೫ | ೨೩೧,೩೭೪ | ೨೭೦,೧೧೬ |

'ರಿಪೋರ್ಟ್ ಆಫ್ ಮೇಜರ್-ಜನರಲ್ ಹ್ಯಾನ್‌ಕಾಕ್ ಆನ್ ದಿ ಇಂಡಿಯನ್ ಆರ್ಮಿ', ಪಾರ್ಲಿಮೆಂಟರಿ ಪೇಪರ್, ೧೮೫೯, ಪು. ೨೧.

ನಾಲ್ಕುಪಟ್ಟು ಹೆಚ್ಚಾಗಿರುತ್ತಿತ್ತು.[೧] ಅಂತೂ ಇಂತೂ ಸಾರ್ವಜನಿಕ ಕಾಮಗಾರಿ ಇರಲಿ, ಖಾಸಗಿ ಉದ್ಯೋಗವಿರಲಿ ಯಾವುದೇ ದೃಷ್ಟಿಯಿಂದ ನೋಡಿದರೂ ಕಂದಾಯ ತೆರುವ ಜನವರ್ಗಕ್ಕೆ ಮಿಲಿಟರಿವೆಚ್ಚದಿಂದ ಯಾವ ಪ್ರಯೋಜನವೂ ಆದಂತೆ ಕಾಣುವುದಿಲ್ಲ.

ಇದಕ್ಕೆ ಪ್ರತಿಯಾಗಿ ಆಡಳಿತ ಮತ್ತು ರಾಜಕೀಯಕ್ಕೆ ತಗಲುವ, ಕಂದಾಯದ ಶೇಕಡಾ ಹತ್ತರಷ್ಟು ಭಾಗದ ವೆಚ್ಚವಾದರೂ ಉಪಶಮನಕಾರಿ ಆದೀತೇ ಎಂಬುದನ್ನು ವಿಚಾರಿಸಿದರೆ, ಅದರಿಂದ ದೇಶೀ ಜನರಿಗೆ, ಕರಭಾರ ಹೊರುವ ಭಾರತದ ಪ್ರಜಾಜನರಿಗೆ ಏನೂ ಸಿಗುವಂತಿರಲಿಲ್ಲ. ಬ್ರಿಟಿಷರ ವಿರುದ್ಧ ಸೋತ ದೇಶೀಯರಿಗೆ ಸ್ಥಾನಮಾನ ಕಮ್ಮಿಯಾದದ್ದು ಮಾತ್ರವೇ ಅಲ್ಲ ಶತ್ರುಗಳಾದ ಅವರ ಬಗ್ಗೆ ಬ್ರಿಟಿಷರಲ್ಲಿ ಅಪನಂಬಿಕೆಯೂ ಹುಟ್ಟಿಕೊಂಡಿತ್ತು. ಆದ್ದರಿಂದ ಬ್ರಿಟಿಷ್ ಆಡಳಿತ ಆರಂಭವಾದಾಗ ವಿಶ್ವಾಸಾರ್ಹರಲ್ಲವೆಂದೂ, ಸೋತುಹೋದವರೆಂದೂ ಭಾರತೀಯರನ್ನು ಮೇಲ್ಮಟ್ಟದ ಆಡಳಿತ ಹುದ್ದೆಗಳಿಂದ ದೂರವಿಡಲಾಯಿತು.[೨]

---

೧. ಇದು ಕೆಳಗಿನ ತಃಖ್ತೆಯಿಂದ ವ್ಯಕ್ತವಾಗುತ್ತದೆ. :

**ಒಂದು ಪದಾತಿದಳದ ಮಾಹೆಯಾನ ಖರ್ಚು**

| **ಐರೋಪ್ಯ** | | |
|---|---|---|
| | **ವಿವರಗಳು** | **ಒಟ್ಟು** |
| **ಅಧಿಕಾರಿಗಳು** | **ರೂ.ಅ.ಪೈ** | **ರೂ.ಅ.ಪೈ** |
| ೩೭ ಅಧಿಕಾರಿಗಳು | ೧೪,೭೩೪–೧೪–೩ | ೨೧,೭೭೯–೨–೭ |
| ಸಿಬ್ಬಂದಿ | ೪,೫೧೫–೧೨–೪ | |
| ಕಮಾಂಡ್ ಮತ್ತು ಇತರ ಭತ್ಯಗಳು | ೨,೫೨೮–೮೦ | |
| **ಸೈನಿಕರು** | | |
| ೧೧೭ ಎನ್.ಸಿ.ಓಗಳು | ೨,೨೮೯–೪–೫ | ೨೫,೯೯–೮–೦ |
| ೯೫೦ ಪ್ರೈವೇಟ್ ಕೂಸಿ ತಂಡ | ೧೧,೨೦೩–೮–೪ | |
| ರೇಷನ್, ಅರಿವೆ ಮತ್ತು ಇತರ ಖರ್ಚುಗಳು | ೧೨,೫೦೬–೧೧–೩ | |
| **ಒಟ್ಟು** | | **೪೭,೭೭೮–೧೦–೭** |

೨. ೧೮೩೩ಕ್ಕೆ ಮುಂಚೆ ಅವರು ಎಷ್ಟು ಕನಿಷ್ಠ ವೇತನ ಶ್ರೇಣಿಯಲ್ಲಿ ನೇಮಕಗೊಂಡಿದ್ದರೆಂಬುದು ಈ ಕೆಳಗಿನ ತಃಖ್ತೆಯಿಂದ ಗೊತ್ತಾಗುತ್ತದೆ:

| **ಮೂರು ಪ್ರೆಸಿಡೆನ್ಸಿಗಳಲ್ಲಿ ನೇಮಕಗೊಂಡಿದ್ದ ಒಂದನೆಯ ದರ್ಜೆಯ ನಾಗರಿಕ ಸಿಬ್ಬಂದಿಯು ಪಡೆಯುತ್ತಿದ್ದ ಮಾಸಿಕ ವೇತನ** | **ಬಂಗಾಳ** | | **ಮದರಾಸು** | | **ಮುಂಬಯಿ** | | **ಒಟ್ಟು** | |
|---|---|---|---|---|---|---|---|---|
| | **ಸಂಖ್ಯೆ** | **ಪಡೆಯಲಾದ ಒಟ್ಟು ವೇತನ** | **ಸಂಖ್ಯೆ** | **ಪಡೆಯಲಾದ ಒಟ್ಟು ವೇತನ** | **ಸಂಖ್ಯೆ** | **ಪಡೆಯಲಾದ ಒಟ್ಟು ವೇತನ** | **ಸಂಖ್ಯೆ** | **ಪಡೆಯಲಾದ ಒಟ್ಟು ವೇತನ** |
| ೫೦೦ ರೂಪಾಯಿಗಳ ಮೇಲೆ | ೫ | ೨,೭೦೦ | ...... | ...... | ೫ | ೨,೫೦೦ | | |
| ೪೦೦ ರೂಪಾಯಿಗಳ ಮೇಲೆ | ೨ | ೮೦೦ | ...... | ...... | ೧ | ೪೦೦ | | |
| ೩೫೦ ರೂಪಾಯಿಗಳ ಮೇಲೆ | ೪ | ೧,೪೦೦ | ೧ | ೩೫೦ | ೧ | ೩೫೦ | | |
| ೩೦೦ ರೂಪಾಯಿಗಳ ಮೇಲೆ | ೩ | ೯೦೦ | ....... | ....... | ೨ | ೬೦೦ | | |
| ೨೫೦ ರೂಪಾಯಿಗಳ ಮೇಲೆ | ೫ | ೧,೨೫೦ | ...... | ...... | ೧ | ೨೫೦ | ೮೯ | ೨೦,೬೯೦ |
| ೨೦೦ರಿಂದ ೨೫೦ ರೂಗಳು | ೧೭ | ೩,೪೬೦ | ೫ | ೧,೧೫೫ | ೧ | ೨೦೦ | | |
| ೧೫೦ರಿಂದ ೨೦೦ ರೂಗಳು | ೧೦ | ೧,೫೯೦ | ೪ | ೬೮೨¹/₂ | ....... | ...... | | |
| ೧೦೦ರಿಂದ ೨೦೦ ರೂಗಳು | ೫ | ೫೫೦ | ೫ | ೫೨೫ | ೫ | ೩೩೦ | | |
| ೧೦೦ರೂಗಿಂತ ಕಡಿಮೆ | ೬ | ೪೭೦ | ೧ | ೮೭¹/₂ | ೨ | ೧೪೦ | | |
| ಒಟ್ಟು | ೫೭ | ೧೩,೧೨೦ | ೧೬ | ೨,೮೦೦ | ೧೬ | ೪,೭೭೦ | | |

| ದೇಶೀಯ | | |
|---|---|---|
| | ವಿವರಗಳು | ಒಟ್ಟು |
| **ಅಧಿಕಾರಿಗಳು** | **ರೂ.ಆ.ಪೈ** | **ರೂ.ಆ.ಪೈ** |
| ೨೬ ಐರೋಪ್ಯರು... | ೯,೮೬೧-೨೧ | ೧೩,೫೨೭-೮-೭ |
| ೨೦ ದೇಶೀಯರು... | ೯೪೦-೦-೦ | |
| ಸಿಬ್ಬಂದಿ ಮತ್ತು ಅದರ ವೆಚ್ಚ | ೧,೨೯೯-೧-೪ | |
| ಕಮಾಂಡ್ ಮತ್ತು ಇತರ ಭತ್ಯಗಳು | ೧,೫೧೭-೫-೨ | |
| **ಸೈನಿಕರು** | | |
| ೧೪೦ ಎನ್.ಸಿ.ಓಗಳು | ೧,೭೮೦-೦-೦ | ೯,೬೦೬-೧೪-೦ |
| ೧,೦೦೦ ಸಿಪಾಯಿಗಳು | ೭,೦೦೦-೦-೦ | |
| ವೆಚ್ಚಗಳು... | ೮೨೬-೧೪-೦ | |
| **ಒಟ್ಟು** | | **೨೩,೧೩೪-೬-೭** |

ಇದಕ್ಕೋಸ್ಕರವೇ ಈ ಭೂ ಪ್ರದೇಶದ ನಿವಾಸಿಗಳನ್ನು ಅಥವಾ ಬ್ರಿಟಿಷ್ ಆಳರಸರ ಕೆಳಗೆ ಹುಟ್ಟಿದ ಪ್ರಜೆಯನ್ನು ಆತನ ಧರ್ಮ, ಜನನ ಸ್ಥಳ, ವಂಶ, ವರ್ಣಮಾತ್ರದಿಂದ ಕಂಪನಿಯ ಕೈಕೆಳಗೆ ಯಾವುದೇ ಹುದ್ದೆ ಅಥವಾ ಉದ್ಯೋಗದಿಂದ ದೂರವಿಡಲು ಆಗದೆಂದು ೧೮೩೩ರ ಪಾರ್ಲಿಮೆಂಟ್ ಶಾಸನದಲ್ಲಿ ಈ ಅನ್ಯಾಯವನ್ನು ಹಿಂದೂಡಿ ನ್ಯಾಯ ದೊರಕಿಸುವ ಯತ್ನ ಮಾಡಲಾಯಿತು. (ಸೆಕ್ಷನ್, ೮೭)

ದೇಶೀಯರು ಕೆಳಗೆ ತೋರಿಸಲಾಗಿರುವ ೨೬ ಐರೋಪ್ಯ ಅಧಿಕಾರಿಗಳ ವೇತನ ಮತ್ತು ಕಮಾಂಡ್ ಹಾಗೂ ಇತರ ಭತ್ಯಗಳ ಒಟ್ಟು ಮೊತ್ತವಾದ ೧೧,೩೭೮-೭-೩ ರೂ. ಗಳನ್ನು ಕಳೆದರೆ ೧,೧೦೪ ಜನ ಐರೋಪ್ಯರು ೪೭,೭೧೪-೧೦-೭ ರೂ. ಗಳನ್ನು ಮತ್ತು ೧೧೬೦ ದೇಶೀಯರು ಕೇವಲ ೧೧,೭೫೫-೧೫-೪ ರೂ.ಗಳನ್ನು ಪಡೆದಿರುವುದು ಈ ತಃಖ್ತೆಯಿಂದ ತಿಳಿದುಬರುತ್ತದೆ.

ಆದರೂ ವಾಸ್ತವವಾಗಿ ದಂಗೆಯ ಕಾಲ ಕಳೆಯುವವರೆಗೂ ಯಾರೊಬ್ಬ ದೇಶೀಯನನ್ನೂ ಮೇಲು ಹುದ್ದೆಗಳಿಗೆ ನೇಮಕ ಮಾಡಲಿಲ್ಲ. ಏಕೆಂದರೆ ಪಾರ್ಲಿಮೆಂಟ್ ಶಾಸನವನ್ನು ವ್ಯಾಖ್ಯಾನ ಮಾಡಿದ ನಿರ್ದೇಶಕ ಮಂಡಳಿ ಶಾಸನ ಜಾರಿಯಾದ ತಕ್ಷಣ ಭಾರತ ಸರ್ಕಾರಕ್ಕೆ ಕಳಿಸಿದ ನಿರೂಪದಲ್ಲಿ 'ಯಾವ ಬದಲಾವಣೆಯೂ ಅಗತ್ಯವಿಲ್ಲವೆಂದೂ, ನೇಮಕಾತಿ ಪರಿಸ್ಥಿತಿಯನ್ನು ಹಿಂದಿನಂತೆಯೇ ಇಟ್ಟಿರಬೇಕೆಂದೂ' ಸೂಚಿಸಿತು.[೧]

ನ್ಯಾಯವಿತರಣೆ ಮತ್ತು ಪೊಲೀಸ್ ವೆಚ್ಚಗಳಿಗೆ ಶೇಕಡಾ ೧೦ರಷ್ಟು ವೆಚ್ಚ ಮಾಡಿದರೂ ಅದು ಪಾಲನೆಯ ವೆಚ್ಚವಷ್ಟೇ ಆದೀತು. ಹಾನಿಕರ ತೆರಿಗೆ ಹಣದಲ್ಲಿ ಹೆಚ್ಚಿನಂಶವನ್ನು ಅನುತ್ಪಾದಕ ವಿಷಯಗಳಿಗೇ ವೆಚ್ಚಮಾಡಲಾಗುತ್ತಿತ್ತು. ಶಾಂತಿಯ ಹೆಸರಿನಲ್ಲಿ ಯುದ್ಧದ ಹಂದರಗಳಿಗೆ ಪೋಲು ಮಾಡುವಾಗ ದೇಶದ

---

೧. ಡಿಸೆಂಬರ್ ೧೦,೧೮೩೪ ರಂದು ಬಂಗಾಳಕ್ಕೆ ಕಳುಹಿಸಿದ ೪೪ನೆಯ ಓಲೆ, ಪ್ಯಾರಾ ೧೦೭

ಪ್ರಗತಿಯ ಸಲುವಾಗಿ ವೆಚ್ಚಮಾಡಲು ಹಣವೆಲ್ಲಿ ಉಳಿದೀತು? ವೆಚ್ಚದಲ್ಲಿ ಶಿಕ್ಷಣದ ಬಾಬಿಗೆ ಹಣವಿರಲಿಲ್ಲ. ಸಾರ್ವಜನಿಕ ಕಾಮಗಾರಿಗಳಿಗೆ ಎಲ್ಲೋ ಅಲ್ಲಿ ಇಲ್ಲಿ ಸ್ವಲ್ಪ[1]. ರೈಲ್ವೇ, ಕಾಲುವೆಗಳು, ನೀರಾವರಿ ಮುಂತಾದ ಪ್ರಗತಿಕಾರಕ ವಿಷಯಗಳಿಗೆ ಸಾಮ್ರಾಜ್ಯ ಬಜೆಟ್ಟಿನ ಮೂಲೆಯಲ್ಲೂ ಸ್ಥಳಾವಕಾಶ ಇರಲಿಲ್ಲ. ೮,೩೭,೦೦೦ ಚದರ ಮೈಲುಳ್ಳ ದೇಶದಲ್ಲಿ ರಚಿತವಾದದ್ದು ಕೇವಲ ಕೆಲವೇ ಮೈಲು ರೈಲುಹಾದಿ, ೨೧೫೭ ಮೈಲು ರಸ್ತೆಗಳು, ೫೮೦ ಮೈಲು ಕಾಲುವೆ ಮತ್ತು ೮೦ ಮೈಲು ದೂರಕ್ಕೆ ಟೆಲಿಗ್ರಾಫ್. ೧೮೩೭–೩೮ ರಿಂದ ೧೮೫೧–೫೨ರವರೆಗೆ ಅಂದರೆ ೧೫ ವರ್ಷಗಳ ಅವಧಿಯಲ್ಲಿ ಸರ್ಕಾರ ಕೈಗೊಂಡ ಸಾರ್ವಜನಿಕ ಕಾಮಗಾರಿ ವೆಚ್ಚ ವರ್ಷವೊಂದರ ಸರಾಸರಿ ೨೯,೩೭೨ ಪೌಂಡುಗಳನ್ನು ಮೀರಲಿಲ್ಲ.[2] ನೆಲಕ್ಕೆ ಗೊಬ್ಬರ ಹಾಕದೆ ಪ್ರತಿ ವರ್ಷವೂ ಭೂಮಿಯಲ್ಲಿ ಫಸಲು ತೆಗೆಯಲಸಾಧ್ಯವೆಂಬ ವಿಷಯ ಪ್ರತಿ ರೈತನಿಗೂ ತಿಳಿದಿರುತ್ತದೆ. ಈ ತತ್ವವನ್ನು ಬೇರೆ ಕ್ಷೇತ್ರಗಳಲ್ಲಿಯೂ ಅನ್ವಯಮಾಡಿಕೊಳ್ಳುವಂತಿದ್ದರೆ ಅಥವಾ ಭಾರತದ ರಾಷ್ಟ್ರೀಯ ಅರ್ಥಮಂಡಳದ ಸಂಪನ್ನತೆ ತೆರಿಗೆ ತೆರುವ ಶಕ್ತಿಗೆ ಹೇತುವೆಂಬುದು ಗ್ರಾಹ್ಯತತ್ವವಾಗಿದ್ದರೆ, ಸರ್ಕಾರದ ಖಜಾನೆ ಮತ್ತು ಪ್ರಜೆಗಳಿಗೆ ಲಾಭವಾಗುತ್ತಿತ್ತೋ ಏನೋ.

ತೆರಿಗೆಗಳಲ್ಲಿ ವಿವೇಚನೆಯನ್ನೂ, ವೆಚ್ಚಮಾಡುವುದರಲ್ಲಿ ಉತ್ಪಾದಕತೆಯನ್ನೂ ಗುರಿಯಾಗಿರಿಸಿ ಸಂಪನ್ಮೂಲವನ್ನು ಬಳಸುವ ಚಿಂತೆಮಾಡಿದ್ದರೂ ವೆಚ್ಚದಲ್ಲಿಯಾದರೂ ಮಿತವ್ಯಯ ಸಾಧಿಸಬಹುದಾಗಿತ್ತಲ್ಲವೆ? ಎಂದು ಕೇಳಬಹುದು. ೧೮೩೩ರಲ್ಲಿ ಬಲಿಷ್ಠ ಕೇಂದ್ರ ಸರ್ಕಾರ ಸ್ಥಾಪಿತವಾದರೂ ಮಿತವ್ಯಯ ಸಾಧ್ಯವಾಗಿಲ್ಲವೇಕೆಂದರೆ ನಡೆದಂಥ ಕೇಂದ್ರೀಕರಣ ಅತ್ಯಂತ ದುರ್ಬಲ ಸ್ವರೂಪದ್ದಾಗಿತ್ತು. ಅದು ಕಾಯ್ದೆಶೀರ

---

೧. ಮೂರು ದೇಶೀಯ ಪ್ರೆಸಿಡೆನ್ಸಿಗಳ ಮೇಲಣ ನಾಗರಿಕ ಹಣಕಾಸು ಸಮಿತಿಯ ವರದಿ – ಬಂಗಾಳ ಹಣಕಾಸು ಪರಾಮರ್ಶೆ–ಏಪ್ರಿಲ್ ೧೩, ೧೮೩೦ (ಇಂಡಿಯಾ ಆಫೀಸ್ ರಿಕಾರ್ಡ್ಸ್) ವಿವಿಧ ಪ್ರೆಸಿಡೆನ್ಸಿಗಳಿಗೆ ಸೇರಿದ ಒಡಂಬಡಿಕೆಗೊಳಗಾಗದ ಕ್ರೈಸ್ತ ಮತ್ತು ದೇಶೀಯ ಅಧೀನ ಸೇವೆಯ ಸಿಬ್ಬಂದಿ ವರ್ಗವನ್ನು ಈ ಸಮಿತಿ ನಾಲ್ಕು ವರ್ಗಗಳಲ್ಲಿ ವಿಂಗಡಿಸಿತ್ತು : (೧) ಗ್ರಹಣಶಕ್ತಿಯ ಮುಖ್ಯ ಗುಮಾಸ್ತರು, ರಿಜಿಸ್ಟ್ರಾರ್‌ಗಳು, ಮ್ಯಾನೇಜರುಗಳು ಮತ್ತು ಅವರ ಸಹಾಯಕರು, ಪರೀಕ್ಷಕರು, ಇನ್‌ವೆಸ್ಟರುಗಳು ಇತ್ಯಾದಿ, ಇವರುಗಳನ್ನು ಕಾರ್ಯದರ್ಶಿಗಳ ಅಧೀನದಲ್ಲಿ ಕಚೇರಿಯ ವ್ಯವಹಾರಗಳನ್ನು ನಡೆಸಿಕೊಂಡು ಹೋಗುವುದಕ್ಕಾಗಿ ಮತ್ತು ಮೇಲ್ವಿಚಾರಣೆಯ ಕಾರ್ಯಕ್ಕಾಗಿ ನೇಮಿಸಿಕೊಳ್ಳಲಾಗಿತ್ತು. (೨) ಚಾಲ್ತಿ ವ್ಯವಹಾರಗಳ ರೈತರುಗಳು ಮತ್ತು ಕಾಯಂ ನಕಲುದಾರರು, (೩) ಪ್ರಕರಣಗಳನ್ನು ನೋಡಿಕೊಳ್ಳುವರು ಮತ್ತು ಗುತ್ತಿಗೆ ಆಧಾರದ ಮೇಲೆ ನೇಮಕಗೊಂಡ ನಕಲುದಾರರು, ಮತ್ತು (೪) ಇತರ ಎಲ್ಲಾ ಕೆಳದರ್ಜೆಯ ನೌಕರರು – ಸಮಿತಿಯ ತನಿಖೆಯ ಪ್ರಕಾರ ಕಲ್ಕತ್ತಾದಲ್ಲಿ ಚಾಲ್ತಿ ವ್ಯವಹಾರಗಳ ರೈಟರುಗಳ ಸಂಬಳ ಮಾಹೆಯಾನ ರೂ. ೨೦ ರಿಂದ ರೂ. ೩೦೦ ರವರೆಗೆ (ಪ್ರತಿಯೊಬ್ಬನಿಗೆ ಸರಾಸರಿ ರೂ. ೧೦೪) ಆಗಿತ್ತು. ಮುಂಬಯಿಯಲ್ಲಿ ಅದು ರೂ. ೧೫ ರಿಂದ ರೂ. ೧೨೦ರವರೆಗೆ (ಎಂದರೆ ಸರಾಸರಿ ರೂ. ೪೮) ಆಗಿತ್ತು. ಮದರಾಸಿನಲ್ಲಿ ಅದು ಕಾನೂನಿನನ್ವಯವೇ ಈ ವರ್ಗದ ಸಿಬ್ಬಂದಿಗೆ ಅದು ಸರಾಸರಿ ೨೭ ೧/೨ರೂ. ಆಗಿತ್ತು. ಅವರವರ ಸೇವಾ ಅವಧಿ, ಉಪಯುಕ್ತತೆಯ ಆಧಾರದ ಮೇಲೆ ೧೦೧/೨ ಇಂದ ೮೭ ೧/೨ ರೂ.ಗಳಷ್ಟು ವಿವಿಧ ಮೊತ್ತವನ್ನು ನೀಡಲಾಗುತ್ತಿತ್ತು. (ಪ್ಯಾರಾ : ೩೫)
ಬಂಗಾಳದ ಸಚಿವಾಲಯದ ವಿಭಾಗ ಅಧಿಕಾರಿಗಳಲ್ಲಿ ೭೫೦ ಪದಗಳಿಗೆ ಒಂದು ರೂಪಾಯಿ ದರದಂತೆ ಸಂಭಾವನೆ ಕೊಡಲಾಗುತ್ತಿತ್ತು. ಇತರ ಪ್ರೆಸಿಡೆನ್ಸಿಗಳಲ್ಲಿ ೧೩೩೩ ಪದಗಳಿಗೆ ಒಂದು ರೂಪಾಯಿಯಂತೆ ಕೊಡಲಾಗುತ್ತಿತ್ತು.
ಪ್ಯಾರಾ : ೫೧ :– ಸಚಿವಾಲಯದ ಸಿಬ್ಬಂದಿಗೆ ಸದ್ಯ ಕೊಡುತ್ತಿರುವ ಸಂಭಾವನೆ ಹೀಗಿತ್ತು: ಬಂಗಾಳದಲ್ಲಿ ಮಾಹೆಯಾನ ರೂ. ೧,೧೪೨, ಮದರಾಸಿನಲ್ಲಿ ಮೋಚಿಗಳೂ ಸೇರಿದಂತೆ ರೂ. ೪೫೫ ಮತ್ತು ಮುಂಬಯಿಯಲ್ಲಿ ರೂ. ೨೬೧. ಬಂಗಾಳದಲ್ಲಿ ೧೮೬, ಮದರಾಸಿನಲ್ಲಿ ೫೬ ಮತ್ತು ಮುಂಬಯಿಯಲ್ಲಿ ೪೨ ಜನ ಸಿಬ್ಬಂದಿಯವರಿದ್ದರು.

೨. *ಸ್ಟ್ಯಾಟಿಸ್ಟಿಕಲ್ ಪೇಪರ್ ರಿಲೇಟಿವ್ ಟು ಇಂಡಿಯಾ* : (ಸಂ) ಥಾಂಪ್ಸನ್, ೧೮೫೩.

(ಡಿಜೂರೇ) ಕೇಂದ್ರೀಕರಣ ಅಷ್ಟೆ. ವಾಸ್ತವವಾಗಿ ಪ್ರಾಂತ್ಯಗಳು ತಾವೇ ಕಾರ್ಯನಿರ್ವಾಹಕ ಆಡಳಿತವೆಂದು ಇನ್ನೂ ಬಗೆಯುತ್ತಿದ್ದವು. ಕೇಂದ್ರವು ಬರೇ ಸಮನ್ವಯ ಕಾರ್ಯಕ್ಕಾಗಿ ಮಾತ್ರ ಇರುವಂಥದ್ದು ಎಂಬ ಕಲ್ಪನೆ ಇತ್ತು. ಶಾಸನ ರಚನೆಯ ಅಧಿಕಾರ ಕೇಂದ್ರದ ವಶದಲ್ಲಿದ್ದರೂ ಪ್ರಾಂತಗಳ ಪರವಾಗಿ ಅದು ಶಾಸನ ರಚಿಸುವ ಹಾಗೆ, ಪ್ರಾಂತಗಳಲ್ಲಿಯೇ ಶಾಸನದ ಮೂಲಸ್ಫುರಣೆ ಉಳಿದಿರುವ ಹಾಗೆ, ಕೇಂದ್ರಕ್ಕೆ ಬರೇ ಪ್ರಾಂತದ ಬೇಡಿಕೆಗಳನ್ನು ಮಂಜೂರು ಮಾಡುವ ಕರ್ತವ್ಯವೇನೋ ಎಂಬ ಹಾಗೆ ತಿಳಿಯಲಾಗಿತ್ತು. ಪ್ರತಿ ಪ್ರಾಂತಕ್ಕೆ ಅದರದ್ದೇ ಒಳನಾಡು ಹಾಗೂ ಹೊರನಾಡಿನ ಸುಂಕ, ಅದರದ್ದೇ ಪ್ರತ್ಯೇಕ ಸೈನ್ಯ ಕೂಡ. ಕೇಂದ್ರೀಕರಣದ ಬಳಿಕವೂ ಪ್ರಾಂತಗಳ ಸ್ವಾತಂತ್ರ್ಯದ ಪಳೆಯುಳಿಕೆಯಂತೆ ಲೆಕ್ಕವಿಡುವ ಪದ್ಧತಿ ಪ್ರಾಂತೀಯವಾಗಿಯೇ ಇರುತ್ತಿತ್ತು. ಕಂದಾಯ ಸಂಗ್ರಹದ ಕೆಲಸವನ್ನೂ ಆಡಳಿತವನ್ನೂ ನೋಡಿಕೊಂಡಿರುವ ಪ್ರಾಂತ ಸರ್ಕಾರಗಳು ತಾವೇ ಸರ್ಕಾರ ನಿರ್ವಹಣೆಯ ಹೊಣೆಗಾರ ಸಂಸ್ಥೆಗಳೆಂದು ಭಾವಿಸಿದರೆ ಆಶ್ಚರ್ಯವಿಲ್ಲ. ಇಂಥ ಸ್ವತಂತ್ರ ಧೋರಣೆ ಅವಿಧೇಯತೆಗೆ ಅವಕಾಶ ಕೊಡುತ್ತಿದ್ದದು ಅಪರೂಪವೇನೂ ಅಲ್ಲ. ದಂಗೆಯ ಅನಂತರ ಅದರ ವೆಚ್ಚ ಭರಿಸುವ ಸಲುವಾಗಿ ಭಾರತ ಸರ್ಕಾರ ತೆರಿಗೆ ಹೊರಿಸಲು ಉದ್ದೇಶಿಸಿದರೆ ಮುಂಬಯಿ ಮತ್ತು ಮದರಾಸು ಪ್ರಾಂತಗಳು ತಮ್ಮ ಸೀಮೆಯ ಪ್ರಜೆಗಳ ಮೇಲೆ ತೆರಿಗೆ ಹೊರಿಸುವುದನ್ನು ವಿರೋಧಿಸಿದ್ದುಂಟು. ೧೮೩೩ರ ಶಾಸನದಲ್ಲಿ ಶಾಸನಿಕ ಹೊಣೆಗಾರಿಕೆ ಮತ್ತು ನಿರ್ವಹಣಾ ಹೊಣೆಗಾರಿಕೆಗಳ ವಿಚ್ಛೇದನ ಶೋಚನೀಯವಾದದ್ದೆಂದು ಬೇರೆ ಹೇಳುವುದು ಬೇಡ. ಶಾಸನಿಕವಾಗಿ ಸಾಮ್ರಾಜ್ಯ ಸರ್ಕಾರ ಹೊಣೆಗಾರನಾದರೂ ವಾಸ್ತವವಾಗಿ ಅದು ಆಡಳಿತವನ್ನು ನೋಡಿಕೊಳ್ಳುತ್ತಿರಲಿಲ್ಲ. ನಿಜಕ್ಕೂ ಆಡಳಿತ ಮಾಡುವ ಪ್ರಾಂತ ಸರ್ಕಾರಗಳಿಗೆ ಶಾಸನಿಕ ಹೊಣೆ ಇರಲಿಲ್ಲ. ಇಂಥ ವಿಚ್ಛೇದನದ ಕರಿನೆರಳು ಬಿದ್ದದ್ದು ದೇಶದ ಆರ್ಥಿಕ ಪರಿಸ್ಥಿತಿಯ ಮೇಲೆ. ಹಾಗೆ ನೋಡಿದರೆ ಸಾಮ್ರಾಜ್ಯ ಪದ್ಧತಿಯಲ್ಲಿಯೇ ದುಂದುವೆಚ್ಚದ ಬೀಜ ಅಂತರ್ಗತವಾಗಿತ್ತು. ಹೊಣೆಗಾರಿಕೆ ಇದ್ದರೆ ಮಾತ್ರ ಮಿತವ್ಯಯ, ವೆಚ್ಚಕ್ಕೆ ಮಾಡುವ ಮೊದಲು ಆದಾಯ ಎಲ್ಲಿಂದ ಬರಬೇಕೆಂಬುದರ ಮುನ್ನೆಚ್ಚರವುಳ್ಳವರಿಗೆ ಮಿತವ್ಯಯದ ಯೋಚನೆಯಿದ್ದೀತು, ಉಳಿದವರಿಗೆ ಬಂದೀತೇ? ಸಾಮ್ರಾಜ್ಯಪದ್ಧತಿ ತೊಡಗುವುದಕ್ಕೆ ಪೂರ್ವದಲ್ಲಿ ವೆಚ್ಚಮಾಡುವ ಮೊದಲು ಆದಾಯವನ್ನು ಸಂಗ್ರಹಿಸುವ ಬಗ್ಗೆ ಪ್ರಾಂತ ಸರ್ಕಾರ ಯೋಚಿಸಬೇಕಾಗಿತ್ತು. ಆಮೇಲೆ ವೆಚ್ಚದ ಬಜೆಟ್ ಮಾಡುವುದು ಪ್ರಾಂತ ಸರ್ಕಾರದ ಕೆಲಸವೆಂದೂ, ಅದಕ್ಕೆ ಅವಶ್ಯವೆನಿಸುವ ಹಣಕಾಸನ್ನು ಕೂಡಿಸಿಕೊಡುವುದು ಸಾಮ್ರಾಜ್ಯದ ಕೆಲಸವೆಂದೂ ತಿಳಿಯಲಾಗಿತ್ತು.. ಪ್ರತಿ ವರ್ಷದ ಬಜೆಟ್‌ನಲ್ಲಿ ತಾವು ನಮೂದಿಸಿದ ವೆಚ್ಚ ಎಷ್ಟಾದರೂ ಸಾಮ್ರಾಜ್ಯದ ಕೋಶದಲ್ಲಿರುವ ಅಪರಿಮಿತ ಹಣವನ್ನು ಸಾಮ್ರಾಜ್ಯ ಒದಗಿಸಿಯೇ ತೀರುತ್ತದೆ, ಕೋಶದ ಗಾತ್ರ ಅಜ್ಞಾತವಾದದ್ದರಿಂದ ಮಿತಿಯೇ ಇಲ್ಲವೆಂಬ ಕಲ್ಪನೆ. ಎಲ್ಲಿ ಯಾವುದನ್ನು ನೋಡಿದರೂ ತಿದ್ದುವ, ಸುಧಾರಿಸುವ, ಬೆಳೆಯಿಸುವ ಹಂಬಲದಲ್ಲಿ ಪ್ರಾಂತಗಳು ತಮ್ಮ ಸೀಮೆಗೆ ಎಷ್ಟು ಸಾಧ್ಯವೋ ಅಷ್ಟು ದೊಡ್ಡ ಮೊತ್ತವನ್ನು ಕೇಂದ್ರದಿಂದ ಕಿತ್ತುಕೊಳ್ಳಬೇಕೆಂಬ ಹಠದಲ್ಲಿ ಭಾರೀವೆಚ್ಚದ ಬೇಡಿಕೆಗಳನ್ನೇ ಮುಂದಿರಿಸುತ್ತಿದ್ದವು. ತಮ್ಮ ಬೇಡಿಕೆಯನ್ನು ಹಿಗ್ಗಿಸಿ ಕೇಂದ್ರಕ್ಕೆ ಸಾದರಪಡಿಸುವುದು ತಮ್ಮ ಕರ್ತವ್ಯವೆಂದೂ, ಬೇಕಿದ್ದರೆ ಕೇಂದ್ರವು ಬೇಡಿಕೆ ತಿರಸ್ಕರಿಸಲಿ ಎಂದೂ ಪ್ರಾಂತಗಳು ತಿಳಿದಿದ್ದವು.[೧]

---

೧. ಅರ್ಲ್ ಆಫ್ ಮೇಯೋ ವೈಸರಾಯ್ ಮತ್ತು ಗವರ್ನರ್ ಜನರಲ್ ಆಫ್ ಇಂಡಿಯಾ ಇವರಿಗೆ ಜನ್‌ಸ್ಟ್ರಾಚೀ, ಕೌನ್ಸಿಲ್ ಮೆಂಬರ್ ಮತ್ತು ಮಾಜೀ ಗವರ್ನರ್ ಜನರಲ್ ಒಪ್ಪಿಸಿದ ವರದಿ ಏಪ್ರಿಲ್ ೩೦, ೧೮೭೨, ಸರ್ಕಾರಿ ಮುದ್ರಣಾಲಯದ ಕಲ್ಕತ್ತ ಕಚೇರಿಯ ಸೂಪರಿಟೆಂಡೆಂಟ್ ೧೮೭೨.

ಎಂಥ ಹಿರಿಯ ಗಾತ್ರದ ಬೇಡಿಕೆಯನ್ನಾದರೂ ಕೇಂದ್ರವು ಮಂಜೂರು ಮಾಡಬೇಕಾದ ಸನ್ನಿವೇಶವಿತ್ತು – ಕಾರಣ ಬಹಳ ಕಾಲ ಬೇಡಿಕೆಗಳ ಮೌಲ್ಯಮಾಪನ ಮಾಡಲಿಕ್ಕೂ, ನಿಯಂತ್ರಣ ನೋಡಿಕೊಳ್ಳುವುದಕ್ಕೂ ಅದರ ಹತ್ತಿರ ವ್ಯವಸ್ಥೆಯೇ ಇರಲಿಲ್ಲ. ಅದೂ ಅಲ್ಲದೆ ನಿಯಂತ್ರಣ ಕ್ಷೇತ್ರ ಬರೇ ಒಂದು ಇಲಾಖೆಯಲ್ಲ, ಪ್ರಾಂತ್ಯವೂ ಅಲ್ಲ ಒಂದು ಇಡೀ ದೇಶವೆನ್ನುವಾಗ ಅಂಥ ಪ್ರಭುತ್ವದಿಂದ ದಕ್ಷತೆಯನ್ನು ಅಪೇಕ್ಷಿಸುವುದು ತಪ್ಪಾದೀತು. ಮಂದಗತಿಗೆ ಗಾತ್ರ ಎಂಬ ಕಾರಣವೊಂದೇ ಸಾಕಾಗಿತ್ತು, ಜತೆಗೆ ಕ್ರೋಡೀಕರಣ ಮಾಡದಿರುವ ಅಸಂಘಟಿತ ಪದ್ಧತಿ ಇನ್ನಷ್ಟು ಅಡಚಣೆ ಒಡ್ಡುತ್ತಿತ್ತು. ಅಲ್ಲದೆ ಈ ಸಾಮ್ರಾಜ್ಯ ಪದ್ಧತಿಯ ಪ್ರಾಂತ ನಿಯಂತ್ರಣಕ್ಕೆ ಯಾವುದೇ ನಿಯಂತ್ರಕ ಏರ್ಪಾಟನ್ನು ಮಾಡಿರಲಿಲ್ಲ. ಅಲ್ಲದೆ ಬಂಗಾಳ ಸರ್ಕಾರವನ್ನೂ ಭಾರತ ಸರ್ಕಾರವನ್ನೂ ಒಂದೇ ಸರ್ಕಾರವಾಗಿ ರೂಪಿಸಿದ್ದು ಪ್ರಥಮ ಪ್ರಮಾದವೆನ್ನಬೇಕು. ಪ್ರಾಂತ ಸರ್ಕಾರದ ಕರ್ತವ್ಯಗಳ ನಡುವೆ ಭಾರತ ಸರ್ಕಾರದ ಕೆಲಸ ಮಾಡಲು ಬಂಗಾಳ ಸರ್ಕಾರಕ್ಕೆ ಸಮಯವೇ ಸಿಗುತ್ತಿರಲಿಲ್ಲ. ಮೊದಲೇ ಆರು ಸೆಕ್ರೆಟೇರಿಯಟ್ ಕೆಲಸಗಳ ಹೊರೆಯಿಂದ ಬಳಲುತ್ತಿತ್ತು, ಅದರಲ್ಲೂ ೧೮೪೩ರವರೆಗೆ ಹಣಕಾಸು ವ್ಯವಸ್ಥೆಯನ್ನು ನಿರ್ವಹಿಸಲು ಯಾವನೇ ವಿಶೇಷಾಧಿಕಾರಿಯನ್ನು ನೇಮಿಸದೆ ಇದ್ದುದರಿಂದ ಇನ್ನಷ್ಟು ತೊಳಲಾಟ ಇರುತ್ತಿತ್ತು. ೧೮೪೩ರಲ್ಲಿ ವೈಸರಾಯನಾಗಿದ್ದ ಲಾರ್ಡ್ ಎಲೆನ್‌ಬರೋ ಬಂಗಾಳದ ಸೆಕ್ರೆಟೇರಿಯೆಟನ್ನು ಪ್ರತ್ಯೇಕಿಸಿ,[೧] ಭಾರತ ಸರ್ಕಾರಕ್ಕೆ ಹಣಕಾಸು ವ್ಯವಸ್ಥೆ ನೋಡಿಕೊಳ್ಳುವ ಏಕಮೇವ ಕರ್ತವ್ಯಕ್ಕಾಗಿ, 'ಭಾರತ ಸರ್ಕಾರದ ಹಣಕಾಸು ಕಾರ್ಯದರ್ಶಿ' ಎಂಬ ಹೆಸರಿನಲ್ಲಿ ಒಬ್ಬ ವಿಶೇಷಾಧಿಕಾರಿಯನ್ನು ನಿಯೋಜಿಸಿದರು.[೨] ಇದರಿಂದ ಲೆಕ್ಕ ತಪಾಸಣೆಗೆ ಒಬ್ಬ ವಿಶೇಷಾಧಿಕಾರಿ ದೊರೆತಂತೆ ಆದರೂ ಕೇಂದ್ರೀಯ ಆಡಿಟ್ ಮತ್ತು ಅಕೌಂಟ್ ಹಾಗೂ ಅಪ್ರೋಪ್ರಿಯೇಶನ್ ಬಜೆಟ್ ಇಲ್ಲದೆ ಮಿತವ್ಯಯ ಧೋರಣೆಗಳನ್ನು ಅನ್ವಯಗೊಳಿಸುವುದು ಆತನಿಗೆ ಕಷ್ಟವಾಗುತ್ತಿತ್ತು. ಸಾಮ್ರಾಜ್ಯ ಪದ್ಧತಿ ಚಲಾವಣೆಗೆ ಬಂದ ಮೇಲೂ ಆಡಿಟ್ ಮತ್ತು ಅಕೌಂಟ್ಸ್ ಅಧಿಕಾರ ಪ್ರಾಂತಗಳಲ್ಲಿಯೇ ಇರುತ್ತಿದ್ದುದರಿಂದ ಕೇಂದ್ರೀಯ ಅನುಶಾಸನವು ಪ್ರಾಂತೀಯ ಆಡಿಟ್‌ನ ಮುಖಾಂತರವೇ, ಅರ್ಥಾತ್ ಪ್ರಾಂತೀಯ ಅಭಿಪ್ರಾಯಗಳಿಗೆ ಒಳಪಟ್ಟೇ ಕಾರ್ಯರೂಪಕ್ಕೆ ಬರಬೇಕಾಗುತ್ತಿತ್ತು. ಎರಡನೆಯದಾಗಿ, ವ್ಯಾಪಾರೋದ್ದೇಶ ಈಡೇರಿಸಲು ಮಾತ್ರ ಯೋಗ್ಯವೆನಿಸುವ ಆಗಿನ ಆಡಿಟ್ ಒಂದು ರಾಷ್ಟ್ರದ ಆಡಿಟ್‌ನಲ್ಲಿ ಎದ್ದು ತೋರಬೇಕಾದ ತಪಾಸಣೆ (ಚೆಕ್)ಯ ಉದ್ದೇಶದ ದೃಷ್ಟಿಯಿಂದ ಪರ್ಯಾಪ್ತವಾದುದಾಗಿರಲಿಲ್ಲ. ತೋರಿಕೆಗೆ ಮೂರು ಅಂದಾಜು ಪತ್ರಗಳಲ್ಲಿ (ಸ್ಕೆಚ್, ರೆಗ್ಯುಲರ್, ಬಜೆಟ್) ವೆಚ್ಚದ ವಿವರಗಳು ನಮೂದಿಸಿರುವಂತೆ ಕಂಡರೂ ಇವು ಅಪ್ರೋಪ್ರಿಯೇಶನ್ ಎನ್ನಿಸದೆ ಬರೇ ನಗದು ಜರೂರಿಯನ್ನಷ್ಟೇ ಸೂಚನೆ ಮಾಡುತ್ತಿದ್ದುದರಿಂದ ಇವು ನಿಷ್ಪ್ರಯೋಜಕವಾಗಿದ್ದವು. ಬಜೆಟನ್ನು ಜಾಗರೂಕತೆಯಿಂದ ರಚಿಸುವುದಾಗಲಿ, ಅದನ್ನು ಕ್ರಮವಾಗಿ ಜಾರಿಗೊಳಿಸುವುದಾಗಲೀ ಇರಲೇ ಇಲ್ಲ. ನಿಗದಿತ ಮಂಜೂರಾತಿ ಪಡೆದ ಸೇವಾ ಬಾಬುಗಳಿಲ್ಲದಿದ್ದುದರಿಂದ ಆಡಿಟ್ ಮತ್ತು ಅಕೌಂಟ್ಸ್ ಎಂಬುದು ಲೆಕ್ಕಕ್ಕೆ ಜಮೆಗೊಂಡು ಖಜಾನೆಯಿಂದ ಪಾವತಿಸಲ್ಪಡುವ ಮೊತ್ತಗಳ ಒಂದು ವರದಿಯಷ್ಟೇ ಆಗಿತ್ತು. ಅಪ್ರೋಪ್ರಿಯೇಶನ್ ಇಲ್ಲದ ಪರಿಸ್ಥಿತಿಯಲ್ಲಿ ವೆಚ್ಚಮಾಡುವ ಆಡಳಿತಾಧಿಕರಣವು ಮಂಜೂರಾತಿಯನ್ನು ಮೀರದೆ ವೆಚ್ಚಮಾಡಿದೆಯೊ ಇಲ್ಲವೊ ಎಂಬುದರ ತಪಾಸಣೆ ಸಾಧ್ಯವಾಗುತ್ತಿರಲಿಲ್ಲ. ಎಲ್ಲಿಯವರೆಗೆ ಒಂದು ಅಪ್ರೋಪ್ರಿಯೇಶನ್ ಬಜೆಟ್ ಹಾಗೂ ಒಂದು ಕೇಂದ್ರೀಕೃತ ಆಡಿಟ್ ಅಂಡ್ ಅಕೌಂಟ್ಸ್ ಇರುವುದಿಲ್ಲವೋ

---

೧. ಗೃಹ ಖಾತೆ, ಏಪ್ರಿಲ್ ೨೯, ೧೮೪೩ರ ಭಾರತ ಸರ್ಕಾರದ ಠರಾವು,
೨. ಜನವರಿ ೪, ೧೮೪೩ರ ಭಾರತ ಸರ್ಕಾರದ ಠರಾವು.

ಅಲ್ಲಿಯವರೆಗೆ ದುರ್ಬಲ ಪ್ರಾಂತಗಳ ಹಣಕಾಸಿನ ಕೇಂದ್ರೀಯ ನಿಯಂತ್ರಣ ಕೇವಲ ನಾಮಮಾತ್ರ ಎಂದು ಹೇಳಬೇಕಾಗುತ್ತದೆ.

ಹಣಕಾಸು ವಿಷಯದಲ್ಲಿ ಪ್ರಾಂತೀಯ ಬೇಜವಾಬ್ದಾರಿಗೆ ಪ್ರಚೋದನೆ ನೀಡಿದ್ದಲ್ಲದೆ ಕೇಂದ್ರ ಸರ್ಕಾರದ ಅಧ್ಯಕ್ಷತೆಗೆ ಚಾಲನೆ ಕೊಟ್ಟ ಸನ್ನಿವೇಶದಲ್ಲಿ ಭಾರತ ಸರ್ಕಾರದ ಎಕ್ಸಿಕ್ಯೂಟಿವ್ ಕೌನ್ಸಿಲ್ ಹಣಕಾಸು ವಿಷಯಗಳಲ್ಲಿ ಸರ್ವೇಸಾಮಾನ್ಯವಾಗಿ ಔದಾಸೀನ್ಯವನ್ನೇ ತೋರುತ್ತಿದ್ದುದನ್ನು ಗುರುತಿಸಿದಲ್ಲಿ ಪರಿಸ್ಥಿತಿ ಇನ್ನಷ್ಟು ಜಟಿಲವಾಗುತ್ತದೆ. ಎಕ್ಸಿಕ್ಯೂಟಿವ್ ಕೌನ್ಸಿಲಿನ ಸಹಮತವಿಲ್ಲದೆ ಭಾರತ ಸರ್ಕಾರದ ಆದಾಯಗಳನ್ನು ವ್ಯಯಿಸುವುದು ಅಸಾಧ್ಯವೆಂಬುದು ನಿಜವಾದರೂ ಅದಕ್ಕೆ ಮಿತವ್ಯಯದಲ್ಲಿ ಅಂಥ ಆಸಕ್ತಿ ಇದ್ದುದು ಗೋಚರಿಸದು. ಕೌನ್ಸಿಲಿನ ಹೊಣೆ ಸಮುದಾಯ ಜವಾಬ್ದಾರಿಯ ವಿನಾ ಪ್ರತಿಯೊಬ್ಬ ಸದಸ್ಯನಿಗೆ ಯಾವುದೇ ವಿಷಯದ ಪರಾಮರ್ಶೆಯನ್ನು ಪ್ರತ್ಯೇಕವಾಗಿ ಒಪ್ಪಿಸಿಕೊಟ್ಟಿರಲಿಲ್ಲ. ಯುದ್ಧ ಮತ್ತು ಶಾಸನ ರಚನೆ ಈ ಎರಡೇ ಪ್ರತ್ಯೇಕವಾಗಿ ಕೌನ್ಸಿಲಿನ ಮುಂದೆ ಇರಿಸುವ ಪ್ರಶ್ನೆಗಳು. ಉಳಿದವೆಲ್ಲ ಸಾರಾಸಗಟಾಗಿ ಪ್ರತಿಯೊಬ್ಬ ಸದಸ್ಯನ ಅವಗಾಹನೆಗೂ ಬರುವಂತಾಗಬೇಕು ಎನ್ನುವಾಗ, ಸದಸ್ಯನಿಂದ ಸದಸ್ಯನಿಗೆ ದಾಖಲೆಪತ್ರಗಳ ಮಹೋಗನಿ ಸಂದೂಕಗಳು ವರ್ಗಾಯಿಸಲ್ಪಡುವಾಗ ಕಾಲಹರಣ ಮತ್ತು ನಿಧಾನಗತಿ ಅನಿವಾರ್ಯ.[೧] ಇಂಥ ಪದ್ಧತಿಯಲ್ಲಿ ಮಿತವ್ಯಯದ ಬಗ್ಗೆ ವಾದಿಸಲು ಅರ್ಥಸಚಿವನಿರುತ್ತಿರಲಿಲ್ಲ. ನೋಟಕ್ಕೆ ಎಲ್ಲರೂ ಹೊಣೆ ಎಂದು ತೋರುವ ಆರ್ಥಿಕ ವಿಷಯಕ್ಕೆ ಯಾರೂ ಹೊಣೆಗಾರರೇ ಇರಲಿಲ್ಲವೆಂಬುದು ವಾಸ್ತವ ಸತ್ಯ. ಗುಲ್ಲುಗದ್ದಲಮಾಡಿ ಕಾಡುವವರಿಗೇ ಹಣಕಾಸಿನ ಸಲುವಳಿಯಾಗುತ್ತಿತ್ತೆ ಹೊರತು ಕೇವಲ ಅಗತ್ಯವಾದ ಬೇಡಿಕೆಗಳನ್ನು ಮುಂದಿಟ್ಟವರಿಗಲ್ಲ.

ದೋಷಪೂರಿತವಾದ ಇಂಥ ಹಣಕಾಸು ವ್ಯವಸ್ಥೆ ಸಾಮ್ರಾಜ್ಯ ಪದ್ಧತಿಯ ಸ್ಥಾಪನೆಯಿಂದಲೇ ತೊಡಗಿತು ಎನ್ನಲಾರೆವು. ಇದು ಪೂರ್ವಕಾಲದಿಂದ ಬಂದ ಪಾರಂಪರಿಕ ಬಳುವಳಿ ಎನ್ನಬಹುದು. ಆದರೆ ಹಣಕಾಸು ವ್ಯವಸ್ಥೆಯನ್ನು ಸಕಾಲಿಕವಾಗಿ ಪುನರ್ವಿಮರ್ಶಿಸಿ ಕೇಂದ್ರೀಯ ನಿಯಂತ್ರಣವನ್ನು ಬಿಗಿಗೊಳಿಸಿದ್ದರೆ ಸಾಮ್ರಾಜ್ಯ ಪದ್ಧತಿಯ ಅಡಿಗಲ್ಲು ಭದ್ರವಾಗಿರುತ್ತಿತ್ತು. ಬುಡ ಭದ್ರವಾಗಿರದ ಒಂದು ಹಣಕಾಸಿನ ವ್ಯವಸ್ಥೆಯಲ್ಲಿ ದಾರಿದ್ರ್ಯ ಕೂಪದಲ್ಲಿ ಒದ್ದಾಡುವ ಜನಸಮುದಾಯದಿಂದ ಏರುವೆಚ್ಚಗಳ ಬಾಯ್ಮುಚ್ಚಿಸಲು ತಕ್ಕಷ್ಟು ಹಣವನ್ನು ಆಕರ ಮಾಡಿಕೊಳ್ಳಲು ಅಸಮರ್ಥವಾದ ಸಾಮ್ರಾಜ್ಯ ಪದ್ಧತಿ ದಂಗೆಯ ಪ್ರಬಲ ಆಘಾತಕ್ಕೆ ಕುಸಿದು ಬಿದ್ದದ್ದು, ಹಾಗೆ ಬಿದ್ದದ್ದು ಮತ್ತೆ ಎದ್ದು ಪೂರ್ವರೂಪವನ್ನು ಪಡೆಯದೆ ಇದ್ದದ್ದು ಅಂಥ ಆಶ್ಚರ್ಯವೇನೂ ಆಗಿರಲಿಲ್ಲ.

---

೧. ಡಬ್ಲ್ಯೂ. ಡಬ್ಲ್ಯೂ. ಹಂಟರ್: *ಲೈಫ್ ಆಫ್ ಮೇಯೋ*, ಸಂ ೭, ಪು. ೧೯೦

## ಅಧ್ಯಾಯ ೨

# ಸಾಮ್ರಾಜ್ಯವಾದದ ಪ್ರತಿಯಾಗಿ ಫೆಡರಲ್‌ವಾದ

೧೮೫೭ರ ದಂಗೆಯ ವೆಚ್ಚದ ದೆಸೆಯಿಂದ ಆಗಲೇ ನಾಜೂಕಾಗಿದ್ದ ಸಾಮ್ರಾಜ್ಯ ಹಣಕಾಸು ವ್ಯವಸ್ಥೆಯು ಎಷ್ಟು ಗಂಭೀರ ಅವಸ್ಥೆಗೆ ಬಂದಿತೆಂದರೆ ಮುಂದಿನ ಹತ್ತುವರ್ಷಗಳ ಕಾಲವೂ ತತ್ತರಿಸಿ ಕುಸಿತಕ್ಕೆ ಒಳಗಾದ ಈ ಪದ್ಧತಿಯನ್ನುಳಿಸಿಕೊಳ್ಳುವ ಪರಿ ಹೇಗೆಂದು ಅಧಿಕಾರಿವರ್ಗ ಯೋಚಿಸುತ್ತಿದ್ದಿತು. ಪುನಾರಚನೆಯ ಮಾರ್ಗಗಳ ಬಗ್ಗೆ ಅನೇಕ ವಿವಾದಾಸ್ಪದ ಚಿಂತನಗಳು ಮುಂದೆ ಬಂದರೂ ಕುಸಿತಕ್ಕೆ ಕಾರಣ ಹುಡುಕುವ ವೇಳೆಯಲ್ಲಿ ಒಂದು ವಿಷಯದ ಬಗ್ಗೆ ಮಾತ್ರ ಒಮ್ಮತವಿತ್ತು. ಎಲ್ಲರೂ ಬೆರಳುಮಾಡಿ ತೋರಿಸುತ್ತಿದ್ದ ವಿಷಯ ಪ್ರಾಂತೀಯ ಸರ್ಕಾರಗಳ ಬೇಜವಾಬ್ದಾರಿ ದುಂದುವೆಚ್ಚವಾಗುತ್ತಿತ್ತು. ಈ ದೋಷನಿವಾರಣೆಗೆ ತಜ್ಞರಾದವರು ಒಂದು ಉಪಾಯ ಹುಡುಕಿ ತೆಗೆದರು. ಅದೇನೆಂದರೆ ಸ್ಥಾನೀಯ ಸರ್ಕಾರಗಳು ಎಂದಿನವರೆಗೆ ಕೇಂದ್ರದ ಏಜೆಂಟರಾಗಿ ಅಥವಾ ಸೇವಕರಾಗಿ ಇರುತ್ತವೆಯೋ ಅಂದಿನವರೆಗೆ ತಮ್ಮ ಮಾಲೀಕ ಕೇಂದ್ರ ಸರ್ಕಾರದ ಹಣವನ್ನು ದೋಚಲು ಅತಿರೇಕ ಬೇಡಿಕೆಗಳನ್ನು ಮುಂದಿಡುವುದು ಅವುಗಳ ಚಾಳಿಯಾಗಿಬಿಡುತ್ತದೆ. ಆದ್ದರಿಂದ ಭಾರತದ ಹಣಕಾಸಿನ ಮಹತ್ತಾದ ಕೂಡು ಬಂಡವಾಳದಲ್ಲಿ ಸ್ಥಾನೀಯ ಸರ್ಕಾರಗಳು ಪಾಲುದಾರರಾಗಿ ಬಂದು ಭಾರತ ಸರ್ಕಾರದ ಜೊತೆಯಲ್ಲಿ ಆಸಕ್ತಿಯುತವೂ ಜೀವಂತವೂ ಆದ ಸಹಕಾರವನ್ನು ನೆಲೆಗೊಳಿಸಬೇಕು.[೧]

ಕಾಲಕ್ರಮೇಣ ಇದೇ ದೃಷ್ಟಿಕೋನ ಬಲವಾಗಿ ಬೆಳೆದು, ಅಭಿಪ್ರಾಯದ ರೂಪ ತಳೆದು ಏಕೀಕೃತ ಭಾರತದ ಸ್ಥಾನದಲ್ಲಿ ಭಾರತದ ಸಂಯುಕ್ತ ರಾಜ್ಯವನ್ನು ಸೃಷ್ಟಿಮಾಡಬೇಕೆಂಬುವತ್ತ ಒಲವು ಹರಿಯಿತು.[೨] ಸಾಮ್ರಾಜ್ಯ ಪದ್ಧತಿಯ ಬದಲು ಫೆಡರಲ್ ಪದ್ಧತಿಯನ್ನು ಅಂಗೀಕರಿಸಿ ಹಣಕಾಸು ವ್ಯವಸ್ಥೆಯನ್ನು ಅಮೆರಿಕದ ಫೆಡರಲ್ (ಕೇಂದ್ರೀಯ) ವ್ಯವಸ್ಥೆಯಲ್ಲಿರುವಷ್ಟೇ ಕೇಂದ್ರೀಕೃತವಾಗಿ ಮಾಡಬೇಕು ಎಂಬುದು ಉದ್ದೇಶವಾಯಿತು, ಭಾರತದ ಆದಾಯವನ್ನು ಇಂಪೀರಿಯಲ್ ಖಜಾನೆಗೆ ಜಮೆಮಾಡಿ ಪ್ರಾಂತೀಯ ಸರ್ಕಾರಗಳಿಗೆ ಬಟವಾಡೆ ಮಾಡುವ ಕೇಂದ್ರೀಯ ಆದಾಯ ಮತ್ತು ವಿತರಣಾ ವ್ಯವಸ್ಥೆಯ ಬದಲು ಪ್ರತಿಪ್ರಾಂತ್ಯವೂ ತನ್ನ ಆದಾಯವನ್ನು ತಾನೇ ಇರಿಸಿಕೊಂಡು ಖರ್ಚುವೆಚ್ಚಗಳನ್ನು ನೋಡಿಕೊಳ್ಳುವುದು, ತನ್ನದೇ ಪ್ರತ್ಯೇಕ ಆದಾಯ ಮೂಲಗಳುಳ್ಳ ಕೇಂದ್ರ ಸರ್ಕಾರಕ್ಕೆ ಪ್ರಾಂತೀಯ ಸರ್ಕಾರಗಳೂ ತಮ್ಮ ಪಾಲಿನ ನ್ಯಾಯಸಮ್ಮತ ಪಾಲನ್ನು ಅಥವಾ ದೇಣಿಗೆಯನ್ನು ಕೊಡುವುದು ಆ ಕಾಲದಲ್ಲಿ ಭಾರತ ಸರ್ಕಾರದ ನಿರ್ವಹಣೆಗೆ ಸೂಚಿತವಾದ ಫೆಡರಲ್

---

೧. ಡಿ.ಎ.ಸರ್ ಡಬ್ಲ್ಯೂ. ಆರ್. ಮ್ಯಾನ್ಸ್‌ಫೀಲ್ಡ್, ಕಮಾಂಡರ್–ಇನ್–ಚೀಫ್ ರವರ ಅಕ್ಟೋಬರ್ ೧೭,೧೮೬೭ರ ನಡವಳಿ (ಮಿನಿಟ್), ಪೇಪರ್ಸ್ ಇತ್ಯಾದಿ 'ಆನ್ ಎಕ್ಸ್‌ಟೆನ್‌ಷನ್ ಆಫ್ ಫೈನಾನ್ಷಿಯಲ್ ಪವರ್ಸ್ ಟು ಲೋಕಲ್ ಗವರ್ನಮೆಂಟ್ಸ್', ಪು. ೯೯–೧೦೩.

೨. ಕರ್ನಲ್ ಆರ್ ಸ್ಟ್ರಾಚೇ ರವರ ಟಿಪ್ಪಣಿ ಆಗಸ್ಟ್ ೧೭,೧೮೬೭. ಜೆಎಫ್. ಫೀನ್ಲೇರವರ *'ಹಿಸ್ಟರಿ ಆಫ್ ಪ್ರೊವಿನ್ಷಿಯಲ್ ಫೈನಾನ್ಷಿಯಲ್ ಅಗ್ರಿಮೆಂಟ್.'*

ಸೂತ್ರವಾಗಿತ್ತು. ಪ್ರಾಂತೀಯ ಮತ್ತು ಸಾಮ್ರಾಜ್ಯವೆಂದು ಇಬ್ಭಾಗ ಮಾಡಿದ್ದು ಏಕಮಾತ್ರ ಕ್ರೋಡೀಕೃತ ಕೇಂದ್ರೀಯ ಬಜೆಟ್ಟಿಗೆ ಬದಲಾಗಿ ಸೇವೆಗಳನ್ನೂ ಆದಾಯಗಳನ್ನೂ ಪ್ರಾಮಾಣಿಕವಾಗಿ, ಬೇರೆಬೇರೆಯಾಗಿ ಒಪ್ಪಿಸಿಕೊಂಡು ನಿರ್ವಹಿಸುವ ಎರಡು ಪ್ರತ್ಯೇಕ ಬಜೆಟ್‌ಗಳು–ಕೇಂದ್ರೀಯ ಬಜೆಟ್, ಪ್ರಾಂತೀಯ ಬಜೆಟ್ ರೂಪದಲ್ಲಿ ಪ್ರಕಟವಾಗಬೇಕೆಂದು ತೀರ್ಮಾನಿಸಲಾಯಿತು.

ಫೆಡರಲ್ ಯೋಜನೆಯಲ್ಲಿ ಹಲವಾರು ಪ್ರಯೋಜನಗಳು ಇದ್ದುವೆಂದು ಗುರುತಿಸಲಾಯಿತು. ಆದಾಯ ಮೂಲಗಳು ಮತ್ತು ಸೇವಾಕಾರ್ಯದ ವೆಚ್ಚಗಳನ್ನು ಕೇಂದ್ರ ಮತ್ತು ಪ್ರಾಂತಗಳಿಗೆ ಪ್ರತ್ಯೇಕ ಪ್ರತ್ಯೇಕವಾಗಿ ಒಪ್ಪಿಸಿಕೊಟ್ಟಲ್ಲಿ ತಮ್ಮ ಕ್ಷೇತ್ರಕ್ಕೆ ಮಾತ್ರ ಅವು ಹೊಣೆಗಾರರಾಗುವವು. ಇದುವರೆಗೂ ವೆಚ್ಚಕ್ಕೂ ಆದಾಯಕ್ಕೂ ಒಂದಕ್ಕೊಂದು ಸಂಬಂಧವಿಲ್ಲದಂತೆ ತಯಾರುಮಾಡಿಕೊಟ್ಟರೆ ತಮ್ಮ ಕರ್ತವ್ಯ ಮುಗಿಯಿತೆಂದೂ, ಅವುಗಳನ್ನು ಸಮತೋಲಕ್ಕೆ ತರುವುದು ವರಿಷ್ಠ ಸರ್ಕಾರದ ಉಸಾಬರಿ ಎಂದೂ ತಿಳಿಯಲಾಗುತ್ತಿತ್ತು. ಫೆಡರಲ್ ಯೋಜನೆಯಲ್ಲಿ ಆಯವ್ಯಯದ ಸಮತೋಲ ಇರಿಸಿಕೊಂಡೇ ಪ್ರಾಂತಗಳು ಲೆಕ್ಕಾಚಾರ ಒಪ್ಪಿಸಬೇಕಾಗಿತ್ತು. ಇದು ಪ್ರಾಂತಗಳಿಗೆ ಮಾತ್ರವಲ್ಲ ಕೇಂದ್ರಕ್ಕೂ ಆಯವ್ಯಯಗಳ ಬಗ್ಗೆ ಎಚ್ಚರವಹಿಸಿ ಸಮತೂಕ ಸಾಧಿಸಲು ಮತ್ತು ದುಂದುವೆಚ್ಚದ ಮೇಲೆ ಹತೋಟಿ ಸಾಧಿಸಲು ನೆರವಾಗುವುದೆಂದೂ, ಭಾವಿಸಲು ಸಾಧ್ಯವಿತ್ತು.

ಮಿತವ್ಯಯ ಮತ್ತು ಹೊಣೆಗಾರಿಕೆಯ ಅನುಕೂಲತೆಗಳಲ್ಲದೆ ಸಮೃದ್ಧಿಯ ತತ್ವವನ್ನೂ ಫೆಡರಲ್ ಯೋಜನೆ ಅಳವಡಿಸಿಕೊಂಡಿತ್ತು. ರಾಷ್ಟ್ರದ ವೆಚ್ಚಗಳನ್ನು ತುಂಬಿಸಿಕೊಳ್ಳಲು ಭಾರತದಲ್ಲಿ ಸಂಪನ್ಮೂಲಗಳಿರಲಿಲ್ಲವೆಂಬ ವಾದವನ್ನು ಫೆಡರಲ್ ಯೋಜನೆ ತಳ್ಳಿಹಾಕಿತು. ಭಾರತೀಯ ಹಣಕಾಸು ವ್ಯವಸ್ಥೆ ಎಂಬ ಹೊಳೆ ದಾಟುವ ದೋಣಿಯಲ್ಲಿ ನೀರುತುಂಬಿಕೊಂಡರೂ ಸಾಕಷ್ಟು ಕರಮೂಲಗಳ ಶಕ್ತಿಯಿಂದ ಆ ದೋಣಿಯನ್ನು ತೇಲಿಸಿಕೊಂಡು ಮುನ್ನಡೆಸಲು ಸಾಧ್ಯವಿತ್ತೆಂದು ಫೆಡರಲ್‌ವಾದಿಗಳ ಅಭಿಪ್ರಾಯ. ಸಾಮ್ರಾಜ್ಯ ಪದ್ಧತಿಯ ಸರ್ಕಾರ ಸ್ಥಾನೀಯವೆನಿಸುವ ಸಣ್ಣಪುಟ್ಟ ತೆರಿಗೆಯ ಕ್ಷೇತ್ರಗಳ ಕಡೆಗೆ ಕಣ್ಣೆತ್ತಿ ನೋಡದಿರುವುದೊಂದು, ಪ್ರಾಂತೀಯ ಸರ್ಕಾರಗಳಿಗೆ ಸಾಂವಿಧಾನಿಕವಾಗಿ ಈ ಬಾಬುಗಳ ಮೇಲೆ ಕರವಿಧಿಸಲು ಅಧಿಕಾರ ಇಲ್ಲದಿರುವುದಿನ್ನೊಂದು – ಈ ದೆಸೆಯಿಂದ ಆದಾಯ ಮೂಲ ಸೊರಗಿತ್ತು. ಫೆಡರಲ್ ಯೋಜನೆಗೆ ಸ್ಥಾನೀಯವಾದ ಬಾಬುಗಳಲ್ಲಿ ಕರವೆತ್ತುವ ಅಧಿಕಾರ ವಹಿಸಿಕೊಟ್ಟಲ್ಲಿ ಅಂಥ ಬಾಬುಗಳು ತೆರಿಗೆಯ ಬಲೆಗೆ ಸಿಲುಕಿ ಪ್ರಾಂತ್ಯಕ್ಕೂ ಕೇಂದ್ರಕ್ಕೂ ಕೂಡಿಯೇ ಆರ್ಥಿಕ ಭಾರ ಇಳಿಯುವಂತೆ ಮಾಡುತ್ತದೆ.

ಮಿತವ್ಯಯ ಮತ್ತು ಸಮೃದ್ಧಿಗಳ ಸಲುವಾಗಿ ಮಾತ್ರವೇ ಅಲ್ಲದೆ ಸಮಾನ ನ್ಯಾಯ(ಇಕ್ವಿಟಿ)ದ ನೆಲೆಯಲ್ಲೂ ಫೆಡರಲ್‌ವಾದದಲ್ಲಿ ಹುರುಳು ತುಂಬಿತ್ತೆಂದು ಹೇಳಬಹುದು. ಪ್ರಸ್ತುತ ಪದ್ಧತಿ ಪ್ರಾಂತ ಪ್ರಾಂತಗಳಲ್ಲಿ ಅಸಮಾನತೆಯನ್ನು ಸ್ಥಾಪಿಸಿತ್ತು. ಪ್ರಾಂತೀಯ ಪ್ರಯೋಜನವುಳ್ಳ ಸಾರ್ವಜನಿಕ ಕಾಮಗಾರಿಗಳನ್ನು ಗಮನಿಸಿದ ಪಕ್ಷದಲ್ಲಿ ಫೆಡರಲ್‌ವಾದಿಗಳು ಮಾಡುತ್ತಿದ್ದ ಟೀಕೆಗೆ ಅರ್ಥವಿರುವುದೂ ಈ ಕೆಳಗಿನ ಯಾದಿಯ ಅಂಕಿಸಂಖ್ಯೆಯಲ್ಲಿ ಅವರ ವಾದಕ್ಕೆ ಬೆಂಬಲ ಸಿಗುವುದೂ ಕಂಡುಬರುತ್ತದೆ.

**ಸಾರ್ವಜನಿಕ ಕಾಮಗಾರಿಕೆ ವೆಚ್ಚಗಳು :**
**೧೯೩೭–೩೮ ರಿಂದ ೧೮೪೫–೪೬ರ ವರೆಗಿನ ವಾರ್ಷಿಕ ಸರಾಸರಿ**

| ಪ್ರಾಂತ | ಜನಸಂಖ್ಯೆ | ವಿಸ್ತೀರ್ಣ ಚ.ಮೈಲು | ಆದಾಯ ೧೦೦ ರೂ.ಗಳಲ್ಲಿ | ಲೋಕೋಪಯೋಗಿ ಕಾಮಗಾರಿಕೆ ವೆಚ್ಚ ನೂರು ರೂ.ಗಳಲ್ಲಿ |
|---|---|---|---|---|
| ಬಂಗಾಳ | ೪೦,೦೦೦,೦೦೦ | ೧,೬೫,೪೪೩ | ೧೦,೨೯,೫೦೦ | ೧,೭೯,೮೧೨ |
| ವಾಯವ್ಯ ಪ್ರಾಂತ | ೨೩,೨೦೦,೦೦೦ | ೭೧,೯೮೫ | ೫,೬೯,೨೦೦ | ೧,೪೧,೪೫೦ |
| ಮದರಾಸು | ೨೨,೦೦೦,೦೦೦ | ೧,೪೫,೦೦೦ | ೫,೦೬೯,೫೦೦ | ೩೦,೩೦೦ |

*ಕಲ್ಕತ್ತ ರಿವ್ಯೂ ೧೮೫೧,* ಸಂಪುಟ XVI ಪುಟ ೪೬೬ರಿಂದ ಉದ್ಧೃತ

ಪ್ರಾಂತ ಆದಾಯದಲ್ಲಿ ಸಾರ್ವಜನಿಕ (ಲೋಕೋಪಯೋಗಿ) ಕಾಮಗಾರಿವೆಚ್ಚದ ಭಾಗವನ್ನು ಗಮನಿಸಿದರೆ ಅದು ಎಷ್ಟು ಕಡಿಮೆಯಾಗಿತ್ತೆಂಬುದು ಗೋಚರವಾಗುತ್ತದಲ್ಲವೆ? ಬಂಗಾಳದಲ್ಲಿ ಶೇ.೧೩/೪ ವಾಯವ್ಯ ಪ್ರಾಂತದಲ್ಲಿ ಶೇ.೨೧/೨, ಮದರಾಸಿನಲ್ಲಿ ಶೇ.೧/೨ಕ್ಕಿಂತ ಒಂದಿಷ್ಟು ಹೆಚ್ಚು. ಲೆಕ್ಕದಲ್ಲಿ ಉಳಿತಾಯ ತೋರಿಸಿದ ಪ್ರಾಂತಗಳಿಗೆ ಹೆಚ್ಚು ಸವಲತ್ತು ಎನ್ನಬಹುದಾದರೆ ಇಲ್ಲಿ ಕೊರತೆ, ಉಳಿತಾಯ ಗಣನೆಗೂ ಬೇರೆಬೇರೆ ಪ್ರಾಂತಗಳಲ್ಲಿ ಬೇರೆಬೇರೆ ಮಾನದಂಡ (ನಿಕಷ)ವಿರುವಂತೆ ತೋರುವುದು. ಲೆಕ್ಕ ಇಡುವ ಪದ್ಧತಿಯೇ ದೋಷಪೂರ್ಣವಾಗಿರುವಾಗ, ಇಂಥ ಅಸಮಾನತೆಗಳೂ, ಅನ್ಯಾಯವೂ ಸಹಜವೇ. ೧೮೩೩ರ ಶಾಸನದ ತರುವಾಯ ಈ ಬಗೆಯ ಲೆಕ್ಕಾಚಾರ ಪದ್ಧತಿ ಅಸಂಗತವಾಗಿತ್ತು. ಲೆಕ್ಕದ ಶೀರ್ಷಿಕೆಗಳನ್ನು ಬಿಟ್ಟು ಪ್ರಾಂತದ ಜಮಾ ಖರ್ಚು ಬರೆದಲ್ಲಿ ಬೇರೇನು ಸಾಧ್ಯ? ಅಖಿಲ ಭಾರತ ಸೇವೆಯ ಖರ್ಚನ್ನು ಪ್ರಾಂತದ ಶೀರ್ಷಿಕೆಯಲ್ಲಿ ಸೇರಿಸಿದರೆ ಕೊರತೆಯೂ, ಬಿಟ್ಟರೆ ಉಳಿತಾಯವೂ ಪ್ರಕಟವಾಗುತ್ತಿದ್ದವು. ಕೆಲವು ಹಾಗೆ, ಕೆಲವು ಹೀಗೆ ಆಗಿ ಕೊರತೆ ಮತ್ತು ಉಳಿತಾಯವೆಂಬ ಮಾತಿಗೆ ಅರ್ಥವಿರಲಿಲ್ಲ. ಉದಾ : ಮುಂಬಯಿಯ ಪ್ರಾಂತೀಯ ಲೆಕ್ಕಾಚಾರದಲ್ಲಿ ಭಾರತೀಯ ನೌಕಾಪಡೆಯ ಖರ್ಚುಗಳನ್ನು ತೋರಿಸದೆ ಹೋಗಿದ್ದಲ್ಲಿ ಈ ಪ್ರಾಂತವೂ ಉಳಿತಾಯವನ್ನು ತೋರಿಸಬಹುದಿತ್ತು. ಆ ಅವ್ಯವಸ್ಥೆಯಿಂದ ಕೂಡಿದ ಅನಾಗರಿಕ ಲೆಕ್ಕಾಚಾರ ಪದ್ಧತಿಯ ಹಾವಳಿ ಇಷ್ಟೇ ಅಲ್ಲ – ಒಂದು ಪ್ರಾಂತದಲ್ಲಿ ವೆಚ್ಚವನ್ನು ತೋರಿಸಿದರೆ, ಆದಾಯವನ್ನು ಇನ್ನೊಂದು ಪ್ರಾಂತದ ಲೆಕ್ಕಾಚಾರಕ್ಕೆ ಸೇರಿಸಿಬಿಡಬಹುದಿತ್ತು. ಉದಾ: ಮದರಾಸು ಪ್ರಾಂತದ ಲೆಕ್ಕದಲ್ಲಿ ಕೊರತೆ ಹುಟ್ಟಿಸಿದ ಪರಿ ಗಮನಿಸಿ :–

| ಆಕ್ರಮಣ ಮಾಡಿದ ಸೈನ್ಯ ವೆಚ್ಚ | | ಆಕ್ರಮಿತ ಪ್ರದೇಶದಿಂದ ವಸೂಲಾದ ಆದಾಯ | |
|---|---|---|---|
| **ಖರ್ಚುಬರೆದದ್ದು** | **ಮೂಲ್ಯ (ರೂಪಾಯಿ)** | **ಜಮಾ** | **ಮೂಲ್ಯ (ರೂಪಾಯಿ)** |
| ಮದರಾಸಿನ ಲೆಕ್ಕಕ್ಕೆ | ೭೯,೮೩,೦೦೦ | ಮುಂಬಯಿಯ ಲೆಕ್ಕಕ್ಕೆ<br>ಬಂಗಾಳದ ಲೆಕ್ಕಕ್ಕೆ | ೨೦,೦೦,೦೦೦<br>೧,೦೪,೨೨,೮೭೦ |

ಹಿಂದಿನ ಮೂಲದಿಂದ ಸಂಗ್ರಹ, ಪು. ೪೭೫

ಆದ್ದರಿಂದ ಫೆಡರಲ್‌ವಾದಿಗಳ ವಿಚಾರದಲ್ಲಿ ಹುರುಳು ಇತ್ತು. ಸಮಾನ ನ್ಯಾಯ ಒದಗದೆ ಹೋದರೂ ಕೂಡ ಕರ್ತವ್ಯಗಳನ್ನು ಫೆಡರಲ್ ಮತ್ತು ಪ್ರಾಂತೀಯವೆಂದು ವಿಂಗಡಣೆ ಮಾಡಿಕೊಡುವುದಷ್ಟರಿಂದಲೇ ಪ್ರಚಲಿತ ಅನರ್ಥ ನಿಲುಗಡೆ ಹೊಂದುವ ನಿರೀಕ್ಷೆ ಇಟ್ಟುಕೊಳ್ಳಬಹುದಾಗಿತ್ತು.

ಫೆಡರಲ್ ಯೋಜನೆಯನ್ನು ಅಧಿಕಾರಿಗಳ ಮುಂದೆ ಸಮರ್ಪಕವಾಗಿ ಇರಿಸಿದ ವೇಳೆಯಲ್ಲಿ ಅದು ಸಾಮ್ರಾಜ್ಯವಾದಿಗಳಿಂದ ಪ್ರಬಲ ವಿರೋಧವನ್ನು ಇದಿರಿಸಬೇಕಾಯಿತು. ಇವರಲ್ಲಿ ಹೆಚ್ಚಿನವರು ಸಿವಿಲ್ ಆಡಳಿತ ಕ್ಷೇತ್ರಕ್ಕೆ ಮಿಲಿಟರಿ ಕ್ಷೇತ್ರಗಳಿಂದ ಬಂದವರೆಂಬುದನ್ನು ಗಮನಿಸಬೇಕು. ವ್ಯಾವಹಾರಿಕತೆ ಮತ್ತು ಅಗತ್ಯತೆಗಳ ನೆಲೆಯಲ್ಲಿ ಅವರು ಫೆಡರಲ್‌ವಾದಿಗಳಿಗೆ ಹೋರಾಟ ಕೊಟ್ಟರು.

ಭಾರತದ ವೆಚ್ಚ ಮತ್ತು ಆದಾಯಗಳನ್ನು ಯಾವುದೇ ಒಂದು ಪ್ರಾಂತ್ಯಕ್ಕೆ ಹಂಚಿಹಾಕಲು ಸಾಧ್ಯವೇ ಇರದೆಂಬುದು ಸಾಮ್ರಾಜ್ಯವಾದಿಗಳ ಆಕ್ಷೇಪ, ಬ್ರಿಟಿಷ್ ಪ್ರಭುತ್ವದ ಆರಂಭಕಾಲದಿಂದಲೂ ಪ್ರಾಂತ ಮತ್ತು ಕೇಂದ್ರದ ಆಗುಹೋಗುಗಳೂ, ಹಿತಾಸಕ್ತಿಗಳೂ, ಆಯವ್ಯಯಗಳೂ ಒಂದರಿಂದ ಇನ್ನೊಂದು ಬಿಡಿಸಲು ಆಗದ ರೀತಿಯಲ್ಲಿ ಹಾಸುಹೊಕ್ಕಾಗಿ ಬೆಳೆದು ಬಂದಿವೆ. ಅವುಗಳನ್ನು ಪ್ರತ್ಯೇಕಿಸಿದ್ದೇ ಆದರೆ ಭಾರೀ ಅನನುಕೂಲತೆಗಳನ್ನು ಅನುಭವಿಸಬೇಕಾಗಿ ಬರಬಹುದು. ಬಂಗಾಳ ಪ್ರಾಂತದ ಸೈನ್ಯ ಅಲ್ಲಿನ ಸಮೃದ್ಧ ಜಿಲ್ಲಾ ಪ್ರದೇಶಗಳಲ್ಲಿ ಇರುವುದಿಲ್ಲ; ಅದು ಇರುವುದು ಪಂಜಾಬಿನ ಬಡ ಪ್ರದೇಶದಲ್ಲಿ. ಇಡೀ ರಾಜ್ಯಕ್ಕೆ ಸಂಬಂಧಿಸಿದ ಸೇವೆ ಮಾಡುತ್ತ ಮದರಾಸು ಸೈನ್ಯ ಮದರಾಸು ಪ್ರಾಂತದಲ್ಲಿ ಮಾತ್ರವೇ ಇರುವುದಿಲ್ಲ ಅದು ದಕ್ಷಿಣ, ಕೇಂದ್ರೀಯ ಪ್ರಾಂತ್ಯಗಳು ಮತ್ತು ಬ್ರಿಟಿಷ್ ಬರ್ಮಾದಲ್ಲಿ ಕರ್ತವ್ಯದಲ್ಲಿರಬೇಕಾಗುತ್ತದೆ. ಮುಂಬಯಿ ಸೈನ್ಯಕ್ಕೆ ರಾಜಪುತಾನ ಮತ್ತು ಮಾಳ್ವಗಳಲ್ಲಿಯೂ ಕೆಲಸವಿರುತ್ತದೆ. ಒಂದು ಬಂಗಾಳ ಪ್ರಾಂತದಲ್ಲೇ ಆದರೂ ಸುಂಕದ ಆದಾಯ ಅಲ್ಲಿಯ ಕೆಳಪ್ರದೇಶಗಳಿಂದ ಮಾತ್ರವಲ್ಲ ಬೇರೆ ಜಿಲ್ಲೆಗಳಿಂದಲೂ ಉತ್ಪನ್ನವಾಗುವಂಥದ್ದಲ್ಲವೆ? ಬಂಗಾಳದ ಅಫೀಮು ಆದಾಯ ಅಲ್ಲಿ ಮಾತ್ರವೇ ಅಲ್ಲ ವಾಯವ್ಯ ಪ್ರಾಂತದಲ್ಲಿನ ಅಫೀಮಿನಿಂದಲೂ ಹುಟ್ಟಿದ್ದಲ್ಲವೆ? ಮುಂಬಯಿ ಮಟ್ಟಿಗೆ ಅದರ ಗಡಿಯಲ್ಲಿ ಅಫೀಮು ಉತ್ಪಾದನೆ ಇಲ್ಲವೇ ಇಲ್ಲವೆಂದಾಗ ಅಫೀಮು ಆದಾಯವನ್ನೆಲ್ಲಿಗೆ ಜಮಾಕೊಡಬೇಕು? ಮದರಾಸು ಮತ್ತು ಮುಂಬಯಿಯ ಉಪ್ಪಿನ ತೆರಿಗೆ ಆದಾಯವು ಉಪ್ಪು ಮಾರಾಟವಾಗುವ ಕೇಂದ್ರೀಯ ಎಲ್ಲಾ ಪ್ರಾಂತಗಳ ದೆಸೆಯಿಂದ ಇಡೀ ಆದಾಯ ಕೇಂದ್ರೀಯ ಭಾರತ ಸರ್ಕಾರಕ್ಕೆ ಸೇರಬೇಕಾದದ್ದಲ್ಲವೆ? ಹಣಕಾಸು ವ್ಯವಸ್ಥೆಯನ್ನು ವಿಕೇಂದ್ರಿಕರಿಸುವುದು ಅದೆಷ್ಟು ಕಠಿಣ ಮತ್ತು ವಿವಾದಾಸ್ಪದವೆಂಬುದಕ್ಕೆ ಇನ್ನೂ ಹಲವು ಉದಾಹರಣೆಗಳನ್ನು ಕೊಡಬಹುದು.[೧]

ಮೇಲ್ಕಂಡ ವಾದವನ್ನೇ ಪುಷ್ಟೀಕರಿಸುವ ಮಾತುಗಳನ್ನು ಅಂದಿನ ವೈಸರಾಯ್ ಲಾರ್ಡ್ ಲಾರೆನ್ಸ್ ಪುರಸ್ಕರಿಸಿ ಹೇಳುತ್ತಾನೆ :

'ಯಾವ ಪ್ರಾಂತದಲ್ಲಿ ತೆರಿಗೆ ಆದಾಯ ಸಂಜನಿಸಿತೆಂಬುದರ ಮೇಲಿಂದ ಭಾರತೀಯ ಹಣಕಾಸು ವ್ಯವಸ್ಥೆಯನ್ನು ಪರಿಗಣಿಸಬಾರದು - ಅದು ಇಡೀ ಭಾರತಕ್ಕೆ ಸಮಷ್ಟಿಯಾಗಿ ಸೇರಿದ್ದೆಂಬ ಭಾವನೆ ಇರಬೇಕು. ಈ ಸಮಷ್ಟಿ (ಎಗ್ರಿಗೇಟ್) ತತ್ವವನ್ನು ಕೈಬಿಟ್ಟಲ್ಲಿ ಪ್ರಾಂತೀಯ ಆದಾಯವೆಂದರೇನು? ಎಂಬ ಪ್ರಶ್ನೆಗೆ ಉತ್ತರ ಹುಡುಕಬೇಕಾಗುತ್ತದೆ. ಯಾವ ವೆಚ್ಚ ಪ್ರಾಂತದ್ದು, ಯಾವುದು ಅಲ್ಲ? ಗುಡ್ಡಗಾಡಿನಲ್ಲಿ ಠಾಣ್ಯಹೂಡಿದ ಸೈನ್ಯದ ಖರ್ಚನ್ನು ಪಂಜಾಬಿಗೆ ಬರಿಯಬೇಕೇ ಬೇಡವೇ? ವಾಯವ್ಯ ಗಡಿನಾಡಿನ ಸೈನ್ಯದ ಖರ್ಚು ಯಾರು ನೋಡಿಕೊಳ್ಳಬೇಕು? ಮುಂಬಯಿ ಪ್ರಾಂತ ಸೈನ್ಯ ರಾಜಪುತಾನದಲ್ಲಿ

೧. ಸರ್ ರಿಚರ್ಡ್ ಟೆಂಪಲ್ ಮಾಡಿದ ವರದಿ ನವೆಂಬರ್ ೭, ೧೮೬೮-ಪುಟಗಳು ೧೯೬-೨೦೮.

ಬೀಡುಬಿಟ್ಟಿರುವಾಗ ಅದರ ವೆಚ್ಚ ಯಾರಿಗೆ ತಗಲಿಸಬೇಕು? ನೆರೆಕರೆಯಲ್ಲಿ ವಿದೇಶೀಯರಿಲ್ಲದ, ಒಳನಾಡಿನ ಪ್ರಜೆಗಳು ಶಾಂತಿಪ್ರಿಯರಾಗಿರುವಂಥ ಬಂಗಾಳ ಪ್ರಾಂತ ಈ ವಿಷಯದಲ್ಲಿ ಉಳಿತಾಯ ಮಾಡಿದೆವೆಂದು ಸಂತೋಷಪಡುವುದೇ? ಅಥವಾ ಗಡಿನಾಡು ಪ್ರಾಂತ್ಯದಲ್ಲಿ ಹಾಲಿ ಠಾಣ್ಯ ಹೂಡಿರುವ ಸೈನ್ಯದ ವೆಚ್ಚವನ್ನು ಬಂಗಾಳವೇ ನೋಡಿಕೊಳ್ಳಬಾರದೇಕೆ? ರೋಹಿಲರು, ಮರಾಠರು ಮತ್ತು ಪಿಂಡಾರಿಗಳಿಂದ ರಕ್ಷಣೆ ಪಡೆಯುವ ಪ್ರಯೋಜನಕ್ಕಾಗಿ ಪಂಜಾಬ್ ಮತ್ತು ಕೇಂದ್ರ ಪ್ರಾಂತಗಳಲ್ಲಿರುವ ಸೈನ್ಯದ ವೆಚ್ಚವನ್ನು ಬಂಗಾಳದ ಲೆಕ್ಕಕ್ಕೆ ಬರೆಯಬಾರದೇಕೆ? ಪ್ರತಿ ಪ್ರಾಂತ್ಯಕ್ಕೂ ಅದರದ್ದೇ ಹಣಕಾಸು ವ್ಯವಸ್ಥೆಯನ್ನು ರೂಪಿಸುವ ಮೊದಲು ಇಂಥ ಪ್ರಶ್ನೆಗಳಿಗೆ ಉತ್ತರ ಕೊಟ್ಟೇ ಮುಂದುವರಿಯಬೇಕಾಗುತ್ತದೆ.[೧]

ಪ್ರಾಂತೀಯವಾಗಿ ವೆಚ್ಚ ಮತ್ತು ಹೊಣೆಗಳನ್ನು ಪ್ರತ್ಯೇಕಿಸಲು ಸಾಧ್ಯವಾದರೂ ಕೂಡ ಸಾಮ್ರಾಜ್ಯವಾದಿಗಳ ದೃಷ್ಟಿಯಲ್ಲಿ ಹೀಗೆ ಮಾಡುವುದು ಒಂದು ಅನಗತ್ಯ ಪ್ರಸಂಗ ಎನಿಸಿತು. ಅವರು ವಾದಿಸುತ್ತಿದ್ದುದು ಹೀಗೆ:–

'ಹಣಕಾಸು ಮೂಲಗಳ ವಿನಿಯೋಗಾಧಿಕಾರ ಪಡೆದಿರುವ ಸಾಮ್ರಾಜ್ಯ ಸರ್ಕಾರ ಎಲ್ಲಿ ವಿನಿಯೋಗದ ತುರ್ತು ಅವಶ್ಯಕತೆ ಇರುವುದೋ ಅಲ್ಲಿಗೆ ಹಣ ಒದಗಿಸುತ್ತದೆ. ಒಂದು ಜಿಲ್ಲೆಗಷ್ಟೇ ಪ್ರಯೋಜನವೆಂದು ಕಾಣಿಸುವ ವಿಷಯ ರಾಷ್ಟ್ರದ ದೃಷ್ಟಿಯಲ್ಲೂ ಮುಖ್ಯವಾದೊಂದು ವಿಷಯವಾಗಿರಲು ಸಾಧ್ಯವುಂಟು. ಜಿಲ್ಲೆಗಳಲ್ಲಿರುವಂಥ ಅಗತ್ಯಗಳನ್ನೂ ಅಪಾಯಗಳನ್ನೂ ದುಶ್ಶಕ್ತಿಗಳನ್ನೂ ಹತ್ತಿಕ್ಕುವುದು ಆಯಾ ಜಿಲ್ಲೆಗೆ ಮಾತ್ರವಲ್ಲ ರಾಷ್ಟ್ರದ ದೃಷ್ಟಿಯಿಂದಲೂ ಮಹತ್ವದ ಕರ್ತವ್ಯವಾಗುತ್ತದೆ. ಒಂದು ಜಿಲ್ಲೆಗೆ ಲಾಭದಾಯಕವೆಂದು ತೋರುವ ವೆಚ್ಚ ರಾಷ್ಟ್ರದ ದೃಷ್ಟಿಯಿಂದ ಮಹತ್ವದ್ದಿರಬಹುದು. ಒಂದು ರಸ್ತೆ ಅಥವಾ ಕಾಲುವೆ, ಅಥವಾ ಹತ್ತಿ ಬೆಳೆವ ಅಥವಾ ಕಾಫಿ – ಚಹ ಬೆಳೆವ ಜಿಲ್ಲೆಯ ಮೂಲಕ ಹಾಯುವ ರೈಲ್ವೆಗಳಿಗೆ ರಾಷ್ಟ್ರೀಯ ವ್ಯಾಪಾರೋದ್ಯಮ ದೃಷ್ಟಿಯಿಂದಲೂ ಮಹತ್ವ ಇರುತ್ತದೆ. ಅಲ್ಲಿಂದ ಸದ್ಯ ಬರುವ ಆದಾಯಕ್ಕೂ ಅಲ್ಲಿ ಸಾಮ್ರಾಜ್ಯ ಮಾಡುವ ವೆಚ್ಚಕ್ಕೂ ಸಂಬಂಧವಿರುವುದಿಲ್ಲ. ಇತ್ತೀಚೆಗೆ ಸಾಮ್ರಾಜ್ಯಕ್ಕೆ ಸೇರ್ಪಡೆಗೊಂಡಂಥ ಅಶಾಂತ ಪ್ರದೇಶಗಳ ಬಗ್ಗೆ ಅಲ್ಲಿಂದ ಸದ್ಯ ಹುಟ್ಟುವ ಆದಾಯಕ್ಕಿಂತ ಎಷ್ಟೋ ಪಾಲು ಹೆಚ್ಚು ವೆಚ್ಚ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಅವುಗಳು ಭಾರತದಲ್ಲಿರುವ ಈಗಾಗಲೇ ಸುಧಾರಿತ ಪ್ರದೇಶಗಳೊಡನೆ ಹೊಂದಿಕೊಳ್ಳುವುದೆಂತು? ಸಾಮ್ರಾಜ್ಯದ ಹಳೇ ಪ್ರಾಂತಗಳು ಹೊಸ ಪ್ರಾಂತಗಳನ್ನು ಗೆದ್ದುಕೊಂಡರೆ ಈ ಹೊಸವನ್ನು ನಾಗರಿಕತೆಗೆ ಸೇರ್ಪಡೆಗೊಳಿಸುವುದು ಹಳೇ ಪ್ರಾಂತಗಳ ಕರ್ತವ್ಯವಾಗಿರುತ್ತದೆ. ದೇಶ ಗೆದ್ದುಕೊಂಡ ಬಳಿಕ ಅದನ್ನು ಅದರ ಪಾಡಿಗೆ ಬಿಟ್ಟುಬಿಡುವುದಕ್ಕೆ ಆಗುವುದಿಲ್ಲ. ವಿಜಯದಲ್ಲಿ ಹಕ್ಕುಗಳಿರುವಂತೆ ಕರ್ತವ್ಯಗಳೂ ಇರುತ್ತವೆ.

ವರಿಷ್ಠ ಸರ್ಕಾರದ ಪ್ರಯೋಜನವನ್ನು ಆದಾಯದ ಪ್ರಮಾಣಕ್ಕೆ ಮಿತಗೊಳಿಸುವುದಕ್ಕೆ ನನ್ನ ಒಪ್ಪಿಗೆಯಿಲ್ಲ. ಪ್ರಾಂತದಿಂದ ಎಷ್ಟು ಉತ್ಪತ್ತಿ ಹುಟ್ಟುವುದೋ ಅಷ್ಟಕ್ಕೇ ವಿನಿಯೋಗವನ್ನು ಮಿತಗೊಳಿಸಬೇಕೆಂಬ ಸಂಕುಚಿತ ವಾದವನ್ನು ನಾನೊಲ್ಲೆ. ಏಕೀಕೃತ ಭಾರತದ ಭವ್ಯಚಿತ್ರದ ನಿರ್ಮಿತಿಗೋಸ್ಕರ ಶ್ರೀಮಂತರು ಬಡವರಿಗೆ ನೆರವು ನೀಡಬೇಕು, ವಯಸ್ಕರು ತರುಣರಿಗೆ ಪ್ರೋತ್ಸಾಹ ಕೊಡಬೇಕು, ಒಳ್ಳೆಯದು ಕೆಟ್ಟದನ್ನು ಸುಧಾರಿಸಬೇಕು. ಇದಕ್ಕಾಗಿ ಕೇಂದ್ರಸರ್ಕಾರವೇ ಧನವಿನಿಯೋಗದ, ಅರ್ಥಾತ್ ಹಣಕಾಸು ವಿತರಣೆಯ ಹೊಣೆ ಹೊತ್ತಿರಬೇಕು – ಮದರಾಸು ಕೌನ್ಸಿಲಿನ ಅಧ್ಯಕ್ಷ ಲಾರ್ಡ್ ನೇಪಿಯರ್ ಅವರ ಖಚಿತಾಭಿಪ್ರಾಯ ಇದು.[೨]

---

೧. ನವೆಂಬರ್ ೨೨, ೧೮೬೭ರ ಮಿನಿಟ್ (ಈ ಹಿಂದೆ ಹೇಳಿದ ಮೂಲ) ಪುಟಗಳು ೧೦೪–೭.

೨. ಫೆಬ್ರವರಿ ೧೫, ೧೮೬೮ ಇವರ ಟಿಪ್ಪಣಿ (ಮಿನಿಟ್)ಯ ಪ್ಯಾರಾ ೯ ನೋಡಿ. ಈ ಹಿಂದೆ ಹೇಳಿದ ಮೂಲ, ಪುಟಗಳು ೧೮೬–೯೦

ಮೇಲ್ಕಂಡ ವಾದ ಅಥವಾ ಉಪದೇಶಗಳಷ್ಟರಿಂದಲೇ ಸಾಮ್ರಾಜ್ಯವಾದವನ್ನು ಎತ್ತಿಹಿಡಿಯಲು ಸಾಧ್ಯವಿರುತ್ತಿರಲಿಲ್ಲ. ಆದಾಯ ವೆಚ್ಚಗಳನ್ನು ಸಾಮ್ರಾಜ್ಯಪರ ಮತ್ತು ಪ್ರಾಂತಪರವೆಂದು ವಿಭಾಗಿಸುವುದು ಕಷ್ಟವೆಂದು ಭಾವಿಸುವಂತೆ ವಾದಿಸುವುದು ಆಗಿನ ಕಾಲದಲ್ಲಿ ಸಾಮಾನ್ಯವಾಗಿದ್ದರೂ ನಿಜಕ್ಕೂ ಅದೇನೂ ಅಂಥ ಸಾಧ್ಯವಾಗದ ಕೆಲಸ ಆಗಿರಲಿಲ್ಲ. ಮಿಲಿಟರಿಯನ್ನು ಕೇಂದ್ರೀಕರಿಸಿ ಕೇಂದ್ರ ಸರ್ಕಾರದ ಅಧೀನದಲ್ಲಿರಿಸಿದರೆ ಮಿಲಿಟರಿ ವೆಚ್ಚವನ್ನು ಕೇಂದ್ರ ಮತ್ತು ಪ್ರಾಂತವೆಂದು ವಿಭಾಗಿಸುವುದು ತಪ್ಪುತ್ತದೆ. ಯಾವ ವೆಚ್ಚಗಳು ಪ್ರಾಂತ್ಯದ ಸೀಮೆಯೊಳಗೆ ಮಾತ್ರವಲ್ಲದೆ ಇಡೀ ದೇಶಕ್ಕೆ ಪ್ರಯೋಜನವೋ ಅಂಥವನ್ನು ಕೇಂದ್ರ ಸರ್ಕಾರದ ಬಜೆಟಿನಲ್ಲಿ ಒಳಪಡಿಸಿದರೆ ಆಗುತ್ತಿತ್ತು. ಹಾಗೆಯೇ ಆದಾಯ ಮೂಲಗಳನ್ನು ಪ್ರಾಂತೀಯ ಮತ್ತು ಕೇಂದ್ರೀಯವೆಂದು ಪ್ರತ್ಯೇಕಿಸುವಲ್ಲಿ ಕಷ್ಟವಿರುತ್ತಿರಲಿಲ್ಲ. ಕೇವಲ ಸ್ಥಳೀಯ ಪ್ರಯೋಜನ ನೀಡುವಂಥ ಅಥವಾ ಸ್ಥಳೀಯ ತನಿಖೆಗೆ ಸೂಕ್ತವೆನಿಸುವಂಥ ಬಾಬುಗಳನ್ನು ಪ್ರಾಂತೀಯ ಅಧಿಕಾರಕ್ಕೆ ಒಪ್ಪಿಸಿಬಿಡಬಹುದಾಗಿತ್ತು ಉದಾ: ಸುಂಕ ಶುಲ್ಕವನ್ನು ಕೇಂದ್ರೀಯ ಮೂಲವೆಂದು ಪರಿಗಣಿಸುವುದು ಅದರ ಹೊರೆಯ (ಇನ್ಸಿಡೆನ್ಸ್) ವ್ಯಾಪ್ತಿ ವಿಶಾಲವಾಗುವುದರಿಂದ ಏಕರೂಪಿ ಶಾಸನ ಮತ್ತು ಆಕರನೀತಿ ಅದಕ್ಕೆ ಸಮುಚಿತ ಧೋರಣೆಯ ಅನುಸರಣೆಯನ್ನು ಅಳವಡಿಸಿಕೊಳ್ಳಬೇಕಿತ್ತು. ಅಫೀಮು ಮತ್ತು ಉಪ್ಪಿನ ಆದಾಯವನ್ನು ಕೇಂದ್ರೀಕರಿಸಬೇಕಿತ್ತು. ಪ್ರತ್ಯೇಕ ಪ್ರಾಂತಗಳ ವೆಚ್ಚವನ್ನು ಪೈಗೆ ಪೈ ಸರಿತೂಗಿಸುವ ರೀತಿಯಲ್ಲಿ ಆದಾಯಮೂಲಗಳನ್ನು ಹಂಚುವುದು ಸಾಧ್ಯವಾಗದೆ ಹೋಗಬಹುದು. ಅಂಥ ಸಂದರ್ಭದಲ್ಲಿ ಕೇಂದ್ರವು ಪ್ರಾಂತಕ್ಕೆ, ಪ್ರಾಂತವು ಕೆಲವೊಮ್ಮೆ ಕೇಂದ್ರಕ್ಕೂ ದೇಣಿಗೆ (ಕಾಂಟ್ರಿಬ್ಯೂಶನ್) ಕೊಡುವ ಉಪಾಯ ಕೈಗೊಳ್ಳಬಹುದು. ಏನು ಮಾಡಿದರೂ ಆದಾಯಮೂಲಗಳ ವಿಭಜನೆಯ ಕಾರ್ಯ ಏಕಪಕ್ಷೀಯವಾಗುವುದೆಂಬ ಅಪವಾದ ತಪ್ಪಿಸಿಕೊಳ್ಳುವುದು ಸುಲಭವಲ್ಲ. ನಿಜ, ಅದರಂತೆ ಸಾಮ್ರಾಜ್ಯ ಬಜೆಟನ್ನು ಪ್ರಾಂತೀಯ ಮತ್ತು ಕೇಂದ್ರೀಯವೆಂದು ವಿಭಜಿಸಲು ಮನಸ್ಸಿದ್ದರೆ ಸಾಧ್ಯವಿತ್ತು. ಸಾಮ್ರಾಜ್ಯವಾದಿಗಳ ವಿತಂಡವಾದಕ್ಕೆ ಉತ್ತರರೂಪವಾಗಿ ಕರ್ನಲ್ ಚೆಸ್ನೇ ಎಂಬುವರು ಸೂಚಿಸಿದ್ದು ಏನೆಂದರೆ:–

"ಸಾಮ್ರಾಜ್ಯ ವೆಚ್ಚಕ್ಕೋಸ್ಕರ ದೇಣಿಗೆ ನೀಡುವ ಪ್ರಸಂಗಗಳು ಇವು : (೧) ಸ್ವದೇಶದ (ಇಂಗ್ಲೆಂಡಿನಲ್ಲಿರುವ) ಕಚೇರಿ ಆಡಳಿತ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ವಿಲೆವಾರಿ ಮಾಡುವಂಥ ವೆಚ್ಚಗಳು. (೨) ಭಾರತದ ಸಾಲದ ಮೇಲಿನ ಬಡ್ಡಿ (೩) ಭಾರತ ಸರ್ಕಾರದ ಆಡಳಿತ ವ್ಯವಸ್ಥೆ (೪) ರಾಯಭಾರಿ ವ್ಯವಸ್ಥೆ (೫) ಸೈನ್ಯ (೬) ಸಾಮ್ರಾಜ್ಯದ ಸೇವೆಗಳಾದ : ಅಂಚೆ ಕಚೇರಿ ಮತ್ತು ಟೆಲಿಗ್ರಾಫ್ (೭) ರೈಲ್ವೆ ಬಂಡವಾಳದ ಮೇಲೆ ಗ್ಯಾರಂಟಿಕೊಟ್ಟಿರುವ ಬಡ್ಡಿ – ಇಷ್ಟಲ್ಲದೆ ಜೊತೆಗೆ (೮) ಪ್ರಸ್ತುತ ವೆಚ್ಚ ಭರಿಸಲಶಕ್ತವಾದ ಬಡಪ್ರಾಂತಗಳಿಗೆ ನೀಡುವ ಸಹಾಯಧನ."

ಶಕ್ಯತೆ ಮತ್ತು ವ್ಯವಹಾರದ ದೃಷ್ಟಿಯಿಂದ ತಮ್ಮ ವಾದದಲ್ಲಿ ಹುರುಳಿಲ್ಲವೆಂಬುದು ಸಾಬೀತಾಗುವ ಸ್ಥಿತಿಯಲ್ಲಿ 'ಸಾಮ್ರಾಜ್ಯ' ವಾದಿಗಳು ಇನ್ನೊಂದು ವಾದವನ್ನು ಮುಂದೊಡ್ಡಿದರು. ಇದರಲ್ಲಿ ಹೆಚ್ಚು ಸತ್ವವುಂಟೆಂದು ಅವರು ಭಾವಿಸಿದರು. ಫೆಡರಲ್ ಸರ್ಕಾರದ ದಕ್ಷತೆ, ವಿಶ್ವಾಸಾರ್ಹತೆ (ಕ್ರೆಡಿಟ್)ಗಳು ಒಂದು ಸಾಮ್ರಾಜ್ಯದ ದಕ್ಷತೆ, ವಿಶ್ವಾಸರ್ಹತೆಯಷ್ಟು ಉತ್ಕೃಷ್ಟವಾಗಿರಲು ಸಾಧ್ಯವೇ ಎಂಬ ಪ್ರಶ್ನೆಯನ್ನು ಅವರು ಕೇಳಿದರು. ೧೮೫೭ರ ದಂಗೆಯಿಂದ ದೇಶವನ್ನು ರಕ್ಷಿಸಿದ ಸಾಮ್ರಾಜ್ಯವನ್ನು ಪ್ರಜಾ ಜನರು ಮರೆಯಲುಂಟೇ? ಸಂಕಷ್ಟಗಳನ್ನು ಜಯಿಸಿ ಉಳಿದುಕೊಳ್ಳುವಲ್ಲಿ ಸಾಮ್ರಾಜ್ಯದ ಶಕ್ತಿ ಸಾಬೀತಾಗಿತ್ತು. ತಮ್ಮ ಚಾಕಚಕ್ಯತೆಯನ್ನು ಉಪಯೋಗಿಸಿ ಸಾಮ್ರಾಜ್ಯವಾದಿಗಳು ಈ ಸಂಕಷ್ಟಗಳ ಮೂಲಕ ವಿಜಯಶಾಲಿಗಳಾಗಿ ಹಾಯ್ದುಬರಲು ಹೇಗೆ ಸಾಧ್ಯವಾಯಿತು ಎಂಬುದನ್ನು ಯೋಚಿಸುವಂತೆ ಅಧಿಕಾರದಲ್ಲಿರುವವರನ್ನು ಕೇಳಿದರು. ಹೀಗೆ

ಕೇಳುವಾಗ ಇದಕ್ಕೆ ಸಾಮ್ರಾಜ್ಯದ ಕೇಂದ್ರೀಕೃತ ಹಣಕಾಸು ನೀತಿಯೇ ಕಾರಣವೆಂಬುದನ್ನು ಒತ್ತಿ ಹೇಳಲು ಮರೆಯಲಿಲ್ಲ. ಈ ನೀತಿಯಿಲ್ಲದಿದ್ದರೆ ಇಂತಹ ಸನ್ನಿವೇಶಗಳನ್ನು ನಿಭಾಯಿಸಲು ಸಾಧ್ಯವಾಗುತ್ತಿರಲಿಲ್ಲ ಮತ್ತು ಈ ನೀತಿಯಿಂದ ಸರ್ಕಾರದ ದಕ್ಷತೆ ಹೆಚ್ಚಾಗುವುದರ ಜೊತೆಗೆ ಅದರ ವಿಶ್ವಾಸಾರ್ಹತೆಯೂ ಹೆಚ್ಚಾಗುತ್ತದೆ ಎಂಬುದನ್ನು ಅವರು ವಿವರಿಸಿದರು. ಆದಾಯದ ಪ್ರಮಾಣವು ವಿಶ್ವಾಸಾರ್ಹತೆಗೆ ಕಾರಣವಾಗುತ್ತದೆ. ಬದಲಿಗೆ ಆದಾಯದ ಪ್ರಮಾಣವು ಪ್ರಾಂತೀಯ ರಾಜ್ಯಗಳಲ್ಲಿ ಹಂಚಿಹೋದರೆ ವಿಶ್ವಾಸಾರ್ಹತೆಗೆ ಧಕ್ಕೆ ಬರುತ್ತದೆ ಎಂದೂ ವಾದಿಸಿದರು. ಏಷಿಯಾದ ಸರ್ಕಾರಗಳಿಗೆ ಗೌರವವನ್ನು ನೀಡುತ್ತಿದ್ದ ಯುರೋಪಿಯನ್ ಸಂಪ್ರದಾಯವನ್ನು ಮೊಟಕುಗೊಳಿಸಿದ್ದಕ್ಕಾಗಿಯೂ ಸಂಯುಕ್ತ ವ್ಯವಸ್ಥೆ ಯೋಜನೆಯು ಟೀಕಿಸಲ್ಪಟ್ಟಿತು. ತಾನು ರಾಜಕೀಯ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಹಿಡಿತವನ್ನು ಸಾಧಿಸಿ, ಸಾಮ್ರಾಜ್ಯದ ಸರ್ಕಾರಕ್ಕೆ ತನ್ನ ನೀತಿ ನಿಯಮಗಳನ್ನು ತೃಪ್ತಿಕರವಾಗಿ ಜಾರಿಗೆ ತರಲು ಶಕ್ತಿಯನ್ನು ತುಂಬಿದ, ಸಾಮ್ರಾಜ್ಯದ ಆರ್ಥಿಕ ನೀತಿಯ ಕೇಂದ್ರೀಕರಣವಿಲ್ಲದೆ ಕೇಂದ್ರ ಸರ್ಕಾರವು ತನ್ನ ಗೌರವವನ್ನು ಉಳಿಸಿಕೊಳ್ಳುತ್ತದೆ ಎಂಬುದನ್ನು ಊಹಿಸಿಕೊಳ್ಳಲೂ ಸಾಧ್ಯವಿಲ್ಲ. ಆದರೆ, ತನ್ನ ಕೈಕೆಳಗಿರುವ ಸ್ಥಾನೀಯ ಸರ್ಕಾರಗಳಲ್ಲಿ ಕೃಪಾಭಿಕ್ಷೆಯನ್ನು ಬೇಡುವಂತಹ ಕೇಂದ್ರ ಸರ್ಕಾರದ ಮಾನವನ್ನು ಯಾರು ತಾನೇ ಕಾಪಾಡಬಲ್ಲರು?

ವಿವಾದದಿಂದ ದೂರದಲ್ಲಿ ನಿಂತು ನಿಷ್ಪಕ್ಷಪಾತವಾಗಿ, ಅನಾಸಕ್ತಿಯಿಂದ ವಿಶ್ಲೇಷಿಸುವುದಾದರೆ ಸಾಮ್ರಾಜ್ಯ ಹಣಕಾಸುವಾದಿಗಳಿಗೆ ಅನಿವಾರ್ಯತೆಯ ನೆಲೆಯಲ್ಲಿ ಲಭಿಸಿದ ಸುಲಭ ವಿಜಯದ ಬಗ್ಗೆ ಆಶ್ಚರ್ಯವೇ ಆಗುತ್ತದೆ. ಅಮೆರಿಕ ಮತ್ತು ಜರ್ಮನಿಯಲ್ಲಿ ಹಾಲಿ ಪ್ರವೃತ್ತವಾಗಿರುವ ಫೆಡರಲ್ ಸರ್ಕಾರಗಳು ದಕ್ಷತೆ, ವಿಶ್ವಾಸಾರ್ಹತೆ ಮತ್ತು ಮನ್ನಣೆಗಳಿಸುವುದರಲ್ಲಿ ವಿಫಲವಾಗಿದ್ದೇವೆಂದು ಒಪ್ಪಿಕೊಳ್ಳಲು ಸಿದ್ಧರಿರಲಿಲ್ಲ. ಇತಿಹಾಸವು ಇಂತಹ ನಿರಾಶವಾದ ಭವಿಷ್ಯವನ್ನು ಸುಳ್ಳುಮಾಡಿತು. ಆದರೆ ಭಾರತದಲ್ಲಿ ಈ ಚರ್ಚೆ ಸಾಗುತ್ತಿರುವ ವೇಳೆಯಲ್ಲಿ ಫೆಡರಲ್‌ವಾದಕ್ಕೆ ಇತಿಹಾಸವಿರಲಿಲ್ಲ ಮತ್ತು ಸಂಯುಕ್ತ ರಾಜ್ಯ ವ್ಯವಸ್ಥೆಯೇ ಇನ್ನೂ ಶೈಶವಾವಸ್ಥೆಯಲ್ಲಿತ್ತು. ಆದರೆ, ಆ ಸಂದರ್ಭದಲ್ಲಿ ಸಾಮ್ರಾಜ್ಯವಾದಿಗಳು ತಮ್ಮ ವಾದವನ್ನು ಮಂಡಿಸಲು ಸಂಯುಕ್ತ ರಾಜ್ಯ ವ್ಯವಸ್ಥೆಯ ಚಾರಿತ್ರಿಕತೆಯನ್ನು ಅವಲಂಬಿಸಿಲ್ಲ. ಆಗಿನ ಸಾಂದರ್ಭಿಕ ಒತ್ತಡಗಳೇ ಅವರನ್ನು ಸಾಮ್ರಾಜ್ಯವಾದಕ್ಕೆ ಬೆಂಬಲವನ್ನು ಸೂಚಿಸುವಂತೆ ಪ್ರೇರೇಪಿಸಿದ್ದವು. ಸಾಮ್ರಾಜ್ಯದ ವ್ಯವಸ್ಥೆಯು ಭಾರತವನ್ನು ೧೮೫೭ರ ದಂಗೆಯಿಂದ ರಕ್ಷಿಸಿತ್ತು ಮತ್ತು ಅಂತಹ ದಂಗೆ ಮತ್ತೆ ಘಟಿಸಬಹುದೆಂಬ ಭಯ ಇನ್ನೂ ನಿವಾರಣೆಯಾಗದಿದ್ದ ಆ ಸಮಯದಲ್ಲಿ ತನ್ನ ಬಲವನ್ನು ಸಾಬೀತುಪಡಿಸಿದ್ದ ವ್ಯವಸ್ಥೆಯೊಂದನ್ನು ಬದಲಾಯಿಸುವುದು ಸಾಧ್ಯವಿರಲಿಲ್ಲ. ಆ ವ್ಯವಸ್ಥೆಯ ಲೋಪದೋಷಗಳನ್ನು ಅರಿತಿದ್ದರೂ, ಅದನ್ನು ಬದಲಿಸುವ ಪ್ರಯತ್ನದಿಂದ ಜನರು ಹಿಂದೆಗೆಯುತ್ತಿದ್ದರು ಮತ್ತು ಆ ವ್ಯವಸ್ಥೆಯ ಬಗ್ಗೆ ತಮಗಿದ್ದ ಬಲವಾದ ಒಲವಿನಿಂದಾಗಿಯೇ ಕೆಳಕಂಡಂತೆ ಹೇಳಿಕೆಯನ್ನಿತ್ತಿದ್ದ ಮೇಜರ್ ಜನರಲ್ ಸರ್ ಎಚ್.ಎಂ. ಡುರಾಂಡ್ ಅವರ ಮಾತುಗಳನ್ನು ಸಹಾನುಭೂತಿಯಿಂದ ಕೇಳುತ್ತಿದ್ದರು.

ಭಾರತ ಸರ್ಕಾರದ ಹಣಕಾಸು ನಿಯಂತ್ರಣ ಭಾರೀ ಬಿಗಿಯಾಗಿದ್ದು ಗುರಿಸಾಧನೆಯ ವಿಷಯದಲ್ಲಿ ಅಸಫಲವಾಯಿತೆಂಬ ಮಾತು ನಿಜವಲ್ಲ. ಹಾಗೆಯೇ ಒಟ್ಟಿನಲ್ಲಿ ನಿಯಮ, ನಿಯಂತ್ರಣಗಳನ್ನು ನಿರುಪಯುಕ್ತವೆಂದು ತಿರಸ್ಕರಿಸುವಂತಿಲ್ಲ. ಬಹುಶಃ ಈ ನಿಯಮಗಳನ್ನು ಇನ್ನಷ್ಟು ನಿಷ್ಠುರವಾಗಿ ಚಲಾವಣೆ ಮಾಡಲು ಇಂಡಿಯಾ ಸರ್ಕಾರ ಮತ್ತು ಇಂಗ್ಲೆಂಡಿನಲ್ಲಿರುವ ಸರ್ಕಾರ ಮುಂದೆ ಬರಬೇಕಾಗುತ್ತದೆ. ಒಂಬತ್ತು ಆಡಳಿತಗಳ ಪೈಕಿ ಯಾವುದೋ ಒಂದು ಆಡಳಿತ ಆಯತಪ್ಪಿತೆಂದು ಕೇಂದ್ರಸರ್ಕಾರದ ಹಿಡಿತವನ್ನು ಸಡಿಲಗೊಳಿಸುವುದು ಒಂದು ರೆಜಿಮೆಂಟ್ ನಿಯಮೋಲ್ಲಂಘನೆ ಮಾಡಿದ್ದಕ್ಕೆ ಯುದ್ಧದ ಸೂತ್ರಗಳನ್ನೆಲ್ಲ

ತಿರಿಚಿ, ಮಹಾದಂಡನಾಯಕನ ಅಧಿಕಾರವನ್ನು ಕಿತ್ತುಕೊಂಡಂತೆ ಆದೀತು. ಇದು ನಮ್ಮ ಸೈನ್ಯವನ್ನಾಗಲಿ ಭಾರತವನ್ನಾಗಲಿ ಆಳುವ ಮುತ್ಸದ್ದಿತನ ಅಲ್ಲವೆಂದು ನಾನು ಹೇಳಿಯೇನು.[೧]

ಸಾಮ್ರಾಜ್ಯವಾದಿಗಳು ವಿಜಯವನ್ನು ಸಾಧಿಸಿದರೆಂಬುದನ್ನು ಗಮನಿಸುವಾಗಲೂ ಸಂಯುಕ್ತರಾಜ್ಯವಾದಿಗಳು ಗೆಲ್ಲಬೇಕಾಗಿದ್ದಂತಹ ಸಂದರ್ಭದಲ್ಲಿ ಸೋತರು ಎಂದೂ ಹೇಳಬಹುದಾಗಿದೆ. ಅದಕ್ಕೆ ಕಾರಣವೆಂದರೆ ಹಾಲಿ ಇದ್ದ ಸಾಮ್ರಾಜ್ಯ ಪದ್ಧತಿಯನ್ನು ಉಳಿಸಿಕೊಂಡು ಹೋಗುವಂತಹ ವಿಚಾರ ಆಗ ಇದ್ದದ್ದು ನಿಜವಾದರೂ, ಪರಿಸ್ಥಿತಿಯನ್ನೆದುರಿಸಿ ಹೋರಾಡಬಲ್ಲ ಚೈತನ್ಯ ಆಗ ಇನ್ನೂ ದುರ್ಬಲವಾಗಿಯೇ ಇತ್ತು. ಸಾಮ್ರಾಜ್ಯ ಸರ್ಕಾರವನ್ನು ದಾರಿದ್ರ್ಯ ಕೂಪದಿಂದ ಎತ್ತುವುದಕ್ಕಾಗಿ ಫೆಡರಲ್ ವ್ಯವಸ್ಥೆಗೆ ಒಲಿಯಲು ಸಾಮ್ರಾಜ್ಯಪದ್ಧತಿ ಸಿದ್ಧವಾಗಿರಲಿಲ್ಲ. ಇಷ್ಟಾಗಿಯೂ ಸಾಮ್ರಾಜ್ಯ ಹಣಕಾಸು ವ್ಯವಸ್ಥೆ ಶಾಶ್ವತವಾಗಿ ಉಳಿಯಲಾರದೆಂಬ ಸತ್ಯದ ಅರಿವು ಸಹ ಮೂಡುತ್ತಿತ್ತು.

---

೧. ಅಕ್ಟೋಬರ್ ೭, ೧೮೬೭ರ ಟಿಪ್ಪಣಿ. ಈ ಹಿಂದಿನ ಮೂಲ, ಪುಟಗಳು ೯೪–೭.

## ಅಧ್ಯಾಯ ೩

# ಕೇಂದ್ರ ಹಾಗೂ ಪ್ರಾಂತ್ಯಗಳ ನಡುವಣ ಹೊಂದಾಣಿಕೆ– ಸಾಮ್ರಾಜ್ಯ ನಿರ್ವಹಿಸದ ಸಾಮ್ರಾಜ್ಯದ ಹಣಕಾಸು

ಸಂಯುಕ್ತರಾಜ್ಯವಾದಿಗಳು ವ್ಯವಸ್ಥೆಯಲ್ಲಿದ್ದ ಅತ್ಯಂತ ತೀವ್ರತರವಾದ ಕೆಲವು ದೌರ್ಬಲ್ಯಗಳನ್ನು ಹೋಗಲಾಡಿಸಿ ತಮ್ಮ ವಿರೋಧಿಗಳ ವ್ಯವಸ್ಥೆಯನ್ನು ಸ್ವಲ್ಪಮಟ್ಟಿಗೆ ಸುಧಾರಿಸುವಂತೆ ಮಾಡಿದರು. ಆದಾಯ ನಿಯಮಗಳನ್ನು ಪುನರ್ವಿಮರ್ಶಿಸುವ ಬಗ್ಗೆ ಮತ್ತು ನಿಯಂತ್ರಣ ವಿಧಾನಗಳನ್ನು ಸುಧಾರಿಸುವುದರ ಬಗ್ಗೆ ಅವರುಗಳು ಗಮನವನ್ನು ಹರಿಸಿದರು. ಇದರಿಂದ ಹೆಚ್ಚು ಆದಾಯ ಪಡೆಯುವುದು ಮತ್ತು ವ್ಯರ್ಥವಾಗಿ ಮಾಡುವ ವೆಚ್ಚವನ್ನು ಕಡಿಮೆ ಮಾಡುವುದು ಇವರ ಉದ್ದೇಶವಾಗಿತ್ತು. ಈಸ್ಟ್ ಇಂಡಿಯಾ ಕಂಪನಿಯ ಆಡಳಿತದ ಕೊನೆಯ ಭಾಗದ ವೇಳೆಗೆ, ಸಾಮ್ರಾಜ್ಯ ವ್ಯವಸ್ಥೆಯನ್ನು ಬಲಗೊಳಿಸುವ ಮತ್ತು ಶ್ರೀಮಂತವನ್ನಾಗಿ ಮಾಡುವ ಉದ್ದೇಶದಿಂದ, ಬಹಳ ಕಾಲದವರೆಗೆ ಜನರ ಏಳಿಗೆ ಹಾಗೂ ಅದರ ಪರಿಣಾಮವಾಗಿ ಸರ್ಕಾರದ ಏಳಿಗೆಯನ್ನು ಕುಂಠಿತಗೊಳಿಸಿದ್ದ ದಮನಕಾರೀ ತೆರಿಗೆಗಳನ್ನು ತೆಗೆದುಹಾಗಲು ತೀವ್ರ ಯತ್ನಗಳನ್ನು ಮಾಡಲಾಯಿತು. ಜೊತೆಗೆ ಆಂತರಿಕ ಆಮದು–ರಫ್ತು ಸುಂಕವನ್ನು ತೆಗೆದುಹಾಕಲಾಯಿತು. ವ್ಯಾಪಾರ ಮತ್ತು ಉದ್ಯಮಗಳ ಬೆಳವಣಿಗೆಗೆ ಅಡ್ಡಿಯಾಗಿದ್ದ ಎಲ್ಲ ನಿರ್ಬಂಧಗಳಿಂದ ದೇಶವನ್ನು ಮುಕ್ತಗೊಳಿಸಲಾಯಿತು. ಇಷ್ಟೇ ಅಲ್ಲದೆ, ರಾಷ್ಟ್ರದ ಕೈಗಾರಿಕೆಗಳಿಗೆ ವಿದೇಶೀ ಸ್ಪರ್ಧೆಯುಂಟಾಗದಂತೆ ನೋಡಿಕೊಳ್ಳುವ ರೀತಿಯಲ್ಲಿ ರಕ್ಷಣಾತ್ಮಕ ಆಮದು ಸುಂಕವನ್ನು ವಿಧಿಸಲಾಯಿತು. ಇಂಗ್ಲಿಷ್ ಮತ್ತು ಇತರ ವಿದೇಶೀ ಹಡಗುಗಳ ಮೇಲಿನ ಸುಂಕವನ್ನು ಸಮಾನಗೊಳಿಸುವುದರ ಮೂಲಕ ವ್ಯಾಪಾರ ಸುಗಮಗೊಳ್ಳುವಂತೆ ಮಾಡಲಾಯಿತು. ರಫ್ತು ಸರಕುಗಳಿಗೆ ಸಹ ಅವುಗಳ ಮೇಲಿನ ಸುಂಕವನ್ನು ತೆಗೆದುಹಾಕಿ ರಫ್ತಿಗಿದ್ದ ಅಡೆ–ತಡೆಗಳನ್ನು ನಿವಾರಿಸಲಾಯಿತು. ಯುರೋಪ್ ಮತ್ತು ಇತರ ರಾಷ್ಟ್ರಗಳಲ್ಲಿ ಅತ್ಯಂತ ಹೆಚ್ಚು ಬೇಡಿಕೆಗಳನ್ನು ಹೊಂದಿದ್ದ ಕಾಫಿ, ಟೀ, ಹತ್ತಿಯಂತಹ ಸರಕುಗಳ ಕೃಷಿಯನ್ನು ಸುಧಾರಿಸುವ ಪ್ರಯತ್ನಗಳನ್ನು ಸಹ ನಡೆಸಲಾಯಿತು.

ಸುಧಾರಣೆಗೆ ಗುರಿಪಡಿಸಲಾದ ಎರಡನೆಯ ವಿಷಯ ಆಡಳಿತಯಂತ್ರವಾಗಿತ್ತು. ಇದಕ್ಕಾಗಿ ೧೮೬೧ರ ಇಂಡಿಯನ್ ಕೌನ್ಸಿಲ್ ಕಾಯಿದೆಯ ಲಾಭವನ್ನು ಪಡೆದುಕೊಳ್ಳಲಾಯಿತು. ಈ ಕಾಯಿದೆಯನ್ವಯ ತನ್ನ ಕೌನ್ಸಿಲ್‌ನಲ್ಲಿ ಸುಗಮವಾಗಿ ಆಡಳಿತ ಮತ್ತು ವ್ಯವಹಾರವನ್ನು ನಡೆಸಲು ಆಗಿಂದಾಗ್ಗೆ ಬದಲಾವಣೆಗಳನ್ನು ಮಾಡಲು ವೈಸ್‌ರಾಯ್‌ಗೆ ಅಧಿಕಾರವನ್ನು ನೀಡಲಾಗಿತ್ತು. ಈ ಅಧಿಕಾರವನ್ನು ಬಳಸಿಕೊಂಡು ಕೌನ್ಸಿಲ್‌ನ ಪ್ರತಿ ಸದಸ್ಯನಿಗೆ ಸರ್ಕಾರದ ಪ್ರತ್ಯೇಕ ಇಲಾಖೆಯ ಆಡಳಿತವನ್ನು ಒಪ್ಪಿಸಲಾಯಿತು. ಹೀಗಾಗಿ ಕೌನ್ಸಿಲನ್ನು ವಾಸ್ತವವಾಗಿ ಒಂದು ಮಂತ್ರಿಮಂಡಲವನ್ನಾಗಿ ಪರಿವರ್ತಿಸಲಾಯಿತು. ಇದಕ್ಕೆ ಗವರ್ನರ್–ಜನರಲ್ ಮುಖ್ಯಸ್ಥನಾದ, ಈ ರೀತಿ ಆರ್ಥಿಕ ಸಚಿವರ ಹುದ್ದೆಯನ್ನು ಸೃಷ್ಟಿಸಲಾಯಿತು. ಇದಕ್ಕೆ ಪ್ರಸಿದ್ಧ ಹಣಕಾಸು ತಜ್ಞ ಶ್ರೀಯುತ ಜೇಮ್ಸ್ ವಿಲ್ಸನ್‌ರವರನ್ನು ನೇಮಿಸಲಾಯಿತು. ವಿಲ್ಸನ್‌ನ ಗಮನ ಮೊಟ್ಟಮೊದಲಿಗೆ ತೆರಿಗೆ ಆಡಳಿತಯಂತ್ರದ ಸುಧಾರಣೆಯ ಕಡೆ ಹರಿಯಿತು. ಭಾರತದಲ್ಲಿ ಏಕರೀತಿಯಾದ ಹಣಕಾಸು ವಿಧಾನ,

ನಾಗರಿಕ ಹಾಗೂ ಮಿಲಿಟರಿ ಲೆಕ್ಕ ತಪಾಸಣೆಯ ಕೇಂದ್ರೀಕರಣ ಮತ್ತು ಯೋಗ್ಯ ಬಜೆಟ್ ನಿರೂಪಣೆಗಳನ್ನು ಜಾರಿಗೆ ತಂದ ಶ್ರೇಯಸ್ಸು ವಿಲ್ಸನ್‌ಗೆ ಸೇರುತ್ತದೆ. ಆದಾಯ ಕಾನೂನಿನಲ್ಲಿ ಸುಧಾರಣೆ, ಆಡಳಿತ ಕ್ರಮ ಮತ್ತು ಸುಧಾರಿತ ತೆರಿಗೆ ನೀತಿಗಳ ಅನುಸರಣೆಗಳು ಸೇರಿ ಅಪವ್ಯಯ ತಪ್ಪಿ ಸರ್ಕಾರದ ವೆಚ್ಚಗಳಲ್ಲಿ ಕಡಿತ ಮಾಡುವ ನೀತಿಯನ್ನು ಅನುಸರಿಸಲಾಯಿತು.[೧]

ಬಜೆಟ್ ಮತ್ತು ಲೆಕ್ಕ ತಪಾಸಣೆ ನಿಯಮಗಳನ್ನು ಹೇಗೆ ರೂಪಿಸಲಾಯಿತೆಂದರೆ, "ಪ್ರತಿ ಪ್ರಾದೇಶಿಕ ಸರ್ಕಾರ ಅಥವಾ ಆಡಳಿತದ ಪ್ರತಿ ವಿಭಾಗಕ್ಕೆ ಹೆಚ್ಚಿನ ತೀರ್ಮಾನ ಕೈಗೊಳ್ಳುವ ವಿವೇಚನಾ ಅಧಿಕಾರವನ್ನು ಕೊಡಲಾಯಿತು...... ಇಲ್ಲಿಂದ ಆಚೆಗೆ.... ಸರ್ಕಾರದ ವೆಚ್ಚದ ವಿವರಗಳನ್ನು ಹೊಂದಾಣಿಕೆ ಮಾಡಿಕೊಳ್ಳುವ ಹೆಚ್ಚಿನ ಅಧಿಕಾರಗಳನ್ನು ಇವರಿಗೆ ಕೊಡಲಾಯಿತು."[೨]

ಮಿತವ್ಯಯದ ವಾಸ್ತವ ಸಾಧನೆ ಇದರಿಂದ ತೀವ್ರಗತಿಯಲ್ಲಿ ನಡೆಯಿತು. ಇದು ಎಷ್ಟರಮಟ್ಟಿಗೆ ಇತ್ತೆಂದರೆ, ೧೮೫೪ರಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಸಂದೇಶದ ಮೂಲಕ ದೇಶಾದ್ಯಂತ ವಿದ್ಯಾಭ್ಯಾಸವನ್ನು ಹರಡಲು ತೆಗೆದುಕೊಂಡಿದ್ದ ಕ್ರಮಗಳನ್ನು ಆರಂಭಿಸಿದ ಕೂಡಲೇ ವಿದ್ಯಾಭ್ಯಾಸದ ಮೇಲಿನ ವೆಚ್ಚದಲ್ಲಿ ಯಾವುದೇ ಹೆಚ್ಚಳವೂ ಆಗದಂತೆ ನಿಯಂತ್ರಿಸಲಾಯಿತು.[೩]

ಆದರೆ, ಸುಧಾರಣೆಯ ಮೇಲಿನ ಈ ಪ್ರಯತ್ನಗಳಿಂದ ಭಾರತದ ಹಣಕಾಸಿನ ಪರಿಸ್ಥಿತಿ ಹೇಳಿಕೊಳ್ಳುವಷ್ಟು ಸುಧಾರಿಸಲಿಲ್ಲ. ೧೮೬೦-೬೧ರ ತನ್ನ ಹಣಕಾಸು ವಿವರಣೆಯ ಸಾರಂಶವನ್ನು ನೀಡುತ್ತಾ ಹೇಳಿದ ಮಾತುಗಳೆಂದರೆ,

"ಕಳೆದ ಮೂರು ವರ್ಷಗಳಲ್ಲಿ ನಮ್ಮ ಕೊರತೆ ೩೦,೫೪೭,೪೮೮ಗಳಾಗಿದೆ. ಮುಂದಿನ ವರ್ಷದ ನಮ್ಮ ಕೊರತೆಯ ಅಂದಾಜು ೬,೫೦,೦೦೦. ನಮ್ಮ ಸಾಲಕ್ಕೆ ಈಗಾಗಲೇ ೩೮,೪೧೦,೭೫೫ನ್ನು ಸೇರಿಸಿದ್ದೇವೆ."

ಇಷ್ಟು ದೊಡ್ಡ ಮೊತ್ತದ ಕೊರತೆಯನ್ನು ಸರಿತೂಗಿಸಲು, ವಿಲ್ಸನ್ ಅವರು ವಿಧಿಯಿಲ್ಲದೆ ಸ್ಟಾಂಪು ತೆರಿಗೆಯನ್ನು ಹೆಚ್ಚಿಸಬೇಕಾಯಿತು, ವಿದೇಶೀ ಸರಕು ಸುಂಕವನ್ನು ದ್ವಿಗುಣಗೊಳಿಸಬೇಕಾಯಿತು ಮತ್ತು ಇದುವರೆಗೆ ಜನರಿಗೆ ಗೊತ್ತಿರದಿದ್ದ ಆದಾಯ ತೆರಿಗೆಯನ್ನು ಜಾರಿಗೆ ತರಬೇಕಾಯಿತು.

ಈ ಮೂರೂ "ಭೀಕರ ತೆರಿಗೆಗಳಿಂದ" ಬರುವ ಆದಾಯ ಸಹ, ವಿಲ್ಸನ್‌ನ ನಂತರ ಅಧಿಕಾರಕ್ಕೆ ಬಂದ ಸ್ಯಾಮ್ಯುಯಲ್ ಲಾಯಿಂಗ್‌ನ ನೆರವಿಗೆ ಬರಲಿಲ್ಲ. ಕೊರತೆ ಸುಧಾರಿಸಿ, ಸುಸ್ಥಿತಿ ಉಂಟಾಗಲಿಲ್ಲ. ಏಕೆಂದರೆ ಲಾಯಿಂಗ್ ಸಹ ತನ್ನ ೧೮೬೧-೬೨ರ ಹಣಕಾಸು ಹೇಳಿಕೆಯಲ್ಲಿ ಕೊರತೆಯನ್ನು ಸರಿದೂಗಿಸಲು £ ೫೦೦,೦೦೦ಗಳ ಅಗತ್ಯವಿದೆಯೆಂದು ಸೂಚಿಸಿದ. ಹೀಗೆ ಮಾಡಿದರೆ ಮಾತ್ರ ಕೊರತೆ ಸರಿತೂಗಿಸಬಹುದಲ್ಲದೆ ಬಜೆಟ್‌ನಲ್ಲಿ ಅಲ್ಪ ಅಧಿಕ್ಯ ಉಂಟಾಗುತ್ತದೆ ಎಂಬುದು ಅವನ ಅಭಿಪ್ರಾಯವಾಗಿತ್ತು. ಕೆಲವು ವರ್ಷಗಳು ವಾಸ್ತವವಾಗಿ ಹಣಕಾಸು ಶ್ರೇಯಸ್ಸನ್ನು ಕಂಡವು ಸಹ. ಆದರೆ ೧೮೬೬ರಲ್ಲಿ ಲಾಯಿಂಗ್‌ನ ಸ್ಥಾನಕ್ಕೆ ಮ್ಯಾಸ್ಸೇ ಬಂದ. ಅವನ ಹೇಳಿಕೆಯಂತೆ:

೧. ೧೮೬೦ ನವೆಂಬರ್ ೧೯ರ ಹಣಕಾಸು ಇಲಾಖೆಯ ೧೨೬ನೇ ಗೊತ್ತುವಳಿ. ಇದು ನವೆಂಬರ್ ೨೪, ೧೮೬೦ರ ಕಲ್ಕತ್ತ ಗೆಜೆಟ್‌ನ ಅನುಬಂಧದಲ್ಲಿ ಪ್ರಕಟವಾಗಿದೆ.

೨. ಅಲ್ಲೇ, ಪ್ಯಾರಾ-೨೦

೩. ಕಲ್ಕತ್ತಾ ಗೆಜೆಟ್ ಪ್ರಕಟಣೆ, ೧೪ ಆಗಸ್ಟ್ ೧೮೫೮. ಪುಟ ೧೬೪೨.

"ವಾಸ್ತವವಾಗಿ ಸಾಮ್ರಾಜ್ಯದ ಹಣಕಾಸು ಮತ್ತು ಅದರ ಸಂಪನ್ಮೂಲಗಳ ಮೇಲೆ ಉಂಟಾಗುತ್ತಿರುವ ಅಧಿಕ ಬೇಡಿಕೆಯನ್ನು ವಿಮರ್ಶಿಸಿದರೆ... ಸದ್ಯದ ವರಮಾನಕ್ಕೆ ಕೊನೆಯ ಪಕ್ಷ ಒಂದು ದಶಲಕ್ಷ ಸ್ಟರ್ಲಿಂಗ್‌ಗಳನ್ನು ಶಾಶ್ವತವಾಗಿ ಸೇರಿಸುವುದು ಅತ್ಯಂತ ಅಗತ್ಯ".[೧]

ಒಬ್ಬರ ನಂತರ ಬಂದ ಮತ್ತೊಬ್ಬ ಆರ್ಥಿಕ ಸಚಿವ ಯಶಸ್ಸನ್ನು ಸಾಧಿಸದಿರುವುದಕ್ಕೆ ಇದ್ದ ಅತ್ಯಂತ ಮುಖ್ಯ ಕಾರಣವೆಂದರೆ, ರಾಷ್ಟ್ರದ ಆಡಳಿತಾತ್ಮಕ ವೆಚ್ಚ ಮತ್ತು ಸಾರ್ವಜನಿಕ ಅಗತ್ಯತೆಗಳು ಕಲ್ಪನಾತೀತವಾಗಿ ಬೆಳೆಯುತ್ತಿದ್ದುದು.

ದಂಗೆಯ ನಂತರ "ಕೇವಲ ಸಿಪಾಯಿಗಳಲ್ಲದೆ, ಇತರ ವರ್ಗಗಳಿಗೆ ಸೇರಿದ ಸಾವಿರಾರು ಇಂಗ್ಲಿಷರು ಭಾರತಕ್ಕೆ ಮಹಾಪೂರದ ರೂಪದಲ್ಲಿ ಬಂದರು. ಭಾರತದಲ್ಲಿ ಇಲ್ಲದೆ ಇರುವ, ಆದರೆ ಆವಶ್ಯಕವೆನಿಸಿದ ಸಾವಿರಾರು ಸರಕುಗಳಿಗೆ ಬೇಡಿಕೆ ಪ್ರಾರಂಭವಾಯಿತು. ಹಸಿವೆಯಿಂದ ಜನರನ್ನು ಕಾಪಾಡಲು ರಾಷ್ಟ್ರದಲ್ಲಿ ರೈಲ್ವೆ, ಟೆಲಿಗ್ರಾಫ್, ರಸ್ತೆ ಮತ್ತು ಸೇತುವೆಗಳ ಸಂಪರ್ಕ ಏರ್ಪಾಡಾಗಬೇಕಾಯಿತು. ಯುರೋಪ್ ಸೈನಿಕರಿಗೆ ಬೇಕಾದ ಬ್ಯಾರಕ್‌ಗಳನ್ನು ಕಟ್ಟಬೇಕಾಯಿತು. ಹಾಗೆಯೇ ಸೈನಿಕರಿಗೆ ಅನುಕೂಲವಾಗುವ ಎಲ್ಲ ರೀತಿಯ ಅನುಕೂಲಗಳನ್ನೂ ನಿರ್ಮಿಸಬೇಕಾಯಿತು. ಚಕ್ರಾಧಿಪತ್ಯಕ್ಕೆ ಸಂಬಂಧಿಸಿದ ವಿಷಯಗಳಿಗಷ್ಟೆ ಇದು ಸೀಮಿತವಾಗಿರಲಿಲ್ಲ. ಕೇಂದ್ರ ಸರ್ಕಾರಕ್ಕೆ ಸುಧಾರಣೆಗಾಗಿ ಸಲ್ಲುತ್ತಿದ್ದ ಬೇಡಿಕೆಗಳಿಗೆ ಸಮನಾದ ಬೇಡಿಕೆಗಳೇ ಪ್ರತಿ ಪಟ್ಟಣ ಹಾಗೂ ಪ್ರಾದೇಶಿಕ ಸರ್ಕಾರಗಳು ನೋಡಿಕೊಳ್ಳುತ್ತಿದ್ದ ಪ್ರತಿ ಜಿಲ್ಲೆಯಲ್ಲಿ ಸಹ ಹುಟ್ಟಿಕೊಂಡವು. ಸುಧಾರಿತ ಆಡಳಿತದ ಬೇಡಿಕೆಗಳು ಸಹ ಪರಿಣಾಮಕಾರಿಯಾಗತೊಡಗಿದವು. ಭಾರತಾದ್ಯಂತ ಪೊಲೀಸರ ಪರಿಸ್ಥಿತಿ ಬಹಳ ಶೋಚನೀಯವಾಗಿತ್ತು... ಭಾರತೀಯ ನ್ಯಾಯಾಧೀಶರಿಗೆ ಮತ್ತು ನ್ಯಾಯಾಲಯದಲ್ಲಿ ಅತಿ ಮುಖ್ಯ ಸ್ಥಾನಗಳಲ್ಲಿ ನೇಮಕವಾಗಿದ್ದ ಅಧಿಕಾರಿಗಳಿಗೆ ದೊರೆಯುತ್ತಿದ್ದ ಸಂಬಳ ತೀರ ಕಡಿಮೆಯಾಗಿತ್ತು. ಈ ಸಂಬಳ ಲಾರ್ಡ್ ಲಾರೆನ್ಸ್ ವೈಸ್‌ರಾಯ್ ಆಗಿದ್ದಾಗ ಗೊತ್ತುಮಾಡಿದ್ದ ಸಂಬಳವಾಗಿತ್ತು. ಬಂಗಾಳ ಪ್ರಾಂತ್ಯದಲ್ಲಿ ಅತ್ಯಂತ ಹೆಚ್ಚು ಸಂಬಳ ಪಡೆಯುತ್ತಿದ್ದ ಇಂತಹ ಸುಮಾರು ೪೦೦೦ ಅಧಿಕಾರಿಗಳಲ್ಲಿ ಮುಖ್ಯ ಅಧಿಕಾರಿಗಳಿಗೆ ದೊರೆಯುತ್ತಿದ್ದ ಸಂಬಳ ವರ್ಷಕ್ಕೆ ೧೮೦ ಸ್ಟರ್ಲಿಂಗ್ ಪೌಂಡ್. ಇಂತಹ ಸಂಬಳ ಪಡೆಯುತ್ತಿದ್ದ ಅಧಿಕಾರಿಗಳು ಬಹಳ ಕಡಿಮೆ. ಹೆಚ್ಚಿನವರಿಗೆ ವರ್ಷಕ್ಕೆ ಸರಾಸರಿ ೧೨ ರಿಂದ ೧೮ ಸ್ಟರ್ಲಿಂಗ್ ಪೌಂಡ್‌ವರೆಗೆ ಸಂಬಳ ದೊರೆಯುತ್ತಿದ್ದು ಇದು ಭಾರತದಲ್ಲಿ ಅನೇಕ ಕಡೆ ಇಟ್ಟಿಗೆ ಕೆಲಸದವರಿಗೆ ಮತ್ತು ಮರಗೆಲಸದವರಿಗೆ ದೊರೆಯುತ್ತಿದ್ದ ಸಂಬಳಕ್ಕಿಂತ ಕಡಿಮೆಯಾಗಿತ್ತು. ಇವೆಲ್ಲ ವಿಷಯಗಳಲ್ಲಿ ಸುಧಾರಣೆಯಾಗಬೇಕು." [೨]

ಮೇಲಿನ ಕಾರಣಗಳಿಂದ ಸರ್ಕಾರದ ವೆಚ್ಚದಲ್ಲಿ ಹೆಚ್ಚಳವಾಗುತ್ತಿದ್ದುದರಿಂದ ಮಿತವ್ಯಯವನ್ನು ಸಾಧಿಸುವುದು ಬಹಳ ಕಷ್ಟವಾಗಿತ್ತು. ಮೊದಲಿಗೆ ಸುಲಭವೆಂದು ತೋರಿದರೂ, ಒಂದಾದ ಮೇಲೆ ಒಂದರಂತೆ ಕೈಗೆತ್ತಿಕೊಂಡ ಮಿತವ್ಯಯದ ಪ್ರಯತ್ನಗಳನ್ನು ಸಾಧಿಸುವುದು ಅವುಗಳ ಹಿಂದಿನ ಪ್ರಯತ್ನಗಳಿಗಿಂತ ಕಠಿಣವಾಗುತ್ತಾ ಹೋದವು. ಇದುವರೆಗೆ ಅಲಕ್ಷಿಸಲಾಗಿದ್ದ, ಆದರೆ ಈಗ ಅಗತ್ಯವಾದ ಸುಧಾರಣೆಗಳಿಗಾಗಿ ಮತ್ತು ಕುಗ್ಗುತ್ತಿದ್ದ ಆರ್ಥಿಕತೆ–ಇವುಗಳಿಗಾಗಿ ಅತ್ಯಂತ ಹೆಚ್ಚಿನ ತೆರಿಗೆಗಳನ್ನು ವಿಧಿಸುವುದು ಅನಿವಾರ್ಯವಾಯಿತು.

---

೧. ಪ್ರಾದೇಶಿಕ ಸರ್ಕಾರಗಳಿಗೆ ಸುತ್ತೋಲೆ ದಿನಾಂಕ ೨೧ ಫೆಬ್ರವರಿ ೧೮೬೬.

೨. ಹೌಸ್ ಆಫ್ ಕಾಮನ್ಸ್, ೧೮೭೪ ರ ಸಂಖ್ಯೆ ೩೨೬ ರಿಂದ ಸರ ಜಾನ್ ಸ್ಟ್ರಾಚ್‌ರವರ 'ಅಬ್ಸರ್ವೇಷನ್ಸ್ ಆನ್ ಸಂ ಕೊಶ್ಚನ್ಸ್ ಆಫ್ ಇಂಡಿಯನ್ ಫೈನಾನ್ಸ್' ನಿಂದ ಉದ್ಧೃತ. ಕೇವಲ ವಿಷಯಕ್ಕೆ ಸಂಬಂಧಿಸಿದಂತೆ ಸ್ವಲ್ಪ ಮಾರ್ಪಾಟುಮಾಡಲಾಗಿದೆ ಅಷ್ಟೆ.

ಬ್ರಿಟನ್ನಿನಿಂದ ಒಬ್ಬರಾದ ಮೇಲೆ ಒಬ್ಬರಾಗಿ ಬಂದ ಮೂವರು ಹಣಕಾಸು ತಜ್ಞರೂ, ತೆರಿಗೆಯ ಹೆಚ್ಚಳಕ್ಕೆ ಪ್ರತಿರೋಧಿಗಳಾಗಿದ್ದರು ಮತ್ತು ಈ ರೀತಿಯ ತೆರಿಗೆ ಹೆಚ್ಚಳಕ್ಕೆ ಪ್ರತಿಯಾಗಿ ಸೌಲಭ್ಯಗಳನ್ನು ಪಡೆಯುವುದಕ್ಕೆ ಇಷ್ಟವಿಲ್ಲದ ಜನರ ಮೇಲೆ ಹೆಚ್ಚಿನ ತೆರಿಗೆ ಹೇರುವುದರಲ್ಲಿ ಇದ್ದ ಅಪಾಯಗಳನ್ನು ಮನಗಂಡವರಾಗಿದ್ದರು. ಹೀಗಾಗಿ, ಸುಧಾರಿತ ಆಡಳಿತ ಮತ್ತು ಸುಧಾರಿತ ಅನುಕೂಲಗಳು ಹಾಗೂ ಉತ್ತಮ ನೈತಿಕ ಪರಿಸ್ಥಿತಿಯನ್ನು ದೊರಕಿಸಿಕೊಡುವ ಹಣಕಾಸು ವಿಚಾರದಲ್ಲಿ ಮಿತಿಗಳನ್ನು ಹೇರದಿದ್ದರೆ, ಎಷ್ಟೇ ಹೆಚ್ಚಿನ ತೆರಿಗೆಗಳನ್ನು ಹೇರಿದರೂ ಹಣಕಾಸು ದೃಢತೆಯನ್ನು ಸಾಧಿಸುವುದು ಶಕ್ಯವಿಲ್ಲವೆಂಬುದನ್ನು ಅವರು ಮನಗಂಡಿದ್ದರು. ಈ ರೀತಿಯ ಸುಧಾರಣೆಗಳನ್ನು ತಂದರೂ ಅದರ ಲಾಭ ಭಾರತೀಯರಿಗಿಂತಲೂ ಹೆಚ್ಚಾಗಿ ತಕ್ಷಣದಲ್ಲಿ ಯುರೋಪಿಯನ್ನರಿಗೆ ಆಗುತ್ತದೆಂಬುದೂ ಅವರಿಗೆ ತಿಳಿದಿತ್ತು. ಜೊತೆಗೆ ಇಂತಹ ತೆರಿಗೆಯಲ್ಲಿನ ಹೆಚ್ಚಳ ಚಕ್ರಾಧಿಪತ್ಯಕ್ಕೆ ಅಪಾಯವನ್ನು ತಂದೊಡ್ಡಬಹುದೆಂಬ ಅರಿವೂ ಅವರಿಗಿತ್ತು. ಏಕತೆಯೇ ಇಲ್ಲದಿರುವ ಮತ್ತು ಜಟಿಲವಾದ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಹಣಕಾಸು ದೃಢತೆಯನ್ನು ಸಾಧಿಸುವುದು ಅಸಾಧ್ಯವೇ ಆಗಿತ್ತು. ಮಿತವ್ಯಯ ಸಾಧನೆಗೆ ಕೇಂದ್ರ ಸರ್ಕಾರ ಸ್ಥಳೀಯ ಸರ್ಕಾರಗಳನ್ನು ಅವಲಂಬಿಸುವುದು ಅನಿವಾರ್ಯವಾಗಿತ್ತು. ಸ್ಥಳೀಯ ಸರ್ಕಾರಗಳಾದರೋ ಯಾವುದೇ ಹಣಕಾಸು ಸುಧಾರಣೆಗೂ ನಿರ್ಲಕ್ಷ್ಯ ಮನೋಭಾವವನ್ನು ವ್ಯಕ್ತಪಡಿಸುತ್ತಿದ್ದವು. ಇಷ್ಟೇ ಅಲ್ಲದೆ ಅನೇಕ ಬಾರಿ ಇಂತಹ ಸುಧಾರಣೆಗೆ ಪ್ರತಿಭಟನೆಯನ್ನು ಸಹ ವ್ಯಕ್ತಪಡಿಸುತ್ತಿದ್ದವು. ಜೊತೆಗೆ ಮಿತವ್ಯಯ ಸಾಧನೆಗಾಗಿ ಕೇಂದ್ರ ಸರ್ಕಾರ ನೀಡಿದ ನಿಯಮಾವಳಿಗಳನ್ನು ಜಾರಿಗೆ ತರುತ್ತಲೇ ಇರಲಿಲ್ಲ. ಸ್ಥಳೀಯ ಸರ್ಕಾರಗಳು ಮಿತವ್ಯಯವನ್ನು ಸಾಧಿಸುವಂತೆ ಮಾಡಲು ಇದ್ದ ಏಕೈಕ ಮಾರ್ಗವೆಂದರೆ, ತಮ್ಮ ವ್ಯವಹಾರಗಳನ್ನು ನಿರ್ವಹಿಸುವುದಕ್ಕೆ ಸ್ಥಳೀಯ ಸರ್ಕಾರಗಳಿಗೆ ಜವಾಬ್ದಾರಿಯನ್ನು ಕೊಡುವುದಾಗಿತ್ತು. ಹಣಕಾಸು ತಜ್ಞರು ತಮ್ಮ ಆಡಳಿತಾನುಭವದಿಂದ ತಿಳಿದುಕೊಂಡಿದ್ದ ವಿಷಯವೆಂದರೆ, ಸರ್ಕಾರದ ಆದಾಯ ಮತ್ತು ಖರ್ಚುಗಳು ವಾಸ್ತವವಾಗಿ ಚಕ್ರಾಧಿಪತ್ಯದ ವಿಷಯವಾಗಿದ್ದೂ, ಆದಾಯ ಮತ್ತು ಖರ್ಚಿನ ಅನೇಕ ಬಾಬ್ತುಗಳು ವಾಸ್ತವವಾಗಿ ಸ್ಥಳೀಯ ಸ್ವರೂಪದವಾಗಿದ್ದವು. ನಿಜವಾಗಿ ಹೇಳುವುದಾದರೆ ಇವನ್ನು ಸ್ಥಳೀಯ ಸರ್ಕಾರಗಳಿಗೆ ವಹಿಸುವುದಕ್ಕೆ ಯಾವ ಬಾಧಕವೂ ಇರಲಿಲ್ಲ. ಸ್ಥಳೀಯ ಸರ್ಕಾರಗಳು ತಮ್ಮ ಅಗತ್ಯತೆಗಳಿಗೆ, ತಮ್ಮ ಸಂಪನ್ಮೂಲಗಳನ್ನು ಅವಲಂಬಿಸುವಂತೆ ಮಾಡುವವರಿಗೆ ಮಿತವ್ಯಯವನ್ನು ಏಕರೂಪವಾಗಿ ಸಾಧಿಸುವುದು ಕಷ್ಟವಿಲ್ಲವೆಂಬುದನ್ನು ಹಣಕಾಸು ತಜ್ಞರು ಅರಿತಿದ್ದರು. ಇದರಿಂದ ಸ್ಥಳೀಯ ಸರ್ಕಾರಗಳು ತಮ್ಮ ಖರ್ಚಿಗೆ ಎಷ್ಟು ಹಣ ಲಭ್ಯವಿದೆ ಎಂಬುದನ್ನು ತಿಳಿಯುವುದೂ ಸಾಧ್ಯವಿತ್ತು. ಹೀಗಾದಾಗ ಚಕ್ರಾಧಿಪತ್ಯದ ಬೊಕ್ಕಸದಿಂದ ಒಂದು ಭಾಗವನ್ನು ಪ್ರತ್ಯೇಕವಾಗಿ ಸ್ಥಳೀಯ ಸರ್ಕಾರದ ಮಟ್ಟದಲ್ಲಿ ಮೀಸಲಾಗಿರಿಸುವುದು ತಪ್ಪಿ ಸ್ಥಳೀಯ ಸರ್ಕಾರಗಳೇ ತಮ್ಮ ಜವಾಬ್ದಾರಿಯನ್ನರಿತು ತಮ್ಮ ಬೇಡಿಕೆಗಳನ್ನು ಪೂರೈಸುವ, ತನ್ಮೂಲಕ ಹಣಕಾಸಿನ ವಿಷಯದಲ್ಲಿ ಸಮತೋಲನವನ್ನು ಸಾಧಿಸುವುದು ಸಾಧ್ಯವಿತ್ತು.

ಹೀಗೆ ಹಣಕಾಸು ತಜ್ಞರು, ಸಂಯುಕ್ತ ರಾಜ್ಯವಾದಿಗಳು ಯೋಜನೆ ಮಾಡಿ ತೀರ್ಮಾನಕ್ಕೆ ಬಂದರು. ಆದರೆ ಸಾಮ್ರಾಜ್ಯವಾದಿಗಳು ತಮ್ಮ ಯೋಜನೆಯನ್ನು ಒಪ್ಪುವಂತೆ ಮಾಡಲು, ಅದರಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿದರು. ಹೀಗೆ ಮಾಡುವಾಗ ಮೂಲ ಯೋಜನೆಯ ಜೊತೆ ಅವರು ಯಾವ ರಾಜಿಯನ್ನೂ ಮಾಡಿಕೊಳ್ಳಲಿಲ್ಲ. ಸಂಯುಕ್ತ ಹಣಕಾಸು ಯೋಜನೆ ಭಾರತ ಸರ್ಕಾರದ ಸಂವಿಧಾನದಲ್ಲಿ ಕೆಲವು ಮಾರ್ಪಾಡುಗಳನ್ನು ಬಯಸಿತು. ಕೇಂದ್ರ ಸರ್ಕಾರ ಹಾಗೂ ಪ್ರಾಂತೀಯ ಸರ್ಕಾರಗಳ ಆದಾಯ ಮತ್ತು ಖರ್ಚುಗಳ ನಡುವೆ ಒಂದು ಕಾನೂನುಬದ್ಧ ಪ್ರತ್ಯೇಕತೆ ಅಗತ್ಯವೆನಿಸಿತು. ಹಣಕಾಸು ಜವಾಬ್ದಾರಿಯನ್ನು

ಗೊತ್ತುಮಾಡುವ ಹಾಗೂ ಮಿತವ್ಯಯವನ್ನು ಸಾಧಿಸುವ ದೃಷ್ಟಿಯಿಂದ ಸಾಮ್ರಾಜ್ಯಶಾಹಿ ಯೋಜನೆ ಅತ್ಯಂತ ಬಲಿಷ್ಠಸಾಧನ ಎಂಬುದನ್ನು ಸಾಮ್ರಾಜ್ಯವಾದಿಗಳನ್ನೊಳಗೊಂಡಂತೆ ಎಲ್ಲರೂ ಗುರುತಿಸಿದ್ದರು. ಆದರೆ ಈ ಯೋಜನೆಗೆ ಉಂಟಾದ ಆಕ್ಷೇಪವೆಂದರೆ, ಇದರಿಂದ ಕೇಂದ್ರ ಸರ್ಕಾರ, ಭಾರತದ ಸಂಪನ್ಮೂಲದ ಮೇಲೆ ಕಾನೂನುಬದ್ಧವಾಗಿ ಮತ್ತು ಶಾಶ್ವತವಾಗಿ ತನ್ನ ಹಿಡಿತವನ್ನು ಕಳೆದುಕೊಳ್ಳುತ್ತದೆ ಎನ್ನುವ ಅಂಶ. ತಮ್ಮ ರಾಜಕೀಯ ವಾಸ್ತವಿಕತೆಯ ಅನುಭವವನ್ನು ಉಪಯೋಗಿಸಿಕೊಂಡು ಹಣಕಾಸು ತಜ್ಞರು ಸಂಯುಕ್ತ ಹಣಕಾಸು ಯೋಜನೆಯಲ್ಲಿದ್ದ ಈ ನ್ಯೂನತೆಯನ್ನು ಹೋಗಲಾಡಿಸಲು ಬೇಗ ಒಂದು ದಾರಿಯನ್ನು ಕಂಡುಹಿಡಿದರು. ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಕೆಲಸ ಮಾಡಿದ ತಮ್ಮ ಅನುಭವವನ್ನು ಬಳಿಸಿಕೊಂಡು ಅವರು, ಯೋಜನೆಯನ್ನು ಕಾರ್ಯಗತಗೊಳಿಸಲು ಸಂವಿಧಾನದ ಮಾರ್ಪಾಟು ಅಗತ್ಯವಿಲ್ಲವೆಂದು ವಾದಿಸಿದರು. ಒಮ್ಮೆ ಒಂದು ಕಾರ್ಯವನ್ನು ರೂಢಿಗೆ ತಂದರೆ ಅದಕ್ಕೆ ಕಾನೂನಿನ ಬೆಂಬಲ ಅಗತ್ಯವಿಲ್ಲ, ರೂಢಿ ಕಾನೂನಿನಷ್ಟೇ ಬಲಯುತವಾಗಬಲ್ಲದು ಎಂಬುದನ್ನು ಸೂಚಿಸುತ್ತಾ ಅವರು ಯೋಜನೆಯನ್ನು ಒಮ್ಮೆ ಜಾರಿಗೆ ತಂದರೆ ಅದು ಯಾವ ತೊಂದರೆಯೂ ಇಲ್ಲದೆ ಮುಂದುವರಿದುಕೊಂಡು ಹೋಗುತ್ತದೆ ಎಂದು ಸೂಚಿಸಿದರು. ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಆದಾಯ ಮತ್ತು ವೆಚ್ಚಗಳನ್ನು ಪ್ರತ್ಯೇಕಿಸುವುದು, ಎರಡೂ ಸರ್ಕಾರಗಳಿಗೆ ಅನುಕೂಲವಾಗಿರುವವರೆಗೂ ನಡೆದುಕೊಂಡು ಹೋಗುವುದರಲ್ಲಿ ಯಾವ ಬಾಧಕವೂ ಇಲ್ಲ ಎಂದು ಅವರು ವಾದಿಸಿದರು. ಇದು ಕೇಂದ್ರ ಸರ್ಕಾರಕ್ಕೆ ಭಾರತದ ಸಂಪನ್ಮೂಲದ ಮೇಲೆ ಕಾನೂನುಯುತವಾಗಿ ಹಿಡಿತ ತಪ್ಪದೆ, ಸಂಯುಕ್ತ ಹಣಕಾಸು ಯೋಜನೆಯ ಎಲ್ಲ ಅನುಕೂಲಗಳೂ ಉಂಟಾಗುವಂತೆ ನೋಡಿಕೊಳ್ಳುತ್ತಿತ್ತು. ಈ ಕ್ರಮ ಸ್ವಾಭಾವಿಕವಾಗಿ ಸಂವಿಧಾನಾತ್ಮಕ ಚಕ್ರಾಧಿಪತ್ಯ ಮತ್ತು ಸಂವಿಧಾನಾತ್ಮಕ ಸಂಯುಕ್ತರಾಷ್ಟ್ರ ಯೋಜನೆಯ ನಡುವಣ ರಾಜಿಯಾಗಿತ್ತು. ಇದರ ಅರ್ಥ ಚಕ್ರಾಧಿಪತ್ಯದ ಮೇಲ್ವಿಚಾರಣೆ ಇಲ್ಲದೇ ಚಕ್ರಾಧಿಪತ್ಯದ ಹಣಕಾಸಿನ ನಿರ್ವಹಣೆಯಾಗಿತ್ತು. ಇಂಥ ರಾಜೀಸೂತ್ರದಿಂದ ಆದಾಯ ಮತ್ತು ಖರ್ಚು ಚಕ್ರಾಧಿಪತ್ಯದ್ದಾಗುತ್ತಿತ್ತು. ಆದರೆ ಇದರ ನಿರ್ವಹಣೆ ಮಾತ್ರ ಪ್ರಾಂತೀಯ ಸರ್ಕಾರಗಳದ್ದಾಗಿತ್ತು. ಇದರ ಪ್ರಕಾರ ಪ್ರತಿಯೊಂದು ಪ್ರಾಂತೀಯ ಸರ್ಕಾರವೂ ತನ್ನ ಪ್ರಾಂತ್ಯದ ಆದಾಯದಲ್ಲಿ, ಒಂದು ಭಾಗವನ್ನು ತನ್ನ ಪ್ರಾಂತದಲ್ಲೇ ಖರ್ಚುಮಾಡುವ ಹಕ್ಕನ್ನು ಪಡೆದುಕೊಂಡಿತು. ಇದು ಹೊಸ ಯೋಜನೆಯ ಸಾರಾಂಶವಾಗಿತ್ತು. ಭಾರತದ ಹಣಕಾಸು ವಿಷಯಗಳಿಗೆ ಸಂಬಂಧಿಸಿದಂತೆ, ಈ ಯೋಜನೆ ಚಕ್ರಾಧಿಪತ್ಯ ಸರ್ಕಾರಕ್ಕೆ ಅತ್ಯುನ್ನತ ಹಿಡಿತ ನಿಯಂತ್ರಣ ಮತ್ತು ಅಧಿಕಾರವನ್ನು ದೊರಕಿಸಿಕೊಟ್ಟಿತು. ಈ ಹಿಂದಿನ ಸಂಯುಕ್ತ ಹಣಕಾಸು ವಿಧಾನದಲ್ಲಿ ಈ ರೀತಿಯ ಹಿಡಿತವಿರಲಿಲ್ಲ.

ಹಣಕಾಸು ಪುನರ್ ನಿರೂಪಣೆಯ ಕಾರ್ಯಭಾರವನ್ನು ಹೊರಲು ನಿಯೋಜಿತರಾಗಿದ್ದ ಮೂರು ಜನ ಹಣಕಾಸು ಮಂತ್ರಿಗಳು ಮೇಲೆ ವಿವರಿಸಿದ ರೀತಿಯ ಯೋಜನೆಯ ಮುಖ್ಯ ಸ್ವರೂಪಗಳ ವಿಷಯದಲ್ಲಿ ಒಮ್ಮತವನ್ನು ಹೊಂದಿದ್ದರು. ಆದರೆ ಯಾವ ಮಟ್ಟದಲ್ಲಿ ಯೋಜನೆಯನ್ನು ಕಾರ್ಯಗತಗೊಳಿಸಬೇಕು ಎನ್ನುವ ವಿಷಯದಲ್ಲಿ ಅವರು ಭಿನ್ನಾಭಿಪ್ರಾಯವನ್ನು ಹೊಂದಿದ್ದರು. ವಿಲ್ಸನ್ ತನ್ನ ಯೋಜನೆಯ ರೂಪುರೇಷೆಗಳನ್ನು ವಿಸ್ತರಿಸಿದ್ದನೆ ಎನ್ನುವುದು ಸಂಶಯಾಸ್ಪದ. ಆದರೆ ರೂಪುರೇಷೆಗಳ ಬಗ್ಗೆ ಅವನಿಗೆ ತುಂಬಾ ಸ್ಪಷ್ಟ ವಿಚಾರಗಳಿದ್ದವು. ಅವನು ಜಾರಿಗೆ ತಂದ ೧೮೬೦ರ XXXII ನೇ ಆದಾಯ ತೆರಿಗೆ ಮಸೂದೆಯು "ಎರಡು ಭಾಗಗಳನ್ನು ಹೊಂದಿತ್ತು. ಮೊದಲನೆಯದು, ಪರಿವರ್ತನೀಯ ತೆರಿಗೆ – ಇದು ವರಮಾನದ ಶೇ. ೩ ರಷ್ಟು ಇರಬೇಕೆಂದು ಮೊದಲು ಗೊತ್ತುಮಾಡಲಾಗಿತ್ತು. ಈ ಶೇಕಡಾಂಶ ಸಾಮ್ರಾಜ್ಯದ ಅಗತ್ಯಗಳಿಗನುಗುಣವಾಗಿ ಬದಲಾಗಬಹುದಿತ್ತು. ಒಂದು ಪಕ್ಷ ಸಾಮ್ರಾಜ್ಯಕ್ಕೆ ಅಗತ್ಯವಿಲ್ಲದಿದ್ದಲ್ಲಿ ಈ ಭಾಗದ

ತೆರಿಗೆಯನ್ನು ಸಂಪೂರ್ಣವಾಗಿ ತೆಗೆದುಹಾಕಬಹುದಿತ್ತು. ಎರಡನೆಯದಾಗಿ, ಶೇ ೧ರ ಕಾಯಂ ತೆರಿಗೆ. ಈ ತೆರಿಗೆಯ ಆದಾಯವನ್ನು ಸ್ಥಳೀಯ ಆಡಳಿತಕ್ಕೆ ಕೊಡಬಹುದಾಗಿತ್ತು. ಇದನ್ನು ಸ್ಥಳೀಯ ಆಡಳಿತಗಾರರು, ರಸ್ತೆಗಳು, ಕಾಲುವೆಗಳು ಮುಂತಾದ ಸಾರ್ವಜನಿಕ ಕಾಮಗಾರಿಗಳಿಗಾಗಿ ಬಳಸಬಹುದಾಗಿತ್ತು. ಇಂತಹ ಬಳಕೆ ತೆರಿಗೆ ಆದಾಯ ಯಾವ ಪ್ರದೇಶದಿಂದ ಬರುತ್ತಿತ್ತೋ ಅಲ್ಲೇ ನಡೆಯಬೇಕಾಗಿತ್ತು. ಈ ತೆರಿಗೆಗೆ ಯಾವ ವಿನಾಯಿತಿಯೂ ಇರಲಿಲ್ಲ. ಇಂತಹ ತೆರಿಗೆ ಉದ್ದೇಶ ಇವು ಯಾವ ಬಾಬ್ತುಗಳಿಗೆ ಬೇಕಾಗಿದೆಯೋ ಅವುಗಳ ಖರ್ಚನ್ನು ನಿರ್ವಹಿಸುವುದು ಮತ್ತು ತೆರಿಗೆಯ ಯಂತ್ರವನ್ನು ಸ್ಥಿರವಾಗಿಟ್ಟುಕೊಳ್ಳುವುದಾಗಿತ್ತು. ಮೊದಲನೆಯ ಭಾಗದ ತೆರಿಗೆಯಾದರೋ ತಾತ್ಕಾಲಿಕವಾಗಿ ಕಡಿಮೆ ಅಥವಾ ರದ್ದು ಆದರೂ ಸಹ ಅದನ್ನು ಯಾವ ತಕರಾರು, ಖರ್ಚು ಮತ್ತು ತೊಂದರೆಗಳಿಲ್ಲದೆ ಪುನರ್‌ವಿಧಿಸುವ ಸ್ವರೂಪವನ್ನು ಹೊಂದಿತ್ತು."[೧]

ವಿಲ್ಸನ್ ನಂತರ ಬಂದ ಲಾಯಿಂಗ್, ಈ ಭಾವನೆಗಳಿಗೆ ಒಂದು ನಿಶ್ಚಿತ ಸ್ವರೂಪವನ್ನು ಕೊಟ್ಟ. ಸ್ಥಳೀಯ ಸರ್ಕಾರಗಳು ಸಾರ್ವಜನಿಕ ಕಾಮಗಾರಿಗಳಿಗಾಗಿ ಹೆಚ್ಚು ಹೆಚ್ಚು ಹಣವನ್ನು ಬೇಡುತ್ತಿದ್ದ ಹಿನ್ನೆಲೆಯಲ್ಲಿ ಲಾಯಿಂಗ್‌ನ ೧೮೬೧–೬೨ ರ ಮುಂಗಡ ಪತ್ರವು ಕೊರತೆಯ ಮುಂಗಡ ಪತ್ರವಾಗಿತ್ತು.

"ಸಿಪಾಯಿ ದಂಗೆಯ ನಂತರ, ರಸ್ತೆಗಳು, ಕಾಲುವೆಗಳು ಮತ್ತು ಇತರ ಉಪಯುಕ್ತವಾದ ಕಾಮಗಾರಿಗಳಿಗೆ ಅತ್ಯಂತ ತೀವ್ರವಾದ ಹಣದ ಕೊರತೆಯ ಪರಿಸ್ಥಿತಿ ಉಂಟಾಗಿತ್ತು."

ಈ ಹಿನ್ನೆಲೆಯಲ್ಲಿ ಲಾಯಿಂಗ್ ಕೊರತೆ ಬಜೆಟನ್ನು ಮಂಡಿಸುವುದು ಅಗತ್ಯವೆಂದು ಭಾವಿಸಿದ್ದ.

ಉಪಯುಕ್ತವಾದ ಸಾರ್ವಜನಿಕ ಕಾಮಗಾರಿಗಳು ನಡೆಯುವುದು ಅತ್ಯಂತ ಅಗತ್ಯವೆಂದು ಲಾಯಿಂಗ್ ಭಾವಿಸಿದ್ದ. ಈ ಕಳಕಳಿಯಿಂದ ಅವನು ಸ್ಥಳೀಯ ಸರ್ಕಾರಗಳಿಗೆ ಚಕ್ರಾಧಿಪತ್ಯ ಸರ್ಕಾರ ಕೊಡುತ್ತಿದ್ದ ಅಲ್ಪ ಹಣಕ್ಕೆ ಪೂರಕವಾಗಿ ಹೆಚ್ಚಿನ ಸಂಪನ್ಮೂಲ ದೊರೆಯುವ ಒಂದು ವಿಧಾನವನ್ನು ರೂಪಿಸಿದ. ಅವನ ಮಾತಿನಲ್ಲಿಯೇ ಹೇಳುವುದಾದರೆ :

"ನಾವು ಕೊಡಬಹುದಾದದ್ದನ್ನು ತೆಗೆದುಕೊಳ್ಳಿ, ಉಳಿದುದಕ್ಕೆ ಕೆಲವು ತೆರಿಗೆಗಳನ್ನು ಹಾಕಲು ಅಧಿಕಾರ ನಿಮಗೆ ಇದೆ. ಈ ಅಧಿಕಾರದಿಂದ ನಿಮಗೆ ಬೇಕಾದ ಆದಾಯವನ್ನು ನೀವೇ ಪಡೆದುಕೊಳ್ಳಿ...... ಏಕೆಂದರೆ ಕೆಲವು ವಿಷಯವನ್ನು ಚಕ್ರಾಧಿಪತ್ಯದ ತೆರಿಗೆಯ ಕ್ರಮಗಳಿಗಿಂತ ಸ್ಥಳೀಯ ತೆರಿಗೆಯ ಕ್ರಮಗಳೇ ಉತ್ತಮವಾಗಿ ನಿರ್ವಹಿಸಬಲ್ಲವು."

ಸ್ಥಳೀಯ ಮುಂಗಡಪತ್ರಗಳನ್ನು ನಿರೂಪಿಸುವುದರಲ್ಲಿ ಅವನ ಉದ್ದೇಶ "ಕೇವಲ ತಾತ್ಕಾಲಿಕ ಸಂಕಷ್ಟಗಳನ್ನು ಹೋಗಲಾಡಿಸಿಕೊಳ್ಳುವುದಷ್ಟೇ ಅಲ್ಲ, ಬದಲಿಗೆ ಸ್ಥಿರವಾದ ಸುಧಾರಣೆಯನ್ನು ಆರಂಭಿಸುವುದಾಗಿತ್ತು. ಇದರಿಂದ ಸಾಮ್ರಾಜ್ಯದ ಖಜಾನೆಯ ಮೇಲೆ ಭಾರ ಹಗುರವಾಗುತ್ತಿತ್ತು ಮತ್ತು ಸ್ಥಳೀಯ ಸರ್ಕಾರಕ್ಕೆ ಅನುಕೂಲಗಳುಂಟಾಗುವುದು ಸಾಧ್ಯವಿತ್ತು. ಸ್ಥಳೀಯ ಸರ್ಕಾರಗಳು ಸಾಮ್ರಾಜ್ಯದ ಆದಾಯದಿಂದ ದೊರಕುತ್ತಿದ್ದ ಹಣಕ್ಕೆ ಪೂರಕವಾಗುವ ರೀತಿಯಲ್ಲಿ ತಮಗೆ ಅಗತ್ಯವಾದ ಸಾರ್ವಜನಿಕ ಕಾಮಗಾರಿಕೆಯನ್ನು ನಿರ್ವಹಿಸುವುದಕ್ಕೆ ತೆರಿಗೆಹಾಕುವ ಯೋಜನೆಗೆ ಸಾರ್ವತ್ರಿಕವಾದ ಒಪ್ಪಿಗೆ ಇತ್ತು. ಆದರೆ ಈ ಯೋಜನೆ ಕಾರ್ಯಗತ ಮಾಡುವುದಕ್ಕೆ ಸ್ಥಳೀಯ ಸರ್ಕಾರಗಳ ಬಳಿ ಅಗತ್ಯವಾದ ತೆರಿಗೆ ಆಡಳಿತ ಯಂತ್ರ ಇರಲಿಲ್ಲ. ಅಂದರೆ ತಮಗೆ ದೊರೆಯುವ ಸ್ಥಳೀಯ ತೆರಿಗೆಗಳ ಮೇಲಿನ ಅಧಿಕಾರವನ್ನು ಚಲಾಯಿಸಲು, ಮತ್ತು ತಮಗೆ ಸಿಗುವ ಕಾನೂನು

---

೧. ನವೆಂಬರ್ ೨೫, ೧೮೬೮ರಲ್ಲಿ ಸರ್ ಬಿ. ಫ್ರೆರೆರವರ ಕಾರ್ಯಕಲಾಪ ವರದಿಯ ೩೦ನೇ ಪ್ಯಾರಾದಿಂದ ಪೇಪರ್ಸ್ ಎಟ್‌ಸೆಟ್ರಾ 'ಆನ್ ದಿ ಎಕ್ಸ್‌ಟೆನ್‌ಶನ್ ಆಫ್ ದಿ ಫೈನಾನ್ಸ್‌ನಲ್ಲಿ ಪವರ್ಸ್ ಆಫ್ ದಿ ಲೋಕಲ್ ಗವರ್ನಮೆಂಟ್ಸ್', ಪು. ೪೨.

ಅಧಿಕಾರವನ್ನು ಚಲಾಯಿಸಲು ಅಗತ್ಯವಾದ ಆಡಳಿತ ಯಂತ್ರವನ್ನು ಅವು ಹೊಂದಿರಲಿಲ್ಲ. ಆದ್ದರಿಂದ ಪಾರ್ಲಿಮೆಂಟ್ ಸ್ಥಳೀಯ ಕಾನೂನು ಸಮಿತಿಗಳನ್ನು ನೇಮಿಸುವವರೆಗೆ ಮೇಲಿನ ಯೋಜನೆಯನ್ನು ಕಾರ್ಯಗತ ಮಾಡುವುದನ್ನು ಮುಂದೂಡಬೇಕಾಯಿತು. ಆದರೆ ಮುಂದಿನ ಕೆಲವು ವರ್ಷಗಳು ಹಣಕಾಸಿನ ದೃಷ್ಟಿಯಿಂದ ತೃಪ್ತಿಕರ ವರ್ಷಗಳಾದುದರಿಂದ ಈ ಯೋಜನೆ ಬಗ್ಗೆ ಆಸಕ್ತಿ ಕಡಿಮೆಯಾದುದಷ್ಟೇ ಅಲ್ಲದೆ ಅದನ್ನು ಅನಿರ್ದಿಷ್ಟ ಕಾಲದವರೆಗೆ ಕೈಬಿಡಲಾಯಿತು.

ಆದರೆ ಆ ತೃಪ್ತಿಕರ ವರ್ಷಗಳೂ ಮುಗಿದುಹೋದವು. ಹಣಕಾಸು ಕ್ಲಿಷ್ಟತೆ ಮತ್ತೆ ಕಾಣಿಸಿಕೊಂಡಿತು. ಆಗ ಮ್ಯಾಸೆ ಮತ್ತೆ ಹಿಂದಿನ ಯೋಜನೆಯನ್ನು ಇನ್ನಷ್ಟು ವಿಸ್ತರಿಸಿ ಜಾರಿಗೆ ತರಬೇಕಾಯಿತು.[೧] ಅವರು ಪ್ರಸ್ತಾಪಿಸಿದ್ದೆಂದರೆ :

"(ಒಂದು ದಶಲಕ್ಷ ಸ್ಟರ್ಲಿಂಗ್‌ಗಳಷ್ಟು) ಹೆಚ್ಚಿನ ಹಣವನ್ನು ಎತ್ತುವುದಕ್ಕೆ ಇರುವ ಸಾಧ್ಯತೆಗಳನ್ನು ಪರಿಶೀಲಿಸಿದರೆ..... ಸ್ಥಳೀಯ ಸ್ವರೂಪಗಳುಳ್ಳ ಕೆಲವು ಬಾಬ್ತುಗಳನ್ನು ಸಾಮ್ರಾಜ್ಯದ ಖಾತೆಯಿಂದ ಸ್ಥಳೀಯ ಖಾತೆಗಳಿಗೆ ವರ್ಗಾಯಿಸುವುದು."

ಭಾರತದಲ್ಲಿ ಸ್ಥಳೀಯ ಸಂಪನ್ಮೂಲಗಳಿಂದ ಎತ್ತಿದ ಹಣದ ಮೂಲಕ, ಸ್ಥಳೀಯ ಉದ್ದೇಶಗಳಿಗಾಗಿ ಮಾಡುತ್ತಿದ್ದ ವೆಚ್ಚದ ಮೊತ್ತ ೨ ದಶಲಕ್ಷ ಸ್ಟರ್ಲಿಂಗ್‌ಗಳನ್ನು ಮೀರಿರಲಿಲ್ಲ. ಹೀಗಾಗಿ ೧,೨೦೦,೦೦೦ ಸ್ಟರ್ಲಿಂಗ್‌ಗಳಷ್ಟು ಹಣವನ್ನು ಪ್ರಾಂತೀಯ ಹಾಗೂ ಸ್ಥಳೀಯ ಸರ್ಕಾರಗಳು ಎತ್ತಬೇಕು ಮತ್ತು ಸಾಮ್ರಾಜ್ಯ ಸರ್ಕಾರ ಸ್ಥಳೀಯ ಸರ್ಕಾರಗಳ ವಿವಿಧ ಬಾಬ್ತುಗಳಿಗೆ ನೀಡುವ ಮೊತ್ತದಲ್ಲಿ ಇಷ್ಟು ಹಣ ಕಡಿಮೆಯಾಗಬೇಕು ಎಂದು ಸೂಚಿಸಲಾಯಿತು. ವಿದೇಶೀ ಆಮದು-ರಫ್ತು ಸುಂಕ ಮತ್ತು ಆದಾಯ ತೆರಿಗೆಯನ್ನು ಬಿಟ್ಟು, ಪ್ರಾಂತೀಯ ಸರ್ಕಾರಗಳಿಗೆ (ಬರ್ಮಾವನ್ನು ಬಿಟ್ಟು) ಬರುತ್ತಿದ್ದ ಅಂದಾಜು ಆದಾಯದಲ್ಲಿ ಶೇ. ೪೧ರಷ್ಟನ್ನು ಬಿಟ್ಟು ೧,೨೦೦,೦೦೦ ಸ್ಟರ್ಲಿಂಗ್ ಮೊತ್ತವನ್ನು ನಿಗದಿ ಮಾಡಲಾಯಿತು.[೨]

ಹೊಸ ನಿಧಿಗೆ ಅನ್ವಯವಾಗಬಹುದಾದ ಬಾಬ್ತುಗಳೆಂದರೆ, ೧) ವಿದ್ಯಾಭ್ಯಾಸ ೨) ಪೊಲೀಸ್ ೩) ಜಿಲ್ಲಾ ಬಂದೀಖಾನೆಗಳು ೪) ರಸ್ತೆಗಳ ರಿಪೇರಿ ಮತ್ತು ನಿರ್ವಹಣೆ. ಹಣವನ್ನು ಎತ್ತಲು ಸೂಚಿಸಲಾದ ತೆರಿಗೆಗಳೆಂದರೆ ೧) ವ್ಯಾಪಾರ ಮತ್ತು ವಿವಿಧ ವೃತ್ತಿಗಳಿಗೆ ಪರವಾನಗಿ ತೆರಿಗೆ ೨) ಮನೆಗಂದಾಯ ೩) ಪಟ್ಟಣಗಳಲ್ಲಿ ಅಬ್ಕಾರಿ ಸುಂಕ ೪) ಭೂಮಿಯ ಉತ್ತರಾಧಿಕಾರದ ಮೇಲೆ ಹಾಕಲಾಗುವ ತೆರಿಗೆ. ಭಾರತ ಸರ್ಕಾರದ ಒಪ್ಪಿಗೆಯನ್ನು ಪಡೆದು, ತಮಗೆ ಮೇಲಿನವುಗಳಲ್ಲಿ ಇಷ್ಟ ಬಂದ ತೆರಿಗೆಯನ್ನು ಹಾಕುವುದಕ್ಕೆ ಸ್ಥಳೀಯ ಸರ್ಕಾರಗಳು ಸ್ವತಂತ್ರವಾಗಿದ್ದವು. ಹೀಗೆ ಹಾಕುವ ತೆರಿಗೆಯಿಂದ, ತೆರಿಗೆಯನ್ನು ಸಂಗ್ರಹಿಸುವುದಕ್ಕೆ ತಗಲುವ ವೆಚ್ಚವನ್ನು ಬಿಟ್ಟು ತಮಗೆ ಬೇಕಾಗುವಷ್ಟು ಹಣವನ್ನು ತೆರಿಗೆಯ ಮೂಲಕ ಸ್ಥಳೀಯ ಸರ್ಕಾರಗಳು ಎತ್ತಬಹುದಾಗಿತ್ತು. ಹೀಗೆ ಎತ್ತಿದ ತೆರಿಗೆ ಹಣವನ್ನು ಸ್ಥಳೀಯ ಸರ್ಕಾರಗಳು ತಮ್ಮ ಯುಕ್ತ ತೀರ್ಮಾನಗಳಿಗನುಗುಣವಾಗಿ ಮೇಲೆ ವಿವರಿಸಿದ ಯಾವುದೇ ಬಾಬ್ತಿಗಾಗಿ ವೆಚ್ಚ ಮಾಡಬಹುದಾಗಿತ್ತು.

ಈ ಯೋಜನೆಗೆ ಒಪ್ಪಿಗೆಯಿದೆಯೇ ಎಂಬ ಕೇಂದ್ರ ಸರ್ಕಾರದ ಪ್ರಶ್ನೆಗೆ ಸ್ಥಳೀಯ ಸರ್ಕಾರಗಳು

---

೧. ೧೮೬೩ ಫೆಬ್ರವರಿ ೨೫ರಂದು ಸ್ಥಾನೀಯ ಸರ್ಕಾರಗಳಿಗೆ ಬರೆದ ಅರೆ-ಸರಕಾರೀ ಪತ್ರ, ಸ್ಥಾನೀಯ ಹಣಕಾಸು ಅಧಿಕಾರದ ವಿಸ್ತರಣೆಗೆ ಸಂಬಂಧಿಸಿದ ಕಾಗದ ಪತ್ರಗಳು, ಪುಟ ೬೭.

೨. ಅದೇ ಪ್ಯಾರಾ ೮

ತಮ್ಮ ಸಮ್ಮತಿಯನ್ನು ವ್ಯಕ್ತಪಡಿಸಿದ್ದವು. ಹೊಸ ಸ್ಥಳೀಯ ತೆರಿಗೆಗಳ ಮೂಲಕ ತಮ್ಮ ವಿವಿಧ ಬಾಬ್ತುಗಳ ವೆಚ್ಚಗಳನ್ನು ಭರಿಸುವ ಹಾಗೂ ಕೇಂದ್ರದಿಂದ ಕೆಲವು ಬಾಬ್ತುಗಳನ್ನು ಸ್ಥಳೀಯ ಸರ್ಕಾರಗಳಿಗೆ ವರ್ಗ ಮಾಡುವ ಯೋಜನೆಗೆ ಸಾರ್ವತ್ರಿಕ ಒಪ್ಪಿಗೆ ವ್ಯಕ್ತವಾಯಿತು. ಆದರೆ ಕೇಂದ್ರ ಸರ್ಕಾರದಿಂದ ಆದಾಯದ ವರ್ಗಾವಣೆಯಲ್ಲದೆ, ಖರ್ಚು ಬಾಬ್ತುಗಳನ್ನು ಸ್ಥಳೀಯ ಸರ್ಕಾರಗಳಿಗೆ ವರ್ಗ ಮಾಡುವುದಕ್ಕೆ ಸಾಮಾನ್ಯವಾದ ವಿರೋಧವೂ ವ್ಯಕ್ತವಾಯಿತು. ಇಂತಹ ಸಂದರ್ಭದಲ್ಲಿ ಭಾರತ ಸರ್ಕಾರ ಸ್ಥಳೀಯ ಸರ್ಕಾರಗಳಿಗೆ ವರ್ಗಮಾಡಬೇಕಾದ ಖರ್ಚಿನ ಭಾಗವನ್ನು ೮೦೦,೦೦೦ ಸ್ಟರ್ಲಿಂಗ್‌ಗಳಿಗೆ ಕಡಿಮೆ ಮಾಡುವುದಕ್ಕೆ ಮತ್ತು ಪರವಾನಗಿ ಶುಲ್ಕದ ಆದಾಯವನ್ನು ಈ ಖರ್ಚುಗಳ ಬಾಬ್ತುಗಳಿಗಾಗಿ ಸ್ಥಳೀಯ ಸರ್ಕಾರಗಳಿಗೆ ವರ್ಗ ಮಾಡುವುದಕ್ಕೆ ಒಪ್ಪಿಕೊಂಡಿತು.[೧]

ಈ ಯೋಜನೆಗೆ ಸಿಕ್ಕಿದ ಪ್ರೋತ್ಸಾಹಕ ಮಾತುಗಳು ಮತ್ತು ಅಷ್ಟೇನೂ ತೀವ್ರವಲ್ಲದ ಟೀಕೆಗಳು ಮ್ಯಾಸೇ ಈ ಯೋಜನೆಯನ್ನು ವಿಸ್ತರಿಸುವುದಕ್ಕೆ ಮತ್ತು ಪುನರ್ವಿಮರ್ಶಿಸುವುದಕ್ಕೆ ಎಡೆಮಾಡಿಕೊಟ್ಟವು. ತನ್ನ ವಿಸ್ತೃತ ಹಾಗೂ ಹೊಸ ಯೋಜನೆಯ ಬಗ್ಗೆ ಮ್ಯಾಸೇ ಹೀಗೆ ಬರೆದ:[೨]

"ನನ್ನ ಮೊದಲನೆಯ ಉದ್ದೇಶ ಸ್ಥಳೀಯ ಅಧಿಕಾರಿಗಳ ವಶಕ್ಕೆ ಯಾವ ಬಾಬ್ತುಗಳನ್ನು ವರ್ಗಾಯಿಸಬೇಕು ಎನ್ನುವುದನ್ನು ಆಯ್ಕೆಮಾಡುವುದಾಗಿದೆ. ಹಣದ ಮೊತ್ತದ ದೃಷ್ಟಿಯಿಂದ ಸ್ಥಳೀಯ ಸರ್ಕಾರಗಳೇ ಸುಲಭವಾಗಿ ನಿರ್ವಹಿಸಬಹುದಾದ ರೀತಿಯಲ್ಲಿ ಹಾಗೂ ಕಾಲಕ್ರಮದಲ್ಲಿ ಸ್ಥಳೀಯ ಸರ್ಕಾರಗಳಿಗೆ ಹಣಕಾಸು ಆಡಳಿತ ಸಂಪೂರ್ಣವಾಗಿ ವಹಿಸಿಕೊಡುವ ದಿಕ್ಕಿನಲ್ಲಿ ಮೊದಲನೆಯ ಹೆಜ್ಜೆಯಾಗಿರುವ ರೀತಿಯಲ್ಲಿ ಸಂಬಂಧಪಟ್ಟ ಖರ್ಚುಗಳನ್ನು ವರ್ಗಾವಣೆ ಮಾಡಬೇಕಾಗುತ್ತದೆ. ಹೀಗೆ ವರ್ಗಾವಣೆ ಮಾಡುವ ಮೊತ್ತವು ಗಣನೀಯ ಪ್ರಮಾಣದ್ದಂತೂ ಆಗಿರುತ್ತದೆ. ನಮ್ಮ ಯೋಜನೆಯ ಪ್ರಕಾರ, ವಿವಿಧ ಹಣ ನೀಡಿಕೆ ಬಾಬ್ತುಗಳಿಂದ ವಿಶೇಷ ಬಾಬ್ತುಗಳನ್ನು ವರ್ಗಾಯಿಸುವುದಕ್ಕಿಂತ ಅತ್ಯಂತ ಅನುಕೂಲಕರವಾದ ವಿಧಾನವೆಂದರೆ, ಕೆಲವು ಇಡೀ ಹಣ ನೀಡಿಕೆ ಬಾಬ್ತುಗಳನ್ನು ವರ್ಗಾಯಿಸುವುದು ಅಥವಾ ಭಾಗಶಃ ವರ್ಗಾಯಿಸುವುದು. ಹೀಗಾಗಿ ಲೆಕ್ಕದ ವಿಧಾನದಲ್ಲಿ ಯಾವ ಬದಲಾವಣೆಯೂ ಅಗತ್ಯವಾಗುವುದಿಲ್ಲ. ಒಂದು ವಿಶೇಷ ವಿಧಾನದಲ್ಲಿ ಹಣ ಸಹಾಯದ ವಿವಿಧ ಬಾಬ್ತುಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕಾಗುತ್ತದೆ ಅಷ್ಟೆ. ಇದಕ್ಕೆ ಅಪವಾದವಾಗುವ ಒಂದೇ ಒಂದು ಲೆಕ್ಕದ ಬಾಬ್ತೆಂದರೆ "ಸಾದಿಲ್ವಾರು". ಇದು ವಿವಿಧ ಬಾಬ್ತುಗಳನ್ನು ಒಳಗೊಂಡಿರುತ್ತದೆ. ಈ ಬಾಬ್ತುಗಳಲ್ಲಿ ಯಾವುವು ನ್ಯಾಯಯುತವಾಗಿ ಸ್ಥಳೀಯ ಬಾಬ್ತುಗಳೆಂದು ತೋರುತ್ತವೆಯೋ ಅಂಥವನ್ನು ಮಾತ್ರ ಸ್ಥಳೀಯ ನಿರ್ವಹಣೆಗೆ ವರ್ಗಾಯಿಸಲಾಗುತ್ತದೆ. ಉಳಿದವುಗಳನ್ನು ಇತರ ಪ್ರಮುಖ ಲೆಕ್ಕ ಬಾಬ್ತುಗಳಿಗೆ ಸೇರಿಸಬಹುದು. ವರ್ಗಾವಣೆಗೆ ಪ್ರಮುಖವಾಗಿ ನಾನು ಶಿಫಾರಸು ಮಾಡುವ ಬಾಬ್ತೆಂದರೆ 'ಜೈಲು'. ಇದು 'ಕಾನೂನು ಮತ್ತು ನ್ಯಾಯ' ಲೆಕ್ಕದಡಿಯಲ್ಲಿದೆ. ಈ ಬಾಬ್ತುಗಳಿಗೆ ವಿರುದ್ಧವಾಗಿ ತೋರಿಸಿಕೊಳ್ಳಲು 'ಕಾನೂನು ಮತ್ತು ನ್ಯಾಯ'ದಿಂದ ಬರುವ ಆದಾಯದ ವರ್ಗಾವಣೆಯನ್ನು ಸಹ ಸೂಚಿಸಲಾಗುತ್ತದೆ... 'ವಿದ್ಯಾಭ್ಯಾಸ'ಕ್ಕೆ ಸಂಬಂಧಿಸಿದಂತೆ 'ಸಾದಿಲ್ವಾರು' ಖರ್ಚನ್ನು ವಿದ್ಯಾಭ್ಯಾಸದ ಲೆಕ್ಕದಡಿಯಲ್ಲಿ ಬರುವ ಆದಾಯದ ವರ್ಗಾವಣೆಯ ಮೂಲಕ

---

೧. ಅದೇ ಪುಸ್ತಕದಲ್ಲಿ ೧೮೬೭ ಸೆಪ್ಟೆಂಬರ್ ೧೯ ರ ಸುತ್ತೋಲೆ ಪು. ೬೭

೨. ಹೊಸ ಯೋಜನೆಯ ರೂಪರೇಷೆಗಳನ್ನು ಮ್ಯಾಸೇ ಹೇಳಿಕೆಯ ಮೇರೆಗೆ ಕರ್ನಲ್ ಸ್ಟ್ರಾಚೇ ಸಿದ್ಧಪಡಿಸಿದ ಇದನ್ನು 'ಟ್ರಾನ್ಸ್‌ಫರ್ಸ್ ಟು ಲೋಕಲ್ ಗವರ್ನಮೆಂಟ್ ಆಫ್ ದಿ ಕಂಟ್ರೋಲ್ ಓವರ್ ಸರ್ಟನ್ ಪೋರ್ಷನ್ಸ್ ಆಫ್ ಪಬ್ಲಿಕ್ ಎಕ್ಸ್‌ಪೆಂಡೀಚರ್' ಎಂಬ ಟಿಪ್ಪಣಿಯಲ್ಲಿ ನಮೂದಿಸಲಾಗಿದೆ. ಅದೇ ಪುಸ್ತಕ, ಪುಟಗಳು. ೫೧–೬೨

ಮಾಡಲಾಗುತ್ತದೆ. 'ವೈದ್ಯಕೀಯ ಸೇವೆ'ಗಳ 'ಮೆಡಿಕಲ್ ಎಸ್ಟಾಬ್ಲಿಷ್‌ಮೆಂಟ್ಸ್ ಅಂಡ್ ಕೆಮಿಕಲ್ ಎಕ್ಸಾಮಿನರ್ಸ್' ಬಾಬ್ತನ್ನು ಹೊರತುಪಡಿಸಿ ಇಡೀ ಬಾಬ್ತನ್ನು ವರ್ಗಾಯಿಸಬೇಕಾಗುತ್ತದೆ. "ಲೇಖನ ಸಾಮಗ್ರಿಗಳು ಮತ್ತು ಮುದ್ರಣ"ದ ಬಾಬ್ತನ್ನು ಸಹ ವರ್ಗಾಯಿಸಬೇಕಾಗುತ್ತದೆ. 'ಪೊಲೀಸ್' ಬಾಬ್ತಿನಲ್ಲಿ ಸ್ಥಳೀಯ ವರಮಾನ ಮೂಲಗಳಿಂದ ಬರುವ ಆದಾಯವನ್ನು ವರ್ಗಮಾಡಬೇಕಾಗುತ್ತದೆ. ಇದು ರೈಲ್ವೆ ಪೊಲೀಸ್ ವರಮಾನವನ್ನೂ ಒಳಗೊಳ್ಳುತ್ತದೆ. ಇದಕ್ಕೆ ವಿರುದ್ಧವಾಗಿ 'ಪೊಲೀಸ್' ಬಾಬ್ತಿನ ವರಮಾನವನ್ನು ಸರಿತೂಗಿಸಲಾಗುತ್ತದೆ. ಇವುಗಳ ಜೊತೆಗೆ ಹೊಸದಾಗಿ ವಿಧಿಸಬೇಕೆಂದು ಸೂಚಿಸಲಾಗುತ್ತಿರುವ ಭೂಕಂದಾಯ, ಆದಾಯ ತೆರಿಗೆ ಮತ್ತು ಪರವಾನಗಿ ಶುಲ್ಕಗಳಿಂದ ಬರುವ ಆದಾಯದಿಂದ ಒಂದು ಭಾಗವನ್ನು ಸ್ಥಳೀಯ ಸರ್ಕಾರಗಳಿಗೆ ವರ್ಗಾಯಿಸಲಾಗುತ್ತದೆ. ಸ್ಥಳೀಯ ಸರ್ಕಾರಗಳಿಗೆ ವರ್ಗಾಯಿಸುವ ಬಾಬ್ತುಗಳಿಗೆ ಅಗತ್ಯವಾಗುವಷ್ಟು ಹಣವನ್ನು ವರ್ಗಾಯಿಸುವುದು ಅಗತ್ಯ. ಹೀಗೆ ಮಾಡುವಾಗ ತೆರಿಗೆಗಳನ್ನು ಸಂಗ್ರಹಿಸುವುದಕ್ಕೆ ತಗಲುವ ವೆಚ್ಚವನ್ನೂ ಗಮನದಲ್ಲಿಟ್ಟುಕೊಳ್ಳಬೇಕಾದುದು ಅಗತ್ಯ. ಭೂಕಂದಾಯದ ಬಾಬ್ತಿಗೆ ಸಂಬಂಧಿಸಿದಂತೆ, ಭೂಮಾಪನ ಅಥವಾ ಸೆಟಲ್‌ಮೆಂಟ್‌ಗೆ ತಗಲುವ ವೆಚ್ಚವನ್ನು ಸೇರಿಸಿಲ್ಲ. ಏಕೆಂದರೆ ಇವು ವ್ಯತ್ಯಾಸಗೊಳ್ಳುತ್ತಿರುತ್ತವೆ ಮತ್ತು ಕೆಲವೊಮ್ಮೆ ಈ ಬಾಬ್ತಿನಲ್ಲಿ ವೆಚ್ಚ ಇರುವುದಿಲ್ಲ. ಆದರೆ ಗ್ರಾಮೀಣ ಅಧಿಕಾರಿಗಳ ಭತ್ಯೆಗಳನ್ನು ಲೆಕ್ಕಕ್ಕೆ ಸೇರಿಸಲಾಗಿದೆ.

* * * *

ಅತ್ಯಂತ ಆದ್ಯತೆಯ ಮೇಲೆ ಮತ್ತು ಪ್ರಮುಖವಾಗಿ ವರ್ಗಾವಣೆಯಾಗಬೇಕಾದ ಆದಾಯವೆಂದರೆ ಭೂಕಂದಾಯದಿಂದ ಬರುವ ಆದಾಯ. ಇದನ್ನು ನಾನು ೧/೧೬ ಭಾಗದಷ್ಟು ಅಥವಾ ರೂಪಾಯಿಯಲ್ಲಿ ಒಂದಾಣೆಯಷ್ಟು ಇರಬೇಕೆಂದು ಸೂಚಿಸುತ್ತೇನೆ. ಇದೇ ದರ ತೆರಿಗೆ ಸಂಗ್ರಹ ವೆಚ್ಚಕ್ಕಾಗಿ ಸಹ ವರ್ಗಾವಣೆಯಾಗಬೇಕು.

"ವರ್ಗಾವಣೆಗೆ ನಾನು ಸೂಚಿಸುವ ಎರಡನೆಯ ಆದಾಯ ಬಾಬ್ತೆಂದರೆ ಆದಾಯ ತೆರಿಗೆ ಮತ್ತು ಪರವಾನಗಿ ತೆರಿಗೆ.[೧] ಇವುಗಳು ಹೆಚ್ಚಾಗಬೇಕೆಂದು ನಾನು ಸೂಚಿಸುತ್ತೇನೆ".

"ಕೆಳಗಿನ ಬಾಬ್ತುಗಳಿಂದ ಬರುವ ಸಂಪೂರ್ಣ ಹಣವನ್ನು ವರ್ಗಾಯಿಸಬೇಕೆಂದು ಸೂಚಿಸಲಾಗಿದೆ; ೧) ಕಾನೂನು ಮತ್ತು ನ್ಯಾಯ, ೨) ಪೊಲೀಸ್, ೩) ವಿದ್ಯಾಭ್ಯಾಸ, ೪) ಹಣಕಾಸು ಸ್ವರೂಪದ ಬಾಬ್ತುಗಳನ್ನು ಬಿಟ್ಟು ಇತರ ಸಾದಿಲ್ವಾರು ಬಾಬ್ತುಗಳು ೫) ನೀರಾವರಿಯನ್ನು ಬಿಟ್ಟು ಪೊಲೀಸ್ ಕೆಲಸಗಳಿಂದ ಬರುವ ಎಲ್ಲ ಆದಾಯಗಳು. ಸಾರ್ವಜನಿಕ ಕಾಮಗಾರಿ ಕೆಳಗೆ ವರ್ಗಾಯಿಸಬೇಕಾದ ವೆಚ್ಚ ಬಾಬ್ತುಗಳೆಂದರೆ ೧) ರಸ್ತೆಗಳು, ೨) ಸಾರ್ವಜನಿಕ ಕಟ್ಟಡಗಳ ರಿಪೇರಿ, ೩) ಹೊಸ ಹಾಗೂ ರಿಪೇರಿಗೆ ಸಂಬಂಧಿಸಿದ ವಿವಿಧ ಸಾದಿಲ್ವಾರು ಬಾಬ್ತುಗಳು, ಮತ್ತು ೪) ಯಂತ್ರಸಾಮಗ್ರಿಗಳು ಮತ್ತು ಯಂತ್ರೋದ್ಯಮಗಳು".

---

೧. ಹೀಗೆ ಲೆಕ್ಕಮಾಡುವಾಗ ಮ್ಯಾಸೆಯ ಅಭಿಪ್ರಾಯವೆಂದರೆ "ಆದಾಯ ತೆರಿಗೆಯನ್ನು ನಾನು ೨% ರಂತೆ ಲೆಕ್ಕಹಾಕಿದ್ದೇನೆ. ರೂ ೨,೦೦೦ ಸಾವಿರದ ಕೆಳಗಿನ ವರಮಾನಕ್ಕೆ ಈ ತೆರಿಗೆ ಇರಬಾರದೆಂದು ನಾನು ಸೂಚಿಸುತ್ತೇನೆ. ವ್ಯಾಪಾರ ತೆರಿಗೆಯೆಂದು ನಾನು ಭಾವಿಸಿರುವ ಪರವಾನಗಿ ತೆರಿಗೆ ಸದ್ಯದ ನಿಧಿಯಿಂದಲೆ ಪ್ರಾರಂಭವಾಗಿ ಆದಾಯ ತೆರಿಗೆಗೆ ಸಮನಾಗುವಷ್ಟು ಪ್ರಮಾಣಕ್ಕೆ ತರಬೇಕೆಂದು ನಾನು ಸೂಚಿಸುತ್ತೇನೆ.

ಹೀಗೆ ವಿಸ್ತರಿಸಲಾದ ಯೋಜನೆಯನ್ನು ವಿಸ್ತೃತವಾಗಿ ಚರ್ಚಿಸಲಾಯಿತು. ಎಚ್ಚರಿಕೆಯಿಂದ ಟೀಕೆ ಮಾಡುವವರ ಒಪ್ಪಿಗೆಯನ್ನು ಪಡೆಯಿತಾದರೂ ಸಾಮ್ರಾಜ್ಯದವರಿಗೆ ಈ ಯೋಜನೆ ತುಂಬಾ ವಿಸ್ತೃತವಾದುದು ಎನಿಸಿತ್ತು.[೧] ಇಂಥವರಲ್ಲಿ ಮುಖ್ಯರಾಗಿದ್ದವರಿಬ್ಬರೆಂದರೆ, ಭಾರತದ ವೈಸ್‌ರಾಯ್ ಲಾರ್ಡ್ ಲಾರೆನ್ಸ್ ಮತ್ತು ಮದರಾಸಿನ ಗವರ್ನರ್, ಮೆರ್ಚಿಸ್ಟನನ ಲಾರ್ಡ್ ನೇಪಿಯರ್. ಅವರು ವಿರೋಧಿಸಿದುದರಿಂದ ಈ ಯೋಜನೆ ಕಾರ್ಯಗತಗೊಳ್ಳಲಾಗಲಿಲ್ಲ.

ಸಾಮ್ರಾಜ್ಯವಾದಿಗಳ ದುರದೃಷ್ಟಕ್ಕೆ, ಈ ದಶಕದಲ್ಲಿ ಹಣಕಾಸಿನ ವಿಷಯದ ಸುಧಾರಣೆ ನಡೆಯಲೇ ಇಲ್ಲ. ಈ ಅವಧಿಯಲ್ಲಿ ಅವರು ಸುಧಾರಣೆಯನ್ನು ತೀವ್ರವಾಗಿ ವಿರೋಧಿಸುತ್ತಿದ್ದರಷ್ಟೇ. ಅವರು ವಾಸ್ತವವಾಗಿ ಸಾಮ್ರಾಜ್ಯ ಹಣಕಾಸು ವ್ಯವಸ್ಥೆಯ ರೋಗಕ್ಕೆ ಯಾವುದೇ ಶಸ್ತ್ರಚಿಕಿತ್ಸೆಯನ್ನು ಬಯಸುತ್ತಿರಲಿಲ್ಲ. ಆದರೆ ಹಣಕಾಸು ವ್ಯವಸ್ಥೆಯ ಚೇತರಿಸಿಕೊಳ್ಳುವ ಚಿಹ್ನೆಗಳು ಕಂಡುಬರಲಿಲ್ಲ. ಚಿಕಿತ್ಸೆ ನಿಧಾನವಾದುದರಿಂದ ರೋಗವೂ ಉಲ್ಬಣಗೊಳ್ಳುತ್ತಿತ್ತು. ತೆರಿಗೆಯಲ್ಲಿನ ನಿರಂತರ ಹೆಚ್ಚಳ ಮತ್ತು ವೆಚ್ಚದಲ್ಲಿನ ಕಡಿತವಿದ್ದಾಗ್ಯೂ, ಇಂಗ್ಲೆಂಡ್ ಕಳುಹಿಸಿದ್ದ ಮೂರು ಜನ ಅರ್ಥ ಸಚಿವರುಗಳು ೧೮೬೦ ಮತ್ತು ೧೮೭೦ರ ದಶಕದಲ್ಲಿ ಕೇವಲ ಮೂರು ವರ್ಷಗಳಲ್ಲಿ ಮಾತ್ರ ಕೊರತೆಯಿಲ್ಲದ ಬಜೆಟ್ಟನ್ನು ಸೂಚಿಸುವುದಕ್ಕೆ ಶಕ್ತರಾಗಿದ್ದರು ಅಷ್ಟೆ. ನಿರಂತರವಾಗಿ ಬಜೆಟ್ ಕೊರತೆ ಉಂಟಾದುದು ನಿಜವಾಗಿ ಪೇಚಿನ ವಿಷಯವಾಯಿತು. ರಾಷ್ಟ್ರದ ಸಾರ್ವಜನಿಕ ಹಣಕಾಸು ವ್ಯವಸ್ಥೆಯನ್ನು ಒಂದು ಹದಕ್ಕೆ ತರುವುದರ ಬದಲು, ಬಜೆಟ್ ವ್ಯವಸ್ಥೆ ಕುಸಿಯುವ ಸ್ಥಿತಿಯನ್ನು ತಲುಪಿತು. ಅತ್ಯಂತ ಕೇಂದ್ರೀಕೃತವಾಗಿದ್ದ ಬಜೆಟ್ ವ್ಯವಸ್ಥೆಯ ಒತ್ತಡದಿಂದಾಗಿ ಅದು ಯಾವುದೇ ಕ್ರಮಬದ್ಧತೆಯನ್ನು ತರುವುದರಲ್ಲಿ ಸಂಪೂರ್ಣ ವಿಫಲತೆಯನ್ನು ವ್ಯಕ್ತಪಡಿಸಿತು. ವಾಸ್ತವವಾಗಿ ಹಣಕಾಸು ಅವ್ಯವಸ್ಥೆ ಉಂಟಾಯಿತು. ಸರ್ಕಾರ ನೀಡಿದ ಸುತ್ತೋಲೆಗಳು, ಆಜ್ಞೆಗಳು, ಬಜೆಟ್ ಅಂದಾಜುಗಳು ಅತ್ಯಂತ ಖಚಿತವಾದವು ಎಂದು ಎಷ್ಟೇ ಹೇಳಿಕೊಂಡರೂ, ವಾಸ್ತವತೆ ಬೇರೆಯಾಗಿತ್ತು. ಅರ್ಥ ಸಚಿವರುಗಳು ಎದುರಿಸುತ್ತಿದ್ದ ಪರಿಸ್ಥಿತಿಯೇ ಬೇರೆ. ಬಜೆಟ್ ಅಂದಾಜುಗಳು ಆಧಿಕ್ಯದ ಸೂಚನೆಗಳೊಂದಿಗೆ ಪ್ರಾರಂಭವಾದರೂ ವಾಸ್ತವವಾಗಿ ಬಜೆಟ್ ವರ್ಷ ಕೊನೆಗೊಂಡಾಗ ಅವು ತೀವ್ರ ಕೊರತೆಯೊಂದಿಗೆ ಅಂತ್ಯವಾಗುತ್ತಿದ್ದವು. ಅಂದಾಜುಗಳು ಮತ್ತು ವಾಸ್ತವತೆಗಳ ನಡುವೆ ಎಷ್ಟು ವ್ಯತ್ಯಾಸವಿರುತ್ತಿತ್ತು ಎನ್ನುವುದನ್ನು ಕೆಳಗಿನ ಪಟ್ಟಿ ಸೂಚಿಸುತ್ತದೆ.

---

೧. ಸರ್‌ಸ್ಟಾಫೋರ್ಡ್ ನಾರ್ತ್‌ಕೋಟ್ ಹೀಗೆ ಘೋಷಿಸಿದರು "ಭಾರತದ ಹಣಕಾಸಿನ ದೃಢತೆಯನ್ನು ನಾವು ಅಲ್ಲಾಡಿಸಬಾರದು. ಲೆಕ್ಕಾಚಾರವಿಲ್ಲದ ಖರ್ಚುಗಳನ್ನು ತಡೆಯಬೇಕು. ಭಾರತದ ಮಾನ್ಯತೆಯನ್ನು ಎತ್ತಿಹಿಡಿಯುವ ರೀತಿಯಲ್ಲಿನ ಒಂದು ವ್ಯವಸ್ಥೆಯನ್ನು ನಾವು ಜಾರಿಗೆ ತರಬೇಕು. ಆದ್ದರಿಂದ ಈಗಿನ ವ್ಯವಸ್ಥೆಯನ್ನು ಬದಲಾಯಿಸುವುದರಲ್ಲಿ ನಾನು ಕೊನೆಯವನಾಗುತ್ತೇನೆ. ಯಾವುದೇ ಬದಲಾವಣೆಯನ್ನು ತರುವುದರಲ್ಲಿ ನಾನು ಎಚ್ಚರಿಕೆಯಿಂದ, ನಿಧಾನವಾಗಿ ಮುಂದುವರಿಯುತ್ತೇನೆ. ಆದರೆ ಮ್ಯಾಸೆಯ ಸೂಚನೆಗಳ ತತ್ವವನ್ನು ನಾನು ಒಪ್ಪುತ್ತೇನೆಂದು ಪುನಃ ತಿಳಿಯಪಡಿಸುತ್ತೇನೆ." ಹ್ಯಾನ್‌ಸಾರ್ಡ್ಸ್ ಪಾರ್ಲಿಮೆಂಟ್‌ರೀ ಡಿಬೇಟ್ಸ್ ಸಂಪುಟ ೧೯೧, ಏಪ್ರಿಲ್ ೨೫, ೧೯೬೮.

## ಸರ್ಕಾರದ ಹಣಕಾಸಿನ ಅವ್ಯವಸ್ಥೆ[೧]

| ವರ್ಷ | ಅಂದಾಜುಗಳು ಕೊರತೆ/ಅಧಿಕ | ಅಂದಾಜುಗಳು ಕೊರತೆ/ಅಧಿಕ |
|---|---|---|
| ೧೮೬೬-೬೭ | - ೬೬,೭೦೦ | -೨,೩೦೭,೭೦೦ |
| ೧೮೬೭-೬೮ | ೧,೬೨೮,೫೨೨ | - ೯೨೩,೭೨೦ |
| ೧೮೬೮-೬೯ | ೧,೮೯೩,೫೦೮ | - ೨,೫೪೨,೮೬೧ |
| ೧೮೬೯-೭೦ | ೪೮,೨೬೩ | - ೧,೬೫೦,೦೦೦ (ಅಂದಾಜು) |

ಮೇಲಿನ ಪಟ್ಟಿಯಿಂದ ಸ್ಪಷ್ಟವಾಗುವ ಅಂಶವೆಂದರೆ, ೧೮೬೮-೬೯ ಮತ್ತು ೧೮೬೯-೭೦ ರ ಬಜೆಟ್ ಅಂದಾಜುಗಳು ಅಧಿಕ ಸೂಚನೆಯೊಂದಿಗೆ ಮಂಡಿಸಲ್ಪಟ್ಟವು. ಇವು ೧೮೬೮-೬೯ ರ ವಿಮರ್ಶಿತ ಅಂದಾಜನ್ನು ಆಧರಿಸಿದ್ದು. ಈ ಅಂದಾಜುಗಳ ಪ್ರಕಾರ ಇವೆರಡೂ ಹಣಕಾಸು ವರ್ಷಗಳು ಕ್ರಮವಾಗಿ ೧,೮೯೩,೫೦೮ ಮತ್ತು ೪೮,೨೬೩ ಸ್ಟರ್ಲಿಂಗ್ ಆಧಿಕ್ಯದೊಂದಿಗೆ ಮುಕ್ತಾಯವಾಗಬೇಕಾಗಿತ್ತು. ಆದರೆ ಈ ನಿರೀಕ್ಷೆಗೆ ಬದಲಾಗಿ ೧೮೬೮-೬೯ರ ಬಜೆಟ್ ಅತ್ಯಂತ ಹೆಚ್ಚಿನ ಕೊರತೆಯೊಂದಿಗೆ ಅಂತ್ಯವಾಗಬೇಕಾಯಿತು.

ಈ ಮಧ್ಯೆ ಲಾರ್ಡ್ ಮೇಯೋ ಭಾರತದ ವೈಸರಾಯ್ ಆಗಿ ನೇಮಕಗೊಂಡ. ತನ್ನ ಬಜೆಟ್ಟನ್ನು ಇಂಥ ಅಂದಾಜುಗಳ ಆಧಾರದ ಮೇಲೆ ಪುನರ್ವಿಮರ್ಶಿಸಿದರೆ ಅದು ಆಧಿಕ್ಯದ ಬದಲಿಗೆ ಹೆಚ್ಚಿನ ಕೊರತೆಯೊಂದಿಗೆ ಅಂತ್ಯವಾಗಬೇಕಾಗುತ್ತದೆ ಎಂಬ ಅಂಶವನ್ನು ಆತ ಮನಗಂಡಿದ್ದ. ಈ ಅಂಶವು ಅವನನ್ನು ಬಜೆಟ್ ವಿಷಯದಲ್ಲಿ ವ್ಯಸ್ತನಾಗುವಂತೆ ಮಾಡಿತ್ತು. ಬಜೆಟ್‌ನಲ್ಲಿ ಕ್ರಮಬದ್ಧತೆಯನ್ನು ತರಲು ತೆರಿಗೆಯನ್ನು ಹೆಚ್ಚಿಸುವ ಮತ್ತು ಖರ್ಚನ್ನು ಕಡಿಮೆ ಮಾಡುವ ಮಾಮೂಲು ಕ್ರಮವನ್ನು ಅನುಸರಿಸುವುದು ಅವನಿಗೆ ಅನಿವಾರ್ಯವಾಯಿತು.

ಆತ ಅನುಸರಿಸಿದ ಕ್ರಮಗಳ ಸಂಕ್ಷಿಪ್ತ ಸ್ವರೂಪ ಕೆಳಗಿನಂತಿತ್ತು.

---

೧. ಹಂಟರ್ ಡಬ್ಲ್ಯೂ.ಡಬ್ಲ್ಯೂ. *ಲೈಫ್ ಆಫ್ ಮೇಯೋ*, ಸಂಪುಟ II, ಪುಟಗಳು ೭-೮.

ಈ ಪಟ್ಟಿಯಲ್ಲಿ ಕೊಡಲಾಗಿರುವ ಕೊರತೆಯ ಬಗ್ಗೆ ಅಂಕಿಸಂಖ್ಯೆಗಳು ಮಿಸ್ಟರ್ ಚಾಪ್‌ಮನ್‌ರವರು ಮುಂಬಯಿ ಸರ್ಕಾರಕ್ಕೆ ಲಾರ್ಡ್‌ಮೇಯೋರವರ ಯೋಜನೆಯನ್ನು ತಮ್ಮ ೧೭-೮-೧೮೭೦ರ ಸುತ್ತೋಲೆಯಲ್ಲಿ ತಿಳಿಸಿದ ಅಂಕಿ ಸಂಖ್ಯೆಗಳಲ್ಲಿ ವ್ಯತ್ಯಾಸವಿದೆ. ಚಾಪ್‌ಮನ್‌ರವರ ಪ್ರಕಾರ(ವಾಸ್ತವಿಕ) ಕೊರತೆಯ ಅಂಕಿಸಂಖ್ಯೆಗಳು ಈ ರೀತಿ ಇದೆ:

೧೮೬೬-೬೭ ರಲ್ಲಿ ವಾಸ್ತವಿಕ ಕೊರತೆ ೨,೫೧೭,೪೯೧ ಸ್ಟರ್ಲಿಂಗ್ ಆಗಿತ್ತು
೧೮೬೭-೬೮ ರಲ್ಲಿ ವಾಸ್ತವಿಕ ಕೊರತೆ ೧,೦೦೭,೬೯೫ ಸ್ಟರ್ಲಿಂಗ್ ಆಗಿತ್ತು
೧೮೬೮-೬೯ ರಲ್ಲಿ ವಾಸ್ತವಿಕ ಕೊರತೆ ೨,೭೭೪,೦೩೧ ಸ್ಟರ್ಲಿಂಗ್ ಆಗಿತ್ತು

(ಈ ಸುತ್ತೋಲೆಯನ್ನು ಪೇಪರ್ಸ್ ಎಟ್ಸೆಟ್ರಾ 'ಆನ್ ದಿ ಎಕ್ಸ್‌ಟೆನ್‌ಶನ್ ಆಫ್ ಫೈನಾನ್ಸಿಯಲ್ ಪವರ್ಸ್ ಆಫ್ ದಿ ಲೋಕಲ್ ಗವರ್ನಮೆಂಟ್ಸ್', ಪು. ೨೪೩ರಲ್ಲಿ ನೋಡಬಹುದು)

| | | |
|---|---|---|
| **೧. ಹೆಚ್ಚುವರಿ ತೆರಿಗೆ** | | |
| ೧) | ಶೇ ೧ ರಿಂದ ಶೇ೨೧/₂ಗೆ ಏರಿಸಿದ ಆದಾಯ ತೆರಿಗೆಯಿಂದ ಆದಾಯ ತೆರಿಗೆಯಿಂದ | ೩,೨(£)೦೦ |
| ೨) | ಉಪ್ಪಿನ ಕರದ ಹೆಚ್ಚಳದಿಂದ (ಮದರಾಸು ಮತ್ತು ಬೊಂಬಾಯಿಯಲ್ಲಿ) | ೧೮೦,೦೦೦ |
| | **ಒಟ್ಟು** | **೫೦೦,೦೦೦** |
| **೨. ವೆಚ್ಚದಲ್ಲಿನ ಕಡಿತ** | | |
| ೧) | ವಿದ್ಯಾಭ್ಯಾಸ | ೩೫೦,೦೦೦ |
| ೨) | ಸಾರ್ವಜನಿಕ ಕಾಮಗಾರಿ | ೮೦೦,೦೦೦ |
| | **ಒಟ್ಟು** | **೧,೧೫೦,೦೦೦** |
| | ಕೊರತೆಯಲ್ಲಿನ ಇಳಿತ (ಅಂದಾಜು) | ೧,೬೫೦,೦೦೦ |

ಈ ಎಲ್ಲ ಕ್ರಮಗಳಿಂದಲೂ ಸಹ ಆತ ಕೊರತೆಯನ್ನು ಕಡಿಮೆ ಮಾಡಲಾಗಲಿಲ್ಲ. ಅವನು ಬಜೆಟ್ ಕೊರತೆಯನ್ನು ೧,೬೫೦,೦೦೦ ಸ್ಟರ್ಲಿಂಗ್‌ನ ಮಟ್ಟದಲ್ಲಿ ತೋರಿಸಬೇಕಾದ ಪರಿಸ್ಥಿತಿ ಇದ್ದೇ ಇತ್ತು. ಆದರೆ, ಅನಿರೀಕ್ಷಿತವಾಗಿ ಅಬಿಸೀನಿಯನ್ ಯುದ್ಧದ ಸರಬರಾಜುಗಳಿಂದ ಮತ್ತು ಬಾಕಿ ಬರಬೇಕಾಗಿದ್ದ ಇತರ ಬಾಬ್ತುಗಳ ಹೊಂದಾಣಿಕೆಗಳಿಂದ ಕೊರತೆ ಬಜೆಟ್ ಅನ್ನು ಸ್ವಲ್ಪ ಅಧಿಕದ ಬಜೆಟ್ ಆಗಿ ತೋರಿಸುವುದು ಅವನಿಗೆ ಶಕ್ಯವಾಯಿತು. ತನ್ನ ಈ ಪ್ರಯತ್ನಗಳಿಂದ ಆಗ ಸ್ವಲ್ಪ ಹರ್ಷಗೊಂಡಿದ್ದುದೂ ಹೌದು. ಮೇಯೋ, ಚಕ್ರಾಧಿಪತ್ಯದ ಹಣಕಾಸು ವ್ಯವಸ್ಥೆಯಲ್ಲಿ ತುಂಬಾ ಅಸಮರ್ಪಕತೆ ಇದೆ ಎಂಬುದನ್ನು ಮನಗಂಡಿದ್ದ. ಆದರೆ ಆ ಅಸಮರ್ಪಕತೆಯನ್ನು ಸಂಪೂರ್ಣವಾಗಿ ತೊಡೆದುಹಾಕುವುದರ ಬದಲು, ಪ್ರಾಂತೀಯ ಹಣಕಾಸು ಯೋಜನೆಯನ್ನು ಆರಂಭಿಸುವ ಒಂದು ಹೊಂದಾಣಿಕೆಯ ವ್ಯವಸ್ಥೆಯನ್ನು ಆತ ಆರಂಭಿಸಿದ. ಈ ವ್ಯವಸ್ಥೆಯ ಬೆಳವಣಿಗೆ ನಮ್ಮ ಮುಂದಿನ ೨ನೇ ಭಾಗದ ವಿಷಯವಾಗಿರುತ್ತದೆ.

# ಭಾಗ – II

# ಪ್ರಾಂತೀಯ ಹಣ–ಕಾಸು : ಅದರ ಬೆಳವಣಿಗೆ

## ಅಧ್ಯಾಯ ೪

## ಹಣಹಂಚಿಕೆ ಆಧಾರಿತ ಮುಂಗಡಪತ್ರ

### ೧೮೭೧–೭೨ ರಿಂದ ೧೮೭೬–೭೭

ಪ್ರಾಂತೀಯ ಮುಂಗಡ ಪತ್ರವನ್ನು ರೂಪಿಸುವುದಕ್ಕೆ ಇದ್ದ ಕಾರಣಗಳನ್ನು ಹಿಂದಿನ ಭಾಗದಲ್ಲಿ ನಾವು ಚರ್ಚಿಸಿದ್ದೇವೆ. ಈಗ ಈ ಯೋಜನೆ ಕಾರ್ಯಗತವಾದ ನಂತರ ಅದರ ಸ್ವರೂಪ ಮತ್ತು ಕಾಲದಿಂದ ಕಾಲಕ್ಕೆ ಅದು ಅನುಭವಿಸಿದ ಬದಲಾವಣೆಗಳನ್ನು ವಿಶ್ಲೇಷಿಸುತ್ತೇವೆ.

ತನ್ನ ಇಂಗಿತಜ್ಞಾನದಿಂದ ಲಾರ್ಡ್ ಮೇಯೋ ಹಣಕಾಸು ಕೊರತೆ ಮತ್ತ ಆಧಿಕ್ಯಗಳು, ಚಕ್ರಾಧಿಪತ್ಯದ ಅದಕ್ಷತೆ ಮತ್ತು ಪ್ರಾಂತ್ಯ ಸರ್ಕಾರಗಳ ಬೇಜವಾಬ್ದಾರಿತನದಿಂದ ಉಂಟಾದುವೆಂದು ಖಚಿತವಾಗಿ ತಿಳಿದಿದ್ದು, ಈ ಖಾಯಿಲೆಗೆ ಪ್ರಾಂತೀಯ ಬಜೆಟ್‌ಗಳನ್ನು ಆರಂಭಿಸುವುದೇ ಸೂಕ್ತ ಪರಿಹಾರವೆಂದು ಭಾವಿಸಿದ್ದ. ಆದರೆ ಸಾಮ್ರಾಜ್ಯದ ಹಿತಾಸಕ್ತಿಗಳೇ ಈ ಅವಧಿಯಲ್ಲಿ ಇನ್ನೂ ಪ್ರಧಾನವಾಗಿದ್ದವು ಎನ್ನುವುದನ್ನು ನಾವು ಗಮನಿಸಬೇಕು. ಹೀಗಾಗಿ ಹಣಕಾಸು ವ್ಯವಹಾರದ ಪ್ರತಿಯೊಬ್ಬ ಅತ್ಯುನ್ನತ ಅಧಿಕಾರಿಯೂ ಹೇಗಾದರೂ ಮಾಡಿ ಪರಿಸ್ಥಿತಿಯನ್ನು ಉತ್ತಮಪಡಿಸುವ ಆಕಾಂಕ್ಷೆಯನ್ನು ಹೊಂದಿದ್ದರೂ ಸಾಮ್ರಾಜ್ಯದ ಹಿಡಿತಕ್ಕೆ ವಿರುದ್ಧವಾಗಿ ಕೆಲಸ ಮಾಡಿ ಸುಧಾರಣೆಯನ್ನು ಸಾಧಿಸಲು ಇಚ್ಛಿಸಲಿಲ್ಲ. ಲಾರ್ಡ್ ಮೇಯೋ ಸಹ ಚಕ್ರಾಧಿಪತ್ಯದ ಒಲವಿನಿಂದ ಮುಕ್ತನಾಗಿರಲಿಲ್ಲ. ಆದರೆ ಪರಿಸ್ಥಿತಿಯ ಒತ್ತಡ ಅವನನ್ನು ಇದುವರೆಗೆ ಇದ್ದ ಸಂಕುಚಿತತೆ, ಅನಿಶ್ಚಿತತೆಗಳಿಂದ ಹೊರಗೆ ಬರುವಂತೆ ಒತ್ತಾಯಿಸಿತು. ಆದರೂ ಅವನಿಗಿದ್ದ ಚಕ್ರಾಧಿಪತ್ಯದ ಒಲವು, ಪ್ರಾಂತಗಳ ಬಜೆಟ್‌ಗಳ ರಚನೆಯನ್ನು ನಿಧಾನವಾಗಿಸುವಂತೆ ಮತ್ತು ಎಚ್ಚರಿಕೆಯಿಂದ ಮುಂದುವರಿಯುವಂತೆ ಮಾಡಿತು.

೧೮೭೧–೭೨ ರ ಹಣಕಾಸು ವರ್ಷದಲ್ಲಿ ವಾಸ್ತವವಾಗಿ ಜಾರಿಗೆ ಬಂದ ಯೋಜನೆಯ ರೂಪು–ರೇಷೆಗಳು, ಭಾರತ ಗೃಹ ಇಲಾಖೆ ೧೮೭೦ರ ಫೆಬ್ರವರಿ ೨೧ರಂದು ನೀಡಿದ ರಹಸ್ಯ ಸುತ್ತೋಲೆಯಲ್ಲೇ ವ್ಯಕ್ತವಾಗಿದ್ದು. ಈ ಯೋಜನೆಯ ನೀತಿಯಂತೆ ನಾನಾ ಬಾಬ್ತುಗಳ ವೆಚ್ಚದಲ್ಲಿ ಕಡಿತ ಉಂಟಾಯಿತು. ೧೮೬೯–೭೦ರ ಆರಂಭದಲ್ಲಿ ರಸ್ತೆ ಬಾಬ್ತಿನ ಹಣ ಸಹಾಯ ೧,೨೩೬,೦೦೦ ಸ್ಟರ್ಲಿಂಗ್ ಆಗಿದ್ದರೆ ಆ ವರ್ಷದ ಅಂತ್ಯದಲ್ಲಿ ಅದನ್ನು ೧,೦೨೧,೧೭೮ ಸ್ಟರ್ಲಿಂಗ್‌ಗೆ ಇಳಿಸಲಾಯಿತು. ೧೮೬೯–೭೧ ಕ್ಕೆ ಈ ಬಾಬ್ತಿನ ವೆಚ್ಚದ ಅಂದಾಜು ೧,೦೦೦,೦೦೦ ಸ್ಟರ್ಲಿಂಗ್ ಆಗಿದ್ದರೆ, ಅದನ್ನು ಕೊನೆಗೆ ೭೮೪,೮೩೯ ಸ್ಟರ್ಲಿಂಗ್ ಎಂದು ನಿಗದಿ ಮಾಡಲಾಯಿತು. ಈ ಸುತ್ತೋಲೆಯ ಪ್ರಕಾರ ಈ ಹಣದ ಜೊತೆಗೆ ಸಾರ್ವಜನಿಕ

ಸುಧಾರಣೆಯ ಬಾಬ್ತಿನ ವೆಚ್ಚವೆಂದು ಪೂರಕವಾಗಿ ೨೯,೧೧೦ ಸ್ಟರ್ಲಿಂಗ್‌ಗಳನ್ನು ಗೊತ್ತು ಮಾಡಲಾಯಿತು.

"ಈ ಸುತ್ತೋಲೆಯಲ್ಲಿ ಸ್ಥಳೀಯ ಸರ್ಕಾರಗಳಿಗೆ ಸೂಚಿಸಲಾಗುತ್ತಿರುವ ವೆಚ್ಚದಲ್ಲಿನ ಕಡಿತಗಳು ಪ್ರಸಕ್ತ ಹಣಕಾಸು ತುರ್ತುಸ್ಥಿತಿಯಿಂದಾಗಿ ತಾತ್ಕಾಲಿಕವಾಗಿ ಮಾಡಲಾಗುತ್ತಿರುವ ಕಡಿತಗಳಲ್ಲವೆಂಬುದನ್ನು ಮನದಟ್ಟು ಮಾಡಿಕೊಳ್ಳಬೇಕಾಗಿದೆ. ಇದು ಖಚಿತವಾಗಿ ತೀರ್ಮಾನ ಕೈಗೊಳ್ಳಲಾಗಿರುವ ಕಾಯಂ ನೀತಿಯಾಗಿದೆ ಎಂಬುದನ್ನು ಸ್ಥಳೀಯ ಸರ್ಕಾರಗಳು ತಿಳಿಯತಕ್ಕದ್ದು. ಈ ತೀರ್ಮಾನವನ್ನು ತಾತ್ಕಾಲಿಕ ಪರಿಸ್ಥಿತಿಗಳನ್ನು ಗಮನಿಸುತ್ತಾ ತೆಗೆದುಕೊಳ್ಳಲಾಗುತ್ತದೆ. ಇದು ಪ್ರಸಕ್ತ ಪರಿಸ್ಥಿತಿಗಳಿಂದ ಪ್ರೇರಿತವಾಗದ ಉದ್ದೇಶಪೂರ್ವಕವಾದ ತೀರ್ಮಾನ. ಮುಂದಿನ ವರ್ಷಗಳಲ್ಲಿ ಸಹ ಈ ಬಾಬ್ತುಗಳ ಮೇಲಿನ ವಿಶೇಷ ಅನುದಾನವನ್ನು ಇನ್ನೂ ಕಡಿತ ಮಾಡುವ ಸಂಭವ ಹೆಚ್ಚಾಗಿದೆ. ಆದ್ದರಿಂದ ಸಾಧ್ಯವಾದಷ್ಟು ಬೇಗ ತಮ್ಮ ಸ್ವಂತ ಸಂಪನ್ಮೂಲಗಳಿಂದ ಸ್ಥಳೀಯ ಸರ್ಕಾರಗಳು ಪ್ರಾಂತೀಯ ಹಾಗೂ ಜಿಲ್ಲಾ ರಸ್ತೆಗಳ ನಿರ್ವಹಣೆ ಮತ್ತು ಪ್ರತಿನಿತ್ಯ ಬೇಡಿಕೆ ಹೆಚ್ಚಾಗುತ್ತಿರುವ ಹೊಸ ರಸ್ತೆಗಳ ನಿರ್ಮಾಣವನ್ನು ಕೈಗೊಳ್ಳಬೇಕು."

ಹಣಕಾಸು ಪುನರ್ವ್ಯವಸ್ಥೆಯ ಆಲೋಚನೆಯ ಉದ್ದಕ್ಕೂ, ಸ್ಥಳೀಯ ಬೇಡಿಕೆಗಳನ್ನು ಸ್ಥಳೀಯ ವರಮಾನ ಮೂಲಗಳಿಂದಲೇ ಪೂರೈಸಬೇಕೆಂಬುದು ಭಾರತದ ಹಣಕಾಸು ತಜ್ಞರ ಆದರ್ಶವಾಗಿತ್ತು. ಆದರೆ ೧೮೬೦ರ ವೇಳೆಗೆ ಈ ಆಲೋಚನೆ ಕ್ರಿಯಾತ್ಮಕವಾಗಿ ಹೊರಬಂದಿತು ಎನ್ನುವುದು ಸ್ಪಷ್ಟ. ಏಕೆಂದರೆ, ಸುತ್ತೋಲೆಯ ಪ್ರಕಾರ "ಭವಿಷ್ಯದಲ್ಲಿ ಈ ತತ್ವವನ್ನು ಸಂಪೂರ್ಣವಾಗಿ ಜಾರಿಗೊಳಿಸಬೇಕೆಂದು ಗವರ್ನರ್–ಜನರಲ್ ತೀರ್ಮಾನಿಸಿದ್ದಾರೆ". ಅನೇಕ ಸ್ಥಳೀಯ ಸರ್ಕಾರಗಳು ಭಾರತ ಸರ್ಕಾರ ತನ್ನ ಸುತ್ತೋಲೆಯಲ್ಲಿ ನೀಡಿದ್ದ ಸೂಚನೆಗಳನ್ನು ಗಂಭೀರವಾಗಿ ತೆಗೆದುಕೊಂಡು ಸ್ಥಳೀಯ ವರಮಾನ ಮೂಲಗಳನ್ನು ರೂಢಿಸುವ ಪ್ರಯತ್ನದಲ್ಲಿ ತೊಡಗಿದವು. ಬೊಂಬಾಯಿ ಪ್ರಾಂತ್ಯದಲ್ಲಿ ಭೂ ಕಂದಾಯದ ಮೇಲೆ ಶೇ. ೬ ೧/೪ರ ಮೇಲ್ತೆರಿಗೆಯನ್ನು ವಿಧಿಸಲಾಯಿತು. ಇದರಿಂದ ಬಂದ ಆದಾಯದ ೨/೩ರಷ್ಟನ್ನು ರಸ್ತೆಗಳಿಗೆ ಮತ್ತು ಸಾರ್ವಜನಿಕ ಉಪಯೋಗಗಳ ವೆಚ್ಚಗಳಿಗೆ ತೆಗೆದಿಡಲಾಯಿತು. ಮದರಾಸು ಸರ್ಕಾರ ೧೮೬೬ರ ಹಳೆಯ ಕಾನೂನಿನ ಪ್ರಕಾರ ವಾರ್ಷಿಕ ಗೇಣಿಯ ಶೇ. ೩ ೧/೮ರಷ್ಟಾಗುವಂತೆ ೧ ರೂ. ನ ಮೇಲೆ ೧/೨ ಆಣೆಯಷ್ಟು ಮೇಲ್ತೆರಿಗೆಯನ್ನು ವಿಧಿಸಿತು. ಇದನ್ನು ಜಿಲ್ಲಾ ರಸ್ತೆಗಳ ಉದ್ದೇಶಕ್ಕಾಗಿ ಬಳಸಲಾಗುತ್ತಿತ್ತು. ಬಂಗಾಳ ಸರ್ಕಾರವು, ಮದರಾಸು ಪ್ರಾಂತ್ಯದ ಮಾದರಿಯನ್ನು ಅನುಸರಿಸುವ ಇಚ್ಛೆಯನ್ನು ವ್ಯಕ್ತಪಡಿಸಿತು. ಸ್ಥಳೀಯ ಸರ್ಕಾರಗಳ ಈ ಕ್ರಮಗಳಿಂದ ಉತ್ತೇಜಿತವಾಗಿ ಕೇಂದ್ರ ಸರ್ಕಾರವು ಸುತ್ತೋಲೆಯೊಂದರ ಮೂಲಕ ಇತರ ಸ್ಥಳೀಯ ಸರ್ಕಾರಗಳೂ ಸಹ ಈ ಕ್ರಮವನ್ನು ಅನುಸರಿಸುವಂತೆ ಒತ್ತಾಯಿಸಿತು. ಮುಖ್ಯವಾಗಿ ಉತ್ತರ ಭಾರತದ ವಾಯವ್ಯ ಪ್ರಾಂತ್ಯಗಳು, ಪಂಜಾಬ್ ಮತ್ತು ಕೇಂದ್ರ ಪ್ರಾಂತ್ಯಗಳು ಭೂ ಕಂದಾಯದ ಮೇಲೆ ರಸ್ತೆ ಮೇಲ್ತೆರಿಗೆಯನ್ನು ಶೇ ೫. ರಷ್ಟಕ್ಕೆ ಹೆಚ್ಚಿಸಬೇಕೆಂದು ಸೂಚಿಸಲಾಯಿತು. ಈ ಯೋಜನೆಯ ಮುಖ್ಯ ಉದ್ದೇಶವೆಂದರೆ, ಸ್ಥಳೀಯ ಸರ್ಕಾರಗಳು ತಮ್ಮಲ್ಲಿರುವ ವರಮಾನವನ್ನು ರೂಢಿಸಿಕೊಂಡು ಕೇಂದ್ರದ ಖಜಾನೆಯಿಂದ ರಸ್ತೆಯ ನಿರ್ಮಾಣ ಮತ್ತು ನಿರ್ವಹಣೆಗಾಗಿ ದೊರೆಯುತ್ತಿದ್ದ ಸಹಾಯ ಧನದ ಭಾರವನ್ನು ಕಡಿಮೆ ಮಾಡುವುದಾಗಿತ್ತು.

ಹೀಗೆ, ಪ್ರಾಂತೀಯ ಬಜೆಟ್ ಯೋಜನೆಯನ್ನು ರೂಪಿಸುವ ಸುತ್ತೋಲೆ ಸ್ಥಳೀಯ ವರಮಾನ ಮೂಲಗಳಿಂದ ಕೇವಲ ಸ್ಥಳೀಯ ಸಾರ್ವಜನಿಕ ಕಾಮಗಾರಿಗಳ ಸುಧಾರಣೆಯ ಬಗ್ಗೆ ವಿಚಾರ ಮಾಡಿತ್ತು. ಆದರೆ ಈ ಸುತ್ತೋಲೆಯ ಕ್ರಮಗಳನ್ನು ಜಾರಿಗೆ ತರುವುದಕ್ಕೆ ಮೊದಲೇ ಭಾರತ ಸರ್ಕಾರ ಎದುರಿಸಬೇಕಾಗಿ

ಬಂದ ತೀವ್ರತರವಾದ ಹಣಕಾಸು ತೊಂದರೆಗಳಿಂದಾಗಿ ಹೆಚ್ಚಿನ ಮಟ್ಟದ ಸುಧಾರಣೆಗಳು ಅಗತ್ಯವಾದವು. ಈ ವೇಳೆಗೆ ಅಫೀಮಿನಿಂದ ಬರುತ್ತಿದ್ದ ವರಮಾನದ ಮೇಲೆ ಬಹಳ ಕಡಿಮೆ ಭರವಸೆಯನ್ನಿಟ್ಟುಕೊಳ್ಳುವಂತಾಗಿತ್ತು. ವೆಚ್ಚದಲ್ಲಿ ಕಡಿತವನ್ನು ಜಾರಿಗೆ ತರಲಾಗುತ್ತಿದ್ದರೂ, ಸಾರ್ವಜನಿಕ ಸಾಲದ ಮೇಲಿನ ಬಡ್ಡಿ ಮಾತ್ರ ವಿಪರೀತವಾಗಿ ಬೆಳೆಯುತ್ತಿತ್ತು. ಇಂಥ ಗಂಭೀರ ಪರಿಸ್ಥಿತಿಯಲ್ಲಿ ಭಾರತ ಸರ್ಕಾರ ಶ್ರೀಮಂತ ವರ್ಗದವರ ಕಟು ಟೀಕೆಯನ್ನು ತಡೆಯಲು ಇದುವರೆಗೆ ಜಾರಿಯಲ್ಲಿದ್ದ ಆದಾಯ ತೆರಿಗೆಯ ದರವನ್ನು ಇಳಿಸಲು ತೀರ್ಮಾನಿಸಿತು. ಆದಾಯ ತೆರಿಗೆಯಿಂದ ಉಂಟಾಗುತ್ತಿದ್ದ ೧,೦೦೦,೦೦೦ ಸ್ಟರ್ಲಿಂಗ್‌ಗಳ ಕೊರತೆಯನ್ನು ತುಂಬಿಕೊಳ್ಳಲು, ಆಗಸ್ಟ್ ೧೭, ೧೮೭೦ ರಂದು ಮತ್ತೊಂದು ಸುತ್ತೋಲೆಯನ್ನು ಹೊರಡಿಸಿತು. ಇದರ ಮೂಲಕ ಈಗಾಗಲೇ ಯೋಜಿಸಿದ್ದ ಪ್ರಾಂತೀಯ ಬಜೆಟ್‌ಗಳಿಗೆ ಇನ್ನೂ ವಿಸ್ತೃತ ವ್ಯಾಪ್ತಿಯನ್ನು ಕೊಡಲಾಯಿತು. ಈ ಸುತ್ತೋಲೆಯ ಪ್ರಕಾರ :

"ಆದಾಯ ತೆರಿಗೆಯನ್ನು ಕಡಿಮೆ ಮಾಡಬೇಕಾದರೆ, ಸರ್ಕಾರದ ವರಮಾನ ಮೂಲಗಳನ್ನು ಬೇರೆ ಕಡೆಗಳಿಂದ ರೂಢಿಸಿಕೊಳ್ಳಬೇಕು... ಮುಖ್ಯವಾಗಿ ಸ್ಥಳೀಯ ಸರ್ಕಾರಗಳ ಮಾಧ್ಯಮದ ಮೂಲಕ ಹೀಗೆ ಮಾಡಬಹುದು. ಪ್ರತಿಯೊಂದು ಪ್ರಾಂತ್ಯದ ಯುಕ್ತವಾದ ಮತ್ತು ಅಲ್ಲಿನ ಜನರಿಗೆ ಹೆಚ್ಚು ಭಾರವಾಗದಂತಹ ತೆರಿಗೆ ವಿಧಾನವನ್ನು ರೂಪಿಸುವುದು ಈ ದೃಷ್ಟಿಯಿಂದ ಯುಕ್ತ."

ಸ್ಥಳೀಯ ಸರ್ಕಾರಗಳ ಮೇಲೆ ಹೊರೆಯನ್ನು ಹೊರಿಸಲು ಇದ್ದ ಯುಕ್ತವಾದ ಮಾರ್ಗವೆಂದರೆ, ಹೆಚ್ಚು–ಕಡಿಮೆ ಸ್ಥಳೀಯ ಸ್ವರೂಪ ಉಳ್ಳ ಆಡಳಿತದ ಕೆಲವು ಬಾಬ್ತುಗಳನ್ನು ಅವುಗಳಿಗೆ ವಹಿಸಿಕೊಡುವುದಾಗಿತ್ತು. ೧೮೭೦–೭೧ಕ್ಕೆ ಸಂಬಂಧಿಸಿದಂತೆ ಒಂದು ದಶ ಲಕ್ಷ ಸ್ಟರ್ಲಿಂಗ್‌ಗಳಷ್ಟು ನಿವ್ವಳ ಹಣಸಹಾಯ ಕೇಂದ್ರದಿಂದ ಕಡಿಮೆಯಾಗುವ ರೀತಿಯಲ್ಲಿ ಇದನ್ನು ರೂಪಿಸಬೇಕಾಗಿತ್ತು.[೧] ಈ ಮೊತ್ತವನ್ನು ವಿವಿಧ ಪ್ರಾಂತ್ಯಗಳ ನಡುವೆ ಹಂಚಲು ಉದ್ದೇಶಿಸಲಾಯಿತು. ಈ ಹಂಚಿಕೆ ಒಟ್ಟು ನಿವ್ವಳ ಧನಸಹಾಯಕ್ಕೆ ಪ್ರತಿ ಪ್ರಾಂತ್ಯ ನೀಡುತ್ತಿದ್ದ ಹಣದ ಆಧಾರದ ಮೇಲೆ ಆಗಬೇಕು. ಆದರೆ ಪ್ರತಿ ಪ್ರಾಂತ್ಯವೂ ಈ ಹೊಂದಾಣಿಕೆಯನ್ನು ಹಣದ ವೆಚ್ಚದ ಇಳಿತಾಯ, ವಿವಿಧ ಬಾಬ್ತುಗಳ ನಡುವೆ ಅದರ ಹಂಚಿಕೆಯಲ್ಲಿ ಹೊಂದಾಣಿಕೆ ಅಥವಾ ತೆರಿಗೆಗಳ ಮೂಲಕ ಮಾಡಬಹುದು.

ಸುತ್ತೋಲೆಯಲ್ಲಿ ಸೂಚಿಸಿದ್ದ ಯೋಜನೆಗೆ ಪ್ರಾಂತೀಯ ಸರ್ಕಾರಗಳ ಒಪ್ಪಿಗೆಯನ್ನು ಪಡೆದುಕೊಂಡ ಮೇಲೆ, ೧೮೭೦ರ ಡಿಸೆಂಬರ್ ೧೪ರ ಪ್ರಸಿದ್ಧ ಗೊತ್ತುವಳಿಯ ಮೂಲಕ ೧೮೭೧–೭೨ರ ಹಣಕಾಸು ವರ್ಷದ ಆರಂಭದಿಂದ ಜಾರಿಗೆ ತರಬೇಕೆಂದು ಪ್ರಕಟಿಸಲಾಯಿತು.

ಗೊತ್ತುವಳಿಯ ಮೂಲಕ ಜಾರಿಗೆ ತರಲಾದ ಪ್ರಾಂತೀಯ ಬಜೆಟ್‌ಗಳ ಸ್ವರೂಪವನ್ನು ಈಗ ನಾವು ವಿಶ್ಲೇಷಿಸೋಣ. ಪ್ರಾಂತೀಯ ಬಜೆಟ್‌ನ ವೆಚ್ಚದ ಭಾಗವನ್ನು ಮೊದಲು ನೋಡೋಣ. ಈ ಬಾಬ್ತುಗಳಿಗೆ ಕೆಳಗಿನ ಸಾಮ್ರಾಜ್ಯಶಾಹಿ ಸೇವೆಗಳನ್ನೂ ಸೇರಿಸಲಾಯಿತು:

---

೧. ನಿವ್ವಳ ಧನಸಹಾಯವೆಂದರೆ ಸೇವೆಗಳಿಂದ ಬರುವ ಆದಾಯದಿಂದ ಸೇವೆಗಳಿಗಾಗಿ ಮಾಡುವ ಖರ್ಚನ್ನು ಕಳೆಯುವುದರಿಂದ ಬರುವ ಮೊತ್ತವಾಗಿತ್ತು.

*೧. ಜೈಲುಗಳು
೨. ನೋಂದಣಿ
೩. ಪೊಲೀಸ್
೪. ಶಿಕ್ಷಣ
೫. ವೈದ್ಯಕೀಯ ಸೇವೆಗಳು (ವೈದ್ಯಕೀಯ ಸಂಸ್ಥೆಗಳನ್ನು ಬಿಟ್ಟು)
೬. ಮುದ್ರಣ
೭.ರಸ್ತೆಗಳು
೮. ಸಾದಿಲ್ವಾರು, ಸಾರ್ವಜನಿಕ ಸುಧಾರಣೆಗಳು
೯. ನಾಗರಿಕ ಕಟ್ಟಡಗಳು.

ಮೇಲಿನ ಬಾಬ್ತುಗಳಿಗಾಗಿ, ಪ್ರಾಂತೀಯ ಬಜೆಟ್‌ಗಳಿಗೆ ಬೇಕಾದ ಹಣವನ್ನು ಪೂರೈಸಲು, ಅವುಗಳಿಗೆ ವಹಿಸಲಾದ ಬಾಬ್ತುಗಳಿಂದ ಬರುತ್ತಿದ್ದ ಹಣವನ್ನು ಕೊಡಬೇಕು ಮತ್ತು ಜೊತೆಗೆ ಸಾಮ್ರಾಜ್ಯಶಾಹಿ ಬೊಕ್ಕಸದಿಂದ ಸಹ ಸ್ವಲ್ಪ ಹಣವನ್ನು ಈ ಉದ್ದೇಶಕ್ಕಾಗಿ ಕೊಡಬೇಕು ಎಂದಾಯಿತು. ಈ ಬಾಬ್ತುಗಳ ವರಮಾನ ಮತ್ತು ಸಾಮ್ರಾಜ್ಯಶಾಹಿ ನೀಡಿಕೆ ಮುಂದಿನಂತಿದೆ:–

---

* ಗೊತ್ತುವಳಿಯ ಅನುಬಂಧ ೨ ರಲ್ಲಿ ಸಾಮ್ರಾಜ್ಯಶಾಹಿ ಆದಾಯದಿಂದ ಕೆಲವು ಬಾಬ್ತುಗಳಿಗೆ ಕೊಡಲಾಗುವ ಹಣವನ್ನು ನಿಗದಿ ಮಾಡಲಾಗಿತ್ತು. ಈ ಬಾಬ್ತುಗಳು ಕೆಳಗಿನ ಇಲಾಖೆಗಳ ಕಟ್ಟಡಗಳು ಮತ್ತು ಕಚೇರಿಗಳನ್ನು ಒಳಗೊಂಡಿದ್ದವು:
ಅಫೀಮು (ಕಲ್ಕತ್ತಾದ ಬೋರ್ಡ್ ಆಫ್ ರೆವಿನ್ಯೂಸ್ ಕಚೇರಿಯ ಹೊರತಾಗಿ)
ಮಿಂಟ್ ಮತ್ತು ಕರೆನ್ಸಿ, ಅಂಚೆ ಕಚೇರಿ, ಟೆಲಿಗ್ರಾಫ್,
ಸುಪ್ರೀಂ ಗವರ್ನಮೆಂಟ್‌ನ ಕಚೇರಿಗಳು, ವೈಸ್‌ರೀಗಲ್ ನಿವಾಸಗಳು,
ಸಾಮ್ರಾಜ್ಯಶಾಹಿ ಮ್ಯೂಜಿಯಂಗಳು,
ಸ್ಟಾಂಪ್ ಮತ್ತು ಸಾಮಗ್ರಿ ಕಚೇರಿಗಳು
ಟ್ರೆಜರಿ ಕಟ್ಟಡಗಳು,
ಬಿಷಪ್ ಪ್ಯಾಲೇಸ್, ಗೋದಾವರಿ ವರ್ಕ್ಸ್,
ಕರಾಚಿ ಹಾರ್ಬರ್ ಇಂಪ್ರೂವ್‌ಮೆಂಟ್ಸ್
ಸದ್ಯಕ್ಕೆ ಸಾಮ್ರಾಜ್ಯಶಾಹಿಗಾಗಿ ಮೀಸಲಾಗಿರುವುದು
ಅಂಥ ಮಿಲಿಟರಿ ರಸ್ತೆಗಳಿಗೆ "ಮಿಲಿಟರಿ ವರ್ಕ್ಸ್" ಅನುದಾನದಿಂದ ಈ ವರ್ಷದವರೆಗೆ ಒದಗಿಸಲಾಗಿತ್ತು.

## ೧೮೭೦ ಡಿಸೆಂಬರ್ ೧೪ರ ಸುತ್ತೋಲೆ ೩,೩೩೪ರ ಪ್ರಕಾರ ಪ್ರಾಂತೀಯ ಸರ್ಕಾರಗಳಿಗೆ, ಅವುಗಳ ಬಜೆಟ್‌ನಲ್ಲಿ ಸೇರಿಸಲಾದ ಸೇವೆಗಳಿಗೆ ನೀಡಿಕೆ ಮಾಡಲಾದ ಹಣದ ವಿವರ

| ಪ್ರಾಂತೀಯ ಬಜೆಟ್‌ಗಳಿಗೆ ಸೇರಿಸಲಾದ ಬಾಬ್ತುಗಳು | ಸೇವೆಗಳಿಗೆ ಸಾಮ್ರಾಜ್ಯಶಾಹಿ ನೀಡಿಕೆಗಳು | | | | | | | | |
|---|---|---|---|---|---|---|---|---|---|
| | ಔಧ್ | ಸಿ.ಪಿ, | ಬರ್ಮಾ | ಬಂಗಾಳ | ವಾಯವ್ಯ ಪ್ರಾಂತ್ಯ | ಪಂಜಾಬ್ | ಮದರಾಸು | ಮುಂಬಯಿ | ಒಟ್ಟು |
| | £ | £ | £ | £ | £ | £ | £ | £ | £ |
| ಜೈಲುಗಳು | ೨೯೭೭ | ೨೬೮೧ | ೩೭೬೬೬ | ೨೧೮,೨೧೦ | ೮೩೬೪ | ೫೮,೨೦೪ | ೯೧೯೮೩ | ೭೩೪೦ | ೬೧೭೮೧೧ |
| ನೊಂದಣಿ | – | ೩೪೯೯ | – | ೩೬೬೯ | ೨೦೧೯ | ೧೧೬೮೩ | ೨೨೯೭೦ | ೨೫೩೭೨ | ೧೨೦,೨೧೨ |
| ಪೊಲೀಸ್ | ೧೦೩,೨೯೬ | ೧೩೦,೬೦೭ | ೧೯೭,೨೫೩ | ೫೫೫,೭೫೭ | ೩೪೮,೧೩೫ | ೨೯೯,೫೫೦ | ೩೫೦,೭೩೦ | ೩೨೮,೭೦೩ | ೨,೩೦೬,೪೯೯ |
| ಶಿಕ್ಷಣ | ೨೬,೦೫೬ | ೨೭,೮೬೪ | ೧೯,೯೯೮ | ೨೩೪,೩೮೫ | ೧,೦೩೫೩೮ | ೬೪,೯೯೯ | ೯೦,೦೫೨ | ೧೧೮,೨೭೧ | ೬೭೬,೦೬೩ |
| ವೈದ್ಯಕೀಯ ಸೇವೆಗಳು (ವೈದ್ಯಕೀಯ ಸಂಸ್ಥೆಗಳನ್ನು ಬಿಟ್ಟು) | ೫,೦೪೯ | ೧೧,೭೭೦ | ೬,೪೬೦ | ೮೯,೭೧೩ | ೨೭,೬೦೭ | ೨೪,೯೩೫ | ೬೧,೯೬೭ | ೭೪,೮೫೨ | ೩೦೨,೫೫೨ |
| ಮುದ್ರಣ | ೭೬೯೯ | ೩೬೪೦ | ೩,೦೦೦ | ೪೧,೭೫೨ | ೨೫೩೦೨ | ೧೪,೧೦೬ | ೨೫೮೪೦ | ೨೭,೦೫೦ | ೧೪೮,೨೯೭ |
| ರಸ್ತೆ ಮುಂತಾದ ಸಾರ್ವಜನಿಕ ಸುಧಾರಣೆಗಳಿಗೆ | ೩೯೯೦೦ | ೬೩,೪೦೩ | ೬೩,೦೦೦ | ೧೫೭,೮೦೦ | ೮೨,೬೩೬ | ೮೫,೨೦೦ | ೧೨೩,೮೮೦ | ೧೨೧,೯೦೦ | ೭೯೯,೮೯೯ |
| ನಾಗರಿಕ ಕಟ್ಟಡಗಳು | ೨೦೯೯೦ | ೧೪೪,೪೦೬ | ೨೩೯೫೯ | ೧೧೧,೩೭೦ | ೬೩,೩೪೧ | ೫೯,೭೧೦ | ೫೮,೫೦೬ | ೧೦೭,೫೦೦ | ೪೩೮,೮೮೨ |
| ಕಾಮಗಾರಿ ಕಾರ್ಯಗಳ ಸಿಬ್ಬಂದಿ ವೆಚ್ಚ | ೧೩,೭೭೭ | ೨೦,೨೩೦ | ೨೭,೬೩೫ | ೯೯,೮೫೪ | ೩೭,೯೫೪ | ೩೨,೨೧೭ | ೪೭,೪೨೧ | ೫೯,೬೪೪ | ೩೦೩,೮೫೨ |
| ಉಪಕರಣಗಳು ಮತ್ತು ಸ್ಥಾವರ | ೧,೦೬೦ | ೧,೫೫೬ | ೧,೭೪೧ | ೫,೩೬೩ | ೨೯೨೦ | ೨,೪೭೮ | ೩,೬೪೮ | ೪,೫೫೮ | ೨೩,೩೭೪ |
| **ಒಟ್ಟು** | **೨೩೭,೧೮೭** | **೩೦೪,೮೬೬** | **೩೦೨,೯೨೩** | **೧,೫೨೦,೯೪೩** | **೭೯೯,೯೪೬** | **೬೨೨,೩೫೨** | **೮೬೬,೭೦೬** | **೧,೦೦೧,೩೨೦** | **೫,೬೬೬,೭೪೩** |

| ಪ್ರಾಂತೀಯ ಬಜೆಟ್‌ಗಳಿಗೆ ಸೇರಿಸಲಾದ ಬಾಬ್ತುಗಳು | ಸೇವೆಗಳಿಂದ ನಿರೀಕ್ಷಿಸಲಾದ ಅಂದಾಜು ಆದಾಯ | | | | | | | | |
|---|---|---|---|---|---|---|---|---|---|
| | ಔಧ್ | ಸಿ.ಪಿ. | ಬರ್ಮಾ | ಬಂಗಾಳ | ವಾಯವ್ಯ ಪ್ರಾಂತ್ಯ | ಪಂಜಾಬ್ | ಮದರಾಸು | ಮುಂಬಯಿ | ಒಟ್ಟು |
| ಜೈಲುಗಳು | ೧,೫೭೫ | ೬,೦೦೦ | ೯,೪೨೦ | ೧೧೦,೩೮೫ | ೧೧,೧೫೪ | — | ೭,೩೦೦ | ೬೬೪ | ೧೪೬,೪೯೮ |
| ರಿಜಿಸ್ಟ್ರೇಷನ್ | — | ೫,೫೦೦ | — | ೪೦,೦೦೦ | ೩೫,೦೩೦ | ೨೦,೬೯೪ | ೩೪,೦೦೦ | ೩೦,೧೪೧ | ೧೬೫,೩೫೬ |
| ಪೊಲೀಸ್ | ೧೦,೫೮೬ | ೧೨,೫೨೦ | ೧೮,೬೭೧ | ೭೦,೩೬೩ | ೫೧,೭೩೦ | ೪೧,೭೨೪ | ೩೨,೩೫೦ | ೧೪,೦೦೦ | ೨೫೧,೬೪೪ |
| ಶಿಕ್ಷಣ | ೧,೪೮೨ | — | ೫೦೦ | ೪೨,೦೧೨ | ೧೧,೦೫೦ | ೫,೦೦೦ | ೬,೯೦೦ | ೧೦,೪೮೦ | ೭೭,೪೨೪ |
| ಮುದ್ರಣ | ೧,೦೮೦ | — | — | ೨,೦೦೦ | ೨,೧೬೦ | — | ೧,೨೬೦ | — | ೬,೫೦೦ |
| **ಒಟ್ಟು** | **೧೪,೭೨೩** | **೨೪,೦೨೦** | **೨೮,೫೯೧** | **೨೬೪,೭೬೦** | **೧೧೧,೧೨೪** | **೬೭,೪೧೮** | **೮೧,೮೧೦** | **೫೫,೨೮೫** | **೬೪೭,೭೩೧** |
| **ನಿವ್ವಳ ಹಂಚಿಕೆಯ ಒಟ್ಟು ಮೊತ್ತ** | **೨೨೨,೪೫೯** | **೨೮೦,೮೪೬** | **೨೭೫,೩೩೨** | **೧,೨೫೬,೧೮೩** | **೬೮೮,೮೨೨** | **೫೫೪,೯೧೪** | **೭೯೪,೯೧೬** | **೯೪೬,೦೪೦** | **೫,೦೧೯,೫೧೨** |

**ಡಿಸೆಂಬರ್ ೧೪,೧೮೭೦ರ ಗೊತ್ತುವಳಿಯಲ್ಲಿ ನೀಡಲಾಗಿರುವ ಅಂಕಿಸಂಖ್ಯೆಗಳ ಆಧಾರದ ಮೇಲೆ ಈ ಪಟ್ಟಿಯನ್ನು ತಯಾರಿಸಲಾಗಿದೆ.**

ಪ್ರಾಂತೀಯ ಸರ್ಕಾರಗಳಿಗೆ ವಹಿಸಲಾದ ಬಾಬ್ತುಗಳಿಗೆ ತಗಲುತ್ತಿದ್ದ ವೆಚ್ಚಗಳನ್ನು ಪೂರೈಸಲು ಮೇಲಿನ ಪಟ್ಟಿಯಲ್ಲಿ ಸೂಚಿಸಲಾದ ರೀತಿಯಲ್ಲಿ ಯೋಜಿಸಬೇಕೆಂದು ಗೊತ್ತುಮಾಡಲಾಯಿತು. ಆದಾಯ ತೆರಿಗೆಯನ್ನು ಇಳಿಸುವುದರಿಂದ ಉಂಟಾಗುತ್ತಿದ್ದ ಕೊರತೆಯನ್ನು ಭಾರತ ಸರ್ಕಾರ, ಪ್ರಾಂತೀಯ ಸರ್ಕಾರಗಳಿಗೆ ವಿವಿಧ ಬಾಬ್ತುಗಳು ಮತ್ತು ಖರ್ಚುಗಳನ್ನು ವರ್ಗಾಯಿಸುವುದರ ಮೂಲಕ ಪೂರೈಸಿಕೊಳ್ಳಲು ಯೋಜಿಸಿತ್ತು. ಮೊದಲು ಯೋಜಿಸಲಾಗಿದ್ದ ೧,೦೦೦,೦೦೦ ಸ್ಟರ್ಲಿಂಗ್‌ಗಳಷ್ಟು ಖರ್ಚಿನಲ್ಲಿ ೩೫೦,೦೦೦ ಸ್ಟರ್ಲಿಂಗ್‌ಗಳಷ್ಟನ್ನು ಕಡಿತಗೊಳಿಸಲಾಯಿತು. ಇಷ್ಟನ್ನು ವಿವಿಧ ಪ್ರಾಂತ್ಯಗಳ ನಡುವೆ ಹಂಚಬೇಕಾಗಿತ್ತು. ಈ ರೀತಿಯ ಖರ್ಚಿನ ಕಡಿತಗಳನ್ನು ಲೆಕ್ಕಕ್ಕೆ ಹಿಡಿಯುತ್ತಾ ವಿವಿಧ ಪ್ರಾಂತ್ಯಗಳಿಗೆ ಕಾಯಂ ಆಗಿ ಗೊತ್ತುಮಾಡಲಾದ ಹಣದ ಮೊತ್ತವನ್ನು ಕೆಳಗೆ ಸೂಚಿಸಲಾಗಿದೆ :–

| **ಪ್ರಾಂತ್ಯಗಳು** | **ಮುಂದಿನ ಹಂಚಿಕೆ ಮೊತ್ತ** | **ಕಡಿತದ ಭಾಗಾಂಶ** | **ಕಾಯಂ ಆಗಿ ಗೊತ್ತು ಮಾಡಲಾದ ಮೊತ್ತ** |
|---|---|---|---|
| ಔಧ್ | ೨೨೨,೪೫೯ | ೧೫,೫೧೧ | ೨೦೬,೯೪೮ |
| ಸಿ.ಪಿ. | ೨೮೦,೮೪೯ | ೧೯,೫೮೩ | ೨೬೧,೨೬೩ |
| ಬರ್ಮಾ | ೨೭೫,೩೩೨ | ೧೯,೧೯೯, | ೧೭೫,೩೩೨ |
| ಬಂಗಾಳ | ೧,೨೫೬,೧೮೩ | ೮೭,೫೯೧ | ೧,೧೬೮,೭೯೨ |
| ವಾಯವ್ಯ ಪ್ರಾಂತ್ಯಗಳು | ೬೮೮,೮೨೨ | ೪೮,೦೩೦ | ೬೪೦,೭೯೨ |
| ಪಂಜಾಬ್ | ೫೫೪,೯೧೪ | ೩೮,೬೯೩ | ೫೧೬,೨೨೧ |
| ಮದರಾಸು | ೭೯೪,೯೧೬ | ೫೫,೪೨೮ | ೭೩೯,೪೮೮ |
| ಮುಂಬಯಿ | ೯೪೬,೦೪೦ | ೬೫,೯೬೫ | ೮೮೦,೦೭೫ |
| **ಒಟ್ಟು** | **೫,೦೧೯,೫೧೨** | **೩೫೦,೦೦೦** | **೪,೬೮೮,೭೧** |

ಪರಿವರ್ತನೆಯ ದರ ೧ = ರೂ. ೧೦.

ಈ ಯೋಜನೆಯನ್ನು ಕಾರ್ಯಗತ ಮಾಡಲು ಗೊತ್ತುಮಾಡಲಾಗಿದ್ದ ಸಮಯಕ್ಕಿಂತ ಮುಂಚೆ ಭಾರತ ಸರ್ಕಾರ ಕೆಳಗಿದ್ದ ಬಾಬ್ತುಗಳನ್ನು ಸಹ ಪ್ರಾಂತೀಯ ಬಜೆಟ್‌ಗಳ ಪಟ್ಟಿಗೆ ಸೇರಿಸಿತು.[೧] ಬಂಗಾಳದ ಅಫೀಮು ಇಲಾಖೆಯನ್ನು ಬಿಟ್ಟು ನಾಗರಿಕ ಇಲಾಖೆಯಲ್ಲಿ ಕಟ್ಟಡದ ರಿಪೇರಿ ಮತ್ತು ಸಣ್ಣಪುಟ್ಟ ಕಟ್ಟಡ ನಿರ್ಮಾಣಗಳು ಬಂಗಾಳದ ದಕ್ಷಿಣ ಪ್ರಾಂತ್ಯಗಳ ಹೊರಗಿದ್ದ ಉಪ್ಪಿನ ಇಲಾಖೆ, ಇದರ ಜೊತೆಗೆ ಕೆಳಗಿನ ವೈದ್ಯಕೀಯ ವೆಚ್ಚಗಳನ್ನು ಸಹ ಪ್ರಾಂತೀಯ ಬಜೆಟ್‌ಗಳಿಗೆ ಸೇರಿಸಲಾಯಿತು.

---

೧. ೧೮೭೧ ಮಾರ್ಚ್ ೨೦ ರ ಹಣಕಾಸು ಸುತ್ತೋಲೆ ಸಂಖ್ಯೆ ೧೬೫.

೧) ವೈದ್ಯಕೀಯ ಕಾಲೇಜುಗಳು, ವೈದ್ಯಕೀಯ ಸಿಬ್ಬಂದಿಯ ಸಂಬಳ ಸಾರಿಗೆ, ಕೇಂದ್ರ ಜೈಲುಗಳು, ಪ್ರೆಸಿಡೆನ್ಸಿ ಪಟ್ಟಣಗಳಲ್ಲಿದ್ದ ಹುಚ್ಚಾಸ್ಪತ್ರೆಗಳ ಸಿಬ್ಬಂದಿ ಸಂಬಳಗಳು, ೨) ಇತರ ಸಣ್ಣ ಪಟ್ಟಣಗಳಲ್ಲಿದ್ದ ಹುಚ್ಚಾಸ್ಪತ್ರೆಯಲ್ಲಿನ ವೈದ್ಯಕೀಯ ಸಿಬ್ಬಂದಿಯ ಅಧಿಕ ಭತ್ಯೆಗಳು, ಕಾಲೇಜುಗಳು, ಕೇಂದ್ರ ಜೈಲುಗಳು, ವೈದ್ಯಕೀಯ ಸಿಬ್ಬಂದಿಯ ಅಧಿಕ ಭತ್ಯೆಗಳು ಮತ್ತು ಜೈಲುಗಳಲ್ಲಿ ಆಡಳಿತಾಧಿಕಾರಕ್ಕಾಗಿ ವೈದ್ಯರಿಗೆ ದೊರೆಯುತ್ತಿದ್ದ ಅಧಿಕ ಭತ್ಯೆಗಳು, ೩) ಜಿಲ್ಲೆಗಳಲ್ಲಿ ನೇಮಿಸಿಕೊಳ್ಳಲಾಗಿದ್ದ ನಾಗರಿಕ ವೈದ್ಯರ ವೆಚ್ಚಗಳ ಹೊರತಾಗಿ, ಸಬ್ ಅಸಿಸ್ಟೆಂಟ್ ಸರ್ಜನ್‌ಗಳ ಭತ್ಯೆಗಳು ಮತ್ತು ಇತರ ಅಧೀನ ವೈದ್ಯಕೀಯ ಸಂಸ್ಥೆಗಳ ವೆಚ್ಚಗಳು.

ಈ ವರ್ಗಾವಣೆಯ ಜೊತೆಯಲ್ಲಿಯೇ ಭಾರತ ಸರ್ಕಾರ ಕಲ್ಕತ್ತಾ ವಿಶ್ವವಿದ್ಯಾನಿಲಯವನ್ನು ಪ್ರಾಂತೀಯ ಬಜೆಟ್‌ನಿಂದ ಸಾಮ್ರಾಜ್ಯದ ಬಜೆಟ್‌ಗೆ ವರ್ಗಾಯಿಸಿ ಕೊಂಡಿತು.[೧] ಸರ್ಕಾರದ ಅಂಚೆ ವೆಚ್ಚ[೨] ಮತ್ತು ಬಂಗಾಳ ಪೊಲೀಸು,[೩] ವೆಚ್ಚಗಳನ್ನು ಮರು ವಿಮರ್ಶಿಸಲು ಮತ್ತು ಮೇಲೆ ವಿವರಿಸಿದ ಸೇವೆಗಳಿಗೆ ತಗಲುತ್ತಿದ್ದ ಅಧಿಕ ವೆಚ್ಚ ಮತ್ತು ಕೆಲವು ಸೇವೆಗಳನ್ನು ಹಿಂತೆಗೆದುಕೊಂಡುದರ ಹಣಕಾಸು ಪರಿಣಾಮಗಳನ್ನು ವಿವರಿಸಲು ೧೮೭೧–೭೨ರ ಬಜೆಟ್ ಅನ್ನು ಮತ್ತೆ ಮಾರ್ಪಾಟು ಮಾಡಲಾಯಿತು. ಮಾರ್ಪಾಡಾದ ನಂತರ ವಿವಿಧ ಬಾಬ್ತುಗಳು ಮುಂದಿನ ಪಟ್ಟಿಯಲ್ಲಿದ್ದಂತಿದ್ದವು.

---

೧. ಭಾರತ ಸರ್ಕಾರದ ಸೆಕ್ರೆಟರಿಯವರ ಪತ್ರ, ಹಣಕಾಸು ಇಲಾಖೆ ಸಂಖ್ಯೆ ೧೬೮೩, ದಿನಾಂಕ ಮಾರ್ಚ್ : ೨೧, ೧೮೭೧.

೨. ಹಣಕಾಸು ಇಲಾಖೆಯ ಸುತ್ತೋಲೆ ಸಂಖ್ಯೆ ೧೬೪೯, ಮಾರ್ಚ್ ೨೦, ೧೮೭೧.

೩. ಹಣಕಾಸು ಇಲಾಖೆಯ ಸುತ್ತೋಲೆ ಸಂಖ್ಯೆ ೧೫೮೭, ಮಾರ್ಚ್ ೨೦, ೧೮೭೧.

## ೧೮೭೧–೭೨ಗಾಗಿ ಪ್ರಾಂತೀಯ ಕೊಡುಗೆ[೧]

| | ಔಧ್ | ಸಿ.ಪಿ. | ಬರ್ಮಾ | ಬಂಗಾಳ | ವಾಯವ್ಯ ಪ್ರಾಂತ್ಯ | ಪಂಜಾಬ್ | ಮದರಾಸು | ಬೊಂಬಾಯಿ | ಒಟ್ಟು |
|---|---|---|---|---|---|---|---|---|---|
| | £ | £ | £ | £ | £ | £ | £ | £ | £ |
| ಡಿಸೆಂಬರ್ ೧೪,೧೮೭೦ರ ಗೊತ್ತುವಳಿಯ ಪ್ರಕಾರ ಕೊಡುಗೆ | ೧೬೯,೩೫೫ | ೨೦೫,೭೭೧ | ೧೯೨,೪೮೮ | ೧,೧೭೬,೪೦೬ | ೬೧೩,೯೦೫ | ೪೬೩,೭೨೭ | ೬೪೩,೨೭೧ | ೭೦೭,೯೬೩ | ೪,೧೭೧,೩೦೬ |
| ಸೇರಿಸಿ | | | | | | | | | |
| ಅಧಿಕೃತ ಅಂಚೆ ವೆಚ್ಚ | ೧,೫೫೧ | ೫,೯೦೩ | – | ೪,೯೯೩ | ೧೦,೮೪೦ | ೮,೦೩೧ | ೪,೧೬೩ | ೪,೩೧೧ | ೩೮,೮೮೨ |
| ವೈದ್ಯಕೀಯ ಸೇವೆಗಳಿಂದ ವರ್ಗಾವಣೆ | ೨,೭೩೯ | ೧,೭೬೭ | ೭೪೫ | ೬,೬೪೯ | ೫,೬೨೪ | ೨,೮೨೮ | ೭,೫೯೭ | ೮,೫೦೦ | ೩೫,೮೪೯ |
| ಸಣ್ಣ ನಿರ್ಮಾಣ ಮತ್ತು ನಾಗರಿಕ ಕಟ್ಟಡಗಳ ವರ್ಗಾವಣೆ | ೯೯ | ೧,೭೭೮ | ೪೨೦ | ೬,೫೦೮ | ೨,೫೫೫ | ೧,೯೦೮ | ೧,೦೫೦ | ೪,೦೫೦ | ೧೮,೯೬೮ |
| ಇತರೆ ಬಾಬ್ತುಗಳ ನಿವ್ವಳ | – | – | – | ೭,೮೬೬ | ೧,೪೮೫ | – | – | ೪,೬೦೦ | ೧೮,೭೫೩ |
| ಕಳೆಯಿರಿ | | | | | | | | | |
| ಭಾರತ ಸರ್ಕಾರಕ್ಕೆ ಅಜಮೀರ್ ವೆಚ್ಚದ ವರ್ಗಾವಣೆ | – | – | – | – | ೬೩೩,೫೯೯ | | | | ೪,೨೭೮,೭೫೮ |
| | | | | | ೨೮,೭೧೪ | – | – | – | ೨೮,೭೧೪ |
| **ಒಟ್ಟು** | **೧೭೩,೭೪೪** | **೨೧೩,೯೧೯** | **೧೯೩,೬೫೩** | **೧,೨೦೨,೧೨೪** | **೬೦೪,೮೮೫** | **೪೭೬,೪೯೪** | **೬೫೬,೦೮೧** | **೭೨೯,೧೫೪** | **೪,೨೫೦,೦೪೪** |
| ಕಳೆಯಿರಿ | | | | | | | | | |
| ೧೮೭೦–೭೧ರ ಬಜೆಟ್‌ನಂತೆ ಪಾವತಿಗಳು | ೧೪,೭೨೩ | ೨೪,೦೨೦ | ೨೮,೫೯೧ | ೨೬೦,೫೭೮ | ೧೯೯,೯೭೨ | ೬೭,೪೧೮ | ೮೧,೮೧೦ | ೫೫,೨೮೫ | ೬೪೨,೪೧೭ |
| ನಾಗರಿಕ ಇಲಾಖೆಯಲ್ಲಿ ನಿವ್ವಳ ಖರ್ಚು | ೧೫೫,೦೨೧ | ೧೯೯,೮೯೯ | ೧೬೫,೦೬೨ | ೯೪೧,೫೪೬ | ೪೯೪,೯೯೩ | ೪೦೯,೦೭೬ | ೫೭೪,೨೭೧ | ೬೭೩,೮೬೯ | ೩,೬೦೭,೬೭೭ |
| ಕೂಡಿರಿ | | | | | | | | | |
| ೧೪.೧೨.೧೮೭೦ರ ಗೊತ್ತುವಳಿಯಿಂದ ಸಾರ್ವಜನಿಕ ಕಾಮಗಾರಿಗೆ ಒಟ್ಟು ಅನುದಾನ, ರಸ್ತೆಗಳು ಮತ್ತು ಸಾರ್ವಜನಿಕ ಕಾಮಗಾರಿಯ ಸುಧಾರಣೆಗಳು | ೩೨,೯೦೦ | ೬೩,೪೦೩ | ೬೩,೧೦೦ | ೧೫೭,೮೦೦ | ೮೨,೬೨೬ | ೮೪,೨೦೦ | ೨೩,೮೮೦ | ೧೨೧,೯೦೦ | ೭೨೯,೮೧೯ |
| ನಾಗರಿಕ ಕಟ್ಟಡಗಳು | ೨೦,೯೯೦ | ೧೪,೪೦೬ | ೨೩,೫೬೫ | ೧೧೧,೩೭೦ | ೬೩,೩೪೧ | ೫೯,೭೧೦ | ೫೮,೫೦೬ | ೧೦೭,೫೦೦ | ೪೫೩,೮೮೮ |
| ಸಾರ್ವಜನಿಕ ಕಾಮಗಾರಿ ಕಚೇರಿಗಳು | ೧೩,೭೭೭ | ೨೦,೨೩೦ | ೨೨,೬೩೫ | ೯೯,೮೪೪ | ೩೭,೯೫೪ | ೩೨,೨೧೭ | ೪೭,೪೭೨ | ೪೯,೬೪೪ | ೩೦೩,೮೬೭ |
| ಯಂತ್ರಗಳು ಮತ್ತು ಸಾಮಗ್ರಿಗಳು | ೧,೦೬೦ | ೧,೫೫೬ | ೧,೭೪೧ | ೫,೩೮೩ | ೨,೯೨೦ | ೨,೪೭೮ | ೩,೬೪೮ | ೪,೫೮೮ | ೨೩,೩೭೪ |
| ಒಟ್ಟು ಸಾರ್ವಜನಿಕ ಕಾಮಗಾರಿ | ೬೮,೭೨೭ | ೯೯,೫೯೫ | ೧೧೧,೪೩೫ | ೩೭೪,೫೩೭ | ೧೮೬,೮೫೧ | ೧೫೮,೬೦೫ | ೧೩೩,೪೫೫ | ೨೯೩,೬೩೨ | ೧,೪೯೫,೯೩೭ |
| **ಒಟ್ಟು** | **೨೨೬,೮೪೮** | **೨೯೯,೪೮೪** | **೨೭೬,೪೯೭** | **೧,೨೮೬,೦೮೩** | **೬೮೧,೭೪೪** | **೫೬೭,೬೮೧** | **೮೦೭,೭೨೫** | **೯೬೭,೫೦೧** | **೫,೧೦೩,೫೬೪** |
| ಕಳೆಯಿರಿ ೩೫೦,೦೦೦ಗಳ ಹಿಸ್ಸೆ | ೧೫,೫೫೭ | ೧೯,೮೫೩ | – | ೮೮,೯೯ | ೪೬,೭೫೩ | ೩೮,೯೩೧ | ೫೫,೩೪ | ೬೬,೩೫೧ | ೩೩೧,೦೩೮ |
| ಪರಿಷ್ಕೃತ ಕಾಯಂ ಕೊಡುಗೆ | ೨೧೧,೨೯೧ | ೨೮೬,೬೩೧ | ೨೭೬,೪೯೭ | ೧,೧೯೭,೮೮೪೧ | ೬೩೪,೯೯೧ | ೫೨೮,೭೫೦ | ೭೫೨,೩೯೨ | ೯೦೧,೧೫೦ | ೪,೭೭೨,೫೨೬ |
| ಪೂರ್ಣಾಂಕಗೊಳಿಸಿರುವುದು | ೨೧೧,೩೦೦ | ೨೮೬,೬೦೦ | ೨೭೬,೫೦೦ | ೧,೧೯೭,೯೦೦ | ೬೩೫,೦೦೦ | ೫೨೮,೮೦೦ | ೭೫೨,೪೦೦ | ೯೦೧,೨೦೦ | ೪,೭೭೨,೬೦೦ |
| ಸೇರಿಸಿ – ಭಾರತ[೨] | – | – | – | | – | – | – | – | ೨೬,೨೦೦ |
| | | | | | | | | | **೪,೭೯೯,೩೦೦** |

೧. ಮಾರ್ಚ್ ೨೯,೧೮೭೧ರ ಹಣಕಾಸು ಇಲಾಖೆಯ ಗೊತ್ತುವಳಿ ಸಂಖ್ಯೆ ೧೬೬೦ರ ಮೇಲೆ ಆಧಾರಿತ. ೨. ಭಾರತ ಎನ್ನುವ ಲೆಕ್ಕದ ಎದುರಿಗೆ ತೋರಿಸಿರುವ ಬಾಬ್ತು ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ ಸಂಬಂಧಿಸಿದ್ದು ಮತ್ತು ಪ್ರಾಂತೀಯ ಸೇವೆಗಳಿಗೆ ಸೇರಿದ್ದು. (ಆದರೆ ಭಾರತ ಸರ್ಕಾರದ ಅಧೀನದಲ್ಲಿರುವ ಕೊಡುಗು, ಅಜ್‌ಮೀರ್ ಮತ್ತು ಇತರ ಜಿಲ್ಲೆಗಳ ಸಾರ್ವಜನಿಕ ಕಾಮಗಾರಿ ಸೇರಿಲ್ಲ.)

ಹೀಗೆ ಸ್ಥಳೀಯ ಸರ್ಕಾರಗಳಿಗೆ ವಿವಿಧ ಬಾಬ್ತುಗಳಿಗೆ ಹಣ ನೀಡಿಕೆ ಮಾಡಿದ್ದಲ್ಲದೆ, ಭಾರತ ಸರ್ಕಾರ, ಸ್ಥಳೀಯ ಸರ್ಕಾರಗಳಿಗೆ ೧೮೭೦-೭೧ರ ಸಾಲಿಗೆ ೨೦೦,೦೦೦ ಸ್ಟರ್ಲಿಂಗ್‌ಗಳ ವಿಶೇಷ ದೇಣಿಗೆಯನ್ನು ಕೊಟ್ಟಿತು. ಇದರ ಉದ್ದೇಶ "ರೂಪಿಸಿರುವ ಯೋಜನೆಯ ಆರಂಭ ಸುಗಮವಾಗಿ ನಡೆಯಬೇಕು ಮತ್ತು ಅತ್ಯಂತ ಸುಭದ್ರವಾಗಿ ಆರಂಭವಾಗಬೇಕು ಎನ್ನುವುದು." "ಅಂಕಿಸಂಖ್ಯೆಯ ದೃಷ್ಟಿಯಿಂದ ೧೮೭೧-೭೨ರ ಸಾಲಿನ ಪ್ರಾಂತೀಯ ಸರ್ಕಾರಗಳ ಸಂಪನ್ಮೂಲಗಳು[೧] ಕೆಳಗಿನಂತಿದ್ದವು.

| ಪ್ರಾಂತೀಯ ಬಜೆಟ್‌ಗಳು | ಸಂಪನ್ಮೂಲಗಳು | | ಒಟ್ಟು |
|---|---|---|---|
| | ಸಾಮ್ರಾಜ್ಯ ಸರ್ಕಾರ ಬಿಟ್ಟುಕೊಟ್ಟ ಆದಾಯ | ಸಾಮ್ರಾಜ್ಯ ಸರ್ಕಾರದಿಂದ ಕೊಡಲ್ಪಟ್ಟ ಮೊತ್ತ | |
| | £ | £ | £ |
| ಔಧ್ | ೧೪,೭೦೦ | ೨೧೧,೩೦೦ | ೨೨೬,೦೦೦ |
| ಸಿ.ಪಿ. | ೨೪,೦೦೦ | ೨೯೬,೬೦೦ | ೨೯೩,೦೦೦ |
| ಬರ್ಮಾ | ೨೮,೬೦೦ | ೨೭೬,೫೦೦ | ೩೦೫,೧೦೦ |
| ಬಂಗಾಳ | ೨೬೪,೮೦೦ | ೧,೧೯೭,೯೦೦ | ೧,೪೬೨,೭೦೦ |
| ವಾಯವ್ಯ ಪ್ರಾಂತ್ಯಗಳು | ೧೧೦,೦೦೦ | ೬೩೫,೦೦೦ | ೭೪೫,೦೦೦ |
| ಪಂಜಾಬ್ | ೬೭,೪೦೦ | ೫೨೮,೮೦೦ | ೫೯೬,೨೦೦ |
| ಮದರಾಸು | ೮೧,೮೯೦ | ೭೫೨,೩೦೦ | ೮೩೪,೧೦೦ |
| ಮುಂಬಯಿ | ೫೫,೩೦೦ | ೯೦೧,೨೦೦ | ೯೫೬,೫೦೦ |

ಪ್ರಾಂತೀಯ ಬಜೆಟ್‌ಗಳ ಸ್ವರೂಪವನ್ನು ಇದುವರೆಗೆ ವಿವರಿಸಿದ್ದಾಯಿತು. ಈ ಬಜೆಟ್‌ನ ವಿವಿಧ ಬಾಬ್ತುಗಳು ಮತ್ತು ಅವುಗಳ ಆದಾಯ ಮೂಲವನ್ನು ಸಹ ಅರಿತಂತಾಯಿತು. ಈಗ ೧೮೭೦-೭೧ರಲ್ಲಿ ರಚಿತವಾದ ಈ ಬಜೆಟ್‌ಗಳ ವೈಚಿತ್ರ್ಯವನ್ನು ವಿಶ್ಲೇಷಿಸೋಣ. ಇದನ್ನು ತಿಳಿಯುವುದಕ್ಕಿರುವ ಸುಲಭ ಮಾರ್ಗವೆಂದರೆ, ಪ್ರಾಂತೀಯ ಬಜೆಟ್‌ಗಳನ್ನು ರಚಿಸಿದವರು ಯಾವ ಸಮಸ್ಯೆಗಳನ್ನು ಎದುರಿಸಬೇಕಾಯಿತು ಮತ್ತು ಇವುಗಳನ್ನು ಹೇಗೆ ಬಗೆಹರಿಸಿಕೊಳ್ಳಲಾಯಿತು ಎಂಬುದನ್ನು ತಿಳಿದರೆ ಸಾಕು. ಪ್ರಾಂತೀಯ ಬಜೆಟ್‌ಗಳನ್ನು ರಚಿಸುವಾಗ ಉದ್ಭವಿಸಿದ ವಿವಾದಗಳ ಇತಿಹಾಸದಿಂದ ನಮಗೆ ತಿಳಿದುಬರುವ ಅಂಶವೆಂದರೆ, ಆ ಸಮಯದಲ್ಲಿ ಬಜೆಟ್‌ಗೆ ಯಾವ ಖರ್ಚು ಬಾಬ್ತುಗಳನ್ನು ಸೇರಿಸಬೇಕು, ಎನ್ನುವುದು ಅತಿ ಮುಖ್ಯವಾದ ವಿಷಯವಾಗಿರಲಿಲ್ಲ. ಸಾಮ್ರಾಜ್ಯ ಬಜೆಟ್‌ನಲ್ಲಿ, ಸ್ಥಳಿಯ ಸ್ವರೂಪವನ್ನುಳ್ಳ ಅನೇಕ ಬಾಬ್ತುಗಳಿವೆ ಎನ್ನುವುದು ಗೊತ್ತಿದ್ದ ವಿಷಯವೇ. ಈ ಬಾಬ್ತುಗಳು ಸಾಮ್ರಾಜ್ಯ ಬಜೆಟ್‌ನ ಅತೃಪ್ತಿಕರವಾದ ಭಾಗ ಎನ್ನುವುದರ ಬಗ್ಗೆ

೧. ೧೮೭೧-೭೨ರ ಆರ್ಥಿಕ ಸ್ಥಿತಿವಿವರಣ ಪತ್ರ.

ಎಲ್ಲರಿಗೂ ಏಕಾಭಿಪ್ರಾಯವಿತ್ತು. ಇಂಥ ಸ್ಥಳೀಯ ಸ್ವರೂಪದ ಬಾಬ್ತುಗಳ ಬಗ್ಗೆ ಕೇಂದ್ರ ಸರ್ಕಾರದ ಅರಿವು ಅತ್ಯಲ್ಪವಾದದ್ದು ಎನ್ನುವುದು ಎಲ್ಲರಿಗೂ ಗೊತ್ತಿದ್ದ ವಿಷಯ. ಹೀಗಿದ್ದಾಗ ಅನಗತ್ಯವಾಗಿ ಸಾರ್ವಜನಿಕ ಹಣ ಪೋಲಾಗುತ್ತದೆ ಎನ್ನುವ ಅರಿವಿಲ್ಲದೆ, ಯಾವುದೋ ಇಲಾಖೆಯ ಮುಖ್ಯಸ್ಥ ಅನುಮೋದಿಸಿದ್ದಾನೆ ಎನ್ನುವ ಕಾರಣಕ್ಕೆ ಸ್ಥಳೀಯ ಸ್ವರೂಪದ ಒಂದು ಬಾಬ್ತಿನ ಖರ್ಚಿಗೂ ಭಾರತ ಸರ್ಕಾರ ಅನುಮೋದನೆ ನೀಡುತ್ತಿತ್ತು. ಹಾಗೆಯೇ ಸ್ಥಳೀಯವಾಗಿ ಅತ್ಯಂತ ಜರೂರಾದ ಮತ್ತು ಉಪಯುಕ್ತವಾದ ಖರ್ಚಿಗೆ ಸರ್ಕಾರದ ಖರ್ಚನ್ನು ಉಳಿತಾಯ ಮಾಡಬೇಕು ಎನ್ನುವ ಕಾರಣಕ್ಕೆ ಕೇಂದ್ರ ಸರ್ಕಾರ ಕೆಲವನ್ನು ತಡೆಹಿಡಿಯುತ್ತಿತ್ತು. ಇವೆರಡೂ ಕ್ರಮಗಳೂ ಕುಚೋದ್ಯದಿಂದ ಕೂಡಿದ್ದವು ಎನ್ನುವುದು ಸ್ಪಷ್ಟ. ಆದ್ದರಿಂದಲೇ, ಕೇಂದ್ರ ಸರ್ಕಾರಕ್ಕೆ ಸ್ವಲ್ಪವೂ ತಿಳಿವಳಿಕೆ ಇಲ್ಲದಿರುವ ಕಾರಣದಿಂದ, ಕೆಲವು ಬಾಬ್ತುಗಳ ಮೇಲೆ ನಿಗಾ ಇಡುವುದು ಮತ್ತು ಅವುಗಳನ್ನು ನಿಯಂತ್ರಿಸುವುದು ಕಷ್ಟವೆನ್ನುವ ಕಾರಣದಿಂದ ಆ ಬಾಬ್ತುಗಳನ್ನು ಸಾಮ್ರಾಜ್ಯದ ಹಿಡಿತದಿಂದ ಪ್ರಾಂತೀಯ ಸರ್ಕಾರಗಳಿಗೆ ವರ್ಗಾಯಿಸಬೇಕೆನ್ನುವ ತೀರ್ಮಾನವನ್ನು ಒಪ್ಪಿಕೊಳ್ಳಲಾಯಿತು. ಸಮಸ್ಯೆಯ ಒಂದು ಮುಖ ಹೀಗೆ ಪರಿಸ್ಥಿತಿಯ ಒತ್ತಡದಿಂದಲೇ ಪರಿಹಾರವಾಯಿತು ಎಂದು ಹೇಳಬಹುದು. ಆದರೆ, ಪ್ರಾಂತೀಯ ಸರ್ಕಾರಗಳು ಬಜೆಟ್‌ಗೆ ಸೇರಿಸಲಾದ ಬಾಬ್ತುಗಳಿಗೆ ಸಾಕಷ್ಟು ಪ್ರಮಾಣದ ಹಣವನ್ನು ಹೇಗೆ ಒದಗಿಸಬೇಕು ಎನ್ನುವ ಸಮಸ್ಯೆಗಳ ಬಗ್ಗೆ ಎಲ್ಲರ ಗಮನ ಕೇಂದ್ರೀಕೃತವಾಗಿತ್ತು. ಪ್ರಾಂತೀಯ ಸರ್ಕಾರಗಳ ಬಜೆಟ್‌ಗೆ ಸೇರಿಸಲಾದ ಬಾಬ್ತುಗಳ ಆದಾಯದಿಂದ ಬರುತ್ತಿದ್ದ ಹಣವನ್ನು ಅವುಗಳೇ ಪಡೆದುಕೊಳ್ಳಬೇಕು ಎನ್ನುವುದು ನ್ಯಾಯಯುತವಾದ ಯೋಜನೆಯಾಗಿತ್ತು. ಈ ರೀತಿಯ ಯೋಜನೆಗೆ ಎರಡು ಒಳ್ಳೆಯ ಕಾರಣಗಳಿದ್ದವು. ಮೊದಲನೆಯದಾಗಿ, ತೆರಿಗೆ ಹಾಕುವುದು ಮತ್ತು ಅದನ್ನು ಪಡೆದುಕೊಳ್ಳುವುದು ಸಾಧ್ಯವಾದಷ್ಟು ಒಟ್ಟಿಗೇ ಹೋಗಬೇಕು ಎನ್ನುವುದು ಒಳ್ಳೆಯ ತೆರಿಗೆ ತತ್ವಕ್ಕೆ ಅನುಗುಣವಾಗಿದೆ ಎನ್ನುವ ವಾದ. ಈ ವಾದಕ್ಕನುಗುಣವಾಗಿ, ಪ್ರಾಂತೀಯ ಸರ್ಕಾರಗಳು ತಾವು ನೀಡುತ್ತಿದ್ದ ಸೇವೆಗಳಿಗೆ ಪ್ರತಿಯಾಗಿ ಪಡೆಯುತ್ತಿದ್ದ ತೆರಿಗೆ ಆದಾಯವನ್ನು ತಾವೇ ಉಳಿಸಿಕೊಳ್ಳುವುದು ನ್ಯಾಯಬದ್ಧ. ಆದರೆ ಇದಕ್ಕಿಂತ ಹೆಚ್ಚಾಗಿ ಈ ವಿಧಾನವನ್ನು ಪ್ರೋತ್ಸಾಹಿಸುವುದಕ್ಕೆ ಎರಡನೆಯ ಕಾರಣವೂ ಸಹ ಇತ್ತು. ಅದೇಂದರೆ, ಪ್ರಾಂತೀಯ ಸರ್ಕಾರಗಳು ತಮ್ಮವೇ ಆದ ಬಜೆಟ್ ಅನ್ನು ಆರಂಭಿಸುವುದಕ್ಕೆ ಇದ್ದ ಅತಿ ಮುಖ್ಯ ಕಾರಣ, ಅವುಗಳು ತಮ್ಮ ಸಂಪನ್ಮೂಲವನ್ನು ರೂಢಿಸುವುದು ಮತ್ತು ಅದರ ಖರ್ಚನ್ನು ನಿರ್ವಹಿಸುವುದು; ಈ ವಿಷಯಗಳಲ್ಲಿ ಪರಿಣತಿಯನ್ನು ಪಡೆದುಕೊಳ್ಳಬೇಕು ಎನ್ನುವುದು. ಆದರೆ ಪ್ರಾಂತೀಯ ಸರ್ಕಾರಗಳು ತಮ್ಮ ಖರ್ಚನ್ನು ತಮ್ಮದೇ ಆದಾಯದಿಂದ ನಿರ್ವಹಿಸುವುದು ಬಹಳ ಕಷ್ಟವಾಗಿತ್ತು. ಏಕೆಂದರೆ, ಅವುಗಳಿಗೆ ಬರುತ್ತಿದ್ದ ಆದಾಯ, ಖರ್ಚಿಗೆ ಹೋಲಿಸಿದರೆ ಬಹಳ ಕಡಿಮೆ ಇತ್ತು. ಹೀಗಾಗಿ ಪ್ರಾಂತೀಯ ಬಜೆಟ್‌ಗಳ ಆದಾಯ–ವೆಚ್ಚಗಳನ್ನು ಹೇಗೆ ಸರಿದೂಗಿಸಬೇಕು ಎನ್ನುವುದು ಸಮಸ್ಯೆಯಾಗಿಯೇ ಮುಂದುವರಿಯಿತು. ಆ ಸಮಯದಲ್ಲಿ ಈ ಸಮಸ್ಯೆಗೆ ಕೇಂದ್ರ ಸರ್ಕಾರದ ಮುಂದೆ ಎರಡು ಪರಿಹಾರಗಳಿದ್ದವು. ಒಂದು, ಸಾಮ್ರಾಜ್ಯದ ಆದಾಯದ ಕೆಲವು ಮೂಲಗಳಿಂದ ಬರುವ ಆದಾಯವನ್ನು ಪ್ರಾಂತೀಯ ಸರ್ಕಾರಗಳ ಬಳಕೆಗೆ ವಹಿಸಿಕೊಡುವುದು. ಎರಡು, ಸಾಮ್ರಾಜ್ಯದ ಖಜಾನೆಯಿಂದ ಒಂದು ನಿರ್ದಿಷ್ಟ ಮೊತ್ತದ ಹಣವನ್ನು ಪ್ರತಿ ವರ್ಷ ಪ್ರಾಂತೀಯ ಸರ್ಕಾರಗಳಿಗೆ ಕೊಡುವುದು. ಇವೆರಡರಲ್ಲಿ ಯಾವ ಕ್ರಮ ಸೂಕ್ತವಾದುದು ಎನ್ನುವುದನ್ನು ತೀರ್ಮಾನಿಸುವುದು ವಾಸ್ತವವಾಗಿ ಆಗ ಕಷ್ಟವಾಗಿತ್ತು. ಏಕೆಂದರೆ ಇವೆರಡೂ ಕ್ರಮಗಳಿಗೂ ತಮ್ಮವೇ ಆದ ಅನುಕೂಲ ಮತ್ತು ಅನನುಕೂಲಗಳಿದ್ದವು. ಪ್ರಾಂತೀಯ ಸರ್ಕಾರಗಳಿಗೆ ನಿರ್ದಿಷ್ಟ ಮೊತ್ತದ ಹಣವನ್ನು ಪಡೆಯುವುದಕ್ಕಿಂತ ಕೆಲವು ಆದಾಯ ಬಾಬ್ತುಗಳಿಂದ ಬರುವ ಹಣವನ್ನು ಪಡೆಯುವುದು ಹೆಚ್ಚು ಆಕರ್ಷಕವಾಗಿತ್ತು. ಏಕೆಂದರೆ ಹೀಗೆ ಬರುವ ಆದಾಯದಲ್ಲಿ

ಹೆಚ್ಚುಕಡಿಮೆ ಮಾಡಲು ಸಾಕಷ್ಟು ಅವಕಾಶವಿತ್ತು. ಆದರೆ ಕೇಂದ್ರಸರ್ಕಾರಕ್ಕೆ ಹೀಗೆ ಮಾಡುವುದರಿಂದ ಅನೇಕ ಸಮಸ್ಯೆಗಳು ಹುಟ್ಟಿಕೊಳ್ಳುವ ಸಾಧ್ಯತೆ ಇತ್ತು. ಕೇಂದ್ರ ಸರ್ಕಾರಕ್ಕೆ ಹಿಂದೆ ಇದ್ದ ಮತ್ತು ಪ್ರಸ್ತುತ ಹಣಕಾಸು ಪರಿಸ್ಥಿತಿಯಲ್ಲಿ ತನ್ನ ವರಮಾನದ ಒಂದು ಭಾಗವನ್ನು ಪ್ರಾಂತೀಯ ಸರ್ಕಾರಕ್ಕೆ ಬಿಟ್ಟುಕೊಡುವುದು ಕಷ್ಟವಾಗಿತ್ತು ಮತ್ತು ಮುಂದೆ ಹಣಕಾಸು ಪರಿಸ್ಥಿತಿ ಉತ್ತಮಗೊಳ್ಳುವ ಭರವಸೆಯೂ ಇರಲಿಲ್ಲ. ಹೀಗಿರುವಾಗ ತನಗೆ ಈಗ ಇರುವ ಹಣಕಾಸು ಆದಾಯ ಮೂಲಗಳ ಮೇಲಿನ ಹಿಡಿತವನ್ನು ಬಿಟ್ಟುಕೊಡುವ ಇಷ್ಟ ಭಾರತ ಸರ್ಕಾರಕ್ಕಿರಲಿಲ್ಲ. ಸರ್ಕಾರಕ್ಕಿದ್ದ ಇನ್ನೊಂದು ದಾರಿಯೆಂದರೆ, ತನ್ನ ವರಮಾನ ಮೂಲಗಳ ಮೇಲೆ ಹತೋಟಿಯನ್ನು ಕಳೆದುಕೊಳ್ಳದೆ ಪ್ರಾಂತೀಯ ಸರ್ಕಾರಗಳಿಗೆ ನಿಗದಿಯಾದ ಪ್ರಮಾಣದ ಹಣವನ್ನು ಕೊಡುವುದಾಗಿತ್ತು. ಸಂವಿಧಾನದತ್ತವಾಗಿ ಭಾರತ ಸರ್ಕಾರಕ್ಕೆ ಭಾರತದ ಎಲ್ಲ ವರಮಾನ ಮೂಲಗಳ ಮೇಲೆ ಸಂಪೂರ್ಣವಾದ ಏಕಸ್ವಾಮ್ಯ ಅಧಿಕಾರವಿತ್ತು ಎನ್ನುವುದು ಗಮನಾರ್ಹ. ಆದ್ದರಿಂದ ಪ್ರಾಂತ್ಯಗಳಿಗೆ ಹಣಕೊಡುವ ವಿಚಾರದಲ್ಲಿ ತನ್ನ ಹಿತಾಸಕ್ತಿಗಳಿಗೆ ಧಕ್ಕೆಯುಂಟಾಗದಂತೆ ಸಹ ಸರ್ಕಾರ ವರ್ತಿಸಬೇಕಾಗಿತ್ತು. ಹೀಗಾಗಿ ಪ್ರಾಂತೀಯ ಸರ್ಕಾರಗಳಿಗೆ ಹಣ ಒದಗಿಸುವ ಕ್ರಮ, ಅವುಗಳಿಗೆ ತೆರಿಗೆಯನ್ನು ವಿಧಿಸುವಿಕೆ, ಅಧಿಕಾರ ನೀಡಿ ಅವುಗಳು ವರಮಾನ ಪಡೆಯುವಂತೆ ಮಾಡುವುದಕ್ಕಿಂತ, ತಾವೇ ನಿರ್ದಿಷ್ಟ ಪ್ರಮಾಣದ ಹಣವನ್ನು ಅವುಗಳಿಗೆ ನೀಡುವುದು ಉಚಿತವಾದ ಮಾರ್ಗವೆಂದು ಸರ್ಕಾರ ಭಾವಿಸಿತು. ಈ ಮಾರ್ಗ ಪ್ರಾಂತೀಯ ಬಜೆಟ್‌ಗಳ ರಚನೆಯಲ್ಲಿ ಅತ್ಯಂತ ಯುಕ್ತವಾದದ್ದೆಂದು ಸಹ ಸರ್ಕಾರ ಭಾವಿಸಿತ್ತು.

ಮೇಲೆ ವಿವರಿಸಿದಂತೆ ಪ್ರಾಂತೀಯ ಬಜೆಟ್‌ಗಳ ಸಮತೋಲನಕ್ಕೆ ಅವುಗಳಿಗೆ ನಿರ್ದಿಷ್ಟ ಪ್ರಮಾಣದ ಹಣ ಒದಗಿಸುವುದರ ಮೂಲಕ ನಡೆಸಬೇಕೆಂದಾದುದರಿಂದ, ೧೮೭೧-೭೨ ರ ಬಜೆಟ್‌ಗೆ ಈ ವಿಧಾನವನ್ನು ಅನುಸರಿಸಲಾಯಿತು. ಈ ಕ್ರಮವನ್ನು ನಮ್ಮ ವಿಶ್ಲೇಷಣೆಯಲ್ಲಿ ನಿರ್ದಿಷ್ಟ ಪ್ರಮಾಣದ ಹಣ ಒದಗಿಸುವ ಬಜೆಟ್ ವಿಧಾನ ಎಂದು ಹೆಸರಿಸಲಾಗಿದೆ.

ಮೇಲೆ ಹೇಳಿರುವ, ೧೮೭೧-೭೨ ರಲ್ಲಿ ಜಾರಿಗೆ ಬಂದ ಪ್ರಾಂತೀಯ ಬಜೆಟ್‌ಗಳ ಕ್ರಮ ೧೮೭೬-೭೭ ರವರೆಗೆ ಜಾರಿಯಲ್ಲಿತ್ತು. ೧೮೭೧-೭೨ ರ ವರ್ಷದಲ್ಲಿ ಪ್ರಾಂತೀಯ ಸರ್ಕಾರಗಳಿಗೆ ನೀಡಬೇಕೆಂದು ಗೊತ್ತುಮಾಡಲಾದ ಹಣದ ಪ್ರಮಾಣ ನಿರ್ದಿಷ್ಟವಾದುದು ಮತ್ತು ಪ್ರತಿ ವರ್ಷವೂ ಮುಂದುವರಿಯುವಂಥದ್ದು ಎಂದು ಘೋಷಿಸಲಾಯಿತು. ಪ್ರತಿವರ್ಷ ಹಣವನ್ನು ನೀಡಬೇಕು ಎನ್ನುವುದೇನೋ ನಿಜವಾಯಿತು. ಆದರೆ ಅದು ನಿರ್ದಿಷ್ಟ ಮೊತ್ತವಾಗಿರಲಿಲ್ಲ. ಏಕೆಂದರೆ ವರ್ಷದಿಂದ ವರ್ಷಕ್ಕೆ ಬಜೆಟ್‌ಗೆ ಕೆಲವು ಬಾಬ್ತುಗಳನ್ನು ಸೇರಿಸಲಾಗುತ್ತಿತ್ತು ಅಥವಾ ಹಿಂತೆಗೆದುಕೊಳ್ಳಲಾಗುತ್ತಿತ್ತು. ಹೀಗಾಗಿ ಸಾಮ್ರಾಜ್ಯಶಾಹಿ ನೀಡುತ್ತಿದ್ದ ಹಣದ ಪ್ರಮಾಣ ಹೆಚ್ಚಾಗುತ್ತಿತ್ತು ಇಲ್ಲವೇ ಕಡಿಮೆಯಾಗುತ್ತಿತ್ತು. ೧೮೭೧-೭೨ ರಿಂದ ೧೮೭೬-೭೭ ರವರೆಗೆ ನಿರ್ದಿಷ್ಟ ಉದ್ದೇಶಗಳಿಗಾಗಿ ನೀಡಲಾಗುತ್ತಿದ್ದ ಹಣದ ಪ್ರಮಾಣವನ್ನು ಕೆಳಗಿನ ಪಟ್ಟಿಗಳಲ್ಲಿ ಸೂಚಿಸಲಾಗಿದೆ:-

## ೧೮೭೧-೭೨ನೇ ಸಾಲಿನಲ್ಲಿ ಸಾಮ್ರಾಜ್ಯದಿಂದ ಪ್ರಾಂತ್ಯಕ್ಕೆ ಗೊತ್ತುಮಾಡಲಾದ ಕೊಡುಗೆಗಳ ವಿವರಣಾ ಪತ್ರ

| ಕೊಡುಗೆಯ ಉದ್ದೇಶ | ಕೊಡುಗೆಯ ಮೊತ್ತ | |
|---|---|---|
| | ವಿವರ | ಒಟ್ಟು |
| | ರೂ. | ರೂ. |
| **ಮೂಲ ಕೊಡುಗೆ** | | ೧,೧೯,೭೯,೦೦೦ |
| **ಸೇರಿಸಿರಿ:** | | |
| ಸ್ಮಶಾನ ಕಚೇರಿಗಳಿಗೆ | ೪,೦೦೦ | |
| ಆಗ್ರಾ ಇಟ್ಟಿಗೆ ಕಾರ್ಖಾನೆಗೆ ಪರಿಹಾರಕ್ಕಾಗಿ | ೨೮,೦೦೦ | ೧,೧೪,೦೦೦ |
| ಕಚೇರಿ ಮತ್ತು ಮನೆ ಬಾಡಿಗೆ | ೮೨,೦೦೦ | |
| | | ೧,೨೦,೯೩,೦೦೦ |
| **ಕಳೆಯಿರಿ** | | |
| ಖೈದಿಗಳ ಸಾರಿಗೆ ವೆಚ್ಚಕ್ಕಾಗಿ | ೧೫,೦೦೦ | |
| ಸರಕು ಸಾಗಣೆ ನೌಕೆಗಳ ಲೈಸನ್ಸ್ ಫೀ | ೨,೬೯೦ | ೧,೨೪,೬೯೦ |
| ಸಾರ್ವಜನಿಕ ಕಾಮಗಾರಿ ಇಲಾಖೆಗಳಿಂದ ವರಮಾನ | ೧,೦೭,೦೦೦ | |
| | | ೧,೧೯,೬೮,೩೧೦ |
| **ವಿಶೇಷ ಅನುದಾನಗಳು** | | |
| **ಸೇರಿಸಿರಿ** | | |
| ಕಲ್ಕತ್ತಾ ವಿಶ್ವವಿದ್ಯಾನಿಲಯಕ್ಕೆ | ೬೦,೦೦೦ | |
| ಮಿಡ್ನಾಪುರದ ಸಿವಿಲ್ ನ್ಯಾಯಾಲಯ ಕಟ್ಟಡಕ್ಕೆ | ೩೧,೬೮೦ | ೩,೪೧,೬೮೦ |
| ಕಲ್ಕತ್ತಾದ ಸಣ್ಣವ್ಯವಹಾರಗಳ ನ್ಯಾಯಾಲಯದ ಕಟ್ಟಡಕ್ಕೆ | ೨,೫೦,೦೦೦ | |
| | | ೧,೨೩,೦೯,೯೯೦ |
| **೧೮೭೧-೭೨ಕ್ಕೆ ಒಟ್ಟು ಕೊಡುಗೆ** | | **೧,೨೩,೦೯,೯೯೦** |

## ೧೮೭೨-೭೩ನೇ ಸಾಲಿನಲ್ಲಿ ಸಾಮ್ರಾಜ್ಯದಿಂದ ಪ್ರಾಂತ್ಯಕ್ಕೆ ಗೊತ್ತುಮಾಡಲಾದ ಕೊಡುಗೆಗಳ ವಿವರಣಾ ಪತ್ರ

| **ಕೊಡುಗೆಯ ಉದ್ದೇಶ** | **ಗೊತ್ತುಮಾಡಲಾದ ಮೊತ್ತ** | |
|---|---|---|
| | **ವಿವರ** | **ಒಟ್ಟು** |
| | **ರೂ.** | **ರೂ.** |
| **ಮೂಲ ಕೊಡುಗೆ** | | **೧,೧೯,೭೯,೦೦೦** |
| ಸೇರಿಸಿ | | |
| ೧೮೭೧-೭೨ಕ್ಕೆ ಕಾಯಂ ಸೇರ್ಪಡೆ (ಮೇಲಿನಂತೆ) | ೧,೧೪,೦೦೦ | |
| ಸಾದಿಲ್ವಾರು ಸೇವೆಗಳಿಗೆ | ೨,೬೭,೦೭೦ | |
| ಪುಸ್ತಕ ಮತ್ತು ಪ್ರಕಾಶನಕ್ಕೆ | ೭,೬೦೦ | |
| ಹೌರಾ ಅನಾಥಾಲಯಕ್ಕೆ ಬಾಡಿಗೆ | ೨೬೬ | |
| | | ೩,೮೮,೯೩೬ |
| | | **೧,೨೩,೬೭,೯೩೬** |
| **ಕಳೆಯಿರಿ** | | |
| ೧೮೭೧-೭೨ಕ್ಕೆ ಕಾಯಂ ಇಳಿತಾಯ (ಮೇಲಿನಂತೆ) | ೧,೨೪,೬೯೦ | |
| ವಿಶ್ವವಿದ್ಯಾನಿಲಯದಲ್ಲಿ ರಿಪೇರಿ ಖರ್ಚುಗಳು | ೫,೭೦೦ | |
| | | ೧,೩೦,೩೯೦ |
| | | ೧,೨೨,೩೭,೫೪೬ |
| **ವಿಶೇಷ ಅನುದಾನಗಳು** | | |
| **ಸೇರಿಸಿರಿ** | | |
| ಬರ್ಡ್ವಾನ್ ಜ್ವರ ಪರಿಹಾರ | ೧,೦೦,೦೦೦ | |
| ಸದ್ದರ್ ನ್ಯಾಯಾಲಯಕ್ಕೆ ಕಟ್ಟಡದ ಪರಿಹಾರಕ್ಕೆ | ೪,೦೦,೦೦೦ | ೯,೬೬,೬೭೦ |
| ಸಾರ್ವಜನಿಕ ಕಚೇರಿಗಳಿಗೆ, ವಾರ್ಷಿಕ ತೆರಿಗೆ ರೂ. ೨೧,೦೦೦ರಿಂದ ಬಂಡವಾಳ ಮೌಲ್ಯ | ೪,೬೬,೬೭೦ | |
| | | ೧,೩೨,೦೪,೨೧೬ |
| **ಭಿನ್ನರಾಶಿಗಳನ್ನು ಕಳೆದು** | | ೩೮೦ |
| **೧೮೭೨-೭೩ಕ್ಕೆ ಒಟ್ಟು ಕೊಡುಗೆ** | | **೧,೩೨,೦೩,೮೩೬** |

## ೧೮೭೩–೭೪ನೇ ಸಾಲಿನಲ್ಲಿ ಸಾಮ್ರಾಜ್ಯದಿಂದ ಪ್ರಾಂತ್ಯಕ್ಕೆ ಗೊತ್ತುಮಾಡಲಾದ ಕೊಡುಗೆಗಳ ವಿವರಣಾ ಪತ್ರ

| ಕೊಡುಗೆಯ ಉದ್ದೇಶ | ಗೊತ್ತುಮಾಡಲಾದ ಮೊತ್ತ | |
|---|---|---|
| | ವಿವರ | ಒಟ್ಟು |
| | ರೂ. | ರೂ. |
| ೧೮೭೨–೭೩ರ ಮೇಲಿನ ವಿವರಣೆಯಂತೆ | | |
| ಕಾಯಂ ಕೊಡುಗೆ | | ೧,೨೨,೩೭,೫೪೬ |
| **ಸೇರಿಸಿ** | | |
| ಸಿವಿಲ್ ಸ್ಟೇಷನ್‌ಗಳ | | |
| ವೈದ್ಯಾಧಿಕಾರಿಗಳಿಗೆ ಪಾವತಿಗಳು | ೩,೮೫,೦೦೦ | |
| ಭೂ ಕಂದಾಯ ಸಬ್ ಡಿವಿಷನಲ್ ಕಚೇರಿಗಳಿಗೆ | ೧,೦೦,೦೦೦ | ೪,೮೫,೦೦೦ |
| | | ೧,೨೭,೨೨,೫೪೬ |
| **ಕಳೆಯಿರಿ** | | |
| ಸಾರ್ವಜನಿಕ ಕಚೇರಿಗಳಿಗೆ ಬಾಡಿಗೆಗಳು | ೨೧,೦೦೦ | ೨೧,೦೦೦ |
| | | ೧,೨೭,೦೧,೫೪೬ |
| ೧೮೭೩–೭೪ಕ್ಕೆ ಮಂಜೂರಾದ ಕೊಡುಗೆ | | ೧,೨೭,೦೧,೦೦೦ |
| **ಸೇರಿಸಿರಿ** | | |
| ಹೌರಾ ಅನಾಥಾಲಯಕ್ಕೆ ಬಾಡಿಗೆ | ೨೬೬ | |
| ಯುರೋಪಿಯನ್ ಅಲೆಮಾರಿಗಳಿಗಾಗಿ ಖರ್ಚು | ೧೧,೫೦೦ | |
| ಸ್ಥಳ ಬಾಡಿಗೆ | ೬,೩೦೦ | ೧೮,೦೬೬ |
| **ಕಳೆಯಿರಿ** | | |
| ಪ್ರಾಂತ್ಯದಿಂದ ಸಾಮ್ರಾಜ್ಯಶಾಹಿಗೆ ತೆಗೆದುಕೊಂಡ | | |
| ವೈದ್ಯಕೀಯ ವಿದ್ಯಾರ್ಥಿಗಳಿಗೆ ಪಾವತಿಗಳು | ೫೪೦೦ | |
| ಪ್ರಾಂತ್ಯದಿಂದ ಸಾಮ್ರಾಜ್ಯ ತೆಗೆದುಕೊಂಡ | | |
| ವೈದ್ಯಾಧಿಕಾರಿಗಳಿಗೆ ಪಾವತಿಗಳು | ೩,೮೫,೦೦೦ | ೩,೯೦,೪೦೦ |
| **ವಿಶೇಷ ಅನುದಾನಗಳು** | | ೧,೨೩,೨೮,೬೬೬ |
| **ಸೇರಿಸಿರಿ** | | |
| ಸಣ್ಣ ನ್ಯಾಯಾಲಯಗಳಿಗೆ ಬಾಡಿಗೆ | | ೧೪,೪೦೦ |
| | **ಒಟ್ಟು ಕೊಡುಗೆ** | **೧,೨೩,೪೩,೦೬೬** |

## ೧೮೭೪-೭೫ನೇ ಸಾಲಿನಲ್ಲಿ ವರ್ಷದಲ್ಲಿ ಸಾಮ್ರಾಜ್ಯದಿಂದ ಪ್ರಾಂತ್ಯಕ್ಕೆ ಗೊತ್ತುಮಾಡಲಾದ ಕೊಡುಗೆಗಳ ವಿವರಣಾ ಪತ್ರ

| ಕೊಡುಗೆಯ ಉದ್ದೇಶ | ಗೊತ್ತುಮಾಡಲಾದ ಮೊತ್ತ | |
|---|---|---|
| | ವಿವರ ರೂ. | ಒಟ್ಟು ರೂ. |
| **ಮೇಲಿನ ವಿವರಣೆಯಂತೆ ಕಾಯಂ ಕೊಡುಗೆಗಳು** | | ೧,೨೩,೨೮,೬೬೬ |
| **ಸೇರಿಸಿರಿ** | | |
| ಮುಸಲ್ಮಾನರ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ಕೊಡುಗೆ | ೫೦,೦೦೦ | ೫೦,೦೦೦ |
| ಮಂಜೂರಾದ ಕೊಡುಗೆ | | ೧,೨೩,೭೮,೦೦೦ |
| **ಸೇರಿಸಿರಿ** | | |
| ಮಾದರಿ ಫಾರಂಗೆ ಅನುದಾನ | ೭,೦೦೦ | |
| ಬಾಡಿಗೆಗೆ ವಿಶೇಷ ಅನುದಾನ | ೧,೧೮೦ | ೮,೧೮೦ |
| | | ೧,೨೩,೮೬,೧೮೦ |
| **ಕಳೆಯಿರಿ** | | |
| ಸ್ಮಶಾನ ಮತ್ತು ಚರ್ಚುಗಳ ಲೆಕ್ಕದಲ್ಲಿ ಇಳಿತಾಯ | ೧೪,೩೧೪ | |
| ವರ್ಗಾವಣೆಯಾದ ಅಸ್ಸಾಂನಿಂದಾಗಿ ಇಳಿತಾಯ | ೧೩,೩೦,೦೦೦ | |
| ಹೌರಾ ಅನಾಥಾಲಯದ ಬಾಡಿಗೆ | ೨೬೬ | ೧೩,೪೪,೫೮೦ |
| **ಮಂಜುರಾದ ಒಟ್ಟು ಕೊಡುಗೆ** | | **೧,೧೦,೪೧,೬೦೦** |

## ೧೮೭೫-೭೬ನೇ ಸಾಲಿಗೆ ಪ್ರಾಂತ್ಯಗಳಿಗೆ ಸಾಮ್ರಾಜ್ಯದ ಕೊಡುಗೆಗಳ ವಿವರಣಾ ಪತ್ರ

| ಕೊಡುಗೆಯ ಉದ್ದೇಶ | ಗೊತ್ತುಮಾಡಲಾದ ಮೊತ್ತ | |
|---|---|---|
| | ವಿವರ ರೂ. | ಒಟ್ಟು ರೂ. |
| **ಮೇಲಿನಂತೆ ೧೮೭೪-೭೫ಕ್ಕೆ ಕಾಯಂ ಕೊಡುಗೆ** | | ೧,೧೦,೪೧,೦೦೦ |
| **ಸೇರಿಸಿರಿ** | | |
| ಬಟಾನಿಕಲ್ ಗಾರ್ಡನ್‌ಗೆ ಅನುದಾನ | ೫೨,೫೦೦ | |
| ಭೂ ಬಾಡಿಗೆಗೆ ಅನುದಾನ | ೧,೧೮೦ | ೫೩,೬೮೦ |
| | | ೧,೧೦,೯೪,೬೮೦ |
| **ಕಳೆಯಿರಿ** | | |
| ಉಪ್ಪಿನ ಇಲಾಖೆಗಾಗಿ ಸಾರ್ವಜನಿಕ ಕಾಮಗಾರಿಖರ್ಚು | ೧೩,೬೮೨ | |
| ಹಿಂತೆಗೆದುಕೊಳ್ಳಲಾದ ಲೈಟ್ ಹೌಸ್ ಮತ್ತು ಹಡಗಿನ ಕೊಡುಗೆ ಲೆಕ್ಕ | ೧,೭೬೯ | ೩೩,೧೬೩ |
| ಅಸ್ಸಾಂನ ಪಟ್ಟಣ ಸುಧಾರಣೆ ಬಾಬ್ತಿಗೆ | ೧೭,೭೧೧ | |
| | **ಒಟ್ಟು ಕೊಡುಗೆ** | **೧,೧೦,೬೧,೫೧೭** |

## ೧೮೭೬–೭೭ನೇ ಸಾಲಿನಲ್ಲಿ ಪ್ರಾಂತ್ಯಗಳಿಗೆ ಸಾಮ್ರಾಜ್ಯದ ಕೊಡುಗೆಗಳು

| ಕೊಡುಗೆಯ ಉದ್ದೇಶ | ಗೊತ್ತುಮಾಡಲಾದ ಮೊತ್ತ | |
|---|---|---|
| | ವಿವರ<br>ರೂ. | ಒಟ್ಟು<br>ರೂ. |
| **೧೮೭೫–೭೬ಕ್ಕೆ ಮೂಲ ಕೊಡುಗೆ** | | ೧,೧೦,೪೧,೦೦೦ |
| **ಸೇರಿಸಿ** | | |
| ಭೂ ಬಾಡಿಗೆಗೆ | ೧,೧೮೦ | |
| ಬಟಾನಿಕಲ್ ಗಾರ್ಡನ್ಸ್‌ಗೆ | ೫೨,೫೦೦ | ೫೩,೬೮೦ |
| | | ೧,೧೦,೯೪,೬೮೦ |
| **ಕಳೆಯಿರಿ** | | |
| ಉಪ್ಪಿನ ಇಲಾಖೆಗೆ ಸಾರ್ವಜನಿಕ ಕಾಮಗಾರಿ ಖರ್ಚು | | ೧೩,೬೮೩ |
| | | ೧,೧೦,೮೦,೯೯೭ |
| **ಕಳೆಯಿರಿ** | | |
| ಫಾರಂಸ್ಟೋರ್ ಇಲಾಖೆಗೆ | ೮,೦೩೪ | |
| **ಸೇರಿಸಿರಿ** | | |
| ಪ್ರದರ್ಶನ ಮತ್ತು ಜಾತ್ರೆಗಳು | ೨,೦೦೦ | ೬,೦೩೪ |
| | **ಒಟ್ಟು** | **೧,೧೦,೭೪,೯೬೩** |
| **ಮಂಜುರಾದ ಕೊಡುಗೆಗಳು** | | ೧,೧೦,೭೫,೦೦೦ |
| **ಸೇರಿಸಿರಿ** | | |
| ಬ್ಯಾಂಕಿನ ಮತ್ತು ಅಂಗೋಲ್ ಎಸ್ಟೇಟ್‌ಗೆ ಅನುದಾನ | ೩,೨೭೧ | |
| ಸ್ನೇಕ್ ಪಾಯಿಸನ್ ಕಮಿಷನ್ ವೆಚ್ಚ ಮತ್ತು ಇತರ ಸಾದಿಲ್ವಾರು | ೬,೦೦೦ | |
| ಸೆನ್ಸ್‌ಸ್‌ರಿಜಿಸ್ಟರ್‌ಗೆ ಅನುದಾನ | ೪೯,೪೮೨ | ೫೮,೭೫೩ |
| | | ೧,೧೧,೩೩,೭೫೩ |
| **ಕಳೆಯಿರಿ** | | |
| ಲೈಟ್‌ಹೌಸ್‌ಗಳು ಮತ್ತು ಲೈಟ್‌ಷಿಪ್ಸ್‌ಗಳ ಕೊಡುಗೆಯನ್ನು ಹಿಂತೆಗೆದುಕೊಂಡದ್ದಕ್ಕೆ | ೧,೭೬೯ | |
| ಅಸ್ಸಾಂನ ಪಟ್ಟಣ ಸುಧಾರಣೆ ಕೊಡುಗೆ | ೧೭,೭೧೧ | |
| ಮೇಜ್‌ಪುರ್ ಹುಚ್ಚಾಸ್ಪತ್ರೆಯ ವಾರ್ಷಿಕ ವೆಚ್ಚದ ವರ್ಗಾವಣೆ | ೨,೭೦೦ | ೨೨,೧೮೦ |
| | **ಒಟ್ಟು ಕೊಡುಗೆ** | **೧,೧೧,೧೧,೫೭೩** |

ಸಾಮ್ರಾಜ್ಯ ಸರ್ಕಾರ ಪ್ರಾಂತೀಯ ಬಜೆಟ್‌ಗಳಿಗೆ ವಿವಿಧ ಬಾಬ್ತುಗಳಿಗಾಗಿ ನೀಡುತ್ತಿದ್ದ ಹಣದ ವಿವರಣೆಯನ್ನು ಮೇಲಿನ ಪಟ್ಟಿಗಳು ನೀಡುತ್ತವೆ. ಈ ಪದ್ಧತಿ ಜಾರಿಯಲ್ಲಿದ್ದವರೆಗೂ ಹೇಗೆ ಹಣನೀಡಿಕೆ ನಡೆಯಿತು ಎನ್ನುವುದನ್ನು ಈ ಪಟ್ಟಿಗಳು ತಿಳಿಸುತ್ತವೆ. ಈಗ ಈ ಪದ್ಧತಿ ಎಷ್ಟರಮಟ್ಟಿಗೆ ಫಲಕಾರಿಯಾಗಿತ್ತು ಎನ್ನುವುದನ್ನು ನೋಡೋಣ. ಈ ವಿಷಯ ನಿಜವಾಗಿಯೂ ಚರ್ಚಾಸ್ಪದವಾದದ್ದು. ಏಕೆಂದರೆ ಒಂದು ದೃಷ್ಟಿಯಿಂದ, ಈ ವಿಧಾನ ಸಫಲವಾಗಿತ್ತು ಎಂದು ವಾದಿಸಬಹುದಾದರೆ, ಮತ್ತೊಂದು ದೃಷ್ಟಿಯಿಂದ ಅದು ಹೇಗೆ ವಿಫಲವಾಗಿತ್ತು ಎಂದು ಸಹ ವಾದಿಸುವುದು ಸಾಧ್ಯ. ಆದರೆ ಈ ಚರ್ಚೆಯಂತೂ ತುಂಬಾ ಆವಶ್ಯಕ ಎನ್ನುವುದು ಸ್ಪಷ್ಟ. ಏಕೆಂದರೆ ಈ ರೀತಿಯ ಚರ್ಚೆಯ ಫಲವಾಗಿಯೇ ವರ್ಷದಿಂದ ವರ್ಷಕ್ಕೆ ಪ್ರಾಂತೀಯ ಬಜೆಟ್‌ಗಳಿಗೆ ಹಣ ನೀಡುವ ವಿಧಾನ ಫಲಪ್ರದವಾಗಿತ್ತು. ಪ್ರಾಂತೀಯ ಹಣಕಾಸು ನೀತಿಯನ್ನು ರೂಪಿಸುವುದರಲ್ಲಿ ಮತ್ತು ಅದನ್ನು ಪ್ರಭಾವಿಸುವುದರಲ್ಲಿ ಮುಖ್ಯರಾಗಿದ್ದವರ ಅಭಿಮತಗಳನ್ನು ತಿಳಿಯುವುದು, ಈ ದೃಷ್ಟಿಯಿಂದ ಮುಖ್ಯ. ಈ ಪ್ರಕ್ರಿಯೆಯಲ್ಲಿ ತೊಡಗಿದ್ದ ಎರಡು ಗುಂಪುಗಳೆಂದರೆ ಭಾರತ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳು. ಇವೆರಡೂ ಗುಂಪುಗಳ ಅಭಿಪ್ರಾಯಗಳು ಪರಸ್ಪರ ವಿರೋಧವಾಗಿಲ್ಲದಿದ್ದರೂ, ಭಿನ್ನವಾಗಿದ್ದವು ಎನ್ನುವುದು ಸಹಜ. ಭಾರತ ಸರ್ಕಾರದ ಕಳಕಳಿ, ಪ್ರಾಂತೀಯ ಸರ್ಕಾರಗಳಿಗೆ ಸಾಮ್ರಾಜ್ಯದ ಖಜಾನೆಯಿಂದ ವರ್ಗವಾಗುತ್ತಿದ್ದ ಹಣದಿಂದ, ಕೇಂದ್ರ ಸರ್ಕಾರಕ್ಕೆ ಎಷ್ಟು ಪ್ರಮಾಣದ ಲಾಭವಾಗುತ್ತದೆ ಎನ್ನುವುದು. ಪ್ರಾಂತೀಯ ಸರ್ಕಾರಗಳ ಕಳಕಳಿಯೆಂದರೆ ಕೇಂದ್ರ ಸರ್ಕಾರ ತನಗೆ ವರ್ಗಾಯಿಸುತ್ತಿದ್ದ ಬಾಬ್ತುಗಳ ವೆಚ್ಚಗಳನ್ನು ನಿರ್ವಹಿಸಲು, ಕೇಂದ್ರ ಸರ್ಕಾರ ವಹಿಸಿಕೊಡುತ್ತಿದ್ದ ವರಮಾನ ಮೂಲಗಳು ಸಾಕಾಗುತ್ತವೆಯೇ, ಇಲ್ಲವೇ ಎನ್ನುವುದಾಗಿತ್ತು. ತಮಗೆ ದೊರೆಯುತ್ತಿದ್ದ ನಿರ್ದಿಷ್ಟ ಪ್ರಮಾಣದ ಹಣದಿಂದ ವೆಚ್ಚಗಳನ್ನು ಸರಿತೂಗಿಸಿಕೊಳ್ಳುವುದು ಸಾಧ್ಯವೆಂದು ಖಚಿತವಾದರೆ ಮಾತ್ರ ಸಾಮ್ರಾಜ್ಯ ತಮಗೆ ವಹಿಸುತ್ತಿದ್ದ ಬಾಬ್ತುಗಳ ಜವಾಬ್ದಾರಿಯನ್ನು ಹೊರಲು ಪ್ರಾಂತೀಯ ಸರ್ಕಾರಗಳು ಸಿದ್ಧವಿದ್ದವು ಅಷ್ಟೆ. ಕೇಂದ್ರ ಸರ್ಕಾರದ ಭಾವನೆಯಲ್ಲಿ, ತಾನು ವರ್ಗಾವಣೆ ಮಾಡಲು ಬಯಸುತ್ತಿರುವ ಬಾಬ್ತುಗಳಿಗೆ ಈಗ ತನಗೆ ತಗಲುತ್ತಿರುವ ವೆಚ್ಚ, ಪ್ರಾಂತೀಯ ಸರ್ಕಾರಗಳಿಗೆ ಆ ಬಾಬ್ತುಗಳಿಂದ ಬರುವ ಆದಾಯಕ್ಕಿಂತ ಕಡಿಮೆ ಇದ್ದರೆ ಮಾತ್ರ ತನಗೆ ಅನುಕೂಲವೆಂಬುದಾಗಿತ್ತು. ಆದ್ದರಿಂದ ಪ್ರಾಂತೀಯ ಸರ್ಕಾರಗಳಿಗೆ ಬೇಕಾಗುವಷ್ಟು ಹಣ ದೊರೆಯಬೇಕು ಮತ್ತು ಸಾಮ್ರಾಜ್ಯದ ಬೊಕ್ಕಸಕ್ಕೆ ಲಾಭವಾಗಬೇಕು ಎನ್ನುವ ಎರಡೇ ಅಂಶಗಳು, ಈ ಯೋಜನೆಯನ್ನು ವಿಸ್ತರಿಸುವುದಕ್ಕೆ ಮತ್ತು ಮುಂದುವರಿಸುವುದಕ್ಕೆ ಮುಖ್ಯವಾಗಿದ್ದವು. ಸಾಮ್ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರಗಳ ಜೊತೆಗೆ, ವಿವಿಧ ಪ್ರಾಂತ್ಯಗಳ ಜನರು ಈ ಯೋಜನೆಯ ಬಗ್ಗೆ ಸಮ್ಮತಿಯನ್ನು ಕೊಡುತ್ತಾರೆಯೇ ಎನ್ನುವುದು ಸಹ ಈ ವಿಷಯದಲ್ಲಿ ಮುಖ್ಯವಾಗಿತ್ತು. ಆದ್ದರಿಂದ ಜನತೆ ಈ ವಿಷಯದಲ್ಲಿ ಮೂರನೆಯ ಪಕ್ಷವಾಗಿತ್ತು. ಜನರ ಭಾವನೆಗಳು ಈ ಬಗ್ಗೆ ಏನಾಗಿದ್ದವು ಎನ್ನುವುದನ್ನು ಯಾರಾದರೂ ಸುಲಭವಾಗಿ ಊಹಿಸಬಹುದಾಗಿತ್ತು. ರಾಜಕೀಯ ಪ್ರಗತಿಯ ಬಗ್ಗೆ ಯಾವ ಸ್ವರೂಪದ ಬೇಡಿಕೆಗಳಿತ್ತು ಎನ್ನುವುದರ ಬಗ್ಗೆ ಸಾಕಷ್ಟು ತಿಳುವಳಿಕೆಯಿದ್ದ ಯಾರಿಗೇ ಆದರೂ ಈ ವಿಷಯದ ಬಗ್ಗೆ ಜನರ ಅಭಿಪ್ರಾಯ ಏನಾಗಿತ್ತು ಎನ್ನುವುದನ್ನು ಕಲ್ಪಿಸಿಕೊಳ್ಳುವುದು ಕಷ್ಟವಾಗಿರಲಿಲ್ಲ. ಅದು ಸಾಮ್ರಾಜ್ಯ ಸರ್ಕಾರ ಅಥವಾ ಪ್ರಾಂತೀಯ ಸರ್ಕಾರಗಳು ಚೆನ್ನಾಗಿರಬೇಕೆಂದು ಆಗಿರಲಿಲ್ಲ. ಆದರೆ ತನ್ನ ತೆರಿಗೆಯ ಹಣ ಯುಕ್ತವಾದ ಮಾರ್ಗಗಳಲ್ಲಿ ವೆಚ್ಚವಾಗಬೇಕು ಎನ್ನುವುದಾಗಿತ್ತು. ಈ ಉದ್ದೇಶವನ್ನು ಒಂದು ಪಕ್ಷ ಕೇಂದ್ರ ಸರ್ಕಾರ ಪ್ರಮುಖವಾದುದನ್ನಾಗಿ ಮಾಡಿಕೊಂಡಿದ್ದರೆ, ಪ್ರಾಂತೀಯ ಹಣಕಾಸು ನೀತಿ ಬಹುಶಃ ಬೇರೆ ಮಾರ್ಗವನ್ನು ಹಿಡಿಯುತ್ತಿತ್ತು.

ಆ ಕಾಲದಲ್ಲೂ ಸಹ, ರಾಷ್ಟ್ರದ ಹಣಕಾಸು ವಿಷಯದಲ್ಲಿ ಜನರ ಮಾತಿಗೂ ಬೆಲೆ ಇರಬೇಕು ಎನ್ನುವ ಭಾವನೆಯಿತ್ತು. ೧೮೭೦ರ ಡಿಸೆಂಬರ್ ೧೪ರ ಗೊತ್ತುವಳಿಯ ೧೯ನೇ ಪ್ಯಾರಾದಲ್ಲಿ ಭಾರತ ಸರ್ಕಾರ ಪ್ರಾಂತೀಯ ಹಣಕಾಸು ನೀತಿಯನ್ನು ಪ್ರಕಟಿಸುತ್ತಾ ಕೆಳಗಿನಂತೆ ಹೇಳಿತ್ತು :–

"ಪ್ರತಿಯೊಂದು ಪ್ರಾಂತೀಯ ಸರ್ಕಾರವೂ ತನ್ನ ಸ್ಥಳೀಯ ಗೆಜೆಟ್‌ನಲ್ಲಿ ಪ್ರಾಂತೀಯ ವೆಚ್ಚ ಬಾಬ್ತುಗಳ ವೆಚ್ಚ ಅಂದಾಜುಗಳು ಮತ್ತು ಲೆಕ್ಕವನ್ನು ಪ್ರಕಟಿಸಬೇಕು. ಇದನ್ನು ಗವರ್ನರ್–ಜನರಲ್, ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಮಂಡಿಸುವಂತೆಯೇ ಪ್ರಾಂತೀಯ ಸರ್ಕಾರವು ಹಣಕಾಸು ವಿವರವನ್ನು ಸ್ಥಳೀಯ ಲೆಜಿಸ್ಲೇಟೀವ್ ಕೌನ್ಸಿಲ್‌ನಲ್ಲಿ ಮಂಡಿಸಬೇಕು."

ಒಂದು ಪಕ್ಷ ಈ ಸೂಚನೆ ಕಾರ್ಯಗತವಾಗಿದ್ದಲ್ಲಿ, ಭಾರತದ ತೆರಿಗೆದಾರನಿಗೆ, ಭಾರತ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳ ನಡುವೆ ಹಣಕಾಸು ವಿಷಯದ ಬಗ್ಗೆ ನಡೆಯುವ ಒಪ್ಪಂದದ ಬಗ್ಗೆ ಒಂದು ಧ್ವನಿ ಇದ್ದಂತಾಗುತ್ತಿತ್ತು. ಆದರೆ ಈ ಸೂಚನೆಯನ್ನು ಕಾರ್ಯಗತ ಮಾಡುವುದಕ್ಕೆ ಕೆಲವು ಅಡಚಣೆಗಳಿದ್ದವು. ಒಂದು ಪಕ್ಷ ಬಜೆಟನ್ನು ಕೌನ್ಸಿಲ್‌ನಲ್ಲಿ ಮಂಡಿಸಿದ್ದರೆ ಮತ್ತು ಅದರ ಮೇಲೆ ಚರ್ಚೆ ನಡೆದಿದ್ದರೆ, ಈ ಕಾರ್ಯಾವಳಿಗಳು, ಇಂಡಿಯನ್ ಕೌನ್ಸಿಲ್ ಆ್ಯಕ್ಟ್‌ನ (೨೪ ಮತ್ತು ೨೫ ವಿಕ್ಟೋರಿಯ.ಸಿ ೬೭) ೩೮ನೇ ಸೆಕ್ಷನ್ ಪ್ರಕಾರ ಕಾನೂನು ವಿರೋಧವಾಗುತ್ತಿತ್ತು. ಈ ಕಾನೂನು ಅಡಚಣೆಯನ್ನು ಹೋಗಲಾಡಿಸಿಕೊಳ್ಳಬೇಕಾಗಿದ್ದರೆ, ಬಜೆಟ್ ಜೊತೆ ತೆರಿಗೆ ಕಾನೂನನ್ನೂ ಕೌನ್ಸಿಲ್‌ನ ಮುಂದೆ ಇಡಬೇಕಾಗುತ್ತಿತ್ತು. ಈ ಕಾಯಿದೆಯ ಪ್ರಕಾರ ಲೆಜಿಸ್ಲೇಟಿವ್ ಕೌನ್ಸಿಲನ್ನು ಕಾನೂನು ಉದ್ದೇಶಗಳನ್ನು ಬಿಟ್ಟು ಬೇರೆ ಉದ್ದೇಶಗಳಿಗಾಗಿ ಕರೆಯುವುದು ಸಾಧ್ಯವಿರಲಿಲ್ಲ ಅಥವಾ ಇದರ ಮೇಲೆ ಚರ್ಚೆ ಮಾಡದೇ ಇರಬೇಕಾದರೆ, ಗೆಜೆಟ್‌ನಲ್ಲಿ ಅಧಿಕೃತವಾಗಿ ಪ್ರಕಟಿಸದೆ, ಪ್ರಚಾರ ಕೊಡುವುದರಿಂದ ಯಾವ ಪ್ರಯೋಜನವೂ ಇರಲಿಲ್ಲ. ಈ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು, ಮದರಾಸು ಸರ್ಕಾರ[೧] ಭಾರತ ಸರ್ಕಾರಕ್ಕೆ ಕೆಳಗಿನ ಸಲಹೆಯನ್ನು ನೀಡಿತು :

"ಪ್ರಾಂತೀಯ ಬಜೆಟ್, ಅಪ್ರೋಪ್ರಿಯೇಷನ್ ಬಿಲ್‌ನ ಒಂದು ಅಧಿಸೂಚನೆಯಾಗಬೇಕು. ಇದನ್ನು ಎಲ್ಲ ವಿವರಣೆ ಮತ್ತು ಚರ್ಚೆಯ ನಂತರ ಪರಿಚ್ಛೇದಗಳನ್ನು ಪ್ರತ್ಯೇಕವಾಗಿ ಓಟಿಗೆ ಹಾಕಬೇಕು."

ಭಾರತ ಸರ್ಕಾರಕ್ಕೆ ಈ ಸೂಚನೆ ದಿಗ್ಭ್ರಮೆಯನ್ನುಂಟು ಮಾಡಿತು. ಇದಕ್ಕೆ ಉತ್ತರವಾಗಿ ಮದರಾಸು ಸರ್ಕಾರಕ್ಕೆ ಕೇಂದ್ರ ಸರ್ಕಾರ ಹೀಗೆ ಬರೆಯಿತು.[೨]

"೨. ವಾರ್ಷಿಕ ಹಣಕಾಸು ವಿವರಣಾ ಪಟ್ಟಿಯನ್ನು ಇಂಡಿಯನ್ ಕೌನ್ಸಿಲ್ ಆ್ಯಕ್ಟ್‌ನ ಪರಿಧಿಯೊಳಗೆ ತರುವ ಯೋಜನೆ ಸುಸಂಬದ್ಧವಾದುದು ಅಥವಾ ಸಾಧ್ಯ ಎಂದು ಕೌನ್ಸಿಲ್‌ನ ಹಿಸ್ ಎಕ್ಸ್‌ಲೆನ್ಸಿ ಭಾವಿಸುವುದಿಲ್ಲ. ಹೌಸ್‌ಇನ್ ಕಮಿಟಿ ಆಫ್ ಸಪ್ಲೈನ ಗೊತ್ತುವಳಿಗಳನ್ನು ಜಾರಿಗೆ ತರಬೇಕಾದರೆ, ಅಪ್ರೋಪ್ರಿಯೇಷನ್ ಮಸೂದೆಯನ್ನು ಹೌಸ್ ಆಫ್ ಕಾಮನ್ಸ್‌ನಲ್ಲಿ ಪಾಸು ಮಾಡಬೇಕು. ಹೀಗೆ ಪಾಸು ಮಾಡುವವರೆಗೂ ಅಪ್ರೋಪ್ರಿಯೇಷನ್ ಮಸೂದೆ ಕಾನೂನುಬದ್ಧವಾಗುವುದಿಲ್ಲ. ಅಪ್ರೋಪ್ರಿಯೇಷನ್ ಮಸೂದೆ ಸಂಸತ್ತಿನ ಅವಧಿಯಲ್ಲಿ ಪ್ರತಿಯೊಂದು ಅನುದಾನವನ್ನೂ ಪಟ್ಟಿ ಮಾಡುತ್ತದೆ ಮತ್ತು ಕಮಿಟಿ ಆಫ್ ಸಪ್ಲೈ ಪಾಸು ಮಾಡುವ ವಿವಿಧ ಬಾಬ್ತುಗಳ ಅನೇಕ ಮೊತ್ತಗಳಿಗೆ ಅಧಿಕೃತ ಒಪ್ಪಿಗೆ ಕೊಡಲಾಗುತ್ತದೆ. ಜೊತೆಗೆ ಮಸೂದೆಯ ಮೂಲಕ ಪಾಸಾಗುವ ವಿವಿಧ ಸಹಾಯಧನ ಮತ್ತು ನೀಡಿಕೆಗಳನ್ನು ಗೊತ್ತುಮಾಡಿರುವ ಬಾಬ್ತುಗಳಲ್ಲದೆ ಇತರ ಬಾಬ್ತುಗಳಿಗೆ ಉಪಯೋಗಿಸುವುದಕ್ಕೆ ಬರುವುದಿಲ್ಲ ಎಂಬ ನಿಬಂಧನೆ ಸಹ ಇರುತ್ತದೆ."

---

೧. ಭಾರತದ ಸರ್ಕಾರದ ಹಣಕಾಸು ಇಲಾಖೆಗೆ ಪತ್ರ ಸಂಖ್ಯೆ ೧೪೭ ಏಪ್ರಿಲ್ ೧೮, ೧೮೭೧

೨. ಜುಲೈ, ೨೧, ೧೮೭೧ರಲ್ಲಿ ಮದರಾಸಿಗೆ ಲೆಜಿಸ್ಲೇಟಿವ್ ಪತ್ರ ಸಂಖ್ಯೆ ೭೫

"೩. ಹಿಸ್ ಎಕ್ಸಲೆನ್ಸಿ ಇನ್ ಕೌನ್ಸಿಲ್‌ನ ಪ್ರಕಾರ, ಮೇಲಿನ ರೀತಿಯ ನಡವಳಿಕೆ ಭಾರತದಲ್ಲಿ ಅಗತ್ಯವಿಲ್ಲ. ಹಾಗೆ ಮಾಡಿದರೆ, ಆಡಳಿತದಿಂದ ಶಾಸಕಾಂಗಕ್ಕೆ, ಸಾರ್ವಜನಿಕ ಹಣವನ್ನು ಖರ್ಚು ಮಾಡುವ ಅಧಿಕಾರವನ್ನು ನೀಡಿದಂತಾಗುತ್ತದೆ. ಆದ್ದರಿಂದ ಅಪ್ರೋಪ್ರಿಯೇಷನ್ ಮಸೂದೆಯನ್ನು ಮಂಡಿಸುವುದು ಅಗತ್ಯವೆಂದು ಹಿಸ್ ಎಕ್ಸಲೆನ್ಸಿ ಭಾವಿಸುವುದಿಲ್ಲ."

ಈ ಆಜ್ಞೆಯ ವಿರುದ್ಧ ಮದರಾಸು ಸರ್ಕಾರ ಸೆಕ್ರೆಟರಿ ಆಫ್ ಸ್ಟೇಟಿಗೆ[೧] ಅಪೀಲು ಸಲ್ಲಿಸಿತು. ಮದರಾಸು ಸರ್ಕಾರ ಕಾಯಿದೆಯನ್ವಯ ವಾರ್ಷಿಕ ಅಪ್ರೋಪ್ರಿಯೇಷನ್ ಆಗಬೇಕು ಇಲ್ಲವೇ "ಹಣಕಾಸು ವಿವರಣಾ ಪತ್ರವನ್ನು ಕಾನೂನುಬದ್ಧವನ್ನಾಗಿ ಮಾಡುವಂತಹ ಅವಕಾಶವನ್ನು ಕೌನ್ಸಿಲ್ ಆ್ಯಕ್ಟನ್ನು ಬದಲಾವಣೆ ಮಾಡುವುದರ ಮೂಲಕ ಮಾಡಿಕೊಡಬೇಕು. ಇದು ಸ್ಥಳೀಯ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ಚರ್ಚೆಯಾಗಬೇಕೆಂದು ಅಭಿಪ್ರಾಯ ಪಟ್ಟಿತು.

ಆದರೆ ಸೆಕ್ರೇಟರಿ ಆಫ್ ಸ್ಟೇಟ್ ಭಾರತ ಸರ್ಕಾರದ ತೀರ್ಮಾನವನ್ನೇ ಎತ್ತ ಹಿಡಿದ[೨]. ಅವನು ಇದಕ್ಕೆ ನೀಡಿದ ಕಾರಣವೆಂದರೆ :–

"ಇಂತಹ ಅಧಿಕಾರ ಕೇವಲ ಪ್ರತಿನಿಧಿ ಸಭೆ ಪ್ರಾತಿನಿಧಿಕ ಅಸೆಂಬ್ಲಿಗೆ ಮಾತ್ರ ಇದೆ ಅಷ್ಟೆ. ಪ್ರತಿನಿಧಿ ಸಭೆಗೆ ಆಡಳಿತಾಂಗದ ಮೇಲೆ ಸಂಪೂರ್ಣ ಅಧಿಕಾರವಿರುತ್ತದೆ. ಜೊತೆಗೆ ಭಾರತದ ಲೆಜಿಸ್ಲೇಟಿವ್ ಕೌನ್ಸಿಲ್‌ನಿಂದ ಯಾವುದಾದರೂ ಅಧಿಕಾರವನ್ನು ಪಾರ್ಲಿಮೆಂಟ್ ತಡೆಹಿಡಿದಿದ್ದರೆ, ಅದನ್ನು ಪಾಸು ಮಾಡುವ ಅಧಿಕಾರ ಪ್ರತಿನಿಧಿ ಸಭೆಗೆ ಇರುತ್ತದೆ."

ಮೇಲಿನ ಕಾರಣಕ್ಕಾಗಿ ಅಪ್ರೋಪ್ರಿಯೇಷನ್ ಆ್ಯಕ್ಟ್ ಸಲಹೆಯನ್ನು ಕೈಬಿಡಲಾಯಿತು. ೧೯೨೧ರ ವರೆಗೆ ಇದು ಜಾರಿಗೆ ಬರಲಿಲ್ಲ. ಸಾಮ್ರಾಜ್ಯ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳ ನಡುವಣ ಹಣಕಾಸು ವಿಷಯಗಳ ಒಪ್ಪಂದದಲ್ಲಿ ಹೀಗೆ ಜನತೆ ಪಾತ್ರವಹಿಸುವುದು ತಪ್ಪಿಹೋಯಿತು.[೩] ಆದ್ದರಿಂದ ಜನತೆ ಇಂಥ ಒಪ್ಪಂದದಲ್ಲಿ ಭಾಗವಹಿಸಿದ್ದಿದ್ದರೆ ಇದರ ಲಾಭ ಏನಾಗುತ್ತಿತ್ತು ಎನ್ನುವುದರ ಚರ್ಚೆ ಅಪ್ರಸ್ತುತ. ಬದಲಿಗೆ ಉಳಿದ ಎರಡು ಪಕ್ಷಗಳಾದ ಸಾಮ್ರಾಜ್ಯ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳ ಮೇಲೆ ಯಾವ ಪರಿಣಾಮ ಉಂಟಾಯಿತು ಎನ್ನುವುದನ್ನು ನಾವು ನೋಡಬಹುದು. ಈ ಹಿಂದೆಯೇ ನಾನು ಹೇಳಿರುವಂತೆ ಸಾಮ್ರಾಜ್ಯ ಸರ್ಕಾರಕ್ಕೆ ತನಗೆ ಎಷ್ಟು ಲಾಭವಾಗುತ್ತದೆ ಎನ್ನುವ ಚಿಂತೆ ಇದ್ದರೆ, ಪ್ರಾಂತೀಯ ಸರ್ಕಾರಗಳಿಗೆ ತಮಗೆ ಸಾಕಾಗುವಷ್ಟು ಹಣ ಕೇಂದ್ರದಿಂದ ಬರುತ್ತದೆಯೇ ಎನ್ನುವ ಚಿಂತೆ ಇತ್ತು.

ಪ್ರಾಂತೀಯ ಸರ್ಕಾರಗಳಿಗೆ ಸಾಕಷ್ಟು ಪ್ರಮಾಣದ ಹಣ ಬರುತ್ತಿತ್ತೇ ಎನ್ನುವುದನ್ನು ಪರೀಕ್ಷಿಸಲು ಪ್ರಾಂತೀಯ ಬಜೆಟ್‌ಗಳ ವಾರ್ಷಿಕ ಅಧಿಕ ಮತ್ತು ಕೊರತೆಗಳನ್ನು ಸಮೀಕ್ಷಿಸುವುದು ಉಚಿತ. ಇದಕ್ಕಾಗಿ ಕೆಳಗಿನ ಪಟ್ಟಿಯಲ್ಲಿ ಪ್ರಾಂತೀಯ ಯೋಜನೆಗೆ ಅಳವಡಿಸಲಾಗಿದ್ದ ಪ್ರಾಂತ್ಯಗಳ ಹೆಚ್ಚುವರಿ ಮತ್ತು ಕೊರತೆಗಳನ್ನು ನೀಡಲಾಗಿದೆ.

---

೧. ಸೆಕ್ರೆಟರಿ ಆಫ್ ಸ್ಟೇಟ್‌ಗೆ ಸೆಪ್ಟೆಂಬರ್ ೧೯, ೧೮೭೧ರ ಮದರಾಸು ಸರ್ಕಾರದ ಹಣಕಾಸು ಇಲಾಖೆಯ ಪತ್ರ ಮತ್ತು ಅದರೊಟ್ಟಿಗಿನ ಇದೇ ಪತ್ರ ವ್ಯವಹಾರ.

೨. ಜನವರಿ ೧೮, ೧೮೭೨ ರಲ್ಲಿ ಭಾರತ ಸರ್ಕಾರಕ್ಕೆ ಲೆಜಿಸ್ಲೇಟಿವ್ ಡಿಸ್‌ಪ್ಯಾಚ್ ಸಂಖ್ಯೆ ೪.

೩. ವಾಸ್ತವವಾಗಿ ಜನರ ಪ್ರತಿನಿಧಿಗೆ ರಾಜಕೀಯ ಮತ್ತು ಹಣಕಾಸು ಅಧಿಕಾರವನ್ನು ನೀಡುವವರೆಗೆ ವಿಕೇಂದ್ರೀಕರಣದ ಪ್ರಶ್ನೆಯನ್ನು ನಿರ್ದಿಷ್ಟವಾಗಿ ಎತ್ತಿಕೊಳ್ಳಲಾಗದು ಎನ್ನುವ ವಿಷಯ ೧೯೦೮ರವರೆಗೆ ಚರ್ಚೆಗೆ ಬರಲಿಲ್ಲ. ದಿವಂಗತ ಗೋಬಲ್ ರಾಯಲ್ ಕಮೀಷನ್ ಆಫ್ ಡಿಸೆಂಟ್ರಲೈಸೇಷನ್ ಮುಂದೆ ಸಾಕ್ಷಿ ಹೇಳುವವರೆಗೆ ಈ ಪ್ರಶ್ನೆ ಪ್ರಮುಖವಾಗಲಿಲ್ಲ.

| ಪ್ರಾಂತ್ಯ | ೧೮೭೧-೭೨<br>£ | ೧೮೭೨-೭೩<br>£ | ೧೮೭೩-೭೪<br>£ | ೧೮೭೪-೭೫<br>£ | ೧೮೭೫-೭೬<br>£ | ೧೮೭೬-೭೭<br>£ |
|---|---|---|---|---|---|---|
| ಸಿ.ಪಿ. | ೨೦,೯೮೮ | -೮,೪೨೩ | ೨,೨೬೮ | ೧೩,೧೦೮ | ೮,೩೦೭ | ೧೬,೮೦೦ |
| ಬರ್ಮಾ | ೨೭,೬೩೪ | ೩೩,೮೩೨ | -೯,೯೨೨ | -೨೧,೮೮೯ | -೫,೪೭೧ | ೫,೧೦೦ |
| ಅಸ್ಸಾಂ | - | - | - | ೫,೧೫೯ | ೫೯೦ | ೯,೮೩೩ |
| ಬಂಗಾಳ | ೧೮೦,೬೨೨ | ೭೮,೬೨೨ | ೩೯೩,೯೫೫ | ೨೭೧,೦೪೪ | ೨೭,೩೯೭ | ೪೬,೯೭೮ |
| ವಾಯವ್ಯ ಪ್ರಾಂತ್ಯ ಮತ್ತು ಔಧ್ | ೩೧,೫೯೫ | ೬೪,೦೩೬ | ೩೬,೩೫೮ | ೧೧,೬೯೩ | ೨೦,೯೪೫ | ೧೨೮,೫೦೧ |
| ಪಂಜಾಬ್ | ೧೧೯,೮೨೮ | ೨೮,೦೦೮ | -೩೩,೩೪೭ | -೧೧೭,೬೪೪ | ೯೨,೭೨೪ | ೨೬,೯೦೮ |
| ಮದ್ರಾಸ್ | ೪೦,೭೮೭ | -೧೯,೨೬೪ | -೫೬,೩೮೧ | ೪,೩೦೩ | -೧೪,೨೧೦ | ೫೦೪ |
| ಬೊಂಬಾಯಿ | ೬೫,೫೫೩ | ೧೨೮,೮೦೫ | -೬೪,೩೭೩ | ೯,೨೯೯ | -೧೮,೩೫೪ | -೧೪೦,೭೧೮ |

(ಆಯಾ ವರ್ಷಗಳಿಗೆ ಭಾರತ ಸರ್ಕಾರದ ವಾರ್ಷಿಕ ಹಣಕಾಸು ಮತ್ತು ರೆವಿನ್ಯೂ ಲೆಕ್ಕಪತ್ರಗಳಿಂದ ಸಂಗ್ರಹಿಸಿದೆ)

ಮೇಲಿನ ಪಟ್ಟಿಯಲ್ಲಿ ಸ್ಪಷ್ಟವಾಗುವ ಅಂಶವೆಂದರೆ, ಬಜೆಟ್‌ನ ಅಧಿಕ್ಯ ಕೊರತೆಗಿಂತ ಹೆಚ್ಚಾಗಿದೆ. ಆದ್ದರಿಂದ ಆಧಿಕ್ಯಗಳ ಮೂಲಕ ಅತ್ಯಂತ ಸುಲಭವಾಗಿ ಕೊರತೆಗಳನ್ನು ತೊಡೆದು ಹಾಕಿಬಿಡಬಹುದಾಗಿತ್ತು. ಆದರೆ, ಪ್ರಾಂತೀಯ ಸರ್ಕಾರಗಳ ಆಧಿಕ್ಯದ ಕಾರಣಗಳನ್ನು ವಿವರಿಸುವಾಗ ಎಚ್ಚರಿಕೆ ವಹಿಸಬೇಕು. ಬೊಕ್ಕಸದಿಂದ ದೊರೆಯುತ್ತಿದ್ದ ಹಣದಲ್ಲಿ ಪ್ರಾಂತ್ಯಗಳು, ತಮಗೆ ಸಾಮ್ರಾಜ್ಯದ ಮತ್ತು ಇತರ ಪಾವತಿಗಳಲ್ಲಿ ಉಳಿತಾಯ ಮಾಡಿಕೊಳ್ಳುತ್ತಿದ್ದವೇ ಎನ್ನುವ ಪ್ರಶ್ನೆಗೆ ಉತ್ತರಿಸಬೇಕು. ಈ ಪ್ರಶ್ನೆಗೆ ಔಪಚಾರಿಕವಾಗಿ ಉತ್ತರಿಸುವುದಕ್ಕಾಗುವುದಿಲ್ಲ. ಏಕೆಂದರೆ ಮೇಲಿನ ಪಟ್ಟಿಯಲ್ಲಿನ ಅಂಕಿಅಂಶಗಳು ಪ್ರಾಂತ್ಯಗಳ ಒಟ್ಟು ಹಣ ಸಂಪನ್ಮೂಲಗಳು ಮತ್ತು ಅವುಗಳಲ್ಲಿನ ಬದಲಾವಣೆಗಳು ಪ್ರಾಂತ್ಯಗಳ ನಿರ್ವಹಣೆಗೆ ಕೇಂದ್ರ ಸರ್ಕಾರದಿಂದ ಬರುತ್ತಿದ್ದ ಹಣ ಮತ್ತು ಪಾವತಿಗಳಿಗಿಂತ ಅಧಿಕವಾಗಿದ್ದವು. ಇದರ ಜೊತೆಗೆ ಗಮನಿಸಬೇಕಾದ ಅಂಶವೆಂದರೆ, ಪ್ರಾಂತೀಯ ಸರ್ಕಾರಗಳಿಗೆ ವಹಿಸಿದ್ದ ಬಾಬ್ತುಗಳಿಗೆ ಸಾಮ್ರಾಜ್ಯದ ಹಣ ಮತ್ತು ಪಾವತಿಗಳಲ್ಲದೆ, ಪ್ರಾಂತೀಯ ಬಜೆಟ್‌ಗಳು, ಪ್ರಾಂತೀಯ ನಿಧಿಗಳನ್ನು ಸಹ ಹೊಂದಿದ್ದವು. ಸಾಮ್ರಾಜ್ಯದ ಹಣಕಾಸಿನಿಂದ ಪ್ರಾಂತೀಯ ಹಣಕಾಸನ್ನು ಪ್ರತ್ಯೇಕಿಸುವುದಕ್ಕೆ ಬಹಳ ಮೊದಲೇ ೧೮೫೫ರಿಂದ ಬ್ರಿಟಿಷ್ ಇಂಡಿಯಾದಲ್ಲಿ ಸಾಮ್ರಾಜ್ಯ ಹಾಗೂ ಸ್ಥಳೀಯ ಹಣಕಾಸುಗಳನ್ನು ಪ್ರತ್ಯೇಕಿಸಲಾಗಿತ್ತು ಎನ್ನುವ ಅಂಶವನ್ನು ನಾವು ಗಮನಿಸಬೇಕು. ಸ್ಥಳೀಯ ಹಣಕಾಸಿನ ಮೇಲ್ವಿಚಾರಣೆ ಹೀಗೆ ಪ್ರತ್ಯೇಕತೆಗೊಂಡ ಮೇಲೆ ಸಂಪೂರ್ಣವಾಗಿ ಪ್ರಾಂತೀಯ ಸರ್ಕಾರಗಳ ವಶದಲ್ಲೇ ಇತ್ತು. ಇದು ಎರಡು ವರ್ಗಗಳನ್ನು ಒಳಗೊಂಡಿತ್ತು (ಅ) ನಿಗದಿಯಾದ ಉದ್ದೇಶಗಳಿಗಾಗಿ ಸಂಗ್ರಹಿಸಲಾದ ಹಣವನ್ನು ಕಾನೂನಿನ ಪ್ರಕಾರ, ಯಾವ ಜಿಲ್ಲೆಯಲ್ಲಿ ಸಂಗ್ರಹಿಸಲಾಗಿದೆಯೋ ಅಲ್ಲಿಯೇ ಖರ್ಚು ಮಾಡಬೇಕಾಗಿತ್ತು ಮತ್ತು ಅವುಗಳನ್ನು ನಿರ್ದಿಷ್ಟ ಉದ್ದೇಶಗಳಿಗೆ ಖರ್ಚು ಮಾಡಬೇಕಾಗಿತ್ತು (ಆ) ಇಡೀ ಪ್ರಾಂತ್ಯದಲ್ಲಿ ಸಂಗ್ರಹಿಸಲಾದ ಹಣವನ್ನು ಪ್ರಾಂತೀಯ ಸರ್ಕಾರಗಳು ತಮಗೆ ಯುಕ್ತವೆನಿಸಿದ ರೀತಿಯಲ್ಲಿ ಖರ್ಚು ಮಾಡಬಹುದಾಗಿತ್ತು. ಪ್ರಾಂತೀಯ ಹಣಕಾಸು ವ್ಯವಸ್ಥೆಯನ್ನು ಪ್ರಾರಂಭಿಸಿದಾಗ, ಸಹಜವಾಗಿಯೇ ಎರಡನೆಯ ಗುಂಪಿಗೆ ಸೇರಿದ ಸ್ಥಳೀಯ ಆದಾಯವನ್ನು, ಪ್ರಾಂತೀಯ ನಿಧಿಗೆ ಸೇರಿಸಲು ಉದ್ದೇಶಿಸಲಾಯಿತು. ಎಷ್ಟು ಹಣವನ್ನು ಹೀಗೆ ಪ್ರಾಂತೀಯ ನಿಧಿಗೆ ಸೇರಿಸಲಾಯಿತು ಎನ್ನುವುದನ್ನು

ಖಂಡಿತವಾಗಿ ಹೇಳುವುದು ಕಷ್ಟ. ಆದರೆ ಆ ಕಾಲದಲ್ಲಿ ಹಣಕಾಸು ಸಚಿವನಾಗಿದ್ದ ಸರ್ ಜಾನ್ ಸ್ಟ್ರಾಚ್ ಅಭಿಪ್ರಾಯದಲ್ಲಿ,[೧] ಹಾಗೆ ಸೇರಿದ ಮೊತ್ತ ತುಂಬಾ 'ಅಲ್ಪ ಪ್ರಮಾಣ'ದ್ದಾಗಿತ್ತು. ಹೀಗಾಗಿ ಈ ಮೊತ್ತ ಹೊಸ ವ್ಯವಸ್ಥೆಯ ಹಣಕಾಸಿನ ಮೇಲೆ ಯಾವ ಪರಿಣಾಮವನ್ನೂ ಬೀರಿರಲಿಲ್ಲ.[೨]

ಈ ಹೊಸ ವ್ಯವಸ್ಥೆಯಿಂದ ಸಾಮ್ರಾಜ್ಯದ ಬೊಕ್ಕಸಕ್ಕೆ ಲಾಭವೆಷ್ಟಾಯಿತು ಎನ್ನುವ ಪ್ರಶ್ನೆಗೆ ಉತ್ತರ ದೀರ್ಘವಾದದ್ದೇನಲ್ಲ. ಪ್ರಾಂತೀಯ ಸರ್ಕಾರಗಳು ಸೇವೆಗಳನ್ನು ಮಿತವ್ಯಯದಿಂದ ನಿರ್ವಹಿಸುವುದರ ಮೂಲಕ ಅಪ್ರತ್ಯಕ್ಷವಾಗಿ ಎಷ್ಟು ಲಾಭವಾಯಿತು ಎನ್ನುವುದರ ಚರ್ಚೆಯನ್ನು ನಾವು ಮುಂದೆ ಮಾಡುತ್ತೇವೆ. ಈ ಪ್ರಶ್ನೆಯನ್ನು ಪ್ರಾಂತೀಯ ಹಣಕಾಸು ವಿಕಾಸದ ಎರಡನೇ ಹಂತವನ್ನು ಯಾವ ಪ್ರಮುಖ ಅಂಶಗಳು ಪ್ರಚೋದಿಸಿದವು ಎನ್ನುವುದನ್ನು ವಿವರಿಸುವಾಗ ನೋಡುತ್ತೇವೆ. ಈಗ ಸಾಮ್ರಾಜ್ಯದ ಬೊಕ್ಕಸಕ್ಕೆ ಉಂಟಾದ ನೇರ ಲಾಭವನ್ನು ನೋಡೋಣ. ಪ್ರಾಂತೀಯ ಸರ್ಕಾರಗಳಿಗೆ ಹಣ ನೀಡಿಕೆಯಲ್ಲಿ ಅನೇಕ ಬಾಬ್ತುಗಳಲ್ಲಿ ಕಡಿತವನ್ನುಂಟುಮಾಡಲಾಯಿತು ಎಂಬುದನ್ನು ಈಗಾಗಲೇ ನೋಡಿದ್ದೇವೆ. ಅನೇಕ ಬಾಬ್ತುಗಳ ವರ್ಗಾವಣೆಯ ಮೂಲಕ ಭಾರತ ಸರ್ಕಾರ ಪ್ರತಿವರ್ಷ ಒಂದು ದಶಲಕ್ಷ ಸ್ಟರ್ಲಿಂಗ್‌ಗಳಷ್ಟು ಉಳಿತಾಯ ಮಾಡಲು ಯೋಚಿಸಿತ್ತು ಎಂಬುದನ್ನು ಈ ಹಿಂದೆ ನೋಡಿದ್ದೇವೆ. ಆದರೆ ಇಂತಹ ಕಡಿತವನ್ನು ಸರಿತೂಗಿಸಲು ಪ್ರಾಂತೀಯ ಸರ್ಕಾರಗಳು ಹೊಸ ತೆರಿಗೆಗಳನ್ನು ವಿಧಿಸಬೇಕಾಗುತ್ತದೆ ಎನ್ನುವುದನ್ನು ಕೇಂದ್ರ ಸರ್ಕಾರ ಶೀಘ್ರವಾಗಿ ಮನಗಂಡಿತ್ತು. ಆದರೆ ಈ ರೀತಿಯ ತೆರಿಗೆಯನ್ನು ಹೆಚ್ಚಿಸುವುದೂ ಕಷ್ಟವಿತ್ತು. ಏಕೆಂದರೆ ಸಿಪಾಯಿದಂಗೆಯಾದಾಗಿನಿಂದ, ತೆರಿಗೆಯ ಭಾರ ಹೆಚ್ಚಾಗುತ್ತಾ ಬಂದಿತ್ತು. ಈ ಭಾರವನ್ನು ಸಾಮ್ರಾಜ್ಯದ ತೆರಿಗೆಯಿಂದ ನೇರವಾಗಿಯಾಗಲೀ, ಪ್ರಾಂತೀಯ ತೆರಿಗೆಗಳ ಮೂಲಕ ಪರೋಕ್ಷವಾಗಿಯಾಗಲೀ ಹೆಚ್ಚಿಸುವುದಕ್ಕೆ ಇಷ್ಟವಿಲ್ಲದೆ, ಪ್ರಾಂತ್ಯಗಳಿಗೆ ಗೊತ್ತುಮಾಡಿದ್ದ ವರ್ಗಾವಣೆಯ ಕಡಿತವನ್ನು ೧,೦೦೦,೦೦೦ ಪೌಂಡ್‌ಗಳಿಂದ ೩೫೦,೦೦೦ ಗಳಿಗೆ ಇಳಿಸಲು ಕೇಂದ್ರ ಸರ್ಕಾರ ನಿರ್ಧರಿಸಿತ್ತು. ಇನ್ನೂ ಹೆಚ್ಚು ಖಚಿತವಾಗಿ ಹೇಳುವುದಾದರೆ ಬರ್ಮಾಕ್ಕೆ ಅದರ ವಿಶೇಷ ಪರಿಸ್ಥಿತಿಗಳಿಂದಾಗಿ ಕೊಡಬೇಕಾಗಿದ್ದ ೧೯,೧೯೯ ಪೌಂಡ್‌ಗಳ ಪರಿಹಾರವನ್ನು ಗಣಿಸಿದರೆ ವರ್ಗಾವಣೆಯಲ್ಲಿನ ಕಡಿತವು ೩೫೦,೮೦೧ಕ್ಕೆ ಬಂದು ನಿಲ್ಲುತ್ತಿತ್ತು.

೩೩೦,೧೦೧ ವಾರ್ಷಿಕ ಪರಿಹಾರದ ಉಳಿತಾಯದಿಂದ ಭಾರತ ಸರ್ಕಾರ ಪಡೆದುಕೊಂಡಿದ್ದ ಲಾಭ ಸಾಕಷ್ಟು ಪ್ರಮಾಣದ್ದು ಎಂದು ಭಾವಿಸಿತ್ತು. ಆದರೆ ಇದರಿಂದ ಪ್ರಾಂತೀಯ ಹಣಕಾಸಿಗೆ ಸ್ವಲ್ಪಮಟ್ಟಿಗೆ ಧಕ್ಕೆಯುಂಟಾಗಿದ್ದುದು ಸತ್ಯ ಸಂಗತಿ. ಇದರಿಂದ ಪ್ರಾಂತೀಯ ಸರ್ಕಾರಗಳಿಗೆ ಭಾರ ಉಂಟಾಗಿದ್ದರೂ, ಅವುಗಳ ಪರಿಸ್ಥಿತಿ ಅಷ್ಟೇನೂ ಅತೃಪ್ತಿಕರವಾದದ್ದಾಗಿರಲಿಲ್ಲ.

ಪ್ರಾಂತೀಯ ಹಣಕಾಸು ವ್ಯವಸ್ಥೆಯಲ್ಲಿ ಅಸಂತೋಷಕರವಾಗಿದ್ದ ಒಂದು ಲಕ್ಷಣವಿತ್ತು. ಅದೇಂದರೆ, ಸ್ಥಳೀಯ ಸುಧಾರಣೆಗಾಗಿ ಹೇರಲಾಗುತ್ತಿದ್ದ ಅತಿಯಾದ ತೆರಿಗೆಗಳು ಮತ್ತು ಮೇಲ್ತೆರಿಗೆಗಳು. ಕೆಳಗಿನ ಪಟ್ಟಿಯನ್ನು ಗಮನಿಸಿ.

---

೧. ೧೮೭೭–೭೮ಕ್ಕೆ ಸಂಬಂಧಿಸಿದ ಹಣಕಾಸು ವಿವರಣೆಯ ಅನುಬಂಧಕ್ಕೆ ಸೇರಿಸಿರುವ ಹಣಕಾಸು ಸಚಿವರು ೧೮೭೭, ಮಾರ್ಚ್ ೧೫ರ ಸಭೆ ನಡಾವಳಿಗಳನ್ನು ನೋಡಿ.

೨. ಹಳೆಯ ವ್ಯವಸ್ಥೆಗೆ ಹೋಲಿಸಿದಂತೆ ಹೊಸ ಹಣಕಾಸು ವ್ಯವಸ್ಥೆಯ ಪರಿಣಾಮಗಳನ್ನು ಖಚಿತ ಪಡಿಸಿಕೊಳ್ಳುವುದಕ್ಕೋಸ್ಕರ ೧೮೭೭ರಲ್ಲಿ ಈ ಹೊಂದಾಣಿಕೆಯನ್ನು ರದ್ದು ಮಾಡಲಾಯಿತು.

## ೧೮೭೦ ರಿಂದ ಹೆಚ್ಚು ಮಾಡಲಾದ ಮೇಲ್ತೆರಿಗೆ ಮತ್ತು ಹೊಸ ಬಾಬ್ತುಗಳಿಂದ ಬಂದ ವರಮಾನದ ವಿವರ

| ಪ್ರಾಂತ್ಯ | ೧೮೭೦-೭೧ | ೧೮೭೧-೭೨ | ೧೮೭೨-೭೩ | ೧೮೭೩-೭೪ | ೧೮೭೪-೭೫ | ೧೮೭೫-೭೬ |
|---|---|---|---|---|---|---|
| **ಔಧ್** | £ | £ | £ | £ | £ | £ |
| ಕೆಳಗಿನ ಬಾಬ್ತುಗಳ ಮೇಲೆ ಸಾಧರಣ ತೆರಿಗೆ : | | | | | | |
| ಭೂಕಂದಾಯ | ೩೮,೮೧೩ | ೨೯,೦೧೮ | ೩೪,೩೫೪ | ೩೪,೨೫೯ | ೩೩,೨೦೮ | ೩೩,೧೪೬ |
| ಮಾರ್ಜಿನ್ ಫಂಡ್ | ೭,೩೬೩ | ೩,೪೬೧ | – | – | – | – |
| ಸ್ಥಳೀಯ ತೆರಿಗೆಗಳು | | ೩೬,೮೧೦ | ೪೨,೫೩೫ | ೪೨,೮೮೩ | ೪೧,೦೯೭ | ೪೧,೪೬೧ |
| **ಒಟ್ಟು** | **೪೬,೧೭೬** | **೬೯,೨೮೯** | **೭೬,೮೮೯** | **೭೭,೧೪೨** | **೭೪,೩೦೫** | **೭೪,೬೦೭** |
| **ಅಸ್ಸಾಂ** | | | | | | |
| ಭೂಮಿಯ ಮೇಲೆ ಸಾಧಾರಣ ಮೇಲ್ತೆರಿಗೆ ಹಳೆಯ ಫಂಡ್‌ನಿಂದ ಆದಾಯ | ೬.೫೦೬ | ೪,೩೩೩ | ೭೧೧ | ೧,೯೧೬ | *೧೭,೧೪೯ | – |
| ಹೊಸ ಫಂಡ್ | – | – | – | – | ೧೫,೨೬೭ | ೧೬,೩೦೦ |
| **ಒಟ್ಟು** | **೬,೫೦೬** | **೪,೩೩೩** | **೭೧೧** | **೧,೯೧೬** | **೩೨,೪೧೬** | **೧೬,೩೦೦** |
| **ಬಂಗಾಳ** | | | | | | |
| ರಸ್ತೆಮೇಲ್ತೆರಿಗೆ ಫಂಡ್ | – | – | ೨೨,೯೧೩ | ೫೯,೦೩೯ | ೧೨೦,೧೨೮ | ೧೫೮,೫೧೬ |
| ವಾಯವ್ಯ ಪ್ರಾಂತ್ಯಗಳು | ೧೬೮,೫೩೨ | ೨೦೧,೫೪೮ | ೨೧೬,೮೧೮ | ೨೧೩,೬೭೨ | ೨೧೫,೯೬೮ | ೧೫೦,೬೧೯ |
| ಪಂಜಾಬ್ | ೫೮,೩೩೦ | ೨೧೪,೪೪೧ | ೨೧೬,೧೯೪ | ೨೦೮,೦೬೩ | ೨೧೧,೮೬೨ | ೧೯೩,೫೭೩ |
| ಮದರಾಸು ರಸ್ತೆ ಮೇಲ್ತೆರಿಗೆ | ೨೧೨,೮೧೩ | ೨೩೪,೫೬೭ | ೩೭೭,೦೩೧ | ೩೬೮,೦೩೧ | ೩೭೧,೩೧೧ | ೩೬೯,೩೨೫ |
| ಮದ್ರಾಸ್ ಟೋಲ್ ಮೇಲ್ತೆರಿಗೆ | – | – | ೧೨,೧೪೪ | ೧೨,೨೩೪ | ೧೪,೮೬೦ | ೨೬,೫೩೧ |
| **ಒಟ್ಟು** | **೪೬೨,೩೫೭** | **೭೨೪,೧೭೮** | **೯೨೨,೭೦೪** | **೯೪೦,೩೩೩** | **೧,೦೪೦,೮೫೦** | **೯೮೦,೫೪೫** |

* ರಸ್ತೆ ಮತ್ತು ಸರ್ಕಾರದ ಎಸ್ಟೇಟ್ ಇಂಪ್ರೂವ್‌ಮೆಂಟ್ ಲೆಕ್ಕದಿಂದ ಪಡೆದುಕೊಂಡ ಬಾಕಿ ಹಣ. ಆದಾಯದ ಹೊಸಮೂಲಗಳು ಮತ್ತು ಮೇಲ್ತೆರಿಗೆಗಳ ಮೂಲಕ್ಕಾಗಿ, ನೋಡಿ, ಪೇಪರ್ಸ್ ಎಟ್‌ಸೆಟ್ರಾ, ಆನ್ ದಿ ಎಕ್ಸ್‌ಟೆನ್‌ಷನ್ ಆಫ್ ದಿ ಫೈನಾನ್ಷಿಯಲ್ ಪವರ್ಸ್ ಆಫ್ ದಿ ಲೋಕಲ್ ಗವರ್ನಮೆಂಟ್ಸ್. ಪುಟ ೪೯೪

ಮೇಲಿನ ಪಟ್ಟಿಯಲ್ಲಿ ನಾವು ಗಮನಿಸುವಂತೆ ೧೯೨೦-೨೧ರ ಆದಾಯಕ್ಕಿಂತ ೧೯೨೧-೨೨ರ ಆದಾಯದಲ್ಲಿ ೪೯೯,೧೯೯ ಪೌಂಡ್‌ಗಳ ಹೆಚ್ಚಳವಿದೆ. (ಗ್ರಾಮೀಣ ಪೊಲೀಸ್ ದರಗಳನ್ನು ಬಿಟ್ಟು ನಂತರ).

ಈ ಹೆಚ್ಚಳಕ್ಕೆ ಕಾರಣಗಳಿದ್ದವು. ವಾಯವ್ಯ ಪ್ರಾಂತ್ಯಗಳಲ್ಲಿ ಮೇಲ್ತೆರಿಗೆಯನ್ನು ಹೆಚ್ಚಿಸಲಾಯಿತು. ಪಂಜಾಬ್ ಮತ್ತು ಮದರಾಸು ಪ್ರಾಂತ್ಯಗಳಲ್ಲಿ ಮೇಲ್ತೆರಿಗೆಯನ್ನು ಶೇಕಡಾ ೬೧/೪ರಷ್ಟು ಹೆಚ್ಚಿಸಲಾಯತು. ವಾಯವ್ಯ ಪ್ರಾಂತ್ಯಗಳಲ್ಲದೆ ಭೂಕಂದಾಯವನ್ನು ಶೇಕಡಾ ೫ರಷ್ಟು ಹೆಚ್ಚಿಸಲಾಯಿತು. (ಗ್ರಾಮೀಣ ಪೊಲೀಸ್ ದರಗಳನ್ನು ಬಿಟ್ಟನಂತರ). ಬಂಗಾಳದಲ್ಲಿ ರಸ್ತೆ ಮೇಲ್ತೆರಿಗೆಯನ್ನು ಹೆಚ್ಚಿಸಲಾಯಿತು. ಹಿಂದೆ ಇದ್ದ ಅಸ್ಸಾಂನ ಸಹಾಯಧನವನ್ನು ಹೆಚ್ಚಿಸಲಾಯಿತು. ರೈತರಿಗೆ ಬಾಕಿ ಇದ್ದ ಭೂಕಂದಾಯದ ಮೇಲೆ, ಸಾಮ್ರಾಜ್ಯದ ಮೇಲ್ತೆರಿಗೆ ದರವನ್ನು ಶೇಕಡಾ ೩ ರಿಂದ ಶೇಕಡಾ ೬೧/೪ಕ್ಕೆ ಹೆಚ್ಚಿಸಲಾಯಿತು. ಬೊಂಬಾಯಿ ಪ್ರಾಂತ್ಯದಲ್ಲಿ ಮೇಲ್ತೆರಿಗೆ ದರ ಶೇಕಡಾ ೬೧/೪ರಷ್ಟನ್ನು ಕೆಲವು ವರ್ಷಗಳ ಹಿಂದೆ ವಿಧಿಸಲಾಗಿತ್ತು. ಆದ್ದರಿಂದ ಇದನ್ನು ಮೇಲಿನ ಪಟ್ಟಿಯಲ್ಲಿ ಸೇರಿಸಿಲ್ಲ. ಮೇಲ್ತೆರಿಗೆಯನ್ನು ವಿಧಿಸದೇ ಇದ್ದ ಪ್ರಾಂತ್ಯವೆಂದರೆ, ಮಧ್ಯ ಪ್ರಾಂತ್ಯ (ಸಿ.ಪಿ). ಈ ಪ್ರಾಂತ್ಯದಲ್ಲಿ ೧೯೨೦ರಲ್ಲಿ ಶೇಕಡಾ ೬೧/೪ರ ಭೂ ಕಂದಾಯದ ಮೇಲೆ ಶೇಕಡಾ ೬೧/೪ ಮೇಲ್ತೆರಿಗೆಯನ್ನು ಹಾಕಬೇಕೆಂದು ಯೋಚಿಸಲಾದರೂ ಇದಕ್ಕೆ ಸಮಯ ಇನ್ನೂ ಪಕ್ವವಾಗಿಲ್ಲವೆಂದು ಭಾವಿಸಲಾಯಿತು.

ಹೆಚ್ಚು ಹೆಚ್ಚಿನ ತೆರಿಗೆಯನ್ನು ವಿಧಿಸುವಂತಹ ಪ್ರಾಂತೀಯ ತೆರಿಗೆ ವ್ಯವಸ್ಥೆಯ ಲಾಭವಾದರೂ ಎಂಥದು ಎನ್ನುವ ಪ್ರಶ್ನೆ ಸಹಜವೇ. ಹೀಗೆ ಹೆಚ್ಚಿನ ತೆರಿಗೆಯನ್ನು ವಿಧಿಸುವುದೇ ಆದರೆ, ಈ ಜವಾಬ್ದಾರಿಯನ್ನು ಸಾಮ್ರಾಜ್ಯ ಸರ್ಕಾರವೇ ನೇರವಾಗಿ ಕೈಗೊಳ್ಳದೆ, ಪ್ರಾಂತೀಯ ಬಜೆಟ್‌ಗಳ ರೂಪದಲ್ಲಿ ಅದನ್ನು ಪ್ರಾಂತ್ಯ ಸರ್ಕಾರಗಳಿಗೆ ವರ್ಗಾಯಿಸುವುದರ ಔಚಿತ್ಯವಾದರೂ ಏನಿತ್ತು ಎನ್ನುವ ಪ್ರಶ್ನೆಯೂ ಏಳುತ್ತದೆ. ಈ ಪ್ರಶ್ನೆಗೆ ಉತ್ತರವನ್ನು ನಾವು ಬೇರೊಂದು ದೃಷ್ಟಿಕೋನದಿಂದ ಗಮನಿಸಬೇಕು. ಹೆಚ್ಚಿನ ತೆರಿಗೆಗಳು ಆವಶ್ಯಕವೂ ನ್ಯಾಯಯುತವೂ ಆಗಿದ್ದವು ಎಂಬುದನ್ನು ನಾವು ಮುಂದೆ ತೋರಿಸುತ್ತೇವೆ. ಜನರಿಗೆ ಯಾವುದೇ ರೀತಿಯ ಹೆಚ್ಚಿನ ಅನುಕೂಲಗಳನ್ನು ಹೊಂದಿಸಿಕೊಡಬೇಕಾದಾಗ, ತೆರಿಗೆಗಳನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸುವುದು ಅನಿವಾರ್ಯವಾದುದರಿಂದ ಅಂತಹ ಕ್ರಮದ ವಿರುದ್ಧ ಮಾತನಾಡುವುದು ಸರಿಯೆನಿಸದು. ಆದರೆ ಆಗ ವಿಧಿಸಿದಂತಹ ತೆರಿಗೆಯನ್ನು ವಿರೋಧಿಸದಿರುವಂತೆಯೂ ಇಲ್ಲ. ಏಕೆಂದರೆ ಆಗ ಮಾಡಿದ್ದು ಕೇವಲ ತೆರಿಗೆಯನ್ನು ಹೆಚ್ಚಿಸುವುದಲ್ಲ, ಬದಲಿಗೆ ಅದನ್ನು ಅಸಮಾನತೆಯನ್ನು ಸೃಷ್ಟಿಸುವ ರೀತಿಯಲ್ಲಿ ಹೆಚ್ಚಿಸಿದ್ದು. ತೆರಿಗೆಯ ಹೊಸ ವ್ಯವಸ್ಥೆಯಲ್ಲಿ, ಈಗಾಗಲೇ ಹೆಚ್ಚಿನ ತೆರಿಗೆಯನ್ನು ವಿಧಿಸಲಾಗಿದ್ದ, ಜಮೀನ್ದಾರರ ಮೇಲೆ ಇನ್ನೂ ಹೆಚ್ಚಿನ ತೆರಿಗೆ ಮತ್ತು ಮೇಲ್ತೆರಿಗೆಗಳನ್ನು ವಿಧಿಸಲಾಯಿತು. ಪ್ರಾಂತೀಯ ಬಜೆಟ್‌ಗಳಿಗೆ ಸೇರಿಸಲಾದ ಹೊಸ ಬಾಬ್ತುಗಳನ್ನು ತೂಗಿಸಲು ಹೊಸ ತೆರಿಗೆಗಳು ಮತ್ತು ಮೇಲ್ತೆರಿಗೆಗಳನ್ನು ವಿಧಿಸುತ್ತಿದ್ದು, ಅವುಗಳನ್ನು ಸ್ಥಳೀಯ ಸ್ವರೂಪದ್ದವೆಂದು ಕರೆದಿದ್ದರೂ ಇವು ನಿರ್ದಿಷ್ಟ ಸ್ಥಳಗಳಿಗೆ ಲಾಭದಾಯಕವಾಗಿರಲಿಲ್ಲ. ಆದ್ದರಿಂದ ಸ್ಥಳೀಯ ತೆರಿಗೆಗಳ ಆದಾಯದಿಂದ ನಿರ್ವಹಿಸುತ್ತಿದ್ದ ಬಾಬ್ತುಗಳ ಲಾಭ ಕೇವಲ ಸ್ಥಳೀಯವಾಗಿರಲಿಲ್ಲ. ಅದರಲ್ಲೂ ಆದಾಯ ತೆರಿಗೆಯನ್ನು ತೆಗೆದುಹಾಕಿ, ಸ್ಥಳೀಯ ತೆರಿಗೆ ಮತ್ತು ಮೇಲ್ತೆರಿಗೆಗಳನ್ನು ವಿಧಿಸಲಾಯಿತು ಎನ್ನುವುದನ್ನು ಗಮನಿಸುವಾಗ ಇದು ಇನ್ನೂ ವಿಚಿತ್ರವಾಗಿ ಕಾಣುತ್ತದೆ. ನ್ಯಾಯದ ಹಿತದೃಷ್ಟಿಯಿಂದ ಆದಾಯ ತೆರಿಗೆ ಮುಂದುವರಿಯಬೇಕಾಗಿತ್ತು ಎಂದು ನಾವು ಭಾವಿಸುವುದು ಸರಿಯಾದದ್ದೆ. ಆದರೆ, ಭಾರತ ಸರ್ಕಾರದ ಹಣಕಾಸು ಸಚಿವಾಲಯದಿಂದ ನ್ಯಾಯ ಎನ್ನುವುದು ಬಹಳ ಕಾಲದವರೆಗೆ

ಗೈರುಹಾಜರಾಗಿತ್ತು ಎನ್ನುವುದನ್ನು ನಾವು ಗಮನಿಸಬೇಕು. ಹೀಗಾಗಿ ಪ್ರಾಂತೀಯ ಅಥವಾ ಸ್ಥಳೀಯ ಹಣಕಾಸು ವ್ಯವಸ್ಥೆಯಲ್ಲಿ ನ್ಯಾಯವಿರಬೇಕು ಎನ್ನುವ ಭಾವನೆಗೆ ಮಾನ್ಯತೆ ದೊರೆತದ್ದು ಕಡಿಮೆ. ಸಂಕ್ಷೇಪವಾಗಿ ಹೇಳುವುದಾದರೆ, ಪ್ರಾಂತೀಯ ಸರ್ಕಾರಗಳು, ಪ್ರಾಂತೀಯ ಹಣಕಾಸು ಅಭಿವೃದ್ಧಿಯನ್ನು ಚರ್ಚಿಸುವಾಗ, ನ್ಯಾಯಕ್ಕೆ ದೊರೆತ ಸ್ಥಾನ ಗೌಣ.

## ಅಧ್ಯಾಯ ೫

# ನಿಗದಿತ ಆದಾಯ ಮೂಲದ ಮುಂಗಡ ಪತ್ರ ೧೮೭೭-೭೮ ರಿಂದ ೧೮೮೧-೮೨

ಈಗ ನಾವು ಪ್ರಾಂತೀಯ ಬಜೆಟ್‌ಗಳ ಎರಡನೇ ಹಂತವನ್ನು ಅಧ್ಯಯನ ಮಾಡುತ್ತೇವೆ. ಇದರ ಬಗ್ಗೆ ಸಹ ಭಿನ್ನಾಭಿಪ್ರಾಯಗಳಿಲ್ಲದಿರಲಿಲ್ಲ. ಈ ಬಜೆಟ್‌ಗಳ ಬಗ್ಗೆ ಬಹಳ ಆಶಾಭಾವನೆಗಳನ್ನು ಹೊಂದಲಾಗಿತ್ತು. ಈ ಯೋಜನೆಯಿಂದ ಏನನ್ನು ನಿರೀಕ್ಷಿಸಲಾಗಿತ್ತು ಎನ್ನುವುದು ಸರ್ ರಿಚರ್ಡ್ ಟೆಂಪಲ್‌ನ ಕೆಳಗಿನ ಮಾತುಗಳಿಂದ ಹೆಚ್ಚು ಸ್ಪಷ್ಟವಾಗುತ್ತದೆ. ಈ ಯೋಜನೆಯನ್ನು ಮಂಡಿಸುತ್ತಾ ಅವನು ೧೮೭೦ರಲ್ಲಿ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿದ.

"ಈಗ ನಾವು ಸ್ಥಳೀಯ ಸರ್ಕಾರಗಳಿಗೆ ಕೊಡುತ್ತಿರುವ ರಿಯಾಯಿತಿಯು (ವರಮಾನ ಮತ್ತು ವೆಚ್ಚಗಳ ಮೇಲೆ ಅವುಗಳ ಹೆಚ್ಚಿನ ನಿಯಂತ್ರಣ) ಅವುಗಳ ವೆಚ್ಚದಲ್ಲಿ ಇಳಿತಾಯ ಮಾಡುವ ಬಗ್ಗೆ ಹೆಚ್ಚು ಆಸಕ್ತಿವಹಿಸುವಂತೆ ಮಾಡುತ್ತದೆ ಎಂದು ಆಶಿಸಲಾಗಿದೆ. ಸ್ಥಳೀಯ ಸರ್ಕಾರಗಳು ಆಗಿಂದಾಗ್ಗೆ ಜನರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ವರಮಾನ ಮೂಲಗಳನ್ನು ಬದಲಿಸಿಕೊಳ್ಳಲೂ ಹೊಸ ವ್ಯವಸ್ಥೆ ಅವಕಾಶಮಾಡಿಕೊಡುತ್ತದೆ. ಜನರು ಬೇಡವೆನ್ನುವ ಕ್ರಮಗಳನ್ನು ಸ್ಥಳೀಯ ಸರ್ಕಾರಗಳು ಬಿಟ್ಟುಬಿಡಲೂಬಹುದು. ತೆರಿಗೆಗಳು, ಅವುಗಳಿಂದ ಬರುವ ಆದಾಯ, ಅದರಿಂದ ಜನರಿಗೆ ಉಂಟಾಗುವ ಅನುಕೂಲಗಳ ಬಗ್ಗೆ ಜನರು ಮತ್ತು ಆಡಳಿತಾಧಿಕಾರಿಗಳ ನಡುವೆ ಉತ್ತಮ ತಿಳುವಳಿಕೆ ಮೂಡುವುದಕ್ಕೂ ಇದು ಸಹಾಯಕ. ಈ ವ್ಯವಸ್ಥೆ ಪ್ರಾಂತೀಯ ಹಣಕಾಸಿನ ವಿಷಯದಲ್ಲಿ ಜನರು ನೇರವಾಗಿ ಭಾಗವಹಿಸುವುದಕ್ಕೆ ಅವಕಾಶ ಮಾಡಿಕೊಡುತ್ತದೆ. ಇವುಗಳ ಉದ್ದೇಶವಾದರೋ ಕ್ರಮಕ್ರಮವಾಗಿ ಸ್ವಯಂ ಆಡಳಿತ ಸರ್ಕಾರದತ್ತ ಹೊರಳುವುದಕ್ಕೆ ಅವಕಾಶ ಮಾಡಿಕೊಡುವುದು. ಇವು ಆಡಳಿತ ಹಾಗೂ ಹಣಕಾಸು ವಿಷಯದ ಸುಧಾರಣೆಗಳು ನಡೆಯುವುದಕ್ಕೆ ಒಳ್ಳೆಯ ವಾತಾವರಣವನ್ನು ಏರ್ಪಡಿಸುತ್ತವೆ."[೧]

ಮೇಲಿನ ಆಶಾಭಾವನೆಗಳನ್ನು, ರಿಚರ್ಡ್ ಟೆಂಪಲ್ ವ್ಯಕ್ತಪಡಿಸಿದರೂ, ಈ ವ್ಯವಸ್ಥೆಯ ಬಗೆಗಿನ ಗುಮಾನಿಗಳ ಬಗ್ಗೆ ಸಹ ಅವನು ಎಚ್ಚರಿಕೆ ಕೊಟ್ಟ. ಅವನ ಹೇಳಿಕೆಯಂತೆ:

"ನಾನು ಮೇಲೆ ವಿವರಿಸಿರುವ ಆಶಾದಾಯಕ ಅಂಶಗಳು, ಅಪೇಕ್ಷಣೀಯವಾದುವಾದರೂ, ಅವು ಆಶೆಗಳು ಮಾತ್ರ ಎಂಬುದನ್ನು ಮರೆಯಬಾರದು. ನಮ್ಮೆಲ್ಲ ಆಶೆಗಳೂ ಕೈಗೂಡಬಹುದು ಅಥವಾ ಕೈಗೂಡದೇ ಹೋಗಬಹುದು ಎನ್ನುವುದನ್ನು ನಾವು ಅರಿತಿರಬೇಕು. ಆದರೆ ಬ್ರಿಟಿಷ್ ಇಂಡಿಯಾ ಸಾಮ್ರಾಜ್ಯದ ಬಜೆಟ್‌ಗೆ ನಾವು ಸೂಚಿಸುತ್ತಿರುವ ಕ್ರಮಗಳು ಲಾಭದಾಯಕವಾದವು ಎನ್ನುವುದರಲ್ಲಿ ಯಾವ ಸಂಶಯವೂ

---

೧. ೧೮೬೦-೬೧ ರಿಂದು ೧೮೭೩-೭೪ರ ವರ್ಷಗಳ ವಾರ್ಷಿಕ ಹಣಕಾಸು ವಿವರಣಾ ಪತ್ರಗಳು. ಅನುಬಂಧಗಳನ್ನೂ ಒಳಗೊಂಡಂತೆ, ಆಫೀಸ್ ಆಫ್ ದಿ ಸೂಪರಿಂಟೆಂಡೆಂಟ್ ಆಫ್ ಗವರ್ನಮೆಂಟ್ ಪ್ರಿಂಟಿಂಗ್ ೧೮೭೩ ಪು. ೩೪೮

ಇಲ್ಲ. ಮುಖ್ಯವಾಗಿ ಕೇಂದ್ರ ಹಣಕಾಸು ಸಚಿವರಿಗೆ, ಕೆಲವು ನಾಗರಿಕ ಬಾಬ್ತುಗಳ ಮೇಲಿನ ವೆಚ್ಚದಲ್ಲಿ ಉಳಿತಾಯ ಉಂಟುಮಾಡುವುದಕ್ಕೆ ಇದು ನೆರವಾಗುತ್ತದೆ.

ಈ ಬಾಬ್ತುಗಳನ್ನು ನಾವು ಗಮನಿಸುವುದಾದರೆ, ಇವು ಕ್ರಮ-ಕ್ರಮವಾಗಿ ಹೆಚ್ಚಿನ ವೆಚ್ಚ ಬೇಡಿಕೆಗಳನ್ನು ಉಂಟುಮಾಡುತ್ತಲೇ ಬಂದಿದೆ. ಕೇಂದ್ರಾಡಳಿತ ಈ ಹೆಚ್ಚಿನ ಬೇಡಿಕೆಯನ್ನು ತಡೆಗಟ್ಟುವುದಕ್ಕೆ ಸಾಧ್ಯವೇ ಆಗಿಲ್ಲ.

ನಾವು ಹೊಸ ವ್ಯವಸ್ಥೆಯ ವಾಸ್ತವಿಕ ಫಲಿತಾಂಶಗಳನ್ನು ಗಮನಿಸಿದರೆ, ಕೇಂದ್ರ ಸರ್ಕಾರಕ್ಕೆ ಈ ವ್ಯವಸ್ಥೆಯಿಂದ ನಿರೀಕ್ಷಿಸಿದ್ದಕ್ಕಾಗಿ ಹೆಚ್ಚಿನ ಲಾಭವಾಗಿತ್ತೆಂದೇ ಹೇಳಬಹುದು. ಈ ವ್ಯವಸ್ಥೆಯ ಬಗ್ಗೆ ಇದ್ದ ಗುಮಾನಿಗಳನ್ನೆಲ್ಲಾ ವಾಸ್ತವವಾಗಿ ಈ ಫಲಿತಾಂಶ ಹೋಗಲಾಡಿಸಿತು. ನಾವು ಭಾರತ ಸರ್ಕಾರಕ್ಕೆ ಅಥವಾ ಪ್ರಾಂತೀಯ ಸರ್ಕಾರಗಳಿಗೆ ಈ ವ್ಯವಸ್ಥೆಯಿಂದ ಯಾವ ಪರಿಣಾಮವಾಯಿತು ಎಂಬುದನ್ನು ಗಮನಿಸಿದರೆ, ಪ್ರಾಂತೀಯ ಹಣಕಾಸು ನಿರ್ವಹಣೆಯನ್ನು ಕೇಂದ್ರ ಸರ್ಕಾರ ಮಾಡುವುದಕ್ಕಿಂತ ಪ್ರಾಂತಗಳೇ ಮಾಡುವುದರಿಂದ ಹೆಚ್ಚು ಹಣ ಮಿಗುತ್ತಿತ್ತು ಎನ್ನುವುದು ಸ್ಪಷ್ಟವಾಗುತ್ತದೆ. ಈ ಮಾತು ಯಾವ ಬಾಬ್ತುಗಳು ಸಾಮ್ರಾಜ್ಯ ವಶದಲ್ಲಿದ್ದಾಗ ಅವುಗಳ ಮೇಲೆ ಎಷ್ಟು ಖರ್ಚಾಗುತ್ತಿತ್ತು ಮತ್ತು ಅವು ಪ್ರಾಂತೀಯ ಬಾಬ್ತುಗಳಾದಾಗ ಅವುಗಳಿಗೆ ಎಷ್ಟು ಖರ್ಚಾಗುತ್ತಿತ್ತು ಎನ್ನುವುದನ್ನು ಹೋಲಿಸಿದಾಗ ಇನ್ನೂ ಹೆಚ್ಚು ಸ್ಪಷ್ಟವಾಗುತ್ತದೆ. ಕೆಳಗಿನ ಪಟ್ಟಿಯನ್ನು ಗಮನಿಸಿ.

| **ವರ್ಷ** | **ಬಂಗಾಳದ ಬರ ಪರಿಹಾರ ನಿಧಿಗಾಗಿ ಬಂದ ಹಣವನ್ನು ಬಿಟ್ಟು ಉಳಿದ ಎಲ್ಲಾ ಬಾಬ್ತುಗಳಿಂದ ಬಂದ ಹಣ ಮತ್ತು ನೊಂದಣಿಯನ್ನು ಬಿಟ್ಟು ಉಳಿದಂತೆ ಎಲ್ಲಾ ಬಾಬ್ತುಗಳಿಗೆ ಮಾಡಿದ ಖರ್ಚು-ಇವುಗಳಲ್ಲಿ ಆದ ಉಳಿತಾಯ.** £ |
|---|---|
| ೧೮೬೩-೬೪ | ೫,೧೧೧,೨೯೭ |
| ೧೮೬೪-೬೫ | ೫,೬೦೬,೨೪೮ |
| ೧೮೬೫-೬೬ | ೫,೫೮೭,೭೭೯ |
| ೧೮೬೭-೬೮ | ೫,೮೨೧,೪೩೮ |
| ೧೮೬೮-೬೯ | ೬,೦೩೦,೨೧೪ |
| ೧೮೬೯-೭೦ | ೫,೮೫೬,೩೧೦ |
| ೧೮೭೦-೭೧ | ೫,೯೭೭,೨೫೦ |
| ೧೮೭೧-೭೨ | ೪,೮೩೫,೨೩೮ |
| ೧೮೭೨-೭೩ | ೪,೯೬೪,೪೦೭ |
| ೧೮೭೩-೭೪ | ೫,೩೨೯,೧೮೦ |
| ೧೮೭೪-೭೫ | ೫,೩೭೯,೫೦೯ |
| ೧೮೭೫-೭೬ (ಅಂದಾಜು) | ೫,೧೩೫,೬೭೭ |

**ಆಧಾರ :** *ನೋಟ್ಸ್ ಆನ್ ಇಂಪೀರಿಯಲ್, ಪ್ರೊವಿನ್ಷಿಯಲ್ ಅಂಡ್ ಲೋಕಲ್ ಫೈನಾನ್ಸ್*ನ (೧೮೭೬) ಅಧಿಕೃತ ಸಂಪುಟ.

ಇಂಥ ವ್ಯವಸ್ಥೆಯಿಂದ ತನಗೆ ಲಾಭವಿದೆ ಎನ್ನುವ ಕಾರಣದಿಂದಲೇ, ಭಾರತ ಸರ್ಕಾರ, ಪ್ರಾಂತೀಯ ಸ್ವರೂಪವಿರುವ ಅಥವಾ ಪ್ರಾಂತೀಯವಾಗಿ ನಿಯಂತ್ರಣದಲ್ಲಿಡಬಹುದಾದ ಬಾಬ್ತುಗಳನ್ನು ಪ್ರಾಂತೀಯ ಬಜೆಟ್‌ಗೆ ಸೇರಿಸುವುದಕ್ಕೆ ಪ್ರಯತ್ನಿಸಿತು. ಆದರೆ ಹೀಗೆ ವರ್ಗಾಯಿಸಿದ ಬಾಬ್ತುಗಳಿಗೆ ದೊರಕಿಸಿಕೊಡಬೇಕಾದ ಹಣವು ಮಾತ್ರ ಸಮಸ್ಯೆಯಾಗಿಯೇ ಕಾಣಿಸಿಕೊಂಡಿತು. ಏಕೆಂದರೆ, ಪ್ರಾರಂಭದಲ್ಲಿ ಈ ಬಾಬ್ತುಗಳಿಂದ ಬರುತ್ತಿದ್ದ ವರಮಾನ ಮತ್ತು ಅವುಗಳ ಮೇಲಿನ ವೆಚ್ಚದ ಅಂತರ ಕಡಿಮೆಯಾಗದಿದ್ದರೂ ನಂತರದ ಅವಧಿಯಲ್ಲಿ ವೆಚ್ಚ ಅಧಿಕವಾಯಿತು. ಕೇಂದ್ರ ಸರ್ಕಾರವೇ ಈ ಅಂತರವನ್ನು ತುಂಬುತ್ತಾ ಹೋಗುವುದು ಈ ಯೋಜನೆ ವಿಸ್ತೃತಗೊಂಡಾಗ ಅಷ್ಟು ಅಪೇಕ್ಷಣೀಯವಲ್ಲವೆಂಬ ವಿಚಾರ ಕೇಂದ್ರ ಸರ್ಕಾರಕ್ಕಿತ್ತು. ವಾಸ್ತವವಾಗಿ ಈ ವ್ಯವಸ್ಥೆಯಲ್ಲಿನ ಮುಖ್ಯ ದೋಷ ಅದರ ಜಡಸ್ವರೂಪವೇ ಆಗಿತ್ತು. ಅಂದರೆ, ಪ್ರಾಂತೀಯ ಸರ್ಕಾರಗಳು ತಮಗೆ ವರ್ಗಾವಣೆಯಾಗಿದ್ದ ಬಾಬ್ತುಗಳ ಮೇಲೆ ಹೆಚ್ಚು -ಹೆಚ್ಚಾಗಿ ಹಣ ವೆಚ್ಚವನ್ನು ಮಾಡಬೇಕಾಗಿ ಬಂದಿದ್ದರೂ, ಕೇಂದ್ರದಿಂದ ವರ್ಗಾವಣೆಯಾಗುತ್ತಿದ್ದ ಹಣ ಜಡ ಸ್ವರೂಪದ್ದಾಗಿದ್ದು, ಸ್ಥಿರತೆಯನ್ನು ಹೊಂದಿದ್ದುದು ಸ್ಥಳೀಯ ಸರ್ಕಾರಗಳಿಗೆ ಸಮಸ್ಯೆಯಾಗಿತ್ತು. ಈ ವ್ಯವಸ್ಥೆಯನ್ನು ಮುಂದಿನ ಹಂತಕ್ಕೆ ಕೊಂಡೊಯ್ಯುತ್ತಿದ್ದ ಸರ್ ಜಾನ್ ಸ್ಟ್ರಾಚ್‌ಗೆ, ಈ ವ್ಯವಸ್ಥೆಯ ದೌರ್ಬಲ್ಯದ ಅರಿವಿತ್ತು. ಹೀಗಾಗಿ ಅವನು ಪ್ರಾಂತೀಯ ಸರ್ಕಾರಗಳಿಗೆ, ನಿರ್ದಿಷ್ಟ ಮೊತ್ತವನ್ನು ಕೊಡುವುದರ ಬದಲು, ವರಮಾನದ ಕೆಲವು ಮೂಲಗಳನ್ನು ಕೊಡಬೇಕೆಂದು ಇಚ್ಛಿಸಿದ್ದ. ಪ್ರಾಂತೀಯ ಬಾಬ್ತುಗಳಿಗೆ ಅವುಗಳ ಹೆಚ್ಚುತ್ತಿದ್ದ ವೆಚ್ಚಗಳಿಗನುಗುಣವಾಗಿ, ಸ್ಥಿತಿಸ್ಥಾಪಕಗುಣವನ್ನು ಹೊಂದಿರುವಂಥ ಆದಾಯ ಮೂಲಗಳಿರಬೇಕೆಂಬುದು ಅವನ ಭಾವನೆಯಾಗಿತ್ತು. ನಿರ್ದಿಷ್ಟ ಮೊತ್ತದ ಹಣವನ್ನು ಕೊಡುವುದರ ಬದಲು, ಪ್ರಾಂತೀಯ ಸರ್ಕಾರಗಳಿಗೆ ಆದಾಯ ಮೂಲಗಳನ್ನೇ ವಹಿಸಿಕೊಡಬೇಕೆಂಬುದಕ್ಕೆ ಅವನಿಗೆ ಬಲವಾದ ಬೇರೊಂದು ಕಾರಣವೂ ಇತ್ತು. ಅದೇಂದರೆ, ಪ್ರಾಂತೀಯ ಸರ್ಕಾರಗಳು ತಮಗೆ ವಹಿಸಿಕೊಡುವ ಹಣಕಾಸು ವಿಷಯವನ್ನು ಸರಿಯಾಗಿ ನಿರ್ವಹಿಸಿದರೆ, ಕೇಂದ್ರ ಸರ್ಕಾರಕ್ಕೆ ಸಾಕಷ್ಟು ಹಣ ಮಿಗುವ ಸಾಧ್ಯತೆ ಇತ್ತು. ಆದರೆ ವ್ಯವಸ್ಥಿತವಾಗಿ ನಿರ್ವಹಿಸುವುದು ಎನ್ನುವುದರ ಅರ್ಥವಾದರೂ ಏನು? ಸರ್ ಜಾನ್ ಸ್ಟ್ರಾಚ್ ಮೊದಲಿಗೆ ಇದನ್ನು ವ್ಯಾಖ್ಯಾನಿಸಿದ ಸಹ. ಇವನ ವಿವರಣೆಯೇ ಪ್ರಾಂತೀಯ ಹಣಕಾಸು ವ್ಯವಸ್ಥೆಯಲ್ಲಿ ಬಹಳ ಕಾಲದವರಿಗೆ ಜಾರಿಯಲ್ಲಿತ್ತು. ಅವನ ಪ್ರಕಾರ ಹಣಕಾಸಿನ ಒಳ್ಳೆಯ ನಿರ್ವಹಣೆಯ ಅರ್ಥ ಹೀಗಿತ್ತು.

"ಕಲ್ಕತ್ತ ಅಥವಾ ಸಿಮ್ಲಾದಂಥ ಸುಮಾರು ಸಾವಿರಾರು ಮೈಲಿಗಳ ದೂರದಲ್ಲಿ ಕುಳಿತು ಒಬ್ಬ ಹಣಕಾಸು ಅಧಿಕಾರಿಯೋ ಅಥವಾ ಒಂದು ಇಲಾಖೆಯೋ ತೆಗೆದುಕೊಳ್ಳುವ ತೀರ್ಮಾನದ ಮೂಲಕ ಅಥವಾ ಒಂದು ಸುತ್ತೋಲೆಯ ಮೂಲಕ ಅಥವಾ ಲೆಕ್ಕ-ಪತ್ರಗಳ ತಪಾಸಣೆಯ ಮೂಲಕ ಹಣಕಾಸಿನ ಆಡಳಿತವನ್ನು ನಡೆಸುವುದು ಒಳ್ಳೆಯ ನಿರ್ವಹಣೆಯಲ್ಲ. ಬದಲಿಗೆ ಸ್ಥಳೀಯ ಸರ್ಕಾರಗಳಿಗೆ ನೇರವಾಗಿ ಅಧಿಕಾರ ಕೊಡುವುದರ ಮೂಲಕ, ಜೊತೆಗೆ ವ್ಯಕ್ತಿಗತವಾಗಿ ಸ್ಥಳೀಯರೇ ನಡೆಸುವ ನಿರ್ವಹಣೆಯೇ ದಕ್ಷ ನಿರ್ವಹಣೆಯಾಗಿರುತ್ತದೆ.[೧]

ಸರ್ ಜಾನ್ ಸ್ಟ್ರಾಚ್, ತನ್ನ ಇತ್ತೀಚಿನ ಅನುಭವಗಳ ಬೆಂಬಲವನ್ನು ಪಡೆಯುತ್ತಾ, ಮೇಲಿನ ವಿವರಣೆಯನ್ನು ನೀಡಿದ. ಈ ಹಿಂದಿನ ಅನುಭವದ ಪ್ರಕಾರ ಪ್ರಾಂತೀಯ ಸರ್ಕಾರಗಳು, ಬಜೆಟ್‌ನ ಮೊದಲನೆಯ ಹಂತದ ಸುಧಾರಣೆಯಲ್ಲಿ, ಸಾಮ್ರಾಜ್ಯದ ನಿರ್ವಹಣಾ ವೆಚ್ಚಕ್ಕಿಂತ, ಕಡಿಮೆ ವೆಚ್ಚದಲ್ಲಿ

೧. ಹಣಕಾಸು ವಿವರಣಾ ಪತ್ರ ೧೮೭೭-೭೮.

ಹಣಕಾಸು ನಿರ್ವಹಣೆಯನ್ನು ನಡೆಸಿದ್ದವು. ವಾಸ್ತವವಾಗಿ, ಪ್ರಾಂತೀಯ ಬಾಬ್ತುಗಳಿಂದ ಬಂದ ವರಮಾನ, ದೂರದ ಸಾಮ್ರಾಜ್ಯ ಸರ್ಕಾರದ, ಅಷ್ಟೇನೂ ವ್ಯವಸ್ಥಿತವಲ್ಲದ ಮತ್ತು ದಕ್ಷವಲ್ಲದ ವ್ಯವಸ್ಥೆಯಿಂದ ಬರುತ್ತಿದ್ದ ವರಮಾನಕ್ಕಿಂತ ಹೆಚ್ಚಾಗಿತ್ತು.

ಸರ್ ಜಾನ್ ಸ್ಟ್ರಾಚ್ ಈ ಮುಂಚೆಯೇ ತಿಳಿದುಕೊಂಡಿದ್ದ ವಿಚಾರವೆಂದರೆ, ಪ್ರಾಂತೀಯ ಸರ್ಕಾರಗಳು, ಕೇಂದ್ರ ಸರ್ಕಾರದ ಪರವಾಗಿ ತೆರಿಗೆಯನ್ನು ವಸೂಲು ಮಾಡುವಾಗ ತೆರಿಗೆಗಳ್ಳತನಕ್ಕೆ ಅಷ್ಟೇನೂ ಗಮನ ಕೊಡುತ್ತಿರಲಿಲ್ಲ. ಆದರೆ, ತಮ್ಮ ಅನುಕೂಲಕ್ಕೇ ತೆರಿಗೆಯನ್ನು ಸಂಗ್ರಹಿಸುವಾಗ, ಸ್ಥಳೀಯ ಸರ್ಕಾರಗಳು ತೆರಿಗೆಗಳ್ಳತನವನ್ನು ತಪ್ಪಿಸಲು ಸಾಕಷ್ಟು ಯತ್ನಿಸುತ್ತಿದ್ದವು.

ಅವರ ಮಾತುಗಳಲ್ಲಿ ಹೇಳುವುದಾದರೆ :

"ಉತ್ತಮ ವರಮಾನದ ಮೂಲಗಳನ್ನು ವ್ಯವಸ್ಥಿತವಾಗಿ ನಿರ್ವಹಿಸಿದರೆ ಇದರಿಂದ ಕೇಂದ್ರ ಸರ್ಕಾರಕ್ಕಲ್ಲ ತಮಗೆ ಹೆಚ್ಚಿನ ವರಮಾನವನ್ನು ತಂದುಕೊಡುತ್ತವೆ ಮತ್ತು ಸ್ಥಳೀಯವಾಗಿ ತಮಗೆ ಬೇಕಾದ ಸುಧಾರಣೆಗಳನ್ನು ಮಾಡಲು ಅವಕಾಶ ಮಾಡಿಕೊಡುತ್ತವೆ ಎಂದು ಖಚಿತವಾದಾಗ ಮಾತ್ರ ಎಲ್ಲರೂ ಬಯಸುವ ರೀತಿಯ ಉತ್ತಮ ಆಡಳಿತವನ್ನು ಹೊಂದುವುದು ಸಾಧ್ಯ."

ಪ್ರಾಂತ್ಯಗಳಿಗೆ ಒಪ್ಪಿಸಿದ್ದ ಬಾಬ್ತುಗಳಿಂದ ವಿಸ್ತರಿಸುತ್ತಿದ್ದ ವರಮಾನ ಒಂದು ಹಿತಕರವಾದ ಆಶ್ಚರ್ಯಜನಕ ಬೆಳವಣಿಗೆಯಾಗಿದ್ದು, ಸ್ಟ್ರಾಚ್‌ನ ಹಿಂದಿನ ನಂಬಿಕೆಗಳನ್ನು ಪುಷ್ಟಿಗೊಳಿಸಿದ್ದವು. ವರಮಾನ ಮೂಲಗಳನ್ನು ಅಭಿವೃದ್ಧಿಪಡಿಸುವುದು ಮತ್ತು ಪ್ರಾಂತೀಯ ಹಣಕಾಸಿಗೆ ಮಹತ್ವವನ್ನು ದೊರಕಿಸಿಕೊಡುವುದು ಇವೆರಡೂ ಕಾರಣಗಳಿಗಾಗಿ, ಸರ್ ಜಾನ್ ಸ್ಟ್ರಾಚ್, ನಿರ್ದಿಷ್ಟ ಹಣವನ್ನು ಕೋರುವುದರ ಬದಲು ವರಮಾನ ಮೂಲಗಳನ್ನು ಪ್ರಾಂತೀಯ ಸರ್ಕಾರಗಳಿಗೆ ಕೊಡುವ ಯೋಜನೆಯನ್ನು ಜಾರಿಗೊಳಿಸಿದ.

ಸರ್ ಜಾನ್ ಸ್ಟ್ರಾಚ್‌ನ ಯೋಜನೆ ಹೊಸದೇನೂ ಆಗಿರಲಿಲ್ಲ. ಇದು ಮೊಟ್ಟಮೊದಲಿಗೆ ಜಾರಿಗೆ ಬಂದ ಯೋಜನೆಯೂ ಅಲ್ಲ. ೧೮೭೦ರಲ್ಲಿ ಪ್ರಾಂತೀಯ ಹಣಕಾಸು ವಿಷಯವನ್ನು ಚರ್ಚಿಸಿದವರ ಮನಸ್ಸಿನಲ್ಲಿ ಈ ವಿಷಯ ಇದ್ದೇ ಇತ್ತು. ವಾಸ್ತವವಾಗಿ ೧೮೭೭ಕ್ಕೂ ಹಿಂದೆಯೇ ಸರ್ ರಿಚರ್ಡ್ ಟೆಂಪಲ್ ಈ ಯೋಜನೆಯನ್ನು ಪ್ರತಿಪಾದಿಸಿದ್ದ.[೧] ಆದರೆ ಭಾರತ ಸರ್ಕಾರ ೧೮೭೦ರಲ್ಲಿ ಈ ಯೋಜನೆಯನ್ನು ಅಷ್ಟು ಪುರಸ್ಕರಿಸಲಿಲ್ಲ. ಏಕೆಂದರೆ ಅದು ತನ್ನ ದೃಢತೆಯನ್ನು ಕಾಪಾಡಿಕೊಳ್ಳುವ ವರಮಾನ ಮೂಲಗಳನ್ನು ಕಳೆದುಕೊಳ್ಳಲು ಇಚ್ಛಿಸುತ್ತಿರಲಿಲ್ಲ. ಆದರೆ ಮುಂದಿನ ವರ್ಷಗಳಲ್ಲಿ ಸರ್ಕಾರದ ಹಣಕಾಸು ಪರಿಸ್ಥಿತಿ ಸಾಕಷ್ಟು ಸುಧಾರಿಸಿತ್ತು ಮತ್ತು ಪ್ರಾಂತೀಯ ಹಣಕಾಸು ನಿರ್ವಹಣೆಯ ಆರು ವರ್ಷಗಳ ಅನುಭವದಿಂದ ಸರ್ಕಾರಕ್ಕೆ ಸ್ವಲ್ಪ ಧೈರ್ಯವೂ ಬಂದಿತ್ತು. ಈ ವೇಳೆಗೆ ಈ ಯೋಜನೆಯ ಆಡಳಿತಾತ್ಮಕ ಪ್ರಯೋಜನದಲ್ಲಿ ಸಂಶಯವಿದ್ದವರಿಗೆ ಸಹ ಇದರ ಬಗ್ಗೆ ಧೈರ್ಯ ಉಂಟಾಗುವ ಸ್ಥಿತಿ ಬಂದಿತ್ತು. ಜೊತೆಗೆ, ತಮ್ಮ ವೆಚ್ಚದಲ್ಲಿ, ಈ ಯೋಜನೆಯಿಂದ ಸಾಕಷ್ಟು ಉಳಿತಾಯ ಉಂಟಾಗುವುದರ ಲಾಭ ಸಹ ಭಾರತ ಸರ್ಕಾರಕ್ಕಿತ್ತು.

ಇವೆಲ್ಲ ಕಾರಣಗಳೂ ಒಟ್ಟಾಗಿ ಪ್ರಾಂತೀಯ ಹಣಕಾಸು ಒಂದು ಹೊಸ ಘಟ್ಟವನ್ನು ತಲುಪುವುದು ಸಾಧ್ಯವಾಯಿತು. ಪ್ರಾಂತೀಯ ಸರ್ಕಾರಗಳಿಗೆ ಹಣ ಒದಗಿಸುವ ಒಂದು ವಿನೂತನ ಯೋಜನೆ ಇದಾಗಿದ್ದು, ವರಮಾನ ಮೂಲಗಳನ್ನು ಪ್ರಾಂತೀಯ ಸರ್ಕಾರಗಳಿಗೆ ದೊರಕಿಸಿಕೊಡುವ ಹಂತ ಇದಾಗಿತ್ತು ಎಂದು ಹೇಳಬಹುದು.

---

೧. ೧೮೭೭ ಜುಲೈ ೨೭ರ ಆತನ ಸಭೆ ನಡೆವಳಿಯನ್ನು ನೋಡಿ.

## ಏಕೀಕರಣಗೊಂಡ ಸೇವೆಗಳಿಂದ ಸಂದಾಯವಾದ ಪಾವತಿಗಳು

| ನಿಗದಿ ಮಾಡಲಾದ ಸೇವೆಗಳು | ಸಾಮ್ರಾಜ್ಯದ ನಿರ್ವಹಣೆಯಡಿಯಲ್ಲಿ | | | | | ಪ್ರಾಂತೀಯ ನಿರ್ವಹಣೆಯಡಿಯಲ್ಲಿ | | | | |
|---|---|---|---|---|---|---|---|---|---|---|
| | ೧೮೬೫–೬೬ | ೧೮೬೭–೬೮ | ೧೮೬೮–೬೯ | ೧೮೬೯–೭೦ | ೧೮೭೦–೭೧ | ೧೮೭೧–೭೨ | ೧೮೭೨–೭೩ | ೧೮೭೩–೭೪ | ೧೮೭೪–೭೫ | ೧೮೭೫–೭೬ |
| | £ | £ | £ | £ | £ | £ | £ | £ | £ | £ |
| ಜೈಲುಗಳು | ೮೯,೨೬೦ | ೯೬,೯೧೦ | ೧೪೧,೨೧೮ | ೧೩೩,೮೦೯ | ೧೨೮,೭೭೩ | ೧೪೯,೮೮೮ | ೧೯೫,೭೫೫ | ೨೭೧,೯೧೫ | ೨೯೭,೧೯೮ | ೩೨೬,೦೨೩ |
| ಪೋಲೀಸ್ | ೧೪೦,೧೬೬ | ೨೩೧,೮೫೯ | ೨೭೭,೧೭೯ | ೨೮೭,೫೨೯ | ೨೭೦,೮೫೫ | ೨೦೩,೬೨೪ | ೯೭,೭೩೫ | ೯೦,೭೦೮ | ೮೦,೫೦೯ | ೮೯,೮೯೫ |
| ವಿದ್ಯಾಭ್ಯಾಸ | ೫೩,೨೫೬ | ೬೬,೮೬೯ | ೬೭,೨೦೭ | ೭೨,೮೪೮ | ೬೦,೭೪೦ | ೭೬,೭೮೯ | ೮೦,೮೬೯ | ೧೦೧,೩೦೬ | ೯೯,೫೩೭ | ೧೦೧,೯೦೯ |
| ನೋಂದಣಿ | ೮೬,೯೯೭ | ೧೨೭,೦೭೦ | ೧೫೩,೪೮೮ | ೧೬೫,೦೪೮ | ೧೪೭,೧೫೨ | ೧೫೫,೨೬೨ | ೧೭೧,೭೩೫ | ೧೨೧,೪೭೦ | ೧೭೨,೧೧೧ | ೧೮೪,೪೬೧ |
| ಮುದ್ರಣ | ೩,೩೩೩ | ೩,೨೮೨ | ೨,೮೦೩ | ೩,೭೧೮ | ೯,೨೪೪ | ೧೦,೯೨೩ | ೧೪,೩೮೩ | ೨೧,೧೭೪ | ೧೮,೨೨೦ | ೧೮,೦೬೬ |
| ವೈದ್ಯಕೀಯ | – | – | – | – | ೩,೨೭೩ | ೨೦,೫೯೪ | ೩೦,೬೪೯ | ೩೬,೩೭೦ | ೪೩,೦೯೭ | ೨೬,೫೮೩ |
| ಸಾದಿಲ್ವಾರು | ೪,೦೭೦ | ೫,೬೬೬ | ೪,೦೭೬ | ೪,೪೮೯ | ೬,೧೧೬ | ೨೦,೯೯೧ | ೩೧,೩೪೫ | ೩೨,೩೯೬ | ೩೯,೬೬೬ | ೩೬,೨೩೪ |

ಹಿಂದೆ ಸೂಚಿಸಿದ ಮೂಲಗಳಿಂದಲೇ ಸಂಗ್ರಹಿಸಲಾಗಿದೆ.

ವಾಸ್ತವವಾಗಿ, ಹೊಸ ವ್ಯವಸ್ಥೆಯಲ್ಲಿ ಕೇಂದ್ರ ಸರ್ಕಾರ ಪ್ರಾಂತೀಯ ಸರ್ಕಾರಗಳಿಗೆ ನಿರ್ದಿಷ್ಟ ಹಣವನ್ನು ಕೊಡುವ ವ್ಯವಸ್ಥೆ ಇದ್ದೇ ಇತ್ತು. ಆದರೆ ಇಂಥ ಕೊಡುಗೆಗೆ ಕಾರಣ, ವಹಿಸಿಕೊಟ್ಟ ಬಾಬ್ತಿನಿಂದ ಬರುವ ವರಮಾನ ಅದರ ಖರ್ಚಿಗಿಂತ ಕಡಿಮೆ ಇದ್ದುದಾಗಿತ್ತು. ಏನೇ ಆದರೂ ವಹಿಸಿಕೊಟ್ಟ ಬಾಬ್ತುಗಳ ವರಮಾನ ಮತ್ತು ಖರ್ಚುಗಳ ನಡುವೆ ಸ್ವಲ್ಪ ವ್ಯತ್ಯಾಸ ಇದ್ದೇ ಇರುತ್ತಿತ್ತು. ಪ್ರತಿಯೊಂದು ಪ್ರಾಂತ್ಯಕ್ಕೆ ಸಂಬಂಧಿಸಿದಂತೆಯೂ, ವಹಿಸಿಕೊಟ್ಟ ಬಾಬ್ತುಗಳ ವರಮಾನ ಮತ್ತು ಖರ್ಚುಗಳ ನಡುವೆ ವ್ಯತ್ಯಾಸಗಳು ಇದ್ದೇ ಇದ್ದು, ವ್ಯತ್ಯಾಸದ ಪ್ರಮಾಣಕ್ಕೆ ಸಮನಾದ ಅಲ್ಪ ಪ್ರಮಾಣದ ಮೊತ್ತವನ್ನು ನಿರ್ದಿಷ್ಟ ಕೊಡುಗೆಯ ರೂಪದಲ್ಲಿ ಕೊಡಲೇಬೇಕಾಗಿತ್ತು. ಅಂದರೆ ಈ ರೀತಿಯ ಹೊಂದಾಣಿಕೆಯ ಕೊಡುಗೆ ಹೊಸ ವ್ಯವಸ್ಥೆಯಲ್ಲೂ ಇದ್ದೇ ಇತ್ತು.

ವಾಸ್ತವವಾಗಿ ಹೊಂದಾಣಿಕೆಯ ಕೊಡುಗೆಯನ್ನು ಪ್ರಾಂತ್ಯಗಳಿಗೆ ನಿರ್ಧರಿಸುವುದು ಸ್ವಲ್ಪ ತೊಡಕಿನ ವಿಷಯವೇ ಆಗಿತ್ತು. ನಾವು ಎರಡನೆಯ ಹಂತದ ಪ್ರಾಂತೀಯ ಬಜೆಟ್ ಸ್ವರೂಪವನ್ನು ವಿಮರ್ಶಿಸುವುದಕ್ಕಿಂತ ಮುಂಚೆ ಈ ಹೊಂದಾಣಿಕೆಯ ಕೊಡುಗೆಯನ್ನು ಹೇಗೆ ನಿರ್ಧರಿಸಲಾಗುತ್ತಿತ್ತು ಎನ್ನುವುದನ್ನು ತಿಳಿಯುವುದು ಉಪಯುಕ್ತ. ಪ್ರಾಂತೀಯ ವರಮಾನಕ್ಕೆ ಮೂರು ಮೂಲಗಳಿದ್ದವು. ಅವುಗಳೆಂದರೆ, ೧) ವಹಿಸಿಕೊಡಲಾದ ಬಾಬ್ತುಗಳಿಂದ ಬರುವ ವರಮಾನ ೨) ಗೊತ್ತುಮಾಡಲಾದ ವರಮಾನ ಮೂಲಗಳಿಂದ ಬರುವ ಆದಾಯ ಮತ್ತು ೩) ಹೊಂದಾಣಿಕೆ ಕೊಡುಗೆಗಳು. ಒಂದು ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ಹೊಂದಾಣಿಕೆ ಕೊಡುಗೆಯ ನಿರ್ಧಾರ ಒಂದು ಒಳ್ಳೆಯ ಲೆಕ್ಕಾಚಾರವೇ ಆಗಿತ್ತು. ಹೊಂದಾಣಿಕೆ ಕೊಡುಗೆಯ ಬಗ್ಗೆ ಒಂದು ಮೊತ್ತವನ್ನು ನಿಗದಿ ಮಾಡುವುದಕ್ಕೆ ಮುಂಚೆ ಗೊತ್ತುಮಾಡಲಾದ ಬಾಬ್ತುಗಳಿಂದ ಸಾಮಾನ್ಯವಾಗಿ ಬರುವ ವರಮಾನ ಮತ್ತು ಕೇಂದ್ರ ಸರ್ಕಾರ ಎಷ್ಟು ಹಣವನ್ನು ಕೊಡುತ್ತದೆ ಎನ್ನುವುದನ್ನು ಲೆಕ್ಕಾಚಾರ ಮಾಡುವ ಅಗತ್ಯವಿತ್ತು. ಸಾಮಾನ್ಯವಾಗಿ ಪ್ರಾಂತ್ಯಗಳಿಗೆ ಬರುವ ವರಮಾನ ಪ್ರತಿವರ್ಷದ ಒಂದು ಸಾಮಾನ್ಯ ಲೆಕ್ಕಾಚಾರವಾಗಿತ್ತು. ಇದನ್ನು ಸುಮಾರಾಗಿ ಗೊತ್ತುಮಾಡಿಕೊಳ್ಳಲು ಭಾರತ, ಕಳೆದ ಹಲವು ವರ್ಷಗಳಿಂದ ಪ್ರಾಂತ್ಯಗಳಿಗೆ ಬರುತ್ತಿದ್ದ ವರಮಾನದ ಸರಾಸರಿಯನ್ನು ಲೆಕ್ಕ ಹಾಕುತ್ತಿತ್ತು. ಈ ಮೊತ್ತವನ್ನು ಆಧಾರವಾಗಿಟ್ಟುಕೊಂಡು, ತಾನು ಪ್ರತಿ ಪ್ರಾಂತ್ಯಕ್ಕೆ ಎಷ್ಟು ಹಣವನ್ನು ಕೊಡಬೇಕು ಎನ್ನುವುದನ್ನು ನಿಗದಿಮಾಡುತ್ತಿತ್ತು. ಪ್ರತಿವರ್ಷ ಪ್ರಾಂತ್ಯಗಳಿಗೆ ಪ್ರತಿಯೊಂದು ಮೂಲದಿಂದ ಎಷ್ಟು ವರಮಾನ ಸರಾಸರಿಯಾಗಿ ಬರುತ್ತಿದೆ ಮತ್ತು ಅವುಗಳ ವಾರ್ಷಿಕ ಬೆಳವಣಿಗೆಯ ದರವೇನು ಎನ್ನುವುದನ್ನು ಮೊದಲು ಸರ್ಕಾರ ಗೊತ್ತುಮಾಡಿಕೊಳ್ಳುತ್ತಿತ್ತು. ಹೀಗೆ ಮಾಡಿದಾಗ ಹಿಂದಿನ ವರ್ಷದ ಸಾಮಾನ್ಯ ವರಮಾನಕ್ಕಿಂತ ಈ ವರ್ಷ ಎಷ್ಟು ಹೆಚ್ಚಾಗಿದೆ ಎನ್ನುವುದನ್ನು ತಿಳಿಯುವುದು ಸಾಧ್ಯವಿತ್ತು. ಹೀಗೆ ವಾರ್ಷಿಕವಾಗಿ ಎಷ್ಟು ವರಮಾನ ಬೆಳೆದಿದೆಯೋ ಅಷ್ಟು ಹಣವನ್ನು ತಾನು ಕೊಡಬೇಕಾದ ಮೊತ್ತದಿಂದ ಕೇಂದ್ರ ಸರ್ಕಾರ ಕಡಿಮೆಮಾಡಿಕೊಳ್ಳುತ್ತಿತ್ತು. ವಾಸ್ತವವಾಗಿ, ವಾರ್ಷಿಕವಾಗಿ ಬರುವ ಹೆಚ್ಚಳ ಆದಾಯದ ಅಂದಾಜು ನ್ಯಾಯಯುತವಾಗಿರಲಿಲ್ಲ ಎಂದೇ ಹೇಳಬೇಕು. ಕೇಂದ್ರ ಸರ್ಕಾರ ಪ್ರಾಂತೀಯ ಸರ್ಕಾರಗಳಿಗೆ ಮುಂದಿನ ವರ್ಷಕ್ಕೆ ಇಷ್ಟು ಹೆಚ್ಚಿನ ಆದಾಯ ಬರುತ್ತದೆಂದು ಅಂದಾಜು ಮಾಡಿ ಅಷ್ಟು ಹಣವನ್ನು ತಾನು ಕೊಡಬೇಕಾದ ಮೊತ್ತದಿಂದ ಕಳೆದುಕೊಳ್ಳುತ್ತಿದ್ದುದರಿಂದ ಪ್ರಾಂತೀಯ ಸರ್ಕಾರಗಳು ಈ ವ್ಯವಸ್ಥೆಯನ್ನು ಪ್ರಶ್ನಿಸುತ್ತಿದ್ದವು. ತಮಗೆ ದೊರೆಯುತ್ತಿದ್ದ ಮೊತ್ತದ ಬಗ್ಗೆ ಅವುಗಳಿಗೆ ಅಸಮಾಧಾನವಿತ್ತು. ಈ ಅಸಮಾಧಾನವನ್ನು ಹೋಗಲಾಡಿಸಲು ಮತ್ತು ತನ್ನ ಅಂದಾಜಿನಲ್ಲಿ ಉಂಟಾಗುವ ತಪ್ಪುಗಳನ್ನು ಸರಿಪಡಿಸಲು ಕೇಂದ್ರ ಸರ್ಕಾರ ಒಂದು ಜಾಣತನದ ಸಮಾಧಾನ ಕ್ರಮವನ್ನು ಹುಡುಕಿತ್ತು. ಅದೇನೆಂದರೆ, ಅಂದಾಜು ಮಾಡಲಾದ ಸಾಮಾನ್ಯ ಆದಾಯ ಮಟ್ಟಕ್ಕಿಂತ ವಾಸ್ತವವಾದ ವರಮಾನ ಹೆಚ್ಚು

ಅಥವಾ ಕಡಿಮೆಯಾದರೆ ಅದನ್ನು ಸಾಮ್ರಾಜ್ಯ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳು ಸಮನಾಗಿ ಹಂಚಿಕೊಳ್ಳಬೇಕು. ಒಂದು ಪಕ್ಷ, ವಾಸ್ತವ ವರಮಾನ, ಸಾಮಾನ್ಯ ವರಮಾನಕ್ಕಿಂತ ಹೆಚ್ಚಾದರೆ, ಸಾಮ್ರಾಜ್ಯ ಸರ್ಕಾರದಿಂದ ಬರುತ್ತಿದ್ದ ನಿಗದಿಯಾದ ಪ್ರಮಾಣ ಅರ್ಧದಷ್ಟು ಕಡಿಮೆಯಾಗಬೇಕು. ಹೀಗೆಯೇ ಸಾಮಾನ್ಯವಾಗಿ ಬರಬೇಕಾಗಿದ್ದುದಕ್ಕಿಂತ, ವರಮಾನ ಕಡಿಮೆಯಾದರೆ, ಎಷ್ಟು ಕಡಿಮೆಯಿದೆಯೋ ಅದರಲ್ಲಿ ಅರ್ಧದಷ್ಟನ್ನು ನಿಗದಿಯಾದ ಹಣ ಪ್ರಮಾಣದಲ್ಲಿ ಹೆಚ್ಚು ಮಾಡಬೇಕು.

ಮೇಲೆ ವಿವರಿಸಿದ ರೀತಿಯ ಹೊಂದಾಣಿಕೆಯ ಪದ್ಧತಿಯನ್ನು ಕೇಂದ್ರ ಸರ್ಕಾರ ಅನುಸರಿಸುವುದಕ್ಕೆ ಮುಖ್ಯ ಕಾರಣ, ಇದರ ಪ್ರಕಾರ ಕೇಂದ್ರ ಸರ್ಕಾರಕ್ಕೆ ಪ್ರಾಂತ್ಯ ಸರ್ಕಾರಗಳ, ಕೊಡುಗೆಯನ್ನು ತನಗಾಗಲೀ ಪ್ರಾಂತೀಯ ಸರ್ಕಾರಗಳಿಗಾಗಲೀ ಯಾವ ಅನಾವಶ್ಯಕ ತೊಂದರೆಯೂ ಉಂಟಾಗದಂತೆ ನಿರ್ವಹಿಸಬಹುದಾಗಿತ್ತು. ಇದಲ್ಲದೆ ಈ ವ್ಯವಸ್ಥೆಯಿಂದ ಇನ್ನೂ ಒಂದು ಅನುಕೂಲವಿತ್ತು. ಈ ಅನುಕೂಲ ತಕ್ಷಣಕ್ಕೆ ಕಾಣಿಸಿಕೊಳ್ಳದಿದ್ದರೂ, ಬಹಳ ಪರಿಣಾಮಕಾರಿಯಾಗಿತ್ತು. ಸಾಧಾರಣ ಅಂದಾಜಿನಲ್ಲಿ ಉಂಟಾಗುವ ಕೊರತೆಯಲ್ಲಿ ಅರ್ಧದಷ್ಟು ಭಾರವನ್ನು ಪ್ರಾಂತ್ಯಗಳು ಹೊರಬೇಕೆಂದು ಮಾಡಿದುದರಿಂದ ತಮಗೆ ಬರುವ ವರಮಾನವನ್ನು, ಅವು ಬಹಳ ಎಚ್ಚರಿಕೆಯಿಂದ ಖರ್ಚು ಮಾಡಬೇಕಾದುದು ಅನಿವಾರ್ಯವಾಗಿತ್ತು. ಒಂದು ಪಕ್ಷ ಭಾರತ ಸರ್ಕಾರ, ಅಂದಾಜು ಮಾಡಲಾದ ಮೊತ್ತಕ್ಕಿಂತ ಕಡಿಮೆ ಬೀಳುವ ಹಣವನ್ನೆಲ್ಲಾ ತಾನೇ ತುಂಬಿಕೊಡುತ್ತೇನೆಂದು ಒಪ್ಪಿಕೊಳ್ಳುತ್ತಿದ್ದರೆ, ಪ್ರಾಂತೀಯ ಸರ್ಕಾರಗಳು, ಕೇಂದ್ರ ಸರ್ಕಾರ ಅಂದಾಜು ಮಾಡಿದಷ್ಟು ವರಮಾನವನ್ನು ಪ್ರಾಂತೀಯ ಸರ್ಕಾರಗಳು ರೂಢಿಸುತ್ತಿದ್ದವೆಂದು ಹೇಳಲಾಗುತ್ತಿರಲಿಲ್ಲ. ಆದರೆ ಕೊರತೆಯಾಗುತ್ತಿದ್ದ ಹಣದಲ್ಲಿ ಅರ್ಧದಷ್ಟನ್ನು ತಾವು ಹೊರಬೇಕಾಗುತ್ತಿದ್ದುದರಿಂದ, ಕೊರತೆ ಹೆಚ್ಚಿದಷ್ಟೂ ತಮಗೆ ಭಾರ ಹೆಚ್ಚುತ್ತದೆ ಎಂಬ ಭಯ ಪ್ರಾಂತ್ಯಗಳಿಗಿರುತ್ತಿತ್ತು. ಹೀಗಾಗಿ ಸಾಧ್ಯವಾದಷ್ಟು ವರಮಾನ ಕಡಿಮೆಯಾಗದಂತೆ ಎಚ್ಚರಿಕೆ ವಹಿಸುವುದು ಪ್ರಾಂತೀಯ ಸರ್ಕಾರಗಳಿಗೆ ಅನಿವಾರ್ಯವಾಗಿತ್ತು. ಇದರ ಜೊತೆಗೇ ಪ್ರಾಂತೀಯ ಸರ್ಕಾರಗಳಿಗೆ ಈ ವ್ಯವಸ್ಥೆಯಲ್ಲಿ ಉತ್ತೇಜನವೂ ಇತ್ತು. ಸಾಮಾನ್ಯ ಆದಾಯಕ್ಕಿಂತ ಎಷ್ಟು ಹೆಚ್ಚು ಹಣವನ್ನು ರೂಢಿಸುತ್ತಿದ್ದವೋ, ಅದರಲ್ಲಿನ ಅರ್ಧದಷ್ಟನ್ನು ಕೇಂದ್ರ ಸರ್ಕಾರ, ಪ್ರಾಂತೀಯ ಸರ್ಕಾರಗಳಿಗೆ ನೀಡುತ್ತಿದ್ದುದರಿಂದ ಅವು, ಸಾಧ್ಯವಾದಷ್ಟೂ ಹೆಚ್ಚು ವರಮಾನವನ್ನು ರೂಢಿಸುವುದಕ್ಕೆ ಯತ್ನಿಸುತ್ತಿದ್ದವು. ಒಂದು ಪಕ್ಷ ಸಾಮ್ರಾಜ್ಯ ಸರ್ಕಾರ, ಹೆಚ್ಚಿನ ಇಡೀ ವರಮಾನವನ್ನು ತಾನೇ ತೆಗೆದುಕೊಂಡು ಬಿಡುವುದಾಗಿದ್ದರೆ, ಯಾವ ಪ್ರಾಂತ್ಯವೂ ಅಂದಾಜು ಮಾಡಲಾದ ಮೊತ್ತಕ್ಕಿಂತ ಹೆಚ್ಚಿನ ವರಮಾನವನ್ನು ರೂಢಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತಿರಲಿಲ್ಲ. ಸಂಕ್ಷಿಪ್ತವಾಗಿ ಹೇಳುವುದಾದರೆ ಕೊರತೆಯಲ್ಲಿ ಅರ್ಧದಷ್ಟನ್ನು ತುಂಬಿಕೊಡುವ ಮತ್ತು ಆಧಿಕ್ಯದಲ್ಲಿ ಅರ್ಧದಷ್ಟನ್ನು ಉತ್ತೇಜಕವಾಗಿ ಕೊಡುವ ವ್ಯವಸ್ಥೆಯಿಂದಾಗಿ, ಪ್ರಾಂತೀಯ ಹಣಕಾಸು ಒಂದು ಪರಿಪೂರ್ಣ ವ್ಯವಸ್ಥೆ ಎನಿಸಿಕೊಳ್ಳುವ ಸ್ಥಿತಿಯನ್ನು ಮುಟ್ಟಿತ್ತು. ಇದು ವಾಸ್ತವವಾಗಿ, ಪ್ರಾಂತೀಯ ಸರ್ಕಾರಗಳು ಮಿತವ್ಯಯವನ್ನು ಸಾಧಿಸುವುದಕ್ಕೆ ಮತ್ತು ಸಂಪನ್ಮೂಲಗಳನ್ನು ಚೆನ್ನಾಗಿ ರೂಢಿಸಿಕೊಳ್ಳುವುದಕ್ಕೆ ನೆರವಾಗಿತ್ತು.

ಪ್ರಾಂತೀಯ ಹಣಕಾಸು ವ್ಯವಸ್ಥೆಯ ಈ ಹೊಸ ರೂಪ ಹೇಗೆ ಅಸ್ತಿತ್ವಕ್ಕೆ ಬಂದಿತು ಮತ್ತು ಅದನ್ನು ಹೇಗೆ ಕಾರ್ಯಗತಗೊಳಿಸಲಾಯಿತು ಎನ್ನುವುದನ್ನು ಮತ್ತು ಬಜೆಟ್‌ಗಳಿಗೆ ಯಾವ ಬಾಬ್ತುಗಳನ್ನು ಸೇರಿಸಲಾಗಿತ್ತು ಮತ್ತು ಅವುಗಳ ಆದಾಯಗಳ ಸ್ವರೂಪ ಹೇಗಿತ್ತು ಎನ್ನುವುದನ್ನು ಪರಿಶೀಲಿಸೋಣ. ಮೊದಲಿಗೆ ನಾವು ಗಮನಿಸಬೇಕಾದ ಅಂಶವೆಂದರೆ, ಪ್ರಾಂತೀಯ ಬಜೆಟ್‌ಗಳನ್ನು ಅವುಗಳ ಸಮಗ್ರರೂಪದಲ್ಲಿ ಪರಿಚಯಿಸುವುದಕ್ಕಾಗುವುದಿಲ್ಲ. ಏಕೆಂದರೆ, ಎಲ್ಲಾ ಪ್ರಾಂತೀಯ ಬಜೆಟ್‌ಗಳಿಗೂ ಒಂದೇ ರೀತಿಯ ಬಾಬ್ತುಗಳನ್ನು

ಸೇರಿಸಲಾಗಿರಲಿಲ್ಲ. ಈ ದೃಷ್ಟಿಯಿಂದ ಭಾರತ ಸರ್ಕಾರ ಪ್ರತಿಯೊಂದು ಪ್ರಾಂತ್ಯವನ್ನೂ ಪ್ರತ್ಯೇಕವಾಗಿ ನೋಡುತ್ತಿತ್ತು. ಹೀಗಾಗಿ ನಾವು ೧೮೭೭–೭೮ ರಲ್ಲಿ ಮರುವಿಮರ್ಶಿಸಲಾದ ಪ್ರತಿಯೊಂದು ಪ್ರಾಂತ್ಯವನ್ನು ಪ್ರತ್ಯೇಕವಾಗಿ ಪರಿಶೀಲಿಸಬೇಕಾದುದು ಅಗತ್ಯ.

## ವಾಯವ್ಯ ಪ್ರಾಂತ್ಯಗಳು ಮತ್ತು ಔಧ್[1]

ಈ ಪ್ರಾಂತ್ಯದ ಬಜೆಟ್ ಅನ್ನು, ಇತರ ಕೆಲವು ಪ್ರಾಂತ್ಯಗಳಂತೆ ಮರುರೂಪಿಸಲಾಯಿತೇ ಹೊರತು ವಿಸ್ತರಿಸಲಾಗಲಿಲ್ಲ. ಅದರ ಹೊಸ ರೂಪದಲ್ಲಿ ಈ ಪ್ರಾಂತ್ಯದ ಬಜೆಟ್‌ಗೆ ಕೆಳಗಿನ ಆದಾಯ ಮತ್ತು ವೆಚ್ಚದ ಬಾಬ್ತುಗಳನ್ನು ಸೇರಿಸಲಾಯಿತು :

| | ಖರ್ಚಿನ ಬಾಬ್ತುಗಳು | | ಆದಾಯದ ಬಾಬ್ತುಗಳು |
|---|---|---|---|
| ೩. | ನಿಗದಿಯಾದ ಕೊಡುಗೆಗಳಿಂದ ಬಂದಿರುವ ಹಣದ ಮರುಪಾವತಿಗಳು | I | ಭೂಕಂದಾಯ – ತೆರಾಯ್, ಮಿಜಾಪುರ್‌ನ ದುಡಿ ಎಸ್ಟೇಟ್ ಮತ್ತು ಕಲ್ಲುಗಣಿಗಳಿಂದ ಸಂಗ್ರಹಿಸಿದ ಹಣ ಆದಾಯ |
| ೪. | ಭೂಕಂದಾಯ (ಸೆಟಲ್‌ಮೆಂಟ್, ಬಹಬಾರ್ ಎಸ್ಟೇಟ್, ಜಿಲ್ಲಾ ಹಾಗೂ ಗ್ರಾಮ ಅಧಿಕಾರಿಗಳಿಗೆ ಕೊಡುವ ಭತ್ಯೆಗಳನ್ನು ಹಾಗೂ ವಾಯವ್ಯ ಪ್ರಾಂತ್ಯಗಳ ಸರ್ಕಾರದ ಅಧಿಕಾರಿಗಳಿಗೆ ಕೊಡಲಾದ ತಾತ್ಕಾಲಿಕ ವಿಶೇಷ ಪರಿಹಾರಗಳನ್ನು ಬಿಟ್ಟು) | IV<br>IX | ಅಬ್ಕಾರಿ<br>ಸ್ಟಾಂಪುಗಳು |
| ೬. | ಅಬ್ಕಾರಿ | | |
| ೧೦. | ಸ್ಟಾಂಪುಗಳು | | |
| ೧೪. | ಆಡಳಿತ (ಅಕೌಂಟ್ಸ್ ಮತ್ತು ಕರೆನ್ಸಿ ಅಧಿಕಾರಿಗಳನ್ನು ಬಿಟ್ಟು) | | |
| ೧೬. | ಕಾನೂನು ಮತ್ತು ನ್ಯಾಯ (ವಾಯವ್ಯ ಪ್ರಾಂತ್ಯಗಳ ಸರ್ಕಾರದ ಅಧಿಕಾರಿಗಳಿಗೆ ಕೊಡಲಾದ ನಿಧಿ ತಾತ್ಕಾಲಿಕ ವಿಶೇಷ ಪರಿಹಾರಗಳನ್ನುಬಿಟ್ಟು) | XIII | ಕಾನೂನು ಮತ್ತು ನ್ಯಾಯ |
| ೧೭. | ಪೊಲೀಸ್ | XIV | ಪೊಲೀಸ್ |
| ೧೯. | ಶಿಕ್ಷಣ | XVI | ಶಿಕ್ಷಣ |
| ೨೧. | ವೈದ್ಯಕೀಯ (ಸಿವಿಲ್ ಸ್ಟೇಷನ್‌ಗಳ ವೈದ್ಯಾಧಿಕಾರಿಗಳ ಸಂಬಳವನ್ನು ಬಿಟ್ಟು) | | |

೧. *ಗೆಜೆಟ್ ಆಫ್ ಇಂಡಿಯಾ*, ಭಾಗ ೧, ಮಾರ್ಚ್ ೩೧, ೧೯೭೭, ಪುಟ ೧೭೨, ಫೈನಾನ್ಷಿಯಲ್ ಡಿಪಾರ್ಟ್‌ಮೆಂಟ್ ನೋಟಿಫಿಕೇಷನ್ ಸಂಖ್ಯೆ ೧೮೦೭.

| | | | |
|---|---|---|---|
| ೨೨. | ಮುದ್ರಣ ಮತ್ತು ಲೇಖನ ಸಾಮಗ್ರಿ | | |
| ೨೮. | ಸಾದಿಲ್ವಾರು (ಸೂಚಿಸಿಲ್ಲದ ವಸ್ತುಗಳು ಮತ್ತು ರೂ.೧೦,೦೦೦ ಮೀರಿದ ಮೌಲ್ಯವುಳ್ಳ ವಸ್ತುಗಳನ್ನು ಬಿಟ್ಟು)<br><br>ಸಾರ್ವಜನಿಕ ಕಾಮಗಾರಿ : ರಸ್ತೆ ಮತ್ತು ಇತರ ಸಾರ್ವಜನಿಕ ಸುಧಾರಣೆ ಬಾಬ್ತುಗಳು, ನಾಗರಿಕ ಕಟ್ಟಡಗಳು (ಆಫೀಸು, ಅಂಚೆ ಕಚೇರಿ ಮತ್ತು ತಂತಿ ಕಚೇರಿಗಳ ಕಟ್ಟಡಗಳನ್ನು ಬಿಟ್ಟು) ಕಾರ್ಖಾನೆಗಳು, ಸಾರ್ವಜನಿಕ ಕಾಮಗಾರಿ ಇಲಾಖೆಯ ಎಲ್ಲಾ ಸಂಸ್ಥೆಗಳು, (ಮಿಲಿಟರಿ ಕಾಮಗಾರಿ ಮತ್ತು ನೀರಾವರಿ ಶಾಖೆಗಳನ್ನು ಬಿಟ್ಟು) ಸಾಮ್ರಾಜ್ಯಶಾಹಿ ಫಂಡ್‌ನಿಂದ, ತಮ್ಮ ಖರ್ಚಿನಲ್ಲಿ ಶೇ.೨೦ರಷ್ಟನ್ನು ಪಡೆದುಕೊಳ್ಳುವ ಸಂಸ್ಥೆಗಳು | XX | ಸಾದಿಲ್ವಾರು ("ವಿನಿಮಯದಿಂದ ಬರುವ ಲಾಭ", ಬೆಲೆಗಳ ಮೇಲೆ ಲಾಭ ಮತ್ತು ರೂ.೧೦,೦೦೦ನ್ನು ಸೂಚಿಸಿಲ್ಲದಿರುವ ವಸ್ತುಗಳನ್ನು ಬಿಟ್ಟು)<br>ಸಾರ್ವಜನಿಕ ಕಾಮಗಾರಿಗಳಿಂದ ಬರುವ ಪ್ರಾಂತೀಯ ಆಯವ್ಯಯದಲ್ಲಿ ಸೇರಿಸಲಾದ ಆದಾಯಗಳು |

ಪ್ರಾಂತ್ಯಗಳಿಗೆ ವರಮಾನ ಬಾಬ್ತುಗಳನ್ನು ನಿಗದಿಮಾಡುವಾಗ, ಭಾರತ ಸರ್ಕಾರ ಕೆಳಗಿನ ನಿಯಮವನ್ನು ಸೇರಿಸಿತು.

"ವಾಯವ್ಯ ಪ್ರಾಂತ್ಯ ಮತ್ತು ಔಧ್ ಸರ್ಕಾರಗಳು, ಅಬ್ಕಾರಿ, ಸ್ಟಾಂಪ್ ಶುಲ್ಕಗಳು, ಕಾನೂನು ಮತ್ತು ನ್ಯಾಯ (ಜೈಲು ಮತ್ತು ನೋಂದಣಿಗಳನ್ನು ಬಿಟ್ಟು) ಇಲಾಖೆಗಳಿಂದ ಬರುವ ನಿವ್ವಳ ಆದಾಯದಿಂದ ಬರುವ ರೂ. ೮೩,೭೫,೦೦೦ಗಳನ್ನು ಮೀರುವ ಯಾವುದೇ ಮೊತ್ತವನ್ನು ಸಾಮ್ರಾಜ್ಯಶಾಹಿ ಖಜಾನೆಗೆ ಪಾವತಿ ಮಾಡಬೇಕು"

ಪ್ರಾಂತ್ಯಕ್ಕೆ ಮೇಲಿನ ಮೊತ್ತಕ್ಕಿಂತ ಕಡಿಮೆ ಆದಾಯ ಬಂದರೆ, ಕೊರತೆ ಎಷ್ಟು ಉಂಟಾಗುತ್ತದೆಯೋ ಅದರ ಅರ್ಧದಷ್ಟನ್ನು ಕೇಂದ್ರ ಸರ್ಕಾರ, ಪ್ರಾಂತ್ಯ ಸರ್ಕಾರಕ್ಕೆ ತುಂಬಿಕೊಡಲು ಒಪ್ಪಿತ್ತು. ವಾಯವ್ಯ ಪ್ರಾಂತ್ಯಗಳು ಮತ್ತು ಔಧ್‌ನ ಕೇಂದ್ರ ಸರ್ಕಾರ ಗೊತ್ತುಮಾಡಿರುವ ಬಾಬ್ತುಗಳ ಮೇಲಿನ ವೆಚ್ಚ, ಅಂದಾಜು ಮಾಡಲಾಗಿರುವ ಆದಾಯ ಮತ್ತು ಪ್ರಾಂತ್ಯ ಸರ್ಕಾರಗಳು ಈ ಬಗ್ಗೆ ಕೊಡಬಹುದಾದ ಮೊತ್ತವನ್ನು ಕೂಡಿಸಿ ೮೩,೭೫,೦೦೦ಕ್ಕಿಂತ ಕಡಿಮೆ ಬಿದ್ದರೆ, ಈ ಕೊರತೆಯನ್ನು ತುಂಬಿಕೊಡಬೇಕು. ಆದರೆ ವೆಚ್ಚ ರೂ. ೮೩,೭೫,೦೦೦ಕ್ಕಿಂತ ಅಧಿಕವಾದರೆ, ಈ ಮೊತ್ತವನ್ನು ವಾಯವ್ಯಪ್ರಾಂತ್ಯ ಮತ್ತು ಔಧ್‌ನ ಲೆಕ್ಕದಲ್ಲಿ ಸಾಮ್ರಾಜ್ಯದ ಖಜಾನೆಯಿಂದ ಕಳೆದುಕೊಳ್ಳಬೇಕು.

## ಬಂಗಾಳ

| | ಬಂಗಾಳದ ಬಜೆಟ್‌ಗೆ ಸೇರಿಸಲಾದ ವೆಚ್ಚ ಬಾಬ್ತುಗಳು | ೧೮೭೭–೭೮ ರಲ್ಲಿದ್ದ ಅನುದಾನ | ಬರ್ಖಾಸ್ತು | ಉದ್ದೇಶಿತ ಒಟ್ಟು ಅನುದಾನ |
|---|---|---|---|---|
| ೩. | ಅಬ್ಕಾರಿ, ಸ್ಟಾಂಪ್‌ಗಳು, ಕಾನೂನು ಮತ್ತು ನ್ಯಾಯ ಮತ್ತು ಇತರ ಠೇವಣಿಗಳಿಂದ ಮರುಸಂದಾಯಗಳು | ೪,೯೧,೦೦೦ | – | ೪,೯೧,೦೦೦ |
| ೪. | ಭೂಕಂದಾಯ (ಕಲೆಕ್ಟರ್‌ಗಳು, ಜಿಲ್ಲಾಧಿಕಾರಿಗಳು ಮುಂತಾದವರ ಕಛೇರಿ ಖರ್ಚುಗಳು ಮತ್ತು ಭೂಕಂದಾಯ ಸಂಗ್ರಹಿಸಲು ಬೀಳುವ ಖರ್ಚುಗಳು) | ೨೨,೬೨,೦೦೦ | – | ೨೨,೬೨,೦೦೦ |
| ೬. | ಸ್ಪಿರಿಟ್ ಮತ್ತು ಔಷಧಿಗಳ ಮೇಲೆ ಅಬ್ಕಾರಿ ಸುಂಕ | ೨,೯೨,೦೦೦ | – | ೨,೯೨,೦೦೦ |
| ೮. | ಕಸ್ಟಂ | ೬,೯೩,೦೦೦ | – | ೬,೯೩,೦೦೦ |
| ೯. | ಉಪ್ಪು | ೩೯,೦೦೦ | – | ೩೯,೦೦೦ |
| ೧೧. | ಸ್ಟಾಂಪುಗಳು | ೨,೩೮,೦೦೦ | – | ೨,೩೮,೦೦೦ |
| ೧೫. | ಆಡಳಿತ (ಅಕೌಂಟ್ಸ್ ಆಫೀಸ್, ಪ್ರೆಸಿಡೆನ್ಸಿ ಬ್ಯಾಂಕುಗಳ ಸಂಬಳ, ಸಾರಿಗೆ, ಪ್ರೆಸಿಡೆನ್ಸಿ ಕಚೇರಿಯಲ್ಲಿ ಖರೀದಿಸಿದ ಲೇಖನ ಸಾಮಗ್ರಿಗಳು) | ೧೨,೬೧,೦೦೦ | – | ೧೨,೬೧,೦೦೦ |
| ೧೬. | ಮೈನರ್ ಇಲಾಖೆಗಳು, (ಹವಾಮಾನ ಮತ್ತು ಪುರಾತತ್ವ ಇಲಾಖೆಗಳು, ಜನಗಣತಿ ಮತ್ತು ಗೆಜೆಟಿಯರ್‌ಗಳನ್ನು ಬಿಟ್ಟು) | ೧,೬೮,೦೦೦ | – | ೧,೬೮,೦೦೦ |
| ೧೭. | ಕಾನೂನು ಮತ್ತು ನ್ಯಾಯ (ಕಾನೂನು ಅಧಿಕಾರಿಗಳನ್ನು ಬಿಟ್ಟು) | ೬೩,೯೭,೦೦೦ | ೧,೦೦,೦೦೦ | ೬೨,೯೭,೦೦೦ |
| ೧೮. | ಮೆರೀನ್ | ೧೦,೯೨,೦೦೦ | – | ೧೦,೯೨,೦೦೦ |
| ೨೩. | ರಾಜಕೀಯ (ಗವರ್ನರ್‌ಮೆಂಟ್ ಹೌಸ್ ಪೋಲೀಸ್ ಗಾರ್ಡ್) | ೭,೦೦೦ | – | ೭,೦೦೦ |
| ೨೬. | ಸಾದಿಲ್ವಾರು (ಖಜಾನೆ ಸಂದಾಯಗಳನ್ನು ಬಿಟ್ಟು) | ೨೫,೦೦೦ | – | ೨೫,೦೦೦ |
| | ಸಾಮಗ್ರಿಗಳು ಮತ್ತು ಸ್ಟಾಂಪು | ೪,೯೮,೦೦೦ | ೫೦,೦೦೦ | ೪,೪೮,೦೦೦ |
| ೨೭. | ಪ್ರಸ್ತುತ ಪ್ರಾಂತ್ಯಕ್ಕೆ ಗೊತ್ತುಮಾಡಲಾಗಿರುವ ಹಣ | ೧,೧೦,೫೯,೦೦೦ | ೪,೪೦,೦೦೦ | ೧,೦೬,೧೯,೦೦೦ |
| | ಬಿಷಪ್ ಅರಮನೆಯನ್ನು ನೋಡಿಕೊಳ್ಳುವುದು ಮತ್ತು ಮುಂತಾದ ಬಾಬ್ತುಗಳು | ೭,೦೦೦ | – | ೭,೦೦೦ |
| | **ಒಟ್ಟು** | **೨,೪೫,೨೯,೦೦೦** | **೫,೯೦,೦೦೦** | **೨,೩೯,೩೯,೦೦೦** |

ಬಂಗಾಳ ಪ್ರಾಂತ್ಯದ ಬಜೆಟ್[೧] ಅನ್ನು ಮರುರೂಪಿಸುವ ಬದಲಿಗೆ ಅದನ್ನು ವಿಸ್ತರಿಸಲಾಯಿತು. ಈಗಾಗಲೇ ಇದ್ದ ವೆಚ್ಚ ಹಾಗೂ ಆದಾಯ ಬಾಬ್ತುಗಳಿಗೆ, ಹೊಸ ಬಾಬ್ತುಗಳನ್ನು ಸೇರಿಸಲಾಯಿತು. ಹೊಸ ಯೋಜನೆಯ ಎರಡನೇ ಹಂತವಾಗಿ, ಮೇಲಿನ ಪಟ್ಟಿಯಲ್ಲಿರುವ ಬಾಬ್ತುಗಳ ಜವಾಬ್ದಾರಿಯನ್ನು ಬಂಗಾಳ ಸರ್ಕಾರದ ಜವಾಬ್ದಾರಿಯನ್ನಾಗಿ ಮಾಡಲಾಯಿತು.

ಈ ಬಾಬ್ತುಗಳ ಮೇಲಿನ ವೆಚ್ಚವನ್ನು ಸರಿದೂಗಿಸಲು ಬಂಗಾಳಕ್ಕೆ ಕೆಳಗಿನ ವರಮಾನ ಮೂಲಗಳನ್ನು ವಹಿಸಿಕೊಡಲಾಯಿತು.

## ವಹಿಸಿಕೊಡಲಾದ ವರಮಾನ ಮೂಲಗಳು

(೦೦೦ಗಳನ್ನು ಬಿಡಲಾಗಿದೆ)

| | ವರಮಾನ ಮೂಲಗಳು | ೧೮೭೬-೭ಕ್ಕೆ ಅಂದಾಜು ಮಾಡಲಾದ ವರಮಾನ | ಅಂದಾಜು ಮಾಡಲಾದ ಬೆಳವಣಿಗೆ ದರದ ಪ್ರಕಾರ ಆದಾಯ | | | | |
|---|---|---|---|---|---|---|---|
| | | | ೧೮೭೭-೮ | ೧೮೭೮-೯ | ೧೮೭೯-೮೦ | ೧೮೮೦-೧ | ೧೮೮೧-೨ |
| | | ರೂ. | ರೂ. | ರೂ. | ರೂ. | ರೂ. | ರೂ. |
| IV | ಸ್ಪಿರಿಟ್ ಮತ್ತು ಔಷಧದ ಮೇಲಿನ ಅಬ್ಕಾರಿ | ೬,೩೦೦ | ೬,೪೦೦ | ೬,೫೦೦ | ೬,೬೦೦ | ೬,೭೦೦ | ೬,೮೦೦ |
| VI | ಕಸ್ಟಂ (ಕಸ್ಟಂ ಸಾದಿಲ್ವಾರು, ಉಗ್ರಾಣಗಳು ಮತ್ತು ಬಂದರು ಕಟ್ಟೆ ಬಾಡಿಗೆಗಳು) | ೩,೬೦೦ | ೩,೬೦೦ | ೩,೬೦೦ | ೩,೬೦೦ | ೩,೬೦೦ | ೩,೬೦೦ |
| VII | ಉಪ್ಪು (ಉಗ್ರಾಣ ಬಾಡಿಗೆಗಳು ದಂಡ ಮತ್ತು ಮುಟ್ಟುಗೋಲು ಮತ್ತು ಇತರೆ) | ೨೨೦ | ೨೨೦ | ೨೨೦ | ೨೨೦ | ೨೨೦ | ೨೨೦ |
| IX<br>XIII | ಸ್ಟಾಂಪುಗಳು<br>ಕಾನೂನು ಮತ್ತು ನ್ಯಾಯ } | ೧೦,೩೦೦ | ೧೦,೫೭೫ | ೧೦,೮೫೦ | ೧೧,೧೨೫ | ೧೧,೪೦೦ | ೧೧,೬೭೫ |
| XIV | ನೌಕಾವಿಭಾಗ (ಪೈಲೊಟೇಜ್ ಪಾವತಿಗಳು ನೊಂದಣಿ ಮತ್ತು ಇತರ ಫೀ) | ೧,೦೯೧ | ೧,೦೮೪ | ೧,೦೮೪ | ೧,೦೮೪ | ೧,೦೮೪ | ೧,೦೮೪ |
| XVI | ಸಾದಿಲ್ವಾರು ಬಾಬ್ತುಗಳು (ಬಿಲ್‌ಗಳ ಮೇಲಿನ ಪ್ರೀಮಿಯಂ ಪಡೆದು ಕೊಂಡಿಲ್ಲದಿರುವ ಬಿಲ್‌ಗಳು ಮತ್ತು ರೂ.೧೦,೦೦೦ ಮೀರಿದ ಪಟ್ಟಿಯಲ್ಲಿ ಸೇರಿಸಿರುವ ವಿಷಯಗಳ ಬಾಬ್ತು) | ೭೭೧ | ೯೯೨ | ೯೯೨ | ೯೯೨ | ೯೯೨ | ೯೯೨ |
| | ಒಟ್ಟು | ೨೨,೨೮೨ | ೨೨,೬೭೧ | ೨೩,೦೭೬ | ೨೩,೪೨೧ | ೨೩,೫೯೬ | ೨೪,೧೭೧ |

ಹಿಂದೆ ಹೇಳಿದ ಭಾರತದ ಗೆಜೆಟ್‌ನಿಂದ ಸಂಗ್ರಹಿಸಲಾಗಿದೆ.

೧. *ಗೆಜೆಟ್ ಆಫ್ ಇಂಡಿಯಾ,* ಭಾಗ ೧, ಮಾರ್ಚ್ ೩೧, ೧೮೭೭, ಪು. ೧೭೪.

ವಹಿಸಿಕೊಡಲಾದ ವರಮಾನಗಳು, ವರ್ಗಮಾಡಲಾದ ಬಾಬ್ತುಗಳ ಮೇಲಿನ ವೆಚ್ಚಕ್ಕೆ ಸಾಕಾಗುತ್ತಿರಲಿಲ್ಲ. ಆದ್ದರಿಂದ, ತನಗೆ ಬಂಗಾಳ ಕೊಡಬೇಕಾದ ಹಣವನ್ನು ಲೆಕ್ಕಕ್ಕೆ ಹಿಡಿಯುತ್ತಾ ಭಾರತ ಸರ್ಕಾರ ಆ ಪ್ರಾಂತ್ಯಕ್ಕೆ ಸಾಮ್ರಾಜ್ಯದ ಖಜಾನೆಯಿಂದ ಕೆಳಗಿನ ಮೊತ್ತವನ್ನು ಕೊಡಬೇಕೆಂದು ನಿಗದಿ ಮಾಡಿತು.

| ವರ್ಷ | ಗೊತ್ತುಮಾಡಲಾದ ಹಣ ರೂ.ನಲ್ಲಿ |
|---|---|
| ೧೮೭೭-೭೮ | ೪೮,೩೨,೦೦೦ |
| ೧೮೭೮-೭೯ | ೪೪,೫೭,೦೦೦ |
| ೧೮೭೯-೮೦ | ೪೦,೮೨,೦೦೦ |
| ೧೮೮೦-೮೧ | ೩೭,೦೭,೦೦೦ |
| ೧೮೮೧-೮೨ | ೩೩,೩೨,೦೦೦ |

## ಮಧ್ಯಪ್ರಾಂತ್ಯಗಳು[೧]

**ಮಧ್ಯಪ್ರಾಂತ್ಯಗಳ ಬಜೆಟ್‌ಗೆ ಕೆಳಗಿನ ಬಾಬ್ತುಗಳನ್ನು ಸೇರಿಸಲಾಯಿತು.**

| ಬಾಬ್ತುಗಳು | ೧೮೭೭-೭೮ಕ್ಕೆ ಗೊತ್ತುಮಾಡಲಾದ ಅನುದಾನ ರೂ.ನಲ್ಲಿ | ಖೋತಾ ರೂ.ನಲ್ಲಿ | ಉದ್ದೇಶಿತ ಒಟ್ಟು ಅನುದಾನ ರೂ.ನಲ್ಲಿ |
|---|---|---|---|
| ಅಬ್ಕಾರಿ, ಮರುಸಂದಾಯ, ಸ್ಟಾಂಪ್, ಕಾನೂನು ಮತ್ತು ನ್ಯಾಯ ಮತ್ತು ಇತರೆ | ೪೭,೦೦೦ | - | ೪೭,೦೦೦ |
| ಅಬ್ಕಾರಿ .... | ೫೨,೦೦೦ | - | ೫೨,೦೦೦ |
| ಸ್ಟಾಂಪು .... | ೧೪,೦೦೦ | - | ೧೪,೦೦೦ |
| ಭೂಕಂದಾಯ (ಸೆಟಲ್‌ಮೆಂಟ್ ಛಾರ್ಜ್‌ಗಳನ್ನು ಬಿಟ್ಟು) | ೬,೬೬,೦೦೦ | ೯೦,೦೦೦ | ೧೭,೭೪,೦೦೦ |
| ಆಡಳಿತ (ಅಕೌಂಟ್ಸ್ ಮತ್ತು ಕರೆನ್ಸಿ ಆಫೀಸ್) | ೩,೩೯,೦೦೦ | | |
| ಮೈನರ್ ಡಿಪಾರ್ಟ್‌ಮೆಂಟ್ಸ್ (ವಾಯು ಮಾಪನ ಮತ್ತು ಪುರಾತತ್ವ) | ೪,೦೦೦ | | |

೧. *ಗೆಜೆಟ್ ಆಫ್ ಇಂಡಿಯಾ*, ಭಾಗ ೧, ಜೂನ್ ೨, ೧೮೭೭, ಪು. ೨೭೪.

| ಬಾಬ್ತುಗಳು | ೧೮೭೭–೭೮ಕ್ಕೆ ಗೊತ್ತುಮಾಡಲಾದ ಅನುದಾನ | ಖೋತಾ | ಉದ್ದೇಶಿತ ಒಟ್ಟು ಅನುದಾನ |
|---|---|---|---|
| | ರೂ.ನಲ್ಲಿ | ರೂ.ನಲ್ಲಿ | ರೂ.ನಲ್ಲಿ |
| ನ್ಯಾಯ ಮತ್ತು ಕಾನೂನು | ೬,೯೧,೦೦೦ | | |
| ಲೇಖನಸಾಮಗ್ರಿ ಮತ್ತು ಸ್ಟಾಂಪು | ೬೯,೦೦೦ | | |
| ಸಾದಿಲ್ವಾರು (ಆಭರಣದ ಸಂದಾಯ ಮತ್ತು ಸಪ್ಲೈಬಿಲ್‌ಗಳ ಪಟ್ಟಿಯನ್ನು ಬಿಟ್ಟು) | ೫೦೦೦ | | |
| **ಸೇರಿಸಿ :** | | | |
| ಪ್ರಾಂತೀಯ ಸೇವೆಗಳಿಗೆ ಸದ್ಯದಲ್ಲಿ ಗೊತ್ತು ಮಾಡಲಾಗಿರುವ ಹಣ | ೨೭,೭೩,೦೦೦ | – | ೨೭,೭೩,೦೦೦ |
| ಮಧ್ಯಪ್ರಾಂತ್ಯಗಳ ಬಜೆಟ್‌ಗೆ ನೀಡಬೇಕಾದ ಒಟ್ಟು ಅನುದಾನ. | ೪೬,೬೦,೦೦೦ | ೯೦.೦೦೦ | ೪೫,೭೦,೦೦೦ |

ಮಧ್ಯಪ್ರಾಂತ್ಯಗಳು ಈ ಬಾಬ್ತುಗಳ ಮೇಲೆ ವೆಚ್ಚವನ್ನು ತೂಗಿಸಲು ಕೆಳಗಿನ ವರಮಾನ ಮೂಲಗಳನ್ನು ಬಳಸಿಕೊಳ್ಳಲು ಅಧಿಕಾರ ಕೊಡಲಾಯಿತು.

| ವರಮಾನ ಬಾಬ್ತುಗಳು | ೧೮೭೬–೭೭ ನಿರೀಕ್ಷಿತ ಅಂದಾಜು | ಅಂದಾಜು ಮಾಡಿದ ಬೆಳವಣಿಗೆ ದರದ ಪ್ರಕಾರ ವರಮಾನ | | |
|---|---|---|---|---|
| | | ೧೮೭೭–೭೮ | ೧೮೭೮–೭೯ | ೧೮೭೯–೮೦ |
| | **ರೂ.ಗಳು** | **ರೂ.ಗಳು** | **ರೂ.ಗಳು** | **ರೂ.ಗಳು** |
| ಅಬ್ಕಾರಿ | ೧೩,೯೦,೦೦೦ | ೧೪,೫೦,೦೦೦ | ೧೫,೧೦,೦೦೦ | ೧೫,೭೦,೦೦೦ |
| ಸ್ಟಾಂಪುಗಳು | ೯,೭೦,೦೦೦ | ೯,೭೫,೦೦೦ | ೯,೮೦,೦೦೦ | ೯,೮೫,೦೦೦ |
| ಕಾನೂನು ಮತ್ತು ನ್ಯಾಯ | ೧,೬೭,೦೦೦ | ೧,೭೫,೦೦೦ | ೧,೮೩,೦೦೦ | ೧,೯೧,೦೦೦ |
| ಇತರೆ (ಬಿಲ್‌ಗಳ ಮೇಲೆ ಪ್ರೀಮಿಯಂ, ಇನ್ನೂ ತೆಗೆದು ಕೊಂಡಿಲ್ಲದಿರುವ ಬಿಲ್ಸ್ ಆಫ್ ಎಕ್ಸ್‌ಚೇಂಜ್‌ಗಳು ರೂ. ೧೦,೦೦೦ ಮೀರಿದ ಪಟ್ಟಿ ಮಾಡಿಲ್ಲದ ಬಾಬ್ತುಗಳು) | ೭,೦೦೦ | ೭,೦೦೦ | ೭,೦೦೦ | ೭,೦೦೦ |
| **ಒಟ್ಟು** | **೨೫,೩೪,೦೦೦** | **೨೬,೦೭,೦೦೦** | **೨೬,೮೦,೦೦೦** | **೨೭,೫೩,೦೦೦** |

ಮೇಲೆ ಹೇಳಿದ ಗೆಜೆಟ್‌ನಿಂದ ಸಂಗ್ರಹಿಸಲಾಗಿದೆ.

ಈ ವರಮಾನ ಮೂಲಗಳಿಂದ ಬರುವ ಆದಾಯ ಸಾಕಾಗುತ್ತಿರಲಿಲ್ಲವಾದುದರಿಂದ ಭಾರತ ಸರ್ಕಾರ, ಸಾಮ್ರಾಜ್ಯದ ಖಜಾನೆಯಿಂದ ಕೆಳಗಿನ ನೀಡಿಕೆಗಳನ್ನು ಸಹ ಗೊತ್ತುಮಾಡಿತ್ತು.

| ವರ್ಷ | ನಿಗದಿಮಾಡಲಾದ ಹಣ |
|---|---|
| ೧೮೭೭-೭೮ | ೧೯,೬೩,೦೦೦ |
| ೧೮೭೮-೭೯ | ೧೮,೯೦,೦೦೦ |
| ೧೮೭೯-೮೦ | ೧೮,೧೭,೦೦೦ |

ನಿಗದಿ ಮಾಡಲಾದ ಹಣದ ನಿಯಮಗಳು ಬದಲಾದಂತೆ, ಮೇಲೆ ನಿಗದಿಮಾಡಿದ ಹಣ ಸಹ ವ್ಯತ್ಯಾಸವಾಗುವುದಕ್ಕೆ ಅವಕಾಶವಿತ್ತು. ನಿಯಮದ ಪ್ರಕಾರ ನಿರೀಕ್ಷಿತ ಅಂದಾಜಿಗಿಂತ ವರಮಾನ ಹೆಚ್ಚಾದರೆ, ಅದರಲ್ಲಿ ಅರ್ಧದಷ್ಟನ್ನು ಪಡೆದುಕೊಳ್ಳುವ ಅಧಿಕಾರವನ್ನು ಕೇಂದ್ರ ಸರ್ಕಾರ ಹೊಂದಿತ್ತು. ಹಾಗೆಯೇ ನಿರೀಕ್ಷಿತ ವರಮಾನಕ್ಕಿಂತ ವರಮಾನ ಕಡಿಮೆಬಿದ್ದರೆ, ಅದರಲ್ಲಿ ಅರ್ಧದಷ್ಟನ್ನು ತುಂಬಿಕೊಡಬೇಕಾಗಿತ್ತು. ಒಂದು ಪಕ್ಷ ವರಮಾನ ನಿರೀಕ್ಷಿಸುವುದಕ್ಕಿಂತ ಹೆಚ್ಚಾದರೆ ವರಮಾನ ಎಷ್ಟು ಹೆಚ್ಚಾಗಿದೆಯೋ ಅದರಲ್ಲಿ ಅರ್ಧದಷ್ಟನ್ನು ಕೇಂದ್ರ ಸರ್ಕಾರ ತನ್ನ ಅನುದಾನದಲ್ಲಿ ಹಿಡಿದುಕೊಂಡು ಬಿಡುತ್ತಿತ್ತು. ಹಾಗೆಯೇ ನಿರೀಕ್ಷಿತ ವರಮಾನಕ್ಕಿಂತ ವಾಸ್ತವ ವರಮಾನ ಕಡಿಮೆ ಬಿದ್ದರೆ, ಈ ಕೊರತೆಯ ಅರ್ಧದಷ್ಟು ಮೊತ್ತವನ್ನು ಅನುದಾನದಲ್ಲಿ ಹೆಚ್ಚು ಮಾಡುತ್ತಿತ್ತು.

## ಬೊಂಬಾಯಿ

**ಬೊಂಬಾಯಿ ಸರ್ಕಾರದ ಪ್ರಾಂತೀಯ ಬಜೆಟ್[1]ಗೆ ಸಂಬಂಧಿಸಿದಂತೆ ಕೆಳಗಿನ ಬಾಬ್ತುಗಳನ್ನು ಬಜೆಟ್‌ಗೆ ಸೇರಿಸಲಾಯಿತು.**

| | ಬಾಬ್ತುಗಳು | ೧೮೭೭-ಕ್ಕೆ ಗೊತ್ತು ಮಾಡಲಾದ ಅನುದಾನ | ಕಳೆಯಲಾದ ಮೊತ್ತ | ಒಟ್ಟು ಅನುದಾನ |
|---|---|---|---|---|
| | | ರೂ.ನಲ್ಲಿ | ರೂ.ನಲ್ಲಿ | ರೂ.ನಲ್ಲಿ |
| ೧. | ಮರುಪಾವತಿಗಳು | ೧,೧೦,೦೦೦ | | |
| ೨. | ಭೂಕಂದಾಯ | ೬೩,೦೭,೦೦೦ | | |
| ೩. | ಅಬ್ಕಾರಿ | ೮೦,೦೦೦ | | |

೧. *ಗೆಜೆಟ್ ಆಫ್ ಇಂಡಿಯಾ*, ಭಾಗ ೧, ಆಗಸ್ಟ್ ೨, ೧೮೭೭, ಪು. ೨೬೮.

| | | | | |
|---|---|---|---|---|
| ೭. | ಕಸ್ಟಂಸ್ | ೮,೦೯,೦೦೦ | | |
| ೮. | ಉಪ್ಪು | ೫,೬೯,೦೦೦ | | |
| ೧೪. | ಆಡಳಿತ | ೧೧,೪೩,೦೦೦ | ೫,೬೭,೦೦೦ | ೨,೧೩,೯೬,೦೦೦ |
| ೧೫. | ಮೈನರ್ ಇಲಾಖೆಗಳು | ೧,೧೩,೦೦೦ | | |
| ೧೬. | ನ್ಯಾಯ ಮತ್ತು ಕಾನೂನು | ೪೩,೧೨,೦೦೦ | | |
| ೧೮. | ಮೆರೀನ್ | ೩೧,೦೦೦ | | |
| ೨೦. | ಚರ್ಚು ಸಂಬಂಧಿ (ಎಲೆಕ್ಟ್ರಿಕಲ್) | ೩,೨೫,೦೦೦ | | |
| ೨೧. | ವೈದ್ಯಕೀಯ | ೨,೬೮,೦೦೦ | | |
| ೨೨. | ಲೇಖನಸಾಮಗ್ರಿ ಮತ್ತು ಸ್ಟಾಂಪು | ೨,೨೯,೦೦೦ | | |
| ೨೪. | ಭತ್ಯೆಗಳು ಮತ್ತು ಹೊಂದಾಣಿಕೆಗಳು | ೬೪,೮೧,೦೦೦ | | |
| ೨೬. | ಸೇವಾನಂತರದ ಭತ್ಯೆಗಳು | ೮,೦೦,೦೦೦ | | |
| ೨೮. | ಇತರೆ | ೨೮,೨೮,೦೦೦ | | |
| **ಸೇರಿಸಿ** | **: ಪ್ರಾಂತೀಯ ಸೇವೆಗಳಿಗೆ ಸದ್ಯ ಗೊತ್ತು ಮಾಡಲಾದ ಹಣ** | **೧,೦೪,೫೪,೦೦೦** | | **೧,೦೪,೫೪,೦೦೦** |
| | **ಒಟ್ಟು** | **೩,೨೪,೧೭,೦೦೦** | **೫,೬೭,೦೦೦** | **೩,೧೮,೫೦,೦೦** |

ಈಗಾಗಲೇ ಸೇರಿಸಿರುವ ಬಾಬ್ತುಗಳಿಂದ ಬರುತ್ತಿದ್ದ ಆದಾಯಕ್ಕೆ ಭಾರತ ಸರ್ಕಾರ ಕೆಳಗಿನ ಬಾಬ್ತುಗಳನ್ನು ಸಹ ಬೊಂಬಾಯಿ ಸರ್ಕಾರಕ್ಕೆ ಸೇರಿಸಿತು.

**ವಹಿಸಿಕೊಡಲಾದ ವರಮಾನಗಳು (೦೦೦ಗಳನ್ನು ಬಿಡಲಾಗಿದೆ)**

| ವರಮಾನ ಮೂಲಗಳು | ೧೮೭೬–೭೭ಕ್ಕೆ ಅಂದಾಜು ಮಾಡಲಾದ ವರಮಾನ | ಅಂದಾಜು ಮಾಡಲಾದ ವರಮಾನದ ಬೆಳವಣಿಗೆ ದರ | | | | |
|---|---|---|---|---|---|---|
| | | ೭೭–೭೮ | ೭೮–೭೯ | ೭೯–೮೦ | ೮೦–೮೧ | ೮೧–೮೨ |
| | ರೂ.ಗಳು | ರೂ.ಗಳು | ರೂ.ಗಳು | ರೂ.ಗಳು | ರೂ.ಗಳು | ರೂ.ಗಳು |
| I ಭೂಕಂದಾಯ (ಇನಾಂದಾರಿ ಹೊಂದಾಣಿಕೆಗಳಿಂದ ಬಂದ ವರಮಾನ ಮತ್ತು ಸಂಪರ್ಕ ಸೇವೆಗಳು) | ೫,೧೯೯ | ೬,೬೨೪ | ೬,೬೨೪ | ೬,೬೨೪ | ೬,೬೨೪ | ೬,೬೨೪ |
| IV ಅಬ್ಕಾರಿ | ೩,೯೪೬ | ೪,೦೦೦ | ೪,೧೦೦ | ೪,೨೦೦ | ೪,೩೦೦ | ೪,೪೦೦ |
| ಸ್ಟಾಂಪುಗಳು | ೪,೧೮೬ | ೪,೩೦೦ | ೪,೩೫೦ | ೪,೫೦೦ | ೪,೫೦೦ | ೪,೬೦೦ |
| ಕಾನೂನು ಮತ್ತು ನ್ಯಾಯ | ೨೭೭ | ೨೭೦ | ೨೭೦ | ೨೭೦ | ೨೭೦ | ೨೭೦ |
| **ಒಟ್ಟು** | **೧,೮೦೬** | **೮,೫೭೦** | **೮,೭೨೦** | **೮,೯೭೦** | **೯,೧೨೦** | **೯,೨೭೦** |
| ಇತರೆ (ವಿನಿಮಯದಿಂದ ಲಾಭ, ಬಿಲ್‌ಗಳ ಮೇಲೆ ಪ್ರೀಮಿಯಂ, ಮನಿ ಆರ್ಡರ್‌ವಾಯಿದೆ ತುಂಬಿ ಕೊಡದೇ ಇರುವ ಮನಿಆರ್ಡರ್, ಮಾರಾಟ. ದರ್ಬಾರ್ ಪ್ರೆಸೆಂಟ್‌ಗಳಿಂದ ಬಂದ ವರಮಾನ ರೂ. ೧೦,೦೦೦ವನ್ನು ಮೀರಿದ ಪಟ್ಟಿ ಮಾಡದಿರುವ ಆದಾಯ) | ೫೨ | ೭೦ | ೭೦ | ೭೦ | ೭೦ | ೭೦ |
| **ಒಟ್ಟು** | **೧೩.೬೬೦** | **೧೫,೨೬೪** | **೧೫,೪೧೪** | **೧೫,೬೬೪** | **೧೫,೮೧೪** | **೧೫,೯೬೪** |

*ಗೆಜೆಟ್ ಆಫ್ ಇಂಡಿಯಾದಿಂದ ಸಂಗ್ರಹಿಸಿದೆ.*

ಬೊಂಬಾಯಿ ಬಜೆಟ್‌ಗೆ ಸೇರಿಸಲಾದ ಬಾಬ್ತುಗಳಿಂದ ಬರುವ ವರಮಾನ ಮತ್ತು ಖರ್ಚುಗಳ ನಡುವಣ ವ್ಯತ್ಯಾಸವನ್ನು ತುಂಬಿಕೊಡಲು ಕೆಳಗಿನ ಹೊಂದಾಣಿಕೆ ಕೊಡುಗೆಗಳನ್ನು ಭಾರತ ಸರ್ಕಾರ ಮಾಡಿತ್ತು:–

| ವರ್ಷ | ನಿಗದಿಮಾಡಲಾದ ಹಣ |
|---|---|
| ೧೮೭೭–೭೮ | ೧,೫೩,೨೦,೦೦೦ |
| ೧೮೭೮–೭೯ | ೧,೫೧,೭೦,೦೦೦ |
| ೧೮೭೯–೮೦ | ೧,೪೯,೨೦,೦೦೦ |
| ೧೮೮೦–೮೧ | ೧,೪೭,೨೦,೦೦೦ |
| ೧೮೮೧–೮೨ | ೧,೪೬,೨೦,೦೦೦ |

ಮಧ್ಯಪ್ರಾಂತ್ಯಗಳಿಗೆ ನಿಗದಿಮಾಡಲಾದ ಕ್ರಮವನ್ನನುಸರಿಸಿಯೇ ಮೇಲಿನ ಅನುದಾನವನ್ನು ಗೊತ್ತುಮಾಡಲಾಯಿತು.

## ಪಂಜಾಬ್

ಗೊತ್ತುಮಾಡಲಾದ ಆದಾಯ ವಿಧಾನವನ್ನು ಅನುಸರಿಸಿ ನಿಗದಿಮಾಡದೆ ಉಳಿದುಕೊಂಡ ಪ್ರಾಂತ್ಯವೆಂದರೆ ಪಂಜಾಬ್. ಈ ಬಜೆಟ್‌ಗೆ ಸೇರಿಸಲಾದ ಬಾಬ್ತುಗಳು ಕೆಳಗಿನಂತಿದ್ದವು :–

| ಗೊತ್ತುಮಾಡಲಾದ ಖರ್ಚಿನ ಬಾಬ್ತುಗಳು | ೧೮೭೭–೭೮ರ ಅನುದಾನ ರೂ.ನಲ್ಲಿ | ಖೋತಾ ರೂ.ನಲ್ಲಿ | ಉದ್ದೇಶಿತ ಕ್ರೋಡೀಕೃತ ಅನುದಾನ ರೂ.ನಲ್ಲಿ |
|---|---|---|---|
| ಮರು ಸಂದಾಯ | ೬೫,೦೦೦ | | |
| ಭೂ ಕಂದಾಯ, ಸೆಟಲ್‌ಮೆಂಟ್ ಛಾರ್ಜುಗಳನ್ನು ಬಿಟ್ಟು | ೧೬,೨೧,೦೦೦ | | |
| ಅಬ್ಕಾರಿ | ೫೮,೦೦೦ | | |
| ಸ್ಟಾಂಪುಗಳು | ೭೨,೦೦೦ | | |
| ಆಡಳಿತ (ಅಕೌಂಟ್ಸ್ ಮತ್ತು ಕರೆನ್ಸಿ ಆಫೀಸುಗಳು ಮತ್ತು ಸೆಟಲ್‌ಮೆಂಟ್ ಸೆಕ್ರೆಟರಿ ಆಫೀಸುಗಳನ್ನು ಬಿಟ್ಟು) | ೯,೭೪,೦೦೦ | | |
| ಮೈನರ್ ಇಲಾಖೆಗಳು | ೧೬,೦೦೦,೦೦೦ | | |

| | | | |
|---|---|---|---|
| ಕಾನೂನು ಮತ್ತು ನ್ಯಾಯ | | | |
| ವಿಶ್ರಾಂತಿ ನಂತರದ ಭತ್ಯೆಗಳು | ೨೯,೯೪,೦೦೦ | ೨,೨೪,೦೦೦ | ೫೧,೩೮,೦೦೦ |
| ಪರಿಹಾರ ಭತ್ಯೆಗಳು ಮತ್ತು ಗ್ರಾಚುಯಿಟಿ | ೩,೩೮,೦೦೦ | | |
| ಇತರೆ, ಆಭರಣಗಳ ಸಂದಾಯಗಳನ್ನು ಬಿಟ್ಟು | ೪೧,೦೦೦ | | |
| ಲೇಖನ ಸಾಮಗ್ರಿ ಮತ್ತು ಸ್ಟಾಂಪುಗಳು | ೮೩,೦೦೦ | | |
| ಸೇರಿಸಿ–ಪ್ರಾಂತಿಯ ಸೇವೆಗಳಿಗೆ ಸದ್ಯಕ್ಕೆ ನಿಗದಿ ಮಾಡಿರುವ ಹಣ | ೫೪,೨೨,೦೦೦ | – | ೫೪,೨೨,೦೦೦ |
| **ಒಟ್ಟು** | **೧,೦೭,೮೪,೩೩೦** | **೨,೨೪,೦೦೦** | **೧,೦೫,೬೦,೦೦೦** |

ಈ ವೆಚ್ಚಗಳನ್ನು ತುಂಬಿಕೊಡಲು ಪಂಜಾಬ್ ಸರ್ಕಾರಕ್ಕೆ ಕೆಳಗಿನ ವರಮಾನ ಮೂಲಗಳನ್ನು ಗೊತ್ತುಮಾಡಲಾಗಿತ್ತು.

| **ಆದಾಯದ ಬಾಬ್ತುಗಳು** | **೧೮೭೬–೭೭ ರೂ.ನಲ್ಲಿನ ನಿವ್ವಳ ಆದಾಯ** | **ಅಂದಾಜು ಮಾಡಲಾದ ನಿವ್ವಳ ಆದಾಯ** | | |
|---|---|---|---|---|
| | | **೧೮೭೭–೭೮ ರೂ.ಗಳು** | **೧೮೭೮–೭೯ ರೂ.ಗಳು** | **೧೮೭೯–೮೦ ರೂ.ಗಳು** |
| ಲೆಕ್ಕ ಹಾಕಲಾದ ತೆರಿಗೆಗಳು | – | – | ೧೨,೦೦,೦೦೦ | ೧೨,೦೦,೦೦೦ |
| ಸ್ಟಾಂಪುಗಳು | – | ೨೪,೮೫,೦೦೦ | ೨೫,೦೫,೦೦೦ | ೨೫,೨೫,೦೦೦ |
| ಕಾನೂನು ಮತ್ತು ನ್ಯಾಯ | – | ೪,೧೫,೦೦೦ | ೪,೧೫,೦೦೦ | ೪,೧೫,೦೦೦ |
| ಅಬ್ಕಾರಿ | – | ೧೦,೩೦,೦೦೦ | ೧೦,೫೦,೦೦೦ | ೧೦,೭೦,೦೦೦ |
| | – | **೩೯,೩೦,೦೦೦** | **೩೯,೭೦,೦೦೦** | **೪೦,೧೦,೦೦೦** |
| ಇತರೆ (ವಿನಿಮಯದಿಂದ ಲಾಭ) ಪ್ರೀಮಿಯಂ ಬಿಲ್‌ಗಳು, ತೆಗೆದುಕೊಳ್ಳದಿರುವ ಬಿಲ್ಸ್ ಆಫ್ ಎಕ್ಸ್‌ಚೇಂಜ್ ಇವುಗಳನ್ನು ಬಿಟ್ಟು | – | ೬೦,೦೦೦ | ೬೦,೦೦೦ | ೬೦,೦೦೦ |
| **ಒಟ್ಟು** | – | **೩೯,೯೦,೦೦೦** | **೫೨,೩೦,೦೦೦** | **೫೨,೭೦,೦೦೦** |

ಸ್ಟಾಂಪುಗಳು, ಕಾನೂನು ಮತ್ತು ನ್ಯಾಯ ಇಲಾಖೆಗಳಿಂದ ಬರುವ ನಿವ್ವಳ ಆದಾಯದಲ್ಲಿ ಒಂದು ಭಾಗವನ್ನು ಭಾರತ ಸರ್ಕಾರವೇ ಉಳಿಸಿಕೊಂಡಿತ್ತು. ಅಂದಾಜು ಖರ್ಚಿಗಿಂತ, ಅಂದಾಜು ಆದಾಯ ಕಡಿಮೆ ಬಿದ್ದುದರಿಂದ, ಭಾರತ ಸರ್ಕಾರ, ಕೆಳಗಿನ ಕೊಡುಗೆಯನ್ನು ಪಂಜಾಬ್‌ಗೆ ಗೊತ್ತುಮಾಡಿತ್ತು.

| ವರ್ಷ | ನಿಗದಿ ಮಾಡಲಾದ ಕೊಡುಗೆಗಳು | ಅಬ್ಕಾರಿ, ಸ್ಟಾಂಪ್, ಕಾನೂನು ಮತ್ತು ನ್ಯಾಯ ಬಾಬ್ತುಗಳ ವರಮಾನದಿಂದ ಕಡಿಮೆ ಮಾಡಲಾದ ಭಾಗ | ನಿವ್ವಳ ಕೊಡುಗೆಗಳು |
|---|---|---|---|
| ೧೮೭೭-೭೮ | ೬೫,೭೦,೦೦೦ | ೧೦೭,೦೦೦ | ೬೪,೬೩,೦೦೦ |
| ೧೮೭೮-೭೯ | ೫೩,೪೦,೦೦೦ | ೮೫,೦೦೦ | ೫೨,೫೫,೦೦೦ |
| ೧೮೭೯-೮೦ | ೫೩,೧೦,೦೦೦ | - | ೫೩,೧೦,೦೦೦ |

ಮದರಾಸು ಸರ್ಕಾರ ಭಾರತ ಸರ್ಕಾರದ ಪ್ರಾಂತೀಯ ಬಜೆಟ್‌ನ ಹೊಸ ನೀತಿಯನ್ನನುಸರಿಸಿ ಅಗತ್ಯ ಜವಾಬ್ದಾರಿಯನ್ನು ಹೊರಲು ತಿರಸ್ಕರಿಸಿತು ಎನ್ನುವುದನ್ನು ನಾವು ಗಮನಿಸಬೇಕು. ಅದು ಹಳೆಯ ಪದ್ಧತಿಯಲ್ಲೇ ಮುಂದುವರಿಯಲು ಇಚ್ಛಿಸಿತು. ಅಸ್ಸಾಂ ಮತ್ತು ಬರ್ಮಾದ ಪ್ರಾಂತೀಯ ಬಜೆಟ್‌ಗಳ ವಿಮರ್ಶೆಯನ್ನು ಈ ಅಧ್ಯಾಯದಲ್ಲಿ ಸೇರಿಸಿಲ್ಲ. ಈ ಪ್ರಾಂತ್ಯಗಳ ಬಜೆಟ್ ರಚನೆಯ ತತ್ವ ಮುಂದಿನ ಅಧ್ಯಾಯದಲ್ಲಿ ಪ್ರಸ್ತುತವಾಗುವುದರಿಂದ ಅದನ್ನು ಇಲ್ಲಿ ಚರ್ಚಿಸಲಾಗುತ್ತಿಲ್ಲ.

ಪ್ರಾಂತೀಯ ಬಜೆಟ್‌ನ ಎರಡನೇ ಹಂತದ ವಿಶ್ಲೇಷಣೆಯನ್ನು ಪೂರ್ಣಗೊಳಿಸುವುದಕ್ಕಿಂತ ಮುಂಚೆ, ಈ ವ್ಯವಸ್ಥೆಯ ಲಾಭವನ್ನು ಗಮನಿಸುವುದು ಪ್ರಸ್ತುತವಾಗುತ್ತದೆ. ಅದರಲ್ಲೂ ಈ ವ್ಯವಸ್ಥೆ ಪ್ರಾಂತೀಯ ಸರ್ಕಾರಗಳಿಗೆ ಸಾಕಾಗುವಷ್ಟು ಹಣವನ್ನು ತರುತ್ತಿತ್ತೇ ಮತ್ತು ಇದರಿಂದ ಸಾಮ್ರಾಜ್ಯ ಸರ್ಕಾರಕ್ಕೆ ಎಷ್ಟರಮಟ್ಟಿಗೆ ಲಾಭದಾಯಕವಾಗಿತ್ತು ಎನ್ನುವುದರ ಬಗ್ಗೆ ಮಾತನಾಡುವುದು ಬಹಳ ಮುಖ್ಯವಾಗುತ್ತದೆ. ಪ್ರಾಂತೀಯ ಸರ್ಕಾರಕ್ಕೆ ಸಾಕಾಗುವಷ್ಟು ಹಣ ಬರುತ್ತಿತ್ತೇ ಎನ್ನುವ ಪ್ರಶ್ನೆಗೆ ಕೆಳಗಿನ ಪಟ್ಟಿ ಉತ್ತರ ಕೊಡುತ್ತದೆ.

| ಪ್ರಾಂತ್ಯಗಳು | ವಾರ್ಷಿಕ ಅಧಿಕ ಅಥವಾ ಕೊರತೆ | | | | |
|---|---|---|---|---|---|
| | ೧೮೭೭-೭೮ | ೧೮೭೮-೭೯ | ೧೮೭೯-೮೦ | ೧೮೮೦-೮೧ | ೧೮೮೧-೮೨ |
| | £ | £ | £ | £ | £ |
| ಸಿ.ಪಿ. | ೫,೯೯೨ | ೭,೦೪೯ | -೨೮,೧೩೩ | ೨,೯೫೬ | ೬೫,೨೨೧ |
| ಬಂಗಾಳ | ೧೭೩,೩೮೦ | ೧೫೮,೯೩೨ | ೮೨,೫೨೩ | ೧೧,೩೧೩ | ೨೫೫,೧೮೯ |
| ವಾಯವ್ಯ ಪ್ರಾಂತ್ಯಗಳು ಮತ್ತು ಔಧ್ | ೪,೪೬೯ | ೨೩೭,೧೦೦ | ೩೨೦,೭೨೯ | ೨೮೦,೭೯೦ | ೬೬೭,೬೧೩ |
| ಪಂಜಾಬ್ | ೧೮,೫೭೮ | ೪೮,೧೯೫ | ೭,೦೧೭ | ೫೯,೪೯೭ | ೧೩೫,೯೭೯ |
| ಬೊಂಬಾಯಿ | -೬೦೯,೬೭೨ | ೬೧,೨೪೯ | -೧೧,೨೦೧ | ೩೭,೮೫೫ | ೪೧೮,೭೮೩ |

ಮೇಲಿನ ಪಟ್ಟಿಯಿಂದ ಒಂದು ಅಂಶ ಸ್ಪಷ್ಟವಾಗುತ್ತದೆ. ಅದೆಂದರೆ, ಬೊಂಬಾಯಿಯನ್ನು ಬಿಟ್ಟು ಉಳಿದ ಪ್ರಾಂತ್ಯಗಳಿಗೆ ತಾನು ನೀಡುತ್ತಿದ್ದ ಅನುದಾನದಿಂದಾಗಿ ತಮ್ಮ ಆಯವ್ಯಯದಲ್ಲಿ ಸೇರಿಸಲಾದ ಸೇವೆಗಳನ್ನು ಕಾರ್ಯಗತಗೊಳಿಸುವುದಷ್ಟಕ್ಕೆ ಮಾತ್ರವಲ್ಲದೆ, ಎಲ್ಲಾ ಖರ್ಚುಗಳನ್ನೂ ಕಳೆದು ಸಮಾಧಾನಕರವಾದಷ್ಟು ಹಣವನ್ನು ಉಳಿಸುವುದೂ ಪ್ರಾಂತೀಯ ಸರಕಾರಗಳಿಗೆ ಸಾಧ್ಯವಾಗುವಂತೆ ಮಾಡಿರುವುದು ಕಂಡುಬರುತ್ತದೆ. ತಮ್ಮ ಕಾರ್ಯಕ್ರಮಗಳಿಗೆ ಧಕ್ಕೆ ಬಾರದ ರೀತಿಯಲ್ಲಿ ತಮ್ಮ ಉಳಿತಾಯದಿಂದ ೧೮೭೯-೮೦ ಮತ್ತು ೧೯೮೦-೮೧ರಲ್ಲಿ ಸಾಮ್ರಾಜ್ಯ ವ್ಯವಸ್ಥೆಗೆ ಸಹಾಯಮಾಡುವುದು ಪ್ರಾಂತೀಯ ಸರ್ಕಾರಗಳಿಗೆ ಸಾಧ್ಯವಾಯಿತು.

೧೮೭೯ರಲ್ಲಿ ಸಾಮ್ರಾಜ್ಯ ಸರ್ಕಾರದ ಹಣಕಾಸು ಪರಿಸ್ಥಿತಿ ಬಿಗಡಾಯಿಸಿತು. ರೂಪಾಯಿಯ ಮೌಲ್ಯದ ಕುಸಿತ ಮತ್ತು ಆಫಘಾನಿಸ್ತಾನದ ಜೊತೆ ವೈರದಿಂದಾಗಿ ೧೮೭೯-೮೦ರ ಕೊರತೆ ೧,೩೫೫,೦೦೦ ಪೌಂಡ್‌ಗಳಷ್ಟಾಗಬಹುದೆಂದು ಅಂದಾಜು ಮಾಡಲಾಯಿತು. ಕೊರತೆಯನ್ನು ತುಂಬುವ ಮೊದಲನೆಯ ಹೆಜ್ಜೆಯಾಗಿ, ಕೇಂದ್ರ ಸರ್ಕಾರ, ಅನೇಕ ಸ್ಥಳೀಯ ಸರ್ಕಾರಗಳನ್ನು ಆಡಳಿತ ವೆಚ್ಚದಲ್ಲಿ ಸಾಕಷ್ಟು ಮಿತವ್ಯಯವನ್ನು ಸಾಧಿಸುವಂತೆ ಒತ್ತಾಯಿಸಿತು. ಈ ಕಾರಣಕ್ಕೆ ಪ್ರಾಂತೀಯ, ಸ್ಥಳೀಯ ಅಥವಾ ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದ ಎಲ್ಲ ಐಚ್ಛಿಕವಾದ ವೆಚ್ಚವನ್ನೂ ಮುಂದೂಡುವಂತೆ ಅಥವಾ ಕೈಬಿಡುವಂತೆ ಸಾಮ್ರಾಜ್ಯ ಸರ್ಕಾರ ಕೇಳಿಕೊಂಡಿತ್ತು. ಸಂಸ್ಥೆಗಳಿಗೆ ಸಂಬಂಧಿಸಿದ ಹೆಚ್ಚಿನ ವೆಚ್ಚಗಳ ಪ್ರಸ್ತಾವನೆ ಅಥವಾ ಸಂಬಳ ಸಾರಿಗೆಯ ಹೆಚ್ಚಳವನ್ನು ಅತ್ಯಂತ ಅಗತ್ಯವಾದ ಸಂದರ್ಭಗಳನ್ನು ಬಿಟ್ಟು ಉಳಿದಂತೆ ಕೈಬಿಡುವಂತೆ ಕೇಳಿಕೊಳ್ಳಲಾಯಿತು.[೧]

"ಮುಂದಿನ ಕ್ರಮವಾಗಿ ಭಾರತ ಸರ್ಕಾರವು ಸಾಮ್ರಾಜ್ಯ ಅಥವಾ ಪ್ರಾಂತೀಯ ಸರ್ಕಾರದಿಂದ ರೂ. ೨೫೦೦ ಕ್ಕಿಂತ ಹೆಚ್ಚಾಗುವ ಯಾವುದೇ ಕೆಲಸವನ್ನು, ಈ ಹಿಂದೆಯೇ ಒಪ್ಪಿಗೆ ಪಡೆಯಲಾಗಿದ್ದರೂ ಸಹ ಕೈಗೆತ್ತಿಕೊಳ್ಳಬಾರದು."[೨] ಎಂದು ಆಜ್ಞೆಯನ್ನೂ ಮಾಡಿತು.

ಆದಾಯ ತರುವಂತಹ ಸಾರ್ವಜನಿಕ ಕಾಮಗಾರಿಗಳ ಮೇಲಿನ ವೆಚ್ಚಗಳಲ್ಲಿ ಸಹ ಸಾಕಷ್ಟು ಕಡಿತವನ್ನು ಮಾಡಲಾಯಿತು. ವೆಚ್ಚಗಳ ಮೇಲೆ ಇಂತಹ ಕಡಿವಾಣವನ್ನು ಹಾಕಿದರೂ, ಸಾಮ್ರಾಜ್ಯದ ಬಜೆಟ್‌ನಲ್ಲಿ ಸಮತೋಲನವನ್ನು ಸಾಧಿಸುವುದು ಕಷ್ಟ ಎಂದು ಗೊತ್ತಾದಾಗ ಭಾರತ ಸರ್ಕಾರ ಇನ್ನೊಂದು ನೀತಿಯನ್ನು ಅನುಸರಿಸಿತು. ಹೊಸದಾಗಿ ತೆರಿಗೆಗಳನ್ನು ಹಾಕುವುದರ ಬದಲು ಸಾಮ್ರಾಜ್ಯದ ವಶದಲ್ಲಿದ್ದ ಪ್ರಾಂತೀಯ ಶಿಲ್ಕುಗಳಿಂದ, ಹಣವನ್ನು ಬಿಡುಗಡೆ ಮಾಡುವ ಕ್ರಮವನ್ನು ಕೈಗೊಂಡಿತು. ವಾಸ್ತವವಾಗಿ ಪ್ರಾಂತೀಯ ಶಿಲ್ಕು, ಸಾಮ್ರಾಜ್ಯದ ವಶದಲ್ಲಿದ್ದರೂ ಅದು ಪವಿತ್ರವಾದ ಟ್ರಸ್ಟ್ ಮತ್ತು ಪ್ರಾಂತ್ಯಗಳಿಗೆ ಬೇಕಾದಾಗ ಮಾತ್ರ ಅದನ್ನು ಬಿಡುಗಡೆ ಮಾಡಬೇಕೆಂಬ ಒಪ್ಪಂದವಿದ್ದರೂ, ಕೇಂದ್ರ ಸರ್ಕಾರ ಈ ಕ್ರಮವನ್ನು ಕೈಗೊಂಡಿತು. ಕೆಳಗೆ ತೋರಿಸಿರುವ ಪ್ರಮಾಣದಷ್ಟು ಹಣವನ್ನು ಪ್ರಾಂತೀಯ ಶಿಲ್ಕಿನಿಂದ ಬಿಡುಗಡೆ ಮಾಡಲಾಯಿತು.

---

೧. ಹಣಕಾಸು ಇಲಾಖೆಯ ಗೊತ್ತುವಳಿ ಸಂಖ್ಯೆ ೪೦೬೩ ದಿನಾಂಕ: ೯, ೧೮೭೮.

೨. ಹಣಕಾಸು ಇಲಾಖೆಯ ಮೇ: ೧, ೧೮೭೯ರ ಗೊತ್ತುವಳಿ, *ಗೆಜೆಟ್ ಆಫ್ ಇಂಡಿಯಾ*, ಭಾಗ-೯, ಮೇ ೩, ೧೮೭೯ ಪು. ૩೨೯.

| ಪ್ರಾಂತ್ಯಗಳು | ಸಾಮ್ರಾಜ್ಯದ ಸರ್ಕಾರಕ್ಕೆ ಶಿಲ್ಕಿನಿಂದ ಬಿಡುಗಡೆ ಮಾಡಲಾದ ಹಣ (ಲಕ್ಷ ರೂ.ಗಳಲ್ಲಿ) | | |
|---|---|---|---|
| | ೧೮೭೯–೮೦ | ೧೮೮೦–೮೧ | ಒಟ್ಟು |
| ವಾಯವ್ಯ ಪ್ರಾಂತ್ಯಗಳು | ೧೦ | ೧೦ | ೨೦ |
| ವಾಯವ್ಯ ಪ್ರಾಂತ್ಯಗಳು | ೭½ | ೭½ | ೧೫ |
| ಬೊಂಬಾಯಿ | ೪ | ೪ | ೮ |
| ಪಂಜಾಬ್ | ೩ | ೩ | ೬ |
| ಬರ್ಮಾ | ೩ | ೩ | ೬ |
| ಸಿ.ಪಿ. | ೨½ | ೨½ | ೫ |
| ಮದರಾಸು | ೨ | ೨ | ೪ |
| ಅಸ್ಸಾಂ | ೧½ | ೧½ | ೩ |
| ಒಟ್ಟು | ೩೩½ | ೩೩½ | ೬೭ |

ಹೀಗೆ ಪಡೆಯಲಾದ ಹಣವನ್ನು ೧೮೮೨–೮೩ ರಲ್ಲಿ ಹಿಂದಿರುಗಿಸಲಾಯಿತು. ಆದರೆ ತಕ್ಷಣಕ್ಕೆ ಇದು ಸಾಮ್ರಾಜ್ಯ ಖಜಾನೆಗೆ ಲಾಭದಾಯಕವಾಗಿತ್ತು. ಸಾಮ್ರಾಜ್ಯದ ಖಜಾನೆಗೆ ನಿಜವಾದ ಲಾಭವೆಂದರೆ, ಪ್ರಾಂತೀಯ ನಿರ್ವಹಣೆಗೆ ವರ್ಗಾಯಿಸಲಾದ ಬಾಬ್ತುಗಳಿಗೆ ಗೊತ್ತುಮಾಡಲಾಗಿದ್ದ ಹಣದಲ್ಲಿನ ಕಡಿತ. ಪ್ರತಿಯೊಂದು ಪ್ರಾಂತ್ಯಕ್ಕೆ ಹೀಗೆ ಮಾಡಲಾದ ಕಡಿತವನ್ನು ಕೆಳಗೆ ಸಂಕ್ಷಿಪ್ತರೂಪದಲ್ಲಿ ಕೊಡಲಾಗಿದೆ.

| ಪ್ರಾಂತ್ಯ | ಕಡಿತ ರೂ.ನಲ್ಲಿ | |
|---|---|---|
| ವಾಯವ್ಯ ಪ್ರಾಂತ್ಯಗಳು | ೩,೫೪,೦೦೦ | ಒಟ್ಟು ಗೊತ್ತುಮಾಡಲಾದ ಹಣದಲ್ಲಿ ಶೇ.೫ರಷ್ಟು |
| ಔಧ್ | ೭೩,೦೦೦ | ಒಟ್ಟು ಗೊತ್ತುಮಾಡಲಾದ ಹಣದಲ್ಲಿ ಶೇ.೫ರಷ್ಟು |
| ಬಂಗಾಳ | ೫,೯೦,೦೦೦ | ಒಟ್ಟು ಗೊತ್ತುಮಾಡಲಾದ ಹಣದಲ್ಲಿ ಶೇ.೫ರಷ್ಟು |
| ಸಿ.ಪಿ. | ೯೦,೦೦೦ | ಒಟ್ಟು ಗೊತ್ತುಮಾಡಲಾದ ಹಣದಲ್ಲಿ ಶೇ.೫ರಷ್ಟು |
| ಬೊಂಬಾಯಿ | ೭೩,೦೦೦ | ಒಟ್ಟು ಗೊತ್ತುಮಾಡಲಾದ ಹಣದಲ್ಲಿ ಶೇ.೫ರಷ್ಟು |
| ಪಂಜಾಬ್ | ೨,೪೧,೦೦೦ | ಒಟ್ಟು ಗೊತ್ತುಮಾಡಲಾದ ಹಣದಲ್ಲಿ ಶೇ.೫ರಷ್ಟು |

ಸಾಮ್ರಾಜ್ಯ ಸರ್ಕಾರಕ್ಕೆ ಸಿಕ್ಕಿದ ಲಾಭ ಇದಷ್ಟೇ ಅಲ್ಲ. ಇದರ ಜೊತೆಗೆ ಇನ್ನೂ ಎರಡು ರೀತಿಯ ಲಾಭಗಳು ಅದಕ್ಕೆ ದೊರೆತವು. ತಾನು ಪ್ರಾಂತೀಯ ಸರ್ಕಾರಗಳಿಗೆ ವಹಿಸಿದ ಬಾಬ್ತುಗಳಿಂದ ಅವುಗಳಿಗೆ ಎಷ್ಟು ವರಮಾನ ಬರಬಹುದು ಎಂಬುದನ್ನು ಅಂದಾಜು ಮಾಡುವಾಗ, ಆ ವರಮಾನಗಳನ್ನು ಕಡಿಮೆ ಗೊತ್ತುಮಾಡಿತು. ವಾಸ್ತವವಾಗಿ ಹೀಗೆ ಮಾಡುವಾಗ ಹಿಂದಿನ ವರ್ಷಗಳಲ್ಲಿ ಈ ಬಾಬ್ತುಗಳಿಂದ ಎಷ್ಟು ವರಮಾನ ಬರುತ್ತಿತ್ತು ಎಂಬುದನ್ನು ಗಮನಿಸಿ ಮುಂದಿನ ವರಮಾನವನ್ನು ಅಂದಾಜು ಮಾಡಬೇಕಾಗಿತ್ತು. ಹೀಗೆ ಮಾಡದೆ ಕಡಿಮೆ ಮಟ್ಟದಲ್ಲಿ ಅದನ್ನು ಗೊತ್ತುಮಾಡಿ, ತಾನು ಪ್ರಾಂತ್ಯ ಸರ್ಕಾರಗಳಿಗೆ ಈ ಬಗ್ಗೆ

ಕೊಡಬೇಕಾದ ಹಣವನ್ನು ಕಡಿಮೆ ಮಾಡಿಕೊಂಡಿತು. ಇದರಿಂದ ಸಾಮ್ರಾಜ್ಯ ಸರ್ಕಾರಕ್ಕೆ ನೇರವಾದ ಲಾಭ ಉಂಟಾಯಿತು. ಪ್ರಾಂತ್ಯಗಳಿಗೆ ಗೊತ್ತುಮಾಡಲಾದ ವರಮಾನಕ್ಕಿಂತ ಅಧಿಕ ವರಮಾನ ಬಂದರೆ, ಆ ಅಧಿಕ ಹಣವನ್ನು ಸಾಮ್ರಾಜ್ಯಶಾಹಿ ಸರ್ಕಾರ ಪ್ರಾಂತೀಯ ಸರ್ಕಾರಗಳಿಗೆ ಕೊಡಬೇಕಾಗಿಲ್ಲವೆಂಬ ನಿಬಂಧನೆಯನ್ನು ಸಹ ಮಾಡಿಕೊಳ್ಳಲಾಗಿದ್ದುದರಿಂದ ಸಹ ಕೇಂದ್ರ ಸರ್ಕಾರಕ್ಕೆ ಲಾಭವಾಯಿತು. ಆದರೆ ಇದೇ ನಿಬಂಧನೆಯ ಪ್ರಕಾರ, ಒಂದು ಪಕ್ಷ ಪ್ರಾಂತ್ಯ ಸರ್ಕಾರಕ್ಕೆ ನಿರೀಕ್ಷಿತ ವರಮಾನಕ್ಕಿಂತ ಕಡಿಮೆ ವರಮಾನ ಬಂದರೆ ಅದನ್ನು ತುಂಬಿಕೊಡಬೇಕಾಗಿತ್ತು. ಸಂಕ್ಷಿಪ್ತವಾಗಿ ಇವೆರಡೂ ಮಾರ್ಗಗಳಿಂದ ನಿಖರವಾಗಿ ಎಷ್ಟು ಲಾಭವಾಯಿತು ಎನ್ನುವುದನ್ನು ಅಂದಾಜು ಮಾಡುವುದು ಕಷ್ಟ. ಆದರೆ ಸಾಮ್ರಾಜ್ಯ ಸರ್ಕಾರ ಈ ಕ್ರಮಗಳಿಂದ ಗಣನೀಯ ಪ್ರಮಾಣದ ಪ್ರಯೋಜನ ಪಡೆಯಿತು ಎಂದು ಮಾತ್ರ ಹೇಳಬಹುದು.

ಒಟ್ಟಿನಲ್ಲಿ ಪ್ರಾಂತೀಯ ಸರ್ಕಾರಗಳಿಗೆ ವರಮಾನ ಮೂಲವನ್ನು ಕೊಡುವ ಕೇಂದ್ರ ಸರ್ಕಾರದ ವ್ಯವಸ್ಥೆ ಯಶಸ್ವಿಯಾಯಿತೆಂದು ಹೇಳಬಹುದು. ಹೀಗಾಗಿ ಸಾಮ್ರಾಜ್ಯ ಸರ್ಕಾರ ಮತ್ತು ಪ್ರಾಂತೀಯ ಸರ್ಕಾರಗಳೆರಡೂ ಈ ವ್ಯವಸ್ಥೆಯನ್ನು ಒಪ್ಪಿಕೊಂಡವು. ಈ ಬಗ್ಗೆ ಇನ್ನೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳುವ ತೀರ್ಮಾನವನ್ನು ಈ ಸರ್ಕಾರಗಳು ಹಮ್ಮಿಕೊಂಡವು. ಇದು ಪ್ರಾಂತೀಯ ಬಜೆಟ್‌ನ ಮೂರನೆಯ ಹಂತವಾಗಿತ್ತು.

# ಅಧ್ಯಾಯ ೬

## ಆದಾಯ ಹಂಚಿಕೆಯ ಮುಂಗಡ ಪತ್ರ
### ೧೮೮೨-೮೩ರಿಂದ ೧೯೨೦-೨೧ರವರೆಗೆ

ಪ್ರಾಂತೀಯ ಮುಂಗಡ ಪತ್ರವನ್ನು ವಿಸ್ತರಿಸುವ ಪ್ರತಿ ಹೆಜ್ಜೆಯಲ್ಲೂ ಒಂದು ಪ್ರಶ್ನೆ ಎದುರಾಗುತ್ತಿತ್ತು. ಅದೇಂದರೆ, ಬಜೆಟ್‌ನ ಆದಾಯ ಮತ್ತು ವೆಚ್ಚ ಬಾಬ್ತುಗಳನ್ನು ಪರಸ್ಪರ ಸರಿದೂಗಿಸುವುದು ಹೇಗೆ ಎನ್ನುವುದು. ಪ್ರಾಂತೀಯ ಬಜೆಟ್‌ನ ವಿಕಾಸದ ಹಾದಿಯಲ್ಲಿ ೧೮೭೧ ಮತ್ತು ೧೮೭೭ರಲ್ಲಿ ತೆಗೆದುಕೊಳ್ಳಲಾದ ಎರಡು ಕ್ರಮಗಳು ಈ ದೃಷ್ಟಿಯಿಂದ ಬಹಳ ಮುಖ್ಯವಾದವು. ಈ ಹಿಂದೆ, ಮೊದಲಿಗೆ ಸಾಮ್ರಾಜ್ಯ ಸರ್ಕಾರ ಪ್ರಾಂತೀಯ ಸರ್ಕಾರಗಳಿಗೆ ನಿರ್ದಿಷ್ಟ ಮೊತ್ತದ ಹಣವನ್ನು ಕೊಡುತ್ತಿತ್ತು. ಸ್ವಲ್ಪ ಸಮಯದ ನಂತರ ಈ ರೀತಿಯ ಹಣವನ್ನು ನೀಡುವುದರ ಬದಲು, ಆದಾಯ ಬರುವ ಕೆಲವು ಮೂಲಗಳನ್ನು ಪ್ರಾಂತೀಯ ಸರ್ಕಾರಕ್ಕೆ ಗೊತ್ತುಮಾಡುವ ವಿಧಾನವನ್ನು ಅನುಸರಿಸಲಾಯಿತು. ೧೮೭೧–೭೨ರ ವಿಧಾನಕ್ಕೆ ಹೋಲಿಸಿದಂತೆ, ವರಮಾನ ಮೂಲಗಳನ್ನು ವಹಿಸಿಕೊಡುವ ವಿಧಾನ ಪ್ರಾಂತೀಯ ಬಜೆಟ್‌ನ ಕೆಲವು ದೋಷಗಳನ್ನು ಹೋಗಲಾಡಿಸಲು ಶಕ್ತವಾಯಿತು. ಏಕೆಂದರೆ ಮೊದಲಿನ ಕ್ರಮದಿಂದ ತಮಗೆ ನಿಗದಿಯಾಗಿ ಬರುವ ಮೊತ್ತದಿಂದ ಪ್ರಾಂತೀಯ ಸರ್ಕಾರಗಳಿಗೆ ಯಾವುದೇ ವಿಸ್ತೃತ ಕಾರ್ಯಕ್ರಮಗಳನ್ನು ಕೈಗೆತ್ತಿಕೊಳ್ಳುವುದಕ್ಕಾಗುತ್ತಿರಲಿಲ್ಲ. ನಿಗದಿಯಾದ ಮೊತ್ತಕ್ಕೆ ಸ್ಥಿತಿಸ್ಥಾಪಕತ್ವ ಇಲ್ಲದಿದ್ದುದು ಒಂದು ದೌರ್ಬಲ್ಯ; ಆದರೆ ವರಮಾನ ಮೂಲಗಳನ್ನೇ ವಹಿಸಿಕೊಟ್ಟಾಗ, ವರಮಾನಕ್ಕೆ ಸ್ಥಿತಿಸ್ಥಾಪಕತ್ವ ದೊರೆಯಿತು. ಆದರೆ ಈ ರೀತಿಯ ಸ್ಥಿತಿಸ್ಥಾಪಕತ್ವವಿದ್ದರೂ ಸಹ ೧೮೭೭ರ ಕ್ರಮವನ್ನು ಮದರಾಸು ಸರ್ಕಾರ ತಿರಸ್ಕರಿಸಿ ೧೮೭೧ರ ಪದ್ಧತಿಯನ್ನೇ ಅನುಸರಿಸಿತು. ಅದು ೧೮೭೭ರ ವಿಸ್ತೃತ ಕ್ರಮವನ್ನು ಅಷ್ಟಾಂಗೆ ವಿಸ್ತರಿಸಲಿಲ್ಲ. ೧೯೭೯ರಲ್ಲಿ ಮಾತ್ರ ಬರ್ಮಾಕ್ಕೆ ಈ ಪದ್ಧತಿಯನ್ನು ಅನುಸರಿಸಲು ಕೇಳಲಾಯಿತು. ಈ ಅವಧಿಯಲ್ಲಿ ಈ ಕ್ರಮವನ್ನು ಅನುಸರಿಸಿದ್ದ ಪ್ರಾಂತ್ಯಗಳಲ್ಲಿ ಮಿತವ್ಯಯ ಮತ್ತು ದಕ್ಷ ನಿರ್ವಹಣೆಯನ್ನು ಸಾಧಿಸಲಾಗಿತ್ತು. ಬರ್ಮಾಕ್ಕೆ ಸಂಬಂಧಿಸಿದಂತೆ, ಪ್ರಾಂತೀಯ ಹಣಕಾಸು ವ್ಯವಸ್ಥೆ ಜಾರಿಗೆ ಬಂದ ಹಿಂದಿನ ೭ ವರ್ಷಗಳಲ್ಲಿ ವೆಚ್ಚ ರೂ. ೧,೯೮,೪೫,೯೭೦ಗಳಾಗಿತ್ತು. ಮುಂದಿನ ಏಳು ವರ್ಷಗಳಲ್ಲಿ, ವಿಶೇಷ ಕೊಡುಗೆಗಳನ್ನು ಬಿಟ್ಟು ಹಂಚಿಕೆಯು ರೂ. ೨,೨೦,೨೨,೭೭೦ ಆಗಿತ್ತು. ಇದರಿಂದ ರೂ. ೨೧,೭೬,೮೦೦ ಹೆಚ್ಚುವರಿ ಉಂಟಾಗಿತ್ತು. ಅಂದರೆ ಪ್ರತಿ ವರ್ಷದ ಸರಾಸರಿ ಅಧಿಕ್ಯ ೩ ಲಕ್ಷ ರೂಪಾಯಿಗಳಾಗಿದ್ದವು. ಇದೇ ಅವಧಿಯಲ್ಲಿನ ವೆಚ್ಚ ರೂ. ೨,೪೦,೭೭,೮೮೫ ಆಗಿತ್ತು. ನಿವ್ವಳ ಹೆಚ್ಚುವರಿ ರೂ. ೪೨,೩೧,೯೧೫ ಆಗಿದ್ದು, ವಾರ್ಷಿಕ ಸರಾಸರಿ ೬ ಲಕ್ಷ ರೂ.ಗಳಾಗಿತ್ತು. ಅಧಿಕ ಕೊಡುಗೆ ೩ ಲಕ್ಷ ರೂಪಾಯಿ ಮತ್ತು ಅಧಿಕ ವೆಚ್ಚ ೬ ಲಕ್ಷ ರೂಪಾಯಿಗಳ ನಡುವಣ ವ್ಯತ್ಯಾಸವನ್ನು ಸಾಮ್ರಾಜ್ಯ ಸರ್ಕಾರ ತುಂಬಿಕೊಡಬೇಕಾಗಿತ್ತು. ಅಂದರೆ ಪ್ರಾಂತ್ಯದ ಹಣಕಾಸು ದೃಢತೆಯನ್ನು ಕಾಪಾಡಿಕೊಳ್ಳಲು ಸಾಮ್ರಾಜ್ಯ ಸರ್ಕಾರ ಪ್ರತಿವರ್ಷ ೨ ೩/೪ ಲಕ್ಷ ರೂ.ಗಳ ವಿಶೇಷ ಅನುದಾನವನ್ನು ಕೊಡಬೇಕಾಗಿತ್ತು.[೧] ಭಾರತ ಸರ್ಕಾರ ಇಂತಹ ಪೂರಕ ಅನುದಾನವನ್ನು ಕೊಟ್ಟರೂ ಸಹ ಅದಕ್ಕೆ ಅಂತಹ

---

೧. ಹಣಕಾಸು ಇಲಾಖೆಯ ಗೊತ್ತುವಳಿ ಸಂಖ್ಯೆ ೧೪೮೮, ದಿನಾಂಕ ಮಾರ್ಚ್ ೨೬, ೧೮೭೯, ಪ್ಯಾರಾ ೨೨

ಕೊಡುಗೆ ಯಾವ ರೀತಿಯ ನೈತಿಕ ದುಷ್ಪರಿಣಾಮವನ್ನುಂಟುಮಾಡಬಹುದು ಎನ್ನುವುದರ ಅರಿವಿತ್ತು. ವಾಸ್ತವವಾಗಿ ಬರ್ಮಾಕ್ಕೆ ೨೨½ ಲಕ್ಷ ರೂಪಾಯಿ ವರಮಾನ ಬರುವಂತಹ ಮೂಲಗಳನ್ನು ವಹಿಸಿಕೊಟ್ಟಿದ್ದರೆ ಬಹಳ ಒಳ್ಳೆಯದಿತ್ತೆಂಬುದನ್ನು ಸರ್ಕಾರ ಮನಗಂಡಿತ್ತು. ಹೀಗೆ ಮಾಡಿದ್ದರೆ, ಮಿತವ್ಯಯ ಮತ್ತು ಉತ್ತಮ ಹಣಕಾಸು ನಿರ್ವಹಣೆ ಸಾಧ್ಯವಿರುತ್ತಿತ್ತು. ಬರ್ಮಾದ ಅನುಭವ, ಕೇಂದ್ರ ಸರ್ಕಾರಕ್ಕೆ ನಿಶ್ಚಿತ ಅನುದಾನವನ್ನು ಕೊಡುವುದರಲ್ಲಿರುವ ದೌರ್ಬಲ್ಯಗಳನ್ನು ಚೆನ್ನಾಗಿ ಪರಿಚಯಿಸಿತ್ತು. ಪ್ರಾಂತೀಯ ಹಣಕಾಸು ವ್ಯವಸ್ಥೆ ಯಶಸ್ಸನ್ನು ಸಾಧಿಸಬೇಕಾದರೆ ಸ್ಥಿತಿಸ್ಥಾಪಕತ್ವ ಅತ್ಯಂತ ಮುಖ್ಯವಾದ ಅಂಶವೆಂಬುದನ್ನು ಸರ್ಕಾರ ಮನಗಂಡಿತ್ತು. ಹೀಗಾಗಿ ವರಮಾನ ಮೂಲಗಳನ್ನು ಬರ್ಮಾಕ್ಕೆ ವಹಿಸಿಕೊಡುವುದು ಅನಿವಾರ್ಯವಾಗಿತ್ತು. ಪ್ರಾಂತ್ಯದ ಹೆಚ್ಚುತ್ತಿದ್ದ ಆವಶ್ಯಕತೆಗಳು, ಪೂರೈಕೆ ಮತ್ತು ಸಾಮ್ರಾಜ್ಯ ಸರ್ಕಾರಕ್ಕೆ ಈ ಪ್ರಾಂತ್ಯ ಅತ್ಯಂತ ಹೆಚ್ಚಿನ ಆಧಿಕ್ಯವನ್ನು ಕೊಡುತ್ತದೆ ಎನ್ನುವ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬರ್ಮಾ "ಇಲ್ಲಿಯವರೆಗೆ ದೊರೆಯುತ್ತಿರುವುದಕ್ಕಿಂತ ಹೆಚ್ಚು ಮುಕ್ತವಾಗಿ ತನ್ನ ಬಯಕೆಗಳನ್ನು ಪೂರೈಸಿಕೊಳ್ಳಲು ಅರ್ಹವಾಗಿದೆ[೧] ಎನ್ನುವ ತೀರ್ಮಾನಕ್ಕೆ ಕೇಂದ್ರ ಸರ್ಕಾರ ಬಂದಿತು. ಹೀಗೆ ಬರ್ಮಾಕ್ಕೆ ಹೆಚ್ಚು ಮುಕ್ತವಾಗಿ ಹಣವನ್ನು ಕೊಡುವುದರ ಉದ್ದೇಶದಿಂದಾಗಿ ಪ್ರಾಂತ್ಯಗಳಿಗೆ ಹಣವನ್ನು ಒದಗಿಸುವ ಬಗ್ಗೆ ಹೊಸ ವಿಧಾನವನ್ನು ಅನುಸರಿಸಲಾಯಿತು. ೧೮೭೭–೭೮ರಲ್ಲಿ ಐದು ಪ್ರಾಂತ್ಯಗಳೊಡನೆ ಮಾಡಿಕೊಂಡ ಒಪ್ಪಂದದ ಪ್ರಕಾರ – ಮಧ್ಯ ಪ್ರಾಂತ್ಯಗಳು, ವಾಯವ್ಯ ಪ್ರಾಂತ್ಯಗಳು ಮತ್ತು ಔಧ್, ಪಂಜಾಬ್, ಬೊಂಬಾಯಿ ಮತ್ತು ಬಂಗಾಳ–ಭಾರತದ ಬಜೆಟ್ ಒಳಗೊಂಡಿದ್ದ, ಆದಾಯ ಮತ್ತ ವೆಚ್ಚ ಬಾಬ್ತುಗಳನ್ನು ಎರಡು ಸ್ಪಷ್ಟ ವರ್ಗಗಳಲ್ಲಿ ವಿಭಜಿಸಲಾಯಿತು; ಅವುಗಳೆಂದರೆ ೧) ಸಂಪೂರ್ಣವಾಗಿ ಸಾಮ್ರಾಜ್ಯ ಮತ್ತು ೨) ಸಂಪೂರ್ಣವಾಗಿ ಪ್ರಾಂತೀಯ. ಆದರೆ ಬಂಗಾಳದ ವಿಷಯದಲ್ಲಿ ಇವುಗಳನ್ನು ಮೂರು ವರ್ಗಗಳಲ್ಲಿ ವಿಂಗಡಿಸಲಾಯಿತು. ೧) ಸಂಪೂರ್ಣವಾಗಿ ಸಾಮ್ರಾಜ್ಯ, ೨) ಸಂಪೂರ್ಣವಾಗಿ ಪ್ರಾಂತೀಯ ಮತ್ತು ೩) ಜಂಟಿಯಾಗಿ ಸಾಮ್ರಾಜ್ಯ ಮತ್ತು ಪ್ರಾಂತೀಯ.[೨] ಸಾಮ್ರಾಜ್ಯ ಅಥವಾ ಪ್ರಾಂತೀಯ ಸರ್ಕಾರಗಳ ಆದಾಯ ಮತ್ತು ವೆಚ್ಚದ ಬಾಬ್ತುಗಳು ಇತರ ಪ್ರಾಂತ್ಯಗಳಿಗೆ ಸಂಬಂಧಿಸಿದ ವಿಂಗಡನೆಯಿಂದ ಭಿನ್ನವೇನಾಗಿರಲಿಲ್ಲ. ಕೇವಲ ಮೂರನೇ ವರ್ಗಕ್ಕೆ ಸೇರಿದ ಸಾಮ್ರಾಜ್ಯ ಮತ್ತು ಪ್ರಾಂತೀಯ ಜಂಟಿ ಲೆಕ್ಕದ ಬಾಬ್ತುಗಳು ಮಾತ್ರ ವಿಭಿನ್ನವಾಗಿದ್ದವು ಅಷ್ಟೆ. ಕೆಲವು ಬಾಬ್ತುಗಳನ್ನು ಉಳಿದ ಬಾಬ್ತುಗಳಿಂದ ಬೇರ್ಪಡಿಸಲಾಗಿದ್ದು, ಸಾಮ್ರಾಜ್ಯ ಮತ್ತು ಪ್ರಾಂತೀಯ ಜಂಟಿ ಬಾಬ್ತುಗಳಾಗಿ ವಿಂಗಡಿಸಲಾಯಿತು. ಹೀಗೆ ವಿಂಗಡನೆಮಾಡುವಾಗ, ಆದಾಯ ಮತ್ತು ಖರ್ಚನ್ನು ಹಂಚಿಕೊಳ್ಳಲು ಒಂದು ನಿರ್ದಿಷ್ಟ ಅನುಪಾತವನ್ನು ಅನುಸರಿಸಲಾಯಿತು. ಪ್ರಾಂತೀಯ ವರಮಾನಕ್ಕೆ ಸ್ಥಿತಿಸ್ಥಾಪಕತ್ವವನ್ನು ದೊರಕಿಸಿಕೊಡುವ ಉದ್ದೇಶ ಬಹಳ ಮುಖ್ಯವಾಗಿತ್ತು. ಬೇರೆ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ, ನಿರ್ದಿಷ್ಟ ಮೊತ್ತದ ಅನುದಾನವನ್ನು ದೊರಕಿಸಿಕೊಡುವ ಪದ್ಧತಿಯನ್ನು ಕೈಬಿಟ್ಟು, ಅದರ ಸ್ಥಾನದಲ್ಲಿ ವರಮಾನ ಮೂಲವನ್ನು ವಹಿಸಿಕೊಡುವ ವ್ಯವಸ್ಥೆಯನ್ನು ಅನುಸರಿಸಲಾದುದರ ಉದ್ದೇಶ ಸಹ ವರಮಾನದಲ್ಲಿ ಸ್ಥಿತಿಸ್ಥಾಪಕತ್ವವನ್ನು ದೊರಕಿಸಿಕೊಡುವುದೇ ಆಗಿತ್ತು. ಆದರೆ ಪ್ರಾಂತೀಯ ಸರ್ಕಾರಕ್ಕೆ ಕೇಂದ್ರದಿಂದ ಬರುತ್ತಿದ್ದ ನಿರ್ದಿಷ್ಟ ಅನುದಾನದ ವಿಷಯಕ್ಕೆ ಸಂಬಂಧಿಸಿದಂತೆ ಸ್ಥಿತಿಸ್ಥಾಪಕರಹಿತತ್ವ ಮುಂದುವರಿದೇ ಇತ್ತು. ಆದರೆ ಬರ್ಮಾದ ವಿಷಯದಲ್ಲಿ, ನಿರ್ದಿಷ್ಟ ಕೊಡುಗೆಗಳ ಸ್ಥಾನದಲ್ಲಿ ವರಮಾನಮೂಲಗಳನ್ನು ವಹಿಸಿಕೊಟ್ಟಿದ್ದು, ವರಮಾನದ ದೃಷ್ಟಿಯಿಂದ ಆ ಪ್ರಾಂತ್ಯಕ್ಕೆ ಅತ್ಯಂತ

---

೧. ಹಣಕಾಸು ಇಲಾಖೆಯ ಗೊತ್ತುವಳಿ ಸಂಖ್ಯೆ ೧೪೮೮, ದಿನಾಂಕ ಮಾರ್ಚ ೨೬, ೧೮೭೯, ಪ್ಯಾರಾ ೨೨

೨. ಹಣಕಾಸು ವಿವರಣಾ ಪತ್ರ ೧೮೭೯–೮೦ ಪ್ಯಾರಾ ೨೪

ಹೆಚ್ಚಿನ ಸ್ಥಿತಿಸ್ಥಾಪಕತ್ವವನ್ನು ದೊರಕಿಸಿಕೊಟ್ಟಿತು. ಈ ರೀತಿಯ ಸ್ಥಿತಿಸ್ಥಾಪಕತ್ವವಿಲ್ಲದಿದ್ದರೆ ವೇಗವಾಗಿ ಬೆಳೆಯುತ್ತಿದ್ದ ಖರ್ಚನ್ನು ಸರಿದೂಗಿಸುವುದು ಬರ್ಮಾಕ್ಕೆ ಬಹಳ ಕಷ್ಟವಾಗುತ್ತಿತ್ತು.

ಆದಾಯವನ್ನು ಹಂಚಿಕೊಳ್ಳುವ ತತ್ವದ ಆಧಾರದ ಮೇಲೆ ಬರ್ಮಾದ ಬಜೆಟ್ಟನ್ನು ಮರು ರೂಪಿಸುವಾಗ, ಕೆಳಗಿನ ಬಾಬ್ತುಗಳನ್ನು ಬಿಟ್ಟು, ಉಳಿದವನ್ನು ಸಂಪೂರ್ಣವಾಗಿ ಸಾಮ್ರಾಜ್ಯ ಸರ್ಕಾರದ್ದೆಂದು ಪರಿಗಣಿಸಲಾಯಿತು.

| | | |
|---|---|---|
| ೧. | ಸೈನ್ಯ | ಆದಾಯ ಮತ್ತು ವೆಚ್ಚ |
| ೨. | ಅಂಚೆ ಕಚೇರಿ | ಆದಾಯ ಮತ್ತು ವೆಚ್ಚ |
| ೩. | ಟೆಲಿಗ್ರಾಫ್ | ಆದಾಯ ಮತ್ತು ವೆಚ್ಚ |
| ೪. | ಲೆಕ್ಕಪತ್ರ ಇಲಾಖೆ | ಆದಾಯ ಮತ್ತು ವೆಚ್ಚ |
| ೫. | ವಾಯುಮಾಪನ ಇಲಾಖೆ | ಆದಾಯ ಮತ್ತು ವೆಚ್ಚ |
| ೬. | ರಾಜಕೀಯ | ಆದಾಯ ಮತ್ತು ವೆಚ್ಚ |
| ೭. | ಆಭರಣಗಳ ಸಂದಾಯ<br>ಹುಂಡಿಯ ಮೇಲಿನ ಪ್ರೀಮಿಯಮ್ | ಆದಾಯ ಮತ್ತು ವೆಚ್ಚ |

ಜಂಟಿಯಾಗಿ ಸಾಮ್ರಾಜ್ಯ ಮತ್ತು ಪ್ರಾಂತೀಯ ಆದಾಯ ಮತ್ತು ವೆಚ್ಚಗಳು ಮೂರನೆಯ ವರ್ಗಕ್ಕೆ ಸೇರಿದ್ದು ಅವು ಕೆಳಗಿನ ಬಾಬ್ತುಗಳನ್ನು ಹೊಂದಿದ್ದವು.

೧. ಮೀನುಗಾರಿಕೆ, ಭೂಕಂದಾಯ ಮರುಪಾವತಿಗಳು, ಸಂಗ್ರಹಣೆ ಮತ್ತು ಸೆಟಲ್‌ಮೆಂಟ್ ಚಾರ್ಜುಗಳನ್ನು ಬಿಟ್ಟು ಕಾರ್ಪೊರೇಷನ್ ತೆರಿಗೆಯನ್ನು ಒಳಗೊಂಡಂತೆ ಭೂ ಕಂದಾಯ ಆದರೆ,

೨. ಅರಣ್ಯ ಇಲಾಖೆಯ ಆದಾಯಗಳು, ಖರ್ಚು ಮತ್ತು ಮರುಪಾವತಿಗಳು.

೩. ಭತ್ತದ ಮೇಲೆ ರಫ್ತು ಸುಂಕ ಮತ್ತು ಮರುಪಾವತಿಗಳು.

೪. ಉಪ್ಪಿನಿಂದ ಬರುವ ವರಮಾನ, ವೆಚ್ಚ ಮತ್ತು ಮರುಪಾವತಿಗಳು.

ಮೂರನೆಯ ಗುಂಪಿಗೆ ಸೇರಿದ ಬಾಬ್ತುಗಳ ಆದಾಯವನ್ನು ಸಾಮ್ರಾಜ್ಯ ಮತ್ತು ಪ್ರಾಂತ್ಯಗಳ ನಡುವೆ ಹಂಚಲಾಯಿತು. ಹಂಚಿಕೆಯ ಅನುಪಾತ ಅನುಕ್ರಮವಾಗಿ ೫/೬ ಮತ್ತು ೧/೬ ಆಗಿತ್ತು. ಈ ವಿಧಾನವನ್ನು ಅನುಸರಿಸಿದುದು ಬರ್ಮಾದ ವರಮಾನಕ್ಕೆ ಅತ್ಯಂತ ಹೆಚ್ಚಿನ ಸ್ಥಿತಿಸ್ಥಾಪಕತ್ವವನ್ನು ತಂದುಕೊಟ್ಟಿತು. ಏಕೆಂದರೆ, ಹಿಸ್ಸೆಯ ಅನುಪಾತ ನಿಶ್ಚಿತ ಸ್ವರೂಪದ್ದಾಗಿ ಮುಂದುವರಿದರೂ, ಪ್ರತಿವರ್ಷ ವಹಿಸಿಕೊಡಲಾದ ಬಾಬ್ತುಗಳಿಂದ ಬರುತ್ತಿದ್ದ ಒಟ್ಟು ವರಮಾನ ವ್ಯತ್ಯಾಸವಾಗುತ್ತಿದ್ದು ಹಂಚಿಕೊಳ್ಳಬೇಕಾದ ಹಣದ ಪ್ರಮಾಣದಲ್ಲಿ ಸಹ ವ್ಯತ್ಯಾಸಕ್ಕೆ ಅವಕಾಶವಿತ್ತು. ಬರ್ಮಾಕ್ಕೆ ಎಷ್ಟು ಹೆಚ್ಚು ಹಣ ದೊರೆಯುತ್ತಿತ್ತು? ಈ ಸ್ಥಿತಿಸ್ಥಾಪಕತ್ವದ ಪ್ರಯೋಜನ ಅದಕ್ಕೆ ಎಷ್ಟರಮಟ್ಟಿಗೆ ಆಗುತ್ತಿತ್ತು ಎನ್ನುವುದು ಆ ಪ್ರಾಂತ್ಯ ತನಗೆ ವಹಿಸಿಕೊಡಲಾಗಿದ್ದ ವರಮಾನ ಬಾಬ್ತುಗಳಿಂದ ಹೇಗೆ ವರಮಾನವನ್ನು ರೂಢಿಸುತ್ತಿತ್ತು ಮತ್ತು ಹೇಗೆ ಅವುಗಳನ್ನು ನಿಯಂತ್ರಿಸುತ್ತಿತ್ತು ಎನ್ನುವುದನ್ನು ಅವಲಂಬಿಸಿತ್ತು. ಆ ಪ್ರಾಂತ್ಯ ಈ ವಿಷಯದಲ್ಲಿ ವಿಚಕ್ಷಣೆಯನ್ನು ತೋರಿದಷ್ಟೂ, ಇದರಿಂದ ಬರುತ್ತಿದ್ದ ಲಾಭ ಹೆಚ್ಚಾಗುತ್ತಿತ್ತು.

ಅಸ್ಸಾಂ ವಿಷಯದಲ್ಲಿಯೂ ಸಹ, ಬರ್ಮಾದ ರೀತಿಯ ವರಮಾನ ಹಂಚಿಕೆ ತತ್ವವನ್ನು ಅನುಸರಿಸಲಾಯಿತು. ಆ ಪ್ರಾಂತ್ಯ ಇದುವರೆಗೆ ೧೮೭೧ರ ಹಳೆಯ ಪದ್ಧತಿಯಲ್ಲೇ ಮುಂದುವರಿದಿತ್ತು. ಬರ್ಮಾದ ನಂತರ ಅಸ್ಸಾಂನೊಡನೆ ವರಮಾನ ಹಂಚಿಕೆಯ ಒಪ್ಪಂದವನ್ನು ಮಾಡಿಕೊಳ್ಳಲಾದರೂ, ಈ ಪ್ರಾಂತ್ಯದಲ್ಲಿ ಹೇಳಿಕೊಳ್ಳಬಹುದಾದಷ್ಟು ವಿಸ್ತೃತ ರೂಪದಲ್ಲಿ ವರಮಾನ ಹಂಚಿಕೆಯ ತತ್ವವನ್ನು ಬಜೆಟ್ ಸಮತೋಲನಕ್ಕಾಗಿ ಅನುಸರಿಸಲಾಗಲಿಲ್ಲ. ಇದರ ಜವಾಬ್ದಾರಿಯನ್ನು ನಾವು ಭಾರತ ಸರ್ಕಾರಕ್ಕೆ ವಹಿಸುವುದಕ್ಕಾಗುವುದಿಲ್ಲ. ಅಗತ್ಯತೆಯಿಂದಾಗಿಯೇ ಹೀಗಾಯಿತು ಎಂದು ಹೇಳಬಹುದು. ಅಸ್ಸಾಂ ಪ್ರಾಂತ್ಯವನ್ನು ಬಂಗಾಳದೊಡನೆ ಪುನರ್ವಿಲೀನೀಕರಣ ಮಾಡುವ ಉದ್ದೇಶವಿದ್ದುದರಿಂದ ಅಸ್ಸಾಂ ಪ್ರಾಂತ್ಯದ ಮುಂಗಡ ಪತ್ರವನ್ನು ಬಂಗಾಳ ಪ್ರಾಂತ್ಯದ ಮಾದರಿಯಲ್ಲೇ ರೂಪಿಸಲಾಯಿತು. ಇದರ ಉದ್ದೇಶ ಆಡಳಿತ ವಿಲೀನೀಕರಣದಷ್ಟೇ ಹಣಕಾಸು ವಿಲೀನೀಕರಣವೂ ಆಗಬೇಕೆಂಬುದು. ಹೀಗಾಗಿ ೧೮೭೭ರಿಂದ ಬಂಗಾಳ ಪ್ರಾಂತ್ಯದ ಆದಾಯ ಹಾಗೂ ವೆಚ್ಚದ ಬಾಬ್ತುಗಳನ್ನೇ ಅಸ್ಸಾಂ ಬಜೆಟ್‌ನಲ್ಲೂ ಸಹ ಆದಾಯ–ವೆಚ್ಚ ಬಾಬ್ತುಗಳಾಗಿ ತೋರಿಸಲಾಯಿತು. ಇದು ಬಂಗಾಳದಲ್ಲಿ ತಾತ್ಕಾಲಿಕವಾಗಿ ಸಾಮ್ರಾಜ್ಯದ್ದೆಂದೇ ಪರಿಗಣಿತವಾಗಿದ್ದ ಲಾ ಆಫೀಸಸ್ ಬಾಬ್ತನ್ನೂ ಒಳಗೊಂಡಿತ್ತು. ಹೊಸ ತತ್ವವನ್ನು ಅನ್ವಯಿಸಲಾದ ಒಂದೇ ಒಂದು ಬಾಬ್ತೆಂದರೆ ಭೂ ಕಂದಾಯ. ಅಸ್ಸಾಂನಲ್ಲಿ ಇದನ್ನು ಜಂಟಿ ಬಾಬ್ತಾಗಿ ಪರಿಗಣಿಸಲಾಯಿತು. ಈ ಬಾಬತ್ತಿನ ವರಮಾನವನ್ನು ಸಾಮ್ರಾಜ್ಯ ಹಾಗೂ ಪ್ರಾಂತ್ಯ ಅನುಕ್ರಮವಾಗಿ ೩/೪ ಮತ್ತು ೧/೪ರ ಅನುಪಾತದಲ್ಲಿ ಪರಸ್ಪರ ಹಂಚಿಕೊಳ್ಳಬೇಕಾಗಿತ್ತು.[೧]

ಹೊಸ ಒಪ್ಪಂದದ ಲಾಭದಾಯಕ ಪರಿಣಾಮವನ್ನು ಕೆಳಗಿನ ಪಟ್ಟಿಯಿಂದ ಗಮನಿಸಬಹುದು. ಈ ಪಟ್ಟಿಯನ್ನು, ಇವೆರಡೂ ಪ್ರಾಂತ್ಯಗಳ ಬಜೆಟ್ ಅಂದಾಜುಗಳನ್ನು ಹಳೆಯ ಹಾಗೂ ಹೊಸ ವಿಧಾನಗಳನ್ನು ಅನುಸರಿಸಿಕೊಡಲಾಗಿದೆ:–

**(೦೦೦ಗಳನ್ನು ಬಿಡಲಾಗಿದೆ)**

| | ಅಸ್ಸಾಂ ಬಜೆಟ್ ಅಂದಾಜು | | | | ಬರ್ಮಾ ಬಜೆಟ್ ಅಂದಾಜು | | | |
|---|---|---|---|---|---|---|---|---|
| | ಹಳೆಯ ಪದ್ಧತಿ ಪ್ರಕಾರ | | ಹೊಸ ಪದ್ಧತಿ ಪ್ರಕಾರ | | ಹಳೆಯ ಪದ್ಧತಿ ಪ್ರಕಾರ | | ಹೊಸ ಪದ್ಧತಿ ಪ್ರಕಾರ | |
| | ೭೮–೭೯ | ೭೯–೮೦ | ೭೮–೭೯ | ೭೯–೮೦ | ೭೮–೭೯ | ೭೯–೮೦ | ೭೮–೭೯ | ೭೯–೮೦ |
| | £ | £ | £ | £ | £ | £ | £ | £ |
| ವರಮಾನ | ೨೧೧೫ | ೨೧೧೦ | ೩೬೫೭ | ೩೫೯೬ | ೪೦೧೩ | ೪೦೭೮ | ೯೪೫೯ | ೯೫೯೩ |
| ವೆಚ್ಚ | ೨೨೫೩ | ೨೨೬೧ | ೩೪೮೦ | ೩೫೬೬ | ೪೧೬೯ | ೫೧೧೧ | ೮೯೨೬ | ೧೦೧೧೯ |
| ಆಧಿಕ್ಯ | – | – | ೧೭೭ | ೩೦ | – | – | ೫೩೩ | – |
| ಕೊರತೆ | ೧೩೮ | ೧೫೧ | – | – | ೧೫೬ | ೧೦೩೩ | – | ೫೨೬ |
| ಮುಕ್ತಾಯ ಶಿಲ್ಕು | ೨೦೬ | ೫೫ | ೫೨೧ | ೫೫೫ | ೮೭೩ | ೧೬೧ | ೧೫೬೨ | ೧೪೩೬ |

೧. ಹಣಕಾಸು ಇಲಾಖೆ ಗೊತ್ತುವಳಿ ಸಂಖ್ಯೆ ೧೫೯೮ ದಿನಾಂಕ ಏಪ್ರಿಲ್ ೧೭, ೧೮೯೭.

ಭಾರತ ಸರ್ಕಾರ ಹಣಕಾಸು ಹಾಗೂ ವಾಣಿಜ್ಯ ಇಲಾಖೆಯ ಗೊತ್ತುವಳಿ ಸಂಖ್ಯೆ. ೧೨೪೯, ಮಾರ್ಚ್ ೩, ೧೮೭೯

ವರಮಾನವನ್ನು ಹಂಚಿಕೊಳ್ಳುವ ತತ್ವವನ್ನು ಒಮ್ಮೆ ಬರ್ಮಾ ಮತ್ತು ಅಸ್ಸಾಂ ರಾಜ್ಯಗಳಿಗೆ ಅನ್ವಯಿಸಿದ ಮೇಲೆ ಭಾರತ ಸರ್ಕಾರಕ್ಕೆ ಅದನ್ನು ಬೇರೆ ಪ್ರಾಂತ್ಯಗಳಿಗೆ ಅನ್ವಯಿಸುವುದಕ್ಕಾಗುವುದಿಲ್ಲ ಎನ್ನುವ ನಿಲುವನ್ನು ತೆಗೆದುಕೊಳ್ಳಲಾಗಲಿಲ್ಲ. ೧೮೭೭ರಲ್ಲಿ ವಿವಿಧ ಪ್ರಾಂತ್ಯಗಳೊಡನೆ ಭಾರತ ಸರ್ಕಾರ ಮಾಡಿಕೊಂಡ ಒಪ್ಪಂದ ಕೇವಲ ಅಲ್ಪಕಾಲಿಕವಾಗಿದ್ದುದಷ್ಟೇ ಅಲ್ಲದೆ ಬೇರೆ ಬೇರೆ ಪ್ರಾಂತ್ಯಗಳಿಗೆ ಬೇರೆ ಬೇರೆ ಅವಧಿಯದಾಗಿತ್ತು. ಕೇವಲ ಬೊಂಬಾಯಿ ಮತ್ತು ಬಂಗಾಳ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಮಾತ್ರ ೧೮೭೭–೭೮ ರಿಂದ ಆರಂಭವಾಗಿ ಐದು ವರ್ಷದ ಅವಧಿಯವರೆಗೆ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಮಧ್ಯ ಪ್ರಾಂತ್ಯಗಳು ಮತ್ತು ಪಂಜಾಬ್ ಪ್ರಾಂತ್ಯಗಳ ಒಪ್ಪಂದದ ಅವಧಿ ೩ ವರ್ಷದ್ದಾಗಿತ್ತು. ವಾಯವ್ಯ ಪ್ರಾಂತ್ಯಗಳಿಗೆ ಇದು ೧೮೭೭–೭೮ ರಿಂದ ೨ ವರ್ಷದ ಅವಧಿಯ ಒಪ್ಪಂದವಾಗಿತ್ತು. ಬರ್ಮಾ ಮತ್ತು ಅಸ್ಸಾಂ ಪ್ರಾಂತ್ಯಗಳೊಡನೆ ಒಪ್ಪಂದ ಮಾಡಿಕೊಳ್ಳುವ ವೇಳೆಗೆ ಇತರ ಕೆಲವು ಪ್ರಾಂತ್ಯಗಳ ಒಪ್ಪಂದ ಅವಧಿ ಮುಗಿದಿತ್ತು. ಈ ಒಪ್ಪಂದಗಳು ವರಮಾನವನ್ನು ಹಂಚಿಕೊಳ್ಳುವ ಹೊಸ ತತ್ವದ ಪ್ರಕಾರ ಹೊಸದಾಗಿ ರೂಪಿತವಾಗಬೇಕಾಗಿತ್ತು. ಆದರೆ ಭಾರತ ಸರ್ಕಾರ ಇದನ್ನು ತಡಮಾಡಿತು. ಆದಾಯ ಮತ್ತು ವೆಚ್ಚವನ್ನು ಹಂಚಿಕೊಳ್ಳುವ ಹೊಸ ತತ್ವವನ್ನು ಸಾರ್ವತ್ರಿಕಗೊಳಿಸುವುದು ಜಾಣತನವಲ್ಲ ಎನ್ನುವ ಸರ್ಕಾರದ ಭಾವನೆಯೇ ಇದಕ್ಕೆ ಕಾರಣವಾಗಿತ್ತು. ಇದು ಇನ್ನೂ ಕೇವಲ ಪ್ರಯೋಗದ ಹಂತದಲ್ಲಿದೆ ಎಂದು ಸರ್ಕಾರ ಭಾವಿಸುವುದು ಸಕಾರಣವಾಗಿತ್ತು. ಏಕ ಪಕ್ಷೀಯವಾಗಿ ಪ್ರಾಂತೀಯ ಬಜೆಟ್‌ಗಳ ಬಗ್ಗೆ ಪ್ರತಿ ಪ್ರಾಂತ್ಯದ ಜೊತೆ ಮಾಡಿಕೊಳ್ಳುವ ಒಪ್ಪಂದದಲ್ಲಿದ್ದ ದೌರ್ಬಲ್ಯಗಳನ್ನು ಭಾರತ ಸರ್ಕಾರ ಗಮನಿಸಿತ್ತು. ಪ್ರಾಂತೀಯ ಬಜೆಟ್‌ಗಳನ್ನು ಪ್ರತ್ಯೇಕವಾದ ಭಾಗವೆಂದು ಪರಿಗಣಿಸುವುದರಲ್ಲಿ ಅಪಾಯವಿದೆ. ಏನಿದ್ದರೂ ಅದು ಸಾಮ್ರಾಜ್ಯ ಬಜೆಟ್‌ನ ಒಂದು ಭಾಗವೆಂದು ಪರಿಗಣಿತವಾಗದಿದ್ದರೆ ತಪ್ಪಾಗುತ್ತದೆ ಎನ್ನುವ ಅರಿವು ಸರ್ಕಾರಕ್ಕೆ ಮೂಡಿತ್ತು. ಇತರ ಪ್ರಾಂತ್ಯಗಳ ಅಗತ್ಯತೆಗಳು, ಬೇಡಿಕೆಗಳನ್ನು ಗಮನಿಸದೆ ಒಂದು ಪ್ರಾಂತ್ಯದ ಬಜೆಟ್ ಅಗತ್ಯಗಳನ್ನು ಪೂರೈಸುವುದು ಸಾಧುವಲ್ಲ ಎನ್ನುವುದು ಸ್ಪಷ್ಟವಾಗಿತ್ತು. ಆದರೆ ಎಲ್ಲ ಪ್ರಾಂತ್ಯಗಳನ್ನೂ ಏಕರೂಪವಾಗಿ ಪರಿಗಣಿಸಿ, ಅವುಗಳೆಲ್ಲದರ ಅಗತ್ಯತೆಗಳನ್ನು ಗಮನಿಸಿ ಬಜೆಟ್ ಅನ್ನು ತಯಾರಿಸಬೇಕಾದರೆ, ಎಲ್ಲ ಪ್ರಾಂತ್ಯಗಳ ಬಜೆಟ್ ಅನ್ನು ಏಕಕಾಲದಲ್ಲಿ ತಯಾರಿಸಬೇಕಾಗಿತ್ತು. ಈ ಅಗತ್ಯವನ್ನು ಪರಿಗಣಿಸುತ್ತಾ ಮತ್ತು ಬರ್ಮಾ ಹಾಗೂ ಅಸ್ಸಾಂನ ಅನುಭವಗಳಿಂದ ಲಾಭವನ್ನು ಪಡೆಯುವ ಉದ್ದೇಶದಿಂದ ಭಾರತ ಸರ್ಕಾರ ವಿವಿಧ ಪ್ರಾಂತ್ಯಗಳ ಒಪ್ಪಂದದ ಅವಧಿಯನ್ನು ಸ್ವಲ್ಪಮಟ್ಟಿಗೆ ಮೊಟಕುಗೊಳಿಸುವ ಅಥವಾ ವಿಸ್ತರಿಸುವ ಕಾರ್ಯವನ್ನು ನೆರವೇರಿಸಿತು. ಇದರಿಂದಾಗಿ ಈ ಎಲ್ಲಾ ಒಪ್ಪಂದಗಳ ಅವಧಿಯೂ ೧೮೮೨ರ ಮಾರ್ಚ್ ೩೧ಕ್ಕೆ ಮಗಿಯುವಂತೆ ಅದು ಮಾಡಿತು.

## ೧೮೮೨–೮೩ರ ಹಣಕಾಸು ವಿತರಣಾ ಒಪ್ಪಂದಗಳು

೧೮೮೨–೮೩[1] ರಿಂದ ಜಾರಿಗೆ ಬರುವಂತೆ ಎಲ್ಲಾ ಪ್ರಾಂತ್ಯಗಳೊಡನೆ ಮಾಡಿಕೊಳ್ಳಲಾದ ಒಪ್ಪಂದಗಳು ಬರ್ಮಾದೊಡನೆ ಮಾಡಿಕೊಳ್ಳಲಾದ ಒಪ್ಪಂದ ತತ್ವವನ್ನು ಆಧಾರವಾಗಿ ಹೊಂದಿ ಒಪ್ಪಂದದ ಪ್ರಕಾರ

---

೧. ಭಾರತ ಸರ್ಕಾರದ ಹಣಕಾಸು ಹಾಗೂ ವಾಣಿಜ್ಯ ಇಲಾಖೆಯ ಗೊತ್ತುವಳಿ ಸಂಖ್ಯೆ ೩೩೫೪, ದಿನಾಂಕ ಸೆಪ್ಟೆಂಬರ್ ೧೩, ೧೮೮೧.

ಕೆಲವು ಆದಾಯ ಮತ್ತು ವೆಚ್ಚ ಬಾಬ್ತುಗಳು ಸಂಪೂರ್ಣವಾಗಿ, ಕೆಲವು ಅಪವಾದಗಳೊಡನೆ, ಸಾಮ್ರಾಜ್ಯ ಸರ್ಕಾರದವುಗಳಾಗಿದ್ದವು. ಮತ್ತೆ ಕೆಲವನ್ನು ಸಂಪೂರ್ಣವಾಗಿ ಪ್ರಾಂತೀಯವೆಂದು ಪರಿಗಣಿಸಲಾಯಿತು. ಇವೆರಡಕ್ಕೂ ಸೇರದ ಬಾಬ್ತುಗಳನ್ನು ಜಂಟಿ ಬಾಬತ್ತುಗಳಾಗಿ ವಿಂಗಡಿಸಲಾಯಿತು. ಹೆಚ್ಚುಕಡೆ ಮೂರನೇ ಬಾಬ್ತಿಗೆ ವರವಮಾನವನ್ನು ಸಾವಮ್ರಾಜ್ಯ ಹಾಗೂ ಪ್ರಾಂತೀಯು ಸರ್ಕಾರಗಳು ಸವುನಾಗಿ ಹಂಚಿಕೊಳ್ಳಬೇಕೆಂದಾಯಿತು. ಯಾವುದಾದರೂ ಪ್ರಾಂತ್ಯದಲ್ಲಿ, ಪ್ರಾಂತೀಯ ವೆಚ್ಚ ಅದು ಹಂಚಿಕೊಳ್ಳುತ್ತಿರುವ ಆದಾಯಕ್ಕಿಂತ ಹೆಚ್ಚಾದರೆ ಈ ಕೊರತೆಯನ್ನು ಸಾಮ್ರಾಜ್ಯದ ಆದಾಯವಾದ ಭೂ ಕಂದಾಯ ವರಮಾನದ ಒಂದು ಶೇಕಡಾಂಶದಿಂದ ಭರ್ತಿ ಮಾಡಿಕೊಳ್ಳಬೇಕೆಂದಾಯಿತು. ಇದುವರೆಗೆ ಈ ಕೊರತೆಯನ್ನು ಕೇಂದ್ರದ ಖಜಾನೆಯಿಂದ ನಿಗದಿಯಾದ ಹಣವನ್ನು ಕೊಡುವುದರ ಮೂಲಕ ತುಂಬಿಕೊಡಲಾಗುತ್ತಿತ್ತು.

೧೮೮೨ರಲ್ಲಿ ಪ್ರಾಂತೀಯ ಹಣಕಾಸು ಯೋಜನೆಯನ್ನು ವಿಸ್ತರಿಸುವುದರ ಜೊತೆಗೆ, ಮೇಲೆ ವಿವರಿಸಿರುವ ಮೂರು ಗುಂಪಿನ ಆದಾಯ ಮತ್ತು ವೆಚ್ಚ ವಿಂಗಡನೆಯನ್ನು ಮಾಡುವಾಗ ಇಡೀ ವ್ಯವಸ್ಥೆಗೆ ಸರಳತೆ ಮತ್ತು ಏಕರೂಪತೆಯನ್ನು ಕೊಡುವ ಕಳಕಳಿ ಭಾರತ ಸರ್ಕಾರಕ್ಕಿತ್ತು. ೧೮೭೭ರಲ್ಲಿ ಮಾಡಿಕೊಳ್ಳಲಾದ ಒಪ್ಪಂದದಲ್ಲಿ ವಿಭಿನ್ನತೆ ಮತ್ತು ಸೂಕ್ಷ್ಮತೆ ಇತ್ತು ಎನ್ನುವುದನ್ನು ನಾವು ಮರೆಯಬಾರದು. ಎಲ್ಲ ಪ್ರಾಂತ್ಯಗಳಲ್ಲೂ, ಪ್ರಾಂತೀಯ ಬಾಬ್ತುಗಳು ಒಂದೇ ಆಗಿರಲಿಲ್ಲ. ಒಂದು ಪ್ರಾಂತ್ಯದಲ್ಲಿ ಪ್ರಾಂತೀಯ ವೆಚ್ಚವೆಂದು ಪರಿಗಣಿತವಾಗಿದ್ದ ಬಾಬ್ತು ಮತ್ತೊಂದರಲ್ಲಿ ಸಾಮ್ರಾಜ್ಯ ವೆಚ್ಚದ ಬಾಬ್ತಾಗಿತ್ತು. ವೆಚ್ಚದ ಬಾಬ್ತುಗಳನ್ನು ವರ್ಗಾಯಿಸುವಾಗ, ಅನುದಾನದ ಒಂದು ಭಾಗವನ್ನು ಸಾಮ್ರಾಜ್ಯದ್ದೆಂದೂ ಮತ್ತೊಂದು ಭಾಗವನ್ನು ಪ್ರಾಂತೀಯವೆಂದು ಪರಿಗಣಿಸಲಾಗುತ್ತಿತ್ತು. ವರಮಾನ ಬಾಬ್ತುಗಳು ಅಷ್ಟು ಸೂಕ್ಷ್ಮವಾಗಿರಲಿಲ್ಲ. ಕೇಂದ್ರದಿಂದ ಬಂದ ವರಮಾನ ಬಾಬ್ತುಗಳಿಗೆ ಸಂಬಂಧಿಸಿದಂತೆ ನಿಯಮಾವಳಿಗಳು ಲೆಕ್ಕದ ಭಾಗವನ್ನು ಜಟಿಲಗೊಳಿಸಿದ್ದವು. ಆದರೆ ಇವೆರಡು ದೌರ್ಬಲ್ಯಗಳನ್ನೂ ೧೮೮೨ರ ಒಪ್ಪಂದ ಮಾಡಿಕೊಳ್ಳುವಾಗ ಪರಿಹರಿಸಿಕೊಳ್ಳಲಾಯಿತು. ಯಾವ ಆದಾಯ ಮತ್ತು ವೆಚ್ಚ ಬಾಬ್ತುಗಳನ್ನು ಪ್ರಾಂತೀಯ ಹಾಗೂ ಸಾಮ್ರಾಜ್ಯದ್ದೆಂದು ಪರಿಗಣಿಸಲಾಯಿತು ಎಂಬುದನ್ನು ಕೆಳಗಿನ ಪಟ್ಟಿಯ ಮೂಲಕ ಪರಿಚಯಿಸಲಾಗಿದೆ.

| ಆದಾಯ | | | |
|---|---|---|---|
| | | **ಸಾಮ್ರಾಜ್ಯದ ಆದಾಯ** | **ಪ್ರಾಂತೀಯ ಆದಾಯ** |
| I | ಭೂ ಕಂದಾಯ | ಪ್ರಾಂತೀಯ ಕಾಲಂನಲ್ಲಿ ನಮೂದಿಸಿರುವುದನ್ನು ಬಿಟ್ಟು ಉಳಿದೆಲ್ಲ. | ಬರ್ಮಾದಲ್ಲಿ, ಮೀನುಗಾರಿಕೆ ವಾಯವ್ಯ ಪ್ರಾಂತ್ಯ ಮತ್ತು ಔದ್‌ನಲ್ಲಿ ತೆರಾಯ್, ಭಾಬಾರ್ ಮತ್ತು ದುಧಿ ಎಸ್ಟೇಟ್‌ಗಳು, ವಾಟರ್ ಮಿಲ್‌ಗಳು ಮತ್ತು ಕಲ್ಲುಗಣಿಗಳ ಬಾಡಿಗೆ, ಮುಂಬಯಿಯಲ್ಲಿ, ಮತ್ತೆ ಕೈಗೊಳ್ಳಲಾದ ಸೇವೆಗಳ ಬಾಡಿಗೆಗಳು, ಭೂಮಿ ಮತ್ತು ಸಂಪರ್ಕ ಸೇವೆಗಳು, ಉಳಿದೆಲ್ಲ ಪ್ರಾಂತ್ಯಗಳು, ಪ್ರಾಂತೀಯ ಆದಾಯ ಮತ್ತು ಪ್ರಾಂತೀಯ ವೆಚ್ಚಗಳ ನಡುವಣ ವ್ಯತ್ಯಾಸಗಳನ್ನು ತುಂಬಲು ಸಾಮ್ರಾಜ್ಯ ಭೂ ವರಮಾನದ ಒಂದು ನಿಶ್ಚಿತ ಶೇಕಡಾಂಶ. |
| II | ಟ್ರಿಬ್ಯೂಟ್ಸ್ | ಇಡೀ | ಏನೂ ಇಲ್ಲ |
| III | ಅರಣ್ಯ | ಅರ್ಧ | ಅರ್ಧ |
| IV | ಅಬ್ಕಾರಿ | ಅರ್ಧ | ಅರ್ಧ |
| V | ನಿಗದಿತ ತೆರಿಗೆಗಳು | ಅರ್ಧ | ಅರ್ಧ |
| VI | ಪ್ರಾಂತೀಯ ದರಗಳು | ಏನೂ ಇಲ್ಲ | ಇಡೀ |
| VII | ಕಸ್ಟಂಸ್ | ಪ್ರಾಂತೀಯ ಕಾಲಂನಲ್ಲಿ ನಮೂದಿತವಾಗಿರುವುದನ್ನು ಬಿಟ್ಟು ಉಳಿದೆಲ್ಲ. | ಕಸ್ಟಂ ಡ್ಯೂಟಿಯನ್ನು ಬಿಟ್ಟು ಉಳಿದೆಲ್ಲ ಬಾಬ್ತುಗಳು, ಬರ್ಮಾದ ಮಟ್ಟಿಗೆ ಮಾತ್ರ, ಭೂ ಕಂದಾಯದ ಮೇಲಿನ ಸುಂಕ ಶೇಕಡಾಂಶದಷ್ಟೇ ರಫ್ತು ಡ್ಯೂಟಿಗಳು. |
| VIII | ಉಪ್ಪು | ಪ್ರಾಂತೀಯ ಕಾಲಂನಲ್ಲಿ ನಮೂದಿತವಾಗಿರುವುದನ್ನು ಬಿಟ್ಟು ಉಳಿದೆಲ್ಲ. | ಉಪ್ಪಿನ ಮೇಲಿನ ಕರವನ್ನು ಬಿಟ್ಟು ಉಳಿದೆಲ್ಲ, ಬರ್ಮಾದ ಮಟ್ಟಿಗೆ ಮಾತ್ರ, ಭೂ ಕಂದಾಯದ ಮೇಲಿನ ಶೇಕಡಾಂಶಕ್ಕೆ ಸಮನಾದಷ್ಟೇ. ಉಪ್ಪಿನ ಕರ ಆದಾಯ |
| IX | ಅಫೀಮು | ಇಡೀ | ಏನೂ ಇಲ್ಲ |
| X | ಸ್ಟಾಂಪು | ಅರ್ಧ | ಅರ್ಧ |
| XI | ನೋಂದಣಿ ಶುಲ್ಕಗಳು | ಅರ್ಧ | ಅರ್ಧ |
| XII | ಅಂಚೆ ಕಚೇರಿ | ಏನೂ ಇಲ್ಲ | ಇಡೀ |
| XIV | ಅಧೀನ ಇಲಾಖೆಗಳು | ಏನೂ ಇಲ್ಲ | ಇಡೀ |

| | | | |
|---|---|---|---|
| XVI | ಕಾನೂನು ಮತ್ತು ನ್ಯಾಯ | ಏನೂ ಇಲ್ಲ | ಇಡೀ |
| XVII | ಪೊಲೀಸ್ | ಏನೂ ಇಲ್ಲ | ಇಡೀ |
| XVIII | ಮೆರೀನ್ | ಈಗಿರುವಷ್ಟೇ | ಈಗಿರುವಷ್ಟೇ |
| XIX | ವಿದ್ಯಾಭ್ಯಾಸ | ಏನೂ ಇಲ್ಲ | ಇಡೀ |
| XX | ವೈದ್ಯಕೀಯ | ಏನೂ ಇಲ್ಲ | ಇಡೀ |
| XXI | ಲೇಖನಸಾಮಗ್ರಿ ಮತ್ತು ಮುದ್ರಣ | ಏನೂ ಇಲ್ಲ | ಇಡೀ |
| XXII | ಬಡ್ಡಿ | ಪ್ರಾಂತೀಯ ಕಾಲಂನಲ್ಲಿ ನಮೂದಿಸಿರುವುದನ್ನು ಬಿಟ್ಟು ಉಳಿದೆಲ್ಲ | ಸರ್ಕಾರದ (ಪ್ರಾಂತೀಯ) ಸೆಕ್ಯೂರಿಟಿಗಳ ಮೇಲಿನ ಬಡ್ಡಿ |
| XXIII | ವಿಶ್ರಾಂತಿ ವೇತನ | ಮಿಲಿಟರಿ ಮತ್ತು ಮೆಡಿಕಲ್ ಫಂಡ್ಸ್‌ಗಳಲ್ಲಿ ಮಾಡಲಾಗಿರುವ ಲೆಕ್ಕ ವರ್ಗಾವಣೆಗಳು ಮತ್ತು ಈ ಫಂಡ್‌ಗಳಿಗೆ ಕೊಟ್ಟಿರುವ ವಂತಿಗೆಗಳು. | ಉಳಿದದ್ದು |
| XXIV | ಇತರೆ | ಸಾಮ್ರಾಜ್ಯದ ವ್ಯವಹಾರದಿಂದ ಬಂದಿರುವ ವಿನಿಮಯ ಲಾಭ ಗಳು, ಬೇಡಿಕೆಯಾಗಿಲ್ಲದಿರುವ ಬಿಲ್ಸ್ ಆಫ್ ಎಕ್ಸ್‌ಚೇಂಜ್‌ಗಳು ಮತ್ತು ಬಿಲ್‌ಗಳು. | ಉಳಿದದ್ದು. |
| XXV | ರೈಲ್ವೆ | ಈಗಿರುವಷ್ಟೇ | ಪ್ರಾಂತೀಯವಾಗಿ ಪ್ರತಿ ಪ್ರಾಂತ್ಯದಲ್ಲಿ ಈಗಿರುವಷ್ಟೇ |
| XXVI | ನೀರಾವರಿ ಮತ್ತು ನೌಕೆ | ಈಗಿರುವಷ್ಟೇ | ಪ್ರಾಂತೀಯವಾಗಿ ಪ್ರತಿ ಪ್ರಾಂತ್ಯದಲ್ಲಿ ಈಗಿರುವಷ್ಟೇ |
| XXVII | ಇತರೆ ಕಾಮಗಾರಿಗಳು | ಮಿಲಿಟರಿ ಕಾಮಗಾರಿಗಳಿಂದ ಬಂದವು | ಉಳಿದದ್ದು. |
| XXXI | ಲಂಡನ್‌ನೊಡನೆ ವ್ಯವಹಾರದಲ್ಲಿ ವಿನಿಮಯದಿಂದ ಬಂದಿರುವ ಲಾಭಗಳು | ಇಡೀ | ಏನೂ ಇಲ್ಲ |

| **ವೆಚ್ಚಗಳು** | | | |
|---|---|---|---|
| | | **ಸಾಮ್ರಾಜ್ಯದ ಖರ್ಚು** | **ಪ್ರಾಂತೀಯ ಖರ್ಚು** |
| ೧ | ಬಡ್ಡಿ | ಪ್ರಾಂತೀಯ ಕಾಲಂನಲ್ಲಿ ನಮೂದಿಸಿರುವುದನ್ನು ಬಿಟ್ಟು | ಸ್ಥಳೀಯ ಡಿಬೆಂಚರ್ ಮೇಲಿನ ಬಡ್ಡಿ, **ಆದಾಯ ತರುವ ಸಾರ್ವಜನಿಕ** ಕಾಮಗಾರಿಯೆಂದು ಅಥವಾ ಉಳಿದೆಲ್ಲ ಹೀಗಿಲ್ಲವೆಂದು ವಿಂಗಡಿಸಿರಲಿ ಅಥವಾ ಇಲ್ಲದಿರಲಿ–ಎಲ್ಲಾ ಸಾರ್ವಜನಿಕ ಕಾಮಗಾರಿಯ ಮೇಲೆ, ವರ್ಷದ ಪ್ರಾರಂಭದಲ್ಲಿ ಬಂಡವಾಳ ವೆಚ್ಚದ ಮೇಲೆ ಶೇ೪ ೧/೨ಯಷ್ಟು ಮತ್ತು ವರ್ಷದ ಅವಧಿಯಲ್ಲಿ ಶೇ೨ ೧/೨ಯಷ್ಟು, (ಈ ಬಾಬ್ತುಗಳು ಕ್ಯಾಪಿಟಲ್ ಮತ್ತು ರೆವಿನ್ಯೂ ಅಕೌಂಟ್‌ನಲ್ಲಿ ನಮೂದಿತವಾಗಿರುವ ಬಾಬ್ತುಗಳಿಗೆ ಮಾತ್ರ ಅನ್ವಯಿಸುತ್ತದೆ.) ಈ ವೆಚ್ಚವನ್ನು ಪರಿಗಣಿಸುವಾಗ ಪ್ರಾಂತೀಯ ಆದಾಯ ಅಥವಾ ಪ್ರಾಂತೀಯ ಡಿಬೆಂಚರ್‌ಗಳಿಂದ ಬರುವ ಆದಾಯ ಭಾಗವನ್ನು ಬಿಡಲಾಗುತ್ತದೆ. ಇದು ಪ್ರೊಟೆಕ್ಟಿವ್ ಪಬ್ಲಿಕ್ ವರ್ಕ್ಸ್ ವಿಶೇಷ ಒಪ್ಪಂದಕ್ಕೆ ಒಳಪಡುತ್ತದೆ. |
| ೨. | ಸರ್ವಿಸ್ ಫಂಡ್ ಮತ್ತು ಇತರೆ ಲೆಕ್ಕಗಳ ಮೇಲಿನ ಬಡ್ಡಿ | ಸರ್ವಿಸ್ ಫಂಡ್ ಮತ್ತು ಉಳಿತಾಯ ಠೇವಣಿಗಳ ಮೇಲಿನ ಬಡ್ಡಿ | ಉಳಿದದ್ದು |
| ೩. | ಮರುಪಾವತಿ ಮತ್ತು ಹಿಂತೆಗೆದು ಕೊಂಡಿರುವ ಹಣ ಬಾಬ್ತುಗಳು | ಸಾಮ್ರಾಜ್ಯಶಾಹಿ ಆದಾಯದ ಹಿಸ್ಸೆ. | ಪ್ರಾಂತೀಯ ಆದಾಯದ ಹಿಸ್ಸೆ |
| ೪. | ಭೂ ಕಂದಾಯ | ಭೂ ಕಂದಾಯವನ್ನು ಎತ್ತುವುದಕ್ಕೆ ತಗಲುವ ವೆಚ್ಚ ಮತ್ತು ಸರ್ವೆ ಮತ್ತು ಸೆಟಲ್ ಮೆಂಟ್ ಮೇಲಿನ ವೆಚ್ಚಗಳಿಗೆ ಸಮನಾದ ಶೇಕಡಾಂಶ (ಇಲ್ಲಿಯವರೆಗೆ ಕೇಂದ್ರ ಸರ್ಕಾರದ ಲೆಕ್ಕದಲ್ಲಿ ಸೇರಿಸಲಾದ ವೆಚ್ಚಗಳನ್ನೂ ಒಳಗೊಂಡಂತೆ) | ಉಳಿದದ್ದು |
| ೫. | ಅರಣ್ಯ | ಅರ್ಧ | ಅರ್ಧ |
| ೬. | ಅಬ್ಕಾರಿ | ಅರ್ಧ | ಅರ್ಧ |
| ೭. | ಗೊತ್ತುಮಾಡಲಾದ ತೆರಿಗೆ | ಅರ್ಧ | ಅರ್ಧ |

| | | | |
|---|---|---|---|
| ೮. | ಪ್ರಾಂತೀಯ ದರಗಳು | ಏನೂ ಇಲ್ಲ | ಇಡೀ |
| ೯. | ಕಸ್ಟಂಸ್ | ಏನೂ ಇಲ್ಲ | ಇಡೀ |
| ೧೦. | ಉಪ್ಪು | ಮದರಾಸಿನಲ್ಲಿ ಇಡೀ. ಉಳಿದ ಕಡೆ ಉಪ್ಪಿನ ಉತ್ಪಾದನೆ ಮತ್ತು ಖರೀದಿ, ಮತ್ತು ಬಂಗಾಳದಲ್ಲಿ ಉಪ್ಪಿನ ಮೇಲಿನ ತೆರಿಗೆಯನ್ನು ಎತ್ತಲು ಆಡಳಿತಾತ್ಮಕವಾಗಿ ತಗಲುವ ಖರ್ಚು ಬಾಂಬೆಯ ವೆಚ್ಚದಲ್ಲಿ, ಪೋರ್ಚುಗೀಸ್ ಭಾರತದಲ್ಲಿನ ಉಪ್ಪಿನ ಕರನಿರ್ವಹಣೆಯ ಖರ್ಚು | ಉಳಿದದ್ದು |
| ೧೧. | ಅಫೀಮು | ಇಡೀ | ಏನೂ ಇಲ್ಲ |
| ೧೨. | ಸ್ಟಾಂಪುಗಳು | ಅರ್ಧ | ಅರ್ಧ |
| ೧೩. | ನೋಂದಣಿ | ಅರ್ಧ | ಅರ್ಧ |
| ೧೪. | ಅಂಚೆ ಕಚೇರಿ | ಏನೂ ಇಲ್ಲ | ಇಡೀ |
| ೧೫. | ಟೆಲಿಗ್ರಾಫ್ | ಏನೂ ಇಲ್ಲ | ಇಡೀ |
| ೧೬. | ಆಡಳಿತ | ಅಕೌಂಟ್ ಮತ್ತು ಕರೆನ್ಸಿ ಲೆಕ್ಕಗಳು ಪ್ರೆಸಿಡೆನ್ಸಿ ಬ್ಯಾಂಕು ಗಳಲ್ಲಿನ ಭತ್ಯೆಗಳು | ಉಳಿದದ್ದು |
| ೧೭. | ಅಧೀನ ಇಲಾಖೆಗಳು | ಪುರಾತತ್ವ ಮತ್ತು ವಾಯು ಮಾಪನ ಇಲಾಖೆಗಳು, ಜನಗಣತಿ, ಗೆಜೆಟಿಯರ್ಸ್ ಮತ್ತು ಸ್ಟಾಟಿಸ್ಟಿಕಲ್ ಮೆಮಾಯಿರ್ಸ್ | ಉಳಿದದ್ದು |
| ೧೮. | ಕಾನೂನು ಮತ್ತು ನ್ಯಾಯ | ಏನೂ ಇಲ್ಲ | ಇಡೀ |
| ೧೯. | ಪೊಲೀಸ್ | ಗಡಿಭದ್ರತಾ ಪೊಲೀಸು ಮತ್ತು ಸಾಲ್ಟ್ ಪ್ರಿವೆಂಟಿವ್ ಕರ್ತವ್ಯದಲ್ಲಿ ತೊಡಗಿರುವ ಸಾಮ್ರಾಜ್ಯಶಾಹಿ ರೈಲ್ವೆ ಪೊಲೀಸ್ | ಉಳಿದದ್ದು |
| ೨೦ | ಮೆರೀನ್ | ಈಗ ಸಾಮ್ರಾಜ್ಯಶಾಹಿ ಯಾಗಿರುವುದು. | ಈಗ ಪ್ರಾಂತೀಯವಾಗಿರುವುದು |
| ೨೧. | ವಿದ್ಯಾಭ್ಯಾಸ | ಈಗ ಸಾಮ್ರಾಜ್ಯಶಾಹಿ ಯಾಗಿರುವುದು. | ಈಗ ಪ್ರಾಂತೀಯವಾಗಿರುವುದು |

| | | | |
|---|---|---|---|
| ೨೨. | ಚರ್ಚು ವರಮಾನ | ಇಡೀ | ಏನೂ ಇಲ್ಲ |
| ೨೩. | ವೈದ್ಯಕೀಯ | ಏನೂ ಇಲ್ಲ | ಇಡೀ |
| ೨೪. | ಮುದ್ರಣ ಮತ್ತು ಲೇಖನ ಸಾಮಗ್ರಿ | ಸೆಂಟ್ರಲ್ ಸ್ಟೋರ್‌ಗಾಗಿ ಖರೀದಿಸುವ ಸಾಮಗ್ರಿಗಳು | ಉಳಿದದ್ದು, ಸೆಂಟ್ರಲ್ ಸ್ಟೋರ್ಸ್‌ನಿಂದ ಪಡೆಯುವ ಲೇಖನಸಾಮಗ್ರಿಗಳ ವೆಚ್ಚವನ್ನೂ ಸೇರಿ |
| ೨೫. | ರಾಜಕೀಯ | ಇಡೀ | ಏನೂ ಇಲ್ಲ |
| ೨೬. | ಭತ್ಯೆಗಳು ಮತ್ತು ಇತರ ನೀಡಿಕೆಗಳು | ಪ್ರಾಂತೀಯ ಕಾಲಂನಲ್ಲಿರುವ ಬಾಬ್ತುಗಳನ್ನು ಬಿಟ್ಟು ಇಡೀ | ಬೊಂಬಾಯಿಯಲ್ಲಿ ಈಗ ಪ್ರಾಂತೀಯವಾಗಿರುವ ಬಾಬ್ತು ವೆಚ್ಚ |
| ೨೭. | ನಾಗರಿಕ ಗೈರು ಹಾಜರಿ ರಜೆ ಮತ್ತು ಆಬ್ಸೆಂಟ್ ಅಲೋಯೆನ್ಸಸ್ | ಇಡೀ | ಏನೂ ಇಲ್ಲ |
| ೨೮. | ನಿವೃತ್ತಿ ನಂತರದ ವೆಚ್ಚಗಳು | ಪ್ರಾಂತೀಯ ಕಾಲಂನಲ್ಲಿ ತೋರಿಸಿಲ್ಲದಿರುವುದು. | ವಿಶ್ರಾಂತಿ ವೇತನ, ಗ್ರಾಚುಯಿಟಿ ಭಾರತದ ಲೆಕ್ಕದಲ್ಲಿ ದಲ್ಲಿ ತೋರಿಸಲಾದ ಮಿಲಿಟರಿ ಮತ್ತು ವೈದ್ಯಕೀಯ ವಿಶ್ರಾಂತಿ ವೇತನಗಳನ್ನು ಬಿಟ್ಟು, ಪ್ರತಿ ಸರ್ಕಾರ ಈಗ ಕೊಡುತ್ತಿರುವ ವಿಶ್ರಾಂತಿ ವೇತನ ಮತ್ತು ಗ್ರಾಚ್ಯುಯಿಟಿಗೆ ಜವಾಬ್ದಾರವಾಗಿರುತ್ತದೆ. ಮುಂದೆ ಯಾವುದೇ ಕಾರಣಕ್ಕೆ ಪಾವತಿ ಮಾಡುವ ಅಥವಾ ಶಿಫಾರಸು ಮಾಡುವ ವಿಶ್ರಾಂತಿ ವೇತನ ಮತ್ತು ಗ್ರಾಚುಯಿಟಿಯನ್ನು ಒಳಗೊಂಡಂತೆ. |
| ೨೯. | ಸಾದಿಲ್ವಾರು | ಆಭರಣಗಳ ಸಂದಾಯ ಮತ್ತು ಬಿಲ್‌ಗಳ ನೀಡಿಕೆ | ಉಳಿದದ್ದು |
| ೩೦. | ಕ್ಷಾಮ ಪರಿಹಾರ | ಎರಡನೆ ಹೊಣೆಗಾರಿಕೆ | ಸಂಪೂರ್ಣವಾಗಿ ಪ್ರಾಂತೀಯವಾದುದು |
| ೩೧. | ರೈಲ್ವೆ | ಈಗಿರುವಂತೆಯೇ | ಈಗ ಪ್ರಾಂತೀಯವಾಗಿರುವುದು |
| ೩೨. | ನೀರಾವರಿ | ಈಗಿರುವಂತೆಯೇ | ಈಗ ಪ್ರಾಂತೀಯವಾಗಿರುವುದು |
| ೩೩. | ಇತರ ಸಾರ್ವಜನಿಕ ಕಾಮಗಾರಿ | ಮಿಲಿಟರಿ, ಸಾರ್ವಜನಿಕ ಕಾಮಗಾರಿ, ಬ್ರಿಟಿಷ್ ಬರ್ಮಾ ಬಿಟ್ಟು ಉಳಿದ ಕಡೆ, ಸುಪ್ರೀಂ ಗವರ್ನಮೆಂಟ್‌ನ ಕಚೇರಿಗಳು, ಉಪ್ಪು, ಅಫೀಮು, ಅಂಚೆಕಚೇರಿ, ಸಾಮ್ರಾಜ್ಯ ತಂತಿ ಕಚೇರಿ, ಮಿಂಟ್ ಮತ್ತು ಕರೆನ್ಸಿ ಕಚೇರಿಗಳು ಬಂಗಾಳದ ಸರ್ವೇಯರ್ ಜನರಲ್‌ಕಚೇರಿ. | ಉಳಿದದ್ದು |
| ೩೫ | ವಿನಿಮಯದ ನಷ್ಟ | ಇಡೀ | ಏನೂ ಇಲ್ಲ |

೧೮೮೧–೮೨ರ ಹಣಕಾಸು ವ್ಯವಹಾರದಿಂದ ಸರ್ಕಾರ ವರ್ಷಕ್ಕೆ ೪೭೦,೦೦೦ ಪೌಂಡ್‌ಗಳ ಲಾಭವನ್ನು ನಿರೀಕ್ಷಿಸಿತ್ತು. ಇದರಲ್ಲಿ ಮಧ್ಯ ಪ್ರಾಂತ್ಯಗಳಿಗೆ ೭೭,೯೦೦ ಪೌಂಡ್‌ಗಳನ್ನು ನಾಗರಿಕ ಸೇವೆಗಳನ್ನು ಸುಧಾರಿಸಲು ಮತ್ತು ಇತರ ಸಾಮಾನ್ಯ ಸೇವೆಗಳನ್ನು ಉತ್ತಮಪಡಿಸಲು ಹಿಂದಿರುಗಿಸಿತು. ಪ್ರಾಂತೀಯ ಸಾರ್ವಜನಿಕ ಕಾಮಗಾರಿಗಳಿಗಾಗಿ ೨೦,೦೦೦ಗಳನ್ನು ಹಿಂದಿರುಗಿಸಿತು. ವಾಯವ್ಯ ಸರಹದ್ದು ಪ್ರಾಂತ್ಯಗಳು ಮತ್ತು ಔಧ್‌ಗೆ ೩೨೬,೦೦೦ ಪೌಂಡ್‌ಗಳನ್ನು ಹಿಂದಿರುಗಿಸಿತು. ೧೦,೦೦೦ ಪೌಂಡ್‌ಗಳನ್ನು ಹೆಚ್ಚುವರಿ ಕಾನುಂಗೋಗಳಿಗಾಗಿ ಮತ್ತು ಉಳಿದ ೩೧೬,೦೦೦ಪೌಂಡುಗಳ ಪ್ರಾಂತೀಯ ತೆರಿಗೆಗಳನ್ನು ಹಿಂದಿರುಗಿಸಲು ಉಪಯೋಗಿಸಬೇಕೆಂದು ಗೊತ್ತುಮಾಡಲಾಯಿತು. ಇವುಗಳ ಜೊತೆಗೆ ವಿಶೇಷವಾಗಿ ಬಂಗಾಳಕ್ಕೆ ೨೮೫,೦೦೦೦ ಪೌಂಡ್‌ಗಳು, ಬರ್ಮಾಕ್ಕೆ ೨೦,೦೦೦ ಪೌಂಡ್‌ಗಳು, ವಾಯವ್ಯ ಪ್ರಾಂತ್ಯಗಳಿಗೆ ೫೫,೦೦೦ ಪೌಂಡ್‌ಗಳನ್ನು ಅವುಗಳು ೧೮೮೧–೮೨ರ ಲೆಕ್ಕ ವರ್ಷ ಮುಗಿಯುವುದಕ್ಕೆ ಮುಂಚೆ ತಮ್ಮ ಶಿಲ್ಕುಗಳಿಗೆ ಸೇರಿಸಲು ನೀಡಲಾಯಿತು. ಈ ರೀತಿ ಮಾಡಲಾದ ೪,೯೬,೦೦೦ ಪೌಂಡ್‌ಗಳ ಕೊಡುಗೆ ಭಾರತ ಸರ್ಕಾರ ನಿರೀಕ್ಷಿಸಿದ್ದ ೪,೭೦,೦೦೦ ವಾರ್ಷಿಕ ಲಾಭ ವಾಸ್ತವವಾಗಿ ೨೬,೦೦೦ ಪೌಂಡ್ ನಷ್ಟವಾಗುವಂತೆ ಮಾಡಿತು.[೧]

೧೮೭೯–೮೦ ಮತ್ತು ೧೮೮೦–೮೧ರ ವರ್ಷಗಳಲ್ಲಿ ಭಾರತ ಸರ್ಕಾರ, ಪ್ರಾಂತೀಯ ಸರ್ಕಾರಗಳಿಗೆ ವಿಧಿಸಿದ್ದ ನ್ಯಾಯಸಮ್ಮತವಲ್ಲದ ತೆರಿಗೆ ಹಣವನ್ನು ಸಹ ಮರುಪಾವತಿ ಮಾಡಿತು ಎನ್ನುವ ಅಂಶವನ್ನು ಈ ಸಂದರ್ಭದಲ್ಲಿ ನಾವು ಗಮನಿಸಬೇಕು. ಆದರೆ ೧೮೮೨ರ ಮರು ವಿಮರ್ಶೆಯ ಅತ್ಯಲ್ಪ ಕಾಲದಲ್ಲಿಯೇ ಭಾರತ ಸರ್ಕಾರದ ಹಣಕಾಸು ಪರಿಸ್ಥಿತಿಯು ಸಂಕಷ್ಟವನ್ನು ಎದುರಿಸಬೇಕಾಯಿತು. ಹೀಗಾಗಿ ೧೮೮೬–೮೭ರಲ್ಲಿ ನ್ಯಾಯಸಮ್ಮತವಲ್ಲದ ತೆರಿಗೆಗಳನ್ನು ವಿಧಿಸುವ ಪದ್ಧತಿ ಮತ್ತೆ ಕಾಣಿಸಿಕೊಂಡಿತು. ಆ ವರ್ಷ ಹಣಕಾಸು ವಿವರಣಾ ಪತ್ರವನ್ನು ಮಂಡಿಸುತ್ತಾ ಹಣಕಾಸು ಸಚಿವರು ಹೀಗೆ ವಾದಿಸಬೇಕಾಯಿತು :

"೨೨. ೧೮೮೫–೮೬ರ ಅಂದಾಜುಗಳನ್ನು ಮಂಡಿಸಿದ ನಂತರ ಭಾರತ ಆಡಳಿತ ಮತ್ತು ಹಣ–ಕಾಸು ಹೊಸ ಹಂತವನ್ನು ತಲುಪಿದೆ. ೧೮೮೨ ರಿಂದ ದೇಶ ಅನುಭವಿಸಿದ ತೃಪ್ತಿಕರ ಪರಿಸ್ಥಿತಿ ಕೊನೆಗೊಂಡಿದೆ. ವರ್ಷ ಮಧ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿನ ಘಟನೆಗಳಿಂದಾಗಿ, ಭಾರತ, ಯುರೋಪಿನ ಅತ್ಯಂತ ಬಲಿಷ್ಠ ರಾಷ್ಟ್ರಗಳಲ್ಲೊಂದರೊಡನೆ ಸಂಪರ್ಕ ಪಡೆಯುವಂತಾಗಿದೆ. ಇದರಿಂದಾಗಿ ಭಾರತವು ಮಿಲಿಟರಿ ಶಕ್ತಿಯನ್ನು ಹೆಚ್ಚಿಸಿಕೊಳ್ಳುವುದು ಅನಿವಾರ್ಯವಾಗಿ ಹೆಚ್ಚು ಆವಶ್ಯಕವಾಗಿದೆ. ಇದರಿಂದ ನಮ್ಮ ಹಣಕಾಸು ಅಂದಾಜುಗಳು ಸಹ ಬದಲಾಗಲೇಬೇಕಾಗಿದೆ. ಹೀಗಾಗಿ ನಾವು ಯಾವ ತೊಂದರೆಯೂ ಇಲ್ಲದೆ ಅನುಭವಿಸುತ್ತಿದ್ದ ಹಣಕಾಸು ಶಾಂತಿಗೆ ಭಂಗ ಬಂದು, ನಮ್ಮನ್ನು ಆ ಪಥದಿಂದ ಅನಿವಾರ್ಯವಾಗಿ ನಿರ್ಗಮಿಸುವಂತೆ ಮಾಡಿದೆ."

ಈ ಬಿರುಗಾಳಿಯಿಂದ ತಪ್ಪಿಸಿಕೊಳ್ಳಲು ಮಾಡಿದ ಅನೇಕ ಪ್ರಯತ್ನಗಳ ಜೊತೆಗೆ, ಪ್ರಾಂತೀಯ ವರಮಾನ ಮೂಲಗಳನ್ನು ರೂಪಿಸುವುದಕ್ಕೆ ಭಾರತ ಸರ್ಕಾರ ಎರಡನೆಯ ಬಾರಿಗೆ ಕ್ರಮಕೈಗೊಂಡಿತು. ೧೮೮೬–೮೭ ರಲ್ಲಿ ಅವುಗಳ ಶಿಲ್ಕಿನಿಂದ ೪೦,೦೦೦ಗಳನ್ನು ತನ್ನ ಉದ್ದೇಶಗಳಿಗಾಗಿ ಕೇಂದ್ರ ಪಡೆದುಕೊಂಡಿತ್ತು.

---

೧. ಹಣಕಾಸು ವಿವರಣ ಪತ್ರ ೧೮೮೨–೮೩, ಪು. ೧೫೩.

ಈ ಅವಧಿಯ ಪ್ರಾಂತೀಯ ಹಣಕಾಸು ಪರಿಸ್ಥಿತಿಯನ್ನು ಕೆಳಗಿನ ಪಟ್ಟಿಯ ಮೂಲಕ ಸಂಕ್ಷಿಪ್ತವಾಗಿ ವಿವರಿಸಬಹುದು.

| **ಪ್ರಾಂತ್ಯ** | **ವಾರ್ಷಿಕ ಹೆಚ್ಚುವರಿ ಅಥವಾ ಕೊರತೆ** | | | | |
|---|---|---|---|---|---|
| | ೧೮೮೨-೮೩<br>£ | ೧೮೮೩-೮೪<br>£ | ೧೮೮೪-೮೫<br>£ | ೧೮೮೫-೮೬<br>£ | ೧೮೮೬-೮೭<br>£ |
| ಮಧ್ಯ ಪ್ರಾಂತ್ಯಗಳು | ೩೩,೭೭೫ | ೭೬,೨೧೨ | ೧೮,೦೪೭ | ೨೨,೦೮೦ | ೧೧೫,೬೫೬ |
| ಬರ್ಮಾ | ೧೭೧,೨೦೭ | -೯೦,೦೩೦ | -೮೯,೭೨೫* | * | ೭೧,೭೪೩:: |
| ಅಸ್ಸಾಂ | ೧೩,೮೮೭ | -೫,೨೧೬ | -೪೦,೫೭೭ | ೨೫,೨೯೯ | ೨೮,೫೭೬ |
| ಬಂಗಾಳ | ೫೩೯,೬೧೧ | ೧೪೬,೦೨೭ | ೪೮,೯೧೦ | ೨೬,೭೭೭ | ೫೨,೯೧೧ |
| ವಾಯವ್ಯ ಸರಹದ್ದು ಪ್ರಾಂತ್ಯಗಳು ಮತ್ತು ಔಧ್ | ೨೮೧,೨೨೨ | ೩೫೭,೬೩೦ | -೬೯,೨೭೬ | -೧೮೦,೦೬೦ | -೧೨,೪೦೮ |
| ಪಂಜಾಬ್ | -೧೧೦,೯೬೬ | -೧೫,೭೬೫ | -೪೧,೫೪೫ | ೪೨,೪೪೭ | ೩,೧೦೬ |
| ಮದರಾಸು | ೧೦೮,೪೨೧ | ೧೦,೮೨೦ | -೮೭,೨೮೪ | ೧೪೬,೬೯೨ | -೭೮,೬೮೯ |
| ಬೊಂಬಾಯಿ | -೧೪೯,೮೯೪ | -೨,೫೮೫ | ೬,೦೦೬ | ೨೯೧,೯೭೬ | -೧೬೧,೩೬೯ |

* ವರ್ಷದ ಕೊನೆಯಲ್ಲಿ ಯಾವ ಶಿಲ್ಕು ಇಲ್ಲ.

* ಸಮತೋಲನ.

:: ಚಾಲ್ತಿ ವರಮಾನವು ಚಾಲ್ತಿ ವೆಚ್ಚಕ್ಕಿಂತ ಅಧಿಕವಾಗಿರುವುದರಿಂದ ಉಂಟಾದ ಶಿಲ್ಕು.

ಭಾರತ ಸರ್ಕಾರದ ವರಮಾನ ಮತ್ತು ವಾರ್ಷಿಕ ಹಣಕಾಸು ಲೆಕ್ಕದಿಂದ ಸಂಗ್ರಹಿಸಲಾಗಿದೆ.

೧೮೮೨-೮೩ ರಲ್ಲಿ ಪ್ರಾಂತೀಯ ಸರ್ಕಾರಗಳೊಡನೆ ಮಾಡಿಕೊಂಡ ಒಪ್ಪಂದ ಎರಡು ವಿಷಯಗಳಲ್ಲಿ ಮೊದಲಿನ ಒಪ್ಪಂದಕ್ಕಿಂತ ಭಿನ್ನವಾಗಿತ್ತು. ಅವುಗಳೆಂದರೆ, ಮೊದಲನೆಯದಾಗಿ, ನಿಗದಿಯಾಗಿ ಪ್ರಾಂತೀಯ ಸರ್ಕಾರಗಳಿಗೆ ಹಣ ಕೊಡುವ ಪದ್ಧತಿಯ ಬದಲು ಸಾಮ್ರಾಜ್ಯ ಹಾಗೂ ಪ್ರಾಂತೀಯ ಸರ್ಕಾರಗಳು ವರಮಾನವನ್ನು ಹಂಚಿಕೊಳ್ಳುವ ಪದ್ಧತಿಯನ್ನು ಆರಂಭಿಸಲಾಯಿತು. ಎರಡನೆಯದಾಗಿ, ಹೊಸ ಒಪ್ಪಂದಕ್ಕೆ ಅವಧಿಯನ್ನು ಸಹ ಗೊತ್ತುಮಾಡಲಾಯಿತು. ಪ್ರಾಂತೀಯ ಹಣಕಾಸಿನ ಫಲಿತಾಂಶಗಳನ್ನು ೧೮೭೧-೭೨ರ ಅವಧಿಗೆ ಸಂಬಂಧಿಸಿದಂತೆ ಒಂದು ಪಟ್ಟಿಯಲ್ಲಿಯೇ ನೀಡಲಾಗಿದ್ದರೂ, ಎಲ್ಲ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ೬ ವರ್ಷ ಅವಧಿಯ ಒಪ್ಪಂದವನ್ನು ಮಾಡಿಕೊಳ್ಳಲಾಯಿತು ಎಂದು ಭಾವಿಸಬಾರದು.

ಬದಲಿಗೆ ೧೮೭೭ರಲ್ಲಿ ಮಾಡಿಕೊಂಡ ಒಪ್ಪಂದ ಒಂದು ವರ್ಷ ಅವಧಿಯದಾಗಿತ್ತು. ಇದನ್ನು ವರ್ಷಂಪ್ರತಿ ನವೀಕರಿಸಬೇಕಿತ್ತು. ಸತತವಾಗಿ ದೀರ್ಘವಾಗಿರುವ ಅವಧಿಯ ಫಲಿತಾಂಶಗಳನ್ನು ಕೊಡಲಾಗಿದೆ. ಇದರ ಅರ್ಥ ಇದೇ ಅವಧಿಗೆ ಒಪ್ಪಂದವಾಗಿತ್ತು ಎಂದಲ್ಲ, ಅಲ್ಲಿ ಅನುಸರಿಸಿದ ತತ್ವ ಈ ಅವಧಿಯ ಒಪ್ಪಂದಕ್ಕೆ ಅನುಗುಣವಾಗಿತ್ತು ಎನ್ನುವುದು. ೧೮೭೭ರ ನಂತರ ಒಪ್ಪಂದವನ್ನು ಇನ್ನೂ ಹೆಚ್ಚು ಹೆಚ್ಚಿನ ಅವಧಿಯವರೆಗೆ ಮಾಡಿಕೊಳ್ಳಲಾಯಿತು. ಎರಡು ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ ಒಪ್ಪಂದದ ಅವಧಿ ೫ ವರ್ಷಗಳಾಗಿದ್ದವು. ಉಳಿದ ಪ್ರಾಂತ್ಯಗಳಿಗೆ ಈ ಅವಧಿ ಎರಡರಿಂದ ಮೂರು ವರ್ಷಗಳಾಗಿದ್ದವು. ಅಲ್ಪಾವಧಿಯ ಒಪ್ಪಂದ ನಿಶ್ಚಿತ ಮೊತ್ತವನ್ನು ಪ್ರಾಂತೀಯ ಸರ್ಕಾರಗಳಿಗೆ ಕೊಡುತ್ತಿದ್ದ ಪದ್ಧತಿಯಂತೆಯೇ, ಈ ಪದ್ಧತಿಯೂ ಸಾಮ್ರಾಜ್ಯದ ಖಜಾನೆಗೆ ಬಹಳ ಅನುಕೂಲಕರವಾಗಿತ್ತು. ಈ ಒಪ್ಪಂದಗಳ ಮುಖ್ಯ ಉದ್ದೇಶ, ಬಹಳ ಕಡಿಮೆ ವರಮಾನವಿದ್ದ ಸಾಮ್ರಾಜ್ಯದ ವರಮಾನ ಮೂಲಗಳಿಂದ ಪ್ರಾಂತೀಯ ಸರ್ಕಾರಗಳು ಬೇಡುವ ಮೊತ್ತಕ್ಕೆ ಕಡಿವಾಣವನ್ನು ಹಾಕುವುದಾಗಿತ್ತು. ಹೀಗಾಗಿ, ಈಗ ಇದ್ದ ಒಪ್ಪಂದದ ಅವಧಿಗಿಂತ, ಹೆಚ್ಚಿನ ಅವಧಿಯನ್ನು ಗೊತ್ತುಮಾಡುವುದು ಈ ಉದ್ದೇಶ ಸಾಧನೆಗೆ ಅನುಕೂಲಕರವಾಗಿತ್ತು. ಆದರೆ ಸಾಮ್ರಾಜ್ಯಕ್ಕೆ ದೀರ್ಘಾವಧಿ ಒಪ್ಪಂದವನ್ನು ಮಾಡಿಕೊಳ್ಳುವುದರಿಂದ ಒಂದು ತೊಂದರೆಯಿತ್ತು. ಅದೇಂದರೆ, ಒಪ್ಪಂದದ ವರಮಾನ ಬಾಬ್ತುಗಳಿಂದ ಪಡೆಯಬಹುದಾದ ಮೊತ್ತವನ್ನು ಮರುವಿಮರ್ಶಿಸಿ ಹೆಚ್ಚಿನ ಲಾಭವನ್ನು ಪಡೆದುಕೊಳ್ಳುವುದು ಸಾಧ್ಯವಿರಲಿಲ್ಲ. ಸಾಮ್ರಾಜ್ಯಕ್ಕೆ ಲಾಭದಾಯಕವಾಗಿದ್ದ ಅಂಶ ಪ್ರಾಂತೀಯ ಸರ್ಕಾರಗಳಿಗೆ ಅನುಕೂಲಕರವಾಗಿತ್ತು. ಒಪ್ಪಂದದ ಅಲ್ಪಾವಧಿಯಿಂದಾಗಿ ಪ್ರಾಂತೀಯ ಸರ್ಕಾರಗಳು ತಮ್ಮ ಬಳಿ ಇದ್ದ ಹಣವನ್ನು ತಮ್ಮ ಹಣಕಾಸು ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭವಾಗುವ ರೀತಿಯಲ್ಲಿ ವಿವಿಧ ಸೇವೆಗಳ ಮೇಲೆ ಹಂಚಿಕೆ ಮಾಡುವುದು ಸಾಧ್ಯವಿರಲಿಲ್ಲ. ಅವುಗಳು ಒಂದು ನಿರ್ದಿಷ್ಟವಾದ ಹಣಕಾಸು ನೀತಿಯನ್ನು ಅನುಸರಿಸುವುದು ಶಕ್ಯವಿರಲಿಲ್ಲ. ಏಕೆಂದರೆ ಸಾಮ್ರಾಜ್ಯಶಾಹಿಯೊಡನೆ ಪ್ರಾಂತ್ಯಗಳು ಮಾಡಿಕೊಳ್ಳುವ ಒಪ್ಪಂದ ಅಲ್ಪಾವಧಿಯದಾಗಿದ್ದು, ಅವು ಮುಂದುವರಿಯುವಾಗ ತಮ್ಮ ನೀತಿಯನ್ನು ಬದಲಾಯಿಸಿಕೊಳ್ಳಬೇಕಾಗಬಹುದಾದ ಅಥವಾ ಅದನ್ನು ಸಂಪೂರ್ಣವಾಗಿ ಕೈಬಿಡಬೇಕಾದ ಭಯ ಅವುಗಳಿಗೆ ಇತ್ತು. ಹಾಗೆಯೇ ಒಪ್ಪಂದವನ್ನು ಮುಂದುವರಿಸಬೇಕಾದಾಗ, ತಮ್ಮ ನೀತಿಯನ್ನು ಸಂಪೂರ್ಣವಾಗಿ ಬದಲಾಯಿಸಲೂ ಸಾಧ್ಯವಿಲ್ಲದ ಪರಿಸ್ಥಿತಿ ಏರ್ಪಡಬಹುದೆಂಬ ಭಯವೂ ಅವುಗಳಿಗಿತ್ತು. ಒಂದು ಮುಂಗಡ ಪತ್ರ ಒಂದು ವರ್ಷದ ಅವಧಿಯಲ್ಲಿ ನಡೆಯುವ ಹಣಕಾಸು ಘಟನಾವಳಿಯಾಗಿ ತೋರಬಹುದು. ಆದರೆ ವರ್ಷಂಪ್ರತಿ ಅದನ್ನು ರೂಪಿಸುವವರಿಗೆ ಅದು ಫಲನೀಡಬೇಕಾದ ಒಂದು ನಿರ್ದಿಷ್ಟ ನೀತಿಯ ಝರಿಯಾಗಿ ಕಾಣಿಸಬೇಕಾದುದು ಅಗತ್ಯ. ಆದರೆ, ಎಷ್ಟೇ ಬುದ್ಧಿವಂತಿಕೆಯಿಂದ ಒಂದು ನೀತಿಯನ್ನು ಅನುಸರಿಸಿದರೂ, ಅದು ಸಿದ್ಧಿಯನ್ನು ಸಾಧಿಸಬೇಕಾದರೆ, ಒಂದು ರೀತಿಯ ಏಕರೂಪತೆ ಇರಬೇಕಾದದ್ದು ಅಗತ್ಯ. ಏಕರೂಪತೆ ಇಲ್ಲದಿರುವಾಗ ಅದು ನಿರೀಕ್ಷಿತ ಫಲವನ್ನು ನೀಡುವುದು ಸಾಧ್ಯವಿಲ್ಲ. ಈ ಕೊರತೆಯೇ ಪ್ರಾಂತೀಯ ಹಣಕಾಸು ನೀತಿ ವಿಫಲತೆಯನ್ನು ಅನುಭವಿಸಲು ಕಾರಣವಾಗಿತ್ತು. ನಿರಂತರವಾಗಿ, ಒಪ್ಪಂದವನ್ನು ಒಂದು ಅವಧಿಯ ನಂತರ ಮತ್ತೊಂದು ಅವಧಿಗೆ ಮುಂದುವರಿಸಬೇಕಾಗಿದ್ದುದರಿಂದ, ಅದು ಸಹಜವಾಗಿಯೇ ಅನಿಶ್ಚಿತತೆಯ ಅಂಶವನ್ನು ಒಳಗೊಂಡಿರುತ್ತಿತ್ತು. ಎರಡು ಅವಧಿಗಳ ನಡುವಣ ಅಂತರ ಬಹಳ ಕಡಿಮೆಯಾಗಿದ್ದರಿಂದ, ಒಂದು ಸ್ಥಿರತೆಯುಳ್ಳ ನೀತಿಯನ್ನು ಅನುಸರಿಸುವುದು ಪ್ರಾಂತ್ಯಗಳಿಗೆ ಕಷ್ಟವಾಗಿತ್ತು. ಈ ದೋಷವನ್ನು ಹೋಗಲಾಡಿಸುವ ದೃಷ್ಟಿಯಿಂದ ಭಾರತ ಸರ್ಕಾರ, ೧೮೮೨-೮೩ರಲ್ಲಿ ಒಪ್ಪಂದಗಳನ್ನು ಮುಂದುವರಿಸುವಾಗ, ಅವು ೫ ವರ್ಷದ ಅವಧಿಯಾಗಿರಬೇಕೆಂಬ ನಿಯಮವನ್ನು ಮಾಡಿತ್ತು.

## ೧೮೮೭–೮೮ರ ಮರುವಿಮರ್ಶೆ

ಈ ನೀತಿಯಿಂದಾಗಿ ೧೮೮೨–೮೭ ರಲ್ಲಿ ಮಾಡಿಕೊಳ್ಳಲಾದ ಒಪ್ಪಂದಗಳು ೧೮೮೭ರಲ್ಲಿ ಕೊನೆಗೊಂಡವು. ಆಗ ಮತ್ತು ಅದರ ಹಿಂದಿನ ಒಪ್ಪಂದದ ಮರುವಿಮರ್ಶೆಗಳಿಂದ ಸಂಪೂರ್ಣ ಪ್ರಾಂತೀಯ ಮತ್ತು ಸಂಪೂರ್ಣ ಸಾಮ್ರಾಜ್ಯಶಾಹಿ ವರ್ಗಗಳಿಗೆ ಸೇರಿದ ವರಮಾನ ಮತ್ತು ವೆಚ್ಚ ಬಾಬ್ತುಗಳ ವಿಷಯದಲ್ಲಿ ಯಾವ ಬದಲಾವಣೆಯಾಗಲಿಲ್ಲ. ೧೮೮೨ರಲ್ಲಿ ಪ್ರಾರಂಭವಾದ ಈ ವರ್ಗೀಕರಣ ಹಾಗೆಯೇ ಮುಂದುವರಿಯಬೇಕೆಂಬುದು ಒಂದು ಸಂಪ್ರದಾಯವೇ ಆಯಿತು. ಕೇವಲ ಜಂಟಿ ಬಾಬ್ತುಗಳ ವರಮಾನ ಮತ್ತು ಖರ್ಚು ಬಾಬ್ತುಗಳನ್ನು ಮಾತ್ರ ಮರುವಿಮರ್ಶೆಯ ಸಮಯದಲ್ಲಿ ಬದಲಾಯಿಸಲಾಯಿತು ಅಷ್ಟೆ. ೧೮೮೭–೮೮ರಲ್ಲಿ ಮರುವಿಮರ್ಶೆ ನಡೆದಾಗ, ಈ ಹಿಂದೆಯೇ ಸೂಚಿಸಿರುವ ಸಾಮ್ರಾಜ್ಯದ ಹಣಕಾಸಿನ ಅಸಮರ್ಪಕ ಪರಿಸ್ಥಿತಿ ಒಂದು ನಿರ್ಣಾಯಕ ವಿಷಯವಾಗಿತ್ತು. ಈ ಪರಿಸ್ಥಿತಿಯನ್ನು ಸರಿಪಡಿಸುವ ದೃಷ್ಟಿಯಿಂದ, ಜಂಟೀ ಬಾಬ್ತುಗಳನ್ನು ಬದಲಾಯಿಸಲಾಯಿತು. ಈ ಬದಲಾವಣೆಯಿಂದಾಗಿ, ಪ್ರತಿ ಸ್ಥಳೀಯ ಸರ್ಕಾರ, ಸ್ಟಾಂಪ್‌ಗಳ ವರಮಾನದ ೩/೪ಭಾಗ ಮತ್ತು ಅಬ್ಕಾರಿ ವರಮಾನದ ೧/೪ ಭಾಗವನ್ನು ವಹಿಸಿಕೊಡಬೇಕೆಂಬ ಮತ್ತು ಈ ಬಾಬ್ತಿನ ಖರ್ಚಿನಲ್ಲಿ ಇದೇ ಅನುಪಾತವನ್ನು ತಾವು ಹೊರಬೇಕೆಂಬ ನೀತಿಯನ್ನು ಅನುಸರಿಸಲಾಯಿತು. ಭೂ ವರವಾನದ ಅನುಪಾತವನ್ನು ಸಹ ಹೀಗೆಯೇ ಬದಲಾಯಿಸಲಾಯಿತು. ಇದರಲ್ಲಿ ೩/೪ನ್ನು ಸಾಮ್ರಾಜ್ಯದ ಹಿಸ್ಸೆಯಾಗಿ ಮತ್ತು ೧/೪ನ್ನು ಪ್ರಾಂತ್ಯದ ಹಿಸ್ಸೆಯಾಗಿ ಮಾಡಲಾಯಿತು. ಆದರೆ ಸಾಮ್ರಾಜ್ಯದ ಖಜಾನೆಯ ಹಣಕಾಸಿನ ಬೇಡಿಕೆಗಳು ಎಷ್ಟು ಹೆಚ್ಚಾಗಿದ್ದುವೆಂದರೆ, ಇತರ ವರ್ಗಗಳ ಬಾಬ್ತುಗಳನ್ನು ಸಹ ಭಾರತಸರ್ಕಾರ ಮರುವಿಮರ್ಶಿಸಿತು. ತನ್ನ ಅನುಕೂಲಕ್ಕಾಗಿ ಅದು ಮರುವಿಮರ್ಶಿಸಿದ ಬಾಬ್ತುಗಳೆಂದರೆ, ಉಪ್ಪು, ಕಸ್ಟಂಸ್, ಬಡ್ಡಿ, ನೀರಾವರಿ ಮತ್ತು ರೈಲ್ವೆ, ಈ ವಿಮರ್ಶೆಗಳಿಂದ ಸಾಮ್ರಾಜ್ಯ ಸರ್ಕಾರಕ್ಕೆ ಆದ ಲಾಭವನ್ನು ಮುಂದಿನ ಪಟ್ಟಿಯಲ್ಲಿ ಸೂಚಿಸಲಾಗಿದೆ:–

| ವರಮಾನ | ಸಾಮ್ರಾಜ್ಯದ ಹಿಸ್ಸೆಯಲ್ಲಿ ಹೆಚ್ಚಳ ಅಥವಾ ಇಳಿತಾಯ | ನಿವ್ವಳ ಲಾಭ |
|---|---|---|
| ಭೂ ಆದಾಯ | ೪೩೭,೫೦೦ | |
| ಸ್ಟಾಂಪುಗಳು (೧/೨ರಿಂದ ೧/೪ ಭಾಗಕ್ಕೆ ಇಳಿಸಿದ ಹಿಸ್ಸೆ | –೮೧೦,೦೦೦ | |
| ಅಬ್ಕಾರಿ (೧/೨ರಿಂದ ೩/೪ಗೆ ಹೆಚ್ಚಿದ ಹಿಸ್ಸೆ) | ೯೪೭,೫೦೦ | |
| ಸಾಮ್ರಾಜ್ಯದ್ದೆಂದು ಪರಿವರ್ತನೆ ಮಾಡಿದ ಬರ್ಮಾದ ಉಪ್ಪಿನ ಬಾಬ್ತು ವರಮಾನ | ೫,೦೦೦ | |
| ಸಾಮ್ರಾಜ್ಯದ್ದೆಂದು ಪರಿವರ್ತನೆ ಮಾಡಿದ ಬರ್ಮಾದ ಕಸ್ಟಂಸ್ ಬಾಬ್ತು ವರಮಾನ | ೧೫೫,೦೦೦ | ೨೧೫,೦೦೦ |
| ಗೊತ್ತುಮಾಡಿದ ತೆರಿಗೆಗಳು (ಸಮವಿಭಜಿತ) | –೨೯೦,೦೦೦ | |
| ರಾಜ್ಯ ರೈಲ್ವೆ ಒಟ್ಟು ಸಂಪಾದನೆ | –೩೧೦,೦೦೦ | |

| | | |
|---|---|---|
| ನಾಗಪುರ ಛತ್ತೀಸ್‌ಗರ್ | | |
| ಪಾಟ್ನಾ – ಗಯಾ | | |
| ಕಾಸ್‌ಪುರ್ – ಅಂಚೆನೆಯರಾ | | |
| ಪ್ರಾಂತೀಕರಣ ಮಾಡಿದ ಪೂರ್ವಬಂಗಾಳ | –೫೪೦,೦೦೦ | |

| **ಖರ್ಚು** | **ಹೆಚ್ಚಳ ಅಥವಾ ಇಳಿತಾಯ** | **ನಿವ್ವಳ ಲಾಭ** |
|---|---|---|
| ಭೂ ಕಂದಾಯ, ಪ್ರಾಂತೀಕರಣಗೊಂಡ ಇಡೀ ಸರ್ವೆ ಮತ್ತು ಸೆಟಲ್‌ಮೆಂಟ್ | ೧೪೫,೦೦೦ | |
| ಬೊಂಬಾಯಿಯಲ್ಲಿ ಪ್ರಾಂತೀಕರಣ ಮಾಡಲಾದ ಉಪ್ಪು | –೯೦,೦೦೦ | |
| ಬೊಂಬಾಯಿಯಲ್ಲಿ, ಪ್ರಾಂತೀಕರಣ ಮಾಡಲಾದ ಕಸ್ಟಂಸ್ | –೫೦,೦೦೦ | |
| ಕ್ರಿಯಾತ್ಮಕ ವೆಚ್ಚಗಳು | | |
| ಪ್ರಾಂತೀಯ | ೩೦೫,೦೦೦ | |
| ಸಾಮ್ರಾಜ್ಯ | –೨೧೫,೦೦೦ | |
| ಬಡ್ಡಿ | | |
| ಪ್ರಾಂತೀಯ | –೭೦,೦೦೦ | |
| ಸಾಮ್ರಾಜ್ಯ | –೬೫,೦೦೦ | ೩೯೫,೦೦೦ |
| ನೀರಾವರಿ | | |
| ಪ್ರಾಂತೀಯ ಬಂಗಾಳ | ೬೫,೦೦೦ | |
| ಪ್ರಾಂತೀಯ ಮದರಾಸು | ೨೩೦,೦೦೦ | |
| ಸೇರಿಸಿ : ಪಟ್ಟಿ ಮಾಡಿಲ್ಲದಿರುವ | | |
| ಸಣ್ಣಪುಟ್ಟ ಬಾಬ್ತುಗಳು | | ೨೦,೦೦೦ |

**ಸಾಮ್ರಾಜ್ಯಕ್ಕೆ ಬಂದ ಲಾಭವನ್ನು ವಿವಿಧ ಪ್ರಾಂತ್ಯಗಳ ನಡುವೆ ಕೆಳಗಿನಂತೆ ಹಂಚಲಾಯಿತು:–**

| **ಪ್ರಾಂತ್ಯಗಳು** | **೧೮೮೨ ಮತ್ತು ೧೮೮೭ಕ್ಕೆ ಹೋಲಿಸಿದಂತೆ ಪ್ರಾಂತೀಯ ವರಮಾನದ ಪ್ರಮುಖ ಬಾಬ್ತುಗಳಲ್ಲಿ ವರ್ಷಂಪ್ರತಿ ಹೆಚ್ಚಿದ ಅಂದಾಜು** | | | **೧೮೮೭ರಲ್ಲಿ ವಿಮರ್ಶಿಸಿದಂತೆ ಪ್ರಾಂತೀಯ ಬಜೆಟ್‌ಗಳಲ್ಲಿ ವರ್ಷಂಪ್ರತಿ ಮಾಡಲಾದ ಇಳಿತಾಯ** |
|---|---|---|---|---|
| | **ಭೂಕಂದಾಯ** | **ಸ್ಟಾಂಪುಗಳು ಮತ್ತು ಅಬ್ಕಾರಿ** | **ಒಟ್ಟು** | |
| | £ | £ | £ | £ |
| ಮಧ್ಯ ಪ್ರಾಂತ್ಯಗಳು | ೨,೨೦೦ | ೪೫,೫೦೦ | ೪೭,೭೦೦ | ೧೫,೬೦೦ |
| ಬರ್ಮಾ | ೪,೭೦೦ | ೯,೨೦೦ | ೧೩,೯೦೦ | |
| ಅಸ್ಸಾಂ | ೨೨,೩೦೦ | ೨೧,೩೦೦ | ೪೩,೬೦೦ | ೨೪,೬೦೦ |
| ಬಂಗಾಳ | ೧೯,೨೦೦ | ೧೭೧,೫೫೦ | ೧೯೦,೭೫೦ | ೧೦೩,೬೦೦ |
| ವಾಯವ್ಯ ಸರಹದ್ದು ಪ್ರಾಂತ್ಯಗಳು | ೮,೦೦೦ | ೧೩೦,೧೫೦ | ೧೩೮,೧೫೦ | ೧೦೦,೦೦೦ |
| ಪಂಜಾಬ್ | ೩೨,೮೦೦ | ೨೩,೧೦೦ | ೫೫,೯೦೦ | – |
| ಮದರಾಸು | ೭,೭೫೦ | ೧೪೨,೫೫೦ | ೧೫೦,೩೦೦ | ೧೭೪,೪೦೦ |
| ಮುಂಬಯಿ | ೯೯,೦೦೦ | ೧೯೮,೫೫೦ | ೨೯೭,೫೫೦ | ೨೨೧,೯೦೦ |
| **ಒಟ್ಟು** | **೧೯೫,೯೫೦** | **೭೪೧,೯೦೦** | **೯೩೭,೮೫೦** | **೬೪೦,೧೦೦** |

£೧೧,೦೦೦ಗಳನ್ನು ಬರ್ಮಾಕ್ಕೆ ಕೊಡದಿದ್ದರೆ, ಸಾಮ್ರಾಜ್ಯಕ್ಕೆ £೬೪೦,೧೦೦ಗಳ ಲಾಭವಾಗುತ್ತಿತ್ತು. ಆದರೆ ಈ ಕೊಡುಗೆಯಿಂದಾಗಿ ಅದರ ನಿವ್ವಳ ಲಾಭ £ ೫೩೦,೧೦೦ಗಳಾಗಿದ್ದವು.

ಪ್ರತಿಯೊಂದು ಪ್ರಾಂತ್ಯದ ವಾರ್ಷಿಕ ಆಧಿಕ್ಯ ಮತ್ತು ಕೊರತೆಯನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ ಇದರಿಂದ, ೧೮೮೭–೯೨ರ ಅವಧಿಯಲ್ಲಿ ಅವುಗಳ ಹಣಕಾಸು ಪರಿಸ್ಥಿತಿ ಹೇಗಿತ್ತು ಎನ್ನುವುದನ್ನು ಅರ್ಥ ಮಾಡಿಕೊಳ್ಳಬಹುದು.

**ವಾರ್ಷಿಕ ಆಧಿಕ್ಯ ಅಥವಾ ಕೊರತೆ (ರೂ.ನಲ್ಲಿ)**

| **ಪ್ರಾಂತ್ಯ** | ೧೮೮೭–೮೮ | ೧೮೮೮–೮೯ | ೧೮೮೯–೯೦ | ೧೮೯೦–೯೧ | ೧೮೯೧–೯೨ |
|---|---|---|---|---|---|
| ಮಧ್ಯ ಪ್ರಾಂತ್ಯಗಳು | ೧೩,೧೪೮ | ೨೨,೫೮೩ | –೧೨,೩೨೨ | –೩೧,೫೭೩ | ೧೭,೫೪೦ |
| ಬರ್ಮಾ | ೭೭,೦೨೮ | ೧೧,೫೬೦ | ೬೪,೦೭೨ | ೧೦೬,೨೧೬ | ೫೦,೫೯೮ |
| ಅಸ್ಸಾಂ | ೭,೭೫೧ | ೨೬,೩೪೩ | ೨೦,೯೯೦ | –೧೭,೮೭೧ | ೩೧,೧೮೫ |
| ಬಂಗಾಳ | ೧೩೧,೦೦೭ | –೬೫,೭೯೨ | ೧೦೨,೫೪೭ | –೧೨೦,೩೭೭ | –೧೧,೯೩೪ |
| ವಾಯವ್ಯ ಸರಹದ್ದು ಪ್ರಾಂತ್ಯಗಳು ಮತ್ತು ಔಧ್ | –೫೩,೯೦೦ | ೪೫,೯೪೯ | ೧೦೨,೭೧೦ | –೧೨,೫೪೪ | –೪,೩೯೯ |
| ಪಂಜಾಬ್ | ೧೨,೪೪೬ | ೩೨,೧೪೨ | ೨೯,೨೬೪ | ೩೧,೩೬೭ | –೧,೭೧೯ |
| ಮದರಾಸು | ೧೦೫,೩೭೧ | ೧೧೩,೯೩೨ | ೧೪೪,೫೭೧ | –೧೩೬,೭೩೯ | ೨೪೧,೭೭೦ |
| ಮುಂಬಯಿ | –೨೪,೫೭೪ | ೧೮,೩೨೨ | ೪೧,೩೬೧ | –೧೨೩,೮೮೭ | –೫೩,೧೮೯ |

ಭಾರತ ಸರ್ಕಾರದ ಹಣಕಾಸು ಹಾಗೂ ವರಮಾನ ಲೆಕ್ಕದ ವಾರ್ಷಿಕ ಪ್ರಕಟಣೆಗಳಿಂದ ಸಂಗ್ರಹಿಸಿದೆ.

## ೧೮೯೨–೯೩ರ ಮರುವಿಮರ್ಶೆ

ಪಂಚವಾರ್ಷಿಕ ಅವಧಿಯ ಒಪ್ಪಂದ ಮುಗಿದ ನಂತರದ ಮರುವಿಮರ್ಶೆ ೧೮೯೨–೯೩ರಲ್ಲಿ ನಡೆಯಿತು. ೧೮೮೭–೮೮ರ ವರ್ಷಕ್ಕೆ ಹೋಲುವಂತೆಯೇ ಆ ವರ್ಷ ಹೊಸ ಒಪ್ಪಂದಗಳು ಏರ್ಪಟ್ಟವು. ಬೆಳೆಯುತ್ತಿರುವ ಪ್ರಾಂತೀಯ ವರಮಾನಗಳಿಂದ ಹೆಚ್ಚಿನ ಲಾಭ ಉಂಟಾಗುವ ರೀತಿಯಲ್ಲಿ ಜಂಟಿ ಬಾಬ್ತುಗಳನ್ನು ಮಾತ್ರ ಮರು ಹೊಂದಾಣಿಕೆ ಮಾಡಲಾಯಿತು. ಈ ರೀತಿಯ ಹೊಂದಾಣಿಕೆಯಿಂದ ಸಾಮ್ರಾಜ್ಯಕ್ಕೆ ದೊರೆತ ವರಮಾನವನ್ನು ಕೆಳಗಿನ ಪಟ್ಟಿ ಪರಿಚಯಿಸುತ್ತದೆ:–

| **ಪ್ರಾಂತ್ಯಗಳು** | **೧೮೮೭–೮೮ರಿಂದ ೧೮೯೧–೯೨ರ ಒಪ್ಪಂದದ ಅವಧಿಗೆ ಹೋಲಿಸಿದಂತೆ ವರಮಾನದಲ್ಲಿ ಹೆಚ್ಚಳ (ರೂ.ನಲ್ಲಿ)** | **ಭಾರತ ಸರ್ಕಾರಕ್ಕೆ ದೊರೆತ ಹಣ (ರೂ.ನಲ್ಲಿ)** |
|---|---|---|
| ಮಧ್ಯ ಪ್ರಾಂತ್ಯಗಳು | ೧೧೯,೨೦೦ | ೨೨,೭೦೦ |
| ಲೋಯರ್ ಬರ್ಮಾ | ೩೩೪,೯೦೦ | ೫೮,೯೦೦ |
| ಬಂಗಾಳ | ೫೧೭,೭೦೦ | ೫೧,೯೦೦ |
| ವಾಯವ್ಯ ಸರಹದ್ದು ಪ್ರಾಂತ್ಯಗಳು ಮತ್ತು ಔಧ್ | ೫೩,೩೦೦ | ೫೬,೯೦೦ |
| ಪಂಜಾಬ್ | ೧೯೫,೪೦೦ | ೪೧,೦೦೦ |
| ಮದರಾಸು | ೩೧೩,೨೦೦ | ೧೦೩,೮೦೦ |
| ಮುಂಬಯಿ | ೩೯೯,೨೦೦ | ೧೩೧,೧೦೦ |
| ಅಸ್ಸಾಂ | ೯೯,೮೦೦ | –– |
| **ಒಟ್ಟು** | **೨,೦೪೨,೭೦೦** | **೪೬೬,೩೦೦** |

ಸಾಮ್ರಾಜ್ಯದ ಈ ಹೆಚ್ಚಳದಲ್ಲಿನ ಲಾಭ ವಾಸ್ತವವಾಗಿ ಪ್ರಾಂತೀಯ ಹಣಕಾಸು ಸಮತೋಲನವನ್ನು ವಿಚಲಿತಗೊಳಿಸಿತು. ಮುಂದಿನ ವರ್ಷಗಳಲ್ಲಿ ಪ್ರಾಂತ್ಯಗಳ ನಿರೀಕ್ಷಿತ ವೆಚ್ಚದ ಅಂದಾಜು ಮತ್ತು ನಿರೀಕ್ಷಿತ ಆದಾಯಗಳ ಅಂದಾಜಿನ ಮೇಲೆ ಇದು ಪರಿಣಾಮ ಬೀರಿತು. ಪ್ರಾಂತ್ಯಗಳ ಸಾಮ್ರಾಜ್ಯ ಆದಾಯ ಮತ್ತು ಸಾಮಾನ್ಯ ವೆಚ್ಚಗಳ ನಡುವಣ ಅಂತರವನ್ನು ತುಂಬಲು, ಮತ್ತೆ ಭಾರತ ಸರ್ಕಾರ ಹಳೆಯ ಪದ್ಧತಿಯಾದ ನಿಗದಿತ ಕೊಡುಗೆಗಳಿಗೆ ಶರಣಾಯಿತು. ಹೀಗಾಗಿ ಒಪ್ಪಂದದ ಅವಧಿಗೆ ಪ್ರಾಂತ್ಯಗಳ ನಿರೀಕ್ಷಿತ ವರಮಾನ ಮತ್ತು ನಿರೀಕ್ಷಿತ ಆದಾಯಗಳು, ವಾಸ್ತವ ವರಮಾನ ಮತ್ತು ವಾಸ್ತವ ವೆಚ್ಚಗಳಿಂದ ಭಿನ್ನವಾಯಿತು. ಜೊತೆಗೆ, ಸಾಮ್ರಾಜ್ಯವು ಪ್ರತಿ ಪ್ರಾಂತ್ಯಕ್ಕೆ ಗೊತ್ತುಮಾಡಿದ ಮರುಹೊಂದಾಣಿಕೆ ಲೆಕ್ಕ ಬಾಬ್ತಿನ ಹಣ ಮಾತ್ರ ಸ್ಥಿರವಾಗಿಯೇ ಉಳಿಯಿತು. ಹೊಸ ಅವಧಿಗೆ ಗೊತ್ತುಮಾಡಲಾದ ಹೊಂದಾಣಿಕೆ ಲೆಕ್ಕ ಬಾಬ್ತಿನ ಹಣ, ಮತ್ತು ಪ್ರಾಂತೀಯ ಸರ್ಕಾರಗಳ ಅಂದಾಜು ಮಾಡಲಾದ ವರಮಾನ ಮತ್ತು ವೆಚ್ಚಗಳನ್ನು ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ :-

| | **ಪ್ರಾಂತೀಯ ಆದಾಯಗಳು** | | | |
|---|---|---|---|---|
| **ಪ್ರಾಂತ್ಯ** | **ಕೆಲವು ಜಮಾಗಳ ಹಿಸ್ಸೆಯಾಗಿ ಸಾಧಾರಣ ವರಮಾನ (ರೂ.ನಲ್ಲಿ)** | **ಹೊಂದಾಣಿಕೆ ಕೊಡುಗೆಗಳು (ರೂ.ನಲ್ಲಿ)** | **ಒಟ್ಟು (ರೂ.ನಲ್ಲಿ) (ರೂ.ನಲ್ಲಿ)** | **ಪ್ರಾಂತೀಯ ವೆಚ್ಚಗಳು** |
| ಮಧ್ಯ ಪ್ರಾಂತ್ಯಗಳು | ೫೬೭,೬೦೦ | ೨೨೦,೫೦೦ | ೭೮೮,೧೦೦ | ೭೮೮,೧೦೦ |
| ಲೋಯರ್ ಬರ್ಮಾ | ೧,೪೨೭,೫೦೦ | ೪೧೪,೩೦೦ | ೧,೮೪೧,೮೦೦ | ೧,೮೪೧,೮೦೦ |
| ಅಸ್ಸಾಂ | ೬೫೭,೭೦೦ | -೧೧೨,೭೦೦ | ೫೪೫,೦೦೦ | ೫೪೫,೦೦೦ |
| ಬಂಗಾಳ | ೪,೨೪೯,೩೦೦ | -೧೪೩,೯೦೦ | ೪,೧೦೫,೫೦೦ | ೪,೧೦೫,೯೦೦ |
| ವಾಯವ್ಯ ಸರಹದ್ದು ಪ್ರಾಂತ್ಯಗಳು | ೩,೪೦೩,೫೦೦ | -೨೫೦,೦೦೦ | ೩,೧೫೨,೯೦೦ | ೩,೧೫೨,೯೦೦ |
| ಪಂಜಾಬ್ | ೧,೩೭೦,೪೦೦ | ೩೪೮,೫೦೦ | ೧,೭೧೮,೯೦೦ | ೧,೭೧೮,೯೦೦ |
| ಮದರಾಸು | ೨,೪೭೯,೩೦೦ | ೩೨೫,೪೦೦ | ೨,೮೦೪,೭೦೦ | ೨,೮೦೪,೭೦೦ |
| ಮುಂಬಯಿ | ೩,೧೨೩,೯೦೦ | ೭೭೧,೪೦೦ | ೩,೮೯೫,೩೦೦ | ೩,೮೯೫,೩೦೦ |

ಒಪ್ಪಂದದ ಅವಧಿಯಲ್ಲಿ ವರ್ಷಂಪ್ರತಿ ಪ್ರಾಂತೀಯ ಸರ್ಕಾರಗಳಿಗೆ ಉಂಟಾದ ಆಧಿಕ್ಯ ಮತ್ತು ಕೊರತೆಯನ್ನು ಗಮನಿಸಿದರೆ, ಸಾಮ್ರಾಜ್ಯವು ತಾನು ಪಡೆದುಕೊಂಡ ಹಣ ಮತ್ತು ನೀಡಿದ ನಿಶ್ಚಿತ ಕೊಡುಗೆಗಳಿಂದ ಯಾವ ದುಷ್ಪರಿಣಾಮಗಳಾದವು ಎನ್ನುವುದು ಸ್ಪಷ್ಟವಾಗುತ್ತದೆ. ಅದನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ:-

| ಪ್ರಾಂತ್ಯಗಳು | ವಾರ್ಷಿಕ ಅಧಿಕ್ಯ ಅಥವಾ ಕೊರತೆ (ರೂ.ನಲ್ಲಿ) | | | | |
|---|---|---|---|---|---|
| | ೧೮೯೨–೯೩ | ೧೮೯೩–೯೪ | ೧೮೯೪–೯೫ | ೧೮೯೫–೯೬ | ೧೮೯೬–೯೭ |
| ಮಧ್ಯ ಪ್ರಾಂತ್ಯಗಳು | –೨೧,೭೯೮ | –೬೦,೭೭೨ | –೧೦೫,೧೦೮ | ೧೯,೬೫೩ | –೩೭,೪೦೮* |
| ಬರ್ಮಾ | ೬೬,೬೪೨ | –೯೦,೬೫೩ | –೨೭೨,೩೧೯ | ೨೨೬,೫೦೫ | ೭೮೦ |
| ಅಸ್ಸಾಂ | ೯,೩೩೬ | ೨೮,೫೩೨ | –೨೭,೪೨೨ | ೩೦,೫೦೭ | –೨೫,೪೨೧ |
| ವಾಯವ್ಯ ಪ್ರಾಂತ್ಯಗಳು ಮತ್ತು ಔದ್ | –೧೬,೭೫೨ | –೨೫,೧೫೫ | –೬೫,೯೮೭ | –೧೫೯,೭೯೮ | –೧೬೪,೭೪೦ |
| ಬಂಗಾಳ | –೯,೮೨೬ | ೩೬,೮೮೭ | ೧೬೯,೭೯೬ | ೧೪೯,೮೦೮ | –೧೮೬,೫೫೮ |
| ಪಂಜಾಬ್ | –೧೦೬,೦೫೦ | –೨೨,೬೯೯ | –೨೪,೮೧೧ | –೭,೧೫೬ | –೬೪,೦೭೩ |
| ಮದರಾಸು | –೧೫೯,೦೮೧ | ೩೩,೬೨೬ | ೯೨,೩೨೮ | ೪೪,೧೧೮ | –೨೦೦,೫೭೯ |
| ಮುಂಬಯಿ | –೨೩,೮೮೮ | ೧೯,೪೪೩ | –೧೦೨,೪೭೨ | ೧೦೦,೬೯೦ | –೨೨೧,೧೧೯ |

*ಮುಕ್ತಾಯ ಶಿಲ್ಕು ಇಲ್ಲ.

ಭಾರತ ಸರ್ಕಾರದ ವಾರ್ಷಿಕ ಹಣಕಾಸು ಮತ್ತು ಆದಾಯ ಲೆಕ್ಕಗಳಿಂದ ಸಂಗ್ರಹಿಸಲಾಗಿದೆ.

ಈ ಅವಧಿಯಲ್ಲಿನ ಹಣಕಾಸು ವ್ಯವಸ್ಥೆ, ಒಪ್ಪಂದದ ಅವಧಿಯ ಅಂತ್ಯದಲ್ಲಿ ಕಾಣಿಸಿಕೊಂಡ ಪ್ಲೇಗ್ ಮತ್ತು ಬರಗಳಿಂದಾಗಿ ಬಹುಮಟ್ಟಿಗೆ ಅಲ್ಲೋಲ–ಕಲ್ಲೋಲವಾಯಿತು ಎನ್ನುವುದನ್ನು ನಾವು ಗಮನಿಸಬೇಕು. ಇವೆರಡೂ ಅಸಾಧಾರಣ ಪರಿಸ್ಥಿತಿಯನ್ನು ಎದುರಿಸಲು ಪ್ರಾಂತ್ಯಗಳು ಮಾಡಬೇಕಾಗಿ ಬಂದ ವೆಚ್ಚದಿಂದಾಗಿ ಅವುಗಳ ಖಜಾನೆಗಳು ಬರಿದಾದವು. ಕೇಂದ್ರ ಪ್ರಾಂತ್ಯಗಳು ಮತ್ತು ವಾಯವ್ಯ ಪ್ರಾಂತ್ಯಗಳಂತೂ ಬಿಡಿಗಾಸೂ ಇಲ್ಲದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಈ ಪರಿಸ್ಥಿತಿಯಿಂದ ಅವುಗಳನ್ನು ತಪ್ಪಿಸಲು ಭಾರತ ಸರ್ಕಾರ ೧೮೯೬–೯೭ರ ವರ್ಷದ ಈ ಪ್ರಾಂತ್ಯದ ಶಿಲ್ಕುಗಳಿಗೆ ಕೆಳಗಿನ ದೇಣಿಗೆಯನ್ನು ನೀಡಿತು.

| | |
|---|---|
| ಮಧ್ಯ ಪ್ರಾಂತ್ಯಗಳಿಗೆ | ರೂ. ೫೨೬ ಲಕ್ಷ |
| ವಾಯವ್ಯ ಪ್ರಾಂತ್ಯ ಮತ್ತು ಔಧ್‌ಗೆ | ರೂ. ೧,೬೭೯ ಲಕ್ಷ |

## ೧೮೯೬–೯೭ರ ಮರುವಿಮರ್ಶೆ

೧೮೯೬–೯೭ರ ಮರು ಒಪ್ಪಂದದ ಮೂಲಕ ಪ್ರಾಂತೀಯ ಹಣಕಾಸು ಪರಿಸ್ಥಿತಿಯ ಮುಗ್ಗಟ್ಟನ್ನು ಸ್ವಲ್ಪಮಟ್ಟಿಗೆ ಹೋಗಲಾಡಿಸುವ ಯತ್ನ ನಡೆಯಿತು. ಇದನ್ನು ೧೮೯೨ರಲ್ಲಿ ಪ್ರಾಂತ್ಯಗಳಿಗೆ ಗೊತ್ತುಮಾಡಲಾಗಿದ್ದ ವೆಚ್ಚ ಮತ್ತು ಆದಾಯಗಳನ್ನು ಹೆಚ್ಚಿಸುವುದರ ಮೂಲಕ ಮಾಡಲಾಯಿತು. ಕೆಳಗಿನ ಪಟ್ಟಿ ಹಳೆಯ ಹಾಗೂ ಹೊಸ ವೆಚ್ಚ ಸ್ಥಿತಿಯನ್ನು ನಿರೂಪಿಸುತ್ತದೆ. ಪಟ್ಟಿಯ ಕೊನೆಯಲ್ಲಿ ವೆಚ್ಚದಲ್ಲಿ ಶೇಕಡಾವಾರು ವೆಚ್ಚಗಳನ್ನು ಸಹ ತೋರಿಸಲಾಗಿದೆ:–

| **ಪ್ರಾಂತ್ಯಗಳು** | **ಸಾಧಾರಣ, ನಿವ್ವಳ ವೆಚ್ಚ (ರೂ.ನಲ್ಲಿ)** | | **ಶೇಕಡಾ ಹೆಚ್ಚಳ** |
|---|---|---|---|
| | **೧೮೯೨** | **೧೮೯೭** | |
| ಮಧ್ಯ ಪ್ರಾಂತ್ಯಗಳು | ೬೫೩,೩೦೦ | ೭೧೦,೭೦೦ | ೮.೮ |
| ಲೋಯರ್ ಬರ್ಮಾ | ೧,೦೬೪,೬೦೦ | ೧,೨೦೬,೧೦೦ | ೧೩.೩ |
| ಅಸ್ಸಾಂ | ೪೬೭,೬೦೦ | ೫೬೪,೯೦೦ | ೨೦.೮ |
| ಬಂಗಾಳ | ೨,೮೧೬,೭೦೦ | ೩,೧೨೫,೫೦೦ | ೧೦.೯ |
| ವಾಯವ್ಯ ಸರಹದ್ದು ಪ್ರಾಂತ್ಯಗಳು | ೨,೨೧೫,೪೦೦ | ೨,೪೨೮,೭೦೦ | ೯.೬ |
| ಪಂಜಾಬ್ | ೧,೩೮೪,೬೦೦ | ೧,೫೩೭,೩೦೦ | ೧೧.೦ |
| ಮದರಾಸು | ೨,೦೫೪,೮೦೦ | ೨,೨೩೮,೬೦೦ | ೮.೯ |
| ಮುಂಬಯಿ | ೨,೦೪೯,೫೦೦ | ೨,೫೪೪,೧೦೦ | ೫.೬ |
| **ಒಟ್ಟು** | **೧೩,೦೬೬,೫೦೦** | **೧೪,೩೫೫,೯೦೦** | **೯.೯** |

ವೆಚ್ಚ ಹೆಚ್ಚಳದಿಂದಾಗಿ, ಜಂಟಿ ಆದಾಯ ಬಾಬ್ತುಗಳಲ್ಲಿ ಸಾಮ್ರಾಜ್ಯ ಮತ್ತು ಪ್ರಾಂತೀಯ ಹಿಸ್ಸೆಗಳಲ್ಲಿ ಬದಲಾವಣೆ ಅಗತ್ಯವಾಯಿತು. ಆದರೆ ಈ ಬದಲಾವಣೆಯನ್ನು ಹೇಗೆ ಮಾಡಬೇಕಾಗಿತ್ತೆಂದರೆ, ಇದರಿಂದ ಪ್ರಾಂತೀಯ ವರಮಾನ ಮೂಲಗಳು ವೃದ್ಧಿಗೊಳ್ಳಬೇಕಾಗಿತ್ತು. ಜೊತೆಗೆ ಕೇಂದ್ರ ಸರ್ಕಾರದ ನಿಶ್ಚಿತ ಕೊಡುಗೆಗಳು ಸಾಧ್ಯವಾದಷ್ಟು ಇಲ್ಲದಂತಿರಬೇಕು. ಈಗಾಗಲೇ ನಿಶ್ಚಿತ ಕೊಡುಗೆಗಳ ವಿಷಯದಲ್ಲಿ ಭಾರತ ಸರ್ಕಾರ ಒಂದು ಪಾಠವನ್ನು ಕಲಿತಿತ್ತು. ಅದೆಂದರೆ, ಕೊಡುಗೆಗಳು ಹೆಚ್ಚಾದಷ್ಟೂ, ಪ್ರಾಂತೀಯ ಹಣಕಾಸು ಪರಿಸ್ಥಿತಿ ಗಡುಸಾಗುತ್ತದೆ ಎನ್ನುವುದು. ಈ ಪರಿಸ್ಥಿತಿ ಎಲ್ಲಿಯವರೆಗೆ ಹೋಗುತ್ತಿತ್ತೆಂದರೆ ಪ್ರಾಂತೀಯ ವೆಚ್ಚಗಳು, ಪ್ರಾಂತೀಯ ಬಜೆಟ್‌ನಲ್ಲಿ ಸೇರಿಸಲಾದ ವರಮಾನ ಮೂಲಗಳಿಂದ ಬರುವ ಆದಾಯಕ್ಕಿಂತ ಹೆಚ್ಚಾದಷ್ಟೂ, ಕೇಂದ್ರ ಸರ್ಕಾರ ಹೆಚ್ಚು ಹೆಚ್ಚು ಕೊಡುಗೆಗಳನ್ನು ಪ್ರಾಂತ್ಯಗಳಿಗೆ ಕೊಡಬೇಕಾಗಿ ಬರುತ್ತಿತ್ತು. ಎರಡನೆಯದಾಗಿ, ಈ ನಿಶ್ಚಿತ ಕೊಡುಗೆಗಳು, ಹಿಂದುಳಿದಿರುವ ಮತ್ತು ಮುಂದುವರಿದಿರುವ ಪ್ರಾಂತ್ಯಗಳ ನಡುವೆ ಒಂದು ರೀತಿಯ ಅಸಮಾನತೆಯನ್ನು ಸಹ ಉಂಟು ಮಾಡುತ್ತಿತ್ತು. ಏಕೆಂದರೆ, ಮುಂದುವರಿದ ಪ್ರಾಂತ್ಯಗಳಿಗೆ, ದೊರೆಯುತ್ತಿದ್ದ ನಿಶ್ಚಿತ ಕೊಡುಗೆ ಅವುಗಳ ವರಮಾನದ ಭಾಗವಾಗಿ, ಹಿಂದುಳಿದಿರುವ ಪ್ರಾಂತ್ಯಗಳಿಗೆ ಹೋಲಿಸಿದಂತೆ ಕಡಿಮೆ ಇರುತ್ತಿತ್ತು. ತಮ್ಮ ವರಮಾನಗಳು ಹೆಚ್ಚಿದಾಗ ಮಾತ್ರ ಹೆಚ್ಚಿನ ವೆಚ್ಚಗಳನ್ನು ಕೈಗೊಳ್ಳಬಹುದಾಗಿದ್ದುದರಿಂದ, ಮುಂದುವರಿದ ಪ್ರಾಂತ್ಯಗಳು ಹೆಚ್ಚಿನ ವರಮಾನಗಳನ್ನು ರೂಢಿಸಿಕೊಳ್ಳುತ್ತಿದ್ದುದರಿಂದ, ಸಹಜವಾಗಿಯೇ ಕೇಂದ್ರದಿಂದ ಹೆಚ್ಚಿನ ಆದ್ಯತೆಯನ್ನು ಪಡೆಯುತ್ತಿದ್ದವು. ಆದರೆ ವಾಸ್ತವವಾಗಿ ಅಗತ್ಯವಿದ್ದುದೇ ಬೇರೆ. ಭಾರತ ಸರ್ಕಾರ, ಹಿಂದುಳಿದ ಪ್ರಾಂತ್ಯಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವುದು ಅತ್ಯಂತ ಅಗತ್ಯವಾಗಿತ್ತು. ಏಕೆಂದರೆ ಇವುಗಳ ಅಗತ್ಯತೆಗಳನ್ನು ಪೂರೈಸಲು ಇವಕ್ಕೆ ಹೆಚ್ಚಿನ ಹಣ ಬೇಕಾಗಿತ್ತು. ಈ ಅನ್ಯಾಯವನ್ನು ಹೋಗಲಾಡಿಸಲು, ಭಾರತ ಸರ್ಕಾರ, ಜಂಟಿ ಬಾಬ್ತುಗಳಲ್ಲಿ ಹಿಂದುಳಿದ ಪ್ರಾಂತ್ಯಗಳ ಹಿಸ್ಸೆಯನ್ನು ಹೆಚ್ಚು ಮಾಡಿತು. ಪಂಜಾಬ್‌ಗೆ ಇದು ಭೂ ಕಂದಾಯ

ವರಮಾನದಲ್ಲಿ ೦.೪ರಷ್ಟು, ಬರ್ಮಾದ ಹಿಸ್ಸೆಯನ್ನು ೦.೬೬ರಷ್ಟು ಏರಿಸಿತು. ಅಪ್ಪರ್ ಬರ್ಮಾದ ಸೇರ್ಪಡೆಯಿಂದ ಉಂಟಾದ ವೆಚ್ಚ ಹೆಚ್ಚಳವನ್ನು ಸರಿತೂಗಿಸಲು ಹಿಂದೆ ಇದ್ದ ೦.೨೫ ಅಬ್ಕಾರಿ ಹಿಸ್ಸೆಯನ್ನು ೦.೫೦ ಕ್ಕೆ ಏರಿಸಿತು. ವಾಯವ್ಯ ಸರಹದ್ದು ಪ್ರಾಂತ್ಯಗಳ ಹಣಕಾಸು ಪರಿಸ್ಥಿತಿ ಅಷ್ಟು ಉತ್ತಮವಾಗಿರಲಿಲ್ಲ. ಅದರ ಆದಾಯವಂತೂ ಏನೇನೂ ಹೆಚ್ಚಳವನ್ನು ಸಾಧಿಸಿರಲಿಲ್ಲ. ೧೮೯೨ ಮತ್ತು ೧೮೯೭ರ ನಡುವೆ ಆದಾಯ ಕೇವಲ ೨% ರಷ್ಟು ಬೆಳವಣಿಗೆಯನ್ನು ಮಾತ್ರ ಸಾಧಿಸಿತು. ೧೮೯೨ರಲ್ಲಿ ಮರುವಿಮರ್ಶೆ ನಡೆದಾಗ ಸಹ ವಾಯವ್ಯ ಪ್ರಾಂತ್ಯಕ್ಕೆ ಅನ್ಯಾಯವೇ ಆಗಿತ್ತು. ಅದರ ಪ್ರಕಾರ, ಈ ಪ್ರಾಂತ್ಯದ ಸಾಮಾನ್ಯ ವೆಚ್ಚಕ್ಕೆ ಹೋಲಿಸಿದಂತೆ ಇದರ ವರಮಾನ ೫ ಲಕ್ಷ ಕಡಿಮೆ ಇತ್ತು. ಇದನ್ನು ತುಂಬಿಕೊಡಲು ಭಾರತ ಸರ್ಕಾರ, ವಾಯವ್ಯ ಸರಹದ್ದು ಪ್ರಾಂತ್ಯಗಳಿಗೆ ಅನುಕೂಲವಾಗುವಂತೆ, ಭೂ ಕಂದಾಯ ವರಮಾನವನ್ನು ಮರು ಹಂಚಿಕೆ ಮಾಡಿತು. ಇದರ ಜೊತೆಗೆ ಭಾರತ ಸರ್ಕಾರ, ಆ ಪ್ರಾಂತ್ಯಕ್ಕೆ ೧೮೯೭–೯೮ರ ವರ್ಷಕ್ಕೆ ೪ ಲಕ್ಷ ರೂ.ಗಳ ಅನುದಾನವನ್ನು ಸಹ ಕೊಟ್ಟಿತು. ಈ ಹಣ, ಸ್ವತಂತ್ರವಾಗಿ ಒಂದು ಜಿಲ್ಲಾ ನಿಧಿಯನ್ನು ಸ್ಥಾಪಿಸಿಕೊಳ್ಳುವುದಕ್ಕಾಗಿತ್ತು. ಈ ವ್ಯವಸ್ಥೆ ಇತರ ಪ್ರಾಂತ್ಯಗಳಲ್ಲಿ ಬಹಳ ಹಿಂದೆಯೇ ಜಾರಿಗೆ ಬಂದಿತ್ತು. ಹಿಂದುಳಿದಿರುವ ಮತ್ತು ಮುಂದುವರಿದ ಪ್ರಾಂತ್ಯಗಳಿಗೆ ಭಿನ್ನ ನೀತಿಯನ್ನು ಅನುಸರಿಸುವುದರಿಂದಲೇ ನ್ಯಾಯವನ್ನು ದೊರಕಿಸಿ ಕೊಡಬಹುದೆಂಬ ಭಾವನೆಯನ್ನು ಕೇಂದ್ರ ಸರ್ಕಾರ ತಾಳಿತ್ತು. ಹೀಗಾಗಿ ಬಂಗಾಳ, ಮದರಾಸು ಮತ್ತು ಬೊಂಬಾಯಿಯಂತಹ ಮುಂದುವರಿದ ಪ್ರಾಂತ್ಯಗಳ ವಿಷಯದಲ್ಲಿ ಅಷ್ಟೇನೂ ಉದಾರವಲ್ಲದ ನೀತಿಯನ್ನು ಭಾರತ ಸರ್ಕಾರ ಅನುಸರಿಸಿತು. ಹಿಂದುಳಿದ ಪ್ರಾಂತ್ಯಗಳಿಗೆ ಹೋಲಿಸಿದಂತೆ, ಮುಂದುವರಿದ ಪ್ರಾಂತ್ಯಗಳ ವೆಚ್ಚದಲ್ಲಿ ಕಡಿಮೆ ಹೆಚ್ಚಳಕ್ಕೆ ಅದು ಅವಕಾಶ ಮಾಡಿಕೊಟ್ಟಿತು. ಹಾಗೆಯೇ ಅವುಗಳ ವರಮಾನ ಹಿಸ್ಸೆಯನ್ನು ಸಹ ಸ್ವಲ್ಪಮಟ್ಟಿಗೆ ಕಡಿಮೆ ಮಾಡಿತು. ಈ ಅಂಶಗಳು ಮೇಲಿನ ಪಟ್ಟಿಯಿಂದ ಸ್ಪಷ್ಟವಾಗುತ್ತವೆ.

ಈ ಮರುವಿಮರ್ಶೆಯಿಂದ ಸಾಮ್ರಾಜ್ಯದ ಖಜಾನೆಗೆ ಆದ ಲಾಭ ವಾಸ್ತವವಾಗಿ ತುಂಬಾ ಅಲ್ಪಪ್ರಮಾಣದ್ದಾಗಿತ್ತು. ಬಿಟ್ಟುಕೊಟ್ಟ ಮೊತ್ತದಿಂದ ಖಜಾನೆಗೆ ೧೮೭೭ರಲ್ಲಿ ಆದ ಲಾಭ ೪೦ ಲಕ್ಷ ರೂ. ೧೮೮೨ರಲ್ಲಿ ಸಾಮ್ರಾಜ್ಯ ಸರ್ಕಾರ ಎಷ್ಟು ಸುಸ್ಥಿತಿಯಲ್ಲಿತ್ತೆಂದರೆ, ಲಾಭಕ್ಕೆ ಆಶೆ ಪಡುವುದರ ಬದಲು ತನ್ನ ವರಮಾನದಲ್ಲಿ ೨೬ ಲಕ್ಷ ರೂ.ಗಳನ್ನು ಪ್ರಾಂತ್ಯಗಳಿಗೆ ಬಿಟ್ಟುಕೊಟ್ಟಿತು. ಆದರೆ ೧೮೮೭ರಲ್ಲಿ ೬೩ ಲಕ್ಷ ರೂ.ಗಳನ್ನು ಪಡೆದುಕೊಂಡಿತು. ೧೮೯೨ರಲ್ಲಿ ಇನ್ನೂ ೪೬ ಲಕ್ಷ ರೂ.ಗಳನ್ನು ಪಡೆದುಕೊಂಡಿತು. ಈ ಸಂದರ್ಭದಲ್ಲಿ ಮಾತ್ರ ಅದರ ಲಾಭ ಶೂನ್ಯವಾಗಿತ್ತು. ವಾಸ್ತವವಾಗಿ ಅದು ಮುಂದುವರಿದ ಪ್ರಾಂತ್ಯಗಳಿಂದ ಪಡೆದುಕೊಂಡಿದ್ದ ಹಣವನ್ನು ಹಿಂದುಳಿದ ಪ್ರಾಂತ್ಯಗಳಿಗೆ ಕೊಟ್ಟಿತ್ತು.

ಸಾಮ್ರಾಜ್ಯದ ಒಪ್ಪಂದಗಳ ನಿಯಮಗಳು ಬಹಳ ಮುಕ್ತವೂ, ನ್ಯಾಯಬದ್ಧವೂ ಆಗಿದ್ದದು ನಿಜ. ಆದರೆ, ಈ ಅವಧಿಯಲ್ಲಿನ ಅಸಾಧಾರಣ ಘಟನೆಗಳು ಪ್ರಾಂತೀಯ ಹಣಕಾಸು ಪರಿಸ್ಥಿತಿಯ ಮೇಲೆ ಒತ್ತಡವನ್ನು ತಂದಿದ್ದವು. ಹೀಗಾಗಿ, ಅವುಗಳಿಗೆ ದೊರೆತ ಹಣ ಅಪಾರವಾಗಿದ್ದರೂ, ಅವುಗಳ ಬೇಡಿಕೆಗಳಿಗೆ ಹೋಲಿಸಿದಂತೆ, ಅವು ಏನೇನೂ ಸಾಲದಾಗಿದ್ದವು. ೧೮೯೬ ಮತ್ತು ೧೮೯೭ರ ಬರ ಎಲ್ಲ ಪ್ರಾಂತ್ಯಗಳಿಗೂ ಬಿಸಿ ತಟ್ಟಿಸಿತ್ತು. ಎಲ್ಲ ಪ್ರಾಂತ್ಯಗಳಿಗೂ ಇದರ ತಾಪ ಒಂದೇ ಸಮನಲ್ಲದಿದ್ದರೂ, ಅವು ಇದರಿಂದ ವಿಚಲಿತವಾಗಿದ್ದವು. ವಾಯವ್ಯ ಪ್ರಾಂತ್ಯಗಳು ಮತ್ತು ಔಧ್, ಮಧ್ಯ ಪ್ರಾಂತ್ಯಗಳು ಮತ್ತು ಬರ್ಮಾಗಳ ಮೇಲೆ ಬರ ತನ್ನ ತೀವ್ರ ಪ್ರಭಾವವನ್ನು ಬೀರಿತು. ಮದರಾಸು, ಬಂಗಾಳ ಮತ್ತು ಪಂಜಾಬ್‌ಗಳ ಮೇಲೆ ಸಹ ಇದರ ಪರಿಣಾಮ ಗಂಭೀರವಾಗಿತ್ತು. ಬರ್ಮಾದಲ್ಲಿ ಮಾತ್ರ ಇದರ ತೀವ್ರತೆ ಅಷ್ಟಾಗಿರಲಿಲ್ಲ. ೧೮೯೯ ಮತ್ತು ೧೯೦೦ರ ಬರ ಬೊಂಬಾಯಿ ಮತ್ತು ಮಧ್ಯ ಪ್ರಾಂತ್ಯಗಳ ಮೇಲೆ ತೀವ್ರವಾಗಿ ಮತ್ತು ಪಂಜಾಬ್‌ನ

ಮೇಲೆ ಗಂಭೀರವಾಗಿ ಹಾಗೂ ಉಳಿದ ಪ್ರಾಂತ್ಯಗಳ ಮೇಲೆ ಸ್ವಲ್ಪ ಪರಿಣಾಮ ಬೀರಿತು. ಅಸ್ಸಾಂ ಈ ಎರಡೂ ಅವಧಿಯ ಬರಗಳಿಂದ ತಪ್ಪಿಸಿಕೊಂಡಿದ್ದರೂ, ೧೮೯೭ರ ಭೂಕಂಪದಿಂದ ಘಾತಗೊಂಡಿತ್ತು. ಬರದ ಜೊತೆಗೆ ಪ್ಲೇಗ್ ಸಹ ತನ್ನ ಬಲಿ ತೆಗೆದುಕೊಂಡಿತ್ತು. ಈ ಘಟನೆಗಳಿಂದ ಎಲ್ಲ ಪ್ರಾಂತ್ಯಗಳೂ ತಲ್ಲಣಗೊಂಡಿದ್ದು, ಈ ಹಿಂದಿಗಿಂತ ಅಪಾರ ಪ್ರಮಾಣದ ಹಣವನ್ನು ವೆಚ್ಚ ಮಾಡಬೇಕಾದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಈ ವೆಚ್ಚದ ಬಾಬ್ತುಗಳನ್ನು ಸಾಮ್ರಾಜ್ಯದ ಬಾಬ್ತೆಂದು ಪರಿಗಣಿಸಿ, ಭಾರತ ಸರ್ಕಾರದ ಖಜಾನೆಯಿಂದ ಹಣವನ್ನು ಖರ್ಚಿಗಾಗಿ ಪಡೆಯಬೇಕಾಯಿತು. ಹೀಗೆ ಪಡೆದ ಹಣ ಸಹ ಸಾಕಾಗದೆ, ಭಾರತ ಸರ್ಕಾರ ಈ ಉದ್ದೇಶಗಳಿಗಾಗಿ ವಿಶೇಷ ಅನುದಾನಗಳನ್ನು ನೀಡಬೇಕಾಯಿತು. ಹೀಗೆ ಕೊಟ್ಟ ಅನುದಾನವನ್ನು ಪಟ್ಟಿ ೧ ರಲ್ಲಿ ತೋರಿಸಲಾಗಿದೆ.

ಭಾರತ ಸರ್ಕಾರ ವಿಶೇಷ ಅನುದಾನಗಳನ್ನು ನೀಡಬೇಕಾಗಿ ಬಂದುದಷ್ಟೇ ಅಲ್ಲದೆ, ವಿಶೇಷ ಪರಿಸ್ಥಿತಿಯಿಂದಾಗಿ ಉಂಟಾದ ಬಜೆಟ್ ಅಸಮತೋಲನವನ್ನು ಪರಿಹರಿಸಲು ಸಹ ಪ್ರಾಂತ್ಯಗಳಿಗೆ ಹಣ ನೀಡಬೇಕಾಯಿತು. ಈ ರೀತಿಯ ಹಣ ನೀಡಿಕೆ, ಹಣಕಾಸು ವಿಷಮ ಪರಿಸ್ಥಿತಿಯಿಂದಾಗಿ ನಿಂತುಹೋಗಿದ್ದ ಅಥವಾ ಕಡಿತಗೊಳಿಸಿದ್ದ ಅಗತ್ಯ ಸಾರ್ವಜನಿಕ ಸೇವೆಗಳಿಗೆ ಅತ್ಯಾವಶ್ಯಕವಾಗಿತ್ತು. ಈ ಇಡೀ ಅವಧಿಯಲ್ಲಿ ಸಾಮ್ರಾಜ್ಯ ಸರ್ಕಾರ ಹಣಕಾಸಿನ ವಿಷಯದಲ್ಲಿ ಅತ್ಯಂತ ಅನುಕೂಲ ಪರಿಸ್ಥಿತಿಯನ್ನು ಎದುರಿಸುತ್ತಿದ್ದುದರಿಂದ ಪ್ರಾಂತ್ಯಗಳಿಗೆ ವಿಶೇಷ ನೆರವನ್ನು ಕೊಡುವುದು ಏನೇನೂ ಕಷ್ಟವಾಗಲಿಲ್ಲ. ಸರ್ಕಾರಗಳು ಯಾವಾಗಲೂ ಜಿಪುಣತನದಿಂದಿರುವುದು ಒಳ್ಳೆಯದಾದರೂ, ಸಾಮ್ರಾಜ್ಯದ ಹಣಕಾಸು ಉತ್ತಮವಾಗಿದ್ದುದು ಈ ಪರಿಸ್ಥಿತಿಯಲ್ಲಿ ಬಹಳ ಉಪಯುಕ್ತವಾಗಿತ್ತು. ಈ ಅವಧಿ ಭಾರತ ಸರ್ಕಾರಕ್ಕೆ ವರಪ್ರದವಾಗಿತ್ತು. ಈ ಹಣವನ್ನು ಖರ್ಚು ಮಾಡಿದ ರೀತಿಯನ್ನು ಗಮನಿಸಿದರೆ ಇದರ ಉಪಯುಕ್ತತೆಯನ್ನು ಇನ್ನೂ ಎರಡುಪಟ್ಟು ಹೊಗಳಬೇಕಾಗುತ್ತದೆ. ಉಪಯುಕ್ತ ಸಾರ್ವಜನಿಕ ಕಾಮಗಾರಿಗಳಿಗೆ ವಿಶೇಷ ಅನುದಾನ ಕೊಟ್ಟಿದ್ದಲ್ಲದೆ, ಸಾಮ್ರಾಜ್ಯ ಸರ್ಕಾರ ಕೆಳಗಿನ ರೀತಿಯಲ್ಲಿ ಪ್ರಾಂತ್ಯಗಳಿಗೆ ಹಣವನ್ನು ಒದಗಿಸಿತು.

೧) ಸಾಮ್ರಾಜ್ಯದ ಭೂಕಂದಾಯದಲ್ಲಿ ವಿನಾಯಿತಿ ರೂ. ೫೦,೯೪,೦೦೦ ಮತ್ತು ಪ್ರಾಂತ್ಯಗಳ ಹಿಸ್ಸೆಯಲ್ಲಿ ತನಗೆ ಸಂದಾಯವಾಗಿದ್ದ ಹಣದಲ್ಲಿ ಹಿಂದಿರುಗಿಸಿದ್ದು ರೂ. ೫೯,೮೧,೦೦೦ ಅಂದರೆ ಒಟ್ಟು ರೂ. ೧,೧೦,೭೫,೦೦೦

೨) ಕೇಂದ್ರ ಪ್ರಾಂತ್ಯಗಳಲ್ಲಿ ಪಂಡಾರಿ ತೆರಿಗೆಗಳನ್ನು ರದ್ದು ಮಾಡಿದ್ದರಿಂದ ಆ ಪ್ರಾಂತ್ಯಕ್ಕೆ ದೊರೆತ ಹಣ ವರ್ಷಕ್ಕೆ ರೂ. ೭,೦೦೦.

೩) ಅಜ್‌ಮೀರ್‌ನಲ್ಲಿ ಭೂ ಕಂದಾಯದಲ್ಲಿ, ಪಟ್ವಾರಿ ದರವನ್ನು ಶೇ ೧೦ರಿಂದ ಶೇ ೬ ೧/೪ಗೆ ಇಳಿಸಿದ್ದು, ಸಂದಾಯ ಮಾಡಿದ ಪ್ರಾಂತೀಯ ವರಮಾನ, ರೂ. ೧೩,೦೦೦. ಆದರೆ ಸ್ಥಳೀಯ ಹಣಕಾಸಿಗೆ ಮಾಡಿದ ಪಾವತಿ ರೂ. ೨೩,೦೦೦[೧]

ಮೇಲಿನ ಎಲ್ಲ ರೀತಿಯ ಅನುದಾನ ವಿಶೇಷ ನೆರವು ಎಲ್ಲವನ್ನೂ ಗಣನೆಗೆ ತೆಗೆದುಕೊಂಡು ಒಪ್ಪಂದದ ಅವಧಿಯಲ್ಲಿ, ಪ್ರಾಂತೀಯ ಸರ್ಕಾರಗಳ ಹಣಕಾಸು ಪರಿಸ್ಥಿತಿ ಹೇಗಿತ್ತು ಎಂಬುದನ್ನು ಮುಂದಿನ ಪಟ್ಟಿ ಸೂಚಿಸುತ್ತದೆ.

---

೧. *ಭಾರತ ಸರ್ಕಾರದ ವಾರ್ಷಿಕ ಹಣಕಾಸು ವಿವರಣ ಪತ್ರ* : ೧೯೦೨–೦೩. ಪ್ಯಾರಾ ೧೪೬.

| ಪ್ರಾಂತ್ಯಗಳು | ಪ್ರಾಂತೀಯ ಅಧಿಕ್ಯ ಅಥವಾ ಕೊರತೆ (ರೂ.ನಲ್ಲಿ) | | | | | | |
|---|---|---|---|---|---|---|---|
| | ೧೮೯೭–೯೮ | ೧೮೯೮–೯೯ | ೧೮೯೯–೧೯೦೦ | ೧೯೦೦–೧೯೦೧ | ೧೯೦೧–೦೨ | ೧೯೦೨–೦೩ | ೧೯೦೩–೦೪ |
| ಮಧ್ಯಪ್ರಾಂತ್ಯಗಳು | (ಎ) | ೧೨,೨೮೮ | –೧೨೨,೮೮೩ | (ಎ) | ೨೨,೪೨,೪೦೮ | – ೭೦೫ | –೭,೪೦,೭೪೨ |
| ಬರ್ಮಾ ೧,೬೯,೪೩೫ | ೪,೧೧,೪೯೪ | ೨೬,೧೪,೩೧೨ | ೧೫,೧೬,೨೨೦ | ೭,೫೫,೨೮೫ | — | – | |
| ಅಸ್ಸಾಂ –೪೫,೫೮೦ | ೮೬,೭೪೨ | –೮,೧೫,೪೮೮ | ೮೬,೮೨೯ | ೧,೪೭,೩೫೩ | ೧೦,೦೮,೩೯೩ | ೧೧,೪೦,೫೧೭ | |
| ಬಂಗಾಳ–೩,೦೩,೨೫೦ | ೨,೧೯,೪೪೯ | ೭,೦೧,೮೯ | ೪,೪೩,೨೨೪ | ೬,೪೪,೧೭೦ | ೬,೨೩,೬೪೦ | ೮೭,೨೩,೪೯೬ | |
| ವಾಯವ್ಯ ಪ್ರಾಂತ್ಯಗಳು | (ಎ) | ೩,೨೮,೫೬೨ | ೭,೫೩,೮೧೫ | ೮,೦೪,೭೮೯ | – | – | – |
| ಪಂಜಾಬ್ –೨,೨೭೮ | ೧,೧೫,೩೭೯ | –೧೬,೫೩,೭೯೪ | (ಎ) | ೧೪,೯೬,೩೫೦ | ೧೦,೨೮,೭೭೦ | ೬,೭೪,೮೮೦ | |
| ಮದರಾಸು–೧,೫೭,೭೦೭ | ೧,೬೦,೭೦೬ | –೧೭,೫೮,೦೨೯ | –೩,೨೧,೦೧೩ | ೪೦,೪೧,೨೯೭ | –೧೫,೮೧೦ | ೫೨,೪೦,೮೦೯ | |
| ಬೊಂಬಾಯಿ–೧,೨೯,೬೬೩ | ೧,೦೦,೪೨೭ | –೧೫,೦೪,೨೭೧ | (ಎ) | ೫೮,೨೩,೨೩೫ | –೨೪,೨೩,೨೩೫ | –೧,೨೩,೦೦೦ | |
| ಯು.ಪಿ, ಆಗ್ರಾ ಮತ್ತು ಔಧ್ | – | – | – | – | –೯,೬೩,೭೮೮ | –೬೪,೩೭೨ | ೩೭,೧೧,೨೮೧ |

(ಎ) ಬಜೆಟ್ ಸಮತೋಲನದಿಂದಾಗಿ ಅಂತಿಮ ಶಿಲ್ಕು ಏನೂ ಇಲ್ಲ.

ಭಾರತ ಸರ್ಕಾರದ ವಾರ್ಷಿಕ ಹಣಕಾಸು ಮತ್ತು ವರಮಾನ ಲೆಕ್ಕ ವಿವರಣ ಪತ್ರಗಳಿಂದ ಸಂಗ್ರಹಿಸಲಾಗಿದೆ.

**ಹಿಂದೆ ಸೂಚಿಸಿದ ಮೂಲಗಳಿಂದಲೇ ಸಂಗ್ರಹಿಸಲಾಗಿದೆ.**

## ಪಟ್ಟಿ – ೧
## ಪ್ರಾಂತ್ಯಗಳಿಗೆ ಸಾಮ್ರಾಜ್ಯದ ವಿಶೇಷ ಕೊಡುಗೆಗಳು

(ರೂ.ಗಳಲ್ಲಿ)

| ವರ್ಷ | ಭಾರತ | ಮಧ್ಯ ಪ್ರಾಂತ್ಯಗಳು | ಅಸ್ಸಾಂ | ಬಂಗಾಳ | ವಾಯವ್ಯ ಪ್ರಾಂತ್ಯಗಳು ಮತ್ತು ಔಧ್ | ಪಂಜಾಬ್ | ಮದ್ರಾಸ್ | ಮುಂಬಯಿ | ಬರ್ಮಾ |
|---|---|---|---|---|---|---|---|---|---|
| ೧೮೯೭–೯೮ | – | ೨,೭೨,೦೦೦ | ೮,೦೦,೦೦೦ | – | ೧೦,೨೭,೦೦೦ | – | – | ೧೨,೧೮,೦೦೦ | – |
| ೧೮೯೮–೯೯ | – | ೫,೦೦,೦೦೦ | ೧೮,೦೦,೦೦೦ | ೧೭,೦೦,೦೦೦ | ೧೦,೦೦,೦೦೦ | ೫,೦೦,೦೦೦ | ೧೬,೯೬,೦೦೦ | ೪೮,೭೫,೦೦೦ | – |
| ೧೮೯೯–೧೯೦೦ | – | ೧೯,೩೨,೦೦೦ | – | – | – | ೯೫,೦೦೦ | ೩,೪೯,೦೦೦ | ೩೪,೩೭,೦೦೦ | – |
| ೧೯೦೦–೦೧ | – | ೩೪,೧೫,೦೦೦ | – | – | – | ೫,೯೮,೦೦೦ | – | ೬೪,೭೯,೦೦೦ | – |
| ೧೯೦೧–೦೨ | – | ೨೬,೮೯,೦೦೦ | ೨,೦೦,೦೦೦ | – | – | ೧೨,೪೦,೦೦೦ | ೩೨,೧೪,೦೦೦ | ೯೧,೦೦,೦೦೦ | – |
| | | ೬,೫೦,೦೦೦ | – | – | – | ೪,೦೦,೦೦೦ | ೧೦,೦೦,೦೦೦ | ೧೯,೫೦,೦೦೦ | – |
| ೧೯೦೨–೦೩ ೧ | – | ೨,೦೦,೦೦೦ | ೧,೦೦,೦೦೦ | ೧೦,೦೦,೦೦೦ | ೫,೦೦,೦೦೦ | ೪,೦೦,೦೦೦ | ೮,೦೦,೦೦೦ | ೬,೦೦,೦೦೦ | ೪,೦೦,೦೦೦ |
| ೨ | ಎ೭೦,೦೦೦ | ೨,೦೦,೦೦೦ | ೨,೮೦,೦೦೦ | ೬,೦೦,೦೦೦ | ೪,೫೦,೦೦೦ | ೫,೦೦,೦೦೦ | ೫,೫೦,೦೦೦ | ೫,೫೦,೦೦೦ | – |
| ೩ | ಬಿ೧,೧೦,೦೦೦ | ೨,೦೦,೦೦೦ | ೧,೫೦,೦೦೦ | – | ೩,೫೦,೦೦೦ | ೫,೦೦,೦೦೦ | ೫,೫೦,೦೦೦ | ೫,೫೦,೦೦೦ | – |
| ೧೯೦೩–೦೪ ೧ | – | ೨,೦೦,೦೦೦ | ೧,೦೦,೦೦೦ | ೧೦,೦೦,೦೦೦ | ೫,೦೦,೦೦೦ | ೪,೦೦,೦೦೦ | ೮,೦೦,೦೦೦ | ೬,೦೦,೦೦೦ | ೪,೦೦,೦೦೦ |
| ೨ | – | ೫,೦೦,೦೦೦ | ೫,೦೦,೦೦೦ | ೨,೦೦,೦೦೦ | ೩,೦೦,೦೦೦ | ೧೦,೦೦,೦೦೦ | ೫,೦೦,೦೦೦ | ೧೦,೦೦,೦೦೦ | – |
| ೩ | – | ೧,೯೦,೦೦೦ | ೧,೧೧,೦೦೦ | – | ೨,೨೬,೦೦೦ | ೨,೭೬,೦೦೦ | ೩,೫೦,೦೦೦ | ೩,೫೦,೦೦೦ | – |

೧. ವಿದ್ಯಾಭ್ಯಾಸಕ್ಕೆ (ಆವರ್ತ); ೨. ಸಾರ್ವಜನಿಕ ಕಾಮಗಾರಿಕೆ; ೩. ಜಿಲ್ಲೆ ಮತ್ತು ಇತರ ಸಂಸ್ಥೆಗಳ ಸುಧಾರಣೆಗೆ;

ಎ. ಬಲೂಚಿಸ್ಥಾನ, ರಜಪುತಾನ ಮತ್ತು ಮಧ್ಯ ಭಾರತದ ಸಾರ್ವಜನಿಕ ಕಾಮಗಾರಿಗೆ.

ಬಿ. ಪ್ರಾಂತ್ಯಗಳಿಗೆ ನಂತರದ ಅವಧಿಯಲ್ಲಿ ಹಂಚಿಕೆಮಾಡಲು 'ಭಾರತ'ದ ಅಂದಾಜುಗಳು.

ಭಾರತ ಸರ್ಕಾರದ ವಾರ್ಷಿಕ ಪ್ರಣಾಳಿಕೆಯಿಂದ ಉದ್ಧೃತ.

## ೧೯೦೨–೦೩ರ ಮರುವಿಮರ್ಶೆ

೧೮೯೭ರಲ್ಲಿ ಪ್ರಾಂತ್ಯಗಳೊಡನೆ ಮಾಡಿಕೊಂಡ ಒಪ್ಪಂದಗಳು ಸಾಮಾನ್ಯವಾಗಿ ೧೯೦೨–೦೩ರ ಅವಧಿಯಲ್ಲಿ ಕೊನೆಗೊಳ್ಳಬೇಕಾಗಿತ್ತು. ನಿಯತಕಾಲದ ಒಪ್ಪಂದಗಳ ಮರುವಿಮರ್ಶೆಯ ಮುಖ್ಯ ಉದ್ದೇಶ ಮುಂಬರುವ ಐದು ವರ್ಷಗಳಿಗೆ ಆಗಬಹುದಾದ ಪ್ರಾಂತೀಯ ವೆಚ್ಚದ ಸರಾಸರಿ ಪ್ರಮಾಣವನ್ನು ನಿರ್ಧರಿಸುವುದಾಗಿತ್ತು ಮತ್ತು ಈ ಉದ್ದೇಶಕ್ಕಾಗಿ ಗಳಿಸಿದ ಐದು ವರ್ಷಗಳ ವೆಚ್ಚದ ಸರಾಸರಿ ಪ್ರಮಾಣವನ್ನು ಒಂದು ಸ್ಥೂಲ ಆಧಾರವಾಗಿಟ್ಟುಕೊಳ್ಳಲಾಗಿತ್ತು. ಹಿಂದಿನ ಮತ್ತು ಮುಂದಿನ ಐದು ವರ್ಷಗಳ ಅವಧಿಯ ಘಟನೆಗಳಲ್ಲಿ ಯಾವುದೇ ವ್ಯತ್ಯಾಸವಿಲ್ಲದೆ ಇದ್ದಲ್ಲಿ ಈ ಪದ್ಧತಿಯನ್ನನುಸರಿಸುವುದರಲ್ಲಿ ಯಾವ ದೋಷವೂ ಇರಲಿಲ್ಲ. ಆದರೆ ನಾವು ನೋಡಿದ ಹಾಗೆ ಹಿಂದಿನ ಐದು ವರ್ಷಗಳ ಪರಿಸ್ಥಿತಿ ಅತ್ಯಂತ ಅಸಾಮಾನ್ಯವಾಗಿದ್ದು ಅವು ಮುಂದಿನ ಐದು ವರ್ಷಗಳ ಅವಧಿಗಾಗಿ ಸೂಕ್ತ ಆಧಾರವಾಗಲು ಸಾಧ್ಯವಿರಲಿಲ್ಲ. ಆದ್ದರಿಂದ ಪ್ರಾಂತೀಯ ಸರ್ಕಾರಗಳೊಡನೆ ಇರುವ ಒಪ್ಪಂದಗಳ ಸಂಪೂರ್ಣ ಮರುವಿಮರ್ಶೆಯ ಪ್ರಶ್ನೆಯನ್ನು ಸಾಧಾರಣ ಪರಿಸ್ಥಿತಿಯುಂಟಾಗುವವರೆಗೆ ಕಾಯುವ ನಿರ್ಣಯವನ್ನು ಭಾರತ ಸರ್ಕಾರ ಕೈಗೊಂಡಿತು. ೧೯೦೨–೦೩ರಲ್ಲಿ ಆಗಬೇಕಾಗಿದ್ದ ಮರು ವಿಮರ್ಶೆಯನ್ನು ಬರ್ಮಾವನ್ನು ಹೊರತುಪಡಿಸಿ ಇತರ ಪ್ರಾಂತ್ಯಗಳಲ್ಲಿ ಮುಂದೂಡಲಾಯಿತು. ಏಕೆಂದರೆ ಬೇರೆ ಪ್ರಾಂತ್ಯಗಳಿಗೆ ಹೋಲಿಸಿದಾಗ ಬರ್ಮಾದೊಡನೆ ಮಾಡಿಕೊಂಡ ಒಪ್ಪಂದವು, ೧೮೯೬–೯೭ರಲ್ಲಿ ಅದನ್ನು ಎಷ್ಟೇ ನ್ಯಾಯಯುತ ಲೆಕ್ಕಾಚಾರದ ಪ್ರಕಾರ ಮಾಡಲಾಗಿದ್ದರೂ, ಬರ್ಮಾಕ್ಕೆ ಆ ಒಪ್ಪಂದದಿಂದ ಹೆಚ್ಚು ಅನುಕೂಲಕರವಾಗಿತ್ತು. ವೆಚ್ಚಕ್ಕಿಂತ ಆದಾಯದಲ್ಲಿ ಎಷ್ಟು ಹೆಚ್ಚಳವಾಗಿತ್ತೆಂಬ ಅಂಶ ಈ ಮುಂದಿನ ಪಟ್ಟಿಯಿಂದ ಗೊತ್ತಾಗುತ್ತದೆ.

| ಬರ್ಮಾ | ೧೮೯೭–೮ರಿಂದ ೧೯೦೧–೨ರ ಅವಧಿಗೆ ಒಪ್ಪಂದದ ಅಂದಾಜು ಸರಾಸರಿ ಪ್ರಮಾಣ | ೧೯೦೨–೩ರ ಅಂದಾಜು | ವ್ಯತ್ಯಾಸ |
|---|---|---|---|
| | ರೂ. | ರೂ. | ರೂ. |
| ಆದಾಯ | ೨,೯೩,೮೧,೦೦೦ | ೩,೭೩,೮೬,೦೦೦ | ೮೦,೦೫,೦೦೦ |
| ವೆಚ್ಚ | ೨,೯೩,೮೧,೦೦೦ | ೩,೩೧,೮೬,೦೦೦ | ೩೮,೦೫,೦೦೦ |
| ಹೆಚ್ಚಳ | – | ೪೨,೦೦,೦೦೦ | – |

ಇಂತಹ ವ್ಯವಸ್ಥೆಯನ್ನೇ ಮುಂದುವರಿಸಿಕೊಂಡು ಹೋಗುವುದು ಸಾಮ್ರಾಜ್ಯಕ್ಕೆ ಅಪ್ರಾಮಾಣಿಕ ಮತ್ತು ಇತರ ಪ್ರಾಂತ್ಯಗಳಿಗೆ ಅನ್ಯಾಯಯುತವಾಗಿತ್ತು. ಆದ್ದರಿಂದ ಸಾಮಾನ್ಯವಾಗಿ ಮರುವಿಮರ್ಶೆಯಾಗಬೇಕಾಗಿದ್ದಾಗ ಎಂದರೆ ೧೯೦೨–೦೩ರಲ್ಲಿ ಎಲ್ಲ ಪ್ರಾಂತ್ಯಗಳಿಗೂ ಒಟ್ಟಿಗೆ ಮರುವಿಮರ್ಶೆಯಾಗಬೇಕೆಂಬ ತತ್ವವನ್ನು ಕಡೆಗಣಿಸಿ ಬರ್ಮಾ ಪ್ರಾಂತ್ಯದೊಡನೆ ಇದ್ದ ಒಪ್ಪಂದವನ್ನು ಮಾತ್ರ ಮರುವಿಮರ್ಶೆ ಮಾಡಲಾಯಿತು. ಈ ಮರುವಿಮರ್ಶೆಯ ಪರಿಣಾಮವಾಗಿ ಭಾರತ ಸರ್ಕಾರವು

ಸಂಯೋಜಿತ ಆದಾಯದಲ್ಲಿ ಈ ಪ್ರಾಂತ್ಯದ ಹೆಚ್ಚಳವನ್ನು ತಾನೇ ತೆಗೆದುಕೊಂಡಿತು. ಭೂಕಂದಾಯದಲ್ಲಿನ ಪಾಲನ್ನೂ ೨/೩ ಭಾಗದಿಂದ ೧/೨ಕ್ಕೆ, ಮತ್ತು ಅಬ್ಕಾರಿಯಲ್ಲಿ ೧/೨ ದಿಂದ ೧/೩ಕ್ಕೆ ಇಳಿಸಲಾಯಿತಲ್ಲದೆ, ಈಗಾಗಲೇ ಪ್ರಾಂತ್ಯ ಹೊಂದಿದ್ದ ವೆಚ್ಚದ ಬಾಬ್ತುಗಳಿಗೆ ಇನ್ನೂ ಕೆಲವು ಸಣ್ಣಪುಟ್ಟ ಬಾಬ್ತುಗಳನ್ನು ಸೇರಿಸಲಾಯಿತು. ಈ ಬದಲಾವಣೆಗಳಿಂದಾಗಿ ೧೯೦೩ ರಿಂದ ೧೯೦೭ರ ಅವಧಿಗೆ ಮಾಡಲಾದ ಹೊಸ ಒಪ್ಪಂದದ ಪ್ರಕಾರ ಬರ್ಮಾದ ಆದಾಯ ಮತ್ತು ವೆಚ್ಚದ ಸರಾಸರಿ ಪ್ರಮಾಣ ಈ ರೀತಿ ಪರಿವರ್ತಿತಗೊಂಡಿತು:-

| ಆದಾಯ ರೂ. | ಹಂಚಿಕೆಯಲ್ಲಿ ಹೊಂದಾಣಿಕೆ ರೂ. | ಒಟ್ಟು ಆದಾಯ ರೂ. | ಒಟ್ಟು ಖರ್ಚು ರೂ. |
|---|---|---|---|
| ೨,೭೮,೩೧,೦೦೦ | ೫೩,೦೨,೦೦೦ | ೩,೩೧,೩೩,೦೦೦ | ೩,೩೧,೩೩,೦೦೦ |

ಪಂಜಾಬ್ ಈ ಅವಧಿಯ ಒಪ್ಪಂದದ ಮರುವಿಮರ್ಶೆಗೊಳಗಾದ ಇನ್ನೊಂದು ಪ್ರಾಂತ್ಯವಾಗಿತ್ತು. ವಾಯವ್ಯ ಪ್ರಾಂತ್ಯಗಳನ್ನು (೧) ವಾಯವ್ಯ ಪ್ರಾಂತ್ಯಗಳು ಮತ್ತು (೨) ಈಗ ಸಂಯುಕ್ತ ಪ್ರಾಂತ್ಯ (ಯು.ಪಿ.) ಎಂದು ಕರೆಯುವ ಆಗ್ರಾ ಮತು ಔಧ್‌ಗಳನ್ನೊಳಗೊಂಡ ಸಂಯುಕ್ತ ಪ್ರಾಂತ್ಯ ಎಂದು ಎರಡು ಭಾಗಗಳನ್ನಾಗಿ ವಿಭಜಿಸಲಾಯಿತು. ಇದರೊಂದಿಗೆ ಪಂಜಾಬಿನ ಕೆಲವು ಜಿಲ್ಲೆಗಳನ್ನು ಅದರಿಂದ ಪ್ರತ್ಯೇಕಿಸಿ ಹೊಸದಾಗಿ ರಚಿಸಲಾದ ವಾಯವ್ಯ ಸರಹದ್ದು ಪ್ರಾಂತ್ಯಕ್ಕೆ ಜೋಡಿಸಲಾಯಿತು. ಹೀಗಾಗಿ ಪಂಜಾಬ್ ಪ್ರಾಂತ್ಯದ ಆದಾಯ ಮತ್ತು ವೆಚ್ಚಗಳಲ್ಲಿ ಮರುಹೊಂದಾಣಿಕೆಯಾಗಬೇಕಾಯಿತು. ಆದರೆ ಇದು ಒಪ್ಪಂದದ ಒಟ್ಟಾರೆ ಮರುವಿಮರ್ಶೆಯಾಗಿರಲಿಲ್ಲ. ಈ ಬದಲಾವಣೆಗಳು ಹಂಚಿಕೆಯಲ್ಲಿ ಆವಶ್ಯಕ ಮಾರ್ಪಾಡಿಗೆ ಮಾತ್ರ ಸೀಮಿತವಾಗಿತ್ತು.

## ೧೯೦೪-೦೫ರ ಅರೆ-ಕಾಯಂ ಮರುವಿಮರ್ಶೆ

ಮೇಲೆ ನಾವು ವಿವರಿಸಿದ ಅಪವಾದಗಳನ್ನು ಬಿಟ್ಟು ೧೮೯೭ರ ಒಪ್ಪಂದಗಳನ್ನು ೧೯೦೪ರ ಕೊನೆಯವರೆಗೆ ವಿಸ್ತರಿಸಲಾಯಿತು. ಈ ರೀತಿ ಒಪ್ಪಂದವನ್ನು ಮುಂದೆ ಹಾಕುವುದಕ್ಕೆ ಇದ್ದ ಕಾರಣ ನಾನು ಈಗಾಗಲೇ ವಿವರಿಸಿರುವಂತೆ ೧೯೦೧-೦೨ರ ವರ್ಷದಲ್ಲಿನ ಅಸಾಧಾರಣ ಪರಿಸ್ಥಿತಿಗಳೇ ಆಗಿದ್ದವು. ಆದರೆ ಮರುವಿಮರ್ಶೆಗೆ ಮುಂಚೆ, ಸಾಧಾರಣ ವರ್ಷ ಬರಲೆಂದು ಕಾಯುವುದಕ್ಕೆ ಭಾರತ ಸರ್ಕಾರಕ್ಕೆ ಇನ್ನೂ ಒಂದು ಕಾರಣವಿತ್ತು. ಅದೇಂದರೆ, ಈ ಅವಧಿಯಲ್ಲಿ ಸರ್ಕಾರ ಪ್ರಾಂತೀಯ ಹಣಕಾಸು ಒಂದು ಕಾಯಂ ಸ್ವರೂಪವನ್ನು ಕೊಡಬೇಕೆಂದು ಆಲೋಚಿಸುತ್ತಿತ್ತು. ೧೮೮೧ರಲ್ಲಿ ಪ್ರತಿ ವರ್ಷದ ಬಜೆಟ್ ವ್ಯವಸ್ಥೆಯನ್ನು ತಪ್ಪಿಸಿ, ಐದು ವರ್ಷದ ಮುಂಗಡ ಪತ್ರ ವ್ಯವಸ್ಥೆಯನ್ನು ಸ್ಥಾಪಿಸಲಾಗಿತ್ತು. ಇದು ಪ್ರಾಂತೀಯ ಹಣಕಾಸು ವ್ಯವಸ್ಥೆಗೆ ಒಂದು ನಿರಂತರತೆ ಮತ್ತು ದೃಢತೆಯನ್ನು ತಂದುಕೊಡುವುದರಲ್ಲಿ ಸಾಕಷ್ಟು ಯಶಸ್ಸನ್ನು ಸಾಧಿಸಿದ್ದರೂ, ಒಂದು ಕಾಯಂ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಸಾಕಾದ ಕ್ರಮವಾಗಿರಲಿಲ್ಲ. ಐದು ವರ್ಷದ ಬಜೆಟ್ ವ್ಯವಸ್ಥೆಯಲ್ಲಿ, ಪ್ರಾಂತೀಯ ಸರ್ಕಾರಗಳು ತಮ್ಮ ವರಮಾನ ಮೂಲಗಳನ್ನು ಪೋಷಿಸಿಕೊಳ್ಳುವ ಮತ್ತು ವೆಚ್ಚಗಳಲ್ಲಿ ಮಿತವ್ಯಯವನ್ನು ಸಾಧಿಸುವ ಸ್ವಾತಂತ್ರ್ಯವನ್ನು ಹೊಂದಿದ್ದವು. ಈ ರೀತಿಯ ಅನುಕೂಲತೆ

ಇದ್ದರೂ, ಈ ಐದು ವರ್ಷ ಎನ್ನುವುದು, ಪ್ರಾಂತೀಯ ಹಣಕಾಸು ವ್ಯವಸ್ಥೆಗೆ ಸ್ವಲ್ಪ ಬಾಧಕ ಆಗಿತ್ತು. ಐದು ವರ್ಷದ ಅವಧಿಯಲ್ಲಿ, ಮೊದಲ ಮೂರು ವರ್ಷಗಳು, ಸಾಧ್ಯವಾದಷ್ಟೂ ವೆಚ್ಚದಲ್ಲಿ ಮಿತವ್ಯಯವನ್ನು ಸಾಧಿಸುವ ಪ್ರಯತ್ನವನ್ನು ಪ್ರಾಂತ್ಯಗಳು ಮಾಡುತ್ತಿದ್ದವು. ಕೊನೆಯ ಎರಡು ವರ್ಷಗಳಲ್ಲಿ ವೆಚ್ಚ ಹೆಚ್ಚಳ ಮಾಡಿ, ಆದಾಯ-ವೆಚ್ಚಗಳ ನಡುವಣ ವ್ಯತ್ಯಾಸವನ್ನು ಭಾರತ ಸರ್ಕಾರದ ಒಪ್ಪಂದದ ಅವಧಿಯಲ್ಲಿ ತುಂಬಿಕೊಡುವಂತಾಗಬೇಕೆಂದು ಪ್ರಯತ್ನಿಸುತ್ತಿದ್ದವು. ಯಾವುದೇ ಸ್ಥಳೀಯ ಸರ್ಕಾರ, ಐದು ವರ್ಷದಷ್ಟು ಅಲ್ಪಾವಧಿಯಲ್ಲಿ, ಅತ್ಯಂತ ಪ್ರಬುದ್ಧವಾದ ಮತ್ತು ಮುಕ್ತವಾದ ಸುಧಾರಣಾ ಯೋಜನೆಗಳನ್ನು ಕಾರ್ಯಗತ ಮಾಡಬಹುದೆಂದು ನಿರೀಕ್ಷಿಸುವುದು ಕಷ್ಟ. ಹೀಗಾಗಿ ಹೆಚ್ಚಿನ ಪ್ರಾಂತ್ಯಗಳು ಮೊದಲ ಎರಡು ಮೂರು ವರ್ಷಗಳಲ್ಲಿ ಯೋಜನೆಗಳನ್ನು ರೂಪಿಸಿ, ಕೊನೆಯ ಎರಡು ವರ್ಷಗಳಲ್ಲಿ ಬೇಗ ಬೇಗ ಈ ಯೋಜನೆಗಳಿಗೆ ಕಾರ್ಯರೂಪ ಕೊಡುವುದಕ್ಕೆ ಯತ್ನಿಸುತ್ತಿದ್ದವು. ಹೀಗೆ ಯೋಜನೆಗಳನ್ನು ರೂಪಿಸುವುದರಲ್ಲಿದ್ದ ಒಂದೇ ಒಂದು ಅನುಕೂಲವೆಂದರೆ, ಅದನ್ನು ಒಪ್ಪಂದಗಳ ಮರುವಿಮರ್ಶೆಯಾಗುವ ಅವಧಿಯು ಪ್ರಾರಂಭವಾಗುವುದರೊಳಗೆ ಮುಗಿಸುವುದಾಗಿತ್ತು. ಹೀಗಾಗಿ ಐದು ವರ್ಷದ ಬಜೆಟ್‌ನ ಒಂದು ನೇರ ಪರಿಣಾಮ ಒಪ್ಪಂದದ ಅವಧಿ ಮುಗಿಯುವುದರೊಳಗೆ ಸಾಮಾನ್ಯ ವೆಚ್ಚಗಳನ್ನು ಪೂರೈಸುವುದಾಗಿತ್ತು. ಇದೇನೂ ಯಾವ ಹಿನ್ನೆಲೆಯೂ ಇಲ್ಲದ ಹೇಳಿಕೆಯಲ್ಲ. ಪ್ರಾಂತ್ಯಗಳ ವಾರ್ಷಿಕ ಆಧಿಕ್ಯವನ್ನು ಗಮನಿಸಿದರೆ, ಅವು ಹೇಗೆ, ಪಂಚವಾರ್ಷಿಕ ಅವಧಿಯ ಪ್ರಾರಂಭಿಕ ಏರಿಕೆಯನ್ನು ತೋರಿಸುತ್ತವೆ ಮತ್ತು ಕೊನೆಯ ವರ್ಷಗಳಲ್ಲಿ ಹೇಗೆ ಇಳಿತಾಯವನ್ನು ತೋರಿಸುತ್ತವೆ ಎನ್ನುವುದು ಸ್ಪಷ್ಟವಾಗುತ್ತದೆ. ಈ ರೀತಿಯ ಉಳಿತಾಯ ಮತ್ತು ದುಂದು ವೆಚ್ಚದ ದುಷ್ಪರಿಣಾಮಗಳನ್ನು ತೊಡೆದು ಹಾಕಲು ಇದ್ದ ಒಂದೇ ಒಂದು ಮಾರ್ಗವೆಂದರೆ, ಐದು ವರ್ಷದ ಅವಧಿಯ ನಂತರ ಮರುವಿಮರ್ಶೆಯ ಪದ್ಧತಿಯನ್ನು ಕೈಬಿಡುವುದಾಗಿತ್ತು. ಈ ಕ್ರಮವನ್ನು ಭಾರತ ಸರ್ಕಾರ ತುಂಬಾ ಧೈರ್ಯವಾಗಿ ಕೈಗೊಂಡಿತು. ಮರುವಿಮರ್ಶಿಸುವ ಹಕ್ಕು ಭಾರತ ಸರ್ಕಾರಕ್ಕೆ ಪ್ರಿಯವಾಗಿತ್ತು. ಪ್ರಾಂತ್ಯಗಳು ಈ ಕ್ರಮವನ್ನು ವಿರೋಧಿಸುತ್ತಿದ್ದ ಪರಿಸ್ಥಿತಿಯಲ್ಲೂ ಭಾರತ ಸರ್ಕಾರ ಅದನ್ನು ಜಾರಿಗೊಳಿಸಿತ್ತು. ಆದರೆ ಇದನ್ನು ಕಾರ್ಯಗತಗೊಳಿಸುವುದರಿಂದ ಪ್ರಾಂತ್ಯಗಳು ವೆಚ್ಚದ ವಿಷಯದಲ್ಲಿ ಕುಚೇಷ್ಟೆಮಾಡುವ ಸಾಧ್ಯತೆ ಇದ್ದುದರಿಂದ ಅದನ್ನು ನಂತರ ಕೈಬಿಡಲಾಯಿತು.

೧೯೦೩-೦೪ನ್ನು ಸಾಧಾರಣ ವರ್ಷವೆಂದು ಪರಿಗಣಿಸಿ, ಭಾರತ ಸರ್ಕಾರ, ವಿವಿಧ ಪ್ರಾಂತ್ಯಗಳ ಒಪ್ಪಂದಗಳನ್ನು ಮರುವಿಮರ್ಶಿಸಲು ತೀರ್ಮಾನಿಸಿತು. ಪ್ರಾಂತ್ಯಗಳ ಒಟ್ಟು ವೆಚ್ಚದ ಆಧಾರದ ಮೇಲೆ ವರಮಾನವನ್ನು ಸಾಮ್ರಾಜ್ಯ ಹಾಗೂ ಪ್ರಾಂತ್ಯಗಳ ನಡುವೆ ಹೊಂದಾಣಿಕೆ ಮಾಡುವುದು ಒಪ್ಪಂದಗಳ ಮುಖ್ಯ ಉದ್ದೇಶವಾಗಿತ್ತು. ಪ್ರಾಂತ್ಯಗಳ ಒಟ್ಟು ವೆಚ್ಚ ವರಮಾನದ ೧/೪ ಭಾಗವಿದ್ದರೆ, ಸಾಮ್ರಾಜ್ಯದ ವೆಚ್ಚ, ಸೈನ್ಯ ಮತ್ತು ಗೃಹ ಖಾತೆಗಳನ್ನೊಳಗೊಂಡಂತೆ ವರಮಾನದ ೩/೪ ಭಾಗವಿತ್ತು. ಇದನ್ನೇ ಆಧಾರವಾಗಿಟ್ಟುಕೊಂಡು, ಪ್ರಾಂತ್ಯ ಹಾಗೂ ಸಾಮ್ರಾಜ್ಯಗಳ ನಡುವೆ ವರಮಾನವನ್ನು ಹಂಚಲು ಉದ್ದೇಶಿಸಲಾಯಿತು. ಜಂಟಿ ಬಾಬ್ತುಗಳಲ್ಲಿ ಕೆಳಗೆ ಸೂಚಿಸಿರುವಂತೆ ವರಮಾನ ಮತ್ತು ವೆಚ್ಚ ಬಾಬ್ತುಗಳನ್ನು ಹಂಚಿಕೊಳ್ಳಬೇಕೆಂದು ಸೂಚಿಸಲಾಯಿತು.

| | ಸಾಮ್ರಾಜ್ಯ | ಪ್ರಾಂತ್ಯ |
|---|---|---|
| ಬಂಗಾಳ, ಸಂಯುಕ್ತ ಪ್ರಾಂತ್ಯ (ಯು.ಪಿ.) | ೩/೪ | ೧/೪ |
| ಪಂಜಾಬ್, ಬರ್ಮಾ | ೫/೮ | ೩/೮ |
| ಮಧ್ಯಪ್ರಾಂತ್ಯಗಳು, ಅಸ್ಸಾಂ | ೧/೨ | ೧/೨ |

ಕೇಂದ್ರ ಸರಕಾರವು, ಪಂಜಾಬ್, ಬರ್ಮಾ, ಮಧ್ಯ ಪ್ರಾಂತ್ಯ ಮತ್ತು ಅಸ್ಸಾಂಗಳ ವಿಷಯದಲ್ಲಿ ಬೇರೆಬೇರೆ ಅನುಪಾತವನ್ನು ಗೊತ್ತು ಮಾಡಿದುದರ ಕಾರಣವೆಂದರೆ, ಹಿಂದುಳಿದಿರುವ ಈ ಪ್ರಾಂತ್ಯಗಳು, ಅಭಿವೃದ್ಧಿ ಹೊಂದಿರುವ ಪ್ರಾಂತ್ಯಗಳ ಮಟ್ಟವನ್ನು ಹೊಂದಬೇಕೆಂಬುದು.

೧೯೦೪–೦೫ರ ಒಪ್ಪಂದಗಳಲ್ಲಿ, ಬಂಗಾಳ, ಮದರಾಸು, ಅಸ್ಸಾಂ ಮತ್ತು ಉತ್ತರ ಪ್ರದೇಶ ಪ್ರಾಂತ್ಯಗಳಿಗೆ ಸಂಬಂಧಿಸಿದ ಒಪ್ಪಂದಗಳು ಕಾಯಂ ಸ್ವರೂಪದ್ದಾದುವೆಂದು ಭಾರತ ಸರ್ಕಾರ ಘೋಷಿಸಿತು. ಯಾವುದಾದರೂ ಪ್ರಾಂತ್ಯಕ್ಕೆ ಅನ್ಯಾಯವಾಗುತ್ತಿರುವಾಗ ಮತ್ತು ಯಾವುದಾದರೂ ಪ್ರಾಂತ್ಯ ತುಂಬಾ ಅಸಾಧಾರಣವಾದ ಸಂಕಷ್ಟವನ್ನು ಅನುಭವಿಸುತ್ತಿರುವಾಗ ಮಾತ್ರ ಈ ಒಪ್ಪಂದವನ್ನು ಮರುವಿಮರ್ಶಿಸಬಹುದಾಗಿತ್ತು. ಈ ಸ್ವರೂಪದ ಒಪ್ಪಂದದಿಂದಾಗಿ, ಇದನ್ನು ಅರೆ-ಕಾಯಂ ಒಪ್ಪಂದವೆಂದು ಹೇಳಲಾಯಿತು. ಈ ಸ್ವರೂಪದ ಒಪ್ಪಂದವನ್ನು ಜಾರಿಗೆ ತಂದ ಪ್ರಾಂತ್ಯಗಳಲ್ಲಿ, ಇತರ ಪ್ರಾಂತ್ಯಗಳಿಗೆ ಹೋಲಿಸಿದಂತೆ, ಇವುಗಳಿಗೆ ನ್ಯಾಯ ಉಂಟಾಗುವಂತೆ ಮಾಡಲು ಜಂಟಿ ಬಾಬ್ತುಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲಾಯಿತು. ಅವು ಕೆಳಗಿನಂತಿದ್ದವು.

| ವರಮಾನ | ಪ್ರಾಂತ್ಯದ ಹಿಸ್ಸೆ | | | ವೆಚ್ಚ | ಪ್ರಾಂತ್ಯದ ಹಿಸ್ಸೆ | | |
|---|---|---|---|---|---|---|---|
| | ಬಂಗಾಳ | ಮದರಾಸು | ಸಂಯುಕ್ತ ಪ್ರಾಂತ್ಯ(ಯು.ಪಿ) | | ಬಂಗಾಳ | ಮದರಾಸು | ಸಂಯುಕ್ತ ಪ್ರಾಂತ್ಯ(ಯು.ಪಿ) |
| ಅಬ್ಕಾರಿ | ೭/೧೬ | – | – | ಅಬ್ಕಾರಿ | ೭/೧೬ | – | – |
| ಸ್ಟಾಂಪುಗಳು | ೧/೨ | ೧/೨ | ೧/೨ | ಸ್ಟಾಂಪುಗಳು | ೧/೨ | ೧/೨ | ೧/೨ |
| ನೋಂದಣಿ | ಇಡೀ | ಇಡೀ | – | ನೋಂದಣಿ | – | – | ಇಡೀ |
| ನೀರಾವರಿ | – | – | ಇಡೀ | ನೀರಾವರಿ | ಇಡೀ | ಇಡೀ | ಇಡೀ |

(ಭಾರತ ಸರ್ಕಾರದ ೧೯೦೪–೫ರ ಹಣಕಾಸು ಪ್ರಣಾಳಿಕೆಯಿಂದ ಸಂಗ್ರಹಿಸಲಾಗಿದೆ: ಪುಟ ೬೭)

ಈ ಬದಲಾವಣೆಗಳಲ್ಲದೆ, ಭಾರತ ಸರ್ಕಾರ ಮುಂದಿನ ಅನುದಾನಗಳನ್ನು ಸಹ ಈ ಪ್ರಾಂತ್ಯಗಳಿಗೆ ಮಂಜೂರು ಮಾಡಿತ್ತು.

| ಬಂಗಾಳ | | ಮದರಾಸು | | ಸಂಯುಕ್ತ ಪ್ರಾಂತ್ಯಗಳು | |
|---|---|---|---|---|---|
| ೧. | ಸಿಬ್ಬಂದಿಯ ಸಂಬಳ ಸಾರಿಗೆ ಸುಧಾರಣೆಗಾಗಿ ಹೆಚ್ಚುವರಿ ೪ಲಕ್ಷ ರೂ.ಗಳು | ೧. | ಸರ್ವೆ ಮತ್ತು ಸೆಟಲ್‌ಮೆಂಟ್‌ಗೆ ೨೦ ಲಕ್ಷ ರೂ. ಅನುದಾನ | ೧. | ೪೦ ಲಕ್ಷ ರೂ.ಗಳನ್ನು ನೀರಾವರಿ ವರಮಾನದ ಗ್ಯಾರಂಟಿ. |
| ೨. | ಡೆಪ್ಯೂಟಿ ಕಲೆಕ್ಟರ್ ಅವರ ಸಿಬ್ಬಂದಿಯನ್ನು ಬಲಪಡಿಸುವುದಕ್ಕಾಗಿ ರೂ.೨.೫ ಲಕ್ಷಕ್ಕೆ ಮೀರದಂತೆ ಹೆಚ್ಚುವರಿ ಅನುದಾನ | ೨. | ಕೆಲವು ಸ್ಥಳೀಯ ಸಂಸ್ಥೆಗಳ ಸಂಸ್ಥೆಗಳ ಹಣಕಾಸು ಪರಿಸ್ಥಿತಿಯ ಸುಧಾರಣೆಗೆ ವರ್ಷಕ್ಕೆ ೭೫,೦೦೦ ರೂಪಾಯಿ | ೨. | ಸ್ಥಳೀಯ ಸಂಸ್ಥೆಗಳ ಹಣಕಾಸು ಪರಿಸ್ಥಿತಿಯ ಸುಧಾರಣೆಗೆ ವರ್ಷಕ್ಕೆ ೨.೫ಲಕ್ಷ ರೂಪಾಯಿ. |
| | | ೩. | ಕೃಷಿ ಪ್ರಯೋಗಗಳಿಗಾಗಿ ವರ್ಷಕ್ಕೆ ೫೦,೦೦೦ ರೂಪಾಯಿಗಳು. | ೩. | ಜಿಲ್ಲಾ ಬೋರ್ಡ್‌ಗಳ ಸುಧಾರಣೆಗೆ ವರ್ಷಕ್ಕೆ ೧/೨ ಲಕ್ಷ ರೂ.ಗಳು. |
| | | ೪. | ಜಿಲ್ಲಾ ಆಡಳಿತವನ್ನು ಪುನರ್ನವೀಕರಿಸಲು ಅಗತ್ಯವಾದ ಖರ್ಚಿನ ನೀಡಿಕೆ ಭರವಸೆ. | | |

(ಭಾರತ ಸರ್ಕಾರದ ಅದೇ ಹೇಳಿಕೆಯಿಂದ ಸಂಗ್ರಹಿಸಲಾಗಿದೆ : ಪುಟ ೬೭)

ಅರೆ-ಕಾಯಂ ವ್ಯವಸ್ಥೆಗೆ ಬಂದ ಪ್ರಾಂತ್ಯಗಳಲ್ಲಿ, ಅವುಗಳ ಹಿಸ್ಸೆಯಲ್ಲಿ ಆದ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಂಡ ನಂತರ, ಜಂಟಿ ಬಾಬ್ತುಗಳಿಗೆ ಸಂಬಂಧಿಸಿದಂತೆ, ವರಮಾನ ಮತ್ತು ವೆಚ್ಚ ಕೆಳಗಿನ ಸ್ವರೂಪದ್ದಾಗಿತ್ತು:-

**ಸಾಮಾನ್ಯ ವರಮಾನ ಮತ್ತು ವೆಚ್ಚಗಳು (೦೦೦ ರೂ.ನಲ್ಲಿ)**

| ಪ್ರಾಂತ್ಯ | ವೆಚ್ಚ | ವರಮಾನ | | |
|---|---|---|---|---|
| | | ವರಮಾನ | ಕೊಡುಗೆಗಳು | ಒಟ್ಟು |
| ಮದರಾಸು | ೩,೫೦,೪೮ | ೨,೯೦,೮೨ | ೫೯,೬೬ | ೩,೫೦,೪೮ |
| ಬಂಗಾಳ | ೪,೯೮,೮೭ | ೪,೪೯,೮೪ | ೪೯,೦೩ | ೪,೯೮,೮೭ |
| ಯು.ಪಿ. | ೩,೬೬,೬೪ | ೩,೬೨,೬೪ | ೪೦೦ | ೩,೬೬,೬೪ |
| ಅಸ್ಸಾಂ | ೭೨,೦೭ | ೬೦,೦೭ | ೧೨,೦೦ | ೭೨,೦೭ |

ಅರೆ - ಕಾಯಂ ವ್ಯವಸ್ಥೆಯನ್ನು ಪಡೆದ ಪ್ರಾಂತ್ಯಗಳ ಒಪ್ಪಂದಗಳನ್ನು ಮರುವಿಮರ್ಶೆ ಮಾಡಿದುದರಿಂದ, ಸಾಮ್ರಾಜ್ಯಶಾಹಿಯ ವರಮಾನ ಬಾಬ್ತಿಗೆ ಉಂಟಾದ ಲಾಭ ರೂ. ೨,೦೬,೦೦೦ಗಳಾಗಿದ್ದವು. ಆದರೆ,

ಮರು ವಿಮರ್ಶೆಯಿಂದ ಸಾಮ್ರಾಜ್ಯಶಾಹಿಗೆ ರೂ. ೩೬,೦೦೦ ರೂ. ಗಳಷ್ಟು ಹೆಚ್ಚಿನ ಭಾರ ಕೂಡ ಉಂಟಾಯಿತು. ಏಕೆಂದರೆ, ಇದುವರೆಗೆ ಪ್ರಾಂತೀಯ ಬಜೆಟ್‌ಗಳು ಹೊರುತ್ತಿದ್ದ ಈ ಮೊತ್ತದ ವೆಚ್ಚವನ್ನು ಮರುವಿಮರ್ಶೆಯಿಂದಾಗಿ ಸಾಮ್ರಾಜ್ಯಶಾಹಿ ಹೊರಬೇಕಾಯಿತು. ಹೀಗಾಗಿ ಅದಕ್ಕೆ ನಿವ್ವಳ ಲಾಭ ವರ್ಷಕ್ಕೆ ಕೇವಲ ರೂ. ೧,೭೦,೦೦೦ ಗಳಾಗಿದ್ದವು ಅಷ್ಟೆ.

ಅರೆ–ಕಾಯಂ ಒಪ್ಪಂದಕ್ಕೆ ಬಂದ ಪ್ರಾಂತ್ಯಗಳು ತಮ್ಮ ಹಣಕಾಸು ವ್ಯವಹಾರವನ್ನು ಉತ್ತಮವಾಗಿ ಪ್ರಾರಂಭಿಸಲಿ ಎನ್ನುವ ಉದ್ದೇಶದಿಂದ, ಅವುಗಳ ಬಜೆಟ್ ಆರಂಭದ ಅವಧಿಗೆ ಕೆಳಗಿನ ಅನುದಾನವನ್ನು ಸಹ ಸಾಮ್ರಾಜ್ಯಶಾಹಿ ನೀಡಿತು.

| | |
|---|---|
| ಬಂಗಾಳಕ್ಕೆ | ೫೦ ಲಕ್ಷ ರೂಪಾಯಿಗಳು (ಕಲ್ಕತ್ತಾ ವಿಶ್ವವಿದ್ಯಾನಿಲಯದ ೫೦ ಲಕ್ಷ ರೂ.ಗಳ ಅನುದಾನವನ್ನು ಬಿಟ್ಟು) |
| ಮದರಾಸಿಗೆ | ೫೦ ಲಕ್ಷ ರೂಪಾಯಿಗಳು (ಸರ್ವೆ ಸೆಟಲ್‌ಮೆಂಟ್‌ಗೆ ಕೊಡಲಾದ ೨೦ ಲಕ್ಷ ರೂ.ಗಳನ್ನು ಒಳಗೊಂಡಂತೆ) |
| ಸಂಯುಕ್ತ ಪ್ರಾಂತ್ಯಗಳಿಗೆ (ಯು.ಪಿ) | ೩೦ ಲಕ್ಷ ರೂಪಾಯಿಗಳು (ಖರೀದಿ ವೆಚ್ಚಗಳನ್ನು ಸರಿಹೊಂದಿಸಲು ೧೧/೪ ಲಕ್ಷ ರೂ.ಗಳನ್ನು ಬಿಟ್ಟು) |
| ಅಸ್ಸಾಂಗೆ | ೨೦ ಲಕ್ಷ ರೂಪಾಯಿಗಳು. |

ಉಳಿದ ಪ್ರಾಂತ್ಯಗಳಲ್ಲಿ, ಬೊಂಬಾಯಿ ಮತ್ತು ಪಂಜಾಬ್ ೧೯೦೫–೦೬ರಲ್ಲಿ ಅರೆ–ಕಾಯಂ ವ್ಯವಸ್ಥೆಗೆ ಬಂದವು.

ಈ ಪ್ರಾಂತ್ಯಗಳ ಒಪ್ಪಂದಗಳನ್ನು ಮರು ವಿಮರ್ಶಿಸುವಾಗ, ೧೯೦೪–೦೫ರಲ್ಲಿ ಮಾಡಿದ ಒಪ್ಪಂದಗಳ ಸ್ವರೂಪದಿಂದ ಸ್ವಲ್ಪ ಭಿನ್ನವಾದ ಒಪ್ಪಂದವನ್ನು ಮಾಡಿಕೊಳ್ಳಲಾಯಿತು. ಕೆಲವೊಂದು ಅಪವಾದಗಳನ್ನು ಬಿಟ್ಟು ಜಂಟಿ ಬಾಬ್ತುಗಳ ವರಮಾನ ಮತ್ತು ವೆಚ್ಚಗಳ ಬಾಬ್ತಿನಲ್ಲಿ ಸಹ ಶೇ. ೫೦ರ ದರದಲ್ಲಿ ಹಂಚಿಕೊಳ್ಳಲಾಯಿತು. ಈ ಹಿಂದೆ ವಿವಿಧ ಬಾಬ್ತುಗಳ ನಡುವಣ ಹಂಚಿಕೆ, ಸಾಮ್ರಾಜ್ಯ ಮತ್ತು ಪ್ರಾಂತ್ಯಗಳ ನಡುವೆ ೩/೪ ಮತ್ತು ೧/೪ ಆಗಿತ್ತು.

ಈ ನಿಯಮಕ್ಕೆ ಕೆಳಗಿನ ಬಾಬ್ತುಗಳು ಮಾತ್ರ ಅಪವಾದವಾಗಿದ್ದವು:–

| ರೆವಿನ್ಯೂ ಬಾಬ್ತುಗಳು | ಪ್ರಾಂತ್ಯಗಳ ಹಿಸ್ಸೆ | | ವೆಚ್ಚ ಬಾಬ್ತುಗಳು | ಪ್ರಾಂತೀಯ ಹಿಸ್ಸೆ | |
|---|---|---|---|---|---|
| | ಮುಂಬಯಿ | ಪಂಜಾಬ್ | | ಮುಂಬಯಿ | ಪಂಜಾಬ್ |
| ಭೂಕಂದಾಯ | ೧೮೯೧/೨ ಲಕ್ಷ ರೂ.ಗಳವರೆಗೆ ಗ್ಯಾರಂಟಿ | ೩/೮ | ಭೂಕಂದಾಯ | ಇಡೀ | ಇಡೀ |
| ನೋಂದಣಿ | ಇಡೀ | ಇಡೀ | – | – | – |
| ನೀರಾವರಿ | ೧/೨ | ೩/೮ (೨೮ಲಕ್ಷ ರೂ.ಗಳ ವರೆಗೆ ಗ್ಯಾರಂಟಿ) | | | |

ಭಾರತ ಸರ್ಕಾರದ ಹಣಕಾಸು ಪ್ರಣಾಳಿಕೆಯಿಂದ ಸಂಗ್ರಹಿಸಲಾಗಿದೆ.

ಅರೆ–ಕಾಯಂ ವ್ಯವಸ್ಥೆಯಲ್ಲಿ ಇವೆರಡು ಪ್ರಾಂತ್ಯಗಳ, ಸಾಮಾನ್ಯ ವರಮಾನ ಮತ್ತು ವೆಚ್ಚಗಳು ಕೆಳಗಿನಂತಿದ್ದವು:–

| ಪ್ರಾಂತ್ಯಗಳು | ವೆಚ್ಚ ರೂ.ನಲ್ಲಿ | ವರಮಾನ ರೂ.ನಲ್ಲಿ | ವರಮಾನ | |
|---|---|---|---|---|
| | | | ಕೊಡುಗೆಗಳು ರೂ.ನಲ್ಲಿ | ಒಟ್ಟು ರೂ.ನಲ್ಲಿ |
| ಮುಂಬಯಿ | ೪,೯೧,೭೫,೦೦೦ | ೪,೪೮,೯೮,೦೦೦ | ೪೨,೭೭,೦೦೦ | ೪,೯೧,೭೫,೦೦೦ |
| ಪಂಜಾಬ್ | ೨,೪೯,೫೦,೦೦೦ | ೨,೪೬,೫೦,೦೦೦ | ೩,೦೦,೦೦೦ | ೨,೪೯,೫೦,೦೦೦ |

ಬರ ಮತ್ತು ಪ್ಲೇಗ್‌ನಿಂದ ಪೀಡಿತವಾದ ಈ ಪ್ರಾಂತ್ಯಗಳಿಗೆ ಸಾಮ್ರಾಜ್ಯ ಅನುಸರಿಸಿದ ಉದಾರನೀತಿಯ ಕೊಡುಗೆಗಳಿಂದಾಗಿ ಮತ್ತು ಅವುಗಳ ಹಿಸ್ಸೆಯನ್ನು ಹೆಚ್ಚಿಸಿದಕ್ಕಾಗಿ, ಸಾಮ್ರಾಜ್ಯಕ್ಕೆ ಒಪ್ಪಂದದಿಂದ ನಷ್ಟವೇ ಆಯಿತು. ಹೊಸ ಆದಾಯದ ಮೇಲೆ ಆಧಾರಿತವಾದ ಒಪ್ಪಂದದಿಂದ ಸಾಮ್ರಾಜ್ಯಕ್ಕೆ ಈ ಎರಡು ಪ್ರಾಂತ್ಯಗಳಿಂದ ೫೫,೯೫,೦೦೦ ರೂ. ಗಳ ನಷ್ಟ ಉಂಟಾಯಿತು. ವೆಚ್ಚದ ಜಂಟಿ ಬಾಬ್ತುಗಳಲ್ಲಿ, ಪ್ರಾಂತ್ಯಗಳ ಹಿಸ್ಸೆ ವರ್ಷಕ್ಕೆ ೨,೨೧,೦೦೦ ರೂಪಾಯಿಗಳಾದುದರಿಂದ, ಸಾಮ್ರಾಜ್ಯದ ವೆಚ್ಚದಲ್ಲಿ ಅಷ್ಟು ಉಳಿತಾಯವಾಯಿತು. ಹೀಗಾಗಿ ಈ ಎರಡು ಪ್ರಾಂತ್ಯಗಳ ಹಣಕಾಸು ವ್ಯವಸ್ಥೆಗೆ ದೃಢತೆಯನ್ನು ನೀಡುವ ದೃಷ್ಟಿಯಿಂದ ಮತ್ತು ಅವುಗಳ ಹಣಕಾಸು ವ್ಯವಸ್ಥೆಗೆ ಕಾಯಂ ಸ್ವರೂಪವನ್ನು ದೊರಕಿಸಿಕೊಡುವ ದೃಷ್ಟಿಯಿಂದ ಒಟ್ಟು ೩,೭೪,೦೦೦ ರೂಪಾಯಿಗಳ ತ್ಯಾಗವನ್ನು ಭಾರತ ಸರ್ಕಾರ ಮಾಡಿತು. ಈ ಮೊತ್ತ, ಆ ಪ್ರಾಂತ್ಯಗಳಿಗೆ ಆರಂಭದಲ್ಲಿ ಕೊಡಲಾಗಿದ್ದ ೫೦,೦೦,೦೦೦ ರೂಪಾಯಿಗಳಿಂದ ಹೊರತಾಗಿತ್ತು. ಈ ಆರಂಭದ ಅನುದಾನ ಆ ಪ್ರಾಂತ್ಯಗಳು ಸುಗಮವಾಗಿ ತಮ್ಮ ಹಣಕಾಸು ವ್ಯವಹಾರವನ್ನು ಆರಂಭಿಸಲಿ ಎನ್ನುವ ಉದ್ದೇಶದಿಂದ ಮಾಡಿದುದಾಗಿತ್ತು.

ಒಂದು ವರ್ಷದ ನಂತರ, ಮಧ್ಯಪ್ರಾಂತ್ಯಗಳೊಡನೆ ಮಾಡಲಾದ ಒಪ್ಪಂದವನ್ನು ಸಹ ೧ನೇ ಏಪ್ರಿಲ್ ೧೯೦೬ ರಿಂದ ಆರಂಭವಾಗುವಂತೆ ಅರೆ–ಕಾಯಂ ಸ್ವರೂಪದ್ದನ್ನಾಗಿ ಮಾಡಲಾಯಿತು. ಜಂಟಿ ಬಾಬ್ತಿನ ವರಮಾನ ಮತ್ತು ವೆಚ್ಚಗಳನ್ನು ಹೆಚ್ಚಿಸಲಾಯಿತು. ಬೊಂಬಾಯಿ ಮತ್ತು ಪಂಜಾಬ್‌ಗಳಿಗೆ ಹೋಲುವಂತೆ, ಅವುಗಳನ್ನು ಮಾರ್ಪಡಿಸಲಾಯಿತು. ಇದುವರೆಗೆ ಸಾಮ್ರಾಜ್ಯದ ನೇರ ಆಡಳಿತಕ್ಕೆ ಒಳಪಟ್ಟಿದ್ದ ಬೆರಾರ್ ಪ್ರಾಂತ್ಯವನ್ನು ಮಧ್ಯಪ್ರಾಂತ್ಯಗಳೊಡನೆ ಸೇರಿಸಿದ್ದರಿಂದ, ಜಂಟಿ ಬಾಬ್ತಿನ ಸಾಮ್ರಾಜ್ಯ ಮತ್ತು ಪ್ರಾಂತ್ಯಗಳ ನಡುವಣ ಹಂಚಿಕೆಯನ್ನು ೩/೪ ಮತ್ತು ೧/೪ ಗಳಿಂದ ೧/೨ ಮತ್ತು ೧/೨ಕ್ಕೆ ಬದಲಾಯಿಸಲಾಯಿತು. ಭೂ ವರಮಾನಗಳಿಗೆ ೮೨೧/೨ ಲಕ್ಷಗಳವರೆಗೆ ಗ್ಯಾರಂಟಿ ನೀಡಲಾಯಿತು. ಈ ಶೇ ೫೦ರ ಹಿಸ್ಸೆಗೆ ಇದ್ದ ಒಂದೇ ಒಂದು ಅಪವಾದದ ಬಾಬ್ತೆಂದರೆ, ನೋಂದಣಿ ಆದಾಯ. ಇದನ್ನು ಇಡೀಯಾಗಿ ಪ್ರಾಂತ್ಯಕ್ಕೆ ಬಿಟ್ಟುಕೊಡಲಾಯಿತು. ವರಮಾನ ಮತ್ತು ವೆಚ್ಚಗಳ ನಡುವೆ ಹೊಂದಾಣಿಕೆ ಮಾಡಲು ವರ್ಷಕ್ಕೆ ೨೭,೦೭,೦೦೭ ರೂ.ಗಳ ಕೊಡುಗೆಯನ್ನು ಗೊತ್ತುಮಾಡಿ, ಪ್ರಾರಂಭಕ್ಕೆ ಪ್ರಾಂತ್ಯಕ್ಕೆ ಹಣಕಾಸು ಅನುಕೂಲವಾಗಲೆಂದು ರೂ. ೩೦,೦೦,೦೦೦ ಅನುದಾನವನ್ನು ಕೊಡಲಾಯಿತು.

ಮಧ್ಯ ಪ್ರಾಂತ್ಯಗಳ ಒಪ್ಪಂದಕ್ಕೆ ಅರೆ-ಕಾಯಂ ಸ್ವರೂಪವನ್ನು ಕೊಟ್ಟಿದ್ದರಿಂದ ಈಗಾಗಲೇ ಈ ಸ್ವರೂಪವನ್ನು ಪಡೆದಿದ್ದ ಬಂಗಾಳ ಮತ್ತು ಅಸ್ಸಾಂಗಳ ಬಜೆಟ್‌ಗಳನ್ನು ಸಹ ಮರು ರೂಪಿಸುವುದು ಅಗತ್ಯವಾಯಿತು. ಇದು ಆಡಳಿತಾತ್ಮಕ ದೃಷ್ಟಿಯಿಂದ ಅನಿವಾರ್ಯವಾಗಿತ್ತು. ಇವೆರಡೂ ಪ್ರಾಂತ್ಯಗಳನ್ನು ೧) ಬಂಗಾಳ ೨) ಪೂರ್ವ ಬಂಗಾಳ ಮತ್ತು ಅಸ್ಸಾಂಗಳಾಗಿ ಮರುವಿಂಗಡಿಸಲಾಯಿತು. ಬಂಗಾಳದ ಹೊಸ ಪ್ರಾಂತ್ಯದ ಹಣಕಾಸು ಒಪ್ಪಂದವನ್ನು ಮರುವಿಮರ್ಶಿಸುವಾಗ ಅದಕ್ಕೆ, ಬೊಂಬಾಯಿ ಮತ್ತು ಪಂಜಾಬ್‌ಗಳಿಗೆ ಗೊತ್ತುಮಾಡಲಾಗಿದ್ದ ಹಿಸ್ಸೆಗಳನ್ನೆ ಗೊತ್ತುಮಾಡಲಾಯಿತು. ಅಂದರೆ ಸಾಮ್ರಾಜ್ಯ ಮತ್ತು ಪ್ರಾಂತ್ಯದ ನಡುವೆ ಜಂಟಿ ಬಾಬ್ತುಗಳ ೧/೨ ಮತ್ತು ೧/೨ದ ಹಿಸ್ಸೆಯನ್ನು ಗೊತ್ತುಮಾಡಲಾಯಿತು. ಆದರೆ ಸರ್ಕಾರದ ಎಸ್ಟೇಟ್‌ಗಳಿಂದ ಬರುವ ಭೂಕಂದಾಯ ವರಮಾನ ಮತ್ತು ನೋಂದಣಿ ವರಮಾನಗಳನ್ನು ಸಂಪೂರ್ಣವಾಗಿ ಪ್ರಾಂತ್ಯಕ್ಕೇ ಬಿಟ್ಟು ಕೊಡಲಾಯಿತು. ಈ ಉದಾರ ನೀಡಿಕೆಗಳನ್ನು ಸರಿದೂಗಿಸಲು, ನಿಶ್ಚಿತ ಕೊಡುಗೆಯನ್ನು ೯೮.೦೩ ಲಕ್ಷ ರೂ.ಗಳಿಂದ ೫.೭೨ ಲಕ್ಷ ರೂ.ಗಳಿಗೆ ಇಳಿಸಲಾಯಿತು.

ಹೊಸದಾಗಿ ರೂಪಿತವಾದ ಪೂರ್ವ ಬಂಗಾಳ ಮತ್ತು ಅಸ್ಸಾಂನಲ್ಲಿ ಸಹ ಜಂಟಿ ಬಾಬ್ತುಗಳ ವರಮಾನ ಮತ್ತು ವೆಚ್ಚವನ್ನು ಸಾಮ್ರಾಜ್ಯ ಮತ್ತು ಪ್ರಾಂತ್ಯ ಸಮನಾಗಿ ಹಂಚಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು. ನೋಂದಣಿ ವರಮಾನವನ್ನು ಇಲ್ಲಿ ಸಹ ಸಂಪೂರ್ಣವಾಗಿ ಪ್ರಾಂತ್ಯಕ್ಕೇ ಬಿಟ್ಟುಕೊಡಲಾಯಿತು. ಹೀಗೆ ಪ್ರಾಂತ್ಯದ ಹಿಸ್ಸೆಯನ್ನು ಹೆಚ್ಚು ಮಾಡಿದ್ದರಿಂದ, ಈ ಪ್ರಾಂತ್ಯದ ಬಜೆಟ್‌ನ ವರಮಾನ ಲೆಕ್ಕದಲ್ಲಿ ಬಹಳ ಹೆಚ್ಚಳ ಉಂಟಾಗತೊಡಗಿತು. ಹೀಗಾಗಿ, ಪ್ರಾಂತ್ಯದಿಂದ, ಸಾಮ್ರಾಜ್ಯಕ್ಕೆ ಹಣ ಹರಿಯುವಂತಹ ಋಣಾತ್ಮಕ ಹೊಂದಾಣಿಕೆ ನೀತಿಯನ್ನು ಭಾರತ ಸರ್ಕಾರ ಅನುಸರಿಸಬೇಕಾಯಿತು. ಅರೆ-ಕಾಯಂ ಸ್ವರೂಪವನ್ನು ಪಡೆದ ಪ್ರಾಂತ್ಯಗಳ ಸಾಧಾರಣ ವರಮಾನ ಮತ್ತು ಸಾಧಾರಣ ವೆಚ್ಚ ಕೆಳಗಿನಂತಿದ್ದವು.

| ಪ್ರಾಂತ್ಯ | ವೆಚ್ಚ | ಒಟ್ಟು ವರಮಾನ (ರೂ.ನಲ್ಲಿ) | | |
|---|---|---|---|---|
| | | ವರಮಾನ | ಕೊಡುಗೆಗಳು | ಒಟ್ಟು |
| ಮಧ್ಯ ಪ್ರಾಂತ್ಯಗಳು | ೧,೭೬,೪೩,೦೦೦ | ೧,೪೯,೩೬,೦೦೦ | ೨೭,೦೭,೦೦೦ | ೧,೭೬,೪೩,೦೦೦ |
| ಪೂರ್ವಬಂಗಾಳ ಮತ್ತು ಅಸ್ಸಾಂ | ೨,೧೨,೧೯,೦೦೦ | ೨,೧೮,೪೨,೦೦೦ | ೬,೨೩,೦೦೦ | ೨,೧೨,೧೯,೦೦೦ |
| ಬಂಗಾಳ | ೪,೭೨,೭೩,೦೦೦ | ೬೭,೦೧,೦೦೦ | ೫,೭೨,೦೦೦ | ೪,೭೨,೭೩,೦೦೦ |

ಸಾಮ್ರಾಜ್ಯದಿಂದ ಪ್ರಾಂತ್ಯಕ್ಕೆ ವಾರ್ಷಿಕ ರೂ. ೬೦,೦೦೦ಗಳ ನೀಡಿಕೆಯನ್ನು ಸರಿಯಾಗಿ ಉಪಯೋಗಿಸಿಕೊಳ್ಳಲು ಅನುವು ಮಾಡಿಕೊಡುವುದಕ್ಕಾಗಿ ಒಪ್ಪಂದದಲ್ಲಿ ಸ್ವಲ್ಪ ಬದಲಾವಣೆಗಳನ್ನು ಮಾಡಿಕೊಳ್ಳಲಾಯಿತು.

ಅರೆ-ಕಾಯಂ ವ್ಯವಸ್ಥೆಯ ಹೊರಗೆ ನಿಂತ ಒಂದೇ ಒಂದು ಪ್ರಾಂತ್ಯವೆಂದರೆ ಬರ್ಮಾ. ೧೯೦೨-೦೩ ರಲ್ಲಿ ಅದರೊಡನೆ ಮಾಡಿಕೊಂಡ ಒಪ್ಪಂದ ೫ ವರ್ಷದ ನಂತರ ಕೊನೆಗೊಂಡಿತ್ತು. ಭಾರತ ಸರ್ಕಾರ ಇತರ ಪ್ರಾಂತ್ಯಗಳೊಡನೆ ಏಕರೂಪತೆ ತರಲು ೧೯೦೭ರ ಏಪ್ರಿಲ್ ೧ ರಿಂದ ಆರಂಭವಾಗುವಂತೆ ಒಂದು ಅರೆ-ಕಾಯಂ ಒಪ್ಪಂದಕ್ಕೆ ಬರಲು ನಿರ್ಧರಿಸಿತು. ಇತರ ಪ್ರಾಂತ್ಯಗಳೊಡನೆ ಸಮಾನತೆಯನ್ನು ಸಾಧಿಸುವುದಕ್ಕಾಗಿ

ಬರ್ಮಾಕ್ಕೂ ಆದಾಯ, ವೆಚ್ಚಗಳಲ್ಲಿ ಸಮಾನ ಪಾಲನ್ನು ನೀಡಿತು. ಇತರ ಕಡೆಗಳಲ್ಲಿಯಂತೆ, ಉಪ್ಪು ಸಾಮ್ರಾಜ್ಯದ ಪಾಲಿಗೆ ಇತ್ತು. ಆರಂಭ ನಿಧಿಯಾಗಿ ರೂ. ೫೦,೦೦,೦೦೦ ಗಳನ್ನು ಮತ್ತು ವಾರ್ಷಿಕ ರೂ. ೯೦,೬೮,೦೦೦ ವಿತರಣೆಯನ್ನು ಹೊಂದಾಣಿಕೆಯ ಉದ್ದೇಶದಿಂದ ನೀಡಿತು.

೧೯೦೭ರ ಹೊತ್ತಿಗೆ ಎಲ್ಲಾ ಪ್ರಾಂತಗಳೂ ಈ ಅರೆ–ಕಾಯಂ ಒಪ್ಪಂದದ ಕಕ್ಷೆಯೊಳಗೆ ಬಂದಿದ್ದವು. ಇದರಿಂದಾಗಿ ಪ್ರಾಂತೀಯ ಹಣಕಾಸು ವ್ಯವಸ್ಥೆ ಯಾವ ಅಡಚಣೆಯೂ ಇಲ್ಲದೆ ಸುಸೂತ್ರವಾಗಿ ನಡೆಯಬಹುದು ಎಂಬುದನ್ನು ನಿರೀಕ್ಷಿಸಬಹುದಿತ್ತು. ಇತರ ಪ್ರಾಂತ್ಯಗಳೊಡನೆ ನಂತರ ಮಾಡಿಕೊಳ್ಳಲಾದ ಒಪ್ಪಂದದೊಂದಿಗೆ ಹೋಲಿಸಿದರೆ ೧೯೦೪ರಲ್ಲಿ ಮದರಾಸು ಮತ್ತು ಉತ್ತರ ಪ್ರದೇಶಗಳೊಡನೆ ಮಾಡಿಕೊಂಡ ಒಪ್ಪಂದದಿಂದ, ಆ ಪ್ರಾಂತ್ಯಗಳಿಗೆ ಸ್ವಲ್ಪ ಅನ್ಯಾಯವಾಗಿತ್ತು. ಈ ಅನ್ಯಾಯವನ್ನು ಹೋಗಲಾಡಿಸಲು ೧೯೦೭ರ ಏಪ್ರಿಲ್‌ನಲ್ಲಿ ಈ ಎರಡೂ ಪ್ರಾಂತ್ಯಗಳ, ಜಂಟಿ ಬಾಬ್ತುಗಳಲ್ಲಿ ಪ್ರಾಂತ್ಯಗಳ ಹಿಸ್ಸೆಯನ್ನು ಮರು ವಿಮರ್ಶಿಸಲಾಯಿತು. ಕೆಲವು ಅಪವಾದಗಳನ್ನು ಬಿಟ್ಟು ಈ ಹಿಸ್ಸೆಯನ್ನು ಶೇ. ೫೦ಕ್ಕೆ ಏರಿಸಲಾಯಿತು. ಅಪವಾದದ ಬುಬ್ತುಗಳೆಂದರೆ:

| ಮದರಾಸು | | | ಸಂಯುಕ್ತ ಪ್ರಾಂತ್ಯಗಳು | | |
|---|---|---|---|---|---|
| **ವರಮಾನ** | | | **ವರಮಾನ** | | |
| ೧. | ನೋಂದಣಿ. | ಇಡೀ ಪ್ರಾಂತೀಯ | ೧. | ಭೂವರಮಾನ | ೩/೮ ಪ್ರಾಂತೀಯ(ಕನಿಷ್ಠ ೨೪೦ ಲಕ್ಷ ರೂ.ಗಳು ಗ್ಯಾರಂಟಿ) |
| ೨. | ಭೂವರಮಾನ | ಒಂದು ಪಕ್ಷ ಪ್ರಾಂತ್ಯದ ವರಮಾನ ಕಡಿಮೆಬಿದ್ದರೂ ಕನಿಷ್ಠ ೩೦೮ ಲಕ್ಷ ರೂ. ಗಳನ್ನು ಗ್ಯಾರಂಟಿ ಮಾಡಲಾಯಿತು | ೨. | ನೀರಾವರಿ | ಪ್ರಮುಖ ನೀರಾವರಿಗಳಿಂದ ಕನಿಷ್ಠ ೬೦ ಲಕ್ಷ ರೂಪಾಯಿ ಗಳು ಗ್ಯಾರಂಟಿ (ಒಂದು ಪಕ್ಷ ಪ್ರಾಂತ್ಯದ ವರಮಾನ ಇದಕ್ಕಿಂತ ಕಡಿಮೆ ಬಿದ್ದರೂ) |
| **ವೆಚ್ಚ** | | | | | |
| ೧. | ನೋಂದಣಿ | ಇಡೀ ಪ್ರಾಂತೀಯ | | | |
| ೨. | ಭೂಕಂದಾಯ | ಇಡೀ ಪ್ರಾಂತೀಯ | | | |

ವರಮಾನವನ್ನು ಮೀರಿದ ಖರ್ಚಿಗಾಗಿ ಕೊಡಲಾದ ನಿಶ್ಚಿತ ಕೊಡುಗೆಗಳು ಕೆಳಗಿನಂತಿದ್ದವು:–

ಮದರಾಸಿಗೆ ............ ರೂ. ೨೨,೫೭,೦೦೦

ಸಂಯುಕ್ತ ಪ್ರಾಂತ್ಯಕ್ಕೆ ............ ರೂ. ೧೩,೮೯,೦೦೦

ಹೀಗೆ ಬ್ರಿಟಿಷ್ ಇಂಡಿಯಾದ ಪ್ರಾಂತೀಯ ಹಣಕಾಸು ಅನೇಕ ನಿಶ್ಚಿತ ಹಂತಗಳನ್ನು ದಾಟಿ

ಮೊದಲಿಗೆ, ಅದು ವರಮಾನ ಬಾಬ್ತುಗಳನ್ನು ಗೊತ್ತುಮಾಡಿದ ಬಜೆಟ್‌ಗಳು ಮತ್ತು ಹಂಚಿಕೊಳ್ಳುವ ವರಮಾನ ಬಜೆಟ್‌ಗಳ ಹಂತವನ್ನು ತಲಪಿತು. ನಂತರ ಅದು ಸಾಮ್ರಾಜ್ಯ ಮತ್ತು ಪ್ರಾಂತ್ಯಗಳು ಕೊನೆಯ ಹಂತವೆಂದು ಭಾವಿಸುವಂತಹ ಒಪ್ಪಂದದ ಮಟ್ಟವನ್ನು ಮುಟ್ಟಿತು. ಪ್ರಾಂತ್ಯಗಳ ನಿರೀಕ್ಷೆಗಳು ಎಷ್ಟರಮಟ್ಟಿಗೆ ಫಲಪ್ರದವಾದವು ಎನ್ನುವುದನ್ನು ಪ್ರಾಂತ್ಯಗಳ ಹಣಕಾಸಿನಲ್ಲಿ ಉಂಟಾದ ವಾರ್ಷಿಕ ಆಧಿಕ್ಯಗಳು ಮತ್ತು ಕೊರತೆಗಳು ಹಾಗೂ ಅವುಗಳಲ್ಲಿನ ವ್ಯತ್ಯಾಸದ ಅಂತರಗಳಿಂದ ಗುರುತಿಸಬಹುದು. ಇದಕ್ಕೆ ಸಂಬಂಧಿಸಿದ ಮಾಹಿತಿಯನ್ನು ಮುಂದಿನ ಪಟ್ಟಿಯಲ್ಲಿ ಕೊಡಲಾಗಿದೆ.

ಈ ಫಲಿತಾಂಶಗಳನ್ನು ಗುರುತಿಸುವಲ್ಲಿ, ಇದೇ ಅವಧಿಯಲ್ಲಿ ಸಹಾಯಾನುದಾನದ ಮೂಲಕ ಪ್ರಾಂತ್ಯಗಳಿಗೆ ಭಾರತ ಸರ್ಕಾರದಿಂದ ಮಾಡಲಾದ ವಿವಿಧ ಅನುದಾನಗಳ ಲೆಕ್ಕಗಳನ್ನು ತೆಗೆದುಕೊಳ್ಳಬೇಕು. ಆ ಅನುದಾನಗಳು ಮುಂದಿನ ಪಟ್ಟಿಯಲ್ಲಿದೆ.

ಒಂದೆರಡು ಪ್ರಾಂತ್ಯಗಳನ್ನು ಬಿಟ್ಟರೆ, ಉಳಿದ ಪ್ರಾಂತ್ಯಗಳ ಹಣಕಾಸು ಭದ್ರತೆಯನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಈ ಅನುದಾನಗಳು ಅತ್ಯಂತ ಅಗತ್ಯವಾಗಿದ್ದವು ಎಂದು ಭಾವಿಸುವುದಕ್ಕಾಗುವುದಿಲ್ಲ. ವಾಸ್ತವವಾಗಿ ಕೊನೆಯ ವರ್ಷಗಳನ್ನು ನಾವು ಗಮನಿಸಿದರೆ, ಅನೇಕ ಪ್ರಾಂತ್ಯಗಳ ವರಮಾನ ಅಗತ್ಯವಾದುದಕ್ಕಿಂತ ಅಧಿಕವಾಗಿತ್ತು ಎನ್ನುವುದು ಸುಸ್ಪಷ್ಟ. ನಿಶ್ಚಿತವಾಗಿ ಈ ಕೊನೆಯ ವರ್ಷಗಳು ಆದರ್ಶ ವರ್ಷಗಳಾಗಿದ್ದವು ಎಂದು ಹೇಳಬಹುದು.

| ಪ್ರಾಂತ್ಯಗಳು | ಪ್ರಾಂತೀಯ ಆಧಿಕ್ಯಗಳು ಅಥವಾ ಕೊರತೆಗಳು (ರೂ.ನಲ್ಲಿ) | | | | | | | |
|---|---|---|---|---|---|---|---|---|
| | ೧೯೦೪-೦೫ | ೧೯೦೫-೦೬ | ೧೯೦೬-೦೭ | ೧೯೦೭-೦೮ | ೧೯೦೮-೦೯ | ೧೯೦೯-೧೦ | ೧೯೧೦-೧೧ | ೧೯೧೧-೧೨ |
| ಮಧ್ಯಪ್ರಾಂತ್ಯಗಳು* | -೭,೦೧,೦೦೦ | ೩,೨೩,೫೦೦೦ | ೧೭,೫೦,೬೦೭ | -೯,೩೦,೬೧೭ | -೩೦,೯೭,೮೬೫ | ೭,೨೧,೭೫೫ | ೨,೮೦,೫೫೬ | ೧,೨೧,೪೫೭೩ |
| ಬರ್ಮಾ | -೧,೫೯,೧೭೯೬ | -೨,೬೧,೩೮೯೦ | ೧,೮೯,೦೫೧೬ | -೩,೧೨,೯೫೯೦ | -೨೦,೬೦,೬೭೮ | ೨೫,೧೫,೩೭೧ | ೧೯,೦೦,೨೯೭ | -೧೨,೬೦,೦೪೦ |
| ಅಸ್ಸಾಂ @ | -೨,೬೯,೩೧೬ | -೩೭,೨೦,೦೨೭ | -೨,೦೦,೧೪೦ | -೨೫,೯೬,೬೮೨ | -೨೩,೫೭,೬೮೭ | ೫,೪೯,೨೭೦ | ೫೫,೩೯,೬೯೮ | ೫೨,೧೮,೮೦೨ |
| ಬಂಗಾಳ | -೧೨,೫೨,೮೧೮ | -೧೯,೫೨,೩೧೨ | -೧೮,೭೭,೪೫೫ | -೨೨,೫೬,೯೯೪ | -೧೩,೩೦,೩೭೧ | ೩೨,೭೪,೦೬೫ | ೩೯,೬೦,೬೧೨ | ೮೨,೯೬,೨೩೩ |
| ಯು.ಪಿ. | -೮,೬೯,೦೯೯ | -೨೮,೭೯,೧೯೨ | ೭೯,೫೬೦,೦ | -೩೫,೮೭,೦೬೬ | ೧೦,೦೭,೨೬೦ | ೨೦,೪೫,೨೨೧ | ೩೬,೩೫,೯೦೪ | ೧,೪೪,೨೪೦ |
| ಪಂಜಾಬ್ | ೪೭,೯೪,೩೮೭ | -೨೭,೯೬,೦೫೨ | -೬೬,೧೨,೧೪ | -೨೪,೦೮,೮೧೮ | -೧೫,೭೬,೯೮೧ | ೧೩,೦೦,೫೫೯ | ೪೧,೯೯,೧೨೧ | ೩೩,೯೮,೦೫೫ |
| ಮದರಾಸು | -೧೪,೦೨,೩೪೪ | ೨೨,೦೩,೨೮ | ೧೨,೧೭,೭೪೫ | -೪೪,೯೯೨ | ೨೦,೨೫,೧೦೯ | ೧೨,೬೬,೩೨೬ | ೨೩,೧೬,೩೮೩ | ೨೯,೩೮,೫೦೨ |
| ಮುಂಬಯಿ | ೪೩,೯೬,೦೦೦ | -೪೨,೮೯೨ | ೧೭,೫೨೨,೦೨ | -೩,೦೮೯,೨೫ | -೨೬,೧೮೯,೨೬ | ೭೧,೩೭,೯೯೬ | ೭೫,೮೫೪,೬೦ | -೫,೪೧,೪೧೧ |

* ೧೯೦೬ ರಿಂದ ಬಿರಾರ್ ಸೇರಿದಂತೆ

@ ೧೯೦೬ರಿಂದ ಅಸ್ಸಾಂ ಮತ್ತು ಪೂರ್ವ ಬಂಗಾಳ ಸೇರಿದಂತೆ.

ಭಾರತ ಸರ್ಕಾರದ ಹಣಕಾಸು ಮತ್ತು ವರಮಾನದ ವಾರ್ಷಿಕ ಪ್ರಣಾಳಿಕೆಗಳಿಂದ ಸಂಗ್ರಹಿಸಲಾಗಿದೆ.

| ಪ್ರಾಂತ್ಯಗಳು | ಪ್ರಾಂತೀಯ ಅನುದಾನಗಳು (ರೂ.ನಲ್ಲಿ) | | | | | | | |
|---|---|---|---|---|---|---|---|---|
| | ೧೯೦೪-೦೫ | ೧೯೦೫-೦೬ | ೧೯೦೬-೦೭ | ೧೯೦೭-೦೮ | ೧೯೦೮-೦೯ | ೧೯೦೯-೧೦ | ೧೯೧೦-೧೧ | ೧೯೧೧-೧೨ |
| ಮಧ್ಯಪ್ರಾಂತ್ಯಗಳು* | ೨೮,೫೩,೭೧೦ | ೬೯,೫೭,೭೯೩ | ೧೧,೦೫,೦೦ | ೨೭,೫೨,೦೧೦ | ೨೯,೦೩೬,೬೮ | ೩೫,೮೮,೨೭೦ | ೩೪,೬೫,೫೦೦ | ೨೦,೮೦,೮೪೫ |
| ಬರ್ಮಾ | ೫೬,೭೫,೦೦ | ೧೮,೪೫,೦೦೦ | ೭೨,೧೯,೦೦೦ | ೬,೮೨,೦೦೦ | ೨,೧೫,೨೫೩ | ೧೮,೨೦,೯೫೨ | ೪೨,೩೨,೭೪೨ | ೩೬,೦೫,೧೬೪ |
| ಅಸ್ಸಾಂ | – | ೩೩,೬೨,೯೧೬ | ೩೨,೭೨,೯೪ | ೦,೦೩೦ | ೨೩,೫೮,೯೪೭ | ೪೪,೬೪,೪೩೫ | ೪೬,೦೮,೯೬೫ | ೬೧,೦೦,೭೩೨ |
| ಬಂಗಾಳ | ೨೪,೭೯೪ | ೪೮,೦೬,೯೮೪ | ೪೭,೫೫,೪೮ | ೧,೬೨,೬೩೪ | ೪೧,೫೭,೩೯೩ | ೫೭,೫೩,೬೯೨ | ೬೧,೩೭,೦೧೩ | ೧,೧೧,೩೧,೨೭೬ |
| ಯು.ಪಿ. | ೧೩,೬೬,೦೦ | ೪೦,೩೬,೩೦೭ | ೭೬,೪೧,೬೯೭ | ೯೮,೭೯,೬೬೭ | ೮೭,೭೦,೩೪೫ | ೧೬,೨೪,೩೨೯ | ೪೫,೧೩,೭೨೯ | ೩೧,೩೬,೧೦೭ |
| ಪಂಜಾಬ್ | ೭೫,೨೬೪,೩೬ | ೨೪,೬೭,೫೭೯ | ೪೨,೦೯,೫೩೧ | ೫೫,೪೧,೫೨೯ | ೬೦,೩೭,೯೯೦ | ೫೮,೩೯೦,೧೪ | ೯೫,೯೨,೮೪೪ | ೩೧,೦೧,೬೮೧ |
| ಮದರಾಸು | ೭,೦೦೯,೪೬ | ೪೪,೩೦೭,೧೪ | ೯೯,೮೦,೪೦೦ | ೯೪,೭೩,೩೦೪ | ೭೦,೪೮,೮೫ | ೬೧,೨೯,೪೧ | ೩೬,೯೧,೪೨೬ | ೫೦,೦೮,೮೮೯ |
| ಬೊಂಬಾಯಿ | ೧,೦೩,೧೨,೯೨೮ | ೩೪,೨೭,೩೨೫ | ೪೦,೨೪,೫೧೨ | ೪೫,೭೪,೨೮೪ | ೫೭,೨೬,೧೬೨ | ೫೭,೯೭,೬೦೩ | ೧೨,೦೦,೯೩೬೦ | ೪೯,೩೫,೧೫೯ |
| **ಒಟ್ಟು** | **೨,೨೧,೨೨೯,೧೪** | **೩,೧೩,೩೪,೬೧೮** | **೩,೪೯,೮೨,೯೮೨** | **೨,೪೫,೪೩,೪೫೮** | **೩,೦೮,೭೪,೬೪೩** | **೨,೯೫,೦೨,೨೮೬** | **೧,೫೪,೭೫,೩೬೦** | **೩,೯೦,೯೯,೮೫೩** |

*೧೯೦೬ ರಿಂದ ಬಿರಾರ್ ಸೇರಿದಂತೆ

ಭಾರತ ಸರ್ಕಾರದ ಹಣಕಾಸು ಮತ್ತು ವರಮಾನದ ವಾರ್ಷಿಕ ಪ್ರಣಾಳಿಕೆಗಳಿಂದ ಸಂಗ್ರಹಿಸಲಾಗಿದೆ.

## ೧೯೧೨ರ ಕಾಯಂ ಒಪ್ಪಂದಗಳು

ವಿವಿಧ ಪ್ರಾಂತ್ಯಗಳ ನಡುವೆ ಅರೆ ಕಾಯಂ ಒಪ್ಪಂದಗಳನ್ನು ಮಾಡಿಕೊಂಡ ತಕ್ಷಣ ಬ್ರಿಟಿಷ್ ಭಾರತದ, ಪ್ರಾಂತೀಯ ಹಣಕಾಸು ಮತ್ತು ಸಾಮ್ರಾಜ್ಯದ ಹಣಕಾಸು ವಿಷಯವನ್ನು ವಿಕೇಂದ್ರೀಕರಣದ ವಿಷಯದ ಮೇಲಿನ ರಾಯಲ್ ಕಮಿಷನ್ ವಿಮರ್ಶಿಸಿತು. ೧೯೦೯ರಲ್ಲಿ ತನ್ನ ವರದಿಯನ್ನು ಸಲ್ಲಿಸಿದ ಕಮಿಷನ್, ಸಾಮ್ರಾಜ್ಯ ಮತ್ತು ಪ್ರಾಂತೀಯ ಹಣಕಾಸು ವಿಷಯದಲ್ಲಿನ ವರಮಾನ ಮತ್ತು ವೆಚ್ಚಗಳಿಗೆ ಸಂಬಂಧಿಸಿದಂತೆ ಪ್ರಸ್ತುತದಲ್ಲಿದ್ದ ನಿರ್ಧಾರಕ ಕ್ರಮಗಳ ಮೂಲತತ್ವವನ್ನು ಅನುಮೋದಿಸಿತು. ಆದರೆ ಕಮಿಷನ್‌ಗೆ ಸಾಕ್ಷಿ ನೀಡಿದ ಅನೇಕರಲ್ಲಿ ಈ ತತ್ವವನ್ನು ಕಟುವಾಗಿ ಟೀಕಿಸಿದವರೂ ಇದ್ದರು. ಇವುಗಳಲ್ಲಿ ಎರಡು ವಿಷಯಗಳ ಬಗೆಗಿನ ಟೀಕೆಗಳನ್ನು ಅತಿ ಮುಖ್ಯವಾದುವೆಂದು ಕಮಿಷನ್ ಭಾವಿಸಿತು. ಅವುಗಳೆಂದರೆ: ೧) ಹೊಂದಾಣಿಕೆ ಕೊಡುಗೆಗಳು ಮತ್ತು ೨) ಅನುದಾನಗಳು ಅಥವಾ ಉಚಿತ ದಾನಗಳು. ಹೊಂದಾಣಿಕೆ ಕೊಡುಗೆಗಳು, ಪ್ರಾಂತೀಯ ವರಮಾನಗಳ ಸ್ಥಿತಿಸ್ಥಾಪಕತ್ವವನ್ನು ಕುಂಠಿತಗೊಳಿಸುತ್ತಿದ್ದವು ಎಂದು ಸಹಜವಾಗಿಯೇ ಆಪಾದಿಸಲಾಗುತ್ತಿತ್ತು. ಏಕೆಂದರೆ, ವೆಚ್ಚಗಳು ಹೆಚ್ಚಾಗುತ್ತಿದ್ದರೆ, ತಮಗೆ ವಹಿಸಲಾಗಿದ್ದ ಬಾಬ್ತುಗಳಲ್ಲಿನ ವರಮಾನ ಮಾತ್ರ ಹೆಚ್ಚೂ–ಕಡಿಮೆ ಹೆಚ್ಚಾಗದೆ ಹಾಗೆಯೇ ಮುಂದುವರಿಯುತ್ತಿತ್ತು. ಹೀಗಾಗಿ ಅನುದಾನಗಳು ವಾಸ್ತವವಾಗಿ ಪ್ರಾಂತೀಯ ಹಣಕಾಸು ವ್ಯವಸ್ಥೆಯನ್ನು ನಿಸ್ತೇಜಗೊಳಿಸುತ್ತಿದ್ದವು ಎಂದು ಸಹಜವಾಗಿಯೇ ಹೇಳಲಾಗುತಿತ್ತು. ಆದ್ದರಿಂದ ಇದರ ಸ್ಥಾನದಲ್ಲಿ ಹೆಚ್ಚಾಗಲು ವರಮಾನದ ಹಿಸ್ಸೆಯ ಕ್ರಮವನ್ನು ಅನುಸರಿಸುವುದು ಒಳ್ಳೆಯದು ಎಂದು ವಾದಿಸಲಾಗುತ್ತಿತ್ತು. ಹೆಚ್ಚ–ಹೆಚ್ಚು ಹೊಂದಾಣಿಕೆ ಕೊಡುಗೆಗಳಲ್ಲಿರುವ ದೌರ್ಬಲ್ಯದ ಬಗ್ಗೆ ಕಮಿಷನ್‌ಗೆ ಸಂಪೂರ್ಣ ಅರಿವು ಉಂಟಾಗಿತ್ತು. ಆದರೆ ಅದು ಭಾರತ ಸರ್ಕಾರದ ಅನುದಾನಗಳ ಬಗ್ಗೆ ಇದ್ದ ಟೀಕೆಗಳಿಗೆ ಅಲಕ್ಷ್ಯ ಭಾವನೆಯನ್ನು ಹೊಂದಿತ್ತು. ಪ್ರಾಂತೀಯ ಹಣಕಾಸಿನ ವಿಕೇಂದ್ರೀಕರಣದ ಅನುಕೂಲತೆಗಳನ್ನು ಎಲ್ಲರೂ ಹಾಡಿ ಹೊಗಳುತ್ತಿದ್ದರು. ಆದರೆ ಭಾರತ ಸರ್ಕಾರಕ್ಕೆ ಅದರ ಬಗ್ಗೆ ಇದ್ದ ಭೀತಿಗಳ ಅರಿವು ಕೆಲವರಿಗೆ ಮಾತ್ರ ಗೊತ್ತಿತ್ತು. 'ಏಕೆಂದರೆ ವಿಕೇಂದ್ರೀಕರಣದೊಂದಿಗೆ, ಭಾರತ ಸರ್ಕಾರ ವಹಿಸಿದ್ದ ಬಾಬ್ತುಗಳ ನಿರ್ವಹಣೆಯಲ್ಲಿ ಪ್ರಾಂತ್ಯಗಳು ತಮಗೆ ಇಷ್ಟ ಬಂದ ರೀತಿಯಲ್ಲಿ ಹಣವನ್ನು ವೆಚ್ಚ ಮಾಡುವ ಸ್ವಾತಂತ್ರ್ಯವನ್ನು ಹೊಂದಿದ್ದವು ಎನ್ನುವ ವಿಷಯವನ್ನು ಗಮನಿಸಬೇಕು. ಇದರಲ್ಲಿ ಒಂದು ಅಪಾಯ ಸ್ಪಷ್ಟವಾಗಿತ್ತು. ಅದೆಂದರೆ, ಪ್ರಾಂತ್ಯಗಳು, ತಮ್ಮ ಜನರಿಗೆ ಅನುಕೂಲವಾಗುವ ಸೇವೆಗಳನ್ನು ವಿಸ್ತರಿಸುವ ಮತ್ತು ತಮಗೆ ಅಷ್ಟೇನೂ ಸಂಬಂಧವಿಲ್ಲದ ಬಾಬ್ತುಗಳನ್ನು ಅಲಕ್ಷಿಸುವ ಮನೋಭಾವವನ್ನು ಬೆಳೆಸಿಕೊಂಡಿದ್ದವು. ರಾಷ್ಟ್ರದ ಹಿತ ದೃಷ್ಟಿಯಿಂದ ಅಗತ್ಯವಿರುವ ಬಾಬ್ತುಗಳು ಸಹ, ಈ ವಿಧಾನದಲ್ಲಿ ಪ್ರಾಂತ್ಯಗಳ ಅಲಕ್ಷ್ಯಕ್ಕೆ ಗುರಿಯಾಗುತ್ತಿದ್ದವು. ಅದರಲ್ಲೂ ಪ್ಲೇಗು, ಬರ ಮುಂತಾದ ಸಂಕಟಗಳ ಸಮಯದಲ್ಲಿ ರಾಷ್ಟ್ರೀಯ ಆದ್ಯತೆಗೆ ಕೊಡಬೇಕಾದ ಅಗತ್ಯತೆಯನ್ನು ವಿದ್ಯಾಭ್ಯಾಸ, ನೈರ್ಮಲ್ಯ ಮತ್ತು ಪೊಲೀಸ್‌ನಂತಹ ಬಾಬ್ತುಗಳನ್ನು ಸಹ ಪ್ರಾಂತೀಯ ಸರ್ಕಾರಗಳು ಅಲಕ್ಷಿಸಿದ್ದವು. ಭಾರತ ಸರ್ಕಾರ, ಪ್ರಾಂತ್ಯಗಳು ಈ ಬಾಬ್ತುಗಳ ಮೇಲೆ ಪ್ರಾಂತೀಯ ಹಣವನ್ನು ವೆಚ್ಚ ಮಾಡಲೇಬೇಕೆಂದು ನಿರ್ಬಂಧ ಹೇರುವಂತಿರಲಿಲ್ಲ. ಏಕೆಂದರೆ, ಪ್ರಾಂತೀಯ ಹಣಕಾಸಿನ ನಿಬಂಧನೆಯ ಅತ್ಯಂತ ಪ್ರಮುಖ ಅಂಶವೆಂದರೆ, ಅವು ಪ್ರಾಂತೀಯ ಬಾಬ್ತುಗಳ ಮೇಲೆ ಹಣಕಾಸು ಖರ್ಚು ಮಾಡುವುದಕ್ಕೆ ಸರ್ವತಂತ್ರ ಸ್ವಾತಂತ್ರ್ಯವನ್ನು ಹೊಂದಿದ್ದವು: ಇತರ ರಾಷ್ಟ್ರಗಳ ಸ್ಥಳೀಯ ಹಣಕಾಸು ವ್ಯವಸ್ಥೆಯಲ್ಲಿದ್ದ, ನಿರ್ಬಂಧಿತ ವೆಚ್ಚ ಮತ್ತು ಸ್ವತಂತ್ರ ವೆಚ್ಚಗಳೆಂಬ ವರ್ಗೀಕರಣ, ಪ್ರಾಂತೀಯ ಹಣಕಾಸು ವ್ಯವಸ್ಥೆಯಲ್ಲಿರಲಿಲ್ಲ ಎನ್ನುವುದು ಗಮನಾರ್ಹ.

ವಾಸ್ತವವಾಗಿ, ಇಂಗ್ಲೆಂಡಿನ ಸರ್ಕಾರದಷ್ಟು ಭಾರತ ಸರ್ಕಾರ ಈ ವಿಷಯದಲ್ಲಿ ದುರ್ಬಲವಾಗಿರಲಿಲ್ಲ. ಏಕೆಂದರೆ ಇಂಗ್ಲೆಂಡಿನಲ್ಲಿ ಸ್ಥಳೀಯ ಅಧಿಕಾರಿಗಳು ನಿರ್ಲಕ್ಷಿಸುವ ವಿಷಯಗಳನ್ನು ಸರಿಪಡಿಸಬೇಕಾದರೆ, ರಿಟ್ ಆಫ್ ಮ್ಯಾಂಡಮಸ್‌ಗೆ ಶರಣಾಗಲೇಬೇಕಾಗಿತ್ತು. ಆದರೆ ಭಾರತದಲ್ಲಿ ಈ ಪರಿಸ್ಥಿತಿ ಇರಲಿಲ್ಲ. ಅವಿಧೇಯ ಪ್ರಾಂತ್ಯವೊಂದನ್ನು ವಿಧೇಯವನ್ನಾಗಿ ಮಾಡುವುದು ಸುಲಭವಾಗಿತ್ತು. ಆದರೆ ಅದು ಅಷ್ಟು ಹರ್ಷದಾಯಕ ವಿಷಯವಾಗಿರಲಿಲ್ಲ. ಏಕೆಂದರೆ, ಅವಿಧೇಯತೆಯನ್ನು ಸರಿಪಡಿಸುವುದಕ್ಕಿದ್ದ ಮಾರ್ಗವೆಂದರೆ, ಪ್ರಾಂತೀಯ ಹಣಕಾಸು ವ್ಯವಸ್ಥೆಯನ್ನೇ ರದ್ದುಪಡಿಸುವುದಾಗಿತ್ತು. ಇಂಥ ತೀವ್ರ ಕ್ರಮವನ್ನು ಭಾರತ ಸರ್ಕಾರ ಇಷ್ಟ ಪಡದೆ, ನಿರ್ದಿಷ್ಟ ಬಾಬ್ತುಗಳಿಗೆ ಅನುದಾನವನ್ನು ಕೊಡುವ ಸಂತೋಷಕರ ಕ್ರಮವನ್ನು ತನ್ನದಾಗಿಸಿಕೊಂಡಿತ್ತು. ಇದು ಅಲಕ್ಷ್ಯದಿಂದ ಇರುವ ಪ್ರಾಂತ್ಯವನ್ನು ಸರಿಪಡಿಸುವುದಕ್ಕೆ ಒಳ್ಳೆಯ ಔಷಧವೆಂದು ಭಾರತ ಸರ್ಕಾರ ಭಾವಿಸಿತ್ತು.[೧] ಭಾರತ ಸರ್ಕಾರ ನಿರ್ಧರಿಸುವ ಕೆಲವು ಬಾಬ್ತುಗಳಲ್ಲಿ ರಾಷ್ಟ್ರೀಯ ಕನಿಷ್ಠ ವೆಚ್ಚವನ್ನು ಪ್ರಾಂತ್ಯವು ಮುಂದುವರಿಸಿಕೊಂಡು ಹೋಗಬೇಕೆಂದು ಭಾವಿಸಿತ್ತು, ಈ ವಿಷಯ ಅನುಕೂಲಕರವಾದುದೆನ್ನುವುದಕ್ಕಿಂತಲೂ ಒಂದು ಜವಾಬ್ದಾರಿಯುತವಾದ ವಿಷಯವೆಂಬುದು ಭಾರತ ಸರ್ಕಾರದ ಅಭಿಪ್ರಾಯವಾಗಿತ್ತು.[೨] ಪ್ರಾಂತೀಯ ಹಣಕಾಸಿನ ವಿಕೇಂದ್ರೀಕರಣ, ಅಸಂಘಟನೆಗೆ ಪರಿವರ್ತಿತಗೊಳ್ಳುವುದನ್ನು ತಪ್ಪಿಸಲು ಅನುದಾನ ಒಂದು ಒಳ್ಳೆಯ ಪದ್ಧತಿ ಎನ್ನುವುದು ಕಮಿಷನ್‌ನ ಅಭಿಪ್ರಾಯವಾಗಿತ್ತು. ಪ್ರಾಂತೀಯ ಹಣಕಾಸಿಗೆ ಸಾಧ್ಯವಾದಷ್ಟೂ ಸ್ಥಿತಿಸ್ಥಾಪಕತ್ವವನ್ನು ದೊರಕಿಸಿಕೊಡುವ ದೃಷ್ಟಿಯಿಂದ, ನಿಶ್ಚಿತ ಕೊಡುಗೆಗಳನ್ನು ಅತ್ಯಂತ ಕನಿಷ್ಠ ಮಟ್ಟದಲ್ಲಿ ನೀಡಬೇಕೆಂದು ಕಮಿಷನ್ ಶಿಫಾರಸು ಮಾಡಿತು.

ಕಮಿಷನ್ ಶಿಫಾರಸುಗಳನ್ನು ಅನುಸರಿಸಿ, ಭಾರತ ಸರ್ಕಾರ, ಪ್ರಸ್ತುತದಲ್ಲಿದ್ದ ಪ್ರಾಂತೀಯ ವರಮಾನ ಮತ್ತು ವೆಚ್ಚ ಬಾಬ್ತುಗಳ ಹಿಸ್ಸೆಯಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಲು ತೀರ್ಮಾನಿಸಿತು. ೧೯೧೨ ರಿಂದ ಅರೆ–ಕಾಯಂ ವ್ಯವಸ್ಥೆಯನ್ನು ಪೂರ್ಣವಾಗಿ ಕಾಯಂ ಮಾಡಲು ಅದು ತೀರ್ಮಾನಿಸಿತು. ಕಾಯಂ ಒಪ್ಪಂದವು ತಾತ್ಕಾಲಿಕ ಒಪ್ಪಂದದ ತತ್ವಗಳಿಂದ ವಿಶೇಷ ಭಿನ್ನತೆಯನ್ನು ಹೊಂದಿರಲಿಲ್ಲ. ಕೇವಲ ಜಂಟಿ ಬಾಬ್ತುಗಳ ವರಮಾನ ಮತ್ತು ವೆಚ್ಚದ ಬಾಬ್ತುಗಳ ಹಿಸ್ಸೆಯ ವಿಷಯದಲ್ಲಿ ಮಾತ್ರ ಕೆಲವು ಮಾರ್ಪಾಡುಗಳನ್ನು ಇದು ಹೊಂದಿತ್ತು. ಈ ಬಾಬ್ತುಗಳ ಹಿಸ್ಸೆಯಲ್ಲಿ ಪ್ರಾಂತ್ಯಗಳಿಗೆ ಸ್ವಲ್ಪ ಹೆಚ್ಚಳ ದೊರೆತಿದ್ದುದು ಹೊಸ ಒಪ್ಪಂದದ ಮುಖ್ಯ ಅಂಶ. ಈ ಬದಲಾವಣೆಗಳನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ:–

---

೧. ಪ್ರಾಯಶಃ ಈ ಭಾವನೆ ಇಂಗ್ಲೆಂಡಿನ ವ್ಯವಸ್ಥೆಯಿಂದ ಬಂದುದಾಗಿರಬೇಕು.

೨. ಎಸ್.ವೆಬ್: *ಗ್ರಾಂಟ್ಸ್ ಇನ್ ಏಡ್* ೧೯೧೧. ಪು.೨೫.

| ವರಮಾನಗಳು | | | ವೆಚ್ಚಗಳು | | |
|---|---|---|---|---|---|
| ಬಾಬ್ತುಗಳು | | ಪ್ರಾಂತ್ಯಗಳ ಹಿಸ್ಸೆ | ಬಾಬ್ತುಗಳು | | ಪ್ರಾಂತ್ಯಗಳ ಹಿಸ್ಸೆ |
| ೧. | ಭೂ ವರಮಾನ, ನೀರಾವರಿಗೆ ಸೇರಿದ ಭಾಗವನ್ನೊಳಗೊಂಡಂತೆ | ೫/೮ರಷ್ಟು ಬರ್ಮಾಕ್ಕೆ, ೧/೨ದಷ್ಟು ಪಂಜಾಬ್‌ಗೆ | ೧. | ಭೂ ವರಮಾನ | ೫/೮ ಬರ್ಮಾದಲ್ಲಿ ೧/೨ ಪಂಜಾಬ್‌ನಲ್ಲಿ |
| ೨. | ಅಬ್ಕಾರಿ ಗೊತ್ತು ಮಾಡಿದ ತೆರಿಗೆಗಳು | ಪೂರ್ವಬಂಗಾಳ ಮತ್ತು ಅಸ್ಸಾಂ, ಬೊಂಬಾಯಿಗಳಲ್ಲಿ ಇಡೀ, ಕೇಂದ್ರ ಪ್ರಾಂತ್ಯಗಳು ಬಂಗಾಳ ಮತ್ತು ಯು.ಪಿ.ಯಲ್ಲಿ ೩/೪ | ೨. | ಅಬ್ಕಾರಿ | ವರಮಾನದ ಕಾಲಂನಲ್ಲಿ ಕಾಲಂನಲ್ಲಿ ಇರುವಂತೆಯೇ |
| ೩. | ಪಿ.ಡಬ್ಲ್ಯು.ಡಿ | ೧/೨ | | - | - |
| ೪. | ಅರಣ್ಯ | ಇಡೀ | ೪. | ಅರಣ್ಯ | ಇಡೀ |
| ೫. | ಬೃಹತ್ ನೀರಾವರಿ ಕಾಮಗಾರಿ (ಇದಕ್ಕೆ ಸೇರಿಸಿದ ಭೂ ವರಮಾನವನ್ನು ಬಿಟ್ಟು) | ಪಂಜಾಬ್‌ನಲ್ಲಿ ೧/೨ (ಕನಿಷ್ಠ ೪ ಲಕ್ಷ ಗ್ಯಾರಂಟಿ) | ೫. | ಬೃಹತ್ ನೀರಾವರಿ | ೧/೨ |
| ೬. | ಬೃಹತ್ ಹಾಗೂ ಸಣ್ಣ ನೀರಾವರಿ | ಬಂಗಾಳದಲ್ಲಿ ೧/೨ | ೬. | ಬೃಹತ್ ಹಾಗೂ ಸಣ್ಣ ನೀರಾವರಿ | ಬಂಗಾಳದಲ್ಲಿ ೧/೨ |

ಹೊಂದಾಣಿಕೆ ಕೊಡುಗೆಗಳನ್ನು ಮುಂದೆ ಕೊಡಲಾಗಿರುವ ಪ್ರಮಾಣದಷ್ಟು ಇಳಿಸುವುದೇ ಜಂಟಿ ಬಾಬ್ತುಗಳಲ್ಲಿ ವರಮಾನ ಮತ್ತು ಖರ್ಚುಗಳ ಹಿಸ್ಸೆಯನ್ನು ಬದಲಾಯಿಸಿದುದರ ಉದ್ದೇಶವಾಗಿತ್ತು.

| ಪ್ರಾಂತ್ಯ | ಸಾಮ್ರಾಜ್ಯದಿಂದ ಪ್ರಾಂತ್ಯಗಳಿಗೆ ಕೊಡುಗೆಗಳು (ಲಕ್ಷ ರೂ.ಗಳಲ್ಲಿ) | ಪ್ರಾಂತ್ಯದಿಂದ ಸಾಮ್ರಾಜ್ಯಕ್ಕೆ |
|---|---|---|
| ಮಧ್ಯ ಪ್ರಾಂತ್ಯಗಳು | ೨೧.೪೦ | – |
| ಬರ್ಮಾ | ೧೩.೧೨ | – |
| ಪೂರ್ವ ಬಂಗಾಳ ಮತ್ತು ಅಸ್ಸಾಂ | ೧೩.೫೫ | – |
| ಬಂಗಾಳ | – | ೧೮.೪೦ |
| ಯು.ಪಿ | – | ೧೯.೨೬ |
| ಪಂಜಾಬ್ | ೬.೭೭ | – |
| ಮದರಾಸು | – | ೨೧.೪೩ |
| ಮುಂಬಯಿ | – | ೯.೩೮ |

| ಪ್ರಾಂತ್ಯಗಳು | ವಿಶೇಷ ಅನುದಾನಗಳು (ರೂ.ನಲ್ಲಿ) | | | | | | |
|---|---|---|---|---|---|---|---|
| | ೧೯೧೨–೧೩ | ೧೯೧೩–೧೪ | ೧೯೧೪–೧೫ | ೧೯೧೫–೧೬ | ೧೯೧೬–೧೭ | ೧೯೧೭–೧೮ | ೧೯೧೮–೧೯ |
| ಮಧ್ಯಪ್ರಾಂತ್ಯಗಳು | ೪೭,೯೦,೪೮೦ | ೨೬,೪೩,೨೬೪ | ೫೧,೩೮,೨೫೬ | ೪೪,೦೭,೮೦೨ | ೩೭,೯೫,೭೮೪ | ೩೮,೧೭,೫೪೦ | ೨೭,೨೬,೦೦೮ |
| ಬರ್ಮಾ | ೮೫,೩೮,೯೪೮ | ೨೨,೬೩,೯೩೯ | ೩೮,೪೯,೭೬೩ | ೩೮,೬೯,೪೭೨ | ೨,೧೬,೯೭೯ | –೨೪,೭೮,೪೮೨ | ೨,೪೯೦ |
| ಅಸ್ಸಾಂ | ೫೫,೩೦,೯೯೧ | ೩೨,೮೩,೦೧೧ | ೭೫,೩೩,೮೭೮ | ೬೫,೭೭,೬೧೯ | ೨೪,೬೭,೮೬೧ | ೧೯,೨೨,೨೫೨ | ೨೪,೪೪,೭೩೦ |
| ಬಂಗಾಳ | ೧,೫೪,೦೧,೮೮೫ | ೬೪,೮೦,೮೦೦ | ೭೫,೯೪,೮೯೪ | ೭೧,೮೬,೪೩೬ | ೬೫,೩೮,೭೩೨ | ೭೦,೭೪,೭೭೩ | ೯೮,೮೯,೭೧೭ |
| ಬಿಹಾರ್ ಮತ್ತು ಒರಿಸ್ಸಾ | ೬೩,೭೯,೪೨೦ | ೪೭,೬೧,೦೨೮ | ೩೫,೨೬,೫೬೭ | ೪೨,೭೮,೮೫೪ | ೩೨,೬೨,೨೧೪ | ೪೨,೩೫,೨೦೫ | ೪೧,೭೯,೪೨೫ |
| ಯು.ಪಿ. | ೧,೧೪,೭೦,೬೦೩ | ೮೫,೪೨,೨೭೯ | ೩೮,೪೨,೬೨೪ | ೩೨,೨೯,೯೨೪ | ೨೪,೫೩,೯೬೯ | ೨೭,೦೬,೧೬೪ | ೩೫,೯೦,೫೩೦ |
| ಪಂಜಾಬ್ | ೬೭,೦೦,೯೨೪ | ೨೪,೨೪,೪೦೪ | ೩೯,೮೮,೧೧೭ | ೫೯,೦೮,೯೨೩ | ೪೯,೨೫,೮೩೦ | ೪೮,೬೨,೬೧೬ | ೫೫,೬೩,೬೬೫ |
| ಮದರಾಸು | ೧,೨೨,೭೭,೫೯೧ | ೫೦,೬೬,೩೪೩ | ೧೬,೯೭,೮೦೩ | ೧೨,೨೦,೭೮೫ | ೧೦,೯೯,೧೬೫ | ೧೪,೮೩,೭೦೮ | ೧೫,೭೭,೪೪೬ |
| ಮುಂಬಯಿ | ೧,೧೧,೯೨,೭೨೩ | ೩೯,೯೬,೭೨೯ | ೧೪,೬೮,೮೩೭ | ೧೨,೦೦,೨೫೪ | ೧೦,೬೫,೯೬೪ | ೧೧,೫೪,೭೨೫ | ೨೪,೭೯,೫೧೦ |
| **ಒಟ್ಟು** | **೮,೨೨,೮೩,೫೬೫** | **೩,೯೪,೬೧,೭೯೭** | **೩,೮೬,೪೦,೭೩೯** | **೩,೭೮,೮೦,೦೬೯** | **೨,೫೮,೫೬,೪೯೮** | **೨,೪೭,೭೮,೫೦೧** | **೩,೫೪,೫೩,೫೨೧** |

ಭಾರತ ಸರ್ಕಾರದ ಹಣಕಾಸು ಮತ್ತು ವರಮಾನ ಪ್ರಣಾಳಿಕೆಗಳಿಂದ ಸಂಗ್ರಹಿಸಲಾಗಿದೆ.

ಅರೆಕಾಯಂ ಒಪ್ಪಂದದ ಅಥವಾ ಪಂಚವಾರ್ಷಿಕ ಅವಧಿಯಲ್ಲಿಯಂತೆಯೇ, ಕಾಯಂ ಒಪ್ಪಂದ ಅವಧಿಯಲ್ಲಿಯೂ ಸಹ, ವಿವಿಧ ಪ್ರಾಂತ್ಯಗಳ ವಿಶೇಷ ಸೇವೆಗಳಿಗೆ, ಅನುದಾನವನ್ನು ಕೊಡಲಾಯಿತು. ಇದಕ್ಕೆ ವಿಕೇಂದ್ರೀಕರಣ ಕಮಿಷನ್‌ಗೆ ಸಹ ಯಾವ ಅಭ್ಯಂತರವೂ ಇರಲಿಲ್ಲ. ಆದರೆ ಮುಂದಿನ ಪಟ್ಟಿಯಲ್ಲಿ ನಾವು ನೋಡುವಂತೆ, ಈ ಕೊಡುಗೆಗಳು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬಂದವು.

ಕಾಯಂ ಒಪ್ಪಂದದ ಫಲಿತಾಂಶಗಳನ್ನು ಪ್ರಾಂತ್ಯಗಳು ಅತ್ಯಂತ ಕುತೂಹಲದಿಂದ ಕಾಯುತ್ತಿದ್ದವು. ಕಾರಣವೆಂದರೆ, ಇದರಿಂದ ಆಗಬಹುದಾದ ಲಾಭ ಅಥವಾ ನಷ್ಟ ಸಹ ಕಾಯಂ ಸ್ವರೂಪದ್ದಾಗಿರುತ್ತಿದ್ದವು. ಇವುಗಳ ಕುತೂಹಲ, ಅವುಗಳು ಪಡೆದ ಲಾಭದಿಂದಾಗಿ ಬಹುಮಟ್ಟಿಗೆ ಹರ್ಷದಾಯಕವಾಗಿ ಅಂತ್ಯವಾಯಿತು. ಇದು ಅವು ಪಡೆದ ಆಧಿಕ್ಯದಿಂದ ವ್ಯಕ್ತವಾಗುತ್ತಿದೆ. ಕಾಯಂ ಒಪ್ಪಂದದ ಅವಧಿಯಲ್ಲಿನ ಪ್ರಾಂತ್ಯಗಳ ಆಧಿಕ್ಯ ಮುಂದಿನ ಅಂಕಿ-ಅಂಶಗಳಿಂದ ಅತ್ಯಂತ ಸ್ಪಷ್ಟವಾಗುತ್ತದೆ.

ಪ್ರಾಂತೀಯ ಸರ್ಕಾರಗಳ ಹಣಕಾಸು ಪರಿಸ್ಥಿತಿ ನಿಸ್ಸಂಶಯವಾಗಿ ಉತ್ತಮವಾಗಿತ್ತು ಎನ್ನುವುದು ಮುಂದಿನ ಪಟ್ಟಿಯಿಂದ ಸ್ಪಷ್ಟ. ಆದರೆ ಪ್ರಾಂತೀಯ ಹಣಕಾಸು ಶಿಲ್ಕಿನಲ್ಲಿ ಉಂಟಾಗುತ್ತಿದ್ದ ಅನಿಶ್ಚಿತ ವ್ಯತ್ಯಾಸಗಳು, ಕಾಯಂ ಒಪ್ಪಂದ ನಿರೀಕ್ಷಿಸಿದ್ದ ದೃಢತೆಯನ್ನು ತಂದುಕೊಡುವುದರಲ್ಲಿ ವಿಫಲವಾಗಿತ್ತು. ಕಾಯಂ ಒಪ್ಪಂದದ ಇಡೀ ಅವಧಿ ಸಾಧಾರಣ ವರ್ಷಗಳನ್ನು ಒಳಗೊಂಡಿರಲಿಲ್ಲ ಎನ್ನುವುದು ಗಮನಾರ್ಹ. ಕಾಯಂ ಒಪ್ಪಂದದ ಅವಧಿಯ ಒಂದು ಭಾಗ ಸಾಧಾರಣ ವರ್ಷಗಳನ್ನೊಳಗೊಂಡಿದ್ದುದು ನಿಜ. ಆದರೆ ಇದು ಐದು ವರ್ಷದಷ್ಟು ದೀರ್ಘಾವಧಿಯದಾಗಿರಲಿಲ್ಲ. ಕಾಯಂ ಒಪ್ಪಂದದಲ್ಲಿದ್ದ ಅನುಕೂಲಗಳನ್ನು ಬೆಳಕಿಗೆ ತಂದ ಹಾಗೆಯೇ ಐದು ವರ್ಷ ಅವಧಿಯ ಒಪ್ಪಂದದ ದೌರ್ಬಲ್ಯಗಳನ್ನೂ ಬೆಳಕಿಗೆ ತಂದಿತ್ತು ಎನ್ನುವುದನ್ನು ಮರೆಯಬಾರದು. ಕಾಯಂ ಒಪ್ಪಂದದ ಹೆಚ್ಚಿನ ಅವಧಿ ವಿಶ್ವ ಮಹಾಯುದ್ಧದ ಅವಧಿಯನ್ನು ಒಳಗೊಂಡಿತ್ತು ಎನ್ನುವುದು ಗಮನಾರ್ಹ. ಹೀಗಾಗಿ, ಈ ಅವಧಿಯ ಅಸಾಧಾರಣ ಪರಿಸ್ಥಿತಿಗಳು, ಪ್ರಾಂತೀಯ ಹಣಕಾಸು ವ್ಯವಸ್ಥೆಯ ಮೇಲೆ ತಮ್ಮದೇ ಆದ ದುಷ್ಪರಿಣಾಮಗಳನ್ನು ಉಂಟುಮಾಡಿದ್ದವು.

ತನ್ನ ದೀರ್ಘಾವಧಿ ಸ್ವರೂಪದಿಂದಾಗಿ, ಕಾಯಂ ಒಪ್ಪಂದ, ಒಂದು ಪಕ್ಷ ನಿಜವಾಗಿ ದೀರ್ಘಾವಧಿಯವರೆಗೆ ಕೆಲಸ ಮಾಡಿದ್ದಿದ್ದರೆ, ಪ್ರಾಂತೀಯ ಹಣಕಾಸು ವ್ಯವಸ್ಥೆಯ ಸದೃಢತೆಯನ್ನು ಸಾಧಿಸುತ್ತಿತ್ತೇ ಎನ್ನುವುದರ ಬಗ್ಗೆ ನಾವು ಏನನ್ನೂ ಹೇಳುವ ಸ್ಥಿತಿಯಲ್ಲಿಲ್ಲ. ಏಕೆಂದರೆ ಅಷ್ಟು ದೀರ್ಘಾವಧಿಯವರೆಗೆ ಅದು ಜಾರಿಗೆ ಬರಲೇ ಇಲ್ಲ. ೧೯೨೧ ಏಪ್ರಿಲ್ ಒಂದರಿಂದ ಬ್ರಿಟಿಷ್ ಇಂಡಿಯಾದ ಪ್ರಾಂತೀಯ ಹಣಕಾಸು ವ್ಯವಸ್ಥೆ ಸಂಪೂರ್ಣವಾಗಿ ಒಂದು ಹೊಸ ಸ್ವರೂಪವನ್ನು ಪಡೆದುಕೊಂಡಿತು. ಈ ಹೊಸ ಭಾಗದ ಸ್ವರೂಪವನ್ನು ನಾವು ಮುಂದೆ ವಿಶ್ಲೇಷಿಸುತ್ತೇವೆ. ಇಲ್ಲಿಗೆ, ಪ್ರಾಂತೀಯ ಹಣಕಾಸಿನ ಹಳೆಯ ಪದ್ಧತಿಯ ವಿಶ್ಲೇಷಣೆ ಮುಗಿದಂತಾಯಿತು. ಆದರೆ ಈ ವಿಶ್ಲೇಷಣೆ, ಕೇಂದ್ರ ಮತ್ತು ಪ್ರಾಂತೀಯ ಹಣಕಾಸು ವ್ಯವಸ್ಥೆಗಳ ನಡುವೆ ಹಳೆಯ ಪದ್ಧತಿ ಹೇಗೆ ಪಾರಸ್ಪರಿಕ ಸಂಬಂಧವನ್ನು ತಂದಿತ್ತು ಎನ್ನುವುದನ್ನು ವಿವರಿಸದೆ ಸಂಪೂರ್ಣವಾಗುವುದಿಲ್ಲ. ಇದನ್ನು ಮಾಡುವುದಕ್ಕೆ ಮುಂಚೆ, ಹಳೆಯ ಪದ್ಧತಿಯಲ್ಲಿ ಸುಮಾರು ಅರ್ಧ ಶತಮಾನಗಳ ಅವಧಿಯಲ್ಲಿ, ಇದು ಯಾವ ಏಳು-ಬೀಳುಗಳನ್ನು ಎದುರಿಸಬೇಕಾಯಿತು ಎನ್ನುವುದನ್ನು ಸಂಕ್ಷಿಪ್ತವಾಗಿ ಪರಿಚಯಿಸಿಕೊಳ್ಳುವುದು ಯುಕ್ತವೆನಿಸುತ್ತದೆ. ಇದಕ್ಕಾಗಿ ಮುಂದಿನ ಪಟ್ಟಿ ನೋಡಿ.

| ಪ್ರಾಂತ್ಯಗಳು | ಪ್ರಾಂತ್ಯಗಳ ಅಧಿಕ್ಯ ಅಥವಾ ಕೊರತೆ (ರೂ.ನಲ್ಲಿ) | | | | | | |
|---|---|---|---|---|---|---|---|
| | ೧೯೧೨-೧೩ | ೧೯೧೩-೧೪ | ೧೯೧೪-೧೫ | ೧೯೧೫-೧೬ | ೧೯೧೬-೧೭ | ೧೯೧೭-೧೮ | ೧೯೧೮-೧೯ |
| ಮಧ್ಯಪ್ರಾಂತ್ಯಗಳು | ೫೦,೮೫,೨೪೬ | ೧೮,೮೧,೨೪೫ | -೬೫,೪೪,೪೧೬ | -೧೩,೮೩೬ | ೪೨,೩೫,೭೦೪ | ೪೮,೭೦,೫೧೭ | ೯,೨೦,೧೨೧ |
| ಬರ್ಮಾ | ೮೮,೭೪,೧೭೪ | ೯,೧೪,೦೨೬ | -೩೭,೨೯,೮೦೮ | ೧೮,೯೬,೬೨೧ | ೯೪,೨೭,೭೦೨ | ೧,೨೦,೬೭,೭೦೮ | ೪೮,೭೩,೫೮೭ |
| ಅಸ್ಸಾಂ | ೩೬,೧೦,೪೯೪ | -೨೨,೧೭,೬೯೧ | -೪೫,೫೦,೭೪೯ | ೬,೫೮,೮೧೨ | ೬೦,೪೪,೯೦೪ | ೨೮,೦೦,೬೩೪ | ೪,೩೫,೮೭೨ |
| ಬಂಗಾಳ | ೧,೪೭,೦೫,೨೭೦ | ೪,೮೦,೮೪೨ | -೩೯,೬೭,೬೦೭ | ೧೦,೨೮,೧೫೬ | ೩೭,೦೮,೮೩೮ | ೫೨,೮೦,೦೮೨ | ೭,೩೨,೨೩೭ |
| ಬಿಹಾರ್ ಮತ್ತು ಒರಿಸ್ಸಾ | ೭೦,೨೨,೧೯೯ | -೯,೨೦,೦೬೨ | -೧೮,೭೦,೨೬೪ | ೧೧,೩೩,೫೬೨ | ೫೯,೧೯,೯೦೭ | ೭೧,೭೬,೭೮೬ | ೩೬,೪೩,೫೬೪ |
| ಯು.ಪಿ. | ೯೫,೮೮,೭೪೯ | ೫೦,೭೦೪ | -೪೬,೧೧,೦೮೦ | -೯,೭೩,೦೯೦ | ೩೪,೨೭,೮೦೮ | -೨೨,೬೮,೩೧೧ | ೩೬,೮೬,೯೪೫ |
| ಪಂಜಾಬ್ | ೭೪,೧೧,೦೬೯ | -೬,೯೨,೫೨೧ | -೩೭,೩೦,೬೪೧ | -೧೧,೩೩,೫೪೧ | ೫,೦೦,೯೯೫ | -೬,೯೫,೨೧೬ | ೧೧,೮೫,೯೩೦ |
| ಮದರಾಸು | ೪೩,೩೦,೨೭೫ | -೫೨,೯೮,೪೧೧ | -೧೨,೦೭,೭೫೪ | ೩,೧೮,೫೦೮ | ೨೫,೭೧,೨೪೧ | ೧೦,೪೨,೩೦೩ | -೯,೭೨,೩೫೪ |
| ಮುಂಬಯಿ | ೭೦,೮೩,೨೮೧ | ೧೫,೫೮,೫೬೬ | -೨೬,೩೯,೯೨೪ | -೯,೫೧,೦೯೯ | ೧೨,೨೪,೪೩೪ | ೬,೧೧,೩೨೧ | ೧೬,೮೧,೦೬೬ |

ಭಾರತ ಸರ್ಕಾರದ ವಾರ್ಷಿಕ ಹಣಕಾಸು ಮತ್ತು ವರಮಾನ ಅಕೌಂಟ್ಸ್ ಪ್ರಣಾಳಿಕೆಗಳಿಂದ ಸಂಗ್ರಹಿಸಲಾಗಿದೆ.

## ಪ್ರಾಂತೀಯ ಹಣಕಾಸಿನ ಬೆಳವಣಿಗೆ

| ಪ್ರಾಂತ್ಯಗಳು | ಪ್ರಾಂತಿಯ ಆದಾಯ (ಭಾರತದ ಒಟ್ಟು ಆದಾಯದಲ್ಲಿ ಶೇಕಡಾವಾರು) | | | | | | ಪ್ರಾಂತೀಯ ಖರ್ಚು (ಭಾರತದ ಒಟ್ಟು ಖರ್ಚಿನಲ್ಲಿ ಶೇಕಡಾವಾರು) | | | | | |
|---|---|---|---|---|---|---|---|---|---|---|---|---|
| | ೧೮೭೧-೨ | ೧೮೮೨-೩ | ೧೮೯೨-೩ | ೧೯೦೪-೫ | ೧೯೧೨-೩ | ೧೯೧೮-೯ | ೧೮೭೧-೨ | ೧೮೮೨-೩ | ೧೮೯೨-೯೩ | ೧೯೦೪-೫ | ೧೯೧೨-೧೩ | ೧೯೧೮-೯ |
| ಮಧ್ಯ ಪ್ರಾಂತ್ಯಗಳು | ೦.೬೫೫ | ೧.೦೫೫ | ೦.೮೬೩ | ೦.೯೦೫ | ೨.೫೭ | ೧.೭೧೫ | ೦.೬೫೭ | ೧.೦೦೮ | ೦.೮೭ | ೦.೯೮೪ | ೨.೯ | ೧.೬೮೫ |
| ಬರ್ಮಾ | ೦.೫೭೭ | ೧.೬೬ | ೨.೨೫೬ | ೩.೦೨೩ | ೪.೭೩ | ೩.೫೭ | ೦.೫೯೨ | ೧.೯೧೪ | ೨.೧೬ | ೩.೩೧ | ೪.೧೪ | ೩.೧೫ |
| ಬಂಗಾಳ | ೨.೮ | ೫.೯ | ೪.೭೨ | ೪.೧೨ | ೫.೫೬ | ೪.೦೦ | ೨.೭ | ೬.೬೮ | ೪.೫೨ | ೪.೨೬ | ೪.೫೬ | ೩.೮೪ |
| ವಾಯವ್ಯ ಪ್ರಾಂತ್ಯಗಳು ಮತ್ತು ಔದ್ | ೧.೯೯ | ೪.೧೬ | ೩.೬ | – | – | – | ೨.೦೪ | ೪.೪ | ೩.೩೨ | – | – | – |
| ಪಂಜಾಬ್ | ೧.೬೬ | ೧.೫೯ | ೧.೮೮ | ೨.೦೮ | ೩.೯೬ | ೩.೧೧ | ೧.೫೫ | ೨.೧೬೫ | ೨.೦೩ | ೧.೮೩ | ೩.೪೭ | ೨.೮೧ |
| ಮದರಾಸು | ೧.೫೯೫ | ೩.೩೨ | ೩.೩ | ೨.೮೮ | ೬.೨೭ | ೪.೭೫ | ೧.೬೧ | ೩.೨೪ | ೩.೪ | ೩.೮೯ | ೬.೧ | ೪.೫೩ |
| ಮುಂಬಯಿ | ೧.೮ | ೪.೯ | ೪.೪೯ | ೪.೦೫ | ೬.೧೭ | ೫.೪೫ | ೧.೮೩೬ | ೫.೦೮ | ೪.೪ | ೩.೭೭ | ೫.೭ | ೫.೦೦ |
| ಅಸ್ಸಾಂ | – | ೦.೬೧ | ೦.೭೩೮ | ೦.೫೯೭ | ೧.೩೮ | ೧.೦೦ | – | ೦.೫೦೫ | ೦.೬೧೭ | ೦.೬೧೮ | ೧.೧೩ | .೮೫೭ |
| ಯು.ಪಿ. | – | – | – | ೨.೯ | ೫.೫ | ೪.೧೫ | – | – | – | ೩.೦೧ | ೪.೮೭ | ೩.೯೪ |
| ಬಿಹಾರ ಮತ್ತು ಒರಿಸ್ಸಾ | – | – | – | – | ೨.೬ | ೧.೯ | – | – | – | – | ೨.೧೧ | ೧.೭೭೫ |
| **ಒಟ್ಟು ಪ್ರಾಂತ್ಯಗಳು** | **೧೧.೧** | **೨೨.೮** | **೨೧.೭೫** | **೨೦.೪** | **೩೮.೬** | **೨೯.೭** | **೧೦.೮** | **೨೫.೦೦** | **೨೧.೩** | **೨೦.೮** | **೩೪.೩** | **೨೭.೬** |

ಭಾರತ ಸರ್ಕಾರದ ವಾರ್ಷಿಕ ಹಣಕಾಸು ಮತ್ತು ವರಮಾನ ಪ್ರಣಾಳಿಕೆಗಳಿಂದ ಸಂಗ್ರಹಿಸಲಾಗಿದೆ.

# ಭಾಗ – III

# ಪ್ರಾಂತೀಯ ಹಣಕಾಸು, ಅದರ ರಚನೆ

## ಅಧ್ಯಾಯ ೭

## ಪ್ರಾಂತೀಯ ಹಣಕಾಸಿನ ಮಿತಿಗಳು

ಅಧಿಕಾರದ ನೆರವಿಲ್ಲದೆ, ಪ್ರಾಂತೀಯ ಸರ್ಕಾರಗಳ ಅಸ್ತಿತ್ವದಲ್ಲಿದ್ದ ವಿಪರ್ಯಾಸದ ಅರಿವಿರುವವರಿಗೆ – ಆಡಳಿತ ಇತಿಹಾಸದಲ್ಲೇ ಪ್ರಾಂತೀಯ ಹಣಕಾಸು ಅದ್ವಿತೀಯವಾಗಿತ್ತು. ೧೮೩೩ರಲ್ಲಿ ಆರಂಭವಾದ ವಿಪರ್ಯಾಸ ೧೮೭೦ರಲ್ಲಿ ಸರಿಹೋದ ಅಥವಾ ಹಾಗೆಂದು ಭಾಸವಾದ ವಿಷಯವನ್ನು ಈ ಅವಧಿಯ ಪ್ರಾಂತೀಯ ಹಣಕಾಸಿನ ಅಧ್ಯಯನ ಸ್ಪಷ್ಟಪಡಿಸುತ್ತದೆ.[೧]

---

೧. ೧೮೭೦ರ ಹಿಂದೆಯೇ ಪ್ರಾಂತೀಯ ಹಣಕಾಸು ಅಸ್ತಿತ್ವದಲ್ಲಿತ್ತು ಎಂಬ ವಿಚಾರವಿದೆ. ಇದು ತಪ್ಪು ಭಾವನೆ. ೧೮೭೦ ಹಿಂದಿನ ಹಣಕಾಸು ವಿಕೇಂದ್ರೀಕರಣದ ಇತಿಹಾಸವನ್ನು ನೆನಪಿಸಿಕೊಂಡರೆ ಇದು ಸ್ಪಷ್ಟವಾಗುತ್ತದೆ. ಭಾರತದ ಹಣಕಾಸು ವ್ಯವಸ್ಥೆಯ ವಿಕೇಂದ್ರೀಕರಣದ ಇತಿಹಾಸದಲ್ಲಿ ೧೮೫೫ರ ವರ್ಷ ಎದ್ದು ಕಾಣುತ್ತದೆ. ಇದಕ್ಕೆ ಕಾರಣ ಈ ವರ್ಷದಲ್ಲಿ ಸ್ಥಳೀಯ ಹಣಕಾಸು ವ್ಯವಸ್ಥೆ ಆರಂಭವಾಯಿತು. ಅಂದ ಮಾತ್ರಕ್ಕೆ ೧೮೫೫ರ ಹಿಂದೆ ಸ್ಥಳೀಯ ವರಮಾನ ಇರಲಿಲ್ಲವೆಂದಲ್ಲ. ಇದಕ್ಕೆ ಬದಲಾಗಿ, ಫೆರ್ರಿ ಫಂಡ್, ಟೋಲ್ ಫಂಡ್, ಸೆಸ್ ಮುಂತಾದ ಸಣ್ಣ–ಪುಟ್ಟ ವರಮಾನ ಬಾಬ್ತುಗಳು ಇದ್ದವು. ಈ ವರಮಾನವನ್ನು ಸ್ಥಳೀಯ ಉಪಯೋಗಗಳಿಗೆ ಖರ್ಚುಮಾಡಲಾಗುತ್ತಿತ್ತು ಸಹ. ಆದರೆ ಈ ಲೆಕ್ಕಗಳಲ್ಲಿನ ಶಿಲ್ಕನ್ನು, ಪ್ರತ್ಯೇಕ ಲೆಕ್ಕಕ್ಕೆ ವರ್ಗಾಯಿಸುತ್ತಿರಲಿಲ್ಲ. ಬದಲಾಗಿ ರಾಷ್ಟ್ರದ ಸಾಮಾನ್ಯ ಶಿಲ್ಕಿಗೆ ಇದನ್ನು ಸೇರಿಸಿಬಿಡಲಾಗುತ್ತಿತ್ತು. ಇದಕ್ಕೆ ಅಪವಾದವಾಗಿದ್ದ ಪ್ರಾಂತ್ಯಗಳೆಂದರೆ, ಬಂಗಾಳ ಮತ್ತು ವಾಯವ್ಯ ಪ್ರಾಂತ್ಯಗಳು. ಈ ಪ್ರಾಂತ್ಯಗಳಲ್ಲಿ ವರಮಾನ ಶಿಲ್ಕುಗಳನ್ನು ಪ್ರತ್ಯೇಕ ಲೆಕ್ಕಕ್ಕೆ ಸೇರಿಸಲಾಗುತ್ತಿತ್ತು. (ಕಲ್ಕತ್ತಾ ರಿವ್ಯೂ ೧೮೫೧ ಸಂಪುಟ ೧೬, ಪುಟಗಳು ೧೬೪ ಮತ್ತು ೪೬೬). ೧೮೫೫ರ ಮೇ ೧೧ರ ಹಣಕಾಸು ಗೊತ್ತುವಳಿಯ ಮೂಲಕ ಸ್ಥಳೀಯ ಹಣಕಾಸನ್ನು ಸಾಮ್ರಾಜ್ಯದ ಹಣಕಾಸಿನಿಂದ ಸಂಪೂರ್ಣವಾಗಿ ಬೇರ್ಪಡಿಸಲಾಯಿತು. ಹೀಗೆ ಮಾಡಿ ಇದನ್ನು "ಠೇವಣಿ'ಗಳೆಂದು ವರ್ಗೀಕರಿಸಲಾಯಿತು. ಇದನ್ನು 'ಸಾಲಗಳು' ಎನ್ನುವ ಬಾಬ್ತಿನ ಅಧೀನ ಬಾಬ್ತಾಗಿ ಪರಿಗಣಿಸಲಾಯಿತು. (ವೈ. ವೆಂಕಟರಾಮಯ್ಯನವರ ಅಕೌಂಟ್ಸ್ ಮ್ಯಾನ್ಯುಯಲ್ ಭಾಗ–೧ ಮದರಾಸು, ೧೮೬೬ ಪುಟ ೭೯) ಸೆಪ್ಟೆಂಬರ್ ೧೮೬೩ರ ಗೊತ್ತುವಳಿಯ ಮೂಲಕ ಸ್ಥಳೀಯ ಹಣಕಾಸನ್ನು ಬೇರೆಯದೇ ಲೆಕ್ಕವಾಗಿ ವರ್ಗೀಕರಿಸಲಾಯಿತು. ಹೀಗೆ ಸಾಮ್ರಾಜ್ಯದ ಬಜೆಟ್‌ನಿಂದ ಬೇರ್ಪಡಿಸಿದ ಪ್ರತಿಯೊಂದು ಪ್ರಾಂತ್ಯಕ್ಕೂ ಪ್ರತ್ಯೇಕವಾದ ಸ್ಥಳೀಯ ಹಣಕಾಸು ಬಜೆಟ್ ಅನ್ನು ಸ್ಥಾಪಿಸಲಾಯಿತು. ಸ್ಥಳೀಯ ಅಧಿಕಾರವಿಲ್ಲದುದರಿಂದ, ಭಾರತ ಸರ್ಕಾರ ಸ್ಥಳೀಯ ಹಣಕಾಸು ಬಜೆಟ್‌ನ ರಚನೆ ಮತ್ತು ನಿರ್ವಹಣೆಯನ್ನು ಆಯಾ ಪ್ರಾಂತೀಯ ಸರ್ಕಾರಕ್ಕೆ ವಹಿಸಿಕೊಟ್ಟಿತು. ಸ್ಥಳೀಯ ಅಗತ್ಯಗಳು ಸ್ಥಳೀಯ ಸರ್ಕಾರಗಳಿಗೇ ಚೆನ್ನಾಗಿ ಗೊತ್ತಿದ್ದರಿಂದ ಈ ಕ್ರಮ ಅತ್ಯಂತ ವಿಹಿತವೆಂದು ಭಾವಿಸಲಾಯಿತು. ಈ ಆಕಸ್ಮಿಕವನ್ನೇ ಅನೇಕರು ಇದು ಪ್ರಾಂತೀಯ ಹಣಕಾಸಿನ ವ್ಯವಸ್ಥೆಯೆಂದು ನಂಬಿದ್ದು. ಹೀಗೆ ನಂಬುವುದು ಒಂದು ದೊಡ್ಡ ತಪ್ಪೇ ಆಗಿತ್ತು ಎನ್ನುವುದು ನಿರ್ವಿವಾದ ವಿಷಯ. ಏಕೆಂದರೆ ೧೮೭೦ಕ್ಕೆ ಮುಂಚೆ ಅಸ್ತಿತ್ವದಲ್ಲಿದ್ದುದು ಶುದ್ಧವಾದ ಮತ್ತು ಸರಳವಾದ ಸ್ಥಳೀಯ ಹಣಕಾಸಿನ ವ್ಯವಸ್ಥೆ ಅಷ್ಟೆ. ಇದರ ನಿರ್ವಹಣೆ ಮಾತ್ರ ಪ್ರಾಂತೀಯ ಸರ್ಕಾರದ್ದಾಗಿತ್ತು. ಇದು ಒಂದು ರೀತಿಯಲ್ಲಿ ಪ್ರಾಂತೀಯ ಸರ್ಕಾರಗಳಿಗೆ

ಬ್ರಿಟಿಷ್ ಭಾರತದಲ್ಲಿ ಸ್ಥಾಪಿತವಾದ ಪ್ರಾಂತೀಯ ಹಣಕಾಸಿನ ಪದ್ಧತಿಯು ವ್ಯವಸ್ಥೆಯ ದೃಷ್ಟಿಯಿಂದ ಸ್ವತಂತ್ರವಾಗಿತ್ತು ಎಂದು ಸಹಜವಾಗಿ ಭಾವಿಸಬಹುದಾಗಿತ್ತು. ಪ್ರಾಂತೀಯ ಹಣಕಾಸು ವ್ಯವಸ್ಥೆಯ ಉಗಮ ಮತ್ತು ವಿಕಾಸವನ್ನು ಅಭ್ಯಾಸ ಮಾಡುವ ಯಾವನೇ ವ್ಯಕ್ತಿ ಈ ಭಾವನೆಯಿಂದ ಮುಕ್ತನಾಗುವುದು ವಾಸ್ತವವಾಗಿ ಕಷ್ಟ. ಸ್ವತಂತ್ರ ರಾಜ್ಯಗಳ ವರ್ತನೆಯ ಜೊತೆ ಸಾಮಾನ್ಯವಾಗಿ ಇರುವ ಹಣಕಾಸು ವಿಷಯದ ಮೇಲಿನ ಅಧಿಕಾರವನ್ನು ಪ್ರಾಂತ್ಯಗಳು ಹೊಂದಿದ್ದುದನ್ನು ಸಹ ನಾವು ಗಮನಿಸಬಹುದು. ಪ್ರಾಂತೀಯ ಹಣಕಾಸು ವ್ಯವಸ್ಥೆ ಸ್ವತಂತ್ರವಾಗಿತ್ತೇ ಇಲ್ಲವೇ ಎಂಬುದನ್ನು ಕಂಡುಹಿಡಿಯಲು, ನಾವು ಅವು ಮುಂಗಡ ಪತ್ರವನ್ನು ಮಾಡಲು ಎಷ್ಟು ಸ್ವತಂತ್ರವಾಗಿದ್ದವು ಎಂಬುದನ್ನು ಪರಿಶೀಲಿಸಬಹುದು ಸ್ವತಂತ್ರವಾದ ಮುಂಗಡ ಪತ್ರಕ್ಕೆ ರಾಷ್ಟ್ರದ ಹಿತದ ದೃಷ್ಟಿಯಿಂದ ಯಾವ ಸೇವೆಗಳ ಮೇಲೆ ವೆಚ್ಚ ಮಾಡಬೇಕು ಎಂದು ತೀರ್ಮಾನಿಸುವ ಅಧಿಕಾರ ಇರಬೇಕಾಗುತ್ತದೆ. ಹಾಗೆಯೇ ಸರ್ಕಾರ ಈ ವೆಚ್ಚಗಳಿಗೆ, ತೆರಿಗೆಯ ಮೂಲಕ ಅಥವಾ ಸಾಲದ ಮೂಲಕ ಹಣವನ್ನು ಎತ್ತಬೇಕೇ ಎನ್ನುವುದನ್ನು ನಿರ್ಧರಿಸಬೇಕಾಗುತ್ತದೆ. ಇವುಗಳ ಜೊತೆಗೆ, ಲೆಕ್ಕಗಳನ್ನು ಸರಿಯಾಗಿ ಇಡುವ ಮತ್ತು ಅದನ್ನು ಸ್ವತಂತ್ರವಾದ ಲೆಕ್ಕ ತಪಾಸಣೆಗೆ ಗುರಿಮಾಡುವ ಅಧಿಕಾರವನ್ನು ಸಹ ಹೊಂದಿರಬೇಕು.

ಪ್ರಾಂತೀಯ ಬಜೆಟನ್ನು ಮೇಲೆ ವಿವರಿಸಿರುವ ಪರೀಕ್ಷೆಗೆ ಒಳಪಡಿಸಿನೋಡಿದರೆ, ಸ್ವತಂತ್ರ ಪ್ರಾಂತ್ಯಗಳಿಗೆ ಹೆಚ್ಚಿನ ಸ್ವಾತಂತ್ರ್ಯ ದೊರೆತೇ ಇರಲಿಲ್ಲ ಎನ್ನುವುದನ್ನು ತಿರಸ್ಕರಿಸುವುದಕ್ಕೆ ಬರುವುದಿಲ್ಲ. ವಾಸ್ತವವಾಗಿ, ವಿವಿಧ ಪ್ರಾಂತ್ಯಗಳಲ್ಲಿ ಪ್ರಾರಂಭಿಸಲಾದ ಬಜೆಟ್‌ಗಳಿಗೆ ವಿಪರೀತವಾದ ಮಿತಿಗಳನ್ನು ಹೇರಲಾಗಿತ್ತು. ಅವುಗಳಿಗೆ ಯಾವ ಅಧಿಕಾರವೂ ಇಲ್ಲದ ಬಜೆಟ್‌ಗಳನ್ನು ಕೊಡಲಾಗಿತ್ತು. ಈ ಮಿತಿಯೊಳಗೇ ಪ್ರಾಂತ್ಯಗಳು ಕೆಲಸ ಮಾಡಬೇಕಾಗಿತ್ತಲ್ಲದೆ ತಮ್ಮ ಬಜೆಟ್‌ಗಳನ್ನು ಲೆಕ್ಕ ತಪಾಸಣೆಗೆ ಗುರಿಪಡಿಸಬೇಕಾಗಿತ್ತು. ಎಂತಹ ಮಿತಿಗಳನ್ನು

---

ನಂಬಿಕೆಯಿಂದ ವಹಿಸಿಕೊಡಲಾಗಿದ್ದ ಜವಾಬ್ದಾರಿಯಾಗಿತ್ತು ಅಷ್ಟೆ. ಸ್ಥಳೀಯ ನಿಧಿಗೆ ಸೇರಿದ ವರಮಾನ ಮತ್ತು ಖರ್ಚುಗಳನ್ನು ಇಡೀ ಪ್ರಾಂತ್ಯದ ಒಂದು ಸ್ಥಳೀಯ ನಿಧಿಗೆ ವರ್ಗಾಯಿಸಿದ ಮಾತ್ರಕ್ಕೆ ಅವುಗಳ ಬಳಿ ತಾವು ಉಪಯೋಗಿಸುವುದಕ್ಕೆ ಹಣ ಸೇರಿದಂತಾಯಿತೆಂದು ತಿಳಿಯುವುದು ತಪ್ಪು. ವಾಸ್ತವವಾಗಿ ಸ್ಥಳೀಯ ನಿಧಿ ಪ್ರಾಂತೀಯ ಸರ್ಕಾರಗಳ ಬಳಿ ಉಪಯೋಗಕ್ಕೆ ಇರಲೇ ಇಲ್ಲ. ಏಕೆಂದರೆ ನಿಗದಿತ ವಿಷಯಗಳಿಗೆ ಬಿಟ್ಟು ಬೇರೆಯದಕ್ಕೆ ಅದನ್ನು ಉಪಯೋಗಿಸುವಂತಿರಲಿಲ್ಲ. ಈ ಅರ್ಥದಲ್ಲಿ ಅವು ಸ್ಥಳೀಯ ನಿಧಿಗಳಾಗಿ ಉಳಿದವೇ ಹೊರತು ಪ್ರಾಂತೀಯ ನಿಧಿಗಳಾಗಲಿಲ್ಲ. ಕೆಲವರು ಈ ನಿಧಿಗಳನ್ನು ಪ್ರಾಂತೀಯ ನಿಧಿಗಳೆಂದೇ ಭಾವಿಸಿದ್ದರು. ಇದಕ್ಕೆ ಕಾರಣವೆಂದರೆ ಸ್ಥಳೀಯ ಹಾಗೂ ಪ್ರಾಂತೀಯ ಸರ್ಕಾರಗಳೆಂಬ ಪದಗಳನ್ನು ಸಮಾನ ಅರ್ಥದಲ್ಲಿ ಬಳಸುತ್ತಿದ್ದುದು. ಹೀಗೆ ಇವೆರಡೂ ಸರ್ಕಾರಗಳನ್ನು ಪರಸ್ಪರ ಸಮಾನ ಅರ್ಥದಲ್ಲಿ ಬಳಸುತ್ತಿದ್ದರೂ, ಸ್ಥಳೀಯ ಹಾಗೂ ಪ್ರಾಂತೀಯ ಹಣಕಾಸುಗಳನ್ನು ಒಂದೇ ಅರ್ಥದಲ್ಲಿ ಬಳಸುವುದಕ್ಕಾಗುವುದಿಲ್ಲ ಎನ್ನುವುದನ್ನು ಗಮನಿಸಬೇಕು. ವಾಸ್ತವವಾಗಿ ಭಾರತದ ಹಣಕಾಸು ವ್ಯವಸ್ಥೆಯ ಇತಿಹಾಸದಲ್ಲಿ ಸ್ಥಳೀಯ ಸರ್ಕಾರವಿಲ್ಲದೇ, ಸ್ಥಳೀಯ ಹಣಕಾಸಿನ ವ್ಯವಸ್ಥೆ ಇದ್ದ ಒಂದು ಅವಧಿ ಇತ್ತು. ಇದಕ್ಕೆ ವಿರುದ್ಧವಾಗಿ ಪ್ರಾಂತೀಯ ಸರ್ಕಾರಗಳಿದ್ದರೂ, ಪ್ರಾಂತೀಯ ಹಣಕಾಸಿನ ವ್ಯವಸ್ಥೆ ಇರಲಿಲ್ಲ. ಪ್ರಾಂತೀಯ ಸರ್ಕಾರವನ್ನು ಸ್ಥಳೀಯ ಸರ್ಕಾರವೆಂದೇ ಮಾತನಾಡುವುದು ಮುಂದುವರೆಯುವವರೆಗೂ, ಮೇಲೆ ವಿವರಿಸಿದ ಗಲಿಬಿಲಿ ಮುಂದುವರಿಯುತ್ತದೆ. ೧೮೭೦ಕ್ಕಿಂತ ಬಹಳ ಹಿಂದೆಯೇ ಪ್ರಾಂತೀಯ ಹಣಕಾಸಿನ ವ್ಯವಸ್ಥೆ ಅಸ್ತಿತ್ವದಲ್ಲಿತ್ತು ಎಂದು ಕೆಲವರು ವಾದಿಸುತ್ತಾರೆ. ಡಿಸೆಂಬರ್ ೧೪, ೧೮೭೦ರಲ್ಲಿ ಒಂದು ಗೊತ್ತುವಳಿಯ ಮೂಲಕ ಪ್ರಾಂತೀಯ ಹಣಕಾಸು ವ್ಯವಸ್ಥೆಯನ್ನು ಹುಟ್ಟುಹಾಕಲಾಯಿತು. ಇದನ್ನೇ ಸ್ಥಳೀಯ ಹಣಕಾಸು ವ್ಯವಸ್ಥೆಯೆಂದು ತಿಳಿದುಕೊಂಡು ಇದು ಸ್ಥಳೀಯ ಹಣಕಾಸು ವ್ಯವಸ್ಥೆಯ ಉಗಮ ಬಿಂದು ಎಂದು ವಾದಿಸುತ್ತಾರೆ. ಪ್ರಾಂತೀಯ ಹಾಗೂ ಸ್ಥಳೀಯ ಪದಗಳನ್ನು ಒಂದೇ ಅರ್ಥದಲ್ಲಿ ಬಳಸುವ ಕ್ರಮವನ್ನು ತಪ್ಪಿಸುವುದರ ಮೂಲಕ ಮಾತ್ರ ಮೇಲಿನ ಗಲಿಬಿಲಿಯನ್ನು ಹೋಗಲಾಡಿಸುವುದು ಸಾಧ್ಯ ಎನ್ನುವುದು ಸ್ಪಷ್ಟ.

ಹೇರಲಾಗಿತ್ತು ಎನ್ನುವುದನ್ನು ನಾವು ಮುಂದೆ ವಿವರಿಸುತ್ತೇವೆ. ಪ್ರಾಂತೀಯ ಹಣಕಾಸು ವ್ಯವಸ್ಥೆಯ ವ್ಯಾಪ್ತಿಯನ್ನು ವಿಸ್ತರಿಸುವುದರ ಬಗ್ಗೆ ಚರ್ಚಿಸುವಾಗ ಇದರ ವಿವರಣೆಯನ್ನು ನೀಡಲಾಗುತ್ತದೆ. ಆದರೆ ಇಲ್ಲಿ, ಪ್ರಾಂತೀಯ ಬಜೆಟ್‌ಗಳ ಮೇಲಿನ ಮಿತಿ, ಇಡೀ ವ್ಯವಸ್ಥೆಯ ಒಂದು ಭಾಗವಾಗಿತ್ತು ಎನ್ನುವುದನ್ನು ಗಮನಿಸಬೇಕು. ಆದ್ದರಿಂದ, ಬ್ರಿಟಿಷ್ ಇಂಡಿಯಾದ ಪ್ರಾಂತೀಯ ಹಣಕಾಸು ವ್ಯವಸ್ಥೆಯನ್ನು ಸಮಗ್ರವಾಗಿ ಗ್ರಹಿಸಬೇಕಾದರೆ, ಇದರ ಬಗ್ಗೆ ಸರ್ಕಾರದ ನಿಯಮಗಳು ಹೇಗಿದ್ದವು ಎನ್ನುವುದನ್ನು ಅನಿವಾರ್ಯವಾಗಿ ಅರಿತಿರಲೇಬೇಕಾಗುತ್ತದೆ. ಆದ್ದರಿಂದ ಈ ಹಂತದಲ್ಲಿ ಈ ನಿಯಮಗಳನ್ನು ನಾವು ಪರಿಚಯ ಮಾಡಿಕೊಳ್ಳುವುದು ಅತ್ಯಂತ ಯುಕ್ತ.

ಈ ನಿಯಮಗಳನ್ನು ೧೮೭೦ ಮತ್ತು ೧೯೧೨ರ ಅವಧಿಯಲ್ಲಿ ಜಾರಿಗೆ ತರಲಾಯಿತು. ಅಂದರೆ, ಪ್ರಾಂತೀಯ ಹಣಕಾಸು ವ್ಯವಸ್ಥೆ ಪ್ರಾರಂಭವಾದಾಗಿನಿಂದ ಹಿಡಿದು ಇದು ತನ್ನ ವಿಕಾಸದ ಹಂತಗಳನ್ನು ಮುಗಿಸಿ ಒಂದು ಅಂತಿಮ ಘಟ್ಟವನ್ನು ತಲುಪುವವರೆಗೂ ಈ ಅವಧಿ ವ್ಯಾಪಿಸಿತ್ತು. ಈ ನಿಯಮಗಳನ್ನು ಭಾರತ ಸರ್ಕಾರದ ಹಣಕಾಸು ಇಲಾಖೆಯ ವಿವಿಧ ಗೊತ್ತುವಳಿಗಳ ಮೂಲಕ ಜಾರಿಗೆ ತರಲಾಯಿತು. ೧೮೭೦ರಲ್ಲಿ ಜಾರಿಗೆ ತರಲಾದ ನಿಯಮಗಳು ಸಂಖ್ಯೆಯಲ್ಲಿ ಅಲ್ಪವಾದುದ್ದುವಷ್ಟೇ ಅಲ್ಲದೆ ಸರಳವಾಗಿಯೂ ಇದ್ದವು.[೧] ಆಗ ರೂಪಿಸಲಾದ ಅಲ್ಪಪ್ರಮಾಣದ ಬಜೆಟ್‌ಗಳನ್ನು ನಿರ್ವಹಿಸಲು ಸಂಕೀರ್ಣವಾದ, ಕ್ಲಿಷ್ಟವಾದ ನಿಯಮಗಳ ಅಗತ್ಯವೂ ಇರಲಿಲ್ಲ. ಕೆಲವು ಅನಿರೀಕ್ಷಿತ ವಿಷಯಗಳನ್ನು ನಿರ್ವಹಿಸುವುದಕ್ಕಾಗಿ ಪೂರಕ ನಿಯಮಗಳನ್ನು ರೂಪಿಸಲಾಯಿತು. ೧೮೭೭ರವರೆಗೂ ಸಹ ಪ್ರಾಂತೀಯ ಸರ್ಕಾರಗಳ ಹಣಕಾಸು ವ್ಯವಹಾರಗಳನ್ನು ನಿರ್ವಹಿಸುವುದಕ್ಕೆ ಅತ್ಯಂತ ವಿಸ್ತೃತವಾದ ನಿಯಮಗಳನ್ನು ಜಾರಿಗೆ ತರಲಿಲ್ಲ.[೨] ೧೮೭೭ರ ನಿಯಮಗಳು ನಂತರ ಜಾರಿಗೆ ಬಂದ ಎಲ್ಲಾ ನಿಯಮಗಳಿಗೆ ಆಧಾರ ಸ್ವರೂಪದ್ದಾಗಿತ್ತು. ಕೆಲವೊಂದು ಪೂರಕ ನಿಯಮಗಳೊಡನೆ, ೧೮೭೭ರ ನಿಯಮ ಸುಮಾರು ೧೫ ವರ್ಷಗಳವರೆಗೆ ಜಾರಿಯಲ್ಲಿತ್ತು. ೧೮೯೨ರಲ್ಲಿ ಮಾತ್ರ ೧೮೭೭ರ ನಿಯಮಕ್ಕೆ ಬದಲಾಗಿ ಮತ್ತೊಂದು ನಿಯಮವನ್ನು ಜಾರಿಗೆ ತರಲಾಯಿತು.[೩] ಕೇವಲ ೫ ವರ್ಷದಲ್ಲಿ ಅಂದರೆ ೧೮೯೭ ರಲ್ಲಿ ಈ ನಿಯಮಗಳನ್ನು ಬದಲಿಸಿ ಹೊಸ ನಿಯಮಗಳನ್ನು ಜಾರಿಗೊಳಿಸಲಾಯಿತು.[೪] ೧೯೧೨ರವರೆಗೂ ಈ ನಿಯಮಗಳು ಜಾರಿಯಲ್ಲಿದ್ದವು. ಈ ನಿಯಮಗಳು, ಆ ವರ್ಷ ಜಾರಿಗೊಳಿಸಲಾದ ಕಾಯಂ ಒಪ್ಪಂದಗಳಿಗೆ ಅಗತ್ಯವಾಗಿತ್ತು.[೫] ಇದೇ ನಿಯಮಗಳನ್ನು ಹಣಕಾಸು ಇಲಾಖೆಯ ೧೯೧೬ರ ಜುಲೈ ೨೪ನೇ ದಿನಾಂಕದ, ೩೬೧-ಇ-ಎ ಸಂಖ್ಯೆಯ ಗೊತ್ತುವಳಿಯ ಮೂಲಕ ಮತ್ತೆ ಜಾರಿಗೊಳಿಸಲಾಯಿತು. ಈ ನಿಯಮಗಳಲ್ಲಿನ ಬದಲಾವಣೆಗಳು ಅಷ್ಟೇನೂ ಪ್ರಧಾನವಲ್ಲದುದರಿಂದ ೧೯೧೨ರ ನಿಯಮಗಳನ್ನೇ ಪ್ರಾಂತೀಯ ಹಣಕಾಸು ವ್ಯವಸ್ಥೆಗೆ ಆಧಾರಭೂತವಾದದ್ದೆಂದು ಪರಿಗಣಿಸುವುದರಲ್ಲಿ ತಪ್ಪಿಲ್ಲ.

ಈ ನಿಯಮಗಳನ್ನು ವಿಶ್ಲೇಷಿಸುವ ಅಗತ್ಯವನ್ನು ನಾವು ಗುರುತಿಸಬೇಕು. ಇದಕ್ಕೆ ಮುಂಚೆ ಯಾವ ಅಂಶಗಳನ್ನೊಳಗೊಂಡಂತೆ ವಿಶ್ಲೇಷಣೆಯನ್ನು ಕೈಗೊಳ್ಳಬೇಕು ಎಂಬುದನ್ನು ನಿರ್ಧರಿಸಬೇಕು. ಈ ರೀತಿಯ

---

೧. ಹಣಕಾಸು ಇಲಾಖೆಯ ಗೊತ್ತುವಳಿ ಸಂಖ್ಯೆ ೩೩೩೪ ಡಿಸೆಂಬರ್ ೧೪, ೧೮೭೦

೨. ಹಣಕಾಸು ಇಲಾಖೆ ಗೊತ್ತುವಳಿ ಸಂಖ್ಯೆ ೩೩೩೪ ಮಾರ್ಚ್ ೧೪, ೧೮೭೦

೩. ಹಣಕಾಸು ಇಲಾಖೆ ಗೊತ್ತುವಳಿ ಸಂಖ್ಯೆ ೧೧೪೨ ಮಾರ್ಚ್ ೧೭, ೧೮೯೨

೪. ಹಣಕಾಸು ಇಲಾಖೆ ಗೊತ್ತುವಳಿ ಸಂಖ್ಯೆ ೩೫೫೧ ಆಗಸ್ಟ್ ೧೧, ೧೮೯೭

೫. ಹಣಕಾಸು ಇಲಾಖೆ ಗೊತ್ತುವಳಿ ೨೪೯ ಇ-ಎ, ದಿನಾಂಕ ಜುಲೈ ೧೫, ೧೯೧೨

ವಿಶ್ಲೇಷಣೆಯ ಉದ್ದೇಶಗಳು ಎರಡು: ೧) ಈ ನಿಯಮಗಳಿಗೆ ಇದ್ದ ಮಿತಿಗಳೇನು? ೨) ಏಕೆ ಈ ಮಿತಿಗಳನ್ನು ಗೊತ್ತುಪಡಿಸಲಾಗಿತ್ತು? ನಿಯಮಗಳಿಗಿದ್ದ ಮಿತಿಗಳನ್ನು ಅರಿಯುವುದು ಕುತೂಹಲಕಾರಿಯಾಗಿದ್ದಿತು. ಆದರೆ ಇದಕ್ಕಿಂತಲೂ ಎರಡನೆಯ ಅಂಶ ಅತಿ ಮುಖ್ಯ. ನಿಯಮಗಳಿಗಿದ್ದ ಮಿತಿಗಳನ್ನು ಅರಿಯುವುದು ನಮ್ಮ ತಕ್ಷಣದ ಉದ್ದೇಶವಾದರೂ, ಮುಂದಿನ ಅಧ್ಯಾಯದಲ್ಲಿ ನಾವು ನೋಡುವಂತೆ, ಪ್ರಾಂತೀಯ ಹಣಕಾಸು ವ್ಯವಸ್ಥೆಯ ವೈಚಿತ್ರ್ಯದಿಂದಾಗಿಯೇ ಈ ಮಿತಿಗಳು ಉದ್ಭವಿಸಿದ್ದವು ಎನ್ನುವುದನ್ನು ಗಮನಿಸಬೇಕು. ಈ ನಿಯಮಗಳನ್ನು ಕ್ರಮಯುತವಾಗಿ ಜೋಡಿಸಿ ಅದನ್ನು ಒಂದು ರಿಜಿಸ್ಟರ್‌ನಂತೆ ನೋಡುವುದು ಅಷ್ಟು ಉಪಯುಕ್ತವಲ್ಲ. ಈ ನಿಯಮಗಳನ್ನು ರೂಪಿಸಿದ ಅಧಿಕಾರಿಗಳಿಗೆ ಈ ನಿಯಮಗಳು ಹಣಕಾಸು ನಿಯಂತ್ರಣದ ದೃಷ್ಟಿಯಿಂದ ಮುಖ್ಯವಾಗಿದ್ದವು ಅಷ್ಟೇ. ಹೀಗಾಗಿ ಅವುಗಳನ್ನು ಯಾವ ಕ್ರಮದಲ್ಲಿ ವಿಂಗಡಿಸಲಾಯಿತು ಎನ್ನುವುದು ಅವರಿಗೆ ಮುಖ್ಯವಾಗಿರಲಿಲ್ಲ. ಆದರೆ ಈ ನಿಯಮಗಳ ಹಿಂದೆ ಅಡಗಿದ್ದ ವಿಷಯಗಳನ್ನು ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಅವುಗಳನ್ನು ಯಾವ ಉದ್ದೇಶದಿಂದ ರೂಪಿಸಲಾಗಿತ್ತೋ ಅವುಗಳ ಆಧಾರದ ಮೇಲೆ ಮರುವಿಂಗಡಣೆ ಮಾಡಿಕೊಳ್ಳುವುದು ಅಗತ್ಯ. ಆದರೆ ಹೀಗೆ ವಿಂಗಡಣೆ ಮಾಡುವಾಗ, ಪ್ರಾಂತೀಯ ಹಣಕಾಸು ವ್ಯವಸ್ಥೆಯನ್ನು ಮೊಟ್ಟಮೊದಲಿಗೆ ರೂಪಿಸಿದವರು ಯಾವ ಉದ್ದೇಶವನ್ನು ಪೂರೈಸಬೇಕೆಂದು ಆಲೋಚಿಸುತ್ತಿದ್ದರು ಎನ್ನುವುದನ್ನು ಮನಸ್ಸಿನಲ್ಲಿಟ್ಟುಕೊಳ್ಳುವುದು ಮುಖ್ಯವಾಗುತ್ತದೆ. ಅತಿಯಾದ ಶಾಸ್ತ್ರದೃಷ್ಟಿಯಿಂದ ನೋಡದೆ, ಈ ಯೋಜನೆಯನ್ನು ಯಶಸ್ವಿಯಾಗಿ ನಡೆಸುವ ದೃಷ್ಟಿಯಿಂದ ಪ್ರಾಂತ್ಯಗಳ (೧) ಆಡಳಿತಾತ್ಮಕ ಅಧಿಕಾರ ಮತ್ತು (೨) ವಿತ್ತೀಯ ಅಧಿಕಾರ – ಇವೆರಡನ್ನೂ ಸರಿಯಾಗಿ ನಿರ್ಣಯಿಸಲು ನಿಯಮಗಳನ್ನು ರೂಪಿಸಬೇಕಾಗಿತ್ತು. ಪ್ರಾಂತೀಯ ಹಣಕಾಸು ವ್ಯವಸ್ಥೆಯನ್ನು ಸರಿಯಾಗಿ ಅರ್ಥಮಾಡಿಕೊಳ್ಳುವ ದೃಷ್ಟಿಯಿಂದ ಈ ಅಧಿಕಾರಗಳೆರಡನ್ನೂ ಮತ್ತೆ ಕೆಲವು ಉಪವಿಭಾಗಗಳನ್ನಾಗಿ ವಿಂಗಡಿಸಬಹುದು. ಆಡಳಿತಾತ್ಮಕ ಅಧಿಕಾರವನ್ನು (೧) ಸೇವೆಗಳು ಮತ್ತು (೨) ಸಿಬ್ಬಂದಿ – ಇವುಗಳಿಗೆ ಸೇರಿದವೆಂದೂ, ವಿತ್ತೀಯ ಅಧಿಕಾರವನ್ನು (೧) ಸಾಮಾನ್ಯ ವಿತ್ತೀಯ ಅಧಿಕಾರ, (೨) ಪ್ರಾಂತೀಯ ಆದಾಯಕ್ಕೆ ಸಂಬಂಧಿಸಿದವು, (೩) ಪ್ರಾಂತೀಯ ವೆಚ್ಚಕ್ಕೆ ಸಂಬಂಧಿಸಿದವು. (೪) ಆಯವ್ಯಯ ಪತ್ರಕ್ಕೆ ಸಂಬಂಧಿಸಿದವು, ಹಾಗೂ (೫) ಲೆಕ್ಕಪತ್ರಗಳು ಮತ್ತು ಲೆಕ್ಕ ತಪಾಸಣೆ ಎಂದೂ ವಿಂಗಡಿಸಬಹುದು.

ಪ್ರಾಂತೀಯ ಹಣಕಾಸಿನ ನಿಯಮಗಳನ್ನು ರೂಪಿಸಿದವರ ಮನಸ್ಸಿನಲ್ಲಿದ್ದ ಉದ್ದೇಶಗಳೆಲ್ಲವನ್ನೂ ಮೇಲಿನ ವಿಂಗಡಣೆ ಪೂರೈಸುತ್ತವೆ ಎಂದು ಹೇಳಬಹುದು. ಈ ವಿಂಗಡಣೆಯ ಆಧಾರದ ಮೇಲೆ ಪ್ರಾಂತೀಯ ಹಣಕಾಸಿಗೆ ಸಂಬಂಧಿಸಿದ ಅಸಂಖ್ಯಾತ ನಿಯಮಗಳನ್ನು ಒಂದು ಕೈಪಿಡಿಯ ಮಾದರಿಯಲ್ಲಿ ಸಂಗ್ರಹಿಸಬಹುದು. ಇಂಥ ವಿಂಗಡಣೆ ಅನುಕೂಲಕರವಷ್ಟೇ ಅಲ್ಲದೆ ಬೋಧಪ್ರದ ಕೂಡ ಹೌದು.

### I. ಆಡಳಿತಾತ್ಮಕ ಅಧಿಕಾರದ ಮಿತಿಗಳು

೧) ಅಂತರ–ಪ್ರಾಂತೀಯ ಸೇವೆಗಳಿಗೆ ಸಂಬಂಧಿಸಿದ ನಿಯಮಗಳು.

ಬೇರೆ–ಬೇರೆ ಪ್ರಾಂತ್ಯಗಳಿಗೆ ಸಂಬಂಧಿಸಿದಂತೆ, ಪ್ರತ್ಯೇಕ ಮುಂಗಡ ಪತ್ರದಿಂದಾಗಿ ಅಂತರಪ್ರಾಂತೀಯ ಹಾಗೂ ಅಂತರ ಇಲಾಖೆಗಳಿಗೆ ಸಂಬಂಧಿಸಿದಂತೆ ಕೆಳಗಿನ ನಿಯಮಗಳನ್ನು ರೂಪಿಸಲಾಗಿತ್ತು.

i) ಯಾವುದೇ ಅಂತರಪ್ರಾಂತೀಯ ಹೊಂದಾಣಿಕೆಗಳಿಗೆ ಅವಕಾಶವಿರುವುದಿಲ್ಲ.

ii) ಪ್ರಾಂತೀಯ ಸರ್ಕಾರಕ್ಕೆ ವರ್ಗಾಯಿಸಿದ ಯಾವುದೇ ವಿಭಾಗದ ಹಿಂದಿನ ವೆಚ್ಚವನ್ನು ರದ್ದುಮಾಡಲಾಗಿದೆ.

iii) ಯಾವುದೇ ವಿಭಾಗದ ನೇರ ಸಂಪರ್ಕವನ್ನು ರದ್ದುಪಡಿಸಬಾರದು ಮತ್ತು ಅದನ್ನು ಸುವ್ಯವಸ್ಥೆಯಲ್ಲಿರುವಂತೆ ನೋಡಿಕೊಳ್ಳಬೇಕು.

**೨) ಸಿಬ್ಬಂದಿಗೆ ಸಂಬಂಧಿಸಿದ ನಿಯಮಗಳು**

ಪ್ರಾಂತೀಯಗೊಳಿಸಲಾದ ಸೇವೆಗಳನ್ನು ಅನುಷ್ಠಾನಗೊಳಿಸುವ ಸಿಬ್ಬಂದಿಗೆ ಸಂಬಂಧಿಸಿದಂತೆ ಪ್ರಾಂತೀಯ ಸರ್ಕಾರಗಳು ಕೆಳಗಿನವುಗಳನ್ನು ಮಾಡಲಾಗದು.

(i) ಯಾವುದೇ ಕಾಯಂ ಹುದ್ದೆಯನ್ನು ಸೃಷ್ಟಿಸುವುದು. ಯಾವುದೇ ಹುದ್ದೆಯ ಸಂಬಳ – ಸಾರಿಗೆಯನ್ನು ಹೆಚ್ಚಿಸುವುದು.

೧೯೧೨ಕ್ಕೆ ಮುಂಚೆ ಈ ನಿಯಮಗಳನ್ನು ತಿಂಗಳಿಗೆ ೨೪೦ ರೂಪಾಯಿ ಮತ್ತು ಅದಕ್ಕೆ ಹೆಚ್ಚಿನ ಸಂಬಳದಾರರಿಗೆ ಅನ್ವಯಿಸಲಾಯಿತು.[೧] ೧೯೧೨ರ ನಂತರ ಇದು ಗೆಜೆಟೆಡ್ ಅಧಿಕಾರಿಗಳಿಗೆ ಅಥವಾ ಸಿವಿಲ್ ಸರ್ವೀಸ್‌ನ ನಿಯಮಾವಳಿ ೨೯-ಬಿಯಲ್ಲಿ ವ್ಯಾಖ್ಯಾನಿಸಲಾದ ಸಾಮ್ರಾಜ್ಯಶಾಹಿ ಸೇವೆಯ ಅಧಿಕಾರಿಗಳಿಗೆ ಮಾತ್ರ ಅನ್ವಯಿಸುವಂತಾಯಿತು.[೨]

(ii) ಯಾವುದೇ ತಾತ್ಕಾಲಿಕ ಹುದ್ದೆಯನ್ನು ಸೃಷ್ಟಿಸುವುದು. ಯಾವುದೇ ಅಧಿಕಾರಿಗಳಿಗೆ ಅನ್ಯಕಾರ್ಯನಿಮಿತ್ತವೆಂದು ಪರಿಗಣಿಸಿ ಕಳುಹಿಸುವುದು.

೧೯೧೨ಕ್ಕಿಂತ ಮುಂಚೆ ಈ ನಿಯಮ ತಿಂಗಳಿಗೆ ೨೫೦ ರೂಪಾಯಿ ಅಥವಾ ಅದಕ್ಕೆ ಹೆಚ್ಚಿನ ಸಂಬಳದಾರನಿಗೆ ಅನ್ವಯಿಸುತ್ತಿತ್ತು.[೩] ೧೯೧೨ರ ನಂತರ ಇದು ತಿಂಗಳಿಗೆ ರೂ. ೨,೫೦೦ನ್ನು ಮೀರಿರುವ ಸೇವೆಯ ಸರಾಸರಿ ಸಂಬಳ ಅಥವಾ ಹೆಚ್ಚಿನ ಸಂಬಳ ಪಡೆಯುವವನಿಗೆ ಅಥವಾ ತಾತ್ಕಾಲಿಕ ಹುದ್ದೆಯಲ್ಲಿದ್ದು ಅಥವಾ ಅನ್ಯಕಾರ್ಯನಿಮಿತ್ತ ಇದ್ದು ಮತ್ತು ಇದು ೨ ವರ್ಷವನ್ನು ಮೀರಿದಿದ್ದರೆ, ತಿಂಗಳಿಗೆ ರೂ. ೮೦೦ ಸಂಬಳ ಬರುವವನಿಗೆ ಅನ್ವಯವಾಗುವಂತಾಯಿತು.[೪]

(iii) ಒಂದು ಕಾಯಂ ಹುದ್ದೆಯನ್ನು ರದ್ದು ಮಾಡುವುದು ಅಥವಾ ಅಂತಹ ಹುದ್ದೆಯಲ್ಲಿರುವವರ ಸಂಬಳ-ಸಾರಿಗೆಯನ್ನು ಕಡಿಮೆ ಮಾಡುವುದು.

ಈ ನಿಯಮ ಮೊದಲಿಗೆ ತಿಂಗಳಿಗೆ ೨೫೦ ರೂಗಳಿಗಿಂತ ಹೆಚ್ಚಿನ ಸಂಬಳ ಪಡೆಯುವವರಿಗೆ ಅನ್ವಯವಾಗುವಂತಿತ್ತು.[೫] ೧೯೧೨ರ ನಂತರ ಇದು ಇಂಗ್ಲೆಂಡಿನಲ್ಲಿ ನೇಮಕಗೊಂಡು ಇಲ್ಲಿ ಕೆಲಸ ಮಾಡುತ್ತಿದ್ದ ಗೆಜೆಟೆಡ್ ನೌಕರರಿಗೆ ಮತ್ತು ಸಿವಿಲ್ ಸರ್ವೀಸ್ ನಿಯಮಾವಳಿಯ ಕಲಂ ೨೯-ಬಿ ಯಲ್ಲಿ ವ್ಯಾಖ್ಯಾನಿಸಿದ್ದ ನೇಮಕಗಳಿಗೆ ಅನ್ವಯಿಸುವಂತಾಯಿತು.[೬]

(iv) ಸರ್ಕಾರೀ ಅಧಿಕಾರಿಗೆ ಅಥವಾ ಸೇನೆಯಿಂದ ನಿವೃತ್ತಿಯಾದ ನಂತರ ಪೆನ್‌ಶನ್ ಪಡೆಯುತ್ತಿರುವವರಿಗೆ ಅನುದಾನವನ್ನು ಕೊಡುವುದು.

---

೧. ೧೮೮೦ರ ನಿಯಮ ೪(೩) (ಎ)
೨. ೧೯೧೨ರ ನಿಯಮ ೧೦(೧)
೩. ೧೮೮೦ರ ನಿಯಮ ೪(೩) (ಬಿ)
೪. ೧೯೧೨ರ ನಿಯಮ ೧೦(೪) (ಎ)
೫. ೧೮೮೦ರ ನಿಯಮ ೪(೪)
೬. ೧೯೧೨ರ ನಿಯಮ ೧೦(೩)

(ಎ) ಸಂಬಂಧಪಟ್ಟ ಪ್ರಾಂತ್ಯದ ಸಾಮಾನ್ಯ ಭೂವರಮಾನದ ನಿಯಮಗಳ ಅನ್ವಯ ಅನುದಾನವನ್ನು ಹೊರತುಪಡಿಸಿ.[೧]

(ಬಿ) ವರ್ಷಕ್ಕೆ ೬೦೦ರೂ. ಗಳನ್ನು ಮೀರಿದ ಭೂವರಮಾನ ಕೊಡುಗೆ ಅಥವಾ ಈ ಹಣವನ್ನು ಮೂರು ಸಂತತಿಗೆ ಮೀರದಂತೆ ಮತ್ತು ಪ್ರತಿ ಸಂತಾನದ ಮಟ್ಟದಲ್ಲಿ ೧/೨ದಷ್ಟು ಕಡಿಮೆಯಾಗುವಂತೆ ಕೊಡುಗೆ. ಪ್ರಾಂತೀಯ ಸರ್ಕಾರಗಳು, ಭೂ ವರಮಾನವನ್ನು, ಸರ್ಕಾರೀ ಅಧಿಕಾರಿಗಳಿಗೆ ಅನುದಾನದ ರೂಪದಲ್ಲಿ ನೀಡುವಾಗ ಅವರ ಸೇವೆ ಅತ್ಯಂತ ವಿಶಿಷ್ಟವಾಗಿರುವಂಥ ಮತ್ತು ಅತ್ಯುತ್ತಮವಾದಂಥ ಸಂದರ್ಭಗಳಿಗೆ ಮೀಸಲಾಗಿರತಕ್ಕದ್ದು.[೨]

(v) (ಎ) ವರ್ಷಕ್ಕೆ ರೂ. ೫೦,೦೦೦ ಗಳ ಹೆಚ್ಚುವರಿ ವೆಚ್ಚವನ್ನು ಮೀರುವ ಎಲ್ಲ ಸಂಸ್ಥೆಗಳು ಅಥವಾ (ಬಿ) ಯಾವುದೇ ಸೇನೆಯ ಯಾವುದೇ ಶಾಖೆಯಲ್ಲಿ ವರ್ಷಕ್ಕೆ ರೂ. ೨೫,೦೦೦ವನ್ನು ಮೀರುವ ವೆಚ್ಚವುಳ್ಳ ಅಥವಾ (ಸಿ) ತಿಂಗಳಿಗೆ ಗರಿಷ್ಠ ಸಂಬಳ ಸರಾಸರಿ ರೂ. ೫೦೦ ಅನ್ನು ತಮ್ಮ ಹಣವನ್ನು ಸಂರಕ್ಷಿಸಿ ಇಟ್ಟುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕೆಳಗಿನ ನಿಯಮ ಅನ್ವಯವಾಗುತ್ತಿತ್ತು. ಗರಿಷ್ಠ ಮಿತಿಯನ್ನು ಭಾರತ ಸರ್ಕಾರ ಅಥವಾ ಸೆಕ್ರೆಟರಿ ಆಫ್ ಸ್ಟೇಟ್ ಕೊನೆಯದಾಗಿ ಪುನರ್ವಿಮರ್ಶಿಸಿದ ಮಟ್ಟಕ್ಕೆ ಸರಾಸರಿಯನ್ನು ಏರಿಸಬೇಕು. (ಡಿ) ಯಾವುದೇ ಪ್ರದೇಶದಲ್ಲಿ ಬಾಡಿಗೆ ಹೆಚ್ಚಾಗಿರುವುದರಿಂದ ಜೀವನದ ಭತ್ಯೆಗೆ ಪರಿಹಾರವಾಗಿ ಸ್ಥಳೀಯ ಭತ್ಯೆಗಳನ್ನು ನೀಡುವುದು.[೩]–ಇವುಗಳ ಪುನರ್ವಿಮರ್ಶೆ ಮಾಡುವುದು.

## II ಹಣಕಾಸು ಅಧಿಕಾರದ ಮಿತಿಗಳು

**(೧) ಸಾರ್ವತ್ರಿಕ**

ಪ್ರಾದೇಶಿಕ ಸರ್ಕಾರಗಳ ಹಣಕಾಸು ಅಧಿಕಾರದ ಮಿತಿಗಳನ್ನು ಚರ್ಚಿಸುವುದಕ್ಕಿಂತ ಮುಂಚೆ, ಪ್ರಾದೇಶಿಕ ಸರ್ಕಾರಗಳೊಡನೆ ಮಾಡಿಕೊಂಡಿದ್ದ ಒಪ್ಪಂದ ಅವುಗಳಿಗೆ ಆದಾಯ ಮತ್ತು ಖರ್ಚಿನ ಕೆಲವು ಬಾಬ್ತುಗಳನ್ನು ವಹಿಸಿಕೊಡಲಾಗಿತ್ತು ಎನ್ನುವುದನ್ನು ನೆನಪಿಸಿಕೊಳ್ಳಬೇಕು. ಈ ಆಕಸ್ಮಿಕ ಲಕ್ಷಣದಿಂದಾಗಿ, ಪ್ರಾಂತೀಯ ಸರ್ಕಾರಗಳೊಡನೆ ಮಾಡಿಕೊಳ್ಳಲಾದ ಒಪ್ಪಂದಗಳು, ಆ ಸರ್ಕಾರಗಳ ಬಜೆಟ್‌ನಲ್ಲಿ ಪ್ರತಿಯೊಂದು ಆದಾಯ ವೆಚ್ಚ ಬಾಬ್ತುಗಳೊಡನೆ ಪ್ರತ್ಯೇಕವಾಗಿ ಮಾಡಿಕೊಳ್ಳಲಾದ ಒಪ್ಪಂದದ ಒಂದು ಸಂಗ್ರಹ ಎಂದು ಭಾವಿಸಬಾರದು. ಈ ಭಾವನೆಯನ್ನು ತೊಡೆದು ಹಾಕುವುದಕ್ಕಾಗಿಯೇ ಕೆಳಗಿನ ನಿಬಂಧನೆಯನ್ನು ಮಾಡಲಾಯಿತು.

೧) ಪ್ರಾಂತೀಯ ಸರ್ಕಾರಗಳಿಗೆ ಗೊತ್ತುಮಾಡುವ ತಮ್ಮ ಅಧಿಕಾರ ವ್ಯಾಪ್ತಿಯ ಎಲ್ಲ ಸೇವೆಗಳಿಗೆ ಹಣವನ್ನು ಒಟ್ಟಾಗಿ ಗೊತ್ತುಮಾಡಲಾಗಿದೆ ಎಂದು ತಿಳಿಯತಕ್ಕದ್ದು : ಆದ್ದರಿಂದ, ಯಾವುದೇ ಸೇವೆಯ ಮೇಲಿನ ಖರ್ಚು ಅಂದಾಜುಮಾಡಿದ್ದ ವೆಚ್ಚಕ್ಕಿಂತ ಅಧಿಕವಾಗಿದೆ ಎಂಬ ಕಾರಣಕ್ಕೆ ಸಾಮ್ರಾಜ್ಯಶಾಹಿಯ ಬೊಕ್ಕಸದಿಂದ ಅದನ್ನು ತುಂಬಿಕೊಡುವಂತೆ ನಿರೀಕ್ಷಿಸತಕ್ಕದ್ದಲ್ಲ, ಅಂತಹ

---

೧. ೧೯೧೨ರ ನಿಯಮ ೧೦(೯) (ಎ)
೨. ೧೯೧೨ರ ನಿಯಮ ೧೦(೯) (ಬಿ)
೩. ೧೯೧೨ರ ನಿಯಮ ೧೦ (೬)

ಯಾವುದೇ ವೆಚ್ಚವನ್ನು ಬಿಟ್ಟು ತಮ್ಮ ಕ್ರೋಡೀಕೃತ ಅನುದಾನದಿಂದಲೇ ಭರಿಸಬೇಕು.[೧]

೨) ಮತ್ತು ಪ್ರಾಂತೀಯ ಸರ್ಕಾರಗಳು, ಸಾಮ್ರಾಜ್ಯ ಖಜಾನೆಗೆ ಯಾವುದೇ ಹೆಚ್ಚಿನ ಬೇಡಿಕೆಗಳನ್ನು ಸಲ್ಲಿಸಬಾರದು, ಆಡಳಿತಾತ್ಮಕ ದಕ್ಷತೆಯಿಂದ ತಮ್ಮ ನಿರ್ವಹಣೆಗೆ ವಹಿಸಲಾದ ಎಲ್ಲ ಸೇವೆಗಳನ್ನು ತಮಗೆ ನೀಡಲಾದ ಹಣದಿಂದಲೇ ನಿರ್ವಹಿಸಲು ಬದ್ಧವಾಗಿರಬೇಕು. ಈ ಉದ್ದೇಶಕ್ಕಾಗಿ ಅವರಿಗೆ ನೀಡಲಾದ ನಿಧಿಗಳನ್ನು ದಕ್ಷವಾಗಿ ನಿರ್ವಹಿಸತಕ್ಕದ್ದು.

೩) ತಮ್ಮ ಉಪಯೋಗಕ್ಕೆ ಕೊಡಲಾಗಿರುವ ಹಣವನ್ನು ಪ್ರಾಂತ್ಯಗಳು ಸಾಮ್ರಾಜ್ಯದ ಖಜಾನೆಯಲ್ಲಿ ಇಟ್ಟಿರಬೇಕು. ಇದನ್ನು ಅಲ್ಲಿಂದ ತೆಗೆದು, ಬೇರೆ ಹೂಡಿಕೆಗಳಿಗೆ ಬಳಸಬಾರದು. ಸಾರ್ವಜನಿಕ ಸೇವೆಗಳಿಗೆ ಬಿಟ್ಟು ಬೇರೆ ಉದ್ದೇಶಗಳಿಗೆ ಹಣವನ್ನು ಖಜಾನೆಯಿಂದ ತೆಗೆದುಕೊಳ್ಳುವಂತಿಲ್ಲ.[೨]

**(೨) ವರಮಾನ ನಿಯಮಗಳು**

ಸಾರ್ವತ್ರಿಕ ಮಿತಿಗಳ ನಂತರ ನಾವೀಗ ಪ್ರಾಂತ್ಯದ ವರಮಾನ ನಿಯಮಗಳನ್ನು ನೋಡೋಣ. ಪ್ರತಿ ಒಪ್ಪಂದದಲ್ಲಿ ಪ್ರಾಂತ್ಯಗಳಿಗೆ ಗೊತ್ತು ಮಾಡಲಾಗಿದ್ದ ಹಣದಲ್ಲೇ ಪ್ರತಿಯೊಂದು ಪ್ರಾಂತ್ಯವೂ ತನ್ನ ಆಡಳಿತದ ನಿರ್ವಹಣೆಯನ್ನು ಮಾಡಿಕೊಳ್ಳಬೇಕಾಗಿತ್ತು ಎಂಬುದನ್ನು ನಾವು ಗಮನಿಸಬೇಕು.

ಸಹಜ ಮೂಲಗಳಿಂದ ಬರುತ್ತಿದ್ದ ವರಮಾನ ಮೂಲಗಳಿಗಿಂತ ಭಿನ್ನವಾದ ಮೂಲಗಳಿಂದ, ಪ್ರಾಂತ್ಯಗಳು ವರಮಾನವನ್ನು ಎತ್ತುವಂತಿರಲಿಲ್ಲ. ಕೆಳಗಿನ ನಿಯಮಗಳನ್ನು ಪ್ರಾಂತ್ಯಗಳು ಅನುಸರಿಸಬೇಕಾಗಿತ್ತು:–

(i) ಪ್ರಾಂತ್ಯಗಳು ಯಾವುದೇ ಹೆಚ್ಚುವರಿ ತೆರಿಗೆಯನ್ನು ವಿಧಿಸುವಂತಿರಲಿಲ್ಲ. ವರಮಾನ ನಿರ್ವಹಣೆಗೆ ಸಂಬಂಧಿಸಿದಂತೆ ಪ್ರಾಂತ್ಯಗಳು ಪ್ರಸ್ತುತದಲ್ಲಿರುವ ನಿಯಮಗಳಿಗಿಂತ ಭಿನ್ನವಾದ ನಿಯಮಗಳನ್ನು ಅನುಸರಿಸುವಂತಿರಲಿಲ್ಲ.[೩]

(ii) ಸ್ಟಾಂಪ್‌ಗಳ ಮೇಲಿನ ಚಿಲ್ಲರೆ ವ್ಯಾಪಾರದಲ್ಲಿ, ಕೋರ್ಟ್‌ಫೀ ಲೇಬಲ್‌ಗಳು, ಮತ್ತು ಸ್ಪಿರಿಟ್‌ಗಳು ಮತ್ತು ಔಷಧದ ಮೇಲೆ ಪಟ್ಟಾದರಗಳನ್ನು ಬದಲಾಯಿಸುವಂತಿಲ್ಲ ಅಥವಾ ಹೆಚ್ಚಿಸುವಂತಿಲ್ಲ.[೪]

(iii) ತನ್ನ ಉಪಯೋಗಕ್ಕಾಗಿ ಬಹಿರಂಗ ಮಾರುಕಟ್ಟೆಯಲ್ಲಿ ಪ್ರಾಂತೀಯ ಸರ್ಕಾರಗಳು ಸಾಲಗಳನ್ನು ಎತ್ತುವಂತಿಲ್ಲ.[೫]

ತಮ್ಮ ಸಂಪನ್ಮೂಲಗಳನ್ನು ರೂಢಿಸಿಕೊಳ್ಳುವ ವಿಷಯದಲ್ಲಿ ಯಾವ ಅಧಿಕಾರವನ್ನೂ ಪ್ರಾಂತೀಯ ಸರ್ಕಾರಗಳು ಹೊಂದಿರಲಿಲ್ಲವೆನ್ನುವುದು ನಿಜವಾದರೂ, ಅವು ತಮ್ಮ ಅಧೀನದಲ್ಲಿದ್ದ ಯಾವುದೇ ಅಧಿಕಾರಿಗೆ ಈ ಹಕ್ಕನ್ನು ಕೊಡಲು ಸಿದ್ಧವಿರಲಿಲ್ಲ. ಇಂತಹ ಪರಿಸ್ಥಿತಿಯಿಂದ ತಪ್ಪಿಸಿಕೊಳ್ಳಲು

---

೧. ೧೮೭೭ರ ನಿಯಮ ೭ ಮತ್ತು ೧೮೯೭ರ ನಿಯಮ ೧೪

೨. ೧೮೭೭ರ ನಿಯಮ ೧(೮), ೧೮೯೭ರ ನಿಯಮ ೪ (೧೧), ೧೯೧೨ರ ನಿಯಮ ೫ (೬)

೩. ೧೮೭೭ರ ನಿಯಮ ೧(೧) ಮತ್ತು ನಂತರದ ಗೊತ್ತುವಳಿಗಳು.

೪. ೧೮೭೭ರ ನಿಯಮ ೧(೬) ಮತ್ತು ನಂತರದ ಗೊತ್ತುವಳಿಗಳು.

೫. ೧೯೧೨ರ ನಿಯಮ ೫(೧೩), ೧೯೧೨ ಹಿಂದೆ ಪ್ರಾಂತೀಯ ಹಣಕಾಸಿಗೆ ಸಂಬಂಧಿಸಿದ ಗೊತ್ತುವಳಿಗಳಲ್ಲಿ ಈ ನಿಯಮ ಇರಲಿಲ್ಲ. ಆದರೆ ಪ್ರಾಂತೀಯ ಹಣಕಾಸಿನ ಪ್ರಾರಂಭದಿಂದಲೂ ಇದು ಚಾಲ್ತಿಯಲ್ಲಿತ್ತು ಎನ್ನುವುದರಲ್ಲಿ ಸಂಶಯವಿಲ್ಲ. ೧೯೧೨ ರ ಹಿಂದಿನ ನಿಯಮಗಳಲ್ಲಿ ಇದು ನಿರ್ದಿಷ್ಟವಾಗಿರಲಿಲ್ಲ ಎನ್ನುವುದು ಗಮನಾರ್ಹ. ಆದರೆ ೧೮೭೯–೮೦ ರ ಹಣಕಾಸು ವಿವರಣಾ ಪತ್ರವನ್ನು ವಿಮರ್ಶಿಸುವ ಗೊತ್ತುವಳಿಯ ಪ್ರಕಾರ "ಸ್ಥಳೀಯ ಸರ್ಕಾರ ಸಾಲವನ್ನೆತ್ತುವುದಿಲ್ಲವಾದ್ದರಿಂದ ಕಡ್ಡಾಯವಾಗಿ ನಿಷೇಧಿಸಲಾಗಿದೆ" ೧೮೭೮ರ ಹಣಕಾಸು ಪ್ರಣಾಳಿಕೆ ಕಲ್ಕತ್ತಾ ಪುಟ–೫.

ಕೆಳಗಿನ ನಿಯಮಗಳನ್ನು ರೂಪಿಸಲಾಗಿತ್ತು.

(iv) ಸಾರ್ವತ್ರಿಕ ವರಮಾನಕ್ಕೆ ಜಮಾ ಮಾಡುವ ಯಾವುದೇ ಬಾಬ್ತನ್ನು ಅದು ಸಾಮ್ರಾಜ್ಯದ್ದಾಗಿರಲಿ ಅಥವಾ ಪ್ರಾಂತೀಯವಾಗಿರಲಿ, ಅದು ಸ್ಥಳೀಯ ಅಥವಾ ವಿಶೇಷ ನಿಧಿಯಾಗುವಂತೆ ಮಾಡುವಂತಿಲ್ಲ. ೧೯೧೨ರ ನಿಯಮದ ಮೂಲಕ, ಪ್ರಾಂತ್ಯಗಳಿಗೆ ವಹಿಸಿಕೊಡಲಾದ ವರಮಾನ ಬಾಬ್ತುಗಳಿಂದ ವಿಶೇಷ ನಿಧಿಯನ್ನು ಸ್ಥಾಪಿಸಿಕೊಳ್ಳುವಂತಿಲ್ಲ ಎಂಬ ನಿಯಮವನ್ನು ಸ್ವಲ್ಪಮಟ್ಟಿಗೆ ಸಡಿಲಿಸಲಾಯಿತು. ಇದರ ಪ್ರಕಾರ ವರ್ಷಕ್ಕೆ ರೂ. ೨೫,೦೦೦ವನ್ನು ಮೀರದ ಆದಾಯಗಳಿಂದ ಮತ್ತು ಸಾಮಾನ್ಯ ತೆರಿಗೆಗಳಿಂದ ಬಂದಿಲ್ಲದಿರುವ, (ವರ್ಷಂಪ್ರತಿ ಮರುಕಳಿಸದಂತಿರುವ ಸಂಪೂರ್ಣವಾಗಿ ಪ್ರಾಂತೀಯವಾಗಿರುವ ಕೆಲವು ಸಣ್ಣಪಟ್ಟ ಬಾಬ್ತುಗಳನ್ನು, ಸಿವಿಲ್ ಸರ್ವೀಸ್ ರೆಗ್ಯುಲೇಷನ್‌ನ ಮುಂದೆ ಕಲಂನಲ್ಲಿ ವ್ಯಾಖ್ಯಾನಿಸಿರುವಂತೆ) ಹಣವನ್ನು ಸ್ಥಳೀಯ ಸಂಸ್ಥೆಗೆ ವಹಿಸಕೊಡಬಹುದು ಅಥವಾ ವಿಶೇಷ ನಿಧಿಯಾಗಿ ಮಾಡಬಹುದು.[೧]

(v) ತಮ್ಮಲ್ಲಿರುವ ಹಣದಿಂದ ಪ್ರಾಂತ್ಯಗಳು ಅನುದಾನ, ಸಹಾಯಧನ ಮತ್ತು ಇತರ ಯಾವುದೇ ರೀತಿಯ ಕೊಡುಗೆಯ ರೂಪದಲ್ಲಿ ಸ್ಥಳೀಯ ಸಂಸ್ಥೆಗೆ ಅಥವಾ ಮುನಿಸಿಪಲ್ ಸಂಸ್ಥೆಗೆ ಕೊಡುವಂತಿಲ್ಲ. ಹೀಗೆ ಮಾಡಿ ಭಾರತದ ವರಮಾನಕ್ಕೆ ಖರ್ಚನ್ನು ಜಮಾಮಾಡಿರುವಂತಿಲ್ಲ.

ಅಂದ ಮಾತ್ರಕ್ಕೆ ಪ್ರಾಂತೀಯ ಸರ್ಕಾರಗಳು ಸ್ಥಳೀಯ ಅಥವಾ ಮುನಿಸಿಪಲ್ ಸಂಸ್ಥೆಗಳಿಗೆ ಅನುದಾನವನ್ನು ಅಥವಾ ಕೊಡುಗೆಗಳನ್ನು ಕೊಡುವುದನ್ನು ಸಂಪೂರ್ಣವಾಗಿ ತಪ್ಪಿಸಲಾಗಿತ್ತು ಎಂದು ಭಾವಿಸಬಾರದು. ಭಾರತ ಸರ್ಕಾರ ಸಾಧ್ಯವಾದಷ್ಟೂ ಇಂಥ ಕೊಡುಗೆಗಳನ್ನು ಮಾಡಬಾರದೆಂದು ತನ್ನ ಒಪ್ಪಂದಗಳ ಮೂಲಕ ನಿರ್ಬಂಧಿಸಿತ್ತು ಅಷ್ಟೆ.[೨] ೧೯೧೨ರ ನಿಯಮದ ಮೂಲಕ ಮಾತ್ರ ಇಂಥ ಕೊಡುಗೆಗಳಿಗೆ ಸಂಬಂಧಿಸಿದಂತೆ ಹೆಚ್ಚು ನಿರ್ಬಂಧಗಳನ್ನು ಹೇರಲಾಯಿತು. ಈ ನಿಯಮದ ಪ್ರಕಾರ, ೧) ಯಾವುದೇ ಸಂದರ್ಭದಲ್ಲಿ ಪ್ರಾಂತೀಯ ವರಮಾನಗಳಿಂದ ಸ್ಥಳೀಯ ಸಂಸ್ಥೆಗಳಿಗೆ ವರ್ಷಕ್ಕೆ ೧೦,೦೦,೦೦೦ ರೂಪಾಯಿಗಳನ್ನು ಮೀರಿದ ಪುನರಾವರ್ತವಾಗುವ ಯಾವುದೇ ಅನುದಾನವನ್ನು ನೀಡಕೂಡದೆಂದು ಗೊತ್ತುಮಾಡಲಾಯಿತು.[೩] ಅಥವಾ ೨) ಯಾವುದೇ ಸಂದರ್ಭದಲ್ಲಿ ವರ್ಷಕ್ಕೆ ೧೦,೦೦,೦೦೦ನ್ನು ಮೀರದಂಥ ಅನುದಾನವನ್ನು ನೀಡಲಾಗದು.[೪] ಅಥವಾ ೩) ಭಾರತದ ಒಳಗೆ ಇರುವ ಯಾವುದೇ ಧಾರ್ಮಿಕ ಸಂಸ್ಥೆಗೆ ಅಥವಾ ಸೇವಾ ಸಂಸ್ಥೆಗೆ, ವರ್ಷಕ್ಕೆ ಪುನರಾವರ್ತವಾಗುವಂತಿದ್ದರೆ, ೧೦,೦೦೦ರೂ.ಗಳನ್ನು ಮೀರುವಂತಹ ಮತ್ತು ಪುನರಾವರ್ತನವಾಗದಂತಿದ್ದರೆ ವರ್ಷಕ್ಕೆ ೫೦,೦೦೦ರೂಗಳನ್ನು ಮೀರವಂತಹ ಅನುದಾನಗಳನ್ನು ನೀಡುವಂತಿಲ್ಲ.[೫]

iv (೧) ರಾಜಕೀಯ ಉದ್ದೇಶಗಳಿಗೆ ಅನುದಾನ ನೀಡುವಂತಿಲ್ಲ (ಎ) ಭೂಕಂದಾಯವಿಲ್ಲದ ಭೂಮಿಯನ್ನು ಅಥವಾ ಕಡಿಮೆ ಬೆಲೆಯಲ್ಲಿ ಭೂಮಿಯನ್ನು ಕೊಡುವಂತಿಲ್ಲ. ಅಥವಾ (ಬಿ) ವರ್ಷಕ್ಕೆ ಭೂಕಂದಾಯವು ೧೦೦೦ರೂ.ಗಳನ್ನು ಮೀರುವಂತಿದ್ದರೆ, ಅಥವಾ ಭೂಮಿಯ ಬೆಲೆಯೇ

---

೧. ೧೯೧೨ರ ನಿಯಮ ೫ (೫)
೨. ೧೮೭೭ರ ನಿಯಮ ೪ (೧೦)
೩. ೧೯೧೨ರ ನಿಯಮ ೧೦ (೧೨) (ಎ)
೪. ೧೯೧೨ರ ನಿಯಮ ೧೦ (೧೨) (ಬಿ)
೫. ೧೯೧೨ರ ನಿಯಮ ೧೦ (೧೦)

೧೦೦೦ರೂಗಳನ್ನು ಮೀರುವಂತಿದ್ದರೆ, ಅವುಗಳನ್ನು ಯಾರಿಗೂ ಅನುದಾನವಾಗಿ ಕೊಡುವಂತಿಲ್ಲ.[೧] ೨) ಯಾವುದಾದರೂ ಸರ್ಕಾರೇತರ ಅಧಿಕಾರಿಗೆ ಆಕಸ್ಮಿಕವಾಗಿದ್ದರೆ, ಅಥವಾ ಆತನ ಕುಟುಂಬಕ್ಕೆ ಅಪಘಾತವಾಗಿದ್ದರೆ, ಅಥವಾ ಸರ್ಕಾರಕ್ಕೆ ಯಾವುದೇ ಸೇವೆಯನ್ನು ಸಲ್ಲಿಸುತ್ತಿರುವಾಗ ಅವನಿಗೆ ಮೃತ್ಯು ತಲೆದೋರಿದರೆ, ಯಾವ ಅನುದಾನವನ್ನೂ ಕೊಡುವಂತಿಲ್ಲ. ೩) ವರ್ಷಕ್ಕೆ ೧೦೦೦ರೂ.ಗಳನ್ನು ಮೀರುವಂತಹ ವಿಶ್ರಾಂತಿಧನವನ್ನು ಅಥವಾ ೩೦೦೦ರೂಗಳನ್ನು ಮೀರುವಂತಹ ಗ್ರಾಚುಯಿಟಿಯನ್ನು ಸರ್ಕಾರಕ್ಕೆ ಸಲ್ಲಿಸಿರುವ ಅನುಪಮ ಸೇವೆಗೆ ಪ್ರತಿಯಾಗಿ ಮಂಜೂರು ಮಾಡುವಂತಿಲ್ಲ.[೨]

### (೩) ವೆಚ್ಚದ ನಿಯಮಗಳು

ಪ್ರಾಂತೀಯ ಸರ್ಕಾರಗಳಿಗೆ ಕೊಡಲಾದ ವೆಚ್ಚದ ಅಧಿಕಾರಗಳು, ಅವುಗಳಿಗೆ ವರಮಾನಕ್ಕೆ ಕೊಡಲಾಗಿದ್ದ ಅಧಿಕಾರಗಳಷ್ಟೇ ಮಿತಿಗಳನ್ನು ಹೊಂದಿದ್ದವು. ಪ್ರಾಂತ್ಯಗಳು ತಮಗೆ ಗೊತ್ತುಮಾಡಲಾಗಿದ್ದ ಬಾಬ್ತುಗಳ ಮೇಲೆ ವೆಚ್ಚ ಮಾಡಲು ಸ್ವತಂತ್ರವಾಗಿದ್ದರೂ, ಅವುಗಳನ್ನು ಕೆಲವು ಉದ್ದೇಶಗಳಿಗಾಗಿ ನಿರ್ಬಂಧಿಸಲು ಕೆಲವು ಮಿತಿಗಳನ್ನು ಹೇರಲಾಗಿತ್ತು.

ವೆಚ್ಚ ಉದ್ದೇಶಗಳನ್ನು ಸಾಧಿಸುವ ದೃಷ್ಟಿಯಿಂದ ಪ್ರಾಂತ್ಯಗಳು ಕೆಳಗಿನ ನಿಬಂಧನೆಗಳನ್ನು ಪೂರೈಸಬೇಕಾಗಿತ್ತು.

(i) ಭಾರತ ಸರ್ಕಾರ ಗೊತ್ತುಮಾಡಿದ್ದ ಉದ್ದೇಶಗಳಿಂದ ಹೊರತಾದ ಬಾಬ್ತುಗಳಿಗೆ ಸಾರ್ವಜನಿಕ ಹಣದಿಂದ ಪ್ರಾಂತ್ಯಗಳು ಖರ್ಚು ಮಾಡಕೂಡದು.[೩]

(ii) ಒಪ್ಪಂದದಲ್ಲಿ ಗೊತ್ತುಮಾಡಲಾದ ಸೇವೆಗಳಿಗೆ ಮಾತ್ರ ಪ್ರಾಂತ್ಯಗಳು ವೆಚ್ಚಗಳನ್ನು ಮಾಡಬೇಕು.

೧೯೧೨ರಕ್ಕಿಂತ ಮುಂಚೆ, ಪ್ರಾಂತ್ಯಗಳು ಒಂದು ಹೊಸ ಸಾರ್ವತ್ರಿಕ ಸೇವೆಯನ್ನು ಅಥವಾ ಕರ್ತವ್ಯವನ್ನು ತೆಗೆದುಕೊಳ್ಳಬಹುದಿತ್ತು. ಆದರೆ ತಾತ್ಕಾಲಿಕ ಸೇವೆಗೆ ತಾತ್ಕಾಲಿಕವಾಗಿ ಮತ್ತು ಕಾಯಂ ಸೇವೆಗೆ ಕಾಯಂ ಆಗಿ ಅವು ಹಣವನ್ನು ಒದಗಿಸಬಲ್ಲವೆಂದು ಖಾತ್ರಿಯಾದರೆ ಮಾತ್ರ ಭಾರತ ಸರ್ಕಾರ ಅಂಥ ಸೇವೆಯನ್ನು ಕೈಗೊಳ್ಳಲು ಪ್ರಾಂತ್ಯಗಳಿಗೆ ಅವಕಾಶ ಕೊಡುತ್ತಿತ್ತು.[೪] ೧೯೧೨ರಲ್ಲಿ ಈ ನಿಬಂಧನೆಯನ್ನು ಸಡಿಲಿಸಲಾಯಿತು. ಕೆಳಗಿನ ರೀತಿಯ ಹೊಸ ಸಾರ್ವತ್ರಿಕ ಸೇವೆಯನ್ನು ಅಥವಾ ಕರ್ತವ್ಯವನ್ನು ಪ್ರಾಂತ್ಯ ಕೈಗೊಳ್ಳಲು ಅವಕಾಶ ಕೊಡಲಾಯಿತು. (ಎ) ಇಂಥ ಸೇವೆ ಅಸದೃಶ ಸ್ವರೂಪದ್ದಾಗಿರಬೇಕು. ಅಥವಾ (ಬಿ) ಸಾಮಾನ್ಯ ಆಡಳಿತ ಉದ್ದೇಶಗಳಿಗಿಂತ ತುಂಬಾ ಭಿನ್ನವಾದ ಉದ್ದೇಶಗಳನ್ನು ಹೊಂದಿರಬೇಕು. ಅಥವಾ (ಸಿ) ತಾನು ಮಂಜೂರು ಮಾಡಬಹುದಾದ ಮೊತ್ತಕ್ಕಿಂತ ಅತ್ಯಂತ ಹೆಚ್ಚಿನ ವೆಚ್ಚವನ್ನು ಮುಂದಿನ ದಿನಗಳಲ್ಲಿ ಬೇಡುವಂಥ ಸೇವೆಯಾಗಿರಬೇಕು.[೫]

(iii) ಕೆಳಗಿನ ಬಾಬ್ತುಗಳ ಮೇಲೆ ಪ್ರಾಂತ್ಯಗಳ ಹಣ ಖರ್ಚು.

(ಎ) ರಾಜ್ಯದ ಸಂತೋಷ ಕೂಟಗಳು ಮತ್ತು ಸಭೆಗಳು ಭಾರತಕ್ಕೆ ಬರುವ ವಿಶೇಷ ಅತಿಥಿಗಳ ಸತ್ಕಾರಕ್ಕಾಗಿ ಖರ್ಚು ರೂ. ೧,೦೦,೦೦೦ ಮೀರಬಾರದು.[೬]

---

೧. ೧೯೧೨ರ ನಿಯಮ ೧೦ (೭)
೨. ೧೯೧೨ರ ನಿಯಮ ೧೦ (೮)
೩. ೧೮೭೭ರ ನಿಯಮ ೧೧ ಮತ್ತು ನಂತರದ ಗೊತ್ತುವಳಿಗಳು.
೪. ೧೮೭೭ರ ನಿಯಮ ೪ (೨)
೫. ೧೯೧೨ರ ನಿಯಮ ೫ (೧೧)
೬. ೧೯೧೨ರ ನಿಯಮ ೧೦ (೧೧)

(ಬಿ) ರೈಲ್ವೆ ಬೋಗಿಗೂ ಅದರಲ್ಲೂ ಅತ್ಯುನ್ನತ ಅಧಿಕಾರಿಗಳ ಬಳಕೆಗಾಗಿ ಮೀಸಲಾಗಿರುವ ರೈಲ್ವೆ ಬೋಗಿಗೂ ನಿರ್ವಹಣೆಯನ್ನು ಬಿಟ್ಟು ಉಳಿದ ಯಾವ ಖರ್ಚನ್ನೂ ಮಾಡಬಾರದು.[೧]

(ಸಿ) ಅಧಿಕಾರಿಯ ಬಳಕೆಗೆ ಮೋಟಾರ್ ಕಾರ್ ಅಥವಾ ಮೋಟಾರ್ ಸೈಕಲ್ಲುಗಳ ಖರೀದಿಗೆ ಅಥವಾ ನಿರ್ವಹಣೆಗೆ ಹಣ ವೆಚ್ಚ ಮಾಡಲಾಗದು. ಆದರೆ, ಪ್ರಾಂತೀಯ ಬಾಬ್ತಿನಲ್ಲಿನ 'ಕಂಟ್ರಾಕ್ಟ್ ಗ್ರಾಂಟ್'ನಿಂದ ಈ ಉದ್ದೇಶಕ್ಕಾಗಿ ಹಣ ಖರ್ಚು ಮಾಡಬಹುದು.[೨]

(ಡಿ) ಪ್ರಾಂತ್ಯದ ಬಾಬ್ತಿನ 'ಕಂಟ್ರಾಕ್ಟ್ ಗ್ರಾಂಟ್'ನ ಹೆಚ್ಚಳಕ್ಕೆ ಹಣ ಒದಗಿಸುವಂತಿಲ್ಲ.[೩]

(ಇ) ಅಂತರ್ದೇಶೀಯ ಜಲಸಾಗಣೆಗಾಗಿ ಸಣ್ಣ ನೌಕೆಗಳನ್ನು ನಿರ್ಮಾಣ ಮಾಡುವುದಕ್ಕೆ ಮತ್ತು ಕೊಳ್ಳುವುದಕ್ಕೆ ಮತ್ತು ಅವುಗಳನ್ನು ಬಂದರುಗಳಲ್ಲಿ ಬಳಸುವುದಕ್ಕೆ, ರೂ. ೧,೦೦,೦೦೦ಗಳಿಗಿಂತ ಹೆಚ್ಚು ಹಣವನ್ನು ಖರ್ಚು ಮಾಡುವ ಹಾಗಿಲ್ಲ,[೪]

(ಎಫ್) ಸಿಬ್ಬಂದಿ ವೆಚ್ಚ, ಯಂತ್ರಸಾಮಗ್ರಿ ಮುಂತಾದವುಗಳನ್ನು ಒಳಗೊಂಡಂತೆ, ಹಾಗೂ ಸಾರ್ವತ್ರಿಕ ಕಾಮಗಾರಿಗಳ ಮೇಲೆ ೨೦,೦೦,೦೦೦ ರೂಪಾಯಿಗಳನ್ನು ಮೀರುವಂತಹ ಹಣವನ್ನು ವೆಚ್ಚ ಮಾಡುವಂತಿಲ್ಲ. ಆದರೆ ಒಂದು ಪ್ರಾಂತ್ಯ ಮೂಲತಃ ಮಂಜೂರಾಗಿರುವ ಹಣದ ಮೇಲೆ ಶೇ. ೧೦ರಷ್ಟನ್ನು ಖರ್ಚು ಮಾಡಬಹುದಾಗಿತ್ತು. ಆದರೆ ಇಂಥ ವೆಚ್ಚದ ಮೊತ್ತ, ಕಚೇರಿ, ಸಿಬ್ಬಂದಿ, ಯಂತ್ರಗಳು ಮುಂತಾದವುಗಳನ್ನು ಒಳಗೊಂಡಂತೆ ರೂ. ೧೨½ ಲಕ್ಷವನ್ನು ಮೀರುವಂತಿರಲಿಲ್ಲ.[೫]

ಪ್ರಾಂತೀಯ ಹಣಕಾಸಿಗಿದ್ದ ಮಿತಿಗಳ ಜೊತೆಗೆ ಪ್ರಾಂತೀಯ ಸರ್ಕಾರಗಳು ಇನ್ನೂ ಕೆಲವು ನಿರ್ಬಂಧಗಳನ್ನು ಎದುರಿಸಬೇಕಾಗಿತ್ತು. ಅವು ಕೆಳಗಿನ ಬಾಬ್ತುಗಳಿಗೆ ವೆಚ್ಚ ಮಾಡುವಂತಿರಲಿಲ್ಲ.

(i) ಭಾರತ ಸರ್ಕಾರ ಗೊತ್ತುಮಾಡಿರುವ ನೀತಿಗಳು ಅಥವಾ ನಿಯಮಗಳಿಗೆ ಹೊರತಾದಂತೆ ಯಾವುದೇ ವ್ಯಕ್ತಿಗೆ ಅಥವಾ ಖಾಸಗೀ ವ್ಯಕ್ತಿಗಳ ಸಂಸ್ಥೆಗೆ ಲಾಭವಾಗುವಂತೆ ಪ್ರಾಂತೀಯ ಸರ್ಕಾರಗಳು ಹಣವನ್ನು ಖರ್ಚುಮಾಡುವಂತಿಲ್ಲ.[೬]

(ii) ರಾಜ್ಯಗಳು, ಯಾವುದೇ ಯೋಜನೆಯ ಮೇಲೆ ವರ್ಷಕ್ಕೆ ೧೦,೦೦೦ ರೂಗಳನ್ನು ಮೀರಿ ಖರ್ಚು ಮಾಡುವಂತಿಲ್ಲ. ಅಥವಾ ವೆಚ್ಚ ಮರುಕಳಿಸುವಂತಿದ್ದರೆ ಒಟ್ಟು ವರ್ಷಕ್ಕೆ ರೂ. ೫೦,೦೦೦ವನ್ನು ಮೀರಿ ಖರ್ಚು ಮಾಡುವಂತಿಲ್ಲ.[೭]

**(೪) ಬಜೆಟರಿ ನಿಯಮಗಳು**

೧೮೬೦ರಲ್ಲಿ[೮] ಶ್ರೀಯುತ ವಿಲ್ಸನ್ ಅವರು ಭಾರತದಲ್ಲಿ ಮೊಟ್ಟಮೊದಲ ಬಾರಿಗೆ ಜಾರಿಗೊಳಿಸಿದ ವ್ಯವಸ್ಥೆಯ ಸಾಮಾನ್ಯ ನಿಯಮಗಳನ್ನು ಪ್ರಾಂತ್ಯಗಳು ಅನುಸರಿಸಬೇಕಾಗಿತ್ತು. ಇದರ ಪ್ರಕಾರ ಅವು ತಮ್ಮ

೧. ೧೯೧೨ ನಿಯಮ ೧೦ (೪)
೨. ೧೯೧೨ರ ನಿಯಮ ೧೦ (೬)
೩. ೧೯೧೨ರ ನಿಯಮ ೧೦ (೧೫)
೪. ೧೯೧೨ರ ನಿಯಮ ೧೦ (೧೭)
೫. ೧೯೧೨ರ ನಿಯಮ ೧೦ (೧೮)
೬. ೧೮೭೭ರ ನಿಯಮ ೧೦ ಮತ್ತು ನಂತರದ ಗೊತ್ತುವಳಿಗಳು.
೭. ೧೯೧೨ರ ನಿಯಮ ೧೦ (೧೩)
೮. ೧೮೯೨ರ ನಿಯಮ ೧೧, ೧೮೯೭ರ ನಿಯಮ ೧೩ ಮತ್ತು ೧೯೧೨ ನಿಯಮ ೧೯

ಬಜೆಟ್ ಅಂದಾಜುಗಳನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲೇಬೇಕಾಗಿತ್ತು ಮತ್ತು ಭಾರತ ಸರ್ಕಾರದಿಂದ ಮಂಜೂರಾತಿ ಪಡೆಯಲೇ ಬೇಕಾಗಿತ್ತು; ಜೊತೆಗೆ ಅನುದಾನಗಳ ನಿಯಮ, ಮತ್ತು ಹೊಂದಾಣಿಕೆ ನಿಯಮಗಳನ್ನು ಕಡ್ಡಾಯವಾಗಿ ಅನುಸರಿಸಬೇಕಾಗಿತ್ತು. ಅಲ್ಲದೆ, ಭಾರತ ಸರ್ಕಾರದ ಒಪ್ಪಿಗೆ ಇಲ್ಲದೆ ಪ್ರಾಂತ್ಯಗಳು.

(i) ಸಾಮ್ರಾಜ್ಯದ ಬಳಿ ಇಟ್ಟಿರುವ ತಮ್ಮ ಶಿಲ್ಕನ್ನು ಸಂಪೂರ್ಣವಾಗಿ ತೆಗೆದುಕೊಳ್ಳುವಂತಿರಲಿಲ್ಲ.

೧೮೮೭ಕ್ಕಿಂತ ಮುಂಚೆ, ಪ್ರಾಂತೀಯ ಸರ್ಕಾರ, ತನ್ನ ಬಜೆಟ್ ಅಂದಾಜಿನಲ್ಲಿ, ಸಾಮ್ರಾಜ್ಯದ ಬಳಿ ಇರುವ ತನ್ನ ಇಡೀ ಶಿಲ್ಕನ್ನು ತೆಗೆದುಕೊಳ್ಳುವ ಪ್ರಸ್ತಾಪವನ್ನು ಮಾಡಬಹುದಾಗಿತ್ತು. ಆದರೆ ನಂತರ ರೂಪಿಸಲಾದ ನಿಯಮಗಳ ಪ್ರಕಾರ, ಯಾವಾಗಲೂ, ಸಾಮ್ರಾಜ್ಯದ ಬಳಿ ತನ್ನ ಶಿಲ್ಕಿನ ಸ್ವಲ್ಪ ಭಾಗವನ್ನು ಪ್ರಾಂತೀಯ ಸರ್ಕಾರ ಇಡಲೇಬೇಕಾಗಿತ್ತು. ಈ ಕನಿಷ್ಠ ಮಿತಿಯು ಒಪ್ಪಂದದಿಂದ ಒಪ್ಪಂದಕ್ಕೆ ವ್ಯತ್ಯಾಸಗೊಳ್ಳುತ್ತಿತ್ತು;

(ii) ಪ್ರಾಂತ್ಯ ಕೊರತೆ ಬಜೆಟ್ ಅನ್ನು ರೂಪಿಸುವಂತಿರಲಿಲ್ಲ. ಅಂದರೆ, ಒಂದು ವರ್ಷದಲ್ಲಿ ಪ್ರಾಂತ್ಯದ ವೆಚ್ಚ, ಪ್ರಾಂತ್ಯದ ವರಮಾನವನ್ನು ಮೀರುವಂತಿರಲಿಲ್ಲ.

ಈ ನಿಯಮದ ಬಿಗಿಯನ್ನು ೧೯೧೨ರ ನಂತರ ಸ್ವಲ್ಪ ಸಡಿಲಿಸಲಾಯಿತು.[೨] ಈ ವರ್ಷದ ನಂತರ ಪ್ರಾಂತ್ಯವು, ಭಾರತ ಸರ್ಕಾರಕ್ಕೆ ಪರಿಸ್ಥಿತಿಯ ಮನವರಿಕೆ ಮಾಡಿಕೊಟ್ಟು ಕೊರೆತ ಬಜೆಟ್ಟನ್ನು ಅನ್ನು ಮಂಡಿಸಬಹುದಾಗಿತ್ತು. ಕೊರತೆಗೆ ಕಾರಣ, ವಿಶೇಷ ಪರಿಸ್ಥಿತಿಯನ್ನೊಳಗೊಂಡಿರಬೇಕಾಗಿತ್ತು ಮತ್ತು ಪುನರಾವರ್ತನೆಗೊಳ್ಳದಂತಿರಬೇಕಾಗಿತ್ತು.[೩] ಆದರೆ, ಒಂದು ಪಕ್ಷ ಈ ಕೊರತೆಯನ್ನು, ಸಾಮ್ರಾಜ್ಯದ ಬಳಿ ತನ್ನ ಶಿಲ್ಕಿನಿಂದ ಪಡೆದು ತುಂಬುವಾಗ, ಶಿಲ್ಕು ನಿಗದಿತ ಕನಿಷ್ಠ ಮಟ್ಟವನ್ನು ದಾಟುವಂತಿದ್ದರೆ, ಭಾರತ ಸರ್ಕಾರ ಒಂದು ನಿಬಂಧನೆಯನ್ನು ಹಾಕುತ್ತಿತ್ತು. ಇದೆಂದರೆ, ಪ್ರಾಂತ್ಯಕ್ಕೆ ಶಿಲ್ಕಿನಿಂದ ಮಂಜೂರು ಮಾಡಲಾಗುವ ಹಣ ಓವರ್‌ಡ್ರಾಫ್ಟ್ ರೂಪದಲ್ಲಿರುತ್ತದೆ. ಇದನ್ನು ಅದು ಕಂತುಗಳಲ್ಲಿ ಗೊತ್ತುಮಾಡಲಾಗುವ ಬಡ್ಡಿದರದೊಡನೆ ಹಿಂದಿರುಗಿಸಬೇಕು.[೪]

(iii) ಭಾರತ ಸರ್ಕಾರ ಆಯಾ ವರ್ಷಕ್ಕೆ ಗೊತ್ತುಮಾಡುವ ಮೊತ್ತಕ್ಕಿಂತ ಹೆಚ್ಚಿನ ಮೊತ್ತದ ಹಣವನ್ನು, ಆ ವರ್ಷ ಪ್ರಾಂತ್ಯ ಸರ್ಕಾರ ಖರ್ಚು ಮಾಡಕೂಡದು.

ಪ್ರಾಂತ್ಯವು, ತನ್ನ ವೆಚ್ಚವನ್ನು ಹೆಚ್ಚಿಸಬಹುದು. ಆದರೆ ಒಂದು ಬಾಬ್ತಿನ ಮೇಲೆ ಮಾಡುವ ಹೆಚ್ಚಿನ ವೆಚ್ಚವನ್ನು ಮತ್ತೊಂದು ಬಾಬ್ತಿನ ಮೇಲಿನ ಕಡಿಮೆ ವೆಚ್ಚದಿಂದ ಸರಿತೂಗಿಸಬೇಕು. ಈ ರೀತಿಯ ಮರುಹೊಂದಾಣಿಕೆಗಾಗಿ ಪ್ರಾಂತ್ಯಗಳಿಗೆ ವಿಪುಲವಾದ ಅಧಿಕಾರವನ್ನು ನೀಡಲಾಗಿತ್ತು.[೪] ತನ್ನ ಬಜೆಟ್‌ನಲ್ಲಿ ಮಂಜೂರಾಗಿರುವ ಬಾಬ್ತುಗಳಲ್ಲಿರುವ ವೆಚ್ಚಗಳನ್ನು ಪ್ರಾಂತೀಯ ಸರ್ಕಾರ ಮರುಹೊಂದಾಣಿಕೆ ಮಾಡಬಹುದಿತ್ತು. ಇದು ಮಂಜೂರಾಗಿರುವ ಯಾವುದೇ ಬಾಬ್ತುಗಳಿಂದ, ಅದು ಸಂಪೂರ್ಣವಾಗಿ ಪ್ರಾಂತೀಯವಾಗಿರಲಿ ಅಥವಾ ಅಧೀನ ಬಾಬ್ತಿಗಿರಲಿ ವೆಚ್ಚಗಳ ಹೊಂದಾಣಿಕೆ ಮಾಡಬಹುದಿತ್ತು. ಆದರೆ ಇಡಿಯಾಗಿ ಪ್ರಾಂತ್ಯಕ್ಕೆ ಮಂಜೂರಾಗಿರುವ ವೆಚ್ಚದ ಮೊತ್ತವನ್ನು ಅದು ಮೀರುವಂತಿರಲಿಲ್ಲ.[೫]

---

೧. ೧೯೧೨ರ ನಿಯಮ ೨೫ (೧)
೨. ೧೮೧೨ರ ನಿಯಮ ೮
೩. ೧೯೧೨ರ ನಿಯಮ ೨೧
೪. ೧೯೧೨ರ ನಿಯಮ ೨೧ ಮತ್ತು ೨೨
೫. ೧೯೧೨ರ ನಿಯಮ ೨೪

**(೫) ಲೆಕ್ಕ ತಪಾಸಣೆ ಮತ್ತು ಲೆಕ್ಕ ಮಿತಿಗಳು**

ಪ್ರಾಂತೀಯ ಸರ್ಕಾರಗಳಿಗೆ ಮಂಜೂರಾಗಿರುವ ಬಾಬ್ತುಗಳ ನಡುವೆ ವೆಚ್ಚ ಹೊಂದಾಣಿಕೆ ಮಾಡುವ ಅಧಿಕಾರವನ್ನು ನೀಡಲಾಗಿದ್ದರೂ, ಅವು ತಾವು ಖರ್ಚು ಮಾಡಿದ ಹಣವನ್ನು ಲೆಕ್ಕ ತಪಾಸಣೆಗೆ ಗುರಿಪಡಿಸಲೇಬೇಕಾಗಿತ್ತು. ಒಂದು ಸ್ವಾರಸ್ಯಕರವಾದ ವಿಷಯವೆಂದರೆ, ಲೆಕ್ಕಪತ್ರಗಳನ್ನು ಇಡುವ ಮತ್ತು ಅದನ್ನು ಲೆಕ್ಕ ತಪಾಸಣೆಗೆ ಗುರಿಪಡಿಸುವುದಕ್ಕೆ ಪ್ರಾಂತ್ಯಗಳು ಬದ್ಧವಾಗಿದ್ದರೂ, ಅದನ್ನು ಅವು ತಮ್ಮ ಶಾಸಕರುಗಳಿಗೆ ಒಪ್ಪಿಸಬೇಕಾದ ಜವಾಬ್ದಾರಿಯನ್ನು ಹೊಂದಿರಲಿಲ್ಲ. ಬದಲಿಗೆ ಅದನ್ನು ಕೇಂದ್ರ ಸರ್ಕಾರಕ್ಕೆ ಮಾತ್ರ ಒಪ್ಪಿಸಬೇಕಾಗಿತ್ತು. ಭಾರತ ಸರ್ಕಾರ, ಹಣಕಾಸು ಅಧಿಕಾರವನ್ನು ಪ್ರಾಂತ್ಯಗಳಿಗೆ ನೀಡಿದ್ದುದರಿಂದ ಈ ಪರಿಸ್ಥಿತಿ ಸಹಜವಾಗಿಯೇ ಏರ್ಪಟ್ಟಿತ್ತು. ಭಾರತ ಸರ್ಕಾರವಾದರೋ ಪ್ರಾಂತ್ಯಗಳಿಗೆ ತಮಗಿಷ್ಟ ಬಂದ ಲೆಕ್ಕ ತಪಾಸಣಾಧಿಕಾರಿಗಳಿಂದ ಲೆಕ್ಕ ತಪಾಸಣೆ ಮಾಡಿಸಿಕೊಳ್ಳುವ ಸ್ವಾತಂತ್ರ್ಯವನ್ನು ಕೊಟ್ಟಿರಲಿಲ್ಲ. ಆದರೆ ವಿವಿಧ ಪ್ರಾಂತ್ಯಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಭಾರತ ಸರ್ಕಾರದ ಲೆಕ್ಕ ತಪಾಸಣಾ ಅಧಿಕಾರಿಗಳಿಂದ ಲೆಕ್ಕ ತಪಾಸಣೆ ನಡೆಯಬೇಕಾಗಿತ್ತು. ಈ ಅಧಿಕಾರಿಗಳು ಪ್ರಾಂತೀಯ ಸರ್ಕಾರಗಳ ಆಡಳಿತಕ್ಕೆ ಮಾರ್ಗದರ್ಶಿಗಳಾಗಿರುತ್ತಿದ್ದರು. ಮೇಲೆ ನಾವು ವಿವರಿಸಲಾದ ನಿಯಮಗಳನ್ನು ಪ್ರಾಂತೀಯ ಸರ್ಕಾರಗಳಿಗೆ ವಿವರಿಸಿ ತಿಳಿಸುತ್ತಿದ್ದರು. ಈ ಅಧಿಕಾರಿಗಳ ಕೆಲಸವನ್ನು ಸುಗಮಗೊಳಿಸಲು ಪ್ರಾಂತೀಯ ಸರ್ಕಾರಗಳು ಕೆಳಗಿನ ನಿಯಮಗಳನ್ನು ಅನುಸರಿಸಬೇಕಾಗಿತ್ತು ಸಹ–

(i) ಸಾರ್ವಜನಿಕ ಲೆಕ್ಕ ವಿಧಾನದಲ್ಲಿ ಯಾವುದೇ ಮಾರ್ಪಾಟನ್ನೂ ಮಾಡಕೂಡದು[೨]. ಎರಡು ಅಥವಾ ಹೆಚ್ಚಿನ ಬಾಬ್ತುಗಳ ಮರು ವಿಂಗಡಣೆಯನ್ನು ಮಾಡುವಂತಿಲ್ಲ. ಈ ವಿಷಯಗಳಲ್ಲೆಲ್ಲಾ ಸಾಮ್ರಾಜ್ಯ ಸರ್ಕಾರದ ಅಧಿಕಾರಿಯಾದ ಕಂಟ್ರೋಲರ್ ಜನರಲ್‌ನ ತೀರ್ಮಾನದಂತೆಯೇ ನಡೆಯಬೇಕು[೩]

(ii) ಪ್ರಾಂತ್ಯ ಮಾಡಿರುವ ವೆಚ್ಚ ಅಥವಾ ವೆಚ್ಚಕ್ಕೆ ನೀಡಿರುವ ಅನುಮತಿಯ ಬಗ್ಗೆ ಸಾಮ್ರಾಜ್ಯದ ಲೆಕ್ಕ ತಪಾಸಣಾಧಿಕಾರಿ ಮಾಡಿರುವ ಟೀಕೆಗಳನ್ನು ಭಾರತ ಸರ್ಕಾರಕ್ಕೆ ಕಳುಹಿಸಿಕೊಡತಕ್ಕದ್ದು. ಭಾರತ ಸರ್ಕಾರದ ತೀರ್ಮಾನ ಅಂತಿಮವಾದದ್ದು.[೪]

ಹೀಗೆ ಪ್ರಾಂತೀಯ ಸರ್ಕಾರಗಳ ಹಣಕಾಸು ಅಧಿಕಾರದ ಮೇಲೆ ಅನೇಕ ಮಿತಿಗಳಿದ್ದವು. ಪ್ರಾಂತೀಯ ಸರ್ಕಾರಗಳು ತಮಗಿರುವ ಮಿತಿಯಲ್ಲಿ ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವನ್ನು ಸಹ ಹೊಂದಿರಲಿಲ್ಲ. ಏಕೆಂದರೆ, ಯಾವುದೇ ಇಲಾಖೆಯ ಮೇಲ್ವಿಚಾರಣೆ ಮತ್ತು ಆ ಇಲಾಖೆಯ ನಿಯಂತ್ರಣದ ಅಧಿಕಾರ ಗವರ್ನರ್ ಜನರಲ್ ಇನ್ ಕೌನ್ಸಿಲ್‌ನ ಬಳಿಯೇ ಇತ್ತು. ಪ್ರಾಂತ್ಯಗಳು ತಮ್ಮ ಆಡಳಿತ ಮತ್ತು ಹಣಕಾಸು ಮಾಹಿತಿಯನ್ನು ಅವನಿಗೆ ಪೂರ್ಣವಾಗಿ ಒಪ್ಪಿಸಲೇಬೇಕಾಗಿತ್ತು. ಕೌನ್ಸಿಲ್ ಶಾಂತಿಯನ್ನು ಕಾಪಾಡುವ ಮತ್ತು ಉತ್ತಮ ಸರ್ಕಾರವನ್ನು ನೀಡುವ ಜವಾಬ್ದಾರಿಯನ್ನು ಹೊಂದಿದ್ದುದರಿಂದ ಇದು ಅಗತ್ಯವೆಂದು ಭಾವಿಸಲಾಗಿತ್ತು.[೪] ಹೀಗಾಗಿ ಇಂಥ ಒಂದು ಭ್ರಮಾತ್ಮಕವಾದ ವ್ಯವಸ್ಥೆಯ ಲಾಭಗಳೇನು ಎನ್ನುವುದು ಪ್ರಶ್ನೆಯಾಗಿಯೇ ಉಳಿಯಿತು.

---

೧. ೧೯೦೭ರ ನಿಯಮ ೧ (ಎ) ಅನಂತರದ ಗೊತ್ತುವಳಿಗಳು

೨. ೧೯೦೭ರ ನಿಯಮ ೪ (೨)

೩. ೧೯೧೨ರ ನಿಯಮ ೩೦ ಮತ್ತು ೩೧

೪. ೧೮೭೭ರ ನಿಯಮ ೫, ೧೯೦೭ರ ನಿಯಮ ೧೫ ಮತ್ತು ೧೯೧೨ರ ನಿಯಮ ೯ ಮತ್ತು ೭

## ಅಧ್ಯಾಯ ೮

# ಪ್ರಾಂತೀಯ ಹಣಕಾಸಿನ ಸ್ವರೂಪ

ಬ್ರಿಟಿಷ್ ಭಾರತದಲ್ಲಿ ಕೇಂದ್ರ ಸರ್ಕಾರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಹಣಕಾಸಿನ ಸಂಬಂಧ ಹಳೆಯ ಯೋಜನೆಯ ಪ್ರಕಾರ ಹೇಗಿತ್ತು ಎನ್ನುವ ಪ್ರಶ್ನೆಗೆ ನಿಜವಾದ ಉತ್ತರವನ್ನು ಕೊಡದೆ ಪ್ರಾಂತೀಯ ಹಣಕಾಸಿನ ಅಭ್ಯಾಸ ಪೂರ್ತಿ ಎನಿಸಲಾರದು. ಈ ಪ್ರಶ್ನೆ ಬಹಳ ಮುಖ್ಯವಾದದ್ದು. ಏಕೆಂದರೆ ವಿಷಯ ಯಾವುದೇ ಇರಲಿ, ಟೀಕೆಗಳ ಕ್ರಮಬದ್ಧತೆ ಮತ್ತು ಪ್ರಾಂತೀಯ ಹಣಕಾಸಿನ ಬಗೆಗಿನ ಪ್ರಸ್ತಾವನೆಗಳು, ಅದರ ಸ್ವರೂಪದ ಸರಿಯಾದ ತಿಳಿವಳಿಕೆಯನ್ನೇ ಅವಲಂಬಿಸಿದೆ.

ದುರದೃಷ್ಟವಶಾತ್ ತನ್ನ ಮಹತ್ವಕ್ಕನುಗುಣವಾದಷ್ಟು ಗಮನವನ್ನು ಈ ಪ್ರಶ್ನೆ ಸೆಳೆದಿಲ್ಲ. ತತ್ಪರಿಣಾಮವಾಗಿ, ಹಳೆಯ ಯೋಜನೆಯ ಪ್ರಕಾರದ, ಬ್ರಿಟಿಷ್ ಇಂಡಿಯಾದೊಳಗಿನ ಪ್ರಾಂತೀಯ ಹಣಕಾಸಿನ ಸ್ವರೂಪದಷ್ಟು ಚರ್ಚಾಸ್ಪದವಾದ ಮತ್ತು ತಪ್ಪು ತಿಳಿವಳಿಕೆಯ ವಿಷಯ ಮತ್ತೊಂದಿರಲಾರದೆಂಬ ಕಠೋರ ಸಂಗತಿಯನ್ನು ನಾವು ಕಾಣುತ್ತೇವೆ. ಆದ್ದರಿಂದ ಬ್ರಿಟಿಷ್ ಭಾರತದಲ್ಲಿಯ ಪ್ರಾಂತೀಯ ಹಣಕಾಸಿನ ವ್ಯವಸ್ಥೆಯ ಸ್ವರೂಪ ಹೇಗಿತ್ತೆಂಬುದನ್ನು ವಿವರಿಸುವುದು ಅಗತ್ಯವಾಗುತ್ತದೆ.

ಒಂದಕ್ಕೊಂದು ಸಂಬಂಧ ಹೊಂದಿದ ರಾಜಕೀಯ ವ್ಯವಸ್ಥೆಯ ಬ್ರಿಟಿಷ್ ಭಾರತದಲ್ಲಿ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಹಣಕಾಸಿನ ಸಂಬಂಧವನ್ನು ತಿಳಿಯುವುದು ಯಾವಾಗಲೂ ಕಷ್ಟಸಾಧ್ಯ. ಏಕೆಂದರೆ ಮೇಲುನೋಟಕ್ಕೆ ಕಾಣುವುದು ನಿಜಪರಿಸ್ಥಿತಿಗಿಂತ ಬಹಳ ಭಿನ್ನವಾಗಿರಬಹುದು. ಜರ್ಮನ್ ಸಾಮ್ರಾಜ್ಯದ ಸಂಯುಕ್ತ ರಾಜ್ಯ ಹಣಕಾಸಿನ ವ್ಯವಸ್ಥೆಯಂತೆ ಭಾರತದ ವ್ಯವಸ್ಥೆಯೂ ಸಹ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಉತ್ಪನ್ನದ ಮೂಲಗಳ ವಿಂಗಡಣೆ ಮತ್ತು ಕೇಂದ್ರ ಸರ್ಕಾರದಿಂದ ಪ್ರಾಂತೀಯ ಸರ್ಕಾರಗಳಿಗೆ ಉತ್ಪನ್ನದ ವರ್ಗಾವಣೆ ಮುಂತಾದವುಗಳ ಮೇಲೆ ಅವಲಂಬಿಸಿದೆಯೆಂದು ಸಾಮಾನ್ಯವಾಗಿ ಭಾವಿಸಲಾಗಿತ್ತು. ಈ ದೃಷ್ಟಿ ತಪ್ಪೊ ಅಥವಾ ಸರಿಯೋ ಗೊತ್ತಿಲ್ಲ. ಆದರೆ ಭಾರತದ ಕೇಂದ್ರ ಸರ್ಕಾರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಸಂಬಂಧದ ಕೆಲವು ಘಟನೆಗಳು ಈ ದೃಷ್ಟಿಯನ್ನು ದೃಢೀಕರಿಸಿದವು. ಅಂಥ ಘಟನೆಗಳ ಪೈಕಿ, ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಕಾರ್ಯವಿಂಗಡಣೆಯನ್ನು ಉಲ್ಲೇಖಿಸಲೇಬೇಕು. ಈ ಕಾರ್ಯವಿಗಂಡಣೆಯಲ್ಲಿ ಕೇಂದ್ರ ಸರ್ಕಾರ ತನ್ನ ವಶದಲ್ಲಿ ಸೈನಿಕ ವಿಷಯ, ಅಂತರರಾಷ್ಟ್ರೀಯ ವಿಷಯ, ಸಾಮಾನ್ಯ ತೆರಿಗೆ, ನಾಣ್ಯ, ಸಾಲ, ಸುಂಕ, ಅಂಚೆ ಮತ್ತು ತಂತಿ, ರೈಲ್ವೆ, ಲೆಕ್ಕಶೋಧನೆ ಹಾಗೂ ಲೆಕ್ಕಾಚಾರ ಇಟ್ಟುಕೊಂಡರೆ, ಪ್ರಾಂತೀಯ ಸರ್ಕಾರಗಳು ಒಳ ಆಡಳಿತದ ಸಾಮಾನ್ಯ ವಿಷಯಗಳಾದ ಪೊಲೀಸ್, ಶಿಕ್ಷಣ, ಆರೋಗ್ಯ ರಕ್ಷಣೆ, ನೀರಾವರಿ, ರಸ್ತೆ ಮತ್ತು ಕಟ್ಟಡ, ಅರಣ್ಯ ಮತ್ತು ಸ್ಥಾನಿಕ ಸಂಸ್ಥೆಗಳ ಹತೋಟಿ ಮುಂತಾದವುಗಳನ್ನು ನೋಡಿಕೊಳ್ಳುತ್ತಿದ್ದವು. ಈ ಘಟನೆ ಸೇವೆಗಳ ವಿಂಗಡಣೆಯ ದೃಷ್ಟಿಯನ್ನು ಪ್ರಚೋದಿಸಿದರೆ, ಪರಸ್ಪರ ಸಂಬಂಧದ ಘಟನೆ, ಬ್ರಿಟಿಷ್ ಭಾರತದಲ್ಲಿ, ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವೆ ಆದಾಯದ ವಿಂಗಡಣೆ ಇದೆಯೆಂಬ ದೃಷ್ಟಿಯನ್ನು ಪ್ರಚೋದಿಸಿದೆ. ಆ ಘಟನೆಯೆಂದರೆ ಭಾರತದಲ್ಲಿ ಬಹುತೇಕ ಕರಗಳನ್ನು ಪ್ರಾಂತೀಯ

ಸರ್ಕಾರದ ಸಹಾಯದಿಂದ ಆಕರಣೆ ಮಾಡುವುದು. ಭಾರತದ ವೆಚ್ಚದ ಬಗೆಗಿನ ರಾಯಲ್ ಕಮಿಷನ್ ಹೇಳಿದಂತೆ[೧]–

"ಇಂಗ್ಲೆಂಡಿನಲ್ಲಿ ಕಂದಾಯ ಆಡಳಿತೆಯು ಲಂಡನ್ನಿನಲ್ಲಿಯ ಚಾನ್ಸಲರ್ ಆಫ್ ಎಕ್ಸ್‌ಚೆಕರ್ ಅವರಲ್ಲಿ ಕೇಂದ್ರೀಕೃತವಾಗಿದೆ. ಭಾರತದಲ್ಲಿ ಸಾಮಾನ್ಯವಾಗಿ ಕೇಂದ್ರ ಸರ್ಕಾರದ ಹಣಕಾಸಿನ ಮಂತ್ರಿಯ ಕೈಯಲ್ಲಿ ಇಲ್ಲದಿದ್ದರೂ, ಕೆಲವೊಂದು ಕಂದಾಯದ ಶಾಖೆಗಳ ಆಡಳಿತವು ಕೇಂದ್ರೀಕೃತವಾಗಿದೆ. ಉಳಿದ ಶಾಖೆಗಳ ಆಡಳಿತವು ವಿಕೇಂದ್ರೀಕೃತವಾಗಿದೆ. ಭೂ ಕಂದಾಯವು ಕಲ್ಕತ್ತಾದಲ್ಲಿಯ ಕೇಂದ್ರದ ವಿಭಾಗಕ್ಕೆ ಒಳಪಟ್ಟಿದೆ. ಆದರೆ ಆ ವಿಭಾಗವು ಹಣಕಾಸಿನ ಮಂತ್ರಿಯ ಹತೋಟಿಗೆ ಒಳಪಡದೆ, ಗೃಹ ಮತ್ತು ಕಂದಾಯ ವಿಭಾಗದ ಮಂತ್ರಿಯ ಆಡಳಿತಕ್ಕೆ ಒಳಪಟ್ಟಿದೆ. ತಂತಿ ವಿಭಾಗವು ಸಾರ್ವಜನಿಕ ಕಾಮಗಾರಿಕೆಯ ಮಂತ್ರಿಗೆ ಒಳಪಟ್ಟಿದೆ. ಕೇಂದ್ರ ಸರ್ಕಾರವು ಉಪ್ಪಿನ ಕರ, ಓಪಿಯಮ್ ಕರ, ಅಂಚೆಯ ಆದಾಯ ಮತ್ತು ಉಳಿದ ಆದಾಯದ ಕೆಲವೊಂದು ಭಾಗವನ್ನು ಹತೋಟಿಯಲ್ಲಿಟ್ಟುಕೊಂಡಿದೆ. ಮಿಕ್ಕುಳಿದ ಕಂದಾಯವನ್ನು ಪ್ರಾಂತೀಯ ಸರ್ಕಾರಗಳು ಆಕರಣೆ ಮಾಡಿಕೊಳ್ಳುತ್ತವೆ."

ಇದೇ ದೃಷ್ಟಿಯನ್ನು ಸಮರ್ಥಿಸುವ ಇನ್ನೊಂದು ಘಟನೆಯೆಂದರೆ, ಸರ್ಕಾರಿ ನೀಲಿ ಪುಸ್ತಕದಲ್ಲಿ ಅಳವಡಿಸಿದ ಭಾರತದ ಲೆಕ್ಕಾಚಾರವನ್ನು ಸಾದರಪಡಿಸುವ ಒಂದು ವಿಚಿತ್ರ ಪದ್ಧತಿ. ಕೇಂದ್ರ ಸರ್ಕಾರದ ಸಾಮಾನ್ಯ ಲೆಕ್ಕಾಚಾರಕ್ಕೆ ಬ್ರಿಟಿಷ್ ಭಾರತದ ವಿವಿಧ ಪ್ರಾಂತೀಯ ಸರ್ಕಾರಗಳ ಆದಾಯದ ಮತ್ತು ವೆಚ್ಚದ ಬಾಬತ್ತುಗಳ ಲೆಕ್ಕಾಚಾರದ ಪುರವಣಿಯನ್ನು ಜೋಡಿಸಲಾಗುತ್ತದೆ. ಈ ರೀತಿಯ ಲೆಕ್ಕಾಚಾರ ತೋರಿಸುವುದು ನಿಸ್ಸಂಶಯವಾಗಿ ತಪ್ಪು ಮಾರ್ಗಕ್ಕೆಡೆಮಾಡಿಕೊಟ್ಟಿದೆ. ಇದರ ಉದ್ದೇಶ ಪ್ರಾಂತೀಯ ಹಣಕಾಸಿನ ಸ್ಥಿತಿಯನ್ನು ತೋರಿಸುವುದೇನೋ ಎಂಬಂತೆ ಕಂಡುಬರುತ್ತದೆ. ಆದರೆ ನಿಜ ಪರಿಸ್ಥಿತಿಯೆಂದರೆ, ಇಲ್ಲಿರುವ ಆದಾಯ ಹಾಗೂ ವೆಚ್ಚದ ಅಂಕಿಗಳು ಆಯಾ ಪ್ರಾಂತೀಯ ಸರ್ಕಾರಗಳ ಹಕ್ಕು ಮತ್ತು ಜವಾಬ್ದಾರಿಗಳನ್ನು ತೋರಿಸುವುದಿಲ್ಲ. ಇಲ್ಲಿನ ಅಂಕಿಗಳು ಪ್ರಾಂತೀಯ ಸರ್ಕಾರಗಳ ಹಣಕಾಸಿನ ಪರಿಸ್ಥಿತಿಯನ್ನು ತೋರಿಸದೆ, ಭಾರತ ಸರ್ಕಾರದ ಹಣಕಾಸಿನ ವ್ಯವಹಾರ ಯಾರ ಮುಖಾಂತರ ನಡೆಯುತ್ತದೆ, ಮತ್ತು ಯಾರ ಮುಖಾಂತರ ಆದಾಯದ ಆಕರಣೆಯಾಗುತ್ತದೆ ಮತ್ತು ಖರ್ಚು ಮಾಡಲ್ಪಡುತ್ತದೆಯೋ ಆ ಕಾರ್ಯಭಾರಿಯ ಭೌಗೋಲಿಕ ವಿತರಣೆಯನ್ನು ತೋರಿಸುತ್ತವೆ. ಉದಾಹರಣಾರ್ಥವಾಗಿ "ಬಾಂಬೆ"ಯ ಕೆಳಗೆ ತೋರಿಸಿದ ಆದಾಯ ಹಾಗೂ ವೆಚ್ಚ ನಿಜವಾಗಿ ಬಾಂಬೆಯಲ್ಲಿರುವ ಇಂಡಿಯಾ ಸರ್ಕಾರದ ಅಕೌಂಟೆಂಟ್ ಜನರಲ್‌ರ ಪುಸ್ತಕಗಳ ಮುಖಾಂತರ ಬರುವ ಆದಾಯ ಮತ್ತು ವೆಚ್ಚವನ್ನು ತೋರಿಸುತ್ತವೆ. ಅದೇ ರೀತಿಯಾಗಿ ಇನ್ನುಳಿದ ಪ್ರಾಂತೀಯ ಸರ್ಕಾರಗಳ ದಾಖಲೆಗಳೂ ಸಹ. ಈ ಅಂಕಿಗಳು ಭಾರತ ಸರ್ಕಾರದ ಬೇರೆ ಬೇರೆ ಭೌಗೋಲಿಕ ಭಾಗಗಳ ವ್ಯವಹಾರವನ್ನು ತೋರಿಸುತ್ತವೆಯೇ ಹೊರತು ಅವು ಪ್ರಾಂತೀಯ ವ್ಯವಹಾರಕ್ಕೆ ಸಂಬಂಧಿಸಿದವುಗಳಲ್ಲ. ಆದರೆ ಹೀಗೆ ಲೆಕ್ಕವಿಡುವ ಪದ್ಧತಿಯು ಭಾರತದಲ್ಲಿ ಸಂಯುಕ್ತ ರಾಜ್ಯ ಹಣಕಾಸಿನ ಪದ್ಧತಿ ಇದೆಯೆಂಬ ಭಾವನೆಯನ್ನು ಕೊಡುತ್ತದೆ.

ಬ್ರಿಟಿಷ್ ಭಾರತದಲ್ಲಿ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಹಣಕಾಸಿನ ಸಂಬಂಧದ ವಿಚಾರಣೆಯು ಈ ಮೂರು ಘಟನೆಗಳ ಆಧಾರದ ಮೇಲಿಂದ ಸಂಯುಕ್ತ ರಾಜ್ಯ ವಿಚಾರಧಾರೆ ಹಿಡಿಯುವುದು ಸಹಜವಾಗಿದೆ. ಭಾರತದ ವ್ಯವಸ್ಥೆ, ಆದಾಯ ಮೂಲಗಳು ಮತ್ತು ಕಾಣಿಕೆಗಳ ವಿಂಗಡಣೆಯದ್ದೆಂಬ ಭಾವನೆ ಬಹಳ

---

೧. ಅಂತಿಮ ವರದಿಯ ಪ್ಯಾರಾ ೨೫

ಆಳವಾಗಿದ್ದರಿಂದ, ಭಾರತದ ವೆಚ್ಚದ ಮೇಲಿನ ರಾಯಲ್ ಕಮಿಷನ್ (೧೮೯೨) ಮತ್ತು ಬ್ರಿಟಿಷ್ ಭಾರತದಲ್ಲಿ ವಿಕೇಂದ್ರೀಕರಣ (೧೯೦೯), ಇವುಗಳ ಮುಂದೆ ಹಾಜರಾದ ಸಾಕ್ಷಿಗಳು, ವ್ಯವಸ್ಥೆಯ ಅಸಮಾನತೆಯನ್ನು ಟೀಕಿಸಿ, ನ್ಯಾಯಸಮ್ಮತವಾದ ಬದಲಾವಣೆಗಳನ್ನು ತರಲು ಸೂಚಿಸಿದ್ದರು. ಆದರೆ ಎಲ್ಲಿಯೂ ಅವರು ತಮ್ಮ ನಂಬುಗೆಗಳ ಬಗೆಗಿನ ಕಾರಣಗಳನ್ನು ಹೇಳಿರಲಿಲ್ಲ.[೧] ಆದರೂ ಅವರು ಆ ದೃಷ್ಟಿಯನ್ನು ಹೊಂದಿದ್ದರೆಂಬುದಕ್ಕೆ ಅವರ ಸೂಚನೆಗಳೇ ಸಾಕ್ಷಿ. ಪ್ರಾಂತೀಯ ಸರ್ಕಾರಗಳು ಬೇರೆ ಆದಾಯ ಹಾಗೂ ಬೇರೆ ಸೇವೆಗಳನ್ನು ಪಡೆದಿವೆಯೆಂಬ ಭಾವನೆಯನ್ನು ಅವರು ಹೊಂದಿದವರಾಗಿದ್ದರಿಂದಲೇ, ಪ್ರಾಂತೀಯ ಸರ್ಕಾರಗಳು ತಮ್ಮ ಆದಾಯದಿಂದ ಕೇಂದ್ರ ಸರ್ಕಾರಕ್ಕೆ ಕೊಡುವ ತಾರತಮ್ಯದ ಕಾಣಿಕೆಯ ಅನ್ಯಾಯದ ಪದ್ಧತಿಯನ್ನು ಸುಧಾರಿಸಲು ತಮ್ಮ ಶಕ್ತಿಯನ್ನು ವ್ಯಯಿಸುತ್ತಿರಲಿಲ್ಲ.

ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಸಂಬಂಧದ ಬಗೆಗಿನ ಅವರ ದೃಷ್ಟಿಯನ್ನು ಒಪ್ಪಿಕೊಳ್ಳುವುದಾದರೆ ಅವರ ಟೀಕೆಗಳನ್ನು ಹಾಗೂ ಸೂಚನೆಗಳನ್ನು ಬಹುತೇಕವಾಗಿ ಒಪ್ಪಬೇಕಾಗುತ್ತದೆ. ಒಂದು ಪ್ರಾಂತದಲ್ಲಿ ಆಕರಣೆಯಾದ ಆದಾಯ ಆ ಪ್ರಾಂತಕ್ಕೆ ಸೇರಿದ್ದೆಂಬ ಸರ್ವಸಾಮಾನ್ಯವಾಗಿ ಸ್ವೀಕೃತವಾದ ಹಾಗೂ ಕೆಲವು ಮಟ್ಟಿಗೆ ಸಂಶಯಾಸ್ಪದವಾದ ಊಹೆಯ ಮೇರೆಗೆ ನಿರ್ಧರಿಸಲಾದ, ಆದಾಯ ಪ್ರಮಾಣದ ಅಥವಾ ಜನಸಂಖ್ಯಾ ಪ್ರಮಾಣದ ಮೇಲೆ, ಪ್ರಾಂತೀಯ ಸರ್ಕಾರಗಳು ಕೇಂದ್ರಕ್ಕೆ ಕೊಡುವ ಕಾಣಿಕೆ, ಅಸಮಾನವಾಗಿದ್ದವು. ಮುಂದಿನ ಪುಟದಲ್ಲಿರುವ ಪಟ್ಟಿ ನೋಡಿ.

೧) ಪ್ರತಿವರ್ಷ ಬದಲಾವಣೆಮಾಡಲು ಬರುವಂಥ ಒಂದು ನಿಗದಿತ ಮೊತ್ತ ೨) ಪ್ರಾಂತೀಯ ಆದಾಯದ ಮೇಲಿನ ಒಂದು ಪ್ರಮಾಣ. ೩) ಬದಲಿ ಮಾಡಲು ಬರುವ, ಹಾಗೂ ಜನಸಂಖ್ಯೆಯ ಮೇಲಾಗಲಿ, ಆದಾಯದ ಮೇಲಾಗಲಿ ಅಥವಾ ಸಂಪತ್ತಿನ ಮೇಲಾಗಲಿ, ಪ್ರಾಂತೀಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಸಲ್ಲುವ ಕಾಣಿಕೆಗಳನ್ನು ಹೊಂದಿದ ಸಂಪೂರ್ಣವಾಗಿ ಬೇರೆಯಾದ ವ್ಯವಸ್ಥೆಯ ಬಗೆಗಿನ ಸೂಚನೆಗಳು, ಕೇಂದ್ರ ಹಣಕಾಸಿನ ಭಾರವನ್ನು ಸರಿಸಮಾನವಾಗಿ ಅಥವಾ ಯೋಗ್ಯತೆಯ ಅನುಸಾರ ಹಂಚುವ ಉದ್ದೇಶವನ್ನು ಹೊಂದಿದವುಗಳಾಗಿದ್ದವು. ಪ್ರಾಂತೀಯ ಹಣಕಾಸಿನ ಕೂಲಂಕಷ ಅಭ್ಯಾಸ ಮಾಡಿದ ಯಾವನೇ ವ್ಯಕ್ತಿಯಾದರೂ, ಈ ಸೂಚನೆಗಳನ್ನು ಮಾಡಿದ ಜನರು ಎಷ್ಟು ಗಂಭೀರತೆಯಿಂದ ಸೂಚನೆಗಳನ್ನು ಮಾಡಿದ್ದಾರೆಯೋ ಅಷ್ಟೇ ಗಂಭೀರತೆಯಿಂದ ಆ ಸೂಚನೆಗಳನ್ನು ಒಪ್ಪಿಕೊಳ್ಳಲಾರನು.[೨] ವಿಚಿತ್ರವೆಂಬಂತೆ, ಎರಡು ಕಮಿಷನ್‌ಗಳಲ್ಲಿ ಒಂದಾದರೂ ಅವುಗಳ ಔಚಿತ್ಯವನ್ನು ಪ್ರಶ್ನಿಸಲಿಲ್ಲ. ವಿಕೇಂದ್ರೀಕರಣದ ಬಗೆಗಿನ ರಾಯಲ್ ಕಮಿಷನ್ ಸಮಾನ ಕಾಣಿಕೆಗಳು ನ್ಯಾಯಸಮ್ಮತವಾದ ಕಾಣಿಕೆಗಳಲ್ಲವೆಂದು ಮೆಲುದನಿಯಲ್ಲಿ ಸ್ಪಷ್ಟಪಡಿಸಿತು. ಪ್ರಾಂತಗಳು ತಮ್ಮ ಸೇವಾ ಖರ್ಚನ್ನು ಕಳೆದು ಮಿಕ್ಕುಳಿದ ತಮ್ಮ ಆದಾಯವನ್ನು ಕೇಂದ್ರ ಖಜಾನೆಗೆ ಬಿಟ್ಟು ಕೊಡತ್ತವೆಂಬ ವಿಚಾರವನ್ನು ವಿಕೇಂದ್ರೀಕರಣದ ರಾಯಲ್ ಕಮಿಷನ್ ಆಗಲಿ ಅಥವಾ ಇಂಡಿಯಾ ಸರ್ಕಾರದ ವೆಚ್ಚದ ಬಗೆಗಿನ ರಾಯಲ್ ಕಮಿಷನ್ ಆಗಲಿ ಪ್ರತಿಭಟಿಸಲಿಲ್ಲ. ಉತ್ಪನ್ನದ ಕಾಣಿಕೆಗಳ ಹಾಗೂ ಮೂಲಗಳ ವಿಂಗಡಣೆಯ ತತ್ವದ ಮೇಲೆ ಆಧಾರಿತವಾಗಿದೆಯೆಂಬ ಈ ವ್ಯವಸ್ಥೆಯ ಆಧಾರವನ್ನು ಪರೀಕ್ಷಿಸುವುದು ಬಹಳ ಆವಶ್ಯಕವೆನಿಸುತ್ತದೆ. ಪ್ರಾಂತಗಳಿಗೆ ತಮ್ಮದೇ ಆದ ಸ್ವಂತ ಆದಾಯವಿದೆ

---

೧. 'ಇಂಡಿಯನ್ ಎಕ್ಸ್‌ಪೆಂಡಿಚರ್ ಕಮಿಷನ್, ಮಿನಿಟ್ಸ್ ಆಫ್ ಎವಿಡೆನ್ಸ್', ಸೆ. ೩, ಪ್ರ. ೧೮೦೯೪ ಮತ್ತು 'ಡೀಸೆಂಟ್ರಲೈಜೇಷನ್ ಕಮಿಷನ್ ಎವಿಡೆನ್ಸ್', ಸಂ.೨, ಪ್ರ.೪೯೭.

೨. *ರಾಯಲ್ ಕಮಿಷನ್ ಆನ್ ಡೀಸೆಂಟ್ರಲೈಜೇಷನ್* (ಆರ್.ಸಿ.ಡಿ.)ನ ವರದಿಯನ್ನು ನೋಡಿ.

## ಕೇಂದ್ರ ಸರ್ಕಾರಕ್ಕೆ ಪ್ರಾಂತೀಯ ಸರ್ಕಾರಗಳ ಕೊಡುಗೆ

| ಪ್ರಾಂತ್ಯಗಳು | ಪ್ರಾಂತೀಯ ಸರ್ಕಾರಗಳ ಒಟ್ಟು ಆದಾಯಕ್ಕೆ ಅವುಗಳು ಇಂಡಿಯಾ ಸರ್ಕಾರಕ್ಕೆ ಕೊಟ್ಟ ಮೊತ್ತದ ಪ್ರಮಾಣ | | | | | ಪ್ರಾಂತೀಯ ಜನಸಂಖ್ಯೆಯ ಪ್ರತಿ ವ್ಯಕ್ತಿಗೆ ಇಂಡಿಯಾ ಸರ್ಕಾರಕ್ಕೆ ಕೊಟ್ಟ ಮೊತ್ತದ ಪ್ರಮಾಣ | | | | |
|---|---|---|---|---|---|---|---|---|---|---|
| | ೧೯೭೧–೭೨ | ೧೮೮೨–೮೩ | ೧೮೯೨–೯೩ | ೧೯೦೪–೦೫ | ೧೯೧೨–೧೩ | ೧೮೭೧–೭೨ | ೧೮೮೨–೮೩ | ೧೮೯೨–೯೩ | ೧೯೦೪–೦೫ | ೧೯೧೨–೧೩ |
| ಮಧ್ಯಪ್ರಾಂತ್ಯಗಳು | ೦.೬೫೫ | ೦.೪೬೪ | ೦.೬೧೫ | ೦.೨೯೭ | ೦.೨೦೪ | ೦.೯ | ೦.೬೯ | ೧.೩ | ೦.೫೫ | ೦.೫೯ |
| ಬರ್ಮಾ | ೦.೭೨೮ | ೦.೫೭೫ | ೦.೫೯೮ | ೦.೪೯೭ | ೦.೩೮ | ೨೪ | ೦.೩೯ | ೦.೭ | ೪.೩೭ | ೩.೦೮ |
| ಅಸ್ಸಾಂ | – | ೦.೪೩೮ | ೦.೩೯೦ | ೦.೩೭೬ | – | – | ೦.೭೫ | .೭೫ | ೦.೮೭ | – |
| ಬಂಗಾಳ | ೦.೯೦೩ | ೦.೭೪೬ | ೦.೭೬೧ | ೦.೭೪೨ | ೦.೫೯೬ | ೨೪ | ೧೯ | ೨೯ | ೨೨೯ | ೨೩೯ |
| ವಾಯವ್ಯ ಗಡಿಪ್ರಾಂತ್ಯ ಹಾಗೂ ಔಧ್ | ೦.೭೮೫ | ೦.೬೧೭ | ೦.೪೩೫ | – | – | ೧.೫ | ೧.೨೪ | ೧.೪ | – | – |
| ಪಂಜಾಬ್ | ೦.೭೬೮ | ೦.೬೪೮ | ೦.೭೨೬ | .೫೧೨ | .೩೯೧ | ೧.೭ | ೧.೫ | ೧.೪ | ೧.೫೭ | ೧.೬೪ |
| ಮದರಾಸು | ೮೮ | ೦.೬೬೪ | ೦.೬೬೭ | .೬೩೮ | .೪೭೯ | ೨೩ | ೨೦ | ೨೩ | ೨೩೪ | ೧.೭೯ |
| ಮುಂಬಯಿ | ೦.೮೪೫ | ೦.೬೪೮ | ೦.೬೬ | .೬೧೪ | .೫೮ | ೫.೦ | ೪.೧ | ೫೪ | ೪.೭೫ | ೫.೬ |
| ಸಂಯುಕ್ತ ಪ್ರಾಂತ್ಯಗಳು | – | – | – | .೫೬೭ | .೩೮೧ | – | – | – | ೧.೪೮ | ೦.೯೩ |
| ಬಿಹಾರ ಹಾಗೂ ಒರಿಸ್ಸಾ | – | – | – | – | ೨೨೦ | – | – | – | – | ೦.೧೭ |

ಭಾರತ ಸರ್ಕಾರದ ಹಣಕಾಸು ಹಾಗೂ ಕಂದಾಯ ಲೆಕ್ಕಾಚಾರದ ಮತ್ತು ದಶಕಗಳ ಜನಗಣತಿ ರಿಪೋರ್ಟ್‌ಗಳಿಂದ ತಯಾರಿಸಿದ್ದು.

ಹಾಗೂ ತಮ್ಮ ಮೂಲ ಹೊಣೆಗಾರಿಕೆಯನ್ನು ಕಾರ್ಯದಕ್ಷತೆಯಿಂದ ಪೂರೈಸಲು ಸೇವೆಗಳಿವೆಯೆಂಬುದನ್ನು ನಿರ್ಧರಿಸುವ ಮೊದಲು, ಕಾಣಿಕೆಗಳ ನ್ಯಾಯಸಮ್ಮತಿಯ ಪ್ರಶ್ನೆಯನ್ನು ಚರ್ಚಿಸುವುದು ಪ್ರಯೋಜನಕಾರಿಯಾಗಲಾರದು.

ಪ್ರಾಂತ್ಯಗಳಿಗೆ ತಮ್ಮವೇ ಆದ ಆದಾಯ ಹಾಗೂ ಸೇವೆಗಳಿವೆ ಎಂಬುದವನ್ನು ನಿರ್ಧರಿಸುವ ಮಾನದಂಡ ಯಾವುದು? ಪ್ರಾಂತ್ಯಗಳು ಆಡಳಿತದ ವ್ಯಾಪ್ತಿಯಲ್ಲಿ ಬರುವ ಎಲ್ಲವೂ ಪ್ರಾಂತೀಯವೆಂಬ ಆಡಳಿತ ಮಾನದಂಡ ಒಂದಿದೆ. ಆದರೆ ಆ ಮಾನದಂಡ ಕೊನೆಯ ಮಾನದಂಡವಾಗಲಾರದು. ಏಕೆಂದರೆ ರಾಜ್ಯಾಡಳಿತಗಳ ಮೂಲ ಅಥವಾ ಆದರ್ಶ ವ್ಯವಸ್ಥೆಯಲ್ಲಿ ಅವುಗಳ ಸ್ಥಾನದ ಬಗೆಗಿನ ದೃಷ್ಟಿಕೋನ ಏನೇ ಇದ್ದರೂ, ಸಾಮಾನ್ಯ ನಿಯಮದ ಪ್ರಕಾರ ಎಲ್ಲ ಪ್ರಾಂತೀಯ ಆಡಳಿತ ಕ್ರಮಗಳು ಆಧುನಿಕ ಕಾಲದಲ್ಲಿ ಪ್ರಯೋಗಿಸಲ್ಪಡುತ್ತವೆ. ಆದ್ದರಿಂದ ಬ್ರಿಟಿಷ್ ಇಂಡಿಯಾದಲ್ಲಿ ಪ್ರಾಂತೀಯ ಸರ್ಕಾರಗಳ ಸ್ಥಾನವನ್ನು ನಿರ್ಧರಿಸುವ ನಿಯಮದಿಂದ ಈ ಪ್ರಶ್ನೆಯನ್ನು ಬಗೆಹರಿಸಬಹುದು.

ಪ್ರಾಂತ್ಯಗಳಿಗೆ ಶಾಸನಬದ್ಧವಾದ ಆದಾಯದ ಹಕ್ಕುಗಳಿದ್ದವೇ? ಪ್ರಾಂತೀಯ ಆದಾಯದ ಬಗ್ಗೆ ಮಾತನಾಡುತ್ತಿದ್ದವರು ಪ್ರಾಂತೀಯ ಶಬ್ದಕ್ಕೆ ಶಾಸನಬದ್ಧವಾದ ಸ್ಥಾನವನ್ನು ಕೊಟ್ಟಿದ್ದರೋ ಅಥವಾ ಇಲ್ಲವೋ ಎಂಬುದು ಅನಿಶ್ಚಿತವಿದ್ದರೂ, ಸಾಮಾನ್ಯ ಭಾಷೆಯಲ್ಲಿ ಅದು ಆ ಅರ್ಥವನ್ನು ಹೊಂದಿತ್ತೆಂಬುದು ನಿಸ್ಸಂಶಯ. ಹೆಚ್ಚು ತಿಳಿದುಕೊಳ್ಳಬೇಕಾಗಿದ್ದ ಪ್ರಾಂತೀಯ ಸರ್ಕಾರಗಳೂ ಸಹಿತ ಆದಾಯದ ಪ್ರಾಂತ್ಯೀಕರಣದಿಂದ, ಭಾರತ ಸರ್ಕಾರವು ಅವುಗಳಿಗೆ, ಫಲಾನುಭವದ ಹಕ್ಕನ್ನು ಕೊಡದೆ, ಕೇವಲ ಆದಾಯಕ್ಕೆ, ಹಕ್ಕನ್ನು ಕೊಟ್ಟಿದೆಯೆಂದು ತಿಳಿದುಕೊಂಡಿದ್ದಲ್ಲದೆ, ಹಾಗೆ ವಾದಿಸುತ್ತಲೂ ಇದ್ದವು. ಆದರೆ ಭಾರತ ಸರ್ಕಾರವು ಅಂತಹ ಹಕ್ಕನ್ನು ದಮನ ಮಾಡಲು ಯಾವಾಗಲೂ ಸಿದ್ಧವಾಗಿರುತ್ತಿತ್ತು. ಪ್ರಾಂತೀಯ ವ್ಯವಸ್ಥೆಗಳು ಪ್ರತಿ ಐದು ವರ್ಷಕ್ಕೊಮ್ಮೆ ಬದಲಿಯಾಗುವಂಥವುಗಳು. ಫಲಾನುಭವದ ಹಕ್ಕು ನಿರಂತವಾದದ್ದಲ್ಲ ಮತ್ತು ಭಾರತ ಸರ್ಕಾರವು ತಾನು ಇಚ್ಛಿಸಿದಾಗ ಅದನ್ನು ಮರಳಿ ಪಡೆಯಬಹುದೆಂಬ ಸಂಗತಿಗಳು ಸ್ಪಷ್ಟವಾಗಿದ್ದಿತು. ಬಂಗಾಲ ಸರ್ಕಾರವು ೨೮೪ ನಂಬರಿನ ೧೮೮೨ರ ಜನವರಿ ೧೪ರ ತನ್ನ ಪತ್ರದಲ್ಲಿ ಮುಂದುಮಾಡಿದ ಹಕ್ಕುಗಳ ಬಗೆಗಿನ ಉತ್ತರದಿಂದ ಇದು ಸ್ಪಷ್ಟವಾಗುತ್ತದೆ. ಅದು ಈ ಕೆಳಗಿನಂತಿದೆ:-

"ಘರ್ಷಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ, ಮತ್ತು ಇಲ್ಲಿ ವಿವರಿಸಲು ಅವಶ್ಯವಿಲ್ಲದ ಆದರೆ ಎಲ್ಲರಿಗೂ ತಿಳಿದಿರುವ ಉದ್ದೇಶಗಳಿಗಾಗಿ ಸಾಮ್ರಾಜ್ಯ ಸರ್ಕಾರವೂ ತನ್ನ ಆಡಳಿತದ ಕೆಲವೊಂದು ಭಾಗವನ್ನು ಸ್ಥಾನಿಕ ಸರ್ಕಾರಗಳಿಗೆ ವಹಿಸಿಕೊಟ್ಟಿತು. ಸಾಮಾನ್ಯ ಆದಾಯದ ಕೆಲವೊಂದು ಭಾಗ ಮತ್ತು ಅದರ ಹೆಚ್ಚುವರಿ, ತನ್ನ ಹತೋಟಿಯಲ್ಲಿರುವ ವೆಚ್ಚವನ್ನು ಪೂರೈಸಲು ಸಾಕಾಗುತ್ತದೆ ಮತ್ತು ಅವಶ್ಯವಾದ ವೆಚ್ಚವನ್ನು ಪೂರೈಸಲು ಮಿಕ್ಕುಳಿದ ಹಣವನ್ನು ಸ್ಥಾನಿಕ ಸರ್ಕಾರಗಳಿಗೆ ಕೊಡುವ ಒಂದು ಕಚ್ಚಾಲೆಕ್ಕವನ್ನು ಅದು ಮಾಡುತ್ತದೆ. ಆದರೆ ಈ ಯೋಜನೆಗೆ ಅದು ಸದಾಕಾಲವೂ ಬದ್ಧವಲ್ಲ. ಏಕೆಂದರೆ ಲೆಕ್ಕಾಚಾರಗಳು ಸಾಮಾನ್ಯವಾಗಿ ಕಚ್ಚಾ ರೀತಿಯವುಗಳು, ಮತ್ತು ತಾನು ಇಟ್ಟುಕೊಳ್ಳುವ ಹಣಕಾಸಿನ ಆಡಳಿತದ ಭಾಗದ ಏರಿಳಿತದಿಂದಾಗಲಿ ಅಥವಾ ತಾನು ವಹಿಸಿಕೊಡುವ ಭಾಗದ ಏರಿಳಿತದಿಂದಾಗಲಿ, ಆದಾಯವು ಅನಿರೀಕ್ಷಿತವಾಗಿ ಕಡಿಮೆ ಬೀಳಬಹುದು. ಆದ್ದರಿಂದ ಇದರ ಮರು ಹೊಂದಾಣಿಕೆಯು ಅವಶ್ಯವೆನಿಸುತ್ತದೆ. ಈ ಹಕ್ಕನ್ನು ಬಿಟ್ಟುಕೊಡುವುದು ಅದರ ಸ್ವರೂಪ ಮತ್ತು ಪರಿಣಾಮದ ದೃಷ್ಟಿಯಿಂದ ಬಂಗಾಲದ ಕಾಯಂ ವ್ಯವಸ್ಥೆಯಂತಾಗುತ್ತದೆ."

ಪ್ರಾಂತ್ಯಗಳ ಪರವಾಗಿ ಆತಂಕ ವ್ಯಕ್ತಪಡಿಸಿದರೂ, ಬದಲಾವಣೆಗಳು ಸಾಮ್ರಾಜ್ಯ ಸರ್ಕಾರದ ಪರವಾಗಿಯೇ ಮಾಡಲ್ಪಟ್ಟಿದ್ದವೆಂಬುದನ್ನು ಮರು ಹಂಚಿಕೆಯು ಸಿದ್ಧಪಡಿಸಿತ್ತು ಮತ್ತು ಭಾರತ ಸರ್ಕಾರವು ತನ್ನ ಆದಾಯದ ಮೇಲಿನ ಹತೋಟಿಯನ್ನು ಬಿಟ್ಟುಕೊಡಲು ಇಚ್ಛಿಸದಿದ್ದರಿಂದ ಕಾಯಂ ವ್ಯವಸ್ಥೆಯು ತಡವಾಯಿತು. ಐದು ವರ್ಷದ ಅವಧಿಯ ವ್ಯವಸ್ಥೆಯಲ್ಲಿ ಫಲಾನುಭವದ ಹಕ್ಕನ್ನು ಕೇವಲ ಐದು ವರ್ಷದವರೆಗೆ ಬದಲಾಯಿಸಲು ಬರುವುದಿಲ್ಲ. ಈ ಬದಲಾವಣೆಯು ತಾತ್ಕಾಲಿಕವಾದರೂ ಸೆಕ್ರೆಟರಿ ಆಫ್ ಸ್ಟೇಟ್ ಇದನ್ನು ವಿವೇಕಯುತವಲ್ಲವೆಂದು ಭಾವಿಸಿದ್ದನು.[೧] ಈ ಭಾವನೆಯನ್ನು ಭಾರತ ಸರ್ಕಾರವೂ ಸ್ಥಿರಪಡಿಸಿದೆ. ಏಕೆಂದರೆ, ಪ್ರಾಂತೀಯ ಸಮತೋಲನದ ಮೇಲೆ ಪರಿಣಾಮ ಬೀರುವ ಅಷ್ಟೊಂದು ಅಪರೂಪವಲ್ಲದ ತೆರಿಗೆಗಳಿಂದ ಮತ್ತು ಮೃದುಧೋರಣೆಗಳು ಮತ್ತು ಭಾರತ ಸರ್ಕಾರವು ತೋರುವ ತನಗೆ ಬೇಕಾದಾಗ ಮರಳಿಪಡೆಯುವ ಹಕ್ಕನ್ನು ಉಪಯೋಗಿಸದೆ ಇದ್ದದ್ದು ಇದಕ್ಕೆ ಸಾಕ್ಷಿ. ಕಾಯಂ ವ್ಯವಸ್ಥೆಯನ್ನು ಸಹಿತ ನಾವು ಬೇರೆಬೇರೆ ಪ್ರಾಂತ್ಯಗಳಿಗೆ ವ್ಯವಸ್ಥೆಗೊಳಿಸಲಾದ ಆದಾಯಗಳು, ಆ ಪ್ರಾಂತ್ಯಗಳ ಕಾಯಿದೆಬದ್ಧ ಆದಾಯಗಳೆಂದು ಅರ್ಥೈಸಲು ಬರುವುದಿಲ್ಲ. ಏಕೆಂದರೆ ಕಾಯಿದೆಯ ದೃಷ್ಟಿಯಿಂದ ಪ್ರಾಂತ್ಯೀಕರಣಗೊಳಿಸಿದ ಆದಾಯಗಳು ಸೇರಿ ಎಲ್ಲ ಆದಾಯಗಳು ಸಂವಿಧಾನಾತ್ಮಕವಾಗಿ ಭಾರತ ಸರ್ಕಾರದ ವಶದಲ್ಲಿವೆ. ಪ್ರಾಂತ್ಯಗಳಿಗೆ ಅನುಕೂಲಕರವಾದ, ತನ್ನ ಆದಾಯ ಕಡಿಮೆಯಾಗುವ ಕಾಯಿದೆಬದ್ಧ ವಿಂಗಡಣೆಯನ್ನು ಸರ್ಕಾರವು ಕಾರ್ಯಗತಗೊಳಿಸಬಹುದಾಗಿತ್ತೆಂಬುದು ಸಂಶಯಾಸ್ಪದ. ಭಾರತ ಆದಾಯಗಳನ್ನು ಭಾರತ ಸರ್ಕಾರಕ್ಕೆ ಒದಗಿಸುವ ಶಾಸನಸಭೆಯ ಕಟ್ಟಳೆಯು, ಭಾರತ ಸರ್ಕಾರದ ಶಾಸನ ರಚನೆಯ ಸಾಮರ್ಥ್ಯವನ್ನು ಈ ಕೆಳಗೆ ಹೇಳಿದವುಗಳನ್ನು ಮಾಡದಂತೆ ಮೊಟಕುಗೊಳಿಸಿದೆ:

"೧೮೩೩ನೆಯ ಕಾಯಿದೆಯ ನಿಬಂಧನೆಗಳನ್ನು.... ಅಥವಾ ಸಾಮ್ರಾಟರ ಹಕ್ಕನ್ನು ಅಥವಾ ಶಾಸನಸಭೆಯ ಅಧಿಕಾರವನ್ನು ಯಾವುದೇ ರೀತಿಯಿಂದ ರದ್ದುಮಾಡುವ, ಹೆಚ್ಚು ಕಡಿಮೆ ಮಾಡುವ, ತೊಡೆದುಹಾಕುವ ಅಥವಾ ಬಾಧಿಸುವ ಕಾಯಿದೆಗಳನ್ನು ಅಥವಾ ಕಟ್ಟುಪಾಡುಗಳನ್ನು ಮಾಡುವುದು."

ಹೀಗೆ ಮಾಡಲು ಶಾಸನಸಭೆಯ ಕಾನೂನು ಬೇಕಾಗಿತ್ತೆಂಬುದು ಗಮನಾರ್ಹವಾದದ್ದು. ಆದರೆ ಇಂಡಿಯಾ ಸರ್ಕಾರವು ಆದಾಯ ಬಾಬ್ತುಗಳ ಕಾಯಿದೆಬದ್ಧ ವಿಂಗಡಣೆಯನ್ನು ಮಾಡಿರಲಿಲ್ಲ. ಹಾಗೆ ಅದು ತನ್ನ ಕಾಯಿದೆಯಿಂದ ಮಾಡಿದ್ದಾಗಿದ್ದರೆ ಅದನ್ನು ತೊಡೆದುಹಾಕಲು ಅದಕ್ಕೆ ಬರುತ್ತಿತ್ತು. ಪ್ರಾಂತೀಯ ಆದಾಯದ ವಿಂಗಡಣೆಯು ಪ್ರತ್ಯೇಕವಾದ ಒಡೆತನವನ್ನು ಹೊಂದಿದೆಯೆಂದು ಹೇಳಲಿಕ್ಕಾಗದು. ಪ್ರಾಂತ್ಯೀಕರಿಸಿದ ಆದಾಯದಿಂದ ಬರುವ ಹಣವನ್ನು ಸ್ವೀಕರಿಸಲು, ಖಜನೆಗಳನ್ನು ಸ್ಥಾಪಿಸಲು ಪ್ರಾಂತೀಯ ಸರ್ಕಾರಗಳಿಗೆ ಅನುಮತಿಯನ್ನು ಕೊಟ್ಟಿದ್ದರೆ, ಪ್ರಾಂತೀಯ ಆದಾಯಗಳು ಪ್ರತ್ಯೇಕವಾದ ಒಡೆತನವನ್ನು ಹೊಂದಿದ್ದವು ಗಳೆಂಬುದಕ್ಕೆ ಒಂದು ಅರ್ಥ ಬರುತ್ತಿತ್ತು. ನಿಯಮಾನುಸಾರ ಪ್ರಾಂತೀಯ ಸರ್ಕಾರಗಳು ತಮ್ಮ ಹಣವನ್ನು ಬೇರೆಲ್ಲಿಯೂ ಇಡದೆ, ಸಾಮ್ರಾಜ್ಯ. ಸರ್ಕಾರದ ಖಜಾನೆಯಲ್ಲಿಯೇ ಇಡಬೇಕಾಗುತ್ತಿತ್ತು. ತತ್ಪರಿಣಾಮವಾಗಿ ಆದಾಯದ ಒಡೆತನ ಭಾರತ ಸರ್ಕಾರದ ಕೈಯಲ್ಲಿಯೇ ಉಳಿಯುತ್ತಿತ್ತು ಮತ್ತು ಪ್ರಾಂತೀಯ ಆದಾಯದ ವಿಲೇವಾರಿಯು ಸಾಮ್ರಾಜ್ಯ, ಸರ್ಕಾರದ ಮತ್ತು ಅದರ ಖಜಾನೆಯ ಅಧಿಕಾರಿಗಳಿಂದ ನಡೆಯುತ್ತಿತ್ತು. ಆದರೂ ಸಹಿತ ದೃಷ್ಟಿಯು ಬದಲಾಗುವುದು ಕಠಿಣ. ಆದರೆ ಅಂಥ ತಪ್ಪು ದೃಷ್ಟಿಯನ್ನು ಸನ್ಮಾನ್ಯ ಸಯಾನಿಯವರು ಬಹಳ ಆತ್ಮವಿಶ್ವಾಸದಿಂದ ಪ್ರತಿಪಾದಿಸಿದ್ದಾರೆ ಮತ್ತು ಅಷ್ಟೇ ಬಲವಾಗಿ ಸರ್ ಜೇಮ್ಸ್ ವೆಸ್ಟ್‌ಲ್ಯಾಂಡ್‌ರವರು

೧. 'ಗವರ್ನ್‌ಮೆಂಟ್ ಆಫ್ ಇಂಡಿಯಾ ಡಿಸ್ಪಾಚ್' ಸಂ. ೧, ಫೆಬ್ರವರಿ ೬, ೧೮೮೨ ಮತ್ತು ಸಂ. ೨೦೮, ಜುಲೈ ೬, ೧೮೮೨.

ಅದನ್ನು ಖಂಡಿಸಿದ್ದಾರೆ. ಕೌನ್ಸಿಲ್ ಹಾಲ್‌ನಲ್ಲಿಯ ಭಾರತ ಸರ್ಕಾರದ ಆಯವ್ಯಯ ಪಟ್ಟಿಯ ಮೇಲಿನ ಅವರ ಚರ್ಚೆಯಿಂದ ಇದು ಗೊತ್ತಾಗುತ್ತದೆ. ಅದು ಕೆಳಗಿನಂತಿದೆ:

**ಸನ್ಮಾನ್ಯ ಸಯಾನಿಯವರು ಹೀಗೆ ಹೇಳಿದರು:–**

"ಪ್ರಾಂತೀಯ ಹಣಕಾಸಿನ ವ್ಯವಸ್ಥೆಯ ಅಡಿಪಾಯವಾಗಿರುವ ತತ್ವವೆಂದರೆ, ದೇಶದ ಆದಾಯವು; ಪ್ರಾಂತ್ಯಗಳು ಅವುಗಳನ್ನು ಸಂಗ್ರಹಿಸಿದರೂ ಅದು ಅವರದ್ದಲ್ಲ, ತಮ್ಮ ಆವಶ್ಯಕತೆಗಳಿಗೆ ಅದನ್ನು ಅವರು ಉಪಯೋಗಿಸಲು ಬರುವುದಿಲ್ಲ; ಇದೊಂದು ಕೇಂದ್ರ ಸರ್ಕಾರಕ್ಕೆ ಸೇರಿದ ಸಾಮಾನ್ಯ ನಿಧಿ. ಇದರಿಂದ ತನಗೆ ತಿಳಿದಷ್ಟು ಹಣವನ್ನು ಪ್ರಾಂತೀಯ ಸೇವೆಗಳಿಗಾಗಿ ಅದು ದಾನ ಮಾಡಬಹುದು."

ಈ ಟೀಕೆಗಳಿಗೆ ಉತ್ತರಿಸುತ್ತಾ ಹಣಕಾಸು ಮಂತ್ರಿಗಳಾದ ಸರ್ ಜೇಮ್ಸ್ ವೆಸ್ಟ್‌ಲ್ಯಾಂಡ್‌ರವರು ಈ ಕೆಳಗಿನಂತೆ ಹೇಳಿದರು:

"ನಾನು ಅವರನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದಾದರೆ, ಸನ್ಮಾನ್ಯ ಸಯಾನಿಯವರು ಈ ರೀತಿ ಹೇಳಿದರು. ಭಾರತ ಸರ್ಕಾರದ ವ್ಯವಸ್ಥೆಯಲ್ಲಿ, ಆದಾಯಗಳು ಪ್ರಾಂತೀಯ ಆದಾಯಗಳಲ್ಲ, ಅವು ಪ್ರಾಂತೀಯ ವೆಚ್ಚಗಳಿಗೆ ಸಂಬಂಧಪಟ್ಟವುಗಳಲ್ಲ. ಇಡೀ ದೇಶಕ್ಕೆ ಸೇರಿದ ಆದಾಯಗಳು, ಸ್ಥಾನಿಕ ಸರ್ಕಾರಗಳು ಭಾರತ ಸರ್ಕಾರದ ಕಾರ್ಯಭಾರಿ ಎಂಬ ತತ್ವದ ಮೇಲೆ ರಚಿಸಲ್ಪಟ್ಟಿದೆ. ಅದನ್ನು ದೂಷಿಸಲೆಂದೇ ಅವರು ಆ ತತ್ವದ ಬಗ್ಗೆ ಅಂಥ ಶಬ್ದಗಳಲ್ಲಿ ಹೇಳಿದರೆಂದು ನಾನು ಭಾವಿಸುತ್ತೇನೆ. ಆ ತತ್ವವನ್ನು ನಾನು ಪ್ರತಿಪಾದಿಸಲು ಇಚ್ಛಿಸುತ್ತೇನೆ. ಆದಾಯಗಳು ಭಾರತ ಸರ್ಕಾರದ ಆದಾಯಗಳು ಮತ್ತು ಅದರ ಸಂವಿಧಾನಾತ್ಮಕ ಒಡೆತನದವು. ಭಾರತ ಸರ್ಕಾರವು ಶಾಸನಸಭೆಯ ಕಾಯಿದೆಯಿಂದ ನಿರ್ಮಾಣವಾದ ಸಂಸ್ಥೆ. ಶಾಸನಸಭೆಯ ಕಾಯಿದೆ ಉಲ್ಲೇಖಿಸಿದರೆ ಭಾರತದ ಆದಾಯಗಳು ಕೇವಲ ಭಾರತ ಸರ್ಕಾರದ ಆದಾಯಗಳೆಂದು ಗೊತ್ತಾಗುತ್ತದೆ. ಇವುಗಳ ಸಂಬಂಧದಲ್ಲಿ ಸ್ಥಾನಿಕ ಸರ್ಕಾರಗಳು ತೆಗೆದುಕೊಳ್ಳುವ ಕ್ರಮಗಳು, ಭಾರತ ಸರ್ಕಾರದ ಆಜ್ಞೆಗೆ ಅನುಗುಣವಾಗಿರಬೇಕು. ಸ್ಥಾನಿಕ ಸರ್ಕಾರಗಳು ತಮ್ಮ ಅಧಿಕಾರವನ್ನು ಸಂಪೂರ್ಣವಾಗಿ ಭಾರತ ಸರ್ಕಾರದಿಂದಲೇ ಪಡೆಯುತ್ತವೆ. ಇದರ ಹೊರತಾಗಿ ಅವುಗಳು ಯಾವುದೇ ರೀತಿಯ ಹಣಕಾಸಿನ ಸಾಮರ್ಥ್ಯವನ್ನು ಹೊಂದಿಲ್ಲ.[೧]

ಭಾರತದಲ್ಲಿ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಹಣಕಾಸಿನ ಸಂಬಂಧ ಒಂದು ವೇಳೆ, ಉತ್ಪನ್ನ ಮೂಲಗಳ ಹಾಗೂ ವಿವರಣೆಗಳ ಮೇಲೆ ಆಧಾರಿತವಾಗಿದ್ದರೆ, ಪ್ರಾಂತೀಯ ಸರ್ಕಾರಗಳಿಗೆ ತಾವು ಆಡಳಿತ ಮಾಡುವ ಸೇವೆಗಳಿಗಾಗಿ ಕಾಯಿದೆಬದ್ಧ ಜವಾಬ್ದಾರಿಯ ಅಸ್ತಿತ್ವವನ್ನು ತೋರಿಸಲೇಬೇಕಾಗಿತ್ತು. ಅನೇಕ ಸಂಯುಕ್ತ ರಾಜ್ಯ ಸರ್ಕಾರಗಳಂತೆ ಭಾರತ ಸರ್ಕಾರದ ಮತ್ತು ಪ್ರಾಂತೀಯ ಸರ್ಕಾರಗಳ ನಡುವೆ ಕಾರ್ಯವಿಂಗಡಣೆ ಇದ್ದದ್ದು ನಿಜ. ಆದರೆ ಇಂಥ ಕಾರ್ಯವಿಂಗಡಣೆಗೆ ಕಾಯಿದೆಯ ತೀರ್ಪಾಗಲಿ ಮತ್ತು ಅದಕ್ಕನುಗುಣವಾದ, ಯಾವುದೇ ಪ್ರಾಂತ್ಯೀಯ ಸೇವೆಗಾಗಲಿ, ಪ್ರಾಂತ್ಯೀಕರಿಸಿದ ಸೇವೆಗಾಗಲಿ ಕಾಯಿದೆ ಬದ್ಧ ಜವಾಬ್ದಾರಿ ಇರಲಿಲ್ಲವೆಂಬುದನ್ನು ನೆನಪಿನಲ್ಲಿಡಬೇಕು. ಕಾಯಿದೆಯ ಪ್ರಕಾರ ಎಲ್ಲ ಜವಾಬ್ದಾರಿಯೂ ಸಾಮ್ರಾಜ್ಯ ಸರ್ಕಾರದ ಮೇಲೆ ಇದ್ದು ಈ ಜವಾಬ್ದಾರಿಯನ್ನು ಅದು ಯಾವ ಪ್ರಾಂತೀಯ ಸರ್ಕಾರಗಳಿಗೂ ವರ್ಗಾವಣೆ ಮಾಡಿ ತಪ್ಪಿಸಿಕೊಳ್ಳಲು ಬರಲಾರದು. ಪ್ರಾಂತ್ಯಗಳು ಕೆಲವೊಂದು ಸಾಮ್ರಾಜ್ಯದ ಸೇವೆಗಳಿಗಾಗಿ

---

೧. 'ಫೈನಾನ್ಷಿಯಲ್ ಸ್ಟೇಟ್‌ಮೆಂಟ್', ೧೮೭೭-೮, ಪು. ೧೧೦ ಇತ್ಯಾದಿ.

ಹಣಕಾಸಿನ ಜವಾಬ್ದಾರಿಯನ್ನು ಸ್ವೀಕರಿಸಿದ್ದು ಅವರ ಆಯ್ಕೆ. ಅವುಗಳನ್ನು ತೆಗೆದುಕೊಳ್ಳಲು ಪ್ರಾಂತ್ಯಗಳಿಗೆ ಒತ್ತಾಯ ಮಾಡಲು ಬರುವುದಿಲ್ಲವೆಂಬುದನ್ನು ೧೮೭೭ರಲ್ಲಿ ಮದರಾಸು ಅಂಥ ಜವಾಬ್ದಾರಿಯನ್ನು ಸ್ವೀಕರಿಸಲು ನಿರಾಕರಿಸಿದ್ದು ಸಿದ್ಧಮಾಡುತ್ತದೆ. ಕಾಯಿದೆಯ ಪ್ರಕಾರ ಭಾರತ ಸರ್ಕಾರವೇ ದೇಶದಲ್ಲಿ, ಶಾಂತಿ, ಸುವ್ಯವಸ್ಥೆ ಮತ್ತು ಒಳ್ಳೆಯ ಸರ್ಕಾರಕ್ಕೆ ಹೊಣೆ. ಎಲ್ಲ ಸೇವೆಗಳು ಆವಶ್ಯಕವಾಗಿ ಸಾಮ್ರಾಜ್ಯದ ಸೇವೆಗಳಾದ್ದರಿಂದ ಭಾರತ ಸರ್ಕಾರವು ತನ್ನ ಸಂವಿಧಾನಾತ್ಮಕ ಒಪ್ಪಂದವನ್ನು ಪೂರೈಸಲು ತಾನೇ ಈ ಕಾರ್ಯವನ್ನು ನಿರ್ವಹಿಸುತ್ತದೆ.

ಆದ್ದರಿಂದ ಬ್ರಿಟಿಷ್ ಭಾರತದಲ್ಲಿ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಸಂಬಂಧ, ಉತ್ಪನ್ನ ಮೂಲಗಳ ಹಾಗೂ ಕಾಣಿಕೆಗಳ ವಿಂಗಡಣೆಯದ್ದು ಎನ್ನುವ ದೃಷ್ಟಿ ಅಸಮರ್ಥನೀಯವೆಂಬುದು ಸ್ಪಷ್ಟವಾಗುತ್ತದೆ. ಈಗಿನ ದಿನಗಳಲ್ಲಿ, ಪ್ರತಿದೇಶದ ಸರ್ಕಾರವು, ನಿರ್ದಿಷ್ಟ ಭಾಗದಲ್ಲಿ ಮತ್ತು ನಿರ್ದಿಷ್ಟ ಸಾರ್ವಜನಿಕ ಕಾರ್ಯಾಚರಣೆ ನೆರವೇರಿಸುವುದಕ್ಕಾಗಿ, ಪರಸ್ಪರ ಸಂಬಂಧವಿರುವ ರಾಜ್ಯಾಡಳಿತ ಕ್ರಮದ ಗುಂಪುಗಳಿಂದ, ನಡೆಸಿಕೊಂಡು ಹೋಗುತ್ತದೆ. ಯಾವುದೇ ಎರಡು ದೇಶಗಳಲ್ಲಿ ಸರ್ಕಾರಿ ಕೆಲಸವನ್ನು ನಡೆಸಿಕೊಂಡು ಹೋಗುವ ರಾಜ್ಯಾಡಳಿತ ವ್ಯವಸ್ಥೆ ಒಂದೇ ಇರಬಹುದು. ಆದರೆ ಅವುಗಳ ಪರಸ್ಪರ ಸಂಬಂಧ ಒಂದೇ ತೆರನಾಗಿದೆಯೆಂದು ವಾದಿಸುವುದು ಬಹಳ ತಪ್ಪು. ಕ್ರಮಬದ್ಧವಾದ ಈ ರಾಜ್ಯಾಡಳಿತ ವ್ಯವಸ್ಥೆಯಲ್ಲಿನ ಪರಸ್ಪರ ಸಂಬಂಧವು, ಆ ಸಂಬಂಧಕ್ಕೆ ಒಳಪಟ್ಟಿರುವವರಲ್ಲಿ ಆಜ್ಞೆಯನ್ನು ನೀಡುವ ಅಧಿಕಾರವನ್ನು ಯಾರು ಹೊಂದಿರುತ್ತಾರೆ ಎಂಬುದನ್ನು ಅವಲಂಬಿಸಿರುತ್ತದೆ ಎಂಬುದನ್ನು ಗಮನಿಸುವುದು ಮುಖ್ಯ. ಅಂಥ ರಾಜ್ಯಾಡಳಿತ ವ್ಯವಸ್ಥೆಗಳ ಸಮುದಾಯದಲ್ಲಿ ಅನೇಕ ಕಾರಣಗಳಿಗಾಗಿ, ಹೆಚ್ಚಾಗಿ ಐತಿಹಾಸಿಕ ಕಾರಣಗಳಿಗಾಗಿ, ಒಂದು ರಾಜ್ಯಾಡಳಿತ ವ್ಯವಸ್ಥೆ ಉಳಿದ ವ್ಯವಸ್ಥೆಗಳಿಗೆ ಕಾಯಿದೆಯನ್ನು ಕೊಡಲು ಅರ್ಹವಾದಂಥ ವರಿಷ್ಠ ಸ್ಥಾನದಲ್ಲಿರುತ್ತದೆ. ಸಂಯುಕ್ತ ರಾಜ್ಯ ವ್ಯವಸ್ಥೆ ಹೊಂದಿದ ದೇಶಗಳಲ್ಲಿ ರಾಜ್ಯ ಸರ್ಕಾರಗಳೇ ಕಾಯಿದೆ ಕೊಡಬಲ್ಲ ರಾಜ್ಯಾಡಳಿತ ವ್ಯವಸ್ಥೆಗಳಾಗಿವೆ. ಅವುಗಳು ಒಂದು ಮಹತ್ವದ ಸ್ಥಾನವನ್ನು ಹೊಂದಿವೆ. ಅವುಗಳು ಮೂಲಭೂತ ಹಾಗೂ ಶ್ರೇಷ್ಠ ಆಧಿಪತ್ಯವನ್ನು ಹೊಂದಿದವುಗಳಾಗಿರುತ್ತವೆ. ಅವುಗಳು ಸ್ವತಂತ್ರ ಇರುವಿಕೆಯನ್ನು ಸಾಧಿಸಬಹುದು, ಸ್ವಂತ ಆದಾಯ ಹೊಂದಬಹುದು ಮತ್ತು ತಮ್ಮ ಕಾರ್ಯಗಳನ್ನು ತಾವೇ ನಿರ್ವಹಿಸಬಹುದು. ಸಂಯುಕ್ತ ರಾಜ್ಯ ಸರ್ಕಾರವು ರಾಜ್ಯ ಸರ್ಕಾರಗಳ ಸೃಷ್ಟಿಯಾಗಿದೆ. ರಾಜ್ಯ ಸರ್ಕಾರಗಳು ಸ್ವಸಂತೋಷದಿಂದ ಬಿಟ್ಟುಕೊಟ್ಟ ಕಾರ್ಯಗಳ ಹೊರತಾಗಿ ಇದಕ್ಕೆ ಬೇರೆ ಅಧಿಕಾರ ಮತ್ತು ಕಾರ್ಯಗಳು ಇಲ್ಲ. ಆದ್ದರಿಂದ ರಾಜ್ಯ ಮತ್ತು ಸಂಯುಕ್ತ ರಾಜ್ಯ ಸರ್ಕಾರಗಳ ನಡುವಿನ ಹಣಕಾಸಿನ ಸಂಬಂಧ, ಆದಾಯದ ಮೂಲಗಳು ಹಾಗೂ ವಿವರಣೆಗಳದು ಎಂದು ಹೇಳುವುದು ಸತ್ಯವಾದದ್ದು.[೧] ರಾಜ್ಯಗಳಿಗೆ ಕಾಯಿದೆ ಬದ್ಧವಾದ ಬೇರೆ ಸಾಧನಸಂಪತ್ತುಗಳಿವೆ. ಆದ್ದರಿಂದ ಅವುಗಳು ತಮ್ಮ ಸೇವೆಗಳಿಗೆ ಖರ್ಚುಮಾಡಿದ ಹಣವನ್ನು ಹೊರತುಪಡಿಸಿ, ಕೇಂದ್ರ ಸರ್ಕಾರಕ್ಕೆ ಕೊಡುಗೆ ಮಾಡಲು ಕೆಲವೊಂದು ಆದಾಯವನ್ನು ಬಿಟ್ಟು ಕೊಡುತ್ತವೆಂದು ಹೇಳಬಹುದು. ಆದರೆ ಇದು ಪ್ರಾಂತ್ಯೀಯ ಸರ್ಕಾರಗಳ ನಿಲುವಿಗೆ ಅಸಮಂಜಸವಾಗಿದೆ. ಭಾರತದಲ್ಲಿ ಕೆಲಸ ಮಾಡುವ ರಾಜ್ಯಾಡಳಿತ ವ್ಯವಸ್ಥೆಯ ಗುಂಪಿನಲ್ಲಿ ಪ್ರಾಂತೀಯ ಸರ್ಕಾರಗಳು ಅತಿ ದುರ್ಬಲವಾಗಿವೆ. ೧೮೩೩ರ ವರೆಗೆ ಪ್ರಾಂತ್ಯಗಳಿಗೆ ಪ್ರತ್ಯೇಕವಾದ ಬಿಟ್ಟುಕೊಡುವ ಅಧಿಕಾರವಿತ್ತು. ಒಂದು ವೇಳೆ ಭಾರತ ಸರ್ಕಾರವು ಆಗಲೇ ಸಂಯುಕ್ತ ರಾಜ್ಯ ಸರ್ಕಾರದ ಮಾದರಿಯಲ್ಲಿ

೧. ಸಂಯುಕ್ತ ರಾಜ್ಯ ವ್ಯವಸ್ಥೆಯೇ ಇರಬೇಕಾಗಿಲ್ಲ. ಒಂದು ಕಾಯಿದೆಬದ್ಧ ವಿಕೇಂದ್ರೀಕೃತ ಸಂಪನ್ಮೂಲಗಳು ಮತ್ತು ಕಾಣಿಕೆಯ ಮೂಲದ ಆದಾಯಗಳನ್ನು ಪ್ರತ್ಯೇಕಿಸುವ ವ್ಯವಸ್ಥೆಗೆ ಅನುರೂಪವಾಗಿರುತ್ತದೆ.

ವ್ಯವಸ್ಥಿತಗೊಂಡಿದ್ದಿದ್ದರೆ, ಪ್ರಾಂತ್ಯಗಳ ಪರಿಸ್ಥಿತಿಯು, ಸಂಯುಕ್ತ ರಾಜ್ಯ ಸರ್ಕಾರ ಹೊಂದಿದ ರಾಜ್ಯಗಳಲ್ಲಿಯ ಪರಿಸ್ಥಿತಿಯಂತೆ ಇರಬಹುದಾಗಿತ್ತು. ಆದರೆ ೧೮೩೩ರ ಕಾಯಿದೆ ಪ್ರಕಾರ ಸಾಮ್ರಾಜ್ಯ ಪದ್ಧತಿಯು ಸ್ಥಾಪಿಸಲ್ಪಟ್ಟದ್ದರಿಂದ ಭಾರತದಲ್ಲಿ ರಾಜ್ಯ ಸಮುದಾಯ ನಿರ್ಮಿಸುವ ಕೊನೆಯ ಅವಕಾಶವು ಮತ್ತೆ ಕಾಣಿಸಿಕೊಳ್ಳದ ರೀತಿಯಲ್ಲಿ ಮಾಯವಾಯಿತು. ಆ ಕಾಯಿದೆಯಿಂದ ದೇಶದ ಸರ್ಕಾರವನ್ನು ಒಂದೇ ಅಧಿಕಾರಕ್ಕೆ ವಹಿಸಿಕೊಟ್ಟು, ದೇಶಕ್ಕೆ ಒಳ್ಳೆಯ ಸರ್ಕಾರವನ್ನು ಕೊಡುವ ಜವಾಬ್ದಾರಿಯನ್ನು ಅದಕ್ಕೆ ವಹಿಸಲಾಗಿದೆ. ಕೇಂದ್ರ ಆಡಳಿತ ವರ್ಗದ ಸಹಾಯದಿಂದ ಇಂಥ ದೊಡ್ಡ ದೇಶವನ್ನಾಳುವ ದೈತ್ಯ ಭಾರವನ್ನು ಒಂದೇ ಆಡಳಿತವು ಹೊರುವುದು ಸಾಧ್ಯವಿಲ್ಲದ್ದರಿಂದ, ಪ್ರಾಂತೀಯ ಸರ್ಕಾರಗಳಿಗೆ ಅಧಿಕಾರವನ್ನು ಬಿಟ್ಟುಕೊಡಲಾಯಿತು. ಆದರೆ ಪ್ರಾಂತೀಯ ಸರ್ಕಾರಗಳು ಪದಶಃ 'ಭಾರತ ಸರ್ಕಾರದ ಕಾರ್ಯಭಾರಿ'ಗಳೆಂಬ ಸಂಗತಿಯನ್ನು ಇದು ಮರೆಮಾಚಲಾರದು. 'ಪ್ರಾಂತೀಯ' ಪದಕ್ಕೆ ಅದರ ಸಾಮಾನ್ಯ ಉಪಯೋಗವು ಗೌರವಸ್ಥಾನವನ್ನು ಕಲ್ಪಿಸಿಕೊಟ್ಟಿತು. ಪ್ರಾಂತೀಯ ಆದಾಯದ ಜೊತೆಗೆ, ಪ್ರಾಂತೀಯ ಸೇವೆಗಳು, ಪ್ರಾಂತೀಯ ಆಡಳಿತ ವರ್ಗ, ಪ್ರಾಂತೀಯ ನ್ಯಾಯಾಲಯಗಳು ಎಲ್ಲವನ್ನು ಶಾಸನಬದ್ಧವಾಗಿ ಪ್ರಾಂತೀಯ ಸರ್ಕಾರಕ್ಕೆ ಸೇರಿದವುಗಳೆಂಬಂತೆ, ಮಾತನಾಡುವುದು ಸರ್ವೇಸಾಮಾನ್ಯವಾಗಿತ್ತು. ಆದರೆ ಈ ಪ್ರಯೋಗವು ವ್ಯಂಗ್ಯವಾಗಿಯೂ ಇದ್ದಿತು. ಏಕೆಂದರೆ, ದೇಶದ ಶಾಸನಬದ್ಧ ಕಾಯಿದೆಯ ನಿಬಂಧನೆಗಳನ್ನು ನೆನೆಸಿಕೊಂಡಾಗ, ರಾಜ್ಯಪಾಲರು ಮತ್ತು ಪರಿಷತ್ತುಗಳ ಒಂದು ದೊಡ್ಡ ಜಾಲ ಅವುಗಳಿಗೆ ಇದ್ದಾಗ್ಯೂ, ಅವುಗಳನ್ನು ಸರ್ಕಾರಗಳೆಂದು ಕರೆಯುವುದು ಅಷ್ಟು ಸಮಂಜಸವಲ್ಲವೆಂದು ಯಾರಿಗಾದರೂ ಅನಿಸುತ್ತದೆ. ಸರ್ಕಾರಗಳೆಂದು ಕರೆಸಿಕೊಳ್ಳುವ ಆಡಳಿತ ವ್ಯವಸ್ಥೆಗಳು ಹೊಂದಿರುತ್ತವೆಯೆಂದು ತಿಳಿಯುವ ಯಾವ ಕಾಯಿದೆಬದ್ಧ ಅಧಿಕಾರ ಅಥವಾ ಕಾರ್ಯಾಚರಣೆಗಳನ್ನೂ ಪ್ರಾಂತೀಯ ಸರ್ಕಾರಗಳು ಪಡೆದಿರಲಿಲ್ಲ. ಸತ್ಯಸಂಗತಿಯೆಂದರೆ, ಭಾರತದ ರಾಜ್ಯಾಡಳಿತ ವ್ಯವಸ್ಥೆ ಸಂಯುಕ್ತ ರಾಜ್ಯ ಆಡಳಿತ ವ್ಯವಸ್ಥೆಗೆ ಸಂಪೂರ್ಣ ವಿರೋಧವಾಗಿತ್ತು. ಇದೊಂದು ಕೇಂದ್ರೀಕೃತವಾದ ವ್ಯವಸ್ಥೆಯಾಗಿದ್ದು ಇದರಲ್ಲಿ ಪ್ರಾಂತೀಯವಾದದ್ದು ಏನೂ ಇಲ್ಲ. ಪ್ರಾಂತೀಯವಾಗಿ ಕಂಡದ್ದು ಕೇವಲ ಸಾಮ್ರಾಜ್ಯದ ವಿಭಾಗೀಯ ರೂಪ. ಆದ್ದರಿಂದ ಭಾರತದಲ್ಲಿಯ ಕೇಂದ್ರ ಸರ್ಕಾರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಹಣಕಾಸಿನ ಸಂಬಂಧ. ಆದಾಯ ಮೂಲಗಳು ಹಾಗೂ ಕಾಣಿಕೆಗಳ ವಿಂಗಡಣೆಯದು ಎಂದು ಮಾತನಾಡುವುದು ಅಸತ್ಯವಾಗುತ್ತದೆ. ಏಕೆಂದರೆ ಇಲ್ಲಿ ಪ್ರಾಂತ್ಯಗಳಿಗೆ ತಾವೇ ಕಾಯಿದೆಬದ್ಧವಾಗಿ ಹೊಂದಬಹುದಾದ ಬೇರೆಯಾದ ಸಾಧನಸಂಪತ್ತುಗಳಿಲ್ಲ. ಆದ್ದರಿಂದ ಅವುಗಳು ತಮ್ಮವೆಂದು ತಿಳಿಯುವ ಸೇವೆಗಳಿಗೆ ಖರ್ಚು ಮಾಡಿದ ಹಣವನ್ನು ಹೊರತುಪಡಿಸಿ, ಕೇಂದ್ರ ಸರ್ಕಾರಕ್ಕೆ ಕೊಡಮಾಡಲು ಕೆಲವೊಂದು ಆದಾಯವನ್ನು ಬಿಟ್ಟುಕೊಡುತ್ತವೆಯೆಂದು ಹೇಳಲು ಬಾರದು. ಇದೊಂದು ಸಂವಿಧಾನದ ಕಾಯಿದೆಗೆ ಹೊರಗಿನ ಊಹೆಯಾಗುತ್ತದೆ.

ಪ್ರಾಂತೀಯ ಹಣಕಾಸಿನ ನಿಜ ಸ್ವರೂಪವನ್ನು ತೋರಿಸುವಲ್ಲಿ, ಹಿಂದಿನ ಅಧ್ಯಾಯದಲ್ಲಿ ಚರ್ಚಿಸಿದ ಸಂಕೀರ್ಣ ನಿಯಮದ ಮಿತಿಗಳು ಪರಿಣಾಮಕಾರಿಯಾಗಿದ್ದರೆ, ನಾವಿಲ್ಲಿ ಟೀಕೆಗೊಳಪಡಿಸಿದ ದೃಷ್ಟಿ ಇರುತ್ತಿರಲಿಲ್ಲ. ಇಂಥ ಮಿತಿಗಳಿಂದ ಬಂಧಿತವಾದ ಪ್ರಾಂತೀಯ ಹಣಕಾಸಿನಲ್ಲಿ ಉಳಿದದ್ದೇನು ಎಂದು ಆಶ್ಚರ್ಯಪಡುವ ಬದಲು, ಕೆಲ ಜನರು ತಮ್ಮ ಅಜ್ಞಾನದ ಕಾರಣದಿಂದಾಗಿ ಹುಮ್ಮಸ್ಸಿನಿಂದ ಈ ವ್ಯವಸ್ಥೆ ಸ್ವತಂತ್ರವಾದದ್ದೆಂದು ವಾದಿಸಿದ್ದು, ಈ ಪ್ರಾಂತೀಯ ಹಣಕಾಸಿನ ಅಭ್ಯಾಸದಲ್ಲಿ, ಅದರ ಮಿತಿಗಳ ಅಭ್ಯಾಸವೂ ಒಂದು ಭಾಗವಾಗಿರಲಿಲ್ಲವೆಂದು ತೋರುತ್ತದೆ. ಒಂದು ವೇಳೆ ಪ್ರಾಂತಗಳಿಗೆ ಬೇರೆ ಆದಾಯ ಹಾಗೂ ಸೇವೆಗಳು ಇದ್ದಲ್ಲಿ, ಅವುಗಳು ತಮಗೆ ಬೇಕಾದ ಆದಾಯವನ್ನು ಆಕರಿಸದಿರುವ ಮತ್ತು ಅದನ್ನು ತಾವು

ಇಚ್ಛಿಸಿದ ಸೇವೆಗಾಗಿ ವೆಚ್ಚಮಾಡುವ, ತಾವು ಅನುಸರಿಸಬೇಕೆಂಬ ನೀತಿಯ ದೃಷ್ಟಿಯಿಂದ ಆಯವ್ಯಯ ಪಟ್ಟಿಯ ಅಂದಾಜನ್ನು ಮಾಡುವ ಮತ್ತು ತಮ್ಮ ಇಚ್ಛೆಯಂತೆ ಪೂರಕ ಸಹಾಯ ದ್ರವ್ಯದ ವ್ಯವಸ್ಥೆ ಮಾಡುವ ಅಧಿಕಾರವೂ ಇರುತ್ತಿತ್ತೆಂಬುದು ಆ ನಿಯಮದ ನೆರವಿನಿಂದ ತಿಳಿಯುತ್ತಿತ್ತು. ಆದರೆ ಅವುಗಳಿಗೆ ಅಂಥ ಅಧಿಕಾರ ಯಾವಾಗಲೂ ಇರಲಿಲ್ಲ. ೧೮೭೦ಕ್ಕಿಂತ ಮೊದಲು ಇದ್ದಹಾಗೆ, ೧೮೭೦ರ ನಂತರವೂ ಎಲ್ಲವೂ ಸ್ಥಾನಮಾನದಲ್ಲಿ ಸಾಮ್ರಾಜ್ಯಕ್ಕೊಳಪಟ್ಟಿದೆ ಎಂಬುದಕ್ಕೆ ಪ್ರಾಂತೀಯ ಹಣಕಾಸಿನ ಕಾರ್ಯವಿಧಾನದ ಮೇಲಿರುವ ಮಿತಿಗಳಿಗಿಂತ ಹೆಚ್ಚಿನ ಸಾಕ್ಷಿ ಸಾದರ ಪಡಿಸಲು ಸಾಧ್ಯವಿಲ್ಲ.

ಭಾರತದಲ್ಲಿ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಹಣಕಾಸಿನ ಸಂಬಂಧ, ಆದಾಯ ಮೂಲಗಳು ಹಾಗೂ ಕಾಣಿಕೆಗಳ ವಿಂಗಡಣೆಯದ್ದು ಎನ್ನುವ ವಾದ ಸತ್ಯಸಂಗತಿಗಳಿಗೆ ಅಸಂಗತವಾಗಿದ್ದಲ್ಲಿ, ಕಾಯಿದೆಬದ್ಧ ಸ್ಥಿತಿಗೆ ಹೊಂದಿಕೊಳ್ಳುವ ಇನ್ನಾವ ತತ್ವವಿದೆ? ಸಂಗತಿಗನುಗುಣವಾದ, ನಿಯಮಕ್ಕೆ ಹೊಂದುವ ಎರಡು ಸರ್ಕಾರಗಳ ನಡುವಿನ ಹಣಕಾಸಿನ ಸಂಬಂಧದ ಒಂದೇ ಒಂದು ತತ್ವವೆಂದರೆ, ಆದಾಯ ಮೂಲಗಳ ಶೇಖರಣೆ ಮತ್ತು ಉತ್ಪನ್ನದ ಹಂಚುವಿಕೆಯೆಂದು ನಾವು ಮುಂದುವರಿದು ಹೇಳಬಹುದು.

ಭಾರತ ಸರ್ಕಾರವು ಪ್ರಾಂತ್ಯಗಳಿಗೆ ಕೆಲವೊಂದು ಆದಾಯವನ್ನು ಹಾಗೂ ಆದಾಯದ ಭಾಗವನ್ನು ವಹಿಸಿಕೊಟ್ಟಾಗ, ಆದಾಯದ ಮೂಲಗಳ ಸಂಗ್ರಹದ ಬಗ್ಗೆ ಮಾತನಾಡುವುದು ತಪ್ಪಾಗಿ ಕಾಣಬಹುದು. ಇದಕ್ಕೆ ಉತ್ತರ ಕಠಿಣವಿಲ್ಲ. ಪ್ರಾಂತೀಯ ಹಣಕಾಸು ಆದಾಯ ಮೂಲಗಳ ಕಾಯಿದೆಬದ್ಧ ವಿಂಗಡಣೆಯನ್ನು ಹೊಂದಿರಲಿಲ್ಲವೆಂಬುದನ್ನು ಈಗಾಗಲೇ ಸ್ಪಷ್ಟಪಡಿಸಿದ್ದಾಗಿದೆ. ಏಕೆಂದರೆ ಈಗಾಗಲೇ ಗಮನಿಸಿದಂತೆ, ಎಲ್ಲ ವಹಿಸಿಕೊಟ್ಟ ಹಾಗೂ ಕಾಯ್ದಿಟ್ಟ ಆದಾಯಗಳು ಸಾಮ್ರಾಜ್ಯ ಖಜಾನೆಯಲ್ಲಿ ಸಂಗ್ರಹಿಸಲ್ಪಟ್ಟು ನಂತರ ಮಂಜೂರಾತಿ ಮಾಡಿದ ವ್ಯವಹಾರಕ್ಕೆ ಕೊಡಲಾಗುತ್ತಿತ್ತು. ಎಲ್ಲ ಆದಾಯಗಳನ್ನು ಒಂದೇ ಮಡುವಿನಲ್ಲಿ ಸಂಗ್ರಹಿಸಿದಾಗ, ಪ್ರಾಂತ್ಯಗಳಿಗೆ ಕೊಟ್ಟದ್ದನ್ನು ಆದಾಯವೆಂದು ಹೇಳಲಿಕ್ಕಾಗದು.[೧] ಎಲ್ಲ ಆದಾಯ ಮೂಲಗಳಿಂದ ಬಂದ ಸಂಗ್ರಹಣೆಯು, ಬೇರ್ಪಡದಂತೆ ಮಿಶ್ರಿತವಾಗುವುದರಿಂದ, ಪ್ರಾಂತ್ಯಗಳಿಗೆ ಕೊಟ್ಟದ್ದನ್ನು ನಿಧಿ ಎಂದು ಹೇಳುವುದೊಂದೇ ಸಮಂಜಸ ದೃಷ್ಟಿಯಾಗುತ್ತದೆ. ವಹಿಸಿಕೊಡುವ ಆಯವ್ಯಯ ಪಟ್ಟಿ ಆದಾಯಗಳನ್ನು ಹಂಚಿಕೊಡುವ ಆಯವ್ಯಯ ಪಟ್ಟಿ ಎಂಬ ಹೇಳಿಕೆಗಳು ಕೆಲವೊಂದು ಅರ್ಥದಲ್ಲಿ ಕಾಲ್ಪನಿಕ ಪದಗಳು. ಪ್ರಾಂತೀಯ ಹಣಕಾಸಿನ ಎಲ್ಲ ಮಟ್ಟಗಳಲ್ಲಿ ಪ್ರಾಂತ್ಯಗಳಿಗೆ ಕೊಡಮಾಡಿದ್ದು ನಿಧಿ ಮಾತ್ರ. ಹಂಚಿಕೊಡುವ ಮಟ್ಟದಲ್ಲಿ ಕೊಟ್ಟ ಪೂರೈಕೆಯು ನಿಶ್ಚಿತವಾಗಿಯೂ ಸ್ಥಿರವಾದ ನಿಧಿ ಇತ್ತು. ಆದಾಯ ಬಿಟ್ಟುಕೊಡುವ ಬದಲು ಆದಾಯದ ಹಂಚುವಿಕೆಯನ್ನು ತಂದಿದ್ದರ ಪರಿಣಾಮವೆಂದರೆ ಸ್ಥಿರ ನಿಧಿಯ ಪೂರೈಕೆಯ ಬದಲು ಹಂಚಿದ ಆದಾಯವು, ಉತ್ಪನ್ನ ಏರಿಳಿತವಾದಂತೆ ನಿಧಿಯಲ್ಲಿಯೂ ಏರಿಳಿತ ಆಯಿತು. ಆದರೂ ಇದು ಸಹಿತ ನಿಧಿಯ ಪೂರೈಕೆಯಾಗಿತ್ತೆ ವಿನಹ ಮತ್ತೇನೂ ಅಲ್ಲ. ಪ್ರಾಂತೀಯ ಸರ್ಕಾರಗಳಿಗೆ ತಮ್ಮ ಜವಾಬ್ದಾರಿಯ ಮೇಲೆ ತೆಗೆದುಕೊಂಡಂಥ ಸೇವೆಗಳ ಮೇಲಿನ ವೆಚ್ಚವನ್ನು ಪೂರೈಸಲು ಕೇಂದ್ರ ಸರ್ಕಾರವು

---

೧. ಕ್ಯಾಪ್ಟನ್ ಪ್ರೆಟಿಮನ್, ಎಂ.ಪಿ. ಇವರು ರಾಯಲ್ ಕಮಿಷನ್ ಆನ್ ಲೋಕಲ್ ಟ್ಯಾಕ್ಸೇಷನ್ ಇನ್ ಇಂಗ್ಲೆಂಡ್‌ನ ಎದುರು ಸ್ಥಳೀಯ ಸರ್ಕಾರಗಳಿಗೆ ಕೊಡುವ ಆದಾಯದ ಬಗ್ಗೆ ನೀಡಿದ ಸಾಕ್ಷ್ಯವನ್ನು ಈ ಸಂದರ್ಭದಲ್ಲಿ ಉಲ್ಲೇಖಿಸಬಹುದು. ಅವರು ಹೀಗೆ ಹೇಳಿದರು : ಸಾಮ್ರಾಜ್ಯದ ಇಂತಹುದೆ ತೆರಿಗೆಯಿಂದ ಕೊಡಲಾಗಿದೆ ಎಂದು ಹೇಳುವುದು ಅಸಾಧ್ಯ ಎಂದು ನಾನು ಸಂಪೂರ್ಣ ತಿಳಿದಿದ್ದೇನೆ. ಒಬ್ಬನು ಒಂದು ಕೊಳದಲ್ಲಿ ಒಂದು ಬಕೆಟ್ ನೀರನ್ನು ಸುರಿದು ಪುನಃ ತಾನು ಸುರಿದ ಬಕೆಟ್ಟಿನ ನೀರನ್ನೇ ತುಂಬಿಕೊಂಡಿದ್ದೇನೆ ಎಂದು ಹೇಳಬಹುದು. ತೆರಿಗೆಗಳನ್ನು ಸಾಮ್ರಾಜ್ಯದ ಖಜಾನೆಗೆ ಕೊಡಲಾಗುವುದು ಮತ್ತು ಅದರಿಂದಲೇ ಕೊಡುಗೆಗಳನ್ನು ನೀಡಲಾಗುವುದು. ಆದರೆ ಕೊಡಲಾದ ತೆರಿಗೆಯಿಂದಲೇ ಪುನಃ ನೀಡಲಾಗಿದೆ ಎಂದು ಹೇಳುವುದು ಸಂಪೂರ್ಣ ಅಸತ್ಯ. ಮಿನಿಟ್ ಆಫ್ ಎವಿಡೆನ್ಸ್, ಸಿ. ೮೭೬೩, ೧೮೯೮, ಪು. ೯೮೭೩.

ಅವುಗಳಿಗೆ ನಿಧಿಯನ್ನು ಕೊಟ್ಟಿತೆಂದು ಹೇಳುವುದು ಸರಿಯಲ್ಲ. ನಿಜ ಸಂಗತಿಯೆಂದರೆ, ಪ್ರಾಂತ್ಯಗಳ ಪಾಲೂ ಸೇರಿದ ಸಾರ್ವಜನಿಕ ಹಣವನ್ನು ಸ್ವೀಕರಿಸುವ ಹಾಗೂ ಹಂಚುವ ಅಧಿಕಾರ ಭಾರತ ಸರ್ಕಾರದ ಕೈಯಲ್ಲಿಯೇ ಉಳಿಯಿತು. ಸತ್ಯಸಂಗತಿಗನುಗುಣವಾದ ಒಂದೇ ಸರಿಯಾದ ಹೇಳಿಕೆಯೆಂದರೆ ಪ್ರಾಂತೀಯ ಹಣಕಾಸೆಂದರೆ, ಭಾರತ ಸರ್ಕಾರವು ತನ್ನ ಖಜಾನೆ ಪುಸ್ತಕದಲ್ಲಿ ಪ್ರಾಂತೀಯ ಸೇವೆಗಳ ಖಾತೆಯನ್ನು ತೆರೆಯಿತು. ಹಂಚಿಕೊಟ್ಟ ಆದಾಯಗಳು ಹೆಚ್ಚು ಕಮ್ಮಿಯಾದಂತೆ ಉತ್ಪನ್ನದಲ್ಲಿ ಏರಿಳಿತವಾಗಿ ಪ್ರಾಂತೀಯ ಸರ್ಕಾರಗಳು ಅಷ್ಟೇ ಹಣವನ್ನು ತೆಗೆದುಕೊಳ್ಳಲು ಅನುಮತಿ ಪಡೆದಿದ್ದವು.

ಭಾರತ ಸರ್ಕಾರದ ಕೈಯಲ್ಲಿ ಆದಾಯ ಮೂಲಗಳ ಸಂಪೂರ್ಣ ಕ್ರೋಡೀಕರಣವಿತ್ತು. ಪ್ರಾಂತ್ಯಗಳು ತಮ್ಮ ಮೊತ್ತದಿಂದ ಕಾಣಿಕೆಗಳನ್ನು ಕೇಂದ್ರ ಸರ್ಕಾರಕ್ಕೆ ನೀಡುವ ಬದಲು ಭಾರತ ಸರ್ಕಾರವೇ ತನಗೆ ಬಂದ ಉತ್ಪನ್ನವನ್ನು ಪ್ರಾಂತ್ಯಗಳಿಗೆ ಹಂಚುತ್ತಿತ್ತೆಂಬುದು ಇದರಿಂದ ತಿಳಿದುಬರುತ್ತದೆ. ಪರಿಸ್ಥಿತಿಯು ಇದಕ್ಕಿಂತ ಭಿನ್ನವಾಗಿರುವುದಕ್ಕೆ ಸಾಧ್ಯವಿರಲಿಲ್ಲ. ಏಕೆಂದರೆ ೧೮೩೩ರ ಕಾಯಿದೆಯ ಮೇರೆಗೆ ಶಾಂತಿ ಸುವ್ಯವಸ್ಥೆ ಹಾಗೂ ಒಳ್ಳೆಯ ಸರ್ಕಾರದ ಉದ್ದೇಶಗಳಿಗಾಗಿ ಕೈಗೊಳ್ಳುವ ಸೇವೆಗಳಿಗಾಗಿ ಹಣಕಾಸಿನ ಜವಾಬ್ದಾರಿ ಭಾರತ ಸರ್ಕಾರದ ಮೇಲೆ ಇದೆಯೆಂಬುದನ್ನು ನೆನೆಯಬಹುದು. ಭಾರತ ಸರ್ಕಾರವೇ ಕೆಲವೊಂದು ಸೇವೆಗಳಲ್ಲಿ ನೇರ ಆಡಳಿತವನ್ನು ನಡೆಸಿದ್ದಲ್ಲದೆ, ರಷ್ಯಾ ಹೊರತುಪಡಿಸಿದ ಯುರೋಪಿನಷ್ಟು ವಿಶಾಲವಾದ ದೇಶದ ಆಗುಹೋಗುಗಳನ್ನು ನೇರವಾಗಿ ಕೇಂದ್ರದ ಆಡಳಿತ ಕಚೇರಿಯಿಂದ ನಿರ್ವಹಿಸುವುದು ಅಸಾಧ್ಯವಾದದ್ದರಿಂದ ಸಾಮ್ರಾಜ್ಯ ಸರ್ಕಾರವು ತನ್ನ ಮೇಲ್ವಿಚಾರಣೆಯಲ್ಲಿ, ನಡೆಯುತ್ತಿದ್ದ ಕೆಲವೊಂದು ಸೇವೆಗಳನ್ನು ಪ್ರಾಂತೀಯ ಸರ್ಕಾರಗಳ ಆಡಳಿತಕ್ಕೆ ಬಿಟ್ಟುಕೊಡಬೇಕಾಯಿತು. ನಾವು ಈಗಾಗಲೇ ಗಮನಿಸಿದಂತೆ, ಈ ಪರಿಸ್ಥಿತಿಯ ದುರ್ಬಲ ಅಂಶವೆಂದರೆ, ಒಂದೇ ಕಡೆ ಕೇಂದ್ರೀಕೃತವಾಗಿರಬೇಕಾಗಿದ್ದ ಆಡಳಿತಾತ್ಮಕ ಜವಾಬ್ದಾರಿ ಹಾಗೂ ಹಣಕಾಸಿನ ಜವಾಬ್ದಾರಿಗಳು ಬೇರೆಬೇರೆಯ ಕಡೆಗಳಲ್ಲಿ ಇದ್ದವು. ಅದಕ್ಕೆ ವ್ಯತಿರಿಕ್ತವಾಗಿ ಪ್ರತಿ ಹಣಕಾಸಿನ ವರ್ಷದ ಕೊನೆಯಲ್ಲಿ ಎಲ್ಲ ಪ್ರಾಂತೀಯ ಸರ್ಕಾರಗಳು, ತಾವು ಆಡಳಿತ ಒದಗಿಸಿದ ಸೇವೆಗಳ ಖರ್ಚಿನ ಅಂದಾಜುಗಳನ್ನು ಭಾರತ ಸರ್ಕಾರಕ್ಕೆ ಕಳುಹಿಸಿ, ತನಗೆ ತಿಳಿದ ಹಾಗೆ ಅದನ್ನು ತಿರಸ್ಕರಿಸುವ, ಕಡಿಮೆ ಮಾಡುವ ಅಥವಾ ಕೊಡುವ ನಿರ್ಬಂಧ ಶಕ್ತಿಯನ್ನು ಅದಕ್ಕೆ ಬಿಟ್ಟುಕೊಟ್ಟಿದ್ದವು. ಹಣವನ್ನು ಹುಡುಕುವ ಬಂಧನವಿಲ್ಲದ್ದರಿಂದ, ಪ್ರಾಂತ್ಯಗಳು ಅತಿಯಾದ ಬೇಡಿಕೆಗಳನ್ನು ಮುಂದಿಡುತ್ತಿದ್ದವು. ತನ್ನ ಬಳಿ ವಿವರ ಇರದ ಭಾರತ ಸರ್ಕಾರಕ್ಕೆ ಪ್ರತಿಯೊಂದು ಸೇವೆಯ ನಿಜವಾದ ಆವಶ್ಯಕತೆಗಳೇನೆಂಬುದನ್ನು ತೀರ್ಮಾನಿಸಲು ಸಾಧ್ಯವಿರಲಿಲ್ಲ. ತನಗೆ ಕಳುಹಿಸಿದ ಅಂದಾಜಿನಲ್ಲಿ ಅತೀ ಕಡಿಮೆ ಹಾಗೂ ಅತೀ ಹೆಚ್ಚಿನ ವಿಶ್ವಾಸದಿಂದ ತನ್ನ ಜವಾಬ್ದಾರಿಯ ವೈಫಲ್ಯದ ಹೆದರಿಕೆಯಿಂದಾಗಿ, ಪ್ರಾಂತ್ಯಗಳ ಪೋಲು ವೆಚ್ಚಕ್ಕೆ ಅದು ಮಣಿಯುತ್ತಿತ್ತು. ಇದು ೧೮೫೯ರ ಹಣಕಾಸಿನ ಮುಗ್ಗಟ್ಟನ್ನು ತಂದಿತು. ಈ ಅಸಹಾಯಕತೆಯನ್ನು ನೀಗಿಸಲು ಪ್ರಾಂತೀಯ ಹಣಕಾಸಿನ ವ್ಯವಸ್ಥೆಯನ್ನು ಸ್ಥಾಪಿಸಲಾಯಿತು. ಇದರ ಮುಖಾಂತರ ಭಾರತ ಸರ್ಕಾರವು ಪ್ರಾಂತ್ಯಗಳಿಗೆ ತನ್ನ ನಿಧಿಯನ್ನು ಹಂಚುತ್ತಿತ್ತು. ಇದಕ್ಕೆ ಪ್ರತಿಯಾಗಿ ತಮಗೆ ಪ್ರತ್ಯೇಕವಾಗಿ ಬಂದ, ಹಂಚಿದ ಹಣದಲ್ಲಿ ಪ್ರಾಂತ್ಯಗಳು, ಭಾರತ ಸರ್ಕಾರದ ಪರವಾಗಿ ಕೆಲವೊಂದು ಸೇವೆಗಳನ್ನು ನಿರ್ವಹಿಸುತ್ತಿದ್ದವು.

ಹಣಕಾಸಿನ ಸಂಬಂಧದ ಸ್ವರೂಪ ಹೀಗಿರುವಾಗ, ಪ್ರಾಂತೀಯ ಹಣಕಾಸಿನ ವ್ಯವಸ್ಥೆಯ ಅಸಮಾನತೆಯ ಆಧಾರದ ಮೇಲಿನ ಟೀಕೆಗಳು ಅಪ್ರಕೃತವಾಗಿದ್ದವು. ಅದನ್ನು ಸರಿಮಾಡಲು, ಕಾಣಿಕೆಗಳು ಯೋಗ್ಯಾನುಸಾರವಾಗಿರಬೇಕು ಹಾಗೂ ಹಂಚಿಕೆಗಳು ಆವಶ್ಯಕತೆಗೆ ತಕ್ಕಂತೆ ಇರಬೇಕು. ಅಸಮಾನತೆಯ ಆಧಾರದ ಮೇಲೆ ಪ್ರಾಂತೀಯ ಹಣಕಾಸಿನ ವ್ಯವಸ್ಥೆಯ ಮೇಲೆ ದೋಷಾರೋಪಣೆ ಮಾಡಬೇಕಾದರೆ,

ಹಂಚಿಕೆಯೂ ಅಸಮಾನವಾಗಿತ್ತೆಂದು ತೋರಿಸುವುದು ಅವಶ್ಯವಿತ್ತು. ಜನಸಂಖ್ಯೆಯ ಮಾನದಿಂದ ಅಥವಾ ಅವುಗಳ ವಿಸ್ತರಣೆಯ ಮಾನದಿಂದ ಅಳೆದರೆ, ಬೇರೆ ಬೇರೆ ಪ್ರಾಂತ್ಯಗಳು ಬೇರೆಬೇರೆ ಮೊತ್ತವನ್ನು ಪಡೆಯುತ್ತಿದ್ದವೆಂಬುದನ್ನು ಇಲ್ಲಿ ತೋರಿಸಬಹುದು. ಹಂಚುವಿಕೆಯು ಪ್ರಾಂತ್ಯಗಳಲ್ಲಿ ಅಲ್ಲ, ಆದರೆ ಭಾರತ ಸರ್ಕಾರದ ಅಥವಾ ಪ್ರಾಂತೀಯ ಸರ್ಕಾರಗಳ ಹತೋಟಿಗೆ ಒಳಪಟ್ಟಿದ್ದ ವಿವಿಧ ಖಾತೆಗಳಲ್ಲಿ ಎಂಬುದನ್ನು ನೆನಪಿಡಬೇಕು. ಇದರಿಂದ ಹಂಚುವಿಕೆಯ ಸಮಾನತೆಯಲ್ಲಿ ಬಹಳ ವ್ಯತ್ಯಾಸವಾಗಬಹುದು. ಏಕೆಂದರೆ ವಿವಿಧ ಆಡಳಿತ ವ್ಯವಸ್ಥೆಗಳಿಗೆ ಒಳಪಟ್ಟ ಪ್ರದೇಶಗಳ ಆವಶ್ಯಕತೆಗಳು ಬೇರೆಬೇರೆಯಾಗಿದ್ದು, ತಮ್ಮಲ್ಲಿಯ ವಿಭಾಗಗಳ ಆವಶ್ಯಕತೆಗಳಿಗೆ ತಕ್ಕಂತೆ ಇರುತ್ತಿದ್ದವು ಎಂದು ಹೇಳಲಿಕ್ಕಾಗದು. ಭಾರತ ಸರ್ಕಾರದಿಂದ ನಿಧಿಯ ಹಂಚುವಿಕೆಯು, ಪ್ರತಿಯೊಂದು ಪ್ರಾಂತ್ಯಕ್ಕೆ ಅದರ ಆವಶ್ಯಕತೆಗಳಿಗೆ ತಕ್ಕಂತೆ ಎಂಬ ತತ್ವದ ಆಧಾರದ ಮೇಲೆ ಇರದೆ, ಪ್ರತಿಯೊಂದು ವಿಭಾಗಕ್ಕೆ ಅದರ ಆವಶ್ಯಕತೆಗಳಿಗೆ ತಕ್ಕಂತೆ ಎಂಬ ತತ್ವದ ಆಧಾರದ ಮೇಲೆ ಇತ್ತು. ಆದ್ದರಿಂದ ಈ ವ್ಯವಸ್ಥೆಯ ನ್ಯಾಯಸಮ್ಮತಿಯನ್ನು ಬೇರೆ ತತ್ವದ ಮೇಲೆ ಟೀಕಿಸುವುದು ಸಕಾರಣವಾಗುತ್ತಿರಲಿಲ್ಲ.

ಈ ರೀತಿಯ ವಿವರಣೆಯಿಂದ ಪ್ರಾಂತೀಯ ಹಣಕಾಸಿನ ವ್ಯವಸ್ಥೆಯು, ವಿಭಾಗೀಯ ಹಣಕಾಸಿನ ಸ್ವರೂಪದ್ದೆಂದು, ಸಂಯುಕ್ತರಾಜ್ಯ ಹಣಕಾಸಿನ ವ್ಯವಸ್ಥೆ ಅಥವಾ ವಿಕೇಂದ್ರೀಕೃತ ಹಣಕಾಸಿನ ವ್ಯವಸ್ಥೆಯಿಂದ ಭಿನ್ನವಿದೆಯೆಂದು ಭಾವನೆಯಾಗುತ್ತದೆ. ಅಂಕಿಅಂಶಗಳ ಆಸರೆ ಪಡೆದ ದೃಷ್ಟಿಗಿಂತ ಈ ದೃಷ್ಟಿಯು ತೀರಾ ತಪ್ಪಾಗಿರಲಾರದು. ವಿಭಾಗೀಯ ಹಣಕಾಸಿನಲ್ಲಿದ್ದಂತೆ ರಾಜ್ಯದ ಪ್ರತಿಯೊಂದು ವಿಭಾಗಕ್ಕೆ ಆಯವ್ಯಯ ಪಟ್ಟಿಯಲ್ಲಿ ನಿಗದಿಪಡಿಸಿದ ಕೆಲವೊಂದು ಸಹಾಯಧನವಿದ್ದು, ಅದು ಅಪ್ಪರಮಟ್ಟಿಗೆ ಖಜಾನೆಯಿಂದ ಆ ಹಣವನ್ನು ತೆಗೆದುಕೊಳ್ಳುತ್ತದೆ. ಅದೇ ರೀತಿಯಾಗಿ ಪ್ರಾಂತೀಯ ಸರ್ಕಾರಗಳಿಗೆ, ತಾನು ನಿರ್ವಹಿಸುವ ವಿಭಾಗಗಳಿಗಾಗಿ ಕೆಲವೊಂದು ಕ್ರೋಡೀಕೃತ ಸಹಾಯಧನವನ್ನು ಕೊಡಲಾಯಿತು. ಮತ್ತು ತತ್ಸಂಬಂಧ ವೆಚ್ಚಕ್ಕಾಗಿ ಅಪ್ಪರಮಟ್ಟಿಗೆ ಸಾಮ್ರಾಜ್ಯದ ಖಜಾನೆಯಿಂದ ಹಣವನ್ನು ಅವು ತೆಗೆದುಕೊಳ್ಳುತ್ತಿದ್ದವು. ಸ್ಥಾನಮಾನದಲ್ಲಿ ಪ್ರಾಂತೀಯತೆ ಎಂಬುದು ಏನೂ ಇದರಲ್ಲಿ ಇರಲಿಲ್ಲ. ಪ್ರಾಂತೀಯ ಹಣಕಾಸೆಂಬುದು ಇಲ್ಲದ ೧೮೭೦ರ ಪೂರ್ವದಲ್ಲಿದಂತೆ, ಪ್ರಾಂತೀಯ ಹಣಕಾಸು ೧೮೭೦ರಲ್ಲಿ ಅಸ್ತಿತ್ವಕ್ಕೆ ಬಂದ ನಂತರವೂ, ಆದಾಯಗಳು, ಸೇವೆಗಳು, ನಾಗರಿಕ ಸೇವೆಗಳು, ಸ್ಥಾನಮಾನದಲ್ಲಿ ಸಂಪೂರ್ಣವಾಗಿ ಸಾಮ್ರಾಜ್ಯದವುಗಳಾಗಿದ್ದವು. ಆದ್ದರಿಂದ ಪ್ರಾಂತೀಯ ಹಣಕಾಸು, ಕರವಿಧಿಸುವ ಹಾಗೂ ವೆಚ್ಚಮಾಡುವ ಸ್ವಾತಂತ್ರ್ಯವುಳ್ಳ, ಸ್ವತಂತ್ರ ವ್ಯವಸ್ಥೆಯಾಗುವ ಬದಲು, ಭಾರತ ಸರ್ಕಾರದ ಹತೋಟಿಗೊಳಪಟ್ಟ ಜಮಾ ಮತ್ತು ಖರ್ಚಿನ ಉಸ್ತುವಾರಿಯ ವಿಷಯವಾಗಿತ್ತೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

ಪ್ರಾಂತೀಯ ಹಣಕಾಸಿನ ಯೋಜನೆಯನ್ನು ಆಚರಣೆಯಲ್ಲಿ ತಂದದ್ದರಿಂದ, ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಹಣಕಾಸಿನ ಸಂಬಂಧದ ಸ್ವರೂಪದಲ್ಲಿ ಯಾವ ಬದಲಾವಣೆಯೂ ಇಲ್ಲವೆಂದು ಅರ್ಥವಾಗುತ್ತದೆ. ಆದಾಯ ಮೂಲಗಳ ಕ್ರೋಡೀಕರಣದ ಮತ್ತು ಉತ್ಪನ್ನದ ಹಂಚುವಿಕೆಯ ಸಂಬಂಧ ಹೊಸದಾಗಿರಲಿಲ್ಲ ಅದು ೧೮೩೩ ರಷ್ಟು ಹಳೆಯದಾಗಿದೆ. ಅಂದು ಸ್ಥಾಪಿಸಿದ ಸಾಮ್ರಾಜ್ಯ ಪದ್ಧತಿಯ ಹಣಕಾಸಿನ ಪಡಿರೂಪ ಇದಾಗಿತ್ತು. ಏಕೆಂದರೆ ಸಂಬಂಧದಲ್ಲಿ ಯಾವ ಬದಲಾವಣೆಯೂ ಆಗಲಿಲ್ಲ. ಪ್ರಾಂತೀಯ ಹಣಕಾಸಿನಿಂದ ಪ್ರಾಂತೀಯ ಸರ್ಕಾರಗಳು, ಸ್ವಂತ ಸ್ಪ್ರಿಂಗ್ ಹೊಂದಿದ ಗಡಿಯಾರಗಳಾಗದೆ, ಮೊದಲಿನ ಹಾಗೆಯೇ ಭಾರತ ಸರ್ಕಾರದ ವಿಭಾಗಗಳಾಗಿ ಉಳಿದವು. ಅಂಥ ತೀರ್ಮಾನವು ಕೆಲವು ಮಟ್ಟಿಗೆ ಗಾಬರಿಗೊಳಿಸುವ ರೀತಿಯದೆಂದು ಪರಿಗಣಿಸಲ್ಪಡಬಹುದು. ಆದರೆ,

ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಾಗೂ ಕೇಂದ್ರ ಸರ್ಕಾರಗಳ ನಡುವೆ ಇದ್ದ ಕಾಯಿದೆಬದ್ಧ ಸಂಬಂಧದಿಂದ ಇದು ಸತ್ಯವಾಗಿತ್ತು. ಅಲ್ಲದೆ ಬೇರೆ ಯಾವ ತೀರ್ಮಾನವೂ ಸಾಧ್ಯವಿರಲಿಲ್ಲವೆಂಬುದರಲ್ಲಿ ಯಾವ ಸಂಶಯವೂ ಇರಲಾರದು. ಪ್ರಾಂತೀಯ ಹಣಕಾಸು ಕೇವಲ ಲೆಕ್ಕಪತ್ರದ ವಿಷಯವಾಗಿದ್ದರೆ ಇದರಿಂದ ಸಾಮ್ರಾಜ್ಯದ ಹಣಕಾಸಿನ ವ್ಯವಸ್ಥೆಯಲ್ಲಿ ಯಾವ ಬದಲಾವಣೆಗಳೂ ಉಂಟಾಗಲಿಲ್ಲವೇ? ಪ್ರಾಂತೀಯ ಹಣಕಾಸಿನ ಯೋಜನೆಯನ್ನು ಆಚರಣೆಯಲ್ಲಿ ತಂದದ್ದರಿಂದ ಸಾಮ್ರಾಜ್ಯದ ಹಣಕಾಸಿನ ವ್ಯವಸ್ಥೆಯಲ್ಲಿ ಬದಲಾವಣೆಗಳಾದುವೆಂಬುದನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ ಮತ್ತು ತತ್ಪರಿಣಾಮವಾಗಿ ಕೆಲವೊಂದು ಮೂಲಭೂತ ಬದಲಾವಣೆಗಳಾದವೆಂದು ಒತ್ತಿ ಹೇಳುವುದೂ ಅಷ್ಟೇ ಕಷ್ಟದ ಕೆಲಸ. ಪ್ರಾಂತೀಯ ಹಣಕಾಸಿನ ಪದ್ಧತಿಯನ್ನು ಜಾರಿಗೊಳಿಸಿದ್ದರಿಂದ ಹೇಳಿಕೊಳ್ಳಬಹುದಾದಂತಹ ಎರಡು ಬದಲಾವಣೆಗಳು ಮಾತ್ರ ಆದವೆಂದು ಹೇಳಬಹುದು:–

೧) ೧೮೭೦ರ ಪೂರ್ವದಲ್ಲಿ ಎಲ್ಲ ಸೇವೆಗಳ ಬಾಬ್ತಿನಲ್ಲಿ ಉಳಿದ ಹಣ, ಹಣಕಾಸಿನ ವರ್ಷದ ಕೊನೆಗೆ ಭಾರತ ಸರ್ಕಾರಕ್ಕೆ ಮರಳಿ ಹೋಗುತ್ತಿತ್ತು. ೧೮೭೦ರ ನಂತರ ಪ್ರಾಂತೀಯ ಸರ್ಕಾರಗಳಿಗೆ ವಹಿಸಿಕೊಟ್ಟ ಸೇವೆಗಳ ಮೇಲೆ ಖರ್ಚಾಗದೆ ಉಳಿದ ಹಣವು, ಅವರಲ್ಲಿಯೇ ಉಳಿದು ಅದರ ಮುಂದಿನ ವರ್ಷದ ಸಂಪನ್ಮೂಲಗಳ ಭಾಗವಾಗುತ್ತಿತ್ತು.

೨) ೧೮೭೦ರ ಮೊದಲು ಎಲ್ಲ ಸೇವೆಗಳ ಮೇಲಿನ ಆಯವ್ಯಯ ಪಟ್ಟಿಯ ಅಂದಾಜುಗಳು ಭಾರತ ಸರ್ಕಾರದಿಂದ ಮಂಜೂರಾತಿ ಪಡೆಯಬೇಕಾಗಿತ್ತು ಮತ್ತು ಕೇಂದ್ರ ಸರ್ಕಾರದ ಪೂರ್ವ ಮಂಜೂರಾತಿ ಇಲ್ಲದೆ ಪ್ರಾಂತ್ಯಗಳು ಬೇರೆಬೇರೆ ಅನುದಾನದ ಹಣದಲ್ಲಿ ಮರು ಹೊಂದಾಣಿಕೆ ಮಾಡಿಕೊಳ್ಳಲು, ಆವಶ್ಯಕವೆನಿಸಿದಾಗಲೂ ಸಾಧ್ಯವಿರಲಿಲ್ಲ. ೧೮೭೦ರ ನಂತರ ಸಾಮ್ರಾಜ್ಯದ ಖಜಾನೆಯಲ್ಲಿ ತಮ್ಮ ಖಾತೆಯಲ್ಲಿರುವ ಮೊತ್ತದ ಮಿತಿಯ ಒಳಗಡೆ ತಮ್ಮ ನಿರ್ವಹಣೆಗೆ ಬಿಟ್ಟುಕೊಟ್ಟ ಸೇವೆಗಳಲ್ಲಿ ತಮ್ಮ ವಿವೇಚನೆಯ ಪ್ರಕಾರ ಹಾಗೆ ಹಣವನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ಪ್ರಾಂತ್ಯಗಳಿಗೆ ಸ್ವಾತಂತ್ರ್ಯ ನೀಡಲಾಯಿತು.[೧] ಆದರೆ ನಿಯಮದ ಪ್ರಕಾರ ತಮ್ಮ ನಿರ್ವಹಣೆಗೆ ವಹಿಸಿದ ಸೇವೆಗಳನ್ನು ಅವುಗಳ ಆಡಳಿತಾತ್ಮಕ ಕ್ಷಮತೆಯನ್ನು ಕಾಯ್ದುಕೊಂಡು ಹೋಗಬೇಕಾಗುತ್ತಿತ್ತು. ಅದೇ ರೀತಿಯಾಗಿ ೧೮೭೦ರ ನಂತರ ತಮ್ಮ ಒಟ್ಟು ವೆಚ್ಚವು ಆಯವ್ಯಯ ಪಟ್ಟಿಯ ಅಂದಾಜಿಗಿಂತ ಹೆಚ್ಚಾಗದಂತೆ

---

೧. ಇದರಿಂದ ವಿವಿಧ ಸೇವೆಗಳಿಗಾಗಿ ವಿತರಿಸಲಾದ ಕೊಡುಗೆಗಳಲ್ಲಿ ಏನಾದರೂ ವಸ್ತುಶಃ ಬದಲಾವಣೆಯಾಯಿತೇ ಎಂಬುದು ಸಂಶಯಾಸ್ಪದ. ಅಂದಿನ ಮದರಾಸು ಗವರ್ನರರಾಗಿದ್ದ ದಿ. ಲಾರ್ಡ್ ಹೋಬರ್ಟ್ ಅವರು ಪ್ರಾಂತೀಯ ನಿಧಿಯಲ್ಲಿ ರಸ್ತೆಗಳಿಗಾಗಿ ನಿಗದಿಗೊಳಿಸಲಾಗಿದ್ದ ನಿಧಿಯನ್ನು ಶಿಕ್ಷಣಕ್ಕಾಗಿ ಬಳಸಬಹುದೆಂದು ತಮ್ಮ ಡಿಸೆಂಬರ್ ೧೦, ೧೮೭೪ರ ಸರ್ಕಾರದ ಪತ್ರದಲ್ಲಿ ಮಾಡಿದ್ದ ಸೂಚನೆಯ ಮೇಲೆ ಸೆಕ್ರೆಟರಿ ಆಫ್ ಸ್ಟೇಟ್‌ರವರು ಹೀಗೆ ಬರೆದರು. "ಆದಾಯದ ಪ್ರಾಂತೀಯ ಆಡಳಿತವೆಂದು ಕರೆಯಲಾಗುತ್ತಿರುವ ತತ್ವಗಳೊಂದಿಗೆ ಇದನ್ನು ಸರಿಹೊಂದಿಸಲು ನನಗೆ ಸಾಧ್ಯವಾಗುತ್ತಿಲ್ಲ. ವಹಿಸಿಕೊಡಲಾದ ಸೇವೆಗಳು ಮತ್ತು ಅವುಗಳಿಗೆ ನಿಗದಿಗೊಳಿಸಲಾದ ಖರ್ಚುಗಳ ನಡುವಣ ಪ್ರಮಾಣವನ್ನು ಯಾವಾಗಲೂ ಕಾಯ್ದುಕೊಂಡು ಬರಬೇಕೆಂದು ನೀವು ಹೇಳುತ್ತಿಲ್ಲ. ಆದರೆ ಈ ಎಲ್ಲಾ ಇಲಾಖೆಗಳನ್ನು ಯಾವಾಗಲೂ ಅತ್ಯಂತ ದಕ್ಷ ಮತ್ತು ಪ್ರಾಮಾಣಿಕ ರೀತಿಯಲ್ಲಿ ನಡೆಸಿಕೊಂಡು ಹೋಗಬೇಕು ಮತ್ತು ಒಂದಕ್ಕಾಗಿ ಇನ್ನೊಂದನ್ನು ಬಲಿ ಕೊಡಬಾರದು ಎಂಬ ಶ್ರೀಮಾನ್ ಸಿಮ್‌ರವರೊಂದಿಗೆ ನನ್ನ ಸಂಪೂರ್ಣ ಸಹಮತವಿದೆ. ಈಗ ಪ್ರಸ್ತಾಪಿಸಲಾಗುತ್ತಿರುವ ಹೊಸ ಹಣಕಾಸು ವ್ಯವಸ್ಥೆಯನ್ನು ಅಲ್ಲಿಯವರೆಗೆ ಸ್ಥಾಪಿತವಾಗಿದ್ದ ಭಾರತದ ಎಲ್ಲಾ ಸರ್ಕಾರಗಳೊಂದಿಗೆ ಮತ್ತು ಗೃಹ ಖಾತೆಯೊಂದಿಗೆ ಚರ್ಚಿಸಲಾಗಿತ್ತು. ಈ ಎಲ್ಲಾ ಚರ್ಚೆಗಳಲ್ಲಿ ಭಾರತದ ಕೆಲವು ಭಾಗಗಳಲ್ಲಿ ರಸ್ತೆಗಳ ನಿರ್ಮಾಣವನ್ನು ನಿಲ್ಲಿಸಬೇಕೆಂಬ ಸೂಚನೆ ಬರಲೇ ಇಲ್ಲ, ಹಾಗೆ ಬಂದಿದ್ದರೂ ಅಂತಹ ಬದಲಾವಣೆ ಆಗುತ್ತಿತ್ತೆಂಬುದು ಸಂಶಯಾಸ್ಪದ."

ಅನುದಾನದ ಹಣದಲ್ಲಿ ಮರು ಹೊಂದಾಣಿಕೆ ಮಾಡಲು, ಪ್ರಾಂತೀಯ ಸರ್ಕಾರಗಳಿಗೆ ಸ್ವಾತಂತ್ರ್ಯವಿತ್ತು. ಇದು ಹಿಂದೆ ಇರಲಿಲ್ಲ.

ಸ್ವರೂಪದ ದೃಷ್ಟಿಯಿಂದ ಪ್ರಾಂತ್ಯಗಳ ಹಾಗೂ ಭಾರತ ಸರ್ಕಾರದ ನಡುವಿನ ಹಣಕಾಸಿನ ಸಂಬಂಧವನ್ನು, ಸಂರಕ್ಷಣಾ ಹಕ್ಕು ತಂದೆಯ ಸುಪರ್ದಿನಲ್ಲಿದ್ದ ಹಿಂದೂ ಅವಿಭಕ್ತ ಕುಟುಂಬಕ್ಕೆ ಹೋಲಿಸಬಹುದು. ೧೮೭೦ರ ಪೂರ್ವದಲ್ಲಿ ಎರಡರ ನಡುವಿನ ಸಾಮ್ಯತೆ ಹೆಚ್ಚು ಕಡಿಮೆ ಯಥಾರ್ಥವಾಗಿತ್ತು. ಕೇಂದ್ರ ಅಥವಾ ಪ್ರಾಂತೀಯ ನಿರ್ವಹಣೆಗೊಳಪಟ್ಟ ಎಲ್ಲ ವಿಭಾಗಗಳೂ, ತಮ್ಮ ಪಾಲುಗಳ ಮೇಲೆ ಯಾವ ಮಿತಿಯನ್ನೂ ವಿಧಿಸಿಕೊಳ್ಳದೆ, ಭಾರತದ ಆದಾಯಗಳನ್ನು ಜೊತೆಯಾಗಿ ಹಿಂದೂ ಕುಟುಂಬದ ಆಸ್ತಿಯಂತೆಯೇ ಅನುಭೋಗಿಸುತ್ತಿದ್ದವು. ೧೮೭೦ರ ನಂತರ ಆದ ಒಂದೇ ಒಂದು ಬದಲಾವಣೆಯೆಂದರೆ, ಇಂತಹ ಸಹಪಂಕ್ತಿ ಭೋಜನ ಕೊನೆಗೊಳಿಸಿ ಆವಶ್ಯಕತೆಗಳಿಗೆ ತಕ್ಕಂತೆ ಪ್ರತಿಯೊಬ್ಬರ ಪಾಲಿಗೆ ಇತಿಮಿತಿಗಳನ್ನು ಹಾಕಿದ್ದು, ಯಾವ ಒಬ್ಬ ಸದಸ್ಯನೂ ತನ್ನ ಖಾತೆಯಲ್ಲಿ ಇಡಲಾದ ಮೊತ್ತಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳಲು ಬಾರದಂತೆ ಕುಟುಂಬದ ಮುಖ್ಯಸ್ಥನಾದ ಭಾರತ ಸರ್ಕಾರವು ಬೇರೆಬೇರೆ ಖಾತೆಗಳನ್ನು ತೆಗೆದರೂ ಈ ವ್ಯವಸ್ಥೆ ಅವಿಭಕ್ತ ಕುಟುಂಬದ ವ್ಯವಸ್ಥೆಯಂತೆಯೇ ಉಳಿಯಿತು.

ಈ ಪರಿಣಾಮಗಳಿಗಾಗಿ ಈ ಕಷ್ಟಗಳನ್ನು ನಿಭಾಯಿಸುವುದು ಸಮಂಜಸವಾಗಿದ್ದಿತೇ? ಪ್ರಾಂತೀಯ ಹಣಕಾಸಿನ ಪರಿಣಾಮದಿಂದಾಗಿ ಸಾಧಿಸಿದ ಫಲಗಳ ಮೇಲೆ ಬೇರೆ ಬೇರೆ ಅಭಿಪ್ರಾಯ ವ್ಯಕ್ತಪಡಿಸಲಾಗಿದೆ. ೧೮೭೦ರ ವ್ಯವಸ್ಥೆಯ ಉದಯದ ಹಿನ್ನೆಲೆಯ ಬೆಳಕಿನಲ್ಲಿ ನಾವು ಪರಿಣಾಮಗಳನ್ನು ಪರೀಕ್ಷಿಸಿದರೆ, ನಿರೀಕ್ಷಿಸಿದ ಆಶಯಗಳು ನಿಷ್ಫಲವಾದವೆಂದು ಹೇಳಲಿಕ್ಕಾಗದು. ಈ ವ್ಯವಸ್ಥೆಯನ್ನು ಸರಿಯಾಗಿ ಅರಿಯಲಾಗದೆ ಕೆಲವರು ಈ ವ್ಯವಸ್ಥೆಯ ಪ್ರವರ್ತಕರ ಉದ್ದೇಶಗಳಿಗೆ ಹೊರತಾದ ಉದ್ದೇಶಗಳನ್ನು ಅದಕ್ಕೆ ಆರೋಪಿಸಿ ಇಲ್ಲಸಲ್ಲದ ಟೀಕೆಗಳನ್ನು ಮಾಡಿದರು. ಆದರೆ ಈ ತಪ್ಪು ಕಲ್ಪನೆಗಳನ್ನು ದೂರಮಾಡಿ ೧೮೭೦ರಲ್ಲಿ ಪ್ರಾಂತೀಯ ಸರ್ಕಾರಗಳಿಗೆ ಬೇಕಾಗಿದ್ದದ್ದು ಸ್ವಾತಂತ್ರ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಬೇಕಾಗಿದ್ದದ್ದು ಸ್ಥಿರತೆಯೆಂಬುದನ್ನು ಗಮನದಲ್ಲಿಟ್ಟುಕೊಂಡರೆ ಸಾಮ್ರಾಜ್ಯ ಹಾಗೂ ಸಂಯುಕ್ತ ರಾಜ್ಯದ ನಡುವಿನ ಈ ಮರು ಹೊಂದಾಣಿಕೆಯನ್ನು ನಿರುಪಯುಕ್ತ ಪ್ರಯೋಗವೆಂದು ಯಾರೂ ಹೇಳಲಾರರು. ಪ್ರಾಂತ್ಯಗಳು ಪಡೆದ ಸ್ವಾತಂತ್ರ್ಯ ಎಷ್ಟೆಂಬುದನ್ನು ತಿಳಿಯಬೇಕಾದರೆ ೧೮೭೦ರ ಮೊದಲು ಬಂಗಾಲದ ಗವರ್ನರ್‌ನಿಗೆ "ಸಾರ್ವಜನಿಕ ಸೇವಕನ ಭತ್ಯೆಯಲ್ಲಿ ಬದಲಾವಣೆ ಮಾಡುವ, ಶಾಲೆಗಳನ್ನು ಸ್ಥಾಪಿಸಲು ಅನುಮತಿ ನೀಡುವ ಅಥವಾ ಒಬ್ಬ ಕಾವಲುಗಾರನ ಪಗಾರವನ್ನು ಒಂದು ರೂಪಾಯಿಯಷ್ಟು ಹೆಚ್ಚಿಸುವ ಅಧಿಕಾರವಿರಲಿಲ್ಲ ಎಂಬುದನ್ನು ಗಮನಿಸಬೇಕು.[೧]

ಅದೇ ರೀತಿಯಾಗಿ ಭಾರತದ ಪರಿಷತ್ತಿನ (Council) ಮತವಿಲ್ಲದೆ ಬಾಂಬೆಯ ಗವರ್ನರ್ ಒಂದು ಕೀಲಿಯನ್ನು ಮಾಡಿಸಲೂ ಸಾಧ್ಯವಿರಲಿಲ್ಲ.[೨] ೧೮೭೦ಕ್ಕೆ ಮೊದಲು, ತಮ್ಮ ಸೀಮಿತ ಆದಾಯದಿಂದ ನಲುಗುತ್ತಿದ್ದ ಪ್ರಾಂತೀಯ ಸರ್ಕಾರಗಳು ಮುಂದಿಡುತ್ತಿದ್ದ ತಮ್ಮ ಬೇಡಿಕೆಗಳನ್ನು– ಅಂತಹ ಬೇಡಿಕೆಗಳು, ಯಾವುದಾದರೂ ಒಂದು ಖಾತೆಗಾಗಿ ಬೇಕಿರುವ ನಿಕೃಷ್ಟ ಕಸದ ಬುಟ್ಟಿಯಿಂದ ಮೊದಲುಗೊಂಡು ಗುರುತರವಾದ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯವರೆಗಿನ ವ್ಯಾಪ್ತಿಯದಾಗಿರುತ್ತಿದ್ದವು – ತನ್ನ ಮುಂದಿಟ್ಟಾಗ,

---

೧. *ಕಲ್ಕತ್ತಾ ರಿವ್ಯೂ*, ಸಂ. ೩, ಪು. ೧೬೯.

೨. 'ರಿಪೋರ್ಟ್ ಆಫ್ ದಿ ಕಮಿಟಿ ಆನ್ ದಿ ಅಫೇರ್ಸ್ ಆಫ್ ದಿ ಈಸ್ಟ್ ಇಂಡಿಯಾ ಕಂಪೆನಿ', ೧೮೫೨, ಸಂ. ೧೧.

ಭಾರತ ಸರ್ಕಾರವು ಅವುಗಳಿಗೆ ಮಂಜೂರಾತಿ ನೀಡಬೇಕಾದರೆ ಅಥವಾ ನಿರಾಕರಿಸಬೇಕಾದರೆ ಎಂತಹ ಇಕ್ಕಟ್ಟಿನ ಪರಿಸ್ಥಿತಿಯನ್ನು ಎದುರಿಸುತ್ತಿತ್ತು ಎಂಬುದನ್ನು ಅರ್ಥಮಾಡಿಕೊಳ್ಳದೆ ಹೋದರೆ, ಈ ವ್ಯವಸ್ಥೆಯಿಂದ ದೊರಕಿದ ಸ್ಥಿರತೆಯ ಮಹತ್ವವು ಅರಿವಿಗೆ ಬರುವುದಿಲ್ಲ. ತಮ್ಮ ಸಣ್ಣ ಸಣ್ಣ ಬೇಡಿಕೆಗಳಿಗೂ ಕೇಂದ್ರದ ಮೇಲೆ ಅವಲಂಬಿತವಾಗಿದ್ದ ಪ್ರಾಂತೀಯ ಸರ್ಕಾರಗಳು ಹೊಸ ವ್ಯವಸ್ಥೆಯಿಂದಾಗಿ, ತಮ್ಮ ಸಮಯ ಹಾಗೂ ಅನಾವಶ್ಯಕ ಭಾವನೆಗಳಿಂದ ಮುಕ್ತವಾಗಿದ್ದವು. ಹೇಗೆ ಮಾಡಿದರೂ ತಪ್ಪಾದೀತೆಂಬ ಹೆದರಿಕೆಯಿಂದಿರುತ್ತಿದ್ದ ಸಾಮ್ರಾಜ್ಯ ಸರ್ಕಾರವೂ ಚಿಕ್ಕಪುಟ್ಟ ಬೇಡಿಕೆಗಳನ್ನು ಮಂಜೂರು ಮಾಡುವ ಹಾಗೂ ತಿರಸ್ಕರಿಸುವ, ಕೆಲಸದಿಂದ ಮುಕ್ತವಾಯಿತು. ಈ ಪದ್ಧತಿ ಪ್ರಾಂತೀಯ ಸರ್ಕಾರಗಳಿಗೆ ಸ್ವಾತಂತ್ರ್ಯ ಹಾಗೂ ಭಾರತ ಸರ್ಕಾರಕ್ಕೆ ಸ್ಥಿರತೆಯನ್ನು ಕೊಟ್ಟದ್ದಲ್ಲದೆ, ಸಾಮ್ರಾಜ್ಯ ಪದ್ಧತಿಗೆ ಕೇಡೆನಿಸಿದ, ಬೇಜವಾಬ್ದಾರಿ ಮತ್ತು ದುಂದುವೆಚ್ಚದ ಬದಲು ಜವಾಬ್ದಾರಿ ಹಾಗೂ ಮಿತವ್ಯಯವನ್ನು ತಂದಿತು. ಏಕೆಂದರೆ ಪ್ರಾಂತೀಯ ಸರ್ಕಾರಗಳ ನಿಧಿಗೆ ಮಿತಿಯನ್ನು ಹಾಕುವಲ್ಲಿ ಭಾರತ ಸರ್ಕಾರವು ತನಗೂ ಮಿತಿಯನ್ನು ಹಾಕಿಕೊಂಡಿತು. ಪ್ರಾಂತೀಯ ಹಣಕಾಸಿನ ಟೀಕಾಕಾರರನ್ನು ಈ ಫಲಗಳು ಸಮಾಧಾನಪಡಿಸಲಿಲ್ಲ. ಬೇರೆ ದಿಕ್ಕಿನಲ್ಲಿ ಅದರಿಂದ ಇನ್ನೂ ಹೆಚ್ಚಿನದನ್ನು ಅವರು ಅಪೇಕ್ಷಿಸುತ್ತಿದ್ದರು. ಆದರೆ ಪ್ರಾಂತೀಯ ಹಣಕಾಸಿನ ವ್ಯವಸ್ಥೆ ತನ್ನ ವ್ಯೂಹದಿಂದ ಸ್ವತಂತ್ರವಾದಾಗ ಮಾತ್ರ ಇದು ಸಾಧ್ಯ. ಪ್ರಾಂತೀಯ ಹಣಕಾಸು ಸಾಮ್ರಾಜ್ಯ ಹಣಕಾಸಿನ ಭಾಗವಾಗಿರುವವರೆಗೆ, ಅದರಿಂದ ಸಿಗುತ್ತಿರುವ ಲಾಭಗಳಿಗಿಂತ ಹೆಚ್ಚಿನ ಲಾಭವನ್ನು ಅದು ಕೊಡಲು ಸಾಧ್ಯವಿರಲಿಲ್ಲ. ಆದರೂ ಸಿಕ್ಕಿದ ಲಾಭಗಳು ತೀರಾ ಕಡಿಮೆಯೇನಲ್ಲ.

ಪ್ರಾಂತೀಯ ಸರ್ಕಾರದ ಸ್ವರೂಪವನ್ನು ಬದಲಿಸಲು ಸಾಧ್ಯವಿಲ್ಲದಿದ್ದರೂ, ಅದರ ಜವಾಬ್ದಾರಿಯನ್ನು ಪೂರೈಸಲು ಆತಂಕವಾಗದ ಹಾಗೆ, ಭಾರತ ಸರ್ಕಾರವು ಅದರ ಮೇಲೆ ಹೇರಿದ ಮಿತಿಗಳನ್ನು ಕಡಿಮೆ ಮಾಡಿ, ಅದರ ಪರಿಮಿತಿಯನ್ನು ವಿಸ್ತರಿಸುವುದು ಸಾಧ್ಯವಾಗುತ್ತಿತ್ತೇ ಎಂಬ ಪ್ರಶ್ನೆ ಉಳಿಯುತ್ತದೆ. ಈ ದೃಷ್ಟಿಯಿಂದ ಇದೇ ಪ್ರಶ್ನೆಯನ್ನು ಮುಂದಿನ ಅಧ್ಯಾಯದಲ್ಲಿ ಪರೀಕ್ಷಿಸಲಾಗುವುದು.

# ಅಧ್ಯಾಯ ೯

# ಪ್ರಾಂತೀಯ ಹಣಕಾಸಿನ ವ್ಯಾಪ್ತಿಯ ವಿಸ್ತರಣೆ

ಪ್ರಾಂತೀಯ ಹಣಕಾಸಿನ ವ್ಯವಸ್ಥೆ ಅನ್ಯಾಯವಾದದ್ದು ಎಂಬ ತಕರಾರು ಇತ್ತು. ಏಕೆಂದರೆ ತಮ್ಮ ಆದಾಯ ಮೂಲಗಳನ್ನು ಸುಧಾರಿಸಿಕೊಳ್ಳಲಾಗದ ಪ್ರಾಂತ್ಯಗಳಿಗೆ ಹಣಕಾಸಿನ ವ್ಯವಸ್ಥೆಯ ಪರಿಷ್ಕರಣದಿಂದ ಪ್ರಾಂತ್ಯಗಳ ನಿರ್ವಹಣೆಗೆ ಕೊಡಮಾಡಿದ ಹೆಚ್ಚುವರಿಯನ್ನು ಕೇಂದ್ರದ ಬೊಕ್ಕಸದ ಆವಶ್ಯಕತೆಗಳನ್ನು ಪೂರೈಸುವ ನೆಪದಲ್ಲಿ, ಕೇಂದ್ರ ಸರ್ಕಾರವೇ ಮುಟ್ಟುಗೋಲು ಹಾಕಿಕೊಳ್ಳುತ್ತಿತ್ತು. ಪ್ರಾಂತೀಯ ಹಣಕಾಸಿನ ಮೊದಲ ವರ್ಷಗಳಲ್ಲಿ ಈ ತಕರಾರಿನಲ್ಲಿ ಸಾಕಷ್ಟು ತಥ್ಯವಿತ್ತು. ನಿಧಿಗಳ ಪಾಲಕನಾದದ್ದರಿಂದ, ಕೇಂದ್ರ ಸರ್ಕಾರವು ಸಾಮ್ರಾಜ್ಯ ಸೇವೆಗಳ ಅನುಕೂಲಗಳಿಗೆ, ಪ್ರಾಂತೀಯ ಸೇವೆಗಳ ಅನುಕೂಲಗಳಿಗಿಂತ ಹೆಚ್ಚಿನ ಮಹತ್ವ ಕೊಡುತ್ತಿತ್ತು. ಪ್ರಾಂತೀಯ ಹಣಕಾಸಿನ ಮೊದಲ ವರ್ಷಗಳಲ್ಲಿ ಹಣಕಾಸು ಹಂಚುವ ವಿಷಯದಲ್ಲಿದ್ದ ವಿಚಾರವೆಂದರೆ,[೧] ಹಳೆಯ ವ್ಯವಸ್ಥೆಯ ಪ್ರಕಾರ ಕೊಡಮಾಡಿದ ಆದಾಯಗಳನ್ನು ಪ್ರಾಂತೀಯ ಸರ್ಕಾರಗಳ ಹತೋಟಿಯಲ್ಲಿರುವ ಸೇವೆಗಳ ಮೇಲೆ ಹೇಗೆ ವೆಚ್ಚಮಾಡಲಾಗುತ್ತದೆ ಎಂಬುದಾಗಿರದೇ, ವ್ಯವಸ್ಥೆಯ ಅವಧಿಯಲ್ಲಿ ತನ್ನ ಆದಾಯ ಮೂಲಗಳ ಮೇಲೆ ಬೇಡಿಕೆಗಳು ಹೆಚ್ಚಾಗುವುದನ್ನು ಗಮನಿಸಿ, ಎಷ್ಟು ಸಾಮಾನ್ಯ ಆದಾಯಗಳನ್ನು ಕೇಂದ್ರ ಸರ್ಕಾರವು ಮುಂದಿನ ಅವಧಿಗಾಗಿ ಪ್ರಾಂತೀಯ ಸರ್ಕಾರಗಳಿಗೆ ಅವುಗಳ ಆಡಳಿತವನ್ನು ನಡೆಸಲು ಬೇಕಾಗುವ ವೆಚ್ಚವನ್ನು ಭರಿಸಲು, ಬಿಟ್ಟುಕೊಡಲು ಸಾಧ್ಯವೆಂಬುದು. ಕೇಂದ್ರ ಸರ್ಕಾರದ ಈ ಧೋರಣೆ, ಆ ಅವಧಿಯ ಹಣಕಾಸಿನ ಕೊರತೆಯ ದೃಷ್ಟಿಯಿಂದ ಸಮರ್ಥನೀಯವಾಗಿದ್ದರೂ, ಹಣಕಾಸಿನ ಪರಿಸ್ಥಿತಿ ಸುಧಾರಿಸಿದಂತೆ, ಮುಂದಿನ ಅವಧಿಯಲ್ಲಿ ಬದಲಾಯಿತು.

ತುರ್ತು ಪರಿಸ್ಥಿತಿಯನ್ನು ಹೊರತುಪಡಿಸಿ, ಉಳಿದಂತೆ "ಪ್ರಾಂತೀಯ ಹಾಗೂ ಕೇಂದ್ರ ಸರ್ಕಾರಗಳ ನಡುವೆ ಉತ್ಪನ್ನದ ಹಂಚುವಿಕೆಯನ್ನು, ಕೇಂದ್ರ ಸರ್ಕಾರದ ಆವಶ್ಯಕತೆಗಳ ಮೇಲಿಂದಲ್ಲದೆ, ಪ್ರಾಂತ್ಯವು ತನ್ನ ಸೇವೆಗಳ ಮೇಲೆ ಸಾಮಾನ್ಯವಾಗಿ ಮಾಡಬಹುದಾದ ವೆಚ್ಚವನ್ನು ಅವಲಂಬಿಸಿ ಮಾಡಲಾಯಿತು. ವ್ಯವಸ್ಥೆಯ ಒಪ್ಪಂದದ ವೇಳೆಯಲ್ಲಿ ತೆಗೆದುಕೊಂಡ ಮೊದಲ ಹೆಜ್ಜೆಯೆಂದರೆ, ಪ್ರಾಂತ್ಯಗಳ ಆವಶ್ಯಕತೆಗಳನ್ನು ತಿಳಿದುಕೊಂಡು, ಅವುಗಳನ್ನು ಪೂರೈಸಲು ಆದಾಯ ಒದಗಿಸಿಕೊಟ್ಟಿದ್ದು. ಪ್ರಾಂತ್ಯಗಳ ಮಿಕ್ಕುಳಿದ ಉತ್ಪನ್ನವು ಮಾತ್ರ ಚಕ್ರಾಧಿಪತ್ಯದ ಖಜಾನೆಗೆ ಸೇರುತ್ತಿತ್ತು."[೨]

ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ಆವಶ್ಯಕತೆಗಳ ಪ್ರಾಮುಖ್ಯತೆಯ ಬದಲಾವಣೆಯಿಂದ ಆದಾಯದ ನ್ಯಾಯಸಮ್ಮತವಲ್ಲದ ಹಂಚಿಕೆ ಬಗೆಗಿನ ತಕರಾರು ಇಲ್ಲವಾಯಿತು ಮತ್ತು ವ್ಯವಸ್ಥೆಗಳು ಕಾಯಂ ಎಂದು ಸಾರಿದಾಗ, ಪ್ರತಿಕೂಲ ಪರಿಶೀಲನೆಯ ಹೆದರಿಕೆ ಇಲ್ಲವಾಯಿತು. ಆದರೆ ಪ್ರಾಂತೀಯ ಹಣಕಾಸಿನ ವ್ಯವಸ್ಥೆಗೆ ಮತ್ತೊಂದು ಮುಖ್ಯ ತಕರಾರು ಉಳಿಯಿತು. ಅದು ಏನೆಂದರೆ, ಅದರ ಮೇಲೆ

---

೧. ಹಣಕಾಸು ಇಲಾಖೆಯ ನಿರ್ಣಯ ಸಂ. ೪೫೮, ಜನವರಿ ೨೮, ೧೮೮೧

೨. ಹಣಕಾಸು ಇಲಾಖೆ ನಿರ್ಣಯ ಸಂ. ೨೭, ಮೇ ೧೮, ೧೯೧೨

ಹೇರಿದ ಮಿತಿಗಳು, ಪ್ರಾಂತೀಯ ಸರ್ಕಾರದ ಕಾರ್ಯವ್ಯಾಪ್ತಿಯನ್ನು ಅದಕ್ಕೆ ವಹಿಸಿಕೊಟ್ಟ ಕ್ಷೇತ್ರಕ್ಕೆ ಸೀಮಿತಗೊಳಿಸಿ ಅದನ್ನು ಶೂನ್ಯತೆಗೆ ಇಳಿಸಬಹುದು ಎಂಬುದು.

ಭಾರತ ಸರ್ಕಾರವು ಪ್ರಾಂತೀಯ ಸರ್ಕಾರಗಳಿಗೆ "ನಾವು ನಿಮಗೆ ಕೊಡಲು ಸಾಧ್ಯವಾದದನ್ನು ತೆಗೆದುಕೊಳ್ಳಿ, ಮಿಕ್ಕಿದ್ದಕ್ಕೆ ಕರಾಕರಣೆಯ ಅಧಿಕಾರವನ್ನು ತೆಗೆದುಕೊಂಡು ಅದನ್ನು ಸಂಗ್ರಹಿಸಿರಿ. ಏಕೆಂದರೆ ಕೆಲವೊಂದು ವಿಷಯಗಳನ್ನು ಸಾಮ್ರಾಜ್ಯದ ಕರಾಕರಣೆಗಿಂತ ಸ್ಥಾನಿಕ ಕರಾಕರಣೆಯನ್ನು ಸ್ಥಾನಿಕ ಮಟ್ಟದಲ್ಲಿ ಚೆನ್ನಾಗಿ ನೋಡಿಕೊಳ್ಳಬಹುದು" ಎಂದು ಈ ವ್ಯವಸ್ಥೆ ಜಾರಿಗೆ ಬಂದಾಗ ಹೇಳಿದ್ದರೆ ಪ್ರಾಂತ್ಯಗಳಿಗೆ ಕರಾಕರಣೆಯ ಸ್ವಾತಂತ್ರ್ಯವನ್ನು ಕೊಡದೆ ಇರುವುದಕ್ಕೆ ಕಾರಣವಿರಲಿಲ್ಲ. ಕೆಲವೊಂದು ಆದಾಯ ಮೂಲಗಳನ್ನು ಪ್ರಾಂತ್ಯಗಳಿಗೆ ಕೊಟ್ಟಿದ್ದೇ ಆಗಿದ್ದರೆ, ಸ್ಥಾನಿಕ ಉಪಯುಕ್ತತೆಯ ಉದ್ದೇಶಗಳಿಗಾಗಿ ಅವುಗಳಿಗೆ ಸಾಲವನ್ನು ಎತ್ತಲು ಅನುಮತಿ ಕೊಡದೆ ಇರುವುದಕ್ಕೆ ಯಾವ ಸಮರ್ಥನೆ ಇದೆ? ಈ ಬಂಧನವು ಅಸಮಾಧಾನಕ್ಕೆಡೆಮಾಡಿಕೊಟ್ಟಿದೆ. ಏಕೆಂದರೆ ಭಾರತದಲ್ಲಿನ ಬಡ ಸ್ಥಾನಿಕ ಸರ್ಕಾರವೂ, ತನ್ನ ಅಧಿಕಾರ ವ್ಯಾಪ್ತಿಯಲ್ಲಿ ಸುಧಾರಣೆಯನ್ನು ಜಾರಿಗೆ ತರಲು, ಸಾಲವನ್ನು ಎತ್ತುವ ಅಧಿಕಾರ ಹೊಂದಿದೆ. ಆದರೆ ಪ್ರಾಂತೀಯ ಸರ್ಕಾರದಂಥ ಪ್ರಮುಖವಾದ ರಾಜ್ಯಾಡಳಿತ ವ್ಯವಸ್ಥೆ ಅಂಥ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಅಯೋಗ್ಯವಾಗಿದೆ ಎಂದು ಭಾವಿಸಲಾಯಿತು. ನಿಜವಾಗಿಯೂ ಇದೊಂದು ದೋಷಪೂರಿತ ಅಡಚಣೆಯೆಂದು ಭಾವಿಸಲಾಯಿತು. ಏಕೆಂದರೆ ಭಾರತ ಸರ್ಕಾರ ಸ್ಥಾನಿಕ ಸರ್ಕಾರಗಳಿಗೆ ಸಾಲಕೊಡುವಾಗ ಭದ್ರತೆಯಾಗಿ ಸ್ವೀಕರಿಸಲು ವಿಶ್ವಾಸಾರ್ಹತೆ ಪಡೆದ ಪ್ರಾಂತೀಯ ಸರ್ಕಾರವು ತನ್ನ ವತಿಯಿಂದ ತನ್ನ ಆಸ್ತಿಯನ್ನು ಅಡವಿಡಲು ವಿಶ್ವಾಸಾರ್ಹತೆ ಪಡೆದಿಲ್ಲವೆಂದು ಪರಿಗಣಿಸಲ್ಪಟ್ಟಿತ್ತು.

ಸಿಬ್ಬಂದಿ ಮತ್ತು ನೌಕರರ ವಿಷಯದಲ್ಲಿ ಪ್ರಾಂತೀಯ ಸರ್ಕಾರಗಳು ಖರ್ಚುಮಾಡುವ ಅಧಿಕಾರದ ಮೇಲೆ ಮಿತಿಗಳನ್ನಿಡಲು ಸಮರ್ಥನೆ ಏನು? ಕೆಲವೊಂದು ಸೇವೆಗಳ ಆಡಳಿತವನ್ನು ಪ್ರಾಂತೀಯ ಸರ್ಕಾರಗಳಿಗೆ ವಹಿಸಿಕೊಟ್ಟಾಗ ಹೊಸ ನೇಮಕಾತಿಗಳನ್ನು ಮಾಡುವ ಅಥವಾ ಹಳೇ ನೇಮಕಾತಿಗಳನ್ನು ತೆಗೆದುಹಾಕುವ ಅಥವಾ ತಮ್ಮ ವಿಭಾಗದ ಸಿಬ್ಬಂದಿಯನ್ನು ಪರಿಷ್ಕರಿಸುವ ವಿಷಯಗಳಲ್ಲಿ ಅವುಗಳನ್ನು ಮಿತಿಗೊಳಪಡಿಸಿದ್ದೇಕೆ? ಪ್ರಾಂತೀಯ ಹಣಕಾಸಿನ ವ್ಯವಸ್ಥೆಯಲ್ಲಿ ತಾವು ನಿರ್ವಹಿಸುತ್ತಿರುವ ಸೇವೆಗಳಿಗೆ ತಾವೇ ಜವಾಬ್ದಾರರಾಗಿದ್ದರೆ, ಆ ಸೇವೆಗಳನ್ನು ಪೂರೈಸುವ ಕಾರ್ಯಭಾರಿಗಳಲ್ಲಿ ಬದಲಾವಣೆ ಮಾಡುವ ಅಧಿಕಾರವನ್ನು ಅವುಗಳಿಗೆ ಏಕೆ ಕೊಡಲಿಲ್ಲ?

ಮುಂದುವರಿದು ಪ್ರಾಂತೀಯ ಮುಂಗಡಪತ್ರಗಳ ತಯಾರಿಕೆ ಹಾಗೂ ಕಾರ್ಯಾಚರಣೆಯ ಮೇಲಿನ ಮಿತಿಗಳಿಗೆ ಸಮರ್ಥನೆಗಳೇನು ಎಂದು ಕೇಳಲಾಯಿತು. ಭಾರತ ಸಾಮ್ರಾಜ್ಯದ ಮುಂಗಡಪತ್ರದಿಂದ ಪ್ರತಿಯೊಂದು ಪ್ರಾಂತಗಳಿಗೆ ಪ್ರತ್ಯೇಕ ಮುಂಗಡಪತ್ರಗಳನ್ನು ಹಂಚಿಕೊಟ್ಟಿದ್ದಾದರೆ, ಪ್ರಾಂತ್ಯಗಳು ತಮ್ಮ ಮುಂಗಡಪತ್ರಗಳನ್ನು ಭಾರತ ಸರ್ಕಾರಕ್ಕೆ ಏಕೆ ಒಪ್ಪಿಸಬೇಕು? ಕೇವಲ ಮಾಹಿತಿ ಕಳಿಸುವ ವಿಷಯವಾಗಿದ್ದರೆ ಈ ಆವಶ್ಯಕತೆಯು ಅತಿ ನಿರುಪಯುಕ್ತವಾಗಿತ್ತು. ಅವರ ಅಂದಾಜುಗಳನ್ನು ಬದಲಿಸುವ ಹಾಗೂ ತಾನು ನಿಶ್ಚಿತಪಡಿಸಿದ ಅನುದಾನಕ್ಕೆ ಹೊಂದಿಕೊಂಡು ಹೋಗಲು ಅವುಗಳನ್ನು ಒತ್ತಾಯಿಸುವ ಹಕ್ಕನ್ನು ಕೇಂದ್ರ ಸರ್ಕಾರವು ಏಕೆ ಇಟ್ಟುಕೊಂಡಿತು? ಪ್ರಾಂತೀಯ ಮುಂಗಡಪತ್ರದ ಪರಿಶೀಲನೆಯು ಪ್ರಾಂತ್ಯಗಳ ಮೇಲೆ ತನ್ನ ನೀತಿಯನ್ನು ಹೇರುವ ಹುನ್ನಾರವಾಗಿತ್ತೇ? ಪ್ರಾಂತೀಯ ವ್ಯವಸ್ಥೆಯನ್ನು ಬಲಪಡಿಸುವುದನ್ನು ಮತ್ತು ಒಂದು ಕಾಯಂ ಒಡಂಬಡಿಕೆ ಹೊಂದುವುದನ್ನು ತನ್ನ ಪ್ರಾಥಮಿಕ ಗುರಿಯಾಗಿಟ್ಟುಕೊಂಡ ಪ್ರಾಂತೀಯ ಹಣಕಾಸಿನ ವ್ಯವಸ್ಥೆಯಲ್ಲಿ ಪ್ರವರ್ತನಾಶೀಲತೆ ಹಾಗೂ ಸ್ವಾತಂತ್ರ್ಯಗಳ ವ್ಯಾಪ್ತಿ ಏನಾಗುತ್ತದೆ? ತನ್ನ ಖಾತೆಯಲ್ಲಿಯ

ಹಣವನ್ನು ತೆಗೆದುಕೊಂಡು, ಹೆಚ್ಚಿನ ಅಂದಾಜುಗಳನ್ನು ಮರುಹೊಂದಾಣಿಕೆಯಿಂದ ಪೂರೈಸಲು ಬಾರದ ಪರಿಸ್ಥಿತಿಯಲ್ಲಿ ಪೂರಕ ಅನುದಾನಕ್ಕಾಗಿ ಪ್ರಾಂತೀಯ ಸರ್ಕಾರಗಳು ಭಾರತ ಸರ್ಕಾರದ ಬಳಿ ಏಕೆ ಬರಬೇಕು?

ಪ್ರಾಂತೀಯ ಸರ್ಕಾರಗಳನ್ನು ಕಟ್ಟಿಹಾಕಿದ ಮತ್ತು ಪ್ರಾಂತೀಯ ಹಣಕಾಸಿನ ವ್ಯಾಪ್ತಿಯನ್ನು ಕಡಿಮೆ ಮಾಡಿದ ಪ್ರತಿಯೊಂದು ಪ್ರಕ್ರಿಯೆಗೂ ಕೇಂದ್ರ ಸರ್ಕಾರದ ಬಳಿ ನೆಪಗಳು ಸಿದ್ಧವಿರುತ್ತಿತ್ತು.[೧] ಆದಾಯ ಮಿತಿಗಳ ವಿಷಯದಲ್ಲಿ ಭಾರತದ ಆದಾಯಗಳನ್ನು ಸಾಂವಿಧಾನಿಕವಾಗಿ ತಾನು ಹೊಂದಿರುವುದಾಗಿಯೂ ಮತ್ತು ಅವುಗಳ ಸರಿಯಾದ ವಿತರಣೆಗೆ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಸಂಸತ್ತಿಗೆ ತಾನು ಹೊಣೆಗಾರನೆಂದೂ ಅದು ವಾದಿಸಿತು. ಪರಿಸ್ಥಿತಿ ಹೀಗಿದ್ದಾಗ ಪ್ರಾಂತ್ಯಗಳಿಗೆ ಒದಗಿಸಿದ ಆದಾಯ ಮೂಲಗಳನ್ನು ಒಪ್ಪಿಗೆ ಪಡೆಯದ ಸೇವೆಗಳಿಗಾಗಿ, ಪರವಾನಿಗೆ ಪಡೆಯದ ಅನುದಾನಕ್ಕಾಗಿ, ಖರ್ಚುಗಳಿಗಾಗಿ ಪೋಲು ಮಾಡಬಾರದಂತೆ, ಭಾರತ ಸರ್ಕಾರವು ಅವುಗಳನ್ನು ಕೇಳಿದ್ದು ನ್ಯಾಯಸಮ್ಮತ. ಎಲ್ಲ ಸೇವೆಗಳಿಗೆ ತಾನೇ ಜವಾಬ್ದಾರಿ ಹೊಂದಿದ ಕಾರಣ, ಕರ ಹೇರುವ ಅಥವಾ ಸಾಲ ತೆಗೆದುಕೊಳ್ಳುವ ಅಧಿಕಾರದ ವಿಭಜನೆಯಿಂದ ದೇಶದ ಆದಾಯ ಮೂಲಗಳ ನಿರ್ವಹಣೆಯ ತನ್ನ ಸ್ಥಾನವನ್ನು ಭಾರತ ಸರ್ಕಾರವು ಅಶಕ್ತಗೊಳಿಸಿಕೊಳ್ಳಲು ಸಾಧ್ಯವಿರಲಿಲ್ಲ. ಕರಗಳ ವ್ಯಾಪ್ತಿಯು ಭಾರತದಲ್ಲಿ ಸೀಮಿತವಾಗಿದ್ದುದ್ದರಿಂದ ಸ್ಪರ್ಧಾತ್ಮಕ ಅಧಿಕಾರದಿಂದ ಗೊತ್ತುಗುರಿ ಇಲ್ಲದ ಕರಾಕರಣೆಯು, ಸಾಮ್ರಾಜ್ಯದ ಕರಾಕರಣೆಯನ್ನು ಹೆಚ್ಚಿಸಿ, ಅಸಮಾಧಾನಕ್ಕೆ ಕಾರಣವಾಗಬಹುದು ಅಥವಾ ಸಾಮ್ರಾಜ್ಯದ ಕರಾಕರಣೆಯ ವ್ಯಾಪ್ತಿಯನ್ನು ಕಡಿಮೆ ಮಾಡಬಹುದೆಂದು ಆತಂಕಪಡಲಾಯಿತು.[೨] ಅಖಿಲ ಭಾರತದ ಆದಾಯಗಳಿಗೆ ಅಖಿಲ ಭಾರತದ ಆವಶ್ಯಕತೆಗಳು ಆಧಾರವಾಗಿದೆ ಎಂಬ ವಾದವನ್ನು ಮುಂದಿಟ್ಟುಕೊಂಡು ಸಾಲ ಎತ್ತುವ ತನ್ನ ಅಧಿಕಾರವನ್ನು ಭಾರತ ಸರ್ಕಾರವು ಸಮರ್ಥಿಸಿಕೊಳ್ಳುತ್ತಿತ್ತು. ತನ್ನ ಆವಶ್ಯಕತೆಗಳ ಸಲುವಾಗಿ ಕೇಂದ್ರದ ಆದಾಯವನ್ನು ಒತ್ತೆ ಇಡಲು ಕೇಂದ್ರ ಸರ್ಕಾರವು ಯಾವುದೇ ಪ್ರಾಂತೀಯ ಸರ್ಕಾರಕ್ಕೂ ಅವಕಾಶ ಕೊಡಲಿಲ್ಲ. ಈ ಸಾಲ ಪಡೆಯುವ ಅಧಿಕಾರ ಕೊಟ್ಟಿದ್ದಾದರೆ

"ಹುಟ್ಟುವಳಿಯ ಪೂರ್ವದಲ್ಲೇ ಆದಾಯವನ್ನು ಅಡವಿಡುವ ಚಪಲ ಬೆಳೆಯಬಹುದು ಮತ್ತು ಹಿಂದಿನ ಸರ್ಕಾರ ನಿರುಪಯುಕ್ತ ಯೋಜನೆಗಳನ್ನು ಮುಂದುವರಿಸುವ ಅವಸರದಲ್ಲಿದ್ದರೆ ಮುಂದಿನ ಸರ್ಕಾರಗಳು ಹಣದ ಕೊರತೆಯಿಂದ ಅದನ್ನು ಬಳಸಬಹುದು" ಎಂದು ಭಯಪಡಲಾಗಿತ್ತು.[೩]

ಅದೂ ಅಲ್ಲದೆ ದೇಶದ ಕರಾಕರಣೆಯ ಶಕ್ತಿಯಂತೆ ಸಾಲದ ಮಾರುಕಟ್ಟೆಯೂ ಸೀಮಿತವಾಗಿತ್ತೆಂದೂ ಹೇಳಲಾಯಿತು. ಆದ್ದರಿಂದ ತನ್ನ ಸೀಮಿತ ಸಂಪನ್ಮೂಲಗಳನ್ನು ಮೀರಿದ ಬೇಡಿಕೆಯು ಬಂದರೆ ಅಥವಾ ಕಾರಣಾಂತರಗಳಿಂದ ತನ್ನ ಆದಾಯದ ಸೆಲೆಯೇ ಬತ್ತಿ ಹೋಗುವಂತಾದರೆ, ಸಹಜವಾಗಿಯೇ ಸಂಪನ್ಮೂಲಗಳ ನಿರ್ವಾಹಕನು ಅವುಗಳ ವಿತರಣೆಯಲ್ಲಿ ತನ್ನ ವಿವೇಚನೆಯನ್ನು ಬಳಸಲೇ ಬೇಕಾಗುತ್ತದೆ.[೪]

---

೧. ಈ ಸಂಬಂಧದಲ್ಲಿ ಮಾನ್ಯ ಜೆ.ಎಸ್. ಮೆಸ್ಟನ್‌ರವರು 'ರಾಯಲ್ ಕಮಿಷನ್ ಆನ್ ಡೀಸೆಂಟ್ರಲೈಜೇಷನ್'ಗೆ ನೀಡಿದ ಸಾಕ್ಷ್ಯ ನೋಡಿ, ಮಿನಿಟ್ಸ್ ಆಫ್ ಎವಿಡೆನ್ಸ್ ಸಂ. X, ಪು. ೪೪೮೦೭–೪೫೩೬.

೨. ೧೮೭೦–೧೮೭೯ರ ನಡುವೆ ಪ್ರಾಂತ್ಯಗಳು ಸ್ಥಾನಿಕ ಕರಾಕರಣೆಯಲ್ಲಿ ಮುಕ್ತ ಅವಕಾಶ ಹೊಂದಿದಾಗ ಅವೆಲ್ಲವೂ ಈಗಾಗಲೇ ಕರಭಾರದಿಂದ ನರಳುತ್ತಿದ್ದ ಭೂ ಕಂದಾಯವನ್ನೇ ಕಾಯ್ದುಕೊಂಡವು.

೩. 'ಆರ್.ಸಿ.ಡಿ.' ಮಿನಿಟ್ಸ್ ಆಫ್ ಎವಿಡೆನ್ಸ್ ಸಂ. X, ಪು. ೪೫೩೧೦.

೪. ಇಂಡಿಯಾದ ಸಂವಿಧಾನಾತ್ಮಕ ಸುಧಾರಣೆಗಳ ವರದಿ ಸಿಡಿ. ೯೧೦೯ (೧೯೧೮) ಪು. ೯೪. ಇನ್ನು ಮುಂದೆ ಇದನ್ನು ಜಂಟಿವರದಿ ಎಂದು ಕರೆಯಲಾಗುವುದು.

ಸಿಬ್ಬಂದಿ ಹಾಗೂ ನೌಕರರ ಸಲುವಾಗಿ ಖರ್ಚುಮಾಡುವ ಅಧಿಕಾರದ ಮೇಲಿನ ಕೆಲವೊಂದು ಮಿತಿಗಳ ವಿಷಯದಲ್ಲಿ, ಭಾರತ ಸರ್ಕಾರದ ಸಮರ್ಥನೆಯೆಂದರೆ ಮಿತವ್ಯಯ ಮತ್ತು ಏಕರೂಪತೆಗಳ ದೃಷ್ಟಿಯಿಂದ ಅವು ಅವಶ್ಯವೆನಿಸುತ್ತವೆ ಎಂಬುದು. ಆಡಳಿತದ ಕೆಲಸವನ್ನು ಮಾಡುವ ಸಾರ್ವಜನಿಕ ಸೇವೆಗಳ ಸಂಭಾವನೆಯನ್ನು ಮಿತಗೊಳಿಸುವ ಸ್ವಾತಂತ್ರ್ಯವನ್ನು ಪ್ರಾಂತ್ಯಕ್ಕೆ ಕೊಟ್ಟಿದ್ದಾದರೆ, ಸಮಾನ ಕೆಲಸಕ್ಕೆ ಅಸಮಾನ ವೇತನವಾಗುತ್ತದೆಯೆಂದು ವಾದಿಸಲಾಯಿತು. ಅಂಥ ಪರಿಣಾಮ ರಾಜ್ಯದ ಸೇವಕರಲ್ಲಿ ಅಸಂತೃಪ್ತಿಗೆಡೆಮಾಡಿಕೊಡಬಲ್ಲದು. ಒಳ್ಳೆಯ ಆಡಳಿತದ ದೃಷ್ಟಿಯಿಂದ ಇದನ್ನು ತಡೆಯುವುದು ಸರಿ. ಪ್ರಾಂತ್ಯಗಳಿಗೆ ಸಿಬ್ಬಂದಿಯನ್ನು ಪರಿಷ್ಕರಣ ಮಾಡುವ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟಿದ್ದಿದ್ದರೆ, ಇದರಿಂದ ಪ್ರಾಂತ್ಯಗಳ ಪುನರಾವರ್ತಿತ ವೆಚ್ಚಹೆಚ್ಚಿ, ಪ್ರಾಂತ್ಯಗಳ ಹಾಗೂ ಸಾಮ್ರಾಜ್ಯದ ಹಣಕಾಸಿನ ಸ್ಥಿರತೆಗೆ ಗಂಡಾಂತರ ಬರುತ್ತಿತ್ತು. ಏಕೆಂದರೆ ಕೊನೆಯಲ್ಲಿ ಕೇಂದ್ರ ಸರ್ಕಾರವೇ ಪ್ರಾಂತೀಯ ಸರ್ಕಾರಗಳನ್ನು ಸಲಹುವ ಜವಾಬ್ದಾರಿಯನ್ನು ಹೊಂದಿರುತ್ತದೆ.

ಪ್ರಾಂತ್ಯಗಳ ಮುಂಗಡಪತ್ರಗಳ ಸಿದ್ಧತೆಯ ಮತ್ತು ಕಾರ್ಯಾಚರಣೆಯ ಮೇಲಿನ ಹತೋಟಿಯ ವಿಷಯದಲ್ಲಿ ಈ ಪರಿಶೀಲನೆಯಲ್ಲಿ, ಅನಪೇಕ್ಷಿತ ನೀತಿಯನ್ನು ಹಿಡಿತದಲ್ಲಿಡುವ ಉದ್ದೇಶವು ಇರಲಿಲ್ಲ ಎಂದು ಭಾರತ ಸರ್ಕಾರ ವಾದಿಸಿತು.[೧] ಆದರೆ ಪ್ರಾಂತೀಯ ಮುಂಗಡಪತ್ರಗಳಿಗೆ ಭಾರತ ಸರ್ಕಾರದ ಸಂಗಡ ಇದ್ದ ಮೂರು ಪ್ರಮುಖ ಸಂಬಂಧಗಳಿಂದಾಗಿ ಇದು ಅನಿವಾರ್ಯವಾಗಿತ್ತು.

ಅವುಗಳೆಂದರೆ :–

೧) ಪ್ರಾಂತೀಯ ಸರ್ಕಾರಗಳ ಉತ್ಪನ್ನ ಹಾಗೂ ವೆಚ್ಚವನ್ನು ಭಾರತ ಸರ್ಕಾರದ ಮುಂಗಡಪತ್ರ, ವಾರ್ಷಿಕ ಲೆಕ್ಕಪತ್ರದಲ್ಲಿ ಅವುಗಳ ಅವಿಭಾಜ್ಯ ಅಂಗವೆಂಬಂತೆ ಕೂಡಿಸಿಕೊಳ್ಳುವದು.

೨) ಆದಾಯ ಮತ್ತು ವೆಚ್ಚದ ಬಾಬತ್ತುಗಳ ವರ್ಗೀಕರಣದ ಪದ್ಧತಿ.

೩) ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ವ್ಯವಹಾರಗಳಿಗಾಗಿ ಹಣ ಒದಗಿಸುವ ಮಿಶ್ರ ವ್ಯವಸ್ಥೆ ಹೊಂದಿದ ಸಾರ್ವಜನಿಕ ಖಜಾನೆ.

ಪರಸ್ಪರ ಸಂಬಂಧದ ಮೊದಲಿನ ಎರಡು ಅಂಶಗಳ ಪ್ರಕಾರ ಭಾರತ ಸರ್ಕಾರವು ಪ್ರಾಂತೀಯ ಸರ್ಕಾರಗಳ ಮುಂಗಡಪತ್ರದ ಅಂದಾಜುಗಳನ್ನು ಪರೀಕ್ಷಿಸಬೇಕಾಗಿತ್ತು. ವೆಚ್ಚವನ್ನು ಹೆಚ್ಚುವರಿ ಅಂದಾಜುಮಾಡುವ ಮತ್ತು ಆದಾಯವನ್ನು ಕಡಿಮೆ ಅಂದಾಜು ಮಾಡುವ ಸ್ಥಾನಿಕ ಸರ್ಕಾರಗಳ ಪ್ರವೃತ್ತಿಯಿಂದಾಗಿ ಇಂಥ ಬದಲಾವಣೆ ಮಾಡುವ ಅಧಿಕಾರ ಅವಶ್ಯವಾಗಿತ್ತೆಂದು ವಾದಿಸಲಾಯಿತು.[೨] ಯಥಾರ್ಥಗಳಿಗಿಂತ ಅಂದಾಜುಗಳು ತೀರ ಭಿನ್ನವಾದರೆ ಖಜಾನೆಯ ಕಾರ್ಯಾಚರಣೆಗೆ ಹೆಚ್ಚು ಆದಾಯವನ್ನು ಒದಗಿಸುವ ಮಾರ್ಗೋಪಾಯಗಳನ್ನು ಮಾಡಬೇಕಾಗುತ್ತಿತ್ತು. ಆದರೆ ಈ ಪ್ರವೃತ್ತಿಯು ಇಲ್ಲದಿದ್ದಾಗಲೂ, ಸಂಯೋಜಿತ ಲೆಕ್ಕದಲ್ಲಿ ನಿಷ್ಪಕ್ಷಪಾತೆಯನ್ನು ಕಾಪಾಡಲು ಪ್ರಾಂತೀಯ ಅಂದಾಜುಗಳನ್ನು ಪರಿಶೀಲಿಸುವುದು ಕೇಂದ್ರ ಸರ್ಕಾರದ ಕರ್ತವ್ಯವಾಗತ್ತು. ನಿಷ್ಪಕ್ಷಪಾತೆಯ ದೃಷ್ಟಿಯಿಂದಲ್ಲದೆ, ಪ್ರಾಂತ್ಯವು ತನ್ನ ಹಣಕಾಸಿನ ಭದ್ರತೆಯನ್ನು ದುರ್ಬಲಗೊಳಿಸಲಿಲ್ಲವೆಂಬುದನ್ನು ಕೇಂದ್ರ ಸರ್ಕಾರ ಅವುಗಳ ಅಂದಾಜಿನ ಪರಿಶೀಲನೆಯಿಂದ ಕೆಳಗಿನಂತೆ ಗೊತ್ತುಮಾಡಿಕೊಳ್ಳಬೇಕಾಗಿತ್ತು.

---

೧. 'ಆರ್.ಸಿ.ಡಿ.' ಮಿನಿಟ್ಸ್ ಆಫ್ ಎವಿಡೆನ್ಸ್ ಸಂ X ಪ್ರ. ೪೪೯೮೧

೨. 'ಆರ್.ಸಿ.ಡಿ.' ಮಿನಿಟ್ಸ್ ಆಫ್ ಎವಿಡೆನ್ಸ್ ಸಂ X ಪ್ರ. ೪೪೮೬೩

೧) ಆಡಳಿತದ ಅನುಮತಿಯನ್ನು ಪಡೆಯದಿದ್ದ ಅಥವಾ ಆ ವರ್ಷ ಖರ್ಚುಮಾಡಲು ಬರುವಂತೆ ಅನುಮತಿ ಪಡೆಯುವ ಸಂಭವವಿಲ್ಲದಿದ್ದ ಯೋಜನೆಗಳ ಮೇಲಿನ ವೆಚ್ಚವನ್ನು ತನ್ನ ಮುಂಗಡ ಪತ್ರದಲ್ಲಿ ಕೂಡಿಸಿಕೊಳ್ಳುವುದು. ಅಥವಾ

೨) ವೆಚ್ಚದ ಹೆಚ್ಚಳದಿಂದ ಪ್ರಾಂತ್ಯವು ತನ್ನ ನಿಧಿಯನ್ನು ಅನಾವಶ್ಯಕವಾಗಿ ಕರಗಿಸುತ್ತಿಲ್ಲ. ಕೆಲವೊಂದು ಲೆಕ್ಕದ ಬಾಬ್ತುಗಳನ್ನು ಹಂಚುವುದರಿಂದ ಕೇಂದ್ರದ ಮುಂಗಡಪತ್ರದಲ್ಲಿಯ ಹೆಚ್ಚಳ ಅಥವಾ ಕೊರತೆ ಅಂದಾಜುಗಳ ನಿಷ್ಕೃಷ್ಟತೆಯನ್ನು ಅವಲಂಬಿಸಿದೆ ಎಂಬುದು ಭಾರತ ಸರ್ಕಾರವು ಏಕೆ ಪ್ರಾಂತೀಯ ಅಂದಾಜುಗಳನ್ನು ಪರಿಶೀಲಿಸಬೇಕಾಗುತ್ತದೆಯೆಂಬುದಕ್ಕೆ ಬಲವಾದ ಕಾರಣವಾಗಿತ್ತು. ಕೇಂದ್ರ ಸರ್ಕಾರವು ಪ್ರಾಂತೀಯ ಮುಂಗಡಪತ್ರಗಳಲ್ಲಿ ನೇರ ಆಸಕ್ತಿಯನ್ನು ಹೊಂದಿರುತ್ತದೆ ಮತ್ತು ತನ್ನ ಮುಂಗಡಪತ್ರದ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸದೆ, ಅವುಗಳನ್ನು ಪರಿಶೀಲಿಸುವ ತನ್ನ ಹಕ್ಕನ್ನು ಬಿಟ್ಟುಕೊಡಲು ಸಾಧ್ಯವಿಲ್ಲವೆಂದು ವಾದಿಸಲಾಯಿತು. ಪರಸ್ಪರ ಸಂಬಂಧದ ಮೂರನೆಯ ಅಂಶವು ಭಾರತ ಸರ್ಕಾರವು ಅಂತಿಮವಾಗಿ ನಿಗದಿಪಡಿಸಿದ ಅನುದಾನದಲ್ಲಿಯೇ ಪ್ರಾಂತೀಯ ಸರ್ಕಾರಗಳು ಕಾರ್ಯಮಾಡಬೇಕೆಂಬುದನ್ನು ಒತ್ತಾಯಿಸುತ್ತದೆ. ತಮ್ಮ ಖಾತೆಯಲ್ಲಿ ಸಾಕಷ್ಟು ಹಣವಿದೆಯೆಂದು ಸಹಾಯಧನವನ್ನು ಮೀರಲು, ಪ್ರಾಂತೀಯ ಸರ್ಕಾರಗಳಿಗೆ ಸ್ವಾತಂತ್ರ್ಯ ಕೊಟ್ಟಿದ್ದುದು, ಇಡೀ ದೇಶದ ಆಡಳಿತಕ್ಕಾಗಿ ಹಣ ಒದಗಿಸುವ ಕೇಂದ್ರ ಸರ್ಕಾರದ ಜವಾಬ್ದಾರಿಗೆ ಅಸಂಗತವಾಗುತ್ತಿತ್ತು.[೧] ಪ್ರಾಂತೀಯ ಮೊತ್ತವೆಂದರೆ, ಪ್ರತ್ಯೇಕ ಪ್ರಾಂತೀಯ ಕಪಾಟಿನಲ್ಲಿಟ್ಟ ಮೊತ್ತವಲ್ಲವೆಂದು ಹೇಳಲಾಯಿತು. ಇದು ಭಾರತ ಸರ್ಕಾರವು ಪ್ರತಿದಿನ ವ್ಯವಹಾರ ನಡೆಸಲು ಉಪಯೋಗಿಸುವ ಮೊತ್ತದ ಭಾಗವಾಗಿತ್ತು. ಪ್ರಾಂತೀಯ ಸರ್ಕಾರಗಳು ಸಹಾಯಧನವನ್ನು ಮೀರಿದಾಗ ಆಗಬಹುದಾದಂತೆ, ಒಂದು ವೇಳೆ ಮುಂಗಡಪತ್ರದಲ್ಲಿರದ ಬೇಡಿಕೆಗಳಿಂದ ಈ ಮೊತ್ತದ ಮೇಲೆ ಒತ್ತಡ ಬಂದರೆ, ಅದು ಹಣ ಒದಗಿಸುವ ವ್ಯವಸ್ಥೆಯನ್ನು ಕದಡಬಹುದಾಗಿತ್ತು ಮತ್ತು ಹಣದ ಕೊರತೆಯಿಂದಾಗಿ ಸರ್ಕಾರ ದಿವಾಳಿ ತೆಗೆಯುವ ಅವಕಾಶಗಳಿರುತ್ತಿದ್ದವು.

ಪ್ರಾಂತೀಯ ಸರ್ಕಾರಗಳ ಮೇಲಿನ ಬಂಧನಗಳ ಈ ಎಲ್ಲ ಸಮರ್ಥನೆಗಳ ಕೇವಲ ಮೇಲುನೋಟಕ್ಕೆ ಸರಿ ಇರಬಹುದಾದ ಸಮರ್ಥನೆಗಳು ಮತ್ತು ಅವು, ಒಂದು ಉತ್ತಮ ಸರ್ಕಾರವು ನೆರವೇರಿಸಲೇಬೇಕಾದ ಕರ್ತವ್ಯಗಳಾಗಿದ್ದಿದ್ದರೆ, ಒಂದು ಕೇಂದ್ರೀಕೃತ ಆಡಳಿತದ ಪರವಾಗಿ ನಿರ್ಣಾಯಕವೂ ಆಗಬಲ್ಲವಾಗಿದ್ದವು. ಆದರೆ, ಅಧಿಕಾರವನ್ನು ಕೆಳಮಟ್ಟದವರೆಗೆ ವಿಕೇಂದ್ರೀಕರಣ ಮಾಡುವುದು ಇಂದಿನ ಸರ್ಕಾರಗಳ ಒಲವಾಗಿದೆ ಎಂಬ ಪ್ರಾಂತೀಯ ಸರ್ಕಾರಗಳ ವಾದವನ್ನು ತಳ್ಳಿಹಾಕುವಂತಿರಲಿಲ್ಲ.[೨] ಬೇರೆ ರೀತಿಯಲ್ಲಿ ಪರಿಣಾಮಕಾರಿ ಯಾಗಿ ಉಪಯೋಗಿಸಲುಬಾರದ ಅಧಿಕಾರವನ್ನು ಕೇಂದ್ರೀಕೃತಗೊಳಿಸುವುದು ನ್ಯಾಯಸಮ್ಮತ. ಆದರೆ ಕೇಂದ್ರದ ಹತೋಟಿ ಅಥವಾ ಏಕರೂಪತೆ ಅನಾವಶ್ಯಕವಾಗಿದ್ದಲ್ಲಿ ಅಧಿಕಾರದ ಕೇಂದ್ರೀಕರಣವು ಅಷ್ಟೇ ಅಸಮ್ಮತ. ಕೇಂದ್ರೀಕರಣದಿಂದ ಎಲ್ಲ ಪ್ರಗತಿಯೂ ಕುಂಠಿತವಾಗುತ್ತದೆ. ಸ್ವಯಂ ಚಾಲನೆ ಕಡಿಮೆಯಾಗುತ್ತದೆ ಮತ್ತು ಸ್ಥಾನಿಕ ಸರ್ಕಾರಗಳ ಜವಾಬ್ದಾರಿಯು ದುರ್ಬಲಗೊಳ್ಳುತ್ತದೆ. ಅದೂ ಅಲ್ಲದೆ ಕೇಂದ್ರೀಕರಣ

---

೧. 'ಆರ್.ಸಿ.ಡಿ.' ಮಿನಿಟ್ಸ್ ಆಫ್. ಎವಿ. ಸಂ. X ಪು. ೪೪೮೬೫.

೨. ಈ ವಿಷಯ ಕುರಿತು ಮುಂಬಯಿ ಸರ್ಕಾರವು ವಿಕೇಂದ್ರೀಕರಣದ ಮೇಲೆ ಸಲ್ಲಿಸಿದ ತೀಕ್ಷ್ಣವಾದ ಮನವಿಯನ್ನು ನೋಡಿ. 'ಆರ್.ಸಿ.ಡಿ.' ಮಿನಿಟ್ಸ್ ಆಫ್ ಎವಿಡೆನ್ಸ್ ಸಂ. VIII, ಅನುಬಂಧ II.

ಸ್ಥಿತಿಸ್ಥಾಪಕತ್ವವನ್ನು ಬಲಿತೆಗೆದುಕೊಳ್ಳುತ್ತದೆ. ಏಕೆಂದರೆ ಒಂದೇ ಆಡಳಿತ ಶಾಖೆಯನ್ನು ನಿರ್ವಹಿಸುವ ವಿವಿಧ ಪದ್ಧತಿಗಳ ಜೊತೆ ವ್ಯವಹರಿಸಬೇಕಾದ ಕೇಂದ್ರದ ವಿಭಾಗಕ್ಕೆ ಇದು ಹೊಂದಾಣಿಕೆಯಾಗಲಾರದು. ಅದು ಎಲ್ಲ ಬಗೆಯ ಪದ್ಧತಿಗಳನ್ನು ತೆಗೆದು ಒಂದೇ ಪದ್ಧತಿಯ ಗುರಿಯನ್ನು ಹೊಂದಿರುತ್ತದೆ. ಆಡಳಿತ ವ್ಯವಹಾರವು ಅದನ್ನು ನಿರ್ವಹಿಸುವ ಯೋಗ್ಯ ಅಧಿಕಾರವನ್ನು ಹೊಂದಿದಾಗ, ಆ ಅಧಿಕಾರವು ಅದನ್ನು ನಿರ್ವಹಿಸಬೇಕೆಂಬ ಸರ್ಕಾರದ ಮೂಲತತ್ವ ಕೇಂದ್ರೀಕರಣಕ್ಕೆ ವಿರುದ್ಧವಾಗಿದೆ. ವರ್ಗಾಯಿಸಲ್ಪಟ್ಟ ಆಡಳಿತವನ್ನು ಕೈಗೆ ತೆಗೆದುಕೊಳ್ಳಲು ಕೇಂದ್ರವು ಸಮರ್ಥವಾಗಿದ್ದಾಗ್ಯೂ, ಅದಕ್ಕೆ ವರ್ಗಾಯಿಸಲ್ಪಟ್ಟ ಅಧಿಕಾರಗಳ ಆಧಿಕ್ಯದಿಂದಾಗಿ, ಅದು ಮತ್ತೆ ವಿಕೇಂದ್ರೀಕರಿಸಲೇಬೇಕಾದ ಸನ್ನಿವೇಶವುಂಟಾಗುತ್ತದೆ. ಕೇಂದ್ರೀಕರಣವು ಸೀಮಿತವಾಗದಿದ್ದರೆ, ಅದು ಆಡಳಿತದಲ್ಲಿ ಅಸಾಮರ್ಥ್ಯಕ್ಕೆ ಎಡೆ ಮಾಡಿಕೊಡುತ್ತದೆ. ಒಂದೇ ತರದ ರಾಜ್ಯಗಳಲ್ಲಿಯೂ ಇದು ಆಗುವುದು ನಿಶ್ಚಿತ. ಯುರೋಪ ಖಂಡದಲ್ಲಿ ಕಾಣಸಿಗದಷ್ಟು, ಜಾತಿ, ಭಾಷೆ, ಧರ್ಮ ಮತ್ತು ಆಚರಣೆಗಳಲ್ಲಿಯ ವೈವಿಧ್ಯತೆ ಹೊಂದಿದ ಭಾರತದಂತಹ ದೇಶದಲ್ಲಿ ಇದು ಇನ್ನೂ ಸಹಜವಾಗಿಯೇ ಆಗುತ್ತದೆ. ಅಂಥ ಸಂದರ್ಭದಲ್ಲಿ ಉಚ್ಚ ಅಧಿಕಾರ ಕೆಳಮಟ್ಟದ ಅಧಿಕಾರಕ್ಕಿಂತ ಕಡಿಮೆ ಸಾಮರ್ಥ್ಯ ಹೊಂದಿದೆಯೆಂಬ ಪರಿಸ್ಥಿತಿ ಬರಲೇಬೇಕು. ಏಕೆಂದರೆ ಅದು ಸ್ಥಾನಿಕ ಪರಿಸ್ಥಿತಿಗಳ ಎಲ್ಲಾ ಆವಶ್ಯಕ ಜ್ಞಾನವನ್ನು ಹೊಂದಿರಲು ಸಾಧ್ಯವಿಲ್ಲ. ಆದ್ದರಿಂದ ಭಾರತದ ಕೇಂದ್ರ ಸರ್ಕಾರ, ಬೇರೆಬೇರೆ ಪ್ರಾಂತಗಳಲ್ಲಿರುವ ಪರಿಸ್ಥಿತಿಗಳ ಅರಿವು ಹಾಗೂ ಅವುಗಳ ಅನುಭವವನ್ನು ಹೊಂದಿದೆ ಎಂದು ಹೇಳಲು ಸಾಧ್ಯವಿಲ್ಲ[೧]. ಅದು ಪ್ರಾಂತೀಯ ಆಡಳಿತದ ವಿಷಯಗಳನ್ನು ನಿಭಾಯಿಸುವಲ್ಲಿ ಪ್ರಾಂತೀಯ ಸರ್ಕಾರಗಳಿಗಿಂತ ಕಡಿಮೆ ಸಾಮರ್ಥ್ಯವನ್ನು ಹೊಂದಿರುತ್ತದೆ. ಪ್ರಾಂತೀಯ ಸರ್ಕಾರಗಳ ಸದಸ್ಯರು ಕೀಳು ಮಟ್ಟದವರೆಂದು ಹೇಳಲು ಸಾಧ್ಯವಿಲ್ಲ. ಅವರು ಯೋಗ್ಯತೆಯಲ್ಲಿ ಕೇಂದ್ರ ಸರ್ಕಾರದ ಸದಸ್ಯರಿಗೆ ಸಮ ಮತ್ತು ಸ್ಥಳೀಯ ವಿಷಯಗಳ ಜ್ಞಾನದಲ್ಲಿ ಮೇಲ್ಮಟ್ಟದವರಾಗಿರಲೇಬೇಕು.

ಈ ಎಲ್ಲ ವಾದಗಳಿಗೆ ಕೇಂದ್ರ ಸರ್ಕಾರ ಕೊಟ್ಟ ಒಂದೇ ಉತ್ತರವೆಂದರೆ, ಅದು ತನ್ನ ಕೈಯಲ್ಲಿ ಎಲ್ಲ ಅಧಿಕಾರವನ್ನು ಕ್ರೋಡೀಕರಿಸಿದ್ದು, ತತ್ವಗಳನ್ನು ಅವಲಂಬಿಸಿ ಅಲ್ಲ, ಆದರೆ ಆವಶ್ಯಕತೆಯಿಂದಾಗಿ. ಸಂವಿಧಾನಾತ್ಮಕ ಬಂಧಗಳಿಂದ ಆ ಆವಶ್ಯಕತೆ ಹುಟ್ಟಿಕೊಂಡಿತು. ಸೈನಿಕ ಹಾಗೂ ನಾಗರಿಕ ಸರ್ಕಾರದ ಮೇಲ್ವಿಚಾರಣೆ ಹಾಗೂ ಹತೋಟಿ ಮತ್ತು ದೇಶದ ಆದಾಯಗಳನ್ನು ನಿರ್ವಹಿಸುವ ಜವಾಬ್ದಾರಿಗಳು ಕಾಯಿದೆ ಮೇರೆಗೆ ಇದರ ಮೇಲಿದ್ದವು. ಪ್ರಾಂತೀಯ ಸರ್ಕಾರಗಳಿಗೆ ತಾನು ವಹಿಸಿಕೊಟ್ಟಂಥ ಅಧಿಕಾರದ ಮೇಲಿನ ತನ್ನ ಹತೋಟಿಯನ್ನು ಅದು ಸಡಿಲಗೊಳಿಸಲಿಲ್ಲ. ಶಾಸನಸಭೆಗೆ ಜವಾಬ್ದಾರಿ ಹೊಂದಿದ ಅಧಿಕಾರಿಯಾಗಿ ಭಾರತ ಸರ್ಕಾರ ಇರುವವರೆಗೆ, ದೇಶವನ್ನಾಳುವ ವಿಷಯಗಳ ಸಂಬಂಧದಲ್ಲಿ ಅದು ನಿಯಂತ್ರಿಸುವ ಅಧಿಕಾರ ಹೊಂದಿರಬೇಕೆಂದು ತಿಳಿಯುವುದು ಸಮಂಜಸವಾಗಿತ್ತು. ಆದರೆ ಕೇಂದ್ರೀಯ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಅನ್ಯೋನ್ಯತೆಯ ದೃಷ್ಟಿಯಿಂದ, ಕೇಂದ್ರ ಸರ್ಕಾರವು ತನ್ನ ಜವಾಬ್ದಾರಿಯನ್ನು ಪೂರೈಸಲು ಅನನುಕೂಲವಾಗದಂತೆ, ಪ್ರಾಂತ್ಯಗಳ ಹಣಕಾಸಿನ ಅಧಿಕಾರದ ಮೇಲಿನ ಬಂಧನಗಳನ್ನು

೧. ಈ ಸಂದರ್ಭದಲ್ಲಿ ಶ್ರೀ ಎ.ಸಿ. ಲೋಗನ್‌ರವರು ವಿಕೇಂದ್ರೀಕರಣದ ಬಗ್ಗೆ ಮಾಡಿದ ಲಘು ಸಲಹೆಯನ್ನು ಉಲ್ಲೇಖಿಸಬಹುದು. "ವಿಕೇಂದ್ರೀಕರಣವನ್ನು ಕಾರ್ಯಗತಗೊಳಿಸಲು ಸಾಧ್ಯವಿಲ್ಲದಿದ್ದರೆ ಭಾರತ ಸರ್ಕಾರದ ಸಂವಿಧಾನವನ್ನು ಇನ್ನೊಂದು ರೀತಿಯಲ್ಲಿ ಪುನರ್‌ರಚಿಸಬಹುದು. ಈಗಿರುವ ಇಲಾಖೆಗಳ ಬದಲು ಕೇಂದ್ರ ಸರ್ಕಾರದಲ್ಲಿಯೇ ವಿವಿಧ ಸ್ಥಾನಿಕ ಕ್ಷೇತ್ರಗಳಿಗೊಬ್ಬ ಕಾರ್ಯದರ್ಶಿ ಮತ್ತು ಸದಸ್ಯನಿರಬಹುದು. ಉದಾ : ಬೊಂಬಾಯಿ ವಿಷಯಗಳಿಗೆ ಒಬ್ಬ ಕಾರ್ಯದರ್ಶಿ ಮತ್ತು ಸದಸ್ಯನಿದ್ದುಕೊಂಡು ಕಲ್ಕತ್ತಾದಿಂದಲೇ ಅವರು ಕಾರ್ಯನಿರ್ವಹಿಸಬಹುದು." ('ಆರ್.ಸಿ.ಡಿ.', ಮಿನಿಟ್ಸ್ ಆಫ್ ಎವಿಡೆನ್ಸ್ ಸಂ. VIII ಪ್ರ. ೩೫೫೩೧)

ಸಡಿಲಗೊಳಿಸುವುದು ಸಾಧ್ಯವಿರಲಿಲ್ಲವೇ ಎಂದು ಕೇಳುವುದು ಅಷ್ಟೇ ಸಮಂಜಸ. ಭಾರತ ಸರ್ಕಾರದ ಸ್ಥಾನಕ್ಕೆ ಧಕ್ಕೆಯಾಗದ ರೀತಿಯಲ್ಲಿ ಮಿತಿಗಳನ್ನು ಸಡಿಲಿಸುವುದರಿಂದ ಪ್ರಾಂತೀಯ ಹಣಕಾಸಿನ ಪರಿಮಿತಿಯ ವಿಸ್ತರಣೆ ಸಾಧ್ಯವೆಂಬುದು, ಪ್ರಾಂತೀಯ ಸರ್ಕಾರಗಳು ಮಾಡಿದ ಸೂಚನೆಗಳ ವಿಶ್ಲೇಷಣೆಯಿಂದ ವ್ಯಕ್ತವಾಗುತ್ತದೆಯೆಂದು ಹೇಳಲೇಬೇಕು. ಈ ಸೂಚನೆಗಳೆಂದರೆ:

(i) ಕರಾಕರಣೆಯ ಹಾಗೂ ಪ್ರಾಂತೀಯ ಆದಾಯದ ಭದ್ರತೆಯ ಮೇಲಿಂದ ಸಾಲಮಾಡುವ ಅಧಿಕಾರ.
(ii) ನೌಕರರ ಹಾಗೂ ಸಿಬ್ಬಂದಿಯ ಮೇಲೆ ಭಾರತ ಸರ್ಕಾರ ನಿಗದಿಪಡಿಸಿದ ಮಿತಿಗಿಂತ ಹೆಚ್ಚಿನ ವೆಚ್ಚವನ್ನು ಮಂಜೂರು ಮಾಡುವ ಅಧಿಕಾರ.
(iii) ಸಾಮ್ರಾಜ್ಯದ ಮುಂಗಡಪತ್ರದಿಂದ ಹಾಗೂ ಲೆಕ್ಕಪತ್ರದಿಂದ ಪ್ರಾಂತೀಯ ಅಂದಾಜುಗಳನ್ನು ಬೇರ್ಪಡಿಸುವುದು.
(iv) ಆದಾಯದ ಹಾಗೂ ವೆಚ್ಚದ 'ವಿಭಜಿತ ಬಾಬ್ತು' ಪದ್ಧತಿಯನ್ನು ರದ್ದುಪಡಿಸಿ ಅದರ ಬದಲು ಆದಾಯ ಮೂಲಗಳ ಹಾಗೂ ಕಾಣಿಕೆಗಳ ವಿಂಗಡಣೆಯ ಪದ್ಧತಿಯನ್ನು ಜಾರಿಯಲ್ಲಿ ತರುವುದು.
(v) ಮುಂಗಡಪತ್ರದ ಅಂದಾಜಿಗಿಂತ ಹೆಚ್ಚಿನ ವೆಚ್ಚವನ್ನು ಭರಿಸಲು, ಭಾರತ ಸರ್ಕಾರದ ಮಂಜೂರಾತಿ ಪಡೆಯದೇ, ತಮ್ಮ ಮೊತ್ತವನ್ನು ಖರ್ಚುಮಾಡುವ ಅಧಿಕಾರ.

ಇಂಥ ಬೇಡಿಕೆಗಳನ್ನು ಪೂರೈಸಲು, ಭಾರತ ಸರ್ಕಾರದ ವ್ಯವಸ್ಥಾಬದ್ಧ ಜವಾಬ್ದಾರಿಗಳ ದೃಷ್ಟಿಯಿಂದ ಯಾವ ತಕರಾರುಗಳಿದ್ದವು? ಸಾಮ್ರಾಜ್ಯದ ಕರಗಳಿಗೆ ಸಂಬಂಧವಿಲ್ಲದ ಕೆಲವೊಂದು ಕರಮೂಲಗಳನ್ನು ಪ್ರಾಂತೀಯ ಸರ್ಕಾರಗಳಿಗೆ ಬಿಟ್ಟುಕೊಡಲು ಭಾರತ ಸರ್ಕಾರಕ್ಕೆ ಸಾಧ್ಯವಿತ್ತು. ಅದೇ ರೀತಿಯಾಗಿ, ಅವುಗಳಿಗೊದಗಿಸಿದ ಆದಾಯಗಳ ಭದ್ರತೆಯ ಮೇಲೆ ಕೆಲವು ಮಟ್ಟಿಗೆ ಸಾಲ ಮಾಡಲು ಪ್ರಾಂತೀಯ ಸರ್ಕಾರಗಳಿಗೆ ಅನುಮತಿ ಕೊಡಲೂ ಸಾಧ್ಯವಿತ್ತು. ಪ್ರಾಂತೀಯ ಸರ್ಕಾರಗಳು, ಹಣಕಾಸಿನ ವ್ಯವಸ್ಥೆಯ ಭದ್ರತೆಗೆ ಗಂಡಾಂತರಕಾರಿಯಾಗುವ ರೀತಿಯಲ್ಲಿ ಇಂಥ ಅಧಿಕಾರವನ್ನು ದುರುಪಯೋಗ ಪಡಿಸಿಕೊಳ್ಳುತ್ತವೆಯೆಂದು ಭಾರತ ಸರ್ಕಾರ ಹೇಳುವುದು, ಪ್ರಾಂತೀಯ ಸರ್ಕಾರದ ರಾಜ್ಯಾಡಳಿತ ವ್ಯವಸ್ಥೆಗಳು ತಮ್ಮ ಜವಾಬ್ದಾರಿ ಅರಿಯದ ಅಯೋಗ್ಯ ಆಡಳಿತಗಾರರಿಂದ ನಡೆಸಲ್ಪಡುತ್ತವೆಯೆಂದು ನಂಬಿದಂತಾಗುತ್ತದೆ. ಎರಡನೆಯ ಬೇಡಿಕೆಯನ್ನು ನಿರಾತಂಕವಾಗಿ ಪೂರೈಸಬಹುದಿತ್ತು. ಇಲ್ಲಿ ನಾವು ಗಮನಿಸಬೇಕಾದ ವಿಷಯವೆಂದರೆ, ಆದಾಯ ಮತ್ತು ಸಾಮಾನ್ಯ ಆಡಳಿತಕ್ಕೆ ಸಂಬಂಧಿಸಿದ ನಾಗರಿಕ ಸೇವೆಗಳನ್ನು ಈ ಕೆಳಗಿನಂತೆ ವಿಭಜಿಸಲಾಗಿದೆ:–

(i) ಮಹಾಪ್ರಭುಗಳ ಬೇರೆಡೆಯ ಪ್ರಜೆಗಳಂತೆ, ಭಾರತೀಯರೂ ಸ್ಪರ್ಧಿಸಬಹುದಾದ, ಇಂಗ್ಲೆಂಡ್‌ನಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕ, ಭರ್ತಿಮಾಡಿಕೊಳ್ಳುತ್ತಿದ್ದ "ಭಾರತೀಯ ನಾಗರಿಕ ಸೇವೆ."
(ii) ದೇಶದ ಮೂಲ ನಿವಾಸಿಗಳಿಗೆ ಹಾಗೂ ವಲಸೆ ಬಂದ ಜನರಿಗೆ ಅವಕಾಶವಿರುವ ಭಾರತದಲ್ಲಿ ಭರ್ತಿಮಾಡಿಕೊಳ್ಳುತ್ತಿದ್ದ "ಪ್ರಾಂತೀಯ" ಹಾಗೂ "ಅಧೀನ" ನಾಗರಿಕ ಸೇವೆಗಳು.

ಪ್ರತಿಯೊಂದು ಪ್ರಾಂತ್ಯಕ್ಕೂ ತನ್ನದೇ ಆದ ಪ್ರತ್ಯೇಕ "ಪ್ರಾಂತೀಯ" ಹಾಗೂ "ಅಧೀನ" ಸೇವೆಗಳಿದ್ದವು. ಇವುಗಳಿಗೆ ನೇಮಕ ಮಾಡಲು ಅವಕ್ಕೆ ಸ್ವಾತಂತ್ರ್ಯವಿದೆ. ಆದರೆ ಪ್ರಾಂತೀಯ ಸೇವೆಗಳಿಗೆ ನೇಮಕಾತಿಯನ್ನು ಭಾರತ ಸರ್ಕಾರದ ನಿಯಮಗಳಿಂದ ನಿಯಂತ್ರಣಗೊಳಿಸಲಾಗಿದೆ. ನೇಮಕಾತಿಮಾಡುವ ಅಧಿಕಾರವಿದ್ದ ಸರ್ಕಾರಕ್ಕೆ ಪಗಾರವನ್ನು ನಿಯಂತ್ರಿಸುವ ಅಧಿಕಾರವೂ ಇರಬೇಕಾದದ್ದು ತರ್ಕಸಮ್ಮತ. ಎಲ್ಲ ಪ್ರಾಂತ್ಯಗಳ ಒಂದೇ ಮಟ್ಟದ ಹುದ್ದೆಗೆ ವೇತನ ಸಮಾನವಾಗಿರಬೇಕೆಂಬುದು ಕಾರಣವಿಲ್ಲ. ಪ್ರಾಂತ್ಯಗಳ ಆರ್ಥಿಕ

ಪರಿಸ್ಥಿತಿಯನ್ನು ಗಣನೆಗೆ ತೆಗೆದುಕೊಂಡರೆ ಅವು ಸಮಾನವಾಗಿರಲಾರವು. ಸ್ಥಾನಿಕ ಸರ್ಕಾರವು, ಸ್ಥಳೀಕನ ಆರ್ಥಿಕ ಬೆಲೆಯನ್ನು ತಿಳಿದಿರುವುದರಿಂದ, ಪ್ರಾಂತೀಯ ಹಾಗೂ ಅಧೀನ ಸೇವೆಗಳ ಬಗೆಗಿನ ಅಧಿಕಾರವನ್ನು ಅದಕ್ಕೆ ಕೊಟ್ಟಿರಬಹುದಾಗಿದೆ. ಈ ಅಧಿಕಾರವನ್ನು ಕೊಟ್ಟರೆ ಪ್ರಾಂತ್ಯದ ಪುನರಾವರ್ತಿತ ವೆಚ್ಚವನ್ನು ಹೆಚ್ಚಿಸಬಹುದೆಂಬ ಭಾರತ ಸರ್ಕಾರದ ಸೂಚನೆಯು ಅಹಿತಕರವಾದದ್ದೆಂದು ಹೇಳಲೇಬೇಕು.

ಮೂರನೆಯ ಸಲಹೆಯನ್ನು ಸ್ವೀಕರಿಸುವುದರಿಂದ ಭಾರತ ಸರ್ಕಾರದ ಜವಾಬ್ದಾರಿಗೆ ಯಾವ ರೀತಿಯ ಧಕ್ಕೆಯೂ ಬರುತ್ತಿರಲಿಲ್ಲ. ಅದು ಅಂತಹ ವಿವೇಚನಾಯುಕ್ತವಾದುದಲ್ಲವೆಂಬುದು ಭಾರತ ಸರ್ಕಾರದ ತಕರಾರಾಗಿತ್ತು. ಸಾಕಷ್ಟು ಪ್ರಮಾಣದಲ್ಲಿದ್ದ ಪ್ರಾಂತೀಯ ಲೆಕ್ಕಗಳನ್ನು ಬಿಟ್ಟು ಸಾಮ್ರಾಜ್ಯದ ಲೆಕ್ಕ ಪತ್ರಗಳನ್ನಾಗಲೀ, ಅಥವಾ ಅಂದಾಜು ಪತ್ರವನ್ನಾಗಲೀ ಪ್ರಕಟಿಸುವುದರಿಂದ ಜನತೆಯನ್ನು ದಾರಿಗೆಡಿಸಿದ ಹಾಗೆ ಮತ್ತು ಭಾರತ ಸರ್ಕಾರದ ಹಣಕಾಸಿನ ಅಪೂರ್ಣ ಚಿತ್ರವನ್ನು ಕೊಟ್ಟ ಹಾಗೆ ಆಗುತ್ತಿತ್ತು.[೧] ಲೆಕ್ಕ ಪತ್ರದ ವಿಂಗಡಣೆಯು, ಪರಿಶೀಲನೆ ಹಾಗೂ ತತ್ಪರಿಣಾಮವಾಗಿ ಪ್ರಾಂತೀಯ ಆಯವ್ಯಯಪತ್ರದ ಸಿದ್ಧತೆಯ ಮೇಲಿನ ನಿಯಂತ್ರಣವನ್ನು ದೂರ ಮಾಡಬಹುದಾಗಿದ್ದಿತು, ಹಾಗೂ ಹಾಗೆ ಮಾಡದಿದ್ದುದರಿಂದ ಅರ್ಥಸಮೀಕ್ಷೆ ಮಾಡುವವರಿಗೆ ಅನುಕೂಲವಾಯಿತೇ ಹೊರತು, ಆರ್ಥಿಕ ಆಡಳಿತವನ್ನು ನೋಡಿಕೊಳ್ಳುತ್ತಿದ್ದವರಿಗೆ ತೊಂದರೆಯೇ ಆಯಿತು. ಮೇಲಾಗಿ ಈ ಸೂಚನೆಯು ಹೊಸದಲ್ಲವೆಂಬುದನ್ನು ಗಮನಿಸಬೇಕು. ಇದು ೧೮೭೧ ಮತ್ತು ೧೮೭೭ರ ನಡುವೆ ಆಚರಣೆಯಲ್ಲಿದ್ದ ಹಳೇ ಪದ್ಧತಿಯ ಪುನರುಜ್ಜೀವನವಾಗಿದೆ. ಹಣಕಾಸಿನ ವಿಕೇಂದ್ರೀಕರಣದ ಆ ಅವಧಿಯಲ್ಲಿ, ಸಾಮ್ರಾಜ್ಯದ ಮುಂಗಡಪತ್ರದಲ್ಲಿ ಪ್ರಾಂತೀಯ ಅಂಕಿಸಂಖ್ಯೆಗಳು ಕಂಡುಬರುತ್ತಿರಲಿಲ್ಲ. ಮಹಾಲೇಖಾಪಾಲರು ತಯಾರಿಸಿದ ಪ್ರಾಂತೀಯ ಮುಂಗಡಪತ್ರವು ಪ್ರಾಂತೀಯ ಸರ್ಕಾರಗಳಿಂದ ಅಂಗೀಕೃತವಾಗುತ್ತಿತ್ತು. ಅವುಗಳ ಅಂದಾಜು ಪ್ರಾಂತ್ಯಗಳಿಗೆ ಒದಗಿಸಿದ ಆದಾಯದ ಮಿತಿಯಲ್ಲಿಯೇ ಇದೆಯೆಂದು ಭಾರತ ಸರ್ಕಾರಕ್ಕೆ ತಿಳಿಸುವುದನ್ನೊಂದು ಬಿಟ್ಟು ಮತ್ತೇನನ್ನೂ ಅದಕ್ಕೆ ಒಪ್ಪಿಸಬೇಕಾಗಿರಲಿಲ್ಲ. ಲೆಕ್ಕಾಚಾರದ ವಿಂಗಡಣೆಯ ಬೇಡಿಕೆಯನ್ನು ಒಪ್ಪಿಕೊಳ್ಳಲು ಯಾವ ಕ್ರಮಬದ್ಧ ತಕರಾರು ಇರಲಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ನಾಲ್ಕನೆಯ ಸಲಹೆಯೂ ಮೂರನೆಯದರ ವರ್ಗಕ್ಕೆ ಸೇರಿದ್ದು, ಇದರಿಂದ ಭಾರತ ಸರ್ಕಾರದ ಕ್ರಮಬದ್ಧತೆಯ ಜವಾಬ್ದಾರಿಗಳ ಉಲ್ಲಂಘನೆಯಾಗಿದೆ ಎಂದು ಹೇಳಲಿಕ್ಕಾಗುತ್ತಿರಲಿಲ್ಲ. ಪ್ರಾಂತ್ಯಗಳ ಮುಂಗಡಪತ್ರದ ಅಂದಾಜುಗಳನ್ನು ತಯಾರಿಸುವಲ್ಲಿಯ ಭಾರತ ಸರ್ಕಾರದ ಹಸ್ತಕ್ಷೇಪವನ್ನು ಕಂದಾಯದ ವಿಭಜಿತ ಬಾಬ್ತುಗಳನ್ನು ರದ್ದುಮಾಡುವುದರ ಮೂಲಕ ಸಂಪೂರ್ಣ ತೆಗೆದುಹಾಕಬಹುದಿತ್ತು. ಅದೇ ರೀತಿಯಾಗಿ ತಮಗೆ ವಹಿಸಿದ ಆದಾಯಗಳನ್ನು ಖರ್ಚುಮಾಡುವ ವಿಷಯದಲ್ಲಿ ಸ್ವಾತಂತ್ರ್ಯವು ಪ್ರಾಂತ್ಯಗಳಿಗೆ ವೆಚ್ಚದ ವಿಭಜಿತ ಬಾಬ್ತುಗಳನ್ನು ತೆಗೆದುಹಾಕುವುದರಿಂದ ಸಿಗಬಹುದಾಗಿತ್ತು.[೨] ವಿಭಜಿತ ಬಾಬ್ತಿನ ವ್ಯವಸ್ಥೆಯಲ್ಲಿ ಭಾರತ ಸರ್ಕಾರವು ವೆಚ್ಚದ ಮಿತಿಯನ್ನು ಹೆಚ್ಚಿಸಲು ಒಪ್ಪದಿದ್ದರೆ, ಪ್ರಾಂತೀಯ ಸರ್ಕಾರಗಳು ಯಾವುದೇ ಸೇವೆಗಳ ಮೇಲೆ ಹೆಚ್ಚು ವೆಚ್ಚ ಮಾಡಲು ಸಾಧ್ಯವಿರಲಿಲ್ಲ. ಭಾರತ ಸರ್ಕಾರವು ಅಂಕಗಳನ್ನು ಕಡಿಮೆ ಮಾಡಿದರೆ ಪ್ರಾಂತೀಯ ಸರ್ಕಾರವೂ ತನ್ನ ಅಂಕಿಗಳನ್ನು ಕಡಿಮೆ ಮಾಡಬೇಕಾಗುತ್ತಿತ್ತು. ವಿಭಜಿತ ಬಾಬ್ತುಗಳ ವ್ಯವಸ್ಥೆಗೆ, ಆದಾಯ ಮೂಲಗಳ ಹಾಗೂ ಉತ್ಪನ್ನದ ಕಾಣಿಕೆಗಳ ವಿಂಗಡಣೆಯ ವ್ಯವಸ್ಥೆಯನ್ನು ಬದಲಿ

೧. 'ಆರ್.ಸಿ.ಡಿ.' ಮಿನಿಟ್ಸ್ ಆಫ್ ಎವಿಡೆನ್ಸ್ ಸಂ. X ಪ್ರ. ೪೪೮೬೬, ೪೫೧೭೯–೧೮೦
೨. 'ಆರ್.ಸಿ.ಡಿ.' ಮಿನಿಟ್ಸ್ ಆಫ್ ಎವಿಡೆನ್ಸ್ ಸಂ. VIII ಪ್ರ. ೩೫೨೨೫–೨೮

ಮಾಡಿದ್ದು, ಭಾರತ ಸರ್ಕಾರಕ್ಕೆ ಏನೂ ಹಾನಿ ಮಾಡದೆ, ಪ್ರಾಂತೀಯ ಸರ್ಕಾರಗಳಿಗೆ ಹೆಚ್ಚಿನ ಸ್ವಾತಂತ್ರ್ಯ ತಂದುಕೊಡಬಹುದಿತ್ತು. ಭಾರತ ಸರ್ಕಾರ ಈ ಬೇಡಿಕೆಯ ವಿರೋಧವಾಗಿ ಒಡ್ಡಿದ ತಕರಾರುಗಳು ಮನಗಾಣಿಸುವಂಥವುಗಳಾಗಿರಲಿಲ್ಲ. ಪ್ರಾಂತೀಯ ಸರ್ಕಾರಗಳು ಆದಾಯ ವಿಭಜನೆಯಲ್ಲಿ ತೋರಿದ ಆಸಕ್ತಿಯನ್ನು, ಆದಾಯ ವಿಂಗಡಣೆಯಲ್ಲಿ ತೋರಿಸುವುದಿಲ್ಲವೆಂದು ವಾದಿಸಲಾಯಿತು.[೧] ಹಣಕಾಸಿನ ಪರಿಣಾಮದಲ್ಲಿ ಆಸಕ್ತಿ ಇಲ್ಲದಿದ್ದರೆ, ಪ್ರಾಂತೀಯ ಸರ್ಕಾರವು ಕಾರ್ಯದಕ್ಷತೆಯಿಂದ ಕರವನ್ನು ಹಾಕಲಿಕ್ಕಿಲ್ಲವೆಂಬ ದೃಷ್ಟಿಯು ತಪ್ಪಾದದ್ದು. ಆದಾಯದ ಆಕರಣೆಯಲ್ಲಿ ತೊಡಗಿದ ಜನರಿಗೆ ಅದು ಸಾಮ್ರಾಜ್ಯದ ಅಥವಾ ಪ್ರಾಂತೀಯ ಖಾತೆಗೆ ಹೋಗುತ್ತದೆಯೆಂಬುದು ಗೊತ್ತಿದೆ ಎಂದು ಈ ದೃಷ್ಟಿ ಭಾವಿಸುತ್ತದೆ. ಆ ದೃಷ್ಟಿಯು ನಿಜವಿದ್ದರೂ ತನ್ನ ಆದಾಯವನ್ನು ವಸೂಲು ಮಾಡಲು ಪ್ರತಿ ಸರ್ಕಾರವು ತನ್ನ ಸಿಬ್ಬಂದಿಯನ್ನು ನೇಮಿಸಿಕೊಳ್ಳುವ ಮೂಲಕ ಈ ತೊಂದರೆಯನ್ನು ನಿವಾರಿಸಬಹುದಿತ್ತು. ಒಂದು ಸರ್ಕಾರವು ತನ್ನ ಕಾರ್ಯಮಾಡಲು ಮತ್ತೊಂದರ ಕಾರ್ಯಭಾರಿಗಳನ್ನು ನೇಮಿಸುವ ಭಾರತದಲ್ಲಿದ್ದ ಪದ್ಧತಿ ಕ್ಲಿಷ್ಟ ಹಾಗೂ ಅನಿಷ್ಟಕರವಾದದ್ದು.[೨] ಕಾರ್ಯಭಾರಿಗಳ ವಿಂಗಡಣೆಯಿಂದ ಆದಾಯ ಮೂಲಗಳ ವಿಂಗಡಣೆಯಾಗಿದ್ದರೆ, ಇದೊಂದು ಒಳ್ಳೆಯ ಸುಧಾರಣೆಯಾಗುತ್ತಿತ್ತು. ಆದಾಯ ಬಾಬ್ತುಗಳ ವಿಂಗಡಣೆಯು ಪ್ರಾಂತೀಯ ಸರ್ಕಾರಗಳಿಗೆ ಆಸಕ್ತಿಕೊಟ್ಟಿತು ಎಂಬ ಸಂಗತಿ, ಆ ವ್ಯವಸ್ಥೆಯ ಸಮರ್ಥನೆ ಮಾಡದೆ, ಅದರ ವಿರುದ್ಧವಾಗಿತ್ತೆಂಬ ವಿಷಯವನ್ನು ಅಲಕ್ಷಿಸಲಾಯಿತು. ಆದಾಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಜೊತೆಗೆ ಪಟ್ಟಭದ್ರ ಹಿತಾಸಕ್ತಿಯನ್ನು ನಿರ್ಮಿಸಿದ ವ್ಯವಸ್ಥೆಯು ಅನಿಷ್ಟವಾದದ್ದು. ಏಕೆಂದರೆ ಅಂಥ ಹಿತಾಸಕ್ತಿಯು ಆಕರಣೆಯಲ್ಲಿ ನಿಷ್ಠುರತೆಗೆಡೆಮಾಡಿಕೊಡುತ್ತದೆ. ಆಕರಣೆ ಮಾಡಿದ ಕರವನ್ನು ಜಮಾಮಾಡುವುದರ ಬಗ್ಗೆ ರಾಜ್ಯಗಳಿಗೆ ಇದ್ದ ಕುಪ್ರಸಿದ್ಧ ನಿರಾಸಕ್ತಿಯನ್ನು ಇಲ್ಲಿ ಉದಾಹರಿಸಬಹುದು.[೩] ಪ್ರಾಂತೀಯ ಸರ್ಕಾರಗಳನ್ನು ಮಾನವೀಕರಿಸುವುದು ಅಪೇಕ್ಷಿತ ಗುರಿಯಾಗಿದ್ದರೆ, ಬಾಬ್ತುಗಳ ವಿಂಗಡಣೆಯ ನಿರ್ಮೂಲನೆಯು ಒಳ್ಳೆಯ ಸಾಧನವಾಗಿತ್ತು. ಇದರ ವಿರುದ್ಧವಾಗಿ ಭಾರತ ಸರ್ಕಾರವು ಎದುರಿಸಬೇಕಾಗಿದ್ದ ತಕರಾರೆಂದರೆ, ಅಂಥ ಬದಲಾವಣೆಯು ಪ್ರಾಂತೀಯ ಸರ್ಕಾರಗಳು ಎತ್ತಿದ ಆದಾಯದಲ್ಲಿಯ ಕೇಂದ್ರ ಸರ್ಕಾರದ ಭಾಗಕ್ಕೆ ಕಪ್ಪಕಾಣಿಕೆಯ ಸ್ವರೂಪವನ್ನು ಕೊಡಬಹುದು, ಮತ್ತು ಭಾರತ ಸರ್ಕಾರವು, ಪ್ರಾಂತೀಯ ಸರ್ಕಾರಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವ ಬದಲು ಅವುಗಳ ಮೇಲೆ ಅವಲಂಬಿಸಿದ ಪಿಂಚಣಿದಾರನಂತೆ ಕಾಣಬಹುದು ಎಂಬುದು. ಇದನ್ನು ಭಾವನಾತ್ಮಕ ತಕರಾರೆಂದು ತಳ್ಳಿಹಾಕಬಹುದು.

ಪ್ರಾಂತೀಯ ಹಣಕಾಸಿನ ಪರಿಮಿತಿಯ ವಿಸ್ತರಣೆಯ ಐದನೆಯ ಹಾಗೂ ಕೊನೆಯ ಸಲಹೆಯು, ಭಾರತ ಸರ್ಕಾರದ ಜವಾಬ್ದಾರಿಗೆ ಅಂತಹ ಹಾನಿಕಾರಕವಾಗಿರಲಿಲ್ಲ. ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳಿಗೆ ಒಂದೇ ಖಜಾನೆಯ ವ್ಯವಸ್ಥೆ ಇರಲು ಯಾವ ಕಾರಣವೂ ಇರಲಿಲ್ಲ. ಒಂದು ವ್ಯಾಪಾರೀ ಸಂಸ್ಥೆಯು ತನ್ನ ಗಲ್ಲೆಯಲ್ಲಿಯ ಹಣವನ್ನು ಮಿತವ್ಯಯವಾಗಿ ಬಳಸುವಂತೆ, ಸಾರ್ವಜನಿಕ ಖಜಾನೆಯ ಪದ್ಧತಿ ಹಣದ ಮೊತ್ತದ ಮಿತವ್ಯಯಕ್ಕೆ ಅನುಕೂಲ ಮಾಡಿಕೊಡುತ್ತದೆ. ಇದು ಪ್ರತಿಯೊಂದು ಸರ್ಕಾರದ ಕರ್ತವ್ಯವಾಗಿದೆ. ಆದರೆ ಒಂದು ವೇಳೆ ಸಾರ್ವಜನಿಕ ಖಜಾನೆಯು ಹಣದ ಉಪಯೋಗದಲ್ಲಿ ಅಡಚಣೆ

---

೧. ಅದೇ ಸಂ. IV ಪ್ರ. ೧೫೧೦೦, ೧೬೭೯೧

೨. ಈ ವಿಷಯದ ಬಗ್ಗೆ ಪ್ರೊ. ಉರ್ದಾಲ್ ರವರ ದಿ ಫ್ರೀ ಸಿಸ್ಟಮ್ ನೋಡಿ

೩. 'ಆರ್.ಸಿ.ಡಿ.' ಮಿನಿಟ್ಸ್ ಆಫ್ ಎವಿಡೆನ್ಸ್ ಸಂ. X ಪ್ರ. ೪೪೮೬೬

ಒಡ್ಡಿದರೆ, ಸ್ವಾತಂತ್ರ್ಯದ ಲಾಭ, ಪ್ರತ್ಯೇಕವಾದ ಖಜಾನೆ ಪದ್ಧತಿಯಿಂದಾಗುವ ಕಷ್ಟಕ್ಕಿಂತ ಹೆಚ್ಚಾಗಿರುತ್ತಿತ್ತು. ಪ್ರತ್ಯೇಕ ಖಜಾನೆ ಹಾಗೂ ಪ್ರತ್ಯೇಕ ಹಣ ಒದಗಿಸುವ ಪದ್ಧತಿ ಹೊಂದಿದ, ಕೇಂದ್ರ ಸರ್ಕಾರದ ಮೊತ್ತದಿಂದ ಪ್ರಾಂತ್ಯಗಳ ಮೊತ್ತದ ವಿಂಗಡಣೆಯನ್ನು ಪ್ರಾಂತೀಯ ಸರ್ಕಾರಗಳು ಕೇಳಲಿಲ್ಲ. ಏಕೆಂದರೆ ಬಹುಶಃ ಅಂಥ ಪ್ರಸ್ತಾಪ ಪ್ರಾಂತೀಯ ಮೊತ್ತವನ್ನು ಬೇರ್ಪಡಿಸುವುದರಿಂದ, ಇದಕ್ಕೆ ಭಾರತ ಸರ್ಕಾರವು ಕ್ರಮಬದ್ಧತೆಯ ತಕರಾರು ತೆಗೆಯಬಹುದೆಂದು ಅವುಗಳು ಮೊದಲೆ ತಿಳಿದುಕೊಂಡಿದ್ದವು. ಭಾರತ ಸರ್ಕಾರದ ಅನುಮತಿ ಇಲ್ಲದೆ ತಮ್ಮ ಮೊತ್ತದ ಭಾಗವನ್ನು ಒಂದು ಮಿತಿಯವರೆಗೆ ಖರ್ಚುಮಾಡುವ ಅಧಿಕಾರವನ್ನು ಅವುಗಳು ಕೇಳಿದ್ದವು. ಈ ಸೂಚನೆ ವಿವೇಚನೆಯುಳ್ಳದ್ದೆಂದು ಒಪ್ಪಲಾಯಿತು.[೧] ಏಕೆಂದರೆ ಇದರ ಪರಿಣಾಮದಿಂದ ಹಣ ಒದಗಿಸುವ ಭಾರತ ಸರ್ಕಾರದ ಹತೋಟಿಯ ಅಧಿಕಾರ ಕಡಿಮೆಯಾಗದೆ, ದೇಶದ ನಗದು ನಿಧಿ ಹೆಚ್ಚಳವಾಗಬಹುದಾಗಿತ್ತು.

ಭಾರತ ಸರ್ಕಾರದ ಕ್ರಮಬದ್ಧ ಜವಾಬ್ದಾರಿಗಳ ತೀರಾ ಸಂಕುಚಿತ ಅರ್ಥವಿವರಣೆಯಿಂದ ಪ್ರಾಂತೀಯ ಹಣಕಾಸಿನ ವ್ಯಾಪ್ತಿ ಮಿತಿಗೊಳಿಸಲ್ಪಟ್ಟಿದೆಯೆಂಬುದು ಸ್ಪಷ್ಟವಾಗುತ್ತದೆ. ಭಾರತ ಸರ್ಕಾರದ ಕ್ರಮಬದ್ಧ ಸ್ಥಾನಕ್ಕೆ ಧಕ್ಕೆಬಾರದ ಹಾಗೆ ಅವುಗಳು ಬೇಡಿದ ಬದಲಾವಣೆಗಳನ್ನು ಮಾಡಲು ಸಾಧ್ಯವಿತ್ತೆಂದು ಪ್ರಾಂತೀಯ ಸರ್ಕಾರಗಳು ಮಾಡಿದ ಸೂಚನೆಗಳ ವಿಶ್ಲೇಷಣೆಯಿಂದ ಸ್ಪಷ್ಟವಾಗುತ್ತದೆ. ಅಂಥ ರಿಯಾಯಿತಿಗಳು ಪ್ರಾಂತೀಯ ಹಣಕಾಸನ್ನು ಸ್ವಾವಲಂಬಿಯಾಗಿ, ಸ್ವಯಮಾಧಿಕಾರಿಗಳನ್ನಾಗಿ ಮಾಡಬಹುದಾಗಿತ್ತು. ರೂಢಿಗಳ ಮೇಲೆ ಈ ಪದ್ಧತಿ ಅವಲಂಬಿಸಿದ್ದರೂ ಅದರ ಲಾಭಗಳು ಮಾತ್ರ ಅದು ಕಾಯಿದೆ ಮೇಲೆ ಅವಲಂಬಿಸಿದೆಯೆಂಬಂತೆ ನಿಜವಾಗಿರುತ್ತಿದ್ದವು.

ಹಣಕಾಸಿನ ವ್ಯವಸ್ಥೆ ಕೇವಲ ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳಿಗೆ ಸಂಬಂಧಪಟ್ಟ ವಿಷಯವಲ್ಲವೆಂದು ತಿಳಿಯುವ ಕಾಲ ಬಂದಿತ್ತು. ೧೮೭೦ ರಲ್ಲಿ ಅದರ ಉಪದೇಶಗಳನ್ನು ತಿರಸ್ಕರಿಸಿದ ಆದರೆ ಈಗ ದೇಶದ ಹಣಕಾಸಿನ ಸಂಪತ್ತುಗಳ ವಿತರಣೆಯಲ್ಲಿ ತನ್ನ ಧ್ವನಿ ಇರಬೇಕೆಂಬ, ಮೂರನೆಯ ಪಕ್ಷ ಹುಟ್ಟಿಕೊಂಡಿತು. ಭಾರತದ ಕರ ಕೊಡುವವನ ಶಕ್ತಿ ಬೆಳೆದದ್ದರಿಂದ ಅವನು ವಹಿಸಬೇಕೆಂದಿರುವ ಪಾತ್ರವನ್ನು ಅವನು ವಹಿಸಿಕೊಳ್ಳಲು ಅವಕಾಶ ನೀಡಲು ಅಧಿಕಾರದ ಮೇಲೆ ಈ ಮೂರನೆಯ ಪಕ್ಷ ಒತ್ತಡತಂದಿತು. ಈ ಘಟನೆಯಿಂದಾದ ಬದಲಾವಣೆಗಳು, IV ಭಾಗದ ವಿಷಯವಾಗುತ್ತವೆ.

---

೧. 'ಆರ್.ಸಿ.ಡಿ.', ಮಿನಿಟ್ಸ್ ಆಫ್ ಎವಿಡೆನ್ಸ್ ಸಂ. X ಪ್ರ. ೪೪೯೦೦.

# ಭಾಗ – IV

# ಭಾರತ ಸರ್ಕಾರದ ೧೯೧೯ನೆಯ ಕಾಯಿದೆಯ ಪ್ರಕಾರ ಪ್ರಾಂತೀಯ ಹಣಕಾಸು

## ಅಧ್ಯಾಯ ೧೦

## ಬದಲಾವಣೆಯ ಆವಶ್ಯಕತೆ

ಸಂಸದೀಯ ಸರಕಾರದ ವ್ಯವಸ್ಥೆಯನ್ನು ಎತ್ತಿ ಹಿಡಿಯುವುದಕ್ಕಾಗಿ ಹಲವಾರು ಬಾರಿ ಅದನ್ನು ಅಧ್ಯಕ್ಷೀಯ ಸರ್ಕಾರದೊಂದಿಗೆ ಹೋಲಿಸಲಾಗುತ್ತದೆ.[೧] ಸಂಸದೀಯ ಸರ್ಕಾರದಷ್ಟು ಸಮರ್ಥವಾಗಿ ಬೇರಾವ ವ್ಯವಸ್ಥೆಯೂ ಜನತೆಯ ಸಂಕಲ್ಪವನ್ನು ಆ ಜನತೆಯನ್ನು ಪ್ರತಿನಿಧಿಸುವವರ ಕೈಗೆ ಅಧಿಕಾರವನ್ನು ನೀಡುವುದಿಲ್ಲ.[೨] ಅಂದರೆ, ಇದು ಒಮ್ಮತದ ಆಡಳಿತವಾಗುತ್ತದೆ. ಶಾಸನ ಸಭೆಯಲ್ಲಿನ ಬಹುಮತಕ್ಕೆ ಜವಾಬ್ದಾರರಾಗಿರುವ ಹಾಗೂ ಅದರೊಡನೆ ಸಹಮತವಿರುವವರ ಆಡಳಿತವಾಗುತ್ತದೆ. ಈ ವ್ಯವಸ್ಥೆಯು ಮಾತ್ರ ಸುಭದ್ರ ಆಡಳಿತ ನಡೆಸಲು ಅತ್ಯಗತ್ಯವಾದ ಶಕ್ತಿಯುತವಾದ ಕಾರ್ಯಾಂಗವನ್ನು ಸರ್ಕಾರಕ್ಕೆ ನೀಡುತ್ತದೆ. ಸರ್ಕಾರದ ಉಚ್ಚಸ್ಥಾನಗಳಲ್ಲಿರುವವರು ಅವರವರ ಕ್ರಿಯಾಹೀನತೆಯಿಂದಾದ ಅಸಫಲತೆಗಳ ಹೊಣೆಯನ್ನು ಹೊರುವಂತೆ ಮಾಡುತ್ತದೆ. ಶಾಸನಕ್ರಿಯೆಯಲ್ಲಿ ಹಾಗೂ ಆಡಳಿತದ ವಿಷಯದಲ್ಲಿ ಶಾಸಕಾಂಗದ ಶ್ರೇಷ್ಠತೆಯನ್ನು ಎತ್ತಿಹಿಡಿಯುತ್ತದೆ. ಅದರಿಂದ ಜನಜೀವನ ಸುಗಮವಾಗುತ್ತದೆ – ಎಂದೆಲ್ಲಾ ಸಂಸದೀಯ ಸರ್ಕಾರದ ಪರವಾಗಿ ಹೇಳಲಾಗುತ್ತದೆ. ಸುವ್ಯವಸ್ಥೆಯು ದಬ್ಬಾಳಿಕೆಯಾಗಿ ಅವನತಿ ಹೊಂದುವುದನ್ನು ಅಥವಾ ಶಾಂತಿಯ ಹೆಸರಿನಲ್ಲಿ ಪ್ರಗತಿಗೆ ಅಡ್ಡಬರುವುದನ್ನು ಮತ್ತಾವ ಪದ್ಧತಿಯ ಸರ್ಕಾರವೂ ಪರಿಣಾಮಕಾರಿಯಾಗಿ ಇದರ ಹಾಗೆ ತಡೆಯಲಾರದು ಎಂದೂ ವಾದಿಸಲಾಗುತ್ತದೆ. ಸುವ್ಯವಸ್ಥಿತ ಪ್ರಗತಿಯನ್ನು ಸಾಧಿಸುವಲ್ಲಿ ಸಂಸದೀಯ ಸರ್ಕಾರ ತನ್ನ ಮೇಲ್ಮೈಯನ್ನು ತೋರಿಸಿದೆ. ಬ್ರಿಟಿಷ್ ಸಂವಿಧಾನದ ಪ್ರಗತಿಯಲ್ಲಿ ಇದು ಆಕಸ್ಮಿಕ ಬೆಳವಣಿಗೆಯಾದರೂ, ರಾಜಕೀಯ ಅಸ್ಥಿರತೆಗಳಿಂದಾಗಿ ತಮ್ಮ ವ್ಯವಸ್ಥೆಯನ್ನು ಬದಲಿಸುವ ಆವಶ್ಯಕತೆಯಿದ್ದ ಅನೇಕ ದೇಶಗಳು ಸಂಸದೀಯ ಸರ್ಕಾರ ಪದ್ಧತಿಯನ್ನೇ ಅಳವಡಿಸಿಕೊಂಡಿವೆ.

ಕಾರ್ಯಾಂಗವು ಶಾಸನಸಭೆಯ ಅಂಗವೆಂಬುದು ಸಂಸದೀಯ ಸರ್ಕಾರದ ಲಕ್ಷಣವೆಂದು ಹೇಳಬಹುದಾದರೆ, ೧೮೫೮ರಿಂದ ಇದ್ದ ಭಾರತ ಸರ್ಕಾರವು ಸಂಸದೀಯ ಪದ್ಧತಿ ಸರ್ಕಾರದ ಹೋಲಿಕೆಯುಳ್ಳದ್ದೆಂದು ಹೇಳಬಹುದು. ಭಾರತದ ಸಂವಿಧಾನಕ್ಕೆ ಇಂಥ ಲಕ್ಷಣಗಳಿಲ್ಲವೆಂದು ಹೇಳಲಿಕ್ಕಾಗದು. ಏಕೆಂದರೆ ಸಂವಿಧಾನದ ನಿಯಮದ ಪ್ರಕಾರ ಅಧಿಕ ಸದಸ್ಯರು (ಶಾಸಕ) ಮತ್ತು ಸಾಮಾನ್ಯ (ಕಾರ್ಯಾಂಗ)

---

೧. ಜೇಮ್ಸ್ ಬ್ರೈಸ್ : *ದಿ ಅಮೆರಿಕನ್ ಕಾಮನ್‌ವೆಲ್ತ್*, ೧೯೧೦. ಸಂ. I, ಅಧ್ಯಾಯ XX

೨. ನೋಡಿ: ಸರ್ ಸಿಡ್ನಿಲೋ *ದ ಗವರ್ನೆನ್ಸ್ ಆಫ್ ಇಂಗ್ಲೆಂಡ್*, ೧೯೧೮, ಅಧ್ಯಾಯ III (ಉದ್ಧೃತ).

ಸದಸ್ಯರು ಕೂಡಿಯೇ ಶಾಸನಸಭೆಯಾಗುತ್ತದೆ. ಬ್ರಿಟಿಷ್ ಭಾರತದಲ್ಲಿ ಶಾಂತಿ, ಸುವ್ಯವಸ್ಥೆ ಹಾಗೂ ಒಳ್ಳೆಯ ಸರ್ಕಾರವಿರಲು ಕಾಯಿದೆಗಳನ್ನು ಶಾಸನಸಭೆ ಮಾಡುತ್ತದೆ.[೧] ಪರಿಣಾಮಗಳಿಂದ ಅದನ್ನು ತೂಗಿನೋಡಿದರೆ, ನ್ಯಾಯವಾಗಿ ತಾನು ಸೇರಬೇಕಾದ ಸರ್ಕಾರಿ ಪದ್ಧತಿಯ ವರ್ಗಕ್ಕಿಂತ, ಭಾರತದ ಪದ್ಧತಿ, ಕೆಳಮಟ್ಟಕ್ಕೆ ಬರುತ್ತದೆ. ಬೇರೆ ದೇಶಗಳ ಸಂಸದೀಯ ಸರ್ಕಾರಗಳಲ್ಲಿ ಶಾಸಕಾಂಗಕ್ಕೆ ಕಾರ್ಯಾಂಗವು ವಿಧೇಯತೆ ತೋರಿಸಿದರೆ, ಭಾರತದಲ್ಲಿ ಕಾರ್ಯಾಂಗವು ಶಾಸಕಾಂಗವನ್ನು ತಡೆಹಿಡಿಯುವ ಅಥವಾ ಮೀರುವ ದಾಖಲೆ ಇದೆ. ಶಾಸನಸಭೆಯ ಕಲಾಪಗಳನ್ನು ನೋಡಿದಾಗ ಕಾರ್ಯಾಂಗವು ಜನರ ಸಂಕಲ್ಪಗಳಿಗೆ ಗೌರವವನ್ನು ತೋರಿಸದೆ ಇರುವುದು ಗೊತ್ತಾಗುತ್ತದೆ.[೨] ಶಾಸನ ಸಭೆಯು ಮಂಡಿಸಿದ ಸುಧಾರಣೆಗಳನ್ನು ಕಾರ್ಯಾಂಗ ತಿರಸ್ಕರಿಸಿದೆ.

ಭಾರತದ ಸಂಸದೀಯ ಪದ್ಧತಿಯು ಶೂನ್ಯವಾಗಿತ್ತೆಂಬುದಕ್ಕೆ ಕಾರಣ ಇದು ಸಂಸದೀಯ ಕಾರ್ಯಾಂಗವಿಲ್ಲದ ಸಂಸದೀಯ ಪದ್ಧತಿ ಎಂಬುದು. ಈ ವ್ಯವಸ್ಥೆಯಲ್ಲಿ ಕಾರ್ಯಾಂಗವು ಶಾಸನಸಭೆಗೆ ಜವಾಬ್ದಾರಿಯಾಗಿಲ್ಲ ಮತ್ತು ಅದು ಅದನ್ನು ಶಾಸನಸಭೆಯು ತೆಗೆದುಹಾಕುವಂತಿಲ್ಲ. ಭಾರತದ ಶಾಸನಸಭೆಯು ಭಾರತದ ಕಾರ್ಯಾಂಗವನ್ನು ನೇಮಿಸಲಾರದು ಹಾಗೂ ವಜಾಗೊಳಿಸಲಾರದು. ಶಾಸನಸಭೆಯಿಂದ ವಜಾಮಾಡಲ್ಪಡಬಹುದೆಂಬ ಹೆದರಿಕೆಯಿಲ್ಲದಿರುವುದರಿಂದ ಭಾರತದ ಕಾರ್ಯಾಂಗವು ತನ್ನ ಮನಬಂದಂತೆ ಯುದ್ಧ ಸಾರಿತು ಅಥವಾ ಸಂಧಾನಗಳನ್ನು ಮಾಡಿಕೊಂಡಿತು. ಶಾಸನಸಭೆಯ ಸಂಕಲ್ಪಗಳ ಬಗೆಗೆ ಎಳ್ಳಷ್ಟೂ ಮನದಳುಕು ತೋರದೆ, ಅದು ತನಗೆ ತಿಳಿದಂತೆ ಕರ ವಿಧಿಸಿತು ಹಾಗೂ ಖರ್ಚುಮಾಡಿತು. ತನ್ನ ಇಚ್ಛೆಯಂತೆ ಕಾರ್ಯಮಾಡಿತು ಅಥವಾ ಕಾರ್ಯ ಮಾಡದೆ ಹೋಯಿತು. ಆದರೂ ಶಾಸನಸಭೆಯಿಂದ ಸಂಸದೀಯ ಖಂಡನೆಗೆ ಒಳಗಾಗುವ ಹೆದರಿಕೆ ಅದಕ್ಕೆ ಇರಲಿಲ್ಲ. ಭಾರತದ ಇಂತಹ ಸಂಸದೀಯ ಸರ್ಕಾರ ಪದ್ಧತಿಗೆ ಹತ್ತಿರದ ಪದ್ಧತಿಯನ್ನು ೧೭೮೨ ರಿಂದ ೧೮೦೦ರ ವರೆಗೆ ಇದ್ದ ಐರಿಷ್ ಶಾಸನಸಭೆಯ ಸ್ಥಿತಿಯಲ್ಲಿ ಕಾಣಬಹುದು. ವಿಚಿತ್ರವೆಂದರೆ, ಸಾಮಾನ್ಯವಾಗಿ ಗ್ರ್ಯಾಟನ್ ಶಾಸನಸಭೆಯೆಂದು ಪರಿಚಯವಿದ್ದ ಈ ಐರಿಷ್ ಶಾಸನಸಭೆ ತನ್ನ ಅವಧಿಯಲ್ಲಿ ಪರಮಾಧಿಕಾರ ಹೊಂದಿದ್ದ ಶಾಸನಸಭೆಯಾಗಿದ್ದರೂ, ಐರಿಷ್ ಕಾರ್ಯಾಂಗವು ಯಾವ ದೃಷ್ಟಿಯಲ್ಲಿಯೂ ಸಂಸದೀಯ ಕಾರ್ಯಾಂಗವಾಗಿರಲಿಲ್ಲ. ಐರಿಷ್ ಕಾರ್ಯಾಂಗವು ಐರಿಷ್ ಶಾಸನಸಭೆಯಿಂದ ನೇಮಕ ಹೊಂದುವ ಅಥವಾ ವಜಾ ಮಾಡಲ್ಪಡುವ ಬದಲು, ಇಂಗ್ಲಿಷ್

೧. ಪ್ರಸಿದ್ಧ ವಕೀಲ ಸರ್ ಭಾಷ್ಯಂ ಅಯ್ಯಂಗಾರ್‌ರವರು ೧೯೦೮ರಲ್ಲಿ ಲಾರ್ಡ್ ಮಿಂಟೋರವರ ಸುಧಾರಣೆಗಳ ಬಗ್ಗೆ ಸಿದ್ಧಪಡಿಸಿದ ಬಹುಮುಖ್ಯವಾದ ಟಿಪ್ಪಣಿಯನ್ನು ನೋಡಿ.

೨. ಎನ್.ಸಿ. ಕೇಳ್ಕರ್‌ರವರು 'ದಿ ಕೇಸ್ ಫಾರ್ ಇಂಡಿಯನ್ ಹೋಮ್ ರೂಲ್', ಗ್ರಂಥ ಪು. ೮೧ರ ಈ ಕೆಳಗಿನ ಪಟ್ಟಿಯಿಂದ ಈ ಸಂಗತಿಯನ್ನು ಪುಷ್ಟೀಕರಿಸಬಹುದು:–

| ವಿಧಾನ ಪರಿಷತ್ತು | ಮಂಡಿಸಲಾದ ನಿರ್ಣಯಗಳ ಸಂಖ್ಯೆ | ಹಿಂತೆಗೆದು ಕೊಳ್ಳಲಾದ ನಿರ್ಣಯಗಳ ಸಂಖ್ಯೆ | ತಿರಸ್ಕೃತವಾದ ನಿರ್ಣಯಗಳ ಸಂಖ್ಯೆ | ಸ್ವೀಕೃತವಾದ ನಿರ್ಣಯಗಳ ಸಂಖ್ಯೆ |
|---|---|---|---|---|
| ಸರ್ವೋಚ್ಚ | ೩ | ೨ | ೧ | ೦ |
| ಮದರಾಸು | ೩೨ | ೨೬ | ೬ | ೦ |
| ಬಂಗಾಳ | ೩೮ | ೨೬ | ೧೨ | ೦ |
| ಯು.ಪಿ. | ೨೨ | ೧೦ | ೧೨ | ೦ |
| ಬಿಹಾರ್ ಮತ್ತು ಒರಿಸ್ಸಾ | ೫ | ೫ | ೦ | ೦ |
| ಸಿ.ಪಿ. | ೪ | ೨ | ೨ | ೦ |

ಮಂತ್ರಿಮಂಡಲದ ಉಪದೇಶದ ಮೇರೆಗೆ ಪ್ರಭುತ್ವದಿಂದ ನೇಮಕಗೊಳ್ಳುತ್ತಿತ್ತು ಹಾಗೂ ವಜಾ ಮಾಡಲ್ಪಡುತ್ತಿತ್ತು. ಅದೇ ರೀತಿಯಾಗಿ ಭಾರತದ ಕಾರ್ಯಾಂಗವೂ ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ನ ಉಪದೇಶದ ಮೇರೆಗೆ ಪ್ರಭುತ್ವದಿಂದ ನೇಮಕವಾಗುತ್ತಿತ್ತು ಅಥವಾ ವಜಾ ಆಗುತ್ತಿತ್ತು. ಸೆಕ್ರೆಟರಿ ಆಫ್ ಸ್ಟೇಟ್ ಇಂಗ್ಲಿಷ್ ಮಂತ್ರಿಮಂಡಲದ ಸದಸ್ಯನಾಗಿದ್ದು ಭಾರತದ ಶಾಸನಸಭೆಗೆ ಜವಾಬ್ದಾರನಾಗಿರಲಿಲ್ಲ.

ಭಾರತದ ಕಾರ್ಯಾಂಗವು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಜವಾಬ್ದಾರವಾಗಿದ್ದು ಅವನ ಮುಖಾಂತರ ಬ್ರಿಟಿಷ್ ಶಾಸನಸಭೆಗೆ ಜವಾಬ್ದಾರವಾಗಿದೆ ಎಂದು. ಮಿ॥ ಫಿಷರ್ ಅವರು ಹೇಳಿದ್ದನ್ನು ಇಲ್ಲಿ ಮರೆಯುವಂತಿಲ್ಲ.[೧]

"ಭಾರತದ ವ್ಯವಹಾರಗಳು ಭಾರತ ಸರ್ಕಾರದ ಕೈಯಲ್ಲಿ ಇವೆ. ಪ್ರಸ್ತಾವನೆಗಳು ಭಾರತ ಸರ್ಕಾರದಿಂದ ಲಂಡನ್ನಿಗೆ ಬರಬಹುದು ಮತ್ತು ಸಾಮ್ರಾಜ್ಯ ಸರ್ಕಾರದಿಂದ ತಿರಸ್ಕೃತವಾಗಬಹುದು. ಇಂಡಿಯಾ ಆಫೀಸಿನಲ್ಲಿ, ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಭಾರತದ ನೀತಿಯು ರೂಪಿಸಲ್ಪಡಬಹುದು. ಭಾರತ ಸರ್ಕಾರದಿಂದ ವಿರೋಧ ಬಾರದಿದ್ದಲ್ಲಿ, ಸೆಕ್ರೆಟರಿ ಆಫ್ ಸ್ಟೇಟ್ ಭಾರತದ ವ್ಯವಹಾರದ ಮೇಲೆ ತನ್ನ ಪ್ರಭಾವ ಬೀರಬಲ್ಲನು. ಭಾರತದ ಆಡಳಿತವರ್ಗದ ವಿರೋಧವಾಗಿ ಯಾವ ಕಾನೂನನ್ನೂ ಭಾರತದ ಮೇಲೆ ಹೇರಲಿಕ್ಕಾಗದು ಎಂಬಲ್ಲಿ ಭಾರತದ ಅಧಿಕೃತ ಅಭಿಪ್ರಾಯವು ನಿರ್ಣಾಯಕವಾಗುತ್ತದೆ."

ಜನರು ತಪ್ಪು ಎಂದು ಭಾವಿಸಿದ ಕೆಟ್ಟ ಕೆಲಸವನ್ನು ಭಾರತದಲ್ಲಿನ ಕಾರ್ಯಾಂಗವು ಮಾಡದಂತೆ ತಡೆಯಲು ಮತ್ತು ಜನರಿಗೆ ಒಳ್ಳೆಯದೆಂದು ಅದು ಭಾವಿಸಿದ್ದನ್ನು ಅದಕ್ಕೆ ಮಾಡಹೇಳಲು ಸೆಕ್ರೆಟರಿಗೆ ಒಲವು ಇರಲಿಲ್ಲ.[೨] ಪ್ರತಿಯೊಬ್ಬ ಸದಸ್ಯನೂ ಭಾರತದ ಸದಸ್ಯನೆಂದು ತಿಳಿದ ಬ್ರಿಟಿಷ್ ಶಾಸನ ಸಭೆ, ಭಾರತದ ಕಾರ್ಯನಿರ್ವಾಹಕ ಕಾರ್ಯವನ್ನು ಪರಿಶೀಲನೆಗೊಳಪಡಿಸುತ್ತದೆಯೆಂದು ಹೇಳಲಿಕ್ಕಾಗದು.[೩]

---

೧. ಫಿಷರ್, ಹೆಚ್.ಎ.ಎಲ್. ಸಾಮ್ರಾಜ್ಯದ ಆಡಳಿತದ ಮೇಲೆ ತನ್ನ *'ದಿ ಎಂಪೈರ್ ಅಂಡ್ ದಿ ಫ್ಯೂಚರ್'* ಗ್ರಂಥದಲ್ಲಿ, ೧೯೧೬ ಪು. ೫೮.

೨. ಇಂಡಿಯಾದ ಕಾರ್ಯಾಂಗದ ವಿರುದ್ಧ ಸೆಕ್ರೆಟರಿ ಆಫ್ ಸ್ಟೇಟ್‌ರು ತಾಳಿದ ನಿಲುವೆಂದರೆ ಪಂಜಾಬ್ ಒಳಚರಂಡಿ ಮತ್ತು ಕಾಲುವೆಯ ಕಾಯಿದೆ ಮತ್ತು ೧೮೭೫ರ ಭಾರತೀಯ ಕಾಯಿದೆ. ಇವುಗಳಲ್ಲಿ ಎರಡನೆಯದು ಭಾರತದ ಹಿತಾಸಕ್ತಿ ಮಾರಕವಾಗಿತ್ತು.

೩. ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ರವರ ಸಂಬಳವನ್ನು ಭಾರತದ ಆದಾಯ ಮೂಲಗಳಿಂದ ಕೊಡಲಾಗುತ್ತಿದ್ದುದರಿಂದ ವಸಾಹತು ಕಾರ್ಯದರ್ಶಿಯ ವಿಷಯದಲ್ಲಿ ಸಂಸತ್ತಿಗೆ ನಿಯಂತ್ರಣಾಧಿಕಾರವಿದ್ದಂತೆ ಅವರ ಕಾರ್ಯಗಳ ವಾರ್ಷಿಕ ವಿಮರ್ಶೆಮಾಡುವ ಅವಕಾಶ ಸಂಸತ್ತಿಗೆ ಇರಲಿಲ್ಲ. ಸಾಮಾನ್ಯವಾಗಿ ವಿನಿಯೋಗ ಮಸೂದೆಯ ಎರಡನೆಯ ಪಠನವಾದ ಮೇಲೆ ಕೊನೆಯಲ್ಲಿ ಭಾರತದ ಮುಂಗಡ ಪತ್ರವನ್ನು ಸಂಸತ್ತಿಗೆ ಸಲ್ಲಿಸಲಾಗುತ್ತಿತ್ತು. ಸ್ವಲ್ಪ ಔಪಚಾರಿಕ ಚರ್ಚೆಯನಂತರ ಭಾರತದ ಲಿಖಿತ ಪತ್ರದಲ್ಲಿ ಒಟ್ಟು ಆದಾಯ ಮತ್ತು ವೆಚ್ಚಗಳನ್ನು ತೋರಿಸಲಾಗಿದೆ ಎಂಬ ನಿರ್ಣಯವನ್ನು ಸಂಸತ್ತು ಅಂಗೀಕರಿಸುತ್ತಿತ್ತು. ಆದರೆ ಸಂಸತ್ತು ತನ್ನ ನಿಯಂತ್ರಣಾಧಿಕಾರವನ್ನು ಹೆಚ್ಚಿಸಿಕೊಳ್ಳುವ ಪ್ರಯತ್ನ ಮಾಡಲೇ ಇಲ್ಲ. ಆದರೆ ೧೮೭೩ರಲ್ಲಿ ಮಿಸ್ಟರ್ ಆರ್.ಎನ್. ಫೌಲರ್‌ರವರು ಭಾರತದ ವ್ಯವಹಾರಗಳನ್ನು ಸಂಪೂರ್ಣವಾಗಿ ಚರ್ಚಿಸಲು ಅನುಕೂಲವಾಗುವಂತೆ ಹಣಕಾಸಿನ ವಿವರಗಳನ್ನು ಸರಿಯಾದ ಸಮಯದಲ್ಲಿ ಮಂಡಿಸಬೇಕೆಂಬ ನಿರ್ಣಯವನ್ನು ಮಂಡಿಸಿದರು. ಪುನಃ ೧೮೮೩ರಲ್ಲಿ ಫೌಲರ್‌ರವರು ಇದೇ ನಿರ್ಣಾಯವನ್ನು ಮಂಡಿಸಿದರು. ಆದರೆ ಈ ಎರಡೂ ಪ್ರಯತ್ನಗಳು ವಿಫಲವಾದವು. ಪುನಃ ೧೮೯೯ರಲ್ಲಿ ಇಂತಹದೇ ನಿರ್ಣಯವನ್ನು ಮಿಸ್ಟರ್ ಕ್ಲಾಡ್‌ವೆಲ್‌ರವರು ಮಂಡಿಸಿದರು. ಇದರಲ್ಲಿ ಅವರು ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ರವರ ಸಂಬಳ ಸಾರಿಗೆಗಳನ್ನು ಬ್ರಿಟಿಷ್ ಅಂದಾಜುಗಳಲ್ಲಿ ಸೇರಿಸಬೇಕೆಂಬ ಅಂಶವನ್ನು ಸೇರಿಸಿದ್ದರು. ಅಂದಿನ ಸೆಕ್ರೆಟರಿ ಆಫ್ ಸ್ಟೇಟ್‌ರವರಾಗಿದ್ದ ಫೌಲರ್‌ರವರು ಇದನ್ನು ವಿರೋಧಿಸಿದ್ದರಿಂದ ಬಿದ್ದುಹೋಯಿತು. ೧೯೧೯ ರ ಭಾರತ ಸರ್ಕಾರ ಕಾಯಿದೆಯ ನಿಯಮಗಳ ಪ್ರಕಾರ ಸೆಕ್ರೆಟರಿ ಆಫ್ ಸ್ಟೇಟ್‌ರವರ ಸಂಬಳ ಸಾರಿಗೆಗಳನ್ನು ಬ್ರಿಟಿಷ್ ಅಂದಾಜಿನಲ್ಲಿ ಸೇರಿಸಲಾದಾಗಿನಿಂದ ಭಾರತದ ವಿಷಯಗಳ ಚರ್ಚೆಗೆ ಸಂಸತ್ತಿಗೆ ಹೆಚ್ಚು ಅವಕಾಶ ದೊರೆತಿದೆ.

ಅದೂ ಅಲ್ಲದೆ ಕೆಲವೊಂದು ಸಂದರ್ಭದಲ್ಲಿ ಭಾರತದ ವ್ಯವಹಾರದಲ್ಲಿ ಅದು ಹಸ್ತಕ್ಷೇಪ ಮಾಡಿದಾಗ ಅದು ಭಾರತದ ಜನರ ಹಿತಾಸಕ್ತಿಗೆ ಹಾನಿಮಾಡಿದೆ.[೧] ಭಾರತದ ವ್ಯವಹಾರದ ಬಗೆಗಿನ ಆಸಕ್ತಿಯು ದೇಶದ ವ್ಯವಹಾರವು ಕಂಪನಿಯ ಅಧೀನದಲ್ಲಿದ್ದಾಗಿನದಕ್ಕಿಂತ, ಬ್ರಿಟಿಷ್ ಪ್ರಭುತ್ವದ ಆಡಳಿತದ ಕಾಲದಲ್ಲಿ ಕಡಿಮೆಯಾಗಿದೆ ಎಂಬುದು ನಿಸ್ಸಂಶಯ[೨]. ಭಾರತದ ವ್ಯವಹಾರಗಳಲ್ಲಿ ಬ್ರಿಟಿಷ್ ಸಂಸತ್ತಿನ ಪ್ರಭಾವ ಬಹಳಷ್ಟು ಬದಲಾಯಿತು. ಅಂದರೆ, ಹಿಂದೆ ಇದ್ದುದಕ್ಕಿಂತ ಇನ್ನೂ ಕೆಳಕ್ಕೆ ಇಳಿಯಿತು ಎನ್ನಬಹುದು[೩]. ತನ್ನ ಕಾರ್ಯಾಂಗದ ಮೇಲೆ ಅತಿಯಾದ ಪ್ರಭಾವವನ್ನು ಬೀರುತ್ತಿದ್ದ ಬ್ರಿಟಿಷ್ ಸಂಸತ್ತು, ಸಾರ್ವಜನಿಕ ಅಭಿಪ್ರಾಯದ ವಿರುದ್ಧ ಹೋಗದಂತೆ ಅದನ್ನು ತಡೆಯುವ ಬದಲು, ಜನತೆಗೆ ವಿರೋಧವಾದ ಒಂದು ಶಕ್ತಿಯನ್ನಾಗಿ ಬೆಳೆಸಿದೆ.

ಭಾರತದ ಕಾರ್ಯಾಂಗದ ಮೇಲಿನ ಸೆಕ್ರೆಟರಿ ಆಫ್ ಸ್ಟೇಟ್ ಹಾಗೂ ಶಾಸನಸಭೆಯ ಹತೋಟಿಯು ಕೇವಲ ಹೆಸರಿಗೆ ಮಾತ್ರವಾಗಿತ್ತು. ಭಾರತದ ವ್ಯವಹಾರಗಳನ್ನು ನಡೆಸುವ ಭಾರತದ ಕಾರ್ಯಾಂಗವು ನಿಜವಾಗಿ ಹತೋಟಿಗೊಳಪಡದ ಆಡಳಿತಗಾರರ ಗುಂಪಾಗಿತ್ತು. ಈ ಬೇಜವಾಬ್ದಾರಿ ಕಾರ್ಯಾಂಗವು ತನ್ನಲ್ಲಿಟ್ಟಿದ್ದ ವಿಶ್ವಾಸವನ್ನು ಹೇಗೆ ತಾನೇ ನಿರ್ವಹಿಸೀತು?

ಸುವ್ಯವಸ್ಥೆಗೆ ಪ್ರಗತಿಯನ್ನು ಭಾರತದ ಕಾರ್ಯಾಂಗವು ಬಲಿಕೊಟ್ಟಿತೆಂಬುದೇ ಈ ಪ್ರಶ್ನೆಗೆ ಉತ್ತರವು. ಶಾಸನದ ಅಥವಾ ಹಣಕಾಸಿನ ಕ್ಷೇತ್ರದಲ್ಲಿ ಅದು ಮಾಡಿದ ಕಾರ್ಯಗಳನ್ನು ಪರೀಕ್ಷಿಸಿದಾಗ ಈ ಹೇಳಿಕೆಯ ಸತ್ಯತೆಯು ಮನಸ್ಸಿಗೆ ಘಾತಿಯನ್ನುಂಟುಮಾಡುವ ಹಾಗೆ ಸ್ಪಷ್ಟವಾಗುತ್ತದೆ.

ಭಾರತದಲ್ಲಿ ಇದ್ದಂಥ ಸಾಮಾಜಿಕ ದೋಷಗಳನ್ನು ಹೊಂದಿದ್ದ ದೇಶಗಳು ಜಗತ್ತಿನಲ್ಲಿ ಬಹಳ ಕಡಿಮೆ. ಅಸ್ವಸ್ಥತೆಯನ್ನು ಪರಿಹಾರ ಮಾಡಿ ತನ್ನನ್ನು ಕಾಪಾಡಿಕೊಳ್ಳಲು ಸಮಾಜವು ಕಾಯಿದೆಯನ್ನು ಒಂದು ಸಾಧನವನ್ನಾಗಿ ಉಪಯೋಗಿಸಿಕೊಳ್ಳುತ್ತದೆ. ಹಾನಿಕರವಾದಂಥ ವೈಯಕ್ತಿಕ ಕಾಯಿದೆ ನಿಯಮ ಪ್ರಜೆಗಳ ಸಾಮಾಜಿಕ ಸಂಬಂಧವನ್ನು ರೂಪಿಸಿದೆ. ಬಹಳ ಕಾಲದಿಂದಲೂ ಜನಾಭಿಪ್ರಾಯ ಇದರ ಮುಂದುವರಿಕೆಯನ್ನು ಪ್ರತಿಭಟಿಸಿದೆ.[೪] ಲಕ್ಷಗಟ್ಟಲೆ ಪ್ರಜೆಗಳು ನಾಗರಿಕ ಹಕ್ಕುಗಳನ್ನು ಅನುಭವಿಸುವಂತೆ

೧. ಲಂಕಾಕ್‌ಷೈರ್ ಹಿತರಕ್ಷಣೆಗಾಗಿ ಭಾರತದ ಸುಂಕನೀತಿಯನ್ನು ಖಂಡಿಸಿ ೧೮೭೭ ಮತ್ತು ೧೮೭೯ರಲ್ಲಿ ಹೌಸ್ ಆಫ್ ಕಾಮನ್ಸ್‌ನ ನಿರ್ಣಯಗಳನ್ನು ನೋಡಿ.

೨. ಸಂಸತ್ತು ಈಸ್ಟ್ ಇಂಡಿಯಾ ಕಂಪನಿಯ ವ್ಯವಹಾರಗಳನ್ನು ಕಿರುಕುಳಪ್ರಾಯವಾದ ವಿಚಾರಣೆ ನಡೆಸದೆ ಅಧಿಕಾರಾವಧಿಯ ವಿಸ್ತರಣೆಯನ್ನು ಮಾಡುತ್ತಿರಲಿಲ್ಲವೆಂಬ ಅಂಶವನ್ನು ಈ ವಿಷಯ ಸಮರ್ಥನೆಯಾಗಿ ಸೂಚಿಸಬಹುದು.

೩. ಭಾರತದ ಕಾರ್ಯಾಂಗವನ್ನು ನ್ಯಾಯಾಂಗದ ಹತೋಟಿಗೆ ಒಳಪಡಿಸಿದ ಸಂಸತ್ತನ್ನು ಮತ್ತು ಕಾರ್ಯಾಂಗವನ್ನು ಶಾಸಕಾಂಗ ಮತ್ತು ನ್ಯಾಯಾಂಗಗಳೆರಡರ ನಿಯಂತ್ರಣದಿಂದ ಮುಕ್ತಗೊಳಿಸಿದ ಸಂಸತ್ತಿನೊಡನೆ ಹೋಲಿಸಿನೋಡಿ. ಭಾರತದಲ್ಲಿ ಐರೋಪ್ಯರ ಮೇಲೆ ಕಠಿಣವಾದ ನಿಯಮಗಳನ್ನು ಹೇರಿದ ಸಂಸತ್ತು ಮತ್ತು ಅವರಿಗೆ ವಿಶೇಷ ಪ್ರವೇಶಾಧಿಕಾರವನ್ನು ನೀಡುವುದೇ ಅಲ್ಲದೆ ಅವರನ್ನು ನ್ಯಾಯಾಧಿಕಾರದಿಂದ ವಿಮುಕ್ತಗೊಳಿಸಿದ ಸಂಸತ್ತಿನೊಂದಿಗೆ ಹೋಲಿಸಿ. ಹೇಸ್ಟಿಂಗ್ಸ್‌ನ ವಿರುದ್ಧ ದೋಷಾರೋಪಣೆ ಮಾಡಿದ ಸಂಸತ್ತಿನೊಡನೆ ಜೆನರಲ್ ಡೈಯರ್‌ನನ್ನು ಸಮರ್ಥಿಸಿದ ಸಂಸತ್ತಿನೊಡನೆ ಹೋಲಿಸಿರಿ.

೪. ಸತೀ ಪದ್ಧತಿ ನಿಷೇಧಿಸುವ ೧೮೨೯ರ ಬಂಗಾಲ ನಿಯಂತ್ರಣ ಕಾಯ್ದೆ, ೧೮೪೩ರ (ಗುಲಾಮಗಿರಿ ನಿಷೇಧಿಸುವ) ಕಾಯ್ದೆ V: ೧೮೫೦ರ XXI ಜಾತಿ ಅಥವಾ ಧರ್ಮವನ್ನು ಕಳೆದುಕೊಂಡಾಗ ಹಕ್ಕು ಅಥವಾ ಆಸ್ತಿಯನ್ನು ಕಸಿದುಕೊಳ್ಳುವುದನ್ನು ನಿಷೇಧಿಸುವ ಕಾಯಿದೆ : ೧೯೫೬ರ XV ಹಿಂದು ವಿಧವೆಯರಿಗೆ ಮರು ವಿವಾಹದ ಅಧಿಕಾರವನ್ನು ಕೊಡುವ ಕಾಯಿದೆ : ೧೮೬೬ರ XXI ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಹೊಂದಿದ ದೇಶೀಯರಿಗೆ ವಿವಾಹ ವಿಚ್ಛೇದನ ಹೊಂದುವ ಅವಕಾಶವನ್ನು ಕೊಡುವ ಕಾಯಿದೆ : ೧೮೭೭ರ XXVII ಅಸಹಜ ಪದ್ಧತಿಗಳನ್ನು ನಿಷೇಧಿಸುವ ಕಾಯಿದೆ : ೧೮೭೨ರ III ಕ್ರಿಶ್ಚಿಯನ್, ಜ್ಯೂ, ಹಿಂದು, ಮುಸಲ್ಮಾನ, ಜೈನ ಅಥವಾ ಸಿಖ್‌ರಲ್ಲದ ಜನರಿಗೆ ಒಂದೇ ರೀತಿಯ ಮದುವೆಗೆ ಅವಕಾಶ ಕಲ್ಪಿಸುವ ಕಾಯಿದೆ ಇತ್ಯಾದಿ.

ಮಾಡಿದ ಈ ವೈಯಕ್ತಿಕ ಕಾಯಿದೆ ಉಳಿಯಬೇಕೆಂದು ಕಾರ್ಯಾಂಗವು ಇಚ್ಛಿಸಿತ್ತು.[೧] ಈಗಿನ ಶಾಸನ ಮಟ್ಟದಿಂದ ಅಳೆದರೆ ಕಾರ್ಯಾಂಗವು ತೀರಾ ಸಂಪ್ರದಾಯವಾದಿಯಾಗಿತ್ತೆಂದು ಹೇಳಬಹುದು.[೨] ಆರ್ಥಿಕ ಹಕ್ಕುಗಳನ್ನು ದೊರಕಿಸುವಲ್ಲಿ ಇದರ ಸ್ಪಂದನ ಮಂದವಾಗಿದ್ದು ಬೇಸಾಯದಲ್ಲಿ ಸ್ಥಿರ ಹಕ್ಕುಗಳನ್ನು ಕೊಡುವ[೩] ಔದ್ಯೋಗಿಕ ಜನಸಂಖ್ಯೆಗೆ ನೆಮ್ಮದಿ ತರುವ[೪] ಕಾಯಿದೆಗಳನ್ನು ಇದು ತಂದಿದೆ. ಆದರೆ ಉಳಿದವರನ್ನು ಔದ್ಯೋಗಿಕ ಗುಲಾಮಗಿರಿಯಿಂದ ಮುಕ್ತಗೊಳಿಸಲು ಇದು ಏನನ್ನೂ ಮಾಡಿಲ್ಲ.[೫]

ಶಾಂತಿ ಹಾಗೂ ಸುವ್ಯವಸ್ಥೆ ಸ್ಥಾಪಿಸಲು ಸಾಮಾನ್ಯ ಜನರಿಂದ ಕರವಸೂಲು ಮಾಡುವುದು, ಶ್ರೀಮಂತರನ್ನು ಕರದಿಂದ ಮುಕ್ತಗೊಳಿಸುವುದು, ಇದರ ಹಣಕಾಸಿನ ವ್ಯವಸ್ಥೆಯ ಲಕ್ಷಣಗಳಾಗಿದ್ದವು. ಬಡವರ್ಗದ ಜನರಿಗೆ ಪರಿಹಾರ ಕೊಡುವ ಉದ್ದೇಶದಿಂದ ಕಂದಾಯ ಪದ್ಧತಿಯನ್ನು ಬದಲಿಸಲು ಒತ್ತಾಯ ಬಂದಿತು. ತಮಗೆ ತಿಳಿಯದಂತೆಯೇ ರಾಜ್ಯದ ಹೊರೆಯ ತಮ್ಮ ಭಾಗವನ್ನು ಬಡಜನರು ಕೊಡುವ ಉದ್ದೇಶದಿಂದ ಪರೋಕ್ಷ ತೆರಿಗೆಗಳನ್ನು ಹಾಕಲಾಯಿತೆಂದು ಸಮರ್ಥಿಸಲಾಯಿತು. ಪರೋಕ್ಷ ತೆರಿಗೆ ಹಾಕುವುದನ್ನು ತಡೆಗಟ್ಟುವ ಮಿತ ತತ್ವವೊಂದಿದೆ. ಹೆಚ್ಚಾಗಿ ಬಡವರ ಮೇಲೆಯೇ ಬೀಳುವ ಪರೋಕ್ಷ ತೆರಿಗೆಗಳು, ಅವರ ಆದಾಯಕ್ಕೆ ತಕ್ಕಂತೆ ತೆರಿಗೆಗಳ ಭಾರವನ್ನು ಹೊಂದಾಣಿಕೆ ಮಾಡಲು ಬರುವಂತಿರಬೇಕೆಂಬುದನ್ನು ಸಾರ್ವಜನಿಕ ಹಣಕಾಸಿನ ವಿದ್ಯಾರ್ಥಿಗಳು ಒಪ್ಪಿಕೊಳ್ಳುತ್ತಾರೆ. ಅಂಥ ಪರೋಕ್ಷ ತೆರಿಗೆಗಳು ಐಷಾರಾಮದ ವಸ್ತುಗಳ ಮೇಲೆ ಬಿದ್ದಾಗ ಅವುಗಳ ಖರೀದಿಗಳನ್ನು ಮಿತಗೊಳಿಸಿ ತಾವು ಕೊಡಬೇಕಾದ ತೆರಿಗೆಯ ಭಾರವನ್ನು ಕಡಿಮೆ ಮಾಡಿಕೊಳ್ಳುತ್ತಾರೆ. ಆದರೆ ಅವು ಜೀವನಾವಶ್ಯಕ ವಸ್ತುಗಳ ಮೇಲೆ ಬಿದ್ದಾಗ ಈ ಸ್ಥಿತಿಸ್ಥಾಪಕತ್ವವು ಸಾಧ್ಯವಿರುವುದಿಲ್ಲ. ಹಾನಿಕಾರಕ ಲಕ್ಷಣಗಳನ್ನು ಹೊಂದಿದ ಉಪ್ಪಿನ ಕರವನ್ನು ಭಾರತದ ಕಂದಾಯ ಪದ್ಧತಿಯಿಂದ ತೆಗೆದುಹಾಕಬೇಕೆಂದು ವಾದಿಸಲಾಯಿತು. ಆದರೆ ಕಾರ್ಯಾಂಗವು ಈ ಬೇಡಿಕೆಯನ್ನು ಒಪ್ಪಲಿಲ್ಲ. ಬೇರೆ ಆದಾಯ ಮೂಲಗಳನ್ನು ಹಿಡಿಯುವ ಬದಲು ಹಣದ ಕೊರತೆಯಾದಾಗ ಅದು ಉಪ್ಪಿನ ಕರವನ್ನು ಹೆಚ್ಚಿಸಿತು. ೧೮೮೬ರಲ್ಲಿ ಒಪ್ಪಿಕೊಂಡಂತೆ[೬].

---

೧. ಇದು ಮೊದಲು ೧೭೭೨ರಲ್ಲಿ ವಾರನ್ ಹೇಸ್ಟಿಂಗ್‌ನಿಂದ ಸ್ವೀಕರಿಸಲ್ಪಟ್ಟಿತು ಮತ್ತು ೧೭೮೦ ಈಸ್ಟ್ ಇಂಡಿಯಾ ಕಂಪನಿ ಕಾಯಿದೆಯಲ್ಲಿ ಅಳವಡಿಸಲ್ಪಟ್ಟಿತು. (೨೧ ಜಿಯೆ. III, ಸಿ, ೭೦ ಎಸ್‌ಎಸ್ ೧೭ ಮತ್ತು ೧೮) : ಮುಂದಿನ ಕಾಯಿದೆಗಳಲ್ಲಿ ಈ ನಿಯಮಗಳನ್ನು ಅಳವಡಿಸಲಾಗಿದೆ.

೨. ೧೮೬೫ರ ಇಂಡಿಯಾ ವಾರಸು ಕಾಯಿದೆ X ರಲ್ಲಿ, ವೈಯಕ್ತಿಕ ಕಾಯಿದೆ ಪರ ನಿಯಮಗಳು ನೋಡಿ. ೧೯೨೫ರಲ್ಲಿ ಆಸ್ತಿ ವರ್ಗಾವಣೆ ಕಾಯಿದೆ IV ಮತ್ತು ಭಾರತೀಯ ನ್ಯಾಸ ಕಾಯಿದೆ II.

೩. ಬಂಗಾಲದಲ್ಲಿಯ ಭೂ ಸಾಗುವಳಿ ಕಾಯಿದೆ ೧೮೫೯, ೧೮೬೮, ೧೮೮೧ ಮತ್ತು ೧೮೮೫: ಯು.ಪಿ. ಯಲ್ಲಿಯ ೧೮೬೮ರ ಔಧ್ ಬಾಡಿಗೆ ಕಾಯಿದೆ, ಬಾಂಬೆಯಲ್ಲಿಯ ಡೆಕ್ಕನ್ ರೈತ ಪರಿಹಾರ ಕಾಯಿದೆ ೧೮೭೯ ಮತ್ತು ಮಧ್ಯ ಪ್ರದೇಶಗಳ ಭೂ ಸಾಗುವಳಿ ಕಾಯಿದೆ ೧೮೮೩.

೪. ೧೮೮೧ರ ವರೆಗೆ ಫ್ಯಾಕ್ಟರಿ ಕಾಯಿದೆಗಳು ಭಾರತದಲ್ಲಿ ಪ್ರಾರಂಭವಾಗಲಿಲ್ಲ. ಭಾರತದಲ್ಲಿ ಫ್ಯಾಕ್ಟರಿ ಕಾರ್ಮಿಕರಿಗೆ ಸಂಬಂಧಿಸಿದ ನಿಯಮಗಳನ್ನು ರೂಪಿಸುವ ೧೮೮೧ರ ಕಾಯಿದೆಗೆ, ೧೮೯೧ರಲ್ಲಿ ತಿದ್ದುಪಡಿ ಮಾಡಲಾಯಿತು ಮತ್ತು ೧೯೧೧ರಲ್ಲಿ ಹೊಸ ಕಾಯಿದೆ ಜಾರಿಯಲ್ಲಿ ಬಂದಿತು.

೫. ಇದು ಜೀತದಾಳು ಪದ್ಧತಿಗೆ ಸಂಬಂಧಿಸಿದೆಯೆಂದು ಭಾರತದ ಆರ್ಥಿಕ ಸಮಸ್ಯೆಯ ವಿದ್ಯಾರ್ಥಿಗಳಿಗೆ ತಿಳಿಯುತ್ತದೆ.

೬. 'ಲೈಸೆನ್ಸ್ ಟ್ಯಾಕ್ಸ್ ಅಮೆಂಡ್‌ಮೆಂಟ್' ಮಸೂದೆಯ ಮೇಲೆ ಸರ್ವೋಚ್ಚ ವಿಧಾನ ಪರಿಷತ್ತಿನಲ್ಲಿ ಸರ್.ಎ. ಕೋಲ್ವಿನ್‌ರವರು ಜನವರಿ ೪, ೧೮೮೬ ರಂದು ಮಾಡಿದ ಭಾಷಣ ನೋಡಿ.

"ಕೊನೆಯದಾಗಿ ಒಂದು ಸಂಗತಿ, ಇತ್ತೀಚಿನ ಆಗುಹೋಗುಗಳಿಂದ ಉಲ್ಬಣಗೊಂಡ ಒಂದು ದೋಷವು ಸ್ಥಿರವಾಗಿ ಉಳಿಯುತ್ತದೆ. ಅದು ಏನೆಂದರೆ ಬ್ರಿಟಿಷ್ ಸರ್ಕಾರದಿಂದ ಅತೀ ಹೆಚ್ಚಿನ ಸಂರಕ್ಷಣೆ ಹಾಗೂ ಲಾಭವನ್ನು ಪಡೆಯುವ (ಭಾರತದ) ಶ್ರೀಮಂತ ವರ್ಗ ಅದಕ್ಕೆ ಅತೀ ಕಡಿಮೆ ಕರ ಕೊಡುತ್ತದೆ."

ಆದರೆ ೧೮೮೭–೮೮ರ ಮುಂಗಡಪತ್ರದಲ್ಲಿ ಕೊರತೆ ನೀಗಿಸಲು, ತನ್ನ ನಿರ್ಧಾರಕ್ಕೆ ವ್ಯತಿರಿಕ್ತವಾಗಿ ಕಾರ್ಯಾಂಗವು ಉಪ್ಪಿನ ಕರವನ್ನು ಹೆಚ್ಚಿಸಿತು. ಈ ಕೊರತೆ ಆಂತರಿಕ ಸುಧಾರಣಾ ಕ್ರಮಗಳಿಂದ ಆದದ್ದಲ್ಲ, ಬಾಹ್ಯ ಆಕ್ರಮಣದಿಂದಾದದ್ದು – ಬರ್ಮಾದ ಗೆಲುವಿಗಾಗಿ. ಬಂಗಾಲದ ಜಮೀನುದಾರರ, ಅಸ್ಸಾಮದ ಚಹಾ ತೋಟಗಾರರ, ಮತ್ತು ಔಧದ ತಾಲ್ಲೂಕುದಾರರ ಆದಾಯವನ್ನು ೧೮೮೬ರ ಆದಾಯಕರ ಮುಟ್ಟಲಿಲ್ಲವಾದ್ದರಿಂದ ಶ್ರೀಮಂತವರ್ಗ ಕೊಡಬೇಕಾದ ಕರಗಳನ್ನು ಸ್ವಲ್ಪಮಟ್ಟಿಗೆ ಹೆಚ್ಚಿಸಲಾಯಿತು.

ಬಡವರ್ಗ ಶ್ರೀಮಂತವರ್ಗದ ಸಲುವಾಗಿ ಕೊಡುವ ಕರದ ಅನ್ಯಾಯದ ಉದಾಹರಣೆ ಕೇವಲ ಉಪ್ಪಿನ ಕರವೊಂದೇ ಅಲ್ಲ, ಭಾರತದ ಕರ ಪದ್ಧತಿಯಲ್ಲಿಯ ಅನ್ಯಾಯದ ಇನ್ನೊಂದು ಉದಾಹರಣೆಯೆಂದರೆ, ಭಾರತದಲ್ಲಿ ಹೇರಲಾದ ಭೂಕಂದಾಯ ಅನ್ಯಾಯದ ಮೂಲಗಳು ಅನೇಕವಿವೆ. ಮೊದಲನೆಯದಾಗಿ, ಕೆಲವು ಕಡೆ ಕರದ ಮೊತ್ತ ಶಾಶ್ವತವಾಗಿ ನಿರ್ಧಾರಿತವಾಗಿದೆ. ಉಳಿದ ಕಡೆ ಅದು ಮೇಲಿಂದ ಮೇಲೆ ಬದಲಾವಣೆಯಾಗುತ್ತಿರುತ್ತದೆ. ರಾಜ್ಯದ ಹೆಚ್ಚುತ್ತಿರುವ ಆವಶ್ಯಕತೆಗಳಿಗೆ ಕೆಲವು ನಾಗರಿಕರು ತಮ್ಮ ಭಾಗದ ಕಾಣಿಕೆಯನ್ನು ಸಲ್ಲಿಸದಿರುವುದಕ್ಕೆ ಮತ್ತು ಬೇರೆಯವರಿಂದ ಅದನ್ನು ಒತ್ತಾಯಪೂರ್ವಕವಾಗಿ ತೆಗೆದುಕೊಳ್ಳುವುದಕ್ಕೆ ಸಮರ್ಥನೆಗಳೇನೂ ಇಲ್ಲ. ಹೀಗೆ ಬದಲಾವಣೆಗೊಳಪಟ್ಟ ಕರಕ್ಕೆ ಆಧಾರವಾಗಿರುವುದು ಜಮೀನಿನ ಒಂದು ನಿರ್ದಿಷ್ಟವಾದ ಅಳತೆಯೆಂಬುದು ಭಾರತದ ಹಣಕಾಸಿನ ಅಧ್ಯಯನ ಮಾಡುವ ಎಲ್ಲರಿಗೂ ತಿಳಿದ ವಿಷಯ. ಭೂಮಿಯ ಹಿಡುವಳಿಯ ಮಾನದ ಮೇಲೆ ಕರ ವಿಧಿಸುವ ಪದ್ಧತಿಯ ಅನಿಷ್ಟ ಪರಿಣಾಮಗಳನ್ನು ಯಾರೂ ಸಂಶಯದ ದೃಷ್ಟಿಯಿಂದ ನೋಡಿಲ್ಲ. ಆದರೆ ಇದಕ್ಕಿಂತ ತಪ್ಪು ವಿಚಾರ ಹೊಂದಿದ ಮತ್ತು ಆಚರಣೆಯಲ್ಲಿ ಹಾನಿಕಾರಕವಾದಂಥ ಪದ್ಧತಿಯು ಮತ್ತೊಂದು ಇರಲಾರದು. ವಸ್ತುಗಳು ಕರವನ್ನು ಕೊಡುವುದಿಲ್ಲ ಆದರೆ ಜನರು ಕೊಡುತ್ತಾರೆ,[೧] ಮತ್ತು ಜನರು ಕರ ಕೊಡುವಾಗ ತಾವು ಹೊಂದಿದ ಭೂಮಿಯ ಮೇಲಿಂದ ಕರ ಕೊಡದೆ, ಅದರಿಂದ ಬರುವ ಉತ್ಪನ್ನದ ಮೇಲಿಂದ ಕರ ಕೊಡಬೇಕೆಂಬ ಅರ್ಥಶಾಸ್ತ್ರಜ್ಞರ ಸಾಮಾನ್ಯ ನಿಯಮಗಳನ್ನು ಇದು ಅಲಕ್ಷಿಸುತ್ತದೆ. ಭೂಮಿಯ ಮಾನದಿಂದ ಕರವಿಧಿಸುವ ವ್ಯವಸ್ಥೆಯು, ಬಡರೈತನಿಂದ ಹಾಗೂ ದೊಡ್ಡ ಜಮೀನುದಾರನಿಂದ ಒಂದೇ ಪ್ರಮಾಣದಲ್ಲಿ ಕರ ವಸೂಲು ಮಾಡುತ್ತದೆ. ಆದರೆ ಅವರ ಉತ್ಪನ್ನಗಳಲ್ಲಿ ಬಹಳ ಅಂತರವಿರುವುದರಿಂದ ಕರದ ಏಕರೂಪತೆಯು ಬಡವ ಮತ್ತು ಶ್ರೀಮಂತರ ನಡುವಿನ ಅಂತರವನ್ನು ಹೆಚ್ಚಿಸುತ್ತದೆ.

ಸಮಾನತೆ ಬಲಿಕೊಟ್ಟು ಹೀಗೆ ಆಕರಣೆ ಮಾಡಲಾದ ಆದಾಯವನ್ನು ಪ್ರಗತಿಗೆ ಅನುಕೂಲವಾಗುವ ಸೇವೆಗಳ ಮೇಲೆ ಖರ್ಚುಮಾಡಿದ್ದರೆ ಒಂದು ರೀತಿಯಲ್ಲಿ ಪರಿಹಾರ ದೊರಕುತ್ತಿತ್ತು.

ವಸೂಲು ಮಾಡಿದ ಎಲ್ಲ ಆದಾಯವೂ ಸುವ್ಯವಸ್ಥೆಯನ್ನು ಕಾಪಾಡಲು ಬೇಕಾದ ಪೊಲೀಸು, ಸೈನ್ಯ ಮತ್ತು ಆಡಳಿತ ಮುಂತಾದ ಸೇವೆಗಳ ಮೇಲೆ ಖರ್ಚಾಗುತ್ತಿತ್ತು. ಬೇಜವಾಬ್ದಾರಿ ಕಾರ್ಯಾಂಗದ ಖರ್ಚಿನ ಯೋಜನೆಯಲ್ಲಿ ಶಿಕ್ಷಣ, ಉದ್ದಿಮೆಗಳಿಗೆ ರಾಜ್ಯದಿಂದ ಸಹಾಯ ಮುಂತಾದವುಗಳಿಗೆ ಸ್ಥಾನವಿರಲಿಲ್ಲ.

---

೧. 'ರಾಯಲ್ ಕಮಿಷನ್ ಆನ್ ಲೋಕಲ್ ಟ್ಯಾಕ್ಸೇಷನ್'ನ ವಿಧಿವಿಧಾನಗಳ ಮೇಲೆ ಪ್ರೊ. ಕ್ಯಾನನ್‌ರವರ ಮನವಿಯಲ್ಲಿಯ ಟೀಕೆಗಳು. ೧೮೯೯ರ ಸಿ ೯೫೨೮, ಪು. ೧೬೦.

ಪ್ರಗತಿಗಿಂತ ಸುವ್ಯವಸ್ಥೆಯೇ ಮುಖ್ಯವೆಂಬ ನಿಲುವನ್ನು ಕಾರ್ಯಾಂಗವು ಏಕೆ ತಳೆಯಿತು ಎಂದು ಕೇಳಬಹುದು. ಅದಕ್ಕೆ ಉತ್ತರವೆಂದರೆ ಬೇಜವಾಬ್ದಾರಿ ಸರ್ಕಾರ ಎಷ್ಟೇ ಅಧಿಕಾರವನ್ನು ಹೊಂದಿದ್ದರೂ ಪ್ರಗತಿ ಸಾಧಿಸಲು ಸಾಧ್ಯವಿಲ್ಲ. ಏಕೆಂದರೆ ಸರ್ವೋಚ್ಚ ಅಧಿಕಾರವನ್ನು ಉಪಯೋಗಿಸುವಲ್ಲಿ ಅದಕ್ಕೆ ಎರಡು ಪ್ರಮುಖ ಅಡಚಣೆಗಳು ಅಡ್ಡ ಬರುತ್ತವೆ.[೧] ಅಧಿಕಾರದಲ್ಲಿರುವವರ ಉದ್ದೇಶ ಮತ್ತು ಹಿತಾಸಕ್ತಿಗಳಿಂದ ಉದ್ಭವಿಸುವ ಆಂತರಿಕ ಅಡಚಣೆ ಮೊದಲನೆಯದು. ಸುಲ್ತಾನನು ಮುಸಲ್ಮಾನ ಧರ್ಮವನ್ನು, ಪೋಪನು ಕೆಥೊಲಿಕ್ ಧರ್ಮವನ್ನು ಅಳಿಸದಿರುವುದು, ಹಾಗೂ ಬ್ರಾಹ್ಮಣನು ಜಾತೀಯ ಪದ್ಧತಿಯನ್ನು ಖಂಡಿಸದಿರುವುದು, ಅಥವಾ ನೀಲ ಪ್ರೀತಿ ಪಾತ್ರರಾದ ಕೂಸುಗಳನ್ನುಳಿಸುವುದು ಕಾಯಿದೆ ವಿರುದ್ಧವೆಂದು ಬ್ರಿಟಿಷ್ ಶಾಸನಸಭೆ ಹೇಳದಿರುವುದಕ್ಕೆ ಕಾರಣವೆಂದರೆ ಅವುಗಳನ್ನು ಮಾಡಲು ಅವರು ಸಮರ್ಥರಲ್ಲ ಎಂಬುದಲ್ಲ, ಆದರೆ ಅವುಗಳನ್ನು ಮಾಡಲು ಅವರಿಗೆ ಇಷ್ಟವಿಲ್ಲವೆಂಬುದಾಗಿದೆ. ಅದೇ ರೀತಿಯಾಗಿ ಭಾರತದಲ್ಲಿಯ ಕಾರ್ಯಾಂಗವು ಪ್ರಗತಿಗೆ ಅನುಕೂಲಕರವಾದ ಕ್ರಮಗಳನ್ನು ಕೈಗೊಳ್ಳದೇ ಇದ್ದುದಕ್ಕೆ ಕಾರಣವೆಂದರೆ,[೨] ಉದ್ದೇಶ ಮತ್ತು ಆಸಕ್ತಿಗನುಗುಣವಾಗಿ, ಭಾರತದ ಸಮಾಜದಲ್ಲಿಯ ಜೀವಂತ ಶಕ್ತಿಗಳಿಗೆ ಸಹಾನುಭೂತಿ ತೋರಿಸದೇ ಇರುವುದು. ಅದು ಭಾರತದ ಜನರ ಬೇಡಿಕೆಗಳಿಗೆ, ಅವರ ನೋವುಗಳಿಗೆ, ಅವರ ಆಶಯಗಳಿಗೆ ಸ್ಪಂದಿಸುತ್ತಿರಲಿಲ್ಲ. ಅವರ ಆಶೋತ್ತರಗಳಿಗೆ ಅದು ಗಂಡಾಂತರಕಾರಿಯಾಗಿತ್ತು. ಹೀಗಾಗಿ ಶಿಕ್ಷಣದ ಪ್ರಗತಿ ಆಗಲಿಲ್ಲ. ಸ್ವದೇಶೀಯತೆಗೆ ಉತ್ತೇಜನ ಕೊಡಲಿಲ್ಲ. ರಾಷ್ಟ್ರೀಯತೆಯನ್ನು ಹತ್ತಿಕ್ಕಿತು. ಕಾರಣ ಇವೆಲ್ಲವೂ ಅದರ ಸ್ವಭಾವಕ್ಕೆ ವಿರುದ್ಧವಾಗಿದ್ದವು. ತಾನು ಮಾಡಬೇಕೆಂಬ ಕೆಲಸವನ್ನು ಮಾಡಲೂ ಬೇಜವಾಬ್ದಾರಿ ಸರ್ಕಾರಕ್ಕೆ ಅಧಿಕಾರವಿರಲಿಲ್ಲ. ಬಾಹ್ಯ ಒತ್ತಡದಿಂದ ಅದರ ಅಧಿಕಾರ ಮಿತಿಗೊಳಿಸಲ್ಪಟ್ಟಿತ್ತು. ತನ್ನ ಅಧಿಕಾರಕ್ಕೆ ವಿರೋಧ ಬರಬಹುದೆಂಬ ಹೆದರಿಕೆಯಿಂದ ತಾನು ಮಾಡಬೇಕೆಂಬ ಕೆಲಸವನ್ನು ಮಾಡಲು ಧೈರ್ಯ ಬರುತ್ತಿರಲಿಲ್ಲ. ಸೀಜರನು ರೋಮನ್ ಜನರ ಪೂಜೆಯನ್ನು ತಡೆಯಲಾರನು, ಅಭಿನವ ಶಾಸನಸಭೆಯು

---

೧. ಈ ಬಗ್ಗೆ ಹೆಚ್ಚು ಬೆಳಕುಚೆಲ್ಲುವ ಎ.ವಿ. ಡೈಸೆರವರ *ಲಾ ಆಫ್ ದಿ ಕಾನ್ಸ್ಟಿಟ್ಯೂಷನ್*, ೧೯೧೫, ಪುಟಗಳು ೭೪–೮೨ ನೋಡಿ.

೨. ಅಸ್ಪಂದಿತ, ಏಕೆಂದರೆ ಉಚ್ಚ ಹಾಗೂ ನಿಯಂತ್ರಿಸುವ ಶ್ರೇಣಿಯ ಸಾರ್ವಜನಿಕ ಸೇವೆಗಳಲ್ಲಿ ಭಾರತೀಯರು ಇಲ್ಲ. ೧೮೩೩ರಷ್ಟು ಹಿಂದೆಯೇ ಭಾರತೀಯ ದೇಶೀಯರು ಸಾರ್ವಜನಿಕ ಉದ್ಯೋಗಗಳಿಗೆ ಅರ್ಹರೆಂದು ಘೋಷಿಸಲಾಗಿದ್ದರೂ ಸೆಕ್ರೆಟರಿ ಆಫ್ ಸ್ಟೇಟ್ ಮಾಡಿದ ಭಾರತದಲ್ಲಿಯ ಸಾರ್ವಜನಿಕ ಸೇವೆಗಳಿಗೆ ಪ್ರವೇಶದ ನಿಯಮಗಳು ಭಾರತೀಯರನ್ನು ಆ ಸೇವೆಗಳ ಹೊರಗೆ ಇಟ್ಟಿದ್ದವು. ಯುದ್ಧಸಂಬಂಧ ಸೆಕ್ರೆಟರಿ ಆಫ್ ಸ್ಟೇಟ್ ಮಾಡಿದ ನಿಯಮಗಳ ಪ್ರಕಾರ, ಸೇನೆಯ ಕಮಿಷನ್‌ಗೆ ಅಭ್ಯರ್ಥಿಗಳು ಯುರೋಪಿಯನ್ ವಂಶಸ್ಥರಿರಬೇಕಾಗಿತ್ತು, ಜಲದಳಕ್ಕೂ ಅಂಥ ನಿಯಮಗಳನ್ನು ಅಡ್ಮಿರ್ಯಾಲ್ಟಿಯವರು ಅಳವಡಿಸಿಕೊಂಡಿದ್ದರು. ಹೀಗಾಗಿ ಇವುಗಳಿಂದ ಭಾರತೀಯರನ್ನು ದೂರವಿಡಲಾಗಿತ್ತು. ನಾಗರಿಕ ಸೇವೆಗೆ, ನಿಯಮವೆಂದರೆ ಪ್ರಭುತ್ವದ ಮೂಲ ನಾಗರಿಕರು ಪರೀಕ್ಷೆಗೆ ಪ್ರವೇಶ ಪಡೆಯಬಹುದಾಗಿತ್ತು. ಹೀಗಾಗಿ ಇವುಗಳಿಂದ ಭಾರತೀಯರೂ ಇದರಲ್ಲಿ ಒಳಗೊಂಡಿದ್ದರು. ಆದರೆ ಸೆಕ್ರೆಟರಿ ಆಫ್ ಸ್ಟೇಟ್ ಕೊಟ್ಟ ನಿರ್ಣಯದ ಮೇರೆಗೆ ಈ ಪರೀಕ್ಷೆಗಳು ಕೇವಲ ಲಂಡನ್ನಿನಲ್ಲಿ ಮಾತ್ರ ನಡೆಯಬಹುದಾದ್ದರಿಂದ ಭಾರತೀಯರು ಇದರಿಂದ ಸಹಜವಾಗಿಯೇ ವಂಚಿತರಾದರು. ಉಳಿದ ನಾಗರಿಕ ಸೇವೆಗಳಿಗೆ ಪ್ರವೇಶ ನಿಯಮಗಳು ಬೇರೆಬೇರೆಯಾಗಿದ್ದವು. ಭಾರತದ ಮೆಡಿಕಲ್ ಸೇವೆಗೆ ಅಭ್ಯರ್ಥಿಗಳು ಯುರೋಪಿನ ಅಥವಾ ಈಸ್ಟ್ ಇಂಡಿಯಾದ ವಂಶಸ್ಥರಾಗಿರಬೇಕಾಗಿತ್ತು. ಭಾರತದ ಪೊಲೀಸು ಸೇವೆಗೆ ಅಭ್ಯರ್ಥಿಗಳು ಬ್ರಿಟಿಷ್ ಪ್ರಜೆಗಳು ಅಥವಾ ಯುರೋಪಿನ ವಂಶಸ್ಥರಾಗಿರಬೇಕಾಗಿತ್ತು. ಅರಣ್ಯ ಸೇವೆಗೆ ಅವರು ಮೂಲ ಬ್ರಿಟಿಷ್ ನಾಗರಿಕರಾಗಿರಬೇಕಾಗಿತ್ತು. ಸಾರ್ವಜನಿಕ ಕೆಲಸದ ವಿಭಾಗಕ್ಕೆ ಹತ್ತನೇ ಒಂದರಷ್ಟು ಬ್ರಿಟಿಷ್ ನಾಗರಿಕರಾದ ಭಾರತೀಯರಿರಬಹುದಾಗಿತ್ತು. ಇದಕ್ಕೆ ಸಂಬಂಧಪಟ್ಟಂತೆ ಹಾಲ್ಸ್‌ಬರಿಯವರ *ಲಾ ಆಫ್ ಇಂಗ್ಲೆಂಡ್*, ಸಂ. X, ಪುಟಗಳು ೫೮೮–೯. ನೋಡಿ.

## ಶೇಕಡವಾರು ವೆಚ್ಚ

(ವ್ಯವಹಾರದ ಸೇವೆಗಳಾದ ಅಂಚೆ ಮತ್ತು ತಂತಿ ವಿಭಾಗ, ರೇಲ್ವೆ ಮತ್ತು ನೀರಾವರಿ ಸೇವೆಗಳನ್ನು ಹೊರತುಪಡಿಸಿ)

ಸಾವಿರ ರೂಪಾಯಿಗಳಲ್ಲಿ

| ಅವಧಿ | ಜಿಲ್ಲಾ ಆಡಳಿತ | ಅರಣ್ಯ | ಅದರ ಬಾಬ್ತುಗಳು (ಓಪಿಯಮ್ ಸೇರಿ) | ಸಾಲ ಮೂಲಗಳು | ನಾಗರಿಕ ವಿಭಾಗಗಳು | ನಾಗರಿಕ ಬದಲಾವಣೆಗಳು | ನಾಗರಿಕ ಕಾಮಗಾರಿ | ಸೈನ್ಯ (ಸೈನಿಕ ಕಾಮಗಾರಿ ಮತ್ತು ವಿಶೇಷ ಸಂರಕ್ಷಣೆ ಕಾಮಗಾರಿಗಳನ್ನು ಸೇರಿ) | ಬರಗಾಲ ನಿವಾರಣೆ ಮತ್ತು ವಿಮೆ | ಒಟ್ಟು |
|---|---|---|---|---|---|---|---|---|---|---|
| ೧೮೭೭–೭೮ ರಿಂದ ೧೮೮೧–೮೨ ವರೆಗೆ | ೫.೨ | ೦.೮ | ೫.೬ | ೮.೯ | ೧೮.೭ | ೬.೮ | ೫.೮ | ೩೯.೨ | ೨.೬ | ೯೩.೬ |
| ೧೮೮೨–೮೩ ರಿಂದ ೧೮೮೬–೮೭ ವರೆಗೆ | ೬.೦ | ೧.೨ | ೬.೬ | ೮.೨ | ೨೧.೪ | ೭.೫ | ೭.೬ | ೩೫.೬ | ೨.೩ | ೯೬.೪ |
| ೧೮೮೭–೮೮ ರಿಂದ ೧೮೯೧–೯೨ ವರೆಗೆ | ೬.೦ | ೧.೩ | ೫.೪ | ೭.೬ | ೨೨.೧ | ೭.೫ | ೭.೩ | ೩೭.೭ | ೨.೮ | ೯೫.೭ |
| ೧೮೯೨–೯೩ ರಿಂದ ೧೮೯೬–೯೭ ವರೆಗೆ | ೬.೧ | ೧.೩ | ೪.೯ | ೬.೪ | ೨೨.೫ | ೮.೪ | ೬.೯ | ೩೮.೫ | ೧.೬ | ೯೬.೬ |
| ೧೮೯೭–೯೮ ರಿಂದ ೧೯೦೧–೦೨ ವರೆಗೆ | ೫.೮ | ೧.೪ | ೫.೫ | ೪.೩ | ೨೨.೬ | ೭.೮ | ೬.೮ | ೩೫.೨ | ೪.೮ | ೯೪.೨ |
| ೧೯೦೨–೦೩ ರಿಂದ ೧೯೦೬–೦೭ ವರೆಗೆ | ೫.೯ | ೧.೬ | ೮.೨ | ೩.೧ | ೨೩.೨ | ೭.೩ | ೯.೦ | ೩೭.೧ | ೧.೮ | ೯೭.೨ |
| ೧೯೦೭–೦೮ ರಿಂದ ೧೯೧೧–೧೨ ವರೆಗೆ | ೬.೩ | ೧.೮ | ೭.೧ | ೩.೫ | ೨೫.೭ | ೭.೭ | ೮.೫ | ೩೫.೬ | ೨.೧ | ೯೮.೩ |
| ೧೯೧೨–೧೩ ರಿಂದ ೧೯೧೬–೧೭ ವರೆಗೆ | ೬.೦ | ೧.೯ | ೬.೨ | ೨.೧ | ೨೮.೨ | ೭.೩ | ೯.೩ | ೩೫.೧ | ೧.೫ | ೯೭.೬ |

ಬ್ರಿಟಿಷ್ ಇಂಡಿಯಾದ ಅಂಕಿಸಂಖ್ಯೆಗಳು, ಸಂಪುಟ II ಹಣಕಾಸಿನ ಅಂಕಿಸಂಖ್ಯೆಗಳು ೧೯೨೦ ಪುಟ ೭ ಇಂದ

ವಸಾಹತುಗಳ ಮೇಲೆ ಕರ ವಿಧಿಸುವ ಧೈರ್ಯ ಮಾಡಲಾರದು. ಅದೇ ಕಾರಣಕ್ಕಾಗಿ ಭಾರತದ ಸರ್ಕಾರವು ಜಾತಿಪದ್ಧತಿಯನ್ನು ತೊಲಗಿಸುವ, ಏಕಪತ್ನಿ ಕಾಯಿದೆ ತರುವ, ವಾರಸುದಾರ ಕಾಯಿದೆ ಬದಲಿಸುವ, ಅಂತರ್ಜಾತಿ ವಿವಾಹಗಳನ್ನು ಕಾಯಿದೆ ಬದ್ಧಗೊಳಿಸುವ ಧೈರ್ಯ ಮಾಡಲಾರದು. ಆದರೆ ಜನರ ಸಮೀಪದ, ಜನರ ಸರ್ಕಾರವು ಪ್ರಗತಿಪಥದಲ್ಲಿ ಹೋಗಬಲ್ಲದು, ಏಕೆಂದರೆ ವಿಧೇಯತೆ ಕೊನೆಗೊಂಡು, ವಿರೋಧವು ಎಲ್ಲಿ ಪ್ರಾರಂಭವಾಗುವುದೆಂಬುದು ಅದಕ್ಕೆ ತಿಳಿದಿರುತ್ತದೆ. ಆದರೆ ಭಾರತದ ಕಾರ್ಯಾಂಗವು ಜನತೆಯ ಕಾರ್ಯಾಂಗವಲ್ಲವಾದ್ದರಿಂದ ಜನರ ಭಾವನೆಗಳನ್ನು ಅದು ಅರಿಯದು. ಇದರ ತಾತ್ಪರ್ಯವೇನೆಂದರೆ, ಭಾರತದಲ್ಲಿ ಅಧಿಕಾರದಲ್ಲಿದ್ದ ಬೇಜವಾಬ್ದಾರಿ ಕಾರ್ಯಾಂಗವು ಅಧಿಕಾರದ ಮೇಲಿನ ಈ ಎರಡು ಮಿತಿಗಳಿಂದ ನಿಸ್ಸತ್ವಗೊಳಿಸಲ್ಪಟ್ಟು ಜೀವನವನ್ನು ಸುಗಮವನ್ನಾಗಿ ಮಾಡಲು ಬೇಕಾದ ಎಲ್ಲವನ್ನೂ ತಡೆಹಿಡಿಯಿತು. ಇದರ ಪರಿಣಾಮವಾಗಿ ಜನರ ಸಾಮಾಜಿಕ ಹಾಗೂ ನೈತಿಕ ಜೀವನಕ್ಕೆ ಸಂಬಂಧಿಸಿದಂತೆ, ಮೊಗಲ ಸರ್ಕಾರದಿಂದ ಬ್ರಿಟಿಷ್ ಸರ್ಕಾರಕ್ಕೆ ಆದ ಬದಲಾವಣೆ ಕೇವಲ ಆಳುವವರ ಬದಲಾವಣೆಯಾಯಿತೇ ವಿನಃ ವ್ಯವಸ್ಥೆಯ ಬದಲಾವಣೆಯಾಗಲಿಲ್ಲ. ಕೆಲವು ಮಟ್ಟಿಗೆ ಸ್ವಇಚ್ಛೆಯಿಂದ ಹಾಗೂ ಆವಶ್ಯಕತೆಯಿಂದ ಬ್ರಿಟಿಷರು ಹಸ್ತಕ್ಷೇಪ ಮಾಡಬಾರದೆಂಬ ತತ್ವವನ್ನು ಅಳವಡಿಸಿಕೊಂಡಿದ್ದರು.

"ಇತಿಹಾಸದುದ್ದಕ್ಕೂ ತಾವು ಯಾವ ಸರ್ಕಾರಗಳ ಆಶ್ರಯದಲ್ಲಿ ಶ್ರಮಿಸಿ, ಪೂಜಿಸಿ, ಜೀವಿಸಿ ಮಡಿದಿದ್ದರೋ ಅಂಥ ಸರ್ಕಾರಗಳಿಗಿಂತ ಯಾವ ರೀತಿಯಲ್ಲಿಯೂ ಭಿನ್ನವಲ್ಲದ ಸರ್ಕಾರವನ್ನು ತಾವು ಪಡೆದಿರುಕೊಂಡಿರುವುದನ್ನು ಭಾರತದ ನಿವಾಸಿಗಳು ಕಂಡುಕೊಂಡರು. ರಾಜಕೀಯ ದೃಷ್ಟಿಯಿಂದ ಒಂದು ನಿರಂಕುಶಪ್ರಭುತ್ವ ಮತ್ತೊಂದು ನಿರಂಕುಶ ಪ್ರಭುತ್ವವನ್ನು ತೆಗೆದುಹಾಕಿದಷ್ಟೇ ಬದಲಾವಣೆ ಆಗಿತ್ತು.[೧] ನಮೂನೆಗಾಗಿ ಹಳೆಯ ಕೋಟನ್ನು ಕೊಟ್ಟಾಗ, ಅದರಂತೆಯೇ ಹರಕು ಮತ್ತು ತೇಪೆಗಳ ಕೋಟನ್ನು ತಯಾರಿಸಿದ ಚೀನಾದ ಸಿಂಪಿಗನಂತೆ ಅದು ಹಿಂದೆ ಇದ್ದ ವ್ಯವಸ್ಥೆಯನ್ನೇ ಕಾಪಾಡಿಕೊಂಡು ಬಂದಿತು."[೨]

ಕೆಲವುಮಟ್ಟಿಗೆ ಭೌತಿಕ ಪ್ರಗತಿಯಾಗಿದೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಆದರೆ ಜಗತ್ತಿನಲ್ಲಿ ಯಾವ ಜನರೂ ಶಾಂತಿ ಸುವ್ಯವಸ್ಥೆಯಿಂದ ಮಾತ್ರ ಬಹಳ ದಿನಗಳವರೆಗೆ ಸಂತೃಪ್ತರಾಗಲು ಸಾಧ್ಯವಿಲ್ಲ. ಏಕೆಂದರೆ ಅವರು ಮೂಕಪಶುಗಳಲ್ಲ. ರಸ್ತೆಗಳನ್ನು ಸುಧಾರಿಸಿದೆ, ವೈಜ್ಞಾನಿಕವಾಗಿ ಕಾಲುವೆಗಳನ್ನು ನಿರ್ಮಿಸಿದೆ, ರೈಲ್ವೆಗಳ ನಿರ್ಮಾಣ ಮಾಡಿದೆ, ಅಂಚೆಗಳ ಮೂಲಕ ತಮ್ಮ ಪತ್ರ ಒಯ್ದಿದೆ, ಅವರ ಸಂದೇಶಗಳನ್ನು ಮಿಂಚಿನ ವೇಗದಲ್ಲಿ ಮುಟ್ಟಿಸಿದೆ, ಹಣವನ್ನು ಸುಧಾರಿಸಿದೆ, ತೂಕ ಹಾಗೂ ಅಳತೆಗಳನ್ನು ಮಿತಿಗೊಳಿಸಿದೆ, ಅವರ ಭೌಗೋಲಿಕ, ಖಗೋಳಶಾಸ್ತ್ರದ ಹಾಗೂ ಔಷಧದ ಕಲ್ಪನೆಗಳನ್ನು ತಿದ್ದಿದೆ ಮತ್ತು ಆಂತರಿಕ ಜಗಳಗಳನ್ನು ನಿಲ್ಲಿಸಿದೆಯೆಂದ ಮಾತ್ರಕ್ಕೆ ಅಧಿಕಾರಗಳ ಆಡಳಿತವನ್ನು ಜನರು ಬಹಳ ದಿನಗಳವರೆಗೆ ಸಹಿಸಲಾರರು. ಎಷ್ಟೇ ಸಹಿಷ್ಣುಗಳಿದ್ದರೂ, ಜನರು ಇಂದಲ್ಲ ನಾಳೆ ಕೇವಲ ಯಂತ್ರದಂಥ ಸರ್ಕಾರಕ್ಕಿಂತಲೂ ಒಳ್ಳೆಯ ಸರ್ಕಾರ ಬೇಕೆಂದು ಕೇಳುತ್ತಾರೆ. ಪಾಶ್ಚಿಮಾತ್ಯ ಪ್ರಾತಿನಿಧ್ಯ ಸರ್ಕಾರದ ವಿಚಾರಗಳ ಪ್ರಭಾವದಿಂದ ಭಾರತದ ಜನರು ಸರ್ಕಾರದ ಪದ್ಧತಿಯಲ್ಲಿ ಬದಲಾವಣೆಯನ್ನು ಕೇಳುತ್ತಿದ್ದಾರೆ. ಶಾಸನಸಭೆಯ ಕಾರ್ಯಾಂಗವನ್ನು ಹೊಂದಿದ ಸಂಸದೀಯ ಪದ್ಧತಿಯ ಸರ್ಕಾರದ ಗುರಿಯನ್ನು ಅವರು ತಮ್ಮ ಮುಂದಿಟ್ಟುಕೊಂಡಿದ್ದಾರೆ.

---

೧. ಬರ್ಮಾದಲ್ಲಿ ಅದನ್ನು ಗೆದ್ದ ಕಾಲದಲ್ಲಿ ಜಾರಿಯಲ್ಲಿತ್ತೆಂಬ ಒಂದೇ ಕಾರಣದಿಂದಾಗಿ ತಲೆಗಂದಾಯವನ್ನು ಮುಂದುವರಿಸಲಾಗಿದೆ.

೨. ಬರ್ನಾರ್ಡ್ ಹೌಟನ್ : *ಬ್ಯೂರೋಕ್ರಾಟಿಕ್ ಗವರ್ನಮೆಂಟ್.*

ಈ ಗುರಿಯನ್ನು ಹೊಂದಲು ಜನತೆ ನಡೆಸಿದ ಚಳವಳಿ ಭಾರತದಲ್ಲಿಯ ಕಾರ್ಯಾಂಗವು ಇದನ್ನು ಗಂಭೀರವಾಗಿ ವಿಚಾರಿಸುವ ಮಟ್ಟ ಮುಟ್ಟಿತು. ದೇಶದ ಸರ್ಕಾರವನ್ನು ಹೇಗೆ ನಡೆಸಬೇಕು? ಒತ್ತಾಯದಿಂದಲೊ ಅಥವಾ ಒಪ್ಪಿಗೆಯಿಂದಲೊ? ಅಧಿಕಾರವು ಎಂದೂ ಆತ್ಮಹತ್ಯೆಯನ್ನು ಮಾಡಿಕೊಳ್ಳಲಾರದು. ಸರ್ಕಾರದ ಆಜ್ಞೆಯಂತೆ ಜನತೆ ನಡೆಯದೆ ಹೋದರೆ ಅದು ಬಲವನ್ನು ಉಪಯೋಗಿಸಬೇಕಾಗುತ್ತದೆ. ಭಾರತದಲ್ಲಿಯ ಕಾರ್ಯಾಂಗವು ಈ ಉಪಾಯವನ್ನೇ ಅಳವಡಿಸಿಕೊಳ್ಳಬೇಕಾಯಿತು. ಅಪರಾಧ ಹಾಗೂ ದಂಡ ನಿಯಮಗಳಿಂದ ತನಗೆ ಬಂದ ಅಧಿಕಾರದಿಂದ ಕಾರ್ಯಾಂಗವು ಅಪರಾಧಗಳನ್ನು ತಡೆಯುವಲ್ಲಿ ವಿಫಲಗೊಂಡಿದ್ದರಿಂದ ಕಾಯಿದೆ ಪುಸ್ತಕದ ತುಂಬ ದಬ್ಬಾಳಿಕೆಯ ಕಾಯಿದೆಗಳನ್ನು ತುಂಬಿತು. ೧೯೦೮ರ ಅಪರಾಧ ನಿಯಮ ತಿದ್ದುಪಡಿ ಕಾಯಿದೆ XIV ಮೇರೆಗೆ ಅಪರಾಧಿಯ ಗೈರು ಹಾಜರಿಯಲ್ಲಿ ಏಕಪಕ್ಷೀಯ ವಿಚಾರಣೆ ನಡೆಸುವ ಮತ್ತು ಅವನನ್ನು ವಿಚಾರಣೆಗೆ ಗುರಿಪಡಿಸುವ ಅಧಿಕಾರವನ್ನು ಮ್ಯಾಜಿಸ್ಟ್ರೇಟ್ ಪಡೆದಿದ್ದನು. ಅದೇ ಕಾಯಿದೆಯ ಇನ್ನೊಂದು ನಿಯಮದ ಪ್ರಕಾರ, ತನ್ನ ದೃಷ್ಟಿಯಲ್ಲಿ ಶಾಂತಿ ಸುವ್ಯವಸ್ಥೆಗೆ ಭಂಗ ತರುವಂಥ ಸಂಘಗಳನ್ನು ಕಾಯಿದೆಬಾಹಿರವೆಂದು ಸಾರುವ ಅಧಿಕಾರವನ್ನು ಕಾರ್ಯಾಂಗವು ಪಡೆದಿತ್ತು. ರಾಜ್ಯದ ಖೈದಿಗಳ ನಿಯಮ[೧] ಹಾಗೂ ಕಾಯಿದೆಗಳು[೨] ಸಂಶಯ ಬಂದ ಜನರನ್ನು ಬಂಧಿಸುವ ಅಧಿಕಾರವನ್ನು ಕಾರ್ಯಾಂಗಕ್ಕೆ ಕೊಟ್ಟಿದ್ದರಿಂದ ವ್ಯಕ್ತಿಯ ಹಾಜರಿಯ ಕಾನೂನನ್ನು[೩] ಅಮಾನತಿನಲ್ಲಿಟ್ಟಂತಾಗಿತ್ತು. ಮತ್ತೊಂದು ನಿಯಮದ ಪ್ರಕಾರ[೪] ಆಕ್ರಮಣ ಪರಿಸ್ಥಿತಿಯನ್ನು ಅಥವಾ ಸೈನ್ಯಾಡಳಿತವನ್ನು ಸಾರುವ ಅಧಿಕಾರವನ್ನು ಕಾರ್ಯಾಂಗವು ಹೊಂದಿತ್ತು. ೧೯೧೦ರ ಇಂಡಿಯಾದ ಪತ್ರಿಕೆ ಕಾಯಿದೆ, ಪತ್ರಿಕೆಗಳ ಬಾಯಿಮುಚ್ಚಿಸಿತು. ಅದರ ಕಲಮುಗಳು ಎಷ್ಟು ವ್ಯಾಪಕವಾಗಿದ್ದುವೆಂದರೆ ಅವುಗಳು ಎಲ್ಲಿಯವರೆಗೆ ಹೋಗುವುವೆಂಬುದನ್ನು ಊಹಿಸುವುದೂ ಅಸಾಧ್ಯವಾಗಿತ್ತು.[೫] ವೈಯಕ್ತಿಕ ಸ್ವಾತಂತ್ರ್ಯ, ವಾಕ್ ಸ್ವಾತಂತ್ರ್ಯದ ಹಕ್ಕುಗಳನ್ನು ಹತ್ತಿಕ್ಕಿದಂತೆ ಸಾರ್ವಜನಿಕ ಸಭೆಗಳ ಹಕ್ಕನ್ನೂ ಹತ್ತಿಕ್ಕಲಾಯಿತು. ದೇಶದ ಸಾಮಾನ್ಯ ಕಾಯಿದೆಯಲ್ಲಿರುವ ಪ್ರತಿಬಂಧಕ ನಿಯಮಗಳಲ್ಲದೆ, ಕಾರ್ಯಾಂಗವು ಹೆಚ್ಚಿನ ಅಧಿಕಾರವನ್ನು ಪಡೆದುಕೊಂಡು ಸಾರ್ವಜನಿಕ ಹಿತಾಸಕ್ತಿಯ ನೆಪದಲ್ಲಿ, ಸಾರ್ವಜನಿಕ ಸಭೆಗಳನ್ನು ನಿಷೇಧಿಸಿತು.[೬]

ಈ ದಬ್ಬಾಳಿಕೆಯ ಕಾಯಿದೆಗಳ ಆಚರಣೆಯಲ್ಲಿ ಆಗಬಹುದಾದ ಅತಿರೇಕಗಳಿಗೆ ಕಾರ್ಯಾಂಗವು ಜವಾಬ್ದಾರಿಯಾಗಬಹುದೆಂಬ ಹೆದರಿಕೆಯು ಆಡಳಿತ ಕ್ರಮದ ತೀವ್ರತೆಯನ್ನು ತಗ್ಗಿಸಲಿಲ್ಲ. ಶಾಂತಿ ಸುವ್ಯವಸ್ಥೆ ಕಾಪಾಡಲು ಕಾರ್ಯಾಂಗವು ತನ್ನ ಕಾರ್ಯಭಾರಿಗಳಿಗೆ ಜನರ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಅಧಿಕಾರವನ್ನು ಕೊಟ್ಟಿತ್ತು. ಅದರ ಜೊತೆಗೆ ಅವರಿಗೆ ಅಧಿಕಾರ ಉಪಯೋಗಿಸುವಲ್ಲಿ ರಕ್ಷಣೆಯನ್ನು ಕೊಟ್ಟಿತ್ತು.[೭]

---

೧. ಬಂಗಾಳ ರೆಗ್ಯುಲೇಷನ್ III, ೧೮೧೯: ಬಾಂಬೆ ರೆಗ್ಯುಲೇಷನ್ XXV, ೧೮೨೭, ಮದರಾಸು ರೆಗ್ಯುಲೇಷನ್, II, ೧೮೧೯.

೨. ೧೮೫೦ ಕಾಯಿದೆ XXIV ಮತ್ತು ೧೮೫೫ರ ಕಾಯಿದೆ III.

೩. ಎನ್. ಘೋಷ್ : *ಕಂಪ್ಯಾರೇಟಿವ್ ಅಡ್ಮಿನಿಸ್ಟ್ರೇಟಿವ್ ಲಾ*, ೧೯೧೮ ಪು. ೪೮೦.

೪. ೧೮೫೭ ರ ಕಾಯಿದೆ IX.

೫. ಸರ್ ಲಾರೆನ್ಸ್ ಜೆಂಕಿನ್ಸ್ ಸಿ.ಜೆ. ಮೊಹಮದಾಲಿ, ಐ.ಎಲ್.ಆರ್.೪೦. ಕ್ಯಾಲ್. ೪೬೬(೧೯೧೩) ಎನ್. ಘೋಷ್‌ರವರಿಂದ ಉಲ್ಲೇಖ, ಅದೇ ಪು. ೫೬೭.

೬. ಭಾರತದ ದಂಡಸಂಹಿತೆಯ ಪ್ರಕರಣ ೧೨೦ಎ ಮತ್ತು ಬಿ. ೧೨೪ಎ ಮತ್ತು ೧೫೩ಎ ಕ್ರಿಮಿನಲ್ ಪ್ರೊಸೀಜರ್ ಕೋಡ್ ಪ್ರಕರಣ ೧೦೮ ಮತ್ತು ೧೪೪.

೭. ಎನ್. ಘೋಷ್, ಅದೇ ಪು. ೬೦೧.

ಈ ಕಾಯಿದೆಗಳ ಮುಖಾಂತರ ಆಗುವ ನಷ್ಟಗಳಿಗೆ ನಾಗರಿಕ ನ್ಯಾಯಾಲಯದಲ್ಲಿ ಕ್ರಮಕೈಗೊಳ್ಳಲು ಬಾರದಂತೆ, ಪೊಲೀಸ್ ಕಾಯಿದೆ ಹಾಗೂ ಪತ್ರಿಕಾ ಕಾಯಿದೆಗಳಲ್ಲಿ ನಿಯಮಗಳಿದ್ದವು. ಅಧಿಕಾರಿಗಳು ಹಾಗೂ ಸೈನಿಕರು ದಂಗೆಗಳನ್ನು ಹತ್ತಿಕ್ಕುವಾಗ ಆದ ಕ್ರಮಗಳಿಗೆ ಜವಾಬ್ದಾರರಾಗಿರಲಿಲ್ಲ. ಮತ್ತು ಇನ್ನುಳಿದ ವಿಷಯಗಳಲ್ಲಿಯೂ ಸರ್ಕಾರದ ಅನುಮತಿ ಇಲ್ಲದೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲು ಬರುತ್ತಿರಲಿಲ್ಲ.[೧] ಅದೇ ರೀತಿಯಾಗಿ ಉಚ್ಚ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಸಾರ್ವಜನಿಕ ಕರ್ತವ್ಯಗಳನ್ನು ಮಾಡುವಾಗ ಆದ ಅಪರಾಧಕ್ಕಾಗಿ ಸರ್ಕಾರದ ಅನುಮತಿ ಇಲ್ಲದೆ ಅವರ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಲು ಬರುತ್ತಿರಲಿಲ್ಲ. ಮತ್ತು ಕ್ರಮ ತೆಗೆದುಕೊಂಡಾಗ ಸರ್ಕಾರ ಹೇಳಿದ ರೀತಿಯಲ್ಲಿಯೇ ನಡೆಯಬೇಕಾಗುತ್ತಿತ್ತು.[೨] ನ್ಯಾಯಬಾಹಿರವಾಗಿ ಉಪಯೋಗಿಸಿದ ಇಂಥ ಸ್ವಯಂ ನಿರ್ಧಾರಿತ ಅಧಿಕಾರವನ್ನು ಪಡೆದ ಸರ್ಕಾರ ಶಾಂತ ಆಡಳಿತದ ಬದಲು ಭಯಭೀತ ಆಡಳಿತವನ್ನು ತಂದದ್ದರಲ್ಲಿ ಆಶ್ಚರ್ಯವಿಲ್ಲ.

ಆದರೆ ಇದು ಬಹಳ ಕಾಲ ನಡೆಯಲಿಲ್ಲ. ಸ್ವಲ್ಪ ಕಾಲಾಂತರದಲ್ಲಿಯೇ ದೇಶದ ಸರ್ಕಾರವನ್ನು ನಡೆಸಲು ಬಲಾತ್ಕಾರವೊಂದೇ ಮಾರ್ಗವಲ್ಲವೆಂಬುದನ್ನು ತಿಳಿದುಕೊಳ್ಳಲಾಯಿತು. ಇತಿಹಾಸದ ತೀರ್ಪನ್ನು ಬರ್ಕ್‌ರವರು[೩] ಸಂಕ್ಷಿಪ್ತವಾಗಿ ಹೇಳಿದ್ದಾರೆ:

"ಬಲಪ್ರಯೋಗವು ಅಸ್ಥಿರ, ಇದರಿಂದ ಕೆಲವು ಸಮಯದವರೆಗೆ ಬಗ್ಗುಬಡಿಯಬಹುದು ಆದರೆ ಅದು ಮತ್ತೆ ಆ ಬಗ್ಗುಬಡಿಯುವ ಆವಶ್ಯಕತೆಯನ್ನು ತೆಗೆದುಹಾಕಲಾರದು ಮತ್ತು ಯಾವಾಗಲೂ ಹಿಡಿತದಲ್ಲಿಟ್ಟುಕೊಂಡಿರಬೇಕಾದ ರಾಷ್ಟ್ರವನ್ನು ಆಳಲುಬಾರದು. ಬಲಪ್ರಯೋಗದ ಮತ್ತೊಂದು ಅಡಚಣೆಯೆಂದರೆ ಅದರ ಅನಿಶ್ಚಿತತೆ. ಭಯೋತ್ಪಾದಕತೆಯು ಯಾವಾಗಲೂ ಬಲಪ್ರಯೋಗದ ಫಲವಲ್ಲ. ಯುದ್ಧ ಸನ್ನಾಹ ಜಯವಲ್ಲ. ನೀವು ಜಯಗಳಿಸದಿದ್ದರೆ ಬೇರೆ ಮಾರ್ಗವಿಲ್ಲ. ರಾಜಿಯಾಗದಿದ್ದಲ್ಲಿ ಬಲಪ್ರಯೋಗವೊಂದೇ ಮಾರ್ಗ. ಬಲಪ್ರಯೋಗ ಯಶಸ್ವಿಯಾಗದಿದ್ದಲ್ಲಿ ಸಮನ್ವಯದ ಆಸೆ ಉಳಿಯುವುದಿಲ್ಲ. ದಯೆಯಿಂದ ಅಧಿಕಾರವನ್ನು ಕೊಳ್ಳಬಹುದು. ಆದರೆ ಬಲಕ್ಕೆ ಅಥವಾ ಹಿಂಸೆಗೆ ಸೋತ ನಂತರ ಅದನ್ನು ಭಿಕ್ಷೆ ಮಾಡಲು ಸಾಧ್ಯವಿಲ್ಲ. ಬಲಪ್ರಯೋಗದ ಇನ್ನೊಂದು ಅಡಚಣೆಯೆಂದರೆ ನೀವು ಉಳಿಸಬೇಕೆಂದ ವಸ್ತುವನ್ನು ಅದು ಹಾಳು ಮಾಡುತ್ತದೆ. ನಿಮಗೆ ಸಿಕ್ಕ ವಸ್ತು, ನಿಮಗೆ ಬೇಕೆಂದು ಹೋರಾಡಿದ ವಸ್ತುವಲ್ಲ – ಬಡಿದಾಟದಲ್ಲಿ ಹಾಳಾದ ವಸ್ತುವಾಗಿರುತ್ತದೆ."

ಒಮ್ಮತದ ಸರ್ಕಾರವನ್ನು, ರಾಜಕೀಯ ವಿವೇಕವೆಂದು ಭಾರತದ ಕಾರ್ಯಂಗವು ಬಹಳ ಹಿಂದೆಯೇ ಒಪ್ಪಿಕೊಂಡಿದೆ. ಭಾರತದ ಶಾಸನ ಸಭೆಯ ರಚನೆಯಲ್ಲಿ ತಂದ ಬದಲಾವಣೆಗಳ ಉದ್ದೇಶ, ಅದು ಜನತೆಯ ಇಚ್ಛೆಯನ್ನು ಪ್ರತಿಬಿಂಬಿಸುವಂತೆ ಮಾಡುವುದಾಗಿತ್ತು. ಅದರ ಪರಿಣಾಮವಾಗಿ, ಭಾರತದ ಕಾರ್ಯಾಂಗ ಮತ್ತು ಭಾರತದ ಶಾಸನ ಸಭೆಗಳ ನಡುವೆ ಆಶ್ಚರ್ಯಕರವಾದ ರೀತಿಯಲ್ಲಿ ಹೊಂದಾಣಿಕೆಯಾಗಿತ್ತು. ಆದರೆ ಈ ಒಮ್ಮತದ ಸರ್ಕಾರ ಅಥವಾ ರಾಜೀ ಸರ್ಕಾರ ಕೇವಲ ಭ್ರಮೆಯಾಗಿತ್ತು. ಭಾರತದ ಶಾಸನಸಭೆಯ ರಚನೆಯಲ್ಲಿ ತರಲಾದ ಬದಲಾವಣೆಗಳ ವಿಶ್ಲೇಷಣೆಯಿಂದ, ಅದನ್ನು ದುರ್ಬಲವಾಗಿ ಮಾಡುವ ಅಥವಾ

---

೧. ಕ್ರಿಮಿನಲ್ ಪ್ರೊಸೀಜರ್ ಕೋಡ್, ೧೮೯೬ ರ ಕಾಯಿದೆ, ಅಧ್ಯಾಯ IX ವಿಭಾಗ ೧೨೮, ೧೩೦, ಮತ್ತು ೧೩೨

೨. ಅದೇ ವಿಭಾಗ ೧೯೭

೩. ಅಮೆರಿಕದೊಂದಿಗೆ ರಾಜಿ ಒಪ್ಪಂದ ಕುರಿತ ಅವರ ಭಾಷಣ.

ಕಾರ್ಯನಿರ್ವಾಹಕದ ಕೈಗೊಂಬೆಯಾಗಿ ಮಾಡುವ ಉದ್ದೇಶವಿತ್ತೆಂಬುದು ಗೊತ್ತಾಗುತ್ತದೆ. ಕಾರ್ಯಾಂಗದಿಂದ ಬೇರೆಯಾದ ಶಾಸನ ಸಭೆಯನ್ನು[1] ೧೮೫೩ರಲ್ಲಿ ಮೊದಲು ಸ್ಥಾಪಿಸಲಾಯಿತು.[2] ಅಂದು ಸ್ಥಾಪಿಸಿದ ಶಾಸನಸಭೆಯ ರಚನೆಯನ್ನು ೧೮೬೧ರಲ್ಲಿ[3] ಬದಲಾಯಿಸಲಾಯಿತು. ಇದಕ್ಕೆ ಶಾಸನಸಭೆಯು ಭಾರತದ ಜನರ ಪ್ರತಿನಿಧಿಯಾಗಿರಲಿಲ್ಲವೆಂಬ ಕಾರಣವನ್ನು ಕೊಡಲಾಯಿತು.[4] ಅದರ ಸದಸ್ಯರು ಅನೇಕ ಪ್ರಾಂತೀಯ ಸರ್ಕಾರಗಳನ್ನು ಪ್ರತಿನಿಧಿಸಲು ಆಡಳಿತ ವರ್ಗದಿಂದ ಬಂದವರು. ಶಾಸನಸಭೆಯು ಜನರ ಪ್ರತಿನಿಧಿಯಾಗಿರಲು, ಕಾರ್ಯಾಂಗದ ಸಲಹೆಯ ಮೇರೆಗೆ ಗವರ್ನರ್ ಜನರಲ್ ಆರಿಸಿಕೊಂಡು ನಾಮಕರಣಮಾಡಿದ ಸದಸ್ಯರಿಂದ ಕೂಡಿದ್ದಾಗಿರಬೇಕೆಂದು ೧೮೬೧ರ ಕಾಯಿದೆ ಆಜ್ಞೆಮಾಡಿತು.

ದೇಶದಲ್ಲಿಯ ಸಾರ್ವಜನಿಕ ಸಂಘಗಳು ಆಯ್ದ ಜನರನ್ನೇ ಗವರ್ನರ್ ಜನರಲ್ ಶಾಸನಸಭೆಗೆ ನಾಮಕರಣ ಮಾಡಬೇಕೆಂದು ೧೮೯೨ರ ಕಾಯಿದೆ ಆಜ್ಞೆ ಮಾಡಿತು. ಶಾಸನಸಭೆಯ ರಚನೆಯಲ್ಲಿಯ ಈ ಬದಲಾವಣೆಗಳು ಅದನ್ನು ಉದಾರವಾಗಿ ಮಾಡುವ ಗುರಿಯನ್ನು ಹೊಂದಿದ್ದವು. ಶಾಸನ ಸಭೆಯ ಪ್ರಾತಿನಿಧ್ಯವನ್ನು ಹೆಚ್ಚಿಸುವಾಗ ಅದರ ಅಧಿಕಾರ, ಕಾರ್ಯಾಂಗದ ಅಧಿಕಾರಕ್ಕಿಂತ ಹೆಚ್ಚಾಯಿತೆ? ಇಲ್ಲ ಪ್ರತಿಯಾಗಿ ಅದು ಕಡಿಮೆಯಾಯಿತು. ಶಾಸನಸಭೆಯ ಪ್ರಾತಿನಿಧ್ಯದ ಲಕ್ಷಣಗಳು ಹೆಚ್ಚಿದಂತೆ ಅದರ ಹತೋಟಿ ಶಕ್ತಿ ಕಡಿಮೆಯಾಯಿತು. ೧೮೬೧ರ ಕಾಯಿದೆ ಮೇರೆಗಿನ ಶಾಸನಸಭೆಗೆ ಹೋಲಿಸಿದರೆ ೧೮೫೩ರ ಕಾಯಿದೆ ಮೇರೆಗಿನ ಶಾಸನಸಭೆ ಹೆಚ್ಚಿನ ಅಧಿಕಾರ ಹೊಂದಿತ್ತು. ೧೮೫೩ರ ಕಾಯಿದೆ ಮೇರೆಗಿನ ಭಾರತದ ಶಾಸನಸಭೆ ಇಂಗ್ಲೆಂಡಿನ 'ಹೌಸ್ ಆಫ್ ಕಾಮನ್ಸ್'ನ ಕಾರ್ಯವಿಧಾನದ ಮಾದರಿಯಲ್ಲಿ ರಚಿತವಾಯಿತು. ಅದು ಶಾಸನಗಳ ವಿಷಯಗಳನ್ನಷ್ಟೇ ಅಲ್ಲದೆ ಆಡಳಿತದ ವಿಷಯಗಳನ್ನೂ ಕೈಗೆತ್ತಿಕೊಳ್ಳುತ್ತಿತ್ತು. ಸರ್. ಸಿ. ಎಲ್ಬರ್ಟರು ಹೇಳಿದಂತೆ, ಅದು ಕಾರ್ಯಾಂಗ ಸರ್ಕಾರದ ಕ್ರಮಗಳ ಔಚಿತ್ಯತೆಯನ್ನು ಪ್ರಶ್ನಿಸುವ ಸ್ವಾತಂತ್ರ್ಯವನ್ನು ತೋರಿತು. ತಕರಾರುಗಳ ವಿಚಾರಣೆಮಾಡುವ, ಸ್ಥಳೀಯ ಆಡಳಿತಗಾರರಿಂದ ಮಾಹಿತಿ ತರಿಸುವ, ಸಾರ್ವಜನಿಕ ಹಿತಾಸಕ್ತಿಗಳ ವಿಷಯವನ್ನು ಚರ್ಚಿಸುವ ಅಧಿಕಾರ ತನಗಿದೆ ಎಂದು ಅದು ತಿಳಿದಿದ್ದಿತು. ಲಾರ್ಡ್‌ಕ್ಯಾನಿಂಗ್‌ರು ಶಾಸನಸಭೆಯು ಹೌಸ್ ಆಫ್ ಕಾಮನ್ಸ್‌ನಂತೆ, ಆಡಳಿತ ಕ್ರಮದ ಆಕಾರ ಮತ್ತು ಪದ್ಧತಿಗಳಿಂದ ತುಂಬಿಹೋಗಿದೆ ಎಂದು ಹೇಳಿದರು. ಒಂದು ಡಜನ್ ಜನರ ಸಭೆಯಲ್ಲಿ ಕ್ರಮ ನಿಯಂತ್ರಿಸುವ ೧೩೬ ಸ್ಥಾಯೀ ಆಜ್ಞೆಗಳಿವೆ. ಇದು ೧೮೫೩ರ ಕಾಯಿದೆ ಮೇರೆಗೆ ರಚಿಸಲಾದ ಶಾಸನಸಭೆಯ ದೋಷ (!!). ಕಾರ್ಯಾಂಗದ ಶ್ರೇಷ್ಠತೆಯನ್ನು ಕಾಪಾಡಲು ಇದರ ಸುಧಾರಣೆಯು ಆವಶ್ಯಕವೆನಿಸಿತು. ಅದರ ಜನಾದರಣೀಯವಲ್ಲದ ಲಕ್ಷಣಗಳನ್ನು ಅದರ ಮರುರಚನೆ ಮಾಡುವುದಕ್ಕಿರುವ ಒಂದು ತೋರಿಕೆಯ

---

೧. ೧೮೩೩ರ ವರೆಗೆ ಕಾರ್ಯಾಂಗವು ಶಾಸಕಾಂಗವೂ ಆಗಿತ್ತು. ೧೮೩೩ರಲ್ಲಿ ಕಾರ್ಯಾಂಗದ ಸಮಿತಿಗೆ ಒಬ್ಬ ಕಾನೂನು ಸದಸ್ಯನನ್ನು ಸೇರ್ಪಡೆ ಮಾಡಲಾಯಿತು. ಅವರ ಕಾರ್ಯ ಕಾನೂನು ಮಾಡುವುದರಲ್ಲಿ ಕಾರ್ಯಾಂಗ ಸಮಿತಿಗೆ ಸಹಾಯ ಮಾಡುವುದು ಮಾತ್ರವಾಗಿತ್ತು. ೧೮೫೩ರ ಕಾಯಿದೆಯ ಪ್ರಕಾರ ಅವನನ್ನು ಕಾರ್ಯಾಂಗ ಸಮಿತಿಯಲ್ಲಿ ವಿಲೀನಗೊಳಿಸಲಾಯಿತು.

೨. ವಿಕ್ಟೋರಿಯಾ ೧೬ ಮತ್ತು ೧೭ ಸಿ. ೯೫.

೩. ವಿಕ್ಟೋರಿಯಾ ೨೪ ಮತ್ತು ೨೫ ಸಿ. ೬೭.

೪. ೧೮೫೩ ಕಾಯಿದೆ ಪ್ರಕಾರ ಸರ್ವೋಚ್ಚ ಶಾಸಕಾಂಗವು ನಾಮಕರಣಗೊಂಡ ಸದಸ್ಯರುಗಳಿಂದ ಕೂಡಿದ್ದು, ಅದರಲ್ಲಿ ಬಂಗಾಳ ಉಚ್ಚ ನ್ಯಾಯಾಲಯದ ಇಬ್ಬರು ನ್ಯಾಯಾಧೀಶರು ಮತ್ತು ಬಂಗಾಳ, ಮದರಾಸು, ಬೊಂಬಾಯಿ ಮತ್ತು ವಾಯವ್ಯ ಪ್ರಾಂತ್ಯಗಳನ್ನು ಪ್ರತಿನಿಧಿಸುವ ನಾಲ್ವರು ನಾಮಕರಣಗೊಂಡ ಅಧಿಕಾರಿಗಳು, ಭಾರತ ಸರ್ಕಾರದ ಕಾರ್ಯಾಂಗ ಸಮಿತಿಯ ಸದಸ್ಯರುಗಳ ಜೊತೆಯಲ್ಲಿಯೇ ಇದ್ದರು.

ನೆಪವನ್ನಾಗಿ ಉಪಯೋಗಿಸಲಾಯಿತು. ೧೮೬೧ರಲ್ಲಿ ತಂದ ಕಪಟ ಪ್ರತಿನಿಧಿತ್ವ ಪದ್ಧತಿಯಲ್ಲಿ ಶಾಸನಸಭೆಯು, ಕಾರ್ಯಾಂಗದ ಕೈಯಲ್ಲಿದ್ದ ಒಂದು ದುರ್ಬಲ ಸಂಸ್ಥೆಯಾಗಿತ್ತು. ನಾಮಕರಣ ಹೊಂದಿದ ಸದಸ್ಯರಿಂದ ಕೂಡಿದ ಶಾಸನಸಭೆಯಲ್ಲಿ ಅಭಿಪ್ರಾಯ ಅದರಿಂದ ಪ್ರಭಾವಿತವಾಗುತ್ತಿತ್ತು. ಪ್ರತಿ ಶಾಸನಸಭೆಯಲ್ಲಿ ಇರಬೇಕಾದವನಿಗೆ ಅಧಿಕಾರ ಬೇಕಾಗುತ್ತದೆ. ತಾನು ಯಾರಿಂದ ಈ ಸ್ಥಳ ಪಡೆದಿರುವನೋ ಅವರಿಂದ, ಅವನಿಗೆ ಈ ಅಧಿಕಾರ ಬರುತ್ತದೆ. ನಾಮಕರಣ ಹೊಂದಿದ ಅಧಿಕಾರಿ ಅಥವಾ ಅಧಿಕಾರೇತರ ಸದಸ್ಯರು ತಮ್ಮ ಶಾಸನಸಭೆಯ ಸ್ಥಾನವನ್ನು ಕಾರ್ಯಾಂಗದಿಂದ ಪಡೆದವರಾದ್ದರಿಂದ ಅಭಿಪ್ರಾಯ ತೆಗೆದುಕೊಳ್ಳುವಾಗ ಯಾವುದೇ ವಿಷಯದಲ್ಲಿಯೂ ಅವರು ಕಾರ್ಯಾಂಗದ ನೆರವಿಗೆ ಬರುತ್ತಿದ್ದರು. ನಾಮಕರಣ ಹೊಂದಿದ ಸದಸ್ಯರು, ಕಾರ್ಯಾಂಗದ ಆಜ್ಞೆಯ ಮೇರೆಗೆ ನಡೆದುಕೊಂಡು, ಅದರ ಅಧಿಕಾರಕ್ಕೆ ತಮ್ಮ ವಿಧೇಯತೆ ತೋರಿಸುತ್ತಿದ್ದರು. ಕಾರ್ಯಾಂಗದ ವಿರೋಧಿಗಳೆಂದು ತಿಳಿದ, ನಾಮಕರಣ ಹೊಂದಿದ ಅಧಿಕಾರೇತರರು ನಿಯತ್ತಿಲ್ಲದ ಜನರಾದ್ದರಿಂದ ಕಾರ್ಯಾಂಗದ ವಿರೋಧ ಮಾಡದೆ ಅದಕ್ಕೆ ಹೊಂದಿಕೊಂಡು ಹೋಗುತ್ತಿದ್ದರು. ಅವರು ಒಂದು ವೇಳೆ ನಿಯತ್ತಿನ ಜನರಿದ್ದರೂ ಅವರು ಕಾರ್ಯಾಂಗದ ಯಜಮಾನರಾಗುತ್ತಿರಲಿಲ್ಲ. ಏಕೆಂದರೆ ಸಂವಿಧಾನ ನಿಯಮದ ಮೇರೆಗೆ ಶಾಸನಸಭೆಗೆ ಕಾರ್ಯಾಂಗವನ್ನು ತನ್ನ ಮನಸ್ಸಿನ ವಿರುದ್ಧ ಯಾವುದೇ ಕೆಲಸ ಮಾಡಲು ಒತ್ತಾಯಿಸುವ ಅಧಿಕಾರವಿರಲಿಲ್ಲ. ೧೮೩೩ ರಿಂದ ೧೮೬೧ರ ವರೆಗೆ ಶಾಸನಸಭೆ ಶಾಸನ ಹಾಗೂ ಆಡಳಿತ ವಿಷಯಗಳನ್ನು ಕೈಗೆತ್ತಿಕೊಳ್ಳುತ್ತಿತ್ತು. ೧೮೬೧ ರಿಂದ ಶಾಸನ ಸಭೆ ಕೇವಲ ಶಾಸನೀಯ ಉದ್ದೇಶಕ್ಕಾಗಿ ಕೂಡುತ್ತಿತ್ತು. ಈ ಮಿತಿಯ ಪರಿಣಾಮದಿಂದ ಶಾಸನಸಭೆಯಲ್ಲಿ ಪ್ರಶ್ನೆ ಕೇಳಲು, ನಿಲುವಳಿ ಮಂಡಿಸಲು, ಆಯವ್ಯಯ ಪಟ್ಟಿಯ ಮೇಲೆ ಅಭಿಪ್ರಾಯ ತೆಗೆದುಕೊಳ್ಳಲು ಬಾರದಂತೆ ಆಯಿತು. ಅವರ ಅಸ್ತಿತ್ವದ ಮೊದಲ ೩೦ ವರ್ಷಗಳಲ್ಲಿ ಕೇವಲ ೧೬ ಪ್ರಸಂಗಗಳಲ್ಲಿ ಮಾತ್ರ ಅದು ಆಯವ್ಯಯ ಪಟ್ಟಿಯ ಮೇಲೆ ಚರ್ಚೆಮಾಡಿದೆ. ಅದೂ ಹೊಸ ಕರ ವಿಧಿಸುವ ಮಸೂದೆಯನ್ನು ತಂದಾಗ ಮತ್ತು ಕಾರ್ಯಾಂಗವು ನಾಮಕರಣ ಹೊಂದಿದ ಅಧಿಕಾರಿ ಸದಸ್ಯರ ಸಹಾಯದಿಂದ ಅದನ್ನು ಪಾಸು ಮಾಡಿಸಿಕೊಳ್ಳಬಹುದು, ಎಂಬ ಪರಿಸ್ಥಿತಿಯಲ್ಲಿ ವಾರ್ಷಿಕ ಹಣಕಾಸಿನ ನಿರೂಪಣೆಯನ್ನು ಚರ್ಚಿಸುವ ಮತ್ತು ಅದರ ವಿಷಯದ ಮೇಲೆ ಪ್ರಶ್ನೆ ಕೇಳುವ ಹಕ್ಕನ್ನು ೧೮೯೨ರ 'ಇಂಡಿಯನ್ ಕೌನ್ಸಿಲ್' ಕಾಯಿದೆಯ ಅಡಿಯಲ್ಲಿ ಮಾಡಿದ ಕಾರ್ಯವಿಧಾನದ ನಿಯಮಗಳ ಮುಖಾಂತರ ಶಾಸನಸಭೆಗೆ ಕೊಡಲಾಗಿತ್ತು. ಆದರೆ ಶಾಸನಸಭೆಯ ಈ ಎಲ್ಲಾ ಅಧಿಕಾರದ ರಿಯಾಯಿತಿಗಳು ಅದು ೧೮೩೩ರ ಕಾಯಿದೆ ಮೇರೆಗೆ ಹೊಂದಿದ ಸ್ಥಾನವನ್ನು ಪುನಃ ಸ್ಥಾಪಿಸಿದವೆಂಬುದು ಸಂಶಯಾಸ್ಪದ.

ಕಾರ್ಯಾಂಗದ ಮೇಲೆ ಶಾಸನಸಭೆಗೆ ಅಧಿಕಾರ ಕೊಡುವ ವಿಷಯದಲ್ಲಿ ಲಾರ್ಡ್ ಮಾರ್ಲೆಯವರ ಸುಧಾರಣೆಗಳು ಸಹ ಸಾಕಾಗಲಿಲ್ಲ. ಶಾಸನ ಸಭೆಯ ರಚನೆಯಲ್ಲಿ ನಾಮಕರಣದ ಬದಲು ಚುನಾವಣೆಯೇ ಆಧಾರವೆಂದು ೧೯೦೯ರಲ್ಲಿ ಅವರು ತಂದ ಸುಧಾರಣೆಗಳು ಸಾರಿದವು. ಪೂರಕ ಪ್ರಶ್ನೆ ಕೇಳುವ, ಹಣಕಾಸಿನ ಹೇಳಿಕೆಗಳು ಹಾಗೂ ಸಾರ್ವಜನಿಕ ಆಸಕ್ತಿಗಳ ವಿಷಯಗಳಲ್ಲಿ ಗೊತ್ತುವಳಿಯನ್ನು ಮಂಡಿಸುವ ಅಧಿಕಾರವನ್ನು

---

೧. ಐರ್ಲೆಂಡ್‌ನ ಸ್ವದೇಶಿ ಆಡಳಿತದ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿ, ಮುಕ್ತನೀತಿಯ ವಕ್ತಾರರೆಂದು ಜಗತ್ಪ್ರಸಿದ್ಧನಾದ ಲಾರ್ಡ್ ಮಾರ್ಲೆ, ಭಾರತದಲ್ಲಿ ರಾಜಕೀಯ ಸುಧಾರಣೆಗಳನ್ನು ತರುವಲ್ಲಿ ಈ ರೀತಿ ಹೇಳಿದರು: "ನನ್ನ ಅಧಿಕಾರದ ಅಥವಾ ಜೀವಿತ ದಿನಗಳು ಎಷ್ಟು ಉಳಿದಿವೆಯೋ ಅದಕ್ಕಿಂತಲೂ ೨೦ ಪಟ್ಟು ಹೆಚ್ಚಿನ ದಿನಗಳಿವೆಯೆಂದು ನಾನು ಭಾವಿಸಿದ್ದಾಗ್ಯೂ ಭಾರತದಲ್ಲಿ ಸಂಸತ್ತಿನ ಪದ್ಧತಿಯ ಗುರಿಯನ್ನು ಹೊಂದುವುದು ನನ್ನಿಂದ ಸಾಧ್ಯವಿಲ್ಲ. ಭಾರತದಲ್ಲಿ ಸಂಸತ್ತಿನ ಪದ್ಧತಿಯ ಗುರಿಯನ್ನು ನಾನು ಒಂದೇ ಒಂದು ಕ್ಷಣವೂ ಊಹಿಸಲಾರೆ."

ಸದಸ್ಯರಿಗೆ ಕೊಡಲು ಶಾಸನಸಭೆಯ ಕಾರ್ಯಪದ್ಧತಿಯನ್ನು ಉದಾರಗೊಳಿಸಲಾಯಿತು. ಕಾರ್ಯಾಂಗದ ಶ್ರೇಷ್ಠತೆಗೆ ಧಕ್ಕೆ ಬಾರದ ಹಾಗೆ ಶಾಸನಸಭೆಯನ್ನು ಉದಾರಗೊಳಿಸುವ ಹಳೆಯ ಪ್ರಯತ್ನದ ಒಂದು ಅಂಶ ಇದಾಗಿತ್ತೆಂದು ಅಲ್ಪ ವಿಶ್ಲೇಷಣೆಯಿಂದ ಗೊತ್ತಾಗುತ್ತದೆ.[೧] ಕಾರ್ಯಾಂಗದ ಶ್ರೇಷ್ಠತೆಯನ್ನು ೧) ಶಾಸನಸಭೆಗೆ ನಾಮಕರಣ ಮಾಡಿದ ಸರ್ಕಾರಿ ಅಧಿಕಾರಿಗಳ ಶಾಶ್ವತ ಬಹುಮತದಿಂದ ಮತ್ತು ೨) ಕಾರ್ಯವಿಧಾನ ನಿಯಮಗಳ ಹತೋಟಿಯಿಂದ ಕಾಯ್ದುಕೊಳ್ಳಲಾಯಿತು. ೧೮೯೨ರ ಕಾಯಿದೆ ಮೇರೆಗೆ ಚುನಾವಣೆಗಳು ಶಾಸನಸಭೆ ರಚನೆಯ ತಳಹದಿಯೆಂದು ಒಪ್ಪಿದರೂ,[೧] ಚುನಾಯಿತ ಸದಸ್ಯರು ಅಲ್ಪ ಸಂಖ್ಯೆಯಲ್ಲಿದ್ದುದರಿಂದ ತಾವು ಪ್ರತಿನಿಧಿಸಿದ ಜನರ ಆಶಯಗಳನ್ನು ಕಾರ್ಯರೂಪಕ್ಕೆ ತರಲು ಅವರಿಂದ ಆಗಲಿಲ್ಲ. ಕಾರ್ಯಾಂಗದ ಅನುಮತಿಯಿಂದ ಅವರು ಗೊತ್ತುವಳಿಯನ್ನು ಮಂಡಿಸಬಹುದಿತ್ತು.[೨] ಆದರೆ ಅವುಗಳನ್ನು ಕಾರ್ಯಾಂಗವು ಅಂಗೀಕಾರ ಮಾಡಬೇಕೆಂಬ ನಿಯಮವಿರಲಿಲ್ಲ. ಕಾರ್ಯಾಂಗದ ಮೇಲೆ ಬಾಧ್ಯವಲ್ಲದ ಶಿಫಾರಸುಗಳಾಗಿಯೇ ಅವು ಉಳಿದವು. ಈ ನೇರ ಅಡಚಣೆ, ಕಾರ್ಯಾಂಗ ಮತ್ತು ಶಾಸಕಾಂಗದ ಚುನಾಯಿತ ಸದಸ್ಯರ ನಡುವೆ ಘರ್ಷಣೆಗೆ ಆಸ್ಪದ ಕೊಟ್ಟಿತು. ಕೆಲವೊಂದು ರೀತಿಯಲ್ಲಿ ೧೯೦೯ರ ಸುಧಾರಣೆಗಳು ಸರಿಯಾಗಿರಲಿಲ್ಲ. ೧೯೦೯ರ ಮೊದಲು ಏನೇ ಘರ್ಷಣೆ ಇದ್ದರೂ ಅದು ಶಾಸಕಾಂಗದ ಹೊರಗಡೆ ಕಾಣಿಸಿಕೊಳ್ಳುತ್ತಿತ್ತು. ಏಕೆಂದರೆ ಚುನಾವಣೆಯ ನಿಯಮಗಳಿಂದ ಮತ್ತು ಕಾರ್ಯವಿಧಾನದಿಂದ ಶಾಸನಸಭೆಯ ಬಾಯಿ ಮುಚ್ಚಿಸಲಾಗಿತ್ತು. ಅದು ಯಾವ ಹುಡುಗಾಟವನ್ನು ಮಾಡಲೂ ಸಾಧ್ಯವಿರಲಿಲ್ಲ. ೧೯೦೯ರ ಸುಧಾರಣೆಗಳ ಮೂಲಕ ಶಾಸನಸಭೆಯನ್ನು ಸ್ವತಂತ್ರಗೊಳಿಸುವ ಮತ್ತು ಅದೇ ವೇಳೆಯಲ್ಲಿ ಅದರ ಬಾಯಿ ಮುಚ್ಚಿಸುವ ಪ್ರಯತ್ನಗಳನ್ನು ಮಾಡಲಾಯಿತು. ಈ ಪ್ರಯತ್ನದಿಂದ ಕಾರ್ಯನಿರ್ವಾಹಕ ಮತ್ತು ಜನರ ಮನಸ್ಸಿನಲ್ಲಿ ತಾಕಲಾಡುತ್ತಿದ್ದ ಶಕ್ತಿಗಳ ನಡುವಿನ ಘರ್ಷಣೆ ಮೇಲೆ ಬರುವಂತಾಯಿತು. ಪ್ರೊ. ರೆಡಲಿಕ್‌ರವರ ಮಾತುಗಳಲ್ಲಿ ಶಾಸನಸಭೆಗೆ ಸಂಬಂಧಿಸಿದ ಚುನಾವಣೆಯ ಕಾರ್ಯವಿಧಾನ ಅಥವಾ ವ್ಯವಹಾರ ಕಾರ್ಯವಿಧಾನ ಶಾಸನಸಭೆ ಎಂಜಿನ್ನಿನಲ್ಲಿ ಮತ್ತು ಅದರಂತೆ ಇಡೀ ರಾಜ್ಯದ ದೇಹದಲ್ಲಿ ಒತ್ತಡ ತೋರಿಸುವ ಒಂದು ರಾಜಕೀಯ ಒತ್ತಡ ಮಾಪಕವಾಗಿದೆ.[೩] ಈ ಒತ್ತಡ ಮಾಪಕವನ್ನು ತಪ್ಪಾಗಿ ನಿರ್ಮಿಸಿರಬಹುದು. ಅಥವಾ ಅದು ಹಳೆಯದಾಗಿರಬಹುದು. ಆದ್ದರಿಂದ ಅದು ನಿಜವಾದ ಒತ್ತಡವನ್ನು ತಪ್ಪಾಗಿ ತೋರಿಸಬಹುದು. ಭಾರತದ ಕಾರ್ಯಾಂಗವು ೧೯೦೯ರಲ್ಲಿ ತರಲಾದ ಶಾಸನಸಭೆಯ ಚುನಾವಣೆ ಹಾಗೂ ಕಾರ್ಯವಿಧಾನದಲ್ಲಿಯ ಬದಲಾವಣೆಗಳು ಕೆಟ್ಟ ಉದ್ದೇಶಗಳಿಂದ ತಂದವುಗಳಾಗಿದ್ದು , ರಾಜಕೀಯ ಎಂಜಿನ್ನಿನಲ್ಲಿಯ ಉಗಿಯನ್ನು ಮುಚ್ಚುವ ಪ್ರಯತ್ನಮಾಡಿ ಪರಿಸ್ಥಿತಿಯ ತಪ್ಪು ಕಲ್ಪನೆಯನ್ನು ಕೊಟ್ಟವು. ಅವರೆಲ್ಲರೂ ನಾಮಕರಣ ಹೊಂದಿದ

---

೧. ಇದು ಆಯ್ಕೆ ಪದ್ಧತಿಯಾಗಿತ್ತು. ೧೮೬೧ ಕಾಯಿದೆ ಮತ್ತು ೧೮೯೨ ಕಾಯಿದೆಗಳ ನಡುವಿನ ಒಂದೇ ಒಂದು ಅಂತರವೆಂದರೆ ಮೊದಲಿನ ಕಾಯಿದೆಯಲ್ಲಿ ಕಾರ್ಯಕಾರಿ ಸರ್ಕಾರ ತನಗೆ ಬೇಕಾದ ಒಬ್ಬನನ್ನು ಶಾಸಕಾಂಗಕ್ಕೆ ನೇಮಿಸಬಹುದಿತ್ತು. ಆದರೆ ಎರಡನೆಯ ಕಾಯಿದೆ ಪ್ರಕಾರ, ಸರ್ಕಾರಕ್ಕೆ ಸಹಾಯಮಾಡಲು ಯೋಗ್ಯವಿದ್ದ, ಕೋಮಿನ ಭಾಗದ ಜನರ ಉಪದೇಶದ ಮೇರೆಗೆ ಕಾರ್ಯಕಾರಿ ಸರ್ಕಾರವನ್ನು ನೇಮಿಸಬಹುದಿತ್ತು. ಆಯ್ಕೆಯಾದ ವ್ಯಕ್ತಿಯನ್ನೇ ಸರ್ಕಾರ ನೇಮಿಸಬೇಕೆಂಬ ನಿಯಮವಿಲ್ಲದ್ದರಿಂದ ಮೊದಲನೆಯದರಂತೆ ಎರಡನೆಯದು ಸಹ ಕಾರ್ಯಕಾರಿಯಿಂದ ನೇಮಿಸಿದಂತಾಗುತ್ತಿತ್ತು.

೨. ಕಾಯಿದೆ ಬದ್ಧವಾಗಿ ಕೌನ್ಸಿಲ್‌ನ ಅಧ್ಯಕ್ಷ ಎಂದರೆ ವೈಸ್‌ರಾಯ್ ಆದರೆ ಅವನು ಕಾರ್ಯಕಾರಿ ಪರಿಷತ್ತಿನ ಆದೇಶದ ಮೇರೆಗೆ ಕೆಲಸ ಮಾಡುತ್ತಿದ್ದನು.

೩. ಜೆ. ರೆಡ್ಲಿಕ್ *ಪಾರ್ಲಿಮೆಂಟರಿ ಪ್ರೊಸೀಜರ್*, ಸಂ. III ಪು. ೧೯೮ ನೋಡಿ

ಸದಸ್ಯರಾದ್ದರಿಂದ ಎಲ್ಲಿಯವರೆಗೆ ಶಾಸನಸಭೆಯ ಸದಸ್ಯರು ತಮ್ಮ ಆಜ್ಞೆಯನ್ನು ಕಾರ್ಯಾಂಗದಿಂದ ಪಡೆಯುತ್ತಿದ್ದರೋ ಅಲ್ಲಿಯವರೆಗೆ ಅಂಥ ತಂತ್ರವು ಉಪಯುಕ್ತವಾಯಿತು. ಜನರಿಂದ ಆಜ್ಞೆ ಪಡೆಯುವ ಚುನಾಯಿತ ಸದಸ್ಯರು ಬಂದ ನಂತರ ಅದರ ದೋಷಗಳು ಸ್ಪಷ್ಟವಾದವು. ಚುನಾಯಿತ ಸದಸ್ಯರ ತೇಜೋವಧೆಯಿಂದಾಗಿ ಕಾರ್ಯವಿಧಾನದ ತಳಹದಿಯೆಂದು ತಿಳಿದಿದ್ದ ತತ್ವಗಳನ್ನು ಅವರು ಪ್ರಶ್ನಿಸುವಂತಾಯಿತು. ಒಂದು ಪಕ್ಷವು, ಕಾರ್ಯಕಲಾಪಗಳನ್ನು ನಡೆಸುವ ನಿಯಮಗಳಲ್ಲಿ ವಾಕ್ ಸ್ವಾತಂತ್ರ್ಯದಲ್ಲಿ, ಬಹುಮತ ತತ್ವದಲ್ಲಿ, ಸದಸ್ಯ ಸದಸ್ಯರಲ್ಲಿ , ಅಸಮಾನತೆ ಇದೆಯೆಂದು ತಕಾರಾರುಮಾಡಿದರೆ, ಅದು ರಾಜ್ಯದ ಜೀವನದಲ್ಲಿ ಬಹು ದೊಡ್ಡ ದೋಷದ ಚಿಹ್ನೆಯಾಗಿದೆ. ಅಂಥ ಘರ್ಷಣೆಯು ಉತ್ಪನ್ನವಾದಾಗ ಶಾಸನಸಭೆಯ ಕಾರ್ಯವಿಧಾನದ ಸುಧಾರಣೆಯನ್ನು ತರಬೇಕೋ ಅಥವಾ ರಾಜ್ಯದ ಸಂವಿಧಾನದಲ್ಲಿ ಸುಧಾರಣೆ ತರಬೇಕೋ ಎನ್ನುವುದನ್ನು ರಾಜಕೀಯ ಧುರೀಣರು ನಿರ್ಧರಿಸಬೇಕು.

ಶಾಸನಸಭೆಯ ಒಳಗಡೆ, ನಿಷ್ಫಲ ಪ್ರಯತ್ನಗಳಿಂದ ವಿರೋಧ ಬರುವ ಲಕ್ಷಣಗಳಿದ್ದವು. ಭಾರತದ ಸುಶಿಕ್ಷಿತ ಜನರ ಮನದಲ್ಲಿ, ರಾಷ್ಟ್ರೀಯ ಪ್ರಜ್ಞೆ ಹಾಗೂ ರಾಜಕೀಯ ಅಧಿಕಾರದ ಆಸೆ ತೀವ್ರಗತಿಯಿಂದ ಬೆಳೆಯುತ್ತಿದ್ದವು. ಈ ಸಂಗತಿಯು ಮನದಟ್ಟಾದದ್ದರಿಂದ, ರಾಜಕೀಯ ಪುನಾರಚನೆಯ ಬಗ್ಗೆ ವಿಚಾರ ಮಾಡುತ್ತಿದ್ದ ಜನರು ಕೇವಲ ಕಾರ್ಯವಿಧಾನದ ಸುಧಾರಣೆಯು ಉಪಯೋಗವಿಲ್ಲವೆಂದು ಒಪ್ಪಿಕೊಂಡರು. ರಾಜ್ಯವನ್ನು ಅರಾಜಕತೆಯಿಂದ ಉಳಿಸುವುದು ಸಂವಿಧಾನದ ಸುಧಾರಣೆಯಿಂದ ಮಾತ್ರ ಸಾಧ್ಯ .

ಭಾರತದ ಸಂವಿಧಾನದಲ್ಲಿ ಬದಲಾವಣೆಗಳನ್ನು ತರುವ ದೃಷ್ಟಿಯಿಂದ ಸೂಚಿಸಿದ ಸುಧಾರಣೆಗಳಲ್ಲಿ ಬಹಳ ವ್ಯತ್ಯಾಸವಿತ್ತು . ಭಾರತದ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮುಸ್ಲಿಮ್ ಲೀಗ್ ಮಾಡಿದ ಕಾಂಗ್ರೆಸ್–ಲೀಗ್ ಯೋಜನೆಯೆಂದೇ ಕರೆಯಲಾದ ಯೋಜನೆಯನ್ನು ನಾವಿಲ್ಲಿ ಗಮನಿಸಬಹುದು.[೧] ಆ ಯೋಜನೆಯು ಕೇಂದ್ರ ಶಾಸನಸಭೆಯಲ್ಲಿ ಚುನಾಯಿತ ಸದಸ್ಯರಿಗೆ ಐದನೇ ನಾಲ್ಕರ ಬಹುಮತವನ್ನು ಕೇಳಿತು. ಕಾರ್ಯಾಂಗದ ಅರ್ಧದಷ್ಟು ಸದಸ್ಯರು ಭಾರತೀಯರಿರಬೇಕು ಮತ್ತು ಅವರು ಚುನಾಯಿತ ಶಾಸಕಾಂಗದ ಸದಸ್ಯರಿಂದ ಚುನಾಯಿತರಾದವರಾಗಿರಬೇಕೆಂದು ಅದು ಕೇಳಿತು. ಶಾಸಕಾಂಗಕ್ಕೆ ಹಣಕಾಸಿನ ಹಾಗೂ ಶಾಸನ ರಚನೆಯ ಸಂಪೂರ್ಣ ಅಧಿಕಾರವಿರಬೇಕು. ಗೊತ್ತುವಳಿಗಳ ರೂಪದಲ್ಲಿಯ ಇದರ ಶಿಫಾರಸುಗಳಿಗೆ ಕಾರ್ಯಾಂಗವು ಬದ್ಧವಾಗಿರಬೇಕು. ಭಾರತದ ಜನರ ವತಿಯಿಂದ "ಭಾರತದ ರಾಜಕೀಯ ಸಂಘಗಳು ಮಾಡಿದ ಬೇಡಿಕೆಗಳ ನಿರೂಪಣೆ ಇದಾಗಿತ್ತು." ಭಾರತದ ರಾಜಕಾರಣಿಗಳ ರಾಜಕೀಯ ಸಾಮರ್ಥ್ಯ ಬಹಳ ಕೆಳಮಟ್ಟದಿತ್ತೆಂಬುದನ್ನು ಯೋಜನೆಯ ವಿಶ್ಲೇಷಣೆ ತೋರಿಸುತ್ತದೆ. ಬ್ರಿಟಿಷ್ ಭಾರತದಲ್ಲಿ ಜವಾಬ್ದಾರಿ ಸರ್ಕಾರದ ಬೇಡಿಕೆಯನ್ನು ಈಡೇರಿಸುವ ದೃಷ್ಟಿಯಿಂದ ಈ ಯೋಜನೆಯನ್ನು ಮಂಡಿಸಲಾಗಿತ್ತು . ಆದರೆ ಕಾರ್ಯರೂಪದಲ್ಲಿ ಅದು ಜವಾಬ್ದಾರಿ ಸರ್ಕಾರವನ್ನು ಕೊಡುವುದಿರಲಿ, ಒಳ್ಳೆಯ ಸರ್ಕಾರವನ್ನು ಕೊಡಲೂ ಅಸಮರ್ಥವಾಗಿತ್ತು . ತನ್ನ ಇಚ್ಛೆಯಂತೆ ಕಾರ್ಯಾಂಗವನ್ನು ರಚಿಸುವ ಅಥವಾ ಕಿತ್ತುಹಾಕುವ ಅಧಿಕಾರ ಶಾಸನಸಭೆಗೆ ಇರಬೇಕೆಂದು ಈ ಯೋಜನೆ ಕೇಳಲಿಲ್ಲ . ಅದನ್ನು ಅದು ಕೇಳಿದ್ದಿದ್ದರೆ ಈ ಯೋಜನೆಯು ಜವಾಬ್ದಾರಿ ಸರ್ಕಾರದ ಯೋಜನೆಯಾಗುತ್ತಿತ್ತು . ಶಾಸನ ಸಭೆಯ ಆಜ್ಞೆಯ ಮೇರೆಗೆ ದೇಶದ ಆಡಳಿತವನ್ನು ನಡೆಸಲು ಕಾರ್ಯಾಂಗದ ಮೇಲೆ ಒತ್ತಡವಿರುಬೇಕೆಂದು ಅದು ಕೇಳಿತ್ತು . ಈ ಯೋಜನೆಯು ಲಾರ್ಡ್ ಮಾರ್ಲೆಯವರ ಯೋಜನೆಯ

---

೧. ಇದು *ಈಸ್ಟ್ ಇಂಡಿಯಾ ಕಾನ್‌ಸ್ಟಿಟ್ಯೂಷನಲ್ ರಿಫಾರ್ಮ್ಸ್*, ಪಿಪಿ.ಸಿಡಿ ೯೧೦೨೮, ೧೯೧೮ ಪು. ೯೮ರಲ್ಲಿ ದೊರೆಯುತ್ತದೆ.

ವಿಸ್ತೃತರೂಪವಾಗಿತ್ತು. ಕಾರ್ಯಾಂಗದ ಮೇಲೆ ಭಾರತದ ಅಭಿಪ್ರಾಯ ಹಾಗೂ ಉಪದೇಶದ ಪ್ರಭಾವವಿರಲೆಂದು ಆತನು ಸರ್ಕಾರದಲ್ಲಿ ಭಾರತದ ಅಂಶವನ್ನು ತಂದನು. ಕಾಂಗ್ರೆಸ್–ಲೀಗ್ ಯೋಜನೆಯನ್ನು ಮಂಡಿಸಿದವರು ಕಾರ್ಯಾಂಗ ಮತ್ತು ಶಾಸಕಾಂಗದಲ್ಲಿ ಭಾರತದ ಅಂಶವನ್ನು ಹೆಚ್ಚಿಸಿದರು ಮತ್ತು ಶಾಸಕಾಂಗದ ಇಚ್ಛೆಯಂತೆ ಕಾರ್ಯಾಂಗವು ನಡೆಯದಿದ್ದಲ್ಲಿ ಏನಾಗಬಹುದೆಂಬುದನ್ನು ಯೋಚಿಸದೆ, ಸಲಹೆಯನ್ನು ಹತೋಟಿಯಾಗಿ ಮಾರ್ಪಡಿಸುವ ನಿಯಮಗಳನ್ನು ಅದರಲ್ಲಿ ಕೂಡಿಸಿದರು, ಭಿನ್ನಾಭಿಪ್ರಾಯದ ಆಜ್ಞೆಯನ್ನು ಹೊಂದಿದ, ಕಾನೂನಿನ ಮೇರೆಗೆ ಸಂಸತ್ತಿಗೆ ಜವಾಬ್ದಾರಿಯಾದ ಮತ್ತು ಕಾರ್ಯರೂಪದಲ್ಲಿ ಚುನಾಯಿತ ಶಾಸಕಾಂಗಕ್ಕೆ ಜವಾಬ್ದಾರಿಯಾದ ಕಾರ್ಯಾಂಗವು ಈ ಯೋಜನೆಯ ಮುಖ್ಯಬಿಂದುವಾಗಿತ್ತು. ಆಜ್ಞೆಗಳ ಪ್ರತ್ಯೇಕತೆಯಿಂದ ಶಾಸಕಾಂಗವು ಕಾರ್ಯಾಂಗವನ್ನು ನಿಷ್ಕ್ರಿಯಗೊಳಿಸಬಹುದಾಗಿತ್ತು. ಆದರೆ ಅದನ್ನು ತೆಗೆದುಹಾಕುವ ಅಧಿಕಾರವಿರಲಿಲ್ಲ. ಚುನಾಯಿತ ಸಮುದಾಯಕ್ಕೆ ಮೊರೆಹೋಗಿ ಶಾಸನಸಭೆಯನ್ನು ಬದಲಿಸುವ ಸಾಂವಿಧಾನಿಕ ಮಾರ್ಗವಿಲ್ಲದ್ದರಿಂದ, ಶಾಸನಸಭೆಯ ಆಶಯಗಳಿಗೆ ಮನ್ನಣೆ ಕೊಡದ ಸರ್ಕಾರವನ್ನೂ ಅದು ಮುಂದುವರಿಸಬೇಕಾಗುತ್ತಿತ್ತು. ಭಾರತದ ಸಂವಿಧಾನವನ್ನು ಸುಧಾರಿಸುವ ಹಿಂದಿನ ಪ್ರಯತ್ನಗಳಂತೆ, ಈ ಯೋಜನೆಯೂ ಪರಿಪೂರ್ಣವಾಗಿರಲಿಲ್ಲ. ಏಕೆಂದರೆ ಇದರಲ್ಲಿ ಕಾರ್ಯಾಂಗ ಮತ್ತು ಶಾಸಕಾಂಗ ಬೇರೆಬೇರೆ ಅಧಿಕಾರ ಮೂಲಗಳಿಂದ ಆಜ್ಞೆ ಪಡೆಯುತ್ತವೆ ಮತ್ತು ಅವರಿಗೆ ಜವಾಬ್ದಾರಿಯಾಗಿರುತ್ತವೆ. ಎರಡು ಆಜ್ಞೆಗಳ ನಡುವೆ ಹೊಂದಾಣಿಕೆ ಇಲ್ಲದಾಗ ಘರ್ಷಣೆ ಉದ್ಭವಿಸುವ ಸಾಧ್ಯತೆಯನ್ನು ಅದು ಅಲಕ್ಷಿಸಿದ್ದರಿಂದ ಅದು ಸರಿಯಾದ ಯೋಜನೆ ಎನ್ನಿಸಲಿಲ್ಲ. ಸಂಸದೀಯ ಕಾರ್ಯಾಂಗದಲ್ಲಿ ಇಂಥ ಘರ್ಷಣೆ ಅಂತರ್ಗತವಾಗಿರುತ್ತದೆ. ಸಂಸದೀಯ ಕಾರ್ಯಾಂಗವನ್ನು ಹೊಂದಿದ ಸಂಸದೀಯ ಪದ್ಧತಿಯ ಸರ್ಕಾರವೊಂದೇ ಅದನ್ನು ದೂರವಿಡುವ ಮಾರ್ಗ.

ಈ ದೃಷ್ಟಿಯಿಂದ ಆಗಸ್ಟ್ ೨೦, ೧೯೨೭ರ ಹೇಳಿಕೆಯು ಭಾರತದ ಸಂವಿಧಾನದ ಬೆಳವಣಿಗೆಯ ಚರಿತ್ರೆಯಲ್ಲಿ ಒಂದು ಹೆಗ್ಗುರುತಾಗುತ್ತದೆ. ಆ ದಿನ ಭಾರತದ ಸೆಕ್ರೆಟರಿ ಆಫ್ ಸ್ಟೇಟ್, ಹೌಸ್ ಆಫ್ ಕಾಮನ್ಸ್‌ನಲ್ಲಿ ಈ ಹೇಳಿಕೆ ಕೊಟ್ಟನು.

"ಪ್ರತಿಯೊಂದು ಆಡಳಿತ ಭಾಗದಲ್ಲಿ ಭಾರತೀಯರನ್ನು ಹೆಚ್ಚು ಹೆಚ್ಚಾಗಿ ತೊಡಗಿಸುವುದು, ಸ್ವಯಂ ಆಡಳಿತ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು, ಬ್ರಿಟಿಷ್ ರಾಜ್ಯದ ಅವಿಭಾಜ್ಯ ಅಂಗವಾದ ಜವಾಬ್ದಾರಿ ಸರ್ಕಾರವನ್ನು ಸಾಧಿಸುವುದು, ಬ್ರಿಟಿಷ್ ಸರ್ಕಾರದ ನೀತಿಯಾಗಿದೆ. ಇದನ್ನು ಭಾರತದ ಸರ್ಕಾರವೂ ಒಪ್ಪಿದೆ. ಆದಷ್ಟು ಬೇಗ ಈ ದಿಸೆಯಲ್ಲಿ ಹೆಜ್ಜೆಯನ್ನಿಡುವ ನಿರ್ಣಯ ಅವರು ತೆಗೆದುಕೊಂಡಿದ್ದಾರೆ......"

"ಈ ನೀತಿಯಲ್ಲಿ ಪ್ರಗತಿಯನ್ನು ಹಂತಹಂತವಾಗಿ ಸಾಧಿಸಬಹುದೆಂದು ನಾನಿಲ್ಲಿ ಹೇಳಬಯಸುತ್ತೇನೆ. ಭಾರತದ ಜನರ ಕಲ್ಯಾಣ ಹಾಗೂ ಪ್ರಗತಿಯ ಜವಾಬ್ದಾರಿ ಹೊಂದಿದ ಬ್ರಿಟಿಷ್ ಸರ್ಕಾರ ಹಾಗೂ ಭಾರತ ಸರ್ಕಾರಗಳು, ಪ್ರತಿಯೊಂದು ಪ್ರಗತಿಯ ಸಾಧನ ಹಾಗೂ ವೇಳೆಯನ್ನು ನಿರ್ಧರಿಸಬೇಕು."

ಈ ಬಹುಮುಖ್ಯವಾದ ಹೇಳಿಕೆಯು, ಒಂದು ಯುಗ ಮುಗಿದು ಮತ್ತೊಂದು ಯುಗ ಪ್ರಾರಂಭವಾಗುವ ಗುರುತಾಗಿದೆ. ಸರ್ಕಾರವನ್ನು ಹತೋಟಿಯಲ್ಲಿಟ್ಟುಕೊಳ್ಳಲು ಬಾರದ ಶಾಸನಸಭೆಯ ಅಭಿಪ್ರಾಯವನ್ನು ಕಾರ್ಯಾಂಗ ಕೇಳುವ ಹಳೆಯ ಪದ್ಧತಿಯನ್ನು ಇದು ಬಿಟ್ಟುಕೊಟ್ಟಿತು. ಹೊಸ ಪದ್ಧತಿಯ ಉದ್ದೇಶ, ಶಾಸನಸಭೆಗೆ ಸರ್ಕಾರ ರಚಿಸುವ ಅಥವಾ ತೆಗೆಯುವ ಅಧಿಕಾರ ಕೊಡುವುದಾಗಿತ್ತು. ಈ ಸರ್ಕಾರ

ಕೇವಲ ಜನರ ಸರ್ಕಾರವಾಗಿದೆ, ಜನರ ಸಲುವಾಗಿ ಮತ್ತು ಜನರಿಂದ ಆದ ಸರ್ಕಾರವಾಗಬೇಕೆಂಬುದೂ ಅದರ ಉದ್ದೇಶವಾಗಿತ್ತು. ದೇಶದ ರಾಜಕೀಯ ಸಂಸ್ಥೆಗಳ ತಳಹದಿಯ ನೀತಿಯಲ್ಲಿಯ ಬದಲಾವಣೆ, ಅವುಗಳ ಆಡಳಿತದ, ಶಾಸನ ರಚನೆಯ ಮತ್ತು ಹಣಕಾಸಿನ ಸಂಬಂಧಗಳಲ್ಲಿ ಬಹಳ ಬದಲಾವಣೆಗಳನ್ನು ತಂದಿತು. ೧೯೧೯ರ ಸುಧಾರಣಾ ಕಾಯಿದೆ ಪರಿಣಾಮದಿಂದ, ಪ್ರಾಂತೀಯ ಹಣಕಾಸಿನ ಪದ್ಧತಿಯಲ್ಲಿ ಬದಲಾವಣೆಗಳನ್ನು ತಂದದ್ದು, ಆ ವೇಳೆಯಲ್ಲಿದ್ದ ಆ ಪದ್ಧತಿಯಲ್ಲಿಯ ದೋಷಗಳಿಂದ ತಂದದ್ದವುಗಳಲ್ಲ. ಅಷ್ಟೇ ಅಲ್ಲ ಆ ಪದ್ಧತಿಯು ಬಹಳ ಕ್ರಿಯಾಶೀಲವಾಗಿತ್ತು. ಆ ಕಾಯಿದೆಯು ತರಬೇಕೆಂದು ಮಾಡಿದ್ದ ದೇಶದ ಸರ್ಕಾರದ ಪದ್ಧತಿಯಲ್ಲಿಯ ಕ್ರಾಂತಿಕಾರಿ ಬದಲಾವಣೆಗಳಿಗೆ ಆ ಪದ್ಧತಿ ಹೊಂದಿಕೊಳ್ಳದ್ದರಿಂದ ಈ ಬದಲಾವಣೆಗಳನ್ನು ತರಬೇಕಾಯಿತು.

ಬದಲಾವಣೆಗಳ ಸ್ವರೂಪ, ಅವುಗಳ ವ್ಯಾಪ್ತಿ ಮತ್ತು ಅವುಗಳ ಯಥೋಚಿತತೆ, ಮುಂದಿನ ಎರಡು ಅಧ್ಯಾಯಗಳ ವಿಷಯವಾಗುತ್ತದೆ.

# ಅಧ್ಯಾಯ ೧೧

# ಬದಲಾವಣೆಯ ಸ್ವರೂಪ

ಭವಿಷ್ಯತ್ಕಾಲದ ಬ್ರಿಟಿಷ್ ನೀತಿಯ ಗುರಿಯು, ಭಾರತದಲ್ಲಿ ಜವಾಬ್ದಾರಿ ಸರ್ಕಾರವನ್ನು ಕ್ರಮೇಣವಾಗಿ ಈಡೇರಿಸುವುದಾಗಿದೆಯೆಂದು, ಆಗಸ್ಟ್ ೨೦, ೧೯೧೭ರ ಪ್ರಕಟನೆ ಹೇಳಿತು, ಮತ್ತು ಸಂವಿಧಾನ ಸುಧಾರಣೆಯ ಮೇಲಿನ ಮಾಂಟೆಗ್ಯೂ – ಚೇಲಮ್ಸ್ ಫೊರ್ಡ್‌ರ ವರದಿ ಈ ಹೇಳಿಕೆಗಳನ್ನು ಕಾರ್ಯರೂಪದಲ್ಲಿ ತರುವ ಮಾರ್ಗಗಳನ್ನು ಪರೀಕ್ಷಿಸಿತು. ತಾವು ಚಳವಳಿ ನಡೆಸುತ್ತಿದ್ದ ತತ್ವಗಳಿಗೆ ಕಾಂಗ್ರೆಸ್–ಲೀಗ್‌ಗಳು ತತ್ವಶಃ ಬದ್ಧರಾಗಿಲ್ಲವೆಂಬುದನ್ನು ತೋರಿಸಿದುದು ಆ ವರದಿಯ ಹಿರಿಮೆಯಾಗಿತ್ತು. ಭಾರತದಲ್ಲಿ ಜವಾಬ್ದಾರಿ ಸರ್ಕಾರದ ಪ್ರಾರಂಭವಾಗುವ ಬದಲು ಸಂಸದೀಯ ಪದ್ಧತಿಯ ಸರ್ಕಾರದಡಿಯಲ್ಲಿ ಅಸಂಸದೀಯ ಕಾರ್ಯಾಂಗವನ್ನು ಈ ಯೋಜನೆಯು ದೇಶದ ಮೇಲೆ ಹೇರಬಹುದಾಗಿತ್ತು. ತಮ್ಮ ತಪ್ಪನ್ನು ಮನಗಂಡ ಕಾಂಗ್ರೆಸ್–ಲೀಗ್‌ನ ರಾಜಕಾರಣಿಗಳು ತಮ್ಮ ಯೋಜನೆಯನ್ನು ಬಿಟ್ಟು ಜಂಟಿ ವರದಿಯಲ್ಲಿಯ ಸೂಚನೆಗಳನ್ನು ಒಪ್ಪಿದರು. ಆದರೆ ಎಲ್ಲ ರಾಜಕೀಯ ಸಂಸ್ಥೆಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ಒಂದೇ ಬಾರಿಗೆ ತರಬೇಕೆಂಬುದು ಅವರ ಬೇಡಿಕೆಯಾಗಿತ್ತು. ಪ್ರಕಟಣೆಯಲ್ಲಿ 'ಜವಾಬ್ದಾರಿ' ಶಬ್ದಕ್ಕಿಂತ 'ಹಂತ' ಶಬ್ದಕ್ಕೆ ಬಹಳ ಪ್ರಾಮುಖ್ಯತೆ ಇದೆ ಎಂದು ಹೊಸ ಸಂವಿಧಾನಕರ್ತರು ತೋರಿಸಿದರು.[೧]

ಈ ದೃಷ್ಟಿಗನುಸಾರವಾಗಿ ಪ್ರಾಂತೀಯ ಸರ್ಕಾರಗಳಲ್ಲಿ, ಪರಿಮಿತ ರೀತಿಯ ಜವಾಬ್ದಾರಿ ಸರ್ಕಾರಗಳನ್ನು ತರಲು ನಿರ್ಧರಿಸಲಾಯಿತು. ಕೇಂದ್ರ ಸರ್ಕಾರದಂತೆ, ಪ್ರಾಂತೀಯ ಸರ್ಕಾರಗಳೂ, ಭಾರತದಲ್ಲಿ ಬೇಜವಾಬ್ದಾರಿಯುತ ಸರ್ಕಾರಗಳಾಗಿದ್ದವು. ಪ್ರಾಂತೀಯ ಶಾಸಕಾಂಗದ ರಚನೆಯಲ್ಲಿ ಮಾಡಿದ ಬದಲಾವಣೆಗಳು ಹಾಗೂ ಕೇಂದ್ರೀಯ ಶಾಸಕಾಂಗದ ರಚನೆಯಲ್ಲಿ ಮಾಡಿದ ಬದಲಾವಣೆಗಳು ಒಂದೇ ರೀತಿಯವಾಗಿದ್ದವು. ಈ ಎರಡೂ ಬದಲಾವಣೆಗಳಲ್ಲಿ ಕಾರ್ಯಾಂಗವು ಶಾಸಕಾಂಗದ ಹತೋಟಿಗೊಳಪಡದೆ, ಅದರ ಸಲಹೆಯನ್ನು ಕೇಳಬಹುದಾಗಿತ್ತು. ಒಂದೇ ಸಂದರ್ಭದಲ್ಲಿ ಕೇಂದ್ರೀಯ ಹಾಗೂ ಪ್ರಾಂತೀಯ ಎರಡೂ ಸರ್ಕಾರೀಯಂತ್ರಗಳ ಚೌಕಟ್ಟುಗಳನ್ನು ಪ್ರತ್ಯೇಕ ಅಡಿಪಾಯಗಳ ಮೇಲೆ ಕಟ್ಟಲಾಯಿತು. ಆ ಸಂದರ್ಭವೆಂದರೆ ೧೯೦೯ರ ಮಾರ್ಲೆ–ಮಿಂಟೋ ಸುಧಾರಣೆಯಾಗಿತ್ತು. ಆ ಸುಧಾರಣೆಗಳಡಿಯಲ್ಲಿ ಕೇಂದ್ರ ಶಾಸಕಾಂಗದಲ್ಲಿ ಅಧಿಕಾರಿ ಸದಸ್ಯರು ಹೆಚ್ಚು ಸಂಖ್ಯೆಯಲ್ಲಿದ್ದು ಕಾರ್ಯಾಂಗದ ಸದಸ್ಯರೂ ಸೇರಿದಂತೆ ಅವರು ಸ್ಥಾಯಿ ಬಹುಮತ ಪಡೆದಿದ್ದರು. ಪ್ರಾಂತೀಯ ಶಾಸಕಾಂಗಗಳಲ್ಲಿ ಅಧಿಕಾರಿ ಸದಸ್ಯರ ಸ್ಥಾಯಿ ಬಹುಮತದ ಈ ತತ್ವವನ್ನು ತೆಗೆದುಹಾಕಲಾಗಿತ್ತು. ಪ್ರಾಂತೀಯ ಶಾಸಕಾಂಗದ ರಚನೆ, ಕೇಂದ್ರೀಯ ಶಾಸಕಾಂಗದ ರಚನೆಗಿಂತ ಇನ್ನೊಂದು ರೀತಿಯಲ್ಲಿ ಭಿನ್ನವಾಗಿತ್ತು. ಅದಾವುದೆಂದರೆ, ಆ ಎರಡು ಸರ್ಕಾರಗಳಲ್ಲಿಯ ಮುಂಗಡಪತ್ರದ ಕಾರ್ಯವಿಧಾನ. ಕೇಂದ್ರ ಶಾಸಕಾಂಗದಲ್ಲಿ ವರ್ಷದ ಮೊದಲಿನ ತಿಂಗಳಲ್ಲಿ ಹಣಕಾಸಿನ ಸದಸ್ಯನು ಅಂದಾಜುಗಳನ್ನು

---

೧. ಭಾರತ ಸರ್ಕಾರದ ಮಸೂದೆಯ ಮೇಲಣ ಜಂಟಿ ಆಯ್ಕೆ ಸಮಿತಿಯ ವರದಿ, ಪು. ೨೦೩, ೧೯೧೯, ಪಿ.ಎಸ್. ಪ್ಯಾರಾ. ೭

ವಿವರಗಳೊಂದಿಗೆ, ಶಾಸನಸಭೆಯಲ್ಲಿ ಮಂಡಿಸುತ್ತಾನೆ. ತಾನು ಆವಶ್ಯಕವೆಂದು ತಿಳಿದ ವಿವರಣೆಗಳನ್ನು ಮರುದಿನ ಕೊಡುತ್ತಾನೆ. ಅದಾದ ನಂತರ ಶಾಸನಸಭೆಯ ಸದಸ್ಯರು ಕೆಳಗಿನವುಗಳಿಗೆ ಸಂಬಂಧಪಟ್ಟಂತೆ ನಿರ್ಣಯಗಳನ್ನು ಮಂಡಿಸುತ್ತಾರೆ. (ಎ) ಕರ ಬದಲಾವಣೆಗಳಲ್ಲಿಯ ಪ್ರಸ್ತಾವನೆ (ಬಿ) ಸಾಲದ ಪ್ರಸ್ತಾವನೆ, ಅಥವಾ (ಸಿ) ಸ್ಥಾನಿಕ ಸರ್ಕಾರಗಳಿಗೆ ಹೆಚ್ಚಿನ ಧನಸಹಾಯ. ಈ ನಿರ್ಣಯಗಳ ಮೇಲೆ ಮತ ತೆಗೆದುಕೊಂಡ ನಂತರ, ಭಾರತ ಸರ್ಕಾರದ ಮುಂಗಡಪತ್ರದ ಮೇಲಿನ ಚರ್ಚೆಯ ಮೊದಲ ಹಂತ ಮುಗಿಯುತ್ತದೆ. ಅಂದಾಜುಗಳ ವಿಚಾರಣೆ ತೆಗೆದುಕೊಂಡಾಗ ಎರಡನೆಯ ಹಂತ ಪ್ರಾರಂಭವಾಗುತ್ತದೆ. ಈ ಹಂತದಲ್ಲಿಯೂ ಯಾವುದೇ ಆದಾಯದ ಬಾಬ್ತುಗಳು ಮತ್ತು ವೆಚ್ಚದ ಬಾಬ್ತುಗಳ ಮೇಲೆ, ಸದಸ್ಯರು ನಿರ್ಣಯಗಳನ್ನು ಮಂಡಿಸಬಹುದು. ಶಾಸನಸಭೆಯಲ್ಲಿ ಚರ್ಚಿಸಲು ಬರುವುದಿಲ್ಲವೆಂದು, ಕಾರ್ಯವಿಧಾನ ನಿಯಮಗಳು ಹೇಳಿದ ಆದಾಯದ ಹಾಗೂ ವೆಚ್ಚದ ಬಾಬ್ತುಗಳ ಮೇಲೆ ಮಾತ್ರ ನಿರ್ಣಯಗಳನ್ನು ಮಂಡಿಸಲು ಬರುತ್ತಿರಲಿಲ್ಲ. ನಿರ್ಣಯಗಳನ್ನು ಮಂಡಿಸಿ, ಮತ ತೆಗೆದುಕೊಂಡ ನಂತರ ಹಣಕಾಸಿನ ಸದಸ್ಯನು, ನಡೆದ ಚರ್ಚೆಯನ್ನು ಗಮನದಲ್ಲಿಟ್ಟುಕೊಂಡು ತನಗೆ ಹೊಂದುವಂತೆ ಬದಲಾವಣೆಗಳನ್ನು ಮಾಡಿ, ಅಂತಿಮ ಮುಂಗಡಪತ್ರವನ್ನು ಒಪ್ಪಿಸುತ್ತಾನೆ. ಈ ಮೂರನೆಯ ಹಂತದಲ್ಲಿ ಮುಂಗಡಪತ್ರದ ಮೇಲಿನ ಚರ್ಚೆಯ ವೇಳೆಯಲ್ಲಿಯ ಸೂಚನೆಗಳ ಸ್ವೀಕಾರ ಹಾಗೂ ಅಸ್ವೀಕಾರದ ಬಗೆಗೆ ಕಾರಣಗಳನ್ನು ಕೊಡುತ್ತಾನೆ. ನಂತರ ಮುಂಗಡಪತ್ರದ ಸಾಮಾನ್ಯ ಚರ್ಚೆ ಪ್ರಾರಂಭವಾಗುತ್ತದೆ. ಆದರೆ ಅಂತಿಮ ಮುಂಗಡಪತ್ರದ ಮೇಲೆ ನಿರ್ಣಯಗಳನ್ನು ಮಂಡಿಸುವುದಕ್ಕಾಗಲಿ, ಮತ ತೆಗೆದುಕೊಳ್ಳುವುದಕ್ಕಾಗಲಿ ಬರುವುದಿಲ್ಲ. ಪ್ರಾಂತೀಯ ಶಾಸನಸಭೆಗಳಲ್ಲಿ ಮುಂಗಡಪತ್ರದ ಕಾರ್ಯವಿಧಾನ ಸ್ವಲ್ಪ ಬೇರೆ ಇತ್ತು. ಅಲ್ಲಿ ಪ್ರಾಂತೀಯ ಅಂದಾಜುಗಳ, ಅದರ ಜೊತೆಗೆ ೫೦೦೦ ರೂಪಾಯಿಗಳಿಗಿಂತ ಹೆಚ್ಚಿನ ವೆಚ್ಚದ ಯೋಜನೆಗಳ ಪಟ್ಟಿಯನ್ನು ಕೂಡಿಸಿದ ಕಚ್ಚಾ ಕರಡು ಪ್ರತಿಯನ್ನು ತಯಾರಿಸುವುದರಿಂದ ಮೊದಲನೆಯ ಹಂತ ಪ್ರಾರಂಭವಾಗುತ್ತದೆ. ಇದು ಎರಡು ಭಾಗಗಳಲ್ಲಿ ಇರುತ್ತದೆ. ಮೊದಲನೆಯ ಭಾಗದಲ್ಲಿ ಹಂಚಿದ ಅಥವಾ ನಿರ್ಬಂಧಿತವಾದ ವೆಚ್ಚಗಳ ವಿವರ ಮತ್ತು ಎರಡನೆಯದರಲ್ಲಿ ಹಂಚಲ್ಪಡದ ಅಥವಾ ನಿರ್ಬಂಧಿತವಾದ ವೆಚ್ಚಗಳ ವಿವರಗಳಿರುತ್ತವೆ. ಈ ಮುಂಗಡಪತ್ರದ ಕರಡನ್ನು ಭಾರತ ಸರ್ಕಾರಕ್ಕೆ ಒಪ್ಪಿಸಲಾಗುತ್ತದೆ. ಅದು ಆದಾಯದ ಅಂದಾಜುಗಳನ್ನು ಗಣನೆಗೆ ತೆಗೆದುಕೊಂಡು ಪ್ರಾಂತೀಯ ಸರ್ಕಾರಗಳ ಸಲಹೆಯ ಮೇರೆಗೆ, ಒಟ್ಟು ವೆಚ್ಚವನ್ನು ನಿರ್ಧರಿಸುತ್ತದೆ. ಭಾರತ ಸರ್ಕಾರ ನಿಗದಿಪಡಿಸಿದ ಈ ಬದಲಾದ ಆದಾಯ ಹಾಗೂ ವೆಚ್ಚದ ಅಂಕಿ–ಸಂಖ್ಯೆಗಳನ್ನು ಪ್ರಾಂತೀಯ ಸರ್ಕಾರಗಳಿಗೆ ತಿಳಿಸಿದಾಗ, ಪ್ರಾಂತೀಯ ಸರ್ಕಾರಗಳ ಮುಂಗಡಪತ್ರದ ಮೊದಲಹಂತ ಕೊನೆಗೊಳ್ಳುತ್ತದೆ. ಪ್ರಾಂತೀಯ ಸರ್ಕಾರಗಳು ಈ ಮುಂಗಡಪತ್ರದ ಕರಡನ್ನು ಪ್ರಾಂತೀಯ ಶಾಸನಸಭೆಯ ಸಮಿತಿಗೆ ಒಪ್ಪಿಸಿದಾಗ ಎರಡನೆಯ ಹಂತ ಪ್ರಾರಂಭವಾಗುತ್ತದೆ. ಈ ಸಮಿತಿಯಲ್ಲಿ ಅರ್ಧದಷ್ಟು ಅಧಿಕಾರಿ ಹಾಗೂ ಇನ್ನರ್ಧದಷ್ಟು ಅಧಿಕಾರೇತರರು ಇರುತ್ತಾರೆ. ಮೊದಲನೆಯ ವರ್ಗದವರನ್ನು ಸರ್ಕಾರ ನಾಮಕರಣ ಮಾಡುತ್ತದೆ ಮತ್ತು ಎರಡನೆಯ ವರ್ಗದವರನ್ನು ಅವರ ಸಹೋದ್ಯೋಗಿಗಳು ಚುನಾಯಿಸುತ್ತಾರೆ. ಇದರ ಅಧ್ಯಕ್ಷತೆಯನ್ನು ಪ್ರಾಂತೀಯ ಹಣಕಾಸಿನ ಮೇಲ್ವಿಚಾರಣೆ ಮಾಡುವ ಕಾರ್ಯಾಂಗದ ಸದಸ್ಯನು ವಹಿಸುತ್ತಿದ್ದನು. ಸಮಿತಿಯ ಕಾರ್ಯಗಳು ಅನೌಪಚಾರಿಕ ರೀತಿಯವು ಹಾಗೂ ಗುಟ್ಟಾಗಿರುತ್ತಿದ್ದವು. ನಿರ್ಣಯಗಳನ್ನು ಬಹುಮತದ ಆಧಾರದ ಮೇಲೆ ತೆಗೆದುಕೊಳ್ಳಲಾಗುತ್ತಿತ್ತು. ಸಮಿತಿಯು ಅನಿರ್ಬಂಧಿತವಾದ ವೆಚ್ಚದ ವಿವರಣೆಯಿಂದ ಕೂಡಿದ ಪಟ್ಟಿಯ ಎರಡನೆಯ ಭಾಗಕ್ಕೆ ಸಂಬಂಧಪಟ್ಟಿತ್ತು ಮತ್ತು ಭಾರತ ಸರ್ಕಾರವು ನಿಗದಿಪಡಿಸಿದ ಒಟ್ಟು ವೆಚ್ಚವನ್ನು ಮೀರದ ಹಾಗೆ ಬದಲಾವಣೆಗಳನ್ನು ಮಾಡಲು ಹಾಗೂ ಹೊಸ

ಬಾಬ್ತುಗಳನ್ನು ಕೂಡಿಸಲು ಸ್ವಾತಂತ್ರ್ಯವಿತ್ತು. ಕೊನೆಗೆ ಸಮಿತಿಯು ತಾನು ಮಾಡಿದ ಬದಲಾವಣೆಗಳನ್ನು ತನ್ನ ಸರ್ಕಾರಕ್ಕೆ ಒಪ್ಪಿಸುತ್ತಿತ್ತು. ಇಲ್ಲಿಗೆ ಪ್ರಾಂತೀಯ ಮುಂಗಡಪತ್ರದ ಎರಡನೆಯ ಹಂತ ಕೊನೆಗೊಳ್ಳುತ್ತದೆ. ಹಣಕಾಸಿನ ಮೇಲ್ವಿಚಾರಣೆ ಮಾಡುವ ಸದಸ್ಯನು ಪ್ರಾಂತೀಯ ಅಂದಾಜುಗಳನ್ನು ಪ್ರಾಂತೀಯ ಶಾಸನಸಭೆಗೆ ಒಪ್ಪಿಸಿದಾಗ ಮೂರನೆಯ ಹಂತ ಪ್ರಾರಂಭವಾಗುತ್ತದೆ. ಆ ಸದನದ ಸಮಿತಿಯಲ್ಲಿ ಮುಂಗಡಪತ್ರದ ಚರ್ಚೆಯಾಗಿ, ಚರ್ಚೆಗೊಳಪಟ್ಟ ಪ್ರತಿ ಅಂದಾಜಿನ ಮೇಲೆ ನಿರ್ಣಯಗಳನ್ನು ಮಂಡಿಸಲಾಗುತ್ತಿತ್ತು. ಎಲ್ಲ ನಿರ್ಣಯಗಳು ಚರ್ಚೆಗೊಳಗಾಗಿ, ಮತ ತೆಗೆದುಕೊಂಡ ನಂತರ, ಪ್ರಾಂತೀಯ ಸರ್ಕಾರಗಳಿಗೆ ಚರ್ಚೆಯ ಪರಿಣಾಮವನ್ನು ತಿಳಿಸಲಾಗುತ್ತಿತ್ತು. ಆದರೆ ನಿರ್ಣಯಗಳು ಅಂತಿಮವಾಗಿರಲಿಲ್ಲ. ಪ್ರಾಂತೀಯ ಸರ್ಕಾರವು ಅಂತಿಮ ಮುಂಗಡ ಪತ್ರವನ್ನು ಮಂಡಿಸಿ, ಶಾಸನಸಭೆಯು ಮಾಡಿದ ಸೂಚನೆಗಳನ್ನು ಸ್ವೀಕಾರ ಮಾಡುವ ಹಾಗೂ ಅಸ್ವೀಕಾರ ಮಾಡುವ ಕಾರಣಗಳನ್ನು ಕೊಟ್ಟಾಗ ನಾಲ್ಕನೆಯ ಹಂತ ಪ್ರಾರಂಭವಾಗುತ್ತಿತ್ತು. ಆಮೇಲೆ ಚರ್ಚೆಗಳು ನಡೆಯುತ್ತಿದ್ದವು ಆದರೆ ನಿರ್ಣಯಗಳನ್ನು ತೆಗೆದುಕೊಳ್ಳಲು ಬರುತ್ತಿರಲಿಲ್ಲ ಮತ್ತು ಶಾಸನಸಭೆ ಮುಂಗಡಪತ್ರದ ಮೇಲೆ ತನ್ನದೇ ಆದ ಅಭಿಪ್ರಾಯವನ್ನು ತೆಗೆದುಕೊಳ್ಳಲೂ ಬರುತ್ತಿರಲಿಲ್ಲ. ಒಪ್ಪಿಗೆಯಾಗಿದೆ ಎಂದಷ್ಟೇ ಹೇಳಿ ಕಾರ್ಯಾಂಗದಿಂದ ಅಂಗೀಕರಿಸಲಾಗುತ್ತಿತ್ತು.

ಕೇಂದ್ರೀಯ ಹಾಗೂ ಪ್ರಾಂತೀಯ ಶಾಸನಸಭೆಗಳ ರಚನೆ ಹಾಗೂ ಕಾರ್ಯವಿಧಾನಗಳಲ್ಲಿಯ ಇಂಥ ಅಂತರಗಳಿಂದ, ಕೇಂದ್ರ ಸರ್ಕಾರವು ತನ್ನ ಶಾಸನಸಭೆಗೆ ಬೇಜವಾಬ್ದಾರಿಯಾಗಿದ್ದಕ್ಕಿಂತ, ಪ್ರಾಂತೀಯ ಸರ್ಕಾರಗಳು ತಮ್ಮ ಶಾಸನಸಭೆಗಳಿಗೆ ಕಡಿಮೆ ಬೇಜವಾಬ್ದಾರಿಯಾಗಿದ್ದವೆಂದು ತಿಳಿಯಬಾರದು. ಕೇಂದ್ರ ಶಾಸನಸಭೆಯಲ್ಲಿದ್ದಂತೆ ಪ್ರಾಂತೀಯ ಶಾಸನ ಸಭೆಯಲ್ಲಿ ೧೯೦೯ ರಿಂದ ಅಧಿಕಾರಿ ಸದಸ್ಯರ ಬಹುಮತವಿರಲಿಲ್ಲವೆಂಬುದು ಕಾರ್ಯಾಂಗದ ಮೇಲೆ ಯಾವ ಪರಿಣಾಮವನ್ನೂ ಬೀರಲಿಲ್ಲ. ಏಕೆಂದರೆ ಅಧಿಕಾರಿ ಹಾಗೂ ಅಧಿಕಾರೇತರ ನಾಮಕರಣ ಹೊಂದಿದ ಸದಸ್ಯರ ನಡುವಿನ ಅಂತರ ಕೇವಲ ತೋರಿಕೆಯದಾಗಿತ್ತು. ಇಬ್ಬರೂ ಸರ್ಕಾರದ ಆಜ್ಞಾನುವರ್ತಿಗಳೇ ಆಗಿದ್ದರು. ಸರ್ಕಾರದಿಂದ ನಾಮಕರಣ ಹೊಂದಿದವರಾದ್ದರಿಂದ ಇವರು ಸರ್ಕಾರದ ಪರ ಮತ ನೀಡುತ್ತಿದ್ದರು. ಹೀಗಾಗಿ ಕೇಂದ್ರ ಸರ್ಕಾರದಂತೆ ಪ್ರಾಂತೀಯ ಸರ್ಕಾರಗಳಿಗೆ ಶಾಸನಸಭೆಯಲ್ಲಿ ಬಹುಮತವಿತ್ತು. ಕಾರ್ಯಾಂಗದ ಮೇಲೆ ಶಾಸನಸಭೆಗೆ ಹೆಚ್ಚಿನ ಹತೋಟಿಕೊಡುವ ವಿಷಯದಲ್ಲಿ, ಪ್ರಾಂತೀಯ ಸರ್ಕಾರಗಳ ಮುಂಗಡಪತ್ರದ ಕಾರ್ಯಪದ್ಧತಿ ಕೇಂದ್ರ ಸರ್ಕಾರದ ಪದ್ಧತಿಗಿಂತ ಭಿನ್ನವಿರಲಿಲ್ಲ. ಎರಡರಲ್ಲಿಯೂ ಮುಂಗಡಪತ್ರದ ಆವಶ್ಯಕತೆಗಳಿಗೆ ತಕ್ಕಂತೆ, ಮೊದಲೇ ಚರ್ಚೆಮಾಡುವ ಹಕ್ಕನ್ನು ಶಾಸನಸಭೆಯ ಸದಸ್ಯರಿಗೆ ಕೊಡುವ ಗುರಿ ಇತ್ತು. ಸಾಮ್ರಾಜ್ಯದ ಮುಂಗಡಪತ್ರಕ್ಕೆ ಹೋಲಿಸಿದಾಗ, ಪ್ರಾಂತೀಯ ಮುಂಗಡಪತ್ರಗಳ ವಿಷಯದಲ್ಲಿ ಈ ಹಕ್ಕನ್ನು ಮೊದಲಿನ ಹಂತಗಳಲ್ಲಿಯೇ ಉಪಯೋಗಿಸಬಹುದಿತ್ತು. ಪ್ರಾಂತೀಯ ಮುಂಗಡಪತ್ರದ ಮೇಲಿನ ಶಾಸನಸಭೆಯ ನಿರ್ಣಯಗಳು ಸಾಮ್ರಾಜ್ಯದ ಮುಂಗಡಪತ್ರದ ಮೇಲಿನ ಕೇಂದ್ರೀಯ ಶಾಸನಸಭೆಯ ನಿರ್ಣಯಗಳಂತೆ, ತಮ್ಮ ಸರ್ಕಾರಗಳಿಗೆ ಮಾಡಿದ ಶಿಫಾರಸುಗಳಾಗಿದ್ದವು. ಎರಡೂ ಸರ್ಕಾರಗಳ ಮುಂಗಡಪತ್ರದ ಕಾರ್ಯವಿಧಾನದ ಈ ಅಂತರಗಳು, ಕಾರ್ಯಾಂಗದ ಮೇಲೆ ಹೆಚ್ಚಿನ ಹತೋಟಿಯನ್ನು ಹಾಕಲಿಲ್ಲ. ಪ್ರಾಂತೀಯ ಶಾಸನಸಭೆಯ ಸಮಿತಿಗೆ, ಪ್ರಾಂತೀಯ ಮುಂಗಡಪತ್ರದ ಅನಿರ್ಬಂಧ ಭಾಗದ ಚೌಕಟ್ಟನ್ನು ಗುರುತಿಸುವ ಹಕ್ಕನ್ನು ಕೊಟ್ಟಿದ್ದು ಕಾರ್ಯಾಂಗದ ಮೇಲೆ ಶಾಸನಸಭೆಯ ಹತೋಟಿಯನ್ನು ಕೊಡಲಿಲ್ಲ. ಮೊದಲನೆಯದಾಗಿ ಪ್ರಾಂತೀಯ ಸರ್ಕಾರವು ಯಾವುದೇ ವೆಚ್ಚದ ಬಾಬತ್ತನ್ನು ಅನಿರ್ಬಂಧ ವೆಚ್ಚದ ವರ್ಗದಿಂದ ನಿರ್ಬಂಧ ವೆಚ್ಚದ ಬಾಬತ್ತಿಗೆ ವರ್ಗಾಯಿಸಿ, ಮುಂಗಡಪತ್ರ ಸಮಿತಿಯ ಪರಿಮಿತಿಯನ್ನು

ಸೀಮಿತಗೊಳಿಸಬಹುದಾಗಿತ್ತು. ಇದೂ ಅಲ್ಲದೆ ಸಾರ್ವಜನಿಕ ಹಣಕಾಸಿನ ತತ್ವಕ್ಕನುಗುಣವಾದ ಮುಂಗಡಪತ್ರದ ಕಾರ್ಯವಿಧಾನದ ನಿಯಮಗಳು ಹೆಚ್ಚಿನ ವೆಚ್ಚದ ಯೋಜನೆಗಳನ್ನು ಮುಂದಿಡುವ ಸಮಿತಿಯ ಅಧಿಕಾರವನ್ನು ಸೀಮಿತಗೊಳಿಸಿದವು. ಆವರ್ತಿತ ವೆಚ್ಚವುಳ್ಳ ಯೋಜನೆಗಳನ್ನು ಮಂಡಿಸುವಾಗ ಆವರ್ತಿತ ಆದಾಯದ ಹೆಚ್ಚಳದ ಗತಿ ಮತ್ತು ಆವರ್ತಿತ ವೆಚ್ಚದ ಹೆಚ್ಚಳದ ಗತಿಯನ್ನು ಗಮನದಲ್ಲಿಟ್ಟುಕೊಳ್ಳಬೇಕೆಂದು ನಿರ್ಬಂಧಿಸಲಾಯಿತು. ಈ ಕಾಯಿದೆಯಿಂದಾಗಿ, ತನ್ನ ದೃಷ್ಟಿಯಲ್ಲಿ ಬೇಕೆನಿಸಿದ, ಆದರೆ ಆವರ್ತಿತ ವೆಚ್ಚವುಳ್ಳ ಯೋಜನೆಗಳನ್ನು ಸಮಿತಿಯು ಕೈಬಿಡಬೇಕಾಗುತ್ತಿತ್ತು. ಆದರೆ ಕಾರ್ಯನಿರ್ವಾಹಕ ಸಮಿತಿಯು ಮಾಡಿದ ಅಂಥ ಯೋಜನೆಗಳನ್ನು, ಭಾರತ ಸರ್ಕಾರದ ಪೂರ್ವ ಅನುಮತಿಯನ್ನು ಪಡೆಯುವ ಮೂಲಕ ಒಪ್ಪಿಕೊಳ್ಳಲಾಗುತ್ತಿತ್ತು. ಇದರ ಪರಿಣಾಮವೆಂದರೆ ಹೊಸ ನಿಯಮಗಳ ಪ್ರಕಾರ ಮಂಡಿಸಿದ ಪ್ರಾಂತೀಯ ಮುಂಗಡಪತ್ರಗಳಲ್ಲಿ ಸಮಿತಿಯ ವಿವೇಚನೆಗೆ ಬಿಟ್ಟ ಮೊತ್ತ ತೀರ ಕಡಿಮೆ ಇರುತ್ತಿತ್ತು. ಇದರಿಂದಾಗಿ ಪ್ರಾಂತೀಯ ಕಾರ್ಯನಿರ್ವಾಹಕಗಳು ಪ್ರಾಂತೀಯ ಶಾಸನಸಭೆಗಳಿಗೆ ಮಣಿಯುತ್ತಿರಲಿಲ್ಲ.

ಭಾರತದಲ್ಲಿ ಕೇಂದ್ರ ಸರ್ಕಾರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಸಂಬಂಧ ಬದಲಾವಣೆಯಾಗದ ಹೊರತು ಪ್ರಾಂತ್ಯಗಳಲ್ಲಿ ನಿಜವಾದ ಜವಾಬ್ದಾರಿ ಸರ್ಕಾರ ತರುವುದು ಸಾಧ್ಯವಿಲ್ಲ. ೧೯೧೯ನೆಯ ಕಾಯಿದೆ ಜಾರಿಯಲ್ಲಿ ಬರುವ ಮೊದಲು ಅವೆರಡರ ನಡುವಿನ ಸಂಬಂಧ, ಪ್ರಾಂತೀಯ ಸರ್ಕಾರಗಳು ಕೇಂದ್ರ ಸರ್ಕಾರಕ್ಕೆ ವಿಧೇಯಕವಾಗಿರಬೇಕಾಗಿತ್ತು.[೧] ಈ ವಿಧೇಯಕದ ಬಂಧನದಲ್ಲಿ ನಾವು ಮೂರು ಎಳೆಗಳನ್ನು ಕಾಣಬಹುದು – ಶಾಸನ ರಚನೆ ಹಣಕಾಸು ಮತ್ತು ಆಡಳಿತ ಈ ಮೂರರಲ್ಲಿ ಹಣಕಾಸಿನ ಎಳೆ ಎಷ್ಟು ಬಿಗಿಯಾಗಿತ್ತೆಂಬುದನ್ನು ನಾವು ನೋಡಿದ್ದೇವೆ. ಆದಾಯ ಮತ್ತು ವೆಚ್ಚದ ಮೇಲಿನ ಭಾರತ ಸರ್ಕಾರದ ಹತೋಟಿಯು ಸಂಸತ್ತಿನ ಕಾಯಿದೆಗಳಿಂದ ಬಂದದ್ದು. ಅದು ಭಾರತದ ಆದಾಯಗಳು ಒಂದೇ ಎಂದು ತಿಳಿದು, ಭಾರತ ಸರ್ಕಾರದ ಉದ್ದೇಶಗಳಿಗಾಗಿ ಉಪಯೋಗಿಸಿತು. ಕೆಲವೊಂದು ಆದಾಯ ಮೂಲಗಳನ್ನು ಪ್ರಾಂತೀಯ ಹಾಗೂ ಭಾರತದ ನಿರ್ದಿಷ್ಟ ಉದ್ದೇಶಗಳಿಗಾಗಿ ಬಳಸಲುಬಾರದಂತೆ ಮಾಡುವುದು ಈ ನಿಯಮದ ಉದ್ದೇಶವಾಗಿರಲಿಲ್ಲ. ಇಲ್ಲದೆ ಹೋಗಿದ್ದರೆ ಪ್ರಾಂತೀಯ ಹಣಕಾಸಿನ ಪದ್ಧತಿಯ ಬೆಳವಣಿಗೆ ಸಾಧ್ಯವಿರಲಿಲ್ಲ. ಆದರೆ ಅವು ಸಂಗ್ರಹಿಸಿದ ಆದಾಯಗಳಿಗೆ ಅಂತರ್ಗತ ಕಾಯಿದೆಬದ್ಧ ಹಕ್ಕನ್ನು ಪ್ರಾಂತೀಯ ಸರ್ಕಾರಗಳಿಗೆ ಅದು ನಿರಾಕರಿಸಿತು. ಸ್ಥಾನಿಕ ಸಂಸ್ಥೆಗಳು ಸಂಗ್ರಹಿಸಿದ್ದ ಸ್ಥಾನಿಕ ಕರಗಳನ್ನು ಹೊರತುಪಡಿಸಿ, ಬ್ರಿಟಿಷ್ ಭಾರತದಲ್ಲಿ ಹಾಕಿದ ಕರಗಳ ಮೇಲೆ ಭಾರತ ಸರ್ಕಾರದ ಸಂಪೂರ್ಣ ಹತೋಟಿ ಇತ್ತು. ಕಾಯಿದೆ ಮೂಲಕ ಮಾತ್ರ ಕರ ವಿಧಿಸುವುದು ಸಾಧ್ಯವಿತ್ತು.[೨] ಆದರೆ ಭಾರತ ಸರ್ಕಾರದ ಪೂರ್ವ ಅನುಮತಿ ಇಲ್ಲದೆ ಪ್ರಾಂತೀಯ ಸರ್ಕಾರಗಳು ಕೆಳಗಿನವುಗಳನ್ನು ಮಾಡದಂತೆ ನಿಷೇಧಿಸಿತ್ತು –

---

೧. 'ರಿಪೋರ್ಟ್ ಆನ್ ಇಂಡಿಯನ್ ಕಾನ್‌ಸ್ಟಿಟ್ಯೂಷನಲ್ ರಿಫಾರ್ಮ್ಸ್', ೧೯೧೯, ೧೯೧೮. ಅಧ್ಯಾಯ V.

೨. ಆದಾಗ್ಯೂ ಇದಕ್ಕೆ ಎದ್ದು ಕಾಣುವಂತಹ ಒಂದು ಅಪವಾದವಿತ್ತು. ಭಾರತದಲ್ಲಿ ಭೂಗಂದಾಯವನ್ನು ಯಾವುದೇ ಕಾಯಿದೆಬದ್ಧ ಮಂಜೂರಿಯಿಲ್ಲದೆ ಎತ್ತಲಾಗುತ್ತಿತ್ತು. ಭೂಗಂದಾಯವನ್ನು ಶಾಸಕಾಂಗದ ಮಂಜೂರಾತಿಯಿಂದ ತೆಗೆದುಹಾಕುವ ಮೂಲಕ ಇಡೀ ಸಾರ್ವಜನಿಕ ಆದಾಯದ ಸುಮಾರು ಶೇ.೪೦ರಿಂದ ೫೦ರಷ್ಟು ಆದಾಯವನ್ನು ಎಲ್ಲಾ ನಿಯಂತ್ರಣದಿಂದ ಹೊರತುಪಡಿಸಲಾಯಿತು.

"ಭಾರತದ ಸಾರ್ವಜನಿಕ ಸಾಲ, ವಿದೇಶೀವ್ಯಾಪಾರ ಸುಂಕ, ಅಥವಾ ಭಾರತ ಸರ್ಕಾರದ ಸಾಮಾನ್ಯ ಉದ್ದೇಶಗಳಿಗಾಗಿ ಗವರ್ನರ್ ಜನರಲ್‌ನ ಅಧಿಕಾರದ ಮೇರೆಗೆ ಹಾಕಲಾಗುತ್ತಿದ್ದ ಸುಂಕಗಳಿಗೆ ಸಂಬಂಧಿಸಿದ ಕಾಯಿದೆ."

ಇಡೀ ದೇಶದ ಆದಾಯಗಳನ್ನು ಅದರ ಆವಶ್ಯಕತೆಗಳಿಗೆ ಶಾಸನ ಬದ್ಧವಾಗಿ ಅಡವಿಡುವ ಪದ್ಧತಿಯ ಉಪಸಿದ್ಧಾಂತ ಇದಾಗಿದೆ. ತಾನು ಕಂಡುಹಿಡಿದ ಹೊಸ ಕರಗಳ ಮೂಲವನ್ನು, ಪ್ರಾಂತ್ಯಗಳ ಉದ್ದೇಶಗಳಿಗೆ ಉಪಯೋಗಿಸಿಕೊಳ್ಳಲು ಪ್ರಾಂತೀಯ ಶಾಸನಸಭೆಗಳನ್ನು ಕಾಯಿದೆ ತಡೆಯಲಿಲ್ಲ. ಆದರೆ ಆ ಯೋಜನೆಯು ಕಾರ್ಯರೂಪಕ್ಕೆ ಬರುವ ಮುನ್ನ ಭಾರತ ಸರ್ಕಾರದ ಹಣಕಾಸಿನ ವಿಭಾಗದ ಒಪ್ಪಿಗೆ ಪಡೆಯಬೇಕಾಗುತ್ತಿತ್ತು. ಕೇಂದ್ರ ಸರ್ಕಾರದ ಆದಾಯ ಮೂಲಗಳನ್ನು ಅದು ಅತಿಕ್ರಮಿಸುವುದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳದೆ ಅಂಥ ಒಪ್ಪಿಗೆಯನ್ನು ಕೇಂದ್ರ ಸರ್ಕಾರ ಕೊಡುತ್ತಿರಲಿಲ್ಲ ಮತ್ತು ಕಾಯಿದೆ ನಿಯಮ ಹೀಗೆ ಕಡ್ಡಾಯ ಮಾಡಿತು:

"ಗವರ್ನರ್ ಜನರಲ್‌ನ ಪೂರ್ವ ಮಂಜೂರಾತಿ ಇಲ್ಲದೆ ಗವರ್ನರನು ಹೊಸ ಹುದ್ದೆಯನ್ನು ನಿರ್ಮಾಣಮಾಡುವ ಅಥವಾ ವೇತನ, ಪ್ರೋತ್ಸಾಹಧನ ಅಥವಾ ಭತ್ಯೆಗಳನ್ನು ಕೊಡುವ ಅಧಿಕಾರ ಹೊಂದಿರುವುದಿಲ್ಲ."

ಪ್ರಾಂತೀಯ ಸರ್ಕಾರಗಳ ವೆಚ್ಚದ ಮೇಲಿನ ಹತೋಟಿಯ ಅಧಿಕಾರವನ್ನು ಭಾರತ ಸರ್ಕಾರಕ್ಕೆ ಕೊಡಲಾಗಿತ್ತು. ಅದು ನಾಗರಿಕ ಸೇವಾ ನಿಯಂತ್ರಣಗಳು, ನಾಗರಿಕ ಲೆಕ್ಕಾಚಾರದ ನಿಯಮ, ಸಾರ್ವಜನಿಕ ಕಾಮಗಾರಿ ನಿಯಮ ಮುಂತಾದ ಸೂಚನಾ ನಿಯಮಗಳ ಮುಖಾಂತರ ನಿಯಂತ್ರಿಸುತ್ತಿತ್ತು. ಈ ನಿಯಮಗಳು ಏಕರೂಪದ ಲೆಕ್ಕಾಚಾರ ಮತ್ತು ಲೆಕ್ಕತಪಾಸಣೆ ಪದ್ಧತಿ, ಸಾರ್ವಜನಿಕ ಹಣದ ಜವಾಬ್ದಾರಿ, ಅದರ ರವಾನೆ, ಉಳಿತಾಯ ಮುಂತಾದ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿದ್ದವು. ಆದರೆ ಅವು ಹೊಸ ನೇಮಕ ಮಾಡುವ ಅಥವಾ ವೇತನ ಹೆಚ್ಚಿಸುವ ಮತ್ತು ಇನ್ನುಳಿದ ವಿಷಯಗಳಾದ ಭರತಿ, ಬಡತಿ, ರಜೆ, ವಿದೇಶ ಸೇವೆ, ನಿವೃತ್ತಿವೇತನ ಮುಂತಾದವುಗಳಿಗೆ ಸಂಬಂಧಿಸಿದಂತೆ ಪ್ರಾಂತೀಯ ಸರ್ಕಾರಗಳ ಅಧಿಕಾರವನ್ನು ನಿರ್ಬಂಧಿಸಿದ್ದವು. ಕರವಿಧಿಸುವ ಮತ್ತು ವೆಚ್ಚಮಾಡುವ ಅವುಗಳ ಅಧಿಕಾರವನ್ನು ಹತೋಟಿಯಲ್ಲಿಟ್ಟುಕೊಳ್ಳಲಾಯಿತು ಮತ್ತು ಸಾಲ ಮಾಡುವ ಅಧಿಕಾರವನ್ನು ಪ್ರಾಂತ್ಯಗಳಿಗೆ ಬಿಟ್ಟುಕೊಡಲಿಲ್ಲ. ಬಂದರು ಸಂಸ್ಥೆ ಮತ್ತು ಪುರಸಭೆಗಳು ಒಂದು ಮಿತಿಯಲ್ಲಿ ಸಾಲಗಳನ್ನು ಎತ್ತಬಹುದು. ಆದರೆ ಭಾರತದ ಆದಾಯಗಳು ನ್ಯಾಯಸಮ್ಮತವಾಗಿ ಒಂದೇ ಆದದ್ದರಿಂದ ಮತ್ತು ಅವುಗಳನ್ನು ವಿಭಜಿಸಲುಬಾರದ್ದರಿಂದ ಮತ್ತು ಅವು ಭಾರತ ಸರ್ಕಾರದ ಉದ್ದೇಶಗಳಿಗಾಗಿ ಮಾಡಿದ ಸಾಲಕ್ಕೆ ಜವಾಬ್ದಾರಿಯಾದದ್ದರಿಂದ ಪ್ರಾಂತೀಯ ಸರ್ಕಾರಗಳಿಗೆ ಸಾಲ ತೆಗೆಯಲು ಬೇಕಾದ ಸಂರಕ್ಷಣೆ ಕೊಡಲು ಪ್ರತ್ಯೇಕವಾದ ಸಂಪತ್ತುಗಳಿರಲಿಲ್ಲ.

ಪ್ರಾಂತೀಯ ಹಣಕಾಸಿನ ಮಿತಿಯಲ್ಲಿಯೂ ಕೇಂದ್ರ ಸರ್ಕಾರದ ಹತೋಟಿಯಿಂದ ಪ್ರಾಂತೀಯ ಸರ್ಕಾರಗಳು ಮುಕ್ತವಾಗಿರಲಿಲ್ಲ. ಏಕೆಂದರೆ ಪ್ರಾಂತ್ಯಗಳಿಗೆ ಕೊಡಮಾಡಿದ ಹಣ ಪ್ರಾಂತ್ಯಗಳ ಆದಾಯದ ಮೇಲಲ್ಲದೆ ಅವುಗಳ ಆವಶ್ಯಕತೆಗಳ ಮೇಲೆ ಇತ್ತು. ಹೀಗಾಗಿ ಕೇಂದ್ರ ಸರ್ಕಾರದ ಹತೋಟಿ ಅವಶ್ಯವಾಯಿತು. ದಿವಾಳಿ ತೆಗೆಯಲು ಯಾವ ಪ್ರಾಂತ್ಯವನ್ನು ಭಾರತ ಸರ್ಕಾರ ಬಿಡುತ್ತಿರಲಿಲ್ಲ. ಪ್ರಾಂತ್ಯಗಳ ಸಾಲ ತೀರಿಸುವ ಶಕ್ತಿಗೆ ಭಾರತ ಸರ್ಕಾರ ಜವಾಬ್ದಾರಿಯಾದರೆ, ಅದು ಪ್ರಾಂತ್ಯಗಳ ವೆಚ್ಚವನ್ನು ಹತೋಟಿಯಲ್ಲಿಡಬೇಕು. ಭಾರತ ಸರ್ಕಾರವು ಆದಾಯದ ಭಾಗವನ್ನು ತೆಗೆದುಕೊಳ್ಳುತ್ತಿದ್ದುದರಿಂದ ಅದಕ್ಕೆ ಪ್ರಾಂತ್ಯಗಳ ಮುಂಗಡಪತ್ರದ ಅಂದಾಜುಗಳಲ್ಲಿ ಮತ್ತು ಆಡಳಿತದ ವಿವರಗಳಲ್ಲಿ ಹಸ್ತಕ್ಷೇಪ ಮಾಡಲು ಒಂದು ಬಲವಾದ ಉದ್ದೇಶವಿತ್ತು.

ಭೂಕಂದಾಯದಲ್ಲಿಯ ಅದರ ಆಸಕ್ತಿಯಿಂದಾಗಿ ಅವುಗಳ ಕಂದಾಯ ವ್ಯವಸ್ಥೆಯ ಮೇಲ್ವಿಚಾರಣೆ ತೆಗೆದುಕೊಳ್ಳಬೇಕಾಯಿತು. ನೀರಾವರಿಯಂಥ ಆದಾಯ ಮೂಲಗಳ ವಿಸ್ತರಣೆ ಹಾಗೂ ಅಭಿವೃದ್ಧಿಗಳಿಗೆ ಹೆಚ್ಚಿನ ಬಂಡವಾಳ ವೆಚ್ಚವು ಅಗತ್ಯವಾಗಿದ್ದರೆ ಅಂಥ ವಿಷಯಗಳಲ್ಲಿ ಹತೋಟಿಯು ಇನ್ನೂ ಹೆಚ್ಚು ಬಿಗಿಯಾಗುತ್ತಿತ್ತು.

ಪ್ರಾಂತೀಯ ಸರ್ಕಾರಗಳ ಶಾಸನ ರಚನೆಯ ಅಧಿಕಾರವನ್ನು ಶಾಸನ ಬದ್ಧವಾದ ಮಿತಿಗೊಳಪಡಿಸಿತ್ತು. ಪ್ರಾಂತೀಯ ಶಾಸನಸಭೆಯ ಸಾಮರ್ಥ್ಯಕ್ಕೆ ಯಾವ ಕಾಯಿದೆಬದ್ಧ ಸಂಕೋಲೆಗಳಿಲ್ಲದ, ಒಂದು ಬಹುದೊಡ್ಡ ಕ್ಷೇತ್ರವನ್ನು ಅವುಗಳಿಗೆ ಬಿಟ್ಟುಕೊಡಲಾಗಿತ್ತೆಂಬುದರಲ್ಲಿ ಸಂಶಯವಿಲ್ಲ. ಆದರೆ ಸ್ಥಳೀಯ ಶಾಸನಸಭೆಗಳ ಅಧಿಕಾರವನ್ನು ಎರಡು ರೀತಿಯಲ್ಲಿ ಕಡಿಮೆಗೊಳಿಸಲಾಗಿತ್ತು. ಮೊದಲನೆಯದಾಗಿ ಗವರ್ನರ್ ಜನರಲ್‌ನ ಕೇಂದ್ರದ ಶಾಸನಸಭೆಗಿಂತ ಪ್ರಾಂತೀಯ ಶಾಸನಸಭೆಗಳು ಇತ್ತೀಚಿನವಾಗಿದ್ದವು. ಆದ್ದರಿಂದ ಅವುಗಳಿಗೆ ತೆರೆದಿಡಬಹುದಾಗಿದ್ದ ಕ್ಷೇತ್ರದ ಬಹುದೊಡ್ಡ ಭಾಗಗಳ ಮೇಲೆ ಕೇಂದ್ರ ಶಾಸನ ಸಭೆಯ ಕಾಯಿದೆಗಳು ಹಿಡಿತವನ್ನು ಹೊಂದಿದ್ದವು ಮತ್ತು ಕೇಂದ್ರ ಶಾಸನಸಭೆ ಇಡೀ ದೇಶಕ್ಕಾಗಿ ಶಾಸನ ರಚನೆಮಾಡುವ ಸಹಗಾಮಿ ಅಧಿಕಾರವನ್ನು ಯಾವಾಗಲೂ ಇಟ್ಟುಕೊಂಡಿತ್ತು. ಶಾಸನ ರಚನೆಯ ವಿಷಯದಲ್ಲಿ ಪ್ರಾಂತೀಯ ಸರ್ಕಾರಗಳಿಗೆ ತೆರೆದಿಟ್ಟ ಕ್ಷೇತ್ರವನ್ನು ಮತ್ತಷ್ಟು ಸೀಮಿತಗೊಳಿಸಲಾಯಿತು. ಇಡೀ ಭಾರತಕ್ಕೆ ಸಂಬಂಧಿಸಿದ ಕಾಯಿದೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಸಂಸತ್ತುಗಳು ನಿಯಂತ್ರಿಸುವ ಅಧಿಕಾರ ಕಾರ್ಯನಿರ್ವಾಹಕದ ಆದೇಶದ ಮೇರೆಗೆ ಆಚರಣೆಯಲ್ಲಿ ಬಂದಿತು ಮತ್ತು ಪ್ರಾಂತೀಯ ಸರ್ಕಾರಗಳು ತಮ್ಮ ಎಲ್ಲ ಶಾಸನ ರಚನೆಯ ಯೋಜನೆಗಳನ್ನು ಭಾರತ ಸರ್ಕಾರದ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್‌ನ ಪೂರ್ವಾನುಮತಿಗಾಗಿ ಒಪ್ಪಿಸಬೇಕೆಂದು ಅದು ಕಡ್ಡಾಯ ಮಾಡಿತು. ಆದರೆ ಈ ಆದೇಶಗಳು ಖಾಸಗಿ ಸದಸ್ಯರ ಮಸೂದೆಗೆ ಸಂಬಂಧಪಟ್ಟಿರಲಿಲ್ಲ. ಆದರೆ ಶಾಸನಸಭೆಯ ಒಪ್ಪಿಗೆ ಮೇರೆಗೆ ಮಸೂದೆಯನ್ನು ಮಂಡಿಸಬೇಕಾದುದರಿಂದ ಪ್ರಾಂತೀಯ ಸರ್ಕಾರವು ತಾನು ಮನಸ್ಸು ಮಾಡಿದರೆ, ಅಂಥ ಸೂಚನೆಗಳನ್ನು ವಿರೋಧಿಸಬಹುದಿತ್ತು. ಪ್ರಾಂತೀಯ ಸರ್ಕಾರದ ಮಸೂದೆಯಂತೆ ಎಲ್ಲ ಖಾಸಗಿ ಪ್ರಾಂತೀಯ ಶಾಸನ ರಚನೆಯನ್ನು, ಪ್ರಾಂತೀಯ ಸರ್ಕಾರಗಳಿಗೆ ಆದೇಶ ಕೊಡುವ ಮೂಲಕ ಭಾರತ ಸರ್ಕಾರವು ಪರಿಣಾಮಕಾರಿಯಾಗಿ ನಿಯಂತ್ರಿಸಬಹುದಿತ್ತು.

ಪ್ರತಿಯೊಂದು ಪ್ರಾಂತೀಯ ಸರ್ಕಾರವು, ಆಡಳಿತ ಕೆಲಸವನ್ನು ಮಾಡುವಾಗ ಭಾರತ ಸರ್ಕಾರದ ಆಜ್ಞೆಯನ್ನು ಕಡ್ಡಾಯವಾಗಿ ಪಾಲಿಸಬೇಕಾಗುತ್ತಿತ್ತು. ಮತ್ತು ಆ ಸರ್ಕಾರಕ್ಕೆ ಬೇಕಾದ, ಮತ್ತು ತನ್ನ ಆಗು–ಹೋಗುಗಳ ಬಗೆಗಿನ ತಾನು ಕೊಡಬೇಕೆಂದ ಮಾಹಿತಿಯನ್ನು ಪ್ರಾಂತೀಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಕೊಡಬೇಕಾಗುತ್ತಿತ್ತು. ಏಕೆಂದರೆ ಪ್ರಾಂತೀಯ ಸರ್ಕಾರಗಳಿಗೆ ಸಂಬಂಧಿಸಿದ ಎಲ್ಲಾ ವಿಷಯಗಳ ಮೇಲ್ವಿಚಾರಣೆ, ನಿರ್ದೇಶನ ಹಾಗೂ ಹತೋಟಿಯನ್ನು ಕೇಂದ್ರ ಸರ್ಕಾರವು ತನ್ನ ಕಾಯಿದೆಗಳ ಮೂಲಕ ತನ್ನ ಕೈಗಳಲ್ಲಿ ಇಟ್ಟುಕೊಂಡಿತ್ತು. ಏಕರೂಪತೆಯ ದೃಷ್ಟಿಯಿಂದ ಭಾರತ ಸರ್ಕಾರದ ಆಡಳಿತ ಹತೋಟಿಯನ್ನು ಕೇಂದ್ರ ಸರ್ಕಾರವು ಚಲಾಯಿಸುತ್ತಿತ್ತು. ಭಾರತವು ಅವಿಭಜಿತವಾದ ಒಂದೇ ದೇಶ. ಇಲ್ಲಿ ಅನೇಕ ಕೆಲಸಗಳನ್ನು ಏಕರೂಪತೆಯಿಂದ ಮಾಡಬೇಕಾಗಿದೆ. ಪ್ರಾಂತೀಯ ಸರ್ಕಾರಗಳ ಆಜ್ಞೆಗಳನ್ನು ಕಾರ್ಯರೂಪಕ್ಕೆ ತರುವ ನಾಗರಿಕ ಸೇವಕರು, ಸೆಕ್ರೆಟರಿ ಆಫ್ ಸ್ಟೇಟ್‌ನ ಹೊಣೆಗಾರಿಕೆಯ ಕರಾರುಗಳ ಮೇಲೆ ಇಂಗ್ಲೆಂಡಿನಲ್ಲಿ ಭರ್ತಿ ಮಾಡಲ್ಪಟ್ಟವರಾಗಿರುತ್ತಾರೆ. ಅವರಿಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಪ್ರಾಂತೀಯ ಸರ್ಕಾರ ನಿರ್ಧರಿಸಲು ಸಾಧ್ಯವಿಲ್ಲ. ಭಾರತದಲ್ಲಿ ವ್ಯಾಪಾರ, ಉದ್ದಿಮೆ ಮತ್ತು ವಿಜ್ಞಾನದ ಬೆಳವಣಿಗೆಗಾಗಿ ಭಾರತ ಸರ್ಕಾರ

ಏಕರೀತಿಯ ನೀತಿಗಳನ್ನು ಅನುಸರಿಸುವುದು ಅವಶ್ಯವಿತ್ತು. ಇಡೀ ಭಾರತಕ್ಕೆ ಒಂದೇ ಕಾಯಿದೆ ಇದ್ದರೂ, ವ್ಯಾಪಾರ ಮತ್ತು ಉದ್ದಿಮೆ, ಅಂಕಿ ಸಂಖ್ಯೆ, ಹಕ್ಕುಪತ್ರ, ಮುದ್ರಣ ಹಕ್ಕು, ವಿಮೆ, ಆದಾಯಕರ, ಖನಿಜ ಉತ್ಪಾದನೆ ಮತ್ತು ಸ್ಫೋಟಕ ವಿಷಯಗಳ ಆಡಳಿತವನ್ನು ಪ್ರಾಂತ್ಯಗಳ ವಿವೇಚನೆಗೆ ಬಿಟ್ಟುಕೊಡಬಹುದಾಗಿತ್ತು. ಆಡಳಿತ ವಿಷಯದಲ್ಲಿ ಪ್ರಾಂತೀಯ ಸರ್ಕಾರಗಳು ಕೇಂದ್ರ ಸರ್ಕಾರದ ಅಧೀನದಲ್ಲಿದ್ದವಲ್ಲದೆ, ತಮ್ಮ ಸ್ವಂತ ನೀತಿಯನ್ನು ಅನುಸರಿಸಲು ಕೂಡ ಬರುತ್ತಿರಲಿಲ್ಲ. ಆದೇಶಗಳ ಮೂಲಕ ಇಡೀ ಭಾರತಕ್ಕೆ ನೀತಿಗಳನ್ನು ರೂಪಿಸುವುದು ಮತ್ತು ಸುಧಾರಣೆಗಳನ್ನು ತರುವ ಜವಾಬ್ದಾರಿ ತನ್ನ ಮೇಲೆ ಇದೆಯೆಂದು ಭಾರತ ಸರ್ಕಾರ ತಿಳಿದಿತ್ತು. ಇಂಥ ಹೊಸ ನೀತಿಗಳನ್ನು ಹೇರುವ ದೃಷ್ಟಿಯಿಂದ, ಆಜ್ಞೆಗಳನ್ನು ಹೊರಡಿಸುವಾಗ ಅವುಗಳ ಜೊತೆಗೆ ಪ್ರಾಂತೀಯ ಸರ್ಕಾರಗಳಿಗೆ ನಿರ್ದಿಷ್ಟ ಉದ್ದೇಶಗಳಿಗಾಗಿ ಧನಸಹಾಯವನ್ನು ಕೊಡಲಾಗುತ್ತಿತ್ತು. ವ್ಯವಸ್ಥೆಯಲ್ಲಿ ತುಂಬಿದ ಹೊಸ ಚೈತನ್ಯ ಸಂರಕ್ಷಿಸಲ್ಪಟ್ಟಿದೆಯೇ ಹಾಗೂ ಉದ್ದೇಶಿತ ಗುರಿಯತ್ತ ಸಾಗುತ್ತಿವೆಯೇ ಎಂಬುದನ್ನು ತನಿಖೆ ಮಾಡಲು ಭಾರತ ಸರ್ಕಾರ ತನಿಖಾ ಅಧಿಕಾರಿಗಳನ್ನು ನೇಮಿಸುವುದು ಅಪರೂಪವಾಗಿರಲಿಲ್ಲ.

ಪ್ರಾಂತೀಯ ಸರ್ಕಾರಗಳು ಭಾರತ ಸರ್ಕಾರದ ಇಂಥ ನಿರ್ಬಂಧಗಳಿಗೆ ಒಳಗಾಗಿರುವವರೆಗೆ, ಪ್ರಾಂತ್ಯಗಳಲ್ಲಿ ಜವಾಬ್ದಾರಿ ಸರ್ಕಾರ ಸಾಧ್ಯವಿರಲಿಲ್ಲ. ಒಂದೇ ವೇಳೆಗೆ ಇಬ್ಬರು ಮಾಲೀಕರ ಸೇವೆ ಮಾಡುವುದು ಯಾವ ಸರ್ಕಾರಕ್ಕೂ ಸಾಧ್ಯವಿಲ್ಲ. ಭಾರತ ಸರ್ಕಾರವು ಪ್ರಾಂತೀಯ ಸರ್ಕಾರಗಳನ್ನು ತನ್ನ ಅಧೀನದಲ್ಲಿಟ್ಟುಕೊಂಡು ಅದೇ ಸಮಯದಲ್ಲಿ ಅವುಗಳನ್ನು ಶಾಸನಸಭೆಗಳಿಗೆ ಜವಾಬ್ದಾರವಾಗಿರುವಂತೆ ಮಾಡುವುದು, ತತ್ವಶಃ ಹೊಂದಾಣಿಕೆಯಾಗದೆ, ಆಚರಣೆಯಲ್ಲಿಯೂ ತಪ್ಪಾಗುತ್ತಿತ್ತು.[೧] ಅಂಥ ದ್ವಂದ್ವ ಸರ್ಕಾರದಲ್ಲಿ, ಕೆಲವೊಂದು ವಿಷಯಗಳ ಬಗೆಗಿನ ಪ್ರಾಂತೀಯ ಶಾಸನಗಳ ಆಶಯಗಳು ಭಾರತ ಸರ್ಕಾರದ ಆಶಯಗಳ ಜೊತೆ ಹೊಂದುತ್ತಿರಲಿಲ್ಲ. ಅಂಥ ಪ್ರಸಂಗದಲ್ಲಿ ಪ್ರಾಂತೀಯ ಸರ್ಕಾರ ಯಾರ ಆಜ್ಞೆ ಪಾಲಿಸಬೇಕೆಂಬ ವಿಷಯದಲ್ಲಿ ಗೊಂದಲಕ್ಕೀಡಾಗುತ್ತಿತ್ತು. ಅದು ಶಾಸನಸಭೆಯ ಆಶಯಗಳನ್ನು ಮನ್ನಿಸಿದರೆ, ಭಾರತ ಸರ್ಕಾರ ನಿಯಮಿಸಿದ ಕರ್ತವ್ಯದಲ್ಲಿ ತಪ್ಪುತ್ತಿತ್ತು. ಅಂಥ ಘರ್ಷಣೆಯ ಪ್ರಸಂಗಗಳ ದಾಖಲೆ ಇದೆ.[೨] ಮಾರ್ಲೆ-ಮಿಂಟೋ ಸುಧಾರಣೆಗಳು ಜಾರಿಯಲ್ಲಿದ್ದ ಕಾಲದಲ್ಲಿ, ಒಂದು ಪ್ರಸಂಗದಲ್ಲಿ ಶೈಕ್ಷಣಿಕ ನೌಕರರ ಸಂಬಂಧದ ಕೆಲವೊಂದು ವೆಚ್ಚವನ್ನು ಮಂಜೂರು ಮಾಡುವಂತೆ ಭಾರತ ಸರ್ಕಾರದ ಮನವೊಪ್ಪಿಸಲು ಬಾಂಬೆ ಸರ್ಕಾರ ವಿಫಲವಾಯಿತು. ಈ ಪ್ರಸ್ತಾವನೆಗಳು ಸ್ಥಳೀಯವಾಗಿ ಜನಪ್ರಿಯವಾದವುಗಳಾದ್ದರಿಂದ ಒಬ್ಬ ಚುನಾಯಿತ ಸದಸ್ಯನಿಂದ ಬಾಂಬೆ ಶಾಸನಸಭೆಯಲ್ಲಿ ಗೊತ್ತುವಳಿ ಮಂಡಿಸಿ ಒಪ್ಪಿಗೆಗಾಗಿ ಇಡಲಾಯಿತು. ಬಾಂಬೆ ಸರ್ಕಾರವು ಈ ನಿರ್ಣಯವನ್ನು ಒಪ್ಪಿ, ಇವುಗಳಿಗೆ ಶಾಸನಸಭೆಯ ಸಂಪೂರ್ಣ ಬೆಂಬಲವಿದೆಯೆಂದು ತನ್ನ ಪ್ರಸ್ತಾವನೆಗಳನ್ನು ಭಾರತ ಸರ್ಕಾರದ ಮುಂದೆ ಇಟ್ಟಿತು. ಭಾರತ ಸರ್ಕಾರ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್ ಇಂತಹ ತಂತ್ರಗಳನ್ನು ಒಪ್ಪಲಾಗದು ಎಂದು ಅಭಿಪ್ರಾಯಪಟ್ಟರು ಮತ್ತು ಅದು "ಅಂಥ ನಿರ್ಣಯಗಳ ಸಂಬಂಧದಲ್ಲಿ ಭಾರತ ಸರ್ಕಾರದ ತೀರ್ಮಾನವನ್ನು ಎತ್ತಿ ಹಿಡಿಯುವುದು ಸ್ಥಾನಿಕ ಸರ್ಕಾರದ ಕರ್ತವ್ಯವಾಗಿದೆ" ಎಂದು ಹೇಳಿತು. ತತ್ವಶಃ ಶಾಸನಸಭೆಯು ನಿರ್ಣಯವನ್ನು ಒಪ್ಪಿದರೂ, ಅದನ್ನು ಕೈಬಿಡಬೇಕಾಗಿ ಬಂದಿತು.

---

೧. ಅಧೀನತೆಯ ಪ್ರಮಾಣ ಪ್ರಾಂತ್ಯಗಳ ಅಂತಸ್ತನ್ನೇ ಅವಲಂಬಿಸಿತ್ತು ಎಂಬ ಅಂಶ ಗಮನಾರ್ಹ. ಇದಕ್ಕಾಗಿ ಜಂಟಿ ವರದಿ (ಜಾಯಿಂಟ್ ರಿಪೋರ್ಟ್) ಪುಟಗಳು ೩೭-೪೫ ನೋಡಿ.

೨. ಅದೇ ಜಾಯಿಂಟ್ ರಿಪೋರ್ಟ್, ಪುಟಗಳು ೭೫-೬

ಪ್ರಾಂತ್ಯಗಳ ಮೇಲೆ ಕೇಂದ್ರ ಸರ್ಕಾರವು ಹೇರಿದ್ದ ನಿರ್ಬಂಧಗಳು ಪ್ರಾಂತೀಯ ಸ್ವಯಂ ಆಡಳಿತದ ಮಾರ್ಗದಲ್ಲಿಯ ಅಡೆತಡೆಗಳಾಗಿದ್ದವು. ಪ್ರಾಂತೀಯ ಸರ್ಕಾರಗಳು ಪ್ರಾಂತೀಯ ಶಾಸನಸಭೆಯ ಅಧೀನದಲ್ಲಿರುವಂತೆ ಮಾಡಲು, ಪ್ರಾಂತೀಯ ಹಣಕಾಸು, ಪ್ರಾಂತೀಯ ಶಾಸನ ರಚನೆ ಮತ್ತು ಪ್ರಾಂತೀಯ ಆಡಳಿತದಲ್ಲಿ ಭಾರತ ಸರ್ಕಾರದ ಹಸ್ತಕ್ಷೇಪ ಕಡಿಮೆಯಾಗಬೇಕು. ಸಂವಿಧಾನ ಸುಧಾರಣೆಯ ಬಗೆಗಿನ, ವರದಿಯಲ್ಲಿ ಹೇಳಿದಂತೆ.[೧]

ನಾವು ಹೊಸದನ್ನು ನಿರ್ಮಿಸುವ ಮೊದಲು ಈಗಿರುವ ವ್ಯವಸ್ಥೆಯನ್ನು ಭಾಗಶಃವಾಗಿಯಾದರೂ ಮುರಿಯಬೇಕು. ವಿಕೇಂದ್ರೀಕರಣ, ಅಧಿಕಾರವ್ಯಾಪ್ತಿಯ ಸ್ಪಷ್ಟ ವಿಭಜನೆ, ಹಳೆಯ ಪದ್ಧತಿಗಳನ್ನು ಕೊನೆಗೊಳಿಸುವುದು ನಮ್ಮ ಕರ್ತವ್ಯವಾಗಿದೆ. ಕೇಂದ್ರ ಸರ್ಕಾರವು ನೀಡಬೇಕು ಮತ್ತು ಪ್ರಾಂತ್ಯಗಳು ಅದನ್ನು ಪಡೆಯಬೇಕು, ಹಾಗಿದ್ದರೆ ಮಾತ್ರ ಪ್ರಾಂತ್ಯಗಳಲ್ಲಿ ಬೆಳೆಯಬೇಕಾದ ಸ್ವಯಂ ಆಡಳಿತವು ಸ್ವಲ್ಪ ಉಸಿರಾಡುತ್ತಾ ಬೆಳೆಯಬಹುದಾಗಿದೆ.

ಪ್ರಾಂತ್ಯಗಳ ಸ್ವಾತಂತ್ರ್ಯವನ್ನು ಸಾಧಿಸುವುದು ಅವುಗಳ ಮತ್ತು ಕೇಂದ್ರದ ನಡುವಿನ ಹಾಗೂ ಹಣಕಾಸಿನ ಸಮರ್ಪಕ ವಿಭಜನೆಯನ್ನು ಅವಲಂಬಿಸಿರುತ್ತದೆ. ಇವೆರಡರಲ್ಲಿ ಕರ್ತವ್ಯಗಳ ವಿಭಜನೆ ಕಷ್ಟಕರವಾಗಿರಲಿಲ್ಲ. ಕರ್ತವ್ಯಗಳ ವಿಭಜನೆಗೆ ಅನುಕೂಲವಾಗುವಂತೆ, ಭಾರತ ಸರ್ಕಾರವು ಕೆಳಗಿನ ತತ್ವಗಳನ್ನು ಮುಂದಿಟ್ಟಿತು.[೨]

> "೭, ಸದ್ಯದಲ್ಲಿ ಕೆಲವೊಂದು ವಿಷಯಗಳು ಭಾರತ ಸರ್ಕಾರದ ನೇರ ಆಡಳಿತಕ್ಕೆ ಒಳಪಟ್ಟಿವೆ. ಅವುಗಳ ಆಡಳಿತಕ್ಕಾಗಿ ಭಾರತ ಸರ್ಕಾರವು ಪ್ರತ್ಯೇಕ ನೌಕರರನ್ನು ಇಟ್ಟಿದೆ ಮತ್ತು ಅದರಲ್ಲಿ ಪ್ರಾಂತೀಯ ಸರ್ಕಾರಗಳಿಗೆ ಯಾವ ಪಾತ್ರವೂ ಇಲ್ಲ. ಈ ವಿಭಾಗವು ಸಹಜವಾಗಿ ಗುರುತಿಸುವಂಥದಿದ್ದು, ಇದರಲ್ಲಿ ಸೇರಿಸಬೇಕಾದ ವಿಷಯಗಳ ಬಗ್ಗೆ ಯಾವ ಸಂಶಯಕ್ಕೂ ಆಸ್ಪದವಿರಲಾರದು. ಇನ್ನೊಂದು ಕಡೆ, ಹೆಚ್ಚಾಗಿ ಸ್ಥಾನಿಕ ಆಸಕ್ತಿಯ ವಿಷಯಗಳಿವೆ. ಇವುಗಳು ಪ್ರಾಂತೀಕರಣಕ್ಕೆ ಸರಿಯಾದ ವಿಷಯಗಳೆಂದು ಗುರುತಿಸಲ್ಪಟ್ಟಿವೆ.
>
> "೮. ತೀವ್ರವಾಗಿ ಭಿನ್ನವಾಗಿರುವ ಈ ವಿಭಾಗಗಳ ನಡುವೆ ಸಮಸ್ಯಾತ್ಮಕವಾದ ಒಂದು ದೊಡ್ಡ ಕ್ಷೇತ್ರವಿದೆ. ಅದರ ವಿಂಗಡಣೆಯ ತತ್ವಗಳನ್ನು ನಿರ್ಧರಿಸುವ ಮೊದಲು ಆ ಕ್ಷೇತ್ರದ ಪರೀಕ್ಷೆ ಮಾಡಬೇಕಾಗುತ್ತದೆ. ವ್ಯಾವಹಾರಿಕವಾಗಿ ಪ್ರಾಂತೀಯ ಸರ್ಕಾರಗಳ ಒಳಪಟ್ಟಿದ್ದರೂ, ಕೇಂದ್ರ ಸರ್ಕಾರವೇ ತನ್ನ ಅಂತಿಮ ಅಧಿಕಾರವನ್ನು ಹೊಂದಿರುವಂತಹ ಕೆಲವು ಶಾಸನಾತ್ಮಕ ಹಾಗೂ ಆಡಳಿತಾತ್ಮಕ ವಿಷಯಗಳು ಇದರಲ್ಲಿ ಸೇರಿವೆ. ಈಗಾಗಲೇ ವಿಕೇಂದ್ರೀಕರಣಕ್ಕೆ ಒಳಪಡಿಸಲಾಗಿರುವ ವಿಷಯಗಳು ಸಾಕಷ್ಟು ವಿಶಾಲವಾಗಿವೆ. ಹೀಗೆ ವಿಕೇಂದ್ರೀಕರಣ ಮಾಡಬೇಕಾದರೆ, ಪ್ರತಿವಿಷಯಗಳಲ್ಲಿ ಪ್ರಾಂತೀಯ ಸರ್ಕಾರಗಳು ಭಾರತ ಸರ್ಕಾರದ ಪ್ರತಿನಿಧಿಯಾಗಿ ಕೆಲಸ ನಿರ್ವಹಿಸಬೇಕೇ, ಅಥವಾ, ಅವುಗಳು ಸ್ವತಂತ್ರ ಅಧಿಕಾರವನ್ನು ಹೊಂದಿರಬೇಕೇ ಎಂಬುದನ್ನು ಕೇಂದ್ರ ಸರ್ಕಾರವು ಪರಿಗಣಿಸುತ್ತದೆ. ಹೀಗೆ ಮಾಡುವಲ್ಲಿ ಪರಿಸ್ಥಿತಿಯ ಅನುಕೂಲಕ್ಕಾಗಿ ಮಾಡಿಕೊಂಡಿರುವ ಸದ್ಯದ ವಿಕೇಂದ್ರೀಕರಣವನ್ನು ಗಮನಿಸದೆ ಇಡೀ ಭಾರತದ ಹಾಗೂ ಪ್ರಾಂತ್ಯಗಳ ಹಿತಾಸಕ್ತಿಯ ಪರಿಗಣನೆ ಮುಖ್ಯವಾಗುತ್ತದೆ.

೧. 'ಜಾಯಿಂಟ್ ರಿಪೋರ್ಟ್', ಪು. ೧೦೧

೨. 'ಕಾರ್ಯಾಂಗಗಳ ಸಮಿತಿ'ಗೆ ಭಾರತ ಸರ್ಕಾರ ಸಲ್ಲಿಸಿದ ವಿಜ್ಞಾಪನಾ ಪತ್ರ, 'ರಿಪೋರ್ಟ್ ಆಫ್ ದಿ ಕಮಿಟಿ', ಅನುಬಂಧ II, ೧೯೧೯ರ ೧೦೩.

ಪ್ರಸಕ್ತ ವಿಕೇಂದ್ರೀಕರಣದಿಂದಾಗಿ, ಕೆಲವು ಪ್ರಾಂತ್ಯಗಳ ಬಳಿ ಹೆಚ್ಚಿನ ಅಧಿಕಾರವಿರಬಹುದು. ಆದರೆ, ಅಂತಹ ಪ್ರಸಂಗಗಳಲ್ಲಿ ಹಾಗೆ ಇರುವ ಹೆಚ್ಚಿನ ಅಧಿಕಾರವು ಆ ಪ್ರಾಂತ್ಯದ ನೈಜ ಅಥವಾ ಕಾನೂನುಬದ್ಧ ಅಧಿಕಾರವೆಂದು ಭಾವಿಸಬಾರದು.

ಪ್ರಾಂತ್ಯಗಳ ಹಿತಾಸಕ್ತಿಗೆ ಸೀಮಿತವಾಗದ ವಿಷಯಗಳನ್ನು ಕೇಂದ್ರ ಸರ್ಕಾರಕ್ಕೆ ಸಂಬಂಧಿಸಿದವುಗಳೆಂದೂ, ಪ್ರಾಂತ್ಯಗಳ ಹಿತಾಸಕ್ತಿಯೇ ಮುಖ್ಯವಾಗಿರುವಂತಹ ವಿಷಯಗಳನ್ನು ಪ್ರಾಂತೀಯ ವಿಷಯಗಳೆಂದೂ ವಿಂಗಡಿಸಿರುವ ಈ ನೀತಿಗಳನ್ನು, ಈ ವಿಭಜನೆಯನ್ನು ಮಾಡುವುದಕ್ಕಾಗಿ ನಿಯಮಿಸಿದ ಕಾರ್ಯಕಾರಿ ಸಮಿತಿಯು ಒಪ್ಪಿಕೊಂಡಿತ್ತು. ಈ ಸಮಿತಿ ಮಾಡಿದ ಶಿಫಾರಸುಗಳನ್ನು ಅಲ್ಪಸ್ವಲ್ಪ ತಿದ್ದುಪಡಿಯೊಂದಿಗೆ ಭಾರತ ಸರ್ಕಾರದ ೧೯೧೯ರ ಕಾಯಿದೆಯ ೪೫(ಅ) ಪರಿಚ್ಛೇದದಲ್ಲಿ ಸೇರಿಸಿ, ತನ್ಮೂಲಕ ಜವಾಬ್ದಾರೀ ಸರ್ಕಾರದ ನೀತಿಯನ್ನು ಕಾರ್ಯರೂಪಕ್ಕೆ ತರಲಾಯಿತು. ವಿಕೇಂದ್ರೀಕೃತವಾದ ವಿಷಯಗಳ ಮೇಲೆ ೧೮೮೩ಕ್ಕೆ ಮೊದಲು ಇರದಿದ್ದ ಅಧಿಕಾರವನ್ನು, ಈ ಸಾಂವಿಧಾನಿಕ ವಿಕೇಂದ್ರೀಕರಣದಿಂದಾಗಿ ಪಡೆಯಲು ಪ್ರಾಂತ್ಯಗಳಿಗೆ ಸಾಧ್ಯವಾಯಿತು. ಈ ವಿಕೇಂದ್ರೀಕರಣದ ನಿಯಮಗಳ ಪ್ರಕಾರ ಕೆಳಗಿನವುಗಳನ್ನು ಪ್ರಾಂತೀಯ ವಿಷಯಗಳು ಎಂದು ಪ್ರಕಟಿಸಲಾಯಿತು.

## ಪ್ರಾಂತೀಯ ವಿಷಯಗಳು

೧. **ಸ್ಥಾನಿಕ ಸ್ವಯಂ ಸರ್ಕಾರಗಳು :** ೧೯೧೦ರ ದಂಡು ಪ್ರದೇಶ ಕಾಯಿದೆ ಅಡಿಯಲ್ಲಿ ಬರುವ ವಿಷಯಗಳನ್ನು ಹೊರತುಪಡಿಸಿ, ಮಹಾನಗರ ಸಭೆಗಳ ರಚನೆ ಹಾಗೂ ಅಧಿಕಾರ, ಸುಧಾರಣಾ ಸಂಸ್ಥೆ, ಜಿಲ್ಲಾಸಮಿತಿ, ಆರೋಗ್ಯ ಸಮಿತಿ ಮತ್ತು ಸ್ಥಾನಿಕ ಸ್ವಯಂಸರ್ಕಾರದ ಉದ್ದೇಶಕ್ಕಾಗಿ ಪ್ರಾಂತ್ಯದಲ್ಲಿ ಸ್ಥಾಪಿಸಿದ ಬೇರೆ ಸ್ಥಾನಿಕ ಸರ್ಕಾರಗಳ ಸಂಬಂಧದ ವಿಷಯಗಳು. ಆದರೆ ಇದು ಭಾರತ ಶಾಸನಸಭೆಯ ಶಾಸನವು ವಿಧಿಸಿದ

(ಅ) ಪ್ರಾಂತೀಯ ಸರ್ಕಾರವನ್ನು ಬಿಟ್ಟು ಉಳಿದವರಿಂದ ಸಾಲ ಪಡೆಯುವ ಅಧಿಕಾರ.

(ಬ) ಕಾಯಿದೆಯ IIನೆಯ ಪಟ್ಟಿಯಲ್ಲಿರದ ಕರಗಳನ್ನು ವಿಧಿಸುವ ಅಧಿಕಾರ.

– ಇವುಗಳಿಗೆ ಒಳಪಟ್ಟಿತ್ತು.

೨. **ಆಸ್ಪತ್ರೆಗಳು, ದವಾಖಾನೆಗಳು ಮತ್ತು ಅಭಯ ಸೇವಾಶ್ರಮಗಳು** – ಇವುಗಳ ಆಡಳಿತ ಹಾಗೂ ವೈದ್ಯಕೀಯ ಶಿಕ್ಷಣ.

೩. ಸಾಂಕ್ರಾಮಿಕವೆಂದು ಘೋಷಿಸುವ ಭಾರತದ ಶಾಸಕಾಂಗದ ಕಾಯಿದೆಗಳಿಗೆ ಒಳಪಟ್ಟು, ಸಾರ್ವಜನಿಕ ಆರೋಗ್ಯ, ನೈರ್ಮಲ್ಯ ಮತ್ತು ತತ್ಸಂಬಂಧಿ ಅಂಕಿಅಂಶಗಳು.

೪. **ಬ್ರಿಟಿಷ್ ಭಾರತದೊಳಗಿನ ಯಾತ್ರಿಕರು**

೫. **ಶಿಕ್ಷಣ :**

(ಅ) ಕೆಳಗಿನ ವಿಷಯಗಳನ್ನು ಹೊರತುಪಡಿಸಿ :

(i) ಪ್ರಾಂತ್ಯದ ಆಡಳಿತದ ಯಾವುದೇ ಉದ್ದೇಶಗಳಿಗೆ ಸಂಬಂಧಿಸಿದ್ದ ಅಥವಾ ಉಪಯೋಗಿಸಲ್ಪಡುವ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ; ಭಾರತದ ಗೆಜೆಟ್ಟಿನಲ್ಲಿ ಪ್ರಕಟಿಸುವ ಮೂಲಕ ವಿನಾಯತಿಯಿಂದ ಹೊರತುಪಡಿಸಬಹುದಾದ

ಗವರ್ನರ್ ಜನರಲ್ಲನ ಅಧಿಕಾರಕ್ಕೆ ಒಳಪಟ್ಟಂತೆ ೧೯೦೪ರ ಪುರಾತನ ಸ್ಮಾರಕಗಳ ಸಂರಕ್ಷಣಾ ಕಾನೂನಿನ ೨(೧)ನೇ ಪರಿಚ್ಛೇದದಲ್ಲಿ ಹಾಗೂ ತಾತ್ಕಾಲಿಕವಾಗಿ ೩(೧)ನೇ ಪರಿಚ್ಛೇದದಲ್ಲಿ ನಮೂದಿಸಿರುವುದನ್ನು ಬಿಟ್ಟು ಉಳಿದ ಚಾರಿತ್ರಿಕ ಸ್ಮಾರಕಗಳ ಸಂರಕ್ಷಣೆ;

(ii) ಚೀಫ್ಸ್ ಕಾಲೇಜುಗಳು, ಮತ್ತು ಕೌನ್ಸಿಲ್‌ನ ಗವರ್ನರ್ ಜನರಲ್ ಅವರ ಆಡಳಿತಕ್ಕೆ ಒಳಪಟ್ಟ ಸೈನ್ಯದ ಸದಸ್ಯರ ಅಥವಾ ಬೇರೆ ನಾಗರಿಕ ಸೇವಕರ ಅಥವಾ ಅಂಥ ಸೇವಕರ ಸಂಬಂಧಿಗಳ ಮಕ್ಕಳ ಅನುಕೂಲಕ್ಕಾಗಿ ಇರುವಂತಹ ಸಂಸ್ಥೆಗಳು.

(ಬ) ಕೆಳಗಿನ ವಿಷಯಗಳು ಭಾರತದ ಶಾಸಕಾಂಗದ ಶಾಸನಕ್ಕೆ ಅಧೀನವಾಗಿರುತ್ತವೆ:

(i) ಈ ನಿಯಮಗಳು ಆಚರಣೆಯಲ್ಲಿ ಬಂದ ನಂತರ ಸ್ಥಾಪಿತವಾದ ವಿಶ್ವವಿದ್ಯಾನಿಲಯಗಳ ರಚನೆ ಮತ್ತು ಅವುಗಳ ಕಾರ್ಯಗಳ ನಿಯಂತ್ರಣ.

(ii) ಅದು ಸ್ಥಾಪಿತವಾದ ಪ್ರಾಂತ್ಯದ ಹೊರಗಡೆ ಇರಬಹುದಾದ ವಿಶ್ವವಿದ್ಯಾನಿಲಯದ ವ್ಯಾಪ್ತಿಯನ್ನು ನಿರ್ಧರಿಸುವ ಹಕ್ಕು.

(iii) ಈ ನಿಯಮಗಳು ಆಚರಣೆಯಲ್ಲಿ ಬಂದ ತಾರೀಖಿನಿಂದ ಐದು ವರ್ಷಗಳ ಅವಧಿಯವರೆಗೆ ಕಲ್ಕತ್ತ ವಿಶ್ವವಿದ್ಯಾನಿಲಯ ಹಾಗೂ ಬಂಗಾಲ ಪ್ರಾಂತದಲ್ಲಿ ಮಾಧ್ಯಮಿಕ ಶಿಕ್ಷಣದ ವ್ಯವಸ್ಥೆ ಹಾಗೂ ನಿಯಂತ್ರಣ ಮಾಡುವ ಅಧಿಕಾರ.

೬. **ಸಾರ್ವಜನಿಕ ಕಾಮಗಾರಿಗಳು :** ಮುಂದೆ ಹೇಳಲಾಗಿರುವ ವಿಷಯಗಳು ಈ ಬಾಬತ್ತಿನ ಅಡಿಯಲ್ಲಿ ಬರುತ್ತವೆ.

(ಅ) ೧೯೦೪ರ ಪ್ರಾಚೀನ ಸ್ಮಾರಕಗಳ ಸಂಕಕ್ಷಣಾ ಕಾಯಿದೆ ಭಾಗ ೨(i)ರಲ್ಲಿ ಸ್ಪಷ್ಟಪಡಿಸಿದ ಪ್ರಾಚೀನ ಸ್ಮಾರಕಗಳನ್ನು ಹೊರತುಪಡಿಸಿ, ಆ ಕಾಯಿದೆ ಭಾಗ ೩(i) ಮೇರೆಗೆ ಸದ್ಯ ಸಂರಕ್ಷಿತ ಸ್ಮಾರಕಗಳೆಂದು ಪ್ರಕಟಪಡಿಸಿದ, ಐತಿಹಾಸಿಕ ಸ್ಮಾರಕಗಳ ರಕ್ಷಣೆ, ಗವರ್ನರ್–ಜನರಲ್‌ನು ಭಾರತ ಗೆಜೆಟ್ಟಿನಲ್ಲಿ ಪ್ರಕಟಣೆ ಕೊಡುವ ಮೂಲಕ ಅಂಥ ಯಾವುದೇ ಸ್ಮಾರಕವನ್ನು ಈ ವಿನಾಯಿತಿಯಿಂದ ಹೊರತುಪಡಿಸಬಹುದಾದ ಅಧಿಕಾರಕ್ಕೆ ಒಳಪಟ್ಟಿರುವ ಪ್ರಾಂತ್ಯಗಳ ಆಡಳಿತ ಸಂಬಂಧದ ಉದ್ದೇಶಗಳಿಗಾಗಿ ಉಪಯೋಗಿಸುವ ಪ್ರಾಂತೀಯ ಕಟ್ಟಡಗಳನ್ನು ಕಟ್ಟುವ ಹಾಗೂ ಅವುಗಳನ್ನು ಸಂರಕ್ಷಿಸುವುದು.

(ಬ) ಮಿಲಿಟರಿಗೆ ಮಹತ್ವದವುಗಳೆಂದು ಗವರ್ನರ್–ಜನರಲ್‌ನಿಂದ ಪ್ರಕಟಿಸಲ್ಪಟ್ಟ ಸಂಪರ್ಕ ಸಾಧನಗಳ ನಿರ್ಮಾಣದ ಹತೋಟಿ, ಮತ್ತು ರಕ್ಷಣೆಗಳ ಸಂಬಂಧ ಮತ್ತು ಗವರ್ನರ್–ಜನರಲ್ ನಿಯಮಿಸಿದಂತೆ ಅದಕ್ಕೆ ಸಂಬಂಧಪಟ್ಟ ವಿಶೇಷ ವೆಚ್ಚದ ಭಾರಕ್ಕೆ ಸಂಬಂಧಿಸಿದ, ಕರಾರುಗಳಿಗೆ ಅಧೀನವಾಗಿ ರಸ್ತೆಗಳು, ಸೇತುವೆಗಳು, ಹರಿಗೋಲುಗಳು, ಸುರಂಗಮಾರ್ಗ, ಹಗ್ಗದ ಮಾರ್ಗ, ಒಡ್ಡುದಾರಿ ಮತ್ತು ಬೇರೆ ಸಂಪರ್ಕ ಸಾಧನಗಳು.

(ಕ) ಪುರಸಭೆಗಳ ಹದ್ದಿನಲ್ಲಿಯ ಟ್ರಾಮ್ ಮಾರ್ಗಗಳು.

(ಡ) ಮುಖ್ಯವಾದ ಮಾರ್ಗಕ್ಕೆ ಕೂಡಿಕೊಳ್ಳುವ ಅಥವಾ ಪಕ್ಕದ ಮುಖ್ಯಮಾರ್ಗದಷ್ಟೆ ಅಗಲವಾಗಿ ಪ್ರಮಾಣದಲ್ಲಿ ರಚಿಸಿದ ರೈಲು ಅಥವಾ ಟ್ರಾಮ್ ಮಾರ್ಗದ ವಿಷಯದಲ್ಲಿ ಭಾರತದ ಶಾಸನಸಭೆಯ ಶಾಸನಕ್ಕೆ ಒಳಪಟ್ಟಂತೆ. ಲಘು ಹಾಗೂ ಪೂರಕ ರೈಲುಗಳು ಮತ್ತು

ಪ್ರಾಂತೀಯ ಶಾಸನಗಳಿಂದ, ನಿರ್ಮಾಣ ಹಾಗೂ ನಿರ್ವಹಣೆಗಾಗಿ, ಸರಬರಾಜು ಮಾಡಲ್ಪಟ್ಟ ಪುರಸಭೆಗಳ ಹೊರಗಿನ ಟ್ರ್ಯಾಮ್ ಮಾರ್ಗಗಳು

೭. **ನೀರು ಪೂರೈಕೆ :** ಎರಡು ಅಥವಾ ಹೆಚ್ಚು ಪ್ರಾಂತ್ಯಗಳಿಗೆ ಸಂಬಂಧಿಸಿರುವಂತಹ ಅಥವಾ ಮತ್ತೊಂದು ಪ್ರಾಂತ್ಯದೊಂದಿಗಿನ ಸಂಬಂಧದ ಮೇಲೆ ಪರಿಣಾಮವನ್ನುಂಟುಮಾಡುವಂತಹ ವಿಷಯಗಳಲ್ಲಿ ಭಾರತದ ಶಾಸಕಾಂಗವು ಮಾಡುವ ಶಾಸನಗಳಿಗೆ ಒಳಪಟ್ಟಂತೆ, ನೀರಾವರಿ ಕೆಲಸಗಳು, ಕಾಲುವೆಗಳು, ಚರಂಡಿಗಳು, ಒಡ್ಡುಗಳು, ಜಲಾಶಯಗಳು ಮತ್ತು ಜಲಶಕ್ತಿ.

೮. **ಭೂ ಕಂದಾಯ ಆಡಳಿತ:** ಕೆಳಗಿನ ಬಾಬತ್ತುಗಳಲ್ಲಿ ವಿವರಿಸಿದಂತೆ,

(ಅ) ಭೂಕಂದಾಯದ ಮೊತ್ತವನ್ನು ಗೊತ್ತುಮಾಡುವುದು ಹಾಗೂ ವಸೂಲು ಮಾಡುವುದು.

(ಬ) ಭೂಮಿಯ ದಾಖಲೆಗಳನ್ನು ಇಡುವುದು, ಕಂದಾಯ ಉದ್ದೇಶಕ್ಕಾಗಿ ಮೋಜಣಿ ಮಾಡುವುದು, ಹಕ್ಕಿನ ದಾಖಲೆಗಳು.

(ಕ) ಭೂ ಸಾಗುವಳಿಗೆ ಸಂಬಂಧಿಸಿದ ಕಾಯಿದೆಗಳು, ಭೂಮಾಲೀಕ ಹಾಗೂ ಗೇಣಿದಾರನ ಸಂಬಂಧಗಳು, ಬಾಡಿಗೆ ವಸೂಲು ಮಾಡುವುದು.

(ಡ) ರಕ್ಷಿತರ ನ್ಯಾಯಾಲಯಗಳು, ಅಡವಿಟ್ಟ ಹಾಗೂ ಜಪ್ತಿಮಾಡಿದ ಆಸ್ತಿಗಳು.

(ಇ) ಭೂಮಿಯ ಸುಧಾರಣೆ ಹಾಗೂ ಬೇಸಾಯದ ಸಾಲಗಳು.

(ಫ) ವಸಾಹತೀಕರಣ ಮತ್ತು ಸರ್ಕಾರಿ ಭೂಮಿಯನ್ನು ಮಾರಾಟ ಮಾಡುವುದು ಮತ್ತು ಭೂಕಂದಾಯವನ್ನು ಬಿಟ್ಟುಕೊಡುವುದು.

(ಜ) ಸರ್ಕಾರಿ ಆಸ್ತಿಗಳ ನಿರ್ವಹಣೆ.

೯. **ಬರಗಾಲ ಪರಿಹಾರ**

೧೦. ವಿನಾಶಕಾರಿ ಕೀಟಗಳು, ಪೀಡೆಗಳು ಹಾಗೂ ಸಸ್ಯರೋಗಗಳಿಗೆ ಸಂಬಂಧಿಸಿದಂತೆ ಭಾರತದ ಶಾಸಕಾಂಗವು ಜಾರಿಗೆ ತಂದ ಕಾಯಿದೆಯ ಮಿತಿಗೆ ಒಳಪಟ್ಟಂತೆ, ಸಂಶೋಧನಾ ಸಂಸ್ಥೆಗಳ ಪ್ರಾಯೋಗಿಕ ಹಾಗೂ ಪ್ರಾತ್ಯಕ್ಷಿಕೆಗಳಿಂದ ಸುಧಾರಿತ ಪದ್ಧತಿಗಳನ್ನು ಜಾರಿಗೆ ತರುವುದು. ಬೇಸಾಯದ ಶಿಕ್ಷಣದ ವ್ಯವಸ್ಥೆ, ವಿನಾಶಕಾರಿ ಕೀಟಗಳಿಂದ ಹಾಗೂ ಇತರ ಪೀಡೆಗಳಿಂದ ಸಂರಕ್ಷಣೆ, ಸಸ್ಯರೋಗಗಳನ್ನು ತಡೆಗಟ್ಟುವುದು.

೧೧. **ನಾಗರಿಕ ಪಶುವೈದ್ಯ ವಿಭಾಗ:** ಭಾರತದ ಶಾಸನಸಭೆಯ ಯಾವುದೇ ಕಾಯಿದೆಯಿಂದ ಪ್ರಕಟಿಸಲ್ಪಡಬಹುದಾದ ಪಶು ರೋಗಗಳಿಗೆ ಸಂಬಂಧಿಸಿದ ಕಾಯಿದೆಗಳಿಗೆ ಒಳಪಟ್ಟಂತೆ ಪಶುವೈದ್ಯ ತರಬೇತಿ ವ್ಯವಸ್ಥೆಯನ್ನೊಳಗೊಂಡ, ತಳಿ ಸುಧಾರಣೆ, ಪಶುರೋಗ ನಿರೋಧಕಗಳು.

೧೨. **ಮೀನುಗಾರಿಕೆ**

೧೩. **ಸರ್ಕಾರಿ ಸಂಘಗಳು**

೧೪. **ಅರಣ್ಯಗಳು:** ಕಾಯ್ದಿಟ್ಟ ಅರಣ್ಯಗಳ ನಾಶಕ್ಕೆ ಸಂಬಂಧಿಸಿದ ಭಾರತದ ಶಾಸನಸಭೆಯ ಶಾಸನಕ್ಕೆ ಒಳಪಟ್ಟಂತೆ ಅರಣ್ಯಗಳು ಮತ್ತು ಪ್ರಾಣಿಗಳ ರಕ್ಷಣೆ.

೧೫. **ಭೂ ಸ್ವಾಧೀನ:** ಭಾರತದ ಶಾಸನಸಭೆಯ ಶಾಸನಗಳಿಗೆ ಅಧೀನವಾಗಿ, ಭೂಸ್ವಾಧೀನ.

೧೬. **ಸುಂಕ :** ಅಫೀಮಿನ ಕೃಷಿಯ ಮೇಲಿನ ಹತೋಟಿ, ಉತ್ಪಾದನೆ ಮತ್ತು ಅದರ ರಫ್ತು ವ್ಯಾಪಾರ – ಇವುಗಳನ್ನು ಹೊರತುಪಡಿಸಿದಂತೆ ಉಳಿದ ಮಾದಕ ಪದಾರ್ಥಗಳ ಉತ್ಪಾದನೆ, ದಾಸ್ತಾನು,

ಸಾಗಣಿಕೆ, ಮಾರಾಟ ಹಾಗೂ ಖರೀದಿ ಇವುಗಳ ಮೇಲಿನ ಹತೋಟಿ ಮತ್ತು ಅವುಗಳ ಹಾಗೂ ತತ್ಸಂಬಂಧಿ ಪದಾರ್ಥಗಳ ಮೇಲೆ ಲೈಸನ್ಸ್ ಶುಲ್ಕವನ್ನು ವಿಧಿಸುವುದು.

೧೭. **ನ್ಯಾಯಾಡಳಿತ :** ಉಚ್ಚ ನ್ಯಾಯಾಲಯಗಳು, ಮುಖ್ಯ ನ್ಯಾಯಾಲಯಗಳು, ಮತ್ತು ನ್ಯಾಯಪೀಠಾಧಿಪತಿಗಳ ನ್ಯಾಯಾಲಯಗಳು ಮತ್ತು ಅಪರಾಧ ವ್ಯಾಪ್ತಿಯ ಯಾವುದೇ ನ್ಯಾಯಾಲಯಗಳಿಗೆ ಸಂಬಂಧಿಸಿದ, ಭಾರತದ ಶಾಸನಸಭೆಯ ಶಾಸನಕ್ಕೆ ಅಧೀನವಾಗಿ ತಮ್ಮ ಪ್ರಾಂತ್ಯದ ವ್ಯಾಪ್ತಿಯಲ್ಲಿ ನಾಗರಿಕ ಹಾಗೂ ಅಪರಾಧಿಕ ನ್ಯಾಯಾಲಯಗಳನ್ನು ಸ್ಥಾಪಿಸುವುದು. ಅವುಗಳ ನಿರ್ವಹಣೆ.

೧೮. **ಪ್ರಾಂತೀಯ ಕಾಯಿದೆ ವರದಿಗಳು :**

೧೯. **ಅಡ್ಮಿನಿಸ್ಟ್ರೇಟರ್ಸ್–ಜನರಲ್ ಮತ್ತು ಅಧಿಕೃತ ನ್ಯಾಸಧಾರಿ :** ಭಾರತದ ಶಾಸನಸಭೆಯ ಶಾಸನಗಳಿಗೆ ಅಧೀನವಾಗಿ ಅಡ್ಮಿನಿಸ್ಟ್ರೇಟರ್ಸ್–ಜನರಲ್ ಮತ್ತು ಅಧಿಕೃತ ನ್ಯಾಸಧಾರಿಗಳು.

೨೦. ಅ) ಭಾರತದ ಶಾಸಕಾಂಗದ ಶಾಸನಗಳಿಗೆ ಒಳಪಟ್ಟಂತೆ, ನ್ಯಾಯಾಲಯದ ವ್ಯವಹಾರಗಳಿಗೆ ಉಪಯೋಗಿಸುವ ಸ್ಟಾಂಪುಗಳು.

ಆ) ತಮ್ಮ ವ್ಯಾಪ್ತಿಯಲ್ಲಿ ಬರುವ ಉಚ್ಚ ನ್ಯಾಯಾಲಯಗಳಲ್ಲಿ ವಿಧಿಸುವ ಶುಲ್ಕಗಳಿಗೆ ಸಂಬಂಧಿಸಿದಂತೆ ಭಾರತದ ಶಾಸಕಾಂಗವು ಮಾಡುವ ಶಾಸನಗಳಿಗೆ ಒಳಪಟ್ಟಂತೆ ನ್ಯಾಯಾಲಯಗಳ ಸ್ಟಾಂಪುಗಳು.

೨೧. **ಪತ್ರ ಹಾಗೂ ದಾಖಲೆಗಳ ನೋಂದಣಿ :** ಭಾರತದ ಶಾಸನ ಸಭೆಯ ಶಾಸನಗಳಿಗೆ ಒಳಪಟ್ಟಂತೆ ಪತ್ರ ಹಾಗೂ ದಾಖಲೆಗಳ ನೋಂದಣಿ.

೨೨. **ಹುಟ್ಟು, ಸಾವು ಹಾಗೂ ಮದುವೆಗಳ ನೋಂದಣಿ :** ಭಾರತದ ಶಾಸನಸಭೆ ನಿರ್ಧರಿಸಬಹುದಾದ ವರ್ಗಗಳಿಗಾಗಿ ಭಾರತದ ಶಾಸನ ಸಭೆಯು ಮಾಡುವ ಶಾಸನಗಳಿಗೆ ಒಳಪಟ್ಟಂತೆ ಹುಟ್ಟು, ಸಾವು ಹಾಗೂ ಮದುವೆಗಳ ನೋಂದಣಿ.

೨೩. **ಧಾರ್ಮಿಕ ಹಾಗೂ ಧರ್ಮಾರ್ಥ ದತ್ತಿಗಳು**

೨೪. **ಸರ್ಕಾರಿ ಆಸ್ತಿಗಳಾದ ಖನಿಜ ಸಂಪನ್ಮೂಲಗಳ ಅಭಿವೃದ್ಧಿ :** ಗಣಿಯಂತ್ರವನ್ನು ಹೊರತುಪಡಿಸಿದಂತೆ ಸೆಕ್ರೆಟರಿ–ಆಫ್–ಸ್ಟೇಟ್‌ನಿಂದ ಮಂಜೂರು ಪಡೆದ ಅಥವಾ ಮಾಡಿದ, ಅದರ ನಿಯಮಗಳಿಗೆ ಅಧೀನವಾಗಿ, ಖನಿಜ ಸಂಪನ್ಮೂಲಗಳ ಅಭಿವೃದ್ಧಿ.

೨೫. **ಉದ್ದಿಮೆಗಳ ಅಭಿವೃದ್ಧಿ :** ಔದ್ಯಮಿಕ ಸಂಶೋಧನೆ ಹಾಗೂ ತಾಂತ್ರಿಕ ಶಿಕ್ಷಣವನ್ನೊಳಗೊಂಡಂತೆ ಉದ್ದಿಮೆಗಳ ಅಭಿವೃದ್ಧಿ.

೨೬. **ಔದ್ಯಮಿಕ ವಿಷಯಗಳು :** ಕೆಳಗಿನ ಬಾಬತ್ತುಗಳಲ್ಲಿ ಸೇರಿಸಲಾದವು

(ಅ) ಕಾರ್ಖಾನೆಗಳು;

(ಬ) ಕಾರ್ಮಿಕ ವ್ಯಾಜ್ಯಗಳ ತೀರ್ಮಾನ;

(ಕ) ವಿದ್ಯುತ್;

(ಡ) ಬಾಯ್ಲರುಗಳು;

(ಇ) ಅನಿಲ;

(ಫ) ಹೊಗೆಯಿಂದ ಉಂಟಾಗುವ ತೊಂದರೆ; ಮತ್ತು

(ಜ) ಕಾರ್ಮಿಕ ಕಲ್ಯಾಣ, ಭವಿಷ್ಯ ನಿಧಿ, ಔದ್ಯಮಿಕ ವಿಮೆ (ಸಾಮಾನ್ಯ ಆರೋಗ್ಯ ಹಾಗೂ ಅಪಘಾತ) ಮತ್ತು ವಸತಿ;
ಮೇಲೆ ಹೇಳಿದವುಗಳಲ್ಲಿ (ಅ), (ಬ), (ಕ), (ಡ) ಹಾಗೂ (ಜ) ಬಾಬತ್ತುಗಳು ಭಾರತದ ಶಾಸನಸಭೆಯ ಶಾಸನಗಳಿಗೆ ಅಧೀನವಾಗಿರುತ್ತವೆ.

**೨೭. ಲೇಖನ ಹಾಗೂ ಇತರ ಸಾಮಗ್ರಿ :** ಆಮದು ಮಾಡಿಕೊಂಡ ಲೇಖನ ಹಾಗೂ ಇತರ ಸಾಮಗ್ರಿಗಳ ವಿಷಯದಲ್ಲಿ ಸೆಕ್ರೆಟರಿ–ಆಫ್–ಸ್ಟೇಟ್ ವಿಧಿಸಿದ ನಿಯಮಗಳಿಗೆ ಒಳಪಟ್ಟು ಲೇಖನ ಹಾಗೂ ಇತರ ಸಾಮಗ್ರಿಗಳು.

**೨೮. ಆಹಾರ ಪದಾರ್ಥಗಳು ಹಾಗೂ ಇತರ ವಸ್ತುಗಳ ಕಲಬೆರಕೆ :** ಆಮದು ಮತ್ತು ರಫ್ತುಗಳಿಗೆ ಸಂಬಂಧಿಸಿದ ಭಾರತದ ಶಾಸನಸಭೆಯ ಶಾಸನಗಳಿಗೆ ಒಳಪಟ್ಟಂತೆ ಆಹಾರ ಪದಾರ್ಥಗಳು ಹಾಗೂ ಇತರ ವಸ್ತುಗಳ ಕಲಬೆರಕೆ;

**೨೯. ತೂಕ ಮತ್ತು ಅಳತೆ :** ಪ್ರಮಾಣಕ್ಕೆ ಸಂಬಂಧಿಸಿದ ಹಾಗೆ ಭಾರತದ ಶಾಸನಸಭೆಯ ಶಾಸನಗಳಿಗೆ ಒಳಪಟ್ಟು ತೂಕ ಮತ್ತು ಅಳತೆ;

**೩೦. ಬಂದರುಗಳು :** ಗವರ್ನರ್–ಜನರಲ್‌ನಿಂದಾಗಲಿ ಅಥವಾ ಭಾರತದ ಶಾಸನದಿಂದಾಗಲಿ ಮುಖ್ಯ ಬಂದರುಗಳೆಂದು ಪ್ರಕಟಿಸಲ್ಪಟ್ಟ ಬಂದರುಗಳನ್ನು ಹೊರತುಪಡಿಸಿ, ಉಳಿದ ಬಂದರುಗಳು.

**೩೧. ಅಂತರ್ದೇಶೀಯ ಜಲಮಾರ್ಗಗಳು :** ಕೇಂದ್ರದ ವಿಷಯಗಳೆಂದು ಗವರ್ನರ್–ಜನರಲ್‌ನಿಂದ ಪ್ರಕಟಿಸಲ್ಪಡದ ಹಡಗು ಸಾಗಾಣಿಕೆ ಮತ್ತು ಸಂಚಾರಗಳು. ಆದರೆ ಒಳನಾಡಿನ ಉಗಿ ನೌಕೆಗಳ ಸಂಬಂಧದಲ್ಲಿ ಭಾರತದ ಶಾಸನಸಭೆಯ ಶಾಸನಗಳಿಗೆ ಇವು ಒಳಪಟ್ಟಿರುತ್ತವೆ.

**೩೨. ಆರಕ್ಷಣೆ :** ಕೌನ್ಸಿಲ್ಲಿನ ಗವರ್ನರ್ ಜನರಲ್ಲನು ತೀರ್ಮಾನಿಸುವ ವ್ಯಾಪ್ತಿ ಹಾಗೂ ನಿಬಂಧನೆಗಳಿಗೆ ಒಳಪಟ್ಟಂತೆ, ರೈಲ್ವೆ ಆರಕ್ಷಣೆ ಮತ್ತು ನಾಗರಿಕ ಆರಕ್ಷಣೆ. ಅವುಗಳಲ್ಲಿ ಕೆಳಗಿನ ವಿಷಯಗಳೂ ಸೇರಿವೆ.

(ಅ) ಪಣ ಮತ್ತು ಜೂಜುಗಳ ನಿಯಂತ್ರಣ;
(ಬ) ಪ್ರಾಣಿಗಳ ಮೇಲಿನ ಕ್ರೌರ್ಯ ತಡೆಯುವುದು.;
(ಕ) ಕಾಡಿನ ಪಕ್ಷಿ ಹಾಗೂ ಪ್ರಾಣಿಗಳ ಸಂರಕ್ಷಣೆ;
(ಡ) ಭಾರತದ ಶಾಸನಸಭೆಯ ಶಾಸನಗಳಿಗೆ ಒಳಪಟ್ಟಂತೆ ವಿಷಗಳ ಹತೋಟಿ.
(ಇ) ಇಡೀ ಬ್ರಿಟಿಷ್ ಭಾರತಕ್ಕೆ ಸಂಬಂಧಿಸಿದಂತೆ ನೀಡುವ ಪರವಾನಗಿಯಲ್ಲಿ ಭಾರತ ಶಾಸಕಾಂಗದ ಶಾಸನಗಳಿಗೆ ಒಳಪಟ್ಟಂತೆ, ಮೋಟಾರು ವಾಹನಗಳ ನಿಯಂತ್ರಣ.
(ಫ) ಪ್ರದರ್ಶನದ ವಿಷಯದಲ್ಲಿ ಭಾರತದ ಶಾಸಕಾಂಗವು ಮಾಡುವ ನಿಬಂಧನೆಗಳಿಗೆ ಒಳಪಟ್ಟು, ನಾಟಕ ಹಾಗೂ ಸಿನಿಮಾಗಳು.

೩೩. ಭಾರತದ ಶಾಸನಸಭೆಯ ಶಾಸನಸಭೆಗಳಿಗೆ ಒಳಪಟ್ಟು ವರ್ತಮಾನ ಪತ್ರಿಕೆಗಳು, ಪುಸ್ತಕಗಳು ಹಾಗೂ ಮುದ್ರಣಾಲಯಗಳ ನಿಯಂತ್ರಣ;

**೩೪. ದುರ್ಮರಣಗಳ ತನಿಖೆ**

**೩೫. ಬಹಿಷ್ಕೃತ ಪ್ರದೇಶಗಳು**

೩೬. ಭಾರತದ ಶಾಸನಸಭೆಯ ಶಾಸನಗಳಿಗೆ ಒಳಪಟ್ಟು **ಅಪರಾಧಿ ಬುಡಕಟ್ಟುಗಳು.**

೩೮. **ಯುರೋಪಿಯನ್ನರ ಅಲೆಮಾರಿತನ:** ಭಾರತದ ಶಾಸನಸಭೆಯ ಶಾಸನಗಳಿಗೆ ಒಳಪಟ್ಟು ಯೂರೋಪಿಯನ್ನರ ಅಲೆಮಾರಿತನ.

೩೯. ಭಾರತದ ಶಾಸನ ಸಭೆಯ ಶಾಸನಗಳಿಗೆ ಒಳಪಟ್ಟಂತೆ. ಜೈಲುಗಳು, ಸೆರೆಯಾಳುಗಳು (ಸಾಮ್ರಾಜ್ಯದ ಸೆರೆಯಾಳುಗಳನ್ನು ಹೊರತುಪಡಿಸಿ) ಮತ್ತು ಸುಧಾರಣಾ ಶಾಲೆಗಳು,

೪೦. **ದೊಡ್ಡಿಗಳು** ಮತ್ತು ದನಗಳ ಅತಿಕ್ರಮಣವನ್ನು ತಡೆಯುವುದು.

೪೧. **ಗುಪ್ತನಿಧಿ**

೪೨. ಸಾಮ್ರಾಜ್ಯದ ಗ್ರಂಥಾಲಯಗಳನ್ನುಳಿದಂತೆ ಇತರ ಗ್ರಂಥಾಲಯಗಳು ಮತ್ತು ಭಾರತದ ಪ್ರಾಚ್ಯವಸ್ತು ಸಂಗ್ರಹಾಲಯ, ಇಂಪೀರಿಯಲ್ ಯುದ್ಧ ಪ್ರಾಚ್ಯವಸ್ತು ಸಂಗ್ರಹಾಲಯ ಮತ್ತು ಕಲ್ಕತ್ತಾದ ವಿಕ್ಟೋರಿಯಾ ಸ್ಮಾರಕಗಳನ್ನು ಹೊರತುಪಡಿಸಿ ಇತರ ಪ್ರಾಚ್ಯವಸ್ತು ಸಂಗ್ರಹಾಲಯಗಳು ಮತ್ತು ಮೃಗಾಲಯಗಳು.

೪೩. **ಪ್ರಾಂತೀಯ ಸರ್ಕಾರದ ಮುದ್ರಣಾಲಯಗಳು.**

೪೪. ಚುನಾವಣಾ ಕಾನೂನಿನ ೬೪(೧) ಮತ್ತು ೭೨ಎ(೪)ನೆಯ ಪ್ರಕರಣಗಳಿಗೆ ಅಧೀನವಾಗಿ ಭಾರತದ ಮತ್ತು ಪ್ರಾಂತೀಯ ಶಾಸನಸಭೆಗೆ ನಡೆಸುವ ಚುನಾವಣೆಗಳು.

೪೫. ಭಾರತದ ಶಾಸನಸಭೆಯ ಶಾಸನಗಳಿಗೆ ಒಳಪಟ್ಟಂತೆ ವೈದ್ಯಕೀಯ ಹಾಗೂ ಉಳಿದ ವೃತ್ತಿಯ ಅರ್ಹತೆಗಳನ್ನು ಹಾಗೂ ಮಟ್ಟವನ್ನು ನಿಯಂತ್ರಿಸುವುದು.

೪೬. **ಸ್ಥಾನಿಕ ನಿಧಿಯ ಲೆಕ್ಕತಪಾಸಣೆ:** ಸರ್ಕಾರಿ ಕಾರ್ಯಭಾರಿಗಳಿಂದ ಸ್ಥಾನಿಕ ಸಂಸ್ಥೆಗಳ ಅಧೀನಕ್ಕೊಳಪಟ್ಟ ಆದಾಯ ಹಾಗೂ ವೆಚ್ಚಗಳ ಲೆಕ್ಕತಪಾಸಣೆ.

೪೭. ಭಾರತದ ಶಾಸನ ಸಭೆಯ ಶಾಸನಗಳಿಗೆ ಒಳಪಟ್ಟಂತೆ, ಅಖಿಲ ಭಾರತ ಸೇವೆಗಳನ್ನು ಹೊರತುಪಡಿಸಿ, ೧೦ನೇ ನಿಯಮದ ಮೇರೆಗೆ, ಆಯಾ ಪ್ರಾಂತ್ಯಗಳಲ್ಲಿ ಹಾಗೂ ಇತರೆಡೆಗಳಲ್ಲಿನ ಸೇವೆ ಮತ್ತು ಅದರ ನಿಯಂತ್ರಣ.

೪೮. ಹಿಂದಿನ ಬಾಬತ್ತುಗಳಲ್ಲಿ ಕೂಡಿಸದ ಪ್ರಾಂತೀಯ ಆದಾಯದ ಮೂಲಗಳು.
   (ಅ) ಕರ ನಿಯಮದ ಅನುಸೂಚಿಯಲ್ಲಿ ಸೇರಿಸಿದ ಕರಗಳು. ಅಥವಾ
   (ಬ) ಕರ ನಿಯಮದ ಪಟ್ಟಿಯಲ್ಲಿ ಇಲ್ಲದ, ಆದರೆ ಗವರ್ನರ್–ಜನರಲ್‌ನ ಪೂರ್ವ ಮಂಜೂರಾತಿ ಪಡೆದ, ಪ್ರಾಂತೀಯ ಶಾಸನದ ಮೇರೆಗೆ ಹಾಕಲಾದ ಕರಗಳು

೪೯. ಸ್ಥಾನಿಕ ಸರ್ಕಾರದ ಕಾಯಿದೆಯ ಸಾಲ ನಿಯಮಗಳಿಗೆ ಒಳಪಟ್ಟಂತೆ, ಸ್ವಂತ ಭರವಸೆಯ ಮೇಲೆ ಸಾಲವನ್ನು ಎತ್ತುವುದು.

೫೦. ಭಾರತದ ಶಾಸಕಾಂಗವು ಯಾವುದೇ ವಿಷಯದಲ್ಲಿ ಮಾಡುವ ಶಾಸನಗಳಲ್ಲಿ ವಿಧಿಸಿರುವ ವ್ಯಾಪ್ತಿಗೆ ಒಳಪಟ್ಟಂತೆ, ಪ್ರಾಂತ್ಯದ ಯಾವುದೇ ಕಾನೂನನ್ನು ಜಾರಿಗೆ ತರುವಲ್ಲಿ ವಿಧಿಸಬಹುದಾದ ಶಿಕ್ಷೆ, ದಂಡ, ಬಂಧನ ಮೊದಲಾದವು.

೫೧. ಕೇಂದ್ರದ ಅಧೀನದಲ್ಲಿದ್ದರೂ, ಸ್ಥಾನಿಕ ಅಥವಾ ಖಾಸಗಿ ಸ್ವರೂಪದ್ದೆಂದು, ಗವರ್ನರ್–ಜನರಲ್‌ನಿಂದ ಪ್ರಕಟಪಡಿಸಲಾದ ಯಾವುದೇ ವಿಷಯ.

೫೨. **ಯಾವುದೇ ಕಾಯಿದೆ ಮೇರೆಗೆ ಸ್ಥಾನಿಕ ಸರ್ಕಾರಗಳಿಗೆ ಅಧಿಕಾರ ಕೊಟ್ಟ ಕೇಂದ್ರಾಧೀನ ವಿಷಯಗಳು:**

ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವೆ ಆದಾಯ ಸಂಪನ್ಮೂಲಗಳನ್ನು ಹಂಚುವ ಕೆಲಸ ಕಠಿಣವಾದದ್ದು. ಅವುಗಳು ತಮ್ಮ ಸ್ವಂತ ಅಧಿಕಾರವನ್ನು ಹೊಂದಿರಬೇಕೆಂದು ಪ್ರಸ್ತಾಪಿಸಿದ ವಿಷಯಗಳನ್ನು

ಪ್ರಾಂತ್ಯಗಳನ್ನು ಕೇಂದ್ರ ಸರ್ಕಾರದಿಂದ ಸ್ವತಂತ್ರಗೊಳಿಸುವ ಸಮಸ್ಯೆಯೆಂದು ಇದನ್ನು ಭಾವಿಸಿದ್ದರಿಂದ, ಸಂವಿಧಾನದ ಸುಧಾರಣೆಗಳ ವರದಿಯು ಸಹಜವಾಗಿ ಈ ರೀತಿ ಅಭಿಪ್ರಾಯಪಡಬೇಕಾಯಿತು.

"ನಮ್ಮ ಮೊದಲಗುರಿ ಕೇಂದ್ರ ಸರ್ಕಾರದ ಸಂಪನ್ಮೂಲಗಳನ್ನು ಪ್ರಾಂತೀಯ ಸಂಪನ್ಮೂಲಗಳಿಂದ ಬೇರ್ಪಡಿಸುವ ಮಾರ್ಗವನ್ನು ಕಂಡು ಹಿಡಿಯುವುದಾಗಿದೆ."

> 'ವಿಭಜಿತ ಬಾಬತ್ತುಗಳ' ಅಥವಾ ಆದಾಯ ಹಂಚುವ ಮುಂಗಡಪತ್ರದ ಪದ್ಧತಿಯನ್ನು ತೆಗೆದುಹಾಕುವುದು ಈ ದಿಸೆಯಲ್ಲಿಯ ಮೊದಲ ಹೆಜ್ಜೆಯಾಗಿದೆ. ಏಕೆಂದರೆ ಈ ಪದ್ಧತಿಯು ಪ್ರಾಂತ್ಯಗಳ ಆಂತರಿಕ ವಿಷಯಗಳಲ್ಲಿ ಕೇಂದ್ರ ಸರ್ಕಾರವು ಹಸ್ತಕ್ಷೇಪ ಮಾಡಲು ಆಸ್ಪದಕೊಡುವುದರಿಂದ, ಇದೊಂದು ಘರ್ಷಣೆಯ ಮೂಲವಾಗಿದೆ ಮತ್ತು ಪ್ರಾಂತೀಯ ಸ್ವಾತಂತ್ರ್ಯಕ್ಕೆ ಇದು ಹೊಂದಲಾರದು. ಆದರೆ ಸಂಪೂರ್ಣ ಪ್ರತ್ಯೇಕತೆಯ ಪದ್ಧತಿ ಎರಡು ಸಮಸ್ಯೆಗಳನ್ನೊಳಗೊಂಡಿದೆ. ಮೊದಲನೆಯದೆಂದರೆ, ವಿಭಜಿತ ಬಾಬತ್ತುಗಳನ್ನು ತೆಗೆದುಹಾಕುವುದಕ್ಕೆ ಸಂಬಂಧಪಟ್ಟದ್ದು. ಇವುಗಳನ್ನು ಯಾರಿಗೆ ಹಸ್ತಾಂತರಿಸಬೇಕು? ಸಂಪೂರ್ಣ ಪ್ರತ್ಯೇಕತೆಯ ಯೋಜನೆಯನ್ನು ಆಲೋಚಿಸುವ ವೇಳೆಯಲ್ಲಿ, ಎಲ್ಲ ಅಥವಾ ಕೆಲವೊಂದು ಪ್ರಾಂತ್ಯಗಳಲ್ಲಿ ವಿಭಜಿಸುತ್ತಿದ್ದ, ವಿಭಜಿತ ಬಾಬತ್ತುಗಳೆಂದರೆ-ಭೂಕಂದಾಯ, ಸ್ಟ್ಯಾಂಪುಗಳು, ಸುಂಕ, ಆದಾಯಕರ ಮತ್ತು ನೀರಾವರಿ. ಸಂವಿಧಾನ ಸುಧಾರಣೆಗಳ ಮೇಲಿನ ವರದಿಯಲ್ಲಿ ಹೀಗೆ ಪ್ರಸ್ತಾಪಿಸಿದ್ದಾರೆ.[೧]

"......... ಸ್ಟ್ಯಾಂಪ್ ಕರಗಳಿಂದ ಬರುವ ಆದಾಯವನ್ನು ಈಗಾಗಲೇ ಗುರುತಿಸಿದ, 'ಸಾಮಾನ್ಯ' ಮತ್ತು 'ನ್ಯಾಯಸ್ಥಾನದ' ಉಪ ಬಾಬತ್ತುಗಳಲ್ಲಿ ಹಂಚಬೇಕು. ಮೊದಲನೆಯದನ್ನು ಭಾರತದ ಮತ್ತು ಎರಡನೆಯದನ್ನು ಪ್ರಾಂತೀಯ ಆದಾಯವೆಂದು ತಿಳಿಯಬೇಕು. ಅಪೇಕ್ಷಣೀಯವಾದೆಡೆಯಲ್ಲಿ ಈ ವ್ಯವಸ್ಥೆಯು ವ್ಯಾವಹಾರಿಕ ಸ್ಟಾಂಪುಗಳಲ್ಲಿ ಏಕರೂಪತೆಯನ್ನು ಕಾಯ್ದುಕೊಳ್ಳಲು ಸಹಾಯಮಾಡುತ್ತದೆ. ಈ ವ್ಯವಸ್ಥೆ ನ್ಯಾಯಾಲಯದ ಶುಲ್ಕಗಳ ವ್ಯವಹಾರದಲ್ಲಿ ಪ್ರಾಂತ್ಯಗಳಿಗೆ ಸ್ವಾತಂತ್ರ್ಯವನ್ನು ಕೊಡುತ್ತದೆ ಮತ್ತು ಅದರಿಂದ ಅವುಗಳು ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸಿಕೊಳ್ಳಲು ಅನುಕೂಲವಾಗುತ್ತದೆ. ಬಾಂಬೆ, ಬಂಗಾಲ ಮತ್ತು ಅಸ್ಸಾಂಗಳಲ್ಲಿ ಸುಂಕವು ಈಗಾಗಲೇ ಪ್ರಾಂತೀಯ ಬಾಬತ್ತಾಗಿದೆ, ಮತ್ತು ಅದನ್ನು ಇಡೀ ಭಾರತದಲ್ಲಿ ಪ್ರಾಂತೀಯವಾದುದನ್ನಾಗಿ ಏಕೆ ಮಾಡಬಾರದೆಂಬುದಕ್ಕೆ ನಿಜವಾದ ಕಾರಣ ನಮಗೆ ಗೋಚರಿಸುವುದಿಲ್ಲ..... ಎಲ್ಲಕ್ಕಿಂತಲೂ ದೊಡ್ಡ ಬಾಬತ್ತಾದ ಭೂಕಂದಾಯವು ಈಗ ಭಾರತ ಸರ್ಕಾರ ಹಾಗೂ ಎಲ್ಲ ಪ್ರಾಂತೀಯ ಸರ್ಕಾರಗಳ ನಡುವೆ ಸಮನಾಗಿ ಹಂಚಲ್ಪಡುತ್ತದೆ. ಆದರೆ ಬರ್ಮಾ ಮಾತ್ರ ಅರ್ಧಕ್ಕಿಂತ ಹೆಚ್ಚು ಭಾಗ ತೆಗೆದುಕೊಳ್ಳುತ್ತದೆ ಮತ್ತು ಸಂಯುಕ್ತ ಪ್ರಾಂತ್ಯಗಳು ಕಡಿಮೆ ತೆಗೆದುಕೊಳ್ಳುತ್ತವೆ. ಭೂಕಂದಾಯದ ಮೊತ್ತ ನಿಗದಿಪಡಿಸುವುದು ಮತ್ತು ವಸೂಲುಮಾಡುವುದು, ಗ್ರಾಮೀಣ ಪ್ರದೇಶಗಳಲ್ಲಿಯ ಇಡೀ ಆಡಳಿತಕ್ಕೆ ಬಹಳ ನಿಕಟವಾಗಿ ಸಂಬಂಧಿಸಿರುವುದರಿಂದ, ಅದನ್ನು ಪ್ರಾಂತೀಯ ಸಂದಾಯವೆಂದು ಪರಿಗಣಿಸುವಲ್ಲಿಯ ಪ್ರಯೋಜನಗಳು ಸ್ಪಷ್ಟವಾಗಿವೆ.... ಬರಗಾಲ ವೆಚ್ಚ ಮತ್ತು ದೊಡ್ಡ ನೀರಾವರಿ ಕಾಮಗಾರಿಗಳ ಮೇಲಿನ ವೆಚ್ಚಗಳು ಭೂ ಕಂದಾಯಕ್ಕೆ ನಿಕಟವಾಗಿ ಸಂಬಂಧಿಸಿರುತ್ತವೆ ಮತ್ತು ಆ ಬಾಬತ್ತಿನ ಸಂದಾಯಗಳು ಪ್ರಾಂತೀಯ ಸಂದಾಯಗಳಾದರೆ, ಪ್ರಾಂತ್ಯಗಳು ಬರಗಾಲ ಪರಿಹಾರ ಮತ್ತು ರಕ್ಷಣಾ ಕಾಮಗಾರಿಗಳ

---

೧. ವರದಿ, ಪುಟಗಳು ೧೬೫-೭

ಬಹು ದೊಡ್ಡ ಭಾರವನ್ನು ಹೊತ್ತುಕೊಳ್ಳುತ್ತವೆ. ಪ್ರಾಂತ್ಯಗಳಲ್ಲಿಯ ಜನಪ್ರಿಯ ಸರ್ಕಾರಗಳ ಉದಯದ ದಿನಗಳಲ್ಲಿ ಪ್ರಾಂತೀಯ ಸರ್ಕಾರಗಳ ಭೂಕಂದಾಯ ನೀತಿಯ ಮೇಲೆ ಆಕ್ರಮಣವಾದಾಗ, ಅವುಗಳ ಸಹಾಯಕ್ಕಾಗಿ ಭಾರತ ಸರ್ಕಾರವನ್ನು ಅವಲಂಬಿಸುವುದು ಒಳ್ಳೆಯದೆಂದು ನಮಗೆ ತಿಳಿಸಲಾಗಿದೆ.[೧] ಏಕೆಂದರೆ ವಿಭಜಿತ ಬಾಬತ್ತುಗಳನ್ನು ಕೇವಲ ಹಣಕಾಸಿನ ಸಾಧನವೆಂದು ಪರಿಗಣಿಸಿಲ್ಲ. ಆದ್ದರಿಂದ ನೀರಾವರಿ ಜೊತೆಗೆ ಭೂಕಂದಾಯವನ್ನು ಸಂಪೂರ್ಣ ಪ್ರಾಂತೀಯ ಆದಾಯವೆಂದು ಪರಿಗಣಿಸಬೇಕೆಂದು ನಾವು ಸೂಚಿಸುತ್ತೇವೆ. ಇದರ ಪರಿಣಾಮವಾಗಿ, ಬರಗಾಲ ಪರಿಹಾರ ಮತ್ತು ರಕ್ಷಣಾ ಕಾಮಗಾರಿಗಳ ಮೇಲಿನ ವೆಚ್ಚಕ್ಕಾಗಿ ಪ್ರಾಂತೀಯ ಸರ್ಕಾರವೇ ಪೂರ್ಣ ಜವಾಬ್ದಾರವಾಗಿರುತ್ತದೆ. ಉಳಿದ ಇನ್ನೊಂದು ಬಾಬತ್ತೆಂದರೆ ಆದಾಯ ಕರ. ಇದನ್ನು ಭಾರತ ಸರ್ಕಾರದ ಆದಾಯವಾಗಿ ಮಾಡಲು ಎರಡು ಪ್ರಬಲವಾದ ಕಾರಣಗಳನ್ನು ನಾವು ನೋಡಬಹುದು. ಮೊದಲನೆಯದಾಗಿ, ಇಡೀ ದೇಶದಲ್ಲಿ ಒಂದೇ ಪ್ರಮಾಣವನ್ನು ಉಳಿಸಿಕೊಂಡು ಬರುವ ಆವಶ್ಯಕತೆ ಇದೆ. ಬೇರೆಬೇರೆ ಪ್ರಾಂತ್ಯಗಳಲ್ಲಿ ಬೇರೆ ಬೇರೆ ಪ್ರಮಾಣಗಳಿಂದ ವ್ಯಾಪಾರೀ ಜಗತ್ತಿಗೆ ಆಗುವ ಅನಾನುಕೂಲತೆಗಳು ಸ್ಪಷ್ಟವಾಗಿವೆ. ಎರಡನೆಯದಾಗಿ, ದೊಡ್ಡನಗರವನ್ನು ಕೇಂದ್ರವಾಗಿ ಮಾಡಿಕೊಂಡು ವಿವಿಧ ಪ್ರಾಂತ್ಯಗಳಲ್ಲಿ ತೊಡಗಿದ ವ್ಯವಹಾರದ ಸಂಸ್ಥೆಗಳ ವಿಷಯದಲ್ಲಿ ಆದಾಯಗಳಿಸುವ ಪ್ರಾಂತ ಹಾಗೂ ಕರ ಕೊಡುವ ಪ್ರಾಂತ ಬೇರೆಯಾಗಿರಬಹುದು. ಆದಾಯ ಕರವು ಭೂಕಂದಾಯದ ಔದ್ಯಮಿಕ ಅಥವಾ ವೃತ್ತಿಗೆ ಪೂರಕವಾಗಿದೆ; ಆದ್ದರಿಂದ ಭೂಕಂದಾಯವನ್ನು ಪ್ರಾಂತೀಕರಿಸಿ, ಆದಾಯ ಕರವನ್ನು ಭಾರತ ಸರ್ಕಾರಕ್ಕೆ ವಹಿಸಿದರೆ, ಬೇಸಾಯ ಪ್ರಾಧಾನ್ಯತೆಯ ಸಂಪತ್ತನ್ನು ಹೊಂದಿದ, ಸಂಯುಕ್ತ ಪ್ರಾಂತ್ಯಗಳು ಹಾಗೂ ಮದರಾಸುಗಳಿಗೆ, ಹೆಚ್ಚಾಗಿ ವ್ಯಾಪಾರಿ ಹಾಗೂ ಔದ್ಯಮಿಕ ಆಸಕ್ತಿಗಳನ್ನು ಹೊಂದಿದ ಬಾಂಬೆಯಂಥ ಪ್ರಾಂತ್ಯಕ್ಕಿಂತ ಹೆಚ್ಚಿನ ಪ್ರಾರಂಭಿಕ ಲಾಭ ಕೊಟ್ಟಂತಾಗುತ್ತದೆಯೆಂದು ನಮಗೆ ತಿಳಿಸಲಾಗಿದೆ. ಇನ್ನೊಂದು ಪ್ರಾಯೋಗಿಕ ತರ್ಕವೆಂದರೆ ಪ್ರಾಂತೀಯ ಕಾರ್ಯಭಾರಿಯಿಂದ ಕರ ವಸೂಲು ಮಾಡಲಾಗುತ್ತದೆ. ಪ್ರಾಂತೀಯ ಸರ್ಕಾರಗಳಿಗೆ ಸಂದಾಯದ ಒಂದು ಭಾಗ ಅಥವಾ ವಸೂಲಿಯ ಮೇಲೆ

---

೧. ಸರ್ಕಾರದ ಭೂಕಂದಾಯ ನೀತಿಯನ್ನು ಜನಪ್ರಿಯ ಮುಂದಾಳುಗಳು ಯಾವಾಗಲೂ ಸಂಶಯ ದೃಷ್ಟಿಯಿಂದ ನೋಡುತ್ತಿದ್ದಾರೆ ಮತ್ತು ಟೀಕಿಸುತ್ತಿದ್ದಾರೆ. ಪ್ರಾಂತೀಯ ವಿಷಯವೆಂದು ಪ್ರಾಂತೀಯ ಸಂಸತ್ತುಗಳಿಗೆ ಒಳಪಟ್ಟಂಥ ಭೂಕಂದಾಯ ನೀತಿಯನ್ನು ಜನಪ್ರಿಯ ಸಂಸತ್ತುಗಳು ಬುಡಮೇಲು ಮಾಡಬಹುದೆಂಬ ಹೆದರಿಕೆಯಿಂದ, ಮಸೂದೆಯನ್ನು ಕಾಯ್ದಿಡುವ ನಿಯಮಗಳ ಪರಿಚ್ಛೇದ ೧೨(೧) ಭಾರತ ಸರ್ಕಾರದ ಕಾಯಿದೆ ೧೯೧೯ ಅಡಿಯಲ್ಲಿ ಈ ರೀತಿ ವಿಧಿಸಲಾಯಿತು. ಯಾವುದೇ ಮಸೂದೆ ಪ್ರಾಂತೀಯ ಸಂಸತ್ತಿನಿಂದ ಅಂಗೀಕರಿಸಲ್ಪಟ್ಟ ಗವರ್ನರ್‌ನ ಅಂಗೀಕಾರಕ್ಕಾಗಿ ಒಪ್ಪಿಸಲಾಗಿದೆಯೋ, ಆ ಮಸೂದೆ ಕೆಳಗಿನ ಅಂಶಗಳನ್ನು ಒಳಗೊಂಡಿದೆಯೆಂದು ಗವರ್ನರನಿಗೆ ಕಂಡುಬಂದಲ್ಲಿ, ಅಂಥ ಮಸೂದೆಯನ್ನು ಗವರ್ನರ್–ಜನರಲ್‌ನ ಆಲೋಚನೆಗಾಗಿ ಕಾಯ್ದಿಡಬೇಕಾಗುತ್ತದೆ–

ಇ. ಪ್ರಾಂತೀಯ ಭೂಕಂದಾಯದ ಮೇಲೆ ಕೆಳಗಿನಂತೆ ಪರಿಣಾಮ ಬೀರುವ –

i) ತಾತ್ಕಾಲಿಕವಾಗಿ ನಿರ್ಧರಿಸಿದ ಎಸ್ಟೇಟುಗಳ ಭೂಕಂದಾಯ ಮರು ನಿರ್ಧಾರವಾಗದಂತೆ ಅವಧಿಯನ್ನು ನಿರ್ಣಯಿಸುವುದು.

ii) ಅಂಥ ಎಸ್ಟೇಟ್‌ಗಳ ಭೂಕಂದಾಯವನ್ನು ಹೆಚ್ಚಿಸುವ ಮಿತಿಯನ್ನು ನಿರ್ಧರಿಸುವುದು.

iii) ಪ್ರಾಂತ್ಯದ ಸಾರ್ವಜನಿಕ ಆದಾಯದ ಮೇಲೆ ಪರಿಣಾಮ ಬೀರುತ್ತದೆಯೆಂದು ಗವರ್ನರನಿಗೆ ಕಂಡುಬಂದರೆ ಈವರೆಗೆ ಇರುವ ಭೂಕಂದಾಯವನ್ನು ನಿರ್ಧರಿಸುವ ಸಾಮಾನ್ಯ ನಿಯಮಗಳನ್ನು ಆಮೂಲಾಗ್ರವಾಗಿ ಬದಲಿಸುವುದು.

ದಲಾಲಿ ರೂಪದಲ್ಲಿ ಪ್ರೋತ್ಸಾಹ ಇಲ್ಲದಿದ್ದಲ್ಲಿ ವಸೂಲಿಯಲ್ಲಿ ಸಡಿಲಿಕೆಯಾಗುವ ಪ್ರವೃತ್ತಿಯಿಂದಾಗಿ ಸಂದಾಯ ಕಡಿಮೆಯಾಗಬಹುದು. ಈ ತರ್ಕಗಳಲ್ಲಿ ಬಲವಿದೆಯೆಂದು ನಾವು ಒಪ್ಪುತ್ತೇವೆ. ಆದರೆ ಆದಾಯಗಳನ್ನು ಸಂಪೂರ್ಣವಾಗಿ ಪ್ರತ್ಯೇಕಿಸುವ ಮಾರ್ಗದಲ್ಲಿ ಅಡ್ಡಬರಲು ಅವುಗಳನ್ನು ನಾವು ಬಿಡುವುದಿಲ್ಲ. ಎರಡು ಪ್ರಾಂತ್ಯಗಳ ನಡುವಿನ ಸಮಾನತೆಯ ವ್ಯವಹಾರ ಆದಷ್ಟುಮಟ್ಟಿಗೆ ಪೂರ್ಣ ವ್ಯವಸ್ಥೆಯಿಂದ ದೊರಕಿಸಿಕೊಂಡದ್ದಾಗಿರಬೇಕು. ಸಮಾನತೆಯ ತತ್ವವನ್ನು ಪ್ರತಿಯೊಂದು ಆದಾಯದ ಬಾಬತ್ತುಗಳಿಗೆ ವಿಸ್ತರಿಸಲು ಸಾಧ್ಯವಿಲ್ಲ. ಸಂದಾಯಗಳು ಕಡಿಮೆಯಾಗುತ್ತವೆಯೆಂದು ಕಂಡುಬಂದಲ್ಲಿ, ಕರವನ್ನು ವಸೂಲು ಮಾಡಲು ಇಡೀ ಭಾರತದ ಒಂದು ಕಾರ್ಯ ಸಿಬ್ಬಂದಿ ಅಥವಾ ನಿಯೋಗಿಯನ್ನು ನಿರ್ಮಾಣ ಮಾಡುವ ಆವಶ್ಯಕತೆಯಾಗಬಹುದು. ಆದರೆ ಅದನ್ನು ವಿಭಜಿತ ಬಾಬತ್ತೆಂದು ಇಟ್ಟುಕೊಳ್ಳುವುದಕ್ಕೆ ನಾವು ಒಪ್ಪುತ್ತೇವೆ. ಸಾರಾಂಶವೆಂದರೆ, ಸದ್ಯ ಇದ್ದಂತೆ ಭಾರತದ ಹಾಗೂ ಪ್ರಾಂತೀಯ ಬಾಬತ್ತುಗಳನ್ನು ಇಟ್ಟುಕೊಳ್ಳಬೇಕೆಂದು ನಾವು ಸೂಚಿಸುತ್ತೇವೆ. ಆದರೆ ಮೊದಲಿನದಕ್ಕೆ ಆದಾಯಕರ ಮತ್ತು ಸಾಮಾನ್ಯ ಸ್ಟ್ಯಾಂಪುಗಳನ್ನು ಕೂಡಿಸಿ ಎರಡನೆಯದಕ್ಕೆ ಭೂಕಂದಾಯ, ನೀರಾವರಿ, ಸುಂಕ ಮತ್ತು ನ್ಯಾಯಾಲಯದ ಸ್ಟ್ಯಾಂಪುಗಳನ್ನು ಕೂಡಿಸಬೇಕೆಂದು ಸೂಚಿಸುತ್ತೇವೆ. ಆಗ ಯಾವ ಬಾಬತ್ತೂ ವಿಭಜಿತವಾಗಿ ಉಳಿಯಲಾರದು.”

ಪ್ರಸ್ತಾಪಿಸಿದಂತೆ ಸದ್ಯದ ಎಲ್ಲ ಆದಾಯ ಮೂಲಗಳನ್ನು ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವೆ ಸಂಪೂರ್ಣವಾಗಿ ಹಂಚಿದಾಗ, ಭಾರತ ಸರ್ಕಾರದ ಆಯವ್ಯಯ ಪಟ್ಟಿಯಲ್ಲಿ ಕೊರತೆಯಾಗುವುದು ಅನಿವಾರ್ಯ. ವಿಭಜಿತ ಬಾಬತ್ತುಗಳ ವ್ಯವಸ್ಥೆಯ ಬದಲಿ, ಆದಾಯದ ಪ್ರತ್ಯೇಕ ಬಾಬತ್ತುಗಳ ಪದ್ಧತಿಯನ್ನು ತರುವಲ್ಲಿ ಇರುವ ಮತ್ತೊಂದು ತೊಂದರೆಯೆಂದರೆ, ಈ ಕೊರತೆಯನ್ನು ಹೇಗೆ ನೀಗಿಸುವುದೆಂಬುದು. ಈ ಸಮಸ್ಯೆಯ ಪರಿಹಾರಕ್ಕಾಗಿ, ಸಂವಿಧಾನ ಸುಧಾರಣೆಗಳ ವರದಿಯ ಕರ್ತೃಗಳ ಮುಂದೆ ಅನೇಕ ಯೋಜನೆಗಳನ್ನು ಇಡಲಾಯಿತು. ಅವುಗಳ ಸಮೀಕ್ಷೆಯಿಂದ ಅವರು ಈ ರೀತಿ ಅಭಿಪ್ರಾಯಪಟ್ಟರು.[೧]

“ಸದ್ಯದ ವ್ಯವಸ್ಥೆಯ ಆಧಾರವನ್ನು ಉಳಿಸಿಕೊಂಡು, ವಿಭಜಿತ ಬಾಬತ್ತುಗಳ ಒಂದು ಪಾಲಿನ ಬದಲು ಬೆಳೆಯುತ್ತಿರುವ ಆದಾಯದ ಒಂದು ಅಂಶವನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಡುವುದು ಪರಿಹಾರದ ಒಂದು ಮಾರ್ಗವಾಗಿದೆ. ಆದರೆ ಈ ಉಪಾಯ ಕಾಯಂ ವ್ಯವಸ್ಥೆಯಿಂದಾದ, ಪ್ರಾಂತ್ಯಗಳ ನಡುವಿನ ಸದ್ಯದ ಅಸಮಾನತೆಗಳನ್ನು ಏಕರೂಪಕ್ಕೆ ತರುತ್ತದೆ ಮತ್ತು ಭಾರತ ಸರ್ಕಾರದ ಹಣಕಾಸಿನಲ್ಲಿ ಬಹುದೊಡ್ಡ ಅನಿಶ್ಚಿತತೆಯನ್ನುಂಟುಮಾಡುತ್ತದೆ. ಎರಡನೆಯದೆಂದರೆ, ವ್ಯಕ್ತಿ ಆಧಾರದ ಮೇಲೆ ಒಟ್ಟು ಕೊಡುಗೆಯನ್ನು ನಾವು ತೆಗೆದುಕೊಳ್ಳಬೇಕು. ಪ್ರಾಂತೀಯ ಸಂಪನ್ಮೂಲಗಳ ಹಾಗೂ ಪ್ರಾಂತೀಯ ಆವಶ್ಯಕತೆಗಳ ಅಸಮಾನತೆಯಿಂದಾಗಿ, ಕರ ವಿಧಿಸುವ ಪ್ರಮಾಣದಲ್ಲಿಯ ಪ್ರಾಂತ್ಯಗಳ ನಡುವಿನ ವ್ಯತ್ಯಾಸಗಳನ್ನು ಈ ಉಪಾಯವು ನಿವಾರಿಸಲಾರದು. ಮೂರನೆಯ ಯೋಜನೆಯೆಂದರೆ, ಪ್ರಾಂತೀಯ ಒಟ್ಟು ಆದಾಯ ಆಧಾರಿತವಾದ ಸಮಗ್ರ ಕೊಡುಗೆಯ ಶೇಕಡಾವಾರನ್ನು ತೆಗೆದುಕೊಳ್ಳುವುದು. ಇದು ಅನೇಕ ಪ್ರಾಂತ್ಯಗಳಲ್ಲಿ ಕೊರತೆ ನಿರ್ಮಿಸಬಹುದೆಂದು ಆತಂಕಪಡಲಾಗಿದೆ. ನಾಲ್ಕನೆಯದಾಗಿ, ಹೆಚ್ಚಿನ ಸಂಪನ್ಮೂಲವಿದ್ದ ಪ್ರಾಂತ್ಯಗಳು ಉಳಿದ ಪ್ರಾಂತ್ಯಗಳಿಗೆ ತಾತ್ಕಾಲಿಕವಾಗಿ ಸಹಾಯ ಮಾಡಬೇಕೆಂಬ ಪ್ರಸ್ತಾವನೆಯನ್ನು ನಾವು ತೊಂದರೆದಾಯಕವಾದದ್ದು ಹಾಗೂ ಅವ್ಯಾವಹಾರ್ಯವೆಂದು ತಳ್ಳಿಹಾಕಿದೆವು.”

---

೧. ವರದಿ, ಪು. ೧೬೮.

ವರದಿಯಕರ್ತರು ಶಿಫಾರಸು ಮಾಡಿದ ಯೋಜನೆ ಇದಾಗಿತ್ತು.[೧]

"ಭಾರತ ಸರ್ಕಾರಕ್ಕೆ ಪ್ರತಿಯೊಂದು ಪ್ರಾಂತ್ಯದ ಕೊಡುಗೆಯನ್ನು, ಪ್ರಾಂತೀಯ ಒಟ್ಟು ಆದಾಯ ಮತ್ತು ಪ್ರಾಂತೀಯ ಒಟ್ಟು ವೆಚ್ಚದ ನಡುವಿನ ಅಂತರದ ಒಂದು ಶೇಕಡಾವಾರನ್ನು ಗೊತ್ತುಮಾಡುವುದು."

ಅಂದರೆ – ಎಲ್ಲ ವಿಭಜಿತ ಬಾಬತ್ತುಗಳನ್ನು ಪ್ರತ್ಯೇಕವಾಗಿ ವಹಿಸಿಕೊಟ್ಟನಂತರ ಪ್ರಾಂತ್ಯದ ಅಂದಾಜು ಒಟ್ಟು ಆದಾಯದಲ್ಲಿ ಬರಗಾಲ ಪರಿಹಾರ ಮತ್ತು ಸಂರಕ್ಷಣಾ ನೀರಾವರಿಗಳ ಮೇಲಿನ ವೆಚ್ಚವನ್ನೊಳಗೊಂಡ, ಪ್ರಾಂತ್ಯದ ಅಂದಾಜು ಸಾಮಾನ್ಯ ವೆಚ್ಚವನ್ನು ಕಳೆದಾಗ ಮಿಕ್ಕುಳಿದ ಆದಾಯದ ಮೇಲೆ ತೆರಿಗೆ ಹಾಕುವುದು. ೧೯೧೭–೧೮ ರ ಮುಂಗಡಪತ್ರದ ಮೇಲಿಂದ, ವಿಭಜಿತ ಬಾಬತ್ತು ವ್ಯವಸ್ಥೆಯ ನಿರ್ಮೂಲನದಿಂದ ಆಗಬಹುದೆಂದು ಕಂಡುಕೊಂಡ, ಭಾರತ ಸರ್ಕಾರದ ರೂ. ೧೩೬೩ ಲಕ್ಷ ಕೊರತೆಯನ್ನು ನೀಗಿಸಲು[೨] ಪ್ರಾಂತೀಯ ಉಳಿತಾಯದ ಮೇಲೆ ಪ್ರತಿಶತ ೮೭ರಷ್ಟು ತೆರಿಗೆ ವಿಧಿಸಬೇಕಾಗುತ್ತದೆಯೆಂದು ಕಂಡುಬಂದಿದೆ.[೩]

---

೧. ವರದಿ, ಪು. ೧೬೯

೨. ಸಮಾನ ದರದ ಸೂಚಿತ ಆಕರಣೆ ಸ್ವಲ್ಪ ವಿಚಿತ್ರವೆನಿಸುತ್ತದೆ. ಏಕೆಂದರೆ ವರದಿಯ ಕರ್ತೃಗಳು ಸಮಾನ ಕೊಡುಗೆ ಸಾಧುವಲ್ಲವೆಂದು ಪರಿಚ್ಛೇದ ೨೦೬ ರಲ್ಲಿ ಪ್ರತಿಭಟಿಸಿದ್ದರು. ಜಂಟಿ ವರದಿಯ ಪರಿಚ್ಛೇದ ೨೦೬ ತಪ್ಪು ಕಲ್ಪನೆಗೆಡೆಮಾಡಿದೆ. ತಾನು ಶಿಫಾರಸು ಮಾಡಿದ ಯೋಜನೆಯಲ್ಲಿ ಅಳವಡಿಸಿಕೊಂಡ ಸಮಾನ ಕೊಡುಗೆಯ ವಿರುದ್ಧ ಇದು ಪ್ರತಿಭಟಿಸಿದೆ.

೩. ಸೂಚಿತ ಯೋಜನೆ ನಿಜವಾಗಿ ಹೇಗೆ ಆಗುತ್ತಿತ್ತೆಂಬುದನ್ನು ೧೯೧೭–೧೮ ಅಂದಾಜು ಪಟ್ಟಿಯನ್ನು ಆಧಾರಿತ ಕೆಳಗಿನ ಅಂಕಿಅಂಶಗಳು ತೋರಿಸುತ್ತವೆ.

(ಲಕ್ಷ ರೂ.ಗಳಲ್ಲಿ)

| ಪ್ರಾಂತ್ಯ | ಪ್ರಾಂತೀಯ ಒಟ್ಟು ಆದಾಯ | ಪ್ರಾಂತೀಯ ಒಟ್ಟು ವೆಚ್ಚ | ಪ್ರಾಂತ್ಯದ ಒಟ್ಟು ಉಳಿತಾಯ | ಕೊಡುಗೆ (೪ ಕಾಲಮ್ಮಿನ ಶೇಕಡಾ ೮೭) | ಪ್ರಾಂತ್ಯದ ನಿವ್ವಳ ಉಳಿತಾಯ |
|---|---|---|---|---|---|
| ೧ | ೨ | ೩ | ೪ | ೫ | ೬ |
| ಮದರಾಸು | ೧೩,೩೧ | ೮,೪೦ | ೪,೯೧ | ೪,೨೮ | ೬೩ |
| ಬಾಂಬೆ | ೧೦,೦೧ | ೯,೦೦ | ೧,೦೧ | ೮೮ | ೧೩ |
| ಬಂಗಾಲ | ೭,೫೪ | ೬,೭೫ | ೭೯ | ೬೯ | ೧೦ |
| ಸಂಯುಕ್ತ ಪ್ರಾಂತ್ಯಗಳು | ೧೦,೨೨ | ೭,೪೭ | ೩,೭೫ | ೩,೨೭ | ೪೮ |
| ಪಂಜಾಬ್ | ೮,೬೪ | ೬,೧೪ | ೨,೫೦ | ೨,೧೮ | ೩೨ |
| ಬರ್ಮಾ | ೭,೬೯ | ೬,೦೮ | ೧,೬೧ | ೧,೪೦ | ೨೧ |
| ಬಿಹಾರ ಮತ್ತು ಒರಿಸ್ಸಾ | ೪,೦೪ | ೩,೫೯ | ೪೫ | ೩೯ | ೬ |
| ಕೇಂದ್ರ ಪ್ರಾಂತ್ಯಗಳು | ೪,೧೨ | ೩,೭೧ | ೪೧ | ೩೬ | ೫ |
| ಅಸ್ಸಾಂ | ೧,೭೧ | ೧,೫೦ | ೨೧ | ೧೮ | ೩ |
| ಒಟ್ಟು | ೬೮,೨೮ | ೫೨,೬೪ | ೧೫,೬೪ | ೧೩,೬೩ | ೨,೦೧ |

ಪಂಜಾಬಿಗೆ ಸಂಬಂಧಿಸಿದಂತೆ ೫ನೆಯ ಅಂಕಣದಲ್ಲಿರುವ ಅಂಕಿಗಳನ್ನು ೩.೫ ಲಕ್ಷದಷ್ಟು ಹೆಚ್ಚಿಸಬೇಕು ಮತ್ತು ೬ನೆಯ ಅಂಕಣದ ಅಂಕಿಗಳನ್ನು ೩.೫ ಲಕ್ಷದಷ್ಟು ಕಡಿಮೆ ಮಾಡಬೇಕು. ೧೯೧೪ ರಲ್ಲಿ ಪಂಜಾಬ್ ತನ್ನ ಹಣದಲ್ಲಿ ಒಂದು ಕೋಟಿಯಷ್ಟು ಹಣವನ್ನು ಭಾರತ ಸರ್ಕಾರಕ್ಕೆ ಬಿಟ್ಟುಕೊಟ್ಟಿದ್ದರಿಂದ ಅದನ್ನು ಈಗ ಕ್ರಮೇಣ ಭರ್ತಿಮಾಡಲಾಗುತ್ತಿದೆ.

ಈ ಶಿಫಾರಸುಗಳನ್ನು ಮಾಡುವಲ್ಲಿ ವರದಿಯ ಕರ್ತರು ಜಾಗರೂಕತೆಯಿಂದ ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದರು.[೧]

"ಒಂದು ಎಚ್ಚರಿಕೆಯನ್ನು ನಾವು ನೀಡಲೇಬೇಕು. ಭಾರತ ಸರ್ಕಾರದ ಕರಗಳನ್ನು ಹೆಚ್ಚಿಸುವುದರಿಂದ ನೀಗಿಸಲಾಗದಂತಹ ಅನಿರೀಕ್ಷಿತ ಸಂದರ್ಭಗಳು ಬರಬಹುದು. ಅಂಥ ಸಂದರ್ಭದಲ್ಲಿ ಒದಗಿಸಿಟ್ಟ ಮೊತ್ತದ ಮೇಲೆ ವಿಶೇಷ ಪುರವಣಿ ಕರಗಳನ್ನು ವಿಧಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರವಿರಬೇಕು. ನಮ್ಮ ಪ್ರಸ್ತಾಪನೆಗಳು ಯುದ್ಧದ ಅಂಕಿ-ಸಂಖ್ಯೆಗಳ ಮೇಲೆ ಆಧಾರಿತವಾಗಿರುವುದರಿಂದ, ಅವು ಇಂದಿನಿಂದ ಪರಿಶೀಲಿಸಲು ಮುಕ್ತವಾಗಿರಬೇಕು. ಆದರೆ ಆರು ವರ್ಷಗಳ ಒಳಗಡೆ ಅವುಗಳನ್ನು ಬದಲಿಮಾಡಬಾರದು ಮತ್ತು ಮಧ್ಯಂತರ ಚರ್ಚೆಯನ್ನು ತಪ್ಪಿಸುವ ದೃಷ್ಟಿಯಿಂದ ಈ ಯೋಜನೆ, ಪ್ರಾಂತ್ಯಗಳ ಜೊತೆ ಸಂವಿಧಾನಾತ್ಮಕ ಒಪ್ಪಂದದ ಭಾಗವೆಂದು ತಿಳಿಯಬೇಕು. ಹತ್ತು ವರ್ಷದ ಅವುಗಳ ಅನುಭವದ ನಂತರ ಸಾಂವಿಧಾನಾತ್ಮಕ ಬದಲಾವಣೆಗಳ ಬೆಳವಣಿಗೆಯನ್ನು ಪರೀಕ್ಷಿಸುವುದು ನಾವು ನೇಮಿಸಬೇಕೆಂದು ಪ್ರಸ್ತಾಪಿಸಿದ ನಿಯತಕಾಲಿಕ ಸಮಿತಿಯ ಕರ್ತವ್ಯವಾಗಿದೆ ಮತ್ತು ಭಾರತ ಸರ್ಕಾರಕ್ಕೆ ಪ್ರಾಂತೀಯ ಸರ್ಕಾರಗಳ ಕೊಡುಗೆಯ ಪ್ರಶ್ನೆಯನ್ನು ಮರು ವಿಚಾರಿಸುವುದೂ ಆ ಸಮಿತಿಯ ಕರ್ತವ್ಯವಾಗಿದೆ."

ಈ ಪ್ರಸ್ತಾವನೆಗಳನ್ನು ಪ್ರಾಂತೀಯ ಸರ್ಕಾರಗಳ ಮುಂದೆ ಅವರ ಅಭಿಪ್ರಾಯಕ್ಕಾಗಿ ಇಡಲಾಯಿತು. ಕೇಂದ್ರ ಸರ್ಕಾರದ ಖರ್ಚಿನ ಭಾರವನ್ನು ಕೆಲವೊಂದು ಪ್ರಾಂತ್ಯಗಳು ಉಳಿದ ಪ್ರಾಂತ್ಯಗಳಿಗಿಂತ ಹೆಚ್ಚು ಹೊರುತ್ತವೆಯೆಂದು ತೋರುವ ಈ ಯೋಜನೆಗೆ ಆತಂಕಗಳು ಬಂದವು. ಭಾರತ ಸರ್ಕಾರಕ್ಕೆ ಮದರಾಸು ಮತ್ತು ಸಂಯುಕ್ತ ಸಂಸ್ಥಾನಗಳು ತಮ್ಮ ಉಳಿತಾಯದ ಪ್ರತಿಶತ ೪೭.೪ ಮತ್ತು ೪೧.೧ರಷ್ಟು ಕೊಡುತ್ತಿರುವಂತೆ ಕಂಡುಬಂದಿತು. ಆದರೆ ಬಾಂಬೆ ಮತ್ತು ಬಂಗಾಲಗಳು ತಮ್ಮ ಉಳಿತಾಯದ ಪ್ರತಿಶತ ೯.೬ ಮತ್ತು ೧೦.೧ ಮಾತ್ರ ಕೊಡುತ್ತಿದ್ದವು. ಈ ವ್ಯವಹಾರದಲ್ಲಿಯ ಅನ್ಯಾಯ ಸ್ಪಷ್ಟವಿದ್ದುದರಿಂದ, ಹೆಚ್ಚಿನ ಭಾರವನ್ನು ಹೊತ್ತ ಪ್ರಾಂತ್ಯಗಳು ಜೋರಾಗಿ ಪ್ರತಿಭಟಿಸಿದವು. ಕೇಂದ್ರ ಸರ್ಕಾರವು ಈ ಬೇಡಿಕೆಯ ನ್ಯಾಯಯುತವಾದ ಸಮರ್ಥನೆಯಿಂದ ಪ್ರಭಾವಿತವಾಗಿ ಸೆಕ್ರೆಟರಿ-ಆಫ್-ಸ್ಟೇಟಿಗೆ ತಾನು ಬರೆದ ಪತ್ರದಲ್ಲಿ ಈ ರೀತಿ ಅಭಿಪ್ರಾಯಪಟ್ಟಿತು.[೨]

"ಪ್ರಾರಂಭಿಕ ಕೊಡುಗೆಗಳು ಕೇವಲ ತಾತ್ಕಾಲಿಕ ಹಾಗೂ ಹಂಗಾಮಿಯಾದವುಗಳೆಂದು ತಿಳಿಯಬೇಕು, ಮತ್ತು ಒಂದು ಮಾನದಂಡ ಹಾಗೂ ಸಮಾನತೆಯ ಶ್ರೇಣಿಯನ್ನು ನಿರ್ಧರಿಸಲು ಆದಷ್ಟು ಬೇಗ ಪ್ರಯತ್ನ ಮಾಡಬೇಕೆಂದು ನಾವು ಶಿಫಾರಸು ಮಾಡಿದೆವು.... ಇಡೀ ಪ್ರಶ್ನೆಯನ್ನು.... ವಿಚಕ್ಷಣತೆಯಿಂದ ಪರಿಶೀಲಿಸಬೇಕಾಗುತ್ತದೆ. (ಅಭಿಪ್ರಾಯದ ತೊಂದರೆಯನ್ನು ವರದಿಯಲ್ಲಿ ಮೊದಲೇ ತಿಳಿಸಲಾಗಿತ್ತು ಮತ್ತು ಪ್ರಥಮ ಕಾಯಿದೆಬದ್ಧ ಸಮಿತಿಯಿಂದ ವಿಚಾರಣೆಯ ಭರವಸೆ ಕೊಡಲಾಗಿತ್ತು. ಆದರೆ) ಈ ವಿಷಯದಲ್ಲಿ ಸಲಹೆ ನೀಡಲು ಒಂದು ಹಣಕಾಸಿನ ಸಂಬಂಧದ ಬಗೆಗಿನ ಸಮಿತಿಯನ್ನು ನೀವಾಗಲೀ ಅಥವಾ ನಾವಾಗಲೀ ನೇಮಿಸಬೇಕೆಂದು ನಾವು ಸೂಚಿಸುತ್ತೇವೆ. ಹಾಗಾದರೆ ಮಾತ್ರ ಹೊಸ ಆಡಳಿತದ ಪ್ರಾರಂಭದ ಪೂರ್ವದಲ್ಲಿ ಪ್ರತಿಯೊಂದು ಪ್ರಾಂತ್ಯವು ತನ್ನ ಪರಿಸ್ಥಿತಿಯ ಅರಿವನ್ನು ಮಾಡಿಕೊಳ್ಳುತ್ತದೆ."

---

೧. ವರದಿ ಪು. ೧೭೦.

೨. ದಿನಾಂಕ ಮಾರ್ಚ್ ೫, ೧೯೧೯ (ಪ್ಯಾರಾ ೬೧) ರಿಪೋರ್ಟ್ ಆನ್ ಇಂಡಿಯನ್ ಕಾನ್‌ಸ್ಟಿಟ್ಯೂಷನಲ್ ರಿಫಾರ್ಮ್ಸ್‌ನಲ್ಲಿ ಎತ್ತಿದ ಪ್ರಶ್ನೆಗಳ ಕುರಿತು ಪು. ೧೨೫, ೧೯೧೯.

ಸುಧಾರಣೆಗಳ ಮಸೂದೆಯನ್ನು ಪರಿಶೀಲನೆ ಮಾಡಿದ ಸಂವಿಧಾನದ ಆಯ್ದ ಜಂಟಿ ಸಮಿತಿ ಈ ಶಿಫಾರಸನ್ನು ಅನುಮೋದಿಸಿತು.[೧] ಆದ್ದರಿಂದ ಸೆಕ್ರೆಟರಿ-ಆಫ್-ಸ್ಟೇಟ್‌ರವರು ಲಾರ್ಡ್ ಮೆಸ್ಟನ್‌ರ ಅಧ್ಯಕ್ಷತೆಯಲ್ಲಿ, ಕೆಳಗಿನ ವಿಷಯಗಳ ಮೇಲೆ ಸಲಹೆ ನೀಡಲು, ಒಂದು ಸಮಿತಿಯನ್ನು ನೇಮಿಸಿದರು.

(ಅ) ೧೯೨೧-೨೨ರ ಹಣಕಾಸಿನ ವರ್ಷಕ್ಕಾಗಿ ಕೇಂದ್ರ ಸರ್ಕಾರಕ್ಕೆ ವಿವಿಧ ಪ್ರಾಂತ್ಯಗಳು ಕೊಡಬೇಕಾದ ಕೊಡುಗೆಗಳು.
(ಬ) ಇಡೀ ಭಾರತದ ಕೊರತೆ ನೀಗುವ ಮಟ್ಟಿಗೆ ಅವುಗಳ ನ್ಯಾಯಸಮ್ಮತ ಹಂಚಿಕೆಯ ದೃಷ್ಟಿಯಿಂದ ತದನಂತರದ ಪ್ರಾಂತೀಯ ಕೊಡುಗೆಗಳಲ್ಲಿ ಮಾಡಬಹುದಾದ ಬದಲಾವಣೆಗಳು.
(ಕ) ಪ್ರಾಂತೀಯ ಸಾಲದ ಲೆಕ್ಕಕ್ಕೆ ಮುಂದೆ ಹಣ ಒದಗಿಸುವುದು.
(ಡ) ಆದಾಯ ಕರದಿಂದ ಬಂದ ಆದಾಯದಲ್ಲಿಯ ಒಂದು ಭಾಗವನ್ನು ಬಾಂಬೆ ಸರ್ಕಾರ ಇಟ್ಟುಕೊಳ್ಳಬಹುದೆ?

ಏಳು ವಾರಗಳ ಪರಿಶೀಲನೆಯ ನಂತರ ಸಮಿತಿಯು ವರದಿಯನ್ನು ಹೊರ ತಂದಿತು.[೨] ತನ್ನ ಪರ್ಯಾಲೋಚನಾಂಶಗಳ ಕಲಂ (ಅ) ದ ಮೇಲೆ ಸಲಹೆ ನೀಡುವಲ್ಲಿ ಸಮಿತಿಯು ಜಂಟಿ ಸಮಿತಿಯ ಯೋಜನೆಯ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತು. ಈ ಯೋಜನೆ ಕೇಂದ್ರೀಯ ಖಜಾನೆಯ ಕೊಡುಗೆಯೆಂದು ತಮ್ಮ ಉಳಿತಾಯದ ಒಂದು ಕಾಯಂ ಏಕರೂಪವಾದ ಪಾಲನ್ನು ಪ್ರಾಂತ್ಯಗಳಿಂದ ತೆಗೆದುಕೊಳ್ಳುವುದಾಗಿತ್ತು. ಈ ಯೋಜನೆಗೆ ಮುಖ್ಯ ಆತಂಕವೆಂದರೆ – ತಮ್ಮ ಕೊಡುಗೆಯ ಹಿಸ್ಸೆಯನ್ನು ಕೊಟ್ಟನಂತರ, ಕೆಲವು ಪ್ರಾಂತ್ಯಗಳಲ್ಲಿ ಉಳಿತಾಯವಿರಲಿಲ್ಲ ಮತ್ತು ಇನ್ನುಳಿದವುಗಳಲ್ಲಿ ಸಾಕಷ್ಟು ಉಳಿತಾಯವಿರಲಿಲ್ಲವೆಂಬುದು. ಸಮಿತಿಯು ಕೆಳಗಿನಂತೆ ಅಭಿಪ್ರಾಯಪಟ್ಟಿತು.

"ಪ್ರಾಂತ್ಯಗಳು ತಾತ್ಕಾಲಿಕವಾಗಿ ಹೊಸ ಕರಗಳನ್ನು ವಿಧಿಸಲು ಒತ್ತಾಯಿಸುವಂತೆ ಕೊಡುಗೆಗಳು ಯಾವುದೇ ಸಂದರ್ಭದಲ್ಲಿಯೂ ಇರಕೂಡದು. ಯಥೇಷ್ಟವಾದ ಸಾಮಾನ್ಯ ಸಂಪತ್ತುಗಳ ಆಡಳಿತಾತ್ಮಕ ಮರು ಹೊಂದಾಣಿಕೆಯ ಫಲಿತಾಂಶವಾದ ಇದನ್ನು ನಾವು ಒಪ್ಪಲಾರೆವು."

ಕೊಡುಗೆಯ ಏರ್ಪಾಡು ಮಾಡುವಲ್ಲಿ ಸಮಿತಿಯು ಮಿತಿಗೊಳಪಟ್ಟ ವಿಚಾರಗಳಿಂದ ಬಂಧಿತವಾದ್ದರಿಂದ ಪ್ರತಿಯೊಂದು ಪ್ರಾಂತ್ಯವೂ ನ್ಯಾಯಸಮ್ಮತವಾದ ಉಳಿತಾಯ ಪಡೆಯುವಂತೆ ಮಾಡಿತು. ಈ ಉಳಿತಾಯವನ್ನು ಲೆಕ್ಕ ಹಾಕುವಾಗ ಪ್ರಾತ್ಯದ ಸಾಮಾನ್ಯ ಹಣಕಾಸಿನ ಪರಿಸ್ಥಿತಿ ಹಾಗೂ ಅದರ ಸಂಪತ್ತುಗಳ ಮೇಲಿನ ಸನ್ನಿಹಿತ ಬೇಡಿಕೆಗಳನ್ನು ಗಮನಕ್ಕೆ ತೆಗೆದುಕೊಂಡಿತು.

"ಪ್ರತಿಯೊಂದು ಪ್ರಾಂತ್ಯವು ಉಳಿತಾಯ ಹೊಂದುವಂತೆ ಮಾಡುವ ಬೇಡಿಕೆಯನ್ನು ಪೂರ್ತಿಗೊಳಿಸಬೇಕಾದರೆ, ಮತ್ತು ಹೊಸ ಕರಗಳನ್ನು ಹಾಕುವ ಆವಶ್ಯಕತೆಯಿಲ್ಲದ ಹೊಸ ಪರಿಷತ್ತನ್ನು ಉದ್ಘಾಟಿಸಬೇಕಾದರೆ" ಜಂಟಿ ವರದಿಯು ಹೇಳಿದಂತೆ ಸಮಾನ ಕೊಡುಗೆಗಳನ್ನು ತೆಗೆದುಕೊಳ್ಳದೆ, ಉಳಿತಾಯವನ್ನು ಹೊಂದಿದ ಪ್ರಾಂತಗಳ ಉಳಿತಾಯದಿಂದ ಅಸಮಾನ ಕೊಡುಗೆಗಳನ್ನು ತೆಗೆದುಕೊಳ್ಳುವುದು

---

೧. ರಿಪೋರ್ಟ್ ಆನ್ ದಿ ಜಾಯಿಂಟ್ ಸೆಲೆಕ್ಟ್ ಕಮಿಟಿ ಆನ್ ದಿ ಗವರ್ನಮೆಂಟ್ ಆಫ್ ಇಂಡಿಯಾ ಬಿಲ್ (ಭಾಗ V. ಕಲಮು ೪೧, ಪ್ಯಾರಾ ೯) ಹೌಸ್ ಆಫ್ ಕಾಮನ್ಸ್ ರಿಟರ್ನ್ ೨೦೩, ೧೯೧೯, ಪು. ೧೨.

೨. ಈ ಸಮಿತಿಯ ವರದಿ, ೧೯೧೯ರ ಸಿ.ಎಮ್.ಡಿ. ೭೨೪, ಅಧ್ಯಾಯ III.

ಸಮಾನ ಯೋಜನೆಯಾಗುವುದೆಂದು ವರದಿ ಪರಿಗಣಿಸಿತು.[೧]

ತನ್ನ ಯೋಜನೆಯನ್ನು ನೆರವೇರಿಸಲು ಪ್ರಾಂತೀಯ ಉಳಿತಾಯಗಳನ್ನು ವೃದ್ಧಿಗೊಳಿಸುವುದು ಒಂದು ಆವಶ್ಯಕವಾದ ಕ್ರಮವೆಂದು ಸಮಿತಿಯು ಅಭಿಪ್ರಾಯಪಟ್ಟಿತು. ಇಲ್ಲದೆ ಹೋದಲ್ಲಿ ತನ್ನ ಪರಿಶ್ರಮ ವ್ಯರ್ಥವೆಂದು ಅದು ಪರಿಗಣಿಸಿತು. ಪ್ರಾಂತೀಯ ಉಳಿತಾಯವನ್ನು ಹೆಚ್ಚಿಸುವ ಒಂದೇ ಮಾರ್ಗವೆಂದರೆ, ಈಗಾಗಲೇ ಪ್ರಾಂತ್ಯೀಕರಿಸಿದ ಆದಾಯಗಳ ಜೊತೆಗೆ, ಅವುಗಳಿಗೆ, ಸಾಮ್ರಾಜ್ಯದ ಕೆಲವೊಂದು ಆದಾಯಗಳನ್ನು ವಹಿಸಿಕೊಡುವುದು. ಬಾಂಬೆಗೆ ಸಂಬಂಧಿಸಿಂತೆ ತನ್ನ ಪರ್ಯಾಲೋಚನಾಂಶಗಳ ಕಲಂ (ಡ)ದಲ್ಲಿ ಸೇರಿಸಿದ, ಆದಾಯ ತೆರಿಗೆಯನ್ನು ಪ್ರಾಂತ್ಯೀಕರಿಸುವ ವಿಷಯದಲ್ಲಿ, ಜಂಟಿ ವರದಿಯ ವಾದದಿಂದ ಪ್ರಭಾವಿತವಾಗಿ ಸಮಿತಿಯು ಅದನ್ನು ವಿರೋಧಿಸುವ ನಿರ್ಧಾರ ಮಾಡಿತು. ಪ್ರಾಂತೀಯ ಉಳಿತಾಯ ಹೆಚ್ಚಿಸಲು, ನ್ಯಾಯಸ್ಥಾನದ ಸ್ಟ್ಯಾಂಪುಗಳ ಜೊತೆಗೆ, ಸಾಮಾನ್ಯ ಸ್ಟ್ಯಾಂಪುಗಳನ್ನು ಪ್ರಾಂತ್ಯೀಕರಿಸಬೇಕೆಂದು ಅದು ಶಿಫಾರಸು ಮಾಡಿತು. ಸಾಮಾನ್ಯ ಸ್ಟ್ಯಾಂಪುಗಳನ್ನು ಇಡೀ ಭಾರತದ ಪಟ್ಟಿಯಿಂದ ಪ್ರಾಂತೀಯ ಪಟ್ಟಿಗೆ ವರ್ಗಾಯಿಸಿದ್ದರ ಪರಿಣಾಮವಾಗಿ ಪ್ರಾಂತೀಯ ಸಂಪನ್ಮೂಲಗಳು ಹೆಚ್ಚಿ ಕೇಂದ್ರ ಸರ್ಕಾರದ ಸಂಪನ್ಮೂಲಗಳು ಕಡಿಮೆಯಾದವು. ಈ ಕೊರತೆಯು ೧೯೨೧-೨೨ನೆಯ ವರ್ಷದಲ್ಲಿ ಹತ್ತು ಕೋಟಿ ರೂಪಾಯಿಯಾಗುವುದೆಂದು ಸಮಿತಿಯು ಒಪ್ಪಿತು. ಈ ಹತ್ತು ಕೋಟಿ ರೂಪಾಯಿಯಲ್ಲಿ ಆರು ಕೋಟಿ ರೂಪಾಯಿ ಭಾರತ ಸರ್ಕಾರವು ಅಂದಾಜು ಮಾಡಿದ್ದು[೨] ಮತ್ತು ನಾಲ್ಕು ಕೋಟಿ ರೂಪಾಯಿ ಸಾಮಾನ್ಯ ಸ್ಟ್ಯಾಂಪುಗಳ ನಷ್ಟದಿಂದ ಆದದ್ದು. ಕೆಲವೊಂದು ಹೊಂದಾಣಿಕೆಗಳಿಂದಾಗಿ[೩] ಈ ಮೊತ್ತ ೯೮೩.೦೬ ಲಕ್ಷ ನಿವ್ವಳ ಕೊರತೆಯಾಗಿ ಪರಿಣಮಿಸಿತು. ಈ ಕೊರತೆಯನ್ನು ನೀಗಿಸಲು ಕೆಳಗಿನ ಪ್ರಮಾಣದಲ್ಲಿ ಒಂಬತ್ತು ಪ್ರಾಂತ್ಯಗಳು ೧೯೨೧-೨೨ ವರ್ಷದಲ್ಲಿ ಹಣ ಒದಗಿಸಬೇಕೆಂದು ಸಮಿತಿಯು ಹೇಳಿತು :

---

೧. ಹಣಕಾಸಿನ ಸಂಬಂಧದ ಸಮಿತಿಯ ವರದಿ ಕೊಡುಗೆಯನ್ನು ವಿಧಿಸುವ ತನ್ನ ಯೋಜನೆ ಮತ್ತು ಜಂಟಿ ವರದಿ ಸೂಚಿಸಿದ ಯೋಜನೆಗಳ ನಡುವಿನ ಅಂತರ, ಕೊಡಗೆಯ ಆಧಾರದಲ್ಲಿಯ ವ್ಯತ್ಯಯವೆಂದು ವಾದಿಸಿದಂತೆ ತೋರುತ್ತದೆ. ತನ್ನ ಆಧಾರ "ಹೆಚ್ಚಾದ ವೆಚ್ಚ ಮಾಡುವ ಶಕ್ತಿ" ಜಂಟಿ ವರದಿಯ ಆಧಾರ "ಪ್ರಾಂತ್ಯದ ಒಟ್ಟು ಉಳಿತಾಯ." ಪ್ರತಿಯೊಂದು ಪ್ರಾಂತ್ಯದ ಕೊಡುಗೆಯನ್ನು ನಿರ್ಧರಿಸುವ ಜಂಟಿ ವರದಿ ಸೂಚಿಸಿದ "ಪ್ರಾಂತ್ಯದ ಒಟ್ಟು ಆದಾಯ ಮತ್ತು ಪ್ರಾಂತ್ಯದ ಒಟ್ಟು ವೆಚ್ಚದ ಅಂತರದ ಶೇಕಡಾವಾರು" ಪದ್ಧತಿಯನ್ನು ಹಣಕಾಸಿನ ಸಂಬಂಧದ ಸಮಿತಿ ಟೀಕಿಸಿತು. ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಆದಾಯ ಹಂಚುವಿಕೆಯ ಸಮಿತಿಯ ಹೊಸ (ಪ್ರಾಂತ್ಯಗಳ ಹೆಚ್ಚಿನ ವೆಚ್ಚದ ಕೆಲವೊಂದು ಶೇಕಡಾ) ಯೋಜನೆ ಮತ್ತು ಆ ಯೋಜನೆಗಳ ನಡುವೆ ಹೆಚ್ಚಿನ ಅಂತರವಿದ್ದಂತೆ ತೋರಲಿಲ್ಲ. ಈ ಎರಡೂ ಅಳತೆಯ ವಿವಿಧ ತಳಹದಿಗಳೆಂದು ಸಾಮಾನ್ಯ ಕಲ್ಪನೆ ಇದ್ದಿರಬಹುದು. (ಕೇಂದ್ರೀಯ ಖಜಾನೆಗೆ ಪ್ರಾಂತೀಯ ಕೊಡುಗೆಗಳ ಬಗೆಗಿನ ನಿರ್ಣಯದ ಮೇಲಿನ ಮಾನ್ಯ ರಾವ್‌ಬಹದ್ದೂರ್ ಭಕ್ತಿ ಸೋಹನಲಾಲ್‌ರ ಭಾಷಣ, ವಿಧಾನ ಮಂಡಳಿ ಚರ್ಚೆಗಳು ಸಂಪುಟ III ನಂ. ೮ ಪು. ೫೦೮). ಇದು ತಪ್ಪು. ಏಕೆಂದರೆ ವೆಚ್ಚ ಮಾಡುವ ಶಕ್ತಿ ಒಟ್ಟು ಉಳಿತಾಯಕ್ಕೆ ಮತ್ತೊಂದು ಹೆಸರು. ಸಮಾನ ಕೊಡುಗೆಯ ಬದಲಾಗಿ ಸಮಿತಿಯು ಅಸಮಾನ ಕೊಡುಗೆಯನ್ನು ಸೂಚಿಸಿದ್ದು ಒಂದು ಬದಲಾವಣೆ. ಆದರೆ ಅಳತೆಯ ಆಧಾರವನ್ನು ಬದಲಿಸದೆ ಹಾಗೆಯೇ ಇಟ್ಟಿತು.

೨. ಕೇಂದ್ರ ಮತ್ತು ಪ್ರಾಂತೀಯ ಆದಾಯಗಳ ಹಂಚಿಕೆಯ ಬಗ್ಗೆ ಭಾರತ ಸರ್ಕಾರದ ಶಿಫಾರಸುಗಳ, ೧೯೧೯ರ ಸಿ.ಎಮ್.ಡಿ. ೩೩೪, ನಿರೂಪಣೆ III

೩. ಈ ಹೊಂದಾಣಿಕೆಗಳು ಬರ್ಮಾದಲ್ಲಿ ಸೈನಿಕ ಪೊಲೀಸ್ ದಳದ ನಿವೃತ್ತಿವೇತನ ಮತ್ತು ರಜೆ ಭತ್ಯೆಗಳಿಗಾಗಿ ನೀಡಲಾದ ಹಣದ್ದಾಗಿದೆ. ಹಣಕಾಸು ಸಂಬಂಧಗಳ ಸಮಿತಿಯ ವರದಿ, ೧೧ನೆಯ ಪ್ಯಾರಾ ನೋಡಿ.

### ಪ್ರಾರಂಭಿಕ ದೇಣಿಗೆ (ಲಕ್ಷ ರೂಪಾಯಿಗಳಲ್ಲಿ)

| ಪ್ರಾಂತ್ಯಗಳು | ಹೊಸ ಹಂಚುವಿಕೆಯ ಅಡಿಯಲ್ಲಿ ವೃದ್ಧಿಪಡಿಸಿದ ವೆಚ್ಚದ ಪ್ರಮಾಣ | ಸಮಿತಿಯು ಶಿಫಾರಸು ಮಾಡಿದ ದೇಣಿಗೆ | ದೇಣಿಗೆ ಕೊಟ್ಟ ನಂತರ ಉಳಿಯುವ ವೃದ್ಧಿಪಡಿಸಿದ ವೆಚ್ಚದ ಪ್ರಮಾಣ |
|---|---|---|---|
| ಮದರಾಸು | ೫,೭೬ | ೩.೪೮ | ೨,೨೮ |
| ಬಾಂಬೆ | ೯೩ | ೫೬ | ೩೭ |
| ಬಂಗಾಲ | ೧,೦೪ | ೬೩ | ೪೧ |
| ಸಂಯುಕ್ತ ಪ್ರಾಂತ್ಯಗಳು | ೩,೯೭ | ೨,೪೦ | ೧,೫೭ |
| ಪಂಜಾಬ್ | ೨,೮೯ | ೨,೪೦ | ೧,೧೪ |
| ಬರ್ಮಾ | ೨,೪೬ | ೬೪ | ೧,೮೨ |
| ಬಿಹಾರ ಮತ್ತು ಒರಿಸ್ಸಾ | ೫೧ | – | ೫೧ |
| ಕೇಂದ್ರೀಯ ಪ್ರಾಂತ್ಯಗಳು | ೫೨ | ೨೨ | ೩೦ |
| ಅಸ್ಸಾಂ | ೪೨ | ೧೫ | ೨೭ |
| **ಒಟ್ಟು** | **೧೮,೫೦** | **೯.೮೩** | **೮,೬೭** |

ಈ ಆರಂಭಿಕ ಕೊಡುಗೆಯ ಪ್ರಮಾಣವು ಪ್ರಾಂತೀಯ ಸರ್ಕಾರಗಳು ಸಮಾನವಾಗಿ ಕೊಡಬೇಕಾಗಿರುವ ಆದರ್ಶ ಶ್ರೇಣಿಯನ್ನು ಬಿಂಬಿಸಬೇಕೆಂದು ಸಮಿತಿಯು ಇಚ್ಛಿಸಿರಲಿಲ್ಲ. ಆರಂಭಿಕ ಕೊಡುಗೆಗಳನ್ನು ಶಿಫಾರಸು ಮಾಡುವಾಗ ಕೊಡುಗೆಯ ಸಮಾನತೆಯ ಕಡೆಗೆ ಸಮಿತಿಯು ಲಕ್ಷ್ಯಕೊಡಲಿಲ್ಲ. ಆದರೆ "ಹಿಂದಿನವುಗಳಿಗಿಂತ ಬಹಳ ಬೇರೆಯಾದ ಹೊಸ ಹಾಗೂ ಹೆಚ್ಚು ಸಮಾನತೆಯ ಪ್ರಮಾಣದ ಕೊಡುಗೆಗಳಿಗೆ ಹೊಂದಿಕೆಯಾಗಲಾರದ ರೂಢಿಯಲ್ಲಿದ್ದ ಕರಾಕರಣೆಯ ಕಾರ್ಯಕ್ರಮಗಳು ಮತ್ತು ವೆಚ್ಚ, ಶಾಸನ ರಚನೆ ಹಾಗೂ ಆಡಳಿತದ ನಿರೀಕ್ಷಣೆಗಳು ಹಾಗೂ ರೂಢಿಗಳು, ಅಂಥ ತೊಂದರೆಯನ್ನು ನಿವಾರಿಸಬೇಕಾದರೆ ಆರಂಭದ ಕೊಡುಗೆಗಳ ಪ್ರಮಾಣ ಆದರ್ಶ ಸಮಾನತೆಯ ಕೊಡುಗೆಗೆ ತೀರ ಕಡಿಮೆ ಸಂಬಂಧ ಹೊಂದಿರಬೇಕಾದ ಅನಿವಾರ್ಯತೆ, ಇವುಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿತು. ಆರಂಭಿಕ ಪ್ರಮಾಣ ಕೇವಲ ತಾತ್ಕಾಲಿಕ ಉಪಾಯವೆಂದು ಸಮಿತಿಯು ಕಂಡುಕೊಂಡಿತು. ಪ್ರಾಂತ್ಯಗಳು ಹೊಸ ಪರಿಸ್ಥಿತಿಗೆ ತಮ್ಮ ಆಯವ್ಯಯ ಪಟ್ಟಿಯನ್ನು ಹೊಂದಿಸುವ ಅವಕಾಶ ಕೊಡಲು ಇದು ಆವಶ್ಯಕವಾಗಿದೆ ಮತ್ತು ಕೊರತೆಯ ಹೊರೆಯನ್ನು ಸ್ವಲ್ಪ ಸಮಯದಲ್ಲಿಯೇ ಸಮಾನತೆಯ ಆಧಾರದ ಮೇಲೆ ಹಂಚದಿದ್ದರೆ ಕೊಡುಗೆಯ ಯೋಜನೆಯು ಸಮಾಧಾನಕರವೆನಿಸದು." ಎಂದೂ ಅದು ಹೇಳಿತು.

ತಾತ್ಕಾಲಿಕವಾದ ಆರಂಭಿಕ ಕೊಡುಗೆಗಳಿಂದ ಪ್ರತ್ಯೇಕವಾದ 'ಪ್ರಮಾಣದ' ಕೊಡುಗೆಗಳ ಪ್ರಶ್ನೆಯನ್ನು ಯೋಚಿಸಲು ಸಮಿತಿಯು ಮುಂದುವರಿಯಿತು. ಹೊರೆಯ ಸಮಾನವಾಗಿ ಹಂಚುವಿಕೆಯ ಆದರ್ಶದ ಆಧಾರ ಯಾವುದಿರಬೇಕೆಂಬುದು ಸಮಿತಿಗೆ ನಿಖರವಾಗಿ ತಿಳಿದಿತ್ತು. ಏಕೆಂದರೆ ಅದು ಹೇಳಿದಂತೆ:

"ಪ್ರಾಂತ್ಯಗಳನ್ನು ಸಮಾನತೆಯಿಂದ ನೋಡಬೇಕಾದರೆ, ಪ್ರಾಂತ್ಯಗಳು ಭಾರತ ಸರ್ಕಾರದ ಖಜಾನೆಗೆ ಕೊಡುವ ಒಟ್ಟು ಮೊತ್ತ ಕೊಡಬಹುದಾದ ಶಕ್ತಿಯ ಪ್ರಮಾಣದಲ್ಲಿರಬೇಕು."

ಈ ತತ್ವವನ್ನು ಕಾರ್ಯರೂಪಕ್ಕೆ ತರುವಲ್ಲಿ ಎರಡು ಪ್ರಶ್ನೆಗಳಡಕವಾಗಿವೆ. ಭಾರತ ಸರ್ಕಾರದ ಖಜಾನೆಗೆ ಒಂದು ಪ್ರಾಂತ್ಯದ ಒಟ್ಟು ಕೊಡುಗೆ ಎಷ್ಟಿರಬೇಕು? ಎರಡನೆಯದಾಗಿ ಪ್ರಾಂತದ ಕೊಡುವ ಶಕ್ತಿಯ ಅಳತೆ ಯಾವುದು? ಮೊದಲಿನದಕ್ಕೆ ಸಂಬಂಧಿಸಿದಂತೆ ಸಮಿತಿಯು ಈ ರೀತಿ ಅಭಿಪ್ರಾಯಪಟ್ಟಿತು.

ಭವಿಷ್ಯದಲ್ಲಿ ಭಾರತ ಸರ್ಕಾರದ ಖಜಾನೆಗೆ ನೀಡಬೇಕಾಗಿರುವ ಪ್ರಾಂತ್ಯಗಳ ಕೊಡುಗೆಯು, ಅವುಗಳು ಆಯವ್ಯಯದ ಕೊರತೆಯನ್ನು ತುಂಬಲು ನೀಡಬೇಕಾದ ಹಣ ಹಾಗೂ ಪ್ರಕೃತ ಅಪ್ರತ್ಯಕ್ಷವಾಗಿ ನೀಡುತ್ತಿರುವ ಸುಂಕ, ಆದಾಯ ತೆರಿಗೆ, ಉಪ್ಪಿನ ಮೇಲಿನ ಕರ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಅಂದರೆ, ಕೇಂದ್ರ ಸರ್ಕಾರದ ಸಹಾಯಕ್ಕಾಗಿ ಪ್ರಾಂತ್ಯಗಳು ಕರವಿಧಿಸಬಹುದಾದ ಸಾಮರ್ಥ್ಯವನ್ನು ಇದು ಒಳಗೊಂಡಿರುತ್ತದೆ. ಎರಡನೆಯದಕ್ಕೆ ಸಂಬಂಧಿಸಿದಂತೆ ಸಮಿತಿಯು ಈ ರೀತಿ ಅಭಿಪ್ರಾಯಪಟ್ಟಿತು:

"ಒಂದು ಪ್ರಾಂತ್ಯದ ಕೊಡುಗೆಯ ಶಕ್ತಿ ಅದರ ಕರ ವಿಧಿಸುವ ಶಕ್ತಿಯಾಗಿದೆ. ಇದು ಕರ ಕೊಡುವವರ ಒಟ್ಟು ಆದಾಯ ಅಥವಾ ಕರ ಕೊಡುವವರ ಒಟ್ಟು ಸಂಖ್ಯೆಯಿಂದ ಗುಣಿಸಿದ ಅದರ ಸರಾಸರಿ ಆದಾಯವಾಗಿರುತ್ತದೆ."

ಭಾರತ ಸರ್ಕಾರಕ್ಕೆ ಪ್ರಾಂತ್ಯವು ಮಾಡುವ ನಿವ್ವಳ ಕೊಡುಗೆಯನ್ನಾಗಲೀ ಅಥವಾ ಅದರ ಕೊಡುಗೆಯ ಶಕ್ತಿಯನ್ನಾಗಲೀ ಪರಿಮಾಣಾತ್ಮಕವಾಗಿ ಗೊತ್ತುಮಾಡಲು, ಮಾಹಿತಿಯು ಸಾಕಷ್ಟು ಇರಲಿಲ್ಲವೆಂದು ಸಮಿತಿಯು ಒಪ್ಪಿಕೊಂಡು ಈ ರೀತಿ ಅಭಿಪ್ರಾಯಪಟ್ಟಿತು:

"ಆದರ್ಶ ಪ್ರಮಾಣ ಕೊಡುಗೆಯ ತಳಹದಿಯಾಗಬಲ್ಲ, ಅಂಕಿ ಸಂಖ್ಯೆಗಳ ಆಧಾರಗಳ ಮೂಲಕ, ವರ್ಷದಿಂದ ವರ್ಷಕ್ಕೆ ಅನ್ವಯಿಸಲು ಬರುವಂಥ ಒಂದು ಸೂತ್ರವನ್ನು ನಮೂದಿಸುವ ಪ್ರಯತ್ನ ಮಾಡುವುದು ನಿಷ್ಫಲ."

ಪ್ರಮಾಣ ಕೊಡುಗೆಗಳನ್ನು ನಿರ್ಧರಿಸುವಲ್ಲಿ ತಾನು ಆರಿಸಿದ ಆದರ್ಶ ತಳಹದಿಯನ್ನು ಸಮಿತಿಯು ಬಿಟ್ಟುಕೊಡಲಿಲ್ಲ. ಏಕೆಂದರೆ ಅದು ಈ ರೀತಿ ಅಭಿಪ್ರಾಯಪಟ್ಟಿತು:

"ದೊರೆತ ಅಂಕಿಸಂಖ್ಯೆಗಳ ಸಮೀಕ್ಷೆಯಿಂದ, ಮತ್ತು ಪ್ರತಿಯೊಂದು, ಪ್ರಾಂತ್ಯದ ಪರಿಸ್ಥಿತಿಯ ವಿಚಾರಣೆಯಿಂದ, ಒಂದು ಸ್ಥಿರ ಪ್ರಮಾಣವನ್ನು ಶಿಫಾರಸು ಮಾಡಲು ನಮಗೆ ಸಾಧ್ಯವಾಯಿತು. ಇದು ನಮ್ಮ ಅಭಿಪ್ರಾಯದಲ್ಲಿ ಕೊರತೆಯ ಹೊರೆಯನ್ನು ಸಮಾನವಾಗಿ ಹಂಚುತ್ತದೆ. ಈ ಪ್ರಮಾಣವನ್ನು ನಿರ್ಧರಿಸುವಲ್ಲಿ ಭಾರತ ಸರ್ಕಾರಕ್ಕೆ ಪ್ರಾಂತ್ಯಗಳ ಅಪ್ರತ್ಯಕ್ಷ ಕೊಡುಗೆಗಳನ್ನು ಅದರಲ್ಲಿಯೂ ಮುಖ್ಯವಾಗಿ, ವಿದೇಶೀ ವ್ಯಾಪಾರಿ ಸುಂಕ ಹಾಗೂ ಉತ್ಪನ್ನಕರಗಳ ಭಾರವನ್ನು ನಾವು ಗಣನೆಗೆ ತೆಗೆದುಕೊಂಡಿದ್ದೇವೆ. ಪ್ರಾಂತ್ಯಗಳ ಬೇಸಾಯ ಹಾಗೂ ಔದ್ಯಮಿಕ ಸಂಪತ್ತು, ಬರಗಾಲ ಪರಿಸ್ಥಿತಿಯ ಹೊಣೆಗಾರಿಕೆಗಳನ್ನೊಳಗೊಂಡ ಅವುಗಳ ಆರ್ಥಿಕ ಪರಿಸ್ಥಿತಿಯ ಆಧಾರದ ಮೇಲಿನಿಂದ ಪ್ರಾಂತ್ಯಗಳ ಕರವಿಧಿಸುವ ಸಾಪೇಕ್ಷ ಶಕ್ತಿಯ ಬಗ್ಗೆ ನಾವು ವಿಚಾರಿಸಿದ್ದೇವೆ. ಅವುಗಳ ಕರವಿಧಿಸುವ ಶಕ್ತಿಯನ್ನು ನಿರ್ಧರಿಸುವಲ್ಲಿ ಅವುಗಳ ಈಗಿನ ಸದ್ಯದ ಅಥವಾ ಭವಿಷ್ಯದ ಕರ ವಿಧಿಸುವ ಶಕ್ತಿಯನ್ನಷ್ಟೇ ನಾವು ಗಣನೆಗೆ ತೆಗೆದುಕೊಂಡಿಲ್ಲ. ಬೇಸಾಯದಲ್ಲಿ, ಉದ್ಯಮದಲ್ಲಿ, ಖನಿಜ ಸಂಪತ್ತು ಹಾಗೂ ಅರಣ್ಯ ಸಂಪತ್ತಿನಲ್ಲಿ ಪ್ರತಿ ಪ್ರಾಂತ್ಯವು ವಿಸ್ತರಣೆ ಹೊಂದಬಹುದಾದ ಸಾಮರ್ಥ್ಯವನ್ನೂ ನಾವು ಗಣನೆಗೆ ತೆಗೆದುಕೊಂಡಿದ್ದೇವೆ. ಪ್ರತಿ ಪ್ರಾಂತ್ಯಕ್ಕೆ ದೊರಕಬಹುದಾದ ಸದ್ಯದ ಆದಾಯದ ಬಾಬ್ತಿನ ಸ್ಥಿತಿಸ್ಥಾಪಕತ್ವ ಮತ್ತು ಕರಾಕರಣೆಗೆ ದೊರೆಯುವ ಅದರ ಸಂಪತ್ತನ್ನೂ ನಾವು ಗಣನೆಗೆ ತೆಗೆದುಕೊಂಡಿದ್ದೇವೆ."

ಈ ಪ್ರತಿಯೊಂದು ಪರಿಸ್ಥಿತಿಗೆ ಕೊಡಬೇಕಾದ ಪ್ರಾಮುಖ್ಯತೆಯನ್ನು ಅಂದಾಜು ಮಾಡಿದ ಮೇಲೆ ಕೇಂದ್ರ ಸರ್ಕಾರದ ಕೊರತೆಯನ್ನು ನೀಗಿಸಲು, ಪ್ರಾಂತ್ಯಗಳ ಕೊಡುಗೆಗಳನ್ನು ಸಮಾನ ತಳಹದಿಯ ಆಧಾರದ ಮೇಲೆ ಸಮಿತಿಯು ಕೆಳಗಿನ ಸ್ಥಿರ ಪ್ರಮಾಣಗಳನ್ನು ಶಿಫಾರಸು ಮಾಡಿತು.

**ಆದರ್ಶ ಕೊಡುಗೆಗಳು**

| **ಪ್ರಾಂತ್ಯಗಳು** | **ಕೊರತೆಯ ಪ್ರತಿಶತ ಕೊಡುಗೆ** |
|---|---|
| ಮದರಾಸು | ೧೭ |
| ಬಾಂಬೆ | ೧೩ |
| ಬಂಗಾಳ | ೧೯ |
| ಸಂಯುಕ್ತ ಪ್ರಾಂತ್ಯಗಳು | ೧೮ |
| ಪಂಜಾಬ್ | ೯ |
| ಬರ್ಮಾ | ೬ ೧/೨ |
| ಬಿಹಾರ ಮತ್ತು ಒರಿಸ್ಸಾ | ೧೦ |
| ಕೇಂದ್ರೀಯ ಪ್ರಾಂತ್ಯಗಳು | ೫ |
| ಅಸ್ಸಾಂ | ೨ ೧/೨ |
| **ಒಟ್ಟು** | **೧೦೦** |

ಈ ಆದರ್ಶ ಪ್ರಮಾಣದಲ್ಲಿ ಕೊಡುಗೆಗಳನ್ನು ನೀಡಬೇಕೆಂದು ಕೇಳುವ ಮೊದಲು ಪ್ರಾಂತ್ಯಗಳು ತಮ್ಮ ಮುಂಗಡಪತ್ರಗಳನ್ನು ಹೊಸ ಪರಿಸ್ಥಿತಿಗೆ ಹೊಂದಾಣಿಕೆ ಮಾಡಿಕೊಳ್ಳಲು ಅವುಗಳಿಗೆ ಸಾಕಷ್ಟು ಸಮಯಾವಕಾಶವಿರಬೇಕೆಂಬುದನ್ನು ಸಮಿತಿಯು ಒಪ್ಪಿತು.[೧] ಆದರೆ ಈ ಸಮಯಾವಕಾಶ ದೊಡ್ಡದಿರಬಾರದೆಂದು ಸಮಿತಿಯು ತಿಳಿಯಿತು.

"ನಾವು ಪ್ರಸ್ತಾಪಿಸಿದ ಆರಂಭಿಕ ಪ್ರಮಾಣ ಬಹುಮಟ್ಟಿಗೆ ಅವಶ್ಯವಾದದ್ದು, ಆದರೆ ಪ್ರಾಂತ್ಯಗಳು ತಾವು ನ್ಯಾಯವಾಗಿ ಕೊಡಬೇಕಾದದ್ದಕ್ಕಿಂತಲೂ ಇದರಡಿಯಲ್ಲಿ ಹೆಚ್ಚಿಗೆ ಕೊಡಬೇಕಾದರೆ ಅವುಗಳು ಆ ಹೊರೆಯನ್ನು ಬಹಳ ದಿವಸಗಳವರೆಗೆ ಹೊರಲು ಬಿಡಬಾರದು."

ಆದ್ದರಿಂದ ಸಮಿತಿಯು ಹೀಗೆ ಪ್ರಸ್ತಾಪಿಸಿತು :

"ಕೊಡುಗೆಯ ಏಳನೆಯ ವರ್ಷದಲ್ಲಿರಬಹುದಾದ ಕೊರತೆಯ ಪ್ರಮಾಣದ ಮೇಲೆ ಕೊಡುಗೆಗಳನ್ನು ಮಾಡಬೇಕು. ಆರಂಭದಿಂದ ಆದರ್ಶ ಪ್ರಮಾಣದಲ್ಲಾದ ಬದಲಾವಣೆ, ಕೊಡುಗೆಯ ಎರಡನೆಯ ವರ್ಷದಿಂದ ಪ್ರಾರಂಭವಾಗಿ ಅವಿಚ್ಛಿನ್ನವಾಗಿರಬೇಕು, ಮತ್ತು ಆರು ವಾರ್ಷಿಕ ಹಂತಗಳಾಗಿ ಮುಂದುವರಿಯಬೇಕು."

ಸಮಿತಿಯ ಶಿಫಾರಸಿನ ಮೇರೆಗೆ, ಆರಂಭಿಕ, ಮಾಧ್ಯಮಿಕ ಹಾಗೂ ಕೊನೆಯ ಪ್ರಮಾಣದ ಏಳು ವರ್ಷಗಳ ಕೊಡುಗೆಗಳನ್ನು ಮುಂದಿನ ತಃಖ್ತೆ ತೋರಿಸುತ್ತದೆ:–

---

೧. ಹಣಕಾಸಿನ ಸಂಬಂಧಗಳು ಸಮಿತಿಯ ಆದರ್ಶಪ್ರಮಾಣ ನಿರ್ಧರಿಸಲು ಅನುಸರಿಸಿದ ಆಧಾರದ ಮೇಲೆ ಒಂದು ಸುಸಂಬದ್ಧವೆನಿಸಿದ ಟೀಕೆಯನ್ನು ರಾವ್‌ಬಹದ್ದೂರ್ ಕೆ.ವಿ. ರೆಡ್ಡಿಯವರು ಸುಧಾರಣೆಗಳ ಆಯುಕ್ತರಿಗೆ ಸಲ್ಲಿಸಿದ ವಿವರವಾದ ಪತ್ರದ ೧೨ನೆಯ ಪ್ಯಾರಾದಲ್ಲಿ ನೋಡಿ. ಸಿ.ಎಮ್.ಡಿ. ೯೭೪, ೧೯೨೦, ಪು.೫೮, ಸಿಮ್ಲಾ.

## ಏಳು ಆನುಕ್ರಮಿಕ ವರ್ಷಗಳಲ್ಲಿ ಕೊರತೆಗೆ ಪ್ರತಿಶತ ಕೊಡುಗೆಗಳು.

### ಕೊಡುಗೆಯ ಪ್ರಥಮ ವರುಷದಿಂದ ಪ್ರಾರಂಭವಾಗಿ (೧/೨ಕ್ಕೆ ಸಮಗೊಳಿಸಲ್ಪಟ್ಟವುಗಳು)

| ಪ್ರಾಂತ್ಯಗಳು | ೧ನೇ ವರ್ಷ | ೨ನೇ ವರ್ಷ | ೩ನೇ ವರ್ಷ | ೪ನೇ ವರ್ಷ | ೫ನೇ ವರ್ಷ | ೬ನೇ ವರ್ಷ | ೭ನೇ ವರ್ಷ |
|---|---|---|---|---|---|---|---|
| ಮದರಾಸು | ೩೫ ೧/೨ | ೩೨ ೧/೨ | ೨೯ ೧/೨ | ೨೬ ೧/೨ | ೨೩ | ೨೦ | ೧೭ |
| ಮುಂಬಯಿ | ೫ ೧/೨ | ೭ | ೮ | ೯ ೧/೨ | ೧೦ ೧/೨ | ೧೨ | ೧೩ |
| ಬಂಗಾಳ | ೬ ೧/೨ | ೮ ೧/೨ | ೧೦ ೧/೨ | ೧೨ ೧/೨ | ೧೫ | ೧೭ | ೧೯ |
| ಸಂಯುಕ್ತ ಪ್ರಾಂತ್ಯಗಳು | ೨೪ ೧/೨ | ೨೩ ೧/೨ | ೨೨ ೧/೨ | ೨೧ | ೨೦ | ೧೯ | ೧೮ |
| ಪಂಜಾಬ್ | ೧೮ | ೧೬ ೧/೨ | ೧೫ | ೧೩ ೧/೨ | ೧೨ | ೧೦ ೧/೨ | ೯ |
| ಬರ್ಮಾ | ೬ ೧/೨ | ೬ ೧/೨ | ೬ ೧/೨ | ೬ ೧/೨ | ೬ ೧/೨ | ೬ ೧/೨ | ೬ ೧/೨ |
| ಬಿಹಾರ್ ಮತ್ತು ಒರಿಸ್ಸಾ | – | ೧ ೧/೨ | ೩ | ೫ | ೭ | ೮ ೧/೨ | ೧೦ |
| ಕೇಂದ್ರೀಯ ಪ್ರಾಂತ್ಯಗಳು | ೨ | ೨ ೧/೨ | ೩ | ೩ ೧/೨ | ೪ | ೪ ೧/೨ | ೫ |
| ಅಸ್ಸಾಂ | ೧ ೧/೨ | ೧ ೧/೨ | ೨ | ೨ | ೨ | ೨ | ೨ ೧/೨ |
| **ಒಟ್ಟು** | ೧೦೦% | ೧೦೦% | ೧೦೦% | ೧೦೦% | ೧೦೦% | ೧೦೦% | ೧೦೦% |

ಈ ಶಿಫಾರಸುಗಳು ಭಾರತ ಸರ್ಕಾರದಿಂದ ಹಾಗೂ ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಸ್ವೀಕರಿಸಲ್ಪಟ್ಟವು. ಆದರೆ ಅವುಗಳನ್ನೊಳಗೊಂಡ ನಿಯಮಗಳು, ಭಾರತ ಸರ್ಕಾರದ ಕಾಯಿದೆಯಡಿಯಲ್ಲಿ ಮಾಡಲಾದ ನಿಯಮಗಳ ಕರಡು ಪ್ರತಿಯನ್ನು ಪರಿಶೀಲಿಸಲು ನಿಯಮಿಸಿದ, ಪಾರ್ಲಿಮೆಂಟಿನ ಜಂಟಿ ಆಯ್ದ ಸಮಿತಿಯ ಮುಂದೆ ವಿಚಾರಣೆಗೆ ಬಂದಾಗ, ಸಮಿತಿಯು ಆದಾಯದ ಹಂಚುವಿಕೆಯಲ್ಲಿ ಹಾಗೂ ಪ್ರಾಂತಗಳ ಕೊಡುಗೆಗಳಲ್ಲಿ ಬಹಳ ಮುಖ್ಯವಾಗಿ ಬದಲಾವಣೆಗಳನ್ನು ಮಾಡಿತು. ತನ್ನ ವರದಿಯಲ್ಲಿ ಜಂಟಿ ಸಮಿತಿಯು ಗುರುತಿಸಿದಂತೆ:[೧]

"ಹಣಕಾಸಿನ ಸಂಬಂಧಗಳ ಸಮಿತಿಯು ಬಿಡಿಸಬೇಕಾದ ಸಮಸ್ಯೆಯ ಜಟಿಲತೆಯು, ಎಲ್ಲ ಸ್ಥಾನಿಕ ಸರ್ಕಾರಗಳು ಒಪ್ಪುವ ಪರಿಹಾರವನ್ನು ಕಂಡುಹಿಡಿಯಲು ಸಾಧ್ಯವಾಗದಷ್ಟು ಇದೆ.... ಕೇಂದ್ರೀಯ ಹಾಗೂ ಪ್ರಾಂತೀಯ ಸರ್ಕಾರಗಳ ನಡುವೆ ಸಂಪನ್ಮೂಲಗಳ ಹಂಚುವಿಕೆಯಲ್ಲಿಯ ಅಸಮಾಧಾನವು ಅನಿವಾರ್ಯವೆಂದು ಅವರು ನಂಬಿದರು ಮತ್ತು ಬಹಳ ದಿನಗಳವರೆಗಿನ ಐತಿಹಾಸಿಕ ಕಾರಣಗಳ ಪರಿಣಾಮದಿಂದ ಉದ್ಭವಿಸಿದ ಅಸಮಾನತೆಗಳನ್ನು ಒಮ್ಮೆಗೆ ತೆಗೆಯಲುಬಾರದೆಂಬ ಸಂಗತಿಯನ್ನು ಅಲಕ್ಷಿಸಿದರು." ಆದರೂ ಸಹಿತ ಪ್ರಾಂತೀಯ ಸರ್ಕಾರಗಳು ತಮ್ಮ ಆದಾಯವನ್ನು ಉಪಯೋಗಿಸುವಲ್ಲಿ, ಕೊಡುಗೆ ಪದ್ಧತಿಯು ಹೇರಿದ ಅಡಚಣೆಗಳಿಂದಾದ ಅಸಮಾಧಾನವನ್ನು ಕಡಿಮೆ ಮಾಡಲು ಸಮಿತಿ ಆಶಿಸಿತು. ಭಾರವನ್ನು ಕಡಿಮೆ ಮಾಡುವ ಉಪಾಯಗಳೆಂದು ಸಮಿತಿಯು ಕೆಳಕಂಡ ಕ್ರಮಗಳನ್ನು ಸೂಚಿಸಿತು:

"(೧) ಉತ್ಪನ್ನಗಳ ಹೆಚ್ಚಳದಿಂದ ವೃದ್ಧಿಗೊಂಡ, ಆದಾಯಕರದ ಆದಾಯದ ಹೆಚ್ಚಳದಲ್ಲಿ ಎಲ್ಲ ಪ್ರಾಂತ್ಯಗಳಿಗೆ

---

೧. ಭಾರತ ಸರ್ಕಾರದಿಂದ ಕಾಯಿದೆಯಡಿಯಲ್ಲಿ ಮಾಡಲಾದ ಕರಡು ನಿಯಮಗಳನ್ನು ಪುನರ್ವಿಮರ್ಶಿಸಲು ನೇಮಕವಾಗಿದ್ದ ಜಂಟಿಸಮಿತಿಯ ಎರಡನೆಯ ವರದಿ, ಪು. ೧೭೨, ೧೯೨೦, ಪುಟಗಳು ೨–೩

ಸ್ವಲ್ಪ ಭಾಗವನ್ನು ಕೊಡಬೇಕು."

"(೨) ಯಾವ ಪ್ರಸಂಗದಲ್ಲಿಯೂ ಪ್ರಾಂತ್ಯಗಳು ಕೊಡುವ ಆರಂಭಿಕ ಕೊಡುಗೆಗಳನ್ನು ಹೆಚ್ಚಿಸಕೂಡದು. ಹಣಕಾಸಿನ ಸಂಬಂಧಗಳ ಸಮಿತಿ ಶಿಫಾರಸು ಮಾಡುವಲ್ಲಿ ಒಟ್ಟು ಕೊಡುಗೆಗಳನ್ನು ಕ್ರಮೇಣ ಕಡಿಮೆಮಾಡುವುದೇ ಅದರ ಮುಖ್ಯ ತಾತ್ವಿಕ ಗುರಿಯಾಗಬೇಕು."

ಅದೇ ರೀತಿಯನ್ನು ವಿಕೇಂದ್ರೀಕರಣದ ನಿಯಮಗಳಲ್ಲಿ ಒದಗಿಸಲಾಗಿದೆ.

೧೫) ಪ್ರತಿಯೊಂದು ಸ್ಥಾನಿಕ ಸರ್ಕಾರಕ್ಕೆ ಅದರ ಅಧಿಕಾರವ್ಯಾಪ್ತಿಯಲ್ಲಿ ೧೯೧೮ರ ಆದಾಯಕರ ಕಾಯಿದೆ ಅಡಿಯಲ್ಲಿ ಹಾಕಿದ ಆದಾಯ ಕರದಲ್ಲಿಯ ಒಂದು ಭಾಗವನ್ನು ವಹಿಸಿಕೊಡಬೇಕು. ಅದು ಆ ಕಾಯಿದೆ ಅಡಿಯಲ್ಲಿ ಹಾಕಿದ ಆದಾಯ ಕರದಲ್ಲಿಯ ಪ್ರತಿ ರೂಪಾಯಿಗೆ ೩ ಪೈಸೆಯಷ್ಟಿರಬೇಕು. ಹೀಗೆ ಸ್ಥಾನಿಕ ಸರ್ಕಾರಗಳಿಗೆ ನೀಡುವ ಆದಾಯವನ್ನು ನಿರ್ಧರಿಸುವಲ್ಲಿ ಅವುಗಳಿಗೆ ಒಟ್ಟಿನಲ್ಲಿ ಸುಮಾರು ರೂ. ೪೦೦ ಲಕ್ಷ ಆದಾಯ ಬರುವಂತೆ ಲೆಕ್ಕಮಾಡಬೇಕು.[೨]

೧೭) ಸ್ಥಾನಿಕ ಸರ್ಕಾರಗಳು ಗವರ್ನರ್ ಜನರಲ್‌ನಿಗೆ, ಹಣಕಾಸಿನ ವರ್ಷ ೧೯೨೧–೨೨ರಲ್ಲಿ ಕೆಳಗಿನ ತಃಖ್ತೆಯ ಪ್ರಕಾರ ಕೊಡುಗೆಗಳನ್ನು ಮಾಡಬೇಕು.

| ಪ್ರಾಂತ್ಯದ ಹೆಸರು | ಕೊಡುಗೆಗಳು (ಲಕ್ಷ ರೂಪಾಯಿಗಳಲ್ಲಿ) |
|---|---|
| ಮದರಾಸು | ೩,೪೮ |
| ಮುಂಬಯಿ | ೫೬ |
| ಬಂಗಾಳ | ೬೩ |
| ಸಂಯುಕ್ತ ಪ್ರಾಂತ್ಯಗಳು | ೨,೪೦ |
| ಪಂಜಾಬ್ | ೧,೭೫ |
| ಬರ್ಮಾ | ೬೪ |
| ಕೇಂದ್ರೀಯ ಪ್ರಾಂತ್ಯಗಳು ಹಾಗೂ ಬೆರಾರ್ | ೨೨ |
| ಅಸ್ಸಾಂ | ೧೫ |

೧೮) ೧೯೨೨–೨೩ ಹಣಕಾಸಿನ ವರ್ಷದಿಂದ, ೯.೮೩ ಲಕ್ಷ ರೂ.ಗಳ ಒಟ್ಟು ಕೊಡುಗೆ, ಅಥವಾ ಅದಕ್ಕಿಂತ ಕಡಿಮೆ ಮೊತ್ತವನ್ನು ಗವರ್ನರ್–ಜನರಲ್ ನಿರ್ಧರಿಸಿದರೆ ಆ ಮೊತ್ತವನ್ನು, ಹಿಂದಿನ ನಿಯಮದಲ್ಲಿ ಹೇಳಿದ ಪ್ರಕಾರ ಸ್ಥಾನಿಕ ಸರ್ಕಾರಗಳು, ಗವರ್ನರ್–ಜನರಲ್‌ನಿಗೆ ಕೊಡಬೇಕು. ಹಿಂದಿನ ವರ್ಷ ಕೊಡಬೇಕಾದ ಮೊತ್ತಕ್ಕಿಂತ ಕಡಿಮೆ ಮೊತ್ತವನ್ನು ಯಾವುದೇ ಒಂದು ವರ್ಷಕ್ಕೆ ಗವರ್ನರ್–ಜನರಲ್‌ನು ನಿರ್ಧರಿಸಿದರೆ, ಕೊನೆಯ ವಾರ್ಷಿಕ ಕೊಡುಗೆ ಕೆಳಗೆ ತೋರಿಸಿದ

೨. ಈ ವ್ಯವಸ್ಥೆಯು ವಿಕೇಂದ್ರೀಕರಣ ೧೫ನೆಯ ನಿಯಮದೊಂದಿಗೆ ಸೇರಿಸಲಾಗಿರುವ ಈ ಕೆಳಕಂಡ ಅಧಿನಿಯಮಕ್ಕೊಳಪಟ್ಟಿರಬೇಕು:– ೨) ಈ ಹಂಚಿಕೆಗನುಗುಣವಾಗಿ ಪ್ರತಿಯೊಂದು ಸ್ಥಾನಿಕ ಸರ್ಕಾರವು ಗವರ್ನರ್–ಜನರಲ್ ಇನ್ ಕೌನ್ಸಿಲ್‌ರವರಿಗೆ ಅವರು ನಿಗದಿಗೊಳಿಸಿದಷ್ಟು ಮೊತ್ತವನ್ನು, ಅದು ೧೯೨೦–೨೧ನೆಯ ವರ್ಷದಲ್ಲಿ ಸ್ಥಾನಿಕ ಸರ್ಕಾರಕ್ಕೆ ಸಂಗ್ರಹವಾಗುವ ಹಣಕ್ಕೆ ಸಮಾನವಾಗಿದ್ದು (ಆ ವರ್ಷದಲ್ಲಿ ವಿಶೇಷ ಆದಾಯಕರ ಕಚೇರಿಗಳ ವೆಚ್ಚದಲ್ಲಿ ಪ್ರಾಂತೀಯ ಸರ್ಕಾರಗಳ ಭಾಗವನ್ನು ಕಳೆದ ನಂತರ) ಉಪ ನಿಯಮ (i) ರನ್ವಯ ಆ ವರ್ಷದಲ್ಲಿ ಅನ್ವಯವಾಗುವ ಪೈ–ದರವನ್ನು ಕರಾಕರಣೆಯಲ್ಲಿ ಉಂಟಾಗಬಹುದಾದ ಅನಿರೀಕ್ಷಿತ ವಿಳಂಬವನ್ನು ಗಮನದಲ್ಲಿಟ್ಟುಕೊಂಡು ನಿಗದಿಗೊಳಿಸಬೇಕು, ಇತ್ಯಾದಿ.

ಪ್ರಮಾಣಕ್ಕಿಂತ ಹೆಚ್ಚಿದ್ದ ಸ್ಥಾನಿಕ ಸರ್ಕಾರಗಳ ಕೊಡುಗೆಗಳಲ್ಲಿ ಅದನ್ನು ಕಡಿಮೆ ಮಾಡಬೇಕು. ಹಾಗೆ ಮಾಡಿದ ಕಡಿತ ಅಂಥ ಹೆಚ್ಚಳಕ್ಕೆ ಅನುಗುಣವಾಗಿರಬೇಕು.

| | |
|---|---|
| ಮದರಾಸು | ೧೭/೯೦ |
| ಮುಂಬಯಿ | ೧೩/೯೦ |
| ಬಂಗಾಳ | ೧೯/೯೦ |
| ಸಂಯುಕ್ತ ಪ್ರಾಂತ್ಯಗಳು | ೧೮/೯೦ |
| ಪಂಜಾಬ್ | ೯/೯೦ |
| ಬರ್ಮಾ | ೬½/೯೦ |
| ಕೇಂದ್ರೀಯ ಪ್ರಾಂತ್ಯಗಳು ಹಾಗೂ ಬೆರಾರ್ | ೫/೯೦ |
| ಅಸ್ಸಾಂ | ೨½/೯೦ |

೧೯) ತುರ್ತು ಪರಿಸ್ಥಿತಿಯಲ್ಲಿ ಸ್ಥಾನಿಕ ಸರ್ಕಾರಗಳು ಹಿಂದಿನ ನಿಯಮಗಳ ಪ್ರಕಾರ ತಮಗೆ ಆ ವರ್ಷಕ್ಕಾಗಿ ಕೊಡಬೇಕಾದ ಮೊತ್ತಕ್ಕಿಂತ ಹೆಚ್ಚಿನ ಮೊತ್ತವನ್ನು ಕೊಡಬೇಕೆಂದು, ಸೆಕ್ರೆಟರಿ–ಆಫ್–ಸ್ಟೇಟ್‌ನ ಅನುಮತಿಯೊಂದಿಗೆ, ಗವರ್ನರ್ ಜನರಲ್‌ನು ಕೇಳಬಹುದು.

ಪ್ರಾಂತೀಯ ಹಾಗೂ ಕೇಂದ್ರೀಯ ಹಣಕಾಸಿನ ನಡುವಿನ ಪ್ರತ್ಯೇಕತೆಯನ್ನು ಸಂಪೂರ್ಣಗೊಳಿಸಬೇಕಾದರೆ ಇನ್ನೂ ಎರಡು ವಿಷಯಗಳು ಇತ್ಯರ್ಥವಾಗಬೇಕಾಗಿದೆ. ಅವೆರಡೂ ಬಂಡವಾಳ ವ್ಯವಹಾರಕ್ಕೆ ಸಂಬಂಧಿಸಿದವುಗಳು. ಮೊದಲಿನದು ಪ್ರಾಂತೀಯ ಸಾಲದ ಲೆಕ್ಕ. ಇದೊಂದು ನಿಧಿಯಾಗಿದ್ದು ಇದರಿಂದ ಪ್ರಾಂತೀಯ ಸರ್ಕಾರಗಳು, ಬೇಸಾಯ ಸಾಲ, ಸಾಲದಲ್ಲಿದ್ದ ಭೂಹಿಡುವಳಿದಾರರಿಗೆ ಸಾಲ, ನಗರಪಾಲಿಕೆಗಳಿಗೆ ಹಾಗೂ ಉಳಿದ ಸ್ಥಾನಿಕ ಸಂಸ್ಥೆಗಳಿಗೆ ಸಾಲಗಳನ್ನು ಕೊಡುತ್ತಿತ್ತು. ಇದಕ್ಕೆ ಬೇಕಾದ ಬಂಡವಾಳವನ್ನು ಕೇಂದ್ರ ಸರ್ಕಾರವು ಕೊಡುತ್ತಿತ್ತು. ಸಾಲ ಮರಳಿ ಕೊಟ್ಟಾಗ ಅದನ್ನು ವಾಪಸ್ಸು ಪಡೆಯುತ್ತಿತ್ತು. ಪ್ರತಿವರ್ಷ ಬಾಕಿ ಇದ್ದ ಸರಾಸರಿ ಬಂಡವಾಳದ ಮೇಲೆ ಪ್ರಾಂತ್ಯಗಳು ಕೇಂದ್ರ ಸರ್ಕಾರಕ್ಕೆ ಬಡ್ಡಿಯನ್ನು ಕೊಟ್ಟು, ಮರಳಿಬಾರದ ಸಾಲ ಪರಿಹಾರಕ್ಕಾಗಿ ತಾವು ಹೆಚ್ಚಿನ ಬಡ್ಡಿಯನ್ನು ಆಕರಣೆ ಮಾಡುತ್ತಿದ್ದವು. ಪ್ರಾಂತ್ಯಗಳು ಇನ್ನು ಮುಂದೆ ಸಾಲದ ವ್ಯವಹಾರಕ್ಕೆ ತಾವೇ ಹಣ ಒದಗಿಸಿಕೊಳ್ಳುವುದು, ತಮ್ಮ ಹಾಗೂ ಭಾರತ ಸರ್ಕಾರದ ನಡುವಿನ ಜಂಟಿ ಲೆಕ್ಕವನ್ನು ಚುಕ್ತಾ ಮಾಡುವುದು, ಸುಧಾರಣೆಗಳ ಯೋಜನೆಯ ಫಲವೆಂದು ಸಾಮಾನ್ಯವಾಗಿ ಒಪ್ಪಲಾಗಿದೆ. ಈ ವಿಷಯವನ್ನು ಹಣಕಾಸಿನ ಸಂಬಂಧಗಳ ಸಮಿತಿಗೆ ಒಪ್ಪಿಸಲಾಯಿತು.

ಆ ಸಂಬಂಧದಲ್ಲಿ ಮಾಡಿದ ಅದರ ಶಿಫಾರಸಿನ ಮೇರೆಗೆ ವಿಕೇಂದ್ರೀಕರಣದ ೨೩ನೇ ನಿಯಮದ ಪ್ರಕಾರ ಈ ರೀತಿ ಒದಗಿಸಲಾಗಿದೆ:

"ಯಾವುದೇ ಪ್ರಾಂತ್ಯದ ಸಾಲದ ಲೆಕ್ಕದಿಂದ ಕೊಟ್ಟ, ೧೯೨೧ ಏಪ್ರಿಲ್ ಒಂದರಂದು, ಗವರ್ನರ್–ಜನರಲ್‌ನಿಗೆ ಕೊಡಬೇಕಾದ ಯಾವುದೇ ಹಣವನ್ನು, ಭಾರತದ ಆದಾಯದಿಂದ ಸ್ಥಾನಿಕ ಸರ್ಕಾರಗಳಿಗೆ ಮುಂಗಡವೆಂದು ತಿಳಿಯಲಾಗುವುದು ಮತ್ತು ೩೧ ಮಾರ್ಚ್ ೧೯೨೧ರಂದು ಗವರ್ನರ್–ಜನರಲ್‌ನಿಗೆ ಕೊಡಬೇಕಾದ ಒಟ್ಟು ಮೊತ್ತದ ಮೇಲೆ ಸರಾಸರಿ ಬಡ್ಡಿಯನ್ನು ಹಾಕಲಾಗುವುದು. ಗವರ್ನರ್–ಜನರಲ್‌ನು ನಿಗದಿಪಡಿಸಿದ ತಾರೀಖಿನಂದು ಬಡ್ಡಿಯನ್ನು ಕೊಡಬೇಕಾಗುವುದು ಮತ್ತು ಪ್ರತಿ ವರ್ಷ ಸ್ಥಾನಿಕ ಸರ್ಕಾರಗಳು ಗವರ್ನರ್–ಜನರಲ್‌ನಿಗೆ ಮುಂಗಡದ ಅಸಲಿನ ಕಂತನ್ನು ಮರು ಪಾವತಿ ಮಾಡಬೇಕಾಗುತ್ತದೆ. ಹನ್ನೆರಡು ವರ್ಷಗಳಲ್ಲಿ ಮುಂಗಡದ ಹಣಪೂರ್ತಿ ಮರುಪಾವತಿಯಾಗುವಂತೆ ಕಂತುಗಳನ್ನು ನಿರ್ಧರಿಸಲಾಗುತ್ತಿತ್ತು. ಯಾವುದೇ ಒಂದು ವರ್ಷದಲ್ಲಿ ನಿಗದಿಪಡಿಸಿದ ಕಂತಿನ ಹಣಕ್ಕಿಂತ ಹೆಚ್ಚಿಗೆ ಹಣವನ್ನು ಮರುಪಾವತಿ ಮಾಡಲು ಸ್ಥಾನಿಕ ಸರ್ಕಾರಗಳು ಮುಕ್ತವಾಗಿದ್ದವು."

ಎರಡನೆಯದೆಂದರೆ, ನೀರಾವರಿ, ಕಾಮಗಾರಿಗಳ ಮೇಲೆ ವೆಚ್ಚಮಾಡುವ ಬಂಡವಾಳದ ಜವಾಬ್ದಾರಿಯ ಪ್ರಶ್ನೆ. ಪ್ರಾಂತೀಯ ಸಾಲದ ಲೆಕ್ಕದಂತೆ ಇದರಲ್ಲಿಯೂ, ನೀರಾವರಿ ಕಾಮಗಾರಿ ಹತೋಟಿಯನ್ನು ಸ್ಥಾನಿಕ ಸರ್ಕಾರಗಳಿಗೆ ಕೊಟ್ಟು ಪ್ರಾಂತೀಯ ಸರ್ಕಾರಗಳನ್ನು ಬಂಡವಾಳ ವ್ಯವಹಾರಕ್ಕೆ ಜವಾಬ್ದಾರಿಗಳನ್ನಾಗಿ ಮಾಡುವುದು ಪ್ರಾಂತೀಯ ಹಣಕಾಸಿನ ಸಂಪೂರ್ಣ ಪ್ರತ್ಯೇಕತೆಗೆ ಹೊಂದಾಣಿಕೆಯಾಗಲಾರದೆಂದು ಒಪ್ಪಲಾಗಿದೆ. ಆದ್ದರಿಂದ ಈ ನಿಯಮ.[೧]

೧) ವಿವಿಧ ಪ್ರಾಂತ್ಯಗಳಲ್ಲಿ ಉತ್ಪಾದನೆ ಹಾಗೂ ಸಂರಕ್ಷಣೆ ನೀರಾವರಿ ಕಾಮಗಾರಿ ನಿರ್ಮಾಣಗಳ ಮೇಲೆ ಗವರ್ನರ್–ಜನರಲ್‌ನು ಮಾಡಿದ ಬಂಡವಾಳ ವೆಚ್ಚವನ್ನು, ಹಾಗೂ ಸ್ಥಾನಿಕ ಸರ್ಕಾರಗಳ ನಿರ್ವಹಣೆಗೆ ವಹಿಸಿಕೊಟ್ಟ ಇನ್ನುಳಿದ ಕಾಮಗಾರಿಗಳ ಮೇಲೆ ಮಾಡಿದ ವೆಚ್ಚವನ್ನು ಭಾರತ ಸರ್ಕಾರದ ಆದಾಯದಿಂದ ಸ್ಥಾನಿಕ ಸರ್ಕಾರಗಳಿಗೆ ಮುಂಗಡವೆಂದು ಪರಿಗಣಿಸಬೇಕು. ಅಂಥ ಮುಂಗಡಗಳು ಕೆಳಗಿನಂತೆ ಬಡ್ಡಿದರವನ್ನು ಹೊಂದಿರುತ್ತವೆ.

   (ಅ) ೧೯೧೬–೧೭ರ ಹಣಕಾಸಿನ ವರ್ಷದ ಅಂತ್ಯದವರೆಗೆ ಮಾಡಿದ ಖರ್ಚಿನ ಮೇಲೆ ಪ್ರತಿ ಶತ ೩.೩೨೫೨ರ ದರದಂತೆ.

   (ಬ) ೧೯೧೬–೧೭ರ ಹಣಕಾಸಿನ ವರ್ಷದ ನಂತರ ಮಾಡಿದ ಖರ್ಚಿನ ಮೇಲೆ ಆ ವರ್ಷದ ಅಂತ್ಯದ ನಂತರ ಮುಕ್ತ ಮಾರುಕಟ್ಟೆಯಲ್ಲಿ ಗವರ್ನರ್–ಜನರಲ್‌ನು ತೆಗೆದುಕೊಂಡ ಸಾಲದ ಮೇಲೆ ಅವನು ಕೊಡುವ ಸರಾಸರಿ ಬಡ್ಡಿದರದಂತೆ.

೨) ಗವರ್ನರ್–ಜನರಲ್ ನಿಗದಿಪಡಿಸಿದ ತಾರೀಖುಗಳಂದು ಬಡ್ಡಿಯನ್ನು ಕೊಡಬೇಕಾಗುತ್ತದೆ.

ಹೀಗೆ ಪ್ರಾಂತೀಯ ಸರ್ಕಾರಗಳು ಮತ್ತು ಕೇಂದ್ರ ಸರ್ಕಾರದ ನಡುವೆ ಇದ್ದ ಹಣಕಾಸಿನ ಹಾಗೂ ಆಡಳಿತದ ಸಂಬಂಧ ಹರಿದು, ಅವುಗಳಲ್ಲಿ ಜವಾಬ್ದಾರಿ ಸರ್ಕಾರವನ್ನು ತರುವುದು ತಪ್ಪಿತು. ಪ್ರಾಂತ್ಯಗಳು ಅವುಗಳಿಗೆ ವಹಿಸಿಕೊಟ್ಟ ಸೇವೆಗಳು ಹಾಗೂ ಆದಾಯದ ಮೂಲಗಳ ಮೇಲೆ ತಮ್ಮದೇ ಆದ ಅಧಿಕಾರವನ್ನು ಹೊಂದಿದ್ದರಿಂದ, ತಮ್ಮ ಹೆಸರಿನಲ್ಲಿ ಅವರು ಸಾಲ ಮಾಡುವ ಸ್ವಾತಂತ್ರ್ಯ ಅವರಿಗೆ ಇರಬೇಕಾದದ್ದು ಸಹಜ.

---

೧. ವಿಕೇಂದ್ರೀಕರಣದ ನಿಯಮ ೨೪.

ಇದರ ಪರಿಣಾಮವಾಗಿ, ಸುಧಾರಣೆಗಳ ಕಾಯಿದೆ ಅಡಿಯಲ್ಲಿ ಮಾಡಿದ ಸ್ಥಾನಿಕ ಸರ್ಕಾರಗಳ ಸಾಲದ ನಿಯಮಗಳು ಕೆಲವೊಂದು ಕರಾರಿಗೆ ಅಧೀನವಾಗಿ ಅದಕ್ಕೆ ಅನುಕೂಲ ಮಾಡಿಕೊಟ್ಟಿವೆ.[೧]

"ತನಗೆ ವಹಿಸಿಕೊಟ್ಟ ಆದಾಯದ ಆಧಾರದ ಮೇಲೆ ಸ್ಥಾನಿಕ ಸರ್ಕಾರವು ಕೆಳಗಿನ ಉದ್ದೇಶಗಳಿಗಾಗಿ ಸಾಲ ಎತ್ತಬಹುದು.[೨]

(ಅ) ಬಹಳ ಕಾಲದವರೆಗೆ ಸಾರ್ವಜನಿಕ ಉಪಯೋಗದ ಯೋಜನೆಯ ಸಂಬಂಧದ ಕಾಯಂ ಆಸ್ತಿ ಅಥವಾ ಕಾಮಗಾರಿಯ ನಿರ್ಮಾಣ ಅಥವಾ ಖರೀದಿಗಾಗಿ ಬೇಕಾಗುವ ಬಂಡವಾಳ ವೆಚ್ಚವನ್ನು ಪೂರೈಸಲು, ಕೆಳಗಿನ ನಿಯಮಕ್ಕನುಸಾರವಾಗಿ.

(i) ಚಾಲ್ತಿ ಆದಾಯದಿಂದ ಪೂರೈಸಲು ಸಾಧ್ಯವಾಗದಷ್ಟು ಪ್ರಸ್ತಾಪಿತ ವೆಚ್ಚವು ದೊಡ್ಡದಿದ್ದರೆ, ಮತ್ತು

(iii) ಗವರ್ನರ್-ಜನರಲ್ ತನ್ನ ಆಜ್ಞೆಯಿಂದ ನಿಗದಿಪಡಿಸುವ ದರಕ್ಕಿಂತ ಆ ಯೋಜನೆಯಿಂದ ಬರಬಹುದಾದ ಆದಾಯದ ದರ ಕಡಿಮೆ ಇದ್ದು ಸಾಲ ಮರುಪಾವತಿಗೆ ವ್ಯವಸ್ಥೆಮಾಡಿದ್ದರೆ.

(ಬ) ಈ ಕಾಯಿದೆಯ ಪೂರ್ವದಲ್ಲಿ ಇದ್ದ ನಿಯಮಗಳಡಿಯಲ್ಲಿ ಸಾಲ ಮೊತ್ತದಿಂದ ಪೂರೈಸಲಾಗುತ್ತಿದ್ದ ನೀರಾವರಿಯ ಮೇಲಿನ ಯಾವುದೇ ವರ್ಗದ ವೆಚ್ಚವನ್ನು ಭರಿಸಲು.

(ಕ) ಬರಗಾಲ ಹಾಗೂ ಅಭಾವ ಪರಿಸ್ಥಿತಿಯಲ್ಲಿ ಪರಿಹಾರವನ್ನು ಕೊಡಲು ಹಾಗೂ ಪರಿಹಾರ ಕಾಮಗಾರಿಗಳನ್ನು ಕೈಕೊಳ್ಳಲು

(ಡ) ಪ್ರಾಂತೀಯ ಸಾಲದ ಲೆಕ್ಕಕ್ಕೆ ಹಣ ಒದಗಿಸಲು, ಮತ್ತು

(ಇ) ಈ ನಿಯಮಗಳನುಸಾರವಾಗಿ ಎತ್ತಿದ ಸಾಲದ ಮರುಪಾವತಿ ಅಥವಾ ಸಂಚಯನಕ್ಕಾಗಿ, ಅಥವಾ ಗವರ್ನರ್-ಜನರಲ್ ಮುಂಗಡವಾಗಿ ಕೊಟ್ಟ ಹಣದ ಮರು ಪಾವತಿಗಾಗಿ"

ಹಣಕಾಸಿನ ಹಾಗೂ ಆಡಳಿತದ ಎಳೆಹರಿದು ಇಲ್ಲಿಯವರೆಗೆ ಪ್ರಾಂತೀಯ ಸ್ವಾಯತ್ತತೆಯ ಬೆಳವಣಿಗೆಯನ್ನು ತಡೆದ, ಶಾಸನ ನಿರ್ಮಾಣದ ಎಳೆ ಮಾತ್ರ ಉಳಿಯಿತು. ಈ ಮೊದಲೇ ತೋರಿಸಿಕೊಟ್ಟಂತೆ, ಈ ಶಾಸನ ನಿರ್ಮಾಣದ ಎಳೆ ಭಾರತ ಸರ್ಕಾರದ ಪೂರ್ವಾನುಮತಿ ಮತ್ತು ತದನಂತರದ ಒಪ್ಪಿಗೆ ಪಡೆಯಬೇಕಾಗುವ ತತ್ವದ ಮೂಲಕ ಪ್ರಭಾವ ಬೀರುತ್ತಿತ್ತು. ಸುಧಾರಣೆಗಳ ಕಾಯಿದೆ ಅಡಿಯಲ್ಲಿ ಮಾಡಿದ ನಿಯಮಗಳ ಪ್ರಕಾರ, ಪ್ರಾಂತ್ಯಗಳು ಶಾಸನ ನಿರ್ಮಾಣದ ಅಧಿಕಾರವನ್ನು ಚಲಾಯಿಸಲು ಒಂದು ಕ್ಷೇತ್ರವನ್ನು ಗೊತ್ತುಪಡಿಸಲಾಗಿದೆ. ಕರ ಶಾಸನ ನಿರ್ಮಾಣದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಕೆಳಗಿನ ನಿಯಮವನ್ನು

---

೧. ೧೯೧೯ರ ಭಾರತ ಸರ್ಕಾರದ ಕಾಯಿದೆ ವಿಭಾಗ ೨(೨) ನಿಯಮದಡಿಯನ್ವಯ.

೨. ನಿಯಮಗಳ ಪ್ರಕಾರ

(i) ಸ್ಥಳೀಯ ಸರ್ಕಾರ ಕೌನ್ಸಿಲ್‌ನ ಗವರ್ನರ್-ಜನರಲ್‌ನ (ಇಂಡಿಯಾದಲ್ಲಿ ಎತ್ತಬೇಕಾದ ಸಾಲ), ಇಂಡಿಯಾದ ಹೊರಗಡೆ ಎತ್ತುವ ಸಾಲಕ್ಕೆ) ಸೆಕ್ರೆಟರಿ ಆಫ್ ಸ್ಟೇಟ್‌ನ ಅನುಮತಿಯಿಲ್ಲದೆ ಸಾಲವನ್ನು ಎತ್ತುವ ಹಾಗಿಲ್ಲ. ಗವರ್ನರ್-ಜನರಲ್ಲನಾಗಲಿ ಅಥವಾ ಸೆಕ್ರೆಟರಿ ಆಫ್ ಸ್ಟೇಟ್‌ನಾಗಲಿ ಸಾಲ ಎತ್ತುವ ಅನುಮತಿಯನ್ನು ಕೊಡುವಾಗ ಸಾಲದ ಮೊತ್ತ ಹಾಗೂ ಸಾಲದ ಕರಾರುಗಳನ್ನು ನಿರ್ದಿಷ್ಟ ಪಡಿಸಬಹುದಾಗಿತ್ತು.

(ii) ಸೆಕ್ರೆಟರಿ ಆಫ್ ಸ್ಟೇಟ್‌ನ ಅನುಮತಿಗೆ ಹೋಗುವ ಪ್ರತಿಯೊಂದು ಅರ್ಜಿ ಗವರ್ನರ್-ಜನರಲ್‌ನ ಮುಖಾಂತರ ಹೋಗತಕ್ಕದ್ದು.

ಮಾಡಲಾಗಿದೆ.[೧]

"ಗವರ್ನರ್-ಜನರಲ್‌ನ ಪೂರ್ವಾನುಮತಿಯ ಆವಶ್ಯಕತೆ ಇಲ್ಲದೆ, ಒಂದು ಪ್ರಾಂತ್ಯದ ವಿಧಾನ ಪರಿಷತ್ತು ಸ್ಥಾನಿಕ ಸರ್ಕಾರದ ಉದ್ದೇಶಗಳಿಗಾಗಿ, ಅನುಸೂಚಿ ೧ರಲ್ಲಿ ಸೇರಿಸಲಾದ ಯಾವುದೇ ಕರವನ್ನು ವಿಧಿಸಲು ಕಾಯಿದೆಯನ್ನು ಮಾಡಬಹುದು."

ಈ ಪಟ್ಟಿಯು ಕೆಳಗಿನ ಕರ ಬಾಬತ್ತುಗಳನ್ನು ಹೊಂದಿರುತ್ತದೆ:

೧) ಬೇಸಾಯದ ಹೊರತಾಗಿ ಬೇರೆ ಉಪಯೋಗಕ್ಕೆ ಇರಿಸಲಾದ ಭೂಮಿಯ ಮೇಲಿನ ಕರ.

೨) ಉತ್ತರಾಧಿಕಾರಿ ಅಥವಾ ಅವಿಭಕ್ತ ಕುಟುಂಬದಲ್ಲಿ ಉಳಿದವನೇ ಹಕ್ಕುದಾರನಾಗಿ ಪಡೆಯುವ ಆಸ್ತಿಯ ಮೇಲೆ ಕರ.

೩) ಕಾಯಿದೆ ಅನುಮತಿಯ ಮೇರೆಗಿನ ಜೂಜಾಟದ ಮೇಲೆ ಕರ.

೪) ಜಾಹೀರಾತಿನ ಮೇಲೆ ಕರ.

೫) ವಿನೋದಗಳ ಮೇಲೆ ಕರ.

೬) ನಿರ್ದಿಷ್ಟಪಡಿಸಿದ ಭೋಗವಸ್ತುಗಳ ಮೇಲೆ ಕರ.

೭) ನೋಂದಣಿ ಹಣ

೮) ಭಾರತದ ಶಾಸನದಿಂದ ಮೊತ್ತ ನಿಗದಿಪಡಿಸಿದ ಸುಂಕಗಳನ್ನು ಹೊರತುಪಡಿಸಿ, ಸ್ಟ್ಯಾಂಪು ಸುಂಕ.

ಕರಗಳನ್ನು ಹೊರತುಪಡಿಸಿದ ಶಾಸನ ನಿರ್ಮಾಣಗಳ ವಿಷಯದಲ್ಲಿ ನಿಯಮಗಳನ್ನು ಅಳವಡಿಸಿಕೊಂಡ ಕ್ರಮವು ಸ್ವಲ್ಪ ಬೇರೆಯಾಗಿತ್ತು. ಕರ ಶಾಸನದಲ್ಲಿ ಯಾವ ವಿಷಯಗಳಲ್ಲಿ ಪೂರ್ವಾನುಮತಿ ಅಗತ್ಯವಿರಲಿಲ್ಲವೆಂಬುದನ್ನು ನಿಯಮಗಳು ಹೇಳುತ್ತಿದ್ದವು. ಕರಗಳನ್ನು ಹೊರತುಪಡಿಸಿದ ಶಾಸನದಲ್ಲಿ ಯಾವ ವಿಷಯಗಳಲ್ಲಿ ಪೂರ್ವಾನುಮತಿ ಬೇಕೆಂಬುದನ್ನು ನಿಯಮಗಳು ಹೇಳುತ್ತವೆ. ಪೂರ್ವಾನುಮತಿ ನಿಯಮದ ಆವಶ್ಯಕತೆಯಲ್ಲಿನ ಈ ವ್ಯತ್ಯಾಸದ ಪರಿಣಾಮವೆಂದರೆ,[೨] ಕರ ಶಾಸನದ ವಿಷಯದಲ್ಲಿ ಪ್ರಾಂತೀಯ ಸರ್ಕಾರಗಳು ಕೆಲವೊಂದು ಹೆಸರಿಸಿದ ಕರಗಳನ್ನು ಮಾತ್ರ ಹಾಕಬಹುದಾಗಿತ್ತು, ಆದರೆ ಕರಗಳನ್ನು ಹೊರತುಪಡಿಸಿದ ಶಾಸನದ ವಿಷಯದಲ್ಲಿ, ಯಾವ ನಿಯಮಗಳನ್ನೂ ಮುರಿಯದಂತೆ ಅದು ಏನನ್ನು ಬೇಕಾದರೂ ಮಾಡಬಹುದಾಗಿತ್ತು. ಈ ವ್ಯತ್ಯಾಸದ ಕಾರಣ ಸ್ಪಷ್ಟವಾಗಿದೆ. ಪ್ರಾಂತೀಯ ಕರಗಳ ತಳಹದಿ ವಿಸ್ತಾರವಾದಂತೆ, ಸಾಮ್ರಾಜ್ಯದ ಕರಗಳ ಕ್ಷೇತ್ರವು ಸಂಕೋಚಗೊಳ್ಳುತ್ತದೆ. ಪ್ರಾಂತ್ಯಗಳ ಕರಗಳನ್ನು ಹೊರತುಪಡಿಸಿದ ಶಾಸನದ ಅಧಿಕಾರ ಎಷ್ಟೇ ವಿಸ್ತಾರವಾಗಿದ್ದರೂ, ಆ ವಿಷಯಗಳಲ್ಲಿ ಸರ್ಕಾರಕ್ಕೆ ಹಾನಿಕಾರಕ ಪರಿಣಾಮಗಳು ಬರುತ್ತಿರಲಿಲ್ಲ. ಶಾಸನಾತ್ಮಕ ಅಧಿಕಾರಕ್ಕಿಂತ ಹೆಚ್ಚಾಗಿ, ಪ್ರಾಂತ್ಯಗಳಿಗೆ ಕರ ವಿಧಿಸುವ

---

೧. ಭಾರತ ಸರ್ಕಾರದ ಕಾಯಿದೆ ೧೯೧೯, ಅನುಸೂಚಿತ ತೆರಿಗೆಗಳ ನಿಯಮಗಳು ವಿಭಾಗ ೧೦ (೩) (ಅ) ಇದರ ನಿಯಮಗಳನ್ವಯ.

೨. ೧೯೧೯ರ ಭಾರತ ಸರ್ಕಾರದ ಕಾಯಿದೆ ವಿಭಾಗ ೧೦(೩)(೨) ಅಡಿಯಲ್ಲಿಯ ನಿಯಮ ಸ್ಥಾನಿಕ ಸಂಸತ್ತಿನ ಪೂರ್ವಾನುಮತಿ ನಿಯಮಗಳು. ಆದರೆ ಪೂರ್ವಾನುಮತಿ ಅಗತ್ಯವಿಲ್ಲದ ಪ್ರಾಂತೀಯ ಮಸೂದೆ ಇದ್ದರೆ ಮೇಲಿನ ನಿಯಮದಡಿಯಲ್ಲಿ ಪ್ರಾಂತೀಯ ಸಂಸತ್ತಿನ ಒಪ್ಪಿಗೆ ಇದೆಯೆಂದ ಮಾತ್ರಕ್ಕೆ ಅದು ಕಾಯಿದೆಯಾಗುವುದಿಲ್ಲ. ಏಕೆಂದರೆ ೧೯೧೯ರ ಇಂಡಿಯಾ ಸರ್ಕಾರದ ಕಾಯಿದೆ ವಿಭಾಗ ೧೨(೧) ಮಸೂದೆಯನ್ನು ಕಾಯ್ದಿಡುವ ನಿಯಮದಡಿಯಲ್ಲಿ ಪೂರ್ವಾನುಮತಿ ಅಗತ್ಯವಿರದ ಮಸೂದೆಗಳಿಗೂ ಸಹ ಪ್ರಾಂತದ ಗವರ್ನರನು ಕೆಲವೊಂದು ಮಸೂದೆಗಳನ್ನು ಗವರ್ನರ್-ಜನರಲ್‌ನ ಅನುಮತಿಗಾಗಿ ಕಾಯ್ದಿರಿಸಬೇಕೆಂಬ ನಿಯಮವಿದೆ.

ಅಧಿಕಾರವನ್ನು ಮಿತಗೊಳಿಸಬೇಕಾಗುತ್ತದೆ. ಆದರೂ ಸಹಿತ, ಪೂರ್ವಾನುಮತಿಯ ನಿಯಮಗಳು, ಪ್ರಾಂತ್ಯಗಳು ತಾತ್ವಿಕವಾಗಿ ಮತ್ತು ಆಚರಣೆಯಲ್ಲಿ ಸ್ವಾಯತ್ತತೆ ಹೊಂದಲು ಅನುಕೂಲವಾಗುವಂತೆ, ಶಾಸನ ನಿರ್ಮಾಣದ ಎಳೆಯನ್ನು ಸಡಿಲು ಮಾಡಲಾಯಿತೆಂಬುದನ್ನು ಅಲ್ಲಗಳೆಯುವಂತಿಲ್ಲ.

ಪ್ರಾಂತ್ಯಗಳಲ್ಲಿಯ ಆಯವ್ಯಯ ಪಟ್ಟಿಯ ಹೊಸ ಕಾರ್ಯವಿಧಾನದಲ್ಲಿ ಈ ಸ್ವಾಯತ್ತತೆಯು ಪ್ರತಿಬಿಂಬಿತವಾಗಿದೆ. ಹಳೆಯ ಪದ್ಧತಿಯಲ್ಲಿ ಪ್ರಾಂತೀಯ ಆಯವ್ಯಯ ಪಟ್ಟಿಯನ್ನು ಭಾರತ ಸರ್ಕಾರದ ಹಣಕಾಸಿನ ವಿಭಾಗವು ಅಂಗೀಕರಿಸಲ್ಪಡಬೇಕಾಗಿತ್ತು. ಪ್ರಾಂತೀಯ ಲೆಕ್ಕಗಳನ್ನು ಅಕೌಂಟೆಂಟ್-ಜನರಲ್ ಮೇಲ್ವಿಚಾರಣೆ ಮಾಡುತ್ತಿದ್ದನು, ಮತ್ತು ಭಾರತ ಸರ್ಕಾರದ ಕಂಟ್ರೋಲರ್ ಮತ್ತು ಆಡಿಟರ್-ಜನರಲ್ ಲೆಕ್ಕ ತಪಾಸಣೆ ಮಾಡುತ್ತಿದ್ದನು, ಮತ್ತು ವಿನಿಯೋಗದ ವರದಿಗಳು ಭಾರತ ಸರ್ಕಾರದ ಹಣಕಾಸಿನ ವಿಭಾಗಕ್ಕೆ ಸಲ್ಲಿಸಲ್ಪಡುತ್ತಿದ್ದವು. ಹೊಸ ಪದ್ಧತಿಯಲ್ಲಿ ಇದು ಬದಲಾಯಿತು. ಪ್ರಾಂತೀಯ ಆಯವ್ಯಯ ಪಟ್ಟಿಯು ಭಾರತ ಸರ್ಕಾರದ ಹಣಕಾಸಿನ ವಿಭಾಗದಿಂದ ಸ್ವೀಕರಿಸಲ್ಪಡದೆ, ಸುಧಾರಣಾ ಕಾಯಿದೆ ಅಡಿಯಲ್ಲಿ ನಿರ್ಮಾಣವಾದ, ಪ್ರತಿಯೊಂದು ಪ್ರಾಂತ್ಯದ ಹಣಕಾಸಿನ ವಿಭಾಗದಿಂದ ತಯಾರಿಸಲ್ಪಟ್ಟು[೧] ಪ್ರಾಂತೀಯ ಶಾಸನಸಭೆಯಿಂದ ಪ್ರತಿ ಬಾಬತ್ತಿನ ಮೇಲೆ ಮತ ತೆಗೆದುಕೊಳ್ಳಲಾಗುತ್ತಿತ್ತು.[೨] ಈಗಲೂ ಪ್ರಾಂತೀಯ ಲೆಕ್ಕಗಳು ಭಾರತ ಸರ್ಕಾರದ ಅಧಿಕಾರಿಗಳಿಂದ ಮೇಲ್ವಿಚಾರಣೆ ಹಾಗೂ ತಪಾಸಣೆಗೆ ಒಳಪಟ್ಟಿವೆ.[೩] ಆದರೆ ಹೊಸ ಆಡಳಿತದಡಿಯಲ್ಲಿ ಪ್ರಾಂತೀಯ ಸ್ವಾತಂತ್ರ್ಯದ ಚಿಹ್ನೆಯ ಮುಖ್ಯ ಅಂಶವೆಂದರೆ, ವಿನಿಯೋಗದ ವರದಿಗಳು ಭಾರತ ಸರ್ಕಾರಕ್ಕೆ ಕಳುಹಿಸಲ್ಪಡದೆ, ಸಾರ್ವಜನಿಕ ಲೆಕ್ಕದ ಸಮಿತಿಗೆ ಕಳುಹಿಸಲ್ಪಡುತ್ತವೆ. ಈ ಸಮಿತಿ ಮುಂಗಡಪತ್ರವನ್ನು ಮಂಜೂರು ಮಾಡಿದ ಪ್ರಾಂತೀಯ ಶಾಸನ ಸಭೆಯ ಸದಸ್ಯರಿಂದ ಸಂಘಟಿತವಾಗಿದ್ದು, ಶಾಸನಸಭೆಯು ಒಪ್ಪಿಗೆ ಕೊಟ್ಟ ಹಣವು ಶಾಸನಸಭೆ ಸಮ್ಮತಿಸಿದ ಉದ್ದೇಶಗಳಿಗಾಗಿ ಖರ್ಚು ಮಾಡಲಾಗಿದೆಯೆಂಬುದನ್ನು ವರದಿ ಮಾಡುತ್ತದೆ.

ಈ ರೀತಿಯಾಗಿ ಭಾರತದ ಆಡಳಿತದ ಕ್ಷೇತ್ರವು ಕೇಂದ್ರೀಯ ಹಾಗೂ ಪ್ರಾಂತೀಯವೆಂದು ಗುರುತಿಸಲ್ಪಟ್ಟಿತು. ಅಂಥ ಆಡಳಿತದ ಹಾಗೂ ಹಣಕಾಸಿನ ವಿಷಯಗಳ ಮಿತಿ ನಿರ್ದೇಶನವು ಭಾರತದ ರಾಜಕಾರಣಿಗಳ ಹಾಗೂ ನೇತಾರರ ಕನಸಾಗಿತ್ತು. ವಿಕೇಂದ್ರೀಕರಣದ ಮೇಲಿನ ರಾಯಲ್ ಕಮಿಷನ್ನಿನ ಮುಂದೆಯೂ ಇದನ್ನು ವಾದಿಸಲಾಯಿತು. ಸ್ವರ್ಗೀಯ ಗೋಖಲೆಯವರೂ ಸಹಿತ ತಮ್ಮ ಮರಣಪೂರ್ವದಲ್ಲಿ ಬಿಟ್ಟುಹೋದ ಅವರ ರಾಜಕೀಯ ವಿಧಾಯಕ ವಾಕ್ಯದಲ್ಲಿಯೂ ಇದನ್ನು ವಾದಿಸಿದ್ದರು. ಆದರೆ ಭಾರತದ ಸಂವಿಧಾನದ ನಿಯಮಗಳ ಬದಲಾವಣೆಯಾಗುವವರೆಗೆ ಈ ಎಲ್ಲ ಯೋಜನೆಗಳನ್ನು ಕಾರ್ಯರೂಪದಲ್ಲಿ ತರಲು ಸಾಧ್ಯವಾಗಲಿಲ್ಲ. ಈಗ ಅಂಥ ಬದಲಾವಣೆ ಮಾಡಿರುವುದರಿಂದ ಪ್ರಾಂತೀಯ ಸ್ವಾಯತ್ತತೆಯ ಆದರ್ಶ ನಿಜವಾಗುವ ಸಂಭವವಿದೆ. ಆದರೆ ಈ ಅಭ್ಯಾಸವನ್ನು ಮುಕ್ತಾಯ ಮಾಡುವ ಮೊದಲು ಅದರ ಯಶಸ್ವಿ ಕಾರ್ಯಾಚರಣೆಯ ಬದಲಾವಣೆಗಳ ಪರಿಶೀಲನೆ ಉಪಯುಕ್ತವಾಗಬಹುದು.

---

೧. ಪ್ರಾಂತ್ಯಗಳ ಹಣಕಾಸಿನ ವಿಭಾಗಗಳ ರಚನೆ ಹಾಗೂ ಕಾರ್ಯಗಳ ಬಗ್ಗೆ, ೧೯೧೯ರ ಭಾರತ ಸರ್ಕಾರದ ಕಾಯಿದೆ ಭಾಗ ೧ರ ಅಡಿಯಲ್ಲಿಯ ವಿಕೇಂದ್ರೀಕರಣದ ನಿಯಮ ವಿಭಾಗ IIIನ್ನು ನೋಡುವುದು.

೨. ೧೯೧೯ರ ಭಾರತ ಸರ್ಕಾರದ ಕಾಯಿದೆ ವಿಭಾಗ ೧೧(೫)ರ ಅಡಿಯಲ್ಲಿ ಮಾಡಿದ ಪ್ರಾಂತೀಯ ವಿಧಾನ ಪರಿಷತ್ತುಗಳ ವ್ಯವಹಾರ ನಿಯಮಗಳ ನಿಯಮ ೨೫ ರಿಂದ ೩೨ರವರೆಗೆ ನೋಡುವುದು.

೩. ಭಾರತ ಸರ್ಕಾರದ ಕಾಯಿದೆ ವಿಭಾಗ ೯೬ ಡಿ(೧) ಅಡಿಯಲ್ಲಿ ಮಾಡಿದ ನಿಯಮಗಳು.

# ಅಧ್ಯಾಯ ೧೨

# ಬದಲಾವಣೆಯ ವಿಮರ್ಶೆ

ಒಳ್ಳೆಯ ಆಡಳಿತ ಒಳ್ಳೆಯ ಹಣಕಾಸಿನ ಮೇಲೆ ಅವಲಂಬಿಸಿರುತ್ತದೆಯೆಂಬುದು ಸ್ಪಷ್ಟವಾಗಿದೆ, ಏಕೆಂದರೆ ಹಣಕಾಸು ವ್ಯವಸ್ಥೆಯು ಆಡಳಿತ ಎಂಜಿನ್ನಿಗೆ ಅಗತ್ಯವಾದ ಇಂಧನವಾಗಿದೆ. ಎಲ್ಲಾ ಆಡಳಿತಾತ್ಮಕ ಪದ್ಧತಿಗಳೂ ಆರಂಭದಲ್ಲಿ ಇತರ ಯಾವುದೇ ವಿಷಯಗಳಿಗಿಂತ ತುರ್ತಾಗಿ ಹಣಕಾಸಿನ ಆಡಳಿತವನ್ನು ತಲಸ್ಪರ್ಶಿಯಾಗಿ ವಿಶ್ಲೇಷಿಸಬೇಕು. ಇಲ್ಲಿಯವರೆಗೂ ಇಂತಹ ವಿಶ್ಲೇಷಣೆಯು ಸಂಬಂಧಿಸಿದ ತಜ್ಞರಿಂದಾಗಲೀ, ಸಾಮಾನ್ಯ ಜನರಿಂದಾಗಲೀ ನಡೆದಿಲ್ಲವಾದ್ದರಿಂದ, ಈ ವಿಶ್ಲೇಷಣೆಯ ಅಗತ್ಯ ಈಗ ಇನ್ನೂ ಹೆಚ್ಚಾಗಿದೆ.

ಮೊದಲು ವಿಚಾರಿಸುವ ಪ್ರಶ್ನೆಯೆಂದರೆ, ಹೊಸ ಹಣಕಾಸಿನ ವ್ಯವಸ್ಥೆ ಆಡಳಿತಾತ್ಮಕವಾಗಿ ಕಾರ್ಯಸಾಧುವೆಂದು ಪರಿಗಣಿಸಬಹುದೆ? ಪರಸ್ಪರ ಅವಲಂಬಿಸಿರದೆ ತಮ್ಮ ಸಂಪನ್ಮೂಲಗಳಿಂದಲೇ ತಮ್ಮ ಪೂರ್ಣ ಹಣಕಾಸಿನ ಅಗತ್ಯಗಳನ್ನು ಒದಗಿಸಿಕೊಳ್ಳುವಂತೆ ಆಡಳಿತದ ವ್ಯವಸ್ಥೆಗಳು ಸ್ವತಂತ್ರವಾಗಿರುವಂತೆ ಮಾಡುವುದು ಹಣಕಾಸಿನ ವ್ಯವಸ್ಥೆಯನ್ನು ರೂಪಿಸುವಾಗ ದೃಷ್ಟಿಯಲ್ಲಿಟ್ಟುಕೊಳ್ಳಬೇಕಾದ ಬಹು ಮುಖ್ಯವಾದ ಗುರಿ, ಈ ಗುರಿಯನ್ನು ಸಾಧಿಸುವುದು ಯಾವಾಗಲೂ ಸಾಧ್ಯವಿಲ್ಲವೆನ್ನುವುದು ನಿಜ. ರಾಜಕೀಯ ವ್ಯವಸ್ಥೆಗಳ ಪರಸ್ಪರ ಅವಲಂಬನೆ ಕೆಲವೊಂದು ಪ್ರಸಂಗಗಳಲ್ಲಿ ಅವುಗಳ ಕಾರ್ಯಾಚರಣೆಯಲ್ಲಿ ಸಹಾಯಕವಾಗಬಹುದು, ಏಕೆಂದರೆ ಪರಸ್ಪರ ಅವಲಂಬನೆಯು ಕನಿಷ್ಠ ಸಾರ್ವಜನಿಕ ಹಣಕಾಸಿನ ವಿಷಯದಲ್ಲಿ ಅಡಚಣೆಯಾಗುವ ಬದಲು ಸಹಕಾರದ ಹಾಗೂ ಶಕ್ತಿಯ ಅಡಿಪಾಯವಾಗಬಲ್ಲದು. ಆದರೂ ಸಹಿತ ಸಾಧ್ಯವಿದ್ದಲ್ಲಿ ಪ್ರತಿಯೊಂದು ಆಡಳಿತದ ಶಾಖೆಯೂ ಸ್ವತಂತ್ರ ಹಣಕಾಸು ವ್ಯವಸ್ಥೆಯನ್ನು ಹೊಂದಿರಬೇಕು. ಈ ದೃಷ್ಟಿಯಿಂದ ಅನುದಾನ ಪದ್ಧತಿಯು ವಿಭಜಿತ ಬಾಬತ್ತಿನ ಪದ್ಧತಿಗಿಂತ ಒಳ್ಳೆಯದೆನ್ನುವುದರಲ್ಲಿ ಯಾವ ಸಂಶಯವೂ ಇಲ್ಲ. ಹೀಗೆ ಮಾಡುವುದು ಎಂದರೆ ವಿಭಜಿತ ಬಾಬತ್ತುಗಳ ಪದ್ಧತಿಯನ್ನು ಖಂಡಿಸುವುದಲ್ಲ. ಆದರೆ, ಆಡಳಿತದ ವಿವಿಧ ಶಾಖೆಗಳು ಪರಸ್ಪರ ಅವಲಂಬಿತವಾಗಿದ್ದರೆ, ಹಾಗೂ ಅವುಗಳನ್ನು ಪ್ರತ್ಯೇಕವಾಗಿ ಗಣಿಸದೆ ಹಾಗೆಯೇ ಇಡಿಯಾಗಿ ಗಣಿಸಿದರೆ, ಪ್ರತಿಶಾಖೆಗಳಿಗೂ ಹಣಕಾಸಿನ ಅನುದಾನವನ್ನು ನೀಡಬೇಕಾದಾಗ ತೀವ್ರವಾದ ಸಂಕಷ್ಟಗಳಿಗೆ ಗುರಿಯಾಗಬೇಕಾಗುತ್ತದೆ. ಇದಕ್ಕೆ ಕಾರಣವೆಂದರೆ, ಆದಾಯವನ್ನು ಹಂಚುವಲ್ಲಿ ಹಣಕಾಸಿನ ಪ್ರಮಾಣಕ್ಕಿಂತ ಹೆಚ್ಚಾಗಿ ಅಗತ್ಯ ಅಥವಾ ಅರ್ಹತೆಗಳನ್ನು ವಿಚಕ್ಷಣತೆಯಿಂದ ನೋಡಬೇಕು.

ಪ್ರೊಫೆಸರ್ ಸೆಲಿಗ್ಮನ್ನರು ಅಭಿಪ್ರಾಯಪಟ್ಟಂತೆ[೧] "ಕರದ ಕಾರ್ಯತತ್ಪರತೆಯ ಸಮಸ್ಯೆ ಸಹಜವಾಗಿ ಬಹಳ ಮುಖ್ಯವಾದದ್ದಾಗಿದೆ. ಯೋಜನೆಯು ಎಷ್ಟೇ ಒಳ್ಳೆಯ ಉದ್ದೇಶವನ್ನು ಹೊಂದಿದ್ದರೂ ಅಥವಾ ಕೇವಲ ಭಾವನಾರೂಪವಾದ ತತ್ವಗಳಿಗೆ ಎಷ್ಟೇ ಸಂಪೂರ್ಣವಾಗಿ ಹೊಂದಿಕೊಂಡಿದ್ದರೂ, ಆಡಳಿತಾತ್ಮಕವಾಗಿ ಕರವು ಕಾರ್ಯಸಾಧ್ಯವಾಗದೆ ಹೋದರೆ ಅದು ಅಸಫಲವಾದಂತೆ."

ಆದಾಯ ಮೂಲಗಳನ್ನು ವಿಭಜಿಸುವಲ್ಲಿ, ಒಂದು ಕರದ ಅಧಿಕಾರ ವ್ಯಾಪ್ತಿಗಿಂತ ಮತ್ತೊಂದು ಕರದ ಅಧಿಕಾರವ್ಯಾಪ್ತಿಯಲ್ಲಿ ಸಮಂಜಸವಾಗಿ ಉಪಯೋಗಿಸಲು ಬರುವ ಕರಗಳಿವೆಯೇ ಎಂಬುದು ಕರದ ಮೂಲದ ಮೇಲೆ ಅವಲಂಬಿಸಿದೆ. ಕರದ ಮೂಲ ಸಂಕುಚಿತವಾಗಿದ್ದರೆ ಅದನ್ನು ಸಂಕುಚಿತ ಕರದ

ಅಧಿಕಾರವ್ಯಾಪ್ತಿಯಲ್ಲಿ ಉಪಯೋಗಿಸಬೇಕು. ಕರದಮೂಲ ವಿಶಾಲವಾಗಿದ್ದರೆ ಅದನ್ನು ವಿಶಾಲ ಕರದ ಅಧಿಕಾರವ್ಯಾಪ್ತಿಯಲ್ಲಿ ಉಪಯೋಗಿಸಬೇಕು. ಆದರೆ ಯುಕ್ತಾಯುಕ್ತತೆಯ ಆಜ್ಞೆಯನ್ನು ಅನುಸರಿಸಿದ್ದರೆ, ಪ್ರತಿಯೊಂದು ಆಡಳಿತ ವ್ಯವಸ್ಥೆಗೆ ಅದರ ಉದ್ದೇಶಗಳಿಗೆ ಸಾಕಾಗುವಷ್ಟು ಆದಾಯವನ್ನು ಕೊಡಲು ಯಾವಾಗಲೂ ಸಾಧ್ಯವಾಗುವುದಿಲ್ಲ. ಒಂದು ಕರ ಒಂದು ಅಧಿಕಾರವ್ಯಾಪ್ತಿಗೆ ಯುಕ್ತವಾಗಿರಬಹುದು, ಆದರೆ ಆದಾಯ ಆ ಅಧಿಕಾರವ್ಯಾಪ್ತಿಗೆ ಅವಶ್ಯವಿರದೆ ಅದನ್ನು ವಿಧಿಸಲು ಯೋಗ್ಯವಲ್ಲದ ಮತ್ತೊಂದು ಅಧಿಕಾರವ್ಯಾಪ್ತಿಗೆ ಆವಶ್ಯಕವಿರಬಹುದು ಅಥವಾ ಎರಡಕ್ಕೂ ಭಾಗಶಃ ಆವಶ್ಯಕವಿರಬಹುದು. ಅಂಥ ಸಂದರ್ಭದಲ್ಲಿ ಯುಕ್ತಾಯುಕ್ತತೆಯ ಗುರಿಗಳನ್ನು ಹೇಗೆ ಅನುಸರಿಸುವುದು? ಇದಕ್ಕೆ ಎರಡು ಪರಿಹಾರಗಳಿವೆ. ಒಂದು ವಿಭಜಿತ ಬಾಬತ್ತುಗಳ ಪದ್ಧತಿಯನ್ನು ಅಳವಡಿಸಿಕೊಳ್ಳುವುದು. ಎರಡನೆಯದು ಕೊರತೆಯನ್ನು ಅನೇಕ ರಾಜ್ಯಗಳಲ್ಲಿ ಹಂಚಿ ಅದನ್ನು ಭರಿಸಲು ಅವರು ಕೊಡುಗೆಗಳನ್ನು ಮಾಡಬೇಕೆಂದು ಕೇಳಿಕೊಳ್ಳುವುದು.[೨]

ವಿಭಜಿತ ಬಾಬತ್ತುಗಳ ಪದ್ಧತಿ ಭಾರತದ ವಿತ್ತ ಪದ್ಧತಿಗೆ ಹೊಸದಲ್ಲ. ಇದನ್ನು ಒಂದಲ್ಲ ಒಂದು ರೀತಿಯಲ್ಲಿ ಅನೇಕ ದೇಶಗಳೂ ಅಳವಡಿಸಿಕೊಂಡಿವೆ. ಇಂಗ್ಲೆಂಡ್‌ನ 'ಉತ್ತರಾಧಿಕಾರ' ಕೇಂದ್ರ ಸರ್ಕಾರದಿಂದ ವಿಧಿಸಲ್ಪಡುತ್ತದೆ. ಆದರೆ ಅದರ ಆದಾಯದ ಒಂದು ಭಾಗವನ್ನು ಸ್ಥಾನಿಕ ಸರ್ಕಾರಗಳಿಗೆ ಕೊಡಲಾಗುತ್ತದೆ. ಜರ್ಮನಿಯಲ್ಲಿ ಕೆಲವೊಂದು ಅಪ್ರತ್ಯಕ್ಷ ಕರಗಳ ಆದಾಯ, ಸಂಯುಕ್ತ ಹಾಗೂ ರಾಜ್ಯ ಸರ್ಕಾರಗಳಲ್ಲಿ ವಿಭಜಿತವಾಗುತ್ತಿತ್ತು. ಕೆನಡಾದಲ್ಲಿ ಪ್ರಾಂತೀಯ ಆದಾಯದ ದೊಡ್ಡ ಭಾಗ ಸಂಯುಕ್ತ ಸರ್ಕಾರವು ವಿಧಿಸಿದ ಕರಗಳ ಆದಾಯದಿಂದ ಬಂದದ್ದಾಗಿರುತ್ತದೆಯೆಂಬುದು ಪ್ರಸಿದ್ಧವಿದೆ.

ಆದಾಯದ ವಿಭಜಿತ ಬಾಬತ್ತುಗಳ ಪದ್ಧತಿಯ ವಿರುದ್ಧ ಭಾರತದಲ್ಲಿ ಪೂರ್ವಾಭಿಪ್ರಾಯವಿರುವುದು ವಿಷಾದನೀಯ, ಏಕೆಂದರೆ ಇದು ಆದಾಯದ ಪ್ರತ್ಯೇಕತೆಯ ತತ್ವಕ್ಕೆ ವಿರೋಧವಿದೆಯೆಂಬ ದೃಷ್ಟಿಯ ಮೇಲೆ ಆಧಾರಿತವಾಗಿದೆ. ಅದನ್ನು ವಿರೋಧಿಸಿದ ಜನರು ಅದು ಪ್ರಾಂತೀಯ ವೆಚ್ಚದ ಅಧಿಕಾರಕ್ಕೆ ಬೇಡಿಹಾಕುವ ಮತ್ತು ಅವುಗಳ ಆಯವ್ಯಯ ಅಂದಾಜುಗಳಲ್ಲಿ ಭಾರತ ಸರ್ಕಾರವು ಹಸ್ತಕ್ಷೇಪ ಮಾಡಲು ಅನುಕೂಲವಾಗುವ ವಿಭಜಿತ ವೆಚ್ಚದ ಬಾಬತ್ತುಗಳನ್ನು ಹೊಂದಿರುತ್ತದೆ ಎಂದು ಹೇಳಿದರು.[೩] ವಿಭಜಿತ ಬಾಬತ್ತುಗಳ ಪದ್ಧತಿಯು ಈ ಆಕ್ಷೇಪಣೀಯ ಲಕ್ಷಣಗಳನ್ನು ಹೊಂದಿರುತ್ತದೆ. ವೆಚ್ಚದ ವಿಭಜನೆಯು ಆದಾಯದ ವಿಭಜನೆಯ ಆವಶ್ಯಕವಾದ ಪರಿಕರವಲ್ಲ. ಕರದ ಆದಾಯದಲ್ಲಿ ಭಾಗಿಯಾದ ಆದರೆ ಅದನ್ನು ವಿಧಿಸದ ರಾಜಕೀಯ ವ್ಯವಸ್ಥೆ ಅದರ ಆದಾಯದ ಅಂದಾಜನ್ನು ಮಾಡುವಲ್ಲಿ ಹಸ್ತಕ್ಷೇಪ ಮಾಡಬೇಕೆಂಬುದು ಆವಶ್ಯಕ ಘಟನೆಯಾಗಲಾರದು. ಅದರ ದೋಷಪೂರಿತ ಲಕ್ಷಣಗಳನ್ನು ತೆಗೆದರೆ ಆದಾಯದ ವಿಭಜಿತ ಬಾಬತ್ತುಗಳ ಪದ್ಧತಿ ಪ್ರೊ. ಸೆಲಿಗ್ಮನ್ನರು ಹೇಳಿದಂತೆ[೪] ಆದಾಯ ಮೂಲಗಳ ಬೇರ್ಪಡಿಕೆ ಹಾಗೂ

---

೧. *ಎಸ್ಸೇಸ್ ಇನ್ ಟ್ಯಾಕ್ಸೇಷನ್* (೮ನೆಯ ಆವೃತ್ತಿ, ೧೯೧೩) ಅಧ್ಯಾಯ XII, 'ದಿ ರಿಲೇಷನ್ಸ್ ಆಫ್ ಸ್ಟೇಟ್ ಅಂಡ್ ಫೆಡರಲ್ ಫೈನಾನ್ಸ್'

೨. ಭಾರತ ವ್ಯವಸ್ಥೆ ಬಹುವಾಗಿ ಕೊಡುಗೆಗಳ ವ್ಯವಸ್ಥೆಯಾಗಿದೆಯಾದರೂ ಅದು ಆದಾಯ ಕರದ ವಿಷಯದಲ್ಲಿ ವಿಭಜಿತ ಬಾಬತ್ತುಗಳ ವ್ಯವಸ್ಥೆಯ ಮಿಶ್ರಣವಾಗಿರದೆ ಇಲ್ಲ ಎಂಬ ಅಂಶವನ್ನು ಗಮನಿಸಬೇಕು.

೩. ಆರ್.ಸಿ.ಡಿ. ಮಿನಿಟ್ಸ್ ಆಫ್ ಎವಿಡೆನ್ಸ್, ಸಂ. VI, ಪ್ರ. ೨೫೦೧೭–೨೫೦೨೦, ಸಂ. VIII, ಪ್ರ. ೩೫೫೩೧, ೩೫೨೨೫–೨೯

೪. ಈ ಹಿಂದೆ ಉಲ್ಲೇಖಿತ, ಅಧ್ಯಾಯ XI 'ಸೆಪರೇಷನ್ ಆಫ್ ಸ್ಟೇಟ್ ಅಂಡ್ ಲೋಕಲ್ ರೆವಿನ್ಯೂಸ್' ಅದರಲ್ಲಿಯೂ ಮುಖ್ಯವಾಗಿ ಪುಟಗಳು ೩೬೫–೬.

ಆದಾಯದ ಹಂಚಿಕೆಯ ಮತ್ತೊಂದು ಹೆಸರು. ಒಂದು ಆದಾಯದ ಮೂಲವನ್ನು ಒಂದು ಕರದ ಅಧಿಕಾರವ್ಯಾಪ್ತಿಯಿಂದ ವಿಧಿಸಿ, ಅದರಿಂದ ಬಂದ ಆದಾಯದ ಒಂದು ಭಾಗವನ್ನು ಮತ್ತೊಂದು ಕರದ ಅಧಿಕಾರ ವ್ಯಾಪ್ತಿಗೆ ವಹಿಸಿಕೊಡುವುದು ಈ ವ್ಯವಸ್ಥೆಯ ಸಾರವಾಗಿದೆ. ಆದಾಯದ ವಿಭಜನೆ ಇದೆಯೆಂದ ಮಾತ್ರಕ್ಕೆ ಆದಾಯದ ವಿಭಜನೆಯ ಪದ್ಧತಿಯು, ಆದಾಯ ಮೂಲದ ಪ್ರತ್ಯೇಕತೆಯ ಪದ್ಧತಿಯಾಗಿ ಉಳಿಯದೆ ಇರಲಾರದು. ಅಂಥ ವಿಭಜಿತ ಬಾಬತ್ತುಗಳ ಪದ್ಧತಿಯಲ್ಲಿ ಪ್ರತ್ಯೇಕತೆ ಇದೆ. ಏಕೆಂದರೆ ಒಂದು ಕರ ಅಧಿಕಾರವ್ಯಾಪ್ತಿಯ ಕೈಯಲ್ಲಿ ಕರ ವಿಧಿಸುವ ಅಧಿಕಾರವಿದೆ ಮತ್ತು ಅದರಿಂದ ನಿಜವಾದ ಪ್ರತ್ಯೇಕತೆಗೆ ಹೊಂದಾಣಿಕೆಯಾಗುವಂತೆ ಆದಾಯದ ವಿಭಜನೆಯನ್ನು ನಿಯಂತ್ರಿಸಬಹುದು.

ವಿಭಜಿತ ಬಾಬತ್ತುಗಳ ಪದ್ಧತಿ ಮಾಡಬೇಕೆಂಬುದನ್ನೇ ಕೊಡುಗೆಯ ಪದ್ಧತಿಯೂ ಮಾಡುತ್ತದೆ. ವಿಭಜಿತ ಬಾಬತ್ತುಗಳು ಪದ್ಧತಿಯಂತೆ, ಕರ ವಿಧಿಸಲು ಯೋಗ್ಯವಿದ್ದ ಕರ ಅಧಿಕಾರದ ವ್ಯಾಪ್ತಿಯಿಂದ ಕರ ವಿಧಿಸಲು ಅನುಮತಿ ಕೊಡುವ ಮೂಲಕ ಇದು ಯುಕ್ತತೆ ಹಾಗೂ ಯಥೋಚಿತತೆಯ ಪ್ರಶ್ನೆಗೆ ಉತ್ತರಿಸುತ್ತದೆ ಮತ್ತು ಕರ ವಿಧಿಸುವ ಅಧಿಕಾರವ್ಯಾಪ್ತಿಯು ಕರ ವಿಧಿಸಲಾರದ ವ್ಯಾಪ್ತಿಗೆ ಒಂದು ಮೊತ್ತವನ್ನು ಹಸ್ತಾಂತರಿಸುವ ಮೂಲಕ ಯಥೋಚಿತತೆಯ ಪ್ರಶ್ನೆಗೆ ಉತ್ತರಿಸುತ್ತದೆ. ಆವಶ್ಯಕವಾದ ಅಂಶಗಳಲ್ಲಿ ವಿಭಜಿತ ಬಾಬತ್ತುಗಳ ಪದ್ಧತಿ ಹಾಗೂ ಕೊಡುಗೆಗಳ ಪದ್ಧತಿ ಒಂದೇ ಆಗಿದೆ. ಈ ಎರಡರಲ್ಲಿಯ ಒಂದೇ ಒಂದು ಅಂತರವೆಂದರೆ ಆದಾಯಗಳ ಹಂಚುವಿಕೆಯ ಸಂಬಂಧದಲ್ಲಿ ಒಂದು ಬಾಬುವಾರು ವ್ಯವಸ್ಥೆಯಾದರೆ ಮತ್ತೊಂದು ಎಲ್ಲಾ ಬಾಬುಗಳನ್ನೂ ಒಳಗೊಂಡ ಒಂದೇ ವ್ಯವಸ್ಥೆ. ಆದ್ದರಿಂದ ಅವೆರಡರಲ್ಲಿ ಆಯ್ದುಕೊಳ್ಳುವುದು ಏನೂ ಇಲ್ಲ. ಅಪಖ್ಯಾತಿ ಹೊಂದಿದ ವ್ಯವಸ್ಥೆಗೆ, ಒಳ್ಳೆಯದಾಗಬಹುದೆಂಬ ಆಶಯದಿಂದ, ಕೇವಲ ಹೊಸ ಹೆಸರನ್ನು ಕೊಡುವ ವಿಷಯ ಇದಲ್ಲ. ವಿಭಜಿತ ಬಾಬತ್ತುಗಳ ವ್ಯವಸ್ಥೆಗೆ ಹೋಲಿಸಲಾಗಿ ಕೊಡುಗೆಯ ಪದ್ಧತಿಯು ಒಂದು ಉತ್ಕೃಷ್ಟ ಅಂಶವನ್ನು ಹೊಂದಿದೆ. ಇದು ಕರವನ್ನು ವಿಧಿಸುವಲ್ಲಿ ಪ್ರತ್ಯೇಕತೆಗೆ ಅನುವು ಮಾಡಿಕೊಡುವುದರಲ್ಲಿದೆ. ವಿಭಜಿತ ಬಾಬತ್ತುಗಳ ಪದ್ಧತಿಗಿಂತ ಹೆಚ್ಚಿನ ಪ್ರತ್ಯೇಕತೆಯನ್ನು ಹೊಂದಿದ್ದಾಗಿರುತ್ತದೆ. ವಿಭಜಿತ ಬಾಬತ್ತುಗಳ ಪದ್ಧತಿಯಡಿಯಲ್ಲಿ, ಕರ ವಿಧಿಸುವಲ್ಲಿ ಹಾಗೂ ಕರ ವಸೂಲಿಯಲ್ಲಿ, ಸ್ವೀಕರಿಸುವ ಪಂಗಡಕ್ಕೆ ಆತಂಕವನ್ನೊಳಗೊಂಡ ಆಸಕ್ತಿ ಇರುತ್ತದೆ. ಏಕೆಂದರೆ ಆದಾಯದ ವಿಭಜಿತ ಯಾವುದೇ ಬಾಬತ್ತಿನ ಆಡಳಿತದಲ್ಲಿಯ ಸಡಿಲಿಕೆ ಅದರ ಆಸಕ್ತಿಗಳಿಗೆ ಪ್ರತಿಕೂಲ ಪರಿಣಾಮ ಒದಗಿಸುತ್ತದೆ. ಆದ್ದರಿಂದ ಅದು ಕರದ ಆಡಳಿತದಲ್ಲಿ ತನ್ನ ಪಾಲು ಇರಬೇಕೆಂದು ಕೇಳಬಹುದು. ಆದರೆ ಕೊಡುಗೆಯ ವ್ಯವಸ್ಥೆಯಡಿಯಲ್ಲಿ ಇಂಥ ಸಾಧ್ಯತೆಗೆ ಅವಕಾಶವಿಲ್ಲ. ಅದರ ಹಿಸ್ಸೆಯ ಭರವಸೆ ಹೊಂದಿದ್ದರಿಂದ ಅದು ಕರ ವಿಧಿಸುವ ಹಾಗೂ ಕರ ವಸೂಲುಮಾಡುವ ವ್ಯವಹಾರದ ಹೊರಗೆ ಇದೆ. ಆದ್ದರಿಂದ ವಿಭಜಿತ ಬಾಬತ್ತುಗಳ ಪದ್ಧತಿಯಲ್ಲಿಗಿಂತ ಕೊಡುಗೆಯ ವ್ಯವಸ್ಥೆಯಡಿಯಲ್ಲಿ ಹೆಚ್ಚಿನ ಪ್ರತ್ಯೇಕತೆ ಇದೆ.

ಹೊಸ ಹಣಕಾಸಿನ ವ್ಯವಸ್ಥೆಯ ಸಮಾನತೆಯನ್ನು ವಿಶ್ಲೇಷಿಸುವಾಗ ಕೊಡುಗೆಯ ಪದ್ಧತಿಯ ವಿರುದ್ಧ ಆತಂಕಗಳನ್ನು ವ್ಯಕ್ತಪಡಿಸಿದ್ದು ನಮಗೆ ಗೊತ್ತಾಗುತ್ತದೆ. ಆದರೆ ಇಂಥ ಎಷ್ಟೋ ಆತಂಕಗಳು ತಪ್ಪುಕಲ್ಪನೆಯಿಂದ ಆದಂಥವುಗಳಾಗಿರುತ್ತವೆ. ಪ್ರಾಂತಗಳಿಂದ ಭಾರತದ ಕೇಂದ್ರ ಸರ್ಕಾರಕ್ಕೆ ಬರುವ ಕೊಡುಗೆಗಳನ್ನು ಅವುಗಳ ವೆಚ್ಚಮಾಡುವ ಶಕ್ತಿಗನುಗುಣವಾಗಿ ನಿಯಂತ್ರಿಸಲಾಗಿದೆ, ಎಂಬುದನ್ನು ನಾವಿಲ್ಲಿ ನೆನೆಯಬಹುದು. ಅಂದರೆ ಇದು ವೆಚ್ಚವನ್ನು ಆಧಾರಿಸಿ ಹಂಚಿ ಕೊರತೆಯನ್ನು ನೀಗಿಸುವ ಪದ್ಧತಿ. ಈ ಪದ್ಧತಿಯು ಯಥೋಚಿತತೆಯ ಗುರಿಗಳನ್ನು ಪೂರೈಸುತ್ತದೆಯೆಂಬುದು ಸ್ಪಷ್ಟವಾಗಿದೆ. ಆದರೆ ಕೊಡುಗೆ ಹಾಗೂ ಸ್ವೀಕರಿಸುವ ಕರ ಅಧಿಕಾರವ್ಯಾಪ್ತಿಯಲ್ಲಿ ಮಿತವ್ಯಯವನ್ನು ಉತ್ತೇಜಿಸುವ ಕೊಡುಗೆಯ ಪದ್ಧತಿಯ

ಶ್ರೇಷ್ಠತೆ ಅಷ್ಟು ಸ್ಪಷ್ಟವಾದಂತೆ ಕಾಣಲಿಲ್ಲ. ಏಕೆಂದರೆ ಕೊಡುಗೆಯ ಕರ ಅಧಿಕಾರ ವ್ಯಾಪ್ತಿಯಲ್ಲಿನ ದುಂದುವೆಚ್ಚ ಅದರ ಭಾರವನ್ನು ಹೆಚ್ಚಿಸುತ್ತದೆ ಮತ್ತು ಸ್ವೀಕರಿಸುವ ಕರ ಅಧಿಕಾರವ್ಯಾಪ್ತಿಯಲ್ಲಿಯ ದುಂದುವೆಚ್ಚ ಕೊಡುಗೆಯ ಹೆಚ್ಚಳದಲ್ಲಿ ಪ್ರತಿಬಿಂಬಿತವಾಗುತ್ತದೆ. ಕೊಡುಗೆಗಳು ಅಸಮಾನತೆಯಿಂದ ಕೂಡಿದವುಗಳಾಗಿವೆಯೆಂದು ವಿರೋಧಿಸಲಾಗಿದೆ. ಏಕೆಂದರೆ ಅವು ಜನಸಂಖ್ಯೆಯ ಮೇಲಾಗಲಿ, ವಿಸ್ತಾರದ ಮೇಲಾಗಲಿ, ಐಶ್ವರ್ಯದ ಮೇಲಾಗಲಿ, ಪ್ರಾಂತ್ಯದ ಶಕ್ತಿಯ ಮೇಲಾಗಲಿ ಆಧಾರಿತವಾದವುಗಳಾಗಿಲ್ಲ. ವೆಚ್ಚಮಾಡುವ ಶಕ್ತಿಗನುಗುಣವಾದ ಕೊಡುಗೆಗಳ ಪದ್ಧತಿ ಅಚಾತುರ್ಯವಾದದ್ದೆಂದು ತಕರಾರು ಮಾಡಲಾಗಿದೆ. ಕಾರಣ ಇದು ಪ್ರಗತಿಪರ ಪ್ರಾಂತ್ಯಗಳಲ್ಲಿ ಅಪೇಕ್ಷಿತ ವೆಚ್ಚವನ್ನು ತಡೆಯುತ್ತದೆ. ಸಾಮಾನ್ಯರೂಪದಲ್ಲಿ ಕೊಡುಗೆಗಳನ್ನು ವೆಚ್ಚದ ಮೇಲೆ ಹಂಚುವ ಪದ್ಧತಿಯ ವಿರುದ್ಧ ಇದೊಂದು ನಿಜವಾದ ತಕರಾರಾಗಿದೆ.

ಮೊದಲನೆಯದಾಗಿ ಅಪೇಕ್ಷಿತ ಉದ್ದೇಶಗಳಿಗಾಗಿ ಒಂದು ಅಧಿಕಾರ ವ್ಯಾಪ್ತಿ ಹೆಚ್ಚಿನ ವೆಚ್ಚದ ಭಾರವನ್ನು ತೆಗೆದುಕೊಳ್ಳಲು ಇಚ್ಛಿಸಿದರೆ, ಕೊಡುಗೆಯ ಹೆಚ್ಚಳದಿಂದಾಗಿ ಸ್ವಲ್ಪ ಅಧಿಕ ಭಾರದಿಂದ ಅದು ಹಿಂಜರಿಯದು. ಎರಡನೆಯದಾಗಿ ಕೊಡುಗೆಗಳಿಂದ ಅಂಥ ಪರಿಣಾಮ ಉತ್ಪನ್ನವಾದರೆ ಕೆಲವೊಂದು ಅವಶ್ಯವೆನಿಸಿದ ವೆಚ್ಚಗಳಿಗೆ ವಿನಾಯಿತಿ ತೋರಿಸುವ ಸರಳ ಉಪಾಯದಿಂದ ಇದನ್ನು ನಿವಾರಿಸಬಹುದು. ಈ ವೆಚ್ಚಗಳು ಯಾವುವಾಗಿರಬೇಕೆಂಬುದು ಹೊಂದಾಣಿಕೆಯ ವಿಷಯವಾಗಿದೆ. ಅವು ಬೇರೆಬೇರೆ ಪ್ರಾಂತ್ಯಗಳಲ್ಲಿ ಬೇರೆಬೇರೆಯಾಗಿರಬಹುದು. ಕೊಡುಗೆಗಳನ್ನು ವೆಚ್ಚದ ಮೇಲೆ ಹಂಚುವ ಪದ್ಧತಿಯ ಶ್ರೇಷ್ಠತೆಯನ್ನು ಈಗಲೂ ಉಳಿಸಿಕೊಳ್ಳಬಹುದು ಮತ್ತು ಎಲ್ಲ ವೆಚ್ಚಗಳ ಬದಲಾಗಿ ಕೆಲವೊಂದು ವೆಚ್ಚಗಳನ್ನು ಮಾತ್ರ ಲೆಕ್ಕದ ತಳಹದಿಯಾಗಿ ಆಯ್ಕೆಮಾಡಿದರೆ, ಅದರ ಸ್ವಯಂಚಾಲಿತ ಸ್ವರೂಪ ಅಷ್ಟೇ ಒಳ್ಳೆಯ ಕಾರ್ಯವನ್ನು ಮಾಡಬಲ್ಲದು.

ಭಾರತದ ಕೊಡುಗೆಯ ಪದ್ಧತಿಯ ವಿರುದ್ಧ ಈ ಆಕ್ಷೇಪಣೆಗಳನ್ನು ಮಾಡಲು ಸಾಧ್ಯವಿಲ್ಲ. ಮೊದಲನೆಯದಾಗಿ ಬೇರೆ ದೇಶಗಳ ಹಣಕಾಸಿನ ಪದ್ಧತಿಯಲ್ಲಿ ಇದ್ದಂತೆ ಇಲ್ಲಿ ಕೊಡುಗೆಯು ವ್ಯತ್ಯಯವಾಗುವ ಮೊತ್ತವಲ್ಲ. ಏಕೆಂದರೆ ಕೇಂದ್ರ ಸರ್ಕಾರದ ಕೊರತೆಗೆ ಪ್ರಾಂತ್ಯಗಳನ್ನು ಹೊಣೆಯುಳ್ಳವುಗಳನ್ನಾಗಿ ಮಾಡಿದರೂ ವರ್ಷ ವರ್ಷದ ಪೂರ್ಣ ಕೇಂದ್ರೀಯ ಕೊರತೆಗೆ ಅವು ಜವಾಬ್ದಾರರಲ್ಲವೆಂಬುದನ್ನು ನೆನಪಿನಲ್ಲಿಡಬೇಕು. ಅದರ ವಿರುದ್ಧವಾಗಿ ರೂಪಾಯಿ ೯.೮೩ಲಕ್ಷ ಕೇಂದ್ರೀಯ ಪ್ರಮಾಣ ಕೊರತೆಯನ್ನು ನೀಗಿಸಲು ಪ್ರಾಂತ್ಯಗಳು ಸಾಮಾನ್ಯ ವರ್ಷಗಳಲ್ಲಿ ಕೊಡುಗೆಗಳನ್ನು ಮಾಡಲು ಜವಾಬ್ದಾರರಾಗಿರುತ್ತವೆ. ಪರಿಸ್ಥಿತಿ ಹೀಗಿರುವಾಗ ಪ್ರಾಂತೀಯ ಮುಂಗಡಪತ್ರದಲ್ಲಿ ಕೊಡುಗೆಗಳು ಅನಿಶ್ಚಿತತೆಯ ಅಂಶವಾಗಿರುವುದಿಲ್ಲ. ಎರಡನೆಯದಾಗಿ ಕೊಡುಗೆಗಳು ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಹಣಕಾಸಿನ ವ್ಯವಸ್ಥೆಯ ಕಾಯಂ ಲಕ್ಷಣಗಳಾಗಲಾರವು.

ಭಾರತ ಸರ್ಕಾರ ತನ್ನ ಹಣಕಾಸಿನ ಮುಕ್ತಿಯನ್ನು ಕಂಡುಕೊಳ್ಳಲು ಅನುಕೂಲವಾಗುವಂತೆ ಕೊಡುಗೆಗಳನ್ನು ವಿಧಿಸಿದ್ದು ಕೇವಲ ತಾತ್ಪೂರ್ತಿಕವೆಂದು ಭಾವಿಸಲಾಗಿದೆ ಮತ್ತು ಸಾಧ್ಯವಾದಷ್ಟು ಕಡಿಮೆ ವೇಳೆಯಲ್ಲಿ ಕೊಡುಗೆಗಳನ್ನು ಅಂತ್ಯಗೊಳಿಸಲಿಕ್ಕಾಗಿ ತಾನು ಒಂದು ನೀತಿಯನ್ನು ಅನುಸರಿಸುವುದಾಗಿ ಭಾರತ ಸರ್ಕಾರ ಆಶ್ವಾಸನೆ ಕೊಟ್ಟಿದೆ. ಕೊನೆಯದಾಗಿ, ಪ್ರಾಂತ್ಯಗಳ ಹಣಕಾಸಿನ ಪದ್ಧತಿಯನ್ನು ದುಃಸ್ವಪ್ನದಂತೆ ಕಾಡುವಷ್ಟು ಅವುಗಳ ಆದಾಯ ಹಾಗೂ ವೆಚ್ಚದ ನಡುವಿನ ಪ್ರಮಾಣ ದೊಡ್ಡದಾಗಿರುವುದಿಲ್ಲ, ಹಾಗೂ ಸ್ಥಿರವಾಗಿರುವುದರಿಂದ ಅದು ಉದ್ದೇಶಿತ ಉಪಯುಕ್ತ ವೆಚ್ಚಗಳನ್ನು ಮಾಡುವಲ್ಲಿ ಪ್ರಾಂತ್ಯಗಳಿಗೆ ತಡೆಯೊಡ್ಡುತ್ತದೆ ಎಂದು ಹೇಳುವ ಹಾಗೂ ಇಲ್ಲ.

ಕೊಡುಗೆಗಳನ್ನು ವೆಚ್ಚದ ಮೇಲೆ ಹಂಚುವ ಪದ್ಧತಿಯ ನ್ಯೂನತೆಯ ವಿರುದ್ಧ ಏನು ಹೇಳಿದರೂ, ಆ ಪದ್ಧತಿಯ, ಯುಕ್ತತೆಯ ಬೇಡಿಕೆಗಳಿಗೆ ಸರಿಯಾದ ಉತ್ತರ ಕೊಡಬಲ್ಲದೆಂಬುದನ್ನು ಅಲ್ಲಗಳೆಯುವಂತಿಲ್ಲ. ಬೇರೆ ಪದ್ಧತಿಯಲ್ಲಿ ಸಾಧ್ಯವಿದ್ದದ್ದಕ್ಕಿಂತ ಹೆಚ್ಚಾಗಿ, ಹೊರೆಯನ್ನು ಸಮವಾಗಿ ಹಂಚುವುದನ್ನು[೧] ಇದು ಅವಶ್ಯವಾಗಿ ತರುತ್ತದೆ. ಜನಸಂಖ್ಯೆ ಹಾಗೂ ವಿಸ್ತಾರಕ್ಕಿಂತ ಹೆಚ್ಚಾಗಿ, ಸಂಬಂಧಪಟ್ಟ ಸಮುದಾಯದ ಯೋಗ್ಯತೆಗೆ ವೆಚ್ಚಗಳು ಬಹು ನಿಕಟವಾಗಿ ಹೊಂದಾಣಿಕೆಯಾಗುತ್ತವೆಯೆಂದು ಭಾವಿಸಬಹುದು[೨] ಈ ತತ್ವವು ಸಮಾನತೆಯನ್ನು ಹೊಂದಿದ್ದಲ್ಲದೆ ವಿವಿಧ ಪ್ರಾಂತ್ಯಗಳಿಗೆ ಇದನ್ನು ಅನ್ವಯಿಸುವಲ್ಲಿ ನ್ಯಾಯ ಒದಗಿಸಲು ಕಾಳಜಿ ವಹಿಸಲಾಗಿದೆ. ಬಡ ಹಾಗೂ ಶ್ರೀಮಂತ ಪ್ರಾಂತ್ಯಗಳಿಗೆ ತಮ್ಮ ಪ್ರಮಾಣಿತ ವೆಚ್ಚದ ಅಂಕಿಸಂಖ್ಯೆಗಳಲ್ಲಿ ಒಳಗೊಳ್ಳದ ಆವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗಲು ಕಾಯ್ದಿಟ್ಟ ವೆಚ್ಚದ ಸಾಮರ್ಥ್ಯವನ್ನು ಬಿಡದಂತೆ ಕೊಡುಗೆಗಳನ್ನು ನಿಯಂತ್ರಿಸಲಾಗಿದೆಯೆಂಬುದು ನಮಗೆ ಗೊತ್ತಿದೆ. ಅಸಮಾನ ಕಾಣಿಕೆಗಳ ಪರವಾಗಿ ಸಮಾನ ಕಾಣಿಕೆಗಳನ್ನು ತಿರಸ್ಕರಿಸುವ ಮುಖ್ಯ ಉದ್ದೇಶ, ಯಾವುದೇ ಪ್ರಾಂತ್ಯವು ಅತೀ ಅವಶ್ಯವಾದ ಹೆಚ್ಚಿನ ವೆಚ್ಚವನ್ನು ನೀಗಿಸಲು, ಕೊಡುಗೆಯ ಹೊರೆಯು ತಡೆಯದಂತೆ ಮಾಡುವುದಾಗಿತ್ತು. ನಿಜವಾಗಿಯೂ ಭಾರತದ ಪದ್ಧತಿಗಿಂತ ಹೆಚ್ಚಿನ ಸಮಾನತೆಯನ್ನು ಕೊಡುವ ಮತ್ತಾವ ಕೊಡುಗೆಯ ಪದ್ಧತಿಯನ್ನೂ ಊಹಿಸಲು ಸಾಧ್ಯವಿಲ್ಲ.

ಹೊಸ ಹಣಕಾಸಿನ ವ್ಯವಸ್ಥೆ ಆಡಳಿತಾತ್ಮಕವಾಗಿ ಕಾರ್ಯಾತ್ಮಕವಾಗಿಯೇ ಮತ್ತು ಸಮಾನತೆಯಿಂದೊಡಗೂಡಿದೆಯೇ ಎಂಬುದನ್ನು ಇಲ್ಲಿಯವರೆಗೆ ನಾವು ಪರಿಶೀಲಿಸಿದೆವು. ನಾವೀಗ ನೋಡಬೇಕಾದದ್ದು: ಈ ವ್ಯವಸ್ಥೆ ಹಣಕಾಸಿನ ದೃಷ್ಟಿಯಿಂದ ಯಥೋಚಿತವೆಂದು ಸಿದ್ಧವಾಗಿದೆಯೇ? ದೇಶದ ಸಾಮಾನ್ಯ ಸಂಪನ್ಮೂಲಗಳು ಸಮೃದ್ಧವಾಗಿವೆ ಮತ್ತು ಪ್ರತಿಯೊಂದು ಪ್ರಾಂತ್ಯಕ್ಕೆ ಸಾಕಷ್ಟು ದೊಡ್ಡ ವೆಚ್ಚದ ಶಕ್ತಿ ಅಥವಾ ಉಳಿತಾಯಗಳು ಇರಬೇಕಾದರೆ, ಒಂದು ವಿವೇಚನಾಯುಕ್ತ ಹಂಚುವಿಕೆಯ ।ಯೋಜನೆ ಬೇಕಾಗುತ್ತದೆಯೆಂದು ಹಣಕಾಸಿನ ಸಂಬಂಧಗಳ ಸಮಿತಿ ಅಭಿಪ್ರಾಯಪಟ್ಟಿದೆ. ಸಮಿತಿಯು ಶಿಫಾರಸು ಮಾಡಿದ ಯೋಜನೆ ಅಂಥ ಫಲಗಳನ್ನು ತರುವ ಉದ್ದೇಶವನ್ನು ಹೊಂದಿದ್ದಾಗಿತ್ತೆಂದು ಭಾವಿಸಬೇಕಾಗುತ್ತದೆ. ಸುಧಾರಣೆಗಳನ್ನು ತಂದ ನಂತರದ ಬೇರೆಬೇರೆ ಪ್ರಾಂತ್ಯಗಳ ಮುಂಗಡಪತ್ರಗಳನ್ನು ನಾವು ಪರಿಶೀಲಿಸಿದಾಗ ಪರಿಣಾಮಗಳು ನಿರಾಶಾದಾಯಕವಾದವುಗಳೆಂದು ಕಂಡುಬರುತ್ತದೆ. (ಕೆಳಗಿನ ತಃಖ್ತೆಯನ್ನು ನೋಡಿರಿ)

---

೧. ಸೆಲಿಗ್ಮನ್, ಪೂರ್ವೋಕ್ತ, ಪು. ೩೬೦.

೨. ಜರ್ಮನಿಯಲ್ಲಿ ರಾಜ್ಯಗಳಿಂದ ಕೊಡುಗೆಗಳನ್ನು ಸಾಮ್ರಾಜ್ಯವಿದ್ದಾಗ ಜನಸಂಖ್ಯೆ ಆಧಾರದ ಮೇಲೆ ನಿಗದಿ ಮಾಡಲಾಗಿತ್ತು. ಸ್ವಿಟ್ಜರ್‌ಲ್ಯಾಂಡ್‌ನಲ್ಲಿಯೂ ಇದೇ ರೀತಿ ಮಾಡಲಾಗಿತ್ತು.

(ಸಾವಿರ ರೂಪಾಯಿಗಳಲ್ಲಿ)

| | ಪ್ರಾಂತ್ಯಗಳು | ಮಾದರಿ ಅಂಕಿ ಸಂಖ್ಯೆಗಳು | ಪರಿಷ್ಕೃತ ೧೯೨೧–೨ | ಆಯವ್ಯಯ ಪಟ್ಟಿ ೧೯೨೨–೩ |
|---|---|---|---|---|
| ಮದರಾಸು | ಆದಾಯ | ೧೪,೯೮,೦೨ | ೧೫,೫೮,೫೯ | ೧೬,೭೬,೫೦ |
| | ವೆಚ್ಚ | ೧೪,೦೭,೨೦ | ೧೭,೧೫,೯೩ | ೧೭,೧೮,೫೫ |
| | ಉಳಿತಾಯ ಅಥವಾ ಕೊರತೆ | ೯೦,೮೨ | –೧,೫೭,೩೪ | –೪,೨೦೫ |
| ಮುಂಬಯಿ | ಆದಾಯ | ೧೨,೦೯,೭೦ | ೧೩,೬೭,೧೩ | ೧೪,೯೩,೦೬ |
| | ವೆಚ್ಚ | ೧೧,೫೫,೦೩ | ೧೬,೫೨,೮೦ | ೧೫,೪೨,೧೭ |
| | ಉಳಿತಾಯ ಅಥವಾ ಕೊರತೆ | ೫೪,೬೭ | –೨,೮೫,೬೭ | –೫೦,೧೧ |
| ಬಂಗಾಳ | ಆದಾಯ | ೮,೫೫,೨೮ | ೮,೮೬,೫೩ | ೧೦,೫೫,೮೬ |
| | ವೆಚ್ಚ | ೮,೬೧,೧೩ | ೧೧,೧೦,೬೦ | ೧೦,೩೬,೯೦ |
| | ಉಳಿತಾಯ ಅಥವಾ ಕೊರತೆ | –೫,೮೫ | –೨,೨೪,೦೭ | ೧೮,೯೬ |
| ಸಂಯುಕ್ತ ಪ್ರಾಂತ್ಯಗಳು | ಆದಾಯ | ೧೨,೨೯,೮೮ | ೧೩,೩೪,೩೧ | ೧೩,೫೮,೬೭ |
| | ವೆಚ್ಚ | ೧೨,೦೬,೫೬ | ೧೪,೫೯,೮೭ | ೧೩,೮೫,೬೫ |
| | ಉಳಿತಾಯ ಅಥವಾ ಕೊರತೆ | ೧,೨೩,೩೨ | –೧,೨೫,೫೬ | –೨೬,೯೮ |
| ಪಂಜಾಬ್ | ಆದಾಯ | ೯,೭೩,೫೧ | ೧೦,೭೩,೭೬ | ೧೧,೩೮,೨೬ |
| | ವೆಚ್ಚ | ೯,೧೦,೬೯ | ೧೨,೨೩,೨೪ | ೧೨,೬೮,೪೪ |
| | ಉಳಿತಾಯ ಅಥವಾ ಕೊರತೆ | ೬೨,೮೨ | –೧,೪೯,೪೮ | –೧,೩೦,೧೮ |
| ಬರ್ಮಾ | ಆದಾಯ | ೮,೨೪,೨೮ | ೯,೯೯,೩೩ | ೧೦,೦೦,೫೭ |
| | ವೆಚ್ಚ | ೭,೮೪,೭೮ | ೧೦,೨೭,೫೧ | ೧೦,೯೦,೭೦ |
| | ಉಳಿತಾಯ ಅಥವಾ ಕೊರತೆ | ೩೯,೫೦ | –೨೮,೧೮ | –೧,೯೦,೧೩ |
| ಬಿಹಾರ ಹಾಗೂ ಒರಿಸ್ಸಾ | ಆದಾಯ | ೪,೩೦,೩೯ | ೪,೪೬,೧೫ | ೪,೬೨,೬೫ |
| | ವೆಚ್ಚ | ೪,೨೦,೭೦ | ೪,೮೫,೯೭ | ೫,೧೩,೮೦ |
| | ಉಳಿತಾಯ ಅಥವಾ ಕೊರತೆ | ೯೦,೬೯ | –೩೯,೮೨ | –೫೧,೧೫ |
| ಕೇಂದ್ರೀಯ ಪ್ರಾಂತ್ಯಗಳು | ಆದಾಯ | ೪,೩೫,೩೭ | ೫,೧೪,೮೦ | ೫,೩೫,೨೩ |
| | ವೆಚ್ಚ | ೪,೩೮,೮೦ | ೫,೪೧,೭೬ | ೫,೭೨,೧೭ |
| | ಉಳಿತಾಯ ಅಥವಾ ಕೊರತೆ | –೩,೪೩ | –೨೬,೯೬ | –೩೬,೯೪ |
| ಅಸ್ಸಾಂ | ಆದಾಯ | ೧,೮೧,೪೬ | ೨,೦೧,೧೨ | ೨,೦೮,೦೬ |
| | ವೆಚ್ಚ | ೧,೭೮,೨೫ | ೨,೧೯,೪೫ | ೨,೨೨,೫೮ |
| | ಉಳಿತಾಯ ಅಥವಾ ಕೊರತೆ | ೩,೨೧ | –೧೮,೩೩ | –೧೪,೫೨ |

೧೯೨೨–೨೩ರ ಒಂಬತ್ತು ಪ್ರಾಂತ್ಯಗಳ ಅಂದಾಜಿನ ಆದಾಯ ಹಾಗೂ ವೆಚ್ಚಗಳನ್ನು ತೆಗೆದುಕೊಂಡಾಗ, ಪ್ರಚಲಿತ ಆದಾಯ ಹಾಗೂ ವೆಚ್ಚಗಳ ನಡುವಿನ ಸಮತೋಲನವನ್ನು ಕೇವಲ ಬರ್ಮಾ ಮತ್ತು ಬಂಗಾಳ ಎರಡರಲ್ಲಿ ಮಾತ್ರ ಕಾಣಬಹುದು. ಎರಡನೆಯದರಲ್ಲಿ ಕೇಂದ್ರ ಸರ್ಕಾರಕ್ಕೆ ಅದು ಕೊಡುವ ಕೊಡುಗೆಗಳನ್ನು ತಾತ್ಕಾಲಿಕ ಮಾಫಿ[1] ಸಿಕ್ಕಿದ್ದರಿಂದ ಮತ್ತು ರೂ. ೧೪೦ಲಕ್ಷ ತರುವ ಕರ ಯೋಜನೆಯಿಂದ ಈ ಪರಿಣಾಮ ಸಾಧ್ಯವಾಯಿತು. ಇನ್ನುಳಿದ ಪ್ರಾಂತ್ಯಗಳಲ್ಲಿ ಆ ವರ್ಷದ ಕೊರತೆಗಳು ರೂ. ೭.೭೪ಲಕ್ಷ ಮುಟ್ಟಿದವು. ರೂ. ೩.೫೨ಲಕ್ಷ ಹೊಸ[2] ಕರಗಳನ್ನು ವಿಧಿಸುವ ಮೂಲಕ ಮತ್ತು ಉಳಿದದ್ದಕ್ಕೆ ಶಿಲ್ಕಿನಿಂದ ಹಣವನ್ನು ತೆಗೆದುಕೊಳ್ಳುವ ಮೂಲಕ, ಸಾರ್ವಜನಿಕರಿಂದ ಹಾಗೂ ಕೇಂದ್ರ ಸರ್ಕಾರದಿಂದ ಸಾಲ ಎತ್ತುವ ಮೂಲಕ ಈ ಕೊರತೆಯನ್ನು ನೀಗಿಸಲಾಗಿತ್ತು . ಆದರೆ ಸೆಕ್ರೆಟರಿ ಆಫ್ ಸ್ಟೇಟ್ ತನ್ನ ಪತ್ರದಲ್ಲಿ ಕೆಳಗೆ ಕೊಟ್ಟಿರುವುದನ್ನು ಎತ್ತಿತೋರಿಸಿದನು.[3]

"ಪ್ರಾಂತೀಯ ಕೊರತೆಗಳಿಗೆ ಹಿಂದಿನ ಆದಾಯದ ಸಂಚಯಿತ ಬಾಕಿಗಳಿಂದ ಭಾಗಶಃ ಹಣ ಒದಗಿಸುವ ಕಾರ್ಯಗತಿ ಈಗ ಕೊನೆಗೊಳ್ಳಲಿದೆ. ಏಕೆಂದರೆ ಪ್ರಚಲಿತ ಹಣಕಾಸಿನ ವರ್ಷದ ಕೊನೆಗೆ.... ಅಂಥ ಬಾಕಿಗಳು ಸಾಮಾನ್ಯವಾಗಿ ಮುಗಿದುಹೋಗುತ್ತವೆ. ಭಾರತ ಸರ್ಕಾರಕ್ಕೆ ಗಂಡಾಂತರ ತರಬಲ್ಲ ಪ್ರಾಂತ್ಯಗಳ ಹಣಕಾಸಿನ ಸ್ಥಿರತೆಯನ್ನು ಕಡೆಗಣಿಸಬಾರದು ಎಂದಿದ್ದರೆ, ಪ್ರಾಂತೀಯ ಕೊರತೆಯ ಸರಣಿಗೆ ಸಾರ್ವಜನಿಕರಿಂದ ನೇರವಾಗಿ ಅಥವಾ ಕೇಂದ್ರ ಸರ್ಕಾದಿಂದ ಸಾಲ ಪಡೆದು ಹಣ ಒದಗಿಸುವ ಪದ್ಧತಿ ಮುಂದುವರಿಯುವುದನ್ನು ಆಲೋಚಿಸಲೂ ಸಾಧ್ಯವಿಲ್ಲ ." ಇದಕ್ಕೆ ಉಪಾಯವೇನು? "ಕೇಂದ್ರ ಸರ್ಕಾರ ಹಾಗೂ ಪ್ರಾಂತ್ಯಗಳ ನಡುವಿನ ಹಣಕಾಸಿನ ವ್ಯವಸ್ಥೆಗೆ ಸಂಬಂಧಿಸಿದ ವಿಷಯಗಳನ್ನು ವಿಚಾರಿಸಲು "ಏಪ್ರಿಲ್ ೧೯೨೨ರಲ್ಲಿ ಸಿಮ್ಲಾದಲ್ಲಿ ನಡೆದ ಸಮ್ಮೇಳನದಲ್ಲಿ ಸ್ಥಿರ ಆಧಾರದ ಮೇಲೆ ಪ್ರಾಂತೀಯ ಹಣಕಾಸನ್ನು ಮರು ಸಜ್ಜುಗೊಳಿಸುವ ಉಪಾಯದ ವಿಷಯದಲ್ಲಿ ಕೇಂದ್ರ ಸರ್ಕಾರ ಹಾಗೂ ಪ್ರಾಂತ್ಯಗಳಲ್ಲಿ ಭಿನ್ನಾಭಿಪ್ರಾಯವಿತ್ತೆಂದು ತಿಳಿಯಿತು.[4] ಸುಧಾರಣೆಗಳ ಕಾಯಿದೆಯು ಮಾಡಿದ ಹಣಕಾಸಿನ ವ್ಯವಸ್ಥೆಗಳನ್ನು ಪರಿಷ್ಕೃತಗೊಳಿಸಿ, ತಮ್ಮ ಸಂಪನ್ಮೂಲಗಳನ್ನು ಹೆಚ್ಚಿಸುವ ವಿಧಾನಗಳನ್ನು ಪ್ರಾಂತ್ಯಗಳು ಪ್ರಸ್ತಾಪಿಸಿದವು." ವ್ಯತಿರಿಕ್ತವಾಗಿ ಭಾರತ ಸರ್ಕಾರದ ವಕ್ತಾರನಾದ ಸೆಕ್ರೆಟರಿ ಆಫ್ ಸ್ಟೇಟ್ ಹೀಗೆ ವಾದಿಸಿದನು:

"ವೆಚ್ಚವನ್ನು ಕಡಿಮೆ ಮಾಡುವ ಮೂಲಕ ಹಾಗೂ ಆದಾಯಗಳನ್ನು ಹೆಚ್ಚಿಸುವ ಮಾರ್ಗವನ್ನು ಅನುಸರಿಸುವ ಮೂಲಕ ಮಾತ್ರ ಸಮತೋಲನವನ್ನು ಹೊಂದಬಹುದು."[5]

---

೧. *ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೆಟ್ಸ್*, ಸಂ. III ಸಂಖ್ಯೆ ೮.

೨. ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಇಂಡಿಯಾ ಸರ್ಕಾರದ ಪತ್ರ , ಹಣಕಾಸು ಇಲಾಖೆ ೧೯೨೨ ಜುಲೈ ೧೩ರ ಸಂಖ್ಯೆ ೧೩.

೩. ಮೇಲೆ ನಮೂದಿಸಿದ ಪತ್ರಕ್ಕೆ ಸೆಕ್ರೆಟರಿ ಆಫ್ ಸ್ಟೇಟ್‌ರವರ (ಹಣಕಾಸು) ಉತ್ತರ, ಸಂಖ್ಯೆ ೧೭ ನವೆಂಬರ್ ೯, ೧೯೨೨.

೪. ಈ ಸಮ್ಮೇಳನದ ಪರಿಣಾಮದ ಸಾರಾಂಶಕ್ಕಾಗಿ ಮೇಲೆ ಹೇಳಲಾದ ಇಂಡಿಯಾ ಸರ್ಕಾರದ ಪತ್ರವನ್ನು ನೋಡಿರಿ; ಪು. ೨೫೭

೫. ಸೆಕ್ರೆಟರಿ ಆಫ್ ಸ್ಟೇಟ್‌ರವರ ಲಿಖಿತ ಸಮಾಚಾರ, ಮೇಲ್ಕಾಣಿಸಿದ ಪು. ೨೫೭

ಈ ಕಾಯಿದೆಯಿಂದ ಉಂಟಾದ ವ್ಯವಸ್ಥೆಗಳ ಪರಿಷ್ಕರಣೆಗಾಗಿ ಮಾಡಿದ ಸೂಚನೆಗಳ ವಿಷಯದಲ್ಲಿ ಪ್ರಾಂತ್ಯಗಳಲ್ಲಿ ಒಮ್ಮತವಿರಲಿಲ್ಲ. ಮುಂಬಯಿ ಸರ್ಕಾರದಂತೆ ಕೆಲವು ಪ್ರಾಂತ್ಯಗಳು ವಿಭಜಿತ ಬಾಬತ್ತುಗಳ ಪದ್ಧತಿಗೆ ಮರಳಬೇಕೆಂದು ಸೂಚಿಸಿದವು. ಉಳಿದವುಗಳು ಇದಕ್ಕೆ ವಿರೋಧ ವ್ಯಕ್ತಪಡಿಸಿದವು. ಕೊಡುಗೆಗಳನ್ನು ತೆಗೆದುಹಾಕುವ ಮೂಲಕ ಪರಿಹಾರವನ್ನು ದೊರಕಿಸುವುದಕ್ಕೆ ಬಹುಮತವಿತ್ತು. ಹೊಸ ಹಣಕಾಸಿನ ವ್ಯವಸ್ಥೆ ಬಗೆಗಿನ ಪ್ರಾಂತ್ಯಗಳಲ್ಲೊ ಅಸಮಂಜಸವಾದ ಮನೋಭಾವವಿತ್ತು. ವಿಭಜಿತ ಬಾಬತ್ತುಗಳ ಪದ್ಧತಿ ಹಾಗೂ ಕೊಡುಗೆಯ ಪದ್ಧತಿಗಳೆರಡಕ್ಕೂ ಅವುಗಳು ವಿರೋಧವಾಗಿದ್ದವು. ಉಭಯ ಮಾರ್ಗಗಳಿಂದಲೂ ಲಾಭ ಪಡೆಯುವುದು ಇದಾಗಿದ್ದಿತು. ದೇಶದ ಸಂಪನ್ಮೂಲಗಳ ಸರಿಯಾದ ಉಪಯೋಗವಾಗಿದ್ದರೆ ಅದು ಅವುಗಳಿಗೆ ಸಾಧ್ಯವಾಗುತ್ತಿತ್ತು. ಹಣಕಾಸಿನ ಅಡಚಣೆ ಯಾವಾಗಲೂ ಆದಾಯದ ಸಂಪನ್ಮೂಲಗಳ ಕೊರತೆಯಿಂದ ಆದದ್ದಲ್ಲ. ರಾಷ್ಟ್ರೀಯ ಅಭಿವೃದ್ಧಿ ಹೆಚ್ಚಿರಬಹುದು ಅಥವಾ ಬೆಳೆಯುತ್ತಿರಬಹುದು ಮತ್ತು ರಾಷ್ಟ್ರೀಯ ಸಂಪತ್ತು ತಡೆಯಿಲ್ಲದೆ ಮುಂದುವರಿಯುತ್ತಿರಬಹುದು. ಅಂಥ ಪರಿಸ್ಥಿತಿಯಲ್ಲಿ ಸಾಕಷ್ಟು ಆದಾಯವನ್ನು ಪಡೆಯದಿದ್ದಲ್ಲಿ, ಅದು ಸಾಮಾಜಿಕ ಆದಾಯದ ತಪ್ಪಲ್ಲ. ರಾಷ್ಟ್ರೀಯ ಸಂಪನ್ಮೂಲಗಳನ್ನು ವಿತ್ತೀಯ ಉಪಯೋಗಗಳಿಗಾಗಿ ಬಳಸಲು ವಿಫಲವಾದ ಸರ್ಕಾರದ ತಪ್ಪು, ಭಾರತ ಸರ್ಕಾರದ ವಿಷಯದಲ್ಲಿ ಕೆಲವು ಮಟ್ಟಿಗೆ ಇದು ನಿಜ.

ಸರ್ಕಾರವು ಎರಡು ಆದಾಯ ಮೂಲಗಳನ್ನು ಸರಿಯಾಗಿ ಉಪಯೋಗಿಸಿಕೊಂಡಿಲ್ಲವೆಂದು ರಾಷ್ಟ್ರೀಯ ಸಂಪನ್ಮೂಲಗಳ ನಿರೀಕ್ಷಣೆಯಿಂದ ಸ್ಪಷ್ಟವಾಗುತ್ತದೆ. ಮೊದಲನೆಯದು ಭೂಕಂದಾಯ. ಭಾರತ ಸರ್ಕಾರಕ್ಕೆ ಭೂಕಂದಾಯ ಅತಿ ದೊಡ್ಡ ಸಂಪನ್ಮೂಲವಾಗಿದೆಯೆಂಬುದು ಕುಪ್ರಸಿದ್ಧವಿದೆ. ಭೂಕಂದಾಯ ವಸೂಲಿಯಲ್ಲಿ ಪ್ರತಿಯೊಬ್ಬ ಭೂ ಹಿಡುವಳಿದಾರನು ಕೊಡುಗೆಯ ಕೆಳಗೆ ಬರುತ್ತಾನೆ. ಆದರೆ ಪ್ರತಿಯೊಬ್ಬನಿಗೂ ಕಂದಾಯದ ದರದಲ್ಲಿ ಮೇಲಿಂದ ಮೇಲೆ ಹೆಚ್ಚಳವಾಗುವುದಿಲ್ಲ. ಅಷ್ಟೇ ಅಲ್ಲ, ಬಂಗಾಳ ಮತ್ತು ಭಾರತದ ಇನ್ನುಳಿದ ಭಾಗಗಳಲ್ಲಿ ಕಂದಾಯದ ದರವನ್ನು ಶಾಶ್ವತವಾಗಿ ಗೊತ್ತುಪಡಿಸಲಾಗಿದೆ. ಪರಿಣಾಮವಾಗಿ ಸ್ಥಿರ ಸರ್ಕಾರವನ್ನು ಹೊಂದಿದ ಮತ್ತು ಅದರಿಂದ ಬಂಡವಾಳ ಒಳಕ್ಕೆ ಹರಿದು ಬಂದ ಭಾರತದ ಅಂಥ ಭಾಗಗಳು ಉಳಿದವುಗಳಿಗಿಂತ ಹೆಚ್ಚಿನ ಅಭಿವೃದ್ಧಿ ಹೊಂದಿದವು. ಭೂಕಂದಾಯದಲ್ಲಿ ಹೆಚ್ಚಳವಿಲ್ಲದ್ದರಿಂದ ಭೂಮಾಲೀಕರ ಆದಾಯ ಹೆಚ್ಚಿದರೂ ಅವರು ಸರ್ಕಾರದ ಹಣಕಾಸಿನ ಭಾರದ ಹೆಚ್ಚಳಕ್ಕೆ ಯಾವ ಕೊಡುಗೆಗಳನ್ನು ನೀಡುತ್ತಿರಲಿಲ್ಲ. ಲಾರ್ಡ್ ಕ್ಯಾನಿಂಗ್‌ನ ದಿನಗಳಿಂದಲೂ ಶಾಶ್ವತ ವ್ಯವಸ್ಥೆ ಜನರ ಹಣಕಾಸಿನ ಪರಿಸ್ಥಿತಿಯನ್ನು ಸುಧಾರಿಸಲು ರಾಮಬಾಣವೆಂದು ಸೂಚಿಸಲಾಗಿದೆ. ೧೮೬೦ರ ತೀಕ್ಷ್ಣವಾದ ಬರಗಾಲದ ನಂತರ ಅಂದಿನ ವೈಸ್‌ರಾಯ್ ಮತ್ತು ಭಾರತದ ಗವರ್ನರ್–ಜನರಲ್ ಲಾರ್ಡ್ ಕ್ಯಾನಿಂಗರು ಶಾಶ್ವತ ವ್ಯವಸ್ಥೆಯನ್ನು ಭಾರತದ ಎಲ್ಲ ಭಾಗಗಳಿಗೂ ವಿಸ್ತರಿಸಲು ಶಿಫಾರಸು ಮಾಡಿದರು. ಸರ್ ಜಾನ್ (ನಂತರ ಲಾರ್ಡ್) ಲಾರೆನ್ಸರು ಈ ಶಿಫಾರಸುಗಳನ್ನು ಸಮರ್ಥಿಸಿದರು ಮತ್ತು ಭಾರತದ ಇಬ್ಬರು ಸೆಕ್ರೆಟರಿ ಆಫ್ ಸ್ಟೇಟ್, ಸರ್ ಚಾರ್ಲಸ್‌ವುಡ್ ಮತ್ತು ಸರ್ ಸ್ಟೆಫೋರ್ಡ್ ನಾರ್ಥ್‌ಕೋಟ್‌ರು ಈ ಪ್ರಸ್ತಾವನೆಗಳಿಗೆ ಅನುಮತಿಸಿದರು. ಶಾಶ್ವತ ವ್ಯವಸ್ಥೆಯನ್ನು ಸಾರ್ವತ್ರಿಕವಾಗಿ ಮಾಡುವ ಪ್ರಸ್ತಾವನೆಯು ದೇಶದ ಸುದೈವದಿಂದ ಕೊನೆಗೆ ೧೮೮೫ರಲ್ಲಿ ತಿರಸ್ಕರಿಸಲ್ಪಟ್ಟಿತು. ಈ ನಿರ್ಣಯ ದುರದೃಷ್ಟಕರವಾದದ್ದೆಂದು ಕೆಲವರು ತಿಳಿದು ಶಾಶ್ವತ ವ್ಯವಸ್ಥೆಯ ಪರವಾಗಿ ಆನಂತರ ಎಷ್ಟೋ ದಿನಗಳವರೆಗೆ ಚಳವಳಿಯನ್ನು ಮುಂದುವರಿಸಿದರು. ಈ ಚಳವಳಿಯ ನಿಜವಾದ ಬಲ, ಪರಕೀಯ ಹಾಗೂ ಬೇಜವಾಬ್ದಾರಿ ಆಡಳಿತವರ್ಗದ ಹಣಕಾಸಿನ ಸಂಪನ್ಮೂಲಗಳ ಮೇಲೆ ಮಿತಿಯನ್ನು ಹಾಕುವ ಉದ್ದೇಶದಿಂದ ಬಂದದ್ದಾಗಿತ್ತು. ಒಂದು ದಿನ ಈ

ಬೇಜವಾಬ್ದಾರಿ ಆಡಳಿತವರ್ಗ ಜನರ ಜವಾಬ್ದಾರಿ ಸರ್ಕಾರಕ್ಕೆ ಅನುವುಮಾಡಿಕೊಡಬಲ್ಲದು ಮತ್ತು ಆಡಳಿತವರ್ಗದ ಅನಿರ್ಬಂಧಿತ ಸ್ವಚ್ಛಂದ ಪ್ರವೃತ್ತಿ ತಡೆಯಲು ಸ್ಥಾಪಿಸಬೇಕೆಂದಿದ್ದ ಶಾಶ್ವತ ವ್ಯವಸ್ಥೆ, ಪ್ರಗತಿಪರ ಮಾರ್ಗ ಪ್ರವೇಶಿಸುವ ಜನಪ್ರಿಯ ಸರ್ಕಾರದ ಸ್ವಾತಂತ್ರಕ್ಕೆ ಬೇಡಿ ಹಾಕಿದಂತಾಗುತ್ತದೆ ಎಂಬುದು, ಶಾಶ್ವತ ವ್ಯವಸ್ಥೆಯ ಪರ ಚಳವಳಿ ಮಾಡಿದ ಜನರಿಗೆ ಮನವರಿಕೆಯಾಗಿರಲಿಲ್ಲ. ಒಂದು ಕೆಟ್ಟ ಸರ್ಕಾರ ತನ್ನ ಹಣಕಾಸಿನ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳಬಹುದು. ಆದರೆ ಹಣಕಾಸಿನ ಅಧಿಕಾರದ ಮೇಲೆ ಮಿತಿ ಇರಿಸಿದ ಯಾವ ಸರ್ಕಾರವೂ ಒಳ್ಳೆಯ ಸರ್ಕಾರವಾಗಲಾರದು. ಈ ದುಷ್ಟ, ಶಾಶ್ವತ ವ್ಯವಸ್ಥೆ ಭಾರತದಲ್ಲೆಲ್ಲಾ ಹರಡಲು ಬಿಡಲಿಲ್ಲವಾದ್ದರಿಂದ ಒಳ್ಳೆಯದಾಯಿತು. ಹೊಸ ಹಣಕಾಸಿನ ವ್ಯವಸ್ಥೆಗಳು, ನಿಯತಕಾಲಿಕ ವ್ಯವಸ್ಥೆಯ ಪದ್ಧತಿಯಿಂದ, ಭೂಕಂದಾಯದ ಶಾಶ್ವತ ವ್ಯವಸ್ಥೆಯ ಪದ್ಧತಿಯನ್ನು ತೆಗೆದುಹಾಕುವ ಉಪಾಯ ಯೋಚಿಸಿದ್ದರೆ ಒಳ್ಳೆಯದಾಗುತ್ತಿತ್ತು. ದೇಶದ ಸಾಮಾನ್ಯ ಸಂಪನ್ಮೂಲಗಳನ್ನು ಹೆಚ್ಚಿಸುವ ಮತ್ತು ತನ್ಮೂಲಕ ಸಂಬಂಧಪಟ್ಟ ಎಲ್ಲ ಸರ್ಕಾರಗಳಿಗೂ ಯಥೋಚಿತತೆಯನ್ನು ಕೊಡುವ ಒಂದು ಮುಖ್ಯಮಾರ್ಗ ಇದಾಗಿತ್ತು. ಅದರ ಬದಲು ಹಣಕಾಸಿನ ವ್ಯವಸ್ಥೆಗಳು ಈ ರೀತಿಯಾಗದಂತೆ ರೂಪಿಸಲಾಯಿತು.

"ಶಾಶ್ವತ ಪದ್ಧತಿಯನ್ನು ಮರು ವಿಚಾರಿಸುವಂತೆ, ಶಾಶ್ವತ ವ್ಯವಸ್ಥೆಗೊಳಪಟ್ಟ ಪ್ರಾಂತ್ಯಗಳನ್ನು ಹಣಕಾಸಿನ ಒತ್ತಡಕ್ಕೆ ಒಳಪಡಿಸುವುದು."[೧]

ಇದು ಒಂದು ವೇಳೆ ಆಗಿದ್ದರೆ, ಎಲ್ಲರಿಗೂ ಅನುಕೂಲವಾಗುವಂತೆ ಸಾಮಾನ್ಯ ಸಂಪನ್ಮೂಲಗಳನ್ನು ಇದು ಹೆಚ್ಚಿಸಬಹುದಾಗಿತ್ತು. ಆದರೆ ಶಾಶ್ವತ ವ್ಯವಸ್ಥೆಯ ಉಳಿತಾಯಕ್ಕಾಗಿ ನಿಯಮಗಳನ್ನು ಮಾಡಿದ್ದಲ್ಲದೆ, ಅತೀ ಹೆಚ್ಚಿನ ಸಂಖ್ಯೆಯಲ್ಲಿ ಶಾಶ್ವತ ಪದ್ಧತಿಯಲ್ಲಿ ಭೂ ಹಿಡುವಳಿಗಳನ್ನು ಹೊಂದಿದ ಬಂಗಾಲ ಸರ್ಕಾರವು ಭಾರತ ಸರ್ಕಾರಕ್ಕೆ ಕೊಡುಗೆಗಳನ್ನು ಕೊಡದಂತೆ ವಿನಾಯಿತಿ ಕೊಡಲಾಯಿತು. ಇದರಿಂದಾಗಿ ಭಾರತ ಸರ್ಕಾರವು ತನ್ನ ಕೊರತೆಯನ್ನು ನೀಗಿಸಲು ಬೇರೆ ಉಪಾಯಗಳನ್ನು ಅನುಸರಿಸಬೇಕಾಯಿತು.

ಹೊಸ ಹಣಕಾಸಿನ ವ್ಯವಸ್ಥೆಗಳಿಗೆ ಯಥೋಚಿತತೆಯನ್ನು ಕೊಡುವ ದೃಷ್ಟಿಯಿಂದ ಸರ್ಕಾರ ಉಪಯೋಗಿಸಬಹುದಾಗಿದ್ದ ಒಂದು ಆದಾಯ ಮೂಲ ಭೂಕಂದಾಯವಾಗಿದೆ. ಸರ್ಕಾರ ಉಪಯೋಗಿಸಲು ನಿರಾಕರಿಸುವ ಇನ್ನೊಂದು ಆದಾಯ ಮೂಲ ವಿದೇಶೀ ವ್ಯಾಪಾರಿ ಸುಂಕದ ಆದಾಯ. ಸೈನಿಕ ಬಂಡಾಯದ ಪೂರ್ವದ ದಿನಗಳಲ್ಲಿ ಅಳವಡಿಸಿಕೊಂಡ ವಿತ್ತ ನೀತಿಯು ಆತ್ಮಹತ್ಯಾ ಲಕ್ಷಣದ್ದಾಗಿತ್ತು. ಬಂಡಾಯದ ನಂತರದ ವಿತ್ತ ನೀತಿಯೂ ಅದೇ ಆಗಿತ್ತು. ಬಂಡಾಯದಿಂದ ಇಲ್ಲಿಯವರೆಗೆ ರಾಜ್ಯದ ಆವಶ್ಯಕತೆಗಳನ್ನು ಪೂರೈಸಲು ವಿದೇಶೀ ವ್ಯಾಪಾರಿ ಸುಂಕ ಒಂದು ಸಂಪನ್ಮೂಲವೆಂದು ಭಾರತ ಸರ್ಕಾರ ತಿಳಿಯಲಿಲ್ಲ. ಅದನ್ನು ಉಪಯೋಗಿಸಿದಾಗಲೂ, ಸಂಪೂರ್ಣವಾಗಿ ಉಪಯೋಗಿಸದೆ, ಅರ್ಧ ಮನಸ್ಸಿನಿಂದ ಉಪಯೋಗಿಸಿದೆ. ಅಷ್ಟೇ ಅಲ್ಲ ಈ ಮೂಲದಿಂದ ತನ್ನ ಆದಾಯವನ್ನು ಎಷ್ಟೋ ವೇಳೆ ಅದು ಕಡಿಮೆ ಮಾಡಿದೆ.[೨] ವಿದೇಶೀ ವ್ಯಾಪಾರಿ ಸುಂಕ ತತ್ವಶಃ ತಪ್ಪು ಎಂದು ತನ್ನ ವಿತ್ತನೀತಿಯ ಪರ ಕಾರಣಗಳನ್ನು ಕೊಡಲಾಗಿದೆ. ಇದರಿಂದ ಬ್ರಿಟಿಷ್ ಉದ್ದಿಮೆಗಳ ವಿರುದ್ಧ ಭಾರತದ ಉದ್ದಿಮೆಗಳು ಸಂರಕ್ಷಿಸಲ್ಪಡುತ್ತವೆಯಾದ

---

೧. ಜಂಟಿ ವರದಿ, ಪು. ೧೭೧

೨. ೧೮೮೦–೮೧ ರ ಹಣಕಾಸು ವಿವರಣ ಪತ್ರ, ಪ್ಯಾರಾ, ೭೪

ಕಾರಣ ವಿದೇಶೀ ವ್ಯಾಪಾರ ಸುಂಕವನ್ನು ಭಾರತದಲ್ಲಿ ಎತ್ತಿಲ್ಲವೆಂದು ಎಲ್ಲರಿಗೂ ಗೊತ್ತಿದೆ. ಭಾರತದ ಸಂಪೂರ್ಣ ನೀತಿ ಇಂಗ್ಲಿಷ್ ಉದ್ದಿಮೆಗಳ ಅನುಕೂಲತೆಯಿಂದ ಪ್ರೇರಿತವಾಗಿದೆಯೆನ್ನುವುದು ನಿರ್ವಿವಾದವಾದದ್ದು ಮತ್ತು ಅದಕ್ಕೆ ಕಾರಣಗಳನ್ನು ಹುಡುಕಲು ದೂರ ಹೋಗಬೇಕಾಗಿಲ್ಲ. ಭಾರತದ ಶ್ರೇಷ್ಠ ಕಾರ್ಯನಿರ್ವಾಹಕನಾದ ಭಾರತದ ಸೆಕ್ರೆಟರಿ ಆಫ್ ಸ್ಟೇಟ್, ತಮ್ಮ ಮಾರುಕಟ್ಟೆಗಳು ಮುಚ್ಚಬಾರದೆಂಬ ಮುಖ್ಯ ಆಸಕ್ತಿ ಹೊಂದಿದ್ದ ಇಂಗ್ಲಿಷ್ ಮತದಾರರಿಗೆ ಬಗ್ಗುವಂಥವನಾಗಿದ್ದನು. ಸಂರಕ್ಷಣೆಯ ನೀತಿ ಒಳ್ಳೆಯದೋ ಅಥವಾ ಕೆಟ್ಟದ್ದೋ ಎಂಬುದು ಮತ್ತೊಂದು ಪ್ರಶ್ನೆ. ಬಹಳ ಸ್ಥಿತಿಸ್ಥಾಪಕವನ್ನು ಹೊಂದಿದ, ಹಣಕಾಸಿನ ಸಂಪನ್ಮೂಲಗಳಿಂದ ಸಮೃದ್ಧಿ ಹೊಂದಿದೆಯೆಂದು ಎಲ್ಲಕಡೆಗೂ ಸಿದ್ಧಪಡಿಸಿದ ಆದಾಯ ಮೂಲವನ್ನು ಉಪಯೋಗಿಸದಂತೆ, ಭಾರತ ಸರ್ಕಾರದ ವಿತ್ತ ಅಧಿಕಾರದ ಮೇಲೆ ಮಿತಿಗಳನ್ನಿಡಲಾಗಿದೆ ಎಂಬುದನ್ನು ಇಲ್ಲಿ ಗಮನಿಸಿದರೆ ಸಾಕು. ಈ ಮಿತಿಗಳು ಇರದೆ ಹೋಗಿದ್ದರೆ ಸದ್ಯದ ಹಣಕಾಸಿನ ಅಡಚಣೆ ಬಹುಮಟ್ಟಿಗೆ ಇರುತ್ತಿರಲಿಲ್ಲ ಮತ್ತು ವಿಭಜಿತ ಬಾಬತ್ತುಗಳ ಪದ್ಧತಿಯನ್ನು ಅಳವಡಿಸಿಕೊಳ್ಳುವ ಅಥವಾ ಕೊಡುಗೆಗಳನ್ನು ವಿಧಿಸುವ ಆವಶ್ಯಕತೆ ಇರುತ್ತಿರಲಿಲ್ಲ. ದೇಶದ ಕರಾಕರಣೆಯ ಸಂಪನ್ಮೂಲಗಳ ಮೇಲಿನ ಮಿತಿಯಿಂದಾಗಿ ಕೇಂದ್ರ ಸರ್ಕಾರದ ಆಯವ್ಯಯ ಪಟ್ಟಿಯಲ್ಲಿ ಕೊರತೆ ಅನಿವಾರ್ಯವಾಯಿತು. ಪರಿಸ್ಥಿತಿ ಹೀಗಿರುವಾಗ ಆ ಕೊರತೆಯನ್ನು ಭರಿಸಲು ಬೇರೆ ಮಾರ್ಗಗಳನ್ನು ಅನುಸರಿಸುವುದು ಅತ್ಯಗತ್ಯವಾಗಿತ್ತು ಮತ್ತು ಕೈ ಬಿಡಲಾದ ಪದ್ಧತಿಗಿಂತ ಅಳವಡಿಸಿಕೊಂಡ ಪದ್ಧತಿ ಉತ್ತಮವಾಗಿತ್ತೆಂಬುದರಲ್ಲಿ ಯಾವ ಸಂಶಯವೂ ಇಲ್ಲ. ಸದ್ಯದ ಕೇಂದ್ರ ಸರ್ಕಾರದ ಹಣಕಾಸಿನ ಪರಿಸ್ಥಿತಿಯಲ್ಲಿ ಕೊಡುಗೆಗಳು ತೀರ್ಮಾನಿತ ವಿಷಯವೆಂದು ತಿಳಿಯಬೇಕು. ಕೊಡುಗೆಗಳ ನಿರ್ಮೂಲನೆಯು ಪ್ರಾಂತೀಯ ಹಣಕಾಸಿಗೆ ಸ್ಥಿರತೆಯನ್ನು ಕೊಡಬಲ್ಲದೆಂದು ಹೇಳಲಿಕ್ಕಾಗದು. ಪ್ರಾಂತೀಯ ಸರ್ಕಾರಗಳ ಹಾಗೂ ಅನಧಿಕೃತ ರಾಜಕಾರಣಿಗಳ ಸದ್ಯದ ವಿಚಾರವೂ ಇದಾಗಿದೆ. ಭಾರತ ಸರ್ಕಾರ ಕೊಡುಗೆಗಳನ್ನು ತೆಗೆದುಹಾಕಿದರೆ, ಪ್ರಾಂತ್ಯಗಳ ಹಣಕಾಸಿನ ಸ್ಥಿತಿಯಲ್ಲಿ ಅದು ಕೂಡಲೇ ಸಮತೋಲನೆಯನ್ನು ತರಬಲ್ಲದೆಂಬ ವಿಚಾರವನ್ನು ೧೪ ಸೆಪ್ಟೆಂಬರ್ ೧೯೨೨ರಂದು ಭಾರತದ ಶಾಸನಸಭೆಯಲ್ಲಿ ಮಂಡಿಸಿದ ನಿರ್ಣಯವು ಅವಲಂಬಿಸಿತ್ತು. ೧೯೨೨–೨೩ರ ಹಣಕಾಸಿನ ವರ್ಷದಲ್ಲಿ ಎಲ್ಲ ಪ್ರಾಂತ್ಯಗಳ ಒಟ್ಟು ಅಂದಾಜಿನ ಕೊರತೆ ೩೫೨ ಲಕ್ಷ ರೂಪಾಯಿಯಾಗುತ್ತದೆ ಎಂಬ ಭಾವನೆಯಿಂದ ಈ ನಂಬಿಕೆ ದೃಢವಾಗಿದೆ. ಸಾಮ್ರಾಜ್ಯ ಸರ್ಕಾರಕ್ಕೆ ಪ್ರಾಂತ್ಯಗಳ ಒಟ್ಟು ಕೊಡುಗೆ ೯೮೩ ಲಕ್ಷರೂಪಾಯಿಗಳಷ್ಟಾಗುತ್ತದೆ. ಈ ಮೊತ್ತವನ್ನು ಮನ್ನಾ ಮಾಡಿದರೆ ಪ್ರಾಂತೀಯ ಆಯವ್ಯಯ ಪಟ್ಟಿಗಳಲ್ಲಿಯ ಕೊರತೆ ಪೂರ್ಣ ಅಳಿಸಿಹೋಗುತ್ತದೆ. ಕಾಯಿದೆ ಮೇರೆಗೆ ಹಣಕಾಸಿನ ವ್ಯವಸ್ಥೆಯಿಂದ ಉತ್ಪನ್ನವಾದ ಪ್ರಾಂತ್ಯಗಳ ನಿಜವಾದ ಪರಿಸ್ಥಿತಿಯನ್ನು ೩೫೨ ಲಕ್ಷ ರೂಪಾಯಿಗಳ ಕೊರತೆ ತೋರಿಸುವುದಿಲ್ಲ. ಹೊಸ ವ್ಯವಸ್ಥೆಗಳಿಂದಾದ ಪ್ರಾಂತ್ಯಗಳ ನಿಜವಾದ ಪರಿಸ್ಥಿತಿಯನ್ನು ತರ್ಕಿಸಬೇಕಾದರೆ, ಹೊಸದಾಗಿ ವಿಧಿಸಿದ ಕರಗಳನ್ನು ಮತ್ತು ಸಾಮ್ರಾಜ್ಯದ ಖಜಾನೆಯ ಕೊಡುಗೆಗಳಲ್ಲಿ ಮಾಡಲಾದ ರಿಯಾಯಿತಿಯಿಂದ ಬಂಗಾಳಕ್ಕಾದ ಲಾಭವನ್ನು ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ. ಇವೆಲ್ಲವುಗಳಿಗೆ ಹೊಂದಾಣಿಕೆಮಾಡಿ ಕೊಡುಗೆಗಳು ಇಲ್ಲದಿದ್ದಾಗಿನ ಪ್ರಾಂತೀಯ ಪರಿಸ್ಥಿತಿಯನ್ನು ಮುಂದಿನ ತಃಖ್ತೆಯಲ್ಲಿ ನೋಡಬಹುದು:

## ಪ್ರಾಂತೀಯ ಹಣಕಾಸಿನ ಪರಿಸ್ಥಿತಿ, ೧೯೨೨-೨೩

(ಸಾವಿರ ರೂಪಾಯಿಗಳಲ್ಲಿ)

| ಪ್ರಾಂತ್ಯಗಳು | ಆದಾಯ | ವೆಚ್ಚ | ಉಳಿತಾಯ ಅಥವಾ ಕೊರತೆ |
|---|---|---|---|
| ಮದರಾಸು | ೧೫,೯೯,೦೦ | ೧೭,೧೮,೫೫ | – ೧,೧೯,೫೫ |
| ಮುಂಬಯಿ | ೧೪,೩೨,೦೬ | ೧೫,೪೨,೧೭ | – ೧,೧೦,೧೧ |
| ಬಂಗಾಳ | ೯,೧೫,೮೬ | ೧೦,೯೯,೯೦ | – ೧,೮೪,೦೪ |
| ಸಂಯುಕ್ತ ಪ್ರಾಂತ್ಯಗಳು | ೧೩,೫೮,೬೭ | ೧೩,೮೫,೬೫ | – ೨೬,೯೮ |
| ಪಂಜಾಬ್ | ೧೧,೩೮,೨೬ | ೧೨,೬೮,೪೪ | – ೧,೩೦,೧೮ |
| ಬರ್ಮಾ | ೧೦,೦೦,೫೭ | ೧೧,೯೦,೭೦ | – ೧,೯೦,೧೩ |
| ಬಿಹಾರ ಹಾಗೂ ಒರಿಸ್ಸಾ | ೪,೬೨,೬೫ | ೫,೧೩,೮೦ | – ೫೧,೧೫ |
| ಕೇಂದ್ರೀಯ ಪ್ರಾಂತ್ಯಗಳು | ೫,೩೫,೨೩ | ೫,೭೨,೧೭ | – ೩೬,೯೪ |
| ಅಸ್ಸಾಂ | ೨,೦೫,೦೬ | ೨,೨೨,೫೮ | – ೧೭,೫೨ |
| | **ಒಟ್ಟು ಕೊರತೆ** | | **– ೮,೬೬,೬೦** |

ಈ ಲೆಕ್ಕದ ಪ್ರಕಾರ ಪ್ರಾಂತ್ಯಗಳ ಒಟ್ಟು ಕೊರತೆಯು ೮೬೭ ಲಕ್ಷದಷ್ಟು ಆಗಬಹುದಾಗಿತ್ತು. ಆದರೆ ಈ ಲೆಕ್ಕಕ್ಕೆ ನಾವು ಇನ್ನಷ್ಟು ಹೊಂದಾಣಿಕೆಗಳನ್ನು ಮಾಡಬೇಕು. ಕೇಂದ್ರೀಯ ಪ್ರಾಂತ್ಯಗಳ ಆದಾಯದಲ್ಲಿ, ಪ್ರಾಂತ್ಯಗಳಲ್ಲಿ, ಉತ್ಪಾದನಾ ಕರದ ಹೆಚ್ಚಳದಿಂದ ಬಂದ ಮೊತ್ತವನ್ನು ಕಳೆಯಲು ಸಾಧ್ಯವಾಗಿಲ್ಲ. ಎರಡನೆಯದಾಗಿ ೧೯೨೨-೨೩ನೆಯ ವರ್ಷದ ಕೇಂದ್ರೀಯ ಪ್ರಾಂತ್ಯಗಳ ಆದಾಯ ಹಿಂದಿನ ವರ್ಷಗಳ ತಡೆಹಿಡಯಲ್ಪಟ್ಟ ಆದಾಯದ ವಸೂಲಿಗಳನ್ನು ಕೂಡಿದ್ದಾಗಿದೆ. ಇವುಗಳನ್ನು ಸರಿಪಡಿಸಿದರೆ ಪ್ರಾಂತ್ಯಗಳ ಒಟ್ಟು ಕೊರತೆ, ಕೊಡುಗೆಗಳ ಮನ್ನಾ ತುಂಬಲು ಸಾಧ್ಯವಿಲ್ಲದ ಸಂಖ್ಯೆಯನ್ನು ಮುಟ್ಟುತ್ತದೆ. ಆದ್ದರಿಂದ ಮನ್ನಾದಿಂದ ಕೇಂದ್ರ ಸರ್ಕಾರದ ಆಯವ್ಯಯ ಪಟ್ಟಿಯಲ್ಲಿ ಆದ ಹೆಚ್ಚಿನ ಕೊರತೆಯ ಹಣ ಒದಗಿಸಲು ಸಮಸ್ಯೆಯನ್ನು ಅಲಕ್ಷಿಸಿದರೂ, ಕೊಡುಗೆಗಳ ಮನ್ನಾ ಪ್ರಾಂತೀಯ ಹಣಕಾಸಿನ ಮುಗ್ಗಟ್ಟನ್ನು ನಿವಾರಿಸುವ ಅಸಮರ್ಪಕ ಉಪಾಯವೆಂದು ನಾವು ತೀರ್ಮಾನಿಸಬೇಕಾಗುತ್ತದೆ.

ಪ್ರಾಂತೀಯ ಹಣಕಾಸಿನ ಸಂಬಂಧದ ಕಠಿಣ ಪರಿಸ್ಥಿತಿಯನ್ನು ಕೊಡುಗೆಗಳ ಮನ್ನಾದಿಂದ ಸುಧಾರಿಸಲು ಸಾಧ್ಯವಾಗದೆ ಹೋದರೆ, ನಾವು ವಿಷಯದ ಮೂಲಕ್ಕೇ ಹೋಗಬೇಕು ಮತ್ತು ಆ ಪರಿಸ್ಥಿತಿಯನ್ನು ತಂದ ಕಾರಣಗಳಾವುವು ಎಂಬುದನ್ನು ವಿಚಾರಿಸಬೇಕು. ಪ್ರಾಂತ್ಯದ ಮಾಮೂಲಿನ ವೆಚ್ಚಗಳನ್ನು ಕಡಿಮೆ ಅಂದಾಜು ಮಾಡಿದ್ದರಿಂದ ಹೀಗಾಗಿರಬಹುದೇ? ಅಥವಾ ಪ್ರಾಂತ್ಯದ ಮಾಮೂಲಿನ ಆದಾಯಗಳನ್ನು ಹೆಚ್ಚು ಅಂದಾಜು ಮಾಡಿದ್ದರಿಂದ ಹೀಗಾಗಿರಬಹುದೇ? ಈ ಉದ್ದೇಶಕ್ಕಾಗಿ ನಾವು ಮೊದಲು ಪ್ರಾಂತ್ಯಗಳಿಗೆ ವಹಿಸಲಾದ ಸಂಪನ್ಮೂಲಗಳು, ಅವುಗಳ ಮಾಮೂಲಿನ ಆವಶ್ಯಕತೆಗಳಿಗೆ ಅಸಮರ್ಪಕವಾಗಿದ್ದವೆಂದು ಗೊತ್ತುಮಾಡಿಕೊಳ್ಳ ಬೇಕಾಗುತ್ತದೆ. ಕೆಳಗಿನ ತಃಖ್ತೆ ಪ್ರಮಾಣಿತ ಆದಾಯ ಹಾಗೂ ವೆಚ್ಚಗಳನ್ನು ತುಲನೆ ಮಾಡಿ, ವೆಚ್ಚದಲ್ಲಿ ಆಗಬಹುದಾದ ಹೆಚ್ಚಳವನ್ನು ನೀಗಿಸಲು ಅವುಗಳಲ್ಲಿಯ ಅಂತರವನ್ನು ತೋರಿಸುತ್ತದೆ.

## ಪ್ರಮಾಣಿತ ಆದಾಯ ಹಾಗೂ ಪ್ರಮಾಣಿತ ವೆಚ್ಚ

| ಪ್ರಾಂತ್ಯಗಳು | ಸಾಮಾನ್ಯ ನಿಗದಿತ ಆದಾಯ | ಸಾಮಾನ್ಯ ನಿಗದಿತ ವೆಚ್ಚ | ಸಾಮಾನ್ಯ ನಿಗದಿತ ವೆಚ್ಚ ಹಾಗೂ ಸಾಮಾನ್ಯ ನಿಗದಿತ ಆದಾಯದ ನಡುವಿನ ಅಂತರ |
|---|---|---|---|
| | ರೂ. | ರೂ. | ರೂ. |
| ಮದರಾಸು | ೧೪,೯೮,೦೨ | ೧೪,೦೭,೨೦ | ೯೦,೮೨ |
| ಮುಂಬಯಿ | ೧೨,೦೯,೭೦ | ೧೧,೫೫,೦೩ | ೫೪,೬೭ |
| ಬಂಗಾಳ | ೮,೫೫,೨೮ | ೮,೬೧,೧೩ | – ೫,೮೫ |
| ಸಂಯುಕ್ತ ಪ್ರಾಂತ್ಯಗಳು | ೧೨,೨೯,೮೮ | ೧೧,೦೬,೫೬ | ೧,೨೩,೩೨ |
| ಪಂಜಾಬ್ | ೯,೭೩,೫೧ | ೯,೧೦,೬೯ | ೬೨,೮೨ |
| ಬರ್ಮಾ | ೮,೨೪,೨೮ | ೭,೮೪,೭೮ | ೩೯,೫೦ |
| ಬಿಹಾರ ಹಾಗೂ ಒರಿಸ್ಸಾ | ೪,೩೦,೩೯ | ೪,೨೦,೭೦ | ೯,೬೯ |
| ಕೇಂದ್ರೀಯ ಪ್ರಾಂತ್ಯಗಳು | ೪,೩೫,೩೭ | ೪,೩೮,೮೦ | – ೩,೪೩ |
| ಅಸ್ಸಾಂ | ೧,೮೧,೪೬ | ೧,೭೮,೨೫ | ೩,೨೧ |

ಎರಡು ಪ್ರಾಂತ್ಯಗಳನ್ನು ಹೊರತುಪಡಿಸಿ ಸಾಮಾನ್ಯ ನಿಗದಿತ ಆದಾಯ ಸಾಮಾನ್ಯ ನಿಗದಿತ ವೆಚ್ಚಕ್ಕಿಂತ ಸಾಕಷ್ಟು ಹೆಚ್ಚಾಗಿದೆ ಎಂಬುದು ಇದರಿಂದ ಸ್ಪಷ್ಟವಾಗಿದೆ.

ಪ್ರಮಾಣಿತ ವೆಚ್ಚ ಸಾಮಾನ್ಯ ನಿಗದಿತ ಆದಾಯಕ್ಕಿಂತ ತುಸು ಹೆಚ್ಚು ಇದ್ದುದರಿಂದ ಬಂಗಾಳ ಹಾಗೂ ಕೇಂದ್ರೀಯ ಪ್ರಾಂತ್ಯಗಳಲ್ಲಿ ಮಾತ್ರ ಹೆಚ್ಚಿನ ಮೊತ್ತ ಉಳಿಯಲಿಲ್ಲ. ಬಂಗಾಳದ ವಿಷಯದಲ್ಲಿ ಕೇಂದ್ರ ಸರ್ಕಾರಕ್ಕೆ ಅದು ನೀಡುವ ಕೊಡುಗೆಗಳ ಮನ್ನಾದಿಂದ ಈ ಕೊರತೆಯನ್ನು ನಿವಾರಿಸಲಾಯಿತು. ಕೇಂದ್ರೀಯ ಪ್ರಾಂತ್ಯಗಳ ವಿಷಯದಲ್ಲಿ ಪ್ರಮಾಣಿತ ಆದಾಯಕ್ಕಿಂತ ಪ್ರಮಾಣಿತ ವೆಚ್ಚದ ಹೆಚ್ಚಳ ಬಹಳ ಕಡಿಮೆ ಇತ್ತು. ಇವುಗಳನ್ನು ಬಿಟ್ಟರೆ ಉಳಿದ ಪ್ರಾಂತ್ಯಗಳಲ್ಲಿ ಅನುಮತಿಸಿದ ಹೆಚ್ಚಿನ ಮೊತ್ತ ಸಾಕಷ್ಟಿತ್ತು. ನಾವೀಗ ನಿಜವಾದ ಅಂಕಿಸಂಖ್ಯೆಗಳನ್ನು ತೆಗೆದುಕೊಂಡು ಅವುಗಳನ್ನು ಪ್ರಮಾಣಿತ ಅಂಕಿಸಂಖ್ಯೆಗಳ ಜೊತೆ ತುಲನೆ ಮಾಡೋಣ. ಮೊದಲು ಪ್ರಾಂತೀಯ ಆಯವ್ಯಯಪಟ್ಟಿಗಳ ಆದಾಯದ ಭಾಗವನ್ನು ತೆಗೆದುಕೊಳ್ಳೋಣ. ದೊರಕಿದ ಆದಾಯ ಪ್ರಮಾಣಿತ ಆದಾಯಕ್ಕಿಂತ ಕಡಿಮೆಯಾಗಿದೆಯೇ? ಕೆಳಗಿನ ತಃಖ್ತೆ ಪ್ರಾಂತ್ಯಗಳಿಗೆ ದೊರಕಿದ ಆದಾಯವನ್ನು ಹೊಸ ಕಾಯಿದೆ ಅಡಿಯಲ್ಲಿ ಮಾಡಿದ ಹಣಕಾಸಿನ ಹಂಚುವಿಕೆಯ ಪ್ರಮಾಣಿತ ಅಂಕಿಸಂಖ್ಯೆಗಳ ಜೊತೆ ತುಲನೆ ಮಾಡುತ್ತದೆ.

## ಪ್ರಾಂತೀಯ ಆದಾಯಗಳು[೧]

| ಪ್ರಾಂತ್ಯಗಳು | ಸಾಮಾನ್ಯ ನಿಗದಿತ ಆದಾಯ | + ಸಾಮಾನ್ಯ ನಿಗದಿತ ಆದಾಯದಲ್ಲಿ ಹೆಚ್ಚು – ಸಾಮಾನ್ಯ ನಿಗದಿತ ಆದಾಯದಲ್ಲಿ ಕೊರತೆ | |
|---|---|---|---|
| | | ೧೯೨೧–೨ಕ್ಕಾಗಿ | ೧೯೨೨–೩ಕ್ಕಾಗಿ |
| | ರೂ. | ರೂ. | ರೂ. |
| ಮದರಾಸು | ೧೪,೯೮,೦೨ | ೬೦,೫೭ | ೪೦,೪೧ |
| ಮುಂಬಯಿ | ೧೨,೦೯,೭೦ | ೧,೫೭,೪೭ | ೨,೨೨,೩೬ |
| ಬಂಗಾಳ | ೮,೫೫,೨೮ | ೩೧,೨೫ | ೬೦,೫೮ |
| ಸಂಯುಕ್ತ ಪ್ರಾಂತ್ಯಗಳು | ೧೨,೨೯,೮೮ | ೧,೦೪,೪೩ | ೧,೨೮,೭೯ |
| ಪಂಜಾಬ್ | ೯,೭೩,೫೧ | ೧,೦೦,೧೫ | ೧,೬೪,೭೫ |
| ಬರ್ಮಾ | ೮,೨೪,೨೮ | ೧,೭೫,೦೫ | ೧,೭೬,೨೯ |
| ಬಿಹಾರ ಹಾಗೂ ಒರಿಸ್ಸಾ | ೪,೩೦,೩೯ | ೧೫,೭೬ | ೩೨,೨೬ |
| ಕೇಂದ್ರೀಯ ಪ್ರಾಂತ್ಯಗಳು | ೪,೩೫,೩೭ | ೭೯,೪೩ | ೯೯,೮೬ |
| ಅಸ್ಸಾಂ | ೧,೮೧,೪೬ | ೨೨,೬೦ | ೨೩,೬೦ |

ಮೇಲಿನ ತಃಖ್ತೆ ದೊರಕಿದ ಆದಾಯ ಸಾಮಾನ್ಯ ನಿಗದಿತ ಆದಾಯಕ್ಕಿಂತ ಕಡಿಮೆ ಇಲ್ಲವೆಂದು ಸ್ಪಷ್ಟವಾಗಿ ತೋರಿಸುತ್ತದೆ. ಹಂಚುವಿಕೆಯ ಅಡಿಯಲ್ಲಿ ಅನುಮತಿಸಿದ ಪ್ರಾಂತ್ಯಗಳ ಸಾಮಾನ್ಯ ನಿಗದಿತ ಆದಾಯ ಹಾಗೂ ಸಾಮಾನ್ಯ ನಿಗದಿತ ವೆಚ್ಚದ ಅಂತರಕ್ಕೆ ದೊರಕಿದ ಆದಾಯದ ಹೆಚ್ಚಳ ಸರಿಯಾಗಿತ್ತೇ ಎಂಬ ಪ್ರಶ್ನೆಯನ್ನು ಇಲ್ಲಿ ಕೇಳಬಹುದು. ಪ್ರಶ್ನೆಯ ಈ ಭಾಗದ ಮೇಲೆ ಬೆಳಕು ಚೆಲ್ಲಲು ಕೆಳಗಿನ ತಃಖ್ತೆ ಸ್ವಾರಸ್ಯವುಳ್ಳದ್ದಾಗಿದೆ :

## ಪ್ರಾಂತೀಯ ಆದಾಯಗಳ ವಿಸ್ತರಣೆ

| ಪ್ರಾಂತ್ಯಗಳು | ಸಾಮಾನ್ಯ ನಿಗದಿತ ಅಂತರ | ಸಾಮಾನ್ಯ ನಿಗದಿತ ಅಂತರ ಹಾಗೂ ದೊರಕಿದ ಅಂತರಗಳಲ್ಲಿಯ ಹೆಚ್ಚಳ ಹಾಗೂ ಕೊರತೆ | |
|---|---|---|---|
| | | ೧೯೨೧–೨ಕ್ಕಾಗಿ | ೧೯೨೨–೩ಕ್ಕಾಗಿ |
| | ರೂ. | ರೂ. | ರೂ. |
| ಮದರಾಸು | ೯೦,೮೨ | – ೩೦,೨೫ | – ೫೦,೪೧ |
| ಮುಂಬಯಿ | ೫೪,೬೭ | ೧,೦೨,೮೦ | ೧,೬೮,೧೯ |
| ಬಂಗಾಳ | – ೫,೮೫ | ೨೫,೪೦ | ೫೪,೭೩ |

---

೧. ಹೊಸ ಕರಾಕರಣೆಯನ್ನು ಹೊರತುಪಡಿಸಿ.

| | | | |
|---|---|---|---|
| ಸಂಯುಕ್ತ ಪ್ರಾಂತ್ಯಗಳು | ೧,೨೩,೩೨ | – ೧೮,೮೯ | ೫,೪೭ |
| ಪಂಜಾಬ್ | ೬೨,೮೨ | ೨೭,೩೩ | ೧,೦೧,೯೩ |
| ಬರ್ಮಾ | ೩೯,೫೦ | ೧,೩೫,೫೫ | ೧,೩೬,೭೯ |
| ಬಿಹಾರ ಹಾಗೂ ಒರಿಸ್ಸಾ | ೯,೬೯ | ೬,೦೭ | ೨೨,೫೭ |
| ಕೇಂದ್ರೀಯ ಪ್ರಾಂತ್ಯಗಳು | ೩,೪೩ | ೭೬,೦೦ | ೯೬,೪೩ |
| ಅಸ್ಸಾಂ | ೩,೨೧ | ೧೯,೩೯ | ೨೦,೩೯ |

೧೯೨೨–೩ರಲ್ಲಿ ಮದರಾಸು ಒಂದನ್ನು ಹೊರತುಪಡಿಸಿ ಸಾಮಾನ್ಯ ನಿಗದಿತ ಅಂತರಕ್ಕಿಂತ ದೊರಕಿದ ಅಂತರ ಯಾವ ಪ್ರಾಂತ್ಯಗಳಲ್ಲಿಯೂ ಕಡಿಮೆಯಾಗಿಲ್ಲವೆಂದು ಈ ಅಂಕಿಸಂಖ್ಯೆಗಳಿಂದ ಸ್ಪಷ್ಟವಾಗಿದೆ. ಸಾಮಾನ್ಯ ನಿಗದಿತ ಅಂತರಕ್ಕಿಂತ ದೊರಕಿದ ಅಂತರ ಬಹಳ ಹೆಚ್ಚಾಗಿದೆ. ಪ್ರಾಂತಗಳಲ್ಲಿಯ ಹಣಕಾಸಿನ ಕೊರತೆ, ಪ್ರಾಂತೀಯ ಆದಾಯಗಳು ಭಾವಿಸಿದ ಸಹಜತೆಯನ್ನು ಮುಟ್ಟಲು ವಿಫಲವಾದದ್ದರಿಂದ ಅದನ್ನು ಉತ್ಪನ್ನ ಎಂದು ಹೇಳಲಿಕ್ಕಾಗದು. ವ್ಯತಿರಿಕ್ತವಾಗಿ ಪ್ರಾಂತ್ಯಗಳ ರೂಢಿ ವೆಚ್ಚಕ್ಕಿಂತ ಆದಾಯಗಳು ಹೆಚ್ಚಾಗಿದ್ದವು. ಪ್ರಾಂತೀಯ ಕೊರತೆಗಳು ಪ್ರಾಂತ್ಯಗಳ ವೆಚ್ಚದಲ್ಲಾದ ವಿಪರೀತ ಹೆಚ್ಚಳದಿಂದಾದವುಗಳೆಂದು ನಿರ್ಣಯಕ್ಕೆ ಬರಬೇಕಾಗುತ್ತದೆ.[೧] ಈ ದೃಷ್ಟಿಯ ಬೆಂಬಲಕ್ಕೆ ಕೆಳಗಿನ ಅಂಕಿಸಂಖ್ಯೆಗಳು ಸಾಕಷ್ಟು ಸಾಕ್ಷ್ಯಾಧಾರವನ್ನು ಒದಗಿಸುತ್ತವೆ.

| ಪ್ರಾಂತ್ಯಗಳು | ಸಾಮಾನ್ಯ ನಿಗದಿತ ವೆಚ್ಚ | + ಪ್ರಮಾಣದಲ್ಲಿ ಹೆಚ್ಚಳ – ಪ್ರಮಾಣದಲ್ಲಿ ಕೊರತೆ | |
|---|---|---|---|
| | | ೧೯೨೧–೨ಕ್ಕಾಗಿ | ೧೯೨೨–೩ಕ್ಕಾಗಿ |
| | ರೂ. | ರೂ. | ರೂ. |
| ಮದರಾಸು | ೧೪,೦೭,೨೦ | ೩,೦೮,೭೩ | ೩,೧೧,೩೫ |
| ಮುಂಬಯಿ | ೧೧,೫೫,೦೩ | ೨,೯೭,೭೭ | ೩,೮೭,೧೪ |
| ಬಂಗಾಳ | ೮,೬೧,೧೩ | ೨,೪೯,೪೭ | ೧,೭೫,೭೭ |
| ಸಂಯುಕ್ತ ಪ್ರಾಂತ್ಯಗಳು | ೧೧,೦೬,೫೬ | ೩,೪೩,೩೧ | ೨,೭೯,೦೯ |
| ಪಂಜಾಬ್ | ೯,೧೦,೬೯ | ೩,೧೨,೫೫ | ೩,೫೭,೭೫ |
| ಬರ್ಮಾ | ೭,೮೧,೭೮ | ೨,೪೨,೭೩ | ೪,೦೫,೯೨ |
| ಬಿಹಾರ ಹಾಗೂ ಒರಿಸ್ಸಾ | ೪,೨೦,೭೦ | ೬೫,೨೭ | ೯೩,೧೦ |
| ಕೇಂದ್ರೀಯ ಪ್ರಾಂತ್ಯಗಳು | ೪,೩೮,೮೦ | ೧,೦೨,೯೬ | ೧,೨೩,೩೭ |
| ಅಸ್ಸಾಂ | ೧,೭೮,೨೫ | ೪೧,೨೦ | ೪೪,೩೩ |

೧. ಈ ಅಂಶದ ಸಂಕ್ಷಿಪ್ತ ವಿವರಣೆಗಾಗಿ ಭಾರತ ಸರ್ಕಾರದ ಮೇಲೆ ಹೇಳಲಾದ ಪತ್ರದಲ್ಲಿ ಅದರ ಸಾರಾಂಶವನ್ನು ನೋಡಿರಿ.

ಪ್ರಾಂತೀಯ ಹಣಕಾಸನ್ನು ಸುಧಾರಿಸಬೇಕಾದರೆ, ವೆಚ್ಚವನ್ನು ಕಡಿಮೆ ಮಾಡುವುದು ಹಾಗೂ ಕರಾಕರಣೆಯನ್ನು ಹೆಚ್ಚಿಸುವುದೊಂದೇ ಉಪಾಯವೆಂಬ ಸೆಕ್ರೆಟರಿ ಆಫ್ ಸ್ಟೇಟ್‌ರ ವಿಚಾರವನ್ನು ನಾವು ಒಪ್ಪಬೇಕಾಗುತ್ತದೆ. ತಮ್ಮ ಸುರಕ್ಷಿತತೆಗಾಗಿ ಪಾಂತ್ಯಗಳು ವೆಚ್ಚಗಳನ್ನು ಕಡಿಮೆ ಮಾಡುವ ಹಾಗೂ ಕರಾಕರಣೆಯನ್ನು ಹೆಚ್ಚಿಸುವ ಸಂಭವವೆಷ್ಟಿದೆ? ಇದಕ್ಕೆ ಸಂಬಂಧಿಸಿದಂತೆ ಸಾರ್ವಜನಿಕ ಹಣಕಾಸಿನ ಆಡಳಿತದಲ್ಲಿ ದಕ್ಷನಾದ ಜೇಮ್ಸ್ ವಿಲ್ಸನ್‌ರವರ ನುಡಿಯನ್ನು ಇಲ್ಲಿ ನೆನೆಯುವುದು ಉಚಿತ. ಅವರು ಈ ರೀತಿ ಹೇಳಿದರು :

"ಹಣಕಾಸೆಂದರೆ ಕೇವಲ ಅಂಕಗಣಿತವಲ್ಲ; ಹಣಕಾಸು ಒಂದು ಬಹು ದೊಡ್ಡ ನೀತಿ. ಸರಿಯಾದ ಹಣಕಾಸು ಇಲ್ಲದಿದ್ದರೆ ದೃಢ ಸರ್ಕಾರ ಸಾಧ್ಯವಿಲ್ಲ; ದೃಢ ಸರ್ಕಾರವಿಲ್ಲದೆ ಸರಿಯಾದ ಹಣಕಾಸು ಸಾಧ್ಯವಿಲ್ಲ."

ಇದು ಸತ್ಯವಾಗಿದ್ದರೆ, ಪ್ರಾಂತೀಯ ಸರ್ಕಾರಗಳು ಮಿತವ್ಯಯವನ್ನು ಪಾಲಿಸುತ್ತವೆಯೋ ಅಥವಾ ಹೆಚ್ಚಿನ ಕರಾಕರಣೆಯನ್ನು ನಿರೀಕ್ಷಿಸುತ್ತವೆಯೋ ಎನ್ನುವುದು, ಸುಧಾರಣಾ ಕಾಯಿದೆಯಿಂದ ಪ್ರಾಂತ್ಯಗಳಲ್ಲಿ ಸ್ಥಾಪಿತವಾದ ಸರ್ಕಾರದ ಪದ್ಧತಿ ಒಳ್ಳೆಯದೋ ಅಥವಾ ಅಲ್ಲವೋ ಎಂಬುದನ್ನು ಅವಲಂಬಿಸಿರುತ್ತದೆ. ಈಗ ಸುಧಾರಣೆಗಳ ಕಾಯಿದೆ ಅಡಿಯಲ್ಲಿ ಪ್ರಾಂತ್ಯಗಳಲ್ಲಿ ಸ್ಥಾಪಿತವಾದ ಸರ್ಕಾರದ ಸ್ವರೂಪವೇನು? ಸಾಮಾನ್ಯವಾಗಿ ಈ ಪದ್ಧತಿಯನ್ನು ದ್ವಿಪ್ರಭುತ್ವವೆಂದು ಕರೆಯಲಾಗುತ್ತದೆ. ಇದರಡಿಯಲ್ಲಿ ಕಾರ್ಯನಿರ್ವಾಹಕವು ಮೊದಲಿನಂತೆ ಕೌನ್ಸಿಲ್‌ನಲ್ಲಿಯ ಗವರ್ನರನನ್ನು ಒಳಗೊಂಡಿರದ್ದಾಗಿರದೆ ಕೌನ್ಸಿಲ್‌ನಲ್ಲಿಯ ಗವರ್ನರ್ ಹಾಗೂ ಮಂತ್ರಿಮಂಡಲದಲ್ಲಿಯ ಗವರ್ನರ್ ನಡುವೆ ಈಗ ಅದು ಹಂಚಿಹೋಗಿದೆ. ಇದರಡಿಯಲ್ಲಿ ಪ್ರಾಂತೀಯ ವಿಷಯಗಳೆಂದು ಗುರುತಿಸಲಾದವುಗಳನ್ನು "ಕಾಯ್ದಿಟ್ಟ" ಹಾಗೂ "ವರ್ಗಾಯಿಸಿದ" ವಿಷಯಗಳೆಂದು ವಿಂಗಡಿಸಲಾಗಿದೆ. ಮೊದಲಿನವುಗಳು ಕೌನ್ಸಿಲ್‌ನಲ್ಲಿಯ ಗವರ್ನರನ ಅಧಿಕಾರಕ್ಕೊಳಪಟ್ಟದ್ದು, ಎರಡನೆಯದು ಮಂತ್ರಿಮಂಡಳದಲ್ಲಿಯ ಗವರ್ನರನ ಅಧಿಕಾರಕ್ಕೊಳಪಟ್ಟವೆ. "ಕಾಯ್ದಿಟ್ಟ" ವಿಷಯಗಳಿಗೆ ಹೊಣೆಗಾರನಾದ ಕೌನ್ಸಿಲ್‌ನಲ್ಲಿಯ ಪ್ರಾಂತೀಯ ಕಾರ್ಯಾನಿರ್ವಾಹಕನು ಮೊದಲಿನಂತೆ ಪ್ರಾಂತೀಯ ಶಾಸನಸಭೆಗೆ ಜವಾಬ್ದಾರಿಯುತನಾಗಿರುವುದಿಲ್ಲ. ಅವನನ್ನು ತೆಗೆದುಹಾಕಲು ಶಾಸನಸಭೆಗೆ ಸಾಧ್ಯವಿಲ್ಲ. ಆ ದೃಷ್ಟಿಯಿಂದ ಅವನು ಶಾಸಕೇತರ ಕಾರ್ಯನಿರ್ವಾಹಕನಾಗಿರುತ್ತಾನೆ. "ವರ್ಗಾಯಿತ" ವಿಷಯಗಳಿಗೆ ಹೊಣೆಗಾರನಾದ ಪ್ರಾಂತೀಯ ಕಾರ್ಯನಿರ್ವಾಹಕವಾದ ಮಂತ್ರಿಮಂಡಲವು, ಪ್ರಾಂತೀಯ ಶಾಸನಸಭೆಯಿಂದ ಚುನಾಯಿತರಾದ ಸದಸ್ಯರಿಂದ ಭರ್ತಿ ಮಾಡಲ್ಪಟ್ಟದ್ದಾಗಿರುತ್ತದೆ. ಇದು ಪ್ರಾಂತೀಯ ಶಾಸನಸಭೆಗೆ ಜವಾಬ್ದಾರಿಯುತವಾಗಿರುತ್ತದೆ, ಅದರಿಂದ ತೆಗೆದುಹಾಕಲು ಬರುವಂಥದ್ದಾಗಿರುತ್ತದೆ. ಆದ್ದರಿಂದ ಇದು ಶಾಸನಸಭೆಯ ಕಾರ್ಯಾಂಗವಾಗಿರುತ್ತದೆ.

ಎರಡು ಪ್ರಾಂತೀಯ ಕಾರ್ಯಾಂಗಗಳಿಗೆ ಸಂಬಂಧಿಸಿದಂತೆ ಪ್ರಾಂತೀಯ ಶಾಸನಸಭೆಯು ಶ್ರೇಷ್ಠವಾಗಿದೆ. ಶಾಸನ ರಚನೆಯ ಸಂಪೂರ್ಣ ಅಧಿಕಾರ ಇದಕ್ಕೆ ಇದ್ದದ್ದಲ್ಲದೇ, ಪ್ರಶ್ನೆ ಕೇಳುವ ಅನಿರ್ಬಂಧಿತ ಅಧಿಕಾರವೂ ಇದಕ್ಕಿದೆ. ಪ್ರಾಂತೀಯ ಮುಂಗಡಪತ್ರವನ್ನು ಅನುಮತಿಸುವ ಹಾಗೂ ಅದರ ಮೇಲೆ ಮತ ಚಲಾಯಿಸುವ ಸಂಪೂರ್ಣ ಅಧಿಕಾರ ಇದಕ್ಕಿದೆ. ಸುಧಾರಣಾ ಕಾಯಿದೆಯಲ್ಲಿ ಅನುಮತಿಸಿದಂತೆ.[೧]

"ಬೇಡಿಕೆಯು ಕಾಯ್ದಿಟ್ಟ ವಿಷಯಕ್ಕೆ ಸಂಬಂಧಪಟ್ಟದ್ದಾಗಿದ್ದರೆ ಮತ್ತು ಪ್ರಜೆಗಳ ಮೇಲಿನ ತನ್ನ ಹೊಣೆಗಾರಿಕೆಯನ್ನು ಪೂರೈಸಲು ಒದಗಿಸಿದ ವೆಚ್ಚವು ಅವಶ್ಯವೆಂದು ಗವರ್ನರನು ಸಮರ್ಥಿಸಿದರೆ,

೧. ಭಾರತ ಸರ್ಕಾರ ಕಾಯಿದೆ ೧೯೧೯, ವಿಭಾಗ II (೨) (೬)

ಪ್ರಾಂತೀಯ ಶಾಸನ ಸಭೆ ಆ ಮೊತ್ತಕ್ಕೆ ಒಪ್ಪಿಗೆ ತಡೆಹಿಡಿದಾಗ್ಯೂ, ಅದಕ್ಕೆ ಒಪ್ಪಿಗೆ ಕೊಟ್ಟಿದೆಯೆಂಬ ರೀತಿಯಲ್ಲಿ, ಕಾರ್ಯನಿರ್ವಹಿಸಲು ಸ್ಥಾನಿಕ ಸರ್ಕಾರಕ್ಕೆ ಅಧಿಕಾರವಿದೆ."

ಅಂಥ ಸರ್ಕಾರವು ಹಣಕಾಸಿನ ಸಮಸ್ಯೆಗಳನ್ನು ಬಿಡಿಸಬಲ್ಲದೇ? ದ್ವಿಪ್ರಭುತ್ವ ಕಾರ್ಯಾಂಗದ ಎರಡು ಭಾಗಗಳಲ್ಲಿಯ ಒಂದು ಭಾಗವಾದ ಕೌನ್ಸಿಲ್‌ನಲ್ಲಿಯ ಗವರ್ನರನಿಗೆ, ವೆಚ್ಚವನ್ನಿಳಿಸುವ ಅಥವಾ ಕರಾಕರಣೆಯನ್ನು ಹೆಚ್ಚಿಸುವ ಕಾತರವಿರಬೇಕಾಗಿಲ್ಲ. ಆಜ್ಞೆಯನ್ನು ಅದು ಸಂಸತ್ತಿನಿಂದ ಪಡೆಯುವುದರಿಂದ, ಕರ ಕೊಡುವವರ ಆಸಕ್ತಿಯನ್ನು ಗಣನೆಗೆ ತೆಗೆದುಕೊಳ್ಳದೆ, ತನಗೆ ಸರಿಯೆನಿಸಿದ ನೀತಿಯನ್ನು ಅನುಸರಿಸಲು ಅದು ಸ್ವತಂತ್ರವಾಗಿದೆ. ಶಾಸನಸಭೆಯ ಇಚ್ಛೆಯನ್ನು ತಳ್ಳಿಹಾಕುವ ಈ ಅಧಿಕಾರ, ಕೌನ್ಸಿಲ್‌ನಲ್ಲಿಯ ಗವರ್ನರನ ಬೇಜವಾಬ್ದಾರಿ ದುಂದುವೆಚ್ಚಕ್ಕೆ ಎಡೆಮಾಡಿಕೊಡಬಹುದೆಂಬುದನ್ನು, ಜಂಟಿ ವರದಿಯ ಗ್ರಂಥಕರ್ತರು ಕಂಡುಕೊಂಡಿದ್ದರು. ಇದನ್ನು ತಡೆಯಲು ಮಂತ್ರಿಮಂಡಲದ ಗವರ್ನರನಿಗೆ ಸರಿಗಟ್ಟುವ ಅಧಿಕಾರವನ್ನು ಕೊಡಲು ಅವರು ಪ್ರಸ್ತಾಪಿಸಿದ್ದರು. ಮಂತ್ರಿಮಂಡಲದ ಅನುಮತಿ ಇಲ್ಲದೆ "ಕಾಯ್ದಿಟ್ಟ" ವಿಷಯಗಳ ಪ್ರಯೋಜನಕ್ಕಾಗಿಯೂ ಕರಗಳನ್ನು ಯಾವ ಪ್ರಾಂತ್ಯದಲ್ಲಿಯೂ ಹಾಕಬಾರದೆಂದು ವಿಧಿಸುವ ನಿಯಮದಲ್ಲಿ ಈ ಅಧಿಕಾರ ಅಡಕವಾಗಿತ್ತು.[೧] ಭಾರತದಲ್ಲಿ ಸುಧಾರಣೆಗಳು ಸಾಕಷ್ಟಿಲ್ಲವೆಂದು ಅವುಗಳನ್ನು ತಿರಸ್ಕರಿಸುವ ರಾಜಕೀಯ ಉಗ್ರವಾದಿಗಳು ಮಂತ್ರಿಗಳನ್ನು ಬಲಿಪಶುಗಳನ್ನಾಗಿ ಮಾಡುವ ಹಾಗೂ ಜನರಲ್ಲಿ ಅವರಿಗೆ ಅಪಕೀರ್ತಿ ತರುವ ಉಪಾಯವಿದೆಂದು ಈ ನಿಯಮವನ್ನು ತಿರಸ್ಕರಿಸಿದರು. ಆದರೆ ಅವರ ಪ್ರತಿಸ್ಪರ್ಧಿಗಳಾದ, ತಮ್ಮನ್ನು ತಾವು ಈಗ ಉದಾರ ಪಕ್ಷದವರೆಂದು ಕರೆದುಕೊಳ್ಳುವ ಸೌಮ್ಯವಾದಿಗಳು ಈ ನಿಯಮದ ಅರ್ಥವನ್ನು ಸ್ಪಷ್ಟವಾಗಿ ಕಂಡುಕೊಂಡರು. ಇದು ಸಾಧ್ಯವಾಗಿದ್ದರೆ ಮಂತ್ರಿಮಂಡಲವು ಕೌನ್ಸಿಲ್ಲಿಗೆ ಉಪದೇಶಕೊಡುವ ಹೊರಗಿನದಾಗಿ ಉಳಿಯದೆ, ಮುಂಗಡಪತ್ರದ ಇತ್ಯರ್ಥಮಾಡುವಲ್ಲಿ ಅಧಿಕಾರಯುತ ವಾಣಿಯನ್ನು ಪಡೆಯಬಹುದಾಗಿತ್ತು. ಯಾವ ಮಂತ್ರಿಯೂ, ಕಾಯ್ದಿಟ್ಟ ವಿಷಯಗಳಿಗೆ ಸಂಬಂಧಪಟ್ಟವುಗಳನ್ನೊಳಗೊಂಡು ಮುಂಗಡಪತ್ರದ ಪ್ರಸ್ತಾವನೆಗಳನ್ನು ಸಮರ್ಥಿಸುವ ಸ್ಥಿತಿಯಲ್ಲಿ ಇರದಿದ್ದರೆ, ಹೊಸ ಕರಾಕರಣೆಯನ್ನು ಒಪ್ಪುವಂತೆ ಶಾಸನಸಭೆಯನ್ನು ಮನವೊಲಿಸುವ ಆಶಯವನ್ನು ಅವನು ಹೊಂದಿರಲು ಸಾಧ್ಯವಿರಲಿಲ್ಲ. ಆದ್ದರಿಂದ "ಕಾಯ್ದಿಟ್ಟ" ವಿಷಯಗಳ ಮೇಲೆ ಮಂತ್ರಿಮಂಡಲದ ಪ್ರಭಾವ ಮಿತವ್ಯಯ ಹಾಗೂ ಕತ್ತರಿ ಪ್ರಯೋಗದ ಕಡೆಗೆ ಇರಬಹುದಾಗಿತ್ತು. ನಿಯಮದ ಅರ್ಥವಿವರಣೆಯನ್ನು ಕೊಡುವಲ್ಲಿ ಹಾಗೂ ಹೊಸ ಕರಾಕರಣೆಯ ಭಾರವನ್ನು ದೇಶದ ಮೇಲೆ ಹೇರಿದರೂ ತಾವು ಅಧಿಕಾರವನ್ನು ಹೊಂದಬೇಕೆಂದು ಸೌಮ್ಯವಾದಿಗಳು ಒತ್ತಾಯಿಸುತ್ತಿದ್ದುದು ಸರಿಯಾಗಿತ್ತು.[೨] ಈ ವಿವಾದದ ಬಿಸಿಯಲ್ಲಿ ಮತ್ತು ಸುಧಾರಣೆಗಳ ವಾಸ್ತವಿಕತೆಯ ಬಗ್ಗೆ ಜನರ ಮನ ಒಲಿಸುವಲ್ಲಿ, ಅವರು ಈ ನಿಯಮದ ಅಡಿಯಲ್ಲಿ ಕೆಲಸಮಾಡುವ ಮಂತ್ರಿಗಳು ಕೌನ್ಸಿಲ್ಲನ್ನು ದೂರವಿಡುವಲ್ಲಿ ಹೇಗೆ ಸಫಲರಾಗಿದ್ದಾರೆಂಬುದನ್ನು ತೋರಿಸಿಕೊಟ್ಟರು. ಇದು ಆಡಳಿತವರ್ಗವನ್ನು ಭಯಪಡಿಸಿತು. ಹೀಗಾಗಿ ಅವರು ಕಾಯ್ದಿಟ್ಟ ವಿಷಯಗಳಿಗೆ ಹಣಕಾಸಿನ ವ್ಯವಸ್ಥೆಗೊಳಿಸುವುದನ್ನು ಮಂತ್ರಿಗಳಿಗೆ ಬಿಡುವುದು ಗಂಡಾಂತರಕಾರಿಯೆಂದು ಘೋಷಿಸಿದರು. ಏಕೆಂದರೆ ಈ ವಿಷಯಗಳಿಗೆ ಮುಂಗಡಪತ್ರದಲ್ಲಿ ಅನುವುಮಾಡಿಕೊಡಲು ನಿರಾಕರಿಸಿದ ಪರಿಣಾಮಗಳಿಗೆ ಮಂತ್ರಿಗಳು ಜವಾಬ್ದಾರಿ ಹೊರುವುದಿಲ್ಲ. ಈ ವ್ಯವಸ್ಥೆಯ ಯಶಸ್ಸು ಅದನ್ನು ಕಾರ್ಯಗತಗೊಳಿಸುವ ಜನರ ಮೇಲೆ

---

೨. ಜಂಟಿ ವರದಿ, ಪ್ಯಾರಾ. ೨೫೬

೧. ವೈನ್‌ಬರ್ಗ್ : *ಸಪರೇಷನ್ ಆಫ್ ಸ್ಟೇಟ್ ಅಂಡ್ ಲೋಕಲ್ ರೆವಿನ್ಯೂಸ್ ಇನ್ ಕೆನಡಾ*, ಪ್ಯಾರಾ ೧೩.

ಅವಲಂಬಿಸಿದೆಯೆಂದು ಜಂಟಿ ವರದಿಯ[೧] ಕರ್ತರು ಮನಗಂಡಿದ್ದರು. ಕಾಯ್ದಿಟ್ಟ ವಿಷಯಗಳ ಆಡಳಿತಕ್ಕೆ, ಕೌನ್ಸಿಲ್ ಆವಶ್ಯಕವೆಂದು ತಿಳಿದ ವೆಚ್ಚವನ್ನು ಭರಿಸಲು ಮಂತ್ರಿಗಳು ತಮ್ಮ ಸ್ವಂತ ಬೇಡಿಕೆಗಳನ್ನು ಕಡಿಮೆ ಮಾಡಲು ಅಥವಾ ಹೊಸ ಕರ ವಿಧಿಸಲು ಸಹಕಾರವೊದಗಿಸಬಹುದೆಂದು ಅವರು ತಿಳಿದಿದ್ದರು. ರಕ್ಷಿಸುವ, ಅಭಿವೃದ್ಧಿಪಡಿಸುವ ಕಾರ್ಯಕ್ಕೆ ಹಣ ಒದಗಿಸುವ ಜವಾಬ್ದಾರಿಯನ್ನು ಒಂದು ಪಕ್ಷ ಹೊತ್ತಲ್ಲಿ ಮತ್ತು ಮತ್ತೊಂದು ಪಕ್ಷ ಕೇವಲ ಹಣದ ಒಂದು ಭಾಗವನ್ನು ತೆಗೆದುಕೊಳ್ಳಲು ಇಚ್ಛಿಸಿದ ವಿಷಯಗಳಲ್ಲಿ ವಿವೇಕವುಳ್ಳ ಜನರು ತಮ್ಮ ತಮ್ಮಲ್ಲೇ ಅಭಿಪ್ರಾಯದವರಾಗಿರುತ್ತಾರೆಂದು ಆಡಳಿತವರ್ಗ ಒತ್ತಿ ಹೇಳಿತು. ಅವರ ಅಭಿಪ್ರಾಯದಲ್ಲಿ ಕೆಲವೊಂದು ಪ್ರಸಂಗಗಳಲ್ಲಿ ವಿವೇಚನೆ ಉಳಿಯಲಿಕ್ಕಿಲ್ಲ. ಕೆಲವೊಂದು ಕಾಯ್ದಿಟ್ಟ ವಿಷಯಗಳ ಮೇಲೆ ಹೊಸ ಹಾಗೂ ಹೆಚ್ಚಿನ ವೆಚ್ಚ ಅವಶ್ಯವೆಂದು ಕೌನ್ಸಿಲ್‌ನಲ್ಲಿ ಗವರ್ನರ್ ಕಂಡುಕೊಳ್ಳಬಹುದು. ಆದರೆ ಅವನು ತಮ್ಮ ವಿಷಯಗಳಿಗಾಗಿ ಕಡಿಮೆ ವೆಚ್ಚವನ್ನು ಒಪ್ಪುವಂತೆ ಅಥವಾ ಹೊಸ ಕರಗಳನ್ನು ವಿಧಿಸುವಂತೆ ಮಂತ್ರಿಗಳನ್ನು ಮನವೊಲಿಸಲಾರನು. ಅಂಥ ಪ್ರಸಂಗದಲ್ಲಿ ಗವರ್ನರನು ತನ್ನ ವಿಶೇಷ ಅಧಿಕಾರದಡಿಯಲ್ಲಿ ವೆಚ್ಚವನ್ನು ಮುಂದಿನ ಮುಂಗಡ ಪತ್ರದಲ್ಲಿಯಾದರೂ ವ್ಯವಸ್ಥೆಗೊಳಿಸಲು ಒತ್ತಾಯಿಸುತ್ತಾನೆ. ಇದರಿಂದ ತಮ್ಮ ವರ್ಗಾಯಿತ ವಿಷಯಗಳಿಗಾಗಿ ಮಂತ್ರಿಗಳಿಗೆ ಕಡಿಮೆ ಹಣ ಉಳಿಯುತ್ತದೆ. ಇದರಿಂದೇನಾಗುತ್ತದೆ? ತಮ್ಮ ಆವಶ್ಯಕತೆಗಳಿಗಾಗಿ ಕರ ಹೆಚ್ಚಿಸಲು ಮಂತ್ರಿಗಳನ್ನು ಒತ್ತಾಯಿಸಬೇಕೆ? ಇಂಥ ಬೇಡಿಕೆ ಅವರ ಇಚ್ಛೆಯ ವಿರುದ್ಧವಾಗಿ ತಮ್ಮ ಬೇಡಿಕೆಗಳನ್ನು ಕಡಿಮೆ ಮಾಡಲು ನಿರಾಕರಿಸಿದ ಕೌನ್ಸಿಲ್ಲಿನಿಂದ ನಿರ್ಮಿತವಾದದ್ದಾಗಿದೆ. ಅಂಥ ಕಾರ್ಯವಿಧಾನ ಸುತ್ತು ಬಳಸಿನದಿದ್ದು, ಉದ್ರೇಕಕಾರಿಯೂ ಹಾಗೂ ಅಸಮರ್ಥನೀಯವೂ ಆಗಬಹುದೆಂದು ತೋರಿಸಿಕೊಡಲಾಯಿತು. ಒಂದು ವೇಳೆ ಮಂತ್ರಿಗಳು ಆವಶ್ಯಕ ಹಣವನ್ನು ಎತ್ತಲು ಒಪ್ಪಿದರೆಂದು ತಿಳಿದರೂ, ಶಾಸನಸಭೆ ಅದರ ಆದಾಯದ ಕಾರ್ಯಕ್ರಮಗಳನ್ನು ತಿರಸ್ಕರಿಸಬಹುದು. ಅಂಥ ಪ್ರಸಂಗದಲ್ಲಿ ಶಾಸನಸಭೆಯ ವಿಶ್ವಾಸವನ್ನು ಕಳೆದುಕೊಂಡಿದ್ದೇವೆಂದು ಮಂತ್ರಿಗಳು ರಾಜೀನಾಮೆ ಕೊಡಬೇಕೆ? ಜಂಟಿ ವರದಿಯ ಗ್ರಂಥಕರ್ತರ ಮುಂದೆ ಆಡಳಿತವರ್ಗ ಮತ್ತೊಂದು ಸಮಸ್ಯೆಯನ್ನಿಟ್ಟಿತು. ತಮ್ಮ ಕೆಲವೊಂದು ಉದ್ದೇಶಗಳಿಗಾಗಿ ಮಂತ್ರಿಗಳು ಹೊಸ ಕರವನ್ನು ವಿಧಿಸಿದ್ದಾರೆ. ಮುಂದಿನ ಮುಂಗಡಪತ್ರದಲ್ಲಿ ಕೆಲವೊಂದು ಹೊಸ ಆವಶ್ಯಕತೆಗಳಿಗಾಗಿ ಕಾಯ್ದಿಟ್ಟ ವಿಷಯಕ್ಕೆ ಹೆಚ್ಚಿನ ಮೊತ್ತವನ್ನು ಗವರ್ನರ್ ಕೊಟ್ಟರೆ, 'ವರ್ಗಾಯಿತ' ವಿಷಯಗಳಿಗೆ ಹಣ ಕಡಿಮೆ ಬೀಳುತ್ತದೆ. ಹೀಗಾಗಿ ತಮ್ಮ ಹೊಸ ಕರದಿಂದ ಬರುವ ಆದಾಯ ತಾವು ಜವಾಬ್ದಾರಿಯಾಗಿರದ ಹಾಗೂ ತಾವು ನಾಮಂಜೂರು ಮಾಡಬಹುದಾದ, ಅಭಿವೃದ್ಧಿಗೆ ಹೋಗುವುದನ್ನು ಮಂತ್ರಿಗಳು ನೋಡಬೇಕಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಅವರು ಏನು ಮಾಡಬೇಕು? ಇಂಥ ಕಠಿಣ ಪ್ರಸಂಗಗಳನ್ನು ದೂರಮಾಡಲು ವಿಕೇಂದ್ರೀಕರಣ ನಿಯಮಗಳಲ್ಲಿ ಕೆಳಗಿನ ಬದಲಾವಣೆಗಳನ್ನು ಮಾಡಲಾಯಿತು.

## ಕರಾಕರಣೆ ಹಾಗೂ ಸಾಲ ತೆಗೆದಕೊಳ್ಳುವುದು

ಗವರ್ನರನ ಪ್ರಾಂತ್ಯದ ವಿಷಯದಲ್ಲಿ ಕರಗಳನ್ನು ಹೆಚ್ಚಿಸುವ ಅಥವಾ ಪ್ರಾಂತೀಯ ಆದಾಯದ ಮೇಲೆ ಸಾಲ ತೆಗೆದುಕೊಳ್ಳುವ ಪ್ರಸ್ತಾವನೆಗಳು ತನ್ನ ಕೌನ್ಸಿಲ್‌ನಲ್ಲಿಯ ಕಾರ್ಯನಿರ್ವಾಹಕ ಸಮಿತಿಯ ಜೊತೆ ಗವರ್ನರನಿಂದ ವಿಚಾರಿಸಲ್ಪಡುತ್ತವೆ. ಆದರೆ ಪ್ರಸ್ತಾವನೆ ಕೌನ್ಸಿಲ್‌ನ ಗವರ್ನರನಿಂದ, ಅಥವಾ

---

೧. ಜಂಟಿ ವರದಿ, ಪ್ಯಾರಾ ೨೫೭

ಗವರ್ನರನಿಂದ ಅಥವಾ ಮಂತ್ರಿಗಳಿಂದ ಬಂದದ್ದಾಗಿದೆಯೆಂಬುದನ್ನು ಅವಲಂಬಿಸಿ, ನಿರ್ಣಯಗಳನ್ನು ಕೌನ್ಸಿಲ್‌ನ ಗವರ್ನರನಿಂದ ಅಥವಾ ಗವರ್ನರನಿಂದ ಅಥವಾ ಮಂತ್ರಿಗಳಿಂದ ತೆಗೆದುಕೊಳ್ಳಲಾಗುತ್ತದೆ.

## ವರ್ಗಾಯಿತ ವಿಷಯಗಳ
## ಆಡಳಿತಕ್ಕಾಗಿ ಆದಾಯವನ್ನು ಒದಗಿಸುವುದು.

ಕಾಯ್ದಿಟ್ಟ ಹಾಗೂ ವರ್ಗಾಯಿತ ವಿಷಯಗಳ ಆಡಳಿತದ ಉದ್ದೇಶಗಳಿಗಾದ ವೆಚ್ಚ ಹೊಸ ಪ್ರತಿಯೊಂದು ಪ್ರಾಂತ್ಯದ ಸಾಮಾನ್ಯ ಆದಾಯ ಹಾಗೂ ಶಿಲ್ಕಿನ ಮೇಲೆ ಇರುತ್ತದೆ. ಕಾಯ್ದಿಟ್ಟ ಹಾಗೂ ವರ್ಗಾಯಿತ ವಿಷಯಗಳ ಸಂಬಂಧದಲ್ಲಿ ಹೊಸ ಪ್ರಸ್ತಾವನೆಗಳನ್ನು ಮಾಡುವುದು, ವರ್ಗಾಯಿತ ವಿಷಯಗಳ ಜವಾಬ್ದಾರಿ ಹೊತ್ತ ಸರ್ಕಾರದ ಭಾಗ ಹಾಗೂ ಕಾಯ್ದಿಟ್ಟ ವಿಷಯಗಳ ಜವಾಬ್ದಾರಿ ಹೊತ್ತ ಸರ್ಕಾರದ ಭಾಗಗಳ ನಡುವಿನ ಒಪ್ಪಂದವನ್ನು ಅವಲಂಬಿಸಿರುತ್ತದೆ.

## ಒಪ್ಪಂದಕ್ಕೆ ಬರಲು ವಿಫಲರಾದ ಪ್ರಸಂಗದಲ್ಲಿಯ ಕಾರ್ಯವಿಧಾನ

೩೨ (೧) ಮುಂಗಡಪತ್ರವನ್ನು ತಯಾರಿಸುವ ವೇಳೆಯಲ್ಲಿ ಕೌನ್ಸಿಲ್ಲಿನ ಕಾರ್ಯನಿರ್ವಾಹಕ ಸದಸ್ಯರ ಹಾಗೂ ಮಂತ್ರಿಗಳ ನಡುವೆ, ಕಾಯ್ದಿಟ್ಟ ಹಾಗೂ ವರ್ಗಾಯಿತ ವಿಷಯಗಳ ಹಣವನ್ನು ಹಂಚುವ ವಿಷಯದಲ್ಲಿ ಒಪ್ಪಂದವಾಗುವ ಸಂಭವವಿಲ್ಲವೆಂದು ಗವರ್ನರನಿಗೆ ಮನವರಿಕೆಯಾದರೆ ಅವನು ಪ್ರಾಂತ್ಯಗಳ ಆದಾಯಗಳನ್ನು ಹಾಗೂ ಶಿಲ್ಕನ್ನು ಕಾಯ್ದಿಟ್ಟ ಹಾಗೂ ವರ್ಗಾಯಿತ ವಿಷಯಗಳಿಗೆ ಹಂಚಲು ಲಿಖಿತ ಆಜ್ಞೆಯನ್ನು ಕೊಡಬಹುದು.

೨) ಇಂಥ ಆಜ್ಞೆಯನ್ನು ತನ್ನ ವಿವೇಚನೆಯ ಮೇರೆಗೆ ಅಥವಾ ತನ್ನ ಅರ್ಜಿಯ ಮೇಲೆ ಗವರ್ನರ್-ಜನರಲ್ಲನು ನೀಡುವ ಅಧಿಕಾರದ ವರದಿಯ ಮೇರೆಗೆ ಗವರ್ನರನು ಮಾಡಬಹುದು.

## ಹಂಚುವಿಕೆಯ ಆಜ್ಞೆಯ ಅವಧಿ

೩೩ ಆಜ್ಞೆಯಲ್ಲಿ ತೋರಿಸಿದ ಅವಧಿಯ ಮೇರೆಗೆ ಅಂಥ ಆಜ್ಞೆ ಜಾರಿಯಲ್ಲಿರುತ್ತದೆ. ಈ ಅವಧಿ ಅಂದು ಇದ್ದ ಶಾಸನಸಭೆಯ ಉಳಿದ ಅವಧಿಗಿಂತ ಕಡಿಮೆ ಇರಲಾರದು ಮತ್ತು ಆ ಅವಧಿಗಿಂತ ಒಂದು ವರ್ಷದ ಮೇಲ್ಪಟ್ಟು ಇರಲಾರದು:

ಗವರ್ನರನು ಯಾವುದೇ ವೇಳೆಯಲ್ಲಿ ತನ್ನ ಕೌನ್ಸಿಲ್‌ನ ಕಾರ್ಯನಿರ್ವಾಹಕ ಮತ್ತು ಮಂತ್ರಿಗಳು ಇಚ್ಛಿಸಿದರೆ, ಆಜ್ಞೆಯನ್ನು ಹಿಂತೆಗೆಯಬಹುದು ಹಾಗೂ ಅವರು ಒಪ್ಪಿದ ರೀತಿಯಲ್ಲಿ ಹಂಚುವಿಕೆಯಲ್ಲಿ ಬದಲಾವಣೆಗಳನ್ನು ಮಾಡಬಹುದು.

ಹಿಂತೆಗೆಯಲು ಪ್ರಸ್ತಾವಿಸಿದ ಆಜ್ಞೆ ಗವರ್ನರ್-ಜನರಲ್‌ನಿಂದ ನೇಮಿತವಾದ ಅಧಿಕಾರದ ವರದಿಯ ಮೇರೆಗೆ ಪಾಸಾಗಿದ್ದರೆ, ಗವರ್ನರನು ಆಜ್ಞೆಯನ್ನು ಹಿಂತೆಗೆದುಕೊಳ್ಳುವ ಮೊದಲು ಗವರ್ನರ್-ಜನರಲ್‌ನ ಅನುಮತಿಯನ್ನು ಪಡೆಯಬಹುದು.

## ಹಂಚುವಿಕೆಯ ಆಜ್ಞೆಯ ಕರಾರು

ಈ ನಿಯಮಗಳಡಿಯಲ್ಲಿ ಮಾಡಿದ ಪ್ರತಿಯೊಂದು ಹಂಚುವಿಕೆಯು ಹೊಸ ಕರಗಳನ್ನು ವಿಧಿಸುವುದರಿಂದ ಬಂದ ಹೆಚ್ಚಿನ ಆದಾಯವನ್ನು ಕರ ವಿಧಿಸಲು ಉಪಕ್ರಮ ತೆಗೆದುಕೊಂಡ ಸರ್ಕಾರಕ್ಕೆ ವಹಿಸಿಕೊಡಬೇಕಾಗುತ್ತದೆ.

## ಹಂಚುವಿಕೆಯ ಆಜ್ಞೆಯ ಬಗ್ಗೆ ಒಪ್ಪಂದವಿಲ್ಲದಾಗ ಮುಂಗಡಪತ್ರವನ್ನು ತಯಾರಿಸುವುದು.

೩೫ ಯಾವುದೇ ಮುಂಗಡಪತ್ರವನ್ನು ತಯಾರಿಸುವ ವೇಳೆಯಲ್ಲಿ ಈ ನಿಯಮಗಳು ಉದ್ದೇಶಿಸಿದಂತೆ ಒಪ್ಪಂದ ಅಥವಾ ಹಂಚುವಿಕೆಯು ಸಾಧ್ಯವಾಗದೆ ಹೋದರೆ, ಪ್ರಸಕ್ತ ವರ್ಷದ ಮುಂಗಡಪತ್ರದಲ್ಲಿ "ಕಾಯ್ದಿಟ್ಟ" ಹಾಗೂ "ವರ್ಗಾಯಿಸಿದ" ವಿಷಯಗಳಿಗೆ ಅನುಕ್ರಮವಾಗಿ ಒದಗಿಸಿದ ಒಟ್ಟು ಮೊತ್ತದ ಆಧಾರದ ಮೇಲೆ ಮುಂಗಡಪತ್ರವನ್ನು ತಯಾರಿಸಬೇಕು.

ಕಾಯ್ದಿಟ್ಟ ವಿಷಯಗಳಿಗೆ ನಿಧಿಯ ಹಂಚುವಿಕೆಯನ್ನು ವಿರೋಧಿಸುವ ಇಲಾಖೆಯ ವಿರುದ್ಧ ಮುನ್ನೆಚ್ಚರಿಕೆಯ ಕ್ರಮಗಳನ್ನು ಈ ನಿಯಮಗಳ ಮೂಲಕ ತೆಗೆದುಕೊಳ್ಳಲಾಗಿದೆ. ಕಾರ್ಯನಿರ್ವಾಹಕದ ಎರಡೂ ಭಾಗಗಳಿಗೆ ಬಾಧ್ಯವಾದ ಹಂಚುವಿಕೆಯನ್ನು ಗವರ್ನರನು ಮಾಡಲು ಅನುಮತಿಸಲಾಗಿದೆ ಮತ್ತು ಪ್ರಾಂತೀಯ ಮುಂಗಡಪತ್ರವನ್ನು ನಿರ್ಧರಿಸುವ ಅಧಿಕಾರ ಹೊಂದಿದ ಪ್ರಾಂತೀಯ ಶಾಸನಸಭೆ 'ಕಾಯ್ದಿಟ್ಟ' ವಿಷಯಗಳಿಗೆ ಸಹಾಯಧನವನ್ನು ಕೊಡದಿದ್ದರೆ ಅಥವಾ ಕಡಿಮೆ ಮಾಡಿದ್ದರೆ ಅದನ್ನು ಸರಿಪಡಿಸಲು ಪ್ರಾಂತೀಯ ಶಾಸನಸಭೆಯ ನಿರ್ಣಯಗಳನ್ನು ತಡೆಯುವ ಅಧಿಕಾರವನ್ನು ಗವರ್ನರನಿಗೆ ಕೊಡಲಾಗಿದೆ. ಮೂರನೆಯದಾಗಿ ಮಂತ್ರಿಮಂಡಲದ ಗವರ್ನರನ ಸರಿಸಮಾನವಾಗಿ ಕೌನ್ಸಿಲ್ಲಿನ ಗವರ್ನರನಿಗೆ ತನ್ನ ಹೊಣೆಗಾರಿಕೆಯ ವಿಷಯಗಳ ಅಭಿವೃದ್ಧಿಗಾಗಿ ಹೊಸ ಕರ ವಿಧಿಸಲು ಅಥವಾ ಸಾಲ ತೆಗೆಯಲು ಅನುಮತಿ ಕೊಡಲಾಗಿದೆ. ಇದರ ಪರಿಣಾಮವೆಂದರೆ, ಈ ದ್ವಿಪ್ರಭುತ್ವ ಕಾರ್ಯನಿರ್ವಾಹಕದ ಒಂದು ಭಾಗವಾದ ಕೌನ್ಸಿಲ್‌ನ ಗವರ್ನರನಿಗೆ, ಮಿತವ್ಯಯದಲ್ಲಿ ಅಥವಾ ಹೊಸ ಕರ ವಿಧಿಸುವಲ್ಲಿ ಆಸಕ್ತಿ ಉಳಿಯುವುದಿಲ್ಲ. ಆದ್ದರಿಂದ ಭದ್ರ ಹಣಕಾಸಿನ ಸಮಸ್ಯೆಯನ್ನು ಬಗೆಹರಿಸುವ ಹೊಣೆ 'ವರ್ಗಾಯಿತ' ವಿಷಯಗಳ ಜವಾಬ್ದಾರಿ ಹೊತ್ತ ಇಲಾಖೆಯ ಗವರ್ನರನ ಮೇಲೆಯೇ ಬೀಳುತ್ತದೆ. ಏಕೆಂದರೆ ಹಂಚುವಿಕೆಯ ನಿಯಮಗಳಡಿಯಲ್ಲಿ ವರ್ಗಾಯಿತ ವಿಷಯಗಳಿಗೆ ಹಣ ದೊರೆಯದೆ ಇರಬಹುದು, ಮತ್ತು ಅವುಗಳ ಹೊಣೆ ಹೊತ್ತ ಮಂತ್ರಿಗಳು ಮಿತವ್ಯಯದ ಹೊಣೆಯನ್ನು ಹೊರಬೇಕಾಗುತ್ತದೆ ಮತ್ತು ಪ್ರಾಂತೀಯ ಹಣಕಾಸಿನಲ್ಲಿ ಸಮತೋಲನವನ್ನು ಕಾಪಾಡಲು ಹೊಸ ಕರಗಳನ್ನು ಆಶ್ರಯಿಸಬೇಕಾಗುತ್ತದೆ. ತನ್ನ ಅಧೀನದಲ್ಲಿರುವ ವಿಷಯಗಳಿಗಾಗಿ ಹಣ ಒದಗಿಸುವ ಬೇರೆ ಮಾರ್ಗಗಳಿರುವಾಗ ಕೌನ್ಸಿಲ್ಲಿನ ಗವರ್ನರನು ಹೊಸ ಕರಗಳನ್ನು ವಿಧಿಸುವುದು ಅಥವಾ ಮಿತವ್ಯಯವನ್ನು ಆಚರಿಸುವುದು ಸಂಶಯಾಸ್ಪದ. ಸರ್ಕಾರದ ಉಳಿದ ಅರ್ಧಭಾಗವಾದ ಇಲಾಖೆಯ ಗವರ್ನರ್ ಮಿತವ್ಯಯ ಆಚರಿಸಲು ಒಪ್ಪಬಹುದೇ ಅಥವಾ ಅವಶ್ಯವೆನಿಸಿದಾಗ ಹೊಸ ಕರಗಳನ್ನು ವಿಧಿಸಬಹುದೇ? ಅದು ಶಾಸನಸಭೆಯ ಮನಸ್ಥಿತಿಯನ್ನು ಅವಲಂಬಿಸಿದೆ.

ಕರ ಹೆಚ್ಚಳದ ಯೋಜನೆಗಳನ್ನು ಶಾಸನಸಭೆ ಸುಲಭವಾಗಿ ಒಪ್ಪಲಿಕ್ಕಿಲ್ಲವೆಂಬುದನ್ನು ಮೊದಲು ಗಮನಿಸಬೇಕಾಗುತ್ತದೆ. ಬರ್ಕ್ ಹೇಳಿದ್ದು ನಿಜ.[೧]

"ಸಾರ್ವಜನಿಕ ಆಸ್ತಿಯು ಹಾಳಾಗುವುದರಿಂದ ಜನರಿಗೆ ನೆಮ್ಮದಿ ಸಿಗುತ್ತದೆಯೆಂದು ಅವರಿಗೆ ಹೇಳುವುದು ಕ್ರೌರ್ಯದ ಹಾಗೂ ದುರಹಂಕಾರದ ಪರಮಾವಧಿಯಾಗಿದೆ. ಜನರಿಗೆ ಅವರ ಆದಾಯದ ನಷ್ಟದಿಂದ ಕೊಡಲಾದ ಪರಿಹಾರದಿಂದ ರಾಜಕೀಯ ಪ್ರಮುಖರು ತಮ್ಮ ಬೆಲೆಯನ್ನು ಕಟ್ಟಿಕೊಳ್ಳುವ ಪೂರ್ವದಲ್ಲಿ ಈ ಸಮಸ್ಯೆಯ ಪರಿಹಾರಕ್ಕೆ ಮೊದಲು ಗಮನಕೊಡಬೇಕಾಗಿತ್ತು. ಜನರು ಹೆಚ್ಚಿನ ಹಣವನ್ನು ಕೊಡುವುದು ಮತ್ತು ಅದೇ ಪ್ರಮಾಣದಲ್ಲಿ ಲಾಭ ಪಡೆಯುವುದು ಅವರಿಗೆ ಪ್ರಯೋಜನಕಾರಿಯೋ? ಅಥವಾ ಕೊಡುಗೆಗಳ ಭಾರವನ್ನು ಸಂಪೂರ್ಣ ತೆಗೆಯುವುದರಿಂದ ಸ್ವಲ್ಪ ಲಾಭ ಪಡೆಯುವುದು ಅಥವಾ ಲಾಭ ಪಡೆಯದೆ ಇರುವುದು ಪ್ರಯೋಜನಕಾರಿಯೋ?"

ಈ ಪ್ರಶ್ನೆಗೆ ತಾತ್ವಿಕ ಉತ್ತರವೇನೇ ಇರಲಿ ಹೊಸ ಕರಗಳ ಭಾರವನ್ನು ಹೊರಲು ಕಡಿಮೆ ಸಾಮರ್ಥ್ಯವಿದ್ದ ಭಾರತದಂತಹ ಬಡ ದೇಶದಲ್ಲಿ ಆ ಭಾರವನ್ನು ಹೆಚ್ಚಿಸುವ ಪ್ರಸ್ತಾವನೆ ಮಾಡುವುದು, ಕ್ರೂರವಲ್ಲದಿದ್ದರೂ ಯಾವಾಗಲೂ ಅಹಿತಕರವಾದದ್ದಾಗಿದೆ ಎಂಬುದರಲ್ಲಿ ಯಾವ ಸಂಶಯವೂ ಅಲ್ಲ. ಅಲ್ಲದೆ ಚುನಾವಣೆಯಲ್ಲಿ ಶಾಸಕರ ಅವಕಾಶಗಳನ್ನು ಕಡಿಮೆ ಮಾಡಬಹುದು ಎಂಬ ಕಾರಣದಿಂದ ಹೆಚ್ಚಿನ ಕರದ ಪ್ರಸ್ತಾವನೆಗಳನ್ನು ಬಿಟ್ಟುಕೊಡಲಾಗುತ್ತದೆ. ನಾಮಕರಣದಿಂದ ಶಾಸನ ಸಭೆಯಲ್ಲಿ ಸ್ಥಾನ ದೊರಕಿಸಿಕೊಳ್ಳುವುದು ಸಾಮಾನ್ಯ ಮಾರ್ಗವಿದ್ದಾಗ ಚುನಾಯಿಸುವವರ ಪೂರ್ವಾಗ್ರಹಗಳಿಗೆ ಮಹತ್ವ ಕೊಡುವುದು ಅನಾವಶ್ಯಕವಾಗಿತ್ತು. ಆದರೆ ಚುನಾವಣೆಯಿಂದ ಆ ಸ್ಥಾನ ಗಳಿಸಬೇಕಾದರೆ ಶಾಸನಸಭೆಯ ಅಭ್ಯರ್ಥಿ ಚುನಾಯಿಸುವವರ ಕಿಸೆಯನ್ನು ಮುಟ್ಟಿದರೆ, ಹೊಸ ಕರಗಳು ಪ್ರಮಾಣಕ್ಕಿಂತಲೂ ಹೆಚ್ಚಿನ ಲಾಭವನ್ನು ಕೊಟ್ಟರೂ ಅವನು ಯಶಸ್ವಿಯಾಗುವ ಸಂಭವ ಕಡಿಮೆ. ಅದೂ ಅಲ್ಲದೆ ಆಡಳಿತವರ್ಗ ಹೆಚ್ಚಿನ ಕರ ಹಾಕುತ್ತಿದೆಯೆಂದು ಆಪಾದಿಸಿ ಅಧಿಕಾರಕ್ಕೆ ಬಂದ ರಾಜಕೀಯ ಪಕ್ಷ ಅದೇ ನೀತಿಯನ್ನು ಮುಂದುವರಿಸಿ ತನಗೆ ತಾನು ಅಪಕೀರ್ತಿಯನ್ನು ತಂದುಕೊಳ್ಳಲು ಒಪ್ಪಲಾರದು. ಕರಾಕರಣೆಗೆ ಶಾಸಕರ ಸಾಮಾನ್ಯ ವಿರೋಧ "ಕಾಯ್ದಿಟ್ಟ" ಹಾಗೂ "ವರ್ಗಾಯಿತ" ವಿಷಯಗಳ ಬಗೆಗಿನ ಶಾಸಕರ ವಿಚಿತ್ರ ಭಾವದಿಂದ ಬಲಗೊಳ್ಳಲ್ಪಟ್ಟಿದೆ. ಕಾಯ್ದಿಟ್ಟ ವಿಷಯಗಳು ಹೆಚ್ಚಾಗಿ ಶಾಂತಿ ಮತ್ತು ಸುವ್ಯವಸ್ಥೆಗೆ ಸಂಬಂಧಪಟ್ಟವುಗಳಾಗಿವೆ. ಆದರೆ ಈಗಾಗಲೇ ತೋರಿಸಿಕೊಟ್ಟಂತೆ ಸುಧಾರಣೆಗಳ ಪೂರ್ವದಲ್ಲಿ ಆಡಳಿತವರ್ಗದ ನೀತಿ ಸುವ್ಯವಸ್ಥೆಗೆ ಪ್ರಗತಿಯನ್ನು ಬಲಿಕೊಡುವುದಾಗಿತ್ತು. ಆದ್ದರಿಂದ ಪರಿಷ್ಕೃತ ಸಂವಿಧಾನದಡಿಯಲ್ಲಿ ಜನಪ್ರಿಯ ಶಾಸನಸಭೆಗಳು ಪ್ರಗತಿಗೆ ಅನುವು ಮಾಡಿಕೊಡುವ ವಿಷಯಗಳ ಕಡೆಗೆ ಒಲವು ತೋರಿಸುವುದು ಸ್ಪಷ್ಟವಾಗಿದೆ. ಕರಾಕರಣೆಯ ಹೆಚ್ಚಳಕ್ಕೆ ಅವರ ವಿರೋಧ ಮತ್ತು ವರ್ಗಾಯಿತ ವಿಷಯಗಳ ಕಡೆಗೆ ಅವರ ಒಲವು, ಕಾಯ್ದಿಟ್ಟ ವಿಷಯಗಳಿಗೆ ಒದಗಿಸಿದ ಹಣದಲ್ಲಿ ಕಡಿತ ಮಾಡುವ ಮಂತ್ರಿಗಳ ಪ್ರಸ್ತಾವನೆಗಳನ್ನು ಸ್ವಾಗತಿಸುವಂತೆ ಮಾಡುತ್ತವೆ. ವರ್ಗಾಯಿತ ವಿಷಯಗಳ ಅನುಕೂಲಕ್ಕಾಗಿ ಕಾಯ್ದಿಟ್ಟ ವಿಷಯಗಳಲ್ಲಿ ಎಷ್ಟು ಹಣವನ್ನು ಅವರು ಉಳಿಸಬಲ್ಲರೆಂಬುದರ ಮೇಲೆ ಮಂತ್ರಿಗಳ ಮೇಲಿನ ಅವರ ಗೌರವಭಾವ ಅವಲಂಬಿಸಿದೆ. ಆದಾಯದ ಹೆಚ್ಚಳದ ಸಂಭವ ಇಲ್ಲದಿದ್ದಾಗ, ಕಾರ್ಯನಿರ್ವಾಹಕದ ಎರಡು ಭಾಗಗಳಾದ, ಹಂಚುವಿಕೆಯ ಅಧಿಕಾರ ಹೊಂದಿದ ಕೌನ್ಸಿಲ್ಲಿನ ಗವರ್ನರ್, ಜನಪ್ರಿಯ ಶಾಸನಸಭೆಯ ಮುಂಗಡಪತ್ರದ ಅಧಿಕಾರ ಹೊಂದಿದ

---

೧. *ರಿಫ್ಲೆಕ್ಷನ್ಸ್ ಆನ್ ರೆವಲ್ಯೂಷನ್ ಇನ್ ಫ್ರಾನ್ಸ್.*

ಇಲಾಖೆಯ ಗವರ್ನರ್, ಒಬ್ಬನು ಮತ್ತೊಬ್ಬನಿಗೆ ಮಿತವ್ಯಯವನ್ನು ಒತ್ತಾಯಿಸಿ ತಮ್ಮ ವಿಷಯಗಳ ಅಭಿವೃದ್ಧಿಗೆ ಸ್ಪರ್ಧಿಸುತ್ತಾರೆ. ಶಾಸನಸಭೆ ಹೊಸ ಕರಗಳನ್ನು ವಿಧಿಸಲು ಒಲವು ತೋರಿಸುವುದಿಲ್ಲವಾದ್ದರಿಂದ ಕೌನ್ಸಿಲ್ಲಿನ ಗವರ್ನರ್ ಕಡಿತವನ್ನು ತಡೆಯುವ ಪರಿಸ್ಥಿತಿಯಲ್ಲಿರುವುದರಿಂದ, ಇಲಾಖೆಯ ಗವರ್ನರ್ ಕರಗಳನ್ನು ವಿಸ್ತರಿಸಲು ಉತ್ಸುಕನಾಗಿರುವುರಿಂದ, ಪ್ರಾಂತೀಯ ಹಣಕಾಸಿನಲ್ಲಿ ಸಮತೋಲನದ ಸಂಭವಗಳು ತೀರಾ ಕಡಿಮೆಯಾಗಿವೆ.

ದ್ವಿಪ್ರಭುತ್ವ ಒಂದು ಒಳ್ಳೆಯ ಪದ್ಧತಿಯ ಸರ್ಕಾರವಲ್ಲವಾದ್ದರಿಂದ, ಪ್ರಾಂತ್ಯಗಳಲ್ಲಿ ದೃಢ ಹಣಕಾಸಿನ ವ್ಯವಸ್ಥೆ ಇಲ್ಲವೆಂಬುದು ಸ್ಪಷ್ಟವಾಗಿದೆ. ದ್ವಿಪ್ರಭುತ್ವ ಒಂದು ಒಳ್ಳೆಯ ಪದ್ಧತಿಯ ಸರ್ಕಾರವೇಕೆ ಅಲ್ಲ? ಈ ಪ್ರಶ್ನೆಗೆ ಉತ್ತರವು ಬಹಳ ಸರಳವಾಗಿದೆ. ಅದು ಸಾಮೂಹಿಕ ಜವಾಬ್ದಾರಿ ತತ್ವಕ್ಕೆ ವಿರೋಧವಾಗಿರುವುದರಿಂದ ದ್ವಿಪ್ರಭುತ್ವವು ಒಂದು ಕೆಟ್ಟ ಪದ್ಧತಿಯ ಸರ್ಕಾರವಾಗಿದೆ. ಆಡಳಿತ ಯಂತ್ರವು ಸುಗಮವಾಗಿ ಹಾಗೂ ಪರಸ್ಪರ ಹೊಂದಾಣಿಕೆಯಿಂದ ಕಾರ್ಯಮಾಡಬೇಕು. ಹಾಗೆ ಮಾಡಬೇಕಾದರೆ ಅದು ಸರ್ಕಾರಿ ಕೆಲಸವನ್ನು ವಹಿಸಿಕೊಡಲಾರದ ಮತ್ತು ಅದನ್ನು ಕಾರ್ಯಗತಮಾಡುವಲ್ಲಿ ಆಡಳಿತಗಾರರ ಸಾಮೂಹಿಕ ಜವಾಬ್ದಾರಿಯ ತತ್ವವನ್ನು ಒಪ್ಪಬೇಕು. ಸರ್ಕಾರಿ ಕೆಲಸವು ವಹಿಸಿಕೊಡಲಾರದ ಸ್ವರೂಪದ್ದಾಗಿದೆಯೆಂಬುದು ನಿಜಸಂಗತಿಗೆ ಹೊಂದುವುದಿಲ್ಲ. ಏಕೆಂದರೆ ಆಚರಣೆಯಲ್ಲಿ ಸರ್ಕಾರಿ ಕಾರ್ಯಗಳು ಸ್ಥಾನಿಕ ಸಂಸ್ಥೆಗಳು ಹಾಗೂ ವಿಭಾಗಗಳ ನಡುವೆ ಹಂಚಲ್ಪಟ್ಟಿವೆ. ಆದರೂ ಸಹಿತ ಅವುಗಳ ನಡುವೆ ಒಂದು ಸಾಮಾನ್ಯ ಎಳೆ ಹರಿದಿದೆ. ಅದೆಂದರೆ, ಸರ್ಕಾರದ ಯಾವ ಕಾರ್ಯವೂ ಶೂನ್ಯದಲ್ಲಿ ಕೆಲಸಮಾಡಲಾರದು, ಮತ್ತೊಂದು ಕಾರ್ಯದ ಮೇಲೆ ಪ್ರತಿಯೊಂದು ಕಾರ್ಯವೂ ಅವಲಂಬಿಸಿರುತ್ತದೆ. ಎಲ್ಲ ಕಾರ್ಯಗಳನ್ನು ಮೇಳೈಸುವ ಒಂದು ಶಕ್ತಿ ಇಲ್ಲದಿದ್ದರೆ ಅವುಗಳು ಸುವ್ಯವಸ್ಥಿತ ಪ್ರಗತಿಯನ್ನುಂಟುಮಾಡಲಾರವು ಮತ್ತು ಒಂದು ವಿಭಾಗದಲ್ಲಿ ಕೈಕೊಂಡ ನೀತಿಯು ಉಳಿದ ವಿಭಾಗಗಳ ಸಹಾಯವಿಲ್ಲದೆ ಫಲಕಾರಿಯಾಗಲಾರದು. ಆ ಹೊಂದಾಣಿಕೆಯ ಶಕ್ತಿಯನ್ನು ಸಾಮೂಹಿಕ ಜವಾಬ್ದಾರಿ ತತ್ವದಲ್ಲಿ ಕಾಣಬಹುದು. ಅದು ಈ ರೀತಿಯಾಗಿರಲು ಕಾರಣವು ಹರ್ನರವರು ತೋರಿಸಿಕೊಟ್ಟಂತೆ.[೧]

"ಪ್ರತಿಯೊಬ್ಬ ಮಂತ್ರಿಯು ತನ್ನ ವಿಭಾಗದಲ್ಲಿ ತಾನು ತನ್ನ ಸಹೋದ್ಯೋಗಿಗಳ ಅಧಿಕೃತ ಕಾರ್ಯಭಾರಿ ಎಂಬಂತೆ ಇಡೀ ಅಂಗದಿಂದ ವಿಚಾರಣೆ ಮಾಡುವ ಹಾಗೂ ಅದರಿಂದ ನಿಯಂತ್ರಣಗೊಳಿಸಲ್ಪಡುವ ಅಧೀನಕ್ಕೊಳಪಟ್ಟು, ಕೆಲಸಮಾಡುತ್ತಾನೆ. ಆದರೆ ಯಾವುದೇ ವಿಷಯದಲ್ಲಿ ತೊಂದರೆ ಬರಬಹುದಾದಲ್ಲಿ ಮಂತ್ರಿಮಂಡಲದ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತಾನೆ. ಈ ಮುಂಜಾಗರೂಕತೆಯನ್ನು ತೆಗೆದುಕೊಂಡರೆ ಆ ಉಪಾಯವು ಇಲಾಖೆಯ ಸಾಮಾನ್ಯ ನಿಯಮವಾಗುತ್ತದೆ."

ತಪ್ಪಿರಬಹುದು ಅಥವಾ ಸರಿಯಿರಬಹುದು, ಸಾಮೂಹಿಕ ಜವಾಬ್ದಾರಿ ಆಧಾರದ ಮೇಲೆ ರಚಿತವಾಗಿರುವ ಸರ್ಕಾರಕ್ಕೆ ಮಾರ್ಗದರ್ಶಿಯಾಗಿರುವ ಒಂದು ಸಾಮಾನ್ಯ ಸುಸಂಘಟಿತ ನೀತಿಯಿರುತ್ತದೆ. ಆದರೆ ಸರ್ಕಾರಿ ಕೆಲಸವನ್ನು ವಿಭಜಿಸಿ ದ್ವಿಪ್ರಭುತ್ವವು ಕಾರ್ಯನಿರ್ವಾಹಕದಲ್ಲಿ ವಿಭಜಿತ ಜವಾಬ್ದಾರಿ ಅಂಶವನ್ನು ತಂದಿದೆಯೆಂದು ಹೇಳಬೇಕಾಗುತ್ತದೆ. ವಿಭಜನೆಯು ಅಡ್ಡ–ಅಡ್ಡವಾಗಿರದೆ ಊರ್ಧ್ವಾಧರವಾಗಿರುತ್ತದೆ ಎನ್ನುವುದು ನಿಜ. ಈ ಎರಡು ಭಾಗಗಳು ಕಾರ್ಯಪ್ರವೃತ್ತಿಯಾಗುವಂತೆ ಮಾಡುವಲ್ಲಿ ಎರಡು ಪ್ರತ್ಯೇಕ ಕಾರ್ಯನಿರ್ವಾಹಕಗಳಿಗೆ ಎರಡು ಪ್ರತ್ಯೇಕ ಶಾಸನಸಭೆಗಳಿರಬೇಕೆಂಬುದು, ಅಥವಾ ಪ್ರತಿಯೊಂದೂ ತನ್ನದೇ ಆದ ಕಾಯಿದೆಗಳನ್ನು ಮಾಡಬೇಕೆನ್ನುವ, ತನ್ನ ಹಣಕಾಸನ್ನು ನಿಯಂತ್ರಿಸುವ, ತನ್ನ ಮುಂಗಡಪತ್ರವನ್ನು

೧. *ದಿ ಗವರ್ನ್‌ಮೆಂಟ್ ಆಫ್ ಇಂಗ್ಲೆಂಡ್*, ಪು. ೨೦೪.

ತಯಾರಿಸುವ, ತನ್ನ ಕರಗಳನ್ನು ವಿಧಿಸುವ, ತನಗೆ ಬೇಕಾದ ಸಾಲವನ್ನು ಎತ್ತುವ ಅಥವಾ ಪ್ರತಿಯೊಂದಕ್ಕೂ ಅದಕ್ಕೆ ವಹಿಸಿಕೊಟ್ಟ ವಿಷಯಗಳ ಆಡಳಿತಕ್ಕೆ ಪ್ರತ್ಯೇಕವಾದ ಸಿಬ್ಬಂದಿ, ಅದನ್ನು ಭರ್ತಿಮಾಡಿಕೊಳ್ಳುವ, ಅದರ ಸೇವೆಗಾಗಿ ನೀಡುವ ಪಗಾರ, ನಿವೃತ್ತಿವೇತನದ ಪದ್ಧತಿ, ಎರಡೂ ಅಧಿಕಾರಿಗಳಿಗೆ ಸಂಪೂರ್ಣವಾಗಿ ತಮ್ಮದೇ ಆದಂಥ ಸ್ಪಷ್ಟವಾದ ವಲಯವಿರುವಂತೆ ಏರ್ಪಾಡು ಮಾಡಿಲ್ಲವೆಂಬುದೂ ನಿಜ. ಪ್ರಾಂತ್ಯಗಳ ಸರ್ಕಾರವನ್ನು ನಡೆಸಲು, ಅಳವಡಿಸಿಕೊಂಡ ದ್ವಿಪ್ರಭುತ್ವ ಪದ್ಧತಿಯ ಭಾಗಗಳನ್ನಾಗಿ ದ್ವಿಕಾರ್ಯನಿರ್ವಾಹಕದ ಕೆಲವು ಸಹಗಾಮಿಗಳನ್ನು ಮಾಡಬೇಕೆಂದು ಭಾರತ ಸರ್ಕಾರವು ಸೂಚಿಸಿತ್ತು. ದೇಶದ ಸುದೈವದಿಂದ ಹೊಸ ಸಂವಿಧಾನದ ನಿರ್ಮಾತೃಗಳು ಈ ರೀತಿ ಅಭಿಪ್ರಾಯಪಟ್ಟರು.[೧]

"ಪ್ರತಿಯೊಂದು ಪ್ರತ್ಯೇಕ ಅಂಶಕ್ಕೆ ತನ್ನದೇ ಆದ ಸರಂಜಾಮುಗಳನ್ನು ಒದಗಿಸುವುದರಲ್ಲಿ ಮತ್ತು ಘರ್ಷಣೆಯಾಗದಂತೆ ಅವುಗಳ ಪಥಗಳು ದೂರಾವಾಗಿವೆಯೆಂದು ತಿಳಿಯುವುದರಲ್ಲಿ ಜಾಣತನವಿಲ್ಲ. ಆದರೆ ಜಂಟಿ ಕಾರ್ಯದ ರೂಢಿ ತರಲು ಆ ಎರಡೂ ಅಂಶಗಳನ್ನು ಕೂಡಿಸುವ ಅವಕಾಶಗಳನ್ನು ಕಲ್ಪಿಸುವ ಜಾಣತನವಿದೆ"

ಜಂಟಿ ವರದಿಯ ಗ್ರಂಥಕರ್ತರು ಈ ರೀತಿ ಬರೆದರು:[೨]

"ಈ ರೀತಿಯಾಗಿ ನಿರ್ಮಾಣಗೊಂಡ ಮತ್ತು ಈ ರೀತಿಯ ಕಾರ್ಯ ವಿಂಗಡಣೆಯನ್ನು ಹೊಂದಿದ ಸರ್ಕಾರವು ಒಂದೇ ಸರ್ಕಾರವೆಂಬಂತೆ ಅವುಗಳನ್ನು ನಿರ್ವಹಿಸುತ್ತದೆಯೆಂಬುದು ನಮ್ಮ ಉದ್ದೇಶವಾಗಿದೆ" ಮತ್ತು "ಪ್ರಾಂತೀಯ ಮುಂಗಡಪತ್ರವು ಸಂಪೂರ್ಣವಾಗಿ ಕಾರ್ಯನಿರ್ವಾಹಕ ಸರ್ಕಾರದಿಂದ ತಯಾರಿಸಲ್ಪಡಬೇಕು."[೩]

ಹಾಗೂ ಕೇಂದ್ರದ ಅನೇಕ ಜವಾಬ್ದಾರಿಗಳನ್ನು ಹಂಚುವ ಒಂದು ತತ್ವ, ಆ ಎರಡು ಭಾಗಗಳ ಗುರಿ ಹಾಗೂ ನೀತಿ ಒಂದುಗೂಡುವಂತೆ ಮಾಡುವ ಮತ್ತೊಂದು ತತ್ವ – ಹೀಗೆ ಎರಡು ತತ್ವಗಳ ಅನ್ಯೋನ್ಯ ಕ್ರಿಯೆಗಳಿಗೆ ಸರ್ಕಾರದ ಎರಡು ಭಾಗಗಳನ್ನು ಅಧೀನಗೊಳಿಸುವ ಮುಖಾಂತರ ದ್ವಿಪ್ರಭುತ್ವದ ಕಾರ್ಯವೈಖರಿಯನ್ನು ಮಾರ್ಪಡಿಸಿದ್ದು ನಿಸ್ಸಂಶಯವಾಗಿಯೂ ಒಳ್ಳೆಯದೆ. ಏಕೆಂದರೆ ಪ್ರತಿಯೊಂದು ಕಾರ್ಯನಿರ್ವಾಹಕದ ಭಾಗವನ್ನೂ ಅಗತ್ಯ ರೀತಿಯಲ್ಲಿ ಸಜ್ಜುಗೊಳಿಸಿದ್ದು ಒಂದು ವಿಪತ್ತಾಗಿತ್ತು. ಆದರೆ ವರ್ಗಾಯಿತ ವಿಷಯಗಳ ಸಂಬಂಧದಲ್ಲಿ ಮಂತ್ರಿಗಳು ಕಾರ್ಯವೆಸುಗುವಲ್ಲಿ ಶಾಸನಸಭೆಯ ಸದಸ್ಯರು ಅವರಿಗೆ ಉಪದೇಶ ನೀಡುತ್ತಾರೆ, ಮತ್ತು ಶಾಸನಸಭೆಯ ಸದಸ್ಯರು ಕಾಯ್ದಿಟ್ಟ ವಿಷಯಗಳ ಸಂಬಂಧದಲ್ಲಿ ಕಾರ್ಯವೆಸಗುವಾಗ ಮಂತ್ರಿಗಳು ಅವರಿಗೆ ಉಪದೇಶ ನೀಡುತ್ತಾರೆಂದು ತಿಳಿವಳಿಕೆ ಇದ್ದಾಗ್ಯೂ ದ್ವಿಪ್ರಭುತ್ವವು ವಿಭಜಿತ ಜವಾಬ್ದಾರಿ ಪದ್ಧತಿ ಎಂಬ ಸಂಗತಿಯನ್ನು ಅದು ಬದಲಾಯಿಸಲು ಸಾಧ್ಯವಿಲ್ಲ. ಸರ್ಕಾರಿ ಕಾರ್ಯಗಳನ್ನು ಸುಸಂಬದ್ಧವಾಗಿ ಹಾಗೂ ಸಾಮಾನ್ಯ ನೀತಿಗನುಗುಣವಾಗಿ ನಡೆಸಿಕೊಂಡು ಹೋಗುವ ಪದ್ಧತಿ ಇದಲ್ಲ. ವ್ಯತಿರಿಕ್ತವಾಗಿ, ಸಂಘಟಿತ ನ್ಯಾಯಗಳಿಂದ ತುಂಬಿದ ಪದ್ಧತಿ ಇದಾಗಿದೆ. ದ್ವಿಪ್ರಭುತ್ವ ಹಾಗೂ ಅರಾಜಕತೆಗಳ ನಡುವಿನ ಅಂತರ ಬಹಳ ಕಡಿಮೆ ಇದೆ. ಎರಡು ತಾತ್ಕಾಲಿಕ ಪರಿಸ್ಥಿತಿಯಿಂದಾಗಿ ಈ ಪದ್ಧತಿಯು ಆಚರಣೆಯಲ್ಲಿ ಇಲ್ಲ. ಅಂಥ ಒಂದು ಪರಿಸ್ಥಿತಿಯೆಂದರೆ, ಪ್ರಾಂತೀಯ ಶಾಸನಸಭೆ ರಾಜಕೀಯ

೧. ಜಂಟಿ ವರದಿ, ಪು. ೧೯೯.
೨. ಅದೇ, ಪು. ೧೮೦.
೩. ಅದೇ, ಪು. ೨೦೭.

ವೈಷಮ್ಯದಿಂದ ದುರ್ಬಲವಾಗಿರುವುದು. ಮತ್ತೊಂದು, ಮಂತ್ರಿಗಳ ಅವಧಿ ಶಾಸನಸಭೆಯ ಇಚ್ಛಾನುಸಾರವಾಗಿರದೆ ಶಾಸನಸಭೆಯ ಅವಧಿಯವರೆಗಿದ್ದು, ಗವರ್ನರನ ಇಚ್ಛೆಯವರೆಗೆ ಅಧಿಕಾರವನ್ನು ಹೊಂದಿರುವುದಾಗಿತ್ತು. ಶಾಸನಸಭೆಯಿಂದ ಚುನಾಯಿತರಾದ ಮಂತ್ರಿಗಳನ್ನು ಒಪ್ಪಬೇಕೆಂದು ಒತ್ತಾಯಿಸುವ ಬದಲು ಚುನಾಯಿತ ಸದಸ್ಯರೊಳಗಿಂದ ಮಂತ್ರಿಗಳನ್ನು ಆಯ್ದುಕೊಳ್ಳಲು ಗವರ್ನರನಿಗೆ ಬಿಟ್ಟಿದ್ದು ಸುಧಾರಣಾ ಕಾಯಿದೆಯ ಗುರಿಯಾಗಿದ್ದ ಜವಾಬ್ದಾರಿ ಸರ್ಕಾರದ ತತ್ವಗಳಿಗೆ ಅಪಮಾನವಾಗಿದೆ. ಗವರ್ನರನ ವಿಶ್ವಾಸವಿದ್ದ ಮಂತ್ರಿ, ಶಾಸನಸಭೆಯ ವಿಶ್ವಾಸವಿದ್ದ ಮಂತ್ರಿ ಇವರುಗಳ ನಡುವೆ ಸಾಕಷ್ಟು ಅಂತರವಿದೆ. ಒಳ್ಳೆಯ ಸರ್ಕಾರಕ್ಕೆ ಸಂಬಂಧಪಟ್ಟಂತೆ ಇವುಗಳಲ್ಲಿಯ ಅಂತರ ಎಷ್ಟಿದೆಯೆನ್ನುವುದು, ಹದಿನೆಂಟನೆಯ ಹಾಗೂ ಹತ್ತೊಂಬತ್ತನೆಯ ಶತಮಾನದ ಇಂಗ್ಲಿಷ್ ರಾಜಕೀಯ ಇತಿಹಾಸದ ಪುಟಗಳಲ್ಲಿ ಸ್ಪಷ್ಟವಾಗಿ ಬರೆದಿದೆ. ಅದರ ವಿರುದ್ಧ ಇಂಗ್ಲಿಷ್ ಸಂವಿಧಾನದ ಇತಿಹಾಸವೇ ಒಂದು ದೊಡ್ಡ ಆಕ್ಷೇಪಣೆಯಾಗಿರುವಾಗ, ಅಂಥ ಪದ್ಧತಿಯನ್ನು ಅಳವಡಿಸಿಕೊಂಡದ್ದಕ್ಕೆ ಕಾರಣವಿಲ್ಲದಿರಲಾರದು. ತೋರಿಕೆಗೆ ಕೊಟ್ಟಕಾರಣವೆಂದರೆ,[೧]

ಶಾಸನಸಭೆಗೆ "ಮಂತ್ರಿಗಳನ್ನು ವಜಾ ಮಾಡುವ ಅಧಿಕಾರದ, ಅಥವಾ ಅಂಥ ಅಧಿಕಾರವನ್ನು ಉಪಯೋಗಿಸುವುದರಿಂದಾಗುವ ಪರಿಣಾಮಗಳ ಅನುಭವವಿಲ್ಲ. ಪ್ರಾತಿನಿಧಿಕ ಸಭೆಯ ಇಚ್ಛೆಯಂತೆ ಅಧಿಕಾರದ ಅವಧಿಯು ಹಾಕಿದ ಕರಾರುಗಳ ಅರಿವು ಭಾರತದಲ್ಲಿ ಇನ್ನೂ ಯಾರಿಗೂ ಇದ್ದಂತಿಲ್ಲ. ನಿಜವಾದ ಅನುಭವದಿಂದ ಮಾತ್ರ ಈ ಪಾಠಗಳನ್ನು ಕಲಿಯಬಹುದು..... ಶಾಸನಸಭೆಯ ಚುನಾಯಿತ ಸದಸ್ಯರೊಳಗಿಂದ ಮಂತ್ರಿಗಳನ್ನು ನೇಮಿಸುವ ಹಾಗೂ ತಮ್ಮ ಸದಸ್ಯತ್ವವನ್ನು ಕಾಯ್ದುಕೊಳ್ಳುವುದರ ಮೇಲೆ ಅಧಿಕಾರದ ಅವಧಿಯನ್ನು ನಿರ್ಧರಿಸುವ ತಂತ್ರದ ಮೂಲಕ, ತಮ್ಮ ಮತದಾರರಿಗೆ ಜವಾಬ್ದಾರಿಯಾಗಿರುವ ರೂಪದಲ್ಲಿ ಹಾಗೂ ಆಡಳಿತದ ಹೊಣೆಹೊತ್ತವರು ಶಾಸನಸಭೆಯನ್ನು ಚುನಾಯಿಸುವ ಮತದಾರರಿಗೆ ಬೇಜವಾಬ್ದಾರಿಯಾಗಿರುತ್ತಾರೆಂಬ ವಿಚಾರಗಳ ಪರಿಸ್ಥಿತಿಯನ್ನು ಕೊನೆಗೊಳಿಸಲು ಕೆಲವು ಮಟ್ಟಿಗೆ ಜವಾಬ್ದಾರಿಗಳನ್ನು ಸ್ಥಾಪಿಸಲಾಯಿತು."

ಈ ವಾದದ ಯುಕ್ತತೆಯನ್ನು ನಂಬುವುದು ಕಠಿಣ. ಅನುಭವವಿಲ್ಲದೆ ಏನನ್ನೂ ಕಲಿಯಲು ಸಾಧ್ಯವಿಲ್ಲವೆಂದು ವಾದಿಸುವುದು ಹಾಸ್ಯಾಸ್ಪದ. ವ್ಯಕ್ತಿಯ ಹಾಗೂ ಗುಂಪಿನ ಒಳ್ಳೆಯ ನಡತೆಗೆ ಆವಶ್ಯಕವಾಗಿರುವುದು ವಸ್ತುಗಳ ಅರ್ಥವನ್ನು ಹಾಗೂ ಬೆಲೆಯನ್ನು ತಿಳಿದುಕೊಳ್ಳುವುದಾಗಿದೆ. ಇದಕ್ಕಾಗಿ ನಿಜವಾದ ಪರೀಕ್ಷೆಗೊಳಪಡಿಸಿಕೊಳ್ಳುವುದು ಅನಾವಶ್ಯಕ. ಜವಾಬ್ದಾರಿ ಜನರಿಂದ ನಿರ್ಮಿತವಾದ ಶಾಸನಸಭೆ ಒಬ್ಬ ಮಂತ್ರಿಯನ್ನು ವಜಾ ಮಾಡುವುದರಿಂದಾಗುವ ಪರಿಣಾಮಗಳನ್ನು ಅನುಭವದಿಂದ ಕಲಿಯುವ ಮೊದಲೇ ತಿಳಿದುಕೊಂಡಿದೆ ಎಂದು ಭಾವಿಸಬಹುದು. ಮಂತ್ರಿಗಳು ತಮ್ಮ ಮತದಾರರಿಗೆ ಜವಾಬ್ದಾರರಾಗಿರುವುದರಿಂದ ಇದು ಕಡಿಮೆ ಜವಬ್ದಾರಿ ಪದ್ಧತಿಯೆಂದು ವಾದಿಸುವುದು ಒಂದು ಪೊಳ್ಳುಪಾಂಡಿತ್ಯ ಪ್ರದರ್ಶನವಾಗಿದೆ. ತಮ್ಮನ್ನು ಚುನಾಯಿಸಿದ ಹಾಗೂ ನೇಮಿಸಿದ ಅಂಗಕ್ಕೆ ಹೌಸ್ ಆಫ್ ಕಾಮನ್ಸ್ ಕೇವಲ ನ್ಯಾಸಧಾರಿಯಾಗಿತ್ತೆಂದು ಇಂಗ್ಲಿಷ್ ಸಂವಿಧಾನದ ಸಂಬಂಧದಲ್ಲಿ 'ಆಸ್ಟೀನ್' ವಾದಿಸಿದ್ದನು.[೨] ಚುನಾಯಿಸುವವರು ಪರಮ ಅಧಿಕಾರದ ಬಹು ಮುಖ್ಯ ಭಾಗವಾಗಿರುವುದು ರಾಜಕೀಯ ದೃಷ್ಟಿಯಲ್ಲಿ ನಿಜ. ಏಕೆಂದರೆ ಪ್ರಾತಿನಿಧಿಕ ಸರ್ಕಾರದ ಪದ್ಧತಿಯಲ್ಲಿ ಅವರ ಇಚ್ಛೆಯೇ ಕೊನೆಯ ವಿಧೇಯಕತೆಯನ್ನು ಪಡೆಯುತ್ತದೆ.

---

೧. ಜಂಟಿ ವರದಿ, ಪು. ೧೮೧.

೨. *ಜ್ಯೂರಿಸ್‌ಪ್ರೂಡೆನ್ಸ್*, ಸಂ. I, ೪ನೇಯ ಆವೃತ್ತಿ, ಪು. ೨೫೩

ಆದರೆ ಪ್ರೊ. ಡೈಸೇ ತೋರಿಸಿಕೊಟ್ಟಂತೆ,[೧]

"ಕಾಯಿದೆ ರಚನೆಯಲ್ಲಿ ಪಾರ್ಲಿಮೆಂಟಿನ ಮತದಾರರಿಗೆ ಕಾಯಿದೆಬದ್ಧ ಪಾತ್ರವನ್ನು ಆರೋಪಿಸುವ ಯಾವ ನಿರೂಪಣೆಗಳೂ ಮತದಾರರ ಸ್ಥಾನದ ಬಗೆಗಿನ ಕಾಯಿದೆಯ ದೃಷ್ಟಿಯಲ್ಲಿ ಅಸಂಗತವಾಗಿವೆ. ಇಂಗ್ಲಿಷ್ ಸಂವಿಧಾನದಲ್ಲಿ (ಭಾರತದ ಸಂವಿಧಾನದಲ್ಲಿಯೂ ಅದು ನಿಜವಾಗಿದೆ) ಮತದಾರರ ಕಾಯಿದೆಬದ್ಧ ಹಕ್ಕು ಪಾರ್ಲಿಮೆಂಟಿನ ಸದಸ್ಯರನ್ನು ಚುನಾಯಿಸುವುದಾಗಿದೆ. ಮತದಾರರಿಗೆ ಪಾರ್ಲಿಮೆಂಟಿನಲ್ಲಿ ಶಾಸನವನ್ನು ಮಂಡಿಸುವ, ಮಂಜೂರು ಮಾಡುವ ಮಾರ್ಗಗಳೂ ಇಲ್ಲ. ಮತದಾರರ ಅಭಿಪ್ರಾಯಕ್ಕೆ ವಿರೋಧವಾಗಿರುವ ಕಾಯಿದೆ ಅಕ್ರಮವಾಗಿದೆ ಎಂಬ ವಾದವನ್ನು ಯಾವ ನ್ಯಾಯಾಲಯವೂ ವಿಚಾರಿಸಲಾರದು."

ಭಾರತದ ಮತದಾರರ ಸ್ಥಾನವನ್ನು ಇದು ನಿಖರವಾಗಿ ನಿರ್ಧರಿಸುತ್ತದೆ. ಮಂತ್ರಿಯನ್ನು ಅಂಥ ಶೂನ್ಯಕ್ಕೆ ಜವಾಬ್ದಾರಿಯುತನನ್ನಾಗಿ ಮಾಡುವುದು ಅವನನ್ನು ಬೇಜವಾಬ್ದಾರಿಯುತನನ್ನಾಗಿ ಮಾಡಿದಂತಾಗುತ್ತದೆ. ಈ ರೀತಿಯಾಗಿ ಮಂತ್ರಿಗಳನ್ನು ನೇಮಿಸುವುದನ್ನು ಸೂಚಿಸುವಲ್ಲಿ ಸಂವಿಧಾನದ ನಿರ್ಮಾತೃಗಳು ಈ ವಿಚಾರಗಳನ್ನು ತಿಳಿದುಕೊಂಡಿರಲಿಲ್ಲವೆಂದು ನಂಬುವುದು ಕಷ್ಟ. ಮಂತ್ರಿಗಳನ್ನು ನೇಮಿಸುವ ಈ ರೂಢಿಯನ್ನು ಅಳವಡಿಸಿಕೊಳ್ಳಲು ಕಾರಣವೆಂದರೆ, ಕಾಯ್ದಿಟ್ಟ ವಿಷಯಗಳಿಗೆ ಹೊಣೆಗಾರರಾದವರ ಜೊತೆ ಹೊಂದಿಕೊಂಡು ಹೋಗುವ, ಮತ್ತು ಶಾಸನಸಭೆಯಿಂದ ಅವನನ್ನು ತೆಗೆಯಲು ಬಾರದ್ದರಿಂದ ಅದರ ಇಚ್ಛೆಗೆ ಹೆಚ್ಚು ಮಣಿಯಲಾರದ ಮನುಷ್ಯನನ್ನು ಆಯ್ಕೆಮಾಡಲು ಅದು ಅನುವು ಮಾಡಿಕೊಡುತ್ತದೆ. ಆದರೆ ಶಾಸನಸಭೆಯ ಚಾವಟಿಯಿಂದ ಮಂತ್ರಿಗಳು ಸಂಪೂರ್ಣ ಸುರಕ್ಷಿತರಾಗಿರಲು ಸಾಧ್ಯವಿಲ್ಲ. ಸದಸ್ಯರ ಜೊತೆ ಗೆಳೆತನ ಬೆಳೆಸಿ ಶಾಸನಸಭೆಯನ್ನು ಸಮಾಧಾನಪಡಿಸದ ಮಂತ್ರಿಯು ಮುಂಗಡಪತ್ರದ ವೇಳೆಯಲ್ಲಿ ತೊಂದರೆಯನ್ನು ಎದುರಿಸಬೇಕಾಗುತ್ತದೆ. ಮುಂಗಡ ಪತ್ರದಲ್ಲಿಯ ಮಂತ್ರಿಯ ಪ್ರಸ್ತಾವನೆಗಳು ಶಾಸನಸಭೆಯ ಬಹುಮತದಿಂದ ಹಿಂತಿರುಗಿಸಲ್ಪಡಬಹುದು. ಆದರೆ ತಾನಾಗಲಿ ಅಥವಾ ಗವರ್ನರನಾಗಲಿ ಅದರಲ್ಲಿ ಹಸ್ತಕ್ಷೇಪಮಾಡಲು ಬರುವುದಿಲ್ಲ. ಮಂತ್ರಿಗೆ ಉಳಿದ ಒಂದೇ ಮಾರ್ಗವೆಂದರೆ ರಾಜೀನಾಮೆ ಕೊಡುವುದು.

ಆದರೂ ದ್ವಿಪ್ರಭುತ್ವವನ್ನು ವಿಫಲತೆಯಿಂದ ರಕ್ಷಿಸಿದ ಇಂಥ ಪರಿಸ್ಥಿತಿಗಳು ಕೇವಲ ತಾತ್ಕಾಲಿಕವಾದವುಗಳು. ರಾಜಕೀಯ ಭಿನ್ನಾಭಿಪ್ರಾಯಗಳು ತಾತ್ಕಾಲಿಕವಾದವುಗಳಾಗಿರಲಿಕ್ಕಿಲ್ಲ. ಪುನರ್ಯೋಜಿತ ಶಾಸನಸಭೆಯ ಎರಡನೆಯ ಅವಧಿಯಿಂದ ಮಂತ್ರಿಗಳು ಅದಕ್ಕೆ ತಗ್ಗುವವರಾಗುತ್ತಾರೆ. ಶಕ್ತಿಗಳು ತಾವಿದ್ದುದಕ್ಕಿಂತ ಒಳ್ಳೆಯ ರೀತಿಯಲ್ಲಿ ಸಂಘಟನೆಗೊಂಡು ದ್ವಿಪ್ರಭುತ್ವ ವಿಫಲವಾಗುವುದರಲ್ಲಿ ಸಂಶಯವಿಲ್ಲ.

ಮಿಶ್ರತಳಿಯ ಕಾರ್ಯನಿರ್ವಾಹಕರು, ವಿಭಜಿತ ಜವಾಬ್ದಾರಿ, ಕಾರ್ಯಗಳ ವಿಭಜನೆ, ಅಧಿಕಾರದ ಕಾಯ್ದಿರಿಸುವಿಕೆ, ಒಳ್ಳೆಯ ಸರ್ಕಾರದ ಪದ್ಧತಿಯಾಗಲಾರದು. ಎಲ್ಲಿ ಒಳ್ಳೆಯ ಸರ್ಕಾರದ ಪದ್ಧತಿ ಇಲ್ಲವೊ ಅಲ್ಲಿ ಒಳ್ಳೆಯ ಹಣಕಾಸಿನ ಪದ್ಧತಿ ಇರಲಾರದು. ಮೊದಲ ಉಪಾಯವೆಂದರೆ ಸಾಮೂಹಿಕ ಜವಾಬ್ದಾರಿ ಹೊಂದಿದ ಅವಿಭಜಿತ ಸರ್ಕಾರವಿರಬೇಕು. ಒಂದೇ ಮೂಲದಿಂದ ಇಡೀ ಸರ್ಕಾರವು ತನ್ನ ಆಜ್ಞೆಯನ್ನು ಪಡೆದಾಗ ಮಾತ್ರ ಇದು ಸಾಧ್ಯ. ಅದು ಬೇಗ ನೆರವೇರಲೆಂದು ಆಶಿಸೋಣ. ದ್ವಿಪ್ರಭುತ್ವ ಕೇವಲ ತಾತ್ಕಾಲಿಕವೆಂದು ತಿಳಿಯುವುದು ಆ ದಿಸೆಯಲ್ಲಿ ಉತ್ತೇಜನಕಾರಿಯಾಗಿದೆ. ಈ ತಾತ್ಕಾಲಿಕ ಅವಧಿ ಎಲ್ಲಿಯವರೆಗೆ ಮುಂದುವರಿಯುತ್ತದೆಯೆಂಬುದೇ ಒಂದು ಪ್ರಶ್ನೆ. ಶಿಕ್ಷಣದ ಹಾಗೂ ರಾಜಕೀಯ ಅನುಭವದ ಅಭಾವದಿಂದಾಗಿ, ಭಾರತದ ಮತದಾರರು ತಮ್ಮ ಬೇಡಿಕೆಗಳನ್ನು ಜಾಣತನದಿಂದ ನಿರ್ದಿಷ್ಟ ರೂಪದಲ್ಲಿ ಹೇಳಲಿಕ್ಕಾಗಲಿ,

---

೧. *ಲಾ ಆಫ್ ದಿ ಕಾನ್‌ಸ್ಟಿಟ್ಯೂಷನ್*, ೮ನೆಯ ಆವೃತ್ತಿ, ೧೯೧೫, ಪು. ೫೭.

ತಮ್ಮ ಪ್ರತಿನಿಧಿಗಳ ಮೇಲೆ ಪರಿಣಾಮಕಾರಿಯಾಗಿ ಆಜ್ಞೆ ವಿಧಿಸಲಿಕ್ಕಾಗಲಿ ಸಾಧ್ಯವಿಲ್ಲ. ವಿದ್ಯಾವಂತ ವರ್ಗದ ಹಳೆಯ ಸಾಮಾಜಿಕ ತಪ್ಪು ಕಲ್ಪನೆಗಳಿಂದಾಗಿ ಅವರು ಸಾಮಾನ್ಯ ಜನರನ್ನು ಸುಲಿಯಲು ರಾಜಕೀಯ ಅಧಿಕಾರವನ್ನು ದುರುಪಯೋಗಪಡಿಸಿಕೊಳ್ಳುವ ಅಪಾಯವಿರುವ ಕಾರಣದಿಂದಾಗಿ ಸಂಪೂರ್ಣ ಜವಾಬ್ದಾರಿ ಸರ್ಕಾರದ ಪದ್ಧತಿಯ ಭಾರವನ್ನು ಹೊರಲು ಭಾರತ ಇನ್ನೂ ಅಣಿಯಾಗಿಲ್ಲವೆಂಬ ಭಾವನೆಯ ಮೇಲೆ ದ್ವಿಪ್ರಭುತ್ವ ಪದ್ಧತಿಯ ಸರ್ಕಾರದ ಸಮರ್ಥನೆ ಮಾಡಲಾಗಿದೆ. ಈ ಮೂಲಾಧಾರ ಸಂಗತಿ ಹೊಸ ಪದ್ಧತಿಯ ಪರಿಣಾಮಗಳ ಜವಾಬ್ದಾರಿಗಳಿಂದ, ಸದ್ಯದಲ್ಲಿ ತರಲು ಸಾಧ್ಯವಾಗುವ ಜವಾಬ್ದಾರಿಗಳ ಮಟ್ಟ ಹಾಗೂ ವರ್ಗಗಳನ್ನು ಪ್ರತ್ಯೇಕಿಸಬೇಕಾಗುತ್ತದೆ. ಮತ್ತು ಅದು ಈಗ ಜನರನ್ನು ಒಂದುಗೂಡಿಸುವ ಶಕ್ತಿಗಳನ್ನು ಅವುಗಳ ಸ್ಥಾನವನ್ನಾಕ್ರಮಿಸಲು ಯೋಗ್ಯವಾದ ಬದಲಿಗಳು ತಯಾರಾಗುವ ಪೂರ್ವದಲ್ಲಿ ಸಂಪೂರ್ಣವಾಗಿ ಹಿಂತೆಗೆದುಕೊಳ್ಳಲಾಗುವುದಿಲ್ಲವೆಂಬ ಭರವಸೆಯನ್ನು ಕೊಡುವ ನಿರ್ಬಂಧನೆಯನ್ನು ಹಾಕಬೇಕು. ಅದಕ್ಕೆ ವಿರೋಧವಾಗಿ ಮೂಲಾಧಾರವಾಗಿರುವ ಸಂಗತಿ ತೊಲಗುವವರೆಗೆ ಕಾಯುವುದು ಅವಶ್ಯವಿಲ್ಲವೆಂದು ಒತ್ತಾಯಿಸಲಾಗಿದೆ. ಏಕೆಂದರೆ,[೧]

"ಎಲ್ಲ ದೇಶಗಳಲ್ಲಿ ಜವಾಬ್ದಾರಿಯನ್ನು ಪ್ರಾಂಭದಲ್ಲಿ ಕೇವಲ ಕೆಲವೊಂದು ವರ್ಗದ ಜನರಿಗೆ ಮಾತ್ರ ವಹಿಸಿಕೊಡಲಾಗಿದೆ ಮತ್ತು ಶಿಕ್ಷಣ ಹಬ್ಬಿ ಮತ್ತು ಅದರಿಂದ ಚುನಾವಣೆಯ ಹಕ್ಕು ವಿಸ್ತಾರಗೊಳ್ಳುವವರೆಗೆ ಸಾಮಾನ್ಯ ಜನರ ಹಿತಾಸಕ್ತಿಗಳಿಗೆ ಸಹಜವಾಗಿ ಕಾಳಜಿ ವಹಿಸುವ ವಿದ್ಯಾವಂತ ಅಲ್ಪಸಂಖ್ಯಾತರ ಕೈಯಲ್ಲಿ ಸರ್ಕಾರವಿದೆ."

ಭಾರತದಲ್ಲಿ ರಾಜಕೀಯ ತೀವ್ರವಾದಿಗಳು ಮತ್ತು ಸಾಮಾಜಿಕ ಸಂಪ್ರದಾಯವಾದಿಗಳು ಸಹಜವಾಗಿ ಮುಂದಿಡುವ ಸಾಮಾನ್ಯ ವಿಚಾರಸರಣಿ ಇದಾಗಿದೆ. ಉಚ್ಚವರ್ಗದ ಜನರು ಸಾಮಾನ್ಯ ವರ್ಗದ ಜನರ ಜೊತೆ ಕಠಿಣ, ನೀಚ ಹಾಗೂ ಅಮಾನವೀಯ ರೀತಿಯಲ್ಲಿ ನಡೆದುಕೊಂಡ ದುಃಖದ ಕತೆಯನ್ನು ನಾವು ಬದಿಗಿರಿಸಿದರೆ, ಸತ್ಯ ಅವರ ಕಡೆಗಿದೆ. ಏಕೆಂದರೆ ಪ್ರತಿಯೊಂದು ದೇಶದಲ್ಲಿಯೂ ಸಮಾಜದ ತುಳಿತ ಹಾಗೂ ಸಮಾನತೆಯ ಅನ್ಯಾಯದಿಂದ ಕಷ್ಟಪಡುವ ಹಿಂದುಳಿದ ಜನಾಂಗಗಳಿವೆ. ಆದರೂ ಅದರಿಂದಾಗಿ ಯಾವ ದೇಶವೂ ರಾಜಕೀಯ ಅಧಿಕಾರವಿರದೇ ಇಲ್ಲ. ಆದರೆ ಉಳಿದ ದೇಶಗಳಾದ ನೀಗ್ರೋ ಜನಾಂಗವನ್ನು ಹೊಂದಿದ ಅಮೆರಿಕಾ ಮತ್ತು ಹೀಟಾ ಜನಾಂಗವನ್ನು ಹೊಂದಿದ ಜಪಾನ್, ಸಾಮಾಜಿಕ ಅಸಮಾನತೆಗಳನ್ನು ನಿರ್ಮೂಲನ ಮಾಡದೆ ರಾಜಕೀಯ ಅಧಿಕಾರವನ್ನು ಹೊಂದಿರುವುದು ಅವುಗಳ ಸೈನಿಕ ಬಲವನ್ನು ಹೊಂದಿರುವುದರ ಪರಿಣಾಮವಾಗಿದೆ ಎನ್ನುವುದನ್ನು, ಈ ವಾದವನ್ನು ಉಪಯೋಗಿಸುವ ಜನರು ಮರೆಯುತ್ತಾರೆ. ಸೈನಿಕ ಶಕ್ತಿ ಮತ್ತು ನೈತಿಕ ಶಕ್ತಿ ರಾಜಕೀಯ ಸ್ವಾತಂತ್ರ್ಯಕ್ಕೆ ಮುಖ್ಯ ಸಾಧನಗಳಾಗಿವೆ. ಮೊದಲಿನದನ್ನು ನಿರ್ಮಿಸಲಾಗದ ದೇಶ ಎರಡನೆಯದನ್ನು ಬೆಳೆಸಿಕೊಳ್ಳಬೇಕು. ಆದ್ದರಿಂದ ಭಾರತದಲ್ಲಿ ರಾಜಕೀಯ ಸಮಸ್ಯೆ ಸಂಪೂರ್ಣವಾಗಿ ಒಂದು ಸಾಮಾಜಿಕ ಸಮಸ್ಯೆಯಾಗಿದೆ ಮತ್ತು ಅದರ ಪರಿಹಾರವನ್ನು ಮುಂದೂಡುವುದು ತನ್ನ ಜನರ ಆಜ್ಞೆಗೆ ಅಧೀನವಾಗಿರುವ ಸ್ವತಂತ್ರ ಸರ್ಕಾರವನ್ನು ಭಾರತ ಹೊಂದಬಹುದಾದ ದಿನವನ್ನು ಮುಂದೂಡಿದಂತೆ.

---

೧. ಭಾರತ ಸರ್ಕಾರದ ಮಸೂದೆಯನ್ನು ಕುರಿತು ನೇಮಕವಾಗಿದ್ದ ಜಂಟಿ ಆಯ್ದ ಸಮಿತಿಯ ಮುಂದೆ ಸನ್ಮಾನ್ಯ ವಿ.ಜೆ. ಪಟೇಲ್ ಮತ್ತು ಶ್ರೀ ಮಾಧವರಾವ್ ಅವರುಗಳು ನೀಡಿದ ಸಾಕ್ಷ್ಯ ನೋಡಿ. 'ಹೌಸ್ ಆಫ್ ಕಾಮನ್ಸ್ ರಿಟರ್ನ್' ೨೦೩, ೧೯೧೯, ಪು. ೧೦೬.

## ಅಧ್ಯಾಯ ೧೩

# ದ್ವಿಪ್ರಮಿತಿಯಿಂದ ಬೆಳ್ಳಿಯ ಪ್ರಮಿತಿಗೆ

ಖಾಸಗಿ ಆಸ್ತಿ ಮತ್ತು ವ್ಯಕ್ತಿಗತ ಲಾಭಗಳಿಕೆಗಳನ್ನು ಆಧರಿಸಿದ ಸಮಾಜದಲ್ಲಿ ವಾಣಿಜ್ಯವು ಮಹತ್ವದ ಸಾಧನವಾಗಿರುತ್ತದೆ. ಅದರ ಹೊರತು ಆ ಸಮಾಜದ ಸದಸ್ಯರಿಗೆ ತಮ್ಮ ವಿಶಿಷ್ಟವಾದ ಉತ್ಪತ್ತಿಗಳನ್ನು ವಿತರಿಸುವುದು ದುಸ್ತರವಾಗುತ್ತದೆ. ನಿಜವಾಗಿ ಲಾಟರಿ ಅಥವಾ ಆಡಳಿತಾತ್ಮಕ ತಂತ್ರವು ಅದರ ಸ್ವರೂಪಕ್ಕೆ ಅನುರೂಪವಾಗುವುದಿಲ್ಲ. ಅದು ತನ್ನ ಸ್ವಭಾವವನ್ನು ರಕ್ಷಿಸಿಕೊಳ್ಳಬೇಕಾದರೆ, ಪ್ರತ್ಯೇಕ ಉದ್ದಿಮೆಯ ಉತ್ಪತ್ತಿಗಳ ಆವಶ್ಯಕ ವಿತರಣೆಗೆ ಖಾಸಗಿ ವಾಣಿಜ್ಯವು ಏಕಮೇವ ವಿಧಾನವಾಗಿರುತ್ತದೆ. ಆದರೆ ವ್ಯಾಪಾರಿ ಸಮಾಜವು ಅನಿವಾರ್ಯವಾಗಿ ಆರ್ಥಿಕ ಸಮಾಜವಾಗಿದ್ದು ತನ್ನ ಎಲ್ಲ ವ್ಯವಹಾರಗಳನ್ನು ಹಣದ ಮುಖಾಂತರ ಮಾಡುತ್ತದೆ. ವಾಸ್ತವಿಕವಾಗಿ ವಿತರಣೆಯು ವಸ್ತುಗಳ ಸಲುವಾಗಿ ವಸ್ತುಗಳ ವಿನಿಮಯವಾಗಿರದೇ, ಹಣದ ಸಲುವಾಗಿ ವಸ್ತುಗಳ ವಿನಿಮಯವಾಗಿರುತ್ತದೆ. ಮಾನವನ ಎಲ್ಲಾ ಪರಿಶ್ರಮಗಳ, ಆಸಕ್ತಿಗಳ, ಬಯಕೆ ಮತ್ತು ಆಕಾಂಕ್ಷೆಗಳ ಕೇಂದ್ರ ಬಿಂದುವು ಹಣವಾಗಿರುವುದರಿಂದ ಹಾಗೂ ಸೋಲು ಗೆಲವುಗಳು ಪದಾರ್ಥಗಳ ಉತ್ಪತ್ತಿಯ ಬೆಲೆ ಹಾಗೂ ಅದರ ಮಾರಾಟದ ಬೆಲೆಗಳ ನಡುವಿನ ಏರಿಳಿತಗಳನ್ನು ಅವಲಂಬಿಸಿರುವುದರಿಂದ ಯಾವುದೇ ಒಂದು ವಾಣಿಜ್ಯ ಸಮೂಹವು ಈ ಬೆಲೆಗಳ ಸಾಮ್ರಾಜ್ಯದ ಪರಿಧಿಯ ಒಳಗಡೆಯೇ ಕಾರ್ಯನಿರ್ವಹಿಸಬೇಕಾಗುತ್ತದೆ.

"ವಾಸ್ತವಿಕವಾಗಿ ಹಣಕ್ಕಿಂತ ಹೆಚ್ಚು ಮಹತ್ವದ ವಸ್ತುವಿಲ್ಲ; ಅದು ಪ್ರತಿಯೊಬ್ಬ ವ್ಯಕ್ತಿಗೆ ಜೀವನ ನಿರ್ವಹಣೆ, ಅನುಕೂಲತೆಗಳು ಮತ್ತು ವಿನೋದಗಳು–ಇವುಗಳನ್ನು ಯೋಗ್ಯಪ್ರಮಾಣದಲ್ಲಿ ಕ್ರಮಬದ್ಧವಾಗಿ ಹರಡುವ ಒಂದು ದೊಡ್ಡ ಸಾಧನವಾಗಿದೆ" ಎಂದು ಅರ್ಥಶಾಸ್ತ್ರಜ್ಞರು ನಿಸ್ಸಂದೇಹವಾಗಿ ಒತ್ತಿ ಹೇಳಿದ್ದಾರೆ. ಹಣ ಅಥವಾ ಅದರ ಮೌಲ್ಯವು ಅರ್ಥಜೀವನದ ಪ್ರತಿಫಲವೇ ಅಥವಾ ಅಲ್ಲವೇ ಎಂಬುದು ಚರ್ಚಾಸ್ಪದ ವಿಷಯವಾಗಿದೆ.[೧] ಹಣದ ಬಳಕೆ ಇಲ್ಲದಿದ್ದರೆ ಸಮಾಜಕ್ಕೆ ಈ ನಿರ್ವಹಣೆ, ಅನುಕೂಲತೆಗಳು ಮತ್ತು ವಿನೋದಗಳು ವಾಸ್ತವಿಕವಾಗಿ ಸಂಪೂರ್ಣವಾಗಿ ಇರುತ್ತಲೇ ಇಲ್ಲ ಎಂದು ಹೇಳಲಾಗದಿದ್ದರೂ, ಇವು ನಮಗೆ ಸುಲಭವಾಗಿ ದೊರಕುತ್ತಿರಲಿಲ್ಲ ಎಂಬುದು ಮಾತ್ರ ಖಂಡಿತ. ಹಣದ ಹೊರತು ವಸ್ತುಗಳ ಈ ವ್ಯಾಪಾರ ಹೇಗೆ ಸಂಭವಿಸಬಲ್ಲದು? ಹಣವು ಕೇವಲ ಒಂದು ವಸ್ತುವೆಂದು ಒತ್ತಿಹೇಳುವವರು ಸೇರಿದಂತೆ ವಸ್ತುಗಳ ವಿನಿಯಮದ ತೊಂದರೆಗಳು ಎಲ್ಲ ಅರ್ಥಶಾಸ್ತ್ರಜ್ಞರಿಗೂ ಅನಿವಾರ್ಯ ವಿಷಯಗಳಾಗಿವೆ. ಹಣವು ವಸ್ತುವಿನಿಮಯ ವ್ಯಾಪಾರದ ದೋಷಗಳನ್ನು ನಿವಾರಿಸಿ ವಾಣಿಜ್ಯವನ್ನು ಸುಗಮಗೊಳಿಸುವುದಲ್ಲದೇ ವೈಶಿಷ್ಟ್ಯಕ್ಕೆ ಅವಕಾಶನೀಡಿ ಉತ್ಪಾದನೆಯನ್ನು ಬೆಂಬಲಿಸುವುದು ಆವಶ್ಯಕವಾಗಿರುತ್ತದೆ. ಏಕೆಂದರೆ, ತನಗೆ

---

೧. ಹೋಲಿಸಿರಿ : ಡಬ್ಲ್ಯೂ.ಸಿ. ಮಿಷೆಲ್, 'ದಿ ರಾಶನ್ಯಾಲಿಟಿ ಆಫ್ ಇಕನಾಮಿಕ್ ಆ್ಯಕ್ಟಿವಿಟಿ', 'ಜರ್ನಲ್ ಆಫ್ ಪೊಲಿಟಿಕಲ್ ಇಕಾನಮಿ,' ೧೯೧೦, ಸಂ. XVIII, ಪುಟಗಳು ೯೭ ಮತ್ತು ೧೯೭, ಅಲ್ಲದೇ 'ದಿ ರೋಲ್ ಆಫ್ ಮನಿ ಇನ್ ಇಕನಾಮಿಕ್ ಥಿಯರಿ', ಅವರದೇ ಆದ 'ಅಮೆರಿಕನ್ ಇಕನಾಮಿಕ್ ರಿವ್ಯೂ' (ಪುರವಣಿ), ಸಂಪುಟ VI, ಸಂಚಿಕೆ, ಮಾರ್ಚ್ ೧೯೧೬

ಬೇಕಾದ ವಸ್ತುಗಳ ಸಲುವಾಗಿ ತನ್ನ ವಸ್ತುಗಳನ್ನು ಇತರರಿಗೆ ಮಾರಲು ಸಾಧ್ಯವಾಗದಿದ್ದರೆ ಆತನೇಕೆ ವಿಶಿಷ್ಟ ವಸ್ತುಗಳನ್ನು ಉತ್ಪಾದಿಸುವ ಗೊಡವೆಗೆ ಹೋಗುತ್ತಾನೆ? ವಾಣಿಜ್ಯವು ಉತ್ಪಾದನೆಗೆ ಪೂರಕವಾಗಿದ್ದು ಅದು ಅಭಿವೃದ್ಧಿಯಾಗದಿದ್ದರೆ ಉತ್ಪಾದನೆಯು ಕ್ಷೀಣವಾಗುವುದು. ಆದ್ದರಿಂದ ಒಂದು ವಾಣಿಜ್ಯ ಸಮಾಜವು ಅವ್ಯವಸ್ಥಿತವಾಗಬಾರದು ಮತ್ತು ಕೊಡು–ಕೊಳುವ ವಿಶಿಷ್ಟ ಉದ್ದಿಮೆಯಲ್ಲಿ ತನ್ನ ಸ್ವಯಂಚಾಲಿತ ಹೊಂದಾಣಿಕೆಯ ವಿಫುಲ ಸೌಕರ್ಯಗಳನ್ನು ಕಳೆದುಕೊಳ್ಳಬಾರದು ಎಂದಿದ್ದರೆ, ಅದು ಭದ್ರವಾದ ಹಣದ ವ್ಯವಸ್ಥೆಯನ್ನು ಹೊಂದಿರಲೇಬೇಕು.[೧]

ಮೊಘಲ್ ಸಾಮ್ರಾಜ್ಯದ ಅಂತಿಮ ದಿನಗಳಲ್ಲಿ ಆ ಕಾಲದ ಆರ್ಥಿಕ ಮಟ್ಟದ ತೀರ್ಮಾನದಂತೆ, ಭಾರತವು ಆರ್ಥಿಕವಾಗಿ ಮುಂದುವರಿದ ದೇಶವಾಗಿತ್ತು. ಅದರ ವಾಣಿಜ್ಯವು ದೊಡ್ಡದಿತ್ತು, ಬ್ಯಾಂಕಿಂಗ್ ಸಂಸ್ಥೆಗಳು ಉತ್ತಮವಾಗಿದ್ದು ಅದರ ವ್ಯವಹಾರಗಳಲ್ಲಿ ಉದ್ದರಿಯ ಪಾತ್ರ ಗಣನೀಯವಾಗಿತ್ತು. ಆದರೆ ೧೮ನೆಯ ಶತಮಾನದ ಮಧ್ಯದಲ್ಲಿ ಭಾರತವು ಬ್ರಿಟಿಷರ ಆಳಿಕೆಯಡಿಯಲ್ಲಿ ಬಂದಾಗ, ಇತರ ವಿಷಯಗಳೊಡನೆ ವಿನಿಮಯ ಮಾಧ್ಯಮ ಮತ್ತು ಮೌಲ್ಯಮಾಪನಗಳು ಭಾರತೀಯರ ಅರ್ಥವ್ಯವಸ್ಥೆಯಲ್ಲಿ ಸರ್ವೋಚ್ಚ ಆವಶ್ಯಕತೆಗಳಾಗಿದ್ದವು. ಈ ಘಟನೆ ಸಂಭವಿಸುವ ಮುನ್ನ ಭಾರತದ ಹಣವು ಚಿನ್ನದ ನಾಣ್ಯ ಮತ್ತು ಬೆಳ್ಳಿಯ ನಾಣ್ಯಗಳೆರಡನ್ನೂ ಹೊಂದಿತ್ತು. ಹಿಂದೂ ಅರಸರ ಆಳ್ವಿಕೆಯಲ್ಲಿ ಚಿನ್ನಕ್ಕೆ ಒತ್ತುಕೊಟ್ಟಿದ್ದರೆ, ಮುಸಲ್ಮಾನರ ಆಳ್ವಿಕೆಯಲ್ಲಿ ಬೆಳ್ಳಿಯು ಚಲಾವಣಾ ಮಾಧ್ಯಮದಲ್ಲಿ ಮುಖ್ಯಪಾತ್ರವನ್ನು ಹೊಂದಿತ್ತು.[೨] ಭಾರತದಲ್ಲಿ ಮೊಘಲ್ ಸಾಮ್ರಾಜ್ಯದ ಆರ್ಥಿಕ ಪದ್ಧತಿಯ ಸ್ಥಾಪಕನಾದ ಅಕ್ಬರನ ಕಾಲದಿಂದ ಚಿನ್ನದ ಮೊಹರು ಮತ್ತು ಬೆಳ್ಳಿಯ ರೂಪಾಯಿಗಳು ನಾಣ್ಯದ ಮಾನಕ ಘಟಕಗಳಾಗಿದ್ದವು. ಮೊಹರು ಮತ್ತು ರೂಪಾಯಿಗಳ ತೂಕವು ಒಂದೇ ಅಂದರೆ ೧೭೫ ಗ್ರಾಮ್ ಟ್ರಾಯ್[೩] ಆಗಿತ್ತು ಮತ್ತು ಅವುಗಳನ್ನು ಮಿಶ್ರ ಲೋಹದಿಂದ ತಯಾರು ಮಾಡುವ ಉದ್ದೇಶವಿರಲಿಲ್ಲ.[೪] ಆದರೆ ಅವುಗಳು ಒಂದೇ ಮೌಲ್ಯಪ್ರಮಾಣವಾಗಿ ರಚಿಸಲ್ಪಟ್ಟಿದ್ದವೋ ಅಥವಾ ಇಲ್ಲವೋ ಎಂಬುದು ಸಂದೇಹದ ವಿಷಯವಾಗಿದೆ. ಏಕಕಾಲಕ್ಕೆ ಸಾಮಾನ್ಯ ಮೌಲ್ಯಮಾಪನಗಳಾದ ಮೊಹರು ಮತ್ತು ರೂಪಾಯಿ ಪರಸ್ಪರ ಯಾವುದೇ ನಿಗದಿತ ವಿನಿಮಯ ಪ್ರಮಾಣವಿಲ್ಲದೇ ಚಲಾವಣೆಯಲ್ಲಿದ್ದವು. ಆದ್ದರಿಂದ ಅದು ಪ್ರಮಿತಿಯ ದ್ವಿಪ್ರಮಿತಿಗಿಂತ[೫] ಜೇವನ್ಸ್ ಹೆಸರಿಟ್ಟ

---

೧. ಇದರ ಪೂರ್ಣ ಚರ್ಚೆಗಾಗಿ ಎಚ್.ಜೆ. ಡ್ಯಾವೆನ್‌ಪೋರ್ಟ ಇವರ ದಿ ಇಕನಾಮಿಕ್ಸ್ ಆಫ್ ಎಂಟರಪ್ರೈಸ್, (೧೯೧೩), ಅಧ್ಯಾಯ II ಮತ್ತು III ಹೋಲಿಸಿ.

೨. ಪ್ರಿನ್ಸೆಪ್ ಜೆ, ಯೂಸ್‌ಫುಲ್ ಟೇಬಲ್ಸ್, ಕಲ್ಕತ್ತಾ, ೧೮೩೪, ಪುಟಗಳು ೧೫–೧೬

೩. ರಾಬರ್ಟ ಚಾಮರ್ಸ್, ಹಿಸ್ಟರಿ ಆಫ್ ಕೊಲೋನಿಯಲ್ ಕರೆನ್ಸಿ, ೧೮೯೩, ಪುಟಗಳು ೩೩೬, ೩೪೦

೪. ಡಾ.ಪಿ. ಕೆಲ್ಲಿ, ದಿ ಯೂನಿವರ್ಸಲ್ ಕ್ಯಾಂಬಿಸ್ಟ್, ೧೮೧೧, ಪು. ೧೧೫

೫. ಡಾ. ಪಿ. ಕೆಲ್ಲಿಯವರ ಅಭಿಪ್ರಾಯದಲ್ಲಿ ಅವುಗಳು ತಮ್ಮ ಮಾರುಕಟ್ಟೆ ಅನುಪಾತದಲ್ಲಿ ಚಲಾವಣೆಯಲ್ಲಿದ್ದವು (ಅದೇ ಸ್ಥಳದಿಂದ ಉದಾಹರಿಸಿದ್ದು). ತದ್ವಿರುದ್ಧವಾಗಿ "ಪ್ರಾಚೀನ ಮತ್ತು ಮಧ್ಯಕಾಲೀನ ಭಾರತದಲ್ಲಿ ಪ್ರತಿಯೊಂದು ಲೋಹದ ನಾಣ್ಯಗಳ ಸಾಪೇಕ್ಷ ಮೌಲ್ಯವು ಸರ್ಕಾರದಿಂದ ನಿರ್ಧರಿಸಲ್ಪಡುತ್ತಿತ್ತು ಮತ್ತು ಎಲ್ಲವೂ ಯಾವುದೇ ಔಪಚಾರಿಕ ಪರಿಮಿತಿ ಇಲ್ಲದೇ ವಾಸ್ತವಿಕವಾಗಿ ಕಾನೂನುಬದ್ಧ ಹಣವಾಗಿದ್ದವು" ಎಂದು ಸರ್ ಆರ್. ಟೆಂಪಲ್ ಹೇಳುವರು ("ಜನರಲ್ ಮಾನಿಟರಿ ಪ್ರಾಕ್ಟೀಸ್ ಇನ್ ಇಂಡಿಯಾ", ಜರ್ನಲ್ ಆಫ್ ದಿ ಇನ್‌ಸ್ಟಿಟ್ಯೂಟ್ ಅಫ್ ಬ್ಯಾಂಕರ್ಸ್, ಸಂ. II, ಪು. ४೦೬). ಮತ್ತೊಂದು ಸಂದರ್ಭದಲ್ಲಿ ಅವರು ಹೇಳಿದರು, "ಅತಿ ಮುಂಚಿನ ಹಿಂದೂ ನಾಣ್ಯವು ದ್ವಿಪ್ರಮಿತಿಯೊಂದಿಗೆ ಚಿನ್ನದಿಂದ ಮಾಡಲ್ಪಟ್ಟಿತ್ತು. ಮುಸಲ್ಮಾನರು ಬೆಳ್ಳಿಯ ನಾಣ್ಯವನ್ನು ಆಚರಣೆಯಲ್ಲಿ ತಂದರು ಮತ್ತು ಆನಂತರ ಬ್ರಿಟಿಷರ ಆಳಿಕೆಯವರೆಗೆ ಸುವರ್ಣ ಮತ್ತು ಬೆಳ್ಳಿಯ ದ್ವಿಪ್ರಮಿತಿ ಇತ್ತು." (ಅದೇ ಸ್ಥಳದಿಂದ, ಸಂ. XV, ಪು. ೯). ಇದಕ್ಕೆ ವ್ಯತಿರಿಕ್ತವಾಗಿ ಬ್ರಿಟಿಷರ ಮುಂಚಿನ ಆಳ್ವಿಕೆಯಲ್ಲಿ ಮೊಹರು ಮತ್ತು ರೂಪಾಯಿಗಳ ನಡುವೆ ನಿಗದಿತ ಅನುಪಾತವಿದ್ದಿಲ್ಲವೆಂದು ಒತ್ತಿಹೇಳಲು ಇದಕ್ಕೂ ಮುಂಚಿನ ಪ್ರಿಯಾಂಬಲ್ ಟು ಕರೆನ್ಸಿ ರೆಗ್ಯುಲೇಶನ್ಸ್ XXXV (೧೭೯೩) ಮತ್ತು ಅದರ ಕರೆನ್ಸಿ ರೆಗ್ಯುಲೇಶನ್ಸ್‌ನಲ್ಲಿ ಗಮನ ಸೆಳೆದಿರುವುದನ್ನು ನಾವು ಕಾಣಬಹುದು.

ಸಮಾನಾಂತರ ಪ್ರಮಿತಿಯ[೧] ಸ್ವಭಾವದ್ದಾಗಿತ್ತು. ಆಚರಣೆಯಲ್ಲಿ ಸ್ವಲ್ಪವೂ ಸಮಸ್ಯೆಯಿಲ್ಲದೆ ಈ ಸಮಾನಾಂತರ ಪ್ರಮಿತಿಯು ಕೆಲಸ ಮಾಡುತ್ತಿದ್ದಿಲ್ಲವೆಂಬುದು ಸ್ಫುಟವಿದೆ. ಆದರೆ ಮೊಹರು ಮತ್ತು ರೂಪಾಯಿಗಳು ಪರಸ್ಪರವಾಗಿ ಸಂಬಂಧ ಹೊಂದಿರದಿದ್ದರೂ ಸಾಮ್ರಾಜ್ಯದ ತಾಮ್ರದ ನಾಣ್ಯವಾದ ದಾಮ್‌ನೊಂದಿಗೆ ನಿಗದಿತ ವಿನಿಮಯ ಅನುಪಾತವನ್ನು ಹೊಂದಿತ್ತು. ಇದು ಈ ವಿಲಕ್ಷಣ ವ್ಯವಸ್ಥೆಯನ್ನು ಸರಿದೂಗಿಸಿಕೊಂಡು ಹೋಗುತ್ತಿತ್ತು ಎಂಬುದನ್ನು ನಾವು ಗಮನಿಸಬೇಕು.[೨] ರೂಪಾಯಿ ಮತ್ತು ಮೊಹರ್‌ಗಳು ಮೂರನೆಯ ನಾಣ್ಯವಾದ ದಾಮ್‌ನೊಡನೆ ಒಂದು ನಿಗದಿತ ವಿನಿಮಯದ ಅನುಪಾತವನ್ನು ಹೊಂದಿದ್ದರಿಂದ, ಇವೆರಡೂ ಪರಸ್ಪರ ನಿಶ್ಚಿತವಾದ ಒಂದು ವಿನಿಮಯ ಅನುಪಾತವನ್ನು ಹೊಂದಿದ್ದವು ಎಂದು ಊಹಿಸಬಹುದು.

ಮೊಘಲರ ಪ್ರಭಾವವು ವ್ಯಾಪಿಸದ ದಕ್ಷಿಣ ಭಾರತದಲ್ಲಿ ಬೆಳ್ಳಿಯ ನಾಣ್ಯಪದ್ಧತಿಯು ಜಾರಿಗೆ ಬರಲಿಲ್ಲ. ಪ್ರಾಚೀನ ಹಿಂದೂ ಅರಸರ ಸುವರ್ಣ ನಾಣ್ಯ ಪಗೋಡಾ ಮೌಲ್ಯಮಾಪನದ ಮಾನಕ ಹಾಗೂ ವಿನಿಮಯದ ಮಾಧ್ಯಮವಾಗಿತ್ತು ಮತ್ತು ಅದು ಹಾಗೆಯೇ ಈಸ್ಟ್ ಇಂಡಿಯಾ ಕಂಪನಿಯ ಕಾಲದವರೆಗೆ ಮುಂದುವರಿಯಿತು.

ನಾಣ್ಯ ಟಂಕಿಸುವ ಹಕ್ಕು ಯಾವಾಗಲೂ ರಾಜರ ಕಾಯಿದೆಗೆ ಒಳಪಟ್ಟಿದ್ದು[೩] ಎಂದು ಪ್ರತಿಪಾದಿಸಿದ ಮೊಘಲರು ಅದನ್ನು ಹೊಣೆಗಾರಿಕೆಯ ಪ್ರಜ್ಞೆಯಿಂದ ಚಲಾಯಿಸಿದ್ದು ಸ್ತುತ್ಯ ಸಂಗತಿ. ಮೊಘಲ ಚಕ್ರವರ್ತಿಗಳು ತಮ್ಮ ನಾಣ್ಯವನ್ನು ಅಪಮೌಲ್ಯ ಮಾಡುವ ಮಟ್ಟಕ್ಕೆ ಎಂದೂ ಇಳಿಯಲಿಲ್ಲ. ನಾಣ್ಯ ಮುದ್ರಣದ ತಂತ್ರಶಾಸ್ತ್ರವು ಅಪೂರ್ಣವಿದ್ದರೂ ಸಾಮ್ರಾಜ್ಯದ[೪] ಅತ್ಯಂತ ದೂರದ ಭಾಗದ ವಿವಿಧ ಟಂಕಸಾಲೆಗಳಲ್ಲಿ ತಯಾರಿಸಿದ ನಾಣ್ಯಗಳು ಕೂಡ ವಾಸ್ತವವಾಗಿ ತಮ್ಮ ಗುಣಮಟ್ಟವನ್ನು ಕಾಯ್ದುಕೊಂಡು ಬಂದಿದ್ದವು. ತನ್ನ ಇಡೀ ಆಳ್ವಿಕೆಯಲ್ಲಿ ಮೊಘಲ್ ಸಾಮ್ರಾಜ್ಯವು ನಾಣ್ಯದ ತೂಕವಾದ ೧೭೫ ಗ್ರಾಂಗಳಿಗೆ ಹೇಗೆ ನಿಷ್ಠವಾಗಿತ್ತು ಎಂಬುದನ್ನು ಮುಂದಿನ ಪಟ್ಟಿಯು ತೋರಿಸುತ್ತದೆ.[೫]

---

೧. ಮನಿ ಅಂಡ್ ಮೆಕ್ಯಾನಿಸಮ್ ಆಫ್ ಎಕ್ಸಚೇಂಜ್ (೧೮೯೦), ಪು. ೯೫.

೨. ಹೋಲಿಸಿರಿ : ಪ್ರೊ. ಎಸ್.ವಿ. ವೆಂಕಟೇಶ್ವರ, "ಮೋಘಲ್ ಕರೆನ್ಸಿ ಅಂಡ್ ಕಾಯನೇಜ್", ಇಂಡಿಯನ್ ಜರ್ನಲ್ ಆಫ್ ಇಕನಾಮಿಕ್ಸ್, ಜುಲೈ ೧೯೧೮, ಪುಟ ೧೬೯ ಮತ್ತು ಎಫ್. ಆಟ್‌ಕಿನ್ಸನ್, ದಿ ಇಂಡಿಯನ್ ಕರೆನ್ಸಿ ಕ್ವೆಶ್ಚನ್ (೧೮೯೪), ಪು. ೧

೩. ಮೊಹಮಡನ್ ಇತಿಹಾಸಕಾರ ಖಫಿಖಾನ್ ಇವರ ಪ್ರಕಾರ ೧೬೪೪ರಲ್ಲಿ ಈಸ್ಟ್ ಇಂಡಿಯಾ ಕಂಪನಿಯು ಮುಂಬೈಯಲ್ಲಿ "ಮೊಘಲರ ಅಶುದ್ಧ ಹೆಸರಿನ" ಕೆಲವು ರೂಪಾಯಿಗಳನ್ನು ಮುದ್ರಿಸಿದ್ದರಿಂದ ಚಕ್ರವರ್ತಿ ಔರಂಗಜೇಬನಿಗೆ ಕೋಪ ಬಂದಿತು. (ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯಾ ಸಂ. IV, ಪು. ೫೧೫)

೪. ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯಾ (ಸಂ. IV, ಪು೫೧೪) ಇದರಲ್ಲಿ ಕೆಳಗಿನಂತೆ ಹೇಳಲಾಗಿದೆ : "ಮೊಘಲ್ ಆಡಳಿತದ ಮೊದಲಿನ ದಿನಗಳಲ್ಲಿ ಸಾಮ್ರಾಜ್ಯದ ನಾಣ್ಯಗಳನ್ನು ಮುದ್ರಿಸುವ ಒಂದೇ ಒಂದು ಟಂಕಸಾಲೆ ದಿಲ್ಲಿಯಲ್ಲಿತ್ತು. ಚಕ್ರವರ್ತಿ ಶೇರ್‌ಶಾಹ ಪ್ರಥಮ ಬಾರಿಗೆ ನಾಣ್ಯಗಳನ್ನು ತಯಾರಿಸುವ ಉದ್ದೇಶಕ್ಕಾಗಿ ಅನೇಕ ಟಂಕಸಾಲೆಗಳನ್ನು ಪ್ರಾರಂಭಿಸಿದನು. ನಂತರದ ಚಕ್ರವರ್ತಿಗಳು ಅವುಗಳನ್ನು ಮುಂದುವರೆಸಿದರು ಮತ್ತು ವಿಸ್ತರಿಸಿದರು. ತತ್ಪರಿಣಾಮವಾಗಿ ಅಕ್ಬರ್ ಮತ್ತು ಬಹದ್ದೂರ್ ಶಾಹ ॥ ಇವರ ಆಳ್ವಿಕೆಯ ಮಧ್ಯದಲ್ಲಿ ಟಂಕಸಾಲೆಗಳ ಸಂಖ್ಯೆ ಸುಮಾರು ೨೦೦ ಆಯಿತು. ಬಂಗಾರ, ಬೆಳ್ಳಿ ಮತ್ತು ತಾಮ್ರ ಈ ಮೂರೂ ಲೋಹಗಳ ನಾಣ್ಯಗಳನ್ನು ತಯಾರಿಸಲು ಪ್ರತ್ಯೇಕ ಟಂಕಸಾಲೆಯನ್ನು ತೆರೆದಿರಲಿಲ್ಲ. ಆದರೆ ಕೆಲವು ಟಂಕಸಾಲೆಗಳು ಚಿನ್ನದ ನಾಣ್ಯಗಳನ್ನು, ಕೆಲವು ಬೆಳ್ಳಿಯ ನಾಣ್ಯಗಳನ್ನು ಮತ್ತು ಇನ್ನುಳಿದವು ತಾಮ್ರದ ನಾಣ್ಯಗಳನ್ನು ತಯಾರಿಸುತ್ತಿದ್ದವು ಎಂಬುದು ೧೮೭೨–೭೩ರ ಈಸ್ಟ್ ಇಂಡಿಯಾ ಮಾರಲ್ ಅಂಡ್ ಮೆಟೀರಿಯಲ್ ಪ್ರೋಗ್ರೆಸ್ ರಿಪೋರ್ಟ್‌ನಿಂದ ಸ್ಪಷ್ಟವಾಗುತ್ತದೆ." ನೋಡಿ; ಪುಟಗಳು ೧೧–೧೨

೫. ಪ್ರಿನ್ಸೆಪ್ ಜೆ. ಕೃತಿಯಿಂದ ಉದಾಹರಿಸಿದ್ದು, ಪು. ೧೮

| ರೂಪಾಯಿಯ ಹೆಸರು | ಶುದ್ಧ ಗ್ರಾಮ್ ಗಳಲ್ಲಿ ತೂಕ | ರೂಪಾಯಿಯ ಹೆಸರು | ಶುದ್ಧ ಗ್ರಾಮ್ ಗಳಲ್ಲಿ ತೂಕ |
|---|---|---|---|
| ಲಾಹೋರದ ಅಕ್ಬರಿ | ೧೭೫.೦ | ದಿಲ್ಲಿಯ ಸೋನತ್ | ೧೭೫.೦ |
| ಆಗ್ರಾದ ಅಕ್ಬರಿ | ೧೭೪.೦ | ದಿಲ್ಲಿ ಆಲಮ್‌ಗೀರ್ | ೧೭೫.೦ |
| ಆಗ್ರಾದ ಜಹಾಂಗಿರಿ | ೧೭೪.೬ | ಹಳೇ ಸೂರತ್ | ೧೭೪.೦ |
| ಅಲಹಾಬಾದಿನ ಜಹಾಂಗಿರಿ | ೧೭೩.೬ | ಮುರ್ಶಿದಾಬಾದ್ | ೧೭೫.೯ |
| ಕಂಧಾರದ ಜಹಾಂಗಿರಿ | ೧೭೩.೯ | ೧೭೪೫ರ ಪರ್ಷಿಯನ್ ರೂ. | ೧೭೪.೫ |
| ಆಗ್ರಾದ ಶಹಾಜಹಾನಿ | ೧೭೫.೦ | ಹಳೇ ಡಾಕಾ | ೧೭೩.೩ |
| ಅಹಮದಾಬಾದಿನ ಶಹಾಜಹಾನಿ | ೧೭೪.೨ | ಮಹಮ್ಮದ ಶಾಹಿ | ೧೭೦.೦ |
| ದಿಲ್ಲಿಯ ಶಹಾಜಹಾನಿ | ೧೭೪.೨ | ಅಹಮದ ಶಾಹಿ | ೧೭೨.೮ |
| ದಿಲ್ಲಿಯ ಶಹಾಜಹಾನಿ | ೧೭೫.೦ | ಶಹಾ ಆಲಮ್(೧೭೭೨) | ೧೭೨.೮ |
| ಲಾಹೋರದ ಶಹಾಜಹಾನಿ | ೧೭೪.೦ | | |

ಸಾಮ್ರಾಜ್ಯವು ತನ್ನ ಹಿಡಿತವನ್ನು ಕಡಿಮೆಯಾಗದಂತೆ ಉಳಿಸಿಕೊಂಡಿದ್ದ ಸಮಯದವರೆಗೆ ಬಹುಸಂಖ್ಯೆ ಟಂಕಸಾಲೆಗಳಿಂದ ಸಮಸ್ಯೆಗಳಿಗಿಂತ ಅನುಕೂಲವೇ ಆಗಿತ್ತು. ಏಕೆಂದರೆ, ಒಬ್ಬ ಅಧಿಕಾಯಿಂದ ಆಳಲ್ಪಡುವ ಒಂದು ಇಲಾಖೆಯು ಅನೇಕ ಶಾಖೆಗಳನ್ನು ಹೊಂದಿತ್ತು. ಆದರೆ ಮೊಘಲ ಸಾಮ್ರಾಜ್ಯವು ಪ್ರತ್ಯೇಕ ರಾಜ್ಯಗಳಲ್ಲಿ ವಿಭಾಗವಾಗಿದ್ದರಿಂದ ವಿವಿಧ ಕೇಂದ್ರಗಳಲ್ಲಿ ಸ್ಥಾಪಿಸಲ್ಪಟ್ಟ ಸಾಮ್ರಾಜ್ಯದ ಟಂಕಸಾಲೆಯ ಶಾಖೆಗಳು ನಾಣ್ಯಪದ್ಧತಿಯ ಉದ್ದೇಶಗಳಿಗಾಗಿ ಸ್ವತಂತ್ರ ಕಾರ್ಖಾನೆಗಳಾದವು. ಮೊಘಲ್ ಸಾಮ್ರಾಜ್ಯದ ಪತನಾನಂತರ ಸ್ವಾತಂತ್ರ್ಯಕ್ಕಾಗಿ ನಡೆದ ಕಚ್ಚಾಟದಲ್ಲಿ ನಾಣ್ಯಗಳನ್ನು ಟಂಕಿಸುವ ಅಧಿಕಾರವು ಇತರ ಎಲ್ಲಾ ಹಕ್ಕುಗಳನ್ನೂ ಮೀರಿಸಿತ್ತು ಮತ್ತು ಅದಕ್ಕಾಗಿ ಮಾಡುವ ಹೋರಾಟವು ಅಂದಿನ ದಿನಗಳಲ್ಲಿ ಅತ್ಯಂತ ಹಿರಿದಾದುದೆಂದು ಪರಿಗಣಿಸಲ್ಪಟ್ಟಿತ್ತು. ಅದು ಪತನಹೊಂದುತ್ತಿದ್ದ ರಾಜ್ಯಮನೆತನಗಳು ಅಂಟಿಕೊಂಡ ಕೊನೆಯ ವಿಶೇಷ ಹಕ್ಕಷ್ಟೇ ಅಲ್ಲದೆ ಅಧಿಕಾರಕ್ಕೆ ಏರಬಯಸುತ್ತಿದ್ದ ಸಾಹಸಿಗಳು ಬಯಸಿದ ಪ್ರಥಮ ವಿಶೇಷ ಹಕ್ಕೂ ಆಗಿತ್ತು. ಇದರ ಪರಿಣಾಮವೇನಾಯಿತೆಂದರೆ, ಒಂದು ಸಮಯದಲ್ಲಿ ಅತ್ಯಂತ ನಿಷ್ಠೆಯಿಂದ ಬಳಸಿದ ಈ ಹಕ್ಕು ಅತ್ಯಂತ ಬೇಜವಾಬ್ದಾರಿಯಿಂದ ದುರುಪಯೋಗಪಡಿಸಿಕೊಳ್ಳಲ್ಪಟ್ಟಿತು. ಎಲ್ಲಾ ಕಡೆಯ ಟಂಕಸಾಲೆಗಳಲ್ಲಿ ಕೆಲಸವು ರಭಸದಲ್ಲಿ ನಡೆಸಲಾಗುತ್ತಿತ್ತು. ಕೆಲವೇ ಸಮಯದಲ್ಲಿ ದೇಶವು ಭಿನ್ನ ನಾಣ್ಯಗಳಿಂದ ತುಂಬಿತು. ಇವು ರಾಜಮನೆತನಗಳ ಸತತ ಏಳುಬೀಳುಗಳನ್ನು ಸಾರಿದವಲ್ಲದೇ ವಿನಿಮಯ ಮಾಧ್ಯಮವು ದಿಗ್ಭ್ರಮೆಗೊಳಿಸಿತು. ಹಣದ ಮಾರಾಟ ಮಾಡುವ ಈ ಮಹಾರಾಜರು ಮೊಘಲ ಚಕ್ರವರ್ತಿಗಳು ಅನುಸರಿಸಿದ ಮೂಲ ಮಟ್ಟಕ್ಕೆ ನಾಣ್ಯದ ತಯಾರಿಕೆಯನ್ನು ಇಟ್ಟಿದ್ದಿದ್ದರೆ, ಒಂದೇ ಮೌಲ್ಯದ ನಾಣ್ಯಗಳ ಅನೇಕತ್ವವು ಸಮಸ್ಯೆಯ ವಿಷಯವಾಗುತ್ತಿದ್ದಿಲ್ಲ. ಆದರೆ ತಮ್ಮ ಪ್ರಜೆಗಳು ಬಳಸುವ ಹಣವನ್ನು ತಾವು ತಯಾರಿಸುತ್ತಿದ್ದರಿಂದ ತಮಗೆ ತಿಳಿದಿದ್ದನ್ನು ಮಾಡಬಹುದೆಂದು ಭಾವಿಸಿ ಮೌಲ್ಯವನ್ನು ಬದಲಿಸದೇ ಪ್ರತಿಯೊಬ್ಬರು ಇಚ್ಛಿಸಿದ

ವ್ಯಾಪ್ತಿಗೆ ನಾಣ್ಯಗಳ ಅಪಮೌಲ್ಯ ಮಾಡಲು ಮುಂದಾದರು. ಭಿನ್ನ ಪ್ರಮಾಣದಲ್ಲಿ ಆದ ಅಪಮೌಲ್ಯದ ಪ್ರಕಾರ ನಾಣ್ಯವು ಆವಶ್ಯಕವಾಗಿ ತನ್ನ ಪ್ರಮುಖ ಲಕ್ಷಣವಾದ ಸ್ವೀಕಾರಾರ್ಹ ಮನ್ನಣೆಯನ್ನು ಕಳೆದುಕೊಂಡಿತು.

ಇಂಥ ಪರಿಸ್ಥಿತಿಯಿಂದ ಉಂಟಾಗುವ ದುಷ್ಪರಿಣಾಮಗಳನ್ನು ಸಹಜವಾಗಿ ಊಹಿಸಬಹುದು. ನಾಣ್ಯಗಳ ನೈಜಮೌಲ್ಯ ಮತ್ತು ಅದರ ಸೂಚಿತ ಮೌಲ್ಯದ ನಡುವೆ ವ್ಯತ್ಯಾಸವಿದ್ದಾಗ ಅವು ಕೇವಲ ವಾಣಿಜ್ಯ ಸರಕುಗಳಾದವು ಮತ್ತು ಸಿದ್ಧ ವಿನಿಮಯ ಸಾಧನವಾಗಿ ಕೆಲಸ ಮಾಡಲು ಅನುಕೂಲವಾಗುವಂತಹ ನಾಣ್ಯವಿಲ್ಲದಂತಾಯಿತು. ಋಣಗಳ ಅಂತಿಮ ನಿರ್ವಹಣೆಯಾಗಿ ನಾಣ್ಯವು ಸ್ವೀಕೃತವಾಗುವ ಮೊದಲು ಪ್ರತಿಯೊಂದು ನಾಣ್ಯದ ಗಟ್ಟಿ ಮೌಲ್ಯವನ್ನು ಖಚಿತಪಡಿಸಿಕೊಳ್ಳಬೇಕಾಗುತ್ತಿತ್ತು.[೧] ಬಡವರು ಮತ್ತು ಅಜ್ಞಾನಿಗಳನ್ನು ವಂಚಿಸಲು ಹೀಗೆ ದೊರೆತ ಸುಸಂಧಿಯು, ೧೬೯೬ರ ದೊಡ್ಡ ಪುನರ್ನಾಣ್ಯ ಪದ್ಧತಿಯ ಮೊದಲು ಇಂಗ್ಲೆಂಡಿನಲ್ಲಿ ಇದ್ದ ಸಂದರ್ಭಕ್ಕಿಂತ ಕಡಿಮೆಯಾಗಿರಲಿಲ್ಲ.[೨] ಹೀಗೆ ನಿರಂತರವಾಗಿ ತೂಕ ಮಾಡುವುದು, ಮೌಲ್ಯ ಮಾಪನಮಾಡುವುದು ಮತ್ತು ನಾಣ್ಯಗಳಲ್ಲಿಯ ಗಟ್ಟಿಯನ್ನು ಪರೀಕ್ಷಿಸುವುದು, ಇವುಗಳಿಂದ ನಾಣ್ಯಚಲಾವಣೆಯ, ವಿನಿಮಯದ ಕ್ಷೇತ್ರದಲ್ಲಿ ಅನೇಕ ದೋಷಗಳು ಉಂಟಾದವು. ಅವುಗಳಿಂದಾಗಿ ಮತ್ತೊಂದು ಅಂಶವೂ ಸಂಭವಿಸಿತು. ಸಾಮ್ರಾಜ್ಯವು ಕಣ್ಮರೆಯಾದ ನಂತರ ಭಾರತದ ಉದ್ದಗಲಕ್ಕೂ ಚಲಾವಣೆಯಲ್ಲಿದ್ದ ಸಾರ್ವಭೌಮಿಕ, ಕಾನೂನುಬದ್ಧ ಹಣದ ವ್ಯವಹಾರವು ನಿಂತುಹೋಯಿತು. ಅದರ ಸ್ಥಾನದಲ್ಲಿ ಒಡೆದ ಸಾಮ್ರಾಜ್ಯದಲ್ಲಿ ಉದಯಿಸಿದ ವಿವಿಧ ಸಂಸ್ಥಾನಗಳಲ್ಲಿ ವಿವಿಧ ನಾಣ್ಯಗಳು ಸ್ಥಾನಿಕವಾಗಿ ಕಾನೂನುಬದ್ಧವಾಗಿ ಚಲಾವಣೆಗೆ ಬಂದವು. ಅಂಥ ಪ್ರಸಂಗಗಳಲ್ಲಿ ಸರಕುಗಳ ಬದಲಾಗಿ ಸಂದಾಯದಲ್ಲಿ ಕೊಡಲಾದ ನಾಣ್ಯಗಳಿಂದ ಆವಶ್ಯಕವಿದ್ದ ಗಟ್ಟಿ ವಮೌಲ್ಯವನ್ನು ಪಡೆದು ವಿನಿಮಯವನ್ನು ಸಮಾಪನಗೊಳಿಸಲಾಗುತ್ತಿರಲಿಲ್ಲ. ನಾಣ್ಯಗಳು ತಮ್ಮ ಪ್ರಾಂತ್ಯದಲ್ಲಿನ ಕಾನೂನುಬದ್ಧ ಹಣವೆಂಬುದು ವರ್ತಕರಿಗೆ ಖಂಡಿತ ಗೊತ್ತಿರಬೇಕಾಗಿತ್ತು. ಈ ಅಂಶದ ಮೇಲೆ ೧೭೯೩ರ ಬಂಗಾಳ ಕರೆನ್ಸಿ ರೆಗ್ಯುಲೇಶನ್ XXXV ಇದರ ಪೀಠಿಕೆಯು ಬೆಳಕನ್ನು ಚೆಲ್ಲುತ್ತದೆ:

“ಬಂಗಾಳ, ಬಿಹಾರ ಮತ್ತು ಒರಿಸ್ಸಾಗಳಲ್ಲಿ ಪ್ರತಿಯೊಂದು ಪ್ರಮುಖ ಜಿಲ್ಲೆಯೂ ತನ್ನದೇ ಆದ ಬೆಳ್ಳಿ

---

೧. ಅಪಮೌಲ್ಯಗೊಂಡ ನಾಣ್ಯಗಳ ನೈಜ ಗಟ್ಟಿ ಬೆಲೆಯನ್ನು ಖಚಿತಪಡಿಸಿಕೊಳ್ಳಲು ಬೇಕಾದ ಈ ಆವಶ್ಯಕತೆಯು ಶ್ರಾಫ್ ಎಂದು ಕರೆಯಲ್ಪಡುವ ಹಣ ಬದಲಾಯಿಸುವ ವರ್ಗವನ್ನುಂಟುಮಾಡಿತು. ಇವರು ನಾಣ್ಯಗಳ ದಿನಾಂಕಗಳು ಮತ್ತು ಅವುಗಳ ಮೇಲೆ ಕೆತ್ತಲಾದ ಇತರ ಗುಣಲಕ್ಷಣಗಳ ಮೂಲಕ ಪ್ರಮಾಣ ಶುದ್ಧತೆಯಿಂದ ಯೋಗ್ಯ ಮೊತ್ತವನ್ನು ಕಡಿಮೆ ಮಾಡಿ ಅವುಗಳ ಬೆಲೆಯನ್ನು ನಿರ್ಧರಿಸುವ ಕೆಲಸದಲ್ಲಿ ಪರಿಣಿತಿಯನ್ನು ಪಡೆದರು.

೨. ಪ್ರತ್ಯಕ್ಷ ಸಾಕ್ಷಿಯಾಗಿದ್ದ ಡಾ. ರಾಕ್ಸ್‌ಬರ್ಗ್ ಅವರು ನಾಣ್ಯದ ಕೆಟ್ಟ ಪರಿಸ್ಥಿತಿಯಿಂದ ಉಂಟಾದ ಬಡವರ ವೇದನೆಯಿಂದ ಎಷ್ಟೊಂದು ಪ್ರಭಾವಿತರಾದರೆಂದರೆ ಅವರು ಜೂನ್ ೩೦, ೧೭೯೧ ರಂದು ಎ. ಡಾಲ್‌ರಿಂಪಲ್ ಇವರಿಗೆ ಪತ್ರವನ್ನು ಬರೆದು ಅವರ ಓರಿಯಂಟಲ್ ರೆಪೆರ್ಟರಿ (೨ ಸಂಪುಟಗಳು, ಲಂಡನ್, ೧೮೦೮) ಇದರಲ್ಲಿ ಒಂದು ಪ್ರಬಂಧವನ್ನು ಸೇರಿಸಿ ಅನಿಷ್ಟಗಳಿಗೆ ಪ್ರಾಮುಖ್ಯತೆ ನೀಡಬೇಕೆಂದು ಒತ್ತಾಯಿಸಿದರೆಂದು ಹೇಳಲಾಗುತ್ತದೆ. ಆ ಪ್ರಬಂಧದಲ್ಲಿ ಕಂಪನಿಯ ಪ್ರದೇಶಗಳಲ್ಲಿ ಸರ್ಕಾರ ಮತ್ತು ಪ್ರಜೆಗಳಿಗೆ ಅತ್ಯಂತ ದೃಢ ಮತ್ತು ಶಾಶ್ವತ ಪ್ರಯೋಜನವನ್ನು ನೀಡಬಲ್ಲ ಪ್ರಸಕ್ತ ನಾಣ್ಯ ಚಲಾವಣೆಯನ್ನು ಕುರಿತು ಅವರು ಬರೆದಿದ್ದರು. ಮುಂದುವರಿದು ಅವರು ಹೀಗೆ ಬರೆದಿದ್ದರು; “ದೋಷವನ್ನು ನಿವಾರಿಸಲು ನೀವು ಶಕ್ತರಾಗಬಹುದು. ಅದರಿಂದ ಬಡವರ ಪ್ರಾರ್ಥನೆಗಳೂ ಪ್ರಯೋಜನಕಾರಿಯಾದರೆ ನೀವು ಖಂಡಿತವಾಗಿ ಸ್ವರ್ಗಕ್ಕೆ ಹೋಗುವಿರಿ ಮತ್ತು ನಾನು ಸ್ವರ್ಗದ ಸಮೀಪ ಒಂದು ಪಾವಟಿಗೆಯನ್ನು ಪಡೆಯಬಹುದು.” ಅಬ್ಸರ್‌ವೇಶನ್ಸ್ ಆನ್ ದಿ ಕಾಪರ್, ಕಾಯನೇಜ್ ವಾಂಟೆಡ್ ಇನ್ ದಿ ಸರ್ಕಾರ್ಸ್, ಎ. ಡಾಲ್‌ರಿಂಪಲ್ ಇವರಿಂದ, ಲಂಡನ್, ೧೭೯೪, ಪು. ೧

ನಾಣ್ಯವನ್ನು ಹೊಂದಿದ್ದವು......... ಅವುಗಳು ಚಲಾವಣೆಯಲ್ಲಿರುವ ಜಿಲ್ಲೆಗಳಲ್ಲಿನ ಎಲ್ಲ ವ್ಯವಹಾರಗಳಲ್ಲಿ ಪ್ರಮಾಣ ಅಧಿಕೃತ ವಿನಿಮಯ ಸಾಧನೆಗಳಾಗಿವೆ ಎಂದು ಅದು ಹೇಳುತ್ತದೆ."

ತಮ್ಮ ಜಿಲ್ಲೆಗಳಲ್ಲಿ ಚಲಾವಣೆಯಲ್ಲಿದ್ದ ನಾಣ್ಯದಲ್ಲಿಯೇ ಗೇಣಿಯನ್ನು ನೀಡಬೇಕಾಗಿದ್ದುದರಿಂದ ತಮ್ಮ ವ್ಯವಸಾಯೋತ್ಪನ್ನಗಳ ಮೌಲ್ಯವನ್ನು ಅದೇ ನಾಣ್ಯದಲ್ಲಿಯೇ ನೀಡಬೇಕೆಂದು ವರ್ತಕರನ್ನು ಒತ್ತಾಯಿಸುತ್ತಿದ್ದರು. ಇದನ್ನೇ ಅನುಸರಿಸಿ ಬಟ್ಟೆ ಅಥವಾ ಇತರ ಪದಾರ್ಥಗಳ ಉತ್ಪಾದಕರೂ ತಮ್ಮ ಮಾಲುಗಳಿಗೆ ಆ ಜಿಲ್ಲೆಯಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳ ಮೂಲಕವೇ ಪಾವತಿಯನ್ನು ಬಯಸುತ್ತಿದ್ದರು.

"ತದನುಸಾರವಾಗಿ ವಿವಿಧ ಪ್ರಕಾರಗಳ ಹಳೆಯ ರೂಪಾಯಿಗಳು ಆ ಜಿಲ್ಲೆಗಳಲ್ಲಿ ಪುನಃ ಚಲಾವಣೆಗೆ ಬಂದವು ಮತ್ತು ಅದರ ಅನಿವಾರ್ಯ ಪರಿಣಾಮವಾಗಿ ಎಲ್ಲ ವ್ಯವಹಾರಗಳಿಗೆ ರೂಪಾಯಿಯ ಬೇಡಿಕೆಯು ಹೆಚ್ಚಾದುದರಿಂದ ಅದು ಚಲಾವಣೆಯಲ್ಲಿದ್ದ ಜಿಲ್ಲೆಗಳಲ್ಲಿ ಅದರ ಬೆಲೆಯನ್ನು ಹೆಚ್ಚಿಸಲಾಯಿತು. ಇಷ್ಟೇ ಅಲ್ಲದೆ ಹೊರಗಿನಿಂದ ಜಿಲ್ಲೆಯೊಳಗೆ ತರಲಾದ ಇತರ ಎಲ್ಲಾ ಪ್ರಕಾರದ ರೂಪಾಯಿಗಳನ್ನು ಅಲ್ಲಿನ ನಿವಾಸಿಗಳು ನಿರಾಕರಿಸಿದರು. ಏಕೆಂದರೆ ಈ ಮೌಲ್ಯಮಾಪನವು ಆಸ್ತಿಯ ಅಂದಾಜು ಮಾಡುವಾಗ ಅವರಿಗೆ ರೂಢಿಯಾದ ನಾಣ್ಯದಿಂದ ಭಿನ್ನವಿತ್ತು. ಒಂದು ವೇಳೆ ಅದನ್ನು ಸ್ವೀಕರಿಸಬೇಕಿದ್ದಿದ್ದರೆ ಸಾಕಷ್ಟು ರಿಯಾಯಿತಿಯನ್ನು ಒತ್ತಾಯದಿಂದ ಪಡೆಯಲಾಗುತ್ತಿತ್ತು. ಈ ರಿಯಾಯಿತಿಯು ಜಿಲ್ಲೆಯಲ್ಲಿ ಚಾಲ್ತಿಯಲ್ಲಿರುವ ರೂಪಾಯಿಗೆ ಸರಾಫನ ಮನೆಯಲ್ಲಿ ಅದನ್ನು ಅದಲುಬದಲು ಮಾಡಿದ್ದರೆ ಸಿಗುತ್ತಿದ್ದ ಅಥವಾ ಬೇರೆ ಯಾವುದೇ ವ್ಯಕ್ತಿಗೆ ಅದನ್ನು ಬಟವಾಡೆಯಲ್ಲಿ ಕೊಡುವಾಗ ನೀಡಬೇಕಾಗುತ್ತಿದ್ದ ರಿಯಾಯಿತಿಗೆ ಸಮಾನವಾಗಿರುತ್ತಿತ್ತು.

* * *

ಒಂದು ಜಿಲ್ಲೆಯಲ್ಲಿ ಚಲಾವಣೆಯಲ್ಲಿದ್ದ ನಾಣ್ಯವನ್ನು ಬೇರೊಂದು ಜಿಲ್ಲೆಯಲ್ಲಿ ಸ್ವೀಕರಿಸಲು ಜನತೆಯು ಒಪ್ಪದಿದ್ದಾಗ ಅದರ ಪರಿಹಾರಕ್ಕಾಗಿ ಕೊಡಬೇಕಿದ್ದ ರಿಯಾಯಿತಿಯಿಂದಾಗಿ ವರ್ತಕರು, ಮಾಲೀಕರು ಹಾಗೂ ರೈತರು ಇತರ ಜಿಲ್ಲೆಗಳೊಂದಿಗಿನ ತಮ್ಮ ವ್ಯವಹಾರಗಳಲ್ಲಿ ಸಾಕಷ್ಟು ಸಂಕಷ್ಟಗಳನ್ನು ಅನುಭವಿಸಬೇಕಿತ್ತು.

ಆಗ ವ್ಯಾಪಾರವು ವಸ್ತುವಿನಿಮಯದ ಮಟ್ಟಕ್ಕೆ ಕುಸಿಯಿತು. ಈ ವಸ್ತುವಿನಿಮಯ ಪದ್ಧತಿಗೆ ಎಲ್ಲರೂ ಒಪ್ಪಬಹುದಾದ ವಿನಿಮಯ ಮಾಧ್ಯಮವೊಂದು ಇಲ್ಲದಿರುವುದು ಕಾರಣವಾಗಿದ್ದಿರಬಹುದು ಅಥವಾ ವಿನಿಮಯ ಮಾಧ್ಯಮವಾಗಿ ಅನೇಕ ಬಗೆಯ ನಾಣ್ಯಗಳಿದ್ದುದು ಕಾರಣವಾಗಿದ್ದಿರಬಹುದು. ವಿನಿಮಯ ಮಾಧ್ಯಮವು ಲೋಹದ ನಾಣ್ಯವಾಗಿದ್ದುದರಿಂದ ಪರಿಸ್ಥಿತಿಯು ಹಾಗೆ ಇದ್ದಿರಲಿಕ್ಕಿಲ್ಲವೆಂದು ಭಾವಿಸಬಹುದು. ಇಲ್ಲಿ ನಾವು ನೆನಪಿಡಬೇಕಾದ ವಿಷಯವೆಂದರೆ, ಭಾರತದಲ್ಲಿ ಚಲಾವಣೆಯಲ್ಲಿದ್ದ ನಾಣ್ಯಗಳು ಲೋಹಾಂಶ ಮತ್ತು ಕಾಯಿದೆಬದ್ಧತೆಯಲ್ಲಿ ಭಿನ್ನವಿದ್ದುದರ ಕಾರಣವಾಗಿ ಅವುಗಳು ವಿವಿಧ ಪ್ರಕಾರಗಳ ನಾಣ್ಯಗಳಾಗಿ ರೂಪಿತವಾದವು. ಹೀಗಾಗಿ ಒಂದು ವಿಶಿಷ್ಟ ನಾಣ್ಯದ ಸಲುವಾಗಿ ಮಾಡಲಾಗುವ ವಿನಿಮಯ ಆವಶ್ಯಕವಾಗಿ ವ್ಯವಹಾರಕ್ಕೆ ತಡೆಯೊಡ್ಡಲಿಲ್ಲ. ಕೆಲವೊಂದು ಸಂದರ್ಭಗಳಲ್ಲಿ ಅಗತ್ಯವಾದ ವಿಶಿಷ್ಟ ನಾಣ್ಯವು ಸಿಗುವವರೆಗೆ ನಾಣ್ಯಗಳು ವಿನಿಮಯಕ್ಕೆ ಬೇಕಾದ ಮಧ್ಯವರ್ತಿಯಾಗಿದ್ದಿರಬೇಕು. ಸಮಾಜದಲ್ಲಿ ವ್ಯವಹಾರವು ವಸ್ತುವಿನಿಮಯ ಪದ್ಧತಿಗೆ ಕುಸಿದಿತ್ತೆಂದು ತೋರಿಸಲು ಇದು ಸಾಕಾಗುವುದು. ಇದೊಂದೇ ಪರಿಸ್ಥಿತಿಯಲ್ಲಿಯ ನ್ಯೂನತೆಯಾಗಿದ್ದರೆ ಇದು ನಾಣ್ಯಗಳ ವೈವಿಧ್ಯವಿರುವ ಅಂತರರಾಷ್ಟ್ರೀಯ ವ್ಯಾಪಾರದಷ್ಟು ಕೆಟ್ಟದ್ದಾಗುತ್ತಿತ್ತು. ನಾಣ್ಯಗಳ ಬೆಲೆಯು ಒಂದೇ ಇದ್ದರೂ, ಅವುಗಳ ಲೋಹಾಂಶ ಬಹಳ ಭಿನ್ನವಾಗಿದ್ದರಿಂದ ವ್ಯವಹಾರ ಇನ್ನಷ್ಟು ಜಟಿಲವಾಯಿತು.

ಈ ಕಾರಣದಿಂದ ಒಂದು ನಾಣ್ಯವು ಅದೇ ಹೆಸರಿನ ಇನ್ನೊಂದು ನಾಣ್ಯಕ್ಕೆ ಸಂಬಂಧಿಸಿದಂತೆ ರಿಯಾಯತಿ ಅಥವಾ ಲಾಭಾಂಶವನ್ನು ಹೊಂದಿತು. ಲಾಭಾಂಶ ಅಥವಾ ರಿಯಾಯತಿಯ ಮೊತ್ತವು ಗೊತ್ತಿರದಿದ್ದರಿಂದ ಪ್ರತಿಯೊಬ್ಬರೂ ತನಗೆ ಗೊತ್ತಿದ್ದ ಪ್ರಕಾರದ ಮತ್ತು ತನ್ನ ಪ್ರದೇಶದಲ್ಲಿ ಚಲಾವಣೆಯಲ್ಲಿರುವ ನಾಣ್ಯವನ್ನು ಹೊಂದಲು ಜಾಗರೂಕತೆ ವಹಿಸುತ್ತಿದ್ದರು. ಒಟ್ಟಾರೆ, ಇಂಥ ಪರಿಸ್ಥಿತಿಯಿಂದ ವಾಣಿಜ್ಯಕ್ಕೆ ಉದ್ಭವಿಸುವ ಆತಂಕಗಳು ಲೈಕರಗಸ್‌ನ ಆಜ್ಞೆಯಿಂದುಂಟಾದ ಆತಂಕಗಳಿಗಿಂತ ಕಡಿಮೆಯಾಗಿರಲಿಲ್ಲ. ತಾಮ್ರದ ಹಣದ ತೂಕವು ಲ್ಯಾಸೆಡೆಮೋನಿಯನ್ನರ ವ್ಯಾಪಾರವನ್ನು ಮಿತಿಗೊಳಿಸುತ್ತಿದೆ ಎಂಬ ದೃಷ್ಟಿಯಿಂದ ಆತನು ಈ ಹಣವನ್ನು ಉಪಯೋಗಿಸಲು ಅವರನ್ನು ಒತ್ತಾಯಿಸುತ್ತಿದ್ದನು. ಆ ಪರಿಸ್ಥಿತಿಯು ತ್ರಾಸದಾಯಕವಾಗಿತ್ತಲ್ಲದೇ ತನ್ನಲ್ಲಿದ್ದ ಕೊರತೆಯ ಕಾರಣದಿಂದ ಮತ್ತಷ್ಟು ಉಲ್ಬಣಗೊಂಡಿತು. ಒಂದು ನಾಣ್ಯವನ್ನು ಒದಗಿಸುವಲ್ಲಿ ಹೂಡಿದ ಬಂಡವಾಳವು ಸಮಾಜದ ಉತ್ಪಾದಕ ಸಂಪನ್ಮೂಲಗಳ ಮೇಲೆ ಹೇರಿದ ತೆರಿಗೆಯಾಗಿರುತ್ತದೆ. ಆದಾಗ್ಯೂ ಜೇಮ್ಸ್ ವಿಲ್ಸನ್ ಕೆಳಗಿನಂತೆ ಬರೆದರು.[೧]

"ವಸ್ತುವಿನಿಮಯ ಪದ್ಧತಿಗೆ ಬದಲಾಗಿ ಹಣವು ವಿನಿಮಯದ ಮಾಧ್ಯಮವಾದಾಗ ಅದರಿಂದ ಸಮಯ ಮತ್ತು ಶ್ರಮಗಳ ಉಳಿತಾಯವಾಗುತ್ತದೆ. ತತ್ಪರಿಣಾಮವಾಗಿ ಉಳಿತಾಯವಾಗುವ ಬಂಡವಾಳವು ದೇಶದ ಚಾಲ್ತಿ ಬಂಡವಾಳದೊಡನೆ ಕೂಡಿಕೊಂಡು ಉತ್ಪಾದನಾ ಸಾಮರ್ಥ್ಯವನ್ನು ಹೆಚ್ಚುವಂತೆ ಮಾಡುತ್ತದೆ ಎಂಬುದನ್ನು ಯಾರೂ ಪ್ರಶ್ನಿಸಲಾರರು."

ವಸ್ತುಗಳ ಏಕಮಾತ್ರ ಚಲಾವಣಾ ಸಾಧನವಾಗಿ ಕೆಲಸ ಮಾಡಲು, ಉತ್ಪಾದಕ ಮೂಲಗಳಿಂದ ಅಪಾರ ಬಂಡವಾಳವನ್ನು ಹಿಂತೆಗೆದುಕೊಂಡಿದ್ದರೂ ವಸ್ತುವಿನಿಮಯ ಪದ್ಧತಿಯಲ್ಲಿಯ ದುಷ್ಪರಿಣಾಮಗಳನ್ನು ನಿವಾರಿಸದ ಹಣಕಾಸು ಪದ್ಧತಿಯ ಬಗ್ಗೆ ಏನು ಹೇಳಬೇಕು? ರೋಗಗ್ರಸ್ತ ಹಣ, ಹಣದ ಅಭಾವಕ್ಕಿಂತ ಕೆಟ್ಟದ್ದು. ಹಣದ ಅಭಾವವು ಕನಿಷ್ಠ ವೆಚ್ಚವನ್ನಾದರೂ ಉಳಿಸುತ್ತದೆ. ಆದ್ದರಿಂದ ಕೆಟ್ಟಹಣದಿಂದ ಒಳ್ಳೆಯ ಹಣವನ್ನು ರೂಪಿಸುವ ಹೊಣೆಯು ಭಾರತದಲ್ಲಿ ಮೊಘಲರ ಸಾಮ್ರಾಜ್ಯಕ್ಕೆ ಉತ್ತರಾಧಿಕಾರಿಯಾಗಿದ್ದ ಇಂಗ್ಲಿಷ್ ಈಸ್ಟ್ ಇಂಡಿಯಾ ಕಂಪನಿಯ ಹೆಗಲ ಮೇಲೆ ಬಿತ್ತು.

ಕಂಪನಿಯ ನಿರ್ದೇಶಕರು ೧೮೦೬ರ ಏಪ್ರಿಲ್ ೨೫ರಂದು[೨] ಬೇರೆ ಬೇರೆ ಪ್ರಾಂತ್ಯದ ಅಧಿಕಾರಿಗಳಿಗೆ ಕಳುಹಿಸಿದ ಪತ್ರದಲ್ಲಿ ಪ್ರಥಮ ಬಾರಿಗೆ ಈ ಸುಧಾರಣಾ ವಿಧಾನಗಳನ್ನು ತಿಳಿಸಿದ್ದರು. ಈ ಚಾರಿತ್ರಿಕ ದಾಖಲೆಯಲ್ಲಿ ಅವರು ಹೇಳಿದ್ದುದೆಂದರೆ–

"೧೭. ಯಾವುದೇ ನಷ್ಟವಿಲ್ಲದೆ, ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳು ಪರಸ್ಪರ ನಿಗದಿತವಾದ ಒಂದು ವಿನಿಮಯ ದರವನ್ನು ಹೊಂದಿ ಅಧಿಕೃತ ಚಲಾವಣಾ ಮಾಧ್ಯಮವಾಗಿರಲಾರವು ಎಂಬುದು ತಜ್ಞರ ಅಭಿಮತ ಹಾಗೂ ಇದು ಅನುಭವದಿಂದಲೂ ಸಿದ್ಧವಾಗಿರುವ ವಿಷಯ. ಈ ನಾಣ್ಯಗಳನ್ನು ತಯಾರಿಸಲು ಉಪಯೋಗಿಸುವ ಲೋಹದಲ್ಲಿನ ಬೆಲೆಯ ಏರಿಳಿತಗಳೇ ಇದರಲ್ಲಿನ ನಷ್ಟಕ್ಕೆ ಕಾರಣವಾಗಿರುತ್ತವೆ. ಚಿನ್ನ ಮತ್ತು ಬೆಳ್ಳಿ ನಾಣ್ಯಗಳ ನಡುವಿನ ಅನುಪಾತವನ್ನು, ಅವುಗಳ ಮೌಲ್ಯವನ್ನು ಅನುಸರಿಸಿ, ಕಾನೂನಿನ ಪ್ರಕಾರ ನಿಗದಿಗೊಳಿಸಿರುತ್ತಾರೆ. ಇದು ಅತ್ಯಂತ ನ್ಯಾಯಯುತವೂ ಹೌದು. ಆದರೆ, ಸನ್ನಿವೇಶಗಳಲ್ಲಿ ಆಗುವ ಬದಲಾವಣೆಗಳಿಂದಾಗಿ ಕೆಲವೊಮ್ಮೆ ಚಿನ್ನವು ಬೆಳ್ಳಿಗೆ ಹೋಲಿಸಿದಾಗ ಈ ಮೊದಲು

---

೧. *ಕ್ಯಾಪಿಟಲ್ ಕರೆನ್ಸಿ ಅಂಡ್ ಬ್ಯಾಂಕಿಂಗ್*, ೧೮೪೭, ಪು. ೧೫

೨. ೧೮೯೮ರ ಎಚ್.ಆಫ್.ಸಿ. (ಹೌಸ್ ಆಫ್ ಕಾಮನ್ಸ್) ರಿಟರ್ನ್ ೧೨೭

ನಿಗದಿಗೊಳಿಸಿದುದಕ್ಕಿಂತ ಹೆಚ್ಚಿನ ಮೌಲ್ಯವನ್ನು ಪಡೆದುಕೊಳ್ಳಬಹುದು. ಅಂತಹ ಸನ್ನಿವೇಶಗಳಲ್ಲಿ ಬೆಳ್ಳಿಗೆ ಬದಲಾಗಿ ಚಿನ್ನವನ್ನು ಪಡೆದುಕೊಳ್ಳುವುದು ಲಾಭದಾಯಕವಾಗಬಹುದು. ಹಾಗಾದಾಗ ಆ ಲೋಹದ ನಾಣ್ಯಗಳನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳಬೇಕಾಗುತ್ತದೆ. ಚಿನ್ನಕ್ಕೆ ಹೋಲಿಸಿದಾಗ ಬೆಳ್ಳಿಯು ಮುಂಚಿನ ನಿಗದಿತ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯವನ್ನು ಪಡೆದುಕೊಂಡರೆ, ಬೆಳ್ಳಿಯ ನಾಣ್ಯಗಳು ಚಲಾವಣೆಯಿಂದ ಹಿಂತೆಗೆದುಕೊಳ್ಳಲ್ಪಡುವ ಸಂದರ್ಭವೂ ಬರಬಹುದು. ಈ ಎರಡೂ ಲೋಹಗಳ ಬೆಲೆಗಳ ಸ್ಥಿರತೆಯನ್ನು ಕಾಪಾಡಿಕೊಂಡು ಹೋಗುವುದು ವ್ಯಾವಹಾರಿಕವಾಗಿ ಸಾಧ್ಯವಿಲ್ಲದಿರುವುದರಿಂದ, ಇಂತಹ ಏರುಪೇರುಗಳಿಂದುಂಟಾಗುವ ಪರಿಣಾಮವನ್ನು ತಡೆಯುವುದೂ ಸಾಧ್ಯವಾಗುವುದಿಲ್ಲ. ಚಿನ್ನ ಮತ್ತು ಬೆಳ್ಳಿಗಳ ನಡುವಿನ ಸಾಪೇಕ್ಷ ಮೌಲ್ಯವನ್ನು ಸರಿಹೊಂದಿಸುವುದರಿಂದ ಉಂಟಾಗುವ ಸಂಕಷ್ಟಗಳು ನಿರಂತರವಾಗಿರುವಂತಹವು ಮತ್ತು ಇಂತಹ ವ್ಯವಸ್ಥೆಯು ವ್ಯವಹಾರದಲ್ಲಿ ಅನನುಕೂಲಗಳಿಗೆ ಮತ್ತು ನಷ್ಟಗಳಿಗೆ ದಾರಿಮಾಡಿಕೊಡುತ್ತದೆ".

ಆದ್ದರಿಂದ ಮುಂಬರುವ ವರ್ಷಗಳಲ್ಲಿ ಭಾರತದ ನಾಣ್ಯಪದ್ಧತಿಗೆ ಏಕಲೋಹ ಪದ್ಧತಿಯೇ ಸೂಕ್ತವೆಂದು ನಿರ್ಧರಿಸಿ ಕೆಳಕಂಡಂತೆ ನಿಗದಿಮಾಡಿದರು.

"೩೧........(ಭಾರತದಲ್ಲಿ) ಬೆಳ್ಳಿಯು ಸಾರ್ವತ್ರಿಕ ವ್ಯವಹಾರದಲ್ಲಿ ಹಣವನ್ನಾಗಿ ಉಪಯೋಗಿಸತಕ್ಕದ್ದು ಮತ್ತು ಎಲ್ಲ... ಲೆಕ್ಕಪತ್ರಗಳನ್ನು ರೂಪಾಯಿ, ಆಣೆ ಮತ್ತು ಪೈಸೆಗಳಲ್ಲಿ ಇಡತಕ್ಕದ್ದು........."

ಆದಾಗ್ಯೂ ರೂಪಾಯಿಯ ತೂಕ ಮತ್ತು ಲೋಹಾಂಶಗಳಲ್ಲಿ ಮೊಘಲ್ ಚಕ್ರವರ್ತಿಗಳ ರೂಪಾಯಿಯಂತೆ ಇರಲಿಲ್ಲ. ಅವರು ಕೆಳಗಿನಂತೆ ಸೂಚಿಸಿದರು:

"೯......... ಹೊಸ ರೂಪಾಯಿಯು ಮುಂದೆ ಹೇಳಿದಂತೆ....... ಒಟ್ಟು ತೂಕದ್ದಾಗಿರತಕ್ಕದ್ದು

| | | |
|---|---|---|
| ಟ್ರಾಯ್ ತೂಕಗಳು | ... | ೧೮೦ |
| ಹನ್ನೆರಡನೇ ಒಂದರಷ್ಟು ಮಿಶ್ರಲೋಹ | ... | ೧೫ |
| ಶುದ್ಧಬೆಳ್ಳಿಯ ಟ್ರಾಯ್ ತೂಕಗಳು | ... | ೧೬೫ |

ಭಾರತೀಯ ನಾಣ್ಯಪದ್ಧತಿಯ ಸುಧಾರಣೆಯ ಸಲುವಾಗಿ ಕೋರ್ಟ್ ಆಫ್ ಡೈರೆಕ್ಟರ್ಸ್ ಮುಂದಿಟ್ಟ ಸೂಚನೆಗಳು ಮೇಲೆ ಹೇಳಿದ ರೀತಿ ಇದ್ದವು:

೧೮೦ ಗ್ರಾಂ ತೂಕ ಮತ್ತು ೧೬೫ ಗ್ರಾಂ ಶುದ್ಧ ಬೆಳ್ಳಿಯನ್ನು ಒಳಗೊಂಡ ರೂಪಾಯಿಯ ಆಯ್ಕೆಯು ತರ್ಕಬದ್ಧ ಆಯ್ಕೆಯಾಗಿತ್ತು.

ಈ ಪದ್ಧತಿ ಹಾಗೂ ಅಸ್ತಿತ್ವದಲ್ಲಿರುವ ಪದ್ಧತಿಗಳ ನಡುವಿನ ಭಿನ್ನತೆಯು ಆದಷ್ಟು ಕಡಿಮೆ ಇರಬೇಕೆಂಬುದು ಈ ತೂಕವನ್ನು ನಿರ್ಧರಿಸುವಲ್ಲಿನ ಉದ್ದೇಶವೆಂದು ಕಾಣುತ್ತದೆ.

ಮೊಘಲರ ಪರಂಪರೆಯಿಂದ ಬಂದ ದ್ವಿಲೋಹ ಪದ್ಧತಿಯಲ್ಲಿನ ಕುಂದುಗಳನ್ನು ನಿವಾರಿಸಿ, ಅದನ್ನು ಒಂದು ವ್ಯವಸ್ಥೆಗೆ ತರುವ ಉದ್ದೇಶದಿಂದ ಮೂರು ಪ್ರಾಂತ್ಯಗಳ ಸರ್ಕಾರಗಳು, ಆಗ ಇದ್ದ ಅಸಂಖ್ಯಾತ ನಾಣ್ಯಗಳಲ್ಲಿ ಕೆಲವು ಚಿನ್ನದ ಹಾಗೂ ಬೆಳ್ಳಿಯ ನಾಣ್ಯಗಳನ್ನು ಆಯ್ಕೆಮಾಡಿ, ಅವುಗಳನ್ನು ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ವಿನಿಮಯದ ಅಧಿಕೃತ ಮಾಧ್ಯಮವನ್ನಾಗಿ ಮಾಡಿಕೊಳ್ಳುವ ದಿಸೆಯಲ್ಲಿ ಬಹಳ ದೂರ ಸಾಗಿದ್ದವು. ಹೀಗೆ ಚಲಾವಣೆಗಾಗಿ ಆಯ್ಕೆಮಾಡಿಕೊಂಡಿದ್ದ ಪ್ರಧಾನ ನಾಣ್ಯಗಳು, ಅವುಗಳ ತೂಕ ಮತ್ತು ಲೋಹಾಂಶಗಳು, ಮತ್ತು ಇತರ ವಿವರಗಳನ್ನು ಪಟ್ಟಿ ೧ರಲ್ಲಿ ಕಾಣಬಹುದು.

# ಪಟ್ಟಿ I
## ಪ್ರಧಾನ ನಾಣ್ಯ ಘಟಕಗಳು

| ಹೊರಡಿಸಿದ ಸರ್ಕಾರ | ಚಲಾವಣೆಯಲ್ಲಿದ್ದ ಪ್ರದೇಶ | ಹೊರಡಿಸಿದ ಪ್ರಾಧಿಕಾರ ಮತ್ತು ದಿನಾಂಕ | ಬೆಳ್ಳಿಯ ನಾಣ್ಯಗಳು | | | ಚಿನ್ನದ ನಾಣ್ಯಗಳು | | |
|---|---|---|---|---|---|---|---|---|
| | | | ಹೆಸರು | ಒಟ್ಟು ತೂಕ ಟ್ರಾಯ್ ಗ್ರಾಂ | ಶುದ್ಧ ಅಂತರ್ವಸ್ತು ಟ್ರಾಯ್ ಗ್ರಾಂ | ಹೆಸರು | ಒಟ್ಟು ತೂಕ ಟ್ರಾಯ್ ಗ್ರಾಂ | ಶುದ್ಧ ಅಂತರ್ವಸ್ತು ಟ್ರಾಯ್ ಗ್ರಾಂ |
| ಮುಂಬೈ | ಪ್ರಾಂತ್ಯ | | ಸೂರತ್ ರೂ. | ೧೭೯.೦ | ೧೬೪.೭೪೦ | ಮೊಹರು | ೧೭೯ | ೧೬೪.೭೪೦ |
| ಮದರಾಸು | ಪ್ರಾಂತ್ಯ | | ಅರ್ಕಾಟ್ ರೂ. | ೧೭೬.೪ | ೧೬೬.೪೭೭ | ಸ್ಟಾರ್ ಪಗೋಡಾ | ೫೨.೪೦ | ೪೨.೫೫ |
| ಬಂಗಾಳ | ಬಂಗಾಲ, ಬಿಹಾರ ಮತ್ತು ಒರಿಸ್ಸಾ } ಕಟಕ್ | ೧೭೯೩ರ ನಿಬಂಧನೆ; ೧೮೦೫ರ XII | ಸಿಕ್ಕಾ ರೂಪಾಯಿ (೧೯ನೇ ಸೂರ್ಯ) | ೧೭೯.೬೬ | ೧೭೫.೯೨೭ | ಮೊಹರು | ೧೯೦.೮೦೪ | ೧೮೯.೪೦ |
| | ಬೇರ್ಪಟ್ಟ ಪ್ರಾಂತ್ಯಗಳು ಜಯಿಸಿದ ಪ್ರಾಂತ್ಯಗಳು | ೧೮೦೩ರ XLV | ಫರೂಖಾಬಾದ್ ರೂ. (೪೫ನೇ ಸೂರ್ಯದ ಲಖನೌಸಿಕ್ಕಾ) | ೧೮೦ | ೧೬೬.೧೩೫ | – | – | |
| | ಬನಾರಸ್ ಪ್ರಾಂತ್ಯಗಳು | ೧೮೦೬ರ III | ಬನಾರಸ್ ರೂಪಾಯಿ (ಮಛಲೀದಾರ) | ೧೭೫ | ೧೬೮.೮೭೫ | – | | |

ವಿವಿಧ ಪ್ರಾಂತ್ಯಗಳಲ್ಲಿ ಇದ್ದ ವಿವಿಧ ನಾಣ್ಯಗಳನ್ನು ಎಲ್ಲಾ ಪ್ರಾಂತ್ಯಗಳಿಗೂ ಅನ್ವಯವಾಗುವಂತಹ ಒಂದೇ ನಾಣ್ಯವನ್ನಾಗಿ ಪರಿವರ್ತಿಸಲು, ಮತ್ತು ಹಾಗೆ ಮಾಡುವಾಗ ಆಗಬಹುದಾದ ಅನನುಕೂಲಗಳನ್ನು ಆದಷ್ಟು ಕಡಿಮೆಗೊಳಿಸಲು, ಆಗಿನ ವಿವಿಧ ನಾಣ್ಯಗಳ ಸಾಮಾನ್ಯ ತೂಕದಲ್ಲಿ ಹೆಚ್ಚಿನ ಬದಲಾವಣೆಯನ್ನು ಮಾಡದೆ ೧೮೦ ಗ್ರಾಂನ ಆಸುಪಾಸಿನಲ್ಲೇ ಇರಿಸಬೇಕಾಗಿತ್ತು. ಮೊಘಲ್ ಟಂಕಸಾಲೆಗಳ ರೂಪಾಯಿ ನಾಣದ್ಯ ತೂಕ ೧೮೦ ಗ್ರಾಂಗಳಷ್ಟು (ಅಥವಾ ಕರಾರುವಾಕ್ಕಾಗಿ ಹೇಳಬೇಕೆಂದರೆ ೧೭೯.೫೫೧೧ ಗ್ರಾಂ) ಇತ್ತೆಂದು ನಂಬಲಾಗಿತ್ತು. ಹಾಗಾಗಿ ಅದನ್ನೇ ಅನುಸರಿಸುವುದು, ಹೊಸ ನಾಣ್ಯವನ್ನು ಚಲಾವಣೆಗೆ ತರುತ್ತಿರುವಂತೆ ಕಾಣುವುದರ ಬದಲು ಹಳೆಯ ನಾಣ್ಯವನ್ನೇ ಮತ್ತೆ ಪ್ರಸರಣಕ್ಕೆ ತಂದಂತೆ ಆಗುತ್ತಿತ್ತು.[೧] ಈ ವ್ಯವಸ್ಥೆಯ ಮತ್ತೊಂದು ಲಾಭವೆಂದರೆ, ಹಿಂದೆ ಇದ್ದ ನಾಣ್ಯದ ಈ ಮಾನವನ್ನು ಮತ್ತೆ ಅನುಸರಿಸುವುದಷ್ಟೇ ಅಲ್ಲದೆ, ಅದು ತೂಕದ ಮಾನವಾಗಿಯೂ ಮತ್ತೆ ಸಿಗುವಂತಾಗುತ್ತಿತ್ತು. ತೂಕದ ಮಾನವು ಭಾರತದಲ್ಲಿ ಈ ಹಿಂದೆ ಯಾವಾಗಲೂ ಪ್ರಮುಖ ನಾಣ್ಯವಾದ ರೂಪಾಯಿಯ ತೂಕವೇ ಆಗಿದ್ದು, ಸೇರು, ಮತ್ತಿತರ ತೂಕದ ಬಟ್ಟುಗಳು ರೂಪಾಯಿಯ ತೂಕದ (ಅಂದರೆ ೧೭೯.೬ ಗ್ರಾಂ ಟ್ರಾಯ್‌ನ) ಗುಣಕಗಳೇ ಆಗಿದ್ದವು. ರೂಪಾಯಿ ನಾಣ್ಯದ ತೂಕವನ್ನು ಈಗ ವ್ಯತ್ಯಾಸ ಮಾಡಿದ್ದೇ ಆದರೆ, ಅದರಿಂದ ತೂಕದ ಸಾಮಾನ್ಯ ಮಾನದಲ್ಲಿ ವ್ಯತ್ಯಾಸವಾಗಿ ಅಹಿತಕರ ಪರಿಣಾಮಗಳು ಸಂಭವಿಸಬಹುದೆಂದು ನಂಬಲಾಗಿತ್ತು.[೨] ಇದಲ್ಲದೇ, ೧೮೦ ಗ್ರಾಂ ತೂಕದ ಘಟಕವು ಈ ದೃಷ್ಟಿಕೋನದಿಂದ ಸೂಕ್ತವಾಗಿದುದಷ್ಟೆ ಅಲ್ಲದೇ ಇಂಗ್ಲಿಷ್ ತೂಕ ಘಟಕಗಳೊಂದಿಗೆ ಭಾರತೀಯ ತೂಕದ ಘಟಕವನ್ನು ಸಮೀಕರಿಸುವ ಹೆಚ್ಚಿನ ಅನುಕೂಲತೆಯನ್ನು ಹೊಂದಿತ್ತು.[೩]

---

೧. ಹೋಲಿಸಿರಿ : ದಿ ಡಿಸ್‌ಪ್ಯಾಚ್‌ದಲ್ಲಿ ಮೊದಲು ಉಲ್ಲೇಖಿಸಿದ್ದು, ಪ್ಯಾರಾ ೮

೨. ಕಲ್ಕತ್ತಾ ಮಿಂಟ್ ಕಮಿಟಿಗೆ ಜೇಮ್ಸ್ ಪ್ರಿನ್ಸೆಪ್ ಬರೆದ ಪತ್ರವನ್ನು ಹೋಲಿಸಿರಿ. ಪ್ಯಾರಾ ೨೬–೨೮, ಅಪೆಂಡಿಕ್ಸ್ ಟು ದಿ ಇಂಡಿಯನ್ ಟೇಬಲ್ಸ್ ಇದರಲ್ಲಿ ಜಾನ್ ಮುಲ್ಲರ್ ಇವರಿಂದ ಮುದ್ರಿಸಿದ್ದು, ಕಲ್ಕತ್ತಾ, ೧೮೩೬

೩. ಅದೇ ಸ್ಥಳದಲ್ಲಿ, ಪರಿಚ್ಛೇದ ೨೮ ಹೇಗೆ ಆಂಗ್ಲ ಮತ್ತು ಭಾರತೀಯ ತೂಕದ ಪದ್ಧತಿಗಳು ಪರಸ್ಪರವಾಗಿ ಅನುರೂಪಿಸಲ್ಪಟ್ಟಿದ್ದವು ಎಂಬುದನ್ನು ಕೆಳಗೆ ಕಾಣಬಹುದು :–

| ಭಾರತೀಯ | ಇಂಗ್ಲಿಷ್ |
|---|---|
| ೮ ರಟ್ಟಿಗಳು = ೧ ಮಾಸ್ಸಾ | = ೧೫ ಟ್ರಾಯ್ ಗ್ರಾಂಗಳು |
| ೧೨ ಮಾಸ್ಸಾಗಳೂ = ೧ ತೊಲೆ ಅಥವಾ ಸಿಕ್ಕಾ | = ೧೮೦ ಟ್ರಾಯ್ ಗ್ರಾಂಗಳು |
| ೮೦ ತೊಲೆಗಳು = ೧ ಸೇರು | = ೨೧/೨ ಟ್ರಾಯ್ ಪೌಂಡುಗಳು; |
| ೪೦ ಸೇರುಗಳು = ೧ ಮಣ (ಅಥವಾ ಮನ್) | = ೧೦೦ ಟ್ರಾಯ್ ಪೌಂಡುಗಳು |

ಇವುಗಳು ಪ್ರಧಾನ ನಾಣ್ಯ ಘಟಕದ ತೂಕವನ್ನು ೧೮೦ ಗ್ರಾಂ ಟ್ರಾಯ್‌ಗಳಾಗಿ ನಿರ್ಧರಿಸಲು ಅನುಕೂಲ[೧] ಕಾರಣಗಳಾಗಿದ್ದವು. ಆದರೆ ಅದನ್ನು ಶುದ್ಧ ೧೬೫ ಗ್ರಾಂ ಮಾಡುವ ಯೋಜನೆಗೆ ಕೂಡ ಸಾಕಷ್ಟು ಸಮರ್ಥನೆಯಿತ್ತು. ೧೬೫ ಗ್ರಾಂಗಳನ್ನು ಲೋಹಾಂಶದ ಪ್ರಮಾಣವಾಗಿ ಆಯ್ಕೆ ಮಾಡುವ ನಿರ್ಧಾರವು ಕೂಡ ಅಸ್ತಿತ್ವದಲ್ಲಿದ್ದ ವ್ಯವಸ್ಥೆಯಲ್ಲಿ ಮಾಡಬಹುದಾಗಿದ್ದ ಕ್ಷೋಭೆಯು ಕನಿಷ್ಠ ಪ್ರಮಾಣದ್ದಾಗಿರುತ್ತಿತ್ತು. ಈ ಲೋಹಾಂಶ ಪ್ರಮಾಣವು ತಮ್ಮ ಪ್ರಧಾನ ಚಲಾವಣೆಯಲ್ಲಿಯ ನಾಣ್ಯ ಘಟಕಗಳಾಗಿ ವಿವಿಧ ಸರ್ಕಾರಗಳಿಂದ ಮಾನ್ಯಮಾಡಲ್ಪಟ್ಟ ಚಿನ್ನದ ನಾಣ್ಯಗಳ ಲೋಹಾಂಶ ಪ್ರಮಾಣಗಳಿಂದ ಬಹಳ ಭಿನ್ನವಾಗಿರಲಿಲ್ಲವೆಂಬುದು ಕೆಳಗಿನ ಸಾಪೇಕ್ಷ ವಿವರಣ ಪಟ್ಟಿ IIರಲ್ಲಿ ಕಂಡುಬರುತ್ತದೆ.

**ಪಟ್ಟಿ – II**

**ಮಾನ್ಯ ಮಾಡಲಾದ ಪ್ರಮುಖ ರೂಪಾಯಿಗಳ ಲೋಹಾಂಶ**

**ಪ್ರಮಾಣ ಹಾಗೂ ಸೂಚಿತ ಲೋಹಾಂಶ ಪ್ರಮಾಣದ ನಡುವಿನ ವ್ಯತ್ಯಾಸ**

| ಪ್ರಮುಖ ಘಟಕಗಳಾಗಿ ಮಾನ್ಯ ಮಾಡಲಾದ ಬೆಳ್ಳಿಯ ನಾಣ್ಯಗಳು ಮತ್ತು ಅವುಗಳ ಲೋಹಾಂಶ | | ಸೂಚಿತ ಬೆಳ್ಳಿಯ ರೂಪಾಯಿ ಪ್ರಮಾಣ (ಲೋಹಾಂಶ ಟ್ರಾಯ್ ಗ್ರಾಂಗಳಲ್ಲಿ) | ಸೂಚಿತ ರೂಪಾಯಿಗಿಂತ ಹೆಚ್ಚಿನ ತೂಕ | | ಸೂಚಿತ ರೂಪಾಯಿಗಿಂತ ಕಡಿಮೆ ತೂಕ | |
|---|---|---|---|---|---|---|
| ನಾಣ್ಯದ ಹೆಸರು | ಅದರ ಶುದ್ಧ ಅಂತರ್ವಸ್ತುಗಳು ಟ್ರಾಯ್ ಗ್ರಾಂಗಳು | | (ಗ್ರಾಂ ಗಳಲ್ಲಿ) | ಶೇಕಡಾ ವಾರು | (ಗ್ರಾಂ ಗಳಲ್ಲಿ) | ಶೇಕಡಾ ವಾರು |
| ಸೂರತ್ ರೂ. | ೧೬೪.೭೪ | ೧೬೫ | | | ೦.೨೬ | ೦.೧೫೭ |
| ಅರ್ಕಾಟ್ ರೂ. | ೧೬೬.೪೭೭ | ೧೬೫ | ೧.೪೭೭ | ೦.೮೮೭ | | |
| ಸಿಕ್ಕಾ ರೂ. | ೧೭೫.೯೨೭ | ೧೬೫ | ೧೦.೯೨೭ | ೬.೨೧೧ | | |
| ಫರೂಖಾಬಾದ್ ರೂ. | ೧೬೬.೩೫ | ೧೬೫ | ೧.೧೩೫ | ೦.೬೮೩ | | |
| ಬನಾರಸ್ ರೂ. | ೧೬೯.೨೫೧ | ೧೬೫ | ೪.೨೫೧ | ೨.೫೧೧ | | |

ಸಿಕ್ಕಾ ಮತ್ತು ಬನಾರಸ್ ರೂಪಾಯಿಗಳನ್ನು ಬಿಟ್ಟರೆ ಸೂಚಿತ ಪ್ರಮಾಣ ಲೋಹಾಂಶವು ಇತರ ರೂಪಾಯಿಗಳ ಪ್ರಮಾಣ ಶುದ್ಧತೆಯೊಂದಿಗೆ ಎಷ್ಟೊಂದು ನಿಕಟವಾಗಿ ಹೋಲಿಕೆಯಾಯಿತೆಂದರೆ, ಹೆಚ್ಚಿನ

---

೧. ಈ ಸಂದರ್ಭದಲ್ಲಿ ರೂಪಾಯಿಯ ಸಲುವಾಗಿ ೧೮೦ ಗ್ರಾಂ ಟ್ರಾಯ್ ತೂಕ ಘಟಕವಾಗಿರುವ ಯೋಜನೆಯನ್ನು ಕುರಿತು ಕ್ಯಾಪ್ಟನ್ ಜೆರ್ವಿಸ್ ಅವರ ಅಸಮ್ಮತ ಅಭಿಪ್ರಾಯದ ಬಗ್ಗೆ ಗಮನಹರಿಸಬಹುದು. ಅವರ ಸಮಗ್ರ ಕೃತಿಯನ್ನು ಹೋಲಿಸಿರಿ : ದಿ ಎಕ್ಸ್‌ಪೀಡಿಯೆನ್ಸಿ ಅಂಡ್ ಫ್ಯಾಸಿಲಿಟಿ ಆಫ್ ಎಸ್ಟ್ಯಾಬ್ಲಿಶಿಂಗ್ ದಿ ಮೆಟೀರಿಯಲಾಜಿಕಲ್ ಅಂಡ್ ಮಾನಿಟರಿ ಸಿಸ್ಟಮ್ಸ್ ಥ್ರೂ ಔಟ್ ಇಂಡಿಯಾ ಆನ್ ಎ ಸೈಂಟಿಫಿಕ್ ಅಂಡ್ ಪರ್ಮನೆಂಟ್ ಬೇಸಿಸ್, ಗ್ರೌಂಡೆಡ್ ಆನ್ ಅನ್ ಅನಾಲಿಟಿಕಲ್ ರಿವ್ಯೂ ಆಫ್ ದಿ ವೇಯಿಟ್ಸ್, ಮೆಜರ್ಸ್, ಅಂಡ್ ಕಾಯಿನ್ಸ್ ಆಫ್ ಇಂಡಿಯಾ... ಮುಂಬೈ ೧೮೩೬ ಪುಟಗಳು ೪೯–೬೪

ಅಸ್ತವ್ಯಸ್ತತೆಗೆ ಅವಕಾಶವಿಲ್ಲದಂತೆ ಸಂಪೂರ್ಣ ಏಕರೂಪತೆಯನ್ನು ಹೊಂದುವ ಆಸ್ಥೆ ಅದರ ಸ್ವೀಕಾರಕ್ಕಿದ್ದಿರಬಹುದಾದ ಎಲ್ಲ ಸಾಧ್ಯ ಆಕ್ಷೇಪಣೆಗಳನ್ನು ತಳ್ಳಿಹಾಕಿತು. ೧೬೫ ಗ್ರಾಂಗಳನ್ನು ಶುದ್ಧತೆಯ ಪ್ರಮಾಣವೆಂದು ಆಯ್ಕೆಮಾಡುವಲ್ಲಿ ಕೋರ್ಟ್ ಆಫ್ ಡೈರೆಕ್ಟರ್ಸ್ ಅವರ ಮೇಲೆ ಪ್ರಭಾವ ಬೀರಿದ ಮತ್ತೊಂದು ವಿಚಾರ ಬಹುಶಃ ೧೮೦ ಗ್ರಾಂ ಪ್ರಮಾಣ ತೂಕದ ಸಂಯೋಜನೆಯೊಂದಿಗೆ ವ್ಯವಸ್ಥೆಯು ರೂಪಾಯಿಯನ್ನು ೧೧/೧೨ ಶುದ್ಧವಾಗಿ ಮಾಡಲು ಎಣಿಸಿದ್ದು. ಒಂದು ವಿಶಿಷ್ಟ ಲೋಹಾಂಶವನ್ನು ನಿರ್ಧರಿಸುವುದು ಕೋರ್ಟ್ ಆಫ್ ಡೈರೆಕ್ಟರ್ಸ್ ಇವರಿಗೆ ಅತಿ ತಾಂತ್ರಿಕವಾದ ವಿಷಯವಾಯಿತು. ಆದಾಗ್ಯೂ ವಿವಿಧ ವಿಸ್ತೃತ ಪ್ರಯೋಗಗಳ ಮೇರೆಗೆ "ಹನ್ನೆರಡನೇ ಒಂದು ಭಾಗ ಕೀಳುಧಾತು ಮತ್ತು ಹನ್ನೆರಡನೇ ಹನ್ನೊಂದು ಭಾಗ ಶುದ್ಧ ಲೋಹದ ಅನುಪಾತವು ಶ್ರೇಷ್ಠವಾಗಿದ್ದು, ಕನಿಷ್ಠ ಪಕ್ಷ ಆಯ್ಕೆ ಮಾಡುವ ಬೇರೆ ಯಾವುದೇ ಅನುಪಾತದಷ್ಟೇ ಉತ್ತಮವಿರುತ್ತದೆ"[೧] ಎಂಬುದು ಟಂಕಸಾಲೆ ಮತ್ತು ನಾಣ್ಯ ತಯಾರಿಕೆಯ ಬಗ್ಗೆ ೧೮೦೩ ರಲ್ಲಿ ನೇಮಿತವಾದ ಬ್ರಿಟಿಷ್ ಸಮಿತಿಯ ಅಭಿಪ್ರಾಯವಾಗಿತ್ತು. ಈ ಪ್ರಮಾಣವನ್ನು ಎಷ್ಟೊಂದು ಅಧಿಕಾರವಾಣಿಯಿಂದ ಸಮರ್ಥಿಸಲಾಯಿತೆಂದರೆ, ಕೋರ್ಟ್ ಅದನ್ನು ತಮ್ಮ ಹೊಸ ಭಾರತೀಯ ನಾಣ್ಯದ ಕಾರ್ಯಯೋಜನೆಯಲ್ಲಿ ಸೇರಿಸಲು ಇಚ್ಛಿಸಿದರು. ಆದ್ದರಿಂದ ಅವರು ರೂಪಾಯಿಯಲ್ಲಿ ಹನ್ನೆರಡನೇ ಹನ್ನೊಂದು ಭಾಗವನ್ನು ಶುದ್ಧವಾಗಿರಿಸಲು ಇಚ್ಛಿಸಿದರು.

ನಂತರದ ದಿನಗಳ ಘಟನೆಗಳಿಂದಾಗಿ ಇದ್ದ ಅನುಕೂಲಕರ ಆಧಾರದ ಮೇಲೆ ವಿಮರ್ಶಿಸಿದಾಗ, ಏಕಲೋಹ ನಾಣ್ಯಪದ್ಧತಿಯ ಬಗ್ಗೆ ಕೋರ್ಟ್ ಆಫ್ ಡೈರೆಕ್ಟರ್ಸ್ ಇವರಿಗೆ ಇದ್ದ ಒಲವನ್ನು ವಿಮರ್ಶಿಸಿದಾಗ ಅದು ಸ್ವಲ್ಪ ಸಮೀಪದೃಷ್ಟಿಯದಾಗಿತ್ತು ಎಂದೆನಿಸುತ್ತದೆ. ಆದಾಗ್ಯೂ ಆ ಒಲವು ಉತ್ತಮ ಆಧಾರವನ್ನು ಹೊಂದಿತ್ತು. ಆಡಳಿತದ ಉದ್ದೇಶಕ್ಕಾಗಿ ವಿಭಜನೆಗೊಂಡ ಮೂರು ಪ್ರಾಂತ್ಯಗಳು ದೇಶದ ಸರ್ಕಾರದ ಅಧಿಕಾರ ವಹಿಸಿಕೊಂಡ ಮೇಲೆ ತೆಗೆದುಕೊಂಡ ಪ್ರಥಮ ಕ್ರಮವೆಂದರೆ, ಮೊಹರು, ಪಗೋಡಾ ಮತ್ತು ರೂಪಾಯಿಗಳ ನಡುವೆ ಒಂದು ಕಾನೂನುಬದ್ಧ ವಿನಿಮಯ ಅನುಪಾತವನ್ನು ಸ್ಥಾಪಿಸಿ ಮೊಘಲರ ಸಮಾನಾಂತರ ಪ್ರಮಿತಿಯಲ್ಲಿ ದ್ವಿಲೋಹ ನಾಣ್ಯ ಪ್ರಮಿತಿಗೆ ಬದಲಾಯಿಸುವುದು. ಆದರೆ ಈ ಪ್ರಯೋಗವು ಯಾವುದೇ ಪ್ರಾಂತ್ಯದಲ್ಲಿ ಸಂಪೂರ್ಣವಾಗಿ ಯಶಸ್ವಿಯಾಗಲಿಲ್ಲ.

ಬಂಗಾಲದಲ್ಲಿ[೨] ಸರ್ಕಾರವು ವಾಣಿಜ್ಯಕ್ಕೆ ಪ್ರತಿಕೂಲವಾಗುವಂತೆ, ತನ್ನ ಖಜಾನೆಗಳಲ್ಲಿ ಆದಾಯದ ಹಣವನ್ನು ಭದ್ರವಾಗಿರಿಸಿದ್ದ ತನ್ನದೇ ಕ್ರಿಯೆಯಿಂದ ದೊಡ್ಡ ಪ್ರಮಾಣದಲ್ಲಿ ಉಂಟಾದ ನಾಣ್ಯದ ಬಿಕ್ಕಟ್ಟನ್ನು ನಿವಾರಿಸಲು ಜೂನ್ ೨, ೧೭೬೬ ರಂದು ೧೭೯.೬೬ ಗ್ರಾಂ ಟ್ರಾಯ್ ತೂಕದ ಮತ್ತು ೧೪೯.೯೨ ಗ್ರಾಂ ಟ್ರಾಯ್ ಶುದ್ಧ ಲೋಹವನ್ನು ಹೊಂದಿದ ಚಿನ್ನದ ಮೊಹರುಗಳನ್ನು ೧೪ ಸಿಕ್ಕಾ ರೂಪಾಯಿಗಳನ್ನು ಅಧಿಕೃತ ವಿನಿಮಯ ಹಣವನ್ನಾಗಿ ಹೊರಡಿಸಲು ನಿರ್ಣಯಿಸಿತು. ಇದರಿಂದಾಗಿ ಈ ಹಿಂದೆ ೧ ಚಿನ್ನದ ಮೊಹರಿಗೆ ೧೪.೮೧ ಸಿಕ್ಕಾ ರೂಪಾಯಿಯಷ್ಟು ಇದ್ದ ಅನುಪಾತವು ಅಧಿಕೃತವಾಗಿ ೧ಕ್ಕೆ ೧೬.೪೫ ಆಯಿತು. ಬಹಳಷ್ಟು ವ್ಯತ್ಯಾಸವಾದ ಪರಿಣಾಮವಾಗಿ ಎರಡು ನಾಣ್ಯಗಳ ಸಮಾನಾಂತರ ಚಲಾವಣೆಯು ಸಾರ್ವತ್ರಿಕವಾಗುವ ಮೊದಲೇ ವೈಫಲ್ಯವನ್ನು ಕಂಡಿತು. ಚೀನ, ಮದರಾಸು ಮತ್ತು ಮುಂಬೈಗಳಿಂದ

---

೧. ಹೋಲಿಸಿರಿ : ಡಿಸ್‌ಪ್ಯಾಚ್, ಕೃತಿಯಿಂದ ಉಲ್ಲೇಖಿಸಿದ್ದು, ಪ್ಯಾರಾ ೯

೨. ಎಫ್.ಸಿ. ಹ್ಯಾರಿಸನ್, "ದಿ ಫಾಸ್ಟ್ ಆಕ್ಷನ್ ಆಫ್ ದಿ ಇಂಡಿಯನ್ ಗವರ್ನಮೆಂಟ್ ವಿಥ್ ರಿಗಾರ್ಡ್ ಟು ಗೋಲ್ಡ್", ಇಕನಾಮಿಕ್ ಜರ್ನಲ್‌ನ, ಸಂಪುಟ III, ಪು. ೫೪ ಮತ್ತು ಅದರ ಮುಂದಿನದು ಅಲ್ಲದೆ ಸರ್ ಜಾನ್‌ಶೋರ್ ಅವರ ಸೆಪ್ಟೆಂಬರ್ ೨೯, ೧೭೯೬ರ ಬೆಂಗಾಲ್ ಪಬ್ಲಿಕ್ ಕನ್‌ಸಲ್ಟೇಶನ್ಸ್‌ನ ನಡಾವಳಿಗಳು.

ಬಂಗಾಳಕ್ಕೆ ಬೆಳ್ಳಿಯು ಹರಿದುಹೋದದ್ದರಿಂದ ನಾಣ್ಯದ ಬಿಕ್ಕಟ್ಟು ಎಷ್ಟೊಂದು ಪ್ರಮಾಣದಲ್ಲಿ ಬಿಗಡಾಯಿಸಿತೆಂದರೆ ಮಾರ್ಚ್ ೨೦, ೧೭೬೯ ರಂದು ಸರ್ಕಾರವು ೧೬ ಸಿಕ್ಕಾ ರೂಪಾಯಿಗಳ ಮೌಲ್ಯದಲ್ಲಿ ನಿಗದಿತ ೧೯೦.೭೭೩ ಗ್ರಾಂ ಟ್ರಾಯ್ ತೂಕದ ಮತ್ತು ೧೯೦.೦೮೬ ಗ್ರಾಂ ಶುದ್ಧ ಚಿನ್ನವನ್ನು ಹೊಂದಿದ್ದ ಮತ್ತೊಂದು ಚಿನ್ನದ ಮೊಹರನ್ನು ಮುದ್ರಿಸಿ ಚಲಾವಣೆಯಲ್ಲಿ ತಂದಿತು. ಇದು ೧ಕ್ಕೆ ೧೪.೮೧ರ ಕಾನೂನು ಪ್ರಮಾಣದಲ್ಲಿತ್ತು. ಆದರೆ ಇದು ಭಾರತ (೧ಕ್ಕೆ ೧೪) ಮತ್ತು ಯುರೋಪ್ (೧ಕ್ಕೆ ೧೪.೬) ಈ ಎರಡೂ ದೇಶಗಳಲ್ಲಿಯ ಆಗಿನ ಮಾರುಕಟ್ಟೆ ಅನುಪಾತಕ್ಕಿಂತ ಹೆಚ್ಚು ಇದ್ದುದರಿಂದ ಸಹಗಾಮಿ ಚಲಾವಣೆಯನ್ನು ಜಾರಿಯಲ್ಲಿ ತರುವ ಎರಡನೇ ಪ್ರಯತ್ನವೂ ಅದರ ಹಿಂದಿನದಕ್ಕಿಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಲಿಲ್ಲ. ನಿಖರವಾದ ಬೆಲೆಯನ್ನು ನಿರ್ಧರಿಸುವ ಕೆಲಸವು ಎಷ್ಟೊಂದು ಗೋಜಲಾಗಿತ್ತೆಂದರೆ, ಸರ್ಕಾರವು ಡಿಸೆಂಬರ್ ೩, ೧೭೮೮ ರಂದು ಚಿನ್ನದ ನಾಣ್ಯಗಳನ್ನು ಟಂಕಿಸುವುದನ್ನು ನಿಲ್ಲಿಸಿ ಏಕಲೋಹ ನಾಣ್ಯಪದ್ಧತಿಗೆ ಹಿಂತಿರುಗಿತು. ಇದರಿಂದ ಉಂಟಾದ ಹಣಕಾಸು ಬಿಕ್ಕಟ್ಟು ೧೭೯೦ರಲ್ಲಿ ಚಿನ್ನದ ನಾಣ್ಯ ತಯಾರಿಕೆಯನ್ನು ಪುನರಾರಂಭಿಸುವುದು ಸರ್ಕಾರಕ್ಕೆ ಅನಿವಾರ್ಯವಾದಾಗ, ಅದು ಮೊಹರು ಮತ್ತು ರೂಪಾಯಿಗಳನ್ನು ಒಂದು ಪೂರ್ವನಿರ್ಧಾರಿತ ಅನುಪಾತಕ್ಕೆ ಜೋಡಿಸುವ ಪ್ರಯತ್ನವನ್ನು ಮಾಡದೇ ಅವುಗಳು ಮಾರುಕಟ್ಟೆಯಲ್ಲಿ ತಮ್ಮ ನೈಜ ಮೌಲ್ಯಗಳಲ್ಲಿ ಚಲಾವಣೆಯಲ್ಲಿರುವಂತೆ ಮಾಡಿತು. ೧೭೯೩ರ ವರೆಗೆ ಬಂಗಾಲದಲ್ಲಿ ದ್ವಿಲೋಹ ನಾಣ್ಯ ಪದ್ಧತಿಯನ್ನು ರಚಿಸುವ ಮೂರನೇ ಪ್ರಯತ್ನವನ್ನು ಮಾಡಲಿಲ್ಲ. ಆ ವರ್ಷ ೧೯೦.೮೯೫ ಗ್ರಾಂ ಟ್ರಾಯ್ ತೂಕದ ಮತ್ತು ೧೮೯.೪೦೩೭ ಗ್ರಾಂ ಶುದ್ಧ ಚಿನ್ನವನ್ನು ಹೊಂದಿದ್ದ ಹೊಸ ಮೊಹರನ್ನು ೧೬ ಸಿಕ್ಕಾ ರೂಪಾಯಿಗಳ ದರದಲ್ಲಿ ಅಧಿಕೃತ ಹಣವನ್ನಾಗಿ ಹೊರಡಿಸಲಾಯಿತು. ಇವುಗಳ ಅನುಪಾತವು ೧ಕ್ಕೆ ೧೪.೮೬ರಷ್ಟು ಇತ್ತು. ಆದರೆ ಅದು ಅಂದು ಪೇಟೆಯಲ್ಲಿ ಚಾಲ್ತಿಯಲ್ಲಿರುವ ಅನುಪಾತಕ್ಕೆ ಅನುರೂಪವಾಗದಿದ್ದುದರಿಂದ ಬಂಗಾಲದಲ್ಲಿ ದ್ವಿಲೋಹ ನಾಣ್ಯಪದ್ಧತಿಯನ್ನು ಸ್ಥಾಪಿಸುವ ಈ ಮೂರನೇ ಪ್ರಯತ್ನವೂ ಕೂಡ ೧೭೬೬ ಮತ್ತು ೧೭೬೯ನೆಯ ಇಸವಿಗಳಲ್ಲಿ ಮಾಡಿದ ಪ್ರಯತ್ನಗಳಂತೆಯೇ ವಿಫಲಗೊಂಡಿತು.

ಮದರಾಸು ಸರ್ಕಾರದ ಅಂಥವೇ ಪ್ರಯತ್ನಗಳು[೧] ಬಂಗಾಲದ ಪ್ರಯತ್ನಗಳಿಗಿಂತ ಹೆಚ್ಚು ಅನರ್ಥವನ್ನು ಕಂಡವು. ೧೭೪೯ರಲ್ಲಿ ೩೫೦ ಆರ್ಕಾಟ್ ರೂಪಾಯಿಗಳು ಅಧಿಕೃತವಾಗಿ ೧೦೦ ಸ್ಟಾರ್ ಪಗೋಡಾಗಳ ಮೌಲ್ಯವನ್ನು ಹೊಂದಿದ್ದು ಆ ವರ್ಷ ಮದರಾಸಿನಲ್ಲಿ ಬ್ರಿಟಿಷ್ ಆಳ್ವಿಕೆಯಲ್ಲಿ ದ್ವಿಲೋಹ ನಾಣ್ಯಪದ್ಧತಿಯನ್ನು ಜಾರಿಗೆ ತರುವ ಪ್ರಥಮ ಪ್ರಯತ್ನವನ್ನು ಮಾಡಲಾಯಿತು. ಅಂದಿನ ಮಾರುಕಟ್ಟೆಯಲ್ಲಿನ ಅನುಪಾತಕ್ಕೆ ಹೋಲಿಸಿದಾಗ ಈ ಬೆಲೆಯ ನಿರ್ಧಾರದಿಂದ ಆ ಪ್ರಾಂತ್ಯದ ಚಿನ್ನದ ನಾಣ್ಯವಾದ ಪಗೋಡಾವು ಅಪಮೌಲ್ಯಕ್ಕೆ ಒಳಗಾಯಿತು. ಪಗೋಡಾದ ಕಣ್ಮರೆಯು ಹಣಕಾಸು ಬಿಕ್ಕಟ್ಟನ್ನು ಉಂಟುಮಾಡಿತು ಮತ್ತು ಡಿಸೆಂಬರ್ ೧೭೫೦ರಲ್ಲಿ ಅದನ್ನು ಪುನಃ ಚಲಾವಣೆಯಲ್ಲಿ ತರುವ ಅನಿವಾರ್ಯತೆಯು ಸರ್ಕಾರಕ್ಕೆ ಒದಗಿಬಂದಿತು. ಇದನ್ನು ಸರ್ಕಾರವು ಎರಡು ಯೋಜನೆಗಳ ಮುಖಾಂತರ ಮಾಡಿತು. ಮೊದಲನೆಯದಾಗಿ ಟಂಕಸಾಲೆ ಪ್ರಮಾಣವನ್ನು ಮಾರುಕಟ್ಟೆ ಪ್ರಮಾಣಕ್ಕೆ ಸಮೀಕರಿಸಲು ಅದು ಸರ್ಕಾರಿ ಖಾತೆಯ ಮೇಲೆ ಚಿನ್ನವನ್ನು ಆಮದು ಮಾಡಿಕೊಂಡಿತು. ಎರಡನೆಯದಾಗಿ ಅದು ತನ್ನ ಖಜಾನೆಗಳ ವಸೂಲಿ ಮತ್ತು ಸಂದಾಯಗಳನ್ನು ಪ್ರತ್ಯೇಕವಾಗಿ ಪಗೋಡಾಗಳಲ್ಲಿಯೇ ಮಾಡುವಂತೆ ನಿರ್ಬಂಧಿಸಿತು. ಎರಡನೆಯ ಉಪಾಯವು ಅಷ್ಟೇನೂ

---

೧. ಹೆಚ್. ಡಾಡ್‌ವೆಲ್, "ಸಬ್‌ಸ್ಟಿಟ್ಯೂಷನ್ ಆಫ್ ಸಿಲ್ವರ್ ಫಾರ್ ಗೋಲ್ಡ್ ಇನ್ ಸೌತ್ ಇಂಡಿಯಾ", ಇಂಡಿಯನ್ ಜರ್ನಲ್ ಆಫ್ ಇಕನಾಮಿಕ್ಸ್, ಜನವರಿ ೧೯೨೧.

ಪರಿಣಾಮಕಾರಿಯಾಗಲಿಲ್ಲ. ಆದರೆ ಮೊದಲನೆಯ ಉಪಾಯವು ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿವಾರಿಸುವಲ್ಲಿ ಸಾಕಷ್ಟು ಫಲಕಾರಿಯಾಯಿತು. ದುರದೃಷ್ಟವಶಾತ್ ಈ ಪರಿಸ್ಥಿತಿ ಹೆಚ್ಚು ಕಾಲ ಮುಂದುವರೆಯಲಿಲ್ಲ. ೧೭೫೬ ಮತ್ತು ೧೭೭೧ರ ನಡುವೆ ಮಾರುಕಟ್ಟೆಯಲ್ಲಿ ರೂಪಾಯಿ ಮತ್ತು ಪಗೋಡಾಗಳ ಅನುಪಾತವು ಮತ್ತೆ ಗಣನೀಯವಾಗಿ ಬದಲಾಯಿತು. ೧೭೫೬ರಲ್ಲಿ ಇದ್ದ ೩೬೩ : ೧೦೦ರ ಅನುಪಾತವು ೧೭೬೮ರಲ್ಲಿ ೩೭೦ : ೧೦೦ಕ್ಕೆ ಬದಲಾಯಿತು. ಈ ಅನುಪಾತವು ೧೭೪೯ರಲ್ಲಿ ನಿಗದಿತವಾದ ಅಧಿಕೃತ ಅನುಪಾತಕ್ಕೆ ೧೭೬೮ರ ವರೆಗೂ ಹಿಂದಿರುಗಲೇ ಇಲ್ಲ ಮತ್ತು ಇದು ಹಾಗೆಯೇ ಮುಂದಿನ ಹನ್ನೆರಡು ವರ್ಷಗಳವರೆಗೆ ಸ್ಥಿರವಾಗಿಯೇ ಇತ್ತು. ಆದರೆ ಎರಡನೇ ಮೈಸೂರು ಯುದ್ಧವನ್ನು ಮುಂದುವರೆಸಲು ಅಗತ್ಯವೆನಿಸಿದ ಬೆಳ್ಳಿಯ ಹೆಚ್ಚಿನ ಆಯಾತಗಳು ಮತ್ತೊಮ್ಮೆ ಯುದ್ಧದ ಸಮಾಪ್ತಿಯ ವೇಳೆಗೆ ಈ ಅನುಪಾತವನ್ನು ೧೦೦ ಸ್ಟಾರ್ ಪಗೋಡಾಗಳಿಗೆ ೪೦೦ ಆರ್ಕಾಟ್ ರೂಪಾಯಿಗಳಿಗೆ ತಂದು ಪರಿಸ್ಥಿತಿಯನ್ನು ಮತ್ತಷ್ಟು ಬಿಗಡಾಯಿಸುವಂತೆ ಮಾಡಿತು. ಯುದ್ಧದ ಸಮಾಪ್ತಿಯ ನಂತರ ಮದರಾಸು ಸರ್ಕಾರವು ರೂಪಾಯಿ ಮತ್ತು ಪಗೋಡಾಗಳ ನಡುವೆ ಸಮಾನಾಂತರ ಚಲಾವಣೆಯನ್ನು ತರಲು ಮತ್ತೊಂದು ಪ್ರಯತ್ನ ಮಾಡಿತು. ಆದರೆ ೧೦೦ಕ್ಕೆ ೪೦೦ ಮಾರುಕಟ್ಟೆಯ ಅನುಪಾತವನ್ನು ಅಧಿಕೃತ ಅನುಪಾತವನ್ನಾಗಿ ಮಾಡುವ ಬದಲು ಆ ಪ್ರಾಂತ್ಯದಲ್ಲಿ ಅಂದು ಹೆಚ್ಚಾಗುತ್ತಿದ್ದ ಚಿನ್ನದ ಆಯಾತದ ಮೂಲಕ ಸರ್ಕಾರವು ಮಾರುಕಟ್ಟೆಯಲ್ಲಿನ ಅನುಪಾತವು ಶೀಘ್ರದಲ್ಲಿಯೇ ೧೭೯೦ರಲ್ಲಿ ಕಾನೂನಿನ ಮೇರೆಗೆ ಜಾರಿಯಲ್ಲಿ ತಂದ ಅನುಪಾತದ ಮಟ್ಟಕ್ಕೆ ಏರಬಹುದೆಂಬ ಆಶೆಯನ್ನು ತಾಳಿತು. ಈ ಹಿನ್ನೆಲೆಯಲ್ಲಿ ಸರ್ಕಾರವು ೧೭೯೦ರಲ್ಲಿ ಮೊದಲು ೧೦೦ಕ್ಕೆ ೩೬೫ ಅನುಪಾತವನ್ನು  ನಿಶ್ಚಯಿಸಿ ಪರಿಣಾಮವನ್ನು ನಿರೀಕ್ಷಿಸಲು ನಿರ್ಧರಿಸಿತು. ಆದರೆ ಅದರಿಂದ ಪಗೋಡದ ಅಪಮೌಲ್ಯವಾದದ್ದರಿಂದ ಪರಿಣಾಮವು ಇಚ್ಛಿತ ಪರಿಣಾಮದಿಂದ ಭಿನ್ನವಾಗುವುದು ಅನಿವಾರ್ಯವಾಗಿತ್ತು. ಆದರೆ ಈ ತಪ್ಪನ್ನು ಸರಿಪಡಿಸುವ ಬದಲು ಸರ್ಕಾರವು ೧೭೯೭ರಲ್ಲಿ ಅನುಪಾತವನ್ನು ೧೦೦ಕ್ಕೆ ೩೫೦ರಂತೆ ಏರಿಸಿ ತಪ್ಪನ್ನು ಮತ್ತಷ್ಟು ಉಲ್ಬಣಗೊಳಿಸಿತು. ತತ್ಪರಿಣಾಮವಾಗಿ ಪಗೋಡಾ ಸಂಪೂರ್ಣವಾಗಿ ಚಲಾವಣೆಯಲ್ಲಿ ಇಲ್ಲದಂತಾಯಿತು ಮತ್ತು ದ್ವಿಲೋಹ ನಾಣ್ಯಪದ್ಧತಿಯನ್ನು ಪ್ರಾರಂಭಿಸುವ ಕೊನೆಯ ಪ್ರಯತ್ನವು ಶೋಚನೀಯವಾಗಿ ವಿಫಲವಾಯಿತು.

ಮುಂಬೈ ಸರ್ಕಾರಕ್ಕೆ ದ್ವಿಲೋಹ ನಾಣ್ಯಪದ್ಧತಿಯ ಬಗ್ಗೆ ಒಳ್ಳೆಯ ತಿಳಿವಳಿಕೆಯಿದ್ದರೂ, ಅದು ವ್ಯವಸ್ಥೆಯ ವ್ಯಾವಹಾರಿಕ ತೊಂದರೆಗಳನ್ನು ಪರಿಹರಿಸುವಲ್ಲಿ ಸಹಾಯಕವಾಗಲಿಲ್ಲ. ಈ ಪ್ರಾಂತದಲ್ಲಿ[೧] ದ್ವಿಲೋಹ ನಾಣ್ಯಪದ್ಧತಿಯು ಪ್ರಾರಂಭವಾದ ಪ್ರಥಮ ಸಂದರ್ಭದಲ್ಲಿ ಮೊಹರು ಮತ್ತು ರೂಪಾಯಿಗಳು ೧ಕ್ಕೆ ೧೫.೭೦ರ ಅನುಪಾತದ ಮೌಲ್ಯವನ್ನು ಹೊಂದಿದ್ದವು. ಆದರೆ ಈ ಅನುಪಾತದಲ್ಲಿ ಮೊಹರು ಅಧಿಕ ಬೆಲೆಯನ್ನು ಹೊಂದಿದ್ದು ಕಂಡುಬಂತು ಮತ್ತು ತದನುಸಾರವಾಗಿ ಆಗಸ್ಟ್ ೧೭೭೪ ರಲ್ಲಿ ವೆನೆಶಿಯನ್ ನಾಣ್ಯದ ಲೋಹಾಂಶ ಮತ್ತು ಬೆಳ್ಳಿಯ ರೂಪಾಯಿಯ ತೂಕವಿರುವ ಚಿನ್ನದ ಮೊಹರುಗಳನ್ನು ಮುದ್ರಿಸಲು ಟಂಕಸಾಲೆಯ ನಿರ್ದೇಶಕನಿಗೆ ನಿರ್ದೇಶಿಸಲಾಯಿತು. ಈ ಬದಲಾವಣೆಯಿಂದ ಅಂದು ಸಾಮಾನ್ಯವಾಗಿ ಬಳಕೆಯಲ್ಲಿದ್ದ ೧:೧೫ರ ಮಾರುಕಟ್ಟೆ ಅನುಪಾತಕ್ಕೆ ನಿಖರವಾಗಿ ಅಲ್ಲದಿದ್ದರೂ ಅದಕ್ಕೆ ಅತಿ ಸಮೀಪವಾದ ೧:೧೪.೮೩ರ ಅಧಿಕೃತ ಅನುಪಾತವು ಜಾರಿಗೆ ಬಂದಿತು ಮತ್ತು ದುರದೃಷ್ಟದ ಸಂಗತಿ ಸಂಭವಿಸದೆ

---

೧. ಮುಂಬೈ ಪ್ರಾಂತ್ಯದಲ್ಲಿ ನಾಣ್ಯ ತಯಾರಿಕೆಯ ಇತಿಹಾಸವನ್ನು ಕುರಿತು ಡಾ. ಸ್ಕಾಟ್ ಅವರ ವರದಿ. ಸಹಬಂಧದ ಕೂಡ, ಪಬ್ಲಿಕ್ ಕನ್ಸಲ್ಟೇಶನ್ಸ್ (ಮುಂಬೈ, ಜನವರಿ ೧೭, ೧೮೦೧)

ಇದ್ದಿದ್ದರೆ ದ್ವಿಲೋಹ ನಾಣ್ಯಪದ್ದತಿಯು ಮುಂಬೈ ಪ್ರಾಂತ್ಯದಲ್ಲಿ ಉಳಿದೆರಡು ಪ್ರಾಂತ್ಯಗಳಿಗಿಂತ ಹೆಚ್ಚಿನ ಯಶಸ್ಸನ್ನು ಹೊಂದಬಹುದಿತ್ತು. ಆದರೆ ಸೂರತ್ ನವಾಬನ ಅಪ್ರಾಮಾಣಿಕತೆಯಿಂದ ಪರಿಸ್ಥಿತಿಯು ಸಂಪೂರ್ಣವಾಗಿ ಬದಲಾದದ್ದರಿಂದ ಅದು ಆಗಲಿಲ್ಲ. ಈತನು ಮುಂಬೈ ರೂಪಾಯಿಗಳಷ್ಟೇ ತೂಕ ಮತ್ತು ಲೋಹಾಂಶಗಳನ್ನು ಹೊಂದಿದ್ದ ತನ್ನ ರೂಪಾಯಿಗಳನ್ನು ಶೇಕಡಾ ೧೦, ೧೨ ಅಷ್ಟೇ ಅಲ್ಲ ೧೫ರಷ್ಟು ಅಪಮೌಲ್ಯಗೊಳಿಸಿದನು. ನವಾಬನ (ಅಥವಾ ಸೂರತ್) ರೂಪಾಯಿಗಳು ಒಪ್ಪಂದದ ಮೇರೆಗೆ ಮುಂಬೈ ರೂಪಾಯಿಗಳ ಸಮಾನತೆಯನ್ನು ಹೊಂದಿ ಕಂಪನಿಯ ಪ್ರದೇಶಗಳಲ್ಲಿ ಚಲಾವಣೆಯಲ್ಲಿ ಬರಲು ಅವಕಾಶವಾಗದಿದ್ದಲ್ಲಿ ಈ ಅಪಮೌಲ್ಯವು ಮುಂಬೈ ಪ್ರಾಂತದಲ್ಲಿ ಬಳಕೆಯಲ್ಲಿದ್ದ ದ್ವಿಲೋಹ ನಾಣ್ಯಪದ್ಧತಿಯ ಮೇಲೆ ಯಾವುದೇ ಕ್ಷೋಭೆಯನ್ನೂ ಉಂಟು ಮಾಡುತ್ತಿದ್ದಿಲ್ಲ. ಸೂರತ್ ರೂಪಾಯಿಗಳು ಅಧಿಕೃತ ಹಣವಾಗಿದ್ದರಿಂದ ಅವುಗಳು ಒಮ್ಮೆ ಅಪಮೌಲ್ಯ ಹೊಂದಿದ ಮೇಲೆ ಮುಂಬೈ ರೂಪಾಯಿಗಳನ್ನಷ್ಟೇ ಅಲ್ಲದೇ ಮೊಹರುಗಳನ್ನೂ ಚಲಾವಣೆಯಿಂದ ಹೊರಗೆ ಹಾಕಿದವು. ಏಕೆಂದರೆ ಅಪಮೌಲ್ಯ ಹೊಂದಿದ ಸೂರತ್ ರೂಪಾಯಿಗಳಿಗೆ ಹೋಲಿಸಿದಾಗ ಅನುಪಾತವು ಚಿನ್ನಕ್ಕೆ ಪ್ರತಿಕೂಲವಾಯಿತು ಮತ್ತು ದ್ವಿಲೋಹ ಪದ್ಧತಿಯ ಯಶಸ್ಸಿಗಿದ್ದ ಒಂದು ಅವಕಾಶವು ಕೈತಪ್ಪಿಹೋಯಿತು. ಮುಂಬೈ ಸರ್ಕಾರವು ತನ್ನ ಟಂಕಸಾಲೆಗಳಲ್ಲಿ ಸೂರತ್ ರೂಪಾಯಿಗಳ ಮುದ್ರಣಕ್ಕೆ ಪರವಾನಗಿ ಕೊಟ್ಟಾಗ ಮೊಹರು ಮತ್ತು ರೂಪಾಯಿಗಳ ನಡುವಣ ದ್ವಿಲೋಹ ಪ್ರಮಾಣವನ್ನು ನಿರ್ಧರಿಸುವ ಪ್ರಶ್ನೆ ಮತ್ತೆ ಉದ್ಭವಿಸಿತು. ೧೭೭೪ರ ರೆಗ್ಯುಲೇಶನ್ ಪ್ರಕಾರ ಚಿನ್ನದ ಮೊಹರುಗಳನ್ನು ಹೊರಡಿಸುವುದನ್ನು ಮುಂದುವರೆಸುವ ಪ್ರಶ್ನೆಯೇ ಇರಲಿಲ್ಲ. ಮುಂಬೈಯ ಒಂದು ಮೊಹರು ೧೭೭.೩೮ ಗ್ರಾಂ ಶುದ್ಧ ಚಿನ್ನವನ್ನು ಒಳಗೊಂಡಿತ್ತು ಮತ್ತು ೧೮೦೦ರ ೧೫ ಸೂರತ್ ರೂಪಾಯಿಗಳು ೨೪೭.೧೧ ಗ್ರಾಂ ಬೆಳ್ಳಿಯನ್ನು ಹೊಂದಿದ್ದವು. ಈ ರೆಗ್ಯುಲೇಶನ್‌ನ ಪ್ರಕಾರ ಬಂಗಾರದ ಜೊತೆಗೆ ಬೆಳ್ಳಿಯ ಪ್ರಮಾಣವು ೨೪೭.೧೧/೧೭೭.೩೮ ಅಂದರೆ ೧ಕ್ಕೆ ೧೩.೬ ರಷ್ಟಾಗುತ್ತಿತ್ತು. ಇಲ್ಲಿ ಮೊಹರು ಬಹಳಷ್ಟು ಅಪಮೌಲ್ಯಕ್ಕೆ ಒಳಗಾಗುತ್ತಿತ್ತು. ಆದ್ದರಿಂದ ೧ಕ್ಕೆ ೧೪.೯ರ ಅನುಪಾತವನ್ನು ಜಾರಿಗೆ ತರಲು ಸೂರತ್ ರೂಪಾಯಿಗೆ ತಕ್ಕದಾಗುವ ಹಾಗೆ ಮೊಹರಿನ ಪ್ರಮಾಣವನ್ನು ಬದಲಿಸಲು ನಿರ್ಣಯಿಸಲಾಯಿತು. ಆದರೆ ಮಾರುಕಟ್ಟೆ ಅನುಪಾತವು ೧ಕ್ಕೆ ೧೫ರ ಕಡೆಗೆ ಒಲಿದದ್ದರಿಂದ ಈ ಪ್ರಯೋಗವು ಪೂರ್ಣವಾಗಿ ಯಶಸ್ವಿಯಾಗಲಿಲ್ಲ.

ತಮ್ಮ ಅನುಭವದ ಮೇಲೆ ಈಸ್ಟ್ ಇಂಡಿಯಾ ಕಂಪನಿಯ ಕೋರ್ಟ್ ಆಫ್ ಡೈರೆಕ್ಟರ್ಸ್ ಭವಿಷ್ಯದ ಭಾರತೀಯ ನಾಣ್ಯ ಪದ್ಧತಿಯ ತಳಹದಿಯಾಗಿ ಏಕಲೋಹ ನಾಣ್ಯ ಪ್ರಮಿತಿಯನ್ನು ನಿರ್ಧರಿಸಿ ಒಳ್ಳೆಯದನ್ನೇ ಮಾಡಿತು. ವಿವಿಧ ಹಣದ ಘಟಕಗಳು ಪರಸ್ಪರವಾಗಿ ಒಂದು ನಿಶ್ಚಿತ ಮೌಲ್ಯದ ಸಂಬಂಧವನ್ನು ಹೊಂದಿರತಕ್ಕದ್ದು ಎಂಬುದು ಎಲ್ಲ ನಾಣ್ಯ ನಿಯಮಗಳ ಪ್ರಮುಖ ಉದ್ದೇಶವಾಗಿರುತ್ತದೆ. ಮೌಲ್ಯದ ಈ ನಿಗದಿಯಿಲ್ಲದಿದ್ದರೆ ನಾಣ್ಯದ ವ್ಯವಸ್ಥೆಯು ಗೊಂದಲಮಯವಾಗಿರುವುದು ಮತ್ತು ಆ ನಿಗದಿಯಿಂದಾಗುವ ತಾತ್ಕಾಲಿಕ ಕ್ಷೋಭೆಯ ವಿರುದ್ಧ ಎಲ್ಲಾ ಮುನ್ನೆಚ್ಚರಿಕೆ ಕ್ರಮಗಳೂ ಅತ್ಯಗತ್ಯವಾಗುತ್ತವೆ. ಆರ್ಥಿಕ ಕ್ಷೇತ್ರದಲ್ಲಿ ಒಂದು ಸುವ್ಯವಸ್ಥೆಯನ್ನು ಕಾಪಾಡಿಕೊಂಡು ಹೋಗಲು, ಚಲಾವಣೆಯಲ್ಲಿರುವ ಹಣದ ವಿವಿಧ ಘಟಕಗಳ ಮೌಲ್ಯಗಳ ಸಂಬಂಧವನ್ನು ನಿಗದಿಗೊಳಿಸುವುದು ಬಹು ಮುಖ್ಯ ಪಾತ್ರವಹಿಸುತ್ತದೆ. ಈ ಕಾರಣದಿಂದ, ನಾಣ್ಯವನ್ನು ಭದ್ರ ತಳಹದಿಯ ಮೇಲೆ ನಿಲ್ಲಿಸಲು ಪ್ರಯತ್ನಿಸುತ್ತಿದ್ದ ಕೋರ್ಟ್ ಆಫ್ ಡೈರೆಕ್ಟರ್ಸ್ ಅವರು ಈ ವಿಷಯಕ್ಕೆ ಕೊಟ್ಟ ಪ್ರಾಮುಖ್ಯವು ಸಹಜವಾಗಿಯೇ ಇತ್ತು. ದ್ವಿಲೋಹ ಪ್ರಮಿತಿಗಿಂತ ಏಕಲೋಹ ಪ್ರಮಿತಿಯು ಇದನ್ನು ಪರಿಣಾಮಕಾರಿಯಾಗಿ ಆಗಮಾಡಿಸುತ್ತಿದ್ದುದರಿಂದ, ಕೋರ್ಟ್ ಆಫ್ ಡೈರೆಕ್ಟರ್ಸ್ ಅವರ ಈ

ಆಯ್ಕೆ ವಿವೇಚನಾರಹಿತವಾಗಿತ್ತು ಎಂದು ಹೇಳುವಂತಿರಲಿಲ್ಲ. ಏಕಲೋಹ ಪ್ರಮಿತಿಯ ವ್ಯವಸ್ಥೆಯಲ್ಲಿ ಇದು ಸಹಜವಾಗಿಯೇ ಸಿದ್ಧಿಸುತ್ತಿತ್ತು ಆದರೆ ದ್ವಿಲೋಹ ಪ್ರಮಿತಿಯ ವ್ಯವಸ್ಥೆಯಲ್ಲಿ ಇದನ್ನು ಪ್ರಯತ್ನಪೂರ್ವಕವಾಗಿ ಸಾಧಿಸಬೇಕಿತ್ತು.

ಕೋರ್ಟ್ ಆಫ್ ಡೈರೆಕ್ಟರ್ಸ್‌ನ ಈ ಶಿಫಾರಸ್ಸುಗಳನ್ನು ಯಾವಾಗ ಮತ್ತು ಹೇಗೆ ಜಾರಿಗೆ ತರಬೇಕು ಎನ್ನುವುದನ್ನು ವಿವಿಧ ಸರ್ಕಾರಗಳ ವಿವೇಚನೆಗೆ ಬಿಡಲಾಗಿತ್ತು. ಆದರೆ ಈ ಶಿಫಾರಸುಗಳ ಅನುಸಾರ ಕ್ರಮಗಳನ್ನು ತೆಗೆದುಕೊಳ್ಳುವುದಕ್ಕೆ ಸಾಕಷ್ಟು ಸಮಯ ಹಿಡಿಯಿತು. ಚಲಾವಣೆಯಲ್ಲಿ ನಾಣ್ಯಗಳ ಏಕರೂಪತೆಯನ್ನು ತರುವ ಈ ಶಿಫಾರಸುಗಳ ಉದ್ದೇಶವನ್ನು ಅರಿತ ನಂತರವೇ, ವಿವಿಧ ಸರ್ಕಾರಗಳು ಇತ್ತ ತಮ್ಮ ಗಮನವನ್ನು ಕೇಂದ್ರೀಕರಿಸಿದವು.

ಕೋರ್ಟ್ ಆಫ್ ಡೈರೆಕ್ಟರ್ಸ್ ಪ್ರಸ್ತಾವಿಸಿದ ವಿವಿಧ ನಾಣ್ಯಗಳ ನಡುವೆ ಏಕರೂಪತೆಯನ್ನು ಸಾಧಿಸುವ ಕೆಲಸವು ಮೊದಲು ಮದರಾಸು ಪ್ರಾಂತ್ಯದಲ್ಲಿ ನೆರವೇರಿತು. ಜನವರಿ ೭, ೧೮೧೮ರಂದು ಮದರಾಸು ಸರ್ಕಾರವು ಘೋಷಣೆಯೊಂದನ್ನು[೧] ಹೊರಡಿಸಿತು. ಅದರ ಮುಖಾಂತರ ಹಳೆಯ ನಾಣ್ಯ ಘಟಕಗಳಾದ ಅರ್ಕಾಟ್ ರೂಪಾಯಿ ಮತ್ತು ಸ್ಟಾರ್ ಪಗೋಡಾಗಳ ಸ್ಥಾನವನ್ನು ಪ್ರತಿಯೊಂದು ೧೮೦ ಗ್ರಾಂ ಟ್ರಾಯ್ ತೂಕ ಮತ್ತು ೧೬೫ ಗ್ರಾಂ ಶುದ್ಧ ಲೋಹ ಹೊಂದಿದ ಹೊಸ ಘಟಕಗಳಾದ ಚಿನ್ನದ ರೂಪಾಯಿ ಮತ್ತು ಬೆಳ್ಳಿಯ ರೂಪಾಯಿಗಳು ಆಕ್ರಮಿಸಿದವು. ಮದರಾಸು ಸರ್ಕಾರದ ಈ ಕ್ರಮವನ್ನು ಆರುವರ್ಷಗಳ ತರುವಾಯ ಮುಂಬೈ ಸರ್ಕಾರವು ಅನುಸರಿಸಿತು. ಅದು ೧೮೨೪ರ ಅಕ್ಟೋಬರ್ ೬ರಂದು ಹೊರಡಿಸಿದ ಘೋಷಣೆಯಲ್ಲಿ[೨] ಮದರಾಸಿನಲ್ಲಿದ್ದ ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳು ಮಾತ್ರ ತನ್ನ ಪ್ರಾಂತ್ಯದಲ್ಲಿ ಚಲಾವಣೆಯಲ್ಲಿರತಕ್ಕದ್ದು ಎಂದು ಹೇಳಿತು. ಬಂಗಾಲಕ್ಕೆ ನಿಭಾಯಿಸಬೇಕಾದ ಅದರದೇ ಆದ ಗಂಭೀರ ಸಮಸ್ಯೆಗಳು ಇದ್ದವು. ಅಲ್ಲಿ ಕೋರ್ಟ್ ಸೂಚಿಸಿದ ಪ್ರಮಾಣಕ್ಕೆ ಇಳಿಸಬೇಕಾದ ಮೂರು ವಿವಿಧ ಪ್ರಮುಖ ಬೆಳ್ಳಿಯ ನಾಣ್ಯದ ಘಟಕಗಳು ಚಲಾವಣೆಯಲ್ಲಿದ್ದವು. ಅದು ಚಲಾವಣೆಯಿಂದ ತೆಗೆದುಹಾಕುವ ಮತ್ತು ನಾಣ್ಯಗಳನ್ನು ಬದಲಾಯಿಸುವ ಪದ್ಧತಿಯ ಮುಖಾಂತರ ಪುನಸ್ಸಂಘಟನೆಯ ಕಾರ್ಯವನ್ನು ಪ್ರಾರಂಭಿಸಿತು. ೧೮೧೯ ರಲ್ಲಿ ಅದು ಬನಾರಸ್ ರೂಪಾಯಿಯನ್ನು ಹೊರಡಿಸುವುದನ್ನು ನಿಲ್ಲಿಸಿ[೩] ಅದರ ಸ್ಥಳದಲ್ಲಿ ೧೮೦.೨೩೪ ಗ್ರಾಂ ಟ್ರಾಯ್ ತೂಕ ಮತ್ತು ೧೩೫.೨೧೫ ಗ್ರಾಂ ಟ್ರಾಯ್ ಲೋಹಾಂಶಗಳನ್ನು ಹೊಂದಿದ ಫರೂಖಾಬಾದ್ ರೂಪಾಯಿಯನ್ನು ಚಲಾವಣೆಗೆ ತಂದಿತು. ತೋರಿಕೆಗೆ ಇದು ಸರಿಯಾದ ಮಾರ್ಗದಿಂದ ದೂರವಿದ್ದ ಕ್ರಮವಾಗಿತ್ತು. ಆದರೆ ಇಲ್ಲಿಯೂ ಕೂಡ ಲೋಹಾಂಶಕ್ಕೆ ಸಂಬಂಧಿಸಿದಂತೆ ಏಕರೂಪತೆಯ ಉದ್ದೇಶ ಕಾಣುತ್ತಿತ್ತು. ಏಕೆಂದರೆ ಅದು ಹೊಸ ಮದರಾಸು ಮತ್ತು ಮುಂಬೈಗಳ ಹೊಸ ರೂಪಾಯಿಗಳ ಹಾಗೆ ಫರೂಖಾಬಾದ್ ರೂಪಾಯಿಯಲ್ಲಿ ಹನ್ನೆರಡರ ಹನ್ನೊಂದು ಭಾಗವನ್ನು ಶುದ್ಧ ಮಾಡಿತು. ಮುಂದಿನ ಪಟ್ಟಿಯಲ್ಲಿ ಕಾಣುವಂತೆ, ಬನಾರಸ್ ರೂಪಾಯಿಯ ಚಲಾವಣೆಯನ್ನು ನಿಲ್ಲಿಸಿದ ಮೇಲೆ ನಂತರದ ಕೆಲಸವು ಫರೂಕಾಬಾದ್ ರೂಪಾಯಿಯ ಪ್ರಮಾಣವನ್ನು ಮದರಾಸು ಮತ್ತು ಮುಂಬೈಗಳ ರೂಪಾಯಿಗಳ

---

೧. ಹೋಲಿಸಿರಿ : ಫೋರ್ಟ್ ಸೇಯಿಂಟ್ ಜಾರ್ಜ್ ಪಬ್ಲಿಕ್ ಡಿಪಾರ್ಟ್‌ಮೆಂಟ್ ಕನ್ಸಲ್ಟೇಶನ್ಸ್ ಸಂ. ೧೯, ದಿನಾಂಕ ಜನವರಿ ೭, ೧೮೧೮

೨. ಹೋಲಿಸಿರಿ : ಬಾಂಬೆ ಫೈನ್ಯಾನ್ಷಿಯಲ್ ಕನ್ಸಲ್ಟೇಶನ್ಸ್, ದಿನಾಂಕ ಅಕ್ಟೋಬರ್ ೬, ೧೮೨೪

೩. XI ೧೮೧೯ರ ಬೆಂಗಾಲ್ ರೆಗ್ಯುಲೇಶನ್

## ಪಟ್ಟಿ III

## ೧೯೩೩ರ ಅಂತ್ಯಕ್ಕೆ ನಾಣ್ಯ ತಯಾರಿಕೆಯಲ್ಲಿನ ಏಕರೂಪತೆ

| ಹೊರಡಿಸಿದ ಸರ್ಕಾರ | ಬೆಳ್ಳಿಯ ನಾಣ್ಯಗಳು | | | ಚಿನ್ನದ ನಾಣ್ಯಗಳು | | | ಅಧಿಕೃತ ಅನುಪಾತ |
|---|---|---|---|---|---|---|---|
| | ವರ್ಗ | ತೂಕ | ಲೋಹಾಂಶ | ವರ್ಗ | ತೂಕ | ಲೋಹಾಂಶ | |
| ಬಂಗಾಲ | ಸಿಕ್ಕಾ ರೂ. | ೧೯೨ | ೧೭೬ ಅಥವಾ ೧೧/೧೨ | ಮೊಹರು | ೨೦೪.೭೧೦ | ೧೮೭.೬೫೧ | ೧೫ಕ್ಕೆ ೧ |
| | ಫರೂಖಾಬಾದ್ ರೂ. | ೧೮೦ | ೧೬೫ ಅಥವಾ ೧೧/೧೨ | | – | – | – |
| ಮುಂಬೈ | ಬೆಳ್ಳಿಯ ರೂಪಾಯಿ | ೧೮೦ | ೧೬೫ ಅಥವಾ ೧೧/೧೨ | ಚಿನ್ನದ ರೂಪಾಯಿ | ೧೮೦ | ೧೬೫ ಅಥವಾ | ೧೫ಕ್ಕೆ ೧ |
| ಮದರಾಸು | ಬೆಳ್ಳಿಯ ರೂಪಾಯಿ | ೧೮೦ | ೧೬೫ ಅಥವಾ ೧೧/೧೨ | ಚಿನ್ನದ ರೂಪಾಯಿ | ೧೮೦ | ೧೬೫ ಅಥವಾ ೧೧/೧೨ | ೧೫ಕ್ಕೆ ೧ |

ಪ್ರಮಾಣಕ್ಕೆ ತರುವುದಾಗಿತ್ತು.

ಈ ಪ್ರಕಾರ ಮುಂದಿನ ಪಟ್ಟಿಯಲ್ಲಿ ಕಂಡುಬರುವಂತೆ ದ್ವಿಲೋಹ ನಾಣ್ಯಪದ್ಧತಿಯನ್ನು ರದ್ದುಗೊಳಿಸದೇ ಕೋರ್ಟ್ ಸೂಚಿಸಿದ ಆದರ್ಶ ಘಟಕವನ್ನು ಸಾಧಿಸುವಲ್ಲಿ ಸಾಕಷ್ಟು ಕ್ರಮಗಳನ್ನು ತೆಗೆದುಕೊಳ್ಳಲಾಯಿತು.

೧೮೩೩ರ ಅಂತ್ಯದಲ್ಲಿದ್ದ ಪರಿಸ್ಥಿತಿಯ ಪರಿಶೀಲನೆಯನ್ನು ಮಾಡಿದರೆ, ಬಂಗಾಳದ ಸಿಕ್ಕಾ ರೂಪಾಯಿ ಹಾಗೂ ಚಿನ್ನದ ಮೊಹರುಗಳನ್ನು ಹೊರತುಪಡಿಸಿದರೆ, ನಿರ್ದೇಶಕರ ಯೋಜನೆಯ ಈ ಭಾಗ ಯಶಸ್ವಿಯಾಗಿತ್ತು ಎಂದೇ ಹೇಳಬಹುದು. ಸಿಕ್ಕಾ ರೂಪಾಯಿಯನ್ನು ನಿಲ್ಲಿಸುವ ಮತ್ತು ಚಿನ್ನವನ್ನು ಅನಾಣ್ಯೀಕರಣ ಮಾಡುವ ಕೆಲಸಗಳನ್ನು ಬಿಟ್ಟರೆ ಅದನ್ನು ಪೂರ್ತಿಗೊಳಿಸಲು ಮತ್ತೇನೂ ಉಳಿಯಲಿಲ್ಲ. ಆದಾಗ್ಯೂ ಈ ಸಮಯದಲ್ಲಿ ಕೋರ್ಟ್ ಆಫ್ ಡೈರೆಕ್ಟರ್ಸ್ ಮತ್ತು ಭಾರತದಲ್ಲಿಯ ಈ ಮೂರು ಸರ್ಕಾರಗಳ ನಡುವೆ ಸಂಘರ್ಷ ಉಂಟಾಯಿತು. ಚಿನ್ನದ ಅನಾಣ್ಯೀಕರಣಕ್ಕೆ ಸಾಕಷ್ಟು ಒಲವು ಕಂಡುಬರಲಿಲ್ಲ. ಕೋರ್ಟಿನ ತೀರ್ಪಿನಂತೆ ತನ್ನ ನಾಣ್ಯದ ಸುಧಾರಣೆಯನ್ನು ಪ್ರಪ್ರಥಮವಾಗಿ ಕೈಗೊಂಡ ಮದರಾಸು ಸರ್ಕಾರವು ರೂಪಾಯಿ ನಾಣ್ಯದ ತಯಾರಿಕೆಯ ಜೊತೆಗೆ ಚಿನ್ನದ ನಾಣ್ಯಗಳ ತಯಾರಿಕೆಯನ್ನು ಮುಂದುವರಿಸಲು ಆಗ್ರಹಪಡಿಸಿತಲ್ಲದೆ[೧] ಕೋರ್ಟಿನಿಂದ ಮತ್ತೆ ಮತ್ತೆ ಬರುತ್ತಿದ್ದ ಆಕ್ಷೇಪಣೆಗಳಿದ್ದಾಗ್ಯೂ[೨] ತನ್ನ ಪ್ರದೇಶಗಳಲ್ಲಿ ಬಳಕೆಯಲ್ಲಿದ್ದ ನಿಗದಿತ ಅನುಪಾತದಲ್ಲಿಯ ದ್ವಿಲೋಹ ನಾಣ್ಯ ಪದ್ಧತಿಯನ್ನು ಕೈಬಿಡಲು ಪ್ರಬಲವಾಗಿ ನಿರಾಕರಿಸಿತು.[೩] ಬಂಗಾಲ ಸರ್ಕಾರವು ಸಮಾನ ದೃಢ ಸಂಕಲ್ಪದಿಂದ ದ್ವಿಲೋಹ ನಾಣ್ಯಪದ್ಧತಿಗೆ ಅಂಟಿಕೊಂಡಿತು. ಚಿನ್ನದ ಮೊಹರಿನ ಅನಾಣ್ಯೀಕರಣ ಮಾಡುವುದರ ಬದಲು ೧೮೯೯ರಲ್ಲಿ ಮದರಾಸು ಸ್ವೀಕರಿಸಿದ ಅನುಪಾತದ ಆಧಾರದ ಮೇಲೆ ದ್ವಿಲೋಹ ನಾಣ್ಯಪದ್ಧತಿಯನ್ನು ಪುನಃ ಸ್ಥಾಪಿಸಲು ಮೊಹರಿನಲ್ಲಿದ್ದ ಶುದ್ಧ ಚಿನ್ನವನ್ನು[೪] ೧೮೯.೪೦೩೭ ಟ್ರಾಯ್ ಗ್ರಾಂಗಳಿಂದ ೧೮೭.೬೫೧ ಟ್ರಾಯ್ ಗ್ರಾಂಗಳಿಗೆ ಇಳಿಸಿ ಅದರ ಪ್ರಮಿತಿಯನ್ನು[೫] ಬದಲಾಯಿಸುವ ಕ್ರಮಗಳನ್ನು ತೆಗೆದುಕೊಂಡಿತು. ದ್ವಿಲೋಹ ನಾಣ್ಯಪದ್ಧತಿಗೆ ಅದು ಎಷ್ಟೊಂದು ಬದ್ಧವಾಗಿತ್ತೆಂದರೆ ಅದು ೧೮೩೩ರಲ್ಲಿ ಬಹುಶಃ ರೂಪಾಯಿಯ[೬] ಸಂಗಡ ಮೊಹರಿನ

---

೧. ಕೋರ್ಟ್ ಆಫ್ ಡೈರೆಕ್ಟರ್ಸ್ ಅವರು ರೂಪಾಯಿಗೆ ಜೋಡಿಸದಿದ್ದ ಚಿನ್ನದ ನಾಣ್ಯ ತಯಾರಿಕೆ ಮತ್ತು ಚಲಾವಣೆಗೆ ಪರವಾನಗಿ ಕೊಡಲು ಉತ್ಸುಕರಿದ್ದರು. ಏಕೆಂದರೆ ಅವರು ತಮ್ಮ ಪತ್ರದಲ್ಲಿ ಕೆಳಗಿನಂತೆ ಅಭಿಪ್ರಾಯ ವ್ಯಕ್ತಪಡಿಸಿದ್ದರು: "೧೬ ಬೆಳ್ಳಿಯ ರೂಪಾಯಿ ಪ್ರಮುಖ ಮೌಲ್ಯಮಾಪನ ಮತ್ತು ಎಣಿಕೆಯ ಹಣವಾಗಿರುವ ಔಚಿತ್ಯವು ನಮಗೆ ತುಂಬಾ ಸಮಾಧಾನ ತಂದಿದೆ. ಆದಾಗ್ಯೂ ಖಂಡಿತವಾಗಿ ನಾವು ಸಾಮಾನ್ಯ ಬಳಕೆಗೆ ಉಚಿತವೆನಿಸಿದ ತತ್ವದ ಮೇಲೆ ಚಿನ್ನದ ನಾಣ್ಯವನ್ನು ಸ್ಥಾಪಿಸಲು ಇಚ್ಛಿಸುತ್ತೇವೆಯೇ ವಿನಃ ಚಿನ್ನದ ಚಲಾವಣೆಯನ್ನು ನಿಲ್ಲಿಸಲು ಅಲ್ಲ. ನಮ್ಮ ಅಭಿಪ್ರಾಯದಲ್ಲಿ ಈ ನಾಣ್ಯವು ಬಂಗಾರದ ರೂಪಾಯಿಯೆಂದು ಕರೆಯಲ್ಪಡತಕ್ಕದ್ದು ಮತ್ತು ಅದನ್ನು ಬೆಳ್ಳಿಯ ರೂಪಾಯಿಯ ಹಾಗೆ ಅದೇ ಪ್ರಮಾಣದ್ದನ್ನಾಗಿ ಮಾಡಬೇಕು".

೨. ಹೋಲಿಸಿರಿ : ದಿನಾಂಕ ಮಾರ್ಚ್ ೬, ೧೮೧೦, ಜುಲೈ ೧೦, ೯೧೧೧ ಮತ್ತು ಜೂನ್ ೧೨, ೧೮೧೬ ಇವುಗಳ ದಿ ಪಬ್ಲಿಕ್ ಡಿಸ್‌ಪ್ಯಾಚ್ ಟು ಮದ್ರಾಸ್.

೩. ಹೋಲಿಸಿರಿ : ಆಗಸ್ಟ್ ೧೯, ೧೮೧೭ ಫೋರ್ಟ್‌ಸೆಂಟ್ ಜಾರ್ಜ್ ಪಬ್ಲಿಕ್ ಕನ್ಸಲ್ಟೇಶನ್ಸ್. ವಿಶೇಷವಾಗಿ ಆಮೇಲೆ ಸೇರಿಸಿದ ಮಹಾಲೇಖಾಪಾಲರ ಪತ್ರ.

೪. ಹೇಗಿದ್ದರೂ ಅದು ಅದರ ತೂಕವನ್ನು ೧೯೦.೮೯೫ ರಿಂದ ೨೦೪.೭೧೦ ಟ್ರಾಯ್ ಗ್ರಾಂಗಳಿಗೆ ಏರಿಸಿತು.

೫. ೧೮೧೮ ರ ಪ್ರಿಯಾಂಬಲ್ ಟು ದಿ ಬೆಂಗಾಲ್ ರೆಗ್ಯುಲೇಶನ್ XIV

೬. ಈ ಬದಲಾವಣೆಯು ಸಿಕ್ಕಾ ರೂಪಾಯಿಯನ್ನು ಹನ್ನೆರಡರ ಹನ್ನೊಂದು ಭಾಗ ಶುದ್ಧವಿಡುವ ಉದ್ದೇಶವನ್ನು ಹೊಂದಿರಬಹುದು.

ಕಾನೂನು ಮತ್ತು ಮಾರುಕಟ್ಟೆ ಪ್ರಮಾಣಗಳ ನಡುವೆ ಸಂಭವಿಸಬಹುದಾದ ಭಿನ್ನತೆಯನ್ನು ಸರಿಪಡಿಸಲು ಸಿಕ್ಕಾ ರೂಪಾಯಿಯ ತೂಕ ಮತ್ತು ಲೋಹಾಂಶಗಳನ್ನು ಕ್ರಮವಾಗಿ ೧೯೬ ಗ್ರಾಂ ಟ್ರಾಯ್ ಮತ್ತು ೧೭೬ ಗ್ರಾಂ ಶುದ್ಧತೆಗಳಿಗೆ ಬದಲಾಯಿಸಲು[1] ಕ್ರಮ ತೆಗೆದುಕೊಂಡಿತು.

ಆದರೆ ಮತ್ತೊಂದು ದಿಶೆಯಲ್ಲಿ, ಭಾರತದಲ್ಲಿಯ ಸರ್ಕಾರವು ಕೋರ್ಟ್ ಇಚ್ಛಿಸಿದ್ದಕ್ಕಿಂತ ಮುಂದೆ ಹೋಗಲು ಬಯಸಿತು. ಭಾರತಕ್ಕೆ ಅಗತ್ಯವಾದದ್ದು ಕೇವಲ ಏಕರೂಪದ ನಾಣ್ಯ (ಅಂದರೆ ಒಂದೇ ಬಗೆಯ ಆದರೆ ಸ್ವತಂತ್ರ ಘಟಕಗಳಿಂದ ತಯಾರಿಸಿದ ನಾಣ್ಯಗಳು) ಎಂದು ಕೋರ್ಟ್ ಭಾವಿಸಿತು. ನಿಜವಾಗಿ ನಾಣ್ಯದ ಸರಳೀಕರಣ ವಿಷಯದಲ್ಲಿ ತಾವೇನೂ ಹೆಚ್ಚು ಬಯಸಿಲ್ಲ ಮತ್ತು ಸಿಕ್ಕಾ ಮತ್ತು ಮೊಹರುಗಳು ಇದ್ದ ಹಾಗೆ ವಿಲೀನಗೊಳ್ಳದೇ ಉಳಿಯುವಂತೆ ಅನುಮತಿಸಲು ಸಂಪೂರ್ಣವಾಗಿ ಇಚ್ಛೆ ಹೊಂದಿದ್ದೇವೆ ಎಂದು ಅವರು ಸರ್ಕಾರಗಳಿಗೆ ತಿಳಿವಳಿಕೆ ಕೊಟ್ಟಿದ್ದರು.[2] ಮೊಘಲರ ಉತ್ತರಾಧಿಕಾರಿಗಳು ಬಿಟ್ಟ ವ್ಯವಸ್ಥೆಯ ಮೇಲೆ ಏಕರೂಪ ನಾಣ್ಯಪದ್ಧತಿಯು ನಿಸ್ಸಂಶಯವಾಗಿ ಒಂದು ದೊಡ್ಡ ಮುನ್ನಡೆಯಾಗಿತ್ತು. ಆದರೆ ಅದಷ್ಟೇ ಸಾಕಾಗಲಿಲ್ಲ ಮತ್ತು ಪರಿಸ್ಥಿತಿಯ ಅಗತ್ಯಗಳು ಏಕರೂಪದ ನಾಣ್ಯ ಪದ್ಧತಿಯ ಸ್ಥಳದಲ್ಲಿ ಒಂದೇ ಘಟಕವನ್ನಾಧಾರಿತ ಸಾಮಾನ್ಯ ನಾಣ್ಯ ಪದ್ಧತಿಯನ್ನು ಬಯಸಿದವು. ಏಕರೂಪ ನಾಣ್ಯ ಪದ್ಧತಿಯ ಅಡಿಯಲ್ಲಿ ಪ್ರತಿಯೊಂದು ಪ್ರಾಂತ್ಯವು ತನ್ನದೇ ಆದ ನಾಣ್ಯವನ್ನು ತಯಾರಿಸಿತು ಮತ್ತು ಬೇರೆ ಪ್ರಾಂತ್ಯಗಳ ಟಂಕಸಾಲೆಗಳಲ್ಲಿ ಮುದ್ರಿಸಲಾದ ಹಣವು ಆ ಟಂಕಸಾಲೆಯ ಪ್ರದೇಶಗಳಲ್ಲಿ ಹೊರತು ಉಳಿದೆಡೆ ಕಾನೂನುಬದ್ಧವಿರಲಿಲ್ಲ. ಮೂರು ಪ್ರಾಂತ್ಯಗಳ ನಡುವೆ ಹಣಕಾಸು ಸ್ವಾತಂತ್ರ್ಯ ಕೂಡ ಇದ್ದಿದ್ದರೆ ಅದು ನಷ್ಟದಾಯಕವಾಗುತ್ತಿದ್ದಿಲ್ಲ. ವಾಸ್ತವಿಕವಾಗಿ ಪ್ರತಿಯೊಂದು ಪ್ರಾಂತ್ಯವು ತನ್ನದೇ ಆದ ಹಣಕಾಸು ವ್ಯವಸ್ಥೆಯನ್ನು ಹೊಂದಿದ್ದರೂ, ತಮ್ಮ ಕೊರತೆಯನ್ನು ನೀಗಿಸಲು ಹಣಕಾಸಿನ ಸಲುವಾಗಿ ಅವು ಪರಸ್ಪರ ಅವಲಂಬಿಸಿದ್ದವು. ಅವುಗಳ ನಡುವೆ ನಿಯತ 'ಪೂರೈಕೆ' ಏರ್ಪಾಟು ಇತ್ತು ಮತ್ತು ಒಂದು ಪ್ರಾಂತ್ಯದಲ್ಲಿಯ ಆಧಿಕ್ಯವನ್ನು ಬೇರೆ ಪ್ರಾಂತ್ಯಗಳಲ್ಲಿಯ ಕೊರತೆಯನ್ನು ತುಂಬಲು ಸೆಳೆಯಲಾಗುತ್ತಿತ್ತು. ಒಂದು ಸಾಮಾನ್ಯ ನಾಣ್ಯದ ಅಭಾವವಿರುವಾಗ ಈ ಸಂಪನ್ಮೂಲ ಕಾರ್ಯಾಚರಣೆಗೆ ಬಹಳಷ್ಟು ಅಡಚಣೆಯಾಯಿತು. "ಸರಬರಾಜಿನ" ವ್ಯವಸ್ಥೆಯಲ್ಲಿ ಒಂದು ಸಾಮಾನ್ಯ ನಾಣ್ಯದ ಅಭಾವದಿಂದ ಉಂಟಾದ ತೊಂದರೆಗಳು ಎರಡು ಭಿನ್ನ ರೀತಿಗಳಲ್ಲಿ ಕಾಣಿಸಿಕೊಂಡವು. ಬೇರೆ ಪ್ರಾಂತ್ಯಗಳ ನಾಣ್ಯವನ್ನು ಅಧಿಕೃತ ಹಣವನ್ನಾಗಿ ಉಪಯೋಗಿಸಲು ಪ್ರತಿಯೊಂದು ಪ್ರಾಂತ್ಯವು ಬೃಹತ್ ಮೊತ್ತದ ಕಾರ್ಯಶೀಲ ಬಂಡವಾಳದ ಹಣವನ್ನು ಚಲಾವಣೆಯಿಂದ ಹಿಂತೆಗೆದುಕೊಂಡವು[3]

---

೧. ೧೮೩೩ ಬೆಂಗಾಲ್ ರೆಗ್ಯೂಲೇಶನ್ VII

೨. ಹೋಲಿಸಿರಿ : ಮಾರ್ಚ್ ೧೧, ೧೮೨೯ರ ಡಿಸ್‌ಪ್ಯಾಚ್ ಟು ಬೆಂಗಾಲ್

೩. ಬಂಗಾಲದ ಮಹಾಲೇಖಾಪಾಲ ದಿನಾಂಕ ನವೆಂಬರ್ ೨೧, ೧೮೨೩ ರಂದು ಕಲ್ಕತ್ತಾ ಮಿಂಟ್ ಸಮಿತಿಗೆ ಬರೆದ ಪತ್ರದಲ್ಲಿ ಬರೆದರು :
"ಪ್ಯಾರಾ ೩೨ ಶಿಲ್ಕಿನ ಮೊತ್ತವು ಕೂಡ ಆವಶ್ಯಕವಾಗಿ ನಾಣ್ಯದ ಸ್ಥಿತಿಯ ಮೇಲೆ ಅವಲಂಬಿಸತಕ್ಕದ್ದು. ಮದರಾಸು, ಮುಂಬೈ ಮತ್ತು ಫರೂಖಾಬಾದ್‌ಗಳ ರೂಪಾಯಿಗಳು ತೂಕ ಮತ್ತು ಆಂತರಿಕ ಮೌಲ್ಯಗಳಲ್ಲಿ ಭಿನ್ನವಾಗದೇ ಒಂದೇ ತೂಕ ಮತ್ತು ಮೌಲ್ಯಗಳಲ್ಲಿ ಒಂದೇ ಮೌಲ್ಯವಿರುವಂತೆ ವಹಿಸಿ ಯಾವುದೇ ಪ್ರಕಾರದಲ್ಲಿ ಭಿನ್ನವಾಗದೇ ತಯಾರಿಸಲ್ಪಟ್ಟರೆ ಅದು ಟಂಕಸಾಲೆಯ ಮುಖಾಂತರ ಹಾದು ಹೋಗದೇ ಒಂದು ಪ್ರಾಂತ್ಯದ ಅಧಿಕ್ಯವು ಮತ್ತೊಂದು ಪ್ರಾಂತ್ಯದ ಕೊರೆಯನ್ನು ತುಂಬಲು ಸದಾ ಉಪಲಬ್ದವಾಗುವುದು ಮತ್ತು ಭಾರತದ ಶಿಲ್ಕನ್ನು ಮೂರು ಪ್ರಾಂತ್ಯಗಳ ಬಟವಾಡೆಯ ಸಲುವಾಗಿ ಲಭ್ಯ ನಾಣ್ಯದ ಹೆಚ್ಚಾದ ಪ್ರಮಾಣದ ಮೇರೆಗೆ ಇಳಿಸಬಹುದು" (ಬಾಂಬೆ ಫೈನಾನ್ಷಿಯಲ್ ಕನ್‌ಸಲ್ಟೇಶನ್ಸ್, ದಿನಾಂಕ ಫೆಬ್ರವರಿ ೨೫, ೧೮೨೪)

(ಇಂತಹ ಕ್ರಮದಿಂದ ವಾಣಿಜ್ಯಕ್ಕೆ ಅನನುಕೂಲವಾಯಿತು). ದೊಡ್ಡ ಶಿಲ್ಕಿನ ಆವಶ್ಯಕತೆಯನ್ನು ಹೇರಿದ ಅದೇ ಪದ್ಧತಿಯು ಕಡಿಮೆ ಪರಿಣಾಮಕಾರಿಯಾಗಿದ್ದ ಇತರ ಪ್ರಾಂತ್ಯಗಳಿಗೆ ಪರಿಹಾರವನ್ನು ಕೂಡ ನೀಡಿತು. ಅನಿವಾರ್ಯವಾಗಿ ಪೂರೈಕೆಯು ಅದನ್ನು ನೀಡುವ ಪ್ರಾಂತ್ಯದ ನಾಣ್ಯರೂಪದಲ್ಲಿ ಇದ್ದುದರಿಂದ ಮತ್ತು ಅದನ್ನು ಉಪಯೋಗಿಸುವ ಮುನ್ನ ಅದನ್ನು ಪಡೆಯಬೇಕಾಗಿರುವ ಪ್ರಾಂತ್ಯದ ನಾಣ್ಯದಲ್ಲಿ ಪುನಃ ತಯಾರಿಸಿಕೊಡಬೇಕಾಗುತ್ತಿತ್ತು. ಪುನಃ ನಾಣ್ಯವನ್ನು ತಯಾರಿಸುವಾಗ ಉಂಟಾಗುವ ನಷ್ಟವಲ್ಲದೆ, ಅಂಥ ಪದ್ಧತಿಯು ಸ್ಪಷ್ಟವಾಗಿ ವರ್ತಕರಿಗೆ ಅನನುಕೂಲತೆಯನ್ನೂ ಮತ್ತು ಸರ್ಕಾರಕ್ಕೆ ಪೇಚನ್ನೂ ಉಂಟುಮಾಡಿತ್ತು.[೨]

ಆದ್ದರಿಂದ ೧೮೩೩ರ ಅಂತ್ಯದಲ್ಲಿ ಸ್ಥಿತಿಯು ಹೇಗಿದ್ದಿತೆಂದರೆ ಕೋರ್ಟ್ ಬೆಳ್ಳಿಯ ಒಂದೇ ಪ್ರಮಿತಿಯೊಂದಿಗೆ ಏಕರೂಪ ನಾಣ್ಯಪದ್ಧತಿಯನ್ನು ಇಚ್ಛಿಸಿದ್ದರೆ ಭಾರತದಲ್ಲಿಯ ಅಧಿಕಾರಿಗಳು ದ್ವಿಲೋಹ ನಾಣ್ಯ ಪ್ರಮಿತಿಯೊಂದಿಗೆ ಒಂದು ಸಾಮಾನ್ಯ ನಾಣ್ಯವನ್ನು ಬಯಸಿದರು. ಈ ಭಿನ್ನ ಭಿನ್ನ ಸ್ಥಿತಿಗಳಿದ್ದಾಗ್ಯೂ ನಾಣ್ಯದ ನೈಜ ಸ್ಥಿತಿಯು ಮೊದಲಿನಂತೆ ಯಾವುದೇ ಪ್ರಕಾರದ ಗಣನೀಯ ಬದಲಾವಣೆಗಳಿಲ್ಲದೇ ಮುಂದುವರಿಯಬಹುದಿತ್ತು. ಆದರೆ ೧೮೩೩ರಲ್ಲಿ ಭಾರತದಲ್ಲಿಯ ಮೂರು ಪ್ರಾಂತ್ಯಗಳ ಸರ್ಕಾರಗಳ ನಡುವೆ ಆಡಳಿತಾತ್ಮಕ ಸಂಬಂಧಗಳಲ್ಲಿ ಸಂವಿಧಾನಾತ್ಮಕ ಬದಲಾವಣೆಗಳು ಕಂಡುಬಂದವು. ಆ ವರ್ಷ ಸಂಸತ್ತಿನ[೧] ಒಂದು ಅಧಿನಿಯಮದ ಮುಖಾಂತರ ಭಾರತಾದ್ಯಂತ ಎಲ್ಲ ಶಾಸನ ಮತ್ತು ಕಾರ್ಯನಿರ್ವಾಹಕ ಅಧಿಕಾರಗಳ ಕೇಂದ್ರೀಕರಣವನ್ನು ಹೊಂದಿದ ಆಡಳಿತಾತ್ಮಕ ಸಾರ್ವಭೌಮಿಕ ಪದ್ಧತಿಯನ್ನು ಸ್ಥಾಪಿಸಲಾಯಿತು. ಆಡಳಿತ ಪದ್ಧತಿಯಲ್ಲಿಯ ಈ ಬದಲಾವಣೆಯು ಗತ್ಯಂತರವಿಲ್ಲದೆ ರೂಢಿಯಲ್ಲಿರುವ ಹಣಕಾಸು ಪದ್ಧತಿಗಳಲ್ಲಿ ಬದಲಾವಣೆಯನ್ನುಂಟುಮಾಡಿತು. ಪ್ರಾದೇಶಿಕ ನಾಣ್ಯ ತಯಾರಿಕೆಯ ಸ್ಥಳದಲ್ಲಿ ಸಾರ್ವಭೌಮಿಕ ನಾಣ್ಯ ತಯಾರಿಕೆಯ ಆವಶ್ಯಕತೆ ಬಿದ್ದಿತು. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ ಅದು ಬರಿಯ ಏಕರೂಪ ನಾಣ್ಯದ ತದ್ವಿರುದ್ಧವಾಗಿ ಸಾಮಾನ್ಯ ನಾಣ್ಯದ ಕಡೆಗೆ ಒಲವನ್ನು ತೋರಿಸಿತು. ಭಾರತದಲ್ಲಿಯ ಅಧಿಕಾರಿಗಳು ಘಟನೆಗಳ ಬಲವನ್ನು ಮನವರಿಕೆ ಮಾಡಿಕೊಳ್ಳಲು ತಡಮಾಡಲಿಲ್ಲ. ಸಂಸತ್ತಿನಿಂದ ಸ್ಥಾಪಿಸಲಾದ ಸಾರ್ವಭೌಮ ಸರ್ಕಾರವು ಬ್ರಿಟಿಷರು ಮಾಡಿದ ಹಾಗೆ ದಿವಾನರ ಅಥವಾ ಮೊಘಲರ ಏಜೆಂಟರಂತೆ ವರ್ತಿಸುವಷ್ಟರಲ್ಲಿಯೇ ತೃಪ್ತರಾಗಲಿಲ್ಲ ಮತ್ತು ಎಂದೋ ಆಗಿಹೋದ ಮೊಘಲ್ ಚಕ್ರವರ್ತಿಗಳ ಹೆಸರಿನಲ್ಲಿ ನಾಣ್ಯಗಳನ್ನು ತಯಾರಿಸುವ ವಿಚಾರವನ್ನು ಒಪ್ಪಲಿಲ್ಲ. ಅದು ತನ್ನ ನಿಜ ಸ್ವಭಾವವನ್ನು[೨] ತೋರಿಸಲು ಮತ್ತು ಇಡೀ ಭಾರತಕ್ಕೆ ಸಾಮಾನ್ಯವಾಗಿ ತನ್ನ ಅಧಿಕಾರವನ್ನು ಮುಟ್ಟಿಸಲು ತನ್ನ ಸ್ವಂತ ಹೆಸರಿನಲ್ಲಿ ಸಾರ್ವಭೌಮಿಕ ನಾಣ್ಯವನ್ನು ಹೊರಡಿಸಲು ತವಕಗೊಂಡಿತ್ತು. ತದನುಸಾರವಾಗಿ ಈ ಧೋರಣೆಯನ್ನು ಜಾರಿಗೆ ತರಲು ತ್ವರಿತ ಅವಕಾಶವನ್ನು ಕಲ್ಪಿಸಿಕೊಳ್ಳಲಾಯಿತು. ಸಾರ್ವಭೌಮ ಸರ್ಕಾರದ ಅಧಿನಿಯಮದ ಮೂಲಕ (೧೮೩೫ರ XVII) ಅಧಿಕೃತವಾದ

---

೧. ಈ ಪದ್ಧತಿಯ ದುಷ್ಪರಿಣಾಮವು ಈ ಮೊದಲೇ ಮುಂಬೈಯಲ್ಲಿ ಕಾಣಿಸಿಕೊಂಡಿತ್ತು. ಮುಂಬೈ ಸರ್ಕಾರವು ಬಂಗಾಲದಿಂದ ಪೂರೈಕೆ ಕಾರ್ಯಾಚರಣೆಯನ್ನು ಅನುಕೂಲವಾಗುವಂತೆ ದಿನಾಂಕ ಏಪ್ರಿಲ್ ೯, ೧೮೨೪ ರ ಘೋಷಣೆಯ ಮುಖಾಂತರ ಅನಿವಾರ್ಯವಾಗಿ ೧೮೧೯ರ ಫರೂಖಾಬಾದ್ ರೂಪಾಯಿಯನ್ನು ತನ್ನ ಪ್ರದೇಶಗಳಲ್ಲಿ ಮುಂಬೈ ರೂಪಾಯಿಗೆ ಸಮನಾಗಿ ಕಾನೂನುಬದ್ಧ ಹಣವೆಂದು ಸಾರಿತ್ತು. ಹೋಲಿಸಿರಿ: ಬಾಂಬೆ ಫೈನಾನ್ಷಿಯಲ್ ಕನ್ಸಲ್ಟೇಶನ್ಸ್, ದಿನಾಂಕ ಏಪ್ರಿಲ್ ೧೪, ೧೮೨೪

೧. ೩ ಮತ್ತು ೪ ವಿಲ್, IV, ಸಿ ೮೫

೨. ಹೋಲಿಸಿರಿ : ತಮ್ಮ "ಮೆಮೋರಿಯಲ್ಸ್ ಆಫ್ ಇಂಡಿಯನ್ ಗವರ್ನಮೆಂಟ್" ಇದರಲ್ಲಿ ಟಕರ್ ಅವರ ಭಾವನೆಗಳು (ಸಂಪಾದಕರು ಕಾಯ್ದೆ), ೧೮೫೩, ಪುಟಗಳು ೧೭–೧೯

ಏಕಮೇವ ಹಣವಾಗಿ ಇಡೀ ಭಾರತಕ್ಕೆ ಒಂದು ಸಾಮಾನ್ಯ ನಾಣ್ಯವನ್ನು ಜಾರಿಯಲ್ಲಿ ತರಲಾಯಿತು. ಈ ಸಾಮಾನ್ಯ ನಾಣ್ಯವು ಸಿಕ್ಕಾ ರೂಪಾಯಿಯನ್ನು[೧] ರದ್ದುಮಾಡಿದ್ದರಿಂದ ಕೋರ್ಟ್ ಈ ನಾಣ್ಯದ ವಿರುದ್ಧ ತೀವ್ರವಾಗಿ ಪ್ರತಿಭಟಿಸಿತು. ಆದರೆ ಸಾರ್ವಭೌಮ ಸರ್ಕಾರವು ಇಷ್ಟಕ್ಕೇ ನಿಲ್ಲದೆ ಇನ್ನಷ್ಟು ಮುಂದೆ ಹೋಯಿತು ಮತ್ತು ಕೋರ್ಟಿಗೆ ರಿಯಾಯಿತಿ ಅನ್ನುವಂತೆ "ಈಸ್ಟ್ ಇಂಡಿಯಾ ಕಂಪನಿಯ ಯಾವುದೇ ಪ್ರದೇಶಗಳಲ್ಲಿ ಇನ್ನು ಮುಂದೆ ಚಿನ್ನದ ನಾಣ್ಯಗಳು ಸಂದಾಯದ ಕಾನೂನುಬದ್ಧ ಹಣವಾಗುವುದಿಲ್ಲವೆಂದು ಶಾಸನ ಮಾಡಿತು.[೨]

ಸಾರ್ವಭೌಮ ಆಡಳಿತವು ಅನಿವಾರ್ಯವಾಗಿ ಇಡೀ ಭಾರತಕ್ಕೆ ಒಂದು ಸಾಮಾನ್ಯ ನಾಣ್ಯವನ್ನು ತಯಾರಿಸಬೇಕಾಯಿತು ಎಂಬುದು ಗಮನಿಸತಕ್ಕ ವಿಷಯ. ಆದರೆ ಅಷ್ಟು ದೀರ್ಘಕಾಲ ನಡೆದುಕೊಂಡು ಬಂದ ದ್ವಿಲೋಹ ನಾಣ್ಯ ಪದ್ಧತಿಯನ್ನು ಅದು ಏಕೆ ರದ್ದು ಮಾಡಿತು ಎಂಬುದು ಸ್ಪಷ್ಟವಾಗುವುದಿಲ್ಲ. ಅಧಿಕಾರಿಗಳು ಈ ಹಿಂದೆ ಹೇಗೆ ದ್ವಿಲೋಹ ಪದ್ಧತಿಯ ರದ್ಧತಿಯನ್ನು ವಿರೋಧಿಸಿದ್ದರು ಮತ್ತು ನಾಣ್ಯೀಕರಣದ ಸುಧಾರಣೆಯು ದ್ವಿಲೋಹ ಪದ್ಧತಿಯನ್ನು ಅಷ್ಟಾಗಿ ಭಂಗಗೊಳಿಸದಂತೆ ಎಷ್ಟು ಎಚ್ಚರವಹಿಸಿದ್ದರು ಎಂಬುದನ್ನು ನೋಡಿದಾಗ, ಅವರಿಗೆ ಚಿನ್ನದ ಅನಾಣ್ಯೀಕರಣವು ಆಘಾತಕಾರಿಯಾಗಿತ್ತು ಎಂದು ಎನಿಸದೆ ಇರದು. ಏನೇ ಆದರೂ ಇದರಿಂದಾದ ತಿರುವು ಮುರುವಿನಿಂದಾಗಿ ನಾಣ್ಯಪದ್ಧತಿ ಕಾಯಿದೆಯು (೧೮೩೫ರ XVII) ಭಾರತೀಯ ಇತಿಹಾಸದ ಚಾರಿತ್ರಿಕ ದಾಖಲೆಗಳಲ್ಲಿ ಚಿರಸ್ಮರಣೀಯವಾಗಿ ಉಳಿಯುವುದು. ಅದು ಹಣಕಾಸು ಸುಧಾರಣೆಯ ದೀರ್ಘ ಮತ್ತು ಕಠಿಣವಾದ ಕಾರ್ಯಗತಿಯ ಅತ್ಯುನ್ನತ ಸ್ಥಿತಿಯಾಯಿತು ಮತ್ತು ದೇಶಾದ್ಯಂತ ಸಾಮಾನ್ಯ ನಾಣ್ಯ ಹಾಗೂ ಕಾನೂನುಬದ್ಧ ಹಣವಾಗಿ ೧೮೦ ಗ್ರಾಂ ಟ್ರಾಯ್ ತೂಕದ ಮತ್ತು ೧೬೫ ಗ್ರಾಂ ಲೋಹಾಂಶದ ರೂಪಾಯಿಯೊಂದಿಗೆ ಇಡೀ ಭಾರತವನ್ನು ಬೆಳ್ಳಿಯ ಏಕಲೋಹ ವ್ಯವಸ್ಥೆಯಡಿಯಲ್ಲಿ ತಂದಿತು.

ಇನ್ನಾವುದೇ ಬ್ರಿಟಿಷ್ ಭಾರತ ಶಾಸನವು ನಂತರದ ವರ್ಷಗಳಲ್ಲಿ ಈ ೧೮೩೫ XVII ಕಾಯಿದೆಗಿಂತ ಹೆಚ್ಚು ಅತೃಪ್ತಿಯನ್ನು ಉಂಟುಮಾಡಿದ್ದಿಲ್ಲ. ಕಾಯಿದೆಯು ದ್ವಿಲೋಹ ನಾಣ್ಯ ಪದ್ಧತಿಯನ್ನು ಅಂತ್ಯಗೊಳಿಸಿದ್ದರಿಂದ ಈ ಪ್ರಕ್ರಿಯೆಯನ್ನು ಆಶ್ಚರ್ಯಕರ ಪ್ರಮಾಣದ ಮನಃಸ್ಥೈರ್ಯದೊಂದಿಗೆ ಕಾಣಲಾಗಿದೆ. ಕಾಯಿದೆಯು ಪ್ರಮುಖವಾಗಿ ಏಕಲೋಹ ನಾಣ್ಯಪದ್ಧತಿಯ ಪ್ರತಿಸ್ಥಾಪನೆ ಎಂಬುದು ಬಹಳಷ್ಟು ವಿಮರ್ಶಕರಿಗೆ ತಿಳಿದಿರಲಿಲ್ಲ.[೩] ಬೆಳ್ಳಿಯ ಪ್ರಮಿತಿಯು ಚಿನ್ನದ ಪ್ರಮಿತಿಯ ಬದಲಾಗಿ ಬಂದಿತು ಎಂಬುದಷ್ಟೇ ಸಾಮಾನ್ಯವಾದ ಅಭಿಪ್ರಾಯವಾಗಿತ್ತು. ಸಾರ್ವತ್ರಿಕವಾಗಿ ವಸ್ತುಸ್ಥಿತಿಯ ಅರಿವು ಆಗಿದ್ದಿದ್ದರೂ, ಈ ಪ್ರಕ್ರಿಯೆಯ ಪ್ರತಿರೋಧಕ್ಕೆ ಸಮರ್ಥನೆಗಳು ಇರಲಿಲ್ಲ. ಭಾರತವು ತನ್ನ ದ್ವಿಲೋಹ ನಾಣ್ಯಪದ್ಧತಿಯನ್ನು ರಕ್ಷಿಸಿದ್ದಿದ್ದರೆ, ಅದರ ಮೇಲೆ ಹತ್ತೊಂಬತ್ತನೆಯ ಶತಮಾನದ ಮಧ್ಯದಲ್ಲಿ ಕ್ಯಾಲಿಫೋರ್ನಿಯಾ ಮತ್ತು ಆಸ್ಟ್ರೇಲಿಯಾಗಳಲ್ಲಿಯ ಚಿನ್ನದ ಶೋಧದ ಪರಿಣಾಮಗಳೇನಾಗಬಹುದಿತ್ತು? ಬೆಳ್ಳಿಗೆ ಸಾಪೇಕ್ಷವಾಗಿ ಚಿನ್ನದ ಶೋಧದ ಪರಿಣಾಮಗಳೇನಾಗಬಹುದಿತ್ತು? ಬೆಳ್ಳಿಗೆ ಸಾಪೇಕ್ಷವಾಗಿ ಚಿನ್ನದ ಉತ್ಪಾದನೆಯಲ್ಲಿಯ ಈ ಹೆಚ್ಚಳ ೧೮೫೦ರ ನಂತರ ಹೇಗೆ ಟಂಕಸಾಲೆಯಲ್ಲಿ ಮತ್ತು ಎರಡು ಲೋಹಗಳ ಮಾರುಕಟ್ಟೆ ಅನುಪಾತಗಳಲ್ಲಿ

---

೧. ಹೋಲಿಸಿರಿ : ಅವರ ಫೈನಾನ್ಷಿಯಲ್ ಡಿಸ್‌ಪ್ಯಾಚ್ ಟು ಇಂಡಿಯಾ ಸಂಖ್ಯೆ ೯ ದಿನಾಂಕ ಜುಲೈ ೨೭, ೧೮೩೬.

೨. ೧೮೩೫ರ ಕಾಯಿದೆಯ xviiರ ಕಲಮು ೯

೩. ಇಲ್ಲಿ ಒಂದೇ ಒಂದು ವಿಷಯ ಹೇಳಬೇಕೆಂದರೆ, ಹೋಲಿಸಿರಿ : ಎಸ್.ವಿ. ದೊರೆಸ್ವಾಮಿ. ಇಂಡಿಯನ್ ಕರೆನ್ಸಿ, ಮದರಾಸು, ೧೯೧೫ ಅಲ್ಲಲ್ಲಿ.

ಭಿನ್ನತೆಯನ್ನುಂಟುಮಾಡಿತು ಎಂಬುದು ಚೆನ್ನಾಗಿ ಗೊತ್ತಿದೆ. ಬೆಳ್ಳಿಯ ಅಪಮೌಲ್ಯವು, ಅಷ್ಟೇನೂ ದೊಡ್ಡದಲ್ಲದಿದ್ದರೂ, ಬೆಳ್ಳಿಯ ನಾಣ್ಯಗಳು ಚಲಾವಣೆಯಿಂದ ಕಡಿಮೆಯಾಗುತ್ತಿದ್ದ ಕೆಲವು ದ್ವಿಲೋಹ ಪ್ರಮಿತಿಯನ್ನು ಹೊಂದಿದ್ದ ದೇಶಗಳಲ್ಲಿನ ಗಂಭೀರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಬಲ್ಲದಾಗಿತ್ತು. ಅಮೆರಿಕೆಯು[೧] ಅನಿವಾರ್ಯವಾಗಿ ೧೮೫೩ರ ಕಾಯಿದೆಯ ಮೂಲಕ ಚಿಕ್ಕ ಬೆಳ್ಳಿಯ ನಾಣ್ಯಗಳನ್ನು ಚಲಾವಣೆಯಲ್ಲಿಡಲು ಅವುಗಳ ಮೌಲ್ಯವನ್ನು ಚಿನ್ನದ ಮೌಲ್ಯಕ್ಕಿಂತ ಕೆಳಗೆ ಇರುವಂತೆ ಮಾಡಿ ಬೆಳ್ಳಿಯ ನಾಣ್ಯಗಳು ಸಾಕಷ್ಟು ಪ್ರಮಾಣದಲ್ಲಿ ಚಲಾವಣೆಯಲ್ಲಿರುವಂತೆ ಮಾಡಿತು. ಅನ್ಯೋನ್ಯ ಕಾನೂನುಬದ್ಧ ಹಣದ[೨] ಜೊತೆಗೆ ಫ್ರಾನ್ಸ್‌ನ ದ್ವಿಲೋಹ ಮಾದರಿಯ ಮೇಲೆ ಆಧಾರಿತ ಏಕರೂಪ ನಾಣ್ಯಪದ್ಧತಿಯನ್ನು ಹೊಂದಿದ ಫ್ರಾನ್ಸ್, ಬೆಲ್ಜಿಯಮ್, ಸ್ವಿಟ್ಜರ್‌ಲ್ಯಾಂಡ್ ಮತ್ತು ಇಟಲಿಗಳು ಇಂಥವೇ ತೊಂದರೆಗಳನ್ನು ಎದುರಿಸಿದ್ದವು. ಮತ್ತು ಪ್ರತಿಯೊಂದು ರಾಷ್ಟ್ರವೂ[೩] ತಮ್ಮ ತಮ್ಮ ಬೆಳ್ಳಿಯ ನಾಣ್ಯಗಳನ್ನು, ಅದರಲ್ಲೂ ಚಿಕ್ಕ

೧. ಲಾಫ್‌ಲಿನ್ ಜೆ.ಎಲ್. ಹಿಸ್ಟರಿ ಆಫ್ ಬೈ ಮೆಟಾಲಿಸಂ ನ್ಯೂಯಾರ್ಕ್, ೧೮೮೬ ಪುಟಗಳು ೭೯–೮೩

೨. ಫ್ರಾನ್ಸಿನ ಸಾಂಸ್ಕೃತಿಕ ಪ್ರಭಾವವು ಲ್ಯಾಟಿನ್ ಮೂಲದ ಇತರ ರಾಷ್ಟ್ರಗಳನ್ನು ಫ್ರೆಂಚ್ ಹಣಕಾಸು ಪದ್ಧತಿಯನ್ನು ಸ್ವೀಕರಿಸುವಂತೆ ಮಾಡಿತು. ೧೮೩೧ರಲ್ಲಿ ದೊರಕಿಸಿದ ಬೆಲ್ಜಿಯಮ್‌ನ ರಾಜಕೀಯ ಸ್ವಾತಂತ್ರ್ಯದ ನಂತರ ಅದರ ಹಣಕಾಸು ಪದ್ಧತಿಯಲ್ಲಿ ಬದಲಾವಣೆಯಾಯಿತು. ೧೮೩೨ರ ಕಾನೂನಿನ ಮೂಲಕ ಹಣಕಾಸು ದೃಷ್ಟಿಕೋನದಿಂದ ಬೆಲ್ಜಿಯಮ್ ಫ್ರಾನ್ಸಿನ ಅನುಯಾಯಿಯಾಯಿತು. ಆ ಕಾನೂನಿನ ಮೂಲಕ ಅದು ಸಂಪೂರ್ಣವಾಗಿ ಫ್ರಾನ್ಸಿನ ಹಣಕಾಸು ಪದ್ಧತಿಯನ್ನು ಸ್ವೀಕರಿಸಿತು ಮತ್ತು ಅಷ್ಟಲ್ಲದೇ ಫ್ರೆಂಚ್ ೨೦ ಮತ್ತು ೪೦ ಫ್ರಾಂಕ್ ಚಿನ್ನದ ನಾಣ್ಯಗಳಿಗೆ ಮತ್ತು ಫ್ರೆಂಚ್ ೫ ಬೆಳ್ಳಿಯ ನಾಣ್ಯಗಳಿಗೆ ಬೆಲ್ಜಿಯಮ್‌ನಲ್ಲಿ ಕಾನೂನುಬದ್ಧ ಹಣದ ಅಧಿಕಾರವನ್ನು ಕೊಡುವಷ್ಟು ದೂರಹೋಯಿತು, ಸ್ವಿಟ್ಜರ್‌ಲ್ಯಾಂಡ್‌ದಲ್ಲಿ ೧೮೪೮ರ ಸಂವಿಧಾನದ ೩೬ನೇ ಅನುಚ್ಛೇದ ಸಂಯುಕ್ತ ಸರ್ಕಾರಕ್ಕೆ ಹಣವನ್ನು ತಯಾರಿಸುವ ಅಧಿಕಾರವನ್ನು ವಹಿಸಿಕೊಟ್ಟಿತು. ಮೇ ೭, ೧೮೫೦ರ ಕಾನೂನಿನ ಪ್ರಕಾರ ಸ್ವಿಟ್ಜರ್‌ಲ್ಯಾಂಡಿಗೆ ಫ್ರೆಂಚ್ ಹಣಕಾಸು ಪದ್ಧತಿಯು ಅನ್ವಯವಾಯಿತು. ಅನುಚ್ಛೇದ ೮ ಘೋಷಿಸಿದಂತೆ "ಫ್ರೆಂಚ್ ಪದ್ಧತಿಗೆ ಸಾಕಷ್ಟು ಸಮೀಪವಾಗಿ ತಯಾರಿಸಿದ ವಿದೇಶೀ ಬೆಳ್ಳಿಯ ನಾಣ್ಯಗಳಿಗೆ ಸ್ವಿಟ್ಜರ್‌ಲ್ಯಾಂಡ್‌ನಲ್ಲಿ ಸಾಲಗಳನ್ನು ಪಾವತಿ ಮಾಡಲು ನಿಯತ ಮಾಧ್ಯಮವಾಗಿ ಕಾನೂನು ಸ್ಥಾನಮಾನವನ್ನು ನೀಡಬಹುದು". ಏಕೀಕರಣದ ಮೊದಲು ವಿವಿಧ ಇಟಾಲಿಯನ್ ರಾಜ್ಯಗಳು ಸ್ವಿಸ್ ಕ್ಯಾಂಟನ್‌ಗಳ ಪ್ರಕಾರ ತಮ್ಮದೇ ಆದ ಚಲಾವಣಾ ನಾಣ್ಯವನ್ನು ಹೊಂದಿದ್ದವು. ಆದರೆ ಏಕೀಕರಣದ ಪರಿಣಾಮವಾಗಿ ಉಂಟಾದ ಏಕರೂಪತೆಯ ಇಚ್ಛೆಯಿಂದ ಯಾವುದಾದರೊಂದು ಹಳೆಯ ಪದ್ಧತಿಯನ್ನು ಆಯ್ಕೆಮಾಡುವ ಅಥವಾ ಸಂಪೂರ್ಣ ದೇಶಕ್ಕೆ ಸಾಮಾನ್ಯವಾಗುವ ಒಂದು ಹೊಸ ಪದ್ಧತಿಯನ್ನು ಸ್ವೀಕರಿಸುವ ಸಮಸ್ಯೆ ಉದ್ಭವಿಸಿತು. ತಮ್ಮ ಸ್ವಾತಂತ್ರ್ಯದ ವಿಷಯದಲ್ಲಿ ಫ್ರಾನ್ಸ್ ಸರ್ಕಾರವು ಮಾಡಿದ ಸಹಾಯಕ್ಕಾಗಿ ಅದಕ್ಕೆ ತಾನು ಒಂದು ಪ್ರತ್ಯುಪಕಾರವನ್ನು ಮಾಡುವ ಉತ್ಕಟೇಚ್ಛೆ ಇಟಾಲಿಯನ್ನರ ಮನಸ್ಸಿನಲ್ಲಿ ಇತ್ತು ಮತ್ತು ಇಟಲಿಯು ಫ್ರೆಂಚ್ ಹಣಕಾಸು ಪದ್ಧತಿಯನ್ನು ಸ್ವೀಕರಿಸುವುದು ಈ ಉದ್ದೇಶವನ್ನು ಈಡೇರಿಸುವುದೆಂದು ಪರಿಗಣಿಸಲಾಗಿತ್ತು. ಸುದೈವದಿಂದ ಸಾರ್ಡಾನಿಯಾ ಆದಾಗಲೇ ಫ್ರೆಂಚ್ ಪದ್ಧತಿಯನ್ನು ಹೊಂದಿತ್ತು ಮತ್ತು ಆಗಸ್ಟ್ ೨೪, ೧೮೬೨ರ ಕಾನೂನು ಲೈರ್ ನಾಣ್ಯವನ್ನು ಹಣದ ಘಟಕವನ್ನಾಗಿ ಪೂರ್ಣ ಇಟಲಿಗೆ ವಿಸ್ತರಿಸಿತ್ತು. ಅದಲ್ಲದೇ ಫ್ರಾನ್ಸ್, ಬೆಲ್ಜಿಯಮ್ ಮತ್ತು ಸ್ವಿಟ್ಜರ್‌ಲ್ಯಾಂಡ್ ನಾಣ್ಯಗಳಿಗೆ ಕಾನೂನುಬದ್ಧ ಹಣದ ಅಧಿಕಾರವನ್ನು ಕೊಟ್ಟಿತ್ತು. ಹೋಲಿಸಿರಿ ಹೆಚ್.ಪಿ. ವಿಲ್ಲಿಸ್, ಹಿಸ್ಟರಿ ಆಫ್ ದಿ ಲ್ಯಾಟಿನ್ ಮಾನಿಟರಿ ಯೂನಿಯನ್, ಚಿಕಾಗೊ, ೧೯೧೦, ಪುಟಗಳು ೧೫, ೨೭, ೩೬, ೩೭

೩. ಚಿಕ್ಕ ನಾಣ್ಯಗಳು ಚಲಾವಣೆಯಲ್ಲಿ ಉಳಿಯುವಂತೆ ಅವುಗಳಲ್ಲಿಯ ಬೆಳ್ಳಿಯ ಮೊತ್ತವನ್ನು ಕಡಿಮೆ ಮಾಡುವಲ್ಲಿ ಸ್ವಿಟ್ಜರ್‌ಲ್ಯಾಂಡ್ ಪ್ರಪ್ರಥಮವಾಗಿತ್ತು. ಆದರೆ ಲೋಹಾಂಶ ಕಡಿಮೆ ಮಾಡಲ್ಪಟ್ಟ ಈ ಸ್ವಿಸ್ ನಾಣ್ಯಗಳು ರಾಷ್ಟ್ರೀಯ ಗಡಿಗಳನ್ನು ದಾಟಿದವು ಮತ್ತು ಅವು ಲ್ಯಾಟಿನ್ ಮೂಲದ ಇತರ ದೇಶಗಳಲ್ಲಿ ಕಾನೂನುಬದ್ಧ ಹಣವಾಗಿದ್ದುದರಿಂದ ಹೆಚ್ಚು ಬೆಳ್ಳಿಯನ್ನು ಆಧರಿಸಿದ ಆದರೆ ಅದೇ ಪ್ರಚಲಿತ ನಾಮಮಾತ್ರದ ಮೌಲ್ಯದಲ್ಲಿ ಚಲಾವಣೆಯಲ್ಲಿದ್ದ ಸದೃಶ ವರ್ಗದ ಹೆಚ್ಚು ದುಬಾರಿ ನಾಣ್ಯಗಳನ್ನು ಸ್ಥಳಾಂತರಿಸಿದವು. ಇವು ಸಂಬಂಧಿಸಿದ ಲ್ಯಾಟಿನ್ ದೇಶಗಳ ಒಟ್ಟಾರೆ ಯೋಜಿತ ಕ್ರಮಕ್ಕೆ ಕಾನೂನುಬದ್ಧ ಹಣದ ಅಧಿಕಾರವನ್ನು ಹಿಂತೆಗೆದುಕೊಳ್ಳುವ ತೀರ್ಪನ್ನು ಫ್ರಾನ್ಸಿನಲ್ಲಿ ಉಂಟುಮಾಡಿತು. (ಏಪ್ರಿಲ್ ೧೪, ೧೮೬೪)

ಚಿಕ್ಕ ನಾಣ್ಯಗಳನ್ನು, ರಕ್ಷಿಸಿಕೊಳ್ಳಲು, ಮತ್ತು ತಾವು ಅನುಸರಿಸುತ್ತಿದ್ದ ಪ್ರತ್ಯೇಕ ನೀತಿಗಳಿಂದಾಗಿ ತಮ್ಮ ನಡುವೆ ಇದ್ದ ಆರ್ಥಿಕ ಸಾಮರಸ್ಯವು ಹದಗೆಡದ ಹಾಗೆ ನೋಡಿಕೊಳ್ಳಲು, ೧೮೬೫ರ ನವೆಂಬರ್ ೨೦ರಂದು ಒಂದು ಸಮಾವೇಶವನ್ನು ನಡೆಸಬೇಕಾಯಿತು. ಈ ಸಮ್ಮೇಳನದ ಪ್ರಕಾರ, ಲ್ಯಾಟಿನ್ ಸಮೂಹ ಎಂದು ಕರೆಯಲ್ಪಡುವ ಎಲ್ಲ ಪಕ್ಷಗಳು ಚಲಾವಣೆಯಲ್ಲಿ ಉಳಿಯುವಂತೆ ೨ ಫ್ರಾಂಕ್, ೧ ಫ್ರಾಂಕ್, ೫೦ ಸೆಂಟೆಮ್ಸ್ ಮತ್ತು ೨೦ ಸೆಂಟೆಮ್ಸ್ ಬೆಳ್ಳಿಯ ನಾಣ್ಯಗಳನ್ನು ೯೦೦/೧೦೦೦ ಲೋಹಾಂಶದಿಂದ ೮೩೫/೧೦೦೦ ಲೋಹಾಂಶ ಪ್ರಮಾಣಕ್ಕೆ ಇಳಿಸಬೇಕಾಗಿತ್ತು ಮತ್ತು ಅವುಗಳನ್ನು ಪೂರಕ ನಾಣ್ಯಗಳನ್ನಾಗಿ ಮಾಡಬೇಕಾಗಿತ್ತು.[೧] ಚಿನ್ನ ಮತ್ತು ಬೆಳ್ಳಿಗಳ ಸಾಪೇಕ್ಷ ಮೌಲ್ಯಗಳಲ್ಲಿಯ ಈ ಪಲ್ಲಟದ ಪರಿಣಾಮವಾಗಿ ಭಾರತವು ಕೂಡ ತೊಂದರೆಯಲ್ಲಿ ಸಿಲುಕಿತಾದರೂ ಆ ತೊಂದರೆಯು ಹೆಚ್ಚಾಗಿ ಅದರ ತಿಳಿಗೇಡಿ ಕ್ರಿಯೆಯಿಂದಲೇ ಆಗಿತ್ತು.[೨] ಬಹುಶಃ ಚಿನ್ನದ ನಾಣ್ಯಗಳ ಮೇಲಿನ ಸುಂಕವು (ತೆರುವಳಿಯು) ಆದಾಯದ ಮೂಲವಾಗಿದ್ದು ಅದನ್ನು ಸರ್ಕಾರವು ಕಳೆದುಕೊಳ್ಳಲು ಇಷ್ಟಪಡದ್ದರಿಂದ ೧೮೩೫ರ ನಾಣ್ಯಕಾಯಿದೆಯು ಚಿನ್ನದ ನಾಣ್ಯಗಳ ಅನಿರ್ಬಂಧ ಮುದ್ರಣಕ್ಕೆ ಟಂಕಸಾಲೆಗಳನ್ನು ಮುಚ್ಚಲಿಲ್ಲ. ಸುವರ್ಣವು ಕಾನೂನುಬದ್ಧ ಹಣವಾಗಿರಲಿಲ್ಲವಾದ್ದರಿಂದ ಅದನ್ನು ನಾಣ್ಯ ತಯಾರಿಕೆಗೆ ಟಂಕಸಾಲೆಗೆ ತರಲಾಗಲಿಲ್ಲ ಮತ್ತು ನಾಣ್ಯ ಮುದ್ರಣ ತೆರುವಳಿಯು ಕುಸಿಯಿತು. ಈ ಆದಾಯದ ಹಾನಿಯನ್ನು ತಪ್ಪಿಸಲು ಸರ್ಕಾರವು ಚಿನ್ನದ ನಾಣ್ಯಗಳನ್ನು ಮುದ್ರಿಸುವುದಕ್ಕೆ ಉತ್ತೇಜನವನ್ನೀಯುವ ಕ್ರಮಗಳನ್ನು ತೆಗೆದುಕೊಳ್ಳಲಾರಂಭಿಸಿತು. ಪ್ರಥಮವಾಗಿ ಅದು ೧೮೩೭ರಲ್ಲಿ ನಾಣ್ಯ ಮುದ್ರಣ ತೆರುವಳಿಯನ್ನು[೩] ಪ್ರತಿಶತ ೨ ರಿಂದ ೧ಕ್ಕೆ ಇಳಿಸಿತು. ಆದರೆ ಈ ಕ್ರಮವು ಕೂಡ ಟಂಕಸಾಲೆಗೆ ಚಿನ್ನವನ್ನು ತರಲು ಜನರನ್ನು ಪ್ರೇರೇಪಿಸಲು ಸಾಕಾಗಲಿಲ್ಲ ಮತ್ತು ತತ್ಪರಿಣಾಮವಾಗಿ ನಾಣ್ಯ ಮುದ್ರಣ ತೆರುವಳಿಯ ಆದಾಯವು ಹೆಚ್ಚಾಗುವಲ್ಲಿ ವಿಫಲವಾಯಿತು. ಅದೇ ದಿಶೆಯಲ್ಲಿ ಮುಂದಿನ ಕ್ರಮವಾಗಿ ಸರ್ಕಾರವು ಸರ್ಕಾರಿ ತಿಜೋರಿಗಳ ಪ್ರಭಾರದಲ್ಲಿದ್ದ ಅಧಿಕಾರಿಗಳಿಗೆ ೧೫ ಬೆಳ್ಳಿಯ ರೂಪಾಯಿಗಳಿಗೆ ಒಂದು ಚಿನ್ನದ ಮೊಹರು ದರದಲ್ಲಿ ಚಿನ್ನವನ್ನು ಸ್ವೀಕರಿಸಲು ಅಧಿಕಾರವನ್ನೀಯುವ ಘೋಷಣೆಯನ್ನು ಜನವರಿ ೧೩, ೧೮೪೧ ರಂದು ಹೊರಡಿಸಿತು. ಸರ್ಕಾರವು ಘೋಷಣೆಯ ಮುಖಾಂತರ ನಿಗದಿಪಡಿಸಿದ ದರದಲ್ಲಿ ಚಿನ್ನವು ಅಪಮೌಲ್ಯೀಕೃತವಾದದ್ದರಿಂದ ಕೆಲವು ಸಮಯದವರೆಗೆ ಬಂಗಾರವು ಬರಲಿಲ್ಲ.[೪] ಆದರೆ ಆಸ್ಟ್ರೇಲಿಯಾ ಮತ್ತು ಕ್ಯಾಲಿಫೋರ್ನಿಯಾಗಳ ಚಿನ್ನದ ಶೋಧಗಳು ಪರಿಸ್ಥಿತಿಯನ್ನು ಸಂಪೂರ್ಣವಾಗಿ ಬದಲಾಯಿಸಿದವು. ೧೫ ರೂಪಾಯಿ ದರದಲ್ಲಿ ಅಪಮೌಲ್ಯ ಹೊಂದಿದ್ದ ಚಿನ್ನದ ಮೊಹರು ಅಧಿಕ ಮೌಲ್ಯವನ್ನು ಹೊಂದಿತು ಮತ್ತು ಒಂದು ಕಾಲದಲ್ಲಿ ಬಂಗಾರವನ್ನು ಸ್ವೀಕರಿಸಲು ಉತ್ಸುಕವಾಗಿದ್ದ ಸರ್ಕಾರವು ಈಗ ಅದರ ಆಗಮನದಿಂದ ಹೆದರಿತು.

ಇನ್ನು ಮುಂದೆ ಚಿನ್ನವು ಕಾನೂನುಬದ್ಧ ಹಣವಲ್ಲ ಎಂದು ಸಾರುವ ಕ್ರಮವನ್ನು ತೆಗೆದುಕೊಂಡಾಗ್ಯೂ ಸರ್ಕಾರದ ಬೇಡಿಕೆಗಳ ತೀರುವಳಿಯಲ್ಲಿ ಅದನ್ನು ಸಮೀಕರಿಸುತ್ತ ಹೋದದ್ದರಿಂದ ಸರ್ಕಾರವು ನಿರುಪಯುಕ್ತ ಮತ್ತು ಸಾಮಾನ್ಯವಾಗಿ ತನ್ನ ಮೌಲ್ಯಕ್ಕಿಂತ ಹೆಚ್ಚಿನ ದರದಲ್ಲಿ ಕೊಡಬೇಕಾಗುತ್ತಿದ್ದ ನಾಣ್ಯದಿಂದ ಪೇಚಿಗೊಳಪಡುವ

---

೧. ಲ್ಯಾಟಿನ್ ಯೂನಿಯನ್ನಿನ ಹೆಚ್ಚಿನ ವಿವರಗಳ ಸಲುವಾಗಿ ಹೋಲಿಸಿರಿ: ಲಾಫ್‌ಲಿನ್, ಕೃತಿಯಲ್ಲಿ ಉಲ್ಲೇಖಿಸಿದ್ದು, ಪುಟಗಳು ೧೪೬–೯

೨. ಹೋಲಿಸಿರಿ : ಎಚ್.ಎಫ್.ಸಿ. ರಿಟರ್ನ್, ಈಸ್ಟ್ ಇಂಡಿಯನ್ (ಕಾಯನೇಜ್) ೧೮೬೦ರ ೨೫೪

೩. ಎಚ್.ಎಫ್.ಸಿ. ರಿಟರ್ನ್, ಈಸ್ಟ್ ಇಂಡಿಯನ್ (ಕಾಯನೇಜ್)

೪. ಅದೇ ಸ್ಥಳದಲ್ಲಿ ಪು. ೧೦

ಪರಿಸ್ಥಿತಿಯಲ್ಲಿ ಸಿಲುಕಿತು. ತನ್ನ ಪರಿಸ್ಥಿತಿಯನ್ನು ಮನವರಿಕೆ ಮಾಡಿಕೊಂಡು ಅದು ಹೆಚ್ಚಿನ ನಾಣ್ಯ ತಯಾರಿಕೆಯ ಮೂಲಕ ಆದಾಯ ಹೆಚ್ಚಿಸುವ ವಿಚಾರಗಳನ್ನು ಬದಿಗೊತ್ತಿತು ಮತ್ತು ತಡವಿಲ್ಲದೇ ಡಿಸೆಂಬರ್ ೨೫, ೧೮೫೨ ರಂದು ೧೮೪೧ರ ಘೋಷಣೆಯನ್ನು ಹಿಂತೆಗೆದುಕೊಂಡು ಮತ್ತೊಂದು ಘೋಷಣೆಯನ್ನು ಹೊರಡಿಸಿತು. ಚಿನ್ನದ ಭಾಗಶಃ ಕಾನೂನುಬದ್ಧ ಚಾಲ್ತಿ ಹಣದ ಅಧಿಕೃತತೆಯನ್ನು ತೆಗೆದುಹಾಕುವುದರ ಬದಲು ಅದನ್ನು ಸಾರ್ವತ್ರಿಕ ಅಧಿಕೃತ ಹಣವನ್ನಾಗಿ ಮಾಡಿ ಪೇಚಿನಿಂದ ಪಾರಾಗಿದ್ದರೆ ಅದು ಹೆಚ್ಚು ಒಳ್ಳೆಯದಾಗುತ್ತಿದ್ದಿಲ್ಲವೇ ಎಂಬುದು ಬೇರೆ ವಿಷಯ. ಆದರೆ ತಮ್ಮ ನಾಣ್ಯದ ಬೆಳ್ಳಿಯ ಭಾಗವನ್ನು ಸಂರಕ್ಷಿಸುವುದಕ್ಕೋಸ್ಕರ ದ್ವಿಲೋಹ ನಾಣ್ಯಪದ್ಧತಿಯನ್ನು ಹೊಂದಿದ ರಾಷ್ಟ್ರಗಳು ಅನುಭವಿಸಿದ ತಾಪತ್ರಯಗಳು ಮತ್ತು ಸಂಕಟಗಳಿಗೇ ಭಾರತವು ಒಳಗಾಗದಿದ್ದುರಿಂದ ದ್ವಿಲೋಹ ನಾಣ್ಯಪದ್ಧತಿಯನ್ನು ರದ್ದುಮಾಡಿದ ಕ್ರಮದಿಂದ ಖಂಡಿತವಾಗಿ ದೊಡ್ಡ ಅನುಕೂಲವಾಯಿತು, ಏಕೆಂದರೆ ಈ ಕ್ರಮವು ಆ ವೇಳೆಯಲ್ಲಿ ಕಾಣಿಸಿಕೊಳ್ಳದಿದ್ದರೂ ಬೇಗ ಅನುಭವಕ್ಕೆ ಬಂದ ಬದಲಾವಣೆಗಳ ವಿರುದ್ಧ ಮೊದಲೇ ಸುಸಜ್ಜಿತವಾಗಿರುವಂತೆ ಮಾಡಿತ್ತು.

೧೮೩೫ರ ಕಾನೂನಿನ ಮುಖಾಂತರ ಸಾಧಿಸಲಾದ ಭಾರತದಲ್ಲಿಯ ದ್ವಿಲೋಹ ನಾಣ್ಯಪದ್ಧತಿಯನ್ನು ರದ್ದುಮಾಡಿದುದನ್ನು ಖಂಡಿಸಲಾಗುವುದಿಲ್ಲ. ಆದರೆ ದ್ವಿಲೋಹ ನಾಣ್ಯಪದ್ಧತಿಯ ಖಂಡನೆಯು ತಾನಾಗಿ ಬೆಳ್ಳಿಯ ಏಕ ನಾಣ್ಯಪದ್ಧತಿಯ ಸಮರ್ಥನೆಯಾಗಲಾರದು ಎಂಬುದು ಚರ್ಚೆಗೆ ಬಿಟ್ಟ ವಿಷಯವಾಗಿದೆ. ಅದು ಏಕಲೋಹ ನಾಣ್ಯಪದ್ಧತಿಯಾಗಬೇಕಾಗಿದ್ದರೆ ಅದು ಸರಾಗವಾಗಿ ಚಿನ್ನದ ಏಕಲೋಹ ನಾಣ್ಯ ಪದ್ಧತಿಯಾಗಬಹುದಾಗಿತ್ತು. ವಾಸ್ತವಿಕವಾಗಿ ಏಕಲೋಹ ನಾಣ್ಯಪದ್ಧತಿಯ[೧] ಪ್ರತಿಪಾದಕರಾದ ಮತ್ತು ಅವರ ತತ್ವಗಳನ್ನು ಭಾರತಕ್ಕೆ ಅನ್ವಯಿಸಲು ಕೋರ್ಟ್ ಬಯಸಿದ ಲಾರ್ಡ್ ಲಿವ್ವರ್‌ಪೂಲ್ ಅಂದು ಇಂಗ್ಲೆಂಡಿನಲ್ಲಿ ಬಳಕೆಯಲ್ಲಿದ್ದ ಸದೃಶ ನಾಣ್ಯಗಳ ಕೇಡುಗಳ ಸಲುವಾಗಿ ಚಿನ್ನದ ಏಕ ನಾಣ್ಯಪದ್ಧತಿಯನ್ನು ವಿಧಿಸಿದ್ದರೆಂಬುದನ್ನು ಸ್ಮರಿಸಿದಾಗ ಬೆಳ್ಳಿಯ ಏಕಲೋಹ ನಾಣ್ಯಪದ್ಧತಿಯ ಬಗ್ಗೆ ಆದ್ಯತೆಯು ಸ್ವಲ್ಪ ವಿಲಕ್ಷಣದ್ದಾಗಿ ಕಾಣುವುದಿಲ್ಲ. ಆದರೆ ಕೋರ್ಟ್ ತಮ್ಮ ಮಾರ್ಗದರ್ಶಿಯ ಸಲಹೆಯಿಂದ ದೂರಸರಿದಿದ್ದರಿಂದ ಉಂಟಾದ ಗಂಭಿರವಾದ ಪರಿಸ್ಥಿತಿಯು[೨] ಸಹಜವಾಗಿಯೇ ಕಟು ಟೀಕೆಗೆ ಒಳಗಾಗಬೇಕಾಯಿತು. ಲಾರ್ಡ್ ಲಿವರ್‌ಪೂಲ್ ಅವರಿಗೆ ಚಿನ್ನದ ಗೀಳೇನೂ ಇರಲಿಲ್ಲ. ಹಾಗೆಯೇ, ಕೋರ್ಟ್ ಕೂಡ ಬೆಳ್ಳಿಯ ಹುಚ್ಚು ಹಿಡಿದಿದ್ದವರಿಂದ ಕೂಡಿರಲಿಲ್ಲವಾದ್ದರಿಂದ ಈ ನಿರ್ಧಾರದ ಹಿಂದೆ ಗುಪ್ತ ಉದ್ದೇಶಗಳು ಇವೆ ಎಂದು ಯಾರೂ ಹೇಳುವಂತಿರಲಿಲ್ಲ. ವಾಸ್ತವವಾಗಿ, ಚಿನ್ನ ಅಥವಾ ಬೆಳ್ಳಿ ಇವುಗಳಲ್ಲಿ ಯಾವುದು ಹೆಚ್ಚು ಉತ್ತಮ ಮೌಲ್ಯದ ಪ್ರಮಾಣವಾಗಿತ್ತು ಎಂಬ ಪ್ರಶ್ನೆಯನ್ನು ಅವರಿಬ್ಬರ ಪೈಕಿ ಯಾರೂ ಯೋಚಿಸಲಿಲ್ಲ. ನಿಜವಾಗಿಯೂ ಅದು ಒಂದು ಮುಖ್ಯ ವಿಷಯವಾದದ್ದರಿಂದ ಆ ಸಮಯದಲ್ಲಿನ ಅಭಿಪ್ರಾಯದಂತೆ, ಕೋರ್ಟಿನ ಆಯ್ಕೆಯು ನಿಸ್ಸಂಶಯವಾಗಿ ಲಾರ್ಡ್ ಲಿವರ್‌ಪೂಲ್‌ರ ಅಭಿಪ್ರಾಯಕ್ಕಿಂತ ಹೆಚ್ಚು ಒಳ್ಳೆಯದಿತ್ತು. ಲಾಕ್, ಹ್ಯಾರಿಸ್ ಮತ್ತು ಪೆಟ್ರಿ ಮುಂತಾದ ಎಲ್ಲ ಶಾಸ್ತ್ರಜ್ಞರು ಬೆಳ್ಳಿಯು ಮೌಲ್ಯಮಾಪನದ ಪರವಾಗಿದ್ದರಲ್ಲದೇ ವಿಶ್ವದಲ್ಲೆಲ್ಲಾ ಇದ್ದ ಪದ್ಧತಿಯು ಸಹ ಬೆಳ್ಳಿಗೆ ಅನುಕೂಲವಾಗಿತ್ತು.

---

೧. ಬಂಗಾಲದ ರಾಜ್ಯಪಾಲ ಸರ್ ಜಾನ್ ಶೋರ್ ತಮ್ಮ ಸಂಕ್ಷಿಪ್ತ ಟಿಪ್ಪಣಿ, (ಅದೇ ಸ್ಥಳದಲ್ಲಿ ಉಲ್ಲೇಖಿಸಿದ್ದು) ಪ್ಯಾರಾ ೫೫ರಲ್ಲಿ 'ಎ ಟ್ರೈಟೇಜ್ ಆನ್ ದಿ ಕಾಯಿನೇಜ್ ಆಫ್ ದಿ ರೆಲ್ಮ' ಇದರ ಲೇಖಕರನ್ನು ಈ ಮೊದಲು ಕಂಡಿದ್ದರು.

೨. ಹೋಲಿಸಿರಿ : ಎಮ್. ಡನ್ನಿಂಗ್, ಇಂಡಿಯನ್ ಕರೆನ್ಸಿ, ೧೮೯೮ ಅಲ್ಲಲ್ಲಿ, ಅಲ್ಲದೇ ಎನ್.ವಿ. ದೊರೆಸ್ವಾಮಿ, ಅದೇ ಕೃತಿಯಲ್ಲಿ ಉಲ್ಲೇಖಿಸಿದ್ದು, ಅಲ್ಲಲ್ಲಿ

ನಿಸ್ಸಂದೇಹವಾಗಿ ಇಂಗ್ಲೆಂಡ್ ೧೮೧೯ ರಲ್ಲಿ ಚಿನ್ನದ ಆಧಾರವನ್ನು ಜಾರಿಗೆ ತಂದಿತ್ತು. ಆದರೆ ಆ ಕಾಯಿದೆಯು ಇಂಗ್ಲಿಷ್ ಟಂಕಸಾಲೆಗಳಲ್ಲಿ ಬೆಳ್ಳಿಯ ನಾಣ್ಯಗಳ ಮುಕ್ತ ತಯಾರಿಕೆಯನ್ನು ನಿಲ್ಲಿಸುವುದರ ಬದಲು ಅದನ್ನು ರಾಯಲ್ ಘೋಷಣೆಯ ಮುಖಾಂತರ ತೆರೆಯಲು ಅವಕಾಶ ಮಾಡಿಕೊಟ್ಟಿತು.[೧] ವಾಸ್ತವವಾಗಿ ಘೋಷಣೆಯನ್ನು ಎಂದೂ ಹೊರಡಿಸಲಿಲ್ಲ ಎಂಬುದೇನೋ ನಿಜ. ಆದರೆ ಆಗಿನ ಇಂಗ್ಲಿಷ್ ಜನರು ಪ್ರಮಿತಿಯ ಪ್ರಶ್ನೆಯು ಇತ್ಯರ್ಥವಾದ ವಿಷಯವೆಂದು ಭಾವಿಸಿದ್ದರೆಂದು ಕಲ್ಪಿಸಕೂಡದು. ಇಂಗ್ಲಿಷ್ ನಾಣ್ಯಪದ್ಧತಿಯು ಸುಸೂತ್ರವಾಗಿ ಕೆಲಸಮಾಡಲು ಚಿನ್ನದ ಪ್ರಮಿತಿಯು ತೀವ್ರವಾದ ಅಡಚಣೆಯನ್ನು ಉಂಟುಮಾಡಿತು ಎಂಬುದನ್ನು ೧೮೨೫ರ ಬಿಕ್ಕಟ್ಟು ತೋರಿಸಿತು ಮತ್ತು ಆಗಿನ ತಜ್ಞರ ಅಭಿಪ್ರಾಯದ ಪ್ರಕಾರ[೪] ಸುವರ್ಣ ಪ್ರಮಿತಿಯು ಇಂಗ್ಲೆಂಡಿನ ವಾಣಿಜ್ಯದ ಶ್ರೇಷ್ಠತೆಗೆ ಕಾರಣವಾಗುವ ಬದಲು ಖಂಡಿತವಾಗಿಯೂ ಅದರ ಅಭ್ಯುದಯಕ್ಕೆ ಒಂದು ಅಡಚಣೆಯಾಗಿತ್ತು. ಏಕೆಂದರೆ ಅದು ಬಹುತೇಕವಾಗಿ ಬೆಳ್ಳಿಯ ಆಧಾರದ ಮೇಲಿದ್ದ ವಿಶ್ವದ ಉಳಿದೆಲ್ಲ ದೇಶಗಳಿಂದ ಇಂಗ್ಲೆಂಡ್ ದೇಶವನ್ನು ಬೇರ್ಪಡಿಸಿತು. ಸುವರ್ಣ ಪ್ರಮಿತಿಯ ಸಲುವಾಗಿ ಅಂದಿನ ಬ್ರಿಟಿಷ್ ರಾಜತಂತ್ರಜ್ಞರಲ್ಲಿ ಕೂಡ ಹೆಚ್ಚಿನ ಒಲವಿರಲಿಲ್ಲ. ಸರ್ಕಾರವು ಸಂಪೂರ್ಣ ಕಾನೂನುಬದ್ಧ ಹಣದ ಬೆಳ್ಳಿಯ ಪ್ರಮಾಣ ಪತ್ರಗಳನ್ನು ಹೊರಡಿಸಬೇಕೆಂದು ಹಸ್‌ಕಿಸನ್ ಪ್ರಸ್ತಾಪಿಸಿದರು.[೨] ೧೮೪೪ರವರೆಗೆ ಪ್ರಮಿತಿಯ ಪ್ರಶ್ನೆಯು ಇತ್ಯರ್ಥವಾಗದೇ ಹಾಗೆಯೇ ಉಳಿಯಿತು. ಏಕೆಂದರೆ ಪೀಲ್ ಸಂಪುಟಕ್ಕೆ ನೀಡಿದ ತಮ್ಮ ಬಿನ್ನವತ್ತಳೆಯಲ್ಲಿ[೩] ಯಾವುದೇ ಶಂಕೆ ಅಥವಾ ಅನುರಾಗವಿಲ್ಲದೇ ಬೆಳ್ಳಿಯ ಅಥವಾ ದ್ವಿಲೋಹ ಪ್ರಮಿತಿಗೆ ಅನುಕೂಲವಾಗಿ ಸುವರ್ಣ ಪ್ರಮಿತಿಯನ್ನು ಕೈಬಿಡುವ ಸಾಧ್ಯತೆಯನ್ನು ಚರ್ಚಿಸಿದ್ದು ನಮಗೆ ಕಂಡುಬರುತ್ತದೆ. ಹಣಕಾಸಿನ ವಿಷಯದಲ್ಲಿ ಇತರರಿಂದ ಬೇರ್ಪಟ್ಟು ಒಂಟಿಯಾಗುವಲ್ಲಿನ ತೊಂದರೆಗಳು ಬದಲಾವಣೆಯನ್ನು ಒತ್ತಾಯಿಸುವಷ್ಟು ಸ್ಫುಟವಾಗಿ ಪ್ರಮಿತಿಯಲ್ಲಿ ಬಲವಾಗಿರಲಿಲ್ಲ. ಆದರೆ ಹೊರಡಿಸಿದ ಒಟ್ಟು ಹಣದ ಕಾಲು ಭಾಗದಷ್ಟು ಬೆಳ್ಳಿಯ ಬದಲು ನೋಟುಗಳ ತಯಾರಿಕೆಗೆ ಪರವಾನಗಿ ನೀಡುವಂತೆ ಹಸ್‌ಕಿಸನ್ನರ ಯೋಜನೆಯ ಭಾಗವನ್ನು ಒಳಗೊಂಡ ತಮ್ಮ ಪ್ರಸಿದ್ಧ ಷರತ್ತನ್ನು ೧೮೪೪ರ ಬ್ಯಾಂಕ್ ಚಾರ್ಟರ್ ಕಾಯಿದೆಯಲ್ಲಿ ಮಂಡಿಸಲು ಪೀಲ್ ಅವರನ್ನು ಒತ್ತಾಯಿಸುವಷ್ಟು ಅವು ಶಕ್ತವಾಗಿದ್ದವು.[೪] ನಿಜವಾಗಿ ಬೆಳ್ಳಿಯ ಸ್ಥಿರತೆಯಲ್ಲಿ ಸಾರ್ವತ್ರಿಕ ವಿಶ್ವಾಸ ಎಷ್ಟು ಬಲವಾಗಿತ್ತೆಂದರೆ, ೧೮೪೭ರಲ್ಲಿ ಹಾಲೆಂಡ್ ವ್ಯಾವಹಾರಿಕವಾಗಿ ಚಿನ್ನದ ಏಕಲೋಹ ನಾಣ್ಯಪದ್ಧತಿಯಿಂದ[೫] ಬೆಳ್ಳಿಯ ಏಕಲೋಹ ನಾಣ್ಯಪದ್ಧತಿಗೆ ಪರಿವರ್ತನಗೊಂಡಿತು. ಏಕೆದರೆ ಅದರ ರಾಜ ತಂತ್ರಜ್ಞರು ಕೆಳಗಿನಂತೆ ನಂಬಿದ್ದರು :

---

೧. ಹೋಲಿಸಿರಿ : ಡ್ಯಾನಾ ಹಾರ್ಟನ್ ದಿ ಸಿಲ್ವರ್ ಪೌಂಡ್, ೧೮೮೭, ಪು. ೧೬೧

೨. ಹೋಲಿಸಿರಿ : ನಾಣ್ಯ ಸಮಿತಿಯ ಎದುರಿಗೆ ಎ ಬೇರಿಂಗ್ ಅವರ (ನಂತರ ಲಾರ್ಡ್ ಅಶುಬರ್ಟನ್‌ರ) ಪುರಾವೆ ಎಚ್.ಆಫ್.ಸಿ. ೧೮೩೦ರ ರಿಟರ್ನ್ ೩೧

೩. ಗಿಬ್ಸ್ ಅವರು ಮುದ್ರಿಸಿ ಸಚಿವ ಸಂಪುಟಕ್ಕೆ ಸಲ್ಲಿಸಿದ ಬಿನ್ನವತ್ತಳೆಯನ್ನು ನೋಡಿರಿ. ಎ ಕೊಲೋಕ್ವಾಯ್ ಆನ್ ಕರೆನ್ಸಿ (೧೮೯೪) ಸಹಬಂಧ, ಪುಟ XI-VII

೪. ಅದಕ್ಕೆ ನೋಡಿರಿ : ಅಂಡ್ರಿಯಾಡೆಸ್, ಹಿಸ್ಟರಿ ಆಫ್ ದಿ ಬ್ಯಾಂಕ್ ಆಫ್ ಇಂಗ್ಲೆಂಡ್, ಪುರವಣಿ ೧

೫. ಈ ನಿಷ್ಕ್ರಿಯ ಷರತ್ತಿನ ಮೂಲ ಉದ್ದೇಶಕ್ಕಾಗಿ ನೋಡಿರಿ : ಬ್ಯಾಂಕ್ ಚಾರ್ಟರ್ ಕಾಯಿದೆಯ ಬಗ್ಗೆ ಪೀಲ್ ಇವರ ಭಾಷಣ, ದಿನಾಂಕ ಮೇ ೨೦, ೧೮೪೪, ಹನ್ಸಾರ್ಡ್, ಸಂ. LXXIV, ಪುಟಗಳು ೧೩೩೪–೩೫

೬. ೧೮೧೬ರಲ್ಲಿ ಹಾಲೆಂಡ್ ದ್ವಿಲೋಹ ಪದ್ಧತಿಯನ್ನು ಅಳವಡಿಸಿಕೊಂಡಿತು. ಆದರೆ ೧೫.೮೭೩ : ೧ರ ಅಧಿಕೃತ ಅನುಪಾತವು ಬೆಳ್ಳಿಯನ್ನು ಎಷ್ಟು ಅಪಮೌಲ್ಯಗೊಳಿಸಿತು ಎಂದರೆ, ಇದರಿಂದ ಹಾಲೆಂಡ್‌ನಲ್ಲಿ ಚಿನ್ನವು ಮುಖ್ಯ ವಿನಿಮಯ ಮಾಧ್ಯಮವಾಯಿತು.

"ಸುವರ್ಣ ಪ್ರಮಿತಿಯನ್ನು ಸ್ವೀಕರಿಸಿದ ನಂತರ ಇಂಗ್ಲೆಂಡಿನ ಹಣಕಾಸಿನಲ್ಲಿಯ ತೀವ್ರ ಬದಲಾವಣೆಗಳು ಪದೇ ಪದೇ ಸಂಭವಿಸುತ್ತಿದ್ದು, ಅವು ಗಂಭೀರ ಸ್ವರೂಪದ್ದಾಗಿರುತ್ತಿದ್ದವು ಮತ್ತು ಅವುಗಳ ಪರಿಣಾಮಗಳು ಹಾಲೆಂಡಿನಲ್ಲಿ ವಾಣಿಜ್ಯ ಮತ್ತು ಔದ್ಯೋಗಿಕ ಕ್ಷೇತ್ರಗಳ ಮೇಲೆ ಹಾನಿಕಾರಕವಾಗಿದ್ದವು. ಹೀಗಾಗಿ ಇಂಗ್ಲೆಂಡಿನಲ್ಲಿಯ ಹಣಕಾಸು ಪದ್ಧತಿಯ ತದ್ರೂಪದ ಪದ್ಧತಿ ಇರುವುದು ಹಾಲೆಂಡಿನ ವಾಣಿಜ್ಯ ಮತ್ತು ಔದ್ಯಮಿಕ ಹಿತಾಸಕ್ತಿಗೆ ವಿಪತ್ಕಾರಕವಾಗುತ್ತಿತ್ತು. ಬೆಳ್ಳಿಯ ಪ್ರಮಿತಿಯನ್ನು ಜಾರಿಯಲ್ಲಿ ತರುವುದರಿಂದ ತನ್ನ ಹಣವನ್ನು ಹೀರಿ, ತನ್ನ ಆಂತರಿಕ ವ್ಯಾಪಾರವನ್ನು ಕದಡಿಸುವಲ್ಲಿ ಇಂಗ್ಲೆಂಡ್ ದೇಶವನ್ನು ತಡೆಗಟ್ಟಬಹುದು. ಅಲ್ಲದೆ ತಾನು ಕಾರಣವಾಗದ ಹಾಗೂ ಅವುಗಳಿಗೆ ತಾನು ಹೊಣೆಗಾರನಾಗದ ಕೇಡುಗಳಿಂದ ಹಾಲೆಂಡಿಗೆ ರಕ್ಷಣೆಯನ್ನು ದೊರಕಿಸುವುದು."[೧]

ಆದರೆ ಕೋರ್ಟ್ ಅಥವಾ ಲಾರ್ಡ್ ಲಿವರ್‌ಪೂಲ್ ಅವರು ತಾವು ಮಾಡಿದ ಪ್ರಮಾಣ ಲೋಹದ ಆಯ್ಕೆಗೆ ಸ್ಥಿರತೆಯನ್ನು ಆಧಾರವಾಗಿ ತೆಗೆದುಕೊಂಡಿರಲಿಲ್ಲ. ಅದು ಹಾಗಾಗಿದ್ದಿದ್ದರೆ, ಇಬ್ಬರೂ ಬಹುಶಃ ಬೆಳ್ಳಿಯನ್ನು ಆಯ್ಕೆ ಮಾಡಬಹುದಿತ್ತು. ವಾಸ್ತವದಲ್ಲಿ ಎರಡೂ ಪಕ್ಷಗಳ ಆಯ್ಕೆಯಲ್ಲಿಯ ಭಿನ್ನತೆಯು ಮೇಲುನೋಟಕ್ಕೆ ಮಾತ್ರ ಕಾಣುತ್ತಿತ್ತು. ಲಿವರ್ ಪೂಲ್‌ರವರ ಅಭಿಪ್ರಾಯಕ್ಕಿಂತ ಭಿನ್ನವಾದ ಅಭಿಪ್ರಾಯವನ್ನು ಕೋರ್ಟ್ ತಳೆದಿದ್ದುದರ ಹಿಂದೆ ಯಾವ ಗುಪ್ತ ಉದ್ದೇಶವೂ ಇರಲಿಲ್ಲ. ಬದಲಿಗೆ, ಈ ವಿಷಯದಲ್ಲಿ ಸ್ಥಿರತೆಗಿಂತ ಹೆಚ್ಚಾಗಿ ಜನಮತವೇ ನಿರ್ಧಾರಕ ಅಂಶವಾಗಬೇಕು ಎಂಬ ಎರಡೂ ಪಕ್ಷದವರ ಮೂಲಭೂತ ಕಲ್ಪನೆಗಳು ಇದಕ್ಕೆ ಕಾರಣವಾಗಿತ್ತು. ಈ ಒಮ್ಮತದಿಂದ ಮುಂದುವರೆದ ಅವರು ತಾರ್ಕಿಕವಾಗಿ ಭಿನ್ನ ಭಿನ್ನ ದಾರಿಗಳನ್ನು ಹಿಡಿದರು. ಏಕೆಂದರೆ ನಾಣ್ಯದ ಸಂಯೋಜನವನ್ನು ವಿಶ್ಲೇಷಿಸುವಾಗ ಇಂಗ್ಲೆಂಡಿನಲ್ಲಿ ಅದು ದೊಡ್ಡ ಪ್ರಮಾಣದಲ್ಲಿ ಚಿನ್ನದಿಂದ ಮತ್ತು ಭಾರತದಲ್ಲಿ ಬೆಳ್ಳಿಯಿಂದ ರಚಿತವಾಗಿದ್ದು ಕಂಡುಬಂತು. ಅವರ ಸಾಮಾನ್ಯ ಆಧಾರವಚನವನ್ನು ಮಾನ್ಯ ಮಾಡಿ ಏಕೆ ಲಿವರ್‌ಪೂಲ್ ಇಂಗ್ಲೆಂಡಿಗೆ ಚಿನ್ನವನ್ನು ಮತ್ತು ಕೋರ್ಟ್ ಭಾರತಕ್ಕೆ ಬೆಳ್ಳಿಯನ್ನು ಆಯ್ಕೆ ಮಾಡಿದರೆಂಬುದರ ಕಾರಣವನ್ನು ಹೇಳುವುದು ಸುಲಭ. ನಾಣ್ಯದ ನಿಜವಾದ ಸಂಯೋಜನೆಯು ಜನಪ್ರಿಯತೆಯ ಆಧಾರದ ಮೇಲೆ ನಿಂತಿತ್ತೇ ಎಂಬುದನ್ನು ಕೋರ್ಟ್ ಮತ್ತು ಲಾರ್ಡ್ ಲಿವರ್‌ಪೂಲ್‌ರಂತೆ ಅಷ್ಟೊಂದು ತಾತ್ವಿಕವಾಗಿ ಒತ್ತಿಹೇಳಲು ಸಾಧ್ಯವಾಗುವುದಿಲ್ಲ. ಇಂಗ್ಲೆಂಡಿಗೆ ಸಂಬಂಧಿಸಿದಂತೆ ಲಿವರ್‌ಪೂಲ್‌ರ ಅರ್ಥವಿವರಣೆ ಮಹಾನ್ ಅರ್ಥಶಾಸ್ತ್ರಜ್ಞ ಡೇವಿಡ್ ರಿಕಾರ್ಡೋ ಇವರಿಂದ ಪ್ರಶ್ನಿಸಲ್ಪಟ್ಟಿದೆ. ರಿಕಾರ್ಡೋ ಹೀಗೆ ಬರೆದರು:–

"ಲಿವರ್‌ಪೂಲ್‌ರು ಕೊಟ್ಟ ಅನೇಕ ಕಾರಣಗಳಿಗಾಗಿ ಸುಮಾರು ಒಂದು ಶತಕದವರೆಗೆ ಚಿನ್ನದ ನಾಣ್ಯವು ಪ್ರಧಾನ ಮೌಲ್ಯದ ಸಾಧನವಾದದ್ದು ನಿರ್ವಿವಾದವಾಗಿ ಸಿದ್ಧವಾಗಿದೆಯೆಂದು ಕಂಡುಬರುತ್ತದೆ. ಆದರೆ ಇದು ನಾಣ್ಯ ತಯಾರಿಕೆಯ ಪ್ರಮಾಣಗಳ ಖಚಿತವಲ್ಲದ ನಿರ್ಧಾರದ ಕಾರಣದಿಂದಿರಬೇಕೆಂದು ನನಗೆ ಅನಿಸುತ್ತದೆ. ಚಿನ್ನಕ್ಕೆ ಅತಿಯಾದ ಮೌಲ್ಯವನ್ನು ಕಟ್ಟಲಾಗಿದೆ. ಆದ್ದರಿಂದ ತನ್ನ ಪ್ರಮಾಣ ತೂಕವನ್ನು ಹೊಂದಿದ ಬೆಳ್ಳಿಯ ನಾಣ್ಯವು ಚಲಾವಣೆಯಲ್ಲಿ ಉಳಿಯಲಾರದು. ಒಂದು ಹೊಸ ನಿಬಂಧನೆಯು ಬಂದಲ್ಲಿ ಮತ್ತು ಬೆಳ್ಳಿಯ ಮೌಲ್ಯವನ್ನು ಹೆಚ್ಚು ಕಟ್ಟಿದಲ್ಲಿ ... ಆಗ ಚಿನ್ನವು ಮಾಯವಾಗಿ ಬೆಳ್ಳಿಯು ಅಧಿಕೃತ ಹಣವಾಗುವುದು."[೨]

---

೧. ಯು.ಎಸ್. ಸಿಲ್ವರ್ ಕಮಿಷನ್ ವರದಿ, ೧೮೭೬, ಪು, ೬೮

೨. ಕೃತಿಗಳು, ಪು. ೨೭೧

ಮತ್ತು ಭಾರತದಲ್ಲಿ ಚಿನ್ನದ ಪ್ರಾಬಲ್ಯಕ್ಕೆ ಜನರ ಇಷ್ಟಕ್ಕಿಂತ[೧] ನಾಣ್ಯ ತಯಾರಿಕೆಯ ಪ್ರಮಾಣಗಳು ಬೆಳ್ಳಿಯು ಮೇಲುಗೈಯಾಗುವುದಕ್ಕೆ ಕಾರಣವಾಗಿದೆ.[೨]

ಜನಪ್ರಿಯತೆಯ ಹೊರತು ಮತ್ತೆ ಬೇರೆ ಯಾವುದಾದರೂ ಮಾನದಂಡದ ಕಾರಣಕ್ಕಾಗಿ ಕೋರ್ಟ್ ಏಕಲೋಹ ನಾಣ್ಯಪದ್ಧತಿಯನ್ನು ಜಾರಿಯಲ್ಲಿ ತಂದಿತ್ತೋ ಎಂಬುದು ಚರ್ಚಾಸ್ಪದ ಪ್ರಶ್ನೆ. ಬೆಳ್ಳಿಯ ಏಕಲೋಹ ನಾಣ್ಯಪದ್ಧತಿಯನ್ನು ಜಾರಿಗೊಳಿಸಿದ್ದು ಕಾಯಿದೆಯು ಅಂಗೀಕೃತವಾದಾಗ ಬಹುವಾಗಿ ಬೆಂಬಲಿಸಲ್ಪಟ್ಟಿದ್ದರೂ, ಸ್ವಲ್ಪ ಸಮಯದಲ್ಲಿಯೇ ದೇಶದ ಅಗತ್ಯಗಳನ್ನು ಪೂರೈಸಲು ಅತ್ಯಂತ ಅಸಮರ್ಪಕ ಕ್ರಮವಾಯಿತು ಎಂದು ಹೇಳಿದರೆ ಸಾಕು. ಇದೇ ವೇಳೆಗೆ ಭಾರತೀಯರ ಅರ್ಥವ್ಯವಸ್ಥೆಯಲ್ಲಿ ಬೃಹತ್ ಬದಲಾವಣೆಗಳು ಆಗುತ್ತಿದ್ದವು ಎಂಬುದು ಗಮನಾರ್ಹ. ವಿನಿಮಯ ಪದ್ಧತಿಯ ಸ್ಥಾನದಲ್ಲಿ ಹಣದ ಚಲಾವಣೆ ಜಾರಿಗೆ ಬರುತ್ತಿದ್ದುದೂ ಅಂತಹ ಬದಲಾವಣೆಗಳಲ್ಲಿ ಒಂದಾಗಿತ್ತು. ಈ ಪರಿವರ್ತನೆಗೆ ಸಹಾಯವಾಗುತ್ತಿದ್ದ ಮುಖ್ಯ ಕಾರಣಗಳಲ್ಲಿ ಬ್ರಿಟಿಷರ ಆದಾಯ ಮತ್ತು ಹಣಕಾಸು ಪದ್ಧತಿಗೆ ಪ್ರಥಮ ಸ್ಥಾನವನ್ನೀಯಬೇಕು. ಭಾರತೀಯ ಸಮಾಜವನ್ನು ಚಲಾವಣೆಯ ಪದ್ಧತಿಗೆ ಬದಲಾಯಿಸುವುದರಿಂದ ಉಂಟಾದ ಪರಿಣಾಮಗಳನ್ನು ಸರಿಯಾದ ರೀತಿಯಲ್ಲಿ ಮನಗಂಡಿಲ್ಲ.[೩] ಸ್ಥಳೀಯ ಪ್ರಭುಗಳ ಆಳ್ವಿಕೆಯಲ್ಲಿ ಬಹಳಷ್ಟು ಪಾವತಿಗಳು ವಸ್ತುಗಳ ವಿನಿಮಯದ ಮೂಲಕ ಆಗುತ್ತಿದ್ದವು. ಸರ್ಕಾರದಿಂದ ಇಡಲಾದ ಸ್ಥಿರ ಮಿಲಿಟರಿ ಬಲ ಮತ್ತು ಅವರಿಗೆ ಕೊಡಲಾಗುವ ವೇತನ ಅಲ್ಪವಿದ್ದವು. ಸೈನ್ಯದ ದೊಡ್ಡ ಭಾಗವು ಜಹಗೀರದಾರರು ಮತ್ತು ಜಮೀನುದಾರರು ಒದಗಿಸಿದ ಒಂದು ಬಗೆಯ ಪ್ರಜಾಸೈನ್ಯ ಸಿಬ್ಬಂದಿಯನ್ನು ಒಳಗೊಂಡಿತ್ತು ಮತ್ತು ಸೈನ್ಯ ಅಥವಾ ಈ ಜಹಗೀರದಾರರು ಇವರನ್ನು ಅವರಿದ್ದ ಜಿಲ್ಲೆಗಳಿಂದ ಪೂರೈಸಲಾದ ಧಾನ್ಯ, ಕುದುರೆ ಮತ್ತು ದನಗಳಿಗೆ ಹಾಕುವ ಆಹಾರ ಮತ್ತಿತರ ಸರಬರಾಜುಗಳ ಮೇಲೆ ಪೋಷಿಸಲಾಗುತ್ತಿತ್ತು. ಆನುವಂಶಿಕ ಆದಾಯವು ವಸ್ತುಗಳ ರೂಪದಲ್ಲಿರುತ್ತಿತ್ತು ಮತ್ತು ಪೊಲೀಸ್ ಅಧಿಕಾರಿಗಳಿಗೆ ಸಾಮಾನ್ಯವಾಗಿ ಸೇವೆಯ ಅವಧಿಯನ್ನು ಅವಲಂಬಿಸಿ ಅವರ ವೇತನವನ್ನು ಜಮೀನನ್ನು ಕೊಡುವ ಮೂಲಕ ನೀಡಲಾಗುತ್ತಿತ್ತು. ಕೃಷಿ ಸೇವಕರ ಮತ್ತು ಕಾರ್ಮಿಕ ಮಜೂರಿಯನ್ನು ಧಾನ್ಯ ರೂಪದಲ್ಲಿ ವಿತರಣೆ ಮಾಡಲಾಗುತ್ತಿತ್ತು. ಬಹಳಷ್ಟು ಅಧಿಕಾರಿಗಳಿಗೆ ವಸ್ತುಗಳ ರೂಪದಲ್ಲಿ ವೇತನವನ್ನು ಕೊಡಲಾಗುತ್ತಿದ್ದರಿಂದ, ಸರ್ಕಾರವು ಹಣದ ರೂಪದಲ್ಲಿ ಬಹಳ ಕಡಿಮೆ ತೆರಿಗೆಯನ್ನು ಸಂಗ್ರಹಿಸುತ್ತಿತ್ತು. ಈ ಒರಟು ಆದಾಯ ಮತ್ತು ಹಣಕಾಸು ಪದ್ಧತಿಯಲ್ಲಿ ಬ್ರಿಟಿಷರು ಮಾಡಿದ ಹೊಸ ಬದಲಾವಣೆಗಳು

---

೧. ಶ್ರೀ ಡಾಡ್‌ವೆಲ್ ಅಲ್ಲಿ ಉಲ್ಲೇಖಿಸಿದ ತಮ್ಮ ಉತ್ಕೃಷ್ಟ ಲೇಖನದಲ್ಲಿ ಬೆಳ್ಳಿಯ ಬಗ್ಗೆ ಜನರಲ್ಲಿದ್ದ ಸ್ವಾಭಾವಿಕ ಒಲವಿನ ಪರಿಣಾಮವಾಗಿ ದಕ್ಷಿಣ ಭಾರತದಲ್ಲಿ ಬಂಗಾರದ ಬದಲು ಅದನ್ನು ಉಪಯೋಗಿಸಲಾಯಿತೆಂದು ತಿಳಿದಿರುವಂತೆ ಕಾಣುತ್ತದೆ. ಶ್ರೀ ದೊರೈಸ್ವಾಮಿಯವರಂಥ ಲೇಖಕರ ವಾದಗಳನ್ನು ಎದುರಿಸಲು ಅವರು ಎಷ್ಟೊಂದು ಉತ್ಸುಕರಾಗಿದ್ದರೆಂದರೆ ಹೇಗೆ ತಮ್ಮ ಸ್ವಂತ ಅಂಶಗಳು ತಮ್ಮದೇ ಸಿದ್ಧಾಂತದ ತದ್ವಿರುದ್ಧವಾಗಿವೆ ಎಂಬುದನ್ನು ಕಾಣಲೂ ಅವರು ವಿಫಲರಾಗುತ್ತಾರೆ.

೨. ಜುಲೈ ೧೮೯೨ ರ ಕಲ್ಕತ್ತಾ ರಿವ್ಯೂದಲ್ಲಿ ಶ್ರೀ ಎಫ್.ಸಿ. ಹ್ಯಾರಿಸನ್ ಮಾಡಿದ ಅಂದಾಜಿನ ಪ್ರಕಾರ ೧೮೦೦ ರಂದ ೧೮೩೫ ರವರೆಗೆ ಭಾರತದಲ್ಲಿಯ ಒಟ್ಟು ನಾಣ್ಯ ತಯಾರಿಕೆಯು ಕೆಳಗಿನಂತಿತ್ತು.

ಚಿನ್ನ : ೩,೮೪೫,೦೦೦ ಔನ್ಸುಗಳು

ಬೆಳ್ಳಿ : ೩,೭೮೧,೨೫೦,೦೦೦ ಔನ್ಸುಗಳು

ಗಮನಿಸಿ : ಬೆಳ್ಳಿಯ ವಿಷಯದಲ್ಲಿ ಹೋಲಿಕೆಯ ಸಲುವಾಗಿ ರೂಪಾಯಿಗಳನ್ನು ಔನ್ಸುಗಳಲ್ಲಿ ಪರಿವರ್ತಿಸಲಾಗಿದೆ.

೩. ಏಪ್ರಿಲ್ ೧೮೫೭ರ ಬಾಂಬೆ ಕ್ವಾರ್ಟರ್ಲಿ ರಿವ್ಯೂದಲ್ಲಿ "ದಿ ಸಿಲ್ವರ್ ಕೊಶ್ಚನ್ ಆಸ್ ರಿಗಾರ್ಡ್ಸ್ ಇಂಡಿಯಾ" ಲೇಖನವನ್ನು ಹೋಲಿಸಿರಿ.

ಬಹಳಷ್ಟು ವ್ಯಾಪಕ ಸ್ವರೂಪದ್ದಾಗಿದ್ದವು. ಒಂದರ ನಂತರ ಒಂದು ಪ್ರದೇಶಗಳು ಬ್ರಿಟಿಷರ ಆಳ್ವಿಕೆಯಲ್ಲಿ ಬಂದದ್ದರಿಂದ, ಜಮೀನುದಾರರ ಗ್ರಾಮೀಣ ಪ್ರಜಾಸೈನ್ಯದ ಸ್ಥಳದಲ್ಲಿ ಕ್ರಮಬದ್ಧವಾಗಿ ರಚಿತವಾದ ಸೈನ್ಯವನ್ನು ತರುವುದು ಮತ್ತು ಹಣದ ರೂಪದಲ್ಲಿ ಸಂಬಳ ಕೊಡಲಾಗುವ ಒಳ್ಳೆಯ ಶಿಸ್ತಿನ ಶಾಶ್ವತ ಸೈನ್ಯವನ್ನು ವಿವಿಧ ಸೇನಾ ಠಾಣೆಗಳಲ್ಲಿ ಸ್ಥಾಪಿಸುವುದು ಬ್ರಿಟಿಷರು ತೆಗೆದುಕೊಂಡ ಪ್ರಥಮ ಕ್ರಮವಾಗಿತ್ತು. ಸೈನ್ಯದಲ್ಲಿಯಂತೆ ನಾಗರಿಕ ಸೇವೆಗಳಲ್ಲಿ ಸವಲತ್ತು ಮತ್ತು ಪರೋಕ್ಷ ಲಾಭಗಳನ್ನು ಪಡೆಯುತ್ತಿದ್ದ ಮೊದಲಿನ ಕಂದಾಯ ಮತ್ತು ಪೊಲೀಸ್ ಅಧಿಕಾರಿಗಳನ್ನು ಹಾಗೂ ಅವರ ಅನುಚರರನ್ನು ತೆಗೆದುಹಾಕಿ ಅವರ ಸ್ಥಳದಲ್ಲಿ ಪ್ರಚಲಿತ ನಾಣ್ಯಗಳಲ್ಲಿ ಸಂಬಳ ಪಡೆಯುವ ಆದಾಯ ಕಲೆಕ್ಟರ್ ಮತ್ತು ದಂಡಾಧಿಕಾರಿಗಳ ಸಮೂಹವನ್ನು ನೇಮಿಸಲಾಯಿತು. ಸೈನ್ಯ, ಪೊಲೀಸ್ ಮತ್ತು ಇತರ ನೌಕರರಿಗೆ ಕೊಡಲಾಗುತ್ತಿದ್ದ ಸಂಬಳಗಳಷ್ಟೇ ಬ್ರಿಟಿಷ್ ಸರ್ಕಾರವು ಮಾಡುತ್ತಿದ್ದ ಹಣದ ಪಾವತಿಗಳಾಗಿರಲಿಲ್ಲ. ಇವುಗಳ ಜೊತೆಗೆ ಸ್ಥಳೀಯ ಸರ್ಕಾರಗಳಿಗೆ ಗೊತ್ತಿರದ 'ಗೃಹ ವೆಚ್ಚಗಳು' 'ಸಾರ್ವಜನಿಕ ಸಾಲದ ಮೇಲಿನ ಬಡ್ಡಿ' ಮುಂತಾದವುಗಳು ಕೂಡ ನಗದಿನ ರೂಪದಲ್ಲಿ ಪಾವತಿ ಮಾಡಲ್ಪಡುತ್ತಿದ್ದವು. ನಗದು ಹಣದ ರೂಪದಲ್ಲಿ ಸಂಬಳವನ್ನು ಕೊಡುವ ವಾಗ್ದಾನ ಮಾಡಿದ್ದರಿಂದ ಅದಕ್ಕೆ ತನ್ನ ಎಲ್ಲ ತೆರಿಗೆಗಳನ್ನು ನಗದು ರೂಪದಲ್ಲಿಯೇ ಸಂಗ್ರಹಿಸಬೇಕಾಯಿತು. ಮತ್ತು ಪ್ರತಿಯೊಬ್ಬ ನಾಗರಿಕನು ನಗದು ಹಣದಲ್ಲಿಯೇ ಕೊಡಬೇಕಾಗುತ್ತಿದ್ದರಿಂದ ಆತನು ಕೂಡ ನಗದು ಹಣದ ಹೊರತು ಬೇರೆ ಏನನ್ನೂ ಸ್ವೀಕರಿಸದ ಪದ್ಧತಿ ಜಾರಿಗೆ ಬಂದಿತು. ಈ ಪ್ರಕಾರ ಸಮಾಜದ ರಚನೆಯು ಸಂಪೂರ್ಣವಾಗಿ ಪರಿವರ್ತನೆಗೊಂಡಿತು.

ಭಾರತೀಯ ಜನರ ಅರ್ಥವ್ಯವಸ್ಥೆಯಲ್ಲಿ ಸಂಭವಿಸಿದ ಮತ್ತೊಂದು ಬದಲಾವಣೆಯೆಂದರೆ, ಈ ವೇಳೆಗೆ ವ್ಯಾಪಾರವು ಅಪಾರವಾಗಿ ವೃದ್ಧಿಯಾಯಿತು. ಸಾಕಷ್ಟು ಸಮಯದವರೆಗೆ ಬ್ರಿಟಿಷ್ ಆಮದು, ರಫ್ತು, ಸುಂಕ ಧೋರಣೆ ಮತ್ತು ಸಮುದ್ರಯಾನ ಕಾಯಿದೆಗಳು ಭಾರತದ ವ್ಯಾಪಾರದ ವಿಕಾಸಕ್ಕೆ ವಾಸ್ತವಿಕವಾಗಿ ತಡೆಯೊಡ್ಡಿದ್ದವು. ಭಾರತವು ಇಂಗ್ಲೆಂಡಿನ ಹತ್ತಿ ಮತ್ತಿತರ ತಯಾರಿಕೆಗಳನ್ನು ಸಾಂಕೇತಿಕ ಕರಗಳ (೨$^{1}/_{2}$ ಪ್ರತಿ ಶತ) ಸಾಮೀಪ್ಯದಲ್ಲಿ ಸ್ವೀಕರಿಸಲು ಇಂಗ್ಲೆಂಡ್ ಒತ್ತಾಯಿಸಿತಲ್ಲದೇ ಶೇ.೫೦ರಿಂದ ೫೦೦ರ ಮೇರೆಯಲ್ಲಿಯ ನಿಷೇಧಕರ ಕರಗಳನ್ನು ವಿಧಿಸುವುದರ ಮೂಲಕ ಭಾರತೀಯ ಸರಕುಗಳ ಪ್ರವೇಶವನ್ನು ತನ್ನ ಪ್ರದೇಶಗಳಲ್ಲಿ ಪ್ರತಿಬಂಧಿಸಿತು. ಇಂಗ್ಲೆಂಡ್ ಭಾರತಕ್ಕೆ ಸಹಕಾರಿ ಮನೋಧರ್ಮ ತೋರದಿದ್ದುದು ಮಾತ್ರವಲ್ಲದೆ ತನ್ನ ಸರಕುಗಳೊಂದಿಗೆ ಸ್ಪರ್ಧಿಸುವ ತನ್ನ ವಸಾಹತುಗಳ ಸರಕುಗಳಿಗೆ ಅನುಕೂಲವಾಗುವಂತೆ ಪಕ್ಷಪಾತ ಮಾಡಿತು. ಈ ಅನ್ಯಾಯದ ನಡೆವಳಿಕೆಯ ವಿರುದ್ಧ ದೊಡ್ಡ ಆಂದೋಲನವನ್ನು ಮಾಡಲಾಯಿತು,[೧] ಮತ್ತು ಕೊನೆಗೆ ಸರ್ ರಾಬರ್ಟ್ ಪೀಲ್ ೧೮೪೨ರ ಸುಧಾರಿತ ಆಯಾತ–ನಿರ್ಯಾತ ಸುಂಕದ ಕಾಯಿದೆಯ ಮೂಲಕ ಭಾರತೀಯ ಸರಕುಗಳ ಮೇಲೆ ಹೇರುತ್ತಿದ್ದ ಸುಂಕವನ್ನು ಕಡಿಮೆಮಾಡಲು ಅನುಮತಿಸಿದರು. ಸಮುದ್ರಯಾನ ಕಾನೂನನ್ನು ರದ್ದುಮಾಡಿದುದು ಭಾರತೀಯ ವಾಣಿಜ್ಯದ ವಿಕಾಸಕ್ಕೆ ಮತ್ತಷ್ಟು ಪ್ರಚೋದನೆಯನ್ನು ಕೊಟ್ಟಿತು. ಇದರ ಕೂಡ ಭಾರತೀಯ ಸರಕುಗಳಿಗೆ ಬೇಡಿಕೆಯು ಕೂಡ ಹೆಚ್ಚಾಗುತ್ತಿತ್ತು. ೧೮೫೪ರ ಕ್ರಿಮಿಯನ್ ಯುದ್ಧವು ರಷ್ಯಾದ ಸರಬರಾಜುಗಳನ್ನು ನಿಲ್ಲಿಸಿತು. ಆ ಸ್ಥಳವನ್ನು ಭಾರತೀಯ ಸರಕುಗಳು

೧. ಭಾರತೀಯ ವಾಣಿಜ್ಯವನ್ನು ಬಾಧಿಸುವ ಸುಂಕಗಳನ್ನು ಕುರಿತು ಈಸ್ಟ್ ಇಂಡಿಯಾ ಹೌಸ್‌ನಲ್ಲಿ ಆದ ವಿವಾದಗಳನ್ನು ಹೋಲಿಸಿರಿ. ನೋಡಿರಿ : ದಿ ಏಷಿಯಾಟಿಕ್ ಜರ್ನಲ್ ಅಂಡ್ ಮಂತ್ಲಿ ರಿಜಿಸ್ಟರ್ ಫಾರ್ ಬ್ರಿಟಿಷ್ ಅಂಡ್ ಫಾರಿನ್ ಇಂಡಿಯಾ, ಚೈನಾ, ಆಸ್ಟ್ರೇಲಿಯಾ (ಲಂಡನ್, ನ್ಯೂ ಸಿರೀಸ್‌ಜ್, ಸಂ. XXXVII, ಜನವರಿ ಮತ್ತು ಸಂ. XXXVII, ಮೇ ೧೮೪೨)

ಆವರಿಸಿದವು ಮತ್ತು ಯುರೋಪಿನಾದ್ಯಂತ ೧೮೫೩ರಲ್ಲಿ ರೇಷ್ಮೆ ಬೆಳೆಯ ವೈಫಲ್ಯದಿಂದ ಭಾರತವೂ ಸೇರಿದಂತೆ ಏಷ್ಯಾ ಖಂಡದ ರೇಷ್ಮೆಗೆ ಹೆಚ್ಚಿನ ಬೇಡಿಕೆ ಬಂದಿತು.

ಚಲಾವಣೆಯಲ್ಲಿಯ ನಾಣ್ಯಸ್ಥಿತಿಯ ಮೇಲೆ ಈ ಎರಡು ಬದಲಾವಣೆಗಳಿಂದ ಆದ ಪರಿಣಾಮವು ಸ್ಪಷ್ಟವಿದೆ. ಎರಡೂ ನಗದು ಹಣಕ್ಕೆ ಹೆಚ್ಚಿನ ಬೇಡಿಕೆಯನ್ನು ತಂದವು. ಆದರೆ ನಗದು ಹಣವನ್ನು ದೊರಕಿಸುವುದು ಅತ್ಯಂತ ಕಷ್ಟದಾಯಕವಾಗಿತ್ತು. ಭಾರತವು ಯಾವುದೇ ಬೃಹತ್ ಪ್ರಮಾಣದಲ್ಲಿ ಅಮೂಲ್ಯವಾದ ಲೋಹಗಳನ್ನು ಉತ್ಪಾದಿಸುತ್ತಿರಲಿಲ್ಲ. ಅವುಗಳನ್ನು ಪಡೆಯಲು ಭಾರತ ತನ್ನ ವ್ಯಾಪಾರದ ಮೇಲೆ ಅವಲಂಬಿಸಬೇಕಾಗಿತ್ತು. ಯುರೋಪಿನಲ್ಲಿ[೧] ಅಂದು ಅಮೂಲ್ಯವಾದ ಲೋಹಗಳ ನಿರ್ಯಾತದ ಮೇಲಿದ್ದ ನಿಷೇಧಾಜ್ಞೆಯ ಕಾರಣದಿಂದ ಅವುಗಳನ್ನು ಪಡೆಯುವ ಒಂದು ಮಾರ್ಗವು ಮುಚ್ಚಿತು. ಅಂಥ ನಿಷೇಧಾಜ್ಞೆಯು ಇಲ್ಲದಿದ್ದರೂ, ಯುರೋಪಿನಿಂದ ಅಮೂಲ್ಯವಾದ ಲೋಹಗಳನ್ನು ಪಡೆಯುವ ಸಂಭವ ಕಡಿಮೆ ಇತ್ತು. ವಾಸ್ತವಿಕವಾಗಿ, ಅಂಥ ನಿಷೇಧಾಜ್ಞೆಗಳನ್ನು ಹಿಂತೆಗೆದುಕೊಂಡಾಗ ಅಮೂಲ್ಯವಾದ ಲೋಹಗಳು ಭಾರತಕ್ಕೆ ಹರಿದುಬರಲಿಲ್ಲ.[೨] ಮಿ. ಪೆಟ್ರಿ ಅವರು ಮದರಾಸು ಸುಧಾರಣಾ ಸಮಿತಿಗೆ ನವೆಂಬರ್ ೧೭೯೯ರಲ್ಲಿ ಕೊಟ್ಟ ಲಘು ಟಿಪ್ಪಣಿಯಲ್ಲಿ ಅಮೂಲ್ಯವಾದ ಲೋಹಗಳ ಆಮದಿಗೆ ಇದ್ದ ಅಡ್ಡಿಯ ಕಾರಣವನ್ನು ಬಹಳ ಚೆನ್ನಾಗಿ ತೋರಿಸಿಕೊಟ್ಟರು.[೩] ಮಿ. ಪೆಟ್ರಿಯವರ ಪ್ರಕಾರ ಯುರೋಪಿಯನ್ನರು ತಾವು ಪ್ರಾದೇಶಿಕ ಆಸ್ತಿಪಾಸ್ತಿಗಳನ್ನು ಗಳಿಸುವ ಮೊದಲು, "ಯುರೋಪಿನ ಲೋಹದ ಹಣಗಳಿಂದ ಭಾತರದ ತಯಾರಿಕೆಗಳನ್ನು ಖರೀದಿಸಿದರು ಆದರೆ ಅವರು ನಂತರ ಅಂತಹ ಖರೀದಿಗಳನ್ನು ಮಾಡಲು ಭಾರತದ ಚಿನ್ನ ಮತ್ತು ಬೆಳ್ಳಿಗಳನ್ನು ನೀಡಬೇಕಿತ್ತು. ಸ್ಥಳೀಯ ಆದಾಯಗಳು ವಿದೇಶೀ ಅಪರಂಜಿಯ ಸ್ಥಾನವನ್ನು ತುಂಬಿದವು ಇದರಿಂದ ಭಾರತೀಯ ಉತ್ಪಾದಕರಿಗೆ ಅವರವರ ಹಣದಲ್ಲಿಯೇ ಪಾವತಿಯನ್ನು ಮಾಡಲಾಗುತ್ತಿತ್ತು. ಪ್ರಾರಂಭದಲ್ಲಿ ವ್ಯವಹಾರದಲ್ಲಿನ ಈ ಕ್ರಾಂತಿಯು ಅಷ್ಟಾಗಿ ಅನುಭವಕ್ಕೆ ಬಾರದಿದ್ದರೂ, ಶ್ರೀಮಂತ ಮತ್ತು ವ್ಯಾಪಕ ರಾಜ್ಯಗಳನ್ನು ಇಂಗ್ಲಿಷರು ಸ್ವಾಧೀನಪಡಿಸಿಕೊಂಡ ನಂತರ, ಹಾಗೂ ಯುದ್ಧದಲ್ಲಿನ ಸತತ ವಿಜಯಗಳು, ವ್ಯಾಪಾರದಲ್ಲಿ ಪೂರ್ವದೇಶಗಳನ್ನೆಲ್ಲಾ ಆಕ್ರಮಿಸುವಂತಿದ್ದ ಯುರೋಪಿನ ರಾಷ್ಟ್ರಗಳಲ್ಲಿನ ಪರಸ್ಪರ ಸ್ಪರ್ಧೆ, ಪೂರ್ವದಲ್ಲಿನ ಉತ್ಪಾದನೆಯಿಂದ ಬರುತ್ತಿದ್ದ ಲಕ್ಷಾಂತರ ರೂಪಾಯಿಗಳ ಆದಾಯ ಇವುಗಳಿಂದಾಗಿ, ಕ್ರಾಂತಿಯ ಪರಿಣಾಮವು ಭಾರತದ ಎಲ್ಲಾ ಭಾಗಗಳಲ್ಲಿಯೂ ತೀವ್ರವಾಗಿದ್ದುದು ಅರಿವಿಗೆ ಬಂದಿತು. ಇದರಿಂದಾಗಿ ಅಷ್ಟೊಂದು ಸಮೃದ್ಧವಾಗದ ಹಣಕಾಸಿನ ವ್ಯವಸ್ಥೆಯು ತನ್ನ ರಭಸವನ್ನು ಕಳೆದುಕೊಂಡು ಶೀಘ್ರವಾಗಿ ಆರ್ಥಿಕ ಹಿನ್ನಡೆಯನ್ನು ಅನುಭವಿಸಿತು."

---

೨. ಇಂಗ್ಲೆಂಡ್ ವಿಧಿಸಿದ ನಿಷೇಧಾಜ್ಞೆಗಳ ಇತಿಹಾಸಕ್ಕಾಗಿ ಹೋಲಿಸಿರಿ : ರೂಡಿಂಗ್, ಅನಲ್ಸ್ ಆಫ್ ಕಾಯಿನೇಜ್, ೩ನೇ ಆವೃತ್ತಿ, ಸಂ. ೧ ಪುಟಗಳು ೩೫೩–೪, ೩೭೨, ೩೭೬, ೩೮೬–೭, ಥಾಮಸ್ ವಾಯೋಲೆಟ್, ಅನ್ ಅಫೀಲ್ ಟು ಸೀಜರ, ಲಂಡನ್, ೧೬೬೦, ಪು. ೨೬

೩. ಇಂಗ್ಲೆಂಡ್‌ನಿಂದ ಭಾರತಕ್ಕೆ ನಿರ್ಯಾತ ಮಾಡಲಾದ ಅಮೂಲ್ಯವಾದ ಲೋಹಗಳ ಕೆಳಗಿನ ಅಂಕಿಸಂಖ್ಯೆಗಳು ಕುತೂಹಲಕಾರಿಯಾಗಿವೆ:

೧೬೫೨ – ೧೭೦೩............... ೧,೧೩೧, ೬೫೩ ಶ್ರೀ ಟ್ರಿಯ ಲಘು ಟಿಪ್ಪಣಿಯಿಂದ

೧೭೪೭ – ೧೭೯೫............ ೧,೫೮೯,೬೫೪ („ „ „ )

೩. ಸಮಿತಿಯ ನಡೆವಳಿಗಾಗಿ ನೋಡಿರಿ : ಇಂಡಿಯಾ ಆಫೀಸ್ ರೆಕಾರ್ಡ್ಸ್, "ಹೋಮ್ ಮಿಸಲೇನಿಯಸ್" ಸಿರೀಸ್, ಸಂ. ೪೮೬

# ಪಟ್ಟಿ IV
## ವ್ಯಾಪಾರ ಮತ್ತು ನಾಣ್ಯ

| ವರ್ಷಗಳು | ವಾಣಿಜ್ಯ ಸರಕು | | ನಿಧಿಗಳ ನಿವ್ವಳ ಆಯಾತಗಳು | | ಒಟ್ಟು ನಾಣ್ಯ ತಯಾರಿಕೆ | | ನಿವ್ವಳ ಆಯಾತಗಳ ಮೇಲೆ ನಾಣ್ಯ ತಯಾರಿಕೆಯ ಆಧಿಕ್ಯ (+) ಅಥವಾ ಕೊರತೆ (–) | | ವಾರ್ಷಿಕ ಉತ್ಪಾದನೆ (ಗಳಲ್ಲಿ £ ೦೦.೦೦೦ ಬಿಟ್ಟಿದೆ) | |
|---|---|---|---|---|---|---|---|---|---|---|
| | ಆಯಾತಗಳು £ | ನಿರ್ಯಾತಗಳು £ | ಬೆಳ್ಳಿ £ | ಚಿನ್ನ £ | ಬೆಳ್ಳಿ £ | ಚಿನ್ನ £ | ಬೆಳ್ಳಿ £ | ಚಿನ್ನ £ | ಚಿನ್ನ £ | ಬೆಳ್ಳಿ £ |
| ೧೮೫೦-೫೧ | ೧೧,೫೫೮,೭೮೯ | ೧೮,೧೬೪,೧೫೦ | ೨,೧೧೭,೨೯೪ | ೧,೧೫೩,೨೯೪ | ೩,೫೫೭,೯೦೬ | ೧೨೩,೭೧೭ | +೧,೪೪೦,೬೮೧ | –೧,೦೨೯,೫೭೭ | ೮,೯ | ೭,೮ |
| ೧೮೫೧-೫೨ | ೧೨,೨೪೦,೪೯೦ | ೧೯,೮೭೯,೪೦೬ | ೨,೮೬೫,೩೫೭ | ೧,೨೬೭,೬೧೩ | ೫,೧೭೦,೦೧೪ | ೨,೫೫೩ | +೨,೩೦೪,೬೫೭ | –೧,೨೦೫,೦೬೦ | ೧೩,೫ | ೮,೦ |
| ೧೮೫೨-೫೩ | ೧೦,೦೭೦,೮೬೩ | ೨೦,೪೬೪,೬೩೩ | ೩,೬೦೫,೦೨೪ | ೧,೧೭೨,೩೦೧ | ೫,೯೦೨,೬೪೮ | ಇಲ್ಲ | +೨,೨೯೭,೬೨೪ | –೧,೧೭೨,೩೦೧ | ೩೬,೬ | ೮,೧ |
| ೧೮೫೩-೫೪ | ೧೧,೧೨೨,೬೫೯ | ೧೯,೨೯೫,೧೩೯ | ೨,೩೦೫,೭೪೪ | ೧,೦೬೧,೪೪೩ | ೫,೮೮೮,೨೧೭ | ೧೪೫,೬೭೯ | +೩,೫೮೨,೪೭೩ | –೯೧೫,೭೬೪ | ೩೧,೧ | ೮,೧ |
| ೧೮೫೪-೫೫ | ೧೨,೭೪೨,೬೭೧ | ೧೮,೯೨೭,೨೨೨ | ೨೯,೬೦೦ | ೭೩೧,೪೯೦ | ೧,೮೯೦,೦೫೫ | ೨,೬೭೬ | +೧,೮೬೦,೪೫೫ | –೭೨೮,೮೧೪ | ೨೫,೫ | ೮,೧ |
| ೧೮೫೫-೫೬ | ೧೩,೯೪೩,೪೯೪ | ೨೩,೦೩೮,೨೫೯ | ೮,೧೯೪,೩೭೫ | ೨,೫೦೬,೨೪೫ | ೭,೩೨೨,೮೭೧ | ೧೬೭,೮೬೩ | +೮೭೧,೫೦೪ | –೨,೩೩೮,೩೮೨ | ೨೭,೦ | ೮,೧ |
| ೧೮೫೬-೫೭ | ೧೪,೧೯೪,೫೮೭ | ೨೫,೩೩೮,೪೫೧ | ೧೧,೦೭೩,೨೪೭ | ೨,೦೯೧,೨೧೪ | ೧೧,೨೨೦,೦೧೪ | ೧೨೮,೩೦೨ | +೧೪೬,೭೬೭ | –೧,೯೬೨,೯೧೨ | ೨೯,೫ | ೮,೨ |
| ೧೮೫೭-೫೮ | ೧೫,೨೭೭,೬೨೯ | ೨೭,೪೫೬,೦೩೬ | ೧೨,೨೧೮,೯೪೮ | ೨,೭೮೩,೦೭೩ | ೧೨,೬೫೫,೩೦೮ | ೪೩,೭೮೩ | +೪೩೬,೩೬೦ | –೨,೭೩೯,೨೯೦ | ೨೬,೭ | ೮,೧ |
| ೧೮೫೮-೫೯ | ೨೧,೭೨೮,೫೭೯ | ೨೯,೮೬೨,೮೭೧ | ೭,೭೨೮,೩೪೨ | ೪,೪೨೬,೪೫೩ | ೬,೬೪೧,೫೪೮ | ೧೩೨,೨೭೩ | –೧,೦೮೬,೭೯೪ | –೪,೨೯೪,೧೮೦ | ೨೪,೯ | ೮,೧ |
| ೧೮೫೯-೬೦ | ೨೪,೨೬೫,೧೪೦ | ೨೭,೯೬೦,೨೦೩ | ೧೧,೧೪೭,೫೬೩ | ೪,೨೮೪,೨೩೪ | ೧೦,೭೫೩,೦೬೮ | ೬೪,೩೦೭ | –೩೯೪,೪೯೫ | –೪,೨೧೯,೯೨೭ | ೨೫,೦ | ೮,೨ |

ಪಾಲ್‌ಗ್ರೇವ ಇವರ "ಮೆಮೊರ್‍ಯಾಂಡಮ್ ಆನ್ ಕರೆನ್ಸಿ ಅಂಡ್ ಸ್ಟ್ಯಾಂಡರ್ಡ್ ಆಫ್ ವ್ಯಾಲ್ಯೂ" ಥರ್ಡ್ ರಿಪೋರ್ಟ್ ಆಫ್ ದಿ ರಾಯಲ್ ಕಮಿಷನ್ ಆನ್ ಡಿಪ್ರೆಶನ್ ಆಫ್ ಟ್ರೇಡ್ ಇಂಡಸ್ಟ್ರಿ ಇದಕ್ಕೆ ಅನುಬಂಧ ಬಿ ೧೮೮೬ರ ಸಿ. ೪೭೯೭. ಕ್ಯಾಲೆಂಡರ್ ವರ್ಷಕ್ಕಿರುವ ಚಿನ್ನ ಮತ್ತು ಬೆಳ್ಳಿಗಳ ಉತ್ಪಾದನೆಯ ಅಂಕಿಸಂಖ್ಯೆಗಳನ್ನು ಆರ್. ಬರ್ಕಲೇ ಅವರ "ಸಿಲ್ವರ್ ಕ್ವಶ್ಚನ್ ಅಂಡ್ ದಿ ಗೋಲ್ಡ್ ಕ್ವಶ್ಚನ್" ನಿಂದ ತೆಗೆದುಕೊಳ್ಳಲಾಗಿದೆ.

ಅಮೂಲ್ಯವಾದ ಲೋಹಗಳನ್ನು ಪಡೆಯಲು ನಿಷೇಧಾಜ್ಞೆಗಳನ್ನು ಹಿಂತೆಗೆದುಕೊಂಡ ನಂತರ, ಉಳಿದಿದ್ದ ಒಂದೇ ಮಾರ್ಗವೆಂದರೆ ಅವುಗಳನ್ನು ಒಳಗೆ ತರಲು ಅವುಗಳ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯದ ಸರಕುಗಳನ್ನು ಕಳಿಸುವುದಾಗಿತ್ತು. ಪೀಲ್ ಅವರು ಭಾರತೀಯ ಸರಕುಗಳನ್ನು ಕಡಿಮೆ ಆಯಾತ ನಿರ್ಯಾತ ಸುಂಕಗಳಿಗೆ ಒಳಪಡಿಸಿದ ನಂತರ ಇದು ಸಾಧ್ಯವಾಯಿತು ಮತ್ತು ದೇಶವು ಪ್ರಥಮ ಬಾರಿಗೆ ತನ್ನ ಹೆಚ್ಚುತ್ತಿರುವ ಅಗತ್ಯಗಳನ್ನು ಪೂರೈಸಿಕೊಳ್ಳಲು ಸಾಕಷ್ಟು ಪ್ರಮಾಣದ ಅಮೂಲ್ಯ ಲೋಹಗಳನ್ನು ತರಲು ಸಮರ್ಥವಾಯಿತು. ಆದರೆ ಅಮೂಲ್ಯ ಲೋಹಗಳ ಪೂರೈಕೆಯಲ್ಲಿಯ ಸೌಲಭ್ಯವು ಅಲ್ಪಕಾಲಿಕವಾದದ್ದಾಯಿತು. ಆದಾಗ್ಯೂ ೧೮೫೦ರ ನಂತರದ ತೊಂದರೆಗಳು ಭಾರತಕ್ಕೆ ಅಮೂಲ್ಯ ಲೋಹಗಳನ್ನು ಪಡೆಯುವ ಅಡಚಣೆಗಳಿಂದಾದವುಗಳಲ್ಲ. ಅಮೂಲ್ಯ ಲೋಹಗಳ ನಿರ್ಯಾತ ಮತ್ತು ಆಯಾತಗಳು ಯಾವುದೇ ಅಡ್ಡಿ ಇಲ್ಲದೇ ಸಂಪೂರ್ಣವಾಗಿ ಮುಕ್ತವಿದ್ದವು ಮತ್ತು ಅವುಗಳನ್ನು ಸಂಗ್ರಹಿಸುವ ಭಾರತದ ಸಾಮರ್ಥ್ಯವು ದೊಡ್ಡದಿತ್ತು. ಅಲ್ಲದೆ ಆಗಿನ ತೊಂದರೆಗಳು ಅಮೂಲ್ಯ ಲೋಹಗಳ ಯಾವುದೇ ಕೊರತೆಯಿಂದ ಉಂಟಾಗಿದ್ದಿಲ್ಲ. ಏಕೆಂದರೆ ವಾಸ್ತವವಾಗಿ ೧೮೫೦ರ ನಂತರ ಅಮೂಲ್ಯ ಲೋಹಗಳಲ್ಲಿಯ ಹೆಚ್ಚಳವು ಸಾಕಷ್ಟು ಇದ್ದಿತು. ಈ ತೊಂದರೆಯು ಭಾರತದ ಸ್ವಂತ ಸೃಷ್ಟಿಯಾಗಿತ್ತು ಮತ್ತು ದೊರಕಿಸಲು ಸುಲಭವಾದ ಅಮೂಲ್ಯ ಲೋಹದ ಮೇಲೆ ತನ್ನ ನಾಣ್ಯವನ್ನು ಆಧರಿಸಿರದಿದ್ದುದರಿಂದ ಉಂಟಾಗಿತ್ತು. ೧೮೩೫ರ ಕಾಯಿದೆಯಂತೆ ಭಾರತವು ಬೆಳ್ಳಿಯನ್ನು ಮಾತ್ರ ನಾಣ್ಯಕ್ಕೆ ಆಧಾರವಾಗಿ ಮಾಡಿಕೊಂಡಿತು. ಆದರೆ ದುರ್ದೈವದಿಂದ, ೧೮೫೦ರ ನಂತರ ಏನಾಯಿತೆಂದರೆ ಅಮೂಲ್ಯ ಲೋಹಗಳ ಒಟ್ಟು ಉತ್ಪಾದನೆ ಹೆಚ್ಚಾಗಿದ್ದರೂ. ಬೆಳ್ಳಿಯ ಉತ್ಪಾದನೆಯು ವಿಶ್ವದ ಬೇಡಿಕೆಗೆ ತಕ್ಕಂತೆ ಹೆಚ್ಚಾಗಲಿಲ್ಲ. ವಿಶ್ವದ ಬಹು ಭಾಗವು ಬೆಳ್ಳಿಯ ನಾಣ್ಯದ ಮೇಲೆ ಆಧಾರಿತವಾಗಿತ್ತು. ತನ್ನ ಚಲಾವಣಾ ನಾಣ್ಯದ ಕಾಯಿದೆಯ ಪರಿಣಾಮವಾಗಿ ಭಾರತವು ಕುಗ್ಗುತ್ತಿರುವ ನಾಣ್ಯದಿಂದ ವಿಕಾಸ ಹೊಂದುತ್ತಿರುವ ವ್ಯಾಪಾರದಲ್ಲಿ ಸಂಕಷ್ಟಕ್ಕೆ ಸಿಲುಕಿತ್ತು. ಇದನ್ನು ಪಟ್ಟಿ IVರಲ್ಲಿ ತೋರಿಸಲಾಗಿದೆ.

ಮೇಲ್ನೋಟಕ್ಕೆ ಹಣಕಾಸಿನ ವಿಷಯದಲ್ಲಿ ತುರ್ತುಕ್ರಮಗಳ ಅಗತ್ಯವಿರಲಿಲ್ಲವೆಂದು ಕಾಣುತ್ತದೆ. ಬೆಳ್ಳಿಯ ಆಯಾತ ಮತ್ತು ಅದೇ ಪ್ರಕಾರ ಅದರ ನಾಣ್ಯ ತಯಾರಿಕೆ ಬೃಹತ್ಪ್ರಮಾಣದಲ್ಲಿತ್ತು. ಅಂದ ಮೇಲೆ ಮುಗ್ಗಟ್ಟು ಏಕೆ ಇರಬೇಕಾಗಿತ್ತು? ಈ ಪ್ರಶ್ನೆಯ ಉತ್ತರ ಬಹಳ ಸುಲಭವಿದೆ. ನಾಣ್ಯ ತಯಾರಿಸಿದ ಬೆಳ್ಳಿಯನ್ನು ಚಲಾವಣೆಯಲ್ಲಿ ಉಳಿಸಿಕೊಂಡಿದ್ದರೆ, ಬಿಗುವು ಉಂಟಾಗುವ ಸಾಧ್ಯತೆ ಇರಲಿಲ್ಲ. ಬಹಳ ಹಿಂದಿನ ಕಾಲದಿಂದಲೂ ಭಾರತವು ಅಮೂಲ್ಯ ಲೋಹಗಳನ್ನು ಕರಗಿಸುವ ವಿಷಯದಲ್ಲಿ ಕುಪ್ರಸಿದ್ಧಿಯನ್ನು ಪಡೆದಿದೆ. ಈ ಸ್ಪಷ್ಟ ವಿಷಯವನ್ನು ಅರ್ಥೈಸುಗವಾಗ ಮಿ. ಕ್ಯಾಸೆಲ್ಲರ ಕೆಳಗಿನ ಎಚ್ಚರಿಕೆಯನ್ನು ಲಕ್ಷ್ಯದಲ್ಲಿಡುವುದು ಆವಶ್ಯಕ:

"ಅದರ ಬೆಳ್ಳಿಯ ನಾಣ್ಯ ತಯಾರಿಕೆಯು ವಿನಿಮಯ ಮಾಧ್ಯಮವಾಗಿ ವಾಣಿಜ್ಯದ ಅಗತ್ಯಗಳನ್ನು ತೀರಿಸಬೇಕಾಗಿದ್ದುದಷ್ಟೇ ಅಲ್ಲದೆ, ಅಕ್ಕಸಾಲಿಗ ಮತ್ತು ಸರಾಫರಿಗೆ ಸಾಕಷ್ಟು ಬೆಳ್ಳಿಯನ್ನು ಪೂರೈಸಬೇಕಾಗುತ್ತದೆ. ಟಂಕಸಾಲೆಯನ್ನು ಅದೇ ಲೋಹವನ್ನು ಉಪಯೋಗಿಸುವ ಉದ್ದಿಮೆಯ ವಿರುದ್ಧ ಸ್ಪರ್ಧೆಗಿಳಿಸಲಾಗಿದೆ. ತಾಳ್ಮೆ ಮತ್ತು ಕುಶಲತೆಗಳಿಂದ ತಯಾರಿಸಿದ ನಾಣ್ಯವನ್ನು ತ್ವರಿತ ಗತಿಯಲ್ಲಿ ಆಭರಣಗಳ ರೂಪಕ್ಕೆ ಇಳಿಸಲಾಗಿದೆ."[೧]

---

೧. ಭಾರತಕ್ಕೆ ಚಿನ್ನದ ನಾಣ್ಯವನ್ನು ಕುರಿತು ಲಘು ಟಿಪ್ಪಣಿ, ದಿನಾಂಕ ಡಿಸೆಂಬರ್ ೮, ೧೮೬೩ ರಿಪೋರ್ಟ್ ಆಫ್ ದಿ ಬಾಂಬೆ ಛೇಂಬರ್ ಆಫ್ ಕಾಮರ್ಸ್ ಇದರಲ್ಲಿ ೧೮೬೩ – ೬೪, ಸಹಬಂಧ ೧, ಪು. ೧೮೬.

ಪಟ್ಟಿ IV ರಲ್ಲಿ ಕೊಟ್ಟ ಅಂಕಿಸಂಖ್ಯೆಗಳಿಂದ ಬೆಳ್ಳಿಯ ಎಲ್ಲ ಆಯಾತವನ್ನು ನಾಣ್ಯ ಮಾಡಲಾಯಿತು ಮತ್ತು ಚಲಾವಣೆಯ ನಾಣ್ಯದ ಉದ್ದೇಶಗಳಿಗಾಗಿ ಉಪಯೋಗಿಸಲಾಯಿತು ಎಂಬುದನ್ನು ಕಾಣಬಹುದು. ಔದ್ಯಮಿಕ ಮತ್ತು ಜನರ ಸಾಮಾಜಿಕ ಬಳಕೆಗೆ ಇಲ್ಲವೇ ಇಲ್ಲ ಎನ್ನುವಷ್ಟು ಅಲ್ಪಪ್ರಮಾಣದ ಬೆಳ್ಳಿ ಉಳಿಯಿತು. ವಿಷಯವು ಹೀಗೆ ಇದ್ದು, ನಾಣ್ಯ ತಯಾರಿಕೆಯಲ್ಲಿ ಬಳಸಿದ ಬೆಳ್ಳಿಯ ಬಹು ಭಾಗವನ್ನು ನಾಣ್ಯಗಳ ಉದ್ದೇಶಕ್ಕಿಂತ ಹೆಚ್ಚಾಗಿ ಇತರ ಉದ್ದೇಶಗಳಿಗಾಗಿ ಬಳಸಲಾಯಿತು ಎಂಬುದು ಸ್ಪಷ್ಟವಿದೆ. ಹೀಗೆ ಈ ಹಣಕಾಸು ಬಿಕ್ಕಟ್ಟಿನ ಹಿಂದೆ ಇದ್ದ ಕಾರಣವು ಸ್ಫುಟವಾಗುತ್ತದೆ.

"ಬೃಹತ್ ಆಯಾತಗಳನ್ನು ಮಾಡಿಕೊಂಡಾಗ್ಯೂ ನಾಣ್ಯಗಳ ಬೇಡಿಕೆಯು ಇಲ್ಲಿಯವರೆಗೆ ಬಹಳಷ್ಟು ಹೆಚ್ಚಾಗಿದೆ.... ಗಂಭೀರ ಪೇಚು ಉಂಟಾಗಿದೆ ಮತ್ತು ಚಲಾವಣೆಯ ಮಾಧ್ಯಮದ ಕೊರತೆಯಿಂದ ಉದ್ಯಮವು ಬಹುತೇಕ ಸ್ತಬ್ಧವಾಗಿದೆ. ಆ ನಾಣ್ಯಗಳು ಭಾರತದ ವಿನಿಮಯ ಪದ್ಧತಿಯಿಂದಾಗಿ ಅಥವಾ ಆಭರಣಗಳಿಗಾಗಿ ಉಪಯೋಗಿಸುವುದರಿಂದಾಗಿ ಹಣಕಾಸಿನ ವ್ಯವಸ್ಥೆಯಿಂದ ವೇಗವಾಗಿ ಮರೆಯಾಗಿವೆ." (ಅದೇ ಲೇಖಕರಿಂದ ಉಲ್ಲೇಖಿಸಿದ್ದು)[೧]

ಹಣಕಾಸು ಉದ್ದೇಶಗಳಿಗೆ ಬದಲಾಗಿ ಇತರ ಉದ್ದೇಶಗಳಿಗೆ ಆದ ನಾಣ್ಯಗಳ ಬಳಕೆಯ ಪ್ರಮಾಣವು ಮೇಲಿನ ಪರಿಸ್ಥಿತಿಗೆ ಕಾರಣವಾಗಿತ್ತೆಂಬುದು ಅಂದಿನ ಜನರಿಗೆ ಹಗಲು ಬೆಳಕಿನಷ್ಟು ಸ್ಪಷ್ಟವಿತ್ತು.

ಒಂದು ಪರಿಹಾರವೆಂದರೆ ದೇಶದ ಹಣಕಾಸು ಮತ್ತು ಇತರ ಅಗತ್ಯ ಅವೆರಡಕ್ಕೂ ಸಾಕಾಗುವಷ್ಟು ಬೆಳ್ಳಿಯನ್ನು ಆಯಾತ ಮಾಡುವುದಾಗಿತ್ತು, ಆದರೆ ಬೆಳ್ಳಿಯ ಆಯಾತಗಳು ಈಗಾಗಲೇ ಅಧಿಕವಾಗಿದ್ದಿತು. ಮಿ. ಕ್ಯಾಸೆಲ್ ವಾದಿಸಿದಂತೆ :–

"ಇಡೀ ವಿಶ್ವದ ವಾರ್ಷಿಕ ಬೆಳ್ಳಿಯ ಉತ್ಪಾದನೆಯು ಹತ್ತು ದಶಲಕ್ಷ ಸ್ಟರ್ಲಿಂಗ್‌ಗಳಿಗಿಂತ ಹೆಚ್ಚಾಗುವುದಿಲ್ಲ. ಕಳೆದ ಕೆಲವು ವರ್ಷಗಳಲ್ಲಿ ಭಾರತ ಒಂದೇ ಇಡೀ ವಿಶ್ವದಲ್ಲಿ ಉತ್ಪಾದಿಸಿದ ಪ್ರಮಾಣಕ್ಕಿಂತ ಹೆಚ್ಚು ಪ್ರಮಾಣದ ಉತ್ಪಾದನೆಯನ್ನು ಪ್ರತಿ ವರ್ಷ ತೆಗೆದುಕೊಂಡಿದೆ ಮತ್ತು ದೊಡ್ಡ ಪ್ರಮಾಣದಲ್ಲಿ ಉಪಯೋಗಿಸಿಕೊಂಡಿದೆ. ಗಂಭೀರ ಪರಿಸ್ಥಿತಿಗೆ ಎಡೆಮಾಡಿಕೊಡದೆ ಇದು ಬಹುಕಾಲ ಮುಂದುವರಿಯಲಾರದೆಂಬುದು ಸ್ಪಷ್ಟವಿದೆ. ಯುರೋಪ್‌ನ ಮಾರುಕಟ್ಟೆಗಳು ನಮಗೆ ಪೂರೈಸಲು ಅಶಕ್ತರಾಗುವರು ಅಥವಾ ಹಿಂದೆಗೆಯುವರು ಅಥವಾ ಬೆಳ್ಳಿಯ ಬೆಲೆಯು ಅತಿಯಾಗಿ ಏರುವುದು. ಅಂಥ ಪ್ರಸಂಗಗಳಲ್ಲಿ ಪ್ರಸಕ್ತ ಬಿಕ್ಕಟ್ಟು ಪದೇ ಪದೇ ಉಂಟಾಗುವುದು ಮತ್ತು ಈ ದೇಶದಲ್ಲಿ ವಾಣಿಜ್ಯವು ಶಾಶ್ವತವಾಗಿ ಅಲ್ಲದಿದ್ದರೂ, ನಿಯತಕಾಲಿಕವಾಗಿ ಚಲಾವಣೆಯಲ್ಲಿಯ ಮಾಧ್ಯಮದ ಕೊರತೆಯಿಂದ ಕುಂಠಿತವಾಗುವುದು ಎಂಬುದನ್ನು ಮುಂಗಾಣುವುದು ಕಠಿಣವಾಗುವುದಿಲ್ಲ."[೨]

ಯಾವುದೇ ರೀತಿಯ ಸಾಲದ ವ್ಯವಸ್ಥೆಯಿದ್ದಿದ್ದರೆ ಚಲಾವಣೆಯ ನಾಣ್ಯದ ಕುಗ್ಗುವಿಕೆಯು ಅಷ್ಟು ಅನುಭವಕ್ಕೆ ಬರುತ್ತಿರಲಿಲ್ಲ. ಆದರೆ ಹೇಳಿಕೊಳ್ಳುವಂಥ ಸಾಲದ ವ್ಯವಸ್ಥೆಯಿರಲಿಲ್ಲ. ಸರ್ಕಾರವು ಬಡ್ಡಿಯನ್ನು ಹೊಂದಿದ ಖಜಾನೆ ನೋಟುಗಳನ್ನು ಹೊರಡಿಸಿತು ಮತ್ತು ಅವುಗಳು ದೇಶದ ಚಲಾವಣೆಯಲ್ಲಿಯ

---

೧. ಭಾರತಕ್ಕೆ ಚಿನ್ನದ ನಾಣ್ಯ ಕುರಿತು ಸಂಕ್ಷಿಪ್ತ ಟಿಪ್ಪಣಿ, ದಿನಾಂಕ ಡಿಸೆಂಬರ್ ೧, ೧೮೬೩, ವರದಿ, ಅಲ್ಲಿ ಉಲ್ಲೇಖಿಸಿದ್ದು, ಪು. ೧೮೪.

೨. ವರದಿ, ಅಲ್ಲಿ ಉಲ್ಲೇಖಿಸಿದ್ದು, ಪು. ೧೮೯

ಮಾಧ್ಯಮದ ಒಂದು ಭಾಗವಾದವು. ಆದರೆ ಮೊತ್ತದಲ್ಲಿ[೧] ಅಲ್ಪವಾಗಿರುವ ಬದಲು ಈ ತಿಜೋರಿ ನೋಟುಗಳು "ಕೆಳಗಿನ ಕಾರಣಗಳಿಗಾಗಿ ವಿಫಲವಾಗಿದ್ದವು, ಪ್ರಥಮವಾಗಿ ಹನ್ನೆರಡು ತಿಂಗಳುಗಳವರೆಗೆ ಆದಾಯ ಪಾವತಿಯಲ್ಲಿ ಅವುಗಳನ್ನು ಸ್ವೀಕರಿಸುವುದಿಲ್ಲವೆಂಬ ಷರತ್ತು ಇತ್ತು. ಎರಡನೆಯದಾಗಿ, ಅವುಗಳನ್ನು ಹೊರಡಿಸಿದ ಸ್ಥಳಗಳಲ್ಲಿ ಮಾತ್ರ ಸ್ವೀಕರಿಸಲಾಗುತ್ತಿತ್ತು ಅಥವಾ ಅವುಗಳಿಗೆ ಪಾವತಿ ಮಾಡಲಾಗುತ್ತಿತ್ತು. ಏಕೆಂದರೆ ಅವುಗಳ ನೀಡುವಿಕೆಯು ಕಲ್ಕತ್ತಾ, ಮದರಾಸು ಮತ್ತು ಮುಂಬೈ ನಗರಗಳ ಸರಹದ್ದುಗಳಲ್ಲಿದ್ದು ಚಲಾವಣೆಯ ಉದ್ದೇಶಗಳಿಗೆ ಅವುಗಳ ಉಪಯೋಗ ಮತ್ತು ಕೆಲಸಗಳು ಈ ನಗರಗಳಿಗೆ ಸೀಮಿತವಾಗಿದ್ದವು ... ಮತ್ತು ಕೊನೆಯದಾಗಿ ಅವುಗಳ ಮೊತ್ತಗಳು ಅತಿ ದೊಡ್ಡವಾಗಿದ್ದು, ಬಡ್ಡಿಯನ್ನು ದುಡಿಯುವ ಅವುಗಳ ಅವಧಿಯು ಬಹಳ ಅಲ್ಪವಾಗಿತ್ತು.[೨]

ವಾಣಿಜ್ಯದ ಅಗತ್ಯಗಳನ್ನು ಈಡೇರಿಸುವಷ್ಟು ವಿಸ್ತಾರವಾಗಿ ಬ್ಯಾಂಕಿಂಗ್ ಅಭಿವೃದ್ಧಿ ಹೊಂದಿರಲಿಲ್ಲ. ಕೋರ್ಟಿನ ಮನೋವೃತ್ತಿಯು ಇದರ ಬೆಳವಣಿಗೆಗೆ ಪ್ರಮುಖ ಆತಂಕವಾಗಿತ್ತು. ತಾನೇ ಹೆಚ್ಚಾಗಿ ವಿನಿಮಯದಲ್ಲಿ ವ್ಯವಹರಿಸುವ ವಾಣಿಜ್ಯ ಸಂಘವಾಗಿದ್ದರಿಂದ ಬ್ಯಾಂಕಿಂಗ್ ಸಂಸ್ಥೆಗಳು ತಮ್ಮ ಪ್ರತಿನಿಧಿಗಳಾಗುವರೆಂದು ಕೋರ್ಟ್ ಅವುಗಳ ಬೆಳವಣಿಗೆಯಿಂದ ವಿಮುಖವಾಗಿತ್ತು. ಕೋರ್ಟ್ ವರ್ತಕ, ರಾಜಕುಮಾರರ ಸಂಘವಾಗಿರುವುದು ನಿಂತ ನಂತರ ಕೂಡ ಈ ಸಾಂಪ್ರದಾಯಿಕ ಹಗೆತನದ ಧೋರಣೆಯು ಮುಂದುವರೆದದ್ದರಿಂದ, ವಾಣಿಜ್ಯದ ಬೆಳವಣಿಗೆಯ ಜೊತೆಯಲ್ಲಿ ಬ್ಯಾಂಕುಗಳು ಬೆಳೆಯಲಿಲ್ಲ, ವಾಸ್ತವವಾಗಿ ೧೮೫೬ರ ಸುಮಾರಿಗೆ ಪಟ್ಟಿ Vರಲ್ಲಿ ತೋರಿಸಿದಂತೆ ಬ್ಯಾಂಕುಗಳ ಸಂಖ್ಯೆ ಕಡಿಮೆ ಇತ್ತು ಮತ್ತು ಅವುಗಳ ವ್ಯವಹಾರಗಳು ಕಡಿಮೆ ಇದ್ದವು.

ಬೆಳ್ಳಿಯ ಕೊರತೆ ಮತ್ತು ವಿನಿಮಯ ಮಾಧ್ಯಮದ ಅಭಾವಗಳು ವಾಣಿಜ್ಯಕ್ಕೆ ಎಂಥ ಪೇಚನ್ನುಂಟು ಮಾಡಿದವೆಂದರೆ ಅದು ೧೮೩೫ರ ನಾಣ್ಯ ಕಾಯಿದೆಯು ಬಗ್ಗೆ ಇದ್ದ ದೃಷ್ಟಿಕೋನದಲ್ಲಿ ಬದಲಾವಣೆಯನ್ನುಂಟುಮಾಡಿತು ಮತ್ತು ದ್ವಿಲೋಹ ನಾಣ್ಯಪದ್ಧತಿಯಿಂದ ಏಕಲೋಹ ನಾಣ್ಯಪದ್ಧತಿಗೆ ಬದಲಾಯಿಸಿದ್ದು ಒಳ್ಳೆಯದಾಗಿದ್ದರೂ, ಬೆಳ್ಳಿಯ ಏಕಲೋಹ ನಾಣ್ಯ ಪದ್ಧತಿಗಿಂತ ಚಿನ್ನದ ಲೋಹ ನಾಣ್ಯಪದ್ಧತಿಯನ್ನು ಆಯ್ದುಕೊಂಡಿದ್ದರೆ ಹೆಚ್ಚು ಉತ್ತಮವಾಗುತ್ತಿರಲಿಲ್ಲವೇ ಎಂದು ಜನರು ಕೇಳತೊಡಗಿದರು.

---

೧. ಬಾಕಿ ಉಳಿದ ಭಾರತೀಯ ತಿಜೋರಿ ನೋಟುಗಳ ಮೊತ್ತ :

| | | |
|---|---|---|
| ಏಪ್ರಿಲ್ ೩೦, ೧೮೫೦ರಂದು | £ ೮೦೪,೯೮೮ | ಸದನದ ಪತ್ರ ೨೦೧, VIII ೧೮೫೮ ಈಸ್ಟ್ ಇಂಡಿಯಾ ಆದಾಯಗಳು ಇತ್ಯಾದಿಗಳಿಗೆ ಸಂಬಂಧಿಸಿದ ಸಲ್ಲಿಕೆಯ ಕೋಷ್ಟಕ ೨ ರಿಂದ ಉದ್ಧರಿಸಿದ್ದು |
| ಏಪ್ರಿಲ್ ೩೦, ೧೮೫೧ರಂದು | £ ೮೦೨,೦೩೬ | |
| ಏಪ್ರಿಲ್ ೩೦, ೧೮೫೨ರಂದು | £ ೭೭೦,೩೦೧ | |
| ಏಪ್ರಿಲ್ ೩೦, ೧೮೫೩ರಂದು | £ ೮೫೦,೪೩೨ | |
| ಏಪ್ರಿಲ್ ೩೦, ೧೮೫೪ರಂದು | £ ೮೫೦,೬೨೭ | |
| ಏಪ್ರಿಲ್ ೩೦, ೧೮೫೫ರಂದು | £ ೮೮೯,೮೭೫ | |
| ಏಪ್ರಿಲ್ ೩೦, ೧೮೫೬ರಂದು | £ ೯೬೭,೭೧೧ | |

೨. ಎ.ಸಿ.ಬಿ. ಲಂಡನ್ ಇವರ ಹೌಟು ಮೀಟ್ ದಿ ಫೈನಾನ್ಷಿಯಲ್ ಡಿಫಿಕಲ್ಟೀಸ್ ಆಫ್ ಇಂಡಿಯಾ, ೧೮೫೯, ಪುಟ ೧೩. ಭಾರತೀಯ ನಾಣ್ಯ ಮತ್ತು ಬ್ಯಾಂಕಿಂಗ್ ಪದ್ಧತಿಗಳಲ್ಲಿ ನಂತರದ ಸುಧಾರಣೆಗಳನ್ನು ಸೂಚಿಸಿದ ಈ ಕಿರುಹೊತ್ತಿಗೆ ಅನೇಕ ರೀತಿಗಳಲ್ಲಿ ಅತ್ಯಂತ ಅಸಾಧಾರಣವಾಗಿದೆ.

ಹೆಚ್ಚು ಹೆಚ್ಚು ಚಿನ್ನವನ್ನು ಆಯಾತ ಮಾಡಿಕೊಂಡಂತೆ ಅಸ್ತಿತ್ವದಲ್ಲಿದ್ದ ಭಾರತೀಯ ನಾಣ್ಯ ಪದ್ಧತಿಯಲ್ಲಿ ಅದಕ್ಕೆ ಕಾನೂನುಬದ್ಧ ಹಣದ ದರ್ಜೆಯನ್ನು ನೀಡಲು ಬೇಡಿಕೆಯು ಇನ್ನಷ್ಟು ಪ್ರಬಲವಾಯಿತು.[೧] ಚಿನ್ನದ ನಾಣ್ಯದ ತತ್ವದ ಬಗ್ಗೆ ಎಲ್ಲರೂ ಸಮ್ಮತಿಸಿದ್ದರು: ಇದ್ದಿರಬಹುದಾದ ಭಿನ್ನಾಭಿಪ್ರಾಯವೂ ಅದನ್ನು ಜಾರಿಗೆ ತರುವ ವಿಧಾನಕ್ಕಷ್ಟೇ ಸೀಮಿತವಾಗಿತ್ತು. ದ್ವಿಲೋಹ ಆಧಾರದ ಮೇಲೆ ಚಿನ್ನವನ್ನು ಜಾರಿಯಲ್ಲಿ ತರುವ ಪ್ರಶ್ನೆಯೇ ಇರಲಿಲ್ಲ. ಏಕೆಂದರೆ ಸರ್ಕಾರವು ತಾನು ಪರಿಗಣಿಸಿದಂತೆ ಚಿನ್ನ ಮತ್ತು ಬೆಳ್ಳಿಯ ಮೌಲ್ಯವನ್ನು ನಿರ್ಧರಿಸುವ ಮತ್ತು ಆ ಮೌಲ್ಯದಲ್ಲಿ ಅವುಗಳನ್ನು ಸ್ವೀಕರಿಸಲು ಒತ್ತಾಯಿಸುವ ಪ್ರಯತ್ನವನ್ನು ನಿಷ್ಫಲವೆಂದು ಪರಿಗಣಿಸಿತ್ತು.[೨] ಸರ್ಕಾರವು ಪರಿಶೀಲಿಸಲು[೩] ಸಂಕಲ್ಪಿಸಿದ ಯೋಜನೆಗಳು ಹೀಗಿದ್ದವು : ೧) 'ಸವರನ್' ಅಥವಾ ಬೇರೆ ಯಾವುದಾದರೂ ಚಿನ್ನದ ನಾಣ್ಯವನ್ನು ಜಾರಿಯಲ್ಲಿ ತರುವುದು ಮತ್ತು ಅದನ್ನು ದಿನದಿಂದ ದಿನಕ್ಕೆ ಬೆಳ್ಳಿಯಲ್ಲಿ ಅಳೆದಂತೆ ತನ್ನ ಮಾರುಕಟ್ಟೆ ಬೆಲೆಯಲ್ಲಿ ಚಲಾಯಿಸಲು ಆಸ್ಪದ ಕೊಡುವುದು: ೨) ನಿರ್ಧಾರಿತ ರೂಪಾಯಿಗಳ ಸಂಖ್ಯೆಯಲ್ಲಿ ಖಚಿತ ಮೌಲ್ಯವನ್ನು ಹೊಂದಿದ ಒಂದು ಹೊಸ ಚಿನ್ನದ ನಾಣ್ಯವನ್ನು ಹೊರಡಿಸುವುದು ಮತ್ತು ಅದನ್ನು ಪರಿಮಿತ ಅವಧಿಗೆ ಕಾನೂನುಬದ್ಧ ಹಣವನ್ನಾಗಿ ಮಾಡುವುದು. ಆಗ ಅದನ್ನು ಮರುಹೊಂದಾಣಿಕೆ ಮಾಡಿ ಮತ್ತೆ ಮೌಲ್ಯವನ್ನು ಕಟ್ಟಿ ಹೊಸ ದರದಂತೆ ಇರುವ ಅವಧಿಗೆ ಕಾನೂನುಬದ್ಧ ಹಣವನ್ನಾಗಿ ಮಾಡಬಹುದು; ೩) ೧೦ ರೂಪಾಯಿಗಳಿಗೆ ಕಾನೂನುಬದ್ಧ ಹಣವನ್ನಾಗಿ ಆದರೆ ಕಾನೂನುಬದ್ಧ ಚಾಲ್ತಿ ಹಣದಲ್ಲಿ ೨೦ ರೂಪಾಯಿ ಅಥವಾ ೨ ಸವರನ್ ನಾಣ್ಯಗಳಿಗೆ ಪರಿಮಿತವಾಗಿ ಇಂಗ್ಲಿಷ್ ಸವರನ್ನು ಜಾರಿಯಲ್ಲಿ ತರುವುದು; ಅಥವಾ ೪) ಬೆಳ್ಳಿಯ ಪ್ರಮಿತಿಯ ಸ್ಥಳದಲ್ಲಿ ಸುವರ್ಣ ಪ್ರಮಿತಿಯನ್ನು ತರುವುದು.

ಈ ಯೋಜನೆಗಳಲ್ಲಿ ಮೊದಲಿನ ಮೂರು ಯೋಜನೆಗಳು ನಾಣ್ಯಗಳನ್ನು ಹೊರಡಿಸಲು ಸ್ಪಷ್ಟವಾಗಿ ಸುರಕ್ಷಿತವಾದವುಗಳಾಗಿರಲಿಲ್ಲ. ಒಂದು ಸರಿಯಾದ ನಿಯಂತ್ರಿತ ಹಣಕಾಸು ಪದ್ಧತಿಯಲ್ಲಿ ನಾಣ್ಯದ ವಿವಿಧ ಅಂಶಗಳ ನಡುವೆ ಮೌಲ್ಯ ನಿಶ್ಚಿತತೆ ಇರುವುದು ಅಗತ್ಯವಿರುತ್ತದೆ. ಪ್ರತಿಯೊಂದು ನಾಣ್ಯವು ಬೇರೆ ನಾಣ್ಯಗಳಿಗೆ ತುಲನಾತ್ಮಕವಾಗಿ ಮನವರಿಕೆ ಮಾಡಿಕೊಡುವಂತಹ ಖಚಿತ ಮೌಲ್ಯವನ್ನು ಹೊಂದಿರಬೇಕು. ಹಾಗೆ ಮಾಡಲು ಅಶಕ್ತವಾದಲ್ಲಿ, ಅದು ಒಂದು ಕೇವಲ ವಸ್ತುವಾಗುತ್ತದೆ ಮತ್ತು ಅದರ ಮೌಲ್ಯವು ಮಾರುಕಟ್ಟೆಯ ಬದಲಾವಣೆಗಳೊಡನೆ ಬದಲಾಗುತ್ತಿರುತ್ತದೆ. ಇದರಿಂದಾಗಿ ಮೊದಲಿನ ಎರಡು ಪ್ರಾಯೋಜನೆಗಳು ತಿರಸ್ಕೃತವಾದವು. ಮೊದಲಿನ ಯೋಜನೆಯನ್ನು ಸ್ವೀಕರಿಸಿದ್ದಿದ್ದರೆ, ಪ್ರತಿದಿನವೂ ಬದಲಾಗುವಂತಹ ಮೌಲ್ಯವನ್ನುಳ್ಳ ನಾಣ್ಯವನ್ನು ಹೊಂದಿ ಆ ನಾಣ್ಯದ ಮೌಲ್ಯವನ್ನು ಪ್ರತಿದಿನವೂ ನಿಗದಿಗೊಳಿಸಬೇಕಾಗಿದುದಷ್ಟೇ ಅಲ್ಲದೆ, ಸರ್ಕಾರಕ್ಕೆ ನಿಜಕ್ಕೂ ನಿತ್ಯದ ಮುಜುಗರಕ್ಕೆಡೆಮಾಡಿಕೊಡುತ್ತಿತ್ತು. ಅದನ್ನು ಸ್ವೀಕರಿಸದೇ ಇದ್ದುದೇ ಉತ್ತಮವಾಯಿತು ಎಂದು ಹೇಳಬಹುದು. ಮೊದಲನೆಯದರ ಬದಲು ಎರಡನೆಯ ಯೋಜನೆಯನ್ನು

---

೧. ಬಂಗಾಳ ವಾಣಿಜ್ಯ ಮಹಾಮಂಡಳಿಯ ಅಧ್ಯಕ್ಷರಿಗೆ ಬರೆದ ಪತ್ರದಲ್ಲಿ ಈ ವಿಷಯವು ಮೊದಲ ಬಾರಿಗೆ ಏಪ್ರಿಲ್ ೧೮೫೪ರಲ್ಲಿ ಕಲ್ಕತ್ತೆಯ ಸ್ಥಳಿಕ ಸರಾಫ ಮತ್ತು ವರ್ತಕರಿಂದ ಪ್ರಸ್ತಾವಿಸಲಾಯಿತು. ಭಾರತದಲ್ಲಿ ಚಿನ್ನದ ನಾಣ್ಯದ ಆವಶ್ಯಕತೆಯನ್ನು ಸರ್ಕಾರಕ್ಕೆ ಒತ್ತಾಯಿಸಲು ಇಬ್ಬರೂ ಒಪ್ಪಿದರು. ಹೋಲಿಸಿರಿ : ಪೇಪರ್ಸ್ ರಿಲೇಟಿಂಗ್ ಟು ದಿ ಇಂಟ್ರಡಕ್ಷನ್ ಆಫ್ ಎ ಗೋಲ್ಡ್ ಕರೆನ್ಸಿ ಇನ್ ಇಂಡಿಯಾ, ಕಲ್ಕತ್ತಾ, ೧೮೬೬ ಪುಟಗಳು ೧–೩

೨. ಅದೇ ಸ್ಥಳದಲ್ಲಿ, ಪು. ೬

೩. ಹೋಲಿಸಿರಿ : ರೈಟ್ ಆನರಬಲ್ ಜೇಮ್ಸ್ ವಿಲ್ಸನ್ ಇವರ ಸಂಕ್ಷಿಪ್ತ ಟಿಪ್ಪಣಿ, ದಿನಾಂಕ, ಡಿಸೆಂಬರ್ ೨೫, ೧೮೫೯, ಅದೇ ಸ್ಥಳದಲ್ಲಿ, ಪು. ೨೩

## ಪಟ್ಟಿ V
## ಭಾರತದಲ್ಲಿ ಬ್ಯಾಂಕುಗಳು*

| ಬ್ಯಾಂಕಿನ ಹೆಸರು | ಸ್ಥಾಪನೆಯ ವರ್ಷ | ಪ್ರಧಾನ ಕಛೇರಿ | ಶಾಖೆಗಳು ಮತ್ತು ಏಜೆನ್ಸಿಗಳು | ಬಂಡವಾಳ | | ಚಲಾವಣೆಯಲ್ಲಿಯ ನೋಟುಗಳು | ಬೊಕ್ಕಸಗಳಲ್ಲಿಯ ನಾಣ್ಯ | ಕೊಂಡ ಹುಂಡಿಗಳು |
|---|---|---|---|---|---|---|---|---|
| | | | | ವಂತಿಗೆ ನೀಡಿದ £ | ಸಂದಾಯಿತ £ | | | |
| ಬ್ಯಾಂಕ್ ಆಪ್ ಬೆಂಗಾಲ್ | ೧೮೦೯ | ಕಲ್ಕತ್ತಾ | | ೧,೦೭೦,೦೦೦ | ೧,೦೭೦,೦೦೦ | ೧,೭೧೪,೭೭೧ | ೮೫೧,೬೯೪ | ೧೨೫,೨೫೧ |
| ಬ್ಯಾಂಕ್ ಆಪ್ ಮದ್ರಾಸ್ | ೧೮೪೩ | ಮದರಾಸು | | ೩,೦೦,೦೦೦ | ೩,೦೦,೦೦೦ | ೧೨೩,೭೧೯ | ೧೩೯,೯೬೦ | ೫೯,೮೭೧ |
| ಬ್ಯಾಂಕ್ ಆಫ್ ಬಾಂಬೆ | ೧೮೪೦ | ಮುಂಬೈ | | ೫,೨೨,೦೦೦ | ೫,೨೨,೦೦೦ | ೫,೭೧,೦೮೯ | ೨,೪೦,೦೭೩ | ೧೯೫,೮೩೯ |
| ಓರಿಯಂಟಲ್ ಬ್ಯಾಂಕ್ | ೧೮೫೧ | | | ೧,೨೧೫,೦೦೦ | ೧,೨೧೫,೦೦೦ | ೧೯೯,೨೭೯ | ೧,೧೪೬,೫೨೯ | ೨,೯೧೮,೩೯೯ |
| ಆಗ್ರಾ ಮತ್ತು ಯು.ಪಿ | ೧೮೩೩ | ಕಲ್ಕತ್ತಾ | ಆಗ್ರಾ, ಮದರಾಸು, ಲಾಹೋರ್,ಕ್ಯಾಂಟನ್ ಮತ್ತು ಲಂಡನ್ | ೭೦೦,೦೦೦ | ೭೦೦,೦೦೦ | – | ೭೪,೩೬೨ | |
| ಎನ್.ಡಬ್ಲ್ಯೂ ಬ್ಯಾಂಕ್ | ೧೮೪೪ | ಕಲ್ಕತ್ತಾ | ದಿಲ್ಲಿ ಮತ್ತು ಮತ್ತು ಕಾನ್ಪುರಗಳಲ್ಲಿ ಏಜೆನ್ಸಿಗಳು ಮುಂಬೈ, ಸಿಮ್ಲಾ, ಮಸ್ಸೂರಿ ಮತ್ತು ಅಗ್ರಾದಲ್ಲಿ ಶಾಖೆಗಳು | ೨೨೦,೫೬೦ | ೨೨೦,೦೦೦ | – | – | – |
| ಲಂಡನ್ ಮತ್ತು ಈಸ್ಟರ್ನ್ ಬ್ಯಾಂಕ್ | ೧೮೫೪ | | | ೨೫೦,೦೦೦ | – | ೩೨೫,೦೦೦ | – | – |

| | | | | | | | | |
|---|---|---|---|---|---|---|---|---|
| ಕಮರ್ಷಿಯಲ್ ಬ್ಯಾಂಕ್ | ೧೮೫೪ | ಮುಂಬೈ | ಲಂಡನ್, ಕಲ್ಕತ್ತಾ, ಕ್ಯಾಂಟನ್ ಮತ್ತು ಶಾಂಘಾಯಿಗಳಲ್ಲಿ ಏಜೆಂಟರು | ೧,೦೦೦,೦೦೦ | ೪೫೬,೦೦೦ | – | – | – |
| ದಿಲ್ಲಿ ಬ್ಯಾಂಕ್ | ೧೮೪೪ | ದಿಲ್ಲಿ | ಲಂಡನ್, ಕಲ್ಕತ್ತಾ, ಮುಂಬೈ ಮತ್ತು ಮದರಾಸುಗಳಲ್ಲಿ ಏಜೆಂಟರು | – | ೧೮೦,೦೦೦ | – | – | – |
| ಸಿಮ್ಲಾ ಬ್ಯಾಂಕ್ | ೧೮೪೪ | | | – | ೬೩,೮೫೦ | – | – | – |
| ಡಾಕಾ ಬ್ಯಾಂಕ್ | ೧೮೪೬ | | | ೩೦,೦೦೦ | – | – | – | – |
| ಮರ್ಕೆಂಟೈಲ್ ಬ್ಯಾಂಕ್ | | ಮುಂಬೈ | ಲಂಡನ್, ಕಲ್ಕತ್ತಾ, ಕೊಲಂಬೊ, ಕ್ಯಾಂಡಿ ಮತ್ತು ಶಾಂಘಾಯಿ | ೫೦೦,೦೦೦ | ೩೨೮,೮೨೬ | ೭೭೭,೨೩೬ | ೧೦೬,೪೩೭ | |
| ಇಂಡಿಯಾ, ಚೈನಾ ಮತ್ತು ಆಸ್ಟ್ರೇಲಿಯಾ ಬ್ಯಾಂಕ್ | | | | | ವ್ಯವಹಾರವನ್ನು ಪ್ರಾರಂಭಿಸಿರಲಿಲ್ಲ | | | |

ಆರ್.ಎಮ್. ಮಾರ್ಟಿನ್, ದಿ ಇಂಡಿಯನ್ ಎಂಪೈರ್, ಸಂ.೧, ಪು. ೫೬೫, ಟಿಪ್ಪಣಿ : ಮೂಲ ಪಟ್ಟಿಯು ತಾರೀಖುಗಳನ್ನು ನಿರ್ದಿಷ್ಟಪಡಿಸುವುದಿಲ್ಲ. ಆದರೆ ಅದು ೧೮೫೬ ಇರಬಹುದೆಂದು ಆಂತರಿಕ ಪುರಾವೆ ತೋರಿಸುತ್ತದೆ.

ಜಾರಿಯಲ್ಲಿ ತರಬೇಕೆಂದು ಶಿಫಾರಸು ಮಾಡಿದ್ದಿದ್ದರೆ, ಎರಡನೆಯದರಲ್ಲಿ ಯಾವ ಔಚಿತ್ಯವೂ ಉಳಿದಿರಲಿಲ್ಲ. ಅದನ್ನು ಜಾರಿಯಲ್ಲಿ ತಂದಿದ್ದರೆ, ದರವು ಸ್ಥಿರವಾಗಿ ಉಳಿದ ಸಮಯದಲ್ಲಿ ಚಿನ್ನದ ಮಾರುಕಟ್ಟೆ ಬೆಲೆಯು ಕಡಿಮೆ ಇದೆ ಎಂದು ಭಾವಿಸಿ ಚಿನ್ನವನ್ನು ಒತ್ತಾಯದಿಂದ ಚಲಾವಣೆಯಲ್ಲಿ ತರಬೇಕಾಗುತ್ತಿತ್ತು. ದರವನ್ನು ಪರಿಷ್ಕರಿಸಲಾಗುವುದು ಮತ್ತು ಚಿನ್ನದ ಮೌಲ್ಯದ ಕುಸಿತದ ಮೇರೆಗೆ ನಾಣ್ಯದ ಮೌಲ್ಯವು ಕಡಿಮೆಯಾಗುವುದು ಎಂದು ಗೊತ್ತಾಗಿದ್ದರೆ, ಮಿತಿಮೀರಿದ ಬೆಲೆಯ ಚಿನ್ನದ ನಾಣ್ಯದಿಂದ ಬಿಡಿಸಿಕೊಳ್ಳಬೇಕಾಗುತ್ತಿತ್ತು ಮತ್ತು ತಪ್ಪಿಸಲಾರದ ಹಾನಿಯನ್ನು ಬೇರೆಯವರ ಹೆಗಲಿಗೆ ವರ್ಗಾಯಿಸುವ ಸಾರ್ವತ್ರಿಕ ತೊಂದರೆ ಉಂಟಾಗುತ್ತಿತ್ತು. ಮೂರನೆಯದು ಸ್ವಲ್ಪಮಟ್ಟಿಗೆ ವಿಚಿತ್ರ ಪ್ರಸ್ತಾವವಾಗಿತ್ತು. ಚಿಕ್ಕ ಪಾವತಿಗಳನ್ನು ಮಾಡುವ ಮತ್ತು ನಾಣ್ಯಗಳ ಬದ್ಧತೆಯನ್ನು ಸೀಮಿತಗೊಳಿಸುವ ಉದ್ದೇಶಗಳಿಗಾಗಿ ಕಡಿಮೆ ಬೆಲೆಯ ಲೋಹದಿಂದ ಪೂರ್ಣ ಮೌಲ್ಯಕ್ಕಿಂತ ಕಡಿಮೆ ಇರುವ ನಾಣ್ಯಗಳನ್ನು ತಯಾರಿಸುವುದು ಸಾಧ್ಯವಿದೆ. ಆದರೆ ಇದು ಹೆಚ್ಚು ಮೌಲ್ಯದ ಲೋಹಗಳಿಂದ ಸಾಧ್ಯವಿಲ್ಲ. ಏಕೆಂದರೆ ಅವುಗಳಿರುವ ಕಾರಣ, ಹೆಚ್ಚಿನ ಮೌಲ್ಯದ ಲೋಹಗಳ ನಾಣ್ಯನೀತಿಯು ದೊಡ್ಡ ದೊಡ್ಡ ವ್ಯವಹಾರಗಳಿಗೆ ಅನುಕೂಲವಾದುದಾಗಿದೆ. ಈ ಯೋಜನೆಯ ವಿರುದ್ಧ ಇರುವ ಆಕ್ಷೇಪಣೆಗಳನ್ನು ಮುಚ್ಚಿಡಲಿಕ್ಕಾಗದು. ಚಿನ್ನವು ಕಡಿಮೆ ಬೆಲೆ ಹೊಂದಿರುವವರೆಗೆ ಅದು ಚಲಾವಣೆಯಲ್ಲಿರುವುದು ಸಾಧ್ಯವಾಗುತ್ತಿರಲಿಲ್ಲ. ಆದರೆ ಒಮ್ಮೆ ಮಾರುಕಟ್ಟೆ ಅನುಪಾತದಲ್ಲಿ ಆದ ಬದಲಾವಣೆಗಳಿಂದ ಅದು ಅಧಿಕ ಬೆಲೆಯನ್ನು ಹೊಂದಿದಾಗ, ರೂಪಾಯಿಯು ಚಲಾವಣೆಯಲ್ಲಿರುವುದಿಲ್ಲ ಮತ್ತು ಅಂಗಡಿಕಾರರು ಮತ್ತು ವ್ಯಾಪಾರಸ್ಥರು ದೊಡ್ಡ ದೊಡ್ಡ ವ್ಯವಹಾರಗಳನ್ನು ನಡೆಸಲು ಮತ್ತು ಋಣವಿಮೋಚನೆ ಮಾಡಲು ನಿರುಪಯುಕ್ತವಾಗಿದ್ದ ನಾಣ್ಯವನ್ನು ಪಡೆಯುವ ಸಂದರ್ಭ ಬರುತ್ತಿತ್ತು.

ಬೆಳ್ಳಿಯ ಸಹಾಯಕ ನಾಣ್ಯವಾಗಿ, ಸುವರ್ಣ ಪ್ರಮಿತಿಯನ್ನು ಜಾರಿಗೊಳಿಸುವುದೊಂದೇ ಈ ದೋಷಗಳಿಂದ ಮುಕ್ತವಿದ್ದ ಯೋಜನೆಯಾಗಿತ್ತು. "ಎಲ್ಲ ಪಾವತಿಗಳನ್ನು ಬೆಳ್ಳಿಯಲ್ಲಿ ಮಾಡಲಾಗುತ್ತಿರುವ ದೇಶದಲ್ಲಿ, ಬೇರೆ ಯಾವುದೇ ವಸ್ತುವಿನಲ್ಲಿ ಪಾವತಿ ಮಾಡಲು ಒತ್ತಾಯಿಸುವ ಕಾಯಿದೆಯನ್ನು ಮಾಡುವುದು ಸಾಲಗಾರನ ಅನುಕೂಲಕ್ಕಾಗಿ ಸಾಲಿಗನನ್ನು ವಂಚಿಸಿದಂತಾಗುತ್ತದೆ ಮತ್ತು ಸಾರ್ವಜನಿಕರ ವಿಶ್ವಾಸವನ್ನು ಕಳೆದುಕೊಳ್ಳಬೇಕಾಗುತ್ತದೆ"[೧] ಎಂಬುದು ಈ ಬೇಡಿಕೆಯ ವಿರುದ್ಧ ಸರ್ಕಾರವು ಮುಂದಿಡಬಹುದಾದ ಅತ್ಯಂತ ಪ್ರಬಲ ವಾದವಾಗಿತ್ತು. ಈ ವಾದವು ಎಷ್ಟೇ ಬಲಯುತವಾಗಿದ್ದರೂ ಭಾರತೀಯ ನಾಣ್ಯಪದ್ಧತಿಯನ್ನು ವಿಸ್ತರಿಸುವ ಆಧಾರದ ಮೇಲಿಡಲು ಇದ್ದ ಬೇಡಿಕೆಯನ್ನು ಈಡೇರಿಸಲು ಅದು ಶಕ್ತವಾಗಿರಲಿಲ್ಲ. ಸರ್ಕಾರವು ನಿಜವಾಗಿ ಚಿನ್ನದ ನಾಣ್ಯಕ್ಕಿರುವ ತನ್ನ ವಿರೋಧದಲ್ಲಿ ಗಂಭೀರವಾಗಿತ್ತೆಂದು ವಾಸ್ತವವಾಗಿ ಹೇಳಲಿಕ್ಕಾಗದು. ತನ್ನ ಸ್ಥಾನವನ್ನು ಭದ್ರಪಡಿಸಿಕೊಳ್ಳಲು ಅದು ಚಿನ್ನದ ವಿರುದ್ಧ ಇದ್ದ ತನ್ನ ವಾದಗಳ ಸದೃಢತೆಯ ಮೇಲೆ ಭರವಸೆ ಇಡುವ ಬದಲು ಚಿನ್ನದ ನಾಣ್ಯಕ್ಕಿಂತ ಉತ್ತಮ ಪರಿಹಾರವಿದೆಯೆಂಬ ತನ್ನ ಶೋಧದ ಮೇಲೆ ವಿಶ್ವಾಸವನ್ನಿಟ್ಟಿತು. ಬೇಕಾಗಿದ್ದುದು ಅಸ್ತಿತ್ವದಲ್ಲಿರುವ ನಾಣ್ಯಕ್ಕೆ ಪೂರಕವಾಗಿದ್ದರೆ, ಸರ್ಕಾರವು ಸೂಚಿಸಿದ ಪರಿಹಾರವು ಟೀಕಾರಹಿತವಾಗುತ್ತಿತ್ತು. ಚಿನ್ನವು ಮಿತವ್ಯಯ ಮತ್ತು ಅನುಕೂಲಗಳಿಗೆ ವಿರುದ್ಧವಾಗಿರುತ್ತಿತ್ತು. ಕಾಗದದ ಹಣದಿಂದ ಬೆಂಬಲಿಸಲ್ಪಟ್ಟ ಬೆಳ್ಳಿಯ ನಾಣ್ಯವು ಮಿತವ್ಯಯ, ಅನುಕೂಲಕರ ಮತ್ತು ವಿಸ್ತೃತವಾಗುತ್ತಿತ್ತು. ವಾಸ್ತವವಾಗಿ ಅಧಿಕೃತ ಪರ್ಯಾಯಕ್ಕೆ ಅನುಕೂಲವಾಗಿ ಎಷ್ಟು ಸೌಕರ್ಯಗಳಿದ್ದವೆಂದರೆ ಬೆಳ್ಳಿಯ ಪ್ರಮಿತಿಯ ವಿರುದ್ಧವಿದ್ದ ಈ ಪ್ರಥಮ ಪ್ರಯತ್ನವು ಸುವರ್ಣ ಪ್ರಮಿತಿಯ ಸ್ಥಾಪನೆಯ ಬದಲು ಚಾಲ್ತಿಯಲ್ಲಿದ್ದ ಬೆಳ್ಳಿಯ

೧. ಅದೇ ಸ್ಥಳದಲ್ಲಿ, ಪು. ೨೬

ಪ್ರಮಿತಿಗೆ ಪೂರಕವಾಗಲು ಸರ್ಕಾರದ ಕಾಗದದ ನಾಣ್ಯಪದ್ಧತಿಯನ್ನು ಜಾರಿಗೆ ತರುವಲ್ಲಿ ಸಫಲವಾಯಿತು. ಆದಾಗ್ಯೂ ಸುವರ್ಣ ಪ್ರಮಿತಿಯ ಸಲುವಾಗಿ ಜನರ ಇಚ್ಛೆಯು ಸಂಪೂರ್ಣವಾಗಿ ನಿರ್ಲಕ್ಷಿಸದಷ್ಟು ಪ್ರಬಲವಾಗಿತ್ತು.

ಪರಿಸ್ಥಿತಿ ಹೀಗಿದ್ದರೂ, ಜನಸಾಮಾನ್ಯರಲ್ಲಿ ಚಿನ್ನದ ನಾಣ್ಯದ ಬಳಕೆಯ ಬಗ್ಗೆ ಎಷ್ಟು ಒಲವಿತ್ತೆಂದರೆ, ಅದನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವಂತಿರಲಿಲ್ಲ. ಆದರೂ ಈ ಬೇಡಿಕೆಯನ್ನು ಪರ್ಯಾಯ ಕ್ರಮದಿಂದ ಈಡೇರಿಸಲಾಗಿತ್ತೆಂದು ಭಾವಿಸಬಹುದು. ಮಿ. ವಿಲ್ಸನ್‌ರು ಮೂಲತಃ ಊಹಿಸಿದ ಕಾಗದದ ಹಣವು ಚಿನ್ನದ ಆಂದೋಲನಕ್ಕೆ ನೀಡಿದ ತೀವ್ರ ಪ್ರತಿಕ್ರಿಯೆಯಾಗಿತ್ತು. ಆದರೆ, ವಿಲ್ಸನ್‌ರ ಉತ್ತರಾಧಿಕಾರಿಯಾಗಿ ಬಂದ ಮಿ. ಲೇಂಗ್ ಅವರು ವಿಲ್ಸನ್‌ರವರ ಅಭಿಪ್ರಾಯಕ್ಕೆ ತದ್ವಿರುದ್ಧವಾದ ಅಭಿಪ್ರಾಯವನ್ನು ತಳೆದಿದ್ದರು. ಅವರ ಪ್ರಕಾರ, ಚಿನ್ನವನ್ನು ನಾಣ್ಯಗಳ ಆಧಾರವನ್ನಾಗಿಸುವುದರಿಂದ ಹೊರಗಿಡುವುದು ಒಂದು ಅತ್ಯಂತ ರೂಕ್ಷ ಯೋಜನೆಯಾಗಿತ್ತು. ಆದ್ದರಿಂದ ಅವರು ಮೂಲ ಮಸೂದೆಯಲ್ಲಿ ಎರಡು ಕಟ್ಟುಪಾಡುಗಳನ್ನು ಸೇರಿಸಿದರು. ವಿಲ್ಸನ್‌ರವರ ಅಕಾಲಿಕ ನಿಧನದಿಂದ ಅವುಗಳನ್ನು ಜಾರಿಗೆ ತರುವ ಕೆಲಸವು ಲೇಂಗ್‌ರವರ ಮೇಲೆ ಬಿತ್ತು. ಮೊದಲನೆಯದರಲ್ಲಿ ನೋಟುಗಳ ಅತಿ ಕಡಿಮೆ ಮೊತ್ತವನ್ನು ೫ ರೂಪಾಯಿಗಳಿಂದ ೨೦ ರೂಪಾಯಿಗಳಿಗೆ ಏರಿಸುವ ಆಶಯವಿತ್ತು. ಕೌನ್ಸಿಲ್ಲಿನ ಗವರ್ನರ್ ಜನರಲ್ಲನು ಕಲ್ಕತ್ತಾ, ಮದರಾಸು ಮತ್ತು ಮುಂಬೈನ ರಾಜ್ಯಪತ್ರದಲ್ಲಿ ಪ್ರಕಟಿಸುವ ಮೂಲಕ, ಚಲಾವಣೆಯಲ್ಲಿದ್ದ ಅಪರಂಜಿ ಹಾಗೂ ನಾಣ್ಯಗಳ ಒಟ್ಟು ಮೊತ್ತದ ಕಾಲು ಭಾಗಕ್ಕೆ ಹೆಚ್ಚಾಗದಂತೆ ಕಾಗದದ ಹಣವನ್ನು ಚಲಾವಣೆಗೆ ತರುವ ಅಧಿಕಾರವನ್ನು ನೀಡುವುದು ಮತ್ತೊಂದರ ಆಶಯವಾಗಿತ್ತು.

ಈ ಮಸೂದೆಯನ್ನು ಒಳಗೊಂಡ ಕಾಯಿದೆಯು ಎರಡನೆಯ ಕಟ್ಟುಪಾಡನ್ನು ಸಂಪೂರ್ಣವಾಗಿ ಸ್ವೀಕರಿಸಿತು ಮತ್ತು ಹೊರಡಿಸಲಾಗುವ ನೋಟುಗಳ ಅತಿ ಕಡಿಮೆ ಬೆಲೆ ೧೦ ರೂಪಾಯಿ ಇರಬೇಕೆಂದು ನಿರ್ಧರಿಸಲು ಮಾರ್ಪಾಟು ಮಾಡಿದ ನಂತರ ಮೊದಲನೆಯದನ್ನು ಜಾರಿಯಲ್ಲಿ ತರಲಾಯಿತು. ಎರಡನೆಯ ಕಟ್ಟುಪಾಡಿನ ಸಾಮಾನ್ಯ ತಾತ್ಪರ್ಯ ಸ್ಪಷ್ಟವಿದ್ದರೂ, ಅಧಿಕೃತಪತ್ರಗಳ ವಾಚನದಿಂದ ಅದರ ನೇರವಾದ ಗುರಿಯು ಸರಿಯಾಗಿ ಸ್ಪಷ್ಟವಾಗುವುದಿಲ್ಲ. ಕಟ್ಟುಪಾಡು ಒಳ್ಳೆಯದಾಗಿರದಿದ್ದರೂ ನಿರುಪದ್ರವಿಯಾಗಿದೆ ಎಂಬ ಅಭಿಪ್ರಾಯವನ್ನು ಕಾಗದದ ಹಣದ ಮಸೂದೆಗೆ ಸಂಬಂಧಿಸಿದ ಆಯ್ಕೆ ಸಮಿತಿಯು ಹೊಂದಿತ್ತು. ಅದು ಕೆಳಗಿನಂತೆ ಭಾವಿಸಿತು:–

"ವಿಶೇಷ ಸಂದರ್ಭಗಳಲ್ಲಿ ಮತ್ತು ವಿಶಿಷ್ಟ ವ್ಯವಹಾರಗಳಲ್ಲಿ ನಿರ್ಧಾರಿತ ದರದಲ್ಲಿ ಚಿನ್ನವನ್ನು ಹಣವಾಗಿ ಲಭ್ಯಗೊಳಿಸಲಾಗುವುದು ಎಂಬುದನ್ನು ಅರಿಯುವುದು ವರ್ತಕ ಸಮುದಾಯಕ್ಕೆ ಅನುಕೂಲಕರವಾಗುವುದು. ತದ್ವಿರುದ್ಧವಾಗಿ ನಿಗದಿತ ದರದಲ್ಲಿ ಸುವರ್ಣವು ಚಲಾವಣೆಯಲ್ಲಿ ಬರದಿದ್ದರೆ, ಭದ್ರ ಮತ್ತು ಪರಿವರ್ತನೀಯ ಕಾಗದದ ಹಣದೊಂದಿಗೆ ಬೆಳ್ಳಿಯು ಪೂರ್ಣ ವಿಶ್ವಾಸವನ್ನು ಕೊಡಬಲ್ಲುದು ಮತ್ತು ವಾಣಿಜ್ಯ ಹಾಗೂ ಸಮಾಜದ ಎಲ್ಲ ಬೇಡಿಕೆಗಳನ್ನು ಪೂರೈಸುತ್ತದೆ ಎಂಬುದು ಸಿದ್ಧವಾಗಿ, ಕಾಯಿದೆಯು ನಿಷ್ಪ್ರಯೋಜಕವಾಗಿ ಮತ್ತು ಪೂರ್ತಿಯಾಗಿ ನಿರುಪದ್ರವಿಯಾಗಿ ಉಳಿಯುವುದು."

ಆದರೆ ಮಿ. ಲೇಂಗ್ ಅವರು ಸುವರ್ಣ ಪ್ರಮಿತಿಗೆ ಸ್ಥಿತ್ಯಂತರ ಮಾಡಲು ಇದೊಂದು ಸುಲಭ ಸಾಧನವೆಂದು ಭಾವಿಸಿದರು. ನಾಣ್ಯ ಮತ್ತು ಬ್ಯಾಂಕಿಂಗ್ ಕುರಿತು ಮೇ ೭, ೧೮೬೨ರ ಸಂಕ್ಷಿಪ್ತ ಟಿಪ್ಪಣಿಯಲ್ಲಿ ಅವರು ಹೀಗೆ ಬರೆದರು:–

"ಈ ಕಟ್ಟುಪಾಡಿನ ಉದ್ದೇಶವು ಭವಿಷ್ಯತ್ತಿನ ಚಿನ್ನದ ಉಪಯೋಗದ ಬಗ್ಗೆ ಮುಂಜಾಗ್ರತೆಯ ಮತ್ತು

ತಾತ್ಕಾಲಿಕ ಪ್ರಯೋಗಗಳ ಸಲುವಾಗಿ ಸಾಧಾರಣವಾಗಿ ಅವಕಾಶಮಾಡಿಕೊಡುವುದಾಗಿತ್ತು. ಚಿನ್ನದ ಆಯಾತವು ಈಗಾಗಲೇ ಇದೆ ಮತ್ತು ಹೆಚ್ಚಾಗುತ್ತಲಿದೆ ಮತ್ತು ಈ ಲೋಹವು ಸಾಮಾನ್ಯವಾಗಿ ಲಾಭಯುತವಾಗಿರುತ್ತದೆ ಎಂದು ಸ್ಥಳೀಯ ಜನರು ಬಹಳ ಶ್ಲಾಘಿಸುತ್ತಿದ್ದಾರೆ..... ಹೀಗೆ ಕೆಲ ಸಮಯದ ನಂತರ ಚಿನ್ನದ ಬಳಕೆಯು ಹೆಚ್ಚು ಸಾಮಾನ್ಯವಾದರೆ ಮತ್ತು ಅದರ ಮೌಲ್ಯವು ಹೆಚ್ಚಾದರೆ, ಕೆಲವು ಮುಂದಿನ ಕ್ರಮಗಳನ್ನು ತೆಗೆದುಕೊಳ್ಳಬಹುದು" ಮತ್ತು ಅದು ಆಗಿನ ಸೆಕ್ರೆಟರಿ ಆಫ್ ಸ್ಟೇಟ್‌ರವರ ಭಾವನೆಯೂ ಆಗಿತ್ತೆಂದು ಕಾಣುತ್ತದೆ. ಏಕೆಂದರೆ ಚಿನ್ನದ ಆಧಾರದ ಮೇಲೆ ನೋಟುಗಳ ತಯಾರಿಕೆಗೆ ಅನುಕೂಲಕರವಾಗಿ ಮಾಡಿದ ಶಿಫಾರಸು "ಭಾರತದಲ್ಲಿ ಚಿನ್ನದ ನಾಣ್ಯವನ್ನು ಜಾರಿಯಲ್ಲಿ ತರಲು ಪರಿಣಾಮಕಾರಿಯಾಗಿ ಸಹಾಯ ಮಾಡುವುದು" ಎಂದು ಅವರು ಸರಿಯಾಗಿಯೇ ಅರಿತಿದ್ದರು.[೧]

ಆದರೆ ಇದು ವಾಣಿಜ್ಯ ಸಮೂಹಕ್ಕೆ ಪರಿಹಾರವಾಗುವುದೋ ಅಥವಾ ಸುವರ್ಣ ಪ್ರಮಿತಿಯನ್ನು ಜಾರಿಗೆ ತರಲು ಒಂದು ಮಾರ್ಗವಾಗುವುದೋ ಎಂದು ಭಾವಿಸಿ ಈ ನಿಬಂಧನೆಯನ್ನು ಕಾರ್ಯರೂಪಕ್ಕೆ ತರಲಿಲ್ಲ. ಆ ವಿಷಯದಲ್ಲಿ ಯಾವುದೇ ಕ್ರಮವನ್ನು ತೆಗೆದುಕೊಳ್ಳುವಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಆಕ್ಷೇಪಣೆ ವ್ಯಕ್ತಪಡಿಸಿದರು.[೨] ಅಷ್ಟರಲ್ಲಿ ಕಾಗದದ ನಾಣ್ಯವು ರಾಮಬಾಣವಾಗುವುದೆಂದು ಘಂಟಾಘೋಷವಾಗಿ ಹೇಳಿದ್ದರೂ, ಅದು ಹಾಗೆ ಆಗಲಿಲ್ಲ. ಅದು ತಲುಪಿದ ವ್ಯಾಪ್ತಿ ಮತ್ತು ಅರ್ಥವ್ಯವಸ್ಥೆಯ ಮೇಲೆ ಬೀರಿದ ಪರಿಣಾಮ ಇವುಗಳು ಸಾಪೇಕ್ಷವಾಗಿ ಅಲ್ಪವಿದ್ದವು.

## ಪಟ್ಟಿ VI

| ಪ್ರಾಂತ್ಯಗಳು | ಗಟ್ಟಿ | ನಾಣ್ಯ | ಸರ್ಕಾರದ ಭದ್ರತಾ ಪತ್ರಗಳು | ಚಲಾವಣೆಯ ಯಲ್ಲಿಯ ನೋಟುಗಳ ಮೌಲ್ಯ |
|---|---|---|---|---|
| ಅಕ್ಟೋಬರ್ ೩೧, ೧೮೬೩ರಂದು ಕಲ್ಕತ್ತಾ | – | ೧,೮೪,೫೫,೯೨೨ | ೧,೧೦,೪೪,೦೭೮ | ೨,೯೫,೦೦,೦೦೦ |
| ಅಕ್ಟೋಬರ್ ೩೧, ೧೮೬೩ರಂದು ಮದರಾಸು | – | ೭೩,೦೦,೦೦೦ | – | ೭೩,೦೦,೦೦೦ |
| ಜನವರಿ ೪, ೧೮೬೪ರಂದು ಮುಂಬೈ | ೧,೧೭,೦೦,೦೦೦ | ೧,೧೯,೦೦,೦೦೦ | – | ೨,೩೬,೦೦,೦೦೦ |
| **ಒಟ್ಟು** | **೧,೧೭,೦೦,೦೦೦** | **೩,೭೬,೫೫,೯೨೨** | **೧,೧೦,೪೪,೦೭೮** | **೬,೦೪,೦೦,೦೦೦** |

---

೧. ಪ್ಯಾರಾ ೫೯, ಸೆಕ್ರೆಟರಿ ಆಫ್ ಸ್ಟೇಟ್ ಇವರ ಡಿಸ್‌ಪ್ಯಾಚ್, ಸಂ. ೧೫೮, ದಿನಾಂಕ, ಸೆಪ್ಟೆಂಬರ್ ೧೬, ೧೮೬೨

೨. ನೋಡಿರಿ : ಅವರ ಡಿಸ್‌ಪ್ಯಾಚ್ ಇದರ ಪ್ಯಾರಾ ೬೪, ಮೇಲೆ.

ಮಿ. ಕ್ಯಾಸೆಲ್ಸ್ ತೋರಿಸಿದಂತೆ[೧] ಮೂರು ವರ್ಷಗಳ ನಂತರ ಸಂಪೂರ್ಣ ಲೋಹದ ನಾಣ್ಯದ ಸುಮಾರು ಪ್ರತಿ ಶತ ೬ ರಷ್ಟು ಮಾತ್ರ ಚಲಾವಣಾ ನೋಟುಗಳನ್ನು ತೆಗೆದುಕೊಳ್ಳಲಾಗಿತ್ತು. ಅಂದು ಲೋಹದ ನಾಣ್ಯಗಳು ೧೦೦,೦೦೦,೦೦೦ ಸ್ಟರ್ಲಿಂಗ್‌ಗಳಷ್ಟು ಇದ್ದವು ಎಂದು ವಿಲ್ಸನ್ ಅಂದಾಜು ಮಾಡಿದ್ದರು ಮತ್ತು ಅವರು ಒಟ್ಟು ಮೊತ್ತದ ಶೇಕಡಾ ಒಂದರಷ್ಟು ಅಥವಾ ಒಂದು ದಶಲಕ್ಷ ಸ್ಟರ್ಲಿಂಗ್‌ಗಳನ್ನು ಮಾತ್ರ ದೇಶದ ಪುನರುತ್ಪಾದಕ ಬಂಡವಾಳವನ್ನಾಗಿ ಬಿಡುವ ತಮ್ಮ ಪ್ರಧಾನ ಉದ್ದೇಶವನ್ನು ನಿಜವಾಗಿ ನೆರವೇರಿಸಿದ್ದರು. ಯಾದವೀ ಕಲಹದ ಸಮಯದಲ್ಲಿ ಅಮೆರಿಕೆಯಿಂದ ಹತ್ತಿಯ ನಿರ್ಯಾತವು ನಿಂತಿತ್ತು. ಅದರ ಬದಲು ಲಿವ್ಹರ್‌ಪೂಲ್ ಮಾರುಕಟ್ಟೆಯಲ್ಲಿ ಭಾರತೀಯ ಹತ್ತಿಗೆ ಬೇಡಿಕೆ ಇದ್ದುದರಿಂದ ವಿದೇಶೀ ವ್ಯಾಪಾರವು ಅಪಾರ ಬೆಳವಣಿಗೆಯನ್ನು ಪಡೆಯಿತು ಮತ್ತು ಕಾಗದದ ನಾಣ್ಯವು ನೆರವನ್ನು ನೀಡಿದ್ದರಿಂದ ಬೆಳ್ಳಿಯ ಮೇಲೆ ಒತ್ತಡ ಬಿತ್ತು. ಆದಾಗ್ಯೂ, ಬೆಳ್ಳಿಯ ಉತ್ಪಾದನೆಯು ಹಿಂದಿನಂತೆ ಬಹಳ ವೇಗದಿಂದ ಹೆಚ್ಚಾಗುತ್ತಿರಲಿಲ್ಲ ಮತ್ತು ಭಾರತದಲ್ಲಿ ಅದಕ್ಕಿದ್ದ ಬೇಡಿಕೆಯು ಅಲ್ಪಪ್ರಮಾಣದ್ದಾಗಿರಲಿಲ್ಲ. ಕಾಗದದ ನಾಣ್ಯಪದ್ಧತಿಯು ಜಾರಿಗೆ ಬಂದಾಗ್ಯೂ ಹಣದ ಮಾಧ್ಯಮದ ಕೊರತೆಯು ಮೊದಲಿನಷ್ಟೇ ತೀಕ್ಷ್ಣವಾಗುತ್ತಿತ್ತು. ಚಿನ್ನವು ಕಾನೂನುಬದ್ಧ ಹಣವಾಗದಿದ್ದರೂ, ಅದನ್ನು ಬೃಹತ್ ಪ್ರಮಾಣದಲ್ಲಿ ಆಯಾತ ಮಾಡಿಕೊಳ್ಳಲಾಯಿತಲ್ಲದೇ ಹಣಕಾಸು ಉದ್ದೇಶಗಳಿಗೆ ಬಳಸಲಾಯಿತು, ಸುವರ್ಣ ಪ್ರಮಿತಿಯನ್ನು ಭಾರತದಲ್ಲಿ ಜಾರಿಯಲ್ಲಿ ತರುವಂತೆ ಮುಂಬೈ ವಾಣಿಜ್ಯ ಮಹಾಮಂಡಳಿಯು[೨] ಸರ್ಕಾರಕ್ಕೆ ಮನವಿ ಮಾಡಿತು. ಈ ಮನವಿಯಲ್ಲಿ ಕೆಳಗಿನ ವಿಷಯದತ್ತ ಗಮನ ಸೆಳೆಯಲಾಯಿತು:–

"ಅಸ್ತಿತ್ವದಲ್ಲಿರುವ ಬೆಳ್ಳಿಯ ನಾಣ್ಯದ ದೋಷಗಳಿಗೆ ಸ್ಥೂಲವಾದ ಪರಿಹಾರವಾಗಿ ಚಿನ್ನದ ಗಟ್ಟಿ ನಾಣ್ಯವನ್ನು ದಾಸ್ತಾನು ಮಾಡುವ ಪ್ರವೃತ್ತಿ ಹೆಚ್ಚುತ್ತಾ ಇದೆ." ಮತ್ತು "ಮುಂಬೈ ಬ್ಯಾಂಕುಗಳ ಚಿಹ್ನೆಯಿದ್ದ ಚಿನ್ನದ ಉದ್ದವಾದ ತುಣುಕುಗಳು ಈ ಉದ್ದೇಶಕ್ಕಾಗಿ ದೇಶದ ವಿವಿಧ ಭಾಗಗಳಲ್ಲಿ ಚಲಾವಣೆಯಲ್ಲಿವೆ."

ಇದು ಕಾಗದದ ನಾಣ್ಯ ಕಾಯಿದೆಯಲ್ಲಿನ ಕಟ್ಟುಪಾಡನ್ನು[೩] ಅನುಷ್ಠಾನಕ್ಕೆ ತರುವಂತೆ ಸರ್ಕಾರವನ್ನು ಒತ್ತಾಯಿಸುವ ಆಂದೋಲನಕ್ಕೆ ಕಾರಣವಾಯಿತು ಮತ್ತು ಅದು ಸರ್ಕಾರವನ್ನು ಈ ದಿಸೆಯಲ್ಲಿ ಕಾರ್ಯೋನ್ಮುಖವಾಗುವಂತೆ ಮಾಡುವಲ್ಲಿ ಸಫಲವಾಯಿತು. ಈ ಸಮಯದಲ್ಲಿ ಬದಲಾವಣೆಯನ್ನು ತರುವ ಒಂದು ಯೋಜನೆಯನ್ನು ಧೈರ್ಯದಿಂದ ನಿರೂಪಿಸಲಾಯಿತು. ಸರ್ಕಾರವು ಕ್ರಮ ತೆಗೆದುಕೊಳ್ಳಲು ಉದ್ದೇಶಿಸಿದ ಕಟ್ಟುಪಾಡಿನಲ್ಲಿಯ ನ್ಯೂನತೆಗಳನ್ನು ಸರ್ ಚಾರ್ಲ್ಸ್ ಟ್ರಾವೇಲ್ಯಾನ್ ತೋರಿಸಿದರು. ಭಾರತದಲ್ಲಿ ಚಲಾವಣೆಯಲ್ಲಿಯ ನಾಣ್ಯವಾದ ಬೆಳ್ಳಿಯ ರೂಪಾಯಿಗಳಲ್ಲಿ ಮಾತ್ರ ಚಲಾವಣೆಯಲ್ಲಿಯ ನಾಣ್ಯಗಳನ್ನು ಸಲ್ಲಿಸಬೇಕಾಗಿದೆ ಮತ್ತು ನೋಟುಗಳ ಬಟವಾಡೆಯಲ್ಲಿ ಉಪಯೋಗಿಸಲಾಗದ ಚಿನ್ನದ ಕಾದಿಟ್ಟ ಹಣದ

---

೧. ದಿನಾಂಕ ೧, ೧೮೬೪ರ ಮುಂಬೈ ಸರ್ಕಾರಕ್ಕೆ ಬರೆದ ಅವರ ಪತ್ರ ಹೋಲಿಸಿರಿ. ಇಂಟ್ರಡಕ್ಷನ್ ಆಫ್ ಗೋಲ್ಡ್ ಇನ್ ಇಂಡಿಯಾ ಕುರಿತ ಲೇಖನಗಳು ಇತ್ಯಾದಿ ನೋಡಿ.

೨. ಮುಂಬೈ ವಾಣಿಜ್ಯ ಮಹಾಮಂಡಳಿಯ ವರದಿ, ೧೮೬೩–೬೪, ಅನುಬಂಧ ೧, ಪು. ೨೦೬

೩. ಈ ವೇಳೆಗೆ ಬಂಗಾಲ, ಮುಂಬೈ ಮತ್ತು ಮದರಾಸಿನ ಎಲ್ಲ ವಾಣಿಜ್ಯ ಮಹಾಮಂಡಳಿಗಳು ಸರ್ಕಾರಕ್ಕೆ ಮನವಿಗಳನ್ನು ಕಳುಹಿಸಿದವು. ಮುಂಬೈ ಸಂಘ ಮತ್ತು ಮ್ಯಾಂಚೆಸ್ಟರದ ವಾಣಿಜ್ಯ ಮಹಾಮಂಡಳಿಗಳು ಸೂಕ್ತ ಕ್ರಮ ತೆಗೆದುಕೊಳ್ಳಲು ಸರ್ಕಾರವನ್ನು ಒತ್ತಾಯಿಸಿದವು. ಆದರೆ ಆಂದೋಲನವು ಮುಂಬೈ ಸರ್ಕಾರದ ಬೆಂಬಲದಿಂದ ಅದರಲ್ಲೂ ವಿಶೇಷವಾಗಿ ಸರ್ ವಿಲಿಯಮ್ ಮ್ಯಾನ್ಸ್‌ಫೀಲ್ಡ್ ಅವರ ಭಾರತದಲ್ಲಿಯ ಚಿನ್ನದ ನಾಣ್ಯ ಕುರಿತ ಪ್ರಸಿದ್ಧ ಸಂಕ್ಷಿಪ್ತ ಟಿಪ್ಪಣಿ ಇವುಗಳಿಂದ ಅತಿ ಹೆಚ್ಚಿನ ಶಕ್ತಿಯನ್ನು ಪಡೆಯಿತು.

ಕೆಲ ಭಾಗವನ್ನು ಹಿಡಿದಿರುವುದರಿಂದ ರಾಜಕೀಯ ಅವಿಶ್ವಾಸ ಮತ್ತು ವಾಣಿಜ್ಯದ ಆತಂಕದ ಸಂದರ್ಭದಲ್ಲಿ ಅವುಗಳ ಪರಿವರ್ತನೀಯತೆಯು ಗಂಡಾಂತರದಲ್ಲಿ ಸಿಲುಕುವುದು ಎಂದು ಅವರು ವಾದಿಸಿದರು.[೧] ಆದ್ದರಿಂದ ಅವರು ಚಳವಳಿಯ ವ್ಯಾಪ್ತಿಯ ಆಚೆಹೋಗಿ, ನಾಣ್ಯಪದ್ಧತಿಯಲ್ಲಿ ಚಿನ್ನಕ್ಕೆ ಹಿಂದಿನ ಬಾಗಿಲಿನಿಂದ ಪ್ರವೇಶಿಸಲು ಎಡೆಗೊಡುವುದರ ಬದಲು ಅದನ್ನು ಭಾರತದಲ್ಲಿ ಮೌಲ್ಯದ ಪ್ರಮಾಣವನ್ನಾಗಿ ಮಾಡತಕ್ಕದ್ದು ಎಂದು ಘೋಷಿಸಿದರು. ಬೆಳ್ಳಿಯ ಪ್ರಮಿತಿಯ ಸ್ಥಳದಲ್ಲಿ ಚಿನ್ನದ ಪ್ರಮಿತಿಯನ್ನು ತರುವುದು "ಸಾಲಿಗರ ವಿಶ್ವಾಸವನ್ನು ನಾಶಮಾಡುವುದು" ಎಂಬ ಮಿ. ವಿಲ್ಸನ್ ಅವರ ಅಭಿಪ್ರಾಯವನ್ನು ಇವರು ಒಪ್ಪಲಿಲ್ಲ. ಬೆಳ್ಳಿಯ ನಾಣ್ಯವನ್ನು ಸಹಾಯಕ ದರ್ಜೆಗೆ ಇಳಿಸುವ ಮುನ್ನ ಭಾರತದಲ್ಲಿ ಸುವರ್ಣ ಪ್ರಮಿತಿಯನ್ನು ಜಾರಿಗೆ ತರುವುದು. ದ್ವಿಲೋಹ ನಾಣ್ಯಪದ್ಧತಿಗೆ ಕಾರಣವಾಗುವುದು ಎಂಬ ಸಂಗತಿಯಿಂದ ಅವರು ಎದೆಗುಂದಲಿಲ್ಲ. ಏಕೆಂದರೆ "ಏಕಲೋಹ ನಾಣ್ಯಪದ್ಧತಿಯನ್ನು ತಲುಪುವ ಮೊದಲು ಎಲ್ಲ ರಾಷ್ಟ್ರಗಳೂ ದ್ವಿಲೋಹ ನಾಣ್ಯಪದ್ಧತಿಯ ಬದಲಾವಣೆಯ ಹಂತವನ್ನು ದಾಟಬೇಕು" ಎಂದು ಅವರು ವಾದಮಾಡಿದರು. ತದನುಸಾರ ಅವರು ಹೀಗೆ ಸೂಚಿಸಿದರು : ೧. ಬ್ರಿಟಿಷ್ ಅಥವಾ ಆಸ್ಟ್ರೇಲಿಯಾಗಳ ಸವರನ್ ಮತ್ತು ಅರ್ಧ ಸವರನ್‌ಗಳು ಚಲಾವಣೆಗೆ ಸಲ್ಲಬೇಕು ಮತ್ತು ಒಂದು ಸವರನ್‌ಗೆ ೧೦ ರೂಪಾಯಿಗಳಂತೆ ಅದು ಕಾನೂನುಬದ್ಧ ಹಣವಾಗಬೇಕು, ಮತ್ತು ೨. ಸರ್ಕಾರದ ಚಲಾವಣಾ ನೋಟುಗಳು ರೂಪಾಯಿಗಳಲ್ಲಿ ಅಥವಾ ಸವರನ್‌ಗಳಲ್ಲಿ ಒಂದು ಸವರನ್‌ಗೆ ೧೦ ರೂಪಾಯಿಗಳ ದರದಲ್ಲಿ ವಿನಿಮಯವಾಗಬೇಕು. ಆದರೆ ಅವುಗಳು ಚಿನ್ನ ಅಥವಾ ಬೆಳ್ಳಿ ಗಟ್ಟಿಯೊಂದಿಗೆ ಅದಲುಬದಲು ಆಗಬಾರದು.

ಅವರ ಸೂಚನೆಗಳು ಭಾರತ ಸರ್ಕಾರದಿಂದ ಸ್ವೀಕರಿಸಲ್ಪಟ್ಟವು ಮತ್ತು ಅವುಗಳನ್ನು ಸೆಕ್ರೆಟರಿ ಅಫ್ ಸ್ಟೇಟ್‌ರವರ ಮಂಜೂರಾತಿಗಾಗಿ ಕಳಿಸಲಾಯಿತು.[೨] ಆದರೆ ಏಕನಾಣ್ಯ ಪದ್ಧತಿಯ ಬದಲಾವಣೆಯನ್ನು ಅನುಮೋದಿಸದ ಸೆಕ್ರೆಟರಿ ಆಫ್ ಸ್ಟೇಟ್‌ರವರು ಸ್ವಲ್ಪವೂ ಸೌಜನ್ಯವಿಲ್ಲದೆ ಪೂರ್ಣ ಯೋಜನೆಯನ್ನು ತಿರಸ್ಕರಿಸಿದರು. ಅವರ ಉತ್ತರವು[೩] ಅಸಂಬದ್ಧತೆಯಿಂದ ಕೂಡಿದ್ದ ಕ್ಷುದ್ರ ತರ್ಕವಾಗಿತ್ತು. ಈ ಕ್ರಮಕ್ಕೆ ಅನುಮತಿ ಕೊಡಲು ಅವರು ಇಷ್ಟಪಡಲಿಲ್ಲ. ಏಕೆಂದರೆ ಒಂದು ಸವರನ್‌ಗೆ ೧೦ ರೂಪಾಯಿಗಳ ದರವು ಸವರನ್ನಿನ ಬೆಲೆಯನ್ನು ಅದರ ಚಲಾವಣೆಗೆ ಅನನುಕೂಲವಾಗುವಂತೆ ಬಹಳ ಕಡಿಮೆಯಾಗಿದ್ದಿತು ಎಂಬುದು ಅವರಿಗೆ ಖಾತರಿಯಾಗಿತ್ತು. ಇಲ್ಲಿ ಅವರು ದೃಢ ಆಧಾರ ಹೊಂದಿದ್ದರು. ಆ ವೇಳೆಯಲ್ಲಿ ಭಾರತದ ಟಂಕಸಾಲೆಯಲ್ಲಿ ಒಂದು ಸವರನ್ನಿನ ಉತ್ಪಾದನೆಯ ಖರ್ಚು ರೂಪಾಯಿ ೧೦-೪-೮ ಇದ್ದಿತೆಂದು ಅಂದಾಜು ಮಾಡಲಾಗಿದ್ದು[೪] ಅದನ್ನು ಕಲ್ಕತ್ತೆಗೆ ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾಗಳಿಂದ ಆಯಾತ

೧. ಹೋಲಿಸಿರಿ : ಜೂನ್ ೨೦, ೧೮೬೪ ಅವರ ಸಂಕ್ಷಿಪ್ತ ಟಿಪ್ಪಣಿ ಭಾರತದಲ್ಲಿ ಚಿನ್ನದ ಬಗ್ಗೆ ಪ್ರಬಂಧಗಳು ಇತ್ಯಾದಿ ಪುಟ ೧೪೭, ಕಾಯ್ದಿಟ್ಟ ಕಾಗದದ ನಾಣ್ಯದಲ್ಲಿ ಬೆಳ್ಳಿಯ ಗಟ್ಟಿಯನ್ನು ಇಡುವುದಕ್ಕೆ ಅವರು ವಿರುದ್ಧವಿದ್ದರು. ಏಕೆಂದರೆ ಬೆಳ್ಳಿಯ ನಾಣ್ಯಗಳನ್ನು ತಯಾರಿಸುವುದು ಚಲಾವಣೆಯಲ್ಲಿಯ ನಾಣ್ಯದ ಇಲಾಖೆಗೆ ಅನಿವಾರ್ಯವಾಗಿತ್ತು. ಆ ವೇಳೆಯಲ್ಲಿ ಭಾರತೀಯ ಟಂಕಸಾಲೆಗಳ ಸಾಮರ್ಥ್ಯವು ಸೀಮಿತವಿದ್ದು ಇದಕ್ಕೆ ಕೆಲ ಸಮಯ ಬೇಕಾಗುತ್ತಿತ್ತು. ಆದರೆ ಜಾರಿಯಲ್ಲಿ ತಂದ ನೋಟುಗಳನ್ನು ಬೇಡಿದಾಗ ನಾಣ್ಯದಲ್ಲಿ ಕೊಡಬೇಕಾಗುತ್ತಿತ್ತು. ಕಾಗದದ ನಾಣ್ಯದ ಇಲಾಖೆಗೆ ಬೇಡಿಕೆಯ ಒತ್ತಡವಿತ್ತು. ಆದರೆ ಅದರ ಹತ್ತಿರ ಕಡಿಮೆ ನಾಣ್ಯಗಳಿದ್ದವು.

೨. ಹೋಲಿಸಿರಿ : ಭಾರತ ಸರ್ಕಾರದ ಪತ್ರ ಸಂಖ್ಯೆ ೮೯, ದಿನಾಂಕ ಸಿಮ್ಲಾ, ಜುಲೈ ೧೪, ೧೮೬೪

೩. ಸೆಕ್ರೆಟರಿ ಆಫ್ ಸ್ಟೇಟ್ ಅವರ ಹಣಕಾಸು ಪತ್ರ, ಸಂಖ್ಯೆ ೨೨೪, ದಿನಾಂಕ ಸೆಪ್ಟೆಂಬರ್ ೨೬, ೧೮೬೪

೪. ಹೋಲಿಸಿರಿ : ಮಾನ್ಯ ಕ್ಲಾಡ್ ಬ್ರೌನ್ ಇವರಿಂದ ಮಾನ್ಯ ಸರ್ ಸಿ.ಇ. ಟ್ರಾವೇಲ್ಯಾನ್ ಇವರಿಗೆ ದಿನಾಂಕ ಕಲ್ಕತ್ತಾ ಮೇ ೨೮, ೧೮೬೪ ಪತ್ರ ನೋಡಿರಿ: ಚಿನ್ನದ ಬಗ್ಗೆ ಪ್ರಬಂಧಗಳು ಇತ್ಯಾದಿ ಪು. ೨೬೫

ಮಾಡಿಕೊಳ್ಳುವ ಖರ್ಚು ಕ್ರಮವಾಗಿ ರೂಪಾಯಿ ೧೦–೪–೧೦ ಮತ್ತು ರೂಪಾಯಿ ೧೦–೨–೯ ಇತ್ತು. ಯೋಗ್ಯದರವು ಯಾವುದಾಗಿದ್ದರೂ, ೧೦ ರೂಪಾಯಿಗಳಿಗೆ ಒಂದು ದರದಲ್ಲಿ ಸವರನ್ ಚಲಾವಣೆಯಲ್ಲಿ ಬರಲಾರದು ಎಂಬುದು ಖಂಡಿತವಾಗಿತ್ತು. ಸವರನ್‌ನ ಚಲಾವಣೆಯು ಭರವಸೆ ನೀಡಲು ಅನುಕೂಲವಾಗುವಂತೆ ಸರ್ ಚಾರ್ಲ್ಸ್ ಟ್ರಾವೇಲ್ಯಾನ್ ಇವರು ಹೆಚ್ಚಿನ ಅನುಪಾತವನ್ನು ಸೂಚಿಸದಿದ್ದುದು ವಿಷಾದನೀಯ.[೧] ಆದರೆ ಅನುಪಾತವು ಸವರನ್ ನಾಣ್ಯಕ್ಕೆ ಅನುಕೂಲವಾಗಿದ್ದರೂ ಕೂಡ ಸೆಕ್ರೆಟರಿ ಆಫ್ ಸ್ಟೇಟ್ ಇವರು ಅದೇ ರೀತಿಯಲ್ಲಿ ಅಳತೆಮಾಡಲು ಒಪ್ಪುತ್ತಿದ್ದಿಲ್ಲ. ಅವರ ದೃಷ್ಟಿಯಲ್ಲಿ ಆ ಅಳತೆಯು ಅನುಕೂಲಕರವಾಗಿರದಿದ್ದರಿಂದ ಅದು ನಿರುಪಯುಕ್ತವಿತ್ತು. ಆದರೆ ಅನುಕೂಲಕರ ಪ್ರಮಾಣದ ಮೇಲೆ ಆಧಾರಿತವಾಗಿದ್ದರೂ ಕೂಡ ಅದು ಅಪಾಯಕರವಾಗಿರಬಹುದಿತ್ತು. ಏಕೆಂದರೆ ಅವರು ಭಾವಿಸಿದಂತೆ ಅದು ಎಷ್ಟೇ ತಾತ್ಕಾಲಿಕವಾದರೂ ಅತ್ಯಂತ ದುಷ್ಟ ದ್ವಿಲೋಹ ನಾಣ್ಯಪದ್ಧತಿಯ ಸಾಧ್ಯತೆಯ ಬಗ್ಗೆ ಮುನ್ನೆಚ್ಚರಿಕೆ ಕೊಟ್ಟಿತು. ದ್ವಿಲೋಹ ನಾಣ್ಯಪದ್ಧತಿಗೆ ಕಾರಣವಾಗುವ ಕೇವಲ ಆಕಸ್ಮಿಕ ಘಟನೆಯು ಪೂರ್ಣಕ್ರಮವನ್ನು ವಿರೋಧಿಸಲು ಸೆಕ್ರೆಟರಿ ಆಫ್ ಸ್ಟೇಟ್‌ರವರನ್ನು ಹೆದರಿಸಲು ಸಾಕಿತ್ತು. ಏಕೆಂದರೆ "ನಾಣ್ಯದ ತಳಹದಿಯನ್ನು ಬೆಳ್ಳಿಯಿಂದ ಚಿನ್ನಕ್ಕೆ ಬದಲಾಯಿಸಲು ದ್ವಿಲೋಹ ನಾಣ್ಯಪದ್ಧತಿಯ ಅವಧಿಯನ್ನು ದಾಟುವುದು ಸಾರ್ವಜನಿಕ ಅನುಕೂಲತೆಗಾಗಿ" ಎಂಬುದನ್ನು ಒಪ್ಪಲು ಅವರು ನಿರಾಕರಿಸಿದರು.

"ಸರ್ಕಾರವು ನಿಗದಿಪಡಿಸಿದ ಮತ್ತು ಸಾರ್ವಜನಿಕವಾಗಿ ಘೋಷಣೆಯ ಮೂಲಕ ತಿಳಿಸಿದ ದರದಲ್ಲಿ ಚಿನ್ನದ ನಾಣ್ಯವನ್ನು ಅದು ಭಾರತದಲ್ಲಿ ಕಾನೂನುಬದ್ಧ ಹಣವಾಗದಂತೆ ಸಾರ್ವಜನಿಕ ಖಜಾನೆಯಲ್ಲಿ ಸ್ವೀಕರಿಸಬೇಕು" ಎಂಬ ರಿಯಾಯಿತಿಗೆ ಮಾತ್ರ ಸೆಕ್ರೆಟರಿ ಆಫ್ ಸ್ಟೇಟ್‌ರವರು ತಮ್ಮ ಸಮ್ಮತಿ ನೀಡಿದರು. ಇದು ಸರ್ಕಾರವನ್ನು ಪೇಚಿನಲ್ಲಿ ಸಿಕ್ಕಿಸಿದ್ದರಿಂದ ೧೮೫೨ ನೆಯ ವರ್ಷದಲ್ಲಿ ಕೈ ಬಿಡಲಾಗಿದ್ದ ಆ ಮೂರ್ಖ ಕ್ರಮದ ಪುನರಾವರ್ತನೆಯೇ ಇದಾಗಿತ್ತೆಂಬುದನ್ನು ಇಲ್ಲಿ ಸ್ಮರಿಸಬಹುದು. ನೀವು ವಾಪಸು ಕೊಡಲಾಗದ ನಾಣ್ಯವನ್ನು ಸ್ವೀಕರಿಸಲಿಚ್ಛಿಸುವುದು ತೊಂದರೆಯನ್ನು ಆಹ್ವಾನಿಸುವುದಾಗಿದೆ ಮತ್ತು ಪ್ರಾಯೋಜನೆಯಲ್ಲಿ ಅಂತರ್ಗತವಾದ ಸರ್ವವಿದಿತ ಗಂಡಾಂತರವನ್ನು ನಿವಾರಿಸಲು ಈ ಇಡೀ ಕ್ರಮವನ್ನು ಮಂಡಿಸಲಾಯಿತು. ಆದರೆ ನಾಣ್ಯದ ಬಿಕ್ಕಟ್ಟು ಬಹಳ ದೊಡ್ಡದಾಗಿದ್ದರಿಂದ ಭಾರತ ಸರ್ಕಾರವು ಮೊಂಡುತನದಿಂದ ತನ್ನ ಅಭಿಪ್ರಾಯಕ್ಕೆ ಅಂಟಿಕೊಳ್ಳುವ ಬದಲು ಸೆಕ್ರೆಟರಿಯವರ ಸೂಚನೆಯನ್ನು ಉಪಯೋಗಿಸಲು ಒಪ್ಪಿತು ಮತ್ತು ಕೆಳಗೆ ಕೊಟ್ಟಿರುವಂತೆ ನವೆಂಬರ್ ೧೮೬೪ರಲ್ಲಿ ಒಂದು ಸರ್ಕಾರಿ ಪ್ರಕಟಣೆಯನ್ನು ಹೊರಡಿಸಿತು. ಅದು ಕೆಳಗಿನಂತೆ ಸಾರಿತು:

"ಇಂಗ್ಲೆಂಡ್ ಅಥವಾ ಆಸ್ಟ್ರೇಲಿಯಾಗಳ ಯಾವುದೇ ರಾಯಲ್ ಅಧಿಕೃತ ಟಂಕಸಾಲೆಯಲ್ಲಿ ತಯಾರಿಸಿದ ಪ್ರಚಲಿತ ತೂಕದ ಸವರನ್ ಮತ್ತು ಅರ್ಧ ಸವರನ್ ನಾಣ್ಯಗಳು ಮುಂದಿನ ಸೂಚನೆಗಳು ಬರುವವರೆಗೆ ಸರ್ಕಾರಕ್ಕೆ ಸಲ್ಲಬೇಕಾದ ಪಾವತಿಗಳಿಗೆ ಕ್ರಮವಾಗಿ ೧೦ ರೂಪಾಯಿ ಮತ್ತು ೫ ರೂಪಾಯಿಗಳಿಗೆ

---

೧. ಅವರು ಹತ್ತಕ್ಕೆ ಒಂದರ ಅನುಪಾತವನ್ನು ಇಷ್ಟಪಟ್ಟ ಕಾರಣವೆಂದರೆ ಅದು ಭಾರತದಲ್ಲಿ ಬಳಕೆಯಲ್ಲಿದ್ದ ಮಾರುಕಟ್ಟೆ ಪ್ರಮಾಣವಾಗಿತ್ತು. ಅವರ ವಾದವು ಹೀಗೆ ಇತ್ತು : "ಸವರನ್ ನಾಣ್ಯವು ಭಾರತದಲ್ಲಿ ಚಲಾವಣೆಯ ಸಲುವಾಗಿ ಬೆಳ್ಳಿಯಲ್ಲಿ ಅಂದಾಜು ಮಾಡಿದಂತೆ ಭಾರತದಲ್ಲಿಯ ತನ್ನ ಬೆಲೆಗನುಗುಣವಾಗಿ ಹೊರತು ತನ್ನ ಇಂಗ್ಲಿಷ್ ನೆಲೆಯಲ್ಲಿ ಅಲ್ಲ" "ಅಸ್ತಿತ್ವದಲ್ಲಿರುವ ಭಾರತೀಯ ನಾಣ್ಯದಲ್ಲಿ ವೇಗದಿಂದ ಕ್ರಾಂತಿಯುಂಟಾಗುವುದು ಮತ್ತು ಸಾಲಿಗರು ತಮಗೆ ಬರಬೇಕಾಗಿದ್ದಕ್ಕಿಂತ ಕಡಿಮೆ ಪಡೆಯುವರು" ಎಂಬ ಭೀತಿಯಿಂದ ಅವರು ಬಹುಶಃ ಸವರನ್ ನಾಣ್ಯದ ಬೆಲೆಯನ್ನು ಹೆಚ್ಚು ಕಟ್ಟಲು ಸಿದ್ಧರಿದ್ದಿಲ್ಲ.

## ಪಟ್ಟಿ VII*
## ವ್ಯಾಪಾರ ಮತ್ತು ನಾಣ್ಯ

| ವರ್ಷಗಳು | ವಾಣಿಜ್ಯ ಸರಕು | | ನಿಧಿಗಳು ನಿವ್ವಳ ಆಯಾತಗಳು | | ಒಟ್ಟು ನಾಣ್ಯ ತಯಾರಿಕೆ | | ನಿವ್ವಳ ಆಯಾತಗಳ ಮೇಲೆ ನಾಣ್ಯ ತಯಾರಿಕೆಯಆಧಿಕ್ಯ(+) ಅಥವಾ ಕೊರತೆ(–) | | ವಾರ್ಷಿಕ ಉತ್ಪಾದನೆ (ಗಳಲ್ಲಿ ೦೦,೦೦೦ ಬಿಡಲಾಗಿದೆ) | |
|---|---|---|---|---|---|---|---|---|---|---|
| | ಆಯಾತಗಳು £ | ನಿರ್ಯಾತಗಳು £ | ಬೆಳ್ಳಿ £ | ಚಿನ್ನ £ | ಬೆಳ್ಳಿ £ | ಚಿನ್ನ £ | ಬೆಳ್ಳಿ £ | ಚಿನ್ನ £ | ಚಿನ್ನ £ | ಬೆಳ್ಳಿ £ |
| ೧೮೬೦–೬೧ | ೨೩,೪೯೩,೭೧೬ | ೩೨,೯೭೦,೬೦೫ | ೫೩೨೮,೦೦೯ | ೪,೨೩೨,೫೬೯ | ೩೨೯೭,೧೫೦ | ೬೫,೦೨೫ | –೩೦೮೫೯ | –೪,೧೬೭,೫೩೧ | ೨೩,೯ | ೮,೨ |
| ೧೮೬೧–೬೨ | ೨೨,೩೨೦,೪೩೨ | ೩೬,೩೧೭,೦೪೨ | ೯,೦೮೬,೪೫೬ | ೭,೪೭೦,೦೩೦ | ೫೮,೬೬೭ | –೧,೬೧೬,೪೨೭ | –೫೧೨೫,೭೫೮ | ೨೨,೮ | ೮,೫ | |
| ೧೮೬೨–೬೩ | ೨೨,೬೩೩,೮೪ | ೪೭,೮೫೯,೬೪೫ | ೧೨,೫೫೦,೧೫೫ | ೯,೩೫೫,೪೦೫ | ೧೩೦,೬೬೬ | –೩೧೯೪,೭೫೦ | –೬೭೧೭,೪೯೦ | –೬,೭೧೭,೪೯೦ | ೨೧,೬ | ೯,೦ |
| ೧೮೬೩–೬೪ | ೨೭,೧೪೫,೫೯೦ | ೬೫,೬೨೫,೪೪೯ | ೧೨,೭೯೬,೭೧೭ | ೮,೮೯೭,೩೦೬ | ೧೧,೪೪೬,೭೨೦ | ,೫೪,೨೫೪ | –೧೨೩೯,೯೯೭ | –೮,೮೪೩,೯೫೨ | ೨೧,೪ | ೯,೮ |
| ೧೮೬೪–೬೫ | ೨೮,೧೫೦,೯೨೩ | ೬೮,೦೨೭೦೧೬ | ೧೦,೦೭೮,೭೯೮ | ೯,೮೩೯,೯೬೪ | ೧೦,೯೧೧,೩೨೨ | ೯೫,೬೭೨ | +೮೩೨,೫೨೪ | –೯,೭೪೪,೨೯೨ | ೨೨,೬ | ೧೦,೩ |
| ೧೮೬೫–೬೬ | ೨೯,೫೯೯,೨೨೮ | ೬೫,೪೯೧,೧೨೩ | ೧೮,೬೬೮,೬೭೩ | ೫,೭೨೪,೪೭೬ | ೧೪,೬೩೯,೩೫೩ | ೧೭,೬೬೫ | –೪,೦೨೯,೩೨೦ | –೫,೭೦೬,೮೧೧ | ೨೪,೦ | ೧೦,೪ |
| ೧೮೬೬–೬೭ | ೨೯,೦೩೮,೭೧೫ | ೪೧,೮೫೯,೯೯೪ | ೬,೯೬೩,೦೭೩ | ೩,೮೪೨,೩೨೮ | ೬,೧೮೩,೧೧೩ | ೨೭,೭೨೫ | –೭೭೯,೯೬೦ | –೩,೮೧೪,೭೦೩ | ೨೪,೨ | ೧೦,೧ |
| ೧೮೬೭–೬೮ | ೩೫,೭೦೫,೭೮೩ | ೫೦,೮೭೪,೦೫೬ | ೫,೫೯೩,೯೬೧ | ೪,೬೦೯,೪೬೬ | ೪,೩೮೫,೦೮೦ | ೨೧,೫೩೪ | –೧,೨೦೮,೮೮೧ | –೪,೫೮೭,೯೩೨ | ೨೨,೮ | ೧೦,೮ |
| ೧೮೬೮–೬೯ | ೩೫,೯೯೦,೧೪೨ | ೫೩,೦೬೨,೧೬೫ | ೮,೬೦೧,೦೨೨ | ೫,೧೫೯,೩೫೨ | ೪೨೬೯,೩೦೫ | ೨೫,೧೫೬ | –೪,೩೩೧,೭೧೭ | –೫,೧೩೪,೧೯೬ | ೨೨,೦ | ೧೦,೦ |
| ೧೮೬೯–೭೦ | ೩೨,೯೨೮,೫೨೦ | ೫೨,೪೮೧,೩೮೬ | ೭೩೨೦,೩೩೭ | ೫,೫೯೨,೦೧೬ | ೭೫೧೦,೪೮೦ | ೭೮,೫೧೦ | +೧೯೦,೧೪೩ | –೫,೫೧೩,೧೦೬ | ೨೧,೨ | ೯,೫ |

* ಮೂಲ : ಪಟ್ಟಿ IVರಲ್ಲಿ ಉಪಯೋಗಿಸಿದವುಗಳು.

ಸಮನಾಗಿ ಬ್ರಿಟಿಷ್ ಭಾರತದ ಮತ್ತು ಅದರ ಅಧೀನ ದೇಶಗಳ ಖಜಾನೆಗಳಲ್ಲಿ ಸ್ವೀಕೃತವಾಗುವುದು ಮತ್ತು ಅಂಥ ಸವರನ್ ಮತ್ತು ಅರ್ಧ ಸವರನ್ ನಾಣ್ಯಗಳನ್ನು ಅವುಗಳ ಯಾವುದೇ ಸರ್ಕಾರಿ ಖಜಾನೆಗಳಲ್ಲಿ ಲಭ್ಯವಿದ್ದಾಗ ಸ್ವೀಕರಿಸಲು ಇಚ್ಛಿಸುವ ಯಾವನೇ ವ್ಯಕ್ತಿಗೆ ಅದೇ ದರಗಳಲ್ಲಿ ಸರ್ಕಾರದಿಂದ ಬರಬೇಕಾದ ಮೊಬಲಗುಗಳಿಗೆ ಕೊಡಲಾಗುವುದು."

ಅದಾಗ್ಯೂ ಸವರನ್ ನಾಣ್ಯಕ್ಕೆ[೧] ಸಮಾನ ಬೆಲೆಯು ೧೦ ರೂಪಾಯಿಗಳಿಗಿಂತ ಸ್ವಲ್ಪ ಹೆಚ್ಚು ಇತ್ತು. ಆದ್ದರಿಂದ ಈ ಪ್ರಕಟಣೆಯು ಕಾರ್ಯಾಚರಣೆಯಲ್ಲಿ ಬರಲಿಲ್ಲ. ಮತ್ತೊಂದು ಕಡೆ, ನಾಣ್ಯದ ಸ್ಥಿತಿಯು ಎಂದಿನಂತೆ ತೀಕ್ಷ್ಣವಾಗತೊಡಗಿತು ಮತ್ತು ಚಿನ್ನದ ಚಲಾವಣೆಯನ್ನು ಜಾರಿಗೆ ತರಲು ಕ್ರಮಗಳನ್ನು ತೆಗೆದುಕೊಳ್ಳಲು ಬಂಗಾಲದ ವಾಣಿಜ್ಯ ಮಹಾಮಂಡಳಿಯು ೧೮೬೬ ರಲ್ಲಿ ಸರ್ಕಾರಕ್ಕೆ ಮತ್ತೆ ವಿನಂತಿ ಮಾಡಿಕೊಂಡಿತು. ಈ ಸಾರಿ "ಭಾರತದ ಹಣಕಾಸು ಪದ್ಧತಿಯಲ್ಲಿ ಚಿನ್ನವನ್ನು ಜಾರಿಗೆ ತರುವ ಔಚಿತ್ಯವನ್ನು" ಕುರಿತಂತೆ ಒಂದು ಪರಿಶೀಲನಾ ಆಯೋಗವನ್ನು ನೇಮಿಸಲು ಮಹಾಮಂಡಳಿಯು ಒತ್ತಾಯಿಸಿತು. ಆದರೆ ಆ ಚಿನ್ನದ ನಾಣ್ಯದ ಬದಲು ಕಾಗದದ ನಾಣ್ಯವನ್ನು ಅದು ಬೆಳ್ಳಿ ಅಥವಾ ಚಿನ್ನದ ನಾಣ್ಯಗಳಿಗಿಂತ ಹೆಚ್ಚು ಅನುಕೂಲಕರ ಮತ್ತು ಸ್ವೀಕರಾರ್ಹ ನಾಣ್ಯವಾಗಬಹುದೆಂಬ ನಿರೀಕ್ಷೆಯಿಂದ ಚಲಾವಣೆಯಲ್ಲಿ ತರಲಾಗಿದೆ" ಮತ್ತು ತತ್ಪರಿಣಾಮವಾಗಿ ಕಾಗದದ ಹಣದ ಸ್ಥಾನದಲ್ಲಿ ಅಥವಾ ಅದಕ್ಕೆ ಪೂರಕವಾಗಿ ಚಿನ್ನದ ನಾಣ್ಯವನ್ನು ಚಲಾವಣೆಯಲ್ಲಿ ತರುವ ಪ್ರಯತ್ನ ಮಾಡುವ ಮೊದಲು "ದೇಶದ ಬೇಡಿಕೆಗಳನ್ನು ಪೂರೈಸುವಂತೆ ಮತ್ತು ರೂಢಿಗೆ ಯೋಗ್ಯವಾಗುವಂತೆ ಕಾಗದದ ನಾಣ್ಯಕ್ಕೆ ಚಲಾವಣಾ ಮಾಧ್ಯಮವಾಗಲು ಸಾಧ್ಯವಾಗಿಲ್ಲ ಅಥವಾ ಆಗಲು ಸಾಧ್ಯವಿಲ್ಲ ಎಂಬುದನ್ನು ತೋರಿಸಿಕೊಡಬೇಕು" ಎಂಬುದಾಗಿ ಭಾರತ ಸರ್ಕಾರವು ಅಭಿಪ್ರಾಯ ಹೊಂದಿತ್ತು.[೨] ಆದ್ದರಿಂದ ೧೮೬೧ರ ಕಾಯಿದೆ XIX ಮೇರೆಗೆ ಸ್ಥಾಪಿಸಲ್ಪಟ್ಟ ನಾಣ್ಯವ್ಯವಸ್ಥೆಗಳ ಕಾರ್ಯಾಚರಣೆಯನ್ನು ವಿಚಾರಣೆ ಮಾಡಲು" ಮತ್ತು "ಬೆಳ್ಳಿಯ ಪ್ರಮಿತಿಗೆ ಹೆಚ್ಚುವರಿಯಾಗಿ ಸುವರ್ಣ ಪ್ರಮಿತಿಯನ್ನು ಭಾರತದಲ್ಲಿ ಜಾರಿಗೆ ತಂದರೆ ಔಚಿತ್ಯದ ಆಧಾರದ ಮೇಲೆ ಯಾವ ಲಾಭಗಳಾಗಬಹುದು" ಎಂಬುದರ ವಿವರಗಳನ್ನು ಕೊಡಲು ಒಂದು ಆಯೋಗವನ್ನು ನೇಮಿಸಲಾಯಿತು. ವ್ಯಾಪಕ ಪರಿಶೋಧನೆಯ ನಂತರ ಆಯೋಗವು "ಅನೇಕ ಕಾರಣಗಳಿಂದಾಗಿ ಕಾಗದದ ನಾಣ್ಯವು ದೇಶದ ಚಲಾವಣಾ ಮಾಧ್ಯಮಗಳಲ್ಲಿ ತನ್ನ ಸ್ಥಾನವನ್ನು ಪಡೆಯುವಲ್ಲಿ ವಿಫಲವಾಗಿದೆ, ಆದರೆ ಚಿನ್ನವು ಜನರ ವ್ಯವಹಾಗಳಲ್ಲಿ ದೊಡ್ಡ ಸ್ಥಾನವನ್ನು ಪಡೆಯುತ್ತಲಿದೆ ಎಂಬ ತೀರ್ಮಾನಕ್ಕೆ[೩] ಬಂದಿತು. ಸುವರ್ಣ ಪ್ರಮಿತಿಯು ಭಾರತದ ನಾಣ್ಯವ್ಯವಸ್ಥೆಗಳ ಒಂದು ಅಂಗವಾಗಿ ಮಾಡಲ್ಪಡಬೇಕು" ಎಂದು ಸರ್ಕಾರಕ್ಕೆ ಒತ್ತಾಯಿಸಿತು. ಶಿಫಾರಸನ್ನು ಕಾರ್ಯಾಚರಣೆಯಲ್ಲಿ ತರುವುದು ಆಗ ಸರ್ಕಾರದ ಕೆಲಸವಾಗಿತ್ತು. ಆದರೆ ಕೌತುಕದ ಸಂಗತಿಯೆಂದರೆ, ತಾನೇ ನೇಮಿಸಿದ ಆಯೋಗದ ಶಿಫಾರಸುಗಳನ್ನು ಅದು ಸ್ವೀಕರಿಸಲಿಲ್ಲ. ಆಯೋಗವು ಶಿಫಾರಸು ಮಾಡಿದ ಪ್ರಕಾರ ಚಿನ್ನವನ್ನು ಕಾನೂನುಬದ್ಧ ಹಣವನ್ನಾಗಿ ಮಾಡುವ ಬದಲು ಸರ್ಕಾರವು ತೆಗೆದುಕೊಂಡ ಕ್ರಮವೆಂದರೆ ಅಕ್ಟೋಬರ್

---

೧. ಹೋಲಿಸಿರಿ : ಭಾರತಕ್ಕೆ ಚಿನ್ನದ ನಾಣ್ಯ ಕುರಿತು ಸರ್ ವಿಲಿಯಮ್ ಮ್ಯಾನ್ಸ್ ಫೀಲ್ಡ್ ಅವರ ಸಂಕ್ಷಿಪ್ತ ಟಿಪ್ಪಣಿಗೆ ಸಹಬಂಧ ಎಚ್.ಆಫ್.ಸಿ ರಿಟರ್ನ್ ೭೯, ೧೮೬೪

೨. ಫೆಬ್ರವರಿ ೩, ೧೮೬೬ ರ ಗೆಜೆಟ್ಟಿನಲ್ಲಿ ಪ್ರಕಟಣೆ ಸಂ. ೫೯೨ರ ಅಡಿಯಲ್ಲಿ ಅದೇ ತಾರೀಖಿನ ಹಣಕಾಸು ಇಲಾಖೆಯಲ್ಲಿಯ ಠರಾವು,

೩. ಆಯೋಗದ ವರದಿಗೆ ನೋಡಿರಿ : ೧೮೬೮ ರ ಎಚ್.ಆಫ್.ಸಿ ರಿಟರ್ನ್, ೧೪೮

೨೮, ೧೮೬೮ರಂದು ಅದು ಮತ್ತೊಂದು ಪ್ರಕಟಣೆಯನ್ನು ಹೊರಡಿಸಿತು. ಈ ಪ್ರಕಟಣೆಯು ಆ ಏಕಪಕ್ಷೀಯ ಕ್ರಮದ ದುಷ್ಪರಿಣಾಮಗಳನ್ನು ನಿವಾರಿಸಲು ಮತ್ತೇನ್ನನ್ನೂ ಮಾಡದೆ, ಸವರನ್ ನಾಣ್ಯದ ದರವನ್ನು ಮಾತ್ರ ೧೦–೮ ರೂಪಾಯಿಗಳಿಗೆ ಬದಲಾಯಿಸಿತು. ಸುದೈವದಿಂದ ದರದ ಈ ಮಾರ್ಪಾಟು ಕೂಡ ದೇಶದ ಚಲಾವಣೆಯಲ್ಲಿ ಚಿನ್ನದ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಿಲ್ಲ. ನಾಣ್ಯದ ತೊಂದರೆಗಳು ಈಗಾಗಲೇ ಕಡಿಮೆಯಾಗಿದ್ದವು ಮತ್ತು ಸರ್ಕಾರದ ಮೇಲೆ ಹೊಸ ಒತ್ತಡ ಬಾರದ್ದರಿಂದ ಇವೆರಡು ಪ್ರಯತ್ನಗಳೂ ಭಾರತದಲ್ಲಿ ಸುವರ್ಣ ಪ್ರಮಿತಿಯನ್ನು ಜಾರಿಯಲ್ಲಿ ತರುವಲ್ಲಿ ವಿಫಲವಾದವು.

ಸದ್ಯದ ಮಟ್ಟಿಗೆ ಸಮಸ್ಯೆಯು ತನ್ನಿಂದ ತಾನೇ ಪರಿಹಾರವಾಯಿತು. ಆದರೆ ಮುಂದಿನ ಘಟನೆಗಳು ತೋರಿಸಿದಂತೆ ಸುವರ್ಣ ಪ್ರಮಿತಿಯು ಜಾರಿಗೆ ಬಂದಿದ್ದರೆ ಭಾರತಕ್ಕೆ ಹೆಚ್ಚು ಒಳ್ಳೆಯದಾಗುತ್ತಿತ್ತು[1] ಮತ್ತು ಅಗತ್ಯಕ್ಕಿಂತ ಹೆಚ್ಚಿನ ಚಿನ್ನದ ಪ್ರಮಾಣದಿಂದ ಉಂಟಾದ ಬೆಲೆ ಹೆಚ್ಚಳದಿಂದ ನರಳುತ್ತಿದ್ದ ಯುರೋಪ್‌ನ ಹಿತದ ದೃಷ್ಟಿಯಿಂದ ಕೂಡ ಅದು ಸ್ವಾಗತಾರ್ಹವಾಗುತ್ತಿತ್ತು.[2] ಈ ವಿಶೇಷ ಸಮಯದಲ್ಲಿ ಭಾತರ ಸರ್ಕಾರವು ನಿಜವಾಗಿ ಕವಲು ದಾರಿಯಲ್ಲಿತ್ತು. ಅದು ಬದಲಾವಣೆಯ ಒತ್ತಡಗಳಿಗೆ ಮಣಿದು ಬೆಳ್ಳಿಯ ಪ್ರಮಿತಿಯ ಸ್ಥಳದಲ್ಲಿ ಸುವರ್ಣ ಪ್ರಮಿತಿಯನ್ನು ತಂದಿದ್ದರೆ ತನಗೆ ಮತ್ತು ತನ್ನ ಜನರಿಗೆ ಸಂಭವಿಸಬಹುದಿದ್ದ ತೊಂದರೆಯನ್ನು ತಪ್ಪಿಸಬಹುದಿತ್ತು. ಅದು ಭಾರತ ಸರ್ಕಾರಕ್ಕೆ ಸಾಧ್ಯವೂ ಇತ್ತು. ಭಾರತದ ಆಡಳಿತದ ಚುಕ್ಕಾಣಿಯನ್ನು ಹಿಡಿದಿದ್ದವರು ಈ ಬದಲಾವಣೆಯ ವಿರುದ್ಧವಾಗಿದ್ದುದು ಖಂಡಿಸಬಹುದಾದ ವಿಚಾರವೇನೂ ಆಗಿರದೇ ಇದ್ದರೂ, ವಿಪತ್ಕಾರಿ ಸನ್ನಿವೇಶದಲ್ಲಿಯೂ ತೋರಿಕೆಯ ಭದ್ರತೆಯ ಭಾವವನ್ನು ಅನುಭವಿಸುವಂತೆ ಜನಗಳನ್ನು ಪ್ರೇರೇಪಿಸುವ ಮಾನವ ಸ್ವಭಾವದ ಪರಿಚಯವನ್ನು ನಾವಿಲ್ಲಿ ಕಾಣಬಹುದು[3]. ೧೮೭೦ರಲ್ಲಿ ಟಂಕಸಾಲೆಯ ಕಾಯಿದೆಯನ್ನು ಪರಿಷ್ಕರಿಸಬೇಕಾದಾಗ, ಹಣದ ಚಲಾವಣೆಯಲ್ಲಿ ಯಾವ ಸಮಸ್ಯೆಯೂ ಇಲ್ಲ, ಅಥವಾ ಬರಲು ಸಾಧ್ಯವೂ ಇಲ್ಲ ಎಂಬ ಸುಭದ್ರ ಭಾವ ಸರ್ಕಾರದಲ್ಲಿ ಇತ್ತು. ಇಂತಹ ಸಂತೃಪ್ತಿಯಿಂದ ೧೮೩೫ರ ಬೆಳ್ಳಿಯ ಪ್ರಮಿತಿಯನ್ನು ಚಿನ್ನದ ಪ್ರಮಿತಿಯ ಅಗತ್ಯವಿಲ್ಲದೆಯೇ ಮುಂದುವರೆಸಲು ಅನುಮತಿ ದೊರೆಯಿತು.[4]

ಈ ವಿಷಯದಲ್ಲಿ ಕಾನೂನಿನ ದೃಷ್ಟಿಯಿಂದಷ್ಟೇ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿದ್ದವರಿಗೆ[5] ಮುಂದೆ ಸಂಭವಿಸಬಹುದಾದುದರ ಬಗ್ಗೆ ಹೆಚ್ಚಿನ ತಿಳಿವಳಿಕೆಯೇನೂ ಇರಲಿಲ್ಲ.

---

೧. ಪ್ರೊ. ಜೆ.ಇ. ಕೇರ್ನ್ಸ್ ಭಾರತದಲ್ಲಿ ಸುವರ್ಣ ಪ್ರಮಿತಿಯನ್ನು ಜಾರಿಯಲ್ಲಿ ತರುವುದಕ್ಕೆ ವಿರುದ್ಧವಾಗಿದ್ದರು ಎಂಬುದು ನಿಜ. ಆದರೆ ನಂತರ ಅವರು ತಮ್ಮ ಆಕ್ಷೇಪಣೆಗಳನ್ನು ಹಿಂತೆಗೆದುಕೊಂಡರು. ಹೋಲಿಸಿರಿ : ಅವರ ಎಸ್ಸೇಸ್ ಇನ್ ಪೊಲಿಟಿಕಲ್ ಇಕಾನಮಿ (ಲಂಡನ್, ೧೮೭೩, ಪುಟಗಳು ೮೮–೯೦).

೨. ಹೋಲಿಸಿರಿ : ಜೆ.ಆರ್. ಮ್ಯಾಕ್‌ಕುಲ್ಲೋಚ, ಡಿಕ್ಷನರಿ ಆಫ್ ಕಾಮರ್ಸ್, ಸಂಪಾದಕರು, ೧೮೬೯, ಪು. ೧೧೩೧

೩. ಅವರು ಬೆಳ್ಳಿಯ ಪ್ರಮಿತಿಯನ್ನು ಉಳಿಸಿಕೊಂಡರು. ಏಕೆಂದರೆ ಅವರು ತಮ್ಮ ಹಣ ರವಾನೆಗಳ ಮೇಲೆ ಅದರಿಂದ ಲಾಭಗಳಿಸಿದರು ಎಂದು ಎಚ್.ಬಿ. ರಸೆಲ್ ಹೇಳುತ್ತಾರೆ. ಹೋಲಿಸಿರಿ : ಅವರ ಇಂಟರ್‌ನ್ಯಾಶನಲ್ ಮಾನಿಟರಿ ಕಾನ್ಫರೆನ್ಸಸ್, ೧೮೯೮, ಪು. ೩೨

೪. ಮೂಲ ಟಂಕಸಾಲೆ ಮತ್ತು ನಾಣ್ಯ ತಯಾರಿಕೆ ಮಸೂದೆ ಸಾರ್ವಜನಿಕ ಖಜಾನೆಗಳಲ್ಲಿ ಸವರನ್ ನಾಣ್ಯಗಳನ್ನು ಸ್ವೀಕರಿಸಲು ಒತ್ತಾಯಿಸುವ ೧೮೬೮ ರ ಪ್ರಕಟಣೆಯಲ್ಲಿ ಸಮಾವೇಶಗೊಂಡ ಕಲಮುಗಳನ್ನು ಒಳಗೊಂಡಿತ್ತು. ಹೋಲಿಸಿರಿ: ಗೆಜೆಟ್ ಆಫ್ ಇಂಡಿಯಾ, ಭಾಗ V ದಿನಾಂಕ, ಜುಲೈ ೨೩, ೧೮೭೦. ಆದರೆ ಎಷ್ಟೊಂದು ಪ್ರಮಾಣದ ಔದಾಸೀನ್ಯತೆಯನ್ನು ತೋರಿಸಲಾಯಿತೆಂದರೆ ಪ್ರವರ ಸಮಿತಿಯು ನಂತರ ಅವುಗಳನ್ನು ಕೈಬಿಟ್ಟಿತು ಮತ್ತು ವಿಷಯವನ್ನು ಕಾರ್ಯಾಂಗದ ವಿವೇಚನೆಗೆ ಬಿಡಲು ಇಷ್ಟಪಟ್ಟಿತು.

೫. ಹೋಲಿಸಿರಿ : ನಾಣ್ಯ ತಯಾರಿಕೆ ಮತ್ತು ಟಂಕಸಾಲೆ ಮಸೂದೆಯನ್ನು ಮಂಡಿಸುವ ಮಾನ್ಯ ಸ್ಟೀಫನ್ನರ ಸೆಪ್ಟೆಂಬರ್ ೬, ೧೮೭೦ ರ ಭಾಷಣ ನೋಡಿರಿ : ಲೆಜಿಸ್ಲೇಟಿವ್ ಕೌನ್ಸಿಲ್ ಪ್ರೊಸೀಡಿಂಗ್ಸ್ (ಎಸ್.ಎಲ್.ಸಿ.ಪಿ. ಎಂದು ಸಂಕ್ಷೇಪಿಸಿದ್ದು) ಸಂ. IX, ಪು. ೩೯೮.

## ಅಧ್ಯಾಯ ೧೪

# ಬೆಳ್ಳಿಯ ಪ್ರಮಿತಿ ಮತ್ತು ಅದರ ವಿನಿಮಯ ಮೌಲ್ಯದಲ್ಲಿನ ಸ್ಥಾನಪಲ್ಲಟ

ಭಾರತೀಯ ನಾಣ್ಯಪದ್ಧತಿಯಲ್ಲಿ ಈ ಕ್ರಾಂತಿಕಾರೀ ಪ್ರಕ್ರಿಯೆಯು ಬೆಳ್ಳಿಯ ಪ್ರಮಿತಿಯನ್ನು ಸ್ಥಾಪಿಸುವಲ್ಲಿ ಹೇಗೆ ಅತ್ಯುನ್ನತ ಸ್ಥಿತಿಗೇರಿತು ಮತ್ತು ಹೇಗೆ ಸುವರ್ಣ ಪ್ರಮಿತಿಯ ಸಲುವಾಗಿದ್ದ ಆಂದೋಲನವು ಕಾಗದದ ನಾಣ್ಯದ ಪೂರಕದೊಂದಿಗೆ ಬೆಳ್ಳಿಯ ನಾಣ್ಯಪದ್ಧತಿಯಲ್ಲಿ ಮುಕ್ತಾಯಗೊಂಡಿತು ಎಂಬುದು ಸ್ಪಷ್ಟವಿದೆ. ಅಂಥ ಮಿಶ್ರಪದ್ಧತಿಯ ಕಾರ್ಯಾಚರಣೆಯನ್ನು ವಿಶ್ಲೇಷಿಸುವ ಮೊದಲು ಅದರ ಸ್ವರೂಪವನ್ನು ಸಂಕ್ಷಿಪ್ತವಾಗಿ ವಿಮರ್ಶಿಸುವುದು ಪ್ರಯೋಜನಕಾರಿಯಾದೀತು.

ನಾಣ್ಯದಲ್ಲಿನ ಲೋಹಾಂಶವು ೧೯೭೦ರ ಕಾಯಿದೆ XXIIIರ ಪ್ರಕಾರ ನಿಯಂತ್ರಿಸಲ್ಪಟ್ಟಿತ್ತು. ಅದರ ಪ್ರಕಾರ ಅಧಿಕೃತ ಮತ್ತು ಕಾನೂನುಬದ್ಧವಾಗಿದ್ದ ನಾಣ್ಯಗಳನ್ನು ಪಟ್ಟಿ VIIIರಲ್ಲಿ ತೋರಿಸಲಾಗಿದೆ.

ಟಂಕಸಾಲೆಗಳಿಂದ ಟಂಕಿಸಲ್ಪಡುವ ನಾಣ್ಯಗಳ ಪ್ರಮಾಣ ಅಥವಾ ಅವುಗಳ ಕಾನೂನುಬದ್ಧ ಮೌಲ್ಯವನ್ನು ಕುರಿತು ಕಾಯಿದೆಯು ಹೊಸ ಬದಲಾವಣೆಗಳನ್ನೇನೂ ಮಾಡಲಿಲ್ಲ. ನಾಣ್ಯಗಳನ್ನು ಕುರಿತು[೧] ಅದು ಹಿಂದಿನ ಕಾನೂನುಗಳನ್ನೇ ಯಥಾವತ್ತಾಗಿ ಅನುಸರಿಸಿದ್ದರೂ, ದೇಶದ ಹಣಕಾಸು ಕಾಯಿದೆಯಲ್ಲಿ ಹಿಂದೆ ಇರದಿದ್ದ ಪರಿಪೂರ್ಣತೆಯನ್ನು ಸಾಧಿಸುವ ಉದ್ದೇಶ ಹೊಂದಿದ್ದವು. ಈ ಕಾಯಿದೆಯಿಂದ ನಿರಸನಗೊಳಿಸಲ್ಪಟ್ಟ ಹಿಂದಿನ ಕಾಯಿದೆಗಳು ನಾಣ್ಯ ತಯಾರಿಕೆಯ "ಮೂಲ" ತತ್ವಕ್ಕೆ ಮಾನ್ಯತೆ ಕೊಡುವಲ್ಲಿ ಬಿಗುವನ್ನು ತೋರಿಸಿದವು. ಈ ವಿಷಯವನ್ನು ಕೇವಲ ನಾಣ್ಯ ತಯಾರಿಕೆಯ ತಂತ್ರವಾಗಿದೆಯೆಂದು ಪರಿಗಣಿಸಲಾಗಿದೆ. ಅದು ಹಾಗೆ ಇದೆ; ಆದರೆ ಅದಕ್ಕೆ ಹಣಕಾಸು ಮಹತ್ವವಿಲ್ಲದಿಲ್ಲ. ಆದರೆ ಅಮೂಲ್ಯವಾದ ಲೋಹಗಳು ತೂಕದಿಂದ ಚಲಾವಣೆಯಲ್ಲಿ ಇದ್ದಾಗ ನಾಣ್ಯ ತಯಾರಿಕೆಯಲ್ಲಿ ಸಹನೆಯ ಪ್ರಶ್ನೆಯು

---

೧. ಇದನ್ನು ಕೆಳಗಿನ ಮಾಹಿತಿಯಿಂದ ಕಾಣಬಹುದು:

(ಅ) ಚಿನ್ನದ ನಾಣ್ಯಗಳು : (i), (ii) ಮತ್ತು (iii) ೧೮೩೫ ರ ಕಾಯಿದೆ XVIIರ ಕಲಮು VIIರಿಂದ ಮಾತ್ರ ಅಧಿಕೃತವಾಗಿದ್ದವು. IV ೧೮೭೦ ರ ಕ್ರೋಢೀಕರಿಸುವ ಕಾಯಿದೆಯಿಂದ ಮಾಡಲಾದ ಸಂಕಲನವಾಗಿತ್ತು.

(ಬ) ಬೆಳ್ಳಿಯ ನಾಣ್ಯಗಳು : (i), (ii) ಮತ್ತು (iii) ೧೮೩೫ ರ ಕಾಯಿದೆ XVIIರ ಕಲಮು ೧ರಿಂದ ಅಧಿಕೃತವಾಗಿದ್ದವು. ಈ ಕಾಯಿದೆಯು "ಡಬಲ್ ರೂಪಾಯಿ" ಹೆಸರಿನ ಬೆಳ್ಳಿಯ ನಾಣ್ಯವನ್ನು ಹೊರಡಿಸಲು ಕೂಡ ಅಧಿಕಾರ ನೀಡಿತ್ತು. ಆದರೆ ೧೮೬೨ರ ಕಾಯಿದೆ XIIIರ ಕಲಮು II ಇದನ್ನು ನಿಲ್ಲಿಸಿ ಅದರ ಸ್ಥಳದಲ್ಲಿ ಸಂಖ್ಯೆ VI ಬೆಳ್ಳಿಯ ನಾಣ್ಯವನ್ನು ತಂದಿತು.

(ಕ) ತಾಮ್ರದ ನಾಣ್ಯಗಳು : (i), (ii) ಮತ್ತು (iii) ಮೊದಲು ೧೮೩೫ ರ ಕಾಯಿದೆ XXIರ ಕಲಮು ೧ ರಿಂದ ಅಧಿಕೃತವಾಗಿದ್ದವು. ಅವುಗಳ ಚಲಾವಣೆಯು ಬಂಗಾಲ ಪ್ರಾಂತ್ಯಕ್ಕೆ ಸೀಮಿತವಾಗಿತ್ತು. ಅವುಗಳನ್ನು ೧೮೪೪ರ ಕಾಯಿದೆ XXII ಮುಖಾಂತರ ಪೂರ್ಣ ಭಾರತಕ್ಕೆ ಅನ್ವಯವಾಗುವಂತೆ ಸಾರ್ವತ್ರೀಕರಣ ಮಾಡಲಾಯಿತು. ನಾಣ್ಯ ಸಂಖ್ಯೆ (iii) ಇದನ್ನು ಮೊದಲು ೧೮೫೪ರ ಕಾಯಿದೆ XIರ ಕಲಮು II ರ ಮುಖಾಂತರ ಜಾರಿಯಲ್ಲಿ ತರಲಾಯಿತು.

## ಪಟ್ಟಿ VIII

| | ಟಂಕಸಾಲೆಯಿಂದ ತಯಾರಿಸಿದ ನಾಣ್ಯಗಳ ವರ್ಗಗಳು | ಒಟ್ಟು ತೂಕ ಟ್ರಾಯ್ ಗ್ರಾಮಗಳು | ತೂಕದಲ್ಲಿ ಪರಿಹಾರ | ಲೋಹಶುದ್ಧತೆ ಟ್ರಾಯ್ ಗ್ರಾಮಗಳು | ಲೋಹ ಶುದ್ಧತೆಯಲ್ಲಿ ಪರಿಹಾರ | ಕಾನೂನು ಬದ್ಧತೆ ಮೌಲ್ಯ |
|---|---|---|---|---|---|---|
| **I** | **ಚಿನ್ನದ ನಾಣ್ಯಗಳು (ಅ)** | | | | | ಕಾನೂನುಬದ್ಧ ಹಣವೇ ಅಲ್ಲ |
| (i) | ಮೊಹರು | ೧೮೦ | ೨/೧೦೦೦ | ೧೬೫ | ೨/೧೦೦೦ | |
| (ii) | ಮೊಹರಿನ ಮೂರರಲ್ಲಿಯ ಒಂದು ಭಾಗ | ೬೦ | " | ೬೫ | " | |
| (iii) | ಮೊಹರಿನ ಮೂರರಲ್ಲಿಯ ಎರಡು ಭಾಗ | ೧೨೦ | " | ೧೧೦ | " | |
| (iv) | ಡಬಲ್ ಮೊಹರು | ೩೬೦ | " | ೩೩೦ | " | " |
| **II** | **ಬೆಳ್ಳಿಯ ನಾಣ್ಯಗಳು (ಬ)** | | | | | |
| (i) | ರೂಪಾಯಿ | ೧೮೦ | ೫/೧೦೦೦ | ೧೬.೫ | ೨/೧೦೦೦ | ಅನಿರ್ಬಂಧಿತವಾಗಿ ಕಾನೂನುಬದ್ಧ ಹಣ |
| (ii) | ಅರ್ಧ ರೂಪಾಯಿ | ೯೦ | " | ೮೨.೫ | " | |
| (iii) | ಕಾಲು ರೂಪಾಯಿ | ೪೫ | ೭/೧೦೦೦ | ೪೧.೨೫ | ೩/೧೦೦೦ | ರೂಪಾಯಿಯ ಭಾಗಗಳಿಗೆ ಮಾತ್ರ |
| (iv) | ರೂಪಾಯಿಯ ಎಂಟರಲ್ಲಿ ಒಂದು ಭಾಗ | ೨೨.೫ | ೧೦/೧೦೦೦ | ೨೦.೬೨೫ | " | ಕಾನೂನುಬದ್ಧ ಮೌಲ್ಯ |
| **III** | **ತಾಮ್ರದ ನಾಣ್ಯಗಳು (ಕ)** | | | | | |
| (i) | ಪೈ | ೧೦೦ | ೧/೪೦ | – | – | ರೂ.೧/೬೪ ಭಾಗಕ್ಕೆ ಕಾನೂನುಬದ್ಧ ಮೌಲ್ಯ |
| (ii) | ಡಬಲ್ ಪೈ | ೨೦೦ | " | – | – | ರೂ.೧/೩೨ ಭಾಗಕ್ಕೆ ಕಾನೂನುಬದ್ಧ ಮೌಲ್ಯ |
| (iii) | ಅರ್ಧ ಪೈ | ೫೦ | " | – | – | ರೂ.೧/೧೨೮ ಭಾಗಕ್ಕೆ ಕಾನೂನುಬದ್ಧ ಮೌಲ್ಯ |
| (iv) | ಪೈ | ೩೩.೩ | " | – | – | ರೂ.೧/೧೯೨ ಭಾಗಕ್ಕೆ ಕಾನೂನುಬದ್ಧ ಮೌಲ್ಯ |

ಬಹುಶಃ ಉದ್ಭವಿಸುತ್ತಿದ್ದಿಲ್ಲ. ಏಕೆಂದರೆ ಪ್ರತಿಯೊಬ್ಬರಿಗೂ ಅವರಿಗೆ ಸಿಗಬೇಕಾದ ಪ್ರತಿಫಲದ ಮೌಲ್ಯವನ್ನು ತೂಕಮಾಡಿ ಅದನ್ನು ಖಚಿತಪಡಿಸಿಕೊಳ್ಳಲು ಆಸ್ಪದವಿತ್ತು. ನಾಣ್ಯ ತಯಾರಿಕೆಯ ಶೋಧದ ಸಮಯದಲ್ಲಿ ಅದು ಹಳೆಯ ಕಥೆ ಎನಿಸಿತು. ಅಂದಿನಿಂದ ನಾಣ್ಯಗಳು ದೃಢೀಕರಿಸಿದ ಮೌಲ್ಯವನ್ನು ಒಳಗೊಂಡಿವೆ. ಆದಾಗ್ಯೂ ನಾಣ್ಯದ ನೈಜ ಮೌಲ್ಯವು ಖಚಿತವಾಗಿ ದೃಢೀಕರಿಸಿದ ಬೆಲೆಯಷ್ಟು ಇರಲಾರದು. ಅಂಥ ವ್ಯತ್ಯಾಸಗಳು ಇದ್ದೇ ಇರುತ್ತವೆ ಮತ್ತು ಯಾವ ನಾಣ್ಯ ತಯಾರಿಕೆಯ ಕಲೆಯಲ್ಲಿ ಯಾವ ಸುಧಾರಣೆಗಳನ್ನು ಮಾಡಿದಾಗ್ಯೂ ಅವುಗಳನ್ನು ತಪ್ಪಿಸುವುದು ದುಸ್ತರವಾಗುತ್ತದೆ. ಆದರೆ ಇಲ್ಲಿ ಆಗಬಹುದಾದ ವ್ಯತ್ಯಾಸ ಎಷ್ಟು ಎಂಬುದು ಮುಖ್ಯವಾಗುತ್ತದೆ. ಆದ್ದರಿಂದ ನಾಣ್ಯಗಳು ತಮ್ಮ ಅಧಿಕೃತ ಮೌಲ್ಯದಿಂದ ಹೆಚ್ಚಿನ ಅಂತರದಲ್ಲಿದ್ದರೆ ಅವುಗಳು ತಮ್ಮ ದೃಢೀಕೃತ ಮೌಲ್ಯದಲ್ಲಿ ಕಾನೂನುಬದ್ಧ ಹಣವಾಗಲಾರವು ಎಂದು ಸಾರುವ ಉಪಬಂಧಗಳನ್ನು ಎಲ್ಲ ದೇಶಗಳ ನಾಣ್ಯ ತಯಾರಿಕಾ ಕಾನೂನುಗಳು ಒಳಗೊಂಡಿರುತ್ತವೆ. ವಾಸ್ತವವಾಗಿ ನಾಣ್ಯಗಳ ಮೌಲ್ಯಗಳ ವ್ಯಾಪ್ತಿಯ ಮಿತಿಯನ್ನು ನಿರ್ಧರಿಸದೆ ಅವುಗಳನ್ನು ಕಾನೂನುಬದ್ಧ ನಾಣ್ಯಗಳನ್ನಾಗಿ ಮಾಡುವುದು ವಂಚನೆಗೆ ಅವಕಾಶ ಮಾಡಿದಂತಾಗುವುದು. ಕಾಯಿದೆಯು ಅಧಿಕೃತ ನಾಣ್ಯ ತಯಾರಿಕೆಯಲ್ಲಿ ಮೌಲ್ಯಗಳ ವ್ಯಾಪ್ತಿಯ ಮಿತಿಯನ್ನು ವಿಧಿಸಿದ್ದು ಸರಿಯಾದ ಕ್ರಮವಾಗಿತ್ತು. ಆದಾಗ್ಯೂ ಟಂಕಿಸಿದ ನಾಣ್ಯಗಳು ಕಾನೂನಿಗೆ ಅನುರೂಪವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಕಾಯಿದೆಯು ಯಾವುದೇ ಆಡಳಿತ ವ್ಯವಸ್ಥೆಯನ್ನು ಏರ್ಪಡಿಸದಿರುವುದು ವಿಷಾದನೀಯ.[೧] ಮುಕ್ತ ನಾಣ್ಯ ತಯಾರಿಕೆ ತತ್ವದ ಮಾನ್ಯತೆಯು ಕಾನೂನು ಮಾಡಿದ ಮತ್ತೊಂದು ಮಹತ್ವದ ಸುಧಾರಣೆಯಾಗಿತ್ತು. ಈ ತತ್ವಕ್ಕೆ ತಕ್ಕ ಗಮನವನ್ನು ನೀಡಲಾಗಿರದಿದ್ದರೂ ಅದು ಭದ್ರ ನಾಣ್ಯಪದ್ಧತಿಯ ನಿಜವಾದ ಆಧಾರವಾಗಿರುತ್ತದೆ. ಏಕೆಂದರೆ ಸಮಾಜದ ವ್ಯವಹಾರಗಳಿಗೆ ಅಗತ್ಯವಾದ ನಾಣ್ಯದ ಮೊತ್ತದ ಮುಖ್ಯ ಪ್ರಶ್ನೆಯನ್ನು ಕುರಿತು ಅದು ಮಹತ್ವದ ಸ್ಥಾನವನ್ನು ಹೊಂದಿರುತ್ತದೆ. ಈ ಮೊತ್ತವನ್ನು ನಿಯಂತ್ರಿಸಲು ಎರಡು ಮಾರ್ಗಗಳಿವೆ ಎಂದು ಹೇಳಬಹುದು. ಒಂದು ಮಾರ್ಗವೆಂದರೆ ಟಂಕಸಾಲೆಯನ್ನು ಮುಚ್ಚುವುದು ಮತ್ತು ಅಗತ್ಯಗಳಿಗೆ ಅನುಗುಣವಾಗಿ ನಾಣ್ಯದ ಚಲಾವಣೆಯನ್ನು ಯುಕ್ತಿಯಿಂದ ನಿಭಾಯಿಸುವುದನ್ನು ಸರ್ಕಾರದ ವಿವೇಚನೆಗೆ ಬಿಡುವುದು. ಮತ್ತೊಂದು ಮಾರ್ಗವೆಂದರೆ ಟಂಕಸಾಲೆಯನ್ನು ತೆರೆದಿಡುವುದು ಮತ್ತು ತಮಗೆ ಬೇಕಾದಷ್ಟು ನಾಣ್ಯದ ಮೊತ್ತವನ್ನು ನಿರ್ಧರಿಸುವುದನ್ನು ವ್ಯಕ್ತಿಗಳಿಗೇ ಬಿಡುವುದು. ಮುಚ್ಚಿದ ಟಂಕಸಾಲೆಗಳ ವಿಷಯದಲ್ಲಿ ಆವಶ್ಯಕವಾಗಿ ವಿವೇಚನಾ ಪ್ರಯೋಗಕ್ಕೆ ಮಾರ್ಗದರ್ಶಿಯಾಗಲು ವಿಫಲವಾಗದ ಪರೀಕ್ಷೆಗಳು ಇಲ್ಲದ್ದರಿಂದ ಈ ಎರಡು ಯೋಜನೆಗಳಲ್ಲಿ ತೆರೆದ ಟಂಕಸಾಲೆಗಳ ತತ್ವವು ಶ್ರೇಷ್ಠವಾಗಿದೆಯೆಂದು ಒಪ್ಪಲಾಗಿದೆ. ತೆರೆದ ಟಂಕಸಾಲೆಗಳ ವಿಷಯದಲ್ಲಿ ಆದ ಹಾಗೆ ಪ್ರತಿಯೊಬ್ಬ ವ್ಯಕ್ತಿಯೂ ಗಟ್ಟಿಯ ಬದಲು ನಾಣ್ಯವನ್ನು ಪಡೆದು

೧. ಇಂಗ್ಲೆಂಡಿನಲ್ಲಿ ಈ ಆಡಳಿತ ವ್ಯವಸ್ಥೆಯನ್ನು "ಟ್ರಯಲ್ ಆಫ್ ದಿ ಫಿಕ್ಸ್" ಹೆಸರಿನಲ್ಲಿ ಒದಗಿಸಲಾಗಿದೆ. ಈ ವ್ಯವಸ್ಥೆಯ ಇತಿಹಾಸ ಮತ್ತು ಅದರ ಕಾರ್ಯಾಚರಣೆಯ ಬಗ್ಗೆ ೧೮೬೬ ರ ಎಚ್.ಆಫ್.ಸಿ. ರಿಟರ್ನ್ ೨೦೩ ನೋಡಿ: ಈಸ್ಟ್ ಇಂಡಿಯಾ ಕಂಪನಿಯ ಕಾಲದಲ್ಲಿ ಭಾರತೀಯ ನಾಣ್ಯಗಳ ಪ್ರಮಾಣ ಶುದ್ಧತೆಯನ್ನು ಸದಾ ಕಾಪಾಡುವುದು ಕೋರ್ಟ್ ಆಫ್ ಡೈರೆಕ್ಟರ್ಸ್ ಅವರ ಅತ್ಯಂತ ಜವಾಬ್ದಾರಿಯ ಕೆಲಸವಾಗಿತ್ತು. ಭಾರತದಲ್ಲಿ ತಯಾರಿಸಿದ ನಾಣ್ಯಗಳನ್ನು ಇಂಗ್ಲೆಂಡಿನಲ್ಲಿಯ ವಿಶೇಷ 'ಟ್ರಯಲ್ ಆಫ್ ದಿ ಫಿಕ್ಸ್'ನಲ್ಲಿ ಪರೀಕ್ಷಿಸಲಾಗುತ್ತಿದ್ದು ಅವುಗಳನ್ನು ಅಲ್ಲಿಗೆ ನಿಯತವಾಗಿ ಕಳುಹಿಸಬೇಕಾಗುತ್ತಿತ್ತು ಮತ್ತು ನಿರ್ಣಯವನ್ನು ಭಾರತದಲ್ಲಿಯ ಟಂಕಸಾಲೆಯ ಮಾಲೀಕರಿಗೆ ಅವರ ಭವಿಷ್ಯದ ಮಾರ್ಗದರ್ಶನದ ಸಲುವಾಗಿ ವರದಿ ಮಾಡಬೇಕಾಗಿತ್ತು. ನೋಡಿ : ೧೮೪೯ ರ ಎಚ್.ಆಫ್.ಸಿ. ರಿಟರ್ನ್ ೧೪ ಕಂಪನಿಯನ್ನು ಮುಚ್ಚಿದ ನಂತರ ಟಂಕಸಾಲೆಯ ಮಾಲೀಕರನ್ನು ಹೊಣೆಗಾರರನ್ನಾಗಿ ಮಾಡಲು ಆಡಳಿತದಲ್ಲಿ ವ್ಯವಸ್ಥೆ ಇದ್ದಿಲ್ಲ.

ಆ ನಾಣ್ಯವನ್ನು ಗಟ್ಟಿಯಾಗಿ ಪರಿವರ್ತಿಸಿದರೆ ಪ್ರಮಾಣವು ತಂತಾನೆ ನಿಯಂತ್ರಿಸಲ್ಪಡುವುದು. ವಾಣಿಜ್ಯದ ಹೆಚ್ಚುತ್ತಿರುವ ಬೇಡಿಕೆಗಳಿಗೆ ದೊಡ್ಡ ಪ್ರಮಾಣದ ಚಲಾವಣಾ ಮಾಧ್ಯಮವು ಬೇಕಾಗಿದ್ದರೆ, ಈ ಉದ್ದೇಶಕ್ಕೆ ಸಮಾಜವು ತನ್ನಲ್ಲಿರುವ ಬಂಡವಾಳದ ದೊಡ್ಡ ಭಾಗವನ್ನು ಬಿಡುಗಡೆ ಮಾಡುವುದರಿಂದ ಸಮಾಜಕ್ಕೆ ಹಿತವಾಗುವುದು. ಇದಕ್ಕೆ ವ್ಯತಿರಿಕ್ತವಾಗಿ ವಾಣಿಜ್ಯಕ್ಕೆ ಕಡಿಮೆ ಗಾತ್ರದ ಚಲಾವಣಾ ಮಾಧ್ಯಮ ಬೇಕಾದ ಪರಿಸ್ಥಿತಿ ಇದ್ದರೆ, ನಾಣ್ಯದ ಕೆಲವು ಪ್ರಮಾಣವನ್ನು ಹಿಂತೆಗೆದುಕೊಳ್ಳಲಾಗುತ್ತದೆ ಮತ್ತು ಇತರ ಯಾವುದೇ ವಸ್ತುವಿನಂತೆ ನಾಣ್ಯೇತರ ಉದ್ದೇಶಗಳಿಗೆ ಅದನ್ನು ಉಪಯೋಗಿಸಲಾಗುತ್ತದೆ. ೧೮೭೦ರ ಕಾಯಿದೆಯು ತೆರೆದ ಟಂಕಸಾಲೆಯ ತತ್ವವನ್ನು ಬಹಿರಂಗವಾಗಿ ಮಾನ್ಯ ಮಾಡಿದ್ದರಿಂದ ಆ ದಿನಾಂಕಕ್ಕಿಂತ ಮೊದಲು ಟಂಕಸಾಲೆಗಳನ್ನು ಮುಚ್ಚಲಾಗಿತ್ತು ಎಂದು ಭಾವಿಸಕೂಡದು. ವಾಸ್ತವವಾಗಿ ಬೆಳ್ಳಿಯು ಮಾತ್ರ ಕಾನೂನುಬದ್ಧ ಹಣವಾಗಿದ್ದರೂ, ಚಿನ್ನ ಮತ್ತು ಬೆಳ್ಳಿಗಳ ಮುಕ್ತ ನಾಣ್ಯ ತಯಾರಿಕೆಗೆ ಅಲ್ಲಿ ಅವಕಾಶವಿತ್ತು. ಟಂಕಸಾಲೆಯ ಮಾಲೀಕನು ತನಗೆ ನೀಡಿದ ಎಲ್ಲ ಲೋಹಗಳನ್ನು ನಾಣ್ಯಗಳಲ್ಲಿ ಪರಿವರ್ತಿಸಬೇಕೆಂಬ ಕರಾರು ಇತ್ತು. ಇದು ತೆರೆದ ನಾಣ್ಯಪದ್ಧತಿಯಲ್ಲಿ ವಾಸ್ತವ ಸಂಗತಿಯಾಗಿದ್ದರೂ ಆಶ್ಚರ್ಯವೆಂಬಂತೆ ಇದರ ಬಗ್ಗೆ ಹಿಂದಿನ ಕಾಯಿದೆಗಳಲ್ಲಿ ಒಂದು ಶಬ್ದ ಕೂಡ ಇರಲಿಲ್ಲ. ಈ ವಿಷಯವನ್ನು ಕುರಿತು ಕಾಯಿದೆಯ ಉಪಬಂಧಗಳು ಸ್ಪಷ್ಟವಿದೆ. ಅಲ್ಲಿ ಇದ್ದ ಪರಿಚ್ಛೇದಗಳೆಂದರೆ–

"ಕಲಮು ೧೯ : ಸದ್ಯಕ್ಕೆ ನಾಣ್ಯ ತಯಾರಿಕೆಯ ನಿಯಮಗಳಿಗೆ ಒಳಪಟ್ಟು ಟಂಕಸಾಲೆಗೆ ತರಲಾದ ಎಲ್ಲ ಚಿನ್ನ ಮತ್ತು ಬೆಳ್ಳಿಯ ಗಟ್ಟಿ ಮತ್ತು ನಾಣ್ಯವನ್ನು ಟಂಕಸಾಲೆಯ ಒಡೆಯನು ಸ್ವೀಕರಿಸತಕ್ಕದ್ದು;

"ಆದರೆ ಅಂಥ ಗಟ್ಟಿ ಮತ್ತು ನಾಣ್ಯವು ನಾಣ್ಯ ತಯಾರಿಕೆಗೆ ಯೋಗ್ಯವಿರಬೇಕು.

"ಆದರೆ ಒಮ್ಮೆ ಒಬ್ಬ ವ್ಯಕ್ತಿಯು ತಂದ ಚಿನ್ನವು ೫೦ ತೊಲಗಳಿಗಿಂತ ಮತ್ತು ಬೆಳ್ಳಿಯು ೧೦೦೦ ತೊಲಗಳಿಗಿಂತ ಕಡಿಮೆ ಇರಬಾರದು.

"ಕಲಮು ೨೦ : ಹಾಲಿ ಇರುವ ನಾಣ್ಯ ತಯಾರಿಕೆಯ ನಿಯಮಗಳಿಗನುಸಾರವಾಗಿ ನಾಣ್ಯ ತಯಾರಿಸಲು ತಂದ ಎಲ್ಲ ಚಿನ್ನದ ಗಟ್ಟಿಯ ಉತ್ಪಾದನೆಗಳು ಮತ್ತು ಬಂಗಾರದ ನಾಣ್ಯಗಳ ಮೇಲೆ ಟಂಕಸಾಲೆಯಲ್ಲಿ ಪ್ರತಿಶತ ೧ ರೂಪಾಯಿ ದರದಲ್ಲಿ ಸುಂಕವನ್ನು ಹೇರಲಾಗುವುದು.

"ಕಲಮು ೨೧ : ಉಕ್ತ ಟಂಕಸಾಲೆಯ ನಿಯಮಗಳಿಗನುಸಾರವಾಗಿ ಟಂಕಸಾಲೆಗೆ ನಾಣ್ಯ ತಯಾರಿಸಲು ತಂದ ಎಲ್ಲ ಬೆಳ್ಳಿಯ ಗಟ್ಟಿ ಮತ್ತು ನಾಣ್ಯಗಳ ಮೇಲೆ ಮಾಲೀಕನಿಗೆ ಮರಳಿ ಕೊಡುವ ಉತ್ಪಾದನೆಯ ಶೇಕಡಾ ೨ರಷ್ಟು ಸುಂಕವನ್ನು ವಿಧಿಸಲಾಗುವುದು.

"ಕಲಮು ೨೨ : ಟಂಕಸಾಲೆಯಲ್ಲಿ ಸ್ವೀಕರಿಸಲು ಯೋಗ್ಯವಾಗುವಂತೆ ಕತ್ತರಿಸಲು ಮತ್ತು ಕರಗಿಸಲು ತರಲಾದ ಚಿನ್ನದ ಮತ್ತು ಬೆಳ್ಳಿಯ ಗಟ್ಟಿ ಮತ್ತು ನಾಣ್ಯಗಳ ಮೇಲೆ ಕ್ರಮವಾಗಿ ಒಂದು ಮಿಲ್ಲೆಗೆ ೧/೪ ಮತ್ತು ೧ ರಂತೆ ಕರವನ್ನು ಹೇರಲಾಗುವುದು.

"ಕಲಮು ೨೩ : ನಾಣ್ಯ ತಯಾರಿಕೆಗೆ ಟಂಕಸಾಲೆಗೆ ತರಲಾದ ಚಿನ್ನ ಹಾಗೂ ಬೆಳ್ಳಿಗಳ ಗಟ್ಟಿ ಮತ್ತು ನಾಣ್ಯಗಳು ಕಾಯಿದೆಯು ನಿಗದಿಮಾಡಿದ ಶುದ್ಧತೆಯ ಮಟ್ಟಕ್ಕಿಂತ ಕೆಳದರ್ಜೆಯವಾಗಿದ್ದರೆ ಅಥವಾ ಸುಲಭವಾಗಿ ಒಡೆಯುವ ಅಥವಾ ಅನ್ಯ ಕಾರಣಗಳಿಂದ ನಾಣ್ಯತಯಾರಿಕೆಗೆ ಯೋಗ್ಯವಿಲ್ಲದಿದ್ದರೆ ಅವು ಮತ್ತು ಅವುಗಳನ್ನು ಶುದ್ಧೀಕರಿಸಿದರೆ ಅವೆಲ್ಲವುಗಳ ಮೇಲೆ, ಮೇಲೆ ಹೇಳಿದ ವೆಚ್ಚವಲ್ಲದೇ ಶುದ್ಧೀಕರಿಸುವಾಗ ಉಂಟಾದ ಹಾನಿ ಮತ್ತು ವೆಚ್ಚಗಳ ಸಲುವಾಗಿ ಕೌನ್ಸಿಲ್‌ನ ಗವರ್ನರ್ ಜನರಲ್ ನಿಗದಿಪಡಿಸುವ ಕರವನ್ನು ಹೇರಲಾಗುವುದು.

"ಕಲಮು ೨೪ : ನಾಣ್ಯ ತಯಾರಿಕೆಗೆ ಚಿನ್ನ ಅಥವಾ ಬೆಳ್ಳಿಗಳ ಗಟ್ಟಿ ಅಥವಾ ನಾಣ್ಯಗಳು ಟಂಕಸಾಲೆಗೆ ತಲುಪಿದ ಮೇಲೆ ಟಂಕಸಾಲೆಯ ಒಡೆಯನು ಮಾಲೀಕನಿಗೆ ರಸೀದಿಯನ್ನು ಕೊಡುವನು. ರಸೀದಿಯು ಸಾರ್ವಜನಿಕ ಖಜಾನೆಯಲ್ಲಿ ನೀಡಲಾಗುವ ಅಂಥ ಗಟ್ಟಿ ಅಥವಾ ನಾಣ್ಯಗಳ ನಿವ್ವಳ ಉತ್ಪತ್ತಿಗೆ ಲೋಹ ಶುದ್ಧತೆಯನ್ನು ಪರೀಕ್ಷಿಸುವ ಒಡೆಯನಿಂದ ಪ್ರಮಾಣಪತ್ರ ಪಡೆಯಲು ಮಾಲೀಕನಿಗೆ ಅರ್ಹತೆಯನ್ನು ನೀಡುವುದು.

"ಕಲಮು ೨೫ : ಲೋಹ ಪರಿಶೋಧಕ ಯಜಮಾನನಿಂದ ಪ್ರಮಾಣಪತ್ರಗಳನ್ನು ಪಡೆಯಲಾದ ಎಲ್ಲ ಚಿನ್ನದ ಗಟ್ಟಿ ಮತ್ತು ನಾಣ್ಯಗಳ ಮೌಲ್ಯಗಳಿಗೆ ಸಾಧ್ಯವಾದಷ್ಟು ಹತ್ತಿರದ ಮೌಲ್ಯಗಳನ್ನು ಈ ಕಾಯಿದೆ ಅಥವಾ ೧೮೩೫ ಕಾಯಿದೆ ನಂಬರ್ XVIIರ ಅಡಿಯಲ್ಲಿ ತಯಾರಿಸಿದ ನಾಣ್ಯಗಳಲ್ಲಿ ಪಾವತಿ ಮಾಡಲಾಗುವುದು ಮತ್ತು ಮಾಲೀಕನಿಗೆ ಏನಾದರೂ ಬಾಕಿ ಕೊಡುವುದಿದ್ದರೆ ಬ್ರಿಟಿಷ್ ಭಾರತದಲ್ಲಿ ಅದನ್ನು ಬೆಳ್ಳಿಯಲ್ಲಿ ಅಥವಾ ಬೆಳ್ಳಿ ಅಥವಾ ತಾಮ್ರಗಳ ನಾಣ್ಯಗಳಲ್ಲಿ ಕೊಡಲಾಗುವುದು."

ಕಾಗದದ ನಾಣ್ಯದ ವಿಷಯದಲ್ಲಿ ಸರ್ಕಾರವು ದೇಶದಲ್ಲಿ ಪ್ರಚಲಿತವಿದ್ದ ನಾಣ್ಯ ಹೊರಡಿಸುವಿಕೆಯ ಸ್ವಾತಂತ್ರ್ಯದ ತತ್ವವನ್ನು ಕುರಿತಂತೆ ಮುಂದೆ ಸಾಗಲಿಲ್ಲವೆಂಬುದನ್ನು ಗಮನಿಸಬೇಕು. ಸರ್ಕಾರದ ಕಾಗದದ ಚಲಾವಣಾ ನಾಣ್ಯವನ್ನು ಕಾರ್ಯಾಚರಣೆಯಲ್ಲಿ ತರುವ ಮುನ್ನ ನೋಟುಗಳನ್ನು ಬಿಡುಗಡೆ ಮಾಡುವ ಅಧಿಕಾರವು ಭಾರತದ ಮೂರು ಪ್ರಾಂತೀಯ ಬ್ಯಾಂಕುಗಳಿಗೆ ಸೀಮಿತವಾಗಿತ್ತು ಎಂಬ ತಪ್ಪುಕಲ್ಪನೆ ಚಾಲ್ತಿಯಲ್ಲಿದೆ. ವಾಸ್ತವಿಕವಾಗಿ ಭಾರತದಲ್ಲಿ ಮುಕ್ತ ಬ್ಯಾಂಕಿಂಗ್ ಪದ್ಧತಿಯೆಂದು ಕರೆಯಲಾಗುವ ಪದ್ಧತಿ ಇತ್ತು ಮತ್ತು ಅದರಲ್ಲಿ ತನ್ನ ನೋಟುಗಳನ್ನು ತಯಾರಿಸಲು ಪ್ರತಿಯೊಂದು ಬ್ಯಾಂಕಿಗೆ ಸ್ವಾತಂತ್ರ್ಯವಿತ್ತು. ಪ್ರೆಸಿಡೆನ್ಸಿ ಬ್ಯಾಂಕುಗಳ ನೋಟುಗಳು ಇತರ ಬ್ಯಾಂಕುಗಳ ನೋಟುಗಳಿಗಿಂತ ಸ್ವಲ್ಪ ಹೆಚ್ಚಿನ ಸ್ಥಾನಮಾನವನ್ನು ಅನುಭವಿಸುತ್ತಿದ್ದವು ಎಂಬುದು ನಿಜ. ಏಕೆಂದರೆ ಆದಾಯ ಪಾವತಿ ಮಾಡುವಲ್ಲಿ ಅವುಗಳು ಸ್ವಲ್ಪಮಟ್ಟಿಗೆ ಸರ್ಕಾರದಿಂದ ಸ್ವೀಕರಿಸಲ್ಪಡುತ್ತಿದ್ದವು.[೧] ಈ ವಿಶೇಷ ಹಕ್ಕಿಗಾಗಿ ಪ್ರಾಂತೀಯ ಬ್ಯಾಂಕುಗಳು ತಮ್ಮ ವ್ಯವಹಾರಗಳಲ್ಲಿ[೨] ಉಗ್ರ ಶಾಸಕಾಂಗ ನಿಯಂತ್ರಣಗಳಿಗೆ ಗುರಿಯಾಗಬೇಕಾಗುತ್ತಿತ್ತು. ಆದರೆ ತಮ್ಮ ನೋಟು

೧. ಹೋಲಿಸಿರಿ : ಎಫ್.ಸಿ. ಹ್ಯಾರಿಸನ್, ಇಕನಾಮಿಕ್ ಜರ್ನಲ್ ಸಂ. ೧, ಪು. ೭೨೬

೨. ಅಂಥ ನಿಯಂತ್ರಣದ ಕಾರಣಗಳು ಸರ್ಕಾರ ಮತ್ತು ಪ್ರಾಂತೀಯ ಬ್ಯಾಂಕುಗಳ ನಡುವೆ ಇದ್ದ ವಿಚಿತ್ರ ಸಂಬಂಧದಲ್ಲಿ ಕಂಡುಬರುತ್ತವೆ. ೧೮೬೨ ರ ಮುನ್ನ ತಮ್ಮ ದಿವಾಳಿತನದ ವಿರುದ್ಧ ರಕ್ಷಣೆಯೆಂದು "ಪ್ರೆಸಿಡೆನ್ಸಿ ಬ್ಯಾಂಕ್ ಚಾರ್ಟರುಗಳು ತಾವು ತೊಡಗಬೇಕಾಗಿದ್ದ ವ್ಯವಹಾರದ ಪ್ರಕಾರವನ್ನು ನಿರ್ಬಂಧಿಸಿದವು. ಸಂಕ್ಷಿಪ್ತವಾಗಿ ಹೇಳುವುದಾದರೆ ವಿಧಿಸಲಾದ ಪ್ರಮುಖ ನಿರ್ಬಂಧಗಳು ಬ್ಯಾಂಕುಗಳನ್ನು ವಿದೇಶೀ ವಿನಿಮಯ ವ್ಯವಹಾರವನ್ನು ನಡೆಸುವುದರಿಂದ ಅಥವಾ ಸಾಲ ತೆಗೆದುಕೊಳ್ಳುವುದರಿಂದ ಅಥವಾ ಭಾರತದ ಹೊರಗಡೆ ಪಾವತಿ ಮಾಡಬೇಕಾದ ಠೇವಣಿಗಳನ್ನು ಸ್ವೀಕರಿಸುವುದರಿಂದ ಅಥವಾ ಆರು ತಿಂಗಳುಗಳಿಗಿಂತ ಹೆಚ್ಚಿನ ಅವಧಿಗೆ ಸಾಲ ಕೊಡುವುದರಿಂದ ಅಥವಾ ಅಡವಿನ ಮೇಲೆ ಅಥವಾ ಸ್ಥಿರಾಸ್ತಿಯ ಜಾಮೀನಿನ ಮೇಲೆ ಅಥವಾ ಎರಡಕ್ಕಿಂತ ಕಡಿಮೆ ಸ್ವತಂತ್ರ ಹೆಸರುಗಳನ್ನು ಉಳ್ಳ ಭರವಸೆ ಪತ್ರಗಳ ಮೇಲೆ ಅಥವಾ ಬ್ಯಾಂಕುಗಳಲ್ಲಿ ಜಾಮೀನಾಗಿ ಇಡಲಾಗದ ಸರಕುಗಳ ಮೇಲೆ ಸಾಲ ಕೊಡುವುದನ್ನು ಪ್ರತಿಬಂಧಿಸಿದವು. ಸರ್ಕಾರವು ಬ್ಯಾಂಕುಗಳಲ್ಲಿ ಷೇರುಗಳನ್ನು ಇಟ್ಟಿತ್ತು ಮತ್ತು ನಿರ್ದೇಶನಾಲಯದ ಒಂದು ಭಾಗವನ್ನು ನೇಮಿಸಿತು. ೧೮೬೨ರಲ್ಲಿ ನೋಟುಗಳನ್ನು ತಯಾರಿಸುವ ಅಧಿಕಾರವನ್ನು ಹಿಂತೆಗೆದುಕೊಳ್ಳಲಾಯಿತು. ಸರ್ಕಾರದ ನಿಯಂತ್ರಣಾಧಿಕಾರವು ಬದಲಾಗದೇ ಉಳಿದರೂ ಆಗ ಬ್ಯಾಂಕುಗಳ ವ್ಯವಹಾರಗಳ ಮೇಲಿನ ಶಾಸನಬದ್ಧ ಪರಿಮಿತಿಗಳನ್ನು ಬಹಳಷ್ಟು ಸಡಿಲಿಸಲಾಯಿತು. ಆದರೆ ಕೆಲವೊಂದು ಬ್ಯಾಂಕುಗಳು ತಮ್ಮ ಸ್ವಾತಂತ್ರ್ಯವನ್ನು ದುರುಪಯೋಗಪಡಿಸಿಕೊಂಡಿದ್ದರಿಂದ ಹಿಂದಿನ ಅವಧಿಯಲ್ಲಿಯ ಪ್ರಾಯಶಃ ಬಹುಮಟ್ಟಿಗೆ ಎಲ್ಲ ಹಳೆಯ ನಿರ್ಬಂಧಗಳನ್ನು ೧೮೭೬ ರಲ್ಲಿ ಸರ್ಕಾರದ ಪ್ರೆಸಿಡೆನ್ಸಿ ಬ್ಯಾಂಕುಗಳ ಕಾಯಿದೆಯ ಮುಖಾಂತರ ಪುನಃವಿಧಿಸಲಾಯಿತು. ಆದಾಗ್ಯೂ ಆಡಳಿತದಲ್ಲಿ ನೇರ ಹಸ್ತಕ್ಷೇಪ ಮಾಡುವುದನ್ನು ಕೈಬಿಡಲಾಯಿತು, ಅಧಿಕೃತ ನೇಮಕಾತಿಗಳನ್ನು ನಿಲ್ಲಿಸಲಾಯಿತು.

ತಯಾರಿಕೆಯಲ್ಲಿ ಅಷ್ಟು ವಿಶೇಷ ಹಕ್ಕನ್ನು ಪಡೆಯದ ಬ್ಯಾಂಕುಗಳು ಈ ನಿಯಂತ್ರಣಗಳಿಂದ ಮುಕ್ತವಾಗಿದ್ದವು. ನೋಟು ತಯಾರಿಕೆಯ ಹಕ್ಕನ್ನು ಬ್ಯಾಂಕುಗಳಿಗೆ ಕಾಯಿದೆಯ ಮೂಲಕ ತೆರೆದಿಡಲಾಗಿತ್ತು. ಆದರೆ ಈ ಅನಾನುಕೂಲತೆಯು ಇತರ ಬ್ಯಾಂಕುಗಳು ನೋಟು ತಯಾರಿಕೆಯ ಹಕ್ಕಿನಿಂದ ಹಿಮ್ಮೆಟ್ಟುವಂತೆ ಮಾಡಲು ಸಾಕಾಗಲಿಲ್ಲ. ಹಾಗಾದರೂ, ಪ್ರೆಸಿಡೆನ್ಸಿ ಬ್ಯಾಂಕುಗಳೂ[೧] ಸೇರಿದಂತೆ ಯಾವುದೇ ಬ್ಯಾಂಕು ದೊಡ್ಡ ಪ್ರಮಾಣದಲ್ಲಿ ನೋಟು ತಯಾರಿಸುವ ಹಕ್ಕನ್ನು ಚಲಾಯಿಸಲಿಲ್ಲ. ೧೮೬೧ರಲ್ಲಿ[೨] ಈ ಹಕ್ಕನ್ನು ಎಲ್ಲ ಬ್ಯಾಂಕುಗಳಿಂದ ಕಸಿದುಕೊಳ್ಳಲಾಯಿತು ಮತ್ತು ಇಡೀ ಭಾರತಕ್ಕೆ ಅನ್ವಯಿಸುವಂತೆ ರಾಷ್ಟ್ರೀಯ ನಾಣ್ಯ ತಯಾರಿಕಾ ಇಲಾಖೆಯನ್ನು ಸ್ಥಾಪಿಸಿ ಅದನ್ನು ಕಾಗದದ ನಾಣ್ಯದ ಇಲಾಖೆ ಎಂದು ಕರೆಯಲ್ಪಡುವ ಸರ್ಕಾರಿ ಇಲಾಖೆಯ ಆಡಳಿತಕ್ಕೆ ಒಪ್ಪಿಸಲಾಯಿತು. ಆದರೆ ಲೋಹದ ನಾಣ್ಯದ ವಿಷಯದಲ್ಲಿ ಇದ್ದಂತೆ ಕಾಗದದ ನಾಣ್ಯದ ಪ್ರಮಾಣವನ್ನು ನಿರ್ಧರಿಸುವಲ್ಲಿಯೂ ಖಾಸಗಿಯವರಿಗೆ ಭಾಗವಹಿಸಲು ಅನುಮತಿ ನೀಡದಿದ್ದರೆ ಕಾಗದದ ನಾಣ್ಯವನ್ನು ನಿಯಮನಗೊಳಿಸುವಲ್ಲಿ ಸರ್ಕಾರಕ್ಕೆ ಯಾವುದೇ ವಿವೇಚನೆ ಉಳಿಯುತ್ತಿದ್ದಿಲ್ಲ. ಲೋಹದ ನಾಣ್ಯದ ವಿಷಯದಲ್ಲಿ ಟಂಕಸಾಲೆಯ ಒಡೆಯನಿಗಿದ್ದ ವಿವೇಚನೆಗಿಂತ ಹೆಚ್ಚಿನ ವಿವೇಚನೆ ಕಾಗದದ ನಾಣ್ಯದ ವಿಷಯದಲ್ಲಿ ಈ ಇಲಾಖೆಗೆ ಇರಲಿಲ್ಲ.

ಇಲಾಖೆಯ ಕರ್ತವ್ಯವನ್ನು ಕಾಯಿದೆಯ ಮೂಲಕ[೩] ಕೆಳಕಂಡವುಗಳಿಗೆ ಮಾತ್ರ ಸೀಮಿತವಾಗಿರುವಂತೆ ಮಾಡಲಾಗಿತ್ತು – ೧) ಭಾರತ ಸರ್ಕಾರದ ಚಲಾವಣೆಯಲ್ಲಿಯ ಬೆಳ್ಳಿಯ ನಾಣ್ಯಗಳ ವಿನಿಮಯ. ೨) ಪ್ರಮಾಣಿತ ಬೆಳ್ಳಿಯ ಗಟ್ಟಿಯಲ್ಲಿ ಅಥವಾ ನಾಣ್ಯ ತಯಾರಿಕೆಗೆ ಯೋಗ್ಯವಾದ ಮಟ್ಟದ ಬೆಳ್ಳಿಯ ೧೦೦೦ ತೊಲಗಳಿಗೆ ೯೭೯ ರೂಪಾಯಿ ದರದಲ್ಲಿ ವಿದೇಶೀ ಬೆಳ್ಳಿಯ ನಾಣ್ಯಗಳ ವಿನಿಮಯ. ೩) ಅದೇ ವಲಯದಲ್ಲಿ ಹೊರಡಿಸಲಾದ ಇತರ ಮೊತ್ತಗಳನ್ನು ಧಾರಕನಿಗೆ ಬೇಡಿಕೆಯ ಮೇಲೆ

---

ಮತ್ತು ಬ್ಯಾಂಕುಗಳಲ್ಲಿ ತನ್ನ ಷೇರುಗಳನ್ನು ವಿಲೇವಾರಿ ಮಾಡಲಾಯಿತು. ಮೂರು ಪ್ರೆಸಿಡೆನ್ಸಿ ಬ್ಯಾಂಕುಗಳನ್ನು ಇಂಪೀರಿಯಲ್ ಬ್ಯಾಂಕಿನಲ್ಲಿ ಸಂಯೋಜಿಸಿದ ೧೯೨೦ರ ಕಾಯಿದೆ XLVII ರಲ್ಲಿ ಕೆಲವು ಪರಿಮಿತಿಗಳನ್ನು ಸೇರಿಸಲಾಯಿತು. ಪ್ರೆಸಿಡೆನ್ಸಿ ಬ್ಯಾಂಕುಗಳನ್ನು ಬಿಟ್ಟು ಉಳಿದ ಬ್ಯಾಂಕುಗಳನ್ನು ಭಾರತೀಯ ಕಂಪನಿಗಳ ಕಾಯಿದೆಯ ಉಪಬಂಧ ವಿಧೇಯ ಮಾಡುವುದರ ಹೊರತಾಗಿ ಯಾವುದೇ ಶಾಸನಬದ್ಧ ನಿರ್ಬಂಧನೆಯಿಂದ ಸಂಪೂರ್ಣವಾಗಿ ನಿರೋಧಿಸಲ್ಪಟ್ಟಿವೆ. ಇದನ್ನು ಸರ್ ಹೆನ್ರಮೇನ್ ಇವರ ಸಂಕ್ಷಿಪ್ತ ಟಿಪ್ಪಣಿ ಸಂ. ೪೭ ಮತ್ತು ಅದರ ಜೊತೆಗಿದ್ದ ಡಬ್ಲ್ಯೂಸ್ಟೋಕ್ಸ್ ಇವರ ಟಿಪ್ಪಣಿಯೊಂದಿಗೆ ಹೋಲಿಸಿರಿ. ಈ ಬ್ಯಾಂಕುಗಳ ನಿಯಂತ್ರಣವು ಭಾರತದಲ್ಲಿ ಬ್ಯಾಂಕಿಂಗ್ ಶಾಸನದ ಮಹತ್ವದ ಸಮಸ್ಯೆಗಳಲ್ಲಿ ಒಂದಾಗಿದೆ.

೧. ಆದರೂ ಕೆಳಗೆ ಸ್ಪಷ್ಟವಾದಂತೆ ೧೮೬೦ ರಲ್ಲಿ ಮೂರು ಪ್ರೆಸಿಡೆಸ್ಸಿ ಬ್ಯಾಂಕುಗಳ ಚಲಾವಣೆಯಲ್ಲಿಯ ನೋಟುಗಳ ಮೊತ್ತವು ಅವುಗಳ ಚಾಲ್ತಿ ಲೆಕ್ಕಕ್ಕಿಂತ ದೊಡ್ಡದಿತ್ತು ಎಂಬುದನ್ನು ನೋಡಬಹುದು.

| **ಬ್ಯಾಂಕಿನ ಹೆಸರು** | **ಖಾತೆ ಚಾಲ್ತಿ** | **ಚಲಾವಣೆಯಲ್ಲಿಯ ನೋಟುಗಳು** |
|---|---|---|
| ಬ್ಯಾಂಕ್ ಆಫ್ ಬೆಂಗಾಲ್ | £೧,೨೫೪,೮೭೫ | £೧,೨೮೩,೯೪೬ |
| ಬ್ಯಾಂಕ್ ಆಫ್ ಬಾಂಬೆ | £೪೩೮,೪೫೯ | £೭೬೫,೨೩೪ |
| ಬ್ಯಾಂಕ್ ಆಫ್ ಮದ್ರಾಸ್ | £೧೬೧,೯೫೯ | £೧೯೨,೨೯೧ |

(ಬ್ಯಾಂಕರ್ಸ್ ಮ್ಯಾಗಜಿನ್, ಏಪ್ರಿಲ್, ೧೮೯೩ ಪು. ೫೪೭

೨. ಬ್ಯಾಂಕ್ ತಯಾರಿಕೆ ವಿರುದ್ಧ ಸರ್ಕಾರಿ ತಯಾರಿಕೆ ವಿವಾದದ ಸಾರಾಂಶಕ್ಕೆ ನೋಡಿರಿ: ರಿಪೋರ್ಟ್ ಆಫ್ ದಿ ಬಾಂಬೆ ಚೇಂಬರ್ ಆಫ್ ಕಾಮರ್ಸ್, ೧೮೫೯, ಸಹಬಂಧ L ಪುಟಗಳು ೨೮೪–೩೧೮

೩. ೧೮೬೧ ಕಾಯಿದೆ XIX ರ ಕಲಮು IV

ಕೊಡುವಾಗ ಭಾರತ ಸರ್ಕಾರದ ಇತರ ನೋಟುಗಳ ನೀಡಿಕೆ, ಮತ್ತು ೪) ಚಿನ್ನದ ಬದಲಿಗೆ ಚಲಾವಣೆಗಾಗಿ ನೀಡಿದ ಕಾಗದದ ಹಣವು ಚಲಾವಣೆಯಲ್ಲಿರುವ ನಾಣ್ಯ ಹಾಗೂ ಗಟ್ಟಿಗಳ ಒಟ್ಟು ಮೊತ್ತದ ಶೇ. ೨೫ರಷ್ಟನ್ನು ಮೀರದ ಹಾಗೆ. ಗವರ್ನರ್ ಜನರಲ್‌ನು ನಿಗದಿಪಡಿಸಿದ ದರ, ನಿಯಮ, ನಿಬಂಧನೆಗಳಿಗೆ ಒಳಪಟ್ಟು, ಚಿನ್ನದ ನಾಣ್ಯಗಳ ಮತ್ತು ಗಟ್ಟಿಯ ವಿನಿಮಯ. ಸರ್ಕಾರೀ ಸಾಲಪತ್ರಗಳಲ್ಲಿ ವಿನಿಯೋಗಿಸುವ ಮೊತ್ತವನ್ನು ಉಳಿದಂತೆ ಈ ಹಣವನ್ನು ಸಂಪೂರ್ಣವಾಗಿ ಚಲಾವಣೆಗೆ ಬಿಡುಗಡೆಮಾಡಿದ ಕಾಗದಗಳ ನೋಟುಗಳಿಗೆ ಖಾತ್ರಿಯಾಗಿ ಮೀಸಲು ನಿಧಿಯನ್ನಾಗಿ ಇಡಬೇಕಾಗುತ್ತಿತ್ತು. ಇದರ ಮೇಲೆ ಆಕರವಾಗುತ್ತಿದ್ದ ಬಡ್ಡಿಯೊಂದೇ ಸರ್ಕಾರದ ಆದಾಯವಾಗಿರುತ್ತಿತ್ತು. ಹಾಗೆ ಹೂಡಬೇಕಾದ ಹಣದ ಮಿತಿಯು "ಎಲ್ಲ ವ್ಯಾವಹಾರಿಕ ಅನುಭವದ ಪ್ರಕಾರ ಕಾಗದದ ನಾಣ್ಯವು ಪತನಗೊಳ್ಳಬಹುದಾದ ಅತಿ ಕಡಿಮೆ ಮೊತ್ತವಾಗಿರುತ್ತಿತ್ತು.[೧] ಈ ಆಧಾರದ ಮೇಲೆ ಮಾಡಿದ ಅಂದಾಜು ೧೮೬೧ರಲ್ಲಿ[೨] ೪ ಕೋಟಿ ರೂಪಾಯಿಗಳು ೧೮೭೧ರಲ್ಲಿ[೩] ೬ ಕೋಟಿ ರೂಪಾಯಿಗಳು ಮತ್ತು ೧೮೯೦ರಲ್ಲಿ[೪] ೮ ಕೋಟಿ ರೂಪಾಯಿಗಳು ಎಂದು ಆಗಿತ್ತು. ಕಾಗದದ ನಾಣ್ಯವು ತನ್ನ ಪ್ರತಿರೂಪವಾದ ಲೋಹ ನಾಣ್ಯದ ರೂಪದಲ್ಲಿ ಮತ್ತು ಅದರಷ್ಟೇ ಸಂಕುಚಿತವಾಗಿ ಮತ್ತು ಹಿಗ್ಗಿ ತನ್ನ ಮೌಲ್ಯವನ್ನು ಸಂರಕ್ಷಿಸುವಂತೆ ಕಾಗದದ ನಾಣ್ಯದ ಗಾತ್ರವನ್ನು ಕ್ರಮಗೊಳಿಸುವುದು ಭಾರತೀಯ ಕಾಗದದ ನಾಣ್ಯದ ಕಾಯಿದೆಯ ಆವಶ್ಯಕ ತತ್ವವಾಗಿತ್ತು. ಆದರೆ ಹೂಡಿಕೆಯ ಭಾಗವು ಹೆಚ್ಚುತ್ತಿದ್ದರೂ ಅದರ ಮೇಲೆ ಆಧಾರಿತವಾದ ನ್ಯಾಸ ತಯಾರಿಕೆಯು ಈ ಕಾಯಿದೆಯನ್ನು ರದ್ದುಮಾಡುವಷ್ಟು ಯಾವಾಗಲೂ ದೊಡ್ಡ ಪ್ರಮಾಣದ್ದಾಗಿರಲಿಲ್ಲ.[೫]

---

೧. ಹೋಲಿಸಿರಿ : ಕಾಗದದ ನಾಣ್ಯ ಮಸೂದೆ ದಿನಾಂಕ ಮಾರ್ಚ್ ೨೫, ೧೮೭೦ ಇದನ್ನು ಮಂಡಿಸಿದ ಸರ್ ರಿಚರ್ಡ್ ಟೆಂಪಲ್ ಅವರ ಭಾಷಣ, ಸುಪ್ರೀಮ್ ಲೆಜಿಸ್ಲೇಟಿವ್ ಕೌನ್ಸಿಲ್ ಪ್ರೊಸೀಡಿಂಗ್ಸ್, ಸಂಪುಟ IX, ಪುಟಗಳು ೧೫೧–೫೨.

೨. ಕಾಯಿದೆ XIX ಕಲಮು X

೩. ಕಾಯಿದೆ III ಕಲಮು ೧೬

೪. ಕಾಯಿದೆ XV ಕಲಮು ೧

೫. ಕೆಳಗಿನ ಪಟ್ಟಿಯು ಮೂರು ಅವಧಿಗಳಲ್ಲಿ ಕಾಗದದ ಹಣದ ನಿಧಿಯ ವಿತರಣೆಯನ್ನು ತೋರಿಸುತ್ತದೆ.

| **ಅವಧಿ** | **ನೋಟುಗಳ ಚಲಾವಣೆ** | **ನಿಧಿಯ ಸಂಯೋಜನೆ** | | | | **ಒಟ್ಟು ಚಲಾವಣೆಗೆ ನಿಧಿಯ ಪ್ರತಿಯೊಂದು ಅಂಶದ ಶೇಕಡಾ ದರ** | | |
|---|---|---|---|---|---|---|---|---|
| | | **ಬೆಳ್ಳಿ** | **ಚಿನ್ನ** | **ಸಾಲ ಪತ್ರಗಳು** | **ಒಟ್ಟು** | **ಬೆಳ್ಳಿ** | **ಚಿನ್ನ** | **ಸಾಲ ಪತ್ರಗಳು** |
| ೧೮೬೨–೭೧ | ೭.೬೩ | ೪.೮೦ | ೦.೦೩ | ೨.೮೦ | ೭.೬೩ | ೬೩ | – | ೩೭ |
| ೧೮೭೨–೮೧ | ೧೧.೮೨ | ೫.೯೮ | – | ೫.೮೪ | ೧೧.೮೨ | ೫೧ | – | ೪೯ |
| ೧೮೮೨–೯೧ | ೧೫.೭೪ | ೯.೬೪ | – | ೬.೧೦ | ೧೫.೭೪ | ೬೧ | – | ೩೯ |

೧೯ನೆಯ ಶತಮಾನದ ಕೊನೆಯ ವರ್ಷಗಳಲ್ಲಿ ಅಗಾಧವಾದ ಬದಲಾವಣೆಗಳನ್ನು ಹೊಂದುವ ಮೊದಲು ಭಾರತದಲ್ಲಿ ಅಸ್ತಿತ್ವದಲ್ಲಿದ್ದ ಸಮ್ಮಿಶ್ರ ನಾಣ್ಯದ ವ್ಯವಸ್ಥೆ ಮೇಲ್ಕಂಡಂತೆ ಇತ್ತು. ಮಿಶ್ರ ಸ್ವರೂಪದ್ದಾಗಿದ್ದರೂ, ಕಾಗದದ ಭಾಗವು ತುಲನಾತ್ಮಕವಾಗಿ ಒಟ್ಟು ಮೊತ್ತದಲ್ಲಿ ಒಂದು ಚಿಕ್ಕ ಭಾಗವಾಗಿತ್ತು. ಅಂದರೆ, ಕಾಗದದ ಹಣವು ದೊಡ್ಡ ಪ್ರಮಾಣದ್ದಾಗಿರಲಿಲ್ಲ. ಇದರ ಪ್ರಮುಖ ಕಾರಣಗಳನ್ನು ಕಾಗದದ ಹಣದ ವ್ಯವಸ್ಥೆಯಲ್ಲಿಯೇ ಕಾಣುತ್ತೇವೆ.[೧] ಒಂದು ಕಾರಣವೆಂದರೆ ಅತಿ ಕಡಿಮೆ ಬೆಲೆಯ ನೋಟುಗಳು ಲೋಹದ ಹಣದ ಮೌಲ್ಯಕ್ಕಿಂತ ಹೆಚ್ಚಿನ ಮೌಲ್ಯವಾಗಿದ್ದವು. ೧೮೬೧ ರ ಕಾನೂನಿನ ಮೂಲಕ ನೋಟುಗಳ ದರ್ಜೆಯು ೧೦ ರೂಪಾಯಿಗಳಿಂದ ೨೦ ರೂಪಾಯಿ, ೫೦ ರೂಪಾಯಿ, ೧೦೦ ರೂಪಾಯಿ, ೫೦೦ ರೂಪಾಯಿ ಮತ್ತು ೧೦೦೦೦ ರೂಪಾಯಿಗಳವರೆಗೆ ಇತ್ತು. ವ್ಯವಹಾರಗಳ ಸರಾಸರಿ ವ್ಯಾಪ್ತಿಯು ಒಂದು ರೂಪಾಯಿ ಮೀರದೆ ಇದ್ದ ಮತ್ತು ಒಂದು ಆಣೆ ಅಥವಾ ಅದಕ್ಕಿಂತ ಕಡಿಮೆ ಇರುವ ಒಂದು ದೇಶದಲ್ಲಿ ಕಾಗದದ ಹಣವು ಜನರ ವ್ಯವಹಾರಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಎದ್ದು ಕಾಣುವುದನ್ನು ನಿರೀಕ್ಷಿಸುವುದು ಅಸಾಧ್ಯ. ೧೮೭೧ರಲ್ಲಿ ೫[೨] ರೂಪಾಯಿ ನೋಟುಗಳ ತಯಾರಿಕೆಗೆ ಪ್ರಥಮವಾಗಿ ಮಂಜೂರಾತಿ ದೊರಕಿತು. ಇವುಗಳೂ ಸಹ ಜನರ ಆರ್ಥಿಕ ಜೀವನದಲ್ಲಿ ಭೇದಿಸಿಕೊಂಡು ಹೋಗುವಷ್ಟು ಚಿಕ್ಕವಾಗಿರಲಿಲ್ಲ. ಕಾಗದದ ಹಣದ ಹೆಚ್ಚಳಕ್ಕೆ ನೋಟುಗಳನ್ನು ನಗದೀಕರಿಸುವ ತೊಂದರೆಯು ಮತ್ತೊಂದು ಆತಂಕವಾಗಿತ್ತು. ಕಾಗದದ ನಾಣ್ಯಗಳನ್ನು ಒಂದು ವಲಯದಲ್ಲಿ ಕಾನೂನುಬದ್ಧ ಹಣವನ್ನಾಗಿ ಮಾಡಲಾಗಿತ್ತು. ಆದರೆ ಅವುಗಳನ್ನು ತಯಾರಿಸುವ ಕಚೇರಿಯಲ್ಲಿ ಮಾತ್ರ ನಗದೀಕರಿಸಲಾಗುತ್ತಿತ್ತು. ಇದು ಭಾರತದಲ್ಲಿ ಕಾಗದದ ಹಣದ ಅನುಚಿತ ಘಟನೆಗಳಲ್ಲಿ ಒಂದಾಗಿತ್ತು. ಭಾರತದಲ್ಲಿ ಕಾಗದದ ನಾಣ್ಯದ ಅಂಥ ವಿಲಕ್ಷಣ ಸಂಘಟನೆಗೆ ದೇಶದಲ್ಲಿ ಬಳಕೆಯಲ್ಲಿದ್ದ ಆಂತರಿಕ ವಿನಿಮಯ[೩] ಬಹಳಷ್ಟು ಕಾರಣೀಭೂತವಾಗಿತ್ತು. ಅದು ಸರ್ಕಾರಕ್ಕೆ

೧. ಭಾರತದಲ್ಲಿ ಕಾಗದದ ಹಣದ ಸಂಘಟನೆಯ ಸ್ಪಷ್ಟ ಹಾಗೂ ಸಂಕ್ಷಿಪ್ತ ರೂಪಚಿತ್ರಣಕ್ಕೆ ಅಮೆರಿಕೆಯ ಟಂಕಸಾಲೆ ನಿರ್ದೇಶಕರ ವರದಿಯಲ್ಲಿ ಭಾರತ ಸರ್ಕಾರದ ಟಿಪ್ಪಣಿಯನ್ನು ನೋಡಿರಿ. ವಾಷಿಂಗ್ಟನ್, ೧೮೯೪, ಪುಟಗಳು ೨೩೧–೩೩

೨. ಕಾಯಿದೆ IIIರ ಕಲಮು ೩

೩. ಪ್ರೆಸಿಡೆನ್ಸಿ ಬ್ಯಾಂಕುಗಳು ನೋಟುಗಳ ತಯಾರಿಕೆಯನ್ನು ನಿಲ್ಲಿಸಿದ್ದರೂ ೧೮೬೧ರ ಕಾನೂನು XXIV ಇದರ ಆಧಾರದ ಮೇಲೆ ಮಾಡಿಕೊಂಡ ಒಪ್ಪಂದದ ಪ್ರಕಾರ ಬ್ಯಾಂಕುಗಳನ್ನು "ಬಾಕಿ ಉಳಿದ ಮತ್ತು ಬ್ಯಾಂಕಿನ ಏಜೆನ್ಸಿಯ ಮುಖಾಂತರ ಚಲಾವಣೆಯಲ್ಲಿದ್ದ ಸರ್ಕಾರಿ ನಾಣ್ಯಗಳ ದೈನಿಕ ಸರಾಸರಿ ಮೊತ್ತದ ಮೇಲೆ" ವರ್ಷಕ್ಕೆ ಶೇಕಡಾ ೩/೪ ಪರಿಶ್ರಮ ಧನದಲ್ಲಿ " ಮೇಲ್ವಿಚಾರಣೆ ಮಾಡಲು, ನಾಣ್ಯ ತಯಾರಿಕೆಯನ್ನು ನಿರ್ವಹಿಸಲು ಮತ್ತು ಅದರ ಏಜೆಂಟರಾಗಲು, ಭಾರತ ಸರ್ಕಾರದ ಭರವಸೆ ಪತ್ರಗಳ ಪಾವತಿ ಮತ್ತು ವಿನಿಮಯ ಮಾಡಲು ಮತ್ತು ನಾಣ್ಯ ತಯಾರಿಕೆ ಏಜೆನ್ಸಿಯ ವ್ಯವಹಾರವನ್ನು ನಡೆಸಿಕೊಂಡು ಹೋಗಲು ಸರ್ಕಾರವು ಬಳಸಿಕೊಳ್ಳುತ್ತಿತ್ತು. ಭಾರತ ಸರ್ಕಾರ ಮತ್ತು ಸೆಕ್ರೆಟರಿ ಆಫ್ ಸ್ಟೇಟ್‌ರವರ ನಡುವೆ ಸಂಘರ್ಷ ಉಂಟಾಯಿತು. ಬ್ಯಾಂಕುಗಳನ್ನು ಉಪಯೋಗಿಸಿದರೆ ಅದು ನೋಟುಗಳ ವಿಸ್ತರಣೆಗೆ ಮತ್ತು ಲೋಕಪ್ರಿಯತೆಗೆ ಸಹಾಯಕವಾಗುವುದೆಂದು ನಂಬಿ ಸರ್ಕಾರವು ಈ ಯೋಜನೆಯ ಪರವಾಗಿತ್ತು. ಆದರೆ ನಾಣ್ಯ ತಯಾರಿಕೆಯ ವ್ಯವಹಾರ ಮತ್ತು ಬ್ಯಾಂಕಿಂಗ್ ವ್ಯವಹಾರಗಳ ನಡುವಿನ ಸಂಪೂರ್ಣ ಪ್ರತ್ಯೇಕೀಕರಣ ತತ್ವವನ್ನು ಅದು ರಾಜೀ ವ್ಯವಸ್ಥೆಗೆ ದಾರಿ ಮಾಡುವುದೆಂದು ತಿಳಿದು ಸೆಕ್ರೆಟರಿ ಈ ವ್ಯವಸ್ಥೆಯನ್ನು ಒಪ್ಪಲಿಲ್ಲ. ಆದಾಗ್ಯೂ ಆಂತರಿಕ ವಿನಿಮಯವು ಬಳಕೆಯಲ್ಲಿ ಇದ್ದುದರಿಂದ ವಿವಿಧ ಕೇಂದ್ರಗಳಿಗೆ ಹಣ ರವಾನಿಸುವುದರ ಮೇಲಿನ ಲಾಭವು ಬಹಳ ದೊಡ್ಡದಿತ್ತು. ಬ್ಯಾಂಕುಗಳಿಗೆ ನೀಡಲಾಗುತ್ತಿದ್ದ ಕಮಿಷನ್ ಅವರವರ ಶಾಖೆಗಳಲ್ಲಿ ನೋಟುಗಳ ನಗದೀಕರಣಕ್ಕೆ ಸೌಲಭ್ಯಗಳನ್ನು ಒದಗಿಸಿ ನೋಟುಗಳ ಚಲಾವಣೆಯನ್ನು ವೃದ್ಧಿಗೊಳಿಸುವಂತೆ ಅವರನ್ನು ಪ್ರೇರೇಪಿಸಲು ಸಾಕಾಗದಾಯಿತು ಎಂಬ ವಾಸ್ತವಿಕತೆಯನ್ನು ಇವರೀರ್ವರೂ ಮನದಟ್ಟು ಮಾಡಿಕೊಳ್ಳಲಿಲ್ಲ. ಆಂತರಿಕ ವಿನಿಮಯವು ಎಷ್ಟೊಂದು ಹೆಚ್ಚು ಇತ್ತು ಮತ್ತು ನೋಟುಗಳನ್ನು ಲೋಕಪ್ರಿಯಗೊಳಿಸಲು ಬ್ಯಾಂಕುಗಳು ಎಷ್ಟೊಂದು ವಿಮುಖವಿದ್ದವೆಂದರೆ ಕೊನೆಗೆ ಸರ್ಕಾರವು ಜನವರಿ ೨, ೧೮೬೬ ರಿಂದ ಅವುಗಳನ್ನು ಕಾಗದದ ನಾಣ್ಯದ ಏಜೆನ್ಸಿಯಿಂದ ಮುಕ್ತಗೊಳಿಸಿತು. ನೋಡಿ : ಹೌಸ್ ಆಫ್ ಕಾಮನ್ಸ್ ರಿಟರ್ನ್, ಈಸ್ಟ್ ಇಂಡಿಯನ್ (ಪೇಪರ್ ಮನಿ) ೧೮೬೭ರ ೨೧೫

ಗಂಭೀರ ಸಮಸ್ಯೆಯನ್ನು ಉಂಟುಮಾಡಿತು. ನೋಟುಗಳು ಸಾರ್ವತ್ರಿಕವಾಗಿ ನಗದೀಕರಣವಾಗುವಂತೆ ಮಾಡಿದರೆ ವ್ಯವಹಾರಸ್ಥರು ನೋಟುಗಳನ್ನು ನಾಣ್ಯವಾಗಿ ಉಪಯೋಗಿಸದೆ, ಆಂತರಿಕ ವಿನಿಮಯವನ್ನು ತಪ್ಪಿಸಲು ವಿವಿಧ ಕೇಂದ್ರಗಳಿಗೆ ಹಣವನ್ನು ರವಾನಿಸಲು ಅವುಗಳನ್ನು ಉಪಯೋಗಿಸುವರು, ಇದರಿಂದಾಗಿ ನಗದು ಪಾವತಿಗಳನ್ನು ಸರ್ಕಾರವು ನಿಲ್ಲಿಸಬೇಕಾಗುವುದನ್ನು ತಡೆಯಲು ಹಣವನ್ನು ವಿವಿಧ ಕೇಂದ್ರಗಳ ಮಧ್ಯೆ ವರ್ಗಾಯಿಸುವುದು ಅನಿವಾರ್ಯವಾಗುತ್ತದೆ ಎಂದು ಭಯಪಡಲಾಗಿತ್ತು. ಶೀಘ್ರ ಸಾಗಾಣಿಕೆ ಸೌಕರ್ಯಗಳು ಅತಿ ಕಡಿಮೆ ಇದ್ದುದರಿಂದ ಅಂಥ ದೊಡ್ಡ ಪ್ರಮಾಣದ ಹಣವನ್ನು ಮತ್ತು ದೂರದೂರವಿರುವ ಕೇಂದ್ರಗಳಿಗೆ ರವಾನಿಸುವುದು ಸ್ಪಷ್ಟವಾಗಿ ಅಸಾಧ್ಯವಿತ್ತು.[೧] ಆದ್ದರಿಂದ ಸರ್ಕಾರವು ತಾನು ತಯಾರಿಸಿದ ನೋಟುಗಳ ನಗದೀಕರಣಕ್ಕಿದ್ದ ಸೌಕರ್ಯಗಳನ್ನು ಕಡಿಮೆ ಮಾಡಲು ನಿರ್ಧರಿಸಿತು. ಕಾಗದದ ನಾಣ್ಯಗಳ ಉದ್ದೇಶಗಳಿಗಾಗಿ ಸರ್ಕಾರವು ದೇಶವನ್ನು ಅನೇಕ ನಾಣ್ಯ ತಯಾರಿಕೆಗಳ ವಲಯಗಳಲ್ಲಿ ವಿಭಜಿಸಿತು. ಅಲ್ಲದೆ ಪ್ರತಿಯೊಂದು ವಲಯವನ್ನು ಉಪವಲಯಗಳಾಗಿ ವಿಭಜಿಸಲಾಯಿತು[೨] ಮತ್ತು ಹೊರಡಿಸಲಾದ ನೋಟುಗಳ ಮೇಲೆ ಅವುಗಳು ತಯಾರಾದ ವಲಯ ಮತ್ತು ಉಪವಲಯಗಳ ಹೆಸರುಗಳು ಮುದ್ರಿತವಾಗಿರುತ್ತಿದ್ದವು. ಒಂದು ಪ್ರದೇಶದಲ್ಲಿ ಅಥವಾ ನಾಣ್ಯವಲಯದಲ್ಲಿ ಹೊರಡಿಸಲಾದ ನೋಟುಗಳು ಬೇರೆ ನಾಣ್ಯವಲಯದ ಪ್ರದೇಶದಲ್ಲಿ ಕಾನೂನುಬದ್ಧ ಹಣವಾಗಿದ್ದಿರಲಿಲ್ಲ. ಹಾಗೆಯೇ ತಮ್ಮ ವಲಯದ ಹೊರಗೆ ಅವುಗಳು ನಗದಾಗುತ್ತಿರಲಿಲ್ಲ. ಅಷ್ಟೇ ಅಲ್ಲ, ಒಂದು ಮುಖ್ಯ ವಲಯದ ಅಧೀನದಲ್ಲಿದ್ದ ಉಪವಲಯದಲ್ಲಿ ತಯಾರಾದ ನೋಟುಗಳು ಪರಸ್ಪರ ಪ್ರದೇಶಗಳಲ್ಲಿ ಕಾನೂನುಬದ್ಧ ಹಣವಾಗಿದ್ದವು. ಆದರೆ ನೋಟು ತಯಾರಿಸುವ ತಮ್ಮ ಕಚೇರಿ ಅಥವಾ ತಮ್ಮ ಪ್ರಮುಖ ವಲಯದ ನೋಟು ತಯಾರಿಸುವ ಕಚೇರಿಗಳ ಹೊರತು ಹೊರಗಡೆ ಎಲ್ಲಿಯೂ ಅವು ನಗದಾಗುತ್ತಿರಲಿಲ್ಲ. ಉಪವಲಯಗಳ ನೋಟುಗಳು ಎರಡು ಸ್ಥಳಗಳಲ್ಲಿ ನಗದೀಕರಿಸಲ್ಪಡುತ್ತಿದ್ದವು. ಆದರೆ ಪ್ರಮುಖ ವಲಯದ ನಾಣ್ಯ ತಯಾರಿಸುವ ಕಚೇರಿಯಲ್ಲಿ ತಯಾರಾದ ನೋಟುಗಳು ಪ್ರಮುಖ ವಲಯವು ವಿಸ್ತರಿಸಿದ ಪೂರ್ಣ ಪ್ರದೇಶದಲ್ಲಿ ಕಾನೂನುಬದ್ಧ ಹಣವಾಗಿದ್ದರೂ ಅವುಗಳು ನಿಗದಿಪಡಿಸಿದ ಸ್ಥಳಗಳಲ್ಲಿ ಮಾತ್ರ ನಗದೀಕೃತವಾಗುತ್ತಿದ್ದವು. ಅವುಗಳ ನಗದೀಕರಣ ತನ್ನ ಯಾವುದೇ ಉಪವಲಯದಲ್ಲಿ ಕೂಡ ಆಗುತ್ತಿರಲಿಲ್ಲ.[೩] ಈ ಸಾರ್ವತ್ರಿಕ ನಗದೀಕರಣದ ಕೊರತೆಯು ಸರ್ಕಾರವನ್ನು ಪೇಚಿನಲ್ಲಿ ಬೀಳುವ ಸಾಧ್ಯತೆಯಿಂದ ಉಳಿಸಿತಾದರೂ ನೋಟುಗಳ ಲೋಕಪ್ರಿಯತೆಗೆ ಎಷ್ಟು ದೊಡ್ಡದಾದ ಆತಂಕವಾಯಿತೆಂದರೆ ಅತ್ಯಂತ ಕಡಿಮೆ ಬೆಲೆಯ ನೋಟುಗಳು ವಾಸ್ತವತೆಗಿಂತ ಇನ್ನೂ ಕಡಿಮೆ ಬೆಲೆಯನ್ನು ಹೊಂದಿದ್ದರೂ ಕಾಗದದ ನಾಣ್ಯ ಪದ್ಧತಿಯು ಇನ್ನೂ ಹೆಚ್ಚಿನ ಬೆಳವಣಿಗೆಯನ್ನು ಹೊಂದಬಹುದಿತ್ತೇನೋ ಎಂಬುದು ಸಂದೇಹಾಸ್ಪದ.

---

೧. ಹೋಲಿಸಿರಿ : ಕಾಗದದ ನಾಣ್ಯ ಮಸೂದೆಯ ಬಗ್ಗೆ ಮಾನ್ಯ ಲೇಂಗ್ ಅವರು ಫೆಬ್ರವರಿ ೧೬, ೧೮೬೧ ರಂದು ಮಾಡಿದ ಭಾಷಣ, ಎಸ್.ಎಲ್.ಸಿ.ಪಿ. ಸಂ. VII ಪುಟಗಳು ೭೩–೭೪

೨. ಪ್ರತಿಯೊಂದು ಉಪವಲಯವು ಅನೇಕ ನಾಣ್ಯ ತಯಾರಿಸುವ ಏಜೆನ್ಸಿಗಳನ್ನು ಹೊಂದಿತ್ತು. ಆದರೆ ಈ ವಲಯಗಳು ನಗದೀಕರಣದ ಕೇಂದ್ರಗಳಾಗಿರದೇ ಕೇವಲ ನಾಣ್ಯ ತಯಾರಿಕೆಯ ಕೇಂದ್ರಗಳಾಗಿದ್ದವು.

೩. ವಲಯ ಪದ್ಧತಿಯ ಅನನುಕೂಲತೆಗಳಿಗೆ ಮತ್ತು ನೋಟುಗಳ ನಗದೀಕರಣವನ್ನು ಸುಗಮಗೊಳಿಸಲು ಸರ್ಕಾರವು ಆಲೋಚಿಸಿದ ಕ್ರಮಗಳಿಗೆ ೧೮೬೮–೬೯ ರ ರಿಪೋರ್ಟ್ ಆಫ್ ದಿ ಬಾಂಬೆ ಚೇಂಬರ್ ಆಫ್ ಕಾಮರ್ಸ್ ಸಹಬಂಧ, ಪುಟಗಳು ೩೦೯–೧೬ ನೋಡಿರಿ.

ಆದರೂ ಕಾರ್ಯಕಾರಿ ಸರ್ಕಾರವು ಇಚ್ಚಿಸಿದಷ್ಟು ಭಾರತೀಯ ನಾಣ್ಯವನ್ನು ಮಿತವ್ಯಯ ಮಾಡುವುದು ಭಾರತೀಯ ಶಾಸಕಾಂಗದ ಉದ್ದೇಶವಾಗಿರಲಿಲ್ಲವೆಂಬುದನ್ನು ಗಮನಿಸಬೇಕು.[೧] ಕಾಗದದ ನಾಣ್ಯ ಪದ್ಧತಿಯ ಮೂಲ ಕರ್ತೃಗಳು ಭಾರತವನ್ನು ಅತಿ ಕಡಿಮೆ ವೆಚ್ಚದಲ್ಲಿ[೨] ಅತಿ ಹೆಚ್ಚು ನಾಣ್ಯವನ್ನು ಹೊಂದಿದ ಪೆರು ದೇಶವನ್ನಾಗಿ ಮಾರ್ಪಡಿಸಲು ವಿನಂತಿಸಿದರು ಎಂಬುದು ನಿಜ. ಆದರೆ ಶಾಸಕಾಂಗವು ಅಂಥ ಧೋರಣೆಯನ್ನು ಪೂರ್ತಿ ಮಾಡುವಲ್ಲಿ ಸಹಾಯಮಾಡಲು ನಿಜವಾಗಿ ತನ್ನ ವಿವೇಕಯುತ ಔದಾರ್ಯವನ್ನು ತೋರಲಿಲ್ಲ. ನೋಟುಗಳನ್ನು ನಗದಾಗಿ ಪರಿವರ್ತಿಸಿಕೊಡುವ ಕೇಂದ್ರಗಳು ಅತಿ ಕಡಿಮೆ ಸಂಖ್ಯೆಯಲ್ಲಿದ್ದವು ಮತ್ತು ನಗದೀಕರಣದ ವಲಯದಲ್ಲಿ, ಇವು ಕೆಲವು ಊರುಗಳಿಂದ ಸುಮಾರು ೭೦೦ ಮೈಲಿಗಳಷ್ಟು ದೂರದಲ್ಲಿದವು. ಈ ಕೇಂದ್ರಗಳಲ್ಲಿ ನೋಟುಗಳನ್ನು ನಗದುಗೊಳಿಸುವ ಕಾರ್ಯವು ಬಹಳ ಕಷ್ಟಸಾಧ್ಯವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ, ಬಡವರು ಕಡಿಮೆ ಮೌಲ್ಯದ ನೋಟುಗಳನ್ನು ಸ್ವೀಕರಿಸುವಂತೆಯೂ ಇರದ, ನಿರಾಕರಿಸುವಂತೆಯೂ ಇರದ ಭಯಾನಕ ಪರಿಸ್ಥಿತಿ ಇರುತ್ತಿತ್ತು.[೩] ನೋಟುಗಳನ್ನು ನಗದನ್ನಾಗಿ ಪರಿವರ್ತಿಸುವ ಸವಲತ್ತುಗಳ ಅಭಾವದಿಂದಾದ ತೊಂದರೆಗಳ ಜೊತೆಗೇ, ಈ ನೋಟುಗಳು ಭಾರತೀಯ ರೈತರ ಕೈಗಳಲ್ಲಿ ನಿಲ್ಲದೆ ನೀರಿನಂತೆ ಹರಿದುಹೋಗುವುದು ಎಂಬ ಶಂಕೆಯನ್ನು ಶಾಸಕಾಂಗವು ವ್ಯಕ್ತಪಡಿಸಿತು. ಮಳೆ ಮತ್ತು ಗೆದ್ದಲುಗಳಿಂದ ಸಂರಕ್ಷಿಸಲು ಅಶಕ್ತವಾಗಿ ಆತನು ಒತ್ತಾಯದಿಂದ ಸ್ವೀಕರಿಸಿದ ನೋಟುಗಳನ್ನು ಹೆಚ್ಚಿನ ಸೋಡಿಗೆ ಮಾರಬೇಕಿತ್ತು.[೪] ಲೋಹದ ನಾಣ್ಯವನ್ನು ಓಡಿಸಲು ಉಪಾಯ ಹೂಡಿದ ಕಾಗದದ ನಾಣ್ಯ ಮಸೂದೆಯಲ್ಲಿನ ಕೆಲವು ಪರಿಚ್ಛೇದಗಳಿಗೆ, ಖಂಡಗಳಿಗೆ ಶಾಸನಸಭೆಯು ವಿರುದ್ಧವಾಗಿತ್ತು. ಅದು ಸರ್ಕಾರಕ್ಕೆ ಹೆಚ್ಚು ಬೆಲೆಯ ಕಾನೂನುಬದ್ಧ ನೋಟುಗಳು ಮತ್ತು ಕಾನೂನುಬದ್ಧವಲ್ಲದ ಚಿಕ್ಕಬೆಲೆಯ ನೋಟುಗಳ ನಡುವೆ ಆಯ್ಕೆ ಮಾಡುವ ಸ್ವಾತಂತ್ರ್ಯವನ್ನು ಕೊಟ್ಟಿತು.[೫]

ಸರ್ಕಾರವು ಹೆಚ್ಚು ಬೆಲೆಯ ಕಾನೂನುಬದ್ಧ ನೋಟುಗಳನ್ನು ಆಯ್ಕೆ ಮಾಡಿದ್ದರಿಂದ ವಿಧಾನಮಂಡಲವು ಅವುಗಳು ಹೆಚ್ಚು ಮೌಲ್ಯದವು ಆಗಿರಬೇಕೆಂದು ಒತ್ತಾಯಿಸಿತು. ಮೊದಲು ೨೦ ರೂಪಾಯಿ ನೋಟುಗಳು

---

೧. ಹೋಲಿಸಿರಿ : ಮಾನ್ಯ ಸ್ಕಾನ್ಸ್ ಇವರ ಸಂಪೂರ್ಣ ಭಾಷಣ ದಿನಾಂಕ ಸೆಪ್ಟೆಂಬರ್ ೨೨, ೧೮೬೦, ಎಸ್.ಎಲ್.ಸಿ.ಪಿ. ಸಂ., ಪು. ೧೧೪೩ ಮತ್ತು ಕೆಳಗಿನದು.

೨. ಹೋಲಿಸಿರಿ : ಭಾರತದಲ್ಲಿ ಕಾಗದದ ಹಣದ ಮೂಲಕರ್ತೃ ಆದ ಮಿ. ವಿಲ್ಸನ್ ಇವರು ಮಾರ್ಚ್ ೩, ೧೮೬೦ ರಂದು ಮಾಡಿದ ಭಾಷಣ. ಅದರಲ್ಲಿ ಅವರು ಹೇಳುತ್ತಾರೆ: "ಸ್ವಲ್ಪದರಲ್ಲಿ ಚಲಾವಣೆಯ ಕೇವಲ ಯಾಂತ್ರಿಕ ಉದ್ದೇಶದಿಂದ ಅಷ್ಟೊಂದು ನಾಣ್ಯವನ್ನು ಬೇರ್ಪಡಿಸುವುದು, ಅದರ ಸ್ಥಳದಲ್ಲಿ ಪರಿವರ್ತನೀಯ ನೋಟುಗಳನ್ನು ತರುವುದು ಕಡಿಮೆ ಅಥವಾ ಶೂನ್ಯ ವೆಚ್ಚದಲ್ಲಿ ಬೆಳ್ಳಿಯನ್ನು ಉತ್ಪಾದಿಸುವ ಬೆಳ್ಳಿಯ ಖಣಿಯನ್ನು ಅಕಸ್ಮಾತ್ತಾಗಿ ಮಧ್ಯೆ ಕಂಡುಹಿಡಿದಂತಾಗುವುದು. ಏಕೆಂದರೆ ಎರಡರ ಪರಿಣಾಮ ಒಂದೇ ಇರುತ್ತದೆ. ಸುಪ್ರೀಮ್ ಲೆಜಿಸ್ಲೇಟಿವ್ ಕೌನ್ಸಿಲ್ ಪ್ರೊಸೀಡಿಂಗ್ಸ್ ಸಂ. VI, ಪು. ೨೫೦.

೩. ಹೋಲಿಸಿರಿ : ಮಾನ್ಯ ಮಿ. ಫೋರ್ಬ್ಸ್ ಇವರ ಭಾಷಣಗಳೂ, ದಿನಾಂಕ ಜುಲೈ ೧೩, ೧೮೬೧ ಎಸ್.ಎಲ್.ಸಿ.ಪಿ. ೧೧೫೪

೪. ಹೋಲಿಸಿರಿ : ದಿನಾಂಕ ಜುಲೈ ೧೩, ೧೮೬೧ ರಂದು ಮಾನ್ಯ ಮಿ. ಫೋರ್ಬ್ಸ್ ಮಾಡಿದ ಭಾಷಣ, ಸುಪ್ರೀಮ್ ಲೆಜಿಸ್ಲೇಟವ್ ಕೌನ್ಸಿಲ್ ಪ್ರೊಸೀಡಿಂಗ್ಸ್, ಸಂ. VII ಪು. ೭೬೮

೫. ಹೋಲಿಸಿರಿ : ದಿನಾಂಕ ಸೆಪ್ಟೆಂಬರ್ ೨೨, ೧೮೮೦ ರಂದು ಮಾನ್ಯ ಸ್ಕೋನ್ ಮಾಡಿದ ಭಾಷಣ, ಎಸ್.ಎಲ್.ಸಿ.ಪಿ. ಸಂ. IV, ಪುಟಗಳು ೨೨–೨೫

ಅತ್ಯಂತ ಕಡಿಮೆ ಬೆಲೆಯವು ಎಂದು ಸ್ವೀಕರಿಸಿತಾದರೂ ನಂತರ ಈ ಬೆಲೆಯನ್ನು ೧೦ ರೂಪಾಯಿಗಳಿಗೆ ಇಳಿಸಲಾಯಿತು. ಇದು ೧೮೬೧ ರಲ್ಲಿ ವ್ಯಾವಹಾರಿಕವಾಗಿ ಅತ್ಯಂತ ಕಡಿಮೆ ಬೆಲೆಯಾಗಿತ್ತು. ೧೦ ವರ್ಷಗಳ ನಂತರ, ಅದೂ ಅಲ್ಲದೆ ಆ ನೋಟುಗಳ ನಗದೀಕರಣದ ಹೆಚ್ಚಿನ ಸೌಕರ್ಯವನ್ನು ಕೊಡುವುದಾಗಿ ವಚನ ನೀಡಿದ ಮೇಲೆ, ವಿಧಾನಮಂಡಲವು ಅವುಗಳ ಬೆಲೆಯನ್ನು ೧೦ ರೂಪಾಯಿಗಳಿಗೆ ಇಳಿಸಲು ಒಪ್ಪಿತು.[೧] ಒಟ್ಟಾರೆ ಭಾರತೀಯ ನಾಣ್ಯವನ್ನು ಮಿತವ್ಯಯ ಮಾಡುವುದಕ್ಕಿಂತ ಹೆಚ್ಚಾಗಿ ಸುರಕ್ಷಿತ ಮಾಡುವುದೇ ಭಾರತೀಯ ಶಾಸನಸಭೆಯ ಇಚ್ಛೆಯಾಗಿತ್ತು. ವಸ್ತುಸ್ಥಿತಿಯೂ ಹಾಗೇ ಇತ್ತು.

ಹಾಗೆ ರಚಿತವಾದ ನಾಣ್ಯಪದ್ಧತಿಯು ಹೇಗೆ ಕೆಲಸ ಮಾಡಿತು? ಮೌಲ್ಯದ ಸ್ಥಿರತೆಯು ಒಂದು ಒಳ್ಳೆಯ ನಾಣ್ಯಪದ್ಧತಿಯ ಪ್ರಮುಖ ಅಗತ್ಯ ಗುಣವಾಗಿದೆ. ಆದರೆ ಈ ದೃಷ್ಟಿಕೋನದಿಂದ ನಾವು ಭಾರತೀಯ ನಾಣ್ಯವನ್ನು ವಿವೇಚಿಸಿದರೆ ಅದರ ಮೌಲ್ಯದಲ್ಲಿ ಬಹಳ ವ್ಯತ್ಯಾಸಗಳು ಇದ್ದುದರಿಂದ ಆ ಪದ್ಧತಿಯು ಸಂಪೂರ್ಣವಾಗಿ ವಿಫಲವಾಗಿತ್ತೆಂಬ ಅಂತಿಮ ನಿರ್ಧಾರಕ್ಕೆ ನಾವು ಬರುತ್ತೇವೆ.

ಆಂತರಿಕ ವಾಣಿಜ್ಯದ ಸಲುವಾಗಿ ನಾಣ್ಯದ ಅನುರೂಪತೆಗೆ ರಿಯಾಯಿತಿ ದರವನ್ನು ಸಾಕ್ಷ್ಯವೆಂದು ತೆಗೆದುಕೊಂಡರೆ ಭಾರತೀಯ ಹಣದ ಮಾರುಕಟ್ಟೆಯಲ್ಲಿ ಆದ ಅನಿರೀಕ್ಷಿತ ತಿರುವುಗಳು ಮತ್ತು ಅಕಸ್ಮಾತ್ತಾಗಿ ಆದ ಬದಲಾವಣೆಗಳು ವಿಶ್ವದ ಇತರ ಯಾವುದೇ ಭಾಗದಲ್ಲಿಯ ಬೇರೆ ಯಾವುದೇ ಹಣದ ಮಾರುಕಟ್ಟೆಯ ಚಾರಿತ್ರಿಕ ದಾಖಲೆಗಳಲ್ಲಿ ಇರದಂತಹವುಗಳಾಗಿದ್ದವು ಎಂದು ಶ್ರೇಷ್ಠ ಹಣಕಾಸು ತಜ್ಞ ಮಿ. ವ್ಯಾನ್‌ಬರ್ಗ್ ಅಭಿಪ್ರಾಯಪಟ್ಟರು[೨]. ಭಾರತವು ಪ್ರಧಾನವಾಗಿ ಋತುಕಾಲಿಕ ಬದಲಾವಣೆಗಳಿಗೆ ಒಳಪಟ್ಟ

---

೧. ಅಂಥ ಹೆಚ್ಚಿನ ಸೌಕರ್ಯಗಳೂ ಮತ್ತು ಅವುಗಳನ್ನು ಈಡೇರಿಸಲು ತೆಗೆದುಕೊಂಡ ಹೆಜ್ಜೆಗಳ ಬಗ್ಗೆ ದಿನಾಂಕ ಜನವರಿ ೧೩, ೧೮೭೧ ರಂದು ಕಾಗದದ ನಾಣ್ಯ ಮಸೂದೆಯ ಮೇಲೆ ಮಿ. ರಿಚರ್ಡ್ ಟೆಂಪಲ್ ಮಾಡಿದ ಸ್ವಾರಸ್ಯಕರ ಭಾಷಣವನ್ನು ಹೋಲಿಸಿರಿ : ಎಸ್.ಎಲ್.ಸಿ.ಪಿ. ಸಂ. X, ಪುಟಗಳು ೨೨–೨೫

೨. ದಿ ಮನಿ ಮಾರ್ಕೆಟ್ ಅಂಡ್ ಪೇಪರ್ ಕರೆನ್ಸಿ ಆಫ್ ಬ್ರಿಟಿಷ್ ಇಂಡಿಯಾ ಬಾಟವಿಯಾ, ೧೮೮೪, ಪು. ೩

ದೇಶವಾಗಿದೆ.[೧] ಬೇಸಿಗೆಯ ಮಧ್ಯಭಾಗವು ಸ್ವಾಭಾವಿಕವಾಗಿ ಕಡಿಮೆಯಾದ ಚಟುವಟಿಕೆಗಳ ಕಾಲ. ಶರದೃತು ಎಲ್ಲ ಸಾಮಾಜಿಕ ಮತ್ತು ಆರ್ಥಿಕ ಚಟುವಟಿಕೆಗಳಲ್ಲಿ ಹೊಸ ಓಜಸ್ಸನ್ನು ತರುತ್ತದೆ. ಋತುಗಳು ಕೇವಲ

---

೧. ದೇಶದ ಎಲ್ಲಾ ಭಾಗಗಳಲ್ಲಿ ಶಿಥಿಲ ಮತ್ತು ಒತ್ತಡದ ಕಾಲಗಳು ಏಕರೂಪವಾಗಿ ಹಂಚಲ್ಪಟ್ಟಿಲ್ಲವೆಂಬುದನ್ನು ನಾವು ನೋಡಬೇಕು. ಹಂಚಿಕೆಯು ಕಚ್ಚಾರೂಪದಲ್ಲಿ ಕೆಳಗಿನಂತಿದೆ :

| ತಿಂಗಳುಗಳು | ಪೂರ್ವ ಭಾರತ | | ಪಶ್ಚಿಮ ಭಾರತ, ಮುಂಬೈ ಮತ್ತು ಕರಾಚಿ | ಉತ್ತರ ಭಾರತ | | ದಕ್ಷಿಣ ಭಾರತ ಮದರಾಸು |
|---|---|---|---|---|---|---|
| | ರಂಗೂನ್ | ಕಲ್ಕತ್ತಾ | | ಕಾನಪುರ್ | ಲಾಹೋರ್ | |
| ಒತ್ತಡ ಕಾಲ<br>ಮಂದ ಕಾಲ | ೩ ತಿಂಗಳು<br>೯ ತಿಂಗಳು | ೪ ತಿಂಗಳು<br>೮ ತಿಂಗಳು | ೬ ತಿಂಗಳು<br>೬ ತಿಂಗಳು | ೬ ತಿಂಗಳು<br>೬ ತಿಂಗಳು | ೯ ತಿಂಗಳು<br>೩ ತಿಂಗಳು | ೬ ತಿಂಗಳು<br>೬ ತಿಂಗಳು |
| ಜನವರಿ | ಒತ್ತಡ | ಮಂದ | ಒತ್ತಡ | ಮಂದ | ಒತ್ತಡ | ಮಂದ |
| ಫೆಬ್ರವರಿ | ಒತ್ತಡ | ಮಂದ | ಒತ್ತಡ | ಒತ್ತಡ | ಒತ್ತಡ | ಒತ್ತಡ |
| ಮಾರ್ಚ್ | ಒತ್ತಡ | ಮಂದ | ಒತ್ತಡ | ಒತ್ತಡ | ಒತ್ತಡ | ಒತ್ತಡ |
| ಏಪ್ರಿಲ್ | ಮಂದ | ಮಂದ | ಒತ್ತಡ | ಒತ್ತಡ | ಒತ್ತಡ | ಒತ್ತಡ |
| ಮೇ | ಮಂದ | ಮಂದ | ಮಂದ | ಮಂದ | ಒತ್ತಡ | ಒತ್ತಡ |
| ಜೂನ್ | ಮಂದ | ಮಂದ | ಮಂದ | ಮಂದ | ಒತ್ತಡ | ಒತ್ತಡ |
| ಜುಲೈ | ಮಂದ | ಮಂದ | ಮಂದ | ಮಂದ | ಮಂದ | ಒತ್ತಡ |
| ಆಗಸ್ಟ್ | ಮಂದ | ಒತ್ತಡ | ಮಂದ | ಮಂದ | ಮಂದ | ಮಂದ |
| ಸೆಪ್ಟೆಂಬರ್ | ಮಂದ | ಒತ್ತಡ | ಮಂದ | ಒತ್ತಡ | ಮಂದ | ಮಂದ |
| ಅಕ್ಟೋಬರ್ | ಮಂದ | ಒತ್ತಡ | ಮಂದ | ಒತ್ತಡ | ಒತ್ತಡ | ಮಂದ |
| ನವೆಂಬರ್ | ಮಂದ | ಒತ್ತಡ | ಒತ್ತಡ | ಒತ್ತಡ | ಒತ್ತಡ | ಮಂದ |
| ಡಿಸೆಂಬರ್ | ಮಂದ | ಮಂದ | ಒತ್ತಡ | ಮಂದ | ಒತ್ತಡ | ಮಂದ |
| ಒತ್ತಡ | ಜನವರಿ ಯಿಂದ ಮಾರ್ಚ್ ವರೆಗೆ | ಆಗಸ್ಟ್ ನಿಂದ ನವೆಂಬರ್ ವರೆಗೆ | ನವೆಂಬರ್ ನಿಂದ ಏಪ್ರಿಲ್ ವರೆಗೆ | ಫೆಬ್ರವರಿ ಯಿಂದ ಏಪ್ರಿಲ್ ವರೆಗೆ | ಏಪ್ರಿಲ್ ನಿಂದ ಜೂನ್ ವರೆಗೆ | ಫೆಬ್ರವರಿ ಯಿಂದ ಜುಲೈ ವರೆಗೆ |
| ಮಂದ | ಏಪ್ರಿಲ್ ನಿಂದ ಡಿಸೆಂಬರ್ ವರೆಗೆ | ಡಿಸೆಂಬರ್ ನಿಂದ ಜುಲೈ ವರೆಗೆ | ಮೇನಿಂದ ಅಕ್ಟೋಬರ್ ವರೆಗೆ | ಮೇನಿಂದ ಆಗಸ್ಟ್ ವರೆಗೆ | ಜುಲೈನಿಂದ ಸೆಪ್ಟೆಂಬರ್ ವರೆಗೆ | ಏಪ್ರಿಲ್ ನಿಂದ ಡಿಸೆಂಬರ್ |
| ಒತ್ತಡ | – | – | | ಸೆಪ್ಟೆಂಬರ್ ನಿಂದ ನವೆಂಬರ್ ವರೆಗೆ | ಅಕ್ಟೋಬರ್ ನಿಂದ ಮಾರ್ಚ್ ವರೆಗೆ | |
| ಡಿಸೆಂಬರ್ | – | | | ಡಿಸೆಂಬರ್ ನಿಂದ ಜನವರಿವರೆಗೆ | | |

ಉತ್ಪಾದನೆಯ ಮೇಲೆ ಪರಿಣಾಮ ಬೀರುವುದಿಲ್ಲ. ಬಳಕೆಯ ವಿಷಯದಲ್ಲಿ ಭಾರತೀಯ ಸಾಮಾಜಿಕ ಜೀವನವು ಋತುಗಳ ಬದಲಾವಣೆಗಳಿಗೆ ಅಧೀನವಾಗಿರುತ್ತದೆ. ವಿವಾಹ ಕಾಲಗಳು, ರಜಾ ದಿನ ಕಾಲಗಳು ಮತ್ತು ಪವಿತ್ರ ಕಾಲಗಳು ಇರುತ್ತವೆ. ವಿತರಣೆಯು ಕೂಡ ಭಾರತದಲ್ಲಿ ಬಹಳಷ್ಟು ಋತುಮಾನ ಲಕ್ಷಣವನ್ನು ಹೊಂದಿರುತ್ತದೆ. ಪಾಶ್ಚಾತ್ಯ ಆರ್ಥಿಕ ಸಂಘಟನೆಯ ಜೊತೆಗೆ ಇರುವ ಸಂಪರ್ಕದ ಪರಿಣಾಮವಾಗಿ ನಿಗದಿತ ಮಧ್ಯಂತರದಲ್ಲಿ ಗೇಣಿ, ಸಂಬಳ ಮತ್ತು ಲಾಭಾಂಶವನ್ನು ಕೊಡುವ ಪದ್ಧತಿ ಮತ್ತು ಲೆಕ್ಕಪತ್ರಗಳನ್ನು ಇತ್ಯರ್ಥ ಮಾಡುವುದು ಬಲಗೊಳ್ಳುತ್ತಿರುವುವು. ಇವೆಲ್ಲವುಗಳು ವರ್ಷದ ಕೆಲವು ಅವಧಿಗಳಲ್ಲಿ ಏರುತ್ತಾ ಮತ್ತು ಇತರ ಅವಧಿಗಳಲ್ಲಿ ಬೀಳುತ್ತ ಹಣಕ್ಕೆ ಸಾಮಾಜಿಕ ಬೇಡಿಕೆಯಲ್ಲಿ ಒಂದು ಪ್ರಕಾರದ ಲಯವನ್ನು ಹುಟ್ಟಿಸುತ್ತವೆ. ಒತ್ತಡದ ಕಾಲದಲ್ಲಿ ಸೋಡಿಯ ದರಗಳು ವ್ಯವಹಾರಗಳನ್ನು ಉತ್ತೇಜನಗೊಳಿಸುವಷ್ಟು ಕಡಿಮೆ ಇರಬೇಕು ಮತ್ತು ಮಂದ ತಿಂಗಳುಗಳಲ್ಲಿ ಅವು ಮಾರುಕಟ್ಟೆಗಳ ಧೈರ್ಯಗೆಡಿಸುವಿಕೆಯನ್ನು ತಡೆಯುವಷ್ಟು ಕಡಿಮೆ ಇರಬೇಕು. ವಾಸ್ತವಿಕತೆಯು ತದ್ವಿರುದ್ಧವಿದೆ. ಆರ್ಥಿಕ ಮತ್ತು ಸಾಮಾಜಿಕ ಜೀವನದ ಋತುಮಾನ ಲಕ್ಷಣಗಳನ್ನು ಗಣನೆಗೆ ತೆಗೆದುಕೊಂಡು ಒತ್ತಡ ತಿಂಗಳುಗಳಲ್ಲಿ ಏರುವ ಸೋಡಿಯ ದರದಗಳಿಂದ ಉಂಟಾಗುವ ಮತ್ತು ಮಂದ ತಿಂಗಳುಗಳಲ್ಲಿ ಬೀಳುವ ಸೋಡಿಯ ದರಗಳಿಂದ ಉಂಟಾಗುವ ಬದಲಾವಣೆಗಳನ್ನು ನಿವಾರಿಸಲು ಬರುವುದಿಲ್ಲ. ಭಾರತೀಯ ಹಣಕಾಸು ಮಾರುಕಟ್ಟೆಯಲ್ಲಿ ಇಷ್ಟೊಂದು ಏರುಪೇರುಗಳಿಗೆ ಕಾರಣವೆಂದರೆ ಸೋಡಿಯ ದರಗಳು ಋತುಮಾನಗಳಿಗನುಗುಣವಾಗಿ ಬದಲಾಗುವ ವಿಪರೀತ ಪರಿಸ್ಥಿತಿ[೧]

ಅಂಥ ಮಾರುಕಟ್ಟೆಯ ವಿದ್ಯಮಾನದ ವಿವರಣೆಯು ದೇಶದ ಹಣದ ಪೂರೈಕೆಯಲ್ಲಿನ ಅವ್ಯವಸ್ಥೆಯಲ್ಲಿ ಕಂಡುಬರುತ್ತದೆ. ಏಕರೂಪದ ಬೆಲೆಯಲ್ಲಿ ಹಣವು ದೊರಕಬೇಕಾದರೆ ಅದರ ಪೂರೈಕೆಯನ್ನು ಅದಕ್ಕಿರುವ ಬೇಡಿಕೆಯಲ್ಲಿಯ ಬದಲಾವಣೆಗಳ ಪ್ರಕಾರ ವ್ಯವಸ್ಥೆಗೊಳಿಸಬೇಕು. ಹಣದ ಬೇಡಿಕೆಯು ಎಂದೂ ಸ್ಥಿರವಿರುವುದಿಲ್ಲ ಎಂಬುದನ್ನು ಗುರುತಿಸುವುದು ಒಳಿತು. ಜನಸಂಖ್ಯೆಯಲ್ಲಿನ ಬದಲಾವಣೆ, ವ್ಯಾಪಾರ, ಇವುಗಳ ಮೇಲೆ ಅವಲಂಬಿತವಾಗಿ, ಹಣದ ಬೇಡಿಕೆಯಲ್ಲಿ ವರ್ಷದಿಂದ ವರ್ಷಕ್ಕೆ ಆಗುವ ಬದಲಾವಣೆಗಳು, ಋತುಮಾನಕ್ಕನುಗುಣವಾಗಿ ಉಂಟಾಗುವ ಹಣದ ಬೇಡಿಕೆಯಲ್ಲಿನ ಬದಲಾವಣೆಗಿಂತ ಭಿನ್ನವಾದುದು ಎಂಬುದನ್ನು ಅರಿತುಕೊಳ್ಳುವುದು ಅತ್ಯಂತ ಅಗತ್ಯ. ಚೆನ್ನಾಗಿ ವ್ಯವಸ್ಥಿತವಾದ ಯಾವುದೇ ನಾಣ್ಯ ಪದ್ಧತಿಯಲ್ಲಿ ಹಣಕಾಸು ಬೇಡಿಕೆಯಲ್ಲಿಯ ಈ ಎರಡು ಪ್ರಕಾರದ ಬದಲಾವಣೆಗಳ ಭೇದವನ್ನು ತೋರಿಸುವುದು

---

೧. ೩೦ ದಿವಸಗಳು ಮತ್ತು ಹೆಚ್ಚಿನ ದಿನಗಳ ನಂತರದ ಖಾಸಗಿ ನೋಟುಗಳಿಗೆ ಬ್ಯಾಂಕ್ ಆಫ್ ಬೆಂಗಾಲ್ ಕೆಳಕಂಡಂತೆ ಸೋಡಿಯ ದರಗಳನ್ನು ಬದಲಿಸಿತ್ತು:–

೧೮೭೬ರಲ್ಲಿ ೧೬ ಪಟ್ಟು ೧% ಪ್ರತಿಶತದಲ್ಲಿ ಕನಿಷ್ಠವಾಗಿ ಮತ್ತು ೧೩% ಪ್ರತಿಶತದಲ್ಲಿ ಗರಿಷ್ಠವಾಗಿ
೧೮೭೭ರಲ್ಲಿ ೨೧ ಪಟ್ಟು ೭% ಪ್ರತಿಶತದಲ್ಲಿ ಕನಿಷ್ಠವಾಗಿ ಮತ್ತು ೧೪% ಪ್ರತಿಶತದಲ್ಲಿ ಗರಿಷ್ಠವಾಗಿ
೧೮೭೮ರಲ್ಲಿ ೧೦ ಪಟ್ಟು ೫% ಪ್ರತಿಶತದಲ್ಲಿ ಕನಿಷ್ಠವಾಗಿ ಮತ್ತು ೧೧% ಪ್ರತಿಶತದಲ್ಲಿ ಗರಿಷ್ಠವಾಗಿ
೧೮೭೯ರಲ್ಲಿ ೧೫ ಪಟ್ಟು ೬% ಪ್ರತಿಶತದಲ್ಲಿ ಕನಿಷ್ಠವಾಗಿ ಮತ್ತು ೧೧% ಪ್ರತಿಶತದಲ್ಲಿ ಗರಿಷ್ಠವಾಗಿ
೧೮೮೦ರಲ್ಲಿ ೮ ಪಟ್ಟು ೫% ಪ್ರತಿಶತದಲ್ಲಿ ಕನಿಷ್ಠವಾಗಿ ಮತ್ತು ೯% ಪ್ರತಿಶತದಲ್ಲಿ ಗರಿಷ್ಠವಾಗಿ
೧೮೮೧ರಲ್ಲಿ ೯ ಪಟ್ಟು ೫% ಪ್ರತಿಶತದಲ್ಲಿ ಕನಿಷ್ಠವಾಗಿ ಮತ್ತು ೧೦% ಪ್ರತಿಶತದಲ್ಲಿ ಗರಿಷ್ಠವಾಗಿ
೧೮೮೨ರಲ್ಲಿ ೯ ಪಟ್ಟು ೬% ಪ್ರತಿಶತದಲ್ಲಿ ಕನಿಷ್ಠವಾಗಿ ಮತ್ತು ೧೨% ಪ್ರತಿಶತದಲ್ಲಿ ಗರಿಷ್ಠವಾಗಿ
೧೮೮೩ರಲ್ಲಿ ೧೪ ಪಟ್ಟು ೭% ಪ್ರತಿಶತದಲ್ಲಿ ಕನಿಷ್ಠವಾಗಿ ಮತ್ತು ೧೦% ಪ್ರತಿಶತದಲ್ಲಿ ಗರಿಷ್ಠವಾಗಿ
(ವ್ಯಾನ್ ಡೇನ್ ಬರ್ಗ್– ಹಿಂದೆ ಹೇಳಿದ ಸ್ಥಳದಿಂದಲೇ ಉಲ್ಲೇಖಿಸಿದ್ದು)

ಆವಶ್ಯಕವಾದದ್ದು. ಒಂದು ಬದಲಾವಣೆಗೆ ಸ್ಥಿರತೆ ಮತ್ತು ವಿಕಾಸವಾಗುವ ಶಕ್ತಿ ಬೇಕು ಮತ್ತು ಮತ್ತೊಂದಕ್ಕೆ ಸ್ಥಿತಿಸ್ಥಾಪಕತ್ವ ಬೇಕು. ತುಲನಾತ್ಮಕ ದೃಷ್ಟಿಯಲ್ಲಿ ಹೇಗೆ ಕಾಗದದ ಹಣವನ್ನು ಸ್ಥಿತಿಸ್ಥಾಪಕತ್ವವನ್ನು ಒದಗಿಸಲು ಅಳವಡಿಸಿಕೊಳ್ಳಲಾಗಿದೆಯೊ ಹಾಗೆ ಲೋಹದ ಹಣವನ್ನು ವಿಶೇಷವಾಗಿ ದೃಢತೆ ಮತ್ತು ಸ್ಥಿರತೆಗಳನ್ನು ಒದಗಿಸಲು ಅಳವಡಿಸಿಕೊಳ್ಳಲಾಗಿದೆ ಎಂಬುದು ಹೆಚ್ಚು ಸಂಭವನೀಯ. ವಾಸ್ತವಿಕವಾಗಿ ಅವುಗಳ ಕಾರ್ಯವಿಧಾನಗಳು ಎಷ್ಟು ಪ್ರತ್ಯೇಕವಾಗಿ ಕಾಣುತ್ತವೆಯೆಂದರೆ ಒಂದು ಆದರ್ಶ ಪದ್ಧತಿಯಲ್ಲಿ ಈ ಎರಡೂ ಪ್ರಕಾರದ ಹಣಗಳು ನಾಣ್ಯವನ್ನು ಹೊರೆಯಾಗದಂತೆ ಮತ್ತು ಅಪಾಯಕಾರಿಯಾಗದಂತೆ ತಮ್ಮ ಕಾರ್ಯವಿಧಾನಗಳನ್ನು ಬದಲಾಯಿಸಿಕೊಳ್ಳಲಾರವು ಎಂದು ಒತ್ತಿಹೇಳಲಾಗುತ್ತದೆ.[೧] ಇದರ ರುಜುವಾತನ್ನು, ನೇರವಾಗಿ ನಡೆಯುವ ಸಣ್ಣಪುಟ್ಟ ವಿನಿಮಯದ ವ್ಯವಹಾರಗಳನ್ನು ಹೊರತುಪಡಿಸಿದರೆ, ವಾಣಿಜ್ಯ ಕ್ಷೇತ್ರದಲ್ಲಿ ಮುಂದುವರೆದ ಯಾವುದೇ ದೇಶದಲ್ಲಿನ ಕ್ರಯದ ಮಾಧ್ಯಮವು ಯಾವಾಗಲೂ ಹಣ ಮತ್ತು ಉದ್ದರಿ ಇವೆರಡರ ಮೇಲೂ ಅವಲಂಬಿಸಿರುತ್ತದೆ ಎಂಬುದರಲ್ಲಿ ಕಾಣಬಹುದು.

ಮೇಲ್ನೋಟಕ್ಕೆ ಭಾರತೀಯ ನಾಣ್ಯವು ಹಣ ಮತ್ತು ಉದ್ದರಿಗಳ ಮಿಶ್ರಣವಾಗಿದ್ದು ಅದು ಹಿಗ್ಗುವಿಕೆ ಮತ್ತು ಸ್ಥಿತಿಸ್ಥಾಪಕತ್ವಗಳ ವ್ಯವಸ್ಥೆಗಳನ್ನು ಒಳಗೊಂಡಿತು ಎಂದು ಭಾವಿಸಬಹುದು. ಆದರೆ ನಾವು ಅದನ್ನು ವಿಶ್ಲೇಷಿಸಿದಾಗ ಅದು ಸ್ಥಿತಿಸ್ಥಾಪಕತ್ವಕ್ಕೆ ಯಾವುದೇ ವ್ಯವಸ್ಥೆಯನ್ನು ಮಾಡಿಲ್ಲವೆಂಬುದನ್ನು ಕಾಣುತ್ತೇವೆ. ಅದರ ಉದ್ದರಿಯ ಭಾಗಕ್ಕೆ ಋತುಮಾನಗಳ ಬೇಡಿಕೆಯ ಪ್ರಕಾರ ಹಿಗ್ಗಲು ಮತ್ತು ಸಂಕುಚಿತವಾಗಲು ಅವಕಾಶ ಮಾಡಿಕೊಡುವುದು ದೂರವೇ ಉಳಿಯಿತು. ಕಾಗದದ ಹಣದ ಕಾಯಿದೆಯು ಬೇಡಿಕೆಯ ಪ್ರಮಾಣದಲ್ಲಿನ ಯಾವುದೇ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳದೇ ತನ್ನ ಹಣದ ತಯಾರಿಕೆಯ ಪ್ರಮಾಣದ ಮೇಲೆ ಕಟ್ಟುನಿಟ್ಟಿನ ಮಿತಿಯನ್ನು ಹಾಕಿತು. ಭಾರತೀಯ ಹಣದ ಪೇಟೆಯಲ್ಲಿ ಜಾರಿಯಲ್ಲಿದ್ದ ಬಡ್ಡಿಯ ದರಗಳಲ್ಲಿಯ 'ಏರುಪೇರು'ಗಳಿಗೆ ಒಂದು ಕಾರಣವನ್ನು ಇಲ್ಲಿ ಕಾಣಬಹುದು. ಮಿ. ವ್ಯಾನ್ ಡೇನ್ ಬರ್ಗ್ ಅವರು ಎತ್ತಿ ತೋರಿಸಿದಂತೆ "ಭಾರತೀಯ ಶಾಸಕ ಮಂಡಳಿಯಿಂದ ಸ್ಥಾಪಿಸಲ್ಪಟ್ಟ ಕಾಗದದ ಹಣದ ಪದ್ಧತಿಯು ಉದ್ದಿಮೆಗೆ ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳಿಗಿಂತ ಸುಲಭವಾದ ವಿನಿಮಯ ಮಾಧ್ಯಮವೊಂದು ದೊರಕುವಂತೆ ಮಾಡುವ ಮಟ್ಟಿಗೆ ತನ್ನ ಉದ್ದೇಶವನ್ನು ಪೂರೈಸುತ್ತದೆ. ಆದರೆ ಸಾರ್ವಜನಿಕರು ತಮ್ಮ ಹುಂಡಿಗಳನ್ನು ಅಥವಾ ಸರಕುಗಳನ್ನು ಚಲಾವಣೆಯಲ್ಲಿಯ ವಿನಿಮಯ ಮಾಧ್ಯಮದಲ್ಲಿ ಬದಲಿಸಲು ನಾಣ್ಯಗಳ ಮೇಲಿನ ಜನರ ವಿಶ್ವಾಸಾರ್ಹತೆ ಮತ್ತು ಜನರ ಬೇಡಿಕೆಗಳ ನಡುವೆ ಯಾವುದೇ ಸಂಬಂಧವಿಲ್ಲ........ ಮತ್ತು ಇದು ಹಣದ ಪೇಟೆಯಲ್ಲಿ ಅನಿರೀಕ್ಷಿತ ಏರುಪೇರುಗಳ ಮತ್ತು ಅಕಸ್ಮಾತ್ ಆಗುವ ಬದಲಾವಣೆಗಳ ಪ್ರಮುಖ ಕಾರಣವಾಗಿತ್ತು. ಈ ಅಪಾಯಕ್ಕೆ ಬ್ರಿಟಿಷ್ ಭಾರತದ ವ್ಯಾಪಾರವು ನಿರಂತರವಾಗಿ ಗುರಿಯಾಗುತ್ತಿತ್ತು"[೨]

ಆದಾಗ್ಯೂ ಅಂಥ ಅಭಿಪ್ರಾಯವು ಹುರುಳಿಲ್ಲದ್ದು ಎಂದು ಆಕ್ಷೇಪಿಸಬಹುದು. ಭಾರತೀಯ ಕಾಗದದ ನಾಣ್ಯ ಕಾಯಿದೆಯು ತನ್ನ ಎಲ್ಲಾ ಮೂಲತತ್ವಗಳಲ್ಲಿ ಇಂಗ್ಲಿಷ್ ಬ್ಯಾಂಕು ಕಾಯಿದೆ ೧೮೪೪ರ

---

೧. ನೋಡಿರಿ : ಆರ್.ಪಿ. ಫಾಲ್ಕನರ್ ಅವರ ಎ ಡಿಸ್ಕಷನ್ ಆಫ್ ದಿ ಇಂಟೆರೋಗೆಟರಿಸ್ ಆಫ್ ದಿ ಮಾನಿಟರಿ ಕಮಿಷನ್ ಆಫ್ ದಿ ಇಂಡಿಯನ್ ಪೊಲೀಸ್ ಕನ್‌ವೆನ್ಷನ್. ಪೊಲಿಟಿಕಲ್ ಇಕಾನಮಿ ಅಂಡ್ ಪಬ್ಲಿಕ್ ಲಾ, ಯೂನಿವರ್ಸಿಟಿ ಆಫ್ ಪೆನ್ಸಿಲ್‌ವೇನಿಯ ಆಫ್ ಪಬ್ಲಿಕೇಷನ್, ೧೮೯೮, ಸಂ. ೧೩, ಪುಟಗಳು ೨೫–೨೬

೨. ಕೃತಿಯಲ್ಲಿ ಉಲ್ಲೇಖಿಸಿದ್ದು, ಪು.೭

ಪ್ರತಿರೂಪವಾಗಿದೆ. ಇಂಗ್ಲಿಷ್ ಬ್ಯಾಂಕು ಕಾಯಿದೆಯಂತೆ ಅದು ಮಾರುಕಟ್ಟೆಯಲ್ಲಿ ವಿಶ್ವಾಸಾರ್ಹವಾದ ನೋಟುಗಳ ನೀಡಿಕೆಗೆ ಒಂದು ನಿರ್ದಿಷ್ಟ ಮಿತಿಯನ್ನು ನಿರ್ಧರಿಸಿತು. ಅದಕ್ಕಾಗಿ ಅದು ನಾಣ್ಯ ತಯಾರಿಕೆಯ ಕೆಲಸವನ್ನು ಬ್ಯಾಂಕಿಂಗ್ ಕೆಲಸದಿಂದ ಬೇರ್ಪಡಿಸಿತು[೧] ಮತ್ತು ಇಂಗ್ಲೆಂಡಿನಲ್ಲಿನ ಬ್ಯಾಂಕುಗಳಿಂದ ಅಲ್ಲಿಯ ಬ್ಯಾಂಕ್ ಚಾರ್ಟರ್ ಕಾಯಿದೆಯ ಅಡಿಯಲ್ಲಿ ಹಣವನ್ನು ತಯಾರಿಸುವ ಕಾರ್ಯವನ್ನು ಕಸಿದುಕೊಂಡ ಕ್ರಮವನ್ನೇ ಅನುಸರಿಸಿ, ಭಾರತದಲ್ಲಿಯ ಬ್ಯಾಂಕುಗಳನ್ನು ಕೇವಲ ಹುಂಡಿವಟ್ಟದ ಬ್ಯಾಂಕುಗಳನ್ನಾಗಿ ಮಾಡಿತು. ಆದಾಗ್ಯೂ ಭಾರತೀಯ ಹಣದ ಪೇಟೆಯ ವಿಷಯದಲ್ಲಿ ಆದಂತೆ ಇಂಗ್ಲಿಷ್ ಹಣ ಮಾರುಕಟ್ಟೆಯು ಅಂಥ "ಏರುಪೇರುಗಳ ಮತ್ತು ಅಕಸ್ಮಾತ್ ಆಗುವ ಬದಲಾವಣೆಗಳ" ಪ್ರಭಾವಕ್ಕೆ ಒಳಗಾಗಿತ್ತು ಎಂದು ಹೇಳಲಿಕ್ಕಾಗದು. ಮತ್ತೊಂದು ಕಡೆಗೆ "ಈಗ ಬ್ಯಾಂಕ್ ಆಫ್ ಇಂಗ್ಲೆಂಡ್ ಮತ್ತು ಬ್ಯಾಂಕರುಗಳಿಗೆ ಮಿತಿಗೊಳಪಡಿಸಿದ ಪದ್ಧತಿಯಲ್ಲಿ ಇದ್ದಿರಬಹುದಾದ ರೀತಿಯಲ್ಲಿಯೇ ತಮ್ಮ ಮುಂಗಡಗಳನ್ನು ಹೆಚ್ಚಿಸುವಲ್ಲಿ ಅಥವಾ ಕಡಿಮೆ ಮಾಡುವಲ್ಲಿ ಸ್ವಾತಂತ್ರ್ಯವಿದೆ ಎನ್ನುವುದು ಜೇವನ್ಸ್‌ರ[೨] ಅಭಿಪ್ರಾಯವಾಗಿತ್ತು. ಏಕೆಂದರೆ ಅವರು ಬೇರೊಂದು ಕಡೆ ಪ್ರತಿಪಾದಿಸಿದಂತೆ ನ್ಯಾಸ ತಯಾರಿಕೆಯ ಮೇಲಿನ ಮಿತಿಯು ಅವಿಚಾರಪೂರಿತವಾಗಿದ್ದರೆ ಮತ್ತು ಜನರಿಗೆ ಹೆಚ್ಚು ಹಣ ಬೇಕಾಗಿದ್ದರೆ "ಅವರು ಯಾವಾಗಬೇಕಾದರೂ ಅದರ ಬದಲಿಗೆ ಲೋಹದ ಹಣವನ್ನು ಉಪಯೋಗಿಸಬಹುದು." ಮಿತಿಯನ್ನು ಹಣದ ಮೇಲೆ ಅಲ್ಲ. ಪ್ರಾತಿನಿಧಿಕ ಭಾಗದ ಮೇಲೆ ವಿಧಿಸಲಾಗಿದೆ.[೩] ಹಾಗಾದರೆ ಭಾರತೀಯ ಕಾಗದದ ನಾಣ್ಯ ಕಾಯಿದೆಯು ತನಗೆ ಮಾದರಿಯಾಗಿದ್ದ ಇಂಗ್ಲಿಷ್ ಪದ್ಧತಿಯು ಮಾಡದ ಕೇಡುಗಳನ್ನು ಉಂಟು ಮಾಡಿದ ಕಾರಣವೇನು? ತಾರ್ಕಿಕವಾಗಿ, ಅಂಥ ಕಾನೂನಿಗೆ ಒಳಪಟ್ಟ ಹಣದ ಮಾರುಕಟ್ಟೆಯಲ್ಲಿ ಅಂಥ ಏರುಪೇರುಗಳು ಇರಕೂಡದು. ಕಾಯಿದೆಯು ನೋಟುಗಳ ತಯಾರಿಕೆಯ ಮೇಲೆ ಮಿತಿಗಳನ್ನು ಹೇರಿದ್ದರಿಂದ ಋತುಮಾನಗಳಿಗೆ ಅನುಗುಣವಾಗಿ ಬದಲಾಗುವ ಹಣದ ಬೇಡಿಕೆಗಳಿಗೆ ಲೋಹದ ಹಣವನ್ನು ಉಪಯೋಗಿಸದೆ ಬೇರೆ ದಾರಿಯೇ ಇಲ್ಲದ ಪರಿಸ್ಥಿತಿ ಇತ್ತು. ನೋಟುಗಳು ಉದ್ದರಿಯ ಏಕಮೇವ ರೂಪವಾಗಿದ್ದರೆ ಇದು ನಿಜವಾಗಬಹುದಿತ್ತು. ವಾಸ್ತವಿಕವಾಗಿ ಪರಿಸ್ಥಿತಿ ಹಾಗೆ ಇರಲಿಲ್ಲ. ಉದ್ದರಿಯ ಉಪಯೋಗವಿರುವ ಸಮಾಜದ ಆರ್ಥಿಕತೆಯ ಮೇಲೆ ಯಾವ ಪರಿಣಾಮವನ್ನೂ ಬೀರದೆ, ಉದ್ದರಿಯ ಬ್ಯಾಂಕು ನೀಡಿದ ಹುಂಡಿ (ಪ್ರಾಮಿಸರಿ ನೋಟು) ಅಥವಾ ಹಣ ನೀಡಲು ಬ್ಯಾಂಕಿನ ಮೇಲೆ ನೀಡಿದ ಆದೇಶವಾಗಬಹುದಿತ್ತು.

---

೧. ಭಾರತೀಯ ಕಾಗದದ ನಾಣ್ಯ ಕಾಯಿದೆಯು ವಿಭಜನೆಯ ತತ್ವವನ್ನು ಇಂಗ್ಲಿಷ್ ಬ್ಯಾಂಕ್ ಚಾರ್ಟರ್ ಕಾಯಿದೆಗಿಂತ ಇನ್ನಷ್ಟು ದೂರ ಒಯ್ಯಿತು. ಅದು ನಾಣ್ಯ ತಯಾರಿಕೆ ಇಲಾಖೆಯನ್ನು ಬ್ಯಾಂಕಿಂಗ್ ಇಲಾಖೆಯ ಆಶ್ರಯದಲ್ಲಿ ನಡೆಸುವುದನ್ನು ತಡೆಗಟ್ಟಿತ್ತಲ್ಲದೇ ಅವೆರಡೂ ಒಂದೇ ಕಟ್ಟಡದಲ್ಲಿರುವುದನ್ನು ಕೂಡ ನಿಷೇಧಿಸಿತು. ಅಂಥ ವಿಭಜನೆಯ ಆದರ್ಶವನ್ನು ಸರ್ ಚಾರ್ಲಸ್ ವುಡ್ ಬ್ಯಾಂಕ್ ಚಾರ್ಟರ್ ಕಾಯಿದೆಯನ್ನು ಕುರಿತು ಚರ್ಚೆಯಲ್ಲಿ ಎತ್ತಿ ಹಿಡಿದರು. ನೋಡಿ : ಹ್ಯಾನಾನ್‌ಸಾರ್ಡ್ ಪಾರ್ಲಿಮೆಂಟರಿ ಡಿಬೇಟ್ಸ್, ಸಂಪುಟ, LXXIV, ಪು.. ೧೩೬೩. ಅಂದು ಅವರಿಗೆ ನಿರಾಶೆಯಾದರೂ, ಅವರು ಭಾರತದ ಸೆಕ್ರೆಟರಿ ಆಫ್ ಸ್ಟೇಟ್‌ರಾದ ಮೇಲೆ ತಮ್ಮ ಆದರ್ಶವನ್ನು ನೆರವೇರಿಸಿಕೊಂಡರು.

೨. ನೋಡಿ : "ಫ್ರೀಕ್ವೆಂಟ್ ಆಟಮ್‌ನಲ್ ಪ್ರೆಶರ್ ಇನ್ ದಿ ಮನಿ ಮಾರ್ಕೆಟ್ ಅಂಡ್ ದಿ ಆ್ಯಕ್ಷನ್ ಆಫ್ ದಿ ಬ್ಯಾಂಕ್ ಆಫ್ ಇಂಗ್ಲೆಂಡ್" ಇದರ ಮೇಲೆ ಅವರ ನಿಬಂಧ. ಇನ್‌ವೆಸ್ಟಿಗೇಷನ್ಸ್ ಇನ್ ಕರೆನ್ಸಿ ಅಂಡ್ ಫೈನಾನ್ಸ್ (ಸಂಪಾದಕರು, ಫಾಕ್ಸವೆಲ್), ೧೮೮೪, ಪು. ೧೭೯ (ಇಂಗ್ಲಿಷಿನ) ಓರೆ ಅಕ್ಷರ ಜೇವನ್ಸರದು. ಹಾಗಿದ್ದರೂ ಮೂಲಪ್ರತಿಯಲ್ಲಿ ದೃಗ್ಗೋಚರ ಅಚ್ಚಿನ ತಪ್ಪು ಇದೆ. ಅದನ್ನು ಉದ್ಧರಣದ ಕೊನೆಗೆ "ಪರಿಮಿತ ಪದ್ಧತಿಯಲ್ಲಿ ತಮಗೆ ಇರಬಹುದಾದ ಹಾಗೆ" ಎಂದು ಓದಿಕೊಳ್ಳಿ.

೩. ಮನಿ ಅಂಡರ್ ಮೆಕ್ಯಾಮಿನಸಮ್ ಆಫ್ ಎಕ್ಸ್‌ಚೇಂಜ್, ಕೆಗನ್ ಪಾಲ್, ಲಂಡನ್, ೧೮೯೦, ಪು. ೨೨೫

ತತ್ಪರಿಣಾಮವಾಗಿ ಬ್ಯಾಂಕುಗಳು ಹುಂಡಿಯನ್ನು ನೀಡುವುದರ ಮೇಲೆ ನಿರ್ಬಂಧವನ್ನು ಹೇರಿದರೆ, ಲೋಹದ ಹಣವನ್ನು ಉಪಯೋಗಿಸುವುದೊಂದೇ ಬ್ಯಾಂಕುಗಳಿಗಿದ್ದ ಮಾರ್ಗ ಎಂಬುದು ಇದರ ಅರ್ಥವಲ್ಲ. ಏಕೆಂದರೆ ತಮಗೆ ಬೇಕಾದಷ್ಟು ಪಾವತಿ ಆದೇಶಗಳನ್ನು ಸ್ವೀಕರಿಸುವುದಕ್ಕೆ ಅವರಿಗೆ ಅಷ್ಟೇ ಸ್ವಾತಂತ್ರ್ಯವಿತ್ತು. ವಾಸ್ತವವಾಗಿ ಕಾಯಿದೆಯ ಯಶಸ್ಸು ಅಥವಾ ಅಪಯಶಸ್ಸು ಬ್ಯಾಂಕುಗಳು ಈ ಎರಡು ಪರ್ಯಾಯಗಳಲ್ಲಿ ಯಾವುದನ್ನು ಸ್ವೀಕರಿಸುತ್ತವೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಯಾರು ಕಾಯಿದೆಯ ನಿರ್ಣಯಕ್ಕೆ ಒಪ್ಪುವರೋ ಮತ್ತು ಲೋಹದ ಹಣವನ್ನು ಆಶ್ರಯಿಸುವರೋ ಅವರು "ಏರುಪೇರುಗಳಿಗೆ ಒಳಗಾಗಬೇಕಾಗುವುದು ಮತ್ತು ಯಾರು ಉದ್ದರಿಯ ಇತರ ಪ್ರಕಾರಗಳನ್ನು ಉಪಯೋಗಿಸಿ ಕಾಯಿದೆಯನ್ನು ಉಪಾಯವಾಗಿ ತಪ್ಪಿಸಿಕೊಳ್ಳುವರೋ ಅವರು ಪಾರಾಗುವರು ಎಂಬುದು ಸ್ಪಷ್ಟವಿದೆ. ಕಾಯಿದೆಯು ಇಂಗ್ಲೆಂಡಿನಲ್ಲಿ ಹೇಗೆ ಸಮರ್ಪಕವಾಗಿ ಕೆಲಸ ಮಾಡಿತು, ಆದರೆ ಭಾರತದಲ್ಲಿ ಏಕೆ ವಿಫಲವಾಯಿತು? ಇದರ ಮುಖ್ಯ ಕಾರಣವೆಂದರೆ ಇಂಗ್ಲಿಷ್ ಬ್ಯಾಂಕುಗಳು ನೋಟು ಪದ್ಧತಿಯ ಸ್ಥಳದಲ್ಲಿ ಉದ್ದರಿಯನ್ನು ಉಪಯೋಗಿಸುವ ಆದೇಶ ಅಥವಾ ಚೆಕ್ ಪದ್ಧತಿಯನ್ನು ಬೆಳೆಸುವಲ್ಲಿ ಯಶಸ್ವಿಯಾಗಿದ್ದರೆ, ಭಾರತೀಯ ಬ್ಯಾಂಕುಗಳು ಈ ನಿಟ್ಟಿನಲ್ಲಿ ದುರ್ದೈವದಿಂದ ಯಶಸ್ವಿಯಾಗಲಿಲ್ಲ. ಹಾಗಿಲ್ಲದಿದ್ದರೂ ಅವುಗಳು ವಿಫಲವಾಗುವುದು ಅನಿವಾರ್ಯವಾಗಿತ್ತು. ಚೆಕ್ ಪದ್ಧತಿಯು ಸಾಕ್ಷರ ಜನಸಂಖ್ಯೆಯನ್ನು ಮತ್ತು ತನ್ನ ವ್ಯವಹಾರವನ್ನು ಜನರ ಮಾತೃಭಾಷೆಯಲ್ಲಿ ನಡೆಸುವ ಬ್ಯಾಂಕಿಂಗ್ ಪದ್ಧತಿಯನ್ನು ಪೂರ್ವಭಾವಿಯಾಗಿ ಬಯಸುತ್ತದೆ. ಭಾರತದಲ್ಲಿ ಇವೆರಡರಲ್ಲಿ ಒಂದೂ ಪರಿಸ್ಥಿತಿ ಇರುವುದಿಲ್ಲ. ಜನರು ಬಹುತೇಕ ನಿರಕ್ಷರರಿದ್ದಾರೆ. ಒಂದು ವೇಳೆ ಅವರು ಸಾಕ್ಷರರಿದ್ದರೂ ಅವರು ಚೆಕ್ ಪದ್ಧತಿಯ ಪ್ರಯೋಜನ ಪಡೆಯುತ್ತಿದ್ದಿಲ್ಲ. ಏಕೆಂದರೆ ಭಾರತೀಯ ಬ್ಯಾಂಕುಗಳು ಇಂಗ್ಲಿಷ್ ಬಿಟ್ಟು ಇತರ ಯಾವುದೇ ಭಾಷೆಯಲ್ಲಿ ತಮ್ಮ ವ್ಯವಹಾರವನ್ನು ನಡೆಸಲು ನಿರಾಕರಿಸುವುವು. ಇದಲ್ಲದೇ ಚೆಕ್ ಪದ್ಧತಿಗೆ ಬ್ಯಾಂಕುಗಳ ವ್ಯಾಪಕವಾದ ಜಾಲಬೇಕಾಗಿದ್ದು ಆ ಪರಿಸ್ಥಿತಿಯು ಭಾರತದಲ್ಲಿ ಇರಲಿಲ್ಲ. ಬ್ಯಾಂಕುಗಳ ಅಭಾವವಿದ್ದರೆ ಚೆಕ್‌ಗಳು ನಿರ್ವಹಿಸಲು ಅತಿ ಕೆಟ್ಟ ಉಪಕರಣವಾಗುತ್ತದೆ. ಚೆಕ್ಕನ್ನು ವೇಳೆಗೆ ಸರಿಯಾಗಿ ಕೊಡದಿದ್ದರೆ ಅದು ಹಳೆಯದು ಮತ್ತು ಬೆಲೆ ಇಲ್ಲದ್ದು ಆಗುವುದು. ಆದ್ದರಿಂದ ಚೆಕ್ ಸಂಪತ್ತಿನ ಸಂಗ್ರಹವಾಗಲು ನೋಟಿಗಿಂತ ಹೆಚ್ಚು ನಿರುಪಯುಕ್ತವಾಗುತ್ತದೆ. ಇಂಥ ಪ್ರಸಂಗಗಳಲ್ಲಿ ನೋಟುಗಳ ಸ್ಥಿತಿಸ್ಥಾಪಕತ್ವದ ಅಭಾವವನ್ನು ಸರಿಪಡಿಸಲು ಚೆಕ್ಕುಗಳು ದೊಡ್ಡ ಪ್ರಮಾಣದಲ್ಲಿ ಬಳಕೆಯಲ್ಲಿ ಬರಲಿಲ್ಲ.

ಆದರೆ ಭಾರತೀಯ ಬ್ಯಾಂಕುಗಳು ಉದ್ದರಿಯನ್ನು ನೋಟುಗಳ ಬದಲು ಬೇರೆ ರೂಪದಲ್ಲಿ ಉಪಯೋಗಿಸುವಲ್ಲಿ ಯಶಸ್ವಿಯಾಗಿದ್ದರೂ ಸಹ ಅವುಗಳು ಇಂಗ್ಲಿಷ್ ಬ್ಯಾಂಕುಗಳಷ್ಟು ಹಣದ ಪೇಟೆಯನ್ನು ಸುಗಮಗೊಳಿಸಲಿಲ್ಲ. ಬೇಡಿಕೆಯು ಬಂದಾಗ ನಗದು ಹಣವನ್ನು ನೀಡುವ ಬ್ಯಾಂಕಿನ ಹೊಣೆಯು ಬ್ಯಾಂಕಿಂಗಿನ ಒಂದು ಕರ್ತವ್ಯವಾಗಿರುತ್ತದೆ. ಅವುಗಳ ಎಲ್ಲ ಠೇವಣಿಗಳೂ ನಗದು ಹಣದಲ್ಲಿ ಸ್ವೀಕೃತವಾದರೆ, ಈ ಹೊಣೆಯಲ್ಲಿ ಯಾವ ತೊಂದರೆಯೂ ಇರುವುದಿಲ್ಲ. ವಾಸ್ತವವಾಗಿ ಅವುಗಳ ಠೇವಣಿಗಳ ಬಹು ಭಾಗವು ಹುಂಡಿಗಳಲ್ಲಿದ್ದು ಇವುಗಳನ್ನು ನಗದು ಹಣದಲ್ಲಿ ಪಾವತಿ ಮಾಡುವುದು ಬ್ಯಾಂಕುಗಳ ವ್ಯವಹಾರವಾಗಿರುತ್ತದೆ. ಆದ್ದರಿಂದ ತನ್ನ ನಗದು ಠೇವಣಿಗಳು ಉದ್ದರಿ ಠೇವಣಿಗಳ ನಡುವಿನ ಪ್ರಮಾಣವನ್ನು ಗಮನಿಸುವುದು ಬ್ಯಾಂಕರ್‌ನ ಪ್ರಥಮ ಕರ್ತವ್ಯಗಳಲ್ಲೊಂದಾಗಿದೆ. ಈ ಪ್ರಮಾಣವು ಉದ್ದರಿ ಠೇವಣಿಗಳಲ್ಲಿಯ ಹೆಚ್ಚಳ ಅಥವಾ ನಗದು ಠೇವಣಿಗಳಲ್ಲಿಯ ಇಳಿಕೆಗಳಿಂದ ಪ್ರತಿಕೂಲ ಪರಿಣಾಮಕ್ಕೆ ಒಳಗಾಗಬಹುದು. ಯಾವುದೇ ಪರಿಸ್ಥಿತಿಯಲ್ಲಿ ಬ್ಯಾಂಕರ್ ಒಟ್ಟು ಸಾಲಗಳ ಮತ್ತು ಒಟ್ಟು ನಗದು ಹಣದ ನಡುವಿನ

ಪ್ರಮಾಣವು ಕಡಿಮೆಯಾದರೆ ಅಷ್ಟರ ಮಟ್ಟಿಗೆ ನಗದು ಪಾವತಿಮಾಡುವ ಸಾಮರ್ಥ್ಯವು ಕಡಿಮೆಯಾಗುತ್ತದೆ. ಬ್ಯಾಂಕರನು ಸಾಲದ ಅನುಚಿತ ಹಿಗ್ಗುವಿಕೆಯ ವಿರುದ್ಧ ತನ್ನನ್ನು ರಕ್ಷಿಸಿಕೊಳ್ಳಬೇಕಾಗುತ್ತದೆ. ಆದರೆ ಚೆಕ್ ಪದ್ಧತಿಯ ಅಭಿವೃದ್ಧಿಯಾದಾಗ್ಯೂ, ಒಂದಿಲ್ಲೊಂದು ಸಮಯದಲ್ಲಿ ಸ್ವಲ್ಪ ನಗದು ಹಣವನ್ನು ಹಿಂತೆಗೆದುಕೊಳ್ಳುವ ಸಾಧ್ಯತೆಯು ಸದಾ ಇರುತ್ತದೆ. ಆದ್ದರಿಂದ ಬ್ಯಾಂಕರನು ತನ್ನ ಕೈಯಲ್ಲಿ ಸ್ವಲ್ಪ ಕನಿಷ್ಠ ನಗದನ್ನು ಕಾಯ್ದಿಟ್ಟ ನಿಧಿಯಾಗಿ ಇಟ್ಟುಕೊಳ್ಳಬೇಕು. ಈ ಕಾಯ್ದಿಟ್ಟ ನಿಧಿಯ ಗಾತ್ರವು ಎಷ್ಟು ಇರಬೇಕೆಂಬುದು ನಗದು ಹಣವನ್ನು ಹಿಂತೆಗೆದುಕೊಳ್ಳುವ ಸಾಧ್ಯತೆಗಳೇನಿವೆ ಎಂಬುದರ ಮೇಲೆ ಅವಲಂಬಿಸಿರುತ್ತದೆ. ಇದರ ಮುಖ್ಯ ಅರ್ಥವೆಂದರೆ ಕಾಯ್ದಿಟ್ಟ ನಗದು ಹಣದ ಗಾತ್ರದಷ್ಟು ಬ್ಯಾಂಕಿನ ಸಾಲ ನೀಡುವ ಶಕ್ತಿಯು ಕಡಿಮೆಯಾಗುತ್ತದೆ. ಬ್ಯಾಂಕಿನ ಕಾಯ್ದಿಟ್ಟ ನಿಧಿಯು ಈಗಾಗಲೇ ಕನಿಷ್ಠವಿದ್ದರೆ, ಅದು ಸಾಲವನ್ನು ಒದಗಿಸುವುದನ್ನು ನಿಲ್ಲಿಸಬೇಕು ಅಥವಾ ತನ್ನ ಬೊಕ್ಕಸದಿಂದ ಹಿಂತೆಗೆದುಕೊಂಡ ನಗದು ಹಣವನ್ನು ಮರಳಿ ಪಡೆದು ತನ್ನ ನಗದು ನೀಡುವ ಸಾಮರ್ಥ್ಯವನ್ನು ಪುನಃ ಪಡೆದುಕೊಳ್ಳಬೇಕು. ಹಿಂತೆಗೆದುಕೊಳ್ಳಲಾದ ಹಣವನ್ನು ವ್ಯವಹಾರದಲ್ಲಿ ಚಾಲ್ತಿಯಲ್ಲಿಟ್ಟು ಅದನ್ನು ಬ್ಯಾಂಕುಗಳು ಉಪಯೋಗಿಸಿಕೊಳ್ಳಬಹುದಾದರೆ ಅವು ತಮ್ಮ ಸ್ಥಾನವನ್ನು ಬಲಪಡಿಸಿಕೊಳ್ಳಬಲ್ಲವು ಮತ್ತು ಅವುಗಳು ಕನಿಷ್ಠ ಕಾಯ್ದಿಟ್ಟ ನಿಧಿಯ ಅಪಾಯದ ಮಟ್ಟದಿಂದ ತಮ್ಮನ್ನು ದೂರವಿಟ್ಟುಕೊಳ್ಳಬಹುದಲ್ಲದೇ ಹಣದ ಪೇಟೆಯ ಅಗತ್ಯಗಳನ್ನು ಪೂರೈಸಲು ಸದಾ ಸಿದ್ಧವಿರಬಹುದು. ಈ ದೃಷ್ಟಿಯಿಂದ ಭಾರತೀಯ ಬ್ಯಾಂಕುಗಳ ಪರಿಸ್ಥಿತಿ ಏನಿತ್ತು? ಚೆಕ್ ಪದ್ಧತಿಯ ಅಭಾವದ ಕಾರಣದಿಂದಾಗಿ ನಗದು ಹಣದ ಹಿಂತೆಗೆದುಕೊಳ್ಳುವಿಕೆಯ ಸಾಧ್ಯತೆಗಳು ಹೆಚ್ಚು ಇರುತ್ತವೆ ಮತ್ತು ತತ್ಪರಿಣಾಮವಾಗಿ ಕಾಯ್ದಿಟ್ಟ ಹಣದ ಮೊತ್ತವು ದೊಡ್ಡದಾಗಿರಬೇಕಾಗುತ್ತಿತ್ತು. ಅವುಗಳ ನಿಧಿಗಳ ದೊಡ್ಡ ಪ್ರಮಾಣವನ್ನು ಕಾಯ್ದಿಡುವ ಹಣದ ಸಲುವಾಗಿ ಇಟ್ಟಿದ್ದರಿಂದ ಸಾಲ ಕೊಡಲು ಅವುಗಳ ಸಂಪನ್ಮೂಲಗಳು ಕಡಿಮೆಯಾಗಿದ್ದವು. ಹಿಂತೆಗೆದುಕೊಂಡ ನಗದು ಅವರಿಗೆ ಬೇಗ ವಾಪಸು ಬರದೆ ಇದ್ದುದರಿಂದ ಸಾಲ ಕೊಡುವ ಅವರ ಸ್ಥಿತಿ ಇನ್ನಷ್ಟು ದುರ್ಬಲವಾಯಿತು. ಇದರ ಪರಿಣಾಮವಾಗಿ ಅನಿವಾರ್ಯವಾಗಿ ಭಾರತೀಯ ಬ್ಯಾಂಕುಗಳು ತಮ್ಮ ನಗದು ಮತ್ತು ಉದ್ದರಿಗಳ ನಡುವೆ ಯೋಗ್ಯ ಸಮತೋಲನವನ್ನು ಕಾಯ್ದುಕೊಳ್ಳಲು ತಾವು ನೀಡುತ್ತಿದ್ದ ಸಾಲಗಳನ್ನು ಇಂಗ್ಲಿಷ್ ಬ್ಯಾಂಕುಗಳಿಗಿಂತ ಬಹಳಷ್ಟು ಕಡಿಮೆ ಮಾಡಿದವು. ಈ ವಿಷಯಕ್ಕೆ ಸಂಬಂಧಿಸಿದಂತೆ ಶಾಖಾ ಬ್ಯಾಂಕಿಂಗ್‌ನ ಅಭಾವವು ಮಹತ್ವದ ಕೊರತೆಯಾಗಿತ್ತು. ಆದರೆ ಬ್ಯಾಂಕುಗಳಿಗೆ ಶಾಖೆಗಳಿದ್ದರೂ ಸಹಿತ ಹಿಂತೆಗೆದುಕೊಂಡ ಹಣವು ವಾಪಸು ಬರುತ್ತಿದ್ದಿಲ್ಲ. ಏಕೆಂದರೆ ಅದನ್ನು ಪ್ರಸಕ್ತ ವ್ಯವಹಾರದಲ್ಲಿ ಇಡಲಾಗಿದ್ದಿಲ್ಲ. ಸರ್ಕಾರಿ ಖಜಾನೆಗಳ ವ್ಯವಹಾರಗಳು ದೇಶದ ಬ್ಯಾಂಕಿಂಗ್ ವ್ಯವಹಾರಗಳಿಂದ ಸ್ವತಂತ್ರವಿದ್ದಿತು. ಅದು ಅವುಗಳಲ್ಲಿ ಬಂಧಿತವಾಗಿತ್ತು. ಸಹಜವಾಗಿ, ಸರ್ಕಾರವು ಸ್ವತಂತ್ರ ಖಜಾನೆಗಳನ್ನು ನಡೆಸಿಕೊಂಡು ಹೋಗುವುದರಲ್ಲಿ ಅಂತರ್ಗತವಾಗಿ ಏನೂ ತಪ್ಪಿಲ್ಲ. ಖಜಾನೆಯ ವ್ಯವಹಾರಗಳು ವ್ಯಾಪಾರ ವರ್ಗಗಳ ವ್ಯವಹಾರಗಳೊಂದಿಗೆ ಪರಿಣಾಮಕಾರಿ ಸಂಬಂಧವನ್ನು ಇಟ್ಟುಕೊಂಡಿರಬೇಕಾದರೆ ನಷ್ಟ ಉಂಟಾಗುವ ಸಂದರ್ಭಗಳು ಬರಲಿಕ್ಕಿಲ್ಲ. ಆದರೆ ಭಾರತೀಯ ಖಜಾನೆಯ ಆರ್ಥಿಕ ವ್ಯವಹಾರಗಳು ಉದ್ದಿಮೆಯ ಅಗತ್ಯಗಳಿಗೆ ವಿರುದ್ಧವಾಗಿ ನಡೆದವು. ಅದು ತನ್ನ ಸಂಗ್ರಹಣೆಗಳನ್ನು ಬಿಡುಗಡೆ ಮಾಡಬೇಕಾದ ಸಂದರ್ಭದಲ್ಲಿ ಅದನ್ನು ನಿರ್ಬಂಧಿಸಿತು ಮತ್ತು ಅವುಗಳನ್ನು ನಿರ್ಬಂಧಿಸಬೇಕಾದ ಸಂದರ್ಭದಲ್ಲಿ ಬಿಡುಗಡೆ ಮಾಡಿತ್ತು.

ಸ್ವತಂತ್ರ ಖಜಾನೆ ಪದ್ಧತಿ ಮತ್ತು ಉದ್ದರಿ ಮಾಧ್ಯಮಗಳು ದೇಶದ ಹಣದ ಪೂರೈಕೆಯ ಮೇಲೆ ಪರಿಣಾಮ ಬೀರುವ ಮುಖ್ಯ ಅಂಶಗಳಾಗಿದ್ದು ಮತ್ತು ಮಾಧ್ಯಮಗಳ ಸ್ಥಿತಿಸ್ಥಾಪಕರಾಹಿತ್ಯ ಮತ್ತು

## ನಕ್ಷೆ-1

## ಭಾರತದಲ್ಲಿ ವಟ್ಟದ ದರ



ಖಜಾನೆ ಪದ್ಧತಿಯ ಕಾರ್ಯವೈಖರಿಗಳು ಭಾರತೀಯ ಹಣದ ಪೇಟೆ ಆತಂಕಕ್ಕೆ ಕಾರಣಗಳಾಗಿದ್ದವು. (ನಕ್ಷೆ ೧ ನೋಡಿ). ವಟ್ಟದ ದರದ ಅಂಥ ಏರಿಳಿತಗಳ ಅನಿಷ್ಟ ಪರಿಣಾಮಗಳನ್ನು ಅತಿಶಯೋಕ್ತಿಯಿಂದ ಹೇಳುವ ಆವಶ್ಯಕತೆ ಇಲ್ಲ.[೧] ವರ್ಷದುದ್ದಕ್ಕೂ ಇಲ್ಲದಿದ್ದರೂ ಕೆಲವು ಕಾಲಗಳಲ್ಲಿ ಸಾಲ ಪಡೆದ ಬಂಡವಾಳದ ಮೇಲೆ ಬಹುತೇಕವಾಗಿ ಪ್ರತಿಯೊಬ್ಬ ವ್ಯವಹಾರಸ್ಥನು ಅವಲಂಬಿಸಿರುವ ಅರ್ಥವ್ಯವಸ್ಥೆಯಲ್ಲಿ ವಟ್ಟದ ದರದಲ್ಲಿ ಅಕಸ್ಮಾತ್ ಏರಿಕೆಯಿಂದ ವ್ಯವಹಾರ ಕಡಿಮೆಯಾಗಿ ನಷ್ಟವಾಗಬಹುದು ಅಥವಾ ವಟ್ಟದ ದರದಲ್ಲಿ ಅಕಸ್ಮಾತ್ ಇಳಿಕೆಯಿಂದ ವ್ಯವಹಾರ ಹೆಚ್ಚಾಗಿ ಲಾಭಾಂಶವು ಹೆಚ್ಚಾಗಬಹುದು. ಅಂಥ ಏರಿಳಿತಗಳು ವ್ಯವಹಾರದ ಅನಿಶ್ಚಿತತೆಗಳನ್ನು, ಉದ್ದಿಮೆಯ ಖರ್ಚನ್ನು ಹಾಗೂ ಬಳಕೆದಾರರ ವೆಚ್ಚವನ್ನು ಹೆಚ್ಚಿಸುವುದು. ಅವು ಬೆಲೆಗಳಲ್ಲಿ ಏರಿಳಿತಗಳನ್ನುಂಟು ಮಾಡುವುವು ಮತ್ತು ಸಟ್ಟಾ ವ್ಯವಹಾರಕ್ಕೆ ಕುಮ್ಮಕ್ಕನ್ನು ನೀಡುವುವು ಮತ್ತು ಅಪಾಯಗಳಿಗೆ ಆಹ್ವಾನವನ್ನು ನೀಡುವುವು. ಇಂಥ ಅನಿಷ್ಟಗಳು ಬೇರೆ ಯಾವುದೇ ದೇಶದಲ್ಲಿ ಇದ್ದಿದ್ದರೆ ಅವುಗಳ ನಿವಾರಣೆಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಲು ಅಧಿಕಾರಿಗಳನ್ನು ಒತ್ತಾಯಿಸಬಹುದಿತ್ತು. ಆದರೆ ವಿಲಕ್ಷಣ ಸಂಗತಿಯೆಂದರೆ ಭಾರತದಲ್ಲಿ ವಾಣಿಜ್ಯ ಸಮುದಾಯದ ಮೇಲೆ ಅವುಗಳು ಒಡ್ಡಿದ ಕಷ್ಟಗಳನ್ನು ಉಪಶಮನ ಮಾಡಲು ಗಂಭೀರ ಪ್ರಯತ್ನಗಳನ್ನು ಮಾಡಲಿಲ್ಲ. ಕಾಗದದ ನಾಣ್ಯ ಸುಧಾರಣೆ ಅಥವಾ ಸ್ವತಂತ್ರ ಖಜಾನೆ ಪದ್ಧತಿಯ ರದ್ದತಿ –ಇವು ಪರಿಸ್ಥಿತಿಯನ್ನು ಸರಳಗೊಳಿಸಬೇಕಿತ್ತು. ಇವೆರಡರಲ್ಲೂ ಸುಧಾರಣೆಯಾಗಿದ್ದಿದ್ದರೆ ಇನ್ನೂ ಹೆಚ್ಚು ಒಳ್ಳೆಯದಾಗುತ್ತಿತ್ತು. ಸಾಮಾನ್ಯ ವರ್ಗವು ಕಾಗದದ ಹಣದ ವ್ಯವಸ್ಥೆಯನ್ನು ಬದಲಾಯಿಸಲು ಬಯಸದೆ[೨], ಸ್ವತಂತ್ರ ಖಜಾನೆ ಪದ್ಧತಿಯನ್ನು ರದ್ದುಮಾಡುವತ್ತ ಒಲವನ್ನು ತೋರಿತು. ತದ್ವಿರುದ್ಧವಾಗಿ ಸರ್ಕಾರವು ಸ್ವತಂತ್ರ ಖಜಾನೆ ಪದ್ಧತಿಯನ್ನು[೩] ತೆಗೆದುಹಾಕಲು ನಿರಾಕರಿಸಿತು.

---

೧. ಮಾರ್ಚ್ ೧೯೧೧ ರ ದಿ ಅಮೇರಿಕನ್ ಇಕನಾಮಿಕ್ ರಿವ್ಯೂ ಇದರಲ್ಲಿ ಇ.ಡಬ್ಲ್ಯೂ. ಕೆಮ್‌ರರ್ ಇವರ "ಸೀಜನಲ್ ವೇರಿಯೇಶನ್ಸ್ ಇನ್ ನ್ಯೂಯಾರ್ಕ್ ಮನಿ ಮಾರ್ಕೆಟ್"ನಲ್ಲಿ ನೀಡಿರುವ ಅಮೇರಿಕೆಯ ಅನುಭವಕ್ಕೆ ಹೋಲಿಸಿರಿ.

೨. ನೋಡಿ : ಸರ್ ರಿಚರ್ಡ್ ಟೆಂಪಲ್ ಇವರ ಇಂಡಿಯಾ ಇನ್ ೧೮೮೦, ಪುಟ ೪೯೯, ಸರ್ ಚಾರ್ಲ್ಸ್ ವುಡ್ ಇವರ ಅಡ್‌ಮಿನಿಸ್ಟ್ರೇಷನ್ ಆಫ್ ಇಂಡಿಯನ್ ಅಫೇರ್ಸ್, ಪು. ೮೯, ಅಲ್ಲದೆ ದಿ ಇಂಡಿಯನ್ ಸ್ಟೇಟ್ಸ್‌ಮನ್, ಜನವರಿ ೧೫, (೧೮೮೪)

೩. ೧೮೬೨ ಮತ್ತು ೧೮೭೬ ರ ನಡುವೆ ಪ್ರಾಂತೀಯ ಬ್ಯಾಂಕುಗಳ ಕೇಂದ್ರ ಮತ್ತು ಶಾಖಾ ಕಚೇರಿಗಳನ್ನು ಹೊಂದಿದ ಕೆಲವು ಕೇಂದ್ರಗಳಲ್ಲಿ ಸ್ವತಂತ್ರ ಖಜಾನೆ ಪದ್ಧತಿಯನ್ನು ತಡೆಹಿಡಿಯಲಾಯಿತು. ಪ್ರಾಂತೀಯ ಬ್ಯಾಂಕುಗಳಿಗೆ ಅವರ ನೋಟು ತಯಾರಿಕೆಯ ಹಕ್ಕಿನ ಹಾನಿಯ ಪರಿಹಾರವಾಗಿ ಸರ್ಕಾರವು ೧೮೬೧ರ ಕಾಯಿದೆ XXIV ರ ಮೇರೆಗೆ ಮಾಡಿಕೊಳ್ಳಲಾದ ಒಡಂಬಡಿಕೆಯ ಅಡಿಯಲ್ಲಿ ಕೆಲವು ರಿಯಾಯಿತಿಗಳನ್ನು ಕೊಟ್ಟಿತು. ಈ ರಿಯಾಯಿತಿಗಳಲ್ಲಿ ಸರ್ಕಾರಿ ಶಿಲ್ಕುಗಳನ್ನು ಬ್ಯಾಂಕುಗಳು ಉಪಯೋಗಿಸುವುದು ಒಂದಾಗಿತ್ತು. ೧೮೬೨ ರ ಪ್ರಥಮ ಒಪ್ಪಂದವು ಸರ್ಕಾರಿ ಶಿಲ್ಕುಗಳಿಗೆ ಸಂಬಂಧಿಸಿದಂತೆ ಕೆಳಗಿನ ವಿಶೇಷ ಹಕ್ಕುಗಳನ್ನು ನೀಡಲು ಅಂಗೀಕರಿಸಿತು : ೧) ಈ ಒಪ್ಪಂದವಾಗದೆ ಇದ್ದ ಪಕ್ಷದಲ್ಲಿ, ಬ್ಯಾಂಕುಗಳು ಅನಿರ್ಬಂಧಿತವಾಗಿ ಸ್ವೀಕರಿಸುತ್ತಿದ್ದ ಶಿಲ್ಕನ್ನು, ಬ್ಯಾಂಕ್ ಆಫ್ ಬೆಂಗಾಲ್ ೭೦ ಲಕ್ಷಗಳ ಮಿತಿಗೆ, ಬ್ಯಾಂಕ್ ಆಫ್ ಬಾಂಬೆ ೪೦ ಲಕ್ಷಗಳ ಮಿತಿಗೆ ಹಾಗೂ ಬ್ಯಾಂಕ್ ಆಫ್ ಮದರಾಸ್ ೧೫ ಲಕ್ಷಗಳ ಮಿತಿಗೆ ಒಳಪಟ್ಟು ಅಗತ್ಯವಿದ್ದಷ್ಟನ್ನು ಉಪಯೋಗಿಸಿಕೊಳ್ಳುವ ಸ್ವಾತಂತ್ರ್ಯ, ೨) "ಹೆಚ್ಚುವರಿ ನಗದು ಶಿಲ್ಕುಗಳಿಗೆ ಸರ್ಕಾರಕ್ಕೆ ಎಲ್ಲ ಸಮಯದಲ್ಲಿ ಹೊಣೆಗಾರರಾಗಿರಬೇಕು" ಎಂಬ ಷರತ್ತಿದ್ದು ಈ ರಕಮಿಗೆ ಮೀರಿದ ಹಣವನ್ನು ಬೇಡಿದಾಗ ನೀಡಲು ಪ್ರತ್ಯೇಕ ಸುಭದ್ರ ಕೋಣೆಯಲ್ಲಿ ಇಡುವ ಅಥವಾ ಸರ್ಕಾರಿ ಪತ್ರಗಳಲ್ಲಿ ಅಥವಾ ಇತರ ಅಧಿಕೃತ ಸಾಲಪತ್ರಗಳಲ್ಲಿ ಹೂಡುವ ಆಯ್ಕೆಯ ಸ್ವಾತಂತ್ರ್ಯ ೩) ಬ್ಯಾಂಕ್ ಆಫ್ ಬೆಂಗಾಲ್, ಬ್ಯಾಂಕ್ ಆಫ್ ಬಾಂಬೆ ಮತ್ತು ಬ್ಯಾಂಕ್ ಆಫ್ ಮದ್ರಾಸ್ ಇವುಗಳ ಶಿಲ್ಕುಗಳು ಕ್ರಮವಾಗಿ ೫೦ ಲಕ್ಷ, ೩೦ ಲಕ್ಷ ಮತ್ತು ೧೦ ಲಕ್ಷ ರೂಪಾಯಿಗಳಿಗಿಂತ ಕಡಿಮೆಯಾದಾಗ ವಾಸ್ತವವಾಗಿ ಇರುವ ಶಿಲ್ಕು ಮತ್ತು ಮೇಲಿನ ಮೊತ್ತಗಳ ನಡುವಿನ

ಮತ್ತು ಹಣದ ಚಲಾವಣೆಯನ್ನು ನಿರ್ಬಂಧಿಸುವ ಮೂಲಕ ಬಂಡವಾಳವನ್ನು ನಿರ್ಬಂಧಿಸುತ್ತಿಲ್ಲ ಎಂಬ ಪಾಂಡಿತ್ಯಪ್ರದರ್ಶಕ ವಾದದ ಮೇಲೆ ವಾಣಿಜ್ಯ ಸಮೂಹಕ್ಕೆ ಸಹಾಯ ಮಾಡುವ ತನ್ನ ನೈತಿಕ ಹೊಣೆಯನ್ನು ಕೂಡ ನಿರಾಕರಿಸಿಕೊಂಡಿತು.[೧] ಧೋರಣೆಯನ್ನು ಸ್ಪಷ್ಟವಾಗಿ ನಿರೂಪಿಸಲು ಅದನ್ನು ಕೇಳಿರಲಿಲ್ಲವಾದ್ದರಿಂದ

---

ಅಂತರದ ಮೇಲೆ ಸರ್ಕಾರದಿಂದ ಬಡ್ಡಿಯನ್ನು ಪಡೆಯುವ ಹಕ್ಕು ೪) ಕೇಂದ್ರ ಕಚೇರಿಯ ಒಪ್ಪಂದದ ಹಾಗೆ, ಪ್ರತಿಯೊಂದು ಬಾಬಿಗೂ ನಿರ್ಧರಿಸಿದ ಮಿತಿಯ ಒಳಗೆ ಸರ್ಕಾರಿ ಶಿಲ್ಕುಗಳನ್ನು ತಮ್ಮ ಶಾಖೆಗಳಲ್ಲಿ ಉಪಯೋಗಿಸಿಕೊಳ್ಳಲು ಬ್ಯಾಂಕುಗಳಿಗೆ ಪರವಾನಗಿ.

ಒಡಂಬಡಿಕೆಗಳನ್ನು ಜಾರಿ ಮಾಡಿದ ಒಂದು ವರ್ಷದ ನಂತರ ಬ್ಯಾಂಕ್ ಆಫ್ ಬೆಂಗಾಲ್‌ದಲ್ಲಿ ತೊಂದರೆಗಳು ಉದ್ಭವಿಸಿದವು. ಅದು ತಾನು ಹೊಂದಿದ ಸಾರ್ವಜನಿಕ ಶಿಲ್ಕುಗಳ ಮೇಲೆ ಸರ್ಕಾರದ ಬೇಡಿಕೆಯನ್ನು ಪೂರೈಸುವಲ್ಲಿ ಅಸಮರ್ಥವಾಗುವಷ್ಟು ನಿಧಿಗಳನ್ನು ನಿರ್ಬಂಧಿಸಿತ್ತು. ಆದ್ದರಿಂದ ೧೮೬೩ರಲ್ಲಿ ಒಡಂಬಡಿಕೆಗಳ ಪರಿಷ್ಕರಣಕ್ಕೆ ಮಾತುಕತೆಗಳು ಪ್ರಾರಂಭವಾದವು ಮತ್ತು ಪರಿಷ್ಕೃತ ಒಡಂಬಡಿಕೆಗಳೂ ಜನವರಿ ೨, ೧೮೬೬ ರಲ್ಲಿ ಜಾರಿಗೆ ಬಂದವು. ಸಾರ್ವಜನಿಕ ಶಿಲ್ಕುಗಳಿಗೆ ಸಂಬಂಧಿಸಿದಂತೆ ಅವು ಕೆಳಗಿನ ಉಪಬಂಧಗಳನ್ನು ಒಳಗೊಂಡಿದ್ದವು : ೧) ತಮ್ಮ ಅನುಕೂಲಗಳ ಅನುಗುಣವಾಗಿ ಬ್ಯಾಂಕ್ ಆಫ್ ಬೆಂಗಾಲ್ ತಮ್ಮಲ್ಲಿ ೭೦ ಲಕ್ಷ ರೂಪಾಯಿ, ಬ್ಯಾಂಕ್ ಆಫ್ ಬಾಂಬೆ ಇದರಲ್ಲಿ ೪೦ ಲಕ್ಷ ರೂಪಾಯಿ ಮತ್ತು ಬ್ಯಾಂಕ್ ಆಫ್ ಮದ್ರಾಸ್ ಇದರಲ್ಲಿ ೨೫ ಲಕ್ಷ ರೂಪಾಯಿಗಳಂತೆ ಬ್ಯಾಂಕುಗಳ ಕೇಂದ್ರ ಕಚೇರಿಗಳಲ್ಲಿ ಸರಾಸರಿ ನಗದು ಶಿಲ್ಕನ್ನು ಕಾದಿಡುವ ಬಗ್ಗೆ ಸರ್ಕಾರದ ಮುಚ್ಚಳಿಕೆ ೨) ಸದ್ಯದ ಮಟ್ಟಿಗೆ ಬ್ಯಾಂಕಿಂಗ್ ಉದ್ದೇಶಗಳಿಗಾಗಿ ತಮ್ಮ ಹತ್ತಿರ ಇಟ್ಟ ಠೇವಣಿಗಳ ಪೂರ್ಣ ಶಿಲ್ಕನ್ನು ಉಪಯೋಗಿಸಲು ಪರವಾನಗಿ ೩) ಬ್ಯಾಂಕ್ ಆಫ್ ಬೆಂಗಾಲ್, ಬ್ಯಾಂಕ್ ಆಫ್ ಬಾಂಬೆ ಮತ್ತು ಬ್ಯಾಂಕ್ ಆಫ್ ಮದ್ರಾಸ್ ಇವುಗಳ ಕೇಂದ್ರ ಕಚೇರಿಗಳಲ್ಲಿ ಶಿಲ್ಕು ಕ್ರಮವಾಗಿ ಕನಿಷ್ಠ ೪೫ ಲಕ್ಷ, ೨೫ ಲಕ್ಷ ಮತ್ತು ೨೦ ಲಕ್ಷ ರೂಪಾಯಿಗಳಿಗಿಂತ ಕಡಿಮೆಯಾದಲ್ಲಿ ಸರ್ಕಾರದಿಂದ ಬಡ್ಡಿಯನ್ನು ಪಡೆಯುವ ಹಕ್ಕು ೪) ಪ್ರತಿಯೊಂದು ಶಾಖೆಯು ಎಲ್ಲ ಸಮಯಗಳಲ್ಲಿ ತನ್ನಲ್ಲಿಯ ಸರ್ಕಾರಿ ಶಿಲ್ಕಿನಷ್ಟು ಸರ್ಕಾರಿ ಡ್ರಾಫ್ಟ್‌ಗಳ ಪಾವತಿ ಮಾಡುವ ಷರತ್ತಿಗೆ ಒಳಪಟ್ಟಂತೆ ಬ್ಯಾಂಕಿಂಗ್ ಉದ್ದೇಶಗಳಿಗೆ ಸದ್ಯದ ಮಟ್ಟಿಗೆ (ಶಾಖೆಗಳಲ್ಲಿಯ) ಎಷ್ಟೇ ದೊಡ್ಡದಿದ್ದ ಶಿಲ್ಕನ್ನಾದರೂ ಅದನ್ನು ಉಪಯೋಗಿಸಲು ಪರವಾನಗಿ.

ಈ ಪರಿಷ್ಕೃತ ಒಡಂಬಡಿಕೆಗಳು ಮಾರ್ಚ್, ೧, ೧೮೭೪ರ ವರೆಗೆ ಜಾರಿಯಲ್ಲಿರಬೇಕಾಗಿತ್ತು. ೧೮೭೪ರಲ್ಲಿ ಪ್ರಾಂತೀಯ ಬ್ಯಾಂಕುಗಳ ಅಧಿಕಾರಗಳ ಪರಿಷ್ಕರಣೆಯ ಪ್ರಶ್ನೆಯು ಪರಿಶೀಲನೆಯಲ್ಲಿತ್ತು ಮತ್ತು ಬ್ಯಾಂಕುಗಳಿಗೆ ಸಂಪೂರ್ಣ ಸರ್ಕಾರಿ ಶಿಲ್ಕಿನ ಉಪಯೋಗ ಮಾಡುವ ಹಕ್ಕನ್ನು ಮುಂದುವರೆಸುವುದು ಸರ್ಕಾರದ ಗುರಿಯಾಗಿತ್ತು. ಇದೇ ವೇಳೆಗೆ (೧೮೭೪) ಬ್ಯಾಂಕ್ ಆಫ್ ಬಾಂಬೆಯಲ್ಲಿ ತೊಂದರೆಗಳುಂಟಾದವು ಮತ್ತು ಸರ್ಕಾರಕ್ಕೆ ತನ್ನ ಶಿಲ್ಕುಗಳನ್ನು ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ ಇಂಥ ಸರ್ಕಾರಿ ಶಿಲ್ಕುಗಳನ್ನು ಬ್ಯಾಂಕ್ ಶಿಲ್ಕುಗಳಲ್ಲಿ ವಿಲೀನಗೊಳಿಸುವ ಮತ್ತು ಅವುಗಳನ್ನು ಬ್ಯಾಂಕುಗಳ ವಶದಲ್ಲಿ ಬಿಡುವ ಧೋರಣೆಯ ಮರುಪರಿಶೀಲನೆ ಮಾಡಲು ಒತ್ತಾಯಿಸಲಾಯಿತು. ಸ್ವಲ್ಪ ಸುದೀರ್ಘ ಚರ್ಚೆಯ ನಂತರ ಭಾರತ ಸರ್ಕಾರವು ಪ್ರಾಂತ್ಯಗಳ ಕೇಂದ್ರ ಕಾರ್ಯಸ್ಥಳಗಳಲ್ಲಿ ರಿಸರ್ವ್ ಟ್ರೆಜರಿಗಳನ್ನು ಸ್ಥಾಪಿಸಿ ಸ್ವತಂತ್ರ ಖಜಾನೆ ಪದ್ಧತಿಗೆ ಹಿಂತಿರುಗಿತು. ಈ ರಿಸರ್ವ್ ಟ್ರೆಜರಿಗಳು ಪ್ರಾಂತೀಯ ಬ್ಯಾಂಕುಗಳು ಹಿಂದೆ ಇಟ್ಟುಕೊಳ್ಳುತ್ತಿದ್ದ ಸರ್ಕಾರಿ ಶಿಲ್ಕುಗಳನ್ನು ಇಟ್ಟುಕೊಂಡವು. ಈ ಪ್ರಸಂಗದ ಇತಿಹಾಸಕ್ಕೆ ಹೌಸ್ ಆಫ್ ಕಾಮನ್ಸ್ ರಿಟರ್ನ್ಸ್ ೧೮೯ ಮತ್ತು ೫೦೫, ೧೮೬೪, ಅಲ್ಲದೇ ಜೆ.ಬಿ. ಬ್ರುನ್ಯೇಟ್, ಅನ್ ಅಕೌಂಟ್ ಆಫ್ ಪ್ರೆಸಿಡೆನ್ಸಿ ಬ್ಯಾಂಕ್ ಅಧ್ಯಾಯ VII–ಇವುಗಳನ್ನು ನೋಡಿ.

೧. ಸ್ವತಂತ್ರ ಖಜಾನೆ ಪದ್ಧತಿಯನ್ನು ಪುನಃ ಸ್ಥಾಪಿಸಲು ಮಂಜೂರಾತಿ ನೀಡುವ ಮೇ ೬, ೧೮೭೫ರ ಪತ್ರದಲ್ಲಿ ಸೆಕ್ರೆಟರಿ ಆಫ್ ಸ್ಟೇಟ್‌ರವರು ಬ್ಯಾಂಕುಗಳಿಗೆ ಕೆಳಗಿನಂತೆ ವಾಗ್ದಂಡನೆ ವಿಧಿಸಿದರು : "ಸಮಾಜದ ಉಳಿತಾಯವನ್ನು ಪ್ರತಿನಿಧಿಸದ ಆದರೆ ಸರ್ಕಾರದಿಂದ ಪೂರೈಸಲಾದ ಬಂಡವಾಳವು ಒಂದು ಸಂಪನ್ಮೂಲವಿದ್ದು ಅದರ ಶಾಶ್ವತತೆಯ ಮೇಲೆ ಅವಲಂಬಿಸಿರಕೂಡದು. ಅದು ವ್ಯವಹಾರಸ್ಥರನ್ನು ಅಪಾಯಕರ ಕಟ್ಟುಪಾಡುಗಳತ್ತ ಸಾಗಿಸುತ್ತದೆ. ಅದು ಸ್ವಲ್ಪ ಸಮಯದವರೆಗೆ ನೆಮ್ಮದಿಯನ್ನು ಕೊಡುವುದು. ಆದರೆ ಇದು ತಾತ್ಕಾಲಿಕವಾಗಿರುತ್ತದೆ. ರಾಜಕೀಯ ಅಗತ್ಯತೆ ಹಠಾತ್ ಆಕಸ್ಮಿಕ ಸಂಪನ್ಮೂಲಗಳಿಂದ ಹಿಂತೆಗೆದುಕೊಂಡಾಗ ಅದನ್ನು ನಂಬಿದ್ದ ವಾಣಿಜ್ಯವು ತನ್ನ ಸ್ವಂತ ಸಂಪನ್ಮೂಲಗಳಿಂದ ಪರಿಸ್ಥಿತಿಯನ್ನು ನಿಭಾಯಿಸಲಾಗದ ಪರಿಸ್ಥಿತಿ ಏರ್ಪಡುವುದು. "ರಿಸರ್ವ್ ಟ್ರೆಜರಿಗಳನ್ನು

ಪರಿಸ್ಥಿತಿಯನ್ನು ಸುಗಮಗೊಳಿಸಲು ಕಾಗದದ ನಾಣ್ಯ ಕಾಯಿದೆಯನ್ನು ಮಾರ್ಪಾಡು ಮಾಡಲು ಅದು ಏನು ಕ್ರಮತೆಗೆದುಕೊಳ್ಳಬಹುದಿತ್ತು ಎಂದು ಹೇಳಲು ಸಾಧ್ಯವಿಲ್ಲ. ಆದಾಗ್ಯೂ ನಾಣ್ಯಪದ್ಧತಿಗೆ ಅಗತ್ಯವಾದ ಸ್ಥಿತಿಸ್ಥಾಪಕತ್ವದ ಗುಣವನ್ನು ನೀಡಿ ಈ ವಿವಾದವನ್ನು ಸಮಾಧಾನಕರವಾಗಿ ಪರಿಹರಿಸುವ ಮೊದಲೇ ಇನ್ನಷ್ಟು ದೊಡ್ಡ ಅನರ್ಥವೊಂದು ಉದ್ಭವಿಸಿತು. ಆ ಅನರ್ಥವು ಲೋಹದ ಹಣಕ್ಕೆ ಪ್ರತಿಯಾಗಿದ್ದ ಕಾಗದದ ಹಣದ ಅತ್ಯಂತ ಮಹತ್ವದ ಅಂಶಗಳಾದ ಸ್ಥಿರತೆ ಮತ್ತು ಮೌಲ್ಯದ ದೃಢತೆಗಳನ್ನು ನಾಶ ಮಾಡುವಷ್ಟು ಪ್ರಮಾಣದಲ್ಲಿ ಅದರ ಮೇಲೆ ಪರಿಣಾಮವನ್ನು ಬೀರಿತು. ವಾಸ್ತವವಾಗಿ ಸ್ಥಿರತೆ ಮತ್ತು ದೃಢತೆಗಳನ್ನು ಅದು ಬೆಳೆಸಬೇಕಾಗಿತ್ತು. ಈ ಅನರ್ಥ ಎಷ್ಟೊಂದು ಅಪಾರವಾಗಿ ಬೆಳೆಯಿತೆಂದರೆ ಮತ್ತು ಅದರ ಪರಿಣಾಮಗಳು ಎಷ್ಟೊಂದು ವ್ಯಾಪಕವಾಗಿದ್ದವೆಂದರೆ ಅದು ಇತರ ವಿಷಯಗಳನ್ನು ಬದಿಗೊತ್ತಿ ಎಲ್ಲ ಗಮನವನ್ನು ತನ್ನ ಕಡೆಗೇ ಸೆಳೆದುಕೊಂಡಿತು.

ತನ್ನ ನಾಣ್ಯದ ವಿವಿಧ ಘಟಕಗಳ ನಡುವೆ ಮೌಲ್ಯದ ಸ್ಥಿರತೆಯು ಒಂದು ದೇಶದ ಆಂತರಿಕ ವ್ಯವಹಾರಗಳ ಮೇಲೆ ಯಾವ ಪರಿಣಾಮವನ್ನು ಬೀರುತ್ತದೆಯೋ ಅದೇ ಪರಿಣಾಮವನ್ನು ವಿನಿಮಯದ ಸಮಾನತೆಯು ಅದರ ಆಂತರಿಕ ವ್ಯವಹಾರಗಳ ಮೇಲೆ ಬೀರುತ್ತದೆ. ಯಾವುದೇ ಎರಡು ರಾಷ್ಟ್ರಗಳ ನಡುವೆ ವಿನಿಮಯದ ಸಮಾನತೆಯು ಅವುಗಳ ನಾಣ್ಯಗಳ ಪರಸ್ಪರ ಸಾಪೇಕ್ಷ ವಿನಿಮಯ ಮೌಲ್ಯಗಳನ್ನು ವ್ಯಕ್ತಪಡಿಸುತ್ತದೆ. ಎರಡು ದೇಶಗಳು ಗಟ್ಟಿಯ ರೂಪದಲ್ಲಿ ನಿರ್ಯಾತ ಮಾಡಬಲ್ಲ ಮುಕ್ತವಾಗಿ ಪರಿವರ್ತನೀಯ ಮತ್ತು ಪ್ರಮಾಣಿತ ಹಣವಾಗಿ ಕಾರ್ಯಮಾಡುವ ಒಂದೇ ಪ್ರಕಾರದ ಲೋಹವನ್ನು ಉಪಯೋಗಿಸಿದರೆ ಆ ದೇಶಗಳ ನಡುವೆ ವಿನಿಮಯ ಸಮಾನತೆಯು ಸ್ಥಿರವಾಗುವುದೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

---

ಸ್ಥಾಪಿಸಿದ ೧೮೭೬ ವ್ಯವಸ್ಥೆಗಳಡಿಯಲ್ಲಿ ಸರ್ಕಾರವು ಮೊದಲಿನಂತೆ ಬ್ಯಾಂಕುಗಳಿಗೆ ಅವುಗಳ ಶಿಲ್ಕುಗಳು ಕನಿಷ್ಠ ಮೊತ್ತದ ಕೆಳಗೆ ಇಳಿದಾಗ ಬಡ್ಡಿಯನ್ನು ಕೊಡಲು ಒಪ್ಪಿತು. ಗರಿಷ್ಠ ಮಿತಿಗೆ ಸಂಬಂಧಿಸಿದಂತೆ ಸರ್ಕಾರವು ಔಪಚಾರಿಕ ಒಪ್ಪಂದವನ್ನು ಮಾಡಿಕೊಳ್ಳಲಿಲ್ಲ ಮತ್ತು ಅದು ಬ್ಯಾಂಕುಗಳಿಗೆ "ಸಾಮಾನ್ಯವಾಗಿ ಸರ್ಕಾರವು ಬ್ಯಾಂಕುಗಳ ಕೇಂದ್ರ ಕಚೇರಿಗಳಲ್ಲಿ ಕೆಳಗಿನ ಮೊತ್ತಗಳಿಗಿಂತ ಹೆಚ್ಚಿನ ರಕಮನ್ನು ಶಾಶ್ವತವಾಗಿ ಬಿಡುವುದಿಲ್ಲ ; ಬ್ಯಾಂಕ್ ಆಫ್ ಬೆಂಗಾಲ್ ೧೦೦ ಲಕ್ಷ, ಬ್ಯಾಂಕ್ ಆಫ್ ಮದರಾಸು ೩೦ ಲಕ್ಷ, ಬ್ಯಾಂಕ್ ಆಫ್ ಬಾಂಬೆ ೫೦ ಲಕ್ಷ, ಆದರೆ ಈ ಷರತ್ತನ್ನು ಒಪ್ಪದಿದ್ದಲ್ಲಿ ಅದನ್ನು ಒಪ್ಪಂದದಲ್ಲಿ ಸೇರಿಸಲಾಗುವುದಿಲ್ಲ. ಅದು ಯಾವುದೇ ಶಿಲ್ಕನ್ನು ಬ್ಯಾಂಕುಗಳಲ್ಲಿ ಬಿಡಲು ಸರ್ಕಾರವು ಬದ್ಧವಾಗಿರುವುದಿಲ್ಲ" ... ಸಾಮಾನ್ಯ ಪರಿಸ್ಥಿತಿಯಲ್ಲಿ ಸರ್ಕಾರವು ಬ್ಯಾಂಕುಗಳಲ್ಲಿ ಇಡಬಹುದಾದ ಶಿಲ್ಕುಗಳ ಮೊತ್ತದ ಪ್ರಶ್ನೆಯು ಆ ರೀತಿ ಇತ್ಯರ್ಥವಾದ್ದರಿಂದ, ಋತುಕಾಲದ ಬೇಡಿಕೆಗಳನ್ನು ಪೂರೈಸಲು ಬ್ಯಾಂಕುಗಳಿಗೆ ಸಹಾಯ ಮಾಡಲು ಉಳಿದ ಒಂದೇ ಮಾರ್ಗವೆಂದರೆ ರಿಸರ್ವ್ ಟ್ರೆಜರಿಗಳಲ್ಲಿರಿಸಬೇಕಿದ್ದ ತನ್ನ ಶಿಲ್ಕುಗಳಿಗಾಗಿ ಪ್ರಾಂತೀಯ ಬ್ಯಾಂಕುಗಳಿಗೆ ಸಾಲವನ್ನು ನೀಡುವುದಾಗಿತ್ತು. ೧೯೦೦ರ ನಂತರ ಅದು ಬ್ಯಾಂಕ್ ದರದಲ್ಲಿ ಪರಿಮಿತ ಮೊತ್ತದ ಅಂಥ ಸಾಲಗಳನ್ನು ನೀಡಲು ಒಪ್ಪಿತು. ೧೯೧೩ ರವರೆಗೆ ಕೇವಲ ಆರು ಸಾಲಗಳನ್ನು ಮಾತ್ರ ಕೊಡಲಾಯಿತು. ಅಂಥ ಸಾಲಗಳ ಕರಾರುಗಳು ವಾಸ್ತವಿಕವಾಗಿ ದುರ್ಭರವಾಗಿದ್ದವೆಂದು ತೋರುತ್ತವೆ. ೧೯೧೩ರ ಚೇಂಬರ್‌ಲೀನ್ ಆಯೋಗವು ಸ್ವತಂತ್ರ ಖಜಾನೆ ಪದ್ಧತಿಯನ್ನು ರದ್ದುಮಾಡುವುದರ ಬದಲು ಸಾಲಗಳನ್ನು ಕೊಡುವುದನ್ನು ಶಿಫಾರಸು ಮಾಡಿತು. ಆದಾಗ್ಯೂ ವಿಶ್ವದ ಸಮರವು ಘಟನೆಗಳನ್ನು ತ್ವರೆಪಡಿಸಿತು. ಅದು ಪ್ರಾಂತೀಯ ಬ್ಯಾಂಕುಗಳ ಮತ್ತು ಸರ್ಕಾರದ ನಡುವಿನ ಸಹಕಾರದ ಮಹತ್ವವೂ ಅಲ್ಲದೇ ದೊಡ್ಡ ಮತ್ತು ಶಕ್ತಿದಾಯಕ ಬ್ಯಾಂಕಿಂಗ್ ಸಂಸ್ಥೆಯ ಆವಶ್ಯಕತೆಯನ್ನು ತೋರಿಸಿತು. ಇದನ್ನು ಪ್ರಾಂತೀಯ ಬ್ಯಾಂಕುಗಳನ್ನು ಇಂಪೀರಿಯಲ್ ಬ್ಯಾಂಕಿನಲ್ಲಿ ಸಂಯೋಜಿಸುವ ಮೂಲಕ ಈಡೇರಿಸಲಾಯಿತು (೧೯೨೦ ರ ಕಾಯಿದೆ XLVII) ಇಂಪೀರಿಯಲ್ ಬ್ಯಾಂಕಿನ ಉದ್ಘಾಟನೆಯಿಂದ ಸ್ವತಂತ್ರ ಖಜಾನೆ ಪದ್ಧತಿಯ ರದ್ದತಿಯ ಕಾರ್ಯ ಮತ್ತೆ ಆರಂಭವಾಗಿದೆ. ೧೮೭೬ ರ ನಂತರ ಸ್ವತಂತ್ರ ಖಜಾನೆಗಳ ಪ್ರಸಂಗಗಳ ಇತಿಹಾಸಕ್ಕೆ ಇಂಟರಿಮ್ ರಿಪೋರ್ಟ್ ಆಫ್ ದಿ ಚೇಂಬರ್‌ಲಿನ್ ಕಮಿಷನ್ ಇದರ ಅನುಬಂಧ ನೋಡಿರಿ ಸಂ. ೧ ಸಿ ಡಿ ೧೯೧೩ರ ೭೦೭೦ ಕ್ರಮಾಂಕಗಳೂ I ಮತ್ತು II.

ಏಕೆಂದರೆ ಆ ಸ್ಥಿತಿಯಲ್ಲಿ ಅವುಗಳು ಮೌಲ್ಯಮಾಪನವಾಗಿ ಸಾಮಾನ್ಯ ಮಾಧ್ಯಮವನ್ನು ಹೊಂದಿರುತ್ತವೆ ಮತ್ತು ಇರುವ ವಾಣಿಜ್ಯ ಸ್ವಾತಂತ್ರ್ಯದಲ್ಲಿ ಈ ಮಾಧ್ಯಮದ ಮೌಲ್ಯವು ಎರಡು ದೇಶಗಳ ಎರಡು ಪ್ರದೇಶಗಳ ನಡುವೆ ಹಡಗಿನ ಮೂಲಕ ಸಾಮಾನು ಸಾಗಿಸುವ ವೆಚ್ಚಕ್ಕಿಂತ ಹೆಚ್ಚು ವ್ಯತ್ಯಾಸವಾಗುತ್ತಿದ್ದಿಲ್ಲ. ತದ್ವಿರುದ್ಧವಾಗಿ, ಮೌಲ್ಯದ ನಾಣ್ಯ ಪ್ರಮಾಣಗಳಾಗಿ ಭಿನ್ನ ಲೋಹಗಳನ್ನು ಹೊಂದಿದ ಎರಡು ರಾಷ್ಟ್ರಗಳ ನಡುವೆ ನಿಗದಿತ ವಿನಿಮಯದ ಸಮತ್ವ ಇರಲಾರದು. ಆ ಸ್ಥಿತಿಯಲ್ಲಿ ಅವುಗಳ ವಿನಿಮಯವು ಚಿನ್ನ ಮತ್ತು ಬೆಳ್ಳಿಗಳ ಸಾಪೇಕ್ಷ ಮೌಲ್ಯಗಳಿಂದ ನಿಯಂತ್ರಿಸಲ್ಪಟ್ಟಿರುತ್ತದೆ. ಮತ್ತು ಅವುಗಳ ಮೌಲ್ಯಗಳಲ್ಲಿ ಬದಲಾವಣೆಗಳೂ ಆದಂತೆ ವಿನಿಮಯ ಮೌಲ್ಯಗಳೂ ಆವಶ್ಯಕವಾಗಿ ಬದಲಾಗಬೇಕಾಗುತ್ತವೆ. ವಿನಿಮಯ ಮೌಲ್ಯದಲ್ಲಿ ಆಗುವ ಬದಲಾವಣೆಯ ಮಿತಿಯು ಎರಡು ಲೋಹಗಳ ಸಾಪೇಕ್ಷ ಮೌಲ್ಯಗಳಲ್ಲಿ ಆಗಬಹುದಾದ ಬದಲಾವಣೆಗಳ ಮಿತಿಯಷ್ಟು ವ್ಯಾಪಕವಾಗಿ ಅಥವಾ ಸೀಮಿತವಾಗಿ ಇರುತ್ತದೆ. ಆದ್ದರಿಂದ ಇಂಗ್ಲೆಂಡ್ ಮತ್ತು ಭಾರತಗಳಂಥ ಎರಡು ದೇಶಗಳು ತಮ್ಮಲ್ಲಿಯ ಲೋಹ ಪ್ರಮಿತಿಗಳಲ್ಲಿಯ ವ್ಯತ್ಯಾಸಗಳಿಂದ ಬೇರ್ಪಡಿಸಲ್ಪಟ್ಟಾಗ, ತಾತ್ವಿಕವಾಗಿ ಅವುಗಳ ನಡುವೆ ಸ್ಥಿರ ವಿನಿಮಯ ಸಮತ್ವದ ಸಾಧ್ಯತೆ ಇರಲಾರದು. ಆದರೆ ವಾಸ್ತವಿಕವಾಗಿ, ಅವುಗಳ ಲೋಹ ಪ್ರಮಿತಿಗಳಲ್ಲಿ ವ್ಯತ್ಯಾಸಗಳಿದ್ದಾಗ್ಯೂ ಇಂಗ್ಲೆಂಡ್ ಮತ್ತು ಭಾರತಗಳ ನಡುವೆ ಕ್ವಚಿತ್ತಾಗಿ ಒಂದು ರೂಪಾಯಿಗೆ ಒಂದು ಷಿಲಿಂಗ್ ೧೦ ೧/೨ ಪೆನ್ಸ್ ಆಗಿತ್ತು ಸಾಮಾನ್ಯವಾಗಿ ಈ ವಿನಿಮಯ ದರವು[೧] ಬದಲಾಗುತ್ತಿರಲಿಲ್ಲ.[೨] ೧೮೭೩ರವರೆಗೆ ದರವು ಸ್ಥಿರವಿದ್ದುದರಿಂದ ಈ ಎರಡು ದೇಶಗಳು ಭಿನ್ನ ನಾಣ್ಯ ಪ್ರಮಿತಿಗಳನ್ನು ಹೊಂದಿದ್ದವು ಎಂಬ ವಿಷಯದ ಅರಿವು ಹೆಚ್ಚು ಜನರಿಗೆ ತಿಳಿದಿರಲಿಲ್ಲ. ಹಾಗಾದರೂ ೧೮೭೩ ರ ನಂತರ ರೂಪಾಯಿ ಸ್ಟರ್ಲಿಂಗ್ ದರವು ಹಠಾತ್ತಾಗಿ ತನ್ನ ಸಾಮಾನ್ಯ ಸಮತ್ವವನ್ನು ಕಳೆದುಕೊಂಡಿತು. ಅದರಿಂದಾದ ಏರುಪೇರುಗಳು ಎಷ್ಟು ಭಾರಿಯಾಗಿತ್ತು ಮತ್ತು ಅವ್ಯವಸ್ಥಿತವಾಗಿತ್ತು ಎಂದರೆ (ನಕ್ಷೆ II) ಅದು ಎಲ್ಲಿ ನಿಲ್ಲುವುದೆಂಬುದು ಯಾರಿಗೂ ತಿಳಿದಿರಲಿಲ್ಲ.

ವಾಸ್ತವವಾಗಿ ರೂಪಾಯಿ ಸ್ಟರ್ಲಿಂಗ್ ವಿನಿಮಯದ ದರವು ಚಿನ್ನ–ಬೆಳ್ಳಿ ವಿನಿಮಯದ ದರದ ಪ್ರತಿಬಿಂಬವಾಗಿತ್ತು. ಆದ್ದರಿಂದ ೧೮೭೩ರ ಮೊದಲು ರೂಪಾಯಿ–ಸ್ಟರ್ಲಿಂಗ್ ದರವು ಒಂದು ಷಿಲ್ಲಿಂಗ್ ೧೦೧/೨ ಪೆನ್ಸ್ ದರದಲ್ಲಿ ಸ್ಥಿರವಾಗಿತ್ತು ಎಂದು ಹೇಳಿದ ಮೇಲೆ ೧೮೭೩ರ ಮುನ್ನ ಚಿನ್ನ–ಬೆಳ್ಳಿ ವಿನಿಮಯ ದರವು ೧೫೧/೨ ಗೆ ಒಂದರ ಪ್ರಮಾಣದಲ್ಲಿ ಸ್ಥಿರವಾಗಿತ್ತೆಂದು ಅರ್ಥವಾಗುತ್ತದೆ ಮತ್ತು

---

೧. ಸುಮಾರು ೭೦ ವರ್ಷಗಳವರೆಗೆ ರೂಢಿಯಲ್ಲಿದ್ದ ೧ಕ್ಕೆ ೧೫೧/೨ಯ ಅನುಪಾತವನ್ನು ಚಿನ್ನ ಮತ್ತು ಬೆಳ್ಳಿಗಳ ನಡುವೆ ಇದ್ದ ಸಾಮಾನ್ಯ ಅನುಪಾತವೆಂದು ತೆಗೆದುಕೊಂಡಲ್ಲಿ ಮಾತ್ರ ಸಾಧ್ಯ.

೨. ೧೮೭೩ರ ಮೊದಲು ರೂಪಾಯಿ ಸ್ಟರ್ಲಿಂಗ್ ವಿನಿಮಯ ದರವು ಅಷ್ಟು ಸ್ಥಿರವಿರಲಿಲ್ಲವೆಂಬುದು ನಕ್ಷೆಯಿಂದ ಕಾಣುತ್ತದೆ. ಆದರೆ ಅದರಲ್ಲಿಯ ಬದಲಾವಣೆಗಳು ಬೇರೆ ಕಾರಣಗಳಿಂದ ಉಂಟಾಗಿದ್ದವು. ಈಸ್ಟ್ ಇಂಡಿಯಾ ಕಂಪನಿಯ ವೇಳೆಯಲ್ಲಿ ಭಾರತೀಯ ಹಣವನ್ನು ಸ್ಟರ್ಲಿಂಗ್‌ನಲ್ಲಿ ಬದಲಿಸಲು ಉಪಯೋಗಿಸಿದ ವಿನಿಮಯ ದರಗಳು ಅನೇಕವಿದ್ದವು ಎಂಬುದನ್ನು ಕಾಣಬೇಕು. ಅಲ್ಲದೇ ಅವುಗಳು ಅದಲುಬದಲು ಮಾಡಿದ ನಾಣ್ಯಗಳ ವಾಸ್ತವಿಕ ಮೌಲ್ಯದೊಂದಿಗೆ ಅತಿ ಕಡಿಮೆ ಸಂಬಂಧವನ್ನು ಹೊಂದಿದ್ದರಿಂದ ಅಧಿಕೃತವಾಗಿ ನೀಡಿದ ನೈಜ ದರಗಳು ನೈಜ ಮಾರುಕಟ್ಟೆ ದರಗಳಿಗಿಂತ ಬಹಳ ವ್ಯತ್ಯಾಸ ಹೊಂದಿದ್ದವು. ಈ ಕುತೂಹಲಕಾರಿ ವಿಷಯಕ್ಕೆ ಸಂಬಂಧವಿದ್ದಂತೆ ೧೯೩೧–೩೨ರ ಎಚ್.ಎಫ್.ಸಿ. ಸೆಷನಲ್ ಪೇಪರ್ಸ್ ೭೩೫ ಮತ್ತು ಭಾರತೀಯ ನಾಣ್ಯಗಳು ಸ್ಟರ್ಲಿಂಗ್‌ನಲ್ಲಿ ಪರಿವರ್ತನವಾಗುವ ವಿನಿಮಯ ದರಗಳಿಗೆ ಸಂಬಂಧಿಸಿದಂತೆ ಅನುಬಂಧ ೨೦, ಕರೆಸ್ಪಾಂಡೆನ್ಸ್, ಇತ್ಯಾದಿ ಟಕರ್ ಎಚ್. ಸೇಂಟ್ ಜಾರ್ಜ್, ರಿಮಾರ್ಕ್ಸ್ ಆನ್ ದಿ ಪ್ಲಾನ್ಸ್ ಆಫ್ ಫೈನಾನ್ಸ್, ೧೮೨೧, ಅಲ್ಲಲ್ಲಿ ಮತ್ತು ಅವರದೇ ಮೆಮೋರಿಯಲ್ಸ್ ಆಫ್ ಇಂಡಿಯನ್ ಗವರ್ನಮೆಂಟ್, ೧೮೫೩, ಪುಟಗಳು ೩೮೨–೮೫.–ಇವುಗಳನ್ನು ನೋಡಿ.

೧೮೭೩ರ ನಂತರ ರೂಪಾಯಿ – ಸ್ಟರ್ಲಿಂಗ್ ದರದಲ್ಲಿ ಆದ ಏರುಪೇರಿನಿಂದಾಗಿ ಚಿನ್ನ–ಬೆಳ್ಳಿಗಳ ವಿನಿಮಯ ದರವು ತನ್ನ ಆಧಾರಗಳನ್ನು ಕಳೆದುಕೊಂಡಿತು ಎಂದು ಅರ್ಥವಾಗುತ್ತದೆ. ಆದ್ದರಿಂದ ೧೮೭೩ ರ ನಂತರ ಹಿಂದೆಂದೂ ಆಗದಂತೆ ಚಿನ್ನ ಮತ್ತು ಬೆಳ್ಳಿಗಳ ನಡುವಿನ ಅನುಪಾತವು ಏಕೆ ಕದಡಿತು ಎಂಬ ಪ್ರಶ್ನೆ ಉದ್ಭವಿಸುತ್ತದೆ. ಅಂದಿನ ವಿಲಕ್ಷಣ ಪರಿಸ್ಥಿತಿಗೆ ಸಾಕಷ್ಟು ವಿವರಣೆ ನೀಡುವ ಎರಡು ಅಂಶಗಳು ಎದ್ದು ಕಾಣುತ್ತವೆ. ಮೊದಲನೆಯದು, ವಿಶ್ವದ ಪ್ರಮುಖ ರಾಷ್ಟ್ರಗಳು ಪ್ರಮಾಣಿತ ಹಣದ ಮಾಧ್ಯಮವಾಗಿ ಬೆಳ್ಳಿಯನ್ನು ಅನಾಣ್ಯೀಕರಣಗೊಳಿಸಿದ್ದವು. ಬೆಳ್ಳಿಯ ಅನಾಣ್ಯೀಕರಣದ ಪರವಾಗಿ ಈ ಚಲನವಲನವು ತೂಕಗಳು, ಅಳತೆಗಳು ಮತ್ತು ನಾಣ್ಯ ತಯಾರಿಕೆಗಳು ಇವುಗಳ ಏಕರೂಪತೆಗಾಗಿ ನಡೆದ ಒಂದು ತಾತ್ವಿಕ ಆಂದೋಲನದ ಪರಿಣಾಮವಾಗಿತ್ತು. ಅಂಥ ಏಕರೂಪತೆಯು ಆಂದೋಲನದ ಉದ್ದೇಶವಾಗಿದ್ದರಿಂದ ಅದು ಪ್ರತಿಯೊಂದು ರೀತಿಯಲ್ಲಿಯೂ ಹಿತಕಾರಿಯಾಗಿತ್ತು. ಆದರೆ ಕೆಲವು ಸಾರಿ ಹಿತಾನ್ವೇಷಣೆಯು ತನ್ನ ಹಿಂದೆ ಕೇಡುಗಳ ಪರಂಪರೆಯನ್ನು ಉಳಿಸುತ್ತದೆ ಎಂಬುದನ್ನೂ ಇದು ತೋರಿಸುತ್ತದೆ. ೧೮೫೧ರಲ್ಲಿ ಲಂಡನ್ನಿನಲ್ಲಿ ನಡೆದ ದೊಡ್ಡ ಪ್ರದರ್ಶನದಲ್ಲಿ ಬೇರೆ ಬೇರೆ ರಾಷ್ಟ್ರಗಳ ವಿವಿಧ ನಾಣ್ಯಗಳಲ್ಲಿನ ಲೋಹಗಳ ತೂಕದ ವ್ಯತ್ಯಾಸಗಳಿಂದಾಗಿ ಒದಗಬಹುದಾದ ತೊಂದರೆಗಳನ್ನು, ರಾಷ್ಟ್ರಗಳ ಪ್ರತಿನಿಧಿಗಳಿಗೆ ಪ್ರಾತ್ಯಕ್ಷಿಕೆಯ ಮೂಲಕ ತೋರಿಸಲಾಯಿತು.[೧] ತೂಕಗಳು, ಅಳತೆಗಳು ಮತ್ತು ನಾಣ್ಯಗಳು ಇವುಗಳಲ್ಲಿಯ ಅಂತರರಾಷ್ಟ್ರೀಯ ಏಕರೂಪತೆಯ ಪ್ರಶ್ನೆಯು ಪ್ರದರ್ಶನದಲ್ಲಿ ನೆರೆದ ಅನೇಕ ವೈಜ್ಞಾನಿಕ ಪ್ರತಿನಿಧಿಗಳಿಂದ ಚರ್ಚಿತವಾಯಿತು ಮತ್ತು ಅದರಿಂದ ವಾಸ್ತವಿಕವಾಗಿ ಯಾವುದೇ ಪ್ರಯೋಜನವು ಆಗದಿದ್ದರೂ, ಈ ಪ್ರಶ್ನೆಯನ್ನು ಕೈಬಿಡಲಿಲ್ಲ: ಅದನ್ನು ಎರಡು ವರ್ಷಗಳ ನಂತರ ನಡೆದ ಬ್ರಸೆಲ್ಸ್ ಅಂತರರಾಷ್ಟ್ರೀಯ ಸಂಖ್ಯಾಶಾಸ್ತ್ರ ಮಹಾಸಭೆಯಲ್ಲಿ ಚರ್ಚೆಗೆ ತೆಗೆದುಕೊಳ್ಳಲಾಯಿತು. ಚರ್ಚೆಯು ಎಷ್ಟೊಂದು ಮುಂದುವರಿಯಿತೆಂದರೆ ಪ್ಯಾರಿಸಿನಲ್ಲಿ ನಡೆದ ಮುಂದಿನ ಸಂಖ್ಯಾಶಾಸ್ತ್ರ ಮಹಾಸಭೆಯು ವಿವಿಧ ರಾಷ್ಟ್ರಗಳ ತೂಕಗಳು, ಅಳತೆಗಳು ಮತ್ತು ನಾಣ್ಯಗಳಲ್ಲಿಯ ಅಗತ್ಯವಾದ ಏಕರೂಪತೆಯನ್ನು ತರುವ ಆವಶ್ಯಕತೆಯನ್ನು ಬಲವಾಗಿ ಒತ್ತಾಯಿಸುವ ಘೋಷಣೆಯನ್ನು ಮಾಡಿತು ಮತ್ತು ಈ ಘೋಷಣೆಯನ್ನು ೧೮೫೭ ರಲ್ಲಿ ವಿಯೆನ್ನಾದಲ್ಲಿ ನಡೆದ ಸಂಖ್ಯಾಶಾಸ್ತ್ರ ಮಹಾಸಭೆಯು ಸ್ಥಿರೀಕರಿಸಿತು.[೨] ೧೮೬೨ ರಲ್ಲಿ ಇಂಗ್ಲೆಂಡ್ ತೂಕ ಮತ್ತು ಅಳತೆಗಳ ಮೆಟ್ರಿಕ್ ಪದ್ಧತಿಯನ್ನು ಐಚ್ಛಿಕ ಮಾಡಿತು ಮತ್ತು ಈ ಕ್ರಮದಿಂದ ಪ್ರೋತ್ಸಾಹಿತವಾಗಿ "ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳಲ್ಲಿ ಸಾಪೇಕ್ಷ ತೂಕವು ಎಷ್ಟಿರಬೇಕು ಎಂಬುದನ್ನು ಪರಿಶೀಲಿಸಲು ಮತ್ತು ವರದಿ ಮಾಡಲು ಮತ್ತು ದಶಮಾಂಶವಾಗಿ ಉಪಭಾಗಿಸುವ ಏಕ ಘಟಕದ ಮೇಲೆ ವಿವಿಧ ದೇಶಗಳ ಹಣಕಾಸು ಪದ್ಧತಿಗಳನ್ನು ನಿರ್ಧರಿಸಲು ವಿವರಣೆಗಳನ್ನು ನೀಡುವ ವ್ಯವಸ್ಥೆ ಮಾಡುವುದರ ಸಲುವಾಗಿ ವಿಶೇಷ ಮಹಾಸಭೆಗೆ ಅಧಿಕೃತ ಪ್ರತಿನಿಧಿಗಳನ್ನು ಕಳಿಸಲು" ೧೮೬೩ರ ಬರ್ಲಿನ್‌ನ ಅಂತರರಾಷ್ಟ್ರೀಯ ಸಂಖ್ಯಾಶಾಸ್ತ್ರ ಮಹಾಸಭೆಯು ವಿವಿಧ ದೇಶಗಳನ್ನು ಕೇಳಿಕೊಳ್ಳಲು ನಿರ್ಧರಿಸಿತು.[೩] ಈ ಮಹಾಸಭೆಯ ಮಹತ್ವವನ್ನು ಕಡೆಗಣಿಸಲು ಬರುವುದಿಲ್ಲ. ಆದರೆ ಅದು ಈ ಉದ್ದೇಶದಿಂದ ಬೇರೆಯ ಕಡೆಗೆ ತನ್ನ ಗಮನವನ್ನು ಬದಲಿಸಿತು. ಮೊದಲಿನ ಮಹಾಸಭೆಗಳಲ್ಲಿ

---

೧. ರಿಪೋರ್ಟ್ ಆಫ್ ದಿ ರಾಯಲ್ ಕಮಿಷನ್ ಆನ್ ಇಂಟರ್‌ನ್ಯಾಷನಲ್ ಕಾಯಿನೇಜ್, ೧೮೬೮, ಪುಟ V

೨. ನೋಡಿರಿ : ರಸೆಲ್ ಎಚ್.ಬಿ. ಇಂಟರನ್ಯಾಷನಲ್ ಮಾನಿಟರಿ ಕಾನ್ಫರೆನ್ಸಸ್ ೧೮೯೮, ಪು. ೧೮೨೪

೩. ರಸೆಲ್ ಇವರು ಉಲ್ಲೇಖಿಸಿದ್ದು, ಆ ಕೃತಿಯಲ್ಲಿ ಪು. ೨೪

ಚರ್ಚಿಸಲಾದ ಪ್ರಶ್ನೆಯು ಬಹುತೇಕವಾಗಿ ತೂಕ ಮತ್ತು ಅಳತೆಗಳಲ್ಲಿಯ ಏಕರೂಪತೆಯಾಗಿತ್ತು. ಆದರೆ ಈ ಮಹಾಸಭೆಯಲ್ಲಿ "ಅದರ ಹಂತವನ್ನು ಏಕರೂಪ ನಾಣ್ಯ ತಯಾರಿಕೆಗೆ ಅಧೀನಗೊಳಿಸಿ ಬದಿಗಿಡಲಾಯಿತು."[೧] ಗೊತ್ತುವಳಿಯ ಉದ್ದೇಶದಲ್ಲಿ ಬದಲಾವಣೆಗಳಾಗಿದ್ದರೂ ಸುಧಾರಣೆಯನ್ನು ನಾಣ್ಯ ತಯಾರಿಕೆಯ ಏಕರೂಪತೆಯ ಪ್ರಶ್ನೆಗೆ ಸೀಮಿತಗೊಳಿಸಿದ್ದರೆ, ಅದು ಗಂಭೀರ ಪರಿಣಾಮಗಳಿಂದ ತುಂಬಿರುತ್ತಿರಲಿಲ್ಲ. ಆದರೆ ಅದರ ಅನ್ವಯಿಕೆಯನ್ನು ನಾಣ್ಯದ ಮೂಲ ಪ್ರಶ್ನೆಗೇ ವಿಸ್ತರಿಸುವ ಪ್ರಸಂಗವೊಂದು ಉಂಟಾಯಿತು. ಏಕರೂಪನಾಣ್ಯ ತಯಾರಿಕೆಗೆ ಆಂದೋಲನವು ತೀವ್ರವಾಗಿ ಬೆಳೆದಾಗ ಫ್ರೆಂಚ್ ಸರ್ಕಾರವು ಲ್ಯಾಟಿನ್ ಒಕ್ಕೂಟವನ್ನೂ ಒಳಗೊಂಡಂತೆ ಹಲವು ಕಡೆ ಈಗಾಗಲೇ ವಿಸ್ತರಿಸಲ್ಪಟ್ಟಿರುವ ತನ್ನ ನಾಣ್ಯಪದ್ಧತಿಯನ್ನು ಏಕರೂಪತೆಯ ಹಿತದ ದೃಷ್ಟಿಯಿಂದ ಎಲ್ಲ ದೇಶಗಳೂ ಮಾದರಿಯಾಗಿಟ್ಟುಕೊಂಡು ಅದನ್ನೇ ಅನುಸರಿಸಬೇಕೆಂದು ಸ್ವಾಭಾವಿಕವಾಗಿ ಇಚ್ಛಿಸಿತು. ಈ ಉದ್ದೇಶವನ್ನು ಮನಸ್ಸಿನಲ್ಲಿಟ್ಟುಕೊಂಡು ಫ್ರೆಂಚ್ ಸರ್ಕಾರವು ಆಗಿನ ಬ್ರಿಟಿಷ್ ಸರ್ಕಾರದ ಮುಂದೆ ಈ ಸಲಹೆಯನ್ನು ಇಟ್ಟಿತು. ಆದರೆ ಫ್ರಾನ್ಸ್ ಸುವರ್ಣದ ಏಕಲೋಹ ಪ್ರಮಿತಿಯನ್ನು ಜಾರಿಯಲ್ಲಿ ತರುವವರೆಗೆ ಅದರ ಸಲಹೆಯನ್ನು ಪರಿಶೀಲಿಸಲಾಗುವುದಿಲ್ಲವೆಂದು ಬ್ರಿಟಿಷ್ ಸರ್ಕಾರವು ಉತ್ತರ ಕೊಟ್ಟಿತು.[೨] ಇದರಿಂದ ವಿಚಲಿತವಾಗದ ಫ್ರಾನ್ಸ್, ಬ್ರಿಟನ್ನಿನ ಸ್ನೇಹವನ್ನು ಉಳಿಸಿಕೊಳ್ಳುವ ಸಲುವಾಗಿ, ಯಾವುದೇ ಅಳುಕೂ ಇಲ್ಲದೆ, ಬ್ರಿಟನ್ನಿನ ಸಲಹೆಯನ್ನು ಒಪ್ಪಿಕೊಂಡಿತು. ಅಷ್ಟಕ್ಕೇ ನಿಲ್ಲದೆ ಅದು ೧೮೬೭ರ ಪ್ಯಾರಿಸ್ ಸಮ್ಮೇಳನದಲ್ಲಿ 'ಚಿನ್ನವೊಂದನ್ನೇ ಆಧರಿಸಿದ ಹಣವನ್ನು ಮಾತ್ರ ಅಂತರರಾಷ್ಟ್ರೀಯ ವ್ಯವಹಾರದಲ್ಲಿ ಪ್ರಮುಖವಾದದ್ದೆಂದು ಪರಿಗಣಿಸಬೇಕು" ಎಂಬ ಗೊತ್ತುವಳಿಯನ್ನು ಮಂಜೂರು ಮಾಡುವಂತೆ ಮಾಡಿತು. ನಾಣ್ಯ ತಯಾರಿಕೆಯ ಪ್ರಶ್ನೆಗೆ ಎಷ್ಟೊಂದು ಮಹತ್ವವನ್ನು ನೀಡಲಾಯಿತೆಂದರೆ ಗೊತ್ತುವಳಿಯನ್ನು ಅಂಗೀಕರಿಸಿದವರು ಅದನ್ನು ಸಾಧಿಸಲು ಯಾವ ತ್ಯಾಗ ಮಾಡಬೇಕಾಗುವುದು ಎಂಬುದನ್ನು ಗಮನಿಸಿದಂತೆ ಕಾಣಲಿಲ್ಲ. ತಮ್ಮ ನಿರ್ಧಾರದಿಂದ ವಿಶ್ವದ ನಾಣ್ಯಪದ್ಧತಿಗೆ ಸಂಕಷ್ಟವನ್ನು ತಂದೊಡ್ಡುತ್ತಿದ್ದೇವೆ ಎಂಬುದನ್ನು[೩] ಅವರು ಅರಿಯಲಿಲ್ಲವೆಂದು ಹೇಳುವುದು ಬಹುಶಃ ಹೆಚ್ಚು ಸರಿ ಎನಿಸುತ್ತದೆ. ತಾವು ಮಾಡುತ್ತಿರುವುದು ನಾಣ್ಯ ತಯಾರಿಕೆಯ ಏಕರೂಪತೆಯನ್ನು ವೃದ್ಧಿಗೊಳಿಸುವುದಕ್ಕಿಂತ ಹೆಚ್ಚಿನದಲ್ಲ ಎಂದಷ್ಟೇ ಅವರು ಭಾವಿಸಿದರು.[೪] ಆದರೆ ಸಮಸ್ಯೆಯನ್ನು ಸರಳೀಕರಿಸುವ ದುರ್ಬಲಗೊಳಿಸುವ ಸಂದರ್ಭಗಳು ಏನೇ ಇದ್ದರೂ, ಪರಿಣಾಮವು ಮಾತ್ರ ಅನಾಹುತಕಾರಿಯಾಗಿತ್ತು. ಏಕೆಂದರೆ ನೆರೆದ ವಿವಿಧ ರಾಷ್ಟ್ರಗಳು ಗೊತ್ತುವಳಿಯನ್ನು ಜಾರಿಯಲ್ಲಿ ತಂದ ಮೇಲೆ ಸಮ್ಮೇಳನದ ನಿಜವಾದ ಉದ್ದೇಶವಾದ ನಾಣ್ಯ ತಯಾರಿಕೆಯ ಏಕರೂಪತೆಯು ಸಂಪೂರ್ಣ ಮಾಯವಾಗಿ ಸೂಚಿಸಿದ ಸಾಧನಗಳು ಕೊನೆಗೆ ವಾಸ್ತವ ಗುರಿಗಳಾದವು.

ಒಮ್ಮೆ ಆರಂಭವಾದ ಬೆಳ್ಳಿಯ ನಾಣ್ಯದ ಅನಾಣ್ಯೀಕರಣ ಕೆಲಸವು ಶೀಘ್ರವಾಗಿ ಬೆಳೆಯಲಾರಂಭಿಸಿತು. ಈ ಕ್ಷೇತ್ರದಲ್ಲಿ ಜರ್ಮನಿ ಮೊದಲ ಹೆಜ್ಜೆಯನ್ನು ಇಟ್ಟಿತು. ೧೮೭೦ರ ಸಮರದಲ್ಲಿ ಫ್ರಾನ್ಸ್ ದೇಶವನ್ನು

---

೧. ರಸೆಲ್ ಅದೇ ಸ್ಥಳದಲ್ಲಿ ಉಲ್ಲೇಖಿಸಿದ್ದು.

೨. ನೋಡಿರಿ : ಪ್ರೊಫೆಸರ್ ಫಾಕ್ಸ್‌ವೆಲ್ ಇವರ ಪುರಾವೆ, ಪ್ರ ೨೩೮೭೬ ರಾಯಲ್ ಕಮಿಷನ್ ಆನ್ ಅಗ್ರಿಕಲ್ಚರಲ್ ಡಿಪ್ರೆಶನ್ ಇನ್ ಇಂಗ್ಲೆಂಡ್ ೧೮೯೨

೩. ಅದಕ್ಕೆ ನೋಡಿ : ರಸೆಲ್, ಕೃತಿಯಲ್ಲಿ ಉಲ್ಲೇಖಿಸಿದ್ದು, ಪು. ೪೬

೪. ಗೌರವಾರ್ಹ ಅಪವಾದವೊಂದನ್ನು ಹೇಳಬೇಕಾಗುತ್ತದೆ. ಅದೆಂದರೆ ಹಾಲೆಂಡ್‌ನ ಪ್ರತಿನಿಧಿಯಾದ ಡಾ. ಮೀಸ್ ಅವರು ಈ ಗೊತ್ತುವಳಿಯಿಂದ ಉದ್ಭವಿಸಬಹುದಾದ ಪರಿಣಾಮದ ಬಗ್ಗೆ ಗಮನ ಸೆಳೆದರು.

ಸೋಲಿಸಿ ಅದು ಜರ್ಮನಿಯ ಸಂಯುಕ್ತ ಸಾಮ್ರಾಜ್ಯದ ಸಲುವಾಗಿ ಸುವರ್ಣ ಪ್ರಮಿತಿಯನ್ನು ಜಾರಿಗೆ ತರಲು ಅವಸರಮಾಡಿ ತನ್ನ ಅವ್ಯವಸ್ಥಿತ ನಾಣ್ಯದ[1] ಸುಧಾರಣೆಗೆ ಯುದ್ಧದ ಪರಿಹಾರ ಧನವನ್ನು ಉಪಯೋಗಿಸಿತು. ಡಿಸೆಂಬರ್ ೪, ೧೮೭೧ರ ಕಾಯಿದೆಯು ಮಾರ್ಕ್‌ನ್ನು ನಾಣ್ಯ ಘಟಕವನ್ನಾಗಿ ಮಾಡುವ ಬದಲಾವಣೆಗೆ ಅಧಿಕಾರ ನೀಡಿತು. ಈ ಕಾಯಿದೆಯ ಮುಖಾಂತರ ಬೆಳ್ಳಿಯನ್ನು ಅನಾಣ್ಯೀಕರಣಗೊಳಿಸಲಾಯಿತು. ಆದರೆ ಅಸ್ತಿತ್ವದಲ್ಲಿದ್ದ ಬೆಳ್ಳಿಯ ನಾಣ್ಯಗಳು ಅವುಗಳ, ಮುಂದಿನ ನಾಣ್ಯ ತಯಾರಿಕೆಯು ನಿಂತಿತಾದರೂ, ಹೊಸ ಚಿನ್ನದ ನಾಣ್ಯಗಳ ಕೂಡ ೧೫೧/೨ಗೆ ಒಂದರ ಅನುಪಾತದಲ್ಲಿ ಕಾನೂನುಬದ್ಧ ಹಣವಾಗಿ ಮುಂದುವರಿದವು. ಜೂನ್ ೯, ೧೮೭೩ರ ಕಾಯಿದೆಯು ಬೆಳ್ಳಿನಾಣ್ಯಗಳ ಸಂಪೂರ್ಣ ಕಾನೂನುಬದ್ಧ ಹಣದ ಅಧಿಕಾರವನ್ನು ಕಸಿದುಕೊಂಡು ಅವುಗಳನ್ನು ಪೂರಕ ನಾಣ್ಯದ ಸ್ಥಾನಕ್ಕಿಳಿಸಿತು.[2] ಜರ್ಮನ್ ಸಂಸ್ಕೃತಿಯನ್ನು ಹೊಂದಿದ್ದ ಇತರ ರಾಷ್ಟ್ರಗಳು ಈ ಧೋರಣೆಯನ್ನು ತಕ್ಷಣ ಅನುಕರಿಸಿದವು.[3] ೧೮೭೨ ರಲ್ಲಿ ನಾರ್ವೆ, ಸ್ವೀಡನ್ ಮತ್ತು ಡೆನ್ಮಾರ್ಕ್‌ಗಳು ಲ್ಯಾಟಿನ್ ಹಣಕಾಸು ಒಕ್ಕೂಟದ ಮಾದರಿಯಲ್ಲಿಯೇ ಸ್ಕ್ಯಾಂಡಿನೇವಿಯನ್ ಹಣಕಾಸು ಒಕ್ಕೂಟವನ್ನು ರಚಿಸಿಕೊಂಡು ಜರ್ಮನಿಯಲ್ಲಿ ಮಾಡಿದಂತೆ ಬೆಳ್ಳಿಯನ್ನು ಅನಾಣ್ಯೀಕರಣಗೊಳಿಸಲು ಒಪ್ಪಿದವು. ಸುವರ್ಣ ಪ್ರಮಿತಿಯನ್ನು ಸ್ಥಾಪಿಸಿದ ಮತ್ತು ಅಸ್ತಿತ್ವದಲ್ಲಿದ್ದ ಬೆಳ್ಳಿಯ ನಾಣ್ಯವನ್ನು ಅಧೀನ ಸ್ಥಾನಕ್ಕಿಳಿಸಿದ ಈ ಒಪ್ಪಂದವನ್ನು ಸ್ವೀಡನ್ ಮತ್ತು ಡೆನ್ಮಾರ್ಕ್ ದೇಶಗಳು ೧೮೭೩ರಲ್ಲಿಯೂ ಮತ್ತು ನಾರ್ವೆ ೧೮೭೫ರಲ್ಲಿಯೂ ಸ್ಥಿರೀಕರಿಸಿದವು. ಹಾಲೆಂಡ್ ಕೂಡ ಹೀಗೆಯೇ ಮಾಡಿತು. ೧೮೭೨ರವರೆಗೆ ಅದು ಶುದ್ಧ ಬೆಳ್ಳಿಯ ಪ್ರಮಿತಿಯನ್ನು ಹೊಂದಿತ್ತು. ಆ ವರ್ಷ ಎಲ್ಲಾ ಮೊತ್ತದ ಹಳೆಯ ಬೆಳ್ಳಿಯ ನಾಣ್ಯಗಳು ಕಾನೂನುಬದ್ಧ ಹಣವಾಗಿ ಮುಂದುವರೆದರೂ, ಹಾಲೆಂಡ್ ಬೆಳ್ಳಿಯ ಮುಕ್ತ ನಾಣ್ಯ ತಯಾರಿಕೆಯ ತನ್ನ ಟಂಕಸಾಲೆಯನ್ನು ಮುಚ್ಚಿತು. ೧೮೭೫ ರಲ್ಲಿ ಅದು ಒಂದು ಹೆಜ್ಜೆ ಮುಂದೆ ಹೋಗಿ ಚಿನ್ನದ ಮುಕ್ತ ನಾಣ್ಯ ತಯಾರಿಕೆಗೆ ತನ್ನ ಟಂಕಸಾಲೆಗಳನ್ನು ತೆರೆಯಿತು. ಅದರ ಧೋರಣೆಯು ಜರ್ಮನ್ ಸಂಸ್ಕೃತಿಯ ದೇಶಗಳ ಧೋರಣೆಯಿಂದ ಭಿನ್ನವಾಯಿತು. ಏಕೆಂದರೆ ಉಳಿದ ದೇಶಗಳು ಬೆಳ್ಳಿಯ ನಾಣ್ಯದ ಅನಾಣ್ಯೀಕರಣ ಮಾಡಿದರೆ ಹಾಲೆಂಡ್ ಬೆಳ್ಳಿಯ ನಾಣ್ಯದ ಮುಕ್ತ ತಯಾರಿಕೆಯನ್ನು ಮಾತ್ರ ರದ್ದುಮಾಡಿತ್ತು. ಲ್ಯಾಟಿನ್ ಒಕ್ಕೂಟವು ಕೂಡ ಬೆಳ್ಳಿಯ ವಿರುದ್ಧವಿದ್ದ ಈ ಗತಿಯನ್ನು ತಡೆಗಟ್ಟಲು ಸಮರ್ಥವಾಗಲಿಲ್ಲ. ಬೆಳ್ಳಿಯನ್ನು ಅನಾಣ್ಯೀಕರಣ ಮಾಡಿದ ಪರಿಣಾಮವಾಗಿ ಹೆಚ್ಚಿನ ಸದಸ್ಯರಿಂದ ಕೂಡಿದ್ದ ಲ್ಯಾಟಿನ್ ಒಕ್ಕೂಟವು ಸಹಜವಾಗಿ ಈ ಮೌಲ್ಯವನ್ನು ಕಳೆದುಕೊಂಡಿದ್ದ ಬೆಳ್ಳಿಯು ತಮ್ಮ ದೇಶಗಳಿಗೆ ಬರುವುದನ್ನು ತಡೆಯಲು ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳ್ಳಲು ಇಚ್ಛಿಸಿತು. ಈ ಭಯಕ್ಕೆ ಆಧಾರವಿರದಿರಲಿಲ್ಲ. ಏಕೆಂದರೆ ೧೮೭೩ರಲ್ಲಿ ಬೆಲ್ಜಿಯಮ್‌ನ ಟಂಕಸಾಲೆಯಲ್ಲಿ ನಾಣ್ಯ ತಯಾರಿಕೆಗೆ ನೀಡಿದ ಬೆಳ್ಳಿಯು ೧೮೭೧ ರಲ್ಲಿ ಕೊಟ್ಟ ಬೆಳ್ಳಿಗಿಂತ

---

೧. ೧೮೭೦ ರ ಪೂರ್ವದ ಜರ್ಮನ್ ನಾಣ್ಯದ ಏಕೀಕರಣದ ಸಲುವಾಗಿ ಆಂದೋಲನದ ಇತಿಹಾಸಕ್ಕಾಗಿ ನೋಡಿ : ಎಚ್.ಪಿ. ವಿಲ್ಲಿಸ್, "ದಿ ವಿಯನ್ನಾ ಮಾನಿಟರಿ ಟ್ರೀಟಿ ಆಫ್ ೧೮೫೭", ಜರ್ನಲ್ ಆಫ್ ಪೊಲಿಟಿಕಲ್ ಇಕಾನಮಿ ಇದರಲ್ಲಿ ಸಂಪುಟ IV, ಪು. ೧೮೭ ಮತ್ತು ನಂತರದ ಪುಟಗಳು.

೨. ಕಾಯಿದೆಗಳ ಪಠ್ಯಕ್ಕೆ ಪ್ರೊ ಜೆ.ಎಲ್. ಲಾಫ್ಲಿನ್ ಅವರ ಹಿಸ್ಟರಿ ಆಫ್ ಬೈಮೆಟಾಲಿಸಂ ಇದರ ಅನುಬಂಧ ನೋಡಿರಿ, ನ್ಯೂಯಾರ್ಕ್, ೧೮೮೬.

೩. ನೋಡಿ : ರಿಪೋರ್ಟ್ ಆಫ್ ದಿ ಕಮಿಟಿ ಆನ್ ದಿ ಡಿಪ್ರೆಸಿಯೇಶನ್ ಆಫ್ ಸಿಲ್ವರ್, ೧೮೭೬, ಪು. XXIX

ಮೂರುಪಟ್ಟು ಹೆಚ್ಚು ಇತ್ತು. ಮುಂದೆ ತೊಂದರೆಯಲ್ಲಿ ಸಿಕ್ಕಿಕೊಳ್ಳುವುದರ ಬದಲು ಬೆಲ್ಜಿಯಮ್ ಡಿಸೆಂಬರ್ ೮, ೧೮೭೩ರ ಕಾಯಿದೆಯ ಮೂಲಕ ತನ್ನ ಐದು ಫ್ರ್ಯಾಂಕ್‌ನ ಬೆಳ್ಳಿಯ ನಾಣ್ಯಗಳ ಮುಕ್ತ ತಯಾರಿಕೆಯನ್ನು ಅಮಾನತ್ತಿನಲ್ಲಿಟ್ಟಿತು. ಬೆಲ್ಜಿಯಮ್‌ನ ಈ ಕ್ರಮವು ಅಂಥವೇ ಕ್ರಮಗಳನ್ನು ತೆಗೆದುಕೊಳ್ಳಲು ಒಕ್ಕೂಟದ ಇತರ ದೇಶಗಳ ಮೇಲೆ ಒತ್ತಾಯವನ್ನು ಹೇರಿತು. ಒಕ್ಕೂಟದ ನಿಯೋಗಿಗಳು ಜನವರಿ ೧೮೭೪ರಲ್ಲಿ ಪ್ಯಾರಿಸಿನಲ್ಲಿ ಸಭೆ ಸೇರಿ "೧೮೬೫ರಲ್ಲಿ ಪ್ರಥಮವಾಗಿ ರೂಪಿಸಿದ ಪೂರಕ ಒಪ್ಪಂದಕ್ಕೆ ಒಪ್ಪಿ ಮತ್ತು ಬೆಳ್ಳಿಯ ಐದು ಫ್ರ್ಯಾಂಕ್ ನಾಣ್ಯಗಳನ್ನು ಒಂದು ಸೀಮಿತ ಮೊತ್ತಕ್ಕೆ ನಿಯಮಿತಗೊಳಿಸಿ ವ್ಯಕ್ತಿಗಳಿಂದ ಮುಕ್ತ ನಾಣ್ಯ ತಯಾರಿಕೆಯ ಸಂಪೂರ್ಣ ಹಕ್ಕನ್ನು ಹಿಂತೆಗೆದುಕೊಳ್ಳಲು ನಿರ್ಧರಿಸಿದರು. ಈ ನಾಣ್ಯಗಳನ್ನು ಒಕ್ಕೂಟದ ಪ್ರತಿಯೊಂದು ರಾಜ್ಯವು ೧೮೭೪ ರಲ್ಲಿ ತಯಾರಿಸತಕ್ಕದ್ದು."[೧]

೧೮೭೪ ಕ್ಕೆ ನಿಗದಿತವಾಗಿದ್ದ ಅನುಕ್ರಮ ಪ್ರಮಾಣಗಳನ್ನು ೧೮೯೫ ರಲ್ಲಿ ಸ್ವಲ್ಪಮಟ್ಟಿಗೆ ಹೆಚ್ಚಿಸಲಾಯಿತು. ಆದರೆ ಅವುಗಳನ್ನು ೧೮೭೬ರಲ್ಲಿ ಕಡಿಮೆ ಮಾಡಲಾಯಿತು.[೨] ಆದರೆ ಅವು ವಾಸ್ತವಿಕ ನಾಣ್ಯ ತಯಾರಿಕೆಯು ಈ ಅಲ್ಪ ಪ್ರಮಾಣಗಳನ್ನು ಕೂಡ ತಲುಪಲಿಲ್ಲ. ಬೆಳ್ಳಿಯ ನಾಣ್ಯದ ಸ್ಥಿತಿಯಲ್ಲಿ ಒಕ್ಕೂಟವು ಬಹಳಷ್ಟು ಅಸ್ತವ್ಯಸ್ತತೆಗೆ ಒಳಗಾದದ್ದರಿಂದ ೧೮೭೭ರಲ್ಲಿ ಇಟಲಿಯನ್ನು ಹೊರತುಪಡಿಸಿ[೩] ಉಳಿದ ದೇಶಗಳಲ್ಲಿ ಬೆಳ್ಳಿಯ ಐದು ಫ್ರ್ಯಾಂಕು ನಾಣ್ಯಗಳ ತಯಾರಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು. ಈ ಕ್ರಮವು ನವೆಂಬರ್ ೫, ೧೮೭೮ರ ಒಪ್ಪಂದಕ್ಕೆ ಕೇವಲ ಪೂರ್ವಭಾವಿ ಕ್ರಮವಾಯಿತು. ಈ ಒಪ್ಪಂದದ ಮೂಲಕ ಲ್ಯಾಟಿನ್ ಒಕ್ಕೂಟವು ಮುಂದಿನ ಕ್ರಮದವರೆಗೆ ತನ್ನ ಟಂಕಸಾಲೆಗಳಲ್ಲಿ ಬೆಳ್ಳಿಯ ನಾಣ್ಯಗಳ ಮುಕ್ತ ತಯಾರಿಕೆಯನ್ನು ಮುಚ್ಚಿತು. ಮೊದಲು ಈ ರದ್ದತಿಯು ಅನಿರ್ದಿಷ್ಟ ಅವಧಿಯವರೆಗೆ ಇದ್ದರೂ, ಕೊನೆಗೆ ಶಾಶ್ವತವಾಯಿತು.[೪] ಏಕಕಾಲಕ್ಕೆ ಲ್ಯಾಟಿನ್ ಒಕ್ಕೂಟದ ಮುಂಜಾಗ್ರತಾ ಕ್ರಮಗಳೊಂದಿಗೆ ೧೮೭೬ ರಲ್ಲಿ ರಷ್ಯಾ ಚೀನಾದೊಂದಿಗೆ ಇದ್ದ ತನ್ನ ವ್ಯಾಪಾರದ ಉದ್ದೇಶಗಳಿಗೆ ಆವಶ್ಯಕವಿದ್ದ ಮೊತ್ತವನ್ನು ಬಿಟ್ಟು ಬೆಳ್ಳಿಯ ನಾಣ್ಯ ತಯಾರಿಕೆಯನ್ನು ನಿಲ್ಲಿಸಿತು[೫] ಮತ್ತು ಐದು ರೂಬಲ್ಲುಗಳು ಮತ್ತು ೧೫ ಕಾಪೆಕ್ಸ್‌ಗಳ

---

೧. ಲಾಫ್‌ಲಿನ್, ಕೃತಿಯಲ್ಲಿ ಉಲ್ಲೇಖಿಸಿದ್ದು, ಪು. ೧೫೫

೨. ಸಮ್ಮೇಳನದಲ್ಲಿ ಒಕ್ಕೂಟದ ಅನೇಕ ಸದಸ್ಯರಿಗೆ ನಿಗದಿಪಡಿಸಿದ ಪ್ರಮಾಣಗಳು ಇಂತಿದ್ದವು :

ದಶಲಕ್ಷ ಫ್ರ್ಯಾಂಕುಗಳಲ್ಲಿ

| | ೧೮೭೪ | ೧೮೭೫ | ೧೮೭೬ |
|---|---|---|---|
| ಫ್ರ್ಯಾನ್ಸ್ | ೬೦ | ೭೫ | ೫೪ |
| ಬೆಲ್ಜಿಯಮ್ | ೧೨ | ೫೦ | ೩೬ |
| ಇಟಲಿ | ೪೦ | ೧೫ | ೧೦ |
| ಸ್ವಿಟ್ಜರ್ಲೆಂಡ್ | ೮ | ೧೯ | ೭ |
| ಗ್ರೀಸ್ | – | – | – |
| | ೧೨೦ | ೧೫೦ | ೧೧೦ |

ಇಟಲಿಗೆ ೧೮೭೪ರಲ್ಲಿ ಹೆಚ್ಚಿನ ೨೦ ದಶಲಕ್ಷ ಫ್ರ್ಯಾಂಕುಗಳನ್ನು ಕೊಡಲಾಯಿತು ಇದೇ ಸ್ಥಳದಲ್ಲಿ, ಪು. ೧೫೫

೩. ಅದು ಅವುಗಳ ೧೦ ದಶಲಕ್ಷ ನಾಣ್ಯಗಳನ್ನು ತಯಾರಿಸಲು ಅನುಮತಿ ಪಡೆಯಿತು.

೪. ಅದೇ ಸ್ಥಳದಲ್ಲಿ ಪು. ೧೫೮

೫. ಟಂಕಸಾಲೆಯ ನಿರ್ದೇಶಕರ ವರದಿ, ವಾಷಿಂಗ್ಟನ್, ೧೮೯೩, ಪು. ೨೩

ಮೇಲಿನ ಸಮುದ್ರ ಸುಂಕವನ್ನು ಚಿನ್ನದಲ್ಲಿ ಕೊಡತಕ್ಕದ್ದೆಂದು ನವೆಂಬರ್ ೨೨, ೧೮೭೮ರ ಇಂಪೀರಿಯಲ್ ನ್ಯಾಯಾಲಯವು ನಿರ್ದೇಶಿಸಿತು.[1] ಅದೇ ರೀತಿಯಲ್ಲಿ ಆಸ್ಟ್ರಿಯಾ ೧೮೭೯ ರಲ್ಲಿ ಬೆಳ್ಳಿಯ ನಾಣ್ಯಗಳ ಮುಕ್ತ ತಯಾರಿಕೆಯನ್ನು ನಿಲ್ಲಿಸಿತು.[2]

ಅಟ್ಲಾಂಟಿಕ್‌ನ ಆಚೆಗೆ ಅಮೆರಿಕೆಯಲ್ಲಿ ಒಂದು ಮಹತ್ವದ ಘಟನೆ ಉಂಟಾಗಿತ್ತು. ೧೮೭೦ರಲ್ಲಿ ಅಲ್ಲಿನ ಸರ್ಕಾರವು ೧೮೩೭ರಿಂದ ಪರಿಷ್ಕರಣೆ ಮಾಡಿರದಿದ್ದ ಟಂಕಸಾಲೆಯ ಎಲ್ಲಾ ಕಾಯಿದೆಗಳನ್ನು ಒಂದು ಸಮಗ್ರ ಶಾಸನದ ಅಡಿಯಲ್ಲಿ ಕ್ರೋಢೀಕರಿಸಿ ನಿರ್ಣಯ ತೆಗೆದುಕೊಂಡಿತು. ೧೮೫೩ ರ ಶಾಸನದ ನಂತರ ಅಮೆರಿಕೆಯ ಟಂಕಸಾಲೆಗಳೂ ಮುಕ್ತವಾಗಿ ತಯಾರಿಸಿದ ನಾಣ್ಯವೆಂದರೆ ಕೇವಲ ಬೆಳ್ಳಿಯ ಡಾಲರ್. ಆದರೆ ೧೮೭೩ರ ಹೊಸ ಕ್ರೋಢೀಕೃತ ಟಂಕಸಾಲೆಗಳ ಅಧಿನಿಯಮದಲ್ಲಿ ಟಂಕಸಾಲೆಗಳು ತಯಾರಿಸುವ ನಾಣ್ಯಗಳ ಪಟ್ಟಿಯಿಂದ ಬೆಳ್ಳಿಯ ಡಾಲರನ್ನು ತೆಗೆದುಹಾಕಲಾಯಿತು. ಹೀಗಾಗಿ ಅಂದಿನಿಂದ ವಾಸ್ತವವಾಗಿ ಅಮೆರಿಕೆಯಲ್ಲಿ ಬೆಳ್ಳಿಯ ಮುಕ್ತ ನಾಣ್ಯ ತಯಾರಿಕೆಯು ರದ್ದಾಯಿತು.[3] ಹಿಂದೆ ತಯಾರಿಸಿದ ಬೆಳ್ಳಿಯ ಡಾಲರುಗಳು ಸಂಪೂರ್ಣ ಕಾನೂನುಬದ್ಧ ಹಣವಾಗಿ ಚಲಾವಣೆಯಲ್ಲಿ ಮುಂದುವರಿದವು. ಆದರೆ ಜೂನ್ ೧೮೭೪ರ ಕಾಯಿದೆಯು ಈ ಸ್ಥಾನವನ್ನು ಕಿತ್ತುಕೊಂಡಿತು. "ಯಾವುದೇ ಒಂದು ಪಾವತಿಯಲ್ಲಿ ಐದು ಡಾಲರುಗಳಿಗೆ ಮೀರದ ಯಾವುದೇ ಮೊತ್ತಕ್ಕೆ ತಮ್ಮ ಮುಖಬೆಲೆಯಲ್ಲಿ ಅಮೆರಿಕೆಯ ಬೆಳ್ಳಿಯ ನಾಣ್ಯಗಳು ಕಾನೂನುಬದ್ಧ ಹಣವಾಗುವುವು" ಎಂದು ಕಾಯಿದೆಯು ಸಾರಿತು.

ಚಿನ್ನಕ್ಕೆ ಹೋಲಿಸಿದಂತೆ ಬೆಳ್ಳಿಯ ಉತ್ಪಾದನೆಯಲ್ಲಿಯ ದೊಡ್ಡ ಹೆಚ್ಚಳವು ಚಿನ್ನ ಮತ್ತು ಬೆಳ್ಳಿಗಳ ಸಾಪೇಕ್ಷ ಮೌಲ್ಯಗಳಲ್ಲಿಯ ಸ್ಥಾನಪಲ್ಲಟದ ವಿವರಣೆಯಲ್ಲಿಯ ಮತ್ತೊಂದು ಅಂಶವಾಗಿತ್ತು.

---

೧. ಹೋಲಿಸಿ : ಪಿ. ವಿಲ್ಲಿಸ್, "ಮಾನಿಟರಿ ರಿಫಾರ್ಮ್ಸ್ ಇನ್ ರಷ್ಯಾ", ಜರ್ನಲ್ ಆಫ್ ಪೊಲಿಟಿಕಲ್ ಇಕಾನಮಿ, ಸಂಪುಟ, V, ಇದರಲ್ಲಿ ಪು. ೨೯೧

೨. ಹೋಲಿಸಿ : ಎಫ್. ವೈಜರ್, "ರಿಸಪ್ಷನ್ ಆಫ್ ಸ್ಪೀಸಿ ಪೇಮೆಂಟ್ ಇನ್ ಆಸ್ಟ್ರಿಯಾ–ಹಂಗೇರಿ", ಜರ್ನಲ್ ಆಫ್ ಪೊಲಿಟಿಕಲ್ ಇಕಾನಮಿ, ಸಂಪುಟ ೧ ಇದರಲ್ಲಿ ಪುಟಗಳು ೨೮೦–೭

೩. ಈ ಕ್ರಮವು ವಿಲಕ್ಷಣ ವಿವಾದಕ್ಕೆ ಒಳಗಾಯಿತು. ಚಿನ್ನದ ಪ್ರತಿಪಾದಕರು ಇದನ್ನು ಉದ್ದೇಶಪೂರ್ವಕವಾಗಿ ಜಾರಿಯಲ್ಲಿ ತರಲಾಯಿತು ಎಂದು ವಾದಿಸಿದರೆ, ಬೆಳ್ಳಿಯ ಪ್ರತಿಪಾದಕರು "ನೀಚತನದ ಉಪಾಯ ಮತ್ತು ನೀಚತನದ ಮೌನಸಮ್ಮತಿ ಇವುಗಳ ಸಂಯೋಗ" ದಿಂದ ತೆಗೆದುಕೊಳ್ಳಲಾದ ಮೋಸದ ಕ್ರಮವೆಂದು ಹೇಳಿದರು. ಪ್ರೊ. ಲಾಫ್‌ಲಿನ್ ಈ ಕಾಯಿದೆಯಲ್ಲಿ ಅಡಗಿದ ರಹಸ್ಯವನ್ನು ಚೆನ್ನಾಗಿ ಹೊರಗೆಡವಿದ್ದಾರೆ. ೧೮೫೩ರ ಶಾಸನದ ಮೇಲೆ ಮಹಾಸಭೆಯಲ್ಲಿಯ ಚರ್ಚೆಯನ್ನು ಉಲ್ಲೇಖಿಸುತ್ತ ಚಿನ್ನ ಮತ್ತು ಬೆಳ್ಳಿಗಳ ನಡುವಿನ ಪ್ರಮಾಣವನ್ನು ಬದಲಾಯಿಸಲು ನಿರಾಕರಿಸುವುದರಿಂದ ಅದು ದೇಶವನ್ನು ಸುವರ್ಣ ಪ್ರಮಿತಿಯತ್ತ ಒಯ್ಯುತ್ತಿದೆ ಎಂಬುದು ಮಹಾಸಭೆಗೆ ಗೊತ್ತಿತ್ತು ಎಂದು ಅವರು ತೋರಿಸುತ್ತಾರೆ. ೧೮೭೩ರ ಕಾಯಿದೆಗೆ ಅತಿ ಮಹತ್ವ ನೀಡಲಾಗಿದೆ ಎಂದು ಅವರು ಭಾವಿಸುತ್ತಾರೆ. ಈ ಕಾಯಿದೆಯು ೧೮೫೩ರ ಕಾಯಿದೆಯ ಪರಿಣಾಮಗಳ ಕಾನೂನು ಅಂಶವನ್ನು ಮಾತ್ರ ಪರಿಶೀಲಿಸಿತು. ನೋಡಿ : ಅವರ ಹಿಸ್ಟರಿ ಆಫ್ ಬೈಮೆಟ್ಯಾಲಿಸಂ ಪುಟಗಳು ೮೦ ಮತ್ತು ೯೩–೯೫.

**ಪಟ್ಟಿ IX**

**ಚಿನ್ನ ಮತ್ತು ಬೆಳ್ಳಿ ಇವುಗಳ ಸಾಪೇಕ್ಷ ಉತ್ಪಾದನೆ**

(ಔನ್ಸುಗಳಲ್ಲಿ)

| ಅವಧಿ | ಒಟ್ಟು ಉತ್ಪಾದನೆ | | ವಾರ್ಷಿಕ ಸರಾಸರಿ ಉತ್ಪಾದನೆ | | ಸರಾಸರಿ ವಾರ್ಷಿಕ ಉತ್ಪಾದನೆಯ ಸೂಚ್ಯಂಕ | |
|---|---|---|---|---|---|---|
| | ಚಿನ್ನ | ಬೆಳ್ಳಿ | ಚಿನ್ನ | ಬೆಳ್ಳಿ | ಚಿನ್ನ | ಬೆಳ್ಳಿ |
| ೧೪೯೩–೧೬೦೦ | ೨೪,೨೬೬,೮೨೦ | ೭೩೪,೧೨೫,೯೬೦ | ೨೨೪,೬೯೩ | ೬,೭೯೭,೪೬೩ | ೧೦೦ | ೧೦೦ |
| ೧೬೦೧–೧೭೦೦ | ೨೯,೩೩೦,೪೪೫ | ೧,೧೯೭,೦೭೩,೧೦೦ | ೨೯೩,೩೦೪ | ೧೧,೯೭೦,೭೩೧ | ೧೩೦.೫ | ೧೭೬.೧ |
| ೧೭೦೧–೧೮೦೦ | ೬೧,೦೮೮,೨೧೫ | ೧,೮೩೩,೬೭೨,೦೩೫ | ೬೧೦,೮೮೨ | ೧೮,೩೩೬,೭೨೦ | ೨೭೧.೮ | ೨೬೯.೭ |
| ೧೮೦೧–೧೮೪೦ | ೨೦,೪೮೮,೫೫೨ | ೮೦೧,೧೫೫,೪೯೫ | ೫೧೨,೨೧೭ | ೨೦,೦೨೮,೮೮೭ | ೨೨೭೯ | ೨೯೩.೧ |
| ೧೮೪೧–೧೮೭೦ | ೧೪೩,೧೮೬,೨೨೪ | ೯೩೧,೦೯೧,೩೨೬ | ೪,೭೭೨,೮೭೬ | ೩೧,೦೩೮,೩೭೮ | ೨,೧೨೪.೧ | ೪೫೬.೬ |
| ೧೮೭೧–೧೮೯೦ | ೧೦೬,೯೫೦,೮೦೨ | ೧,೭೧೫,೦೩೯,೯೫೫ | ೫,೩೪೭,೫೪೫ | ೮೫,೭೫೧,೯೯೮ | ೨,೩೭೫.೪ | ೧,೨೬೧.೫ |

ಆಧುನಿಕ ಕಾಲದಲ್ಲಿ ಅಮೂಲ್ಯ ಲೋಹಗಳ ಉತ್ಪಾದನೆಯ ಇತಿಹಾಸವು ೧೪೯೩ರಲ್ಲಿ ಪ್ರಾರಂಭವಾಗುವುದು. ಇದೇ ವರ್ಷ ಅಮೆರಿಕ ಖಂಡದ ಶೋಧವಾಗಿತ್ತು. ೧೪೯೩ ರಿಂದ ೧೮೯೩ ರ ವರೆಗಿನ ೪೦೦ ವರ್ಷ ಅವಧಿಯಲ್ಲಿಯ ಉತ್ಪಾದನೆಯ ಪರಿಮಾಣಗಳನ್ನು ವಿಮರ್ಶಿಸಿದಾಗ ಮೊದಲಿನ ೧೦೦ ವರ್ಷಗಳಲ್ಲಿ ಚಿನ್ನ ಮತ್ತು ಬೆಳ್ಳಿಗಳ ಉತ್ಪಾದನೆಯು ಪ್ರಗತಿದಾಯಕವಾಗಿ ಏಕರೂಪ ಪ್ರಮಾಣದಲ್ಲಿ ಹೆಚ್ಚುತ್ತಿರುವುದನ್ನು ನಾವು ಕಾಣುತ್ತೇವೆ. ಚಿನ್ನ ಮತ್ತು ಬೆಳ್ಳಿಗಳ ಉತ್ಪಾದನೆಯ ಆಧುನಿಕ ಇತಿಹಾಸದಲ್ಲಿ ಅವುಗಳ ವಾರ್ಷಿಕ ಸರಾಸರಿ ಉತ್ಪಾದನೆಯು ಮೊದಲಿನ ೧೦೦ ವರ್ಷಗಳಲ್ಲಿ (೧೪೯೩–೧೬೦೦) ನೂರು ಇತ್ತೆಂದು ಊಹಿಸಿದಲ್ಲಿ ಮುಂದಿನ ಶತಕದಲ್ಲಿ (೧೬೦೧–೧೭೦೦) ಚಿನ್ನದ ಉತ್ಪಾದನಾ ಸೂಚ್ಯಂಕವು ೧೭೬ ಕ್ಕೆ ಏರುವುದು. ಪ್ರಗತಿಯ ಈ ಪ್ರಮಾಣವು ಮುಂದಿನ ಶತಕದಲ್ಲಿ (೧೭೦೦–೧೮೦೦) ಮುಂದುವರಿಯಿತು. ಈ ಶತಕದಲ್ಲಿ ಚಿನ್ನ ಮತ್ತು ಬೆಳ್ಳಿ ಇವೆರಡೂ ೨೭೦ಕ್ಕೆ ಸಮೀಪಿಸುತ್ತದೆ ಮತ್ತು ಈ ಪ್ರವೃತ್ತಿ ೧೮೪೦ರವರೆಗೆ ಹೆಚ್ಚು ಆತಂಕವಿಲ್ಲದೇ ಮುಂದುವರಿಯುವುದು. ೧೮೪೦ರಲ್ಲಿ ಬಂಗಾರ ಮತ್ತು ಬೆಳ್ಳಿಗಳ ಸೂಚ್ಯಂಕಗಳು ಕ್ರಮವಾಗಿ ೨೨೮ ಮತ್ತು ೨೯೩ ಇದ್ದವು. ಇಲ್ಲಿಂದ ಮುಂದಕ್ಕೆ ಎರಡು ಲೋಹಗಳ ಸಾಪೇಕ್ಷ ಉತ್ಪಾದನೆಯು ಸಂಪೂರ್ಣವಾಗಿ ಕ್ರಾಂತಿಗೊಳಗಾಯಿತು. ನಂತರದ ೩೦ ವರ್ಷಗಳಲ್ಲಿ (೧೮೪೧–೭೦) ಚಿನ್ನದ ಉತ್ಪಾದನೆಯು ಹಿಂದೆಂದೂ ಕಾಣದ ಎತ್ತರಗಳನ್ನು ಮುಟ್ಟಿತು. ಆದರೆ ಬೆಳ್ಳಿಯ ಉತ್ಪಾದನೆಯು ಸಾಪೇಕ್ಷವಾಗಿ ಹಿಂದುಳಿಯಿತು. ಬೆಳ್ಳಿಯ ಉತ್ಪಾದನೆಯ ಸೂಚ್ಯಂಕವು ೪೫೦ಕ್ಕೆ ಏರಿದರೆ ಚಿನ್ನದ ಉತ್ಪಾದನೆಯ ಸೂಚ್ಯಂಕವು ೨,೧೨೪ ರಷ್ಟಾಯಿತು. ಈ ಕ್ರಾಂತಿಯ ನಂತರ ಪ್ರತಿಕ್ರಾಂತಿಯುಂಟಾಯಿತು. ಅದರ ಪರಿಣಾಮವಾಗಿ ೧೮೭೦ ರಲ್ಲಿಯ ಸ್ಥಿತಿಯು ಹೆಚ್ಚುಕಡಿಮೆ ಹಿಂದುಮುಂದಾಯಿತು. ಚಿನ್ನದ ಉತ್ಪಾದನೆಗೆ ಹಠಾತ್ ಅಡ್ಡಿ ಬಂದಿತು ಮತ್ತು ಅದು ೧೮೪೦–೭೦ರ ಮಧ್ಯೆ ಬೃಹತ್ ಪ್ರಮಾಣದಲ್ಲಿ ಹೆಚ್ಚಾಗಿದ್ದರೂ, ೧೮೭೦–೯೩ರ ಮಧ್ಯೆ ಸ್ಥಿರವಾಗಿ

ಉಳಿಯಿತು. ತದ್ವಿರುದ್ಧವಾಗಿ ೧೮೪೧–೭೦ರ ನಡುವೆ ಸ್ಥಿರವಾಗಿದ್ದ ಬೆಳ್ಳಿಯ ಉತ್ಪಾದನೆಯು ೧೮೭೦–೯೩ರ ನಡುವೆ ಮೂರುಪಟ್ಟು ಹೆಚ್ಚಾಯಿತು. ಆದ್ದರಿಂದ ಅದರ ಸರಾಸರಿ ವಾರ್ಷಿಕ ಉತ್ಪಾದನೆಯ ಸೂಚ್ಯಂಕವು ನಂತರದ ಅವಧಿಯಲ್ಲಿ ೧,೨೬೦ರಷ್ಟು ಇತ್ತು.

ಈ ಸ್ಥಾನಪಲ್ಲಟವನ್ನು ಮತ್ತು ಚಿನ್ನದಲ್ಲಿ ಬೆಳ್ಳಿಯ ಮೌಲ್ಯದ ಅವನತಿಯನ್ನು ತಂದ ಕಾರಣಗಳಿಗಾಗಿ ಉಂಟಾದ ವಿವಾದದಲ್ಲಿ ಬೇರೆ ಬೇರೆ ಪಕ್ಷಗಳಿದ್ದು ಅವುಗಳಲ್ಲಿ ಒಂದಕ್ಕೆ ಎರಡು ಪ್ರಬಲ ಕಾರಣವಾಗಿತ್ತು. ಬೆಳ್ಳಿಯ ತಡೆಹಿಡಿಯುವಿಕೆ ಅಥವಾ ಅನಾಣ್ಯೀಕರಣವಾಗದೆ ಇದ್ದಿದ್ದರೆ, ಅದರ ಮೌಲ್ಯವು ಎಂದೂ ಕಡಿಮೆಯಾಗುತ್ತಿದ್ದಿಲ್ಲವೆಂದು ಒಂದು ಪಕ್ಷವು ವಾದಿಸಿತು. ಬೇರೆ ಪಕ್ಷವು ಈ ವಾದವನ್ನು ಉಗ್ರವಾಗಿ ಪ್ರತಿಭಟಿಸಿತು. ಅದರ ಪ್ರಕಾರ ಬೆಳ್ಳಿಯ ಅತಿ ಉತ್ಪಾದನೆಯು ಅದರ ಮೌಲ್ಯವು ಕಡಿಮೆಯಾಗುವುದಕ್ಕೆ ಪ್ರಧಾನ ಕಾರಣವಾಗಿತ್ತು. ಸಾಪೇಕ್ಷವಾದ ಅತಿ ಉತ್ಪಾದನೆಯಿಂದ ಈ ವಾದವು ಚಿನ್ನದಲ್ಲಿ ಬೆಳ್ಳಿಯ ಮೌಲ್ಯದ ಪತನವನ್ನು ವಿವರಿಸಲು ಸಮರ್ಥವಾಗಿತ್ತೇ? ಮೇಲ್ನೋಟಕ್ಕೆ ವಿವರಣೆಯು ಸರಳ ಪ್ರಸ್ತಾಪದ ತೋರಿಕೆಯನ್ನು ಹೊಂದಿರುತ್ತದೆ. ಒಂದು ವಸ್ತುವಿನ ಮೌಲ್ಯವು ಅದರ ಪೂರೈಕೆಯೊಂದಿಗೆ ವಿಪರ್ಯಯವಾಗಿ ಬದಲಾಗುತ್ತದೆ ಎಂಬುದು ಅರ್ಥಶಾಸ್ತ್ರದ ಪ್ರಾಥಮಿಕ ಸಿದ್ಧಾಂತಗಳಲ್ಲೊಂದಾಗಿದೆ ಮತ್ತು ಬೆಳ್ಳಿಯ ಪೂರೈಕೆಯು ಬಹಳಷ್ಟು ಹೆಚ್ಚಾಗಿದ್ದರೆ ಚಿನ್ನದಲ್ಲಿ ಅದರ ಮೌಲ್ಯವು ಕಡಿಮೆಯಾಗುವುದು ಸ್ವಾಭಾವಿಕವಲ್ಲವೇ? ಈ ಕೆಳಗಿನ ಸುಸಂಬದ್ಧ ವಾಸ್ತವಾಂಶಗಳು ಈ ವಾದಕ್ಕೆ ತಳಹದಿಯಾಗಿದ್ದವು.

# ಪಟ್ಟಿ X
## ಚಿನ್ನ ಮತ್ತು ಬೆಳ್ಳಿ[೧]
## ಸಾಪೇಕ್ಷ ಉತ್ಪಾದನೆ ಮತ್ತು ಸಾಪೇಕ್ಷ ಮೌಲ್ಯ

| ಅವಧಿ | ಬೆಳ್ಳಿಗೆ ಚಿನ್ನದ ಉತ್ಪಾದನೆಯ ಪ್ರಮಾಣ ತೂಕದಲ್ಲಿ ಒಂದು ಗ್ರೇನಿಗೆ– | ಬೆಳ್ಳಿಗೆ ಚಿನ್ನದ ಮೌಲ್ಯದ ಪ್ರಮಾಣ ಒಂದು ಗ್ರೇನಿಗೆ – | ಉತ್ಪಾದನೆಯ ಪ್ರಮಾಣಕ್ಕೆ ಸೂಚ್ಯಂಕ | ಮೌಲ್ಯದ ಪ್ರಮಾಣಕ್ಕೆ ಸೂಚ್ಯಂಕ | ಸಾಪೇಕ್ಷ ಉತ್ಪಾದನೆ ಮತ್ತು ಸಾಪೇಕ್ಷ ಮೌಲ್ಯಗಳ ನಡುವೆ ಸಹಸಂಬಂಧ | |
|---|---|---|---|---|---|---|
| | | | | | ಬೆಳ್ಳಿಯ ಸಾಪೇಕ್ಷ ಉತ್ಪಾದನೆ [ಕಡಿಮೆ(–) ಹೆಚ್ಚು (+)] | ಬೆಳ್ಳಿಯ ಸಾಪೇಕ್ಷ ಕಡಿಮೆ ಯಾಗುತ್ತದೆ(–) ಹೆಚ್ಚಾಗುತ್ತದೆ(+) |
| ೧೬೮೧–೧೭೦೦ | ೩೧.೮ | ೧೪.೯೫ | ೧೦೦ | ೧೦೦ | – | – |
| ೧೭೦೧–೧೭೨೦ | ೨೭.೭ | ೧೫.೨೧ | ೮೭ | ೧೦೧.೭ | –೧೩ | –೧.೭ |
| ೧೭೨೧–೧೭೪೦ | ೨೨.೬ | ೧೫.೦೦ | ೭೧ | ೧೦೧ | –೨೯ | –೧.೦ |
| ೧೭೪೧–೧೭೬೦ | ೨೧.೭ | ೧೪.೭೦ | ೬೭ | ೯೮.೩ | –೩೩ | +೧.೭ |
| ೧೭೬೧–೧೭೮೦ | ೩೧.೫ | ೧೪.೪೦ | ೯೯ | ೯೬.೩ | –೧ | +೩.೭ |
| ೧೭೮೧–೧೮೦೦ | ೪೯.೪ | ೧೫.೦೮ | ೧೫೫.೬ | ೧೦೦.೮ | +೫೫.೬ | –.೮ |
| ೧೮೦೧–೧೮೧೦ | ೫೦.೩ | ೧೫.೬೭ | ೧೫೮.೦ | ೧೦೪.೮ | +೫೮.೦ | –೪.೮ |
| ೧೮೧೧–೧೮೨೦ | ೪೭.೨ | ೧೫.೬೮ | ೧೪೮.೦ | ೧೦೪.೯ | +೪೮.೦ | –೪.೯ |
| ೧೮೨೧–೧೮೩೦ | ೩೨.೪ | ೧೫.೮೨ | ೧೦೧.೯ | ೧೦೫.೮ | +೧.೯ | –೫.೮ |
| ೧೮೩೧–೧೮೪೦ | ೨೯.೪ | ೧೫.೭೭ | ೯೨.೪ | ೧೦೫.೪ | –೭.೬ | –೫.೪ |
| ೧೮೪೧–೧೮೫೦ | ೧೪.೨ | ೧೫.೮೧ | ೪೪.೬ | ೧೦೫.೮ | –೫೫.೪ | –೫.೮ |
| ೧೮೫೧–೧೮೫೫ | ೪.೪ | ೧೫.೪೫ | ೧೩.೮ | ೧೦೩.೩ | –೮೬.೨ | –೩.೩ |
| ೧೮೫೬–೧೮೬೦ | ೪.೫ | ೧೫.೨೮ | ೧೪.೦ | ೧೦೨.೨ | –೮೬.೦ | –೨.೨ |
| ೧೮೬೧–೧೮೬೫ | ೫.೯ | ೧೫.೪೨ | ೧೮.೫೫ | ೧೦೩.೧ | –೮೧.೫ | –೩.೧ |
| ೧೮೬೬–೧೮೭೦ | ೬.೯ | ೧೫.೫೨ | ೨೧.೭ | ೧೦೩.೮ | –೭೮.೩ | –೩.೮ |
| ೧೮೭೧–೧೮೭೫ | ೧೧.೩ | ೧೬.೧೦ | ೩೫.೫ | ೧೦೭.೬ | –೬೪.೫ | –೭.೬ |
| ೧೮೭೬–೧೮೮೦ | ೧೩.೨ | ೧೭.೭೯ | ೪೧.೫ | ೧೧೯.೦ | –೫೮.೫ | –೧೯.೦ |
| ೧೮೮೧–೧೮೮೬ | ೧೨.೩ | ೧೮.೮೧ | ೫೪.೪ | ೧೨೫.೮ | –೪೫.೬ | –೨೫.೮ |
| ೧೮೮೬–೧೮೯೦ | ೧೯.೯ | ೨೦.೯೮ | ೬೨.೬ | ೧೪೦.೩ | –೩೭.೪ | –೪೦.೩ |
| ೧೮೯೧–೧೮೯೫ | ೨೦.೦ | ೨೬.೭೫ | ೬೨.೯ | ೧೭೮.೯ | –೩೭.೧ | –೭೮.೯ |

೧. ಪಟ್ಟಿಯು ಜುಲೈ ೧೮೯೭ರ ಬೈಮೆಟ್ಯಾಲಿಸ್ಟ್, ಪುಟಗಳು ೧೨೫–೨೮ ಇದರಲ್ಲಿ ಶ್ರೀ ಎಫ್.ಬಿ. ಫೋರ್ಬ್ಸ್ ಇವರು ಕೊಟ್ಟ ಎಮ್.ಡಿ. ಫೋವಿಲ್ಲೆ ಇವರ ಅಂಕಿಗಳ ಮೇಲೆ ಆಧಾರಿತವಾಗಿದೆ.

ಹೀಗೆ ಮಂಡಿಸಲಾದ ವಿಷಯಗಳಿಂದ ಎರಡು ತೀರ್ಮಾನಗಳು ಹೊರಬೀಳುತ್ತವೆ. ಮೊದಲನೆಯದು, ಬೆಳ್ಳಿಯ ಸಾಪೇಕ್ಷ ಉತ್ಪಾದನೆಯಲ್ಲಿ ಅಂದಾಜು ಮಾಡಿದ ಹೆಚ್ಚಳವು ವಾಸ್ತವಿಕತೆಯಲ್ಲಿ ಆಧಾರರಹಿತ ಊಹೆಯಾಗಿತ್ತು. ತದ್ವಿರುದ್ಧವಾಗಿ, ಸಾಪೇಕ್ಷ ಉತ್ಪಾದನೆಯ ಅಂಕಿಗಳ ಕಣ್ಣೋಟವು ೧೮ ನೇ ಶತಮಾನದ ಪ್ರಾರಂಭದಿಂದ ಬೆಳ್ಳಿಯ ಉತ್ಪಾದನೆಯು ಏರುವ ಬದಲು ಇಳಿಯುತ್ತಲಿದೆ ಎಂಬ ಕುತೂಹಲಕಾರಿ ವಾಸ್ತವಿಕತೆಯನ್ನು ಬಹಿರಂಗಪಡಿಸುತ್ತದೆ. ಪಟ್ಟಿಯು ತೋರಿಸುವಂತೆ ಹತ್ತೊಂಬತ್ತನೆಯ ಶತಮಾನದ ಪ್ರಥಮ ಮೂರು ತಿಂಗಳುಗಳನ್ನು ಬಿಟ್ಟರೆ, ಚಿನ್ನಕ್ಕೆ ಹೋಲಿಸಿದಂತೆ ಬೆಳ್ಳಿಯ ಉತ್ಪಾದನೆಯು ಎರಡು ಶತಮಾನಗಳಲ್ಲಿ ಇಳಿಕೆಯಾಗುತ್ತಾ ಬಂದಿತ್ತು.[೧] ನಿಜವಾಗಿ, ಬೆಳ್ಳಿಯ ಪ್ರಮಾಣವು ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ ಅತ್ಯಂತ ಕಡಿಮೆಯಾಗಿದ್ದಿತು. ಮತ್ತು ೧೮೭೩ರ ನಂತರ ಅದು ಹೆಚ್ಚಾಗಲು ಪ್ರಾರಂಭಿಸಿದರೂ, ಹದಿನೆಂಟನೆಯ ಶತಮಾನದ ಪ್ರಾರಂಭದಲ್ಲಿದ್ದ ಗಾತ್ರದ ಅರ್ಧದಷ್ಟು ಕೂಡ ಆಗಲಿಲ್ಲ. ಬೆಳ್ಳಿಯ ಮೌಲ್ಯವು ಚಿನ್ನಕ್ಕೆ ಹೋಲಿಸಿದಂತೆ ಅದರ ಪೂರೈಕೆಗೆ ಅನುಗುಣವಾಗಿ ಹೆಚ್ಚಾಗಲಿಲ್ಲ. ಸಿದ್ಧಾಂತದ ಪ್ರಕಾರ, ಬೆಳ್ಳಿಯ ಮೌಲ್ಯವು ಹೆಚ್ಚಾಗಬೇಕಾಗಿತ್ತು. ಏಕೆಂದರೆ ಅದರ ಉತ್ಪಾದನೆಯ ಸಾಪೇಕ್ಷ ಗಾತ್ರವು ಇಳಿಮುಖವಾಗುತ್ತಿತ್ತು. ತದ್ವಿರುದ್ಧವಾಗಿ ಹಿಂದಿನ ಪಟ್ಟಿಯಲ್ಲಿ ಕೊಟ್ಟ ಸಾಪೇಕ್ಷ ಉತ್ಪಾದನೆ ಮತ್ತು ಸಾಪೇಕ್ಷ ಮೌಲ್ಯಗಳ ಸಂಖ್ಯೆಗಳ ಕೂಲಂಕಷ ಪರೀಕ್ಷೆಯು ಅವುಗಳ ನಡುವಿನ ನಿಕಟ ಸಹಸಂಬಂಧವನ್ನು ತೋರಿಸುವ ಬದಲು ಅದರ ವಿರುದ್ಧ ಪರಿಸ್ಥಿತಿಯನ್ನು ತೋರಿಸುತ್ತದೆ. (ನಕ್ಷೆ III ನೋಡಿರಿ). ಪೂರೈಕೆ ಮತ್ತು ಮೌಲ್ಯಗಳು ಪ್ರಮಾಣದಲ್ಲಿ ವಿಪರ್ಯಯವಾಗುವ ಬದಲು, ಅದರ ಪೂರೈಕೆಯು ಕಡಿಮೆಯಾದಂತೆ ಅದರ ಮೌಲ್ಯವು ಕೂಡ ಕಡಿಮೆಯಾಯಿತು ಎಂಬುದನ್ನು ಅದು ತೋರಿಸುತ್ತದೆ. ಇತಿಹಾಸದ ಸಂಗತಿಗಳು ಹಾಗಿದ್ದು ಬೆಳ್ಳಿಯ ಮೌಲ್ಯದ ಸವಕಳಿಗೆ ಅನಾಣ್ಯೀಕರಣದ ಬದಲು ಅತಿ ಪೂರೈಕೆ ಸಾಕಷ್ಟು ವಿವರಣೆ ನೀಡುತ್ತದೆ ಎಂಬ ವಾದವನ್ನು ಅವುಗಳು ಸಮರ್ಥಿಸಲಿಲ್ಲ.

ಅಂಥ ಚಿಕ್ಕ ಘಟನೆಗಳಲ್ಲದೇ, ೧೮೭೩ರ ಹಿಂದಿನ ಮತ್ತು ಮುಂದಿನ ೨೦ ವರ್ಷಗಳಲ್ಲಿಯ ಘಟನೆಗಳ ವಿಲಕ್ಷಣತೆಯಿಂದ ವಿಷಯವು ಬಹಳಷ್ಟು ಸಂಕುಚಿತಗೊಂಡಿತು.[೨] ೧೮೪೮ರಲ್ಲಿ ಪ್ರಾರಂಭವಾಗಿ ೧೮೭೦ರಲ್ಲಿ ಮುಕ್ತಾಯವಾಗುವ ಅವಧಿಯನ್ನು ೧೮೭೦ರ ನಂತರದ ಅವಧಿಗೆ ಹೋಲಿಸಿದಾಗ ಈ ಎರಡು ಅವಧಿಗಳು ಈ ಎರಡು ಲೋಹಗಳ ಸಾಪೇಕ್ಷ ಮೌಲ್ಯಗಳಿಗೆ ಸಂಬಂಧಿಸಿದಂತೆ ಪರಸ್ಪರವಾಗಿ ವಿರುದ್ಧವಿದ್ದರೂ ಅವುಗಳ ಸಾಪೇಕ್ಷ ಪೂರೈಕೆಯಲ್ಲಿ ಒಂದೇ ತರಹ ಇದ್ದವು ಎಂಬ ವಿಷಯವು ಎದ್ದು ಕಾಣುತ್ತದೆ ಎಂದು ಹೇಳಲಾಗುತ್ತದೆ. ೧೮೭೦ ಮತ್ತು ೧೮೯೩ ನಡುವಿನ ಅವಧಿಯು ಸಾಪೇಕ್ಷ ಪೂರೈಕೆಯ ವಿಷಯದಲ್ಲಿ ಬೆಳ್ಳಿಯ ಪ್ರಾಬಲ್ಯವನ್ನು ಎದ್ದು ತೋರಿಸುತ್ತಿತ್ತು. ೧೮೪೮ ಮತ್ತು ೧೮೭೦ ರ

---

೧. ಪರಿಸ್ಥಿತಿಯು ಹೀಗಿದ್ದುದರಿಂದ ಶ್ರೇಷ್ಠ ಅರ್ಥಶಾಸ್ತ್ರಜ್ಞರಾದ ಪ್ರೊ. ಡಬ್ಲ್ಯೂ. ಲೆಕ್ಸಿಸ್ ಬೆಳ್ಳಿಯ ಅಪಾರ ಹೆಚ್ಚಳವು ಚಿನ್ನದ ಕೂಡ ಶಾಶ್ವತವಾಗಿ ಹೆಚ್ಚಿನ ಪ್ರಮಾಣವನ್ನು ಸ್ಥಾಪಿಸುವುದಕ್ಕೆ ಪ್ರತಿಕೂಲವಾಯಿತೆಂಬ ಕಾರಣದ ಮೇಲೆ ದ್ವಿಲೋಹ ಪದ್ಧತಿಯನ್ನು ಪ್ರತಿಪಾದಿಸುವುದನ್ನು ಬಿಟ್ಟರು ಎಂಬುದು ಸ್ವಲ್ಪ ಆಶ್ಚರ್ಯಕರ ವಿಷಯ. ನೋಡಿ : ಇಕನಾಮಿಕ್ ಸ್ಟಡೀಸ್ ಆಫ್ ದಿ ಅಮೆರಿಕನ್ ಇಕನಾಮಿಕ್ ಅಸೋಸಿಯೇಶನ್, ೧೮೯೬, ಸಂಪುಟ ೧, ಸಂಖ್ಯೆ ೪, ಪುಟಗಳು ೨೭೩–೭೭ ಇದರಲ್ಲಿ ಅವರ ನಿಬಂಧ "ದಿ ಪ್ರೆಸೆಂಟ್ ಮಾನಿಟರಿ ಸಿಚ್ಯುಯೇಶನ್". ಬೆಳ್ಳಿಯ ಉತ್ಪಾದನೆಯನ್ನು ಮೌಲ್ಯದ ರೂಪದಲ್ಲಿ ಅಳೆಯುವ ಚಟವು ನಿಸ್ಸಂದೇಹವಾಗಿ ಈ ಆಧಾರರಹಿತ ಕಲ್ಪನೆಗೆ ಬಹಳಷ್ಟು ಕಾರಣೀಭೂತವಾಗಿದೆ.

೨. ಹೋಲಿಸಿ : ಬೈಮೆಟಾಲಿಸಂ–ಇಟ್ಸ್ ಮೀನಿಂಗ್ ಅಂಡ್ ಏಮ್ಸ್" ದಿ (ಆಕ್ಸ್‌ಫರ್ಡ್) ಇಕನಾಮಿಕ್‌ವ್ಯೂ ಇದರಲ್ಲಿ (೧೮೯೩), ಸಂ. III, ಪು. ೩೦೨.

## ಗ್ರಾಫ್ ನಕ್ಷೆ-II

## ರೂಪಾಯಿ-ಸ್ಟರ್ಲಿಂಗ ವಿನಿಮಯದ ಪತನ



ಮಧ್ಯದ ಅವಧಿಯು ಈ ಎರಡು ಲೋಹಗಳ ಸಾಪೇಕ್ಷ ಪೂರೈಕೆಯಲ್ಲಿಯ ಬದಲಾವಣೆಗಳಿಗೆ ಸಂಬಂಧಿಸಿದಂತೆ ಮೇಲೆ ಹೇಳಿದ ಅವಧಿಗೆ ನಿಖರ ಸಮಾನ ಅಂತರ ಹೊಂದಿತ್ತು. ಈ ವಿಷಯದಲ್ಲಿ ಮಾತ್ರ ಸುವರ್ಣವು ಪ್ರಮಾಣದಲ್ಲಿ ಹೆಚ್ಚಾಗಿತ್ತು. ಈಗ ಅತಿ ಪೂರೈಕೆಯು ಎರಡನೆಯ ಅವಧಿಯಲ್ಲಿ (೧೮೭೦–೯೩) ಎರಡು ಲೋಹಗಳ ಮೌಲ್ಯ ಸಂಬಂಧಗಳನ್ನು ನಿಯಂತ್ರಿಸಿದರೆ ಮೊದಲನೆಯ ಅವಧಿಯಲ್ಲಿ (೧೮೪೮–೭೦) ಕೂಡ ಅವುಗಳ ಮೌಲ್ಯ ಸಂಬಂಧದಲ್ಲಿ ಹೀಗೆ ತಾನೇ ಆಗಬೇಕಾಗುತ್ತದೆ. ಹಾಗಾದರೆ ಮೊದಲನೆಯ ಅವಧಿಯಲ್ಲಿ ಎರಡು ಲೋಹಗಳಲ್ಲಿಯ ಸಾಪೇಕ್ಷ ಮೌಲ್ಯದಲ್ಲಿಯ ಏರುಪೇರು ಎರಡನೆಯ ಅವಧಿಯಲ್ಲಿ ಸಂಭವಿಸಿದ ಹಾಗೆಯೇ ಇತ್ತೇ? ಮೊದಲಿನ ಅವಧಿಯಲ್ಲಿ ಎರಡು ಲೋಹಗಳ ಉತ್ಪಾದನೆಯ ಪ್ರಮಾಣದಲ್ಲಿಯ ಏರುಪೇರು ಎರಡನೆಯ ಅವಧಿಯಲ್ಲಾದ ಏರುಪೇರಿಗಿಂತ ಅತಿ ಹೆಚ್ಚು ಇತ್ತೆಂದು ಒತ್ತಿ ಹೇಳಲಾಯಿತು. ವಾಸ್ತವಿಕವಾಗಿ, ತುಲನಾತ್ಮಕವಾಗಿ ಹೇಳಬೇಕೆಂದರೆ ಎರಡನೆಯ ಅವಧಿಯಲ್ಲಿಯ ಏರುಪೇರು ಹೇಳಿಕೊಳ್ಳುವಂಥದಿರಲಿಲ್ಲ. ಆದಾಗ್ಯೂ ಅವುಗಳ ಸಾಪೇಕ್ಷ ಮೌಲ್ಯವು ಮೊದಲನೇ ಅವಧಿಯಲ್ಲಿ ಹೆಚ್ಚು ಕಡಿಮೆ ೧೫$^{೧}/_{೨}$ ಗೆ ಒಂದರ ಪ್ರಮಾಣದಲ್ಲಿ ಸ್ಥಿರವಿದ್ದು ಅದು ಎರಡನೇ ಅವಧಿಯಲ್ಲಿ ೧೬.೧೦ ಮತ್ತು ೨೬.೭೫ರಷ್ಟಾಯಿತು. ಬೆಳ್ಳಿಯ ಅತಿ ಪೂರೈಕೆಯಿಂದ ಅದರ ಮೌಲ್ಯವು ೧೮೭೩ರ ನಂತರ ಕಡಿಮೆಯಾಯಿತು ಎಂದು ವಾದಿಸುವವರು  ೧೮೭೩ರ ಮೊದಲು ಚಿನ್ನದ ಪೂರೈಕೆಯು ಅತಿ ಹೆಚ್ಚಾಗಿದ್ದರೂ ಅದರ ಬೆಲೆಯು ಏಕೆ ಕಡಿಮೆಯಾಗಲಿಲ್ಲ ಎಂಬ ಪ್ರಶ್ನೆಗೆ ಉತ್ತರಿಸಬೇಕಿತ್ತು. ಆದ್ದರಿಂದ ಈ ಎರಡೂ ಸ್ಥಿತಿಗಳಲ್ಲಿ ಯಾವುದು ಈ ವ್ಯತ್ಯಾಸವನ್ನುಂಟುಮಾಡಿರಬೇಕೆಂಬ ಪ್ರಶ್ನೆಯ ಮೇಲೆ ಪೂರ್ಣ ವಿವಾದವು ಕೇಂದ್ರೀಕೃತವಾಗಿತ್ತು. ಮೊದಲಿನ ಅವಧಿಯಲ್ಲಿ ಚಿನ್ನದ ಉತ್ಪಾದನೆಯಲ್ಲಿ ಆದ ಬೃಹತ್ ಹೆಚ್ಚಳವು ಬೆಳ್ಳಿಯ ಮೌಲ್ಯವನ್ನು ಶೇಕಡಾ ೨ ಕ್ಕಿಂತ ಹೆಚ್ಚು ಏರಿಸದಿದ್ದಾಗ ಎರಡನೆಯ ಅವಧಿಯಲ್ಲಿ ಬೆಳ್ಳಿಯ ಸಾಪೇಕ್ಷ ಉತ್ಪಾದನೆಯಲ್ಲಿ ತುಲನಾತ್ಮಕವಾಗಿ ಅಲ್ಪ ಹೆಚ್ಚಳವು ಚಿನ್ನದ ಬೆಲೆಯಲ್ಲಿ ಅಷ್ಟೊಂದು ಹೆಚ್ಚಳಕ್ಕೆ ಹೇಗೆ ಕಾರಣವಾಯಿತು? ನಿಯಂತ್ರಿಸುವ ಪ್ರಭಾವವು ಒಂದರಲ್ಲಿ ಇದ್ದು ಇನ್ನೊಂದರಲ್ಲಿ ಇರಲಿಲ್ಲವೇ? ಬೆಳ್ಳಿಯ ಅನಾಣ್ಯೀಕರಣವೇ ಅದರ ಮೌಲ್ಯದ ಪತನಕ್ಕೆ ಕಾರಣ ಎಂದು ವಾದಿಸುವವರು, ಈ ಎರಡು ಅವಧಿಗಳು ಒಂದೇ ರೀತಿಯವಾಗಿದ್ದರೂ ಅವುಗಳಲ್ಲಿ ಒಂದು ಮುಖ್ಯ ವ್ಯತ್ಯಾಸವಿತ್ತು ಎಂಬ ಅಭಿಪ್ರಾಯವನ್ನು ಮುಂದಿಟ್ಟರು. ಅವುಗಳ ನಡುವೆ ಇದ್ದ ವ್ಯತ್ಯಾಸವೆಂದರೆ, ಮೊದಲಿನದರಲ್ಲಿ ಒಂದು ದೇಶದ ಪ್ರಮಾಣಿತ ಹಣವು ಒಂದು ನಿರ್ದಿಷ್ಟ ಪ್ರಮಾಣದ ಚಿನ್ನದ ಅಥವಾ ಬೆಳ್ಳಿಯ ಮೊತ್ತವೆಂದು ವ್ಯಾಖ್ಯಾನಿಸುವುದು ಒಂದು ಸಾಮಾನ್ಯ ರೂಢಿಯಾಗಿತ್ತು. ೧೮೦೩ ರ ಮೊದಲು ವಿವಿಧ ದೇಶಗಳಲ್ಲಿ ಈ ಎರಡು ಲೋಹಗಳ ಮೌಲ್ಯವನ್ನು ವಿಭಿನ್ನವಾಗಿ ನಿರ್ಧರಿಸಲಾಗುತ್ತಿತ್ತು.[೧] ಆದರೆ ಅಂದಿನಿಂದ ಮೌಲ್ಯವು ೧೫$^{೧}/_{೨}$ ಗೆ ೧ ರಂತೆ ಹೆಚ್ಚು ಏಕರೂಪವಾದ್ದರಿಂದ ಆ ಸಂಪೂರ್ಣ ಅವಧಿಯಲ್ಲಿ ಹಣಕಾಸು ಪ್ರಮಾಣವು ಒಂದು ಗ್ರ್ಯಾಮ್ ಚಿನ್ನ ಅಥವಾ ೧೫$^{೧}/_{೨}$ ಗ್ರ್ಯಾಮ್ ಬೆಳ್ಳಿ ಇತ್ತು. ಆದರೆ ಮೊದಲನೆಯ ಅವಧಿಯ ಲಕ್ಷಣವಾಗಿದ್ದ 'ಚಿನ್ನ ಅಥವಾ ಬೆಳ್ಳಿ' ಎಂಬಲ್ಲಿದ್ದ ಎರಡು ಲೋಹಗಳ ನಡುವಿನ ಆಯ್ಕೆಯು ಬೆಳ್ಳಿಯ ಅನಾಣ್ಯೀಕರಣ ಹಾಗೂ ಬೆಳ್ಳಿಯ ನಾಣ್ಯಗಳ ರದ್ದತಿಯಿಂದಾಗಿ ಎರಡನೆಯ ಅವಧಿಯಲ್ಲಿ ಇರಲಿಲ್ಲ. ಅಂದರೆ, ಮೊದಲಿನ ಅವಧಿಯಲ್ಲಿ ದ್ವಿಲೋಹ ಪದ್ಧತಿಯು ಜಾರಿಯಲ್ಲಿದ್ದು, ಒಂದರ ಬದಲಿಗೆ

---

೧. ಈ ಅನುಪಾತಗಳಿಗಾಗಿ ನೋಡಿರಿ : ಎಚ್.ಎಚ್. ಗಿಬ್ಸ್, ಇವರ 'ಎ ಕೊಲೋಕ್ವೆ ಆನ್ ಕರೆನ್ಸಿ' ಇದರ ಸಹಬಂಧ ಪಟ್ಟಿ ಬಿ.

ಇನ್ನೊಂದನ್ನು ಉಪಯೋಗಿಸಬಹುದಿತ್ತು. ಎರಡನೆಯ ಅವಧಿಯಲ್ಲಿ, ಇಂತಹ ವಿನಿಮಯಕ್ಕೆ ಅಗತ್ಯವಾಗಿದ್ದ ಈ ಎರಡು ಲೋಹಗಳ ನಡುವಿನ ಮೌಲ್ಯಗಳ ಅನುಪಾತವನ್ನು ತೆಗೆದುಹಾಕಿದ್ದರಿಂದ, ಇದು ಸಾಧ್ಯವಾಗುತ್ತಿರಲಿಲ್ಲ. ಈಗ, ಎರಡು ಅವಧಿಗಳಲ್ಲಿಯ ಅಂಥ ಎದ್ದುಕಾಣುವ ವ್ಯತ್ಯಾಸವನ್ನುಂಟು ಮಾಡುವಲ್ಲಿ ಈ ನಿಗದಿತ ಅನುಪಾತವು ಅಷ್ಟೊಂದು ಪ್ರಭಾವಯುತವಾಗಿತ್ತೆಂದು ಹೇಳಬಹುದೇ? ಈ ಅಂಶವೇ ವ್ಯತ್ಯಾಸವನ್ನು ಸಂಪೂರ್ಣವಾಗಿ ಉಂಟುಮಾಡಿತು ಎಂಬುದು ದ್ವಿಲೋಹ ನಾಣ್ಯಪದ್ಧತಿಯ ಪ್ರತಿಪಾದಕರ ಅಭಿಪ್ರಾಯವಾಗಿತ್ತು. ಮೊದಲನೆಯ ಅವಧಿಯಲ್ಲಿ ಚಾಲ್ತಿಯಲ್ಲಿದ್ದ ಹಣಕಾಸು ಪದ್ಧತಿಯ ಕಾರಣದಿಂದ ಚಿನ್ನ ಮತ್ತು ಬೆಳ್ಳಿಗಳು ಪರಸ್ಪರ ಬದಲಿ ವಸ್ತುಗಳಾದವು ಮತ್ತು "ಎರಡು ವಿವಿಧ ಸಾಮರ್ಥ್ಯಗಳ ಒಂದೇ ವಸ್ತುವಾಗಿ" ಪರಿಗಣಿಸಲ್ಪಟ್ಟವು ಎಂದು ಹೇಳಲಾಯಿತು. ಹೀಗೆ ಸಂಬಂಧವಿದ್ದು, ಸಾಮಾನ್ಯವಾಗಿ ಆಗಬಹುದಾದಂತೆ ಪೂರೈಕೆಯ ಷರತ್ತುಗಳ ಪರಿಣಾಮಗಳು ಅವುಗಳ ವಿನಿಮಯ ಅನುಪಾತದ ಮೇಲೆ ಆಗಲಿಲ್ಲ. ಬದಲಿಗಳಿರುವ ಸರಕುಗಳ ವಿಷಯದಲ್ಲಿ ಒಂದರ ಅಭಾವವು ಮತ್ತೊಂದು ಸರಕಿಗೆ, ಅವುಗಳ ನಿರ್ದಿಷ್ಟ ವಿನಿಮಯ ಅನುಪಾತಕ್ಕಿಂತ ಹೆಚ್ಚಿನ ಮೌಲ್ಯವನ್ನು ಕೊಡಲಾರದು. ಏಕೆಂದರೆ ಬದಲಿ ಮಾಡುವ ಅವಕಾಶದ ಕಾರಣದಿಂದ ಒಂದರ ಅಭಾವವನ್ನು ಮತ್ತೊಂದು ಸರಕಿನ ಸಮೃದ್ಧಿಯಿಂದ ತುಂಬಿಕೊಳ್ಳಬಹುದು. ತದ್ವಿರುದ್ಧವಾಗಿ, ಒಂದು ವಸ್ತುವಿನ ಸಾಪೇಕ್ಷ ಸಮೃದ್ಧಿ ಮತ್ತೊಂದು ಸರಕಿನ ಮೌಲ್ಯವನ್ನು ಅವುಗಳ ನಡುವಿನ ವಿನಿಮಯ ಅನುಪಾತಕ್ಕಿಂತ ಕಡಿಮೆ ಮಾಡಲಾರದು, ಏಕೆಂದರೆ ಮತ್ತೊಂದರ ವಿರಳತೆಯಿಂದ ಉಂಟಾದ ಶೂನ್ಯತೆಯನ್ನು ಇದರ ಆಧಿಕ್ಯದಿಂದ ತುಂಬಿಕೊಳ್ಳಬಹುದು. ಎಲ್ಲಿಯವರೆಗೆ ಅವುಗಳು ಬದಲಿಯ ನಿಗದಿತ ಅನುಪಾತ ಹೊಂದಿದ ಬದಲಿ ವಸ್ತುಗಳಾಗಿ ಉಳಿಯುವುವೋ, ಅಲ್ಲಿಯವರೆಗೆ ಬೇಡಿಕೆ ಅಥವಾ ಪೂರೈಕೆಯಲ್ಲಿ ಉತ್ಪತ್ತಿಯಾಗುವ ಯಾವುದೇ ವಿಷಯವು ಅವುಗಳ ಅನುಪಾತವನ್ನು ಕದಡಲಾರವು. ಎರಡೂ ಒಂದೇ ವಸ್ತುವಾಗಿದ್ದು ವಾಣಿಜ್ಯದ ಅಗತ್ಯಗಳಿಗಿಂತ ಹೆಚ್ಚು ಅವುಗಳ ಪೈಕಿ ಯಾವುದೊಂದರ ಬೇಡಿಕೆ ಅಥವಾ ಪೂರೈಕೆಯಲ್ಲಿ ಏನೇ ಬದಲಾವಣೆಗಳು ಸಂಭವಿಸಿದರೂ ಅವುಗಳು ಕೇವಲ ಒಂದೇ ಹಣದ ಮಾಧ್ಯಮವಾಗಿದ್ದವು ಎಂಬಂತೆ ಬೆಲೆಮಟ್ಟದಲ್ಲಿ ನಿಖರವಾಗಿ ವ್ಯಕ್ತಪಡಿಸಲ್ಪಡುತ್ತವೆ. ಆದರೆ ಯಾವುದೇ ಪರಿಸ್ಥಿತಿಯಲ್ಲಿ ಅವುಗಳ ವಿನಿಮಯ ಅನುಪಾತವು ಧಕ್ಕೆಗೊಳಗಾಗದೆ ಸಂರಕ್ಷಿಸಲ್ಪಡುತ್ತದೆ.

ಇದಕ್ಕೆ ಬೆಂಬಲವಾಗಿ ಜೇವನ್ಸ್‌ರ ಅಧಿಕಾರವಾಣಿಯನ್ನು ಉಲ್ಲೇಖಿಸಲಾಯಿತು. ಅವರು ಹೇಳಿದರು.[೧]

"ವಿವಿಧ ವಸ್ತುಗಳನ್ನು ಒಂದೇ ರೀತಿಯ ಉದ್ದೇಶಗಳಿಗೆ ಉಪಯೋಗಿಸಬಹುದಾದಾಗ ಅವುಗಳ ಬೇಡಿಕೆ ಮತ್ತು ವಿನಿಮಯದ ಷರತ್ತುಗಳು ಸ್ವತಂತ್ರವಿರುವುದಿಲ್ಲ. ಅವುಗಳ ಪರಸ್ಪರ ವಿನಿಮಯದ ಅನುಪಾತವು ಹೆಚ್ಚು ಬದಲಾಗಲಾರದು. ಏಕೆಂದರೆ ಅದು ಅವುಗಳ ಉಪಯೋಗದ ಅನುಪಾತದಿಂದಾಗಿ ಬಹಳ ಹತ್ತಿರವಾಗಿರುತ್ತವೆ. ದನದ ಮತ್ತು ಕುರಿಯ ಮಾಂಸಗಳಲ್ಲಿ ಬಹಳ ಕಡಿಮೆ ವ್ಯತ್ಯಾಸವಿರುವುದರಿಂದ ಜನರು ಅವುಗಳನ್ನು ಬಹುತೇಕ ಔದಾಸೀನ್ಯತೆಯಿಂದ ತಿನ್ನುವರು. ಆದರೆ ಕುರಿಯ ಮಾಂಸದ ಸಗಟು ಬೆಲೆಯು ಸರ್ಕಾರಿ ದನದ ಮಾಂಸಕ್ಕಿಂತ ೮ ಕ್ಕೆ ೬ ಪ್ರಮಾಣದಲ್ಲಿ ಹೆಚ್ಚಿರುತ್ತದೆ ಮತ್ತು ಜನರು ಈ ಪ್ರಮಾಣದಲ್ಲಿ ದನದ ಮಾಂಸಕ್ಕಿಂತ ಕುರಿಯ ಮಾಂಸವನ್ನು ಬಯಸುತ್ತಾರೆ ಎಂದು ನಾವು ತೀರ್ಮಾನಿಸಬೇಕಾಗುತ್ತದೆ. ಇಲ್ಲದಿದ್ದರೆ ಅವರು ದುಬಾರಿ ಮಾಂಸವನ್ನು ಕೊಳ್ಳಲಿಕ್ಕಿಲ್ಲ. ಎಲ್ಲಿಯವರೆಗೆ

೧. ಥಿಯರಿ ಆರ್ಫ್ ಪೊಲಿಟಿಕಲ್ ಇಕಾನಮಿ, ೪ನೇ ಆವೃತ್ತಿ ೧೯೧೧, ಪುಟಗಳು ೧೩೪-೩೬

ಉಪಯುಕ್ತತೆಯ ಸಮೀಕರಣವು ನಿಜವಾಗಿ ಉಳಿಯುವುದೋ, ಕುರಿಯ ಮಾಂಸ ಮತ್ತು ದನದ ಮಾಂಸಗಳ ನಡುವಿನ ವಿನಿಮಯ ಅನುಪಾತವು ೯ ಕ್ಕೆ ೮ ರಿಂದ ಭಿನ್ನವಾಗುವುದಿಲ್ಲ. ದನದ ಮಾಂಸದ ಪೂರೈಕೆಯು ಕಡಿಮೆಯಾದರೆ, ಜನರು ಅದಕ್ಕೆ ಹೆಚ್ಚಿನ ಬೆಲೆಯನ್ನು ಕೊಡುವುದಿಲ್ಲ. ಆದರೆ ಹೆಚ್ಚು ಕುರಿಯ ಮಾಂಸವನ್ನು ತಿನ್ನುವರು ಮತ್ತು ಕುರಿಯ ಮಾಂಸದ ಪೂರೈಕೆಯು ಕಡಿಮೆಯಾದರೆ, ಅವರು ದನದ ಮಾಂಸವನ್ನು ಹೆಚ್ಚು ತಿನ್ನುವರು ........ ೧೮ ಕ್ಯಾರಟ್ಟಿನ ಚಿನ್ನ ಮತ್ತು ೨೦ ಕ್ಯಾರಟ್ಟಿನ ಚಿನ್ನಗಳನ್ನು ಎರಡು ವಸ್ತುಗಳಲ್ಲ ಒಂದೇ ವಸ್ತುವೆಂದು ಪರಿಗಣಿಸುತ್ತೇವೆ. ಏಕೆಂದರೆ ಒಂದರ ೨೦ ಭಾಗಗಳು ಇನ್ನೊಂದ ೧೮ ಭಾಗಗಳಿಗೆ ಸಮಾನವಿರುತ್ತವೆ. ವಾಸ್ತವಿಕವಾಗಿ ಅದೇ ಪ್ರಕಾರ ನಾವು ದನದ ಮಾಂಸ ಮತ್ತು ಕುರಿಯ ಮಾಂಸಗಳನ್ನು ಎರಡು ಭಿನ್ನ ಸಾಮರ್ಥ್ಯಗಳನ್ನು ಹೊಂದಿದ ಒಂದೇ ವಸ್ತುವೆಂದು ಪರಿಗಣಿಸಬೇಕು."

"೧೮ ನೆಯ ಶತಮಾನದ ಪ್ರಾರಂಭದಿಂದ ಇತ್ತೀಚಿನ ವರ್ಷಗಳವರೆಗೆ ಚಿನ್ನ ಮತ್ತು ಬೆಳ್ಳಿಗಳ ವಿನಿಮಯ ಅನುಪಾತವು ೧ಕ್ಕೆ ೧೫ ರಿಂದ ಅಷ್ಟೇನೂ ಬದಲಾಗಿಲ್ಲ. ಈ ತತ್ವದ ಮೇಲೆ ಕೇರ್ನ್ಸ್ ಅವರ ಅಭಿಪ್ರಾಯಗಳ ಸಾಮರಸ್ಯದಲ್ಲಿ ನಾವು ಈ ಅನುಪಾತದ ಅಸಾಧಾರಣ ಸ್ಥಿರತೆಯನ್ನು ವಿವರಿಸಬೇಕಾಗುತ್ತದೆ. ಈ ಸ್ಥಿರತೆಯು ಎಂದೂ ಮೊತ್ತ ಅಥವಾ ಉತ್ಪಾದನಾ ವೆಚ್ಚಗಳ ಮೇಲೆ ಸಂಪೂರ್ಣವಾಗಿ ಅವಲಂಬಿಸಿರಲಿಲ್ಲವೆಂಬುದು ಆಸ್ಟ್ರೇಲಿಯಾ ಮತ್ತು ಕ್ಯಾಲಿಫೋರ್ನಿಯಾಗಳಲ್ಲಿಯ ಚಿನ್ನದ ಶೋಧಗಳಿಂದಾದ ಅತ್ಯಲ್ಪ ಪ್ರಮಾಣದ ಪರಿಣಾಮದಿಂದ ಸಿದ್ಧವಾಗುತ್ತದೆ. ಈ ಶೋಧಗಳು ಚಿನ್ನದಲ್ಲಿಯ ಬೆಳ್ಳಿಯ ಬೆಲೆಯನ್ನು ಸುಮಾರು ಪ್ರತಿಶತ ೪ ೨/೩ ಕಿಂತ ಹೆಚ್ಚು ಶಾಶ್ವತ ಪರಿಣಾಮ ಬೀರಲು ವಿಫಲವಾದವು. ಚಿನ್ನ ಮತ್ತು ಬೆಳ್ಳಿಗಳನ್ನು ನಿಖರವಾಗಿ ಒಂದೇ ಪ್ರಕಾರದ ಉದ್ದೇಶಗಳಿಗಾಗಿ ಉಪಯೋಗಿಸಬಹುದು. ಆದರೆ ಚಿನ್ನವು ಬೆಳ್ಳಿಯ ೧೫ ಅಥವಾ ೧೫ ೧/೨ ಪಟ್ಟು ದುಬಾರಿಯಾಗಿರುವುದರಿಂದ ಅದನ್ನು ವಿಶೇಷವಾಗಿ ಬಯಸಲಾಗುತ್ತದೆ ಎಂಬ ವಾಸ್ತವಿಕತೆಯ ಕಾರಣವು ಸಾಪೇಕ್ಷ ಮೌಲ್ಯಗಳ ಈ ಶಾಶ್ವತತೆಗೆ ಬಹುಶಃ ಕಾರಣ ಆಗಿರಬೇಕು. ಆದಾಗ್ಯೂ ಬಹುಶಃ ಇದಕ್ಕಿಂತ ಹೆಚ್ಚಾಗಿ ಈ ಸಂಗತಿಯ ವಿವರಣೆಯು ಫ್ರಾನ್ಸ್ ಮತ್ತು ಯುರೋಪಿನ ಇತರ ಕೆಲವು ದೇಶಗಳಲ್ಲಿ ನಾಣ್ಯಪದ್ಧತಿಗಳಲ್ಲಿ ವಿನಿಮಯ ಮಾಡಲ್ಪಡುವ ೧ ಕ್ಕೆ ೧೫ ೧/೨ ಅನುಪಾತದಲ್ಲಿ ಕಾಣುವುದು. ಆ ವರ್ಷದ ಫ್ರೆಂಚ್ ನಾಣ್ಯ ಕಾಯಿದೆ XI ಕೆಳಗಿನ ಕೃತ್ರಿಮ[೧] ಸಮೀಕರಣವನ್ನು ಸ್ಥಾಪಿಸಿತು:

---

೧. ಈ ದ್ವಿಲೋಹ ನಾಣ್ಯಪದ್ಧತಿಯ ಈ ಕೃತ್ರಿಮತೆಯು ದುರ್ದೈವದಿಂದ ಕೆಲವು ಜನರ ಮನಸ್ಸಿಗೆ ಮತ್ತು ಇತರರ ದುರಾಗ್ರಹಕ್ಕೆ ಸಂಬಂಧಿಸಿರುತ್ತದೆ. ಹಣವನ್ನಾಗಿ ಉಪಯೋಗಿಸಲ್ಪಡುವ ಎರಡು ವಸ್ತುಗಳ ಬೆಲೆಯು ಕಾನೂನಿನಿಂದ ನಿಗದಿತ ಅನುಪಾತದಿಂದ ವ್ಯವಸ್ಥಿಗೊಳ್ಳುವಂತೆ ಇರುವ ಇತರೆ ಯಾವುದೇ ಎರಡು ವಸ್ತುಗಳ ಬೆಲೆಗಳಿಗಿಂತ ಭಿನ್ನವಿರಬೇಕು ಎಂಬುದನ್ನು ಕೆಲವರು ಅರಿತುಕೊಳ್ಳುವುದಿಲ್ಲ. ಇತರ ಬದಲಿ ವಸ್ತುಗಳ ಜೋಡಿಗಳು ಯಾವುದೇ ಕಾನೂನು ಅನುಪಾತವಿಲ್ಲದೇ ಕೇವಲ ಅವುಗಳ ಉಪಯುಕ್ತತೆಯ ಅನುಪಾತದ ಆಧಾರದ ಮೇಲೆ ಚಲಾವಣೆಯಲ್ಲಿರುವಾಗ, ಚಿನ್ನ ಮತ್ತು ಬೆಳ್ಳಿಗಳು ಬದಲಿ ವಸ್ತುಗಳ ಜೋಡಿಯಾಗಿದೆ ಎಂದ ಮಾತ್ರಕ್ಕೆ ಅವುಗಳಿಗೇಕೆ ಕಾನೂನು ಅನುಪಾತವಿರಬೇಕು ಎಂದು ಇತರರು ಆಕ್ಷೇಪಿಸುತ್ತಾರೆ. ಫಿಷರ್ ಈ ತೊಂದರೆಗಳನ್ನು ಕೆಳಗಿನಂತೆ ಚೆನ್ನಾಗಿ ವಿವರಿಸಿದ್ದಾರೆ:

"ಪರ್ಯಾಯವಾಗಿ ಉಪಯೋಗಿಸಲ್ಪಡಬಹುದಾದ ಎರಡು ಬೇರೆ ಬೇರೆ ನಾಣ್ಯಪದ್ಧತಿಯು, ಪರಸ್ಪರ ಅದಲು–ಬದಲು ಮಾಡಿಕೊಳ್ಳಬಹುದಾದ ಎರಡು ವಸ್ತುಗಳಿಗಿಂತ ಭಿನ್ನವಾದ ಪರಿಸ್ಥಿತಿಯಲ್ಲಿ ಇರುತ್ತದೆ. ಪರ್ಯಾಯವಾಗಿ ಉಪಯೋಗಿಸಬಹುದಾದ ಎರಡು ವಸ್ತುಗಳನ್ನು ಗ್ರಾಹಕರು ಒಂದೇ ವಸ್ತುವೆಂದು ಪರಿಗಣಿಸುತ್ತಾರೆ. ಬೇಡಿಕೆಯಲ್ಲಿನ ವೈವಿಧ್ಯವನ್ನು ಇದು ಕಡಿಮೆಮಾಡುತ್ತದೆ. ಅವೆರಡರ ನಡುವೆ ಇರುವ ಬಳಕೆಯ ನಿಗದಿತವಾದ ಅನುಪಾತದಿಂದಾಗಿ

ಚಿನ್ನದ ತುಷ್ಟಿಗುಣ=೧೫ $^{1}/_{3}$ ಬೆಳ್ಳಿಯ ತುಷ್ಟಿಗುಣ

ಮತ್ತು ಚಿನ್ನ ಹಾಗೂ ಬೆಳ್ಳಿಗಳ ಸಂಬಂಧಗಳಲ್ಲಿಯ ಗಲಭೆಯನ್ನು ನಿವಾರಿಸುವಲ್ಲಿ ಮಹತ್ವದ ಪರಿಣಾಮವನ್ನು ವೊಲೋವಸ್ಕಿ ಮತ್ತಿತರ ಇತ್ತೀಚಿನ ಫ್ರೆಂಚ್ ಅರ್ಥಶಾಸ್ತ್ರಜ್ಞರು ಈ ನಿಯಮಕ್ಕೆ ಅಧ್ಯಾರೋಪಿಸಿದ್ದು ಬಹುಶಃ ಅದಕ್ಕೆ ಒಂದು ಕಾರಣವಿರಬೇಕು."

೧೮೭೩ರ ಮೊದಲು ದ್ವಿಲೋಹ ಕಾಯಿದೆಯ ಪರಿಹಾರ ಕ್ರಮದಿಂದಾಗಿ ಈ ಅನುಪಾತವು ರಕ್ಷಿಸಲ್ಪಟ್ಟಿತು ಎಂದು ಭಾವಿಸಿದಾಗ್ಯೂ ಕಾಯಿದೆಯನ್ನು ಅಮಾನತ್ತಿನಲ್ಲಿ ಇಡದಿದ್ದರೂ ಅದನ್ನು ೧೮೭೩ರ ನಂತರ ಉಳಿಸಿಕೊಳ್ಳಲು ಬರುತ್ತಿತ್ತು ಎಂದು ಹೇಳಬಹುದೇ? ದ್ವಿಲೋಹ ನಾಣ್ಯಪದ್ಧತಿ ಪ್ರತಿಪಾದಕರು ಮಾಡಿದಂತೆ ರಾಜಿಯಾಗದ ಇಂತಹ ಪ್ರತಿಪಾದನೆಯನ್ನು ಕೊಡುವುದು ದ್ವಿಲೋಹ ನಾಣ್ಯಪದ್ಧತಿಯು ಎಲ್ಲ ಸಂದರ್ಭಗಳಲ್ಲಿ ಕಾರ್ಯನಿರ್ವಹಿಸಬಹುದು ಎಂದು ಭಾವಿಸುವುದಾಗಿದೆ. ವಾಸ್ತವಿಕವಾಗಿ, ಅದು ಕೆಲವು ಸಂದರ್ಭಗಳಲ್ಲಿ ಕೆಲಸ ಮಾಡಬಹುದಾದರೂ, ಇತರ ಸಂದರ್ಭಗಳಲ್ಲಿ ಪರಿಣಾಮಕಾರಿಯಾಗದು. ಈ ಸಂದರ್ಭಗಳನ್ನು ಪ್ರೊ. ಫಿಷರ್ ಚೆನ್ನಾಗಿ ವರ್ಣಿಸಿದ್ದಾರೆ[೧] ದ್ವಿಲೋಹ ನಾಣ್ಯಪದ್ಧತಿಯಲ್ಲಿ ಚಿನ್ನ ಮತ್ತು

---

ಒಂದು ವಸ್ತುವಿನ ಅಭಾವವನ್ನು ಇನ್ನೊಂದು ವಸ್ತುವಿನ ಲಭ್ಯತೆಯಿಂದ ಸರಿಪಡಿಸಿಕೊಳ್ಳಬಹುದು. ಹತ್ತು ಪೌಂಡ್ ಕಬ್ಬಿನ ಸಕ್ಕರೆಯು ಹನ್ನೊಂದು ಪೌಂಡ್ ಬೀಟ್‌ರೂಟ್‌ನ ಸಕ್ಕರೆಗೆ ಸಮನಾದರೆ, ಅವೆರಡು ವಸ್ತುಗಳ ನಡುವಿನ ಬಳಕೆಯ ಅನುಪಾತವು ನಿಶ್ಚಿತವಾಗಿ ೧೦:೧೧ ಆಗಿರುತ್ತದೆ. ಒಂದು ಸಾಮಾನ್ಯ ಬೇಡಿಕೆಯನ್ನು ಪೂರೈಸುವಲ್ಲಿ ಅವುಗಳಿಗಿರುವ ಸಾಮರ್ಥ್ಯದ ಮೇಲೆ ಈ ಅನುಪಾತವು ನಿಂತಿರುತ್ತದೆ. ಆದರೆ ಪರ್ಯಾಯತೆಯು ನೈಸರ್ಗಿಕವಾದುದಾಗಿರುವುದರಿಂದ, ಈ ಅನುಪಾತವೂ ನೈಸರ್ಗಿಕವಾದುದೇ ಆಗಿರುತ್ತದೆ.

"ಆದರೆ ಹಣದ ವಿಷಯದಲ್ಲಿ ಪರ್ಯಾಯತೆಗೆ ನಿಗದಿತ ಅನುಪಾತವಿರುವುದಿಲ್ಲ .................... ಇಲ್ಲಿ ನಾವು ಚರ್ಚಿಸಬೇಕಾದದ್ದು ಸಾಪೇಕ್ಷವಾಗಿ ಸಿಹಿಗೊಳಿಸುವ ಶಕ್ತಿಯಲ್ಲ ಅಥವಾ ಸಾಪೇಕ್ಷವಾಗಿ ಪೋಷಣೆ ನೀಡುವ ಶಕ್ತಿಯಲ್ಲ ಅಥವಾ ಬೇಡಿಕೆಗಳನ್ನು ಪೂರೈಸುವ ಯಾವುದೇ ಇತರ ಸಾಮರ್ಥ್ಯವಲ್ಲ. ಲೋಹಗಳಲ್ಲಿ ಅಂತರ್ಗತವಾಗಿರುವ ಮತ್ತು ಅವುಗಳ ಬೆಲೆಗಳಿಂದ ಸ್ವತಂತ್ರವಾಗಿರುವ ಸಾಮರ್ಥ್ಯವಲ್ಲ. ಅದರ ಬದಲಾಗಿ ನಾವು ಸಾಪೇಕ್ಷಗೊಳ್ಳುವ ಶಕ್ತಿಯೊಂದಿಗೆ ಮಾತ್ರ ವ್ಯವಹರಿಸಬೇಕಾಗುತ್ತದೆ. ನಾವು ಲೋಹದಲ್ಲಿ ಮಾತ್ರ ಉಪಯುಕ್ತತೆಯನ್ನು ಪರಿಗಣಿಸದೆ ಅದು ಕೊಳ್ಳುವ ವಸ್ತುಗಳನ್ನು ಪರಿಗಣಿಸುತ್ತೇವೆ. ಸಕ್ಕರೆಗಳಿಗೆ ಅವುಗಳ ಬೆಲೆಗಳನ್ನು ತಿಳಿಯುವ ಮೊದಲು ಅವುಗಳ ಅನುಕ್ರಮ ಇಷ್ಟಗಳನ್ನು ಅಥವಾ ಉಪಯುಕ್ತತೆಗಳನ್ನು ನೀಡುತ್ತೇವೆ. ಆದರೆ ಚಿನ್ನ ಮತ್ತು ಬೆಳ್ಳಿಗಳಿಗೆ ಯಾವ ಅನುಪಾತಗಳನ್ನು ನಾವು ಯಾವ ಅನುಪಾತಗಳನ್ನು ಕಟ್ಟುವೆವು ಎಂಬುದನ್ನು ತಿಳಿಯುವ ಮೊದಲು ಅವುಗಳ ಸಾಪೇಕ್ಷ ಚಲಾವಣಾ ಮೌಲ್ಯಗಳನ್ನು ಚರ್ಚಿಸಬೇಕು. ನಮಗೆ ಪರ್ಯಾಯತೆಯ ಅನುಪಾತವು ಪ್ರಾಸಂಗಿಕವಾಗಿ ಬೆಲೆಗಳ ಅನುಪಾತವಾಗಿರುತ್ತದೆ. ಹಣದ ಎರಡು ಪ್ರಕಾರಗಳ ನಡುವಿನ ಪರ್ಯಾಯತೆಯು ವೈಶಿಷ್ಟ್ಯ ಪೂರ್ಣವಾಗಿದೆ. ಅವುಗಳು ಬದಲಿ ವಸ್ತುಗಳಾಗಿರುತ್ತವೆ. ಆದರೆ ಅವುಗಳಿಗೆ ಬಳಕೆದಾರರ ಇಷ್ಟಗಳ ಮೇಲೆ ಅವಲಂಬಿಸಿದ ನೈಸರ್ಗಿಕ ಪರ್ಯಾಯತೆಯ ಅನುಪಾತವಿರುವುದಿಲ್ಲ.

ಈ ಸಂದರ್ಭದಲ್ಲಿ ಬೇಡಿಕೆ ಮತ್ತು ಸರಬರಾಜು ಕಾರಣವಾಗಿರುವುದರಿಂದ, ನಿಗದಿತವಾದ ಅನುಪಾತವು ಹುರುಳಿಲ್ಲದೆ ಕಾನೂನಿನಿಂದ ವ್ಯವಸ್ಥೆಯ ಮೇಲೆ ಹೇರಲಾಗಿದೆ ಮತ್ತು ಇಂತಹ ಅನುಪಾತವು ಖಂಡಿತವಾಗಿಯೂ ವಿಫಲವಾಗುತ್ತದೆ, ಇಲ್ಲಿನ ಹೋಲಿಕೆಯು ಅಸಮಂಜಸವಾದುದು, ಚಿನ್ನ ಮತ್ತು ಬೆಳ್ಳಿ ಇವೆರಡೂ ಸಾಮ್ಯವಿಲ್ಲದವು, ಇವೆರಡು ಲೋಹಗಳನ್ನು ಅವಲಂಬಿಸಿದ ನಾಣ್ಯಗಳ ಆಯ್ಕೆಯಲ್ಲಿ ಗ್ರಾಹಕರು ಸ್ವತಂತ್ರವಾಗಿ ನಿರ್ಧರಿಸುವ ಅನುಪಾತವಿರುವುದಿಲ್ಲ ಎಂದು ವಾದಿಸುವವರು ಮೇಲೆ ಹೇಳಿದ ವಿಷಯವನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ. ....." ಪರ್ಚೇಸಿಂಗ್ ಪವರ್ ಆಫ್ ಮನಿ, ೧೯೧೧, ಪುಟಗಳು ೩೭೬-೭೭.

೧. ಎಲಿಮೆಂಟರಿ ಪ್ರಿನ್ಸಿಪಲ್ ಆಫ್ ಇಕನಾಮಿಕ್ಸ್, ೧೯೧೨, ಪುಟಗಳು ೨೨೮-೨೯. ಫಿಷರ್ ಅವರು ತಾವು ಕೊಟ್ಟ ಚಿತ್ರಗಳಲ್ಲಿ ಹಾಗೆ ಅರ್ಥೈಸದಿದ್ದರೂ ದ್ವಿಲೋಹ ನಾಣ್ಯಪದ್ಧತಿಯ ಸಫಲತೆ ವಿಫಲತೆಗಳು ಆ ಎರಡು ಲೋಹಗಳು

ಬೆಳ್ಳಿಗಳ ನಡುವಿನ ಮಾರುಕಟ್ಟೆ ಅನುಪಾತವು ಸದಾ ಮುಕ್ತವಾಗಿ ತಯಾರಿಸಿದ ಮತ್ತು ಅನಿಯಮಿತ ಕಾನೂನುಬದ್ಧ ಶಕ್ತಿಯನ್ನು ಹೊಂದಿದ ಚಿನ್ನ ಮತ್ತು ಬೆಳ್ಳಿಗಳ ನಾಣ್ಯಗಳ ನಡುವಿನ ಕಾನೂನು ಅನುಪಾತದ ಹಾಗೆ ಇರುವುದೇ ಎಂಬುದು ಪ್ರಶ್ನೆಯಾಗಿದೆ. ಈಗ ಚಿನ್ನದ ಗಟ್ಟಿಗೆ ಹೋಲಿಸಿದಂತೆ ಬೆಳ್ಳಿಯ ಗಟ್ಟಿಯ ಪೂರೈಕೆಯು ಸಾಪೇಕ್ಷವಾಗಿ ಹೆಚ್ಚಾಗಿದೆ ಎಂದು ಭಾವಿಸಿದರೆ, ಪರಿಣಾಮವು ನಾಣ್ಯ ತಯಾರಿಕೆ ಮತ್ತು ಮಾರುಕಟ್ಟೆ ಅನುಪಾತಗಳಲ್ಲಿ ಸ್ಪಷ್ಟವಾಗಿ ಭಿನ್ನತೆ ಉಂಟಾಗುವುದು. ದ್ವಿಲೋಹ ಕಾನೂನಿನ ಪರಿಹಾರ ಕ್ರಮವು ಸಮತೋಲನವನ್ನು ಪುನರ್‌ಸ್ಥಾಪಿಸುವುದೇ? ಅದನ್ನು ಮಾಡುವಲ್ಲಿ ಅದು ಯಶಸ್ವಿಯಾಗಬಹುದು ಅಥವಾ ಆಗಲಿಕ್ಕಿಲ್ಲ. ಬೆಳ್ಳಿಯ ಗಟ್ಟಿಯ ಪೂರೈಕೆಯಲ್ಲಿಯ ಹೆಚ್ಚಳ ಮತ್ತು ಚಿನ್ನದ ಗಟ್ಟಿಯ ಪೂರೈಕೆಯಲ್ಲಿಯ ಕ್ಷೀಣತೆಗಳೂ ಹೇಗಿರಬೇಕೆಂದರೆ ನಾಣ್ಯದ ಒಳಗೆ ಹರಿಯುವುದರ ಮೂಲಕ ಉಂಟಾಗುವ ಬೆಳ್ಳಿಯ ಕೊರತೆ ಮತ್ತು ನಾಣ್ಯದಿಂದ ಹೊರಗೆ ಹರಿಯುವುದರ ಮೂಲಕ ಉಂಟಾಗುವ ಚಿನ್ನದ ಹೆಚ್ಚಳ ಇವುಗಳು ಅವುಗಳನ್ನು ಗಟ್ಟಿರೂಪದಲ್ಲಿ ತಮ್ಮ ಹಳೆಯ ಮಟ್ಟಕ್ಕೆ ಪುನಃ ಸ್ಥಾಪಿಸಬೇಕು. ಹಾಗಾದಾಗ ಮಾತ್ರ ದ್ವಿಲೋಹ ನಾಣ್ಯಪದ್ಧತಿಯು ಯಶಸ್ವಿಯಾಗುವುದು, ಬೇರೆ ಶಬ್ದಗಳಲ್ಲಿ ಎರಡು ಗಟ್ಟಿಗಳ ಪೇಟೆ ಅನುಪಾತವು ನಾಣ್ಯ ತಯಾರಿಕೆ ಅನುಪಾತಕ್ಕೆ ಹಿಂತಿರುಗುವ ಒಲವನ್ನು ತೋರಿಸುವುದು. ಆದರೆ ಬೆಳ್ಳಿಯ ಗಟ್ಟಿಯ ಪೂರೈಕೆಯಲ್ಲಿಯ ಹೆಚ್ಚಳ ಮತ್ತು ಚಿನ್ನದ ಗಟ್ಟಿಯ ಪೂರೈಕೆಯಲ್ಲಿಯ ಕ್ಷೀಣತೆಗಳು ಕೆಳಗಿನಂತಿದ್ದರೆ ದ್ವಿಲೋಹ ನಾಣ್ಯಪದ್ಧತಿಯು ವಿಫಲವಾಗಲೇಬೇಕು, ನಾಣ್ಯದಲ್ಲಿ ಬೆಳ್ಳಿಯ ಗಟ್ಟಿಯ ಹರಿಯುವಿಕೆಯು ಬೆಳ್ಳಿಯ ಗಟ್ಟಿಯ ಮಟ್ಟವನ್ನು ಹಳೆಯ ಮಟ್ಟಕ್ಕೆ ಇಳಿಸುವುದು. ಆದರೆ ನಾಣ್ಯದಿಂದ ಚಿನ್ನದ ಗಟ್ಟಿಯ ಹರಿಯುವಿಕೆಯು ಚಿನ್ನದ ಗಟ್ಟಿಯ ಮಟ್ಟವನ್ನು ಹಳೆಯ ಮಟ್ಟಕ್ಕೆ ಏರಿಸಲು ಸಾಕಾಗುವುದಿಲ್ಲವಾದರೆ ಅಥವಾ ನಾಣ್ಯದಿಂದ ಚಿನ್ನದ ಹರಿಯುವಿಕೆಯು ಚಿನ್ನದ ಗಟ್ಟಿಯ ಮಟ್ಟವನ್ನು ಹಳೆಯ ಮಟ್ಟಕ್ಕೆ ತಂದರೆ ನಾಣ್ಯದಲ್ಲಿ ಬೆಳ್ಳಿಯ ಹರಿಯುವಿಕೆಯು ಬೆಳ್ಳಿಯ ಗಟ್ಟಿಯ ಮಟ್ಟವನ್ನು ಹಳೆಯ ಮಟ್ಟಕ್ಕೆ ಇಳಿಸದಿದ್ದರೆ, ಅನ್ಯ ಶಬ್ದಗಳಲ್ಲಿ, ಎರಡು ಗಟ್ಟಿಗಳ ಮಾರುಕಟ್ಟೆ ಅನುಪಾತವು ಅವುಗಳ ನಾಣ್ಯಗಳ ಮಧ್ಯ ಕಾನೂನಿನ ಪ್ರಕಾರ ಸ್ಥಾಪಿತವಾದ ನಾಣ್ಯತಯಾರಿಕೆಯ ಅನುಪಾತಕ್ಕಿಂತ ಹೆಚ್ಚು ಅಥವಾ ಕಡಿಮೆಯಾಗುವುದು.

೧೮೭೩ ರ ನಂತರ ಹುಟ್ಟಿದ ಸಂದರ್ಭಗಳು ಈ ಎರಡು ಸಾಧ್ಯತೆಗಳಲ್ಲಿ ಯಾವುದಕ್ಕೆ ಸೇರಿರಬೇಕು?

---

ಚಲಾವಣೆಯಲ್ಲಿ ಇವೆಯೇ ಎಂಬ ಪ್ರಶ್ನೆಯ ಮೇಲೆ ಅವಲಂಬಿಸಿರುತ್ತವೆ ಎಂದು ವಾದಿಸುವಂತೆ ಕಾಣುತ್ತದೆ. ಏಕೆಂದರೆ ದ್ವಿಲೋಹ ನಾಣ್ಯಪದ್ಧತಿಯ ವೈಫಲ್ಯವನ್ನು ತೋರಿಸಲು ಅವರು ಕೊಡುವ ಚಿತ್ರ (೧೪(ಬ) ದಲ್ಲಿ ಅವರ ಚಿತ್ರ ಚಿನ್ನವು ಚಲಾವಣೆಯಿಂದ ಸಂಪೂರ್ಣವಾಗಿ ರದ್ದುಮಾಡಲ್ಪಟ್ಟಿದೆ ಎಂದು ತೋರಿಸುತ್ತದೆ. ಆದರೆ ದ್ವಿಲೋಹ ನಾಣ್ಯ ಪದ್ಧತಿಯ ಯಶಸ್ಸನ್ನು ತೋರಿಸಲು ಅವರು ಕೊಡುವ ಚಿತ್ರ ೧೫(ಬ) ದಲ್ಲಿ ಚಿತ್ರ (ಫ) ಚಿನ್ನವು ಭಾಗಶಃ ಚಲಾವಣೆಯಿಂದ ರದ್ದುಮಾಡಲ್ಪಟ್ಟಿದೆ ಎಂದು ತೋರಿಸುತ್ತದೆ. ಆದರೆ ಮೂರನೇ ಸಾಧ್ಯತೆ ಇರಲಾರದು ಎಂದು ಭಾವಿಸಲು ಕಾರಣವಿಲ್ಲ. ಅದೆಂದರೆ ಚಿತ್ರ ೧೪(ಬ) ದಲ್ಲಿ ಇದ್ದಂತೆ ಎರಡರಲ್ಲಿ ಒಂದು ನಾಣ್ಯವು ಸಂಪೂರ್ಣವಾಗಿ ಚಲಾವಣೆಯಿಂದ ರದ್ದಾದರೂ, ದ್ವಿಲೋಹ ನಾಣ್ಯಪದ್ಧತಿಯು ಯಶಸ್ವಿಯಾಗುತ್ತದೆ. ದ್ವಿಲೋಹ ನಾಣ್ಯಪದ್ಧತಿಯ ಯಶಸ್ಸಿಗೆ ಎರಡೂ ಲೋಹಗಳು ಚಲಾವಣೆಯಲ್ಲಿರಬೇಕೆಂಬುದು ಅವಶ್ಯವಿಲ್ಲ. ಎರಡು ಲೋಹಗಳ ಮೌಲ್ಯಗಳನ್ನು ಸರಿದೂಗಿಸುವುದು ಎರಡು ಗಟ್ಟಿಗಳ ಸಾಪೇಕ್ಷ ಮೌಲ್ಯಗಳನ್ನು ಎರಡು ನಾಣ್ಯಗಳ ನಡುವಿನ ಸ್ಥಾಪಿತ ಕಾನೂನು ಪೂರ್ವಸ್ಥಿತಿಗೆ ತರಲು ಯಶಸ್ವಿಯಾಗುವುದೋ ಅಥವಾ ಇಲ್ಲವೋ ಎಂಬುದರ ಮೇಲೆ ಅದರ ಯಶಸ್ಸು ಅಥವಾ ವೈಫಲ್ಯ ಅವಲಂಬಿಸಿರುತ್ತದೆ. ಅದನ್ನು ಸಾಧಿಸುವಲ್ಲಿ ಅದು ಯಶಸ್ವಿಯಾದರೆ ಪರಿಹಾರ ಕ್ರಮವು ಒಂದು ನಾಣ್ಯವನ್ನು ಚಲಾವಣೆಯಿಂದ ಸಂಪೂರ್ಣವಾಗಿ ಹೊರಗೆ ಹಾಕಿದರೂ ಅನುಪಾತವು ಸುರಕ್ಷಿತವಿರುತ್ತದೆ.

ಇದೊಂದು ಯಾರೂ ಏನೂ ನಿಖರವಾಗಿ ಹೇಳಲು ಬಾರದಂಥ ಪ್ರಶ್ನೆಯಾಗಿದೆ ಮುಂಚಿನ ಅವಧಿಯಲ್ಲಿ ದ್ವಿಲೋಹ ಕಾನೂನಿನ ಯಶಸ್ಸನ್ನು ಒಪ್ಪಿದ ಜೇವನ್ಸ್ ಕೂಡ ನಂತರದ ಅವಧಿಯಲ್ಲಿ ಅದರ ಯಶಸ್ಸಿನ ಬಗ್ಗೆ ಆಶಾವಾದಿಯಾಗಿರಲಿಲ್ಲ. ಅವರು ಕೆಳಗಿನಂತೆ ಅಭಿಪ್ರಾಯಪಟ್ಟರು.[೧]

"ದ್ವಿಲೋಹ ನಾಣ್ಯಪದ್ಧತಿಯು ಒಂದು ಪ್ರಶ್ನೆಯಾಗಿದ್ದು ಅದಕ್ಕೆ ಯಾವುದೇ ಖಚಿತ ಮತ್ತು ಸರಳ ಉತ್ತರವಿರುವುದಿಲ್ಲ. ಅದು ಆವಶ್ಯಕವಾಗಿ ಒಂದು ಅನಿಶ್ಚಿತ ಸಮಸ್ಯೆಯಾಗಿದೆ. ಅದು ಅನೇಕ ಬದಲಾಗುವ ಪ್ರಮಾಣಗಳನ್ನು ಮತ್ತು ಬಹಳ ಸ್ಥಿರಪ್ರಮಾಣಗಳನ್ನು ಒಳಗೊಂಡಿರುತ್ತದೆ. ಸ್ಥಿರವಾದ ಪ್ರಮಾಣಗಳು ನಿಖರವಾಗಿ ಗೊತ್ತಿರುವುದಿಲ್ಲ ಅಥವಾ ಬಹಳ ಸಂದರ್ಭಗಳಲ್ಲಿ ಗೊತ್ತೇ ಇರುವುದಿಲ್ಲ....."

ಆದಾಗ್ಯೂ, ದ್ವಿಲೋಹ ನಾಣ್ಯಪದ್ಧತಿಯಲ್ಲಿ ನಾಣ್ಯ ತಯಾರಿಕೆಯ ಅನುಪಾತ ಮತ್ತು ಮಾರುಕಟ್ಟೆಯ ಅನುಪಾತಗಳ ನಡುವಿನ ಅಂತರವು ದ್ವಿಲೋಹ ನಾಣ್ಯಪದ್ಧತಿ ಇಲ್ಲದ ಪ್ರಸಂಗದಲ್ಲಿಯ ಅಂತರಕ್ಕಿಂತ ಕಡಿಮೆ ಇರುವುದೆಂಬುದು ಖಂಡಿತ. ಪೇಟೆಯ ಅನುಪಾತವು ನಾಣ್ಯ ತಯಾರಿಕೆಯ ಅನುಪಾತದಿಂದ ಭಿನ್ನವಿದ್ದ ಸಮಯಗಳಲ್ಲಿ ದ್ವಿಲೋಹ ಕಾನೂನಿನ ಅಡಿಯಲ್ಲಿ ಪರಿಹಾರ ಕ್ರಮವು ಸಮತೋಲನವನ್ನು ಪುನಃ ಸ್ಥಾಪಿಸುವ ಒಲವನ್ನು ತೋರಿಸುವುದು, ಮತ್ತು ಅದು ಸಮತೋಲನವನ್ನು ಪುನರ್‌ಸ್ಥಾಪಿಸುವಲ್ಲಿ ವಿಫಲವಾದಾಗ್ಯೂ ಅದು ಎರಡು ಅನುಪಾತಗಳ ನಡುವಿನ ಅಂತರವನ್ನು ಕಡಿಮೆ ಮಾಡುವಲ್ಲಿ ಯಶಸ್ವಿಯಾಗುವುದು. ಪರಿಸ್ಥಿತಿ ಹಾಗಿದ್ದು, ೧೮೭೩ ರ ನಂತರ ಬೆಳ್ಳಿಯ ಅನಾಣ್ಯೀಕರಣವಾಗಿದ್ದರೆ, ಚಿನ್ನ ಮತ್ತು ಬೆಳ್ಳಿಗಳ ನಡುವಿನ ಅನುಪಾತವು ಬಹುಶಃ ಮುಂಚಿನ ಅವಧಿಯ ಹಣಕಾಸು ಕ್ಷೋಭೆಗಳಲ್ಲಿಯಂತೆ ಸುರಕ್ಷಿತವಾಗಿ ಉಳಿಯುತ್ತಿತ್ತು ಎಂದು ವಾದಿಸುವುದು ಸುರಕ್ಷಿತ. ಏನೇ ಆದರೂ, ಎರಡು ಲೋಹಗಳ ನಡುವಿನ ಮಾರುಕಟ್ಟೆಯ ಅನುಪಾತವು ವಾಸ್ತವವಾಗಿ ಸಂಭವಿಸುವ ನಾಣ್ಯ ತಯಾರಿಕೆಯ ಅನುಪಾತಕ್ಕಿಂತ ಭಿನ್ನವಾಗುತ್ತಿದ್ದಿಲ್ಲವೆಂಬುದು ಖಚಿತ.[೨]

ಆದ್ದರಿಂದ ಎಪ್ಪತ್ತರ ಹಣಕಾಸು ಶಾಸನವು ಹಿಂದೆ ಇರದಿದ್ದ ಉದ್ದೇಶರಹಿತ ಸಮಸ್ಯೆಯನ್ನು ನಿಜವಾಗಿ ಸೃಷ್ಟಿಸದಿದ್ದರೂ ಅದು ಖಂಡಿತವಾಗಿ ಪರಿಸ್ಥಿತಿಯನ್ನು ಇನ್ನಷ್ಟು ಹದಗೆಡಿಸಲು ಸಹಾಯ ಮಾಡಿತು ಎಂಬುದು ದುಃಖದ ಸಂಗತಿ. ೧೮೭೦ ರ ಮುನ್ನ ಎಲ್ಲ ದೇಶಗಳಿಗೆ ಸಾಮಾನ್ಯವಾದ ನಾಣ್ಯವಿರಲಿಲ್ಲ. ಭಾರತ ಮತ್ತು ಪಶ್ಚಿಮ ಯುರೋಪಿನ ದೇಶಗಳು ಪ್ರತ್ಯೇಕವಾಗಿ ಬೆಳ್ಳಿಯ ಆಧಾರದ ಹಣವನ್ನು ಹೊಂದಿದ್ದವು ಇಂಗ್ಲೆಂಡ್ ಮತ್ತು ಪೋರ್ಚುಗಲ್‌ಗಳಂಥ ಇತರ ದೇಶಗಳು ಪ್ರತ್ಯೇಕವಾಗಿ ಚಿನ್ನದ ಆಧಾರದ ಮೇಲಿದ್ದ ಹಣವನ್ನು ಹೊಂದಿದ್ದವು. ಆದಾಗ್ಯೂ ಅವುಗಳಲ್ಲಿ ಯಾವುದಕ್ಕೂ ತಮ್ಮ ಪರಸ್ಪರ ವ್ಯವಹಾರಗಳಲ್ಲಿ ಸಾಮಾನ್ಯ ಪ್ರಮಿತಿಯ ನಾಣ್ಯದ ಅಭಾವವು ಇತ್ತು ಎಂದೆನಿಸಿರಲಿಲ್ಲ.

ಫ್ರಾನ್ಸ್ ಮತ್ತು ಲ್ಯಾಟಿನ್ ಒಕ್ಕೂಟಗಳಲ್ಲಿ ನಿಗದಿತ ಅನುಪಾತ ಪದ್ಧತಿ ಇರುವವರೆಗೆ ಸಮಸ್ಯೆಗೆ ಪರಿಹಾರ ಒದಗಿಸಲಾಗಿತ್ತು. ಏಕೆಂದರೆ ಎಲ್ಲ ದೇಶಗಳು ಒಂದೇ ಲೋಹವನ್ನು ಸಾಮಾನ್ಯ ಹಣವಾಗಿ ಉಪಯೋಗಿಸದಿದ್ದರೂ, ಅದರಲ್ಲಿ ಎರಡು ಲೋಹಗಳು ಒಂದೇ ಎಂಬಂತೆ ವರ್ತಿಸುತ್ತಿದ್ದವು ಮತ್ತು ಅವು ಸಾಮಾನ್ಯ ಪ್ರಮಿತಿಯನ್ನು ಪೂರೈಸಿದವು. ಆದ್ದರಿಂದ ಎರಡರಲ್ಲಿ ಯಾವುದಾದರೊಂದು ಲೋಹವನ್ನು ನಿಗದಿತ ಪ್ರಮಾಣದಲ್ಲಿ ಉಪಯೋಗಿಸುವ ವ್ಯವಸ್ಥೆ ಯಾವುದೊಂದು ದೇಶದಲ್ಲಿ ಇರುವವರೆಗೆ ಬಹಳಷ್ಟು

---

೧. ಇನ್‌ವೆಸ್ಟಿಗೇಶನ್ಸ್, ಎಟ್‌ಸೆಟ್ರಾ (ಸಂಪಾದಕರು ಫಾಕ್ಸ್‌ವೆಲ್), ಪು. ೩೧೭

೨. ಫಿಷರ್, ಪರ್ಚೇಸಿಂಗ್ ಪವರ್ ಆಫ್ ಮನಿ, ೧೯೧೧ ಪುಟಗಳು ೧೩೪–೩೫.

ದೇಶಗಳಿಗೆ ಅವು ಯಾವ ಲೋಹವನ್ನು ಉಪಯೋಗಿಸಿದವು ಎಂಬುದು ಅಷ್ಟೇನು ಪ್ರಮುಖವಲ್ಲದ ವಿಷಯವಾಗಿತ್ತು. ಈ ನಿಗದಿತ ಅನುಪಾತದ ನಾಶದಿಂದ ಇದು ಅತ್ಯಂತ ಕಳಕಳಿಯ ವಿಷಯವಾಯಿತು. ಮೊದಲು ಸಾಮಾನ್ಯ ನಾಣ್ಯವಿಲ್ಲದೇ ಸಾಮಾನ್ಯ ಅಂತರರಾಷ್ಟ್ರೀಯ ಪ್ರಮಿತಿಯ ಪ್ರಯೋಜನಗಳನ್ನು ಅನುಭವಿಸಿದ ಪ್ರತಿಯೊಂದು ದೇಶವೂ ಒಂದು ಸಾಮಾನ್ಯ ಪ್ರಮಿತಿಯನ್ನು ಪಡೆಯಲು ತನ್ನ ನಾಣ್ಯವನ್ನು ರದ್ದುಮಾಡುವ ಅಥವಾ ತನ್ನ ನಾಣ್ಯವನ್ನು ಮುಂದುವರೆಸಿಕೊಂಡು ಸಾಮಾನ್ಯ ಪ್ರಮಿತಿಯ ಪ್ರಯೋಜನಗಳನ್ನು ಕಳೆದುಕೊಳ್ಳುವ ಆಯ್ಕೆಯ ಬಿಕ್ಕಟ್ಟಿಗೆ ಸಿಕ್ಕಿಕೊಂಡಿತು. ಸಾಮಾನ್ಯ ಪ್ರಮಿತಿಯ ಅಗತ್ಯಗಳು ಅಂತಿಮವಾಗಿ ಅದನ್ನು ಈಡೇರಿಸಿದವು. ಅದು ಹಾಗೆಯೇ ಆಗಬೇಕಿತ್ತು. ಆದರೆ ಬಹಳಷ್ಟು ನಷ್ಟ ಮತ್ತು ಹೊರೆಗಳು ಉಂಟಾಗುವವರೆಗೂ ಅದರ ಅಭಾವದ ಪರಿಣಾಮಗಳು ಏನಾಗಬಹುದೆಂಬ ಕಲ್ಪನೆಯೂ ಜನರಿಗೆ ಇರಲಿಲ್ಲ.

## ಅಧ್ಯಾಯ ೧೫

# ಬೆಳ್ಳಿಯ ಪ್ರಮಿತಿ ಮತ್ತು ಅದರ ಅಸ್ಥಿರತೆಯ ದುಷ್ಪರಿಣಾಮಗಳು

ವಿನಿಮಯದಲ್ಲಿನ ಸಮಾನತೆಯ ಭಂಗದಿಂದ ಆರ್ಥಿಕ ಪರಿಣಾಮಗಳು ಅತ್ಯಂತ ದೂರಗಾಮಿಗಳಾಗಿದ್ದವು. ಅದು ವಾಣಿಜ್ಯೋದ್ಯಮ ಜಗತ್ತನ್ನು ಎರಡು ವಿರುದ್ಧ ಭಾಗಗಳನ್ನಾಗಿ ವಿಭಾಗಿಸಿತ್ತು. ಒಂದು ಸುವರ್ಣವನ್ನು ಬಳಸಿದರೆ ಮತ್ತೊಂದು ಬೆಳ್ಳಿಯನ್ನು ಮಾನದಂಡವಾಗಿ ಉಳ್ಳಂಥ ಹಣವನ್ನು ಬಳಸುತ್ತದೆ. ೧೮೭೩ ಕ್ಕಿಂತ ಹಿಂದೆ ಪ್ರಚಲಿತವಾಗಿದ್ದಂತೆ ಅದೇನೂ ಮುಖ್ಯವಾದದ್ದಾಗಿರಲಿಲ್ಲ. ಅಂತರರಾಷ್ಟ್ರೀಯ ವ್ಯವಹಾರಗಳ ಉದ್ದೇಶಗಳಿಗಾಗಿ ಎಷ್ಟೋ ಪ್ರಮಾಣದ ಚಿನ್ನ ಎಷ್ಟೋ ಪ್ರಮಾಣದ ಬೆಳ್ಳಿಗೆ ಸಮ ಎಂಬುದಾಗಿ ಇತ್ತು. ಒಂದು ದೇಶ ಚಿನ್ನವನ್ನು ಮಾನದಂಡವಾಗಿ ಬಳಸಬಹುದಾಗಿತ್ತು; ಇಲ್ಲವೇ ಯಾವುದರಲ್ಲಿ ಬೇಕಾದರೂ ತನ್ನ ವ್ಯವಹಾರಗಳನ್ನು ನಡೆಸಿಕೊಳ್ಳಬಹುದಾಗಿತ್ತು. ಅದರಲ್ಲಿ ಏನೂ ವ್ಯತ್ಯಾಸವಿರಲಿಲ್ಲ. ಆದರೆ ನಿಗದಿತ ಸಮಾನತೆಯಲ್ಲಿ ಅಸ್ತವ್ಯಸ್ತಗಳಾದದ್ದರಿಂದ ವರ್ಷದಿಂದ ವರ್ಷಕ್ಕೆ ಇಲ್ಲವೇ ತಿಂಗಳಿನಿಂದ ತಿಂಗಳಿಗೆ ಎಷ್ಟು ಬೆಳ್ಳಿ ಎಷ್ಟು ಚಿನ್ನಕ್ಕೆ ಸಮ ಎನ್ನುವುದನ್ನು ವಿವರಿಸುವುದು ಸಾಧ್ಯವಾಗಲಿಲ್ಲ. ಆರ್ಥಿಕ ವಿನಿಮಯದ ಆತ್ಮದಂತಿರುವ ಈ ಖಚಿತ ಮೌಲ್ಯ ಅನಿರ್ದಿಷ್ಟ ಜೂಜಾಟಕ್ಕೆ ಎಡೆಮಾಡಿಕೊಟ್ಟಿತು. ನಿಜ, ಎಲ್ಲ ರಾಷ್ಟ್ರಗಳೂ ಒಂದೇ ಮಟ್ಟದಲ್ಲಿ ಮತ್ತು ಒಂದೇ ಪ್ರಮಾಣದಲ್ಲಿ ತೊಡಕಿನ ಈ ಸುಳಿಯಲ್ಲಿ ಸಿಕ್ಕಿಕೊಳ್ಳಲಿಲ್ಲ. ಆದರೂ ಕೂಟ ಅಂತರರಾಷ್ಟ್ರೀಯ ವಾಣಿಜ್ಯದಲ್ಲಿ ಭಾಗವಹಿಸಿದಂಥ ಯಾವುದೇ ರಾಷ್ಟ್ರವಾಗಲಿ ಇದರಲ್ಲಿ ಸಿಲುಕಿಕೊಳ್ಳದೆ ತಪ್ಪಿಸಿಕೊಳ್ಳುವಂತಿರಲಿಲ್ಲ. ಉಳಿದ ರಾಷ್ಟ್ರಗಳಂತೆ ಭಾರತದ ವಿಷಯದಲ್ಲೂ ಇದು ನಿಜವಾಗಿತ್ತು. ಸುವರ್ಣ ಪ್ರಮಿತಿಗೆ ಸೇರಿದಂಥ ದೇಶಕ್ಕೆ ಬೆಳ್ಳಿಯ ಮಾನದಂಡದ ಭಾರತವು ನಿಕಟವಾಗಿ ಬದ್ಧವಾಗಿತ್ತು. ಇದರಿಂದಾಗಿ ಭಾರತದ ಆರ್ಥಿಕ ಮತ್ತು ಹಣಕಾಸಿನ ಜೀವನವು ಚಿನ್ನ ಮತ್ತು ಬೆಳ್ಳಿಯ ಸಾಪೇಕ್ಷ ಆಧಾರದ ಮೇಲೆ ವ್ಯವಹರಿಸಬೇಕಾಗಿದ್ದ ಕುರುಡು ಶಕ್ತಿಗಳ ಕೃಪೆಗೊಳಗಾಗಬೇಕಿತ್ತು. ಈ ಚಿನ್ನ ಮತ್ತು ಬೆಳ್ಳಿಯ ಸಾಪೇಕ್ಷ ಮೌಲ್ಯಗಳೇ ರೂಪಾಯಿ–ಸ್ಟರ್ಲಿಂಗ್ ವಿನಿಮಯದರವನ್ನು ರೂಪಿಸುತ್ತಿದ್ದವು.

ಚಿನ್ನದ ರೂಪದಲ್ಲಿ ಪಾವತಿಮಾಡಬೇಕಾದ ರಾಷ್ಟ್ರಗಳ ಪತನ ಹೆಚ್ಚಾಗತೊಡಗಿತು. ಅಂಥವುಗಳ ಪೈಕಿ ಅತ್ಯಂತ ಹೆಚ್ಚಿಗೆ ವೆಚ್ಚದ ಹೊರೆ ಭಾರತ ಸರ್ಕಾರದ ಮೇಲೆ ಬಿತ್ತು. ಆದರೆ ರಾಜಕೀಯ ಸಂವಿಧಾನದ ಅಗತ್ಯಗಳಿಗನುಗುಣವಾಗಿ ಸರ್ಕಾರವು ಇಂಗ್ಲೆಂಡಿನಲ್ಲಿ ಈ ಕೆಳಗೆ ಸಂಬಂಧಿಸಿದ ವಿಷಯದಲ್ಲಿ ಕೆಲವೊಂದು ಪಾವತಿಗಳನ್ನು ಮಾಡುವ ಅಗತ್ಯವುಂಟಾಯಿತು : ೧) ರೈಲ್ವೆ ಕಂಪನಿಗಳ ಷೇರು ಮತ್ತು ಸಾಲದ ಬಾಬ್ತುಗಳ ಮೇಲೆ ಬಡ್ಡಿ, ೨) ಭಾರತದಲ್ಲಿ ಯುರೋಪಿಯನ್ ಸೇನಾಪಡೆಗಳ ನಿರ್ವಹಣಾ ವೆಚ್ಚ ೩) ಇಂಗ್ಲೆಂಡಿನಲ್ಲಿ ಪಾವತಿಸಬೇಕಾದ ಪಿಂಚಣಿಗಳು ಮತ್ತು ಪರಿಣಾಮಕಾರಿಯಲ್ಲದ ಭತ್ಯಗಳು ೪) ಸ್ವದೇಶದಲ್ಲಿನ ಆಡಳಿತ ಸಂಬಂಧವಾದ ವೆಚ್ಚಗಳು[೧] ಮತ್ತು ೫) ಭಾರತದಲ್ಲಿ ಉಪಯೋಗಿಸುವ ಸಲುವಾಗಿ ಇಲ್ಲವೇ ಬಳಸುವ ಸಲುವಾಗಿ ಕೊಂಡ ಪದಾರ್ಥಗಳು.

---

೧. ೧೯೨೦ರ ಸುಧಾರಣಾ ಕಾಯ್ದೆಯಿಂದೀಚೆಗೆ "ರಾಜಕೀಯ" ವೆಂದು ಕರೆಯಲಾದ ಈ ವೆಚ್ಚದ ಭಾಗವನ್ನು ಬ್ರಿಟಿಷ್ ಅಂದಾಜುಗಳ ಮೇಲೆ ಮಾಡಲಾಗಿದೆ.

ಇಂಗ್ಲೆಂಡ್ ಚಿನ್ನವನ್ನು ಮಾನದಂಡವಾಗಿ ಉಳ್ಳಂಥ ದೇಶವಾಗಿದ್ದರಿಂದ ಈ ಪಾವತಿಗಳನ್ನು ಚಿನ್ನದ ರೂಪದಲ್ಲಿಯೇ ಮಾಡಬೇಕಾಗಿತ್ತು. ಆದರೆ ಭಾರತ ಸರ್ಕಾರದ ಆದಾಯಗಳಿಂದ ಈ ಬಗ್ಗೆ ಪಾವತಿ ನೀಡಬೇಕಾಗಿತ್ತು. ಆದರೆ ಭಾರತದಲ್ಲಿ ಏಕೈಕ ಕಾನೂನುಬದ್ಧ ಚಾಲ್ತಿ ಹಣವಾಗಿ ಬೆಳ್ಳಿಯನ್ನು ಪಡೆಯಲಾಗುತ್ತಿತ್ತು. ಚಿನ್ನದ ರೂಪದಲ್ಲಿ ಪಾವತಿ ಮಾಡಬೇಕೆಂಬುದಾಗಿ ನಿರ್ದಿಷ್ಟವಾಗಿ ಗೊತ್ತುಪಡಿಸಿದರೂ ಕೂಡ ಬೆಳ್ಳಿಗೆ ಇದ್ದ ಚಿನ್ನದ ವಿನಿಮಯ ಮೌಲ್ಯದ ಕುಸಿತದೊಂದಿಗೇ ಅವುಗಳ ಹೊರೆ ಹೆಚ್ಚಾಗಬೇಕಾದದ್ದು ಸ್ಪಷ್ಟ. ಆದರೆ ಚಿನ್ನದ ಪಾವತಿಗಳು ನಿರ್ದಿಷ್ಟ ಪ್ರಮಾಣದ್ದಲ್ಲ. ಅದು ಯಾವಾಗಲೂ ಏರುಮುಖವಾದದ್ದು. ಹಾಗಾಗಿ ಚಿನ್ನದ ಪಾವತಿಗಳ ರೂಪಾಯಿ ವೆಚ್ಚ ಅವುಗಳ ಬೃಹತ್ಪ್ರಮಾಣದಿಂದ ಹೆಚ್ಚಿದ್ದಷ್ಟೇ ಅಲ್ಲ ಚಿನ್ನದ ಬೆಲೆಯ ಏರಿಕೆಯಿಂದಲೂ ಆಯಿತು. ಏಕೆಂದರೆ ಪಾವತಿಯಾಗಬೇಕಾದದ್ದು ಚಿನ್ನದಲ್ಲಿ ತಾನೆ. ಹೇಗೆ ಈ ದ್ವಿಮುಖ ಲೇವಿ ಪದ್ಧತಿ ಭಾರತದ ಆದಾಯಗಳನ್ನು ಕುಗ್ಗಿಸಿತು ಎಂಬುದನ್ನು ಪಟ್ಟಿ–XI ಬಹಳ ಸಮರ್ಥವಾಗಿ ನಿರೂಪಿಸುತ್ತದೆ.

## ಪಟ್ಟಿ – XI
## ಚಿನ್ನದ ಪಾವತಿಗಳ ರೂಪಾಯಿ ವೆಚ್ಚದಲ್ಲಿ ಹೆಚ್ಚಳ+

| ಆರ್ಥಿಕ ವರ್ಷ | ವರ್ಷದ ಸರಾದರಿ ವಿನಿಮಯ ದರ | ೧೮೭೪–೭೫ರಲ್ಲಿ ಸ್ಟರ್ಲಿಂಗ್ ಪಾವತಿಗಾಗಿ ಅಗತ್ಯವಾದುದಕ್ಕಿಂತ ಹೆಚ್ಚಿನ ಸ್ಟರ್ಲಿಂಗ್ ಪಾವತಿಗಾಗಿ ಒದಗಿಸಲಾದ ಹೆಚ್ಚುವರಿ ರೂಪಾಯಿಗಳು | ೧೮೭೪–೭೫ರಲ್ಲಿ ವಿನಿಮಯ ದರದಲ್ಲಿ ಕುಸಿತದ ಕಾರಣವಾಗಿ ಆದ ಹೆಚ್ಚುವರಿ | ೧೮೭೪–೭೫ರಲ್ಲಿ ಚಿನ್ನ ಪಾವತಿಯ ಹೆಚ್ಚಳದ ಕಾರಣವಾಗಿ ಆದ ಹೆಚ್ಚುವರಿ |
|---|---|---|---|---|
| | ಸ್ಟ ಡಾ | ರೂ. | ರೂ. | ರೂ. |
| ೧೮೭೫–೭೬ | ೧ ೯.೬೨೬ | ೮೬,೯೭,೯೮೦ | ೪೧,೧೩,೭೨೩ | ೪೫,೮೪,೨೫೭ |
| ೧೮೭೬–೭೭ | ೧ ೮.೫೦೮ | ೩,೧೫,೦೬,೮೨೪ | ೧,೪೪,೬೮,೨೩೪ | ೧,೭೦,೩೮,೫೯೦ |
| ೧೮೭೭–೭೮ | ೧ ೮.೭೯೧ | ೧,೩೦,೦೫,೪೮೧ | ೧,೧೪,೫೮,೬೭೦ | ೧,೧೫,೪೬,೮೧೧ |
| ೧೮೭೮–೭೯ | ೧ ೭.೭೯೪ | ೧,೮೫,೨೩,೧೭೦ | ೧,೦೪,೧೬,೭೧೮ | ೮೧,೦೬,೪೫೨ |
| ೧೮೭೯–೮೦ | ೧ ೭.೯೬೧ | ೩೯,೨೩,೫೭೦ | ೧,೬೫,೩೭,೩೯೪ | –೧,೨೬,೧೩,೮೨೪ |
| ೧೮೮೦–೮೧ | ೧ ೭.೯೫೬ | ೩,೧೨,೧೧,೯೮೧ | ೧,೯೨,೮೨,೫೮೨ | ೧,೧೯,೨೯,೩೯೯ |
| ೧೮೮೧–೮೨ | ೧ ೭.೮೯೫ | ೩,೧೮,೧೯,೬೮೫ | ೧,೯೮,೭೬,೭೮೬ | –೧,೧೯,೪೨,೮೯೯ |
| ೧೮೮೨–೮೩ | ೧ ೭.೫೨೫ | ೬೨,೫೦,೫೧೮ | ೧,೮೬,೩೫,೨೪೬ | ೨,೪೮,೫೮,೭೬೪ |
| ೧೮೮೩–೮೪ | ೧ ೭.೫೩೬ | ೩,೪೪,೧೬,೬೮೫ | ೨,೩೩,೪೬,೦೪೦ | ೧,೧೦,೭೦,೬೪೫ |
| ೧೮೮೪–೮೫ | ೧ ೭.೩೦೮ | ೧,೯೬,೨೫,೯೮೧ | ೨,೪೮,೦೩,೪೨೩ | ೫೧,೭೭,೪೪೨ |
| ೧೮೮೫–೮೬ | ೧ ೬.೨೫೪ | ೧,೮೨,೧೧,೩೪೬ | ೨,೫೪,೯೫,೩೩೭ | –೪,೩೭,೦೬,೬೮೩ |
| ೧೮೮೬–೮೭ | ೧ ೫.೪೪೧ | ೪,೬೯,೧೬,೭೮೮ | ೪,೪೬,೬೮,೨೯೯ | ೨೨,೪೮,೪೮೯ |
| ೧೮೮೭–೮೮ | ೧ ೪.೮೯೮ | ೪,೬೩,೧೩,೧೬೧ | ೪,೯೬,೬೦,೫೩೭ | –೩೩,೪೭,೩೭೬ |
| ೧೮೮೮–೮೯ | ೧ ೪.೩೭೯ | ೯,೦೦,೩೮,೧೬೬ | ೬,೫೯,೭೧,೯೯೮ | ೨,೪೦,೬೬,೧೬೮ |
| ೧೮೮೯–೯೦ | ೧ ೪.೫೬೬ | ೭,೭೫,೯೬,೮೮೯ | ೬,೦೬,೯೮,೩೭೦ | ೧,೬೮,೯೮,೫೧೯ |
| ೧೮೯೦–೯೧ | ೧ ೬.೦೯೦ | ೯,೦೬,೧೧,೮೫೭ | ೪,೬೫,೪೮,೩೦೨ | ೪,೪೦,೬೩,೫೫೫ |
| ೧೮೯೧–೯೨ | ೧ ೪.೭೩೩ | ೧೦,೪೪,೪೪,೫೨೯ | ೬,೫೪,೫೨,೯೯೯ | ೩,೮೯,೯೧,೫೩೦ |

\+ ೧೮೪೩ರ ಭಾರತೀಯ ನಾಣ್ಯಸಮಿತಿಯ ಎರಡನೆ ಪರಿಶಿಷ್ಟ ೨೭೦ನೇ ಪುಟದಲ್ಲಿ ನೀಡಲಾದ ಅಂಕಿಅಂಶಗಳಿಂದ ತೆಗೆದುಕೊಳ್ಳಲಾಗಿದೆ.

ಸರ್ಕಾರದ ಹಣಕಾಸಿನ ಮೇಲೆ ಹೆಚ್ಚುತ್ತಿದ್ದ ಹೊರೆಯ ಪರಿಣಾಮವನ್ನು ಕುರಿತು ಚೆನ್ನಾಗಿ ಊಹಿಸಬಹುದು, ಮೊದಲಿಗೆ ಮುಜುಗರವಾಗುವಂಥ ಪರಿಸ್ಥಿತಿ ಆನಂತರ ಈ ನಿರಂತರವಾದ ಹೆಚ್ಚುತ್ತಿರುವ ಹೊಣೆಗಾರಿಕೆಯಿಂದಾಗಿ ಸರ್ಕಾರವು ಕೊನೆಗೆ ಹತಾಶ ಮನೋಭಾವವನ್ನು ತಲುಪಬಹುದು. ಅದು ಹೆಚ್ಚು ತೆರಿಗೆಯಿಂದ ಕೂಡಿದ ಹಾಗೂ ಸರ್ಕಾರದ ಹಣಕಾಸಿಗೆ ಸಂಬಂಧಿಸಿದಂತೆ ಕಠಿಣವಾದ ಆರ್ಥಿಕತೆಯನ್ನು ಜಾರಿಗೆ ತರುವಂಥ ನಿಯಮವೊಂದನ್ನು ಹೇರಿತು. ೧೮೭೨–೭೩ರಿಂದ ಭಾರತೀಯ ಆಯವ್ಯಯಗಳ ಸಂಪನ್ಮೂಲವನ್ನು ವಿಶ್ಲೇಷಿಸಿದಾಗ, ಚಾಲ್ತಿಯಲ್ಲಿರುವ ತೆರಿಗೆಗಳಿಗೆ ಮತ್ತಷ್ಟು ತೆರಿಗೆಗಳನ್ನು ಸೇರಿಸದೆ ಇರುವಂಥ ಯಾವುದೇ ವರ್ಷವಾಗಲಿ ನಮ್ಮ ಕಣ್ಣಿಗೆ ಬೀಳುವುದಿಲ್ಲ. ನಾವು ಯಾವುದನ್ನು ಪ್ರಾಂತೀಯ ದರಗಳು ಎಂದು ಹೇಳುತ್ತೇವೆಯೋ ಆ ಸುಂಕ ೧೮೭೨–೭೩ರಲ್ಲಿ ಆರಂಭವಾಯಿತು. ೧೮೭೫–೭೬ನೇ ಹಣಕಾಸಿನ ವರ್ಷದಲ್ಲಿ ಮದ್ಯಸಾರಗಳ ಮೇಲೆ ಗ್ಯಾಲನ್ ಒಂದಕ್ಕೆ ೧ ರೂಪಾಯಿನಂತೆ ಹೆಚ್ಚಿನ ಅಬ್ಕಾರಿ ಸುಂಕ ಸೇರಿತು. ೧೮೭೭–೭೮ರಲ್ಲಿ ಮಾಳ್ವ ಅಫೀಮಿನ ಮೇಲೆ ಸುಂಕವನ್ನು ಪೆಟ್ಟಿಗೆಯೊಂದಕ್ಕೆ ೬೦೦ ರಿಂದ ೬೫೦ಕ್ಕೆ ಹೆಚ್ಚಿಸಲಾಯಿತು. ೧೮೭೮–೭೯ರಲ್ಲಿ ಹೆಚ್ಚಿನ ಲೈಸೆನ್ಸ್ ತೆರಿಗೆ ಮತ್ತು ಸ್ಥಳೀಯ ದರಗಳನ್ನು ವಿಧಿಸಲಾಯಿತು. ಮರುವರ್ಷ ಮಾಳ್ವ ಅಫೀಮಿನ ಮೇಲೆ ಪೆಟ್ಟಿಗೆಯೊಂದಕ್ಕೆ ಮತ್ತೆ ೫೦ ರೂಗಳ ಹೆಚ್ಚಳ ಕಂಡುಬಂದಿತು. ಈ ತೆರಿಗೆಗಳ ನೆರವಿನಿಂದಾಗಿ ಸರ್ಕಾರವು ತನ್ನ ಹಣಕಾಸನ್ನು ಸಮಾಧಾನಕರ ಆಧಾರದ ಮೇಲೆ ನಿಲ್ಲಿಸುವಂತಾಯಿತು. ೧೮೮೨ರ ಕೊನೆಯ ವೇಳೆಗೆ ಅದಕ್ಕೆ ದೃಢತೆ ಉಂಟಾದಂತೆ ಸರ್ಕಾರವು ಕೆಲವು ತೆರಿಗೆಗಳಲ್ಲಿ ಕಡಿತವನ್ನುಂಟುಮಾಡಿತು. ವಾಯವ್ಯಪ್ರಾಂತ್ಯಗಳಲ್ಲಿ ಪಟವಾರಿ ತೆರಿಗೆ ಮತ್ತು ಅಬ್ಕಾರಿ ಸುಂಕಗಳನ್ನು ಕಡಿಮೆಮಾಡಿತು. ಆದರೆ ವಿನಿಮಯದಲ್ಲಿ ತ್ವರಿತವಾದ ಪತನ ಕಂಡುಬಂದದ್ದರಿಂದ ಸ್ಟರ್ಲಿಂಗ್ ಪಾವತಿಗಳ ಹೆಚ್ಚಳ ವೆಚ್ಚವನ್ನು ಸರಿದೂಗಿಸಲು ಮತ್ತಷ್ಟು ತೆರಿಗೆ ವಿಧಿಸುವುದು ಅಗತ್ಯವೆಂದು ಕಂಡುಬಂತು. ಹಾಗಾಗಿ, ಈಗಾಗಲೇ ಇದ್ದ ಹೊರೆಗಳ ಜೊತೆಗೆ ೧೮೮೬ರಲ್ಲಿ ಆದಾಯತೆರಿಗೆ, ಆಯಾತವಾದ ಮತ್ತು ಬೆಳಕಿಗಾಗಿ ಉಪಯೋಗಿಸದ ಪೆಟ್ರೋಲಿಯಂ ಉತ್ಪನ್ನದ ಮೇಲೆ ಶೇಕಡಾ ೫ ರಷ್ಟು ಸುಂಕವನ್ನು ವಿಧಿಸಲಾಯಿತು. ಭಾರತದಲ್ಲಿ ಉಪ್ಪಿನ ಸುಂಕವನ್ನು ೧೮೮೮ ರಲ್ಲಿ ಮಣ ಒಂದಕ್ಕೆ ೨ ರೂ ಗಳಿಗೆ ಏರಿಸಲಾಯಿತು. ವಾಯವ್ಯ ಪ್ರಾಂತ್ಯಗಳ ಪಟವಾರಿ ಸುಂಕವನ್ನು ೧೮೮೨ ರಲ್ಲಿ ರದ್ದುಗೊಳಿಸಲಾಗಿತ್ತು. ಈಗ ಮತ್ತೆ ೧೮೮೮ರಲ್ಲಿ ಅದನ್ನು ಜಾರಿಗೆ ತರಲಾಯಿತು. ಆಯಾತ ಮದ್ಯಸಾರದ ಮೇಲಣ ಸುಂಕದ ದರಗಳು ಮತ್ತು ಮದ್ಯಸಾರದ ಮೇಲಣ ಅಬ್ಕಾರಿ ಸುಂಕಗಳನ್ನು ೧೮೯೦ ರಲ್ಲಿ ಹೆಚ್ಚಿಸಲಾಯಿತಷ್ಟೇ ಅಲ್ಲದೆ ಆನಂತರ ಪ್ರತಿಯೊಂದು ಪ್ರಾಂತ್ಯದಲ್ಲೂ ಅದನ್ನು ಜಾರಿಗೆ ತರಲಾಯಿತು. ೧೮೯೩ ರಲ್ಲಿ ಧಾನ್ಯ ಮದ್ಯ (ಮಾಲ್ಟ್ ಲಿಕ್ಕರ್)ದ ಮೇಲೂ ಅಬ್ಕಾರಿ ಸುಂಕವನ್ನು ಹಾಕಲಾಯಿತು. ಅಲ್ಲದೆ ಮಣಕ್ಕೆ ಆರಾಣೆ ದರದಂತೆ ಉಪ್ಪೂಡಿದ ಮೀನಿನ ಮೇಲೂ ಸುಂಕ ವಿಧಿಸಲಾಯಿತು. ೧೮೮೨–೮೩ ರಲ್ಲಿ ತೆರಿಗೆಗಳು

| ಸಂಪನ್ಮೂಲಗಳು | ೧೮೮೨–೮೩ | ೧೮೯೨–೯೩ |
|---|---|---|
| ಉಪ್ಪು | ೫,೬೭,೫೦,೦೦೦ | ೮,೧೪,೯೦,೦೦೦ |
| ಅಬ್ಕಾರಿ | ೩,೪೭,೫೦,೦೦೦ | ೪,೯೭,೯೦,೦೦೦ |
| ಸುಂಕಗಳು | ೧,೦೮,೯೦,೦೦೦ | ೧,೪೧,೮೦,೦೦೦ |
| ಬೆಲೆ ಕಟ್ಟಲಾದ ತೆರಿಗೆಗಳು | ೪೮,೪೦,೦೦೦ | ೧,೬೩,೬೦,೦೦೦ |

ಮತ್ತು ಸುಂಕಗಳಿಂದ ಬಂದ ಆದಾಯ ಹೀಗಿದೆ:[೧]

ಈ ಎಲ್ಲ ಹೆಚ್ಚುವರಿ ಹೊರೆ ಚಿನ್ನದ ಪಾವತಿಯ ಹೆಚ್ಚಿನ ವೆಚ್ಚವನ್ನು ಸರಿದೂಗಿಸುವ ಸಲುವಾಗಿತ್ತು ಹಾಗೂ "ವಿನಿಮಯದಲ್ಲಿ ಕೊರತೆಯುಂಟಾಗದೆ ಇದ್ದಿದ್ದರೆ ಇದು ಅಗತ್ಯವಿರಲಿಲ್ಲ."[೨]

ಈ ಸಂಪನ್ಮೂಲಗಳನ್ನು ಹೆಚ್ಚಿಸುವುದರ ಜೊತೆಗೆ ಭಾರತ ಸರ್ಕಾರವು ಆಡಳಿತ ವೆಚ್ಚದಲ್ಲೂ ಕೂಡ ಮಿತವ್ಯಯವನ್ನು ಸಾಧಿಸಲು ಮುಂದಾಯಿತು. ತನ್ನ ಇತಿಹಾಸದಲ್ಲೇ ಮೊಟ್ಟಮೊದಲ ಬಾರಿಗೆ ಸರ್ಕಾರವು ಇಂಗ್ಲೆಂಡಿನಿಂದ ಕರೆತಂದ ಆಂಗ್ಲಜನರ ಬದಲಿಗೆ ಸ್ಥಳೀಯರನ್ನೇ ಸಾಕಷ್ಟು ಅಗ್ಗದ ದರದಲ್ಲಿ ಕೆಲಸಕ್ಕೆ ನೇಮಿಸಿಕೊಳ್ಳುವತ್ತ ದೃಷ್ಟಿ ಹರಿಸಿತು. ೧೮೭೦ಕ್ಕಿಂತ ಹಿಂದೆ ಈ ದಿಕ್ಕಿನಲ್ಲಿ ಆರ್ಥಿಕತೆಯನ್ನು ಪರಿಣಾಮಕಾರಿಯಾಗುವಂತೆ ನಡೆಸುವ ಪ್ರಕ್ರಿಯೆ ಬಹಳ ಸೀಮಿತವಾಗಿತ್ತು. ೧೮೫೩[೩] ಸಿವಿಲ್ ಸರ್ವೀಸ್ ಸುಧಾರಣೆಗಳಿಂದಾಗಿ ಒಪ್ಪಂದಕ್ಕೊಳಗಾದ ಸರ್ವಿಸ್‌ನ ಸದಸ್ಯರಿಗಾಗಿ ೧೭೯೩[೪] ರ ಶಾಸನದಂಗವಾಗಿ ಮೀಸಲಾಗಿದ್ದ ಹುದ್ದೆಗಳಲ್ಲಿ ಭಾರತೀಯರನ್ನು ನೇಮಿಸಿಕೊಳ್ಳುವಂತೆ ಹಾದಿಯನ್ನು ಸುಗಮಗೊಳಿಸಲಾಯಿತು. ಆದರೆ ಈ ಸುಧಾರಣೆಯಿಂದಾಗಿ ಆಡಳಿತ ವೆಚ್ಚದಲ್ಲಿ ಯಾವುದೇ ಮಿತವ್ಯಯವನ್ನು ಸಾಧಿಸಲಾಗಲಿಲ್ಲ. ಏಕೆಂದರೆ ಸಿವಿಲ್ ಸರ್ವೀಸ್‌ನ ಇಂಗ್ಲಿಷ್ ಸದಸ್ಯರು ಯಾವ ಉನ್ನತಮಟ್ಟದ ವೇತನವನ್ನು ಪಡೆಯುತ್ತಿದ್ದರೋ ಅದನ್ನೇ ಭಾರತೀಯ ಸದಸ್ಯರಿಗೂ ನೀಡಲಾಯಿತು. ಆಗ ೧೮೭೦ರ ಶಾಸನ (೩೩ ವಿಐಸಿ.ಸಿ. ೩) ದ ಮೂಲಕ, ಕಡಿಮೆ ವೇತನಶ್ರೇಣಿಯಲ್ಲಿ ಸಿವಿಲ್ ಸರ್ವೀಸ್‌ಗಾಗಿ ಮೀಸಲಾಗಿದ್ದ ಸ್ಥಳಗಳನ್ನು, ನಾಮಕರಣ ಮಾಡುವ ಮೂಲಕ, ಭಾರತೀಯರನ್ನು ನೇಮಿಸಿಕೊಳ್ಳಬಹುದೆಂದು ಅನುಮತಿ ನೀಡಲಾಯಿತು. ಇದರಿಂದಾಗಿ ಭಾರತ ಸರ್ಕಾರಕ್ಕೆ ನಿಜಕ್ಕೂ ಸ್ವಲ್ಪ ಮಟ್ಟಿಗೆ ಮಿತವ್ಯಯವಾದಂತಾಯಿತು. ಅನ್ಯಮಾರ್ಗವಿಲ್ಲದೆ ಈ ಶಾಸನದಂತೆ ಮಿತವ್ಯಯವನ್ನು ಸಾಧಿಸಲು ಭಾರತ ಸರ್ಕಾರ ಪ್ರಯತ್ನಿಸಿತು. ಮಿತವ್ಯಯ ಎಷ್ಟೊಂದು ಅಗತ್ಯವಾಗಿತ್ತೆಂದರೆ ಹಾಗೂ ಸರ್ಕಾರಕ್ಕೆ ತನ್ನ ವೆಚ್ಚವನ್ನು ಕುಗ್ಗಿಸುವ ಬಗ್ಗೆ ಎಷ್ಟು ಪ್ರಬಲ ಆಸಕ್ತಿಯಿತ್ತೆಂದರೆ ಹೆಚ್ಚುವೆಚ್ಚದ ವಿಧಿಯುಕ್ತ ಸಿವಿಲ್ ಅಧಿಕಾರಿಗಳ ಬದಲು ಅಷ್ಟೊಂದು ವೆಚ್ಚವಿಲ್ಲದ ಸಿವಿಲ್ ಅಧಿಕಾರಿಗಳನ್ನು ತರಲು ಅದು ನಿರ್ಧರಿಸಿತು. ದಕ್ಷ ಆಡಳಿತ ಬೇಕು ಎಂಬ ಹೆಚ್ಚುತ್ತಿರುವ ಬೇಡಿಕೆಯನ್ನೂ ಸರ್ಕಾರ ಲಕ್ಷಿಸಲಿಲ್ಲ. ಈ ಬದಲಿ ವೇತನವೂ ಕೂಡ ಅಷ್ಟೊಂದು ಸಣ್ಣ ಮೊತ್ತದ್ದೇನೂ ಆಗಿರಲಿಲ್ಲ. ಏಕೆಂದರೆ ೧೮೭೪ ಮತ್ತು ೧೮೭೯ರ ನಡುವೆ ಇಂಗ್ಲೆಂಡಿನಲ್ಲಿ ಆದ ನೇಮಕಾತಿಯನ್ನು ಶೇಕಡಾ ೨೨ ಕ್ಕಿಂತ ಹೆಚ್ಚಿಗೆ ತಗ್ಗಿಸಲಾಯಿತು ಹಾಗೂ ಶೇಕಡಾ ೧೨ ರಷ್ಟು ಮತ್ತೂ ಕಡಿಮೆಯಾಗುವುದೆಂದು ನಿರೀಕ್ಷಿಸಲಾಗಿತ್ತು. ಸಾಮಾನ್ಯವಾಗಿ ಒಪ್ಪಂದದ ಸಿವಿಲ್ ಅಧಿಕಾರಿಗಳಿಗೆ ಮೀಸಲಾಗಿದ್ದ ಈ ಹುದ್ದೆಗಳನ್ನು ಒಪ್ಪಂದಕ್ಕೊಳಗಾಗದ ಭಾರತೀಯರಿಗೆ ನೀಡಲಾಯಿತು.[೫] ಇದರ ಜೊತೆಗೆ ಇಲಾಖೆಗಳಲ್ಲಿ ದುಂದುವೆಚ್ಚಕ್ಕೆ ಎಡೆಮಾಡಿಕೊಡುವಂಥ ಅಧಿಕಾರಿ ಶ್ರೇಣಿಯನ್ನು ಸರ್ಕಾರ ಹದವಾಗಿ ಕತ್ತರಿಸುವತ್ತ ದೃಷ್ಟಿಹರಿಸಿದ್ದರಿಂದ ಆಡಳಿತದಲ್ಲೂ ಸರ್ಕಾರಕ್ಕೆ ಉಳಿತಾಯವಾಯಿತು.[೬] ಆದಾಯವನ್ನು ಹೆಚ್ಚಿಸುವಂತಹ ಧೈರ್ಯಯುಕ್ತವಾದ ಪ್ರಯತ್ನಗಳಿದ್ದರೂ ಹಾಗೂ

೧. ಭಾರತೀಯ ನಾಣ್ಯ ಸಮಿತಿ ವರದಿ, ೧೮೯೩. ಪರಿಶಿಷ್ಟ II ಪು. ೨೬೩
೧. ಭಾರತೀಯ ನಾಣ್ಯ ಸಮಿತಿ ವರದಿ ಜೆ.ಇ.ಓ. ಕೊನೋರ್, ೧೮೯೮, ಪರಿಶಿಷ್ಟ II ಪು ೧೮೨
೨. ನೋಡಿ. ಸಾರ್ವಜನಿಕ ಸೇವಾ ಆಯೋಗದ ವರದಿ. ಸಿ. ೫೩.೨೭, ೧೮೮೭.
೩. ಕಾಯಿದೆಯ ಈ ಉಪಬಂಧವನ್ನು ೧೮೧೬ ರ ಕಾಯಿದೆಯ ಮೂಲಕ ಅಧಿನಿಯಮ ಮಾಡಲಾಗಿದೆ.
೪. ನೋಡಿ. ಜೆಂಕಿನ್ಸ್ ಸಾಕ್ಷ್ಯ ಪ್ರ. ೧೨ ಈಸ್ಟ್ ಇಂಡಿಯಾ (ಸಿವಿಲ್ ನೌಕರರು) ಆಯ್ಕೆ ಸಮಿತಿ ಸಾಕ್ಷ್ಯ ಹೆಚ್.ಆಫ್.ಸಿ. ೧೮೯೦.
೫. ಹೋಲಿಸಿ ಕಲ್ಕತ್ತ ಸಿವಿಲ್ ಹಣಕಾಸು ವರದಿ, ೧೮೮೯. ಹಾಗೂ ಸಿವಿಲ್ ಹಣಕಾಸು ಕಮಿಷನರ್ ಅವರ (೧೮೮೭) ವರದಿ. ಕಮಿಷನರ್ ಈ ಸಮಿತಿಯು ರದ್ದಾದ ಮೇಲೆ ಈ ವರದಿ ಕಾರ್ಯವನ್ನು ಪೂರ್ಣಗೊಳಿಸಿದರು.

## ಪಟ್ಟಿ XII
## ಭಾರತ ಸರ್ಕಾರದ ಆಯ – ವ್ಯಯಗಳು

| ವರ್ಷ | ವಿನಿಮಯದ ಸರಾಸರಿ ದರ | ಭಾರತದಲ್ಲಿ | | | ಇಂಗ್ಲೆಂಡ್‌ನಲ್ಲಿ | | ಅಂತಿಮ ಪರಿಣಾಮ |
|---|---|---|---|---|---|---|---|
| | | ನಿವ್ವಳ ಆದಾಯ | ವಿನಿಮಯ ಬಿಟ್ಟು ನಿವ್ವಳ ಖರ್ಚು | ಹೆಚ್ಚುವರಿ ಆದಾಯ | ನಿವ್ವಳ ಸ್ಟರ್ಲಿಂಗ್ ಆದಾಯ | ವಿನಿಮಯ | ಹೆಚ್ಚುವರಿ(+) ಇಲ್ಲವೇ ಕೊರತೆ(–) |
| | d | ರೂ. | ರೂ. | ರೂ. | ರೂ. | ರೂ. | ರೂ. |
| ೧೮೭೪–೭೫ | ೨೨.೧೫೬ | ೩೯,೪೬೪.೨೧೬ | ೨೫,೮೯೭,೦೧೮ | ೧೩,೬೬೭,೧೧೮ | ೧೨,೫೬೨,೧೦೧ | ೧,೦೪೫,೨೩೯ | ೫೯,೭೭೮ |
| ೧೮೭೫–೭೬ | ೨೧.೬೨೬ | ೪೦,೦೫೩,೪೧೯ | ೨೪,೫೪೧,೯೨೩ | ೧೫,೫೧೧,೪೯೬ | ೧೨,೫೪೪,೮೧೩ | ೧,೩೭೭,೪೨೮ | ೧,೫೪೯,೨೫೫ |
| ೧೮೭೬–೭೭ | ೨೦.೫೦೮ | ೩೮,೨೫೩,೩೬೬ | ೨೫,೩೫೫,೨೮೫ | ೧೨,೮೯೮,೦೮೧ | ೧೩,೨೨೯,೬೪೬ | ೨,೨೫೨,೬೧೧ | –೨,೫೮೪,೧೭೬ |
| ೧೮೭೭–೭೮ | ೨೦.೭೯೧ | ೩೯,೨೭೫,೪೮೯ | ೨೭,೬೫೮,೦೨೧ | ೧೧,೬೧೭,೪೬೮ | ೧೩,೭೫೬,೪೭೮ | ೨,೧೨೩,೦೩೦ | –೪೨೬೨,೦೪೦ |
| ೧೮೭೮–೭೯ | ೧೯.೭೯೪ | ೪೪,೪೧೫,೧೩೯ | ೨೫,೭೭೮,೯೨೮ | ೧೮,೬೩೬,೨೧೧ | ೧೩,೬೧೦,೨೧೧ | ೨೮೯೧,೯೦೨ | ೨೧೩೪,೦೯೮ |
| ೧೮೭೯–೮೦ | ೧೯.೯೬೧ | ೪೫,೨೫೮,೧೯೭ | ೨೯,೩೮೪,೦೩೦ | ೧೫,೮೭೪,೧೬೭ | ೧೪,೨೨೩,೮೯೧ | ೨,೮೭೮೧೬೯ | –೧,೨೨೩,೮೯೩ |
| ೧೮೮೦–೮೧ | ೪೯.೯೫೬ | ೪೪,೬೯೧,೧೧೯ | ೩೪,೮೮೦,೪೩೪ | ೯,೮೧೦,೦೮೫ | ೧೧,೧೭೭,೨೩೧ | ೨,೨೬೪,೮೪೮ | –೩೦೩೧,೩೯೪ |
| ೧೮೮೧–೮೨ | ೧೯.೮೯೫ | ೪೫,೪೭೧,೯೯೭ | ೨೭,೭೧೭,೨೪೯ | ೧೭,೭೫೪,೬೭೮ | ೧೧,೭೩೭,೬೮೮ | ೨,೪೨೧,೪೯೯ | ೩,೫೯೫,೪೫೧ |
| ೧೮೮೨–೮೩ | ೧೫.೫೨೫ | ೪೨,೫೨೬.೧೭೩ | ೨೫.೫೦೦,೪೩೭ | ೧೭,೦೨೫,೭೩೬ | ೧೩,೨೬೬,೯೭೬ | ೩.೦೫೦,೯೨೩ | ೬೭೪.೮೩೩ |
| ೧೮೮೩–೮೪ | ೧೯.೫೩೬ | ೪೩,೫೯೧,೨೭೩ | ೨೩,೫೬೬,೩೮೧ | ೨೦,೦೨೪,೮೯೨ | ೧೪,೭೭೦,೨೫೩ | ೩,೩೭೫,೧೫೮ | ೧,೮೭೯,೪೭೭ |
| ೧೮೮೪–೮೫ | ೧೩,೩೦೮ | ೪೧,೫೮೫,೩೪೩ | ೨೪,೭೬೩,೭೭೯ | ೧೬,೮೨೧,೫೬೮ | ೧೩,೮೪೪,೦೨೮ | ೩,೩೬೩,೯೮೬ | ೩೮೬,೪೪೬ |
| ೧೮೮೫–೮೬ | ೧೮.೨೫೪ | ೪೨,೬೩೫,೯೫೩ | ೨೭,೩೫೨,೧೩೨ | ೧೫,೨೮೩,೮೨೧ | ೧೩,೭೫೫,೬೫೯ | ೪,೩೨೯,೮೮೮ | –೨,೮೦೧,೭೨೬ |
| ೧೮೮೬–೮೭ | ೧೭.೪೪೧ | ೪೪,೮೦೪,೭೭೪ | ೨೫,೧೨೪,೩೩೫ | ೧೯,೬೮೦,೪೩೯ | ೧೪,೧೭೨,೨೯೮ | ೫,೩೨೯,೭೧೪ | ೧೭೮,೪೨೭ |
| ೧೮೮೭–೮೮ | ೧೬.೮೯೮ | ೪೫,೪೨೪,೧೫೦ | ೨೫,೯೬೮,೦೨೫ | ೧೯,೪೫೬,೧೨೫ | ೧೫,೧೨೮,೦೧೮ | ೬,೩೫೬,೯೩೯ | –೨೦೨೮,೮೩೨ |
| ೧೮೮೮–೮೯ | ೧೬.೩೭೯ | ೪೬,೫೫೮,೩೫೪ | ೨೫,೦೫೧,೧೪೭ | ೨೧,೫೦೭,೨೦೭ | ೧೪,೬೫೨,೫೯೦ | ೬,೮೧೭,೫೯೯ | ೩೭,೦೧೮ |
| ೧೮೮೯–೯೦ | ೧೬.೫೬೬ | ೫೦,೦೦೫,೮೧೦ | ೨೬,೩೬೭,೮೫೫ | ೨೩,೬೩೭,೯೫೫ | ೧೪,೫೧೩,೧೫೫ | ೬,೫೧೨,೭೬೭ | ೨,೬೧೨,೦೩೩ |
| ೧೮೯೦–೯೧ | ೧೮.೦೯೦ | ೪೯,೪೦೩,೮೧೯ | ೨೫,೫೭೯,೭೨೭ | ೨೩,೮೨೪,೦೯೨ | ೧೫,೧೭೬,೮೬೬ | ೪,೯೫೯,೦೫೫ | ೩,೬೮೮,೧೭೧ |
| ೧೮೯೧–೯೨ | ೧೬.೭೩೩ | ೫೦,೦೨೩,೧೪೨ | ೨೩,೦೧೩,೬೧೮ | ೨೩,೦೦೯,೫೨೪ | ೧೫,೭೧೬,೭೮೦ | ೬೮೨೫,೯೦೯ | ೪೬೭,೫೩೫ |

ವಿನಿಮಯ ಕುಸಿಯುತ್ತಿರುವ ಆ ಅವಧಿಯ ಉದ್ದಕ್ಕೂ ಸರ್ಕಾರದ ಖರ್ಚಿನ ಬಾಬತ್ತನ್ನು ಕಡಿಮೆಮಾಡುವಂಥ ಪ್ರಯತ್ನ ಕೈಗೊಂಡಿದ್ದರೂ ಅದರಿಂದ ಯಾವ ಪ್ರಯೋಜನವೂ ಕಾಣಬರುವುದಿಲ್ಲವೆಂಬುದನ್ನು ಪಟ್ಟಿ XII ತೋರಿಸುತ್ತದೆ.

ತನ್ನ ಹಣಕಾಸಿನ ತೊಂದರೆಗಳಿಂದಾಗಿ ಸರ್ಕಾರವು ಉಪಯುಕ್ತ ಸಾರ್ವಜನಿಕ ಕೆಲಸ ಕಾರ್ಯಗಳಿಗೆ ಹಣವನ್ನು ಒದಗಿಸುವಲ್ಲಿ ಅಸಮರ್ಥವಾಯಿತು ಎಂಬುದು ದುರದೃಷ್ಟಕರ ಸಂಗತಿ. ದೇಶದಲ್ಲಿರುವ ಸಂಪನ್ಮೂಲಗಳನ್ನು ಬಹು ಚೆನ್ನಾಗಿ ವಿನಿಯೋಗಿಸಿಕೊಳ್ಳುವುದರ ಮೇಲೆಯೇ ಭಾರತೀಯ ಜನತೆಯ ಕಲ್ಯಾಣ ಅಡಗಿದೆ. ಆದರೆ ಅವುಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವಂಥ ಸಾಹಸ ಜನರಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಹಾಗಾಗಿ ಸಾರಿಗೆ ವ್ಯವಸ್ಥೆ ಮತ್ತು ನೀರಾವರಿ ಯೋಜನೆಗಳಂಥ ಎರಡು ಬಹು ಮುಖ್ಯ ಅಗತ್ಯಗಳನ್ನು ದೇಶಕ್ಕೆ ಕೊಡುವಂಥ ಬೃಹತ್‌ಕಾರ್ಯ ಭಾರತ ಸರ್ಕಾರದ ಮೇಲೆ ಬಿದ್ದಿತ್ತು. ಈ ವಿಷಯವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರವು **"ವಿಶೇಷ ಲೋಕೋಪಯೋಗಿ"** ಎಂಬುದನ್ನು ಅಭಿವೃದ್ಧಿಪಡಿಸಲು ನಿರ್ಧರಿಸಿತು. ಬಂಡವಾಳ ಸಾಲವೇ ಇದಕ್ಕೆ ಮೂಲವಾಗಿತ್ತು. ಅಂಥ ಸಾಲಕ್ಕೆ ಭಾರತದಲ್ಲಿ, ನಿರೀಕ್ಷಿಸಿದ ಹಾಗೆ, ಯಾವುದೇ ಮಾರುಕಟ್ಟೆಯಿರಲಿಲ್ಲ. ಜನರು ಬಡವರಾಗಿದ್ದರು, ಅವರ ಉಳಿತಾಯ ಯಾವುದಕ್ಕೂ ಸಾಲುತ್ತಿರಲಿಲ್ಲ. ಅದರಿಂದ ಬಂಡವಾಳ ರೂಪಿಸುವುದು ಕಷ್ಟವಾಗಿತ್ತು. ಎಲ್ಲ ಬಡ ದೇಶಗಳ ಸರ್ಕಾರಗಳಂತೆ, ಭಾರತ ಸರ್ಕಾರವೂ ಕೂಡ ಸಾಲನೀಡಲು ಹೆಚ್ಚು ಬಂಡವಾಳವಿದ್ದಂಥ ಶ್ರೀಮಂತ ರಾಷ್ಟ್ರಗಳ ಕಡೆ ತಿರುಗುವಂತಾಯಿತು. ಈ ಎಲ್ಲ ರಾಷ್ಟ್ರಗಳೂ ದುರದೃಷ್ಟವಶಾತ್ ಚಿನ್ನದ ಮಾನದಂಡವುಳ್ಳ ರಾಷ್ಟ್ರಗಳಾಗಿದ್ದವು. ಎಲ್ಲಿಯವರೆಗೆ ಇಷ್ಟು ಚಿನ್ನಕ್ಕೆ ಎಷ್ಟು ಬೆಳ್ಳಿ ಸಮ ಎಂದು ಹೇಳುವುದು ಸಾಧ್ಯವಿತ್ತೊ ಅಲ್ಲಿಯವರೆಗೆ ಆಂಗ್ಲ ಹೂಡಿಕೆದಾರನಿಗೆ ಭಾರತ ಸರ್ಕಾರದ ಠೇವಣಿಗಳು ರೂಪಾಯಿ ಠೇವಣಿಗಳೆಂದಾಗಲೀ ಇಲ್ಲವೆ ಸ್ಟರ್ಲಿಂಗ್ ಠೇವಣಿಗಳೆಂದಾಗಲೀ ಲಕ್ಷ್ಯವಿರಲಿಲ್ಲ. ಆದರೆ ಬೆಳ್ಳಿಯ ಮೌಲ್ಯ ಚಿನ್ನದ ಮೌಲ್ಯಕ್ಕೆ ಸಾಪೇಕ್ಷವಾಗಿ ಕುಸಿತವಾದಾಗ ರೂಪಾಯಿ ಠೇವಣಿಗಳ ಚಿನ್ನದ ಮೌಲ್ಯದಲ್ಲೂ ಕುಸಿತವಾದಂತಾಯಿತು. ಹಾಗಾಗಿ ಯಾವುದು ಒಮ್ಮೆ ಸುಭದ್ರವಾದ ಹೂಡಿಕೆಯಾಗಿತ್ತೋ ಅದು ಈಗ ಕಾಣೆಯಾಯಿತು. ಹಾಗಾಗಿ ತನ್ನ ವಿಶೇಷ ಲೋಕೋಪಯೋಗಿ ಕಾರ್ಯಗಳಿಗೆ ಹಣವನ್ನು ಒದಗಿಸುವಲ್ಲಿ ಸರ್ಕಾರಕ್ಕೆ ಬಹಳ ಕಷ್ಟವಾಯಿತು. ಪಟ್ಟಿ XIIIರ ಅಂಕಿಅಂಶಗಳು ಅಧ್ಯಯನಕ್ಕೆ ಮನನೀಯವಾಗಿವೆ.

ಆಂಗ್ಲ ಹೂಡಿಕೆದಾರನು ರೂಪಾಯಿ ಠೇವಣಿಗಳಲ್ಲಿ ಬಂಡವಾಳ ಹೂಡಲು ಸಿದ್ಧನಿರಲಿಲ್ಲ. ಹಾಗಾಗಿ ಭಾರತೀಯ ರೂಪಾಯಿ ಠೇವಣಿಗಳಿಗೆ ಒಬ್ಬ ಪ್ರಮುಖ ಗಿರಾಕಿಯೂ ಇಲ್ಲವಾದಂತಾಯಿತು. ಭಾರತೀಯ ಹಣದ ಮಾರುಕಟ್ಟೆಯ ಪ್ರತಿಕ್ರಿಯೆ ಸಾಕಷ್ಟಿರಲಿಲ್ಲ. ಭಾರತಕ್ಕೆ ಬಂಡವಾಳವನ್ನು ತರಲು ನಿರಂತರವಾದ ಭಂಡಾರ ಬೇಕಾಗಿದ್ದಲ್ಲಿ ದೊಡ್ಡ ಗಿರಾಕಿಯನ್ನು ಸರ್ಕಾರ ಹಿಡಿದುಕೊಳ್ಳಲು ಸ್ಟರ್ಲಿಂಗ್ ಠೇವಣಿಗಳನ್ನೇ ನೀಡಬೇಕಾಗಿತ್ತು; ಆದರೆ ಇದರಿಂದ ಚಿನ್ನದ ಪಾವತಿಯ ಹೊರೆ ನಿಜಕ್ಕೂ ಹೆಚ್ಚಾಗುತ್ತಿತ್ತು. ಭಾರತ ಸರ್ಕಾರದ ಮುಖ್ಯ ಉದ್ದೇಶ ಈ ಹೊರೆಯನ್ನು ಇಳಿಸುವುದಾಗಿತ್ತು. ಹಾಗಾಗಿ ಲಂಡನ್ ಹಣದ ಮಾರುಕಟ್ಟೆಯನ್ನು ಆಶ್ರಯಿಸುವುದು ಅನಿವಾರ್ಯವಾಗಿತ್ತು. ಆದರೂ ಈ ಬಗ್ಗೆ ಸರ್ಕಾರ ಸ್ವಲ್ಪಮಟ್ಟಿಗೆ ನಿಧಾನವಾಗಿ ಕಾರ್ಯಪ್ರವೃತ್ತವಾಯಿತು.[೧] ಇದರಿಂದಾಗಿ ದೇಶದ ಅಗತ್ಯತೆಗಳಿಗನುಗುಣವಾಗಿ ವಿಶೇಷ ಸಾರ್ವಜನಿಕ

---

೧. ವಿನಿಮಯದ ಕುಸಿತದ ಅವಧಿಯಲ್ಲಿ ಭಾರತದ ಋಣ ಹಂಚಿಕೆ ಹೀಗಿತ್ತು :

| | ಸ್ಟರ್ಲಿಂಗ್ ಋಣ | ರೂಪಾಯಿ ಋಣ |
|---|---|---|
| ೧೮೭೩–೭೪ರ ಕೊನೆಗೆ | ೪೧,೧೧೭,೬೧೭ | ೬೬,೪೧,೭೨,೯೦೦ |
| ೧೮೯೮–೯೯ | ೧೨೪,೨೬೮,೬೦೫ | ೧,೧೨,೬೫,೦೪,೩೪೦ |

ಭಾರತೀಯ ನಾಣ್ಯ ಸಮಿತಿ (೧೮೯೮) ಪರಿಶಿಷ್ಟ II. ಪು.೧೭೯

## ಪಟ್ಟಿ XIII : ಭಾರತ ಸರ್ಕಾರದ ರೂಪಾಯಿ ಮತ್ತು ಸ್ಟರ್ಲಿಂಗ್ ಶೇವಣಿಗಳ ಬೆಲೆ ಚಾಲನೆ

| ವರ್ಷ | ವಿನಿಮಯ ದರಗಳು | | ಶೇಕಡಾ ೪ರ ದರ. ರೂಪಾಯಿ ಪತ್ರ | | | | ಸ್ಟರ್ಲಿಂಗ್ ಬೆಲೆ ಭಾರತ ಸ್ಟಾಕ್ | | | | | |
|---|---|---|---|---|---|---|---|---|---|---|---|---|
| | | | ಕಲ್ಕತ್ತದಲ್ಲಿ | | ಲಂಡನ್ನಲ್ಲಿ | | ಶೇಕಡಾ ೪ | | ಶೇಕಡಾ ೩ ೧/೨ | | ಶೇಕಡಾ ೩ | |
| | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ |
| ೧೮೭೩ | ೨೨ ೭/೮ | ೨೧ ೫/೮ | ೧೦೫ | ೧೦೧ ೩/೮ | ೯೭ | ೯೪ ೧/೨ | ೧೦೬ ೧/೨ | ೧೦೧ ೧/೪ | | | | |
| ೧೮೭೪ | ೨೩ ೧/೪ | ೨೧ ೩/೪ | ೧೦೪ ೧/೨ | ೯೯ ೧/೨ | ೯೮ | ೯೪ ೧/೨ | ೧೦೩ ೩/೪ | ೧೦೧ | | | | |
| ೧೮೭೫ | ೨೨ ೩/೧೬ | ೨೧ ೧/೪ | ೧೦೨ ೭/೮ | ೧೦೧ ೩/೮ | ೯೪ | ೯೧ | ೧೦೬ ೧/೪ | ೧೦೩ ೧/೪ | | | | |
| ೧೮೭೬ | ೨೨ ೩/೮ | ೧೮ ೧/೨ | ೧೦೧ ೭/೮ | ೯೮ ೩/೪ | ೮೯ ೩/೪ | ೭೮ | ೧೦೫ ೭/೮ | ೧೦೧ ೭/೮ | | | | |
| ೧೮೭೭ | ೨೨ ೧/೪ | ೨೦ ೯/೧೬ | ೯೮ ೭/೮ | ೯೩ ೧/೪ | ೮೮ ೧/೨ | ೮೧ | ೧೦೪ ೫/೮ | ೧೦೨ ೧/೪ | | | | |
| ೧೮೭೮ | ೨೧ | ೧೮ ೩/೪ | ೯೬ ೭/೮ | ೯೩ ೧/೨ | ೮೨ ೧/೨ | ೭೫ ೩/೮ | ೧೦೪ ೫/೮ | ೯೯ | | | | |
| ೧೮೭೯ | ೨೦ ೫/೮ | ೧೮ ೫/೮ | ೯೪ ೭/೪ | ೯೧ ೧/೪ | ೮೦ | ೭೭ ೧/೪ | ೧೦೫ ೩/೮ | ೧೦೦ ೭/೮ | | | | |
| ೧೮೮೦ | ೨೦ ೩/೮ | ೧೯ ೩/೪ | ೧೦೦ | ೯೨ ೧೫/೧೬ | ೮೧ ೩/೮ | ೭೭ ೩/೪ | ೧೦೫ ೫/೮ | ೧೦೨ ೧/೮ | | | | |
| ೧೮೮೧ | ೨೦ ೧/೧೬ | ೧೯ ೧/೨ | ೧೦೪ ೫/೮ | ೧೦೦ | ೮೬ | ೮೧ ೧/೨ | ೧೦೬ ೩/೮ | ೧೦೩ ೭/೮ | ೧೦೩ ೭/೮ | ೧೦೦ ೩/೪ | | |
| ೧೮೮೨ | ೨೦ ೩/೧೬ | ೧೯ ೧/೧೬ | ೧೦೨ ೧/೧೬ | ೯೫ ೫/೮ | ೮೫ | ೮೧ | ೧೦೫ ೧/೮ | ೧೦೨ ೭/೮ | ೧೦೧ ೭/೮ | ೯೯ ೩/೪ | | |
| ೧೮೮೩ | ೧೬ ೬/೧೬ | ೧೯ ೩/೧೬ | ೧೦೧ ೧/೮ | ೯೭ ೯/೧೬ | ೮೨ | ೭೯ ೩/೪ | ೧೦೪ ೫/೮ | ೧೦೨ ೭/೧೬ | ೧೦೩ ೧/೮ | ೧೦೧ ೩/೮ | | |
| ೧೮೮೪ | ೧೯ ೩/೪ | ೧೮ ೧೫/೧೬ | ೧೦೦ ೫/೮ | ೯೫ ೫/೧೬ | ೮೧ ೩/೪ | ೭೮ ೧/೪ | ೧೦೪ ೫/೮ | ೧೦೧ ೫/೮ | ೧೦೭ ೧/೮ | ೧೦೧ ೩/೪ | ೯೬ ೧/೪ | ೯೧ ೩/೪ |
| ೧೮೮೫ | ೧೯ ೩/೧೬ | ೧೭ ೩೧/೩೨ | ೯೮ ೭/೧೬ | ೯೨ ೧/೪ | ೭೭ ೧/೨ | ೭೩ ೧/೪ | ೧೦೩ ೧/೧೬ | ೯೮ ೩/೪ | ೧೦೨ ೩/೪ | ೯೭ ೧/೨ | ೯೧ ೧/೨ | ೮೫ ೩/೪ |
| ೧೮೮೬ | ೧೮ | ೧೬ ೧/೮ | ೯೭ ೩/೪ | ೯೭ ೩/೧೬ | ೭೩ | ೬೬ ೧/೪ | ೧೦೩ ೧/೨ | ೧೦೧ ೧/೪ | ೧೦೨ ೩/೪ | ೯೯ ೩/೪ | ೯೦ ೧/೮ | ೮೬ ೫/೮ |
| ೧೮೮೭ | ೧೮ ೩/೧೬ | ೧೫ ೫/೮ | ೯೯ ೩/೧೬ | ೯೫ ೫/೧೬ | ೭೧ ೧೧/೧೬ | ೬೭ ೭/೮ | ೧೦೨ ೩/೪ | ೧೦೦ ೧/೨ | ೧೦೩ ೧/೪ | ೧೦೦ ೧/೪ | ೯೨ ೩/೪ | ೯೫ ೩/೮ |
| ೧೮೮೮ | ೧೭ ೧/೮ | ೧೬ | ೧೦೦ ೩/೧೬ | ೯೭ ೩/೪ | ೬೯ ೩/೮ | ೬೬ ೧/೪ | ೧೦೨ ೭/೮ | ೧೦೦ ೧/೨ | ೧೦೭ ೧/೪ | ೧೦೪ ೫/೮ | ೯೮ | ೯೫ |
| ೧೮೮೯ | ೧೬ ೧೫/೧೬ | ೧೬ | ೧೦೦ ೩/೮ | ೯೭ ೧/೧೬ | ೬೯ ೧/೮ | ೬೬ ೩/೮ | | | ೧೦೯ ೧/೨ | ೧೦೬ ೭/೮ | ೧೦೧ ೧/೮ | ೯೯ |
| ೧೮೯೦ | ೨೦ ೨೯/೩೨ | ೧೬ ೭/೮ | ೧೦೩ ೭/೮ | ೯೬ ೧೩/೧೬ | ೮೭ ೩/೪ | ೬೮ ೩/೪ | | | ೧೦೮ ೧/೨ | ೧೦೫ ೧/೪ | ೧೦೦ ೩/೪ | ೯೫ ೧/೪ |
| ೧೮೯೧ | ೧೮ ೧/೪ | ೧೬ ೫/೮ | ೧೦೭ ೧೩/೧೬ | ೧೦೪ ೧/೧೬ | ೮೦ ೩/೪ | ೭೪ ೧/೪ | | | ೧೦೯ ೧/೨ | ೧೦೫ | ೯೯ | ೯೪ ೧/೨ |
| ೧೮೯೨ | ೧೬ ೧೧/೧೬ | ೧೪ ೫/೮ | ೧೦೮ ೧೫/೧೬ | ೧೦೩ ೧೧/೧೬ | ೭೪ ೧/೨ | ೬೨ | | | ೧೦೯ ೧/೨ | ೧೦೬ ೧/೮ | ೯೮ ೧/೨ | ೯೪ ೭/೮ |

ಭಾರತೀಯ ನಾಣ್ಯ ಸಮಿತಿ ೧೮೯೩ (ಪು.೨೭೨)ರ ವರದಿಯ ಪರಿಶಿಷ್ಟ ಭಾಗ II. ೧೮೮೬ರ ಚಿನ್ನ ಮತ್ತು ಬೆಳ್ಳಿ ಆಯೋಗದ ಮೊದಲ ವರದಿಯ ಪರಿಶಿಷ್ಟ IVರಲ್ಲಿ ನೀಡಲಾಗಿರುವ ಹಾಗೂ ೧೯೦೬–೦೭ರ ಬ್ರಿಟಿಷ್ ಭಾರತದ (ಪ್ರಥಮ ಪ್ರಕಟಣೆ)ದ ಅಂಕಿಅಂಶಗಳು (ಆ) ಬೆಲೆಗಳು ಎಂದು ಕರೆಯಲಾದ ೭ ಮತ್ತು ೮ರ ಹಣಕಾಸು ಪಟ್ಟಿಗಳಲ್ಲಿನ ಬೆಲೆಗಳಿಗಿಂತ ಸ್ವಲ್ಪ ಬದಲಾಗುತ್ತದೆ.

ಕೆಲಸಕಾರ್ಯಗಳನ್ನು ವಿಸ್ತರಿಸುವುದು ಸಾಧ್ಯವಾಗಲಿಲ್ಲ. ವಿನಿಮಯದ ಕುಸಿತದ ಫಲವಾಗಿ ಉಂಟಾದ ಈ ಆರ್ಥಿಕ ಅಡ್ಡಿಯ ಪರಿಣಾಮಗಳು ಭಾರತ ಸರ್ಕಾರಕ್ಕಷ್ಟೇ ಸೀಮಿತವಾಗಿರಲಿಲ್ಲ. ಸರ್ಕಾರದ ನೆರವಿನ ಮೇಲೆ ಅವಲಂಬಿತವಾಗಿದ್ದ ನಗರಸಭೆಗಳಿಗೂ ಮತ್ತು ಇತರ ಸ್ಥಳೀಯ ಸಂಸ್ಥೆಗಳಿಗೂ ಕೂಡ ಇದರ ಬಿಸಿಮುಟ್ಟಿತು. ಸರ್ಕಾರದ ಖಜಾನೆಯಲ್ಲಿ ಎಲ್ಲಿಯವರೆಗೆ ನಗದು ಶಿಲ್ಕು ಜಾಸ್ತಿಯಾಗಿರುತ್ತದೆಯೊ ಅಲ್ಲಿಯವರೆಗೆ ಅದರಲ್ಲಿ ಒಂದು ಭಾಗವನ್ನು ಈ ಸ್ಥಳೀಯ ಸಂಸ್ಥೆಗಳಿಗೆ ನೀಡುವುದು "ಅತ್ಯಂತ ಉಪಯುಕ್ತ ಮಾರ್ಗಗಳಲ್ಲಿ ಒಂದು" ಎಂದು ಹೇಳಬಹುದಾಗಿತ್ತು. ಲಾರ್ಡ್ ರಿಪ್ಪನ್ ಆಳ್ವಿಕೆಯ ಅಂಗವಾಗಿ ಆಗತಾನೆ ಉದ್ಘಾಟನೆಗೊಂಡಿದ್ದ ಸ್ಥಳೀಯ ಸರ್ಕಾರದ ನೀತಿಯನ್ನು ಕೇವಲ ಪ್ರಯೋಗಾತ್ಮಕವೆಂದು ಭಾವಿಸಲಾಗಿತ್ತು. ಈ ಸ್ಥಳೀಯ ಸಂಸ್ಥೆಗಳು ತೆರಿಗೆ ವಿಧಿಸುವುದನ್ನಾಗಲೀ ಇಲ್ಲವೆ ಸಾಲತೆಗೆದುಕೊಳ್ಳುವುದನ್ನಾಗಲೀ ಬಹಳ ಸೀಮಿತವಾಗಿ ಮಾಡಬೇಕಾಗಿತ್ತು. ಪರಿಣಾಮವಾಗಿ, ತಾತ್ಕಾಲಿಕ ಮುಂಗಡಗಳು ಎಂಬುದಾಗಿ ಕೇಂದ್ರ ಸರ್ಕಾರದಿಂದ ಬಂದ ಈ ನೆರವನ್ನು ಅವುಗಳು ತಮಗೆ ಬಂದ ಅಮೂಲ್ಯ ಸಂಪನ್ಮೂಲಗಳು ಎಂದು ಭಾವಿಸಿದ್ದವು. ವಿನಿಮಯದಿಂದ ನಿರಂತರ ನಷ್ಟವಾದದ್ದರಿಂದ ಕೇಂದ್ರಸರ್ಕಾರದ ನಗದು ಶಿಲ್ಕು ಕರಗುತ್ತ ಬಂದಂತೆ ಈ ಸೌಲಭ್ಯಗಳನ್ನು ತೀವ್ರವಾಗಿ ಕಡಿತಗೊಳಿಸಲಾಯಿತು.[೨] ಹಾಗಾಗಿ ಯಾವ ಸಮಯದಲ್ಲಿ ಅವು ಬೆಳೆಯಬೇಕಾಗಿದ್ದವೊ ಹಾಗೂ ತಮ್ಮ ಬುನಾದಿಯನ್ನು ಭದ್ರಗೊಳಿಸಿಕೊಳ್ಳಬೇಕಾಗಿದ್ದಿತೋ ಅಂಥ ಸಮಯದಲ್ಲೇ ಅವುಗಳಿಗೆ ನೆರವು ನಿಲ್ಲುವಂಥ ಸಂದರ್ಭ ಒದಗಿಬಂತು.

ಭಾರತ ಸರ್ಕಾರದ, ಸ್ಟೇಟ್ ಕಾರ್ಯದರ್ಶಿಯವರು ಫೆಬ್ರವರಿ ೨, ೧೮೮೬ ರಲ್ಲಿ ಕಳಿಸಿದ ವರದಿಯಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದಾರೆ.[೨]

"೧೦. ಭಾರತದ ಹಿತಾಸಕ್ತಿಗಳ ದೃಷ್ಟಿಯಿಂದ ಹಿಂದಿನ ಪ್ಯಾರಾಗಳಲ್ಲಿ ಹೇಳಲಾದ ವಾಸ್ತವಾಂಶಗಳು ದುಸ್ಸಹ ಎಂಬುದನ್ನು ಮತ್ತೆ ಪುನರಾವರ್ತನೆ ಮಾಡುವಲ್ಲಿ ನಾವು ಹಿಂಜರಿಯುವುದಿಲ್ಲ; ನಾವು ನಮೂದಿಸಿರುವ ಕೆಡುಕುಗಳು ಪಟ್ಟಿಯನ್ನು ಪೂರ್ತಿಗೊಳಿಸುವುದಿಲ್ಲ. ಬೆಳ್ಳಿಯ ಭವಿಷ್ಯದ ಬಗೆಗಿನ ಅನಿರ್ಧಾರತೆಯಿಂದಾಗಿ ಭಾರತದಲ್ಲಿ ಬಂಡವಾಳವನ್ನು ಹೂಡುವುದಕ್ಕೆ ಪ್ರೋತ್ಸಾಹಕ ವಾತಾವರಣವಿಲ್ಲ. ಹೆಚ್ಚು ವೆಚ್ಚದಿಂದ ಬೆಳ್ಳಿಯನ್ನು ಪಡೆಯುವುದರ ಹೊರತು ಬೇರೆ ರೀತಿ ಸಾಧ್ಯವಿಲ್ಲ.

"ಬದಲಿಗೆ, ನಾವು ರೂಪಿಸಲಿರುವ ಕ್ಷಾಮ ಪರಿಹಾರ ಮತ್ತು ರೈಲುಮಾರ್ಗಗಳು ಹಾಗೂ ಮತ್ತು ನಾವು ಈಗಾಗಲೇ ಯೋಜಿಸಿರುವಂತೆ ತೀರಪ್ರದೇಶ ಮತ್ತು ಗಡಿನಾಡು ರಕ್ಷಣೆಗಳು ಅತ್ಯಂತ ಅಗತ್ಯವಾದವುಗಳು ಹಾಗೂ ಅವುಗಳನ್ನು ಅನಿರ್ದಿಷ್ಟವಾಗಿ ಮುಂದೂಡುವಂತಿಲ್ಲ.

"ಆದ್ದರಿಂದ ನಾವು ನಮ್ಮ ಸ್ಟರ್ಲಿಂಗ್ ಹೊಣೆಗಾರಿಕೆಯನ್ನು ಹೆಚ್ಚಿಸಿಕೊಳ್ಳಬೇಕು. ಈ ಬಗ್ಗೆ ಅನೇಕ ಆಕ್ಷೇಪಣೆಗಳಿವೆ. ದೇಶದ ವಾಣಿಜ್ಯ ಅಭಿವೃದ್ಧಿಯ ಹಾಗೂ ದೇಶದ ಮೇಲೆ ದಾಳಿಯಾದಾಗ ಹಾಗೂ ಕ್ಷಾಮದ ಪ್ರಭಾವಗಳ ವಿರುದ್ಧ ರಕ್ಷಣೆಯ ಸಂದರ್ಭದಲ್ಲಿ ಅಗತ್ಯವಾದ ರೈಲುಮಾರ್ಗಗಳನ್ನು ಕೈಬಿಡಬೇಕು.

* * *

---

೨. ಹೋಲಿಸಿ: ಆರ್ಥಿಕ ವಿವರಣೆ, ೧೮೭೬–೭೭, ಪು. ೯೪

"೧೧. ಭಾರತದಲ್ಲಿ ಸಾಲತೆಗೆದುಕೊಳ್ಳುವಾಗ ಸ್ಥಳೀಯ ಸಂಸ್ಥೆಗಳು ಅನುಭವಿಸುತ್ತಿರುವ ಕಷ್ಟಗಳನ್ನು ಗಮನಕ್ಕೆ ತಂದುಕೊಳ್ಳದೆ ಇರಲು ಸಾಧ್ಯವಿಲ್ಲ. ನೈರ್ಮಲ್ಯ ಸಾಧನಗಳ ಅಭಿವೃದ್ಧಿಗಾಗಿ ಬೊಂಬಾಯಿ ಮತ್ತು ಕಲ್ಕತ್ತ ನಗರ ಸಭೆಗಳಿಗೆ ಅಗಾಧವಾದ ಹಣ ಬೇಕಾಗುತ್ತದೆ. ಆದರೆ ಬೆಳ್ಳಿ ಸಾಲಗಳಿಗಾಗಿ ಅವರು ತೆರಬೇಕಾದ ವಿಪರೀತ ಬಡ್ಡಿದರಗಳು ಹೆಚ್ಚಿನ ವೆಚ್ಚದ ಕಾಮಗಾರಿಗಳನ್ನು ಅವು ಕೈಗೊಳ್ಳಲು ನಿರ್ಬಂಧಪಡಿಸುತ್ತವೆ. ತೀರ ಇತ್ತೀಚೆಗೆ ಕಲ್ಕತ್ತ ಮತ್ತು ಬೊಂಬಾಯಿಗಳಲ್ಲಿ ಹಡಗುಗಳ ನಿರ್ಮಾಣಕ್ಕಾಗಿ ಅಗತ್ಯವಾದ ಹಣವನ್ನು ಸಾಲನೀಡಲು ಅಗತ್ಯವಿದೆ ಎಂಬ ಸಂಗತಿಯನ್ನು ಸರ್ಕಾರ ಮನಗಂಡಿದೆ. ಈ ವಿಷಯವನ್ನು ಘನತೆವೆತ್ತ ತಮಗೆ ಮತ್ತೆ ನಾವು ಜ್ಞಾಪಿಸಬೇಕಾಗಿಲ್ಲ. ಭಾರತ ಸರ್ಕಾರದ ಅನುಮೋದನೆಯಿಂದ ೧೮೮೫ರ ಸೆಪ್ಟೆಂಬರ್ ತಿಂಗಳಲ್ಲಿ ೭೫ ಲಕ್ಷ ರೂಪಾಯಿಗಳ ಸಾಲವನ್ನು ಎತ್ತಲು ಕಲ್ಕತ್ತ ಬಂದರು ಕಮಿಷನರ್‌ರವರು ಪ್ರಯತ್ನಿಸಿದಾಗ ಟೆಂಡರುಗಳ ಒಟ್ಟು ಮೊತ್ತ ಕೇವಲ ೪೦,೨೦೦ ಆಗಿದ್ದು ಈ ಮಹತ್ವಪೂರ್ಣವಲ್ಲದ ಮೊತ್ತ ನಮೂದು ಬೆಲೆಗೆ ಅನುರೂಪವಾಗಿರಲಿಲ್ಲ...."

ಅಂಥದೇ ಕಾರಣಗಳಿಂದಾಗಿ ಖಾಸಗಿ ಕ್ಷೇತ್ರದಲ್ಲಿ ಬಂಡವಾಳದ ಆಯಾತಕ್ಕೆ ತೊಂದರೆಯಾಯಿತು. ಇದರಿಂದ ದೇಶಕ್ಕೂ ನಷ್ಟವಾಯಿತು. ಈ ದಿಸೆಯಲ್ಲಿ ಎಲ್ಲಾ ಕಡೆಯಿಂದಲೂ ಇದಕ್ಕೆ ಸಾಕಷ್ಟು ಒತ್ತಡ ಬಂದಿತು. ಅಡಿಗಡಿಗೆ ಕ್ಷಾಮದ ದವಡೆಯಲ್ಲಿ ಸಿಕ್ಕಿ ಬೀಳುತ್ತಿದ್ದ ಭಾರತವು ಇದರಿಂದ ತಪ್ಪಿಸಿಕೊಳ್ಳಲು ಇದ್ದ ಒಂದು ಮಾರ್ಗವೆಂದರೆ ಅದು ತನ್ನ ಉದ್ದಿಮೆಗಳನ್ನು ಬದಲಾಯಿಸಿಕೊಳ್ಳುವುದೇ ಆಗಿತ್ತು. ಯಾವುದೇ ಕಾಯಂ ಲಾಭವಾಗಬೇಕಾದರೆ ಅಂಥ ವಿಭಿನ್ನ ಔದ್ಯೋಗಿಕ ಜೀವನವನ್ನು ಬಂಡವಾಳದ ಆಧಾರದ ಮೇಲೆಯೇ ಅವಲಂಬಿಸಬೇಕಾಗುತ್ತದೆ ಎಂದು ರಾಯಲ್ ಕಮಿಷನ್[೧] ಕೂಡ ಅದಕ್ಕೆ ಶಿಫಾರಸು ನೀಡಿತು. ಬ್ರಿಟಿಷ್ ಬಂಡವಾಳಗಾರರು ಭಾರತದಲ್ಲಿ ಬಂಡವಾಳವನ್ನು ಅವಲಂಬಿಸುತ್ತಾರೆ. ಇದು ದೀರ್ಘಾವಧಿಯಲ್ಲಿ ಪರಿಣಾಮಕಾರಿಯಾಗಿರಬೇಕಾದರೆ, ಅದು ಬಂಡವಾಳದ ಮೇಲೆಯೇ ಅವಲಂಬಿಸಿರಬೇಕು. ಆದರೆ ಇದು ಈ ಉದ್ದೇಶಕ್ಕಾಗಿ ದೇಶದ ಒಳಕ್ಕೆ ಹರಿದು ಬರುವ ಬಂಡವಾಳದ ಮೇಲೆ ನಿಂತಿರುತ್ತದೆ. ಬಂಡವಾಳಗಾರನಾದ ಬ್ರಿಟಿಷ್ ಹೂಡಿಕೆದಾರನು ಭಾರತದಲ್ಲಿ ಬಂಡವಾಳವನ್ನು ಹೂಡುವುದು ಅಪಾಯಕರವೆಂದು ಭಾವಿಸಿದ್ದನು. ಬೆಳ್ಳಿ ಚಲಾವಣೆಯಲ್ಲಿರುವ ದೇಶದಲ್ಲಿ ಒಮ್ಮೆ ಬಂಡವಾಳವನ್ನು ವ್ಯಾಪಕವಾಗಿ ಬೇರೆಬೇರೆ ತೊಡಗಿಸಿದಾಗ ಬೆಳ್ಳಿಯಲ್ಲಿ ಪ್ರತಿಬಾರಿ ಬೆಲೆ ಕುಸಿತವಾದಾಗಲೂ ಚಿನ್ನದಲ್ಲಿ ವಾಪಸು ಪಡೆದಾಗ ಹಿಂಪಡೆಯುವಿಕೆ ಅನಿರ್ದಿಷ್ಟವಾಗಿರುತ್ತದೆಯಲ್ಲದೆ ಚಿನ್ನದ ಲೆಕ್ಕದಲ್ಲಿ ಆತನ ಹೂಡಿಕೆ ಬಂಡವಾಳದ ಮೌಲ್ಯವನ್ನು ಇಳಿಸುತ್ತದೆ. ಚಿನ್ನ ಸಹಜವಾಗಿಯೇ ಘಟಕವಾಗಿರುವುದರಿಂದ ಆತನ ಆದಾಯ ಮತ್ತು ಖರ್ಚುಗಳನ್ನು ಆ ಮೂಲಕವಾಗಿಯೇ ಅಳೆಯಲಾಗುತ್ತದೆ. ಬಂಡವಾಳದ ಹರಿವಿಗೆ ಈ ತಡೆಯುಂಟಾಗುವುದರಿಂದ ವಿನಿಮಯದ ಘರ್ಷಣೆಯಿಂದಾಗಿ ನಿಸ್ಸಂದೇಹವಾಗಿ ತೀವ್ರತರ ಅನರ್ಥ ಸಂಭವಿಸುತ್ತದೆ.

ವಿನಿಮಯದ ಕುಸಿತದಿಂದಾಗಿ ತೊಂದರೆಗೊಳಗಾದ, ಚಿನ್ನದ ಮೂಲಕವೇ ಪಾವತಿಮಾಡಬೇಕಾಗಿ ಬಂದಿರುವ ಮತ್ತೊಂದು ವರ್ಗದವರೆಂದರೆ ಭಾರತದಲ್ಲಿರುವ ಸಿವಿಲ್ ಸೇವೆಗಳಲ್ಲಿ ಕೆಲಸ ಮಾಡುತ್ತಿದ್ದ ಯುರೋಪಿಯನ್ನರಾಗಿದ್ದರು. ಅವರು ತಮ್ಮ ಸರ್ಕಾರದಂತೆಯೆ, ತಮ್ಮ ವೇತನಗಳನ್ನು ಬೆಳ್ಳಿಯಲ್ಲಿ ಪಡೆಯುತ್ತಿದ್ದರು. ಆದರೆ ಇಂಗ್ಲೆಂಡಿನಲ್ಲಿ ಬಿಟ್ಟುಬಂದಿದ್ದ ತಮ್ಮ ಕುಟುಂಬದ ಖರ್ಚಿಗಾಗಿ ಹಣಕಳುಹಿಸುವಾಗ ಚಿನ್ನದಲ್ಲಿ ಪಾವತಿ ಮಾಡಬೇಕಾಗುತ್ತಿತ್ತು. ಚಿನ್ನದ ದರದಲ್ಲಿ ಬೆಳ್ಳಿಯ ದರವನ್ನು ನಿಗದಿಪಡಿಸಿದಾಗ, ೧೮೭೩ಕ್ಕೆ

---

೧. ನೋಡಿ. ೧೮೮೦ರ ಬರಗಾಲ ಕಮಿಷನ್ ವರದಿ, ಭಾಗ–II, ೧೮೮೦ರ ಸಿ. ೨೭೩೫, ಪುಟಗಳು ೧೭೫–೭೬

ಮುಂಚೆ, ಈ ಸಂಗತಿ ಅವರಿಗೆ ಮಹತ್ವದ್ದಾಗಿರಲಿಲ್ಲ. ಆದರೆ ರೂಪಾಯಿಯ ಮೌಲ್ಯ ಕುಸಿಯತೊಡಗಿದಾಗ ಪರಿಸ್ಥಿತಿ ಸಂಪೂರ್ಣವಾಗಿ ಬದಲಾಯಿಸಿತು. ಬೆಳ್ಳಿಯ ಮೌಲ್ಯದ ಪ್ರತಿ ಕುಸಿತದೊಂದಿಗೆ ಅಷ್ಟೇ ಪ್ರಮಾಣದ ಚಿನ್ನವನ್ನು ಖರೀದಿಸಲು ತಮ್ಮ ನಿಗದಿತ ವೇತನದಿಂದ ಹೆಚ್ಚು ರೂಪಾಯಿಗಳನ್ನು ಕೊಡಬೇಕಾಗುತ್ತಿತ್ತು. ಹಣಪಾವತಿಯ ವಿಷಯದಲ್ಲಿ ಅವರಿಗೆ ಸ್ವಲ್ಪಮಟ್ಟಿನ ಪರಿಹಾರವನ್ನು ಕೊಡಲಾಗುತ್ತಿತ್ತು ಎನ್ನುವುದು ನಿಜ. ಸರ್ಕಾರ ಸ್ವಲ್ಪಮಟ್ಟಿಗೆ ತ್ಯಾಗಮಾಡಿ ಸಿವಿಲ್ ಅಧಿಕಾರಿಗಳು ಅಧಿಕೃತ ವಿನಿಮಯದರದಲ್ಲಿ[೧] ಹಣಕಳುಹಿಸಲು ಅವಕಾಶ ಮಾಡಿಕೊಟ್ಟಿತು. ಮಾರುಕಟ್ಟೆ ದರಕ್ಕೂ ಮತ್ತು ಅಧಿಕೃತ ದರಕ್ಕೂ ನಡುವೆ ಗಮನಾರ್ಹವಾದ ವ್ಯತ್ಯಾಸ ಇರಲಿಲ್ಲವೆಂಬುದೂ ನಿಜ. ಆದರೂ ೧೮೬೨–೯೦ರ ಅವಧಿಯಲ್ಲಿ ಸಿವಿಲ್ ಅಧಿಕಾರಿಗಳಿಗೆ ಶೇಕಡಾ ೨ ೧/೨ ಯಷ್ಟು ಲಾಭವಾಯಿತು ಎನ್ನುವುದು ನಿಜ. ಮಿಲಿಟರಿ ಅಧಿಕಾರಿಗಳಿಗೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆದರೆ ಅದು ಬೇರೆ ರೀತಿಯಲ್ಲಿ ಪರಿಹಾರವು ಸಿಕ್ಕಿತು. ಅವರ ವೇತನವನ್ನು ಸ್ಟರ್ಲಿಂಗ್‌ನಲ್ಲಿ ನಿಗದಿಗೊಳಿಸಲಾಗಿತ್ತು. ಆದರೂ ರೂಪಾಯಿಗಳಲ್ಲೂ ಅವರು ಅದನ್ನು ಪಡೆದುಕೊಳ್ಳಬಹುದಾಗಿತ್ತು. ಅವರ ವೇತನವನ್ನು ನಿಗದಿಗೊಳಿಸಿದ್ದ ರಾಯಲ್ ವಾರೆಂಟ್ (ರಾಜತ್ವದ ಅಧಿಪತ್ರ) ಸಾಮಾನ್ಯವಾಗಿ ಮಾರುಕಟ್ಟೆ ದರಕ್ಕಿಂತಲೂ ಹೆಚ್ಚಿಗೆ ನಿಗದಿಗೊಳಿಸುತ್ತಿತ್ತು. ಭಾರತದ ಬೊಕ್ಕಸಕ್ಕೆ ಹೊರೆಯಾದರೂ ಈ ವ್ಯತ್ಯಾಸದ ಮೊಬಲಗನ್ನು ಮಿಲಿಟರಿ ಅಧಿಕಾರಿಗಳಿಗೆ ಪರಿಹಾರವಾಗಿ ನೀಡಲಾಗುತ್ತಿತ್ತು.[೩] ತೌಲನಿಕವಾಗಿ ಹೇಳಬೇಕೆಂದರೆ ಈ ಪರಿಹಾರ ಅವರಿಗೆ ಪರಿಹಾರವೇ ಅಲ್ಲ. ಅಧಿಕೃತ ಇಲ್ಲವೆ ವಿನಿಮಯದ ವಾರೆಂಟ್ (ಅಧಿಪತ್ರದ) ದರಗಳು ಮಾರುಕಟ್ಟೆ ವಿನಿಮಯದ ದರಗಳಿಗಿಂತಲೂ ಉತ್ತಮವಾಗಿದ್ದರೂ ೧೮೭೩ಕ್ಕಿಂತ ಮುಂಚೆ ಅವು ನೀಡುತ್ತಿದ್ದ ದರಗಳಿಗಿಂತಲೂ ಬಹಳ ಕಡಿಮೆಯಾಗಿದ್ದವು. ಹೊರೆ ಏರಿದಂತೆಯೇ ಅವುಗಳ ಪ್ರವೃತ್ತಿ ಗಾಬರಿ ಹುಟ್ಟಿಸಿತು. ವಿನಿಮಯ ದರದಲ್ಲಿ ತಮಗೆ ಆದ ಹಾನಿಗೆ ಸಾಕಷ್ಟು ಪರಿಹಾರ ನೀಡಬೇಕೆಂದು

---

೧. ಈಸ್ಟ್ ಇಂಡಿಯಾದ (ಸಿವಿಲ್ ಅಧಿಕಾರಿಗಳು) ಆಯ್ಕೆ ಸಮಿತಿಯ ಮುಂದೆ ವಾಟರ್‌ಫೀಲ್ಡ್ ಹೇಳಿಕೆ ಎಚ್.ಸಿ. ರಿಟರ್ನ್ ೧೮೯೦, ೩೨೭ ಪ್ರ. ೧೯೦೫–೧೭. ಇದನ್ನು ೧೮೭೪ರಲ್ಲಿ ಮೊದಲಬಾರಿಗೆ ಸ್ಥಾಪಿಸಲಾಯಿತು. ವಿವರಹೀಗಿದೆ : ಲಂಡನ್‌ನಲ್ಲಿ ಬೆಳ್ಳಿಯ ಮಾರುಕಟ್ಟೆ ದರದ ಆಧಾರದ ಮೇಲೆ ಭಾರತಕ್ಕೆ ರೂಪಾಯಿ ಕಳಿಸುವ ವೆಚ್ಚವನ್ನು ಕುರಿತು ಇಂಡಿಯಾ ಕಚೇರಿಯಲ್ಲಿ ಪ್ರತಿವರ್ಷ ಡಿಸೆಂಬರ್ ತಿಂಗಳಲ್ಲಿ ಲೆಕ್ಕಾಚಾರ ಹಾಕಲಾಗುತ್ತಿತ್ತು. ಹಾಗೆಯೇ ಕಲ್ಕತ್ತದಲ್ಲಿ ಲಂಡನ್ನಿನ ಹುಂಡಿಗೆ ದರದ ಆಧಾರದ ಮೇಲೆ ಭಾರತದಿಂದ ರೂಪಾಯಿಯನ್ನು ತರುವ ಬಗೆಗೂ ಲೆಕ್ಕಾಚಾರ ಹಾಕಲಾಗುತ್ತಿತ್ತು. ಮುಂದಿನ ಅಧಿಕೃತ ವರ್ಷದಲ್ಲಿ ಇಂಡಿಯಾ ಕಚೇರಿ ಮತ್ತು ಬ್ರಿಟಿಷ್ ಖಜಾನೆಗಳ ನಡುವಿನ ತಮ್ಮ ವ್ಯವಹಾರಗಳಿಗೆ ಇವೆರಡರ ಮಾಧ್ಯಮಿಕ ದರವೊಂದನ್ನು ಪರಸ್ಪರ ಏಜೆಂಟರಂತೆ ವರ್ತಿಸುತ್ತಿದ್ದ ಭಾರತ ಕಛೇರಿ ಮತ್ತು ಬ್ರಿಟಿಷ್ ಖಜಾನೆಗಳು ತಮ್ಮ ಮುಂದಿನ ಅಧಿಕೃತ ವರ್ಷಕ್ಕೆ ಅಳವಡಿಸಿಕೊಳ್ಳುತ್ತಿದ್ದವು. ಪ್ರತಿಯೊಂದೂ ಹೊಸದಾಗಿ ದರವನ್ನು ನಿಗದಿಮಾಡುತ್ತಿತ್ತು ಹಾಗೂ ಸಾಮಾನ್ಯ ದರವನ್ನು ಗೊತ್ತುಪಡಿಸುತ್ತಿತ್ತು. ಆದರೂ ಕೆಲವೊಮ್ಮೆ ಇದು ಮಾರುಕಟ್ಟೆ ವಿನಿಮಯದರಕ್ಕಿಂತ ಹೆಚ್ಚೋ ಕಮ್ಮಿಯೋ ಆಗಿರುತ್ತಿತ್ತು.

೨. ಅದೇ ಪ್ರ. ೧೯೨೫–೨೬

೩. ನೋಡಿ. ಎಫ್.ಎಸ್. ೧೮೮೭, ಪು. ೩೯–೪೦. ಈ ವೆಚ್ಚ ಹೀಗಿದೆ –

೧೮೪೭–೭೫ ರೂ. ೬,೪೦,೦೦೦
೧೮೮೪–೮೫ ರೂ. ೧೮,೪೩,೦೦೦
೧೮೮೫–೮೬ ರೂ. ೪,೦೦,೦೦೦
೧೮೮೬–೮೭ ರೂ. ೫,೧೫,೦೦೦

ಅನೇಕ ಮಂದಿ ಅರ್ಜಿದಾರರು ಒತ್ತಾಯಿಸಿದರು.[೧] ಅಲ್ಲದೆ ಸರ್ಕಾರಕ್ಕೆ ಕೆಳಕಂಡಂತೆ ಎಚ್ಚರಿಕೆ ನೀಡಲಾಯಿತು.[೨]

"ಪ್ರಸಕ್ತ ವೇತನಗಳನ್ನು ಕಡಿಮೆಮಾಡುವುದರಿಂದ ಭಾರತಕ್ಕೆ ಲಾಭವಾಗುತ್ತದೆಯೆಂದು ಮುಗ್ಧಜನ ಭಾವಿಸಿದ್ದಾರೆ. ಆದರೆ ಅಂಥ ನಿರ್ಧಾರದಿಂದ ಈ ಇಳಿಸಿದ ವೇತನದಲ್ಲಿ ಜೀವನನಿರ್ವಹಣೆ ಮಾಡುವುದಂತೂ ಸಾಧ್ಯವೇ ಇಲ್ಲ ಎಂಬುದನ್ನು ಅವರು ಗ್ರಹಿಸಲು ವಿಫಲರಾಗಿದ್ದಾರೆ. ಆದರೆ ಹಣವನ್ನು ಪಡೆಯಲು ಅಗತ್ಯವಾದರೆ ಬೇರೆ ಮಾರ್ಗಗಳಿವೆ."

ಸಿವಿಲ್ ಅಧಿಕಾರಿಗಳ ವೇತನ ಅಲ್ಪವಾಗಿದ್ದರಿಂದ, ಮೇಲು ಸಂಪಾದನೆಯಿಂದ ಅವರು ಕೊಬ್ಬಿದ್ದಂಥ ಈಸ್ಟ್ ಇಂಡಿಯಾ ಕಂಪನಿಯ ಆರಂಭದ ದಿನಗಳು ಹಾಗಿದ್ದವು.[೩] ಅವರ ದುರಾಶೆಗೆ ಕಡಿವಾಣಹಾಕುವ ಸಲುವಾಗಿ ಅವರ ವೇತನಗಳನ್ನು ಹೆಚ್ಚಿಸಲಾಯಿತು. ಆದರೂ ಸಿವಿಲ್ ಅಧಿಕಾರಿಗಳು ವಿನಿಮಯದ ನಷ್ಟದಿಂದಾಗಿ ಎಷ್ಟೊಂದು ಅತೃಪ್ತರಾಗಿದ್ದರೆನ್ನುವುದನ್ನು ಅವರ ಇಂತಹ ಬಲಾತ್ಕಾರದ ವಸೂಲಿಯು ತೋರಿಸುತ್ತಿತ್ತು.

ದೇಶದ ವಾಣಿಜ್ಯ ಮತ್ತು ಉದ್ದಿಮೆಗಳ ಮೇಲೆ ಈ ಪತನ ಬೇರೆ ರೀತಿಯ ಪ್ರಭಾವವನ್ನು ಹೊಂದಿತ್ತು. ಸರ್ಕಾರದ ವ್ಯವಹಾರದೊಂದಿಗೆ ಇಲ್ಲವೆ ಇಂಗ್ಲೆಂಡಿನಂಥ ಸುವರ್ಣ–ವಿನಿಮಯದ ದೇಶದ ವಾಣಿಜ್ಯ ಮತ್ತು ಉದ್ದಿಮೆಯೊಂದಿಗೆ ಹೋಲಿಸಿದಾಗ ಅದು ಉತ್ತಮಮಟ್ಟದಲ್ಲಿತ್ತು. ಬೆಳ್ಳಿ ಮೌಲ್ಯದ ಕುಸಿತದ ಅವಧಿಯುದ್ದಕ್ಕೂ ಇಂಗ್ಲೆಂಡಿನಲ್ಲಿ ಬೇರೆಬೇರೆ ವಾಣಿಜ್ಯಗಳು ಮತ್ತು ಉದ್ದಿಮೆಗಳಲ್ಲಿ ಉದ್ಯೋಗಳಲ್ಲಿ ಉದ್ಯೋಗಾವಕಾಶಗಳು ಒಂದೇ ಸಮನೆ ಇಳಿಮುಖವಾಗುತ್ತಿತ್ತು. ಬಟ್ಟೆ ಉತ್ಪಾದನೆ ಮತ್ತು ಕಬ್ಬಿಣ ಹಾಗೂ ಕಲ್ಲಿದ್ದಲು ವ್ಯಾಪಾರ ಹಾಗೂ ಬರ್ಮಿಂಗ್‌ಹ್ಯಾಂ ಮತ್ತು ಷೆಫೀಲ್ಡ್‌ನ ಕಬ್ಬಿಣ ತಯಾರಿಕೆಯನ್ನು ಒಳಗೊಂಡಂತೆ ಇತರ ಪ್ರಮುಖ ವಾಣಿಜ್ಯಗಳು ಇಳಿಮುಖವಾಗಿದ್ದವು. ಹಾಗೆಯೇ ಗ್ರೀನಾಕ್, ಲಿವರ್‌ಪೂಲ್ ಮತ್ತು ಲಂಡನ್ನಿನ ಸಕ್ಕರೆ ಕಾರ್ಖಾನೆಗಳೂ, ಮಣ್ಣಿನ, ಗಾಜಿನ, ಚರ್ಮದ, ಕಾಗದದ ಹಾಗೂ ಇತರ ಅಸಂಖ್ಯಾತ ಸಣ್ಣ ಉದ್ದಿಮೆಗಳ ತಯಾರಕರೂ ನಿರುತ್ಸಾಹದಿಂದಿದ್ದರು.[೪] ಇಂಗ್ಲಿಷ್ ಬೇಸಾಯ ಎಷ್ಟೊಂದು ನಿರುತ್ಸಾಹದಿಂದ ಕೂಡಿತ್ತೆಂದರೆ ೧೮೯೨ರಲ್ಲಿದ್ದ ಕಮಿಷನರು "ಈ ನಿರುತ್ಸಾಹದ ಪರಿಣಾಮಗಳಿಂದ ದೇಶದ ಯಾವುದಾದರೂ ಒಂದು ಭಾಗವು ಸಂಪೂರ್ಣವಾಗಿ ಮುಕ್ತವಾಗಿದೆ ಎಂದು ಹೇಳಲು ಅಸಮರ್ಥರಾಗಿದ್ದರು." ೧೮೮೨ ರಿಂದ ಋತುಮಾನಗಳು "ಒಟ್ಟಿನಲ್ಲಿ ವ್ಯವಸಾಯದ ದೃಷ್ಟಿಯಿಂದ ತೃಪ್ತಿಕರವಾಗಿದ್ದರೂ ಪರಿಸ್ಥಿತಿ ಮುಂದುವರಿದಿತ್ತು".[೫] ಭಾರತದ ವಾಣಿಜ್ಯ ಮತ್ತು ಉದ್ದಿಮೆಯ ವಿಷಯದಲ್ಲಿ ಇದು ವಿರುದ್ಧವಾಗಿತ್ತು.

---

೧. ಭಾರತೀಯ ನಾಣ್ಯ ವರದಿ ನೋಡಿ. ೧೮೯೩, ಪರಿಶಿಷ್ಟ I, ಪುಟಗಳು ೧೮೫–೯೦. ಮತ್ತು ಪು. ೨೦೨. ಯುರೋಪಿಯನ್ ಸಿವಿಲ್ ಅಧಿಕಾರಿಗಳ ಜ್ಞಾಪಕಾರ್ಥವಾಗಿ.

೨. ನೋಡಿ. ಕರ್ನಲ್ ಹ್ಯೂ–ಹ್ಯಾಲೆಟ್, ಎಂ.ಪಿ., ರೂಪಾಯಿಗಳ ಸವಕಳಿ: ಆಂಗ್ಲೋ–ಇಂಡಿಯನ್ ಅಧಿಕಾರಿಯ ಮೇಲೆ ಅದರ ಪ್ರಭಾವ ಮತ್ತು ಪರಿಹಾರ, ಲಂಡನ್, ೧೮೮೭. ಪು. ೧೪.

೩. ಆರಂಭದ ಯುರೋಪಿಯನ್ ಸಿವಿಲ್ ಅಧಿಕಾರಿಗಳ ದುರಾಸೆ ಸ್ವಭಾವ ಮತ್ತು ಅವರ ಕಡಿಮೆ ವೇತನಗಳನ್ನು ಕುರಿತು ೧೭೭೨ರ ಮಾರ್ಚ್ ೩೦ರಂದು ತನ್ನ ಭಾಷಣದಲ್ಲಿ ಕ್ಲೈವ್ ಹೇಳಿದ್ದ. ಈಸ್ಟ್ ಇಂಡಿಯಾ ನ್ಯಾಯಾಂಗ ಮಸೂದೆಯ ಬಗ್ಗೆ ಹೌಸ್ ಆಫ್ ಕಾಮನ್ಸ್ ಸಭೆಯಲ್ಲಿ ನಡೆದ ಚರ್ಚೆ. ಹನ್ಸರ್ಡ್ ಸಂ.XVII, ಪುಟಗಳು ೩೩೪–೩೯.

೪. ವಾಣಿಜ್ಯ ಮತ್ತು ಉದ್ದಿಮೆಯ ಕುಸಿತದ ಬಗ್ಗೆ ರಾಯಲ್ ಕಮಿಷನ್ನಿನ ಅಂತಿಮ ವರದಿಯ ದುನ್‌ರಾವೆನ್, ಫಾರೆರ್, ಮುಂಟ್ಸ್ ಮತ್ತು ಲುಬ್ಬಾಕ್ ರವರ ವರದಿ. ಪ್ಯಾರಾ. ೫೪, ಸಿ ೪೮೯೩

೫. ಇಂಗ್ಲೆಂಡಿನಲ್ಲಿ ವ್ಯವಸಾಯ ಕುಸಿತದ ಬಗ್ಗೆ ರಾಯಲ್ ಕಮಿಷನ್ನಿನ ಅಂತಿಮ ವರದಿ. ಸಿ ೮೫೪೦/೧೮೯೭. ಪ್ಯಾರಾ ೨೮.

ಅಮೆರಿಕನ್ ಅಂತರ್ಯುದ್ಧದ ಅವಧಿಯಲ್ಲಿ ಪುಟಗೊಂಡಿದ್ದ ದೇಶದ ವಿದೇಶೀ ವಾಣಿಜ್ಯವು ೧೮೭೦ರ ನಂತರ ಹೆಚ್ಚಿನ ಉತ್ಸಾಹವನ್ನು ತೋರಿ ವಿನಿಮಯ ಇಳಿಕೆಯ ಅವಧಿಯುದ್ದಕ್ಕೂ ತೀವ್ರಗತಿಯಲ್ಲಿ ಬೆಳೆಯತೊಡಗಿತು. ಇಪ್ಪತ್ತುವರ್ಷಗಳ ಅಲ್ಪ ಅವಧಿಯಲ್ಲಿ ದೇಶದ ಆಯಾತ ಮತ್ತು ನಿರ್ಯಾತಗಳು ಪಟ್ಟಿ XIV ರಲ್ಲಿ ತೋರಿಸಿರುವಂತೆ ತಮ್ಮ ಪ್ರಮಾಣದಲ್ಲಿ ಎರಡುಪಟ್ಟು ಹೆಚ್ಚಿದವು.

## ಪಟ್ಟಿ XIV
## ಆಯಾತ ಮತ್ತು ನಿರ್ಯಾತ
## (ವಾಣಿಜ್ಯ ಸರಕು ಮತ್ತು ಸಂಪತ್ತು (ಚಿನ್ನ) ಸೇರಿ)*

| ವರ್ಷ | ನಿರ್ಯಾತ ರೂ. | ಆಯಾತ | ವರ್ಷ | ನಿರ್ಯಾತ ರೂ. | ಆಯಾತ |
|---|---|---|---|---|---|
| ೧೮೭೦-೭೧ | ೫೭,೫೫೬,೯೫೧ | ೩೯,೯೧೩,೯೪೨ | ೧೮೮೧-೮೨ | ೮೩,೦೬೮,೧೯೮ | ೬೦,೪೩೬,೧೫೫ |
| ೧೮೭೧-೭೨ | ೬೪,೬೮೫,೩೭೬ | ೪೩,೬೬೫,೬೬೩ | ೧೮೮೨-೮೩ | ೮೪,೫೨೭,೧೮೨ | ೬೫,೫೪೮,೮೬೮ |
| ೧೮೭೨-೭೩ | ೫೬,೫೪೮,೮೪೨ | ೩೬,೪೩೧,೨೧೦ | ೧೮೮೩-೮೪ | ೮೯,೧೮೬,೩೯೭ | ೯೮,೧೫೭,೩೧೧ |
| ೧೮೭೩-೭೪ | ೫೬,೯೧೦,೦೮೧ | ೩೯,೬೧೨,೩೬೨ | ೧೮೮೪-೮೫ | ೮೫,೨೨೫,೯೨೨ | ೬೯,೫೯೧,೨೬೯ |
| ೧೮೭೪-೭೫ | ೫೭,೯೮೪,೫೪೯ | ೪೪,೩೬೩,೧೬೦ | ೧೮೮೫-೮೬ | ೮೪,೯೮೯,೫೦೨ | ೭೧,೧೩೩,೬೬೬ |
| ೧೮೭೫-೭೬ | ೬೦,೨೯೧,೭೩೧ | ೪೪,೧೯೨,೩೭೮ | ೧೮೮೬-೮೭ | ೯೦,೧೯೦,೬೩೩ | ೭೨,೮೩೦,೬೭೦ |
| ೧೮೭೬-೭೭ | ೬೫,೦೪೩,೭೮೯ | ೪೮,೮೭೬,೭೫೧ | ೧೮೮೭-೮೮ | ೯೨,೧೪೮,೨೭೯ | ೭೮,೮೩೦,೪೬೮ |
| ೧೮೭೭-೭೮ | ೬೭,೪೩೩,೩೨೪ | ೫೮,೮೧೯,೬೪೪ | ೧೮೮೮-೮೯ | ೯೮,೮೩೩,೮೭೯ | ೮೩,೨೮೫,೪೨೭ |
| ೧೮೭೮-೭೯ | ೬೪,೯೧೯,೭೪೧ | ೪೪,೮೫೭,೩೪೩ | ೧೮೮೯-೯೦ | ೧೦೫,೩೬೬,೭೨೦ | ೮೬,೬೫೬,೯೯೦ |
| ೧೮೭೯-೮೦ | ೬೯,೨೪೭,೫೧೧ | ೫೨,೮೨೧,೩೯೮ | ೧೮೯೦-೯೧ | ೧೦೨,೩೫೦,೫೨೬ | ೯೩,೯೦೯,೮೫೬ |
| ೧೮೮೦-೮೧ | ೭೬,೦೨೧,೦೪೩ | ೬೨,೧೦೪,೯೮೪ | ೧೮೯೧-೯೨ | ೧೧೧,೪೬೦,೨೭೮ | ೮೪,೧೫೫,೦೪೫ |

* ೧೯೮೮ರ ಭಾರತೀಯ ನಾಣ್ಯ ಸಮಿತಿಯ ವರದಿಯ ಪರಿಶಿಷ್ಟ II (ಸಂ. ೧ ಮತ್ತು ೨)ರಿಂದ

## ಪಟ್ಟಿ XV ಇಂಗ್ಲೆಂಡ್ ಮತ್ತು ಭಾರತದಲ್ಲಿ ಔದ್ಯೋಗಿಕ ವೃತ್ತಿಗಳು*

| ವರ್ಷ | ಚಿನ್ನವನ್ನು ಬಿಟ್ಟು ಭಾರತೀಯ ರಫ್ತುಗಳ ಹಂಚಿಕೆ (ಶೇ.) | | | | | ಚಿನ್ನವನ್ನು ಬಿಟ್ಟು ಇಂಗ್ಲೆಂಡಿನ ರಫ್ತುಗಳ ಹಂಚಿಕೆ (ಶೇ.) | | | | |
|---|---|---|---|---|---|---|---|---|---|---|
| | ತಯಾರಿಸಿದ ವಸ್ತುಗಳು | ಕಚ್ಚಾ ವಸ್ತುಗಳು | ಆಹಾರ ವಸ್ತುಗಳು | ವರ್ಗೀಕೃತವಾಗದ ವಸ್ತುಗಳು | ಮೊತ್ತ | ತಯಾರಿಸಿದ ವಸ್ತುಗಳು | ಕಚ್ಚಾ ವಸ್ತುಗಳು | ಆಹಾರ ವಸ್ತುಗಳು | ವರ್ಗೀಕೃತವಾಗದ ವಸ್ತುಗಳು | ಮೊತ್ತ |
| ೧೮೫೭ | ೧೧ | ೩೪ | ೨೨ | ೨೩ | ೧೦೦ | ೯೦.೯ | ೪ | ೪.೯ | .೨ | ೧೦೦ |
| ೧೮೫೮ | ೬ | ೩೫ | ೨೬ | ೩೩ | ೧೦೦ | ೯೧.೪ | ೩.೪ | ೫.೧ | .೧ | ೧೦೦ |
| ೧೮೫೯ | ೬.೫ | ೪೦ | ೧೫.೫ | ೩೮ | ೧೦೦ | ೯೧.೫ | ೩.೮ | ೪.೬ | .೧ | ೧೦೦ |
| ೧೮೬೦ | ೫.೭ | ೪೩.೬ | ೧೭.೭ | ೩೩ | ೧೦೦ | ೯೧.೯ | ೩.೬ | ೪.೪ | .೩ | ೧೦೦ |
| ೧೮೬೧ | ೫.೮ | ೪೬.೫ | ೧೫.೩ | ೩೨.೪ | ೧೦೦ | ೯೦.೪ | ೪.೮ | ೪.೮ | – | ೧೦೦ |
| ೧೮೬೨ | ೫ | ೫೨ | ೧೬ | ೨೭ | ೧೦೦ | ೯೦.೩ | ೪ | ೪.೮ | .೯ | ೧೦೦ |
| ೧೮೬೩ | ೩.೭ | ೫೮.೭ | ೧೦.೬ | ೨೭ | ೧೦೦ | ೯೧.೦ | ೪ | ೪ | ೧.೦ | ೧೦೦ |
| ೧೮೬೪ | ೪ | ೬೯.೨ | ೯.೩ | ೧೭.೫ | ೧೦೦ | ೯೨.೫ | ೩.೭ | ೩.೭ | .೧ | ೧೦೦ |
| ೨೮೬೫ | ೩.೫ | ೬೮ | ೧೨ | ೧೬.೬ | ೧೦೦ | ೯೨.೧ | ೩.೬ | ೩.೬ | .೭ | ೧೦೦ |
| ೧೮೬೬ | ೪.೨ | ೬೭.೨ | ೧೦.೩ | ೧೮.೩ | ೧೦೦ | ೯೨ | ೩.೭ | ೩.೭ | .೪ | ೧೦೦ |
| ೧೮೬೭ | ೪ | ೫೮ | ೧೧ | ೨೭ | ೧೦೦ | ೯೨.೨ | ೩.೮ | ೩.೭ | .೩ | ೧೦೦ |
| ೧೮೬೮ | ೪ | ೫೮.೫ | ೧೧.೫ | ೨೬ | ೧೦೦ | ೯೨ | ೪.೪ | ೩.೪ | .೨ | ೧೦೦ |
| ೧೮೬೯ | ೪.೮ | ೬೦.೫ | ೧೪ | ೨೦.೭ | ೧೦೦ | ೯೨ | ೪.೨ | ೩.೧ | .೭ | ೧೦೦ |
| ೧೮೭೦ | ೪.೪ | ೬೩.೬ | ೯ | ೨೩ | ೧೦೦ | ೯೧ | ೪ | ೪ | ೧.೦ | ೧೦೦ |
| ೧೮೭೧ | ೩.೭ | ೬೫.೩ | ೧೧ | ೨೦ | ೧೦೦ | ೯೦ | ೪.೪ | ೪.೯ | .೭ | ೧೦೦ |
| ೧೮೭೨ | ೩.೩ | ೬೧.೪ | ೧೩.೫ | ೨೧.೮ | ೧೦೦ | ೯೧.೨ | ೫.೪ | ೩.೫ | .೯ | ೧೦೦ |

* ಭಾರತಕ್ಕೆ ಸಂಬಂಧಿಸಿದಂತೆ ಅಂಕಿ ಅಂಶಗಳನ್ನು ಸ್ಟಾಟಿಸ್ಟಿಕಲ್ ಅಬ್‌ಸ್ಟ್ರಾಕ್ಟ್ ಫಾರ್ ಬ್ರಿಟಿಷ್ ಇಂಡಿಯಾ, ಎರಡನೇ ಸಂಪುಟದಿಂದ (೧೮೫೭–೧೮೬೬) ತೆಗೆದುಕೊಂಡಿದೆ. ಹಾಗೆಯೇ ಪಟ್ಟಿ ೩೪, ಹಾಗೂ ಎಂಟನೇ ಸಂಪುಟ (೧೮೬೪–೧೮೭೩), ಪಟ್ಟಿ ನಂ.೨೪. ಇಂಗ್ಲೆಂಡಿಗೆ ಸಂಬಂಧಿಸಿದಂತೆ ಅಂಕಿಅಂಶಗಳನ್ನು ಪರಿಶಿಷ್ಟ ಸಿ ಯಿಂದ (ನಿರೂಪಣೆ ೬) ತೆಗೆದುಕೊಂಡಿದೆ. ನೋಡಿ. ಫಸ್ಟ್ ರಿಪೋರ್ಟ್ ಆಫ್ ದಿ ರಾಯಲ್ ಕಮಿಷನ್ ಆಫ್ ದಿ ಡಿಪ್ರಿಷಿಯೇಷನ್ ಆಫ್ ಟ್ರೇಡ್ ಅಂಡ್ ಇಂಡಸ್ಟ್ರಿ, ೧೮೮೫. ಈ ಬದಲಾವಣೆಯನ್ನು ಅದರಿಂದ ಮಾಡಿಕೊಂಡಿದೆ. ಭಾರತದ ನಿರ್ಯಾತಗಳಡಿಯಲ್ಲಿ "ಅವರ್ಗೀಕೃತ ವಸ್ತು"ಗಳೆಂದರೆ ಬಹುಪಾಲು "ಆಭರಣಗಳು".

## ಪಟ್ಟಿ XVI
## ಭಾರತದ ಔದ್ಯೋಗಿಕ ವೃತ್ತಿಗಳಲ್ಲಿ ಬದಲಾವಣೆಗಳು

| ವರ್ಷಗಳು | ಆಯಾತಗಳು | | ನಿರ್ಯಾತಗಳು | |
|---|---|---|---|---|
| | ಸಿದ್ಧವಸ್ತುಗಳು | ಕಚ್ಚಾವಸ್ತುಗಳು | ಸಿದ್ಧವಸ್ತುಗಳು | ಕಚ್ಚಾವಸ್ತುಗಳು |
| | ರೂ. | ರೂ. | ರೂ. | ರೂ. |
| ೧೮೭೯ | ೨೫,೯೮,೬೫,೮೨೭ | ೧೩,೭೫,೫೫,೮೩೭ | ೫,೨೭,೮೦,೩೪೦ | ೫೯,೬೭,೨೭,೯೧ |
| ೧೮೯೨ | ೩೬,೨೨,೩೧,೮೭೨ | ೨೬,೩೮,೧೮,೪೩೧ | ೧೬,೪೨,೪೭,೫೬೬ | ೮೫,೫೨,೦೯,೪೯ |
| ಶೇ. ಹೆಚ್ಚಳ | ೩೯ | ೯೧ | ೨೧೧ | ೪೩ |
| ಒಟ್ಟು ವಾರ್ಷಿಕ | ೨.೮ | ೬.೫ | ೧೫ | ೩ |

ಭಾರತದಲ್ಲಿ ವಾಣಿಜ್ಯ ಹೆಚ್ಚುತ್ತಿದ್ದುದಷ್ಟೇ ಅಲ್ಲ, ಅದರ ಉದ್ದಿಮೆಗಳೂ ಕೂಡ ಅದೇ ವೇಳೆಗೆ ಅಗಾಧ ಬದಲಾವಣೆ ಹೊಂದುತ್ತಿದ್ದವು. ೧೮೭೦ಕ್ಕಿಂತ ಹಿಂದೆ, ಭಾರತ ಮತ್ತು ಇಂಗ್ಲೆಂಡ್ ಸ್ಪರ್ಧೇತರ ಗುಂಪುಗಳಾಗಿದ್ದವು. ಸಮುದ್ರಯಾನ ಕಾನೂನುಗಳ ರಕ್ಷಣಾನೀತಿಯಂತೆ ಹಾಗೂ ಉತ್ಪಾದನಾ ಕ್ಷೇತ್ರದಲ್ಲಿ ಮನುಷ್ಯನ ಸ್ಥಾನದಲ್ಲಿ ಯಂತ್ರಗಳನ್ನು ತಂದಿದ್ದರಿಂದ ಭಾರತವು ಸಂಪೂರ್ಣವಾಗಿ ಬೇಸಾಯದ ಹಾಗೂ ಕಚ್ಚಾಸಾಮಗ್ರಿಗಳ ಉತ್ಪಾದನಾ ದೇಶವಾಯಿತು. ಆದರೆ ಇಂಗ್ಲೆಂಡಾದರೋ ವಿದೇಶದಿಂದ ಆಯಾತ ಮಾಡಿಕೊಂಡ ಕಚ್ಚಾ ಪದಾರ್ಥಗಳನ್ನು ಸಿದ್ಧವಸ್ತುಗಳನ್ನಾಗಿ ತಯಾರಿಸುವಲ್ಲಿ ತನ್ನ ಶಕ್ತಿಯನ್ನೂ, ಸಂಪನ್ಮೂಲವನ್ನೂ ಸಮರ್ಥವಾಗಿ ಬಳಸಿಕೊಂಡಿತು. ಪಟ್ಟಿ XVರಲ್ಲಿ ಔದ್ಯೋಗಿಕ ವೃತ್ತಿಗಳಲ್ಲಿ ಎರಡು ರಾಷ್ಟ್ರಗಳ ನಡುವೆ ಇರುವ ಎದ್ದುಕಾಣುವ ವ್ಯತ್ಯಾಸಗಳನ್ನು ಸಂಬಂಧಪಟ್ಟ ನಿರ್ಯಾತಗಳು ತೋರಿಸುತ್ತವೆ.

೧೮೭೦ರ ನಂತರ, ಅವುಗಳ ಔದ್ಯೋಗಿಕ ವೃತ್ತಿಗಳಲ್ಲಿ ಬಹುಮಟ್ಟಿನ ಬದಲಾವಣೆಗಳಾದವು. ಭಾರತ ಮತ್ತೊಮ್ಮೆ ಉತ್ಪಾದನಾ ರಾಷ್ಟ್ರದ ಪಾತ್ರವನ್ನು ವಹಿಸತೊಡಗಿತು. ೧೮೭೦ರ ನಂತರದ ಇಪ್ಪತ್ತು ವರ್ಷಗಳ ಭಾರತೀಯ ಆಯಾತಗಳ ಮತ್ತು ನಿರ್ಯಾತಗಳ ಅಂಕಿಅಂಶಗಳನ್ನು ವಿಶ್ಲೇಷಿಸಿದಾಗ (ನೋಡಿ–ಪಟ್ಟಿ XVI) ಉತ್ಪಾದನೆಯ ನಿಟ್ಟಿನಲ್ಲಿ ಉಂಟಾದ ಮುನ್ನಡೆ ಆ ಕಾಲದ ಅತ್ಯಂತ ಮಹತ್ವಪೂರ್ಣ ಲಕ್ಷಣಗಳಲ್ಲಿ ಒಂದೆಂಬುದು ನಮಗೆ ಗೊತ್ತಾಗುತ್ತದೆ.

---

೧. ರಾನಡೆಯವರ *ಎಸ್ಸೇಸ್ ಆನ್ ಇಂಡಿಯನ್ ಇಕನಾಮಿಕ್ಸ್*, ಪು. ೧೦೪

## ಪಟ್ಟಿ XVII
## ಭಾರತೀಯ ಹತ್ತಿ ವಾಣಿಜ್ಯ ಮತ್ತು ಉದ್ದಿಮೆಗಳ ವಿಕಾಸ

| | ವಾಣಿಜ್ಯ ಬೆಳವಣಿಗೆ (ಪ್ರತಿ ಐದುವರ್ಷಗಳಲ್ಲಿ ಸರಾಸರಿ ವಾರ್ಷಿಕ ಪ್ರಮಾಣಗಳು) | | | | |
|---|---|---|---|---|---|
| | ೧೮೭೦–೭೧ರಿಂದ ೧೮೭೪–೭೫ರವರೆಗೆ | ೧೮೭೫–೭೬ರಿಂದ ೧೮೭೯–೮೦ರವರೆಗೆ | ೧೮೮೦–೮೧ರಿಂದ ೧೮೮೪–೮೫ರವರೆಗೆ | ೧೮೮೫–೮೬ರಿಂದ ೧೮೮೯–೯೦ರವರೆಗೆ | ೧೮೯೦–೯೧ರಿಂದ ೧೮೯೪–೯೫ರವರೆಗೆ |
| ಕಚ್ಚಾ ಹತ್ತಿ ಆಯಾತ–ಸಾವಿರಾರು ಅಥವಾ ಹಂಡ್ರೆಡ್‌ವೈಟ್ | ೨೩ | ೫೨ | ೫೧ | ೭೪ | ೮೯ |
| ಕಚ್ಚಾ ಹತ್ತಿ ನಿರ್ಯಾತ ಸಾವಿರಾರು ಅಥವಾ ಹಂಡ್ರೆಡ್‌ವೈಟ್ | ೫,೨೩೬ | ೩,೯೮೮ | ೫,೪೭೭ | ೫,೩೩೦ | ೪,೬೬೦ |
| ಹುರಿ ಮತ್ತು ನೂಲುಗಳ ಆಯಾತಗಳು | ೩೩,೫೫ | ೩೩,೫೫ | ೪೪,೩೪ | ೪೯,೦೯ | ೪೪.೭೯ |
| | ಉದ್ದಿಮೆ ಬೆಳವಣಿಗೆ (ಪ್ರತಿ ಐದುವರ್ಷದ ಕೊನೆಯಲ್ಲಿ) | | | | |
| ಕಾರ್ಖಾನೆಗಳ ಸಂಖ್ಯೆ | ೪೮ | ೫೮ | ೮೧ | ೧೧೪ | ೧೪೩ |
| ಕದಿರುಗಳ ಸಂಖ್ಯೆ–(೦೦೦– ಕೈಬಿಡಲಾಗಿದೆ) | ೧,೦೦೦ | ೧,೪೭೧ | ೨,೦೩೭ | ೨,೯೩೫ | ೩,೭೧೨ |
| ಮಗ್ಗಗಳ ಸಂಖ್ಯೆ–(೦೦೦– ಕೈಬಿಡಲಾಗಿದೆ) | ೧೦ | ೧೩ | ೧೬ | ೨೨ | ೩೪ |
| ಕೆಲಸ ಮಾಡುತ್ತಿದ್ದ ಉದ್ಯೋಗಿಗಳ ಸಂಖ್ಯೆ | – | ೩೯,೫೩೭ | ೬೧,೮೩೬ | ೯೯,೨೨೪ | – |

ಔದ್ಯೋಗಿಕ ವಿಕಾಸದಲ್ಲಿನ ಈ ಬದಲಾವಣೆ ಎರಡು ಪ್ರಧಾನ ತಯಾರಿಕೆಗಳ ಬೆಳವಣಿಗೆಯಿಂದ ಗೊತ್ತಾಗುತ್ತದೆ. ಆ ಪೈಕಿ ಒಂದೆಂದರೆ ಹತ್ತಿಯ ತಯಾರಿಕೆ. ಹತ್ತಿ ಉದ್ದಿಮೆಯು ಭಾರತದ ಅತ್ಯಂತ ಹಳೆಯ ಉದ್ದಿಮೆಗಳಲ್ಲೊಂದು. ಆದರೆ ೧೭೫೦ ಮತ್ತು ೧೮೫೦ರ ನೂರು ವರ್ಷಗಳ ಅವಧಿಯಲ್ಲಿ ಅದು ಸಂಪೂರ್ಣವಾಗಿ ಸತ್ವಗುಂದಿತ್ತು. ಹತ್ತೊಂಬತ್ತನೆಯ ಶತಮಾನದ ಅರವತ್ತರ ದಶಕಗಳಲ್ಲಿ ಬಂಡವಾಳಶಾಹಿ ಆಧಾರದ ಮೇಲೆ ಉದ್ದಿಮೆಯನ್ನು ಪುನರುಜ್ಜೀವನಗೊಳಿಸುವ ಪ್ರಯತ್ನಗಳು ನಡೆದವು; ಬಹುಬೇಗನೆ ತೀವ್ರಗತಿಯ ಸುಧಾರಣೆಯ ಚಿಹ್ನೆಗಳು ಕಾಣತೊಡಗಿದವು. ಈ XVIIನೇ ಪಟ್ಟಿಯಲ್ಲಿ ಅದರ ಪ್ರಗತಿಯ ಕಥೆಯನ್ನು ಸಂಕ್ಷೇಪವಾಗಿ ಚಿತ್ರಿಸಲಾಗಿದೆ.

ಭಾರತದ ಉತ್ಪಾದಕರ ಈ ಅಭಿವೃದ್ಧಿಯಲ್ಲಿ ಬಹಳಷ್ಟು ಎದ್ದುಕಾಣುವಂಥ ಉದ್ದಿಮೆಯೆಂದರೆ ಅದು ಸೆಣಬಿನ ಉತ್ಪಾದನೆ. ಭಾರತದ ಹತ್ತಿ ಉದ್ದಿಮೆಯಂತಲ್ಲದೆ, ಸೆಣಬಿನ ಉದ್ದಿಮೆ ಬಹುಮಟ್ಟಿಗೆ ಇತ್ತೀಚಿನ ಉದ್ದಿಮೆಯಾಗಿದೆ. ಹತ್ತಿ ಉದ್ದಿಮೆಯಿಂದ ವಿಭಿನ್ನವಾದ ಅದರ ಬೆಳವಣಿಗೆ ಯುರೋಪಿಯನ್ ಬಂಡವಾಳ, ಯುರೋಪಿಯನ್ ನಿರ್ವಹಣೆ, ಯುರೋಪಿಯನ್ ನೈಪುಣ್ಯಗಳಿಂದ ಪೋಷಿಸಲ್ಪಟ್ಟಿದೆ. ಆನಂತರ ಬಹುಬೇಗನೆ ಅದು ಹತ್ತಿ ಉದ್ದಿಮೆಯಂತೆಯೆ ಆಳವಾಗಿ ಬೇರೂರಿತಲ್ಲದೆ ಆ ಉದ್ಯಮದಂತೆಯೆ, ಅದಕ್ಕಿಂತ ಉತ್ತಮವಾಗಿಯಲ್ಲದಿದ್ದರೂ, ಲಾಭದಾಯಕವಾಗಿ ಬೆಳೆಯಿತು. ಅದರ ಇತಿಹಾಸ ಅದರ ಮುನ್ನಡೆಯನ್ನು ತೋರಿಸುತ್ತದೆ (ಪಟ್ಟಿ XVIII ನೋಡಿ).

**ಪಟ್ಟಿ XVIII**

**ಸೆಣಬು ಉದ್ಯಮ ಮತ್ತು ವ್ಯಾಪಾರದ ವಿಕಾಸ**

| ಬೆಳವಣಿಗೆ | ಪ್ರತಿ ವರ್ಷ ಪಂಚವಾರ್ಷಿಕ ಸರಾಸರಿ | | | | |
|---|---|---|---|---|---|
| | ೧೮೭೦-೭೧ ರಿಂದ ೧೮೭೪-೭೫ | ೧೮೭೫-೭೬ ರಿಂದ ೧೮೭೯-೮೦ | ೧೮೮೦-೮೧ ರಿಂದ ೧೮೮೪-೮೫ | ೧೮೮೫-೮೬ ರಿಂದ ೧೮೮೯-೯೦ | ೧೮೯೦-೯೧ ರಿಂದ ೧೮೯೪-೯೫ |
| **ನಿರ್ಯಾತಗಳು** | | | | | |
| ಕಚ್ಚಾ, ಹತ್ತುಲಕ್ಷ (ಹಂಡ್ರೆಡ್‌ವೈಟ್‌ಗಳಲ್ಲಿ) | ೫.೭೨ | ೫.೫೮ | ೭.೮೧ | ೯.೩೧ | ೧೦.೫೪ |
| ಗೋಣಿಚೀಲಗಳು (ಹತ್ತು ಲಕ್ಷಗಳಲ್ಲಿ) | ೬.೪೪ | ೩೫.೯೬ | ೬೦.೩೨ | ೭೯.೯೮ | ೧೨೦.೭೪ |
| ಬಟ್ಟೆ (ಹತ್ತುಲಕ್ಷ ಗಜಗಳಲ್ಲಿ) | – | ೪.೭೧ | ೬.೪೪ | ೧೯.೭೯ | ೫೪.೨೦ |
| **ಉದ್ದಿಮೆಯ ಬೆಳವಣಿಗೆ** | | | | | |
| ಕಾರ್ಖಾನೆಗಳು | – | ೨೧ | ೨೧ | ೨೪ | ೨೬ |
| ಮಗ್ಗಗಳು (೦೦೦ ಬಿಡಲಾಗಿದೆ) | – | ೫.೫ | ೫.೫ | ೭ | ೮.೩ |
| ರಾಟೆಗಳು (೦೦೦ ಬಿಡಲಾಗಿದೆ) | – | ೮೮ | ೮೮ | ೧೩೮.೪ | ೧೭೨.೪ |
| ಕೆಲಸಕ್ಕಿರುವ ಕಾರ್ಮಿಕರು, ಸಾವಿರಗಳಲ್ಲಿ | – | ೩೮.೮ | ೩೮.೮ | ೫೨.೭ | ೬೪.೩ |

ಉತ್ಪಾದನಾ ಕ್ಷೇತ್ರದಲ್ಲಿ ಹೆಚ್ಚುತ್ತಿರುವ ಈ ಪ್ರವೃತ್ತಿಯಿಂದಾಗಿ ಭಾರತದ ವ್ಯವಸಾಯದ ಮೇಲೆ ಅದರ ಪರೋಕ್ಷ ಪ್ರಭಾವಗಳೂ ಇಲ್ಲದೇ ಹೋಗಲಿಲ್ಲ. ೧೮೭೦ಕ್ಕಿಂತ ಹಿಂದೆ ಭಾರತೀಯ ರೈತನಿಗೆ ವಾಣಿಜ್ಯ ಮನೋಭಾವ ಇರಲಿಲ್ಲವೆಂದು ಹೇಳಲಾಗಿದೆ. ಅವನು ತನ್ನ ಸ್ವಂತದ ಅಗತ್ಯಗಳಿಗಾಗಿ ಮಾತ್ರ ವ್ಯವಸಾಯ ಮಾಡುತ್ತಿದ್ದನೇ ಹೊರತು ವ್ಯಾವಹಾರಿಕ ಲಾಭಕ್ಕಾಗಿ ವ್ಯವಸಾಯವನ್ನು ಮಾಡುತ್ತಿರಲಿಲ್ಲ. ೧೮೭೦ರ ತರುವಾಯ ಬೇಸಾಯ ವ್ಯವಹಾರವಾಯಿತು ಹಾಗೂ ರೈತನ ಸ್ವಂತ ಅಗತ್ಯಗಳಿಗಿಂತ ಮಿಗಿಲಾಗಿ ಬೆಳೆಗಳು ಮಾರುಕಟ್ಟೆ ದರಗಳ ಗತಿಯಿಂದ ನಿರ್ಧಾರವಾಗುವುದು ಹೆಚ್ಚಾಯಿತು XIXನೆಯ ಪಟ್ಟಿಯಲ್ಲಿನ ಅಂಕಿಸಂಖ್ಯೆಗಳು ಇದನ್ನು ಬಹು ಚೆನ್ನಾಗಿ ನಿರೂಪಿಸುತ್ತವೆ.

## ಪಟ್ಟಿ XIX
## ಭಾರತದಲ್ಲಿ ಬೇಸಾಯ ವಸ್ತುಗಳ ನಿರ್ಯಾತದಲ್ಲಿನ ಬೆಳವಣಿಗೆ

| | ೧೮೬೮–೬೯ | ೧೮೭೩–೭೪ | ೧೮೭೭–೭೮ | ೧೮೮೨–೮೩ | ೧೮೮೭–೮೮ | ೧೮೯೧–೯೨ |
|---|---|---|---|---|---|---|
| **ಗೋಧಿ** | ೧೦೦ | ೬೩೭.೪೧ | ೨,೩೧೩.೪೭ | ೫,೧೫೨,೩೬ | ೪,೯೧೪.೩೭ | ೧೧,೦೦೧.೪೪ |
| **ಅಫೀಮು** | ೧೦೦ | ೧೧೮.೩೮ | ೧೨೩.೮೩ | ೧೨೨.೪೭ | ೧೨೦.೨೦ | ೧೧೬.೮೨ |
| **ಬೀಜಗಳು** | ೧೦೦ | ೧೧೧.೨೬ | ೩೦೫.೮೭ | ೨೩೯.೯೭ | ೪೦೩.೬೦ | ೪೮೦.೯೯ |
| **ಅಕ್ಕಿ** | ೧೦೦ | ೧೩೧.೬೬ | ೧೧೯.೮೪ | ೨೦೩.೨೮ | ೧೮೫.೫೫ | ೨೨೦.೩೬ |
| **ನೀಲಿ** | ೧೦೦ | ೧೧೬.೯೧ | ೧೨೧.೫೭ | ೧೪೨.೧೭ | ೧೪೦.೭೬ | ೧೨೬.೩೩ |
| **ಚಹ** | ೧೦೦ | ೧೬೯.೩೫ | ೨೯೩.೧೭ | ೫೦೭.೨೫ | ೭೭೫.೦೯ | ೧,೦೭೫.೭೫ |
| **ಕಾಫಿ** | ೧೦೦ | ೮೬.೦೪ | ೬೯.೯೮ | ೮೫.೩೧ | ೬೪.೫೯ | ೭೪.೧೧ |

ಎರಡೂ ರಾಷ್ಟ್ರಗಳಲ್ಲಿ ಪ್ರಚಲಿತದಲ್ಲಿದ್ದ ಆರ್ಥಿಕ ಪರಿಸ್ಥಿತಿಗಳ ವೈರುಧ್ಯ ಅಂಥದು. ಬೆಳ್ಳಿ ಮಾನದಂಡವುಳ್ಳ ದೇಶದ ಈ ವಿಚಿತ್ರ ಸಂಗತಿ ನಿಧಾನವಾಗಿ ಮುಂದುವರಿಯುತ್ತಿತ್ತು ಹಾಗೂ ಚಿನ್ನದ ಮಾನದಂಡವುಳ್ಳ ದೇಶದ ಪರಿಸ್ಥಿತಿಯಲ್ಲಿ ಯಾವ ಬದಲಾವಣೆಯೂ ಇರಲಿಲ್ಲ. ಈ ಪರಿಸ್ಥಿತಿಯನ್ನು ಪರಿಶೀಲಿಸುತ್ತಿದ್ದವರು ಇದರಿಂದಾಗಿ ಚಿಂತೆಗೀಡಾಗಿದ್ದರು. ಅಂತರರಾಷ್ಟ್ರೀಯ ಸ್ಪರ್ಧೆಯಲ್ಲಿ ಇಂಗ್ಲಿಷ್ ಉತ್ಪಾದಕರು ಭಾಗವಹಿಸಲು ಅಸಮರ್ಥರಾಗಿದ್ದುದೇ ಮುಖ್ಯಕಾರಣವೆಂದು ಹೇಳಲಾಗಿದೆ. ಯುರೋಪಿಯನ್ ರಾಷ್ಟ್ರಗಳ ಔದ್ಯಮಿಕ ಮತ್ತು ವಾಣಿಜ್ಯ ಸಂಹಿತೆಯ ಅಗತ್ಯ ಭಾಗವಾಗಿ ರೂಪುಗೊಂಡಿದ್ದ ರಕ್ಷಿತ ಆಯಾತ–ನಿರ್ಯಾತ ಸುಂಕಗಳು ಮತ್ತು ಸಹಾಯಗಳು ಇವುಗಳಿಂದಾಗಿ ಇತರ ಯುರೋಪಿಯನ್ ಪ್ರತಿಸ್ಪಧಿಗಳೊಂದಿಗೆ ಇವರು ಸ್ಪರ್ಧಿಸುವುದು ಸಾಧ್ಯವಾಗಲಿಲ್ಲವೆಂದು ಹೇಳಲಾಗಿದೆ. ಭಾರತದಲ್ಲಿ ಇಂಥ ಪರಿಸ್ಥಿತಿ ಆಗ ಇರಲಿಲ್ಲ. ಅಲ್ಲಿ ಬೇರೆಲ್ಲ ಕಡೆಯಿರಬಹುದಾಗಿದ್ದಂತೆಯೆ ವಾಣಿಜ್ಯವು ಮುಕ್ತವಾಗಿತ್ತು ಹಾಗೂ ಉದ್ದಿಮೆ ಕೂಡ ರಕ್ಷಿತವಾಗಿರಲಿಲ್ಲ. ಹಾಗಿದ್ದರೂ ಕೂಡ ಲ್ಯಾಂಕ್‌ಷೈರ್‌ನ ಹತ್ತಿ ತಯಾರಕ, ಡಂಡೀ ಸೆಣಬು ತಯಾರಕ ಮತ್ತು ಇಂಗ್ಲಿಷ್ ಗೋಧಿ ಬೆಳೆಗಾರ, ತಾನು ಭಾರತದಲ್ಲಿನ ತನ್ನ ಎದುರಾಳಿಗಳೊಂದಿಗೆ ಸ್ಪರ್ಧಿಸಲಾರೆನೆಂದು ದೂರುತ್ತಿದ್ದ.

ಈ ವಿಷಯದಲ್ಲಿ ಇದಕ್ಕೆ ವಿನಿಮಯದರದ[೧] ಕುಸಿತವೇ ಕಾರಣವೆಂದು ಹೇಳಲಾಗಿದೆ. ಈ ಅಭಿಪ್ರಾಯದಿಂದ ಕೆಲವು ಜನರು ಎಷ್ಟೊಂದು ಪ್ರಭಾವಿತರಾದರೆಂದರೆ ದೂರ ಪ್ರಾಚ್ಯಕ್ಕೆ ಭಾರತೀಯ ವಾಣಿಜ್ಯವನ್ನು ವಿಸ್ತರಿಸಿದ್ದರಿಂದಲೇ ಹೀಗಾಯಿತು ಎಂದು ಅಭಿಪ್ರಾಯಪಟ್ಟರು. ಈಗಾಗಲೇ ಆಕ್ಷೇಪಿಸಿರುವಂತೆ ಚಿನ್ನ ಮತ್ತು ಬೆಳ್ಳಿಗಳ ನಡುವಣ ವಿನಿಮಯ ದರದಲ್ಲಿನ ಸ್ಥಾನಪಲ್ಲಟದಿಂದಾಗಿ ಚಿನ್ನವನ್ನು ಬಳಸುವ ದೇಶಗಳಿಗೂ ಮತ್ತು ಬೆಳ್ಳಿಯನ್ನು ಬಳಸುವ ದೇಶಗಳಿಗೂ ಒಂದು ರೀತಿಯ ಪ್ರತ್ಯೇಕತೆಯುಂಟಾಯಿತು. ಒಂದೇ ಲೋಹವನ್ನು ಪ್ರಮಿತಿಯಾಗಿ ಬಳಸುವ ಎರಡು ರಾಷ್ಟ್ರಗಳ ನಡುವಣ ವ್ಯವಹಾರದಲ್ಲಿ, ಎರಡು ಲೋಹಗಳನ್ನು ಬಳಸುವುದರಿಂದ ಉದ್ಭವವಾಗಬಹುದಾಗಿದ್ದ ಅನಿರ್ದಿಷ್ಟತೆಯ ಅಂಶವನ್ನು ತೊಡೆದುಹಾಕಲಾಗಿತ್ತು ಎಂದು ಹೇಳಲಾಗಿತ್ತು. ವಿವಿಧ ಮಾನದಂಡಗಳನ್ನು ಬಳಸುವ ಎರಡು ರಾಷ್ಟ್ರಗಳಿಗಿಂತಲೂ, ಒಂದೇ ಲೋಹವನ್ನು ಬಳಸುವ ಎರಡು ದೇಶಗಳ ನಡುವಣ ವ್ಯಾಪಾರವನ್ನು ಅಷ್ಟೊಂದು ಅಪಾಯ ಮತ್ತು ಮುಜುಗರವಿಲ್ಲದೆ ನಡೆಸಬಹುದಾಗಿತ್ತು. ವಿವಿಧ ಮಾನದಂಡಗಳನ್ನು ಬಳಸುವ ಎರಡು ರಾಷ್ಟ್ರಗಳ ಬಗ್ಗೆ ಹೇಳುವುದಾದರೆ ಪ್ರತಿಯೊಂದು ವ್ಯವಹಾರದಲ್ಲೂ ಅನಿಶ್ಚಿತತೆ ಉಂಟಾಗುತ್ತಿತ್ತು ಹಾಗೂ ಯಾವುದರಲ್ಲಿ ವ್ಯಾಪಾರ ನಡೆಯುತ್ತಿತ್ತೋ ಆ ಆಡಳಿತಯಂತ್ರಕ್ಕೆ ಅಧಿಕ ವೆಚ್ಚ ತಗಲುತ್ತಿತು. ಭಾರತೀಯ ವ್ಯಾಪಾರ ಬೇರೆ ಕಡೆಗಳಿಗೆ[೨] ದಿಕ್ಕುತಪ್ಪಬಹುದಾಗಿತ್ತು ಮತ್ತು ಸಾಮಾನ್ಯ ಮಾನದಂಡ ಇರುವಂಥ ದೇಶಗಳ ಪರಿಸ್ಥಿತಿಯಲ್ಲಿನ ವ್ಯಾಪಾರ ಅನಿರ್ದಿಷ್ಟತೆಗಳಿಂದ ಅಭಾದಿತವಾಗಿತ್ತು ಎಂಬುದನ್ನು ಒಪ್ಪಿಕೊಳ್ಳಲಾಯಿತು. ವಾಣಿಜ್ಯದ ವಿಭಜನೆಯ ಭಾಗವಾಗಿ ಭಾರತೀಯ ಉತ್ಪಾದನೆಗೆ ತನ್ನ ಇಂಗ್ಲಿಷ್ ಪ್ರತಿಸ್ಪರ್ಧಿಯನ್ನು ಸಾಧ್ಯವಾದ ಮಟ್ಟಿಗೆ ಪೂರ್ವದ ಮಾರುಕಟ್ಟೆಗಳಿಂದ ಓಡಿಸಲು ಸಾಧ್ಯವಾದದ್ದು ಹೇಗೆ ಎಂಬುದಕ್ಕೆ ಯಾವ ಕಾರಣವೂ ಇದ್ದಿರಲಾರದು. (ನೋಡಿ. ಪಟ್ಟಿ XX)

ಅಂಥ ವ್ಯಾಪಾರ ಕ್ಷೋಭೆಗಳಿಗೆ ಕಾರಣವಾದಂಥ ಸಂಗತಿಗಳು ತೀವ್ರ ವಿವಾದದ ವಿಷಯಗಳಾದವು.[೩] ವಿವಾದದ ಅಂಶವೆಂದರೆ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಬದಲಾವಣೆಗಳನ್ನು ಆ ಕಾಲದ ಆರ್ಥಿಕ ಕ್ಷೋಭೆಗಳಿಗೆ ಅನ್ವಯಿಸಬೇಕೇ ಎಂಬುದು. ಹೌದು ಎಂಬ ಅಭಿಪ್ರಾಯ ಹೊಂದಿದ್ದವರು ವಿನಿಮಯದ ಪತನ ಭಾರತೀಯ ಉತ್ಪಾದಕನಿಗೆ ಕೈತುಂಬ ಲಾಭ ತಂದರೆ ಇಂಗ್ಲಿಷ್ ಉತ್ಪಾದಕನಿಗೆ ಒಂದು ಬಗೆಯ ಶಿಕ್ಷೆಯನ್ನು ವಿಧಿಸಿತು ಎಂಬುದಾಗಿ ವಾದಿಸಿದರು. ಅಂತರರಾಷ್ಟ್ರೀಯ ವಾಣಿಜ್ಯ ಕ್ಷೇತ್ರದಲ್ಲಿ ಬೇರೂರಿದ್ದ ಸ್ಪರ್ಧಿಗಳ ಸ್ಥಾನವನ್ನು ಸ್ಥಳಾಂತರಿಸಲು ಕಾರಣವಾಯಿತೆಂದು ಹೇಳಲಾದ ಈ ಸಮೃದ್ಧಿಯ ಅಸ್ತಿತ್ವ ಸರಳ ಲೆಕ್ಕಾಚಾರದ ಮೇಲೆ ಅವಲಂಬಿತವಾಗಿತ್ತು. ಬೆಳ್ಳಿಯ ಮೌಲ್ಯ ಚಿನ್ನದಲ್ಲಿ ಕುಸಿತವಾದಲ್ಲಿ ಭಾರತೀಯ ನಿರ್ಯಾತಗಾರನಿಗೆ ತನ್ನ ಉತ್ಪಾದನೆಗೆ ಹೆಚ್ಚು ಬೆಲೆ ದೊರಕುತ್ತಿತ್ತು. ಹಾಗಾಗಿ ಅವನ ಸ್ಥಿತಿ ಚೆನ್ನಾಗಿತ್ತು. ಆದರೆ ಅದೇ ಕಾರಣಕ್ಕಾಗಿ ಇಂಗ್ಲಿಷ್ ಉತ್ಪಾದಕನಿಗೆ ಕಡಿಮೆ ಸವರನ್ನುಗಳು ಸಿಕ್ಕುತ್ತಿದ್ದವು. ಅದರಿಂದ ಅವನ ಸ್ಥಿತಿ ಚೆನ್ನಾಗಿರಲಿಲ್ಲ.

---

೧. ನೋಡಿ : ಚಿನ್ನ ಮತ್ತು ಬೆಳ್ಳಿಗೆ ಸಂಬಂಧಿಸಿದ ರಾಯಲ್ ಕಮಿಷನ್ನಿನ ಅಂತಿಮ ವರದಿ. ಪ್ಯಾರಾ ೯೯–೧೦೧, ವಾದದ ಸಂಗ್ರಹ.

೨. ಈ ಅವಧಿಯಲ್ಲಿನ ಭಾರತೀಯ ವ್ಯಾಪಾರ ಹಂಚಿಕೆಯನ್ನು ಪಟ್ಟಿ XXರಲ್ಲಿ ತೋರಿಸಲಾಗಿದೆ.

೩. ಚಿನ್ನ ಮತ್ತು ಬೆಳ್ಳಿಗಳಿಗೆ ಸಂಬಂಧಿಸಿದಂತೆ ರಾಯಲ್ ಆಯೋಗದ ಮುಂದೆ ಪ್ರಾಧ್ಯಾಪಕರಾದ ಮಾರ್ಷಲ್ ಮತ್ತು ನಿಕಲ್‌ಸನ್‌ರವರು ನೀಡಿದ ಸಾಕ್ಷಿ ಮತ್ತು ಮನವಿಗಳನ್ನು ನೋಡಿ. ಹಾಗೆಯೇ 'ಇಕನಾಮಿಕಲ್ ಜರ್ನಲ್'ನಲ್ಲಿನ (ಸಂ. V. ೧೮೯೫) 'ದಿ ಅಜಿಯೋ ಆನ್ ಗೋಲ್ಡ್ ಅಂಡ್‌ಇಂಟರ್‌ನ್ಯಾಷನಲ್ ಟ್ರೇಡ್' ಎಂಬ ಬಗ್ಗೆ ಪ್ರಾಧ್ಯಾಪಕ ಲೆಕ್ಸಿಸ್ ಅವರ ಲೇಖನ ನೋಡಿ.

## ಪಟ್ಟಿ XX
## ಪೂರ್ವ ದೇಶದ ಮಾರುಕಟ್ಟೆಗಳಿಗೆ ಹತ್ತಿ ವಸ್ತುಗಳ ನಿರ್ಯಾತಗಳು

| ವರ್ಷಗಳು | ನೂಲು, ಪೌಂಡ್‌ಗಳಲ್ಲಿ, (೦೦೦ ಬಿಡಲಾಗಿದೆ) | | ಬಿಡಿ ವಸ್ತುಗಳು, ಗಜಗಳಲ್ಲಿ (೦೦೦ ಬಿಡಲಾಗಿದೆ) | |
|---|---|---|---|---|
| | ಭಾರತದಿಂದ | ಬ್ರಿಟನ್ನಿನಿಂದ | ಭಾರತದಿಂದ | ಬ್ರಿಟನ್ನಿನಿಂದ |
| ೧೮೭೭ | ೭,೯೨೭ | ೩೩,೦೮೬ | ೧೫,೫೪೪ | ೩೯೪,೪೮೯ |
| ೧೮೭೮ | ೧೫,೬೦೦ | ೩೬,೪೬೭ | ೧೭,೫೪೫ | ೩೮೨,೩೩೦ |
| ೧೮೭೯ | ೨೧,೩೩೨ | ೩೮,೯೫೧ | ೨೨,೫೧೭ | ೫೨೩,೯೨೧ |
| ೧೮೮೦ | ೨೫,೮೬೨ | ೪೬,೪೨೬ | ೨೫,೮೦೦ | ೫೦೯,೦೯೯ |
| ೧೮೮೧ | ೨೬,೯೦೧ | ೪೭,೪೭೯ | ೩೦,೪೨೪ | ೫೮೭,೧೭೭ |
| ೧೮೮೨ | ೩೦,೭೮೬ | ೩೪,೩೭೦ | ೨೯,೯೧೧ | ೪೫೪,೯೪೮ |
| ೧೮೮೩ | ೪೫,೩೭೮ | ೩೩,೪೯೯ | ೪೧,೫೩೪ | ೪೧೫,೯೫೬ |
| ೧೮೮೪ | ೪೯,೮೭೭ | ೩೮,೮೫೬ | ೫೫,೫೬೫ | ೪೩೯,೯೩೭ |
| ೧೮೮೫ | ೬೫,೮೯೭ | ೩೩,೦೬೧ | ೪೭,೯೦೯ | ೫೬೨,೩೩೯ |
| ೧೮೮೬ | ೭೮,೨೪೨ | ೨೬,೯೨೪ | ೫೧,೫೭೮ | ೪೯೦,೪೫೧ |
| ೧೮೮೭ | ೯೧,೮೦೪ | ೩೫,೩೫೪ | ೫೩,೪೦೬ | ೬೧೮,೧೪೬ |
| ೧೮೮೮ | ೧೧೩,೪೫೧ | ೪೪,೬೪೩ | ೬೯,೪೮೬ | ೬೫೨,೪೦೪ |
| ೧೮೮೯ | ೧೨೮,೯೦೭ | ೩೫,೭೨೦ | ೭೦,೨೬೫ | ೫೫೭,೦೦೪ |
| ೧೮೯೦ | ೧೪೧,೯೫೦ | ೩೭,೮೬೯ | ೫೯,೪೯೬ | ೬೩೩,೬೦೬ |
| ೧೮೯೧ | ೧೬೯,೨೫೩ | ೨೭,೯೭೧ | ೬೭,೬೬೬ | ೫೯೫,೨೫೮ |

## ಭಾರತೀಯ ವಾಣಿಜ್ಯದ ಹಂಚಿಕೆ
## ಪ್ರತಿ ವರ್ಷ ಪಂಚಕಕ್ಕೆ ಹತ್ತು ಲಕ್ಷ ರೂ.ಗಳಲ್ಲಿ ವಾರ್ಷಿಕ ಸರಾಸರಿ

| ವರ್ಷಗಳು | ೧೮೭೫-೭೬ ರಿಂದ ೧೮೭೯-೮೦ | | | ೧೮೮೦-೮೧ ರಿಂದ ೧೮೮೪-೮೫ | | |
|---|---|---|---|---|---|---|
| | ಆಯಾತ | ನಿರ್ಯಾತ | ಒಟ್ಟು | ಆಯಾತ | ನಿರ್ಯಾತ | ಒಟ್ಟು |
| ಬ್ರಿಟನ್ | ೩೨೩.೬೮ | ೨೭೮.೧೫ | ೬೦೧.೮೩ | ೪೩೪.೪೫ | ೩೪೪.೨೨ | ೭೭೮.೬೭ |
| ಚೀನಾ | ೧೪.೦೫ | ೧೩೨.೨೭ | ೧೪೬.೩೨ | ೧೯.೨೩ | ೧೩೪.೯೪ | ೧೫೪.೧೭ |
| ಜಪಾನ್ | ೦.೦೨ | ೦.೩೩ | .೩೫ | .೧೯ | ೨.೦೯ | ೨.೨೮ |
| ಸಿಲೋನ್ | ೫.೭೪ | ೨೨.೯೭ | ೨೮.೭೧ | ೫.೩೫ | ೧೬.೩೭ | ೨೧.೭೨ |
| ಖಾರಿವಸಾಹತುಗಳು | ೧೦.೮೩ | ೨೬.೧೧ | ೩೬.೯೪ | ೧೫.೮೮ | ೩೩.೬೫ | ೪೯.೫೩ |

## ಪ್ರತಿ ವರ್ಷ ಪಂಚಕಕ್ಕೆ ಹತ್ತು ಲಕ್ಷ ರೂ.ಗಳಲ್ಲಿ ವಾರ್ಷಿಕ ಸರಾಸರಿ

| ವರ್ಷಗಳು | ೧೮೮೫-೮೬ ರಿಂದ ೧೮೮೯-೯೦ | | | ೧೮೯೦-೯೧ ರಿಂದ ೧೮೯೪-೯೫ | | |
|---|---|---|---|---|---|---|
| | ಆಯಾತ | ನಿರ್ಯಾತ | ಒಟ್ಟು | ಆಯಾತ | ನಿರ್ಯಾತ | ಒಟ್ಟು |
| ಬ್ರಿಟನ್ | ೫೧೦.೪೭ | ೩೬೦.೫೯ | ೮೭೧.೦೬ | ೫೨೬.೨೪ | ೩೩೮.೪೦ | ೮೬೪.೬೪ |
| ಚೀನಾ | ೨೧.೬೪ | ೧೩೪.೫೪ | ೧೫೬.೧೮ | ೨೮.೬೯ | ೧೩೩.೩೦ | ೧೬೧.೯೦ |
| ಜಪಾನ್ | .೨೫ | ೭.೨೭ | ೭.೫೨ | ೧.೫೧ | ೧೪.೪೪ | ೧೫.೯೫ |
| ಸಿಲೋನ್ | ೫.೮೬ | ೨೦.೫೬ | ೨೬.೪೨ | ೬.೪೨ | ೩೧.೧೮ | ೩೭.೬೦ |
| ಖಾರಿವಸಾಹತುಗಳು | ೨೦.೦೯ | ೪೨.೫೪ | ೬೨.೬೩ | ೨೩.೩೨ | ೫೨.೫೬ | ೭೫.೮೮ |

ಇದನ್ನು ಸ್ಪಷ್ಟವಾಗಿ ಹೇಳಬೇಕೆಂದರೆ, ವಿನಿಮಯದರದ ಕುಸಿತದಿಂದ ಭಾರತೀಯ ನಿರ್ಯಾತದಾರರಿಗೆ ಲಾಭವೂ ಇಂಗ್ಲಿಷ್ ನಿರ್ಯಾತದಾರರಿಗೆ ಶಿಕ್ಷೆಯೂ ಆಯಿತೆಂಬ ವಾದ ಗಣಿತದ ನಿಯಮದ ತೀರ್ಮಾನವಾದಂತಾಗುತ್ತದೆ. ಆ ಕಾಲದ ವಾಣಿಜ್ಯ ಮತ್ತು ಔದ್ಯಮಿಕ ಪರಿಸ್ಥಿತಿಯ ಮೇಲೆ ಅದರ ಪರಿಣಾಮವೇನು ಎಂಬ ಬಗ್ಗೆ ಪ್ರಮುಖ ತೀರ್ಮಾನಗಳನ್ನು ಮಾಡುವಷ್ಟರಮಟ್ಟಿಗೆ ಈ ಸೂತ್ರಗಳು ಸ್ವತಸ್ಸಿದ್ಧವಾಗಿವೆ ಎಂದು ಅದನ್ನು ನಿರೂಪಿಸಿದ್ದವರು ಹೇಳುತ್ತಿದ್ದರು. ಅಂಥ ಒಂದು ತೀರ್ಮಾನವೆಂದರೆ ಬೆಳ್ಳಿಯನ್ನು ಬಳಸುವ ದೇಶಗಳಿಂದ ನಿರ್ಯಾತಗಳಿಗೆ ಚೈತನ್ಯವುಂಟಾಯಿತು ಹಾಗೂ ಆಯಾತಗಳಿಗೆ ತೊಂದರೆಯಾಯಿತು ಎನ್ನುವುದು. ಎರಡನೆಯ ತೀರ್ಮಾನವೆಂದರೆ ವಿನಿಮಯದ ಕುಸಿತವು ಬೆಳ್ಳಿ ಬಳಸುವ ದೇಶಗಳಲ್ಲಿನ ತಮ್ಮ ಪ್ರತಿಸ್ಪರ್ಧಿಗಳನ್ನು ಎದುರಿಸುವಲ್ಲಿ ಇಂಗ್ಲಿಷ್ ಉತ್ಪಾದಕರು ವಿಫಲರಾದದ್ದು. ವಿನಿಮಯ ದರದಲ್ಲಿ ಕುಸಿತವುಂಟಾದ್ದರಿಂದ ಅಂಥ ಫಲಿತಾಂಶಗಳು ಉಂಟಾದವು ಎಂದು ಈಗ ಹೇಳಲು ಸಾಧ್ಯವೇ? ವಿನಿಮಯದರದ ಕುಸಿತ ಎಂಬ ಸಾಮಾನ್ಯ ಹೇಳಿಕೆಯನ್ನೇ ನಂಬುವುದಾದರೆ ಹಾಗೂ ಮೇಲಿನ ತೀರ್ಮಾನಗಳಿಗೆ ಬರಲು ಬೆಳ್ಳಿಯ ಯಾವ ದರದಿಂದ ಚಿನ್ನದ ದರ ನಿರ್ಧಾರವಾಯಿತು ಎಂಬುದು ಗ್ರಾಹ್ಯವಲ್ಲ. ಚಿನ್ನ ಮತ್ತು ಬೆಳ್ಳಿಗಳ ನಡುವಣ ಪ್ರಮಾಣ ಚಿನ್ನದ ದರಗಳ ಮತ್ತು ಬೆಳ್ಳಿಯ ದರಗಳ ನಡುವಣ ವಿಲೋಮ ಪ್ರಮಾಣವೆಂದು ತೆಗೆದುಕೊಂಡಾಗಲೇ ಅದು ಪ್ರಶ್ನಾತೀತ ಸೂಚನೆಯಾಗುತ್ತದೆ. ಹಾಗಾಗಿ ಚಿನ್ನದ ದರದಲ್ಲಿ ಬೆಳ್ಳಿಯ ಮೌಲ್ಯ ಕುಸಿದಿದ್ದರೆ ಚಿನ್ನದಲ್ಲಿ ಅಳೆಯಲಾಗುತ್ತಿದ್ದ ಇಂಗ್ಲಿಷ್ ಬೆಲೆಗಳ ಕುಸಿತದ ಸಾಮಾನ್ಯ ಘಟನೆಯಾಗಿ ಅದು ಕಾಣಿಸುತ್ತದೆ. ಭಾರತೀಯ ದರಗಳಲ್ಲಿ ಉಂಟಾದ ಹೆಚ್ಚಳ ಅಳತೆಮಾನದಿಂದಾದದ್ದು. ವಿನಿಮಯದರದ ಕುಸಿತದ ಬಗ್ಗೆ ಅಂಥ ವ್ಯಾಖ್ಯೆಯನ್ನು ಹೇಳಿದಲ್ಲಿ, ಅದು ಹೇಗೆ ನಿರ್ಯಾತಗಳಲ್ಲಿ ಹೆಚ್ಚಳವನ್ನು ಮತ್ತು ಆಯಾತಗಳಲ್ಲಿ ಕೊರತೆಯನ್ನು ಉಂಟುಮಾಡಲು ಸಹಾಯಕವಾಯಿತು ಎಂಬುದನ್ನು ಅರ್ಥ ಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಅಂತರರಾಷ್ಟ್ರೀಯ ವಾಣಿಜ್ಯ ಪರಸ್ಪರ ಲಾಭಗಳ ಮೇಲೆ ಅವಲಂಬಿತವಾಗಿದೆ. ಈ ಲಾಭಗಳು ಒಂದು ರಾಷ್ಟ್ರದಿಂದ ಮತ್ತೊಂದು ರಾಷ್ಟ್ರಕ್ಕೆ ಉಂಟಾಗುತ್ತವೆ. ಈ ವಾಣಿಜ್ಯ ಯಾವ ಷರತ್ತುಗಳ ಮೇಲೆ ನಡೆಯುತ್ತದೆ ಎಂದರೆ ದೇಶಗಳಿಗೆ ಆಯಾತವಾಗುವ ವಸ್ತುಗಳ ತೌಲನಿಕ ವೆಚ್ಚದ ಮೇಲೆ ಅವಲಂಬಿತವಾಗಿರುತ್ತದೆ. ಹಾಗಾಗಿ, ಈ ವಸ್ತುಗಳ ತೌಲನಿಕ ವೆಚ್ಚದಲ್ಲಿನ ಬದಲಾವಣೆಗಳ ಪರಿಣಾಮದ ಹೊರತಾಗಿ ಎರಡು ರಾಷ್ಟ್ರಗಳ ನಡುವೆ ನಡೆಯುವ ವಾಣಿಜ್ಯದ ನಿಜವಾದ

ಅರ್ಥದಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ. ಎಲ್ಲ ಕಡೆಗಳಲ್ಲೂ ಚಿನ್ನದ ಬೆಲೆಗಳಲ್ಲಿ ಕುಸಿತವಾದಾಗ, ಎಲ್ಲ ಕಡೆಗಳಲ್ಲೂ ಬೆಳ್ಳಿಯ ಬೆಲೆಗಳು ಏರಿದಾಗ, ಆರ್ಥಿಕ ಪ್ರಕ್ಷುಬ್ಧತೆಯೇನೂ ಇರುವುದಿಲ್ಲ. ಇದರಿಂದಾಗಿ ಭಾರತಕ್ಕೆ ತನ್ನ ನಿರ್ಯಾತ ಹೆಚ್ಚಿಸಿಕೊಳ್ಳಲು ಸಹಾಯವಾಯಿತು ಎನ್ನುವುದರಲ್ಲಿ ಅರ್ಥವಿಲ್ಲ. ಬದಲಿಗೆ, ಭಾರತಕ್ಕೆ ತನ್ನ ನಿರ್ಯಾತವನ್ನು ಕಡಿಮೆ ಮಾಡಿಕೊಳ್ಳುವ ಇಲ್ಲವೆ ಬೇರೆ ಯಾವುದನ್ನೋ ಆಯಾತ ಮಾಡಿಕೊಳ್ಳಲು ಅವಕಾಶವಾಯಿತು. ವಿನಿಮಯದರದ ಕುಸಿತದ ಪ್ರಶ್ನೆಯು ಅದೇ ಅಭಿಪ್ರಾಯದಿಂದ ಅಂಥ ಪ್ರಕ್ಷುಬ್ಧತೆ ಒಂದು ವಾಣಿಜ್ಯವನ್ನು ಬೇರೊಂದಕ್ಕಿಂತ ಮಿಗಿಲಾಗಿ ಕುಗ್ಗಿಸಲಾರದು. ವಿನಿಮಯದರದಲ್ಲಿ ಕುಸಿತ ಇಲ್ಲವೆ ಹೆಚ್ಚಳ ಉಂಟಾದಲ್ಲಿ ಅದು ಸಾಮಾನ್ಯ ದರಗಳ ಮಟ್ಟವನ್ನು ಕುರಿತು ಹೇಳಿದ್ದಾದಲ್ಲಿ ಇತರ ಎಲ್ಲ ವಸ್ತುಗಳನ್ನು ಉತ್ಪಾದಿಸುವವರ ಮೇಲೂ ಇದು ಪರಿಣಾಮವನ್ನುಂಟು ಮಾಡುತ್ತಿತ್ತು. ವಿನಿಮಯ ದರದ ಕುಸಿತದಿಂದ ಚಾಕು ಚೂರಿ ವ್ಯಾಪಾರಕ್ಕಿಂತ ಹತ್ತಿ ವ್ಯಾಪಾರ ಇಲ್ಲವೆ ಗೋಧಿ ವ್ಯಾಪಾರದ ಮೇಲೆ ಹೆಚ್ಚಾಗಿ ಏಕೆ ಪರಿಣಾಮ ಬೀರದಿರಬಾರದು ಎಂದು ಹೇಳಬೇಕಾಗುತ್ತದೆ.

ಯಾವುದೇ ನಿರ್ದಿಷ್ಟ ವಸ್ತುಗಳ ವಿಷಯದಲ್ಲಾಗಲೀ ಇಲ್ಲವೆ ಸಾಮಾನ್ಯ ವಿಷಯದಲ್ಲಾಗಲೀ ಈಗಿರುವ ವಾಣಿಜ್ಯ ಸಂಬಂಧಗಳನ್ನು ತೆಗೆದುಹಾಕಲು ವಿನಿಮಯದಲ್ಲಿ ಯಾವುದೇ ತೊಂದರೆಯಿಲ್ಲದಿರುವಾಗ ಅದರಿಂದ ಭಾರತೀಯ ಉತ್ಪಾದಕನಿಗೆ ಲಾಭವಾಗುವುದೆಂದಾಗಲೀ ಇಂಗ್ಲಿಷ್ ಉತ್ಪಾದಕನಿಗೆ ಹಾನಿಯುಂಟಾಗುವುದೆಂದಾಗಲೀ ಹೇಳುವುದರಲ್ಲಿ ಅರ್ಥವಿಲ್ಲ. ವಿನಿಮಯವು ಎರಡು ಬೆಲೆಗಳ ದರಗಳ ಪ್ರಮಾಣವೆಂದು ಅಂಗೀಕರಿಸಿದರೂ ಹೆಚ್ಚಿನ ಕೊಳ್ಳುವಿಕೆಯ ಶಕ್ತಿಯನ್ನುಳ್ಳ ಸ್ವಲ್ಪಮಟ್ಟಿನ ಸವರನ್ನುಗಳನ್ನು ಹೊಂದಿರುವ ಇಂಗ್ಲಿಷ್ ಉತ್ಪಾದಕ ಕಡಿಮೆ ಕೊಳ್ಳುವಿಕೆಯ ಶಕ್ತಿಯನ್ನು ಹೊಂದಿದ್ದು ಸ್ವಲ್ಪ ಜಾಸ್ತಿ ರೂಪಾಯಿಗಳನ್ನು ಗಳಿಸಿದ ಎಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟವಾಗುತ್ತದೆ. ಪ್ರೊಫೆಸರ್ ಮಾರ್ಷಲ್ ಕೊಡುವ ಹೋಲಿಕೆ ಬಹಳ ಸರಿಯಾಗಿದೆ. ವಿನಿಮಯದರದಲ್ಲಿನ ಕುಸಿತದಿಂದ ಮೊದಲನೆಯವರಿಗೆ ನಷ್ಟ. ಎರಡನೆಯವರಿಗೆ ಲಾಭವಾಗುತ್ತದೆಂದು ಊಹಿಸಿದರೆ ಅದು ಹತ್ತು ಅಡಿ ಎತ್ತರದ ಹಡಗಿನ ಕ್ಯಾಬಿನ್ ಒಳಗೆ ವ್ಯಕ್ತಿಯೊಬ್ಬನಿದ್ದರೆ ಆ ಹಡಗು ಸಮುದ್ರದ ಅಲೆಗಳ ನಡುವಣ ಕುಣಿಯಲ್ಲಿ ಹನ್ನೆರಡು ಅಡಿ ಒಳಗೆ ಮುಳುಗಿದಲ್ಲಿ, ಅವನ ತಲೆ ಒಡೆದುಹೋಗುತ್ತದೆ ಎಂದು ಹೇಳಿದಂತಾಗುತ್ತದೆ. ವ್ಯಕ್ತಿಯನ್ನು ಹಡಗಿನಿಂದ ಬೇರೆ ಎಂದು ಹೇಳುವ ಭ್ರಮೆಯಂತಾಗುತ್ತದೆ. ವಾಸ್ತವವಾಗಿ ಆ ಒಂದೇ ಶಕ್ತಿ ಹಡಗು ಮತ್ತು ಪ್ರಯಾಣಿಕನ ಮೇಲೆ ಏಕಕಾಲದಲ್ಲೇ ಕಾರ್ಯೋನ್ಮುಖವಾಗಿ ಎರಡರಲ್ಲೂ ಒಂದೇ ಚಲನೆಯನ್ನು ಉಂಟುಮಾಡುತ್ತದೆ. ಅದೇ ರೀತಿ, ಆ ಒಂದು ಶಕ್ತಿಯೇ ಭಾರತೀಯ ಉತ್ಪಾದಕನ ಮೇಲೂ ಮತ್ತು ಇಂಗ್ಲಿಷ್ ಉತ್ಪಾದಕನ ಮೇಲೂ ಕೆಲಸಮಾಡಿದೆ. ಏಕೆಂದರೆ ವಿನಿಮಯದರದಲ್ಲಿನ ಬದಲಾವಣೆ, ಎರಡೂ ದೇಶಗಳಲ್ಲಿನ ಸಾಮಾನ್ಯ ಬೆಲೆಮಟ್ಟಗಳಲ್ಲಿನ ತೀವ್ರ ಬದಲಾವಣೆಯ ಅಂಗವಾಗಿದೆ. ಹಾಗಾಗಿ ಇಂಗ್ಲಿಷ್ ಮತ್ತು ಭಾರತೀಯ ಉತ್ಪಾದಕನ ಸ್ಥಿತಿ ಚೆನ್ನಾಗಿಯೇ ಇರುತ್ತದೆ ಇಲ್ಲವೆ ಕೆಟ್ಟುಹೋಗಿರುತ್ತದೆ. ಒಂದೇ ಒಂದು ವ್ಯತ್ಯಾಸವೆಂದರೆ ತನ್ನ ವ್ಯವಹಾರಗಳನ್ನು ಇಂಗ್ಲಿಷಿನವರು ಕೆಲವೇ ದೇಶಗಳೊಂದಿಗೆ ಕೈಗೊಂಡರೆ ಭಾರತೀಯನು ಬಹಳ ದೇಶಗಳೊಂದಿಗೆ ವ್ಯವಹಾರಗಳನ್ನು ಇಟ್ಟುಕೊಂಡಿರುತ್ತಾನೆ.

ಚಿನ್ನದ ಮೌಲ್ಯಾರ್ಥದಲ್ಲಿ ಇಂಗ್ಲೆಂಡಿನ ಬೆಳ್ಳಿಯ ಕುಸಿತವು, ಭಾರತದಲ್ಲಿ ವಸ್ತುಗಳ ಮೌಲ್ಯಾರ್ಥದಲ್ಲಿನ ಬೆಳ್ಳಿಯ ಕುಸಿತಕ್ಕಿಂತ ಹೆಚ್ಚಾಗಿದ್ದಲ್ಲಿ ಆಗ ಭಾರತೀಯ ಉತ್ಪಾದಕನಿಗೆ ಲಾಭವೂ ಇಂಗ್ಲಿಷ್ ಉತ್ಪಾದಕನಿಗೆ ನಷ್ಟವೂ ಆಗಿರುತ್ತಿತ್ತು. ಹಾಗೇನಾದರೂ ಆಗಿದ್ದಲ್ಲಿ ಭಾರತೀಯ ಉತ್ಪಾದಕ ಇಂಗ್ಲೆಂಡಿನಲ್ಲಿ ತನ್ನ ಪದಾರ್ಥಗಳನ್ನು ಬೆಳ್ಳಿಗೆ ಬದಲಾಯಿಸಿಕೊಂಡು ಸ್ಪಷ್ಟವಾದ ಲಾಭ ಪಡೆಯುತ್ತಿದ್ದ. ಹಾಗಾಗಿ ಅವನು ಗಳಿಸಿಕೊಂಡ ಮಾಧ್ಯಮ

## ಪಟ್ಟಿ XXI ಭಾರತ ಮತ್ತು ಇಂಗ್ಲೆಂಡಗಳು ನಡುವೆ ಬೆಲೆಗಳು,ಮಜೂರಿಗಳು ಮತ್ತು ಬೆಳ್ಳಿಯ ಚಲನೆಗಳು*

| ಭಾರತಕ್ಕೆ ಬೆಳ್ಳಿಯ ನಿವ್ವಳ ಆಮದು | | ಚಿನ್ನದ ಬೆಲೆಯಲ್ಲಿ ಬೆಳ್ಳಿಯ ಸೂಚ್ಯಂಕ | ವರ್ಷಗಳು | ಭಾರತದಲ್ಲಿ ಬೆಳ್ಳಿಯ ಬೆಲೆಗಳಲ್ಲಿ ವಸ್ತುಗಳ ಬೆಲೆಯ ಸೂಚ್ಯಂಕಗಳು | ಭಾರತದಲ್ಲಿ ಮಜೂರಿಗಾಗಿ ಸೂಚ್ಯಂಕಗಳು | ಇಂಗ್ಲೆಂಡಿನಲ್ಲಿ ವಸ್ತುಗಳಿಗಾಗಿ ಚಿನ್ನದ ಸೂಚ್ಯಂಕ | ಇಂಗ್ಲೆಂಡಿನಲ್ಲಿ ಮಜೂರಿಗಾಗಿ ಸೂಚ್ಯಂಕ |
|---|---|---|---|---|---|---|---|
| ವರ್ಷಗಳು | ರೂ. | | | | | | |
| ೧೮೭೧-೭೨ | ೬,೫೮೭,೨೯೬ | ೯೯.೭ | ೧೯೭೧ | ೧೦೦ | – | ೧೦೦ | ೧೦೦ |
| ೧೮೭೨-೭೩ | ೭೩೯,೨೪೪ | ೯೯.೨ | ೧೮೭೨ | ೧೦೫ | – | ೧೦೯ | ೧೦೫.೮ |
| ೧೮೭೩-೭೪ | ೨,೫೩೦,೮೨೪ | ೯೭.೪ | ೧೮೭೩ | ೧೦೭ | ೧೦೦ | ೧೧೧ | ೧೧೨ |
| ೨೮೭೪-೭೫ | ೪,೬೭೪,೭೯೧ | ೯೫.೮ | ೧೮೭೪ | ೧೧೬ | ೧೦೧ | ೧೦೨ | ೧೧೩ |
| ೧೮೭೫-೭೬ | ೧,೬೪೦,೪೪೫ | ೯೩.೩ | ೧೮೭೫ | ೧೦೩ | ೯೭ | ೯೬ | ೧೧೧.೬ |
| ೧೮೭೬-೭೭ | ೭,೨೮೬,೧೮೮ | ೮೬.೪ | ೧೮೭೬ | ೧೦೭ | ೯೮ | ೯೫ | ೧೧೦ |
| ೧೮೭೭-೭೮ | ೧೪,೭೩೨,೧೯೪ | ೯೦.೨ | ೧೮೭೭ | ೧೩೮ | ೯೭ | ೯೪ | ೧೦೯.೮ |
| ೧೮೭೮-೭೯ | ೪,೦೫೭,೩೭೭ | ೮೬.೪ | ೧೮೭೮ | ೧೪೮ | ೯೯ | ೮೭ | ೧೦೭ |
| ೧೮೭೯-೮೦ | ೭,೯೭೬,೦೬೩ | ೮೪.೨ | ೧೮೭೯ | ೧೩೫ | ೧೦೦ | ೮೩ | ೧೦೫.೮ |
| ೧೮೮೦-೮೧ | ೩,೯೨೩,೬೧೨ | ೮೫.೯ | ೧೮೮೦ | ೧೧೭ | ೯೯ | ೮೮ | ೧೦೬.೫ |
| ೧೮೮೧-೮೨ | ೫,೩೮೧,೪೧೦ | ೮೫.೦ | ೧೮೮೧ | ೧೦೬ | ೯೯ | ೮೫ | ೧೦೬.೫ |
| ೧೮೮೨-೮೩ | ೭,೫೪೧,೪೨೭ | ೮೪.೯ | ೧೮೮೨ | ೧೦೫ | ೧೦೦ | ೮೪ | ೧೦೬.೫ |
| ೧೮೮೩-೮೪ | ೬,೪೩೩,೮೮೬ | ೮೩.೧ | ೧೮೮೩ | ೧೦೬ | ೧೦೨ | ೮೨ | ೧೦೮ |
| ೧೮೮೪-೮೫ | ೭,೩೧೯,೫೮೧ | ೮೩.೩ | ೧೮೮೪ | ೧೧೪ | ೧೦೧ | ೭೬ | ೧೦೯ |
| ೧೮೮೫-೮೬ | ೧೧,೬೨೭,೦೨೮ | ೭೯.೯ | ೧೮೮೫ | ೧೧೩ | ೧೦೬ | ೭೨ | ೧೦೮ |
| ೧೮೮೬-೮೭ | ೭,೧೯೧,೭೪೩ | ೭೪.೬ | ೧೮೮೬ | ೧೧೦ | ೧೦೫ | ೬೯ | ೧೦೭ |
| ೧೮೮೭-೮೮ | ೯,೫೧೯,೪೨೧ | ೭೩.೩ | ೧೮೮೭ | ೧೧೧ | ೧೧೪ | ೬೮ | ೧೦೮ |
| ೧೮೮೮-೮೯ | ೯,೩೨೭,೫೨೯ | ೭೦.೪ | ೧೮೮೮ | ೧೧೯ | ೧೧೨ | ೭೦ | ೧೦೯.೮ |
| ೧೮೮೯-೯೦ | ೧೧,೦೦೨,೦೭೮ | ೭೦.೨ | ೧೮೮೯ | ೧೨೫ | ೧೧೨ | ೭೨ | ೧೧೩ |
| ೧೮೯೦-೯೧ | ೧೪,೨೧೧,೪೦೮ | ೭೮.೪ | ೧೮೯೦ | ೧೨೫ | ೧೧೩ | ೭೨ | ೧೧೮ |
| ೧೮೯೧-೯೨ | ೯,೧೬೫,೬೮೪ | ೭೪.೩ | ೧೮೯೧ | ೧೨೮ | ೧೧೮ | ೭೨ | ೧೧೮ |
| ೧೮೯೨-೯೩ | ೧೨,೮೯೩,೪೯೯ | ೬೫.೫ | ೧೮೯೨ | ೧೪೧ | ೧೧೦ | ೬೮ | ೧೧೭.೪ |
| ೧೮೯೩-೯೪ | ೧೩,೭೫೯,೨೭೩ | ೫೮.೫ | ೧೮೯೩ | ೧೩೮ | ೧೧೯ | ೬೮ | ೧೧೭.೪ |

ಕಾಲಂ(೨) ೧೮೯೮ರ ಐ.ಸಿ.ಸಿಯ ಎರಡನೆ ಪಟ್ಟಿಯ ಪರಿಶಿಷ್ಟ IIರದ್ದು. ಕಾಲಂಗಳು(೩)(೫)(೬) ಮತ್ತು(೭)–ಇವುಗಳು ಅಟ್‌ಕಿನ್‌ಸನ್‌ರವರ "ಭಾರತದಲ್ಲಿ ಬೆಳ್ಳಿ ಬೆಲೆಗಳು"ಎಂಬುದರಿಂದ ತೆಗೆದುಕೊಂಡದ್ದು. ಇದು ಮಾರ್ಚ್೧೮೯೭ರ 'ಜರ್ನಲ್ ಆಫ್ ದಿ ಸ್ಟ್ಯಾಟಿಸ್ಟಿಕಲ್ ಸೊಸೈಟಿ'ಯಲ್ಲಿ ಪ್ರಕಟವಾಗಿದೆ. ಕಾಲಂ(೮) ಡಬ್ಲ್ಯು.ಟಿ.ಲೇಟನ್ ರವರ "ಇಂಟ್ರಡಕ್ಷನ್ ಸ್ಟಡಿ ಆಫ್ ಪ್ರೈಸಸ್' (೧೯೧೨)ನಲ್ಲಿ ನೀಡಲಾದ ಅಂಕಿಅಂಶಗಳ ಮೇಲೆ ಆಧಾರಗೊಂಡಿದೆ. ಪಟ್ಟಿ I ಕಾಲಂ I ಪುಟ ೧೫೦ ಇದನ್ನು ೧೮೭೧ಕ್ಕೆ ೧೦೦ ಎಂಬುದಾಗಿ ಪುನರ್ ಶ್ರೇಣಿಗೊಳಿಸಲಾಗಿದೆ.

ಭಾರತದಲ್ಲಿ ವಸ್ತುಗಳ ಮೇಲೆ ಮತ್ತು ಸೇವೆಗಳ ಮೇಲೆ ಹೆಚ್ಚಿನ ಹತೋಟಿಯನ್ನು ಹೊಂದಿರುತ್ತಿದ್ದ. ಆದರೆ ಅಂಥ ಊಹೆಗೆ ಯಾವ ಆಧಾರವೂ ಇಲ್ಲ. ಸಾಮಾನ್ಯವಾಗಿ ವಸ್ತುಗಳ ಚಿನ್ನದ ಬೆಲೆಯಿಂದ ಏಕೆ ಬೆಳ್ಳಿಯ ಚಿನ್ನದ ಬೆಲೆ ಪ್ರತ್ಯೇಕ ದರದಲ್ಲಿ ಪತನಗೊಳ್ಳಬೇಕು ಎಂಬುದಕ್ಕೆ ಕಾರಣವಿಲ್ಲ ಅಥವಾ ಇಂಗ್ಲೆಂಡಿನಲ್ಲಿ ಮತ್ತು ಭಾರತದಲ್ಲಿ ಬೆಳ್ಳಿಯ ಬೆಲೆಗಳ ನಡುವೆ ಏಕೆ ಬಹಳ ವ್ಯತ್ಯಾಸವಿರಬೇಕು ಎಂಬುದಕ್ಕೆ ಕಾರಣವಿಲ್ಲ. ಅಂಥ ಊಹೆಗಳಿಗೆ ಆಧಾರವಿಲ್ಲವೆನ್ನುವುದನ್ನು ಅಂಕಿಅಂಶಗಳು ತೋರಿಸಿಕೊಡುತ್ತವೆ (ನೋಡಿ. ಪಟ್ಟಿ XXI).

ಬೆಳ್ಳಿಯ ಬೆಲೆಯು ಇತರ ಪದಾರ್ಥಗಳಿಗಿಂತ ಶೀಘ್ರದಲ್ಲಿ ಪತನಗೊಳ್ಳುತ್ತಿದ್ದರೆ ಹಾಗೂ ಭಾರತದಲ್ಲಿ ಬೆಳ್ಳಿಯ ಬೆಲೆ ಇಂಗ್ಲೆಂಡಿನಲ್ಲಿನ ಬೆಳ್ಳಿಯ ಬೆಲೆಗಿಂತ ಕಡಿಮೆಯಾಗಿದ್ದಲ್ಲಿ ಇಂಗ್ಲೆಂಡಿನಿಂದ ಭಾರತಕ್ಕೆ ಬೆಳ್ಳಿಯ ಒಳಹರಿವು ಗಣನೀಯವಾಗಿರುತ್ತಿತ್ತು. ಆದರೆ ನಿಜವಾದ ಸಂಗತಿಗಳೇನು? ಭಾರತಕ್ಕೆ ಬೆಳ್ಳಿಯ ಅತಿಯಾದ ಒಳಹರಿವೇನೂ ಇರಲಿಲ್ಲ, ಅಷ್ಟೇ ಅಲ್ಲ. ೧೮೭೧–೯೩ರ ಅವಧಿಯಲ್ಲಿ ಬೆಳ್ಳಿಯ ಆಯಾತ ಆ ಅವಧಿಗೆ ಇಪ್ಪತ್ತು ವರ್ಷಗಳ ಹಿಂದಿಗಿಂತಲೂ ಹೆಚ್ಚು ಕಡಿಮೆಯದಾಗಿತ್ತು.[೧] ಭಾರತದಲ್ಲಿನ ಬೆಳ್ಳಿಯ ಬೆಲೆಗಳು ಬೇರೆ ದೇಶಗಳಲ್ಲಿನ ಬೆಲೆಗಳಷ್ಟೇ ಇತ್ತು ಎಂಬುದನ್ನು ಇದು ತೋರಿಸುತ್ತದೆ. ಪರಿಣಾಮವಾಗಿ ಭಾರತೀಯ ಉತ್ಪಾದಕನಿಗೆ ತನ್ನ ವ್ಯಾಪಾರದಲ್ಲಿ ತುಂಬ ಲಾಭವಿತ್ತು ಎನ್ನುವುದರಲ್ಲಿ ಅರ್ಥವಿಲ್ಲ.

ಈ ಸಂಬಂಧವಾಗಿ ಇಷ್ಟೊಂದನ್ನು ಹೇಳಿದರೂ ಭಾರತೀಯ ಉತ್ಪಾದಕ ತಾನು ಹೆಚ್ಚು ಲಾಭ ಗಳಿಸಿದ್ದೇನೆ ಎಂದೆ ನಂಬಿಕೊಂಡಿದ್ದ. ಅಂಥ ಪರಿಸ್ಥಿತಿಯಿಂದಾಗಿ ಆತನು ಭಾರತೀಯ ನಾಣ್ಯದಲ್ಲಿ ಯಾವುದೇ ಸುಧಾರಣೆ ತರುವುದನ್ನು ಸಹಜವಾಗಿಯೇ ವಿರೋಧಿಸುತ್ತಿದ್ದ. ಏಕೆಂದರೆ ಸರ್ಕಾರ ಯಾವುದನ್ನು ಶಾಪವೆಂದು ಪರಿಗಣಿಸಿತ್ತೋ ಅದನ್ನು ಇವನು ವರವೆಂದು ಭಾವಿಸಿದ್ದ. ಆದರೆ ಭಾರತೀಯ ಉತ್ಪಾದಕನ ಅಭಿಪ್ರಾಯವೇನೇ ಇರಲಿ, ಈ ಲಾಭ ನಿರ್ಯಾತ ವ್ಯಾಪಾರದಿಂದ ಬಂದದ್ದು ಎಂಬ ಸಾಮಾನ್ಯ ಅಭಿಪ್ರಾಯವಿಲ್ಲದೇ ಹೋಗಿದ್ದಲ್ಲಿ ಅದರ ಬಗ್ಗೆ ಹೆಚ್ಚು ಸಹಾನುಭೂತಿಯುಂಟಾಗುತ್ತಿರಲಿಲ್ಲ. ಹಾಗಾಗಿ ವಿನಿಮಯದರದಲ್ಲಿನ ಕುಸಿತ ಇಡೀ ರಾಷ್ಟ್ರಕ್ಕೆ ಒಂದು ಬಗೆಯ ಲಾಭವೆಂದು ಎಲ್ಲರೂ ನಂಬುವಂತಾಯಿತು. ನಿರ್ಯಾತ ವ್ಯಾಪಾರದಿಂದ ಲಾಭ ಉಂಟಾಯಿತು ಎಂಬುದು ನಿಜವೇ? ಹಾಗಿದ್ದಿದ್ದರೆ, ವಿನಿಮಯದರದಲ್ಲಿ ಪ್ರತಿಬಾರಿ ಕುಸಿತವಾದಾಗಲೂ ಅದರಿಂದ ಲಾಭ ಉಂಟಾಗಬೇಕಿತ್ತು. ಯುರೋಪಿನಲ್ಲಿ ಬೆಳ್ಳಿಯ ಬೆಲೆ ಇಳಿತಗೊಳ್ಳುವುದಕ್ಕಿಂತ ಮುಂಚಿತವಾಗಿ ಒಂದುವೇಳೆ ಭಾರತದಲ್ಲಿ ಅದು ಇಳಿದುಹೋಗಿತ್ತೆಂದು ಭಾವಿಸಿಕೊಂಡರೆ ವಿನಿಮಯದರದ ಕುಸಿತದಿಂದಾಗಿ ಭಾರತೀಯ ನಿರ್ಯಾತದಾರನಿಗೆ ಅದು ಲಾಭ ತಂದುಕೊಟ್ಟಿತೇನು? ಮೇಲೆ ವಿವರಿಸಿರುವಂತೆ, ತನ್ನ ಉತ್ಪಾದನೆಗೆ ತಾನು ಗಳಿಸಿಕೊಂಡ ಬೆಳ್ಳಿಯೊಂದಿಗೆ ಹೆಚ್ಚು ಪದಾರ್ಥಗಳನ್ನು ಮತ್ತು ಸೇವೆಗಳನ್ನು ಕೊಳ್ಳಲು ಸಮರ್ಥನಾದರೆ ಭಾರತೀಯ ನಿರ್ಯಾತದಾರನಿಗೆ ಲಾಭ ಒದಗುವ ಅವಕಾಶವಿರುತ್ತಿತ್ತು. ಅದನ್ನೇ ಸುಲಭದ ಮಾತುಗಳಲ್ಲಿ ಹೇಳುವುದಾದರೆ ಆತನ ಲಾಭ ಅವುಗಳನ್ನು ಮಾರುವ ಬೆಲೆ ಮತ್ತು ಅವನ ಖರ್ಚಿನ ನಡುವಣದ ವ್ಯತ್ಯಾಸವಾಗಿರುತ್ತದೆ. ಇದನ್ನು ಮನಸ್ಸಿನಲ್ಲಿರಿಸಿಕೊಂಡು, ಮೊದಲಲ್ಲಿ ಭಾರತದಲ್ಲಿ ಬೆಳ್ಳಿಯ ಬೆಲೆ ಇಳಿತವಾಗಿದೆ ಎಂದು ಭಾವಿಸಿ ಖಚಿತವಾಗಿ ಹೇಳಿದಾಗ, ಭಾರತೀಯ ವಿನಿಮಯದರದಲ್ಲಿನ ಇಳಿತದಿಂದಾಗಿ ಆತನ ವ್ಯಾಪಾರದ ಮೇಲೆ ಲಾಭದ

---

೧. ಬೆಳ್ಳಿಯ ಆಯಾತಗಳ ಅಂಕಿಅಂಶಗಳಿಗಾಗಿ ಮೊದಲನೆ ಅಧ್ಯಾಯ ನೋಡಿ, ೧೮೭೨–೧೮೯೩ ರ ನಡುವೆ ಭಾರತದೊಳಕ್ಕೆ ಬೆಳ್ಳಿಯ ಒಳಹರಿವು ಉಂಟಾದ್ದರಿಂದ ಬೆಳ್ಳಿಯ ಚಿನ್ನದ ಬೆಲೆಯಲ್ಲಿ ಪತನವುಂಟಾಯಿತು ಎಂಬುದನ್ನು ಗಮನಿಸಿ.

ಬದಲು ನಷ್ಟವೇ ಸಂಭವಿಸಬಹುದಾಗಿತ್ತು. ಆ ಸಂದರ್ಭದಲ್ಲಿ, ತನ್ನ ಉತ್ಪಾದನೆಯನ್ನು ಭಾರತದಿಂದ ಹೊರಕ್ಕೆ ಕಳಿಸುವ ನಿರ್ಯಾತದಾರ ಬೆಳ್ಳಿಯ ಚಿನ್ನದ ದರವಾದ ಭಾರತೀಯ ವಿನಿಮಯದರದಲ್ಲಿ ಕುಸಿತವುಂಟಾಗಿದ್ದರೂ ಭಾರತದಲ್ಲಿನ ಬೆಳ್ಳಿಯ ಬೆಲೆಗಳಿಗೆ ಲಗತ್ತಾಗಿದ್ದ ಇಂಗ್ಲೆಂಡಿನಲ್ಲಿನ ಚಿನ್ನದ ಬೆಲೆಗಳ ಪ್ರಮಾಣದಲ್ಲೇ ಹೆಚ್ಚು ಕುಸಿತವುಂಟಾಗಿತ್ತು. ಅಂದರೆ ಉತ್ಪಾದಕನು ತನ್ನ ಉತ್ಪಾದನೆಗೆ ಗಳಿಸಿದ ಬೆಲೆ ತಾನು ಖರ್ಚುಮಾಡಿದುದಕ್ಕಿಂತಲೂ ಕಡಿಮೆಯಾಗಿತ್ತು. ಭಾರತದಲ್ಲಿ[೧] ಬೆಳ್ಳಿ ಕುಸಿತಕ್ಕೆ ಮೊದಲೇ ಯುರೋಪಿನಲ್ಲಿ ಅದು ಕುಸಿದಿತ್ತು ಎಂಬುದು ಅಷ್ಟೊಂದು ಸ್ಥಾಪಿತವಾಗಿರಲಿಲ್ಲ. ಆದರೆ ಅದು ಹಾಗಾಗಿದ್ದರೂ, ವಿನಿಮಯದರದಲ್ಲಿನ ಕುಸಿತದ ಮೂಲಕ ನಷ್ಟದ ಸಾಧ್ಯತೆ ಲಾಭವು, ಯಾವುದೇ ಇದ್ದರೂ, ನಿರ್ಯಾತ ವ್ಯಾಪಾರವಾಗಿ ಅದರ ಮೇಲಿಂದ ಗಳಿಸಿದ ಲಾಭವಲ್ಲವೆಂದೂ, ಆದರೆ ಅದು ದೇಶದ ಒಳಗಣ ನಿರ್ದಿಷ್ಟ ವಸ್ತುಗಳ ಮತ್ತು ಸೇವೆಗಳ ನೆಲೆಗಳ ಹಾಗೂ ಬೆಲೆಗಳ ಸಾಮಾನ್ಯ ವಟ್ಟದ ನಡವಣ ಅಸಾಂಗತ್ಯದಿಂದಾಗಿ ಎಂಬುದಾಗಿ ಸಿದ್ಧಪಡುತ್ತದೆ. ಒಂದು ವೇಳೆ ದೇಶದಲ್ಲಿ ನಿರ್ಯಾತ ವ್ಯಾಪಾರವಿಲ್ಲದೇ ಹೋಗಿದ್ದರೂ ಅದು ಅಸ್ತಿತ್ವದಲ್ಲಿರುತ್ತಿತ್ತು.

ಹಾಗಾಗಿ ಲಾಭವೆನ್ನುವುದು ನಾಣ್ಯದ ಸಾಮಾನ್ಯ ಅಪಮೌಲ್ಯದ ಒಂದು ಸಂಗತಿಯಷ್ಟೆ ಆಗಿತ್ತು. ಭಾರತದಲ್ಲಿ ಎಲ್ಲ ವಸ್ತುಗಳ ಮತ್ತು ಸೇವೆಗಳ ಬೆಲೆಗಳು ಒಂದೇ ರೀತಿಯಲ್ಲಿ ಚಲಿಸಲಿಲ್ಲವಾದ್ದರಿಂದ ಅದರ ಅನುಭವ ಗಮನಕ್ಕೆ ಬಂದಿತು. ಯಾವುದೋ ಒಂದು ಸಮಯದಲ್ಲಿ ನಿರ್ದಿಷ್ಟವಸ್ತುಗಳ ಬೆಲೆ ಹೆಚ್ಚುತ್ತಿರುವಾಗ ಸಾಮಾನ್ಯ ಬೆಲೆಮಟ್ಟ ಕುಸಿಯುತ್ತಿರುತ್ತದೆ ಎಂಬುದು ಗೊತ್ತಿರುವ ಸಂಗತಿ. ಅದರ ಬದಲಿಗೆ, ಅದೇ ಕಾಲದಲ್ಲಿ ಕೆಲವೊಂದು ವಸ್ತುಗಳು ಬೆಲೆಗಳಲ್ಲಿ ಕುಸಿಯುತ್ತಿರುವಾಗ ಸಾಮಾನ್ಯ ವಸ್ತುಗಳ ಬೆಲೆಯ ಮಟ್ಟ ಏರುತ್ತಿರುತ್ತದೆ. ಬಹಳಷ್ಟು ಸಲ ಏನಾಗುತ್ತದೆ ಎಂದರೆ ಕೆಲವೊಂದು ವಸ್ತುಗಳ ಮತ್ತು ಸೇವೆಗಳ ಬೆಲೆಗಳು, ಅವು ಅದೇ ದಿಕ್ಕಿನಲ್ಲಿ ಚಲಿಸಿದಾಗಲೂ, ಸಾಮಾನ್ಯ ಬೆಲೆಮಟ್ಟದ ಗತಿಯಲ್ಲೇ ಚಲಿಸಲಾರವು. ಸಾಮಾನ್ಯ ಬೆಲೆಗಳು ಕುಸಿದಾಗ, ಪ್ರತಿಯೊಬ್ಬ ಉದ್ಯೋಗದಾತನ ಒಟ್ಟು ವೆಚ್ಚದಲ್ಲಿ ಅತ್ಯಂತ ದೊಡ್ಡ ಬಾಬತ್ತಾದ ಮಜೂರಿಗಳು ಮತ್ತು ಇತರ ನಿಗದಿತ ಆದಾಯಗಳು ಅದೇ ಪ್ರಮಾಣದಲ್ಲಿ ಕುಸಿಯುವುದಿಲ್ಲ; ಸಾಮಾನ್ಯ ಬೆಲೆಗಳು ಏರಿದಾಗ ಅವು ಸಾಮಾನ್ಯ ಬೆಲೆಗಳಷ್ಟು ವೇಗವಾಗಿ ಏರುವುದಿಲ್ಲ, ಆದರೆ ಸಾಮಾನ್ಯವಾಗಿ ಹಿಂದೆ ಬೀಳುತ್ತವೆ. ೧೮೭೩–೯೩ರ (ನೋಡಿ. ನಕ್ಷೆ IV) ಅವಧಿಯಲ್ಲಿ ಬೆಳ್ಳಿಯ ಮಾನದಂಡವುಳ್ಳಂಥ ಭಾರತದಲ್ಲಿ ಹಾಗೂ ಚಿನ್ನದ ಮಾನದಂಡವುಳ್ಳಂಥ ಇಂಗ್ಲೆಂಡಿನಲ್ಲಿ ಆಗುತ್ತಿದ್ದದ್ದು ಹೀಗೆಯೇ. ಇಂಗ್ಲೆಂಡಿನಲ್ಲಿ ಬೆಲೆಗಳು ಕುಸಿದಿದ್ದವು, ಆದರೆ ಮಜೂರಿಗಳು ಅದೇ ಪ್ರಮಾಣದಲ್ಲಿ ಕುಸಿದಿರಲಿಲ್ಲ. ಇಂಗ್ಲಿಷ್ ಉತ್ಪಾದಕನಿಗೆ ಶಿಕ್ಷೆ ದೊರಕಿದುದು ಭಾರತೀಯ ಪ್ರತಿಸ್ಪರ್ಧಿಯಿಂದಾಗಿ ಅಲ್ಲ; ಆದರೆ ಇಂಗ್ಲಿಷ್ ಕೆಲಸಗಾರರ ಮಜೂರಿಗಳು ಬದಲಾಗದೆ ಹಾಗೇ ಇದ್ದದ್ದರಿಂದ ಹಾಗೂ ಆತನ ಉತ್ಪಾದನೆಗಳ ನೆಲೆ ಕುಸಿದು ಬಿದ್ದಿದ್ದರಿಂದ. ಭಾರತೀಯ ಉತ್ಪಾದಕನಿಗೆ ಲಾಭ ಬಂದದ್ದು, ಇಂಗ್ಲಿಷ್ ಪ್ರತಿಸ್ಪರ್ಧಿಯಿಂದಾಗಿ ಅಲ್ಲ. ಭಾರತೀಯ ಉತ್ಪಾದಕನಿಗೆ ತನ್ನ ಉತ್ಪಾದನೆಯ ಬೆಲೆ ಹೆಚ್ಚಿದ್ದರೂ ಆತನು ಹೆಚ್ಚಿನ ಮಜೂರಿಯನ್ನು ನೀಡಬೇಕಾಗಿರಲಿಲ್ಲ.

ಒಟ್ಟಿನಲ್ಲಿ ಹೇಳಬೇಕೆಂದರೆ ಕುಸಿಯುತ್ತಿರುವ ವಿನಿಮಯ, ಸ್ಥಾಪಿತ ವ್ಯಾಪಾರ ಸಂಬಂಧಗಳನ್ನು ಕ್ಷೋಭೆಗೊಳಿಸಬೇಕಾಗಿರಲಿಲ್ಲ ಇಲ್ಲವೆ ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಪ್ರವೇಶಿಸಿದ ವಸ್ತುಗಳನ್ನು ಸ್ಥಳಾಂತರಿಸಬೇಕಾಗಿರಲಿಲ್ಲ. ಬಹಳ ಹೆಚ್ಚೆಂದರೆ ಅದನ್ನು ಆರ್ಥಿಕ ಪ್ರೋತ್ಸಾಹದ ಪ್ರಕ್ರಿಯೆಯಲ್ಲಿ

---

೧. ನೋಡಿ. ಅಧ್ಯಾಯ IV

## ನಕ್ಷೆ-IV

## ಭಾರತ ಮತ್ತು ಇಂಗ್ಲೆಂಡ್‌ಗಳಲ್ಲಿ ಬೆಲೆಗಳು ಮತ್ತು ಮಜೂರಿಗಳು, ೧೮೭೩-೯೩



ಹೊರೆಯೆಂಬುದಾಗಿ ಆರೋಪಿಸಬಹುದು. ಆದರೆ ಅದು ಅಭಿಪ್ರೇರಣೆಯನ್ನು ಒದಗಿಸಿತು ಇಲ್ಲವೇ ಉತ್ತೇಜನವನ್ನು ಹಿಂತೆಗೆದುಕೊಂಡಿತು. ಅದು ಸಂಪತ್ತಿನ ಸಾಮಾಜಿಕ ಹಂಚಿಕೆಯಲ್ಲಿ ಬದಲಾವಣೆಗಳನ್ನು ತಂದಿತು. ಬೆಲೆಗಳು ಕುಸಿಯುತ್ತಿದ್ದ ಇಂಗ್ಲೆಂಡ್‌ನಲ್ಲಿ ಮಾಲೀಕನಿಗೆ ತೊಂದರೆಯಾದರೆ, ಬೆಲೆಗಳು ಏರುತ್ತಿದ್ದ ಭಾರತದಲ್ಲಿ ಕಾರ್ಮಿಕನಿಗೆ ತೊಂದರೆಯಾಯಿತು. ಎರಡೂ ಸಂದರ್ಭಗಳಲ್ಲಿ ಅನ್ಯಾಯವಾದದ್ದು ಸಮುದಾಯದ ಒಂದು ವರ್ಗಕ್ಕೆ. ನಾಣ್ಯದ ಸುಧಾರಣೆಗೆ ಸಂಬಂಧಿಸಿದಂತೆ ಸುಲಭವಾದ ಸಂದರ್ಭವನ್ನು ರೂಪಿಸಲಾಯಿತು. ಇಂಗ್ಲೆಂಡಿನಲ್ಲಿ ನಾಣ್ಯ ಸುಧಾರಣೆಯ ಅಗತ್ಯವನ್ನು ಮನಗಾಣಲಾಯಿತು; ಆದರೆ ಭಾರತದಲ್ಲಿ ಬಹುಜನರಿಗೆ ಅದು ಅಪ್ರಿಯ ವಿಷಯವಾಗಿತ್ತು. ಕೆಲವರಿಗೆ ಬೆಳ್ಳಿಯ ಸ್ಥಿರತೆಯ ಬಗ್ಗೆ ಬಹಳಷ್ಟು ಒಲವಿತ್ತು. ಏಕೆಂದರೆ ಭಾರತೀಯ ಬೆಲೆಗಳು ೧೮೭೩ರ ಮಟ್ಟದಿಂದ ಮೇಲಕ್ಕೇರುವ ಯಾವುದೇ ಸಂಭವನೀಯತೆಯನ್ನು ಅವರು ಕಂಡುಕೊಳ್ಳುವಲ್ಲಿ ವಿಫಲರಾಗಿದ್ದರು. ಇತರರಿಗೆ ಕುಸಿಯುತ್ತಿರುವ ವಿನಿಮಯದ ಲಾಭ ಎಷ್ಟೊಂದು ಹೆಚ್ಚಿನ ವರವಾಗಿತ್ತೆಂದರೆ ವಿನಿಮಯದಲ್ಲಿ ಸ್ಥಿರತೆಯನ್ನು ತರಲು ಅವರು ಸುಲಭವಾಗಿ ಇಷ್ಟಪಡುತ್ತಿರಲಿಲ್ಲ. ಎರಡು ಅಭಿಪ್ರಾಯಗಳ ತಪ್ಪುಕಲ್ಪನೆಗಳೂ ಸ್ಪಷ್ಟವಾದದ್ದೇ. ಭಾರತದಲ್ಲೂ ಬೆಲೆಗಳು ಏರಿದವು, ಅದೂ ಸಾಕಷ್ಟು ಗಮನಾರ್ಹವಾಗಿ. ಅಲ್ಲೂ ಲಾಭವಿತ್ತು. ಆದರೆ ಕಾರ್ಮಿಕನಿಗೆ ಅದು ಅನುಕೂಲಕರವಾಗಿರಲಿಲ್ಲ. ಹಾಗೆ ನೋಡಿದಾಗ ಭಾರತೀಯ ನಾಣ್ಯದ ಸುಧಾರಣೆಯ ಅಗತ್ಯವು ಇಂಗ್ಲಿಷ್ ನಾಣ್ಯದ ಸುಧಾರಣೆಗಿಂತಲೂ ಹೆಚ್ಚು ಇತ್ತು ಎಂದು ಹೇಳಬಹುದು. ಕೇವಲ ಮನೋವೈಜ್ಞಾನಿಕ ದೃಷ್ಟಿಯಿಂದ ಹೇಳುವುದಾದರೆ ಏರುತ್ತಿರುವ ಬೆಲೆಗಳು ಮತ್ತು ಬೀಳುತ್ತಿರುವ ಬೆಲೆಗಳ ನಡುವೆ ಆಯ್ಕೆ ಮಾಡುವುದು ಬಹುಶಃ ಬಹಳಷ್ಟಿದೆ. ಸಂಪತ್ತಿನ ವಿತರಣೆಯ ಮೇಲೆ ಅದರ ಪರಿಣಾಮದ ದೃಷ್ಟಿಯಿಂದ ಸಂಪತ್ತನ್ನು ಬಡವರಿಂದ ಸಿರಿವಂತರಿಗೆ ವರ್ಗಾಯಿಸುವುದಕ್ಕೆ ಸಹಾಯಕವಾಗುವಂತಹ ಸಾಧನವಾಗುವ ಇಂತಹ ಬದಲಾವಣೆಗಳಿಗೆ ಕಾರಣವಾಗುವ ಪ್ರಮಿತಿಗಳ ಬಗ್ಗೆ ಹೇಳಿಕೊಳ್ಳುವಂತಹದೇನೂ ಇಲ್ಲ. ಸ್ಕ್ರೋಪ್ ಹೀಗೆ ಹೇಳಿದ್ದಾರೆ: "ಮೌಲ್ಯದ ಸುಭದ್ರತೆಯಿಲ್ಲದ ಹಣ ವಿಶ್ವಾಸಾರ್ಹವಾಗುವುದಿಲ್ಲ." ನಿಜವಾಗಿಯೂ, ಹಿತಾಸಕ್ತಿಗಳಿಗೆ ಉಂಟಾದ ಬೃಹತ್‌ಪ್ರಮಾಣದ ತೊಂದರೆಯನ್ನು ಗಮನಿಸಿದಾಗ ಮೌಲ್ಯದಲ್ಲಿ ಇಳಿಕೆಗೊಂಡ ಹಣವನ್ನು ದೊಡ್ಡ ಮೋಸವೆನ್ನಬಹುದು. ನಾಣ್ಯವು ರೋಗಗ್ರಸ್ತ ನಾಣ್ಯವಾಗಿರುವುದರಿಂದಲೇ, ಸದೃಢವಾದ ನಾಣ್ಯದ ಹಿನ್ನೆಲೆಯಿಲ್ಲದ ಭಾರತೀಯ ವ್ಯಾಪಾರ ಮತ್ತು ಉದ್ಯಮಗಳು ಇನ್ನೂ ಉಳಿದಿವೆ. ವಿನಿಮಯದ ಪತನ, ಒಂದರ್ಥದಲ್ಲಿ ಅದು ಲಾಭವೆಂದು ಹೇಳಬಹುದಾದ್ದರಿಂದ, ನಿರ್ದಿಷ್ಟ ಆದಾಯ ಹೊಂದಿದ್ದ ಭಾರತೀಯ ಜನತೆಯ ಒಂದು ದೊಡ್ಡ ವರ್ಗಕ್ಕೆ[೧] ನಷ್ಟವಾಯಿತೆನ್ನಬಹುದು. ಈ ವರ್ಗದ ಜನರು ಬೆಳ್ಳಿಯ ಸ್ಟ್ಯಾಂಡರ್ಡ್‌ನ ಅಸ್ಥಿರತೆಯಿಂದಾಗಿ ಸರ್ಕಾರ ಹಾಗೂ ಯುರೋಪಿಯನ್ ಅಧಿಕಾರಿಗಳ ಹಾಗೆಯೇ ನಷ್ಟವನ್ನನುಭವಿಸಿದ್ದರು.

ಇದು ಬೆಳ್ಳಿಯ ಪತನದ ಮಾತಾಯಿತು. ಆದರೆ ಅದು ಮಾಡಿದ ಆರ್ಥಿಕ ತೊಂದರೆಗಳು ಮತ್ತು ಸಾಮಾಜಿಕ ಅನ್ಯಾಯಗಳು ತಮ್ಮಿಂದಾದ ಕೆಟ್ಟ ಪ್ರಭಾವಗಳನ್ನು ತಿಳಿಸಲಿಲ್ಲ. ಪತನಕ್ಕಿಂತ ಹೆಚ್ಚು ಕ್ಷೋಭೆಯನ್ನು ಉಂಟುಮಾಡಿದ್ದೆಂದರೆ ಪತನದ ಹಿಂದೆಯೇ ಬಂದ ಏರಿಳಿತಗಳು (ನೋಡಿ. ನಕ್ಷೆ V).

ರೂಪಾಯಿಯ ವಿನಿಮಯದರದ ಈ ಏರಿಳಿತಗಳು ಭಾರತ ಸರ್ಕಾರಕ್ಕೆ ಹೆಚ್ಚು ಮುಜುಗರವನ್ನುಂಟುಮಾಡಿದವು. ಸನ್ಮಾನ್ಯ ಬೇರಿಂಗ್ (ಆನಂತರ ಲಾರ್ಡ್ ಕ್ರೋಮರ್) ಹೀಗೆ ಹೇಳಿದ್ದಾರೆ:

"ತೌಲನಿಕವಾಗಿ ಹೇಳಬೇಕೆಂದರೆ ತೊಂದರೆಯನ್ನುಂಟುಮಾಡುವಷ್ಟು ರೂಪಾಯಿಯ ಮೌಲ್ಯ

---

೧. ಫೈನಾನ್ಷಿಯಲ್ ಸ್ಟೇಟ್‌ಮೆಂಟ್, ೧೮೮೩–೮೪, ಪು. ೨೬

## ನಕ್ಷೆ-V

## ರೂಪಾಯಿ-ಸ್ಟರ್ಲಿಂಗ್ ವಿನಿಮಯದ ಮಾಹೆಯಾನ ಏರಿಳಿತಗಳು



ಕೆಳಮಟ್ಟದಲ್ಲಿದೆ ಎಂಬುದು ಸತ್ಯಾಂಶವಲ್ಲ. ಅದು ತೀರ ಮುಜುಗರವನ್ನುಂಟುಮಾಡುವಂಥದ್ದಾಗಿದ್ದರೂ ಭಾರತೀಯ ಹಣಕಾಸು ವ್ಯವಸ್ಥೆಯನ್ನು ಯಾವುದೇ ಮೌಲ್ಯದ ರೂಪಾಯಿಗೆ ಹೊಂದಿಸುವುದು ಸಾಧ್ಯವಾಗುತ್ತದೆ. ಸರ್ಕಾರ ಮತ್ತು ವಾಣಿಜ್ಯ ಎರಡಕ್ಕೂ ಅನಾನುಕೂಲವನ್ನುಂಟುಮಾಡುತ್ತಿರುವುದು ಮೌಲ್ಯ ದೃಢವಾಗಿಲ್ಲದ ರೂಪಾಯಿ. ಭಾರತೀಯ ಹಣದ ಮಾನದಲ್ಲಿ ಭಾರತ ಸರ್ಕಾರದ ವಾರ್ಷಿಕ ಹೊಣೆಗಾರಿಕೆಗಳು ಎಷ್ಟು ಎಂಬುದನ್ನು ಹೇಳಲು ಸಾಧ್ಯವಿಲ್ಲ. ಚಿನ್ನ ಮತ್ತು ಬೆಳ್ಳಿಯ ಸಾಪೇಕ್ಷ ಮೌಲ್ಯದಲ್ಲಿ ಸಂಭವಿಸುವಂಥ ವ್ಯತ್ಯಾಸಗಳಿಗನುಗುಣವಾಗಿ ಈ ಹೊಣೆಗಾರಿಕೆಗಳನ್ನು ಹೊಸದಾಗಿ ಪ್ರತಿವರ್ಷವೂ ಲೆಕ್ಕಹಾಕಬೇಕು. ಅದು ಒಂದು ವರ್ಷದ ಲೆಕ್ಕಾಚಾರವಾದರೂ ಅದನ್ನು ಮಾಡುವುದು ಅತ್ಯಂತ ಕಷ್ಟವಾಗುತ್ತದೆ."

ಅಂಥ ಅಸ್ಥಿರತೆಗಳಿಂದಾಗಿ, ಆಯವ್ಯಯದಲ್ಲಿ ಯಾವುದೇ ದರವನ್ನಾಗಲೀ ಈ ಆಯವ್ಯಯವು ನಿಜವಾಗಿ ಮಾರುಕಟ್ಟೆಯ ದರವೆಂದು ಭಾವಿಸಲು ಸಾಧ್ಯವಿಲ್ಲ. ವಸ್ತುಸ್ಥಿತಿಗಳಿಗನುಗುಣವಾಗಿ, ಒಂದು ನಿರ್ದಿಷ್ಟ ವರ್ಷದ ಸರಾಸರಿ ದರವು ಆಯವ್ಯಯ ದರದಿಂದ ಎಷ್ಟೊಂದು ವಿಭಿನ್ನವಾಗಿರುತ್ತದೆಂದರೆ ಸರ್ಕಾರದ ಹಣಕಾಸುಗಳು, ಅರ್ಥಮಂತ್ರಿಯೊಬ್ಬರ ಮಾತುಗಳಲ್ಲಿ ಹೇಳಬಹುದಾದರೆ, "ನಿಜವಾದ ಜೂಜು"ಗಳಾಗಿ ಪರಿಣಮಿಸಿದ್ದವು. ವಾರ್ಷಿಕ ಆಯವ್ಯಯವು ಅನಿರೀಕ್ಷಿತವಾಗಿ ಮಾಡಬೇಕಿದ್ದ ಸ್ಟರ್ಲಿಂಗ್ ಪಾವತಿಗಳಿಂದಾಗಿ ರೂಪಾಯಿ ವೆಚ್ಚದ ಬದಲಾವಣೆಗಳಿಂದ ಹೇಗೆ ಅಸ್ತವ್ಯಸ್ತವಾಗಿದ್ದಿರಬೇಕು ಎಂದ ಈ ಬಗ್ಗೆ XXII ಪಟ್ಟಿ ಕೆಲವೊಂದು ಸಂಗತಿಗಳನ್ನು ನೀಡುತ್ತದೆ.

ಸರ್ಕಾರದ ಆರ್ಥಿಕತೆಯು ವಿನಿಮಯದ ದರಗಳಲ್ಲಿ ಇಂತಹ ಏರಿಳಿತಗಳಿಗೆ ಒಳಗಾಗಿದ್ದರೆ, ಖಾಸಗೀ ವ್ಯಾಪಾರ ವ್ಯವಹಾರಗಳೂ ಇಂತಹ ಅನಿಶ್ಚಿತತೆಗಳಿಂದ ಮುಕ್ತವಾಗಿರುವುದಿಲ್ಲ. ವಿನಿಮಯದರದ ಅಸ್ಥಿರತೆಗಳು ನಿಜವಾಗಿಯೂ ಅಂತರರಾಷ್ಟ್ರೀಯ ವಾಣಿಜ್ಯದಲ್ಲಿ ಒಂದು ಸಾಮಾನ್ಯ ಘಟನೆ. ಆದರೆ ವಾಣಿಜ್ಯ ಮತ್ತು ಉದ್ಯಮಗಳಲ್ಲಿ ಅವು ವಿಚ್ಛಿನ್ನತೆಯನ್ನುಂಟುಮಾಡದೇಹೋದಲ್ಲಿ ಅಂಥ ಅಸ್ಥಿರತೆಗಳಿಗೆ ನಿರ್ದಿಷ್ಟ ಮಿತಿಗಳಿರಬೇಕಾಗುತ್ತದೆ. ಮಿತಿಗಳನ್ನು ಮುಂಚೆಯೇ ಅರಿಯಬಹುದಿದ್ದಲ್ಲಿ ವಾಣಿಜ್ಯವು ತನ್ನ ಹಂಚಿಕೆಯಂತೆ ಸಾಕಷ್ಟು ನಿರ್ದುಷ್ಟವಾಗಿರುತ್ತದೆ ಮತ್ತು ವಿನಿಮಯದಲ್ಲಿನ ಸಟ್ಟಾವ್ಯಾಪಾರವು ಒಂದು ಗೊತ್ತಾದ ಮಿತಿಗೆ ಸೀಮಿತವಾಗಿರುತ್ತದೆ. ಆದರೆ ವಿನಿಮಯದ ಏರಿಳಿತಗಳ ಮಿತಿಗಳು ಗೊತ್ತಿರದೆ ಇದ್ದರೆ ವಾಣಿಜ್ಯದ ಎಲ್ಲ ಲೆಕ್ಕಾಚಾರಗಳೂ ತಲೆಕೆಳಗಾಗುತ್ತವೆ ಹಾಗೂ ವಿನಿಮಯದ ಸಟ್ಟಾವ್ಯಾಪಾರ – ನ್ಯಾಯಬದ್ಧ ವಾಣಿಜ್ಯದಲ್ಲಿ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತದೆ. ಈಗ ಎರಡು ರಾಷ್ಟ್ರಗಳ ನಡುವಣ ವಿನಿಮಯದಲ್ಲಿನ ಅಸ್ಥಿರತೆಗಳು, ಎರಡು ರಾಷ್ಟ್ರಗಳೂ ಒಂದೇ ಮೌಲ್ಯ ಪ್ರಮಾಣವನ್ನು ಹೊಂದಿದ್ದಲ್ಲಿ, ಸೀಮಿತವಾಗಿರುತ್ತವೆ. ಅಂಥ ಸಾಮಾನ್ಯ ಮೌಲ್ಯ ಪ್ರಮಾಣಗಳು ಎಲ್ಲಿ ಇಲ್ಲವೊ, ಅಲ್ಲಿ ಅವು ಅಸ್ತಿತ್ವದಲ್ಲಿದ್ದರೂ ಕೂಡ, ಅವು ಅನಿಶ್ಚಿತವಾಗಿರುವುದರಿಂದ ಅವುಗಳಿಂದ ಉಪಯೋಗವಾಗುವುದಿಲ್ಲ. ನಿಗದಿತ ವಿನಿಮಯದಲ್ಲಿನ ಭಾಗ ಆ ದೇಶಗಳ ನಡುವಣ ವಿನಿಮಯ ಅಸ್ಥಿರತೆಗಳ ಮೇಲಣ ಮಿತಿಗಳನ್ನು ತೆಗೆದುಹಾಕಿತು. ವಿನಿಮಯವು ಚಿನ್ನ ಮತ್ತು ಬೆಳ್ಳಿ ಮಾನದಂಡಗಳನ್ನುಳ್ಳ ದೇಶಗಳ ಸಾಮಾನ್ಯ, ಮೌಲ್ಯ ಪ್ರಮಾಣವನ್ನು ಅಳಿಸಿಹಾಕಿತು. ಶಿಷ್ಟಪ್ರಮಾಣದ ಮೌಲ್ಯದಲ್ಲಿನ ಅಂಥ ಏರುಪೇರುಗಳ ಪರಿಣಾಮವಾಗಿ, ವಾಣಿಜ್ಯವು ಏರಿಳಿತಗಳೊಂದಿಗೆ ನಡೆಯುತ್ತಿತ್ತು ಮತ್ತು ಸಟ್ಟಾ ವ್ಯಾಪಾರ ತುಂಬ ಚಟುವಟಿಕೆಯಿಂದ ಕೂಡಿತ್ತು.[೧]

ವಾಣಿಜ್ಯದ ಮುನ್ನಡೆ ಸ್ಥಿರತೆಯನ್ನು ಅವಲಂಬಿಸಿರುತ್ತದೆ ಎಂಬ ಸತ್ಯ ನಿರಾಕರಿಸಲ್ಪಡುವವರೆಗೂ

೧. ಇಂಡಿಯನ್ ಕರೆನ್ಸಿ ಕಮಿಟಿ, ೧೮೯೮. ಪ್ರ. ೬,೨೫೦, ೯,೮೦೮–೧೦.

## ಪಟ್ಟಿ XXII ವಿನಿಮಯದ ಏರಿಳಿತಗಳು ಮತ್ತು ಚಿನ್ನ ಪಾವತಿಗಳ ರೂಪಾಯಿ ದರದಲ್ಲಿನ ಏರಿಳಿತಗಳು*

| ಆರ್ಥಿಕ ವರ್ಷ | ವರ್ಷದ ಆಯವ್ಯಯ ರೂಪಿಸಲಾದ ಆಧಾರದ ಮೇಲೆ ವಿನಿಮಯ ದರದ ಅಂದಾಜು | | ವರ್ಷದ ಅವಧಿಯಲ್ಲಿ ವಾಸ್ತವವಾಗಿ ವಸೂಲಾದ ವಿನಿಮಯ ದರ (ಸರಾಸರಿ) | | ವಿನಿಮಯದ ಅಂದಾಜು ಮತ್ತು ವಾಸ್ತವ ದರಗಳ ನಡುವೆ ಉಂಟಾದ ಬದಲಾವಣೆಗಳಿಂದಾಗಿ ಸ್ಟರ್ಲಿಂಗ್ ಪಾವತಿಗಳ ರೂಪಾಯಿ ದರದಲ್ಲಿ ಬದಲಾವಣೆಗಳು | |
|---|---|---|---|---|---|---|
| | | | | | ಹೆಚ್ಚಳ | ಇಳಿತ |
| | ಷಿ | ಪೆ | ಷಿ | ಪೆ | ರೂ. | ರೂ. |
| ೧೮೭೪-೭೫ | ೧ | ೧೦.೩೭೫ | ೧ | ೧೦,೧೫೬ | ೧೫,೯೧,೭೬೪ | – |
| ೧೮೭೫-೭೬ | ೧ | ೯.೮೭೫ | ೧ | ೯.೬೨೬ | ೧೬,೫೭,೯೧೭ | – |
| ೧೮೭೬-೭೭ | ೧ | ೮.೫ | ೧ | ೮.೫೦೮ | – | ೭೬,೭೩೬ |
| ೧೮೭೭-೭೮ | ೧ | ೯.೨೩ | ೧ | ೮.೭೯೧ | ೩೮,೪೩,೦೫೦ | – |
| ೧೮೭೮-೭೯ | ೧ | ೮.೪ | ೧ | ೭.೭೯೪ | ೫೬,೮೭,೧೨೯ | – |
| ೧೮೭೯-೮೦ | ೧ | ೭ | ೧ | ೭.೯೬೧ | – | ೮೪,೪೦,೭೩೭ |
| ೧೮೮೦-೮೧ | ೧ | ೮ | ೧ | ೭.೯೫೬ | ೪,೨೪,೭೨೨ | – |
| ೧೮೮೧-೮೨ | ೧ | ೮ | ೧ | ೭.೮೯೫ | ೧೦,೧೭,೪೮೨ | – |
| ೧೮೮೨-೮೩ | ೧ | ೮ | ೧ | ೭.೫೨೫ | ೩೭,೪೬,೮೯೦ | – |
| ೧೮೮೩-೮೪ | ೧ | ೭.೫ | ೧ | ೭,೫೩೬ | – | ೩,೬೨,೯೦೨ |
| ೧೮೮೪-೮೫ | ೧ | ೭.೫ | ೧ | ೭.೩೦೮ | ೧೮,೯೭,೩೦೭ | – |
| ೧೮೮೫-೮೬ | ೧ | ೭ | ೧ | ೬.೨೫೪ | ೫೬,೮೨,೬೩೮ | – |
| ೧೮೮೬-೮೭ | ೧ | ೬ | ೧ | ೫.೪೪೧ | ೬೫,೧೭,೭೨೧ | – |
| ೧೮೮೭-೮೮ | ೧ | ೫.೫ | ೧ | ೪.೮೯೮ | ೭೧,೯೦,೦೯೭ | – |
| ೧೮೮೮-೮೯ | ೧ | ೪.೯ | ೧ | ೪.೩೭೯ | ೭೭,೯೮,೪೦೦ | – |
| ೧೮೮೯-೯೦ | ೧ | ೪.೩೮ | ೧ | ೪.೫೬೬ | – | ೨೭,೩೧,೮೯೨ |
| ೧೮೯೦-೯೧ | ೧ | ೪.೫೫೨ | ೧ | ೬.೦೯ | – | ೨,೩೫,೫೧,೭೪೪ |
| ೧೮೯೧-೯೨ | ೧ | ೫.೨೫ | ೧ | ೪.೭೩೩ | ೮೦,೦೯,೩೬೬ | – |

* ಫೈನಲ್ ರಿಪೋರ್ಟ್ ಆಫ್ ದಿ ಗೋಲ್ಡ್ ಅಂಡ್ ಸಿಲ್ವರ್ ಕಮಿಷನ್‌ನಲ್ಲಿ ನೀಡಲಾದ ಅಂಕಿಅಂಶಗಳಿಂದ ಸಂಗ್ರಹಿಸಿದೆ (ಪು. ೪೦) ಹಾಗೆಯೇ ೧೮೯೩ರ 'ರಿಪೋರ್ಟ್ ಆಫ್ ದಿ ಇಂಡಿಯನ್ ಕರೆನ್ಸಿ ಕಮಿಟಿಯ ಪರಿಶಿಷ್ಟ II (ಪು. ೨೭೦) ರಿಂದಲೂ ಸಂಗ್ರಹಿಸಿದೆ.

ಸತ್ಯವೆಂದೇ ಸ್ಥಾಪಿತವಾಗಿರುತ್ತದೆ. ಸರ್ಕಾರ ಸ್ಥಿರವಿದ್ದಾಗ, ಜಮೆ ಸುಭದ್ರವಿದ್ದಾಗ ಮತ್ತು ಸ್ಥಿತಿಗತಿಗಳು ಏಕಪ್ರಕಾರವಿದ್ದಾಗ ಆರೋಗ್ಯಕರ ಉದ್ದಿಮೆಗೆ ಅದರ ಮಹತ್ವವನ್ನು ಮೆಚ್ಚಿಕೊಳ್ಳುವುದು ಕಷ್ಟವಾಗುತ್ತದೆ. ಸರ್ಕಾರದ ಆರ್ಥಿಕತೆಯ ವಿನಿಮಯ ದರದಲ್ಲಿನ ಏರಿಳಿತಗಳಿಂದಾಗಿ, ಅಂತಹ ಅನಿಶ್ಚಿತತೆಗಳಿಗೆ ಗುರಿಯಾಗಿದ್ದ ಹಾಗೆಯೇ, ಖಾಸಗಿ ವಹಿವಾಟುಗಳೂ ಹೆಚ್ಚುಕಡಿಮೆ ಜೂಜಾಟದಂತಾಗಿದ್ದವು. ಮುಂಬರುವ ಬದಲಾವಣೆಗಳ ಬಗ್ಗೆ ವ್ಯವಹಾರಸ್ಥರಿಗೆ ಮುನ್ನೆಚ್ಚರಿಕೆ ನೀಡುವಂಥ ವಾಣಿಜ್ಯದ ಅಳತೆಗೋಲುಗಳು ಎಲ್ಲೆಡೆ ರೂಢಿಗೆ ಬಂದಿವೆ. ಇಡೀ ವಿಮಾ ವ್ಯವಹಾರವು ಆರ್ಥಿಕ ಜೀವನಕ್ಕೆ ಭದ್ರತೆ ನೀಡುವ ಗುರಿಹೊಂದಿದೆ. ಎಲ್ಲಾ ವಸ್ತುಗಳ ಪ್ರಮಾಣಾನುಪಾತವನ್ನು ನಿರ್ಧರಿಸುವ ಮತ್ತು ಅವುಗಳಲ್ಲಿ ವ್ಯವಹರಿಸುವ ಅಗತ್ಯದ ದೃಷ್ಟಿಯಿಂದ ಶಿಷ್ಟಕ್ರಮಗಳನ್ನು ಮುಂದುವರೆಸಿಕೊಂಡು ಹೋಗುವಂತೆ ಎಲ್ಲಾ ಸುಭದ್ರ ಸರ್ಕಾರಗಳನ್ನೂ ಪ್ರೇರೇಪಿಸಿದ ಹಿಂದಿನ ಪ್ರೇರಣೆಯೂ ಇದೇ ಉದ್ದೇಶದಿಂದ ಬಂದಿತ್ತು. ಶಿಷ್ಟಕ್ರಮಗಳ ಬಗ್ಗೆ ಪ್ರತಿಯೊಂದು ನಾಗರಿಕ ರಾಷ್ಟ್ರವೂ ಸೂಕ್ಷ್ಮವಾಗಿ ವಿವರಿಸುವಾಗ ಹಾಗೂ ಅಡ್ಡಮಾರ್ಗ ಹಿಡಿಯದಂತೆ ಅವುಗಳನ್ನು ರಕ್ಷಿಸುವ ಸಲುವಾಗಿ ಅದು ಬಹುದೊಡ್ಡ ಆಡಳಿತ ಯಂತ್ರವನ್ನೇ ನೇಮಿಸಿರುತ್ತದೆ. ಖಚಿತ ಅಭಿವ್ಯಕ್ತಿಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಆರ್ಥಿಕ ಸಮಾಜ ಅದನ್ನು ಮುಂದುವರಿಸಬೇಕು ಎಂಬುದೇ ಅದಕ್ಕೆ ಕಾರಣವಾಗಿದೆ.

ಸಮುದಾಯದ ಶಿಷ್ಟಕ್ರಮಗಳು ಮುಖ್ಯವಾಗಿರುವ ಹಾಗೆಯೇ, ಅದರ ಮೌಲ್ಯಕ್ರಮಗಳು ಎಲ್ಲದಕ್ಕಿಂತಲೂ ಮುಖ್ಯವಾಗಿವೆ.[೧] ತೂಕದ ಮೌಲ್ಯಗಳು, ವಿಸ್ತರಣೆ ಇಲ್ಲವೆ ಗಾತ್ರ. ಇವು ನಿರ್ದಿಷ್ಟ ವ್ಯವಹಾರಗಳಿಗೆ ಮಾತ್ರ ಸೀಮಿತಗೊಂಡಿರುತ್ತವೆ. ಪೌಂಡ್, ಬುಷೆಲ್ ಅಥವಾ ಗಜ ಅವುಗಳನ್ನು ಬದಲಾಯಿಸಿದಲ್ಲಿ ವ್ಯಾಪ್ತಿಯಲ್ಲಿ ತೌಲನಿಕವಾಗಿ ದುಷ್ಪರಿಣಾಮಗಳನ್ನು ನಿಯಂತ್ರಿಸಬಹುದು. ಆದರೆ ಮೌಲ್ಯದ ಕ್ರಮ ಸರ್ವವ್ಯಾಪಿಯಾಗಿದೆ.

ಪೀಲ್ ಹೀಗೆ ಘೋಷಿಸಿದ್ದರು[೨]: "ಸಾರ್ವಜನಿಕ ಒಪ್ಪಂದವಿರಲಿ ಅಥವಾ ಖಾಸಗಿ ಒಪ್ಪಂದವಿರಲಿ, ರಾಷ್ಟ್ರೀಯ ಕಾರ್ಯಕ್ರಮವಿರಲಿ ಅಥವಾ ವ್ಯಕ್ತಿಗತ ಕಾರ್ಯಕ್ರಮವಿರಲಿ, ಯಾವುದೇ ಇದ್ದರೂ, ಇದರ ಪರಿಣಾಮದಿಂದ ಬಾಧಿತವಾಗದೆ ಇಲ್ಲ. ವಾಣಿಜ್ಯದ ಉದ್ಯಮಗಳು, ವ್ಯಾಪಾರದ ಲಾಭಗಳು, ಸಮಾಜದ ಎಲ್ಲ ಆಂತರಿಕ ಸಂಬಂಧಗಳ ಬಗ್ಗೆ ಮಾಡಲಾದ ವ್ಯವಸ್ಥೆಗಳು, ಕಾರ್ಮಿಕ ಮಜೂರಿಗಳು, ಅತ್ಯಂತ ಹೆಚ್ಚಿನ ಮತ್ತು ಅತ್ಯಂತ ಕಡಿಮೆ ಮೊಬಲಗಿನ ಆರ್ಥಿಕ ವ್ಯವಹಾರಗಳು, ರಾಷ್ಟ್ರೀಯ ಋಣ ಪಾವತಿ, ರಾಷ್ಟ್ರೀಯ ವೆಚ್ಚಕ್ಕಾಗಿ ಅವಕಾಶ, ಜೀವನದ ಅತ್ಯಗತ್ಯತೆ ಮೇಲೆ ಅತ್ಯಂತ ಚಿಕ್ಕವರ್ಗದ ನಾಣ್ಯದ ನಿಯಂತ್ರಣ, ಇವೆಲ್ಲವೂ ತೊಂದರೆಗೆ ಒಳಗಾದವು" ಇದಕ್ಕೆ ಕಾರಣ ಮೌಲ್ಯದ ಕ್ರಮದಲ್ಲಾದ ಬದಲಾವಣೆಗಳು. ಅಂತಿಮವಾಗಿ ಎಲ್ಲಾ ಒಪ್ಪಂದಗಳೂ ಸಿದ್ಧವಸ್ತುಗಳಿಗಾಗಿ ಒಪ್ಪಂದಗಳಾಗಿದ್ದರೂ ಪ್ರತಿಯೊಂದು ಒಪ್ಪಂದವೂ ಕೂಡ ಪ್ರಧಾನವಾಗಿ ಮೌಲ್ಯದಲ್ಲಿ ಒಪ್ಪಂದವೇ ಆಗಿರುತ್ತದೆ. ಹಾಗಾಗಿ ತೂಕ, ಸಾಮರ್ಥ್ಯ ಇಲ್ಲವೇ ಗಾತ್ರಗಳ ಮೌಲ್ಯಗಳಲ್ಲಿ ನಿಯತತೆಯನ್ನು ಕಾಪಾಡಿಕೊಂಡು ಬಂದರಷ್ಟೇ ಸಾಲದು. ಸಿದ್ಧವಸ್ತುಗಳಲ್ಲೊಂದಾಗಿ

---

೧. ಹೋಲಿಸಿರಿ : ಹ್ಯಾರಿಸ್ ಆನ್ ಎಸ್ಸೇ ಅಪಾನ್ ಮನಿ ಅಂಡ್ ಕಾಯಿನ್ಸ್ (ಪುನರ್ಮುದ್ರಣ: ಜೆ.ಆರ್. ಮೆಕ್ಕುಲಾಕ್ ಅವರ ಸಂಪುಟ ಸ್ಕೇರ್ಸ್ ಟ್ರಾಕ್ಟ್ಸ್ ಆನ್ ಮನಿ, ಭಾಗ I, ಅಧ್ಯಾಯ II, ಪ್ಯಾರಾ ೨೧, ಅಧ್ಯಾಯ II, ಭಾಗ II, ಪ್ಯಾರಾಗಳು ೧೧, ೧೩ ಮತ್ತು ೨೦.)

೨. ಹೋಲಿಸಿರಿ : ಹನ್ಸರ್ಡ್‌ನ ಬ್ಯಾಂಕ್ ಚಾರ್ಟರ್ ಕಾಯಿದೆಯ ಮೇಲೆ ಕಾಮನ್ಸ್ ಚರ್ಚೆಗಳ ಸಂದರ್ಭದಲ್ಲಿ ೧೮೪೪ರ ಮೇ ೬ ರಂದು ಆತನು ಮಾಡಿದ ಭಾಷಣ ಸಂ. XXXIV, ಪು. ೭೨೦.

ಒಪ್ಪಂದವೊಂದು ನಿಗದಿಪಡಿಸಿದ ಪ್ರಮಾಣದಲ್ಲಿನ ಬದಲಾವಣೆಗಳ ಕಾರಣದಿಂದ ಮೌಲ್ಯದಲ್ಲಿನ ಒಪ್ಪಂದ ದೋಷಯುಕ್ತವಾಗಿರಬಹುದು. ಅದರ ಮೌಲ್ಯದ ಪ್ರಮಾಣದಲ್ಲಿ ಸ್ಥಿರತೆಯನ್ನು ಕಾಯ್ದುಕೊಂಡು ಹೋಗಬೇಕಾದ ಅಗತ್ಯತೆ ಸುವ್ಯವಸ್ಥಿತ ಸಮಾಜದ ಪ್ರತಿಯೊಂದು ಸರ್ಕಾರದ ಹೆಗಲಮೇಲೆ ಬೀಳುತ್ತದೆ. ಆದರೆ ಸಮಾಜ ತನ್ನ ಕಾನೂನುಸಮ್ಮತ ಸ್ಥಾನಮಾನದಿಂದ ಒಪ್ಪಂದದ ಕಡೆ ಮುಂದುವರಿದ ಹಾಗೆಲ್ಲ ಅದರ ಮಹತ್ವ ಯಾವುದೇ ವಿವಾದವಿಲ್ಲದೆ ಬೆಳೆಯುತ್ತದೆ. ಸಮಾಜದ ಒಪ್ಪಂದದ ಆಧಾರದ ಮೇಲಣ ಸಂರಕ್ಷಣೆ, ಆನಂತರ ಬದಲಾಗದ ಅದರ ಮೌಲ್ಯ–ಇವು ಪ್ರಮಾಣದ ಸಂರಕ್ಷಣೆಗೆ ಕಾರಣವಾಗುತ್ತದೆ.

ಎಪ್ಪತ್ತನೆಯ ದಶಕದ ತಪ್ಪುದಾರಿಗೆ ಆ ಶಾಸಕರು ವಿನಾಶಗೊಳಿಸಲು ಸಹಾಯಮಾಡಿದ, ಒಂದಲ್ಲ ಒಂದು ರೂಪದ ಸಾಮಾನ್ಯ ಮೌಲ್ಯ ಪ್ರಮಾಣವನ್ನು ಪುನರ್‌ರಚಿಸುವ ಕೆಲಸವನ್ನು ನಿಧಾನಗೊಳಿಸುವಂತಿಲ್ಲ. ಹೆಚ್ಚು ಹಾನಿಯುಂಟಾಗುವುದಕ್ಕೆ ಮೊದಲೇ ಪುನರ್ ರಚನೆಯ ಪ್ರಯತ್ನಗಳನ್ನು ಕೈಗೊಳ್ಳಬೇಕಿತ್ತು ಎಂಬ ಸಂಗತಿ ವಾಣಿಜ್ಯ ಸಂಬಂಧಗಳೊಂದಿಗೆ ಸಂಪರ್ಕಹೊಂದಿದ ಪ್ರಪಂಚ ತನ್ನ ನಾಣ್ಯ ವ್ಯವಸ್ಥೆಯನ್ನು ಸಾಮಾನ್ಯ ಮಾನದಂಡದ ಮೇಲೆ ಸ್ಥಾಪಿಸಬೇಕು ಎಂಬುದನ್ನೇ ತೋರಿಸುತ್ತದೆ.

# ಅಧ್ಯಾಯ ೧೬

# ಸುವರ್ಣ ಪ್ರಮಿತಿಯ ಕಡೆಗೆ

ಒಂದು ದೇಶದ ಹಣಕಾಸಿನ ಪರಿಸ್ಥಿತಿಯ ಸ್ಥಿರತೆ ಅದರ ಸಾರ್ವತ್ರಿಕ ಮೌಲ್ಯಮಾಪನದ ಜೀರ್ಣೋದ್ಧಾರದ ಮೇಲೆ ಸಾಕಷ್ಟು ಅವಲಂಬಿಸಿರುತ್ತದೆ. ಇದು, ಒಂದು ಸರಳ 'ಗುರಿ'ಯಾಗಿ ಕಂಡುಬಂದರೂ, ಇದರ 'ಸಾಧನೆ' ಸುಲಭವಾದುದ್ದಲ್ಲ. ಮೊದಲಲ್ಲಿ, ಈ ಗುರಿಯ ಸಾಧನೆಗೆ ಎರಡು ದಾರಿಗಳಿವೆ ಎಂದು ಅನಿಸುತ್ತದೆ. ಇತರ ದೇಶಗಳು ಸ್ವೀಕರಿಸಿದ ಲೋಹವನ್ನು ಭಾರತ ತನ್ನ ನಾಣ್ಯವನ್ನಾಗಿ ಮಾಡಿಕೊಳ್ಳುವುದು ಒಂದು ದಾರಿ. ಜಗತ್ತಿನ ಎಲ್ಲ ಪ್ರಮುಖ ದೇಶಗಳು 'ಸುವರ್ಣ ಪ್ರಮಿತಿ'ಯನ್ನು ಸ್ವೀಕರಿಸಿರುವುದರಿಂದ, ಬೆಳ್ಳಿ ನಾಣ್ಯ ಪದ್ಧತಿ ಹೊಂದಿರುವ ಭಾರತದಂಥ ದೇಶಗಳು, ತಮ್ಮ ಪದ್ಧತಿಯನ್ನು ಸುವರ್ಣ ಪ್ರಮಿತಿಗಾಗಿ ಕೈಬಿಡಲೇಬೇಕು. ಎರಡನೆಯ ದಾರಿ ಎಂದರೆ ಸುವರ್ಣ ಮತ್ತು ಬೆಳ್ಳಿ ಎರಡರ ಪ್ರಮಿತಿಯನ್ನು ಹೊಂದಿರುವ ರಾಷ್ಟ್ರಗಳು ಅವೆರಡನ್ನೂ, ವಾಸ್ತವದಲ್ಲಿ ಮುಂದುವರಿಸಿಕೊಂಡು ಹೋಗಬೇಕು ಹಾಗೂ ಚಿನ್ನ ಮತ್ತು ಬೆಳ್ಳಿಗಳ ಮಧ್ಯ ಒಂದು ಸ್ಥಿರ ವಿನಿಮಯದ ಅನುಪಾತವನ್ನು ಸ್ಥಾಪಿಸಬೇಕು; ಈ ರೀತಿ ಮಾಡುವುದರಿಂದ ಈ ಎರಡೂ ನಾಣ್ಯಗಳ ನಡುವೆ ಸಾರ್ವತ್ರಿಕವಾದ ಒಂದು ವಿನಿಮಯ ದರವು ಉಂಟಾಗುತ್ತದೆ.

ಭಾರತೀಯ 'ಬೆಳ್ಳಿ ಪ್ರಮಿತಿ' ಸುಧಾರಣೆಯ ಚಳವಳಿಯ ಇತಿಹಾಸ, ನಿಜವಾಗಿಯೂ ಎರಡು ಚಳವಳಿಗಳ ಅಂದರೆ ಸುವರ್ಣ ಮತ್ತು ಬೆಳ್ಳಿ ಪ್ರಮಿತಿಯ ಇತಿಹಾಸವಾಗಿದೆ. ಈ ವಿಷಯ ಏನೇ ಇರಲಿ, ಸುವರ್ಣ ಪ್ರಮಿತಿಯ ಅನುಷ್ಠಾನದ ಚಳವಳಿ ಭಾರತದಲ್ಲಿ ಮೊದಲು ಪ್ರಾರಂಭವಾಯಿತು. ೧೯ನೆಯ ಶತಮಾನದ ೬೦ರ ದಶಕದಲ್ಲಿಯೇ ಈ ಚಳವಳಿ ಉಗಮಿಸಿತು. ಅಂದಿನ ಸರ್ಕಾರ ೧೮೬೮ರಲ್ಲಿ ಸುವರ್ಣ ಪ್ರಮಿತಿಯ ಆರಂಭಕ್ಕಾಗಿ ಪ್ರಕಟನೆಯನ್ನು ಹೊರಡಿಸದೇ ಇದ್ದುದು ಈ ಚಳವಳಿಯ ಸೋಲನ್ನು ಸೂಚಿಸಿದರೂ, ಆ ಚಳವಳಿ ಅಲ್ಲಿಗೇ ಕೊನೆಗೊಳ್ಳಲಿಲ್ಲ. ನಾಲ್ಕು ವರ್ಷಗಳ ನಂತರ ೧೫ನೆಯ ಮೇ ೧೮೭೨ರ ಜ್ಞಾಪಕ ಪತ್ರದ ಪ್ರಕಾರ,[1] ಹಣಕಾಸಿನ ಮಂತ್ರಿಯಾದ ಸರ್ ಆರ್. ಟೆಂಪಲ್‌ರವರು ಈ ಚಳವಳಿಯನ್ನು ಪುನಶ್ಚೇತನಗೊಳಿಸಿದರು ಎಂಬ ಸಂಗತಿ ಅದು ಇನ್ನೂ ಜೀವಂತವಾಗಿತ್ತೆಂಬುದನ್ನು ತೋರಿಸುತ್ತದೆ. ಈತ, ತನ್ನ ಹಿಂದಿನವರಿಗಿಂತ ಒಂದು ಪ್ರಮುಖ ವಿಷಯದಲ್ಲಿ ಭಿನ್ನವಾಗಿದ್ದರು; ಹಿಂದಿನವರೆಲ್ಲರೂ ಬ್ರಿಟಿಷ್ 'ಸವರನ್ನು'ಗಳನ್ನು ಭಾರತದ ನಾಣ್ಯವಾಗಿಸಬೇಕೆಂದಿದ್ದರೆ, ಈತ, ಈ ಸ್ಥಾನವು ಭಾರತೀಯ ಚಿನ್ನದ ನಾಣ್ಯವಾದ 'ಮೊಹರ್'ಗೆ ಸಿಗಬೇಕು ಎಂದು ಅಪೇಕ್ಷಿಸಿದ್ದರು. ಆಗ, ಇಂಗ್ಲಿಷ್ ಸವರನ್ನುಗಳ ದರವನ್ನು ಸರಿಯಾಗಿ ನಿಗದಿಪಡಿಸುವ ಸಮಸ್ಯೆ ಅಧಿಕಾರಿಗಳನ್ನು ದಿಗ್ಭ್ರಮೆಗೊಳಿಸಿದ್ದರೂ, ಅವರು ಮೊಹರನ್ನು ನಾಣ್ಯಮಾಡುವುದಕ್ಕೆ ವಿಚಾರಮಾಡದಿದ್ದುದು ಆಶ್ಚರ್ಯಕರ ಸಂಗತಿಯಾಗಿತ್ತು. ಭಾರತದ ಟಂಕಸಾಲೆಗಳು, ಬಹಳ ವರ್ಷಗಳಿಂದಲೂ, 'ಮೊಹರನ್ನು' ಹಣವೆಂದು ಉಪಯೋಗಿಸುತ್ತ ಬಂದಿದ್ದವು ಮತ್ತು ಬ್ರಿಟಿಷ್ ಸವರನ್ನಿನೊಂದಿಗೆ ಮೊಹರಿನ ವಿನಿಮಯ ದರವನ್ನು ಸರಿಯಾಗಿ ನಿಗದಿಸಬಹುದಾಗಿತ್ತು.

---

೧. ಭಾರತೀಯ ನಾಣ್ಯ ಸಮಿತಿ ವರದಿ, ೧೮೯೮, ಅನುಬಂಧ ೧೨.

ಇಷ್ಟಾದರೂ ಹಿಂದಿನ ಅಧಿಕಾರಿಗಳು 'ಮೊಹರ'ನ್ನು ಹಣವೆಂದು ಪರಿಗಣಿಸಿರಲಿಲ್ಲ. ಅವರ ಈ ನಿಲುವು, ಅವರು ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಹೊಡೆಯಲು ಕಾತರರಾಗಿದ್ದಾರೆಂಬುದನ್ನು ಸೂಚಿಸುತ್ತದೆ. ಮೊದಲನೆಯದು, 'ಸವರನ್ನು'ಗಳನ್ನು ಸ್ವೀಕರಿಸಿ ಭಾರತದಲ್ಲಿ 'ಸುವರ್ಣ ಪ್ರಮಿತಿ'ಗೆ ಬೆಂಬಲವೀಯುವುದು ಮತ್ತು ಎರಡನೆಯದು, ಅಂದು ಪ್ರಚಲಿತವಿದ್ದ ನಾಣ್ಯಗಳ ಅಂತರರಾಷ್ಟ್ರೀಯ ಚಳವಳಿಗೆ ಪ್ರೋತ್ಸಾಹ ನೀಡುವುದು. ಈ ಕಾರಣವಾಗಿ, 'ಮೊಹರಿನ' ಉಪಯುಕ್ತತೆ ಸವರನ್ನಿಗಿಂತಲೂ ಕೆಳಮಟ್ಟದ್ದಾಗಿತ್ತು. ಆದರೆ, ಸರ್ ಆರ್. ಟೆಂಪಲ್‌ರವರು ಹಣಕಾಸಿನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಇವೆರಡರಲ್ಲಿ ಯಾವುದಾದರೂ ಒಂದು ನಾಣ್ಯವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲರೂ ಉಪಯೋಗಿಸುವಂತೆ ಮಾಡುವ ವಿಚಾರ ಮಾಯವಾಯಿತು. ಉದಾಹರಣೆಗೆ, ಲಾರ್ಡ್ ಹ್ಯಾಲಿಫೆಕ್ಸರು ಅಧ್ಯಕ್ಷ ಸ್ಥಾನವಹಿಸಿದ್ದ ಅಂತರರಾಷ್ಟ್ರೀಯ ನಾಣ್ಯದ ಇಂಗ್ಲಿಷ್ ಸಮಿತಿಯ ಎಲ್ಲ ಸಭೆಗಳಲ್ಲಿ ಇಂಗ್ಲೆಂಡಿನ ಸವರನ್ನಿನ ಮಾದರಿಯಲ್ಲಿನ ಬದಲಾವಣೆಗಳನ್ನು ವಿರೋಧಿಸಲಾಯಿತು. ಮಹತ್ವವುಳ್ಳ ವಿಷಯದ ಬಗ್ಗೆ ಯಾವುದೇ ಸರ್ಕಾರಿ ಒತ್ತಡಗಳಿಗೆ ಒಳಗಾಗದೆ, ಸರ್ ಆರ್. ಟೆಂಪಲ್‌ರವರು 'ಸವರನ್ನಿ'ನ 'ಮೊಹರ'ನ್ನು ಚಲಾವಣೆಯಲ್ಲಿ ಸ್ವೀಕರಿಸುವಂತೆ ಅಧಿಕಾರಿಗಳಿಗೆ ಶಿಫಾರಸು ಮಾಡಲು ಸ್ವತಂತ್ರರಿದ್ದರು.[೧]

"ನಾವು 'ಮೊಹರಿ'ನಲ್ಲಿ ಹದಿನೈದು, ಹತ್ತು ಮತ್ತು ಐದು ರೂಪಾಯಿಗಳ ಮೌಲ್ಯವನ್ನು ಕ್ರಮವಾಗಿ ಪ್ರತಿನಿಧಿಸುವ ನಾಣ್ಯಗಳನ್ನು ಹೊಂದಿರುತ್ತೇವೆ. ಮೊಹರಿನ ಈ ವಿವಿಧ ಮೌಲ್ಯದ ನಾಣ್ಯಗಳು, ತಮ್ಮ ತುಲನಾತ್ಮಕ ಮೌಲ್ಯವನ್ನು ಚಿನ್ನ ಮತ್ತು ಬೆಳ್ಳಿಯಲ್ಲಿ ಬಹು ಖಚಿತವಾಗಿ ಪ್ರತಿನಿಧಿಸುತ್ತವೆ.......... ಈ ನಾಣ್ಯಗಳನ್ನು ಅನಿಯಮಿತ ಶಾಸನಬದ್ಧ ಹಣವೆಂದು ಸಾರಬೇಕು, ಈ ಬಂಗಾರದ ತುಣುಕುಗಳು ರೂಪಾಯಿಯೊಂದಿಗೆ ತಮ್ಮ ಸ್ಥಿರವಾದ ಸಂಬಂಧವನ್ನು ಮುಂದುವರಿಸಬೇಕು, ಕೆಲಕಾಲ ರೂಪಾಯಿಯು ಅನಿಯಮಿತ ಶಾಸನಬದ್ಧ ಹಣವಾಗಿ ಉಳಿಯಲು, ಇದು ದ್ವಿ–ಪ್ರಮಿತಿಯ ತೊಂದರೆಗಳನ್ನು ತಾತ್ಕಾಲಿಕವಾಗಿ ಒಳಗೊಂಡರೂ, ಪರವಾನಿಗೆ ನೀಡಬೇಕು, ಈ ದ್ವಿ–ಪ್ರಮಿತಿಯ ತೊಂದರೆಯನ್ನು ಒಳಗೊಂಡ ಬದಲಾವಣೆಯ ಅವಧಿ ಸಾಧ್ಯವಾದಷ್ಟೂ ಕಡಿಮೆ ಅವಧಿಯದಾಗಿರಬೇಕು, ಬೆಳ್ಳಿಯನ್ನು ಸಾಂಕೇತಿಕ ನಾಣ್ಯದ ಸ್ಥಿತಿಗೆ ಇಳಿಸಿರುವುದರಿಂದ ಅದನ್ನು ನಿಯಮಿತ ಶಾಸನಬದ್ಧ ಹಣವನ್ನಾಗಿ ಮಾತ್ರ ಉಪಯೋಗಿಸಬೇಕು ಮತ್ತು ಅಂತಿಮವಾಗಿ 'ಬಂಗಾರ'ವು ಮಾತ್ರ ಶಾಸನಬದ್ಧ ಹಣವಾಗಿ ಉಳಿಯಬೇಕು" ಎಂದು ಸರ್ ಆರ್. ಟೆಂಪಲ್‌ರವರು ಬರೆದರು.

ಸರ್ ಆರ್. ಟೆಂಪಲ್‌ರವರು ೧೦ ರೂಪಾಯಿಗೆ ೧.೨೦ ಗ್ರಾಮ್ ಬಂಗಾರ (ಅಂದರೆ ೧೦೦ ಗ್ರಾಮ್‌ಗಳ ಅಪ್ಪಟ ಬಂಗಾರ)ದ ಅನುಪಾತವನ್ನು ಸೂಚಿಸಿದರು.[೨] ಆದರೆ ಅವರು ಸರ್ ಚಾರ್ಲ್ಸ್

೧. ಈ ವಿಷಯವೇನೇ ಇರಲಿ, "ನಾನು ಸವರನ್ನು ೧೦ ರೂ. ೪ ಆಣೆಗೆ ಸಮನಾದ ನಾಣ್ಯವೆಂದು ಪರಿಗಣಿಸುವುದಕ್ಕೆ ಆಕ್ಷೇಪಿಸುವುದಿಲ್ಲ. ಆದರೆ ಒಂದು ಸವರನ್ನಿನ ಬೆಲೆ ಇದ್ದಕ್ಕಿಂತ ಹೆಚ್ಚೆಂದಾಗ, ಅದನ್ನು ಬೆಳ್ಳಿಗೆ ಸಮನಾಗಿ ಬೆಲೆಕಟ್ಟುವಲ್ಲಿ ತೊಂದರೆ ಉಂಟಾಗಬಹುದು ಮತ್ತು ಸವರನ್ನನ್ನೂ ಭಾರತದಲ್ಲಿ 'ಹಣ'ದಂತೆ ಉಪಯೋಗಿಸುವಲ್ಲಿ ಇದೊಂದು ದೋಷವಾಗಬಹುದು. ಈ ದೋಷವನ್ನೇ ಒತ್ತೊತ್ತಿ ಹೇಳಿದರೆ, ಸವರನ್ನನ್ನು ಶಾಸನಬದ್ಧ ಹಣವನ್ನಾಗಿ ಭಾರತದಲ್ಲಿ ಮಾಡಲು ನಾನು ಒತ್ತಾಯಿಸುವುದಿಲ್ಲ. ಆದರೆ, ನಾವು ಯಾವುದೇ ಸಂದರ್ಭದಲ್ಲಿಯಾಗಲಿ, ಒಂದು ಸವರನ್ನನ್ನು ೧೦ ರೂ. ೪ ಆಣೆಗೆ ಸಮನಾಗಿ ಅವುಗಳನ್ನು ನಮ್ಮ ಖಜಾನೆಗಳಲ್ಲಿ ಪಡೆಯುತ್ತಾ ಹೋಗಬೇಕು." ಎಂದು ಸರ್ ಆರ್. ಟೆಂಪಲ್‌ರವರು ಹೇಳಿದರು.

೨. ಇದರ ಪ್ರಮಾಣ ೧೫೧ ಇದು ಬಂಗಾರದ ಸ್ವಲ್ಪ ಕಡಿಮೆ ಮೌಲ್ಯ

ಟ್ರೆವೆಲಿಯನ ಹುಚ್ಚು ಸಾಹಸದಲ್ಲಿ ಶಾಮೀಲಾಗಲಿಲ್ಲ.[೧] ಸುವರ್ಣ ಪ್ರಮಿತಿಯನ್ನು ಅನುಷ್ಠಾನಕ್ಕೆ ತರಲು ಅವರು ಎಷ್ಟು ಉತ್ಸುಕನಾಗಿದ್ದರೆಂದರೆ, ರೂಪಾಯಿಯ ಮತ್ತು ಬಂಗಾರದ ಪ್ರಮಾಣದಲ್ಲಿ, ರೂಪಾಯಿಯ ಪ್ರಮಾಣವನ್ನು ಬಂಗಾರದ ಪರವಾಗಿ ಬದಲಾಯಿಸಲು ಸಿದ್ಧವಿದ್ದರು.

"ಈ ಪ್ರಮಾಣದ ಪ್ರಶ್ನೆಯನ್ನು ಭಾರತ ಸರ್ಕಾರವು ನಿರ್ಧರಿಸಲೇಬೇಕು. ಚಿನ್ನವನ್ನು ನಾಣ್ಯವೆಂದು ಸ್ವೀಕರಿಸಲಿರುವ ಎಲ್ಲಾ ದೇಶಗಳು ಈಗಾಗಲೇ ಈ ಪ್ರಶ್ನೆಗಳನ್ನು ಬಗೆಹರಿಸಿಕೊಂಡಿವೆ. ಒಂದು ದೇಶದ ಹಣದ ಮತ್ತು ಚಿನ್ನದ ಪ್ರಮಾಣದಲ್ಲಿ ಸಮಾನತೆಯನ್ನು ತರುವುದು ಕಷ್ಟಕರ ಮತ್ತು ಪ್ರಮುಖ ಪ್ರಶ್ನೆಯಾದರೂ, ಬಗೆಹರಿಸಲು ಆಗದ ಸಮಸ್ಯೆಯೇನಲ್ಲ ಮತ್ತು ಭಾರತ ಈ ಸಮಸ್ಯೆಯನ್ನು ಬಗೆಹರಿಸಲೇಬೇಕು" ಎಂದು ಅವರು ಹೇಳಿದರು.

ಭಾರತದಲ್ಲಿ ಚಿನ್ನದ ನಾಣ್ಯವನ್ನು ಚಲಾವಣೆಯಲ್ಲಿ ತರುವ ಪ್ರಥಮ ಪ್ರಸ್ತಾವನೆಯ ರೂಪುರೇಷೆ ಹೀಗಿತ್ತು. ಈ ಪ್ರಸ್ತಾವನೆಯನ್ನು ದೇಶದಲ್ಲಿ ಬೆಳ್ಳಿಯ ಮೌಲ್ಯವು ಕೆಳಗಿಳಿಯುವ ಮುನ್ನವೇ ಕಲ್ಪಿಸಲಾಗಿತ್ತು; ಆದುದರಿಂದ ಈ ಕಲ್ಪನೆಯು ಈ ಹಿಂದಿನ ಚಿನ್ನದ ನಾಣ್ಯವನ್ನು ಚಲಾವಣೆಯಲ್ಲಿ ತರುವ ವಿಚಾರದ ಪರಿಣಾಮವಾಗಿತ್ತೇ ಹೊರತು ಅಂದಿನ ಬೆಳ್ಳಿಯ ಕುಗ್ಗುತ್ತಿರುವ ಮೌಲ್ಯದ ಸಮಸ್ಯೆಗೆ ಒಂದು ಪರಿಹಾರವಾಗಿರಲಿಲ್ಲ. ಒಳ್ಳೆಯ ದಿನಗಳಲ್ಲಿ ಬೆಳ್ಳಿಯಿಂದ ಚಿನ್ನದ ನಾಣ್ಯಕ್ಕೆ ಪರಿವರ್ತನೆಯನ್ನು ಒಂದು ವೇಳೆ ತಂದಲ್ಲಿ ಅದರಿಂದ ಉಂಟಾಗುವ ವೆಚ್ಚದ ಮೊತ್ತವನ್ನು ಕಡಿಮೆಗೊಳಿಸುವುದು ಸಾಧ್ಯ, ಇಲ್ಲದಿದ್ದಲ್ಲಿ ಈ ಪ್ರಕ್ರಿಯೆ ಬಹುವಾಗಿ ತೊಂದರೆದಾಯಕವಾಗಿರುತ್ತದೆ ಮತ್ತು ಹಲವಾರು ಇತರ ಯೋಜನೆಗಳನ್ನು ಅದು ವಿಫಲಗೊಳಿಸುತ್ತದೆ. ಇದಲ್ಲದೆ, ಮುಂಬರುವ ಬೆಳ್ಳಿಯ ಅನಾಣ್ಯೀಕರಣ ಪ್ರಕ್ರಿಯೆಯ ಸಂದಿಗ್ಧ ಪರಿಸ್ಥಿತಿಯ ಬಗ್ಗೆ ಜ್ಞಾಪನಾಪತ್ರವು ಸರ್ಕಾರಕ್ಕೆ ಎಚ್ಚರಿಕೆ ನೀಡಲಿಲ್ಲವೆಂದಲ್ಲ; ಏಕೆಂದರೆ ಬೆಳ್ಳಿಯ ಅನಾಣ್ಯೀಕರಣ ಪ್ರಕ್ರಿಯೆ ಆರಂಭವಾಗಿ ಆಗಲೇ ಎರಡು ವರ್ಷಗಳಾಗಿದ್ದವು.[೨] ಆದರೆ, ಈ ಪ್ರಕ್ರಿಯೆಯನ್ನು ತಡೆಹಿಡಿಯಲು ಸರ್ಕಾರವು ಯಾವ ಕ್ರಮವನ್ನು ಕೈಗೊಂಡಿರಲಿಲ್ಲ ಮತ್ತು ಸರ್ಕಾರದ ಈ ನಿಲುವು ಜನರಿಗೆ ಅರ್ಥವಾಗಲಿಲ್ಲ. ಭಾರತದಲ್ಲಿ ಚಿನ್ನ ನಾಣ್ಯ ಪದ್ಧತಿಯ ಅನುಷ್ಠಾನದ ಯೋಜನೆಯನ್ನು ಅದರ ಟಂಕಸಾಲೆಯ ಸಮರ್ಥ ಮೇಲ್ವಿಚಾರಕ ಜೆ.ಟಿ. ಸ್ಮಿಥ್‌ರವರು ನೀಡಿದ್ದರು. ಅವರ ಯೋಜನೆ, ಅಂದಿನ ಮೌಲ್ಯ ಕೆಳಗಿಳಿಯುತ್ತಿರುವ ಬೆಳ್ಳಿಯ ನಾಣ್ಯಪದ್ಧತಿಯ ಸಮಸ್ಯೆಗೆ ನಿವಾರಣೋಪಾಯವಾಗಿತ್ತು.[೩] ಅವರ ಯೋಜನೆಯನ್ನು "ಬೆಳ್ಳಿ ಮತ್ತು ಭಾರತೀಯ ವಿನಿಮಯಗಳು"[೪] ಎಂಬ ಪುಸ್ತಕದ ಪ್ರಥಮ ನಿಬಂಧದಲ್ಲಿ ನಾವು ಕಾಣಬಹುದು. ಅವರ ಮಾತಿನಲ್ಲಿಯೇ ಅದನ್ನು ಈ ರೀತಿ ವರ್ಣಿಸಬಹುದು.

"೬ ಮೌಲ್ಯ ಕೆಳಗಿಳಿಯುತ್ತಿರುವ ಬೆಳ್ಳಿ ನಾಣ್ಯಪದ್ಧತಿಯನ್ನು ಹೊಂದಿರುವ ಭಾರತೀಯ ವಿನಿಮಯ

---

೧. ಅಧ್ಯಾಯ ಒಂದರಲ್ಲಿ ಇದ್ದಂತೆ.

೨. ಈ ಪ್ರಸ್ತಾವನೆ ಮಾಡಿದಾಗ ವೈಸರಾಯರಾಗಿದ್ದ ಲಾರ್ಡ್ ನಾರ್ಥ್‌ಬ್ರೂಕ್‌ರು ಐ.ಸಿ.ಎಸ್. ೧೮೭೮, ೨, ೮೪೪೭ರ ಮುಂದೆ ತಮ್ಮ ಸಾಕ್ಷಿ ನೀಡುವಾಗ ಹೀಗೆಂದರು. "ನಾನು ಚಿನ್ನದ ನಾಣ್ಯಪದ್ಧತಿಯನ್ನು ಅದರ ಬೆಲೆ ಏರುತ್ತಿರುವಾಗ ಸ್ವೀಕರಿಸಲು ಸೂಚಿಸಲಾರೆ, ಹೀಗೆ ಹೇಳಲು ನನಗೆ ಸಾಧ್ಯವಾಗುವುದಿಲ್ಲ." ಆದರೆ ಇದು ಐತಿಹಾಸಿಕವಾಗಿ ನಿಜವಾಗಿರಲಿಲ್ಲ.

೩. ಸವರನ್ನು ಒಂದು ಘಟಕದಂತೆ ಭಾರತದಲ್ಲಿ ಸುವರ್ಣ ಪ್ರಮಿತಿಯ ಅನುಷ್ಠಾನದ ಈ ಹಿಂದೆ ನಡೆದ ೭೦ ರ ದಶಕದ ಚಳವಳಿಯಲ್ಲಿ ಅವರು ಭಾಗವಹಿಸಿದ್ದರು. ಆದರೆ, ಅವರು ಒಂದೇ ರೀತಿಯ ಅಂತರರಾಷ್ಟ್ರೀಯ ನಾಣ್ಯದ ಅನುಷ್ಠಾನದ ಚಳವಳಿಯ ಬೆಂಬಲಿಗರಾಗಿ ಮಾತ್ರ ಭಾಗವಹಿಸಿದ್ದರು.

೪. ಲಂಡನ್, ಎಫಿಂಗ್‌ಹ್ಯಾಮ್ ವಿಲ್ಸನ್, ೧೮೭೬.

ದರವನ್ನು ಯಾವುದೇ ಆಘಾತ ಮತ್ತು ಸದ್ದುಗದ್ದಲಗಳಿಲ್ಲದೆ ಸಾಮಾನ್ಯಸ್ಥಿತಿಗೆ ಮತ್ತೆ ತರುವುದು ಹಿಂದಿನಂತೆ ಈಗ ಸರಳವಾಗಿಲ್ಲ. ಏಕೆಂದರೆ ಈಗಾಗಲೇ ಮೌಲ್ಯ ಸಾಕಷ್ಟು ಕೆಳಗಿಳಿದಿದೆ. ಆದರೂ, ಕ್ರಮಗಳನ್ನು ತೆಗೆದುಕೊಳ್ಳಲು ತೀರ್ಮಾನಿಸಿದ್ದೇ ಆದರೆ, ಹೆಚ್ಚಿನ ಆಘಾತವಿಲ್ಲದೆ, ದೇಶೀಯ ವ್ಯವಸ್ಥೆಯಲ್ಲಿ ಬೆಳ್ಳಿಗೆ ಅದರ ಹಿಂದಿನ ಬೆಲೆಯನ್ನು ತಂದುಕೊಡುವುದಕ್ಕೇ ಈಗಲೂ ಅವಕಾಶವಿದೆ. ಹಾಗೆ ಮಾಡಲು ತೆಗೆದುಕೊಳ್ಳಬೇಕಾದ ಮುಖ್ಯ ಕ್ರಮವೆಂದರೆ ಖಾಸಗಿಯಾಗಿ ಅದನ್ನು ಟಂಕಿಸುವುದನ್ನು ತಡೆಯುವುದು. ಅಷ್ಟೇ ಅಲ್ಲದೆ, ಅದರ ಆಯಾತವನ್ನು ನಿರ್ಬಂಧಿಸಬೇಕು ಅಥವಾ ವಿದೇಶೀ ಬೆಳ್ಳಿಯ ನಾಣ್ಯಗಳ ಚಲಾವಣೆಯನ್ನಾದರೂ ಹಿಡಿತದಲ್ಲಿಡಬೇಕು."

"೭ ಇವೆಲ್ಲ ಹೇಗೆ ಕಾರ್ಯಾಚರಣೆಯಲ್ಲಿ ಬರುತ್ತವೆಂಬುದನ್ನು ವಿವರಿಸಲು, ನಾನು ಕೆಳಗಿನ ಅಂಶಗಳನ್ನು ಗಮನಿಸಬೇಕಾಗುತ್ತದೆ ಎಂದರು.

"೮. ಭಾರತ ಸಾಮ್ರಾಜ್ಯದ ಆಂತರಿಕ ವ್ಯಾಪಾರ ಹೆಚ್ಚಾಗಿದೆ ಮತ್ತು ಹೆಚ್ಚಾಗುತ್ತಲಿದೆ.........

"೯. ಕಾರಣವೇನೇ ಇರಲಿ, ಭಾರತದ ಆಂತರಿಕ ವ್ಯಾಪಾರ, ಈ ಶತಮಾನದ ಆರಂಭದಿಂದಲೂ ಅಂದರೆ ಈ ಹಿಂದಿನ ೩೫ ವರ್ಷಗಳಲ್ಲಿ ಪ್ರತಿವರ್ಷ ಸರಾಸರಿ ೫ ಮಿಲಿಯನ್ ಪೌಂಡುಗಳಷ್ಟಾಗಿದೆ. ಇದಲ್ಲದೆ, ಇದೇ ಅವಧಿಯಲ್ಲಿ ಬಂಗಾರದ ಗಟ್ಟಿಯ ಆಯಾತವು ಬಾಕಿ ನಿರ್ಯಾತಕ್ಕಿಂತ ೨$^{1}/_{3}$ ಯಷ್ಟು ಹೆಚ್ಚಾಗಿದೆ. ಮತ್ತು ಕಳೆದ ಕೊನೆಯ ೨೦ ವರ್ಷಗಳಲ್ಲಿ ಇದರ ಮೊತ್ತ ಪ್ರತಿವರ್ಷ ೪ ದಶಲಕ್ಷಕ್ಕಿಂತ ಹೆಚ್ಚು ಇತ್ತೆಂದು ಸೂಚಿಸುತ್ತದೆ.

"೧೦. ಪರಿಸ್ಥಿತಿ ಹೀಗಿರುವಾಗ, ಒಂದು ವೇಳೆ ಬೆಳ್ಳಿಯ ರೂಪಾಯಿಯ ಪೂರೈಕೆಯನ್ನು ನಿಲ್ಲಿಸಿದಾಗ ಅದರ ಸ್ಥಾನೀಯ ಮೌಲ್ಯ, ವಸ್ತುಗಳ ಮೌಲ್ಯಕ್ಕಿಂತ ಹೆಚ್ಚಾಗುತ್ತದೆ. ಈ ಹೆಚ್ಚಳ ೧೮೭೦ಕ್ಕಿಂತ ೫ ವರ್ಷಗಳ ಪೂರ್ವದಲ್ಲಿದ್ದ ಮೌಲ್ಯ (೧೦ ರೂಪಾಯಿ = ಒಂದು ಸವರನ್ನು) ಅಂದರೆ ಬಂಗಾರದೊಂದಿಗೆ ಇದ್ದ ಸಮಮೌಲ್ಯ ವಾಗಿರುತ್ತದೆ.

"೧೧. ಬೆಳ್ಳಿಯು ಆ ಮಟ್ಟದ ಹೆಚ್ಚಿನ ಮೌಲ್ಯ ಮುಟ್ಟಿದ ಮೇಲೆ, ವ್ಯಾಪಾರಿಗಳು ತಮ್ಮ ಹಿತಾಸಕ್ತಿಯನ್ನು ಕಾಪಾಡುವುದಕ್ಕಾಗಿಯೇ ಬಂಗಾರವನ್ನು ಭಾರತೀಯ ನಾಣ್ಯಮಾಡಲು ತರುತ್ತಾರೆ; ಹೀಗೆ ಮಾಡುವುದರಿಂದ ಚಿನ್ನದ ನಾಣ್ಯ ನೀಡುವ ಹೆಚ್ಚಿನ ಲಾಭಾಂಶವನ್ನು ಅವರು ಪಡೆಯುತ್ತಾರೆ.

"೧೨. ಈ ರೀತಿಯಾಗಿ ಬಂಗಾರವನ್ನು ನಿಧಾನವಾಗಿ ಭಾರತದೊಳಗೆ ತರಬಹುದು. ಈಗಿರುವ ಪೌಂಡು ಮೊತ್ತಕ್ಕಿಂತ ಇನ್ನು ಹೆಚ್ಚಿನ ಐದು ದಶಲಕ್ಷ ಪೌಂಡುಗಳು ಹೆಚ್ಚುತ್ತಿರುವ ವಿದೇಶೀ ವ್ಯಾಪಾರಕ್ಕಾಗಿ ಪ್ರತಿವರ್ಷ ಬೇಕಾಗುತ್ತವೆ. ಈ ಹೆಚ್ಚುತ್ತಿರುವ ವ್ಯಾಪಾರಕ್ಕಾಗಿ ಅಧಿಕ ಮೊತ್ತದ ಬೆಳ್ಳಿ ನಾಣ್ಯಗಳನ್ನು ಚಲಾವಣೆಯಲ್ಲಿ ತರದಿರುವುದರಿಂದ ಬೆಳ್ಳಿಯ ಶೇಖರಣೆ ಉಂಟಾಗುತ್ತದೆ........

"೧೩. ಆದುದರಿಂದ ಮುನ್ಸೂಚನೆ ನೀಡಿ ಖಾಸಗಿ ವ್ಯಕ್ತಿಗಳಿಗೆ ಬೆಳ್ಳಿಯ ನಾಣ್ಯ ತಯಾರಿಸುವುದನ್ನು ಹಾಗೂ ಬೆಳ್ಳಿಯ ಗಟ್ಟಿಯ ಮೇಲೆ ಮುಂಗಡ ಹಣ ಕೊಡುವುದನ್ನು ಕೈಬಿಡಬೇಕು; ೧೮೭೦ರ ಕಾಯಿದೆ ೨೩ರ ಪ್ರಕಾರ ಸ್ಥಳೀಯ ಜನ ಸರ್ಕಾರದಿಂದ ಬೆಳ್ಳಿಯ ಗಟ್ಟಿಯನ್ನು ಪಡೆಯುವುದು ಮತ್ತು ಅದನ್ನು ನಾಣ್ಯದಲ್ಲಿ ಪರಿವರ್ತಿಸುವ ಭಾಗವನ್ನು ರದ್ದುಪಡಿಸಬೇಕು, ಯಾವಾಗ ಆವಶ್ಯಕ ಎನಿಸುತ್ತದೆಯೋ ಆಗ ಚಲಾವಣೆಯ ಬೆಳ್ಳಿಯ ನಾಣ್ಯದಲ್ಲಿ ಕಡಿಮೆ ಬಿದ್ದ ಮೊತ್ತವನ್ನು ತಾನೇ ಭರಿಸುವ ಅಧಿಕಾರ ಸರ್ಕಾರ ತನ್ನ ಕೈಯಲ್ಲಿಯೇ ಇಟ್ಟುಕೊಳ್ಳಬೇಕು, ಸರ್ಕಾರವು ೩೮ ರೂಪಾಯಿ ಮತ್ತು ೧೪ ಆಣೆಗೆ ಒಂದು ಔನ್ಸ್‌ನಂತೆ ಚಿನ್ನದ ಸವರನ್ನನ್ನು ತೆಗೆದುಕೊಳ್ಳಬೇಕು ಮತ್ತು ಅದನ್ನು ೩೮ ರೂಪಾಯಿ ಮತ್ತು ೧೫ ಆಣೆಗೆ ಒಂದು

ಸವರನ್ನಿನ ದರದಲ್ಲಿ ಒಂದು ಅಥವಾ ಅರ್ಧ ಸವರನ್ನಿನ ರೂಪದಲ್ಲಿ ಅಥವಾ ಅದೇ ದರದಲ್ಲಿ ೧೦ ಅಥವಾ ೫ ರೂಪಾಯಿಗಳ ನಾಣ್ಯಗಳನ್ನಾಗಿ ಪರಿವರ್ತಿಸಬೇಕು. ಹಾಗೂ ಶಾಸನಬದ್ಧವಾದರೂ ಬೇಡಿದಾಗ ಬಂಗಾರ ರೂಪದಲ್ಲಿ ನೀಡಲಾರದ ಹಣವೆಂದು ಇವುಗಳನ್ನು ಸಾರಬೇಕು, ಹಿಂದಿನಂತೆ ಯಥಾರೀತಿ ಅಸ್ತಿತ್ವದಲ್ಲಿರುವ ಬೆಳ್ಳಿ ರೂಪಾಯಿಗಳು ಶಾಸನಬದ್ಧ ಹಣವಾಗಿ ಮುಂದುವರಿಸಬೇಕು"[೧]

ಸ್ಮಿಥ್‌ರವರು ಚಿನ್ನದ ನಾಣ್ಯಗಳನ್ನು ಚಲಾವಣೆಯಲ್ಲಿ ತರುವ ತಮ್ಮ ಯೋಜನೆ ಮಂಡಿಸಿದ ದಿನಗಳಲ್ಲಿಯೇ ಬೆಳ್ಳಿಯ ಬೆಲೆ ಕೆಳಗಿಳಿದುದು ಇವರ ಮುಂಬರುವ ಯೋಜನೆಗೆ ಜನರಿಂದ ಸಾಕಷ್ಟು ಬೆಂಬಲ ತಂದಿತು. "ಈ ಬೆಂಬಲವನ್ನು ಬಂಗಾಳ ವಾಣಿಜ್ಯ ಮಂಡಳಿಯ ಜುಲೈ ೧೫, ೧೮೭೬ರ ನಿರ್ಣಯದಲ್ಲಿ ನಾವು ನೋಡಬಹುದು. ೧೮೭೦ರ ೨೩ನೆ ಕಾಯಿದೆ ೧೯ನೆಯ ಕಲಮಿನ ಪ್ರಕಾರ ಹಣ ತಯಾರಿಸಲು ಪಡೆಯುವ ಎಲ್ಲಾ ಬೆಳ್ಳಿಗಟ್ಟಿಗಳನ್ನು ಟಂಕಸಾಲೆಗಳು ಪಡೆಯಲೇಬೇಕು ಮತ್ತು ೧೮೭೧ರ ಮೂರನೆಯ ಕಾಯಿದೆಯ ವಿಭಾಗ ಎರಡು, ಉಪವ್ಯಾಖ್ಯೆ (ಬ)ದ ಪ್ರಕಾರ ಜನರಿಗೆ ನಾಣ್ಯ ಕೊಡಮಾಡುವ ವಿಭಾಗ, ಹೊರದೇಶದಿಂದ ಕಳುಹಿಸಲಾದ ಬೆಳ್ಳಿಯ ಗಟ್ಟಿಗಳನ್ನು ನಾಣ್ಯಗಳಾಗಿ ಪರಿವರ್ತಿಸಿ ಅವುಗಳನ್ನು ಜನತೆಗೆ ನೀಡುವುದನ್ನು ಸ್ವಲ್ಪಮಟ್ಟಿಗೆ ನಿಲ್ಲಿಸಬೇಕು ಹಾಗೂ ಬೆಳ್ಳಿ ಹಣವನ್ನು ಜನತೆಗೆ ನೀಡುವುದನ್ನು ನಿಲ್ಲಿಸಿದ ಸಮಯದಲ್ಲಿ ಅಥವಾ ಪುನಃ ಪರವಾನಿಗೆ ನೀಡುವವರೆಗೆ ರೂಪಾಯಿಯ ನಾಣ್ಯಗಳನ್ನು ವಿದೇಶೀ ಬಂದರುಗಳಿಂದ ಆಯಾತ ಮಾಡಿಕೊಳ್ಳುವುದು ಕಾನೂನುಬಾಹಿರವೆಂದು ಸಾರಬೇಕು ಎಂದು ಬಂಗಾಲ ವಾಣಿಜ್ಯ ಮಂಡಳಿಯು ಅಭಿಪ್ರಾಯಪಟ್ಟಿತು. ಇಂಥದೇ ಇನ್ನೊಂದು ಯೋಜನೆಯನ್ನು 'ಕಲ್ಕತ್ತೆಯ ವ್ಯಾಪಾರಿ ಸಂಸ್ಥೆ'ಯು ಸರ್ಕಾರದ ಮುಂದಿಟ್ಟಿತು. ಈ ವೇಳೆಗೆಲ್ಲ ಭಾರತ ನಾಣ್ಯದ ವಿನಿಮಯ ದರದಲ್ಲಿನ ಇಳಿತವು ತನ್ನ ದುಷ್ಪರಿಣಾಮವನ್ನು ಸರ್ಕಾರದ ಹಣಕಾಸಿನ ಪರಿಸ್ಥಿತಿಯ ಮೇಲೆ ಬೀರಲಾರಂಭಿಸಿತ್ತು. ಆದುದರಿಂದ, ಸರ್ ವಿಲಿಯಮ್ ಮ್ಯೂರ್ ತಮ್ಮ ೧೮೭೬–೭೭ರ ಹಣಕಾಸಿನ ಹೇಳಿಕೆಯಲ್ಲಿ ಅಂದಿನ ಪರಿಸ್ಥಿತಿಯ ಬಗ್ಗೆ ಈ ರೀತಿ ಟಿಪ್ಪಣಿಮಾಡಿದ್ದರು.

"ಬೆಳ್ಳಿಯ ಮೌಲ್ಯದಲ್ಲಿ ಒಮ್ಮಿಂದೊಮ್ಮೆಲೆ ಉಂಟಾದ ಇಳಿತ ಮತ್ತು ಇದರ ಪರಿಣಾಮವಾಗಿ ಭಾರತ ಸರ್ಕಾರ ಇಂಗ್ಲೆಂಡಿಗೆ ಕೊಡಬೇಕಾದ ಹಣದ ಮೊತ್ತದಲ್ಲಿನ ೧೫ ದಶಲಕ್ಷ ಪೌಂಡುಗಳ ಹೆಚ್ಚಳ ಈ ದೇಶದ 'ಭವಿಷ್ಯದ' ಮೇಲೆ ನಿಸ್ಸಂದೇಹವಾಗಿ ತನ್ನ ಕರಾಳ ಛಾಯೆಯನ್ನು ಬೀಳುವಂತೆ ಮಾಡಿದೆ. ಈ ಗಂಡಾಂತರ ಯಾವ ದೃಷ್ಟಿಯಿಂದ ವೀಕ್ಷಿಸಿದರೂ, ಈ ಹಿಂದೆ ಒದಗಿದ ಗಂಡಾಂತರಗಳಿಗಿಂತ ಭಯಾನಕವಾದುದಾಗಿದೆ. ಯುದ್ಧ, ಬರಗಾಲ ಮತ್ತು ಅನಾವೃಷ್ಟಿಗಳು ಆಗಾಗ್ಗೆ ದೇಶದ ಖಜಾನೆಗೆ ಹಾನಿಯನ್ನು ಉಂಟುಮಾಡುತ್ತಿದ್ದರೂ, ಬೆಳ್ಳಿಯ ಬೆಲೆಯಲ್ಲಿನ ಇಳಿತದ ಸಂದರ್ಭ ಈ ಎಲ್ಲ ನೈಸರ್ಗಿಕ ಪ್ರಕೋಪಗಳು ಉಂಟುಮಾಡುವ ಹಾನಿಗಿಂತ ಹೆಚ್ಚು ತೀಕ್ಷ್ಣವಾದುದ್ದಾಗಿದೆ. ಮೇಲಾಗಿ, ನೈಸರ್ಗಿಕ ಪ್ರಕೋಪಗಳು ಆಗಾಗ್ಗೆ ಬರುತ್ತವೆ ಹಾಗೂ ಹೋಗುತ್ತವೆ ಮತ್ತು ಅವುಗಳು ಉಂಟುಮಾಡುವ ಹಾನಿ ಮಿತಿಯಾಗಿರುತ್ತದೆ. ಆದರೆ, ಬೆಳ್ಳಿಯ ನೆಲೆಯಲ್ಲಿನ ಇಳಿತದಿಂದ ಉಂಟಾದ ದುಷ್ಪರಿಣಾಮಗಳು ದೇಶಕ್ಕೆ ಇಂದು ಹಿಂಸೆ ಕೊಡವುದರ ಜೊತೆಗೆ ಮುಂದೆಯೂ ಹಾನಿಯನ್ನು ಉಂಟುಮಾಡುತ್ತವೆ ಹಾಗೂ ಇವುಗಳ ಪರಿಣಾಮದ

---

೧. ಒಂದು ಭಾರತೀಯ ಬೆಳ್ಳಿ ರೂಪಾಯಿಯ ಮೌಲ್ಯ ೨ಶಿಲಿಂಗ್ ಬ್ರಿಟಿಷ್ ಬಂಗಾರಕ್ಕೆ ಸಮವೆಂದು ಈ ರೀತಿ ಲೆಕ್ಕ ಹಾಕಿತ್ತು. ರೂಪಾಯಿ – ಪೌಂಡಿನ ವಿನಿಮಯ ೧೮೭೬ರಲ್ಲಿ ೧ ರೂಪಾಯಿ – ೧ ಷಿಲಿಂಗ್ ೯.೬೪೫ ಪೆನ್ಸ್ ಆಗಿತ್ತು. ಈ ವಿನಿಮಯ ದರ ನಾಣ್ಯಕ್ಕಿಂತಲೂ ಬಂಗಾರದ ಮೌಲ್ಯ ಸ್ವಲ್ಪ ಹೆಚ್ಚಿಸಿತ್ತು. ಆದರೆ ಈ ಹೆಚ್ಚಳ ರೂಪಾಯಿ ನಾಣ್ಯಮಾಡುವುದನ್ನು ನಿಲ್ಲಿಸಿದಾಗ ಇಲ್ಲವಾಗುವಂತಹದಾಗಿತ್ತು.

ಅಂತ್ಯವನ್ನು ಊಹಿಸಲಾಗುವುದಿಲ್ಲ. ಇದರಿಂದಾಗಿ ದೇಶದ ಭವಿಷ್ಯ ಅನಿಶ್ಚಿತತೆಯಿಂದ ಕೂಡಿದೆ.[೧]

ಇಂತಹ ಪರಿಸ್ಥಿತಿಯಲ್ಲಿ ಸರ್ಕಾರವು ಇತರರನ್ನಲ್ಲದಿದ್ದರೂ, ತನ್ನನ್ನು ತಾನು ರಕ್ಷಿಸಿಕೊಳ್ಳಲು ಕೆಲವು ಕ್ರಮಗಳನ್ನು ತೆಗೆದುಕೊಳ್ಳುತ್ತದೆಯೆಂದು ನಿರೀಕ್ಷಿಸುವುದು ಸ್ವಾಭಾವಿಕವಾಗಿತ್ತು. ಆದರೆ ಇಂತಹ ಯಾವ ಕ್ರಮಗಳನ್ನೂ ತೆಗೆದುಕೊಳ್ಳುವ ಪ್ರಯತ್ನವನ್ನು ಮಾಡದ ಸರ್ಕಾರವು, ಈ ಬಗ್ಗೆ ತನ್ನ ಮೇಲೆ ಬಂಗಾಳದ ವಾಣಿಜ್ಯ ಮಂಡಲಿಯು ಒತ್ತಡವನ್ನು ತಂದಾಗ, ಒಬ್ಬ ಸಾಮಾನ್ಯ ಮನುಷ್ಯನ ರೀತಿಯಲ್ಲಿ ತನ್ನ ನಿಷ್ಕ್ರಿಯತೆಯನ್ನು ಪ್ರದರ್ಶಿಸಿತು. ಭಾರತೀಯ ಟಂಕಸಾಲೆಗಳಿಗೆ ಚಿನ್ನದ ನಾಣ್ಯಮಾಡಲು ಪರವಾನಗಿಯನ್ನು ನೀಡಬೇಕೆಂಬ ಸಲಹೆ ಬಂಗಾಳ ಚೇಂಬರ್ಸ್‌ರವರ ಪ್ರಸ್ತಾವನೆಯಲ್ಲಿ ಇರಲಿಲ್ಲವೆಂಬುದು ನಿಜವಾಗಿತ್ತು. ಈ ತಪ್ಪನ್ನು ಸರ್ಕಾರ ಚಾಕಚಕ್ಯತೆಯಿಂದ ಅದಕ್ಕೆ ತೋರಿಸಿ ತನ್ನ ಮೇಲ್ಮೆಯನ್ನು ಸಾರಿತ್ತು.

ಸರ್ಕಾರವು "ಮಂಡಲಿಯು ಚಿನ್ನದ ಮುಕ್ತ ನಾಣ್ಯೀಕರಣದ ಪ್ರಸ್ತಾಪವನ್ನು ಮುಂದಿಟ್ಟಿದ್ದಿದ್ದರೆ ಅದು ಟಂಕಸಾಲೆಯನ್ನು ಒಂದು ಲೋಹದ ನಾಣ್ಯದ ತಯಾರಿಕೆಗಾಗಿ ತೆರೆದಿಟ್ಟು, ಅಲ್ಲಿ ಚಲಾವಣೆಯಲ್ಲಿ ಅಧಿಕೃತವಾಗಿ ಇರಬಹುದಾದ ಇನ್ನೊಂದು ಲೋಹದ ನಾಣ್ಯದ ತಯಾರಿಕೆಯನ್ನು ತಾತ್ಕಾಲಿಕವಾಗಿಯಾದರೂ ನಿಲ್ಲಿಸಬೇಕೆಂಬ ನಿರ್ಣಯದಷ್ಟು ಮಾರಕವಾಗುತ್ತಿರಲಿಲ್ಲ" ಎಂದು ಮಂಡಲಿಗೆ ಸ್ಪಷ್ಟವಾಗಿ ತಿಳಿಸಿತು.

ಚೇಂಬರ್ ಮಾಡಿದಂಥ ಶಿಫಾರಸನ್ನು ಕರ್ನಲ್ ಜೆ.ಟಿ. ಸ್ಮಿಥ್‌ರವರೂ ಮಾಡಿದ್ದರು; ಇದನ್ನು ಸಹ ಸರ್ಕಾರ ಅನುಷ್ಠಾನದಲ್ಲಿ ತರಲಿಲ್ಲ. ಇದು ಹೋಗಲಿ ಸರ್ಕಾರ, ಯಾವ ಆಕ್ಷೇಪಣೆಯೂ ಇಲ್ಲದ ಶಿಫಾರಸುಗಳನ್ನು ಸಹ ಅನುಷ್ಠಾನದಲ್ಲಿ ತರಲಿಲ್ಲ. ಇದಕ್ಕೆ ಅಂದಿನ ಪ್ರಚಲಿತ ಹಣಕಾಸಿನ ಏರುಪೇರುಗಳಿಗೆ ಇವು ಕಾರಣಗಳಾಗುತ್ತವೆ ಎಂಬುದೇ ಕಾರಣವಾಗಿತ್ತು. "ಅಮೂಲ್ಯ ಲೋಹಗಳ ಸಮತೋಲನದಲ್ಲಿನ ಏರುಪೇರಿಗೆ" ಅನೇಕ ವಿಧದ ಕಾರಣಗಳಿವೆ ಎಂಬುದು ಸರ್ಕಾರದ ದೃಷ್ಟಿಯಲ್ಲಿದ್ದಿತು.[೨]

೧) ಚಿನ್ನದ ಮೌಲ್ಯದಲ್ಲಿ ಏರುಪೇರಾಗದೆಯೇ ಬೆಳ್ಳಿಯ ಮೌಲ್ಯದಲ್ಲಿನ ಇಳಿತ;
೨) ಬೆಳ್ಳಿಯ ಮೌಲ್ಯದಲ್ಲಿ ಏನೂ ಬದಲಾವಣೆಯಾಗದೆಯೇ, ಚಿನ್ನದ ಮೌಲ್ಯದಲ್ಲಿನ ಹೆಚ್ಚಳ;
೩) ಬಂಗಾರದ ಮೌಲ್ಯದಲ್ಲಿನ ಹೆಚ್ಚಳ ಹಾಗೂ ಬೆಳ್ಳಿಯ ಮೌಲ್ಯದಲ್ಲಿನ ಇಳಿತ;
೪) ಚಿನ್ನ ಮತ್ತು ಬೆಳ್ಳಿ ಇವೆರಡರ ಮೌಲ್ಯದಲ್ಲಿನ ಹೆಚ್ಚಳ, ಆದರೆ ಬೆಳ್ಳಿಗಿಂತಲೂ ಬಂಗಾರದ ಮೌಲ್ಯದಲ್ಲಿ ಅಧಿಕ ಹೆಚ್ಚಳ, ಮತ್ತು
೫) ಎರಡೂ ಲೋಹಗಳ ಮೌಲ್ಯದಲ್ಲಿನ ಇಳಿತ; ಆದರೆ ಬಂಗಾರಕ್ಕಿಂತಲೂ ಬೆಳ್ಳಿಯ ಮೌಲ್ಯದಲ್ಲಿನ ತೀಕ್ಷ್ಣ ಇಳಿತ.

ಮುಂದುವರಿದು, ಅತಾರ್ಕಿಕವಾದ ಮತ್ತು ಕೇವಲ ಪುಸ್ತಕ ಪಾಂಡಿತ್ಯವನ್ನು ಮಾತ್ರ ಪ್ರದರ್ಶಿಸುವ ನಾಣ್ಯಪದ್ಧತಿಯಲ್ಲಿ ಸುಧಾರಣೆಯನ್ನು ತರುವ 'ಸುಧಾರಕರಿಗೆ' ಈ ಕೆಳಕಂಡಂತೆ ಅದು ಮುನ್ನೆಚ್ಚರಿಕೆ ನೀಡಿತು; "ಚಿನ್ನದ ಮೌಲ್ಯದಲ್ಲಿ ಬದಲಾವಣೆಗಳಿಂದುಂಟಾಗುವ ಪರಿಣಾಮಗಳನ್ನು ನಿವಾರಿಸಲು ಸೂಚಿಸಿರುವ ಕ್ರಮಗಳು ಬೆಳ್ಳಿಯ ಮೌಲ್ಯದ ಕುಸಿತದ ಪರಿಣಾಮಗಳನ್ನು ನಿವಾರಿಸಲು ನಿಷ್ಪ್ರಯೋಜಕವಾಗುತ್ತವೆ."[೩]

ಮೇಲಿನ ಎಲ್ಲ ಸಾಧ್ಯತೆಗಳಲ್ಲಿ, "೧೮೭೨ ರ ಮಾರ್ಚ್‌ನಿಂದ ಚಿನ್ನದ ಬೆಲೆ ಏರಿದ ಅಂಶಮಾತ್ರ

---

೧. ಪು. ೯೩
೨. ಭಾರತದ ಸರ್ಕಾರದ ಬೆಳ್ಳಿಯ ಮೌಲ್ಯದಲ್ಲಿ ಇಳಿತಕ್ಕೆ ಸಂಬಂಧಿಸಿದ ನಿರ್ಣಯ, ದಿನಾಂಕ ೨೨–೯–೧೮೭೬, ಪರಿಚ್ಛೇದ ೬, ೪೪೯ರ ಕಾಮನ್ಸ್ ಕಾಗದ, ೧೮೯೩
೩. ೪೪೯ ನೆಯ ಕಾಗದ, ೧೮೯೩.

ನಿಜವಾದದ್ದಾಗಿತ್ತು”.[೧] ಆದುದರಿಂದ, ನಾಣ್ಯಪದ್ಧತಿಯ ಸುಧಾರಣೆಯನ್ನೇನಾದರೂ ಕೈಗೊಳ್ಳಬೇಕಾಗಿದ್ದಲ್ಲಿ, ಅದು ‘ಸುವರ್ಣ ಪ್ರಮಿತಿ’ಯ ದೇಶಗಳಲ್ಲಿ ಉಂಟಾಗಬೇಕಾಗಿತ್ತು. ಭಾರತವು, ಬೆಳ್ಳಿ ಪ್ರಮಿತಿಯ ದೇಶವಾದದ್ದರಿಂದ, ತನ್ನ ನಾಣ್ಯಪದ್ಧತಿಯಲ್ಲಿ ಸುಧಾರಣೆಯನ್ನು ತರುವ ಅವಸರ ಅದಕ್ಕೆ ಇರಲಿಲ್ಲ. ಆದುದರಿಂದ, ನಾಣ್ಯಪದ್ಧತಿಯಲ್ಲಿನ ಸುಧಾರಣೆಯಂಥ ಮಹತ್ವದ ಸಮಸ್ಯೆಯ ನಿವಾರಣೆಯ ತನ್ನ ನೀತಿಯನ್ನು ರೂಪಿಸುವಲ್ಲಿ ಪರಿಸ್ಥಿತಿಯ ಬಿಕ್ಕಟ್ಟಿನ ಅವಸರ ತನ್ನ ಮೇಲೆ ಪ್ರಭಾವ ಬೀರಲು ಅದು ಅನುವು ಮಾಡಿಕೊಡಲಿಲ್ಲ. ಅದರ ಇಂಥ ವಿಚಾರ ಅದರ ವಿಳಂಬದ ನೀತಿಯನ್ನು ಸೂಚಿಸುವುದಿಲ್ಲ. ಮತ್ತೊಂದು ಮಾತಿನಲ್ಲಿ ಹೇಳುವುದಾದರೆ, ಇದು ಸರ್ಕಾರದ ಎಚ್ಚರವನ್ನು ನಮಗೆ ತಿಳಿಯಪಡಿಸುತ್ತದೆ. ಈ ‘ಎಚ್ಚರ’ವನ್ನು ಪ್ರತಿಬಿಂಬಿಸುವ, ತನ್ನ ಕಾದುನೋಡುವ ನಿರ್ಣಯವನ್ನು ೧೩ನೆಯ ಅಕ್ಟೋಬರ್ ೧೮೭೬ ರಂದು ಅದು ಬ್ರಿಟಿಷ್ ಸರ್ಕಾರದ ಕಾರ್ಯದರ್ಶಿಗೆ ವಿಶದವಾಗಿ ಹಾಗೂ ನೇರವಾಗಿ ತಿಳಿಯಪಡಿಸಿತು. ಭಾರತ ಸರ್ಕಾರದ ಈ ಒಳ್ಳೆಯ ಕಾರ್ಯಕ್ಕೆ ಎಲ್ಲರೂ ತಮ್ಮ ಮೆಚ್ಚುಗೆಯನ್ನು ಸೂಚಿಸಲೇಬೇಕಾಗುತ್ತದೆ. ಆದರೆ, ನಾಣ್ಯಪದ್ಧತಿಯ ಸುಧಾರಣೆಯ ಬಗ್ಗೆ ಭಾರತ ಸರ್ಕಾರ ತಳೆದ ನಿಲುವು ಅಷ್ಟೊಂದು ಹೇಳಿಕೊಳ್ಳುವಂತಹದ್ದಾಗಿರಲಿಲ್ಲ. ಅಂದು, ಚಿನ್ನದ ಮೌಲ್ಯದಲ್ಲಿ ಹೆಚ್ಚಳ ಕಂಡುಬರುತ್ತಿತ್ತು ಮತ್ತು ಬೆಳ್ಳಿಯ ಮೌಲ್ಯದಲ್ಲಿ ಇಳಿತ ಉಂಟಾಗಿರಲಿಲ್ಲ ಎಂಬ ವಿಚಾರದ ಬಗೆಗಿನ ನಿರ್ಣಯವನ್ನು ನಾವು ತರ್ಕಶಾಸ್ತ್ರ ಪಂಡಿತರಿಗೆ ಬಿಡೋಣ; ಆದರೆ, ಒಂದು ಬೆಳ್ಳಿ ಪ್ರಮಿತಿಯ ದೇಶವಾದ ಭಾರತ, ಬಂಗಾರದ ಮೌಲ್ಯದಲ್ಲಿ ಮಾತ್ರ ಏರಿಳಿತ ಉಂಟಾಗಿದೆ, ಅಂದರೆ ಅದರ ಮೌಲ್ಯ ಹೆಚ್ಚಾಗಿದೆ ಎಂಬ ಕಾರಣದ ಮೇಲೆ ತನ್ನ ನಾಣ್ಯಪದ್ಧತಿಯಲ್ಲಿ ಸುಧಾರಣೆಯನ್ನು ತರದೆ ಇರುವುದು ನಿಸ್ಸಂದೇಹವಾಗಿಯೂ ತಿಳಿವಳಿಕೆಯಿಲ್ಲದೆ ಎಸಗಿದ ಒಂದು ತಪ್ಪು, ಸೈನಿಕರ ವಿಷಯದಲ್ಲಿ ಪರಿಸ್ಥಿತಿಗೆ ಅನುಗುಣವಾಗಿ ಹೊಂದಿಕೊಂಡು ಹೋಗಬೇಕೆಂಬ ವಿಚಾರ ಸರಿಯಾಗಿರಬಹುದು. ಆದರೆ ನಾಣ್ಯಕ್ಕೆ ಸಂಬಂಧಿಸಿದ ವಿಷಯದಲ್ಲಿ ಇಂಥ ನಡವಳಿಕೆ ಆವಶ್ಯಕವಾಗಿರುವುದಿಲ್ಲ. ಏಕೆಂದರೆ, ಮಿಲಿಟರಿ ವಿಷಯಗಳಲ್ಲಿ ಬೇರೆಯವರ ದೌರ್ಬಲ್ಯವು ನಮ್ಮ ಶಕ್ತಿಯಾಗುತ್ತದೆ. ಆದರೆ ನಾಣ್ಯಗಳ ವಿಷಯದಲ್ಲಿ, ಒಬ್ಬರ ದೌರ್ಬಲ್ಯವು ಎಲ್ಲರಲ್ಲೂ ದೌರ್ಬಲ್ಯವನ್ನು ಮೂಡಿಸುತ್ತದೆ. ಆದ್ದರಿಂದ, ನಾಣ್ಯಪದ್ಧತಿಯ ಸುಧಾರಣೆಯ ವಿಷಯದಲ್ಲಿ ಭಾರತ ಸರ್ಕಾರದ ನಿಲುವು, ಪ್ರೊಫೆಸರ್ ನಿಕಲ್ಸನ್[೨]ರವರ ಮಾತಿನಲ್ಲಿ ಹೇಳುವುದಾದರೆ, “ಹಡಗಿನಲ್ಲಿ ತಾನು ಮಲಗಿಕೊಳ್ಳುವ ಕ್ಯಾಬಿನ್ ಮಾತ್ರ ಸೋರುವುದಿಲ್ಲ ಆದುದರಿಂದ ಹಡಗು ಮುಳುಗಲಾರದು ಎನ್ನುವವನ ಮೂರ್ಖ ವಿಚಾರದಂತೆ ಇರುತ್ತದೆ.”

ಆದರೆ, ತನ್ನ ಈ ನಿಷ್ಕ್ರಿಯೆಯ ಹಾಗೂ ಅಜ್ಞಾನದ ನಡವಳಿಕೆಯನ್ನು ಭಾರತ ಸರ್ಕಾರ ಬೇಗನೆ ಅರ್ಥಮಾಡಿಕೊಂಡಿತು. ಆದ್ದರಿಂದ, ಕೇವಲ ಎರಡು ವರ್ಷಗಳ ಅಲ್ಪಾವಧಿಯಲ್ಲಿ ಅದು ತಾನು ೧೮೭೬ರಲ್ಲಿ ತೆಗೆದುಕೊಂಡ ನಿರ್ಣಯವನ್ನು ಪುನರ್ ವಿಮರ್ಶೆ ಮಾಡಲು ತಯಾರಾಯಿತು. ಅದು, ನವೆಂಬರ್ ೯, ೧೮೭೮ ರಂದು ತಾನು ಹೊರಡಿಸಿದ ಪತ್ರದಲ್ಲಿ[೩] ಈ ರೀತಿ ಹೇಳಿತು:

“೫, ಅಷ್ಟೊಂದು ಕ್ಲಿಷ್ಟವಾಗಿರುವ ನಾಣ್ಯಪದ್ಧತಿಯ ಸುಧಾರಣೆಯಂಥ ವಿಷಯ, ಅವಸರವಸರವಾಗಿ ಇತ್ಯರ್ಥವಾಗುವುದೇ ಬೇಡ, ಸಹಜ ಮತ್ತು ಅತಿ ಜಾಣತನದ ಕಾರ್ಯವೆಂದರೆ, ಈ ಸಮಸ್ಯೆಗೆ ಅಂತಿಮ ಪರಿಹಾರ ಒದಗಿಸಲು ಪ್ರಯತ್ನಿಸುವ ಮುನ್ನ ಸ್ವಲ್ಪಕಾಲಾವಕಾಶವನ್ನು ನೀಡಿ ನಂತರ ಅದಕ್ಕೆ ಪರಿಹಾರವನ್ನು

---

೧. ಅದೇ ಭಾಗ ೧೬.

೨. ಹಣ ಮತ್ತು ಹಣಕಾಸಿನ ಸಮಸ್ಯೆಗಳು, ೧೮೯೫, ಪು. ೯೦

೩. ಪಿ.ಪಿ., ೧೮೮೬ರ ಪಿ.ಪಿ., ಸಿ ೪೮೬೮, ಪು. ೧೮

ಕಂಡುಕೊಳ್ಳುವುದೇ ಒಳ್ಳೆಯ ವಿಚಾರವೆನ್ನಲಾಗಿದೆ. ೧೮೭೭ರಲ್ಲಿ ಉಂಟಾದ ಬೆಳ್ಳಿಯ ಮೌಲ್ಯದಲ್ಲಿನ ಸುಧಾರಣೆ ಇಂಥ ಕಾರ್ಯಾಚರಣೆಗೆ ಪುಟಕೊಟ್ಟಿರುತ್ತದೆ. ಇದಲ್ಲದೆ, ಆಗತಾನೆ ರೂಪಾಯಿಯ ಮೌಲ್ಯದಲ್ಲಿ (ಜುಲೈ, ೧೮೭೬ ಮಟ್ಟಕ್ಕೆ) ಒಂದು ಹೊಸ ಇಳಿತ ಉಂಟಾಗಿತ್ತು; ಇದರಿಂದಾಗಿ ಹೊರನಾಡಿನಲ್ಲಿ ನೆಲೆಸಿದ ಭಾರತೀಯರು ಸ್ವದೇಶಕ್ಕೆ ಕಳುಹಿಸುವ ವಿದೇಶೀ ಹಣದ ಮೊತ್ತದ ಮೇಲೆ ಈ ಇಳಿತ ಬೀರುವ ಒಳ್ಳೆಯ ಪ್ರಭಾವದ ವಾಸ್ತವಿಕ ಪರಿಣಾಮವನ್ನು ದೃಷ್ಟಿಯಲ್ಲಿಟ್ಟುಕೊಂಡು ನಾಣ್ಯಪದ್ಧತಿಯ ಸುಧಾರಣೆಯ ಕಾರ್ಯವನ್ನು ಮುಂದೂಡುವುದೇ ಸೂಕ್ತವೆಂಬ ಅಭಿಪ್ರಾಯವನ್ನು ಅಂದಿನ ಸರ್ಕಾರ ಹೊಂದಿತ್ತು.”

* * *

“೨೧. ಅಂದಿನ ಬೆಳ್ಳಿಯ ಮೌಲ್ಯಕ್ಕೆ ಸಂಬಂಧಿಸಿದಂತೆ ಕೆಲವು ಕಾಲ ಪ್ರಚಲಿತವಿದ್ದ ಅನಿಶ್ಚಿತತೆ ಹಾಗೂ ಅದರ ಪರಿಣಾಮವಾಗಿ ‘ವಿನಿಮಯ’ದಲ್ಲಿ ಉಂಟಾಗುವ ತೊಂದರೆಗಳು ಸರ್ಕಾರದ ಮುಂದುವರಿದ ಹಣಕಾಸಿನ ತೊಂದರೆಗಳಿಗೆ ಕಾರಣವಾಗಿದ್ದವು. ಈ ಗೊಂದಲಗಳು ದೇಶದ ವ್ಯಾಪಾರ ಅಥವಾ ವಿದೇಶೀ ಬಂಡವಾಳ ಹೂಡಿಕೆಗಳನ್ನು ಸಹ ಬಹಳ ಕೆಟ್ಟ ರೀತಿಯಲ್ಲಿ ಹಾಳುಗೆಡವಿದ್ದವು.

೨೩. ಪ್ರಸಕ್ತ ಸಂಕಷ್ಟದ ಪರಿಸ್ಥಿತಿಯು ಹಾಗೂ ಈಗಿರುವ ನಾಣ್ಯಗಳ ಕಾಯಿದೆಯನ್ನು ಮುಂದುವರೆಸಿಕೊಂಡು ಹೋಗುವುದರಿಂದ ಒದಗಬಹುದಾದ ಅಪಾಯಗಳನ್ನು ನಾವು ವಾಸ್ತವಸಂಗತಿಗಳೆಂದು ಪರಿಗಣಿಸುತ್ತೇವೆ ಮತ್ತು ಇವುಗಳಲ್ಲಿ ಯಾವುದೇ ಉತ್ಪ್ರೇಕ್ಷೆಯಿಲ್ಲ ಎಂದೂ ಭಾವಿಸುತ್ತೇವೆ. ಇದನ್ನು ನಿವಾರಿಸಬಲ್ಲಂತಹ, ಹಾಗೂ ತೀವ್ರ ಆಕ್ಷೇಪಣೆಗೆ ಗುರಿಯಾಗದಂತಹ ಒಂದು ಕಾರ್ಯಸಾಧು ತಂತ್ರವನ್ನು ರೂಪಿಸುವುದು ನಮ್ಮ ಪಾಲಿಗೆ ಇದೆ. ಭಾರತದ ನಾಣ್ಯನೀತಿಗೆ ಸಂಬಂಧಿಸಿದಂತೆ ಅದನ್ನು ಬದಲಾಯಿಸಬೇಕೇ ಅಥವಾ ಬೇಡವೇ ಎಂಬ ಗುರುತರ ಜವಾಬ್ದಾರಿ ನಮ್ಮ ಮೇಲೆಯೇ ಇದೆ ಎಂದು ನಾವು ಸಂಪೂರ್ಣವಾಗಿ ಮನಗಂಡಿದ್ದೇವೆ; ಆದರೆ, ಈ ಸಂದರ್ಭದಲ್ಲಿ ಯಾವ ಕ್ರಮಕ್ಕೈಗೊಳ್ಳದೇ ಇರುವ ಜವಾಬ್ದಾರಿ ಸಹ ಅಷ್ಟೇ ದೊಡ್ಡದಾಗಿದೆ ಎಂಬುದು ನಮಗೆ ಸ್ಪಷ್ಟವಾಗಿದೆ. ಅಸ್ತಿತ್ವದಲ್ಲಿರುವ ಶಾಸನವನ್ನು ಬದಲಾಯಿಸಿದರೂ ಅಥವಾ ಹಾಗೆಯೇ ಬಿಟ್ಟರೂ ಉಂಟಾಗುವ ಪರಿಣಾಮಗಳು ನಾವು ಕೈಗೊಂಡ ಕ್ರಮದಿಂದಾಗಿ ಉಂಟಾಗುತ್ತವೆ ಮತ್ತು ಇಂಥ ಗಂಭೀರ ಪ್ರಶ್ನೆಯನ್ನು ಎದುರಿಸದೆ ತಪ್ಪಿಸಿಕೊಳ್ಳುವುದು ಸಾಧ್ಯವಿಲ್ಲ.

“೨೪. ಹಿಂದಿನ ಅಕ್ಟೋಬರ್ ತಿಂಗಳ ಓಲೆಯಲ್ಲಿ ಸೂಚಿಸಲಾದ, ವಿನಿಮಯದರದಲ್ಲಿನ ಸ್ಥಿರತೆಗಾಗಿರುವ ಸುವರ್ಣ ಪ್ರಮಿತಿಯನ್ನು ಸ್ವೀಕರಿಸುವುದು, ಮತ್ತು ಸರ್ಕಾರಿ ಕ್ರಮಗಳಿಂದ ನೇರವಾಗಿ ಬೆಳ್ಳಿಯ ಬದಲಿಗೆ ಚಿನ್ನದ ನಾಣ್ಯವನ್ನು ಜಾರಿಗೆ ತರುವ ಕಾರ್ಯವು ಅವಾಸ್ತವವೆಂಬುದನ್ನು, ಕಳೆದ ಅಕ್ಟೋಬರ್ ತಿಂಗಳ ಓಲೆಯು ಸ್ಪಷ್ಟವಾಗಿ ತಿಳಿಸಿದೆ. ಈ ವಿಚಾರವನ್ನು ಮತ್ತೊಮ್ಮೆ ಎಲ್ಲರ ಗಮನಕ್ಕೆ ತರಲಾಗದು. ಅದೇ ಓಲೆಯಲ್ಲಿ ಸೂಚಿಸಿದಂತೆ ಬೆಳ್ಳಿಯ ರೂಪಾಯಿಯ ತೂಕದಲ್ಲಿನ ಹೆಚ್ಚಳದ ಕ್ರಮವನ್ನು ಮತ್ತೊಮ್ಮೆ ಅನುಷ್ಠಾನಕ್ಕೆ ತರುವುದು ಸಹ ಅಷ್ಟೇನು ಒಳ್ಳೆಯ ವಿಚಾರವಾಗಿರುವುದಿಲ್ಲ; ಏಕೆಂದರೆ, ವಾಸ್ತವದಲ್ಲಿ ರೂಪಾಯಿಯ ಭವಿಷ್ಯಕ್ಕೆ ಯಾವ ರಕ್ಷಣೆಯನ್ನೂ ಅದು ನೀಡುವುದಿಲ್ಲ. ಒಂದು ವೇಳೆ ಈ ವಿಚಾರವನ್ನು ಅನುಷ್ಠಾನಕ್ಕೆ ತಂದಲ್ಲಿ ಅದು ಯಾವ ಘನ ಉದ್ದೇಶಗಳನ್ನು ಸಾಧಿಸದೆ, ದೇಶದ ಖಜಾನೆಗೆ ಹೆಚ್ಚಿನ ಖರ್ಚಿನ ಭಾರವನ್ನು ಹೇರುತ್ತದೆ. ವಿಷಯ ಹೀಗಿರುವಾಗ ಈ ಮೊದಲೆ ಸೂಚಿಸಿದಂತೆ ಚಲಾವಣೆಯಲ್ಲಿರುವ ಬೆಳ್ಳಿಯ ನಾಣ್ಯಕ್ಕೆ ಚಲಾವಣೆಯ ಮಿತಿಯನ್ನು ಸೂಚಿಸುವ ವಿಚಾರ ಸರಿಯಾಗಿ ಕಂಡು ಬರುತ್ತದೆ. ಈ ವಿಚಾರವನ್ನು ೧೮೭೬ರಲ್ಲಿಯೇ ಭಾರತ ಸರ್ಕಾರ ತಿರಸ್ಕರಿಸಿದ್ದರೂ ಈಗ ಅದನ್ನು ಮತ್ತೊಮ್ಮೆ ಸರಿಯಾಗಿ ಪರೀಕ್ಷಿಸಬೇಕಾಗುತ್ತದೆ.

"೨೫. ಜನರು ಬೆಳ್ಳಿಯ ಗಟ್ಟಿಗಳನ್ನು ಟಂಕಸಾಲೆಗೆ ತಂದು ನಾಣ್ಯವನ್ನಾಗಿ ಪರಿವರ್ತಿಸಿಕೊಳ್ಳುವ ಹಕ್ಕನ್ನು ಸಂಪೂರ್ಣವಾಗಿ ಹಿಂತೆಗೆದುಕೊಳ್ಳುವುದು ಅಥವಾ ಭವಿಷ್ಯದಲ್ಲಿ ಇದನ್ನು ಸಂಪೂರ್ಣವಾಗಿ ಕೈಬಿಡುವ ಅಥವಾ ಒಂದು ಕಾಲಾವಧಿಗೆ ಮಿತಿಗೊಳಿಸುವುದೇ ಮುಂತಾದ ಮಾರ್ಪಾಡುಗಳನ್ನು ನಾಣ್ಯದ ಶಾಸನದಲ್ಲಿ ತರುವುದು, – ಇವು ಈ ಸೂಚನೆಯ ಮುಖ್ಯ ಲಕ್ಷಣಗಳಾಗಿವೆ.

"೨೬. ಯಾವುದೇ ಯೋಜನೆಯು ರೂಪಾಯಿಯ ವಿನಿಮಯ ದರವನ್ನು ಸ್ಥಿರಗೊಳಿಸುವ ಉದ್ದೇಶವನ್ನು ಹೊಂದಿದ್ದರೆ, ನಾಣ್ಯವನ್ನು ಪಡೆಯುವ ಅಧಿಕಾರವು ಚಿನ್ನದ ಮೂಲಕ ಮಾಡುವ ಪಾವತಿಯ ಮೇಲೆ ಯಾವುದಾದರೂ ಒಂದು ರೀತಿಯ ನಿಯಂತ್ರಣವನ್ನು ಹೊಂದಿರುವುದು ಹಾಗೂ ಸ್ಟರ್ಲಿಂಗ್ ಮತ್ತು ರೂಪಾಯಿಗಳ ವಿನಿಮಯ ದರವು ನಾಣ್ಯಗಳಿಗೆ ಉಪಯೋಗಿಸಿದ ಲೋಹಗಳ ಮೇಲೆ ಅವಲಂಬಿತವಾಗದಿರುವುದು ಅತ್ಯಗತ್ಯವಾಗಿರುತ್ತದೆ."

"೨೭. ಇನ್ನೊಂದು ಅರ್ಥದಲ್ಲಿ ಹೇಳುವುದಾದರೆ, ಈ ವಿಚಾರ ಒಂದು ರೂಪಾಯಿಯ ವಿನಿಮಯ ದರ ೨ ಷಿಲಿಂಗಿಗೆ ಅಥವಾ ಅದಕ್ಕಿಂತ ಹೆಚ್ಚಿನ ಅಥವಾ ಕಡಿಮೆ ಪ್ರಮಾಣಕ್ಕೆ ನಿಗದಿಪಡಿಸುವ ಯೋಜನೆಯ ಒಂದು ಆವಶ್ಯಕ ಭಾಗವಾಗಿರುವುದಿಲ್ಲ. ನಮಗೆ ಇಲ್ಲಿ ಆವಶ್ಯಕವಾಗಿರುವುದೇನೆಂದರೆ ಒಮ್ಮೆ ನಿಗದಿಯಾದ ರೂಪಾಯಿ–ಪೌಂಡಿನ ವಿನಿಮಯದ ದರವು ಭವಿಷ್ಯದಲ್ಲಿ ಸ್ಥಿರವಾಗಿ ಉಳಿಯಬೇಕು."

"೩೩ ಅತ್ಯಂತ ಪ್ರಮುಖ ಪ್ರಶ್ನೆ ಎಂದರೆ, ಬೆಳ್ಳಿಯನ್ನು ಒಂದು ಪ್ರಮುಖ ಅಂಶವಾಗಿ ಹೊಂದಿರುವ ಬೆಳ್ಳಿಯ ಪ್ರಮಿತಿಯನ್ನು ನಾವು ಮುಂದುವರಿಸಿಕೊಂಡು ಹೋಗುವುದು ಸಾಧುವೆ ಅಥವಾ ಇಲ್ಲವೇ ಎಂಬುದು. ಈ ತರಹದ ನಾಣ್ಯಪದ್ಧತಿಯಲ್ಲಿ ಬಂಗಾರದ ಉಪಯೋಗ ಅತ್ಯಲ್ಪವಾಗಿರುತ್ತದೆ; ಅಥವಾ ಅದು ಇಲ್ಲದೆಯೂ ಇರಬಹುದು. ಪರಿಸ್ಥಿತಿಯನ್ನು ಅಭ್ಯಸಿಸಿ, ಭಾರತ ಸರ್ಕಾರ ತನ್ನ ೧೮೭೮ರ ಓಲೆಯಲ್ಲಿ ಇಂಥ ಪದ್ಧತಿ ಅರ್ಥವ್ಯವಸ್ಥೆಗೆ ನೆರವಾಗುವುದಿಲ್ಲ, ಆದುದರಿಂದ ಇದು ಅಗತ್ಯವಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿತು. ಆದರೆ, ಈ ವಿಚಾರದ ಸಂಪೂರ್ಣ ಪುನಃಪರಿಶೀಲನೆಯನ್ನು ಕೈಗೊಂಡು, ಸರ್ಕಾರಕ್ಕೆ ವಿರೋಧವಾಗಿರುವ ನಿರ್ಣಯವನ್ನು ನಾವು ತೆಗೆದುಕೊಂಡಿದ್ದೇವೆ........ ಅದೇನೆಂದರೆ, ಇಂಥ ಪದ್ಧತಿಯು ಸಂಪೂರ್ಣವಾಗಿ ಕಾರ್ಯಸಾಧುವಾಗಿರುತ್ತದೆ ಮತ್ತು ಹಾಗೆ ಮಾಡುವುದರಿಂದ ವಾಸ್ತವಿಕವಾಗಿ ನಮಗೆ ಯಾವ ತೊಂದರೆಯೂ ಉಂಟಾಗುವುದಿಲ್ಲ. ಜಗತ್ತಿನ ಯಾವ ದೇಶದಲ್ಲೂ ಭಾರತದಲ್ಲಿರುವಂಥ ಪರಿಸ್ಥಿತಿಗಳು ಅಸ್ತಿತ್ವದಲ್ಲಿರುವುದಿಲ್ಲ. ಆದರೆ ಎಲ್ಲಿ ಪರಿವರ್ತಿತ ಕಾಗದದ ಹಣ ಅಸ್ತಿತ್ವದಲ್ಲಿದೆಯೋ ಅಥವಾ ಹಿಂದೆ ಇತ್ತೋ ಅಂಥ ದೇಶಗಳಲ್ಲಿ (ಇವುಗಳ ಸಂಖ್ಯೆ ಬಹಳಷ್ಟಿದೆ) ಯಾವುದೇ ಲೋಹದ ಹಣ ಸಮಾಧಾನಕರವಾಗಿ ಕೈಗೊಳ್ಳಬಹುದಾದ ಕಾರ್ಯಗಳನ್ನು, ಸ್ಥಾನೀಯ ವಿನಿಮಯ ಮೌಲ್ಯವನ್ನು, ಎಲ್ಲಿಯವರೆಗೆ ನಾವು ಅದರ ಅತಿ ಪೂರೈಕೆಯ ಬಗ್ಗೆ ಹುಷಾರಾಗಿರುತ್ತೇವೆಯೋ ಅಲ್ಲಿಯವರೆಗೆ ಅದು ಕಾಪಾಡಿಕೊಂಡು ಬರುತ್ತದೆ.

೩೭. ಬ್ರಿಟಿಷ್ ಷಿಲಿಂಗ್ ಹಾಗೂ ಫ್ರಾನ್ಸಿನ ಐದು ಫ್ರಾಂಕಿನ ನಾಣ್ಯ – ಇವುಗಳ ಸಂದರ್ಭಗಳು ಸೂಚಿಸುವುದೆಂದರೆ – ಕಳ್ಳತನದಿಂದ ನಾಣ್ಯಗಳನ್ನು ತಯಾರಿಸುವುದು ಅಥವಾ ಆಂತರಿಕ ಮೌಲ್ಯಗಳಲ್ಲಿ ಆಗುವ ಪತನ – ಈ ಎರಡರಲ್ಲಿ ಯಾವ ವಿಧಾನದಿಂದಾಗಲೀ ರೂಪಾಯಿಯ ಪ್ರಕೃತ ತೂಕವನ್ನು ಕಾಪಾಡಿಕೊಂಡು ಅದರ ಮೌಲ್ಯವನ್ನು ಎರಡು ಷಿಲಿಂಗ್‌ಗಳಿಗೆ ಸಮನಾಗಿರುವಂತೆ ಇಟ್ಟುಕೊಂಡು ಚಿನ್ನದ ಪ್ರಮಿತಿಯುನ್ನು ಹಾಗೂ ಭಾಗಶಃ ಚಿನ್ನದ ನಾಣ್ಯಗಳ ಬಳಕೆಯುನ್ನು ಇಟ್ಟುಕೊಳ್ಳುವುದು ಸಂಭವನೀಯವಾಗಿರುವುದಿಲ್ಲ."

"೪೬. ಆದ್ದರಿಂದ ನಾವು, ಇಂದಿನ ಸಮಾಜಕ್ಕೆ ಹಾನಿ ಉಂಟುಮಾಡದ ಹಾಗೆ ಅಥವಾ ಮುಂದೆ ಸಹ ಸಂಕಷ್ಟಗಳು ಬಾರದಂತೆ ಭಾರತದಲ್ಲಿ ಪ್ರಚಲಿತವಿರುವ ಬೆಳ್ಳಿನಾಣ್ಯವನ್ನು ಹಾಗೆಯೇ ಉಳಿಸಿಕೊಂಡು ಸುವರ್ಣ ಪ್ರಮಿತಿಯನ್ನು ಸ್ವೀಕರಿಸುವುದು ಸಾಧ್ಯವೆಂಬ ನಿರ್ಣಯಕ್ಕೆ ಬಂದಿದ್ದೇವೆ. ಎಲ್ಲಿಯವರೆಗೆ ನಾವು ಇವೆರಡೂ ನಾಣ್ಯಗಳ ಚಲಾವಣೆಯನ್ನು ಉಳಿಸಿಕೊಂಡು ಹೋಗುತ್ತೇವೆಯೋ ಅಲ್ಲಿಯವರೆಗೆ ನಮಗೆ ಒದಗಬಹುದಾದ ಸಹಜ ಅಪಾಯಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬಹುದು. ತತ್ಪರಿಣಾಮವಾಗಿ ನಾವು ಇಂಥ ನಾಣ್ಯಪದ್ಧತಿಯನ್ನು ಆದಷ್ಟು ತೀವ್ರ ಜಾರಿಗೆ ತರಬೇಕೆಂದು ಬ್ರಿಟಿಷ್ ಮಹಾಪ್ರಭುಗಳನ್ನು ಬೇಡಿಕೊಳ್ಳುತ್ತೇವೆ. ಇಂಥ ಬದಲಾವಣೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಅನುಸರಿಸಬೇಕಾದ ಉಪಾಯಗಳನ್ನು ನಾವು ಈ ಕೆಳಗೆ ವಿವರವಾಗಿ ನೀಡುತ್ತೇವೆ." :

* * *

"೫೦. ನಮ್ಮ ಉದ್ದಿಶ್ಯ ಭಾರತದ ಮೇಲೆ ಬಂಗಾರದ ನಾಣ್ಯವನ್ನು ಒತ್ತಾಯದಿಂದ ಹೇರುವುದಲ್ಲ ಅಥವಾ ಅದರ ಬೆಳ್ಳಿಯ ನಾಣ್ಯವನ್ನು ರದ್ದುಪಡಿಸಬೇಕೆಂಬುದೂ ಅಲ್ಲ, ಆದರೆ ಈ ಎರಡು ಲೋಹದ ನಾಣ್ಯಗಳು ಪ್ರಚಲಿತವಿದ್ದಾಗ, ಚಿನ್ನದ ನಾಣ್ಯದ ಚಲಾವಣೆಯನ್ನು ಜಾರಿಗೆ ತರುವ ಮೂಲಕ ಬೆಳ್ಳಿಯ ನಾಣ್ಯದ ಚಲಾವಣೆ ಪದ್ಧತಿಯಿಂದಾಗುವ ಪರಿಣಾಮ ಅಥವಾ ಆ ದಿಶೆಯಲ್ಲಿ ನಡೆಯುವ ಚಟುವಟಿಕೆಗಳನ್ನು ಸರಿಪಡಿಸುವುದಾಗಿದೆ. ಈ ಸಂದರ್ಭದಲ್ಲಿ, ನಮ್ಮ ನಿರ್ಣಯವೇನೆಂದರೆ, ನಾವು ಭಾರತದಲ್ಲಿ ಚಿನ್ನದ ನಾಣ್ಯದ ಉಪಯೋಗಕ್ಕೆ ಅನುಕೂಲ ಮಾಡುವುದಾಗಿದೆಯೇ ಹೊರತು, ಅದಕ್ಕೆ ಈ ದೇಶದಲ್ಲಿ ಶಾಸನಬದ್ಧ ಹಣವೆಂದು ಮುಂದುವರಿಯಲು ಬಿಡುವುದಿಲ್ಲ. ಇದೇ ಸಮಯದಲ್ಲಿ ಬೆಳ್ಳಿಯ ನಾಣ್ಯಗಳನ್ನು ಯಾವ ಮಿತಿಯೂ ಇಲ್ಲದೆ ಚಲಾವಣೆಯಲ್ಲಿ ತರುತ್ತೇವೆ, ಆದರೆ ಈ ರೀತಿಯ ಬೆಳ್ಳಿ ನಾಣ್ಯದ ಚಲಾವಣೆಗೆ ಬಂಗಾರವನ್ನು ಬದಲಿಸುವ ಯಾವ ಅನುಕೂಲವೂ ಇರುವುದಿಲ್ಲ."

"೫೧. ಮೇಲಿನ ಉದ್ದಿಶ್ಯಗಳನ್ನು ನಾವು ಕೆಳಕಂಡ ರೀತಿಯಿಂದ, ಸಾಧಿಸಬೇಕೆಂದಿದ್ದೇವೆ. ಮೊಟ್ಟಮೊದಲು, ನಾವು ಬ್ರಿಟಿಷ್ ಅಥವಾ ಬ್ರಿಟಿಷ್ ಇಂಡಿಯನ್ ಚಿನ್ನದ ನಾಣ್ಯವನ್ನು ನಮ್ಮ ಸರ್ಕಾರದ ಹಣವನ್ನು ನೀಡಿ ಕೊಳ್ಳುವ ಅಧಿಕಾರವನ್ನು ಪಡೆಯುತ್ತೇವೆ. ರೂಪಾಯಿಯ ದರವು ಎರಡು ಷಿಲಿಂಗ್ ಆಗಿ ಸ್ಥಿರೀಕರಣಗೊಳ್ಳುವವರೆಗೆ, ವಿನಿಮಯ ದರವನ್ನು ಕಾಲಕಾಲಕ್ಕೆ ನಿರ್ಧರಿಸುವುದನ್ನು ಸರ್ಕಾರಕ್ಕೇ ಬಿಡುತ್ತೇವೆ. ಅದೇ ಸಮಯದಲ್ಲಿ, ಬೆಳ್ಳಿಯ ಗಟ್ಟಿಗಳನ್ನು ನಾಣ್ಯವನ್ನಾಗಿ ಟಂಕಿಸಿಕೊಳ್ಳಲು ಅದನ್ನು ಆಯಾತಮಾಡಿಕೊಂಡವರು ನೀಡಬೇಕಾದ ತೆರುವಳಿಯನ್ನು ಒಂದು ರೂಪಾಯಿಯವರೆಗೆ ಹೆಚ್ಚಿಸುತ್ತೇವೆ. ಹೀಗೆ ಮಾಡುವುದರಿಂದ ಅದರ ಬೆಲೆಯು ಮೇಲೆ ಹೇಳಿದ ಚಿನ್ನದ ನಾಣ್ಯಕ್ಕೆ ಸಮನಾಗುತ್ತದೆ. ಈ ರೀತಿಯಾಗಿ, ನಾವು ಹೆಚ್ಚಾಗಿ ಬೆಳ್ಳಿಯನ್ನು ನಾಣ್ಯ ಮಾಡುವುದಕ್ಕೆ ಅನುವಾಗಿಸುವ, ಎಲ್ಲಿಯವರೆಗೆ ಅನುಕೂಲ ಅಥವಾ ಲಾಭದಾಯಕವಾಗಿರುತ್ತದೆಯೋ ಅಲ್ಲಿಯವರೆಗೆ ಚಿನ್ನದ ನಾಣ್ಯಗಳನ್ನು ಮಿತ ಪ್ರಮಾಣದಲ್ಲಿ ಉಪಯೋಗಿಸಲು ಅವಕಾಶ ನೀಡುವ ನಾಣ್ಯಪದ್ಧತಿಯನ್ನು ಅನುಷ್ಠಾನದಲ್ಲಿ ತರುತ್ತೇವೆ" ಎಂದು ಸ್ಮಿಥ್‌ರವರು ಸಾರಿದರು.

ಸ್ಮಿಥ್‌ರವರ ಯೋಜನೆ ಸರಳ, ಮಿತವ್ಯಯಕಾರಿ ಹಾಗೂ ಸುರಕ್ಷಿತವಾಗಿದ್ದರೂ ಬ್ರಿಟಿಷ್ ಸರ್ಕಾರ ಅದನ್ನು ಏಕೆ ಒಪ್ಪಿಕೊಳ್ಳಲಿಲ್ಲ? ಇದಕ್ಕೆ ಕಾರಣ, ಪ್ರಮಾಣದಲ್ಲಿ ಕಡಿಮೆಯಾಗುತ್ತಿರುವ ಜಾಗತಿಕ ಬಂಗಾರ ಸಂಗ್ರಹದ ಒಂದು ಪಾಲನ್ನು ಭಾರತ ಬೇಡುತ್ತದೆಂಬ ಭಾವನೆ ಬ್ರಿಟಿಷ್ ಸರ್ಕಾರದಲ್ಲಿತ್ತು. ಅಂದಿನ ಪರಿಸ್ಥಿತಿಯಲ್ಲಿ ಈ ಕಾರಣವು ಒಂದು ಅಪಾಯಕರ ಪ್ರಮಾದವಾಗಿತ್ತು ಮತ್ತು ಅಧಿಕಾರಿಗಳು ಆಗಲೇ

ಏನೇ ಆಗಲಿ ಭಾರತವನ್ನು ಬಂಗಾರಕ್ಕಾಗಿ ನಡೆಯುವ ಮೇಲಾಟದಿಂದ ದೂರವಿಡಬೇಕೆಂದು ತೀರ್ಮಾನಿಸಿದ್ದರು. ತತ್ಪರಿಣಾಮವಾಗಿ, ಸುವರ್ಣ ಪ್ರಮಿತಿ ಭಾರತಕ್ಕೆ ಆವಶ್ಯಕವೆಂಬ ಪ್ರಸ್ತಾವನೆಯು ಸೋಲನ್ನು ಒಪ್ಪಬೇಕಾಯಿತು. ಇದಲ್ಲದೆ ಸರ್ಕಾರ ಪ್ರಸ್ತಾಪಿಸಿದ ಒಂದು ಮೃದು ಮತ್ತು ದುರ್ಬಲ ಸುವರ್ಣ ಪ್ರಮಿತಿಯ ಅನುಷ್ಠಾನದ ಪ್ರಸ್ತಾವನೆ ಯಶಸ್ವಿಯಾಗುವ ಸಂಭವವೇ ಇರಲಿಲ್ಲ. ಸರ್ಕಾರದ ಕಾರ್ಯದರ್ಶಿ ಹಾಗೂ ಹಣಕಾಸಿನ ಮಂತ್ರಿ ಇಬ್ಬರೂ ನೇಮಿಸಿದ ಜಂಟಿ ಸಮಿತಿಯು ಇಂಥ ದುರ್ಬಲ ಪ್ರಸ್ತಾವನೆಯನ್ನು ಬ್ರಿಟಿಷ್ ಪ್ರಭುಗಳ ಮುಂದೆ ಇಡಲು ಒಕ್ಕೊರಲಿನಿಂದ ನಿರಾಕರಿಸಿತು.[೧] ಮುಂದುವರಿದು, ಈ ಪ್ರಸ್ತಾವನೆಯನ್ನು ಯಾವ ಕಾರಣಗಳಿಂದ ತಿರಸ್ಕರಿಸಲಾಯಿತು ಎಂಬುದು ಬೆಳಕಿಗೆ ಬರಲಿಲ್ಲ. ಸಮಿತಿಯ ವರದಿ ಜನರಿಗೆ ಸಭೆಯ ನಡಾವಳಿಗಳ ವಿವರ ನೀಡಲು ಬಹು ಕಟುವಾಗಿ ನಿರಾಕರಿಸಿದತು. ಅರ್ಧ ಶತಮಾನದಷ್ಟು ಕಾಲ ಕಳೆದುಹೋದರೂ ಭಾರತೀಯ ನಾಣ್ಯ ಪ್ರಮಿತಿಯ ಪ್ರಸ್ತಾವನೆಗಳನ್ನು ಸರ್ಕಾರ ಏಕೆ ರಹಸ್ಯವಾಗಿಟ್ಟಿತ್ತು ಎಂಬುದರ ಕಲ್ಪನೆ ಸುಲಭವಾಗಿರಲಿಲ್ಲ. ಈ ಸಮಿತಿಯ ಸದಸ್ಯರಾದ ರಾಬರ್ಟ್ ಗಿಫೆನ್‌ರು, ೧೮೯೮ರಲ್ಲಿ ಇದರ ವಿಷಯ ಅತಿ ರಕ್ಷಿಸಲ್ಪಟ್ಟ 'ಹೊತ್ತಿಗೆ'ಯಾಗಿದೆ ಎಂದರು.[೨] ಈ ಪ್ರಸ್ತಾವನೆಗಳು ಭಾರತೀಯ ನಾಣ್ಯವನ್ನು ಬಳಸಿದ ನಾಣ್ಯವನ್ನಾಗಿ ಪರಿವರ್ತಿಸುವ ಉದ್ದೇಶಗಳನ್ನು ಹೊಂದಿರುವುದರಿಂದ ಅವುಗಳನ್ನು ಒಪ್ಪಲಾಗದು ಎಂದು ಸಮಿತಿಯು ಅಭಿಪ್ರಾಯಪಟ್ಟಿತು. ಮೇಲಾಗಿ, ಸಮಿತಿ ಈ ಪ್ರಸ್ತಾವನೆಗಳ ಬಗೆಗಿನ ತನ್ನ ವಿಚಾರವನ್ನು ಹೊರಹಾಕಿದ ಸಮಯದಲ್ಲಿ ಪ್ರಚಲಿತ ಅಭಿಪ್ರಾಯ ಅಂದಿನ ನಾಣ್ಯಪದ್ಧತಿಯ ಸುಧಾರಣೆಗೆ ವಿರುದ್ಧವಾಗಿತ್ತು. 'ಹಣ'ದ ವಿಷಯದ ಮೇಲೆ ಪುಸ್ತಕಗಳನ್ನು ಬರೆಯುವ ಎಲ್ಲ ಪ್ರಸಿದ್ಧ ಬರಹಗಾರರನ್ನು ಕೃತ್ರಿಮವಾಗಿ ನಿಯಂತ್ರಿಸಲಾದ ನಾಣ್ಯಪದ್ಧತಿಯ ವೈರಿಗಳೆಂದು ಅಭಿಪ್ರಾಯ ಪಡಲಾಯಿತು.[೩] ಹಣದ ಯಾಂತ್ರಿಕ ವ್ಯವಸ್ಥೆಯೇ ಅವರಿಗೆ ಆದರ್ಶಪ್ರಾಯವಾಗಿತ್ತು. ಈ ಹಾನಿಕರ ವಾದದಿಂದ, ತಪ್ಪು ಹಾದಿ ಹಿಡಿಯುವ ಜೊತೆಗೆ, ಅವರು ಅಂದಿನ ಹಣಕಾಸಿನ ಪರಿಸ್ಥಿತಿಯು ಬೇಗನೆ ತನ್ನಷ್ಟಕ್ಕೆ ತಾನೆ ಸರಿಯಾಗುತ್ತದೆ ಹಾಗೂ ಭಾರತೀಯ ಹಣದಲ್ಲಿ ಸುಧಾರಣೆ ತರುವುದು ಅವಶ್ಯವಿಲ್ಲವೆಂಬ ತಪ್ಪು ನಂಬಿಕೆಯನ್ನು ಹೊಂದಿದ್ದರು. ಈ ಸಮಿತಿಯ ಸದಸ್ಯರಾಗಿದ್ದ ಸ್ವರ್ಗೀಯ ಮಿ. ವಾಲ್ಟರ್ ಬೇಗ್ ಹಾಟ್‌ರವರು[೪] ಈ ಹಣಕಾಸಿನ ಗೊಂದಲ ಪರಿಸ್ಥಿತಿ ಬಹುಕಾಲವಿರಲಾರದು. ಹಣದ ಅಪಮೌಲ್ಯ ಭಾರತೀಯ ನಿರ್ಯಾತವನ್ನು ಹೆಚ್ಚಿಸುತ್ತದೆ ಮತ್ತು ಅದರ ಆಯಾತವನ್ನು ಕಡಿಮೆ ಮಾಡುತ್ತದೆ; ಇಂಥ ಬದಲಾವಣೆ ಭಾರತದಿಂದ ಬೆಳ್ಳಿ ಹೊರಹೋಗುವಂತೆ ಮಾಡಿ, ಅದರ ಬೆಲೆ ಏರಿಕೆಗೆ ಕಾರಣವಾಗುತ್ತದೆ. ಇದಲ್ಲದೆ ಭಾರತದ ಹೊರಗಿನಿಂದಲೂ ಬೆಳ್ಳಿಯ ಬೇಡಿಕೆ ಹೆಚ್ಚಾಗುತ್ತದೆ. ಕೆಲ ದೇಶಗಳ ಬೆಳ್ಳಿಯ ಅನಾಣ್ಯತೆ ಅದರ ಬೇಡಿಕೆಯನ್ನು ಕಡಿಮೆ

---

೧. ಸಮಿತಿಯ ವರದಿಗಾಗಿ ಕಾಮನ್ಸ್ ಪೇಪರ್ಸ್ ೧೮೮೬ರು.ಸಿ. ೪೮೬೮ ಪು. ೨೬ನ್ನು ನೋಡಿ.

೨. ಪ್ರ, ೧೦, ೦೨೫.೫೦

೩. ದೇಶದ ನಾಣ್ಯಪದ್ಧತಿಯ ಪ್ರಮುಖ ಲೋಹ ಘಟಕದ ಲೆಕ್ಕವನ್ನು ಸರ್ಕಾರಿ ಸಂಸ್ಥೆಯೇ ನಿಯಂತ್ರಿಸಬೇಕೆನ್ನುವ ವಿಚಾರದ ಪರವಾಗಿರುವ ಸಾಕ್ಷಿಗಳ ವಾದವನ್ನು ಕೇಳಿ ೧೮೭೬ರ ಅಮೆರಿಕೆಯ ಹಣಕಾಸಿನ ಸಮಿತಿಯು ಆಶ್ಚರ್ಯಪಟ್ಟಿತು. ಇದೊಂದು ಹೊಸ ವಿಚಾರವಾಗಿತ್ತು. ೪೪ನೇ ಕ್ರಾಂಗ್ರೆಸ್ಸಿನ ಎರಡನೆಯ ಅಧಿವೇಶನ ೭೦೩ ಬರಹವನ್ನು ನೋಡಿರಿ. ಪುಟಗಳು ೪೭–೪೮

೪. ನೋಡಿ : ಅವರ ಬೆಳ್ಳಿಯ ಇಳಿತದ ಮೇಲಿನ ಮತ್ತು ಅದಕ್ಕೆ ಸಂಬಂಧಿಸಿದ ಕೆಲವು ಲೇಖನಗಳು ಆಯ್ಕೆ ಸಮಿತಿಯ ಮುಂದೆ, ಲಂಡನ್ ೧೮೭೭, ಪುಟಗಳು ೧೦೫೫ ಮತ್ತು ೮೦ ಬೆಳ್ಳಿ ಇಳಿತದ ಬಗ್ಗೆ ಅವರ ಪುರಾವೆ, ಲಾರ್ಡ್ಸ್ ಪೇಪರ್, ೧೮೭೬ರ ೧೭೮ ಪ್ರ. ೧೩೬೧–೧೪೫೦.

ಮಾಡಿದರೆ, ಉಳಿದ ದೇಶಗಳ ಬೆಳ್ಳಿಯ ಪ್ರಮಿತಿಯ ಸ್ವೀಕಾರ ಪ್ರತಿಕೂಲ ಪರಿಣಾಮ ಬೀರುತ್ತದೆ. ಹೀಗಾಗಿ ಬೆಳ್ಳಿಯ ಬೆಲೆಯಲ್ಲಿನ ಇಳಿತ ಯಾವ ದುಷ್ಪರಿಣಾಮವನ್ನೂ ಬೀರುವುದಿಲ್ಲವೆಂದು ಪ್ರತಿಪಾದಿಸಿದ್ದರು.

ಅಸಹಜವಾದ ನಾಣ್ಯ ಪದ್ಧತಿಯನ್ನು ಎತ್ತಿಹಿಡಿಯುವಲ್ಲಿ ಸಮಿತಿಯು ಏನೇ ಹೇಳಿದರೂ ಬೆಳ್ಳಿಯು ಮತ್ತೆ ತನ್ನ ಸ್ಥಾನವನ್ನು ಗಳಿಸಿಕೊಳ್ಳುವುದೆಂಬ ಆಶಾಭಾವನೆಯಿಂದ ಸರ್ಕಾರದ ಪ್ರಸ್ತಾಪವನ್ನು ತಿರಸ್ಕರಿಸುವುದರಿಂದ ಸಮಿತಿಯು ಮೋಸಹೋಗಿರುವುದು ಮಾತ್ರ ಸತ್ಯವಾಗಿತ್ತು. ಸಮಿತಿಯ ಮೂಲಭೂತ ಕಾರ್ಯನೀತಿಯ ಪರಿಜುಗಳೇ ವಿಫಲವಾಗಿದ್ದವು. ಈ ಬಿಳಿಯ ತಗಡನ್ನು ನಿರಾಕರಿಸುವುದರ ಮೂಲಕ ಭಾರತವು ಎಲ್ಲರ ಹುಬ್ಬೇರುವಂತೆ ಮಾಡಿತ್ತು. ಆದರೆ, ಯುರೋಪಿನಲ್ಲಿ ಬೆಲೆ ಕಳೆದುಕೊಂಡ ಬೆಳ್ಳಿ ಬೃಹತ್ ಪ್ರಮಾಣದಲ್ಲಿ ಭಾರತದಲ್ಲಿ ಏಕೆ ಬೇಡಿಕೆಯ ವಸ್ತುವಾಗಲಿಲ್ಲ ಎಂಬುದು ಒಂದು ಬಿಡಿಸಲಾರದ ಒಗಟಾಗಿತ್ತು. ಕೌನ್ಸಿಲ್ ಬಿಲ್‌ಗಳ ಮಾರಾಟಕ್ಕಾಗಿ ಬಹಳ ಜನ ಸರ್ಕಾರಿ ಕಾರ್ಯದರ್ಶಿಯನ್ನು ದೂಷಿಸಿದರು.[೧] ಆದರೆ ಈ ಬಿಲ್ಲುಗಳು ಭಾರತಕ್ಕೆ ಬೆಳ್ಳಿ ಕಳುಹಿಸುವುದನ್ನು ನಿಲ್ಲಿಸುವ ಪರ್ಯಾಯ ಹಣಪಾವತಿಯ ಸಾಧನಗಳೆಂದು ಹೇಳಲಾಗುತ್ತಿತ್ತು ಮತ್ತು ಇವುಗಳನ್ನು ಉಪಯೋಗಿಸುವುದರಿಂದ ಬೆಳ್ಳಿಯ ಬೇಡಿಕೆಯು ಕಡಿಮೆಯಾಗುತ್ತದೆ ಎಂದು ಗ್ರಹಿಸಲಾಗಿತ್ತು. ಆದರೆ, ಇದು ಸರಿಯಾದ ವಿಚಾರವಾದುದಲ್ಲವೆಂಬುದು ಸ್ಪಷ್ಟವಾಗಿತ್ತು.[೨], ಏಕೆಂದರೆ, ಒಂದು ವೇಳೆ ಕೌನ್ಸಿಲ್ ಬಿಲ್‌ಗಳನ್ನು ಸಂಪೂರ್ಣ ತೊಡೆದು ಹಾಕಿದರೂ, ಭಾರತಕ್ಕೆ ಎಷ್ಟು ಬೆಳ್ಳಿಯು ಹೋಗಬೇಕೋ ಅಷ್ಟು ಹೋಗಿಯೇ ಹೋಗುತ್ತಿತ್ತು. ಅದಕ್ಕಿಂತ ಹೆಚ್ಚಿನ ಪ್ರಮಾಣದಲ್ಲಲ್ಲ. ಕೌನ್ಸಿಲ್ ಬಿಲ್ಲುಗಳು ಕೇವಲ ವಸ್ತು ಹಾಗೂ ಸೇವೆಗಳ ವಿರುದ್ಧ ಉಪಯೋಗಿಸುವ ಸಾಮಾನ್ಯ ವ್ಯಾಪಾರಿ ಬಿಲ್ಲುಗಳೆಂದು ಭಾವಿಸಬೇಕು. ಇವುಗಳು ಬೆಳ್ಳಿ ಗಟ್ಟಿಯ ಸ್ಥಳಾಂತರದ ಮೇಲೆ ಯಾವ ಪ್ರಭಾವವನ್ನೂ ಬೀರುತ್ತಿರಲಿಲ್ಲ. ಈ ಬಿಲ್ಲುಗಳನ್ನು ಪಾವತಿ ಮಾಡುವವರೆಗೆ ಉಳಿದ ದೇಶಗಳ ಬೆಳ್ಳಿಯನ್ನು ಭಾರತ ಖರೀದಿಸಲು ಸಾಧ್ಯವಾಗುತ್ತಿರಲಿಲ್ಲ. ಆದರೆ ಒಮ್ಮೆ ಹಣಪಾವತಿ ಆದ ಮೇಲೆ ಉಳಿದ ತನ್ನ ಸಂಪನ್ಮೂಲಗಳಿಂದ ಇತರ ವಸ್ತುಗಳಿಗೆ ಬದಲಾಗಿ ಬೆಳ್ಳಿಯನ್ನು ಕೊಳ್ಳುವ ತಮ್ಮ ಪ್ರವೃತ್ತಿಯನ್ನು ತೃಪ್ತಿಪಡಿಸಿಕೊಳ್ಳಲು ಯಾವ ಅಡ್ಡಿ ಆತಂಕ ಇರುವುದಿಲ್ಲ. ಆದುದರಿಂದ, ಈ ಉಳಿದ ಕೊಳ್ಳುವ ಶಕ್ತಿಯನ್ನು ದೇಶಗಳು ನೆಲೆ ಇಳಿಯುತ್ತಿರುವ ಯುರೋಪಿನ ಬೆಳ್ಳಿಯನ್ನು ಕೊಳ್ಳಲು ಉಪಯೋಗಿಸುತ್ತವೆ ಎಂದು ಮಿ. ಬೇಗ್‌ಹಾಟ್ ಊಹಿಸಿದ್ದರು ಮತ್ತು ಅವರ ಊಹೆ ಸೈದ್ಧಾಂತಿಕವಾಗಿ ಬಲಹೀನವಾಗಿತ್ತು. ಏಕೆಂದರೆ, ಈ ಉಳಿದ ಕೊಳ್ಳುವಶಕ್ತಿ ಯುರೋಪಿನ ಬೆಳ್ಳಿಯ ಬೆಲೆ ಭಾರತದಲ್ಲಿರುವುದಕ್ಕಿಂತ ಕಡಿಮೆ ಇದ್ದಾಗ ಮಾತ್ರ ಉಂಟಾಗುತ್ತದೆ ಎಂಬ ಸತ್ಯಾಂಶವನ್ನು ಒಳಗೊಂಡಿಲ್ಲ. ಅಂದಿನ ಪರಿಸ್ಥಿತಿಗೆ ಅನುಗುಣವಾಗಿ, ಪ್ರೊಫೆಸರ್ ಪಿಯರ್ಸನ್‌ರವರು[೩] ಬೆಳ್ಳಿಯ ಬೆಲೆ ಇಳಿತ ಜಾಗತಿಕವಾಗಿರುವಾಗ, ಭಾರತದಲ್ಲಿ ಅದರ ಮೌಲ್ಯ ಹೆಚ್ಚಾಗಲು ಸಾಧ್ಯವಿಲ್ಲ ಇದರ ಬದಲಾಗಿ ಈ ದೇಶದಲ್ಲೂ ಬೆಳ್ಳಿಯ ಮಿತಿಮೀರಿದ ಪೂರೈಕೆ ಕಂಡುಬರುವುದು ಸಹಜ. ಭಾರತ, ಸಾಮಾನ್ಯ

---

೧. ೧೮೭೬ರ ಬೆಳ್ಳಿಯ ಮೌಲ್ಯದ ಇಳಿತದ ಆಯ್ದ ಸಮಿತಿಯ ವರದಿಯಲ್ಲಿ ಈ ವಾದವನ್ನು ಎಲ್ಲರಿಗೂ ಎದ್ದುಕಾಣುವಂತೆ ಮಾಡಲಾಯಿತು. (ಪುಟ XXX-XXXV,) ಅದಲ್ಲದೆ, ಈ ವಿಷಯವನ್ನು ೧೮೯೬ರ 'ಬಂಗಾರ ಹಾಗೂ ಬೆಳ್ಳಿ ಸಮಿತಿಯ' ಸದಸ್ಯರುಗಳು ಸಹ ಎತ್ತಿದ್ದರು. (ಅಂತಿಮ ವರದಿಯ ಭಾಗ ೨– ಪುಟಗಳು ೭೭–೭೯.)

೨. ನೋಡಿ : ಗೋಲ್ಡ್ ಅಂಡ್ ಸಿಲ್ವರ್ ಕಮಿಶನ್ ಮುಂದೆ ಪ್ರೊ. ಮಾರ್ಷಲ್‌ರ ಪುರಾವೆ, ೧೮೮೬, ಪ್ರ ೧೦, ೧೬೪–೭೬

೩. ಹೋಲಿಸಿ : ಗೋಲ್ಡ್ ಅಂಡ್ ಸಿಲ್ವರ್ ಕಮಿಶನ್ ಸುತ್ತೋಲೆಗೆ ಉತ್ತರ, ೧೮೮೬, ಎರಡನೆ ವರದಿ, ಸಹಬಂಧ VII(I), ಪು. ೨೫೪

ಪರಿಸ್ಥಿತಿಯಲ್ಲಿ, ಒಟ್ಟು ಪ್ರಮಾಣದ ಬೆಳ್ಳಿಯ ದೊಡ್ಡ ಭಾಗವನ್ನು ತಾನು ಯುರೋಪಿಗೆ ಕಳುಹಿಸಬಹುದಾಗಿತ್ತು. ಆದರೆ ಬೆಳ್ಳಿಯ ಬೆಲೆಯಲ್ಲಿನ ಸಾರ್ವತ್ರಿಕ ಇಳಿತ ಇದನ್ನು ತಡೆಹಿಡಿದಿತ್ತು, ಮತ್ತು ಆಗ ಅದು ಎರಡು ಪರಸ್ಪರ ವಿರೋಧಿ ಶಕ್ತಿಗಳನ್ನು ಅಂದರೆ i) ಭಾರತದಿಂದ ಯುರೋಪಿಗೆ ಬೆಳ್ಳಿಯನ್ನು ನಿರ್ಯಾತ ಮಾಡುವ ಮತ್ತು ii) ಯುರೋಪಿನಿಂದ ಭಾರತಕ್ಕೆ ಬೆಳ್ಳಿಯ ನಿರ್ಯಾತ ಮಾಡುವ ಪ್ರವೃತ್ತಿಯನ್ನು ಹೊಂದಿತ್ತು. ಇವೆರಡರಲ್ಲಿ ಎರಡನೆಯದು, ಮೊದಲನೆಯದಕ್ಕಿಂತ ಶಕ್ತಿಯುತವಾಗಿದ್ದರೂ, ಮೊದಲನೆಯದು ಯುರೋಪಿನಿಂದ ಭಾರತಕ್ಕೆ ಬೆಳ್ಳಿಯನ್ನು ದೊಡ್ಡ ಪ್ರಮಾಣದಲ್ಲಿ ಒಳಬರಗೊಡಲಿಲ್ಲ. ಒಟ್ಟಿನಲ್ಲಿ ಸಮಿತಿ, ತನ್ನ ಅಸಂಬದ್ಧ ಊಹೆಗಳಿಂದ ತಾನೇ ಮೋಸಹೋದುದಲ್ಲದೆ ಉಳಿದ ವಿಷಯಗಳಲ್ಲಿಯೂ ನಿರಾಶೆಯನ್ನು ಹೊಂದಿತು. ಮಿ. ಬೇಗ್ ಹಾಟ್ ಅವರು ನಿರೀಕ್ಷಿಸುತ್ತಿದ್ದಂತೆ ಕಾಗದದ ಹಣವು ಜಾರಿಯಲ್ಲಿರುವ ದೇಶಗಳು ಪಾವತಿಗಳನ್ನು ಬೆಳ್ಳಿಯ ನಾಣ್ಯಗಳಲ್ಲಿ ಮಾಡಲಿಲ್ಲ. ಬದಲಿಗೆ, ಆ ಎಲ್ಲಾ ದೇಶಗಳೂ, ಕಾದುನೋಡುವ ನೀತಿಯನ್ನು ಅನುಸರಿಸುತ್ತಿದ್ದ ಎಲ್ಲರನ್ನೂ ನಿಬ್ಬೆರಗುಗೊಳಿಸುವಂತೆ ಬೆಳ್ಳಿಯನ್ನು ಅನಾಣ್ಯೀಕರಣಗೊಳಿಸಿದವು.

ಭಾರತ ಹಾಗೂ ಇತರ ದೇಶಗಳು ಮಾಡಿದ ಆಶಾಭಂಗದಿಂದ ಆಘಾತಕ್ಕೆ ಒಳಗಾದ ರಾಷ್ಟ್ರಗಳ ದೃಷ್ಟಿಕೋನವೇ ಬದಲಾಯಿತು. ಈ ಮೊದಲು ಈ ದೇಶಗಳು ಅಸ್ತವ್ಯಸ್ತವಾಗಿದ್ದ ನಾಣ್ಯಗಳನ್ನು ಪುನಃ ವ್ಯವಸ್ಥೆಗೆ ತರುವ ಯಾವ ಪ್ರಯತ್ನಗಳನ್ನೂ ಮಾಡಿರಲಿಲ್ಲ. ಇದನ್ನು ಕಂಡು ನಾಣ್ಯಪದ್ಧತಿಯಲ್ಲಿ ಸುಧಾರಣೆಯನ್ನು ತರುವಲ್ಲಿ ಅವಸರ ಮಾಡಬಾರದೆಂದು ಈ ದೇಶಗಳಿಗೆ ಪ್ರಸಿದ್ಧ ಅರ್ಥಶಾಸ್ತ್ರಜ್ಞರು ಈ ರೀತಿ ಉಪದೇಶಿಸಿದರು:

ಜೆವನ್ಸರು,[೧] "ಬರುವ ಕಷ್ಟಗಳನ್ನು ಎದುರಿಸಲು ಸ್ವಲ್ಪ ತಾಳ್ಮೆ ಹಾಗೂ ಸ್ವಲ್ಪ ತಿಳಿವಳಿಕೆ ನಮಗೆ ಬೇಕಾಗುತ್ತದೆ. ಭಾರತದಲ್ಲಿ ಮುಂಬರುವ ಸುಗ್ಗಿಯು ಅನುಕೂಲಕರವಾಗಿದ್ದು, ಅದು ಆ ದೇಶವು ನಮ್ಮಲ್ಲಿರುವ ಹೆಚ್ಚುವರಿ ಬೆಳ್ಳಿಯನ್ನು ಸಂಪೂರ್ಣವಾಗಿ ಕೊಂಡುಕೊಳ್ಳುವಂತೆ ಮಾಡುತ್ತದೆ....(ಕೆಲವೊಂದು ಅಪವಾದದ ವರ್ಷಗಳನ್ನು ಬಿಟ್ಟರೆ) ಪ್ಲಿನಿಯ ಕಾಲದಿಂದಲೂ ಈ ರೀತಿ ಅವರು ಮಾಡುತ್ತಲೇ ಬಂದಿರುತ್ತಾರೆ....... ಭವಿಷ್ಯದ ವರ್ಷಗಳಲ್ಲಿ ಯಾವುದೇ ಹೆಚ್ಚಿನ ಪ್ರಮಾಣದ ಬೆಳ್ಳಿಯನ್ನು ಹಾನಿ ಮಾಡಿಕೊಳ್ಳದೆ, ಒಂದು ವೇಳೆ ಹಂತಹಂತವಾಗಿ ಮತ್ತು ಎಚ್ಚರದಿಂದ ಅದನ್ನು ಮಾರಿದರೆ, ಹೆಚ್ಚುವರಿ ಬೆಳ್ಳಿಯ ಸಮಸ್ಯೆ ತೀವ್ರವಾಗದಂತೆ ಮಾಡಿಕೊಳ್ಳಬಹುದು ಎಂದರು.

ಆದರೆ, ಇದಕ್ಕಾಗಿ ಕಾಯಬೇಕಾದ ಕಾಲಾವಧಿಯು ಅಧಿಕವಾಗಿದ್ದು, ಇದರಿಂದ ತಾಳ್ಮೆಯನ್ನು ಕಳೆದುಕೊಂಡ ಯುರೋಪಿನ ಜನತೆಯು ಬೆಳ್ಳಿಯ ಮೌಲ್ಯದಲ್ಲಾಗುತ್ತಿದ್ದ ಕುಸಿತವನ್ನು ತಡೆಯಲು ವಿಳಂಬಮಾಡದೆ ತಕ್ಷಣವೇ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳುವಂತೆ ಒತ್ತಾಯಿಸಿ ಚಳವಳಿಯನ್ನು ಆರಂಭಿಸಿತು.

ಈ ಚಳವಳಿಯು ಕೇವಲ ಭಾವನಾತ್ಮಕವಾಗಿರದೆ ವಾಸ್ತವತೆಯಿಂದ ಕೂಡಿತ್ತು ಮತ್ತು ಅಂದಿನ ನಾಣ್ಯಪದ್ಧತಿಯಿಂದಾದ ಕೆಡುಕುಗಳಿಂದಲೇ ತನ್ನ ಶಕ್ತಿಯನ್ನು ಪಡೆದಿತ್ತು. ಮೇಲಾಗಿ, ಯುರೋಪಿನ ಬಹುತೇಕ ರಾಷ್ಟ್ರಗಳ ಹಣಕಾಸಿನ ಪರಿಸ್ಥಿತಿಯೂ ಬಹಳ ಅನಾರೋಗ್ಯಕರವಾಗಿತ್ತು. ಬೆಳ್ಳಿಯನ್ನು ಸಾಂಕೇತಿಕ ನಾಣ್ಯವಾಗಿ ಉಪಯೋಗಿಸುವ ಪರಿಣಾಮಕಾರಿ ಸುವರ್ಣ ಪ್ರಮಿತಿಯ ಯೋಜನೆಗಳು ಜಾರಿಯಲ್ಲಿ ತರುವಾಗಲೇ

---

೧. ಕೃತಿಯಲ್ಲಿ ಉದ್ಧೃತ ಪು. ೩೫೪

ತಡೆಹಿಡಿಯಲ್ಪಟ್ಟಿದ್ದವು. ಉದಾಹರಣೆಗಾಗಿ, ಜರ್ಮನಿಯು ಬೆಳ್ಳಿಯ ಅನಾಣ್ಯೀಕರಣ ಮಾಡಿದಮೇಲೆ, ಬಂಗಾರದೊಂದಿಗೆ ಹಳೆ ಪ್ರಮಾಣದಲ್ಲಿ ತನ್ನ ಬೆಳ್ಳಿ ನಾಣ್ಯಗಳನ್ನು ಸಂಪೂರ್ಣ ಶಾಸನಬದ್ಧ ಹಣದಂತೆ ಉಳಿಸಿಕೊಂಡಿತ್ತು. ಆದರೆ, ಜರ್ಮನಿಯು ಈ ರೀತಿ ಮಾಡುವುದಕ್ಕಿಂತ ಮುಂಚೆ ಅದರ ಅನಾಣ್ಯೀಕರಣ ನೀತಿ ಬೆಳ್ಳಿಯ ಮೌಲ್ಯದ ಮೇಲೆ ತನ್ನ ಅನಿಷ್ಟಕರ ಪ್ರಭಾವವನ್ನು ಬೀರಲಾರಂಭಿಸಿತು. ಮತ್ತು ಇದರಿಂದ ಜರ್ಮನಿಗೆ ತನ್ನ ಹಳೆಯ ಬೆಳ್ಳಿಯ ನಾಣ್ಯಗಳನ್ನೇ ಮುಂದುವರಿಸಿಕೊಂಡು ಹೋಗುವುದು ಅನಿವಾರ್ಯವಾಯಿತು. ಲ್ಯಾಟಿನ್ ದೇಶಗಳ ಒಕ್ಕೂಟವು ಅನುಷ್ಠಾನದಲ್ಲಿ ತಂದ ಬೆಳ್ಳಿಯ ಅನಾಣ್ಯೀರಣವು ಅವುಗಳ ನಾಣ್ಯಪದ್ಧತಿಯ ಮೇಲೆ ಇಂತಹುದೇ ಕೆಟ್ಟ ಪರಿಣಾಮ ಉಂಟುಮಾಡಿತು. ಈ ದೇಶಗಳು ತಮ್ಮ ಬೆಳ್ಳಿಯ ಐದು ಫ್ರ್ಯಾಂಕನ್ನು ಚಲಾವಣೆಯಲ್ಲಿ ತರುವುದನ್ನು ನಿಲ್ಲಿಸಿದವು, ಆದರೆ, ಈಗಾಗಲೆ ಚಲಾವಣೆಯಲ್ಲಿ ಬಂದ ಐದು ಫ್ರ್ಯಾಂಕ್ ನಾಣ್ಯಗಳನ್ನು ಚಲಾವಣೆಯಿಂದ ಹಿಂದೆ ತೆಗೆದುಕೊಳ್ಳಲು ಆಗಲಿಲ್ಲ. ಇಂಥದೇ ಪರಿಸ್ಥಿತಿಯಲ್ಲಿ ಅಮೆರಿಕವೂ ತನ್ನ ಆಯ್ಕೆಯಿಂದಾಗಿ ಸಿಕ್ಕಿ ಹಾಕಿಕೊಂಡಿತ್ತು. ಬೆಳ್ಳಿ ಪ್ರಮಿತಿಯ ಸುಧಾರಣೆಗೆ ಸಂಬಂಧಿಸಿದ ಜನರ ಚಳವಳಿಯಿಂದ ಪ್ರಭಾವಿತಗೊಂಡು, ಅಮೆರಿಕೆಯು ೧೮೭೮ರಲ್ಲಿ ಬ್ಲ್ಯಾಂಡ್ ಆಲಿಸನ್ ಕಾಯಿದೆಯನ್ನು ಜಾರಿಗೆ ತಂದಿತು. ಈ ಶಾಸನದ ಪ್ರಕಾರ ಅಮೆರಿಕೆಯ ಖಜಾನೆ ಕಾರ್ಯದರ್ಶಿಯು ಪ್ರತಿ ತಿಂಗಳು $೨,೦೦೦,೦೦೦ಕ್ಕಿಂತಲೂ ಕಡಿಮೆ ಇಲ್ಲದ ಹಾಗೂ $೪,೦೦೦,೦೦೦ಕ್ಕಿಂತಲೂ ಹೆಚ್ಚಿನ ಪ್ರಮಾಣದ್ದಾಗಿರದ ಬೆಳ್ಳಿಗಟ್ಟಿಗಳನ್ನು ಖರೀದಿಸಿ ಮತ್ತು ಆ ಗಟ್ಟಿಗಳನ್ನು ನಾಣ್ಯವಾಗಿಸಿ, ಅಂದರೆ ಅವುಗಳನ್ನು ಬೆಳ್ಳಿ ಡಾಲರುಗಳಲ್ಲಿ ಪರಿವರ್ತಿಸಿ, ಎಲ್ಲ ಸರ್ಕಾರಿ ಹಾಗೂ ಖಾಸಗಿ ಸಾಲಗಳನ್ನು ತೀರಿಸಬೇಕಾಗಿತ್ತು.[೧] ಈ ಬೆಳ್ಳಿ ಡಾಲರುಗಳ ಲೋಹದ ಮೌಲ್ಯ ಕೆಳಗಿಳಿಯುತ್ತಾ ಹೋದಂತೆಲ್ಲಾ ಅವುಗಳ ಶಾಸನಬದ್ಧ ಮೌಲ್ಯ ಕೆಳಗಿಳಿಯದಿದ್ದರೂ, ಜರ್ಮನ್ ಬೆಳ್ಳಿಯ ಮತ್ತು ಐದರ ಫ್ರ್ಯಾಂಕ್ ನಾಣ್ಯಗಳಂತೆ ಅಸಹಜವಾಗಿ ಮೌಲ್ಯ ಏರಿಸಲ್ಪಟ್ಟ ನಾಣ್ಯಗಳಾದವು. ಯಾವಾಗ ಒಂದು ದೇಶದ ನಾಣ್ಯ ಅದರ ಎಲ್ಲ ಉದ್ದೇಶಗಳಿಗೆ ಅಂದರೆ ಆಂತರಿಕ ವಿನಿಮಯ, ಅಂತರರಾಷ್ಟ್ರೀಯ ವಿನಿಮಯ ಮುಂತಾದವುಗಳಿಗೆ, ಸಮನಾಗಿರುವುದಿಲ್ಲವೊ ಆ ನಾಣ್ಯದ ಪರಿಸ್ಥಿತಿ ತುಲನಾತ್ಮಕವಾಗಿ ಅಸಮಾಧಾನಕರವಾಗಿದೆ ಎಂದು ಸ್ಪಷ್ಟವಾಗಿ ಹೇಳಬಹುದು.[೨] ಆಂತರಿಕ ಉದ್ದಿಶ್ಯಗಳಿಗೆ ಅನುಕೂಲವಾಗಿದ್ದರೂ ಈ ನಾಣ್ಯಗಳು, ಅಂತರರಾಷ್ಟ್ರೀಯವಾಗಿ ವ್ಯಾಪಾರದಲ್ಲಿ ಉಪಯೋಗಕ್ಕೆ ಬಾರದಂತಿದ್ದವು, ಈ ನಾಣ್ಯಗಳು ಬೆಳ್ಳಿ ನಾಣ್ಯಪದ್ಧತಿಯನ್ನು ಅಸ್ಥಿರ ಹಾಗೂ ಏರುಪೇರು ಮಾಡುವುದಲ್ಲದೆ, ಅವುಗಳು ಬ್ಯಾಂಕುಗಳ ಮೀಸಲು ಹಣದಂತೆ ಯಾವ ಉಪಯೋಗಕ್ಕೂ ಬರಲಿಲ್ಲ (ಬ್ಯಾಂಕುಗಳ ಮೀಸಲು ಹಣದಂತೆ ವರ್ತಿಸುವುದು ಹಣದ ಅತಿ ಮುಖ್ಯ ಕಾರ್ಯಗಳಲ್ಲಿ ಒಂದಾಗಿದೆ). ಮುಂದುವರಿದು, ಬೆಳ್ಳಿ ನಾಣ್ಯಪದ್ಧತಿಯು, ಕಾಯಿದೆಬಾಹಿರ ನಾಣ್ಯಗಳು ತಯಾರಾಗುವುದಕ್ಕೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿತು. ಆದುದರಿಂದ, ಈ ನಾಣ್ಯಗಳು ಅನೇಕ ಅರ್ಥ ವ್ಯವಸ್ಥೆಗಳನ್ನು ಗಂಡಾಂತರಕ್ಕೀಡುಮಾಡಿದವು. ಏಕೆಂದರೆ ಈ ದೇಶಗಳ ನಾಣ್ಯದ ಒಟ್ಟು ಮೊತ್ತದಲ್ಲಿನ ಅಧಿಕ ಭಾಗ ಬೆಳ್ಳಿಯ ರೂಪದಲ್ಲಿರುತ್ತದೆ. ಆದುದರಿಂದ, ಅಟ್ಟೋಮರ್ ಹೌಸ್ ಅವರ (ಅಂದರೆ XXIIIನೆಯ ಪಟ್ಟಿಯಲ್ಲಿ ನೀಡಲಾದ) ಅಂಕಿಸಂಖ್ಯೆಗಳು, ಒಂದು ಹೆಚ್ಚಿನ ಪ್ರಮಾಣದ ಸಾಂಕೇತಿಕ ಹಣವನ್ನು ಹೊಂದಿದ ನಾಣ್ಯಪದ್ಧತಿಯನ್ನು ನಿಯಂತ್ರಿಸುವುದು ಮತ್ತು ನಿರ್ದೇಶಿಸುವುದು ಈ ದೇಶಗಳಿಗೆ ಬಹು ಕಷ್ಟಕರವಾಗಿದೆ ಎಂದು ಹೇಳುತ್ತವೆ.

---

೧. ಹಣಕಾಸಿನ ಸಮಿತಿಯ ಇಂಡೋನೆಪೋಲಿನ್ಸ್ ಕನ್ವೆನ್ಷನ್ ವರದಿ, ಚಿಕಾಗೊ ೧೮೫೬ ಪುಟಗಳು ೩೮-೪೫

೨. ೧೮೮೧ರಲ್ಲಿನ ಅಂತರರಾಷ್ಟ್ರೀಯ ಹಣಕಾಸಿನ ಸಮ್ಮೇಳನದಲ್ಲಿನ ಪ್ರೊ. ಪಿಯರ್‌ಸನ್‌ರ ಭಾಷಣ. ಪುಟಗಳು ೭೭-೮೪

## ಪಟ್ಟಿ XXIII
## ವಿವಿಧ ದೇಶಗಳಲ್ಲಿ ಚಲಾವಣೆಯಲ್ಲಿರುವ ಹಣ* (ವಿವಿಧ ನಾಣ್ಯಗಳಲ್ಲಿ)

| ದೇಶಗಳು | | | ೧೮೯೨ರ ಪ್ರಾರಂಭದಲ್ಲಿನ ಹಣದ ಚಲಾವಣೆ | | | | |
|---|---|---|---|---|---|---|---|
| | | | ಬಂಗಾರ | ಬೆಳ್ಳಿ | ಹೊಂದಾಣಿಕೆಯಾಗದ ನೋಟುಗಳು | ಹಣ | ಗಟ್ಟಿ ಹಣ |
| ಆಸ್ಟ್ರಿಯಾ | ... | fl | ೬೫,೦೦೦,೦೦೦ | ೧೯೭,೦೦೦,೦೦೦ | ೬೦೧,೦೦೦,೦೦೦ | ೪೦,೦೦೦,೦೦೦ | ೧೪,೦೦೦,೦೦೦ |
| ಇಂಗ್ಲೆಂಡ್ | ... | £ | ೧೧೮,೦೦೦,೦೦೦ | – | ೧೦,೦೦೦,೦೦೦ | ೨೬,೦೦೦,೦೦೦ | ೧,೯೦೦,೦೦೦ |
| ಫ್ರಾನ್ಸ್ | ... | fr | ೩,೯೦೦,೦೦೦,೦೦೦ | ೩,೨೦೦,೦೦೦,೦೦೦ | ೫೭೨,೦೦೦,೦೦೦ | ೨೮೦,೦೦೦,೦೦೦ | ೨೮೦,೦೦೦,೦೦೦ |
| ಜರ್ಮನಿ | ... | m | ೨,೫೦೦,೦೦೦,೦೦೦ | ೪೩೦,೦೦೦,೦೦೦ | ೪೫೦,೦೦೦,೦೦೦ | ೪೫೭,೦೦೦,೦೦೦ | ೫೭,೦೦೦,೦೦೦ |
| ಹಾಲೆಂಡ್ | ... | fl | ೬೪,೦೦೦,೦೦೦ | ೧೩೫,೦೦೦,೦೦೦ | ೯೮,೦೦೦,೦೦೦ | ೭,೬೦೦,೦೦೦ | ೧,೮೦೦,೦೦೦ |
| ಇಟಲಿ | ... | li | ೪೮೫,೦೦೦,೦೦೦ | ೮೧,೦೦೦,೦೦೦ | ೮೪೭,೦೦೦,೦೦೦ | ೧೫೦,೦೦೦,೦೦೦ | ೭೫,೦೦೦,೦೦೦ |
| ರಷ್ಯ | ... | £ | ೫೯,೫೦೦,೦೦೦ | – | ೫೧,೨೦೦,೦೦೦ | ೮,೨೦೦,೦೦೦ | ೧,೦೦೦,೦೦೦ |
| ಸ್ಪೇನ್ | ... | Pes. | ೧೬೦,೦೦೦,೦೦೦ | ೬೪೬,೦೦೦,೦೦೦ | ೫೪೮,೦೦೦,೦೦೦ | ೧೯೦,೦೦೦,೦೦೦ | ೧೫೭,೦೦೦,೦೦೦ |
| ಅಮೆರಿಕಾ ಸಂಯುಕ್ತ ಸಂಸ್ಥಾನ | ... | $ | ೬೭೧,೦೦೦,೦೦೦ | ೪೫೮,೦೦೦,೦೦೦ | ೪೧೯,೦೦೦,೦೦೦ | ೭೭,೦೦೦,೦೦೦ | ೧೮,೦೦೦,೦೦೦ |

* ಅಂಕಿಸಂಖ್ಯೆಗಳು, ಒಟ್ಟೊಮಾರ್ ಹೌಪ್ಟ್ ಕೊಟ್ಟಂತೆ (ಲಂಡನ್, ಎಫಿಂಗಹ್ಯಾಮ್, ವಿಲ್ಸನ್ ಮತ್ತು ಕಂಪನಿ ೧೮೯೨, ಪು. ೨೬೦)

ಸುವರ್ಣ ಪ್ರಮಿತಿಯನ್ನು ಹೊಂದಿರುವ ಇಂಗ್ಲೆಂಡಿನಂತಹ ಒಂದು ದೇಶ, ಇನ್ನೂ ಕೆಲವು ಕಠಿಣವಾದ ತೊಂದರೆಗಳಿಗೆ ಒಳಗಾಗದೆ ಇರಲಿಲ್ಲ. ಈ ಹಿಂದೆ ಹೇಳಿದಂತೆ, ಬೆಲೆಗಳ ಇಳಿತದ ಮುಂದುವರಿಕೆ, ಬಂಗಾರದ ಬೆಲೆ ಏರಿಕೆಯ ಪರಿಣಾಮವಲ್ಲದೆ ಮತ್ತೇನಲ್ಲ. ಇದು ಇಂಗ್ಲೆಂಡ್, ಈ ಹಿಂದೆ, ತನ್ನ ಇತಿಹಾಸದಲ್ಲಿ ಎಂದೂ ಅನುಭವಿಸದ ಔದ್ಯಮಿಕ ಮತ್ತು ವ್ಯಾಪಾರಿ ಮುಗ್ಗಟ್ಟಿನ ಪರಿಸ್ಥಿತಿಯನ್ನು ತಂದೊಡ್ಡಿತ್ತು. ಇಷ್ಟೇ ಅಲ್ಲದೆ, ಈ ಹಣಕಾಸಿನ ತೊಂದರೆಗಳು, ವೃತ್ತಿನಿರತ ಬಂಡವಾಳಗಾರರಿಗೆ ಬಂಡವಾಳ ಹೂಡುವಿಕೆಯಿಂದ ಬರುವ ಲಾಭವನ್ನು ಕಡಿಮೆಮಾಡಿತು. ಬಂಡವಾಳದ ವಿನಿಯೋಗದ ಅವಕಾಶಗಳೂ ಕಡಿಮೆಯಾಯಿತು. ಈ ಸಂದರ್ಭದಲ್ಲಿ ಅಮೆರಿಕೆಯ ಸಮಿತಿಯ ವರದಿ ಹೀಗಿತ್ತು :– "೧೮೭೭ ರಿಂದ ೧೮೯೭ ಅಂದರೆ ೨೦ ವರ್ಷಗಳ ಅವಧಿಯಲ್ಲಿ ಬಂಡವಾಳದ ಲಾಭಗಳಿಸುವ ಸಾಮರ್ಥ್ಯ ಒಂದೂವರೆ ಪಟ್ಟು ಅಥವಾ ಈ ಪ್ರಮಾಣಕ್ಕೆ ಹತ್ತಿರವಾಗಿ, ಕಡಿಮೆಯಾಗಿತ್ತು. ಬಂಡವಾಳದ ಲಾಭಗಳಿಸುವ ಸಾಮರ್ಥ್ಯದಲ್ಲಿನ ಈ ಇಳಿತ 'ಬಂಡವಾಳ ಹೂಡುವಿಕೆ'ಯನ್ನು ವೃತ್ತಿಯಾಗಿ ಮಾಡಿಕೊಂಡ ಜನರಿಗೆ ಆಘಾತವನ್ನು ಉಂಟುಮಾಡಿತು. ಮುಂದುವರಿದು, ಇದು ಉದ್ದಿಮೆಯ ಧುರೀಣರು ಮತ್ತು ಹಣದ ಬಂಡವಾಳಗಾರರ ಮೇಲೆ ತನ್ನ ಕೆಟ್ಟ ಪರಿಣಾಮವನ್ನು ಬೀರಿತು. ಮುಂದುವರೆದ ಈ ಪರಿಸ್ಥಿತಿಯು, ಸಾಮಾನ್ಯವಾಗಿ ತಮ್ಮ ಮುಪ್ಪಿನ ಕಾಲಕ್ಕೆ ನೆರವಾಗಲಿ ಎಂಬ ಉದ್ದೇಶದಿಂದ ಬಂಡವಾಳದ ಮಾರುಕಟ್ಟೆಯಲ್ಲಿ ಹಣ ತೊಡಗಿಸುತ್ತಿದ್ದ ಇಂಗ್ಲೆಂಡ್ ಹಾಗೂ ಫ್ರಾನ್ಸಿನ ಶ್ರೀಸಾಮಾನ್ಯರು ಷೇರುಗಳನ್ನು ಕೊಳ್ಳಲಾಗದಂತೆ ಮಾಡಿತು."[೧]

ಅಮೆರಿಕನ್ ಸಮಿತಿಯ ಈ ಹೇಳಿಕೆಯು ಸರಿಯಾಗಿದೆಯೋ ಇಲ್ಲವೋ ಎಂಬುದು ಸಂಶಯಾತ್ಮಕವಾಗಿದ್ದಿತು. ಈ ಹಣಕಾಸಿನ ಪರಿಸ್ಥಿತಿಯಲ್ಲಾದ ಏರುಪೇರು, ಬಂಡವಾಳ ಮಾರುಕಟ್ಟೆಯಲ್ಲಿ ಹಣ ಹೂಡುವುದೇ ಒಂದು ಲಾಭದಾಯಕವಾಗಿದ್ದ ಇಂಗ್ಲೆಂಡ್‌ನಲ್ಲಿ, ಒಂದು ಇಕ್ಕಟ್ಟಿನ ಪರಿಸ್ಥಿತಿಯನ್ನು ತಂದೊಡ್ಡಿತ್ತು.

ಅಂದಿನ ದ್ವಿಲೋಹ ಪರಿಸ್ಥಿತಿಯನ್ನು ಸುಧಾರಿಸಲು, ಬಂಗಾರ ಮತ್ತು ಬೆಳ್ಳಿಯ ನಡುವೆ ಸಮತೆಯನ್ನು ಸ್ಥಾಪಿಸಲಿಕ್ಕೆ, ಒಂದರ ನಂತರ ಮತ್ತೊಂದರಂತೆ ಮೂರು ಬಾರಿ ಅಂತರರಾಷ್ಟ್ರೀಯ ಸಮ್ಮೇಳನಗಳನ್ನು ಕರೆಯಲಾಯಿತು. ಅಮೆರಿಕ ಸಂಯುಕ್ತ ಸಂಸ್ಥಾನದ ಆಹ್ವಾನದ ಮೇರೆಗೆ ೧೮೭೮ರಲ್ಲಿ ಮೊದಲನೆಯ ಅಂತರರಾಷ್ಟ್ರೀಯ ಸಮ್ಮೇಳನ ಜರುಗಿತು. ಎರಡನೆಯದು ಫ್ರಾನ್ಸ್ ಮತ್ತು ಅಮೆರಿಕೆಯ ಜಂಟಿ ಕರೆಯ ಪ್ರಕಾರ ೧೮೮೧ರಲ್ಲಿ ಮತ್ತೆ ಅಮೆರಿಕೆಯಲ್ಲಿಯೇ ಜರುಗಿತು. ಮೂರನೆಯ ಹಾಗೂ ಕೊನೆಯ ಸಮ್ಮೇಳನ ಪುನಃ ಅಮೆರಿಕೆಯ ಸಂಯುಕ್ತ ಸಂಸ್ಥಾನದ ಇಚ್ಛೆಯ ಪ್ರಕಾರ ೧೮೯೨ರಲ್ಲಿ ಬ್ರಸಲ್ಸ್‌ನಲ್ಲಿ ನಡೆಯಿತು.

ಅಂದಿನ ಸಂದಿಗ್ಧ ಪರಿಸ್ಥಿತಿಯನ್ನು ಗಮನಿಸಿದರೆ, ಈ ಮೂರು ಸಮ್ಮೇಳನಗಳು, ಅವುಗಳು ಇಟ್ಟುಕೊಂಡಿದ್ದ ಗುರಿಯನ್ನು ಮುಟ್ಟಲು ಯಾವುದಾದರೂ ಒಂದು ಸಂಧಾನಕ್ಕೆ ಬಂದೇ ಬರುತ್ತವೆ ಎಂದು ಜನರು ಆಶಿಸುವುದು ಸಹಜವಾಗಿತ್ತು. ಆದರೆ, ಯಾವುದೇ ಒಂದು ಸಂಧಾನಕ್ಕೆ ಬರದೆ ಈ ದೇಶಗಳು ವ್ಯರ್ಥ ಚರ್ಚೆಯಲ್ಲಿ ಕಾಲ ಕಳೆದವು. ಇದ್ದುದರಲ್ಲಿ ಎರಡನೆಯ ಸಮ್ಮೇಳನದಲ್ಲಿ ಭಾಗವಹಿಸಿದ

---

೧. ಚೀನಾ ಹಾಗೂ ಇನ್ನಿತರ ಬೆಳ್ಳಿ ಉಪಯೋಗಿಸುವ ದೇಶಗಳ ಮೇಲೆ ನೀಡಿದ ವಿನಿಮಯದ ಮೇಲಿನ ಅಂತರರಾಷ್ಟ್ರೀಯ ಸಮಿತಿಯ ವರದಿ ೫೮ನೆಯ ಅಧಿವೇಶನ ಎರಡನೆಯ ಅಂಕಣ, ಸಂ. ೧೪೪ ಫೈಲು ವಾಷಿಂಗ್‌ಟನ್, ೧೯೦೩, ಪು. ೧೦೧.

ದೇಶಗಳು ಯಾವುದಾದರೂ ಒಂದು ಸೂಕ್ತ ಒಪ್ಪಂದಕ್ಕೆ ಬರಬಹುದೇನೋ ಎನ್ನುವ ಶುಭ ಚಿಹ್ನೆ, ತೋರಿದವು. ಮೊದಲನೆಯ ಮತ್ತು ಮೂರನೆಯ ಸಮ್ಮೇಳನಗಳ ವಿಚಾರವಾಹಿನಿ ಪರಸ್ಪರ ವಿರುದ್ಧವಾದ ದಿಕ್ಕುಗಳಲ್ಲಿ ಸಾಗಿತ್ತು. ಈ ಸಮ್ಮೇಳನಗಳು ಸಾಧಿಸಿದ ಪ್ರಗತಿಯನ್ನು ಸಂಕ್ಷಿಪ್ತದಲ್ಲಿ ಹೇಳುವುದಾದರೆ ಹೆಚ್ಚಿನ ದೇಶಗಳು ಚಿನ್ನದ ಜೊತೆಗೆ ಬೆಳ್ಳಿಯ ನಾಣ್ಯದ ಉಪಯೋಗವನ್ನು ಉಳಿಸಿಕೊಳ್ಳಬೇಕು ಮತ್ತು ವಿಸ್ತರಿಸಬೇಕೆಂಬ ವಿಚಾರವನ್ನು ದೃಢವಾಗಿ ಹೇಳಿದವು. ಆದರೆ ಅವುಗಳ ಈ ಗಂಭೀರ ಹೇಳಿಕೆಗೆ ಉಳಿದ ದೇಶಗಳು ಸರಿಯಾಗಿ ಸ್ಪಂದಿಸಲಿಲ್ಲ.

ದ್ವಿಲೋಹ ಒಪ್ಪಂದವನ್ನು ಏರ್ಪಡಿಸುವಲ್ಲಿ ಈ ಸಮ್ಮೇಳನಗಳು ಯಶಸ್ವಿಯಾಗದ ಕಾರಣಗಳನ್ನು ಯಾರೂ ಸರಿಯಾಗಿ ಅರ್ಥ ಮಾಡಿಕೊಳ್ಳಲಿಲ್ಲ. ವಿವಿಧ ದೇಶಗಳು ತಮ್ಮ ಪರಸ್ಪರ ವಿಭಿನ್ನ ಉದ್ದೇಶಗಳಿಂದ ದ್ವಿಲೋಹ ವಾದಕ್ಕೆ ಪರವಾಗಿ ಹಾಗೂ ವಿರುದ್ಧವಾಗಿ ವಾದಿಸಿದವು ಎಂಬುದು ಈ ಸಮ್ಮೇಳನದ ನಡಾವಳಿಯಿಂದ ಗೊತ್ತಾಗುತ್ತದೆ. ಒಂದು ದೇಶಕ್ಕೆ ಚಲಾವಣೆಯಲ್ಲಿ ಒಂದೇ ಲೋಹದ ನಾಣ್ಯವಿದೆಯೇ ಅಥವಾ ಎರಡು ಲೋಹಗಳೂ (ಅಂದರೆ ಚಿನ್ನ ಮತ್ತು ಬೆಳ್ಳಿ) ಚಲಾವಣೆಯಲ್ಲಿವೆಯೋ ಎಂಬುದು ಮಹತ್ವದ ಪ್ರಶ್ನೆಯಾಗಿರದೆ, ಆ ದೇಶಕ್ಕೆ ಚಿನ್ನ ಹಾಗೂ ಬೆಳ್ಳಿಯ ವಿನಿಮಯದರದಲ್ಲಿ ಸ್ಥಿರತೆಯನ್ನು ಕಾಪಾಡಿಕೊಂಡು ಹೋಗುವುದು ಪ್ರಮುಖ ಉದ್ದೇಶವಾಗಿರುತ್ತದೆ, ಉಳಿದ ದೇಶಕ್ಕೆ ಎರಡೂ ಲೋಹದ ನಾಣ್ಯಗಳ ಸಹಗಾಮಿ ಚಲಾವಣೆಯು ಅತಿ ಮುಖ್ಯ ಉದ್ದೇಶವಾಗಿರುತ್ತದೆ. ಇವೆರಡು ಮಾರ್ಗಗಳ ವಿಭಿನ್ನತೆಯ ಪರಿಣಾಮವೇನೆಂದರೆ, ದ್ವಿಲೋಹ ಪದ್ಧತಿಯ ಯೋಜನೆಗೆ ವಿವಿಧ ದೇಶಗಳು ಒಂದು ಒಪ್ಪಂದಕ್ಕೆ ಬಾರದೇ ಇರುವುದು.

ಚಿನ್ನ ಮತ್ತು ಬೆಳ್ಳಿಗಳ ನಡುವೆ ಒಂದು ಸ್ಥಿರ ಪ್ರಮಾಣ ಉಳಿಸಿಕೊಂಡು ಹೋಗುವ ಅರ್ಥದಲ್ಲಿ ದ್ವಿಲೋಹವಾದದ ಕಾರ್ಯಸಾಮರ್ಥ್ಯ ಒಂದು ಖಚಿತತೆ ಇಲ್ಲದ ಪ್ರಸ್ತಾವನೆಯಾಗಿದೆ. ಈ ವಿಷಯ ಏನೇ ಇರಲಿ, ಸಮ್ಮೇಳನಗಳಲ್ಲಿ ನಡೆದ ವಾದಗಳನ್ನು ಓದಿದಾಗ ಇವುಗಳು ಭಾಗವಹಿಸುವ ದೇಶ ಮತ್ತು ಅರ್ಥಶಾಸ್ತ್ರಜ್ಞರಿಗೆ ಒಂದು ಸ್ಥಿರಪ್ರಮಾಣದಲ್ಲಿ ಚಿನ್ನ ಹಾಗೂ ಬೆಳ್ಳಿನಾಣ್ಯಗಳನ್ನು ಚಲಾವಣೆಯಲ್ಲಿ ತರುವ ಯಶಸ್ವಿ ದ್ವಿಲೋಹವಾದಕ್ಕೆ, ಬೆಂಬಲ ನೀಡಲಿಲ್ಲವೆಂಬುದು ಸುಳ್ಳಾಗುತ್ತದೆ. ವಾಸ್ತವದಲ್ಲಿ ೧೮೮೧ರ ಸಮ್ಮೇಳನದಲ್ಲಿ ಈ ವಿಷಯದ ಪರವಾಗಿ ಬಹಳಷ್ಟು ಚರ್ಚೆಯಾಯಿತು. ಬಹುತೇಕ ಎಲ್ಲ ದೇಶದ ಸರ್ಕಾರಗಳು ದ್ವಿಲೋಹ ಪದ್ಧತಿಯ ಅನುಷ್ಠಾನವನ್ನು ಸ್ವಾಗತಿಸಿದವು. ಅದರಲ್ಲೂ ಬ್ರಿಟಿಷ್ ಸರ್ಕಾರ ಸಹ ತನ್ನ ಬ್ಯಾಂಕ್ ಸನ್ನದು ಕಾಯಿದೆಯಲ್ಲಿ ಬೆಳ್ಳಿಯ ಉಪಯೋಗಕ್ಕೆ ಸಮ್ಮತಿ ನೀಡಿತು.

ಆದರೆ, ಒಂದು ವ್ಯವಸ್ಥೆಯಂತೆ, ಏಕಕಾಲದಲ್ಲಿಯೇ ತನ್ನ ಎರಡೂ ಲೋಹಗಳು ಚಲಾವಣೆಯನ್ನು ಉಳಿಸಿಕೊಂಡು ಬರಲು ದ್ವಿಲೋಹವಾದ ಎಲ್ಲಿಯವರೆಗೆ ಭರವಸೆ ನೀಡಬಲ್ಲದು? ದ್ವಿಲೋಹವಾದಿಗಳು ತಾವು ಎರಡೂ ಲೋಹಗಳ ಚಲಾವಣೆಯನ್ನು ಕೊನೆಯವರೆಗೂ ಉಳಿಸಿಕೊಂಡು ಹೋಗುತ್ತೇವೆಂಬ ತಮ್ಮ ವಾದದ ಸಮರ್ಥನೆಗೆ ಫ್ರಾನ್ಸಿನ ಉದಾಹರಣೆಯನ್ನು ನಮ್ಮ ಮುಂದಿಡುತ್ತಾರೆ. ದ್ವಿಲೋಹ ಪದ್ಧತಿಯನ್ನು ಅನುಸರಿಸಿದ ಫ್ರಾನ್ಸ್‌ನಲ್ಲಿ ಚಿನ್ನ-ಬೆಳ್ಳಿಗಳು ಒಟ್ಟಿಗೇ ಚಲಾವಣೆಯಲ್ಲಿತ್ತೆ? ಇಲ್ಲ. ಈ ಪದ್ಧತಿಯಲ್ಲಿ ಎರಡು ಲೋಹಗಳ ಉತ್ಪಾದನೆಯಲ್ಲಿ ಉಂಟಾದ ಏರಿಳಿತಗಳು, ಅವುಗಳ ಸ್ಥಿರ ವಿನಿಮಯ ದರದಲ್ಲಿ ಹೇಳಿಕೊಳ್ಳುವಂಥ ಯಾವ ಏರಿಳಿತಗಳನ್ನು ಉಂಟುಮಾಡುವುದಿಲ್ಲವೆಂಬುದು ದ್ವಿಲೋಹ ಪದ್ಧತಿಯ ಹಿರಿಮೆಯಾದರೂ, ಇಲ್ಲಿನ ಕಿಂಚಿತ್ ಅಸ್ಥಿರತೆ, ಎರಡು ಲೋಹನಾಣ್ಯಗಳ ಚಲಾವಣೆಯಲ್ಲಿನ ಅತಿದೊಡ್ಡ ಕ್ರಾಂತಿಯನ್ನು ಉಂಟುಮಾಡಲು ಸಾಕಷ್ಟು ಸಾಮರ್ಥ್ಯವನ್ನು ಹೊಂದಿರುತ್ತದೆಂಬುದನ್ನು ಕೆಳಗಿನ ಪಟ್ಟಿ ವಿವರಿಸುತ್ತದೆ:-

## ಪಟ್ಟಿ XXIV
## ಫ್ರಾನ್ಸಿನಲ್ಲಿ ಚಿನ್ನ ಮತ್ತು ಬೆಳ್ಳಿಯ ನಾಣ್ಯೀಕರಣ*

| ಅವಧಿ | ಬಂಗಾರ ದಶಲಕ್ಷ ಫ್ರ್ಯಾಂಕುಗಳಲ್ಲಿ | ಬೆಳ್ಳಿ ದಶಲಕ್ಷ ಫ್ರ್ಯಾಂಕುಗಳಲ್ಲಿ | ಮೌಲ್ಯದ ಪ್ರಮಾಣ |
|---|---|---|---|
| ೧೮೦೩ ರಿಂದ ೧೮೨೦ ರವರೆಗೆ | ೮೬೮ | ೧,೦೯೧ | ೧:೧೫.೫೮ |
| ೧೮೨೧ ರಿಂದ ೧೮೪೭ ರವರೆಗೆ | ೩೦೧ | ೨,೭೭೮ | ೧:೧೫.೮೦ |
| ೧೮೪೮ ರಿಂದ ೧೮೫೨ ರವರೆಗೆ | ೪೪೮ | ೫೪೩ | ೧:೧೫.೬೭ |
| ೧೮೫೩ ರಿಂದ ೧೮೫೬ ರವರೆಗೆ | ೧,೭೯೫ | ೧೦೨ | ೧:೧೫.೩೫ |
| ೧೮೫೭ ರಿಂದ ೧೮೬೬ ರವರೆಗೆ | ೩,೫೧೬ | ೫೫ | ೧:೧೫.೩೩ |
| ೧೮೬೭ ರಿಂದ ೧೮೭೩ ರವರೆಗೆ | ೮೭೬ | ೫೮೭ | ೧:೧೫.೬೨ |

* ಎಮ್. ಪಿಯರ್ಸನ್, ೧೮೮೧ರಲ್ಲಿ ಜರುಗಿದ ಪ್ಯಾರೀಸ್ ಅಂತರರಾಷ್ಟ್ರೀಯ ಹಣಕಾಸಿನ ಸಮ್ಮೇಳನದಲ್ಲಿ ನೀಡಿದ ಪಟ್ಟಿ. ಇವರು ನೆದರ್‌ಲ್ಯಾಂಡಿನ ಪ್ರತಿನಿಧಿ.

ದ್ವಿಲೋಹ ಪದ್ಧತಿಯಲ್ಲಿನ ಈ ದುಷ್ಪಪರಿಣಾಮಗಳನ್ನು ನಿವಾರಿಸಲು ದ್ವಿಲೋಹಪರವಾದಿಗಳು ನಿರ್ದಿಷ್ಟವಾದ ಯಾವ ವಿವರಣೆಯನ್ನೂ ನೀಡಿಲ್ಲ. ಆದರೆ ಅರ್ಥಶಾಸ್ತ್ರದಲ್ಲಿ ಕೆಲವೊಂದು ಯೋಜನೆಗಳಿವೆ. ಇಂಥ ಒಂದು ಯೋಜನೆಯನ್ನು ಚಿನ್ನ ಮತ್ತು ಬೆಳ್ಳಿ ಗಟ್ಟಿಗಳ ಒಂದು ನಿಗದಿಯಾದ ಖಚಿತ ಪ್ರಮಾಣಗಳ ಆಧಾರಿತ ಸಂಶೋಧನಾ ಲೇಖನದಲ್ಲಿ ಪ್ರೊ. ಮಾರ್ಷಲ್‌ರವರು ಪ್ರಸ್ತಾಪಿಸಿದ್ದಾರೆ.[೧] ಆದರೆ ಇಂಥ ಕೆಲವೇ ಕೆಲವು ಯೋಜನೆಗಳನ್ನು ಬಿಟ್ಟರೆ, ಮುಕ್ತ–ನಾಣ್ಯ ಮಾಡುವಿಕೆ ಮತ್ತು ನಿಗದಿತ ಪ್ರಮಾಣದ ನಾಣ್ಯಗಳಿರುವ ದ್ವಿಲೋಹವಾದದ ಯೋಜನೆಗಳು ಎರಡೂ ನಾಣ್ಯಗಳ ಪರ್ಯಾಯದ ಬಗ್ಗೆ ಯಾವ ಖಚಿತತೆಯನ್ನೂ ನೀಡುವುದಿಲ್ಲ. ನಿಜವಾಗಿ ಹೇಳುವುದಾದರೆ, ಈ ನಾಣ್ಯಗಳ ಪ್ರಮಾಣದಲ್ಲಿನ ಪರ್ಯಾಯವು ದ್ವಿಲೋಹವಾದದ 'ಜೀವಾಳ'ವಾಗಿದೆ ಮತ್ತು ಇದು ಎರಡು ಲೋಹಗಳ ನಾಣ್ಯದ ಪ್ರಮಾಣವನ್ನು ಏರುಪೇರಾಗದಂತೆ ನೋಡಿಕೊಳ್ಳುವುದಿಲ್ಲ. ದ್ವಿಲೋಹ ಪದ್ಧತಿಯ ಈ ಒಂದು ದೋಷವನ್ನು ನಿವಾರಿಸಲು, ದ್ವಿಲೋಹ ಪದ್ಧತಿಯ ಅಭಿಮಾನಿಗಳು.[೨] ಚಿನ್ನ–ಬೆಳ್ಳಿ ನಾಣ್ಯಗಳ ಪ್ರಮಾಣದಲ್ಲಿನ ಈ ಬದಲಾವಣೆ ಕೇವಲ ಬ್ಯಾಂಕು ಮೀಸಲು ಹಣಕ್ಕೆ ಅನ್ವಯಿಸುತ್ತಿದ್ದು, ಜನರ ದೈನಂದಿನ ವ್ಯವಹಾರಕ್ಕೆ ಭಾದಕವಾಗುವುದಿಲ್ಲ ಎಂದು ವಾದಿಸಬಹುದು. ಬ್ಯಾಂಕುಗಳು ಜನರ ಪೂರ್ವವಿಶ್ವಾಸಕ್ಕೆ ಒಳಗಾಗದೆ, ತಮ್ಮ ಚಿನ್ನ–ಬೆಳ್ಳಿಯ ನಾಣ್ಯಗಳ

---

೧. ಇಂಥದೇ ಒಂದು ಯೋಜನೆಯನ್ನು ೧೧೫ ವರ್ಷಗಳ ಹಿಂದೆ ಸೂಚಿಸಲಾಗಿತ್ತು. ಅದನ್ನು ಜೇಮ್ಸ್ ಸ್ಟೆವಾರ್ಟ್‌ಯ ಸೂಚಿಸಿದ್ದರು. ಈಸ್ಟ್ ಇಂಡಿಯಾ ಕಂಪನಿಯು ಆಗಿನ ಕಾಲದ ಬಂಗಾಲದ ಅರಾಜಕತೆಯ ನಾಣ್ಯಪದ್ಧತಿಯನ್ನು ಸುಧಾರಿಸಲು ಸಲಹೆಗಳನ್ನು ನೀಡಲು ಆತನನ್ನು ಕೇಳಿದ್ದರೂ ತನ್ನ ಯೋಜನೆಯನ್ನು ಆತ, "ಜನರೆಲ್ಲಾ ತತ್ವಜ್ಞಾನಿಗಳಲ್ಲ" ಎಂಬ ಯೋಚನೆಯಿಂದ ಕಂಪನಿಗೆ ನೀಡಿರಲಿಲ್ಲ. ಇದು ಇವರ 'ಪ್ರಿನ್ಸಿಪಲ್ಸ್ ಆಫ್ ಮನಿ ಆ್ಯಸ್ ಅಪ್ಲೈಡ್ ಟು ದಿ ಪ್ರೆಸೆಂಟ್ ಸ್ಟೇಟ್ ಆಫ್ ಕಾಯಿನ್ ಆಫ್ ಬೆಂಗಾಲ್' (ಎರಡನೇ ಆವೃತ್ತಿ) ಪುಟಗಳು ೮–೧೧, ಹಾಗೂ ವಿಲಿಯಮ್ ವಾರ್ಡ್‌ರ ಹಣಕಾಸಿನ ಅಸ್ತವ್ಯಸ್ತತೆ ಎಂಬ ಪುಸ್ತಕದಲ್ಲಿದೆ (ಲಂಡನ್ ೧೮೪೦). ಪು. ೮

೨. ಪ್ರೊ. ಫಾಕ್ಸ್‌ವೆಲ್ ಆಕ್ಸ್‌ಫರ್ಡ್ ಇಕನಾಮಿಕ್ ರಿವ್ಯೂ ಎಂಬ ಪತ್ರಿಕೆ, ೧೮೯೩ ಸಂ. III ಪು. ೨೯೭.

ಮೀಸಲು ಹಣದಲ್ಲಿ ಏರುಪೇರು ಮಾಡಲು ಹೇಗೆ ಸಾಧ್ಯ? ಆದುದರಿಂದ ಇದೊಂದು ಕಣ್ಣೊರೆಸುವ ತಂತ್ರವಲ್ಲದೆ ಮತ್ತೇನಲ್ಲ.[೧] ಚಿನ್ನ ಮತ್ತು ಬೆಳ್ಳಿಯನ್ನು ನಿಗದಿತ ಪ್ರಮಾಣದಲ್ಲಿ ಉಪಯೋಗಿಸಬೇಕೆನ್ನುವ ಅಂತರರಾಷ್ಟ್ರೀಯ ಒಪ್ಪಂದ ಕೂಡ, ಬೆಳ್ಳಿ–ಚಿನ್ನ ಇವೆರಡೂ ನಾಣ್ಯಗಳ ಚಲಾವಣೆಯಲ್ಲಿ ಒಂದು ಅನುಪಾತವನ್ನು ಸಾಧಿಸುವ ಯಾವ ಭರವಸೆಯನ್ನೂ ನೀಡುವುದಿಲ್ಲ. ಅಂತರರಾಷ್ಟ್ರೀಯ ಒಪ್ಪಂದವೊಂದರ ಮೇಲೆ ಎಲ್ಲಾ ದೇಶದ ಕಾರ್ಯಾಚರಣೆಯ ಮೇಲೆ ದ್ವಿಲೋಹ ಸೂತ್ರದ ಸ್ಥಿರತೆ ನಿಂತಿರುತ್ತದೆ. ಇದೇ ಸ್ಥಿರತೆಯನ್ನು ಸ್ವತಃ ಒಂದು ದೇಶವೇ ಸಾಧಿಸಲು ಪ್ರಯತ್ನಿಸಬಹುದು. ಆದರೆ ಅಂತಹ ಸಂದರ್ಭಗಳಲ್ಲಿ ಆ ಪ್ರಮಾಣದಲ್ಲಿನ ಏರುಪೇರು ದೊಡ್ಡದಾಗಿರಬಹುದಾಗಿದೆ. ಆದರೆ ಕೇವಲ ಅಂತರರಾಷ್ಟ್ರೀಯ ಒಪ್ಪಂದವು ಮಾತ್ರ ಒಂದೇ ನಾಣ್ಯದ ಚಲಾವಣೆಯನ್ನಿಟ್ಟುಕೊಂಡು ಇನ್ನೊಂದು ನಾಣ್ಯವನ್ನು ಚಲಾವಣೆಯಿಂದ ದೂರವಿಡುವ ಪ್ರಕ್ರಿಯೆಯನ್ನು ತಪ್ಪಿಸುವ ಸಾಮರ್ಥ್ಯವನ್ನು ಹೊಂದಿರುವುದಿಲ್ಲ. ಗ್ರೆಶಮ್‌ರ ಸಿದ್ಧಾಂತ ಅಂತರರಾಷ್ಟ್ರೀಯ ನಾಣ್ಯಗಳ ಒಪ್ಪಂದದಲ್ಲಿ ಒಂದು ದುರ್ಬಲ ಸಿದ್ಧಾಂತವಾಗಿದೆ ಎಂದು ಭಾವಿಸುವುದು ಶುದ್ಧ ತಪ್ಪು. ಚಲಾವಣೆಗೆ ಆವಶ್ಯಕವಾಗಿರುವ ಒಟ್ಟು ಹಣ/ನಾಣ್ಯದ ಮೊತ್ತ ಮತ್ತು ಈ ಎರಡು ಲೋಹಗಳ ಉತ್ಪಾದನೆ ಇವುಗಳ ಸಾಪೇಕ್ಷತೆಯ ಮೇಲೆ ಗ್ರೆಶಮ್‌ರ ಸಿದ್ಧಾಂತ ರೂಪಿತವಾಗಿರುತ್ತದೆ. ಉದಾಹರಣೆಗೆ ಒಂದು ಲೋಹದ ಉತ್ಪಾದನೆ ಇನ್ನೊಂದು ಲೋಹದ ಉತ್ಪಾದನೆಗಿಂಥ ಬಹಳಷ್ಟು ಹೆಚ್ಚಾಗಿದೆ ಎಂದು ಭಾವಿಸಿದರೆ, ಮೊದಲ ಲೋಹದಿಂದ ಮಾಡಿದ ನಾಣ್ಯ ಎರಡನೆಯ ಲೋಹದಿಂದ ಮಾಡಿದ ನಾಣ್ಯವನ್ನು ಚಲಾವಣೆಯಿಂದ ದೂರವಿರಿಸುವುದನ್ನು ಒಂದು ಅಂತರರಾಷ್ಟ್ರೀಯ ಒಪ್ಪಂದ ಹೇಗೆ ತಪ್ಪಿಸುತ್ತದೆ? ಇನ್ನೊಂದು ರೀತಿ ಹೇಳುವುದಾದರೆ, ಅಂತರರಾಷ್ಟ್ರೀಯ ಒಪ್ಪಂದವು ಒಂದು ನಾಣ್ಯ ಇನ್ನೊಂದು ನಾಣ್ಯವನ್ನು ಚಲಾವಣೆಯಿಂದ ದೂರವಿರಿಸುವ ಪ್ರಕ್ರಿಯೆಯನ್ನು ಮಾಡುವ ಬದಲು ಅದನ್ನು ಪ್ರೋತ್ಸಾಹಿಸುತ್ತದೆ.

ಆದುದರಿಂದ, ದ್ವಿಲೋಹ ವಾದವನ್ನು ಸ್ವೀಕರಿಸುವ ಪ್ರಶ್ನೆ ಬಂದಾಗ, ರಾಷ್ಟ್ರಗಳು, ಒಂದು ಸ್ಥಿರ ಪ್ರಮಾಣ ಮತ್ತು ಎರಡೂ ಲೋಹಗಳ ಚಲಾವಣೆ ಇವೆರಡರ ನಡುವೆ ಒಂದನ್ನು ಆರಿಸಿಕೊಳ್ಳಬೇಕು. ಕಾರಣ, ಲೋಹಗಳ ಸ್ಥಿರ ಪ್ರಮಾಣ ಅನುಷ್ಠಾನದಲ್ಲಿದ್ದು, ಲೋಹಗಳ ಸಹಗಾಮಿ ಚಲಾವಣೆ ಇಲ್ಲದಿರುವ ಸನ್ನಿವೇಶವನ್ನು ವಾಸ್ತವದಲ್ಲಿ ಅವುಗಳು ಎದುರಿಸಬೇಕಾಗಬಹುದು. ಇಂಥ ಸನ್ನಿವೇಶದ ಒಂದು ಸಾಧ್ಯತೆಯನ್ನು ಗುರುತಿಸದ ಪರಿಣಾಮವಾಗಿ ಅಂತರರಾಷ್ಟ್ರೀಯ ಸಮ್ಮೇಳನಗಳೂ ಯಶಸ್ವಿಯಾಗದೇ ಹೋದವು ಎಂದು, ೧೮೮೬ರ ಬಂಗಾರ ಮತ್ತು ಬೆಳ್ಳಿ ಸಮಿತಿಯಂತಹ ನಿಷ್ಪಕ್ಷಪಾತದ ನ್ಯಾಯಪೀಠ ಒಕ್ಕೊರಲಿನಿಂದ ಸಾರಿತು. ಒಟ್ಟಿನಲ್ಲಿ ದ್ವಿಲೋಹ ಪದ್ಧತಿಗಳು ತಮ್ಮ ಎರಡು ಲೋಹಗಳನ್ನು ಒಟ್ಟಿಗೆ ಚಲಾವಣೆಯಲ್ಲಿ ತರುವ ಭರವಸೆಗಳನ್ನು ಹೊಂದಿರದಿದ್ದುದರಿಂದ, ಅವುಗಳು ಮುರಿದು ಬಿದ್ದವು. ಈ ವಿಷಯ ಏನೇ ಇರಲಿ, ದ್ವಿಲೋಹ ಪದ್ಧತಿಯ ಅನುಷ್ಠಾನದ ತಕ್ಷಣದ ಪರಿಣಾಮ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತರುವುದಾಗಿದ್ದರೆ, ಇಂತಹ ಚಲಾವಣೆಯ ಅಸಾಧ್ಯತೆಯು ಪದ್ಧತಿಯ ಒಂದು ದೊಡ್ಡ ದೋಷವಾಗುತ್ತಿರಲಿಲ್ಲ. ಆದರೆ, ಅಂದಿನ ವಾಸ್ತವಿಕ ಸಂಗತಿ ಏನಾಗಿತ್ತೆಂದರೆ, ದ್ವಿಲೋಹ ಪದ್ಧತಿಯ ಅನುಷ್ಠಾನದ ತಕ್ಷಣದ ಪರಿಣಾಮವಾಗಿ ಬೆಳ್ಳಿಯ ನಾಣ್ಯಗಳು ಜಾರಿಗೆ ಬಂದವು. ದ್ವಿಲೋಹ ಪದ್ಧತಿಯ ಪರಿಣಾಮವಾದ ಈ ವಾಸ್ತವಸಂಗತಿ ಈ ಪದ್ಧತಿಯ ಬೇರೆ ಎಲ್ಲಾ ಅಂಶಗಳಿಗಿಂತ, ಬಹುತೇಕ ರಾಷ್ಟ್ರಗಳನ್ನು ಈ ಪದ್ಧತಿಯನ್ನು ಸ್ವೀಕರಿಸಲು ಹಿಂದೇಟು ಹಾಕುವಂತೆ ಮಾಡಿತ್ತು. ದ್ವಿಲೋಹ ಪದ್ಧತಿಯ ಚೌಕಟ್ಟಿನಲ್ಲಿ ಬಂಗಾರ ಮತ್ತು ಬೆಳ್ಳಿಯ ನಡುವೆ

---

೧. ಕ್ಯಾನನ್‌ರಿಗೆ ನೀಡಿದ ಉತ್ತರ, ಹಿಂದೆ ಹೇಳಿದಂತೆ, ಪು. ೪೫೭

ಒಂದು ಸ್ಥಿರ ಪ್ರಮಾಣವನ್ನು ತರಲು ಅಂದು ಒಂದೆಡೆ ಸೇರಿದ್ದ ರಾಷ್ಟ್ರಗಳು, ಅದು ತುಲನಾತ್ಮಕವಾಗಿ ಕಡಿಮೆ ಮೌಲ್ಯದ ಲೋಹಕ್ಕೆ ಅಂದರೆ, ಬೆಳ್ಳಿಗೆ ಸ್ಥಿರತೆಯನ್ನು ನೀಡುತ್ತದೆ (ಬಂಗಾರಕ್ಕೆ ಅಲ್ಲ) ಎಂಬ ಕಾರಣದಿಂದ ಇಂದು ತಿರಸ್ಕರಿಸುತ್ತಿರುವುದು ಒಂದು ಆಶ್ಚರ್ಯದ ಸಂಗತಿಯಾಗಿದೆ. ದ್ವಿಲೋಹ ಪದ್ಧತಿಯನ್ನು ಪುನರ್ ರಚಿಸುವ ಪ್ರಶ್ನೆ ಬಂದಾಗ, ಯುರೋಪಿನ ಎಲ್ಲ ರಾಷ್ಟ್ರಗಳ ಜನರ ಮನಸ್ಸಿನಲ್ಲಿ, ನಾಣ್ಯ ಮಾಡುವ ಉದ್ದೇಶಕ್ಕಾಗಿ ಬಂಗಾರ ಹಾಗೂ ಬೆಳ್ಳಿಗಳೆರಡು ಸಮನಾದ ಮೌಲ್ಯವಿರುವ ನಾಣ್ಯಗಳಾಗಿರಲಿಲ್ಲವೆಂಬ ಸತ್ಯಸಂಗತಿಯನ್ನು ನಾವು ಗುರುತಿಸಲೇಬೇಕು. ಬೆಳ್ಳಿಗೆ ಹೋಲಿಸಿದಾಗ ಬಂಗಾರವು ತನ್ನ ಸಣ್ಣಗಾತ್ರದಲ್ಲಿ ಅಧಿಕ ಮೌಲ್ಯ ಹೊಂದಿದ ಉಚ್ಚ ಲೋಹವಾಗಿದೆ ಎಂಬ ವಿಚಾರ ೧೯ನೆಯ ಶತಮಾನದ ಕೊನೆಯ ಭಾಗದಲ್ಲಿ ಹೆಚ್ಚು ಜನರಿಗೆ ಗೊತ್ತಾಯಿತು ಹಾಗೂ ಚಿನ್ನದ ನಾಣ್ಯ ಮುಕ್ತವಾಗಿ ಚಲಾವಣೆಯಲ್ಲಿ ತರುವ ಯೋಜನೆಯೊಂದನ್ನು ಬಿಟ್ಟು ಉಳಿದೆಲ್ಲ ಯೋಜನೆಗಳಿಗೆ ಜನ ಒಪ್ಪದೇ ಹೋದರು. ಈ ಬಂಗಾರದ ವ್ಯಾಮೋಹ ಇಂಗ್ಲೆಂಡ್‌ನಂತಹ ಸುವರ್ಣ ಪ್ರಮಿತಿ ದೇಶಗಳಿಗೆ ಮಾತ್ರ ಸೀಮಿತವಾಗಿರಲಿಲ್ಲ. ಲ್ಯಾಟಿನ್ ದೇಶಗಳ ಒಕ್ಕೂಟದ ಟಂಕಸಾಲೆಗಳು ಸಹ ಈ ಸಮಸ್ಯೆಯನ್ನು ಎದುರಿಸತೊಡಗಿದ್ದವು. ಜೆವನ್ಸ್ ಹೇಳಿದಂತೆ[೧].

"ಫ್ರಾನ್ಸ್ ದೇಶದಲ್ಲಿ ಹಳೆ ಬೆಳ್ಳಿ ನಾಣ್ಯಗಳಿಗೆ ಬದಲಾಗಿ ಸಂದ ಚಿನ್ನದ ನಾಣ್ಯಗಳಾದ ಒಂದು ಮತ್ತು ಅರ್ಧ ನೆಪೋಲಿಯನ್‌ಗಳು ಹಾಗೂ ಫ್ರ್ಯಾಂಕಿನ ಐದರ ನೋಟು ಮುಂತಾದವುಗಳನ್ನು ಚಲಾವಣೆಗೆ ತಂದಾಗ, ಅದರ ಪ್ರಜೆಗಳು ಸರ್ಕಾರದ ಈ ಹಾನಿಯನ್ನು ತುಂಬುವ ನಾಣ್ಯಪದ್ಧತಿಯನ್ನು ಹೊಗಳಿದರು. ಆದರೆ, ೧೮೭೩ರ ನಂತರ ಚಲಾವಣೆಗೆ ಬಿಟ್ಟಿರುವ ಹಳೇ ಬೆಳ್ಳಿ ನಾಣ್ಯಗಳು ಬೃಹತ್ ಪ್ರಮಾಣದಲ್ಲಿ ಹಿಂದಿರುಗಿ ಬಂದಿದ್ದನ್ನು ಕಂಡು ಫ್ರಾನ್ಸ್‌ಗೆ ತನ್ನ ಜನ ಚಿನ್ನದ ನಾಣ್ಯಕ್ಕೆ ಮರಳಿ ಹೋಗಿರುತ್ತಾರೆ ಎಂಬ ವಿಷಯದ ಬಗ್ಗೆ ಮನವರಿಕೆಯಾಯಿತು.

ಚಿನ್ನದ ನಾಣ್ಯಗಳ ಪರವಾಗಿನ ಪ್ರಮುಖ ದೇಶಗಳ ಒಲವು ಎಷ್ಟು ಪ್ರಬಲವಾಗಿತ್ತೆಂದರೆ, ಅನೇಕ ಸಮ್ಮೇಳನಗಳಲ್ಲಿ ಅದು ಬಂಗಾರದ ಮೀಸಲು ಮೊತ್ತದ ಏರುಪೇರಿನೊಂದಿಗೆ ವೃದ್ಧಿಸುತ್ತಾ ಮತ್ತು ಕ್ಷೀಣಿಸುತ್ತಾ ಹೋಯಿತು.[೨] ೧೮೭೮ ರಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನವು ಮತ್ತೊಮ್ಮೆ ಅಂತರರಾಷ್ಟ್ರೀಯ ಸಮ್ಮೇಳನವನ್ನು ಕರೆಯಲು ಮುಂದಾಯಿತು, ಏಕೆಂದರೆ ಬ್ಲ್ಯಾಂಡ್ ಎಲಿಸನ್ ಕಾಯಿದೆಯ ಅನುಷ್ಠಾನವು ತನ್ನ ಅರ್ಥವ್ಯವಸ್ಥೆಯಲ್ಲಿ ಪಾವತಿಗಾಗಿ ಬರುವ ಬಂಗಾರದ ಒಳಹರಿವಿಗೆ ತಡೆಯನ್ನು ಉಂಟುಮಾಡಿತು. ಅಮೆರಿಕೆಯ ಈ ವಿಚಾರಕ್ಕೆ, ಅಂದರೆ ಅಂತರರಾಷ್ಟ್ರೀಯ ಸಮ್ಮೇಳನ ಕರೆಯುವುದಕ್ಕೆ ಜರ್ಮನಿಯು ಉದಾಸೀನತೆ ತೋರಿಸಿತು. ಏಕೆಂದರೆ, ಜರ್ಮನಿಯು ಸಾಕಷ್ಟು ಬಂಗಾರವನ್ನು ಹೊಂದಿತ್ತು ಮತ್ತು ಅನಾಣ್ಯವಾಗುವ ಬೆಳ್ಳಿಯನ್ನು ಹಾನಿಗೆ ಒಳಗಾಗದಂತೆ ಮಾರಬಹುದೆಂಬ ಧೈರ್ಯ ಅದಕ್ಕಿತ್ತು. ಆದರೆ ೧೮೮೧ರಲ್ಲಿ ಫ್ರಾನ್ಸ್ ಮತ್ತು ಜರ್ಮನಿಗಳು ಹಣಕಾಸಿನ ಸುಧಾರಣೆಗೆ ತಮ್ಮ ಅಧಿಕ ಕಾತರವನ್ನು ಸೂಚಿಸಿದವು. ಏಕೆಂದರೆ ಆಗ ಫ್ರಾನ್ಸ್ ತನ್ನ ಎಲ್ಲಾ ಬಂಗಾರವನ್ನು ಕಳೆದುಕೊಂಡಿತ್ತು ಮತ್ತು ಜರ್ಮನಿಯು ತನ್ನ ಬೆಳ್ಳಿಯನ್ನು ಮೋಸದಿಂದ ಬೇರೆ ದೇಶಗಳಿಗೆ ಮಾರುವಲ್ಲಿ ಅಸಮರ್ಥವಾಗಿತ್ತು. ೧೮೯೨ರ ಹೊತ್ತಿಗೆ ಉಳಿದ ದೇಶಗಳಿಗಿಂತ ಹೆಚ್ಚಾಗಿ ಅಮೆರಿಕಾ ಸಂಯುಕ್ತ ಸಂಸ್ಥಾನವು ಬಂಗಾರದ ಕೊರತೆಯಿಂದ ಬಳಲುತ್ತಿತ್ತು. ಆ ದೇಶದ ಬೇಜವಾಬ್ದಾರಿ

---

೧. ಹಣ ಮತ್ತು ವಿನಿಮಯದ ವ್ಯವಸ್ಥೆ. ೧೮೯೦, ಪು. ೧೪೩

೨. ೧೮೮೧ರಲ್ಲಿ ಜರುಗಿದ ಅಂತರರಾಷ್ಟ್ರೀಯ ಹಣಕಾಸಿನ ಸಮಿತಿಯ ಭಾರತೀಯ ಪ್ರತಿನಿಧಿಯ ವರದಿಯಿಂದ, ೧೮೮೨ರ ಸಿ ೩೨೨೯ ಪು. ೭ ಹಿಂದೆ ಹೇಳಿದ ರಸೆಲ್ ಪುಟಗಳು ೩೭೪–೭೫

ನೀತಿಯ ಪರಿಣಾಮವಾಗಿ ಅದಕ್ಕೆ ಇಂಥ ಪರಿಸ್ಥಿತಿ ಒದಗಿ ಬಂದಿತ್ತು ಮತ್ತು ಅದರಿಂದ ಇತರ ದೇಶಗಳಿಗೆ ಅನುಕೂಲವೂ ಆಗಲಿಲ್ಲ. ಹೀಗಾಗಿ ಅಮೆರಿಕವು ಮಾತ್ರ ಬೆಳ್ಳಿ ಪ್ರಮಿತಿಯನ್ನು ಬೆಂಬಲಿಸುವ ಪರಿಸ್ಥಿತಿಯು ಉಂಟಾಗಿತ್ತು.

ಬಹುತೇಕ ಎಲ್ಲ ದೇಶದ ಸರ್ಕಾರಗಳು ಬಂಗಾರದ ಪರವಾಗಿ ಹೆಚ್ಚಿನ ಒಲವನ್ನು ಹೊಂದಿದ್ದರೂ, ಇದೇನು ಶಾಶ್ವತವಾದ ಒಲವಾಗಿರಲಿಲ್ಲ. ಅಂದು ಆ ದೇಶಗಳು, ದ್ವಿಲೋಹ ಪದ್ಧತಿಯ ಪರಿಣಾಮಕಾರಿ ಅನುಷ್ಠಾನವನ್ನು ಸಾಧಿಸುವ ಒಂದು ಪ್ರಭಾವೀದೇಶದ ನಾಯಕತ್ವಕ್ಕಾಗಿ ಕಾದುನೋಡುತ್ತಿದ್ದವು. ಆ ಎಲ್ಲಾ ಸಮ್ಮೇಳನಗಳ ಕಾರ್ಯಕಲಾಪಗಳಲ್ಲಿ ಒಂದು ವಿಷಯ ಎದ್ದು ಕಾಣುತ್ತಿತ್ತು, ಅದೇನೆಂದರೆ, ಒಂದು ವೇಳೆ ಇಂಗ್ಲೆಂಡ್ ದ್ವಿಲೋಹ ಪದ್ಧತಿಯನ್ನು ಅನುಷ್ಠಾನಕ್ಕೆ ತಂದಲ್ಲಿ ಉಳಿದ ದೇಶಗಳು ಕುರಿಗಳಂತೆ ಆ ದೇಶವನ್ನು ಅನುಸರಿಸುತ್ತಿದ್ದವು. ಆದರೆ ಬ್ರಿಟನ್ ತನ್ನ ಸುವರ್ಣ ಪ್ರಮಿತಿಗೆ ಬಲವಾಗಿ ಅಂಟಿಕೊಂಡಿದ್ದರಿಂದ ಅದನ್ನು ಬದಲಾವಣೆಮಾಡಲು ಅವು ಇಚ್ಚಿಸುತ್ತಿರಲಿಲ್ಲ. ತತ್ಪರಿಣಾಮವಾಗಿ ಆ ದೇಶಕ್ಕೆ ದ್ವಿಲೋಹ ಪದ್ಧತಿ ಹಣಕಾಸಿನ ತೊಂದರೆಗಳಿಗೆ ಒಂದು ನಿವಾರಣೋಪಾಯವೆಂದೆನಿಸಲಿಲ್ಲ. ಆದರೆ, ದ್ವಿಲೋಹ ಪದ್ಧತಿಯ ಅನುಷ್ಠಾನದಲ್ಲಿ ಬ್ರಿಟನ್ ತೋರಿದ ಅನಾಸಕ್ತಿ ಉಳಿದ ಯುರೋಪ್ ದೇಶಗಳಿಗೆ ಅಂಥ ದೊಡ್ಡ ವಿಷಯವಾಗಿರಲಿಲ್ಲ. ಹೆಚ್ಚು ಕಡಿಮೆ ಆ ಎಲ್ಲಾ ದೇಶಗಳೂ, ಆಗಲೇ ಬಂಗಾರವನ್ನು ಅಂತರರಾಷ್ಟ್ರೀಯ ಹಣವನ್ನಾಗಿಸಿದ್ದವು, ಆದುದರಿಂದ ದ್ವಿಲೋಹ ಪದ್ಧತಿಯನ್ನು ಜಾರಿಗೆ ತರುವಲ್ಲಿ ಉದಾಸೀನರಾಗಿದ್ದರು. ಭಾರತದ ಆಶೋತ್ತರಗಳಿಗೆ ಇದೊಂದು ಭೀಕರ ಪ್ರಹಾರವಾಗಿತ್ತು.

ಈ ದ್ವಿಲೋಹ ಪದ್ಧತಿಯ ಅನುಷ್ಠಾನದ ೧೮೭೮ರ ಪ್ರಸ್ತಾವನೆಯನ್ನು ಯುರೋಪ್ ತಿರಸ್ಕರಿಸಿದಾಗ, ಭಾರತ ಸರ್ಕಾರ ಅದೇ ತನ್ನ ಹಣಕಾಸಿನ ಸಮಸ್ಯೆಗೆ ನಿವಾರಣೋಪಾಯವೆಂದು ಭಾವಿಸಿ ಇದರ ಅನುಷ್ಠಾನದಿಂದ ತನಗೆ ತನ್ನ ಹಣಕಾಸಿನ ಸಮಸ್ಯೆಗಳಿಂದ ಮುಕ್ತಿ ಸಿಗಲಿದೆ ಎಂದು ಕಾತರದಿಂದ ಅದನ್ನು ಎದುರುನೋಡುತ್ತಿತ್ತು. ದ್ವಿಲೋಹ ನೀತಿಯ ಅನುಷ್ಠಾನಕ್ಕೆ ಮೊದಮೊದಲು ಉದಾಸೀನ ಭಾವನೆಯನ್ನು ಭಾರತ ತಳೆದಿತ್ತು ಎಂಬುದೇನೋ ನಿಜ. ಉದಾಹರಣೆಗೆ ಸರ್ಕಾರದ ಕಾರ್ಯದರ್ಶಿ ಜೂನ್ ೧೦, ೧೮೮೧ರಲ್ಲಿ ಬರೆದ ಓಲೆಯಲ್ಲಿ[೧] ಅಂದಿನ ಭಾರತ ಸರ್ಕಾರ ದ್ವಿಲೋಹ ಪದ್ಧತಿಯ ಅನುಕೂಲಗಳ ಬಗ್ಗೆ ತನ್ನ ಅಭಿಪ್ರಾಯವನ್ನು ಸೂಚಿಸಲು ಹಿಂದೆಮುಂದೆ ನೋಡಿದ ಸಂಗತಿ ಕಂಡುಬರುತ್ತದೆ. ಅಂದು, ಇಂಥ ವಿಷಯಗಳಲ್ಲಿ ಸಲಹೆ ನೀಡುವ ಮಂಡಳಿಯ ಒಬ್ಬ ಸದಸ್ಯ ಮತ್ತು ವೈಸರಾಯ್‌ರವರು ದ್ವಿಲೋಹ ಪದ್ಧತಿಯ ನೀತಿಗಳು ಅಸ್ಪಷ್ಟವಾಗಿವೆ ಎಂಬ ಕಾರಣದಿಂದ ತಮ್ಮ ಬೆಂಬಲವನ್ನು ಕೊಡಲು ನಿರಾಕರಿಸಿದ್ದರು.[೨] ಈ ವಿಷಯದಲ್ಲಿ ಭಿನ್ನ ನಿಲುವನ್ನು ತಾಳಿದ್ದ ಬಹುಸಂಖ್ಯಾತರೂ, ಒಂದು ವೇಳೆ ಬಹುಸಂಖ್ಯಾತ ಸರ್ಕಾರಗಳು ದ್ವಿಲೋಹ ಪದ್ಧತಿಗೆ ಒಪ್ಪಿಕೊಂಡರೆ, ಅದಕ್ಕೆ ತಮ್ಮ ವಿರೋಧವೇನೂ ಇರುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೂ, ಅದನ್ನು ಅಂಗೀಕರಿಸಲು ಮುಂದಾಗಲಿಲ್ಲ. ಈ ವಿಷಯ ಏನೇ ಇರಲಿ, ಸರ್ಕಾರದ ಹಣಕಾಸಿನ ಸಂಕಷ್ಟಗಳು ಬೆಳೆದಂತೆಲ್ಲಾ ಮೊದಲು ಕ್ಷೀಣವಾಗಿದ್ದ ಭಾರತದಲ್ಲಿ ದ್ವಿಲೋಹ ಪದ್ಧತಿಯನ್ನು ಜಾರಿಗೆ ತರುವ ನಂಬಿಕೆ ಮತ್ತಷ್ಟು ಗಾಢವಾಗುತ್ತಾ ಹೋಯಿತು; ಇದು ಮುಂದೆ ೧೮೮೬ರಲ್ಲಿ ಭಾರತ ಸರ್ಕಾರ ಬ್ರಿಟಿಷ್ ಸರ್ಕಾರದ ಕಾರ್ಯದರ್ಶಿಗೆ, ಬಂಗಾರ ಹಾಗೂ ಬೆಳ್ಳಿಯ ನಡುವೆ ಒಂದು ಸ್ಥಿರ ಅನುಪಾತವನ್ನು

---

೧. ೧೮೮೨ರ ಪಿ.ಪಿ.ಸಿ. ೩೨೯, ಪು. ೩೩

೨. ಮೇಲೆ ಹೇಳಿದಂತೆ, ಪು. ೩೭

ಸ್ಥಾಪಿಸಲು, ಒಂದು ಅಂತರರಾಷ್ಟ್ರೀಯ ಹಣಕಾಸಿನ ಸಭೆಯನ್ನು ಕರೆಯುವಂತೆ ಮನವಿ ಮಾಡಿತು.[೧] ದ್ವಿಲೋಹ ಪದ್ಧತಿ ಸಂಪೂರ್ಣವಾಗಿ ತರುವಲ್ಲಿ ಅಂದಿನ ಸರ್ಕಾರಕ್ಕೆ ಎಷ್ಟು ಆಸಕ್ತಿ ಇತ್ತೆಂದರೆ, ಅದು ತಾನು ಕಾರ್ಯದರ್ಶಿಗೆ ಕಳುಹಿಸಿದ ಸಲಹೆಯನ್ನು ಖಜಾನೆ ಒಪ್ಪದಿದ್ದಾಗ, ಅದು ಖಜಾನೆಗೆ ತನ್ನ ಬಲವಾದ ವಾಗ್ದಂಡನೆಯನ್ನು ವಿಧಿಸಲು ಹಿಂದೆಮುಂದೆ ನೋಡಲಿಲ್ಲ.[೨] ದ್ವಿಲೋಹ ಪದ್ಧತಿಯು ಇಂದಲ್ಲ ನಾಳೆ ಜಾರಿಯಲ್ಲಿ ಬಂದೀತು ಎಂಬ ನಂಬಿಕೆ ಮತ್ತು ಆಸೆಯನ್ನು ಇಟ್ಟುಕೊಂಡು, ಭಾರತ ಸರ್ಕಾರ ಅಂತರರಾಷ್ಟ್ರೀಯ ಸಮ್ಮೇಳನಗಳಲ್ಲಿ ಭಾಗವಹಿಸಿ ತನ್ನ ಒಳ್ಳೆಯ ದಿನಕ್ಕಾಗಿ ಕಾಯತೊಡಗಿತು. ಬ್ರಿಟನನ್ನು ಕೂಡಿಕೊಂಡು ಇತರ ರಾಷ್ಟ್ರಗಳು, ದ್ವಿಲೋಹ ಪದ್ಧತಿಯನ್ನು ಅನುಷ್ಠಾನದಲ್ಲಿ ತರುವ ವಿಚಾರವುಳ್ಳ ಭಾರತವನ್ನು ಬಹಳ ಸಂಶಯ ಮತ್ತು ಪೂರ್ವಗ್ರಹ ಪೀಡಿತವಾಗಿ ನೋಡಿಕೊಂಡವು.[೩] ಆ ಸಮಯಕ್ಕಾಗಲೇ ಕೆಳಗಿಳಿಯುತ್ತಿರುವ ಬಂಗಾರದ ಮಿತಿಯಾದ ಮೊತ್ತಕ್ಕೆ ತಟ್ಟನೆ ಅದನ್ನು ಮತ್ತಷ್ಟು ಕೆಳಗಿಳಿಸಲು ಸಾಸಹಗ್ಯೆಯುತ್ತಿರುವ ಒಬ್ಬ ಖಳನಾಯಕನಂತೆ ಭಾರತವನ್ನು, ಈ ಸಂದರ್ಭದಲ್ಲಿ, ಕಾಣಲಾಯಿತು. ಇಂಗ್ಲೆಂಡ್ ಭಾರತವನ್ನು ದ್ವಿಲೋಹ ಪದ್ಧತಿಯುಳ್ಳ ದೇಶಗಳಿಂದ ಹೊರಗೆ ಇಡಲು ಪ್ರಯತ್ನಿಸಿತು. ಒಂದು ವೇಳೆ ಈ ಕೂಟವನ್ನು ಭಾರತವು ಸೇರಿದರೆ, ಬಂಗಾರವನ್ನು ಶಾಸನಬದ್ಧ ಹಣವನ್ನಾಗಿ ಮಾಡಿಕೊಂಡು ತನ್ನ ವಿನಿಮಯ ದರದಲ್ಲಿ ಸ್ಥಿರತೆಯನ್ನು ತಂದ ಮೇಲೆ, ಈ ಕೂಟವನ್ನು ತನ್ನ ಸ್ವಾರ್ಥಸಾಧನೆಗಾಗಿ ಉಪಯೋಗಿಸುವುದಿಲ್ಲವೆಂದು ಇಂಗ್ಲೆಂಡಿನ ಮುಂದೆ ಭರವಸೆ ನೀಡಬೇಕಾಗಿತ್ತು. ಇಂಥ ಭರವಸೆಗಳನ್ನು ಭಾರತ ಸರ್ಕಾರ, ದ್ವಿಲೋಹ ಪದ್ಧತಿಯ ಚೌಕಟ್ಟಿನಲ್ಲಿ ಉಳಿಯುವುದಕ್ಕಾಗಿ ನಮ್ರತೆಯಿಂದ ನೀಡಿತು. ಏಕೆಂದರೆ, ಭಾರತ ಈ ಪದ್ಧತಿಯ ಯಶಸ್ಸನ್ನು ಸಾಕಷ್ಟು ಅವಲಂಬಿಸಿತ್ತು. ಇಷ್ಟೆಲ್ಲಾ ಮಾಡಿದರೂ, ದ್ವಿಲೋಹ ಪದ್ಧತಿಯ ಸಂಘಟನೆಯಲ್ಲಿ ಸೇರಲು ತನಗೆ ಯಶಸ್ಸು ದೊರೆಯಲಿಲ್ಲವೆಂಬ ಸಂಗತಿ ಅದಕ್ಕೆ ತೀವ್ರ ನಿರಾಶೆ ಉಂಟುಮಾಡಿತು. ಭಾರತಕ್ಕೆ ಹೀಗಾಗಲು ಕಾರಣ ಬ್ರಿಟಿಷ್ ಅಧಿಕಾರಿಗಳ ಬಹಳ ಬೇಜವಾಬ್ದಾರಿ ವರ್ತನೆ ಎಂದರೆ ಅಷ್ಟು ಕಟುವಾಗಲಿಕ್ಕಿಲ್ಲ. ಈ ವಿಷಯದಲ್ಲಿ ಅವರ ವರ್ತನೆ ಕ್ರೂರವಾಗಿತ್ತೆಂದರೂ ಅದು ಅತಿಶಯೋಕ್ತಿಯಾಗುವುದಿಲ್ಲ. ಬ್ರಿಟಿಷ್ ಅಧಿಕಾರಿಗಳು, ಭಾರತಕ್ಕೆ ಅದರ ಹೆಬ್ಬಯಕೆಯ ವಿರುದ್ಧ, ಬೆಳ್ಳಿ ನಾಣ್ಯಪದ್ಧತಿಯೊಂದನ್ನೇ ಅನುಸರಿಸುವಂತೆ ಮಾಡಲು, ಭಾಗಶಃ, ಬಂಗಾರವನ್ನು ಬೇಡುವಲ್ಲಿ ಅದು ಹಿಂದೆ ಸರಿಯುವಂತೆ ಮಾಡಲು ಮತ್ತು ಭಾಗಶಃ ಬ್ರಿಟಿಷರು ಬೆಳ್ಳಿಯ ಪುನರುತ್ಥಾನದ ಕಾರ್ಯದಲ್ಲಿ ತಮ್ಮ ಪಾಲಿನ ಕರ್ತವ್ಯ ಮಾಡುತ್ತಾ ಇಲ್ಲ ಎಂದು ಹೇಳುವ ಉಳಿದ ರಾಷ್ಟ್ರಗಳ ಟೀಕೆಗಳಿಗೆ ಉತ್ತರಿಸಲು, ಅಧಿಕಾರಿಗಳು ಈ ರೀತಿ ವರ್ತಿಸಿದರು.[೫] ಮಾತಿಗೆ ಮೀರದ ಹಾಗೂ ಏನಾದರೂ ಹೇಳಿದರೆ ಅದನ್ನು ಯಾವಾಗಲೂ ಒಪ್ಪುವ ಭಾರತದಂತಹ ದೇಶದಿಂದ, ಇದೊಂದೇ

---

೧. ದಿನಾಂಕ ಫೆಬ್ರವರಿ ೨, ೧೮೮೬ರ ೪೮೬೮ ವಿವರದಂತೆ ಪು. ೫

೨. ಸೆಪ್ಟೆಂಬರ್ ೪, ೧೮೮೬ರ ಓಲೆ, ೧೮೮೬ರ ಬಂಗಾರ ಮತ್ತು ಬೆಳ್ಳಿಯ ರಾಯಲ್ ಕಮಿಷನ್ನಿನ ವರದಿಯ ಅನುಬಂಧ ii

೩. ೧೮೮೬ರ ಬಂಗಾರ ಮತ್ತು ಬೆಳ್ಳಿಯ ರಾಯಲ್ ಕಮಿಷನ್ನಿನ ಮುಂದೆ ನೀಡಿದ ಒ. ಸ್ಮಿಥ್‌ರ ಸಾಕ್ಷಿ, ಪ್ರ. ೪೮೨೫–೩೦; ಹಾಗೂ ಮಿ. ವ್ಯಾಟ್ಸನ್‌ರವರ ಪ್ರ. ೯,೪೨೭

೪. ದಿ ರಿಪೋರ್ಟ್ ಆಫ್ ದಿ ಇಂಡಿಯನ್ ಡೆಲಿಗೇಟ್ಸ್, ಪು. ೧೨.

೫. ಮಿ. ಗೋಷೆನ್‌ರು ೧೮೭೮ರ ಅಂತರರಾಷ್ಟ್ರೀಯ ಹಣಕಾಸಿನ ಸಮ್ಮೇಳನದಲ್ಲಿ ಮೂರನೆಯ ಸಭೆಯಲ್ಲಿ ಮಾಡಿದ ಭಾಷಣದಿಂದ ಅಮೆರಿಕನ್ ಪ್ರತಿನಿಧಿಗಳ ವರದಿ, ೫೮ ಸಂಕೆಯ ಸಿನೆತ್ ಪತ್ರ, ೪೫ನೆಯ ಸಮ್ಮೇಳನ, ಮೂರನೆಯ ಸಭೆ, ವಾಷಿಂಗ್‌ಟನ್, ೧೮೭೯, ಪುಟಗಳು ೫೦–೫೨.

ಅನುಕೂಲವನ್ನು ಬ್ರಿಟಿಷರು ಪಡೆಯಲಿಲ್ಲ. ಇದರ ಜೊತೆಗೆ ಹಲವಾರು ಅನುಕೂಲಗಳನ್ನು ಪಡೆದರು. ಮೊದಲನೆಯದಾಗಿ, ಬ್ರಿಟಿಷರು ಭಾರತ ಸರ್ಕಾರ ತನ್ನ ನಾಣ್ಯಪದ್ಧತಿಯ ಸುಧಾರಣೆಯ ವಿಷಯದಲ್ಲಿ ಒಂದು ಸ್ವತಂತ್ರ ನಿರ್ಣಯ ತೆಗೆದುಕೊಳ್ಳದಂತೆ ಮಾಡಿತು. ಎರಡನೆಯದಾಗಿ, ಮೌಲ್ಯ ಕಳೆದುಕೊಂಡು ಈಗಾಗಲೇ ಪಾರ್ಲಿಮೆಂಟಿನ ಆಕ್ಷೇಪಣೆಗೆ ಗುರಿಯಾದ ಪೌಂಡಿನ ಹಾನಿಯನ್ನು ಭಾರತ ತುಂಬುವಂತೆ ಉಪಾಯಗಳನ್ನು ಯಶಸ್ವಿಯಾಗಿ ಜಾರಿಯಲ್ಲಿ ತಂದರು. ಮೂರನೆಯದಾಗಿ, ಬ್ರಿಟನ್ನಿನ ಪ್ರಜಾ ಪ್ರತಿನಿಧಿಸಭೆ ಎರಡುಸಲ, ಅಂದರೆ ೧೮೭೭ ಹಾಗೂ ಪುನಃ ೧೮೭೯ರಲ್ಲಿ ತೋರಿಕೆಗೆ ಭಾರತದಲ್ಲಿ ಮುಕ್ತ ವ್ಯಾಪಾರ ತರುವ ಉದ್ದೇಶದಿಂದ ಮತ್ತು ನಿಜದಲ್ಲಿ ತನ್ನ ಲ್ಯಾಂಕ್‌ಶೈರ್ ಅನುಭವಿಸುತ್ತಿರುವ ಆರ್ಥಿಕ ಮುಗ್ಗಟ್ಟಿನಿಂದ ಪರಿಹಾರ ಪಡೆಯಲು, ಭಾರತ ತನ್ನ ಸುಂಕದ ದರಗಳನ್ನು ಕಡಿಮೆ ಮಾಡಬೇಕೆಂಬ ಪ್ರಸ್ತಾವನೆಯನ್ನು ತರುವಲ್ಲಿ ಯಶಸ್ವಿಯಾದರು. ಇದರ ಪರಿಣಾಮವೇನೆಂದರೆ, ಭಾರತ ತನ್ನ ಆರ್ಥಿಕವಾಗಿ ಅತ್ಯಂತ ಕಷ್ಟದ ದಿನಗಳಲ್ಲಿ ವ್ಯಾಪಾರಿ ಸುಂಕಗಳಿಂದ ಬಂದ ಆದಾಯವನ್ನು ಉಪಯೋಗ ಮಾಡಿಕೊಳ್ಳಲಾರದೆ ಹೋಯಿತು. ತಮಗೆ ಸಂಪೂರ್ಣವಾಗಿ ವಶವರ್ತಿಯಾಗಿ ತನ್ನ ಸ್ವಂತ ಎಲ್ಲಾ ಸಾಮರ್ಥ್ಯವನ್ನು ಕಳೆದುಕೊಂಡಿದ್ದ ಭಾರತದ ಹಿತಾಸಕ್ತಿಗಳನ್ನು ಕಾಪಾಡುವ ಧರ್ಮದರ್ಶಿಗಳೆಂದು ತಮ್ಮನ್ನು ತಾವೇ ವರ್ಣಿಸಿಕೊಳ್ಳುತ್ತಿದ್ದ ಬ್ರಿಟಿಷ್ ಅಧಿಕಾರಿಗಳು ಭಾರತಕ್ಕೆ ಮಾಡಬಹುದಾಗಿದ್ದ ಒಂದು ಸೂಕ್ತ ಪರಿಹಾರವೆಂದರೆ, ದ್ವಿಲೋಹ ಪದ್ಧತಿಯ ರಾಷ್ಟ್ರಗಳ ಕೂಟವನ್ನು ಸೇರುವುದು. ಆದರೆ, ಎಲ್ಲರಿಗೆ ಗೊತ್ತಿದ್ದ ಹಾಗೆ ಅವರು ಯಾವ ಇಂಥ ಕಾರ್ಯವನ್ನು ಕೈಕೊಳ್ಳಲಿಲ್ಲ. ಒಟ್ಟಾರೆ, ಅನಿವಾರ್ಯವಲ್ಲದ ವಿಳಂಬದ ಕಷ್ಟಕ್ಕೆ ಗುರಿಯಾದ, ಭಾರತ ಸರ್ಕಾರ, ತಾನು ಆರ್ಥಿಕವಾಗಿ ೧೮೭೮ರಲ್ಲಿ ಹೇಗಿತ್ತೊ ಅದೇ ಸ್ಥಿತಿಯಲ್ಲಿ ೧೮೯೩ರ ಕೊನೆಯಲ್ಲಿಯೂ ಇದ್ದಿತು.

ಕೇವಲ ಆಶಾಭಾವನೆಯಿಂದ ಮಾತ್ರ ಒಳ್ಳೆಯ ಕಾಲವನ್ನು ನಿರೀಕ್ಷಿಸದೆ, ಅದಕ್ಕಾಗಿ ಕಾರ್ಯಪ್ರವೃತ್ತವಾಗುವ ವ್ಯವಹಾರಜ್ಞಾನವುಳ್ಳವರಂತೆ, ಅಮೆರಿಕ ದೇಶವನ್ನುಳಿದಂತೆ ಬೆಳ್ಳಿಯ ಪ್ರಮಿತಿಯನ್ನು ಅನುಸರಿಸುತ್ತಿದ್ದ ಇತರ ದೇಶಗಳು, ಬೆಳ್ಳಿಯ ಪ್ರಮಿತಿಯನ್ನು ಮುಂದುವರೆಸುವಂತೆ ಕರೆಕೊಡುತ್ತಿದ್ದ ಸಮಾವೇಶಗಳಲ್ಲಿ ಭಾಗವಹಿಸುತ್ತಿದ್ದರೂ, ಆಂತರಿಕವಾಗಿ ತಮ್ಮಲ್ಲಿನ ಚಿನ್ನದ ನಿಧಿಯನ್ನು ಆ ಅವಧಿಯಲ್ಲಿ ವರ್ಧಿಸಿಕೊಳ್ಳುತ್ತಿದ್ದವು. ೧೮೭೮ರ ಸಮಾವೇಶದಲ್ಲಿ ಮಾತನಾಡಿದ ಮಿ.ಗೋಶ್ಚೆನ್ ಅವರು, 'ಬೆಳ್ಳಿಯ ಮೌಲ್ಯ ಕುಸಿಯುತ್ತಿರುವುದರಿಂದ ರಾಷ್ಟ್ರಗಳು ಬೆಳ್ಳಿಯ ಪ್ರಮಿತಿಯನ್ನು ಜಾರಿಗೆ ತರಲು ಹಿಂಜರಿಯುತ್ತಿವೆ ಮತ್ತು ಬೆಳ್ಳಿಯು ನಾಣ್ಯದ ಆಧಾರವಾಗಿಲ್ಲದಿರುವುದರಿಂದ ಅದರ ಬೆಲೆಯು ಕುಸಿಯುತ್ತಿದೆ' ಎಂದು ತಾತ್ವಿಕವಾಗಿ ನುಡಿದರು.[೧] ಒಂದು ವೇಳೆ ಸಮಸ್ಯೆಯ ಮೊದಲನೆಯ ಭಾಗದ ನಿರೂಪಣೆ, ಅಂದರೆ, ಬೆಳ್ಳಿಯ ಮೌಲ್ಯ ಕೆಳಗಿಳಿಯುತ್ತದೆಂಬ ಕಾರಣದಿಂದ ಅದನ್ನು ದೇಶಗಳು ಉಪಯೋಗಿಸಲು ಅಂಜುತ್ತದೆ ಎಂಬುದು ಸರಿಯಾಗಿದ್ದಲ್ಲಿ, ಅಮೆರಿಕಾ ಸಂಯುಕ್ತ ಸಂಸ್ಥಾನದ ಬೆಳ್ಳಿಯ ಕಾಯಿದೆಯಿಂದ ಕೆಳಗಿಳಿಯುತ್ತಿರುವ ಬೆಳ್ಳಿಯ ಬೆಲೆಯನ್ನು ನಿಲ್ಲಿಸಿದಾಗ, ಉಳಿದ ದೇಶಗಳು ತಮ್ಮತಮ್ಮ ದೇಶದ ಬೆಳ್ಳಿಯ ಪುನರುಜ್ಜೀವನ ಕಾರ್ಯವನ್ನು ಕಾಳಜಿಪೂರ್ವಕವಾಗಿ ಮಾಡಬೇಕಾಗಿತ್ತು. ಆದರೆ ೧೮೭೯ರ ಬ್ಯಾಂಡ್ ಆಲಿಸನ್ ಕಾಯಿದೆ ಅಥವಾ ೧೮೯೦ರ ಶೇರ್ ಮ್ಯಾನ್ ಕಾಯಿದೆ ಅಡಿಯಲ್ಲಿ ಈ ದೇಶಗಳು ಕೇವಲ ತಮ್ಮ ಬೆಳ್ಳಿಯ ಮಾಸಿಕ ಕೊಳ್ಳುವಿಕೆಗಾಗಿ, ಬೆಳ್ಳಿಯ ಬೆಲೆಯನ್ನು ಸ್ವಲ್ಪ ಮೇಲೇರಿಸಿದ್ದವು ಅಷ್ಟೆ. ಇದಲ್ಲದೆ ಬೆಳ್ಳಿಯ ಬೆಲೆಯನ್ನು ಅದರ ಹಿಂದಿನ ಸ್ಥಿತಿಗೆ ತರಲು ಯಾವ

---

೧. ಸಮ್ಮೇಳನದಲ್ಲಿ ಸೂಚಿಸಿದ ಹಲವಾರು ಯೋಜನೆಗಳ ವಿವರಗಳಿಗಾಗಿ ೧೮೯೨ರ ಅಂತರರಾಷ್ಟ್ರೀಯ ಹಣಕಾಸಿನ ಸಮ್ಮೇಳನದ ಬಗ್ಗೆ ಅಮೆರಿಕೆಯ ಪ್ರತಿನಿಧಿಗಳು ಮಾಡಿರುವ ವರದಿಯನ್ನು ನೋಡಿ ವಾಷಿಂಗ್‌ಟನ್, ೧೮೯೩.

ಹೆಜ್ಜೆಯನ್ನೂ ಇಡಲು ಈ ದೇಶಗಳು ಕಾತರ ತೋರಲಿಲ್ಲ; ಇದಕ್ಕೆ ಬದಲಾಗಿ ಬೆಳ್ಳಿಯ ಬೆಲೆಯಲ್ಲಿನ ಏರಿಕೆಯನ್ನು ಆ ಲೋಹವನ್ನು ಹಣವನ್ನಾಗಿ ಮುಂದುವರೆಸುವ ಯೋಜನೆಯನ್ನು ಕೈಬಿಡುವುದಕ್ಕಾಗಿ ಉಪಯೋಗಿಸಿಕೊಂಡರು.[೧] ಇಂಥ ಕಾರ್ಯ ಕೈಗೊಂಡಿದ್ದಕ್ಕಾಗಿ ಆ ದೇಶಗಳನ್ನು ದೂಷಿಸಲು ಬರುವುದಿಲ್ಲ. ಏಕೆಂದರೆ ದ್ವಿಲೋಹ ಪದ್ಧತಿಯ ಒಕ್ಕೂಟವೇ ನಿಷ್ಕ್ರಿಯವಾಗುತ್ತ ಬರುತ್ತಿದ್ದ ಕಾಲದಲ್ಲಿ, ಈ ದೇಶಗಳ ಬೆಳ್ಳಿಯ ವೃಥಾ ಸಂಗ್ರಹಣೆ ಅವುಗಳಿಗೆ ಅನಾವಶ್ಯಕ ಕಿರಿಕಿರಿಯನ್ನು ತಂದೊಡ್ಡುತ್ತಿತ್ತು. ಇಂಥ ಬೆಳ್ಳಿಯ ಒತ್ತಡದಿಂದ ಲಾಭಪಡೆಯಲು ಭಾರತವು ಮಾತ್ರ ತಿರಸ್ಕರಿಸಿತು; ಅಮೆರಿಕ ಈ ಲಾಭವನ್ನು ಪ್ರಾತಿನಿಧಿಕವಾಗಿ ಇತರ ದೇಶಗಳಿಗೆ ತೆಗೆದುಕೊಂಡು ಹೋಯಿತು. ಈ ರೀತಿಯಾಗಿ ಭಾರತ ತನಗೆ ಒದಗಿಬಂದ ಅಮೂಲ್ಯವಾದ ಅವಕಾಶವನ್ನು ಕೈಜಾರಿಹೋಗಲು ಅನುಮತಿ ನೀಡಿತು. ತತ್ಪರಿಣಾಮವಾಗಿ, ಅದು ತಾನು ೧೮೭೮ರಲ್ಲಿ ತಿರಸ್ಕರಿಸಿದ್ದ ನಿವಾರಣೋಪಾಯವನ್ನೇ ಪುನಃ ಸ್ವೀಕರಿಸಬೇಕಾಯಿತು.

ಒಂದು ವೇಳೆ ಭಾರತ ಸರ್ಕಾರ ಸುವರ್ಣ ಪ್ರಮಿತಿಯನ್ನು ೧೮೭೮ರಲ್ಲಿಯೇ ಹೊಂದಿದ್ದರೆ, ಅದು ದೇಶಕ್ಕೆ ಒಳ್ಳೆಯದನ್ನು ಮಾಡುತ್ತಿತ್ತು. ಆದರೆ ೧೮೭೮ರಲ್ಲಿ ಅದು ಪ್ರಸ್ತಾಪಿಸಿದ ಸುವರ್ಣ ಪ್ರಮಿತಿಯ ಯೋಜನೆ ತುಂಬಾ ಕ್ಲಿಷ್ಟವಾಗಿತ್ತು ಹಾಗೂ ಕಾರ್ಯಸಾಧುವಾಗಿರಲಿಲ್ಲ. ಆದರೆ ಅದು ಸ್ವೀಕಾರವಾಗದಿದ್ದರೂ ಭಾರತದಲ್ಲಿ ಸುವರ್ಣ ಪ್ರಮಿತಿಯ ಅನುಷ್ಠಾನವನ್ನು ಇಡಿಯಾಗಿ ತರುವ ಕಾರ್ಯವನ್ನು ಅಮಾನತ್ತಿನಲ್ಲಿಡುವ ಹಾಗಿರಲಿಲ್ಲ. ಒಂದು ವೇಳೆ ಅದು ಇಂಗ್ಲಿಷ್ ಮಾದರಿಯಂತೆ ಸಾಂಪ್ರದಾಯಿಕ ಯೋಜನೆಯಾಗಿದ್ದಲ್ಲಿ, ಸರ್ಕಾರ ತನ್ನ ಬೆಳ್ಳಿ ರೂಪಾಯಿಗೆ ಉಪನಾಣ್ಯದ ಸ್ಥಾನ ನೀಡಲು ಮತ್ತು ಅದರ ಸ್ಥಾನದಲ್ಲಿ ಚಿನ್ನದ ನಾಣ್ಯವನ್ನು ಚಲಾವಣೆಗೆ ತರಲು, ತನ್ನ ಬೆಳ್ಳಿಯ ಭಾಗಶಃ ಮೊತ್ತವನ್ನು ಕಡಿಮೆ ಬೆಲೆಗೆ ಮಾರುವ ಸಂದರ್ಭ ಒದಗಿಬರುತ್ತಿತ್ತು.

ಬೆಳ್ಳಿಯಿಂದ ಚಿನ್ನದ ನಾಣ್ಯಕ್ಕೆ ಪರಿವರ್ತನೆ ಮಾಡುವ ವೆಚ್ಚ ೧೮೭೮ರಲ್ಲಿ ಅಷ್ಟೇನೂ ಹೆಚ್ಚಿನದಾಗಿರುತ್ತಿರಲಿಲ್ಲ, ಏಕೆಂದರೆ, ಅಂದು ಬೆಳ್ಳಿಯ ಬೆಲೆಯಲ್ಲಿನ ಇಳಿತ ಬಂಗಾರದ ಸಾಮಾನ್ಯ ಬೆಲೆಗೆ ಕೇವಲ ೧೨೧/೨% ಆಗಿತ್ತು. ಒಂದು ವೇಳೆ ಸುವರ್ಣ ಪ್ರಮಿತಿಯ ಯೋಜನೆ ಕರ್ನಲ್ ಸ್ಮಿಥ್‌ರವರ ಯೋಜನೆಯಂತೆ ಅಸಾಂಪ್ರದಾಯಿಕವಾಗಿದ್ದಲ್ಲಿ, ಆ ಯೋಜನೆ ಟಂಕಸಾಲೆಯಲ್ಲಿ ಚಿನ್ನದ ನಾಣ್ಯ ಮಾಡಲು ಹೊಸಯಂತ್ರವನ್ನು ಕೊಳ್ಳುವ ವೆಚ್ಚವನ್ನು ಬಿಟ್ಟು ಉಳಿದ ಯಾವ ವೆಚ್ಚವನ್ನೂ[೨] ಒಳಗೊಂಡಿರುತ್ತಿರಲಿಲ್ಲ.

---

೧. ಹಿಂದೆ ಪ್ರಸ್ತಾಪಿಸಿದ ರಸೆಲ್ ಪು. ೪೧೦, ಹಾಗೂ ಪ್ರೊ. ಎಫ್.ಎ. ವಾಕರ್‌ರ "ಬೆಳ್ಳಿಯ ಮುಕ್ತ ನಾಣ್ಯತೆ" ಎಂಬ ಶೀರ್ಷಿಕೆಯ ಲೇಖನ ಪುಸ್ತಕದಲ್ಲಿರುವುದು ಸಂ. ೧, ಪು. ೧೭೪.

೨. ಭಾರತದಲ್ಲಿ ಸುವರ್ಣ ಪ್ರಮಿತಿ ತರುವ ವಿಚಾರ ಎಷ್ಟು ಸ್ಪಷ್ಟವಾಗಿತ್ತೆಂದರೆ, 'ಲಂಡನ್ ಟೈಮ್ಸ್' ಪತ್ರಿಕೆ ಈ ವಿಚಾರವನ್ನು ಒಪ್ಪದಿದ್ದರೂ, ತನ್ನ ಪತ್ರಿಕೆಯಲ್ಲಿ ೨೫ ಅಕ್ಟೋಬರ್ ೧೮೭೬ (ಪು. ೯) ರಂದು ಈ ವಿಕ್ರಮದ ಬಗ್ಗೆ ಒಂದು ಪ್ರಮುಖ ಲೇಖನ ಪ್ರಕಟಿಸಿತು, "ಇಂದಿನ ಕೆಟ್ಟ ಪರಿಸ್ಥಿತಿಗಳಲ್ಲಿ, ಭಾರತದಲ್ಲಿ ಸುವರ್ಣ ಪ್ರಮಿತಿ ತರುವುದನ್ನು ಕೌನ್ಸಿಲ್‌ನಲ್ಲಿ ಅದು ದುಬಾರಿ ಎಂಬ ಕಾರಣದ ಮೇಲೆ ಅನುಷ್ಠಾನದಲ್ಲಿ ತರಬಾರದೆಂದು ಗವರ್ನರ್–ಜನರಲ್‌ರು ಹೇಳಿರುತ್ತಾರೆ. ಆದರೆ ಅವರ ಅಭಿಪ್ರಾಯ ತಪ್ಪಾಗಿದೆ. ಭಾರತದಲ್ಲಿನ ಬೆಳ್ಳಿಯ ನಾಣ್ಯಕ್ಕೆ ಚಿನ್ನದ ನಾಣ್ಯವನ್ನು ಬದಲಾಯಿಸುವುದು ಅತಿ ದುಬಾರಿ ಕಾರ್ಯಾಚರಣೆ, ಆದರೆ ಮುಂದೆ ಬರುವವರಿಗೆ ಬೆಳ್ಳಿಯ ಬದಲಿಗೆ ಚಿನ್ನದ ನಾಣ್ಯ ನೀಡುವುದು ಹೊಸ ಯಂತ್ರದ ವೆಚ್ಚಕ್ಕಿಂತ ಹೆಚ್ಚಿನ ವೆಚ್ಚವನ್ನು ಒಳಗೊಂಡಿಲ್ಲ. ಒಂದುವೇಳೆ ನಿಗದಿತಪಡಿಸಿದ ದಿನದ ನಂತರ ಬೆಳ್ಳಿ ನಾಣ್ಯ ಮಾಡುವುದನ್ನು ನಿಲ್ಲಿಸಲಾಗುತ್ತದೆ, ಇದಕ್ಕೆ ಬದಲಾಗಿ ಯಾರಾದರೂ ಚಿನ್ನ ತರಲಿ, ಒಂದು ಚಿನ್ನದ ನಾಣ್ಯ ಮಾಡಲಾಗುತ್ತದೆ, ಈ ನಾಣ್ಯಗಳನ್ನು ಬೆಳ್ಳಿಯ ನಾಣ್ಯಗಳ ಜೊತೆಗೆ ವಿನಿಮಯಿಸಬಹುದು ಎಂದಾಗ ಫ್ರಾನ್ಸಿನಲ್ಲಿ ಇದ್ದಂತೆ ಭಾರತದಲ್ಲೂ ದ್ವಿನಾಣ್ಯ ಪದ್ಧತಿ ಇರಬಹುದಾಗಿತ್ತು. ಬೆಳ್ಳಿಯ ನಾಣ್ಯ ಮಾಡುವುದನ್ನು

ಆದರೆ, ೧೮೯೩ರಲ್ಲಿ ಸುವರ್ಣ ಪ್ರಮಿತಿಯನ್ನು ಅನುಷ್ಠಾನದಲ್ಲಿ ತರುವ ಈ ಎರಡು ಪ್ರಯತ್ನಗಳು ನಿರಾಶಾದಾಯಕವಾಗಿದ್ದವು. ರೂಪಾಂತರದ ಯೋಜನೆಯನ್ನು ಅನುಷ್ಠಾನದಲ್ಲಿ ತರುವುದು ಅಸಾಧ್ಯದ ಮಾತೇನಾಗಿರಲಿಲ್ಲ. ಏಕೆಂದರೆ, ೧೮೯೩ರಲ್ಲಿ ಬೆಳ್ಳಿಯ ಮೌಲ್ಯದಲ್ಲಿನ ಇಳಿತ ಕೇವಲ ೩೫% ಆಗಿತ್ತು. ಮುಂದುವರಿದ ದೇಶದಲ್ಲಿ ಚಲಾವಣೆಯಲ್ಲಿರುವ ಬೆಳ್ಳಿಯ ರೂಪಾಯಿಯಲ್ಲಿನ ಭಾರಿ ಪ್ರಮಾಣದ ಹೆಚ್ಚಳ ಸ್ಮಿಥ್‌ರವರ ಯೋಜನೆಯನ್ನು ಅನುಷ್ಠಾನದಲ್ಲಿ ತರುವ ಸಾಧ್ಯತೆಗಳನ್ನು ಕಡಿಮೆಮಾಡಿತು. ಒಂದು ವೇಳೆ, ಭಾರತ ೧೮೭೮ರಲ್ಲಿಯೇ ಸುವರ್ಣ ಪ್ರಮಿತಿ ಸ್ವೀಕರಿಸಿದ್ದರೆ, ನಾಣ್ಯಗಳು ಬೆಳ್ಳಿಯವಾಗಿರದೆ ಚಿನ್ನದಲ್ಲಿರುತ್ತಿದ್ದವು, ಇದರ ಪರಿಣಾಮವಾಗಿ ೧೮೯೩ರ ವರೆಗೆ ಅರ್ಥವ್ಯವಸ್ಥೆಯಲ್ಲಿ ಚಲಾವಣೆಯಲ್ಲಿರುವ ನಾಣ್ಯಗಳ ಮೊತ್ತ ಚಿನ್ನದ ಪ್ರಮಾಣದಲ್ಲಿ ಅಧಿಕವಾಗಿದ್ದಿರಬಹುದಾಗಿತ್ತು ಹಾಗೂ ದೇಶದ ನಾಣ್ಯಪದ್ಧತಿಯು ಅಪ್ಪಟ ಚಿನ್ನದ ತಳಹದಿಯ ಮೇಲೆ, ಉಳಿದ ದೇಶಗಳೊಂದಿಗೆ, ಸ್ಥಿರತೆಯನ್ನು ಹೊಂದಿರುತ್ತಿತ್ತು. ಆದರೆ, ೧೮೯೩ರಲ್ಲಿ ದೇಶದಲ್ಲಿನ ಬೆಳ್ಳಿ ನಾಣ್ಯ ಹೆಚ್ಚಿನ ಮೊತ್ತದ್ದಾಗಿತ್ತು. ಈ ಪರಿಸ್ಥಿತಿಯಲ್ಲಿ ರೂಪಾಯಿಯನ್ನು ಸ್ಥಿರಗೊಳಿಸುವ ಕಾರ್ಯಕ್ಕೆ ಹಲವು ದಶಕಗಳೇ ಬೇಕಾಗುತ್ತಿತ್ತು.

ಮೇಲೆ ವಿವರಿಸಿದ ಬಿಕ್ಕಟ್ಟಿನಿಂದ ಭಾರತವು ಹೊರಬರಬಹುದಾದ ಕೆಲವು ಯೋಜನೆಗಳು ಇದ್ದವು. ಭಾರವಾದ ರೂಪಾಯಿಗಳನ್ನು ಚಲಾವಣೆಗೆ ತರುವುದು ಮೊದಲನೆಯ ಯೋಜನೆಯಾಗಿತ್ತು.[೧] ಎರಡನೆಯದು, ಬೆಳ್ಳಿಯನ್ನು ನಿಯಮಿತ ಶಾಸನಬದ್ಧ ಹಣವನ್ನಾಗಿ ಮಾಡುವುದು ಮತ್ತು ಸೆಕ್ರೆಟರಿ ಆಫ್ ಸ್ಟೇಟ್‌ರವರು ಭಾರತಕ್ಕೆ ನೀಡುವ ಬಂಗಾರಕ್ಕೆ ಸಮವಾಗಿ ನಮ್ಮ ಬಂಗಾರ ಅಥವಾ ಬೆಳ್ಳಿಯ ಸಾಲಪತ್ರಗಳನ್ನು ಲಂಡನ್ನಿನಲ್ಲಿ ಮಾರಲು ಅನುಮತಿ ನೀಡಬೇಕು, ಮುಂದೆ ಭಾರತ ಸರ್ಕಾರದ 'ಬೋನ್ಸ್'[೨] ಎಂಬ ಹೆಸರಿನ ಅನಿಯಮಿತ ಶಾಸನಬದ್ಧ ಹಣವನ್ನು ತಂದು ಇಂಗ್ಲೆಂಡಿಗೆ ಕೊಡುವ ಸಾಲದ ಮರುಪಾವತಿಗೆ ಇವುಗಳನ್ನು ಉಪಯೋಗಿಸುವುದು. ಮೂರನೆಯದು, ಇಂಗ್ಲೆಂಡ್ ಮತ್ತು ಭಾರತಗಳು ತಮ್ಮೊಳಗೆ, ಒಂದು ಹೊಸ ತಳಹದಿಯ ಮೇಲೆ ದ್ವಿಲೋಹ ಪದ್ಧತಿಯನ್ನು ಸ್ವೀಕರಿಸುವುದು[೩] ಅಥವಾ ರೂಪಾಯಿಯನ್ನು ಸಂಪೂರ್ಣ ಶಾಸನಬದ್ಧ ಹಣವೆಂದು ಇಂಗ್ಲೆಂಡ್ ಸ್ವೀಕರಿಸುವುದು[೪] ನಾಲ್ಕನೆಯದು ಸರ್ಕಾರದ ಕಾರ್ಯದರ್ಶಿಯು ಪ್ರತಿವರ್ಷದ ಮೊದಲಲ್ಲಿ ನಿಗದಿಪಡಿಸಿದ ಕೌನ್ಸಿಲ್ ಹುಂಡಿಯ ವಿನಿಮಯ ದರವನ್ನು ಮಾನದಂಡವಾಗಿಟ್ಟುಕೊಂಡು ವಾಸ್ತವಿಕ ವಿನಿಮಯ ದರಗಳ ಏರಿಳಿತದ ಮೇಲೆ ನಾಣ್ಯ ತಯಾರಿಸಲು ಟಂಕಸಾಲೆಯ ತೆರೆಯುವಿಕೆ ಹಾಗೂ ಮುಚ್ಚುವಿಕೆಯನ್ನು ನಿಯಂತ್ರಿಸುವುದು. ಈ ಯೋಜನೆಯಲ್ಲಿ ವಾಸ್ತವ ವಿನಿಮಯ ದರ, ನಿಗದಿಪಡಿಸಿದ ದರಕ್ಕಿಂತ ೫%ರ ವರೆಗೆ ಹೆಚ್ಚು ಇರದಿದ್ದಲ್ಲಿ ಬೆಳ್ಳಿಯ ನಾಣ್ಯಗಳನ್ನು ಮುದ್ರಿಸುವುದನ್ನು ನಿಲ್ಲಿಸಬಹುದಿತ್ತು.[೫]

---

ನಿಲ್ಲಿಸುವುದರಿಂದ ಈಗಾಗಲೇ ಬೆಳ್ಳಿಯ ರೂಪದಲ್ಲಿರುವ ಅರ್ಥವ್ಯವಸ್ಥೆಯಲ್ಲಿನ ನಾಣ್ಯಗಳ ವಿನಿಮಯದರದಲ್ಲಿ ಹೆಚ್ಚಳ ಉಂಟಾಗಿ, ಹೆಚ್ಚು ಹೆಚ್ಚು ಬಂಗಾರ ಟಂಕಸಾಲೆಗೆ ತರಲಾಗುತ್ತದೆ. ಹೀಗೆ ಚಿನ್ನದ ನಾಣ್ಯ ಚಲಾವಣೆಯಲ್ಲಿ ಬರುತ್ತದೆ. ಈ ಪ್ರಕ್ರಿಯೆಯೂ ಸಹಜವಾಗಿದ್ದು, ಇದರ ವೆಚ್ಚ ಸಹ ಹೆಚ್ಚಾಗಿರುವುದಿಲ್ಲ. ಆದರೆ ಇದೊಂದು ಅತಿ ನಿಧಾನದ ಪ್ರಕ್ರಿಯೆಯಾಗಿರುತ್ತದೆ. ಇತ್ಯಾದಿ.

೧. ಅಂತರರಾಷ್ಟ್ರೀಯ ಹಣಕಾಸಿನ ಸಮ್ಮೇಳನ ೧೮೯೩ ಆಸ್ಟನ್ ಮತ್ತು ಆರ್. ವೆಸ್ಟ್‌ಚಾಪ್‌ಮನ್ ಸಹಬಂಧ III; ೨೮೧–೩೨೫ ರಿಂದ.

೨. ಅಟ್‌ಕಿನ್ಸ್‌ರಿಂದ, ಮೇಲೆ ಹೇಳಿದಂತೆ, ಪು. ೨೮೨

೩. ಚಾಪ್‌ಮನ್‌ರಿಂದ ಮೇಲೆ ಹೇಳಿದಂತೆ ಪು. ೩೩

೪. ವುಡ್‌ಹೌಸ್‌ರಿಂದ ಮೇಲೆ ಹೇಳಿದಂತೆ ಪು. ೩೩

೫. ಗ್ರಹಾಮ್‌ರಿಂದ, ಮೇಲೆ ಹೇಳಿದಂತೆ, ಪು. ೩೦೫

ಐದನೆಯದು, ಒಂದೆಡೆ ಬ್ರಿಟಿಷ್ ಸೆಕ್ರೆಟರಿ ಆಫ್ ಸ್ಟೇಟ್ ತನ್ನ ಕೌನ್ಸಿಲ್ ಹುಂಡಿಗಳಿಗೆ ಕನಿಷ್ಠ ದರದ ವಟ್ಟವನ್ನು ನಿಗದಿಪಡಿಸಬೇಕು. ಇನ್ನೊಂದೆಡೆ ಭಾರತ ಸರ್ಕಾರವು ತನ್ನ ಎಲ್ಲ ಬೆಳ್ಳಿಯ ಆಯಾತದ ಮೇಲೆ ಸುಂಕ ಹೇರುವ ಕಾರ್ಯಾಚರಣೆಯನ್ನು ಕೈಗೊಳ್ಳುವುದು ಮತ್ತು ಈ ಸುಂಕದ ದರ ಲಂಡನ್ನಿನಲ್ಲಿ ಗಟ್ಟಿಗಳ ರೂಪದಲ್ಲಿರುವ ಬೆಳ್ಳಿಯ ಪ್ರತಿದಿನದ ಸೂಚಿತ ಬೆಲೆ ಮತ್ತು ಅದಕ್ಕೆ ಅನುಗುಣವಾಗಿ ಕೌನ್ಸಿಲ್ ಹುಂಡಿಗಳಿಗೆ ನಿಗದಿಪಡಿಸಿದ ಪ್ರಮಾಣ ಇವುಗಳ ನಡುವಿನ ಅಂತರದಷ್ಟಾಗಿರಬೇಕು.[೧] ಆರನೆಯದು, ಇಂಪೀರಿಯಲ್ ಫ್ಲೋರಿನ್ ಅಥವಾ ರೂಪಾಯಿ ಎಂಬ ಹೆಸರಿನ ದ್ವಿಲೋಹದ ನಾಣ್ಯವನ್ನು ಜಾರಿಗೆ ತರಬೇಕು. ಈ ನಾಣ್ಯದ ಮೌಲ್ಯ '೨' ಷಿಲಿಂಗಾಗಿರಬೇಕು ಮತ್ತು ಅದರಲ್ಲಿ ೪% ಚಿನ್ನ ಮತ್ತು ಉಳಿದ ಭಾಗ ಬೆಳ್ಳಿಯಾಗಿರಬೇಕು.[೨] ಸ್ವತಂತ್ರವಾಗಿರುವ ಚಿನ್ನ ಮತ್ತು ಬೆಳ್ಳಿ ಇವುಗಳ ನಡುವೆ ನಿಗದಿಪಡಿಸಿದ ಮೌಲ್ಯವಿಲ್ಲದೆಯೇ ಸ್ಥಾಪಿಸಿದ ನಾಣ್ಯಪದ್ಧತಿ ಇರಬೇಕು,[೩] ಅಥವಾ ಬೃಹತ್ ಮಾನದ ನಾಣ್ಯಗಳ ವ್ಯಾಪಾರದಲ್ಲಿ ಮಾತ್ರ ಬಂಗಾರದ ಉಪಯೋಗವನ್ನು ಸ್ವಲ್ಪಮಟ್ಟಿಗೆ ಪ್ರೋತ್ಸಾಹಿಸಬೇಕು.[೪] ಇಂಥ ಅವೈಚಾರಿಕ ಮತ್ತು ನಿಷ್ಪ್ರಯೋಜಕ ನಾಣ್ಯ ಸುಧಾರಣೆಯ ಯೋಜನೆಗಳಿಗೆ, ಭಾರತ ಒಪ್ಪದಿದ್ದರೂ, ಅದು ಇವುಗಳು ಹೊಂದಿರುವ ಗುರಿಗಳಿಗೆ, ಅಂದರೆ ತನ್ನನ್ನು ಸುವರ್ಣ ಪ್ರಮಿತಿಗೆ ಒಳಪಡಿಸುವ ಉದ್ದೇಶಕ್ಕೆ ಒಪ್ಪಿಕೊಂಡಿತು. ಈ ಉದ್ದೇಶವನ್ನು ಗಮನದಲ್ಲಿಟ್ಟುಕೊಂಡು ಭಾರತ ಸರ್ಕಾರ ಹೆಚ್ಚು ಸರಳವಾಗಿರುವ ಮತ್ತು ಅಧಿಕ ವೈಜ್ಞಾನಿಕವಾಗಿರುವ ಕರ್ನಲ್ ಸ್ಮಿಥ್‌ರವರ ಯೋಜನೆಯ ಪುನರ್ ವಿಮರ್ಶೆಮಾಡಿತು. ಪೂರ್ವಸಿದ್ಧತೆಯ ರೀತಿಯಲ್ಲಿ, ಅದು ಬಂಗಾಲ ವಾಣಿಜ್ಯ ಮಂಡಳಿಯ ನಿರ್ಣಯಕ್ಕೆ ಹಿಂತಿರುಗಿತು, (ಇದೇ ಮಂಡಳಿಯ ನಿರ್ಣಯಗಳಿಗೆ ೧೮೭೬ರಲ್ಲಿ ಸರ್ಕಾರ ಸಂಪೂರ್ಣ ಆಕ್ಷೇಪಣೆ ಎತ್ತಿತ್ತು). ತನ್ನ ಜೂನ್ ೨೧, ೧೮೯೨ರ ಓಲೆಯಲ್ಲಿ ಭಾರತ ಸರ್ಕಾರ ಬಂಗಾಲ ವಾಣಿಜ್ಯ ಮಂಡಳಿಯ ಪ್ರಸ್ತಾವನೆಗಳಲ್ಲದೆ ಮತ್ತೇನೂ ಬೇಡ ಎಂದಿತು. ಈ ಓಲೆಯನ್ನು ಬರೆದ ಒಬ್ಬ ಲೇಖಕನ ಮಾತಿನಲ್ಲಿ ಇದನ್ನೇ ಈ ಕೆಳಗೆ ನೀಡಲಾಗಿದೆ.[೫]

"ಬೆಳ್ಳಿನಾಣ್ಯದ ಅನಿಯಮಿತ ಉತ್ಪಾದನೆ ಉಂಟಾಗದಂತೆ ಭಾರತೀಯ ಟಂಕಸಾಲೆಗಳನ್ನು ಮುಚ್ಚಬೇಕು, ಹೀಗೆ ಟಂಕಸಾಲೆಗಳನ್ನು ಮುಚ್ಚುವುದರಿಂದ ಉಂಟಾಗುವ ಪರಿಣಾಮಗಳ ಬಗ್ಗೆ ತನಗೆ ಮನವರಿಕೆಯಾಗುವವರೆಗೆ ಸರ್ಕಾರ ಅವುಗಳನ್ನು ತೆರೆಯಬಾರದು."

"ಯಾವ ಪ್ರಮಾಣದಲ್ಲಿ ಬೆಳ್ಳಿಯಿಂದ ಸುವರ್ಣ ಅನುಪಾತಕ್ಕೆ ಬದಲಾಯಿಸಬೇಕೆಂಬುದನ್ನು ಭಾರತ ಕಾಲಕ್ರಮೇಣ ನಿರ್ಧರಿಸಬೇಕು, ಟಂಕಸಾಲೆಗಳು ಮುಚ್ಚುವ ಸ್ವಲ್ಪ ಮೊದಲು ಇದ್ದ ಬೆಳ್ಳಿಯ ಸರಾಸರಿ ಬೆಲೆ ಮೇಲೆ ಈ ಪ್ರಮಾಣವನ್ನು ನಿರ್ಧರಿಸುವುದು ಅತ್ಯಂತ ಸುರಕ್ಷಿತ ಹಾಗೂ ನ್ಯಾಯಯುತವಾಗಿದೆ. ಈ ಪ್ರಮಾಣ ನಿರ್ಧಾರವಾದ ಮೇಲೆ, ಟಂಕಸಾಲೆಗಳನ್ನು ಆ ಅನುಪಾತದಲ್ಲಿಯೇ ಚಿನ್ನದ ನಾಣ್ಯಗಳನ್ನು ಮಾಡಲು ತೆಗೆಯಬೇಕು ಮತ್ತು ಇಂಥ ಚಿನ್ನದ ನಾಣ್ಯಗಳನ್ನು ಶಾಸನಬದ್ಧ ಹಣವನ್ನಾಗಿ ಮಾಡಬೇಕು."

---

೧. ಶಿಲ್ಲಿಜ್‌ರಿಂದ ಮೇಲೆ ಹೇಳಿದಂತೆ, ಪು. ೩೯

೨. ಸ್ಟಾಲ್‌ಕಾರ್ಟ್‌ರಿಂದ ಮೇಲೆ ಹೇಳಿದಂತೆ ಪು. ೩೨ ಹಾಗೆಯೇ ಮೆರಿಂಗ್‌ಟನ್‌ರಿಂದ, ಮೇಲೆ ಹೇಳಿದಂತೆ, ಪು. ೩೧೬

೩. ಪೆರ್ರಿಯಿಂದ ಮೇಲೆ ಹೇಳಿದಂತೆ, ಪು. ೩೨೩

೪. ಕ್ಲೇರಿಮಂತ್‌ರಿಂದ. ಮೇಲೆ ಹೇಳಿದಂತೆ, ಪು. ೨೯೨

೫. ಸರ್ ಡೇವಿಡ್ ಬಾರಬೋರರ "ದಿ ಸ್ಟಾಂಡರ್ಡ್ ಆಫ್ ವ್ಯಾಲ್ಯೂ" ಎಂಬ ಗ್ರಂಥ, ೧೯೧೨ ಪುಟಗಳೂ ೨೦೨-೩. ಇಟಾಲಿಕ್ ಅಕ್ಷರಗಳು ಮೂಲದಲ್ಲಿಲ್ಲ.

ಮೇಲೆ ಹೇಳಿದ ಭಾರತ ಸರ್ಕಾರದ ಪ್ರಸ್ತಾವನೆಗಳನ್ನು ಕೂಲಂಕಷ ಪರೀಕ್ಷೆಗಾಗಿ, ಒಂದು ವಿಭಾಗೀಯ ಸಮಿತಿಗೆ ಕಳುಹಿಸಲಾಯಿತು. ಈ ಸಮಿತಿಯು ಹರ್‌ಶ್ಚೆಲ್ ಸಮಿತಿ ಎಂದು ಪ್ರಸಿದ್ಧವಾಗಿತ್ತು. ರೂಪಾಯಿಯ ಮೌಲ್ಯವನ್ನು ಸಂರಕ್ಷಿಸಲು ಕಾಯ್ದುಕೊಂಡು ಹೋಗಬೇಕಾದ ಚಿನ್ನದ ಮೀಸಲು ನಿಧಿಯ ಅಗತ್ಯವನ್ನು ಒಳಗೊಳ್ಳದ್ದರಿಂದ ಆ ಪ್ರಸ್ತಾವನೆಗಳು ದೋಷಪೂರಿತವಾಗಿದೆ ಎಂದು ಹರ್‌ಶ್ಚೆಲ್ ಸಮಿತಿಯು ಅಭಿಪ್ರಾಯಪಟ್ಟಿತು. ಇದೇ ಕಾರಣಕ್ಕಾಗಿ ಹಲವಾರು ಜನರು ಚೇಂಬರ್‌ರವರ ಪ್ರಸ್ತಾವನೆಗಳು ಯಶಸ್ವಿಯಾಗುವುದಿಲ್ಲವೆಂದರು. ಆದರೆ, ಬೇರೆಬೇರೆ ದೇಶಗಳಲ್ಲಿನ ನಾಣ್ಯಪದ್ಧತಿಗಳನ್ನು ವಿಸ್ತಾರವಾಗಿ ಪರಿಶೀಲಿಸಿ ಹರ್‌ಶ್ಚೆಲ್ ಸಮಿತಿ ಈ ರೀತಿ ವರದಿ ಮಾಡಿತು.[೧]

"ಇಂಗ್ಲೆಂಡಿನ ನಾಣ್ಯ ಪದ್ಧತಿಯಲ್ಲಿ ತೆಗೆದುಕೊಂಡಿರುವ ಮುನ್ನೆಚ್ಚರಿಕೆಗಳು ಇತರ ದೇಶಗಳ ಪದ್ಧತಿಗಳು ಸುಗಮವಾಗಿರುವುದನ್ನು ಮತ್ತು ತಮ್ಮ ನಾಣ್ಯಗಳಿಗಾಗಿ ಒಂದು ಚಿನ್ನದ ಪ್ರಮಿತಿಯನ್ನು ಅನುಸರಿಸುತ್ತಿರುವ ಇತರ ದೇಶಗಳೊಡನೆ ಸಾಕಷ್ಟು ಸಮಾನತೆಯನ್ನು ಹೊಂದಿರುವುದನ್ನು ಗಮನಿಸದೆ ಅಂತರರಾಷ್ಟ್ರೀಯ ಪದ್ಧತಿಗಳನ್ನು ವಿಶ್ಲೇಷಿಸುವುದು ಅಸಾಧ್ಯವಾಗುತ್ತದೆ."

ಸಮಿತಿಯು ಭಾರತದ ಪ್ರಸ್ತಾವನೆಗಳ ಬಗ್ಗೆ ತೃಪ್ತಿಯನ್ನು ವ್ಯಕ್ತಪಡಿಸಿ, ಅವುಗಳ ಅನುಷ್ಠಾನಕ್ಕೆ ಒಪ್ಪಿಗೆಯಿತ್ತುದೇ ಅಲ್ಲದೆ, ಅದರಲ್ಲಿ ಈ ಕೆಳಕಂಡ ತಿದ್ದುಪಡಿಯನ್ನು ಮಾಡಿತು.[೨]

"ಬೆಳ್ಳಿಯ ನಾಣ್ಯಗಳನ್ನು ಮುಕ್ತವಾಗಿ ಟಂಕಿಸುವುದನ್ನು ನಿಲ್ಲಿಸಿದ ಮೇಲೆ, ಸಾರ್ವಜನಿಕರಿಗೆ ಮುಚ್ಚಿದ್ದರೂ, ಈ ಟಂಕಸಾಲೆಗಳನ್ನು ಸರ್ಕಾರವು ಒಂದು ಷಿಲಿಂಗ್ ೪ ಪೆನ್ಸ್‌ಗಳ ದರದಲ್ಲಿ ನಿಗದಿಗೊಳಿಸಿದ ರೂಪಾಯಿ ನಾಣ್ಯಗಳನ್ನು ಟಂಕಿಸಲು ಉಪಯೋಗಿಸಿಕೊಳ್ಳಲಾಗುತ್ತದೆ ಮತ್ತು ಸರ್ಕಾರೀ ಖಜಾನೆಗಳಲ್ಲಿ ಇದೇ ವಿನಿಮಯ ದರದಲ್ಲಿ ಚಿನ್ನವನ್ನು ಸ್ವೀಕರಿಸಲಾಗುತ್ತದೆ ಎಂಬ ಪ್ರಕಟಣೆಯನ್ನು ನೀಡಬೇಕು".

ಮೇಲಿನ ಶಿಫಾರಸುಗಳನ್ನು ಭಾರತ ಸರ್ಕಾರ ಜೂನ್ ೨೬, ೧೮೯೩ರಂದು ಜಾರಿಗೆ ತಂದಿತು. ಇದು ೧೮೩೫ರಲ್ಲಿ ಸಂಭವಿಸಿದಂತೆ ಭಾರತ ಸರ್ಕಾರ ಇಟ್ಟ ಇನ್ನೊಂದು ಮಹತ್ವದ ಹೆಜ್ಜೆಯಾಗಿತ್ತು. ಅದೇ ದಿನ ಭಾರತ ಸರ್ಕಾರ ಒಂದು ಕಾಯಿದೆ ಮತ್ತು ಮೂರು ಕಾರ್ಯನಿರ್ವಾಹಕ ಪ್ರಕಟಣೆಗಳನ್ನು ಅನುಷ್ಠಾನದಲ್ಲಿ ತಂದಿತು. ೧೮೯೩ ರ (VIII) ಕಾಯಿದೆ ಕೇವಲ ರದ್ದುಪಡಿಸುವ ಉದ್ದೇಶವನ್ನು ಉಳ್ಳ ಕಾಯಿದೆಯಾಗಿತ್ತು ಹಾಗೂ ಇದು ಈ ಕೆಳಗಿನ ಕಾಯಿದೆಗಳನ್ನೆಲ್ಲಾ ರದ್ದುಪಡಿಸಿತು.

(i) ೧೮೭೦ರ XXIII ಭಾರತೀಯ ನಾಣ್ಯೀಕರಣದ ಕಾಯಿದೆ.

ಬೆಳ್ಳಿಗಟ್ಟಿಯನ್ನು ಬೆಳ್ಳಿಯ ನಾಣ್ಯಗಳಲ್ಲಿ ಪರಿವರ್ತಿಸುವುದಕ್ಕಾಗಿ ಟಂಕಸಾಲೆಯ ಮೇಲ್ವಿಚಾರಕರಿಗೆ ಪರವಾನಿಗೆ ನೀಡುವ ಕಾಯಿದೆಯ ೧೯ ರಿಂದ ೨೮ನೆಯ ಭಾಗಗಳನ್ನು (ಈ ಎರಡೂ ಭಾಗಗಳೂ ಸೇರಿದಂತೆ) ರದ್ದುಪಡಿಸುವುದು.[೩]

---

೧. ವರದಿ. ೯೩.

೨. ವರದಿ ೧೫೫

೩. ಖಾಸಗಿ ವ್ಯಕ್ತಿಗಳ ಉದ್ದೇಶಗಳನ್ನು ಈಡೇರಿಸುವುದಕ್ಕಾಗಿ ಟಂಕಸಾಲೆಗಳು ನಾಣ್ಯಮಾಡಲು ಬಂಗಾರದ ಪ್ರಸ್ತಾವನೆಗಳನ್ನು ಸಹ ಈ ಪ್ರಕರಣಗಳು ಹೊಂದಿದ್ದವು. ಟಂಕಸಾಲೆಗಳಿಗೆ ಬಂದ ಬಂಗಾರದ ಗುಣಮಟ್ಟ ಬಹಳ ಕಡಿಮೆ ಇತ್ತು ಮತ್ತು ಅದರಿಂದ ಬಂದ ಚಿನ್ನದ ನಾಣ್ಯ, ಅಂದರೆ 'ಮೊಹರ್' ಶಾಸನಬದ್ಧ ಹಣವಾಗಿರಲಿಲ್ಲ. ಈ ಮೊಹರುಗಳನ್ನು ಭವಿಷ್ಯದಲ್ಲಿ ಚಿನ್ನದ ಮುಕ್ತ ನಾಣ್ಯ ಮಾಡುವಿಕೆಯಿಂದ ದೂರವಿಡುವ ಉದ್ದೇಶ ಜನರಿಗೆ ಆಗಲೇ ಗೊತ್ತಾಗಿದ್ದುದರಿಂದ, ಇಂಥಾ ಮೊಹರುಗಳು ಅಸ್ತಿತ್ವದಲ್ಲಿದ್ದವು. ತತ್ಪರಿಣಾಮವಾಗಿ ಬೆಳ್ಳಿಯ ಜೊತೆ ಬಂಗಾರವನ್ನು ಟಂಕಸಾಲೆಗಳಿಗೆ ತರುವುದು ನಿಂತುಹೋಯಿತು.

(ii) ೧೮೮೨ರ ಭಾರತೀಯ ಕಾಗದ ನಾಣ್ಯದ ಕಾಯಿದೆಯ[೨] ಕೆಳಗಿನ ಅಂಶಗಳನ್ನು ರದ್ದುಪಡಿಸುವುದು.

- (ಎ) ೧೮೮೧ ಪೋರ್ಚುಗೀಸರ ಸಂಪ್ರದಾಯದ ಕಾಯಿದೆಯ ಪ್ರಕಾರ ಬೆಳ್ಳಿ ನಾಣ್ಯಗಳ ವಿರುದ್ಧ ನೋಟುಗಳನ್ನು ಚಲಾವಣೆಯಲ್ಲಿ ತರುವ ೧೧ನೆಯ ಪರಿಚ್ಛೇದ ಕಲಂ(ಬಿ)[೩]
- (ಬಿ) ಬೆಳ್ಳಿಯ ಗಟ್ಟಿ ಅಥವಾ ವಿದೇಶೀ ಬೆಳ್ಳಿಯ ನಾಣ್ಯದ ವಿರುದ್ಧ ನೋಟುಗಳನ್ನು ಚಲಾವಣೆಯಲ್ಲಿ ತರುವ ೧೧ನೆಯ ಪರಿಚ್ಛೇದದಲ್ಲಿ ಕಲಂ(ಡಿ).[೪]
- (ಸಿ) ಕಾಗದದ ನಾಣ್ಯ ಮಾಡಲು ಬೇಕಾಗಿರುವ ಚಿನ್ನ, ಬೆಳ್ಳಿ, ವಿದೇಶೀ ಸಾಲಪತ್ರಗಳ ಮೀಸಲು ಹಣದ ಒಟ್ಟು ಮೊತ್ತದಲ್ಲಿ ಚಿನ್ನದ ನಾಣ್ಯಗಳ ಪ್ರಮಾಣವನ್ನು ೧/೪ಕ್ಕೆ ಮಿತಿಗೊಳಿಸುವ ೧೩ನೆಯ ಪರಿಚ್ಛೇದ[೫]

ಮೇಲೆ ವಿವರಿಸಿದ ಕಾಯಿದೆಯ ಭಾಗಗಳ ರದ್ದುಪಡಿಸುವಿಕೆಗೆ ಕಾರ್ಯನಿರ್ವಾಹಕ ಪ್ರಕಟಣೆ ಕ್ರ.ಸಂ. ೨೬೬೩ ಪೂರಕವಾಗಿತ್ತು. ಹರ್‌ಶ್ಚೆಲ್ ಸಮಿತಿಯ ಸಲಹೆಯ ಮೇರೆಗೆ ಸರ್ಕಾರದ ಖಜಾನೆಗಳು ಒಂದು ಮತ್ತು ಅರ್ಧ ಸವರನ್ನುಗಳನ್ನು ಕ್ರಮವಾಗಿ ೧೫ ರೂಪಾಯಿ ಮತ್ತು ೭ ರೂಪಾಯಿ ಎಂಟಾಣೆಗೆ ಸಮನಾಗಿ ಪಡೆಯಲು ಪ್ರಾರಂಭಿಸಿದವು.

ಮೇಲಿನ ಯಾವುದೇ ಕ್ರಮಗಳಲ್ಲಿ ಬಂಗಾರವನ್ನು ಶಾಸನಬದ್ಧ ಹಣವನ್ನಾಗಿ ಮಾಡದೆ ಇದ್ದುದರಿಂದ ತನ್ನ ಖಜಾನೆಗಳಲ್ಲಿ ಬಂಗಾರ ಹೆಚ್ಚಿನ ಪ್ರಮಾಣದಲ್ಲಿ ಸಂಗ್ರಹವಾಗಿ ಅದು ಸರ್ಕಾರಕ್ಕೆ ತಲೆನೋವಾಗಬಹುದಿತ್ತು. ಇದನ್ನು ತಪ್ಪಿಸಲು ಸರ್ಕಾರ ಮತ್ತೊಂದು ಪ್ರಕಟಣೆ ಕ್ರ.ಸಂ. ೨೬೬೪ನ್ನು ಜಾರಿಗೆ ತಂದಿತು. ಇದರ ಪ್ರಕಾರ ನಾಣ್ಯ ವಿಭಾಗದ ಮುಖ್ಯ ನಿಯಂತ್ರಣಾಧಿಕಾರಿಯ ಅಪ್ಪಣೆಯ ಮೇರೆಗೆ ಚಿನ್ನದ ನಾಣ್ಯ ಅಥವಾ ಗಟ್ಟಿಯ ವಿರುದ್ಧ ಕಾಗದದ ನೋಟುಗಳನ್ನು ನೀಡಬೇಕು. ಇಲ್ಲಿ, ವಿನಿಮಯ ದರ ಒಂದು ರೂಪಾಯಿಗೆ ೭.೫೩೩೪೪ ಗ್ರಾಂ ಬಂಗಾರಕ್ಕೆ ಸಮವಾಗಿತ್ತು. ಮುಂದುವರಿದು, ಒಂದು ಮತ್ತು ಅರ್ಧ ಸವರನ್ನುಗಳಿಗೆ ಕ್ರಮವಾಗಿ ರೂಪಾಯಿ ೧೫ ಮತ್ತು ರೂಪಾಯಿ ೭ ಮತ್ತು ಎಂಟು ಆಣೆ ವಿನಿಮಯ ದರ ನಿಗದಿಯಾಗಿತ್ತು.

ಹರ್‌ಶ್ಚೆಲ್ ಸಮಿತಿಯ ಎರಡನೆಯ ತಿದ್ದುಪಡಿಗೆ ಬಲನೀಡಲು ಸರ್ಕಾರ ಕ್ರ.ಸಂ. ೨೬೬೨ರ ಪ್ರಕಟಣೆಯನ್ನು ಹೊರತಂದಿತು. ಇದರ ಪ್ರಕಾರ "ಕಲ್ಕತ್ತೆಯ ಹಾಗೂ ಬೊಂಬಾಯಿಯ ಟಂಕಸಾಲೆಯ ಮೇಲ್ವಿಚಾರಕರು ಜನರಿಂದ ಚಿನ್ನದ ನಾಣ್ಯ ಮತ್ತು ಬಂಗಾರದ ಗಟ್ಟಿಯನ್ನು ರೂಪಾಯಿಯ ವಿನಿಮಯಕ್ಕೆ, ಒಂದು ರೂಪಾಯಿಗೆ ೭.೫೩೩೪೪ ಗ್ರಾಂ ಬಂಗಾರದಂತೆ, ಪಡೆಯಬೇಕೆಂದು ಗವರ್ನರ್–ಜನರಲ್ ಕೌನ್ಸಿಲ್‌ನಲ್ಲಿ ಸಾರಬೇಕಾಗಿತ್ತು. ಈ ಕಾರ್ಯ ಮುಂದಿನ ದಿನಗಳಲ್ಲಿ ಬೇರೆ ಆಜ್ಞೆ ಬರುವವರೆಗೆ ಮುಂದುವರಿಯುತ್ತದೆಂದು ಹೇಳಲಾಗಿತ್ತು. ಮುಂದುವರಿದು, ಖಜಾನೆಗಳು ಜನರಿಂದ ಬಂಗಾರವನ್ನು ಪಡೆಯಲು ಈ ಕೆಳಗಿನ ಕರಾರುಗಳನ್ನು ಹೊಂದಿದ್ದವು:–

---

೨. ಕಾಯಿದೆಯ ಈ ಭಾಗಗಳ ರದ್ದುಪಡಿಸುವಿಕೆ ಅದರ ಉಳಿದ ಭಾಗಗಳ ರದ್ದುಪಡಿಸುವಿಕೆಯ ಮೇಲೆ ಅಂದರೆ ಅದರ ೧೪ ಮತ್ತು ೧೫ನೆಯ ಭಾಗಗಳ ರದ್ದುಪಡಿಸುವಿಕೆಯ ಮೇಲೆ ಹಾಗೂ ೨೧ ಮತ್ತು ೨೮ನೆಯ ಭಾಗಗಳ ಮಾರ್ಪಾಡಿನ ಮೇಲೆ ಅವಲಂಬಿತವಾಗಿತ್ತು. ಇವೆಲ್ಲವುಗಳು ಇಡೀ ಕಾಯಿದೆಯನ್ನು ಅಂದು ಪ್ರಾರಂಭಿಸಲಾದ ಸುವರ್ಣ ಪ್ರಮಿತಿಯ ನೀತಿಗೆ ಸರಿಹೊಂದುವಂತೆ ಮಾಡುವ ಉದ್ದೇಶಗಳನ್ನು ಹೊಂದಿದ್ದವು.

೩. ಸಭೆ ಮುಕ್ತಾಯವಾದದ್ದರಿಂದ ಈ ಕಲಂ ಉಳಿಸಿಕೊಳ್ಳುವ ಆವಶ್ಯಕತೆ ಇರಲಿಲ್ಲ.

೪. ಈ ಕಾಲಂ ಅನ್ನು ಉಳಿಸಿಕೊಳ್ಳುವುದು ಅಂದಿನ ಟಂಕಸಾಲೆಗಳ ಮುಚ್ಚುವಿಕೆಗೆ ಸರಿಹೊಂದುತ್ತಿರಲಿಲ್ಲ.

೫. ಭವಿಷ್ಯದಲ್ಲಿ ಭಾರತದ ನಾಣ್ಯಪ್ರಮಿತಿ ಸುವರ್ಣ ಪ್ರಮಿತಿಯಾಗಲಿದ್ದುದರಿಂದ ಈ ಮಿತಿ ಅನಾವಶ್ಯಕವಾಗಿದ್ದಿತು.

೧) ಜನರು ನೀಡುತ್ತಿರುವ ಲೋಹದ ನಾಣ್ಯಗಳು ಅಥವಾ ಗಟ್ಟಿಯು ನಾಣ್ಯಮಾಡಲು ಅರ್ಹವಾಗಿರಬೇಕು.

೨) ಒಂದು ಸಲದ ವಿನಿಮಯದಲ್ಲಿ ಬಂಗಾರದ ಪ್ರಮಾಣ ೫೦ ತೊಲಗಳಿಗಿಂತ ಕಡಿಮೆಯಾಗಿರಬಾರದು.

೩) ಈಗಾಗಲೇ ಕರಗಿಸಲಾದ ಅಥವಾ ಕತ್ತರಿಸಲಾದ ಚಿನ್ನದ ನಾಣ್ಯ ಅಥವಾ ಗಟ್ಟಿಯನ್ನು ಮತ್ತೊಮ್ಮೆ ಟಂಕಸಾಲೆಗಳು ಸ್ವೀಕರಿಸುವಂತೆ ಮಾಡಲು ಪ್ರತಿಯೊಂದು ಸಹಸ್ರ ಅಂಶಗಳಿಗೆ ೧/೪ರಂತೆ ಶುಲ್ಕವನ್ನು ತೆಗೆದುಕೊಳ್ಳಬೇಕು.

೪) ಟಂಕಸಾಲೆಯ ಮೇಲ್ವಿಚಾರಕರು ಚಿನ್ನದ ನಾಣ್ಯ ಅಥವಾ ಗಟ್ಟಿಯನ್ನು ಪಡೆದಮೇಲೆ ಅವುಗಳನ್ನು ತಂದು ನೀಡಿದವರಿಗೆ ಒಂದು ರಸೀದಿಯನ್ನು ನೀಡಬೇಕು; ಅವರಿಗೆ ಇದೊಂದು ಪ್ರಮಾಣಪತ್ರವಾಗಿರುತ್ತದೆ. ಇದರ ಆಧಾರದ ಮೇಲೆ ಅವರಿಗೆ ಕಲ್ಕತ್ತೆಯ ಅಥವಾ ಬೊಂಬಾಯಿಯ ಖಜಾನೆಗಳು ಹಣವನ್ನು ನೀಡುತ್ತವೆ. ಈ ಹಣದ ಪಾವತಿಯನ್ನು ಮುಖ್ಯ ನಿಯಂತ್ರಣಾಧಿಕಾರಿಗಳು ಕಾಲಕಾಲಕ್ಕೆ ನಿಗದಿ ಮಾಡಿದ ನಂತರ ಮಾಡಲಾಗುತ್ತದೆ.”

ಮೇಲಿನ ವಿಧಾನಗಳಿಂದ ಈ ನೀತಿಗೆ ಒಂದು ರೂಪವನ್ನು ನೀಡುವ ಮುನ್ನವೇ ಇದನ್ನು ಅನುಷ್ಠಾನದಲ್ಲಿ ತರದ ಹಾಗೆ ಮಾಡಲು ಪ್ರಯತ್ನಗಳು ಪ್ರಾರಂಭವಾಯಿತು. ೧೮೯೨ರ ಅಂತರರಾಷ್ಟ್ರೀಯ ಹಣಕಾಸಿನ ಸಮ್ಮೇಳನದ ವೈಫಲ್ಯದ ನಂತರ ಅಮೇರಿಕ ಮತ್ತು ಫ್ರಾನ್ಸ್ ದೇಶಗಳು ತಮ್ಮ ಬೆಳ್ಳಿಯ ಅಧಿಕ ದಾಸ್ತಾನಿನ ಭಾರದಿಂದ ಅತಿಯಾಗಿ ಬಳಲುತ್ತಿದ್ದವು. ಇವುಗಳು ಬ್ರಿಟಿಷ್ ಸರ್ಕಾರದ ಜೊತೆ ಕೆಲವೊಂದು ಷರತ್ತುಗಳ ಮೇಲೆ ೧೫½ಗೆ ೧ ರ ಅನುಪಾತದಲ್ಲಿ ಬೆಳ್ಳಿಯ ನಾಣ್ಯವನ್ನು ಮುಕ್ತವಾಗಿ ಟಂಕಿಸಲು ತಮ್ಮ ಟಂಕಸಾಲೆಗಳನ್ನು ತೆರೆದವು. ಈ ಷರತ್ತುಗಳು ಈ ಕೆಳಗಿನಂತೆ ಇದ್ದವು.[೧]

೧) ಈಗಾಗಲೇ ಬೆಳ್ಳಿಯ ನಾಣ್ಯಗಳನ್ನು ಮುಕ್ತವಾಗಿ ಟಂಕಿಸಲು ಭಾರತೀಯ ಟಂಕಸಾಲೆಗಳನ್ನು ಪುನಃ ಪ್ರಾರಂಭಿಸುವುದು ಮತ್ತು ಭಾರತದಲ್ಲಿ ಬಂಗಾರವನ್ನು ಶಾಸನಬದ್ಧ ಹಣವನ್ನಾಗಿಸುವುದಿಲ್ಲವೆಂಬ ವಾಗ್ದಾನ ನೀಡುವುದು.

೨) ಬ್ಯಾಂಕ್ ಆಫ್ ಇಂಗ್ಲೆಂಡಿನ ನಾಣ್ಯ ಚಲಾವಣೆಯ ವಿಭಾಗದ ಗಟ್ಟಿಯ ೧/೫ ಭಾಗವನ್ನು ಬೆಳ್ಳಿಯಲ್ಲಿ ಇಡುವುದು.

೩) (ಅ) ಇಂಗ್ಲೆಂಡಿನಲ್ಲಿ ಬೆಳ್ಳಿಯ ಹಣ ಶಾಸನಬದ್ಧ ಮಿತಿಯನ್ನು ೧೦ಕ್ಕೆ ಏರಿಸುವುದು.
   (ಬ) ೨೦ ಷಿಲಿಂಗ್ ನೋಟುಗಳನ್ನು ಬೆಳ್ಳಿಯ ಆಧಾರದ ಮೇಲೆ ಜನತೆಗೆ ನೀಡುವುದು.
   (ಕ) ಬಂಗಾರದ ೧೦ ಷಿಲಿಂಗ್ ನೋಟುಗಳನ್ನು ನಿಧಾನವಾಗಿಯಾಗಲಿ ಅಥವಾ ಶೀಘ್ರವಾಗಿಯಾಗಲಿ ಚಲಾವಣೆಯಿಂದ ಹಿಂತೆಗೆಯುವುದು, ಇದಕ್ಕೆ ಬದಲಾಗಿ ಬೆಳ್ಳಿಯ ಆಧಾರದ ಮೇಲೆ ೧೦ ಷಿಲಿಂಗ್ ಮೌಲ್ಯದ ಕಾಗದದ ನೋಟುಗಳನ್ನು ಜಾರಿಗೆ ತರುವುದು.

೪) ಒಂದು ನಿರ್ದಿಷ್ಟ ಗಾತ್ರದ ಬೆಳ್ಳಿಯನ್ನು ಪ್ರತಿವರ್ಷವೂ ನಾಣ್ಯದಲ್ಲಿ ಪರಿವರ್ತಿಸುವುದು.

೫) ರೂಪಾಯಿಯ ಮತ್ತು ಬ್ರಿಟಿಷ್ ಡಾಲರುಗಳ ಹಣಮಾಡಲು ಇಂಗ್ಲಿಷ್ ಟಂಕಸಾಲೆಗಳನ್ನು ತೆರೆಯುವುದು,

---

೧. ಅಮೆರಿಕಾ ಸಂಯುಕ್ತ ಸಂಸ್ಥಾನದ ವಿಶೇಷ ರಾಯಭಾರಿಗಳು ನಾಣ್ಯದ ಮೇಲೆ ಮಾಡಿದ ಪ್ರಸ್ತಾವನೆಗಳ ಪತ್ರವ್ಯವಹಾರ, ೧೮೯೭ ರ ಪಿ.ಪಿ.ಸಿ. ೮೬೬೭, ಪು.೩

ಈ ಹಣವನ್ನು ನೇರ ಒಪ್ಪಂದಗಳಲ್ಲಿ ಹಾಗೂ ಇನ್ನಿತರ ಬೆಳ್ಳಿ ಪ್ರಮಿತಿಯ ವಸಾಹತುಗಳಲ್ಲಿ ಸಂಪೂರ್ಣ ಶಾಸನಬದ್ಧ ಹಣದ ಹಾಗೆ ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಅದರ ಬೆಳ್ಳಿ ನಾಣ್ಯದ ಮೊತ್ತಕ್ಕೆ ಸಮನಾಗಿ ಉಪಯೋಗಿಸುವುದು.

೬) ವಸಾಹತು ಅರ್ಥವ್ಯವಸ್ಥೆಗಳ ಮೇಲೆ ಕ್ರಮಕೈಗೊಳ್ಳುವುದು ಹಾಗೂ ಈಜಿಪ್ತ್ ದೇಶದಲ್ಲಿ ಬೆಳ್ಳಿಯ ನಾಣ್ಯಗಳನ್ನು ಜಾರಿಯಲ್ಲಿ ತರುವುದು.

೭) ಹಸ್ಕಿಸನ್ ಯೋಜನೆಯಂತೆ ವಿಶಾಲವಾದ ವ್ಯಾಪ್ತಿಯ ಯಾವುದಾದರೂ ಒಂದು ಯೋಜನೆಯನ್ನು ಅನುಷ್ಠಾನದಲ್ಲಿ ತರುವುದು.

ಈ ಮೇಲಿನ ಒಡಂಬಡಿಕೆಗಳು ಸರ್ಕಾರಿ ಖಜಾನೆಯನ್ನು ಪುನಃ ಅದರ ಹಳೆಯ ನಿಲುವಿಗೆ ಹಿಂತಿರುಗುವಂತೆ ಮಾಡಿತು. ಮುಂದುವರಿದು, ಅದು ಬ್ರಿಟಿಷ್ ನಾಣ್ಯಪದ್ಧತಿಯಲ್ಲಿ ಬದಲಾವಣೆಯನ್ನು ತರಲು ಅವಶ್ಯವಿರುವ ಕರಾರುಗಳ ಬಗ್ಗೆ ಚರ್ಚಿಸಲು ತಿರಸ್ಕರಿಸಿತು; ಭಾರತೀಯ ಟಂಕಸಾಲೆಗಳನ್ನು ತೆರೆಯುವ ಕಾರ್ಯ ಅನುಷ್ಠಾನದಲ್ಲಿ ತರುವುದೇ ಚಿನ್ನ ಮತ್ತು ಬೆಳ್ಳಿಗಳ ನಡುವೆ ವಿನಿಮಯ ಸ್ಥಿರತೆಯನ್ನು[೧] ತರುವುದಕ್ಕೆ ಬ್ರಿಟಿಷ್ ಸಾಮ್ರಾಜ್ಯದ ಕೊಡುಗೆ ಎಂದು ತಿಳಿಯಬೇಕೆಂದು ಬ್ರಿಟನ್ ಹೇಳಿತು. ಬ್ರಿಟನ್ನಿನ ಈ ವಿಚಾರಕ್ಕೆ ಅಮೆರಿಕ ಮತ್ತು ಫ್ರಾನ್ಸ್‌ಗಳು ಒಪ್ಪಿವೆ ಎಂಬುದು ಕಂಡುಬಂದಿತು. ಈ ವಿಷಯ ಏನೇ ಇರಲಿ, ಇಂಥ ಒಪ್ಪಂದಗಳು ಭಾರತ ಸರ್ಕಾರ ತಳೆದ ದಿಟ್ಟ ನಿಲುವಿನಿಂದ ಅಯಶಸ್ವಿಯಾದವು. ಭಾರತ ಸರ್ಕಾರ ಬ್ರಿಟಿಷ್ ಖಜಾನೆಯ ಬಲಿಪಶುವಾಗಲು ಇಚ್ಚಿಸಲಿಲ್ಲ ಮೇಲಾಗಿ, ಅದು ಫ್ರಾನ್ಸ್ ಹಾಗೂ ಅಮೆರಿಕದ ಲಾಭಕ್ಕೋಸ್ಕರ ಈ ಕ್ರಮಗಳನ್ನು ಅನುಸರಿಸಬೇಕೆಂಬ ಇಂಗ್ಲೆಂಡಿನ ಮಾತನ್ನು ಒಪ್ಪಲಿಲ್ಲ. ಇಂಥ ಪ್ರಸ್ತಾವನೆಗಳನ್ನು ಟೀಕಿಸುತ್ತಾ ಭಾರತ ಸರ್ಕಾರ ಹೀಗೆ ಹೇಳಿತು[೨]:–

"ಇಂಗ್ಲಿಷ್ ಮಹಾಪ್ರಭುಗಳು ಪ್ರಸ್ತಾಪಿಸಿರುವ ಹಣದಲ್ಲಿನ ಬದಲಾವಣೆಗಳೂ ಹೀಗಿರುತ್ತವೆ. ಫ್ರಾನ್ಸ್ ಮತ್ತು ಅಮೆರಿಕಗಳು ಬೆಳ್ಳಿಯ ನಾಣ್ಯದ ಚಲಾವಣೆಗೆ ಯಾವ ಅಡೆತಡೆಗಳು ಬಾರದಂತೆ ಮಾಡುವುದಕ್ಕಾಗಿ ಅವುಗಳು ತಮ್ಮ ಮುಚ್ಚಿದ ಟಂಕಸಾಲೆಗಳನ್ನು ತೆಗೆಯಬೇಕು, ಬಂಗಾರದ ಗಟ್ಟಿಯನ್ನು ನಾಣ್ಯದಲ್ಲಿ ಪರಿವರ್ತಿಸುವುದು ಮುಂದುವರಿಯಬೇಕು, ಎರಡು ಲೋಹಗಳ ನಾಣ್ಯಗಳು ಅನಿಯಮಿತ ಶಾಸನಬದ್ಧ ಹಣವಾಗಬೇಕು ಮತ್ತು ಇವೆರಡು ಲೋಹಗಳ ಪ್ರಮಾಣ ಫ್ರಾನ್ಸ್‌ನಲ್ಲಿ ಬದಲಾವಣೆ ಹೊಂದಬಾರದು ಮತ್ತು, ಈ ಪ್ರಮಾಣ ಅಮೆರಿಕದಲ್ಲಿ ೧೫ ೧/೨ಗೆ ಒಂದರ ಅನುಪಾತದಲ್ಲಿ ಬದಲಾಗಬೇಕೆಂಬುದಾಗಿತ್ತು. ಮುಂದುವರಿದು, ಭಾರತ ತನ್ನ ಟಂಕಸಾಲೆಗಳನ್ನು ಬೆಳ್ಳಿ ನಾಣ್ಯ ಮಾಡುವುದಕ್ಕಾಗಿ ಉಪಯೋಗಿಸಬೇಕು. ಮತ್ತು ಬಂಗಾರದ ನಾಣ್ಯವನ್ನು ಟಂಕಿಸಬಾರದು. ಫ್ರಾನ್ಸ್ ಮತ್ತು ಅಮೆರಿಕಗಳೂ ದ್ವಿಲೋಹ ಪದ್ಧತಿಗಳುಳ್ಳವಾಗಿರಬೇಕು, ಭಾರತವು ಒಂದೇ ಲೋಹದ (ಅಂದರೆ) ಬೆಳ್ಳಿಯ ನಾಣ್ಯಪದ್ಧತಿಯನ್ನು ಮುಂದುವರೆಸಬೇಕು. ಉಳಿದ ಎಲ್ಲ ಪ್ರಮುಖ ದೇಶಗಳು ಒಂದೇ ಲೋಹದ ನಾಣ್ಯಪದ್ಧತಿಯನ್ನು ಅಂದರೆ ಸುವರ್ಣ ಪ್ರಮಿತಿಯನ್ನು ಹೊಂದಿರಬೇಕು. ಒಟ್ಟಿನಲ್ಲಿ, ಇದು, ಭಾರತ, ಅಮೆರಿಕ ಮತ್ತು ಫ್ರಾನ್ಸ್ ದೇಶಗಳ ಒಡಂಬಡಿಕೆಯಾಗಿತ್ತು."

* * *

೧. ವಿದೇಶೀ ಆಫೀಸಿಗೆ ಬರೆದ ಅಕ್ಟೋಬರ್ ೧೬, ೧೮೯೭ರ ಓಲೆ, ೧೮೯೭ರ ಪಿ.ಪಿ.ಸಿ. ೮೬೬೭. ಪು. ೧೫.

೨. ಬ್ರಿಟಿಷ್ ಸೆಕ್ರೆಟರಿ ಆಫ್ ಸ್ಟೇಟ್ ರವರ ಸೆಪ್ಟೆಂಬರ್ ೧೬, ೧೮೯೭ರ ಓಲೆ, ಪು. ೯

“ಮೇಲೆ ಸೂಚಿಸಲಾದ ಕ್ರಮಗಳು, ಅವುಗಳು ಒಂದುವೇಳೆ ತಾತ್ಕಾಲಿಕವಾಗಿಯಾದರೂ ತಮ್ಮ ಉದ್ದೇಶಗಳನ್ನು ಸಾಧಿಸುವಲ್ಲಿ ಯಶಸ್ವಿಗೊಂಡರೆ, ಅದು ಒಂದು ಪೌಂಡಿನ ದರವನ್ನು ೧೬ ಪೆನ್ಸ್ ಗಳಿಂದ ೨೩ ಪೆನ್ಸ್‌ಗಳಿಗೆ ಏರಿಸಿ ಭಾರತದ ವ್ಯಾಪಾರ ಮತ್ತು ಉದ್ದಿಮೆಗಳ ಮೇಲೆ ಸಾಕಷ್ಟು ಕೆಟ್ಟ ಪರಿಣಾಮವನ್ನು ಬೀರಬಲ್ಲವಾಗಿದ್ದವು. ಪೌಂಡಿನ ಮೌಲ್ಯದಲ್ಲಿನ ಈ ರೀತಿಯ ಹೆಚ್ಚಳ ಭಾರತದ ನಿರ್ಯಾತ ವ್ಯಾಪಾರವನ್ನು ಸಂಪೂರ್ಣ ನಾಶಮಾಡುವ ಶಕ್ತಿಯನ್ನು ಹೊಂದಿರುತ್ತದೆ.... ಇದು ಅಮೆರಿಕ ಮತ್ತು ಫ್ರಾನ್ಸ್ ದೇಶಗಳಿಗೆ ಏನೂ ತೊಂದರೆ ಉಂಟುಮಾಡದೆ ಇದ್ದರೂ ಭಾರತಕ್ಕೆ ಮಾತ್ರ ಎಲ್ಲಕಾಲಕ್ಕೂ ಹಾನಿ ಉಂಟುಮಾಡಿ ಅದರ ಅರ್ಥವ್ಯವಸ್ಥೆಯನ್ನು ಹಾಳು ಮಾಡುವುದರಲ್ಲಿ ಯಾವ ಸಂದೇಹವೂ ಇಲ್ಲ. ಒಂದು ವೇಳೆ, ಈ ಮೂರು ದೇಶಗಳ ನಡುವಿನ (ಅಂದರೆ ಭಾರತ, ಅಮೆರಿಕ ಮತ್ತು ಫ್ರಾನ್ಸ್) ಒಪ್ಪಂದ ಮುರಿದುಬಿದ್ದರೆ ಈ ಮೂರು ದೇಶಗಳ ಮೇಲೆ ವೈಯಕ್ತಿಕವಾಗಿ ಅದು ಎಂಥ ಪರಿಣಾಮವನ್ನು ಬೀರುತ್ತದೆ? ಫ್ರಾನ್ಸ್ ಸಾಕಷ್ಟು ದೊಡ್ಡ ಮೊತ್ತದ ಬಂಗಾರವನ್ನು ಹೊಂದಿರುತ್ತದೆ ಮತ್ತು ಅಮೆರಿಕವು ಫ್ರಾನ್ಸ್‌ನಷ್ಟು ಬಂಗಾರ ಹೊಂದಿರದಿದ್ದರೂ ಅದರ ಪರಿಸ್ಥಿತಿ ಏನೂ ಕೆಟ್ಟಿರುವುದಿಲ್ಲ. ಒಂದು ವೇಳೆ ಯಾವ ಮುನ್ನೆಚ್ಚರಿಕೆಗಳನ್ನೂ ಈ ದೇಶಗಳು (ಅಂದರೆ, ಫ್ರಾನ್ಸ್ ಮತ್ತು ಅಮೆರಿಕ) ತೆಗೆದುಕೊಳ್ಳದಿದ್ದಲ್ಲಿ, ಈ ಒಪ್ಪಂದದ ಕಾರ್ಯಾಚರಣೆಯಿಂದ ಇವೆರಡು ದೇಶಗಳ ಬಂಗಾರದ ಮೀಸಲು ಇಲ್ಲವಾಗುತ್ತದೆ. ಮತ್ತು ಅಂಥ ಸಂದರ್ಭದಲ್ಲಿ ಎರಡೂ ದೇಶಗಳಿಗೆ ದೊಡ್ಡಪ್ರಮಾಣದ ಹಾನಿ ಉಂಟಾಗುತ್ತದೆ. ಆದರೆ, ಈ ದೇಶಗಳು ಸಾಕಷ್ಟು ಮುನ್ನೆಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುವುದಿಲ್ಲವೆಂದು, ತತ್ಪರಿಣಾಮವಾಗಿ ಅವುಗಳ ಬಂಗಾರದ ಮೀಸಲಿನ ಮೊತ್ತದಲ್ಲಿ ತೀವ್ರ ಕುಸಿತ ಕಂಡುಬರುವುದು ನಿಶ್ಚಿತವೆಂದು ಹೇಳುವುದು ನಂಬಲಸಾಧ್ಯವಾದ ಮಾತಾಗಿರುತ್ತದೆ. ಒಂದುವೇಳೆ ಬಂಗಾರದ ಮೀಸಲು ಇಲ್ಲವಾದರೂ, ಈ ದೇಶಗಳ ಒಪ್ಪಂದ ಕೇವಲ ಬೆಳ್ಳಿ ಪ್ರಮಿತಿಗೆ ಸಂಬಂಧಿಸಿರುವುದರಿಂದ, ಒಪ್ಪಂದ ಮುರಿದುಬಿದ್ದಾಗ ಇವುಗಳ ಬೆಳ್ಳಿಯ ನಾಣ್ಯಪದ್ಧತಿ ಕುಸಿದು ಬೀಳುತ್ತದೆ. ಈ ರೀತಿಯಾಗಿ, ಒಂದುವೇಳೆ ಈ ಪ್ರಯೋಗ ಅಯಶಸ್ವಿಯಾದಲ್ಲಿ, ಈ ಸೋಲಿನ ವೆಚ್ಚವೆಲ್ಲ ಭಾರತದ ಮೇಲೆ ಬೀಳುತ್ತದೆ ಹಾಗೂ ಈ ದೇಶ ಅದನ್ನು ಅನಿವಾರ್ಯವಾಗಿ ಭರಿಸಬೇಕಾಗುತ್ತದೆ. ಏಕೆಂದರೆ, ಭಾರತದಲ್ಲಿ ಕೇವಲ ಬೆಳ್ಳಿಯ ನಾಣ್ಯಗಳಿವೆ, ಚಿನ್ನದ ನಾಣ್ಯಗಳಿರುವುದಿಲ್ಲ. ಇಂಥ ಪರಿಸ್ಥಿತಿಯಲ್ಲಿ ಮೊದಲು, ಸ್ವಲ್ಪ ಕಾಲಾವಧಿಯವರೆಗೆ, ಭಾರತದ ರೂಪಾಯಿಯ ಮೌಲ್ಯ ಅಧಿಕ ವೇಗದಿಂದ ಏರುತ್ತದೆ. ಒಂದು ಕಾಲಾವಧಿಯವರೆಗೂ ಅದು ಇಳಿಯುವುದಿಲ್ಲ. ಆದರೆ, ಅದು ಇಳಿಯಲು ಪ್ರಾರಂಭಿಸಿದಾಗ ಆ ಪ್ರಕ್ರಿಯೆಯು ಶೀಘ್ರವಾಗಿರುತ್ತದೆ. ಈ ರೀತಿಯ ಬೆಳ್ಳಿಯ ಮೌಲ್ಯದ ಏರಿಳಿತಕ್ಕೆ ತೀವ್ರವಾಗಿ ಸಂಬಂಧಿಸಿದ ರೂಪಾಯಿಯನ್ನು ಹೊಂದಿರುವ ಭಾರತ, ತನ್ನ ನಾಣ್ಯದ ವಿನಿಮಯದರದಲ್ಲಿನ ಏರಿಳಿತಗಳನ್ನು ತಪ್ಪಿಸಲು ಯಾವ ದಾರಿಯನ್ನು ಸ್ವೀಕರಿಸಬಹುದು? ಒಂದು ವೇಳೆ ಭಾರತೀಯ ಟಂಕಸಾಲೆಗಳನ್ನು ಪುನಃ ತೆರೆದಲ್ಲಿ ಅವುಗಳನ್ನು ಪುನಃ ಬೇಗನೆ ಮುಚ್ಚಲು ಬರುವುದಿಲ್ಲ; ಒಂದು ವೇಳೆ ಅವುಗಳನ್ನು ಮುಚ್ಚಿದರೂ ಆ ವೇಳೆಗೆ ಬೆಳ್ಳಿಯ ಬಹುದೊಡ್ಡ ಮೊತ್ತ ಭಾರತದಲ್ಲಿ ಚಲಾವಣೆಯಲ್ಲಿ ಬಂದಿರುತ್ತದೆ. ಪರಿಸ್ಥಿತಿ ಹೀಗಿರುವಾಗ, ಭಾರತಕ್ಕೆ ಯಾವುದಾದರೂ ನಿವಾರಣೋಪಾಯ ಉಳಿದಿರುತ್ತದೆ ಎಂದು ನಮಗನಿಸುವುದಿಲ್ಲ.

ಆದರೆ, ಭಾರತವು ತಾನು ಇಟ್ಟುಕೊಂಡ ‘ಸುವರ್ಣ’ ಪ್ರಮಿತಿ’ಯನ್ನು ಅನುಷ್ಠಾನಕ್ಕೆ ತರುವ ಉದ್ದೇಶದಿಂದ, ಬೇರೆಡೆ ತನ್ನ ಗಮನವನ್ನು ಹರಿಸಲು ತಿರಸ್ಕರಿಸಿದ ನಂತರ ಅದು ತನ್ನ ಹಣಕಾಸಿನ ವ್ಯವಸ್ಥೆಯಲ್ಲಿ ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿತ್ತು. ೧೮೯೩ರಲ್ಲಿ ಟಂಕಸಾಲೆ ಮುಚ್ಚಿದ ದಿನದಿಂದಲೂ ರೂಪಾಯಿಯಲ್ಲಿನ ಮೊತ್ತಕ್ಕೆ ಹೆಚ್ಚಳವೇನೂ ಆಗದಿದ್ದರೂ, ಚಲಾವಣೆಯಲ್ಲಿ ಲಭ್ಯವಿದ್ದ ರೂಪಾಯಿಯ ಮೊತ್ತ ಬಹುಕಾಲದವರೆಗೆ

ಜನರ ಆವಶ್ಯಕತೆಗಳನ್ನು ಪೂರೈಸಲು ಸಾಕಾಗುತ್ತಿತ್ತು. ಟಂಕಸಾಲೆ ಮುಚ್ಚಿದ ಮೊದಲ ಕೆಲವರ್ಷಗಳಲ್ಲಿ ರೂಪಾಯಿಯ ನಾಣ್ಯ ವಿಪುಲವಾಗಿತ್ತಲ್ಲದೆ ಉಪಯೋಗಕ್ಕೆ ಬಾರದಂತಿತ್ತು. ಆದರೆ ಬೇಗನೆ ಆ ಪರಿಸ್ಥಿತಿಯನ್ನು ದಾಟಿ ೧೮೯೮ರ ಹೊತ್ತಿಗೆ ಅದರ ಬೇಡಿಕೆ ಲಭ್ಯತೆಗಿಂತ ಹೆಚ್ಚಾಯಿತು. ಈ ಕೊರತೆ ಎಷ್ಟಿತ್ತೆಂದರೆ ಭಾರತೀಯ ಹಣದ ಪೇಟೆಯಲ್ಲಿ ಸೋಡಿದರ ೧೬%ಗೆ ಏರಿ ಹೆಚ್ಚುಕಡಿಮೆ ಇಡೀ ವರ್ಷ ಹಾಗೆಯೇ ಮುಂದುವರಿಯಿತು. ಆರ್ಥಿಕ ಕೊರತೆಯನ್ನು ಮುಂದುವರೆಸುವ ಸರ್ಕಾರದ ನೀತಿಯ ವಿರುದ್ಧ ಜನ ರೊಚ್ಚಿಗೆದ್ದರು. ಆಗ, ಭಾರತ ಸರ್ಕಾರ ೧೮೯೮ರ (ಸಂಖ್ಯೆ ii) ಕಾಯಿದೆಯನ್ನು ಅನುಷ್ಠಾನದಲ್ಲಿ ತಂದು ಲಂಡನ್ನಿನಲ್ಲಿ ತಾನು ಬ್ರಿಟಿಷ್ ಸೆಕ್ರೆಟರಿ ಆಫ್ ಸ್ಟೇಟ್‌ರವರಿಗೆ ಇಂಗ್ಲೆಂಡಿನಲ್ಲಿ ಸಲ್ಲಿಸಿದ ಚಿನ್ನಕ್ಕೆ ಪ್ರತಿಯಾಗಿ ಭಾರತದಲ್ಲಿ ಹೆಚ್ಚಿನ ಪ್ರಮಾಣದ ನೋಟುಗಳನ್ನು ಚಲಾವಣೆಗೆ ತರಲು ಮನವಿಯನ್ನು ಮಾಡಿಕೊಂಡು ಪರವಾನಿಗೆ ಪಡೆಯಿತು. ಈ ಕಾಯಿದೆ ಅಂದಿನ ಹಣದ ಕೊರತೆಯನ್ನು ಸಂಪೂರ್ಣವಾಗಿ ನಿವಾರಿಸಿತು. ಈ ಹಿಂದೆ, ೧೮೯೩ರಲ್ಲಿ ಕೈಗೊಂಡ ಕ್ರಮಗಳಿಂದ ಚಿನ್ನವು ಶಾಸನಬದ್ಧ ಹಣವಾಗಿರಲಿಲ್ಲ. ಆದುದರಿಂದ, ರೂಪಾಯಿಯ ನಾಣ್ಯಗಳು ಕೊರತೆಯಲ್ಲಿದ್ದಾಗ 'ಬಂಗಾರ'ವನ್ನು ಹಣವಾಗಿ ಉಪಯೋಗಿಸಲಾಗಲಿಲ್ಲ, ೧೮೯೮ರ ಹೊಸ ಕಾಯಿದೆ ಚಿನ್ನವನ್ನು ಶಾಸನಬದ್ಧ ಹಣವನ್ನಾಗಿಸಲಿಲ್ಲ ಎಂಬ ಸಂಗತಿ ನಿಜವಾದರೂ, ಅದು ಹೆಚ್ಚಿನ ಮೊತ್ತದ ರೂಪಾಯಿಗಳನ್ನು ಚಲಾವಣೆಯಲ್ಲಿ ತರುವುದಕ್ಕೆ ಬಂಗಾರವನ್ನು ಬೆಂಬಲವಾಗಿ ಉಪಯೋಗಿಸಲು ಅನುವುಮಾಡಿಕೊಟ್ಟಿತು.[೧] ಆದರೆ, ಈ ಕಾಯಿದೆಯು ರೂಪಾಯಿಯ ನೋಟುಗಳನ್ನು ಚಲಾವಣೆಯಲ್ಲಿ ತರುವ ಮುನ್ನ ಬಂಗಾರವನ್ನು ಭಾರತದಲ್ಲಿ ಇಡಬೇಕಾದುದನ್ನು ಆವಶ್ಯಕವೆಂಬ ನಿಯಮವನ್ನು ಜಾರಿಗೆ ತಂದಿತು. ಚಿನ್ನವನ್ನು ಕಳುಹಿಸುವುದಕ್ಕೆ ೩ ಅಥವಾ ೪ ವಾರಗಳ ಸಮಯ ತೆಗೆದುಕೊಳ್ಳುವುದು ಎಂಬ ಅಂಜಿಕೆ ಇತ್ತು ಮತ್ತು ಈ ವಿಳಂಬದ ನಿವಾರಣೋಪಾಯವೂ ನಿಧಾನವಾಗಿತ್ತು. ಹಾಗಾಗಿ ಅದು ಅಷ್ಟೊಂದು ಪರಿಣಾಮಕಾರಿಯಾಗದೆ ಹೋಯಿತು. ಈ ಸಮಸ್ಯೆಯನ್ನು ಬಗೆಹರಿಸಲು ಲಂಡನ್ನಿನ ಸೆಕ್ರೆಟರಿ ಆಫ್ ಸ್ಟೇಟ್‌ರವರಲ್ಲಿಟ್ಟ ಬಂಗಾರ ಭಾರತದ ನಾಣ್ಯ ವಿಭಾಗದಲ್ಲಿ ಚಲಾವಣೆಯ ರೂಪಾಯಿಯ ಮುದ್ರಣಕ್ಕಿರುವ ಚಿನ್ನವೆಂದು ಪರಿಗಣಿಸಿದರೆ ಈ ವಿಳಂಬ ತಪ್ಪಿಸಲು ಸಾಧ್ಯವಿತ್ತು. ಹಾಗೆ ಮಾಡದಿದ್ದಲ್ಲಿ ಈ ನಿವಾರಣೋಪಾಯ ತನ್ನ ಉದ್ದೇಶ ಸಾಧಿಸುವಲ್ಲಿ ಬಹಳ ಹಿಂದೆ ಬೀಳಬಹುದೆಂಬ ಅಂಜಿಕೆ ಜನರಲ್ಲಿ ಇತ್ತು.[೨]

ಹೀಗೆ ಮಾಡುವಲ್ಲಿ ಈ ಕಾಯಿದೆಯು ಅಂದಿನ ಪರಿಸ್ಥಿತಿಯ ತುರ್ತನ್ನು ಚೆನ್ನಾಗಿ ಒತ್ತಿ ಹೇಳಿತು. ಒಂದು ಒಳ್ಳೆಯ ನಾಣ್ಯಪದ್ಧತಿ. ಸಹಜವಾಗಿ ನಾಣ್ಯದ ಪ್ರಮಾಣದಲ್ಲಿನ ಹಿಗ್ಗುವಿಕೆ ಮತ್ತು ಕುಗ್ಗುವಿಕೆಯನ್ನು ಒಳಗೊಂಡಿರಬೇಕಾಗುತ್ತದೆ. ಸರ್ಕಾರ ೧೮೯೩ರಲ್ಲಿನ ಟಂಕಸಾಲೆಗಳನ್ನು ಮುಚ್ಚಿದುದರಿಂದ ಅರ್ಥವ್ಯವಸ್ಥೆಯಲ್ಲಿ ನಾಣ್ಯದ ಪೂರೈಕೆಯನ್ನು ಅಪಾಯದ ಮಟ್ಟಕ್ಕೆ ಕುಗ್ಗಿಸಿತ್ತು. ಅದೇ ನಾಣ್ಯಪದ್ಧತಿಯನ್ನು ೧೮೯೮ರಲ್ಲಿ ನಾಣ್ಯದ ಪೂರೈಕೆಯ ವಿಸ್ತರಣೆಗಾಗಿ ಕ್ರಮಗಳನ್ನು ತೆಗೆದುಕೊಳ್ಳಲು ಸೂಚಿಸಲಾಯಿತು. ಆಗ, ನಾಣ್ಯದ ವಿಸ್ತರಣೆಯನ್ನು ತರಲು ಎರಡು ಉಪಾಯಗಳಿದ್ದವು. ಮೊದಲನೆಯದು, ಟಂಕಸಾಲೆಗಳನ್ನು ಮುಚ್ಚುವುದು ಮತ್ತು ನಾಣ್ಯದ ಹೆಚ್ಚಳವನ್ನು ಬಂಗಾರದ ಉಪಯೋಗದಿಂದ, ಅಂದರೆ ಸವರನ್ನುಗಳನ್ನು ಸಾರ್ವತ್ರಿಕ ಶಾಸನಬದ್ಧ ನಾಣ್ಯ ಮಾಡುವುದರ ಮೂಲಕ ಸಾಧಿಸುವುದು. ಭಾರತ ಸರ್ಕಾರ ತನ್ನ ೮ನೇ ಮಾರ್ಚ್

---

೧. ೧೮೯೩ರ ಪ್ರಕಟಣೆ ನಂ. ೨೬೬೪, ಇದರ ಪ್ರಕಾರ ಚಿನ್ನಕ್ಕೆ ಬದಲಾಗಿ ನೋಟುಗಳನ್ನು ಚಲಾವಣೆಯಲ್ಲಿ ಮುಖ್ಯ ನಿಯಂತ್ರಕರು ತರಬಹುದಾಗಿತ್ತು.

೨. ಮಾನ್ಯ ಸರ್ ಜೇವರ್ಸ್ ವೆಸ್ಟ್‌ಲ್ಯಾಂಡ್ ಮಸೂದೆಯ ಪರಿಚಯ ಭಾಷಣ; ದಿನಾಂಕ ಜನವರಿ ೧೪, ೧೮೯೮.

೧೮೯೮ರ ಓಲೆಯಲ್ಲಿ ಈ ಯೋಜನೆಯನ್ನು ಪ್ರಸ್ತಾಪಿಸಿತು.[೧]

ಈ ಓಲೆಯಲ್ಲಿ ಭಾರತ ಸರ್ಕಾರ, "ನಮ್ಮ ಈಗಿನ ಉದ್ದೇಶ ಸ್ವತಂತ್ರವಾಗಿ ನಡೆಯುವ ವ್ಯಾಪಾರದ ಕಾರ್ಯಾಚರಣೆಯ ಮೇಲೆ ವಿಶ್ವಾಸವಿಡುವುದಾಗಿದೆ. ಒಂದೆಡೆ, ವಾಣಿಜ್ಯಕ್ಕಾಗಿ ಬೇಕಾಗುವ ನಾಣ್ಯದ ಪ್ರಮಾಣ ಪ್ರತಿವರ್ಷ ಹೆಚ್ಚಾಗುತ್ತಿದೆ ಮತ್ತು ಇನ್ನೊಂದೆಡೆ ನಾಣ್ಯದ ಬೇಡಿಕೆಗೆ ಸಮನಾಗಿ ಹೆಚ್ಚುಹೆಚ್ಚು, ಬೆಳ್ಳಿಯ ನಾಣ್ಯಗಳನ್ನು ನಾವು ಚಲಾವಣೆಯಲ್ಲಿ ತರದಿದ್ದುದರಿಂದ ನಮ್ಮ ಬೆಳ್ಳಿಯ ನಾಣ್ಯಕ್ಕಿರುವ ಬೇಡಿಕೆ ಹೆಚ್ಚಾಗುತ್ತದೆ. ಹಾಗೆಯೇ ಅದರ ವಿನಿಮಯ ದರದಲ್ಲಿ ಏರಿಕೆಯುಂಟಾಗುತ್ತದೆ, ಇದರಿಂದ ಹೊರದೇಶದ ಬಂಗಾರ ನಮ್ಮ ದೇಶಕ್ಕೆ ಬರುವಂತೆ ಮತ್ತು ಚಲಾವಣೆಯಲ್ಲಿ ಉಳಿಯುವಂತೆ ಕಾರ್ಯ ಕೈಗೊಳ್ಳಬಹುದೆಂದು ನಾವು ಆಶಿಸುತ್ತೇವೆ. ಕಾಲಕಳೆದಂತೆಲ್ಲಾ ನಮ್ಮ ಬೆಳ್ಳಿ ರೂಪಾಯಿಯ ಅಂತಸ್ತು ಹೆಚ್ಚುತ್ತಾ ಹೋಗುತ್ತದೆ. ಆದರೆ, ಮೊದಮೊದಲು, ಬಂಗಾರವು ದೇಶದ ವಿನಿಮಯದಲ್ಲಿ ಸ್ಥಿರತೆಯನ್ನು ಉಂಟುಮಾಡಲು ಎಷ್ಟು ಆವಶ್ಯಕವೋ ಅಷ್ಟು ಪ್ರಮಾಣದಲ್ಲಿ ಮಾತ್ರ ಇರಲಿಕ್ಕೆ ಸಾಧ್ಯ. ಪರಿಸ್ಥಿತಿ ಹೀಗಿರುವಾಗ, ಅರ್ಥವ್ಯವಸ್ಥೆಯಲ್ಲಿ ಹೇರಳವಾಗಿ ಚಲಾವಣೆಯಲ್ಲಿರುವ ಹಣ ಅಧಿಕ ಮೌಲ್ಯವನ್ನು ಹೊಂದಿರುವ ಬೆಳ್ಳಿ ಆಗಿರುತ್ತದೆಯೇ ವಿನಃ ಬಂಗಾರವಲ್ಲ; ನಾವು ಅಲ್ಪ ಪ್ರಮಾಣದಲ್ಲಿರುವ ಚಿನ್ನದ ನಾಣ್ಯಗಳನ್ನು ಕಣ್ಣಾರೆ ನೋಡಿ ಸಮಾಧಾನಪಡಬಹುದು ಹಾಗೂ ಈ ಚಿನ್ನದ ನಾಣ್ಯಗಳನ್ನು ದೇಶದೊಳಗೆ ಚಲಾವಣೆಗೆ ಉಳಿಸಿಕೊಳ್ಳಬಹುದು. ಒಂದು ವೇಳೆ, ಈ ಮಿತಪ್ರಮಾಣದ ಚಿನ್ನದ ನಾಣ್ಯಗಳನ್ನು ಹೊರದೇಶಗಳ ಪಾವತಿಗಾಗಿ ಉಪಯೋಗಿಸಿದ್ದಲ್ಲಿ, ಅವುಗಳ ಪೂರೈಕೆಯಲ್ಲಿ ಕೊರತೆಯುಂಟಾಗಿ ಅದು ಬೆಳ್ಳಿಯ ವಿನಿಮಯದರವನ್ನು ಹೆಚ್ಚಿಸಿ, ಅದನ್ನು ಪುನಃ ಭಾರತಕ್ಕೆ ಹಿಂತಿರುಗಿ ಬರುವಂತೆ ಮಾಡಬಹುದು ಅಥವಾ ಹೆಚ್ಚೆಂದರೆ ಅದು ಬೆಳ್ಳಿಯ ಹೊರದೇಶದ ಪಾವತಿ ಪ್ರವಾಹವನ್ನು ನಿಲ್ಲಿಸಬಹುದು. ಒಟ್ಟಿನಲ್ಲಿ, ಚಿನ್ನದ ಚಲಾವಣೆ ಇಂಗ್ಲೆಂಡಿನಲ್ಲಿ ಇರುವ ಹಾಗೆ ನಮ್ಮ ದೇಶದಲ್ಲಿ ಇರದಿದ್ದರೂ, ಫ್ರಾನ್ಸ್‌ನಲ್ಲಿರುವ ಹಾಗೆ ಸುವರ್ಣ ಪ್ರಮಿತಿಯನ್ನು ಭಾರತವು ಹೊಂದಬಹುದಾಗಿದೆ."

ಈ ರೀತಿಯಾಗಿ, ಬಂಗಾರದ ಉಪಯೋಗದಿಂದ ನಮ್ಮ ಬೆಳ್ಳಿಯ ನಾಣ್ಯದ ಮೊತ್ತದಲ್ಲಿನ ಹೆಚ್ಚಳವನ್ನು ಸಾಧಿಸಬಹುದಾಗಿದೆ. ಈ ಉದ್ದೇಶವನ್ನು ಇನ್ನೊಂದು ರೀತಿ, ಅಂದರೆ ಅಧಿಕ ನಾಣ್ಯಗಳ ಆವಶ್ಯಕತೆ ಉಂಟಾದಾಗಲೆಲ್ಲಾ, ಸರ್ಕಾರ ಅವುಗಳನ್ನು ತಾನೇ ಹೊರತಂದು ಒಟ್ಟು ನಾಣ್ಯದ ಮೊತ್ತದಲ್ಲಿ ಹೆಚ್ಚಳ ಉಂಟುಮಾಡಬಹುದಾಗಿದೆ. ಟಂಕಸಾಲೆಗಳು ಮುಚ್ಚಿದರೂ, ಸರ್ಕಾರ, ತನ್ನ ಸಂ. ೨೬೬೨ ಪ್ರಕಟಣೆಯ ಪ್ರಕಾರ ರೂ. ೧=೭.೫೩೪೪ ಗ್ರಾಂ ಉತ್ತಮ ಬಂಗಾರದಂತೆ ಹಣವನ್ನು ತಾನೇ ಮುದ್ರಿಸಿ ಆವಶ್ಯಕತೆ ಉಂಟಾದಾಗಲೆಲ್ಲ ಕೊಡುವುದಕ್ಕೆ ಬದ್ಧವಾಗಿತ್ತು.[೨] ಈ ಪ್ರಕಟಣೆಯನ್ನು ಜಾರಿಗೆ ತರುವುದೊಂದೇ ಬಾಕಿ ಇತ್ತು. ಈ ಯೋಜನೆಯನ್ನು ಬಲವಾಗಿ ಪ್ರತಿರೋಧಿಸಿದವರಲ್ಲಿ ಮಿ. ಪ್ರೊಬಿನ್ ಹಾಗೂ ಎ.ಎಮ್. ಲಿಂಡ್ಸೆಯವರು. ಅಗ್ರಗಣ್ಯ ಅರ್ಥಶಾಸ್ತ್ರಜ್ಞರಾಗಿದ್ದ ಅವರಿಬ್ಬರೂ ಮುಂದುವರಿದು, ಭಾರತ ಸರ್ಕಾರದ ಯೋಜನೆ ಚಿನ್ನವನ್ನು ಶಾಸನಬದ್ಧ ಹಣವನ್ನಾಗಿಸುವುದರಿಂದ ಬೆಳ್ಳಿಯ ರೂಪಾಯಿಯ ಪ್ರಮಾಣದಲ್ಲಿ ಹೆಚ್ಚಳ ಉಂಟುಮಾಡಿದರೂ ಸಹ, ಅದು ರೂಪಾಯಿಯನ್ನು ಸಂಪೂರ್ಣವಾಗಿ ಅಪರಿವರ್ತಿತ ನಾಣ್ಯವನ್ನಾಗಿ ಮಾಡುತ್ತದೆ ಮತ್ತು ಹೀಗೆ ಮಾಡುವುದರಿಂದ ಅದು ತನ್ನ ವಿನಿಮಯ ಮೌಲ್ಯವನ್ನು ಸ್ಥಿರಗೊಳಿಸುವ ನೀತಿಯನ್ನು ತಾನೇ ಸೋಲಿಸಿದಂತಾಗುತ್ತದೆ ಎಂದು ಹೇಳಿದರು. ಬದಲಿಗೆ, ಭಾರತ ಸರ್ಕಾರದ ಯೋಜನೆಗಿಂತ

---

೧. ಭಾರತ ಸರ್ಕಾರ 'ನಾಣ್ಯ'ದ ಮೇಲಿನ ಪ್ರಸ್ತಾವನೆಗಳ ಪತ್ರವ್ಯವಹಾರ, ೧೮೯೮ರ ೮೮೪೦ ಪತ್ರವ್ಯವಹಾರ, ಪು. ೩

೨. ಮೊದಲೇ ಹೇಳಿದಂತೆ

ತಮ್ಮ ಯೋಜನೆಯು ಉತ್ತಮವಾಗಿದೆ; ಏಕೆಂದರೆ ಅದು ಕೆಲವು ಷರತ್ತುಗಳ ಮೇಲೆ ರೂಪಾಯಿಯ ನಾಣ್ಯದ ಪರಿವರ್ತನೆಗೆ ಅನುವು ಮಾಡಿಕೊಡುತ್ತದೆಂದು ಹೇಳಿದರು. ಒಟ್ಟಿನಲ್ಲಿ, ಇವರಿಬ್ಬರ ಯೋಜನೆಗಳು ಒಂದೇ ರೀತಿಯ ಷರತ್ತುಗಳ ಮೇಲೆ ರೂಪಾಯಿಯ ನಾಣ್ಯಪರಿವರ್ತನೆಯನ್ನು ರೂಪಿಸಿದ್ದರೂ ಅವರು ಇಂಥದೇ ವಿಧಾನದ ಮೂಲಕ ನಾಣ್ಯ ಪರಿವರ್ತನೆ ಸಾಧಿಸಬೇಕೆಂಬ ವಿಚಾರದಲ್ಲಿ ಭಿನ್ನಾಭಿಪ್ರಾಯ ಹೊಂದಿದ್ದರು. ಮಿ. ಪ್ರೊಬಿನ್‌ರ ಪ್ರಸ್ತಾಪದ ಅಂಶಗಳು ಹೀಗಿದ್ದವು:-

"೧. ಸಾರ್ವಜನಿಕರು ಭಾರತೀಯ ಟಂಕಸಾಲೆ ಹಾಗೂ ಮೀಸಲು ಹಣದ ಖಜಾನೆಗಳಿಂದ ಬಂಗಾರದ ವಿನಿಮಯಕ್ಕೆ ಪ್ರತಿಯಾಗಿ ರೂ. ೧=೧ಷಿ ೪ ಪೆ. ನಂತೆ, ರೂಪಾಯಿಗಳನ್ನು ಪಡೆಯುವ ೧೮೯೩ರ ಪ್ರಕಟಣೆಗೆ ಶಾಸಕಾಂಗದ ಅನುಮತಿ ನೀಡಲೇಬೇಕು.

೨. ಈ ರೀತಿ, ಸರ್ಕಾರ ಪಡೆದ ಬಂಗಾರ ಅದರ ಕಾಗದದ ಹಣದ ಮೀಸಲಿನ ಒಂದು ಭಾಗವಾಗಿರಲೇಬೇಕು. ಇದು ಬ್ರಿಟನ್ನಿನ ಚಿನ್ನದ ನಾಣ್ಯ ಅಥವಾ ಅದರ ರೂ. ೧೦೦೦ ಮೌಲ್ಯಕ್ಕಿಂತ ಕಡಿಮೆಯಿಲ್ಲದ ಬಂಗಾರ ಗಟ್ಟಿಯಲ್ಲಿ ಇರಬೇಕು.

೩. ಮಾರುಕಟ್ಟೆಯ ಪರಿಸ್ಥಿತಿಗಳಿಗೆ ತಾನೇ ಸ್ಪಂದಿಸುವ ಶಕ್ತಿಯನ್ನು ನೀಡುವುದಕ್ಕಾಗಿ, ಒಂದು ವರ್ಷ ಸತತವಾಗಿ ಕಾಗದದ ಹಣಗಳ ಮೌಲ್ಯ ಚಿನ್ನದ ನಾಣ್ಯಗಳ ಮೌಲ್ಯಕ್ಕಿಂತ ಕಡಿಮೆಯಿದ್ದರೆ ಬಂಗಾರವನ್ನು ರೂಪಾಯಿಗಳಿಗೆ ಬದಲಾಗಿ ನೀಡುವ ಅಧಿಕಾರವನ್ನು ಸರ್ಕಾರಕ್ಕೆ ನೀಡಬೇಕು. ಅಂತಹ ಸಂದರ್ಭದಲ್ಲಿ ವಿನಿಮಯ ದರ ರೂ. ೧=೧ ಷಿ. ೪ ಪೆ. ಆಗಿರಬೇಕು ಮತ್ತು ಕನಿಷ್ಠ ವ್ಯವಹಾರವೂ ರೂ. ೧೦,೦೦೦ವಾಗಿರಬೇಕು.

೪. ಈಗ ಚಾಲ್ತಿಯಲ್ಲಿರುವ ರೂ ೧೦,೦೦೦ದ ನೋಟುಗಳನ್ನು ಹಿಂತೆಗೆದುಕೊಳ್ಳಬೇಕು ಮತ್ತು ಧಾರಕನ ಅಪೇಕ್ಷೆಯಂತೆ ಇನ್ನು ಮುಂದೆ ರೂ. ೧೦,೦೦೦ದ ನೋಟುಗಳನ್ನು ಚಿನ್ನದ ವಿನಿಮಯಕ್ಕೆ ಮಾತ್ರ ನೀಡಬೇಕು. ಅದೂ ಹಾಗೆ ವಿನಿಮಯಕ್ಕೆ ನೀಡಲ್ಪಡುತ್ತಿರುವ ಚಿನ್ನವು ಗಟ್ಟಿಯ ರೂಪದಲ್ಲಿರಬೇಕು.

ಲಿಂಡ್ಸೆಯವರು ಮಿ. ಪ್ರೊಬಿನ್‌ರಿಂದ ಬೇರೆ ರೀತಿಯಲ್ಲಿ ತಮ್ಮ ವಾದವನ್ನು ಮಂಡಿಸಿದರು,[೧] ಅವರ ಪ್ರಸ್ತಾವನೆಯಲ್ಲಿ ಒಂದೆಡೆ, ಭಾರತದ ಮೇಲಿನ ರೂಪಾಯಿ ಡ್ರಾಫ್ಟ್‌ಗಳನ್ನು ೧೬ ೧/೮ ಪೆ.ಗೆ ಮಾರಲು ಅದೇ ಸಮಯದಲ್ಲಿ ಲಂಡನ್ನಿನ ಮೇಲಿನ ಸ್ಟರ್ಲಿಂಗ್ ಡ್ರಾಫ್ಟ್‌ಗಳನ್ನು ರೂ. ೧೫ ೩/೪ ಪೆ. ಗೆ ಮಾರಲು ಅನುವು ಮಾಡಕೊಡಬೇಕು. ಈ ವ್ಯವಹಾರಕ್ಕೆ ಬೇಕಾಗಿರುವ ಹಣವನ್ನು ಸುವರ್ಣ ಪ್ರಮಿತಿಯ ಮೀಸಲು ಹಣದಂತೆ ಒಂದೆಡೆ ಲಂಡನ್ನಿನ ಮತ್ತು ಭಾರತದ ಕಚೇರಿಗಳಲ್ಲಿ ಪ್ರತ್ಯೇಕವಾಗಿ ಇಡಬೇಕು. ಮುಂದುವರಿದು, ಲಂಡನ್ ಕಚೇರಿ ತನ್ನ ಹುಂಡಿಗಳ ಮೇಲೆ ಈಗಾಗಲೇ ಪಡೆದ ಹಣವನ್ನು ಹಿಂತಿರುಗಿಸುವುದಕ್ಕಾಗಿ ಈ ಮೀಸಲು

---

೧. ಇವರ ಯೋಜನೆಯ ಪ್ರಥಮ ವಿಸ್ತರಣೆಯನ್ನು ಇವರ 'ಬಂಗಾರವಿಲ್ಲದೆ ಇಂಗ್ಲೆಂಡ್ ಮತ್ತು ಭಾರತದಲ್ಲಿನ ಸುವರ್ಣ ಪ್ರಮಿತಿ' ಎಂಬ ಪ್ರಬಂಧದಲ್ಲಿ ಓದಬಹುದು. ಇದು ೧೮೭೮ರ ಅಕ್ಟೋಬರ್ ತಿಂಗಳಲ್ಲಿ ಕಲ್ಕತ್ತಾ ರಿವ್ಯೂದಲ್ಲಿ ಪ್ರಕಟವಾಗಿದೆ. ಇವರ ಇತ್ತೀಚಿನ ಬರವಣಿಗೆ "ರಿಕಾರ್ಡೋಸ್ ಎಕ್ಸ್‌ಛೇಂಜ್ ರೆಮಿಡಿ ಎಫಿಂಗ್ಯಾಮ್ ವಿಲ್ಸನ್, ೧೮೯೨" ಪುಸ್ತಕದಲ್ಲಿ ಕಾಣಬಹುದು. ಇವರ ಯೋಜನೆಯನ್ನು ಪಯೋನಿಯರ್ ಆಫ್ ಅಲಹಾಬಾದ್ (ಇಂಡಿಯಾ) ಪತ್ರಿಕೆಯ ೬-೧-೧೮೯೮ ರ ಸಂಚಿಕೆಯಲ್ಲಿ ಓದಬಹುದು, ಇಲ್ಲಿ ನೀಡಿರುವ ವಿವರಗಳಣ್ನು ೧೮೯೮ ರ ಸಂಚಿಕೆಯಲ್ಲಿ ಓದಬಹುದು, ಇಲ್ಲಿ ನೀಡಿರುವ ವಿವರಗಳಣ್ನು ೧೮೯೮ ರ ಸಿ. ೮೮೪೦, ಪು. ೧೩ ರಿಂದ ಆಯ್ದುಕೊಳ್ಳಲಾಗಿದೆ.

ಹಣವನ್ನು ಕೆಳಗಿನಂತೆ ಉಪಯೋಗಿಸಬೇಕು:

೧) ೫ ಅಥವಾ ೧೦ ದಶಲಕ್ಷ ಪೌಂಡು ಮೌಲ್ಯದ ಬಂಗಾರವನ್ನು ಸಾಲವಾಗಿ ಪಡೆಯುವುದಕ್ಕಾಗಿ,

೨) ಭಾರತದಲ್ಲಿ ಈಗಾಗಲೇ ಮಾರಿರುವ ಹುಂಡಿಗಳ ಪಾವತಿಗಾಗಿ.

೩) ರೂಪಾಯಿಗಳಲ್ಲಿ ಈಗಾಗಲೇ ಕರಗಿಸಲಾದ ಬೆಳ್ಳಿಯ ಗಟ್ಟಿಯನ್ನು ಕೊಳ್ಳುವುದಕ್ಕಾಗಿ,[೧]

೪) ಆವಶ್ಯಕವೆನಿಸಿದಾಗ, ಮಾಡಿದ ಹೆಚ್ಚಿನ ಚಿನ್ನದ ಸಾಲಕ್ಕೆ ಮರುಪಾವತಿಗಾಗಿ, ಉಪಯೋಗಿಸಬೇಕು.

ಇದೇ ರೀತಿ, ಭಾರತದ ಸುವರ್ಣ ಪ್ರಮಿತಿಯ ಕಚೇರಿಯಲ್ಲಿಟ್ಟ ಹಣವನ್ನು ಈ ಕೆಳಗಿನ ರೀತಿ ವ್ಯಯಿಸಬಹುದು:

i) ಲಂಡನ್ನಿನಲ್ಲಿ ಹುಂಡಿಗಳನ್ನು ಮಾರುವುದರಿಂದ ಬಂದ ಪಾವತಿಗಾಗಿ.

ii) ಆವಶ್ಯಕವಾಗಿರುವಾಗ ಹೊಸ ಬಂಗಾರದ ಗಟ್ಟಿಯಿಂದ ನಾಣ್ಯಮಾಡಲು ಬಂಗಾರವನ್ನು ಲಂಡನ್ನಿನಿಂದ ಖರೀದಿಸಿ ಭಾರತಕ್ಕೆ ಕಳುಹಿಸಲು.

ಭಾರತ ಸರ್ಕಾರ ಹಾಗೂ ಪ್ರೊಬಿನ್ ಮತ್ತು ಲಿಂಡ್ಸೆರವರು ಪ್ರಮಿತಿಯನ್ನು ಅನುಷ್ಠಾನದಲ್ಲಿ ತರಲು ನೀಡಿದ ಯೋಜನೆಗಳಲ್ಲಿ ಇದ್ದ ಭಿನ್ನತೆ ಎಂದರೆ ಪ್ರೊ. ಬಿನ್ ಅವರು ಭಾರತ ಸರ್ಕಾರವು ಚಿನ್ನದ ನಾಣ್ಯದಿಂದ ಸುವರ್ಣ ಪ್ರಮಿತಿ ಸ್ಥಾಪಿಸಬೇಕೆಂದರು. ಆದರೆ, ಲಿಂಡ್ಸೆಯವರು ಚಿನ್ನದ ನಾಣ್ಯವಿಲ್ಲದೆ ಸುವರ್ಣ ಪ್ರಮಿತಿ ಅಸ್ತಿತ್ವವನ್ನು ಪ್ರಸ್ತಾಪಿಸಿದರು.

'ಚಿನ್ನದ ನಾಣ್ಯದ ಸುವರ್ಣ ಪ್ರಮಿತಿ' ಹಾಗೂ 'ಚಿನ್ನದ ನಾಣ್ಯವಿಲ್ಲದ ಸುವರ್ಣ ಪ್ರಮಿತಿ' ಈ ಪ್ರಸ್ತಾವನೆಗಳಲ್ಲಿ ಅನುಕೂಲಗಳೂ ಯಾವುದರಲ್ಲಿ ತುಲನಾತ್ಮಕವಾಗಿ ಹೆಚ್ಚಾಗಿವೆ ಎಂಬುದನ್ನು ತೀರ್ಮಾನಿಸಲು ಮತ್ತೊಂದು ವಿಭಾಗೀಯ ಸಮಿತಿಯನ್ನು ಸರ್ ಹೆನ್ರಿ ಫೌಲರ್‌ರವರ ಅಧ್ಯಕ್ಷತೆಯಲ್ಲಿ, ನೇಮಿಸಿತು. ಸಾಕಷ್ಟು ಪ್ರಮುಖ ಸಾಕ್ಷಿಗಳನ್ನು ಸಂಗ್ರಹಿಸಿದ ನಂತರ, ಈ ಸಮಿತಿ ತನ್ನ ಅಭಿಪ್ರಾಯವನ್ನು ಈ ರೀತಿ ನೀಡಿತು.[೨]

"೫೦. ಪ್ರೊಬಿನ್‌ರ ಯೋಜನೆಯ ಬಗ್ಗೆ ನಾವು ಹೇಳುವುದಾದರೆ, ಅವರು ಸೂಚಿಸಿದ ಬಂಗಾರದ ಗಟ್ಟಿಯನ್ನು ಅಂತರರಾಷ್ಟ್ರೀಯ ವಿನಿಮಯದ ಮಾಧ್ಯಮ ಎಂದು ಪರಿಗಣಿಸಬಹುದು; ಆದರೆ ಈ ಗಟ್ಟಿಯನ್ನು ಆಂತರಿಕ ನಾಣ್ಯವೆಂದು ಗಣಿಸಿ ಅದನ್ನು ಶಾಶ್ವತವಾಗಿ ಸ್ವೀಕರಿಸಿದ ಯಾವ ಪೂರ್ವ–ನಿದರ್ಶನಗಳೂ ಇಲ್ಲ. ಇದಲ್ಲದೆ, ಯುರೋಪಿನಲ್ಲಾಗಲಿ ಅಥವಾ ಭಾರತದಲ್ಲಾಗಲಿ ಈ ಲೋಹ ನಾಣ್ಯದ ರೂಪದಲ್ಲಿ ಒಬ್ಬನಿಂದ ಇನ್ನೊಬ್ಬನ ಕೈಗೆ ಹೋಗಬಾರದೆಂಬ ರೂಢಿಗೂ ಇದು ಹೊಂದಿಕೊಳ್ಳುವುದಿಲ್ಲ. ಇವರ ಯೋಜನೆ ೧೮೪೪ರ ಪೀಲ್‌ರವರ ಕಾಯಿದೆಯ ತಾತ್ಕಾಲಿಕ ಪ್ರಸ್ತಾವನೆಗಳ ಮೇಲೆ ಅವಲಂಬಿತವಾಗಿರುವುದರಿಂದ ಆ ಯೋಜನೆಗಳಿಂದ ಯಾವ ಹೆಚ್ಚಿನ ಉಪಯೋಗವನ್ನು ಪಡೆಯುವುದೂ ಸಾಧ್ಯವಾಗುವುದಿಲ್ಲ. ಅಲ್ಲದೆ, ಪೀಲ್‌ರವರ ಕಾಯಿದೆಯ ಪ್ರಕಾರ, ೨೦೦ ಪೌಂಡುಗಳಿಗಿಂತ ಕಡಿಮೆಯಿಲ್ಲದ ಮುದ್ರಿತ ಬಂಗಾರದ ಗಟ್ಟಿಗಳ ಮೇಲೆ ನಗದನ್ನು ನೀಡುವ ಅಧಿಕಾರವನ್ನು ಬ್ಯಾಂಕ್ ಆಫ್ ಇಂಗ್ಲೆಂಡಿಗೆ

---

೧. ಲಂಡನ್ನಿನ ಬಂಗಾರದ ಹುಂಡಿಯ ಬೇಡಿಕೆ ಎಷ್ಟು ಹೆಚ್ಚಾಯಿತೆಂದರೆ, ಬೆಳ್ಳಿ ನಾಣ್ಯಗಳನ್ನು ಕರಗಿಸಿ, ಬೆಳ್ಳಿಯಾಗಿಸಬೇಕು ಮತ್ತು ಈ ಬೆಳ್ಳಿಯನ್ನು ಬಂಗಾರ ಕೊಳ್ಳುವುದಕ್ಕೆ ಉಪಯೋಗಿಸಬೇಕು ಹಾಗೂ ಈ ರೀತಿ ಖರೀದಿಸಿದ ಬಂಗಾರವನ್ನು ಲಂಡನ್ನಿನ ಸುವರ್ಣ ಪ್ರಮಿತಿ ಕಚೇರಿಯಲ್ಲಿ ಇಡಬೇಕು.

೨. ಭಾರತೀಯ ನಾಣ್ಯದ ಸ್ಥಿತಿಗತಿಗಳ ಬಗ್ಗೆ ವಿಚಾರಿಸುವ ಸಮಿತಿಯ ವರದಿ, ೧೮೯೯ರ ಪಿ.ಪಿ.ಸಿ. ೯೩೯೦ ಪು. ೧೫

ತಾತ್ಕಾಲಿಕ ಕ್ರಮವಾಗಿ ನೀಡಲಾಗಿತ್ತು. ಆದರೆ, ೧೮೨೧ರಲ್ಲಿ 'ಬ್ಯಾಂಕ್ ಆಫ್ ಇಂಗ್ಲೆಂಡ್' ಚಲಾವಣೆಯಲ್ಲಿ ತಂದ ಈ ಗಟ್ಟಿಗಳಿಗೆ ಮೊದಲನೆಯ ವರ್ಷದಲ್ಲಿಯೇ ಬೇಡಿಕೆ ಇರಲಿಲ್ಲ.

* * *

"೫೩. ಭಾರತದಲ್ಲಿ ಚಿನ್ನದ ನಾಣ್ಯವನ್ನು ಚಲಾವಣೆಗೆ ತರುವುದರ ಪರವಾಗಿ ಹಾಗೂ ಮಿ. ಪ್ರೊಬಿನ್‌ರವರ ಬುಲಿಯನ್ ಯೋಜನೆಯನ್ನು ಶಾಶ್ವತವಾಗಿ ಅಂಗೀಕರಿಸುವುದರ ವಿರುದ್ಧವಾಗಿರುವ ವಾದಗಳು 'ವಿನಿಮಯದ ಪ್ರಮಿತಿ'ಯೆಂದು ಕರೆಯಲಾದ ಲಿಂಡ್ಸೆಯವರ ಸುಸಂಬದ್ಧ ಯೋಜನೆಯ ವಿರುದ್ಧವೂ ಪ್ರಬಲವಾಗಿದ್ದವು. 'ಬಂಗಾರ'ವನ್ನು ಚಲಾವಣೆಗೆ ತರದೆ ಜಾರಿಗೆ ತರುವ ಎಲ್ಲಾ ಯೋಜನೆಯನ್ನು ಜನರು ಅವಿಶ್ವಾಸದಿಂದ ನೋಡುತ್ತಾರೆ ಎಂಬ ಸಾಕ್ಷಿಯನ್ನು ನೀಡಿದ ಲಾರ್ಡ್ ರೋತ್ಸ್‌ಚೈಲ್ಡ್, ಸರ್ ಜಾನ್ ಲುಬ್ಬೋಕ್, ಸರ್ ಸ್ಯಾಮ್ಯುಯಲ್ ಮಾಂಟೆಗೂ ಹಾಗೂ ಮತ್ತಿತರರ ವಾದದಿಂದ ನಾವು ಪ್ರಭಾವಿತರಾಗಿದ್ದೇವೆ. ಲಿಂಡ್ಸೆಯವರ ಯೋಜನೆಯನ್ನು ಸ್ವೀಕರಿಸುವುದರಿಂದಲೂ ಭಾರತಕ್ಕೆ ಅನ್ಯಾಯವಾಗುತ್ತದೆ, ಏಕೆಂದರೆ, ಇದು ಭಾರತಕ್ಕೆ, ಅದರ ಭವಿಷ್ಯವನ್ನು ಉಜ್ವಲಗೊಳಿಸಲು ಬರುವ, ಬಂಡವಾಳದ ಹರಿಯುವಿಕೆಯನ್ನು ನಿಲ್ಲಿಸಲು ಯಾವ ಬಲವಾದ ಕ್ರಮಗಳನ್ನೂ ತೆಗೆದುಕೊಳ್ಳುವಷ್ಟು ಶಕ್ತವಾಗಿರಲಿಲ್ಲ. ಆದುದರಿಂದ, ನಾವು ಲಿಂಡ್ಸೆಯವರ, ಮತ್ತು ಅವರಂಥವರೇ ಆದ ದಿವಂಗತ ರ್‍ಯಾಫೆಲ್ ಹಾಗೂ ಮೇಜರ್ ಡಾರ್ವಿನ್ನರ ಯೋಜನೆಗಳನ್ನು ಒಂದು ಶಾಶ್ವತ ವ್ಯವಸ್ಥೆಯೆಂದು ಶಿಫಾರಸು ಮಾಡುವುದಿಲ್ಲ. ಮೇಲಾಗಿ ಈಗಿರುವ ಪರಿಸ್ಥಿತಿಗಳು ಸಹ ಈ ಯಾವ ಯೋಜನೆಯನ್ನೂ ಪೌಂಡು–ರೂಪಾಯಿ ವಿನಿಮಯ ದರ ನಿಗದಿಪಡಿಸಲು, ಕೊನೆಯ ಪಕ್ಷ ತಾತ್ಕಾಲಿಕವಾಗಿಯಾದರೂ, ಸ್ವೀಕರಿಸುವ ಅಗತ್ಯ ಸೂಚಿಸುವುದಿಲ್ಲ."

ಕೊನೆಗೆ, ಸಮಿತಿಯು, ಭಾರತ ಸರ್ಕಾರದ ನಾಣ್ಯಯೋಜನೆಯನ್ನು ಒಪ್ಪಿ, ಒಂದು ಶಾಶ್ವತ ತಳಹದಿಯ ಮೇಲೆ ಅದನ್ನು, ಆ ದೇಶದಲ್ಲಿ, ಅನುಷ್ಠಾನಕ್ಕೆ ತರಲು ಒಂದು ಕಾರ್ಯನೀತಿಯನ್ನು ರೂಪಿಸಿತು. ಇದನ್ನು ಸಮಿತಿಯ ಮಾತಿನಲ್ಲಿ ಹೇಳುವುದಾದರೆ:

"೫೪. ಭಾರತದಲ್ಲಿ ಬ್ರಿಟಿಷ್ ಸವರನ್ನನ್ನು ಒಂದು ಶಾಸನಬದ್ಧ ಹಾಗೂ ಪ್ರಚಲಿತ ನಾಣ್ಯವನ್ನಾಗಿ ಮಾಡುವುದಕ್ಕೆ ನಾವು ಒಪ್ಪಿದ್ದೇವೆ. ಇದೇ ಸಮಯದಲ್ಲಿ ರಾಯಲ್ ಟಂಕಸಾಲೆಯ ಆಸ್ಟ್ರೇಲಿಯಾದ ಮೂರು ಶಾಖೆಗಳಿಗೆ ನಾಣ್ಯ ಮಾಡಲು ಅನುಮತಿ ನೀಡಲಾಗಿರುವ ಹಾಗೆ ಭಾರತೀಯ ಟಂಕಸಾಲೆಗಳಿಗೆ ಯಾವ ಅಡೆತಡೆಗಳಿಲ್ಲದೆ, ನಾಣ್ಯ ಮಾಡುವುದಕ್ಕೆ ನಾವು ಪರವಾನಿಗೆ ನೀಡಬೇಕು. ಇದರ ಪರಿಣಾಮವೇನೆಂದರೆ, ಬ್ರಿಟನ್ ಹಾಗೂ ಭಾರತದಲ್ಲಿ, ಒಂದೇ ತೆರನಾದ ಪರಿಸ್ಥಿತಿಗಳಲ್ಲಿ, ಸವರನ್ನುಗಳನ್ನು ಮಾಡಬಹುದು ಮತ್ತು ಅವುಗಳನ್ನು ಬ್ರಿಟನ್ ಹಾಗೂ ಭಾರತದಲ್ಲಿ ಚಲಾವಣೆಯಲ್ಲಿ ತರಬಹುದು. ಒಟ್ಟಿನಲ್ಲಿ ಭಾರತದಲ್ಲಿ ಯಾವ ಅಡೆತಡೆಗಳಿಲ್ಲದೆ ಚಿನ್ನ ಒಳಗೆ ಬರುವ ಮತ್ತು ಹೊರಗೆ ಹೋಗುವ ತತ್ವಗಳ ಆಧಾರದ ಮೇಲೆ ಒಂದು ಪರಿಣಾಮಕಾರಿಯಾದ ಸುವರ್ಣ ಪ್ರಮಿತಿ ಹಾಗೂ ಚಿನ್ನದ ನಾಣ್ಯದ ಚಲಾವಣೆ ಭಾರತದಲ್ಲಿ ಸ್ಥಾಪಿತವಾಗುವುದನ್ನು ನಾವು ಎದುರು ನೋಡುತ್ತಿದ್ದೇವೆ ಮತ್ತು ಇಂತಹ ಯೋಜನೆಯನ್ನು ಸ್ವೀಕರಿಸಲು ಭಾರತಕ್ಕೆ ಶಿಫಾರಸು ಮಾಡುತ್ತೇವೆ." ಎಂದಿತು. ಸೆಕ್ರೆಟರಿ ಆಫ್ ಸ್ಟೇಟ್‌ರವರು ಈ ಸಮಿತಿಯ ಶಿಫಾರಸುಗಳನ್ನೆಲ್ಲಾ ಸ್ವೀಕರಿಸಿ ಈ ರೀತಿ ನಿರ್ಧಾರ ಕೈಗೊಂಡರು.[೧]:

"ಪ್ರಚಲಿತವಿರುವ ಬೆಳ್ಳಿಯ ಅನಿರ್ಬಂಧಿತ ನಾಣ್ಯಪರಿವರ್ತಿಸುವ ಅಧಿಕಾರವನ್ನು ಭಾರತದ

---

೧. ಜುಲೈ ೨೫, ೧೮೯೯ ದಿನಾಂಕದ ಓಲೆನೋಡಿ, ೧೮೯೯ರ ೯೪೨೧ ಪತ್ರವ್ಯವಹಾರ, ಸಂ. ೧೪೦ (ಹಣಕಾಸಿನ)

ಟಂಕಸಾಲೆಗಳಿಗೆ ನೀಡದಿರುವ ನೀತಿಯನ್ನು ಮುಂದುವರಿಸಿಕೊಂಡು ಹೋಗಬೇಕು" ಮತ್ತು ಉಚಿತವೆಂದು ಭಾವಿಸಲಾದಾಗ "ಬ್ರಿಟಿಷ್ ಸವರನ್ನನ್ನು ಶಾಸನಬದ್ಧ ಹಣ ಹಾಗೂ ಚಾಲ್ತಿ ಹಣವನ್ನಾಗಿ ಮಾಡಲು ಭಾರತ ಸರ್ಕಾರವು ಆವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು 'ಸಮಿತಿ' ಸೂಚಿಸಿದ ಸಲಹೆಯಂತೆ ಚಿನ್ನದ ನಾಣ್ಯವನ್ನು ಚಲಾವಣೆಯಲ್ಲಿ ತರುವ ವ್ಯವಸ್ಥೆ ಮಾಡಬೇಕು."

ಇಂಡಿಯನ್ ಕಾಯಿನೇಜ್ ಅಂಡ್ ಪೇಪರ್ ಕರೆನ್ಸಿ ಕಾಯಿದೆ (XXIII) ೧೮೯೯, ಎಂಬ ಜನಪ್ರಿಯ ಕಾಯಿದೆಯನ್ನು ಜಾರಿಯಲ್ಲಿ ತಂದು ಸರ್ಕಾರ 'ಸಮಿತಿಯ' ಮೊದಲನೆಯ ಶಿಫಾರಸನ್ನು ಅನುಷ್ಠಾನಗೊಳಿಸಿತು. ಈ ಕಾಯಿದೆಯು ಬ್ರಿಟಿಷ್ ಒಂದು ಮತ್ತು ಅರ್ಧ ಸವರನ್ನುಗಳನ್ನು ಇಡೀ ಭಾರತಾದ್ಯಂತ ಒಂದು ಸವರನ್ನು = ೧೫ ರೂ. ಅರ್ಧ ಸವರನ್ನು = ೭$^{1}/_{2}$ ರೂ. ನಂತೆ, ಶಾಸನಬದ್ಧ ಹಣವನ್ನಾಗಿ ಮಾಡಿತು.

ಭಾರತದ ನಾಣ್ಯವನ್ನು ಬಂಗಾರದ ತಳಹದಿಯ ಮೇಲೆ ನಿಲ್ಲಿಸುವುದರ ಜೊತೆಗೆ, ಸರ್ಕಾರ ಬೇಷರತ್ತಾಗಿ ಬಂಗಾರವನ್ನು ನಾಣ್ಯರೂಪದಲ್ಲಿ ಪರಿವರ್ತಿಸಲು ಟಂಕಸಾಲೆಗಳನ್ನು ತೆರೆಯುವ ಕಾತರ ಹೊಂದಿತ್ತು. ಆದರೆ, ಟಂಕಸಾಲೆಯಿಂದ ಜನತೆಗೆ ನೀಡಬೇಕಾದ ಹಣ ಇಂಗ್ಲಿಷ್ ಸವರನ್ನು ಆಗಿದ್ದುದರಿಂದ ಭಾರತ ಸರ್ಕಾರ ಸಂಪೂರ್ಣವಾಗಿ ಬ್ರಿಟಿಷ್ ಖಜಾನೆಯ ಆಜ್ಞಾನುಸಾರ ನಡೆಯಬೇಕಿತ್ತು. ೧೮೭೦ರ ಇಂಗ್ಲಿಷ್ ನಾಣ್ಯ ಕಾಯಿದೆಯ ಪ್ರಕಾರ, ಭಾರತದ ಟಂಕಸಾಲೆಯು ರಾಯಲ್ ಟಂಕಸಾಲೆಯ ಒಂದು ಶಾಖೆಯಂತೆ ಕಾರ್ಯನಿರ್ವಹಿಸಲು ಬ್ರಿಟಿಷ್ ಮಹಾಪ್ರಭುಗಳ ಒಂದು ಆಜ್ಞೆ ಬೇಕಾಗಿತ್ತು ಮತ್ತು ಈ ವಿಷಯ ಬ್ರಿಟಿಷ್ ಖಜಾನೆಯ ಒಪ್ಪಿಗೆಯನ್ನು ಅವಲಂಬಿಸಿತ್ತು, ಭಾರತ ಸರ್ಕಾರ, ಆವಶ್ಯಕವಿದ್ದ ಕಾಯಿದೆಯನ್ನು ಜಾರಿಗೆ ತರುವ ಮತ್ತು ಸವರನ್ನನ್ನು ಶಾಸನಬದ್ಧ ಹಣವೆಂದು ಸಾರುವ ಹೇಳಿಕೆಯನ್ನು ಏಕಕಾಲದಲ್ಲಿ ಪ್ರಕಟಿಸುವ ಉದ್ದೇಶಹೊಂದಿತ್ತು. ಆದರೆ, ವಾಸ್ತವದಲ್ಲಿ, ಇಂಥ ಒಂದು ಆಜ್ಞೆ ಇನ್ನೂ ಬರದಿದ್ದುದರಿಂದ ಈ ಶಾಸನವನ್ನು ಅನುಷ್ಠಾನದಲ್ಲಿ ತರುವುದನ್ನು ಮುಂದೂಡಲಾಯಿತು ಮತ್ತು ಈ ವಿಷಯದಲ್ಲಿ ಭಾರತ ಸರ್ಕಾರ ಮನಸ್ಸಿಲ್ಲದ ಮನಸ್ಸಿನಿಂದ ಮುಂದುವರಿಯಿತು.[೧] ಏಕೆಂದರೆ ಅದಕ್ಕೆ ಇಂತಹ ಹೇಳಿಕೆ ಮತ್ತು ಕಾಯಿದೆಯ ಅನುಷ್ಠಾನ, ತಾಂತ್ರಿಕ ಕಾರಣಗಳಿಂದಾಗಿ ಇನ್ನೂ ಮುಂದೆ ಹೋಗಬಹುದೆಂಬ ಭಾವನೆಯಿತ್ತು. ಮುಂದುವರಿದು, ಬ್ರಿಟಿಷ್ ಖಜಾನೆ ಎತ್ತಿದ ಆಕ್ಷೇಪಣೆಗಳು ಕೇವಲ ತಾಂತ್ರಿಕವಾಗಿದ್ದರೂ ಮೊದಲಲ್ಲಿ ಅವು ಸಂಪೂರ್ಣ ಅನುಲ್ಲಂಘನೀಯವಾಗಿ, ಮತ್ತು ದುಸ್ತರವಾಗಿ ಕಂಡುಬಂದವು.[೨] ಇಲ್ಲಿ, ಒಂದುವೇಳೆ, ಭಾರತ ಕಚೇರಿ, ಒಪ್ಪಂದದ ಮನೋಭಾವವನ್ನು ಹೊಂದಿರದೆ ಹೋಗಿದ್ದಲ್ಲಿ ಮಾತುಕತೆಗಳು ಮುರಿದು ಬೀಳಬಹುದಾಗಿತ್ತು. ಈ ವಿಷಯ ಏನೇ ಇರಲಿ ಬ್ರಿಟಿಷ್ ಖಜಾನೆ, ಈ ಯೋಜನೆಗಾಗಿ ಭಾರತಕ್ಕೆ ಒಂದು ಅವಕಾಶ ನೀಡುವ ಇಚ್ಛೆಯನ್ನು ಹೊಂದಿರಲಿಲ್ಲ. ತಾಂತ್ರಿಕ ದೃಷ್ಟಿಯಿಂದ ಇದ್ದ ತೊಡಕುಗಳು ನಿವಾರಣೆಯಾದಾಗ, ಬ್ರಿಟಿಷ್ ಖಜಾನೆಯು ತನ್ನ ನಿಲುವನ್ನು ಬದಲಿಸಿ ಚಿನ್ನದ ಟಂಕಸಾಲೆಯು ಭಾರತಕ್ಕೆ ಅಗತ್ಯವೇ ಎಂಬ ಮೂಲಭೂತ ಪ್ರಶ್ನೆಯನ್ನು ಎತ್ತಿತು. ಮುಂದುವರಿದು ಅದು:

"ಚಿನ್ನದ ನಾಣ್ಯಗಳನ್ನು ಅನುಷ್ಠಾನದಲ್ಲಿ ತರುವ ಒಂದು ಒಪ್ಪಂದವಾಗಿರುವುದರ ಬಗ್ಗೆ ಸಮಾಧಾನ ವ್ಯಕ್ತಪಡಿಸಿದ, ನಮ್ಮ ಪ್ರಭುಗಳು, ಈ ಯೋಜನೆಯನ್ನು ಅನುಷ್ಠಾನದಲ್ಲಿ ತರಲು ಕೆಲವು ವಾಸ್ತವಿಕ

---

೧. ಎಂಟನೆಯ ಸೆಪ್ಟೆಂಬರ್ ೧೮೯೯ ರಂದು 'ಭಾರತದ ನಾಣ್ಯ ಮತ್ತು ಕಾಗದ ನೋಟುಗಳು' ಎಂಬ ವಿಷಯದ ಮೇಲೆ ಸನ್ಮಾನ್ಯ ಡಾಕಿನ್ಸರು ಮಾಡಿದ ಭಾಷಣ.

೨. ಕಾಮನ್ಸ್ ಸಭೆ ೧೯೧೩ ರ ೪೯೫, ಪು. ೧೪

ಕ್ರಮಗಳನ್ನು ಕೈಗೊಳ್ಳುವ ಮುನ್ನ ಇತರ ಕೆಲವು ಕ್ರಮಗಳನ್ನು ತೆಗೆದುಕೊಳ್ಳುವುದು ಅಪೇಕ್ಷಣೀಯವೆಂದಿತು. ಅದೇನೆಂದರೆ, "ಲಾರ್ಡ್ ಜಾರ್ಜ್ ಹ್ಯಾಮಿಲ್ಟನ್‌ರವರನ್ನೂ (i) ಭಾರತದಲ್ಲಿ ಸವರನ್ನು ನಾಣ್ಯಗಳನ್ನು ಟಂಕಿಸುವ ಪರವಾಗಿರುವ ಮೂಲ ವಾದಗಳನ್ನು ಪರಾಮರ್ಶಿಸಲು ಮತ್ತು (ii) ಈ ಪ್ರಸ್ತಾವನೆ ಬಂದ ನಂತರ ಎರಡು ವರ್ಷಗಳ ಅವಧಿಯಲ್ಲಿ ಜರುಗಿದ ಪ್ರಸಂಗಗಳು ಟಂಕಸಾಲೆಯ ಶಾಖೆಯನ್ನು ಸ್ಥಾಪಿಸುವ ಪರವಾಗಿದ್ದ ವಾದಗಳು ಈಗಲೂ ಪ್ರಸ್ತುತವಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ವಿವೇಚಿಸಲು ಕೇಳಿಕೊಳ್ಳಬೇಕು..... ಸುವರ್ಣ ಪ್ರಮಿತಿ ಈಗ ದೃಢ ಅಸ್ತಿತ್ವದಲ್ಲಿದೆ. ಸರ್ಕಾರದ ಸುವರ್ಣ ಪ್ರಮಿತಿಯನ್ನು ತರುವ ಉದ್ದೇಶದ ಬಗ್ಗೆ ಜನರಿಗೆ ಯಾವ ಸಂಶಯವೂ ಇರಬೇಕಾಗಿಲ್ಲ ಹಾಗೂ ಭಾರತೀಯ ಸರ್ಕಾರ ತನ್ನದೇ ಆದ ಈ ನೀತಿಯನ್ನು ಅನುಷ್ಠಾನದಲ್ಲಿ ತರಲು ಹಿಂದೇಟು ಹಾಕಬಾರದು. ಈಗಾಗಲೇ ಸವರನ್ನುಗಳು ಭಾರತಕ್ಕೆ ಬರುತ್ತಿವೆ. ನಾಣ್ಯ ಮಾಡಲು ಬೇಕಾಗುವ ಬಂಗಾರದ ಮೊತ್ತದ ಬಗ್ಗೆ ಭಾರತ ಸರ್ಕಾರದ ಅಂದಾಜಿಗಿಂತಲೂ ಕಡಿಮೆ ಬಂಗಾರವು ದೇಶದಲ್ಲಿ ಲಭ್ಯವಾಗಿದೆ ಮತ್ತು ಮುಂದಿನ ದಿನಗಳಲ್ಲಿ ಈ ಮೊತ್ತದಲ್ಲಿ ಯಾವ ಗಮನಾರ್ಹ ಹೆಚ್ಚಳವನ್ನೂ ನಿರೀಕ್ಷಿಸಲಾಗದು" ಎಂದಿತು.

"ಟಂಕಸಾಲೆಯಲ್ಲಿ ನಾಣ್ಯ ತಯಾರಿಸುವ ನೌಕರರನ್ನು ವರ್ಷದಲ್ಲಿನ ಹೆಚ್ಚು ಭಾಗ ಯಾವುದೇ ಕೆಲಸವಿಲ್ಲದೆ ವೇತನ ನೀಡಿ ಇಟ್ಟುಕೊಳ್ಳುವುದು ಸರ್ಕಾರದ ಬೊಕ್ಕಸಕ್ಕೆ ವೃಥಾ ಹೊರೆಯಾಗಿರುತ್ತದೆ. ಇವೆಲ್ಲಾ ಆಕ್ಷೇಪಣೆಗಳಿದ್ದರೂ ಈ ಸುವರ್ಣ ಪ್ರಮಿತಿಯ ಯೋಜನೆಯನ್ನು ಅನುಷ್ಠಾನಕ್ಕೆ ತರಬೇಕೋ ಬೇಡವೋ ಎನ್ನುವುದನ್ನು ಲಾರ್ಡ್ ಜಾರ್ಜ್ ಹ್ಯಾಮಿಲ್ಟನ್‌ರೇ ನಿರ್ಧರಿಸಬೇಕು" ಎಂದು ಬ್ರಿಟಿಷ್ ಖಜಾನೆ ವಾದಿಸಿತು.

ಇದಕ್ಕೆ ಉತ್ತರವಾಗಿ, ಭಾರತದ ಕಚೇರಿ ಈ ರೀತಿ ಹೇಳಿತು :

"ಭಾರತದಲ್ಲಿ ಚಿನ್ನದ ನಾಣ್ಯಗಳನ್ನು ತಯಾರಿಸುವ ಟಂಕಸಾಲೆ ಸ್ಥಾಪಿಸುವ ಕಾರ್ಯ ಈ ದೇಶದ ಹೊಸ ನಾಣ್ಯಪದ್ಧತಿಯ ಪ್ರಾರಂಭಕ್ಕೆ ಒಂದು ಒಳ್ಳೆಯ ಹಾಗೂ ಸ್ಪಷ್ಟ ಚಿಹ್ನೆಯಾಗಿದೆ. ಸುವರ್ಣ ಪ್ರಮಿತಿಯ ಅನುಷ್ಠಾನ ಕೈಬಿಟ್ಟರೆ ಜನರ ಅಸಂತೋಷ ಮತ್ತು ಟೀಕೆಗೆ ಪುಟ ನೀಡಿದಂತಾಗುತ್ತದೆ. ಮಹಾಪ್ರಭುಗಳು ಈ ಯೋಜನೆಯನ್ನು ಈಗ ಅದು ಮುಟ್ಟಿರುವ ಹಂತದಲ್ಲಿ ಕೈಬಿಡಬಾರದು."

ಭಾರತದ ಕಚೇರಿಯ ಈ ನಿಲುವಿಗೆ ಉತ್ತರವಾಗಿ ಬ್ರಿಟಿಷ್ ಖಜಾನೆ ಒಂದು ಕಟುವಾದ ಪ್ರತ್ಯುತ್ತರ ಕಳುಹಿಸಿತು. ಇದರಲ್ಲಿ "ಈಗ ಭಾರತೀಯ ನಾಣ್ಯದ ಆವಶ್ಯಕತೆಗಳನ್ನು ಇತರ ಮೂಲಗಳಿಂದ ಪೂರೈಸಲಾಗುತ್ತಿದೆ ಮತ್ತು ಸವರನ್ನುಗಳನ್ನು ಸ್ಥಳೀಯವಾಗಿ ಮಾಡಲು ಯಾವ ನೈಜ ಬೇಡಿಕೆಯೂ ಇರುವುದಿಲ್ಲ..... ಭಾರತದಲ್ಲಿ ಸುವರ್ಣ ಪ್ರಮಿತಿಯು ಬೇಕೆನ್ನುವ ಚಳವಳಿ ಬಲಗೊಳ್ಳುತ್ತಿದೆಯೆಂಬ ವಿಚಾರವನ್ನು ಮಹಾಪ್ರಭುಗಳು ನಂಬಲು ಸಾಧ್ಯವಿಲ್ಲ. ಇದಲ್ಲದೆ, ಕೇವಲ ಚಿನ್ನದ ನಾಣ್ಯಗಳನ್ನು ತಯಾರಿಸುವ ಯಂತ್ರಗಳನ್ನು ಭಾರತಕ್ಕೆ ತರುವುದರಿಂದ, ಸುವರ್ಣ ಪದ್ಧತಿಯನ್ನು ಅನುಷ್ಠಾನದಲ್ಲಿ ತರುವ ಸರ್ಕಾರದ ಉದ್ದೇಶದ ಬಗ್ಗೆ ಜನರಲ್ಲಿ ಯಾವ ಸಂಶಯ ಉಳಿಯುವುದಿಲ್ಲವೆಂಬ ನಂಬಿಕೆಯು ಸರಿ ಇರುವುದಿಲ್ಲ... ಈಗಾಗಲೇ (i) ಸುವರ್ಣ ಪ್ರಮಿತಿ ತರಲು ನೇಮಿಸಲಾದ ಸಮಿತಿಯ ವರದಿಯನ್ನು ಒಪ್ಪಿರುವುದು, ಮತ್ತು (ii) ಇಂಗ್ಲೆಂಡಿನಿಂದ ಬಂಗಾರವನ್ನು ಹಡಗಿನಲ್ಲಿ ಭಾರತಕ್ಕೆ ತರುವ ಕಾರ್ಯಾಚರಣೆ, ಇವೆರಡನ್ನು ಅನುಷ್ಠಾನದಲ್ಲಿ ತಂದು, ಬ್ರಿಟಿಷ್ ಸರ್ಕಾರ ಸುವರ್ಣ ಪ್ರಮಿತಿಯನ್ನು ಭಾರತದಲ್ಲಿ ತರಲು ಆಸಕ್ತಿ ತೋರಿಸಿದೆ" ಎಂದು ಹೇಳಿತು.

ಒಟ್ಟಿನಲ್ಲಿ ಬ್ರಿಟಿಷ್ 'ಖಜಾನೆ'ಯು ಈ ಪ್ರಸ್ತಾವನೆಯ ಬಗ್ಗೆ ತನ್ನ ಮನಸ್ಸಿನಲ್ಲಿ ಇಟ್ಟುಕೊಂಡ ವಿರೋಧವನ್ನು ಮುಚ್ಚುಮರೆಯಿಲ್ಲದೆ ವ್ಯಕ್ತಪಡಿಸಿತು ಎನ್ನುವುದು ನಿಜ. ಅದರೆ, ಖಜಾನೆ ಇದಕ್ಕಾಗಿ

ಮುಂದಿಟ್ಟ ವಾದಗಳೂ ಸಂಪೂರ್ಣ ತರ್ಕಬದ್ಧವಾಗಿದ್ದವೆಂಬುದನ್ನು ಯಾರೂ ಅಲ್ಲಗೆಳೆಯಲಾರರು. ಸುವರ್ಣ ಪ್ರಮಿತಿಯ ಕಾರ್ಯಾಚರಣೆಯಲ್ಲಿ ಸವರನ್ನುಗಳು ಎಲ್ಲಿಂದ ಬಂದವೆಂಬ ವಿಚಾರ ಮಹತ್ವದ್ದಲ್ಲ; ಎಲ್ಲಿಯವರೆಗೆ ಟಂಕಸಾಲೆ ಸವರನ್ನುಗಳನ್ನು ಮುಕ್ತವಾಗಿ ಮುದ್ರಣಮಾಡುತ್ತಿದೆಯೋ, ಟಂಕಸಾಲೆಯ ಸ್ಥಾನ ಎಲ್ಲೇ ಇರಲಿ, (ಅಂದರೆ ಭಾರತದಲ್ಲಾಗಲಿ ಅಥವಾ ಇಂಗ್ಲೆಂಡಿನಲ್ಲಾಗಲಿ ಇರಲಿ) ಅಲ್ಲಿಯವರೆಗೆ ಭಾರತದ ಸುವರ್ಣ ಪ್ರಮಿತಿಯು ಸಾಧಿಸಲ್ಪಟ್ಟಂತಾಗುತ್ತಿತ್ತು. ವಾಸ್ತವದಲ್ಲಿ, ಲಂಡನ್ನಿನಿಂದ ಸವರನ್ನುಗಳನ್ನು ಪಡೆಯುವುದು ಭಾರತದಲ್ಲಿ ಅವುಗಳ ಮುದ್ರಣಕ್ಕಿಂತಲೂ ಕಡಿಮೆ ಖರ್ಚಿನದ್ದಾಗಿತ್ತು ಮತ್ತು ಎಲ್ಲರಿಗೂ ಅದು ಸಾಕಷ್ಟು ಪ್ರಮಾಣದಲ್ಲಿ ದೊರೆಯುತ್ತಿತ್ತು.

ಭಾರತ ಸರ್ಕಾರದ ಕಾತರ ಟಂಕಸಾಲೆ ಸ್ಥಳೀಯವಾಗಿ ಸ್ಥಾಪಿಸಲಾಗಲಿಲ್ಲ ಎಂಬುದರ ಬಗ್ಗೆ ಇರಲಿಲ್ಲ. ನಿಜವಾಗಿಯೂ ಟಂಕಸಾಲೆ ತಮಗೆ ಬೇಕೆಂಬ ವಾದವು ಅಷ್ಟು ಪ್ರಬಲವಾಗಿರಲಿಲ್ಲವೆಂದು ಈ ಪ್ರಸ್ತಾವನೆಯನ್ನು ಕೈಬಿಡಲು ಸರ್ಕಾರ ಒಪ್ಪಿತು. ಭಾರತಕ್ಕೆ ಅಂದು ಅತಿ ಹೆಚ್ಚು ತೊಂದರೆ ಇತ್ತ ವಿಷಯವೆಂದರೆ ಹೊಸ ನಾಣ್ಯಪದ್ಧತಿಯಲ್ಲಿ ಹಳೆಯ ನಾಣ್ಯದ (ಅಂದರೆ ಬೆಳ್ಳಿಯ ನಾಣ್ಯದ) ಅಂತಸ್ತು. ಓಲೆಯನ್ನು ಓದಿದಾಗ, ಅದರಲ್ಲಿ ಮೊದಲಿನಿಂದ ಕೊನೆಯವರೆಗೂ ಭಾರತ ಸರ್ಕಾರ ತನ್ನ ಹಳೆಯ ರೂಪಾಯಿಯನ್ನು ಅನಾಣ್ಯೀಕರಣಗೊಳಿಸುವುದಕ್ಕೆ ಮತ್ತು ಅದು ತನ್ನ ನಾಣ್ಯವನ್ನು ಇಂಗ್ಲೆಂಡಿನ ನಾಣ್ಯದೊಂದಿಗೆ ಸಮರೂಪಗೊಳಿಸಲು ತಯಾರಿರಲಿಲ್ಲವೆಂಬುದು ಗೊತ್ತಾಗುತ್ತದೆ. ಮುಂದುವರಿದು, ಆ ಓಲೆಯನ್ನು ಓದಿದಾಗ ನಮಗನಿಸುವುದೇನೆಂದರೆ, ಅದರಲ್ಲಿ ಭಾರತ ತನ್ನ ನಾಣ್ಯವನ್ನು ಫ್ರಾನ್ಸ್ ಹಾಗೂ ಅಮೆರಿಕದ ನಾಣ್ಯದೊಂದಿಗೆ ಸಮರೂಪಗೊಳಿಸಬೇಕೆಂಬ ಶಿಫಾರಸು ಮಾಡಲಾಗಿತ್ತು. ಅದನ್ನು ಭಾರತ ಸರ್ಕಾರ ಅನುಷ್ಠಾನದಲ್ಲಿ ತಂದಿರಲಿಲ್ಲ. ಭಾರತ ಸರ್ಕಾರ ಹೀಗೆ ವ್ಯವಹರಿಸುತ್ತಿದ್ದುದರ ಕಾರಣ, ಇವೆರಡು ದೇಶ (ಅಂದರೆ ಫ್ರಾನ್ಸ್ ಮತ್ತು ಅಮೆರಿಕ)ಗಳ ನಾಣ್ಯಪದ್ಧತಿ ಅದರ ಕೈಗೆ ನಿಲುಕುತ್ತಿರಲಿಲ್ಲ. ಈ ನಿಜವಾದ ಆಂತರಿಕ ಪರಿಸ್ಥಿತಿಯನ್ನು ಭಾರತ ಸರ್ಕಾರ ಅರಿತಿದ್ದುದರಿಂದ, ತನ್ನ ನಾಣ್ಯಪದ್ಧತಿಯ ಬಗೆಗೆ ಅದು ಅಷ್ಟೊಂದು ಉತ್ಸುಕವಾಗಿರಲಿಲ್ಲ. ಹಣದ ನೀತಿಯ ಬಗ್ಗೆ ಫ್ರಾನ್ಸ್ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನಗಳಿಗೆ ಇದ್ದ ದೃಷ್ಟಿಯನ್ನು ಮೆಚ್ಚಿಕೊಂಡಿದ್ದ ಭಾರತವು ತನ್ನ ಹಣದ ಬಗ್ಗೆ ಅಷ್ಟೇನೂ ಉತ್ಸುಕವಾಗಿರಲಿಲ್ಲ. ಇವೆರಡು ದೇಶಗಳ ನಾಣ್ಯಪದ್ಧತಿಯಲ್ಲಿ ಐದು ಫ್ರ್ಯಾಂಕ್‌ನ ನೋಟು ಮತ್ತು ಅಮೆರಿಕೆಯ ಬೆಳ್ಳಿ ಡಾಲರ್ ಇವುಗಳ ಮೌಲ್ಯ ಬಹಳ ಅಸಂಬದ್ಧವಾಗಿತ್ತು. ಪ್ರೊ॥ ಪಿಯರ್‌ಸನ್‌ರಂಥ ಹೆಸರಾಂತ ನಾಣ್ಯತಜ್ಞರಿಗೂ ಸಹ ಇಡೀ ಸಾಂಪ್ರದಾಯಿಕ ನಾಣ್ಯಪದ್ಧತಿಯಲ್ಲಿ ಈ ನಾಣ್ಯಗಳ ಮೌಲ್ಯವನ್ನು ಗುರುತಿಸುವುದು ಅಸಾಧ್ಯವಾಗಿತ್ತು.[೧] ಸುವ್ಯವಸ್ಥಿತವಾದ ಸುವರ್ಣ ಪ್ರಮಿತಿಯಲ್ಲಿ ಬಂಗಾರವೊಂದೇ ನೂರಕ್ಕೆ ನೂರರಷ್ಟು ಮುಕ್ತವಾಗಿ ನಾಣ್ಯದಲ್ಲಿ ಪರಿವರ್ತಿತವಾಗುವ ಲೋಹ ಮತ್ತು ಇದೊಂದು ಪೂರ್ಣ ಶಾಸನಬದ್ಧವಾದ ಹಣದ ಶಕ್ತಿಯುಳ್ಳ ನಾಣ್ಯ. ಇಲ್ಲಿ ಬೆಳ್ಳಿಯ ಪರಿವರ್ತನೆ ಮಿತ ಪ್ರಮಾಣದ್ದಾಗಿರುತ್ತದೆ ಮತ್ತು ಬೆಳ್ಳಿಯ 'ನಿಜ ಮೌಲ್ಯ' ಅದರ ಮುಖಬೆಲೆಗಿಂತ ಕಡಿಮೆಯಾಗಿರುತ್ತದೆ ಹಾಗೂ ಇದು ಮಿತ ಶಾಸನಬದ್ಧ ಪ್ರಮಾಣದ ನಾಣ್ಯವಾಗಿರುತ್ತದೆ. ಆದುದರಿಂದ, ಬಂಗಾರದ ನಾಣ್ಯಗಳನ್ನು 'ಪ್ರಮಾಣಬದ್ಧ' ನಾಣ್ಯವೆಂದು ಮತ್ತು ಬೆಳ್ಳಿ ನಾಣ್ಯಗಳನ್ನು 'ಸಹಾಯಕ' ನಾಣ್ಯಗಳೆಂದು ಕರೆಯಲಾಗುತ್ತದೆ, ಇವೆರಡೂ ಕೂಡಿ ಒಂದು ಆದರ್ಶವಾದ ಏಕಲೋಹ ನಾಣ್ಯಪದ್ಧತಿಯಾಗುತ್ತವೆ ಮತ್ತು ೧೮೧೬ ರಿಂದ ಇಂಗ್ಲೆಂಡ್ ಹೊಂದಿರುವ ಪದ್ಧತಿ ಇಂತಹುದೇ ಆಗಿರುತ್ತದೆ.

ಈ ವಿಷಯವನ್ನು ಹೊಂದಿರುವ ಒಂದು ಯೋಜನೆಯಲ್ಲಿ, ನಾಣ್ಯಪದ್ಧತಿಯ ಮೇಲೆ ಪ್ರಬಂಧವನ್ನು

---

೧. *ಪ್ರಿನ್ಸಿಪಲ್ಸ್ ಆಫ್ ಇಕನಾಮಿಕ್ಸ್*, ಸಂಪುಟ ೧, ಪು. ೫೬೯

ಬರೆಯುವ ಲೇಖಕರು, ಬೆಳ್ಳಿಯ ಡಾಲರ್ ಅಥವಾ ಫ್ರಾಂಕಿನ ಐದರ ನೋಟನ್ನು ಸರಿಹೊಂದಿಸುವುದು ಕಷ್ಟದಾಯಕವೆಂದು ಹೇಳಿದ್ದರು. ಈ ನಾಣ್ಯಗಳ ವಿಲಕ್ಷಣತೆ ಏನೆಂದರೆ ಅವುಗಳ 'ನಿಜಮೌಲ್ಯ' ಮುಖಬೆಲೆಗಿಂತ ಕಡಿಮೆ ಇದ್ದರೂ, ಅವುಗಳು ಅಪರಿವರ್ತಿತವಷ್ಟೆ ಅಲ್ಲ ಮುಕ್ತವಾದ ಶಾಸನಬದ್ಧತೆ ಹಣವೆನಿಸಿವೆ. ಇಂಥ ಅಸಂಬದ್ಧತೆಯನ್ನು ಫ್ರಾನ್ಸ್ ಮತ್ತು ಅಮೆರಿಕದ ನಾಣ್ಯಪದ್ಧತಿಗಳು ಹೊಂದಿರುವುದರಿಂದಲೇ ಸುವರ್ಣ ಪ್ರಮಿತಿಯ ಶಿರೋನಾಮೆಯನ್ನು ಅವುಗಳಿಗೆ ನೀಡಿರುವುದಿಲ್ಲ. ಕುಂಟುವ ಪ್ರಮಿತಿಯೆಂದೇ ಕರೆಯಲ್ಪಡುವ ಈ ನಾಣ್ಯಪದ್ಧತಿಗಳನ್ನು ಕೆಲವರು ಮಾತ್ರ ನಂಬುತ್ತಾರೆ.[೧] ಇವುಗಳಲ್ಲಿ "ಬೆಳ್ಳಿಯ ನಾಣ್ಯ, ಚಿನ್ನದ ನಾಣ್ಯಕ್ಕಿಂತಲೂ ಕಡಿಮೆ ಮೌಲ್ಯ ಹೊಂದಿದ್ದರೂ ಅದು ಚಿನ್ನದ ನಾಣ್ಯದೊಂದಿಗೆ ಕುಂಟುತ್ತಾ ಸಮಸಮವಾಗಿ ನಡೆಯುತ್ತದೆ ಹಾಗೂ ತನಗಿಂತ ಬಲಶಾಲಿ ಜೊತೆಗಾರನನ್ನು (ಅಂದರೆ ಬಂಗಾರವನ್ನು) ಹೊಂದಿರುವುದರಿಂದ ಅದರೊಂದಿಗೆ ಅದು ಸಮತೆಯನ್ನು ಪಡೆಯುತ್ತದೆ.[೨]

ಆದರೆ, ಫ್ರೆಂಚ್ ನಾಣ್ಯಪದ್ಧತಿ ತನ್ನ ಸ್ಥಿರತೆಯ ಬಗ್ಗೆ ಸಂಶಯ ಬರಿಸುವಷ್ಟು ಇಂಗ್ಲಿಷ್ ನಾಣ್ಯಪದ್ಧತಿಗಿಂತ ಭಿನ್ನವಾಗಿತ್ತೇ? ಇವೆರಡು ನಾಣ್ಯಪದ್ಧತಿಗಳ ನಡುವಿನ ಅಂಶಗಳು ಏನೇ ಇರಲಿ, ಅವುಗಳ ಸೂಕ್ಷ್ಮವಾದ ವಿಶ್ಲೇಷಣೆ, ಅವುಗಳು ಮೂಲತಃ ಒಂದೇ ಆಗಿವೆ ಎಂಬುದನ್ನು ತೋರಿಸುತ್ತದೆ. ಒಂದು ವೇಳೆ ಫ್ರೆಂಚ್ ೧೮೦೩ರ ದ್ವಿಲೋಹ ಕಾಯಿದೆ ಹಾಗೂ ೧೮೭೪ರ ಟಂಕಸಾಲೆಯನ್ನು ಮುಚ್ಚುವ ಶಾಸನಗಳನ್ನು, ಹಾಗೆಯೇ ೧೮೧೬ ಇಂಗ್ಲಿಷ್ ಬಂಗಾರ ಪದ್ಧತಿ ಕಾಯಿದೆಯನ್ನು ಬ್ಯಾಂಕು ಸನ್ನದು ಕಾಯಿದೆ ೧೮೪೪ ರೊಂದಿಗೆ ಜೊತೆಯಾಗಿ ಓದಿದರೆ ಹಾಗೂ ಅವುಗಳನ್ನು ಒಂದಕ್ಕೊಂದು ಹೋಲಿಸಿನೋಡಿದರೆ, ನಾವು ಫ್ರೆಂಚ್ ಮತ್ತು ಇಂಗ್ಲಿಷ್ ನಾಣ್ಯಪದ್ಧತಿಗಳ ನಡುವೆ ಸಾಕಷ್ಟು ಭಿನ್ನತೆಗಳನ್ನು ಕಾಣುತ್ತೇವೆಯೋ? ೧೮೭೪ರ ಮುಂಚಿತ ಅವಧಿಯಲ್ಲಿ, ಫ್ರಾನ್ಸಿನಲ್ಲಿ ಬಂಗಾರ ಹಾಗೂ ಬೆಳ್ಳಿಯ ಅನಿರ್ಬಂಧಿತ ಶಾಸನಬದ್ಧ ನಾಣ್ಯಗಳು ಬಳಕೆಯಲ್ಲಿದ್ದವು. ಇದೇ ರೀತಿ, ೧೮೪೪ರ ಮುಂಚಿನ ಅವಧಿಯಲ್ಲಿ ಇಂಗ್ಲೆಂಡಿನಲ್ಲಿ ಬಂಗಾರದ ಸವರನ್ನುಗಳು ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡಿನ ನೋಟುಗಳು ಅನಿಯಮಿತ ಶಾಸನಬದ್ಧ ನಾಣ್ಯಗಳಾಗಿ ಬಳಕೆಯಲ್ಲಿದ್ದವು. ೧೮೪೪ರಲ್ಲಿ ಇಂಗ್ಲೆಂಡ್ ಬ್ಯಾಂಕ್ ನೋಟುಗಳನ್ನು ಹೊರತರುವುದರ ಮೇಲೆ ನಿರ್ಬಂಧ ಹೇರಿತು; ಆದರೆ, ಅವುಗಳ ಶಾಸನಬದ್ಧ ಹಕ್ಕನ್ನು ಕಿತ್ತುಕೊಳ್ಳಲಿಲ್ಲ. ೧೮೪೪ರಲ್ಲಿ ಇಂಗ್ಲೆಂಡ್ ತನ್ನ ಬ್ಯಾಂಕು ನೋಟುಗಳಿಗೆ ಮಾಡಿದುದನ್ನೇ ಫ್ರಾನ್ಸ್ ೧೮೭೪ರಲ್ಲಿ ಕರಾರುವಾಕ್ಕಾಗಿ ಅನುಸರಿಸಿತು. ಇನ್ನೊಂದು ರೀತಿ ಇದನ್ನೇ ಹೇಳುವುದಾದರೆ, ೧೮೭೪ರಲ್ಲಿ ಫ್ರಾನ್ಸ್ ಕಾಯಿದೆಯ ನೆರವಿನಿಂದ ತನ್ನ ಟಂಕಸಾಲೆಗಳನ್ನು ತಾತ್ಕಾಲಿಕವಾಗಿ ಮುಚ್ಚಿಸಿ ತನ್ನ ಬೆಳ್ಳಿಯ ಐದು ಫ್ರ್ಯಾಂಕ್ ನಾಣ್ಯಗಳ ಚಲಾವಣೆಗೆ ಒಂದು ಮಿತಿ ಹೇರಿತು, ಆದರೆ ಅವುಗಳ ಶಾಸನಬದ್ಧತೆಯನ್ನು ಕಸಿದುಕೊಳ್ಳಲಿಲ್ಲ.[೩] ಒಂದು ವೇಳೆ ಫ್ರೆಂಚ್ ಐದು ಫ್ರ್ಯಾಂಕಿನ ನಾಣ್ಯಗಳನ್ನು ಬೆಳ್ಳಿಯ

---

೧. ಇಂಥ ನಂಬಿಕೆಯ ಕೊರತೆಯೇ ಜರ್ಮನಿಯನ್ನು ತನ್ನ ಬೆಳ್ಳಿಯ ನಾಣ್ಯಗಳ ಸಂಪೂರ್ಣ ಶಾಸನಬದ್ಧತೆಯನ್ನು ಅಕ್ಟೋಬರ್ ೧, ೧೯೦೭ರ ಕಾಯಿದೆಯ ಮೂಲಕ ತೆಗೆದುಹಾಕುವಂತೆ ಮಾಡಿತು. ಒಂದು ವೇಳೆ ಒಪ್ಪಂದದ ಕರಾರುಗಳಲ್ಲಿ, ಬೆಳ್ಳಿ ಡಾಲರಿನ ಶಾಸನಬದ್ಧತೆಯನ್ನು ಪ್ರತ್ಯೇಕವಾಗಿ ಕಾಣಿಸದೆ ಇದ್ದಲ್ಲಿ, ಅಮೆರಿಕಾ ಸಂಸ್ಥಾನದ ಬೆಳ್ಳಿ ಡಾಲರು ಸಹ ಶಾಸನಬದ್ಧ ಹಣವೆಂದು ಅಂದುಕೊಳ್ಳಲಾಗುತ್ತಿರಲಿಲ್ಲ" ಎ.ಸಿ. ವ್ಹಿಟೇಕರ್ "ವಿದೇಶೀ ವಿನಿಮಯ" ಎಂಬ ಪುಸ್ತಕದಿಂದ, ೧೯೨೦, ಪುಟಗಳು ೮ ಹಾಗೂ ೪೭೭.

೨. ಸಿ.ಎಫ್. ಡಬ್ಲ್ಯು. ಟಾಸಿಗ್‌ರ "ತತ್ವಗಳು" ಎರಡನೆಯ ಆವೃತ್ತಿ ೧೯೧೮, ಪು. ೨೮೦.

೩. ಲಾರ್ಡ್ ಆಲ್‌ಥೋರ್ಪ್‌ರವರ ಕಾಯಿದೆ, ೧೮೩೩, ಬ್ಯಾಂಕ್ ಆಫ್ ಇಂಗ್ಲೆಂಡಿನ ನೋಟುಗಳನ್ನು ಶಾಸನಬದ್ಧ ಹಣವನ್ನಾಗಿಸಿತು.

ಮೇಲೆ ಮುದ್ರಿಸಿದ ನೋಟುಗಳೆಂದು ಭಾವಿಸಿದರೆ, ಇಂಗ್ಲೆಂಡ್ ಮತ್ತು ಫ್ರಾನ್ಸಿನ ನಾಣ್ಯಪದ್ಧತಿಗಳಲ್ಲಿ, ಒಂದನ್ನು ಸುವರ್ಣ ಪ್ರಮಿತಿ ಎಂದು ಮತ್ತೊಂದನ್ನು ಕುಂಟುತ್ತಿರುವ ಪ್ರಮಿತಿ ಎಂದು ಅರ್ಥಶಾಸ್ತ್ರಜ್ಞರು ಕರೆಯುವಷ್ಟು ಅಂತರವಿದೆಯೇ ಎಂಬುದನ್ನು ಕಂಡುಕೊಳ್ಳುವುದು ನಮಗೆ ಕಷ್ಟವಾಗುತ್ತದೆ. ಒಂದು ವೇಳೆ ಬೆಳ್ಳಿಯ ಫ್ರ್ಯಾಂಕು ಕುಂಟಿದರೆ, ಅದೇ ರೀತಿ ಬ್ಯಾಂಕ್ ಆಫ್ ಇಂಗ್ಲೆಂಡಿನ ನೋಟುಗಳು ಸಹ ಕುಂಟುತ್ತವೆ. ಬೆಳ್ಳಿಯ ಫ್ರ್ಯಾಂಕು ಇಂಗ್ಲೆಂಡಿನ ನೋಟುಗಳಿಗಿಂತ ಹೆಚ್ಚು ಕುಂಟುತ್ತದೆ, ಏಕೆಂದರೆ, ಇದು ನೋಟಿಗಿಂತ ಅಧಿಕ ನೈಜ ಮೌಲ್ಯವನ್ನು ಹೊಂದಿರುತ್ತದೆ. ಈ ವಿಷಯ ಏನೇ ಇರಲಿ, ಒಂದು ವೇಳೆ, ಬ್ಯಾಂಕು ನೋಟುಗಳನ್ನು ಚಿನ್ನಕ್ಕೆ ಪರಿವರ್ತಿಸಬಹುದು, ಆದರೆ ಫ್ರೆಂಚ್ ಐದರ ನಾಣ್ಯಕ್ಕೆ ಇಂಥ ಶಕ್ತಿ ಏಕಿಲ್ಲವೆಂಬ ಪ್ರಶ್ನೆ ಬಂದಾಗ, ಬ್ಯಾಂಕ್ ಆಫ್ ಇಂಗ್ಲೆಂಡಿನ ನೋಟುಗಳನ್ನು ನಂಬಿಕೆಯ ಕಾಗದದ ನಾಣ್ಯಗಳಿಗೆ ಹೋಲಿಸಬೇಕು, ಫ್ರೆಂಚ್ ಬೆಳ್ಳಿಯ ನಾಣ್ಯಗಳಿಗಲ್ಲ ಎಂದು ಉತ್ತರ ನೀಡಬೇಕಾಗುತ್ತದೆ. ಈ ಕಾಗದದ ನೋಟುಗಳು ವಾಸ್ತವದಲ್ಲಿ, ಅಪರಿವರ್ತನೀಯವಾಗಿರುತ್ತವೆ. ಯಾವ ವೇಳೆಯಲ್ಲಾದರೂ, ಬ್ಯಾಂಕ್ ಆಫ್ ಇಂಗ್ಲೆಂಡ್ ತನ್ನ ಹಣ ಚಲಾವಣೆ ವಿಭಾಗದಲ್ಲಿ ಬಂಗಾರದೊಂದಿಗೆ, ಅನಿರೀಕ್ಷಿತವಾದ ನಂಬಿಕೆಯ ಕಾಗದದ ನೋಟುಗಳನ್ನು ಹೊಂದಿರುತ್ತದೆ. ಆದುದರಿಂದ ಇವುಗಳನ್ನು, ಅನಿಯಮಿತವಾಗಿರುವ ಐದರ ಫ್ರ್ಯಾಂಕಿನಂತೆ ಬಂಗಾರಕ್ಕೆ ಪರಿವರ್ತಿಸಲು ಬರುವುದಿಲ್ಲ. ಐದರ ಫ್ರ್ಯಾಂಕಿನಂತೆ ನಂಬಿಕೆಯ ಕಾಗದದ ಹಣ ಸಹ ಅಪರಿವರ್ತನೆಗೆ ಒಳಗಾಗುತ್ತದೆ ಎಂದು ಒಂದುವೇಳೆ ಯಾರಾದರೂ ಸಾಧಿಸಿದರೆ, ಇವೆರಡರ ನಡುವಿನ ಸಾಮ್ಯತೆಯನ್ನು ಇವುಗಳ ಪರಿವರ್ತನೀಯ ಅಥವಾ ಅಪರಿವರ್ತನೀಯ ಲಕ್ಷಣದ ಮೇಲೆ ನಿರ್ಧರಿಸಲು ಬರುವುದಿಲ್ಲವೆನ್ನಬೇಕಾಗುತ್ತದೆ. ಬ್ಯಾಂಕ್ ಆಫ್ ಇಂಗ್ಲೆಂಡಿನ ನಂಬಿಕೆಯ ಕಾಗದದ ನೋಟುಗಳ ಪರಿವರ್ತನೆ ಕೆಲಸಕ್ಕೆ ಬಾರದ್ದಾಗಿದೆ, ಏಕೆಂದರೆ ಅದು ಅವುಗಳ ಮೌಲ್ಯದ ಅಂತಸ್ತನ್ನು ಸುಧಾರಿಸುವುದಿಲ್ಲ. ಆದರೆ, ಐದರ ಫ್ರ್ಯಾಂಕಿನ ವಿಷಯದಲ್ಲಿ ಪರಿವರ್ತನೀಯತೆಯು ಉಪಯೋಗಕಾರಿಯಾಗಿದೆ. ಆದುದರಿಂದ ಇವೆರಡು ನಾಣ್ಯಗಳ ವಿಷಯದಲ್ಲಿ ಅವುಗಳ ಪರಿವರ್ತನೀಯತೆಗಿಂತಲೂ ಮಿತಿಯ ಚಲಾವಣೆಯ ಲಕ್ಷಣ ಅವುಗಳ ಸಾಮ್ಯತೆಯನ್ನು ಹೆಚ್ಚು ಅರ್ಥಗರ್ಭಿತವಾದ ರೀತಿಯಲ್ಲಿ ತೋರಿಸುತ್ತದೆ. ಆದುದರಿಂದ ಫ್ರೆಂಚ್ ಕುಂಟುವ ಪ್ರಮಿತಿ ಹಾಗೂ ಇಂಗ್ಲಿಷ್ ಸುವರ್ಣ ಪ್ರಮಿತಿಗಳು, ನಿಗದಿಪಡಿಸಿದ ನಂಬಿಕೆಯ ಕಾಗದದ ನೋಟುಗಳ ಚಲಾವಣೆಯ ಮಿತಿಯೊಳಗೇ ಇರಬೇಕೆಂಬ ನೀತಿಯನ್ನು ಪ್ರಮುಖ ಲಕ್ಷಣವನ್ನಾಗಿ ಹೊಂದಿರುವ ಒಂದೇ ನಾಣ್ಯ ಸಿದ್ಧಾಂತದ ಎರಡು ಬೇರೆಬೇರೆ ಉದಾಹರಣೆಗಳಾಗಿವೆಯಲ್ಲದೆ ಮತ್ತೇನಲ್ಲ ಎಂದು ಹೇಳಬಹುದು.

ಫ್ರೆಂಚ್ ಮತ್ತು ಇಂಗ್ಲಿಷ್ ಹಣಕಾಸಿನ ಪದ್ಧತಿಗಳು ತಮ್ಮತಮ್ಮ ರಚನೆಯಲ್ಲಿ ಅಷ್ಟೇ ಅಲ್ಲ, ವಿನ್ಯಾಸದಲ್ಲಿಯೂ ಒಂದಾಗಿವೆ. ಲಾರ್ಡ್ ಓವರ್‌ಸ್ಟೋನ್‌ರು ಹಣ ಚಲಾವಣೆಯಲ್ಲಿ ತರುವುದನ್ನು ಮಿತಿಗೊಳಿಸಬೇಕೆಂದು ಇಂಗ್ಲೆಂಡಿನಲ್ಲಿ ಬ್ಯಾಂಕ್ ಸನ್ನದು ಕಾಯಿದೆಯನ್ನು ೧೮೪೪ರಲ್ಲಿ ಜಾರಿಗೊಳಿಸಿದರು. ಇವರ ಉದ್ದೇಶವನ್ನು ಇವರ ವಿರೋಧಿಗಳಾದ ಬ್ಯಾಂಕಿಂಗ್ ಪಂಥದವರು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಇವರ ವಿರೋಧಿಗಳು ತಿಳಿದಂತೆ ಲಾರ್ಡ್ ಓವರ್‌ಸ್ಟೋನರು ನೊಟುಗಳ ಚಲಾವಣೆಯಲ್ಲಿನ ಇಳಿತವನ್ನು ಪ್ರತಿಪಾದಿಸಲಿಲ್ಲ. ಬಂಗಾರವು ಚಲಾವಣೆಯಿಂದ ಮಾಯವಾಗದಂತೆ ತಡೆಹಿಡಿಯುವುದು ಅವರ ಅತಿಹೆಚ್ಚಿನ ಕಾಳಜಿಯಾಗಿತ್ತು. ಅಧಿಕ ಪ್ರಮಾಣದಲ್ಲಿ ಕಾಗದದ ನೋಟುಗಳು ಚಲಾವಣೆಯಲ್ಲಿ ಬಂದರೆ, ಅದು ಬಂಗಾರದ ಚಲಾವಣೆಯನ್ನು ತಡೆಯುತ್ತದೆ ಎಂಬ ವಿಚಾರ ಹೊಂದಿದ್ದ ಅವರು ಬಂಗಾರವನ್ನು ಚಲಾವಣೆಯಲ್ಲಿ ಇಡುವುದಕ್ಕೋಸ್ಕರ ನೋಟುಗಳ ಚಲಾವಣೆಯನ್ನು ಮಿತಗೊಳಿಸಬೇಕೆಂದರು. ಇದೇ ೧೮೪೪ರ ಅವರ ಬ್ಯಾಂಕು ಸನ್ನದು

ಕಾಯಿದೆಯ (೧೮೪೪) ಉದ್ದೇಶವಾಗಿತ್ತು. ಫ್ರಾನ್ಸ್‌ನಲ್ಲಿಯ ಬೆಳ್ಳಿಯನ್ನು ಹೆಚ್ಚಿನ ಮೊತ್ತದಲ್ಲಿ ಚಲಾವಣೆಗೆ ಬರದ ಹಾಗೆ ನೋಡಿಕೊಳ್ಳುವ ಉದ್ದೇಶವೂ ಇದೇ ಆಗಿತ್ತು. ಈಗಾಗಲೇ ಹೇಳಿದಂತೆ ೧೮೭೩ರಲ್ಲಿ ಉಂಟಾದ ಬೆಳ್ಳಿಯ ಮೌಲ್ಯದಲ್ಲಿನ ಇಳಿತದಿಂದಾಗಿ, 'ಬಂಗಾರ' ಚಲಾವಣೆಯಿಂದ ದೂರವಾಗಿ, ಅದು ಕಡಿಮೆ ಮೌಲ್ಯದ ಬೆಳ್ಳಿಯಿಂದ ಬದಲಿಸಲ್ಪಟ್ಟಿತು. ಇದನ್ನು ತಡೆಯಲು, ಫ್ರೆಂಚ್ ಜನ ಲಾರ್ಡ್ ಓವರ್‌ಸ್ಟೋನ್‌ರ ನಿವಾರಣೋಪಾಯವನ್ನು ಸ್ವೀಕರಿಸಿದರು, ಆದುದರಿಂದ, ಅವರ ಬೆಳ್ಳಿನಾಣ್ಯದ ಚಲಾವಣೆಯ ರದ್ಧತಿಯು ಬಂಗಾರವನ್ನು ಚಲಾವಣೆಯಿಂದ ಹೊರಹೋಗದಂತೆ ತಡೆಯಿತು.

ಆದುದರಿಂದ, ಭಾರತ ಸರ್ಕಾರ ಆಲೋಚಿಸಿದ ಮತ್ತು ಫೌಲರ್ ಸಮಿತಿಯಿಂದ ಒಪ್ಪಿಗೆ ಪಡೆದ ಯೋಜನೆ, ಫ್ರೆಂಚ್ ಪದ್ಧತಿಯಂತಿದೆ ಎಂದರೆ ಏನೂ ತಪ್ಪಾಗಲಾರದು. ಮೇಲಾಗಿ, ಇಂಗ್ಲಿಷ್ ನಾಣ್ಯಪದ್ಧತಿಯನ್ನು 'ಒಂದು ಆರೋಗ್ಯಕರ ಹಣಕಾಸಿನ ಕಾಯಿದೆಯ ಲಿಖಿತ ದಾಖಲೆ' ಎಂದು ಜೆವನ್ಸ್ ಅವರು ಹೇಳಿದ್ದನ್ನು ನಾವು ಇಲ್ಲಿ ಮರೆಯುವಂತಿಲ್ಲ.

# ಅಧ್ಯಾಯ ೧೭

# ಸುವರ್ಣ ಪ್ರಮಿತಿಯಿಂದ ಸುವರ್ಣ ವಿನಿಮಯ ಪದ್ಧತಿಗೆ

ಮೌಲ್ಯ ಕಡಿಮೆಯಾಗುತ್ತಿರುವ ರೂಪಾಯಿಯ ಸಮಸ್ಯೆಯನ್ನು ಸಮರ್ಪಕವಾಗಿ ಬಗೆಹರಿಸಲಾಗಿದೆ ಎಂದು ಕೆಲವೊಮ್ಮೆ ಎನಿಸುತ್ತಿತ್ತು. ರೂಪಾಯಿಯ ಮೌಲ್ಯ ಕುಸಿಯುವ ಸಮಸ್ಯೆ ಸುಮಾರು ಕಾಲು ಶತಮಾನಗಳ ಕಾಲದಷ್ಟು ದೀರ್ಘಾವಧಿಯವರೆಗೆ ಕಷ್ಟ ಮತ್ತು ಆತಂಕವನ್ನು ಉಂಟುಮಾಡಿತ್ತು. ಹಿಂದಿನ ಅಧ್ಯಾಯದಲ್ಲಿ ವಿವರಿಸಿದಂಥ ಕ್ರಮದ ಮೂಲಕ ಸಹ ಹಣಮೌಲ್ಯದ ಕುಸಿತದ ಸಮಸ್ಯೆಯನ್ನು ಪೂರ್ಣವಾಗಿ ಪರಿಹರಿಸಲಾಗಲಿಲ್ಲ. ಕೇವಲ ಒಂದು ದೌರ್ಭಾಗ್ಯಕರ ಘಟನೆಯಿಂದಾಗಿ, ಈ ಹಿಂದೆ ಯೋಜಿಸಿದ ಯೋಜನೆಯನ್ನು ಜಾರಿಗೆ ತರಲಾಗಲಿಲ್ಲ. ಆದರೆ ಯೋಜನೆಗೆ ವಿರುದ್ಧವೇ ಆಗಿದ್ದ ಒಂದು ಕರೆನ್ಸಿ ಪದ್ಧತಿಯು ರೂಪುಗೊಂಡಿತು. ಫೌಲರ್ ಸಮಿತಿಯ ಶಿಫಾರಸುಗಳಿಗೆ ಶಾಸನಬದ್ಧ ಮಂಜೂರಾತಿ ಪಡೆದ ಸುಮಾರು ೧೩ ವರ್ಷಗಳ ನಂತರ, ಭಾರತದ ಹಣಕಾಸು ಮತ್ತು ಕರೆನ್ಸಿಗೆ ಸಂಬಂಧಿಸಿದ ಚೇಂಬರ್ಲಿನ್ ಸಮಿತಿ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು.

"೧೮೯೮ರಲ್ಲಿ ಸಮಿತಿಯ ಶಿಫಾರಸುಗಳನ್ನು ಸರ್ಕಾರ ಒಪ್ಪಿಕೊಂಡಿತ್ತು. ಇವುಗಳನ್ನು ಪೂರ್ಣವಾಗಿ ಜಾರಿಗೆ ತರುವ ಉದ್ದೇಶವನ್ನು ಸಹ ಸರ್ಕಾರ ಹೊಂದಿತ್ತು. ಹೀಗಿದ್ದರೂ ಸಮಿತಿ ಕಲ್ಪಿಸಿಕೊಂಡಿದ್ದುದಕ್ಕಿಂತ ಇಂದಿನ ಭಾತದ ಕರೆನ್ಸಿ ಪದ್ಧತಿ ಬಹಳಷ್ಟು ಭಿನ್ನವಾಗಿದೆ. ವಿನಿಮಯವನ್ನು ಕಾಯ್ದುಕೊಳ್ಳುವ ವಿಧಾನ ಮಾತ್ರ ಎ.ಎಮ್. ಲಿಂಡ್ಸೆ ಸಮಿತಿ ಮಾಡಿದ್ದ ಸೂಚನೆಗಳಿಗನುಗುಣವಾಗಿದೆ ಅಷ್ಟೆ."[೧]

ಲಿಂಡ್ಸೆ ಯೋಜನೆಯ ಪ್ರಕಾರ, ಭಾರತದ ಕರೆನ್ಸಿ ಸಂಪೂರ್ಣವಾಗಿ ರೂಪಾಯಿ ಕರೆನ್ಸಿಯಾಗಿರಬೇಕಾಗಿತ್ತು ಎನ್ನುವುದನ್ನು ನೆನಪಿಸಿಕೊಳ್ಳಬೇಕು.[೨] ಸರ್ಕಾರ ಚಿನ್ನಕ್ಕೆ ಪ್ರತಿಯಾಗಿ ಪ್ರತಿ ಸಂದರ್ಭದಲ್ಲಿ ರೂಪಾಯಿಯನ್ನು ಕೊಡುತ್ತಿತ್ತು. ಆದರೆ ವಿದೇಶದಿಂದ ಸಂದಾಯವಾಗುವ ಹಣಕ್ಕೆ ಪ್ರತಿಯಾಗಿ ಮಾತ್ರ ಚಿನ್ನವನ್ನು ಕೊಡುತ್ತಿತ್ತು. ಈ ಯೋಜನೆಯನ್ನು ಎರಡು ಕಚೇರಿಗಳ ಮಾಧ್ಯಮದ ಮೂಲಕ ನಿರ್ವಹಿಸಲಾಗುತ್ತಿತ್ತು. ಒಂದು ಕಚೇರಿ ಲಂಡನ್ನಿನಲ್ಲಿ ಮತ್ತೊಂದು ಭಾರತದಲ್ಲಿತ್ತು. ರೂಪಾಯಿ ಬೇಕಾದಾಗ ಲಂಡನ್ನಿನ ಕಚೇರಿ ಭಾರತದ ಕಚೇರಿಗೆ ಡ್ರಾಫ್ಟ್‌ಗಳನ್ನು ಮಾರಬೇಕಾಗಿತ್ತು. ಹಾಗೆಯೇ ಚಿನ್ನ ಬೇಕಾದಾಗ, ಭಾರತದ ಕಚೇರಿ, ಲಂಡನ್ನಿನ ಕಚೇರಿಗೆ ಡ್ರಾಫ್ಟ್‌ಗಳನ್ನು ಮಾರಬೇಕಾಗಿತ್ತು. ವಿಸ್ಮಯದ ಸಂಗತಿಯೆಂದರೆ, ಭಾರತದಲ್ಲಿ ಈಗ ಪ್ರಚಲಿತವಿರುವ ಪದ್ಧತಿ ಸಹ ಇದೇ ಆಗಿದೆ. ಲಿಂಡ್ಸೆಯ ಸೂಚನೆಗಳನ್ನು ಸರ್ಕಾರ ೧೮೯೮ರಲ್ಲಿ ತಿರಸ್ಕರಿಸಿತು ಎನ್ನುವುದನ್ನು ನೆನಪಿನಲ್ಲಿಡಬೇಕು. ಭಾರತ ಸರ್ಕಾರ ಎರಡು ನಿಧಿಗಳನ್ನು ಸೃಷ್ಟಿಸಿಕೊಂಡಿತ್ತು. ಒಂದು ಚಿನ್ನದ ನಿಧಿ, ಮತ್ತೊಂದು ರೂಪಾಯಿಯದು. ಈ ನಿಧಿಗಳನ್ನು ನಗದು ಶಿಲ್ಕುಗಳು, ಕಾಗದದ ಕರೆನ್ಸಿ ಮತ್ತು ಸುವರ್ಣ

---

೧. ರಿಪೋರ್ಟ್ ಪಿ.ಪಿ.ಸಿ.ಡಿ. ೧೯೧೩ ರ ೭೦೬೮ ಪು. ೧೩

೨. ಅಧ್ಯಾಯ ೪ನ್ನು ನೋಡಿ

ಪ್ರಮಿತಿ ನಿಧಿಗಳಿಂದ ರೂಪುಗೊಳಿಸಲಾಗಿತ್ತು. ಕರೆನ್ಸಿ ಪದ್ಧತಿಯ ಸ್ವಭಾವಕ್ಕನುಗುಣವಾಗಿ ಪ್ರತಿಯೊಂದು ನಿಧಿಯೂ ಸಂಯುಕ್ತ ಸ್ವಭಾವದ್ದಾಗಿದ್ದವು. ರೆವಿನ್ಯೂ ಸಂದಾಯಗಳಿಂದ ಭರ್ತಿಯಾಗುತ್ತಿದ್ದ ನಗದು ಶಿಲ್ಕುಗಳು, ರೂಪಾಯಿ ಮತ್ತು ಸವರನ್‌ಗಳ ಮೂಲಕವೂ ಭರ್ತಿಯಾಗುತ್ತಿದ್ದವು. ಇವೆರಡೂ ಶಾಸನಬದ್ಧ ಹಣವಾಗಿದ್ದವು. ನೋಟುಗಳನ್ನು ಇವೆರಡರ ಆಧಾರದ ಮೇಲೂ ನೀಡಲಾಗುತ್ತಿತ್ತು. ಕಾಗದದ ಕರೆನ್ಸಿ ರಿಸರ್ವ್‌ಅನ್ನು ಭಾಗಶಃ ಚಿನ್ನದಲ್ಲಿ ಮತ್ತು ಭಾಗಶಃ ರೂಪಾಯಿಗಳಲ್ಲಿ ಇಟ್ಟುಕೊಳ್ಳಲಾಗುತ್ತಿತ್ತು.[೧] ಸರ್ಕಾರ ತನ್ನ ಹಣಕಾಸು ವ್ಯವಹಾರಕ್ಕೆ ಅಗತ್ಯವಾದ ಹಣವನ್ನು ರೂಪಾಯಿ ಮತ್ತು ಸವರನ್‌ಗಳ ಮೇಲೆ ಒಂದು ನಿರ್ದಿಷ್ಟ ಹಂಚಿಕೆ ಕ್ರಮದ ಮೂಲಕ ಪಡೆದುಕೊಳ್ಳುತ್ತಿತ್ತು.[೨] ಈ ಕ್ರಮವನ್ನು "ವರ್ಗಾವಣೆಗಳು" ಎಂದು ಕರೆಯಲಾಗುತ್ತಿತ್ತು. ಲಿಂಡ್ಸೆ ರೂಪಿಸಿದ ಕ್ರಮದಲ್ಲಿಯೇ ಈ ನಿಧಿಗಳನ್ನೂ ಶೇಖರಿಸಲಾಗಿತ್ತು. ಸರ್ಕಾರದ ಶಿಲ್ಕುಗಳು ಅದರ ಖಜಾನೆಗೆ ಸೇರಿದ ಹಣವಾದುದರಿಂದ, ಅದನ್ನು ಭಾರತದಲ್ಲಿ, ಭಾರತ ಸರ್ಕಾರದ ಬಳಿ ಮತ್ತು ಲಂಡನ್ನಿನಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಬಳಿ ಇಡಲಾಗುತ್ತಿತ್ತು. ಲಂಡನ್ನಿನ ಸೆಕ್ರೆಟರಿ ಆಫ್ ಸ್ಟೇಟ್ ಬಳಿ ಇದ್ದ ನಿಧಿ ಚಿನ್ನದಲ್ಲಿದ್ದು, ಭಾರತ ಸರ್ಕಾರದ ನಿಧಿ ಬೆಳ್ಳಿಯಲ್ಲಿತ್ತು. ಸುವರ್ಣ ಪ್ರಮಿತಿ ನಿಧಿ, ನಗದು ಶಿಲ್ಕಿನಂತೆ ಕಾನೂನುಬದ್ಧವಾದ ರಿಸರ್ವ್ ಅಲ್ಲ. ಹೀಗಾಗಿ ಅದು ಎಲ್ಲಿರಬೇಕು ಎನ್ನುವುದರ ತೀರ್ಮಾನ ಆಡಳಿತಾಂಗಕ್ಕೇ ಸಂಪೂರ್ಣವಾಗಿ ಸೇರಿದ್ದು. ಹೀಗಾಗಿ ನಿಧಿಯ ಚಿನ್ನದ ಭಾಗ ಲಂಡನ್ನಿನ ಸೆಕ್ರೆಟರಿ ಆಫ್ ಸ್ಟೇಟ್ ಬಳಿ ಮತ್ತು ರೂಪಾಯಿಯ ಭಾಗ ಭಾರತದ ಸರ್ಕಾರದ ಬಳಿ ಇರಬೇಕೆಂಬ ಏರ್ಪಾಟು ಆಗಿತ್ತು. ಕರೆನ್ಸಿ ಬದಲಾವಣೆಗಳಿಗೆ ಸುಲಭವಾಗಿ ಒಳಪಡಿಸಲಾಗದಿದ್ದ ಒಂದೇ ಒಂದು ರಿಸರ್ವ್ ಎಂದರೆ ಪೇಪರ್ ಕರೆನ್ಸಿ ರಿಸರ್ವ್. ಏಕೆಂದರೆ ಅದು ಎಲ್ಲಿರಬೇಕು ಮತ್ತು ಹೇಗೆ ವಿತರಣೆಯಾಗಬೇಕು ಎನ್ನುವುದು ಕಾನೂನಿನಿಂದ ನಿರ್ಣೀತವಾಗಿತ್ತು. ಸ್ಟೇಟ್ ಸೆಕ್ರೆಟರಿಯವರಿಗೆ ಸಲ್ಲಿಸಲ್ಪಟ್ಟ ಚಿನ್ನದ ಮೇಲೆ ನೋಟುಗಳನ್ನು ನೀಡುವ ಅಧಿಕಾರವನ್ನು ತಾತ್ಕಾಲಿಕವಾಗಿ ನೀಡಿದ್ದ ೧೮೯೮ರ ೨ನೇ ಕಾಯಿದೆಯನ್ನು ಸ್ಥಿರೀಕರಿಸುವುದರ ಮೂಲಕ ಚಿನ್ನದ ನಿಧಿಯನ್ನು ಕಾಯ್ದಿಡುವ ಸ್ಥಳವನ್ನು ಬದಲಾಯಿಸುವ ಅಧಿಕಾರವನ್ನು ಸರ್ಕಾರವು ಪಡೆದುಕೊಂಡಿತು. ಹೀಗಾಗಿ ಸೆಕ್ರೆಟರಿ ಆಫ್ ಸ್ಟೇಟ್ ಮತ್ತು ಭಾರತ ಸರ್ಕಾರಗಳು, ಹೊಸ ಕರೆನ್ಸಿ ನೀಡಿಕೆಯನ್ವಯ, ಎರಡು ರೀತಿಯ ರಿಸರ್ವ್‌ಗಳನ್ನು ಹೊಂದಿರುವಂತಾಯಿತು. ಒಂದು ಚಿನ್ನದ ರೂಪದಲ್ಲಿರುವ ರಿಸರ್ವ್, ಮತ್ತೊಂದು ರೂಪಾಯಿಯದು. ಚಿನ್ನದ ರಿಸರ್ವ್ ಸೆಕ್ರೆಟರಿ ಆಫ್ ಸ್ಟೇಟ್ ಬಳಿ ಮತ್ತು ರೂಪಾಯಿಯ ರಿಸರ್ವ್ ಭಾರತದ ಸರ್ಕಾರದ ಬಳಿ ಇರುವ ವ್ಯವಸ್ಥೆಯಾಯಿತು. ಆದರೆ ಪ್ರಸ್ತುತದ ವ್ಯವಸ್ಥೆ ಲಿಂಡ್ಸೆ ಸೂಚಿಸಿದ ವ್ಯವಸ್ಥೆಯೊಡನೆ ನಿಧಿಗಳನ್ನು ಹೊಂದಿರುವುದರ ಬಗ್ಗೆ ಮತ್ತು ಅದು ಎಲ್ಲಿರಬೇಕು ಎಂಬವುಗಳ ಬಗ್ಗೆ ಮಾತ್ರ ಸಾಮ್ಯವನ್ನು ಹೊಂದಿರಲಿಲ್ಲ. ಜೊತೆಗೆ ಈ ನಿಧಿಗಳನ್ನು ಹೀಗೆ ಉಪಯೋಗಿಸಬೇಕು ಎನ್ನುವುದರವರೆಗೆ ಅದು ವಿಸ್ತರಿಸಿತ್ತು. ಉದಾಹರಣೆಗೆ, ಲಿಂಡ್ಸೆ ಸೂಚಿಸಿದಂತೆ, ಭಾರತದ ರೂಪಾಯಿಯ ಅಗತ್ಯಬಿದ್ದರೆ, ಸೆಕ್ರೆಟರಿ ಆಫ್ ಸ್ಟೇಟ್ "ಕೌನ್ಸಿಲ್ ಆಫ್ ಬಿಲ್ಸ್" ಗಳನ್ನು ಮಾರಾಟಮಾಡುತ್ತಿದ್ದ. ಇದನ್ನು ಭಾರತ ಸರ್ಕಾರದ ಟ್ರೆಜರಿಗಳಲ್ಲಿ ರೂಪಾಯಿಗೆ ಪರಿವರ್ತಿಸಿಕೊಳ್ಳಬಹುದಿತ್ತು. ಈ ಮೂಲಕ ಭಾರತದಲ್ಲಿ ರೂಪಾಯಿ

---

೧. ಆ ದಿನದಿಂದ ರೂಪಾಯಿ ಶಾಖೆಯನ್ನು ರದ್ದು ಮಾಡಲಾಗಿದೆ. ಇದನ್ನು ಚೇಂಬರ್ಲಿನ್ ಸಮಿತಿಯ ಶಿಫಾರಸಿನ ಮೇಲೆ ಮಾಡಲಾಯಿತು.

೨. ಇದಲ್ಲದೆ ಒಂದು ಪಕ್ಷ ರೂಪಾಯಿ ಕಡಿಮೆ ಬಿದ್ದರೆ ಕಾಗದದ ಕರೆನ್ಸಿ ರಿಸರ್ವ್‌ನಲ್ಲಿರುವ ಚಿನ್ನವನ್ನು ರೂಪಾಯಿಗೆ ಪರಿವರ್ತಿಸುವ ಅಧಿಕಾರವು ಸರ್ಕಾರಕ್ಕೆ ಇತ್ತು.

ಲಭ್ಯವಾಗುತ್ತಿತ್ತು. ಚಿನ್ನ ಬೇಕಾಗಿದ್ದರೆ ಭಾರತ ಸರ್ಕಾರ "ರಿವರ್ಸ್ ಕೌನ್ಸಿಲ್"ಗಳನ್ನು ಮಾರಾಟ ಮಾಡಬಹುದಿತ್ತು. ಇವುಗಳನ್ನು ಸೆಕ್ರೆಟರಿ ಆಫ್ ಸ್ಟೇಟ್ ಮಾನ್ಯಮಾಡುತ್ತಿದ್ದರು. ಇದರಿಂದ ಭಾರತ ಸರ್ಕಾರಕ್ಕೆ ವಿದೇಶೀ ಪಾವತಿಗಳಿಗಾಗಿ ಚಿನ್ನ ಲಭ್ಯವಾಗುತ್ತಿತ್ತು. "ಕೌನ್ಸಿಲ್ ಬಿಲ್"ಗಳು ಮತ್ತು "ರಿವರ್ಸ್ ಬಿಲ್"ಗಳ ಮಾರಾಟದ ಉದ್ದೇಶವನ್ನು ಅರ್ಥಮಾಡಿಕೊಳ್ಳಬೇಕು. ಇದು ಫೌಲರ್ ಸಮಿತಿ ಅಪೇಕ್ಷಿಸಿದ ವಿಷಯವನ್ನು ಲಿಂಡ್ಸೆ ಅಪೇಕ್ಷಿಸಿದ ಕ್ರಮಕ್ಕೆ ಪರಿವರ್ತಿಸುವುದಾಗಿತ್ತು. ಏಕೆಂದರೆ, ಇಲ್ಲಿನ ಉದ್ದೇಶ ಫೌಲರ್ ಸಮಿತಿಯು ಅಪೇಕ್ಷಿಸಿದಂತೆ, ಭಾರತದಲ್ಲಿ ಪ್ರಚಲಿತವಿದ್ದ ಚಿನ್ನದ ಪ್ರಮಿತಿ ಹಾಗೂ ಚಿನ್ನದ ನಾಣ್ಯಗಳ ಪದ್ಧತಿಯ ಬದಲಿಗೆ ಚಿನ್ನದ ನಾಣ್ಯದ ಚಲಾವಣೆಯಿಲ್ಲದೆ ಚಿನ್ನದ ಪ್ರಮಿತಿಯನ್ನು ಜಾರಿಗೆ ತರುವುದಾಗಿತ್ತು.

ಭಾರತ ಸರ್ಕಾರ ಮೂಲತಃ ಉದ್ದೇಶಿಸಿದ್ದ ಕ್ರಮದ ಬದಲಿಗೆ ಜಾರಿಗೆ ಬಂದ ಈ ಪದ್ಧತಿಯನ್ನು ಸುವರ್ಣ ವಿನಿಮಯ ಪ್ರಮಿತಿ ಎಂದು ಹೆಸರಿಸಲಾಗಿತ್ತು. ಈ ಹೆಸರು ಏನೇ ಇರಲಿ, ೧೮೯೮ರಲ್ಲಿ ಭಾರತ ಸರ್ಕಾರ ಉದ್ದೇಶಿಸಿದ್ದ ಪ್ರಮಿತಿ ಇದಾಗಿರಲಿಲ್ಲ. ಈ ರೀತಿಯ ಬದಲಾವಣೆಗೆ ಕಾರಣಗಳೇನು ಎನ್ನುವುದನ್ನು ನಾವು ಬೇರೆ ಕಡೆ ವಿಶ್ಲೇಷಿಸೋಣ. ಇಲ್ಲಿ ನಮಗೆ ಪ್ರಸ್ತುತ ಬೇಕಾದ ಅಂಶವೆಂದರೆ ಸುವರ್ಣ ವಿನಿಮಯ ಪ್ರಮಿತಿಯನ್ನು ಜಾರಿಗೆ ತರುವುದು ಸರ್ಕಾರದ ಪ್ರಾರಂಭಿಕ ಉದ್ದೇಶವಾಗಿರಲೇ ಇಲ್ಲ ಎನ್ನುವುದನ್ನು ಗಮನಿಸಿದರೆ ಸಾಕು. ವಾಸ್ತವವಾಗಿ ಸರ್ಕಾರ ಪ್ರಾರಂಭದಲ್ಲಿ ಯೋಚಿಸಿದ್ದು ನಿಜವಾದ ಸುವರ್ಣ ಪ್ರಮಿತಿಯನ್ನು ಜಾರಿಗೆ ತರಬೇಕೆಂಬುದು. ಆದರೆ ಈ ವ್ಯವಸ್ಥೆಯನ್ನು ರೂಪಿಸಿದವರು ಇದನ್ನು ಪೂರ್ತಿಯಾಗಿ ಅರ್ಥಮಾಡಿಕೊಳ್ಳಲಿಲ್ಲ. ಸರ್ಕಾರದ ಉದ್ದೇಶವಿದ್ದುದು ೧೮೪೪ರ ಬ್ಯಾಂಕ್ ಚಾರ್ಟರ್ ಅಧಿನಿಯಮಗಳಿಗನುಗುಣವಾದ ತತ್ವವನ್ನು ಅನುಸರಿಸುವುದಾಗಿತ್ತು ಎಂಬುದು ಗಮನಾರ್ಹ.

ಹೊಸ ಪದ್ಧತಿಯ ಬಗ್ಗೆ ನಾವು ಏನು ಹೇಳಬಹುದು? ಆದರ್ಶಯುತವಾದ ಚಿನ್ನದ ಕರೆನ್ಸಿಯನ್ನುಳ್ಳ ಸುವರ್ಣ ಪ್ರಮಿತಿಯನ್ನು ಕೈಬಿಟ್ಟುದುದಕ್ಕೆ ಚೇಂಬರ್ಲಿನ್ ಸಮಿತಿ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತು.[೧]:–

"ಈ ಬದಲಾವಣೆಯನ್ನು ಉಂಟುಮಾಡಲಾಗಿದೆ ಎಂದ ಮಾತ್ರಕ್ಕೆ, ಪ್ರಸ್ತುತದ ಪದ್ಧತಿಯನ್ನಾಗಲೀ ಅಥವಾ ಈ ಕ್ರಮವನ್ನಾಗಲೀ ಖಂಡಿಸುವುದಿಲ್ಲ........".

೧೮೭೮ರಲ್ಲಿ ಭಾರತ ಸರ್ಕಾರ ಯೋಜಿಸಿದ್ದು ಮತ್ತು ೧೮೯೮ರಲ್ಲಿ ಸಮಿತಿ ಟೀಕಿಸಿದ್ದು ಇದೇ ಪದ್ಧತಿಯನ್ನಲ್ಲವೇ? ೧೮೯೮ರಲ್ಲಿ ಯೋಜನೆಯ ವಿರುದ್ಧ ಸಮಿತಿ ಮಂಡಿಸಿದ ವಾದದಲ್ಲಿ ಅಷ್ಟು ತೂಕ ಇರಲಿಲ್ಲ ಎನ್ನುವುದು ನಿಜ.[೨] ಆದರೆ ಯೋಜನೆಯೂ ಸಹ ದೋಷಮುಕ್ತವಾಗಿರಲಿಲ್ಲ. ಸುವರ್ಣ ಪ್ರಮಿತಿಯನ್ನು ಜಾರಿಗೊಳಿಸಿದರೆ ಅದು ಹಣದ ಪ್ರಮಾಣದ ಮೇಲೆ ಮಿತಿಯನ್ನೊಡ್ಡುತ್ತದೆ ಎನ್ನುವ ಅಂಶವನ್ನು ಗಮನಿಸಲೇಬೇಕು. ೧೮೭೮ರ ಯೋಜನೆ ಈ ಅಂಶವನ್ನು ಮನನ ಮಾಡಿರಲೇ ಇಲ್ಲ. ಹಣದ ಪ್ರಮಾಣದ ಮೇಲೆ ಯಾವುದೇ ಮಿತಿಯನ್ನೊಡ್ಡುವುದರ ಬದಲಿಗೆ ಟಂಕಸಾಲೆಗಳು ಮುಕ್ತವಾಗಿ ಬೆಳ್ಳಿಯ ನಾಣ್ಯಗಳನ್ನು ಮಾಡುವುದಕ್ಕೆ ಅದು ಅವಕಾಶ ಕೊಡುತ್ತಿತ್ತು. ಆದರೆ ಆ ಯೋಜನೆಯಲ್ಲಿ ಒಂದು ಅಂಶ ಕುತೂಹಲಕರವಾಗಿತ್ತು. ಅದೇಂದರೆ, ರೂಪಾಯಿಯ ಚಿನ್ನದ ಆಂತರಿಕ ಬೆಲೆಯನ್ನು, ಅದಕ್ಕೆ ಕೊಟ್ಟಿರುವ ಚಿನ್ನದ ಬೆಲೆಗೆ ಸಮಾನ ಮಾಡುವ, ಟಂಕಸಾಲೆ ಸುಂಕವನ್ನುಳ್ಳ ವ್ಯವಸ್ಥೆ. ಆದರೆ ರೂಪಾಯಿ ನಾಣ್ಯಗಳನ್ನು ಮುದ್ರಿಸಿಕೊಳ್ಳುವುದನ್ನು ಮಿತಿಗೊಳಿಸುವ ದೃಷ್ಟಿಯಿಂದ ಈ ವ್ಯವಸ್ಥೆ ವ್ಯರ್ಥವಾಗಿತ್ತು. ರೂಪಾಯಿಯನ್ನು ಮುದ್ರಿಸುವುದಕ್ಕೆ ಶುಲ್ಕವನ್ನು

---

೧. ವರದಿ. ಪ್ಯಾರಾ ೪೬

೨. ಅಧ್ಯಾಯ ೪

ಗೊತ್ತುಮಾಡುವುದಷ್ಟೇ, ರೂಪಾಯಿಯ ಮುದ್ರಣವನ್ನು ಮಿತಿಗೊಳಿಸುವುದಕ್ಕೆ ಸಾಕಾಗಿರಲಿಲ್ಲ. ಏಕೆಂದರೆ ಈ ಕ್ರಿಯೆ, ರೂಪಾಯಿಗೆ ಸರ್ಕಾರ ಗೊತ್ತುಮಾಡಿದ್ದ ಬೆಳ್ಳಿಯ ಬೆಲೆ, ಮತ್ತು ಮಾರುಕಟ್ಟೆಯಲ್ಲಿ ರೂಪಾಯಿಗೆ ಇದ್ದ ಬೆಳ್ಳಿಯ ಬೆಲೆ ಇವುಗಳ ನಡುವಣ ಅಂತರ ಮತ್ತು ರೂಪಾಯಿ ಮುದ್ರಣಕ್ಕೆ ಗೊತ್ತುಮಾಡಿದ್ದ ಶುಲ್ಕ, ಇವೆರಡರ ನಡುವಣ ವ್ಯತ್ಯಾಸವನ್ನು ಹೆಚ್ಚಾಗಿ ಅವಲಂಬಿಸುತ್ತಿತ್ತು. ಈ ವ್ಯತ್ಯಾಸಕ್ಕಿಂತ ಶುಲ್ಕವು ಕಡಿಮೆ ಇದ್ದರೆ, ರೂಪಾಯಿಯನ್ನು ಹೆಚ್ಚುಹೆಚ್ಚಾಗಿ ಮುದ್ರಿಸಿಕೊಳ್ಳುವುದಕ್ಕೆ ಒತ್ತಾಸೆಕೊಡುತ್ತಿತ್ತು. ಈ ಕ್ರಿಯೆ ಇವೆರಡರ ನಡುವಣ ವ್ಯತ್ಯಾಸ ಅಳಿಸಿಹೋಗುವವರೆಗೂ ಮುಂದುವರೆಯುತ್ತಿತ್ತು. ಈ ದೃಷ್ಟಿಯಿಂದ ಪ್ರಸ್ತುತ ಯೋಜನೆ ೧೮೭೬ರ ಸುವರ್ಣ ಪ್ರಮಿತಿ ಅಧಿನಿಯಮದ ಮರುರೂಪವೇ ಆಗಿತ್ತು ಎಂದು ಹೇಳಬಹುದು. ೧೮೭೪ರ ಭಾರತ ಸರ್ಕಾರದ ಯೋಜನೆಯಂತೆಯೇ ಆ ಮಸೂದೆ, ಸುವರ್ಣ ಪ್ರಮಿತಿಯನ್ನು ಜಾರಿಗೆ ತರುತ್ತೇನೆಂದು ಭಾವಿಸುತ್ತಿದ್ದರೂ, ಟಂಕಸಾಲೆಯನ್ನು ಮುಕ್ತವಾಗಿ ತೆರೆದಿಡುವ ವ್ಯವಸ್ಥೆಗೆ ಎಡೆಮಾಡಿಕೊಡುತ್ತಿತ್ತು. ಆದರೆ ಬೆಳ್ಳಿಯನ್ನು ಮುಕ್ತವಾಗಿ ಟಂಕಸಾಲೆಯಲ್ಲಿ ರೂಪಾಯಿಯಾಗಿ ಮುದ್ರಿಸುವುದಕ್ಕೆ ಈ ವ್ಯವಸ್ಥೆ ಅವಕಾಶ ಕೊಡುತ್ತಿರಲಿಲ್ಲ. ಈ ಮಸೂದೆಯ ವಿಧಿಗಳು ಎಷ್ಟು ಮೂರ್ಖವಾದದ್ದು ಎನ್ನುವುದು ಸಾರ್ವತ್ರಿಕವಾಗಿ ತಿಳಿದಿರಲಿಲ್ಲ.[೧] ಮುಕ್ತವಾಗಿ ಬೆಳ್ಳಿಯನ್ನು ಹಣವಾಗಿ ಮುದ್ರಿಸುವ, ಏಕಲೋಹ ಪ್ರಮಿತಿಯ ಆದರ್ಶವ್ಯವಸ್ಥೆಗೆ ಇದು ಅವಕಾಶವನ್ನೇ ಕೊಟ್ಟಿರಲಿಲ್ಲ. ಇಂಗ್ಲೆಂಡಿಗಾದರೆ, ಅದೃಷ್ಟವಶಾತ್ ಟಂಕಸಾಲೆಗೆ ತರುವ ಎಲ್ಲಾ ಬೆಳ್ಳಿಯನ್ನೂ ನಾಣ್ಯವಾಗಿ ಮುದ್ರಿಸುವಂತೆ ರಾಯಲ್ ಪ್ರೊಕ್ಲಮೇಷನ್, ಟಂಕಸಾಲೆಗೆ ಅತ್ಯುನ್ನತಾಧಿಕಾರವನ್ನು ಕೊಟ್ಟಿರಲಿಲ್ಲ. ಇಲ್ಲದಿದ್ದ ಪಕ್ಷದಲ್ಲಿ ಸುವರ್ಣ ಪ್ರಮಿತಿ ಕೆಲಸ ಮಾಡುವುದೇ ದುಃಸಾಧ್ಯವಾಗಿಬಿಡುತ್ತಿತ್ತು.[೨] ೧೮೭೬ರ ಮಸೂದೆ ಕೊನೆಯ ಪಕ್ಷ ಒಂದು ಎಚ್ಚರಿಕೆಯನ್ನು ವಹಿಸಿತ್ತು. ಅದೆಂದರೆ, ಬೆಳ್ಳಿಗೆ ಇದ್ದ ಕಾನೂನುಬದ್ಧ ಹಕ್ಕಿಗೆ ಮಿತಿಯನ್ನೊಡ್ಡಿದ್ದುದು. ಭಾರತ ಸರ್ಕಾರದ ಯೋಜನೆಯ ಪ್ರಕಾರ, ಬೆಳ್ಳಿಯಿಂದ ಮುಕ್ತವಾಗಿ ನಾಣ್ಯವನ್ನು ಟಂಕಿಸಬಹುದಾಗಿದ್ದುದಷ್ಟೇ ಅಲ್ಲದೆ, ಬೆಳ್ಳಿಗೆ ಪೂರ್ಣವಾದ ಕಾನೂನುಬದ್ಧತೆಯನ್ನು ಸಹ ಕೊಡಲಾಗಿತ್ತು. ಈ ದೃಷ್ಟಿಯಿಂದ, ಯೋಜನೆ, ರೂಪಾಯಿಯ ಪ್ರಮಾಣವನ್ನು ನಿಯಂತ್ರಿಸುವುದಕ್ಕೆ ಶಕ್ತವಾಗಿಲ್ಲದಿದ್ದುದಷ್ಟೇ ಅಲ್ಲದೆ, ಅದರ ದೃಷ್ಟಿಯಲ್ಲಿದ್ದ ಸುವರ್ಣ ಪ್ರಮಿತಿಗೆ ಅಧೀನವಾದ ಯೋಜನೆಯಾಗಿತ್ತು.

೧೮೭೪ರ ಯೋಜನೆ ಮತ್ತು ಭಾರತದಲ್ಲಿ ಜಾರಿಯಲ್ಲಿದ್ದ ಯೋಜನೆಗಳ ನಡುವಣ ಏಕೈಕ ವ್ಯತ್ಯಾಸವೆಂದರೆ, ಮೊದಲನೆಯದಲ್ಲಿ ಸಾರ್ವಜನಿಕರಿಗೆ ಹಣವನ್ನು ಟಂಕಸಾಲೆಯಿಂದ ಟಂಕಿಸಿಕೊಳ್ಳುವುದಕ್ಕೆ ಅವಕಾಶವಿದ್ದರೆ, ಎರಡನೆಯದಲ್ಲಿ ಇದು ಕೇವಲ ಸರ್ಕಾರಕ್ಕೆ ಮಾತ್ರ ಸೇರಿದ ಹಕ್ಕಾಗಿತ್ತು.

ಅಂದರೆ ಒಂದರಲ್ಲಿ ಸಾರ್ವಜನಿಕರ ಪರವಾಗಿ ರೂಪಾಯಿಯನ್ನು ಟಂಕಿಸಬಹುದಾಗಿದ್ದರೆ, ಇನ್ನೊಂದರಲ್ಲಿ ಸರ್ಕಾರದ ಪರವಾಗಿ ರೂಪಾಯಿಯನ್ನು ಟಂಕಿಸಬಹುದಾಗಿತ್ತು ಅಷ್ಟೇ, ೧೮೭೪ರಲ್ಲಿ ಟಂಕಸಾಲೆಯನ್ನು ಸಾರ್ವಜನಿಕರಿಗೆ ರದ್ದು ಮಾಡಬೇಕೆಂಬುದನ್ನು ಯೋಚಿಸಿರಲಿಲ್ಲವೆಂದಲ್ಲ. ಭಾರತ ಸರ್ಕಾರ ರೂಪಾಯಿಯನ್ನು ಟಂಕಿಸುವ ಅಧಿಕಾರವನ್ನು ತಾನೇ ತೆಗೆದುಕೊಳ್ಳುವುದರ ವಾಸ್ತವತೆಯನ್ನು

---

೧. ಆರ್.ಜಿ. ಹಾಟ್ರೆ ಅವರ "ಕರೆನ್ಸಿ ಅಂಡ್ ಕ್ರೆಡಿಟ್" ೧೯೧೯, ಪುಟಗಳು ೩೦೨–೩ ನೋಡಿ.

೨. ೧೮೯೮ರಲ್ಲಿ ನೇಮಕವಾದ, ಲಾರ್ಡ್ಸ್ ಕಮಿಟಿ ಆನ್ ಕ್ಯಾಷ್ ಪೇಮೆಂಟ್ಸ್‌ನ ಮುಂದೆ ಹೇಳಿಕೆ ನೀಡಿದ ಕೆಲವರು, ೧೮೯೯ರ ಮಸೂದೆಯ ಬೆಳ್ಳಿಯ ನಿಬಂಧನೆಗಳ ಬಗ್ಗೆ ಸಂಶಯವನ್ನು ವ್ಯಕ್ತಪಡಿಸಿದರು. ಅವರ ಪ್ರಕಾರ, ಇಂಗ್ಲೆಂಡಿನಲ್ಲಿ ಸುವರ್ಣ ಪ್ರಮಿತಿಯನ್ನು ಸ್ಥಾಪಿಸುವುದಕ್ಕೆ ನಗದು ಪಾವತಿಗಳು ಅಗತ್ಯವಿದ್ದವೇ ಎನ್ನುವುದು ಪ್ರಶ್ನಾರ್ಹವಾಗಿತ್ತು. ಅದರಲ್ಲೂ ಫ್ಲೇಚರ್ ಮತ್ತು ಮುಷೆಟ್‌ರವರು ಸಮಿತಿಯ ಮುಂದೆ ನೀಡಿದ ಹೇಳಿಕೆ ಗಮನಾರ್ಹವಾದದು.

ಕೆಲವು ಮುಖ್ಯ ಕಾರಣಗಳಿಗಾಗಿ ಕೈಬಿಟ್ಟಿತ್ತು. ಆಗಿನ ಸರ್ಕಾರ ಇದರ ಬಗ್ಗೆ ತಳೆದಿದ್ದ ನಿಲುವೆಂದರೆ:–

"೪೮. ಪ್ರಸ್ತುತ ಆಲೋಚಿಸಲಾಗುತ್ತಿರುವ ಬದಲಾವಣೆಯನ್ನು ಜಾರಿಗೆ ತರಬೇಕಾದರೆ ಮೊಟ್ಟಮೊದಲಿಗೆ ಗಮನದಲ್ಲಿಟ್ಟುಕೊಳ್ಳಬೇಕಾದ ಅಂಶವೆಂದರೆ, ಅದು ರಾಷ್ಟ್ರದ ವ್ಯಾಪಾರದ ಅಗತ್ಯಗಳಿಗೆ ಬೇಕಾಗುವ ಹಣದ ಬೇಡಿಕೆಯನ್ನು ಪೂರೈಸುವಂತಿರಬೇಕು. ಈ ಬೇಡಿಕೆಯನ್ನು ಸಾರ್ವಜನಿಕರು ಟಂಕಸಾಲೆಯಲ್ಲಿ ನಾಣ್ಯೀಕರಿಸಲು ಅವಕಾಶ ಕೊಡದಿದ್ದಲ್ಲಿ ಪೂರೈಸಲಾಗುವುದಿಲ್ಲ. ಈ ಕ್ರಮವನ್ನು ಒಂದು ಪಕ್ಷ ಅನುಸರಿಸಿದರೆ, ಬೆಳ್ಳಿಗೆ ಇರುವ ಬೇಡಿಕೆಯನ್ನು ಪೂರೈಸುವ ಜವಾಬ್ದಾರಿಯು ಸರ್ಕಾರದ ಮೇಲೆ ಬೀಳುತ್ತದೆ. ಚಿನ್ನ ಮತ್ತು ಬೆಳ್ಳಿ ಗಟ್ಟಿಗಳಿಗೆ ಮಾರುಕಟ್ಟೆಯಲ್ಲಿ ಪ್ರಸ್ತುತದಲ್ಲಿರುವ ಪರಿಸ್ಥಿತಿಯಲ್ಲಿ ಇಂಥ ಜವಾಬ್ದಾರಿಯನ್ನು ಸರ್ಕಾರ ಹೊರುವುದಕ್ಕೆ ಸಾಧ್ಯವಿಲ್ಲ."

"೪೯. ಮೊದಲ ನೋಟಕ್ಕೆ ಅತ್ಯಂತ ಸರಳವೆಂದು ಕಾಣುವ ಮತ್ತು ಅದರಿಂದಾಗಿ ಅತ್ಯುತ್ತಮವೆಂದು ತೋರುವ ವ್ಯವಸ್ಥೆಯೆಂದರೆ ಸುವರ್ಣ ಪ್ರಮಿತಿಯೊಂದಿಗಿರುವಂತೆ ಬೆಳ್ಳಿಯ ಕರೆನ್ಸಿಯನ್ನು ವಿಸ್ತರಿಸುವುದು. ಇದಕ್ಕಾಗಿ ಸರ್ಕಾರ ಯಾರು ಬೇಡುತ್ತಾರೋ ಅವರೆಲ್ಲರಿಗೂ, ಚಿನ್ನದ ನಾಣ್ಯಕ್ಕೆ ಬದಲಾಗಿ ಬೆಳ್ಳಿಯ ನಾಣ್ಯವನ್ನು ವಿನಿಮಯವಾಗಿ ಕೊಡಬೇಕು. ಈ ವಿನಿಮಯದ ಹೊಸ ವ್ಯವಸ್ಥೆ ಗೊತ್ತುಮಾಡಿದ ದರದಲ್ಲಿ ನಡೆಯಬೇಕು. ಚಿನ್ನವನ್ನು ನಾಣ್ಯವಾಗಿ ಟಂಕಿಸಿಕೊಡಬಹುದು. ಆದರೆ, ಬೆಳ್ಳಿಯನ್ನು ನಾಣ್ಯವಾಗಿ ಟಂಕಿಸುವಂತಿಲ್ಲ. ಆದರೆ ನಾಣ್ಯೀಕರಣಕ್ಕಾಗಿ ಭಾರತದಲ್ಲಿ ಆವಶ್ಯಕವಾದ ಬೆಳ್ಳಿಯ ಸರಬರಾಜಿನ ಅಭಾವವಿರುವಾಗ ಈ ಜವಾಬ್ದಾರಿಯನ್ನು ಹೊರುವುದು ಸರ್ಕಾರಕ್ಕೆ ಸಾಧ್ಯವಿರಲಿಲ್ಲ. ಈ ಜಟಿಲವಾದ ವ್ಯವಹಾರದಲ್ಲಿ ಜವಾಬ್ದಾರಿಯನ್ನು ಹೊರಬೇಕಾಗಿದ್ದ ಪಕ್ಷದಲ್ಲಿ ಸರ್ಕಾರವು ಚಿನ್ನದ ಗಟ್ಟಿಯನ್ನು ಕೊಳ್ಳುವ ಮತ್ತು ದಾಸ್ತಾನು ಮಾಡುವ ಜವಾಬ್ದಾರಿಯನ್ನು ಹೊರಬೇಕಾಗಿತ್ತು."

ಈಗ ಇಂಡಿಯಾ ಆಫೀಸು ಮಾಡಿರುವ ಬೆಳ್ಳಿಯ ಖರೀದಿಗೆ ಸಂಬಂಧಿಸಿದಂತೆ ಇರುವ ಹಗರಣದ ಭವಿಷ್ಯವನ್ನು ಈ ವ್ಯವಸ್ಥೆ ನುಡಿಯುವಂತಿತ್ತು ಎನ್ನುವುದು ಸ್ವಾರಸ್ಯವಾದ ವಿಷಯ.[೧] ಇದು ನಮಗೆ ನೇರವಾಗಿ ಸಂಬಂಧಿಸಿದುದಲ್ಲ. ನಮಗೆ ಮುಖ್ಯವಾದುದೆಂದರೆ, ಹೀಗೆ ಹಣವನ್ನು ನೀಡುವುದರಿಂದ ಹಣದ ಪ್ರಮಾಣದಲ್ಲಿ ಮುಖ್ಯ ವ್ಯತ್ಯಾಸ ಉಂಟಾಗುತ್ತದೆಯೇ ಎನ್ನುವುದು. ಬೆಳ್ಳಿಯನ್ನು ಖಾಸಗಿಯವರಿಗೆ ನಾಣ್ಯವಾಗಿ ಟಂಕಿಸಿಕೊಡುವುದಕ್ಕೆ ಅವಕಾಶವನ್ನು ರದ್ದುಮಾಡುವುದರಿಂದ ಏನು ಲಾಭವಿದೆ ಎಂಬುದರ ಬಗ್ಗೆ ಬಹಳ ಗಲಿಬಿಲಿ ಇದೆ. ಸರ್ಕಾರಕ್ಕೆ ರೂಪಾಯಿಯನ್ನು ನೀಡಿಕೆ ಮಾಡುವುದರ ಬಗ್ಗೆ ಏಕಸ್ವಾಮ್ಯವಿದೆ. ಇದು ರೂಪಾಯಿಯ ನೀಡಿಕೆ ಹೆಚ್ಚಾಗದಂತೆ ನೋಡಿಕೊಂಡು, ಅದರ ಚಿನ್ನದ ಮೌಲ್ಯವನ್ನು ಕಾಪಾಡಿಕೊಳ್ಳುವುದಕ್ಕೆ ನೆರವಾಗುತ್ತದೆ ಎಂದು ಭಾವಿಸಲಾಗಿತ್ತು. ಟಂಕಸಾಲೆಯನ್ನು ಸಾರ್ವಜನಿಕರಿಗೆ ಲಭ್ಯವಿಲ್ಲದಂತೆ ಮಾಡಿರುವುದು, ಸರ್ಕಾರಕ್ಕೆ ಇದರ ಬಗ್ಗೆ ಏಕಸ್ವಾಮ್ಯ ಪರಿಸ್ಥಿತಿಯನ್ನುಂಟುಮಾಡಿದೆ ಎನ್ನುವುದನ್ನು ಒಪ್ಪಬೇಕು. ಆದರೆ ಏಕಸ್ವಾಮ್ಯವಿದ್ದ ಮಾತ್ರಕ್ಕೆ ಅದು ನೋಟುಗಳ ಅಧಿಕ ನೀಡಿಕೆಯನ್ನು ಹೇಗೆ ತಡೆಗಟ್ಟುತ್ತದೆ ಎನ್ನುವುದನ್ನು ಗ್ರಹಿಸುವುದು ಕಷ್ಟ. ಮುಕ್ತವಾಗಿ ನಾಣ್ಯಗಳನ್ನು ಟಂಕಿಸುವ ಅಧಿಕಾರವನ್ನು ರದ್ದುಮಾಡುವುದು ಯಾವುದಕ್ಕೆ ಸಮನೆಂದರೆ, ಬ್ಯಾಂಕುಗಳು ನೋಟು ನೀಡುವುದನ್ನು ರದ್ದುಮಾಡಿ, ಅದನ್ನು ಕೇಂದ್ರ ಬ್ಯಾಂಕಿಗೆ ವಹಿಸಿಕೊಡುವುದಕ್ಕೆ. ಆದರೆ ಕೇಂದ್ರ ಬ್ಯಾಂಕಿಗೆ ನೋಟು ನೀಡಿಕೆ ಮಾಡುವ ಏಕಸ್ವಾಮ್ಯವಿದೆ ಎಂದ ಮಾತ್ರಕ್ಕೆ ಅದು ಅಧಿಕ ನೋಟುಗಳನ್ನು ನೀಡುವುದಿಲ್ಲ ಎಂದು ವಾದಿಸುವುದಕ್ಕಾಗುವುದಿಲ್ಲ.

---

೧. ನೋಡಿ ೧೯೧೨ ರ ಪು. ೪೦೦

ಹಾಗೇಯೇ ಭಾರತ ಸರ್ಕಾರಕ್ಕೆ ನಾಣ್ಯಗಳನ್ನು ಟಂಕಿಸುವುದರ ಬಗ್ಗೆ ಏಕಸ್ವಾಮ್ಯವಿದೆ ಎಂದ ಮಾತ್ರಕ್ಕೆ ಅದು ಅಧಿಕ ಹಣವನ್ನು ನೀಡುವುದಿಲ್ಲ ಎಂದು ವಾದಿಸುವುದು ನಿರರ್ಥಕ. ವಾಸ್ತವವಾಗಿ ಎಲ್ಲಾ ಖಾಸಗಿ ಜನರ ಬಳಿ ಇರುವ ಒಟ್ಟು ನಗದಿನಷ್ಟೇ ಮೊತ್ತವನ್ನು ಏಕಸ್ವಾಮ್ಯವಿರುವ ಸರ್ಕಾರವೊಂದೇ ನೀಡಬಹುದು. ಜೊತೆಗೆ ನಾಣ್ಯವನ್ನು ಟಂಕಿಸುವುದರಿಂದ ಬರುವ ಲಾಭದ ದೃಷ್ಟಿಯಿಂದ ಪ್ರಸ್ತುತ ಯೋಜನೆ ೧೮೭೮ರ ಯೋಜನೆಗಿಂತ ಬಹಳ ಕಳಪೆಯಾದುದು. ಎರಡೂ ಪರಿಸ್ಥಿತಿಗಳಲ್ಲಿ ಲಾಭಗಳು ಎಷ್ಟು ನಾಣ್ಯವನ್ನು ಟಂಕಿಸಲಾಗುತ್ತಿದೆ ಎನ್ನುವುದನ್ನು ಅವಲಂಬಿಸುತ್ತದೆ ಎನ್ನುವುದು ನಿಜ. ಆದರೆ ಮೊದಲನೆಯದರಲ್ಲಿ ನಾಣ್ಯಗಳನ್ನು ಮಾಡುವುದಕ್ಕೆ ಲಾಭ ಉತ್ತೇಜಕವಲ್ಲ. ಸರ್ಕಾರಕ್ಕೆ ನಾಣ್ಯವನ್ನು ಮಾಡುವುದಕ್ಕೆ ಅಧಿಕಾರವಿಲ್ಲದಿರುವುದರಿಂದ ಅದರ ಬಗ್ಗೆ ಲಾಭದ ಆಕರ್ಷಣೆ ಇಲ್ಲ. ಜನರಿಗಾದರೋ ನಾಣ್ಯ ಮಾಡಿಸುವ ಫೀ ದುಬಾರಿಯಾದುದರಿಂದ, ನಾಣ್ಯೀಕರಣಕ್ಕಾಗಿ ಹೆಚ್ಚು ಲೋಹವನ್ನು ತರುವ ಆಕರ್ಷಣೆ ಅವರಿಗಿಲ್ಲ. ಪ್ರಸ್ತುತ ಯೋಜನೆಯಲ್ಲಾದರೆ, ನಾಣ್ಯವನ್ನು ಮಾಡುವ ಹಕ್ಕು ಸಂಪೂರ್ಣವಾಗಿ ಸರ್ಕಾರಕ್ಕೆ ಸೇರಿದ್ದು. ಈಗ ಕರೆನ್ಸಿಗೆ ಬೆಂಬಲವಾಗಿ ಲೋಹವಿರಬೇಕೆಂಬ ಅಗತ್ಯವು ಹೆಚ್ಚು ನಾಣ್ಯವನ್ನು ಟಂಕಿಸಲು ಪ್ರೇರೇಪಣೆಯಾಗಬಹುದು ಅದರಲ್ಲೂ ರೂಪಾಯಿಯ ಟಂಕಸಾಲೆ ನೆಲೆ ಮತ್ತು ಅದರ ಮಾರುಕಟ್ಟೆ ಬೆಲೆಗಳ ನಡುವೆ ಅಂತರ ಹೆಚ್ಚಾಗಿದ್ದಷ್ಟೂ ಈ ಹೆಚ್ಚು ನಾಣ್ಯಗಳನ್ನು ಟಂಕಿಸುವ ಆಕರ್ಷಣೆ ಸರ್ಕಾರಕ್ಕೆ ಇನ್ನೂ ಪ್ರಬಲವಾಗಬಹುದು.[೧]

ಹಣದ ಚಲಾವಣೆಯು ಕುಗ್ಗದಂತೆ ನೋಡಿಕೊಳ್ಳುವ ಉದ್ದೇಶವುಳ್ಳ ಸರ್ಕಾರವು ಏಕಸ್ವಾಮ್ಯವನ್ನು ಹೊಂದಿರುವುದರಿಂದ ಚಲಾವಣೆಗಾಗಿ ಬಿಡುಗಡೆ ಮಾಡುವ ರೂಪಾಯಿ ನಾಣ್ಯದ ಪ್ರಮಾಣವನ್ನು ಮಿತಿಗೊಳಿಸಬಹುದು. ಸಾರ್ವಜನಿಕರ ಉಪಯೋಗಕ್ಕಾಗಿ ಟಂಕಸಾಲೆಗಳನ್ನು ತೆರೆದಿಟ್ಟಿದ್ದರೆ ಈ ಉದ್ದೇಶವನ್ನು ಈಡೇರಿಸಲು ಸಾಧ್ಯವಾಗುವುದಿಲ್ಲ ಎಂದು ವಾದಿಸಿದರೆ, ಅದಕ್ಕೆ ಉತ್ತರ ಹೀಗೆ ಇತ್ತು – ಸರ್ಕಾರವು ಹಣದ ಚಲಾವಣೆಯ ಮೇಲೆ ಹೇರಬಹುದಾದ ಮಿತಿಯು, ಹಣ ನೀಡಿಕೆಯನ್ನು ತಿರಸ್ಕರಿಸಬಹುದಾದ ಅಧಿಕಾರವಿದ್ದರೆ ಮಾತ್ರ ಕಾರ್ಯಗತವಾಗಬಹುದು. ಕೇಂದ್ರ ಬ್ಯಾಂಕುಗಳಾದರೆ, ಅವು ಯಾರಿಗೇ ಆದರೂ ಹಣವನ್ನು ನೀಡುವ ಹೊಣೆಯನ್ನು ಹೊಂದಿಲ್ಲ. ಹೀಗಾಗಿ ಅವು ನೀಡಿಕೆಯನ್ನು ಮಿತಿಗೊಳಿಸಿಕೊಳ್ಳಬಹುದು. ಆದರೆ ಸರ್ಕಾರ ಈ ದೃಷ್ಟಿಯಿಂದ ದುರ್ಬಲವಾದದ್ದು. ಏಕೆಂದರೆ, ಕೇಳಿದಾಗ ಹಣವನ್ನು ನೀಡಿಕೆ ಮಾಡದಿರುವ ಸ್ವಾತಂತ್ರ್ಯವನ್ನು ಸರ್ಕಾರ ಹೊಂದಿಲ್ಲ. ಪ್ರತಿಬಾರಿ ಹಣನೀಡಿದಾಗಲೂ ಅದು ಪ್ರಸ್ತುತದಲ್ಲಿರುವ ಹಣದ ಪ್ರಮಾಣವನ್ನು ಹೆಚ್ಚು ಮಾಡುವುದಿಲ್ಲ ಎನ್ನುವುದು ನಿಜ. ಏಕೆಂದರೆ ಒಂದು ಭಾಗದ ಹಣ ಸರ್ಕಾರಕ್ಕೆ ಹಿಂದಿರುಗಿ ಬರುತ್ತಲೇ ಇದ್ದು, ಹೊಸ ಹಣ ನೀಡಿಕೆಯಾದಾಗ, ವಾಪಸ್ಸು ಬಂದಿರುವಷ್ಟು ಹಣ ಚಲಾವಣೆಯಿಂದ ಹಿಂದಿರುಗಿರುತ್ತದೆ. ಏನೇ ಆದರೂ, ತನಗೆ ಏಕಸ್ವಾಮ್ಯವಿರುವ ಕಾರಣದಿಂದ ಸರ್ಕಾರ ರೂಪಾಯಿ ಕರೆನ್ಸಿಯ ಪ್ರಮಾಣದ ಮೇಲೆ ಮಿತಿಯನ್ನೊಡ್ಡಿದೆ ಎಂದು ಹೇಳುವುದಕ್ಕಾಗುವುದಿಲ್ಲ. ಬದಲಿಗೆ, ಕರೆನ್ಸಿ ನೀಡಿಕೆಯ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕೆ ಆಗುವುದಿಲ್ಲ. ಆದುದರಿಂದ, ಕರೆನ್ಸಿ ನೀಡಿಕೆಯು ಸರ್ಕಾರದ ಸ್ಥಿತಿಯನ್ನು ಸಬಲಗೊಳಿಸುವುದಕ್ಕಿಂತ ಹೆಚ್ಚಾಗಿ ಅದನ್ನು ಸಾಕಷ್ಟು ದುರ್ಬಲಗೊಳಿಸಿದೆ ಎಂದೇ

---

೧. ಈ ದೃಷ್ಟಿಯಿಂದ ಪ್ರೊಫೆಸರ್ ಕೇನ್ಸ್‌ರವರ ಪ್ರಸ್ತಾಪ ಅಪಾಯಕಾರಿಯಾಗಿ ಕಾಣಬಹುದು. ಅವರು ಬೆಳ್ಳಿಯ ಬೆಲೆ ಏನೇ ಇರಲಿ ಅದನ್ನು ಗಮನಕ್ಕೆ ತೆಗೆದುಕೊಳ್ಳದೆ, ರೂಪಾಯಿಯ ಚಿನ್ನದ ಬೆಲೆಯನ್ನು ಗೊತ್ತುಮಾಡಬೇಕೆಂದು ಸೂಚಿಸಿದ್ದರು. ನೋಡಿ : ೧೯೧೯ ರ ಭಾರತದ ಕರೆನ್ಸಿ ಸಮಿತಿಯ ಮುಂದೆ ಕೇನ್ಸ್‌ರವರ ಹೇಳಿಕೆ ಪ್ರ ೨,೬೮೮

ಹೇಳಬೇಕು.[೧]

ಚೇಂಬರ್ಲಿನ್ ಸಮಿತಿ ಇದರ ಬಗ್ಗೆ ಹೀಗೆ ಅಭಿಪ್ರಾಯಪಟ್ಟಿತ್ತು[೨]

"ವಿನಿಮಯ ಮಾರುಕಟ್ಟೆಯಲ್ಲಿ ಸರ್ಕಾರ ಬಹಳ ವ್ಯವಹಾರವನ್ನು ಮಾಡುವ ಒಂದು ಸಂಸ್ಥೆ. ಆದರೆ ಅದು ಏಕಸ್ವಾಮ್ಯ ಹೊಂದಿಲ್ಲ (!) ಸರ್ಕಾರ ವರ್ಷದ ಎಲ್ಲ ಸಮಯದಲ್ಲಿ ಒಂದು ನಿರ್ದಿಷ್ಟ ದರವನ್ನು (ನಿರ್ದಿಷ್ಟ ಸ್ಥಿರ ದರವನ್ನು) ಯಶಸ್ವಿಯಾಗಿ ಕಾಯ್ದುಕೊಂಡು ಹೋಗಬಲ್ಲದು ಎನ್ನುವುದು ಸಂಶಯಾಸ್ಪದ".

ಆದ್ದರಿಂದ, ಟಂಕಸಾಲೆಯನ್ನು ಸಾರ್ವಜನಿಕರ ಪಾಲಿಗೆ ರದ್ದುಮಾಡಿದ್ದರಿಂದ, ತಾನು ಮಾತ್ರ ಟಂಕಿಸುತ್ತಿದ್ದ ರೂಪಾಯಿಯ ಬೆಲೆಯನ್ನು ನಿರ್ಧರಿಸುವ ಸಾಮರ್ಥ್ಯವನ್ನು ಪಡೆಯಲು ಸರ್ಕಾರಕ್ಕೆ ಸಾಧ್ಯವಾಗಲಿಲ್ಲ ಎನ್ನುವುದು ಸ್ವಾರಸ್ಯವಾದ ಅಂಶ.

೧೮೭೮ರಲ್ಲಿ ಸೂಚಿಸಲಾಗಿದ್ದ ವ್ಯವಸ್ಥೆ ಪ್ರಸ್ತುತ ವ್ಯವಸ್ಥೆಗಿಂತ ಹೆಸರಿನಲ್ಲಿ ಮಾತ್ರ ಬೇರೆಯಾಗಿತ್ತು ಎನ್ನುವುದು ಮೇಲಿನ ವಿವರಣೆಯಿಂದ ಸ್ಪಷ್ಟ. ಪ್ರಸ್ತುತ ವ್ಯವಸ್ಥೆ ಕರೆನ್ಸಿಯ ಪ್ರಮಾಣವನ್ನು ನಿಯಂತ್ರಿಸುವ ಸೂಚಕವಾಗಿ ವಿನಿಮಯ ದರ ವರ್ತಿಸುತ್ತದೆ ಎಂಬ ಲಕ್ಷಣವನ್ನು ಹೊಂದಿದೆ ಎಂದಾದರೆ, ೧೮೭೮ರ ವ್ಯವಸ್ಥೆ ಸಹ ಇದೇ ಲಕ್ಷಣವನ್ನು ಹೊಂದಿತ್ತು ಎನ್ನುವುದನ್ನು ಗಮನಿಸಬೇಕು. ಹಾಟ್ರೆ ಅಭಿಪ್ರಾಯ ಪಡುವಂತೆ[೩] ಕರೆನ್ಸಿಯನ್ನು ನಿಯಂತ್ರಿಸಲು ಯಾವುದೇ ಸಾಧನವನ್ನು ಅನುಸರಿಸಿದರೂ "ರೂಪಾಯಿಯ ಮೌಲ್ಯವು ಚಲಾವಣೆಯಲ್ಲಿರುವ ಹಣದ ಪ್ರಮಾಣದಿಂದಲೇ ನಿರ್ಧರಿತವಾಗುತ್ತದೆ."

ಅಂದರೆ, ಸುವರ್ಣಪ್ರಮಿತಿಯ ರಕ್ಷಣೆಗೆ ಅಗತ್ಯವಾದುದೆಂದರೆ ಅಗತ್ಯಕ್ಕಿಂತ ಹೆಚ್ಚಿನ ರೂಪಾಯಿಯನ್ನು ಚಲಾವಣೆಗೆ ಬರದಂತೆ ನೋಡಿಕೊಳ್ಳುವುದು. ಮೇಲಿನ ವಿವರಣೆಯಿಂದ ಸ್ಪಷ್ಟವಾಗುವುದೆಂದರೆ ೧೮೭೮ರ ಯೋಜನೆಯಾಗಲೀ, ಪ್ರಸ್ತತದ ಯೋಜನೆಯಾಗಲೀ ಈ ಅಪಾಯದಿಂದ ಮುಕ್ತವಾಗಿಲ್ಲ. ಆದ್ದರಿಂದ ಇವೆರಡು ವ್ಯವಸ್ಥೆಗಳೂ ಸಮಾನ ಲಕ್ಷಣ ಹೊಂದಿರುವುದಾದ್ದರಿಂದ ಒಂದರ ವಿರುದ್ಧ ಇರುವ ಆರೋಪಗಳೂ ಮತ್ತೊಂದಕ್ಕೂ ಅಷ್ಟೇ ಅನ್ವಯವಾಗುತ್ತವೆ.

ವಿನಿಮಯ ಪ್ರಮಿತಿಯು ಈ ಹಿಂದೆ ತಿರಸ್ಕರಿಸಲ್ಪಟ್ಟಿದ್ದ ಯೋಜನೆಯ ಪುನರುಜ್ಜೀವನ ರೂಪವೆಂದು ಚೇಂಬರ್ಲಿನ್ ಯೋಜನೆಯು ನಂಬುವುದಿಲ್ಲ. ಬದಲಿಗೆ, ಆ ವ್ಯವಸ್ಥೆಯ ಬಗ್ಗೆ ಹೆಚ್ಚು ಸ್ಥೈರ್ಯವನ್ನು ಮೂಡಿಸಲು ಅದು ಯತ್ನಿಸುತ್ತದೆ. ಅದರ ಅಭಿಪ್ರಾಯವೆಂದರೆ[೪]

"ಪ್ರಸ್ತುತದ ಭಾರತೀಯ ವ್ಯವಸ್ಥೆ ಕೆಲವು ಮಹಾನ್ ಯುರೋಪ್ ರಾಷ್ಟ್ರಗಳು ಮತ್ತು ಇತರ ಕೆಲವು ಮುಖ್ಯ ರಾಷ್ಟ್ರಗಳ ವ್ಯವಸ್ಥೆಯೊಂದಿಗೆ ಅತ್ಯಂತ ಹೆಚ್ಚಿನ ಸಾಮ್ಯ ಹೊಂದಿದೆ...."

ಈ ಸಾಮ್ಯಗಳು ಎಂಥವು ಎನ್ನುವುದನ್ನು ನೋಡಬೇಕಾದರೆ, ನಾವು ಕೇನ್ಸ್‌ನ ಕುತೂಹಲಕಾರಿ

---

೧. ೧೯೧೯ರ ಸ್ಮಿತ್ ಕರೆನ್ಸಿ ಸಮಿತಿ, ರೂಪಾಯಿ ಕರೆನ್ಸಿಯನ್ನು ನೀಡುವ ಸರ್ಕಾರದ ಈ ಜವಾಬ್ದಾರಿಯಲ್ಲಿರುವ ಅಪಾಯವನ್ನು ಗುರುತಿಸಿತ್ತು. ಹೀಗಾಗಿ ಆ ಜವಾಬ್ದಾರಿಯನ್ನು ಹಿಂತೆಗೆದುಕೊಳ್ಳಬೇಕೆಂದು ಅದು ಶಿಫಾರಸು ಮಾಡಿತು. ನೋಡಿ: ಸಮಿತಿಯ ವರದಿ, ಆದರೆ ಆ ಸಮಿತಿಯ ಉದ್ದೇಶ ಬೇರೆಯದೇ ಆಗಿತ್ತು ಎನ್ನುವುದು ಬೇರೆಯ ವಿಷಯ.

೨. ವರದಿ ಪ್ಯಾರಾ ೧೮೨

೩. ಕರೆನ್ಸಿ ಅಂಡ್ ಕ್ರೆಡಿಟ್, ೧೯೧೯ ಪು. ೩೪೧

೪. ವರದಿ, ಪ್ಯಾರಾ ೪೬

ಗ್ರಂಥ "ಇಂಡಿಯನ್ ಕರೆನ್ಸಿ ಅಂಡ್ ಫೈನಾನ್ಸ್"ನ ಎರಡನೇ ಅಧ್ಯಾಯವನ್ನು ಗಮನಿಸಬೇಕು. ಇದರಲ್ಲಿ ಅವನು, ಭಾರತದ ಕರೆನ್ಸಿ ವ್ಯವಸ್ಥೆಯಲ್ಲಿ ಮತ್ತು ಯುರೋಪಿನ ಕೆಲವು ಪ್ರಮುಖ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳ ಹಣ ವ್ಯವಸ್ಥೆಯಲ್ಲಿ ಇರುವ ಮೂಲಭೂತ ಸಾಮ್ಯವನ್ನು ಗುರುತಿಸಲು ಯತ್ನಿಸುತ್ತಾನೆ. ಈ ಬ್ಯಾಂಕುಗಳು ವಿದೇಶಗಳಲ್ಲಿ ಪಾವತಿಗಳನ್ನು ಮಾಡುವುದಕ್ಕೋಸ್ಕರ, ವಿದೇಶೀ ಬಿಲ್ಲುಗಳನ್ನು ಹೊಂದಿರುವ ಅಭ್ಯಾಸವನ್ನಿಟ್ಟುಕೊಂಡಿದ್ದವು. ಕೇನ್ಸ್ ಪ್ರಕಾರ, ಇಂಥ ವಿದೇಶೀ ಬಿಲ್ಲುಗಳ ಮಾರಾಟ ಮತ್ತು ಭಾರತ ಸರ್ಕಾರ ಮಾರಾಟ ಮಾಡುವ "ರಿವರ್ಸ್ ಕೌನ್ಸಿಲ್"ಗಳು ನಿಕಟವಾದ ಸಾಮ್ಯವನ್ನು ಹೊಂದಿವೆ. ಏಕೆಂದರೆ ಇವೆರಡೂ ಒಂದೇ ವ್ಯವಸ್ಥೆಯನ್ನು ಹೊಂದಿವೆ. ಅದೆಂದರೆ "ಚಿನ್ನದಿಂದಲ್ಲದಿರುವ ಸ್ಥಳೀಯ ಕರೆನ್ಸಿಯನ್ನುಪಯೋಗಿಸುವುದು, ಸ್ಥಳೀಯ ಕರೆನ್ಸಿಗೆ ವಿನಿಮಯವಾಗಿ ಚಿನ್ನವನ್ನು ಸರಬರಾಜು ಮಾಡುವುದಕ್ಕೆ ಇಚ್ಛೆ ಇಲ್ಲದಿರುವುದು. ಆದರೆ ಒಂದು ಗರಿಷ್ಠ ದರದಲ್ಲಿ ಸ್ಥಳೀಯ ಕರೆನ್ಸಿಗಳಿಗೆ ವಿನಿಮಯವಾಗಿ ವಿದೇಶೀ ಕರೆನ್ಸಿಯನ್ನು ಮಾರಾಟಮಾಡಲು ಅತ್ಯಂತ ಉತ್ಸುಕವಾಗಿರುವುದು"[೧]

ಆದರೆ ಕೆಮರ್ ಅಭಿಪ್ರಾಯಪಡುವಂತೆ[೨] ಭಾರತ ಸರ್ಕಾರದ 'ರಿವರ್ಸ್ ಕೌನ್ಸಿಲ್'ಗಳ ಮಾರಾಟ ಮತ್ತು ಯುರೋಪಿನ ಬ್ಯಾಂಕುಗಳು ವಿದೇಶೀ ಬೆಲೆಗಳನ್ನು ಹೊಂದಿರುವುದರ ನಡುವೆ ಇರುವ ಸಾಮ್ಯವನ್ನು ಗ್ರಹಿಸುವುದು ನಿಜವಾಗಿಯೂ ಕಷ್ಟ. ವಾಸ್ತವವಾಗಿ ಇವೆರಡರ ನಡುವಣ ಸಾಮ್ಯಕ್ಕಿಂತ, ಇವೆರಡೂ ಪರಸ್ಪರ ವಿರೋಧವಾದವು ಎಂಬುದನ್ನು ಗಮನಿಸಬೇಕು. ರಿವರ್ಸ್ ಕೌನ್ಸಿಲ್‌ಗಳನ್ನು ಮಾರುವುದರ ಮೂಲಕ ಸ್ವದೇಶದಲ್ಲಿ ಹಣ ಅಧಿಕವಾಗಿರುವಾಗ "ಸರ್ಕಾರ, ತನ್ನ ವಿದೇಶೀ ಚಿನ್ನದ ಸಾಲಗಳಿಗೆ ಪ್ರತಿಯಾಗಿ ಡ್ರಾಫ್ಟ್‌ಗಳನ್ನು ಮಾರುತ್ತದೆ. ಇದು ವಿನಿಮಯ ದರ, ಚಿನ್ನ–ನಿರ್ಯಾತದ ಮಟ್ಟದ ದರವನ್ನು ತಲುಪಿರುವುದರ ಮೂಲಕ ವ್ಯಕ್ತವಾಗುತ್ತದೆ. ಹೀಗೆ ಮಾಡುವ ಕ್ರಮವು ಹಣವನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳುವ ಮೂಲಕ ಮತ್ತು ಡ್ರಾಫ್ಟ್‌ಗಳನ್ನು ಮಾರುವುದರಿಂದ ಬರುವ ಸ್ಥಳೀಯ ಹಣವನ್ನು ಬಿಡುಗಡೆಮಾಡದೆ ಭದ್ರವಾಗಿಟ್ಟುಕೊಳ್ಳುವ ಮೂಲಕ ಹಣದ ಆಧಿಕ್ಯವನ್ನು ಕಡಿಮೆ ಮಾಡುತ್ತದೆ. ಹಣದ ಮಾರುಕಟ್ಟೆಯನ್ನು ರಕ್ಷಿಸುವುದಕ್ಕಾಗಿ, ವಿದೇಶೀ ಬಿಲ್‌ಗಳನ್ನು ಇಟ್ಟುಕೊಳ್ಳುವ ವ್ಯವಸ್ಥೆಯಲ್ಲಿ ಕೇಂದ್ರಬ್ಯಾಂಕು, ದೇಶದಲ್ಲಿ ಹಣದ ಪ್ರಮಾಣ ಸಾಪೇಕ್ಷವಾಗಿ ಕಡಿಮೆ ಇದ್ದರೆ, ಚಿನ್ನವನ್ನು ಆಮದು ಮಾಡಿಕೊಳ್ಳುವುದಕ್ಕೆ ಅಥವಾ ಅದನ್ನು ನಿರ್ಯಾತ ಮಾಡುವುದನ್ನು ತಪ್ಪಿಸುವುದಕ್ಕಾಗಿ ತನ್ನಲ್ಲಿರುವ ವಿದೇಶೀ ಬಿಲ್‌ಗಳನ್ನು ಮಾರಾಟ ಮಾಡುತ್ತದೆ. ಮೊದಲನೆಯ ವ್ಯವಸ್ಥೆಯಲ್ಲಿ, ಡ್ರಾಫ್ಟ್‌ಗಳ ಮಾರಾಟ, ಚಿನ್ನವನ್ನು ರಫ್ತುಮಾಡುವುದರ ಸ್ಥಾನ ಪಡೆದುಕೊಳ್ಳುತ್ತದೆ. ಪರಿಣಾಮವಾಗಿ ಚಲಾವಣೆಯಿಂದ ಹಿಂತೆಗೆದುಕೊಳ್ಳುವ ಸ್ಥಳೀಯ ಹಣ ಸಹ ಚಿನ್ನದ ರಫ್ತಿಗೆ ಸಮಾನವಾದದ್ದೇ. ಎರಡನೆಯ ವ್ಯವಸ್ಥೆಯಲ್ಲಿ, ವಿದೇಶಗಳಿಗೆ ಡ್ರಾಫ್ಟನ್ನು ಮಾರಾಟ ಮಾಡುವುದು ಚಿನ್ನವನ್ನು ಆಯಾತ ಮಾಡಿಕೊಳ್ಳುವ ಕ್ರಿಯೆಯ ಒಂದು ಭಾಗ ಅಥವಾ ಅದರ ನಿರ್ಯಾತವನ್ನು ತಪ್ಪಿಸುವ ಒಂದು ಕ್ರಮ".

ಆದ್ದರಿಂದ ಕೇನ್ಸ್ ವಿಚಾರ ಮಾಡುವಂತೆ, ಭಾರತದ ಕರೆನ್ಸಿ ವ್ಯವಸ್ಥೆ ಯುರೋಪಿನ ಕರೆನ್ಸಿ ಪದ್ಧತಿಯೊಡನೆ ಸಮಾನತೆ ಹೊಂದಿರುವಂಥದಲ್ಲ. ವಾಸ್ತವವಾಗಿ, ಭಾರತದ ವ್ಯವಸ್ಥೆಗೆ ಒಂದು ಸಮಾನಾಂತರ ವ್ಯವಸ್ಥೆಯನ್ನು ನಾವು ಕಾಣಬೇಕಾದರೆ, ಇಂಗ್ಲೆಂಡಿನಲ್ಲಿ ಬ್ಯಾಂಕ್ ಸಸ್ಪೆನ್ಷನ್ ಅವಧಿಯ (೧೭೯೭–೧೮೨೧) ವ್ಯಯಸ್ಥೆಯನ್ನು ನಾವು ನೋಡಬೇಕು. ಇವೆರಡರ ನಡುವೆ ನಾವು ಸಾಮ್ಯವನ್ನು ಗಮನಿಸಬೇಕಾದರೆ, ಸ್ವಲ್ಪಕಾಲ ಭಾರತ

೧. ಕೇನ್ಸ್ ಇಂಡಿಯನ್ ಕರೆನ್ಸಿ ಅಂಡ್ ಫೈನಾನ್ಸ್ ಪು. ೨೯

೨. ೧೯೧೪, ಫೆಬ್ರವರಿಯ 'ಕ್ವಾರ್ಟರ್ಲಿ ಜರ್ನಲ್ ಆಫ್ ಇಕನಾಮಿಕ್ಸ್'ನಲ್ಲಿನ ಕೇನ್ಸ್‌ನ ಪುಸ್ತಕದ ವಿಮರ್ಶೆಯಲ್ಲಿ.

ಸರ್ಕಾರ ಮತ್ತು ಸೆಕ್ರೆಟರಿ ಆಫ್ ಸ್ಟೇಟ್‌ಗಳ ಸಂದಾಯ ಕ್ರಿಯೆಗಳನ್ನು ಮರೆಯಬೇಕು. ಈ ಕ್ರಿಯೆಗಳು, ಭಾರತದ ಕರೆನ್ಸಿ ವ್ಯವಸ್ಥೆಯ ಲಕ್ಷಣಗಳ ಮೇಲೆ ತೆರೆಯನ್ನೆಳೆಯುತ್ತವೆ. ಈ ತೆರೆಯನ್ನು ಸರಿಸಿ ನಾವು ನೋಡಿದರೆ, ಭಾರತದ ವ್ಯವಸ್ಥೆಯಲ್ಲಿ ಕೆಳಗಿನ ಪ್ರಮುಖ ಲಕ್ಷಣಗಳನ್ನು ಕಾಣುತ್ತೇವೆ.

೧) ಚಿನ್ನದ ಸವರನ್ ಪೂರ್ಣವಾಗಿ ಕಾನೂನುಬದ್ಧ ಹಣ
೨) ಬೆಳ್ಳಿ ರೂಪಾಯಿ
೩) ಸರ್ಕಾರ ಸವರನ್‌ಗೆ ಬದಲಾಗಿ ರೂಪಾಯಿಗಳನ್ನು ಕೊಡುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಆದರೆ ರೂಪಾಯಿಗೆ ಬದಲಾಗಿ ಸವರನ್ ಕೊಡುವ ಜವಾಬ್ದಾರಿಯು ಅದಕ್ಕೆ ಇರುವುದಿಲ್ಲ.

ಅಂದರೆ ರೂಪಾಯಿ ಅಮಿತವಾಗಿ ನೀಡಿಕೆಯಾಗಬಹುದಾದ ಅಪರಿವರ್ತನೀಯ ಕರೆನ್ಸಿ.

ಬ್ಯಾಂಕ್ ಸಸ್‌ಪೆನ್ಷನ್ ಅವಧಿಯ ಇಂಗ್ಲಿಷ್ ಕರೆನ್ಸಿಯನ್ನು ಗಮನಿಸುವುದಾದರೆ, ನಾವು ಕೆಳಗಿನ ಲಕ್ಷಣವನ್ನು ನೋಡುತ್ತೇವೆ.

೧) ಚಿನ್ನದ ಸವರನ್ ಪೂರ್ಣ ಕಾನೂನುಬದ್ಧ ಹಣ
೨) ಕಾನೂನಿನಿಂದಲ್ಲವಾದರೂ, ಸಾಮಾನ್ಯ ರೂಢಿಯಿಂದ ಬ್ಯಾಂಕ್ ಆಫ್ ಇಂಗ್ಲೆಂಡಿನ ಕಾಗದದ ನೋಟುಗಳು ಸಾಮಾನ್ಯ ಸ್ವೀಕೃತಿಯನ್ನು ಪಡೆದಿದ್ದು ಚಲಾವಣೆಯಲ್ಲಿದ್ದವು.[೧]
೩) ಬ್ಯಾಂಕ್ ಆಫ್ ಇಂಗ್ಲೆಂಡ್ ಚಿನ್ನ ಅಥವಾ ವ್ಯಾಪಾರೀ ಬಿಲ್‌ಗಳೂ ಅಥವಾ ಅವಕ್ಕೆ ಸಮನಾದ ಸಾಧನಗಳಿಗೆ ಪ್ರತಿಯಾಗಿ ನೋಟುಗಳನ್ನು ಕೊಡುವ ಜವಾಬ್ದಾರಿಯನ್ನು ಹೊಂದಿರುತ್ತದೆ. ಆದರೆ, ನೋಟುಗಳಿಗೆ ಪ್ರತಿಯಾಗಿ ಚಿನ್ನವನ್ನು ಕೊಡುವ ಜವಾಬ್ದಾರಿಯನ್ನು ಹೊಂದಿರುವುದಿಲ್ಲ. ಅಂದರೆ ಅಪರಿಮಿತವಾಗಿ ನೀಡಿಕೆಯಾಗಬಲ್ಲ ಕರೆನ್ಸಿ ಅಪರಿವರ್ತನೀಯವಾಗಿತ್ತು.

ಕೇವಲ ಒಂದು ದೃಷ್ಟಿಯಿಂದ ಮಾತ್ರ ಈ ಸಾಮ್ಯ ಅಪರಿಪೂರ್ಣವಾಗಿತ್ತು ಎಂದು ಹೇಳಬಹುದು. ಅದೇಂದರೆ ಭಾರತ ಸರ್ಕಾರ ಒಂದು ಪಕ್ಷ ವಿದೇಶೀ ವಿನಿಮಯ ನಿರ್ದಿಷ್ಟ ಮಟ್ಟಕ್ಕಿಂತ ಕೆಳಗಿಳಿದರೆ, ವಿದೇಶೀ ಸಂದಾಯಗಳಿಗೆ ಪ್ರತಿಯಾಗಿ ಪಾವತಿಯಾಗಬೇಕಾದ ರೂಪಾಯಿಯನ್ನು ಚಿನ್ನಕ್ಕೆ ಪರಿವರ್ತಿಸುತ್ತಿತ್ತು. ಆದರೆ ಇದು ಕಾನೂನಿನ ರೀತಿಯಾಗಿ ನಡೆಯದೆ, ಆಡಳಿತಾತ್ಮಕ ಇಚ್ಛೆಯಿಂದ ನಡೆಯುವ ಕ್ರಿಯೆಯಾಗಿತ್ತು. ಆದರೆ ಇದನ್ನು 'ಸಸ್ಪೆನ್ಷನ್ ಅವಧಿ'ಯಲ್ಲಿ ಬ್ಯಾಂಕ್ ಆಫ್ ಇಂಗ್ಲೆಂಡ್ ನಡೆಸುತ್ತಿರಲಿಲ್ಲ. ಇದೊಂದೇ ವ್ಯತ್ಯಾಸದಿಂದಾಗಿ, ಸಸ್‌ಪೆನ್ಷನ್ ಅವಧಿಯ ಇಂಗ್ಲಿಷ್ ಕರೆನ್ಸಿ ವ್ಯವಸ್ಥೆಯನ್ನು ಒಂದು ಪ್ರತ್ಯೇಕ ಗುಂಪಿಗೆ ಸೇರಿಸಬಹುದೇ ಮತ್ತು ಭಾರತದ ಕರೆನ್ಸಿ ಪದ್ಧತಿ ಮತ್ತು ಈ ಪದ್ಧತಿಗೆ ಸಾಮ್ಯವಿರಲಿಲ್ಲವೆಂದು ಹೇಳಬಹುದೇ ಎನ್ನುವುದು ಪ್ರಶ್ನಾರ್ಹ. ಈ ಪ್ರಶ್ನೆಗೆ ಉತ್ತರಿಸಬೇಕಾದರೆ ನಾವು ಪರಿವರ್ತನೀಯತೆಯ ಪ್ರಾಮುಖ್ಯತೆಯನ್ನು ಸರಿಯಾಗಿ ಗ್ರಹಿಸಬೇಕು ಪರಿವರ್ತನೀಯತೆ ಎಷ್ಟೇ ಅಲ್ಪಪ್ರಮಾಣದ ಹಣಕ್ಕಾಗಿ ಇರಲಿ ಅದನ್ನು ಜನರು ಅಪೇಕ್ಷಿಸುತ್ತಾರೆ. ಅವರು ಯಾವಾಗಲೂ ಪರಿವರ್ತನೀಯತೆಯನ್ನು ಬಯಸುವವರೇ. ಇಂಥ ಬಯಕೆಯನ್ನು ಗಮನಿಸುವುದು ಒಂದು ಅತಿ ಮುಖ್ಯ ಪ್ರಶ್ನೆಯನ್ನೇ ನಮ್ಮ ಮುಂದೆ ಇಡುತ್ತದೆ. ಈಗ ನಾವು ನಿಜವಾಗಿ ಪರಿವರ್ತನೀಯತೆ ಮತ್ತು ಅಪರಿವರ್ತನೀಯತೆಗಳ ನಡುವಣ ವ್ಯತ್ಯಾಸವನ್ನು ಗ್ರಹಿಸಬೇಕು. ಒಂದು ಸ್ವತಂತ್ರವಾಗಿ ನಿರ್ವಹಣೆಯಾಗುವ ಮತ್ತು ಇನ್ನೊಂದು ನಿರ್ವಹಿಸಲ್ಪಡುವ ಹಣವ್ಯವಸ್ಥೆ ಎಂದು ಸಾಮಾನ್ಯವಾಗಿ

---

೧. ಆಂಡ್ರೆಡ್ಸ್, ಹಿಸ್ಟರಿ ಆಫ್ ದಿ ಬ್ಯಾಂಕ್ ಆಫ್ ಇಂಗ್ಲೆಂಡ್, ಪು. ೧೯೮

ನಂಬಲಾಗುತ್ತದೆ. ಇದು ದೊಡ್ಡ ತಪ್ಪು. ಏಕೆಂದರೆ, ನಿರ್ವಹಿಸಲ್ಪಡುವ ಕರನ್ಸಿಯೆಂದರೆ, ಯಾರು ನೀಡಿಕೆ ಮಾಡುತ್ತಾರೋ, ಅವರ ಮೇಲೆ ಆ ಕರೆನ್ಸಿಯ ನೀಡಿಕೆ ಅವಲಂಬಗೊಳ್ಳುತ್ತದೆ ಎನ್ನುವುದನ್ನು ಒಪ್ಪುವುದಾದರೆ, ಪರಿವರ್ತನೀಯ ಕರೆನ್ಸಿ ಸಹ, ಅಪರಿವರ್ತನೀಯ ಕರೆನ್ಸಿಯಷ್ಟೇ ನಿರ್ವಹಿಸುವ ಕರೆನ್ಸಿಯಾಗುತ್ತದೆ. ಆಗ ಇವೆರಡರ ನಡುವಣ ಒಂದೇ ಒಂದು ವ್ಯತ್ಯಾಸವೆಂದರೆ, ಪರಿವರ್ತನೀಯ ಕರೆನ್ಸಿಯ ನಿರ್ವಹಣೆಯಲ್ಲಿ ನೀಡಿಕೆಯ ತೀರ್ಮಾನವನ್ನು ನಿಯಂತ್ರಿಸಲಾಗುತ್ತದೆ, ಆದರೆ ಅಪರಿವರ್ತನೀಯ ಕರೆನ್ಸಿಯಲ್ಲಿ ಈ ನಿಯಂತ್ರಣ ಇರುವುದಿಲ್ಲ ಅಷ್ಟೆ. ನಿಯಂತ್ರಣ ಮಾಡಿದರೂ ಸಹ, ಪರಿವರ್ತನೀಯ ಕರೆನ್ಸಿ ವ್ಯವಸ್ಥೆಯಲ್ಲಿ ಕರೆನ್ಸಿಯ ನೀಡಿಕೆ ಆಡಳಿತದ ತೀರ್ಮಾನಕ್ಕೇ ಬಿಟ್ಟ ವಿಷಯವಾಗುವುದರಿಂದ, ಅಷ್ಟರಮಟ್ಟಿಗೆ ಪರಿವರ್ತನೀಯತೆ ಸುರಕ್ಷಿತವಲ್ಲ. ಈ ದೃಷ್ಟಿಯಿಂದ ಅದು ಅಪರಿವರ್ತನೀಯ ಕರೆನ್ಸಿಗಿಂತ ತೀರ ಭಿನ್ನ ವ್ಯವಸ್ಥೆಯಾಗುವುದಿಲ್ಲ. ಕರೆನ್ಸಿಯನ್ನು ವಿಸ್ತರಿಸುವುದು ಆಡಳಿತದ ತೀರ್ಮಾನಕ್ಕೆ ಬಿಟ್ಟ ವಿಷಯವಾದಾಗ ಮತ್ತು ಕರೆನ್ಸಿಯ ನೀಡಿಕೆಯನ್ನು ಚಲಾವಣೆಯಿಂದ ಹೊರದೂಡುವುದರಿಂದ, ಪರಿವರ್ತನೀಯ ಕರೆನ್ಸಿ ಸಹ ಅಪರಿವರ್ತನೀಯವಾಗಿ ಬಿಡಬಹುದು. ಆದ್ದರಿಂದ ಕರೆನ್ಸಿಯ ಪರಿವರ್ತನೀಯತೆ ಮತ್ತು ಅಪರಿವರ್ತನೀಯತೆ ವಾಸ್ತವವಾಗಿ ಕರೆನ್ಸಿಯ ನೀಡಿಕೆಯ ಯುಕ್ತಾಯುಕ್ತ ತೀರ್ಮಾನಗಳ ನಡುವಣ ವ್ಯತ್ಯಾಸಕ್ಕೆ ಸಮನಾಗುತ್ತದೆಂದು ಹೇಳಬಹುದು. ಅಂದರೆ, ಪರಿವರ್ತನೀಯತೆ ಕರೆನ್ಸಿಯ ನೀಡಿಕೆಯ ಮೇಲಿರುವ ಲಗಾಮು ಎಂದು ಹೇಳಬಹುದು. ಈ ವಿಷಯವನ್ನು ಮುಖ್ಯವಾಗಿ ನಾವು ಗಮನದಲ್ಲಿಟ್ಟುಕೊಳ್ಳಬೇಕು. ಜೊತೆಗೆ ಆಡಳಿತದಲ್ಲಿ ಹತೋಟಿಯಿಲ್ಲದಿರುವಾಗ, ಪರಿವರ್ತನೀಯ ಕರೆನ್ಸಿ, ಅಪರಿವರ್ತನೀಯ ಕರೆನ್ಸಿಯಾಗುವ ಅಪಾಯವನ್ನು ಹೊಂದಿರುತ್ತದೆ ಎನ್ನುವುದನ್ನೂ ಗಮನಿಸಬೇಕು. ಆಗ ನಮಗೆ ಸಮರ್ಥ ನಿರ್ವಹಣೆ ಅತ್ಯಂತ ಹೆಚ್ಚಿನ ಕರೆನ್ಸಿಯನ್ನು ನೀಡುವಂತಹ ಅಸಮರ್ಥ ನಿರ್ವಹಣೆಯಾಗಿ ಹೇಗೆ ಪರಿವರ್ತಿತವಾಗಬಲ್ಲದು ಎಂಬುದನ್ನು ಗ್ರಹಿಸುವುದಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದಲೇ, ಪರಿವರ್ತನೀಯ ವ್ಯವಸ್ಥೆ ಇರುವ ರಾಷ್ಟ್ರಗಳಲ್ಲಿ, ಹಣಕಾಸು ವ್ಯವಹಾರವನ್ನು ಎಷ್ಟು ಯುಕ್ತವಾಗಿ ನಿರ್ವಹಿಸಲಾಯಿತೆಂದರೆ, ಲೋಹದ ನಾಣ್ಯಗಳು ರಾಷ್ಟ್ರದಿಂದ ಹೊರಗೆ ಹೋದಾಗಲೂ ರಾಷ್ಟ್ರದಲ್ಲಿ ಕಾಗದದ ಕರೆನ್ಸಿಯ ಪ್ರಮಾಣವನ್ನು ಹೆಚ್ಚು ಮಾಡಲಿಲ್ಲ. ಬದಲಿಗೆ ಅದರ ಪ್ರಮಾಣವನ್ನು ಕಡಿಮೆ ಮಾಡಲಾಯಿತು. ವಾಸ್ತವವಾಗಿ ಚಿನ್ನದ ಕರೆನ್ಸಿಗಿಂತ ಕಾಗದದ ಕರೆನ್ಸಿಯ ನಿರಪೇಕ್ಷ ಪ್ರಮಾಣ ಹೆಚ್ಚು ಇಳಿತಾಯವಾಗಿತ್ತು. ಇದಕ್ಕೆ ಕಾರಣ, ಪರಿವರ್ತನೀಯತೆಗಿದ್ದ ಜವಾಬ್ದಾರಿ. ಇದು "ಪರಿಣಾಮ ಸ್ವರೂಪದ ತತ್‌ಕ್ಷಣದ ನಿರಪೇಕ್ಷ ಪರಿವರ್ತನೀಯತೆ"[೧]ಯ ಜವಾಬ್ದಾರಿಯಾಗಿತ್ತು. ಈಗ ನಾವು ಪ್ರೊಫೆಸರ್ ಸಮ್‌ನರ್‌ರ ಅಭಿಪ್ರಾಯವನ್ನು ಪ್ರಶಂಸಿಸಬಹುದು.[೨] ಅವರ ಮಾತುಗಳಲ್ಲಿ ಹೇಳುವುದಾದರೆ

"ಕರೆನ್ಸಿಯ ಪರಿವರ್ತನೀಯತೆ ಎನ್ನುವುದು ಮನುಷ್ಯನ ಮನಸ್ಸಿದ್ದ ಹಾಗೆ. ಅದಕ್ಕೆ ಅನೇಕ ಸ್ತರಗಳಿವೆ. ಅದು ಎಷ್ಟು ಶಿಸ್ತಿನಿಂದಿದೆಯೋ ಮತ್ತು ಎಷ್ಟು ಶುದ್ಧವಾಗಿರುತ್ತದೆಯೋ ಅಷ್ಟು ಮೌಲ್ಯಯುತ ವಾಗಿರುತ್ತದೆ".

ಪರಿಸ್ಥಿತಿ ಹೀಗಿರುವಾಗ, ಪರಿವರ್ತನೀಯತೆಯ ಯಾವ ಸ್ತರವನ್ನು ನಮಗೆ ದೊರಕಿಸಿಕೊಡಲಾಗಿದೆ ಎನ್ನುವುದನ್ನು ತಿಳಿಯದೆ, ಅಪರಿವರ್ತನೀಯ ಕರೆನ್ಸಿಯ ಪರಿಣಾಮಗಳಿಗೆ ನಾವು ಪ್ರತಿರೋಧ ಹೊಂದಿದ್ದೇವೆ

---

೧. ನಿಕಲ್‌ಸನ್ ತನ್ನ 'ವಾರ್ ಫೈನಾನ್ಸ್' ಪುಸ್ತಕದಲ್ಲಿ ಯಾವುದೇ ಒಂದು ಪದ, ಈ ಪರಿಭಾವನೆಯನ್ನು ಪೂರ್ಣ ಅರ್ಥವನ್ನು ಕೊಡಲಾರದು ಎಂದು ಹೇಳುತ್ತಾನೆ. ೧೯೧೮. ಪು. ೩೬

೨. ಎ ಹಿಸ್ಟರಿ ಆಫ್ ಅಮೆರಿಕನ್ ಕರೆನ್ಸಿ ನ್ಯೂಯಾರ್ಕ್, ೧೮೭೪. ಪು. ೧೦೬

ಎಂದು ಹೇಳುವುದು ಮೂರ್ಖತೆಯಾಗುತ್ತದೆ. ಭಾರತದಲ್ಲಿ ರೂಪಾಯಿಯ ಪರಿವರ್ತನೀಯತೆಯ ಸ್ವರೂಪ ಯಾವುದು? ಅದು ಮುಂದೂಡಲ್ಪಟ್ಟ, ಕಾನೂನಿಗೆ ಹೊರತಾಗಿರುವ, ಸ್ಥಳೀಯತೆಯಿಂದ ಮುಕ್ತವಾಗಿರುವ, ಆದ್ದರಿಂದ ಸತ್ವಹೀನವಾದ ಒಂದು ಪರಿವರ್ತನೀಯ ವ್ಯವಸ್ಥೆ. ಅಂದರೆ ಸತ್ಯವಾಗಿ ಹೇಳುವುದಾದರೆ ಅದು ಪರಿವರ್ತನೀಯ ವ್ಯವಸ್ಥೆಯಲ್ಲ. ಅದು ವಿದೇಶೀ ಸಾಲಗಳ ವಿಳಂಬಿತ ಪಾವತಿಯ ಒಂದು ವ್ಯವಸ್ಥೆ ಸಹ. ಏಕೆಂದರೆ, ವಾಸ್ತವತೆಯಲ್ಲಿ, ವಿದೇಶೀ ಸಂದಾಯಗಳಿಗೆ ಸಂಬಂಧಿಸಿದಂತೆ, ಪರಿವರ್ತನೀಯತೆ ಯಾವ ನಿಬಂಧನೆಗಳನ್ನು ಹೊಂದಿರುತ್ತದೆ? ವಿದೇಶೀ ವಿನಿಮಯದಲ್ಲಿ ಇಳಿತಾಯವಾಗುವವರೆಗೆ ವಿದೇಶೀ ಸಾಲಗಳ ವಿಳಂಬಿತ ಪಾವತಿಗೆ ಅವಕಾಶವಿದೆ ಅಥವಾ ರೂಪಾಯಿ ಅಪರಿವರ್ತನೀಯತೆಯನ್ನು ಹೊಂದಿರುತ್ತದೆ ಎಂದು ಅದರ ಅರ್ಥ. ವಿದೇಶೀ ವಿನಿಮಯ ಕೆಳಗಿಳಿಯುವವರೆಗೆ ಸಾಲಗಳಿಗೆ ವಿಳಂಬಿತ ಪಾವತಿಯ ಅವಕಾಶವಿದೆ ಎಂದಷ್ಟೇ ಅಲ್ಲದೆ, ನಿಜವಾಗಿ ವಿನಿಮಯ ಇಳಿದಾಗ ವಿಳಂಬಿತ ಪಾವತಿ ಅವಕಾಶವನ್ನು ಸಡಿಲಿಸಲಾಗುತ್ತದೆ ಎಂದು ಸಹ ಭಾವಿಸುವಂತಿಲ್ಲ. ಏಕೆಂದರೆ ಇದು ವಿವೇಚನೆಗೆ ಸಂಬಂಧಿಸಿದ ವಿಷಯವೇ ಹೊರತು ಕಾನೂನಿನಂತೆ ನಡೆಯುವುದೇನಲ್ಲ.[೧] ಈ ಮಟ್ಟದ ಪರಿವರ್ತನೀಯತೆ, ಸಸ್‌ಪೆನ್ಷನ್ ಅವಧಿಯ ಬ್ಯಾಂಕು ನೋಟುಗಳ ಅಪರಿವರ್ತನೀಯತೆಗಿಂತ ತೀರ ಭಿನ್ನವಾದುದೇ? ಪರಿವರ್ತನೀಯತೆಗಳ ಬಗ್ಗೆ ಕಲ್ಪನೆ ಇಲ್ಲದಿರುವ ವ್ಯಕ್ತಿಗಳಿಗೆ, ಇವೆರಡರ ನಡುವಣ ವ್ಯತ್ಯಾಸ ಅರ್ಥವಾಗುವುದು ಕಷ್ಟ, ಇವೆರಡರ ನಡುವಣ ವ್ಯತ್ಯಾಸ ತುಂಬಾ ಕಡಿಮೆ ಇರುವುದರಿಂದ, ಅದನ್ನು ಅವರಿಗೆ ಅರ್ಥಮಾಡಿಸುವುದೂ ಕಷ್ಟ. ವಾಸ್ತವವಾಗಿ, ನಾವು ಭಾರತದಲ್ಲಿ ಬೆಲೆಮಟ್ಟಗಳು ಮತ್ತು ಭಾರತದ ಹೊರಗಿನ ರಾಷ್ಟ್ರಗಳಲ್ಲಿ ಬೆಲೆಮಟ್ಟಗಳನ್ನು ವಿಶ್ಲೇಷಿಸಿದರೆ, ಇವೆರಡೂ ವ್ಯವಸ್ಥೆಗಳ ನಡುವೆ ವ್ಯತ್ಯಾಸವಿಲ್ಲ ಎನ್ನುವುದಕ್ಕೆ ನಮಗೆ ಇನ್ನೂ ಒಂದು

---

೧. ವೈಸರಾಯ್ ಕೌನ್ಸಿಲ್‌ನ ಹಣಕಾಸು ಸದಸ್ಯ, ೧೯೦೮–೧೯೦೯ ರ ಹಣಕಾಸು ಹೇಳಿಕೆ ಪತ್ರದಲ್ಲಿ ಹೀಗೆ ಅಭಿಪ್ರಾಯಪಟ್ಟಿದ್ದ (ಪುಟ ೨೩) "ಚಿನ್ನದ ನೀಡಿಕೆಗಿರುವ ಬೇಡಿಕೆಯನ್ನೆಲ್ಲಾ ನಾವು ಮಿತಿಯಿಲ್ಲದೆ ಪೂರೈಸುವಂತಿದ್ದರೆ, ನಮ್ಮಲ್ಲಿರುವ ಪೂರೈಕೆ ಎಲ್ಲವೂ ಕೇವಲ ಕೆಲವೇ ವಾರಗಳಲ್ಲಿ ಮುಗಿದುಹೋಗುತ್ತಿತ್ತು........ಈ ಕಾರಣಕ್ಕಾಗಿ ನಾವು ನಮ್ಮ ಕಾನೂನು ಹಕ್ಕಿಗೆ ಅಂಟಿಕೊಂಡೆವು....... ನಮ್ಮ ಅನುಕೂಲದ ಸಂದರ್ಭಗಳನ್ನು ಬಿಟ್ಟು ರೂಪಾಯಿಗೆ ಬದಲಾಗಿ ಸವರನ್‌ಗಳನ್ನು ನಾವು ಕೊಡಬೇಕಾಗಿಲ್ಲ. ಇದಕ್ಕಾಗಿ ನಮ್ಮ ಕರೆನ್ಸಿ ಕಚೇರಿಗೆ ನಾವು ತಾಕೀತು ಮಾಡಿದ್ದೇವೆ. ಅದೆಂದರೆ, ಯಾವುದೇ ವ್ಯಕ್ತಿಗೆ ೧೦,೦೦೦ ಕ್ಕಿಂತ ಹೆಚ್ಚಿಗೆ ಚಿನ್ನವನ್ನು ಕೊಡಕೂಡದು". ೧೯೦೭ರಲ್ಲಿ ವಿದೇಶೀ ವಿನಿಮಯದ ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸರ್ಕಾರ ಯಾವ ಧೋರಣೆಯನ್ನು ಹೊಂದಿತ್ತು, ರೂಪಾಯಿಯ ಪರಿವರ್ತನೆಗೆ ಯಾವ ಜವಾಬ್ದಾರಿಯನ್ನು ಹೊತ್ತಿತ್ತು ಎನ್ನುವುದು ಮೇಲಿನ ಹೇಳಿಕೆಯಿಂದ ಸುಸ್ಪಷ್ಟ! ಎಷ್ಟರಮಟ್ಟಿಗೆ ಪರಿವರ್ತನೆಯನ್ನು ಮಾಡಬಹುದು ಎನ್ನುವುದನ್ನು ಆಡಳಿತದವರು ತೀರ್ಮಾನಿಸುತ್ತಿದ್ದುದರಿಂದ, ಅದನ್ನು ಎಷ್ಟರಮಟ್ಟಿಗೆ ಜಾರಿಗೆ ತರಲಾಗಿತ್ತು ಎನ್ನುವುದನ್ನು ವಿಮರ್ಶಿಸುವುದು ಕಷ್ಟ. ಅಧಿಕಾರಿಗಳ ಧೋರಣೆಯಾದರೋ, ರೂಪಾಯಿ ವಾಸ್ತವವಾಗಿ ಪರಿವರ್ತನೀಯ ಎಂದು ಸಾರ್ವಜನಿಕರಿಗೆ ಅಭಿಪ್ರಾಯ ಕೊಡುವುದೇ ಆಗಿತ್ತು. ಹೀಗಿದ್ದರೆ, ರೂಪಾಯಿಯನ್ನು ಕಾನೂನುಬದ್ಧವಾಗಿಯೇ ಏಕೆ ಪರಿವರ್ತಿಸಬಾರದು? ಹಾಗಾದಾಗ, ಪರಿವರ್ತನೀಯತೆ ನಿಜವಾಗಿ ಜಾರಿಯಲ್ಲಿರುವುದಾದರೆ, ಅದನ್ನು ಕಾನೂನು ಮಾಡಿದಾಗ, ಸರ್ಕಾರಕ್ಕೆ ಯಾವ ಹೆಚ್ಚಿನ ಜವಾಬ್ದಾರಿಯನ್ನೂ ಹೊರಿಸಿದಂತಾಗುವುದಿಲ್ಲವಷ್ಟೆ. ಸರ್ಕಾರ ಇಂಥ ಕಾನೂನನ್ನು ಜಾರಿಗೆ ತರಲಾರದು. ಏಕೆಂದರೆ ಹೀಗೆ ಮಾಡಿದರೆ ಸಟ್ಟಾ ವ್ಯವಹಾರಸ್ಥರು ಇದರ ಲಾಭ ಪಡೆದುಕೊಂಡುಬಿಡುತ್ತಾರೆ ಎನ್ನುವ ಭಯ. ಆದರೆ ಸಟ್ಟಾ ವ್ಯವಹಾರಸ್ಥರು ಹಾಗೆ ಮಾಡಬಾರದೇಕೆ? ಅವರು ರೂಪಾಯಿಯನ್ನು ಹೊಂದಿರುವವರಲ್ಲವೇ? ಹೀಗೆ ಮಾಡದಿರುವುದರ ಅರ್ಥವೆಂದರೆ, ಕರೆನ್ಸಿಯನ್ನು ಅದರ "ಗರಿಷ್ಠಮಿತಿ"ಗಿಂತ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ನೀಡಿಕೆಯಾಗಿದೆ ಮತ್ತು ಅದರ ಮೌಲ್ಯ ಸಟ್ಟಾ ವ್ಯವಹಾರಸ್ಥರಿಂದ ದುರುಪಯೋಗಪಡಿಸಿಕೊಳ್ಳಬಹುದಾದ ಮಟ್ಟವನ್ನು ಮುಟ್ಟಿದೆ ಎನ್ನುವುದನ್ನು ಸರ್ಕಾರ ಅರಿತಿದೆ.

ಪುರಾವೆ ದೊರೆಯುತ್ತದೆ. ಇಂಥ ವಿಶ್ಲೇಷಣೆಯಿಂದ ಇವೆರಡೂ ವ್ಯವಸ್ಥೆಗಳ ನಡುವಣ ಸಾಮ್ಯ ಸಹ ಪರಿಪೂರ್ಣವಾದದ್ದು ಎಂದು ಗೋಚರವಾಗುತ್ತದೆ.

ಅಪರಿವರ್ತನೀಯ ಕರೆನ್ಸಿ ವ್ಯವಸ್ಥೆಯಲ್ಲಿ ಚಿನ್ನಕ್ಕೆ ಯಾವ ಅಧಿಕ ಮೌಲ್ಯವೂ ದೊರೆಯದ ಹಾಗೆ ಮತ್ತು ಈ ವ್ಯವಸ್ಥೆ ಹಾಗೂ ಪರಿವರ್ತನೀಯ ಕರೆನ್ಸಿಗಳ ನಡುವೆ ವ್ಯತ್ಯಾಸ ಗೊತ್ತಾಗದ ಹಾಗೆ ಕರೆನ್ಸಿಯನ್ನು ನಿರ್ವಹಿಸುವುದು ಸಾಧ್ಯ. ಆದರೆ ವಾಸ್ತವವಾಗಿ ಕರೆನ್ಸಿಯನ್ನು ಹೀಗೆ ನಿರ್ವಹಿಸಬಹುದೇ ಎನ್ನುವುದು ಪ್ರಶ್ನೆ. ಜೊತೆಗೆ, ಚಿನ್ನಕ್ಕೆ ಅಧಿಕೃತ ದರಕ್ಕಿಂತ ಹೆಚ್ಚಿನ ದರ ದೊರೆಯುವುದಿಲ್ಲ ಎನ್ನುವುದಷ್ಟೇ ಒಂದು ಅಪರಿವರ್ತನೀಯ ಕರೆನ್ಸಿಯನ್ನು ಪರವರ್ತನೀಯ ಕರೆನ್ಸಿಗೆ ಸಮಮಾಡಲು ಸಾಕೇ ಎನ್ನುವುದು ಪರಿಸ್ಥಿತಿಗಳನ್ನು ಅವಲಂಬಿಸುತ್ತದೆ ಎನ್ನುವುದನ್ನು ಗಮನಿಸಬೇಕು. ಈ ವಿಷಯಗಳನ್ನು ಸೂಕ್ತ ಸ್ಥಳಗಳಲ್ಲಿ ವಿಮರ್ಶಿಸಲಾಗುತ್ತದೆ. ಪ್ರಸ್ತುತದಲ್ಲಿ ನಾವು ಚರ್ಚಿಸುತ್ತಿರುವುದು, ಅಪರಿವರ್ತನೀಯ ಕರೆನ್ಸಿಯ ಅಂತಃಸ್ಸತ್ವಗಳನ್ನು ಮಾತ್ರ. ಈಗ ನಾವು ಗಮನಿಸಬೇಕಾದ ವಿಷಯವೆಂದರೆ, ಸುವರ್ಣ ವಿನಿಮಯ ಪ್ರಮಿತಿ ಭಾರತದ ನಿಜವಾದ ಹಣ ಪ್ರಮಿತಿಯ ಸ್ವರೂಪವನ್ನು ಮರೆಮಾಚಲಾರದು. ಇಲ್ಲಿ ಚಿನ್ನ ಅಪರಿಮಿತ ಕಾನೂನುಬದ್ಧ ಹಣವಾದರೂ, ಇದರ ಜೊತೆಗೇ ಇನ್ನೊಂದು ರೀತಿಯ ಅಪರಿವರ್ತನೀಯ ವಿಶ್ವಾಸಾವಲಂಬಿ ಕರೆನ್ಸಿ ಚಲಾವಣೆಯಲ್ಲಿದೆ. ಇದೂ ಸಹ ಅಪರಿಮಿತ ಕಾನೂನು ಬದ್ಧತೆಯನ್ನು ಹೊಂದಿದೆ.

ಈ ದೃಷ್ಟಿಯಿಂದ ನೋಡಿದಾಗ, ಭಾರತದಲ್ಲಿ ಪ್ರಸ್ತುತದಲ್ಲಿ ಜಾರಿಯಲ್ಲಿರುವ ಕರೆನ್ಸಿ ವ್ಯವಸ್ಥೆ ೧೮೯೮ರಲ್ಲಿ ಸರ್ಕಾರ ರೂಪಿಸಿದ ಮತ್ತು ಫೌಲರ್ ಸಮಿತಿ ಜಾರಿಗೆ ತಂದ, ಕರೆನ್ಸಿ ವ್ಯವಸ್ಥೆಗೆ ತೀರ ವಿರುದ್ಧವಾದದ್ದು ಎನ್ನುವುದು ಅತ್ಯಂತ ಸ್ಪಷ್ಟವಾಗುತ್ತದೆ. ಬ್ಯಾಂಕ್ ಚಾರ್ಟರ್ ಆಕ್ಟ್ ಮತ್ತು ಬ್ಯಾಂಕ್ ಸಸ್‌ಪೆನ್ಷನ್ ಆಕ್ಟ್‌ಗಳು ಯಾವ ಕಾರಣಕ್ಕಾಗಿ ವಿರೋಧವಾಗಿದ್ದವೋ ಅದೇ ಕಾರಣಕ್ಕೆ ಮೇಲಿನ ವ್ಯವಸ್ಥೆಗಳೆರಡೂ ವಿರುದ್ಧವಾದವು ಎಂದು ಹೇಳಬಹುದು. ಇವೆರಡೂ ಮಸೂದೆಗಳ ಪ್ರಕಾರ ಇಂಗ್ಲೆಂಡ್‌ನಲ್ಲಿ ಕರೆನ್ಸಿ ಒಂದು ಮಿಶ್ರ ವ್ಯವಸ್ಥೆಯಾಗಿತ್ತು. ಭಾಗಶಃ ಚಿನ್ನವನ್ನು ಮತ್ತು ಭಾಗಶಃ ಕಾಗದದ ಹಣವನ್ನು ಕರೆನ್ಸಿ ವ್ಯವಸ್ಥೆ ಹೊಂದಿತ್ತು. ವ್ಯತ್ಯಾಸವೆಂದರೆ, ಬ್ಯಾಂಕ್ ಸಸ್‌ಪೆನ್ಷನ್ ಆಕ್ಟ್ ಪ್ರಕಾರ, ಚಿನ್ನದ ನೀಡಿಕೆ ಮಿತ ಪ್ರಮಾಣದ್ದಾಗಿತ್ತು. ಕಾಗದದ ಹಣ ನೀಡಿಕೆ ಅಪರಿಮಿತವಾಗಿತ್ತು. ಬ್ಯಾಂಕ್ ಚಾರ್ಟರ್ ಆಕ್ಟ್ ಪ್ರಕಾರ, ಇದು ವಿರುದ್ಧ ಪರಿಸ್ಥಿತಿಯನ್ನು ಹೊಂದಿತ್ತು. ಇದೇ ರೀತಿ ಭಾರತ ಸರ್ಕಾರದ ಮೂಲಯೋಜನೆಯ ಪ್ರಕಾರ, ರೂಪಾಯಿಯ ನೀಡಿಕೆ ಮಿತವಾಗಿದ್ದು, ಚಿನ್ನದ ನೀಡಿಕೆ ಅಪರಿಮಿತವಾಗಿರಬೇಕಾಗಿತ್ತು, ಆದರೆ ಪ್ರಸ್ತುತದ ವ್ಯವಸ್ಥೆಯಲ್ಲಿ ಚಿನ್ನದ ನೀಡಿಕೆ ಮಿತವಾಗಿದ್ದು, ರೂಪಾಯಿಯ ನೀಡಿಕೆ ಅಪರಿಮಿತವಾಗಿದೆ.

ಭಾರತ ಸರ್ಕಾರ ಮೂಲತಃ ಆಲೋಚಿಸಿದ್ದ ಯೋಜನೆಗಿಂತ ಇದು ಸುಧಾರಿತವಾದ ಯೋಜನೆಯೇ? ಮೂಲ ಯೋಜನೆಗಿದ್ದ ಒಂದೇ ಒಂದು ಆಕ್ಷೇಪಣೆಯೆಂದರೆ ರೂಪಾಯಿ ಅಪರಿವರ್ತನೀಯವಾಗಿತ್ತು ಎನ್ನುವುದು.[೧]

ಹಾಗಾದರೆ ಪರಿವರ್ತನೀಯತೆ ಒಂದು ಅತ್ಯಾವಶ್ಯಕ ಅಗತ್ಯವೇ? ಹಾಗಿದ್ದರೆ ಯಾವಾಗ? ಒಂದು ಕರೆನ್ಸಿಯ ಮೌಲ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಪರಿವರ್ತನೀಯತೆ ಅಗತ್ಯ ಎಂಬ ಭಾವನೆ ನಿಜವಾಗಿಯೂ

---

೧. ಈ ಅಂಶದ ಮೇಲೆ ಲಿಂಡ್ಸೆ ಮತ್ತು ಪ್ರೊ. ಬಿನ್ ಭಾರತ ಸರ್ಕಾರದ ಈ ಯೋಜನೆಯನ್ನು ಕಟುವಾಗಿ ಟೀಕಿಸಿದ್ದರು. ತಮ್ಮ ಯೋಜನೆ, ಒಂದು ರೀತಿಯ ಪರಿವರ್ತನೀಯತೆಯನ್ನುಳ್ಳ ಯೋಜನೆಯಾದುದರಿಂದ ಸರ್ಕಾರದ ಯೋಜನೆಗಿಂತ ಶ್ರೇಷ್ಠವಾದದ್ದು ಎಂದು ಅವರು ವಾದಿಸಿದ್ದರು.

ಖೇದಕರ. ಉದಾಹರಣೆಗೆ ಬಾಳೆಯ ಹಣ್ಣಿನ ಮೌಲ್ಯವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ಅದನ್ನು ಸೇಬಿನ ಹಣ್ಣಿನೊಡನೆ ಪರಿವರ್ತನಿಯತೆ ಹೊಂದಿರಬೇಕೆಂದು ಯಾರೂ ಬಯಸಲಾರರು. ಬಾಳೆಯ ಹಣ್ಣಿಗೆ ಬೇಡಿಕೆ ಹೆಚ್ಚಾಗಿದ್ದು ಅದರ ಪೂರೈಕೆ ಕಡಿಮೆಯಿರುವುದರಿಂದ ಅದು ತನ್ನ ಮೌಲ್ಯವನ್ನು ಕಾಪಾಡಿಕೊಳ್ಳುತ್ತದೆ. ಕರೆನ್ಸಿ ಈ ನಿಯಮಕ್ಕೆ ಹೊರತಾದದ್ದು ಎಂದು ಭಾವಿಸುವುದಕ್ಕೆ ಕಾರಣವಿಲ್ಲ. ಕರೆನ್ಸಿಯ ಬೆಲೆಯನ್ನು ಬಾಳೇಹಣ್ಣಿನ ಬೆಲೆಗಿಂತ ಹೆಚ್ಚು ದೃಢವಾಗಿಟ್ಟಿರಬೇಕೆಂದು ನಾವು ಬಯಸುವುದಕ್ಕೆ ಕಾರಣವೆಂದರೆ, ಹಣ ಎಲ್ಲ ಸರಕುಗಳ ಸಾಮಾನ್ಯ ಮೌಲ್ಯಮಾಪಕವಾಗಿರುವುದು. ಒಂದು ಕರೆನ್ಸಿಯ ಮೌಲ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಅಥವಾ ಯಾವುದೇ ಸರಕಿನ ಮೌಲ್ಯವನ್ನು ಕಾಪಾಡಿಕೊಳ್ಳುವುದಕ್ಕೆ ಅಗತ್ಯವಿರುವ ವಿಷಯವೆಂದರೆ, ಅದರ ಪೂರೈಕೆ ಮೇಲೆ ದಕ್ಷವಾದ ಮಿತಿಯನ್ನುಂಟುಮಾಡುವುದು. ಈ ದೃಷ್ಟಿಯಿಂದ ಪರಿವರ್ತನೀಯತೆ ಉಪಯುಕ್ತ. ಏಕೆಂದರೆ, ಅದು ನೇರವಾಗಿ ಕರೆನ್ಸಿಯ ಮೌಲ್ಯವನ್ನು ಕಾಪಾಡಿಕೊಳ್ಳುತ್ತದೆ ಎನ್ನುವ ಕಾರಣಕ್ಕಲ್ಲ. ವಾಸ್ತವವಾಗಿ ಇದು ಸುಳ್ಳು. ಆದರೆ ಪರಿವರ್ತನೀಯತೆ ಕರೆನ್ಸಿಯ ಪೂರೈಕೆಯ ಮೇಲೆ ಒಂದು ಮಿತಿಯನ್ನು ಹೇರುವ ಸಮರ್ಥ ಶಕ್ತಿಯನ್ನು ಹೊಂದಿದೆ ಎನ್ನುವುದರಿಂದ. ಆದರೆ ಈ ಕರೆನ್ಸಿಯ ದೃಢತೆಯನ್ನು ಕಾಪಾಡಿಕೊಳ್ಳುವುದನ್ನು ಸಾಧಿಸಲು ಪರಿವರ್ತನೀಯತೆಯೊಂದೇ ಸಾಧನವಲ್ಲ. ಹಣದ ನೀಡಿಕೆಯ ಮೇಲೆ ಮಿತಿಯನ್ನೊಡ್ಡುವ ಯಾವುದೇ ಕ್ರಮ ಈ ಪರಿಣಾಮವನ್ನುಂಟುಮಾಡಲು ಶಕ್ತವಾಗಿದೆ. ಈಗ ಒಂದು ಪಕ್ಷ ಟಂಕಸಾಲೆಯು ನಾಣ್ಯಗಳನ್ನು ಟಂಕಿಸುವ ಕೆಲಸವನ್ನು ಮಾಡುವುದಿಲ್ಲ ಎಂದು ಭಾವಿಸೋಣ. ಇದರಿಂದ ಕರೆನ್ಸಿಯ ನೀಡಿಕೆಯ ಮೇಲೆ ಮಿತಿಯನ್ನೊಡ್ಡಿದಂತಾಯಿತು. ಈ ರೀತಿಯ ಅಪರಿವರ್ತನೀಯತೆಯಿಂದ, ಪರಿವರ್ತನೀಯತೆಯ ಎಲ್ಲ ಉದ್ದೇಶಗಳನ್ನೂ ಸೇರಿಸಿದಂತಾಗುತ್ತದಷ್ಟೆ. ಆಗ ಆ ರೀತಿಯ ಅಪರಿವರ್ತನೀಯ ರೂಪಾಯಿ ಈಗ ಭಾರತದಲ್ಲಿ ಜಾರಿಯಲ್ಲಿರುವ ಅರೆ–ಬರೆ ಪರಿವರ್ತನೀಯ ರೂಪಾಯಿಗಿಂತ ಹೆಚ್ಚು ಶ್ರೇಷ್ಠವಾದ ವ್ಯವಸ್ಥೆಯಾಗಿರುತ್ತದೆ.[೧] ಒಂದೇ ಅಪಾಯವೆಂದರೆ, ರೂಪಾಯಿ ಹೆಚ್ಚಿನ ಮೌಲ್ಯ ವೃದ್ಧಿಯನ್ನು ಪಡೆಯುವ ಸಾಧ್ಯತೆ ಇರುತ್ತದೆ. ಆದರೆ, ಚಿನ್ನಕ್ಕೆ ಸಾರ್ವತ್ರಿಕ ಕಾನೂನುಬದ್ಧತೆಯನ್ನು ಕೊಡುವುದರ ಮೂಲಕ ಈ ಅಪಾಯವನ್ನು ತಡೆಗಟ್ಟಬಹುದು. ಕರೆನ್ಸಿಯ ಮೇಲೆ ನಿರ್ದಿಷ್ಟ ಮಿತಿಯನ್ನೊಡ್ಡುವುದರ ಇನ್ನೊಂದು ಪರಿಣಾಮವೆಂದರೆ, ಅದನ್ನು ನಿರ್ವಹಣೆಯ ಕಷ್ಟದಿಂದ ತಪ್ಪಿಸಬಹುದು. ಏಕೆಂದರೆ ಈ ಕ್ರಮದಲ್ಲಿ ಕರೆನ್ಸಿ ನೀಡಿಕೆಯ ಪ್ರಮಾಣದ ಮೇಲಿನ ಎಲ್ಲ ಸಮಸ್ಯೆಗಳನ್ನೂ ಏಕಕಾಲದಲ್ಲಿ ಪರಿಹರಿಸಿಕೊಂಡು ಬಿಡುವುದು ಸಾಧ್ಯ.

ಮೇಲಿನ ಕಾರಣಗಳಿಗಾಗಿ, ಮೂಲತಃ ಯೋಜಿತವಾಗಿದ್ದ ಚಿನ್ನವನ್ನು ಪೂರಕವಾಗಿ ಹೊಂದಿರುವ, ನಿರ್ದಿಷ್ಟ ಪ್ರಮಾಣದ ನೀಡಿಕೆಯನ್ನುಳ್ಳ, ಅಪರಿವರ್ತನೀಯ ರೂಪಾಯಿಯ ವ್ಯವಸ್ಥೆ ಸುವರ್ಣ ವಿನಿಮಯ ಪ್ರಮಿತಿಯನ್ನು ಊನಗೊಳಿಸಿರುವ ಒಂದು ಕ್ರಮವಾಗಿತ್ತು. ಮತ್ತೆ, ಬೆಲೆಮಟ್ಟವನ್ನು ದೃಢವಾಗಿಟ್ಟುಕೊಳ್ಳುವ ದೃಷ್ಟಿಯಿಂದಲೂ, ಸುವರ್ಣ ವಿನಿಮಯ ಪ್ರಮಿತಿ ಮೂಲಯೋಜನೆಗಿಂತ ಸುಧಾರಿತವಾದುದೆಂದು ಹೇಳುವುದಕ್ಕಾಗುವುದಿಲ್ಲ. ಒಂದು ವಿಷಯವೆಂದರೆ, ಮೂಲಯೋಜನೆಯನ್ನು ತಿರುಚಿರುವುದಕ್ಕೆ ದುಃಖಪಡಬೇಕಾಗಿಲ್ಲ ಎಂದು ಹೇಳಬಹುದು. ಚಿನ್ನವು ಮೌಲ್ಯದ ಪ್ರಮಿತಿಯಾಗಿದೆಯೇ ಅಥವಾ ವಿಶ್ವಸನೀಯ

---

೧. ಕುಂಟುವ ಪ್ರಮಿತಿಯನ್ನು ವಿನಿಮಯ ಪ್ರಮಿತಿಗೆ ಹೋಲಿಸುವಾಗ ಪ್ರೊ॥ ಫಿಷರ್, ಈ ಅಂಶಗಳನ್ನು ಪೂರ್ತಿಯಾಗಿ ಗಮನಿಸದೇ ಹೋದಂತೆ ಕಾಣುತ್ತದೆ. ನೋಡಿ: ಫಿಷರ್‌ನ ಪರ್‌ಚೇಸಿಂಗ ಪವರ್ ಇತ್ಯಾದಿ ೧೯೧೧ ಪು. ೧೩೧–೧೩೨

ಹಣದ ಮೌಲ್ಯ ಪ್ರಮಿತಿಯಾಗಿದೆಯೇ ಎನ್ನುವುದು ಗೌಣವಾದ ವಿಷಯ. ಏಕೆಂದರೆ ದೃಢ ಪ್ರಮಿತಿಯನ್ನು ತಂದುಕೊಡುವಲ್ಲಿ ಇವೆರಡೂ ವಿಫಲವಾಗಿದೆ.

ಸುವರ್ಣ ಪ್ರಮಿತಿ, ಕಾಗದದ ಪ್ರಮಿತಿಯಷ್ಟೇ ಅದೃಢವಾದದ್ದು. ಏಕೆಂದರೆ, ಇವೆರಡೂ ವಿಸ್ತೃತಗೊಳ್ಳುವ ಹಾಗೂ ಸಂಕುಚಿತಗೊಳ್ಳುವ ಸ್ವಭಾವವುಳ್ಳ ಪ್ರಮಿತಿಗಳು. ಇದು ಸತ್ಯವಾದ ಮಾತು. ಆದರೆ ಯಾವುದೇ ಹಣಕಾಸು ವ್ಯವಸ್ಥೆಯಲ್ಲೂ ಅನಿರ್ದಿಷ್ಟವಾಗಿ ಸಂಕೋಚವಾಗುವ ಭಯವಿಲ್ಲ ಎಂಬುದನ್ನು ಗಮನಿಸಬೇಕು.[೧] ಎಚ್ಚರಿಕೆ ವಹಿಸಬೇಕಾದ ವಿಷಯುವೆಂದರೆ, ಅನಿರ್ದಿಷ್ಟವಾಗಿ ಹಣ ವಿಸ್ತಾರಗೊಳ್ಳದಂತೆ ನೋಡಿಕೊಳ್ಳಬೇಕಾದುದಷ್ಟೆ. ಹಣದ ಸ್ವರೂಪವನ್ನು ಹೊಂದಿಕೊಂಡು, ಅನಿರ್ದಿಷ್ಟವಾಗಿ ಹಣ ವಿಸ್ತರಣೆಗೊಳ್ಳುತ್ತದೆ. ಹಣ ಪ್ರಮಿತಿ, ಲೋಹದ ಹಣದಿಂದ ಕೂಡಿರುವಾಗ, ಹಣದ ವಿಸ್ತರಣೆ ಅಷ್ಟಾಗಿ ನಡೆಯುವುದು ಸಾಧ್ಯವಿಲ್ಲ. ಏಕೆಂದರೆ ಲೋಹದ ಹಣವನ್ನು ತಯಾರಿಸಲು ತಗಲುವ ವೆಚ್ಚ ವಿಸ್ತರಣೆಗೆ ಮಿತಿಯನ್ನೊಡ್ಡುತ್ತದೆ. ಹಣಪ್ರಮಿತಿ, ಪರಿವರ್ತನೀಯ ಕಾಗದದ ಹಣವಾಗಿರುವಾಗ, ಹಣಕ್ಕೆ ಬೆಂಬಲವಾಗಿ ಇಟ್ಟುಕೊಳ್ಳಬೇಕಾದ ಚಿನ್ನ ಮತ್ತು ಇತರ ರಿಸರ್ವ್‌ಗಳು ಹಣದ ವಿಸ್ತರಣೆಗೆ ಮಿತಿಯನ್ನೊಡ್ಡುತ್ತವೆ. ಆದರೆ, ಹಣದ ತಯಾರಿಕೆಗೆ ತಗಲುವ ವೆಚ್ಚಕ್ಕಿಂತ ಹೆಚ್ಚಿನ ಮೌಲ್ಯವನ್ನು ಹೊಂದಿರುವ ಹಣದ ವ್ಯವಸ್ಥೆ ಇರುವಾಗ ಮತ್ತು ಹಣ ಅಪರಿವರ್ತನೀಯವಾಗಿರುವಾಗ, ಹಣ ಅನಿರ್ದಿಷ್ಟ ವಿಸ್ತರಣೆಯ ಅಪಾಯವನ್ನು ಹೊಂದಿರುತ್ತದೆ. ಇಂಥ ವಿಸ್ತರಣೆಯನ್ನೇ ಹಣದ ಮೌಲ್ಯದ ಕುಸಿಯುವಿಕೆ ಅಥವಾ ಬೆಲೆಮಟ್ಟದ ಹೆಚ್ಚಳ ಎಂದು ಹೇಳಲಾಗುತ್ತದೆ. ಆದ್ದರಿಂದ, ಬ್ಯಾಂಕ್ ಚಾರ್ಟರ್ ಆಕ್ಟ್, ಬ್ಯಾಂಕ್ ರಿಸ್ಟ್ರಿಕ್ಷನ್ ಆಕ್ಟ್ ಅನ್ನು ಸುಧಾರಿಸಲಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ವಾಸ್ತವವಾಗಿ, ಅದು ಒಂದು ದೊಡ್ಡ ಸುಧಾರಣೆ ಎಂದೇ ಒಪ್ಪಿಕೊಳ್ಳಬೇಕು. ಏಕೆಂದರೆ ಅದು ಅತ್ಯಂತ ಹೆಚ್ಚು ವಿಸ್ತ್ರೃತಗೊಳ್ಳುವ ಸಾಧ್ಯತೆಯಿರುವ ಕರೆನ್ಸಿಯನ್ನು ಕಡಿಮೆ ವಿಸ್ತಾರಗೊಳ್ಳುವ ಕರೆನ್ಸಿಯಿಂದ ಪ್ರತಿನಿಧಿಸಿತು. ಈಗ ರೂಪಾಯಿ ಆಧಾರ ಕಳೆದುಕೊಂಡಿರುವ ನಾಣ್ಯ.[೨] ಹಾಗೆಯೇ ಅದು ಅಪರಿವರ್ತನೀಯ ಹಾಗೂ ಅಪರಿಮಿತ ಕಾನೂನುಬದ್ಧ ಹಣ. ಹೀಗಾಗಿ ಅದು ಅನಿರ್ದಿಷ್ಟವಾಗಿ ವಿಸ್ತಾರಗೊಳ್ಳುವ ಶಕ್ತಿಯನ್ನು ಹೊಂದಿರುವ ಕರೆನ್ಸಿ ಗುಂಪಿಗೆ ಸೇರಿದ ಹಣವಾಗುತ್ತದೆ. ಇದು ಮೌಲ್ಯವನ್ನು ಕಳೆದುಕೊಳ್ಳುವ ಮತ್ತು ಬೆಲೆ ಹೆಚ್ಚಳಕ್ಕೆ ಅವಕಾಶ ಮಾಡಿಕೊಡುವ ಕರೆನ್ಸಿ ಸಹ ಆಗಿರುತ್ತದೆ. ಈ ಅಪಾಯಗಳಿಗೆ

---

೧. ಹಾಟ್ರೆ ಆರ್.ಜಿ., ಅದೇ ಪುಸ್ತಕ ಅಧ್ಯಾಯ ೧.

೨. ಭಾರತದ ಕರೆನ್ಸಿಯನ್ನು ವಿಶ್ಲೇಷಿಸುವ ಕೆಲವು ಲೇಖಕರು ಈ ಮಾತನ್ನು ಏಕೆ ಒಪ್ಪುವುದಿಲ್ಲ ಎನ್ನುವುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ನೋಡಿ : ಇಂಡಿಯನ್ ಇಕನಾಮಿಕ್ ಅಸೋಸಿಯೇಷನ್‌ನ ವಾರ್ಷಿಕ ಸಭೆಯಲ್ಲಿ ಮಂಡಿಸಲಾದ ಮದನ್‌ರವರ ಲೇಖನ (ಇಂಡಿಯನ್ ಜರ್ನಲ್ ಆಫ್ ಇಕನಾಮಿಕ್ಸ್ ಸಂ. ೩ ಭಾಗ ೪, ಸೀರಿಯಲ್ ನಂ. ೧೨ ಪು. ೫೬೦) ರೂಪಾಯಿ ತನ್ನ ತೂಕವನ್ನೇ ಉಳಿಸಿಕೊಂಡಿದ್ದರೆ, ಆಧಾರವನ್ನು ಉಳಿಸಿಕೊಂಡಿದ್ದರೆ ಮತ್ತು ಹಿಂದಿನ ಚೊಕ್ಕತೆಯನ್ನೇ ಹೊಂದಿದ್ದು, ಹಗುರವಾಗಿಲ್ಲದಿದ್ದರೆ, ರೂಪಾಯಿಯ ಆಧಾರರಹಿತತ್ವ ಇಷ್ಟು ಎದ್ದು ಕಾಣುತ್ತಿರಲಿಲ್ಲ ಎನ್ನುವುದು ನಿಜ. ಆದರೆ ಹ್ಯಾರಿಸ್ ತನ್ನ ಕೃತಿ ಎಸ್ಸೆ ಅಪಾನ್ ಮನಿ ಅಂಡ್ ಕಾಯಿನ್ಸ್ (ಭಾಗ II, ಅಧ್ಯಾಯ ೧, ಪ್ಯಾರಾ ೮)ರಲ್ಲಿ ವಾದಿಸುವಂತೆ "ಟಂಕಸಾಲೆಯಲ್ಲಿ ನಾಣ್ಯಗಳನ್ನು ಬದಲಿಸದೆ ಅಥವಾ ನಾಣ್ಯಗಳನ್ನೇ ಬದಲಿಸದೆ ಕೇವಲ ಅವುಗಳ ಮುಖಬೆಲೆಗಳನ್ನು ಬದಲಿಸಿದರೆ ಉದಾಹರಣೆಗೆ ೯ ಪೆನ್‌ಗಳನ್ನು ಅಥವಾ ೯ ಪೆನ್‌ಗಳಲ್ಲಿರುವ ಚಿನ್ನವನ್ನು ಒಂದು ಷಿಲ್ಲಿಂಗ್ ಎಂದು ಕರೆದರೆ", ಇದು ರೂಪಾಯಿಯನ್ನು ಆಧಾರರಹಿತ ಮಾಡಿರುವುದಕ್ಕಿಂತ ಭಿನ್ನವಾಗುವುದಿಲ್ಲ. ಹೀಗೆ ನೋಡಿದಾಗ ರೂಪಾಯಿ ಒಂದು ಆಧಾರರಹಿತವಾದ ನಾಣ್ಯವಾಗಿದೆ ಎಂದು ಹೇಳದೆ ವಿಧಿಯಿಲ್ಲ.

ಮೂಲತಃ ಯೋಜಿಸಿದ್ದ ವ್ಯವಸ್ಥೆ ವಾಸ್ತವವಾಗಿ ರಕ್ಷಣೆಯನ್ನೊದಗಿಸುತ್ತಿತ್ತು. ಆ ಯೋಜನೆಯಲ್ಲಿ ರೂಪಾಯಿಯನ್ನು ನೀಡುವುದಕ್ಕೆ ಮಿತಿ ಇತ್ತು. ಇದರಿಂದ ಬ್ಯಾಂಕ್ ಚಾರ್ಟರ್ ಆಕ್ಟ್ ೧೮೪೪ರ ಪ್ರಕಾರ ಕಾರ್ಯಪ್ರವೃತ್ತವಾಗಿದ್ದ ಇಂಗ್ಲಿಷ್ ವ್ಯವಸ್ಥೆಗೆ ಸಮಾನವಾದ ವ್ಯವಸ್ಥೆ ಸಹ ಇದಾಗಿತ್ತು.

ಮೇಲಿನ ವಿವರಣೆಯಲ್ಲಿ ಅನುಸರಿಸಲಾಗಿರುವ ತರ್ಕದಲ್ಲಿ ಕ್ರಮಬದ್ಧತೆ ಇದೆ ಎಂದಾದರೆ, ಚೇಂಬರ್ಲಿನ್ ಕಮಿಷನ್ ಆಫ್ ದಿ ಎಕ್ಸ್‌ಚೇಂಜ್ ಸ್ಟಾಂಡರ್ಡ್‌ನ ಅಭಿಪ್ರಾಯದೊಡನೆ ಸಹಮತ ಹೊಂದುವುದು ಸಾಧ್ಯವಿಲ್ಲ. ಸಮಿತಿ ವಿವರಿಸಿರುವ ವ್ಯವಸ್ಥೆಯಲ್ಲಿ ದೌರ್ಬಲ್ಯಗಳಿಲ್ಲವೇ ಎನ್ನುವ ಸಂಶಯಕ್ಕೆ ಸಹ ಇದು ದಾರಿಮಾಡಿಕೊಡುತ್ತದೆ. ಈ ದೌರ್ಬಲ್ಯಗಳು ಸಮಿತಿ ವಿವರಿಸಿರುವ ವ್ಯವಸ್ಥೆ ಮುರಿದು ಬೀಳುವುದಕ್ಕೆ ಸಹ ನೆರವಾಗುತ್ತದೆ ಎನ್ನುವುದು ಗಮನಾರ್ಹ. ಆದ್ದರಿಂದ ಈ ಸಮಿತಿ ವಿವರಿಸಿರುವ ಹಣ ಪ್ರಮಿತಿಯ ಮೂಲ ಸ್ವರೂಪಗಳನ್ನು ಹೊಸದಾಗಿ ವಿಶ್ಲೇಷಿಸುವುದು ಅಗತ್ಯವಾಗುತ್ತದೆ.

# ಅಧ್ಯಾಯ ೧೮

# ವಿನಿಮಯ ಪ್ರಮಿತಿಯ ಸ್ಥಿರತೆ

ಬೆಳ್ಳಿಯನ್ನು ಮುಕ್ತವಾಗಿ ನಾಣ್ಯಗಳನ್ನಾಗಿ ಟಂಕಿಸುವುದನ್ನು ಭಾರತದ ಟಂಕಸಾಲೆಗಳು ನಿಲ್ಲಿಸಿದಾಗ, ದೇಶದಲ್ಲಿ ಎರಡು ಪಕ್ಷಗಳಿದ್ದವು ಎನ್ನುವುದನ್ನು ನೆನಪಿಸಿಕೊಳ್ಳಬೇಕು. ಒಂದು ಟಂಕಸಾಲೆಯನ್ನು ಮುಚ್ಚುವುದರ ಪರವಾಗಿದ್ದರೆ ಇನ್ನೊಂದು ಅದನ್ನು ಇದಕ್ಕಾಗಿ ತೆರೆದಿಡುವುದರ ಪರವಾಗಿತ್ತು. ರೂಪಾಯಿಯ ಮೌಲ್ಯ ಕುಸಿದಿದ್ದುದರಿಂದ, ಆಗಿನ ಭಾರತ ಸರ್ಕಾರ ಟಂಕಸಾಲೆಗಳನ್ನು ಮುಚ್ಚುವುದಕ್ಕೆ ಉತ್ಸುಕವಾಗಿತ್ತು. ಇದರ ಉದ್ದೇಶ, ಚಿನ್ನದ ಪಾವತಿಯ ತನ್ನ ಜವಾಬ್ದಾರಿಯ ಭಾರದಿಂದ ಪಾರಾಗಿ, ಹಣದ ಮೌಲ್ಯವನ್ನು ಹೆಚ್ಚಿಸುವುದಾಗಿತ್ತು. ಆದರೆ ದೇಶದ ಉತ್ಪಾದಕ ವರ್ಗ ಇದಕ್ಕೆ ವಿರೋಧವಾಗಿತ್ತು. ಕಾರಣವೆಂದರೆ, ರೂಪಾಯಿಯ ವಿನಿಮಯದರ ಕುಸಿದರೆ, ಭಾರತದ ವ್ಯಾಪಾರ ಮತ್ತು ಕೈಗಾರಿಕೆಗಳ ಮೇಲೆ ಅದು ತೀವ್ರವಾದ ಪ್ರತಿಕೂಲ ಪರಿಣಾಮವನ್ನುಂಟುಮಾಡುತ್ತದೆ ಎನ್ನುವುದು. ಈ ವರ್ಗದ ವಾದವೆಂದರೆ, ೧೮೭೩–೧೮೯೩ರ ಅವಧಿಯಲ್ಲಿ ಭಾರತದ ಕೈಗಾರಿಕೆಗಳು ಅತ್ಯಂತ ಕ್ಷಿಪ್ರ ಗತಿಯಲ್ಲಿ ಪ್ರಗತಿ ಸಾಧಿಸುವುದಕ್ಕೆ ಮುಖ್ಯ ಕಾರಣ ರೂಪಾಯಿ ವಿನಿಮಯ ಮೌಲ್ಯದಲ್ಲಿ ಹೆಚ್ಚಳ ಉಂಟಾಗಿದ್ದುದು. ಟಂಕಸಾಲೆಯನ್ನು ಮುಚ್ಚಿದುದರಿಂದ, ಹಣದ ಮೌಲ್ಯ ಕುಸಿಯುವುದು ಕಡಿಮೆಯಾಯಿತು. ಆದರೆ, ಇದರಿಂದ ಭಾರತದ ವ್ಯಾಪಾರಕ್ಕೆ ಎರಡೂ ಕಡೆಯಿಂದ ಏಟು ಬೀಳುತ್ತದೆಂದು ಭಾವಿಸಲಾಯಿತು. ಏಕೆಂದರೆ, ಇದರಿಂದ ಬೆಳ್ಳಿಯನ್ನು ಉಪಯೋಗಿಸುತ್ತಿರುವ ರಾಷ್ಟ್ರಗಳಿಗೆ ಅನುಕೂಲವನ್ನು ಒದಗಿಸಿದರೆ, ಚಿನ್ನವನ್ನು ಉಪಯೋಗಿಸುತ್ತಿರುವ ರಾಷ್ಟ್ರಗಳೊಡನೆ ವ್ಯಾಪಾರದಿಂದ ಭಾರತಕ್ಕೆ ಪ್ರತಿಕೂಲ ಪರಿಸ್ಥಿತಿ ಉಂಟಾಗುವಂತಾಗಿತ್ತು.

ಈ ಭಯಗಳನ್ನು ಆರ್ಥಿಕ ಸಿದ್ಧಾಂತಗಳು ಪ್ರತಿಪಾದಿಸಿಯೇ ಇದ್ದವು. ಈ ಸಿದ್ಧಾಂತಗಳನ್ನು ಮುಂದಿನ ಚಾರಿತ್ರಿಕ ಬೆಳವಣಿಗೆಗಳು ಖಾತರಿಪಡಿಸಿದವು. ಭಾರತದ ವ್ಯಾಪಾರ, ಸುವರ್ಣ ಪ್ರಮಿತಿಯ ಮೇಲಿದ್ದ ಇಂಗ್ಲೆಂಡ್ ಅಥವಾ ಬೆಳ್ಳಿ ಪ್ರಮಿತಿಯ ಮೇಲಿದ್ದ ಚೈನಾಗಳಿಂದ ಪ್ರತಿಕೂಲವನ್ನು ಎದುರಿಸಲಿಲ್ಲ. ಪಟ್ಟಿ ೨೫ ಮತ್ತು ೨೬ರಲ್ಲಿನ ಅಂಕಿ–ಅಂಶಗಳು ಇದರ ಮೇಲೆ ಬೆಳಕು ಚೆಲ್ಲುತ್ತವೆ.

ಟಂಕಸಾಲೆಗಳನ್ನು ಮುಚ್ಚುವುದರಿಂದ ನಿರೀಕ್ಷಿಸಿದ್ದೆಂದರೆ, ರೂಪಾಯಿಯ ಕುಸಿಯುವ ಮೌಲ್ಯವನ್ನು ಇದು ತಡೆಗಟ್ಟುತ್ತದೆ ಮತ್ತು ಭಾರತದ ಹಣಕಾಸಿನ ಒತ್ತಡವನ್ನು ಇದು ಕಡಿಮೆ ಮಾಡುತ್ತದೆ ಎಂಬುದು. ತೆರಿಗೆಗಳಲ್ಲಿ ಇಳಿತಾಯ ಮತ್ತು ಸಾಮಾಜಿಕ ಉಪಯೋಗಗಳ ಮೇಲಿನ ವೆಚ್ಚಗಳಲ್ಲಿ ಕಡಿತವಾದ ಮೇಲೂ ಸಹ, ಟಂಕಸಾಲೆಯನ್ನು ಮುಚ್ಚಿದಂದಿನಿಂದ, ವಾರ್ಷಿಕ ಆಯವ್ಯಯವು ಕೇವಲ ಕೆಲವು ಕೊರತೆ ಪರಿಸ್ಥಿತಿಗಳನ್ನು ಹೊಂದಿದ್ದುದು ಕಂಡುಬರುತ್ತದೆ. (ನೋಡಿ ಪಟ್ಟಿ XXVII)

ಈ ಮಾಹಿತಿಗಳು, ಭಾರತದ ಕರೆನ್ಸಿ ತುಂಬಾ ಗಟ್ಟಿಮುಟ್ಟಾಗಿದೆ ಎಂಬುದಕ್ಕೆ ಸಾಕ್ಷಿಯಾಗಿದೆ ಎಂದು

---

೧. ಕೇನ್ಸ್ ಅದೇ ಪುಸ್ತಕ ಪು. ೩

## ಪಟ್ಟಿ XXV
## ಯುನೈಟೆಡ್ ಕಿಂಗ್‌ಡಂ ಜೊತೆ ಭಾರತದ ವ್ಯಾಪಾರ (ಟಂಕಸಾಲೆ ಮುಚ್ಚುವುದಕ್ಕೆ ಮುಂಚೆ ಮತ್ತು ನಂತರ)

| ವಾರ್ಷಿಕ ಸರಾಸರಿ | ಯು.ಕೆ.ಗೆ ರಫ್ತು | | | ಯು.ಕೆ.ಯಿಂದ ಆಮದು | | |
|---|---|---|---|---|---|---|
| | ಸರಕು £ | ಚಿನ್ನದ ಗಟ್ಟಿ ಮತ್ತು ನಾಣ್ಯ £ | ಒಟ್ಟು £ | ಸರಕು £ | ಚಿನ್ನದ ಗಟ್ಟಿ ಮತ್ತು ನಾಣ್ಯ £ | ಒಟ್ಟು £ |
| ೧. ೧೮೮೯–೯೩<br>೨. ೧೮೯೪–೯೮<br>೩. ೧೮೯೯–೧೯೦೩<br>೪. ೧೯೦೩–೮ | ೩೧,೫೬೯,೮೯೧<br>೨೬,೩೨೯,೨೬೪<br>೨೮,೭೦೯,೮೧೯<br>೩೬,೭೮೪,೬೨೮ | ೧,೧೮೦,೬೪೬<br>೨,೨೧೫,೦೪೯<br>೨,೦೮೯,೬೫೬<br>೨,೨೩೨,೮೫೭ | ೩೨,೭೫೦,೫೩೭<br>೨೪,೫೪೪,೮೧೩<br>೩೦,೭೯೯,೪೭೫<br>೩೯,೦೧೭,೪೮೫ | ೩೧,೮೩೭,೪೮೨<br>೨೮,೯೬೩,೧೮೦<br>೩೩,೪೯೮,೪೮೦<br>೪೭,೨೯೪,೩೧೧ | ೭,೯೪೪,೧೪೯<br>೬,೭೫೦,೭೩೬<br>೭,೩೦೧,೧೭೨<br>೯,೫೮೬,೭೦೬ | ೩೯,೫೩೧,೬೩೧<br>೩೫,೭೧೩,೯೧೬<br>೪೦,೭೯೯,೬೫೨<br>೫೬,೮೮೧,೦೧೭ |
| ಮೊದಲನೆಯ ಅವಧಿಗೆ ಹೋಲಿಸಿದಂತೆ ಶೇಕಡಾಂಶ ಹೆಚ್ಚಳ ಅಥವಾ ಇಳಿತ | − ೧೬.೫೯೮ | + ೮೭.೬೧೩ | − ೨೫.೦೫೫ | − ೯.೦೨೮ | − ೧೨.೨೬೧ | − ೯.೬೫೭ |
| ಎರಡನೆಯ ಅವಧಿಗೆ ಹೋಲಿಸಿದಂತೆ ಶೇಕಡಾಂಶ ಹೆಚ್ಚಳ ಅಥವಾ ಇಳಿತ | + ೯.೦೩೯ | − ೫.೬೬೧ | + ೨೫.೪೮೩ | + ೧೫.೬೪೯ | + ೮.೧೫೪ | + ೧೪.೨೪೦ |
| ಮೂರನೆಯ ಅವಧಿಗೆ ಹೋಲಿಸಿದಂತೆ ನಾಲ್ಕನೆ ಅವಧಿಯಲ್ಲಿ ಶೇಕಡಾಂಶ ಹೆಚ್ಚಳ ಅಥವಾ ಇಳಿತ | + ೨೮.೧೨೬ | + ೬.೮೫೩ | + ೨೬.೬೮೨ | + ೪೧.೧೮೩ | + ೩೧.೩೦೪ | + ೩೯.೪೧೫ |
| ನಾಲ್ಕನೆಯ ಅವಧಿಯಲ್ಲಿ ಮೊದಲನೆಯ ಅವಧಿಗೆ ಹೋಲಿಸಿದಂತೆ ಶೇಕಡಾಂಶ ಹೆಚ್ಚಳ ಅಥವಾ ಇಳಿತ | + ೧೬.೫೧೮ | + ೮೯.೧೨೨ | + ೧೯.೧೩೫ | + ೪೮.೫೪೪ | + ೨೪.೫೯೭ | + ೪೩.೮೮೭ |

## ಪಟ್ಟಿ XXVI
## ಚೈನಾದೊಡನೆ ಭಾರತದ ವ್ಯಾಪಾರ

| ವಾರ್ಷಿಕ ಸರಾಸರಿ | ಚೈನಾಕ್ಕೆ ರಫ್ತು | | | ಚೈನಾದಿಂದ ಆಮದು | | |
|---|---|---|---|---|---|---|
| | ಸರಕು £ | ಚಿನ್ನದ ಗಟ್ಟಿ ಮತ್ತು ನಾಣ್ಯ £ | ಒಟ್ಟು £ | ಸರಕು £ | ಚಿನ್ನದ ಗಟ್ಟಿ ಮತ್ತು ನಾಣ್ಯ £ | ಒಟ್ಟು £ |
| ೧. ೧೮೮೯–೯೩ | ೯,೪೫೪,೦೧೪ | ೨೦,೨೨೩ | ೯,೪೭೪,೨೩೮ | ೧,೬೬೬,೮೪೦ | ೧,೯೯೨,೯೧೪ | ೩,೬೫೯,೭೫೪ |
| ೨. ೧೮೯೩–೯೮ | ೮,೫೦೯,೨೮೪ | ೧೧೨,೧೦೫ | ೮,೬೨೧,೩೮೯ | ೧,೭೧೩,೫೨೯ | ೫೦೩,೩೫೭ | ೨,೨೧೬,೮೮೬ |
| ೩. ೧೮೯೮–೧೯೦೩ | ೯,೬೭೯,೮೩೦ | ೧೮೩,೬೪೭ | ೯,೮೬೩,೪೭೭ | ೧,೩೦೯,೯೭೫ | ೭೯೮,೦೫೩ | ೨,೧೦೮,೦೨೮ |
| ೪. ೧೯೦೩–೮ | ೧೨,೪೬೧,೫೩೫ | ೧೬೦,೮೭೯ | ೧೨,೬೨೨,೮೨೨ | ೧,೨೪೮,೮೨೨ | ೯೧೯,೪೦೨ | ೨,೧೬೮,೨೨೪ |
| ಶೇಕಡಾಂಶ ಹೆಚ್ಚಳ ಅಥವಾ ಇಳಿತಾಯ ಅವಧಿ ಒಂದಕ್ಕೆ ಹೋಲಿಸಿದಂತೆ ಅವಧಿ ಎರಡು | −೯.೯೯೩ | +೪೫೪.೩೩೩ | −೯.೦೦೨ | +೨.೮೦೧ | +೭೪.೭೪೩ | −೩೯.೪೨೫ |
| ಅವಧಿ ಎರಡಕ್ಕೆ ಹೋಲಿಸಿದಂತೆ ಅವಧಿ ಮೂರು | +೧೩.೭೫೬ | +೬೩.೮೧೭ | +೧೪.೪೦೭ | −೨೩.೫೫೧ | +೫೮.೫೪೬ | −೪.೯೧೦ |
| ಅವಧಿ ಮೂರಕ್ಕೆ ಹೋಲಿಸಿದಂತೆ ಅವಧಿ ನಾಲ್ಕು | +೨೮.೭೩೭ | −೧೨.೩೯೮ | +೨೭.೯೭೧ | −೪.೬೬೮ | +೧೫.೨೦೬ | +೨.೮೫೬ |
| ಅವಧಿ ಒಂದಕ್ಕೆ ಹೋಲಿಸಿದಂತೆ ಅವಧಿ ನಾಲ್ಕು | +೩೧.೮೧೨ | +೬೯೫.೫೦೮ | +೩೩.೨೨೯ | −೨೫.೦೭೮ | −೫೩.೮೬೬ | −೪೦.೭೫೫ |

ಕೆಲವು ಲೇಖಕರು ವಾದಿಸುತ್ತಾರೆ. ಅವರ ವಾದವೆಂದರೆ, ವ್ಯಾಪಾರ ಪ್ರತಿಕೂಲವನ್ನು ಅನುಭವಿಸಿಲ್ಲದ[೧] ರಾಷ್ಟ್ರದ ಹಣಕಾಸು ಸ್ಥಿತಿ ಉತ್ತಮಗೊಂಡಿದೆ ಎಂದರೆ, ಅದರ ಅರ್ಥ ಈ ಪರಿಣಾಮವನ್ನುಂಟುಮಾಡಿರುವ ಕರೆನ್ಸಿ ಪದ್ಧತಿ ಉತ್ತಮವಾಗಿರಲೇಬೇಕು.[೧] ಒಂದು ಕರೆನ್ಸಿಯ ಸ್ಥಿರತೆಯ ಬಗ್ಗೆ ಕರೆನ್ಸಿಯ ವಿದ್ಯಾರ್ಥಿಗಳಿಗೆ ಎಚ್ಚರಿಕೆ ನೀಡಬೇಕಾದುದು ಅಗತ್ಯ. ವ್ಯಾಪಾರ ನಿಶ್ಚಯವಾಗಿಯೂ ಒಳ್ಳೆಯ ಹಣವನ್ನು ಅವಲಂಬಿಸುತ್ತದೆ. ಆದರೆ ವ್ಯಾಪಾರದ ಬೆಳವಣಿಗೆಯೇ ಒಳ್ಳೆಯ ಹಣಕ್ಕೆ ಒಂದು ಆಧಾರ ಎಂದು ತೀರ್ಮಾನಿಸುವುದಕ್ಕಾಗುವುದಿಲ್ಲ. ಒಂದು ಕಾಲದಲ್ಲಿ ಆಧಾರ ಕಳೆದುಕೊಂಡಿದ್ದ ನಾಣ್ಯಪದ್ಧತಿಯನ್ನು ಅನೇಕ ರಾಷ್ಟ್ರಗಳು ಹೊಂದಿದ್ದವು. ಈ ವ್ಯವಸ್ಥೆಯಿಂದಾಗಿ ಸಾಮಾಜಿಕ ತೊಂದರೆಗಳು ಸಾಮಾನ್ಯವಾಗಿದ್ದವು. ಇವನ್ನು ತಡೆದುಕೊಳ್ಳುವುದು ಜನರಿಗೆ ಕಷ್ಟವಾಗಿದ್ದರೂ ಇದೇ ಅವಧಿಯಲ್ಲಿ ವ್ಯಾಪಾರದಲ್ಲಿ ಆ ರಾಷ್ಟ್ರಗಳು ಅತ್ಯಂತ ಹೆಚ್ಚಿನ ಪ್ರಗತಿಯನ್ನು ಸಾಧಿಸಿದ್ದವು. ೧೭ನೇ ಶತಮಾನದ ಇಂಗ್ಲೆಂಡಿನ ವಿಷಯವನ್ನು ಪ್ರಸ್ತಾಪಿಸುವುದಾದರೆ, ಈ ಅವಧಿ ಆಧಾರವನ್ನು ಕಳೆದುಕೊಂಡಿದ್ದ ಕರೆನ್ಸಿಯ ಅವಧಿಯಾಗಿತ್ತು. ಜೊತೆಗೆ ನಾಣ್ಯವ್ಯವಸ್ಥೆ ಪದೇ ಪದೇ ಬದಲಾಗುತ್ತಿತ್ತು. ಹಾಗೆಯೇ, ದೀರ್ಘಾವಧಿಯ ಅಂತರ್ ಯುದ್ಧದ ಅವಧಿಯೂ ಇದಾಗಿತ್ತು. ಈ ಸ್ಥಿತಿಯಲ್ಲಿನ ಕರೆನ್ಸಿ ವ್ಯವಸ್ಥೆಯನ್ನು ಕುರಿತು, ಅತ್ಯಂತ ಶ್ರೇಷ್ಠ ರಾಜಕಾರಣಿಗಳಲ್ಲೊಬ್ಬನೂ, ಕೆಟ್ಟ ಕರೆನ್ಸಿ ವ್ಯವಸ್ಥೆಗೆ ಸ್ಪಂದಿಸುವವನೂ ಆಗಿದ್ದ ಲಾರ್ಡ್ ಲಿವರ್‌ಪೂಲ್ ಹೀಗೆ ಅಭಿಪ್ರಾಯಪಟ್ಟಿದ್ದ

"ಈ ಇಡೀ ಅವಧಿಯಲ್ಲಿ ನಮ್ಮ ಇಡೀ ನಾಣ್ಯವ್ಯವಸ್ಥೆ ಗಲಿಬಿಲಿಗೆ ಒಳಗಾಗಿದೆ. ಆದರೆ ಸಾಮ್ರಾಜ್ಯದ ವಾಣಿಜ್ಯ ಮಾತ್ರ ಉತ್ತಮಗೊಳ್ಳುತ್ತಿದೆ. ಜೊತೆಗೆ, ವಿದೇಶೀ ಪಾವತಿ ಶುಲ್ಕ ರಾಷ್ಟ್ರಕ್ಕೆ ತುಂಬಾ ಅನುಕೂಲಕರವಾಗಿದೆ.[೨]

ಕರೆನ್ಸಿ ತುಂಬಾ ಕೆಟ್ಟದಾಗಿರುವಾಗಲೂ, ವಾಣಿಜ್ಯ ಉತ್ತಮಗೊಳ್ಳಬಹುದು ಎನ್ನುವುದನ್ನು ಭಾರತದ ಅನುಭವವೇ ಪುಷ್ಟೀಕರಿಸುತ್ತದೆ. ೧೮೭೩–೯೩ರ ಅವಧಿಯಲ್ಲಿ ಭಾರತದ ವ್ಯಾಪಾರದಲ್ಲಾದ ಪ್ರಗತಿ ಹಿಂದಿನ ಯಾವ ಅವಧಿಯಲ್ಲೂ ಆಗಿರಲಿಲ್ಲ. ಆ ಅವಧಿಯ ಭಾರತದ ಕರೆನ್ಸಿ ಉತ್ತಮವಾಗಿತ್ತೆಂದು ಇದರ ಅರ್ಥವೇ? ವಾಸ್ತವವಾಗಿ ಇದನ್ನು ಇನ್ನೊಂದು ರೀತಿಯಲ್ಲಿ ವಾದಿಸಬಹುದು. ಅದೆಂದರೆ, ಕರೆನ್ಸಿ ಕೆಟ್ಟದಾಗಿರುವುದರಿಂದ ವಾಣಿಜ್ಯ ಉತ್ತಮವಾಗಿದೆ. ೧೮೭೩–೯೩ರ ಅವಧಿಯಲ್ಲಿ ಭಾರತದ ವ್ಯಾಪಾರ ಉತ್ತಮಗೊಳ್ಳುವುದಕ್ಕೆ ಕಾರಣ, ವ್ಯಾಪಾರಕ್ಕೆ ದೊರೆತಿದ್ದ ಸಹಾಯಧನ. ಅದು ಭಾರತದ ಕಾರ್ಮಿಕನ ಶೋಷಣೆಯಿಂದ ಆಗಿತ್ತು. ಏಕೆಂದರೆ ಈ ಅವಧಿಯಲ್ಲಿ ಕಾರ್ಮಿಕನ ಕೂಲಿಮಟ್ಟ ಬೆಲೆಮಟ್ಟದಷ್ಟು ಹೆಚ್ಚಲಿಲ್ಲ. ಆದ್ದರಿಂದ ಆ ಅವಧಿಯಲ್ಲಿನ ಭಾರತದ ವಾಣಿಜ್ಯದ ಪ್ರಗತಿಗೆ ಆಧಾರ ಅಧಿಕ ಉತ್ಪಾದನೆಯಾಗಿರಲಿಲ್ಲ; ಬದಲಿಗೆ ಹಣದುಬ್ಬರವಾಗಿತ್ತು.

ಭಾರತದ ಹೊಸ ಕರೆನ್ಸಿ ವ್ಯವಸ್ಥೆ, ರಾಷ್ಟ್ರದ ಚಿನ್ನ ಪಾವತಿಯ ಹೊರೆಯನ್ನು ನಿವಾರಿಸಿದೆ ಮತ್ತು ತೆರಿಗೆದಾರನಿಗೆ ರಿಯಾಯಿತಿ ಕೊಟ್ಟಿದೆ ಆದುದರಿಂದ ಉತ್ತಮವಾದದ್ದು ಎಂದು ಪರಿಗಣಿಸುವಂತಿಲ್ಲ. ಹೀಗೆ ವಾದಿಸುವುದು, ವಿನಿಮಯದರ ಕುಸಿಯುತ್ತಿರುವ ಅವಧಿಯಲ್ಲಿ ಭಾರತದ ಚಿನ್ನದ ಪಾವತಿ ಹೊರೆಯ ಮೂಲದ ಬಗ್ಗೆ ಇರುವ ತಪ್ಪು ತಿಳುವಳಿಕೆಯನ್ನು ತೋರಿಸುತ್ತದೆ.

ಬೆಳ್ಳಿಯ ಮಾಧ್ಯಮದಲ್ಲಿ ಚಿನ್ನದ ಬೆಲೆ ಕುಸಿದಿದ್ದರಿಂದ, ಚಿನ್ನದ ಪಾವತಿಯ ಹೊರೆ ಹೆಚ್ಚಾಯಿತು ಎನ್ನುವ ಸಾರ್ವತ್ರಿಕ ಭಾವನೆ ಇದೆ. ಆದ್ದರಿಂದ ಒಂದು ಪಕ್ಷ ಭಾರತ ಸುವರ್ಣ ಪ್ರಮಿತಿಯ ಮೇಲಿದ್ದರೆ, ಈ ಭಾರವನ್ನು ಸುಲಭವಾಗಿ ತಪ್ಪಿಸಿಕೊಳ್ಳಬಹುದಾಗಿತ್ತು ಎನ್ನುವ ನಂಬಿಕೆ ಇದೆ. ಇದು ತಪ್ಪು ಭಾವನೆ

---

೧. ಬಾರ್ಬರ್, ದಿ ಸ್ಟಾಂಡರ್ಡ್ ಆಫ್ ವ್ಯಾಲ್ಯೂ ಪು. ೨೨೪

೨. ಬಾರ್ಬರ್ ಡಿ: ದಿ ಸ್ಟಾಂಡಡ ಆಫ್ ವ್ಯಾಲ್ಯೂ ಪು. ೨೨೪

**ಪಟ್ಟಿ – XXVII**

**ಸರ್ಕಾರದ ಹಣಕಾಸು**

| ವರ್ಷಗಳು | ಆಧಿಕ್ಯ+ ಕೊರತೆ– | ವರ್ಷಗಳು | ಆಧಿಕ್ಯ+ ಕೊರತೆ– | ವರ್ಷಗಳು | ಆಧಿಕ್ಯ+ ಕೊರತೆ– | ವರ್ಷಗಳು | ಆಧಿಕ್ಯ+ ಕೊರತೆ– | ವರ್ಷಗಳು | ಆಧಿಕ್ಯ+ ಕೊರತೆ– |
|---|---|---|---|---|---|---|---|---|---|
| ೧೮೯೩–೯೪ | –೧,೫೪೬,೯೯೮ | ೧೮೯೮–೯೯ | ೨,೬೪೦,೮೭೩ | ೧೯೦೩–೦೪ | +೨,೯೯೬,೪೦೦ | ೧೯೦೮–೯೦ | –೩,೭೩೭,೭೧೦ | ೧೯೧೩–೧೪ | +೨,೩೧೨,೪೨೩ |
| ೧೮೯೪–೯೫ | +೬೯೩,೧೧೦ | ೧೮೯೯–೧೯೦೦ | +೨,೭೭೪,೬೨೩ | ೧೯೦೪–೦೫ | +೩,೪೫೬,೦೬೬ | ೧೯೦೯–೧೦ | +೬೦೬,೬೪೧ | ೧೯೧೪–೧೫ | –೧,೭೮೫,೨೭೦ |
| ೧೮೯೫–೯೬ | +೧,೫೩೩,೯೯೮ | ೧೯೦೦–೦೧ | +೧,೬೭೦,೨೦೪ | ೧೯೦೫–೦೬ | +೨,೦೯೧,೮೫೪ | ೧೯೧೦–೧೧ | +೩,೯೩೬,೨೮೭ | ೧೯೧೫–೧೬ | –೧,೧೮೮,೬೬೧ |
| ೧೮೯೬–೯೭ | –೧,೭೦೫,೦೨೨ | ೧೯೦೧–೦೨ | +೪,೯೫೦,೨೪೩ | ೧೯೦೬–೦೭ | +೧,೫೮೯,೩೪೦ | ೧೯೧೧–೧೨ | +೩,೯೪೦,೩೩೪ | ೧೯೧೬–೧೭ | +೭,೪೭೮,೧೭೦ |
| ೧೮೯೭–೯೮ | –೫,೩೫೯,೨೧೧ | ೧೯೦೨–೦೩ | +೩,೦೬೯,೫೪೯ | ೧೯೦೭–೦೮ | +೩,೦೦,೬೧೫ | ೧೯೧೨–೧೩ | +೩,೧೦೭,೬೩೪ | – | – |

ಎಂಬುದನ್ನು ಸುಲಭವಾಗಿ ತೋರಿಸಬಹುದು. ಚಿನ್ನದ ಪಾವತಿಯಿಂದಾಗಿ ಭಾರತವು ವಿಶೇಷ ಹೊರೆಯನ್ನು ಹೊರಬೇಕಾಯಿತು ಎನ್ನುವುದು ನಿಜ. ಆದರೆ ಈ ಭಾರವನ್ನು ಸುವರ್ಣ ಪ್ರಮಿತಿಯ ಮೇಲಿರುವ ಅಥವಾ ಬೆಳ್ಳಿಯ ಪ್ರಮಿತಿಯನ್ನು ಹೊಂದಿರುವ ರಾಷ್ಟ್ರಗಳೆಲ್ಲವೂ ಹೊರಬೇಕಾಯಿತು ಎನ್ನುವುದು ಮುಖ್ಯವಾಗಿ ಗಮನಿಸಬೇಕಾದ ವಿಚಾರ. ಈ ದೃಷ್ಟಿಯಿಂದ, ಆಸ್ಟ್ರೇಲಿಯಾದಂಥ ಸುವರ್ಣ ಪ್ರಮಿತಿಯನ್ನು ಹೊಂದಿರುವ ರಾಷ್ಟ್ರದ ಪರಿಸ್ಥಿತಿ ಬೆಳ್ಳಿಯ ಪ್ರಮಿತಿಯ ಮೇಲಿರುವ ಭಾರತದಂಥ ರಾಷ್ಟ್ರಕ್ಕೆ ಹೋಲಿಸಿದರೆ ಭಿನ್ನವಾದುದೇನಲ್ಲ. ಚಿನ್ನದ ಮೂಲಕ ಪಾವತಿಯ ಋಣಭಾರವನ್ನು ಹೊಂದಿರುವ ರಾಷ್ಟ್ರಗಳೆಲ್ಲವೂ ಈ ಕಷ್ಟವನ್ನು ಅನುಭವಿಸಲೇಬೇಕಾಯಿತು. ಒಂದು ರಾಷ್ಟ್ರ ಚಿನ್ನದ ಮೂಲಕ, ಮತ್ತೊಂದು ರಾಷ್ಟ್ರ ಬೆಳ್ಳಿಯ ಮೂಲಕ ಪಾವತಿಗಳನ್ನು ಮಾಡುತ್ತಿದ್ದವು ಎನ್ನುವುದು, ಆ ರಾಷ್ಟ್ರಗಳ ಪರಿಸ್ಥಿತಿಯನ್ನು ಬದಲಿಸಲಿಲ್ಲ. ಏಕೆಂದರೆ ಬೆಳ್ಳಿಯ ಮೂಲಕ ತನ್ನ ಋಣವನ್ನು ಪಾವತಿ ಮಾಡಿದುದರಿಂದ, ಅದರ ಭಾರವನ್ನು ಸ್ಪಷ್ಟವಾಗಿ ನೋಡುವುದು ಸಾಧ್ಯವಾಗಿದೆ ಅಷ್ಟೆ. ಬೆಳ್ಳಿಯ ಮೌಲ್ಯಕುಸಿತ, ಭಾರತದ ಚಿನ್ನದ ರೂಪದ ಋಣಸಂದಾಯವನ್ನು ಅಳತೆ ಮಾಡಿತೇ ಹೊರತು ಅದಕ್ಕೆ ಅದು ಕಾರಣವಾಗಿರಲಿಲ್ಲ. ರೂಪಾಯಿಯ ಮೌಲ್ಯದ ಕುಸಿತವನ್ನು ತಡೆಗಟ್ಟಿದುದು ತೆರಿಗೆದಾರನಿಗೆ ಪರಿಹಾರ ದೊರೆತುದದಕ್ಕೆ ಸ್ಪಷ್ಟ ನಿರೂಪಣೆಯಾಗಿರಲಿಲ್ಲ. ಹೀಗಾಗಿ ಅದು ಉತ್ತಮ ಕರೆನ್ಸಿ ಪದ್ಧತಿಯಾಗಿದೆ ಎನ್ನುವುದಕ್ಕೆ ಸಹ ಸಾಕ್ಷಿಯಾಗಿರಲಿಲ್ಲ. ಹೀಗಾಗಿ ದೊರೆತ ಯಾವುದೇ ಅಲ್ಪ ಲಾಭಕ್ಕೆ ಕೊಡಬೇಕಾದ ವೆಚ್ಚ ಅತಿಯಾಯಿತು ಎನ್ನುವುದು ಗಮನಾರ್ಹ.

ವಿನಿಮಯ ಪ್ರಮಿತಿಯಲ್ಲಿ ಉಂಟಾದ ವ್ಯಾಪಾರದ ಹೆಚ್ಚಳ ಮತ್ತು ಸರ್ಕಾರದ ಹಣಕಾಸು ಆದಾಯ ವೃದ್ಧಿಯಿಂದ, ಚೇಂಬರ್ಲಿನ್ ಸಮಿತಿ ತೃಪ್ತಿ ವ್ಯಕ್ತಪಡಿಸಿದರೂ ಸಹ, ಅದು ವಿನಿಮಯ ಪ್ರಮಿತಿಯ ಪರವಾಗಿ ಇವುಗಳನ್ನು ಬಳಸಿಕೊಳ್ಳಲು ಶಕ್ತವಾಗಿರಲಿಲ್ಲ. ಸಮಿತಿಯ ಅತಿಮುಖ್ಯವಾದವೆಂದರೆ, ಕರೆನ್ಸಿ ಪದ್ಧತಿಯು ರೂಪಾಯಿಯ ವಿನಿಮಯ ದರವನ್ನು ದೃಢವಾಗಿ ಚಿನ್ನದ ನಿರ್ದಿಷ್ಟ ದರದೊಡನೆ ಸಂಪರ್ಕಿಸಿಕೊಳ್ಳಬಲ್ಲದು ಎನ್ನುವುದಾಗಿತ್ತು.[೧] ಆದ್ದರಿಂದ, ವಿನಿಮಯ ಪ್ರಮಿತಿಯ ಬಗ್ಗೆ ಸಮಿತಿ ಮಂಡಿಸಿದ ಈ ವಾದವನ್ನು ನಾವು ವಿಶ್ಲೇಷಿಸಬೇಕು. ಪಟ್ಟಿ XXVIII ಈ ಪ್ರಶ್ನೆಯನ್ನು ಆಳವಾಗಿ ವಿಶ್ಲೇಷಿಸಲು ನೆರವಾಗುತ್ತದೆ.

ಒಂದು ವೇಳೆ ಸಮಿತಿ ಹಾಕಿಕೊಂಡಿರುವ ಅಳತೆಗೋಲು ಸರಿಯಾಗಿಯೇ ಇದೆ ಎಂದು ಭಾವಿಸಿಕೊಂಡರೂ, ಮೇಲಿನ ಪಟ್ಟಿಯಲ್ಲಿನ ಅಂಕಿ-ಅಂಶಗಳು, ರೂಪಾಯಿಯು ತನ್ನ ಚಿನ್ನದ ಮೌಲ್ಯವನ್ನು ಕಾಪಾಡಿಕೊಂಡಿದೆ ಎಂಬುದನ್ನು ಸಮರ್ಥಿಸುತ್ತದೆಯೇ? ವ್ಯವಸ್ಥೆ ಒಂದು ಯಶಸ್ಸನ್ನು ಸಾಧಿಸಿದೆ ಎಂದು ಹೇಳುವುದು ತುಂಬಾ ಒರಟಾದ ಉತ್ತರವೆಂದು ಭಾವಿಸಲಾಗದಿದ್ದರೂ, ಅದು ವ್ಯವಸ್ಥೆಯಲ್ಲಿ ಅಧಿಕ ನಂಬಿಕೆಯ ಭಾವನೆಯಾಗುತ್ತದೆಂದು ಹೇಳಬೇಕಾಗುತ್ತದೆ.

೧೮೯೩ರ ಜೂನ್ ಮತ್ತು ೧೯೧೭ರ ಜನವರಿ ನಡುವೆ ರೂಪಾಯಿಯ ಚಿನ್ನದ ದರವನ್ನು ೧ ರೂಪಾಯಿ ೭.೫೩೩೪೪ ಟ್ರಾಯ್‌ಗ್ರಾಂನ ಶುದ್ಧಚಿನ್ನವೆಂದು ಗೊತ್ತುಮಾಡಲಾಗಿತ್ತು. ಆ ದರದಲ್ಲಿ ೧ ಸವರನ್ ೧೫ ರೂಪಾಯಿಗಳಿಗೆ ಸಮನಾಗಬೇಕಾಗಿತ್ತು. ಚಿನ್ನದ ಟಂಕಸಾಲೆ ದರ ತೊಲ ಒಂದಕ್ಕೆ (೧೮೦ ಗ್ರಾಂಗಳು) ರೂ. ೨೩-೧೪-೪ ಆಗಬೇಕಿತ್ತು. ಲಂಡನ್ನಿನಲ್ಲಿ ವಿನಿಮಯ ದರ ೧ ಷಿಲ್ಲಿಂಗ್ ೪ ಪೆನ್ನಿಯಾಗಬೇಕಿತ್ತು. ಇದು ಆಯಾತದಲ್ಲಿ ೧ ಷಿಲಿಂಗ್ ೪.೧೨೫ ಪೆನ್ನಿ ಮತ್ತು ನಿರ್ಯಾತದಲ್ಲಿ ೧ ಷಿಲಿಂಗ್ ೩.೯೦೬ ಪೆನ್ನಿಗಳ ನಡುವೆ ವ್ಯತ್ಯಾಸಗೊಳ್ಳಬೇಕಾಗಿತ್ತು.

---

೧. ವರದಿ, ಪುಟಗಳು ೧೮ ಮತ್ತು ೨೦

## ಪಟ್ಟಿ XXVIII ರೂಪಾಯಿಗೆ ಇರುವ ಚಿನ್ನದ ಮೌಲ್ಯ

| ಲಂಡನ್ನಿನಲ್ಲಿ ವಿದೇಶೀ ವಿನಿಮಯ ದರದಲ್ಲಿ ವ್ಯಕ್ತವಾಗಿದೆ ಒಂದು ರೂಪಾಯಿ = ೧ ಷಿ, ೪ ಪೆ | | | | ಚಿನ್ನದ ಮಾಧ್ಯಮದಲ್ಲಿ ವ್ಯಕ್ತಪಡಿಸಲಾಗಿದೆ | | | |
|---|---|---|---|---|---|---|---|
| | | | | ಸವರನ್ ನ ರೂಪಾಯಿ ಬೆಲೆ ರೂ. ೧೫=೧ ಸವರನ್ | | ಚಿನ್ನದ ಬಾರ್‌ನ ರೂಪಾಯಿ ಬೆಲೆ ತೊಲ ಒಂದಕ್ಕೆ ರೂ.೨೩–೧೪–೪ | |
| ವರ್ಷಗಳು | ಗರಿಷ್ಠ | ಕನಿಷ್ಠ | ವರ್ಷಗಳು | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ |
| ೧೮೯೨–೧೮೯೩ | ೧ ೩.೯೬೯ | ೧ ೨.೬೨೫ | ೧೮೯೩ | ೧೬ ೧೦ ೬ | ೧೫ ೬ ೦ | ೨೬ ೧೧ ೦ | ೨೪ ೧೪ ೦ |
| ೧೮೯೩–೧೮೯೪ | ೧ ೪.೦೩೧ | ೧ ೧.೫೦೦ | ೧೮೯೪ | ೧೯ ೦ ೦ | ೧೯ ೧ ೦ | ೩೨ ೪ ೦ | ೨೫ ೯ ೦ |
| ೧೮೯೪–೧೮೯೫ | ೧ ೧.೯೦೬ | ೧ ೦.೦೦೦ | ೧೯೯೫ | ೧೯ ೫ ೦ | ೧೮ ೨ ೬ | ೩೦ ೮ ೦ | ೨೭ ೬ ೦ |
| ೧೮೯೫–೧೮೯೬ | ೧ ೨.೮೭೫ | ೧ ೧.೦೦೦ | ೧೮೯೬ | ೧೭ ೭ ೦ | ೧೬ ೧ ೦ | ೨೭ ೧೩ ೬ | ೨೭ ೨ ೦ |
| ೧೮೯೬–೧೮೯೭ | ೧ ೩.೮೪೨ | ೧ ೧.೭೮೧ | ೧೮೯೭ | ೧೬ ೧೦ ೦ | ೧೫ ೩ ೦ | ೨೬ ೧೨ ೬ | ೨೫ ೪ ೦ |
| ೧೮೯೭–೧೮೯೮ | ೧ ೪.೧೨೫ | ೧ ೨.೨೫೦ | ೧೮೯೮ | ೧೫ ೭ ೦ | ೧೫ ೧ ೦ | ೨೪ ೧೦ ೦ | ೨೪ ೦ ೦ |
| ೧೮೯೯–೧೯೦೦ | ೧ ೪.೧೫೬ | ೧ ೨.೦೯೪ | ೧೮೯೯ | ೧೫ ೪ ೦ | ೧೫ ೦ ೦ | ೨೪ ೨ ೦ | ೨೩ ೪ ೦ |
| ೧೯೦೦–೧೯೦೧ | ೧ ೪.೭೭೫ | ೧ ೩.೮೭೫ | ೧೯೦೦ | ೧೫ ೧ ೩ | ೧೫ ೦ ೦ | ೨೪ ೨ ೦ | ೨೩ ೧೫ ೬ |
| ೧೯೦೧–೧೯೦೨ | ೧ ೪.೧೫೬ | ೧ ೩.೮೭೫ | ೧೯೦೧ | ೧೫ ೦ ೦ | ೧೫ ೦ ೦ | ೨೪ ೨ ೦ | ೨೪ ೦ ೦ |
| ೧೯೦೨–೧೯೦೩ | ೧ ೪.೧೨೫ | ೧ ೩.೮೭೫ | ೧೯೦೨ | ೧೫ ೪ ೬ | ೨೪ ೨ ೬ | ೨೪ ೨ ೬ | ೨೪ ೦ ೦ |
| ೧೯೦೩–೧೯೦೪ | ೧ ೪.೧೫೬ | ೧ ೩.೮೭೫ | ೧೯೦೩ | ೧೫ ೩ ೦ | ೧೫ ೧ ೬ | ೨೪ ೩ ೦ | ೨೪ ೦ ೦ |
| ೧೯೦೪–೧೯೦೫ | ೧ ೪.೧೫೬ | ೧ ೩.೮೭೫ | ೧೯೦೪ | ೧೫ ೫ ೦ | ೧೫ ೧ ೩ | ೨೪ ೨ ೦ | ೨೪ ೦ ೩ |
| ೧೯೦೫–೧೯೦೬ | ೧ ೪.೧೫೬ | ೧ ೩.೯೭೦ | ೧೫೦೫ | ೧೫ ೪ ೦ | ೧೫ ೧ ೬ | ೨೪ ೨ ೦ | ೨೪ ೦ ೦ |
| ೧೯೦೬–೧೯೦೭ | ೧ ೪.೧೫೬ | ೧ ೨.೯೩೭ | ೧೯೦೬ | ೧೫ ೧ ೦ | ೧೫ ೨ ೦ | ೨೪ ೪ ೬ | ೨೪ ೦ ೦ |
| ೧೯೦೭–೧೯೦೮ | ೧ ೪.೧೮೭ | ೧ ೩.೯೩೭ | ೧೯೦೭ | ೧೫ ೪ ೦ | ೧೫ ೦ ೦ | ೨೪ ೪ ೦ | ೨೩ ೧೫ ೬ |
| ೧೯೦೮–೧೯೦೯ | ೧ ೪.೧೮೭ | ೧ ೩.೮೭೫ | ೧೯೦೮ | ೧೫ ೧ ೦ | ೧೫ ೦ ೦ | ೨೪ ೧೦ ೦ | ೨೪ ೨ ೦ |
| ೧೯೦೯–೧೯೧೦ | ೧ ೪.೦೦೦ | ೧ ೩.೮೭೫ | ೧೯೦೯ಪ್ರೀಮಿಯಂ ಶೇ. ೧೨.೩ರ ನಡುವೆ | | | ೨೪ ೩ ೬ | ೨೩ ೧೫ ೦ |
| ೧೯೧೦–೧೯೧೧ | ೧ ೪.೧೫೬ | ೧ ೨.೮೭೫ | ೧೯೧೦ | ೧೫ ೫ ೦ | ೧೫ ೦ ೦ | ೨೪ ೪ ೦ | ೨೩ ೧೫ ೦ |
| ೧೯೧೧–೧೯೧೨ | ೧ ೪.೧೫೬ | ೧ ೩.೮೭೫ | ೧೯೧೧ | ೧೫ ೦ ೦ | ೧೫ ೦ ೦ | ೨೪ ೦ ೬ | ೨೩ ೧೪ ೦ |
| ೧೯೧೨–೧೯೧೩ | ೧ ೪.೧೫೬ | ೧ ೩.೯೩೭ | ೧೯೧೨ | ೧೫ ೦ ೦ | ೧೫ ೦ ೦ | ೨೪ ೦ ೦ | ೨೩ ೧೪ ೦ |
| ೧೯೧೩–೧೯೧೪ | ೧ ೪.೧೫೬ | ೧ ೩.೯೭೦ | ೧೯೧೩ | ೧೫ ೦ ೦ | ೧೫ ೦ ೦ | – | – |
| ೧೯೧೪–೧೯೧೫ | ೧ ೪.೦೯೪ | ೧ ೩.೯೩೭ | ೧೯೧೪ | ೧೫ ೧೪ ೦ | ೧೫ ೨ ೦ | ೨೬ ೧೦ ೦ | ೨೩ ೧೫ ೬ |
| | | ೧ ೩.೯೩೭ | ೧೯೧೫ | ೧೫ ೧೩ ೬ | ೧೫ ೫ ೦ | ೨೫ ೧೪ ೦ | ೨೪ ೮ ೦ |

ರೂಪಾಯಿಯ ಸ್ಥಿರತೆಯ ಬಗ್ಗೆ ಒಂದು ಸಾರ್ವತ್ರಿಕ ಸಮೀಕ್ಷೆ ನಡೆಸಿದರೆ ಕಂಡುಬರುವ ಅಂಶವೆಂದರೆ, ಟಂಕಸಾಲೆಯನ್ನು ಮುಚ್ಚಿದಾಗಿನಿಂದ ೧೮೯೮ರ ವರೆಗೆ ರೂಪಾಯಿ ಅದರ ಸಮಾನತೆ ದರದಿಂದ ಬಹಳ ಕಡಿಮೆ ದರವನ್ನು ಹೊಂದಿತ್ತು. ರೂಪಾಯಿಯ ಮೌಲ್ಯ ಕುಗ್ಗುವಿಕೆ, ವಿನಿಮಯ ದರ ಅಥವಾ ಚಿನ್ನ ಅಥವಾ ಸವರನ್‌ನ ಮಾಧ್ಯಮದಲ್ಲಿ ಶೇ. ೨೫ ರಿಂದ ಶೇ. ೩೦ರ ವರೆಗೆ ನಡೆದಿತ್ತು. ಈ ಮೌಲ್ಯ ಕುಗ್ಗುವಿಕೆ ಅಗಾಧ ಪ್ರಮಾಣದ್ದಾಗಿತ್ತು ಎನ್ನುವುದನ್ನು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಇದು ರೂಪಾಯಿಯನ್ನು ಚಿನ್ನದೊಡನೆ ಸಂಪರ್ಕಿಸಿಲ್ಲವಾದ ಅವಧಿಗಿಂತ ಸರ್ಕಾರದ ಕಷ್ಟವನ್ನು ದ್ವಿಗುಣಗೊಳಿಸಿತ್ತು. ಕೌನ್ಸಿಲ್ ಬಿಲ್‌ಗಳನ್ನು ಮಾರುವುದರ ಮೂಲಕ ಹಣವನ್ನು ಒದಗಿಸುವುದು ಅಸಾಧ್ಯವಾಯಿತು.[೧] ಸೆಕ್ರೆಟರಿ ಆಫ್ ಸ್ಟೇಟ್ ಅತ್ಯಂತ ಇಕ್ಕಟ್ಟಾದ ಪರಿಸ್ಥಿತಿಯನ್ನು ಎದುರಿಸಬೇಕಾಯಿತು. ಸಮಾನತೆಯ ದರಕ್ಕಿಂತ ಕಡಿಮೆ ಮಾರಿದರೆ, ವಿನಿಮಯ ದರವನ್ನು ಸ್ಥಿರ ಮಾಡುತ್ತೇವೆಂದು ಒಪ್ಪಿಕೊಂಡಂತಾಗುತ್ತಿತ್ತು. ಮಾರುಕಟ್ಟೆ ದರದಲ್ಲಿ ಮಾರಾಟವನ್ನು ತಿರಸ್ಕರಿಸಿದರೆ, ಖಜಾನೆ ಬರಿದಾಗುವ ಅಪಾಯವಿತ್ತು. ಭಾರತ ಸರ್ಕಾರ, ಸೆಕ್ರೆಟರಿ ಆಫ್ ಸ್ಟೇಟ್ ಬಿಲ್‌ಗಳಿಗೆ ಒಂದು ಕನಿಷ್ಠ ಬೆಲೆಯನ್ನು ಗೊತ್ತುಮಾಡಬೇಕು ಮತ್ತು ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಗರಿಷ್ಠ ಪ್ರಮಾಣದ ಬಿಲ್‌ಗಳೆಷ್ಟು ಎಂಬುದನ್ನು ತಿಳಿಯಪಡಿಸಬೇಕು ಎಂದು ಸೂಚಿಸಿತು. ಸೆಕ್ರೆಟರಿ ಆಫ್ ಸ್ಟೇಟ್ ಇವೆರಡಕ್ಕೂ ಒಪ್ಪಲಿಲ್ಲ. ಬದಲಿಗೆ, ವಿನಿಮಯ ದರವನ್ನು ಸುಮ್ಮನೆ ಕೆಳಗಿಳಿಯದಂತೆ ಮಾಡಲು ತಾನು ತೆಗೆಯುವ ವಿನಿಮಯವನ್ನು ಕಡಿಮೆ ಮಾಡಲು ಒಪ್ಪಿಗೆ ಸೂಚಿಸಿದ. XXIXನೆಯ ಪಟ್ಟಿಯಲ್ಲಿ ಇದಕ್ಕೆ ಸಂಬಂಧಿಸಿದ ಮಾಹಿತಿ ಇದೆ.

**ಪಟ್ಟಿ – XXIX**

**ಕೌನ್ಸಿಲ್ ಪಡೆದಿರುವುದು**

| ಪಡೆದ ದಿನಾಂಕ | ಪಡೆದ ಮೊತ್ತ £೧,೦೦೦ ಬಿಡಲಾಗಿದೆ | ಪಡೆದ ದರ (ಪ್ರತಿ ರೂಪಾಯಿಗೆ ಪೆನ್ನಿಗಳಲ್ಲಿ) |
|---|---|---|
| ೧೮೯೩ | | |
| ಜೂನ್ | ೨,೪೭೮ | ೧೫.೦೩೯ |
| ಜುಲೈ | ೨೫ | ೧೫.೯೭೪ |
| ಆಗಸ್ಟ್ | ೭೮ | ೧೫.೨೪೩ |
| ಸೆಪ್ಟೆಂಬರ್ | ೭ | ೧೫.೩೫೦ |
| ಅಕ್ಟೋಬರ್ | ೫ | ೧೫.೩೩೪ |
| ನವೆಂಬರ್ | ೬೧೭ | ೧೫.೨೫೧ |
| ಡಿಸೆಂಬರ್ | ೧೪ | ೧೫.೨೪೨ |
| ೧೮೯೪ | | |
| ಜನವರಿ | ೯೮ | ೧೪.೪೦೮ |
| ಫೆಬ್ರವರಿ | ೧,೦೨೩ | ೧೩.೭೮೭ |
| ಮಾರ್ಚ್ | ೧,೯೧೫ | ೧೩.೮೭೦ |
| ಏಪ್ರಿಲ್ | ೧,೩೬೮ | ೧೩.೬೨೬ |

೧. ನೋಡಿ : ಕಾಮನ್ಸ್ ಪೇಪರ್, ೧೮೯೪ರ ಪೇಪರ್ ೭, ಈಸ್ಟ್ ಇಂಡಿಯಾ (ಕರೆನ್ಸಿ ಅಂಡ್ ಸೇಲ್ ಆಫ್ ಬಿಲ್ಸ್)

ಸೆಕ್ರೆಟರಿ ಆಫ್ ಸ್ಟೇಟ್, ಟಂಕಸಾಲೆಯನ್ನು ಮುಚ್ಚಿದಂದಿನಿಂದ, ಮೊದಲನೆಯ ವಿತ್ತ ವರ್ಷದವರೆಗೆ ಪಡೆದುಕೊಂಡ ವಿನಿಮಯ ಕನಿಷ್ಠವಾಗಿತ್ತು. ವಿನಿಮಯ ದರ ಇಳಿಯುವುದನ್ನು ತಡೆಗಟ್ಟಲು, ವಿನಿಮಯ ಪಡೆಯುವುದನ್ನು ಕಡಿಮೆ ಮಾಡಿದುದು ಒಳ್ಳೆಯದನ್ನೇನೂ ಮಾಡಲಿಲ್ಲ. ಏಕೆಂದರೆ ರಾಷ್ಟ್ರದ ಖಜಾನೆಗೆ ಹಣ ಒದಗಿಸಲು ಸ್ಟರ್ಲಿಂಗ್ ಸಾಲವನ್ನು ಕೈಗೊಳ್ಳಬೇಕಾಯಿತು. ಈ ಸಾಲ ಹೆಚ್ಚು ವೆಚ್ಚದ್ದಾಗಿತ್ತು.[೧] ಡ್ರಾಯಿಂಗ್‌ಗಳ ಮೂಲಕ ಮಾಡಿದ ಪಾವತಿಗಳು, ಖಜಾನೆ ಮಾಡಿದ ಒಟ್ಟು ಸಂದಾಯಗಳಿಗೆ ಹೋಲಿಸಿದಂತೆ ೧೮೯೩–೯೪ರಲ್ಲಿ £೬,೫೮೮,೦೦೦ಗಳಷ್ಟು ಕೊರತೆ ಬಿತ್ತು. ಇದನ್ನು ತುಂಬಲು ಒಟ್ಟು £೭,೪೩೦,೦೦೦ಗಳಷ್ಟು ಸ್ಟರ್ಲಿಂಗ್ ಸಾಲವನ್ನು ಪಡೆದುಕೊಳ್ಳಲಾಯಿತು. ಇದರ ಮೇಲಿನ ಬಡ್ಡಿ, ಈಗಾಗಲೇ ಇದ್ದ ಚಿನ್ನ ಪಾವತಿಯ ಸಾಲದ ಭಾರವನ್ನು ಇನ್ನೂ ಹೆಚ್ಚು ಮಾಡಿತು. ಇಂಥ ದಂಡವನ್ನು ತಪ್ಪಿಸಲು ಸೆಕ್ರೆಟರಿ ಆಫ್ ಸ್ಟೇಟ್ ಮಾರುಕಟ್ಟೆಯಲ್ಲಿ ತನ್ನ ವ್ಯವಹಾರದ ಪ್ರಾಧಾನ್ಯತೆಯನ್ನು ಕಡಿಮೆ ಮಾಡಿ, ಮಾರುಕಟ್ಟೆಯ ವ್ಯವಹಾರವನ್ನು ಗಮನಿಸಿ ಅದನ್ನು ಅನುಸರಿಸಲು ಯತ್ನಿಸಿದ. ಆದರೆ ಇಂಥ ನೀತಿ ಸಹ ದುಬಾರಿಯಾಗಿತ್ತು. ವಿನಿಮಯದರ ೧ ಷಿ. ೪ ಪೆನ್ನಿಗಳಿಗಿಂತ ಕೆಳಗಿಳಿದಾಗ, ಅದು, ಖಜಾನೆಯ ಸಂದಾಯದ ಭಾರವನ್ನು ಇನ್ನೂ ಹೆಚ್ಚು ಮಾಡಿತು. ಸರ್ಕಾರವು ತನ್ನ ಯುರೋಪಿಯನ್ ಅಧಿಕಾರಗಳಿಗೆ ವಿನಿಮಯದರ ಭತ್ಯೆಯನ್ನು ಕೊಡುವುದನ್ನು ಇದು ಅನಿವಾರ್ಯವಾಗಿಸಿತು. ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳಿಗೆ ನೀಡಬೇಕಾದ ಈ ಭತ್ಯೆಯನ್ನು ಸರ್ಕಾರ ಇದುವರೆಗೆ ತಡೆಹಿಡಿದಿತ್ತು. ರೂಪಾಯಿ ತನ್ನ ವಿನಿಮಯ ಸಮಾನತೆ ದರವನ್ನು ಕಳೆದುಕೊಂಡದ್ದರಿಂದ ಸರ್ಕಾರಕ್ಕೆ ತಗುಲಿದ ವೆಚ್ಚ ಸಾಕಷ್ಟು ಪ್ರಮಾಣದ್ದಾಗಿತ್ತು.[೨]

**ಪಟ್ಟಿ – XXX**
**ರೂಪಾಯಿ ಇಳಿತಾಯದ ವೆಚ್ಚ**

| ವರ್ಷ | ಸಮಾನತೆ ದರದಿಂದ ಕಡಿಮೆ ದರದಲ್ಲಿ ಕೌನ್ಸಿಲ್ ಬಿಲ್‌ಗಳನ್ನು ಮಾರಾಟ ಮಾಡಿದುದರಿಂದ ಆದ ವೆಚ್ಚ | ವಿನಿಮಯ ದರ ಪರಿಹಾರ ಭತ್ಯೆಯಿಂದ ಆದ ನಷ್ಟ | ಬ್ರಿಟಿಷ್ ಟ್ರೂಪ್‌ಗಳಿಗೆ ಸಂಬಳದಲ್ಲಿನ ಹೆಚ್ಚಳದಿಂದ ಆದ ನಷ್ಟ | ಪ್ರತಿಬಾಬ್ತಿನಿಂದ ಪ್ರತಿ ವರ್ಷದ ಮೊತ್ತ | ಮೂರು ವರ್ಷಕ್ಕೆ ವೆಚ್ಚದ ಮೊತ್ತ | |
|---|---|---|---|---|---|---|
| | | | | | ರೂ.ನಲ್ಲಿ | ಸ್ಟರ್ಲಿಂಗ್ ೧ಷಿ ೪ ಪೆ |
| ೧೮೯೪–೯೫ | ೩,೭೪,೧೫,೦೦೦ | ೭೨,೦೨,೦೦೦ | ೩೭,೮೪,೦೦೦ | ೪,೯೦,೦೧,೦೦೦ | | |
| ೧೮೯೫–೯೬ | ೩,೦೫,೯೧,೦೦೦ | ೮೭,೧೮,೦೦೦ | ೪೯,೩೮,೦೦೦ | ೪,೪೨,೪೭,೦೦೦ | ೧೧,೯೧,೮೬,೦೦೦ | ೭,೯೪೫,೭೩೩ |
| ೧೮೯೬–೯೭ | ೧,೬೬,೪೮,೦೦೦ | ೪೮,೯೫,೦೦೦ | ೪೪,೨೫,೦೦೦ | ೨,೫೯,೩೮,೦೦೦ | | |

---

೧. ಫೌಲರ್ ಸಮಿತಿ ಮುಂದೆ ಸರ್.ಎಚ್. ವಾಟರ್ ಫೀಲ್ಡ್‌ರವರ ಸಾಕ್ಷ್ಯ ಪ್ರ. ೪,೩೩೨–೩೯

೨. ಫೌಲರ್ ಸಮಿತಿಯ ಮುಂದೆ ಆನರಬಲ್ ವಿ. ಆರ್ಥರ್‌ರವರ ಸಾಕ್ಷಿ ಪ್ರ. ೧೮೦೬–೭

ಇಂಥ ಪರಿಸ್ಥಿತಿಯಲ್ಲಿ, ರೂಪಾಯಿಯ ವಿನಿಮಯ ದರದಲ್ಲಿ ಸ್ಥಿರತೆಯನ್ನು ತರಬೇಕೆಂಬುದರ ಬಗ್ಗೆ ಇದ್ದ ನಂಬಿಕೆಯು ಕಳೆದುಹೋದದ್ದರಲ್ಲಿ ಆಶ್ಚರ್ಯವಿಲ್ಲ. ಏಕೆಂದರೆ, ೧೮೯೬ರ ಅಕ್ಟೋಬರ್‌ನಲ್ಲಿ ಕೌನ್ಸಿಲ್‌ನ ಹಣಕಾಸು ಸದಸ್ಯ, ಸ್ಥಿರತೆಯ ದೃಷ್ಟಿಯಿಂದ ರೂಪಾಯಿ ಮತ್ತು ಚಿನ್ನಗಳ ವಿನಿಮಯ ದರವನ್ನು ೧೬ ಪೆನ್ನಿಗಳಿಗೆ ಬದಲಾಗಿ ೧೫ ಪೆನ್ನಿಗಳಿಗೆ ಗೊತ್ತುಮಾಡುವುದು ಉತ್ತಮವೆಂಬ ತೀರ್ಮಾನಕ್ಕೆ ಬಂದಿದ್ದ.[೧] ಆದರೆ ಈ ಸೂಚನೆಯನ್ನು ಕೈಬಿಡಲಾಯಿತು. ಇದಕ್ಕೆ ಕಾರಣ, ರೂಪಾಯಿ ಬೆಲೆ ಚಿನ್ನದ ಸಮಾನತೆಯನ್ನು ಕಂಡುಕೊಳ್ಳುವ ಸೂಚನೆಯನ್ನು ತೋರಿದ್ದು, ವಾಸ್ತವವಾಗಿ ೧೮೯೮ರ ಜನವರಿಯಲ್ಲಿ ಇದನ್ನು ಅದು ಪಡೆಯಿತು ಸಹ. ಈ ಸಮಾನತೆಯು ಸತತವಾಗಿ ೫ ವರ್ಷಗಳ ಹಣದ ಮೌಲ್ಯ ಕುಗ್ಗುವಿಕೆಯ ನಂತರ ಸಾಧಿತವಾಯಿತು.

೧೮೯೮ರ ಜನವರಿ ಮತ್ತು ೧೯೧೭ರ ಜನವರಿಯ ನಡುವೆ ಚಿನ್ನದ ಸಮಾನತೆ ದರಕ್ಕಿಂತ ರೂಪಾಯಿ ಮೌಲ್ಯ ಎರಡು ಬಾರಿ ಕೆಳಗಿಳಿಯಿತು. ೧೯೦೭–೮ರ ವರ್ಷ ವಿನಿಮಯ ಪ್ರಮಿತಿಯಡಿ ಎರಡನೇ ಬಾರಿಗೆ ರೂಪಾಯಿ ಸಮಾನತೆ ದರ ಕುಸಿದು ಹೋಯಿತು. ಮಾರುಕಟ್ಟೆಯಲ್ಲಿ ಜಾರಿಯಲ್ಲಿದ್ದ ದರಗಳು ಕೆಳಗಿನಂತಿದ್ದವು (ಪಟ್ಟಿ – XXXI)

**ಪಟ್ಟಿ – XXXI**

**ವಿನಿಮಯ ದರಗಳು (ದಿ ಟೈಮ್ಸ್‌ನಿಂದ)**

ರೂಪಾಯಿ ಸಮಾನತೆ ದರ : ೧ ಷಿಲಿಂಗ್ ೪ ಪೆನ್ನಿಗಳು

| ತಾರೀಖು | ಕಲ್ಕತ್ತಾದಲ್ಲಿ | | ಬೊಂಬಾಯಿಯಲ್ಲಿ | |
|---|---|---|---|---|
| | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ |
| ೧೯೦೭ | | | | |
| ಸೆಪ್ಟೆಂಬರ್ | ೧ ೪ ೧/೩೨ | ೧ ೩ ೩೧/೩೨ | ೧ ೪ ೧/೩೨ | ೧ ೩ ೩೧/೩೨ |
| ಅಕ್ಟೋಬರ್ | ೧ ೪ ೧/೩೨ | ೧ ೩ ೩೧/೩೨ | ೧ ೪ ೧/೩೨ | ೧ ೩ ೩೧/೩೨ |
| ನವೆಂಬರ್ | ೧ ೪ | ೧ ೩ ೨೩/೩೨ | ೧ ೩ ೩೧/೩೨ | ೧ ೩ ೨೩/೩೨ |
| ಡಿಸೆಂಬರ್ | ೧ ೩ ೧೫/೧೬ | ೧ ೩ ೨೭/೩೨ | ೧ ೩ ೧೫/೧೬ | ೧ ೩ ೨೭/೩೨ |
| ೧೯೦೮ | | | | |
| ಜನವರಿ | ೧ ೩ ೧೩/೧೬ | ೧ ೩ ೨೯/೩೨ | ೧ ೩ ೧೫/೧೬ | ೧ ೩ ೭/೮ |
| ಫೆಬ್ರವರಿ | ೧ ೩ ೩೧/೩೨ | ೧ ೩ ೭/೮ | ೧ ೩ ೩೧/೩೨ | ೧ ೩ ೭/೮ |
| ಮಾರ್ಚ್ | ೧ ೩ ೨೯/೩೨ | ೧ ೩ ೨೭/೩೨ | ೧ ೩ ೨೯/೩೨ | ೧ ೩ ೨೭/೩೨ |
| ಏಪ್ರಿಲ್ | ೧ ೩ ೭/೮ | ೧ ೩ ೨೭/೩೨ | ೧ ೩ ೨೭/೩೨ | ೧ ೩ ೨೭/೩೨ |
| ಮೇ | ೧ ೩ ೭/೮ | ೧ ೩ ೨೭/೩೨ | ೧ ೩ ೧೫/೧೬ | ೧ ೩ ೨೭/೩೨ |
| ಜೂನ್ | ೧ ೩ ೨೯/೩೨ | ೧ ೩ ೨೭/೩೨ | ೧ ೩ ೭/೮ | ೧ ೩ ೨೭/೩೨ |
| ಜುಲೈ | ೧ ೩ ೭/೮ | ೧ ೩ ೨೭/೩೨ | ೧ ೩ ೭/೮ | ೧ ೩ ೨೭/೩೨ |

೧. ಶಿರಾಸ್, ಇಂಡಿಯನ್ ಫೈನಾನ್ಸ್ ಅಂಡ್ ಬ್ಯಾಂಕಿಂಗ್ ಪು. ೧೬೮.

| | | | | |
|---|---|---|---|---|
| ಆಗಸ್ಟ್ | ೧ ೩ ೨೯/೩೨ | ೧ ೩ ೨೭/೩೨ | ೧ ೩ ೨೯/೩೨ | ೧ ೩ ೨೭/೩೨ |
| ಸೆಪ್ಟೆಂಬರ್ | ೧ ೩ ೩೧/೩೨ | ೧ ೩ ೨೭/೩೨ | ೧ ೩ ೩೧/೩೨ | ೧ ೩ ೭/೮ |
| ಅಕ್ಟೋಬರ್ | ೧ ೩ ೧೫/೧೬ | ೧ ೩ ೭/೮ | ೧ ೩ ೨೯/೩೨ | ೧ ೩ ೧೩/೧೬ |
| ನವೆಂಬರ್ | ೧ ೩ ೨೯/೩೨ | ೧ ೩ ೭/೮ | ೧ ೩ ೭/೮ | ೧ ೩ ೭/೮ |
| ಡಿಸೆಂಬರ್ | ೧ ೩ ೧೫/೧೬ | ೧ ೩ ೨೯/೩೨ | ೧ ೩ ೩೧/೩೨ | ೧ ೩ ೭/೮ |

ಒಂದು ವರ್ಷದ ಬಿಕ್ಕಟ್ಟಿನ ನಂತರ ರೂಪಾಯಿ ತನ್ನ ಹಳೆಯ ವಿನಿಮಯ ಸಮಾನತೆಯ ದರಕ್ಕೆ ಹಿಂದಿರುಗಿತು. ಈ ದರದಲ್ಲಿ ಮುಂದಿನ ೭ ವರ್ಷಗಳವರೆಗೆ ಹೆಚ್ಚು ಕಡಿಮೆ ಸ್ಥಿರವಾಗಿತ್ತು. ೧೯೧೪–೧೫ ರಲ್ಲಿ ಮಾತ್ರ ಮತ್ತೆ ರೂಪಾಯಿಯ ದರ ಕುಸಿಯಿತು (ನೋಡಿ ಪಟ್ಟಿ XXXII).

೧೯೧೬ರ ನಂತರ ವಿನಿಮಯ ಪ್ರಮಿತಿಯ ಸ್ಥಿರತೆಯು ಒಂದು ಅನಿರೀಕ್ಷಿತ ಮೂಲದಿಂದ ಅಪಾಯವನ್ನೆದುರಿಸಿತು. ಬೆಳ್ಳಿಯ ಮಾಧ್ಯಮದಲ್ಲಿ ಚಿನ್ನದ ಮೌಲ್ಯ ಇಳಿಯುತ್ತದೆ ಅಥವಾ ಕೊನೆಯಪಕ್ಷ ರೂಪಾಯಿಯ ಮುಖಬೆಲೆಯಷ್ಟು ಅದರ ಆಂತರಿಕ ಮೌಲ್ಯ ಹೆಚ್ಚಾಗುವುದಿಲ್ಲ ಎಂಬ ಕಲ್ಪನೆಯ ಮೇಲೆ ಭಾರತದ ವಿನಿಮಯ ಪ್ರಮಿತಿ ಆಧಾರಿತವಾಗಿತ್ತು. ರೂಪಾಯಿಯ ಆಂತರಿಕ ಮೌಲ್ಯ ಅದರ ನಾಮಮಾತ್ರದ ಬೆಲೆಗೆ ಔನ್ಸಿಗೆ ೪೩ ಪೆನ್ನಿಗಳಿಗೆ ಸಮಾನವಾಗಿತ್ತು. ರೂಪಾಯಿಯ ನಾಮಮಾತ್ರದ ಬೆಲೆಗಿಂತ ಅದರ ಆಂತರಿಕ ಬೆಲೆ ಕಡಿಮೆ ಇರುವವರಿಗೂ, ಬೆಳ್ಳಿಯ ಬೆಲೆ ೪೩ ಪೆನ್ನಿಗಳಿಗಿಂತ ಹೆಚ್ಚಾಗುವವರೆಗೆ, ಚಲಾವಣೆಯಲ್ಲಿದ್ದ ರೂಪಾಯಿ ಕರೆನ್ಸಿಗೆ ಯಾವ ಅಪಾಯವೂ ಇರಲಿಲ್ಲ. ಒಮ್ಮೆ ಬೆಳ್ಳಿಯ ಬೆಲೆ ಈ ದರಕ್ಕಿಂತ ಹೆಚ್ಚಾದಾಗ, ರೂಪಾಯಿಯ ಚಲಾವಣೆಯಲ್ಲಿ ಅಪಾಯವನ್ನೆದುರಿಸುವ ಸಾಧ್ಯತೆಯಿತ್ತು.

**ಪಟ್ಟಿ – XXXII**

**ವಿನಿಮಯ ದರಗಳು (ನ್ಯಾಷನಲ್ ಬ್ಯಾಂಕ್ ಆಫ್ ಇಂಡಿಯಾದಿಂದ)**

| ತಾರೀಖು | ೧೯೧೪ | | ೧೯೧೫ | |
|---|---|---|---|---|
| | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ |
| ಜನವರಿ | – | – | ೧ ೩ ೧೫/೧೬ | ೧ ೩ ೧೫/೧೬ |
| ಫೆಬ್ರವರಿ | – | – | ೧ ೪ ೧/೩೨ | ೧ ೩ ೨೯/೩೨ |
| ಮಾರ್ಚ್ | – | – | ೧ ೪ | ೧ ೩ ೧೫/೧೬ |
| ಏಪ್ರಿಲ್ | – | – | ೧ ೩ ೧೫/೧೬ | ೧ ೩ ೨೯/೩೨ |
| ಮೇ | ೧ ೪ ೧/೪ | ೧ ೩ ೧೫/೧೬ | ೧ ೩ ೧೫/೧೬ | ೧ ೩ ೭/೮ |
| ಜೂನ್ | ೧ ೩ ೩೧/೩೨ | ೧ ೩ ೧೫/೧೬ | ೧ ೩ ೭/೮ | ೧ ೩ ೨೭/೩೨ |
| ಜುಲೈ | ೧ ೩ ೩೧/೩೨ | ೧ ೩ ೧೩/೧೬ | ೧ ೩ ೨೨/೩೨ | ೧ ೩ ೨೩/೩೨ |
| ಆಗಸ್ಟ್ | ೧ ೩ ೭/೮ | ೧ ೩ ೧೩/೧೬ | ೧ ೩ ೧೫/೧೬ | ೧ ೩ ೨೭/೩೨ |
| ಸೆಪ್ಟೆಂಬರ್ | ೧ ೩ ೧೫/೧೬ | ೧ ೩ ೧೩/೧೬ | ೧ ೪ | ೧ ೩ ೧೫/೧೬ |
| ಅಕ್ಟೋಬರ್ | ೧ ೩ ೧೫/೧೬ | ೧ ೩ ೧೫/೧೬ | – | – |
| ನವೆಂಬರ್ | ೧ ೩ ೧೫/೧೬ | ೧ ೩ ೧೫/೧೬ | – | – |
| ಡಿಸೆಂಬರ್ | ೧ ೩ ೧೫/೧೬ | ೧ ೩ ೧೫/೧೬ | – | – |

೧೯೦೪ ರ ಸೆಪ್ಟೆಂಬರ್‌ನಿಂದ ೧೯೦೭ರ ಡಿಸೆಂಬರ್ ವರೆಗಿನ ಅಲ್ಪಾವಧಿಯನ್ನು ಬಿಟ್ಟರೆ, ೧೮೭೩ ರಿಂದಲೂ ಚಿನ್ನದ ಮಾಧ್ಯಮದಲ್ಲಿ ಬೆಳ್ಳಿಯ ಬೆಲೆ ಕೆಳಗಿಳಿಯುವ ಪ್ರವೃತ್ತಿಯನ್ನೇ ಹೊಂದಿತ್ತು. ಬೆಲೆಯಲ್ಲಿನ ಇಳಿತಾಯ ಎಷ್ಟು ಸತತವಾಗಿತ್ತು. ಎಂದರೆ, ಈ ಕಡಿಮೆ ಬೆಲೆಯೇ ಉಳಿದುಕೊಂಡು ಬಿಡುತ್ತದೆ ಎನ್ನುವ ಸಾರ್ವತ್ರಿಕ ಭಾವನೆ ಇತ್ತು. ಈ ಭಾವನೆ ಎಷ್ಟು ದೃಢವಾಗಿತ್ತೆಂದರೆ, ಸುವರ್ಣ ವಿನಿಮಯ ಪ್ರವೃತ್ತಿಯನ್ನು ರೂಪಿಸಿದವರು, ಬೆಳ್ಳಿಯ ಬೆಲೆ ಔನ್ಸಿಗೆ ೪೩ ಪೆನ್ನಿಗಳಿಗಿಂತ ಹೆಚ್ಚಾಗುವುದಿಲ್ಲ ಎಂಬ ಕಲ್ಪನೆಯನ್ನೇ ಆಧರಿಸಿದ್ದರು. ಇಂಥ ನಿರೀಕ್ಷೆ ಎಷ್ಟು ಪ್ರಭಾವಪೂರ್ಣವಾಗಿತ್ತು ಎಂದರೆ, ಭಾರತದ ಕರೆನ್ಸಿಯ ಮೇಲಿನ ಎಲ್ಲ ಸಮಿತಿಗಳು ಮತ್ತು ಕಮಿಷನ್‌ಗಳ ಎದುರು ಹೇಳಿಕೆ ನೀಡಿದ ಯಾರೂ ಈ ವ್ಯವಸ್ಥೆಯನ್ನು ಟೀಕಿಸಲೇ ಇಲ್ಲ. ೧೯೧೬ರ ನಂತರ ಅನಿರೀಕ್ಷಿತ ಘಟನೆ ಘಟಿಸಿತು. ಇದು ಅತಿ ತಕ್ಷಣದಲ್ಲೇ ನಡೆಯಿತು ಸಹ. ೧೯೧೪ರ ಫೆಬ್ರವರಿ ೧೦ ರಂದು ಲಂಡನ್ನಿನಲ್ಲಿ, ನಿಗದಿತ ಚೊಕ್ಕ ಬೆಳ್ಳಿಯ ಬೆಲೆ ಔನ್ಸಿಗೆ ೨೬ ೫/೮ ಪೆನ್ನಿಗಳಿದ್ದುದು ೨೨ ೧೧/೧೬ ಪೆನ್ನಿಗಳಿಗೆ ಇಳಿಯಿತು. ೧೯೧೫ರ ಫೆಬ್ರವರಿ ೧೦ ರಂದು ಅದು ೨೭ ಪೆನ್ನಿಗಳಿಗೆ ಏರಿದರೂ ೧೯೧೬ರ ಅದೇ ದಿನ ಅದು ರೂಪಾಯಿಯ ಕರಗಿಸುವಿಕೆ ದರಕ್ಕಿಂತ ಕೆಳಗಿಳಿಯಿತು. ಈ ದಿನದ ನಂತರ ಅದು ಮತ್ತೆ ತುಂಬಾ ಎತ್ತರದ ಮಟ್ಟಕ್ಕೆ ಏರಿತು. ೧೯೧೭ರ ಫೆಬ್ರವರಿ ೯ ರಂದು ಅದು ೩೭ ೫/೮ ಪೆನ್ನಿಗಳಿಗೆ ಏರಿತು. ೧೯೧೮ರ ಫೆಬ್ರವರಿ ೮ ರಂದು ಅದು ೪೩ ಪೆನ್ನಿಗಳಿಗೆ ಏರಿತು. ೧೯೧೯ರ ಅದೇ ದಿನ ಅದು ೪೮ ೭/೧೬ ಪೆನ್ನಿಗಳಿಗೆ ಏರಿತು. ಇದು ರೂಪಾಯಿಯ ಕರಗಿಸುವಿಕೆ ದರವನ್ನು ಬಹಳವಾಗಿ ಮೀರಿ ಏರಿತ್ತು. ಈ ದಾಖಲೆಗಳೆಲ್ಲವನ್ನೂ ಮುರಿದು ೧೯೨೦ರ ಫೆಬ್ರವರಿ ೧೧ ರಂದು ಈ ದರ ಔನ್ಸಿಗೆ ೮೯ ೧/೨ ಪೆನ್ನಿಗಳಿಗೆ ಏರಿತು.

ರೂಪಾಯಿಯ ಆಂತರಿಕ ಬೆಲೆ ಅದರ ಮುಖಬೆಲೆಗಿಂತ ಬಹಳ ಹೆಚ್ಚಾದಾಗ ಅದನ್ನು ಚಲಾವಣೆಯಲ್ಲಿ ಉಳಿಸಿಕೊಳ್ಳುವುದು ಹೇಗೆ ಎನ್ನುವ ಸಮಸ್ಯೆ ಉಂಟಾಯಿತು. ಇದಕ್ಕೆ ಎರಡು ಪರಿಹಾರಗಳಿದ್ದಂತೆ ಗೋಚರವಾಯಿತು. ಒಂದು ರೂಪಾಯಿಯ ಚೊಕ್ಕತೆಯನ್ನು ಕಡಿಮೆ ಮಾಡುವುದು. ಇನ್ನೊಂದು ಅದರ ಚಿನ್ನದ ಸಮಾನತೆಯನ್ನು ಹೆಚ್ಚು ಮಾಡುವುದು. ಇಂಥದೇ ಸಮಸ್ಯೆಯನ್ನು ಎದುರಿಸುತ್ತಿದ್ದ ಇತರ ರಾಷ್ಟ್ರಗಳು ಮೊದಲನೆಯ ಪರಿಹಾರವನ್ನು ಆಯ್ದುಕೊಂಡವು. ಈ ವಿಧಾನವನ್ನು ಅತ್ಯಂತ ಯಶಸ್ವಿಯಾಗಿ, ಫಿಲಿಫೈನ್ಸ್‌ನಲ್ಲಿ ಮತ್ತು ಮೆಕ್ಸಿಕೋದಲ್ಲಿ ೧೯೦೪-೭ರ ಅವಧಿಯಲ್ಲಿ ಅನುಸರಿಸಲಾಗಿತ್ತು[೧] ಈ ರಾಷ್ಟ್ರಗಳಲ್ಲಿ, ಬೆಳ್ಳಿಯು ಮೇಲಿನ ರೀತಿಯ ಸಮಸ್ಯೆಗಳನ್ನುಂಟುಮಾಡಿದಾಗ ನಾಣ್ಯದ ಚೊಕ್ಕತೆಯನ್ನು ಕಡಿಮೆ ಮಾಡುವುದರ ಮೂಲಕ ಸಮಸ್ಯೆಯನ್ನು ಎದುರಿಸಲಾಗಿತ್ತು. ಆದರೆ ಭಾರತದ ಸೆಕ್ರೆಟರಿ ಆಫ್ ಸ್ಟೇಟ್ ಎರಡನೆಯ ಮಾರ್ಗವನ್ನು ಅನುಸರಿಸಿದ. ಇದರ ಪ್ರಕಾರ ಬೆಳ್ಳಿಯ ಬೆಲೆ ಹೆಚ್ಚಾದಂತೆಲ್ಲ, ರೂಪಾಯಿಯ ಸಮಾನತೆ ದರವನ್ನು ವ್ಯತ್ಯಾಸಗೊಳಿಸುತ್ತಾ ಹೋಗಲಾಯಿತು. ಬೆಳ್ಳಿಯ ಬೆಲೆಯ ವ್ಯತ್ಯಾಸದೊಂದಿಗೆ, ರೂಪಾಯಿಯ ಸಮಾನತೆ ಬೆಲೆಯನ್ನು ಹೇಗೆ ವ್ಯತ್ಯಾಸಗೊಳಿಸಲಾಯಿತು ಎನ್ನುವುದರ ಪರಿಚಯವನ್ನು ಮುಂದಿನ ಪಟ್ಟಿ ಕೊಡುತ್ತದೆ.

---

೧. ನೋಡಿ : ಇ.ಡಬ್ಲ್ಯೂ. ಕೆಮ್ಮೆರರ್, ಮಾಡರ್ನ್ ಕರೆನ್ಸಿ ರಿಫಾರ್ಮ್ಸ್ ೧೯೬೬ ಪುಟಗಳು ೩೪೯–೫೪, ೪೪೫–೪೯ ಮತ್ತು ೫೩೫–೪೭

**ಪಟ್ಟಿ – XXXIII**

| ರೂಪಾಯಿ ಸಮಾನತೆ ದರವನ್ನು ಬದಲಾಯಿಸಲಾದ ದಿನಾಂಕಗಳು | ಸಮಾನತೆಯ ದರನ ಮಟ್ಟ ಶಿ. | ಪೈ |
|---|---|---|
| ಜನವರಿ ೩, ೧೯೧೭ | ೧ | ೪ ೧/೪ |
| ಆಗಸ್ಟ್ ೨೮, ೧೯೧೭ | ೧ | ೫ |
| ಏಪ್ರಿಲ್ ೧೨, ೧೯೧೮ | ೧ | ೬ |
| ಮೇ ೧೩, ೧೯೧೯ | ೧ | ೮ |
| ಆಗಸ್ಟ್ ೧೨, ೧೯೧೯ | ೧ | ೧೦ |
| ಸೆಪ್ಟೆಂಬರ್ ೧೫, ೧೯೧೯ | ೨ | ೦ |
| ನವೆಂಬರ್ ೨೨, ೧೯೧೯ | ೨ | ೨ |
| ಡಿಸೆಂಬರ್ ೧೨, ೧೯೧೯ | ೨ | ೪ |

ಈ ರೀತಿ ರೂಪಾಯಿಯ ಸಮಾನತೆಯ ಆಟವನ್ನು ಸುಮಾರು ೨ ವರ್ಷಗಳು ಆಡಿದ ನಂತರ, ಇದು ಯಾವ ಸಾಮಾಜಿಕ ಪರಿಣಾಮಗಳನ್ನೂ ಉಂಟುಮಾಡಿಲ್ಲ ಎನ್ನುವ ರೀತಿಯಲ್ಲಿ, ೧೯೧೯ರ ಮೇ ೩೦ರಂದು, ಸೆಕ್ರೆಟರಿ ಆಫ್ ಸ್ಟೇಟ್, ಬಾಬಿಂಗ್‌ಟನ್ ಸ್ಮಿಥ್ ಅಧ್ಯಕ್ಷತೆಯಲ್ಲಿ ಕರೆನ್ಸಿ ಸಮಿತಿಯನ್ನು ರಚಿಸಿದ. ಈ ಸಮಿತಿ "ಒಂದು ದೃಢ ಸುವರ್ಣ ವಿನಿಮಯ ಪ್ರಮಿತಿ ಖಾತರಿಮಾಡಿಕೊಳ್ಳುವ ಬಗ್ಗೆ" ಶಿಫಾರಸುಗಳನ್ನು ಮಾಡಬೇಕಾಗಿತ್ತು. ಸುಮಾರು ೬ ತಿಂಗಳ ವಿಚಾರ ವಿನಿಮಯದ ನಂತರ ಸಮಿತಿಯ ಹೆಚ್ಚಿನ ಸದಸ್ಯರು ಕೆಳಗಿನ ಒಮ್ಮತದ ಶಿಫಾರಸುಗಳನ್ನು ಮಾಡಿದರು.[೧]

೧. "ರೂಪಾಯಿಗೆ ಸ್ಥಿರತೆಯನ್ನು ವಾಪಸ್ಸು ತರುವ ಉದ್ದೇಶ ಇರಬೇಕು. ಸಾಧ್ಯವಾದಷ್ಟೂ ಬೇಗ ಕರೆನ್ಸಿ ವ್ಯವಸ್ಥೆ ಸ್ವಯಂಚಾಲಿತವಾಗಿ ಮತ್ತೆ ಕೆಲಸ ಮಾಡುವಂತಾಗಬೇಕು"

೨. "ಏರ್ಪಡಬೇಕಾದ ದೃಢ ದರದ ಸಂಬಂಧ ಚಿನ್ನದೊಡನೆ ಇರಬೇಕೇ ಹೊರತು ಸ್ಟರ್ಲಿಂಗ್‌ನೊಡನೆ ಅಲ್ಲ"

೩. "ರೂಪಾಯಿಯ ಚಿನ್ನದ ಸಮಾನತೆ ಸಾಕಷ್ಟು ಹೆಚ್ಚಾಗಿರಬೇಕು. ರೂಪಾಯಿ ಸಾಧ್ಯವಿರುವಷ್ಟೂ ತನ್ನ ಪ್ರಸ್ತುತದ ಚೊಕ್ಕತೆ ಮತ್ತು ತೂಕವನ್ನು ಕಾಪಾಡಿಕೊಳ್ಳುತ್ತಿದೆ ಎಂದು ಭರವಸೆ ನೀಡುವಷ್ಟರ ಮಟ್ಟಿಗೆ ಹೆಚ್ಚಾಗಿರಬೇಕು. ಈ ರೀತಿಯ ರೂಪಾಯಿ ಸಾಂಕೇತಿಕ ನಾಣ್ಯವಾಗೇ ಇರಬೇಕು. ಅಂದರೆ, ಅದು ಹೊಂದಿರುವ ಬೆಳ್ಳಿ ಅದರ ವಿನಿಮಯ ದರವನ್ನು ಮೀರಬಾರದು".

"ಬಹಳ ಎಚ್ಚರಿಕೆಯಿಂದ ಸಮಸ್ಯೆಯನ್ನು ಪರಿಶೀಲಿಸಿದ ನಂತರ (ನಮ್ಮಲ್ಲಿ ಒಬ್ಬರು ಸದಸ್ಯರನ್ನು ಬಿಟ್ಟು – ಅವರು ಪ್ರತ್ಯೇಕ ವರದಿಯನ್ನು ನೀಡುತ್ತಾರೆ). ಉಳಿದವರು ಒಮ್ಮತದಿಂದ ಕೆಳಗಿನ ಶಿಫಾರಸನ್ನು ಮಾಡುತ್ತೇವೆ. ಅದೆಂದರೆ ರೂಪಾಯಿ ಮತ್ತು ಚಿನ್ನದ ನಡುವೆ ದೃಢ ಸಂಬಂಧ ಏರ್ಪಡುವ ದೃಷ್ಟಿಯಿಂದ, ಒಂದು ರೂಪಾಯಿಗೆ ೧೧.೩೦೦೧೬ ಗ್ರಾಂಗಳ ಚಿನ್ನದ ಸಮಾನತೆ ಇರಬೇಕು. ಈ ದರ ವಿದೇಶೀ

೧. ನೋಡಿ : ವರದಿ. ಪಿ.ಪಿ.ಸಿ.ಡಿ. ೫೨೭, ೧೯೨೦ ಪ್ಯಾರಾ. ೫೯.

ವಿನಿಮಯಕ್ಕೆ ಮತ್ತು ಆಂತರಿಕ ಚಲಾವಣೆಗಳೆರಡಕ್ಕೂ ಇರಬೇಕು" ಎಂದು ಸಮಿತಿಯು ಹೇಳಿತು. ಅಂದರೆ ಒಂದು ರೂಪಾಯಿಗೆ ೨ ಷಿಲ್ಲಿಂಗ್‌ಗಳ (ಚಿನ್ನ) ಸಮಾನತೆ ಇರಬೇಕು.

ಅಲ್ಪಸಂಖ್ಯಾತ ವರದಿ: ಇದು ಕೆಳಮಟ್ಟದ ವಿನಿಮಯ ದರಕ್ಕೆ ಉತ್ತೇಜನ ಕೊಡುವ ಮತ್ತು ಮೇಲ್ಮಟ್ಟದ ವಿನಿಮಯ ದರವನ್ನು ಶಿಕ್ಷಿಸುವ ಹಳೆಯ ರಾಗಕ್ಕೇ ಇಂಬುಕೊಟ್ಟಿತ್ತು. ಅದು ೧೫ ರೂಪಾಯಿಗೆ ಒಂದು ಚಿನ್ನದ ಸವರನ್ ಅಥವಾ ೧೧೩.೦೦೧೬ ಟ್ರಾಯ್ ಗ್ರಾಂ ಶುದ್ಧಚಿನ್ನದ ವಿನಿಮಯ ದರವನ್ನು ಶಿಫಾರಸು ಮಾಡಿತು. ಜೊತೆಗೆ ಈ ವರದಿ, ಹಳೆಯ ನಾಣ್ಯಕ್ಕೆ ಹೋಲಿಸಿದಂತೆ ಕಡಿಮೆ ಶುದ್ಧತೆಯಿರುವ ಎರಡು ರೂಪಾಯಿಯ ಬೆಳ್ಳಿಯ ನಾಣ್ಯವನ್ನು ಚಲಾವಣೆಗೆ ತರುವ ಶಿಫಾರಸು ಮಾಡಿತು. ಈ ವಿನಿಮಯದರ ನ್ಯೂಯಾರ್ಕ್‌ನಲ್ಲಿ ಬೆಳ್ಳಿಯ ದರ ೯೨ ಸೆಂಟ್‌ಗಳಿರುವಷ್ಟು ಕಾಲವೂ ಇರಬೇಕೆಂದು ಅದರ ಶಿಫಾರಸಾಗಿತ್ತು.[೧]

೧೯೨೦ರ ಫೆಬ್ರವರಿ ೨ರ ಪ್ರಕಟನೆಯ ಮೂಲಕ ಭಾರತ ಸರ್ಕಾರ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಬಹುಮತದ ವರದಿಯನ್ನು ಜಾರಿಗೆ ತರಲು ಒಪ್ಪಿಕೊಂಡವು. ಹಳೆಯ ಸಮಾನತೆ ದರ ೭.೫೩೩೪೪ ಗ್ರಾಂಗಳನ್ನು ರದ್ದುಮಾಡಿ ಹೊಸ ಸಮಾನತೆ ದರ ೧೧.೩೦೦೦೬ ಟ್ರಾಯ್‌ಗ್ರಾಂ ಅನ್ನು ಜಾರಿಗೆ ತರಲಾಯಿತು. ಈಗ ರೂಪಾಯಿ ಚಿನ್ನದ ಸಮಾನತೆ ದರವನ್ನು ಕಾಯ್ದುಕೊಂಡಿದೆಯೆ?

ಈ ವಿಷಯವನ್ನು ಖಾತರಿಪಡಿಸಿಕೊಳ್ಳುವುದಕ್ಕೆ ಲಂಡನ್ನಿನ ವಿನಿಮಯ ಕೊಟೇಷನ್ ನೆರವಾಗುವುದಿಲ್ಲ. ಏಕೆಂದರೆ ಅಲ್ಲಿ ರೂಪಾಯಿಯ ಸಮಾನತೆದರ ೨ಷಿ ಚಿನ್ನವೇ ಹೊರತು ೨ಷಿ ಸ್ಟರ್ಲಿಂಗ್ ಅಲ್ಲ. ಚಿನ್ನ ಮತ್ತು ಸ್ಟರ್ಲಿಂಗ್‌ಗಳೆರಡೂ ಒಂದೇ ಆಗಿದ್ದರೆ ಅದರ ಮಾತೇ ಬೇರೆ.

ಆದರೆ ಯುದ್ಧದ ಅವಧಿಯಲ್ಲಿ, ಹೆಚ್ಚು ಕಡಿಮೆ ಅಪರಿವರ್ತನೀಯ ಹಣವನ್ನು ನೀಡಿದ್ದರಿಂದ, ಪೌಂಡ್, ಸ್ಟರ್ಲಿಂಗ್‌ಗಳು ಚಿನ್ನದ ಮಾಧ್ಯಮದಲ್ಲಿ ಕುಸಿದಿತ್ತು. ಆದ್ದರಿಂದ ನಾವು ಯಾವ ಕರೆನ್ಸಿ ಚಿನ್ನದೊಡನೆ ಸಮಾನತೆಯನ್ನು ಕಾಯ್ದುಕೊಂಡಿತ್ತೋ ಅದನ್ನು ಪರಿಗಣಿಸಿ ಮಾತನಾಡಬೇಕು. ಅಂಥ ಕರೆನ್ಸಿಯೆಂದರೆ, ಅಮೆರಿಕನ್ ಡಾಲರ್. ಆದ್ದರಿಂದ, ನ್ಯೂಯಾರ್ಕ್‌ನಲ್ಲಿನ ವಿನಿಮಯದರ, ರೂಪಾಯಿಯ ಚಿನ್ನದ ಬೆಲೆಯನ್ನು ಅಳತೆ ಮಾಡಲು, ಲಂಡನ್ನಿನ ಸ್ಟರ್ಲಿಂಗ್ ಬೆಲೆಗಿಂತ ಹೆಚ್ಚು ಉಪಯುಕ್ತ. ೧೧.೩೦೦೦೬ ಗ್ರಾಂ ಚೊಕ್ಕ ಚಿನ್ನಕ್ಕೆ ಸಮಾನವಾಗಿ, ರೂಪಾಯಿ ಎಷ್ಟು ಸ್ಟರ್ಲಿಂಗ್ ಅನ್ನು ಕೊಳ್ಳುವ ಚೈತನ್ಯವನ್ನು ಪಡೆದಿತ್ತು ಎನ್ನುವುದನ್ನು, ರೂಪಾಯಿ–ಸ್ಟರ್ಲಿಂಗ್ ವಿನಿಮಯದರದೊಡನೆ ಹೋಲಿಸುವುದರ ಮೂಲಕ ಸಹ ನಾವು ರೂಪಾಯಿಯ ಚಿನ್ನದ ಬೆಲೆಯನ್ನು ಅಳತೆ ಮಾಡಬಹುದು. ಹೀಗೆ ಮಾಡಲು ನ್ಯೂಯಾರ್ಕ್–ಲಂಡನ್‌ನಲ್ಲಿ ಪ್ರಚಲಿತದಲ್ಲಿರುವ ದರಗಳನ್ನೂ ಗಮನಿಸಿ, ಚಿನ್ನದ ಸಮಾನತೆಯನ್ನು ಕಂಡುಕೊಳ್ಳಬಹುದು.[೨]

---

೧. ವರದಿ ಪು. ೪೧

೨. ಇದನ್ನು ಲೆಕ್ಕಹಾಕಲು ಬಳಸಬಹುದಾದ ಸೂತ್ರವೆಂದರೆ,

| | | |
|---|---|---|
| x ಪೆನ್ನಿಗಳು | = | ೧ ರೂಪಾಯಿ |
| | = | ೧೧.೩೦೦೧೬ ಗ್ರಾಂನಷ್ಟು ಚೊಕ್ಕ ಚಿನ್ನ |
| ೨೨.೨೨ ಚೊಕ್ಕಚಿನ್ನ | = | ೧ ಡಾಲರ್ |
| d ಡಾಲರ್‌ಗಳು | = | ೧ ಪೌಂಡ್ ಸ್ಟರ್ಲಿಂಗ್ |
| | = | ೨೪೦ ಪೆನ್ನಿಗಳು |

ಆದ್ದರಿಂದ $x = \frac{೧೧.೩೦೦೧೬ x ೨೪೦}{೨೩.೨೨ x d}$ $\frac{೧೧,೬೮೦}{d}$ ಪೆನ್ನಿಗಳು

ನೋಡಿ : ರಪ್‌ಫೋರ್ತ್ ಎಫ್.ವಿ. : ದಿ ಇಂಡಿಯನ್ ಎಕ್ಸ್‌ಛೇಂಜ್ ಪ್ರಾಬ್ಲಂ, ೧೯೨೧ ಪು. ೯

## ಪಟ್ಟಿ XXXIV
## ರೂಪಾಯಿಯ ವಾಸ್ತವ ಚಿನ್ನ ಮೌಲ್ಯ ಮತ್ತು ವಿದೇಶೀವಿನಿಮಯ ಮಾಧ್ಯಮದಲ್ಲಿ ಹೊಸ ಸಮಾನತೆ ದರ

| ತಿಂಗಳ ಮಧ್ಯದಲ್ಲಿ | ಬೊಂಬಾಯಿಗೆ ಹೋಲಿಸಿದಂತೆ ನ್ಯೂಯಾರ್ಕ್ ದರ (ಸೆಂಟ್‌ಗಳಲ್ಲಿ) | | | | | | ಲಂಡನ್‌ಗೆ ಹೋಲಿಸಿದಂತೆ ಬೊಂಬಾಯಿ ದರ (ಪಿ.ಪೆಗಳಲ್ಲಿ) | | | | | |
|---|---|---|---|---|---|---|---|---|---|---|---|---|
| | ೧೯೨೦ | | ೧೯೨೧ | | ೧೯೨೨ | | ೧೯೨೦ | | ೧೯೨೧ | | ೧೯೨೨ | |
| | ಸಮಾನತೆ ದರ | ವಾಸ್ತವ ದರ | ಸಮಾನತೆ ದರ | ವಾಸ್ತವ ದರ | ಸಮಾನತೆ ದರ | ವಾಸ್ತವ ದರ | ಸಮಾನತೆ ದರ | ವಾಸ್ತವ ದರ | ಸಮಾನತೆ ದರ | ವಾಸ್ತವ ದರ | ಸಮಾನತೆ ದರ | ವಾಸ್ತವ ದರ |
| ಜನವರಿ | ೦.೪೮೬೬ | ೦.೪೪೦೦ | ೦.೪೮೬೬ | ೦.೨೯೨೫ | ೦.೪೮೬೬ | ೦.೨೮೦೦ | ೨ ೭ ೧/೨ | ೨ ೩ ೫/೮ | ೨ ೭ ೫/೧೬ | ೧ ೫ ೫/೮ | ೨ ೩ ೫/೮ | ೧ ೩ ೧೩/೧೬ |
| ಫೆಬ್ರವರಿ | ೦.೪೮೬೬ | ೦.೪೮೫೦ | ೦.೪೮೬೬ | ೦.೨೮೦೦ | ೦.೪೮೬೬ | ೦.೨೮೪೫ | ೨ ೧೦ ೧೧/೩೨ | ೨ ೯ ೧/೮ | ೨ ೫ ೧೩/೧೬ | ೧ ೪ ೧/೮ | ೨ ೨ ೭/೩೨ | ೧ ೩ ೯/೧೬ |
| ಮಾರ್ಚ್ | ೦.೪೮೬೬ | ೦.೪೮೫೦ | ೦.೪೮೬೬ | ೦.೨೬೨೫ | ೦.೪೮೬೬ | ೦.೨೭೮೭ | ೨ ೭ ೨೯/೩೨ | ೨ ೫ ೩/೪ | ೨ ೫ ೩೧/೩೨ | ೧ ೩ ೧/೪ | ೨ ೨ ೭/೩೨ | ೧ ೩ ೫/೧೬ |
| ಏಪ್ರಿಲ್ | ೦.೪೮೬೬ | ೦.೪೭೭೫ | ೦.೪೮೬೬ | ೦.೨೬೨೫ | ೦.೪೮೬೬ | ೦.೨೭೮೫ | ೨ ೫ ೭/೧೬ | ೨ ೩ ೩/೪ | ೨ ೫ ೧೩/೧೬ | ೧ ೩ ೫/೮ | ೨ ೨ ೨೯/೩೨ | ೧ ೩ ೧/೮ |
| ಮೇ | ೦.೪೮೬೬ | ೦.೪೩೨೫ | ೦.೪೮೬೬ | ೦.೨೬೭೫ | ೦.೪೮೬೬ | ೦.೨೯೩೦ | ೨ ೬ ೧೯/೩೨ | ೨ ೨ ೧/೮ | ೨ ೫ ೭/೩೨ | ೧ ೩ ೧/೨ | ೨ ೨ ೧/೨ | ೧ ೩ ೯/೧೬ |
| ಜೂನ್ | ೦.೪೮೬೬ | ೦.೪೧೨೫ | ೦.೪೮೬೬ | ೦.೨೫೨೫ | ೦.೪೮೬೬ | ೦.೨೯೦೦ | ೨ ೫ ೩೧/೩೨ | ೧ ೧೦ ೧೩/೧೬ | ೨ ೬ ೨೯/೩೨ | ೧ ೩ ೩/೮ | ೨ ೨ ೧/೪ | ೧ ೩ ೧೯/೩೨ |
| ಜುಲೈ | ೦.೪೮೬೬ | ೦.೩೯೦೦ | ೦.೪೮೬೬ | ೦.೨೪೦೦ | ೦.೪೮೬೬ | ೦.೨೯೦೦ | ೨ ೫ ೩೧/೩೨ | ೧ ೮ ೧/೧೬ | ೨ ೮ ೨೯/೩೨ | ೧ ೩ ೧/೪ | ೨ ೨ ೧/೮ | ೧ ೩ ೫/೮ |
| ಆಗಸ್ಟ್ | ೦.೪೮೬೬ | ೦.೩೬೫೦ | ೦.೪೮೬೬ | ೦.೨೪೭೫ | ೦.೪೮೬೬ | ೦.೨೯೧೬ | ೨ ೮ ೯/೩೨ | ೧ ೧೦ ೧/೧೬ | ೨ ೭ ೨೯/೩೨ | ೧ ೪ ೩/೪ | ೨ ೨ ೫/೮ | ೧ ೩ ೧೯/೩೨ |
| ಸೆಪ್ಟೆಂಬರ್ | ೦.೪೮೬೬ | ೦.೩೩೨೫ | ೦.೪೮೬೬ | ೦.೨೬೭೫ | ೦.೪೮೬೬ | ೦.೨೮೭೫ | ೨ ೯ ೯/೧೬ | ೧ ೧೦ ೧/೧೬ | ೨ ೭ ೧೫/೩೨ | ೧ ೫ ೧/೧೬ | ೨ ೨ ೩/೧೬ | ೧ ೩ ೯/೧೬ |
| ಅಕ್ಟೋಬರ್ | ೦.೪೮೬೬ | ೦.೩೦೨೫ | ೦.೪೮೬೬ | ೦.೨೮೨೫ | ೦.೪೮೬೬ | – | ೨ ೯ ೨೧/೩೨ | ೧ ೭ ೩/೪ | ೨ ೬ ೧/೩೨ | ೧ ೫ ೭/೧೬ | ೨ ೨ ೬/೧೬ | – |
| ನವೆಂಬರ್ | ೦.೪೮೬೬ | ೦.೩೦೨೫ | ೦.೪೮೬೬ | ೦.೨೬೯೫ | ೦.೪೮೬೬ | – | ೨ ೧೦ ೯/೧೬ | ೧ ೭ ೧/೮ | ೨ ೫ ೧೬/೩೨ | ೧ ೪ ೧/೮ | – | – |
| ಡಿಸೆಂಬರ್ | ೦.೪೮೬೬ | ೦.೨೬೫೦ | ೦.೪೮೬೬ | ೦.೨೭೭೫ | ೦.೪೮೬೬ | – | ೨ ೯ ೯/೧೬ | ೧ ೫ ೧/೪ | ೨ ೪ | ೧ ೩ ೭/೮ | – | – |

ವಿನಿಮಯದ ಸಮಾನತೆಗೆ ಹೋಲಿಸಿದಂತೆ, ವಾಸ್ತವ ವಿನಿಮಯದರ, ನ್ಯೂಯಾರ್ಕ್‌ನಲ್ಲಾಗಲೀ ಅಥವಾ ಲಂಡನ್‌ನಲ್ಲಾಗಲೀ, ರೂಪಾಯಿಯ ಮೌಲ್ಯದ ಕುಸಿತವನ್ನು ಸೂಚಿಸುತ್ತದೆ (ನೋಡಿ ಪಟ್ಟಿ XXXIV)

ರೂಪಾಯಿಯ ಬಾಹ್ಯ ಚಿನ್ನ ಮೌಲ್ಯದ ಜೊತೆಗೆ, ಸವರನ್ ಅಥವಾ ಚಿನ್ನದ ಬಾರ್‌ಗಳ ಮಾಧ್ಯಮದಲ್ಲಿ ರೂಪಾಯಿಯ ಆಂತರಿಕ ಬೆಲೆಯನ್ನು ಪರಿಗಣಿಸುವುದು ಅಗತ್ಯ (ನೋಡಿ ಪಟ್ಟಿ XXXV)

**ಪಟ್ಟಿ – XXXV**

**ರೂಪಾಯಿಯ ಚಿನ್ನದ ಮೌಲ್ಯ ಮತ್ತು ಸವರನ್‌ಗಳು ಹಾಗೂ ಚಿನ್ನದ ಬೆಲೆಯ ಮಾಧ್ಯಮದಲ್ಲಿ ಹೊಸ ಸಮಾನತೆಯ ದರ**

| ತಿಂಗಳುಗಳು | | ೧೯೨೦ | ೧೯೨೧ | | ೧೯೨೨ | |
|---|---|---|---|---|---|---|
| | | ರೂ.ಆ.ಪೈ | ರೂ.ಆ.ಪೈ | | ರೂ.ಆ.ಪೈ | |
| ಜವರಿ | ಮುಖಬೆಲೆ | ೨೮ ೦ ೦ | ಮುಖಬೆಲೆ | **ಅಧಿಕೃತ ಅಂಕಿ ಅಂಶಗಳು ಇದುವರೆಗೆ ಪ್ರಕಾಶ ವಾಗಿಲ್ಲ** | ೧೭ ೧೪ ೦ | **ಅಧಿಕೃತ ಅಂಕಿ ಅಂಶಗಳು ಇದುವರೆಗೆ ಪ್ರಕಾಶ ವಾಗಿಲ್ಲ** |
| ಫೆಬ್ರವರಿ | ” | ೨೨ ೦ ೦ | –”– | | ೧೭ ೧೪ ೦ | |
| ಮಾರ್ಚ್ | ” | ೨೪ ೦ ೦ | –”– | | ೧೭ ೧೪ ೦ | |
| ಏಪ್ರಿಲ್ | ” | ೨೪ ೮ ೦ | ೧೮ ೧೨ ೦ | | – | |
| ಮೇ | ” | ೨೨ ೧೨ ೦ | ೧೯ ೦ ೦ | | – | |
| ಜೂನ್ | ” | ೨೨ ೪ ೦ | ೧೯ ೧೨ ೦ | | – | |
| ಜುಲೈ | ” | ೨೩ ೦ ೦ | ೨೦ ೯ ೦ | | – | |
| ಆಗಸ್ಟ್ | ” | ೨೧ ೮ ೦ | ೨೦ ೯ ೦ | | – | |
| ಸೆಪ್ಟೆಂಬರ್ | ” | ೨೫ ೪ ೦ | ೧೯ ೨ ೦ | | – | |
| ಅಕ್ಟೋಬರ್ | ” | ೨೭ ೭ ೦ | ೧೮ ೧೪ ೦ | | – | |
| ನವೆಂಬರ್ | ” | ೨೮ ೧೦ ೦ | ೧೮ ೮ ೦ | | – | |
| ಡಿಸೆಂಬರ್ | ” | ೨೭ ೧೨ ೦ | ೧೮ ೭ ೦ | | – | |

ಈ ಪಟ್ಟಿಗಳಿಗೆ ವಿವರಣೆ ಬೇಕಿಲ್ಲ. ರೂಪಾಯಿ ೨ ಷಿಲಿಂಗ್‌ಗಳಿಗಿಂತ (ಚಿನ್ನ) ಬಹಳ ದೂರವಿದ್ದಿತಷ್ಟೇ ಅಲ್ಲದೆ, ಅದು ೧ಷಿ ೪ಪೆ (ಸ್ಟರ್ಲಿಂಗ್) ಸಹ ಆಗಿರಲಿಲ್ಲ.

ಈ ಮಾಹಿತಿಗಳೂ ವಿನಿಮಯ ಪ್ರವೃತ್ತಿಯ ನಿಷ್ಫಲತೆಯನ್ನು ವಿವಾದಾತೀತವಾಗಿ ಸಾಬೀತು ಮಾಡುವುದಿಲ್ಲವೇ? ಚಿನ್ನದೊಡನೆ ಸಮಾನತೆಯನ್ನು ಕಾಯ್ದುಕೊಳ್ಳದ ಒಂದು ವ್ಯವಸ್ಥೆಯನ್ನು ದಕ್ಷವಾದದ್ದು ಎಂದು ಕರೆಯಲು ಸಾಧ್ಯವೇ? ಪದೇ ಪದೇ ಮುರಿದು ಬೀಳುವುದಕ್ಕೆ ಈ ವ್ಯವಸ್ಥೆಯಲ್ಲಿಯೇ ದೋಷವಿರಬೇಕು. ೧೮೯೩ರಲ್ಲಿ ಸಮಾನತೆ ದರಕ್ಕಿಂತ ಬಹಳ ಕೆಳದರವನ್ನು ಮುಟ್ಟಿದ್ದ ರೂಪಾಯಿ, ೧೯೦೦ರವರೆಗೆ ದೃಢವಾದ ಯಾವ ನೈಜ ದರವನ್ನೂ ಪಡೆದುಕೊಳ್ಳಲೇ ಇಲ್ಲ. ೧೯೦೭ರಲ್ಲಿ ರೂಪಾಯಿ ಮೌಲ್ಯ ಮತ್ತೊಂದು ಕುಸಿತವನ್ನು ಕಂಡಿತು. ೧೯೧೭ರಲ್ಲಿ ಅಸಾಧಾರಣ ಪ್ರಮಾಣದ ಏರಿಕೆಯನ್ನು ತೋರಿದರೂ ಮತ್ತೆ ೧೯೨೦ರ ನಂತರ ಕುಸಿತ ಉಂಟಾಯಿತು. ಈ ಕುತೂಹಲಕಾರಿ ಬೆಳವಣಿಗೆ ಸಹಜವಾಗಿಯೇ ಒಂದು ಪ್ರಶ್ನೆಯನ್ನು ಕೇಳುವಂತೆ ಮಾಡುತ್ತದೆ. ಅದೇಂದರೆ, ಈ ಸಂದರ್ಭಗಳಲ್ಲೆಲ್ಲಾ ರೂಪಾಯಿ ಚಿನ್ನದ ಸಮಾನತೆ

ದರವನ್ನು ಏಕೆ ಕಾಯ್ದುಕೊಳ್ಳಲು ಅಸಮರ್ಥವಾಯಿತು? ಈ ಪ್ರಶ್ನೆಗೆ ಉತ್ತರ, ಈ ವ್ಯವಸ್ಥೆಯ ದೌರ್ಬಲ್ಯದ ಮೇಲೂ ಬೆಳಕನ್ನು ಚೆಲ್ಲುತ್ತದೆ.

ರೂಪಾಯಿ ತನ್ನ ಸಾರ್ವತ್ರಿಕಗೊಳ್ಳುವ ಚೈತನ್ಯವನ್ನು ಕಳೆದುಕೊಂಡಿತ್ತು ಎಂದು ಹೇಳಿದರೆ, ಹಣದ ಮೌಲ್ಯ ಕುಸಿದಿತ್ತು ಎನ್ನುವುದಕ್ಕೆ ಸಾಕಷ್ಟು ವಿವರಣೆ ಕೊಟ್ಟಂತೆಯೇ. ಒಂದು ಕರೆನ್ಸಿಯನ್ನು ಅದು ಇತರ ಕರೆನ್ಸಿಯೊಡನೆ ಎಷ್ಟು ಮೌಲ್ಯ ಹೊಂದಿದೆ ಎನ್ನುವುದನ್ನು ಅಳತೆ ಮಾಡುವುದರ ಮೂಲಕ ಅದರ ಮೌಲ್ಯವನ್ನು ಅಳೆಯಲಾಗುತ್ತದೆ. ಒಂದು ಸ್ಪಷ್ಟ ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ, ಇಂಗ್ಲಿಷ್‌ನವರಾಗಲೀ ಅಥವಾ ಇತರರಾಗಲೀ ಭಾರತದ ರೂಪಾಯಿಯನ್ನು, ಅದು ಭಾರತದ ಸರಕುಗಳನ್ನು ಕೊಳ್ಳಲು ಎಷ್ಟು ಶಕ್ತಿಯನ್ನು ಹೊಂದಿದೆ ಎನ್ನುವುದರ ಆಧಾರದ ಮೇಲೆ ಅದರ ಮೌಲ್ಯವನ್ನು ಕಟ್ಟುತ್ತಾರೆ. ಹಾಗೆಯೇ ಭಾರತೀಯರು, ಇಂಗ್ಲೆಂಡಿನ ಪೌಂಡನ್ನು, ಅದು ಎಷ್ಟು ಇಂಗ್ಲೆಂಡಿನ ಸರಕುಗಳನ್ನು ಕೊಳ್ಳಲು ಶಕ್ತಿ ಪಡೆದಿದೆ ಎನ್ನುವುದನ್ನವಲಂಬಿಸಿ ಅದರ ಮೌಲ್ಯವನ್ನು ಕಟ್ಟುತ್ತಾರೆ. ಒಂದು ಪಕ್ಷ ಭಾರತದ ರೂಪಾಯಿಯ ಕೊಳ್ಳುವ ಶಕ್ತಿ ಹೆಚ್ಚಾದರೆ, (ಅಂದರೆ ಭಾರತದಲ್ಲಿ ಸರಕುಗಳ ಬೆಲೆ ಇಳಿದರೆ) ಜೊತೆಗೆ ಪೌಂಡಿನ ಕೊಳ್ಳುವ ಶಕ್ತಿ ನಿಧಾನವಾಗಿ ಏರಿದರೆ (ಅಂದರೆ ಭಾರತದ ಬೆಲೆಗಳಿಗೆ ಹೋಲಿಸಿದಂತೆ ಇಂಗ್ಲೆಂಡಿನ ಬೆಲೆಗಳು ಏರಿದರೆ) ಆಗ ಇಂಗ್ಲೆಂಡಿನ ಪೌಂಡಿಗೆ ದೊರೆಯುವ ರೂಪಾಯಿಗಳು ಕಡಿಮೆಯಾಗುತ್ತವೆ. ಇದೇ ರೀತಿ ಭಾರತದ ರೂಪಾಯಿಯ ಕೊಳ್ಳುವ ಚೈತನ್ಯ ಹಾಗೇ ಇದ್ದು ಅಥವಾ ಬಹಳ ಕಡಿಮೆ ದರದಲ್ಲಿ ಏರುತ್ತಿದ್ದರೆ, ಅಥವಾ ಅದು ಇಳಿದಿದ್ದರೆ (ಅಂದರೆ ಇಂಗ್ಲೆಂಡಿನ ಬೆಲೆಮಟ್ಟಗಳಿಗೆ ಹೋಲಿಸಿದಂತೆ ಭಾರತದ ಸರಕುಗಳ ಬೆಲೆಗಳು ಇಳಿದರೆ) ಆಗ ಪೌಂಡಿಗೆ ಪ್ರತಿಯಾಗಿ ದೊರೆಯುವ ರೂಪಾಯಿಗಳು ಹೆಚ್ಚಾಗುತ್ತವೆ. ಅಂದರೆ ಪೌಂಡಿನ ಮಾಧ್ಯಮದಲ್ಲಿ ಭಾರತದ ರೂಪಾಯಿಯ ವಿನಿಮಯಮೌಲ್ಯ ಪತನಗೊಳ್ಳುತ್ತದೆ.

ಈ ಸಿದ್ಧಾಂತದ ಆಧಾರದ ಮೇಲೆ, ಭಾರತದ ರೂಪಾಯಿಯ ವಿನಿಮಯ ಮೌಲ್ಯ ಏಕೆ ಇಳಿದಿದೆ ಎನ್ನುವುದಕ್ಕೆ ವಿವರಣೆಯನ್ನು ಭಾರತದ ಬೆಲೆಮಟ್ಟಗಳಲ್ಲಿ ಉಂಟಾಗಿರುವ ವ್ಯತ್ಯಾಸದ ಮೂಲಕ ನೀಡಬೇಕು. ಆದ್ದರಿಂದ ಮೇಲೆ ವಿವರಿಸಿದ ಸಿದ್ಧಾಂತ ನಿಜವೇ, ಸುಳ್ಳೇ ಎಂಬುದನ್ನು ಪರಿಶೀಲಿಸಲು ವಿನಿಮಯದರ ಮತ್ತು ಭಾರತದ ರೂಪಾಯಿಯ ಕೊಳ್ಳುವ ಶಕ್ತಿಯ ನಡುವಣ ಸಂಬಂಧವನ್ನು ಪರಿಶೀಲಿಸೋಣ.[೧]

---

೧. ಮೇಲಿನ ಪಟ್ಟಿಗಳಲ್ಲಿನ ಅಂಕಿಅಂಶಗಳನ್ನು ರಿಪೋರ್ಟ್ ಆಫ್ ದಿ ಪ್ರೈಸ್ ಇನ್‌ಕ್ವೈರಿ ಕಮಿಟಿ ೧೯೧೪, ರಿಂದ ತೆಗೆದುಕೊಳ್ಳಲಾಗಿದೆ. ಹಾಗಿಲ್ಲದಿರುವ ಕಡೆ ಸೂಚನೆಯನ್ನು ಕೊಡಲಾಗಿದೆ.

## ಪಟ್ಟಿ – XXXVI
## ಅವಧಿ ೧, ೧೮೯೦–೯೯

| ವರ್ಷಗಳು | ಚಲಾವಣೆಯಲ್ಲಿರುವ ಕರೆನ್ಸಿಗಳು, ರೂಪಾಯಿ + ನೋಟುಗಳು | | | |
|---|---|---|---|---|
| | ಕೋಟಿ ರೂ.ಗಳಲ್ಲಿ | ಸೂಚ್ಯಂಕ ೧೮೯೦–೯೪=೧೦೦ | ಭಾರತದಲ್ಲಿ ಬೆಲೆ ಸೂಚ್ಯಂಕ ೧೮೯೦–೯೪=೧೦೦ | ಇಂಗ್ಲೆಂಡಿನಲ್ಲಿ ಬೆಲೆ ಸೂಚ್ಯಂಕ ೧೮೯೦–೯೪=೧೦೦ |
| ೧೮೯೦ | ೧೨೦ | ೯೨ | ೧೧೩ | ೧೦೪ |
| ೧೮೯೧ | ೧೩೧ | ೧೦೦ | ೧೦೬ | ೧೦೫ |
| ೧೮೯೨ | ೧೪೧ | ೧೦೮ | ೧೦೦ | ೯೯ |
| ೧೮೯೩ | ೧೩೨ | ೧೦೧ | ೯೬ | ೯೯ |
| ೧೮೯೪ | ೧೨೯ | ೯೯ | ೮೫ | ೯೩ |
| ೧೮೯೫ | ೧೩೨ | ೧೦೧ | ೮೯ | ೯೦ |
| ೧೮೯೬ | ೧೨೭ | ೯೭ | ೯೯ | ೮೯ |
| ೧೮೯೭ | ೧೨೫ | ೯೬ | ೧೨೦ | ೯೦ |
| ೧೮೯೮ | ೧೨೨ | ೯೩ | ೧೦೯ | ೯೧ |
| ೧೮೯೯ | ೧೩೧ | ೧೦೦ | ೧೦೮ | ೯೪ |

## ಪಟ್ಟಿ – XXXVII
## ಅವಧಿ ೨, ೧೯೦೦–೧೯೦೮

| ವರ್ಷಗಳು | ಚಲಾವಣೆಯಲ್ಲಿರುವ ಕರೆನ್ಸಿಗಳು, ರೂಪಾಯಿ + ನೋಟುಗಳು | | | |
|---|---|---|---|---|
| | ಕೋಟಿ ರೂ.ಗಳಲ್ಲಿ | ಸೂಚ್ಯಂಕ ೧೮೯೦–೯೪=೧೦೦ | ಭಾರತದಲ್ಲಿ ಬೆಲೆ ಸೂಚ್ಯಂಕ ೧೮೯೦–೯೪=೧೦೦ | ಇಂಗ್ಲೆಂಡಿನಲ್ಲಿ ಬೆಲೆ ಸೂಚ್ಯಂಕ ೧೮೯೦–೯೪=೧೦೦ |
| ೧೯೦೦ | ೧೩೪ | ೧೦೩ | ೧೨೬ | ೧೦೩ |
| ೧೯೦೧ | ೧೫೦ | ೧೧೫ | ೧೨೦ | ೯೮ |
| ೧೯೦೨ | ೧೪೩ | ೧೦೯ | ೧೧೫ | ೯೬ |
| ೧೯೦೩ | ೧೪೭ | ೧೧೩ | ೧೧೧ | ೯೭ |
| ೧೯೦೪ | ೧೫೨ | ೧೧೬ | ೧೧೦ | ೧೦೦ |
| ೧೯೦೫ | ೧೬೪ | ೧೨೬ | ೧೨೦ | ೧೦೦ |
| ೧೯೦೬ | ೧೮೫ | ೧೪೨ | ೧೩೪ | ೧೦೭ |
| ೧೯೦೭ | ೧೯೦ | ೧೪೫ | ೧೩೮ | ೧೧೩ |
| ೧೯೦೮ | ೧೮೧ | ೧೩೯ | ೧೪೭ | ೧೦೪ |

**ಪಟ್ಟಿ – XXXVIII**
**ಅವಧಿ ೩, ೧೯೦೯–೧೯೧೪[1]**

| ವರ್ಷಗಳು | ಚಲಾವಣೆಯಲ್ಲಿರುವ ಕರೆನ್ಸಿಗಳು, ರೂಪಾಯಿ + ನೋಟುಗಳು | | | |
|---|---|---|---|---|
| | ಕೋಟಿ ರೂ.ಗಳಲ್ಲಿ | ಸೂಚ್ಯಂಕ ೧೮೯೦–೯೪=೧೦೦ | ಭಾರತದಲ್ಲಿ ಬೆಲೆ ಸೂಚ್ಯಂಕ ೧೮೯೦–೯೪=೧೦೦ | ಇಂಗ್ಲೆಂಡಿನಲ್ಲಿ ಬೆಲೆ ಸೂಚ್ಯಂಕ ೧೮೯೦–೯೪=೧೦೦ |
| ೧೯೦೯ | ೧೯೮ | ೧೫೨ | ೧೩೮ | ೧೦೫ |
| ೧೯೧೦ | ೧೯೯ | ೧೫೨ | ೧೩೭ | ೧೧೦ |
| ೧೯೧೧ | ೨೦೯ | ೧೬೧ | ೧೩೯ | ೧೧೪ |
| ೧೯೧೨ | ೨೧೪ | ೧೬೪ | ೧೪೭ | ೧೧೭ |
| ೧೯೧೩ | ೨೩೮ | ೧೮೨ | ೧೫೨ | ೧೨೪ |
| ೧೯೧೪ | ೨೩೭ | ೧೮೨ | ೧೫೬ | ೧೨೪ |

**ಪಟ್ಟಿ – XXXIX**
**ಅವಧಿ ೪, ೧೯೧೫–೧೯೨೧[2]**

| ವರ್ಷಗಳು | ಚಲಾವಣೆಯಲ್ಲಿರುವ ಕರೆನ್ಸಿಗಳು, ರೂಪಾಯಿ + ನೋಟುಗಳು | | | |
|---|---|---|---|---|
| | ಕೋಟಿ ರೂ.ಗಳಲ್ಲಿ | ಸೂಚ್ಯಂಕ ೧೮೯೦–೯೪=೧೦೦ | ಭಾರತದಲ್ಲಿ ಬೆಲೆ ಸೂಚ್ಯಂಕ ೧೮೯೦–೯೪=೧೦೦ | ಇಂಗ್ಲೆಂಡಿನಲ್ಲಿ ಬೆಲೆ ಸೂಚ್ಯಂಕ ೧೮೯೦–೯೪=೧೦೦ |
| ೧೯೧೫ | ೨೬೬ | ೧೦೪ | ೧೧೨ | ೧೨೭.೧ |
| ೧೯೧೬ | ೨೯೭ | ೧೧೬ | ೧೨೫ | ೧೩೯.೫ |
| ೧೯೧೭ | ೩೩೮ | ೧೩೨ | ೧೪೨ | ೨೦೬.೧ |
| ೧೯೧೮ | ೪೦೭ | ೧೫೫ | ೧೭೮ | ೨೨೬.೫ |
| ೧೯೧೯ | ೪೬೩ | ೧೮೦ | ೨೦೦ | ೨೪೧.೯ |
| ೧೯೨೦ | ೪೧೧ | ೧೬೦ | ೨೦೯ | ೨೯೫.೩ |
| ೧೯೨೧ | ೩೯೩ | ೧೧೪ | ೧೮೩ | ೧೮೨.೪ |

---

೧. ೧೯೧೩ ಮತ್ತು ೧೪ರ ಅಂಕಿಅಂಶಗಳು ಷಿರಾಸ್‌ನ ಪುಸ್ತಕ ಇಂಡಿಯನ್ ಫೈನಾನ್ಸ್ ಅಂಡ್ ಬ್ಯಾಂಕಿಂಗ್‌ನ ಅನುಬಂಧದಿಂದ ಕೊಡಲಾಗಿದೆ. ಕಾಲಂ ೩ರಲ್ಲಿ ಕೊಡಲಾಗಿರುವ ಅಂಕಿಅಂಶಗಳನ್ನು ಆ ಮೂಲದಿಂದಲೇ ಲೆಕ್ಕ ಹಾಕಲಾಗಿದೆ.

೨. ಲೀಗ್ ಆಫ್ ನೇಷನ್ಸ್‌ನ ಮೆಮೊರಾಂಡಾಂ ಆಫ್ ಕರೆನ್ಸಿ ೧೯೧೩–೨೧ರ ೨ನೇ ಆವೃತ್ತಿ (೧೯೨೨) ರಿಂದ ಬೆಲೆ ಸೂಚ್ಯಂಕಗಳನ್ನು ತೆಗೆದುಕೊಳ್ಳಲಾಗಿದೆ. ಚಲಾವಣೆಯಲ್ಲಿರುವ ಕರೆನ್ಸಿಯ ಮಾಹಿತಿಯನ್ನು ಹೆಚ.ಎಸ್. ಜೆವನ್ಸ್‌ನ ದಿ ಫ್ಯೂಚರ್ ಆಫ್ ಎಕ್ಸ್‌ಚೇಂಜ್ ಅಂಡ್ ಇಂಡಿಯನ್ ಕರೆನ್ಸಿ, ೧೯೨೨ ಪು. ೪೪ರಿಂದ ತೆಗೆದುಕೊಳ್ಳಲಾಗಿದೆ.

ಈ ಪಟ್ಟಿಯಲ್ಲಿನ ಮಾಹಿತಿಗಳು, ರೂಪಾಯಿಯ ಚಿನ್ನದಮೌಲ್ಯ, ರೂಪಾಯಿಯ ಕೊಳ್ಳುವ ಶಕ್ತಿಯೊಡನೆ ಸಹ ಸಂಬಂಧವಿಟ್ಟುಕೊಂಡಿದೆ ಎಂಬುದನ್ನು ಸಾಬೀತು ಮಾಡುತ್ತವೆಯೇ ಇಲ್ಲವೇ? ರೂಪಾಯಿಯ ಮೌಲ್ಯ ಕುಸಿದಾಗ ಅದರ ಕೊಳ್ಳುವ ಶಕ್ತಿ ಎಷ್ಟಿತ್ತು? ನಮಗೆ ಮೇಲಿನ ಪಟ್ಟಿಗಳಲ್ಲಿ ದೊರೆಯುವ ಅಂಕಿಅಂಶಗಳನ್ನು ಪರಿಶೀಲಿಸಿದರೆ ಈ ಪ್ರಶ್ನೆಗೆ ಉತ್ತರ ಸ್ಪಷ್ಟವಾಗಿ ದೊರೆಯುತ್ತದೆ. ಪಟ್ಟಿಗಳಿಂದ ಸ್ಪಷ್ಟವಾಗುವ ಅಂಶವೆಂದರೆ, ೧೮೭೩–೯೮ರ ನಡುವೆ ರೂಪಾಯಿಯ ಚಿನ್ನದಮೌಲ್ಯ ಸುಧಾರಿಸಿತು. ಏಕೆಂದರೆ ಅದರ ಕೊಳ್ಳುವ ಶಕ್ತಿ ಕೆಲವೊಮ್ಮೆ ವ್ಯತ್ಯಾಸಗೊಂಡರೂ ತುಂಬಾ ದೃಢವಾಗಿತ್ತು. ಮತ್ತೆ, ನಂತರದ ಅವಧಿಯಲ್ಲಿ ೧೯೦೮, ೧೯೧೪ ಮತ್ತು ೧೯೨೦ರಲ್ಲಿ ವಿನಿಮಯದರ ಇಳಿದಾಗ, ಬೆಲೆಮಟ್ಟಗಳು, ಭಾರತದಲ್ಲಿ ಹಿಂದೆಂದೂ ಇಲ್ಲದಿದ್ದ ಮಟ್ಟಕ್ಕೆ ಏರಿದವು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಈ ವರ್ಷಗಳಲ್ಲಿ ರೂಪಾಯಿಯ ಕೊಳ್ಳುವ ಶಕ್ತಿ ತೀವ್ರವಾಗಿ ಇಳಿಯಿತು. ರೂಪಾಯಿಯ ವಿನಿಮಯ ದರವನ್ನು ಅದರ ಕೊಳ್ಳುವ ಶಕ್ತಿಯೇ ಅಂತಿಮವಾಗಿ ನಿರ್ಧರಿಸುತ್ತದೆ ಎನ್ನುವುದಕ್ಕೆ ಮತ್ತೂ ಒಂದು ಸಾಕ್ಷ್ಯ ಬೇಕಾದರೆ ನಾವು ರೂಪಾಯಿ ಸ್ಟರ್ಲಿಂಗ್ ಬೆಲೆಗಳ ಸಂಬಂಧದ ಚಲನವನ್ನು ಗಮನಿಸಬಹುದು (ಪಟ್ಟಿ ನೋಡಿ XL).

ಈ ರೀತಿ ಸಿದ್ಧಾಂತವನ್ನು, ಲಭ್ಯವಿರುವ ಪುರಾವೆಗಳು ಸ್ಪಷ್ಟಪಡಿಸಿದರೂ, ರೂಪಾಯಿಯ ಚಿನ್ನದ ಮೌಲ್ಯ ಕುಸಿಯುವುದಕ್ಕೆ ಇರುವ ಈ ಸೈದ್ಧಾಂತಿಕ ಕಾರಣವನ್ನು ಭಾರತ ಸರ್ಕಾರ ಒಪ್ಪುವುದಿಲ್ಲ. ಸರ್ಕಾರದ ನಿಲುವೆಂದರೆ, ರೂಪಾಯಿಯ ಚಿನ್ನದ ಮೌಲ್ಯ ಕುಸಿಯುವುದಕ್ಕೆ ಕಾರಣ, ಪ್ರತಿಕೂಲ ವ್ಯಾಪಾರ ಶಿಲ್ಕು. ಕೇನ್ಸ್[೧] ಮತ್ತು ಶಿರಾಸ್[೨] ರಂಥ ವಿದ್ವಾಂಸರ ಅಭಿಪ್ರಾಯವೂ ಸಹ ಇದೇ ಆಗಿದೆ.

೧೯೨೦ರ ಕರೆನ್ಸಿ ದುರವಸ್ಥೆಗೆ ಇಂಥ ತರ್ಕವೇ ಕಾರಣ ಎನ್ನುವುದರಲ್ಲಿ ಸಂಶಯವಿಲ್ಲ. ಇಲ್ಲದಿದ್ದರೆ, ರೂಪಾಯಿಯ ವಿನಿಮಯದರವನ್ನು ಏರಿಸುವ ಸರ್ಕಾರದ ನೀತಿಯನ್ನು ವಿವರಿಸುವುದಕ್ಕೆ ಹೇಗೆ ಸಾಧ್ಯ? ಭಾರತದ ಕರೆನ್ಸಿಗೆ ಸಂಬಂಧಿಸಿದಂತೆ ಸ್ಮಿತ್ ಸಮಿತಿ[೩] ಮತ್ತು ಭಾರತ ಸರ್ಕಾರ[೪]ಗಳೆರಡಕ್ಕೂ ರೂಪಾಯಿ ಬಹಳ ತೀವ್ರವಾಗಿ ಕುಸಿದಿದೆ ಎನ್ನುವುದರ ಅರಿವಿತ್ತು. ಇದು ಭಾರತದಲ್ಲಿ ಬೆಲೆ ಏರಿಕೆಯಿಂದ ಸ್ಪಷ್ಟವಾಗಿತ್ತು ಸಹ.

ಈ ಪರಿಸ್ಥಿತಿಗಳಲ್ಲಿ, ರೂಪಾಯಿಯ ಚಿನ್ನದ ಮೌಲ್ಯವನ್ನು ೨ಷಿ. ಚಿನ್ನಕ್ಕೆ ಏರಿಸುವುದು ಅಸಾಧ್ಯವಾಗಿತ್ತು. ಏಕೆಂದರೆ ರೂಪಾಯಿ, ಹೆಚ್ಚು ಎಂದರೆ ೧ಷಿ. ೪ಪೆ. ಸ್ಟರ್ಲಿಂಗನ್ನು ಕೊಳ್ಳುವ ಶಕ್ತಿಯನ್ನು ಪಡೆದಿತ್ತು ಅಷ್ಟೆ. ಸಮಿತಿ ಭಾರತದ ರೂಪಾಯಿಯ ವಿನಿಮಯ ದರವನ್ನು ದೃಢೀಕರಿಸುವ ಬಗ್ಗೆ ಹಗುರವಾದ ಮಾತನ್ನಾಡುತ್ತಿತ್ತು ಅಷ್ಟೆ. ರೂಪಾಯಿಯನ್ನು, ಚಿನ್ನಕ್ಕೆ ಸಾಪೇಕ್ಷವಾಗಿರಿಸಬೇಕೆಂಬ ಸಮಿತಿಯ ಒತ್ತಾಯ ಸಹ ಉಡಾಫೆಯದಾಗಿತ್ತು. ಮಾರ್ಷಲ್‌ರವರ ಮಾತುಗಳನ್ನು ಬಳಸಿ ಹೇಳುವುದಾದರೆ, ಪ್ರಪಂಚದ ರೈಲ್ವೆಮಾರ್ಗಗಳನ್ನೆಲ್ಲಾ ಪ್ರಮುಖ ರೈಲ್ವೆಮಾರ್ಗದೊಡನೆ ಸಂಪರ್ಕಿಸುವ ರೀತಿಯ ಯತ್ನ ಇದಾಗಿತ್ತು. ಒಂದು ದೃಢ ವಿನಿಮಯ ಚಿನ್ನವೇ "ಪ್ರಮುಖ ಮಾರ್ಗ"ದ ಸ್ಥಾನವನ್ನು ಕಳೆದುಕೊಂಡಾಗ, ರೂಪಾಯಿಯನ್ನು ಅದರೊಡನೆ ಸಂಪರ್ಕಿಸಿ, ವಿನಿಮಯದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು ಎಂಥ ಮಾತಾಗುತ್ತದೆ? ಜನರ ಬಯಕೆಯೆಂದರೆ,

---

೧. ಅದೇ ಪುಸ್ತಕ ಪು. ೧೬

೨. ಅದೇ ಪುಸ್ತಕ ಪು. ೪

೩. ವರದಿ ಪು. ೧೯–೨೦

೪. ೧೯೧೯ರ ಕರೆನ್ಸಿ ಸಮಿತಿಯ ವರದಿಗೆ, ಭಾರತದ ಬೆಲೆ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ, ಭಾರತ ಸರ್ಕಾರ ಸಲ್ಲಿಸಿದ ಮೆಮೊರಾಂಡಾಂ.

## ಪಟ್ಟಿ – XL

| ದಿನಾಂಕ | ಭಾರತದಲ್ಲಿ ರೂಪಾಯಿ ಬೆಲೆ ೧೯೧೩=೧೦೦ | ಇಂಗ್ಲೆಂಡಿನಲ್ಲಿ ಸ್ಟರ್ಲಿಂಗ್ ಬೆಲೆ ೧೯೧೩–೧೦೦ | ವಿನಿಮಯದ ಸರಾಸರಿ ಬೆಲೆ ಕಲ್ಕತ್ತಾಕ್ಕೆ ಹೋಲಿಸಿದಂತೆ ಲಂಡನ್‌ನಲ್ಲಿ | ರೂಪಾಯಿ ಮತ್ತು ಸ್ಟರ್ಲಿಂಗ್‌ನ ಕೊಳ್ಳುವ ಶಕ್ತಿಯಲ್ಲಿನ ಸಮಾನತೆ |
|---|---|---|---|---|
| ೧೯೨೦ | | | | |
| ಜನವರಿ | ೨೦೨ | ೨೮೯ | ೨೭.೮೧ | ೨೨.೮೯ |
| ಫೆಬ್ರವರಿ | ೨೦೩ | ೩೦೬ | ೩೨.೦೫ | ೨೪.೧೨ |
| ಮಾರ್ಚ್ | ೧೯೪ | ೩೦೧ | ೨೯.೬೬ | ೨೫.೪೦ |
| ಏಪ್ರಿಲ್ | ೧೯೩ | ೩೦೦ | ೨೭.೮೮ | ೨೫.೯೫ |
| ಮೇ | ೧೯೦ | ೨೯೮ | ೨೫.೯೧ | ೨೫.೭೭ |
| ಜೂನ್ | ೧೯೨ | ೨೯೩ | ೨೩.೬೩ | ೨೫.೦೮ |
| ಜುಲೈ | ೧೯೬ | ೨೮೨ | ೨೨.೬೩ | ೨೪.೪೯ |
| ಆಗಸ್ಟ್ | ೧೯೩ | ೨೬೩ | ೨೨.೭೫ | ೨೪.೭೦ |
| ಸೆಪ್ಟೆಂಬರ್ | ೧೮೮ | ೨೪೪ | ೨೨.೩೧ | ೨೪.೯೪ |
| ಅಕ್ಟೋಬರ್ | ೧೮೮ | ೨೩೨ | ೧೯.೮೮ | ೨೪.೦೦ |
| ನವೆಂಬರ್ | ೧೮೬ | ೨೧೫ | ೧೯.೬೯ | ೨೨.೬೨ |
| ಡಿಸೆಂಬರ್ | ೧೭೯ | ೨೦೯ | ೧೭.೪೪ | ೨೧.೮೧ |
| ೧೯೨೧ | | | | |
| ಜನವರಿ | ೧೬೯ | ೨೦೦ | ೧೭.೬೬ | ೨೧.೯೬ |
| ಫೆಬ್ರವರಿ | ೧೬೪ | ೧೯೧ | ೧೬.೩೧ | ೨೦.೯೮ |
| ಮಾರ್ಚ್ | ೧೬೨ | ೧೮೩ | ೧೫.೫೩ | ೨೦.೪೦ |
| ಏಪ್ರಿಲ್ | ೧೬೩ | ೧೮೬ | ೧೫.೭೫ | ೧೯.೬೩ |
| ಮೇ | ೧೭೦ | ೧೮೨ | ೧೫.೪೪ | ೧೭.೯೮ |
| ಜೂನ್ | ೧೭೨ | ೧೬೬ | ೧೫.೫೩ | ೧೭.೧೪ |
| ಜುಲೈ | ೧೭೧ | ೧೬೩ | ೧೫.೩೮ | ೧೭.೪೦ |
| ಆಗಸ್ಟ್ | ೧೭೮ | ೧೬೧ | ೧೬.೨೫ | ೧೬.೩೬ |
| ಸೆಪ್ಟೆಂಬರ್ | ೧೭೮ | ೧೫೭ | ೧೭.೨೨ | ೧೫.೮೨ |
| ಅಕ್ಟೋಬರ್ | ೧೭೮ | ೧೫೬ | ೧೭.೦೨ | ೧೪.೬೫ |
| ನವೆಂಬರ್ | ೧೭೩ | ೧೬೧ | ೧೬.೨೫ | ೧೪.೮೯ |
| ಡಿಸೆಂಬರ್ | ೧೬೯ | ೧೫೭ | ೧೫.೯೪ | ೧೪.೮೬ |
| ೧೯೨೨ | | | | |
| ಜನವರಿ | ೧೬೨ | ೧೫೬ | ೧೫.೮೮ | ೧೫.೪೧ |
| ಫೆಬ್ರವರಿ | ೧೫೯ | ೧೫೬ | ೧೫.೫೯ | ೧೬.೭೦ |
| ಮಾರ್ಚ್ | ೧೬೦ | ೧೫೭ | ೧೫.೩೪ | ೧೫.೭೦ |
| ಏಪ್ರಿಲ್ | ೧೬೦ | ೧೫೯ | ೧೫.೧೯ | ೧೫.೯೦ |
| ಮೇ | ೧೬೨ | ೧೫೯ | ೧೫.೫೯ | ೧೫.೭೦ |
| ಜೂನ್ | ೧೬೯ | ೧೬೦ | ೧೫.೬೩ | ೧೫.೧೪ |
| ಜುಲೈ | ೧೭೦ | ೧೫೮ | ೧೫.೬೯ | ೧೪.೮೭ |
| ಆಗಸ್ಟ್ | ೧೬೬ | ೧೫೩ | ೧೫.೬೬ | ೧೪.೭೪ |

ಬೆಲೆಗಳನ್ನು ಅಳತೆಮಾಡುವ ಮಾಧ್ಯಮದೊಡನೆ ಒಂದು ದೃಢ ವಿನಿಮಯವನ್ನೇರ್ಪಡಿಸುವುದು. ಚಿನ್ನದೊಡನೆ ರೂಪಾಯಿಯನ್ನು ಸಂಪರ್ಕಿಸಬೇಕು ಎಂದಾಗ ಅದು ಸ್ಟರ್ಲಿಂಗ್‌ನೊಡನೆ ಸಂಪರ್ಕವನ್ನು ಕಳೆದುಕೊಳ್ಳುತ್ತದೆ ಎಂದು ಅರ್ಥ. ಆದರೆ ಸ್ಟರ್ಲಿಂಗ್ ಅತ್ಯಂತ ಮುಖ್ಯವಾದದ್ದೇ ಹೊರತು ಚಿನ್ನವಲ್ಲ. ಆದ್ದರಿಂದ ಸ್ಟರ್ಲಿಂಗ್ ಚಿನ್ನಕ್ಕಿಂತ ಮುಖ್ಯವೆಂಬ ಮಾತನ್ನು ಒಪ್ಪಿಕೊಂಡರೆ, ವಿನಿಮಯ ದೃಢೀಕರಣದ ಯಾವುದೇ ನೀತಿ ಆವಶ್ಯಕವೇ? ಆದ್ದರಿಂದ ಯಾವುದೇ ನೀತಿ ಯಶಸ್ವಿಯಾಗಬೇಕಾದರೆ, ಸ್ಟರ್ಲಿಂಗ್ ಮತ್ತು ರೂಪಾಯಿ ಬೆಲೆಗಳು ಏಕಮುಖವಾಗಿ ಚಲಿಸುವಂತೆ ನೋಡಿಕೊಳ್ಳುವುದರ ಮೂಲಕ ಮಾತ್ರ ಸಾಧ್ಯ ಎಂಬುದನ್ನು ಮೊದಲು ಮನಗಾಣಬೇಕು. ಹಾಗಾದಾಗ ಮಾತ್ರ ಅವುಗಳ ನಡುವಣ ವಿನಿಮಯ ದರದ ಅನುಪಾತ ಒಂದೇ ಆಗಿರುವುದು ಸಾಧ್ಯ. ಆದರೆ ಭಾರತ ಸರ್ಕಾರಕ್ಕೆ ಸ್ಟರ್ಲಿಂಗ್ ಮೇಲೆ ಯಾವ ಅಧಿಕಾರವಿತ್ತು? ಸರ್ಕಾರ ಮಾಡಬಹುದಾಗಿದ್ದ ಕೆಲಸವೆಂದರೆ, ನಿರೀಕ್ಷಿತ ಫಲಿತಾಂಶವನ್ನು ಕೊಡುವಂತೆ ರೂಪಾಯಿಯನ್ನು ನಿಯಂತ್ರಿಸುವುದು. ಆದರೆ ಸ್ಟರ್ಲಿಂಗ್ ಇದರ ವಿರೋಧವಾಗಿ ನಡೆದಾಗಲೆಲ್ಲಾ ಭಾರತ ಸರ್ಕಾರದ ಯತ್ನ ಶೋಚನೀಯವಾಗಿ ನಿಷ್ಫಲವಾಗುತ್ತಿತ್ತು. ಆದ್ದರಿಂದ ರೂಪಾಯಿಯನ್ನು ಸ್ಟರ್ಲಿಂಗ್‌ನೊಡನೆ ಸಂಪರ್ಕಿಸುವುದು ತುಂಬಾ ಅಪೇಕ್ಷಣೀಯವಾದರೂ, ಅಂಥ ನೀತಿಯನ್ನು ಅನುಸರಿಸುವುದು ತುಂಬಾ ಸಮಸ್ಯಾತ್ಮಕವಾಗಿತ್ತು ಎನ್ನುವುದು ಗಮನಾರ್ಹ.

ಎರಡು ಕರೆನ್ಸಿಗಳ ನಡುವೆ ಕೊಳ್ಳುವ ಶಕ್ತಿಯಲ್ಲಿ ಉಂಟಾಗುವ ಅತ್ಯಂತ ಹೆಚ್ಚಿನ ಬದಲಾವಣೆಗಳನ್ನು ಹತೋಟಿಯಲ್ಲಿಟ್ಟುಕೊಳ್ಳುವುದೇ ದೃಢೀಕರಣದ ಪ್ರಮುಖ ಸಮಸ್ಯೆ. ಭಾರತದ ವಿಷಯದಲ್ಲಿ ರೂಪಾಯಿ ಸ್ಟರ್ಲಿಂಗ್‌ಗಳ ಕೊಳ್ಳುವ ಶಕ್ತಿ ಸಮಾನತೆಗಳಲ್ಲಿ ಅತ್ಯಂತ ಹೆಚ್ಚಿನ ಬದಲಾವಣೆಗಳು ಇರಲಿಲ್ಲ. ವಾಸ್ತವವಾಗಿ ಭಾರತದ ವಿನಿಮಯ ದರ ಹೆಚ್ಚು ಕಡಿಮೆ ಸ್ಟರ್ಲಿಂಗ್‌ನೊಡನೆ ಹೊಂದಿಕೊಂಡೇ ನಡೆದಿತ್ತು. ಆದ್ದರಿಂದ ವಿನಿಮಯ ದೃಢೀಕರಣದ ಯಾವುದೇ ಆವಶ್ಯಕತೆ ಇರಲಿಲ್ಲ. ಆದರೆ ಒಂದು ಪಕ್ಷ ಇಂಥ ಅಸಾಧಾರಣ ಬದಲಾವಣೆಗಳು ಉಂಟಾದರೆ ಏನು ಮಾಡಬೇಕು ಎನ್ನುವ ಕಲ್ಪನೆಯಿಂದ ಸಮಿತಿಯು ರೂಪಾಯಿಯ ವಿನಿಮಯದರ ಅದರ ಕೊಳ್ಳುವ ಶಕ್ತಿಗೆ ಸಮನಾಗುವ ಹಂತಕ್ಕೆ ಹಿಂದಿರುಗುವುದಿಲ್ಲವೆಂದು ಭಾವಿಸಿತ್ತು. ಹೀಗಿದ್ದರೂ ಸಹ ಸಮಿತಿ ರೂಪಾಯಿಯ ಕೊಳ್ಳುವ ಶಕ್ತಿಯ ಒಂದು ಯುಕ್ತ ಅಂತರದೊಳಗೆ ವಿನಿಮಯ ದರವನ್ನು ನಿಗದಿಮಾಡಬೇಕಾಗಿತ್ತು. ವಾಸ್ತವವಾಗಿ ಸಮಿತಿ ರೂಪಾಯಿಗೆ ಗೊತ್ತುಮಾಡಿದ ವಿನಿಮಯ ದರವೆಂದರೆ, ರೂಪಾಯಿ ಯಾವ ಕಾಲದಲ್ಲೂ ಆ ದರವನ್ನು ಕಂಡಿರಲೇ ಇಲ್ಲ. ಇಂಥ ಒಂದು ಹೆಚ್ಚಿನ ಬೆಲೆಯನ್ನು ಗೊತ್ತುಮಾಡುವುದರ ಮೂಲಕ ಸಮಿತಿ ದೃಢೀಕರಣದ ಸಾಮಾನ್ಯ ಸಮಸ್ಯೆಗೆ ಪರಿಹಾರವನ್ನು ಕಂಡುಹಿಡಿಯುವುದಕ್ಕೆ ಹೋಗಿ, ಹಣ ಕುಗ್ಗುವಿಕೆ ಅಥವಾ ರೂಪಾಯಿಯ ನಿರಪೇಕ್ಷ ಮೌಲ್ಯದ ಹೆಚ್ಚಳದ ಗಂಭೀರ ಸಮಸ್ಯೆಯನ್ನು ಹುಟ್ಟುಹಾಕಿತು. ಈ ಸಮಸ್ಯೆಯನ್ನು ಎದುರಿಸುವುದು ಹೇಗೆ? ಸಮಿತಿ ಈ ಸಮಸ್ಯೆಯನ್ನು ಪರಿಗಣಿಸಲೇ ಇಲ್ಲ. ಏಕೆ? ಬೆಳ್ಳಿಯ ಬೆಲೆ ಮೇಲಕ್ಕೆ ಹೋಗಿತ್ತು ಎನ್ನುವುದರಿಂದಲೇ? ಇರಬಹುದು. ಆದರೆ ಬೆಳ್ಳಿಯ ಬೆಲೆ ಸತತವಾಗಿ ಹೆಚ್ಚಾಗುತ್ತದೆ ಮತ್ತು ಚಿನ್ನದ ಸಮಾನತೆ ಬೆಲೆಯಲ್ಲಿ ಸುಧಾರಣೆಗಳನ್ನು ತರುವಷ್ಟರ ಮಟ್ಟಿಗೆ ಬೆಳ್ಳಿಯ ಬೆಲೆ ಹೆಚ್ಚಾಗುತ್ತದೆಯೆಂದು ಸಮಿತಿ ನಂಬಿತ್ತು ಎನ್ನುವುದು ಸಂಶಯಾಸ್ಪದವಾಗಿತ್ತು. ಆದರೆ ಬೆಳ್ಳಿಯ ಬೆಲೆಯ ಹೆಚ್ಚಳವನ್ನು ಗಮನಿಸುತ್ತಿದ್ದ ಯಾರೇ ಆದರೂ ಈ ಹೆಚ್ಚಳ ಸಟ್ಟಾ ಸ್ವರೂಪದ್ದು, ಖಾಯಂಸ್ವರೂಪದ್ದಲ್ಲ ಎಂಬುದನ್ನು ಸುಲಭವಾಗಿ ಗ್ರಹಿಸಬಹುದಾಗಿತ್ತು.

## ಪಟ್ಟಿ XLI
## ಸ್ಟರ್ಲಿಂಗ್‌ನಲ್ಲಿ ಬೆಳ್ಳಿಯ ಬೆಲೆ (ಪೆನ್ನಿಗಳಲ್ಲಿ)[೧]

| ವರ್ಷ | ಗರಿಷ್ಠ | ಕನಿಷ್ಠ | ಗರಿಷ್ಠ | ಕನಿಷ್ಠ |
|---|---|---|---|---|
| ೧೯೧೩ | ೨೯ ೩/೮ | ೨೫ ೧೫/೧೬ | ೨೭ ೯/೧೬ | ೩ ೭/೧೬ |
| ೧೯೧೪ | ೨೭ ೩/೪ | ೨೨ ೧/೮ | ೨೫ ೫/೧೬ | ೫ ೫/೮ |
| ೧೯೧೫ | ೨೭ ೧/೪ | ೨೨ ೫/೧೬ | ೨೩ ೧೧/೧೬ | ೪ ೧೫/೧೬ |
| ೧೯೧೬ | ೩೭ ೧/೮ | ೨೬ ೧೧/೧೬ | ೩೧ ೫/೧೬ | ೧೦ ೭/೧೬ |
| ೧೯೧೭ | ೫೫ | ೩೫ ೧೧/೧೬ | ೪೦ ೭/೮ | ೧೯ ೧೧/೧೬ |
| ೧೯೧೮ | ೪೯ ೧/೨ | ೪೨ ೧/೨ | ೪೭ ೯/೧೬ | ೭ |
| ೧೯೧೯ | ೭೯ ೧/೮ | ೪೭ ೩/೪ | ೫೭ ೧/೧೬ | ೩೧ ೩/೮ |
| ೧೯೨೦ | ೮೯ ೧/೨ | ೩೮ ೭/೮ | ೬೧ ೭/೧೬ | ೫೦ ೫/೮ |
| ೧೯೨೧ | ೪೩ ೩/೮ | ೩೦ ೫/೮ | ೩೭ | ೧೨ ೩/೪ |

ಒಂದು ಪಕ್ಷ ಬೆಳ್ಳಿಯ ಬೆಲೆಯಲ್ಲಿನ ಹೆಚ್ಚಳ ಸಟ್ಟಾ ಸ್ವರೂಪದ್ದಲ್ಲ ಎಂದಾದರೂ, ರೂಪಾಯಿಯ ಬೆಲೆ ಹೆಚ್ಚಳವಾಗುತ್ತಿತ್ತು ಎಂದು ಅರ್ಥವೇ? ಸಮಿತಿಯು ವಿಶ್ಲೇಷಣೆಯೇ ಬಹಳ ತಪ್ಪಾಗಿತ್ತು. ಬೆಲೆಯ ಹೆಚ್ಚಳದ ಅಲ್ಪ ಪರಿಚಯ ಇರುವ ಯಾರೇ ಆದರೂ, ಬೆಳ್ಳಿಯ ಬೆಲೆ ಹೆಚ್ಚಾದದ್ದರಿಂದ, ರೂಪಾಯಿಯ ಬೆಲೆಯಲ್ಲಿ ಹೆಚ್ಚಳ ಉಂಟಾಗಿತ್ತು ಎನ್ನುವುದನ್ನು ಸುಲಭವಾಗಿ ಗುರುತಿಸಬಹುದಾಗಿತ್ತು. ಹೀಗಿದ್ದರೂ ರೂಪಾಯಿಯ ಬೆಲೆ ಇತರ ಸರಕುಗಳ ಮಾಧ್ಯಮದಲ್ಲಿ, ಚಿನ್ನ ಮತ್ತು ಬೆಳ್ಳಿಯನ್ನೂ ಒಳಗೊಂಡಂತೆ ಕುಸಿದಿತ್ತು ಎನ್ನುವುದನ್ನು ಗಮನಿಸಬೇಕು. ಪಟ್ಟಿ XLII ಈ ವಿಷಯಕ್ಕೆ ವಿವಾದಾತೀತ ಪುರಾವೆಯನ್ನು ಒದಗಿಸುತ್ತದೆ.

ಆದ್ದರಿಂದ ಬೆಳ್ಳಿಯ ಬೆಲೆಯಲ್ಲಿನ ಹೆಚ್ಚಳ, ಭಾಗಶಃ ರೂಪಾಯಿಯ ಮೌಲ್ಯದ ಕುಸಿತದ ಕಾರಣದಿಂದ ಸಹ ಆದದ್ದು, ಸಮಿತಿ, ರೂಪಾಯಿಯ ಚಿನ್ನದ ಬೆಲೆಯನ್ನು ೧ ಸವರನ್‌ಗೆ ೧೦ ರೂಪಾಯಿಯೆಂದು ಗೊತ್ತುಮಾಡಿತು. ವಾಸ್ತವವಾಗಿ ಮಾರುಕಟ್ಟೆಯಲ್ಲಿ ೧ ಸವರನ್‌ಗೆ ೨೦ ರೂಪಾಯಿ ಬೆಲೆ ಇತ್ತು. ಹೀಗೆ ರೂಪಾಯಿಯ ಮೌಲ್ಯ, ಚಿನ್ನದ ಮಾಧ್ಯಮದಲ್ಲಿ ಕುಸಿದಿತ್ತು. ಸಮಿತಿ ತನ್ನ ವರದಿಯನ್ನು ಸಲ್ಲಿಸುವ ಕೆಲವು ತಿಂಗಳಿಗೆ ಸ್ಟೇಟ್ಸ್‌ಮನ್ (ಕಲ್ಕತ್ತಾದಿಂದ ಹೊರಡುವುದು) ಕೆಳಗಿನಂತೆ ಬರೆದಿತ್ತು :

"ನೀವು ಒಂದು ಸವರನ್ ಇಟ್ಟಕೊಂಡು ಭಾರತದಲ್ಲಿ ಕಾಲಿಟ್ಟರೆ, ಸರ್ಕಾರ ಅದನ್ನು ತೆಗೆದುಕೊಂಡು, ನಿಮಗೆ ೧೧ ರೂಪಾಯಿ ೩ ಆಣೆಯನ್ನು ಕೊಡುತ್ತದೆ. ಆದರೆ ನೀವು ಕರೆನ್ಸಿ ಆಫೀಸಿಗೆ ಹೋಗಿ ಒಂದು ಸವರನ್ ಕೊಟ್ಟರೆ ನಿಮಗೆ ೧೫ ರೂಪಾಯಿ ದೊರೆಯುತ್ತದೆ. ಬದಲಿಗೆ ಪೇಟೆಗೆ ಹೋಗಿ ನೀವು ಸವರನ್ ಅನ್ನು ವಿನಿಮಯ ಮಾಡಿಕೊಂಡರೆ ನಿಮಗೆ ೨೧ ರೂಪಾಯಿ ದೊರೆಯುತ್ತದೆ".

---

೧. ಕಿರ್‌ಕಾಲ್‌ಡಿಯ ಪುಸ್ತಕ ಬ್ರಿಟಿಷ್ ವಾರ್ ಫೈನಾನ್ಸ್ ೧೯೨೧ ಪು. ೩೫. ೧೯೨೧ ಅಂಕಿಅಂಶಗಳನ್ನು ಇಂಡಿಯನ್ ಪೇಪರ್ ಕರೆನ್ಸಿ ರಿಪೋರ್ಟಿನಿಂದ ಕೊಡಲಾಗಿದೆ.

## ಪಟ್ಟಿ XLII
## ರೂಪಾಯಿಯ ಮೌಲ್ಯದಲ್ಲಿ ಕುಸಿತ[೧]

| ತಾರೀಖು | ಭಾರತದಲ್ಲಿನ ಚಿನ್ನದ ಬಾರ್‌ನ (ಬೊಂಬಾಯಿಯಲ್ಲಿ) ತೊಲ ಒಂದರ ಬೆಲೆ | ಭಾರತದಲ್ಲಿ (ಬೊಂಬಾಯಿಯಲ್ಲಿ) ಬೆಳ್ಳಿಯ ೧೦೦ ತೊಲದ ಬೆಲೆ | ಭಾರತದಲ್ಲಿ ಬೆಲೆಗಳ ಸೂಚ್ಯಂಕ ೧೯೧೩–೧೦೦ |
|---|---|---|---|
| | ರೂ. ಆ | ರೂ. ಆ | |
| ೧೯೧೪ | ೨೪ ೧೦ | ೬೫ ೧೧ | – |
| ೧೯೧೫ | ೨೪ ೧೪ | ೬೧ ೨ | – |
| ೧೯೧೬ | ೨೭ ೨ | ೭೮ ೧೦ | – |
| ೧೯೧೭ | ೨೭ ೧೧ | ೯೪ ೧೦ | – |
| ೧೯೧೮ | | | |
| ಜುಲೈ | ೩೪ ೦ | (ಮೇ ೧೬) ೧೧೭ ೨ | ೧೪೨ |
| ಆಗಸ್ಟ್ | ೩೦ ೦ | (ನವೆಂ. ೨೮) ೮೨ ೧೦ | ೧೭೮ |
| ಸೆಪ್ಟೆಂಬರ್ | ೩೨ ೪ | | – – |
| ೧೯೧೯ಮಾರ್ಚ್ | ೩೨ ೦ | ೧೧೩ ೦ | ೨೦೦ |

ಈ ಮಾತು ತುಂಬಾ ಸತ್ಯ ಎನ್ನುವುದನ್ನು ಭಾರತ ಸರ್ಕಾರದ ಹಣಕಾಸು ಇಲಾಖೆ ಖಚಿತ ಪಡಿಸಿತು.[೧] ಇಷ್ಟಿದ್ದರೂ ಸಹ ಸಮಿತಿಯು ರೂಪಾಯಿಯ ಚಿನ್ನದ ಮೌಲ್ಯವನ್ನು ೨೫ ರೂ. ಗಳಿಗೆ ನಿಗದಿಪಡಿಸಿತು. ಸಮಿತಿಯು ರೂಪಾಯಿ ಮತ್ತು ಬೆಳ್ಳಿ ಇವುಗಳನ್ನು ತಪ್ಪಾಗಿ ಅರ್ಥೈಸಿತು. ಹೀಗಾಗಿ ಅದು ರೂಪಾಯಿಯನ್ನು ಚಲಾವಣೆಯಲ್ಲಿ ಉಳಿಸಿಕೊಳ್ಳುವುದು ಮತ್ತು ಚಿನ್ನದ ಮಾಧ್ಯಮದಲ್ಲಿ ಅದರ ಮೌಲ್ಯವನ್ನು ಹೆಚ್ಚು ಮಾಡುವುದರ ನಡುವೆ ವ್ಯತ್ಯಾಸವನ್ನು ಗುರುತಿಸುವುದಕ್ಕೆ ಶಕ್ತವಾಗಲಿಲ್ಲ. ಈ ಪರಿಹಾರ ರೂಪಾಯಿಯ ಬೆಲೆ ಹೆಚ್ಚಾಗುತ್ತಿದ್ದರೆ ಮಾತ್ರ ಅನ್ವಯವಾಗುತ್ತಿತ್ತು. ಆದರೆ ರೂಪಾಯಿಯ ಮಾಧ್ಯಮದಲ್ಲಿ ಬೆಳ್ಳಿಯ ಬೆಲೆ ಹೆಚ್ಚಾಗುತ್ತಿದ್ದುದರಿಂದ, ರೂಪಾಯಿಯ ಚೊಕ್ಕತೆಯನ್ನು ಕಡಿಮೆ ಮಾಡುವ ಯೋಜನೆಯೇ ವಾಸ್ತವವಾದದ್ದೆಂದು ಭಾವಿಸಲಾಯಿತು.

ಒಂದು ಪಕ್ಷ ಸಮಿತಿಯು ಬೆಳ್ಳಿಯನ್ನೂ ಇತರ ಸರಕುಗಳಂತೆಯೇ ಒಂದು ಸರಕೆಂದು ಭಾವಿಸಿದ್ದರೆ ಪರಿಸ್ಥಿತಿ ಬೇರೆ ಇರುತ್ತಿತ್ತು. ಆಗ ಸಮಿತಿಯು ಈಗ ಮಾಡಿದ ತಪ್ಪನ್ನು ಮಾಡುತ್ತಿರಲಿಲ್ಲ. ಆದರೆ ಅದು ರೂಪಾಯಿಯ ಸಾರ್ವತ್ರಿಕ ಕೊಳ್ಳುವ ಶಕ್ತಿಯನ್ನು ಒಂದು ಮುಖ್ಯ ಅಂಶವೆಂದು ಪರಿಗಣಿಸಬೇಕೆಂಬುದನ್ನು ಮರೆತುಬಿಟ್ಟಿತು. ಅದರ ಮನಸ್ಸಿನಲ್ಲಿ ಪ್ರಮುಖವೆಂದು ಅನ್ನಿಸಿದ ಅಂಶವೆಂದರೆ, ರೂಪಾಯಿಯ ವಿನಿಮಯ ದರವನ್ನು ಕಾಪಾಡಿಕೊಳ್ಳುವುದಕ್ಕೆ, ಅನುಕೂಲಕರವಾದ ವ್ಯಾಪಾರ ಶಿಲ್ಕು ಅಗತ್ಯ ಎನ್ನುವುದು. ಆ ಸಮಿತಿ ತನ್ನ ವರದಿಯನ್ನು ತಯಾರು ಮಾಡುವಾಗ ವಾಸ್ತವವಾಗಿ ಭಾರತಕ್ಕೆ ವ್ಯಾಪಾರ ಶಿಲ್ಕು ಅನುಕೂಲಕರವಾಗಿಯೇ ಇತ್ತು. ಏಕೆಂದರೆ, ಸಮಿತಿ ವಿನಿಮಯ ಪರಮಿತಿಯ ಬಗ್ಗೆ ತನ್ನ ಸಾಮಾನ್ಯ ನಿಲುವನ್ನು ವ್ಯಕ್ತಪಡಿಸುವಾಗ ಕೆಳಗಿನ ಅಭಿಪ್ರಾಯವನ್ನು ವ್ಯಕ್ತಪಡಿಸಿತ್ತು:–

೧. ನೋಡಿ : ಆನರಬಲ್ ಸಿನ್ಹ ರವರ ಪ್ರಶ್ನೆಗೆ ಆನರಬಲ್ ಹೊನವಾರ್ಡ್‌ರವರ ಉತ್ತರ ಸೆಪ್ಟೆಂಬರ್ ೨೫, ೧೯೧೯. ಎಸ್.ಎಲ್.ಸಿ.ಪಿ. ಸಂ. LVII ಪು. ೪೧೭

"ಈ ವ್ಯವಸ್ಥೆ ರೂಪಾಯಿಯ ಮೌಲ್ಯ ೧ ಷಿ. ೪ ಪೆ. ಗಿಂತ ಕೆಳಗಿಳಿಯುವುದನ್ನು ತಪ್ಪಿಸುವುದಕ್ಕೆ ಶಕ್ತವಾಗಿದೆ. ಭಾರತ, ಅನುಕೂಲ ವ್ಯಾಪಾರ ಶಿಲ್ಕಿರುವ ರಫ್ತು ರಾಷ್ಟ್ರವಾಗಿರುವುದರಿಂದ ವಿಪರೀತ ಬದಲಾವಣೆಗಳನ್ನು ಹೊಂದದಿರುವವರೆಗೂ, ಈ ವ್ಯವಸ್ಥೆ ಮುರಿದು ಬೀಳುವುದಕ್ಕೆ ಯಾವ ಕಾರಣವೂ ಇಲ್ಲ."[೧]

ಅನುಕೂಲಕರವಾದ ವ್ಯಾಪಾರ ಶಿಲ್ಕು ೧ ಷಿ ಸುವರ್ಣ ವಿನಿಮಯವನ್ನು ತಡೆದುಕೊಳ್ಳಬಹುದಾದರೆ, ಅದು ೨ ಷಿ. ಸುವರ್ಣ ವಿನಿಮಯವನ್ನು ಏಕೆ ತಡೆದುಕೊಳ್ಳಲಾರದು ಎಂಬ ವಾದವನ್ನು ಸಮಿತಿಯು ಸಹಜವಾಗಿಯೇ ಮುಂದಿಡಬಹುದಿತ್ತು.

ಮೇಲಿನ ರೀತಿಯ ವಾದಗಳಿಂದಾಗಿಯೇ ಸಮಿತಿಯ ವರದಿಯನ್ನು ಏಕೆ ಒಪ್ಪಿಕೊಳ್ಳಲಾಯಿತು ಎಂಬುದನ್ನು ವಿವರಿಸಬಹುದು. ವಾಸ್ತವವಾಗಿ ಈ ವರದಿಯನ್ನು ಒಪ್ಪಿಕೊಂಡಾಗ ಅದರ ಆವಶ್ಯಕತೆಯೇ ಮುಗಿದುಹೋಗಿತ್ತು. ಒಂದು ಪಕ್ಷ ರೂಪಾಯಿಯ ಆಂತರಿಕ ಬೆಲೆ ಅದರ ಮುಖಬೆಲೆಯನ್ನು ಮೀರಿದ್ದರೂ ಸಹ, ಭಾರತದಲ್ಲಿ ಬಹಳವಾಗಿ ರೂಪಾಯಿ ಇದ್ದುದರಿಂದ ಅದು ಚಲಾವಣೆಯಿಂದ ಮಾಯವಾಗುವ ಅಪಾಯ ಇಲ್ಲವೇ ಇಲ್ಲ.[೨] ಇದರಿಂದ ಆಗಬಹುದಾಗಿದ್ದ ಪರಿಣಾಮ, ಬಹಳ ಹೆಚ್ಚಿನ ಪ್ರಮಾಣದಲ್ಲಿ ರೂಪಾಯಿ ನಾಣ್ಯಗಳನ್ನು ಕರಗಿಸುವುದಲ್ಲ. ಬದಲಿಗೆ ಸರ್ಕಾರ ಜಾರಿಗೆ ತಂದಿದ್ದ ಆಜ್ಞೆಯ ಉಲ್ಲಂಘನೆ. ಏಕೆಂದರೆ ಸರ್ಕಾರ ರೂಪಾಯಿಯನ್ನು ಕರಗಿಸಬಾರದು ಮತ್ತು ನಿರ್ಯಾತ ಮಾಡಬಾರದು ಎಂಬ ಆಜ್ಞೆಯನ್ನು ಜಾರಿಗೆ ತಂದಿತ್ತು. ಸಮಿತಿ ತನ್ನ ವರದಿಯನ್ನು ಸಲ್ಲಿಸಿದಾಗ (ಡಿಸೆಂಬರ್ ೧೯೧೯), ಬೆಳ್ಳಿಯ ಬೆಲೆ ತುಂಬಾ ಹೆಚ್ಚಾಗಿದ್ದುದು ನಿಜ. ಆದರೆ ಸರ್ಕಾರವು ಸಮಿತಿಯ ಶಿಫಾರಸುಗಳನ್ನು ಜಾರಿಗೆ ತರುವ ವೇಳೆಗೆ ಅಂದರೆ ೧೯೨೦ರ ವೇಳೆಗೆ ಬೆಳ್ಳಿಯ ಬೆಲೆ ಇಳಿಯುವುದಕ್ಕೆ ಪ್ರಾರಂಭವಾಗಿತ್ತು. ೧೯೨೦ರ ಆಗಸ್ಟ್ ೩೧ ರಂದು ರೂಪಾಯಿಯ ಚಿನ್ನ ಮೌಲ್ಯವನ್ನು ಬದಲಿಸುವ ಮಸೂದೆಯನ್ನು ಕೌನ್ಸಿಲ್‌ನ ಮುಂದೆ ಮಂಡಿಸಲಾಯಿತು. ಆಗ ಚಿನ್ನ ತೊಲ ಒಂದಕ್ಕೆ ೨೩ ೧/೪ ರೂಪಾಯಿಗಳಿಗೆ ಮಾರಾಟವಾಗುತ್ತಿತ್ತು. ಸವರನ್‌ನ ಬೆಲೆ ೧೦ ರೂಪಾಯಿಗೆ ಸಮನಾಗಬೇಕಾಗಿದ್ದರೆ ಚಿನ್ನದ ಬೆಲೆ ಮಾರುಕಟ್ಟೆಯಲ್ಲಿ ತೊಲಕ್ಕೆ ರೂ. ೧೫-೧೪-೦ ಆಗಬೇಕಾಗಿತ್ತು. ಇದರಿಂದ ಚಿನ್ನದ ಮಾರುಕಟ್ಟೆ ಬೆಲೆಗಳ ನಡುವಣ ಅನುಪಾತ ಶೇ. ೩೩ ರಷ್ಟು ಅಥವಾ ರೂ ೭ ೧/೨ಯ ವ್ಯತ್ಯಾಸವನ್ನು ಹೊಂದಿರುವುದು ಸಾಧ್ಯವಾಗುತ್ತಿತ್ತು. ಬೆಳ್ಳಿಯ ಬೆಲೆ ೪೪ ಪೆ. ಗಳ ಆಸುಪಾಸಿನಷ್ಟು ಕಡಿಮೆಯಾಗಿತ್ತು. ಹೀಗಾಗಿ ರೂಪಾಯಿಯು ಚಲಾವಣೆಯಿಂದ ಮಾಯವಾಗುವ ಸಾಧ್ಯತೆ ಇರಲೇ ಇಲ್ಲ.[೩] ಇಂಥ ವ್ಯತ್ಯಾಸವಿದ್ದರೂ ಸಹ ಸರ್ಕಾರ ಆತುರಾತುರವಾಗಿ ರೂಪಾಯಿಗೆ ಹೆಚ್ಚಿನ ಸಮಾನತೆ ಬೆಲೆಯನ್ನು ನಿಗದಿಮಾಡಿತು. ಇದಕ್ಕೆ ಹಣಕಾಸು ಸಂಬಂಧದ ಕಾರಣ ಅತ್ಯಂತ ಸ್ಪಷ್ಟವಾಗಿತ್ತು. ಏಕೆಂದರೆ ಬ್ರಿಟಿಷ್ ಇಂಡಿಯಾದಲ್ಲಿ ತಕ್ಷಣದಲ್ಲೇ ಸಂವಿಧಾನಾತ್ಮಕವಾಗಿ ಪ್ರಾಂತೀಯ ಹಾಗೂ ಸಾಮ್ರಾಜ್ಯ ಹಣಕಾಸುಗಳು ಪ್ರತ್ಯೇಕವಾಗಿರಬೇಕೆಂಬ ಉದ್ದೇಶವನ್ನು ಸರ್ಕಾರ ಹೊಂದಿತ್ತು. ಹಳೆಯ ಹಣಕಾಸು ಪದ್ಧತಿಯಲ್ಲಿ ಕೇಂದ್ರ ಸರ್ಕಾರ "ಬೆನೆವೊಲೆನ್ಸ್" ತೆರಿಗೆಯನ್ನು ಹಾಕುವ ಸ್ವಾತಂತ್ರ್ಯವನ್ನು ಹೊಂದಿತ್ತು. ಇದು ಪ್ರಾಂತೀಯ ಸರ್ಕಾರಗಳು ತಮ್ಮ ಕೆಲವು ಖರ್ಚು ಬಾಬ್ತುಗಳ ಆಸೆಯನ್ನು ಪೂರೈಸಿಕೊಳ್ಳಲು, ತಮ್ಮದೇ ಆದ ಸಂಪನ್ಮೂಲದಿಂದ ಹಣ ಎತ್ತುವ ಒಂದು ವಿಧಾನವಾಗಿತ್ತು. ಆದರೆ ಹೊಸ ಪದ್ಧತಿಯಲ್ಲಿ

---

೧. ವರದಿ ಪ್ಯಾರಾ ೩೩

೨. ಸಮಿತಿಯ ಮುಂದೆ ಕೇನ್ಸ್‌ನ ಸಾಕ್ಷಿ ೧೯೧೯ ಪ್ರ. ೨೬೬೫-೬೭

೩. ದಿ ಇಂಡಿಯನ್ ಕಾಯಿನೇಜ್ (ಅಮೆಂಡ್‌ಮೆಂಟ್) ಬಿಲ್, ಮೇಲೆ ಆನರಬಲ್ ಟಾಟಾರವರ ಭಾಷಣ

ಕೇಂದ್ರ ಸರ್ಕಾರಕ್ಕೆ ಈ ಸ್ವಾತಂತ್ರ್ಯ ತಪ್ಪುತ್ತಿತ್ತು. ಆದ್ದರಿಂದ ಕೇಂದ್ರ ಸರ್ಕಾರ ಯಾರ ಮೇಲೂ ತೆರಿಗೆ ವಿಧಿಸದೆ ಸಂಪನ್ಮೂಲದಿಂದ ಹಣ ಎತ್ತುವ ಒಂದು ವಿಧಾನವಾಗಿತ್ತು. ಆದರೆ ಹೊಸ ಪದ್ಧತಿಯಲ್ಲಿ ಕೇಂದ್ರ ಸರ್ಕಾರ ಯಾರ ಮೇಲೂ ತೆರಿಗೆ ವಿಧಿಸದೆ ಸಂಪನ್ಮೂಲವನ್ನು ರೂಢಿಸುವ ಯಾವುದಾದರೂ ಕ್ರಮವನ್ನು ಆಲೋಚಿಸುತ್ತಿತ್ತು. ಹೆಚ್ಚಿನ ವಿದೇಶೀ ವಿನಿಮಯ ದರವನ್ನು ನಿಗದಿ ಮಾಡುವುದು ಈ ದಿಕ್ಕಿನಲ್ಲಿ ಒಂದು ಒಳ್ಳೆಯ ಅವಕಾಶವಾಗಿತ್ತು. ಏಕೆಂದರೆ ಇದರಿಂದ "ಹೋಂ ಚಾರ್ಜಸ್" ಬಾಬ್ತಿನಲ್ಲಿ ಸಾಕಷ್ಟು ಉಳಿತಾಯ ಮಾಡುವುದು ಸಾಧ್ಯವಿತ್ತು. ಆದರೆ ಹಣಕಾಸು ದೃಷ್ಟಿಯಿಂದಲೂ ಅಗತ್ಯವಾಗಿದ್ದ ಈ ಹೆಚ್ಚಿನ ದರವನ್ನು ಸ್ಥಿರವಾಗಿ ಕಾಪಾಡಿಕೊಳ್ಳುವ ಬಗೆಯಾದರೂ ಹೇಗೆ ಎನ್ನುವ ಪ್ರಶ್ನೆ ಸರ್ಕಾರದ ಮುಂದೆ ಇತ್ತು.[೧] ಬೆಳ್ಳಿಯ ಬೆಲೆ ಕಡಿಮೆಯಾಗಿ ಹೋಗಿದ್ದುದಷ್ಟೇ ಅಲ್ಲದೆ, ಚಿನ್ನದ ಮಾಧ್ಯಮದಲ್ಲಿ ರೂಪಾಯಿಯ ಮೌಲ್ಯ ಸಹ ಕುಸಿಯುವ ಸೂಚನೆಗಳಿದ್ದವು. ಜೊತೆಗೆ ಸಮಿತಿಯ ವರದಿಯ ಮೇಲೆ ಕ್ರಮ ಪ್ರಾರಂಭ ಮಾಡುವ ವೇಳೆಗೆ ಭಾರತದ ವ್ಯಾಪಾರ ಶಿಲ್ಕು ಸಹ ಪ್ರತಿಕೂಲವಾಗಿತ್ತು.

ಸರ್ಕಾರ ಬೆಂಗಾಲ್ ಚೇಂಬರ್ ಆಫ್ ಕಾಮರ್ಸ್‌ಗೆ ಬರೆದ ಪತ್ರದಿಂದ, ಸರ್ಕಾರಕ್ಕೆ ಈ ಬಗ್ಗೆ ಏನು ಲೆಕ್ಕಾಚಾರವಿತ್ತು ಎನ್ನುವುದು ಸ್ಪಷ್ಟವಾಗುತ್ತದೆ.[೨] ವಾಣಿಜ್ಯವನ್ನು ಪುನರುಜ್ಜೀವನಗೊಳಿಸಲು ಅಂತರರಾಷ್ಟ್ರೀಯ ಸಾಲಗಳನ್ನು ಮಂಜೂರು ಮಾಡುವುದರ ಆವಶ್ಯಕತೆಯನ್ನು ಕುರಿತು ಮಾತನಾಡಿದ ಮೇಲೆ, ಪತ್ರ ಕೆಳಗಿನಂತೆ ಮುಂದುವರೆಯುತ್ತದೆ:–

"ಉಳಿದವುಗಳನ್ನು ಬಿಟ್ಟು, ಈಗ ಅವರು (ಭಾರತ ಸರ್ಕಾರ) ಸಹಜವಾದ ಘಟನೆಗಳನ್ನು ಅವಲಂಬಿಸಬೇಕಾಗಿದೆ. ಹೀಗಾಗಿ ಅನುಕೂಲಕರವಾದ ನಿರ್ಯಾತ ಪರಿಸ್ಥಿತಿಯ ಜೊತೆಗೆ ಈಗ ವಿನಿಮಯವನ್ನು ದೃಢಗೊಳಿಸಲು ಆಯಾತದಲ್ಲಿನ ಕಡಿತವನ್ನು ಅವಲಂಬಿಸಬೇಕಾಗಿದೆ. ಆದರೆ ಸರ್ಕಾರ, ಕರೆನ್ಸಿ ಸಮಿತಿ ಸೂಚಿಸಿರುವ ಮಟ್ಟಕ್ಕೆ ಕೊನೆಯದಾಗಿ ವಿನಿಮಯ ದರವನ್ನು ನಿಗದಿಮಾಡುವುದಕ್ಕೆ ಸಹಜ ಪರಿಸ್ಥಿತಿಗಳೇ ಏಕೆ ನೆರವಾಗಲಾರವು ಎಂಬುದರ ಬಗ್ಗೆ ಯಾವ ಸಂಶಯವನ್ನೂ ವ್ಯಕ್ತಪಡಿಸುವುದಿಲ್ಲ".

ಇವೆರಡರಲ್ಲಿ ಯಾವ ಕ್ರಮ ಸರಿಯಾದುದು? ರೂಪಾಯಿಯ ಕೊಳ್ಳುವ ಶಕ್ತಿ ಕಡಿಮೆಯಾಗಿರುವುದು ಅದರ ಮೌಲ್ಯ ಕುಸಿಯುವುದಕ್ಕೆ ಕಾರಣವೇ? ಅಥವಾ ಪ್ರತಿಕೂಲಕರ ವ್ಯಾಪಾರದ ಶಿಲ್ಕು ಇದಕ್ಕೆ ಕಾರಣವೇ? ಆದರೆ ನಾವು ಮೊದಲು ಸೂಚಿಸಬೇಕಾದುದೆಂದರೆ, ಪ್ರತಿಕೂಲಕರವಾದ ವ್ಯಾಪಾರದ ಶಿಲ್ಕು ಭಾರತ ಸರ್ಕಾರಕ್ಕೆ ಒಂದು ಹೊಸ ವಿಷಯ. ೧೮೭೩ ಮತ್ತು ೧೮೯೩ರ ನಡುವೆ ವಿನಿಮಯ ದರದಲ್ಲಿನ ಇಳಿತಾಯ ತುಂಬಾ ಸಾಮಾನ್ಯವಾದ ವಿಷಯವಾಗಿತ್ತು. ಆದರೆ ಯಾವ ಅಧಿಕಾರಿಯೂ ಇದಕ್ಕೆ ಪ್ರತಿಕೂಲಕರ ವಾಣಿಜ್ಯ ಶಿಲ್ಕು ಕಾರಣವೆಂದು ವಿವರಿಸಿಲ್ಲ. ಹಾಗೆಯೇ ೧೯೦೭, ೧೯೧೪ ಮತ್ತು ೧೯೨೦ ರಲ್ಲಿ ವಿನಿಮಯದರ ಕುಸಿದುದಕ್ಕೆ ಪ್ರತಿಕೂಲ ವ್ಯಾಪಾರವನ್ನು ಕಾರಣವಾಗಿ ಕೊಡಬಹುದೇ? ಮೊದಲನೆಯದಾಗಿ, ಎಲ್ಲ ಅವಧಿಯ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷ ವ್ಯಾಪಾರವನ್ನು ಪರಿಗಣಿಸಿದರೆ, ಭಾರತದ ವಿದೇಶೀ ವಾಣಿಜ್ಯ ಶಿಲ್ಕು ಸಮತೋಲನವನ್ನೇ ವ್ಯಕ್ತಪಡಿಸಬೇಕು. ವಾಸ್ತವವಾಗಿ, ಇಂಡಿಯನ್ ಪೇಪರ್ ಕರೆನ್ಸಿ ರಿಪೋರ್ಟ್‌ಗಳ

---

೧. ಭಾರತದ ವಿನಿಮಯದ ಬಗ್ಗೆ ಇತ್ತೀಚಿನ ಚರ್ಚೆಗಳಲ್ಲಿ, ವಿನಿಮಯದರವನ್ನು ೨ ಷಿ ಗೆ ಗೊತ್ತುಮಾಡಿದುದರ ಈ ಹಿನ್ನೆಲೆಯನ್ನು ಸಂಪೂರ್ಣವಾಗಿ ಅಲಕ್ಷಿಸಲಾಗಿದೆ. ಆದರೆ ೧೯೨೦, ಮಾರ್ಚ್ ೧೦ರ ಕೌನ್ಸಿಲ್‌ನ ಹಣಕಾಸು ಸದಸ್ಯ ಈ ವಿಷಯವನ್ನು ಠರಾವುಗಳ ಮೇಲಿನ ಚರ್ಚೆಯಲ್ಲಿ ಅತ್ಯಂತ ಸ್ಪಷ್ಟವಾದ ಮಾತುಗಳಲ್ಲಿ ಬಹಿರಂಗ ಪಡಿಸಿದ್ದಾರೆ. ನೋಡಿ : ರಿವರ್ಸ್ ಕೌನ್ಸಿಲ್ ಎಸ್.ಎಲ್.ಸಿ.ಪಿ. ಸಂ. LVIII ಪು. ೧೨೯೨

೨. ಈ ಪತ್ರ ೧೯೨೦ರ ನವೆಂಬರ್ ೨೦ರ ಟೈಂಸ್ ಆಫ್ ಇಂಡಿಯಾದಲ್ಲಿ ಪ್ರಕಟವಾಯಿತು.

ಮೂಲಕ ಇಳಿಯುವ ವಿನಿಮಯ ದರಕ್ಕೆ ಕಾರಣವಾಗಿ ಭಾರತದ ವ್ಯಾಪಾರಪ್ರತ್ಯಯದಲ್ಲಿನ ಪ್ರತಿಕೂಲಕರ ಪರಿಸ್ಥಿತಿಯನ್ನು ಚರ್ಚಿಸುವುದಾದರೆ ಮತ್ತು ಭಾರತದಿಂದ ಪ್ರತಿ ಆಯಾತಕ್ಕೆ, ಪ್ರತಿ ನಿರ್ಯಾತದ ಮೂಲಕ ಹೇಗೆ ಪಾವತಿಗಳನ್ನು ಮಾಡಲಾಗಿದೆ ಎಂದು ವಿಶ್ಲೇಷಿಸಿದರೆ, ಭಾರತದಿಂದ ಸರಕು ಅಥವಾ ಸೇವೆ 'ಪಲಾಯನ'ವಾಗಿರುವುದು ವ್ಯಕ್ತವಾಗುವುದಿಲ್ಲ. ಭಾರತದ ಎಲ್ಲ ಆಯಾತಕ್ಕೆ ನಿರ್ಯಾತದ ಮೂಲಕ ಪಾವತಿ ಮಾಡಲಾಗಿದೆ ಎಂದಮೇಲೆ ಕೊರತೆ ಅಥವಾ ಅಧಿಶೇಷ ಶಿಲ್ಕಿನ ಪ್ರಶ್ನೆ ಎಲ್ಲಿ ಏಳುತ್ತದೆ? ಹಣದಿಂದ ತೀರಿಸಲ್ಪಟ್ಟ ಸಾಲದ ಭಾಗವನ್ನು 'ಶಿಲ್ಕು' ಎಂದು ಏಕೆ ಪರಿಗಣಿಸಬೇಕು? ಇದರ ಬದಲಿಗೆ ರಾಷ್ಟ್ರದ ವ್ಯಾಪಾರದಲ್ಲಿ ವಾಸ್ತವವಾಗಿ ಪಾತ್ರವಹಿಸುವ ಯಾವುದಾದರೂ ಸಾಮಾನಿನ 'ಶಿಲ್ಕು' ಎಂದು ಮಾತನಾಡುವುದರಲ್ಲಿ ಸ್ವಲ್ಪ ಅರ್ಥವಿದೆ. ಯಾವುದೇ ಎರಡು ಸರಕುಗಳ ಸಾಪೇಕ್ಷ ಬೆಲೆಗಳು ಯಾವ ತತ್ವದ ಮೇಲೆ ವ್ಯಾಪಾರದಲ್ಲಿ ಪರಿಗಣಿತವಾಗುತ್ತವೆಯೋ ಹಾಗೆಯೇ ವ್ಯಾಪಾರದಲ್ಲಿ ತೊಡಗುವ ಎರಡು ರಾಷ್ಟ್ರಗಳ ಹಣವೂ ಪರಿಗಣಿತವಾಗಬೇಕು. ಒಂದು ರಾಷ್ಟ್ರದಿಂದ ಹೆಚ್ಚು ಹಣ ಹೊರಕ್ಕೆ ಹೋದರೆ ಇದರ ಅರ್ಥ ಇತರ ಸರಕುಗಳಿಗೆ ಹೋಲಿಸದಂತೆ ಹಣದ ಮೌಲ್ಯ ಕಡಿಮೆಯಾಗಿದೆ ಎಂದು. ಒಂದು ಪಕ್ಷ ಸರಕುಗಳ ಆಯಾತ ಸರಕುಗಳ ನಿರ್ಯಾತಕ್ಕಿಂತ ಹೆಚ್ಚಾಗಿದ್ದರೆ, ಆಗ ಇನ್ನೂ ಒಂದು ಪ್ರಶ್ನೆ ಉದ್ಭವಿಸುತ್ತದೆ. ನಿರ್ಯಾತ ಏಕೆ ಕಡಿಮೆಯಾಗುತ್ತದೆ ಮತ್ತು ಆಯಾತ ಏಕೆ ಹೆಚ್ಚಾಗುತ್ತಿದೆ? ಆದರೆ, ವ್ಯಾಪಾರದ ಒಂದು ಸಮತೋಲನ ಸ್ಥಿತಿ ಇದೆ ಎಂದಿಟ್ಟುಕೊಳ್ಳೋಣ. ಆಗ ಈ ಸ್ಥಿತಿಯಿಂದ ಪ್ರತಿಕೂಲ ವ್ಯಾಪಾರವ್ಯತ್ಯಯ ಉಂಟಾಗುವುದಕ್ಕೆ ಕಾರಣಗಳೇನು? ಇದಕ್ಕೆ ಅಧಿಕಾರಿಗಳ ಕಡೆಯಿಂದ ಯಾವ ವಿವರಣೆಯೂ ಇಲ್ಲ. ಇಂಥ ಒಂದು ಪರಿಸ್ಥಿತಿಯನ್ನು ಸರ್ಕಾರದ ಸಾಹಿತ್ಯ ನಿರೀಕ್ಷಿಸಿರಲಿಲ್ಲ ಸಹ. ಆದರೆ ಈ ಪ್ರಶ್ನೆ ಮೂಲಭೂತವಾದದ್ದು ಎನ್ನುವುದು ನಿರ್ವಿವಾದ. ಪ್ರತಿಕೂಲ ವ್ಯಾಪಾರ ಶಿಲ್ಕಿನ ಅರ್ಥವೆಂದರೆ, ರಾಷ್ಟ್ರವು ಸರಕುಗಳ ಮಾರಾಟಕ್ಕೆ ಒಳ್ಳೆಯ ಮಾರುಕಟ್ಟೆಯನ್ನು ಒದಗಿಸಿದೆ, ಆದರೆ ಸರಕುಗಳನ್ನು ಕೊಳ್ಳುವುದಕ್ಕೆ ಕೆಟ್ಟ ಸ್ಥಿತಿಯನ್ನು ಹೊಂದಿದೆ ಎಂದು. ಒಂದು ಮಾರುಕಟ್ಟೆ ಮಾರಾಟ ಮಾಡುವುದಕ್ಕೆ ಯಾವಾಗ ಒಳ್ಳೆಯ ಪರಿಸ್ಥಿತಿಯನ್ನು ಪಡೆದಿರುತ್ತದೆ ಎಂದರೆ, ಹೊರರಾಷ್ಟ್ರಗಳ ಮಾರುಕಟ್ಟೆಗಳಿಗಿಂತ ಆಂತರಿಕ ಸರಕಿನ ಬೆಲೆಗಳು ಅಗ್ಗವಾಗಿರುವಾಗ. ಆದ್ದರಿಂದ ವಿದೇಶೀ ವಿನಿಮಯ ಇಳಿಯುವುದಕ್ಕೆ ಪ್ರತಿಕೂಲ ವ್ಯಾಪಾರ ಕಾರಣವಾದರೆ, ಮತ್ತು ಪ್ರತಿಕೂಲ ವ್ಯಾಪಾರದ ಶಿಲ್ಕು ಹೊರಗಿನ ನೆಲೆಗಳು ಹೆಚ್ಚಾಗಿದ್ದು ಆಂತರಿಕ ಬೆಲೆಗಳು ಕಡಿಮೆಯಾಗಿರುವುದರಿಂದ ಉಂಟಾಗಿದ್ದರೆ, ಇದರ ಅರ್ಥ ವಿನಿಮಯ ದರದ ಕುಸಿತ ಎನ್ನುವುದು, ಕರೆನ್ಸಿಯ ಕೊಳ್ಳುವ ಶಕ್ತಿಹೀನತೆಯಲ್ಲದೆ ಬೇರೆ ಏನೂ ಅಲ್ಲ ಎನ್ನುವುದು. ಇದರ ಮತ್ತೊಂದು ಸಮಾನ ಅರ್ಥ ಬೆಲೆಗಳ ಹೆಚ್ಚಳ ಉಂಟಾಗಿದೆ ಎನ್ನುವುದು. ಪ್ರತಿಕೂಲ ವ್ಯಾಪಾರಶಿಲ್ಕು ಎನ್ನುವುದು, ಅಂತಿಮ ವಿವರಣೆಗಿಂತ ಒಂದು ಹಂತ ಕಡಿಮೆಯ ವಿವರಣೆ ಅಷ್ಟೆ. ರೂಪಾಯಿಯ ಮೌಲ್ಯದ ಕುಸಿತ, ರೂಪಾಯಿಯ ಕೊಳ್ಳುವ ಶಕ್ತಿ ಕಡಿಮೆಯಾಗಿರುವುದರ ಪರಿಣಾಮದಿಂದ ಉಂಟಾಗುವಂಥದು ಎನ್ನುವ ವಿವರಣೆಯನ್ನು ಯಾರೂ ತಳ್ಳಿಹಾಕಲಾರರು.

ಹಾಗಾದರೆ ರೂಪಾಯಿಯ ಕೊಳ್ಳುವಶಕ್ತಿ ಕಡಿಮೆಯಾಗುವುದಕ್ಕೆ ಕಾರಣಗಳೇನು? ವಿಚಾರ ಗಲಿಬಿಲಿಯನ್ನುಂಟುಮಾಡುವ ಪ್ರೈಸ್ ಎನ್‌ಕ್ವೈರಿ ಸಮಿತಿಯ[೧] ಪ್ರಕಾರ ಭಾರತದಲ್ಲಿ ಬೆಲೆಗಳು ಏರುವುದಕ್ಕೆ

೧. ಈ ಸಮಿತಿಯನ್ನು ೧೯೧೦ ರಲ್ಲಿ ನೇಮಿಸಲಾಯಿತು. ಇದರ ಉದ್ದೇಶ ಭಾರತದಲ್ಲಿ ಏರುತ್ತಿರುವ ಬೆಲೆಗಳಿಗೆ ಕಾರಣಗಳನ್ನು ಕಂಡುಹಿಡಿಯುವುದು. ಈ ಸಮಿತಿಯಲ್ಲಿ, ಶ್ರೀಯುತ ದತ್ತಾ, ಶಿರಾಸ್ ಮತ್ತು ಗುಪ್ತಾ ಇದ್ದರು. ಮೊದಲನೆಯವರು ಮತ್ತು ಕೊನೆಯವರು, ಭಾರತ ಸರ್ಕಾರದ ಹಣಕಾಸು ಇಲಾಖೆಯ ಸದಸ್ಯರಾಗಿದ್ದರು. ಹೀಗಾಗಿ ಸಮಿತಿಯನ್ನು ಹೆಚ್ಚು–ಕಡಿಮೆ ಸರ್ಕಾರದ ಅಧಿಕೃತ ಸಮಿತಿಯೆಂದು ಹೇಳಬಹುದು. ೧೯೧೪ರಲ್ಲಿ ಈ ಸಮಿತಿಯ ಫಲಿತಾಂಶಗಳು ೫ ಸಂಪುಟಗಳಲ್ಲಿ ಪ್ರಕಟವಾಯಿತು. ಮೊದಲನೆಯ ಸಂಪುಟ ದತ್ತಾರವರ ಸಹಿಯನ್ನು ಹೊಂದಿತ್ತು.

ಇತರ ಕಾರಣಗಳ ಜೊತೆಗೆ ಒಂದು ಮುಖ್ಯ ಕಾರಣವೆಂದರೆ ಜನಸಂಖ್ಯೆಗೆ ಹೋಲಿಸಿದಂತೆ ಸರಕುಗಳ ಪೂರೈಕೆಯ ಕೊರತೆ.[೧] ಪ್ರಸಿದ್ಧವಾದ ಹಣಪ್ರಮಾಣ ಸಿದ್ಧಾಂತದ ಪ್ರಕಾರ ಹಣದ ಪ್ರಮಾಣ ಅದರ ಮೌಲ್ಯವನ್ನು ನಿರ್ಧರಿಸುತ್ತದೆ. ಈ ಹಿನ್ನೆಲೆಯಲ್ಲಿ ನೋಡುವುದಾದರೆ ಸಮಿತಿ ಅನುಸರಿಸಿದ ತರ್ಕ ಬಹಳ ಆಶ್ಚರ್ಯಕರವಾಗಿತ್ತು. ಆದರೆ ಬೆಲೆ ಏರಿಕೆಯ ವಿವರಣೆಗಾಗಿ ಏಕೆ ಒಂದು ನಿರ್ದಿಷ್ಟ ಹಾದಿಯನ್ನು ಅನುಸರಿಸಿತು ಎನ್ನುವುದಕ್ಕೆ ಕಾರಣವಿದೆ. ಭಾರತದ ಕರೆನ್ಸಿಯನ್ನು ಭಾರತ ಸರ್ಕಾರ ನಿರ್ವಹಿಸುವ ವಿಧಾನ ತುಂಬಾ ಸೂಕ್ಷ್ಮವಾದದ್ದು. ಕಾಗದದ ಕರೆನ್ಸಿಯ ನೀಡಿಕೆ ಈಗಾಗಲೇ ಸರ್ಕಾರದ ವಶದಲ್ಲಿತ್ತು. ಟಂಕಸಾಲೆ ಮುಚ್ಚಿದ ನಂತರ ರೂಪಾಯಿ ಕರೆನ್ಸಿಯ ನಿರ್ವಹಣೆಯನ್ನೂ ಸಹ ಸರ್ಕಾರವೇ ತೆಗೆದುಕೊಂಡಿತು.

ಕರೆನ್ಸಿ ಮತ್ತು ರೂಪಾಯಿಗಳೆಲ್ಲದರ ಮೇಲೆ ನೇರ ನಿಯಂತ್ರಣ ಹೊಂದಿದ್ದ ಸರ್ಕಾರ ಕರೆನ್ಸಿಯ ನೀಡಿಕೆ ಉಂಟುಮಾಡುವ ಎಲ್ಲ ಪರಿಣಾಮಗಳಿಗೆ ನೇರ ಜವಾಬ್ದಾರಿಯನ್ನು ಹೊಂದಿತ್ತು. ಸರ್ಕಾರ ವಿರೋಧ ಪಕ್ಷಗಳಿಂದ ಸತತವಾಗಿ ಟೀಕೆಗೆ ಒಳಗಾಗಿತ್ತು ಎನ್ನುವುದನ್ನು ಸಹ ನಾವು ಮರೆಯಬಾರದು. ಆದ್ದರಿಂದ ಸರ್ಕಾರ ತನ್ನ ತೀರ್ಮಾನದ ಬಗ್ಗೆ ಎಚ್ಚರಿಕೆಯಿಂದಿರಬೇಕು. ಲಾರ್ಡ್ ಕ್ಯಾಸ್ಲರೀಗ್, ೧೮೧೧ರ ಹಾರ್ನರ್ ಠರಾವನ್ನು ಪ್ರಸ್ತಾಪಿಸುತ್ತಾ, ಕರೆನ್ಸಿಯ ಹೆಚ್ಚಿನ ನೀಡಿಕೆಯಿಂದಾಗಿ ಬ್ಯಾಂಕು ನೋಟುಗಳ ಮೌಲ್ಯ ಕುಸಿದಿದೆ ಎಂದು ವಾದಿಸಿದರು. ಜೊತೆಗೆ, ನೋಟಿನ ಮೌಲ್ಯ ಕುಸಿದಿದೆ ಎಂಬುದನ್ನು ಸಭೆ ಒಪ್ಪಿಕೊಂಡರೆ ನೊಪೋಲಿಯನ್ ಏನು ಮಾಡುತ್ತಾನೆ ಎಂಬ ಪ್ರಶ್ನಿಸಿದರು. ಭಾರತ ಸರ್ಕಾರ ಇದೇ ಪರಿಸ್ಥಿತಿಯಲ್ಲಿದೆ. ಅದು ಯಾವುದೇ ತತ್ವವನ್ನು ಒಪ್ಪಿಕೊಂಡರೂ ವಿರೋಧ ಪಕ್ಷದವರು ಏನು ಮಾಡುತ್ತಾರೆ ಎನ್ನುವುದನ್ನು ಯೋಚಿಸಬೇಕು. ಭಾರತ ಸರ್ಕಾರ, ವಿನಿಮಯ ದರ ಇಳಿಯುವುದಕ್ಕೆ ಪ್ರತಿಕೂಲ ವ್ಯಾಪಾರ ಶಿಲ್ಕು ಕಾರಣ ಎನ್ನುವುದನ್ನು ಎಷ್ಟರಮಟ್ಟಿಗೆ ಒಪ್ಪಿಕೊಂಡಿತೋ ಅಷ್ಟೇ ತರ್ಕಬದ್ಧವಾಗಿ ಸಮಿತಿ ಸರಕುಗಳ ಕೊರತೆಯೇ ಬೆಲೆ ಏರಿಕೆಗೆ ಕಾರಣ ಎಂಬ ನಿಲುವನ್ನು ತಾಳಿತು. ಇವೆರಡೂ ವಿವರಣೆಗಳೂ ಸರ್ಕಾರದ ಹೊಣೆಗಾರಿಕೆಯನ್ನು ತಪ್ಪಿಸುವ ವಿವರಣೆಗಳೇ ಆಗಿವೆ. ತನ್ನ ಜವಾಬ್ದಾರಿಯಿಂದ ಸರ್ಕಾರ ಸುಲಭವಾಗಿ ಕೈತೊಳೆದುಕೊಳ್ಳುವುದಕ್ಕೆ ಈ ವಿವರಣೆಗಳು ನೆರವಾಗುತ್ತವೆ. ವ್ಯಾಪಾರ ಶಿಲ್ಕು ಪ್ರತಿಕೂಲವಾದರೆ ಸರ್ಕಾರ ಏನು ತಾನೇ ಮಾಡಬಹುದು? ಹಾಗೆಯೇ ಸರಕುಗಳ ಪೂರೈಕೆ ಕಡಿಮೆಯಾಗುವುದಕ್ಕೆ ಸರ್ಕಾರ ಕಾರಣವೇ ? ಸರ್ಕಾರ ಇಂತಹ ವಿವರಣೆಯ ರಕ್ಷಣೆಯನ್ನು ತುಂಬಾ ಸುಲಭವಾಗಿ ಪಡೆದುಕೊಳ್ಳಬಲ್ಲದು.[೨] ಆದರೆ ಭಾರತದಲ್ಲಿ ಬೆಲೆ ಹೆಚ್ಚಳಕ್ಕೆ ಕಾರಣ ಕರೆನ್ಸಿಯ ನೀಡಿಕೆಯಲ್ಲಿನ ಹೆಚ್ಚಳ ಎನ್ನುವ ಕಾರಣವನ್ನು ಸಮಿತಿಯ ವಿವರಣೆ ತಿರಸ್ಕರಿಸುತ್ತದೆಯೇ? ಹಣದ ಮೌಲ್ಯ, ಹಣ ಮತ್ತು ಸರಕುಗಳ ನಡುವಣ (ವಿನಿಮಯ) ಸಮಾನತೆಯ ಫಲಿತಾಂಶ.[೩] ಈ ಸಮೀಕರಣಕ್ಕೆ ಸಹಜವಾಗಿಯೇ ಎರಡು ಭಾಗಗಳಿವೆ. ಒಂದು ಹಣದ ಭಾಗ, ಮತ್ತೊಂದು

---

೧. ನೋಡಿ : ವರದಿಯ ಪ್ಯಾರಾಗಳು ೧೨೬–೨೭

೨. ಸರಕುಗಳ ಕೊರತೆಯ ವಿಶ್ಲೇಷಣೆಯನ್ನು ಭಾರತ ಸರ್ಕಾರ ಕರೆನ್ಸಿಯ ಮೌಲ್ಯ ಕುಸಿಯುವಿಕೆಗೆ ಕಾರಣವಾಗಿ ಕೊಟ್ಟು ತನ್ನ ಜವಾಬ್ದಾರಿಯನ್ನು ತಪ್ಪಿಸಿಕೊಳ್ಳಲು ಯತ್ನಿಸಿದರೂ, ಸಮಿತಿಯ ವರದಿಯನ್ನು ಸಮೀಕ್ಷಿಸುವಾಗ ಭಾರತಸರ್ಕಾರ ಈ ವಾದವನ್ನೇ ತಿರಸ್ಕರಿಸಿತು. ಏಕೆಂದರೆ ಇಂಥ ಕಾರಣವನ್ನು ಕೊಟ್ಟಾಗ ಸಹಜವಾಗಿಯೇ ತನ್ನ ಆಡಳಿತದಲ್ಲಿ ಭಾರತ ಬಡ ರಾಷ್ಟ್ರವಾಗುತ್ತಿದೆ ಎನ್ನುವುದನ್ನು ಸರ್ಕಾರ ತಾನೇ ಒಪ್ಪಿಕೊಂಡಂತಾಗುತ್ತಿತ್ತು. ಆದರೆ ಈ ವಿವರಣೆಯನ್ನು ಕೊಡುವ ಆತುರದಲ್ಲಿ ಸರ್ಕಾರಕ್ಕೆ ಬೆಲೆ ಹೆಚ್ಚಳಕ್ಕೆ ನೋಟು ನೀಡಿಕೆಯ ವಿಸ್ತರಣೆಯೊಂದನ್ನೇ ಕೊಡಬೇಕಾಗುವ ಪರಿಸ್ಥಿತಿ ಉದ್ಭವಿಸುತ್ತದೆ ಎನ್ನುವುದನ್ನು ಮನಗಾಣುವುದಕ್ಕಾಗಲಿಲ್ಲ.

೩. ಕಂಸದೊಳಗೆ ಕೊಡಲಾಗಿರುವ ಪದವನ್ನು 'ಪ್ರಾಬ್ಲಂ ಆಫ್ ರುಪಿ'ಯಿಂದತೆಗೆದು ಸೇರಿಸಲಾಗಿದೆ (ಸಂಪಾದಕ)

ಸರಕಿನ ಭಾಗ. ಸಾರ್ವತ್ರಿಕ ಬೆಲೆಮಟ್ಟಗಳು ಬದಲಾದಾಗ ಈ ಎರಡು ಭಾಗಗಳಲ್ಲಿ ಯಾವುದು ಪ್ರಮುಖ ಪಾತ್ರ ವಹಿಸುತ್ತಿದೆ ಎನ್ನುವುದರ ಬಗ್ಗೆ ಬಹಳ ಹಿಂದಿನಿಂದಲೂ ಅರ್ಥಶಾಸ್ತ್ರಜ್ಞರಲ್ಲಿ ಭಿನ್ನಾಭಿಪ್ರಾಯವಿದೆ. ಹಣದ ಸಾರ್ವತ್ರಿಕ ಕೊಳ್ಳುವ ಚೈತನ್ಯವನ್ನು ಅಥವಾ ಅದರ ಮೌಲ್ಯವನ್ನು ನಿರ್ಧರಿಸುವುದರಲ್ಲಿ ಸರಕಿನ ಪ್ರಮಾಣವೇ ಮುಖ್ಯ ಎಂದು ಒಂದು ಗುಂಪು ವಾದಿಸುತ್ತಿದೆ. ಇವರ ಪ್ರಕಾರ, ಬೆಲೆಗಳು ಸಾರ್ವತ್ರಿಕವಾಗಿ ಇಳಿದರೆ ಅದಕ್ಕೆ ಕಾರಣ, ಹಣದ ಕೊರತೆಯಲ್ಲ, ಬದಲಿಗೆ ಸರಕಿನ ಹೆಚ್ಚಳ ಹಾಗೆಯೇ ಬೆಲೆಗಳು ಸಾರ್ವತ್ರಿಕವಾಗಿ ಹೆಚ್ಚಾದರೆ ಇದಕ್ಕೆ ಕಾರಣ, ಹಣದ ಪ್ರಮಾಣದಲ್ಲಿನ ಹೆಚ್ಚಳವಲ್ಲ, ಬದಲಿಗೆ ಸರಕಿನ ಪ್ರಮಾಣದಲ್ಲಿ ಇಳಿತಾಯ. ಕೆಲವು ಅರ್ಥಶಾಸ್ತ್ರಜ್ಞರು ಈ ವಾದವನ್ನು ಒಪ್ಪುವುದು ಸಾಧ್ಯ. ಆದರೆ, ಇದರಿಂದ ಹಣ ಪ್ರಮಾಣ ಸಿದ್ಧಾಂತವನ್ನು ಸೋಲಿಸಲಾಗಿದೆ ಎಂದು ಮಾತ್ರ ಒಪ್ಪುವುದಕ್ಕಾಗುವುದಿಲ್ಲ. ವಾಸ್ತವವಾಗಿ ಈ ರೀತಿಯ ನಿಲುವನ್ನು ತೆಗೆದುಕೊಂಡಿರುವುದರಿಂದ ಹಣ ಪ್ರಮಾಣ ಸಿದ್ಧಾಂತಕ್ಕೆ ಧಕ್ಕೆಯಾಗಿದೆ ಎಂದು ಭಾವಿಸಬಾರದು. ಅವರು ಇದೇ ಸಿದ್ಧಾಂತವನ್ನು ಇನ್ನೊಂದು ರೀತಿಯಲ್ಲಿ ಪ್ರತಿಪಾದಿಸುತ್ತಾರೆ ಅಷ್ಟೆ. ಏಕೆಂದರೆ ಸರಕುಗಳ ಪೂರೈಕೆಯ ಏರಿಕೆ ಮತ್ತು ಇಳಿತಾಯಗಳನ್ನು ಕುರಿತು ಮಾತನಾಡುವಾಗ ಅವರು ಹಣವನ್ನೂ ಒಳಗೊಂಡಂತೆ ಸರಕುಗಳನ್ನು ಪ್ರಸ್ತಾಪಿಸುತ್ತಾರಷ್ಟೆ. ಆದ್ದರಿಂದ ಕರೆನ್ಸಿಯನ್ನೂ ಒಳಗೊಂಡಂತೆ ಸರಕುಗಳ ಪ್ರಮಾಣ ಹೆಚ್ಚಾದಾಗ ಬೆಲೆಗಳ ಮಟ್ಟ ಕಡಿಮೆಯಾಗುತ್ತಿದೆ ಎಂದು ಹೇಳಿದಂತಾಗುತ್ತದೆ. ವಾಸ್ತವವಾಗಿ ಸರಕುಗಳ ಮಾಧ್ಯಮದಲ್ಲಿ ಹಣದ ಮೌಲ್ಯವನ್ನು ವಿವರಿಸುವುದು, ಹಣ ಪ್ರಮಾಣ ಸಿದ್ಧಾಂತದ ಪ್ರಕಾರವೇ ತಿರುಗು–ಮುರುಗಾಗಿ ಹಣದ ಮೌಲ್ಯವನ್ನು ವಿವರಿಸಿದಂತೆ. ಈ ಹಿನ್ನೆಲೆಯಲ್ಲಿ ಸಮಿತಿಯ ವಾದವನ್ನು ಮತ್ತೆ ನೋಡುವುದಾದರೆ, ಅವರ ದೃಷ್ಟಿಯಲ್ಲಿ ಭಾರತದಲ್ಲಿ ಬೆಲೆಗಳ ಹೆಚ್ಚಳಕ್ಕೆ ಕರೆನ್ಸಿಯಲ್ಲಿನ ಇಳಿತಾಯವು ಸರಕುಗಳ ಪೂರೈಕೆಯಲ್ಲಿನ ಇಳಿತಾಯಕ್ಕೆ ಅನುಗುಣವಾಗಿಲ್ಲದಿದ್ದುದೇ ಕಾರಣವಾಗಿತ್ತು. ಆದರೆ ರೂಪಾಯಿಯ ಕೊಳ್ಳುವ ಶಕ್ತಿಯಲ್ಲಿನ ಇಳಿತಾಯ, ಕರೆನ್ಸಿಯಲ್ಲಿ ಹೆಚ್ಚಳ ಉಂಟಾದುದರ ಪರಿಣಾಮವಾಗಿ ಉಂಟಾದಂಥದ್ದು, ೧೮೯೩ರಲ್ಲಿ ಟಂಕಸಾಲೆ ಮುಚ್ಚಿದಾಗಿನಿಂದ ಕರೆನ್ಸಿಯಲ್ಲಿ ಹೆಚ್ಚಳ ಉಂಟಾದದ್ದು ಸಂಶಯಾತೀತವಾದ ವಿಷಯ.

ವಾಸ್ತವವಾಗಿ ೧೮೯೩–೯೮ರ ಅವಧಿಯಲ್ಲಿ ಮಾತ್ರ ಸಾಪೇಕ್ಷವಾಗಿ ಕರೆನ್ಸಿಯ ವಿಸ್ತರಣೆಯ ನೀತಿಯಲ್ಲಿ ನಿಧಾನದ ಆದರೆ ಎಚ್ಚರಿಕೆಯ ನೀತಿಯನ್ನು ಅನುಸರಿಸಲಾಯಿತು. ಇದಕ್ಕೆ ಕಾರಣ ಸ್ಪಷ್ಟ; ಟಂಕಸಾಲೆಯನ್ನು ಮುಚ್ಚುವ ಅವಧಿಗಾಗಲೇ, ಕರೆನ್ಸಿಯು ಅಗತ್ಯಕ್ಕಿಂತ ಅಧಿಕವಾಗಿತ್ತು. ಆದರೆ ಕರೆನ್ಸಿಯ ವಿಸ್ತರಣೆಯನ್ನು ಆರ್ಥಿಕತೆ ರೂಢಿಸಿಕೊಂಡಿರಲಿಲ್ಲ.[೧] ಟಂಕಸಾಲೆಯನ್ನು ಮುಚ್ಚಿದಾಗ ಜನರ ಬಳಿ ಇದ್ದ ಗಟ್ಟಿ ಚಿನ್ನದ ಮೌಲ್ಯ ಕಡಿಮೆಯಾಗಿತ್ತು. ಈ ನಷ್ಟವನ್ನು ತುಂಬಿಕೊಡಬೇಕೆಂದು ಕೆಲವು ಆಸಕ್ತ ಜನರು ಸರ್ಕಾರವನ್ನು ಒತ್ತಾಯಿಸುವ ಚಳವಳಿ ನಡೆಸಿದ್ದರು. ಈ ಹಿಂದೆ ಟಂಕಸಾಲೆಗಳನ್ನು ಮುಚ್ಚಲು ಕಾರಣನಾಗಿದ್ದ ಸರ್ ಜೇಮ್ಸ್ ಮೆಕೇ (ಈಗ ಲಾರ್ಡ್ ಇಂಚಕೇಪ್) ಬ್ಯಾಂಕುಗಳಿಂದ ಬೆಳ್ಳಿಯನ್ನು ತೆಗೆದುಕೊಂಡುಬಿಡುವಂತೆ ಸರ್ಕಾರದ ಮೇಲೆ ಒತ್ತಡ ತಂದ. ಸರ್ಕಾರ ಸೆಕ್ರೆಟರಿ ಆಫ್ ಸ್ಟೇಟ್‌ಗೆ ನಾಣ್ಯವನ್ನು ಟಂಕಿಸಿ ಈಗಾಗಲೇ ಅಧಿಕವಾಗಿರುವ ಕರೆನ್ಸಿಯನ್ನು ಇನ್ನೂ ಹೆಚ್ಚು ಮಾಡುವುದಕ್ಕಿಂತ, ನಷ್ಟವಾದರೂ ಬೆಳ್ಳಿಯನ್ನು ಮಾರಾಟ ಮಾಡುವುದು ಸೂಕ್ತ ಎಂಬ ಸೂಚನೆಯನ್ನು ಕೊಟ್ಟಿತು. ಆದರೆ ಸೆಕ್ರೆಟರಿ ಆಫ್ ಸ್ಟೇಟ್ ಈ ಸೂಚನೆಯನ್ನು ತಿರಸ್ಕರಿಸಿದ. ಜೊತೆಗೆ ಬೆಳ್ಳಿಯನ್ನು ನಾಣ್ಯೀಕರಿಸಿ ಈಗಾಗಲೇ ಅಧಿಕವಾಗಿದ್ದ ಕರೆನ್ಸಿಯನ್ನು ಇನ್ನೂ

---

೧. ನೋಡಿ : ಎಚ್.ಎಮ್. ರೋಸ್, ದಿ ಟ್ರಂಪ್ ಆಫ್ ದಿ ಸ್ಟಾಂಡರ್ಡ್ ೧೯೧೦ ಪು. ೧೬–೧೭

ಹೆಚ್ಚಿಸಲಾಯಿತು. ೧೮೯೩-೯೪ರಲ್ಲಿ ಕೌನ್ಸಿಲ್ ಬಿಲ್‌ಗಳನ್ನು ನಿಲ್ಲಿಸಿದ್ದರಿಂದ, ಖಜಾನೆಗಳಲ್ಲಿ ದೊಡ್ಡ ಮೊತ್ತದ ರೂಪಾಯಿ ಸಂಗ್ರಹವಾಗಿತ್ತು. ಇದರ ಪರಿಣಾಮವಾಗಿ ಕರೆನ್ಸಿಯ ಚಲಾವಣೆ ಸಂಕುಚಿತಗೊಂಡಿತ್ತು. ನಂತರ ಸರ್ಕಾರ ಈ ಹಣವನ್ನು ರೈಲ್ವೆ ನಿರ್ಮಾಣದ ಮೇಲೆ ಖರ್ಚುಮಾಡಲು ನಿರ್ಧರಿಸಿತು. ಈ ಕ್ರಮ ಕರೆನ್ಸಿಯನ್ನು ಹೆಚ್ಚಿಸುವ ನೀತಿಗೆ ಸಮನಾಗಿತ್ತು. ೧೮೯೪ರಲ್ಲಿ ಕೌನ್ಸಿಲ್ ಬಿಲ್‌ಗಳನ್ನು ಮತ್ತೆ ಆರಂಭಿಸಿದ ಮೇಲೆ ಸಹ ಇದೇ ಪರಿಣಾಮ ಉಂಟಾಗಿತ್ತು. ಏಕೆಂದರೆ ಕೌನ್ಸಿಲ್ ಬಿಲ್‌ಗಳ ಮಾರಾಟದಿಂದ ಕರೆನ್ಸಿಯ ಪ್ರಮಾಣ ಹೆಚ್ಚಾಗುತ್ತದೆ. ಚಿನ್ನವನ್ನು ಸಾಲವಾಗಿ ಪಡೆಯುವುದರ ಮೂಲಕ ಖಜಾನೆಗೆ ಹಣ ಒದಗಿಸುವುದಕ್ಕೆ ತುಂಬಾ ವೆಚ್ಚ ತಗಲುತ್ತಿದ್ದುದರಿಂದ, ಕೌನ್ಸಿಲ್ ಬಿಲ್‌ಗಳ ಮಾರಾಟವನ್ನು ಮತ್ತೆ ಪ್ರಾರಂಭಿಸಿದ್ದು ಅಂಥ ತಪ್ಪಾಗಿರಲಿಲ್ಲ. ಆದರೆ ಅಕ್ಷಮ್ಯವಾದ ಕಾರ್ಯವೆಂದರೆ, ಪೇಪರ್ ಕರೆನ್ಸಿಯ ರಿಸರ್ವ್ ಅನ್ನು ೮ ರಿಂದ ೧೦ ಕೋಟಿಗೆ ಹೆಚ್ಚಿಸಿದುದು.[೧] ಇದರಿಂದ ೨ ಕೋಟಿ ರೂಪಾಯಿಗಳಷ್ಟು ರೂಪಾಯಿ ನಾಣ್ಯಗಳನ್ನು ಚಲಾವಣೆಗೆ ಹೊಸದಾಗಿ ತಂದಂತಾಯಿತು. ಹಣಕಾಸು ಮಂತ್ರಿಗಳು ಇಂಥ ನೀತಿಯ ಪರಿಣಾಮದ ಕಡೆ ಎಷ್ಟು ಅಲಕ್ಷ್ಯತೆಯನ್ನು ವ್ಯಕ್ತಪಡಿಸಿದ್ದರು ಎನ್ನುವುದು ಕೆಳಗಿನ ವಾದದಿಂದ ಸ್ಪಷ್ಟವಾಗುತ್ತದೆ.

"ಕರೆನ್ಸಿ ರಿಸರ್ವ್‌ನ ಹೆಚ್ಚಳದ ಪ್ರಶ್ನೆಯ ಬಗ್ಗೆ ಚರ್ಚೆ ಮಾಡುವುದರ ಮೂಲಕ, ಅದಕ್ಕಿದ್ದ ಇತರ ಕಾರಣಗಳ ಕಡೆ ನಾವು ಗಮನ ಕೊಟ್ಟಿದ್ದೇವೆಯೇ ಎನ್ನುವುದು ಸಂಶಯಾಸ್ಪದ".[೨]

೧೯೦೦-೧೯೦೮ರ ಎರಡನೇ ಅವಧಿಗೆ ಹೋಲಿಸಿದಂತೆ, ಮೊದಲನೆಯ ಅವಧಿಯಲ್ಲಿ ನಡೆದ ಕರೆನ್ಸಿಯ ವಿಸ್ತರಣೆ ಅಷ್ಟು ಗಣನೀಯವಾಗಿರಲಿಲ್ಲ. ಎರಡನೇ ಅವಧಿಯಲ್ಲಿ ಸರ್ಕಾರ ಕರೆನ್ಸಿಯನ್ನು ಬಹುವಾಗಿ ವಿಸ್ತರಿಸಿತು. ಈ ಅವಧಿಯಲ್ಲಿನ ರೂಪಾಯಿಗಳನ್ನು ನಾಣ್ಯೀಕರಿಸುವುದರ ಬಗ್ಗೆ, ಕೇನ್ಸ್ ಸರ್ಕಾರದ ನೀತಿಯನ್ನು ಟೀಕಿಸುತ್ತಾ ಕೆಳಗಿನಂತೆ ಅಭಿಪ್ರಾಯಪಟ್ಟಿದ್ದ.[೩]

"೧೯೦೦ರಿಂದ ಪ್ರತಿವರ್ಷ ಹೆಚ್ಚಾದ ಹೊಸ ನಾಣ್ಯಕ್ಕೆ ಬೇಡಿಕೆ (೧೯೦೧-೨ರಲ್ಲಿ ಕಡಿಮೆ, ಆದರೆ ೧೯೦೩-೪ ರಲ್ಲಿ ಹೆಚ್ಚುಬೇಡಿಕೆ ಇತ್ತು. ಆದರೆ ಯಾವ ಅವಧಿಯಲ್ಲೂ ಅದು ಅಸಾಧಾರಣವಾಗಿರಲಿಲ್ಲ) ಟಂಕಸಾಲೆಯ ಸಮಯಕ್ಕೆ ಸರಿಯಾಗಿ ಬೇಡಿಕೆಯನ್ನು ಪೂರೈಸಿತ್ತು. ೧೯೦೩-೦೪ ರಲ್ಲಿ ಈ ಪೂರೈಕೆಗೆ ಸ್ವಲ್ಪ ಕಷ್ಟವಿದ್ದುದು ನಿಜ. ಆದರೂ ಪೂರೈಕೆ ನಡೆದಿತ್ತು. ೧೯೦೫-೬ ರಲ್ಲಿ ಬೇಡಿಕೆ ಬಹಳ ಹೆಚ್ಚಾಯಿತು. ೧೯೦೫ ಜುಲೈನಿಂದ ಬೇಡಿಕೆ, ಟಂಕಸಾಲೆಯ ಬೆಳ್ಳಿ ನಾಣ್ಯದ ಪೂರೈಕೆಗಿಂತ ಬಹಳ ಹೆಚ್ಚಾಯಿತು..... ಬೇಡಿಕೆಯನ್ನು ಪೂರೈಸುವ ಈ ಸಣ್ಣ ಭಯವೇ ಸರ್ಕಾರದ ತಲೆ ಕೆಡಿಸುವುದಕ್ಕೆ ಸಾಕಾಗಿತ್ತು. ಅತ್ಯಂತ ಹೆಚ್ಚು ನಾಣ್ಯಗಳನ್ನು ಸರಬರಾಜು ಮಾಡುವ ಕ್ರಿಯೆಯನ್ನು ಒಮ್ಮೆ ಕೈಗೊಂಡ ಸರ್ಕಾರ ಸಾಮಾನ್ಯ ತಿಳುವಳಿಕೆಯೂ ಇಲ್ಲದೆ ಈ ಕ್ರಿಯೆಯನ್ನು ಮುಂದುವರಿಸಿತು..... ಅದು ೧೯೦೬-೭ರ ತೇಜಿ ಅವಧಿ ಮುಂದೆ ಹೇಗೆ ಕೊನೆಗಾಣುತ್ತಿದೆ ಎನ್ನುವುದನ್ನೂ ಮುಂಗಾಣದೆ, ಬೇಸಿಗೆಯ ತಿಂಗಳುಗಳಲ್ಲೂ ಹೆಚ್ಚುಹೆಚ್ಚು ನಾಣ್ಯಗಳನ್ನು ಟಂಕಿಸಿ ನೀಡಿತು. ೧೯೦೭ರ ಬೇಸಿಗೆಯಲ್ಲಿ, ೧೯೦೬ರ ಬೇಸಿಗೆಯಂತೆಯೇ, ನಾಣ್ಯೀಕರಣವನ್ನು ಮುಂದುವರಿಸಲಾಯಿತು. ೧೯೦೭-೧೯೦೮ರ ವೃದ್ಧಿಯ ಅವಧಿಗಾಗಿ ಕಾಯದೆ ಇಂಥ ಕಾರ್ಯವನ್ನು ಸರ್ಕಾರ ಮಾಡಿತು."

---

೧. ೧೮೯೬ರ ಮಸೂದೆ
೨. ಫೈನಾನ್ಷಿಯಲ್ ಸ್ಟೇಟ್‌ಮೆಂಟ್ಸ್ ೧೮೯೬-೯೭, ಪು. ೮೯
೩. ಅದೇ ಗ್ರಂಥ ಪು. ೧೩೧-೩೫

ಆದ್ದರಿಂದ "ಕೆಲವು ಸಮುದಾಯದವರು ಬೀರನ್ನು ಕುಡಿಯುವಂತೆಯೇ, ಜನರು ಕರೆನ್ಸಿಯ ಅನುಭೋಗವನ್ನು ನಡೆಸುತ್ತಾರೆ" ಎನ್ನುವಂತೆ ಸರ್ಕಾರ ಈ ಅವಧಿಯಲ್ಲಿ ತನ್ನ ನೀತಿಯನ್ನು ರೂಪಿಸಿತು. ಇದೇ ಅವಧಿಯು ಕಾಗದದ ಕರೆನ್ಸಿಯ ವಿಸ್ತರಣೆಯನ್ನು ಸಹ ಕಂಡಿತು. ೧೯೦೩ ರ ವರೆಗೆ ಕರೆನ್ಸಿಯ ಬಳಕೆ ಕಡಿಮೆ ಇತ್ತು. ಇದಕ್ಕೆ ಕಾರಣ ಅದರ ಕಾನೂನುಬದ್ಧತೆಗಿದ್ದ ಮಿತಿ ಮತ್ತು ಅದನ್ನು ಎಲ್ಲಿ ನೀಡುತ್ತಿದ್ದರೋ ಆ ಕಚೇರಿಗಳಲ್ಲಿ ಮಾತ್ರ ಅದನ್ನು ನಗದಾಗಿಸುವ ಸೌಲಭ್ಯವಿದ್ದುದು. ಇದು ಭಾರತದಲ್ಲಿ ಕಾಗದದ ಕರೆನ್ಸಿಯ ನೀಡಿಕೆಗೆ ಇದ್ದ ಅತ್ಯಂತ ದೊಡ್ಡ ಮಿತಿಯಾಗಿತ್ತು. ೧೯೦೩ರಲ್ಲಿ ಮಸೂದೆ ೬ರ ಅನ್ವಯ ಬ್ರಿಟಿಷ್ ಭಾರತದಲ್ಲಿ, ಬರ್ಮಾವನ್ನು ಬಿಟ್ಟು ಉಳಿದ ಕಡೆ ೫ ರೂಪಾಯಿಯ ನೋಟನ್ನು ಸಾರ್ವತ್ರೀಕರಿಸಲಾಯಿತು, ಅಂದರೆ ಅದನ್ನು ಎಲ್ಲ ಕಡೆಯೂ ಕಾನೂನುಬದ್ಧ ಹಣವೆಂದು ಘೋಷಿಸಲಾಯಿತು. ಈಗ ಅದು ಎಲ್ಲ ಕಚೇರಿಗಳಲ್ಲಿ ನಗದಾಗುವ ಸೌಲಭ್ಯವನ್ನು ಪಡೆಯಿತು. ಜೊತೆಗೆ ೧೯೦೫ ರ ಮಸೂದೆ VI ರ ಪ್ರಕಾರ ಕಾಗದದ ಕರೆನ್ಸಿ ರಿಸರ್ವ್‌ನ ವಿಶ್ವಸನೀಯ ಭಾಗವನ್ನು ೧೨ ಕೋಟಿ ರೂ.ಗಳಿಗೆ ಹೆಚ್ಚಿಸಲಾಯಿತು. ಮೊದಲನೆಯ ಕ್ರಮದಿಂದ ಕೇವಲ ನೋಟುಗಳ ಚಲಾವಣೆಯನ್ನು ವಿಸ್ತರಿಸಬೇಕೆಂದು ಲೆಕ್ಕ ಹಾಕಲಾಗಿತ್ತು. ಆದರೆ ಎರಡನೆಯ ಕ್ರಮ ರೂಪಾಯಿ ಕರೆನ್ಸಿಯ ಮೌಲ್ಯವನ್ನು ಕಡಿಮೆ ಮಾಡುವ ನೇರ ಪರಿಣಾಮವನ್ನು ಹೊಂದಿತ್ತು.

ಮೂರನೆಯ ಅವಧಿ (೧೯೦೯-೧೪) ಸಾಧಾರಣ ಅವಧಿಯಾಗಿತ್ತು. ಆದರೆ ಇದು ಕರೆನ್ಸಿಯ ವಿಸ್ತರಣೆಯ ದೃಷ್ಟಿಯಿಂದ ಮಂದಗತಿಯದಾಗಿರಲಿಲ್ಲ. ವಾಸ್ತವವಾಗಿ ಮೊದಲ ಮೂರು ವರ್ಷಗಳು ನಾಣ್ಯೀಕರಣದ ವಿಷಯದಲ್ಲಿ ಅದುಮಿಟ್ಟ ಭಾವನೆಗಳ ವರ್ಷಗಳಾಗಿದ್ದವು. ೧೯೧೦ರಲ್ಲಿ ಮಾತ್ರ ನಾಣ್ಯಗಳನ್ನು ಟಂಕಿಸಲಾಯಿತು. ೧೯೦೯ ಮತ್ತು ೧೯೧೨ರಲ್ಲಿ ಟಂಕಿಸಲಾದ ನಾಣ್ಯಗಳ ಮೊತ್ತ ೨೪ ರಿಂದ ೩೦ ಲಕ್ಷ ಆಗಿದ್ದವು. ಕೊನೆಯ ಎರಡು ವರ್ಷಗಳಲ್ಲಂತೂ ನಾಣ್ಯೀಕರಣದ ಸುಗ್ಗಿಯೇ ಆಗಿತ್ತು. ಈ ವರ್ಷ ಟಂಕಿಸಿದ ನಾಣ್ಯಗಳ ಮೌಲ್ಯ ೨೬$^{1}/_{3}$ ಕೋಟಿಗಳಾಗಿದ್ದವು. ಈ ಅವಧಿಯಲ್ಲಿ ಕಾಗದದ ನೋಟಿನ ವಿಸ್ತರಣೆ ಸಹ ಗಣನೀಯ ಪ್ರಮಾಣದಲ್ಲಿ ನಡೆಯಿತು. ೧೯೦೯ರಲ್ಲಿ ಬರ್ಮಾದಲ್ಲಿ ಸಹ ೫ ರೂಪಾಯಿಯನ್ನು ಸಾರ್ವತ್ರೀಕರಿಸಲಾಯಿತು. ಭಾರತದ ಇತರ ಭಾಗಗಳಲ್ಲಿ ಇದು ಹಿಂದೆಯೇ ನಡೆದಿತ್ತು. ಈ ಪ್ರಕ್ರಿಯೆ ಈ ಅವಧಿಯಲ್ಲಿ ಇನ್ನೂ ವಿಸ್ತಾರಗೊಂಡಿತು. ಏಕೆಂದರೆ, ೧೯೧೦ ರ ಮಸೂದೆ II ರ ಪ್ರಕಾರ, ದೊರಕಿದ ಅಧಿಕಾರವನ್ನು ಬಳಸಿ, ಸರ್ಕಾರ ರೂ ೫ ಮತ್ತು ರೂ ೫೦ ಅನ್ನು ೧೯೧೦ರಲ್ಲಿ ಮತ್ತು ರೂ ೧೦೦ ಅನ್ನು ೧೯೧೧ ರಲ್ಲಿ ಸಾರ್ವತ್ರೀಕರಣಗೊಳಿಸಿತು. ಕಾಗದದ ಕರೆನ್ಸಿಯನ್ನು ಹೀಗೆ ವಿಸ್ತರಿಸುವುದರ ಜೊತೆಗೆ ಸರ್ಕಾರ ೧೯೧೧ರ ಮಸೂದೆ VIIರ ಅನ್ವಯ, ನೀಡಿಕೆಯ ವಿಶ್ವಸನೀಯ ಭಾಗವನ್ನು ೧೨ ಕೋಟಿಯಿಂದ ೧೪ ಕೋಟಿಗೆ ಏರಿಸಿತು. ಇದರಿಂದ ಇನ್ನೂ ೨ ಕೋಟಿ ರೂ. ಹೆಚ್ಚುವರಿ ಹಣ ಚಲಾವಣೆಗೆ ಸೇರಿಕೊಂಡಿತು.

ನಾಲ್ಕನೆಯ ಅವಧಿಯಲ್ಲಿ (೧೯೧೫-೨೦) ಎಲ್ಲ ಜವಾಬ್ದಾರಿಯುತ ಕ್ರಮಗಳನ್ನೂ ಮೂಲೆಗುಂಪು ಮಾಡಲಾಯಿತು.[೧] ಈ ಅವಧಿ ಮಹಾಯುದ್ಧದ ಅವಧಿಯೂ ಆಗಿತ್ತು. ಇದರಿಂದಾಗಿ ಭಾರತದ ಸರಕುಗಳಿಗೆ ವಿಪರೀತವಾದ ಬೇಡಿಕೆಯಿತ್ತು. ಇದಕ್ಕಾಗಿ ಬ್ರಿಟಿಷ್ ಸರ್ಕಾರದ ಪರವಾಗಿ ಭಾರತ ಸರ್ಕಾರ ದೊಡ್ಡ ಪ್ರಮಾಣದ ವೆಚ್ಚವನ್ನು ಭರಿಸಬೇಕಾಗಿತ್ತು. ಇವೆರಡು ಘಟನೆಗಳಿಂದಾಗಿ ಕರೆನ್ಸಿಯನ್ನು ಹೆಚ್ಚುಮಾಡುವುದು ತುಂಬಾ ಆವಶ್ಯಕವಾಗಿದ್ದವು. ಈ ಅಗತ್ಯವನ್ನು ಪೂರೈಸಲು ಸರ್ಕಾರಕ್ಕೆ ಮೂರು ಮಾರ್ಗಗಳಿದ್ದವು.

೧. ಈ ಅವಧಿಯ ಕರೆನ್ಸಿ ನೀತಿಯ ಪ್ರಾಥಮಿಕ ಮೂಲಗಳೆಂದರೆ ಈ ವರ್ಷಗಳ ಭಾರತ ಸರ್ಕಾರದ ಫೈನಾನ್ಸಿಯಲ್ ಸ್ಟೇಟ್‌ಮೆಂಟ್ಸ್.

೧) ಚಿನ್ನವನ್ನು ಆಯಾತ ಮಾಡಿಕೊಳ್ಳುವುದು ೨) ರೂಪಾಯಿ ನಾಣ್ಯಗಳನ್ನು ಹೆಚ್ಚುಮಾಡುವುದು ಮತ್ತು ೩) ಕಾಗದದ ಕರೆನ್ಸಿಯನ್ನು ಹೆಚ್ಚು ಮಾಡುವುದು. ಭಾರತ ಸರ್ಕಾರಕ್ಕೆ ಅಗತ್ಯ ಕರೆನ್ಸಿಗಳನ್ನು ಹೆಚ್ಚು ಮಾಡಲು ಸಾಕಷ್ಟು ಸಾಧನಗಳಿರಲಿಲ್ಲ. ಭಾರತ ಸರ್ಕಾರ, ಭಾರತದಲ್ಲಿ ಮಾಡಿದ ವೆಚ್ಚಗಳನ್ನು ಸೆಕ್ರೆಟರಿ ಆಫ್ ಸ್ಟೇಟ್ ಮರುಸಂದಾಯ ಮಾಡುತ್ತಿದ್ದ. ಸಾಮಾನ್ಯವಾಗಿ ಸೆಕ್ರೆಟರಿ ಆಫ್ ಸ್ಟೇಟ್, ತನ್ನ ಅಧಿಕಾರದಲ್ಲಿದ್ದ ಚಿನ್ನಕ್ಕೆ, ಭಾರತದಲ್ಲಿ ರೂಪಾಯಿಯಾಗಿ ನಾಣ್ಯೀಕರಿಸಲು ಬೆಳ್ಳಿಯನ್ನು ಕೊಳ್ಳುತ್ತಿದ್ದ. ಈ ಅವಧಿಯ ಮೊದಲೆರಡು ವರ್ಷಗಳಲ್ಲಿ ಈ ವಿಧಾನವನ್ನು ಅನುಸರಿಸಲಾಗುತ್ತಿತ್ತು. ಈ ವಿಧಾನದಿಂದ ಭಾರತದಲ್ಲಿ ಕರೆನ್ಸಿಯನ್ನು ಹೆಚ್ಚು ಮಾಡಲಾಗುತ್ತಿತ್ತು. ಆದರೆ ಬೆಳ್ಳಿಯ ಬೆಲೆ ಹೆಚ್ಚಾದುದರಿಂದ ಈ ಮೂಲ ಸರ್ಕಾರಕ್ಕೆ ಕಡಿಮೆಯಾಯಿತು. ಆದ್ದರಿಂದ ಸೆಕ್ರೆಟರಿ ಆಫ್ ಸ್ಟೇಟ್, ಚಿನ್ನವನ್ನು ಹೊರಗೆ ಕಳುಹಿಸುವುದು ಅಥವಾ ಪೇಪರ್ ಕರೆನ್ಸಿಯ ನೀಡಿಕೆ ಇವುಗಳಲ್ಲಿ ಯಾವುದಾದರೂ ಒಂದು ವಿಧಾನವನ್ನು ಆರಿಸಿಕೊಳ್ಳಬೇಕಾಯಿತು. ಇವೆರಡರಲ್ಲಿ ಎರಡನೆಯದು ತುಂಬಾ ದೇಶದ್ರೋಹಿ ಕ್ರಮ ಎಂದು ಎನಿಸಿತ್ತು. ವಾಸ್ತವವಾಗಿ ಚಕ್ರಾಧಿಪತ್ಯದ ದೃಷ್ಟಿಯಿಂದ, ಲಂಡನ್ನಿನಲ್ಲಿ ಪಡೆಯುವ ಚಿನ್ನವನ್ನು ಭಾರತಕ್ಕೆ ಸೇರಿದ್ದೆಂದು "ವಿಭಾಗಿಸಿಡು"ವುದು ಸಹ ಮರ್ಯಾದಾಯುತವಾದದ್ದಲ್ಲ ಎನ್ನುವುದು ಸೆಕ್ರೆಟರಿ ಆಫ್ ಸ್ಟೇಟ್‌ನ ಭಾವನೆಯಾಗಿತ್ತು. ಆದರೆ ಭಾರತದಲ್ಲಿ ಉಂಟಾಗಿದ್ದ ಕರೆನ್ಸಿಯ ಅಧಿಕ ಬೇಡಿಕೆಯನ್ನು ಪೂರೈಸುವುದಾದರೂ ಹೇಗೆ? ಇದರ ಬಗ್ಗೆ ಬಹಳ ಚರ್ಚೆಯ ನಂತರ ಒಂದು ತೀರ್ಮಾನಕ್ಕೆ ಬರಲಾಯಿತು. ಅದೇನೆಂದರೆ, ಭಾರತದಲ್ಲಿ ಚಿನ್ನವನ್ನು ಬಳಸದೆ ಕರೆನ್ಸಿಯನ್ನು ಹೆಚ್ಚಿಗೆ ಮಾಡುವ ವಿಧಾನವೆಂದರೆ, ಸೆಕ್ರೆಟರಿ ಆಫ್ ಸ್ಟೇಟ್, ಒಂದು ಕಡೆ, ತಾನು ಪಡೆಯುವ ಚಿನ್ನವನ್ನು ಭಾರತದ ಪರವಾಗಿ ಬ್ರಿಟಿಷ್ ಟ್ರೆಜರಿ ಬಿಲ್‌ಗಳನ್ನು ಕೊಳ್ಳಲು ಉಪಯೋಗಿಸಬೇಕು. ಇನ್ನೊಂದು ಕಡೆ, ಭಾರತ ಸರ್ಕಾರ ಈ ಬಿಲ್‌ಗಳ ಆಧಾರದ ಮೇಲೆ ಕಾಗದದ ಕರೆನ್ಸಿಯ ನೀಡಿಕೆ ಮಾಡಬೇಕು. ಈ ಕ್ರಿಯೆಯ ಹಿಂದೆ ಇದ್ದ ಸಿದ್ಧಾಂತವೆಂದರೆ, ವಿಶ್ವಾಸನೀಯ ಹಣವನ್ನು ಸ್ವಲ್ಪವೇ ಲೋಹ ಬೆಂಬಲದ ಮೂಲಕ ಹೆಚ್ಚು ಮಾಡುವುದು. ಇದರ ಪರಿಣಾಮ, ಕಾಗದದ ಕರೆನ್ಸಿ ಎಷ್ಟು ಚಲಾವಣೆಯಲ್ಲಿರುತ್ತದೆ ಎನ್ನುವುದು ಜನರ ರೂಢಿಯಿಂದ ನಿರ್ಧಾರವಾಗುವಂತಾಯಿತೇ ಹೊರತು, ಅದಕ್ಕೆ ಬೆಂಬಲವಾಗಿರುವ ಲೋಹದಿಂದಲ್ಲ. ಹೊಸ ಪದ್ಧತಿಯ ಪ್ರಕಾರ, ಯಾವ ಲೋಹದ ಬೆಂಬಲವೂ ಇಲ್ಲದೆ ಕಾಗದದ ಕರೆನ್ಸಿಯನ್ನು ನೀಡಲಾಯಿತು. ಇದರ ಜೊತೆಗೆ, ಸ್ವಾರಸ್ಯಕರವಾದ ಬೆಳವಣಿಗೆಯೆಂದರೆ, ಜನರ ರೂಢಿಯಿಂದಲೂ ಅಲ್ಲದೆ, ಸರ್ಕಾರದ ಅಗತ್ಯತೆಗೆ ತಕ್ಕಹಾಗೆ, ಮತ್ತು ಸರ್ಕಾರದ ಬಳಿಯಿದ್ದ ಚಿನ್ನ ಮತ್ತು ಇತರ ಸೆಕ್ಯೂರಿಟಿಗಳ ಆಧಾರದ ಮೇಲೆ ಕಾಗದದ ಕರೆನ್ಸಿಯ ನೀಡಿಕೆಯ ಕ್ರಮ ಜಾರಿಗೆ ಬಂದುದು. ಈ ಅತ್ಯಂತ ಅಪಾಯಕಾರಿಯಾದ ಮತ್ತು ಅತಿ ಆಸೆಯಿಂದ ಕೂಡಿದ ಕ್ರಮವನ್ನು ಭಾರತ ಸರ್ಕಾರ ಬಹಳ ಆತುರವಾಗಿ ಅನುಸರಿಸಿತು. ಇದನ್ನು ಜಾರಿಗೆ ತರುವುದಕ್ಕಾಗಿ ನಾಲ್ಕು ವರ್ಷಗಳ ಒಳಗಾಗಿ, ಸರ್ಕಾರ, ಒಂದರ ನಂತರ ಒಂದರಂತೆ ಎಂಟು ಮಸೂದೆಗಳನ್ನು ಜಾರಿಗೆ ತಂದಿತು. ಪ್ರತಿಯೊಂದು ಮಸೂದೆಯೂ ನೋಟಿನ ಪ್ರಮಾಣವನ್ನು ಹೆಚ್ಚಿಸುವುದಕ್ಕೆ ಅನುವು ಮಾಡಿಕೊಟ್ಟಿತು. ಮುಂದಿನ ಪಟ್ಟಿ ಮಸೂದೆಗಳು ನೋಟಿನ ನೀಡಿಕೆಗೆ ಗೊತ್ತುಮಾಡಿದ ಮಿತಿ ಮತ್ತು ಒಟ್ಟು ನೀಡಿಕೆಯನ್ನು ಪರಿಚಯಿಸುತ್ತದೆ. (ಪಟ್ಟಿ XLIII ನೋಡಿ)

ಈ ರೀತಿಯ ಅತ್ಯಂತ ಸುಲಭವಾದ ನೋಟು ನೀಡಿಕೆ ಕ್ರಮವನ್ನು ನೋಟು ಪರಿವರ್ತನೆಯ ವಿಧಾನಕ್ಕೆ ಧಕ್ಕೆ ತರದ ಹಾಗೆ, ಬಹಳ ಕಾಲ ಮುಂದುವರಿಸುವುದು ಸಾಧ್ಯವಿರಲಿಲ್ಲ. ಪರಿಣಾಮವಾಗಿ,

---

೧. ೧೯೧೮ರ ಮಸೂದೆ XIV

## ಪಟ್ಟಿ – XLIII
## ಕರೆನ್ಸಿ ನೋಟುಗಳ ನೀಡಿಕೆ
## ಕರೆನ್ಸಿ ನೋಟುಗಳ ನೀಡಿಕೆಗಾಗಿ ಜಾರಿಗೆ ತಂದ ಮಸೂದೆಗಳು

| | | ೧೯೧೫ರ V ಮಸೂದೆ | ೧೯೧೬ರ IX ಮಸೂದೆ | ೧೯೧೭ರ XI ಮಸೂದೆ | ೧೯೧೭ರ XIX ಮಸೂದೆ | ೧೯೧೮ರ VI ಮಸೂದೆ | ೧೯೧೬ರ II ಮಸೂದೆ | ೧೯೧೫ರ XXVI ಮಸೂದೆ |
|---|---|---|---|---|---|---|---|---|
| | | ಲಕ್ಷ ರೂ.ಗಳಲ್ಲಿ | | | | | | |
| I | ವಿಶ್ವಾಸಾರ್ಹ ಹಣಕ್ಕೆ ನೀಡಿಕೆ ಮಿತಿ | | | | | | | |
| (i) | ಕಾಯಂ | ೧೪,೦೦ | ೧೪.೦೦ | ೧೪.೦೦ | ೧೪.೦೦ | ೧೪.೦೦ | ೧೪.೦೦ | ೧೪.೦೦ |
| (ii) | ತಾತ್ಕಾಲಿಕ | ೬,೦೦ | ೧೨.೦೦ | ೩೬.೦೦ | ೪೮.೦೦ | ೭೨.೦೦ | ೮೬.೦೦ | ೧೦೬.೦೦ |
| | **ಒಟ್ಟು ಮಿತಿ** | **೨೦,೦೦** | **೨೬.೦೦** | **೫೦.೦೦** | **೬೨..೦೦** | **೮೬.೦೦** | **೧೦೦.೦೦** | **೧೨೦.೦೦** |
| II | ಕರೆನ್ಸಿ ನೋಟುಗಳ **ಒಟ್ಟು ನೀಡಿಕೆ** | **೬೧,೬೩** | **೬೭,೭೩** | | **೮೬,೩೮** | **೯೯,೭೯** | **೧೫೩,೪೬** | **೧೭೯.೬೭*** |
| III | ರಿಸರ್ವ್‌ಗಳು ಬೆಳ್ಳಿ | ೩೨,೩೪ | ೨೩,೫೭ | ೧೯,೨೨ | | ೧೦,೭೯ | ೩೭,೩೯ | ೪೭,೪೪ |
| | ಚಿನ್ನ | ೧೫,೨೯ | ೨೪,೧೬ | ೧೮,೬೭ | | ೨೭,೫೨ | ೧೭,೪೯ | ೩೨,೭೦ |
| | ಸೆಕ್ಯೂರಿಟಿಗಳು | ೧೪,೦೦ | ೨೦,೦೦ | ೪೮,೪೯ | | ೬೧,೪೮ | ೯೮,೫೮ | ೯೯,೫೩ |

೧೯೧೯ರ ನವೆಂಬರ್ ೩೦ಕ್ಕೆ ಸಂಬಂಧಿಸಿದ್ದು ಉಳಿದದ್ದು ಮಾರ್ಚ್ ೩೧ರ ಅಂಕಿ–ಅಂಶಗಳು.

ಕಾಗದದ ಹಣದ ಹೆಚ್ಚಳವೇ, ಕರೆನ್ಸಿಯ ಹೆಚ್ಚು ಹೆಚ್ಚಿನ ಬೇಡಿಕೆಗೆ ಅವಕಾಶ ಮಾಡಿಕೊಟ್ಟಿತು. ಇದರಿಂದಾಗಿ ಸರ್ಕಾರವು ಹಣಕ್ಕೆ ಕೊಳ್ಳುವ ಶಕ್ತಿಯನ್ನು ಕೊಡಲು ಮತ್ತು ದ್ರವೀಕೃತ ಕಾಗದದ ಹಣಕ್ಕೆ ಬೆಂಬಲ ಕೊಡಲು, ಲೋಹದ ಹಣಕ್ಕೆ ಅವಕಾಶ ಮಾಡಿಕೊಟ್ಟಿತು. ಬೆಳ್ಳಿಯ ಬೆಲೆ ಏರುತ್ತಿದ್ದುದರಿಂದ, ಸಹಜವಾಗಿಯೇ ಸರ್ಕಾರ ಚಿನ್ನಕ್ಕೆ ಮೊರೆಹೋಯಿತು. ೧೯೧೭ರ ಜೂನ್ ೨೯ ರಂದು ಸರ್ಕಾರ ಇದರ ಬಗ್ಗೆ ಒಂದು ಸುಗ್ರೀವಾಜ್ಞೆಯನ್ನು ಹೊರಡಿಸಿತು. ಇದರ ಪ್ರಕಾರ, ಭಾರತಕ್ಕೆ ಆಯಾತ ಮಾಡಿಕೊಳ್ಳುವ ಎಲ್ಲ ಚಿನ್ನವನ್ನೂ ಸ್ಟರ್ಲಿಂಗ್ ವಿನಿಮಯವನ್ನು ಆಧರಿಸಿ ಗೊತ್ತುಮಾಡಿದ ಬೆಲೆಯಲ್ಲಿ ಸರ್ಕಾರಕ್ಕೆ ಮಾರಾಟ ಮಾಡಬೇಕೆಂದು ಮಾಡಲಾಯಿತು. ಜೊತೆಗೆ ಬೊಂಬಾಯಿಯಲ್ಲಿ ಟಂಕಸಾಲೆಯನ್ನು ಆರಂಭಿಸಿ ಅಲ್ಲಿ ಚಿನ್ನದ ಮೊಹರುಗಳನ್ನು ಟಂಕಿಸಲು ಪ್ರಾರಂಭಿಸಲಾಯಿತು[1]. ಎಲ್ಲ ಮೂಲಗಳಿಂದ ಚಿನ್ನವನ್ನು ಪಡೆಯಲು ಸರ್ಕಾರವು ತನ್ನೆಲ್ಲಾ ಪ್ರಯತ್ನಗಳನ್ನೂ ಮಾಡಿತು. ೧೯೧೭ರ ಜೂನ್ ೯ ರಂದು ಚಿನ್ನದ ನಿರ್ಯಾತದ ಮೇಲೆ ಅಮೆರಿಕಾ ಸಂಯುಕ್ತ ಸಂಸ್ಥಾನ ನಿರ್ಬಂಧವನ್ನು ತೆಗೆದುಹಾಕಿದ್ದು, ೧೯೧೫ರ ಜೂನ್ ೯ ರಂದು ದಕ್ಷಿಣ ಆಫ್ರಿಕಾ ಮತ್ತು ಆಸ್ಟ್ರೇಲಿಯಾದ ಚಿನ್ನದ ಮಾರುಕಟ್ಟೆಗಳನ್ನು ಮುಕ್ತ ಮಾಡಿದ್ದು ಭಾರತಕ್ಕೆ ಚಿನ್ನವನ್ನು ಪಡೆದುಕೊಳ್ಳಲು ಸ್ವಲ್ಪಮಟ್ಟಿಗೆ ಅನುಕೂಲವಾಯಿತು. ಆಗಸ್ಟ್ ೨೨, ೧೯೧೯ ರಿಂದ ಕೆನಡಾದ ಒಟ್ಟಾವಾ ಟಂಕಸಾಲೆಯಲ್ಲಿ ಇಡಲಾಗುವ ಚಿನ್ನ ಅಥವಾ ನಾಣ್ಯಗಳ ಠೇವಣಿಗಳಿಗೆ ಪ್ರತಿಯಾಗಿ ಪ್ರಸ್ತುತದ ವಿನಿಮಯ ದರದಲ್ಲಿ ಟೆಲಿಗ್ರಾಫಿಕ್ ಟ್ರಾನ್ಸ್‌ಫರ್ ಮೂಲಕ ಚಿನ್ನ ನೀಡಿಕೆಗೆ ಕೆನಡಾ ಮುಂದೆ ಬಂತು. ಲಂಡನ್ನಿನಲ್ಲಿ ಮತ್ತು ಅಮೆರಿಕಾ ಸಂಯುಕ್ತ ಸಂಸ್ಥಾನದಲ್ಲಿ ಚಿನ್ನವನ್ನು ನೇರವಾಗಿ ಕೊಳ್ಳಲು ಸಹ ಏರ್ಪಾಡು ಮಾಡಲಾಯಿತು. ಕೊನೆಯದಾಗಿ ಖಾಸಗಿಯಾಗಿ ಚಿನ್ನದ ಆಯಾತವನ್ನು ಪ್ರೋತ್ಸಾಹಿಸಲು, ೧೯೧೯ರ ಸೆಪ್ಟೆಂಬರ್ ೧೬ರಂದು ಚಿನ್ನವನ್ನು ಪಡೆದುಕೊಳ್ಳುವ ದರವನ್ನು ಬದಲಾಯಿಸಲಾಯಿತು. ಆದರೆ ಈ ಕ್ರಮಗಳ ಮೂಲಕ ಪಡೆದುಕೊಳ್ಳಲಾದ ಚಿನ್ನದ ಪ್ರಮಾಣ ಬಹಳ ಅಲ್ಪವಾಗಿತ್ತು. ಜೊತೆಗೆ ಚಿನ್ನವನ್ನು ಪಡೆದುಕೊಳ್ಳುವುದು ಸರ್ಕಾರದ ಉದ್ದೇಶವನ್ನು ಸಾಧಿಸಲು ಸಹಾಯಕವಾಗಲಿಲ್ಲ. ಸರ್ಕಾರದ ಉದ್ದೇಶ ಚಿನ್ನವನ್ನು ಚಲಾವಣೆಯಲ್ಲಿಡುವುದಾಗಿತ್ತು. ಆದರೆ ಇದು ಈಡೇರಲಿಲ್ಲ. ಚಿನ್ನದ ಮಾಧ್ಯಮದಲ್ಲಿ ರೂಪಾಯಿಯ ಮೌಲ್ಯ ಬಹಳವಾಗಿ ಕುಸಿಯಿತು. ಪರಿಣಾಮವಾಗಿ ಸರ್ಕಾರದ ನೀಡಿಕೆ ಹೆಚ್ಚಾದಷ್ಟು ಚಿನ್ನವು ಚಲಾವಣೆಯಿಂದ ದೂರವಾಯಿತು. ಸರ್ಕಾರ ಮಾಡಬಹುದಾಗಿದ್ದುದೆಂದರೆ, ಚಿನ್ನ ಮತ್ತು ಬೆಳ್ಳಿಯ ನಾಣ್ಯಗಳು ಕಾನೂನುಬದ್ಧ ಹಣವಲ್ಲ ಎಂದು ಘೋಷಿಸುವುದು ಮತ್ತು ಆ ಮೂಲಕ ಅವುಗಳ ನಿರ್ಯಾತವನ್ನು ತಪ್ಪಿಸುವುದು. ಇದನ್ನು ಸರ್ಕಾರ ೧೯೧೭ರ ಸೆಪ್ಟೆಂಬರ್ ೩ ರಂದು ಮಾಡಿತು. ಚಿನ್ನದ ಮೇಲೆ ಅವಲಂಬಿತವಾಗಿರುವುದು ಸಾಧ್ಯವಿಲ್ಲವೆಂಬುದನ್ನರಿತ ಸರ್ಕಾರ, ರೂಪಾಯಿ ನಾಣ್ಯಗಳನ್ನು ವಿಸ್ತರಿಸುವುದಕ್ಕೆ ಪ್ರಯತ್ನಿಸಿತು. ಬೆಳ್ಳಿಯ ಖರೀದಿಯನ್ನು ಸುಲಭಗೊಳಿಸಲು ಭಾರತಕ್ಕೆ ಖಾಸಗಿಯಾಗಿ ಬೆಳ್ಳಿಯನ್ನು ತರುವುದನ್ನು ೧೯೧೭ರ ಸೆಪ್ಟೆಂಬರ್ ೩ ರಿಂದ ನಿಷೇಧಿಸಲಾಯಿತು. ಭಾರತಕ್ಕೆ ಬರುತ್ತಿದ್ದ ಬೆಳ್ಳಿಯಾದರೂ ಎಷ್ಟು ? ವಿಶ್ವದಲ್ಲಿ ಬೆಳ್ಳಿಯ ಬೇಡಿಕೆ ವಿಪರೀತ ಪ್ರಮಾಣದ್ದಾಗಿತ್ತು. ಸೆಕ್ರೆಟರಿ ಆಫ್ ಸ್ಟೇಟ್ ಸಾಕಷ್ಟು ಬೆಳ್ಳಿಯನ್ನು ಪಡೆಯಲು ಅಸಮರ್ಥನಾದುದರಿಂದ, ಸಣ್ಣ ಮೌಲ್ಯದ ಬೆಳ್ಳಿ ನಾಣ್ಯಗಳನ್ನು ನಿಕಲ್ ನಾಣ್ಯಗಳಿಗೆ ಬದಲಾಯಿಸಿದ.[1] ಅತ್ಯಂತ ಕೆಳಸ್ತರದ ೧ ರೂ. ನೋಟು[2] ಮತ್ತು ೨.೮ ರೂ ನೋಟುಗಳನ್ನು[3] ನೀಡಿಕೆ ಮಾಡುವುದರ

---

೧. ೧೯೧೮ರ ಮಸೂದೆ IV ಮತ್ತು ರ ಮಸೂದೆ XXI
೨. ಮೊದಲು ೧೯೧೭ರ ಡಿಸೆಂಬರ್ ೧ರಂದು ನೀಡಿಕೆಯಾಯಿತು
೩. ೧೯೧೮ ಜನವರಿ ೨ರಂದು ಮೊದಲು ಚಲಾವಣೆಗೆ ತರಲಾಯಿತು

ಮೂಲಕ ಈ ಕಾರ್ಯವನ್ನು ಕೈಗೊಳ್ಳಲಾಯಿತು. ಅಮೆರಿಕದಲ್ಲಿ ಇಡಲಾಗಿದ್ದ ಬೆಳ್ಳಿ ಡಾಲರ್‌ಗಳನ್ನು ಬಿಡುಗಡೆ ಮಾಡಿಸಿಕೊಳ್ಳಲು ಸಹ ಕೋರಲಾಯಿತು. ಅಮೆರಿಕ ಇದಕ್ಕೆ ಒಪ್ಪಿ ಪಿಟ್ಸ್‌ಮನ್ ಮಸೂದೆಯನ್ನು ಜಾರಿಗೆ ತಂದಿತು. ಇದರ ಪ್ರಕಾರ, ಭಾರತ ಸರ್ಕಾರ ಶುದ್ಧ ಔನ್ಸ್ ಒಂದಕ್ಕೆ ೧೦೧$^{೧}/_{೨}$ ಸೆಂಟ್ ದರದಲ್ಲಿ ಸಾಕಷ್ಟು ಪ್ರಮಾಣದ ಬೆಳ್ಳಿಯನ್ನು ಪಡೆಯಿತು. ಈ ಅವಧಿಯಲ್ಲಿ ಖರೀದಿ ಮಾಡಲಾದ ಬೆಳ್ಳಿಯ ಪ್ರಮಾಣವನ್ನು XLIV ಪಟ್ಟಿ ತೋರಿಸುತ್ತದೆ.

೧೯೦೦ ಮತ್ತು ೧೯೧೪ ರ ನಡುವೆ ಸರ್ಕಾರ ಸುಮಾರು ೫೩೨ ದಶಲಕ್ಷ ಸ್ಟಾಂಡರ್ಡ್ ಔನ್ಸ್‌ಗಳಷ್ಟು ಬೆಳ್ಳಿಯನ್ನು ನಾಣ್ಯೀಕರಿಸಿತ್ತು.[೪] ಅಂದರೆ, ಹಿಂದಿನ ೧೪ ವರ್ಷಗಳಲ್ಲಿ ಸರ್ಕಾರ ನಾಣ್ಯೀಕರಿಸಿದ ಬೆಳ್ಳಿಯ ಮೊತ್ತಕ್ಕೆ ಹೋಲಿಸಿದಂತೆ ಈ ಐದು ವರ್ಷಗಳಲ್ಲಿ ಹಿಂದಿನ ಹದಿನಾಲ್ಕು ವರ್ಷಗಳನ್ನೂ ಸೇರಿಸಿ ಸುಮಾರು ೫ ದಶಲಕ್ಷ ಔನ್ಸ್‌ಗಳಷ್ಟು ಹೆಚ್ಚಿನ ಬೆಳ್ಳಿಯ ನಾಣ್ಯೀಕರಣ ನಡೆದಿತ್ತು.

## ಪಟ್ಟಿ XLIV
## ರೂಪಾಯಿ ನಾಣ್ಯೀಕರಣ ೧೯೧೫-೨೦

| ವರ್ಷ | ಬಹಿರಂಗ ಮಾರುಕಟ್ಟೆಯಲ್ಲಿ ಖರೀದಿ ಮಾಡಲಾದ ಬೆಳ್ಳಿ (ಸ್ಟಾಂಡರ್ಡ್ ಔನ್ಸ್‌ಗಳಲ್ಲಿ) | ಅಮೆರಿಕದಿಂದ ಖರೀದಿ ಮಾಡಲಾದ ಬೆಳ್ಳಿ (ಸ್ಟಾಂಡರ್ಡ್ ಔನ್ಸ್‌ಗಳಲ್ಲಿ) | ಒಟ್ಟು (ಸ್ಟಾಂಡರ್ಡ್ ಔನ್ಸ್‌ಗಳು) |
|---|---|---|---|
| ೧೯೧೫-೧೬ | ೮,೬೩೬.೦೦೦ | - | - |
| ೧೯೧೬-೧೭ | ೧೨೪,೫೩೫,೦೦೦ | - | - |
| ೧೯೧೭-೧೮ | ೭೦,೯೨೩,೦೦೦ | - | - |
| ೧೯೧೮-೧೯ | ೧೦೬,೪೧೦,೦೦೦ | ೧೫೨,೫೧೮,೦೦೦ | - |
| ೧೯೧೯-೨೦ | ೧೪,೧೦೮,೦೦೦ | ೬೦,೮೭೪,೦೦೦ | - |
| **ಒಟ್ಟು** | **೩೨೪,೬೧೨,೦೦೦** | **೨೧೩,೩೯೩,೦೦೦** | **೫೩೮,೦೦೫,೦೦೦** |

ಅಪರಿವರ್ತನೀಯ ಕರೆನ್ಸಿಯನ್ನು ಅಪರಿಮಿತವಾಗಿ ನೀಡಿಕೆ ಮಾಡಿದುದರ ಪರಿಣಾಮವಾಗಿ ಅನಿವಾರ್ಯವಾಗಿ ರೂಪಾಯಿಯ ಚಿನ್ನದ ಮೌಲ್ಯ ಕೆಳಗಿಳಿಯಿತು. ಇತಿಹಾಸದಲ್ಲಿ ಬಂದಿರುವ ಎಲ್ಲ ಅಪರಿವರ್ತನೀಯ ಕರೆನ್ಸಿಗಳ ಹಣೆಬರಹವು ಇದೇ ಆಗಿದೆ. ಆದರೆ ಈ ಇತಿಹಾಸಕ್ಕೆ ಒಂದು ಅಪವಾದವಾಗಿ ರೂಪಾಯಿ ಆಗಬೇಕು ಎನ್ನುವುದು ಸರ್ಕಾರದ ಅಭಿಮತ. ಏಕೆಂದರೆ, ಸರ್ಕಾರದ ರೂಪಾಯಿ ಕರೆನ್ಸಿಯ ಅಪರಿಮಿತ ನೀಡಿಕೆಯಿಂದಾಗಿ ಉಂಟಾಗುವ ಮೌಲ್ಯಕುಸಿತದ ಪರಿಣಾಮವನ್ನು ಎದುರಿಸಲು ಸಂಪನ್ಮೂಲಗಳು ಸರ್ಕಾರದ ಬಳಿ ಇದೆ ಎಂದು ಭಾವಿಸಲಾಗಿತ್ತು. ಈ ಸಂಪನ್ಮೂಲಗಳನ್ನು

೪. ನೋಡಿ : ಕರೆನ್ಸಿ ಕೌನ್ಸಿಲ್‌ಗೆ ಎಲ್. ಅಬ್ರಹಾಂ ನೀಡಿದ ಸಾಕ್ಷಿ ೧೯೧೯ ಸಾಕ್ಷಿಯ ವರದಿ ಪ್ರ. ೩೭-೪೧.

ನಾವು ಪರೀಕ್ಷಿಸುವುದು ಅಗತ್ಯ.

ಇಡೀ ವಾದದ ತರ್ಕಬದ್ಧತೆ ಹೀಗಿದೆ. ರೂಪಾಯಿ ಒಂದು ಸಾಂಕೇತಿಕ ಕರೆನ್ಸಿ. ಅದನ್ನು ಮರು ವಿಮೋಚನೆಯ ತತ್ವಕ್ಕೆ ಒಳಪಡಿಸಿ[೧] ಅದರ ಮೌಲ್ಯವನ್ನು ಕಾಪಾಡಿಕೊಂಡರೆ, ರೂಪಾಯಿಯ ಮೌಲ್ಯವನ್ನು ಚಿನ್ನದ ಮೌಲ್ಯದೊಡನೆ ಸಮಾನತೆ ಹೊಂದಿರುವಂತೆ ನೋಡಿಕೊಂಡು ಹೋಗುವುದಕ್ಕೆ ಸಾಧ್ಯವಿರಲೇಬೇಕು. ಅಗತ್ಯವಿರುವುದೆಂದರೆ ಸಾಕಷ್ಟು ಪ್ರಮಾಣದ ಚಿನ್ನದ ನಿಧಿ. ಸರ್ಕಾರದ ಬಳಿ ಈ ನಿಧಿ ಇರುವವರೆಗೂ, ರೂಪಾಯಿ ಮೌಲ್ಯ ಕುಸಿಯಬಹುದೆಂಬ ಭಯ ನಮ್ಮನ್ನು ಕಾಡಲೇಬಾರದು. ಭಾರತ ಸರ್ಕಾರದ ಬಳಿ ಇಂಥ ನಿಧಿ ಇತ್ತು ಮತ್ತು ರೂಪಾಯಿಯ ಚಿನ್ನದ ಮೌಲ್ಯ ಕುಸಿದ ಮೂರು ಬಾರಿಯೂ ಈ ನಿಧಿಯನ್ನು ಬಳಸಲಾಯಿತು. ಮರುವಿಮೋಚನೆಯ ಕ್ರಿಯೆ ಮುಖ್ಯವಾಗಿ ಮೂರು ವಿಧಾನಗಳಿಂದ ನಡೆಯುತ್ತದೆ. ೧) ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟ ಮಾಡುವ ಮೂಲಕ, ಲಂಡನ್ನಿನಲ್ಲಿ ಚಿನ್ನದ ಪಾವತಿಗೆ ಪ್ರತಿಯಾಗಿ ಭಾರತದಲ್ಲಿ ಸರ್ಕಾರ ರೂಪಾಯಿಯನ್ನು ಪಡೆಯುತ್ತದೆ. ೨) ಭಾರತದಲ್ಲಿಯೇ ರೂಪಾಯಿಗಳನ್ನು ಸಂದಾಯಮಾಡಿ ಚಿನ್ನವನ್ನು ಬಿಡುಗಡೆ ಮಾಡಲಾಗುತ್ತದೆ. ಮತ್ತು ೩) ಇನ್ನೂ ಹೆಚ್ಚು ರೂಪಾಯಿ ಚಲಾವಣೆಗೆ ಬರುವುದನ್ನು ತಡೆಗಟ್ಟಲು ಸೆಕ್ರೆಟರಿ ಆಫ್ ಸ್ಟೇಟ್‌ನ ಕೌನ್ಸಿಲ್ ಬಿಲ್‌ಗಳನ್ನು ತಡೆಗಟ್ಟಲಾಗುತ್ತದೆ ಈ ಕ್ರಮಗಳ ಸಂಚಿತ ಪರಿಣಾಮವೆಂದರೆ, ಕರೆನ್ಸಿಯ ಪ್ರಮಾಣವನ್ನು ಕಡಿಮೆ ಮಾಡುವುದು ಮತ್ತು ಅದರ ಮೌಲ್ಯವನ್ನು ಚಿನ್ನದ ಮೌಲ್ಯಕ್ಕೆ ಏರಿಸುವುದು. ಈ ಮೂರೂ ಕ್ರಮಗಳನ್ನು ಅನುಸರಿಸಬಹುದಾಗಿದ್ದರೂ ಸರ್ಕಾರ ಮರುವಿಮೋಚನೆ ಮಾಡುವ ಕ್ರಮವನ್ನೇ ಅತಿ ಮುಖ್ಯವಾಗಿ ಅನುಸರಿಸಿತು. ಮೂರೂ ಸಂದರ್ಭಗಳಲ್ಲಿ ಈ ಕ್ರಮಗಳನ್ನನುಸರಿಸಿ ಸರ್ಕಾರ ಮರುವಿಮೋಚಿಸಿದ ಪ್ರಮಾಣವನ್ನು ಮುಂದಿನ ಪಟ್ಟಿಗಳಲ್ಲಿ ಕೊಡಲಾಗಿದೆ.

---

೧. ನೋಡಿ : ಲಾಗ್ಲಿನ್, ಪ್ರಿನ್ಸಿಪಲ್ಸ್ ಆಫ್ ಮನಿ : ಇದರಲ್ಲಿ ಸಾಂಕೇತಿಕ ಹಣದ ತತ್ವಗಳನ್ನು ಸ್ವಾರಸ್ಯವಾಗಿ ಚರ್ಚಿಸಲಾಗಿದೆ. ಲಾಗ್ಲಿನ್ ಹಣಪ್ರಮಾಣ ಸಿದ್ಧಾಂತದ ವಿರೋಧಿ. ಆದರೆ ಸಾಂಕೇತಿಕ ಹಣದ ವಿಷಯವನ್ನು ಚರ್ಚಿಸುವಾಗ ಅವನು ಈ ತತ್ವವನ್ನು ಒಪ್ಪಿಕೊಳ್ಳುತ್ತಾನೆ.

## ಪಟ್ಟಿ XLV

## ೧೯೦೭–೦೮ ಕರೆನ್ಸಿಯ ಮರುವಿಮೋಚನೆ

| ದಿನಾಂಕ | ರಿವರ್ಸ್ ಕೌನ್ಸಿಲ್‌ಗಳ ಮಾರಾಟದಿಂದ | | ಸರ್ಕಾರದ ಬಳಿ ಇರುವ ಚಿನ್ನವನ್ನು ಬಿಡುಗಡೆ ಮಾಡುವುದರ ಮೂಲಕ (ಆಯಾ ತಿಂಗಳಲ್ಲಿ) | ಖಾಸಗಿಯಾಗಿ ಚಿನ್ನದ ನಾಣ್ಯಗಳ ರಫ್ತು (ಆಯಾ ತಿಂಗಳಲ್ಲಿ) | ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಪಡೆದದ್ದು |
|---|---|---|---|---|---|
| | ನೀಡಲಾದ ಪ್ರಮಾಣ | ಮಾರಾಟದ ಪ್ರಮಾಣ | | | |
| ೧೯೦೭ | | | | | |
| ಸೆಪ್ಟೆಂಬರ್ | | | ೧೫೨,೦೦೦ | ೧೪ | ೮೫೮,೮೯೬ |
| ಅಕ್ಟೋಬರ್ | | | ೨೫೪,೦೦೦ | | ೯೨೧,೬೭೮ |
| ನವೆಂಬರ್ | | | | ೯,೧೦೯ | |
| ಡಿಸೆಂಬರ್ | | | ೫೩೨,೦೦೦ | ೩ | ೪೨೭,೩೪೪ |
| ೧೯೦೮ | | | | | |
| ಮಾರ್ಚ್ ೨೬ | ೫,೦೦,೦೦೦ | ೭೦,೦೦೦ | ೩೩೮,೦೦೦ | ೨,೫೦೧ | ೫೭೧,೯೦೫ |
| ಏಪ್ರಿಲ್ ೨ | ೫,೦೦,೦೦೦ | ೪೪೯,೦೦೦ | } ೨೨೬,೦೦೦ | – | ೧೭೨,೬೬೯ |
| ಏಪ್ರಿಲ್ ೯ | ೫,೦೦,೦೦೦ | ೩೪೦,೦೦೦ | } | | ಇಡೀ ತಿಂಗಳಿಗೆ |
| ಏಪ್ರಿಲ್ ೧೬ | ೫,೦೦,೦೦೦ | ೪೪೧,೦೦೦ | } ೪೬೧,೦೦೦ | – | ೬೬,೮೩೪ |
| ಏಪ್ರಿಲ್ ೨೩ | ೫,೦೦,೦೦೦ | ೩೨೯,೦೦೦ | } | | |
| ಏಪ್ರಿಲ್ ೩೦ | ೫,೦೦,೦೦೦ | ೨೦೫,೦೦೦ | | | |
| ಮೇ ೭ | ೫,೦೦,೦೦೦ | ೮೧,೦೦೦ | ೬೪೫,೦೦೦ | | ೬೨,೭೬೪ |
| ಮೇ ೧೪ | ೫,೦೦,೦೦೦ | ೧೪೫,೦೦೦ | | | |
| ಮೇ ೨೧ | ೮,೨೦,೦೦೦ | ೭೯೩,೦೦೦ | | | |
| ಮೇ ೨೮ | ೫,೦೦,೦೦೦ | ೫,೦೦,೦೦೦ | ೩,೩೪,೦೦೦ | – | ೧೬೯,೮೧೦ |
| ಜೂನ್ ೪ | ೧,೦೦೦,೦೦೦ | ೭,೫೫,೦೦೦ | ೩,೩೪,೦೦೦ | – | ೧೬೯,೮೧೦ |
| ಜೂನ್ ೧೧ | ೧,೦೦೦,೦೦೦ | ೭೦,೦೦೦ | | | |
| ಜೂನ್ ೧೮ | ೫,೦೦,೦೦೦ | ಇಲ್ಲ | | | |
| ಜೂನ್ ೨೫ | ೫,೦೦,೦೦೦ | ೫೦,೦೦೦ | | | |
| ಜುಲೈ ೨ | ೫,೦೦,೦೦೦ | ೪೭೦,೦೦೦ | ೧೬,೦೦೦ | – | ೧೮೬,೮೪೭ |
| ಜುಲೈ ೯ | ೫,೦೦,೦೦೦ | ೩,೦೪,೦೦೦ | | | |
| ಜುಲೈ ೧೬ | ೫,೦೦,೦೦೦ | ೫,೦೦,೦೦೦ | | | |
| ಜುಲೈ ೨೩ | ೧,೦೦೦,೦೦೦ | ೯೬೮,೦೦೦ | | | |
| ಜುಲೈ ೩೦ | ೧,೦೦೦,೦೦೦ | ೮೬೦,೦೦೦ | | | |
| ಆಗಸ್ಟ್ ೬ | ೧,೦೦೦,೦೦೦ | ೪೧೮,೦೦೦ | | | |
| ಆಗಸ್ಟ್ ೧೩ | ೫,೦೦,೦೦೦ | ೩.೧೦,೦೦೦ | | | |
| ಆಗಸ್ಟ್ ೨೦ | ೫೦೦,೦೦೦ | ಇಲ್ಲ | | | |
| ಆಗಸ್ಟ್ ೨೭ | ೫೦೦,೦೦೦ | ಇಲ್ಲ | ೩೫೪,೦೦೦ | – | ೨೬೨,೨೧೭ |
| ಸೆಪ್ಟೆಂಬರ್೩ | ೫೦೦,೦೦೦ | ಇಲ್ಲ | | | |
| ಸೆಪ್ಟೆಂಬರ್೧೦ | ೫೦೦,೦೦೦ | ಇಲ್ಲ | ೫೦೨,೦೦೦ | – | ೧,೪೩೧,೦೧೨ |
| **ಒಟ್ಟು** | **೧೫,೩೨೦,೦೦೦** | **೮,೦೫೮,೦೦೦** | **೪,೩೯೪,೦೦೦** | **೨೪೯,೯೪೨** | **–** |

## ಪಟ್ಟಿ XLVI

## ಮರುವಿಮೋಚನೆ ೧೯೧೪–೨೬ರಲ್ಲಿ

| ದಿನಾಂಕ | ರಿವರ್ಸ್ ಕೌನ್ಸಿಲ್‌ಗಳು (೦೦೦ ಗಳಲ್ಲಿ) | ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಪಡೆದು ಕೊಂಡದ್ದು (ಲಕ್ಷ ರೂ.ಗಳಲ್ಲಿ) |
|---|---|---|
| ೧೯೧೪ | | |
| ಏಪ್ರಿಲ್ | ಇಲ್ಲ | ೨೭೦ |
| ಮೇ | ಇಲ್ಲ | ೬೧ |
| ಜೂನ್ | ಇಲ್ಲ | ೬೮ |
| ಜುಲೈ | ಇಲ್ಲ | ೬೬ |
| ಆಗಸ್ಟ್ | ೨,೭೭೮ | ೭೨ |
| ಸೆಪ್ಟೆಂಬರ್ | ೧,೫೧೫ | ೨೫ |
| ಅಕ್ಟೋಬರ್ | ೧,೮೯೫ | ೪೧ |
| ನವೆಂಬರ್ | ೧,೦೪೪ | ೩೨ |
| ಡಿಸೆಂಬರ್ | ೧,೨೫೦ | ೩೦ |
| ೧೯೧೫ | | |
| ಜನವರಿ | ೨೨೫ | ೨೯ |
| ಫೆಬ್ರವರಿ | ಇಲ್ಲ | ೧೮೧ |
| ಮಾರ್ಚ್ | ಇಲ್ಲ | ೨೮೭ |
| **ಒಟ್ಟು** | **೮೭೦೭** | **೧೧೬೨** |
| ಏಪ್ರಿಲ್ | ಇಲ್ಲ | ೧೫೩ |
| ಮೇ | ಇಲ್ಲ | ೧೦೩ |
| ಜೂನ್ | ೬೫೧ | ೧೭ |
| ಜುಲೈ | ೩,೩೭೭ | ೮ |
| ಆಗಸ್ಟ್ | ೮೧೫ | ೨೩ |
| ಸೆಪ್ಟೆಂಬರ್ | ೫೦ | ೨೧೭ |
| ಅಕ್ಟೋಬರ್ | ಇಲ್ಲ | ೨೨೫ |
| ನವೆಂಬರ್ | ಇಲ್ಲ | ೨೦೨ |
| ಡಿಸೆಂಬರ್ | ಇಲ್ಲ | ೩೨೮ |
| ೧೯೧೬ | | |
| ಜನವರಿ | ಇಲ್ಲ | ೫೨೬ |
| ಫೆಬ್ರವರಿ | ಇಲ್ಲ | ೬೦೨ |
| ಮಾರ್ಚ್ | ಇಲ್ಲ | ೬೩೩ |
| **ಒಟ್ಟು** | **೪,೮೯೩** | **೩,೦೩೭** |

## ಪಟ್ಟಿ - XLVII ೧೯೨೦ರಲ್ಲಿ ಮರುಪಾವತಿ ರಿವರ್ಸ್ ಕೌನ್ಸಿಲ್‌ಗಳ ಮಾರಾಟ (೦೦೦ ಪೌಂಡುಗಳಲ್ಲಿ)

| ಮಾರಾಟದ ದಿನಾಂಕ | ಪ್ರತಿ ಮಾರಾಟದಲ್ಲಿ ನೀಡಿಕೆ ಮಾಡಲಾದ ಮೊತ್ತ | ಪ್ರತಿ ಮಾರಾಟ ದಲ್ಲಿ ಬೇಡಿಕೆ ಮಾಡಲಾದ ಮೊತ್ತ | ಪ್ರತಿ ಮಾಡಲಾದ ಮೊತ್ತ | ಮಾರಾಟದ ಸಂಚಿತ ಮೊತ್ತ |
|---|---|---|---|---|
| ೧೯೨೦ | | | | |
| ಜನವರಿ ೨ | – | – | ೧೫೨,೦೦೦ | ೧೪ |
| ಜನವರಿ ೮ | – | – | ೨೫೪,೦೦೦ | |
| ಜನವರಿ ೧೫ | – | – | | ೯,೦೦೯ |
| ಜನವರಿ ೨೨ | – | – | ೫೩೨,೦೦೦ | ೩ |
| ಜನವರಿ ೨೯ | | | | |
| ಫೆಬ್ರವರಿ ೫ | ೫,೦೦,೦೦೦ | ೭೦,೦೦೦ | ೩೩೮,೦೦೦ | ೨,೫೦೦ |
| ಫೆಬ್ರವರಿ ೧೯ | ೫,೦೦,೦೦೦ | ೪೪೯,೦೦೦ | ೨೨೬,೦೦೦ | – |
| ಫೆಬ್ರವರಿ ೨೬ | ೫,೦೦,೦೦೦ | ೩೪೦,೦೦೦ | | |
| ಮಾರ್ಚ ೩ | ೫,೦೦,೦೦೦ | ೪೪೧,೦೦೦ | ೪೬೧,೦೦೦ | – |
| ಮಾರ್ಚ ೧೧ | ೫,೦೦,೦೦೦ | ೩೨೯,೦೦೦ | | |
| ಮಾರ್ಚ ೧೮ | ೫,೦೦,೦೦೦ | ೨೦೫,೦೦೦ | | |
| ಮಾರ್ಚ ೩೧ | ೫,೦೦,೦೦೦ | ೮೧,೦೦೦ | ೬೪೫,೦೦೦ | – |
| ಏಪ್ರಿಲ್ ೧ | ೫,೦೦,೦೦೦ | ೧೪೫,೦೦೦ | | |
| ಏಪ್ರಿಲ್ ೮ | ೮,೨೦,೦೦೦ | ೭೯೩,೦೦೦ | | |
| ಏಪ್ರಿಲ್ ೧೫ | ೫,೦೦,೦೦೦ | ೫,೦೦,೦೦೦ | | |
| ಏಪ್ರಿಲ್ ೨೨ | ೧,೦೦೦,೦೦೦ | ೭೫೫,೦೦೦ | ೩೩೪,೦೦೦ | – |
| ಏಪ್ರಿಲ್ ೨೯ | ೧,೦೦೦,೦೦೦ | ೭೦,೦೦೦ | | |
| ಮೇ ೬ | ೫,೦೦,೦೦೦ | ಇಲ್ಲ | | |
| ಮೇ ೧೩ | ೫,೦೦,೦೦೦ | ೫೦,೦೦೦ | | |
| ಮೇ ೨೦ | ೫,೦೦,೦೦೦ | ೪೭೦,೦೦೦ | ೧೬,೦೦೦ | – |
| ಮೇ ೨೬ | ೫,೦೦,೦೦೦ | ೩,೦೪,೦೦೦ | | |
| ಜೂನ್ ೩ | ೫,೦೦,೦೦೦ | ೫,೦೦,೦೦೦ | | |
| ಜೂನ್ ೧೦ | ೧,೦೦೦,೦೦೦ | ೯೬೮,೦೦೦ | | |
| ಜೂನ್ ೧೫ | ೧,೦೦೦,೦೦೦ | ೮೬೦,೦೦೦ | | |
| ಜೂನ್ ೨೪ | ೧,೦೦೦,೦೦೦ | ೪೧೮,೦೦೦ | | |
| ಜುಲೈ ೧ | ೫,೦೦,೦೦೦ | ೩೧೦,೦೦೦ | | |
| ಜುಲೈ ೧ | ೫,೦೦,೦೦೦ | ಇಲ್ಲ | | |
| ಜುಲೈ ೧೫ | ೫,೦೦,೦೦೦ | ಇಲ್ಲ | ೩೫೪,೦೦೦ | – |
| ಜುಲೈ ೧೫ | ೫,೦೦,೦೦೦ | ಇಲ್ಲ | | |
| ಜುಲೈ ೨೯ | ೫,೦೦,೦೦೦ | ಇಲ್ಲ | ೫೦೨,೦೦೦ | – |
| ಆಗಸ್ಟ ೫ | | | | |
| ಆಗಸ್ಟ ೧೨ | | | | |
| ಆಗಸ್ಟ ೧೯ | | | | |
| ಆಗಸ್ಟ ೨೬ | | | | |
| ಸೆಪ್ಟೆಂಬರ್ ೨ | | | | |
| ಸೆಪ್ಟೆಂಬರ್ ೭ | | | | |
| ಸೆಪ್ಟೆಂಬರ್ ೧೩ | | | | |
| ಸೆಪ್ಟೆಂಬರ್ ೨೧ | | | | |
| ಸೆಪ್ಟೆಂಬರ್ ೨೮ | | | | |

ಸರ್ಕಾರ ಗಣನೀಯ ಪ್ರಮಾಣದಲ್ಲಿ ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟ ಮಾಡಿದ್ದಷ್ಟೇ ಅಲ್ಲದೆ, ರೂಪಾಯಿಗೆ ಪ್ರತಿಯಾಗಿ ಚಿನ್ನವನ್ನು ಆಂತರಿಕ ಮಾರಾಟ ಮಾಡಿತು ಸಹ. ಈ ಹಿಂದೆ ಅಷ್ಟಾಗಿ ಸರ್ಕಾರ ಹೀಗೆ ಮಾಡಿರಲಿಲ್ಲ. ಚಿನ್ನದ ಮಾರಾಟದ ಪ್ರಮಾಣವನ್ನು ಕೆಳಗಿನ ಪಟ್ಟಿಯಲ್ಲಿ ಕೊಡಲಾಗಿದೆ.

**ಪಟ್ಟಿ – XLVIII : ಚಿನ್ನದ ಮಾರಾಟ**

**೧೯೨೦ರಲ್ಲಿ ಮರುವಿಮೋಚನೆ**

| ಮಾರಾಟದ ಸಂಖ್ಯೆ | ಮಾರಾಟದ ದಿನಾಂಕ | ಒಪ್ಪಿಕೊಳ್ಳಲಾದ ಟೆಂಡರ್‌ನ ಕನಿಷ್ಠ ಬೆಲೆ ರೂ.ಪೈ. | ಒಪ್ಪಿಕೊಳ್ಳಲಾದ ಟೆಂಡರ್‌ನ ಸರಾಸರಿ ಬೆಲೆ ರೂ.ಪೈ. | ಮಾರಾಟ ಮಾಡಲಾದ ಪ್ರಮಾಣ ತೊಲದಲ್ಲಿ | ಬೊಂಬಾಯಿ ಬಜಾರ್‌ನಲ್ಲಿ ದೇಶೀಯ ಚಿನ್ನದ ಬಾರ್‌ನ ಬೆಲೆ ರೂ.ಪೈ. |
|---|---|---|---|---|---|
| | ೧೯೧೯ | | | | |
| ೧ | ಸೆ.೨ | ೨೫ ೮ ೦ | ೨೬ ೧೨ ೧ | ೩,೨೯,೧೩೦ | ೨೮ ೧೦ ೦ |
| ೨ | ಸೆ.೧೭ | ೨೪ ೮ ೦ | ೨೪ ೧೦ ೦ | ೩,೯೬,೬೪೦ | ೨೬ ೧ ೦ |
| ೩ | ಅ.೬ | ೨೫ ೮ ೦ | ೨೫ ೯ ೮ | ೩,೨೬,೦೦೦ | ೨೭ ೦ ೦ |
| ೪ | ಅ.೨೦ | ೨೬ ೧೫ ೩ | ೨೭ ೦ ೨ | ೩,೩೪,೦೦೦ | ೨೮ ೦ ೦ |
| ೫ | ನ.೩ | ೨೭ ೧೪ ೬ | ೨೭ ೧೫ ೬ | ೩,೨೫,೦೦೦ | ೨೮ ೫ ೦ |
| ೬ | ನ.೧೭ | ೨೬ ೧೫ ೦ | ೨೭ ೦ ೧೧ | ೫,೧೮,೫೦೦ | ೨೮ ೨ ೦ |
| ೭ | ಡಿ.೮ | ೨೬ ೦ ೬ | ೨೬ ೪ ೬ | ೧೦,೦೦,೬೫೦ | ೨೭ ೧೦ ೦ |
| | ೧೯೨೦ | | | | |
| ೮ | ಜ.೫ | ೨೬ ೪ ೩ | ೨೬ ೭ ೯ | ೭,೬೩,೩೦೦ | ೨೭ ೩ ೦ |
| ೯ | ಜ.೧೯ | ೨೬ ೧೩ ೩ | ೨೬ ೧೪ ೭ | ೮,೦೦,೦೦೦ | ೨೭,೫ ೦ |
| ೧೦ | ಫೆ.೫ | ೨೫ ೨ ೩ | ೨೫ ೯ ೭ | ೭,೫೬,೪೫೦ | ೨೫ ೬ ೦ |
| ೧೧ | ಫೆ.೧೯ | ೧೬ ೨ ೩ | ೨೧ ೯ ೧ | ೯,೬೦,೫೯೦ | ೨೩ ೪ ೦ |
| ೧೨ | ಮಾ.೩ | ೧೮ ೮ ೦ | ೧೮ ೧೨ ೪ | ೧೨,೯೬,೧೨೫ | ೨೧ ೭ ೦ |
| ೧೩ | ಮಾ.೧೭ | ೨೧ ೬ ೦ | ೨೧ ೭ ೭ | ೧೨,೫೩,೩೨೫ | ೨೨ ೧೩ ೦ |
| ೧೪ | ಏ.೭ | ೨೨ ೭ ೩ | ೨೨ ೯ ೪ | ೧೨,೪೬,೨೦೦ | ೨೪ ೦ ೦ |
| ೧೫ | ಏ.೨೧ | ೨೨ ೭ ೪ | ೨೩ ೮ ೬ | ೧೦,೬೮,೧೭೫ | ೨೪ ೪ ೦ |
| ೧೬ | ಮೇ. ೫ | ೨೦ ೧೩ ೩ | ೨೧ ೩ ೨ | ೧೧,೯೬,೭೫೦ | ೨೧ ೮ ೦ |
| ೧೭ | ಮೇ.೧೯ | ೨೧ ೦ ೩ | ೨೧ ೧ ೭ | ೧೨,೪೬,೦೫೦ | ೨೧ ೧೨ ೦ |
| ೧೮ | ಜೂನ್. ೯ | ೨೧ ೮ ೯ | ೨೧ ೯ ೮ | ೧೧,೩೨,೩೫೦ | ೨೨ ೨ ೬ |
| ೧೯ | ಜೂನ್.೨೩ | ೨೦ ೧೪ ೧೦ | ೨೧ ೦ ೫ | ೧೨,೨೫,೨೫೦ | ೨೧ ೮ ೦ |
| ೨೦ | ಜುಲೈ.೭ | ೨೧ ೧ ೪ | ೨೨ ೨ ೨ | ೧೨,೮೧,೫೦೦ | ೨೧ ೬ ೦ |
| ೨೧ | ಜುಲೈ.೨೧ | ೨೨ ೦ ೧ | ೨೨ ೦ ೧೧ | ೧೨,೪೨,೦೦೦ | ೨೨ ೫ ೦ |
| ೨೨ | ಆಗಸ್ಟ್.೪ | ೨೨ ೫ ೬ | ೨೨ ೬ ೩ | ೧೨,೭೮,೯೫೦ | ೨೨ ೭ ೦ |
| ೨೩ | ಆಗಸ್ಟ್.೧೯ | ೨೩ ೯ ೪ | ೨೩ ೧೦ ೨ | ೫,೫೪,೫೦೦ | ೨೩ ೭ ೦ |
| ೨೪ | ಸೆ.೧ | ೨೨ ೮ ೩ | ೨೨ ೧೦ ೮ | ೮,೨೭,೭೦೦ | ೨೩ ೧ ೬ |
| ೨೫ | ಸೆ,೧೪ | ೨೩ ೯ ೪ | ೨೩ ೧೨ ೧೧ | ೨,೩೦,೫೦೦ | ೨೩ ೮ ೦ |
| | | | **ಒಟ್ಟು** | **೨,೧೫,೮೬,೬೩೫** | |

೧೯೨೦ರಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಯಾವುದೇ ಬಿಲ್‌ಗಳನ್ನು ಪಡೆದುಕೊಳ್ಳಲಿಲ್ಲ.

ಹಿಂದಿನ ಎರಡು ಅವಧಿಗಳಲ್ಲಿನ ಅನುಭವ, ಕುಗ್ಗಿರುವ ಹಣದ ಮೌಲ್ಯವನ್ನು ಮತ್ತೆ ಮರುಸ್ಥಾಪಿಸುವುದಕ್ಕೆ ಈ ಕ್ರಮವು ಶಕ್ತವಾಗಿದೆ ಎಂಬುದನ್ನು ತೋರಿಸಿಕೊಟ್ಟಿತ್ತು. ಆದರೆ ೧೯೨೦ ರಲ್ಲಿ ಈ ತಂತ್ರ ಕುಸಿದದ್ದು, ಇದರ ಸಾಮರ್ಥ್ಯವನ್ನು ಎಚ್ಚರಿಕೆಯಿಂದ ಮರುಪರಿಶೀಲಿಸುವಂತೆ ಮಾಡಿದೆ. ಈ ತಂತ್ರವನ್ನು ಅಳವಡಿಸದುದರಿಂದ ವಿನಿಮಯ ಪ್ರಮಿತಿ ಕುಸಿಯಿತು ಎಂದು ಹೇಳುವುದಕ್ಕಾಗುವುದಿಲ್ಲ. ವಾಸ್ತವವಾಗಿ ೧೯೦೭–೮ರ ಬಿಕ್ಕಟ್ಟಿನ ಪರಿಸ್ಥಿತಿಗೆ ಹೋಲಿಸಿದರೆ, ೧೯೨೦ರಲ್ಲಿ ರಿವರ್ಸ್ ಕೌನ್ಸಿಲ್‌ಗಳ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದ ಮನೋಭಾವದಲ್ಲಿ ಬಹಳ ಬದಲಾವಣೆಗಳಾಗಿದ್ದವು. ೧೯೦೭–೮ರ ಬಿಕ್ಕಟ್ಟುಂಟಾದಾಗ ಸರ್ಕಾರ ಬಹಳ ಜಿಪುಣತನವನ್ನು ತೋರಿತ್ತು. ಚಿನ್ನದ ರಿವರ್ಸನ್ನು ಭದ್ರವಾಗಿ ಕಾಪಾಡಿಕೊಂಡು, ಯಾವ ಉದ್ದೇಶಕ್ಕಾಗಿ ಚಿನ್ನದ ರಿಸರ್ವನ್ನು ಉಪಯೋಗಿಸಬೇಕಾಗಿತ್ತೋ ಅದಕ್ಕೂ ಬಳಸದೆ ಅದು ಕೃಪಣತನವನ್ನು ತೋರಿತ್ತು. ಒಬ್ಬ ಅಕೌಂಟೆಂಟ್ ಜನರಲ್ ಭಾರತ ಸರ್ಕಾರದ ಮುಂದೆ "ಮೊಣಕಾಲೂರಿ" ಚಿನ್ನವನ್ನು ಬಿಡುಗಡೆ ಮಾಡುವಂತೆ ಬೇಡಿಕೊಳ್ಳುವ ಪರಿಸ್ಥಿತಿಯನ್ನು ಸಹ ಕಾಣಬೇಕಾಗಿತ್ತು.[೧] ಪ್ರಾಯಶಃ ೧೯೦೭ರಲ್ಲಿ ಭಾರತ ಸರ್ಕಾರ ಬಿಕ್ಕಟ್ಟನ್ನು ಪರಿಹರಿಸಲು ಚಿನ್ನದ ರಿಸರ್ವ್ ಅನ್ನು ಉಪಯೋಗಿಸದಿದ್ದುದನ್ನು ಚೇಂಬರ್ಲಿನ್ ಸಮಿತಿ ಆಕ್ಷೇಪಿಸಿದ್ದುದರಿಂದ ೧೯೨೦ರಲ್ಲಿ ರಿವರ್ಸ್ ಕೌನ್ಸಿಲ್ ಬಿಲ್‌ಗಳ ಮಾರಾಟವನ್ನು ದಿಟ್ಟತನದಿಂದ ಕೈಗೊಳ್ಳಲಾಯಿತು. ವಾಸ್ತವವಾಗಿ, ಸಾರ್ವಜನಿಕರು ಈ ನೀತಿಯನ್ನು ಸರಿಯಾಗಿ ತಿಳಿದುಕೊಳ್ಳದೆ ಅಜ್ಞಾನದಿಂದ, ಸರ್ಕಾರ "ವ್ಯವಸ್ಥಿತವಾದ ಲೂಟಿ"ಯಲ್ಲಿ ತೊಡಗಿದೆ ಎಂದು ಟೀಕಿಸಿದರು. ಆದರೆ ಹಣಕಾಸು ಮಂತ್ರಿ ಇದರಿಂದ ಎದೆಗುಂದಲಿಲ್ಲ. ಅವರ ವಾದವೆಂದರೆ[೨] "ಇದು ನಮ್ಮ ವಿನಿಮಯ ನೀತಿಯ ಅತ್ಯಗತ್ಯ ಲಕ್ಷಣ....... ಇದರ ಪ್ರಕಾರ, ಕೌನ್ಸಿಲ್ ಬಿಲ್‌ಗಳ ಮೂಲಕ, ಸುಮಾರಾಗಿ ಚಿನ್ನದಲ್ಲಿ ಲಂಡನ್ನಿನಿಂದ ಭಾರತಕ್ಕೆ ಪಾವತಿಗಳನ್ನು ಕಳುಹಿಸಬೇಕು. ಜೊತೆಗೆ ವಿನಿಮಯ ದುರ್ಬಲವಾಗಿರುವಾಗ, ಚಿನ್ನದಲ್ಲಿ ರಿವರ್ಸ್ ಕೌನ್ಸಿಲ್‌ಗಳ ಮಾರಾಟದ ಮೂಲಕ ಭಾರತದಿಂದ ಲಂಡನ್ನಿಗೆ ಸಹ ಪಾವತಿಗಳನ್ನು ಕಳುಹಿಸಬೇಕಾಗುತ್ತದೆ. ಇದು ಚಿನ್ನದ ನಿರ್ಯಾತಕ್ಕೆ ಇರುವ ಪರ್ಯಾಯ ವ್ಯವಸ್ಥೆ. ಇದೇನೂ ಹೊಸದಲ್ಲ – ನಾವು ರಿವರ್ಸ್ ಕೌನ್ಸಿಲ್‌ಗಳನ್ನು ಬಹಳ ಹಿಂದಿನಿಂದಲೂ ಮಾರಾಟ ಮಾಡುತ್ತಾ ಬಂದಿದ್ದೇವೆ. ನಾವು ಹೀಗೆ ಮಾಡದಿದ್ದರೆ ವಿನಿಮಯ ನೀತಿಯು ಪರಿಣಾಮಕಾರಿಯಾಗಿ ಕೆಲಸ ಮಾಡುವುದು ಸಾಧ್ಯವಿಲ್ಲ. ಈ ಕಾರಣಕ್ಕಾಗಿ ಮತ್ತು ಇದೊಂದೇ ಕಾರಣಕ್ಕಾಗಿ ನಾವು ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟ ಮಾಡಿದ್ದೇವೆ...... ಇದು ಚಿನ್ನದ ಬಿಂದುವಿಗೆ ಅತ್ಯಂತ ಸಮೀಪದಲ್ಲಿ ವಿನಿಮಯ ದರವನ್ನು ಕಾಪಾಡಿಕೊಳ್ಳುವುದಕ್ಕೆ ನಡೆದಿರುವ ಪ್ರಯತ್ನ...... ಒಂದು ಪಕ್ಷ ನಮ್ಮ ಮೇಲಿನ ಒತ್ತಡದಿಂದಾಗಿ ನಾವು ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟ ಮಾಡದಿದ್ದರೆ ಅದರ ಪರಿಣಾಮವೇನು ? ಬೇರೆ ಒಂದು ವಿಧದಿಂದ ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟ ಮಾಡಬೇಕು ಎನ್ನುವ ಒತ್ತಾಯವನ್ನು ನಾನು ಅರ್ಥಮಾಡಿಕೊಳ್ಳಬಲ್ಲೆ. ಹಾಗೆಯೇ, ಈಗ ಇರುವ ದರಗಳಲ್ಲಲ್ಲ. ಆದರೆ ಬೇರೆ ದರಗಳಲ್ಲಿ ಮಾರಾಟ ಮಾಡಬೇಕೆಂಬ ವಾದವನ್ನೂ ಅರ್ಥಮಾಡಿಕೊಳ್ಳಬಲ್ಲೆ. ಆದರೆ, ರೂಪಾಯಿಯನ್ನು ವಿದೇಶೀ ಕರೆನ್ಸಿಗಳಿಗೆ ವಿನಿಮಯ ಮಾಡಿಕೊಳ್ಳುವುದನ್ನೇ ಹಿಂದಕ್ಕೆ ತೆಗೆದುಕೊಂಡು ಬಿಡಬೇಕು ಎನ್ನುವ ವಾದವನ್ನು ನಾನು ಅರ್ಥಮಾಡಿಕೊಳ್ಳಲಾರೆ. ಬೊಂಬಾಯಿಯಲ್ಲಿ, ವಿನಿಮಯ ಅದರ 'ಸಹಜ ದರ'ವನ್ನು ತಾನೇ ಕಂಡುಕೊಳ್ಳಬೇಕು ಎಂದು ಒತ್ತಾಯಿಸಲಾಗುತ್ತಿದೆ. ಈ ಅತ್ಯಂತ ಸಾಮಾನ್ಯ

೧. ಚೇಂಬರ್ಲಿನ್ ಕಮಿಷನ್ ಮುಂದೆ ಎಫ್.ಸಿ. ಹ್ಯಾರಿಸನ್ ಸಾಕ್ಷಿ. ಪ್ರ. ೧೦, ೨೦೯

೨. ನೋಡಿ : ನಿಲುವಳಿಯ ಮೇಲೆ ಭಾಷಣ ಮಾರ್ಚ್ ೧೦, ೧೯೨೦ "ರಿವರ್ಸ್‌ಕೌನ್ಸಿಲ್ಸ್" ಎಸ್.ಎಲ್.ಸಿ.ಪಿ. ಸಂ. LVIII

ಬಳಕೆಯ ಪದ ನನಗೆ ಸಮಂಜಸವಾಗಿ ಕಂಡುಬಂದಿಲ್ಲ. ಈ ಪದವನ್ನು ಇತ್ತೀಚೆಗೆ ಬಳಸುತ್ತಿರುವ ಅರ್ಥದಲ್ಲಿ ವಿನಿಮಯದಲ್ಲಿ **'ಸಹಜ ದರ'** ಎನ್ನುವುದು ಯಾವುದೂ ಇಲ್ಲ. ಏಕೆಂದರೆ ಆಂತರಿಕ ಕರೆನ್ಸಿಯನ್ನು, ವಿದೇಶೀ ಕರೆನ್ಸಿಗೆ ಪರಿವರ್ತಿಸಿದಾಗ, ಇವೆರಡು ಕರೆನ್ಸಿಗಳನ್ನೂ ಸಮಾನಗೊಳಿಸುವ ಒಂದು ಸಮಾನ ಮಾಧ್ಯಮ ಇರಲೇಬೇಕಾಗುತ್ತದೆ. ಇದು ಚಿನ್ನವಾಗಬಹುದು, ಬೆಳ್ಳಿಯಾಗಬಹುದು, ಸ್ಟರ್ಲಿಂಗ್ ಆಗಬಹುದು ಅಥವಾ ಸ್ಪಾನಿಷ್ ಪೆಸೆಟಾಸ್ ಆಗಬಹುದು. ರೂಪಾಯಿಯನ್ನು ಯಾವುದಾದರೂ ಒಂದಕ್ಕೆ ಸಂಪರ್ಕಿಸಲೇಬೇಕು. ಹೀಗೆ ಅದನ್ನು ಸಂಪರ್ಕಿಸಿದರೆ, ಅದು ಒಂದು ನಿರ್ದಿಷ್ಟ ದರದಲ್ಲಿಯೇ ಆಗಬೇಕು. ಈ ದರವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ, ನಾವು ಕೆಲವೊಮ್ಮೆ ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟಮಾಡಲು ಸಿದ್ಧರಿರಬೇಕಾಗುತ್ತದೆ. ರಿವರ್ಸ್ ಕೌನ್ಸಿಲ್‌ಗಳನ್ನು ಸಾರಾಸಗಟಾಗಿ ಹಿಂತೆಗೆದುಕೊಂಡುಬಿಟ್ಟರೆ, ನಾವು ಸುವರ್ಣ ಪ್ರಮಿತಿಯನ್ನಾಗಲೀ ಸುವರ್ಣ ವಿನಿಮಯ ಪ್ರಮಿತಿಯನ್ನಾಗಲೀ ಅಥವಾ ಯಾವುದೇ ಪ್ರಮಿತಿಯನ್ನಾಗಲೀ ಹೊಂದುವುದು ಸಾಧ್ಯವೇ ಇಲ್ಲ".

ವಿನಿಮಯ ದರವನ್ನು ಸರಿಪಡಿಸುವುದಕ್ಕೆ ರಿವರ್ಸ್ ಕೌನ್ಸಿಲ್‌ಗಳು ಸಮರ್ಥವಾಗಿವೆ ಎಂದಾದರೆ, ಅದರ ಪರಿಣಾಮ ಏಕೆ ಅಷ್ಟು ವಿಫಲವಾಗಿತ್ತು? ಇದಕ್ಕೆ ಹಣಕಾಸು ಮಂತ್ರಿ ಅತ್ಯಂತ ಯುಕ್ತವಾಗಿ ಮತ್ತು ಒರಟಾಗಿ ಕೆಳಗಿನಂತೆ ಉತ್ತರಿಸಿದ್ದ :

"ನಾವು ಚಿನ್ನದ ಮಾರುಕಟ್ಟೆ ಬೆಲೆ ಮತ್ತು ರೂಪಾಯಿಯ ಚಿನ್ನದ ಭಾಗದ ತಾತ್ವಿಕ ಬೆಲೆಗಳ ನಡುವಣ ಅಂತರವನ್ನು ಕಡಿಮೆ ಮಾಡುವುದರಲ್ಲಿ ಯಶಸ್ವಿಯಾಗದಿದ್ದರೆ....... ಅದಕ್ಕೆ ಕಾರಣ ನಾವು ಹೆಚ್ಚಿನ ಪ್ರಮಾಣದ ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟ ಮಾಡಿದ್ದೇವೆನ್ನುವುದರ ಬದಲಿಗೆ ಬಹಳ ಕಡಿಮೆ ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟ ಮಾಡಿದ್ದೇವೆ ಎನ್ನುವುದು. ಇಲ್ಲಿರುವ ಯಾವುದೇ ವಾಣಿಜ್ಯ ಗುಂಪಿಗೆ ಸೇರಿದ ಸದಸ್ಯನಿಗೆ ನಾನು ನಿರ್ಭಯವಾಗಿ ಹೇಳಲು ಇಚ್ಛಿಸುವ ವಿಷಯವೆಂದರೆ, ನಮ್ಮ ಸಂಪನ್ಮೂಲಗಳು ೨೦, ೩೦ ಅಥವಾ ೪೦ ದಶಲಕ್ಷ ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟಮಾಡಲು ಅವಕಾಶ ಮಾಡಿಕೊಟ್ಟಿದ್ದರೆ ಬಹುಶಃ ರೂಪಾಯಿಯ ಮಾರುಕಟ್ಟೆ ಬೆಲೆ ಮತ್ತು ರೂಪಾಯಿಯ ಚಿನ್ನದ ಭಾಗದ ತಾತ್ವಿಕ ಬೆಲೆಗಳ ನಡುವೆ ಯಾವ ಅಂತರವೂ ಉಳಿಯುತ್ತಿರಲಿಲ್ಲ. ನಮ್ಮ ಕಷ್ಟವೆಂದರೆ, ನಾವು ಹೆಚ್ಚು ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟ ಮಾಡಿಲ್ಲ, ಬದಲಿಗೆ ಬಹಳ ಕಡಿಮೆ ಮಾರಾಟ ಮಾಡಿದ್ದೇವೆ.[೧]

ಆದರೆ ಈ ವಾದದಲ್ಲಿ ಮಂತ್ರಿಗಳು ಹೇಳಿದಂತೆ ೨೦, ೩೦ ಅಥವಾ ೪೦ ದಶಲಕ್ಷ ರಿವರ್ಸ್ ಕೌನ್ಸಿಲ್ ಬಿಲ್‌ಗಳನ್ನು ಮಾರಾಟಮಾಡಿದ್ದಿದ್ದರೆ ಹುರುಳಿರುತ್ತಿತ್ತು. ಆದರೆ, ವಾಸ್ತವವಾಗಿ ೫೫೧/೨ ದಶಲಕ್ಷ ರಿವರ್ಸ್ ಕೌನ್ಸಿಲ್‌ಗಳನ್ನು ಮಾರಾಟ ಮಾಡಲಾಯಿತು. ಇದಲ್ಲದೆ, ಆಂತರಿಕವಾಗಿ ದೊಡ್ಡ ಪ್ರಮಾಣದಲ್ಲಿ ಚಿನ್ನವನ್ನು ನೀಡಲಾಯಿತು. ಕೌನ್ಸಿಲ್ ಬಿಲ್‌ಗಳನ್ನು ಸಂಪೂರ್ಣವಾಗಿ ನಿಲ್ಲಿಸಲಾಯಿತು. ಆದರೂ ರೂಪಾಯಿ ೨ ಷಿ ಗೆ ಏರುವುದಿರಲಿ, ೧ ಷಿ ೪ ಪೆ ಗಳಿಗಿಂತ ಹೆಚ್ಚಾಗಲಿಲ್ಲ. ವಿನಿಮಯವನ್ನು ಸ್ಥಿರೀಕರಿಸಲು ರಿವರ್ಸ್

---

೧. ೧೯೨೦ರ ಜೂನ್ ೨೦ ರ ಸುಗ್ರೀವಾಜ್ಞೆ IIIರ ಪ್ರಕಾರ, (೧೯೦೬ರ III) ಇಂಡಿಯನ್ ಕಾಯಿನೇಜ್ ಸೆಕ್ಷನ್ ೧ ರಲ್ಲಿ ಸೂಚಿಸಿರುವ ಚಿನ್ನದ ನಾಣ್ಯಗಳು ಪಾವತಿಗಳಿಗೆ ಲೆಕ್ಕಾಚಾರದಲ್ಲಿ ತನ್ನ ಕಾನೂನುಬದ್ಧತೆಯನ್ನು ಕಳೆದುಕೊಂಡವು. ಆದರೆ ಸರ್ಕಾರ ಇದನ್ನು ಮಾನ್ಯಮಾಡುವುದಕ್ಕೆ ಅವಕಾಶ ಮಾಡಿಕೊಡಲಾಯಿತು. ಚಿನ್ನದ ನಾಣ್ಯಕ್ಕೆ ೧೫ ರೂ. ನಂತೆ ೨೧ ದಿನದೊಳಗೆ ಸರ್ಕಾರ ಮಾನ್ಯ ಮಾಡುತ್ತಿತ್ತು. ಈ ಸುಗ್ರೀವಾಜ್ಞೆ ೧೯೨೦ರ ಸೆಪ್ಟೆಂಬರ್ ೬ರ ವರೆಗೆ ಮುಂದುವರೆಯಿತು. ಆಗ ೧೯೧೦ರ ಮಸೂದೆ XXXVI ರ ಮೂಲಕ ಸವರನ್ ಅನ್ನು ಮತ್ತೆ ಕಾನೂನುಬದ್ಧ ಹಣವನ್ನಾಗಿ ಮಾಡಲಾಯಿತು. ಈ ಅವಧಿಯಲ್ಲಿ ಭಾರತದಲ್ಲಿ ಚಿನ್ನಕ್ಕೆ ಕಾನೂನುಬದ್ಧ ಮಾನ್ಯತೆ ಇರಲಿಲ್ಲ.

ಕೌನ್ಸಿಲ್‌ಗಳ ಮಾರಾಟ ಸಮರ್ಥವಾಗಲಿಲ್ಲ. ಈ ವ್ಯವಸ್ಥೆಯ ಸಾಮರ್ಥ್ಯವನ್ನು ನಾವು ಈಗ ಪರಿಶೀಲಿಸುವುದು ಉಚಿತ.

ಒಂದು ಕರೆನ್ಸಿಯನ್ನು ವಿಮೋಚನೆಗೊಳಿಸುವುದು ಎಂದಾದಾಗ, ಅದು ಒಂದು ರೂಪದ ಕರೆನ್ಸಿಯನ್ನು ಮತ್ತೊಂದು ರೂಪದ ಕರೆನ್ಸಿಯಿಂದ ಬದಲಿಸುವ ಅಥವಾ ಒಂದು ಕರೆನ್ಸಿಯನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳುವ ಪರಿಣಾಮವನ್ನು ಉಂಟುಮಾಡುತ್ತದೆ. ಒಂದು ಕರೆನ್ಸಿ, ಮತ್ತೊಂದು ಕರೆನ್ಸಿಯನ್ನು ಪ್ರತಿನಿಧಿಸುವುದರ ಪರಿಣಾಮವನ್ನು ಅಲಕ್ಷಿಸಬಹುದು. ಏಕೆಂದರೆ ಹೀಗಾದಾಗ, ಕರೆನ್ಸಿಯ ಪ್ರಮಾಣ ಸಂಕುಚಿತಗೊಳ್ಳುವುದಿಲ್ಲ.[೧] ಆದರೆ ಕರೆನ್ಸಿಯ ಪ್ರಮಾಣವನ್ನು ಕಡಿಮೆ ಮಾಡುವುದು. ಅಂದರೆ ಅದರ ಹಿಂತೆಗೆತ ಅಥವಾ ರದ್ದು. ಆದ್ದರಿಂದ ಈ ತಂತ್ರದ ಮುಖ್ಯ ಪ್ರಶ್ನೆಯೆಂದರೆ, ಎಷ್ಟು ಕರೆನ್ಸಿಯನ್ನು ಮರುವಿಮೋಚಿಸಬಹುದು ಎಂಬುದಲ್ಲ. ಬದಲಿಗೆ ಎಷ್ಟು ಕರೆನ್ಸಿಯನ್ನು ಹಿಂತೆಗೆದುಕೊಳ್ಳಬಹುದು ಎನ್ನುವುದು. ಈ ಪ್ರಶ್ನೆಗೆ ಉತ್ತರ, ಭಾರತ ಸರ್ಕಾರದ ಬಳಿ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ಬಳಿ ಎಷ್ಟು ಚಿನ್ನದ ಸಂಪನ್ಮೂಲವಿದೆ ಎಂಬುದರಿಂದ ನಿರ್ಧಾರವಾಗುತ್ತದೆ. ಮೊದಲು ನಾವು ಈ ಚಿನ್ನದ ಸಂಪನ್ಮೂಲವನ್ನು ಹೇಗೆ ಸ್ಥಾನೀಕರಿಸಲಾಗುತ್ತದೆ ಮತ್ತು ವಿತರಿಸಲಾಗುತ್ತದೆ ಎಂಬುದನ್ನು ಸ್ಪಷ್ಟವಾಗಿ ಅರಿಯೋಣ. ಈ ಚಿನ್ನ ಸಂಪನ್ಮೂಲಗಳು ೧) ಕಾಗದದ ಕರೆನ್ಸಿ ರಿಸರ್ವ್‌ಗಳು ೨) ಸುವರ್ಣ ಪ್ರಮಿತಿ ರಿಸರ್ವ್‌ಗಳು ಮತ್ತು ೩) ಸೆಕ್ರೆಟರಿ ಆಫ್ ಸ್ಟೇಟ್ ಬಳಿಯಿರುವ ನಗದು ಶಿಲ್ಕುಗಳ ನಡುವೆ ಹಂಚಿಕೆಯಾಗುತ್ತದೆ. ವಿನಿಮಯದ ಬಿಕ್ಕಟ್ಟು ಉಂಟಾದಾಗ ಅದನ್ನು ಎದುರಿಸಲು ಸರ್ಕಾರದ ಬಳಿ ಇರುವ ಸುರಕ್ಷಿತವಾದ "ಮೂರು ರಕ್ಷಣೆ"ಗಳು ಇವು ಎಂದು ಸಾಮಾನ್ಯವಾಗಿ ಹೇಳಲಾಗುತ್ತದೆ. ಆದರೆ ನಿಜವಾಗಿಯೂ ಇವು ರಕ್ಷಣೆಯನ್ನು ನೀಡುತ್ತಿವೆಯೇ? ಇವು "ಮುಕ್ತ" ಸಂಪನ್ಮೂಲಗಳಾಗಿದ್ದರೆ, ಕರೆನ್ಸಿಯನ್ನು ಹಿಂತೆಗೆದುಕೊಳ್ಳುವುದಕ್ಕೆ ಇವು ಉತ್ತಮವಾದ ರಕ್ಷಣಾ ಮಾರ್ಗಗಳು ಎನ್ನುವುದು ನಿಜ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ ಈ ಸಂಪನ್ಮೂಲಗಳನ್ನು ಅಡೆತಡೆಗಳಿಲ್ಲದೆ ಬಳಸಿಕೊಳ್ಳಬಹುದಾದರೆ ವಿನಿಮಯ ಬಿಕ್ಕಟ್ಟನ್ನು ಎದುರಿಸಲು ಇವನ್ನು ರಕ್ಷಣಾ ಮಾರ್ಗಗಳನ್ನಾಗಿ ಬಳಸಬಹುದು.

ಎಷ್ಟರಮಟ್ಟಿಗೆ ಈ ರಿಸರ್ವ್‌ಗಳನ್ನು ಬಳಸಿಕೊಳ್ಳಬಹುದು ? ಪೇಪರ್ ಕರೆನ್ಸಿ ರಿಸರ್ವ್‌ನಿಂದ ಸೆಕ್ರೆಟರಿ ಆಫ್ ಸ್ಟೇಟ್ ಚಿನ್ನವನ್ನು ತೆಗೆದುಕೊಳ್ಳಬಹುದೆ? ಅವನು ತೆಗೆದುಕೊಳ್ಳಬಹುದು. ಆದರೆ, ಅದನ್ನು ಬೇರೆ ಯಾವುದರಿಂದಲಾದರೂ ಭರ್ತಿಮಾಡಬೇಕು ಅಥವಾ ನೋಟುಗಳನ್ನು ಅಷ್ಟರಮಟ್ಟಿಗೆ ರದ್ದುಮಾಡಬೇಕು. ಸೆಕ್ರೆಟರಿ ಆಫ್ ಸ್ಟೇಟ್ ತನ್ನ ನಗದು ಶಿಲ್ಕುಗಳಿಂದ ಚಿನ್ನವನ್ನು ತೆಗೆಯಬಹುದೇ? ತೆಗೆಯಬಹುದು. ಆದರೆ, ತನ್ನ ಟ್ರೆಜರಿಯನ್ನು ಭರ್ತಿಮಾಡಲು ಸಾಲ ತೆಗೆದುಕೊಳ್ಳಬೇಕು ಅಥವಾ ಯಾರಾದರೂ ಅವನ ಬಿಲ್‌ಗಳನ್ನು ಕೊಳ್ಳುವವರಿದ್ದರೆ ಭಾರತ ಸರ್ಕಾರದಿಂದ ಸಾಲ ತೆಗೆಯಬಹುದು. ಇದು ರೂಪಾಯಿ ಕರೆನ್ಸಿಗಳನ್ನು ನೀಡಿಕೆ ಮಾಡುವುದಕ್ಕೆ ಸಮನಾದುದು. ಪೇಪರ್ ಕರೆನ್ಸಿಯ ರಿಸರ್ವ್‌ನಲ್ಲಿರುವ ಮತ್ತು ನಗದು ಶಿಲ್ಕಿನಲ್ಲಿರುವ ಚಿನ್ನದಿಂದ ಪ್ರಯೋಜನವೇ ಇಲ್ಲ. ಏಕೆಂದರೆ ಇವು ರೂಪಾಯಿ ಕರೆನ್ಸಿಗಳ ಚಲಾವಣೆಯನ್ನು ಕಡಿಮೆ ಮಾಡುವುದಿಲ್ಲ. ಆದರೆ ರೂಪಾಯಿ ಮೌಲ್ಯವನ್ನು ಕಳೆದುಕೊಂಡಾಗ ಅದನ್ನು ಮರುಸ್ಥಾಪಿಸಲು ಕರೆನ್ಸಿಯ

೧. ಇದಕ್ಕೆ ಬಹಳ ಉತ್ತಮ ಉದಾಹರಣೆ ಎಂದರೆ, ಅಮೆರಿಕನ್ ಗ್ರೀನ್‌ಬ್ಯಾಕ್ಸ್, ೧೮೭೫ರ ಕಾನೂನಿನ ಮೂಲಕ ೧೮೭೯ರ ವೇಳೆಗೆ ಚಿನ್ನದೊಡನೆ ಸಮಾನತೆ ಉಂಟುಮಾಡಲು ಕರೆನ್ಸಿಗಳನ್ನು ಹಿಂತೆಗೆದುಕೊಳ್ಳಲಾಯಿತು. ಆದರೆ ೧೮೭೮ ರ ಮರುಕಾನೂನಿನ ಮೂಲಕ ೩೪೬,೦೦೦,೦೦೦ ಕರೆನ್ಸಿಗಳನ್ನು ಚಲಾವಣೆಯಲ್ಲಿ ಮುಂದುವರಿಸಲಾಯಿತು. ಅವುಗಳನ್ನು ವಿಮೋಚನೆಗೊಳಿಸಿದ ತಕ್ಷಣ ಅವುಗಳ ಮರುನೀಡಿಕೆಯಾಗಬೇಕು. ಅವುಗಳನ್ನು ಹಿಂತೆಗೆದುಕೊಳ್ಳುವಂತಿಲ್ಲ.

ಚಲಾವಣೆಯನ್ನು ಕಡಿಮೆ ಮಾಡುವುದು ಅತ್ಯಗತ್ಯ. ಆದ್ದರಿಂದ ಮರುವಿಮೋಚನೆಯ ಪರಿಣಾಮ, ಸೆಕ್ರೆಟರಿ ಆಫ್ ಸ್ಟೇಟ್‌ನ ಬಳಿ ಇರುವ ಚಿನ್ನದ ಸಂಪನ್ಮೂಲಕ್ಕೆ ಸಮ ಎಂದು ಮಾತನಾಡುವುದು ಅತ್ಯಂತ ಮೂರ್ಖತನದ ವಾದವಾಗುತ್ತದೆ. ಈ ವಿಷಯ ಬಹಳ ಮುಖ್ಯವಾದುದರಿಂದ, ಒಂದು ಉದಾಹರಣೆ ಇಲ್ಲಿ ಯುಕ್ತವೆನಿಸುತ್ತದೆ ಎನ್ನುವ ವ್ಯಕ್ತಿ ತನ್ನಲ್ಲಿರುವ ರೂಪಾಯಿಗೆ ಚಿನ್ನವನ್ನು ಪಡೆಯಲು ಇಚ್ಛಿಸುತ್ತಾನೆ ಎಂದು ಭಾವಿಸೋಣ. ಅವನು ಮೂರು ಕೌಂಟರ್‌ಗಳಿಂದ ಇದನ್ನು ಪಡೆಯಬಹುದು. ಅವುಗಳೆಂದರೆ ೧) ನಗದು ಶಿಲ್ಕುಗಳ ಉಸ್ತುವಾರಿಯನ್ನು ನೋಡಿಕೊಳ್ಳುವ ಕಂಟ್ರೋಲರ್‌ನಿಂದ ೨) ಪೇಪರ್ ಕರೆನ್ಸಿಯ ಉಸ್ತುವಾರಿಯನ್ನು ನೋಡಿಕೊಳ್ಳುವ ಕಂಟ್ರೋಲರ್ ಆಫ್ ಕರೆನ್ಸಿಯಿಂದ ಮತ್ತು ೩) ಸುವರ್ಣ ಪ್ರಮಿತಿಯ ರಿಸರ್ವ್‌ನ ಕಸ್ಟೋಡಿಯನ್‌ನಿಂದ. ಯಾರಾದರೂ ಮೊದಲನೆಯವನ ಬಳಿಯಿಂದ ಚಿನ್ನ ಪಡೆಯುವುದರ ಪರಿಣಾಮವೇನು? ಕಂಟ್ರೋಲರ್‌ನ ನಗದುಶಿಲ್ಕು ಎಷ್ಟು ಪ್ರಮಾಣದ ಚಿನ್ನವನ್ನು ಕೊಡುತ್ತಾನೆಯೋ ಅಷ್ಟು ಪ್ರಮಾಣದ ಚಿನ್ನವು ಕಡಿಮೆಯಾಗುತ್ತದೆ. ಒಂದು ಪಕ್ಷ ನಗದು ಶಿಲ್ಕು ಕನಿಷ್ಠ ಮಟ್ಟದಲ್ಲಿದೆ ಎಂದು ಭಾವಿಸಿದರೆ, ಕಂಟ್ರೋಲರ್ ತಕ್ಷಣವೇ ಬಿಲ್‌ಗಳನ್ನು ಡ್ರಾ ಮಾಡುವುದರ ಮೂಲಕ ತನ್ನ ಶಿಲ್ಕನ್ನು ಮರುಭರ್ತಿಮಾಡಿಕೊಳ್ಳಬೇಕು.

ಇದರಿಂದ ಕಂಟ್ರೋಲರ್ ಚಿನ್ನಕ್ಕೆ ಪ್ರತಿಯಾಗಿ ಪಡೆದಿದ್ದ ರೂಪಾಯಿ ಮತ್ತೆ ಚಲಾವಣೆಗೆ ಬಂದಂತಾಯಿತು. ಹೀಗಾಗಿ ಈ ಕ್ರಮದಿಂದ ಚಲಾವಣೆಯಲ್ಲಿರುವ ಕರೆನ್ಸಿಯ ಪ್ರಮಾಣವೇನೂ ಕಡಿಮೆಯಾಗುವುದಿಲ್ಲ. ಒಂದು ಪಕ್ಷ ಯಾರಾದರೂ ಕಂಟ್ರೋಲರ್ ಆಫ್ ಕರೆನ್ಸಿ ಬಳಿ ಹೋದರೆ ಏನಾಗುತ್ತದೆ? ಕಂಟ್ರೋಲರ್ ರೂಪಾಯಿಯ ಬದಲಿಗೆ ಅವರಿಗೆ ಚಿನ್ನವನ್ನು ಕೊಡುತ್ತಾರೆ. ಆದರೆ ಪೇಪರ್ ಕರೆನ್ಸಿಯ ಲೆಕ್ಕ ಕಾನೂನುರೀತ್ಯ ಬೇರೆಯದೇ ಆದ ಲೆಕ್ಕವಾಗಿರುವುದರಿಂದ, ಕಂಟ್ರೋಲರ್ ಅವರಿಂದ ಪಡೆದ ಹಣವನ್ನು ತನ್ನ ರಿಸರ್ವ್‌ನಿಂದ ಖಾಲಿ ಮಾಡಿರುವ ಚಿನ್ನದ ಲೆಕ್ಕದಲ್ಲಿ ಹಾಕಬೇಕು. ಆದ್ದರಿಂದ ಇಲ್ಲಿ ರಿಸರ್ವ್‌ನ ಸ್ವರೂಪದಲ್ಲಿ ಬದಲಾವಣೆಯಾಗುತ್ತಿದೆಯೇ ಹೊರತು, ಒಟ್ಟು ಕರೆನ್ಸಿಯ ಮೊತ್ತ ಹಾಗೆಯೇ ಉಳಿಯುತ್ತದೆ. ಆದ್ದರಿಂದ ಮೇಲಿನ ಎರಡು ಕ್ರಮಗಳಿಂದಲೂ ಕರೆನ್ಸಿ ವಿಶ್ರಾಂತ ಹೊಂದುವುದಿಲ್ಲ ಅಥವಾ ಅದರ ಮೊತ್ತ ಕಡಿಮೆಯಾಗುವುದಿಲ್ಲ ಎನ್ನುವುದನ್ನು ಗಮನಿಸಬೇಕು. ಆದ್ದರಿಂದ ಇವೆರಡೂ 'ರಕ್ಷಣಾತ್ಮಕ' ರಿಸರ್ವ್‌ಗಳು ಎಂದು ಮಾತನಾಡುವಾಗ ನಾವು ಅವು ಮುಕ್ತವಾದ ರಿಸರ್ವ್‌ಗಳಲ್ಲ ಬದಲಿಗೆ ಭರ್ತಿ ಮಾಡಬೇಕಾಗುವ ರಿಸರ್ವ್‌ಗಳು ಎನ್ನುವುದನ್ನು ಮರೆತುಬಿಡುತ್ತೇವೆ.

ಹೀಗಾಗಿ ಕರೆನ್ಸಿಯನ್ನು ವಿಶ್ರಾಂತಿಗೊಳಿಸಲು ಸರ್ಕಾರಕ್ಕೆ ಉಳಿದಿರುವ ರಿಸರ್ವ್ ಯಾವುದು? ಯಾವುದೇ ನಿರ್ದಿಷ್ಟ ಉಪಯೋಗದಿಂದ ಹೊಂದಿಸಬೇಕಾಗದಂತಿರುವುದು, ಇದು ಮುಕ್ತ ನಗದು. ಆದ್ದರಿಂದ ಕರೆನ್ಸಿಯ ಚಿನ್ನದ ಮೌಲ್ಯ ಕುಸಿದಾಗ ಅದನ್ನು ಈ ರಿಸರ್ವ್ ಅನ್ನು ಬಳಸಿ ಮರುಸ್ಥಾಪಿಸಬಹುದು. ಆದರೆ ಈ ಕ್ರಮ ಎಷ್ಟರಮಟ್ಟಿಗೆ ಚಲಾವಣೆಯಲ್ಲಿರುವ ಕರೆನ್ಸಿಯನ್ನು ಹಿಂತೆಗೆದುಕೊಳ್ಳಬಲ್ಲದು ಎನ್ನುವುದು ಪರಿಶೀಲಿಸಬೇಕಾದ ವಿಷಯ. ಹಿಂದೆ ಅನೇಕ ಸಂದರ್ಭಗಳಲ್ಲಿ ಈ ಕ್ರಮದಿಂದ ಕರೆನ್ಸಿಯ ಪ್ರಮಾಣವನ್ನು ಕಡಿಮೆಗೊಳಿಸಲಾಗಿದೆ. ಇಲ್ಲಿ ಎರಡು ಸಂದರ್ಭಗಳನ್ನು ಪ್ರಸ್ತಾಪಿಸಿದರೆ ಸಾಕು. ಟಂಕಸಾಲೆಯನ್ನು ಮುಚ್ಚಿದ ಮೊದಲ ಅವಧಿಯಲ್ಲಿ ಅಂದರೆ ೧೮೯೩–೯೮ ರಲ್ಲಿ, ಸರ್ಕಾರದ ಬಳಿ ಬಹಳವಾಗಿ ರೂಪಾಯಿ ಸಂಗ್ರಹವಾಗಿತ್ತಷ್ಟೆ. ರೂಪಾಯಿಯ ಮೌಲ್ಯವನ್ನು ಕಾಪಾಡಿಕೊಳ್ಳುವ ದೃಷ್ಟಿಯಿಂದ ಅದನ್ನು ಬಿಡುಗಡೆ ಮಾಡಬೇಕಾಗಿರಲಿಲ್ಲ. ಬದಲಿಗೆ ಭಾರತ ಸರ್ಕಾರ ರೈಲ್ವೆನಿರ್ಮಾಣ ಮತ್ತು ಇತರ ಸಾರ್ವಜನಿಕ ಕಾಮಗಾರಿಗಳನ್ನು ಕೈಗೆತ್ತಿಕೊಂಡು ರೂಪಾಯಿಗಳನ್ನು ಮರುಚಲಾವಣೆ ಮಾಡಿತು.ಬಹುಶಃ ಸರ್ಕಾರದ

ಭಾವನೆಯೆಂದರೆ, ತಾನು ಮಾಡುವ ಖರ್ಚಿನಿಂದ ಉಂಟಾಗುವ ಪರಿಣಾಮ ಸಾರ್ವಜನಿಕರು ಮಾಡುವ ಖರ್ಚಿನಿಂದ ಉಂಟಾಗುವ ಪರಿಣಾಮಕ್ಕಿಂತ ಭಿನ್ನವಾಗಿರುತ್ತದೆ ಎನ್ನುವುದಾಗಿತ್ತು. ಹಾಗೆಯೇ ೧೯೨೦ರಲ್ಲಿ ರಿಸರ್ವ್ ಕೌನ್ಸಿಲ್‌ಗಳನ್ನು ಬೇಜವಾಬ್ದಾರಿಯುತವಾಗಿ ಮಾರಾಟಮಾಡುವ ಕಾರ್ಯವೂ ನಡೆಯಿತು. ರಿವರ್ಸ್ ಕೌನ್ಸಿಲ್‌ಗಳ ಪಾವತಿಗಾಗಿ ಸೆಕ್ರೆಟರಿ ಆಫ್ ಸ್ಟೇಟ್ ಪೇಪರ್ ಕರೆನ್ಸಿಯ ರಿಸರ್ವ್‌ನಿಂದ ಚಿನ್ನವನ್ನು ತೆಗೆದುಕೊಂಡರು. ಎಷ್ಟು ಚಿನ್ನವನ್ನು ತೆಗೆದುಕೊಂಡರು. ಎಷ್ಟು ಚಿನ್ನವನ್ನು ತೆಗೆಯಲಾಯಿತೋ ಅದಕ್ಕೆ ಸಮಾನವಾದ ನೋಟುಗಳನ್ನು ಚಲಾವಣೆಯಿಂದ ರದ್ದು ಮಾಡುವುದರ ಬದಲು ಸರ್ಕಾರ ಮಸೂದೆ XXIರ ರಕ್ಷಣೆ ಪಡೆದು, ಸೆಕ್ಯೂರಿಟಿಗಳನ್ನು ಸೃಷ್ಟಿಸಿತು. ಹೀಗೆ ಅದು ಅಂತರವನ್ನು ತುಂಬಲು ಯತ್ನಿಸಿತು. ಇದು ಒಂದು ಅವ್ಯವಸ್ಥಿತ ಕ್ರಮವಾಗಿತ್ತು. ಹೀಗಾಗಿ ಚಿನ್ನದ ವಿಮೋಚನೆ ನಡೆದರೂ, ಕರೆನ್ಸಿಯನ್ನು ಹಿಂತೆಗೆದುಕೊಳ್ಳಲಾಗಲಿಲ್ಲ. ಇದರಿಂದ ಸ್ವಲ್ಪ ಚಿನ್ನ ಅಪವ್ಯಯವಾಯಿತು. ಏಕೆಂದರೆ ಇದು ಬೆಲೆಗಳ ಮೇಲಾಗಲೀ, ವಿನಿಮಯ ದರದ ಮೇಲಾಗಲೀ ಯಾವ ಪರಿಣಾಮವನ್ನೂ ಬೀರಲಿಲ್ಲ. ೧೯೨೦ರ ಮಾರ್ಚ್‌ನಲ್ಲಿ ಜಾರಿಗೆ ತರಲಾದ ಮಸೂದೆಯ ತಾತ್ಕಾಲಿಕ ಅವಧಿಯದಾಗಿತ್ತು. ಇದು ೧೯೨೦ರ ಅಕ್ಟೋಬರ್‌ಗೆ ಕೊನೆಗೊಳ್ಳುವ ವೇಳೆಗೆ ಕರೆನ್ಸಿಯನ್ನು ವಿಶ್ರಾಂತಗೊಳಿಸುವ ಶಕ್ತಿಯನ್ನು ಹೊಂದಿತ್ತು. ಹೀಗೆ ಮಾಡುವುದರ ಬದಲು ಸರ್ಕಾರ, ಪೇಪರ್ ಕರೆನ್ಸಿ ಕಾನೂನನ್ನು ಶಾಶ್ವತವಾಗಿ ಬದಲಾಯಿಸಿತು (೧೯೨೦ರ ಮಸೂದೆ XLV). ಇದರ ಪ್ರಕಾರ, ಕಾನೂನಿನ ಕೆಲವು ಭಾಗಗಳನ್ನು ಹೇಗೆ ಬದಲಾಯಿಸಲಾಯಿತೆಂದರೆ, "ಸೃಷ್ಟಿಸಿದ ಸೆಕ್ಯೂರಿಟಿಗಳನ್ನು" ವಿಶ್ರಾಂತಗೊಳಿಸುವುದರ ಮೂಲಕ ಕರೆನ್ಸಿಯ ಪ್ರಮಾಣದಲ್ಲಿ ಅತ್ಯಂತ ಕಡಿಮೆ ಭಾಗವನ್ನು ಸರ್ಕಾರ ರದ್ದುಮಾಡುವುದಕ್ಕೆ ಅವಕಾಶ ಮಾಡಿಕೊಡಲಾಯಿತು. ಆದರೆ ಸರ್ಕಾರವು ಬಜೆಟ್‌ನಲ್ಲಿ ಕೊರತೆ ಇದ್ದುದರಿಂದ ಇದಕ್ಕೆ ಸಹಿ ಹಾಕಲಿಲ್ಲ.

ಇಂಥ ಅನೇಕ ಅತಾರ್ಕಿಕ ಕ್ರಮಗಳನ್ನು ಸರ್ಕಾರ ಕೈಗೊಂಡಿತು. ಏನೇ ಆದರೂ, ಸುವರ್ಣ ಪ್ರಮಿತಿ ರಿಸರ್ವ್ ಅವಕಾಶ ಕೊಟ್ಟಿದುದಕ್ಕಿಂತ ಸರ್ಕಾರ ಯಾವುದೇ ಕ್ರಮದಿಂದ ಹೆಚ್ಚಿನ ಕರೆನ್ಸಿಯನ್ನು ಹಿಂತೆಗೆದುಕೊಳ್ಳುವುದು ಸಾಧ್ಯವಿರಲಿಲ್ಲ ಎಂಬುದು ಸತ್ಯಸಂಗತಿಯಾಗಿಯೇ ಉಳಿಯುತ್ತದೆ. ಒಂದು ಪಕ್ಷ ಈ ರಿಸರ್ವ್ ವಿಫಲವಾದರೆ ಸರ್ಕಾರಕ್ಕೆ ಎರಡೇ ಮಾರ್ಗಗಳು ಉಳಿಯುತ್ತವೆ. ಅವೆಂದರೆ ೧) ರೂಪಾಯಿ ನಾಣ್ಯಗಳನ್ನು ಕರಗಿಸಿ ಅದನ್ನು ಗಟ್ಟಿರೂಪದಲ್ಲಿ ಚಿನ್ನಕ್ಕೆ ಪ್ರತಿಯಾಗಿ ಮಾರಾಟ ಮಾಡುವುದು. ಮತ್ತು ಹೀಗೆ ಮಾಡುತ್ತಾ, ರೂಪಾಯಿಯ ಮೌಲ್ಯ ಮರುಸ್ಥಾಪನೆಗೊಳ್ಳುವವರೆಗೆ ಮುಂದುವರಿಯುವುದು. ೨) ಚಿನ್ನವನ್ನು ಸಾಲವಾಗಿ ಪಡೆಯುವುದು. ಇವೆರಡೂ ದುಬಾರಿ ಕ್ರಮಗಳು ಎನ್ನುವುದು ಸ್ಪಷ್ಟ. ಏಕೆಂದರೆ ರೂಪಾಯಿ ನಾಣ್ಯವನ್ನು ಕರಗಿಸಿ ಮಾರುವಾಗ, ಯಾವಾಗ ಲಾಭವಾಗುತ್ತದೆಂದರೆ, ಅದರ ಮಾರಾಟದಿಂದ ಬರುವ ಚಿನ್ನ, ನಾಣ್ಯವನ್ನು ಮಾಡುವಾಗ ಕೊಂಡ ಚಿನ್ನಕ್ಕಿಂತ ಹೆಚ್ಚು ಬಂದಾಗ ಮಾತ್ರ. ಇಲ್ಲದಿದ್ದರೆ ಈ ಕ್ರಮದಿಂದ ನಷ್ಟವೇ ತಗಲುತ್ತದೆ. ಎರಡನೆಯ ಕ್ರಮದಲ್ಲಿ, ಅಂದರೆ, ಚಿನ್ನವನ್ನು ಸಾಲವಾಗಿ ಪಡೆಯುವುದರಲ್ಲಿ ಇರುವ ನಷ್ಟ ಸ್ಪಷ್ಟ. ಕೇವಲ ಕರೆನ್ಸಿಯನ್ನು ಹಿಂತೆಗೆದುಕೊಳ್ಳುವದಕ್ಕೋಸ್ಕರ ಒಂದು ರಿಸರ್ವ್ ನಿಧಿಯನ್ನು ಸೃಷ್ಟಿಸಲು ಚಿನ್ನವನ್ನು ಸಾಲವಾಗಿ ಪಡೆಯುವುದಕ್ಕಾಗುವುದಿಲ್ಲ. ಈ ಕ್ರಮಗಳು ದುಬಾರಿಯಷ್ಟೇ ಅಲ್ಲ. ಇವುಗಳನ್ನು ಕೈಗೊಂಡಾಗ, ವಿನಿಮಯ ಪ್ರಮಿತಿಯ ಅಸ್ಥಿರತೆಗೆ ಎಡೆಮಾಡುತ್ತವೆ ಎಂಬುದಕ್ಕೆ ಆಧಾರವನ್ನೊದಗಿಸುತ್ತವೆ ಸಹ. ಹೀಗಾಗಿ ಸರ್ಕಾರ ವಿನಿಮಯದ ಬಿಕ್ಕಟ್ಟುಂಟಾದಾಗ ಈ ರಕ್ಷಣಾ ಕ್ರಮಗಳಿಗೆ ಯಾವಾಗಲೂ ಶರಣು ಹೋಗಿಯೇ ಇಲ್ಲ. ಸುವರ್ಣ ಪ್ರಮಿತಿಯ ರಿಸರ್ವ್ ಒಂದೇ ವಿನಿಮಯದ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಸಾಕಾಗುವುದಿಲ್ಲ ಎಂಬ ಅಂಶವನ್ನು ಸರ್ಕಾರವು ಮನಗಂಡಂತೆ

ಕಾಣುತ್ತದೆ. ಏಕೆಂದರೆ ೧೯೦೩-೮ ರಿಂದ ಸರ್ಕಾರದ ಶಿಲ್ಕುಗಳನ್ನು ಭಾರತ ಮತ್ತು ಲಂಡನ್‌ಗಳ ನಡುವೆ ಹಂಚಿರುವುದರಲ್ಲಿ ಸಂಪೂರ್ಣ ಬದಲಾವಣೆಯನ್ನು ನಾವು ಕಾಣುತ್ತೇವೆ. ಅಲ್ಲಿಯವರೆಗೆ ಸೆಕ್ರೆಟರಿ ಆಫ್ ಸ್ಟೇಟ್, ತನ್ನ ದೇಶದ ಟ್ರೆಜರಿಗೆ ಅಗತ್ಯವಾಗಿ ಬೇಕಾಗುವಷ್ಟು ಮಾತ್ರ ತೆಗೆದುಕೊಳ್ಳುತ್ತಿದ್ದ; ಆದರೆ, ಅದರ ನಂತರ, ಭಾರತ ಸರ್ಕಾರ ಕೊಡಬಹುದಾದಷ್ಟನ್ನು ತೆಗೆದುಕೊಳ್ಳುವ ಪರಿಪಾಠ ಆರಂಭವಾಯಿತು. ಹಣಕಾಸು ವಿಷಯದಲ್ಲಿ ಭಾರತ ಸರ್ಕಾರವೇ ಅತ್ಯುನ್ನತ ಅಧಿಕಾರವನ್ನು ಪಡೆದಿದ್ದುದರಿಂದ, ಅದು ಅತ್ಯಂತ ಹೆಚ್ಚಿನ ಕೌನ್ಸಿಲ್‌ಗಳನ್ನು ಪಡೆಯಲು ಹೆಚ್ಚಿನ ಹಣಕ್ಕೆ ಅವಕಾಶಮಾಡಿಕೊಟ್ಟಿತು. ಈ ಹಣವನ್ನು, ಏರಿಸಿದ ತೆರಿಗೆಗಳು ಮತ್ತು ಬಜೆಟ್‌ಗಳಲ್ಲಿನ ಹೆಚ್ಚುವರಿಯ ಮೂಲಕ ಒದಗಿಸಲಾಯಿತು. ಇದರ ಪರಿಣಾಮವಾಗಿ ಸೆಕ್ರೆಟರಿ ಆಫ್ ಸ್ಟೇಟ್ ಬಳಿ ಇದ್ದ ಶಿಲ್ಕು ಬಹಳ ಹೆಚ್ಚಾಯಿತು.[೧] ಟ್ರೆಜರಿಗೆ ಈ ರೀತಿ ಹಣವನ್ನು ಒದಗಿಸುವ ವಿನೂತನ ಕ್ರಮಕ್ಕೆ ಯಾವುದೇ ಸಮರ್ಪಕ ಅಧಿಕೃತ ವಿವರಣೆಯನ್ನು ಕೊಡಲಾಗಿಲ್ಲ.[೨] ಆದರೆ, ಈ ಶಿಲ್ಕುಗಳ ಸಂಗ್ರಹಣೆಯ ಉದ್ದೇಶ, ನಿಜವಾದ ಸುವರ್ಣ ಪ್ರಮಿತಿಯ ರಿಸರ್ವ್‌ಗೆ ಪೂರಕವಾದ ಇನ್ನೊಂದು ಚಿನ್ನದ ರಿಸರ್ವ್ ಅನ್ನು ಹೊಂದಿರುವುದಾಗಿತ್ತು ಎಂದು ನಾವು ಹೇಳಿದರೆ ಅದು ಸತ್ಯಕ್ಕೆ ದೂರವಾಗುವುದಿಲ್ಲ. ಈ ಸಾಹಸದ ರಿಸರ್ವ್‌ನ ಸೃಷ್ಟಿಯಿಂದ ಸರ್ಕಾರ ತಾತ್ಕಾಲಿಕವಾಗಿ ಯಾವುದೇ ಶಕ್ತಿಯನ್ನು ಸೃಷ್ಟಿಸಿಕೊಂಡಿರಲಿ, ಇದು ಕಾಯಂ ಆದ ಕ್ರಮವಾಗುವುದಿಲ್ಲ ಎನ್ನುವುದು ಖಚಿತ. ಸರ್ಕಾರದ ಹಣಕಾಸನ್ನು ನಿಯಂತ್ರಿಸುವ ಹೆಚ್ಚಿನ ಪ್ರಚಲಿತ ಕ್ರಮದಿಂದ, ಟ್ರೆಜರಿ ಕೆಲಸ ಮಾಡಲು ಎಷ್ಟು ಬೇಕೋ ಅಷ್ಟು ಮಾತ್ರ ನಗದು ಶಿಲ್ಕುಗಳನ್ನು ಹೊಂದಿರಬೇಕಾಗುತ್ತದೆ ಎಂದು ಹೇಳಲೇಬೇಕಾಗುತ್ತದೆ. ಜೊತೆಗೆ ಸರ್ಕಾರ ಅವಲಂಬಿತವಾಗಬಹುದಾದ ಒಂದೇ ಒಂದು ರಿಸರ್ವ್ ಎಂದರೆ, ಸುವರ್ಣ ಪ್ರಮಿತಿ ರಿಸರ್ವ್ ಎಂದೂ ಸಹ ಖಚಿತವಾಗಿ ಹೇಳಬೇಕಾಗುತ್ತದೆ.

ನೋಟುಗಳಿಗೆ ಪೇಪರ್‌ಕರೆನ್ಸಿ ಹೇಗೋ ಹಾಗೆ ರೂಪಾಯಿಗೆ ಸುವರ್ಣ ಪ್ರಮಿತಿಯ ರಿಸರ್ವ್, ಇವುಗಳೆರಡರ ಉದ್ದೇಶವೂ ತಾವು ಬೆಂಬಲಿಸುತ್ತಿರುವ ಕರೆನ್ಸಿಗಳ ಮೌಲ್ಯ ಕುಸಿಯದಂತೆ ನೋಡಿಕೊಳ್ಳುವುದು. ಆದರೆ, ರಿಸರ್ವ್‌ಗಳಿಗೆ ಸಂಬಂಧಿಸಿದಂತೆ ರೂಪಾಯಿಗೆ ಮತ್ತು ಪೇಪರ್ ಕರೆನ್ಸಿಗೆ, ಸರ್ಕಾರ ತೋರುವ ಧೋರಣೆ ತುಂಬಾ ವಿಪರ್ಯಾಸದ್ದು, ಪೇಪರ್ ಕರೆನ್ಸಿಗೆ ಸಂಬಂಧಿಸಿದಂತೆ, ಈ ಹಿಂದೆಯೇ ನೋಡಿರುವಂತೆ ಈ ರಿಸರ್ವ್ ಒಂದು ಕಾನೂನುಬದ್ಧ ರಿಸರ್ವ್. ಆದ್ದರಿಂದ ಭಾರತದ ಪೇಪರ್ ಕರೆನ್ಸಿಯ ಆಧಾರವೆಲ್ಲವೂ ಬದಲಾದರೂ, ರಿಸರ್ವ್‌ಗೆ ಸಂಬಂಧಿಸಿದ ನಿಯಮಾವಳಿಗಳು ಬಹಳ ಕಟ್ಟುನಿಟ್ಟಾದದ್ದಾಗಿದೆ. ಹೀಗಾಗಿ ಕಾನೂನನ್ನು ಮುರಿಯದೆ ಸರ್ಕಾರ, ಈ ದಿಕ್ಕಿನಲ್ಲಿ ಏನನ್ನೂ ಮಾಡಲಾರದು. ರೂಪಾಯಿಯಾದರೆ ಬೆಳ್ಳಿಯ ಮೇಲೆ ಮುದ್ರಿತವಾಗಿರುವ ನೋಟು[೩]. ಹೀಗಾಗಿ ಪೇಪರ್ ಕರೆನ್ಸಿಯನ್ನು ನಡೆಸುತ್ತಿರುವ ನಿಯಮಗಳು, ರಿಸರ್ವ್‌ಗೆ ಸಹ ಏಕರೂಪದ್ದಾಗಿರಬೇಕಾಗುತ್ತದೆ.

---

೧. ಅಂಕಿ-ಅಂಶಗಳಿಗಾಗಿ ನೋಡಿ ಅಧ್ಯಾಯ ೭

೨. ನೋಡಿ : ಮೆಮೊರಾಡಂ ಆನ್ ಇಂಡಿಯಾ ಆಫೀಸ್ ಬ್ಯಾಲೆನ್ಸ್ ೧೯೧೩ ರ ಸಿಡಿ ೭೬೨೯

೩. "ನಾವು ನಮ್ಮ ರೂಪಾಯಿಯನ್ನು ಖಂಡಿತವಾಗಿ ಸಾಂಕೇತಿಕ ಕರೆನ್ಸಿಯ ಸ್ಥಾನಕ್ಕೆ ತಂದು ನಿಲ್ಲಿಸಿದ್ದೇವೆ. ಈಗ ನಾವು. ವಿಶ್ವಸನೀಯ (ಪೇಪರ್‌ದಾಗಿರಲಿ ಅಥವಾ ಲೋಹದ್ದಾಗಿರಲಿ) ನೀಡಿಕೆ ಮಾಡಿರುವ ಬ್ಯಾಂಕರುಗಳ ಸ್ಥಿತಿಯಲ್ಲಿದ್ದೇವೆ. ಈ ವಿಶ್ವಸನೀಯ ಹಣದ ಮೌಲ್ಯವನ್ನು ಕಾಪಾಡಿಕೊಳ್ಳುವುದಕ್ಕೋಸ್ಕರ ನಾವು ಅತ್ಯಗತ್ಯ ವ್ಯಾಪಾರದ ಆವಶ್ಯಕತೆಗಳಿಗೆ ಕರೆನ್ಸಿಯನ್ನು ಕೊಟ್ಟಾಗ ಅದನ್ನು ಚಿನ್ನಕ್ಕೆ ಪರಿವರ್ತಿಸಿಕೊಡಲೇಬೇಕಾಗಿದೆ' ೧೯೦೩-೪ ರ ಫೈನಾನ್ಶಿಯಲ್ ಸ್ಟೇಟ್‌ಮೆಂಟ್ ಈ ಅಭಿಪ್ರಾಯ ಕೊಟ್ಟಿದೆ. ಪು. ೧೪

ಒಂದು ಆಶ್ಚರ್ಯವೆಂದರೆ, ಸುವರ್ಣ ಪ್ರಮಿತಿಗೆ ಸಂಬಂಧಿಸಿದಂತೆ ಯಾವುದೇ ನಿಯಮವಿಲ್ಲದಿರುವುದು.[೧] ಸರ್ಕಾರಕ್ಕೆ ರೂಪಾಯಿಯನ್ನು ಚಿನ್ನಕ್ಕೆ ಪರಿವರ್ತಿಸುವ ಜವಾಬ್ದಾರಿ ಇಲ್ಲ. ಅಷ್ಟೇ ಅದು ರಿಸರ್ವ್ ಅನ್ನು ಕಾಯ್ದಿಟ್ಟುಕೊಂಡಿರಬೇಕೆಂದೂ ಇಲ್ಲ. ಸರ್ಕಾರ ಅಂಥ ಒಂದು ರಿಸರ್ವ್ ಹೊಂದಿದೆ ಎಂದ ಮಾತ್ರಕ್ಕೆ, ರಿಸರ್ವ್ ಬರಿದಾದಾಗ ಅದನ್ನು ಭರ್ತಿಮಾಡಬೇಕೆಂದೇನಿಲ್ಲ.[೨] ಇವುಗಳನ್ನು ಬಿಟ್ಟರೂ, ಸುವರ್ಣ ಪ್ರಮಿತಿ ರಿಸರ್ವ್ ಸಾಕಾಗುವಷ್ಟು ಇದೆಯೇ? ಸರ್ಕಾರದ ಅಧಿಕೃತ ಪ್ರಕಟಿತ ಮಾಹಿತಿ, ಒಂದು ಅರ್ಥಹೀನ ಅಂಕಿಅಂಶ. ಏಕೆಂದರೆ, ಹೊಣೆಗಾರಿಕೆಯನ್ನು ಜೊತೆಜೊತೆಗೇ ಪ್ರಕಟಿಸದೆ, ಆಸ್ತಿಗಳನ್ನು ಮಾತ್ರ ಪ್ರಕಟಿಸುವುದರಿಂದ ಏನು ಪ್ರಯೋಜನ? ರಿಸರ್ವ್ ಎಷ್ಟು ಪರಿಣಾಮಕಾರಿ ಎಂದು ತಿಳಿಯುವುದಕ್ಕೆ, ರೂಪಾಯಿ ಒಟ್ಟು ಎಷ್ಟು ಚಲಾವಣೆಯಲ್ಲಿದೆ ಎನ್ನುವುದನ್ನು ತಿಳಿಯಬೇಕು. ಚಲಾವಣೆಯಲ್ಲಿರುವ ರೂಪಾಯಿ ಮತ್ತು ರಿಸರ್ವ್‌ನಲ್ಲಿರುವ ಹಣಗಳ ನಡುವಣ ಅನುಪಾತ, ವ್ಯವಸ್ಥೆಯಲ್ಲಿ ನಂಬಿಕೆಯನ್ನು ಹುಟ್ಟಿಸುವಷ್ಟು ಹೆಚ್ಚಾಗಿಲ್ಲದಿರುವುದು ಸ್ಪಷ್ಟವಾಗುತ್ತದೆ (ನೋಡಿ ಪಟ್ಟಿ XLIX).

ಇಷ್ಟು ಕಡಿಮೆಯಿರುವ ರಿಸರ್ವ್, ಹಣವನ್ನು ಹಿಂತೆಗೆದುಕೊಳ್ಳುವ ಕ್ರಿಯೆಯಲ್ಲಿ ಎಷ್ಟುದೂರ ಕ್ರಮಿಸಬಲ್ಲದು? ಇದು ಹೆಚ್ಚು ದೂರ ಕ್ರಮಿಸಲಾರದು ಎನ್ನುವುದನ್ನು ೧೯೨೦ರ ಬಿಕ್ಕಟ್ಟು ಸಾಕಷ್ಟು ಮನದಟ್ಟು ಮಾಡಿಕೊಡುತ್ತದೆ. ಆದರೆ ವಿನಿಮಯ ಪ್ರಮಿತಿಯ ಪ್ರತಿಪಾದಕರು, "ರಿಸರ್ವ್‌ನ ಪ್ರಮಾಣ ಕಡಿಮೆ ಇರುವುದು ಅಷ್ಟು ಮುಖ್ಯವಲ್ಲ ಏಕೆಂದರೆ, ಕೇವಲ ವಿದೇಶೀ ಸಂದಾಯಗಳಿಗಾಗಿ ರಿಸರ್ವ್ ಅನ್ನು ಇಡಲಾಗಿದೆ" ಎಂದು ವಾದಿಸುತ್ತಾರೆ. ಇದರಿಂದಾಗಿ ರಿಸರ್ವ್ ಅನ್ನು ಇಡಲಾಗದೆ ಎಂದು ವಾದಿಸುತ್ತಾರೆ. ಇದರಿಂದಾಗಿ ರಿಸರ್ವ್ ದೊಡ್ಡ ಪ್ರಮಾಣದ್ದಾಗಿರಬೇಕಾಗಿಲ್ಲ ಎನ್ನುವುದು ಅವರ ಅಭಿಪ್ರಾಯ. ಈ ವಾದವನ್ನು ಒಪ್ಪಿಕೊಂಡರೂ, ಯಾವುದೇ ಸಂದರ್ಭವನ್ನೆದುರಿಸಲು ರಿಸರ್ವ್‌ನ ಗಾತ್ರ ಎಷ್ಟಿರಬೇಕು ಎನ್ನುವುದು ಮುಖ್ಯವಾದ ಪ್ರಶ್ನೆ. ಇದಕ್ಕೆ ಸಂಬಂಧಿಸಿದ ನಿಯಮಾವಳಿಯನ್ನು ಕೊಡುವ ಒಂದೇ ಪ್ರಯತ್ನ ನಡೆದದ್ದು ಪ್ರೊಫೆಸರ್ ಕೇನ್ಸ್‌ರಿಂದ, ಈ ನಿಯಮಾವಳಿಯನ್ನು ಅವರು ಭಾರತದ ವ್ಯಾಪಾರ ಶಿಲ್ಕಿನ ವ್ಯತ್ಯಯದಲ್ಲಿ ಕಾಣುತ್ತಾರೆ.[೩] ಇದು ರಿಸರ್ವ್ ಅನ್ನು ಖಚಿತವಾಗಿ ನಿಯಂತ್ರಿಸಲು ನೆರವಾಗಬಲ್ಲದೇ? ಈ ಹಿಂದೆಯೇ

---

೧. ಇದರ ಬಗ್ಗೆ ಚೇಂಬರ್ಲಿನ್ ಸಮಿತಿ ಹೀಗೆ ಅಭಿಪ್ರಾಯಪಟ್ಟಿದೆ. "ಒಂದು ಬಿಕ್ಕಟ್ಟಿನ ಪರಿಸ್ಥಿತಿ ಇರುವಾಗ ಸರ್ಕಾರದ ಸ್ವಾತಂತ್ರ್ಯವನ್ನು ನಿರ್ಬಂಧಿಸುವುದರಿಂದ ಅನೇಕ ಅನನುಕೂಲತೆಗಳಿವೆ. ರಿಸರ್ವ್‌ಗಳ ಸ್ವರೂಪ ಮತ್ತು ಮೊತ್ತ ಎರಕ ಹೊಯ್ದಂತೆ ಒಂದೇ ರೀತಿ ಇರಬೇಕೆನ್ನುವುದು ಅಪೇಕ್ಷಣೀಯವಲ್ಲ. ಆದ್ದರಿಂದ ಸುವರ್ಣ ಪ್ರಮಿತಿಯನ್ನು ಕಾನೂನಿನಿಂದ ನಿಯಂತ್ರಿಸಬೇಕು ಎನ್ನುವುದನ್ನು ನಾವು ಒಪ್ಪುವುದಿಲ್ಲ" – ವರದಿ ಸೆಕ್ಷನ್ ೧೦೧

೨. ೧೯೨೦ರ ಮಾರ್ಚ್ ೧೭ ರಂದು ಇಂಡಿಯನ್ ಪೇಪರ್ ಕರೆನ್ಸಿ (ಟೆಂಪೊರರಿ ಅಮೆಂಡ್‌ಮೆಂಟ್) ಬಿಲ್ ಮೇಲೆ ಮಾತನಾಡುತ್ತಾ ಹಣಕಾಸು ಮಂತ್ರಿ ಹೀಗೆ ಅಭಿಪ್ರಾಯಪಟ್ಟಿದ್ದರು. "ವಾಸ್ತವಿಕ ದೃಷ್ಟಿಯಿಂದ ಕಾಗದದ ಕರೆನ್ಸಿ ರಿಸರ್ವ್ ಅನ್ನು ಮರುವರ್ಗಾವಣೆ ಮಾಡುವವರೆಗೆ ಸುವರ್ಣ ಪ್ರಮಿತಿ ರಿಸರ್ವ್ ಅನ್ನು ಹಾಗೆಯೇ ಬಿಟ್ಟಿರುವುದು ಅಪೇಕ್ಷಣೀಯ. ಒಂದು ಪಕ್ಷ ಸೆಕ್ರೆಟರಿ ಆಫ್ ಸ್ಟೇಟ್, ತನ್ನ ಅತಿಯಾದ ರಾಷ್ಟ್ರದ ಹೊಣೆಗಾರಿಕೆಗಳನ್ನು ಕೌನ್ಸಿಲ್‌ಗಳಿಂದ ಪೂರೈಸುವುದಕ್ಕೆ ಅಸಮರ್ಥರಾದರೆ, ಆಗ ಅವರು ಸುವರ್ಣ ಪ್ರಮಿತಿ ರಿಸರ್ವ್‌ಗೆ ಭರ್ತಿಮಾಡಬಹುದು. ಮೂರನೆಯ ಹಾಗೂ ನಿರ್ಣಾಯಕ ವಿಷಯವೊಂದಿದೆ. ಅದೆಂದರೆ ನೀವು ಪೇಪರ್ ಕರೆನ್ಸಿಯ ರಿಸರ್ವನ್ನು ಬಳಸುವುದಾದರೆ ಆ ರಿಸರ್ವ್‌ನ ಚೌಕಟ್ಟಿನೊಳಗೇ ಅದನ್ನು ಬಳಸಬೇಕು. ಆದರೆ ಸುವರ್ಣ ಪ್ರಮಿತಿಯ ರಿಸರ್ವನ್ನು ಬಳಸಿದಾಗ, ಅದು ಬರಿದಾಗುತ್ತಾ ಹೋಗುತ್ತದೆ. ಅದು ಕರಗುತ್ತಾ ಹೋಗುತ್ತದೆ. ನಮಗೆ ಅದನ್ನು ಮರುಭರ್ತಿ ಮಾಡಬೇಕಾದ ಜವಾಬ್ದಾರಿ ಇಲ್ಲ. ಆದರೆ ಪೇಪರ್ ಕರೆನ್ಸಿಯ ರಿಸರ್ವ್ ಖಾಲಿಯಾದಾಗ ಅದನ್ನು ಕಾನೂನುತಃ ಭರ್ತಿಮಾಡಲೇಬೇಕು.

೩. ಅದೇ ಪುಸ್ತಕ ಪು. ೧೬೬–೬೭

## ಪಟ್ಟಿ – XLIX ಸುವರ್ಣ ಪ್ರಮಿತಿ ರಿಸರ್ವಿನ ವಿತರಣೆ ಮತ್ತು ಚಲಾವಣೆಯಲ್ಲಿರುವ ರೂಪಾಯಿಗೆ ಅದರ ಅನುಪಾತ

(ಸಾವಿರ ಪೌಂಡ್ ಸ್ಟರ್ಲಿಂಗ್‌ಗಳಲ್ಲಿ)

| ಪ್ರತಿ ವರ್ಷದ ಮಾರ್ಚ್ ೩೧ ರಂದು | ಇಂಗ್ಲೆಂಡಿನಲ್ಲಿ: ಸ್ಟರ್ಲಿಂಗ್ ಸೆಕ್ಯೂರಿಟಿಗಳ ಕೊಳ್ಳುವ ಬೆಲೆ | ಇಂಗ್ಲೆಂಡಿನಲ್ಲಿ: ಕರೆ ಅವಧಿಯಲ್ಲಿರುವ ನಗದು | ಇಂಗ್ಲೆಂಡಿನಲ್ಲಿ: ಹೋಂ ಟ್ರೆಷರಿಗೆ ತಾತ್ಕಾಲಿಕ ಸಾಲ | ಇಂಗ್ಲೆಂಡಿನಲ್ಲಿ: ಬ್ಯಾಂಕ್ ಆಫ್ ಇಂಗ್ಲೆಂಡಿನಲ್ಲಿ ಚಿನ್ನದ ಠೇವಣಿ | ಇಂಗ್ಲೆಂಡಿನಲ್ಲಿ: ಒಟ್ಟು | ಭಾರತದಲ್ಲಿ: ಭಾರತದಲ್ಲಿ ಟಂಕಿಸಲಾದ ನಾಣ್ಯ ರೂಪಾಯಿ | ಭಾರತದಲ್ಲಿ: ಟ್ರೆಜರಿ ಶಿಲ್ಕಿನಲ್ಲಿ ಬಾಕಿ ಇರುವ ಹಣ | ಭಾರತದಲ್ಲಿ: ಟ್ರೆಜರಿ ಶಿಲ್ಕಿಗೆ ತಾತ್ಕಾಲಿಕ ಸಾಲ | ಭಾರತದಲ್ಲಿ: ಚಿನ್ನ | ಭಾರತದಲ್ಲಿ: ಒಟ್ಟು | ಒಟ್ಟು ರಿಸರ್ವ್ ಇಂಗ್ಲೆಂಡ್ ಮತ್ತು ಭಾರತದಲ್ಲಿ | ಚಲಾವಣೆಯಲ್ಲಿರುವ ರೂಪಾಯಿ (ಕೋಟಿಗಳಲ್ಲಿ) | ಚಲಾವಣೆಯಲ್ಲಿರುವ ರೂಪಾಯಿಗೆ ಹೋಲಿಸಿದಂತೆ ರಿಸರ್ವ್‌ನ ಅನುಪಾತ (=೧೫ರೂ) |
|---|---|---|---|---|---|---|---|---|---|---|---|---|---|
| ೧೯೦೧ | – | – | – | – | – | – | ೧೮೩೧ | – | ೧,೨೦೦ | ೩,೦೩೧ | ೩,೦೩೧ | ೧೪೩ | ೩.೧ |
| ೧೯೦೨ | ೨೪೫೪ | – | – | – | ೩೪೫೪ | – | – | – | – | – | ೩೪೫೪ | ೧೩೮ | ೩.೭ |
| ೧೯೦೩ | ೩,೮೧೦ | – | – | – | ೩,೮೧೦ | – | ೧ | – | – | ೧ | ೩೮೧೧ | ೧೩೬ | ೩.೪ |
| ೧೯೦೪ | ೬,೩೭೭ | – | – | – | ೬,೩೭೭ | – | ೧೬೭ | – | – | ೧೬೭ | ೬೫೪೪ | ೧೪೪ | ೬.೮ |
| ೧೯೦೫ | ೮,೩೭೭ | – | – | – | ೮,೩೭೭ | – | ೧೫೨ | – | – | ೧೫೨ | ೮,೫೨೯ | ೧೫೨ | ೮.೪ |
| ೧೯೦೬ | ೧೨,೧೬೫ | – | – | – | ೧೨,೧೬೫ | – | ೨೮೭ | | | ೨೮೭ | ೧೨,೪೫೨ | ೧೬೪ | ೧೦.೭ |
| ೧೯೦೭ | ೧೨,೫೧೯ | – | – | – | ೧೨,೫೧೯ | ೪,೦೦೦ | ೩೦೧ | – | ೨೨ | ೪,೩೨೩ | ೧೬,೮೪೨ | ೧೭೮ | ೧೦.೬ |
| ೧೯೦೮ | ೧೩,೧೮೭ | – | ೧,೧೩೧ | – | ೧೪,೩೧೮ | ೪,೦೦೦ | – | – | – | ೪,೦೦೦ | ೧೮,೩೧೮ | ೧೯೧ | ೧೧.೨ |
| ೧೯೦೯ | ೭,೪೧೪ | – | ೪೬೦ | – | ೭,೮೭೪ | ೧೦,೫೮೭ | – | – | – | ೧೦,೫೮೭ | ೧೮,೪೬೧ | ೧೮೭ | ೭.೧ |
| ೧೯೧೦ | ೧೩,೨೧೯ | ೩,೦೧೧ | – | – | ೧೬,೨೩೦ | ೨,೫೩೪ | – | – | – | ೨,೫೩೪ | ೧೮,೭೬೪ | ೧೮೬ | ೧೩.೮ |
| ೧೯೧೧ | ೧೫,೮೪೯ | ೧,೪೭೭ | – | – | ೧೭,೩೨೬ | ೧,೯೩೪ | – | – | – | ೧,೯೩೪ | ೧೯,೨೬೦ | ೧೮೪ | ೧೪.೮ |
| ೧೯೧೨ | ೧೬,೭೪೮ | ೧,೦೭೮ | – | – | ೧೭,೮೨೨ | ೧,೯೩೪ | – | – | – | ೧,೯೩೪ | ೧೯,೯೫೬ | ೧೮೨ | ೧೪.೯ |
| ೧೯೧೩ | ೧೫,೯೪೬ | ೧,೦೦೬ | – | ೧,೬೨೦ | ೧೮,೫೭೨ | ೪,೦೦೦ | ೩೫ | – | – | ೪,೦೩೫ | ೨೨,೬೦೭ | ೧೯೧ | ೧೪.೮ |
| ೧೯೧೪ | ೧೭,೧೬೫ | ೨೫ | – | ೪,೩೨೦ | ೨೧,೫೧೦ | ೪,೦೦೦ | ೨೨ | – | – | ೪,೦೨೨ | ೨೫,೫೩೨ | ೧೮೨ | ೧೭.೨ |
| ೧೯೧೫ | ೧೨,೧೪೯ | ೮ | – | ೧,೨೫೦ | ೧೩,೪೦೭ | – | ೭೦ | ೭,೦೦೦ | ೫,೨೩೮ | ೧೩,೩೦೮ | ೨೫,೭೧೫ | ೨೦೪ | ೧೮.೯ |
| ೧೯೧೬ | ೧೬,೨೧೯ | ೫,೭೯೨ | – | – | ೨೨,೦೧೧ | – | ೧ | ೪,೦೦೦ | ೨೨೯ | ೪,೨೪೦ | ೨೬,೨೪೧ | ೨೧೨ | ೧೫.೭ |
| ೧೯೧೭ | ೨೫,೪೦೬ | ೬,೦೦೧ | – | – | ೩೧,೪೦೭ | – | – | – | ೧೦೩ | ೧೦೩ | ೩೧,೫೧೦ | ೨೨೭ | ೨೦.೮ |
| ೧೯೧೮ | ೨೮,೪೫೩ | ೬,೦೦೦ | – | – | ೩೪,೪೫೩ | – | – | – | – | – | ೩೪,೪೫೩ | ೨೩೯ | ೨೩.೫ |
| ೧೯೧೯ | ೨೯,೭೨೯ | ೬,೦೧೬ | – | – | ೩೫,೭೪೫ | – | – | – | – | – | ೩೫,೭೪೫ | ೨೨೮ | ೨೩.೫ |

ವಿವರಿಸಿರುವಂತೆ, ಕರೆನ್ಸಿಯ ಮೌಲ್ಯದ ಕುಸಿತದಿಂದಾಗಿ ಪ್ರತಿಕೂಲ ವ್ಯಾಪಾರ ಶಿಲ್ಕು ಉಂಟಾಗುತ್ತದೆ. ಕೇನ್ಸ್‌ನ ವಿವರಣೆಯೆಂದರೆ, ಕರೆನ್ಸಿಯ ಮೌಲ್ಯ ಕುಸಿತ ಎಷ್ಟು ಆಳವಾಗಿದೆಯೋ ಅದಕ್ಕೆ ಹೊಂದಿಕೊಂಡು ರಿಸರ್ವ್ ವ್ಯತ್ಯಾಸಗೊಳ್ಳಬೇಕು. ಸರ್ಕಾರ ಈ ವ್ಯತ್ಯಾಸವನ್ನು ಹೇಗೆ ಮಾಡಬೇಕು. ಸರ್ಕಾರ ಈ ವ್ಯತ್ಯಾಸವನ್ನು ಹೇಗೆ ಮಾಡಬೇಕು? ಇದಕ್ಕಿರುವ ದಾರಿ ಬೆಲೆ ಮಟ್ಟದಲ್ಲಿನ ಬದಲಾವಣೆಗಳನ್ನು ನಿಯಂತ್ರಿಸುವುದು. ಆದರೆ ಕರೆನ್ಸಿ ನಿರ್ವಹಣೆಯ ವ್ಯವಹಾರದಲ್ಲಿ ಬೆಲೆಗಳಿಗೆ ಸರ್ಕಾರ ಗಮನವನ್ನೂ ಕೊಟ್ಟಿಲ್ಲ. ವಾಸ್ತವವಾಗಿ ಮೇಲೆ ಹೇಳಿದಂತೆ ವಿನಿಮಯ ದರ ಬೀಳುವುದರ ಹಿಂದೆ ಇರುವ ನೈಜ ಕಾರಣಗಳನ್ನು ಸರ್ಕಾರ ಅರಿತಿರಲೇ ಇಲ್ಲ. ಇದನ್ನು ಅರಿತಿದ್ದರೆ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳುವುದು ಸರ್ಕಾರಕ್ಕೆ ಸಾಧ್ಯವಾಗುತ್ತಿತ್ತು. ನೈಜ ಕಾರಣಗಳ ಅರಿವಿಲ್ಲದೆ, ಸರ್ಕಾರ ಸುಮ್ಮನೆ ಒಂದೇ ಸಮನೆ ಕರೆನ್ಸಿಗಳ ನೀಡಿಕೆಯನ್ನು ಮುಂದುವರೆಸುತ್ತಾ ಹೋಯಿತು. ಇದು ಪ್ರತಿಕೂಲ ವ್ಯಾಪಾರ ಶಿಲ್ಕು ಉಂಟಾಗುವವರೆಗೂ ಮುಂದುವರಿಯಿತು. ಸರ್ಕಾರದ ಬಳಿ ಇದ್ದುದೆಂದರೆ ಚಿನ್ನದ ರಿಸರ್ವ್. ಇದು ಇರುವವರೆಗೆ ಸರ್ಕಾರವು ಎಷ್ಟು ಕರೆನ್ಸಿಗಳನ್ನು ನೀಡಿಕೆ ಮಾಡಲಾಗಿದೆ ಎಂಬುದರ ಬಗ್ಗೆ ಆಲೋಚನೆಯನ್ನೇ ಮಾಡಲಿಲ್ಲ. ನೀಡಿಕೆಯ ಪ್ರಮಾಣ ಮತ್ತು ರಿಸರ್ವ್‌ಗಳ ಅನುಪಾತಗಳ ನಡುವೆ ಸಹ ಸಂಬಂಧ ಉಂಟಾಗದ್ದರಿಂದ, ವಿನಿಮಯ ಪ್ರಮಿತಿಯ ಸ್ಥಿರತೆ ಬಹಳ ಅಸ್ಪಷ್ಟತೆಯಲ್ಲಿ ಪರ್ಯಾವಸಾನವಾಗುವುದು ಅನಿವಾರ್ಯವಾಗಿತ್ತು. ಹೀಗಾಗಿ ಈ ವ್ಯವಸ್ಥೆಯ ಬಗ್ಗೆ ನಂಬಿಕೆ ಕಳೆದು ಹೋಗುವುದು ಸಹಜವಾಗಿತ್ತು. ವಿದೇಶೀ ಸಂದಾಯಗಳನ್ನು ವಿವೇಚಿಸುವ ಜವಾಬ್ದಾರಿ, ಬಹಳ ಕಡಿಮೆ ಪ್ರಮಾಣದ್ದಾದರೂ, ಇದು ತುಂಬಾ ಅನಿಶ್ಚಿತವಾಗುವ ಸಾಧ್ಯತೆ ಇತ್ತು. ಇದು ವಿನಿಮಯ ಪ್ರಮಿತಿಯ ಪ್ರಾಮುಖ್ಯತೆಗೆ ಧಕ್ಕೆಯುಂಟುಮಾಡುವ ಸಾಧ್ಯತೆ ಸಹ ಇತ್ತು.

ಒಂದು ಕರೆನ್ಸಿಯ ಮೌಲ್ಯವನ್ನು ಕಾಪಾಡಿಕೊಳ್ಳಲು ಚಿನ್ನದ ರಿಸರ್ವ್ ಅಷ್ಟು ಮುಖ್ಯವಾದುದೇ? ಸುವರ್ಣ ಪ್ರಮಿತಿಯನ್ನು ಬೆಂಬಲಿಸುವವರೆಲ್ಲರೂ ಈ ಸಿದ್ಧಾಂತದಲ್ಲಿ ನಂಬಿಕೆ ಇಟ್ಟುಕೊಂಡಿರುವವರಂತೆ ಕಾಣುತ್ತಾರೆ. ಆದರೆ ಈ ಸಿದ್ಧಾಂತವು ಕಟು ಟೀಕೆಗಳನ್ನು ಎದುರಿಸುವುದು ಕಷ್ಟ. ಚಿನ್ನದ ರಿಸರ್ವ್ ಕರೆನ್ಸಿಯ ಮೌಲ್ಯವನ್ನು ದಕ್ಷವಾಗಿ ಕಾಪಾಡಿಕೊಳ್ಳಬಲ್ಲದು ಎನ್ನುವುದನ್ನು ಪ್ರತಿಪಾದಿಸುವುದು ಕಷ್ಟ.[೧] ಹಾಗೆ ಮಾಡುತ್ತಿದೆ ಎಂದು ಕಲ್ಪಿಸಿಕೊಳ್ಳುವುದು ಸಹಜಸ್ಥಿತಿಯನ್ನು ತಿರುಗು–ಮುರುಗಾಗಿ ನೋಡಿದಂತೆ. ವಾಸ್ತವವಾಗಿ ಚಲಾವಣೆಯಲ್ಲಿರುವ ಹಣದ ಮೌಲ್ಯವನ್ನು ಕಾಪಾಡಿಕೊಳ್ಳುವುದು ಚಿನ್ನದ ರಿಸರ್ವ್ ಅಲ್ಲ. ಬದಲಿಗೆ ಚಲಾವಣೆಯಲ್ಲಿರುವ ಹಣದ ಪ್ರಮಾಣದ ಮಿತಿ ಮುಖ್ಯವಾದುದು. ಈ ಮಿತಿ ಚಿನ್ನದ ರಿಸರ್ವ್‌ನ ಮೌಲ್ಯವನ್ನು ಕಾಪಾಡಿಕೊಳ್ಳುವುದಷ್ಟೇ ಅಲ್ಲದೆ, ರಾಷ್ಟ್ರದಲ್ಲಿರುವ ಚಿನ್ನದ ರಿಸರ್ವ್‌ಗಳೆಲ್ಲದರ ಮೌಲ್ಯವನ್ನು ಕಾಪಾಡಿಕೊಳ್ಳುತ್ತದೆ. ಕರೆನ್ಸಿಯ ಪ್ರಮಾಣದ ಮೇಲಿನ ಮಿತಿಯನ್ನು ತೆಗೆದುಬಿಟ್ಟರೆ, ಅದು ತನ್ನ ಮೌಲ್ಯವನ್ನು ಕಳೆದುಕೊಳ್ಳುವುದಷ್ಟೇ ಅಲ್ಲದೆ, ಚಿನ್ನದ ರಿಸರ್ವ್‌ನ ಸಂಚಯ ನಡೆಯದಂತೆ ಸಹ ಮಾಡುತ್ತದೆ. ಆದ್ದರಿಂದ ಕರೆನ್ಸಿಯ ಮೌಲ್ಯವನ್ನು ಕಾಪಾಡಿಕೊಳ್ಳುವುದರಲ್ಲಿ ಚಿನ್ನದ ರಿಸರ್ವ್‌ನ ಪಾತ್ರ ಗೌಣ.

ವಾಸ್ತವವಾಗಿ ಕರೆನ್ಸಿಯ ಚಲಾವಣೆಯ ಮೇಲೆ ಮಿತಿಯನ್ನುಂಟುಮಾಡಬಹುದಾದರೆ, ಚಿನ್ನದ ರಿಸರ್ವ್ ಇಲ್ಲದೆಯೇ ಕರೆನ್ಸಿಯ ಮೌಲ್ಯವನ್ನು ಕಾಪಾಡಿಕೊಳ್ಳಬಹುದು. ಚೇಂಬರ್ಲಿನ್ ಸಮಿತಿ ಭಾರತ ಸರ್ಕಾರ ರೂಪಾಯಿಯ ಮೌಲ್ಯವನ್ನು ಕಾಪಾಡಿಕೊಳ್ಳಲು ಚಿನ್ನದ ರಿಸರ್ವ್ ಅನ್ನು ಹೊಂದಿರಬೇಕೆಂದು

---

೧. ಇದರ ಬಗ್ಗೆ ಅತ್ಯಂತ ಮೇಧಾವಿ ಲೇಖನಕ್ಕಾಗಿ ನೋಡಿ ಎಫ್.ಎ. ಫೆಟರ್, 'ದಿ ಗೋಲ್ಡ್ ರಿಸರ್ವ್ : ಇಟ್ಸ್ ಫಂಕ್ಷನ್ ಅಂಡ್ ಇಟ್ಸ್ ಮೇಂಟನೆನ್ಸ್' ಪೊಲಿಟಿಕಲ್ ಸೈನ್ಸ್ ಕ್ವಾರ್ಟರ್ಲಿ, ೧೮೯೬ ಸಂ VX ನಂ. ೨

ಶಿಫಾರಸು ಮಾಡಿದುದಕ್ಕೆ ಕಾರಣವೇ ಬೇರೆ. ಅದೆಂದರೆ ಈ ರಿಸರ್ವ್‌ಗಳ ಮೂಲಕ ಯುರೋಪಿನ ಬ್ಯಾಂಕುಗಳು ತಮ್ಮ ಕರೆನ್ಸಿಗಳ ಮೌಲ್ಯವನ್ನು ಕಾಪಾಡಿಕೊಳ್ಳಬಹುದು ಎನ್ನುವುದು. ಇದಕ್ಕಿಂತ ಅಸತ್ಯವಾದ ಮಾತು ಬೇರೆ ಇಲ್ಲ. ಯುರೋಪಿನ ಬ್ಯಾಂಕುಗಳು ಕಮಿಷನ್ನಿನ ಶಿಫಾರಸಿನ ವಿರುದ್ಧವಾದ ಕಾರ್ಯವನ್ನು ಮಾಡಿದವು. ತಮ್ಮಲ್ಲಿನ ಚಿನ್ನ ಸಂಪೂರ್ಣವಾಗಿ ಕರಗಿಹೋಗುವ ಪರಿಸ್ಥಿತಿ ಬಂದಾಗಲೆಲ್ಲಾ ತಮ್ಮ ಕರೆನ್ಸಿಗಳನ್ನು ಸಾಪೇಕ್ಷವಾಗಿ ಮತ್ತು ವಾಸ್ತವ ಪ್ರಮಾಣದಲ್ಲಿ ಕಡಿಮೆಮಾಡಿಕೊಳ್ಳುವುದರ ಮೂಲಕ ಅವು ತಮ್ಮ ಕರೆನ್ಸಿಗಳ ಹಾಗೂ ಚಿನ್ನದ ರಿಸರ್ವ್‌ಗಳ ಮೌಲ್ಯಗಳನ್ನು ಕಾಪಾಡಿಕೊಂಡವು.

ಕೇವಲ ಚಿನ್ನದ ರಿಸರ್ವ್ ಇದೆ ಎನ್ನುವುದು, ಸುವರ್ಣ ವಿನಿಮಯ ಪ್ರಮಿತಿಗೆ ಯಾವ ಶಕ್ತಿಯನ್ನೂ ಕೊಡಲಾರದು. ವಾಸ್ತವವಾಗಿ ನಾವು ಈ ರಿಸರ್ವ್ ಹೇಗೆ ಹುಟ್ಟಿಕೊಂಡಿತು ಎನ್ನುವುದನ್ನು ಪರೀಕ್ಷಿಸಿದರೆ, ಆಗ ನಮಗೆ ಈ ರಿಸರ್ವ್ ಸುವರ್ಣ ವಿನಿಮಯ ಪ್ರಮಿತಿಗೆ ಒಂದು ದುರ್ಬಲ ಅಂಶವೇ ಆಗಿದೆ ಎನ್ನುವುದು ಮನದಟ್ಟಾಗುತ್ತದೆ. ಸರ್ಕಾರ ತನ್ನ ಸುವರ್ಣ ಪ್ರಮಿತಿ ರಿಸರ್ವ್‌ಗಳನ್ನು ಹೇಗೆ ಪಡೆದುಕೊಳ್ಳುತ್ತದೆ? ಅದು ಬ್ಯಾಂಕುಗಳು ಹೆಚ್ಚಿಸಿಕೊಳ್ಳುವಂತೆಯೇ ತನ್ನ ರಿಸರ್ವ್‌ಗಳನ್ನು ಹೆಚ್ಚಿಸಿಕೊಳ್ಳುತ್ತದೆಯೇ? ಏಕೆಂದರೆ ಬ್ಯಾಂಕುಗಳು ತಮ್ಮ ನೀಡಿಕೆಗಳನ್ನು ಕಡಿಮೆ ಮಾಡಿ ರಿಸರ್ವನ್ನು ಹೆಚ್ಚಿಸಿಕೊಳ್ಳುತ್ತವೆ. ಆದರೆ ಸರ್ಕಾರ ಹೀಗಲ್ಲ, ಅದು ಇದರ ವಿರುದ್ಧ ಕ್ರಿಯೆಯ ಮೂಲಕ ರಿಸರ್ವ್ ಅನ್ನು ಹೆಚ್ಚಿಸಿಕೊಳ್ಳುತ್ತದೆ. ಭಾರತದ ಸುವರ್ಣ ವಿನಿಮಯ ರಿಸರ್ವ್ ಇದೆ ಮತ್ತು ಹೊಣೆಗಾರಿಕೆ ಭಾಗದಲ್ಲಿ ರೂಪಾಯಿ ಇದೆ. ಆದ್ದರಿಂದ ರೂಪಾಯಿ ಕರೆನ್ಸಿಯಲ್ಲಿ ಹೆಚ್ಚಳ ಉಂಟಾಗದೆ, ರಿಸರ್ವ್‌ನಲ್ಲಿ ಹೆಚ್ಚಳ ಉಂಟಾಗುವುದು ಸಾಧ್ಯವಿಲ್ಲ. ಇಂಥ ಅಪಾಯಕರ ಪರಿಸ್ಥಿತಿಗೆ ಕಾರಣ ರೂಪಾಯಿಯನ್ನು ನಾಣ್ಯೀಕರಿಸುವುದರಿಂದ ಉಂಟಾದ ಲಾಭದಿಂದ ಈ ರಿಸರ್ವ್ ಏರ್ಪಡುತ್ತದೆ. ರಿಸರ್ವನ ಮೂಲ ಹೀಗಿರುವುದರಿಂದ ರೂಪಾಯಿಗಳನ್ನು ಹೆಚ್ಚುಹೆಚ್ಚಾಗಿ ನಾಣ್ಯೀಕರಿಸದೆ, ರಿಸರ್ವ್ ಹೆಚ್ಚಾಗುವುದು ಸಾಧ್ಯವಿಲ್ಲ. ನಾಣ್ಯೀಕರಣದಿಂದ ಎಷ್ಟು ಲಾಭ ಬರಬಹುದು ಎನ್ನುವುದು, ರೂಪಾಯಿಯನ್ನು ತಯಾರಿಸಲು ತಗಲುವ ವೆಚ್ಚ ಮತ್ತು ಅದರ ವಿನಿಮಯ ಮೌಲ್ಯಗಳ ನಡುವಣ ವ್ಯತ್ಯಾಸವನ್ನು ಅವಲಂಬಿಸಿರುತ್ತದೆ. ರೂಪಾಯಿಯನ್ನು ಟಂಕಿಸುವ ವೆಚ್ಚ ಹೆಚ್ಚು ಕಡಿಮೆ ಸ್ಥಿರವಾಗಿರುತ್ತದೆ. ಆದ್ದರಿಂದ ಇದನ್ನು ಬಿಟ್ಟರೆ, ನಾಣ್ಯೀಕರಣದ ವೆಚ್ಚ ಬೆಳ್ಳಿಯ ಬೆಲೆಯನ್ನು ಅವಲಂಬಿಸುತ್ತದೆ. ಹೀಗಾಗಿ ರಿಸರ್ವ್‌ಗೆ ಜಮಾಮಾಡಬಹುದಾದ ಲಾಭವು ಬೆಳ್ಳಿಯನ್ನು ಟಂಕಿಸಲು ನೀಡಬೇಕಾದ ಶುಲ್ಕವನ್ನು ಅವಲಂಬಿಸಿರುತ್ತದೆ.

ಶ್ರೀ ಎಂ.ಎಲ್. ರೆಡ್ಡಿಗಾರು ಅವರಿಗೆ ಅವರ ಪ್ರಶ್ನೆಗೆ ಉತ್ತರವಾಗಿ ಈ ಕೆಳಗಿನ ಪಟ್ಟಿಯನ್ನು

**ಪಟ್ಟಿ***

**ಕೊಳ್ಳಲಾದ ಬೆಳ್ಳಿಯ ಸರಾಸರಿ ಬೆಲೆಯನ್ನು ತೋರಿಸುವ ಪಟ್ಟಿ**[೧]

| ದಿನಾಂಕ | ರಾಯಲ್ ಮಿಂಟ್‌ನ ಸರಾಸರಿ ವೆಚ್ಚ ಸ್ಟಾಂಡರ್ಡ್ ಔನ್ಸಿಗೆ ಪೆ | ಇಂಡಿಯಾ ಆಫೀಸ್‌ನ ಸರಾಸರಿ ವೆಚ್ಚ ಸ್ಟಾಂಡರ್ಡ್ ಔನ್ಸಿಗೆ ಪೆ | ಹಣಕಾಸು ವರ್ಷ |
|---|---|---|---|
| ೧೮೯೩ | ೩೬ ೫/೧೬ | ಕೊಳ್ಳಲಿಲ್ಲ | ೧೮೯೩–೧೮೯೪ |
| ೧೮೯೪ | ೨೯ ೧/೪ | ಕೊಳ್ಳಲಿಲ್ಲ | ೧೮೯೪–೧೮೯೫ |
| ೧೮೯೫ | ೩೦ ೩/೮ | ಕೊಳ್ಳಲಿಲ್ಲ | ೧೮೯೫–೧೮೯೬ |
| ೧೮೯೬ | ೩೦ ೫/೧೬ | ಕೊಳ್ಳಲಿಲ್ಲ | ೧೮೯೬–೧೮೯೭ |
| ೧೮೯೭ | ೨೭ ೭/೮ | ಕೊಳ್ಳಲಿಲ್ಲ | ೧೮೯೭–೧೮೯೮ |
| ೧೮೯೮ | ೨೭ ೧/೪ | ಕೊಳ್ಳಲಿಲ್ಲ | ೧೮೯೮–೧೮೯೯ |
| ೧೮೯೯ | ೨೭ ೧/೨ | ೨೮ | ೧೮೯೯–೧೯೦೦ |
| ೧೯೦೦ | ೨೮ ೧/೪ | ೨೯ | ೧೯೦೦–೧೯೦೧ |
| ೧೯೦೧ | ೨೭ ೧೫/೧೬ | ಕೊಳ್ಳಲಿಲ್ಲ | ೧೯೦೧–೧೯೦೨ |
| ೧೯೦೨ | ೨೪ ೫/೧೬ | ೨೨.೮೦ | ೧೯೦೨–೧೯೦೩ |
| ೧೯೦೩ | ೨೩ ೧೧/೧೬ | ೨೭.೧೯ | ೧೯೦೩–೧೯೦೪ |
| ೧೯೦೪ | ೨೬ ೧/೨ | ೨೭:೧೪ | ೧೯೦೪–೧೯೦೫ |
| ೧೯೦೫ | ೨೭ ೭/೧೬ | ೨೯.೭೪ | ೧೯೦೫–೧೯೦೬ |
| ೧೯೦೬ | ೩೧ ೧/೧೬ | ೩೧.೫೯ | ೧೯೦೬–೧೯೦೭ |
| ೧೯೦೭ | ೩೦ ೯/೧೬ | ೩೧.೨೭ | ೧೯೦೭–೧೯೦೮ |
| ೧೯೦೮ | ೨೪ ೭/೧೬ | ಕೊಳ್ಳಲಿಲ್ಲ | ೧೯೦೮–೧೯೦೯ |
| ೧೯೦೯ | ೨೩ ೧೧/೧೬ | ಕೊಳ್ಳಲಿಲ್ಲ | ೧೯೦೯–೧೯೧೦ |
| ೧೯೧೦ | ೨೪ ೭/೮ | ಕೊಳ್ಳಲಿಲ್ಲ | ೧೯೧೦–೧೯೧೧ |
| ೧೯೧೧ | ೨೪ ೧೩/೧೬ | ಕೊಳ್ಳಲಿಲ್ಲ | ೧೯೧೧–೧೯೧೨ |
| ೧೯೧೨ | ೨೭ ೧೫/೧೬ | ೨೮.೭೧ | ೧೯೧೨–೧೯೧೩ |
| ೧೯೧೩ | ೨೮ ೧/೧೬ | ೨೮.೭೧ | ೧೯೧೩–೧೯೧೪ |
| ೧೯೧೪ | ೨೪ ೫/೧೬ | ಕೊಳ್ಳಲಿಲ್ಲ | ೧೯೧೪–೧೯೧೫ |
| ೧೯೧೫ | ೨೪ ೧/೪ | ೩೩.೯೬ | ೧೯೧೫–೧೯೧೬ |
| ೧೯೧೬ | ೩೦ ೫/೮ | ೩೩.೯೬ | ೧೯೧೬–೧೯೧೭ |
| ೧೯೧೭ | ೩೯ ೧೫/೧೬ | ೪೨.೭೮ | ೧೯೧೭–೧೯೧೮ |
| ೧೯೧೮ | ೪೭ ೧೫/೧೬ | ೪೮.೨೦ | ೧೯೧೮–೧೯೧೯ |
| ೧೯೧೯ | ೪೯ ೫/೮ | ೫೨.೦೪ | ೧೯೧೯–೧೯೨೦ |
| ೧೯೨೦ | ೫೦ ೭/೮ | ಬೆಳ್ಳಿಯನ್ನು ವಿಶೇಷ ಬೆಲೆಯಲ್ಲಿ ಬಾಲ್ಡ್‌ವಿನ್ ಮೈನ್ಸ್ ಮತ್ತು ಪರ್ತ್‌ಮಿಂಟ್‌ನಿಂದ ಕೊಳ್ಳಲಾಯಿತು | ೧೯೨೦–೧೯೨೧ |

೧. ಲೆಜಿಸ್ಲೇಟಿವ್ ಅಸೆಂಬ್ಲಿ ಡಿಬೇಟ್ಸ್ ಸಂ ೧೧, ನಂ.೩ ಸೆಪ್ಟೆಂಬರ್ ೧೦,೧೯೨೧ ಪು. ೧೮೧

ನೀಡಲಾಗಿತ್ತು.

ರಿಸರ್ವ್ ತನ್ನ ಹುಟ್ಟಿನಿಂದ ಅಪಾಯಕಾರಿಯಷ್ಟೇ ಅಲ್ಲ. ಅದರ ಚರಿತ್ರೆಯನ್ನು ಅವಲೋಕಿಸಿದಾಗ, ಅದು ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಸಂಪೂರ್ಣವಾಗಿ ನಂಬಬಹುದಾದುದ್ದಲ್ಲ ಎನ್ನುವುದು ಸಹ ಸ್ಪಷ್ಟವಾಗುತ್ತದೆ. ಸರ್ಕಾರ ರಿಸರ್ವ್‌ನಿಂದ ಹೂಡಿಕೆಗಳನ್ನು ಮಾಡುತ್ತಿರುವುದರ ಉದ್ದೇಶ, ಸೆಕ್ಯೂರಿಟಿಗಳಿಂದ ಬರುವ ಬಡ್ಡಿಯನ್ನು, ರಿಸರ್ವ್‌ಗೆ ಸೇರಿಸಿ ಅದು ಹೆಚ್ಚಾಗುವಂತೆ ಮಾಡುವುದು. ಸರ್ಕಾರವನ್ನು ಟೀಕಿಸುತ್ತಿರುವವರು, ದೊಡ್ಡ ಪ್ರಮಾಣದ ರಿಸರ್ವ್ ಇರಬೇಕು ಮತ್ತು ಲೋಹದಿಂದ ಕೂಡಿರುವ ರಿಸರ್ವ್ ಇರಬೇಕು ಎಂದು ಅಪೇಕ್ಷಿಸುತ್ತಾರೆ. ಆದರೆ, ರಿಸರ್ವ್ ಹೇಗೆ ಹುಟ್ಟುತ್ತದೆ ಎನ್ನುವುದನ್ನು ಅರಿತಾಗ ಇವೆರಡು ಬೇಡಿಕೆಗಳೂ ಪರಸ್ಪರ ವಿರೋಧವಾದವು ಎನ್ನುವುದು ಸ್ಪಷ್ಟವಾಗುತ್ತದೆ. ರಿಸರ್ವ್ ದೊಡ್ಡ ಪ್ರಮಾಣದ್ದಾಗಬೇಕಾದರೆ, ಅದನ್ನು ಹೂಡಿಕೆ ಮಾಡಲೇಬೇಕು. ಇಲ್ಲದಿದ್ದರೆ ಅದು ಬೆಳೆಯುವುದಿಲ್ಲ. ಅದರ ಪ್ರಮಾಣ ಅತ್ಯಲ್ಪವಾಗಿಯೇ ಉಳಿಯುತ್ತದೆ.[೧] ಆದರೆ ಅಂಥ ರಿಸರ್ವ್‌ನಿಂದ ಅಪಾಯವಿಲ್ಲವೇ?

ಇಂಥ ರಿಸರ್ವ್‌ನಲ್ಲಿರುವ ಅಪಾಯವನ್ನು ಜೆವನ್ಸ್ ಕೆಳಗಿನಂತೆ ವ್ಯಕ್ತಪಡಿಸಿದ್ದ.[೨]

"..... ಒಳ್ಳೆಯ ಸರ್ಕಾರದ ನಿಧಿಗಳನ್ನು ಮತ್ತು ಬಿಲ್‌ಗಳನ್ನು ಯಾವಾಗಲೂ ಒಂದು ಬೆಲೆಗೆ ಮಾರಾಟ ಮಾಡಬಹುದು. ಇದರಿಂದ, ಈ ರೀತಿಯ ಬಲಿಷ್ಠ ರಿಸರ್ವ್ ಉಳ್ಳ ಬ್ಯಾಂಕ್ ತನ್ನ ಋಣಪರಿಹಾರದ ಸಾಮರ್ಥ್ಯವನ್ನು ಯಾವಾಗಲೂ ಕಾಪಾಡಿಕೊಳ್ಳಬಹುದು. ಆದರೆ ಈ ಔಷಧಿ ಕೆಲವೊಮ್ಮೆ ವಿಷವಾಗಬಹುದು. ಅಂಥ ಪರಿಸ್ಥಿತಿ ಎಂದರೆ, ರಿಸರ್ವ್‌ಗಳನ್ನು ಒತ್ತಾಯಪೂರ್ವಕವಾಗಿ ಮಾರಾಟ ಮಾಡಬೇಕಾದ ಸಂದರ್ಭ. ಇದು ಹಣದ ಮಾರುಕಟ್ಟೆಯಲ್ಲಿ ಅತ್ಯಂತ ಹೆಚ್ಚಿನ ಕೋಲಾಹಲವನ್ನುಂಟುಮಾಡಬಹುದು. ಈ ಪರಿಸ್ಥಿತಿ ಪಾವತಿಗಳನ್ನು ರದ್ದುಮಾಡಿದಾಗಿನ ಪರಿಸ್ಥಿತಿಗಿಂತ ಗಂಭೀರವಾಗಬಹುದು."

ಇದೇ ರೀತಿ, ವಿನಿಮಯದ ಬಿಕ್ಕಟ್ಟಿರುವಾಗ, ಸೆಕ್ಯೂರಿಟಿಗಳ ಬೆಲೆಗಳು ಮಾರುಕಟ್ಟೆಯಲ್ಲಿ ತೀವ್ರವಾಗಿ ಕುಸಿದು, ರಿಸರ್ವ್‌ನಲ್ಲಿ ಬಡ್ಡಿಯಿಂದಾಗಿ ಬಂದಿರುವ ಲಾಭಗಳೆಲ್ಲವೂ ಸಂಪೂರ್ಣವಾಗಿ ಅಳಿಸಿಹೋಗಬಹುದಾದ ಪರಿಸ್ಥಿತಿ ಬರಲಾರದು ಎಂದು ಹೇಳಬಹುದಾದರೂ ಹೇಗೆ? ಒಂದು ಪಕ್ಷ ಸೆಕ್ಯೂರಿಟಿಗಳ ಪೂರ್ಣ ಮೌಲ್ಯವನ್ನು ಪಡೆದುಕೊಳ್ಳಬಹುದು ಎಂದು ಭಾವಿಸಿದರೂ, ಪರಿವರ್ತನೆಮಾಡಬೇಕಾಗಿ ಬಂದಾಗ, ರಿಸರ್ವ್ "ಕಳೆದುಕೊಳ್ಳಬಹುದಾದ" ರೂಪಾಯಿಗಳ ಪ್ರಮಾಣ, ರೂಪಾಯಿಯನ್ನು ಯಾವ ಬೆಲೆಯಲ್ಲಿ ವಾಪಸ್ಸು ಕೊಳ್ಳಲಾಗುತ್ತದೆ ಎನ್ನುವುದನ್ನು ಅವಲಂಬಿಸುತ್ತದೆ. ರೂಪಾಯಿಯ ಮೌಲ್ಯದಲ್ಲಿನ ಇಳಿತಾಯ ಕಡಿಮೆಯಿದ್ದರೆ, ಅದು ದೊಡ್ಡ ಪ್ರಮಾಣದಲ್ಲಿ ಕರೆನ್ಸಿಯನ್ನು ಚಲಾವಣೆಯಿಂದ ಹಿಂತೆಗೆದುಕೊಳ್ಳಲು ಸಹಾಯ ಮಾಡಬಹುದು. ಇದರಿಂದ ರೂಪಾಯಿಯ ಹಿಂದಿನ ಹೆಚ್ಚಿನ ಮೌಲ್ಯ ಮರುಸ್ಥಾಪನೆಯಾಗಬಹುದು. ಹೀಗಲ್ಲದೆ, ರೂಪಾಯಿ ಮೌಲ್ಯದಲ್ಲಿನ ಇಳಿತಾಯ ತುಂಬಾ ಹೆಚ್ಚಾಗಿದ್ದರೆ, ೧೯೨೦ರಲ್ಲಿ ಆದಂತೆ, ಅದು ಕೇವಲ ಸ್ವಲ್ಪ ಪ್ರಮಾಣದ ಕರೆನ್ಸಿಯನ್ನು ಮಾತ್ರ ಚಲಾವಣೆಯಿಂದ ವಿಶ್ರಾಂತಗೊಳಿಸಲು ಶಕ್ತವಾಗಬಹುದು

---

೧. ೧೯೦೦-೧ ರಿಂದ ೧೯೨೦-೨೧ರ ವರೆಗೆ, ನಾಣ್ಯೀಕರಣದಿಂದ, ರಿಸರ್ವ್‌ಗೆ ಸೇರಿಸಿದ ಮೊತ್ತ ೨೮,೫೭೩,೬೦೬ ಪೌಂಡ್ ಮಾತ್ರ ಆಗಿತ್ತು. ಇದೇ ಅವಧಿಯಲ್ಲಿ ಬಡ್ಡಿ ಮತ್ತು ಪಟ್ಟಾವಣಿಗಳಿಂದ ಬಂದ ಮೊತ್ತ ೧೩,೩೦೬,೮೪೭ ಪೌಂಡ್ ಆಗಿತ್ತು. ಅಂದರೆ ನಾಣ್ಯೀಕರಣದ ಲಾಭಕ್ಕಿಂತ ಇದು ಸುಮಾರಾಗಿ ಅರ್ಧದಷ್ಟಿತ್ತು ಅಷ್ಟೆ. ನೋಡಿ : ಈಸ್ಟ್ ಇಂಡಿಯಾ ಅಕೌಂಟ್ಸ್ ಅಂಡ್ ಎಸ್ಟಿಮೇಟ್ಸ್ ೧೯೧೨ ೨೨. ೧೦೨೯ ಪು. ೨೦

೨. ಮನಿ, ಪು. ೨೨೭

ಅಷ್ಟೆ. ಇಂಥ ಸಂದರ್ಭದಲ್ಲಿ ದೊಡ್ಡ ಪ್ರಮಾಣದ ರಿಸರ್ವ್ ಸಹ ಅಲ್ಪವಾಗಿ ಗೋಚರವಾಗಬಹುದು. ಸಂಚಯಿಸಬಹುದಾದ ರಿಸರ್ವ್‌ನ ಪ್ರಮಾಣಕ್ಕಿಂತಲೂ ಮುಖ್ಯವಾಗಿ, ಸಂಪೂರ್ಣವಾಗಿ ಮರೆತುಬಿಡಲಾಗಿರುವ ವಿಷಯವೆಂದರೆ, ರಿಸರ್ವನ್ನು ವೃದ್ಧಿಸಲು ಕೈಗೊಳ್ಳಬೇಕಾದ ಕ್ರಮ, ಕರೆನ್ಸಿಯನ್ನು ವೃದ್ಧಿಸುವ ಕ್ರಮವೂ ಆಗಿದೆ ಎನ್ನುವುದು. ರೂಪಾಯಿಗಳನ್ನು ನಾಣ್ಯೀಕರಿಸದೆ ರಿಸರ್ವನ್ನು ವೃದ್ಧಿಸುವುದು ಸಾಧ್ಯವಿಲ್ಲವೆಂಬುದು ಚೇಂಬರ್ಲಿನ್ ಸಮಿತಿಗೆ ಚೆನ್ನಾಗಿ ಗೊತ್ತಿತ್ತು. ಆದ್ದರಿಂದಲೇ ಚಿನ್ನದ ಕರೆನ್ಸಿಗೆ ಆಸೆಪಟ್ಟವರಿಗೆ ಅದು ಒಂದು ಎಚ್ಚರಿಕೆಯನ್ನು ನೀಡಿತ್ತು. ಅದೆಂದರೆ, ಒಂದು ಪಕ್ಷ ಚಿನ್ನವು ಅನಿವಾರ್ಯವಾಗಿ ಟಂಕಿಸಬೇಕಾಗುವ "ಹೊಸ ರೂಪಾಯಿಯ ಸ್ಥಾನವನ್ನು ತೆಗೆದುಕೊಂಡರೆ ಅದು ಸುವರ್ಣ ಪ್ರಮಿತಿಯ ಬಲವನ್ನು ಕುಗ್ಗಿಸುತ್ತದೆ. ಈ ಬಲ ಕುಗ್ಗುವಿಕೆ ಎಷ್ಟಿರುತ್ತದೆಂದರೆ, ಹೊಸ ನಾಣ್ಯೀಕರಣದಿಂದ ಬರುವ ಲಾಭದ ಪ್ರಮಾಣಕ್ಕೆ ಇದು ಸಮನಾಗಿರುತ್ತದೆ".[೧] ಸಮಿತಿಯು "ಸುವರ್ಣ ಪ್ರಮಿತಿಯ ಸಹಜ ಬೆಳವಣಿಗೆಯನ್ನು ಕೊನೆಗಾಣಿಸುವ" ಒಂದು ನೀತಿಯನ್ನು ಶಿಫಾರಸು ಮಾಡುವುದರ ಬದಲು ಸರ್ಕಾರ ರೂಪಾಯಿಯನ್ನು ನಾಣ್ಯೀಕರಿಸಲು ಅನುಮತಿ ನೀಡಿತು. ಇಂಥ ರಿಸರ್ವ್‌ನಿಂದ ಅಪಾಯವಿಲ್ಲವೇ? ಅಂತ್ಯಗೊಳಿಸಬೇಕಾದ ದುಷ್ಪರಿಣಾಮವನ್ನು ತಾನೇ ಕೊನೆಗೆ ಉಂಟುಮಾಡುವ ರಿಸರ್ವ್‌ನಿಂದ ಏನು ಪ್ರಯೋಜನ? ವಾಸ್ತವವಾಗಿ, ಭಾರತದ ಸುವರ್ಣ ಪ್ರಮಿತಿಯ ರಿಸರ್ವನ್ನು ಹೆಚ್ಚಿಸಬೇಕೆಂದು ವಾದಿಸುವವರು ಆ ರಿಸರ್ವ್‌ನಲ್ಲಿದ್ದ ಅಪಾಯಗಳನ್ನು ಅರಿತಿರಬೇಕಾಗಿತ್ತು. ಸುವರ್ಣ ಪ್ರಮಿತಿಯ ರಿಸರ್ವ್ ಅಲ್ಪವಾಗಿದ್ದಷ್ಟೂ ಅಪಾಯ ಅಲ್ಪ ಎಂಬುದನ್ನು ಗಮನಿಸಬೇಕು. ಏಕೆಂದರೆ ರಿಸರ್ವ್ ಅಲ್ಪವಿದ್ದಷ್ಟೂ, ಹಣದುಬ್ಬರ ಇರುವುದಿಲ್ಲ, ರೂಪಾಯಿ ಕೊಳ್ಳುವ ಚೈತನ್ಯವನ್ನು ಕಳೆದುಕೊಳ್ಳುವುದಿಲ್ಲ ಮತ್ತು ಅದನ್ನು ವಿಶ್ರಾಂತಗೊಳಿಸುವ ಅಗತ್ಯವಿರುವುದಿಲ್ಲ.

ಸುವರ್ಣ ಪ್ರಮಿತಿ ಹೇಗೆ ಹುಟ್ಟುತ್ತದೆ ಎನ್ನುವುದನ್ನು ತಿಳಿದಿರುವಾಗ ಅದು ತುಂಬಾ ಹೆಚ್ಚಿನ ಪ್ರಮಾಣದ ರೂಪಾಯಿ ಕರೆನ್ಸಿಗಳ ನೀಡಿಕೆಗೆ ತಡೆಯೊಡ್ಡದೆ, ಅದನ್ನು ಇನ್ನೂ ತೀವ್ರಗೊಳಿಸುತ್ತದೆ ಎನ್ನುವುದನ್ನು ಅರಿಯುವುದು ಸುಲಭ. ಸುವರ್ಣ ಪ್ರಮಿತಿಯ ರಿಸರ್ವ್ ತಂತ್ರ ಕರೆನ್ಸಿಯನ್ನು ಮಿತಗೊಳಿಸಲು ಅಳವಡಿಸಲಾದದ್ದು. ಆದರೆ ಕರೆನ್ಸಿಯನ್ನು ಹೆಚ್ಚು ಮಾಡದೆ ಈ ತಂತ್ರ ಕೆಲಸ ಮಾಡುವುದು ಸಾಧ್ಯವೇ ಇಲ್ಲ. ಹೀಗಾಗಿ ಅದು ಇಡೀ ವ್ಯವಸ್ಥೆ ಒಂದು ಅದಕ್ಷ ಕರೆನ್ಸಿಯನ್ನುಳ್ಳ ವ್ಯವಸ್ಥೆಯನ್ನಾಗಿ ಮಾಡುತ್ತದೆ. ವಿನಿಮಯ ಪ್ರಮಿತಿಯ ಪರವಾಗಿ ದೊಡ್ಡ ದೊಡ್ಡ ಹೆಸರುಗಳನ್ನು ಹೇಳಲಾಗುತ್ತದೆ. ತನ್ನ ಯೋಜನೆಗೆ ತುಂಬಾ ಅಧಿಕೃತವಾದ ಪೂರ್ವಪುರಾವೆಗಳನ್ನು ಒದಗಿಸುವುದಕ್ಕೆ ತೀವ್ರವಾಗಿ ಪ್ರಯತ್ನಪಟ್ಟ ನಂತರ,[೨] ಲಿಂಡ್ಸೆಯು

---

೧. ವರದಿ, ಪ್ಯಾರಾ ೬೩

೨. ೧೮೭೮ರಲ್ಲಿ ಲಿಂಡ್ಸೆ ಮೊಟ್ಟಮೊದಲು ತಮ್ಮ ಯೋಜನೆಯನ್ನು 'ಕಲ್ಕತ್ತಾ ರಿವ್ಯೂ'ನಲ್ಲಿ ಪ್ರಕಟಿಸಿದಾಗ, ಇಂಥ ಮತ್ತೊಂದು ಯೋಜನೆ ಇದೆ ಎಂಬುದನ್ನು ಪ್ರಸ್ತಾಪಿಸಲಿಲ್ಲ. ೧೮೯೨ರಲ್ಲಿ ಅವರ 'ರಿಕಾರ್ಡೋಸ್ ಎಕ್ಸ್‌ಚೇಂಜ್ ರೆಮಿಡಿ'ಯಲ್ಲಿ ರಿಕಾರ್ಡೋ ತಮ್ಮ ಯೋಜನೆಗೆ ಅಧಿಕೃತ ಆಧಾರವೆಂದು ಸೂಚಿಸಿದರು. ಆದರೆ ೧೮೯೮ರಲ್ಲಿ ತನ್ನ ನಿಲುವನ್ನು ಆತ ಬದಲಾಯಿಸಿದ. ಅವನು (ಇಕನಾಮಿಕ್ ಜರ್ನಲ್) ರಕಾರ್ಡೋವಿನ ಗೋಲ್ಡ್‌ಬಾರ್ ಯೋಜನೆಯನ್ನು ಪ್ರೊಬಿನ್ ತನ್ನ ಯೋಜನೆಗೆ ಆಧಾರವಾಗಿ ತೆಗೆದುಕೊಂಡದ್ದಕ್ಕೆ ತೀವ್ರವಾಗಿ ಟೀಕಿಸಿದರು. ಆತ ರಿಕಾರ್ಡೋವನ್ನು ಕೈಬಿಟ್ಟದ್ದಕ್ಕೆ ಪ್ರಾಯಶಃ ಕಾರಣವೆಂದರೆ, ಕರೆನ್ಸಿಯ ಮೇಲೆ ರಿಕಾರ್ಡೋವಿನ ಸಾಮಾನ್ಯ ನಿಲುವು ಲಿಂಡ್ಸೆಯ ನಿಲುವಿಗೆ ಧಕ್ಕೆ ತರುವಂತಿದ್ದುದು. ರಿಕಾರ್ಡೋ ನಿಲುವು ಲೋಹಪ್ರಮಿತಿಗೆ ವಿರೋಧವಾಗಿತ್ತು. ಎನ್ನುವುದನ್ನು ಬಹಳ ಜನರು ಪ್ರತಿವಾದಿಸಿದ್ದಾರೆ. ಇದಕ್ಕೆ ಆಧಾರ ರಿಕಾರ್ಡೋವಿನ "ಪ್ರಪೋಸಲ್ಸ್ ಫಾರ್ ಅನ್ ಇಕನಾಮಿಕಲ್ ಅಂಡ್ ಸೆಕ್ಯೂರ್ ಕರೆನ್ಸಿ". ಇದನ್ನು ರಿಕಾರ್ಡೋ ಲೋಹ ಪ್ರಮಿತಿಯನ್ನು ವಿರೋಧಿಸುವುದಕ್ಕಾಗಿ ಬರೆದಿದ್ದ, ಆತನ ಪ್ರಪೋಸಲ್ಸ್‌ನಿಂದ ಕೆಳಗಿನದನ್ನು ಉದ್ಧರಿಸುವುದು ಉಪಯುಕ್ತ. "ಚಿನ್ನದ ಗಟ್ಟಿಯ ವಿಷಯದಲ್ಲಿ ಇತ್ತೀಚಿನ ಚರ್ಚೆಗಳಲ್ಲಿ,

ಫೌಲರ್ ಸಮಿತಿಯ ಮುಂದೆ ಇದು ಐರಿಷ್ ವಿನಿಮಯದ ಮೇಲಿನ ಪಾರ್ಲಿಮೆಂಟರಿ ಸಮಿತಿಯ ವರದಿಯನ್ನಾಧರಿಸಿದೆ ಎಂದು ಹೇಳಿದ.[೧] ಆದರೆ ಇದರ ಬಗ್ಗೆ ಅವರಲ್ಲಿ ಖಚಿತತೆಯಿತ್ತು. ಇತರ ಶಿಫಾರಸುಗಳೊಡನೆ, ಸಮಿತಿ ಮಾಡಿದ್ದ ಒಂದು ಶಿಫಾರಸೆಂದರೆ, ಇಂಗ್ಲೆಂಡ್ ಮತ್ತು ಐರ್ಲೆಂಡ್ ನಡುವೆ ವಿನಿಮಯವನ್ನು ಸ್ಥಿರಗೊಳಿಸುವುದಕ್ಕಾಗಿ ಬ್ಯಾಂಕ್ ಆಫ್ ಐರ್ಲೆಂಡ್ ಇಂಗ್ಲೆಂಡಿನಲ್ಲಿ ತನ್ನ ಖಾತೆಯನ್ನು ತೆರೆಯಬೇಕು ಮತ್ತು ಲಂಡನ್ನಿನ ಬ್ಯಾಂಕ್ ಮೇಲೆ ಡ್ರಾಫ್ಟ್‌ಗಳನ್ನು ನಿರ್ದಿಷ್ಟ ಬೆಲೆಗಳಲ್ಲಿ ಮಾರಾಟ ಮಾಡಬೇಕು. ಲಂಡನ್ನಿನಲ್ಲಿರುವ ಚಿನ್ನದ ರಿಸರ್ವ್ ಮೇಲೆ ವಿನಿಮಯ ಪ್ರಮಿತಿ ಅವಲಂಬಿತವಾಗಿರುವವರೆಗಿನ ಮಟ್ಟದವರೆಗೆ ಲಿಂಡ್ಸೆ, ವಿನಿಮಯದ ಮೇಲಿನ ಐರಿಷ್ ಸಮಿತಿಯನ್ನು ನಕಲು ಮಾಡಿದ್ದರು ಎಂದು ಹೇಳಬಹುದು. ಆದರೆ ಅವರು, ಸಮಿತಿಯ ಅತ್ಯಂತ ಮುಖ್ಯವಾದ ಇನ್ನೊಂದು ಶಿಫಾರಸಿಗೆ ಗಮನ ಕೊಡುವುದನ್ನು ಮರೆತಿದ್ದರು. ಅದೆಂದರೆ "ಅಧಿಕವಾಗಿರುವ ತನ್ನ ಕರೆನ್ಸಿಯ ನೀಡಿಕೆಯನ್ನು ಕಡಿಮೆ ಮಾಡುವುದರ ಮೂಲಕ ಅದು (ಬ್ಯಾಂಕ್ ಆಫ್ ಐರ್ಲೆಂಡ್) ತನ್ನ ಕರೆನ್ಸಿಯ ಮೌಲ್ಯ ಕುಸಿಯುವಿಕೆಯನ್ನು ಗುಣಪಡಿಸುವ ವಾಗ್ದಾನವನ್ನು ನೀಡದಿದ್ದರೆ ಈ ಕ್ರಮದಿಂದ ಪಡೆಯಬಹುದಾದ ಲಾಭಗಳು ಅತ್ಯಲ್ಪವಾಗಿರುತ್ತವೆ". ಕರೆನ್ಸಿ ನೀಡಿಕೆಯನ್ನು ಮಿತಿಗೊಳಿಸುವುದರ ಮೇಲಿನ ಒತ್ತಾಯದ ಪ್ರಾಮುಖ್ಯತೆ ಎಷ್ಟಿತ್ತೆಂದರೆ ಐರಿಷ್ ಕರೆನ್ಸಿಯನ್ನು ಸುಧಾರಿಸುವ ವಿಷಯದ ಮೇಲಿನ ತನ್ನ ಗೊತ್ತುವಳಿಯಲ್ಲಿ ಪಾರ್‌ನೆಲ್, ಸಮಿತಿಯ ಶಿಫಾರಸುಗಳನ್ನು ಅಳವಡಿಸಿಕೊಳ್ಳದಿದ್ದುದಕ್ಕಾಗಿ ಬಹಳ ಖೇದವನ್ನು ವ್ಯಕ್ತಪಡಿಸಿದ.[೨] ಥಾರ್ನ್‌ಟೆಸ್ ತನ್ನ ಉತ್ತರದಲ್ಲಿ ಸಮಿತಿಯು ಸೂಚಿಸಿರುವ ಅತಿ ಮುಖ್ಯ ನಿಬಂಧನೆಗಳನ್ನು ಅಲಕ್ಷಿಸಿರುವವರೆಗೂ ಐರಿಷ್ ವಿನಿಮಯವನ್ನು ಸ್ಥಿರೀಕರಿಸುವುದಕ್ಕೆ ಸಾಧ್ಯವಿಲ್ಲವೆಂದು ಪ್ರತಿಪಾದಿಸಿದ. ವಿನಿಮಯವನ್ನು ಸ್ಥಿರಗೊಳಿಸಿರುವ ಇತ್ತೀಚಿನ ಅನುಭವ ಈ ನಿಬಂಧನೆಯ ಪ್ರಾಮುಖ್ಯತೆಯನ್ನು ಎತ್ತಿತೋರಿಸುತ್ತದೆ. ಕರೆನ್ಸಿಯ ಬಾಹ್ಯ ಮೌಲ್ಯವನ್ನು ಆಂತರಿಕ ಮೌಲ್ಯದೊಡನೆಯೇ ಕುಸಿಯುವಂತೆ ಮಾಡುವ ಒಂದು ಪರಿಸ್ಥಿತಿಯನ್ನು ತಡೆಗಟ್ಟಲು ಇರುವ ಒಂದು ಮುಖ್ಯ ವಿಧಾನವೆಂದರೆ ವಿನಿಮಯವನ್ನು ಸ್ಥಿರಗೊಳಿಸುವುದು ಈ ಮೌಲ್ಯ ಕುಸಿತಗಳನ್ನು ಈ ವಿಧಾನ ಹೇಗೆ ಬೇರ್ಪಡಿಸುತ್ತದೆ ಎನ್ನುವುದನ್ನು ಗಮನಿಸುವುದು ಮುಖ್ಯ.[೩] ವಿನಿಮಯ ದರವನ್ನು ಸ್ಥಿರಗೊಳಿಸುವುದರ ಮೊದಲನೆಯ ಪರಿಣಾಮವೆಂದರೆ ಅದು ದೇಶೀಯ ಕರೆನ್ಸಿಗೆ, ವಿದೇಶೀ ಕರೆನ್ಸಿಗಳನ್ನು ಒಂದು ನಿರ್ದಿಷ್ಟ ದರದಲ್ಲಿ ಕೊಂಡು ಅದರ ಮೂಲಕ ವಿದೇಶೀ ಸರಕುಗಳನ್ನು ಕೊಳ್ಳಲು ಅವಕಾಶ ಮಾಡಿಕೊಡುತ್ತದೆ.

---

ಒಂದು ಕರೆನ್ಸಿ, ಪರಿಪೂರ್ಣವಾಗಿರಬೇಕಾದರೆ, ಅದು ಸ್ಥಿರ ಮೌಲ್ಯವನ್ನು ಹೊಂದಿರಬೇಕು ಎನ್ನುವುದು ನ್ಯಾಯವಾದದ್ದು. ನಮ್ಮ ಕರೆನ್ಸಿ ಸಹ ಹೀಗೆ ಇದೆ ಎಂದು ಬ್ಯಾಂಕ್ ರಿಸ್ಟ್ರಿಕ್ಷನ್ ಬಿಲ್ ಹೇಳುತ್ತದೆ. ಏಕೆಂದರೆ ಈ ಬಿಲ್ ಮೂಲಕ ನಾವು ಚಿನ್ನ ಮತ್ತು ಬೆಳ್ಳಿಯನ್ನು ನಮ್ಮ ಹಣದ ಆಧಾರವಾಗಿರುವುದನ್ನು ತಪ್ಪಿಸಿದೆವು. ಈ ಅಭಿಪ್ರಾಯವನ್ನು ಸಮರ್ಥಿಸಿದವರು, ಇಂಥ ಕರೆನ್ಸಿ ಸ್ಥಿರವಾಗಿರುವುದರ ಬದಲು ತನ್ನ ಮೌಲ್ಯದಲ್ಲಿ ಬಹಳ ಏರುಪೇರುಗಳಿಗೂ ಅನುಭವಿಸುತ್ತದೆ ಎಂಬುದನ್ನು ಪರಿಗಣಿಸಲಿಲ್ಲ – ಒಂದು ಪ್ರಮಿತಿಯ ಉಪಯೋಗ ಕೇವಲ ಪ್ರಮಾಣವನ್ನು ನಿಯಂತ್ರಿಸುವುದಾಗಿರುತ್ತದೆ ಮತ್ತು ಆ ಪ್ರಮಾಣದ ಮೂಲಕ ಕರೆನ್ಸಿಯ ಮೌಲ್ಯವನ್ನು ನಿಯಂತ್ರಿಸುತ್ತದೆ. ಒಂದು ಪ್ರಮಿತಿ ಇಲ್ಲದಿದ್ದರೆ ಕರೆನ್ಸಿ ಅದನ್ನು ನೀಡಿಕೆ ಮಾಡುವವರು ಅದನ್ನು ಗುರಿಪಡಿಸಬಹುದಾದ ಎಲ್ಲ ಬದಲಾವಣೆಗಳಿಗೂ ತಾನೇ ಗುರಿಯಾಗುತ್ತದೆ."

೧. ಅತ್ಯಂತ ಉತ್ತಮವಾಗಿದ್ದ ಈ ವರದಿಯನ್ನು ಬುಲಿಯನ್ ವರದಿಯು ಸ್ವಲ್ಪಮಟ್ಟಿಗೆ ಮಸಕುಗೊಳಿಸಿತು. ಇವೆರಡೂ ಒಂದೇ ಸಿದ್ಧಾಂತವನ್ನು ಹೊಂದಿದ್ದರೂ, ೧೮೨೬ರ ವರೆಗೆ ಇದನ್ನು ಪ್ರಕಟಪಡಿಸದೆ ಇದ್ದುದೇ ಇದಕ್ಕೆ ಕಾರಣ. ನೋಡಿ : ಲಾರ್ಡ್ಸ್ ಪೇಪರ್ ೪೮, ೧೮೨೬

೨. ನೋಡಿ : ಹಾನ್‌ಸಾರ್ಡ್ ಪಾರ್ಲಿಮೆಂಟರಿ ಡಿಬೆಟ್ಸ್ ಸಂ. XIV ಪುಟಗಳು ೭೫–೯೧

೩. ನೋಡಿ : ಟಿ.ಈ. ಗ್ರೆಗರಿಯ ಸಾರಯುಕ್ತ ಹೇಳಿಕೆ ಫಾರಿನ್ ಎಕ್ಸ್‌ಚೇಂಜಸ್, ಪು. ೮೫

ಹೀಗೆ ಗೊತ್ತು ಮಾಡಲಾಗಿರುವ ಸ್ಥಿರವಾದ ದರ ಎರಡು ಕರೆನ್ಸಿಗಳ ಪರಸ್ಪರ ಕೊಳ್ಳುವ ಚೈತನ್ಯದ ಆಧಾರದ ಮೇಲೆ ನಿಗದಿಯಾಗಬಹುದಾಗಿದ್ದ ವಿನಿಮಯ ದರಕ್ಕಿಂತ ಹೆಚ್ಚಾಗಿರುತ್ತದೆ. ವಿದೇಶೀ ಸರಕುಗಳನ್ನು ಜನರು ವಿದೇಶೀ ಕರೆನ್ಸಿಗಳ ಮೂಲಕ ಕೊಳ್ಳುವ ಈ ಕ್ರಿಯೆಯಲ್ಲಿ ವಿದೇಶೀ ಕರೆನ್ಸಿಯನ್ನು ಜನರು ಅಗ್ಗವಾಗಿ ಕೊಂಡುಕೊಂಡಿರುತ್ತಾರೆ. ಏಕೆಂದರೆ ಮಾರುಕಟ್ಟೆ ದರವಿದ್ದಿದ್ದರೆ ಅವರು ಹೆಚ್ಚಿನ ದೇಶೀಯ ಕರೆನ್ಸಿಗಳನ್ನು ವಿದೇಶೀ ಕರೆನ್ಸಿಗಳಿಗೆ ಕೊಡಬೇಕಾಗಿರುತ್ತದೆ. ಇದರ ಪರಿಣಾಮ, ಸ್ಥಿರವಾದ ವಿನಿಮಯದರ ವಿದೇಶೀ ಸರಕುಗಳ ಬೆಲೆಗಳನ್ನು, ದೇಶೀಯ ಬೆಲೆಮಟ್ಟಗಳಿಗೆ ಸಮನಾಗುವಷ್ಟು ಏರಿಸುತ್ತದೆ. ಆದ್ದರಿಂದ ಈಗ ವಿನಿಮಯದರ ಸ್ಥಿರವಾಗಿದ್ದರೆ, ಅದು ಸ್ಥಿರವಾದ ಬೆಲೆಯನ್ನು ಅದಕ್ಕೆ ಗೊತ್ತುಮಾಡಿರುವುದರಿಂದಲ್ಲ, ಬದಲಿಗೆ ಎರಡೂ ರಾಷ್ಟ್ರಗಳಲ್ಲಿ ಬೆಲೆ ಮಟ್ಟಗಳು ಹೊಸ ಸಮತೋಲನವನ್ನು ಮುಟ್ಟಿರುವುದರಿಂದ ಉಂಟಾಗಿರುವಂಥದು. ವಿನಿಮಯ ದರ ದೃಢವಾಗಿರುವುದಕ್ಕೆ ಕಾರಣ ಅದು ಕೃತಕವಾದ ಕೊಳ್ಳುವ ಶಕ್ತಿಯಲ್ಲಿ ಸಮಾನತೆಯನ್ನು ಉಂಟುಮಾಡಿರುವುದರಿಂದ. ಇದು ಹೀಗೆಯೇ ಮುಂದುವರಿಯುತ್ತಿದೆಯೇ ಇಲ್ಲವೇ ಎನ್ನುವುದು ದೇಶದಲ್ಲಿನ ಆಂತರಿಕ ಬೆಲೆಗಳು ಹೇಗೆ ಚಲಿಸುತ್ತದೆ ಎನ್ನುವುದನ್ನು ಅವಲಂಬಿಸುತ್ತದೆ. ದೇಶದಲ್ಲಿ ಆಂತರಿಕ ಬೆಲೆಗಳು, ಸ್ಥಿರವಾದ ದರ ವಿದೇಶದಲ್ಲಿ ಉಂಟುಮಾಡಿರುವ ಬೆಲೆ ಮಟ್ಟಕ್ಕಿಂತ ಹೆಚ್ಚಾದರೆ, ಈ ವ್ಯವಸ್ಥೆ ಕುಸಿಯಲೇಬೇಕು. ಈ ದೃಷ್ಟಿಯಿಂದ ವಿನಿಮಯ ಪ್ರಮಿತಿಯ ಮೇಲಿನ ಐರಿಷ್ ಸಮಿತಿ, ಕರೆನ್ಸಿ ನೀಡಿಕೆಯ ಮೇಲೆ ಮಿತಿಯನ್ನು ಗೊತ್ತುಮಾಡಬೇಕು ಎಂದು ಹೇಳಿದ್ದನ್ನು ನಿರ್ಲಕ್ಷಿಸುವುದರ ಮೂಲಕ ಭಾರತದ ಕರೆನ್ಸಿಯ ಸ್ಥಿತಿ ಐರಿಷ್ ಸಮಿತಿಯ ವರದಿಯಲ್ಲಿರುವ ಅತಿ ಮುಖ್ಯ ಭಾಗಕ್ಕೆ ವಿರುದ್ಧವಾಗಿದೆ.

ಹೊಸ ಪ್ರಮಿತಿಯ ನಿರ್ಮಾಪಕನಾಗಿ ಲಿಂಡ್ಸೆ ಅತ್ಯಂತ ಹೆಚ್ಚಿನ ಗೌರವವನ್ನು ಸಂಪಾದಿಸಿರುವುದು ನಿಜ. ಆದರೆ ತನ್ನ ಹೊಸ ಪ್ರಮಿತಿಯನ್ನು ಪ್ರತಿಪಾದಿಸಿದಾಗ, ಕರೆನ್ಸಿಯ ಮಿತಿಯ ಅಂಶಕ್ಕೆ ಗಮನ ಕೊಡದಿರುವುದಕ್ಕೆ ಕಾರಣವೆಂದರೆ, ಕರೆನ್ಸಿಯ ಮೌಲ್ಯದ ನಿಜವಾದ ಸಿದ್ಧಾಂತದ ಬಗ್ಗೆ ಅವನು ಅಜ್ಞಾನಿಯಾಗಿದ್ದ, ಅವನಾಗಲೀ ಅಥವಾ ಕರೆನ್ಸಿ ವ್ಯವಸ್ಥೆಯ ಬಗ್ಗೆ ೧೮೯೦ರ ದಶಕದಲ್ಲಿ ಭಾರತದ ವಿನಿಮಯ ಸಮಸ್ಯೆಗಳನ್ನು ಬಗೆಹರಿಸುತ್ತೇವೆಂದು ಯೋಜನೆಗಳನ್ನು ತಯಾರಿಸಿದ ಕರೆನ್ಸಿಯ ತಜ್ಞರಾಗಲೀ, ವಿನಿಮಯವನ್ನು ಸ್ಥಿರೀಕರಿಸುವುದು ಕರೆನ್ಸಿಯ ಪ್ರಮಾಣವನ್ನು ನಿಯಂತ್ರಿಸುವುದರ ಮೂಲಕ ಅದರ ಕೊಳ್ಳುವ ಶಕ್ತಿಯನ್ನು ಸ್ಥಿರೀಕರಿಸುವ ಮುಖ್ಯ ಸಮಸ್ಯೆಯಾಗಿದೆ ಎನ್ನುವುದನ್ನು ತಿಳಿದುಕೊಳ್ಳಲೇ ಇಲ್ಲ.[೧] ದೀರ್ಘಾವಧಿಯಲ್ಲಿ, ಕರೆನ್ಸಿಯ ಸಾರ್ವತ್ರಿಕ ಕೊಳ್ಳುವ ಶಕ್ತಿಯೇ, ಕೊನೆಯದಾಗಿ, ಅದರ ವಿನಿಮಯವು ಮೌಲ್ಯವನ್ನು ನಿರ್ಧರಿಸುತ್ತದೆ ಎನ್ನುವ ಅಂಶವನ್ನು ಸುವರ್ಣ ಪ್ರಮಿತಿ ಕಡೆಗಣಿಸುತ್ತದೆ. ಸುವರ್ಣ ಪ್ರಮಿತಿಯ ಗುರಿ, ವಿನಿಮಯವನ್ನು ದೃಢೀಕರಿಸುವುದು. ಕೊಳ್ಳುವ ಚೈತನ್ಯದ ಅಂಶವನ್ನು ಅದು ಗಣನೆಗೇ ತೆಗೆದುಕೊಳ್ಳುವುದಿಲ್ಲ. ಆದರೆ ವಾಸ್ತವ ನೀತಿ ಕರೆನ್ಸಿಯ ಕೊಳ್ಳುವ ಶಕ್ತಿಯನ್ನು ಸ್ಥಿರೀಕರಿಸುವುದರತ್ತ ಗಮನಕೊಟ್ಟು ವಿನಿಮಯ ತನ್ನನ್ನು ತಾನೇ ನೋಡಿಕೊಳ್ಳುವಂತೆ ಮಾಡಬೇಕು. ಈ ದೃಷ್ಟಿಯಿಂದ ಚೇಂಬರ್ಲಿನ್ ಸಮಿತಿಯ ವಿನಿಮಯ ಪ್ರಮಿತಿಯನ್ನು ಅತ್ಯಂತ ಗುಣಮಟ್ಟ ಉಳ್ಳ ಪ್ರಮಿತಿಯೆಂದು ಕರೆಯುತ್ತಿರಲಿಲ್ಲ. ಏಕೆಂದರೆ ವಾಸ್ತವವಾಗಿ ಈ ಪ್ರಮಿತಿಯ ಮೂಲಭೂತ ಅಂಶಗಳು ಗುಣಮಟ್ಟ ಪ್ರಮಿತಿಗೆ ವಿರೋಧವಾದುದಾಗಿದೆ.

---

೧. ನೋಡಿ : ಫೌಲರ್ ಸಮಿತಿಯ ಮುಂದೆ ಲಿಂಡ್ಸೆಯ ಸಾಕ್ಷಿ. ಅಲ್ಲಿ ಅವನು ವಿನಿಮಯ ಚಲಾವಣೆಯಲ್ಲಿರುವ ಹಣ ಪ್ರಮಾಣದೊಂದಿಗೆ ಯಾವ ಸಂಬಂಧವನ್ನೂ ಹೊಂದಿರುವುದಿಲ್ಲ ಎಂದು ಪ್ರತಿಪಾದಿಸಿದ.

ವಿನಿಮಯ ಪ್ರಮಿತಿಯ ದೌರ್ಬಲ್ಯದ ಬಗ್ಗೆ ಮನವರಿಕೆಯಾಗದಿರುವ ಯಾರೇ ಆದರೂ, ಒಂದು ಟೀಕೆಯನ್ನು ಮಾಡಬಹುದು. ಅದೆಂದರೆ, ನಾವು ಅದರ ಸ್ಥಿರತೆಯನ್ನು ಪರೀಕ್ಷಿಸುವಾಗ, ಪ್ರಮಿತಿ ಮುರಿದುಬಿದ್ದ ಅವಧಿಯನ್ನು ಮಾತ್ರ ತೆಗೆದುಕೊಂಡಿದ್ದೇವೆಯೇ ಹೊರತು, ಅದು ಸಮರ್ಪಕವಾಗಿ ಕೆಲಸ ಮಾಡಿದ ಅವಧಿಗಳನ್ನಲ್ಲ ಎಂದು. ಟೀಕಾಕಾರರು ಎತ್ತಬಹುದಾದ ಪ್ರಶ್ನೆಯೆಂದರೆ, ವಿನಿಮಯದ ಸ್ಥಿರತೆಯನ್ನು ಕಾಪಾಡಿಕೊಳ್ಳಲಾದ ವರ್ಷಗಳ ವಿಷಯ ಹೇಗೆ? ೧೯೦೧ ರಿಂದ ೦೭ರ ವರೆಗೆ ಮತ್ತೆ ೧೯೦೯ ರಿಂದ ೧೪ರ ವರೆಗೆ ರೂಪಾಯಿಯ ಚಿನ್ನ ಸಮಾನತೆ ಬೆಲೆಯನ್ನು ಪ್ರಮಿತಿ ಕಾಪಾಡಿಕೊಳ್ಳಲಿಲ್ಲವೇ? ಈ ಅವಧಿಯನ್ನು ಗಮನಿಸಿ ಪ್ರಮಿತಿಯ ಬಗ್ಗೆ ಒಳ್ಳೆಯ ಮಾತುಗಳನ್ನು ಏಕೆ ಹೇಳಲಾಗುತ್ತಿಲ್ಲ? ಇದು ತುಂಬಾ ಸಮಂಜಸವಾದ ಪ್ರಶ್ನೆ: ಏಕೆಂದರೆ ಈ ಪ್ರಶ್ನೆಗೆ ಉತ್ತರಿಸುವಾಗ, ಇಲ್ಲವೇ ಸುವರ್ಣ ವಿನಿಮಯ ಪ್ರಮಿತಿ ಈ ಅವಧಿಗಳಲ್ಲಿ ಕೆಲಸ ಮಾಡಿರುವುದರ ಹಿನ್ನೆಲೆಯಲ್ಲಿ ಒಂದು ಉತ್ತಮವಾದ ಪ್ರಮಿತಿ ಎಂದು ಒಪ್ಪಿಕೊಳ್ಳಬೇಕು. ಇಲ್ಲವೇ, ಸುವರ್ಣ ಪ್ರಮಿತಿಯಲ್ಲಿ ರೂಪಾಯಿ ಹೆಚ್ಚಿನಂಶ ಚಿನ್ನದಲ್ಲಿ ತನ್ನ ಮೌಲ್ಯವನ್ನು ಕಾಪಾಡಿಕೊಳ್ಳಲು ವಿಫಲವಾಗಿದೆ ಎನ್ನುವುದನ್ನು ತೋರಿಸಬೇಕು.[೧]

ನಾವು ಈ ಪ್ರಶ್ನೆಗೆ ಉತ್ತರಿಸಬೇಕಾದರೆ, ಸುವರ್ಣ ಪ್ರಮಿತಿಯ ಕಲ್ಪನೆಗಳನ್ನು ನೋಡಬೇಕು. ಜೊತೆಗೆ ಈ ಕಲ್ಪನೆಗಳು ಎಷ್ಟು ನಿರುಪಯುಕ್ತವಾದವು ಎನ್ನುವುದನ್ನು ಎತ್ತಿ ತೋರಿಸಬೇಕು. ಮೊದಲನೆಯ ಕಲ್ಪನೆಯೆಂದರೆ ಒಂದು ಕರೆನ್ಸಿ, ಚಿನ್ನದ ಮಾಧ್ಯಮದಲ್ಲಿ ತನ್ನ ಮೌಲ್ಯವನ್ನು ಕಳೆದುಕೊಳ್ಳದೆ, ತನ್ನ ಮೌಲ್ಯವನ್ನು ಕಳೆದುಕೊಳ್ಳಲಾರದು ಎನ್ನುವುದು. ಇದರ ಅರ್ಥ ಕರೆನ್ಸಿಯನ್ನು ಹೆಚ್ಚು ಮಾಡಿರುವುದರಿಂದ ಅದು ಕರೆನ್ಸಿಯ ಮೌಲ್ಯವನ್ನು ಯಾವುದೇ ಸರಕಿನ ಮಾಧ್ಯಮದಲ್ಲಿ ಕಡಿಮೆ ಮಾಡಿಲ್ಲ ಎಂದಾದರೆ, ಅಂದರೆ ಚಿನ್ನದ ಮಾಧ್ಯಮದಲ್ಲೂ ಅದರ ಮೌಲ್ಯ ಕಡಿಮೆಯಾಗಿಲ್ಲ ಎಂದಾಗುತ್ತದೆ. ಹೀಗಿದ್ದರೆ, ಎಲ್ಲ ಸರಕುಗಳ ಮಾಧ್ಯಮದಲ್ಲೂ ಇದರ ಮೌಲ್ಯ ಕಡಿಮೆಯಾಗಿಲ್ಲ ಎಂದಾಗುತ್ತದೆ. ಬುಲಿಯನ್ ವರದಿಯ ಮೇಲೆ ಚರ್ಚೆ ನಡೆಯುವಾಗ, ಅತ್ಯಂತ ಮೇಧಾವಿಗಳಿಗೂ[೨] ಸಾರ್ವತ್ರಿಕ ಸರಕುಗಳಿಗೆ ಸಂಬಂಧಿಸಿದಂತೆ ಕರೆನ್ಸಿಯ ಮೌಲ್ಯದ ಪರಿಭಾವನೆ ಸ್ಪಷ್ಟವಾಗಿರಲಿಲ್ಲ, ಉನ್ನತ ಅಧಿಕಾರಿಗಳು[೩] ಸಹ ಇದು ಮುಖ್ಯವಲ್ಲವೆಂದೇ ಭಾವಿಸಿದ್ದರು. ಸೂಚ್ಯಂಕಗಳೂ ಇಲ್ಲದಿರುವ ಪರಿಸ್ಥಿತಿಯಲ್ಲಿ ಒಂದು ನಿರ್ದಿಷ್ಟ ಸರಕಿನ ಮಾಧ್ಯಮದಲ್ಲಿ, ಉದಾಹರಣೆಗೆ ಚಿನ್ನದಂತಹ ಮೌಲ್ಯಮಾಪಕ ಮಾಧ್ಯಮದಲ್ಲಿ ಒಂದು ಕರೆನ್ಸಿಯ ಮೌಲ್ಯ ಕುಸಿತದ ಬಗ್ಗೆ ನಂಬಿಕೆಯನ್ನು ವ್ಯಕ್ತಪಡಿಸುವುದನ್ನು ಒಪ್ಪಿಕೊಳ್ಳಬಹುದು. ಆದರೆ ಇಂದು ಇಂಥ ವಾದಕ್ಕೆ ಅಡಿಪಾಯವೇ ಇರುವುದಿಲ್ಲ. ಈಗ ಕರೆನ್ಸಿಯ ಬೆಲೆಯಲ್ಲಿ ವ್ಯತ್ಯಾಸವಾಗಿದೆ ಎಂಬುದನ್ನು ಒಪ್ಪಿಕೊಳ್ಳಲು ಸಾರ್ವತ್ರಿಕ ಬೆಲೆ ಮಟ್ಟಗಳು ಸೂಚಿಸುವಂತೆಯೇ, ಪ್ರತಿಯೊಂದು ಸರಕಿನ ಬೆಲೆಯೂ ಒಂದೇ ಮಟ್ಟದಲ್ಲಿ ವ್ಯತ್ಯಾಸ ಹೊಂದಿದೆ ಎಂಬುದನ್ನು

---

೧. ಡಾಡ್‌ವೆಲ್ : "ಎ ಗೋಲ್ಡ್ ಕರೆನ್ಸಿ ಫಾರ್ ಇಂಡಿಯಾ" ಎಕನಾಮಿಕ್ ಜರ್ನಲ್ ೧೯೧೧, ರಿಪೋರ್ಟ್ ಆನ್ ದಿ ಎನ್‌ಕ್ವೈರಿ ಇನ್‌ಟುದಿ ರೈಸ್ ಆಫ್ ಪ್ರೈಸಸ್ ಇನ್ ಇಂಡಿಯಾ"

೨. ಬುಲಿಯನ್ ಚರ್ಚೆ ನಡೆಯುತ್ತಿದ್ದಾಗ ಕ್ಯಾಸ್ಟ್ಲರಿಂಗ್ ಪ್ರಮಿತಿಗೆ ಕೊಟ್ಟ ವ್ಯಾಖ್ಯೆ "ಮೌಲ್ಯದ ಒಂದು ಭಾವನೆ" ಎಂದು. ಇದನ್ನು ಕ್ಯಾನಿಂಗ್ಸ್ ಅಪಹಾಸ್ಯ ಮಾಡಿದ್ದು, ಈ ವಿಷಯದ ಬಗ್ಗೆ ಅವನಿಗಿದ್ದ ಅಜ್ಞಾನವನ್ನು ವ್ಯಕ್ತಪಡಿಸುತ್ತದೆ.

೨. ರಿಕಾರ್ಡೋ ತನ್ನ ಪ್ರಪೋಸಲ್ ಫಾರ್ ಎನ್ ಇಕನಾಮಿಕಲ್ ಅಂಡ್ ಸೆಕ್ಯೂರ್ ಕರೆನ್ಸಿಯಲ್ಲಿ ಹೀಗೆ ಹೇಳುತ್ತಾನೆ "ನಾವು ಕರೆನ್ಸಿಯ ಮೌಲ್ಯವನ್ನು ಕೇವಲ ಒಂದು ವಸ್ತುವಿಗೆ ಸಂಬಂಧಿಸಿದಂತಲ್ಲ ಆದರೆ ಎಲ್ಲ ಸರಕುಗಳಿಗೆ ಸಂಬಂಧಿಸಿದಂತೆ ನಿರ್ಣಯಿಸಬೇಕು ಎಂದು ಹೇಳಲಾಗುತ್ತದೆ.... ಆದರೆ ಅಂಥ ಮಾಪಕ ಉಪಯುಕ್ತವಲ್ಲ...... ಒಂದು ಕರೆನ್ಸಿಯ ಮೌಲ್ಯವನ್ನು ಈ ರೀತಿ ಮಾಪನ ಮಾಡುವುದು ಅಸಾಧ್ಯ

## ಪಟ್ಟಿ - L

## ಬ್ಯಾಂಕ್ ಆಫ್ ಇಂಗ್ಲೆಂಡಿನ ನೋಟುಗಳ ಮೌಲ್ಯ ಕುಗ್ಗಿಸುವಿಕೆ[೧]

| | ಬ್ಯಾಂಕ್ ನೋಟುಗಳ ಶೇಕಡಾಂಶ ಮೌಲ್ಯ | |
|---|---|---|
| | ಚಿನ್ನದ ಮಾಧ್ಯಮದಲ್ಲಿ | ಸರಕುಗಳ ಮಾಧ್ಯಮದಲ್ಲಿ |
| ೧೭೯೭ | ೧೦೦.೦ | ೧೧೦ |
| ೧೭೯೮ | ೧೦೦.೦ | ೧೧೮ |
| ೧೭೯೯ | – | ೧೩೦ |
| ೧೮೦೦ | ೧೦೭.೦ | ೧೪೧ |
| ೧೮೦೧ | ೧೦೯.೦ | ೧೫೩ |
| ೧೮೦೨ | – | ೧೧೯ |
| ೧೮೦೩ | – | ೧೨೮ |
| ೧೮೦೪ | ೧೦೩.೦ | ೧೨೨ |
| ೧೮೦೫ | ೧೦೩.೦ | ೧೩೬ |
| ೧೮೦೬ | – | ೧೩೩ |
| ೧೮೦೭ | – | ೧೩೨ |
| ೧೮೦೮ | – | ೧೪೯ |
| ೧೮೦೯ | – | ೧೬೧ |
| ೧೮೧೦ | – | ೧೬೪ |
| ೧೮೧೧ | ೧೨೩.೯ | ೧೪೭ |
| ೧೮೧೨ | ೧೩೦.೨ | ೧೪೮ |
| ೧೮೧೩ | ೧೩೬.೪ | ೧೪೯ |
| ೧೮೧೪ | ೧೨೪.೪ | ೧೫೩ |
| ೧೮೧೫ | ೧೧೮.೭ | ೧೩೨ |
| ೧೮೧೬ | ೧೦೨.೯ | ೧೦೯ |
| ೧೮೧೭ | ೧೦೨.೨ | ೧೨೦ |
| ೧೮೧೮ | ೧೦೪.೬ | ೧೩೫ |

---

೧. ಹಾಟ್ರೆಯವರ ಕ್ರೆಡಿಟ್ ಅಂಡ್ ಕರೆನ್ಸಿಯಿಂದ ಪು. ೨೬೯ ಚಿನ್ನದ ಮಾಧ್ಯಮದಲ್ಲಿ ನೋಟುಗಳ ಬೆಲೆ ವಿಷಯದಲ್ಲಿ ಪ್ರೊ. ಫ್ಯಾಕ್ಸ್‌ವೆಲ್ ಅಭಿಪ್ರಾಯ ಹೀಗಿದೆ : "........ ಬ್ಯಾಂಕಿನ ಅತ್ಯಂತ ಕಟು ಟೀಕಾಕಾರರು ಸಹ, ೧೮೦೮–೦೯ರವರೆಗೆ ಅದರ ಕ್ರಿಯಾಶೀಲತೆಯ ಬಗ್ಗೆ ಯಾವ ಆಕ್ಷೇಪವೂ ಇಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತಾರೆ. ಆ ವರ್ಷದವರೆಗೆ ಅದರ ಕಾಗದದ ಕರೆನ್ಸಿ ಮೌಲ್ಯದಲ್ಲಿ ಸಹ ಯಾವ ಕುಗ್ಗುವಿಕೆಯೂ ಇರಲಿಲ್ಲ. ೧೮೦೩–೦೯ರವರೆಗೆ ಅದರ ಬೆಲೆ ಔನ್ಸಿಗೆ £ರಂತೆಯೇ ಮುಂದುವರೆಯಿತು. ಈ ಬೆಲೆಯನ್ನು ಬ್ಯಾಂಕು ಯಾವ ತತ್ವದ ಹಿನ್ನೆಲೆಯೂ ಇಲ್ಲದೆ ಅನಿರ್ದಿಷ್ಟವಾಗಿ ಗೊತ್ತುಮಾಡಿತ್ತು. ಇದು ಬ್ಯಾಂಕು ವಿದೇಶೀ ಚಿನ್ನವನ್ನು ಕೊಳ್ಳುವ ಬೆಲೆಯಾಗಿತ್ತು." ಫ್ರಿಫೇಸ್ ಟು ಆಂಡ್ರಿಯಾಡಿಸ್ ಪು. XVI. ೧೮೧೧ರವರೆಗೆ ಬ್ಯಾಂಕ್ ಆಫ್ ಇಂಗ್ಲೆಂಡಿನ ಅಪರಿವರ್ತನೀಯ ನೋಟುಗಳ ಮೌಲ್ಯದಲ್ಲಿ ಕುಸಿತವಿರಲಿಲ್ಲ ಎನ್ನುವುದು ಕೆಲವರ ವಾದ. ಇದಕ್ಕೆ ಪುರಾವೆಯನ್ನೊದಗಿಸುವುದಕ್ಕೆ ದುರದೃಷ್ಟವಶಾತ್ ಯಾವ ಅಂಕಿ–ಅಂಶಗಳೂ ಲಭ್ಯವಿಲ್ಲ. ಆದರೆ ಆ ಕಾಲದಲ್ಲಿ ಚಿನ್ನಕ್ಕೆ ದೊರೆಯುತ್ತಿದ್ದ ಬೆಲೆ ಆಧಿಕ್ಯವೇ ಚಿನ್ನದ ಮೌಲ್ಯವನ್ನು ಮಾಪನ ಮಾಡುವುದಕ್ಕೆ ಗೊತ್ತಿದ್ದ ವಿಧಾನ. ಹಾರ್ನರ್, ರಿಕಾರ್ಡೋ ಮತ್ತು ಇತರರು ಬ್ಯಾಂಕ್ ಆಫ್ ಇಂಗ್ಲೆಂಡಿನ ಬಹಿರಂಗ ಶತ್ರುಗಳಾಗಿದ್ದರು. ವಿಷಯ ಹೀಗಿದ್ದುದರಿಂದ, ಬ್ಯಾಂಕು ನೋಟುಗಳು ನಿರ್ದಿಷ್ಟ ಮೌಲ್ಯಕುಸಿತದ ಚಿಹ್ನೆಗಳನ್ನು ತೋರಿದ್ದರೆ ಹಾರ್ನರ್ ೧೮೧೧ರವರೆಗೆ ಹೌಸ್ ಆಫ್ ಕಾಮನ್ಸ್‌ನಲ್ಲಿ ತನ್ನ ಗೊತ್ತುವಳಿಯನ್ನು ಮಂಡಿಸಲು ಕಾದಿರುತ್ತಿರಲಿಲ್ಲ.

ತೋರಿಸಬೇಕಾಗಿಲ್ಲ. ಚಿನ್ನದಂಥ ಒಂದೇ ವಸ್ತುವನ್ನು ಕರೆನ್ಸಿಯ ಮೌಲ್ಯ ಕುಸಿತದ ಮಾಪಕವಾಗಿ ಏಕೆ ಒಪ್ಪಿಕೊಳ್ಳಬೇಕು? ಇತರ ಎಲ್ಲ ವಸ್ತುಗಳ ಮಾಧ್ಯಮದಲ್ಲಿ ಕರೆನ್ಸಿಯ ಮೌಲ್ಯಕುಸಿತವನ್ನು ಅಳತೆಮಾಡಲು ಚಿನ್ನದ ಮೌಲ್ಯಕುಸಿತ ಅತ್ಯಂತ ಸಮರ್ಪಕ ಮಾಪಕವೆಂದು ಒಪ್ಪಿಕೊಳ್ಳುವುದು ಸಾಧ್ಯವಾಗುತ್ತದೆಂದು ಭಾವಿಸೋಣ. ಇದು ಹೀಗೆ ಪರಿಗಣಿತವಾಗುವುದು ಸಾಧ್ಯವಾಗುವುದಿಲ್ಲ. ಆಂತರಿಕ ಯುದ್ಧದ ಅವಧಿಯಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನದ ಗ್ರೀನ್‌ಬ್ಯಾಂಕ್‌ಗಳ ಅನುಭವದ ಬಗ್ಗೆ ಮಾತನಾಡುತ್ತಾ, ಪ್ರೊಫೆಸರ್ ಡಬ್ಲ್ಯು.ಸಿ.ಮಿಚೆಲ್ ಕೆಳಗಿನಂತೆ ಹೇಳಿದ್ದ :

"ಚಿನ್ನದ ಬೆಲೆಯಲ್ಲಿನ ವ್ಯತ್ಯಾಸಗಳು ಹೆಚ್ಚು ಗಮನವನ್ನು ಆಕರ್ಷಿಸಿದ್ದವು. ಆದರೆ ಸರಕುಗಳಲ್ಲಿನ ಬೆಲೆಗಳ ವ್ಯತ್ಯಾಸ ಚಿನ್ನದ ಬೆಲೆಯ ವ್ಯತ್ಯಾಸಕ್ಕೆ ಹೋಲಿಸಿದಂತೆ ಸಾಧಾರಣ ಪ್ರಮಾಣದ್ದಾಗಿತ್ತು. ಸರಕುಗಳ ಬೆಲೆಗಳ ವ್ಯತ್ಯಾಸದ ಅಂತರದೊಳಗೇ ಚಿನ್ನದ ಬೆಲೆಯ ವ್ಯತ್ಯಾಸ ನಡೆದಿತ್ತು. ಯುದ್ಧದ ಅವಧಿಯಲ್ಲಿ ಚಿನ್ನದ ಬೆಲೆಯ ಹೆಚ್ಚಳ ಮತ್ತು ಇಳಿಕೆ ಇತರ ಸರಕುಗಳ ಬೆಲೆಗಳ ಹೆಚ್ಚಳ ಮತ್ತು ಇಳಿಕೆಗಳಿಗಿಂತ ವೇಗವಾಗಿತ್ತು...... ಚಿನ್ನದ ಬೆಲೆ ಇಳಿಯುವಾಗ, ಇತರ ಸರಕುಗಳ ಬೆಲೆಗಳು ಸ್ಥಿರವಾಗಿದ್ದವು ಇಲ್ಲವೇ ತುಂಬಾ ನಿಧಾನವಾಗಿ ಇಳಿದವು...... ಈ ರೀತಿಯ ಸರಕುಗಳ ಮಂದಗತಿಯ ಬೆಲೆಯಲ್ಲಿನ ವ್ಯತ್ಯಾಸಗಳು ಯುದ್ಧದ ನಂತರ ಇನ್ನೂ ಸ್ಪಷ್ಟವಾಗಿ ವ್ಯಕ್ತವಾಗಿವೆ. ಸರಕುಗಳ ಬೆಲೆಗಳು ತೀವ್ರವಾಗಿ ಇಳಿದರೂ, ಅವು ಚಿನ್ನದ ಬೆಲೆಯ ಇಳಿತಾಯದಷ್ಟು ತೀವ್ರವಾಗಿರಲಿಲ್ಲ. ಇನ್ನೂ ಕುತೂಹಲಕರ ವಿಷಯವೆಂದರೆ, ಹತ್ತು ವರ್ಷಗಳ ಕಾಲ ಸರಕುಗಳ ಬೆಲೆಗಳು ಚಿನ್ನದ ಬೆಲೆಗಳಿಗಿಂತ ಹೆಚ್ಚಾಗಿಯೇ ಮುಂದುವರಿದದ್ದು".

ಸುವರ್ಣ ಪ್ರಮಿತಿಯ ಪ್ರತಿಪಾದಕರು ರೂಪಿಸಿರುವ ಮಾನದಂಡ ತಪ್ಪಾದುದೆಂಬುದನ್ನು ಇದು ಸಾಬೀತು ಮಾಡುತ್ತದೆ. ಈ ಮಾನದಂಡ ಕರೆನ್ಸಿಯ ಮೌಲ್ಯವನ್ನು ತಪ್ಪಾಗಿ ಅಳತೆ ಮಾಡುತ್ತದೆ. ಸುವರ್ಣ ಪ್ರಮಿತಿಯನ್ನು ಪ್ರತಿಪಾದಿಸಿ ಅದನ್ನು ಅನ್ವಯಿಸಬೇಕೆಂದು ವಾದಿಸುವ ಜನರು, ಚಿನ್ನದ ಮಾಧ್ಯಮದಲ್ಲಿ ಒಂದು ಕರೆನ್ಸಿಯ ನಿರ್ದಿಷ್ಟ ಮೌಲ್ಯ ಕುಸಿತ ಮತ್ತು ಸರಕುಗಳ ಮಾಧ್ಯಮದಲ್ಲಿ ಸಾರ್ವತ್ರಿಕ ಮೌಲ್ಯ ಕುಸಿತಗಳ ನಡುವೆ ಒಂದು ಪಕ್ವ ವ್ಯತ್ಯಾಸವನ್ನು ಗುರುತಿಸಬಲ್ಲವರಾಗಿದ್ದಿದ್ದರೆ, ಈ ಪ್ರಮಿತಿಯ ಅನ್ವಯಕ್ಕೆ ಒತ್ತಾಯಿಸುತ್ತಿರಲಿಲ್ಲ.[೧] ಸಾರ್ವತ್ರಿಕವಾಗಿ ಸಸ್‌ಪೆನ್ಷನ್ ಅವಧಿಯ ಬ್ಯಾಂಕ್ ಆಫ್ ಇಂಗ್ಲೆಂಡಿನ ಅನುಭವ ಇದಕ್ಕೆ ಅತ್ಯಂತ ಬಲವಾದ ನಿದರ್ಶನ. ಆ ಅವಧಿಯಲ್ಲಿ ಕರೆನ್ಸಿಯ ಮೌಲ್ಯವನ್ನು ಸಾರ್ವತ್ರಿಕವಾಗಿ ಕುಗ್ಗಿಸಲಾಯಿತು. ಆದರೆ ಕರೆನ್ಸಿಯ ನಿರ್ದಿಷ್ಟ ಮೌಲ್ಯ ಕುಗ್ಗುವಿಕೆ ಈ ಅವಧಿಯಲ್ಲಿ ನಡೆಯಲೇ ಇಲ್ಲ.

ಯಾವ ರೀತಿಯ ಮೌಲ್ಯಕುಗ್ಗುವಿಕೆಯು ಹೆಚ್ಚು ಅಪಾಯಕಾರಿಯಾದದ್ದು ಎನ್ನುವುದನ್ನು ನಾವು ಮುಂದಿನ ಅಧ್ಯಾಯದಲ್ಲಿ ಚರ್ಚಿಸುತ್ತೇವೆ. ಬ್ಯಾಂಕ್ ಆಫ್ ಇಂಗ್ಲೆಂಡಿನ ಅನುಭವವನ್ನು ಆಧರಿಸಿ ಈಗ ಮಾತನಾಡುವುದಾದರೆ, ನಿರ್ದಿಷ್ಟ ಮೌಲ್ಯದ ಕುಗ್ಗುವಿಕೆ ಇಲ್ಲದೆ, ಸಾರ್ವತ್ರಿಕ ಮೌಲ್ಯದ ಕುಗ್ಗುವಿಕೆ ಸಾಧ್ಯ ಎನ್ನುವುದು ಸ್ಪಷ್ಟ. ಆದ್ದರಿಂದ, ವಿನಿಮಯ ಪ್ರಮಿತಿಯ ಪ್ರತಿಪಾದಕರು, ದೀರ್ಘಾವಧಿಯವರೆಗೆ ರೂಪಾಯಿ ನಿರ್ದಿಷ್ಟ ಮೌಲ್ಯದ ಕುಗ್ಗುವಿಕೆಯ ಚಿಹ್ನೆಗಳನ್ನು ತೋರಿಸಿಲ್ಲ ಎಂದು ಹೆಮ್ಮೆಪಡಬೇಕಾಗಿಲ್ಲ. ಸಂಪೂರ್ಣವಾಗಿ ಅಪರಿವರ್ತನೀಯವಾಗಿರುವ ಮತ್ತು ನೀಡಿಕೆಯ ವಿಷಯದಲ್ಲಿ ನಿಯಂತ್ರಿತವಲ್ಲದ ಬ್ಯಾಂಕುನೋಟು, ೧೩ ವರ್ಷದವರೆಗೆ ಚಿನ್ನದೊಡನೆ ಸಮಾನ ಬೆಲೆಯನ್ನು ಕಾಯ್ದುಕೊಂಡಿದೆ ಎನ್ನುವುದು, ರೂಪಾಯಿಯ

---

೧. ನೋಡಿ : ಪ್ರೊಫೆಸರ್ ನಿಕಲ್‌ಸನ್‌ರವರ "ಪ್ರಿನ್ಸಿಪಲ್ಸ್ ಆಫ್ ಪೊಲಿಟಿಕಲ್ ಇಕಾನಮಿ" (೧೮೯೭) ಸಂ. ೨ ಅಧ್ಯಾಯ XV ಮತ್ತು ವಾಕರ್ ಎಫ್.ಎ. 'ಮನಿ' (೧೮೭೮) ಪುಟಗಳು ೩೮೭–೯೧

ಅನುಭವ ವಿನಿಮಯ ಪ್ರಮಿತಿಗಿಂತ ಹೆಚ್ಚಾಗಿ ಸಸ್‌ಪೆನ್ಷನ್ ಪದ್ಧತಿಯ ಪರವಾಗಿದೆ ಎಂಬುದನ್ನು ಸೂಚಿಸುತ್ತದೆ. ಮೊದಲನೆಯ ಪದ್ಧತಿಯಲ್ಲಿ, ಎರಡನೆಯದಕ್ಕಿಂತ ಒಂದು ಹೆಚ್ಚಿನ ಆಶ್ಚರ್ಯಕರ ಸಂಗತಿಯೂ ಇದೆ. ಅದೇಂದರೆ ಚಿನ್ನದ ಮೌಲ್ಯವೇ ಕುಗ್ಗುತ್ತಿರುವಾಗ, ಕರೆನ್ಸಿ ತನ್ನ ಮೌಲ್ಯವನ್ನು ಸ್ಥಿರವಾಗಿಟ್ಟುಕೊಂಡು ಮುಂದುವರಿಯಿತು. ಈ ಅಂಶ ಇಂಗ್ಲೆಂಡಿನಲ್ಲಿ ಸಾರ್ವತ್ರಿಕ ಬೆಲೆಯ ಬಗೆಗಿನ ಅಂಕಿ-ಅಂಶಗಳಿಂದ ಸ್ಪಷ್ಟವಾಗುತ್ತದೆ. ಇಷ್ಟಾದರೂ, ಸಸ್ಪೆನ್‌ಷನ್ ಅವಧಿಯಲ್ಲಿ ಬಹಳ ಕಾಲದವರೆಗೆ ಕರೆನ್ಸಿಯ ಮೌಲ್ಯ ಕುಸಿಯುವುದಕ್ಕೆ ಅವಕಾಶ ಕೊಡದಿದ್ದಂತಹ ಕರೆನ್ಸಿ ವ್ಯವಸ್ಥೆಯನ್ನು, ಯಾರೂ ಮೆಚ್ಚಲಿಲ್ಲ ಮತ್ತು ನ್ಯಾಯಬದ್ಧವಾದುದೆಂದು ಹೊಗಳಲಿಲ್ಲ.

ಚಿನ್ನದ ಮಾಧ್ಯಮದಲ್ಲಿ ಕರೆನ್ಸಿಯ ಮೌಲ್ಯ ಕುಗ್ಗುವಿಕೆಯನ್ನು ಅಳತೆಮಾಡುವ ವಿಧಾನ, ಸಾಪೇಕ್ಷವಾಗಿ ಹೇಳುವುದಾದರೆ, ಅಂಥ ಅಪಾಯಕಾರಿಯಲ್ಲದ ವಿಧಾನವೆಂದೇ ಹೇಳಬಹುದಿತ್ತು, ಆದರೆ, ಈ ಕಲ್ಪನೆ ವಿನಿಮಯ ಪ್ರಮಿತಿಗೆ ಸಂಬಂಧಿಸಿದ ಇನ್ನೂ ಒಂದು ಕಲ್ಪನೆಯನ್ನು ಆಧರಿಸಿದೆ ಎನ್ನುವುದನ್ನು ಗಮನಿಸಬೇಕು. ಅದೇಂದರೆ, ಸಾರ್ವತ್ರಿಕ ಮತ್ತು ನಿರ್ದಿಷ್ಟ ಮೌಲ್ಯ ಕುಗ್ಗುವಿಕೆಗಳು ಪರಸ್ಪರ ಸ್ವತಂತ್ರವಾದ ಕ್ರಿಯೆಗಳು ಎನ್ನುವುದು. ಈ ಕಲ್ಪನೆಯನ್ನು ಒಪ್ಪಿಕೊಳ್ಳುವುದಕ್ಕಾಗುವುದಿಲ್ಲ. ಏಕೆಂದರೆ ಬ್ಯಾಂಕ್ ಆಫ್ ಇಂಗ್ಲೆಂಡಿನ ಅನುಭವದಿಂದ ಪ್ರಕಟವಾಗುವ ಮುಖ್ಯಪಾಠವೆಂದರೆ, ಸಾರ್ವತ್ರಿಕ ಮತ್ತು ನಿರ್ದಿಷ್ಟ ಮೌಲ್ಯಕುಗ್ಗುವಿಕೆಗಳು ಪರಿಪೂರ್ಣವಾಗಿ ಹೊಂದಿಕೊಂಡು ವ್ಯಕ್ತವಾಗದಿದ್ದರೂ ಅವು ಪರಸ್ಪರ ತೀವ್ರವಾದ ಸಂಬಂಧವನ್ನು ಹೊಂದಿರುವಂಥವು. ಇದನ್ನು ವಿನಿಮಯ ಪ್ರಮಿತಿಯ ಪ್ರತಿಪಾದಕರು ಗಮನಿಸಲೇಬೇಕು. ಏಕೆಂದರೆ ಕರೆನ್ಸಿಯ ಸಾರ್ವತ್ರಿಕ ಮೌಲ್ಯಕುಸಿತ ಒಂದು ಮಿತಿಯಿಂದಾಚೆಗೆ ಉಂಟಾದಾಗಲೆಲ್ಲಾ ನಿರ್ದಿಷ್ಟ ಮೌಲ್ಯಕುಸಿತ ಅದರ ಹಿಂದೆಯೇ ನಡೆದಿದೆ. ಆದರೆ ಇವೆರಡರ ನಡುವೆ ಸಮಯದ ಅಂತರವಿದೆ ಅಷ್ಟೇ. ಈ ಅವಧಿ ಎಷ್ಟು ಎನ್ನುವುದು, ಅನೇಕ ಅಂಶಗಳನ್ನು ಅವಲಂಬಿಸಿರುತ್ತದೆ. ಉಕ್ಕುತ್ತಿರುವ ಸರೋವರದಂತೆ, ಕರೆನ್ಸಿಯ ಸಾರ್ವತ್ರಿಕ ಮೌಲ್ಯಕುಸಿತ, ಬೇರೆಬೇರೆ ಸಮಯದಲ್ಲಿ ಬೇರೆ ಬೇರೆ ಪದಾರ್ಥಗಳನ್ನು ಮುಟ್ಟಿದೆ. ಯಾವ ಯಾವ ಸರಕಿನ ಮೇಲೆ ಮೌಲ್ಯಕುಸಿತ ಪರಿಣಾಮ ಬೀರಿದೆ ಎನ್ನುವುದು, ಸರಕಿನ ಬೇಡಿಕೆಯನ್ನು ಅವಲಂಬಿಸಿದೆ. ಉದಾಹರಣೆಗೆ ಚಿನ್ನಕ್ಕೆ, ಕರೆನ್ಸಿಯ ಉದ್ದೇಶಕ್ಕಾಗಲೀ, ಕೈಗಾರಿಕಾ ಉದ್ದೇಶಕ್ಕಾಗಲೀ ಬೇಡಿಕೆ ಇಲ್ಲದಿದ್ದರೆ, ಚಿನ್ನದ ಮಾಧ್ಯಮದಲ್ಲಿ ಕರೆನ್ಸಿಯ ಮೌಲ್ಯಕುಸಿತ ಬಹಳ ನಿಧಾನವಾಗಬಹುದು. ಮೂಲತಃ ಕೇವಲ ವಿದೇಶೀ ಪಾವತಿಗಳನ್ನು ಮಾಡುವುದಕ್ಕಾಗಿ ಚಿನ್ನದ ಬೇಡಿಕೆ ಉಂಟಾಗುತ್ತದೆ. ಹೀಗಾಗಿ ಅಲ್ಲಿ ಮೊದಲಿಗೆ ಮೌಲ್ಯದಲ್ಲಿನ ಕುಸಿತ ಕಾಣಿಸಿಕೊಳ್ಳುತ್ತದೆ. ಇಲ್ಲೂ ಸಹ, ವಿದೇಶೀಯರು ಇತರ ಸರಕುಗಳನ್ನು ಚಿನ್ನದಂತೆಯೇ ಬೇಡುತ್ತಿದ್ದರೆ, ಮೌಲ್ಯಕುಸಿತ ಕಾಣಿಸಿಕೊಳ್ಳದೇ ಹೋಗಬಹುದು. ಭಾರತದ ವಿಷಯದಲ್ಲಿ ಕರೆನ್ಸಿಯ ನಿರ್ದಿಷ್ಟ ಮೌಲ್ಯ ಕುಸಿತವನ್ನು ಮುಂದೂಡಲು ಈ ಮೂರು ಅಂಶಗಳೂ ಕಾರ್ಯೋನ್ಮುಖವಾಗಿವೆ. ರೂಪಾಯಿ ಪೂರ್ಣವಾಗಿ ಕಾನೂನುಬದ್ಧ ಹಣವಾಗಿದ್ದು, ಚಿನ್ನವನ್ನು ಅವಲಂಬಿಸದೆ ಅದು ಸಾಲಗಳನ್ನು ತೀರಿಸಲು ಶಕ್ತವಾಗಿದೆ. ಭಾರತದಂಥ ಬಡರಾಷ್ಟ್ರದಲ್ಲಿ ಚಿನ್ನಕ್ಕೆ ಕೈಗಾರಿಕಾ ಬೇಡಿಕೆ ದೊಡ್ಡ ಪ್ರಮಾಣದ್ದಾಗಿಲ್ಲ.[೧] ಪರಿಣಾಮವಾಗಿ ಸಾರ್ವತ್ರಿಕವಾಗಿ ಮೌಲ್ಯದಲ್ಲಿನ ಕುಸಿತವನ್ನನುಭವಿಸಿರುವ ರೂಪಾಯಿ, ಭಾರತದ ಆಂತರಿಕ ವ್ಯಾಪಾರದಲ್ಲಿ ಕುಸಿತದ ಚಿಹ್ನೆಯನ್ನು ತೋರಿಸುವುದಿಲ್ಲ. ವಿದೇಶೀ ಪಾವತಿಗಳಿಗೆ ಸಂಬಂಧಿಸಿದಂತೆ, ಭಾರತದ ಸ್ಥಿತಿ ತುಂಬಾ ಮಜಬೂತಾಗೇ ಇದೆ. ಇದಕ್ಕೆ ಕಾರಣ ಕೆಲವರು ತಪ್ಪಾಗಿ ಗ್ರಹಿಸಿರುವಂತೆ

೧. ಬೇರೆ ಬೇರೆ ರಾಷ್ಟ್ರಗಳಲ್ಲಿ ಚಿನ್ನದ ಅನುಭೋಗ ಕುತೂಹಲಕಾರಿಯಾದದ್ದು. ಕೆಳಗಿನ ಪಟ್ಟಿ ಇದನ್ನು ಪರಿಚಯಿಸುತ್ತದೆ.

ಭಾರತಕ್ಕೆ ಅನುಕೂಲವಾದ ವ್ಯಾಪಾರದ ಶಿಲ್ಕು ಇದ್ದುದಲ್ಲ, ಬದಲಿಗೆ ಅದರ ಬಳಿ ವಿದೇಶೀಯರು ಚಿನ್ನಕ್ಕೆ ಬದಲಾಗಿ ಒಪ್ಪಿಕೊಳ್ಳಬಹುದಾದ ಇತರ ಕೆಲವು ಅತ್ಯುಪಯುಕ್ತ ವಸ್ತುಗಳಿರುವುದು.[1] ಭಾರತದ ವಿದೇಶೀ ವ್ಯಾಪಾರವನ್ನು ಪ್ರವೇಶಿಸುವ ಸರಕುಗಳನ್ನು ಮೀರಿ ಸಾರ್ವತ್ರಿಕ ಮೌಲ್ಯ ಕುಸಿತ ಉಂಟಾದಾಗ ಮುಖ್ಯವಾಗಿ ನಿರ್ದಿಷ್ಟ ಕರೆನ್ಸಿ ಮೌಲ್ಯಕುಸಿತ ಉಂಟಾಗುತ್ತದೆ. ಮೌಲ್ಯಕುಸಿತ ಈ ಸರಕುಗಳಿಗೂ ತಟ್ಟುವುದು ಅನಿವಾರ್ಯ. ಇದರ ಬಗ್ಗೆ ಕೆಳಗಿನ ಉತ್ತಮ ವಿವರಣೆ ಇದೆ.[2]

"ಆಧುನಿಕ ಸಮಾಜದಲ್ಲಿ ವಿವಿಧ ಸರಕುಗಳ ಬೆಲೆಗಳು ಸಂಪೂರ್ಣವಾಗಿ ವ್ಯವಸ್ಥಿತವಾದ ಒಂದು ಪ್ರಕ್ರಿಯೆಯಾಗುತ್ತದೆ. ಇವು ಪರಸ್ಪರ ಸ್ಪಂದಿಸುತ್ತಾ ವ್ಯಾಪಾರ–ವ್ಯವಹಾರಗಳ ಉದ್ದೇಶಕ್ಕಾಗಿ ಹೊಂದಾಣಿಕೆಗಳನ್ನು ಉಂಟುಮಾಡಿಕೊಳ್ಳುತ್ತವೆ. ಅತಿಮುಖ್ಯ ಸರಕುಗಳ ಬೆಲೆಗಳ ವ್ಯತ್ಯಾಸ ಇಡೀ ವ್ಯವಸ್ಥೆಯ ಸಮತೋಲನವನ್ನು

---

**ಚಿನ್ನದ ಅನುಭೋಗ+ (ದಶಲಕ್ಷ ಪೌಂಡು ಸ್ಟರ್ಲಿಂಗ್‌ಗಳಲ್ಲಿ ಪ್ರತಿಶುದ್ಧ ಔನ್ಸಿಗೆ ೮೫ ಷಿ. ದರದಲ್ಲಿ)**

| | ೧೯೧೫ | ೧೯೧೬ | ೧೯೧೭ | ೧೯೧೮ | ೧೯೧೯ | ೧೯೨೦ |
|---|---|---|---|---|---|---|
| ಕೈಗಾರಿಕೆಗಳಿಗೆ (ಯುರೋಪು ಮತ್ತು ಅಮೆರಿಕದಲ್ಲಿ) | ೧೭.೦ | ೧೮.೦ | ೧೬.೦ | ೧೭.೦ | ೨೨.೦ | ೨೨.೦ |
| ಭಾರತದಲ್ಲಿ (ಆಯಾ ವರ್ಷದ ಮಾರ್ಚ್ ೩೧ರವರೆಗೆ) | ೧.೪ | ೫.೧ | ೧೯.೬ | –೩.೩ | ೨೭.೭ | ೫.೧ |
| ಚೈನಾ | –೧.೭ | ೨.೬ | ೨.೬ | ೦೪ | ೧೧.೫ | –೩.೭ |
| ಈಜಿಪ್ಟ್ | –೦.೮ | –೦.೨ | –೦.೧ | ೦.೦ | ೦.೦ | |
| ಹಣದ ರೂಪದಲ್ಲಿ ಲಭ್ಯವಾಗುವ ಶಿಲ್ಕು (ವ್ಯತ್ಯಾಸ) | ೮೦.೫ | ೬೮.೦ | ೪೮.೨ | ೬೪.೯ | ೧೩.೮ | ೪೬.೬ |
| **ವಿಶ್ವ** | **೯೬.೪** | **೯೩.೫** | **೮೬.೩** | **೭೯.೦** | **೭೫.೦** | **೭೦.೦** |

\+ ಈ ಅಂಕಿ–ಅಂಶಗಳನ್ನು ಜೋಸೆಫ್ ಕಿಚನ್‌ನ ದಿ ರಿವ್ಯೂ ಆಫ್ ಇಕನಾಮಿಕ್ ಸ್ಟಾಟಿಸ್ಟಿಕ್ಸ್ ಪ್ರಿಲಿಮಿನರಿ ವಾಲ್ಯೂಂ ೩, ನಂ. ೮ ಆಗಸ್ಟ್ ೧೯೨೧ ಪು. ೨೫೭ ರಿಂದ ತೆಗೆದುಕೊಳ್ಳಲಾಗಿದೆ. ೧೯೧೪ ಕ್ಕಿಂತ ಹಿಂದಿನ ಅಂಕಿಅಂಶಗಳು ಬೇಕಾಗಿದ್ದರೆ ನೋಡಿ, ಅಲ್ಲೇ ಪು. ೨೫೮. ೧೯೧೭ ಮತ್ತು ೧೯೧೯ ರಂತಹ ಅಸಾಧಾರಣ ವರ್ಷಗಳನ್ನು ಬಿಟ್ಟರೆ, ಮತ್ತು ಸಂಖ್ಯೆಗಳನ್ನು ತಲಾ ಅನುಭೋಗಕ್ಕೆ ಪರಿವರ್ತಿಸಿದರೆ, ಭಾರತದ ಅನುಭೋಗ ಅತ್ಯಲ್ಪವಾಗಿರುವುದು ಸ್ಪಷ್ಟವಾಗುತ್ತದೆ. ಜೊತೆಗೆ ಭಾರತದ ಅನುಭೋಗದ ಸಂಖ್ಯೆ, ಕೈಗಾರಿಕೆ ಮತ್ತು ಹಣಕಾಸು ಅನುಭೋಗಗಳೆರಡನ್ನೂ ಕೂಡಿಸಿಕೊಂಡಿದೆ. ಹಾಗೆಯೇ ಹೋಲಿಕೆ ಮಾಡುವಾಗ ವರ್ಷದ ಅವಧಿಗಳಲ್ಲಿನ ವ್ಯತ್ಯಾಸವನ್ನೂ ಗಮನಿಸಬೇಕು. ಭಾರತದಲ್ಲಿ ಮಾರ್ಚ್ ೩೧ ವರ್ಷಾಂತ್ಯ ಎನ್ನುವುದು ಗಮನಾರ್ಹ. ಸಾರ್ವತ್ರಿಕ ಸರಕುಗಳ ಮಾಧ್ಯಮದಲ್ಲಿ ಚಿನ್ನದ ಮೌಲ್ಯ ಕುಸಿಯುತ್ತಿರುವ ಈ ಅವಧಿಯನ್ನು ಅದರ ಉತ್ಪಾದನೆ ಕಡಿಮೆಯಾದರೂ ಯಾರೂ ದುಃಖಿಸಬೇಕಾಗಿಲ್ಲ. ವಾಸ್ತವವಾಗಿ ಚಿನ್ನದ ಉಪಯೋಗವನ್ನು ವಿಸ್ತರಿಸಬಹುದಾದರೆ ಅದು ಸ್ವಾಗತಿಸಬೇಕಾದ ವಿಷಯ. ಆದ್ದರಿಂದ ಭಾರತ ಚಿನ್ನವನ್ನು ಹೆಚ್ಚುಹೆಚ್ಚು ಆಮದು ಮಾಡಿಕೊಂಡರೆ ಅದನ್ನು ತಿರಸ್ಕಾರ ಭಾವದಿಂದ ನೋಡುವುದು ಜಾಣತನವಾಗುವುದಿಲ್ಲ. ಇಂದು ನಡೆಯುತ್ತಿರುವಂತೆ ಚಿನ್ನವನ್ನು ಹೆಚ್ಚು ಉಪಯೋಗಗಳಿಗೆ ಹಾಕುತ್ತಿರುವಾಗ, ಅದರ ಉತ್ಪಾದನೆಯೂ ಕಡಿಮೆಯಾಗಿದ್ದರೆ ಅದರಿಂದ ವಿಶ್ವಕ್ಕೆ ಲಾಭವೇ ಆಗುತ್ತದೆ.

೧. ೨. ಪ್ರೊ. ಮಾರ್ಷಲ್‌ರ ಸಾಕ್ಷಿ ಐ.ಸಿ.ಸಿ. ೧೮೯೮ ಪ್ರಶ್ನೆ ೧೧, ೭೯೩

೨. ಮಿಚೆಲ್, ಅಲ್ಲೇ ಪು. ೨೫೮

ವ್ಯತ್ಯಾಸಗೊಳಿಸುತ್ತದೆ. ಮತ್ತೆ ಸಮತೋಲನವನ್ನು ಸ್ಥಾಪಿಸುವುದಕ್ಕಾಗಿ, ವ್ಯಾಪಾರ ಕ್ರಿಯೆಗಳು ತಕ್ಷಣವೇ ಒಂದು ಸರಣಿಯಲ್ಲಿ ಮರುಹೊಂದಾಣಿಕೆಗಳನ್ನು ಮಾಡಿಕೊಳ್ಳುತ್ತವೆ."

ಭಾರತದ ವಿಷಯದಲ್ಲಿ, ಇತರ ರಾಷ್ಟ್ರಗಳಿಗೆ ಹೋಲಿಸಿದಂತೆ ಆಂತರಿಕ ವ್ಯಾಪಾರಕ್ಕಾಗಿ ಉತ್ಪಾದನೆ ಮತ್ತು ವಿದೇಶೀ ವ್ಯಾಪಾರಕ್ಕಾಗಿ ಉತ್ಪಾದನೆಗಳು ಚೆನ್ನಾಗಿ ಪರಸ್ಪರ ಬೆಸೆದುಕೊಂಡಿಲ್ಲ ಎನ್ನುವುದು ನಿಜ. ಇದರ ಪರಿಣಾಮವೆಂದರೆ, ಸಾರ್ವತ್ರಿಕ ಕರೆನ್ಸಿ ಮೌಲ್ಯಕುಸಿತದ ತೀವ್ರತೆಯನ್ನು ನಿಧಾನಿಸಿ, ಅದು ವಿದೇಶೀ ವ್ಯಾಪಾರದ ಸರಕುಗಳ ಮೇಲೆ ಬಹಳ ಬೇಗ ಪ್ರಭಾವ ಬೀರದಂತೆ ಮಾಡುತ್ತದೆ. ಆದರೆ ಕೊನೆಯಲ್ಲಿ ಬೆಲೆಗಳು ಏರದಂತೆ ಅದು ತಡೆಗಟ್ಟಲಾರದು. ಒಮ್ಮೆ ವಿದೇಶೀ ವ್ಯಾಪಾರದ ಸರಕುಗಳ ಬೆಲೆಗಳು ಏರಿದರೆ, ಅವು ಎಷ್ಟೇ ಅಗತ್ಯವಿದ್ದರೂ ವಿದೇಶೀಯರು ಅದನ್ನು ಕೊಳ್ಳುವುದಿಲ್ಲ. ಚಿನ್ನದ ಬೆಲೆ ಏರಿ ಅದರ ಪರಿಣಾಮವಾಗಿ ಕರೆನ್ಸಿಯ ನಿರ್ದಿಷ್ಟ ಮೌಲ್ಯಕುಸಿತ ಉಂಟಾಗಬೇಕು. ಈ ಹೇಳಿಕೆ, ಬ್ಯಾಂಕ್ ಆಫ್ ಇಂಗ್ಲೆಂಡಿನ ಮತ್ತು ಭಾರತದ ಅನುಭವಗಳೊಂದಿಗೆ ಹೊಂದಿಕೊಳ್ಳುತ್ತದೆ. ಬ್ಯಾಂಕ್ ಆಫ್ ಇಂಗ್ಲೆಂಡಿನ ವಿಷಯದಲ್ಲಿ ಬ್ಯಾಂಕು ನೋಟುಗಳ ಮೌಲ್ಯಕುಸಿತ ೧೮೦೯ರಲ್ಲಿ ಕಾಣಿಸಿಕೊಂಡಿತು. ಇದನ್ನು ಹಾರ್ನರ್ ಬಹುವಾಗಿ ದೂರಿದ್ದನಷ್ಟೆ. ಇದು ಸಸ್ಪೆನ್ಷನ್ ಘೋಷಿತವಾದ ಸುಮಾರು ೧೫ ವರ್ಷಗಳ ನಂತರ ನಡೆಯಿತು. ಭಾರತದ ವಿಷಯದಲಿ, ಕರೆನ್ಸಿಯ ನಿರ್ದಿಷ್ಟ ಮೌಲ್ಯಕುಸಿತ ಬೇರೆ ಬೇರೆ ಸಮಯದ ಅಂತರದಲ್ಲಿ ಕಾಣಿಸಿಕೊಂಡಿರುವುದನ್ನು ನಾವು ನೋಡುತ್ತೇವೆ. ಇದು ನಿರ್ದಿಷ್ಟ ಮೌಲ್ಯಕುಸಿತವನ್ನು ತಪ್ಪಿಸುವುದಕ್ಕಾಗಿ, ಕರೆನ್ಸಿಯ ಸಾರ್ವತ್ರಿಕ ಮೌಲ್ಯಕುಸಿತಕ್ಕೆ ಗಮನಕೊಡುವುದು ಅತ್ಯಗತ್ಯ ಎಂಬುದನ್ನು ತೋರಿಸುತ್ತದೆ.

ಈ ವಿವರಣೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ಇತಿಹಾಸ ಹಾಗೂ ತತ್ವಗಳು ಏನನ್ನು ಬೆಂಬಲಿಸುತ್ತಿವೆ ಎಂಬುದನ್ನು ಗಮನಿಸಿ ತಾವು ಒಂದು ತೀರ್ಮಾನಕ್ಕೆ ಬರಬಹುದು. ಅದೆಂದರೆ, ಕೆಲವು ಅವಧಿಗಳಲ್ಲಿ ರೂಪಾಯಿ ತನ್ನ ಚಿನ್ನದ ಮೌಲ್ಯವನ್ನು ಕಾಪಾಡಿಕೊಂಡಿದೆ ಎನ್ನುವುದು ವಿನಿಮಯ ಪ್ರಮಿತಿ ಒಂದು ದೃಢವಾದ ಪ್ರಮಿತಿ ಎಂಬುದಕ್ಕೆ ಪುಷ್ಟೀಕರಣ ನೀಡುವುದಿಲ್ಲ. ಆದ್ದರಿಂದ ಈ ಪ್ರಮಿತಿ ಉತ್ತಮವಾದದ್ದೆಂದು ಒಪ್ಪಿಕೊಳ್ಳಬೇಕಾಗಿಲ್ಲ. ಅದನ್ನು ಒಪ್ಪಿಕೊಂಡ ಮಾತ್ರಕ್ಕೆ ಮೇಲಿನ ವಿವರಣೆ ಸುಳ್ಳಾಗುವುದೂ ಇಲ್ಲ. ದೀರ್ಘಾವಧಿಯಲ್ಲಿ ಕರೆನ್ಸಿಯ ಮೌಲ್ಯಕುಸಿತ, ಚಿನ್ನದ ಮಾಧ್ಯಮದಲ್ಲಿ ಅದರ ನಿರ್ದಿಷ್ಟ ಮೌಲ್ಯಕುಸಿತವನ್ನು ತಂದೇ ತರುತ್ತದೆ. ಇದು ನಮ್ಮ ನಿರ್ದಿಷ್ಟ ನಿಲುವು. ಆದ್ದರಿಂದ, ನಿರ್ದಿಷ್ಟ ಮೌಲ್ಯಕುಸಿತ ಇಲ್ಲದಿರುವಾಗಲೂ ನಾವು ನಮ್ಮ ತೀರ್ಮಾನದಿಂದ ವಿಮುಖರಾಗಬೇಕಾಗಿಲ್ಲ. ನಮ್ಮ ಅಭಿಪ್ರಾಯವೆಂದರೆ, ಕರೆನ್ಸಿಯ ಸಾರ್ವತ್ರಿಕ ಮೌಲ್ಯಕುಸಿತದ ಮೇಲೆ ತಡೆಯನ್ನುಂಟುಮಾಡುವಂಥ ಕರೆನ್ಸಿ ಪದ್ಧತಿಯೇ ಅತ್ಯುತ್ತಮವಾದುದು. ವಿನಿಮಯ ಪ್ರಮಿತಿಯ ಪ್ರಮಿತಿ ಇಂಥ ತಡೆಯೊಡ್ಡುವ ಪ್ರಭಾವವನ್ನು ಹೊಂದಿಲ್ಲ. ವಾಸ್ತವವಾಗಿ, ಈ ಪ್ರಮಿತಿಯ ಚಿನ್ನದ ರಿಸರ್ವ್, ಮೌಲ್ಯಕುಸಿತವನ್ನು ನಿಯಂತ್ರಿಸಬೇಕಾದದ್ದು ತಾನೇ ಮೌಲ್ಯಕುಸಿತಕ್ಕೆ ನೇರವಾಗಿ ಕಾರಣವಾಗುತ್ತದೆ. ಸದ್ಯದಲ್ಲಿ ನಿರ್ದಿಷ್ಟ ಮೌಲ್ಯಕುಸಿತವಿಲ್ಲದಿರುವುದು ಒಂದು ಕುತೂಹಲಕಾರಿ ಪರಿಸ್ಥಿತಿ. ಆದರೆ ಅದನ್ನೇ ವಿನಿಮಯ ಪ್ರಮಿತಿಗೆ ಆಧಾರವೆಂದು ಪರಿಗಣಿಸುವುದು, ಮೂರ್ಖರ ಪ್ರಪಂಚದಲ್ಲಿ ವಾಸಮಾಡುವಂತಾಗುತ್ತದೆ.

# ಅಧ್ಯಾಯ ೧೯

## ಮರಳಿ ಸುವರ್ಣ ಪ್ರಮಿತಿಗೆ

ರೂಪಾಯಿ ಮತ್ತು ಚಿನ್ನದ ನಡುವಿನ ಮೌಲ್ಯದ ಸಮತೆಯನ್ನು ರಕ್ಷಿಸಬಲ್ಲ ಸಾಮರ್ಥ್ಯ ಹೊಂದಿದೆಯೆಂದು ವಿನಿಮಯ ಪ್ರಮಿತಿಯ ಪರವಾಗಿ ಮಾಡಲಾಗಿರುವ ವಾದದ ಹಿನ್ನೆಲೆಯಲ್ಲಿ ಆ ಪ್ರಮಿತಿಯನ್ನು ನಾವು ಪರಿಶೀಲಿಸಿದ್ದೇವೆ. ಈ ಪ್ರಮಿತಿಯ ಗುಣಾವಗುಣಗಳನ್ನು ವಿಮರ್ಶಿಸಲು ಈ ಮಾನದಂಡವೇ ಸೂಕ್ತವೆಂದು ಚೇಂಬರ್‌ಲಿನ್ ಸಮಿತಿಯು ನಿಗದಿಪಡಿಸಿತ್ತು. ಆದರೆ, ಆ ಮಾನದಂಡದ ಸಮರ್ಪಕತೆಯು ನಿರ್ವಿವಾದವಾಗಿದೆಯೇ? ಪರ್ಯಾಯವಾಗಿ, ರೂಪಾಯಿಯು ಚಿನ್ನದೊಡನೆ ಸಮತೆಯನ್ನು ಸಂರಕ್ಷಿಸಿಕೊಂಡು ಬಂದಿದೆಯೆನ್ನುವುದಾದರೆ, ಅದು ಬಹುಮಟ್ಟಿಗೆ ಸಾಧ್ಯವಾಗಿಲ್ಲವಾದರೂ, ಅದರಿಂದಾಗಿ ಒಳ್ಳೆಯ ಹಣದ ವ್ಯವಸ್ಥೆಯ ಎಲ್ಲಾ ಉದ್ದೇಶಗಳನ್ನು ಸಾಧಿಸಲಾಗಿದೆ ಎನ್ನಬಹುದೇ?

"ಈಗ ಚಾಲ್ತಿಯಲ್ಲಿರುವ ವಿನಿಮಯ ಪ್ರಮಿತಿಯಲ್ಲಿ ಹಣಕ್ಕೆ ತಾನು ಸಂಪಾದಿಸುವ ಚಿನ್ನದ ಪ್ರಮಾಣವೊಂದೇ ಮುಖ್ಯ ಎಂಬ ರೀತಿಯಲ್ಲಿ ಹಣವು ಚಿನ್ನದೊಡನೆ ಸಮತೆಯನ್ನು ಹೊಂದಿರುವಂತೆ ನಾಣ್ಯೀಕರಣವನ್ನು ನಿರ್ವಹಿಸಿಕೊಂಡು ಬರಲಾಗುತ್ತಿದೆ.[೧] ಆದರೆ ಹಣವನ್ನು ಬಳಸುವಾಗ ವಾಸ್ತವವಾಗಿ ಆಸಕ್ತಿಯಿರುವುದು ಹಣ ಯಾವ ಪ್ರಮಾಣದ ಚಿನ್ನಕ್ಕೆ ತೂಗುತ್ತದೆಯೆಂಬುದಲ್ಲ; ಬದಲಿಗೆ ಯಾವ ಪ್ರಮಾಣದ ಸಾಮಾನ್ಯ ಸರಕುಗಳಷ್ಟು (ಅವುಗಳಲ್ಲಿ ಚಿನ್ನ ಅತ್ಯಲ್ಪ ಭಾಗ) ಬೆಲೆ ಬಾಳುತ್ತದೆ ಎಂಬುದೇ ಆಗಿದೆ. ಆದುದರಿಂದಲೇ ಎಲ್ಲ ಕಡೆಯೂ ಸಾಮಾನ್ಯ ಸರಕುಗಳಿಗೆ ಸಂಬಂಧಿಸಿದಂತೆ ಹಣವನ್ನು ಸ್ಥಿಮಿತಗೊಳಿಸುವತ್ತ ಪ್ರಯತ್ನ ಸಾಗಿದೆ. ಅದು ಸಹಜವೂ ಕೂಡ. ಏಕೆಂದರೆ, ಜನತೆಯ ಯೋಗಕ್ಷೇಮವನ್ನು ಉಪಯುಕ್ತ ಸರಕು ಸೇವೆಗಳು ನಿರ್ಣಯಿಸುವಂತೆ ಅಮೂಲ್ಯ ಲೋಹಗಳು ನಿರ್ಣಯಿಸುವುದಿಲ್ಲ. ಚಿನ್ನದ ರೂಪದಲ್ಲಿ ಹಣದ (ಕರೆನ್ಸಿ) ಸ್ಥಿಮಿತತೆಯು ಕೇವಲ ಚಿನ್ನದ ವ್ಯಾಪಾರಿಗಳಿಗೆ ಮುಖ್ಯವಾಗುತ್ತದೆ. ಆದರೆ ಸಾಮಾನ್ಯ ಸರಕುಗಳ ರೂಪದಲ್ಲಿ ಹಣದ ಸ್ಥಿಮಿತತೆಯು ಚಿನ್ನದ ವ್ಯಾಪಾರಿಗಳೂ ಸೇರಿದಂತೆ ಎಲ್ಲರ ಮೇಲೂ ಪರಿಣಾಮ ಬೀರುತ್ತದೆ. ಪ್ರೊಫೆಸರ್ ಕೇನ್ಸ್ ಕೂಡ ೧೯೧೯ರ ಇಂಡಿಯನ್ ಕರೆನ್ಸಿ ಕಮಿಟಿಯ ಮುಂದೆ ಸಾಕ್ಷ್ಯ ನೀಡುತ್ತಾ ಹೀಗೆ ಹೇಳಿದ್ದಾರೆ.[೨]:– "ಭಾರತದಲ್ಲಿ ಬೆಲೆಗಳನ್ನು ಯಾವುದೇ ಒಂದು ಗೊತ್ತಾದ ಲೋಹ ಅಥವಾ ಗೊತ್ತಾದ ವಿದೇಶೀ ಹಣಕ್ಕೆ ಹೊಂದಿಸುವ ಬದಲಾಗಿ ಸರಕುಗಳಿಗೆ ಸಂಬಂಧಿಸಿದಂತೆ ಸ್ಥಿಮಿತಗೊಳಿಸುತ್ತಲೇ ಇರುವುದು ಸದಾ ನನ್ನ ಗುರಿ. ಬಹುಶಃ ಭಾರತಕ್ಕೆ ಅದೇ ಹೆಚ್ಚು ಮುಖ್ಯ ಎಂದು ನನ್ನ ಅನಿಸಿಕೆ".

ಆ ಉದ್ದೇಶವನ್ನು ಸಾಧಿಸಲು ಅವರು ಸಮರ್ಥಿಸಿದ ಏರಿಕೆ ವಿನಿಮಯ ನಿವಾರಣೋಪಾಯವನ್ನು ಹೇಗೆ ಬಳಸಿಕೊಂಡರೆಂಬುದನ್ನು ಅರ್ಥ ಮಾಡಿಕೊಳ್ಳುವುದು ಬಹುಶಃ ಸ್ವಲ್ಪಮಟ್ಟಿಗೆ ಕಷ್ಟವಾಗುತ್ತದೆ.

---

೧. ಫಿಷರ್ : ಪರ್ಚೇಸಿಂಗ್ ಪವರ್ ಆಫ್ ಮನಿ, ೧೯೧೧, ಪು. ೩೪೦

೨. ಮ. ೨,೬೮೦

ವಿನಿಮಯ ಮೌಲ್ಯವು ರೂಪಾಯಿಯ ಕೊಳ್ಳುವ ಶಕ್ತಿಗೆ ಹೊಂದಿಕೊಳ್ಳದಿದ್ದರೂ ವಿನಿಮಯ ದರವನ್ನು ಏರಿಸಿದುದು ನಿರರ್ಥಕ ಯೋಜನೆಯೇ ಸರಿ. ಬೆಲೆಯನ್ನು ನಿರ್ಧರಿಸುವ ಒಂದು ನಿರ್ಣಾಯಕವಾಗಿ ಅವರು ಆರೋಪಿಸಿದ ಗುಣವನ್ನು ವಿನಿಮಯ ಏರಿಕೆಯು ಸ್ವಲ್ಪವಾದರೂ ಹೊಂದಿತ್ತೆಂದು ಹೇಳಲಾಗುವುದಿಲ್ಲ. ಯಾವುದೇ ದೃಷ್ಟಿಯಲ್ಲಿ ಅದು ಪ್ರಸಕ್ತ ಬೆಲೆ ಮಟ್ಟದ ಮೇಲೆ ಪ್ರಭಾವ ಬೀರುವುದು ಸಾಧ್ಯವಿರಲಿಲ್ಲ. ಅಷ್ಟೇ ಅಲ್ಲ, ಏರಿಕೆ ವಿನಿಮಯವು ಬರಲಿರುವ ದಿನಗಳಲ್ಲಿನ ಬೆಲೆಗಳ ಏರಿಕೆಯನ್ನು ತಡೆಗಟ್ಟುವಂತೆಯೂ ಇರಲಿಲ್ಲ. ಹೆಚ್ಚೆಂದರೆ, ಅದು ಕೇವಲ ಬೆಲೆ ಅಳೆಯುವ ಆಧಾರಮಟ್ಟವನ್ನು ಮಾತ್ರ ಬದಲಾಯಿಸಬಹುದಾಗಿದ್ದಿತು. ಹಳೆಯ ಆಧಾರ ಮಟ್ಟದಿಂದ ಬೆಲೆಗಳೂ ಹಿಂದೆ ವ್ಯತ್ಯಾಸವಾದಂತೆಯೇ ಭವಿಷ್ಯದ ಬೆಲೆಗಳು ಹೊಸ ಆಧಾರಮಟ್ಟದಿಂದ ಸುಲಭವಾಗಿ ವ್ಯತ್ಯಾಸಗೊಳ್ಳಬಹುದಾಗಿತ್ತು. ಬೇರೆ ಮಾತುಗಳಲ್ಲಿ ಹೇಳುವುದಾದರೆ ವಿನಿಮಯವು ಬೆಲೆಮಟ್ಟದ ಸೂಚಿ ಮತ್ತು ಅದನ್ನು ನಿಯಂತ್ರಿಸುವ ಸಲುವಾಗಿ ಬೆಲೆಯ ಮಟ್ಟವನ್ನು ನಿಯಂತ್ರಿಸುವುದು ಆವಶ್ಯಕವೆಂದು ಭಾವಿಸಿದರೇ ಹೊರತು ಅದಕ್ಕೆ ಕೇವಲ ಸಹಿಸಿಕೊಳ್ಳಲಾಗದ ಮತ್ತು ಸಹ್ಯವಲ್ಲದ ಹೊಸ ಹೆಸರನ್ನು ಕೊಡುವ ವಿಷಯವನ್ನು ಕೇನ್ಸ್ ಗಮನಿಸಿದ ಹಾಗೆ ಕಾಣುವುದಿಲ್ಲ. ಇದನ್ನು ಪುಷ್ಟೀಕರಿಸುವಂತೆ ೧೯೨೦ರಲ್ಲಿ ವಿಧಾಯಕವಾಗಿ ರೂಪಾಯಿಗೆ ೨ ಷಿಲಿಂಗ್ (ಚಿನ್ನ) ಮೌಲ್ಯವಿದ್ದಾಗ ವಾಸ್ತವವಾಗಿ ರೂಪಾಯಿಗೆ ೧ ಷಿಲಿಂಗ್ ೪ ಪೆನ್ನಿ ಸ್ಟರ್ಲಿಂಗ್‌ನಷ್ಟೂ ಬೆಲೆ ತರಲಾಗಲಿಲ್ಲ. ಪರಿಣಾಮವಾಗಿ ರೂಪಾಯಿಯ ವಿನಿಮಯ ದರವು ಅದರ ಕೊಳ್ಳುವ ಶಕ್ತಿಯು ನಿರ್ಧರಿಸಿದ ಮಟ್ಟಕ್ಕೆ ಇಳಿಯಿತು. ಈ ಪ್ರಶ್ನೆಯನ್ನು ಬಿಟ್ಟರೂ ಹಣದ ಮೌಲ್ಯವನ್ನು ಸಾಮಾನ್ಯ ಸರಕುಗಳಿಗೆ ಸಂಬಂಧಿಸಿದಂತೆ ಸ್ಥಿಮಿತವಾಗಿರಿಸುವುದೇ ವಾಸಿ ಎಂಬುದಕ್ಕೆ ವಿನಿಮಯ ಪ್ರಮಿತಿಯ ದಕ್ಷ ಬೆಂಬಲಿಗರ ಅಭಿಪ್ರಾಯವನ್ನು ಒಪ್ಪಬೇಕಾಗಿದೆ.

ಒಂದು ಕರೆನ್ಸಿ ವ್ಯವಸ್ಥೆಯನ್ನು ತೀರ್ಮಾನಿಸಲು ಇದನ್ನು ಯುಕ್ತ ಮಾನದಂಡವೆಂದು ಭಾವಿಸಿದರೆ, ಟಂಕಸಾಲೆಯು ಮುಚ್ಚಿದ ೧೮೯೩ ರಿಂದಲೂ ಭಾರತದ ಬೆಲೆಗಳ ಗತಿ ಯಾವುದೆಂಬುದನ್ನು ನಾವು ಕೇಳಲೇಬೇಕಾಗುತ್ತದೆ. ಇದು ಮೂಲಭೂತ ಪ್ರಶ್ನೆಯಾಗಿದೆ. ಮತ್ತು ವಿನಿಮಯ ಪ್ರಮಿತಿಯ ಗುಣಗಳನ್ನು ಪ್ರಶಂಸಿಸಿದವರಲ್ಲಿ ಯಾರೊಬ್ಬರೂ ಇದುವರೆಗೆ ಈ ಬಗ್ಗೆ ಗಮನ ನೀಡಿಲ್ಲ. ಈ ದೃಷ್ಟಿಯಿಂದ ಪ್ರೊ. ಕೆಮ್‌ರರ್ ಅಥವಾ ಪ್ರೊ. ಷಿರ್ರಾಸ್ ಅವರ ಬರವಣಿಗೆಗಳಲ್ಲಿ ಕೂಡ ಈ ಬಗ್ಗೆ ಏನೂ ಸಿಗುವುದಿಲ್ಲ. ಭಾರತದಲ್ಲಿನ ಬೆಲೆಗಳ ಸಮಸ್ಯೆಯ[೧] ಬಗ್ಗೆ ಭಾರತದ ಕರೆನ್ಸಿ ಕುರಿತ ಚೇಂಬರ್‌ಲಿನ್ ಕಮಿಷನ್ ಅಥವಾ ಸ್ಮಿತ್ ಸಮಿತಿಯು ಗಮನ ಹರಿಸಿಯೇ ಇಲ್ಲ ಮತ್ತು ಈ ಕುರಿತು ಇತ್ಯರ್ಥವಾಗದ ಹೊರತು ಆ ಪ್ರಮಿತಿಯ ಯುಕ್ತಾಯುಕ್ತತೆಯನ್ನು ಕುರಿತು ಯಾರೇ ಆಗಲಿ ಯಾವುದೇ ಅಭಿಪ್ರಾಯವನ್ನು ಕೊಡುವುದು ನಿಜವಾಗಿಯೂ ಕಷ್ಟವಾಗುತ್ತದೆ.

ಬೆಲೆಗಳ ದೃಷ್ಟಿಯಿಂದ ವಿನಿಮಯ ಪ್ರಮಿತಿಯ ಪರಿಶೀಲನೆಯನ್ನು ಕೈಗೊಳ್ಳುವ ಸಂದರ್ಭದಲ್ಲಿ ಈ ಅಭಿಗೃಹೀತವನ್ನು ಇಟ್ಟುಕೊಳ್ಳುವುದು ಸರಿಯೆಂದೆನಿಸುತ್ತದೆ. ಅದೇನೆಂದರೆ, ಬೆಳ್ಳಿಯ ಮುಕ್ತ ನಾಣ್ಯೀಕರಣಕ್ಕೆ ಭಾರತೀಯ ಟಂಕಸಾಲೆಗಳನ್ನು ಮುಚ್ಚಲು ರೂಪಾಯಿಯು ಇಳಿತಾಯಗೊಂಡ ಕರೆನ್ಸಿಯಾಗಿ ಬೆಲೆಗಳು ಹೆಚ್ಚಾದುದು ಮುಖ್ಯ ಕಾರಣಗಳಲ್ಲಿ ಒಂದಾಗಿತ್ತು ಎಂಬುದು.[೨] ಟಂಕಸಾಲೆಗಳು ಮುಚ್ಚಿದ ನಂತರ ಭಾರತದಲ್ಲಿ

---

೧. ಸ್ಮಿಥ್ ಸಮಿತಿಯನ್ನು ಇದರಿಂದ ಹೊರತುಪಡಿಸಬಹುದಾಗಿದೆ, ಆದರೆ ಹೆಚ್ಚಿನ ವಿನಿಮಯ ದರಕ್ಕೆ ಅದನ್ನು ಆಧಾರ ಮಾಡುವುದೇ ಅದರ ಉದ್ದೇಶವಾಗಿತ್ತು.

೨. ಈ ಮೇಲೆ ಹೇಳಲಾದ ಗ್ರಂಥದ ಅಧ್ಯಾಯ IIIನ್ನು ನೋಡಿ.

ಬೆಲೆಗಳು ಖಂಡಿತಕ್ಕೂ ಕಡಿಮೆಯಾಗಬೇಕಿತ್ತು; ಏಕೆಂದರೆ ಪ್ರೊ. ಫಿಷರ್[೧] ಅವರ ಉಲ್ಲೇಖವನ್ನು ಬಳಸುವುದಾದರೆ ಹಣ ಸಂಗ್ರಹಾಲಯಕ್ಕೂ ಮತ್ತು ಬೆಳ್ಳಿ ಗಟ್ಟಿಯ ಸಂಗ್ರಹಾಲಯಕ್ಕೂ ನಡುವೆ ಇರುವ ಆಂತರಿಕ ಸಂಪರ್ಕವು ಟಂಕಸಾಲೆಯ ಮುಚ್ಚುವಿಕೆಯಿಂದಾಗಿ ಕಡಿದುಹೋಗಿ ಬೆಳ್ಳಿಗಟ್ಟಿಯ ಸಂಗ್ರಹದಿಂದ ಹಣ ಸಂಗ್ರಹಾಲಯಕ್ಕೆ ಬೆಳ್ಳಿಯು ಹಾದುಹೋಗುವ ವ್ಯವಸ್ಥೆಯನ್ನು ತಡೆಗಟ್ಟಿತು. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಹೊಸದಾಗಿ ಗಣಿಯಿಂದ ತೆಗೆದ ಬೆಳ್ಳಿಯು ಟಂಕಸಾಲೆಯು ಮುಚ್ಚಿದ ನಂತರ ಹಣವಾಗಿ ಪರಿವರ್ತಿತವಾಗಲು ಸಾಧ್ಯವಾಗಲಿಲ್ಲ ಮತ್ತು ಚಲಾವಣೆಯಲ್ಲಿದ್ದ ರೂಪಾಯಿಯ ಕೊಳ್ಳುವ ಶಕ್ತಿಯನ್ನು ಕಡಿಮೆ ಮಾಡಲಾಗಲಿಲ್ಲ. ಇದು ಹೀಗಾಗುವುದಾದರೆ ಟಂಕಸಾಲೆಯ ಮುಚ್ಚುವಿಕೆಯ ಪರಿಣಾಮದಿಂದ ಎಷ್ಟು ಆಶಾಭಂಗವಾಗಿರಬಹುದು; ಬೆಲೆಗಳ ದೃಷ್ಟಿಯಿಂದ ಹಿಂದೆಂದೂ ಆಗಿರದಂತೆ ರೂಪಾಯಿಯು ಒಂದು ಸಮಸ್ಯೆಯಾಗಿದೆ. ಟಂಕಸಾಲೆಯು ಮುಚ್ಚಿದಂದಿನಿಂದ (ನೋಡಿ. ನಕ್ಷೆ VI) ಭಾರತದಲ್ಲಿ ಬೆಲೆಗಳು ಏರುತ್ತಿರುವುದು ದೇಶದ ಇತಿಹಾಸದಲ್ಲಿ ಅಭೂತಪೂರ್ವವಾಗಿಯೇ ಇದೆ. ವಾಸ್ತವವಾಗಿ, ಟಂಕಸಾಲೆಯು ಮುಚ್ಚಿದ ನಂತರ ಅಂದರೆ – ಆಂತರಿಕ ಸಂಪರ್ಕ ಕಡಿದು ಹೋದಾಗ ಉಂಟಾದ ಬೆಲೆ ಏರಿಕೆಗೆ ಹೋಲಿಸಿದರೆ, ಟಂಕಸಾಲೆ ಮುಚ್ಚುವುದಕ್ಕೆ ಮುಂಚೆ ಅಂದರೆ, ಬೆಳ್ಳಿಗಟ್ಟಿ ಸಂಗ್ರಹಕ್ಕೂ ಮತ್ತು ಹಣ ಸಂಗ್ರಹಕ್ಕೂ ಸಂಪರ್ಕ ಸರಿಯಾಗಿದ್ದಾಗ ಅಥವಾ ದೃಢವಾಗಿದ್ದಾಗ ಉಂಟಾದ ಬೆಲೆ ಏರಿಕೆಯು ಅತ್ಯಂತ ಕ್ಷುಲ್ಲಕವೇ ಎಂಬುದನ್ನು ಪರಿಗಣಿಸಲೇಬೇಕು. ಬೆಲೆಗಳ ದೃಷ್ಟಿಯಿಂದ ಟಂಕಸಾಲೆಯ ಮುಚ್ಚುವಿಕೆಯಿಂದ ಅನುಕೂಲಕ್ಕಿಂತ ಅನಾನುಕೂಲವೇ ಹೆಚ್ಚಾಗಿದೆ. ಏಕೆಂದರೆ ಬೆಲೆಮಟ್ಟ ಸದಾ ಏರುತ್ತಿರುವ ಪರಿಸ್ಥಿತಿಯಲ್ಲಿ ಭಾರತದಲ್ಲಿ ಜೀವನವು ಸಾಕಷ್ಟು ಅಸಹನೀಯವಾಗಿದೆ. ಭಾರತೀಯ ಜನತೆ ಹೆಚ್ಚಿನ ಬೆಲೆಗಳಿಂದಾಗಿ ಅನುಭವಿಸಿರುವಷ್ಟು ನೋವನ್ನು ಇನ್ನು ಯಾರೂ ಅನುಭವಿಸಿಲ್ಲ. ಯುದ್ಧದ ಅವಧಿಯಲ್ಲಿ ಬೆಲೆಯ ಮಟ್ಟವು ಎಷ್ಟರಮಟ್ಟಿಗೆ ತಲೆ ಗಿರುಗುಟ್ಟುವಷ್ಟು ಎತ್ತರಕ್ಕೆ ತಲುಪಿತೆಂದರೆ ಗಂಡಸರು ಮತ್ತು ಹೆಂಗಸರು ಆಹಾರ ಮತ್ತು ಬಟ್ಟೆಯನ್ನು ಕೊಳ್ಳಲಾಗದೆ ಆತ್ಮಹತ್ಯೆ ಮಾಡಿಕೊಂಡ ಪ್ರಸಂಗಗಳ ಸಂಖ್ಯೆಯೇನೂ ಅತಿ ಅಲ್ಪವೇನಲ್ಲ. ಹೇಗಾದರೂ ಸರಿಯೇ ಭಾರತ ಪೂರ್ಣವಾಗಿ ಬೆಳ್ಳಿ ಪ್ರಮಿತಿಯಾಗಿಯೇ ಉಳಿದಿದ್ದರೆ ಮತ್ತು ಟಂಕಸಾಲೆಗಳನ್ನು ಮುಚ್ಚದೇ ಹೋಗಿದ್ದರೆ ಭಾರತದಲ್ಲಿ ಬೆಲೆಗಳ ಏರಿಕೆಯು ಇನ್ನೂ ಹೆಚ್ಚಾಗುತ್ತಿರಲಿಲ್ಲವೆ ಎಂದು ವಾದಮಾಡಬಹುದು. ನಿಸ್ಸಂದೇಹವಾಗಿ, ಈ ಅಭಿಪ್ರಾಯದ ಪರವಾಗಿ ಸಾಕಷ್ಟು ಹೇಳಬಹುದು ಬೆಳ್ಳಿಯು ಸಾರ್ವತ್ರಿಕವಾಗಿ ತಿರಸ್ಕೃತವಾಗುವುದರಿಂದ ಅದು ಮೌಲ್ಯದ ಮಾನದಂಡವಾಗಿ ಕಾರ್ಯನಿರ್ವಹಿಸುವುದರಲ್ಲಿ ನಿಷ್ಪ್ರಯೋಜಕವೆಂಬುದು ಸ್ವತಃಸಿದ್ಧ ಸತ್ಯ; ಆ ಮಟ್ಟಿಗೆ ವಿನಿಮಯ ಪ್ರಮಿತಿಯು ಶುದ್ಧ ಬೆಳ್ಳಿಯ ಪ್ರಮಿತಿಗಿಂತಲೂ ಉತ್ತಮ. ಆದರೆ, ಅದು ಸುವರ್ಣ ಪ್ರಮಿತಿಯಷ್ಟು ಉತ್ತಮವೇ?

ವಾಸ್ತವ ವಿನಿಮಯ ದರಗಳ ವಿವರಣೆಯಾಗಿರುವ ಕೊಳ್ಳುವ ಶಕ್ತಿ ಸಮತೆ ಸಿದ್ಧಾಂತದ ಆಧಾರದ ಮೇಲೆ ಈ ಪ್ರಶ್ನೆಗೆ ಒಪ್ಪುವ ರೀತಿಯಲ್ಲಿ ಉತ್ತರಿಸಬಹುದು. ಒಂದು ಪಕ್ಷ ರೂಪಾಯಿಯು ಚಿನ್ನದ ಮೌಲ್ಯವನ್ನು ಸಂರಕ್ಷಿಸಿಕೊಂಡು ಬರಲಾಗಿತ್ತು ಎನ್ನುವುದಾದರೆ ಅದಕ್ಕೆ ಕಾರಣ ಚಿನ್ನ ಮತ್ತು ರೂಪಾಯಿಗಳ ಬೆಲೆಗಳು ಸಮವಾಗಿದ್ದುವು[೨] ಎಂಬುದಾಗಿ ವಾದಿಸಬಹುದು. ಇದನ್ನೆ ವಿನಿಮಯ ಪ್ರಮಿತಿಯು ಲಕ್ಷ್ಯದಲ್ಲಿಡುತ್ತದೆ

೧. ಪರ್ಚೇಸಿಂಗ್ ಪವರ್ ಆಫ್ ಮನಿ, ೧೯೧೧, ಪು. ೧೨೮

೨. ವಿನಿಮಯ ಪ್ರಮಿತಿಯ ಪರವಾಗಿ ಈ ಧೋರಣೆ ಅಥವಾ ವಾದವನ್ನು ಪ್ರೊ. ಕೇನ್ಸ್ ಆಗಲೀ ಪ್ರೊ. ಕೆಮ್‌ರರ್ ಅವರಾಗಲೀ ಪ್ರತಿಪಾದಿಸಿಲ್ಲವೆಂಬುದನ್ನು ಗಮನಿಸಬೇಕಾಗಿದೆ. ಏನಾದರೂ ಇದ್ದರೆ, ಎಲ್ಲ ಬೆಲೆಗಳ ಸಮಾನತೆಯ ಊಹೆಯ ವಿರುದ್ಧವಾಗಿ ಇಬ್ಬರೂ ವಾದಿಸಿದ್ದಾರೆ.

ಮತ್ತು ಸಾಧಿಸಿದೆ ಎಂದು ಹೇಳಬಹುದು. ಏಕೆಂದರೆ, ಭಾರತದ ಒಳಗೆ ಮತ್ತು ಭಾರತದ ಹೊರಗೆ ಬೆಲೆಗಳು ಒಂದೇ ಮಟ್ಟದಲ್ಲಿದ್ದವು ಎಂಬುದಕ್ಕೆ ಸುವರ್ಣ ಪ್ರಮಿತಿಯ ಕಾಪುನಿಧಿಯು ಅಪರೂಪವಾಗಿಯೂ ಬರಿದಾಗದೆ ಇತ್ತು ಎಂಬ ಸಂಗತಿಯೇ ಸಾಕ್ಷಿಯಾಗಿದೆ. ಇಂಥ ಬುದ್ಧಿರೂಢ ವಿಚಾರಗಳಿಂದಾಗಿಯೇ ವಿನಿಮಯ ಪ್ರಮಿತಿಯು ಸುವರ್ಣ ಪ್ರಮಿತಿಯಷ್ಟೇ ಒಳ್ಳೆಯದೆಂಬುದಾಗಿ ಪರಿಗಣಿಸಬಹುದು.

ಭಾರತದ ಬೆಲೆಗಳು ಚಿನ್ನದ ಬೆಲೆಗಳಿಗಿಂತ ಹೆಚ್ಚಾಗಿರದಿದ್ದರೂ ಅವುಗಳನ್ನು ಏತಕ್ಕಾಗಿ ಹೆಚ್ಚಿನ ಮಟ್ಟದಲ್ಲಿರಿಸಬೇಕಾಗಿತ್ತು ಮತ್ತು ಭಾರತದ ಬೆಲೆಗಳನ್ನು ಕಡಿಮೆ ಮಟ್ಟದಲ್ಲಿರಿಸುವುದು ಉತ್ತಮವಾಗಿತ್ತಲ್ಲವೇ ಎಂಬ ಪ್ರಶ್ನೆ ಹಾಕಬಹುದು. ಆದರೆ, ಈ ಪ್ರಶ್ನೆಯನ್ನು ನಾವು ಎತ್ತುವುದಿಲ್ಲ. ಭಾರತದ ಬೆಲೆಗಳು ಚಿನ್ನದ ಬೆಲೆಗಳಷ್ಟೇ ಹೆಚ್ಚಾಗಿದ್ದುವು ಎಂಬುದಷ್ಟೇ ನಮಗೆ ಸಾಕು. ಪ್ರಕೃತ ಭಾರತದ ಬೆಲೆಗಳು ಚಿನ್ನದ ಬೆಲೆಗಳಷ್ಟೇ ಏರಿದವೇ? ನಕ್ಷೆಯನ್ನು ಗಮನಿಸಿದರೆ ಭಾರತದಲ್ಲಿ ಬೆಲೆಗಳು ಚಿನ್ನದ ಬೆಲೆಗಳಷ್ಟೇ ಅಲ್ಲ ಅವುಗಳಿಗಿಂತಲೂ ಹೆಚ್ಚಾಗಿ ಏರಿದವೆಂಬ ಆಶ್ಚರ್ಯಕರ ಸಂಗತಿ ತಿಳಿದುಬರುತ್ತದೆ. ವಿನಿಮಯ ಪ್ರಮಿತಿಯ ಕಾರ್ಯದಕ್ಷತೆಯನ್ನು ಪರಿಶೀಲಿಸಲು ಭಾರತದ ಬೆಲೆಗಳನ್ನು ಚಿನ್ನದ ಬೆಲೆಗಳಿಗೆ ಹೋಲಿಸುವಾಗ ಸಹಜವಾಗಿ ನಾವು ಯುದ್ಧ ಅವಧಿಯನ್ನು ಕೈಬಿಡಬೇಕು. ಏಕೆಂದರೆ, ಬಹುತೇಕ ರಾಷ್ಟ್ರಗಳಿಂದ ಆ ಅವಧಿಯಲ್ಲಿ ಚಿನ್ನವನ್ನು ಮೌಲ್ಯದ ಮಾನದಂಡವಾಗಿ ರದ್ದುಗೊಳಿಸಲಾಗಿತ್ತು. ಒಂದು ಪಕ್ಷ ಈ ಅವಧಿಯನ್ನು ಗಣನೆಗೆ ತೆಗೆದುಕೊಂಡರೂ ಅದು ವಸ್ತುತಃ ತೀರ್ಮಾನದ ಮೇಲೆ ಪ್ರಭಾವ ಬೀರುವುದಿಲ್ಲ. ಏಕೆಂದರೆ ಭಾರತ ಯುದ್ಧ ಹೂಡಿದ ರಾಷ್ಟ್ರವಾಗಿಲ್ಲದಿದ್ದರೂ ಯುದ್ಧದ ಅವಧಿಯಲ್ಲಿ ಭಾರತದಲ್ಲಿ ಬೆಲೆಗಳು ಅತಿಮೌಲ್ಯದ ಕರೆನ್ಸಿ ರಾಷ್ಟ್ರಗಳಲ್ಲಿನ ಬೆಲೆಗಳಿಗಿಂತ ಗಮನಾರ್ಹವಾಗಿ ಕಡಿಮೆಯಾಗಿರಲಿಲ್ಲ ಮತ್ತು ಅಲ್ಪಾವಧಿಯನ್ನು ಬಿಟ್ಟರೆ ಅಮೆರಿಕ ಸಂಯುಕ್ತ ಸಂಸ್ಥಾನದಲ್ಲಿ ಬೆಲೆಗಳು ಚಿನ್ನದ ಬೆಲೆಗಳಿಗಿಂತ ಖಂಡಿತವಾಗಿಯೂ ಹೆಚ್ಚಿನ ಮಟ್ಟದಲ್ಲಿದ್ದುವು.

ವಿನಿಮಯ ಪ್ರಮಿತಿಯ ಪರವಾಗಿ ಮಾಡಲಾದ ಗ್ರಹಿಕೆಗೆ ವಾಸ್ತವಾಂಶಗಳು ಅಥವಾ ವಸ್ತುಸ್ಥಿತಿಯು ಹೊಂದಿಕೊಳ್ಳುವುದಿಲ್ಲ ಎಂಬುದು ಸುಸ್ಪಷ್ಟ. ಇಂಗ್ಲೆಂಡಿನ ಸಾರ್ವತ್ರಿಕ ಬೆಲೆಯ ಮಟ್ಟಕ್ಕಿಂತಲೂ ಭಾರತದ ಬೆಲೆಗಳಲ್ಲಿ ಸ್ಥಳೀಯ ಏರಿಕೆಯು ಗಮನಾರ್ಹವಾಗಿದ್ದಿತೆಂದು ಹೇಳಬೇಕಾಗುತ್ತದೆ. ವಿನಿಮಯ ಪ್ರಮಿತಿಯ ದೋಷಗಳನ್ನು ಉತ್ಪ್ರೇಕ್ಷಿಸದ ಕೇನ್ಸ್ ಅವರೂ ಕೂಡ ತಮ್ಮ ಸ್ವತಂತ್ರ ಆಲೋಚನೆಯ ಕೊನೆಗೆ ಹೀಗೆ ಒಪ್ಪಿಕೊಳ್ಳುತ್ತಾರೆ.[೧]

"ಭಾರತದಲ್ಲಿನ ಬದಲಾವಣೆಯು ಬೇರೆ ಕಡೆ ಉಂಟಾಗಿರುವ ಬದಲಾವಣೆಗಳಿಗಿಂತಲೂ ಸಾಕಷ್ಟು ಹೆಚ್ಚಾಗಿದೆಯೆಂಬುದನ್ನು ಯುನೈಟೆಡ್ ಕಿಂಗ್‌ಡಮ್‌ನ ಸೌರ್‌ಬೆಕ್ ಸೂಚಿಸಂಖ್ಯೆಗೆ ಹೋಲಿಸಿ ನೋಡಿದರೆ ಗೊತ್ತಾಗುತ್ತದೆ".

ಗ್ರಹಿಕೆಗೂ ಮತ್ತು ವಾಸ್ತವಿಕ ಸಂಗತಿಗೂ ನಡುವೆ ಇರುವ ವ್ಯತ್ಯಾಸಕ್ಕೆ ಮತ್ತೆ ಯಾವ ವಿವರಣೆ ಬೇಕು? ವಾಸ್ತವ ವಿನಿಮಯ ದರಗಳು ಎರಡು ಕರೆನ್ಸಿಗಳ ಕೊಳ್ಳುವ ಶಕ್ತಿ ಸಮತೆಗಳಿಗೆ ಹೊಂದುತ್ತವೆಯಾದರೂ ಅವು ಎಲ್ಲ ಸರಕುಗಳಿಗೂ ಅಲ್ಲ, ಕೇವಲ ಕೆಲವು ಸರಕುಗಳಿಗೆ ಮಾತ್ರ ಅನ್ವಯವಾಗುತ್ತವೆ ಎಂಬುದೇ ವಿವರಣೆಯಾಗಿದೆ. ಈ ಸಂದರ್ಭದಲ್ಲಿ ಆವಶ್ಯಕ ಗುಣ ವಿಶೇಷಣಗಳ ಸಹಿತ ಕೊಳ್ಳುವ ಶಕ್ತಿ ಸಮತೆಗಳಿಗೂ ಮತ್ತು ವಿನಿಮಯ ದರಗಳಿಗೂ ಇರುವ ಸಂಬಂಧವನ್ನು ಪುನರ್ ನಿರೂಪಿಸುವುದು ಅಗತ್ಯ. ಈ ಸಿದ್ಧಾಂತದ

---

೧. "ರೀಸೆಂಟ್ ಎಕನಾಮಿಕ್ ಈವೆಂಟ್ಸ್ ಇನ್ ಇಂಡಿಯಾ", ದಿ ಎಕನಾಮಿಕ್ ಜರ್ನಲ್ ಮಾರ್ಚ್, ೧೯೦೯, ಪು. ೫೪

ನಿಷ್ಠುರವಾದ ನಿಷ್ಕೃಷ್ಟ ನಿರೂಪಣೆಯನ್ನು ಆವಶ್ಯಕವಾಗಿ ಹೀಗೆ ಹೇಳಬೇಕಾಗುತ್ತದೆ. ಇಂಗ್ಲಿಷ್ ಜನರು ಬಯಸುವಂತಹ ಭಾರತೀಯ ಸರಕುಗಳನ್ನು ರೂಪಾಯಿಗಳು ಎಷ್ಟರಮಟ್ಟಿಗೆ ಮತ್ತು ಎಷ್ಟು ಹೆಚ್ಚಾಗಿ ಕೊಳ್ಳುತ್ತವೆ ಎಂಬುದನ್ನು ಗಮನಿಸಿ ಇಂಗ್ಲಿಷರು ಮತ್ತು ಇತರರು ಭಾರತದ ರೂಪಾಯಿಗೆ ಬೆಲೆ ಕಟ್ಟುತ್ತಾರೆ. ಹಾಗೆಯೇ ಭಾರತೀಯರು ಬಯಸುವಂತಹ ಇಂಗ್ಲಿಷ್ ಸರಕುಗಳನ್ನು ಪೌಂಡುಗಳು ಎಷ್ಟರಮಟ್ಟಿಗೆ ಮತ್ತು ಎಷ್ಟು ಹೆಚ್ಚಾಗಿ ಕೊಳ್ಳುತ್ತವೆ ಎಂಬುದನ್ನು ಗಮನಿಸಿ ಭಾರತೀಯರು ಇಂಗ್ಲಿಷ್ ಪೌಂಡುಗಳಿಗೆ ಬೆಲೆ ಕಟ್ಟುತ್ತಾರೆ. ಹೀಗೆ ನಿರೂಪಿಸಿದರೆ ವಾಸ್ತವ ವಿನಿಮಯ ದರಗಳು ಕೇವಲ ವಿದೇಶೀ ವ್ಯಾಪಾರಕ್ಕೆ ಒಳಪಟ್ಟ ಸರಕುಗಳಿಗೆ ಅನ್ವಯವಾಗುವಂತೆ, ಎರಡು ಕರೆನ್ಸಿಗಳ ಕೊಳ್ಳುವ ಶಕ್ತಿಗಳ ಸಮತೆಗಳಿಗೂ ಸಂಬಂಧಿಸಿವೆ ಎಂದು ತೀರ್ಮಾನವಾಗುತ್ತದೆ. ಎಲ್ಲಾ ಸರಕುಗಳಿಗೂ ಸಂಬಂಧಿಸಿದಂತೆ ಎರಡು ಕರೆನ್ಸಿಗಳ ಕೊಳ್ಳುವ ಶಕ್ತಿಯ ಸಮತೆಯ ನಿಷ್ಕೃಷ್ಟ ಸೂಚಿ ಸಂಖ್ಯೆಯೇ ವಾಸ್ತವ ವಿನಿಮಯ ದರವೆಂದು ಊಹಿಸಿದೆವೆನ್ನಿ. ಆಗ ವಿದೇಶೀ ವ್ಯಾಪಾರಕ್ಕೆ ಒಳಗಾದ ಮತ್ತು ಒಳಗಾಗದ ಸರಕುಗಳ – ಇವುಗಳೆರಡಕ್ಕೂ ಅನ್ವಯವಾಗುವಂತೆ ಉಂಟಾಗುವ ಒಂದು ಕರೆನ್ಸಿಯ ಕೊಳ್ಳುವ ಶಕ್ತಿಯ ವ್ಯತ್ಯಾಸಗಳು ಒಂದೇ ಎಂದು ಭಾವಿಸಿದಂತಾಗುತ್ತದೆ.[೧] ದೀರ್ಘಾವಧಿಯಲ್ಲಿ ಈ ಎರಡೂ ವರ್ಗಗಳ ಸರಕುಗಳ ಬೆಲೆಗಳ ಏರಿಳಿತಗಳಲ್ಲಿ ಪರಸ್ಪರ ಪರಿಣಾಮ ಬೀರುವ ಪ್ರವೃತ್ತಿಯು ಖಂಡಿತ; ಆದುದರಿಂದ ಕರೆನ್ಸಿಯ ವಿನಿಮಯ ಮೌಲ್ಯವು ಅದರ ಆಂತರಿಕ ಕೊಳ್ಳುವ ಶಕ್ತಿಯಿಂದ ನಿರ್ಣಯವಾಗುತ್ತದೆಯೆಂದು ಹೇಳಲು ಸಾಧ್ಯವಾಗುತ್ತದೆ. ವಿದೇಶೀ ವಿನಿಮಯವನ್ನು ನಿಯಂತ್ರಿಸಲು ವಿನಿಮಯ ದರಗಳ ವಿವರಣೆಯನ್ನು ಒದಗಿಸುವ ಕೊಳ್ಳುವ ಶಕ್ತಿ ಸಮತೆ ಸಿದ್ಧಾಂತವು ಉಪಯುಕ್ತ ಸಾಧನವಾಗಿ ಅಮೂಲ್ಯವಾಗಿದೆ. ಆ ದೃಷ್ಟಿಯಿಂದಲೇ ಈ ಅಧ್ಯಯನದ ಮುಂಚಿನ ಭಾಗದಲ್ಲಿ ರೂಪಾಯಿಯ ಚಿನ್ನದ ಮೌಲ್ಯವು ಕಡಿಮೆಯಾದುದಕ್ಕೆ ಕಾರಣವನ್ನು ಗುರುತಿಸಲು ಈ ಸಿದ್ಧಾಂತವನ್ನು ಬಳಸಿಕೊಳ್ಳಲಾಯಿತು. ಕರೆನ್ಸಿಯ ಕೊಳ್ಳುವ ಶಕ್ತಿ ಮತ್ತು ಅದರ ವಿನಿಮಯ ಮೌಲ್ಯ – ಇವುಗಳ ನಡುವಿನ ಸಂಬಂಧದ ಆಧಾರದ ಮೇಲೆ ಮುಂದುವರಿದರೆ ಹಾಗೂ ಯಾವುದೇ ಒಂದು ಗೊತ್ತಾದ ಅವಧಿಯಲ್ಲಿ ವಿನಿಮಯ ಮೌಲ್ಯವು ಹೆಚ್ಚು ಕಡಿಮೆ ಎರಡು ಕರೆನ್ಸಿಗಳ ಸಾರ್ವತ್ರಿಕ ಕೊಳ್ಳುವ ಶಕ್ತಿಯ ನಿಷ್ಕೃಷ್ಟ ಅಳತೆಯೆಂಬುದಾಗಿ ವಾದಿಸಿದರೆ ಯಾವುದು ಯಾವಾಗಲೂ ನಿಜವಲ್ಲವೋ ಅದನ್ನು ನಿಜವೆಂದು ಊಹಿಸಿದಂತಾಗುತ್ತದೆ. ಅಂದರೆ, ವಿದೇಶೀ ವ್ಯಾಪಾರಕ್ಕೆ ಒಳಗಾದ ಮತ್ತು ಒಳಗಾಗದ ಸರಕುಗಳ ಬೆಲೆಗಳು ಸಹಾನುವರ್ತಿಯಾಗಿ ಚಲಿಸುತ್ತವೆಯೆಂದು ಊಹಿಸಿದಂತಾಗುತ್ತದೆ. ಈ ಊಹೆಯು ವ್ಯಾಪಕವಾದುದಾಗಿದೆ ಮತ್ತು ಸಂದರ್ಭಗಳಿಗೆ ತಕ್ಕಂತೆ ಹೆಚ್ಚು ಕಡಿಮೆ ನಿಜವೆಂದು ಹೇಳಬಹುದು. ಪ್ರಕೃತ,[೨] ಕೆಮ್‌ರರ್ ಸೂಚಿಸುವಂತೆ:–

"ಭಾರತದ ರಫ್ತು ಮತ್ತು ಆಮದು ನಿರಪೇಕ್ಷವಾಗಿ ಹೆಚ್ಚು ಆದರೂ ಭಾರತದ ಜನರು ಇನ್ನೂ

---

೧. ಕೊಳ್ಳುವ ಶಕ್ತಿ ಸಮತೆಗಳಿಗೂ ವಿನಿಮಯ ದರಗಳಿಗೂ ಸಂಬಂಧ ಪ್ರತಿಪಾದಿಸುವ ಹಳೆಯ ಸಿದ್ಧಾಂತದ ಆಧುನಿಕ ಪ್ರತಿಪಾದಕರಾದ ಪ್ರೊ. ಕ್ಯಾಸೆಲ್ ಅವರು ಈ ಎರಡು ಅಂಶಗಳ ಹೊಂದಾಣಿಕೆಗೆ ಕೆಳಕಂಡ ಊಹೆಯು ಅಗತ್ಯವೆಂಬುದನ್ನು ಒಪ್ಪಿಕೊಳ್ಳುತ್ತಾರೆ. ಅವರು ಹೀಗೆ ಹೇಳುತ್ತಾರೆ. "ಸಂಬಂಧಿತ ರಾಷ್ಟ್ರಗಳಲ್ಲಿ ನೆಲೆ ಏರಿಕೆಯು ಎಲ್ಲ ಸರಕುಗಳ ಮೇಲೂ ಸಮಾನ ಪರಿಣಾಮ ಬೀರುವುದೆಂಬ ನಿಷ್ಕೃಷ್ಟ ಷರತ್ತಿನ ಆಧಾರದ ಮೇಲೆ ಕೊಳ್ಳುವ ಶಕ್ತಿಯ ಸಮತೆಯ ನಮ್ಮ ಲೆಕ್ಕಾಚಾರವು ಅವಲಂಬಿಸಿದೆ. ಈ ಷರತ್ತು ಈಡೇರದಿದ್ದರೆ ವಾಸ್ತವ ವಿನಿಮಯ ದರವು ಲೆಕ್ಕಿಸಿದ ಕೊಳ್ಳುವ ಶಕ್ತಿಯ ಸಮತೆಯಿಂದ ಭಿನ್ನವಾಗಬಹುದು" – ಮನಿ ಅಂಡ್ ಫಾರಿನ್ ಎಕ್ಸ್‌ಛೇಂಜ್ ಆಫ್ಟರ್ ೧೯೧೪, ಲಂಡನ್, ೧೯೨೨, ಪು. ೧೫೪

೨. ಮೇಲೆ ಹೇಳಿದ ಗ್ರಂಥ, ಪು. ೬೪

ಮುಖ್ಯವಾಗಿ ತಮ್ಮ ಸ್ವಂತ ಸರಕುಗಳನ್ನೇ ಅವಲಂಬಿಸಿದ್ದಾರೆ. ಮತ್ತು ಆ ಸರಕುಗಳು ಬಹುಪಾಲು ಉತ್ಪಾದನೆಯಿಂದ ಅನುಭೋಗದವರೆಗೆ ಒಂದು ಅತ್ಯಂತ ಚಿಕ್ಕ ಪ್ರದೇಶದಲ್ಲಿಯೇ ಚಲಿಸುತ್ತವೆ. ಅವುಗಳು ವಿದೇಶೀ ವ್ಯಾಪಾರ, ಚಿನ್ನ ಮತ್ತು ಚಿನ್ನ ವಿನಿಮಯದೊಡನೆ ಯಾವ ಸಂಬಂಧವನ್ನೂ ಹೊಂದಿಲ್ಲ. ದೇಶದ ಆಮದು ಮತ್ತು ರಫ್ತು ವ್ಯಾಪಾರದ ಮೌಲ್ಯಗಳ ಸಮತೋಲನದಲ್ಲಿ ಗಣನೀಯ ಅಡ್ಡಿ ಉಂಟಾದರೆ ಅದು ಸ್ವಲ್ಪ ಕಾಲದ ನಂತರ ಸಹಜವಾಗಿ ಈ ಸ್ಥಳೀಯ ಬೆಲೆಗಳಲ್ಲಿ ಕಾಣಿಸಿಕೊಳ್ಳುತ್ತದೆ. ಆದರೆ ಕೆಲವು ಅಪವಾದಗಳ ಹೊರತು ಇಂತಹ ಅಡ್ಡಿಗಳ ಪ್ರಭಾವಗಳು ಭಾರತದಂಥ ದೇಶದಲ್ಲಿ ನಿಧಾನವಾಗಿ ಹರಡುತ್ತವೆ ಮತ್ತು ಹರಡುವಾಗ ತಮ್ಮ ವೇಗವನ್ನು ಬಹಳಷ್ಟು ಕಳೆದುಕೊಳ್ಳುತ್ತವೆಯೆಂದು ಹೇಳಬಹುದು".

ಇವೆರಡರ ನಡುವೆ ವಿರಳವಾದ ಸಂಪರ್ಕವಿರುವುದರ ಪರಿಣಾಮವಾಗಿ ವಿದೇಶೀ ವ್ಯಾಪಾರಕ್ಕೊಳಗಾದ ಭಾರತೀಯ ಸರಕಿನ ಬೆಲೆಗಳು ವಿದೇಶೀ ವ್ಯಾಪಾರಕ್ಕೊಳಗಾಗದ ಸರಕಿನ ಬೆಲೆಗಳಷ್ಟೇ ಹೆಚ್ಚುಕಡಿಮೆ ಒಂದೇ ಪ್ರಮಾಣದಲ್ಲಿ ಸದಾ ಬದಲಾಗುತ್ತವೆಯೆಂದು ಸ್ಪಷ್ಟವಾಗಿ ಹೇಳಲು ಸಾಧ್ಯವಿಲ್ಲ. ಈ ವಿರಳ ಸಂಪರ್ಕವು ವಾಸ್ತವ ವಿನಿಮಯ ದರ ಸೂಚಿಸುವ ಮಟ್ಟದಿಂದ ಕರೆನ್ಸಿಯ ಕೊಳ್ಳುವ ಶಕ್ತಿಯು ವ್ಯತ್ಯಾಸಗೊಳ್ಳುವ ಸಾಧ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಜೊತೆಗೆ, ವಿದೇಶೀ ವ್ಯಾಪಾರಕ್ಕೊಳಗಾದ ಮುಖ್ಯವಾದ ಭಾರತೀಯ ಸರಕುಗಳ ಬೆಲೆಗಳೂ ಸ್ಥಳೀಯ ಪ್ರಭಾವಗಳ ಪರಿಣಾಮಕ್ಕೆ ಒಳಪಟ್ಟಿಲ್ಲ ಎಂಬುದನ್ನು ಗಮನಿಸಬೇಕು. ಭಾರತದ ರಫ್ತು ಸರಕುಗಳಾದ ಗೋಧಿ, ಚರ್ಮ, ಅಕ್ಕಿ ಮತ್ತು ಎಣ್ಣೆಬೀಜಗಳು ಅಂತರರಾಷ್ಟ್ರೀಯ ಸರಕುಗಳಾಗಿವೆ. ಇವು ದೇಶೀಯ ಸರಕು-ಸೇವೆಯ ಬೆಲೆಗಳ ಬದಲಾವಣೆಗಳಿಂದ ಉಂಟಾಗುವ ಪ್ರಭಾವಕ್ಕೆ ಸಂಪೂರ್ಣವಾಗಿ ಒಳಗಾಗಿಲ್ಲ. ಈ ಎರಡು ಸಂದರ್ಭಗಳ ಸಂಯೋಜಿತ ಪರಿಣಾಮವು, ಅಸಹಜ ಘಟನೆಗಳಾದ ಯುದ್ಧ ಮುಂತಾದ ಸಂದರ್ಭಗಳನ್ನು ಬಿಟ್ಟರೆ, ವ್ಯಾಪಾರಕ್ಕೊಳಗಾದ ಮತ್ತು ವ್ಯಾಪಾರಕ್ಕೊಳಗಾಗದ ಸರಕುಗಳ ಬೆಲೆಗಳ ಶೀಘ್ರ ಸಹಾನುಭೂತಿ ಏರಿಳಿತಗಳಿಗೆ ಪ್ರತಿಕೂಲವಾಗಿದೆ.[೧]

ಒಂದು ಪಕ್ಷ ಇದು ನಿಜವಾದರೆ, ವಿನಿಮಯ ಪ್ರಮಿತಿಯ ನಿರ್ವಹಣೆಯು ರೂಪಾಯಿಯ ಕೊಳ್ಳುವ ಶಕ್ತಿಯ ಸಮತೆಯನ್ನು ಚಿನ್ನದೊಡನೆ ಸೂಚಿಸಿದರೂ ಅದು ಎಲ್ಲ ಸರಕುಗಳಿಗೂ ಸಂಬಂಧಿಸಿದಂತೆ ಎರಡು ಕರೆನ್ಸಿಗಳ ಕೊಳ್ಳುವ ಶಕ್ತಿಯ ಸಮತೆಯಾಗಿಲ್ಲ. ಈ ಕೊಳ್ಳುವ ಶಕ್ತಿಯ ಸಮತೆಯು ವಿದೇಶೀ ವ್ಯಾಪಾರಕ್ಕೆ ಒಳಪಟ್ಟ ಸರಕುಗಳ ಮೇಲೆ ವೆಚ್ಚ ಮಾಡಲಾದ ರೂಪಾಯಿಯ ಕೊಳ್ಳುವ ಶಕ್ತಿಯು ಚಿನ್ನದ ಕೊಳ್ಳುವ ಶಕ್ತಿಗೆ ಸಮವಾಗಿತ್ತೆಂಬುದನ್ನು ಮಾತ್ರ ಸೂಚಿಸುತ್ತದೆ. ಆದ್ದರಿಂದ, ಚಿನ್ನದ ಕಾಪು ನಿಧಿಯನ್ನು ಬಂದುಮಾಡಬೇಕಾದ ಆವಶ್ಯಕತೆ ಉಂಟಾಗಲಿಲ್ಲ. ವಿದೇಶೀ ವ್ಯಾಪಾರಕ್ಕೊಳಗಾದ ಸರಕುಗಳ ಮಟ್ಟಿಗೆ, ಬೆಲೆಗಳು ಪರಸ್ಪರ ಸಮವಾಗಿದ್ದವೆಂಬುದನ್ನು ಮಾತ್ರ ಚಿನ್ನದ ಕಾಪುನಿಧಿಯ ರಕ್ಷಣೆಯು ವ್ಯಕ್ತಪಡಿಸಿತು. ಹೀಗೆ ವ್ಯಾಖ್ಯಾನಿಸಿದರೆ, ರೂಪಾಯಿಯು ತನ್ನ ಚಿನ್ನದ ಮೌಲ್ಯವನ್ನು ರಕ್ಷಿಸಿಕೊಂಡು ಬಂದಿದ್ದಿತು ಎಂಬ ಸಂಗತಿಯು ಭಾರತದ ಬೆಲೆಗಳು ಒಟ್ಟಾರೆ ಚಿನ್ನದ ಬೆಲೆಗಳಿಗಿಂತಲೂ ಹೆಚ್ಚಾಗಿದ್ದವೆಂಬ ಸಾಧ್ಯತೆಯನ್ನು ತಳ್ಳಿಹಾಕುವುದಿಲ್ಲ. ಪರಿಣಾಮವಾಗಿ, ಸುವರ್ಣ ಪ್ರಮಿತಿಯಷ್ಟೇ ವಿನಿಮಯ ಪ್ರಮಿತಿಯು ಒಳ್ಳೆಯದೆಂಬ ಬುದ್ಧಿರೂಢ ಅಭಿಪ್ರಾಯವು ತಪ್ಪಾಗುತ್ತದೆ.

---

೧. ರೂಪಾಯಿಯ ಸಾಮಾನ್ಯ ಇಳಿತಾಯ ಉಂಟಾದಾಗ ಅದರ ನಿರ್ದಿಷ್ಟ ಇಳಿತಾಯ ಕೂಡಲೇ ಏಕೆ ಉಂಟಾಗುವುದಿಲ್ಲ ಎಂಬುದನ್ನು ಹಿಂದೆಯೇ ವಿವರಿಸಿದೆ. ಅದರ ಪುನರ್ ನಿರೂಪಣೆಯೇ ಇದು.

೨. ಮೇಯೋಸ್ಮಿತ್ ಅವರ "ಪ್ರೈಸ್ ಮೂವ್‌ಮೆಂಟ್ಸ್ ಅಂಡ್ ಇಂಡಿವಿಜ್ಯೂಯಲ್ ವೆಲ್‌ಫೇರ್" ಪೊಲಿಟಿಕಲ್ ಸೈನ್ಸ್ ಕ್ವಾರ್ಟರ್ಲಿ, ಸಂ XV, ಸಂಖ್ಯೆ ೧ (ಮಾರ್ಚ್ ೧೯೦೦) ಪುಟಗಳು ೧೪-೧೭

ಬೆಲೆಗಳ ಎಲ್ಲ ಬದಲಾವಣೆಗಳೂ ಹೆಚ್ಚು ಕಡಿಮೆ ವ್ಯಕ್ತಿಯ ದೈನಂದಿನ ಜೀವನದ ಮೇಲೆ ಪ್ರಭಾವ ಬೀರುತ್ತದೆಯೆಂಬುದರ ಕಡೆಗೆ ಗಮನಹರಿಸಲೇಬೇಕು.[೨] ಇಷ್ಟಾದರೂ ಸಹ, ಬಂಡವಾಳ ಮತ್ತು ಪರಿಶ್ರಮದ ಗತಿಶೀಲತೆ, ಮುಕ್ತ ಪೈಪೋಟಿ, ಆಯ್ಕೆಯ ಸಾಮರ್ಥ್ಯ, ಆವಿಷ್ಕಾರ ಪ್ರತಿಭೆ ಮತ್ತು ಉದ್ಯಮ ಸಾಹಸಿಗಳ ಹಾಗೂ ವ್ಯಾಪಾರಿಗಳ ಬೌದ್ಧಿಕ ಸಂಪನ್ಮೂಲಗಳು–ಇವುಗಳನ್ನೊಳಗೊಂಡ ಆಧುನಿಕ ಆರ್ಥಿಕ ವ್ಯವಸ್ಥೆಯ ಹೊಂದಾಣಿಕೆಯ ಸಾಮರ್ಥ್ಯವು ಬೆಲೆಗಳ ಸಹಜ ಮತ್ತು ತಾತ್ಕಾಲಿಕ ಏರಿಳಿತಗಳನ್ನು ತಾನಾಗಿಯೇ ಸರಿಪಡಿಸುತ್ತದೆ. ಆದರೆ ಬೆಲೆಯ ಬದಲಾವಣೆಯು ಸಾಮಾನ್ಯವೂ ಮತ್ತು ಒಂದೇ ದಿಕ್ಕಿನಲ್ಲಿ ಸತತವೂ ಆದಾಗ ಉಂಟಾಗುವ ಪರಿಸ್ಥಿತಿಯೇ ಬೇರೆ. ಬೆಲೆಯ ಚಲನೆಯು ತಾತ್ಕಾಲಿಕ ಮತ್ತು ಮೊದಲಿನ ಸಹಜ ಸ್ಥಿತಿಗೆ ಹಿಂದಿರುಗುವುದೆಂಬ ನಿರೀಕ್ಷೆಯನ್ನು ಆಧರಿಸಿದ ಏರ್ಪಾಟುಗಳು ಖಂಡಿತವಾಗಿಯೂ ನಿಷ್ಪ್ರಯೋಜಕವಾಗುತ್ತವೆ ಚಲನೆಯ ಒಂದು ತಿರುವಿನಲ್ಲಿ ಅನುಭವಿಸಿದ ನೋವನ್ನು ಮತ್ತೊಂದು ತಿರುವಿನಲ್ಲಿನ ಲಾಭವು ಸರಿದೂಗಿಸಲಾರದು. ಸಂಕ್ಷಿಪ್ತವಾಗಿ, ಒಂದು ದಿಕ್ಕಿನಲ್ಲಿ ಸತತವಾಗಿ ಉಂಟಾಗತಕ್ಕಂಥ ಬೆಲೆಯ ಚಲನೆಯು ಖಂಡಿತವಾಗಿಯೂ ಸಾಧಾರಣ ಉದ್ದಿಮೆಯ ಜಾಣ್ಮೆಯನ್ನು ಗೊಂದಲಕ್ಕೀಡುಮಾಡುತ್ತದೆ ಮತ್ತು ಅದು ಅಪರಿಮಿತ ಸ್ಥಾನಪಲ್ಲಟ ಅಥವಾ ನಷ್ಟ ಉಂಟುಮಾಡುವಂತೆ ಭವಿಷ್ಯತ್ತಿನ ಲೆಕ್ಕಾಚಾರವನ್ನು ನಿರರ್ಥಕಗೊಳಿಸುತ್ತದೆ. ಅಲ್ಲದೆ, ವ್ಯಕ್ತಿಯನ್ನು ಅಂತಹ ಶಕ್ತಿಯುತ ಹಾಗೂ ಲೆಕ್ಕಿಸಲಾಗದ ಪ್ರಭಾವಕ್ಕೆ ಗುರಿಪಡಿಸಿ ಅವನ ಆರ್ಥಿಕ ಯೋಗಕ್ಷೇಮವು ಅನಿವಾರ್ಯವಾಗಿ ಅವನ ಹತೋಟಿಯಿಂದ ಕೈತಪ್ಪುತ್ತದೆ. ಜಾಣ್ಮೆ, ಮುಂದಾಲೋಚನೆ ಮತ್ತು ಸಾಮರ್ಥ್ಯವು ಅವನ ಅಸ್ತಿತ್ವದ ಹೋರಾಟದಲ್ಲಿ ನಿಷ್ಪ್ರಯೋಜಕವಾಗುತ್ತದೆ. ಹಣ ಪ್ರಮಿತಿಯಲ್ಲಿ ಮೌಲ್ಯದ ಪರಿಪೂರ್ಣ ಸ್ಥಿರತೆಯು ಇದುವರೆವಿಗೂ ಕೇವಲ ಆದರ್ಶವಾಗಿ ಉಳಿದಿದೆ. ಆದರೆ, ಅಸ್ಥಿರತೆಯ ದುಷ್ಪರಿಣಾಮಗಳೂ ಎಷ್ಟು ತೀವ್ರವೆಂದರೆ, ಆರ್ಥಿಕ ಜೀವನದ ಆರ್ಥಿಕ ತಳಹದಿಯನ್ನು ತಿದ್ದುವುದು ತಪ್ಪೆಂಬ ಸಾಮಾನ್ಯವಾದ ಪೂರ್ವಕಲ್ಪಿತ ಅಭಿಪ್ರಾಯವನ್ನು ಒಪ್ಪುವ ಮಾರ್ಷಲ್ ಅವರೂ ಅಸ್ಥಿರತೆಯ ವ್ಯತ್ಯಾಸವನ್ನು ಕಡಿಮೆ ಮಾಡುವುದರ ಮೂಲಕ ಸಮುದಾಯಗಳ ಆರ್ಥಿಕ ಯೋಗಕ್ಷೇಮವನ್ನು ರಕ್ಷಿಸಲು ಸಾಕಷ್ಟು ಕ್ರಮತೆಗೆದುಕೊಳ್ಳಬೇಕೆಂಬುದನ್ನು ಗಮನಿಸಿದ್ದಾರೆ.[೧] ೧೮೭೩ ರಿಂದ ಚಿನ್ನವು ಮೌಲ್ಯದ ಮಾನದಂಡವಾಗಿ ಇಳಿಮುಖಗೊಳ್ಳುತ್ತಿರುವುದು ಒಂದು ಕೇಡು. ಸುವರ್ಣ ಪ್ರಮಿತಿಗಿಂತಲೂ ವಿನಿಮಯ ಪ್ರಮಿತಿಯಲ್ಲಿ ಅವಿರತವಾಗಿ ಹೆಚ್ಚಿನ ಪ್ರಮಾಣದಲ್ಲಿ ಇಳಿತಾಯಗೊಂಡು, ಹೆಚ್ಚಿನ ಬೆಲೆ ಏರಿಕೆಗೆ ಕಾರಣವಾಗಿರುವ ಮೌಲ್ಯದ ಮಾನದಂಡವೊಂದನ್ನು ಮೌಲ್ಯದ ಒಳ್ಳೆಯ ಮಾನದಂಡವೆಂದು ಪರಿಗಣಿಸಲು ಸಾಧ್ಯವೇ?

ಈ ಹಿನ್ನೆಲೆಯಲ್ಲಿ ವಿನಿಮಯ ಪ್ರಮಿತಿಯ ಭವಿಷ್ಯತ್ತಿನ ಆದರ್ಶ ಪ್ರಮಿತಿಯಾಗಿ ಅತ್ಯಾವಶ್ಯಕ ಅಂಶವೊಂದನ್ನು ಹೊಂದಿದೆಯೆಂಬುದಾಗಿ ಕೇನ್ಸ್ ಅವರು ತಮ್ಮ 'ಇಂಡಿಯನ್ ಕರೆನ್ಸಿ ಅಂಡ್ ಫೈನಾನ್ಸ್' ಎಂಬ ಗ್ರಂಥದಲ್ಲಿ ಸಮರ್ಥಿಸಿರುವುದು ವಿಸ್ಮಯವೇ ಸರಿ.[೨] ಇದೇ ಅಭಿಪ್ರಾಯವನ್ನು ಆನಂತರದಲ್ಲಿ ಚೇಂಬರ್‌ಲಿನ್ ಸಮಿತಿಯೂ ಅನುಮೋದಿಸಿತು. ಕರೆನ್ಸಿ ಪದ್ಧತಿಯೊಂದನ್ನು ತೀರ್ಮಾನಿಸುವುದಕ್ಕೆ ಸಾಮಾನ್ಯ ಸರಕುಗಳಿಗೆ ಅನ್ವಯಿಸುವಂತೆ ಕೊಳ್ಳುವ ಶಕ್ತಿಯ ಸ್ಥಿಮಿತತೆಯನ್ನು ಮಾನದಂಡವೆಂದು ಪರಿಗಣಿಸಿದರೆ ಅರ್ಥಶಾಸ್ತ್ರದ ಯಾವ ವಿದ್ಯಾರ್ಥಿಯೂ ಕೇನ್ಸ್ ಅವರ ವಾದಸರಣಿಯನ್ನು ಒಪ್ಪಲು ಸಾಧ್ಯವಿಲ್ಲ. ಪ್ರಾಯಶಃ

---

೧. ನೋಡಿ: "ರೆಮಿಡೀಸ್ ಫಾರ್ ಫ್ಲಕ್ಚುಯೇಷನ್ಸ್ ಆಫ್ ಜನರಲ್ ಪ್ರೈಸಸ್" ದಿ ಕಾಂಟೆಂಪೊರರಿ ರಿವ್ಯೂ, ಮಾರ್ಚ್ ೧೮೮೭, ಅಲ್ಲಲ್ಲಿ.

೨. ಅದೇ ಪುಟಗಳು ೩೬.

೧೯೨೦ ಕೇನ್ಸ್ ಅವರು ಸುವರ್ಣ ವಿನಿಮಯ ಪ್ರಮಿತಿಗೆ ಬದಲಾಗಿ ಸುವರ್ಣ ಪ್ರಮಿತಿಗೆ ಒಲವನ್ನು ವ್ಯಕ್ತಪಡಿಸುತ್ತಾರೆ ಎಂದು ಹೇಳುವುದು ಅಷ್ಟೇನೂ ಸರಿಯೆನಿಸದು ಏಕೆಂದರೆ, ಎರಡನೆಯದರಲ್ಲಿ ಮೊದಲಿನದಕ್ಕಿಂತಲೂ ಬೆಲೆಗಳು ಕಡಿಮೆ ವ್ಯತ್ಯಾಸಗೊಂಡಿವೆ.

ಈ ಸಂದರ್ಭದಲ್ಲಿ ಭಾರತವು ಸುವರ್ಣ ಪ್ರಮಿತಿ ರಾಷ್ಟ್ರವೆಂಬ ಪ್ರಚಲಿತ ತಪ್ಪು ಕಲ್ಪನೆಯ ಕಡೆಗೆ ಗಮನ ನೀಡಬಹುದು. ಎರಡೂ ರಾಷ್ಟ್ರಗಳಲ್ಲಿ ಮೌಲ್ಯದ ಮಾನದಂಡವು ಒಂದೇ ಆಗಿದೆಯೆಂಬುದನ್ನು ಗುರುತಿಸಲು ಅವುಗಳ ಬೆಲೆಮಟ್ಟಗಳ ಏರಿಳಿತಗಳೇ ನಡೆವಳಿಕೆಯೇ ಅತ್ಯುತ್ತಮ ಪ್ರಾಯೋಗಿಕ ಪರೀಕ್ಷೆಯೆಂದು ಒಪ್ಪಿಕೊಳ್ಳಬಹುದು. ಈ ಪರೀಕ್ಷೆಯು ಎಷ್ಟರಮಟ್ಟಿಗೆ ನಿಶ್ಚಿತವಾದುದು ಎಂದರೆ ಪ್ರೊ. ಮಿಚೆಲ್ ಅವರು ವಿವಿಧ ರಾಷ್ಟ್ರಗಳ ಮತ್ತು ಅಮೇರಿಕೆಯ ಗ್ರೀನ್‌ಬ್ಯಾಂಕ್ ಅವಧಿಯ ಬೆಲೆಯ ಮಟ್ಟದ ಜಾಗರೂಕ ಹಾಗೂ ವಿವೇಕಯುತ ಸಮೀಕ್ಷೆ ನಡೆಸಿ ಅವರನ್ನು ಈ ಕೆಳಕಂಡ ಅಭಿಪ್ರಾಯ ಕೊಡುವಂತೆ ಮಾಡಿತು.[೧]

"ಎರಡು ರಾಷ್ಟ್ರಗಳು ಒಂದೇ ರೀತಿಯ ಹಣದ ಪದ್ಧತಿಯನ್ನು ಮತ್ತು ಪ್ರಮುಖ ಔದ್ಯಮಿಕ ಸಂಬಂಧಗಳನ್ನು ಹೊಂದಿದ್ದಾಗ ಅವುಗಳ ಬೆಲೆಯ ಮಟ್ಟಗಳ ಚಲನೆಗಳು ಸೂಚಿಸಂಖ್ಯೆಗಳು ಪ್ರತಿನಿಧಿಸುವಂತೆ ಖಚಿತವಾಗಿ ಬಹು ಸಮೀಪದಲ್ಲಿದ್ದು ಹೊಂದಿಕೊಂಡಿರುತ್ತವೆ. ಈ ಹೊಂದಿಕೆಯು ದೃಢವಾಗಿದೆಯೆಂಬುದು ಸುಸ್ಪಷ್ಟ, ಎಷ್ಟರಮಟ್ಟಿಗೆ ಅಂದರೆ, ಸದೃಶವಲ್ಲದ ಸರಕುಪಟ್ಟಿಗಳಿಂದ ಸಂಗ್ರಹಿಸಿದ ಮತ್ತು ವಿವಿಧ ವರ್ಷಗಳಲ್ಲಿನ ವಾಸ್ತವ ಬೆಲೆಗಳನ್ನು ಆಧಾರವಾಗಿಟ್ಟುಕೊಂಡು ಲೆಕ್ಕಿಸಿದ ಅಪಕ್ವ ಸಾಧನವಾದ ಸೂಚಿಸಂಖ್ಯೆಗಳನ್ನು ಹೋಲಿಸಿದರೂ ಅವುಗಳ ಚಲನೆಯಲ್ಲಿ ಹೊಂದಿಕೆಯು ಕಂಡುಬರುತ್ತದೆ."

ಪ್ರಕೃತ, ಯುದ್ಧಕ್ಕೆ ಮುಂಚೆ ಇಂಗ್ಲೆಂಡ್ ಸುವರ್ಣ ಪ್ರಮಿತಿ ರಾಷ್ಟ್ರವಾಗಿತ್ತು ಎಂಬುದು ನಮಗೆ ಗೊತ್ತಿದೆ ಮತ್ತು ಇಂಡಿಯಾ ಮತ್ತು ಇಂಗ್ಲೆಂಡಿನ ಬೆಲೆ ಮಟ್ಟಗಳ ಸಮಕಾಲೀನ ಚಲನೆಗಳಲ್ಲಿ ಹೆಚ್ಚು ಹೊಂದಿಕೆಯಿರಲಿಲ್ಲವೆಂಬುದೂ ನಮಗೆ ಗೊತ್ತಿದೆ. ಈ ದೃಷ್ಟಿಯಿಂದ ಭಾರತವು ಸುವರ್ಣ ಪ್ರಮಿತಿಯ ರಾಷ್ಟ್ರವಾಗಿದೆಯೆಂದು ಸಮರ್ಥಿಸುವುದು ಕೇವಲ ಭ್ರಮೆಯಷ್ಟೆ. ಭಾರತದಲ್ಲಿ ವಾಸ್ತವವಾಗಿ ಸುವರ್ಣ ಪ್ರಮಿತಿಯಿಲ್ಲದಿರುವಾಗ ಅಸಾಧಾರಣ ಬೆಲೆ ಏರಿಕೆಗೆ ಸುವರ್ಣ ಪ್ರಮಿತಿಯ ಅಸ್ತಿತ್ವವೇ ಕಾರಣ ಎಂಬುದಾಗಿ ಫಿಷರ್ ಅವರು ಆರೋಪಿಸಿದ್ದಾರೆ.[೨] ಪ್ರೊ. ಫಿಷರ್ ಅವರ ಈ ತಪ್ಪನ್ನೇ ನಾವು ಮಾಡದಿರಬೇಕಾದರೆ ಭಾರತವು ಸುವರ್ಣ ಪ್ರಮಿತಿ ರಾಷ್ಟ್ರವಾಗಬೇಕು ಎಂದು ಗುರುತಿಸುವುದು ಉತ್ತಮ.

ಭಾರತವು ಹೇಗೆ ಸುವರ್ಣ ಪ್ರಮಿತಿಯ ರಾಷ್ಟ್ರವಾಗಬಹುದು? ಚಿನ್ನದ ಕರೆನ್ಸಿಯನ್ನು ಪರಿಚಯಿಸುವುದರ ಮೂಲಕ ಎಂಬುದು ಸುಸ್ಪಷ್ಟ. ಚಿನ್ನದ ಕರೆನ್ಸಿಯಿಲ್ಲದೆ ಸುವರ್ಣ ಪ್ರಮಿತಿಯಿರುವುದಕ್ಕೆ ಸಾಧ್ಯವೇ ಇಲ್ಲ ಎಂಬ ಅಭಿಪ್ರಾಯವನ್ನು ಶುದ್ಧ ತಪ್ಪು ಕಲ್ಪನೆ ಎಂಬುದಾಗಿ ಕೇನ್ಸ್ ಅಪಹಾಸ್ಯ ಮಾಡುತ್ತಾರೆ.[೩] ಕರೆನ್ಸಿ ಮತ್ತು ಮೌಲ್ಯದ ಮಾನದಂಡ ಇವುಗಳೆರಡನ್ನೂ ಪ್ರತ್ಯೇಕ ಅಂಶಗಳೆಂಬುದಾಗಿ ಅವರು ಭಾವಿಸಿದ ಹಾಗೆ ತೋರುತ್ತದೆ. ಖಂಡಿತವಾಗಿಯೂ ಇದರಲ್ಲಿ ತಪ್ಪಿದೆ. ಏಕೆಂದರೆ ಸಮಾಜಕ್ಕೆ ತನ್ನ ಆರ್ಥಿಕತೆಯನ್ನು ಘೋಷಿಸಲು ವಿನಿಮಯ ಮಾಧ್ಯಮ, ಮೌಲ್ಯದ ಮಾನದಂಡ ಮತ್ತು ಮೌಲ್ಯ ಸಂಗ್ರಹ ಸಾಧನ ಬೇಕು. ಈ ಮೂರು ಕಾರ್ಯಗಳನ್ನು ವಿಭಿನ್ನ ಸಾಧನಗಳು ನಿರ್ವಹಿಸಬಲ್ಲವೆಂಬುದಾಗಿ ವಾದಿಸುವುದು ಖಂಡಿತವಾಗಿಯೂ

---

೧. ಗೋಲ್ಡ್ ಪ್ರೈಸಸ್ ಅಂಡ ವೇಜಸ್ ಅಂಡರ್ ದಿ ಗ್ರೀನ್‌ಬ್ಯಾಕ್ ಸ್ಟ್ಯಾಂಡರ್ಡ್, ೧೯೦೮ ಪು. ೨೭

೨. ಪರ್ಚೆಸಿಂಗ್ ಪವರ್, ಮೊದಲಾದವು ೧೯೧೧ ಪು. ೩೪೦

೩. ಗೋಲ್ಡ್ ಪ್ರೈಸಸ್ ಅಂಡ್ ವೇಜಸ್ ಅಂಡರ್ ದಿ ಗ್ರೀನ್‌ಬ್ಯಾಕ್ ಸ್ಟಾಂಡರ್ಡ್, ಪು. ೨೯

ದೋಷಪೂರ್ಣವಾದುದು. ಪ್ರತಿಯಾಗಿ, ಪ್ರೊ. ಡೇವನ್ ಪೋರ್ಟ್ ಅವರು ಹೀಗೆ ಒತ್ತಾಯಿಸುತ್ತಾರೆ.[೧]

"ಹಣದ ವಿವಿಧ ಉಪಯೋಗಗಳು ಮಧ್ಯವರ್ತಿ ಕಾರ್ಯದ ವಿಭಿನ್ನ ಮುಖಗಳು ಅಷ್ಟೆ. ಅವು ಮುಂದೂಡಿದ ಪಾವತಿಗಳು........... ಮತ್ತೆ ಮಾನದಂಡದ ಮುಖವೂ ಹಾಗೆಯೇ. ಯಾವುದೇ ಆಗಲಿ ಸಾಮಾನ್ಯ ಮಧ್ಯವರ್ತಿಯಾಗಿದೆ ಎಂದರೂ ಅದು ಮಾನದಂಡವೇ. ಕಾರ್ಯಗಳು ಎರಡಲ್ಲ, ಒಂದು ಮಾತ್ರ........ ಸ್ಪಷ್ಟವಾಗಿ. ಮಧ್ಯವರ್ತಿಯ ಕೊಳ್ಳುವ ಶಕ್ತಿಯು ಭಂಡಾರವೂ ಸಹ ಆಗಿರಬಹುದು. ವಿನಿಮಯದಲ್ಲಿನ ಉತ್ತರಾರ್ಧವನ್ನು ಮುಂದೂಡಬಹುದು. ಮಧ್ಯವರ್ತಿಯು ಸಾರ್ವತ್ರಿಕವಾಗಿ ಒಂದು ಕೊಳ್ಳುವ ಶಕ್ತಿಯಾಗಿದೆ. ಮುಂದೂಡುವಿಕೆ ಎಂಬುದು ಮಧ್ಯವರ್ತಿಯ ಕಾರ್ಯವು ತನ್ನ ಜೊತೆಯಲ್ಲಿಯೇ ಒಯ್ಯುವ ಹಕ್ಕುಗಳಲ್ಲಿ ಒಂದಾಗಿದೆ."

ಆದ್ದರಿಂದ ರೂಪಾಯಿಯು ಕರೆನ್ಸಿಯಾಗಿರುವ ಕಾರಣದಿಂದಲೇ ಮೌಲ್ಯದ ಮಾನದಂಡವೂ ಆಗಿದೆ. ಭಾರತದಲ್ಲಿ ಚಿನ್ನವನ್ನು ಮೌಲ್ಯದ ಮಾನದಂಡವನ್ನಾಗಿ ಮಾಡಲು ಅಪೇಕ್ಷಿಸಿದರೆ ಅದನ್ನು ಭಾರತದ ಕರೆನ್ಸಿಯಲ್ಲಿ ಆಚರಣೆಗೆ ತರಬೇಕು. ಚಿನ್ನವನ್ನು ಭಾರತದ ಕರೆನ್ಸಿಯ ಭಾಗವನ್ನಾಗಿ ಮಾಡಿದ ಪಕ್ಷದಲ್ಲಿ ಅದು ಭಾರತದ ಬೆಲೆಯ ಮಟ್ಟದಲ್ಲಿ ಯಾವ ವ್ಯತ್ಯಾಸವನ್ನುಂಟುಮಾಡಬಹುದು ಎಂಬ ಪ್ರಶ್ನೆಯನ್ನು ಕೇಳಬಹುದು. ಈ ಪ್ರಶ್ನೆಗೆ ಉತ್ತರಿಸಲು ರೂಪಾಯಿ ಕರೆನ್ಸಿಯ ಸ್ವಭಾವವನ್ನು ಸ್ಪಷ್ಟಗೊಳಿಸುವುದು ಆವಶ್ಯಕ. ವಿಸ್ತರಣೆ ಹಾಗೂ ಸಂಕೋಚಗೊಳ್ಳುವ ಸಾಮರ್ಥ್ಯವಿರುವ ಮೌಲ್ಯದ ಮಾನದಂಡವು ಆ ಸಾಮರ್ಥ್ಯವಿಲ್ಲದಿರುವ ಮೌಲ್ಯದ ಮಾನದಂಡಕ್ಕಿಂತಲೂ ಹೆಚ್ಚು ಸ್ಥಿಮಿತವಾಗಿರುವುದೆಂಬುದನ್ನು ಈಗ ಒಪ್ಪಿಕೊಳ್ಳಬೇಕಾಗುತ್ತದೆ. ರೂಪಾಯಿ ಕರೆನ್ಸಿಯು ಸುಲಭವಾಗಿ ವಿಸ್ತರಣೆಯಾಗಬಲ್ಲ ಸಾಮರ್ಥ್ಯ ಹೊಂದಿದೆ. ಆದರೆ ಅದು ಸುಲಭವಾಗಿ ಸಂಕೋಚಗೊಳ್ಳಬಲ್ಲ ಕರೆನ್ಸಿಯಾಗಿಲ್ಲ. ಏಕೆಂದರೆ, ಅದನ್ನು ರಫ್ತುಮಾಡಲಾಗಲೀ, ಕರಗಿಸುವುದಕ್ಕಾಗಲೀ ಅಥವಾ ಅಪೇಕ್ಷಿಸಿದಾಗ ಪರಿವರ್ತಿಸುವುದಕ್ಕಾಗಲೀ ಸಾಧ್ಯವಿಲ್ಲವೆಂಬುದೇ ಕಾರಣ. ಅಂತಹ ಕರೆನ್ಸಿಯನ್ನು ರಫ್ತು ಮಾಡಬಲ್ಲ ಕರೆನ್ಸಿಗೆ ಹೋಲಿಸಿದರೆ ಯಾವ ಪರಿಣಾಮ ಉಂಟಾಗುತ್ತದೆಂಬುದನ್ನು ದಿವಂಗತ ಗೋಖಲೆಯವರು[೨] ತಮ್ಮ ಭಾಷಣವೊಂದರಲ್ಲಿ ಚೆನ್ನಾಗಿ ಗುರುತಿಸಿದ್ದಾರೆ.

"ಈಗ ನಾವು ಹೊಂದಿರುವ ಒಂದು ರೀತಿಯ ಕೃತಕ ಕರೆನ್ಸಿಗೂ ಮತ್ತು ೧೮೯೩ ಕ್ಕೆ ಮುಂಚೆ ಹೊಂದಿದ್ದ ಬೆಳ್ಳಿ ಅಥವಾ ನಾವು ಹೊಂದಬಹುದಾದ ಚಿನ್ನದಂತಹ ಸ್ವಯಂಚಲನಾತ್ಮಕ ಹೊಂದಾಣಿಕೆಯ ಕರೆನ್ಸಿಗೂ ವ್ಯತ್ಯಾಸವೇನು? ಭಾರತದಲ್ಲಿರುವ ಪರಿಸ್ಥಿತಿಯಲ್ಲಿ ವ್ಯಾಪಾರದ ಬೇಡಿಕೆಗಳನ್ನು ಸರಿದೂಗಿಸಲು ರಫ್ತು ಕಾಲದಲ್ಲಿ ಅಂದರೆ ವರ್ಷದಲ್ಲಿ ಆರು ತಿಂಗಳು ನಮಗೆ ಸಂದರ್ಭಕ್ಕೆ ತಕ್ಕಂತೆ ಚಿನ್ನ ಅಥವಾ ಬೆಳ್ಳಿಯ ನಾಣ್ಯಗಳು ಬೇಕಾಗುತ್ತವೆ. ರಫ್ತು ಕಾಲವು ಚುರುಕಾಗಿದ್ದಾಗ ಸರಕುಗಳನ್ನು ಕೊಳ್ಳಲು ಒಳಪ್ರದೇಶಗಳಿಗೆ ಹಣವನ್ನು ಕಳುಹಿಸಬೇಕಾಗುತ್ತದೆ. ಇದು ಎರಡು ಸನ್ನಿವೇಶಗಳಿಗೂ ಅಂದರೆ, ನಾವು ಈಗಿನ ಹಾಗೆ ಕೃತಕ ಕರೆನ್ಸಿಯನ್ನು ಹೊಂದಿರುವ ಸನ್ನಿವೇಶಕ್ಕೂ ಅಥವಾ ೧೮೯೩ಕ್ಕೆ ಮುಂಚೆ ಬೆಳ್ಳಿಯ ಕರೆನ್ಸಿಯನ್ನು ಹೊಂದಿದ್ದ ಸನ್ನಿವೇಶಕ್ಕೂ ಸಮಾನವಾಗಿರುವ ಅಂಶವಾಗಿದೆ. ಆದರೆ ವ್ಯತ್ಯಾಸ ಇಷ್ಟು. ಉಳಿದ ಆರು ತಿಂಗಳ ಇಳಿಗಾಲದಲ್ಲಿ

---

೧. ಗೋಲ್ಡ್ ಪ್ರೈಸಸ್ ಅಂಡ್ ವೇಜಸ್ ಅಂಡರ್ ದಿ ಗ್ರೀನ್‌ಬ್ಯಾಕ್ ಸ್ಟಾಂಡರ್ಡ್ ಪು. ೨೫೫–೫೬, ಜೊತೆಗೆ ನೋಡಿ : ಮನಿ ಇನ್ ಇಟ್ಸ್ ರಿಲೇಷನ್ ಟು ಟ್ರೇಡ್, ಪು. ೨೭, ಮತ್ತು ಸಿ.ಎಮ್. ವಾಲ್ಷ್ : ದಿ ಫಂಡಮೆಂಟಲ್ ಪ್ರಾಬ್ಲಮ್ ಇನ್ ಮಾನಿಟರಿ ಸೈನ್ಸ್, ಪು. ೩೦೪.

೨. ಸುಪ್ರೀಮ್ ಲೆಜಿಸ್ಲೇಟಿವ್ ಕೌನ್ಸಿಲ್ ಪ್ರೊಸೀಡಿಂಗ್ಸ್, ಸಂ. L, ಪು. ೬೪೨

ಕರೆನ್ಸಿಯ ಹೆಚ್ಚಳವನ್ನು ನಿಸ್ಸಂದೇಹವಾಗಿ ಅನುಭವಿಸುತ್ತೇವೆ. ಮತ್ತು ಸ್ವಯಂ ಹೊಂದಾಣಿಕೆಯ ಸ್ವಯಂಚಾಲಿತ ವ್ಯವಸ್ಥೆಯಲ್ಲಿ ಈ ಕರೆನ್ಸಿ ಹೆಚ್ಚಳವು ತಾನಾಗಿಯೇ ಮೂರು ಮಾರ್ಗಗಳ ಮೂಲಕ ವಿಲೇವಾರಿಯಾಗುತ್ತದೆ. ಹೆಚ್ಚಳವಾದ ಕರೆನ್ಸಿಯು ಬ್ಯಾಂಕುಗಳಿಗೆ ಅಥವಾ ಸರ್ಕಾರದ ಖಜಾನೆಗೆ ವಾಪಸಾಗಬಹುದು ಅಥವಾ ಅದನ್ನು ನಿರ್ಯಾತ ಮಾಡಬಹುದು ಅಥವಾ ಜನರು ತಮ್ಮ ಇತರೆ ಬಯಕೆಗಳ ಪೂರೈಕೆಗೆ ಅದನ್ನು ಕರಗಿಸಿ ಬಳಸಿಕೊಳ್ಳಬಹುದು. ಆದರೆ ಸ್ವಯಂ ಹೊಂದಾಣಿಕೆಯ ಮತ್ತು ಸ್ವಯಂಚಾಲಿತ ಕರೆನ್ಸಿಯಿಲ್ಲದಿದ್ದಾಗ ಅಂದರೆ ಈಗಿನ ಸಂದರ್ಭದಲ್ಲಿರುವಂತೆ ಕೃತಕ ಸಂಕೇತ ಕರೆನ್ಸಿಯಾದ ರೂಪಾಯಿ ಇದ್ದಾಗ ಮೂರು ಮಾರ್ಗಗಳಲ್ಲಿ ಎರಡು ಮಾರ್ಗಗಳು ಒಂದಾಗುತ್ತವೆ. ಹೆಚ್ಚು ನಷ್ಟವಿಲ್ಲದೆ ರೂಪಾಯಿಯನ್ನು ನಿರ್ಯಾತ ಮಾಡುವುದಾಗಲೀ ಅಥವಾ ಕರಗಿಸುವುದಾಗಲೀ ಸಾಧ್ಯವಿಲ್ಲ. ಪರಿಣಾಮವಾಗಿ ಹೆಚ್ಚಿನ ನಾಣ್ಯಗಳು ಬ್ಯಾಂಕುಗಳಿಗೆ ಮತ್ತು ಸರ್ಕಾರದ ಖಜಾನೆಗೆ ವಾಪಸಾಗಲೇಬೇಕು ಅಥವಾ ಅವುಗಳನ್ನು ಜನರು ಬಳಸಲೇಬೇಕೆಂದಾಯಿತು. ಎರಡನೆಯ ಸನ್ನಿವೇಶವು ಹೇಗೆಂದರೆ ಸರಿಯಾದ ವ್ಯವಸ್ಥೆಯಿರದ ಜಮೀನಿನಲ್ಲಿ ನೀರು ನಿಂತಿರುವ ಹಾಗೆ; ಇಂತಹ ಜಮೀನಿನಿಂದ ತೇವವನ್ನು ತೆಗೆದುಹಾಕಲು ಸಾಧ್ಯವಿಲ್ಲ. ಈ ದೇಶದಲ್ಲಿ ಬ್ಯಾಂಕಿಂಗ್ ಸೌಲಭ್ಯಗಳು ಅಸಮರ್ಪಕವಾಗಿವೆ. ಅದರಿಂದಾಗಿ, ಹಣವು ಬ್ಯಾಂಕುಗಳಿಗೆ ಅಥವಾ ಸರ್ಕಾರದ ಖಜಾನೆಗೆ ಶೀಘ್ರವಾಗಿ ವಾಪಸಾಗುವುದಿಲ್ಲ. ಪರಿಣಾಮವಾಗಿ, ನಿಂತ ನೀರು ಜಮೀನನ್ನು ಜೌಗು ಪ್ರದೇಶವನ್ನಾಗಿ ಮಾಡುವ ಹಾಗೆ ಒಳಪ್ರದೇಶಗಳಿಗೆ ಕಳುಹಿಸಿದ ಹೆಚ್ಚಿನ ಹಣವು ಅಲ್ಲಿ ಇಲ್ಲಿ ನಿಂತು ಬಿಡುತ್ತದೆ. ಹೀಗೆ ಮೂರರಲ್ಲಿ ಎರಡು ಮಾರ್ಗಗಳು ಬಂದಾಗಿ ಬಿಡುವ ಪ್ರವೃತ್ತಿಯಿಂದಾಗಿ ಬೆಲೆಗಳು ಏರುತ್ತವೆ ಮತ್ತು ಕರೆನ್ಸಿಯ ಹೆಚ್ಚಳವಾಗುತ್ತದೆ ಎಂಬ ವಾದವನ್ನು ತಳ್ಳಿಹಾಕಲು ಸಾಧ್ಯವಿಲ್ಲ ಎಂಬುದೇ ನನ್ನ ನಂಬಿಕೆ."

ಚಿನ್ನವು ಭಾರತದ ಕರೆನ್ಸಿಯ ಭಾಗವಾಗಿದ್ದ ಪಕ್ಷದಲ್ಲಿ ಅದು ಬೆಳೆದ ಆವಶ್ಯಕತೆಗಳನ್ನು ಪೂರೈಸುವಷ್ಟು ಹಿಗ್ಗುತ್ತಿತ್ತು. ಅಲ್ಲದೆ, ಅದಕ್ಕೆ ರೂಪಾಯಿಯಂತಲ್ಲದೆ ಕುಗ್ಗುವ ಅವಕಾಶವೂ ಇರುತ್ತಿತ್ತು. ಮೌಲ್ಯದ ಮಾನದಂಡವಾಗಿ ಚಿನ್ನವು ರೂಪಾಯಿಗಿಂತಲೂ ಉತ್ತಮ. ಏಕೆಂದರೆ ಚಿನ್ನವು ಹಿಗ್ಗಬಲ್ಲದ್ದು ಹಾಗೂ ಕುಗ್ಗಬಲ್ಲದ್ದು; ರೂಪಾಯಿ ಹಿಗ್ಗಬಲ್ಲದೇ ವಿನಃ ಕುಗ್ಗಬಲ್ಲದ್ದಲ್ಲ. ಇದನ್ನೇ ಬೇರೆ ಪರಿಭಾಷೆಯಲ್ಲಿ ನಿರೂಪಿಸುವುದಾದರೆ ಭಾರತದ ಹಣ ಪ್ರಮಿತಿಯು ಸುವರ್ಣ ಅಥವಾ ಸುವರ್ಣ ವಿನಿಮಯ ಪ್ರಮಿತಿಯಾಗಿರುವುದಕ್ಕೆ ಬದಲಾಗಿ ಅದು ಬ್ಯಾಂಕು ಅಮಾನತ್ತು ಅವಧಿಯಲ್ಲಿದ್ದ ಕಾಗದ ಪೌಂಡು ಪ್ರಮಿತಿಯಂತೆ ಅಪರಿವರ್ತನೀಯ ರೂಪಾಯಿ ಪ್ರಮಿತಿಯಾಗಿದೆ ಮತ್ತು ಸ್ಥಳೀಯವಾಗಿ ಬೆಲೆಗಳು ಅಧಿಕವಾಗಿ ಹೆಚ್ಚುತ್ತಿರುವಷ್ಟೇ ಈ ಎರಡೂ ಪದ್ಧತಿಗಳಲ್ಲಿ ಹಣವು ಅಪರಿವರ್ತನೀಯ ಎಂಬ ಮಾತಿಗೆ ಆಧಾರವಾಗಿದೆ. ಈ ಲಕ್ಷಣವನ್ನು ಬುಲಿಯನ್ ವರದಿಯನ್ನು ಉಲ್ಲೇಖಿಸಿ ಹೀಗೆ ಹೇಳಬಹುದು.[೧]

"ಇತರೆ ರಾಷ್ಟ್ರಗಳಿಗೆ ನಿರ್ಯಾತ ಮಾಡಲಾಗದಿರುವ ಅಥವಾ ನಿರ್ಯಾತ ಮಾಡಬಲ್ಲ ನಾಣ್ಯಕ್ಕೆ ಅಪೇಕ್ಷಾನುಸಾರ ಪರಿವರ್ತಿಸಲಾಗದಿರುವ ಕರೆನ್ಸಿಯಿರುವ ರಾಷ್ಟ್ರದಲ್ಲಿ ಅತ್ಯಧಿಕ ಪ್ರಮಾಣದ ಹಣದ ಚಲಾವಣೆಯ ಪರಿಣಾಮವು" ಸುವರ್ಣ ಅಥವಾ ಸುವರ್ಣ ವಿನಿಮಯ ಪ್ರಮಿತಿ ಲಕ್ಷಣವಾಗಿದೆ.

ಆದುದರಿಂದ ಭಾರತದ ಬೆಲೆಮಟ್ಟದ ಏರಿಕೆಯಲ್ಲಿ ಸ್ವಲ್ಪಮಟ್ಟಿನ ಕುಗ್ಗುವಿಕೆಯು ಅಪೇಕ್ಷಣೀಯವಾದರೆ, ಆಗ ಯಾವುದಾದರೂ ಒಂದು ರೂಪದ ನಿರ್ಯಾತ ಮಾಡಬಲ್ಲ ಕರೆನ್ಸಿಯು ಅಂದರೆ ಚಿನ್ನದಂತಹ

೧. ಪ್ರೊ. ಕ್ಯಾನನ್‌ರವರ ಗ್ರಂಥದಪುನರ್ಮುದ್ರಿತ ಆವೃತ್ತಿ, ಪು. ೧೭

ಕರೆನ್ಸಿಯು ಭಾರತದ ಹಣದ ಪದ್ಧತಿಯಲ್ಲಿ ಪ್ರತಿರೂಪವಾಗಿರುವುದಕ್ಕೆ ಅವಕಾಶ ಮಾಡಿಕೊಡಬೇಕು.

ಭಾರತದಲ್ಲಿ ಚಿನ್ನದ ಕರೆನ್ಸಿಯ ಚಲಾವಣೆಗೆ ವಿರುದ್ಧವಾಗಿ ವಾದಿಸಲು ಚೇಂಬರ್‌ಲಿನ್ ಸಮಿತಿಯು ತನ್ನ ಕಲ್ಪನಾಚಾತುರ್ಯವನ್ನು ಸಾಕಷ್ಟು ಬಳಸಿತು.[೧] ಈ ಸಮಿತಿಯು ತೀವ್ರವಾಗಿ ಪ್ರತಿಪಾದಿಸಿದ ವಾದಗಳು ಇವು:

೧) ಭಾರತದ ಜನರು ಚಿನ್ನವನ್ನು ಸಂಗ್ರಹಿಸುತ್ತಾರೆ ಮತ್ತು ಸಂದಿಗ್ಧ ಪರಿಸ್ಥಿತಿಯಲ್ಲಿ ಅದನ್ನು ಒದಗಿಸುವುದಿಲ್ಲ:
೨) ಭಾರತವು ಚಿನ್ನದಂಥ ದುಬಾರಿ ಹಣ ಸಾಮಗ್ರಿಯನ್ನು ನಿರ್ವಹಿಸಿಕೊಂಡು ಬರಲಾಗದಿರುವಷ್ಟು ಬಡ ರಾಷ್ಟ್ರವಾಗಿದೆ;
೩) ಭಾರತದ ಜನರ ವ್ಯವಹಾರಗಳ ಗಾತ್ರವು ಚಿನ್ನದ ಚಲಾವಣೆಯನ್ನು ತರಲಾಗದಿರುವಷ್ಟು ಅತ್ಯಂತ ಸಣ್ಣ ಪ್ರಮಾಣದಲ್ಲಿದೆ; ಮತ್ತು
೪) ಮಿತವ್ಯಯದ ದೃಷ್ಟಿಯಿಂದ ಭಾರತದ ಜನರಿಗೆ ರೂಪಾಯಿ ನಾಣ್ಯಕ್ಕೆ ಪರಿವರ್ತಿಸಬಲ್ಲ ಕಾಗದದ ಕರೆನ್ಸಿಯು ಅತ್ಯುತ್ತಮವಾಗಿದೆ ಮತ್ತು ಚಿನ್ನದ ಕರೆನ್ಸಿಯ ಬಳಕೆಯು ನೋಟುಗಳು ಮತ್ತು ರೂಪಾಯಿ ನಾಣ್ಯಗಳ ಜನಪ್ರಿಯತೆಗೆ ವಿರುದ್ಧವಾಗಿ ವರ್ತಿಸುತ್ತದೆ.

ಶೇಖರಣೆಯೆಂಬ ಪಿಶಾಚಿಯು ಹಳೆಯದು ಮತ್ತು ಶೇಖರಣೆಯ ವಿರುದ್ಧ ಯಾವ ಕಾನೂನೂ ಇಲ್ಲದಿರುವಾಗ ಈ ವಾದದಲ್ಲಿ ಸ್ವಲ್ಪಮಟ್ಟಿಗಾದರೂ ಸತ್ವವಿದೆ. ಆದರೆ ವಾಸ್ತವ ಸಂಗತಿಯೇ ಬೇರೆ. ಹಣವು ಬಹುಮಟ್ಟಿಗೆ ಮಾರಾಟವಾಗಬಲ್ಲ ಸರಕಾಗಿರುವಾಗ ಮತ್ತು ಸುವ್ಯವಸ್ಥಿತ ಹಣದ ಪದ್ಧತಿಯಲ್ಲಿ ಹಣದ ಮೌಲ್ಯವು ಅಲ್ಪಾವಧಿಯಲ್ಲಿ ಇಳಿಮುಖವಾಗುವ ಸಂಭವವು ಅತ್ಯಲ್ಪವಾಗಿರುವಾಗ ಹಣವನ್ನು ಎಲ್ಲ ಜನರೂ ಮೌಲ್ಯ ಸಂಗ್ರಹ ಸಾಧನವಾಗಿ ಶೇಖರಿಸುತ್ತಾರೆ. ಅದನ್ನು ಮೌಲ್ಯ ಸಂಗ್ರಹದ ಸಾಧನವಾಗಿ ಪರಿಗಣಿಸಿ ಹಣ ಹೊಂದಿರುವ ವ್ಯಕ್ತಿಯು ಆ ಹಣದ ಸದ್ಯದ ವಿನಿಯೋಗದಿಂದ ದೊರಕುವ ತುಷ್ಟಿ ಗುಣಕ್ಕೂ ಮತ್ತು ಭವಿಷ್ಯದಲ್ಲಿ ದೊರಕಬಹುದಾದ ತುಷ್ಟಿ ಗುಣಕ್ಕೂ ಹೋಲಿಸುತ್ತಿರುತ್ತಾನೆ. ವರ್ತಮಾನದ ಅತ್ಯಧಿಕ ತುಷ್ಟಿ ಗುಣವು ಗಂಡಾಂತರ ಹಾಗೂ ಕಾಲಕ್ಕೆ ವಟ್ಟಾಯಿಸಿದ ನಂತರ ದೊರಕುವ ಅತ್ಯಧಿಕ ಭವಿಷ್ಯತ್ತಿನ ತುಷ್ಟಿ ಗುಣದ ಮಟ್ಟಕ್ಕಿಂತ ಅಧಿಕವಾಗಿರದಿದ್ದರೆ ವ್ಯಕ್ತಿಯು ಹಣವನ್ನು ಶೇಖರಿಸುತ್ತಾನೆ. ಪರ್ಯಾಯವಾಗಿ ಭವಿಷ್ಯದ ಉಪಯೋಗಕ್ಕಿಂತ ವರ್ತಮಾನದ ಉಪಯೋಗವು ಅಧಿಕವಾಗಿದ್ದರೆ ಅವನು ಹಣವನ್ನು ಶೇಖರಿಸುವುದಿಲ್ಲ. ಹಾಗಿರಬೇಕಾದರೆ ಚಿನ್ನದ ಕರೆನ್ಸಿಯ ಶೇಖರಣೆಗಾಗಿ ಭಾರತದ ಜನರನ್ನು ಏಕೆ ದೂಷಿಸುವರೆಂಬುದನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ಅವರು ಚಿನ್ನವನ್ನು ಸಂಗ್ರಹಿಸುತ್ತಾರೆ ಎಂದರೆ ಪ್ರಸಕ್ತ ಸರಕಿನ ಮೇಲೆ ಅದನ್ನು ವೆಚ್ಚಮಾಡಲು ಅವರಿಗೆ ಇಚ್ಛೆಯಿಲ್ಲ ಅಥವಾ ಚಿನ್ನಕ್ಕಿಂತ ಕೀಳಾದ ಕರೆನ್ಸಿಯನ್ನು ಹೊಂದಿದ್ದು ಅದನ್ನು ಸಹಜವಾಗಿಯೇ ಬಿಟ್ಟುಕೊಡಲು ಇಚ್ಛಿಸುತ್ತಾರೆಂದು ಇದರಿಂದ ಅರ್ಥವಾಗುತ್ತದೆ. ಪರ್ಯಾಯವಾಗಿ, ಪ್ರಸ್ತಕ ಕೊಳ್ಳುವಿಕೆಯ ಅಪೇಕ್ಷೆ ಹೊಂದಿದ್ದು ಮತ್ತೆ ಯಾವ ಕರೆನ್ಸಿಯನ್ನೂ ಹೊಂದಿಲ್ಲದಿದ್ದರೆ ಅವರು ಚಿನ್ನವನ್ನು ಶೇಖರಿಸಲು ಸಾಧ್ಯವಿಲ್ಲ. ಸಂದರ್ಭದ ಒತ್ತಡ ಉಂಟಾದಾಗ ಭಾರತವು ಅಮೂಲ್ಯ ಲೋಹಗಳನ್ನು ರಫ್ತು ಮಾಡಿರುವ ಪ್ರಸಂಗಗಳನ್ನು[೧] ಗಮನಿಸಿದರೆ ಭಾರತದ

---

೧. ವರದಿ, ಪುಟಗಳು ೧–೧೯. ಇದೇ ರೀತಿಯ ವಾದಗಳನ್ನು ಮಿಸ್ಟರ್ ಕೇನ್ಸ್‌ರವರ ಗ್ರಂಥದ IVನೆಯ ಅಧ್ಯಾಯದಲ್ಲಿಯೂ ಕಾಣಬಹುದು.

ಜನರ ಶೇಖರಣೆಯ ಪ್ರವೃತ್ತಿ ಸಾಮಾನ್ಯವಾಗಿ ಊಹಿಸಿದಂತೆ ತಿಳಿವಳಿಕೆಗೆ ಗೋಚರವಾಗದ ವಿಷಯವೇನಲ್ಲ. ಒಂದು ಪಕ್ಷ, ಕೆಲವು ಸಂದರ್ಭಗಳಲ್ಲಿ[೨] ರಫ್ತು ಮಾಡಬಲ್ಲ ಕರೆನ್ಸಿಯನ್ನು ಬಿಟ್ಟುಕೊಡುವುದಕ್ಕೆ ಬದಲಾಗಿ ಜನರು ಶೇಖರಿಸಿದ್ದರೆ ಅದು ಅವರ ತಪ್ಪಲ್ಲ. ಬದಲಿಗೆ ಕರೆನ್ಸಿ ಪದ್ಧತಿಯಲ್ಲಿ ಹಣದ ಒಟ್ಟು ದಾಸ್ತಾನಿನ ಅಂಶಗಳು ಮೌಲ್ಯಸಂಗ್ರಹ ಸಾಧನವಾಗಿ ಉತ್ತಮವಾಗಿರಲಿಲ್ಲವೆಂಬುದೇ ಕಾರಣ. ಶೇಖರಣೆಯ ಪ್ರವೃತ್ತಿಯ ವಾದವನ್ನು (ಅದೂ ಒಂದು ವಾದವಾಗಿದ್ದರೆ) ನಿರ್ದಿಷ್ಟವಾಗಿ ಭಾರತದ ಜನರಿಗಷ್ಟೇ ಅಲ್ಲ ಎಲ್ಲ ಜನರಿಗೂ ಅನ್ವಯವಾಗುವಂತೆ ಬಳಸಬಹುದು.

ಭಾರತದಲ್ಲಿ ಚಿನ್ನದ ಕರೆನ್ಸಿಯ ವಿರುದ್ಧ ಇರುವ ಎರಡನೆಯ ವಾದವು ಮೊದಲಿನದಕ್ಕಿಂತ ಶಕ್ತಿಯುತವಾಗಿಲ್ಲ. ಚಲಾವಣೆಯಿಂದ ಚಿನ್ನವು ಅದೃಶ್ಯವಾಗಿರಬೇಕಾದರೆ ಅದಕ್ಕೆ ಮತ್ತೊಂದು ಬಗೆಯ ಹಣದ ಅತಿ ಸಮೃದ್ಧಿಯೇ ಹೊರತು ಬೇರೆ ಯಾವ ಕಾರಣವೂ ಇರಲಾರದು. ೧೮೯೦ರ ದಶಕದಲ್ಲಿ ಭಾರತದಲ್ಲಿ ಸುವರ್ಣ ಪ್ರಮಿತಿಯನ್ನು ಆಚರಣೆಗೆ ತರಬೇಕೆಂದು ಯೋಚಿಸುತ್ತಿದ್ದಾಗ ಕೆಲವರು ಚಿನ್ನವನ್ನು ಚಲಾವಣೆಗೆ ತರುವ ಇಟಲಿ ಮತ್ತು ಆಸ್ಟ್ರಿಯನ್ ಸಾಮ್ರಾಜ್ಯದ ನಿರರ್ಥಕ ಪ್ರಯತ್ನಗಳನ್ನು ಉಲ್ಲೇಖಿಸುತ್ತಿದ್ದರು. ಚಿನ್ನವು ಚಲಾವಣೆಯಿಂದ ಅದೃಶ್ಯವಾಗುತ್ತಿದ್ದುದು ನಿಜಸಂಗತಿಯೇ. ಅದಕ್ಕೆ ಅವರ ಬಡತನ ಕಾರಣವಲ್ಲ. ಆ ರೀತಿಯಾಗುವುದಕ್ಕೆ ಅವರು ನೋಟುಗಳನ್ನು ಚಲಾವಣೆಗೆ ತಂದುದೇ ಕಾರಣ, ಚಲಾವಣೆಗೆ ಅಗ್ಗದ ಪರ್ಯಾಯವನ್ನು ತರದೇಹೋದರೆ ಯಾವುದೇ ರಾಷ್ಟ್ರವಾಗಲೀ ಸುವರ್ಣ ಪ್ರಮಿತಿಯನ್ನು ನಿರ್ವಹಿಸಬಲ್ಲದು.

ಮತ್ತೆ ವ್ಯವಹಾರಗಳು ಅತ್ಯಲ್ಪ ಪ್ರಮಾಣದ್ದಾಗಿರುವುದರಿಂದ ಚಿನ್ನವು ಚಲಾವಣೆಯಲ್ಲಿರುವುದಿಲ್ಲ ಎಂದ ಮಾತ್ರಕ್ಕೆ ಚಿನ್ನವು ಚಲಾವಣೆಯಲ್ಲಿರಕೂಡದೆಂಬುದಲ್ಲ. ಆದರೆ ಕರೆನ್ಸಿ ಘಟಕವು ಸಂದರ್ಭೋಚಿತವಾಗಿ ಸಣ್ಣದಾಗಿರಬೇಕೆಂಬುದೇ ಸರಿಯಾದ ತೀರ್ಮಾನವಾಗಿದೆ. ಚಲಾವಣೆಯ ತೊಂದರೆಗಳು ನಾಣ್ಯೀಕರಣದ ಸಮಸ್ಯೆಯನ್ನು ತಂದೊಡ್ಡುತ್ತವೆ. ಯಾವುದು ಮೌಲ್ಯದ ಮಾನದಂಡವಾಗಿರಬೇಕೆಂಬ ಪ್ರಶ್ನೆಗೆ ನಾಣ್ಯ ಮಾಡುವುದನ್ನು ಕುರಿತ ವಿಚಾರಗಳು ನಿರ್ಣಾಯಕವಾಗಲು ಅವಕಾಶ ಕೊಡಬಾರದು. ಸವರನ್ನು ಚಲಾವಣೆಯಲ್ಲಿಲ್ಲ ಎಂದರೆ ಭಾರತವು ಚಿನ್ನದ ಕರೆನ್ಸಿಯನ್ನು ಹೊಂದಿರಕೂಡದೆಂಬುದಲ್ಲ. ಅದರ ಅರ್ಥ ಚಲಾವಣೆಗೆ ಸವರನ್ನು ಬಹಳ ದೊಡ್ಡ ನಾಣ್ಯ ಎಂದಷ್ಟೆ. ಒರಟಾಗಿ ಹೇಳಬಹುದಾದರೆ ಸವರನ್ನು ಘಟಕವಾಗಿರಕೂಡದು ಎಂಬುದಕ್ಕೆ ಈ ವಿರೋಧವು ಅನ್ವಯವಾಗುತ್ತದೆಯೇ ಹೊರತು ಚಿನ್ನದ ಕರೆನ್ಸಿಯ ತತ್ವದ ವಿರುದ್ಧವಾಗಲ್ಲ. ಸವರನ್ನು ಸಾಕಷ್ಟು ಸಣ್ಣ ಘಟಕವಾಗಿರದಿದ್ದರೆ ಚಿನ್ನದ ಚಲಾವಣೆಯು ಸಫಲವಾಗುವಂತೆ ಮಾಡಲು ಮತ್ತೊಂದು ಬಗೆಯ ನಾಣ್ಯವನ್ನು ನಿರ್ಧರಿಸಬೇಕಾಗುತ್ತದೆ.

ಚಿನ್ನದ ಕರೆನ್ಸಿಯ ವಿರುದ್ಧ ಇರುವ ನಾಲ್ಕನೆಯ ವಾದವು ಒಂದು ವಾಸ್ತವ ಸಂಗತಿಯಾಗಿದೆ ಮತ್ತು ಈ ಸಂಗತಿಯನ್ನು ಚಿನ್ನದ ಕರೆನ್ಸಿಗೆ ಆರೋಪಿಸಲಾಗಿರುವ ಪ್ರವೃತ್ತಿಯು ಇದೆಯೇ ಅಥವಾ ಇಲ್ಲವೇ ಎಂಬ ಸಾಕ್ಷ್ಯಾಧಾರದೊಡನೆ ಖಚಿತಪಡಿಸಬಹುದು ಅಥವಾ ಹಾಗೆ ಖಚಿತಪಡಿಸಲು ಆಗದೆಯೂ ಇರಬಹುದು. ಆದರೆ ಕಾಗದವನ್ನು ರೂಪಾಯಿಯಾಗಿ ಪರಿವರ್ತಿಸುವ ಹಣದ ಪದ್ಧತಿಯಲ್ಲಿ ಯಾವ

---

೧. ಚೇಂಬರ್‌ಲಿನ್ ಸಮಿತಿಗೆ ದಲಾಲ್‌ರವರು ಸಲ್ಲಿಸಿದ ವಿಜ್ಞಾಪನಾ ಪತ್ರವನ್ನು ನೋಡಿ. ಅನುಬಂಧಗಳು, ಸಂ.III ಸಂಖ್ಯೆ XXXIII, ಪುಟಗಳು ೬೭೩–೭೫

೨. ೧೯೦೭–೦೮ರ ಆಪತ್ಕಾಲದಲ್ಲಿ ಭಾರತದ ಜನರನ್ನು ಈ ರೀತಿ ದೂಷಿಸಲಾಗಿತ್ತು. ಆದರೂ ಆ ಆಪತ್ಕಾಲದಲ್ಲಿ ಕೆಲಭಾಗ ಚಿನ್ನವನ್ನು ಖಾಸಗಿಯಾಗಿ ರಫ್ತುಮಾಡಲಾಗಿತ್ತು ಎಂಬುದನ್ನು ಗಮನಿಸಬೇಕು.

ಅಪಾಯವೂ ಇಲ್ಲವೇ ಎಂಬ ಪ್ರಶ್ನೆಯನ್ನು ನಾವು ಕೇಳಬಹುದು. ರೂಪಾಯಿಯ ಮೌಲ್ಯದ ಮೇಲೆ ಕಾಗದವು ಯಾವ ಪರಿಣಾಮವನ್ನೂ ಬೀರುವುದಿಲ್ಲವೇ? ಈ ಪ್ರಶ್ನೆಯನ್ನು ಸಮಿತಿ ಪರಿಗಣಿಸಿತ್ತೇ ಎಂಬುದು ನಿಜಕ್ಕೂ ಸಂದೇಹಾಸ್ಪದ. ಏಕೆಂದರೆ ಕಾಗದದ ಕರೆನ್ಸಿಯು ಪರಿವರ್ತನೀಯವಾದದ್ದರಿಂದ ಅದು ರೂಪಾಯಿಯ ಮೌಲ್ಯ ಅಥವಾ ಕೊಳ್ಳುವ ಶಕ್ತಿಯ ಮೇಲೆ ಪ್ರಭಾವ ಬೀರಲಾಗಲಿಲ್ಲವೆಂಬ ಸಾಮಾನ್ಯ ಅಭಿಪ್ರಾಯಕ್ಕೆ ಪ್ರಾಯಶಃ ಸಮಿತಿಯನ್ನು ಒಪ್ಪಿಸಲಾಯಿತೆಂದು ತೋರುತ್ತದೆ. ಈ ದೃಷ್ಟಿಯನ್ನು ಹೊಂದಿದ್ದುದರಲ್ಲೇ ಸಮಿತಿ ತಪ್ಪು ಮಾಡಿತ್ತು. ಆಧಾರರಹಿತ ಕರೆನ್ಸಿ ಇರುವವರೆಗೆ ಲೆಕ್ಕದ ಮೂಲಮಾನಕ್ಕೆ ಪರಿವರ್ತನೆಯಾಗಬಲ್ಲ ಕಾಗದ ಕರೆನ್ಸಿಯ ಪರಿವರ್ತನೆಯು ಲೆಕ್ಕದ ಮೂಲಮಾನದ ಮೌಲ್ಯದಲ್ಲಿ ಕಡಿತ ಉಂಟಾಗುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಏಕೆಂದರೆ ಕಾಗದದ ಕರೆನ್ಸಿಯು ಪೈಪೋಟಿಯ ಮೂಲಕ ಲೆಕ್ಕದ ಮೂಲಮಾನಕ್ಕಿರುವ ಬೇಡಿಕೆಯನ್ನು ತಗ್ಗಿಸಿ ಅದರ ಮೌಲ್ಯವನ್ನೂ ತಗ್ಗಿಸುತ್ತದೆ. ಆದುದರಿಂದ ಕಾಗದವು ಕರೆನ್ಸಿಯಾಗಿ ಮಿತವ್ಯಯದ ಲಕ್ಷಣ ಹೊಂದಿದಾಗ್ಯೂ ಅದು ರೂಪಾಯಿಯ ಮೌಲ್ಯಕ್ಕೆ ಅಪಾಯಕಾರಿಯಾಗಿದೆ. ಒಂದು ಪಕ್ಷ ರೂಪಾಯಿಯನ್ನು ಚಿನ್ನಕ್ಕೆ ಮುಕ್ತವಾಗಿ ಪರಿವರ್ತಿಸಬಹುದಾಗಿದ್ದರೆ ಈ ಅಪಾಯವು ಮಿತವಾಗಿರುತ್ತಿದ್ದಿತು. ಆದರೆ ಲೆಕ್ಕದ ಮೂಲಮಾನದ ಮೌಲ್ಯಕ್ಕೆ ಅಪರಿವರ್ತನೀಯವಾಗಿರುವ ಕಾಗದ ಹಣದಷ್ಟೇ ಪರಿವರ್ತನೀಯವಾಗಿರುವ ಕಾಗದದ ಹಣವೂ ಅಪಾಯಕಾರಿಯಾಗುತ್ತದೆ. ರೂಪಾಯಿಯ ಮೌಲ್ಯವನ್ನು ಲೋಹದ ಮೌಲ್ಯಕ್ಕಿಂತ ಕಡಿಮೆಯಾಗದಂತೆ ರಕ್ಷಿಸದಿದ್ದರೆ ಅಂದರೆ ಮುಕ್ತ ಪರಿವರ್ತನೆಯ ಮೂಲಕ ರೂಪಾಯಿಯನ್ನು ಅಂತಿಮವಾಗಿ ಲೋಹವನ್ನಾಗಿ ಮಾರ್ಪಾಟು ಮಾಡಲಾಗದಿದ್ದರೆ ಆಗ ಪರಿವರ್ತನೀಯ ಕಾಗದದ ಕರೆನ್ಸಿಯು ಅಪಾಯಕಾರಿಯಾಗುತ್ತದೆ.[೧] ಇಂಥ ಪರಿವರ್ತನೆಯಿಂದ ರೂಪಾಯಿಯನ್ನು ಸಂರಕ್ಷಿಸಿಲ್ಲ. ಹೀಗೆ ರೂಪಾಯಿಯನ್ನು ಸಂರಕ್ಷಿಸುವುದಕ್ಕೆ ಸಮಿತಿ ಒಡಂಬಡಲಿಲ್ಲ. ಏಕೆಂದರೆ, ಕಾಗದವನ್ನು ಸಂಪೂರ್ಣವಾಗಿ ಅಪರಿವರ್ತನೀಯವಾಗಿ ಮಾಡಬಹುದಾಗಿದ್ದಂತೆಯೇ ಕಾಗದ ಕರೆನ್ಸಿಯನ್ನು ಬಹಳಷ್ಟು ಸಂಪೂರ್ಣವಾಗಿ ಪರಿವರ್ತನೀಯವಾಗುವಂತೆ ಮಾಡಲು ಒತ್ತಾಯಿಸುವುದರಿಂದ ಸಾಮಾನ್ಯ ಸರಕುಗಳು ಮತ್ತು ಆ ಕಾರಣದಿಂದ ಚಿನ್ನದೊಡನೆ ರೂಪಾಯಿಯ ಸಮತೆಯನ್ನು ರಕ್ಷಿಸುವ ನಿರೀಕ್ಷೆಯನ್ನು ಗಂಡಾಂತರಕ್ಕೆ ಒಳಪಡಿಸಬೇಕಾಗುತ್ತದೆ ಎಂಬುದಾಗಿ ಸಮಿತಿ ಗ್ರಹಿಸಿದ್ದಿತು. ಮಿತವ್ಯಯದ ಪರಿಗಣನೆಯ ಗೀಳನ್ನು ಹೊಂದಿದ್ದ, ಆದರೆ ಮೌಲ್ಯ ಸ್ಥಿಮಿತತೆಯ ಪರಿಗಣನೆಗೆ ಅಷ್ಟೇ ನಿರ್ಲಕ್ಷ್ಯವಾಗಿದ್ದ ಸಮಿತಿಯು ಭಾರತದ ಕಾಗದ ಹಣದ ಆಧಾರವನ್ನು ನಿರ್ದಿಷ್ಟ ಚಲಾವಣಾ ಪದ್ಧತಿಯಿಂದ ನಿರ್ದಿಷ್ಟ ಅನುಪಾತ ಪದ್ಧತಿಗೆ ಬದಲಾಯಿಸಲು ವಾಸ್ತವವಾಗಿ ಸೂಚಿಸಿತು.[೨] ಮಿತವ್ಯಯದ ಪರಿಗಣನೆಯ ಆದೇಶದಿಂದಾಗಿ ಈ ಪ್ರಶ್ನೆಯನ್ನು ಸಮಿತಿ ಗಮನಿಸಿಲ್ಲ ಎಂಬುದು ಭಾರತದ ಕರೆನ್ಸಿ ಕುರಿತಂತೆ ಇಡೀ ಸ್ಥಿರತೆಯ ಪ್ರಶ್ನೆಯನ್ನು ತೀರ ಉದಾಸೀನವಾಗಿ ಪರಿಗಣಿಸಿದೆ ಎಂಬುದಕ್ಕೆ ಮತ್ತೊಂದು ಸಾಕ್ಷ್ಯವಾಗಿದೆ.

ಮೇಲೆ ಚರ್ಚಿಸಿರುವುದರಲ್ಲಿ ಸತ್ಯವೇನಾದರೂ ಇದ್ದರೆ ಚಿನ್ನದ ಕರೆನ್ಸಿಯು ಕೇವಲ ಭಾವಾತಿರೇಕ ಮತ್ತು ದುಬಾರಿಯ ಭೋಗವಸ್ತುವಲ್ಲ ಎಂಬುದು ನಿಜವಾಗಿಯೂ ತಿಳಿಯುತ್ತದೆ. ಭಾರತದ ಮೌಲ್ಯದ ಮಾನದಂಡವನ್ನು ಸ್ಥಿರಗೊಳಿಸಿ ಆ ಮೂಲಕ ಬೆಲೆಯ ಮಟ್ಟದ ಏರಿಕೆಯಿಂದ ಉಂಟಾಗುವ

---

೧. ಈ ವಿಷಯಕುರಿತ ವಿಚಾರಪೂರ್ಣ ಚರ್ಚೆಗೆ, ಪ್ರೊ. ಕ್ಯಾನನ್‌ರವರ 'ಮನಿ' ಇಟ್ಸ್ ಕನೆಕ್ಷನ್ ವಿತ್ ರೈಸಿಂಗ್ ಅಂಡ್ ಫಾಲಿಂಗ್ ಪ್ರೈಸಸ್, ಮೂರನೆಯ ಆವೃತ್ತಿ ಪುಟಗಳು ೪೭–೪೮ ನ್ನು ನೋಡಿ.

೨. ವರದಿ, ವಿಭಾಗ ೧೧೨

ದುಷ್ಪರಿಣಾಮಗಳಿಂದ ಭಾರತೀಯ ಜನತೆಯ ಯೋಗಕ್ಷೇಮವನ್ನು ಸ್ವಲ್ಪಮಟ್ಟಿಗಾದರೂ ಕಾಪಾಡಬೇಕೆಂಬ ತೀವ್ರ ಆಸಕ್ತಿಯುಳ್ಳ ಆದೇಶದಿಂದ ಚಿನ್ನದ ಕರೆನ್ಸಿಯು ಆವಶ್ಯಕವಾಗಿದೆ.

ಭಾರತ ಸರ್ಕಾರದಿಂದ ಮೂಲತಃ ರೂಪುಗೊಂಡ ಮತ್ತು ಫೌಲರ್ ಸಮಿತಿಯಿಂದ ಸಮ್ಮತಿಸಲ್ಪಟ್ಟ ಯೋಜನೆಯಿಂದ ಹಿಂತೆಗೆಯುವುದನ್ನು ಸಮರ್ಥಿಸಿದ ಚೇಂಬರ್‌ಲಿನ್ ಸಮಿತಿಯು ಎಲ್ಲಾ ದೃಷ್ಟಿಯಿಂದಲೂ ಘೋರವಾದ ತಪ್ಪು ಮಾಡಿತ್ತೆಂಬುದನ್ನು ನಾವು ಈಗ ಕಾಣಬಹುದು. ಆದರೆ, ಅದು ಒಂದು ಪ್ರಶ್ನೆಗೆ ಅವಕಾಶ ಮಾಡಿಕೊಡುತ್ತದೆ: ಆ ಆದರ್ಶವು ಹೀಗೆ ದಯನೀಯವಾಗಿ ಸೋತದ್ದು ಹೇಗೆ? ಫೌಲರ್ ಸಮಿತಿಯು ಚಿನ್ನವನ್ನು ಭಾರತದ ಕರೆನ್ಸಿಯಾಗಿರಬೇಕೆಂದು ಸೂಚಿಸಿದ್ದರೆ ಚಿನ್ನವು ಕರೆನ್ಸಿಯಾಗದಿದ್ದುದು ಹೇಗೆ? ಚಿನ್ನವನ್ನು ಕಾನೂನುಬದ್ಧ ಹಣವೆಂದು ಘೋಷಿಸಲಾಗಿರುವುದರಿಂದ ಅದರ ಒಳಹರಿವಿಗೆ ಅವಕಾಶವಿಲ್ಲವೆಂದು ಹೇಳಲಾಗುವುದಿಲ್ಲ. ಪ್ರೊ. ಫಿಷರ್ ಅವರ ಮಾತುಗಳಲ್ಲಿ ಹೇಳುವುದಾದರೆ ಭಾರತದ ಹಣದ ಸಂಗ್ರಹಾಲಯದಲ್ಲಿ ಬೆಳ್ಳಿಗಿಂತಲೂ ಚಿನ್ನವು ಹರಿಯುವುದಕ್ಕೆ ವಿಧಾಯಕವಾಗಿ ಹೆಚ್ಚು ಅವಕಾಶ ಮಾಡಿಕೊಡಲಾಗಿದೆ. ಬೆಳ್ಳಿಯು ರೂಪಾಯಿಯ ರೂಪದಲ್ಲಿ ಒಂದು ಸಣ್ಣ ಕವಾಟದ ಮೂಲಕ ಹಣದ ಸಂಗ್ರಹಾಲಯ ಸೇರುತ್ತದೆ ಮತ್ತು ಆ ಕವಾಟವು ಸಂಗ್ರಹಾಲಯವನ್ನು ಸೇರಲು ಬೆಳ್ಳಿಗೆ ಅವಕಾಶವನ್ನು ಒದಗಿಸಿದೆಯೇ ವಿನಾ ಅಲ್ಲಿಂದ ಅದನ್ನು ಹೊರತೆಗೆಯಲು ಅಲ್ಲ. ಪ್ರತಿಯಾಗಿ ಅದೇ ಸಂಗ್ರಹಾಲಯಕ್ಕೆ ಚಿನ್ನವನ್ನು ಒಳತರಲು ಹಾಗೂ ಹೊರಕ್ಕೆ ಕಳುಹಿಸುವ ಅವಕಾಶ ಮಾಡಲಾಗಿದೆ. ಹಾಗಿದ್ದರೆ ಭಾರತದ ಕರೆನ್ಸಿ ಸಂಗ್ರಹಾಲಯಕ್ಕೆ ಚಿನ್ನವು ಏಕೆ ಹರಿಯುತ್ತಿಲ್ಲ? ೧೮೯೮ರಲ್ಲಿ ಸೂಚಿಸಲಾದ ಸ್ಪಷ್ಟವಾದ ಪದ್ಧತಿಯ ಕಡೆಗೆ ಹೊರಳಲು ಈ ಪ್ರಶ್ನೆ ಬಗ್ಗೆ ಸರಿಯಾಗಿ ಅರ್ಥ ಮಾಡಿಕೊಳ್ಳುವುದೇ ಮೊದಲ ಹೆಜ್ಜೆಯಾಗಿದೆ.

ಈ ಪ್ರಶ್ನೆಯನ್ನು ಕುರಿತ ಬರವಣಿಗೆಗಳ ಪರಿಶೀಲನೆಯಿಂದ ಭಾರತದ ಕರೆನ್ಸಿ ಪದ್ಧತಿಯೊಳಕ್ಕೆ ಚಿನ್ನವು ಬಾರದಿರುವುದಕ್ಕೆ ಎರಡು ವಿವರಣೆಗಳನ್ನು ಸಾಮಾನ್ಯವಾಗಿ ಕೊಡಬಹುದೆಂಬುದು ತೋರುತ್ತದೆ. ಸರ್ಕಾರದ ಸೆಕ್ರೆಟರಿ ಆಫ್ ಸ್ಟೇಟ್‌ನ ಕೌನ್ಸಿಲ್ ಹುಂಡಿಗಳ ಮಾರಾಟವು ಈ ವಿವರಣೆಗಳಲ್ಲಿ ಒಂದಾಗಿದೆ. ಭಾರತಕ್ಕೆ ಚಿನ್ನವು ಹೋಗದಂತೆ ತಡೆಗಟ್ಟುವುದೇ ಕೌನ್ಸಿಲ್ ಹುಂಡಿಗಳ ಮಾರಾಟದ ಪರಿಣಾಮವಾಗಿತ್ತೆಂದು ಹೇಳಲಾಗಿದೆ. ಭಾರತದ ಕರೆನ್ಸಿ ಬಗ್ಗೆ ಅಧಿಕಾರಯುತವಾಣಿಯಾದ ಸುಬೇದಾರ್ ಅವರು ಸ್ಮಿಥ್ ಸಮಿತಿಯ ಮುಂದೆ (ಪ್ರಶ್ನೆ ೩೫೦೨) ಹೇಳಿಕೆ ನೀಡುತ್ತಾ ಹೀಗೆ ಅಭಿಪ್ರಾಯ ಪಟ್ಟಿದ್ದಾರೆ.

"ನಮ್ಮ ಕರೆನ್ಸಿ ನೀತಿಯನ್ನು ನಿಯಂತ್ರಿಸುವವರು ೧೯೦೫ ರಿಂದಲೂ ಚಿನ್ನವು ಭಾರತಕ್ಕೆ ಹೋಗದಂತೆ ಮತ್ತು ಚಲಾವಣೆಗೆ ಬಾರದಂತೆ ತಡೆಗಟ್ಟಲು ಉದ್ದೇಶಪೂರ್ವಕವಾಗಿ ಪ್ರಯತ್ನಿಸುತ್ತಾ ಬಂದಿದ್ದಾರೆ."

ಈಸ್ಟ್ ಇಂಡಿಯಾ ಕಂಪನಿಯ ಕಾಲದಷ್ಟೇ ಹಿಂದಿನಷ್ಟು ಇತಿಹಾಸವನ್ನು ಕೌನ್ಸಿಲ್ ಹುಂಡಿಯೂ ಹೊಂದಿದೆ.[೧] ಭಾರತದಲ್ಲಿ ಸರ್ಕಾರವು ತನ್ನ ಆದಾಯ ಪಡೆದು ಅದನ್ನು ಇಂಗ್ಲೆಂಡಿನಲ್ಲಿ ಪಾವತಿ ಮಾಡಬೇಕಾದ ಕಟ್ಟುಪಾಡಿನಿಂದ ಹುಟ್ಟಿಕೊಂಡ ಭಾರತ ಸರ್ಕಾರದ ವಿಚಿತ್ರ ಪರಿಸ್ಥಿತಿಯು ಭಾರತದಿಂದ ಇಂಗ್ಲೆಂಡಿಗೆ ಹಣ ರವಾನಿಸುವ ಆವಶ್ಯಕತೆಯನ್ನು ಭಾರತ ಸರ್ಕಾರದ ಮೇಲೆ ವಿಧಿಸುತ್ತದೆ. ಈಸ್ಟ್ ಇಂಡಿಯಾ ಕಂಪನಿಯು

---

೧. ಹೋಲಿಸಿ : ಭಾರತದಿಂದ ಹಣ ಕಳುಹಿಸುವ ರೀತಿಗೆ ಸಂಬಂಧಿಸಿದ ಪದ್ಧತಿಯ ಬಗ್ಗೆ ಸರ್ ಹೆನ್ರಿ ವಾಟರ್‌ಫೀಲ್ಡ್ ಅವರ ಜ್ಞಾಪನ ಪತ್ರ ಫೌಲರ್ ಕಮಿಟಿ ರಿಪೋರ್ಟ್‌ನ ಅನುಬಂಧ ಪು. ೨೪, ಕೌನ್ಸಿಲ್ ಹುಂಡಿಯ ಮಾರಾಟ ಮತ್ತು ತಂತಿ ವರ್ಗಾವಣೆ ಕುರಿತು ಎಫ್.ಡಬ್ಲ್ಯೂ. ನ್ಯೂ ಮಾರ್ಚ್ ಅವರ ಜ್ಞಾಪನ ಪತ್ರ ಕೂಡ; ರಾಯಲ್ ಕಮಿಷನ್ ಆನ್ ಇಂಡಿಯನ್ ಫೈನಾನ್ಸ್ ಅಂಡ್ ಕರೆನ್ಸಿಯ ಮಧ್ಯಂತರ ವರದಿಯ ಅನುಬಂಧಗಳು, ಸಂ. I, ಸಂಖ್ಯೆ VIII, ಪು. ೨೧೭

ಪ್ರಾರಂಭವಾದಾಗಿನಿಂದಲೂ ಚಿನ್ನದ ಗಟ್ಟಿಯ ವರ್ಗಾವಣೆಯನ್ನು ತಪ್ಪಿಸುವಂತೆ ಹಣ ರವಾನಿಸುವ ವ್ಯವಸ್ಥೆಯ ನೀತಿಯನ್ನು ಅನುಸರಿಸುತ್ತಾ ಬರಲಾಗಿದೆ. ಈಸ್ಟ್ ಇಂಡಿಯಾ ಕಂಪನಿಯ ಡೈರೆಕ್ಟರುಗಳಿಗೆ ಹಣ ರವಾನಿಸುವ ಮೂರು ಮಾರ್ಗಗಳು ತೆರೆದಿದ್ದವು: ೧) ಚಿನ್ನದ ಗಟ್ಟಿಯನ್ನು ಭಾರತದಿಂದ ಇಂಗ್ಲೆಂಡಿಗೆ ಕಳುಹಿಸುವುದು; ೨) ಭಾರತ ಸರ್ಕಾರದ ಮೇಲಿನ ಹುಂಡಿಗಳಿಗೆ ಇಂಗ್ಲೆಂಡಿನಲ್ಲಿ ಹಣ ಪಡೆಯುವುದು; ಮತ್ತು ೩) ಇಂಗ್ಲೆಂಡಿಗೆ ರವಾನಿಸಬೇಕಾದ ಸರಕುಗಳನ್ನು ಕೊಳ್ಳುವ ಸಲುವಾಗಿ ಭಾರತದಲ್ಲಿ ವರ್ತಕರಿಗೆ ಸಾಲ ಒದಗಿಸುವುದು ಮತ್ತು ಯಾವ ಕಂಪನಿಯ ಡೈರೆಕ್ಟರುಗಳಿಗೆ ಸರಕುಗಳನ್ನು ಅಡಮಾನ ಮಾಡಲಾಗಿದೆಯೋ ಅವರಿಗೆ ಇಂಗ್ಲೆಂಡಿನಲ್ಲಿ ಮರುಪಾವತಿ ಮಾಡುವುದು. ಇವುಗಳಲ್ಲಿ ಕೊನೆಯ ಎರಡು ವರ್ಗಗಳ ಮೇಲೆ ಡೈರೆಕ್ಟರುಗಳು ಹೆಚ್ಚು ಭರವಸೆಯನ್ನು ಇಟ್ಟಿದ್ದರು. ಇದರಿಂದಾಗಿ, ಸಾಲದ ವಿಷಮ ಪದ್ಧತಿಯನ್ನು ತಂದಂತಾಗುತ್ತದೆ ಮತ್ತು ವ್ಯಾಪಾರದ ಸಾಮಾನ್ಯ ಗತಿಯಲ್ಲಿ ಮಧ್ಯೆ ಪ್ರವೇಶಿಸಿದಂತಾಗುತ್ತದೆ ಎನ್ನುವ ದೃಷ್ಟಿಯಿಂದ ಕಾಲಕ್ರಮದಲ್ಲಿ ಅಡಮಾನದ ಮೂಲಕ ಹಣ ಕಳುಹಿಸುವ ರೀತಿಯನ್ನು ಕೈಬಿಡಲಾಯಿತು. ಈ ಮೂರು ಸಾಧ್ಯತೆಗಳಲ್ಲಿ[೧] ಭಾರತದ ಮೇಲೆ ಹುಂಡಿ ಮಾರುವುದೇ ಅತ್ಯಂತ ಯುಕ್ತವಾದದ್ದಾಗಿ ಉಳಿದುಕೊಂಡಿತು ಮತ್ತು ಈಸ್ಟ್ ಇಂಡಿಯಾ ಕಂಪನಿಯಿಂದ ಭಾರತ ಸರ್ಕಾರವನ್ನು ಚಕ್ರವರ್ತಿಯು ವಹಿಸಿಕೊಂಡಾಗ ಹುಂಡಿ ಮಾರುವ ಕಾರ್ಯವನ್ನು ಕೌನ್ಸಿಲ್‌ನಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ಮುಂದುವರಿಸಿತು. ಅದರಿಂದಾಗಿಯೇ ಕೌನ್ಸಿಲ್ ಹುಂಡಿ ಎನ್ನುವ ಹೆಸರು ಬಂದಿತು. ಸೆಕ್ರೆಟರಿ ಆಫ್ ಸ್ಟೇಟ್‌ನ ಆಶ್ರಯದಲ್ಲಿ ಕೌನ್ಸಿಲ್ ಹುಂಡಿಯು ಕೆಲವು ಮಾರ್ಪಾಟುಗಳಿಗೆ ಒಳಪಟ್ಟಿದೆ. ಈಗ ಕಾರ್ಯರೂಪದಲ್ಲಿರುವ ಮಾರಾಟವು ವಾರದ ಮಾರಾಟವಾಗಿದೆ[೨] ಮತ್ತು ಬ್ಯಾಂಕ್ ಆಫ್ ಇಂಗ್ಲೆಂಡಿನ ಮೂಲಕ ಇದನ್ನು ನಿರ್ವಹಿಸಲಾಗುತ್ತಿದೆ. ಭಾರತ ಸರ್ಕಾರದ ಪರವಾಗಿ ಪ್ರತಿ ಬುಧವಾರವೂ ಬ್ಯಾಂಕ್ ಆಫ್ ಇಂಗ್ಲೆಂಡ್ ಜಾಹೀರಾತನ್ನು ಕೊಡುತ್ತದೆ. ಈ ಜಾಹೀರಾತಿನ ಮೇರೆಗೆ ಮುಂಬಯಿ, ಮದರಾಸು ಅಥವಾ ಕಲ್ಕತ್ತಾದಲ್ಲಿ ಭಾರತ ಸರ್ಕಾರದಿಂದ ಪಾವತಿಯಾಗಬೇಕಾದ ಆನ್ ಡಿಮಾಂಡ್ ಹುಂಡಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸಿ ಅವುಗಳನ್ನು ಮುಂದಿನ ಬುಧವಾರದಂದು ಒಪ್ಪಿಸಲು ಬ್ಯಾಂಕ್ ಆಫ್ ಇಂಗ್ಲೆಂಡ್ ವ್ಯವಸ್ಥೆಮಾಡಿದೆ. ಹುಂಡಿಗಳ ಟೆಂಡರುಗಳನ್ನು ಸ್ವೀಕರಿಸಲು ಬೆಲೆಯಲ್ಲಿನ ಪೆನ್ಸ್‌ನ ಕನಿಷ್ಠ ಪಾಲನ್ನು ಈಗ ೧/೩೨ ರಷ್ಟು ಪೆನ್ಸ್ ಎಂಬುದಾಗಿ ನಿಗದಿಪಡಿಸಲಾಗಿದೆ.[೩] ಮತ್ತೊಂದು ಸಂಗತಿಯೆಂದರೆ, ನಾಲ್ಕು ಬಗೆಯ ಹುಂಡಿಗಳಿವೆ: ೧) ಪ್ರತಿ ಬುಧವಾರವೂ ಮಾರಾಟವಾಗುವ 'ಕೌನ್ಸಿಲ್'ಎಂಬ ಹೆಸರಿನ ಸಾಮಾನ್ಯ ಹುಂಡಿಗಳು;

---

೧. ನಾಲ್ಕನೆಯ ಮಾರ್ಗವೊಂದಿತ್ತು. ಯಾವುದೆಂದರೆ: ಲಂಡನ್ ಮೇಲಿನ ಸ್ಟರ್ಲಿಂಗ್ ಹುಂಡಿಗಳನ್ನು ಭಾರತದಲ್ಲಿ ಭಾರತ ಸರ್ಕಾರವು ಕೊಂಡು ಅವುಗಳನ್ನು ವಸೂಲಿಗಾಗಿ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಕಳುಹಿಸುವುದು. ೧೮೭೭ರಲ್ಲಿ ಈ ಮಾರ್ಗವನ್ನು ಸ್ವಲ್ಪಕಾಲದವರೆಗೆ ಅನುಸರಿಸಲಾಯಿತು. ನಂತರ ಅದನ್ನು ತ್ಯಜಿಸಲಾಯಿತು.

೨. ಸೆಕ್ರೆಟರಿ ಆಫ್ ಸ್ಟೇಟ್‌ನ ಆಶ್ರಯದಲ್ಲಿ ಕೌನ್ಸಿಲ್ ಹುಂಡಿಗಳ ಮಾರಾಟವನ್ನು ಮೊಟ್ಟಮೊದಲಿಗೆ ೧೮೬೨ರ ಜನವರಿ ೨೨ ರಿಂದ ೧೮೬೨ರ ನವೆಂಬರ್ ೨೨ರ ವರೆವಿಗೂ ಮಾರಾಟವನ್ನು ಮಾಸಿಕವಾಗಿ ನಡೆಸಲಾಗುತ್ತಿತ್ತು. ೧೮೬೨ರ ನವೆಂಬರ್‌ನಿಂದ ಪಾಕ್ಷಿಕ ಮಾರಾಟವನ್ನು ಕಾರ್ಯರೂಪಕ್ಕೆ ತಂದಿತ್ತು. ೧೮೭೬ರ ಆಗಸ್ಟ್‌ನಲ್ಲಿ ಅವುಗಳನ್ನು ವಾರದ ಮಾರಾಟವಾಗಿ ಮಾರ್ಪಾಟು ಮಾಡಲಾಯಿತು.

೩. ೧೮೬೨ ಜನವರಿಯಿಂದ ಮಾರ್ಚ್‌ನವರೆಗೆ ಕನಿಷ್ಠಪಾಲು ಫಾರ್ದಿಂಗ್ ಆಗಿತ್ತು. ಅದನ್ನು ೧೮೬೨ರ ಮಾರ್ಚ್‌ನಲ್ಲಿ ಪೆನ್ಸ್‌ನ ೧/೮ ಭಾಗಕ್ಕೂ ೧೮೭೪ ರ ಜನವರಿಯಲ್ಲಿ ೧/೧೬ ಭಾಗಕ್ಕೂ ಮತ್ತು ೧೮೯೨ ರಲ್ಲಿ ೧/೩೨ ಭಾಗಕ್ಕೂ ಇಳಿಸಲಾಯಿತು. ಅಲ್ಲಿಂದೀಚೆಗೆ ಈ ಕನಿಷ್ಠ ಪಾಲು ಮುಂದುವರಿಯುತ್ತಿದೆ.

೨) ಬುಧವಾರಗಳಂದು ಮಾರಾಟವಾಗುವ, ಸಂಕ್ಷಿಪ್ತವಾಗಿ 'ವರ್ಗಾವಣೆ'ಗಳೆಂದು ಕರೆಯಲಾಗುವ ತಂತಿ ವರ್ಗಾವಣೆಗಳು; ೩) ಬುಧವಾರ ಬಿಟ್ಟು ವಾರದ ಯಾವುದೇ ದಿನದಲ್ಲಿ ಮಾರಾಟವಾಗುವ 'ಮಧ್ಯವರ್ತಿ'ಗಳೆಂದು ಕರೆಯಲಾಗುವ ಸಾಮಾನ್ಯ ವಿನಿಮಯ ಹುಂಡಿಗಳು; ಮತ್ತು ೪) ಬುಧವಾರ ಬಿಟ್ಟು ಯಾವುದೇ ದಿನದಂದು ಮಾರಾಟವಾಗುವ ಮತ್ತು 'ವಿಶೇಷಗಳು' ಎಂದು ಕರೆಯಲಾಗುವ ತಂತಿ ವರ್ಗಾವಣೆಗಳು. ಪ್ರಕೃತ, ಚಿನ್ನವು ಭಾರತಕ್ಕೆ ಹೋಗದಂತೆ ತಡೆಗಟ್ಟಲು ಕೌನ್ಸಿಲ್ ಹುಂಡಿಗಳ ಸಾಧನವನ್ನು ಸೆಕ್ರೆಟರಿ ಆಫ್ ಸ್ಟೇಟ್ ಹೇಗೆ ಬಳಸುತ್ತಾರೆ? ಭಾರತಕ್ಕೆ ಚಿನ್ನವು ರವಾನೆಯಾಗದಂತೆ ಅದೇ ರೀತಿ ಬೆಲೆ ಮತ್ತು ಮಾರಾಟದ ಗಾತ್ರವನ್ನು ವ್ಯವಸ್ಥೆಗೊಳಿಸುತ್ತಿದ್ದುದಾಗಿ ಹೇಳಲಾಗಿದೆ. ಈ ಕ್ರಮವು ಎಷ್ಟರಮಟ್ಟಿಗೆ ಫೌಲರ್ ಸಮಿತಿಯ ನೀತಿಯನ್ನು ವಿಫಲಗೊಳಿಸಿದೆಯೆಂದು ಪರಿಶೀಲಿಸುವ ಮುಂಚೆ ವಿವರಣೆಯ ಉದ್ದೇಶಕ್ಕಾಗಿ ಈ ಮುಂದೆ ಅಂಕಗಳನ್ನು (ಪಟ್ಟಿಗಳು LI ಮತ್ತು LII, ಪುಟಗಳು ೮೯೬ ಮತ್ತು ೮೯೭, ೬೦೦ ಮತ್ತು ೬೦೧) ಒದಗಿಸಲಾಗಿದೆ.

ಈ ಪಟ್ಟಿಗಳ ಪರಿಶೀಲನೆಯಿಂದ ಕೂಡಲೇ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಒಂದು, ಸೆಕ್ರೆಟರಿ ಆಫ್ ಸ್ಟೇಟ್ ಮಾರುವ ಅತ್ಯಧಿಕ ಪ್ರಮಾಣದ ಕೌನ್ಸಿಲ್ ಹುಂಡಿಗಳು. ಟಂಕಸಾಲೆಗಳನ್ನು ಮುಚ್ಚುವುದಕ್ಕೆ ಮುಂಚೆ ಕೌನ್ಸಿಲ್ ಹುಂಡಿಗಳ ಮಾರಾಟಗಳು ದೇಶೀಯ ವೆಚ್ಚಗಳ ಪ್ರಮಾಣಕ್ಕೆ ಬಹಳ ಸಮೀಪವಾಗಿದ್ದವು ಮತ್ತು ವಾಸ್ತವ ಹಿಂತೆಗೆತವು ಬಜೆಟ್‌ನಲ್ಲಿ ಅಂದಾಜು ಮಾಡಲಾದ ಮೊತ್ತಕ್ಕಿಂತ ಭಿನ್ನವಾಗಿರಲಿಲ್ಲ. ಟಂಕಸಾಲೆಗಳನ್ನು ಮುಚ್ಚಿದಂದಿನಿಂದ ಸೆಕ್ರೆಟರಿ ಆಫ್ ಸ್ಟೇಟ್‌ನ ಹಿಂತೆಗೆತಗಳನ್ನು ಸ್ವದೇಶಿ ಖಜಾನೆಯ ಅಗತ್ಯವು ಸಂಪೂರ್ಣವಾಗಿ ನಿರ್ಣಯಿಸುತ್ತಾ ಬಂದಿಲ್ಲ. ಈ ಕೆಳಕಂಡ ಅಂಶಗಳನ್ನು ಸಾಧಿಸಲು ಪ್ರಯತ್ನಿಸುತ್ತಿದೆ.[೧]

"೧) ವಾರ್ಷಿಕ ಹಣ ಒದಗಿಸುವ ಕಾರ್ಯಕ್ರಮವನ್ನು ನಿರ್ವಹಿಸುವುದಕ್ಕೆ ಬಜೆಟ್ಟಿನಲ್ಲಿ ನಮೂದಿಸಿದಂತೆ ಹಣಕಾಸಿನ ವರ್ಷದಲ್ಲಿ ಅಗತ್ಯವಾದ ಮೊತ್ತವನ್ನು ಭಾರತದ ಖಜಾನೆಗಳಿಂದ ವಾಪಸು ತೆಗೆಯುವುದು.

೨) ನಾಣ್ಯೀಕರಣದ ಉದ್ದೇಶಗಳಿಗಾಗಿ ಕೊಂಡ ಬೆಳ್ಳಿಯ ಕೊಳ್ಳುವಿಕೆಗೆ ಪಾವತಿ ಮಾಡಲು ಎಷ್ಟು ಅಗತ್ಯವೋ ಅಷ್ಟು ಮೊತ್ತವನ್ನು ತೆಗೆಯುವುದು.

೩) ಇಂಗ್ಲೆಂಡಿನಲ್ಲಿ ಸಾಲವನ್ನು ಕುಗ್ಗಿಸುವ ಅಥವಾ ತಪ್ಪಿಸುವ ದೃಷ್ಟಿಯಿಂದ ಅನಿರೀಕ್ಷಿತ ಸಮೃದ್ಧಿಯ ಕಾಲದಿಂದಾಗಿ ಸರ್ಕಾರಕ್ಕೆ ಉಳಿತಾಯ ಮಾಡಲು ಸಾಧ್ಯವಾಗುವಷ್ಟು ಮೊತ್ತವನ್ನು ತೆಗೆಯುವುದು.

೪) ವ್ಯಾಪಾರಕ್ಕೆ ಅನುವು ಮಾಡಿಕೊಡಲು ಹುಂಡಿಗಳನ್ನು ಮತ್ತು ವರ್ಗಾವಣೆಗಳನ್ನು ಮಾಡುವುದು.

೫) ಆಸ್ಟ್ರೇಲಿಯ ಅಥವಾ ಈಜಿಪ್ಟಿನಿಂದ ಭಾರತಕ್ಕೆ ಸೆಕ್ರೆಟರಿ ಆಫ್ ಸ್ಟೇಟ್ ಮಾರ್ಗಮಧ್ಯೆ ಕೊಂಡ ಸವರನ್ನುಗಳಿಗೆ ಪಾವತಿಮಾಡಲು ಭಾರತದ ಮೇಲೆ ತಂತಿ ವರ್ಗಾವಣೆಗಳನ್ನು ನೀಡುವುದು."

ಇಂಥ ಹಣ ತೆಗೆಯುವಿಕೆಗಳು ವ್ಯಾಪಾರ ಸಮತೋಲನದಲ್ಲಿ ಹೊಂದಾಣಿಕೆ ತರಲು ಕೌನ್ಸಿಲ್ ಹುಂಡಿಗಳು ಪ್ರಮುಖ ಪಾತ್ರ ವಹಿಸುವ ಹಾಗೆ ಮತ್ತು ಸ್ವದೇಶಿ ಖಜಾನೆಯಲ್ಲಿ ಶಿಲ್ಕುಗಳು ಹೆಚ್ಚುವ ಹಾಗೆ ಮತ್ತು ಲಂಡನ್ನಿನಲ್ಲಿ ಭಾರತದ ನಿಧಿಯು ಬಂದಿಯಾಗಿರುವ ಹಾಗೆ ಪರಿಣಾಮ ಬೀರಿದವು.

ಸೆಕ್ರೆಟರಿ ಆಫ್ ಸ್ಟೇಟ್ ತಮ್ಮ ಮಾರಾಟಗಳನ್ನು ಯಾವ ಬೆಲೆಗೆ ಸಂಬಂಧಿಸಿದಂತೆ ಮಾಡುತ್ತಾರೆಂಬುದನ್ನು

---

೨. ಹೋಲಿಸಿ: ಚೇಂಬರ್‌ಲಿನ್ ಸಮಿತಿಗೆ ಎಫ್. ಡಬ್ಲ್ಯೂ. ನ್ಯೂಮಾರ್ಚ್ ಅವರ ಮೆಮೊರ್‍ಯಾಂಡಂ ಆನ್ ದಿ ಸೇಲ್ ಆಫ್ ಕೌನ್ಸಿಲ್ ಬಿಲ್ಸ್ ಅನುಬಂಧ, ಸಂ. I ಸಂಖ್ಯೆ VII ಪು. ೨೨೨

## ಪಟ್ಟಿ – LI
## ಆಯಾತ–ನಿರ್ಯಾತ ವ್ಯಾಪಾರದ ಅಂತರ, ಕೌನ್ಸಿಲ್ ವಾಪಸು ಪಡೆದ ಹಣ ಮತ್ತು ೧೮೯೩ ರ ಮುನ್ನ ಆಯಾತ ಮಾಡಿಕೊಳ್ಳಲಾದ ಚಿನ್ನ

| ವರ್ಷಗಳು | ಆಯಾತ–ನಿರ್ಯಾತ ವ್ಯವಹಾರದ ಅಂತರ (ಸರಕು, ಖಾಸಗಿ ಖಾತೆ) | ಸಂಪತ್ತಿನ ನಿವ್ವಳ ಆಯಾತ | | ವಾಪಸು ಪಡೆದ ಕೌನ್ಸಿಲ್ ಹುಂಡಿಗಳ ಮೊತ್ತ | ಬಜೆಟ್ ಅಂದಾಜಿಗೆ ಹೋಲಿಸಿದಂತೆ ಹುಂಡಿಗಳ ಹೆಚ್ಚಳ(+) ಅಥವಾ ಕೊರತೆ(–) | ಸ್ವದೇಶೀ ವೆಚ್ಚಗಳು | ಸ್ವದೇಶೀ ಖಜಾನೆಯಲ್ಲಿ ನಗದು ಶಿಲ್ಕು | ಕೌನ್ಸಿಲ್ ಹುಂಡಿಗಳ ಕನಿಷ್ಠ ದರ |
|---|---|---|---|---|---|---|---|---|
| | | ಚಿನ್ನ | ಬೆಳ್ಳಿ | | | | | |
| (೧) | (೨) £ | (೩) £೦೦೦,೦೦೦ | (೪) £೦೦೦,೦೦೦ | (೫) £ | (೬) £ | (೭) £ | (೮) £ | (೯) £ |
| ೧೮೭೦–೭೧ | ೨೦,೭೬೩,೦೦೦ | ೨.೧೩ | ೦.೯ | – | – | ೧೦,೦೩೧,೨೬೧ | ೩,೩೦೫,೯೭೨ | ೧ ೧೦ ೧/೪ |
| ೧೮೭೧–೭೨ | ೩೧,೦೯೪,೦೦೦ | ೩.೪೩ | ೬.೩ | – | – | ೯,೭೦೩,೨೩೫ | ೨,೮೨೧,೦೯೧ | ೧ ೧೦ ೩/೮ |
| ೧೮೭೨–೭೩ | ೨೩,೩೭೬,೦೦೦ | ೨.೪೧ | ೦.೭ | ೧೩,೯೩೯,೦೯೫ | +೯೩೯,೦೯೫ | ೧೦,೨೪೮,೬೦೫ | ೨,೯೯೮,೪೪೪ | ೧ ೧೦ ೩/೮ |
| ೧೮೭೩–೭೪ | ೨೧,೧೬೦,೦೦೦ | ೧.೨೯ | ೨.೩ | ೧೩,೨೮೫,೬೭೮ | ೨೧೪,೩೨೨ | ೯,೩೧೦,೯೨೬ | ೨,೦೧೩,೬೩೮ | ೧ ೯ ೧/೨ |
| ೧೮೭೪–೭೫ | ೨೦,೧೩೭,೦೦೦ | ೧.೭೩ | ೪.೩ | ೧೦,೮೪೧,೬೧೫ | +೮೪೧,೬೧೫ | ೯,೪೯,೦೩೯೧ | ೨,೭೯೬,೩೭೦ | ೧ ೯ ೩/೪ |
| ೧೮೭೫–೭೬ | ೧೯,೨೦೪,೦೦೦ | ೧.೪೦ | ೧.೪ | ೧೨,೩೮೯,೬೧೩ | –೧,೯೧೦,೩೮೭ | ೯,೧೫೫,೦೫೦ | ೯೧೯,೮೯೯ | ೧ ೯ |
| ೧೮೭೬–೭೭ | ೨೩,೫೭೩,೦೦೦ | ೦.೧೮ | ೬.೧ | ೧೨,೬೯೫,೮೦೦ | –೯೬೪,೨೦೦ | ೧೩,೮೫೧,೨೯೬ | ೨,೭೧೩,೯೬೭ | ೧ ೬ ೧/೨ |
| ೧೮೭೭–೭೮ | ೨೩,೭೫೮,೦೦೦ | ೦.೪೧ | ೧೨.೭ | ೧೦,೧೩೪,೪೫೫ | –೨,೧೧೫,೫೪೫ | ೧೪,೦೪೮,೩೫೦ | ೧,೦೭೬,೬೫೭ | ೧ ೮ ೩/೧೬ |
| ೧೮೭೮–೭೯ | ೨೩,೧೬೭,೦೦೦ | ೦.೭೪ | ೩.೩ | ೧೩,೯೪೮,೫೬೫ | –೩,೦೫೧,೪೩೫ | ೧೩,೮೫೧,೨೯೬ | ೧,೧೧೭,೯೨೫ | ೧ ೬ ೫/೮ |

| | | | | | | | | |
|---|---|---|---|---|---|---|---|---|
| ೧೮೭೯–೮೦ | ೨೬,೦೪೬,೦೦೦ | ೧.೪೫ | ೬.೫ | ೧೫,೨೬೧,೯೧೦ | +೨೬೧,೮೧೦ | ೧೪,೫೪೭,೬೬೪ | ೨,೨೭೦,೧೦೭ | ೧ ೭ |
| ೧೮೮೦–೮೧ | ೨೧,೪೬೪,೦೦೦ | ೩.೦೩ | ೩.೨ | ೧೫,೨೩೯,೬೭೭ | –೧,೬೬೦,೩೨೩ | ೧೪,೪೧೮,೯೮೬ | ೪,೧೨೭,೭೪೯ | ೧ ೭ ೧/೨ |
| ೧೮೮೧–೮೨ | ೩೨,೮೫೫,೦೦೦ | ೪.೦೨ | ೪.೫ | ೧೮,೪೧೨,೪೨೯ | +೧,೨೧೨,೪೨೯ | ೧೪,೩೯೯,೦೮೩ | ೨,೬೨೦,೯೦೯ | ೧ ೭ ೩/೮ |
| ೧೮೮೨–೮೩ | ೩೧,೩೮೯,೦೦೦ | ೪.೦೧ | ೬.೧ | ೧೫,೧೨೦,೫೨೧ | –೨೨೧,೪೭೯ | ೧೪,೧೦೧,೨೬೨ | ೩,೪೨೯,೮೭೪ | ೧ ೭ |
| ೧೮೮೩–೮೪ | ೨೧,೬೧೧,೬೦೦ | ೪.೪೪ | ೫.೨ | ೧೭,೫೯೯,೮೦೫ | ೧,೨೯೯,೮೦೫ | +೧೫,೦೩೦,೧೯೫ | ೪,೧೧೩,೨೨೧ | ೧ ೭ ೧/೪ |
| ೧೮೮೪–೮೫ | ೨೦,೦೩೪,೧೦೦ | ೩,೭೬ | ೫.೮ | ೧೩,೭೫೮,೯೦೯ | –೨,೭೪೧,೦೯೧ | ೧೪,೧೦೦,೯೮೨ | ೨,೨೪೯,೩೭೮ | ೧ ೬ ೩/೪ |
| ೧೮೮೫–೮೬ | ೨೧,೩೪೪,೨೦೦ | ೨.೧೦ | ೮.೮ | ೧೦,೨೯೨,೬೯೨ | –೩,೪೮೧,೦೦೮ | ೧೪,೦೧೪,೭೩೩ | ೪,೭೨೬,೫೮೫ | ೧ ೫ ೭/೮ |
| ೧೮೮೬–೮೭ | ೧೯,೮೪೪,೮೦೦ | ೧.೫೮ | ೫.೨ | ೧೨,೧೩೬,೨೭೯ | ೧,೧೯೫,೧೨೧ | ೧೪,೪೦೯,೯೪೯ | ೫,೨೮೦,೮೨೯ | ೧ ೪ ೧/೮ |
| ೧೮೮೭–೮೮ | ೧೮,೭೨೪,೪೦೦ | ೨.೧೦ | ೬.೫ | ೧೫,೩೫೮,೫೭೭ | –೮೯೧,೪೨೩ | ೧೫,೩೮೯,೦೬೫ | ೫,೯೦೦,೬೯೭ | ೧ ೪ ೩/೮ |
| ೧೮೮೮–೮೯ | ೨೦,೨೭೧,೯೦೦ | ೧.೯೨ | ೬.೩ | ೧೪,೨೬೨,೮೫೯ | +೨೬೨,೮೫೯ | ೧೪,೯೮೩,೨೨೧ | ೩,೨೫೯,೯೩೩ | ೧ ೪ |
| ೧೮೮೯–೯೦ | ೨೪,೫೫೭,೮೦೦ | ೩,೧೮ | ೭.೬ | ೧೫,೪೭೫,೫೯೬ | +೭೮೪,೫೯೬ | ೧೪,೮೪೮,೯೨೩ | ೫,೪೦೨,೮೭೩ | ೧ ೪ |
| ೧೮೯೦–೯೧ | ೨೦,೭೩೩,೮೦೦ | ೪.೨೫ | ೧೦.೭ | ೧೫,೯೬೯,೦೩೪ | +೯೮೦,೦೩೪ | ೧೫,೫೬೮,೮೭೫ | ೩,೮೮೫,೦೫೦ | ೧ ೪ ೧೫/೧೬ |
| ೧೮೯೧–೯೨ | ೨೭,೬೩೨,೪೦೦ | ೧.೬೮ | ೬.೩ | ೧೬,೦೯೩,೮೫೪ | +೯೩,೮೫೪ | ೧೫,೮೭೪,೬೯೯ | ೪,೧೨೨,೬೨೬ | ೧ ೩ ೧/೧೬ |
| ೧೮೯೨–೯೩ | ೨೯,೨೮೭,೩೦೦ | ೧.೭೫ | ೮.೦ | ೧೬,೫೩೨,೨೧೫ | –೪೬೭,೭೮೫ | ೧೬,೩೩೪,೫೪೧ | ೧೨,೨೬೮,೩೮೮ | ೧ ೨ ೫/೮ |

ಹಿಂದಿನ ಪಟ್ಟಿಗಳನ್ನು ಹೋಲಿಸಿ ಗಮನಿಸಬೇಕಾದುದು ಎರಡನೆಯ ಅಂಶವಾಗಿದೆ. ಟಂಕಸಾಲೆಗಳ ಮುಚ್ಚುವಿಕೆಗೆ ಮುಂಚೆ ಕೌನ್ಸಿಲ್ ಹುಂಡಿಗಳ ಬೆಲೆಯು ಸೆಕ್ರೆಟರಿ ಆಫ್ ಸ್ಟೇಟ್ ನಿಯಂತ್ರಣಕ್ಕೆ ಹೊರತಾಗಿದ್ದಿತು. ಆದ್ದರಿಂದ ತಮ್ಮ ಹುಂಡಿಗಳ ವಾರದ ಮಾರಾಟದಲ್ಲಿ ಹೆಚ್ಚಿನ ಪಾಲುದಾರರು ಕೊಟ್ಟ ಬೆಲೆಯನ್ನು ಸೆಕ್ರೆಟರಿ ಆಫ್ ಸ್ಟೇಟ್ ಒಪ್ಪಿಕೊಳ್ಳಬೇಕಾಗಿದ್ದಿತು. ಟಂಕಸಾಲೆಗಳ ಮುಚ್ಚುವಿಕೆಯಿಂದಾಗಿ ಸೆಕ್ರೆಟರಿ ಆಫ್ ಸ್ಟೇಟ್ ರೂಪಾಯಿಯನ್ನು ನಿರ್ಮಿಸುವ ಏಕಸ್ವಾಮ್ಯವನ್ನು ಹೊಂದಿದ್ದಾಗ ಅವರು ಹೆಚ್ಚಿನ ಪಾಲುದಾರರಿಗೆ ಹರಾಜು ವಹಿಸುವ ಹಳೆಯ ಅಭ್ಯಾಸವನ್ನು ಕಾರಣವಿಲ್ಲದಿದ್ದರೂ ಮುಂದುವರಿಸಿಕೊಂಡು ಬರುವುದಕ್ಕೆ ಆಕ್ಷೇಪಿಸಲಾಗಿತ್ತು. ತನ್ನ ಏಕಸ್ವಾಮ್ಯದ ಬಲವನ್ನು ಬಳಸಿಕೊಂಡು ಸೆಕ್ರೆಟರಿ ಆಫ್ ಸ್ಟೇಟ್ ಹುಂಡಿಗಳನ್ನು ೧ ಷಿಲಿಂಗ್ ೪ ೧/೮ ಪೆನ್ಸ್ ಅಥವಾ ೧ ಷಿಲಿಂಗ್ ೩/೩೨ ಪೆನ್ನಿಗಿಂತಲೂ ಕಡಿಮೆ ಬೆಲೆಗೆ ಮಾರಾಟ ಮಾಡಬಾರದಾಗಿತ್ತೆಂದು ಒತ್ತಾಯಿಸಲಾಗಿತ್ತು. ಈ ಬೆಲೆಯು ೧೫ ರೂಗೆ ೧ ಸವರನ್ ಭಾರತಕ್ಕೆ ಚಿನ್ನದ–ಆಯಾತ ದರವಾಗಿತ್ತು. ಕಾರ್ಯಾಚರಣೆಯಲ್ಲಿ ಸೆಕ್ರೆಟರಿ ಆಫ್ ಸ್ಟೇಟ್ ತನ್ನ ಸ್ಥಾನದ ಪ್ರಯೋಜನವನ್ನು ಉದ್ದೇಶಪೂರ್ವಕವಾಗಿಯೇ ಬಿಟ್ಟುಕೊಟ್ಟಿದ್ದಾರೆ ಮತ್ತು ತಮ್ಮ ಹುಂಡಿಗಳಿಗೆ ಒಪ್ಪಿಕೊಳ್ಳಲಾಗಿರುವ ಕನಿಷ್ಠ ದರಗಳನ್ನು ನೋಡಿದರೆ ಸೆಕ್ರೆಟರಿ ಆಫ್ ಸ್ಟೇಟ್ ಚಿನ್ನದ–ಆಯಾತ ದರಕ್ಕಿಂತಲೂ ಕೆಳಮಟ್ಟದ ದರಗಳ ಟೆಂಡರುಗಳನ್ನು ಒಪ್ಪಿಕೊಂಡಿದ್ದಾರೆ.

ಒಂದು ಪಕ್ಷ ಸ್ವದೇಶೀ ಖಜಾನೆಯ ಉದ್ದೇಶಗಳಿಗೆ ಬೇಕಾಗುವಷ್ಟು ಮೊತ್ತದ ಕೌನ್ಸಿಲ್ ಹುಂಡಿಗಳನ್ನು ನಿಷ್ಕೃಷ್ಟವಾಗಿ ಮಾರಿದ್ದೇ ಆಗಿದ್ದರೆ ಮತ್ತು ಚಿನ್ನದ ಆಯಾತ ಒಂದು ಸೂಚಿಯ ಬೆಲೆಗಿಂತ ಕಡಿಮೆ ಬೆಲೆಗೆ ಮಾರಾಟ ಮಾಡಿರದಿದ್ದರೆ ಚಿನ್ನವು ಭಾರತಕ್ಕೆ ಆಯಾತವಾಗುತ್ತಿತ್ತು. ಮತ್ತು ಅದು ಭಾರತದ ಕರೆನ್ಸಿ ಚಲಾವಣೆಯ ಭಾಗವಾಗುತ್ತಿತ್ತು ಎಂಬುದಾಗಿ ಹೇಳಲಾಗಿದೆ. ಈಗಿರುವ ಹಾಗೆ, ಸೆಕ್ರೆಟರಿ ಆಫ್ ಸ್ಟೇಟ್‌ನ ವ್ಯವಹಾರಗಳ ಸಂಯೋಜಿತ ಪರಿಣಾಮವು ಭಾರತದ ಚಿನ್ನವನ್ನು ಲಂಡನ್ನಿನಲ್ಲಿ ಬಂಧಿಸಿಡುವಂತೆ ಮಾಡುವುದೇ ಆಗಿದ್ದಿತೆಂದು ಹೇಳಲಾಗಿದೆ. ಲಂಡನ್ನಿನಲ್ಲಿದ್ದ ಭಾರತದ ಚಿನ್ನದ ಬಳಕೆ ಅಥವಾ ಅಪವ್ಯಯದ ಬಗ್ಗೆ ಇಲ್ಲಿ ನಮಗೆ ಆಸಕ್ತಿಯಿಲ್ಲ. ಆದರೆ ಲಂಡನ್ನಿನಲ್ಲಿರುವ ಭಾರತದ ನಿಧಿಯ ನಿರ್ವಹಣೆ ಕುರಿತ ಇಂಡಿಯಾ ಕಚೇರಿಯ ಹಗರಣಗಳನ್ನು ಸಮರ್ಥಿಸುವ ಒಲವನ್ನು ಹೊಂದಿರುವವರಿಗೆ ಮತ್ತು ಆ ಹಗರಣಗಳಿಗೆ ವೈಚಾರಿಕ ಬೆಂಬಲವನ್ನು ಕೊಡುವವರಿಗೆ ಒಂದು ವಿಷಯದ ಬಗ್ಗೆ ನೆನಪಿಸಬೇಕಾಗಬಹುದು. ಅದೇನೆಂದರೆ, ಬೇಗ್‌ಹಾಟ್ ಹೇಳಿದಂತೆ ಡೌನಿಂಗ್ ಸ್ಟ್ರೀಟ್‌ನ ಒಂದು ಪಕ್ಕದಲ್ಲಿ ನಿರ್ವಹಿಸಿದ ಆಚರಣೆಯೊಂದನ್ನು ಟೀಕೆಯ ಬಿರುಗಾಳಿ ಏಳದಂತೆ ಮತ್ತೊಂದು ಪಕ್ಕದಲ್ಲಿ ಕಾರ್ಯರೂಪಕ್ಕೆ ತರಲಾಗುವುದಿಲ್ಲ. ಅಂದರೆ ಇಂಡಿಯಾ ಕಚೇರಿಯ ಹಗರಣಗಳ ಸಮರ್ಥನೆಗೆ ಅವರ ವಿವರಣೆಯಲ್ಲಿ ವ್ಯಕ್ತವಾಗಿರುವುದಕ್ಕಿಂತಲೂ ಹೆಚ್ಚು ಶಕ್ತಿ ಬೇಕಾಗುತ್ತದೆ.

ಸೆಕ್ರೆಟರಿ ಆಫ್ ಸ್ಟೇಟ್ ಅವರ ವ್ಯವಹಾರಗಳು ಸಂಪೂರ್ಣವಾಗಿ ಅಲ್ಲದಿದ್ದರೂ ಅವರ ವ್ಯವಹಾರಗಳ ವ್ಯಾಪ್ತಿಯಷ್ಟರಮಟ್ಟಿಗೆ ಭಾರತಕ್ಕೆ ಚಿನ್ನವು ಆಯಾತವಾಗುವುದನ್ನು ತಡೆಗಟ್ಟುತ್ತದೆ ಎಂಬುದನ್ನು ಎರಡು ಕಡೆಯವರೂ ಒಪ್ಪಿಕೊಂಡಿದ್ದಾರೆಂಬುದು ವ್ಯಕ್ತವಾಗುತ್ತದೆ. ಈಗ ಫೌಲರ್ ಸಮಿತಿಯ ಆದರ್ಶವು ವಿಫಲಗೊಂಡಿದೆ ಎಂಬುದಾಗಿ ಅಭಿಪ್ರಾಯ ಹೊಂದಿರುವವರು ಸೆಕ್ರೆಟರಿ ಆಫ್ ಸ್ಟೇಟ್ ಅವರ ವ್ಯವಹಾರಗಳನ್ನು ಮೊಟಕುಗೊಳಿಸಿದರೆ ಭಾರತಕ್ಕೆ ಚಿನ್ನದ ಆಮದು ಉಂಟಾಗುತ್ತದೆ ಎನ್ನುವ ಅಭಿಪ್ರಾಯ ಹೊಂದಿರುವುದು ಖಂಡಿತವಾಗಿಯೂ ಸರಿ. ಆದರೆ ಆಮದಾದ ಚಿನ್ನವು ತನ್ನಿಂದ ತಾನೆ ಭಾರತದ ಕರೆನ್ಸಿಯ ಒಂದು ಭಾಗವಾಗುತ್ತದೆ ಎಂಬ ಊಹೆಗೆ ಏನು ಸಮರ್ಥನೆ? ಸೆಕ್ರೆಟರಿ ಆಫ್ ಸ್ಟೇಟ್‌ನ ಹಣಕಾಸು ವ್ಯವಹಾರಗಳನ್ನು ರದ್ದು ಮಾಡುವುದರಿಂದ ಚಿನ್ನವು ತನ್ನಿಂದ ತಾನೆ ಭಾರತದ ಕರೆನ್ಸಿಯಾಗುತ್ತದೆ ಎಂಬ ಊಹೆಯು ಕೇವಲ

ಸಮರ್ಥಿಸಲಾಗದ ಊಹೆಯಾಗುತ್ತದೆ. ಆಮದಾದ ಚಿನ್ನವು ಕರೆನ್ಸಿಯಾಗುವುದೇ ಅಥವಾ ಇಲ್ಲವೇ ಎಂಬುದು ತೀರಾ ಭಿನ್ನ ಸಂದರ್ಭವನ್ನು ಅವಲಂಬಿಸಿದೆ.

ಚಿನ್ನದ ಮುಕ್ತ ನಾಣ್ಯೀಕರಣಕ್ಕೆ ಅವಕಾಶ ಮಾಡಿಕೊಡುವಂತೆ ಭಾರತದಲ್ಲಿ ಟಂಕಸಾಲೆಯು ಇಲ್ಲದಿರುವುದೇ ಫೌಲರ್ ಸಮಿತಿಯ ಆದರ್ಶದ ವಿಫಲತೆಗೆ ಮತ್ತೊಂದು ವಿವರಣೆಯಾಗಿದೆ – ಚಿನ್ನದ ಮುಕ್ತ ನಾಣ್ಯೀಕರಣಕ್ಕೆ ಟಂಕಸಾಲೆಗಳು ಅವಕಾಶ ಮಾಡಿಕೊಡಬೇಕೆಂಬ ಫೌಲರ್ ಸಮಿತಿಯ ಶಿಫಾರಸನ್ನು ಅತ್ಯಂತ ಪ್ರಮುಖವಾದುದೆಂದು ಪರಿಗಣಿಸಲಾಗಿದೆ. ವಾಸ್ತವವಾಗಿ, ಫೌಲರ್ ಸಮಿತಿಯ ವೈಫಲ್ಯಕ್ಕೆ ಆ ಆದರ್ಶವನ್ನು ಕಾರ್ಯಾಚರಣೆಗೆ ತರುವುದರಲ್ಲಿ ಉಂಟಾದ ಸರ್ಕಾರದ ಕರ್ತವ್ಯಲೋಪವೇ ಕಾರಣವೆಂದು ಆರೋಪಿಸಬೇಕಾಗುತ್ತದೆ. ಖಜಾನೆಯ ದುಂಡಾವರ್ತಿಯ ಧೋರಣೆಯಿಂದಾಗಿ ಸರ್ಕಾರವು ೧೯೦೦ ರಲ್ಲಿ ಈ ಯೋಜನೆಯನ್ನು ಕೈಬಿಡಲು ಒಪ್ಪಿದಾಗಿನಿಂದಲೂ ಚಿನ್ನದ ಕರೆನ್ಸಿಯ ಪ್ರತಿಪಾದಕರಿಗೆ ತೀವ್ರ ಅಸಮಾಧಾನ ಉಂಟಾಗಿದೆ. ಖಜಾನೆಯ ಅನುಮತಿಯೊಡನೆ ಸವರನ್ನಿನ ನಾಣ್ಯೀಕರಣಕ್ಕೆ ಚಿನ್ನದ ಟಂಕಸಾಲೆಯನ್ನು ತೆರೆಯುವ ಅಭಿಲಾಷೆ ಕುರಿತಂತೆ ಮತ್ತು ಅದಾಗದಿದ್ದರೆ ಬೇರೆ ರೀತಿಯ ಚಿನ್ನದ ನಾಣ್ಯದ ನಾಣ್ಯೀಕರಣವನ್ನು ಕುರಿತಂತೆ ಸರ್ಕಾರವನ್ನು ಒತ್ತಾಯಿಸಲು ೧೯೧೧ ರಲ್ಲಿ ಸರ್.ವಿ.ಥ್ಯಾಕರ್ಸ್ ಅವರು ಸುಪ್ರೀಂ ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ನಿರ್ಣಯವನ್ನು ಮಂಡಿಸಿದರು. ಕೌನ್ಸಿಲ್ಲಿನ ಏಕಾಭಿಪ್ರಾಯಕ್ಕೆ ಮನ್ನಣೆ ಕೊಡುವ ದೃಷ್ಟಿಯಿಂದ ಸವರನ್ನಿನ ಮುಕ್ತ ನಾಣ್ಯೀಕರಣಕ್ಕೆ ಮಂಜೂರಾತಿ ಪಡೆಯಲು ಖಜಾನೆಯನ್ನು ನೋಡಿ ಬರುವಂತೆ ಭಾರತ ಸರ್ಕಾರವು ಸೆಕ್ರೆಟರಿ ಆಫ್ ಸ್ಟೇಟ್ ಅವರನ್ನು ಕೇಳಿಕೊಂಡಿತು.[೧]

ಪಟ್ಟಿ LII ನೋಡಿ.

೧. ನೋಡಿ. ಕಾಮನ್ಸ್ ಪೇಪರ್, ೪೯೫ ೧೯೧೩ರ ಪುಟ. ೫೭

## ಪಟ್ಟಿ – LII
## ಆಯಾತ–ನಿರ್ಯಾತ ವ್ಯಾಪಾರದ ಅಂತರ, ಕೌನ್ಸಿಲ್ ವಾಪಸು ಪಡೆದ ಹಣ ಮತ್ತು ೧೮೯೨ ರ ನಂತರ ಆಯಾತ ಮಾಡಿಕೊಳ್ಳಲಾದ ಚಿನ್ನ

| ವರ್ಷಗಳು | ಆಯಾತ–ನಿರ್ಯಾತ ವ್ಯವಹಾರದ ಅಂತರ(ಸರಕು, ಖಾಸಗಿ ಖಾತೆ) | ಸಂಪತ್ತಿನ ನಿವ್ವಳ ಆಯಾತ | | ವಾಪಸು ಪಡೆದ ಕೌನ್ಸಿಲ್ ಹುಂಡಿಗಳ ಮೊತ್ತ | ಬಜೆಟ್ ಅಂದಾಜಿಗೆ ಹೋಲಿಸಿದಂತೆ ಹುಂಡಿಗಳ ಹೆಚ್ಚಳ(+) ಅಥವಾ ಕೊರತೆ(–) | ಸ್ವದೇಶೀ ವೆಚ್ಚಗಳು | ಸ್ವದೇಶೀ ಖಜಾನೆಯಲ್ಲಿ ನಗದು ಶಿಲ್ಕು | ಕೌನ್ಸಿಲ್ ಹುಂಡಿಗಳ ಕನಿಷ್ಠ ದರ |
|---|---|---|---|---|---|---|---|---|
| | | ಚಿನ್ನ | ಬೆಳ್ಳಿ | | | | | |
| (೧) | (೨) £ | (೩) £000,000 | (೪) £000,000 | (೫) £ | (೬) £ | (೭) £ | (೮) £ | (೯) £ |
| ೧೮೯೩–೧೮೯೪ | ೨೧,೬೬೦,೫೦೦ | –೦.೩೯ | ೮.೩ | ೯,೫೩೦,೨೩೫ | –೯,೧೬೯,೭೬೫ | ೧೫,೮೨೬,೮೧೫ | ೧,೩೦೦,೫೬೪ | ೧ ೧.೫೦೦ |
| ೧೮೯೪–೧೮೯೫ | ೨೫,೭೬೫,೦೦೦ | – ೨.೭ | ೩.೪ | ೧೬,೯೦೫,೧೦೨ | –೯೪,೮೯೮ | ೧೫,೭೦೭,೩೬೭ | ೧,೫೦೩,೧೨೪ | ೧ ೦.೦೦೦ |
| ೧೮೯೫–೧೮೯೬ | ೨೯,೯೬೩,೮೦೦ | ೧.೫ | ೩.೭ | ೧೭,೬೬೪,೪೯೨ | +೬೬೪,೪೯೨ | ೧೫,೬೦೩,೩೭೦ | ೩,೩೯೩,೭೯೮ | ೧ ೧.೦೦೦ |
| ೧೮೯೬–೧೮೯೭ | ೨೧,೩೩೩,೧೦೦ | ೧.೪ | ೩.೫ | ೧೫,೫೨೬,೫೪೭ | –೯೭೩,೪೫೩ | ೧೫,೭೯೫,೮೩೬ | ೨,೮೩೨,೩೫೪ | ೧ ೧.೭೮೧ |
| ೧೮೯೭–೧೮೯೮ | ೧೮,೮೪೭,೦೦೦ | ೩.೨ | ೫.೪ | ೯,೫೦೬,೦೭೭ | –೩,೪೯೩,೯೨೩ | ೧೬,೧೯೮,೨೬೩ | ೨,೫೩೪,೨೪೪ | ೧ ೨.೨೫೦ |
| ೧೮೯೮–೧೮೯೯ | ೨೯,೫೬೦,೭೦೦ | ೪.೩ | ೨.೬ | ೧೮,೬೯೨,೩೭೭ | +೨,೬೯೨,೩೭೭ | ೧೬,೩೦೩,೧೯೭ | ೩,೧೪೫,೭೬೮ | ೧ ೩.೧೯೪ |
| ೧೮೯೯–೧೯೦೦ | ೨೫,೫೦೯,೬೦೦ | ೬.೩ | ೨.೪ | ೧೯,೦೬೭,೦೨೨ | +೨,೦೬೭,೦೨೨ | ೧೬,೩೯೨,೮೪೬ | ೩,೩೩೦,೯೪೩ | ೧ ೩.೮೭೫ |
| ೧೯೦೦–೧೯೦೧ | ೨೦,೭೨೭,೪೦೦ | ೦.೫ | ೬.೩ | ೧೩,೩೦೦,೨೭೭ | –೩,೧೩೯,೭೨೩ | ೧೭,೨೦೦,೯೫೭ | ೪,೦೯೧,೯೨೬ | ೧ ೩.೮೭೫ |
| ೧೯೦೧–೧೯೦೨ | ೨೮,೬೩೦,೬೦೦ | ೧.೩ | ೪.೮ | ೧೮,೫೩೯,೦೭೧ | +೨,೦೩೯,೦೭೧ | ೧೭,೩೬೮,೬೫೫ | ೬,೬೯೩,೧೩೭ | ೧ ೩.೮೭೫ |
| ೧೯೦೨–೧೯೦೩ | ೩೩,೩೫೨,೬೦೦ | ೫.೮ | ೪.೬ | ೧೮,೪೯೯,೯೪೬ | +೧,೯೯೯,೯೪೬ | ೧೮,೩೬೧,೮೨೧ | ೫,೭೬೭,೭೮೭ | ೧ ೩.೮೭೫ |

| | | | | | | | | |
|---|---|---|---|---|---|---|---|---|
| ೧೯೦೩–೧೯೦೪ | ೪೫,೪೨೪,೧೧೦ | ೬೬ | ೯.೧ | ೨೩,೮೫೯,೩೦೩ | +೬,೮೫೯,೩೦೩ | ೧೮,೧೪೬,೪೭೪ | ೭,೯೫೪,೭೮೨ | ೧ ೩.೮೭೫ |
| ೧೯೦೪–೧೯೦೫ | ೪೦,೫೫೮,೨೦೦ | ೬೫ | ೮೯ | ೨೪,೪೨೫,೫೫೮ | +೭,೯೨೫,೫೫೮ | ೧೯,೪೪೩,೭೫೭ | ೧೧,೭೬೨,೫೫೧ | ೧ ೩.೯೬೯ |
| ೧೯೦೫–೧೯೦೬ | ೩೯,೦೮೬,೭೦೦ | ೦೩ | ೧೦೫ | ೩೨,೧೬೬,೯೭೩ | +೧೪,೩೩೩,೯೭೩ | ೧೮,೬೧೭,೪೬೫ | ೮,೪೩೬,೫೯೯ | ೧ ೩.೯೩೮ |
| ೧೯೦೬–೧೯೦೭ | ೪೫,೫೦೬,೭೦೦ | ೯೯ | ೧೬೦ | ೩೩,೧೫೭,೧೯೬ | +೧೫,೩೫೭,೧೯೬ | ೧೯,೨೦೪,೪೦೮ | ೫,೬೦೬,೮೮೨ | ೧ ೩.೯೯೯ |
| ೧೯೦೭–೧೯೦೮ | ೩೧,೬೪೦,೦೦೦ | ೧೧೬ | ೧೩೦ | ೧೬,೨೩೨,೧೬೨ | –೧,೮೬೭,೮೩೮ | ೧೮,೪೮೭,೨೬೭ | ೫,೭೭೩,೪೪೯ | ೧ ೩.೯೦೬ |
| ೧೯೦೮–೧೯೦೯ | ೨೧,೧೭೩,೩೦೦ | ೨೯ | ೮೦ | ೧೩,೯೧೫,೪೨೬ | –೪,೫೮೪,೫೭೪ | ೧೮,೯೨೫,೧೫೯ | ೮,೪೫೫,೭೧೫ | ೧ ೩.೯೦೬ |
| ೧೯೦೯–೧೯೧೦ | ೪೭,೨೧೩,೦೦೦ | ೧೪೫ | ೬೩ | ೨೭,೦೯೬,೫೮೬ | +೧೦,೮೯೬,೫೮೬ | ೧೯,೧೨೨,೯೧೬ | ೧೫,೮೦೯,೬೧೮ | ೧ ೩.೯೦೬ |
| ೧೯೧೦–೧೯೧೧ | ೫೩,೬೮೫,೩೦೦ | ೧೬೦ | ೫೮ | ೨೬,೭೮೫,೩೦೩ | +೧೧,೨೮೫,೩೦೩ | ೧೯,೫೮೧,೫೬೩ | ೧೮,೧೭೪,೩೪೯ | ೧ ೩.೯೦೬ |
| ೧೯೧೧–೧೯೧೨ | ೫೯,೫೧೨,೯೦೦ | ೨೫೧ | ೩೬ | ೨೭,೦೫೮,೫೫೦ | +೯,೯೦೦,೨೫೦ | ೧೯,೯೫೭,೬೭೭ | ೧೯,೪೬೬,೩೨೩ | ೧ ೩.೯೭೭ |
| ೧೯೧೨–೧೯೧೩ | ೫೭,೦೨೦,೯೦೦ | ೨೨೬ | ೧೧೫ | ೨೫,೭೯೯,೭೦೬ | +೧೦,೨೯೯,೭೦೬ | ೨೦,೨೭೯,೫೭೨ | ೯,೭೮೯,೬೩೪ | ೧ ೩.೯೯೯ |
| ೧೯೧೩–೧೯೧೪ | ೪೩,೭೫೫,೯೦೦ | ೧೫೬ | ೮೭ | ೩೧,೨೦೦,೮೨೭ | +೧೦,೦೦೦,೮೨೭ | ೨೧,೩೧೧,೬೭೩ | ೩,೧೫೫,೭೭೩ | ೧ ೩.೯೩೭ |
| ೧೯೧೪–೧೯೧೫ | ೨೯,೧೦೮,೫೦೦ | ೫೧ | ೫೯ | ೭,೭೪೮,೧೧೧ | –೧೨,೨೫೧,೮೮೯ | ೨೦,೨೦೮,೫೯೮ | ೭,೯೧೩,೨೩೬ | ೧ ೩.೯೩೭ |
| ೧೯೧೫–೧೯೧೬ | ೪೪,೦೨೬,೬೦೦ | ೦೭ | ೩೨ | ೨೦,೩೫೪,೫೧೭ | +೧೩,೩೫೪,೫೧೭ | ೨೦,೧೯೯,೦೯೪ | ೧೨,೮೦೮,೩೪೪ | ೧ ೩.೯೩೭ |
| ೧೯೧೬–೧೯೧೭ | ೬೦,೮೪೩,೨೦೦ | ೮೮೨ | ೧೨೫ | ೩೨,೯೯೮,೦೯೫ | +೨೯,೦೯೩,೦೯೫ | ೨೧,೧೮೫,೬೭೭ | ೧೧,೫೯೯,೯೯೩ | ೧ ೪.೦೩೧ |
| ೧೯೧೭–೧೯೧೮ | ೬೧,೪೨೨,೦೦೦ | ೧೬೮ | ೧೨೭ | ೩೪,೫೮೧,೬೮೮ | +೩೪,೫೮೧,೬೮೮ | ೨೬,೦೬೫,೦೫೭ | ೧೬,೬೨೫,೪೦೬ | ೧ ೪.೧೫೬ |
| ೧೯೧೮–೧೯೧೯ | ೫೬,೫೪೦,೦೦೦ | – ೩.೭ | ೪೫೩ | ೨೦,೯೪೬,೩೧೪ | +೨೦,೯೪೬,೩೧೪ | ೨೩,೬೨೯,೪೯೫ | ೧೪,೭೧೫,೮೨೭ | ೧ ೪.೯೦೬ |

ಈ ಸಂದರ್ಭದಲ್ಲಿ ಖಜಾನೆಯು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಎರಡು ಪರ್ಯಾಯಗಳನ್ನು[೧] ನೀಡಿತು: ೧) ಚಿನ್ನವನ್ನು ಸವರನ್ನುಗಳಾಗಿ ನಾಣ್ಯೀಕರಿಸುವ ಉದ್ದೇಶಕ್ಕಾಗಿಯೇ ರಾಯಲ್ ಮಿಂಟ್‌ನ ಒಂದು ಶಾಖೆಯನ್ನು ಸ್ಥಾಪಿಸುವುದು ಮತ್ತು ಅದನ್ನು ಸಂಪೂರ್ಣವಾಗಿ ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳುವುದು; ಅಥವಾ ೨) ಬೊಂಬಾಯಿಯಲ್ಲಿರುವ ಟಂಕಸಾಲೆಯ ನಿಯಂತ್ರಣವನ್ನು ಅದಕ್ಕೆ ವರ್ಗಾಯಿಸುವುದು. ಈ ಎರಡು ಅವಕಾಶಗಳಲ್ಲಿ ಭಾರತ ಸರ್ಕಾರಕ್ಕೆ ಯಾವುದೂ ಒಪ್ಪಿಗೆಯಾಗಲಿಲ್ಲ. ಭಾರತೀಯ ಭಾವನೆಗಳಿಗೆ ರಿಯಾಯಿತಿ ತೋರಿಸಿದಂತೆ ಹತ್ತು ರೂಪಾಯಿ ಚಿನ್ನದ ನಾಣ್ಯವನ್ನು ಭಾರತೀಯ ಟಂಕಸಾಲೆಯಿಂದ ಚಲಾವಣೆಗೆ ತರಲು ಸೆಕ್ರೆಟರಿ ಆಫ್ ಸ್ಟೇಟ್ ಮಂಜೂರಾತಿ ನೀಡಿದರು. ಖಜಾನೆಯು ಸೂಚಿಸಿದ ತೀರ್ಮಾನಕ್ಕೆ ಬದಲಾಗಿ ಭಾರತ ಸರ್ಕಾರವು ಈ ತೀರ್ಮಾನವನ್ನು ಆಯ್ದುಕೊಂಡಿತು. ಮತ್ತು ಆಗ ಉಪಸ್ಥಿತವಿದ್ದ ಚೇಂಬರ್‌ಲಿನ್ ಸಮಿತಿಯು ಈ ವಿಷಯವನ್ನು ಮತ್ತೆ ಪರಿಶೀಲಿಸಬೇಕೆಂದು ಸರ್ಕಾರ ಅಪೇಕ್ಷಿಸಿತು. ಆ ಸಮಿತಿಯು ಚಿನ್ನದ ಟಂಕಸಾಲೆಯನ್ನು ಶಿಫಾರಸು ಮಾಡಲಿಲ್ಲ.[೨] ಆದರೆ, ಸವರನ್ನು ನಾಣ್ಯವನ್ನು ಚಲಾವಣೆಗೆ ತರುವ ಹಾಗಿದ್ದರೆ ಮತ್ತು ಅದರ ನಾಣ್ಯೀಕರಣವನ್ನು ಭಾರತೀಯರು ಅಪೇಕ್ಷಿಸಿದರೆ ಮತ್ತು ನಾಣ್ಯೀಕರಣದ ವೆಚ್ಚವನ್ನು ಸರ್ಕಾರವು ಲಕ್ಷಿಸದಿದ್ದರೆ ಚಿನ್ನದ ಟಂಕಸಾಲೆಯನ್ನು ಸ್ಥಾಪಿಸಲು ಸಮಿತಿಯು ಯಾವ ಆಕ್ಷೇಪವೂ ಇಲ್ಲವೆಂದು ತಿಳಿಸಿತು.[೩]

ಸಮಿತಿಯು ಅಭಿಪ್ರಾಯಪಟ್ಟ ಈ ಪ್ರಸ್ತಾಪವು ೧೯೦೦ರಲ್ಲಿದ್ದ ಪರಿಸ್ಥಿತಿಗೆ ದೇಶವನ್ನು ಕೊಂಡೊಯ್ದಿತ್ತಷ್ಟೆ. ರಾಯಲ್ ಮಿಂಟ್‌ನ ಶಾಖೆಯಾಗಿ ಬೊಂಬಾಯಿ ಟಂಕಸಾಲೆಯನ್ನು ಚಿನ್ನದ ನಾಣ್ಯೀಕರಣಕ್ಕೋಸ್ಕರ ತೆರೆಯುವಂತೆ ಸರ್ಕಾರವನ್ನು ಯುದ್ಧ ಪರಿಸ್ಥಿತಿಯು ಒತ್ತಾಯಿಸುವವರೆಗೂ ಈ ಅಭಿಪ್ರಾಯವೇ ಇತ್ತು. ಮತ್ತೆ ೧೯೧೯ರಲ್ಲಿ ಬೊಂಬಾಯಿ ಟಂಕಸಾಲೆಯನ್ನು ಮುಚ್ಚಲಾಯಿತು. ೧೯೧೯ರ ಕರೆನ್ಸಿ ಸಮಿತಿಯು[೪] ಅದರ ಪುನರಾರಂಭಕ್ಕೆ ಶಿಫಾರಸು ಮಾಡಿತು. ಈ ಯೋಜನೆಯನ್ನು ಅತಿ ಉತ್ಸಾಹದಿಂದ ಸ್ವೀಕರಿಸಲಾಯಿತು. ಎಷ್ಟು ಉತ್ಸಾಹದಿಂದ ಎಂದರೆ, ಸುಪ್ರೀಂ ಕೌನ್ಸಿಲ್‌ನ ಗೌರವಾನ್ವಿತ ಸದಸ್ಯರೊಬ್ಬರು ಸಮಿತಿಯ ಶಿಫಾರಸನ್ನು ಅಳವಡಿಸಿಕೊಳ್ಳುವಂತೆ ಪ್ರಭಾವ ಬೀರಲು ಒಂದು ವಿಶಿಷ್ಟ ಕ್ರಮವನ್ನು ಕೈಗೊಂಡರು. ಅದೇನೆಂದರೆ, ಟಂಕಸಾಲೆಯ ಪುನರಾರಂಭಕ್ಕಾಗಿ ಸರ್ಕಾರಕ್ಕೆ ತಗಲುವ ಖರ್ಚನ್ನು, ಭರಿಸಲು ಟಂಕಸಾಲೆಯ ಬಜೆಟ್ ಅಂದಾಜನ್ನು ಹೆಚ್ಚಿಸುವ ಆ ಸಲಹೆ ಒಂದು ಪ್ರಲೋಭನೆಯಾಗಿತ್ತು. ಆದರೂ, ಈ ಸಲಹೆಯನ್ನು ಸರ್ಕಾರವು ಗೌರವಪೂರ್ವಕವಾಗಿ ತಿರಸ್ಕರಿಸಿತು. ಪರಿಣಾಮವಾಗಿ, ಚಿನ್ನದ ಟಂಕಸಾಲೆಯಿದ್ದರೂ ಚಿನ್ನವು ಕಾನೂನುಬದ್ಧ ಹಣವಾಗಿರದಂತಹ, ಅಂದರೆ ೧೮೩೫ರಿಂದಲೂ ಇರುವ ಪರಿಸ್ಥಿತಿಯನ್ನು ಒಳಗೊಂಡಿರುವಂಥ ವಿಚಿತ್ರ ಪರಿಸ್ಥಿತಿಯನ್ನು ಭಾರತದಲ್ಲಿ ನಾವು ಹೊಂದಿದ್ದೇವೆ. ಹಾಗೆ ಫೌಲರ್ ಸಮಿತಿಯ ಆದರ್ಶವನ್ನು ಉತ್ತೇಜಿಸುವುದರಲ್ಲಿ ಮುಕ್ತ ಟಂಕಸಾಲೆಯು ಏನು ಮಾಡಬಲ್ಲದೆಂಬುದನ್ನು ಊಹಿಸುವುದೂ ಕಷ್ಟ; ಮುಕ್ತ ಟಂಕಸಾಲೆಯ ಪ್ರತಿಪಾದಕರೊಬ್ಬರು ಚೇಂಬರ್‌ಲಿನ್ ಸಮಿತಿಯ ಮುಂದೆ ನೀಡಿದ ಹೇಳಿಕೆಯ ಕೆಳಕಂಡ

---

೧. ಕಾಮನ್ಸ್ ಪೇಪರ್ಸ್, ಪುಟ. ೬೪.

೨. ರಿಪೋರ್ಟ್, ಸೆಕ್ಷನ್ಸ್ ೬೯–೭೧

೩. ಭಾರತದಲ್ಲಿ ಚಿನ್ನದ ಟಂಕಸಾಲೆಯನ್ನು ಸ್ಥಾಪಿಸದಿದ್ದರೆ ಪರಿಷ್ಕರಿಸಿದ ಚಿನ್ನವನ್ನು ಯುಕ್ತ ಷರತ್ತುಗಳ ಮೇಲೆ ಪಡೆಯಲು ೧೯೦೬ರಲ್ಲಿ ಹಿಂತೆಗೆದುಕೊಂಡ ಪ್ರಕಟಣೆಯನ್ನು ಸರ್ಕಾರವು ನವೀಕರಿಸಬೇಕೆಂಬುದಾಗಿ ಸಮಿತಿಯು ಶಿಫಾರಸು ಮಾಡಿತು, ರಿಪೋರ್ಟ್, ಸೆಕ್ಷನ್ ೭೨.

೪. ರಿಪೋರ್ಟ್, ಪ್ಯಾರಾ ೬೭

ಉದ್ಧರಣಗಳು ಚಿನ್ನದ ಟಂಕಸಾಲೆಯಿಂದ ಕೇವಲ ಏನನ್ನು ನಿರೀಕ್ಷಿಸಲಾಗುತ್ತದೆ ಎಂಬುದನ್ನು ತಿಳಿಸಲು ಸಹಾಯಕವಾಗುತ್ತದೆ.

"ಚಿನ್ನದ ಟಂಕಸಾಲೆಯಿಂದ ನೀವು ನಿರೀಕ್ಷಿಸಬಹುದಾದ ಮುಖ್ಯ ಅನುಕೂಲ ಯಾವುದೆಂದರೆ ನೀವು ಚಿನ್ನದ ಪರಿಣಾಮವನ್ನು ಏರಿಸಬಹುದು ಎಂಬುದೇ?–ಅದು ಹಲವಾರು ಪ್ರವೃತ್ತಿಗಳಲ್ಲಿ ಒಂದಾಗಿದೆ.

"ಮತ್ತೆ ಇನ್ಯಾವುದಾದರೂ ಅನುಕೂಲವಿದೆಯೇ? ಹಣದ ತಂತ್ರದ ಅತ್ಯಾವಶ್ಯಕ ಭಾಗವೆಂದು ಯಾವುದನ್ನು ಪರಿಗಣಿಸುವೆನೋ ಅದನ್ನು ದೇಶಕ್ಕೆ ಹೊಂದಿಸುವ ಅನುಕೂಲವಿದೆ. ಸಾರ್ವಜನಿಕರ ಕೋರಿಕೆಯ ಮೇರೆಗೆ ಹಣವನ್ನು ನಾಣ್ಯವನ್ನಾಗಿ ಮಾಡಲು ಚಿನ್ನದ ಟಂಕಸಾಲೆಯನ್ನು ಕರೆನ್ಸಿ ತಂತ್ರದ ಅತ್ಯಾವಶ್ಯಕ ಭಾಗವನ್ನಾಗಿ ನಾನು ಪರಿಗಣಿಸುತ್ತೇನೆ."

"ಮತ್ತು ಚಿನ್ನದ ಕರೆನ್ಸಿಗೆ ಅತ್ಯಾವಶ್ಯಕವಾಗಿ ಚಿನ್ನದ ಟಂಕಸಾಲೆಯು ಇದ್ದೇ ಇರಬೇಕೆ? –ಹೌದು, ಈ ಕೂಡಲೇ ಭಾರತದಲ್ಲಿಯೇ ವಿದೇಶೀ ವಿನಿಮಯಗಳ ನಿರ್ವಹಣೆಯನ್ನು ಸ್ವಲ್ಪಮಟ್ಟಿಗೆ ಸೆಕ್ರೆಟರಿ ಆಫ್ ಸ್ಟೇಟ್ ಅವರಿಂದ ರದ್ದು ಮಾಡಲ್ಪಡುತ್ತದೆ. ಏಕೆಂದರೆ ಸಾರ್ವಜನಿಕರು ಇಷ್ಟಪಡದ ಕ್ರಮವನ್ನು ಸೆಕ್ರೆಟರಿ ಆಫ್ ಸ್ಟೇಟ್ ತೆಗೆದುಕೊಂಡ ಪಕ್ಷದಲ್ಲಿ ಸಾರ್ವಜನಿಕರು ಚಿನ್ನವನ್ನು ಕಾನೂನುಬದ್ಧ ನಾಣ್ಯಗಳನ್ನಾಗಿ ಪರಿವರ್ತಿಸಲು ಸಾರ್ವಜನಿಕರಿಗೆ ಟಂಕಸಾಲೆಯು ಇದ್ದೇ ಇರುತ್ತದೆ. ಅದು ಒಂದು ರಕ್ಷಣೋಪಾಯ; ಹಾಗೆ ಹೇಳುವುದಾದರೆ ಅದು ಒಂದು ಹೆಚ್ಚಿಗೆಯ ರಕ್ಷಣೋಪಾಯ. ಅದರಿಂದಾಗಿ, ಭಾರತದ ಜನರು ಆ ಲೋಹವನ್ನು ಕೊಟ್ಟಕೂಡಲೇ ತಮ್ಮ ಹಣವನ್ನು ಪಡೆಯಬಹುದಾಗಿದೆ."

ಇಲ್ಲಿಯೂ ಕೂಡ, ಚಿನ್ನದ ಟಂಕಸಾಲೆಯು ಚಿನ್ನದ ಕರೆನ್ಸಿ ಇರುವಿಕೆಗೆ ಖಾತರಿ ಎಂಬ ಊಹೆಯು ಚಿನ್ನದ ಮುಕ್ತ ಆಮದಿಗೆ ಅವಕಾಶ ಮಾಡಿಕೊಡುವುದರಿಂದ ಅದು ಕರೆನ್ಸಿಯ ಒಂದು ಭಾಗವಾಗಿರುತ್ತದೆ ಎಂಬ ಹಿಂದಿನ ಸಮರ್ಥಿಸಲಾಗದ ಊಹೆಯಷ್ಟೇ ಅನುಚಿತವಾಗುತ್ತದೆ ಎಂದು ತೋರುತ್ತದೆ. ಪ್ರತಿಯಾಗಿ ಟಂಕಸಾಲೆಗಳು ತೆರೆದಿದ್ದಾಗ್ಯೂ ಚಿನ್ನದ ನಾಣ್ಯೀಕರಣ ಅಥವಾ ಚಿನ್ನದ ಕರೆನ್ಸಿ ಇರದ ಸಂದರ್ಭಗಳೂ ಇವೆ. ಲಂಡನ್ನಿನ ರಾಯಲ್ ಮಿಂಟ್‌ನ ನಾಣ್ಯೀಕರಣದ ಇತಿಹಾಸದಿಂದ ಇಂಥ ಉದಾಹರಣೆಗಳನ್ನು ತೋರಿಸಬಹುದು. ಈ ದೃಷ್ಟಿಯಿಂದ ಬ್ಯಾಂಕು ಅಮಾನತ್ತು ಅವಧಿ, ೧೭೯೭–೧೮೨೧ ಅಥವಾ ಕಳೆದ ಯುದ್ಧದ ಅಂದರೆ ೧೯೧೪–೧೮ರ ಅವಧಿಯಲ್ಲಿನ ಚಿನ್ನದ ನಾಣ್ಯೀಕರಣದ ಪ್ರಮಾಣವು ಅಧ್ಯಯನಯೋಗ್ಯವಾಗಿದೆ. ಎರಡೂ ಸಂದರ್ಭಗಳಲ್ಲಿ ಟಂಕಸಾಲೆಯು ತೆರೆದಿದ್ದರೂ ಚಿನ್ನದ ಒಟ್ಟು ನಾಣ್ಯೀಕರಣವು ಎಷ್ಟಿತ್ತು? ಬ್ಯಾಂಕು ಅಮಾನತ್ತು ಅವಧಿಯ ಮೊದಲಿನಿಂದ ಕೊನೆಯವರೆಗೂ ನಾಣ್ಯೀಕರಿಸಿದ ಚಿನ್ನವು ಗಮನಾರ್ಹವಾಗಿರಲಿಲ್ಲ ಮತ್ತು ೧೮೦೭, ೧೮೧೨ ಮತ್ತು ೧೮೧೪–೧೬ರ ವರ್ಷಗಳಲ್ಲಿ ರಾಯಲ್ ಮಿಂಟಿನಲ್ಲಿ ಚಿನ್ನವನ್ನು ನಾಣ್ಯೀಕರಿಸಲೇ ಇಲ್ಲ.[೧] ಪುನಃ ಕಳೆದ ಯುದ್ಧದಲ್ಲಿ ಚಿನ್ನದ ನಾಣ್ಯೀಕರಣವು ೧೬೧೫ ರಿಂದ ಕುಸಿಯಿತು ಮತ್ತು ೧೯೧೭ ರಿಂದ ಸಂಪೂರ್ಣವಾಗಿ ಅದು ನಿಂತುಹೋಯಿತು.[೨] ಟಂಕಸಾಲೆಯು ಒಂದು ಉಪಯುಕ್ತ ಸಂಸ್ಥೆಯಾಗಿದ್ದರೂ ಅದು ಚಿನ್ನವನ್ನು ಆಕರ್ಷಿಸುವ ಮೋಡಿಯನ್ನು ಹೊಂದಿಲ್ಲ ಎಂಬುದನ್ನು ಈ ದೃಷ್ಟಾಂತಗಳು ನಿರ್ಣಾಯಕವಾಗಿ ತೋರಿಸುತ್ತವೆ. ಮುಕ್ತ ನಾಣ್ಯೀಕರಣಕ್ಕೆ ಅವಕಾಶ ಕಲ್ಪಿಸುವ ಟಂಕಸಾಲೆಯ ಇರುವುದು ಅಥವಾ ಇಲ್ಲದಿರುವುದು ಚಿನ್ನದ ಚಲಾವಣೆಯ ಮೇಲೆ

---

೧. ನೋಡಿ. ಜಿ.ಆರ್. ಪೋರ್ಟರ್, ಪ್ರೋಗ್ರೆಸ್ ಆಫ್ ದಿ ನೇಷನ್ (ಸಂಪಾದಿತ, ಹರ್ಸ್ಟ್) ಪು. ೫೬೮

೨. ನೋಡಿ. ರಿಪೋರ್ಟ್ ಆಫ್ ದಿ ಡೆಪ್ಯುಟಿ ಮಾಸ್ಟರ್ ಆಫ್ ದಿ ರಾಯಲ್ ಮಿಂಟ್ ೧೯೨೧.

ಯಾವುದೇ ಪ್ರಭಾವವನ್ನು ಬೀರುವುದಿಲ್ಲ ಎಂಬುದನ್ನು ಮೇಲೆ ಉದಾಹರಿಸಲಾದ ಐತಿಹಾಸಿಕ ದೃಷ್ಟಾಂತಗಳು ವಿವಾದಾತೀತವಾಗಿ ಸಿದ್ಧಪಡಿಸುತ್ತವೆ.

ಪ್ರಕೃತ, ಎರಡು ರೀತಿಯ ಮಾಧ್ಯಮಗಳನ್ನು ಕರೆನ್ಸಿ ಉದ್ದೇಶಗಳಿಗೆ ಬಳಸಿದಾಗ ಕೆಟ್ಟ ಮಾಧ್ಯಮವು ಒಳ್ಳೆಯದನ್ನು ಚಲಾವಣೆಯಿಂದ ಹೊರದೂಡುತ್ತದೆ ಎಂಬುದು ಅರ್ಥಶಾಸ್ತ್ರದ ದೃಢವಾದ ಹೇಳಿಕೆಯಾಗಿದೆ. ಈ ನಿಯಮವನ್ನು ಭಾರತದ ಸಂದರ್ಭಕ್ಕೆ ಅನ್ವಯಿಸಿದರೆ, ಎಲ್ಲಿಯವರೆಗೆ ಭಾರತದಲ್ಲಿ ರೂಪಾಯಿಗಳ ಅಪರಿಮಿತ ಚಲಾವಣೆ ಇರುತ್ತದೆಯೋ ಅಲ್ಲಿಯವರೆಗೆ ಚಿನ್ನವು ಚಲಾವಣೆಯಲ್ಲಿರಲು ಸಾಧ್ಯವಿಲ್ಲ. ಚಿನ್ನದ ಕರೆನ್ಸಿಯನ್ನು ಚಲಾವಣೆಗೆ ತರಬೇಕೆಂದು ಅತ್ಯಾವಶ್ಯಕವಾಗಿ ಒತ್ತಾಯ ಮಾಡುವವರು ಎಷ್ಟರಮಟ್ಟಿಗೆ ಇಂಥ ನಿಯಮವೊಂದನ್ನು ಕಡೆಗಣಿಸಿದ್ದಾರೆ ಎಂದರೆ ಅವರು ರೂಪಾಯಿಗಳ ಅಪರಿಮಿತ ಚಲಾವಣೆಗೆ ವಿರುದ್ಧವಾಗಿ ಎಂದೂ ಬೆರಳೆತ್ತಿಯೇ ಇಲ್ಲ. ಇಂಡಿಯಾ ಆಫೀಸಿನ ಆ ಕಾರ್ಯಗಳ ಉಗ್ರವಿರೋಧಿಯೂ ಮತ್ತು ಸೆಕ್ರೆಟರಿ ಆಫ್ ಸ್ಟೇಟ್ ತನ್ನ ಹಣತೆಗೆಯುವಿಕೆಗಳನ್ನು ಕುಗ್ಗಿಸಿದ ಪಕ್ಷದಲ್ಲಿ ಚಿನ್ನವು ಒದಗಿ ಬಂದು ಭಾರತದಲ್ಲಿ ಅದು ಕರೆನ್ಸಿಯ ಭಾಗವಾಗಿರುತ್ತಿತ್ತು ಎಂಬ ಧೋರಣೆಯ ವಿಶ್ವಾಸಾರ್ಹ ಬೆಂಬಲಿಗರೂ ಆದ ಶ್ರೀ ವೆಬ್ ಅವರು ಚೇಂಬರ್‌ಲಿನ್ ಸಮಿತಿಗೆ ಹೀಗೆ ಶಿಫಾರಸು ಮಾಡಿದರು

"ಸ್ವದೇಶಿ ವೆಚ್ಚಗಳನ್ನು ಸರಿದೂಗಿಸುವಷ್ಟು ಮೊತ್ತಕ್ಕೆ ಕೌನ್ಸಿಲ್ ಹುಂಡಿಗಳ ಮಾರಾಟವನ್ನು ನಿಷ್ಕೃಷ್ಟವಾಗಿ ಮಿತಿಗೊಳಿಸಬೇಕು ಮತ್ತು ಭಾರತಕ್ಕೆ ಚಿನ್ನದ ಆಮದಾಗಲು ಈಗಿನ ಲೋಹ ಬಿಂದುವಿನ ಸಮಾನಾರ್ಥಕ ಬೆಲೆಗಿಂತಲೂ ಕಡಿಮೆ ಬೆಲೆಗೆ – ಅಂದರೆ ೧ ಷಿಲಿಂಗ್ ೪ ೧/೮ ಪೆನ್ಸ್‌ನಿಂದ ೧ ಷಿಲಿಂಗ್ ೪ ೧/೩೨ ಪೆನ್ಸ್‌ನವರೆಗಿನ ನೆಲೆಗಿಂತ ಕಡಿಮೆ ಬೆಲೆಗೆ, ಯಾವುದೇ ಸಂದರ್ಭದಲ್ಲಿ ಕೌನ್ಸಿಲ್ ಹುಂಡಿಗಳ ಪ್ರಮಾಣವನ್ನು ನಿರ್ಣಯಿಸಕೂಡದು. ಸ್ವದೇಶೀ ವೆಚ್ಚದ ಮೊತ್ತವನ್ನು ಲಂಡನ್ನಿನಲ್ಲಿ ಪಡೆದ ನಂತರ ಹೆಚ್ಚು ಸಂಕೇತ ನಾಣ್ಯಗಳನ್ನು ತಯಾರಿಸುವುದಕ್ಕೋಸ್ಕರ ಲೋಹವನ್ನು ಕೊಳ್ಳುವ ನಿರ್ದಿಷ್ಟ ಉದ್ದೇಶದ ಹೊರತು – ಅದು ಸಾರ್ವಜನಿಕರ ಗಮನಕ್ಕೆ ಬರುವಂತೆ ಸೂಕ್ತವಾಗಿ ಘೋಷಿಸಿದ ಮೇಲೆ – ಹೆಚ್ಚು ಕೌನ್ಸಿಲ್ ಹುಂಡಿಗಳ ಮಾರಾಟ ಮಾಡಕೂಡದು. ಕೌನ್ಸಿಲ್ ಹುಂಡಿಗಳ ಅಂತಹ ವಿಶೇಷ ಮಾರಾಟಗಳನ್ನು ಚಿನ್ನದ ಆಮದಿಗೋಸ್ಕರ ಲೋಹಬಿಂದುವಿನ ಬೆಲೆಗಿಂತಲೂ ಕಡಿಮೆ ಬೆಲೆಗೆ ಮಾರಾಟ ಮಾಡಕೂಡದು".

ಪುನಃ ಭಾರತ ಚಿನ್ನದ ನಾಣ್ಯೀಕರಣಕ್ಕೆ ಟಂಕಸಾಲೆಯನ್ನು ತೆರೆಯಲು ಸರ್ಕಾರವನ್ನು ಕೋರುತ್ತಾ, ಲೆಜಿಸ್ಲೇಟಿವ್ ಕೌನ್ಸಿಲ್‌ನಲ್ಲಿ ನಿರ್ಣಯವನ್ನು ಮಂಡಿಸಿ, ೨೨–೩–೧೯೧೨ರಲ್ಲಿ ಮಾಡಿದ ತಮ್ಮ ಭಾಷಣದಲ್ಲಿ ಸರ್.ವಿ. ಥ್ಯಾಕರ್ಸೆಯವರು ಹೀಗೆ ಗಮನಿಸಿದರು :–

"ಒಂದು ವಿಷಯದ ಬಗ್ಗೆ ನನ್ನ ಸ್ಪಷ್ಟೀಕರಣ ಹೀಗಿದೆ. ರೂಪಾಯಿಗಳ ನಾಣ್ಯೀಕರಣದ ಹಕ್ಕನ್ನು ಸರ್ಕಾರವು ಬಿಟ್ಟುಕೊಡಬೇಕೆಂದು ಅಥವಾ ಜನರು ಅದನ್ನು ಬೇಡಿದಾಗ ರೂಪಾಯಿ ಕೊಡುವುದನ್ನು ತಿರಸ್ಕರಿಸಬೇಕೆಂದು ನಾನು ಸಲಹೆ ಮಾಡುವುದಿಲ್ಲ. ನಮ್ಮ ಕರೆನ್ಸಿ ನೀತಿಗೆ ಅಂತಿಮ ಭದ್ರತೆಯಾಗಿರುವ ಸುವರ್ಣ ಪ್ರಮಿತಿ ಕಾಪುನಿಧಿಯು ಹಾಗೆಯೇ ಇರಬೇಕಾದುದರಿಂದ ಅದರ ಬಗ್ಗೆ ಪ್ರಸ್ತಾಪಿಸುವುದಿಲ್ಲ. ನನ್ನ ಯೋಜನೆಯು ಯಾವುದೇ ರೀತಿಯಲ್ಲಿ ಪ್ರಸಕ್ತ ವ್ಯವಸ್ಥೆಗಳಲ್ಲಿ ಮಧ್ಯೆ ಪ್ರವೇಶಿಸುವುದಿಲ್ಲ. ಆದರೆ ಅವುಗಳಿಗೆ ಅದು ಕೇವಲ ಪೂರಕವಾಗಿದೆ...... ಭಾರತ ಸರ್ಕಾರವು ತನ್ನ ಪರಮಾವಧಿ ಸಾಮರ್ಥ್ಯದವರೆಗೆ ಚಿನ್ನವನ್ನು ಶೇಖರಿಸಿ, ಆದರೆ ತಾನು ಬಳಸಿಕೊಳ್ಳದೇ ಉಳಿಯುವ ಹೆಚ್ಚುವರಿ ಚಿನ್ನವನ್ನು ಜನತೆ ಇಷ್ಟಪಟ್ಟರೆ ನಾಣ್ಯವನ್ನಾಗಿ ಮಾಡಲಿ ಮತ್ತು ಚಲಾವಣೆಗೆ ತರಲಿ. ನಮ್ಮ ವ್ಯಾಪಾರದ ವಿಸ್ತರಣೆಯೊಡನೆ ಮತ್ತು ಸಮತೋಲನವು ನಮ್ಮ ಪರವಾಗಿರುವುದರಿಂದ ಸಾಮಾನ್ಯ ಕಾಲದಲ್ಲಿಯೂ ಚಿನ್ನವು ಆಮದಾಗುವುದು ಮುಂದುವರಿಯುತ್ತದೆ

ಮತ್ತು ಭಾರತದಲ್ಲಿ ಟಂಕಸಾಲೆಯ ಸೌಲಭ್ಯಗಳನ್ನು ಒದಗಿಸಿದರೆ ಚಿನ್ನವು ಚಲಾವಣೆಗೆ ಬರುತ್ತದೆ[೧].

ಇವುಗಳು ಚಿನ್ನದ ಕರೆನ್ಸಿಯ ಉತ್ತೇಜನಕ್ಕೆ ಖಂಡಿತವಾಗಿಯೂ ಮಾರ್ಗಗಳಲ್ಲ. ವಾಸ್ತವವಾಗಿ ಅವುಗಳು ಅದಕ್ಕೆ ಪ್ರತಿಕೂಲವಾಗಿ ವರ್ತಿಸುತ್ತವೆ. ರೂಪಾಯಿಯನ್ನು ನಾಣ್ಯಮಾಡುವುದು ಎಲ್ಲಿಯವರೆಗೆ ನಡೆಯುತ್ತದೆಯೋ. ಅಲ್ಲಿಯವರೆಗೆ ಚಿನ್ನವು ಕರೆನ್ಸಿಯನ್ನು ಪ್ರವೇಶಿಸುವುದಿಲ್ಲ. ಒಂದು ಕಡೆ ಸೆಕ್ರೆಟರಿ ಆಫ್ ಸ್ಟೇಟ್‌ನ ಭಾರಿ ಮೊತ್ತದ ಹಿಂತೆಗೆತಗಳು ಮತ್ತು ಅದರಿಂದಾಗಿ ಭಾರತದ ನಿಧಿಗಳನ್ನು ಲಂಡನ್ನಿಗೆ ವರ್ಗಾಯಿಸುವುದು ಮತ್ತು ಸೆಕ್ರೆಟರಿ ಆಫ್ ಸ್ಟೇಟ್‌ನಿಂದ ಅವುಗಳ ದೋಷಪೂರಿತ ನಿರ್ವಹಣೆಯ ವಿರುದ್ಧವಾಗಿ ಅಬ್ಬರಿಸುವುದು ಮತ್ತು ಇನ್ನೊಂದು ಕಡೆ, ರೂಪಾಯಿಯ ಹೆಚ್ಚಿನ ಸಂಕೇತ ನಾಣ್ಯಗಳನ್ನು ತಯಾರಿಸಲು ಅನುಮತಿ ನೀಡುವುದು – ಇವು ಕರೆನ್ಸಿಯ ಮೂಲಭೂತ ತತ್ವದ ಬಗ್ಗೆ ಅಜ್ಞಾನವನ್ನಷ್ಟೇ ಪ್ರದರ್ಶಿಸುವುದಿಲ್ಲ, ಜೊತೆಗೆ ಸಮಸ್ಯೆಯ ಉದ್ಭವಕ್ಕೆ ನಿರ್ದಿಷ್ಟ ಮೂಲ ಯಾವುದೆಂಬುದನ್ನು ಅರ್ಥ ಮಾಡಿಕೊಳ್ಳುವುದರ ಸಂಪೂರ್ಣ ವಿಫಲತೆಯನ್ನು ತೋರಿಸುತ್ತದೆ.

ಸೆಕ್ರೆಟರಿ ಆಫ್ ಸ್ಟೇಟ್‌ರವರನ್ನು ಒಂದು ನಿರ್ದಿಷ್ಟ ಕ್ರಮ ಕೈಗೊಳ್ಳುವಂತೆ ನಿರ್ಬಂಧಿಸಲು ಭಾರತ ಸರ್ಕಾರಕ್ಕೆ ಸಾಧ್ಯವಿಲ್ಲವೆಂಬುದೂ[೨] ಮತ್ತು ಅವನು ವಾರ್ಷಿಕ ಬಜೆಟ್‌ನ ನಿಬಂಧನೆಗಳನ್ನು ಆಗಾಗ್ಗೆ ಅತಿಕ್ರಮಿಸುವುದೂ ನಿಜ. ಆದರೆ ಪ್ರಶ್ನೆ ಮತ್ತೆ ಹಾಗೆಯೇ ಉಳಿಯುತ್ತದೆ. ೧೮೯೩ಕ್ಕೆ ಹಿಂದಿಗಿಂತ ಅಧಿಕವಾಗಿ ಹಿಂತೆಗೆಯಲು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಹೇಗೆ ಸಾಧ್ಯವಾಯಿತು? ಲಂಡನ್ನಿನಲ್ಲಿರುವ ನಿಧಿಗಳನ್ನು ಸೆಕ್ರೆಟರಿ ಆಫ್ ಸ್ಟೇಟ್ ಹೇಗೆ ಬಳಸಿದರೂ ಆ ಹಿಂತೆಗೆತಗಳಿಗೆ ಭಾರತದಲ್ಲಿ ಅವನೇ ಪಾವತಿ ಮಾಡಬೇಕು ಎಂಬುದನ್ನು ನಾವು ಜ್ಞಾಪಕದಲ್ಲಿಟ್ಟುಕೊಳ್ಳಬೇಕು; ೧೮೯೩ಕ್ಕೆ ಮುಂಚೆ ಅವನು ಹಣವನ್ನು ಕಡಿಮೆ ಹಿಂತೆಗೆಯುತ್ತಿದ್ದನು. ಏಕೆಂದರೆ ಆಗ ವಿನಿಮಯ ಮಾಧ್ಯಮಗಳೂ ಹೆಚ್ಚಾಗಿದ್ದವು ಮತ್ತು ಅವನ ವಿನಿಮಯ ಮಾಧ್ಯಮ ಏಕೆ ಹೆಚ್ಚಾಗಿದ್ದವು ಎಂದರೆ, ರೂಪಾಯಿಗಳನ್ನು ನಾಣ್ಯಮಾಡುವ ಸಾಧ್ಯತೆಯು ಅವನಿಗಿತ್ತು.

ವಾಸ್ತವವಾಗಿ, ಹಣ ಹಿಂತೆಗೆತಗಳ ಮೊತ್ತಕ್ಕಿರುವ ಬೇಡಿಕೆ ಮತ್ತು ರೂಪಾಯಿಗಳನ್ನು ನಾಣ್ಯ ಮಾಡುವ ಸೆಕ್ರೆಟರಿ ಆಫ್ ಸ್ಟೇಟ್‌ನ ಸಾಮರ್ಥ್ಯದಿಂದ ಹಿಂತೆಗೆತಗಳ ಪ್ರಮಾಣವು ಮಿತಿಗೊಂಡಿದೆ. ಆದುದರಿಂದ, ರೂಪಾಯಿಯನ್ನು ನಾಣ್ಯ ಮಾಡುವುದಕ್ಕೆ ಅನುಮತಿ ಕೊಟ್ಟು ಆ ಹಣದ ಸಂಪನ್ಮೂಲದ ಬಳಕೆಯಿಂದ ವಿಶ್ವಾಸಘಾತುಕನಾಗುವ ಅವಕಾಶ ಕಲ್ಪಿಸಿ ಭಾರತದ ಹಿತಾಸಕ್ತಿಯ ವಿಶ್ವಾಸಘಾತಕ್ಕೆ ಸೆಕ್ರೆಟರಿ ಆಫ್ ಸ್ಟೇಟ್‌ನ ಮೇಲೆ ದೋಷಾರೋಪಣೆ ಮಾಡುವುದು ಮೂರ್ಖತನವೇ ಸರಿ. ರೂಪಾಯಿಯು ಮೌಲ್ಯಮಾಪನವಾಗಿ ದೋಷಪೂರಿತವಾಗಿರುವುದರಿಂದ ಚಿನ್ನದ ಕರೆನ್ಸಿಯು ಬೇಕಾಗಿದ್ದರೆ ಸೆಕ್ರೆಟರಿ ಆಫ್ ಸ್ಟೇಟ್‌ನ ಹಣ ಹಿಂತೆಗೆತಗಳ ಮೇಲೆ ಮಿತಿಯನ್ನು ಹೇರುವುದಾಗಲೀ ಅಥವಾ ಟಂಕಸಾಲೆಯನ್ನು ತೆಗೆಯುವುದಾಗಲೀ ಕ್ರಮವಲ್ಲ. ಒಂದು ಚಿಕ್ಕ ಶಾಸನದ ಮೂಲಕ ರೂಪಾಯಿಯ ನಾಣ್ಯೀಕರಣವನ್ನು ನಿಲ್ಲಿಸಬೇಕಾದುದೇ ಅಗತ್ಯ ಕ್ರಮವಾಗಿದೆ. ರೂಪಾಯಿಯೊಡನೆ ಚಿನ್ನದ ತಕ್ಕ ಅನುಪಾತವನ್ನು ನಿರ್ಣಯಿಸಿ ಚಿನ್ನವನ್ನು ಶಾಸನಬದ್ಧ ಹಣವಾಗಿ ಮಾಡಿದಾಗ ಮಾತ್ರ ಚಿನ್ನವು ಭಾರತದ ಕರೆನ್ಸಿಯ ಭಾಗವಾಗುತ್ತದೆ.

---

೧. ಎಸ್.ಎಲ್.ಸಿ.ಪಿ. ಸಂಪುಟ, ಪುಟಗಳು ೬೩೭–೬೩೮.

೨. ಇಂಡಿಯನ್ ಪೇಪರ್ ಕರೆನ್ಸಿ (ಅಮೆಂಡ್‌ಮೆಂಟ್) ಬಿಲ್ ಕುರಿತು ಮಾಡಿದ ಸರ್ ಜೇಮ್ಸ್ ವೆಸ್ಟ್ ಲ್ಯಾಂಡ್ ಅವರ ಭಾಷಣದಲ್ಲಿ ಸೆಕ್ರೆಟರಿ ಆಫ್ ಸ್ಟೇಟ್‌ನ ವೈಧಾನಿಕ ಸ್ಥಾನಮಾನ ಮತ್ತು ಎಷ್ಟರಮಟ್ಟಿಗೆ ಭಾರತ ಸರ್ಕಾರದಿಂದ ಕಾರ್ಯರೂಪಕ್ಕೆ ತರಲಾದ ನಿಬಂಧನೆಗಳಿಗೆ ಅವರು ಬದ್ಧರಾಗಿದ್ದರು ಎಂಬುದನ್ನು ಚೆನ್ನಾಗಿ ವಿವರಿಸಲಾಗಿದೆ. ಈ ಮಸೂದೆ ನಂತರದಲ್ಲಿ ೧೮೯೮ರ ಕಾಯಿದೆ ೧೧ ಆಯಿತು. ಈ ಕಾಯಿದೆಯ ವಿಚಿತ್ರ ಶೈಲಿಯನ್ನು ಗಮನಿಸಿ.

ರೂಪಾಯಿಯ ನಾಣ್ಯೀಕರಣವನ್ನು ನಿಲ್ಲಿಸುವುದೇ ಸೂಕ್ತ ಪರಿಹಾರ ಎಂಬುದನ್ನು ಈಗಾಗಲೇ ಮರೆತುಹೋಗಿರುವ ೧೮೯೮–೧೯೦೨ರ ವರ್ಷಗಳ ಭಾರತದ ಕರೆನ್ಸಿ ಇತಿಹಾಸದ ಘಟನೆಗಳು ಸಾಕಷ್ಟು ಸಮರ್ಥಿಸುತ್ತವೆ. ಚಿನ್ನದ ಟಂಕಸಾಲೆಯಿಲ್ಲದಿರುವ ಸಂಗತಿ ಗೊತ್ತಿದ್ದೂ ಚಿನ್ನವನ್ನು ಶಾಸನಬದ್ಧ ಹಣವಾಗಿ ಮಾಡದ ಒಂದೂವರೆ ವರ್ಷದ ಅತ್ಯಲ್ಪಾವಧಿಯಲ್ಲಿಯೇ ಶ್ರೀ ಡಾಕಿನ್ಸ್ ಅವರು ೧೯೦೧ರ ಮಾರ್ಚಿಯ ತಮ್ಮ ಬಜೆಟ್ ಭಾಷಣದಲ್ಲಿ ಹೀಗೆ ಗಮನಿಸಿದ್ದಾರೆ;–

"ಬಹುಕಾಲದ ನಂತರ ಭಾರತವು ತನ್ನ ಕರೆನ್ಸಿಯ ಸಂಕ್ರಮಣಕಾಲದಿಂದ ಹೊರಹೊಮ್ಮಿದೆ, ಯಾವ ಗುರಿಗೆ ಬಹಳ ವರ್ಷಗಳಿಂದಲೂ ಹೋರಾಟ ನಡೆಸುತ್ತಾ ಬಂದಿದೆಯೋ ಅದನ್ನು ತಲುಪಿದೆ. ಸುವರ್ಣ ಪ್ರಮಿತಿಯನ್ನು ಮತ್ತು ಚಿನ್ನದ ಕರೆನ್ಸಿಯನ್ನು ಸ್ಥಾಪಿಸಿದೆ ಮತ್ತು ವಿನಿಮಯದಲ್ಲಿ ಖಾಸಗಿ ವ್ಯಕ್ತಿಗಳಿಗೂ ಮತ್ತು ಸರ್ಕಾರದ ಹಣಕಾಸಿಗೂ ಒಂದೇ ತೆರನಾದ ಪರಿಹಾರ ತಂದುಕೊಟ್ಟಿರುವಂಥ ಪ್ರಾಯೋಗಿಕ ಸ್ಥಿರತೆಯನ್ನು ಸಾಧಿಸಿದೆ."[೧]

ಚಿನ್ನದ ಅತಿಸಮೃದ್ಧಿಯು ಎಷ್ಟಿತ್ತೆಂದರೆ ಡಾಕಿನ್ಸ್ ಅವರು ಅಭಿಪ್ರಾಯ ಪಡುವ ಹಾಗೆ[೨] "ಚಿನ್ನದಿಂದ..... ಬಹುಮಟ್ಟಿಗೆ ನಾವು ಮುಳುಗಿ ಹೋಗಿದ್ದೇವೆ." ಆಗ ವೈಸರಾಯ್ ಆಗಿದ್ದ ಲಾರ್ಡ್ ಕರ್ಜನ್ ಅವರು ಕೆಳಕಂಡ ಪದಗಳಲ್ಲಿ ಆಗ ಉಂಟಾದ ಕರೆನ್ಸಿ ಸ್ಥಿತಿಯಲ್ಲಿನ ಪರಿವರ್ತನೆಯನ್ನು ಸುಸ್ಪಷ್ಟವಾಗಿ ವರ್ಣಿಸಿದ್ದಾರೆ.[೩]

"ಭಾರತದಲ್ಲಿ ಸವರನ್ನು ಶಾಸನಬದ್ಧ ಹಣವಾಗಿರುವ ಮತ್ತು ನಾವು ನಿರೀಕ್ಷಿಸಿದ ಹಾಗಿರುವ ಎರಕ ಹೊಯ್ದಂಥ ವಿನಿಮಯದಲ್ಲಿನ ಸ್ಥಿಮಿತತೆಯ ಹೊಸ ಯುಗವನ್ನು ಡಾಕಿನ್ಸ್ ಅವರು ಯಶಸ್ವಿಯಾಗಿ ಆರಂಭಿಸಿದ್ದಾರೆ. ಎಲ್ಲ ಕರಾಳ ಭವಿಷ್ಯಗಳನ್ನು ಮೀರಿ ಈ ಮಹತ್ತರ ಬದಲಾವಣೆಯನ್ನು ಪರಿಚಯಿಸಲಾಗಿದೆ. ಬಹು ಮುಖ್ಯವಾಗಿ, ಚಿನ್ನವು ಭಾರತಕ್ಕೆ ಬರುವಂತೆ ಮಾಡಲು ನಮಗೆ ಸಾಧ್ಯವಿಲ್ಲ; ಒಂದು ವೇಳೆ ಅದು ನಮಗೆ ದೊರಕಿದರೂ ನಮ್ಮ ಕೈಯಲ್ಲಿ ಅದನ್ನು ಉಳಿಸಿಕೊಳ್ಳಲಾಗುವುದಿಲ್ಲ; ಏಕೆಂದರೆ ಅದು ನಮ್ಮ ಕೈಯಿಂದ ಜಾಗ್ರತೆಯಾಗಿ ನುಸುಳಿ ಹೋಗುತ್ತದೆ. ಅಗತ್ಯ ನೀಡಿಕೆಯನ್ನು ರಕ್ಷಿಸಿಕೊಂಡು ಬರಲು ನಾವು ಇನ್ನೂ ಸಾಲಮಾಡಬೇಕಾಗುತ್ತದೆ ಎಂಬ ಖಚಿತ ಭವಿಷ್ಯವಾಣಿಯ ವಿರುದ್ಧ ಈ ಬದಲಾವಣೆಯನ್ನು ತರಲಾಗಿದೆ. ವಾಸ್ತವವಾಗಿ, ಮುಟ್ಟಿದ್ದೆಲ್ಲಾ ಚಿನ್ನವಾಗುವಂತೆ ಪ್ರಾರ್ಥನೆ ಮಾಡಿದ ಮತ್ತು ತನ್ನ ಆಹಾರವು ಅರಗಿಸಿಕೊಳ್ಳಲಾಗದ ಚಿನ್ನವಾಗಿ ಮಾರ್ಪಾಟಾದುದನ್ನು ನೋಡಿ ನೊಂದ ಮೈದಾಸನ ಪರಿಸ್ಥಿತಿಯಲ್ಲಿ ನಾವು ಇದ್ದೇವೆ. ಎಷ್ಟು ಹೆಚ್ಚಿನ ಪ್ರಮಾಣದಲ್ಲಿ ನಾವು ಚಿನ್ನ ಹೊಂದಿದ್ದೇವೆಯೆಂದರೆ ರೂಪಾಯಿಗೆ ಚಿನ್ನವನ್ನು ಹಾಗೂ ಚಿನ್ನಕ್ಕೆ ರೂಪಾಯಿಯನ್ನು ನಾವು ಈಗ ಕೊಡುತ್ತಿದ್ದೇವೆ. ಅಂದರೆ, ಪರಿಪೂರ್ಣ ಪರಿವರ್ತನೆಯ ಸುಖವನ್ನು ಅನುಭವಿಸುತ್ತಿದ್ದೇವೆ. ಒಂದು ವರ್ಷದ ಹಿಂದೆ ಅಸಾಧ್ಯವೆಂದು ತಜ್ಞರ ಅಪಹಾಸ್ಯಕ್ಕೆ ಗುರಿಯಾಗಬಹುದಾಗಿದ್ದ ಪರಿಸ್ಥಿತಿಯನ್ನು ಈಗ ನಾವು ಇದ್ದೇವೆ."

ಉದಾಹರಣೆಗೆ, ೧೯೦೦–೧ರ ಪರಿಸ್ಥಿತಿಯನ್ನು ೧೯೧೦–೧೧ ರಲ್ಲಿದ್ದ ಪರಿಸ್ಥಿತಿಗೆ ಹೋಲಿಸಿ. ಆ ವರ್ಷದಲ್ಲಿದ್ದ ಕರೆನ್ಸಿ ಸ್ಥಿತಿಯ ಬಗ್ಗೆ ಮಾತನಾಡುತ್ತಾ ಸರ್ ಜೇಮ್ಸ್ ಮೆಸ್ಟನ್ ಅವರು ಹೀಗೆ ಅಭಿಪ್ರಾಯ ಪಟ್ಟಿದ್ದಾರೆ.[೪]

---

೧. ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ೧೯೦೦–೧ ಪು. ೧೪

೨. ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ಪು. ೧೯

೩. ಅದೇ ಪು. ೧೬೭

೪. ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ೧೯೧೦–೧೧, ಪು ೩೪೬

"ಕರೆನ್ಸಿ ನೀತಿಯಲ್ಲಿ ಹಲವಾರು ಬದಲಾವಣೆಗಳನ್ನು ನಾವು ಹಾದು ಹೋಗಿದ್ದೇವೆ ಮತ್ತು ಸಾಕಷ್ಟು ತಪ್ಪುಗಳನ್ನು ಮಾಡಿದ್ದೇವೆ. ಆದರೆ ನಮ್ಮ ಕಾರ್ಯದ ರೂಪುರೇಷೆಯು ಮತ್ತು ಗುರಿಗಳು ಸಂದೇಹಾತೀತ ಹಾಗೂ ಸ್ಪಷ್ಟವಾಗಿವೆ. ನಮ್ಮ ಆದರ್ಶದೆಡೆಗೆ ದೃಢತೆಯಿಂದ ಪ್ರಗತಿ ಸಾಧಿಸುವುದರಲ್ಲಿ ಯಾವುದೇ ದೊಡ್ಡ ಅಥವಾ ಮೂಲಭೂತ ತ್ಯಾಗವೇನಿಲ್ಲ. ಫೌಲರ್ ಸಮಿತಿ ಬಂದಾಗಿನಿಂದ ಆ ಪ್ರಗತಿಯು ವಾಸ್ತವವೂ ಹಾಗೂ ಅವಿರತವೂ ಆಗಿದೆ. ಈ ಆದರ್ಶವನ್ನು ತಲುಪುವುದಕ್ಕೆ ಮುಂಚೆ ಇನ್ನೂ ಒಂದು ದೊಡ್ಡ ಹೆಜ್ಜೆ ಇಡಬೇಕಾದದ್ದಿದೆ. ಪ್ರಪಂಚದ ಸುವರ್ಣ ಪ್ರಮಿತಿಯ ರಾಷ್ಟ್ರಗಳೊಡನೆ ಭಾರತವನ್ನು ನಾವು ಕೂಡಿಸಿದ್ದೇವೆ. ಒಂದು ಸುವರ್ಣ ವಿನಿಮಯ ಪ್ರಮಿತಿಯನ್ನು ನಾವು ತಲುಪಿದ್ದೇವೆ. ಇದನ್ನು ಏಕಪ್ರಕಾರವಾಗಿ ಬೆಳೆಸುತ್ತಿದ್ದೇವೆ ಮತ್ತು ಉತ್ತಮಗೊಳಿಸುತ್ತಿದ್ದೇವೆ. ಮುಂದಿನ ಹಾಗೂ ಕೊನೆಯ ಹೆಜ್ಜೆಯೆಂದರೆ ಚಿನ್ನದ ಕರೆನ್ಸಿ, ಅದು ಸಕಾಲದಲ್ಲಿ ಬರುತ್ತದೆಯೆಂಬ ಭರವಸೆಯ ಖಂಡಿತವಾಗಿಯೂ ನನಗಿದೆ...."

ಭಾಷಣಕಾರನ ಈ ಉಪಶಾಮಕ ಹೇಳಿಕೆಗಳನ್ನು ಒಂದು ಕ್ಷಣ ಬದಿಗಿಟ್ಟರೆ, ೧೯೦೦ ರಲ್ಲಿ ಭಾರತವು ಒಳ್ಳೆಯ ಚಿನ್ನದ ಕರೆನ್ಸಿಯನ್ನು ಹೊಂದಿತ್ತೆಂಬ ಸಂಗತಿಯು ನಿಜವೇ. ೧೯೧೦ ರ ಅಂತ್ಯದ ಪರಿಸ್ಥಿತಿಯನ್ನು ಪರಿಶೀಲಿಸಿದರೆ ಭಾರತವು ಅದನ್ನು ಹೊಂದಿರಲಿಲ್ಲ. ಈ ವ್ಯತ್ಯಾಸ ಉಂಟಾಗುವುದಕ್ಕೆ ಕಾರಣ ಯಾವುದು? ಯಾವುದು ಅಲ್ಲ? ವಿಷಯ ಇಷ್ಟೆ. ೧೮೯೩-೧೯೦೦ರ ಅವಧಿಯಲ್ಲಿ ಯಾವುದೇ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಲಿಲ್ಲ; ಆದರೆ ೧೯೦೦-೧೯೧೦ರ ಅವಧಿಯಲ್ಲಿ ನಾಣ್ಯವನ್ನಾಗಿ ಮಾಡಿದ ರೂಪಾಯಿಗಳ ಪ್ರಮಾಣ ಅಧಿಕವಾಗಿತ್ತು. ವಿನಿಮಯವು ಸಾಕಷ್ಟು ಸ್ಥಿರವಾಗಿರಲಿಲ್ಲ ಮತ್ತು ಸ್ವದೇಶೀ ವೆಚ್ಚದ ಪಾವತಿಗಾಗಿ ಸರ್ಕಾರವು ರೂಪಾಯಿಯನ್ನು ಅಧಿಕ ಪ್ರಮಾಣದಲ್ಲಿ ಒದಗಿಸಬೇಕಾಗಿತ್ತು. ಸುಪ್ರೀಂ ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರೊಬ್ಬರು[೧] ವಾಸ್ತವವಾಗಿ ಹೀಗೆ ಕೇಳಿದರು:-

"ಸರ್ಕಾರವು ತಾನಾಗಿಯೇ ಟಂಕಸಾಲೆಗಳನ್ನು ನಡೆಸುವುದಕ್ಕೆ ಏನಾದರೂ ಆಕ್ಷೇಪಣೆ ಇದೆಯೇ? ಬೆಳ್ಳಿಯ ಕಡಿಮೆ ಬೆಲೆಯನ್ನು ಮತ್ತು ಚಿನ್ನದ ಗಟ್ಟಿ ಮತ್ತು ರೂಪಾಯಿಗಳ ನಡುವಿನ ಅನುಕ್ರಮ ಬೆಲೆಗಳಲ್ಲಿನ ಅಧಿಕ ಅಂತರವನ್ನು ಗಣನೆಗೆ ತೆಗೆದುಕೊಂಡರೆ ಸರ್ಕಾರವು ತಾನಾಗಿಯೇ ರೂಪಾಯಿಗಳ ತಯಾರಿಕೆಯಿಂದ ಲಾಭಗಳಿಸಿ ಕೊನೆಯ ಪಕ್ಷ ಪ್ರಸಕ್ತ ಖೋತಾದ ಗಮನಾರ್ಹ ಭಾಗವನ್ನಾದರೂ ಸರಿದೂಗಿಸಲು ಸಾಧ್ಯವಿಲ್ಲವೇ? ನನ್ನ ಮಟ್ಟಿಗೆ ಅದು ನ್ಯಾಯಸಮ್ಮತ ಆದಾಯದ ಮೂಲ ಮತ್ತು ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ವಾಸ್ತವವಾಗಿ ಸುಧಾರಿಸಬಲ್ಲದೆಂದು ತೋರುತ್ತದೆ".

ಆದರೆ ಭಾರತದ ಹಣಕಾಸಿನ ಆಗಿನ ಮೇಲ್ವಿಚಾರಕರಾದ ಸರ್ ಜೇಮ್ಸ್ ವೆಸ್ಟ್‌ಲ್ಯಾಂಡ್ ಅವರು ಹೀಗೆ ಉತ್ತರಿಸಿದರು:-[೨]

"ನಾವು ಬೆಳ್ಳಿಯನ್ನು ಈಗಿನ ಕಡಿಮೆ ಬೆಲೆಗೆ ಕೊಂಡುಕೊಳ್ಳಬೇಕು ಮತ್ತು ಅದನ್ನು ರೂಪಾಯಿಯ ಗರಿಷ್ಠ ಮೌಲ್ಯದಷ್ಟಕ್ಕೆ ನಾಣ್ಯವನ್ನಾಗಿ ಮಾಡಿ ಚಲಾವಣೆಗೆ ತರಬೇಕೆಂಬ ತಮ್ಮ ಘನತೆವೆತ್ತ ಕೌನ್ಸಿಲ್‌ನ ಸದಸ್ಯರೊಬ್ಬರು ಸೂಚಿಸುವ ಯೋಜನೆಯು ಸ್ವಲ್ಪಮಟ್ಟಿಗೆ ಆಶ್ಚರ್ಯಕರವಾದದ್ದು ಎಂಬುದನ್ನು ನಾನು ನಿವೇದಿಸಿಕೊಳ್ಳಬೇಕಾಗಿದೆ. ಈ ಪ್ರಲೋಭನೆಗೆ ಒಳಗಾಗಲು ನಾನು ಖಂಡಿತವಾಗಿಯೂ ಸಿದ್ಧನಿಲ್ಲ".

---

೧. ಇವರು ಮತ್ತ್ಯಾರು ಅಲ್ಲ. ಬೊಂಬಾಯಿಯ ಪ್ರಖ್ಯಾತ ಬಂಡವಾಳದಾರರಾದ ಫಜುಲ್‌ಭಾಯ್ ವಿಶ್ರಮ್. ನೋಡಿ ಫೈನಾನ್ಷಿಯಲ್ ಸ್ಟೇಟ್‌ಮೆಂಟನಲ್ಲಿನ ಅವರ ಭಾಷಣ, ೧೮೯೪-೯೫ ಪು. ೯೬

೨. ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ೧೮೯೪-೯೫ ಪು. ೧೨೩

ಮತ್ತೆ ೧೮೯೮ ರಲ್ಲಿ ಲಿಂಡ್ಸೇ ಅವರ ಕೆಲವು ಅನುಯಾಯಿಗಳು ಹಣದ ಮುಗ್ಗಟ್ಟನ್ನು ಸುಧಾರಿಸಲು ಸರ್ಕಾರವು ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಬೇಕೆಂದು ಅಪೇಕ್ಷಿಸಿದಾಗ ಸರ್ ಜೇಮ್ಸ್ ವೆಸ್ಟ್‌ಲ್ಯಾಂಡ್ ಹೀಗೆ ಟೀಕಿಸಿದರು.:–[೧]

"ನಮ್ಮ ಅಭಿಪ್ರಾಯದಲ್ಲಿ ಬೆಳ್ಳಿ ಪ್ರಮಿತಿಯು ಈಗ ಮುಗಿದುಹೋದ ಪ್ರಶ್ನೆಯಾಗಿದೆ. ಅದು ಪುನರಾವರ್ತನೆಯಾಗದ ಸಂಗತಿಯಾಗಿದೆ. ಸುವರ್ಣ ಪ್ರಮಿತಿಯನ್ನು ಎಷ್ಟು ಉತ್ತಮವಾಗಿ ಸಾಧಿಸಬಹುದೆಂಬುದೊಂದೇ ನಮ್ಮ ಮುಂದಿರುವ ಪ್ರಶ್ನೆ. ಮುಕ್ತ ಟಂಕಸಾಲೆಗಳ ಪರಿಸ್ಥಿತಿಗೆ ನಾವು ಹಿಂದಿರುಗಲು ಸಾಧ್ಯವಿಲ್ಲ. ಆ ಸ್ಥಿತಿಗೆ ಹಿಂದಿರುಗುವುದಕ್ಕೆ ನಮಗೆ ಕೇವಲ ಎರಡು ಮಾರ್ಗಗಳಿವೆ. ಸಾಮಾನ್ಯವಾಗಿ ಸಾರ್ವಜನಿಕರಿಗಾಗಿ ಟಂಕಸಾಲೆಗಳನ್ನು ತೆರೆಯಬಹುದು ಅಥವಾ ನಾವೇ ನಾಣ್ಯ ಮಾಡುವುದಕ್ಕಾಗಿಯೂ ಅವುಗಳನ್ನು ತೆರೆಯಬಹುದು. ಹಾಗೆಂದರೆ, ಯಾವುದೇ ಸಂದರ್ಭದಲ್ಲಿಯಾಗಲೀ ರೂಪಾಯಿಯ ಮೌಲ್ಯವು ಸ್ವಲ್ಪಮಟ್ಟಿಗೆ ಇಳಿದು ಬೆಳ್ಳಿಯ ಮೌಲ್ಯದ ಮಟ್ಟದತ್ತ ಚಲಿಸುತ್ತದೆ. ಟಂಕಸಾಲೆಗಳನ್ನು ಸಾರ್ವಜನಿಕರಿಗಾಗಿ ತೆರೆದ ಸಂದರ್ಭದಲ್ಲಿ ರೂಪಾಯಿಯ ಇಳಿತವು ಶೀಘ್ರವಾಗಿರುತ್ತದೆ. ಕೇವಲ ಸರ್ಕಾರದ ನಾಣ್ಯ ಮಾಡುವ ಕಾರ್ಯಕ್ಕೆ ಅವುಗಳನ್ನು ತೆರೆದರೆ ರೂಪಾಯಿಯ ಇಳಿತವು ನಿಧಾನವಾಗಬಹುದು. ಆದರೆ ಅದು ಅನಿವಾರ್ಯವಾಗಿದೆ ಎಂಬುದು ಖಂಡಿತ".

ಸರ್ಕಾರವು ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವ ಯೋಜನೆಯ ನಿರಾಕರಣೆ ಕುರಿತು ಸಿ.ಇ. ಡಾಕಿನ್ಸ್ ಅವರೂ ಅಷ್ಟೇ ಒತ್ತಿ ಹೇಳಿದ್ದಾರೆ. ನಾಣ್ಯವನ್ನಾಗಿ ಮಾಡುವುದರಿಂದ ದೊರಕುವ ಲಾಭ ನಿರೀಕ್ಷೆಯ ದೃಷ್ಟಿಯಿಂದ ಈ ಯೋಜನೆಯನ್ನು ಒಪ್ಪಿಕೊಳ್ಳಲು ಪ್ರೇರೇಪಿಸಿದಾಗ ಅವರು ಹೀಗೆ ಉತ್ತರಿಸಿದರು:–[೨]

"ಅತ್ಯುತ್ತಮ ಹಾಗೂ ಯೋಗ್ಯವಾದ ಸರ್ಕಾರದ ಕಣ್ಣೆದುರೇ ಕೋರೈಸುವ ಬೆಳ್ಳಿಯ ಮೇಲೆ ಲಭ್ಯವಾಗುವ ಲಾಭದ ಮೋಹವನ್ನು ಓಲಾಡಿಸದಿರಲಿ ಎಂದು ನನ್ನ ಮಾನ್ಯ ಮಿತ್ರರನ್ನು ಪ್ರಾರ್ಥಿಸಿಕೊಳ್ಳಲೇಬೇಕು ಎಂಬುದಾಗಿ ನಾನು ಯೋಚಿಸುತ್ತೇನೆ. ಒಮ್ಮೆ ಈ ಲಾಭಗಳು ನಿಮ್ಮ ಕಾರ್ಯದ ನಿರ್ಣಾಯಕ ಅಂಶವಾಗಲು ಬಿಟ್ಟರೆ ಆಗ ಸ್ಥಿಮಿತತೆಗೇ ವಿದಾಯ ಹೇಳಬೇಕಾಗುತ್ತದೆ."

ರೂಪಾಯಿಯನ್ನು ನಾಣ್ಯವನ್ನಾಗಿ ಮಾಡಕೂಡದೆಂಬ ಸರ್ಕಾರದ ನಿರ್ಣಯಕ್ಕೆ ಮತ್ತೊಂದು ನಿದರ್ಶನವನ್ನು ಒದಗಿಸಲಾಗಿದೆ. ಹುಡುಕುತ್ತಾ ಹೋದರೆ ಒಂದು ನಿರ್ದಿಷ್ಟ ದರದಲ್ಲಿ ಮತ್ತು ಅನಿರ್ದಿಷ್ಟ ಮೊತ್ತದಲ್ಲಿ ಕೌನ್ಸಿಲ್ ಹುಂಡಿಗಳನ್ನು ಮಾರಾಟ ಮಾಡುವ ಜವಾಬ್ದಾರಿಯನ್ನು ಸರ್ಕಾರವು ಏಕೆ ವಹಿಸಿಕೊಳ್ಳಲೇ ಇಲ್ಲ ಎಂಬುದಕ್ಕೆ ಕಾರಣಗಳು ದೊರೆಯುತ್ತವೆ. ಕೌನ್ಸಿಲ್ ಹುಂಡಿಗಳಿಗೆ ಒಂದು ನಿರ್ದಿಷ್ಟ ಬೆಲೆಯನ್ನು ಕೊಡುವ ಭರವಸೆ ನೀಡಲು ಸಾಧ್ಯವಿಲ್ಲದಿರುವುದರಿಂದ ಮತ್ತು ಅವುಗಳನ್ನು ಸಮತೆಯ ಬೆಲೆಗಿಂತಲೂ ಕಡಿಮೆ ಬೆಲೆಗೆ ಮಾರಾಟ ಮಾಡಬೇಕಾಗಿರುವ ಪ್ರಸಂಗಗಳಿರುವುದರಿಂದ ಸರ್ಕಾರವು ಇಂಥ ಜವಾಬ್ದಾರಿಯನ್ನು ತೆಗೆದುಕೊಳ್ಳಲು ಸಾಧ್ಯವಿಲ್ಲವೆಂಬುದಾಗಿ ಚೇಂಬರ್‌ಲಿನ್ ಸಮಿತಿಯು ವಾದಿಸಿತು. ರೂಪಾಯಿಯನ್ನು ಅತಿಯಾಗಿ ನಾಣ್ಯಮಾಡುವ ಸರ್ಕಾರದ ಸ್ವೇಚ್ಛಾನೀತಿಯ ತಪ್ಪಿನಿಂದಾಗಿ ಈ ಸ್ಥಿತಿಯು ದುರ್ಬಲಗೊಂಡಿತೆಂದು ಒಪ್ಪಿಕೊಳ್ಳುವಷ್ಟರವರೆಗೆ ಇದು ನಿಜವಾಗಿದೆ. ಆ ಜವಾಬ್ದಾರಿಯನ್ನು ಒಪ್ಪಿಕೊಳ್ಳಲು ೧೯೦೦ರಲ್ಲಿ ಮೊದಲಿಗೆ

---

೧. ಫೈನಾನ್ಷಿಯಲ್ ಸ್ಟೇಟ್‌ಮೆಂಟ್, ೧೮೯೮–೯೯ ಪು. ೧೮೯

೨. ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ೧೯೦೦–೧ ಪು. ೧೬೩

ಸರ್ಕಾರವನ್ನು ಕೇಳಿದಾಗ ಸರ್ಕಾರವು ಕೊಟ್ಟ ವಿವರಣೆಯು ಖಂಡಿತವಾಗಿಯೂ ಇದಲ್ಲ. ಹುಂಡಿಗಳನ್ನು ಅನಿರ್ದಿಷ್ಟವಾಗಿ ಮಾರುವುದೆಂದರೆ ಅನಿರ್ದಿಷ್ಟವಾಗಿ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಬೇಕಾಗಿತ್ತು ಎಂಬುದು ಸರ್ಕಾರಕ್ಕೆ ಸಂಪೂರ್ಣವಾಗಿ ತಿಳಿದಿತ್ತು. ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಲು ಸರ್ಕಾರವು ಅಪೇಕ್ಷಿಸಿದ್ದುದರಿಂದ ಆ ಜವಾಬ್ದಾರಿಯನ್ನು ತೆಗೆದುಕೊಳ್ಳಲಿಲ್ಲ. ಅಂಥ ಜವಾಬ್ದಾರಿಯನ್ನು ವಹಿಸಿಕೊಳ್ಳುವಂತೆ ಸರ್ಕಾರವನ್ನು ಕೇಳಿದವರಿಗೆ ಇದೇ ಮೂಲ ಕಾರಣ ಎಂಬುದಾಗಿ ಡಾಕಿನ್ಸ್[೧] ಅವರು ಸ್ಪಷ್ಟಪಡಿಸುತ್ತಾ ಹೀಗೆ ಜ್ಞಾಪಿಸಿದರು:–

"ಸರ್ಕಾರದ ಬೆಳ್ಳಿ ನಾಣ್ಯದ ಕಾಪುನಿಧಿಯು ಯಾವ ಮಟ್ಟವನ್ನು ಶೀಘ್ರವಾಗಿ ತಲುಪಿತ್ತೆಂದರೆ ಅದರ ಪರಿಣಾಮವಾಗಿ ಕೌನ್ಸಿಲ್ ಹುಂಡಿಗಳ ಅಪರಿಮಿತ ವರ್ಗಾವಣೆಗಳನ್ನು ಮುಂದುವರೆಸಿಕೊಂಡು ಬರುವುದು ಅಸಾಧ್ಯವಾಗಿತ್ತು. ಆದುದರಿಂದ ಸೆಕ್ರೆಟರಿ ಆಫ್ ಸ್ಟೇಟ್ ಅವರು ಕ್ರಮವಾಗಿ ಬೆಲೆ ಏರಿಸುವುದರ ಮೂಲಕ ಬೇಡಿಕೆಗಳನ್ನು ಮಿತಿಗೊಳಿಸಲು ತೀರ್ಮಾನಿಸಿದರು. ಅತ್ಯಂತ ತುರ್ತು ಬೇಡಿಕೆಯನ್ನು ಮಾತ್ರ ಪೂರೈಸಲಾಯಿತು ಮತ್ತು ಅಷ್ಟು ತುರ್ತಾಗಿಲ್ಲದ ಬೇಡಿಕೆಯನ್ನು ತಳ್ಳಿಹಾಕಲಾಯಿತು. ಅದೇ ಕಾಲದಲ್ಲಿ ಯಾರ ಬೇಡಿಕೆಗಳು ಅಷ್ಟು ತುರ್ತಾಗಿರಲಿಲ್ಲವೋ ಅವರು ಭಾರತಕ್ಕೆ ಚಿನ್ನವನ್ನು ರವಾನಿಸುವಂತೆ ಎಚ್ಚರಿಕೆಯನ್ನು ಕೊಡಲಾಯಿತು. ಬೇರೆ ಯಾವ ಮಾರ್ಗವೂ ಸಾಧ್ಯವಿರಲಿಲ್ಲ. ಬೆಳ್ಳಿಯನ್ನು ಅನಿರ್ದಿಷ್ಟವಾಗಿ ೧ ಷಿಲಿಂಗ್ ೪$^{೫}/_{೬೪}$ ಪೆನ್ಸ್ ದರದಲ್ಲಿ ಹರಿಯಬಿಡುವ ಸೆಕ್ರೆಟರಿ ಆಫ್ ಸ್ಟೇಟ್ ಅವರ ಹೊಣೆಗಾರಿಕೆಯನ್ನು ಸಮರ್ಥಿಸಿಕೊಳ್ಳಲಾಗಿದೆ. ಆದರೆ ಅವರಿಗೆ ಯಾವುದೇ ಸ್ಪಷ್ಟ ಹೊಣೆಗಾರಿಕೆಯಿತ್ತು ಎಂಬುದು ನನಗೆ ತೋರುತ್ತಿಲ್ಲ ಮತ್ತು ಅಂಥ ಹೊಣೆಗಾರಿಕೆಯನ್ನು ಯಾರು ಪ್ರತಿಪಾದಿಸುವರೋ ಅವರು ರೂಪಾಯಿಯ ಕಾಪುನಿಧಿಯು ಕಡಿಮೆಯಾಗುವ ಅಪಾಯವನ್ನು ಮನಗಂಡು ನಮ್ಮ ಕರೆನ್ಸಿ ಸ್ತಿಮಿತತೆಯ ಮೇಲೆ ಪ್ರಭಾವ ಬೀರುತ್ತಿತ್ತೆಂಬ ಕಾರಣಕ್ಕಾಗಿ ಹೊಣೆಗಾರಿಕೆಯನ್ನು ಇಷ್ಟಪಡುತ್ತಿದ್ದರು ಎನ್ನುವುದು ನನಗೆ ಆಶ್ಚರ್ಯವನ್ನುಂಟುಮಾಡಿದೆ.

ನಿಗದಿತ ಕಾಲಕ್ಕೆ ಸರಿಯಾಗಿ ಚಿನ್ನದ ಕರೆನ್ಸಿಯಿರುವ ಚಿನ್ನದ ಪ್ರಮಿತಿಯ ಆದರ್ಶವು ಇನ್ನೇನು ಕೈಗೂಡುತ್ತದೆ ಎನ್ನುವಾಗ ಭಾರತದ ಹಣಕಾಸಿನ ಮಂತ್ರಿಯಾಗಿ ಸರ್ ಎಡ್ವರ್ಡ್ ಲಾ ಅವರು ನೇಮಕವಾದರು ಮತ್ತು ಅವರು ಅವಿವೇಕಿಯಂತೆ ಸ್ವೇಚ್ಛಾನುಸಾರಿಯಾಗಿ, ಕಡಲ್ಗಳ್ಳನ ಉದಾಸೀನತೆಯಿಂದ ಇಡೀ ಕರೆನ್ಸಿ ರಚನೆಯನ್ನು ಚೂರು ಚೂರು ಮಾಡಿದರು. ಜೂನ್ ೨೮, ೧೯೦೦ರ ಅವರ ಸೂಚನಾ ಪತ್ರವು ಇಡೀ ಘಟನೆಗಳ ಗತಿಯನ್ನು ಬದಲಾಯಿಸಿತು.[೨] ಆ ಸೂಚನಾ ಪತ್ರದಲ್ಲಿ ಈ ಕೆಳಕಂಡ ಮುಖ್ಯ ಭಾಗವು ಕಂಡುಬರುತ್ತದೆ:–

"೧೫. ಈ ಎಲ್ಲಾ ವಿಚಾರಗಳ ಫಲವಾಗಿ ಸರ್ಕಾರಿ ಸೆಕ್ಯೂರಿಟಿಗಳಲ್ಲಿ ಸುರಕ್ಷಿತವಾಗಿ ಹೆಚ್ಚಿಸಬಹುದಾದ ಹೂಡಿಕೆಯ ಪ್ರಮಾಣದ ಮೊತ್ತವನ್ನು ಪರಿಗಣಿಸುವುದಕ್ಕೆ ಮಾರ್ಗದರ್ಶಿಯಾಗಿರುವ ಸೂತ್ರಗಳಿಂದಲೇ ಕರೆನ್ಸಿ ಕಾಪು ನಿಧಿಯಾಗಿ ಸುರಕ್ಷಿತವಾಗಿ ತೆಗೆದಿರಿಸಬಲ್ಲ ಚಿನ್ನದ ಮೊತ್ತವನ್ನು ಈಗ ಸದ್ಯಕ್ಕೆ ನಿಯಂತ್ರಿಸಬೇಕೆಂಬುದು ಒಪ್ಪತಕ್ಕದ್ದಾಗಿ ನನಗೆ ತೋರುತ್ತದೆ. ನೋಟುಗಳ ಚಲಾವಣೆ ಏರಿಕೆಯಲ್ಲಿ...... ಅಥವಾ ಪ್ರಸಕ್ತ ಪರಿಸ್ಥಿತಿಯಲ್ಲಿ ಕೆಲವು ಇತರೆ ಬದಲಾವಣೆಗಳು ಇತ್ಯರ್ಥವಾಗುವವರೆಗೂ ಸುಮಾರು £

---

೧. ಹೋಲಿಸಿ. ಅವರ ಬಜೆಟ್ ಭಾಷಣ, ಫೈನಾನ್ಷಿಯಲ್ ಸ್ಟೇಟ್‌ಮೆಂಟ್ ೧೯೦೦–೧, ಪು. ೨೭

೨. ಸೂಚನಾ ಪತ್ರದ ಪ್ರತಿಗೆ ಮತ್ತು ಅದಕ್ಕೆ ಸಂಬಂಧಿಸಿದ ಪತ್ರವ್ಯವಹಾರಕ್ಕೆ ನೋಡಿ: ಅನುಬಂಧ ಇಂಟರಿಮ್ ರಿಪೋರ್ಟ್ ಆಫ್ ದಿ ಚೇಂಬರ್‌ಲಿನ್ ಕಮಿಷನ್, ೧೯೧೩ರ ೭೦೭೦.

೭,೦೦೦,೦೦೦ ಗಳಷ್ಟು ಚಿನ್ನವನ್ನು ಈಗ ಕರೆನ್ಸಿ ಕಾಪುನಿಧಿಯಾಗಿ ಸುರಕ್ಷಿತವಾಗಿಡಬಹುದು ಎಂಬುದು ನನ್ನ ಅಭಿಪ್ರಾಯ. ಹೇಗಾದರೂ ಸರಿಯೇ ಈ ಆಧಾರರಹಿತ ಅಂಕಿಗೆ ಬದ್ಧನಾಗಲು ನಾನು ಇಚ್ಛಿಸುವುದಿಲ್ಲ ಮತ್ತು ವಿಶೇಷವಾಗಿ ಸದ್ಯದಲ್ಲಿ ಊಹಿಸದ ಸಂದರ್ಭಗಳು ಒದಗಿ ಬಂದಲ್ಲಿ ಇನ್ನು ಮುಂದೆ ಅಪೇಕ್ಷಣೀಯವಾದ ಕಾಪುನಿಧಿಯ ಇಳಿಕೆಯನ್ನು ಕಾರ್ಯಗತಗೊಳಿಸಲು ಸರ್ಕಾರದ ಕೈಕಟ್ಟುವಂತಹ ಸಾರ್ವಜನಿಕ ಘೋಷಣೆಯನ್ನು ಮಾಡಬಾರದೆಂಬುದಾಗಿ ನಾನು ಇಚ್ಛಿಸುತ್ತೇನೆ".

ಕರೆನ್ಸಿ ಕಾಪುನಿಧಿಯಲ್ಲಿರಿಸಬೇಕಾದ ಗರಿಷ್ಠ ಚಿನ್ನದ ಪ್ರಮಾಣ ಕುರಿತ ಮಾರ್ಪಾಟುಗಳನ್ನು ಒಳಗೊಂಡ ಮತ್ತು ಭಾರತದ ಕರೆನ್ಸಿ ಪದ್ಧತಿಗೆ ತಳಹದಿಯಾಗಿ ಉಳಿಯುವ ಈ ಸೂಚನಾ ಪತ್ರವನ್ನು ರೂಪಿಸುವಾಗ ಅದರ ಲೇಖಕರು ಸುವರ್ಣ ಪ್ರಮಿತಿಯ ಮತ್ತು ಚಿನ್ನದ ಕರೆನ್ಸಿಯ ಆದರ್ಶಕ್ಕೆ ಏನಾಗುತ್ತಿತ್ತು ಎಂಬುದರ ಬಗ್ಗೆ ಒಂದು ಕ್ಷಣದ ಮಟ್ಟಿಗಾದರೂ ವಿಚಾರಿಸಿದ ಹಾಗೆ ತೋರುವುದಿಲ್ಲ. ಸುವರ್ಣ ಪ್ರಮಿತಿಯ ಜಾರಿಗೆ ಆತ ಸಹಕರಿಸುತ್ತಿದ್ದನೇ? ಅಥವಾ ಚಿನ್ನದ ಶೇಖರಣೆಗೆ ಮಿತಿಯನ್ನು ಗೊತ್ತುಪಡಿಸುವುದರ ಮೂಲಕ ಸುವರ್ಣ ಪ್ರಮಿತಿಯನ್ನು ಕೈಬಿಡಲು ಯೋಚಿಸುತ್ತಿದ್ದನೇ? ಈ ಸೂಚನಾ ಪತ್ರದ ನೀತಿಯನ್ನು ಆಚರಣೆಗೆ ತರುವ ಮುಂಚೆಯೇ ಭಾರತದ ಕರೆನ್ಸಿ ಪದ್ಧತಿಯು ೧೮೪೪ ರ ಬ್ಯಾಂಕ್ ಚಾರ್ಟರ್ ಕಾಯಿದೆಯಂತೆಯೇ ರೂಪಗೊಳ್ಳುತ್ತಿತ್ತು. ಈ ಕಾಯಿದೆಯಲ್ಲಿ ರೂಪಾಯಿಯು ಚಲಾವಣೆಯ ಮಿತಿಗೆ ಒಳಪಟ್ಟಿತ್ತು ಮತ್ತು ಚಿನ್ನದ ಚಲಾವಣೆಯು ಅಪರಿಮಿತವಾಗಿದ್ದಿತು. ಬ್ಯಾಂಕು ಅಮಾನತ್ತು ಅವಧಿಯ ಪದ್ಧತಿಗೆ ತೀರ ವಿರುದ್ಧವಾದ ಆಲೋಚನೆಯನ್ನು ಅಂದರೆ ಚಿನ್ನದ ಚಲಾವಣೆಯನ್ನು ಮಿತಿಗೊಳಿಸಲೇಬೇಕು ಮತ್ತು ರೂಪಾಯಿಯ ಚಲಾವಣೆಯು ಅಪರಿಮಿತವಾಗಿರಬೇಕು ಎಂಬುದನ್ನು, ಈ ಸೂಚನಾ ಪತ್ರವು ಪ್ರಸ್ತಾಪಿಸಿತು. ಭಾರತದ ಕರೆನ್ಸಿಯಲ್ಲಿ ಚಿನ್ನಕ್ಕೆ ಬದಲಾಗಿ ರೂಪಾಯಿಯನ್ನು ಚಲಾವಣೆಗೆ ತರುವ ಮತ್ತು ಈ ಮೂಲಕ ೧೮೯೩ ರಿಂದಲೂ ಮುಂದಿಟ್ಟುಕೊಂಡಿದ್ದ ಆದರ್ಶವನ್ನು ಮತ್ತು ೧೯೦೦ರಲ್ಲಿ ಅದನ್ನು ಬಹುಮಟ್ಟಿಗೆ ಸಾಧಿಸಿದ್ದುದನ್ನು ವಿಫಲಗೊಳಿಸುವ ನೀತಿಯನ್ನು ಉದ್ದೇಶಪೂರ್ವಕವಾಗಿ ರೂಪಿಸಿದ ಅತಿ ಮಹತ್ವಪೂರ್ಣ ಅಂಶವು ಈ ಸೂಚನಾ ಪತ್ರದಲ್ಲಿ ಅಡಗಿದೆ. ಇದನ್ನು ಸುವರ್ಣ ಪ್ರಮಿತಿಯ ಪರಿತ್ಯಾಗ ಎಂಬುದಾಗಿ ಸರ್ ಎಡ್ವರ್ಡ್ ಲಾ ಅವರು ಅರ್ಥಮಾಡಿಕೊಂಡಿದ್ದರೆ ಪ್ರಾಯಶಃ ಅವರು ಸೂಚನಾ ಪತ್ರವನ್ನು ನಿರೂಪಿಸುತ್ತಿರಲಿಲ್ಲ. ಆದರೆ ಸುವರ್ಣ ಪ್ರಮಿತಿ ಹಾಗೂ ಚಿನ್ನದ ಕರೆನ್ಸಿ ನೀತಿಯನ್ನು ಬುಡಮೇಲು ಮಾಡುವುದಕ್ಕೆ ಮತ್ತು ಕರೆನ್ಸಿಯ ರೂಪಾಯಿ ಭಾಗಕ್ಕಿಂತ ಕರೆನ್ಸಿಯ ಚಿನ್ನದ ಭಾಗದ ಮೇಲೆ ಮಿತಿ ಹೇರುವುದಕ್ಕೆ ಈ ಸೂಚನಾ ಪತ್ರದಲ್ಲಿ ಪ್ರಸ್ತಾಪಿಸಲಾಗಿದ್ದ ಯಾವ ವಿಚಾರಗಳು ಅವರನ್ನು ಪ್ರೇರೇಪಿಸಿದವು? ಭಾರತ ಸರ್ಕಾರದ ದಿನಾಂಕ ಸೆಪ್ಟೆಂಬರ್ ೧೯೦೦ರ ೩೦೨ನೇ ಸಂಖ್ಯೆಯ ಪತ್ರದಲ್ಲಿ ಅವುಗಳ ವಿಚಾರಗಳು ಇವೆ. ಈ ಪತ್ರವು ಹೀಗೆ ಹೇಳುತ್ತದೆ:-

"೨..... ಕಳೆದ ಡಿಸೆಂಬರ್ ನಂತರ ಚಿನ್ನದ ಜಮಾ ಮುಂದುವರಿಯಿತು ಮತ್ತು ಹೆಚ್ಚಿತು. ಎಂಟು ತಿಂಗಳಿಗೂ ಹೆಚ್ಚಾಗಿ ಕರೆನ್ಸಿ ಕಾಪುನಿಧಿಯಲ್ಲಿ ಚಿನ್ನದ ದಾಸ್ತಾನು ಮಿತಿ ಮೀರಿದೆ ಮತ್ತ ಜೂನ್ ೧೮ರ ಪತ್ರದಲ್ಲಿ ಸೂಚಿಸಲಾದ ಮಿತಿಗಳಿಗಿಂತ ಬೆಳ್ಳಿಯು ಕಡಿಮೆಯಾಗುತ್ತಿದೆ. ಜನವರಿಯ ಮಧ್ಯಭಾಗದ ವೇಳೆಗೆ ಭಾರತದಲ್ಲಿನ ಕರೆನ್ಸಿ ಕಾಪುನಿಧಿಯಲ್ಲಿ ಚಿನ್ನದ ದಾಸ್ತಾನು ೫,೦೦೦,೦೦೦ ಪೌಂಡುಗಳಷ್ಟು ತಲುಪಿತು. ಆ ಪತ್ರದಲ್ಲಿ ಮಾಡಲಾದ ಪ್ರಸ್ತಾಪವನ್ನು ತತ್‌ಕ್ಷಣದಲ್ಲಿಯೇ ಆಚರಣೆಗೆ ತರಲಾಯಿತು; ಆನಂತರ ನಾವು ದೊಡ್ಡ ಜಿಲ್ಲಾ ಖಜಾನೆಗಳಿಗೆ ಸವರನ್ನುಗಳ ಸರಬರಾಜು ಮಾಡಿ ಬಾಕಿ ಪಾವತಿಗಳಿಗೆ ಅವುಗಳನ್ನು ಪಡೆಯಲಿಚ್ಛಿಸುವ ಯಾರಿಗೇ ಆಗಲಿ ಕೊಡಲು ಅಥವಾ ರೂಪಾಯಿಗಳಿಗೆ ವಿನಿಮಯ ಮಾಡಿಕೊಳ್ಳಲು

ಸೂಚನೆ ಕೊಟ್ಟೆವು. ಪ್ರೆಸಿಡೆನ್ಸಿ ನಗರಗಳು ಮತ್ತು ರಂಗೂನಿನಲ್ಲಿ ಮನಿ ಆರ್ಡರ್‌ಗಳ ಪಾವತಿಗಳನ್ನು ಸವರನ್ನುಗಳ ಮೂಲಕ ಮಾಡಲು ಮಾರ್ಚಿಯಲ್ಲಿ ನಾವು ಆದೇಶಿಸಿದೆವು ಮತ್ತು ಪ್ರೆಸಿಡೆನ್ಸಿ ನಗರಗಳು ಮತ್ತು ರಂಗೂನಿನಲ್ಲಿ ಸರ್ಕಾರದ ಲೆಕ್ಕದ ಮೇಲಿನ ಪಾವತಿಗಳನ್ನು ಆದಷ್ಟು ಮಟ್ಟಿಗೆ ಸವರನ್ನುಗಳ ಮೂಲಕ ಮಾಡಲು ಪ್ರೆಸಿಡೆನ್ಸಿ ಬ್ಯಾಂಕುಗಳಿಗೆ ನಾವು ವಿಜ್ಞಾಪಿಸಿಕೊಂಡೆವು. ಸದ್ಯದಲ್ಲೇ ನಮ್ಮಲ್ಲಿರುವ ಹೆಚ್ಚುವರಿ ಚಿನ್ನವನ್ನು ಬಿಡುಗಡೆ ಪಡೆಯಬೇಕೆಂಬ ಹೆಚ್ಚಿನ ನಿರೀಕ್ಷಣೆಯಿಂದಲ್ಲ, ಬದಲಿಗೆ ಜನರು ಚಿನ್ನದ ಉಪಯೋಗಕ್ಕೆ ಒಗ್ಗಿಕೊಳ್ಳುವರೆಂಬ ಆಸೆಯ ಮೇಲೆ ಈ ಕ್ರಮಗಳನ್ನು ಕೈಗೊಳ್ಳಲಾಯಿತು. ಈ ಕ್ರಮಗಳು ಚಿನ್ನವನ್ನು ಗಣನೀಯ ಪ್ರಮಾಣದಲ್ಲಿ ತ್ವರಿತವಾಗಿ ಸಾರ್ವತ್ರಿಕ ಚಲಾವಣೆಗೆ ತರಲು ಸಹಾಯಮಾಡುತ್ತವೆ. ಹೀಗೆ ಮಾಡುವುದರ ಮೂಲಕ ನಮ್ಮ ರೂಪಾಯಿಯ ದಾಸ್ತಾನಿನ ಬರಿದಾಗುವಿಕೆಯನ್ನು ಮತ್ತು ಬೃಹತ್ ಪ್ರಮಾಣದ ನಮ್ಮ ಚಿನ್ನದ ದಾಸ್ತಾನಿನಿಂದ ನಾವು ಅನುಭವಿಸುತ್ತಿದ್ದ ತೊಂದರೆಗಳನ್ನು ಮುಂಬರುವ ವರ್ಷಗಳಲ್ಲಿ ಕುಗ್ಗಿಸುತ್ತವೆಯೆಂದು ಈ ಕ್ರಮಗಳನ್ನು ತೆಗೆದುಕೊಳ್ಳಲಾಯಿತು.

"೩. ಈ ತೊಂದರೆಗಳನ್ನು ಸರಿದೂಗಿಸಲು ಮತ್ತು ಕರೆನ್ಸಿ ನೋಟುಗಳನ್ನು ಹಾಜರುಪಡಿಸುವವರಿಗೆ ಮತ್ತು ಚಿನ್ನವನ್ನು ಒಪ್ಪಿಸುವವರಿಗೆ ಪಾವತಿ ಮಾಡುವುದಕ್ಕೋಸ್ಕರ ಹೆಚ್ಚಿನ ನಾಣ್ಯಗಳನ್ನು ಟಂಕಿಸುವುದಕ್ಕೆ ನಾವು ಪ್ರಾರಂಭಿಸಿದೆವು....

* * *

"೧೪. ಪ್ಯಾರಾ ೨ರಲ್ಲಿ ವಿವರಿಸಲಾದ ಕ್ರಮಗಳ ಪರಿಣಾಮವನ್ನು ನಾವು ಎಚ್ಚರಿಕೆಯಿಂದ ಗಮನಿಸುತ್ತಿದ್ದೇವೆ ಎಂದು ಹೇಳಬಹುದು. ಚಿನ್ನದ ಚಲಾವಣೆಗಳು ಗಣನೀಯವಾಗಿವೆ; ಆದರೆ, ಕರೆನ್ಸಿ ಇಲಾಖೆ ಮತ್ತು ಪ್ರೆಸಿಡೆನ್ಸಿ ಬ್ಯಾಂಕುಗಳ ಮೂಲಕ ಬಹಳಷ್ಟು ಹಣವು ಹಿಂತಿರುಗಿ ಬಂದಿದೆ. ಅಲ್ಲಿಯವರೆಗೆ ಚಲಾವಣೆಗೆ ತರಲಾದ ಸುಮಾರು ೨ ದಶಲಕ್ಷ ರೂಪಾಯಿಗಳಲ್ಲಿ ಒಂದೂಕಾಲು ದಶಲಕ್ಷದಷ್ಟು ಮೊತ್ತವು ಜೂನ್ ಅಂತ್ಯಕ್ಕೆ ಚಲಾವಣೆಯಲ್ಲಿ ಉಳಿದಿತ್ತೆಂಬುದಾಗಿ ಕಂಟ್ರೋಲರ್ ಜನರಲ್ ಅಂದಾಜು ಮಾಡಿದ್ದಾರೆ. ಆದರೆ ಲೆಕ್ಕಾಚಾರದಲ್ಲಿ ಬಳಸಿರುವ ಅನೇಕ ಅಂಕಿಅಂಶಗಳು ಅನಿಶ್ಚಿತವಾಗಿವೆ. ಚಿನ್ನವನ್ನು ಹಣವನ್ನಾಗಿ ಸಾಕಷ್ಟು ಗಮನಾರ್ಹವಾಗಿ ಬಳಸಲಾಗುತ್ತಿದೆಯೆಂಬುದನ್ನು ಹೇಳಲು ಇನ್ನೂ ಸಾಧ್ಯವಿಲ್ಲ.

"೧೫. ಕರೆನ್ಸಿ ನೋಟುಗಳು ಮತ್ತು ಚಿನ್ನದ ಒಪ್ಪಿಸುವಿಕೆಯು ಸೂಚಿಸುವಂತೆ ರೂಪಾಯಿಗಿರುವ ಸಾರ್ವಜನಿಕ ಬೇಡಿಕೆಯನ್ನು ಪೂರೈಸಲು ಖಂಡಿತವಾಗಿಯೂ ನಮಗೆ ಸಾಮರ್ಥ್ಯವಿರಬೇಕಾದುದು ಅತ್ಯಂತ ಅಪೇಕ್ಷಣೀಯ. ಆದುದರಿಂದ (ರೂಪಾಯಿಗಳನ್ನು).......... ಇನ್ನೂ ಹೆಚ್ಚಾಗಿ ನಾಣ್ಯವನ್ನಾಗಿ ಮಾಡುವ ಮೇಲಿನ ಯೋಜನೆ ಮಂಜೂರುಮಾಡುವ ಔಚಿತ್ಯವನ್ನು ಪ್ರಭುಗಳ ಸನ್ನಿಧಾನದಲ್ಲಿ ನಾವು ಬಲವಾಗಿ ಅರಿಕೆ ಮಾಡಿಕೊಳ್ಳುತ್ತೇವೆ."

* * *

"೧೭. ಆದರೆ ನಮ್ಮ ಈ ಯೋಜನೆಯು ಈಗ ತಾನೇ ನಿರೂಪಿಸಿದಂತಹ ವಾದಗಳ ಮೇಲೆ ಅವಲಂಬಿಸಿದೆ ಎಂಬ ಅಂಶವನ್ನು ಪರಿಗಣಿಸಬೇಕೆಂದು ನಾವು ಅಪೇಕ್ಷಿಸುವುದಿಲ್ಲ. ಈ ಯೋಜನೆಯನ್ನು–ವಿಧಾಯಕವಾಗಿ ಬದ್ಧರಾಗಿಲ್ಲದಿದ್ದರೂ ಮತ್ತು ಬದ್ಧರಾಗುವ ಉದ್ದೇಶವಿಲ್ಲದಿದ್ದರೂ – ಆವಶ್ಯಕ ಕರ್ತವ್ಯವನ್ನು ಪೂರೈಸುವುದು ಅಗತ್ಯವೆಂದು ನಾವು ಪರಿಗಣಿಸುವುದರಿಂದ ಹೆಚ್ಚು ತೊಂದರೆಯಿಲ್ಲದೆ ಸಾಧ್ಯವಿದ್ದಷ್ಟೂ ದೂರದವರೆಗೆ ಕೈಗೊಳ್ಳುವುದು ಅಪೇಕ್ಷಣೀಯವೆಂದು ನಮಗೆ ತೋರುವುದರಿಂದ–ಮುಖ್ಯವಾಗಿ ಪ್ರಾಯೋಗಿಕ ಆಧಾರದ ಮೇಲೆ ಅದನ್ನು ಅಂದರೆ, ಚಿನ್ನ ಒಪ್ಪಿಸುವವರೆಲ್ಲರಿಗೂ ರೂಪಾಯಿಯನ್ನು ಮತ್ತು ಇತರ

ನೋಟುಗಳನ್ನು ಪಾವತಿ ಮಾಡುವವರಿಗೆ ಮತ್ತು ಸವರನ್ನಿಗೆ ಬದಲಾಗಿ ರೂಪಾಯಿಯನ್ನು ಇಷ್ಟಪಡುವವರಿಗೆ ರೂಪಾಯಿಯನ್ನು ಕರೆನ್ಸಿ ನೋಟುಗಳ ಮೂಲಕ ಪಾವತಿ ಮಾಡುವ ಯೋಜನೆಯನ್ನು ಸಮರ್ಥಿಸುತ್ತೇವೆ".

ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವ ವಿಷಯದ ನಿರೂಪಣೆಯಲ್ಲಿ ಮುಂದಿಟ್ಟ ವಾದಗಳು ವಿಲಕ್ಷಣದಿಂದ ಕೂಡಿವೆ. ಮೊದಲಿಗೆ ಸುವರ್ಣ ಪ್ರಮಿತಿ ಮತ್ತು ಚಿನ್ನದ ಕರೆನ್ಸಿಯನ್ನು ಸ್ಥಾಪಿಸಲು ಯೋಚಿಸುತ್ತಿದ್ದ ಸರ್ಕಾರವು ತನ್ನ ಧ್ಯೇಯದ ಶೀಘ್ರ ಈಡೇರಿಕೆಗೆ ತನ್ನ ಅದೃಷ್ಟವನ್ನು ಅಭಿನಂದಿಸಬೇಕಾಗಿರುವಾಗ, ಚಿನ್ನದ ಹೆಚ್ಚಳವನ್ನು ಕಂಡು ತೀವ್ರವಾಗಿ ಭಯಗೊಳ್ಳುತ್ತಿರುವುದು ಹಿಂದೆಂದೂ ಕೇಳದ ವಿಷಯವಾಗಿದೆ. ಈ ಪ್ರಶ್ನೆಯ ಮನೋವೈಜ್ಞಾನಿಕ ದೃಷ್ಟಿಯನ್ನು ಬದಿಗಿರಿಸಿ ಸರ್ಕಾರವು ತನ್ನದೇ ಹೇಳಿಕೆಯ ಮಾನಸಿಕ ಮುಖವನ್ನು ಬದಿಗಿರಿಸಿದರೆ ಸರ್ಕಾರವು ತನ್ನದೇ ಹೇಳಿಕೆಯ ಮೇರೆಗೆ ಎರಡು ಕಾರಣಗಳಿಂದಾಗಿ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಲು ತೀರ್ಮಾನಿಸಿತು. ೧) ಏಕೆಂದರೆ ಯಾವಾಗ ಕೇಳಿದರೂ ರೂಪಾಯಿ ಕೊಡುವುದು ತನ್ನ ಆವಶ್ಯಕ ಕರ್ತವ್ಯವೆಂದು ಸರ್ಕಾರವು ತಾನಾಗಿಯೇ ಭಾವಿಸಿತ್ತು. ಮತ್ತು ೨) ಜನರಿಗೆ ಚಿನ್ನವು ಬೇಕಾಗಿರಲಿಲ್ಲ. ಈ ವಾದಗಳಲ್ಲಿ ಯಾವುದರಲ್ಲಿ ಸತ್ವವಿದೆ? ಮೊದಲನೆಯ ವಾದವನ್ನು ಒಪ್ಪಿಕೊಂಡರೆ ಸರ್ಕಾರವು ರೂಪಾಯಿಯನ್ನು ಕೊಡಲು ತಾನಾಗಿಯೇ ತನ್ನ ಆವಶ್ಯಕ ಕರ್ತವ್ಯವೆಂದು ಭಾವಿಸಲೇಬೇಕಾದುದಕ್ಕೆ ಕಾರಣವನ್ನು ಅರ್ಥಮಾಡಿಕೊಳ್ಳುವುದು ಕಷ್ಟ. ದೇಶದ ಶಾಸನಬದ್ಧ ಹಣವನ್ನು ಪಾವತಿ ಮಾಡುವುದು ಸಾಲಗಾರನ ಹೊಣೆಯಾಗಿದೆ. ಚಿನ್ನವನ್ನು ಶಾಸನಬದ್ಧ ಹಣವನ್ನಾಗಿ ಮಾಡಲಾಗಿತ್ತು ಮತ್ತು ಯಾವ ಸಂಕೋಚವೂ ಇಲ್ಲದೆ ಸರ್ಕಾರವು ತನ್ನ ಹೊಣೆಯನ್ನು ನಿರ್ವಹಿಸಿಕೊಂಡು ಬರಬಹುದಾಗಿತ್ತು. ಎರಡನೆಯದಾಗಿ, ಜನರಿಗೆ ಚಿನ್ನ ಬೇಕಿಲ್ಲವೆಂಬುದಕ್ಕೆ ಆಧಾರವಾದರೂ ಏನು? ಸರ್ಕಾರದಿಂದ ಪಾವತಿಯಾದ ಚಿನ್ನವು ತನಗೇ ವಾಪಸಾಯಿತು ಎಂಬ ಸಂಗತಿಯೇ ಜನರಿಗೆ ಚಿನ್ನವು ಬೇಕಿರಲಿಲ್ಲ ಎಂಬುದಕ್ಕೆ ಸಮರ್ಪಕ ಸಾಕ್ಷ್ಯ ಎಂದು ಹೇಳಲಾಗಿದೆ. ಆದರೆ ಇದು ತಪ್ಪು. ಭಾರತದಂತಹ ದೇಶದಲ್ಲಿ ಜನರ ವೆಚ್ಚದಲ್ಲಿ ಸರ್ಕಾರದ ಬಾಕಿಗಳೇ ಒಂದು ದೊಡ್ಡ ಭಾಗವಾಗಿದೆ ಮತ್ತು ಆ ಬಾಕಿಗಳನ್ನು ಪಾವತಿ ಮಾಡಲು ಆ ಚಿನ್ನವನ್ನು ಬಳಸಿದರೆ–ಚಿನ್ನವನ್ನು ಕರೆನ್ಸಿಯಾಗಿ ಬಳಸಲು ಸಿದ್ಧವಾಗಿದ್ದರು ಎಂಬ ವಾದದ ಸಮರ್ಥನೆಗೆ ಅದು ಸಾಕ್ಷ್ಯವಾಗಿದೆ. ಆದರೆ ಜನರಿಗೆ ಚಿನ್ನವು ಬೇಕಿಲ್ಲ ಎಂಬುದು ನಿಜವಾದರೆ ಜನರು ಚಿನ್ನಕ್ಕೆ ಬೇಡಿಕೆಯನ್ನು ಪ್ರಕಟಿಸಿದಾಗ ಸರ್ಕಾರವು ಚಿನ್ನ ಕೊಡಲು ತಿರಸ್ಕರಿಸುವುದೆಂಬ ಸಂಗತಿಯೊಂದಿಗೆ ಅದು ಹೇಗೆ ಹೊಂದಿಕೊಳ್ಳುತ್ತದೆ? ಕಾಯಂ ತಿರಸ್ಕಾರವು ಕಾಯಂ ಬೇಡಿಕೆಯಿದೆ ಎಂಬುದನ್ನು ಸೂಚಿಸುವುದಿಲ್ಲವೇ? ಈ ಬಗೆಯ ತರ್ಕದಲ್ಲಿ ಸಮಂಜಸತೆಯಿಲ್ಲ. ಈ ಎಲ್ಲಾ ಗೊಂದಲದ ಸಮರ್ಥನೆಯು ಸತ್ಯವನ್ನು ಮರೆಮಾಡಲು ಬಳಸಲಾಗಿದೆ. ಸತ್ಯ ಯಾವುದೆಂದರೆ ಸರ್ಕಾರವು ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಲು ಕಾತುರತೆಯನ್ನು ಹೊಂದಿದ್ದುದಕ್ಕೆ ಜನರಿಗೆ ಚಿನ್ನ ಬೇಕಿಲ್ಲವೆಂಬುದು ಕಾರಣವಲ್ಲ, ಪ್ರತಿಯಾಗಿ ರೂಪಾಯಿಗಳ ಹೆಚ್ಚಿನ ನಾಣ್ಯೀಕರಣದಿಂದ ದೊರಕುವ ಲಾಭದಿಂದ ಚಿನ್ನದ ಕಾಪುನಿಧಿಯನ್ನು ನಿರ್ಮಿಸಲು ಸರ್ಕಾರವು ಕಾತುರವಾಗಿದ್ದಿತು ಎಂಬುದೇ ನಿಜವಾದ ಕಾರಣ. ಇದೇ ಅಂತರ್ಗತ ಪ್ರೇರಣೆಯಾಗಿತ್ತೆಂಬುದು ಸರ್ ಎಡ್ವರ್ಡ್ ಲಾ ಅವರ ಸೂಚನಾ ಪತ್ರದಿಂದ ವ್ಯಕ್ತವಾಗುತ್ತದೆ. ಜನರು ಚಿನ್ನವನ್ನು ಇಷ್ಟಪಡುತ್ತಿರಲಿಲ್ಲ ಎಂಬುದರ ಬಗ್ಗೆ ಮತ್ತು ಇನ್ನೂ ಹಾಗೆಯೇ ಅದೇ ರೀತಿಯ ವಾದವು ನಿಜವಾದ ಉದ್ದೇಶಕ್ಕೆ ಹಾಕಿದ್ದ. ಕೇವಲ ಒಂದು ಮುಸುಕು ಎಂಬುದು ವ್ಯಕ್ತ ಸೂಚನಾ ಪತ್ರದ ಒಂದು ಕಡೆ, ಅವರು ಕೆಳಕಂಡಂತೆ ಮಾಡಿರುವ ವಾದದಿಂದ ವ್ಯಕ್ತವಾಗುತ್ತದೆ.

"೧೬. ಈಗಾಗಲೇ ಹೂಡಿರುವ ೧೦ ಕೋಟಿ ರೂಪಾಯಿ ಜೊತೆಗೆ ಪ್ರಸಕ್ತ ಸನ್ನಿವೇಶದಲ್ಲಿ

೭,೦೦೦,೦೦೦ ಪೌಂಡಿನಷ್ಟು ಪರಮಾವಧಿ ಮೊತ್ತದ ಚಿನ್ನವನ್ನು ಕಾಪುನಿಧಿಯಲ್ಲಿ ಶೇಖರಿಸಿಡಬೇಕೆಂದು ಒಪ್ಪಿಕೊಂಡರೆ, ಕಾಪುನಿಧಿಯ ನಿರ್ವಹಣೆಯಿಂದ ಪಡೆಯಬಹುದಾದ ನೆರವು ಸ್ಥಿರವಿನಿಮಯದ ನಿರ್ವಹಣೆಗೆ ಸೂಕ್ತವೆಂದು ಪರಿಗಣಿಸುವ ಚಿನ್ನದ ಮೊತ್ತವನ್ನು ಒದಗಿಸುವುದರಲ್ಲಿ ವಿಫಲವಾಗುತ್ತದೆಯೆಂಬುದು ಸುಸ್ಪಷ್ಟವಾಗುತ್ತದೆ. ಈ ಉದ್ದೇಶಕ್ಕಾಗಿ, ತೃಪ್ತಿಕರವಾದ ನಿರ್ದಿಷ್ಟ ಮೊತ್ತವನ್ನು ಸೂಚಿಸುವುದಕ್ಕೆ ಇದುವರೆವಿಗೂ ಯಾವ ನಿಯೋಜಿತ ಅಧಿಕಾರವು ಮುಂದಾಗಿದ್ದಿಲ್ಲ. ಆದರೆ ಅತ್ಯಂತ ಗಣನೀಯ ಮೊತ್ತವು ಅಗತ್ಯವಾಗಿದೆಯೆಂಬ ಸಾಮಾನ್ಯ ಒಪ್ಪಿಗೆಯ ಅಭಿಪ್ರಾಯಕ್ಕೆ ಪೂರ್ಣವಾಗಿ ಸಮ್ಮತಿಸುತ್ತೇನೆ. ಅಷ್ಟು ದೊಡ್ಡ ಮೊತ್ತವನ್ನು ಪಡೆಯುವ ಅತ್ಯಂತ ಖಚಿತವಾದ ಮಾರ್ಗವೆಂದರೆ ಚಿನ್ನದ ಸಾಲಗಳೇ ಆಗಿವೆ. ಆದರೆ ಕರೆನ್ಸಿ ಕಮಿಷನ್ನಿನ ಅಭಿಪ್ರಾಯವು ಅಂತಹ ಮಾರ್ಗಕ್ಕೆ ತೀವ್ರವಾಗಿ ವಿರೋಧವಾಗಿದ್ದಿತು ಮತ್ತು ಆವಶ್ಯಕವಾದ ಚಿನ್ನದ ದಾಸ್ತಾನನ್ನು ಪಡೆಯುವ ಬಗೆ ಹೇಗೆ ಎಂಬ ಪ್ರಶ್ನೆಗೆ ಉತ್ತರ ಸಿಗದೆ ಹಾಗೆಯೇ ಉಳಿದಿದೆ".

"೧೭. ಈ ಕ್ಲಿಷ್ಟ ಸಮಸ್ಯೆಗೆ ಯಾವುದೇ ಖಚಿತವಾದ ಪರಿಹಾರ ನೀಡುವೆನೆಂದು ನಾನೆಣಿಸುವುದಿಲ್ಲ. ಒಂದು ಪಕ್ಷ ಅಳವಡಿಸಿಕೊಂಡರೆ ಈ ಕ್ಲಿಷ್ಟತೆಯನ್ನು ನಿವಾರಿಸುವುದರಲ್ಲಿ ಗಣನೀಯವಾಗಿ ಪರಿಣಾಮಕಾರಿಯಾಗ ಬಹುದೆಂದು ನಾನು ಭಾವಿಸಿರುವ ಕೆಲವು ಸಲಹೆಗಳನ್ನು ಕೊಡಲು ಪ್ರಯತ್ನಿಸುತ್ತೇನೆ. ವಿಶೇಷ ಚಿನ್ನ ವಿನಿಮಯ ನಿಧಿಯನ್ನು ಪ್ರತಿಷ್ಠಾಪಿಸಬೇಕೆಂಬುದೇ ನನ್ನ ಸೂಚನೆ. ಈ ನಿಧಿಯು ಕರೆನ್ಸಿ ಕಾಪುನಿಧಿಯ ಚಿನ್ನದ ಸಂಪನ್ಮೂಲದಿಂದ ಸ್ವತಂತ್ರವಾಗಿದೆ. ಆದರೆ ವಿನಿಮಯ ಉದ್ದೇಶಗಳಿಗಾಗಿ ವಿಶೇಷ ಸಂದರ್ಭಗಳಲ್ಲಿ ಈ ನಿಧಿಯನ್ನು ಕರೆನ್ಸಿ ಕಾಪುನಿಧಿಯ ಚಿನ್ನದ ಸಂಪನ್ಮೂಲದೊಡನೆ ಬಳಸಬಹುದು. ಕರೆನ್ಸಿ ಕಾಪುನಿಧಿಯಲ್ಲಿ ಶೇಖರಿಸಿಟ್ಟಿರುವ ೭,೦೦೦,೦೦೦ ಪೌಂಡುಗಳಿಗೂ ಮಿಗಿಲಾಗಿರುವ ಚಿನ್ನವನ್ನು ರೂಪಾಯಿಗಳಿಗಾಗಿ ಪರಿವರ್ತಿಸಿದಾಗ ದೊರಕುವ ಲಾಭವು ಈ ನಿಧಿಗೆ ಆಧಾರವಾಗಿದೆ."

ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದಕ್ಕೆ ನಿಜವಾದ ಕಾರಣ ಏನೆಂಬ ಬಗ್ಗೆ ಈಗ ಯಾವುದಾದರೂ ಸಂದೇಹವಿದೆಯೇ? ಜನರು ಚಿನ್ನವನ್ನು ಇಷ್ಟಪಡಲಿಲ್ಲವೆಂಬ ಕಾರಣದಿಂದಾಗಿ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಲಾಯಿತೆಂದು ಪ್ರಚಾರ ಮಾಡುವ ಲೇಖಕರು ಭಾರತದಲ್ಲಿರುವ ವಿನಿಮಯ ಪ್ರಮಿತಿಯ ಮೂಲ ಇತಿಹಾಸವನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆಂದು ಹೇಳಲಾಗುವುದಿಲ್ಲ.

ಆದರೆ ರೂಪಾಯಿಯನ್ನು ನಾಣ್ಯವನ್ನಾಗಿ ಮಾಡುವ ವಿನಾಶಕಾರಿ ನೀತಿಯ ಮೂಲಕ ಸ್ವಸ್ಥ ಕರೆನ್ಸಿ ಪದ್ಧತಿಯನ್ನು ಅಸ್ವಸ್ಥವನ್ನಾಗಿ ಮಾಡಿದ ಸರ್ ಎಡ್ವರ್ಡ್ ಲಾ ಅವರು ದುರ್ದೇವತೆಯೇ? ಇದು ಫೌಲರ್ ಸಮಿತಿಯ ಆದರ್ಶದಿಂದ ಪರಾಙ್ಮುಖತೆ ಎಂಬುದಾಗಿ ಸರ್ಕಾರದ ವಿರೋಧಿಗಳು ಹಾಗೂ ಬೆಂಬಲಿಗರೆಲ್ಲರೂ ಒಪ್ಪಿಕೊಂಡಿದ್ದಾರೆ.[೧] ಎಷ್ಟಾದರೂ, ಫೌಲರ್ ಸಮಿತಿಯ ಶಿಫಾರಸುಗಳಿಂದ ಯಾವ ಖಚಿತವಾದ ಅಂಶವನ್ನು ಕುರಿತು ಸರ್ಕಾರವು ದಾರಿ ತಪ್ಪಿದೆ ಎಂಬುದಕ್ಕೆ ಭಾರತದ ಕರೆನ್ಸಿ ವಿಷಯ ಕುರಿತ ಬರವಣಿಗೆಯಲ್ಲಿ ಎಲ್ಲಿಯೂ ಸ್ಪಷ್ಟವಾಗಿ ತಿಳಿಸಿದಂತೆ ಕಾಣುವುದಿಲ್ಲ. ಫೌಲರ್ ಸಮಿತಿಯ ಶಿಫಾರಸುಗಳು ಯಾವುವು? ಭಾರತ ಸರ್ಕಾರಕ್ಕೆ ಅವಮಾನವಾಗುವ ಹಾಗೆ ಫೌಲರ್ ಸಮಿತಿಯು ಹೇಳಿದ್ದುದನ್ನು ಹೀಗೆ ಸಾಮಾನ್ಯವಾಗಿ ತೋರಿಸಲಾಗಿದೆ (ಅದನ್ನು ಮತ್ತೆ ಹೇಳುವುದು ಯುಕ್ತವಾಗಿದೆ):–

"ಭಾರತದಲ್ಲಿ ಬ್ರಿಟಿಷರು ಸವರನ್ನನ್ನು ಶಾಸನಬದ್ಧ ಹಣವನ್ನಾಗಿ ಮಾಡುವುದಕ್ಕೆ ನಮ್ಮ ಬೆಂಬಲವಿದೆ.

---

೧. ಸರ್ಕಾರವು ಫೌಲರ್ ಸಮಿತಿಯ ಆದರ್ಶದಿಂದ ದಾರಿ ತಪ್ಪಿತು ಎಂಬುದಾಗಿ ಸಮಿತಿಯೂ ಹೇಳಿದೆ.

ಇದೇ ಸಂದರ್ಭದಲ್ಲಿ ಚಿನ್ನವನ್ನು ಅನಿಯತವಾಗಿ ನಾಣ್ಯವನ್ನಾಗಿ ಮಾಡುವುದಕ್ಕೆ ಭಾರತೀಯ ಟಂಕಸಾಲೆಗಳನ್ನು ತೆರೆದಿಡಲೇಬೇಕೆಂಬುದನ್ನು ನಾವು ಪರಿಗಣಿಸುತ್ತೇವೆ...... ಸುವರ್ಣ ಪ್ರಮಿತಿಯ ಫಲಕಾರಿ ಪ್ರತಿಷ್ಠಾಪನೆಗಾಗಿ ಮತ್ತು ಚಿನ್ನದ ಒಳಹರಿವು ಮತ್ತು ಹೊರಹರಿವು ನಿಯಮಗಳ ಆಧಾರಿತ ಕರೆನ್ಸಿಗಾಗಿ ನಿರೀಕ್ಷೆ ಇಟ್ಟುಕೊಂಡು, ಈ ಕ್ರಮಗಳನ್ನು ಅಳವಡಿಸಿಕೊಳ್ಳುವುದಕ್ಕೆ ನಾವು ಶಿಫಾರಸು ಮಾಡುತ್ತೇವೆ."

ಇದು ನಿಜ. ಆದರೆ ಯಾರು ಸರ್ಕಾರವನ್ನು ದೂಷಿಸಿದರೋ ಅವರು ಈ ಸಮಿತಿಯೂ ಕೂಡ ಹೀಗೆ ಶಿಫಾರಸು ಮಾಡಿತ್ತೆಂಬುದನ್ನು ಮರೆತಿದ್ದಾರೆ:–

"ಹೊಸ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವ ಏಕಸ್ವಾಮ್ಯವು ಸರ್ಕಾರದಲ್ಲಿಯೇ ನಿಹಿತವಾಗಿರಬೇಕು; ಮತ್ತು ಪ್ರಸಕ್ತ ರೂಪಾಯಿಯ ದಾಸ್ತಾನು ಸ್ವಲ್ಪ ಕಾಲದವರೆಗೆ ಸಾಕಾಗಬಹುದಾದರೂ ಆವಶ್ಯಕತೆ ಹುಟ್ಟಿದಾಗ ಬೆಳ್ಳಿ ಕರೆನ್ಸಿಗೆ ರೂಪಾಯಿಗಳನ್ನು ಕೂಡಿಸಲು ಅಂತಿಮವಾಗಿ ನಿಬಂಧನೆಗಳು ಬೇಕಾಗುತ್ತವೆ. ಚಿನ್ನಕ್ಕೆ ರೂಪಾಯಿಗಳನ್ನು ಕೊಡುವುದನ್ನು ಸರ್ಕಾರವು ಮುಂದುವರಿಸಿಕೊಂಡು ಬರಬೇಕು. ಆದರೆ ಕರೆನ್ಸಿಯಲ್ಲಿ ಚಿನ್ನದ ಪ್ರಮಾಣವು ಸಾರ್ವಜನಿಕರ ಆವಶ್ಯಕತೆಗಳನ್ನು ನಾಣ್ಯವನ್ನಾಗಿ ಮಾಡಕೂಡದು. ಈ ನಿಟ್ಟಿನಲ್ಲಿ ಬಂದ ಯಾವುದೇ ಲಾಭವನ್ನು ಭಾರತ ಸರ್ಕಾರದ ಆದಾಯಕ್ಕೆ ಜಮಾ ಮಾಡಬಾರದು ಅಥವಾ ಅದನ್ನು ಭಾರತ ಸರ್ಕಾರದ ಸಾಮಾನ್ಯ ಶಿಲ್ಕಿನ ಭಾಗವಾಗಿ ಶೇಖರಿಸಕೂಡದು ಎಂಬುದಾಗಿಯೂ ನಾವು ಶಿಪಾರಸು ಮಾಡಿದ್ದೇವೆ. ಆದರೆ ಈ ಲಾಭವನ್ನು ಕಾಗದ ಕರೆನ್ಸಿ ಕಾಪುನಿಧಿ ಮತ್ತು ಸಾಮಾನ್ಯ ಖಜಾನೆ ಶಿಲ್ಕುಗಳಿಂದ ಸಂಪೂರ್ಣವಾಗಿ, ಪ್ರತ್ಯೇಕವಾಗಿ, ವಿಶೇಷ ಕಾಪುನಿಧಿಯಂತೆ ಚಿನ್ನದಲ್ಲಿ ತೆಗೆದಿಡಬೇಕು. (ಮತ್ತು ಚಿನ್ನದ ಬಿಂದುವಿಗಿಂತ ವಿನಿಮಯ ಇಳಿಮುಖವಾದಾಗ ವಿದೇಶೀ ಪಾವತಿಗೆ ಸುಲಭವಾಗಿ ದೊರಕುವಂತೆ ವ್ಯವಸ್ಥೆ ಮಾಡಬೇಕು.)

ಸಮಿತಿಯ ಎರಡೂ ಶಿಫಾರಸುಗಳನ್ನು ಒಟ್ಟಾಗಿ ತೆಗೆದುಕೊಂಡರೆ ಇಲ್ಲಿ ಹಿಂಜರಿತ ಎಲ್ಲಿದೆ? ಸಮಿತಿಯು ಶಿಫಾರಸು ಮಾಡಿದ್ದನ್ನೇ ಖಚಿತವಾಗಿ ಸರ್ಕಾರವು ಮಾಡಿದೆ. ಫೌಲರ್ ಸಮಿತಿಯಿಂದ ಈ ಹಿಂಜರಿತ ಆಗಿತ್ತೆಂಬುದನ್ನು ಭಾರತ ಸರ್ಕಾರ ಅಥವಾ ಚೇಂಬರ್‌ಲಿನ್ ಸಮಿತಿಯು ಒಂದು ಕ್ಷಣ ಒಪ್ಪಿಕೊಂಡಿದೆ ಎಂಬುದು ವಿಲಕ್ಷಣವೇನೂ ಅಲ್ಲ. ಏಕೆಂದರೆ ಸರ್ ಎಡ್ವರ್ಡ್ ಲಾ ಅವರ ಸೂಚನಾ ಪತ್ರವನ್ನು ಸೆಕ್ರೆಟರಿ ಆಫ್ ಸ್ಟೇಟ್‌ಗೆ ಕಳುಹಿಸಿದಾಗ ಫೌಲರ್ ಸಮಿತಿಯ ಶಿಫಾರಸುಗಳನ್ನು ಸರ್ಕಾರವು ನಿಷ್ಠೆಯಿಂದ ಅನುಸರಿಸುತ್ತಿತ್ತೆಂಬ ಅಭಿಪ್ರಾಯವನ್ನು ತೋರಿಸುತ್ತದೆ. ಅದು ಹೀಗೆ ಮುಂದುವರಿಯುತ್ತದೆ:–

"೧೮೯೯ ಆಗಸ್ಟ್ ೨೪ರ ಸಂಖ್ಯೆ ೩೦೧ರ ನಮ್ಮ ಪತ್ರದಲ್ಲಿ, ಭಾರತದ ಕರೆನ್ಸಿ ಸಮಿತಿಯ (ಎಂದರೆ ಫೌಲರ್ ಸಮಿತಿಯ) ವರದಿಯ ೬೦ನೇ ಪ್ಯಾರಾಕ್ಕೆ ಸಂಬಂಧಿಸಿದಂತೆ ನಾವು ಹೀಗೆ ಬರೆದೆವು. ರೂಪಾಯಿಯನ್ನು ನಾಣ್ಯವನ್ನಾಗಿ ಮಾಡಿ ದೊರಕುವ ಯಾವುದೇ ಲಾಭವನ್ನು ವಿಶೇಷ ಕಾಪುನಿಧಿಯಾಗಿ ಚಿನ್ನದಲ್ಲಿಡಬೇಕೆಂಬುದು ನಮ್ಮ ಗಮನದಲ್ಲಿದೆ. ಆದರೆ ಹೆಚ್ಚಿನ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವ ಆವಶ್ಯಕತೆಯು ಸ್ವಲ್ಪ ಕಾಲದವರೆಗೆ ಸಂಭವನೀಯವಲ್ಲ ಮತ್ತು ಈ ಕುರಿತ ತೀರ್ಮಾನವನ್ನು ನಿಶ್ಚಿಂತೆಯಾಗಿ ಮುಂದೂಡಬಹುದು."

ಸಂದರ್ಭ ಒದಗಿದಾಗ ಸರ್ ಎಡ್ವರ್ಡ್ ಲಾ ಆ ಶಿಫಾರಸನ್ನು ಜಾರಿಗೆ ತಂದರು. ರೂಪಾಯಿಯನ್ನು ನಾಣ್ಯ ಮಾಡುವುದರ ಮೂಲಕ ಚಿನ್ನದ ಕರೆನ್ಸಿಯಿರುವ ಸುವರ್ಣ ಪ್ರಮಿತಿಯ ಸ್ಥಾಪನೆಯು ವಿಫಲವಾಗಿದೆಯೆನ್ನುವ ದೃಷ್ಟಿಯಿಂದ ಭಾರತ ಸರ್ಕಾರವನ್ನು ದೂಷಿಸುವುದು ನಿಷ್ಪ್ರಯೋಜಕ. ಆದರೆ ಸರ್ಕಾರವು ತನ್ನ ಅಜ್ಞಾನದಿಂದ ದೂಷಣೆಯನ್ನು ಹೊತ್ತುಕೊಂಡಿದ್ದರೂ, ಅದು ನೇರವಾಗಿ ಇದಕ್ಕೆ

ಬಾಧ್ಯವಾಗುವುದಿಲ್ಲ. ರೂಪಾಯಿಯನ್ನು ನಾಣ್ಯ ಮಾಡುವುದರಿಂದಾಗಿ ಯೋಜನೆಯು ವಿಫಲವಾಗಿದ್ದರೆ ಈ ಪ್ರಶ್ನೆಯನ್ನು ಫೌಲರ್ ಸಮಿತಿಗೆ ಒಪ್ಪಿಸಬೇಕು. ರೂಪಾಯಿಗಳನ್ನು ನಾಣ್ಯ ಮಾಡುವುದಕ್ಕೆ ಸಮಿತಿಯು ಏಕೆ ಅನುಮತಿ ಕೊಟ್ಟಿತು? ಇದಕ್ಕೆ ನೇರ ಉತ್ತರವಿಲ್ಲದಿದ್ದರೂ ಅದನ್ನು ಸುಲಭವಾಗಿಯೇ ಊಹಿಸಬಹುದು. ಭಾರತ ಸರ್ಕಾರದ ಅಪೇಕ್ಷೆಯಂತೆ ಸುವರ್ಣ ಪ್ರಮಿತಿ ಮತ್ತು ಚಿನ್ನದ ಕರೆನ್ಸಿ ಇರಬೇಕೆಂದು ಸಮಿತಿಯು ಮೊದಲಿಗೆ ತೀರ್ಮಾನಿಸಿತೆಂದು ತೋರುತ್ತದೆ. ಹಾಗಿರುವುದಾದರೆ, ರೂಪಾಯಿಯ ಚಿನ್ನದ ಮೌಲ್ಯವನ್ನು ರಕ್ಷಿಸುವುದಕ್ಕೋಸ್ಕರ ಸಾಕಷ್ಟು ಪೂರ್ವಸಿದ್ಧತೆಯನ್ನು ತಾವು ರೂಪಿಸಿದ ಆದರ್ಶದಲ್ಲಿದೆಯೇ ಎಂಬ ಪ್ರಶ್ನೆಯು ಅವರನ್ನು ಕಾಡಹತ್ತಿತೆಂದು ತೋರುತ್ತದೆ. ಭಾರತ ಸರ್ಕಾರದ ವಿರೋಧಿಗಳ ದೃಷ್ಟಿಯಿಂದ ಬ್ಯಾಂಕು ನೋಟಿನಂತೆ ರೂಪಾಯಿಯನ್ನು ಪರಿವರ್ತನೀಯವಾಗಿ ಅಥವಾ ಷಿಲಿಂಗ್‌ನಂತೆ ನಿಯತ ಶಾಸನಬದ್ಧ ಹಣವನ್ನಾಗಿ ಮಾಡಬೇಕಾಗಿದ್ದಿತು. ಸಮಿತಿಯು ಈ ಎರಡು ಬೇಡಿಕೆಗಳನ್ನು ಅನಾವಶ್ಯಕವೆಂದು ತಿರಸ್ಕರಿಸಿತು. ರೂಪಾಯಿಯ ಸ್ಥಾನಮಾನವನ್ನು ಷಿಲಿಂಗಿಗೆ ಇಳಿಸುವ ಪ್ರಸ್ತಾಪದ ತಿರಸ್ಕಾರಕ್ಕೆ ಕಾರಣ ಕೊಡುತ್ತಾ ಸಮಿತಿಯು ಹೀಗೆ ವಾದಿಸಿತು:–[೧]

"ಯುನೈಟೆಡ್ ಕಿಂಗ್‌ಡಂನಲ್ಲಿ ಬೆಳ್ಳಿಯ ಕರೆನ್ಸಿಯು ೪೦ ಷಿಲಿಂಗ್‌ಗಳ ನಿರ್ದಿಷ್ಟ ಮಿತಿಯನ್ನು ಹೊಂದಿದೆ. ಈ ಮಿತಿಯನ್ನು ಮೀರಿ ಸಾಲ ಮರುಪಾವತಿಗೆ ಅದನ್ನು ಬಳಸಲು ಸಾಧ್ಯವಿಲ್ಲ ಎಂಬುದು ನಿಜ..... ನಮ್ಮ ಬೆಳ್ಳಿ ನಾಣ್ಯ ಪದ್ಧತಿಯ ಪೂರಕ ಲಕ್ಷಣವನ್ನು ೪೦ ಷಿಲಿಂಗ್ ಮಿತಿಯು ಒತ್ತಿ ಹೇಳುತ್ತದೆ ಮತ್ತು ಉಳಿಸಿಕೊಂಡು ಬರುತ್ತಿದೆ ಎಂಬುದನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಆದರೂ ಆ ಸಾಂಕೇತಿಕ ನಾಣ್ಯಗಳ ಪ್ರಾತಿನಿಧಿಕ ಮುಖಬೆಲೆಯನ್ನು ಸಂರಕ್ಷಿಸಿಕೊಂಡು ಬರುವುದರಲ್ಲಿ ಅವುಗಳ ಒಟ್ಟು ಚಲಾವಣೆಗಿರುವ ಮಿತಿಯು ಮುಖ್ಯ ಅಂಶವಾಗಿದೆಯೇ ಹೊರತು ಯಾವುದೇ ಒಂದು ಪಾವತಿಯಲ್ಲಿ ಅವುಗಳನ್ನು ಶಾಸನಬದ್ಧ ಹಣವಾಗಿ ಬಳಸುವ ಮೊತ್ತಕ್ಕಿರುವ ವಿಧಾಯಕ ಮಿತಿಯಲ್ಲ. ಮೊದಲನೆಯ ನಿರ್ಬಂಧವು ಸಮರ್ಪಕವಾಗಿದ್ದರೆ ಸಾಂಕೇತಿಕ ನಾಣ್ಯಗಳನ್ನು ಶಾಸನಬದ್ಧ ಹಣವಾಗಿ ಬಳಸುವ ಮೊತ್ತಕ್ಕೆ ಯಾವುದೇ ಒಂದು ಮಿತಿಯು ಏಕೆ ಬೇಕು ಎನ್ನುವುದಕ್ಕೆ ಸಮಂಜಸ ಕಾರಣವಿಲ್ಲ."

ಪರಿವರ್ತನೆಯ ಆವಶ್ಯಕತೆ ಕುರಿತು ಸಮಿತಿಯು ಹೀಗೆ ಗಮನಿಸಿತು:–[೨]

'ಯುನೈಟೆಡ್ ಕಿಂಗ್‌ಡಂ ಹೊರಗೆ ಬೆಳ್ಳಿ ನಾಣ್ಯಗಳನ್ನು ಅಪರಿಮಿತ ಶಾಸನಬದ್ಧ ನಾಣ್ಯಗಳೆಂದು ಒಪ್ಪಿಕೊಳ್ಳುವ ಸುವರ್ಣ ಪ್ರಮಿತಿ ಮತ್ತು ಚಿನ್ನದ ಕರೆನ್ಸಿಯುಳ್ಳ ಎರಡು ರಾಷ್ಟ್ರಗಳ ದೃಷ್ಟಾಂತ ನಮ್ಮ ಮುಂದಿದೆ. ಇವೆಂದರೆ ಫ್ರಾನ್ಸ್ ಮತ್ತು ಅಮೇರಿಕ ಸಂಯುಕ್ತ ಸಂಸ್ಥಾನ. ಫ್ರಾನ್ಸಿನಲ್ಲಿ ಐದು ಫ್ರ್ಯಾಂಕ್ ನಾಣ್ಯವು ಅಪರಿಮಿತ ಶಾಸನಬದ್ಧ ಹಣವಾಗಿದೆ ಮತ್ತು ಎಲ್ಲಾ ಆಂತರಿಕ ವ್ಯವಹಾರಗಳಿಗೂ ಅದು ಚಿನ್ನಕ್ಕೆ ಸಮನಾಗಿದೆ. ಇದೇ ಹೇಳಿಕೆಯು ಅಮೇರಿಕ ಸಂಯುಕ್ತ ಸಂಸ್ಥಾನದಲ್ಲಿ ಬೆಳ್ಳಿ ಡಾಲರ್‌ಗೆ ಅನ್ವಯಿಸುತ್ತದೆ. ಫ್ರಾನ್ಸ್ ಮತ್ತು ಅಮೇರಿಕೆಯಲ್ಲಿ ಅಪರಿಮಿತ ಶಾಸನಬದ್ಧ ಬೆಳ್ಳಿ ನಾಣ್ಯಗಳ ನಾಣ್ಯೀಕರಣಕ್ಕೆ ಈಗ ಟಂಕಸಾಲೆಗಳನ್ನು ಮುಚ್ಚಲಾಗಿವೆ. ಯಾವ ರಾಷ್ಟ್ರದಲ್ಲೂ ಅಂತಹ ನಾಣ್ಯಗಳನ್ನು ವಿಧಾಯಕವಾಗಿ ಚಿನ್ನಕ್ಕೆ ಪರಿವರ್ತಿಸಲಾಗುವುದಿಲ್ಲ; ಈ ಎರಡೂ ರಾಷ್ಟ್ರಗಳಲ್ಲಿ ಒಂದೇ ರೀತಿಯಲ್ಲಿ ಎಲ್ಲಾ ಆಂತರಿಕ ಉದ್ದೇಶಗಳಿಗೆ ಅವು ಚಿನ್ನಕ್ಕೆ ಸಮವಾಗಿವೆ. ಅಂತರರಾಷ್ಟ್ರೀಯ ಪಾವತಿಗಳಿಗೆ, ಲೋಹ ಹಣಕ್ಕೆ ಸಂಬಂಧಿಸಿದ ಮಟ್ಟಿಗೆ, ಫ್ರಾನ್ಸ್ ಮತ್ತು ಅಮೇರಿಕ

---

೧. ರಿಪೋರ್ಟ್, ಪ್ಯಾರಾ ೫೬

೨. ರಿಪೋರ್ಟ್, ಪ್ಯಾರಾಗಳು ೫೭–೬೦

ಅಂತರರಾಷ್ಟ್ರೀಯ ವಿನಿಮಯ ಮಾಧ್ಯಮವಾದ ಚಿನ್ನವನ್ನು ಅಂತಿಮವಾಗಿ ಅವಲಂಬಿಸಿವೆ. ಕೊನೆಯ ಪ್ರಯತ್ನವಾಗಿ, ಅವರ ಚಿನ್ನವು ವಿದೇಶೀ ವಿನಿಮಯಗಳ ಮುಖಾಂತರ ಕಾರ್ಯ ನಡೆಸಿ ಅವರ ಇಡೀ ಕರೆನ್ಸಿ ಮೊತ್ತವನ್ನು ಆಂತರಿಕ ಉದ್ದೇಶಗಳಿಗಾಗಿ ಅದರ ಮುಖಬೆಲೆಗೆ ಸಂರಕ್ಷಿಸುತ್ತದೆ.'

"ಹಿಂದಿನ ಪ್ಯಾರಾದಲ್ಲಿ ವಿವರಿಸಿರುವಂತಹ ಕರೆನ್ಸಿ ಪ್ರಶ್ನೆಯ ಸ್ಥಿತಿಯು ಭಾರತದಲ್ಲಿದೆ. ಹೀಗಿರುವುದರಿಂದ ಫ್ರಾನ್ಸ್ ಮತ್ತು ಅಮೆರಿಕೆಯಲ್ಲಿ ಸಮರ್ಥನೆಯಾಗಿರುವಂಥ ನೀತಿಗೆ ಭಿನ್ನವಾಗಿರುವ ಅಂದರೆ ರೂಪಾಯಿಗೆ ಚಿನ್ನವನ್ನು ಕೊಡುವ ಅಥವಾ ಸಂಗ್ರಹಕಾರರ ಬೇಡಿಕೆಯ ಮೇರೆಗೆ ಚಿನ್ನವನ್ನು ರೂಪಾಯಿಗೆ ಬದಲಾಯಿಸುವ ವಿಧಾಯಕ ಹೊಣೆಯನ್ನು ಭಾರತ ಸರ್ಕಾರದ ಮೇಲೆ ವಿಧಿಸುವ ನೀತಿಯನ್ನು ಶಿಫಾರಸು ಮಾಡುವುದು ಅಗತ್ಯವೆಂದು ನಾವು ಪರಿಗಣಿಸುವುದಿಲ್ಲ. ಈ ಹೊಣೆಗಾರಿಕೆಯು ಮುಂಚಿತವಾಗಿಯೇ ನಿರ್ದಿಷ್ಟಪಡಿಸಲಾಗದ ಮೊತ್ತದಷ್ಟು ಚಿನ್ನವನ್ನು ತಕ್ಷಣವೇ ಸರಿಹೊಂದಿಸುವ ಹೊಣೆಯನ್ನು ಭಾರತ ಸರ್ಕಾರದ ಮೇಲೆ ವಿಧಿಸುವುದು ಮತ್ತು, ನಮ್ಮ ಅಭಿಪ್ರಾಯದಲ್ಲಿ, ಈ ಹೊಣೆಯನ್ನು ಒಪ್ಪಿಕೊಳ್ಳಲೇಬಾರದು."

ಸಮಿತಿಯು ತನ್ನ ಅಭಿಪ್ರಾಯಗಳ ಬಗ್ಗೆ ನಂಬಿಕೆಯನ್ನು ಹೊಂದಿದ್ದರೂ, ಅಧಿಕ ಪ್ರಮಾಣದ ರೂಪಾಯಿಯ ಚಲಾವಣೆಯಿಂದಾಗಿ ಉದ್ಭವವಾಗುವ ಸಂದೇಹಗಳನ್ನು ಹೊಂದಿರುವವರ ಅಭಿಪ್ರಾಯದಿಂದ ಅದು ಪ್ರಭಾವಿತಗೊಂಡಿತ್ತು. "ಭಾರತದ ಟಂಕಸಾಲೆಗಳನ್ನು ಕೇವಲ ಬೆಳ್ಳಿಗೆ ಮುಚ್ಚುವುದರ ಜೊತೆಯಲ್ಲಿಯೇ ಒಂದು ನಿರ್ದಿಷ್ಟ ದರದಲ್ಲಿ ರೂಪಾಯಿಯನ್ನು ಶಾಶ್ವತವಾಗಿ ಚಿನ್ನಕ್ಕೆ ವಿನಿಮಯ ಮಾಡಿಕೊಳ್ಳುವ ಹಾಗೆ ರೂಪಾಯಿ ಕರೆನ್ಸಿಯನ್ನು ಪರಿಮಿತಿಗೊಳಿಸುವುದು ಸಾಧ್ಯವೇ" ಎಂಬುದೇ ಈ ಸಂದೇಹವಾಗಿದೆ. ಎಷ್ಟರಮಟ್ಟಿಗೆ ಈ ಸಂದೇಹಗಳಿಂದ ಸಮಿತಿಯು ಸ್ಥೈರ್ಯಗೆಟ್ಟಿತೆಂದರೆ ಅದು ಹೀಗೆ ಒಪ್ಪಿಕೊಂಡಿದೆ.[೧]

"ರೂಪಾಯಿಯ ಚಿನ್ನದ ಮೌಲ್ಯವನ್ನು ಪ್ರಭಾವಿಸುವ ಶಕ್ತಿಗಳು ಸಂಕೀರ್ಣವಾಗಿವೆ ಮತ್ತು ಅವುಗಳ ಕಾರ್ಯವಿಧಾನದ ರೀತಿಯೂ ಅಸ್ಪಷ್ಟ. ಆದುದರಿಂದ, ಟಂಕಸಾಲೆಗಳನ್ನು ಬೆಳ್ಳಿಗೆ ಮುಚ್ಚುವುದರಿಂದ ಕಾರ್ಯಾಚರಣೆಯಲ್ಲಿ ಆ ಕ್ರಮವು ಒಂದು ನಿರ್ದಿಷ್ಟ ದರದಲ್ಲಿ ರೂಪಾಯಿಯನ್ನು ಚಿನ್ನಕ್ಕೆ ಶಾಶ್ವತವಾಗಿ ವಿನಿಮಯ ಮಾಡಿಕೊಳ್ಳುವಷ್ಟರಮಟ್ಟಿಗೆ, ರೂಪಾಯಿಯನ್ನು ಸಾಪೇಕ್ಷವಾಗಿ ಅದರ ಬೇಡಿಕೆಗೆ ಸಂಬಂಧಿಸಿದಂತೆ, ಮಿತಿಗೊಳಿಸಲು ಅವಕಾಶ ಮಾಡಿಕೊಡುತ್ತದೆ ಎಂದು ಹೇಳಲು ಅಸಮರ್ಥರಾಗಿದ್ದೇವೆ."

ಅಂತಹ ಆಕಸ್ಮಿಕ ಸಂದರ್ಭವನ್ನು ಎದುರಿಸುವುದಕ್ಕೆ ನಿವಾರಣೋಪಾಯವಾಗಿ, ರೂಪಾಯಿಯ ಮೌಲ್ಯವು ಲೋಹಬಿಂದುವಿಗಿಂತಲೂ ಕಡಿಮೆಯಾದಾಗ ವಿದೇಶೀ ಪಾವತಿಗಳಿಗೋಸ್ಕರ ರೂಪಾಯಿಯನ್ನು ಚಿನ್ನಕ್ಕೆ ಪರಿವರ್ತಿಸುವ ಹೊಣೆಗಾರಿಕೆಯನ್ನು ಭಾರತ ಸರ್ಕಾರವು ವಹಿಸಿಕೊಳ್ಳಬೇಕೆಂದು ಸಮಿತಿಯು ಯೋಚಿಸಿತು. ಅಂಥ ಸರಳ ಪರಿಹಾರವನ್ನು ಕಂಡುಕೊಂಡ ಮೇಲೆ, ಸರ್ಕಾರವು ತನ್ನ ಚಿನ್ನದ ಕಾಪುನಿಧಿಯನ್ನು ತನ್ನ ಉದ್ದೇಶಗಳಿಗೋಸ್ಕರ ಪಡೆಯುವುದಕ್ಕೆ ಸಾಲವು ಒಂದು ಮಾರ್ಗವಾಗಿದ್ದಿತು. ಆದರೆ ಸಮಿತಿಗೆ ಆ ಯೋಜನೆಯು ಏಕೋ ರುಚಿಸಲಿಲ್ಲ. ಪ್ರಾಯಶಃ ಸಮಿತಿಯು, ವರದಿಯ[೨] ಮತ್ತೊಂದು ಭಾಗದಲ್ಲಿ "ತನ್ನ ಅಧೀನದಲ್ಲಿರುವ ಸಂಪನ್ಮೂಲಗಳನ್ನು ನಿರ್ವಹಿಸುವುದಕ್ಕೆ, ದೃಢಸಂಕಲ್ಪದ ಮಿತವ್ಯಯವನ್ನು ಚಲಾಯಿಸುವುದಕ್ಕೆ ಮತ್ತು ಅವರ ಚಿನ್ನದ ಹೊಣೆಯ ಬೆಳವಣಿಗೆಯನ್ನು ಮಿತಿಗೊಳಿಸುವುದಕ್ಕೆ" ಸರ್ಕಾರಕ್ಕೆ ಎಚ್ಚರಿಕೆ ಕೊಟ್ಟಿತ್ತು ಅಥವಾ "ಸುವರ್ಣ ಪ್ರಮಿತಿಯನ್ನು ಸ್ಥಾಪಿಸುವುದಕ್ಕೋಸ್ಕರ ಅಥವಾ ನಡೆಸಿಕೊಂಡು ಬರುವುದಕ್ಕೋಸ್ಕರ

---

೧. ರಿಪೋರ್ಟ್, ಪ್ಯಾರಾ ೫೮.

೧. ರಿಪೋರ್ಟ್, ಪ್ಯಾರಾ ೭೦

ಸಾಲ ತೆಗೆಯುವುದು ದೋಷಪೂರ್ಣ ನಿಯಮವೆಂಬುದಾಗಿ"[೧] ಸಮಿತಿಯು ಭಾವಿಸಿತ್ತು. ಚಿನ್ನದ ಸಾಲದ ಪ್ರಸ್ತಾಪಕ್ಕೆ ಸಮಿತಿಯು ವಿರುದ್ಧವಾಗಿತ್ತು. ಆದರೆ ಚಿನ್ನದ ಕಾಪುನಿಧಿಯನ್ನು ಸಾಲದ ಮೂಲಕ ಸೃಷ್ಟಿಸಬಾರದಾಗಿದ್ದರೆ ಅದನ್ನು ಸೃಷ್ಟಿಸುವ ಬಗೆ ಹೇಗೆ? ಕಾಪುನಿಧಿಯನ್ನು ಬದಲಿ ಮಾರ್ಗದ ಮೂಲಕ ನಿರ್ಮಿಸುವ ಸಮಸ್ಯೆಯಿಂದ ಸಾಕಷ್ಟು ಬಾಧಿತಗೊಂಡಂತೆ ತೋರುತ್ತದೆ. ಆಗ ಸಮಿತಿಯ ಸದಸ್ಯರೊಬ್ಬರು, ಪ್ರಾಯಶಃ ಅವರ ಬುದ್ಧಿಶಕ್ತಿ ದುರ್ಬಲವಾಗಿದ್ದ ಒಂದು ಕ್ಷಣದಲ್ಲಿ, "ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದಕ್ಕೆ ಸರ್ಕಾರಗಳಿಗೆ ಅವಕಾಶ ಕೊಡಬಾರದೇಕೆ?" ಎಂಬ ಪ್ರಸ್ತಾಪ ಎತ್ತಿದರು. "ಒಂದು ಪಕ್ಷ ಆ ಕ್ರಮಕ್ಕೆ ಅವಕಾಶ ಕೊಟ್ಟಲ್ಲಿ ಸಾಲ ತೆಗೆಯದೆಯೇ ಚಿನ್ನದ ಕಾಪುನಿಧಿಯನ್ನು ಅದು ಸುಲಭವಾಗಿ ಸೃಷ್ಟಿಸಬಹುದು ಮತ್ತು ಆಗ ವಿದೇಶೀ ಪಾವತಿಗಳಿಗೆ ಪರಿವರ್ತನೆಯ ಹೊಣೆಗಾರಿಕೆಯನ್ನು ನೆರವೇರಿಸಿಕೊಡಬಹುದು". ಈ ಪ್ರಸ್ತಾಪವು ಎಷ್ಟರಮಟ್ಟಿಗೆ ಅಪಾಯರಹಿತವೆಂದು ಕಂಡುಬಂದಿತೆಂದರೆ, ಒಂದು ಸಮಾಧಾನಕರ ನಿಟ್ಟುಸಿರೊಡನೆ ಸಮಿತಿಯು ತನ್ನ ವರದಿಯಲ್ಲಿ ಅದನ್ನು ಸ್ವೀಕರಿಸಿ ಅಳವಡಿಸಿಕೊಂಡಿತು ಎಂಬುದು ಸಮಿತಿಯು ಬಳಸಿರುವ ದೃಢವಾದ ಭಾಷೆಯಲ್ಲಿ ಸ್ಪಷ್ಟವಾಗಿ ನಿರೂಪಿತವಾಗಿರುವುದು ಗೊತ್ತಾಗುತ್ತದೆ.

ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದಕ್ಕೆ ಸರ್ಕಾರಕ್ಕೆ ಅನುಮತಿ ಕೊಡುವುದರಲ್ಲಿ ಸಮಿತಿಯು ಬಳಸಿದ ಆಲೋಚನಾವೈಖರಿಗೆ ಮೇಲಿನ ವಿವರಣೆಯು ಸರಿಯಾದ ಅರ್ಥವಿವರಣೆಯಾಗಿರಬಹುದು ಅಥವಾ ಇಲ್ಲದಿರಬಹುದು. ಆದರೆ ಆ ಶಿಫಾರಸಿನಲ್ಲಿ ಒಳಗೊಂಡಿದ್ದುದೇನೆಂಬುದನ್ನು ಸಮಿತಿಯು ಗ್ರಹಿಸಲಿಲ್ಲ ಎಂಬ ಸಂಗತಿಯು ಹಾಗೆಯೇ ಉಳಿಯುತ್ತದೆ. ಮೊದಲನೆಯದಾಗಿ, ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದು ಮುಂದುವರಿದ ಪಕ್ಷದಲ್ಲಿ ಸುವರ್ಣ ಪ್ರಮಿತಿ ಮತ್ತು ಕರೆನ್ಸಿಗೆ ಏನಾಗುತ್ತಿತ್ತು? ಈ ಬಗ್ಗೆ, ಬ್ಯಾಂಕ್ ಆಫ್ ಇಂಗ್ಲೆಂಡಿನ ಡೈರೆಕ್ಟರುಗಳಿಗೆ ಸಹಾನುಭೂತಿಯನ್ನು ತೋರುತ್ತಾ ಮರುಗಿ ಬೇಗ್ ಹ್ಯಾಟ್ ಅವರು ೧೮೯೯ರ ಮಾರ್ಚ್ ೨೫ರಲ್ಲಿ ಅಂಗೀಕರಿಸಿದ ದುರದೃಷ್ಟಕರ ನಿರ್ಣಯಕ್ಕಿಂತಲೂ ಸುವರ್ಣ ಪ್ರಮಿತಿ ಮತ್ತು ಕರೆನ್ಸಿಯ ಆದರ್ಶವನ್ನು ಒಂದು ಕಡೆ ನಿರೂಪಿಸಿದ ಮತ್ತು ಮತ್ತೊಂದು ಕಡೆ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದಕ್ಕೆ ಅನುಮತಿ ಕೊಟ್ಟ ಸಮಿತಿಗೆ ಹೆಚ್ಚು ಮಾನ್ಯತೆಯನ್ನು ಕೊಡಲು ಸಾಧ್ಯವೇ? ಬೇಗ್ ಹ್ಯಾಟ್ ಅವರ ನಿರ್ಣಯ ಹೀಗಿದೆ :–

"ವಿನಿಮಯಗಳಲ್ಲಿ ಅನುಕೂಲಕರವಾದ ಬದಲಾವಣೆಗಳನ್ನು ತರಲು ಮತ್ತು ಆ ಮೂಲಕ ಅಮೂಲ್ಯ ಲೋಹಗಳ ಒಳಹರಿವಿಗಾಗಿ ಬ್ಯಾಂಕ್ ಆಫ್ ಇಂಗ್ಲೆಂಡ್ ತನ್ನ ಚಲಾವಣೆಗಳನ್ನು ಕುಗ್ಗಿಸಲೇಬೇಕು ಎಂದು ಪ್ರಬಲವಾಗಿ ಒತ್ತಾಯಿಸುವ ಕೆಲವರ ಅಭಿಪ್ರಾಯಕ್ಕೆ ಕೋರ್ಟು ಲಕ್ಷ್ಯ ನೀಡದಿರಲು ಸಾಧ್ಯವಿಲ್ಲ; ಅಂಥ ಭಾವನೆಗೆ ಭದ್ರ ಬುನಾದಿ ಯಾವುದೆಂಬುದನ್ನು ಕಂಡು ಹಿಡಿಯಲು ತನಗೆ ಸಾಧ್ಯವಿಲ್ಲ ಎಂಬುದನ್ನು ಘೋಷಿಸುವುದು ತನ್ನ ಕರ್ತವ್ಯ ಎಂಬುದಾಗಿ ಕೋರ್ಟು ಭಾವಿಸುತ್ತದೆ". ಡೈರೆಕ್ಟರುಗಳ ಅಭಿಪ್ರಾಯಗಳು ಅವರ ಅಸಂಬದ್ಧತೆಗೆ ಮಾದರಿಯಾದರೆ ಫೌಲರ್ ಸಮಿತಿಯ ಅಭಿಪ್ರಾಯಗಳೇನು ಅವುಗಳಿಗಿಂತ ಕಡಿಮೆಯೇ? ಅವುಗಳ ನಡುವೆ ವ್ಯತ್ಯಾಸವೇನಾದರೂ ಇದೆಯೇ? ಫೌಲರ್ ಸಮಿತಿಯ ಶಿಫಾರಸುಗಳಿಗಿಂತ ಬೇರೆಯಾಗಿರದ ಈ ನಿರ್ಣಯದಲ್ಲಿ ಅಡಕವಾಗಿರುವ ಭಾವನೆಗಳನ್ನು ಟೀಕಿಸುತ್ತಾ ಬ್ಯಾಂಕ್ ಡೈರೆಕ್ಟರುಗಳನ್ನು ಅವರ ಅಸಂಬದ್ಧತೆಯನ್ನು ಮನ್ನಿಸಬೇಕಾದ ಕ್ಷಮಾರ್ಹ ಸಂದರ್ಭಗಳನ್ನು ಬೇಗ್‌ಹ್ಯಾಟ್ ಒತ್ತಿ ಹೇಳಿದ್ದಾರೆ.

---

೧. ನೋಡಿ, ದಿ ರಿಸರ್ವೇಷನ್ಸ್ ಟು ದಿ ರಿಪೋರ್ಟ್ ಬೈ ಕ್ಯಾಂಪ್‌ಬೆಲ್ ಹಾಲೆಂಡ್ ಅಂಡ್ ಮ್ಯೂರ್, ರಿಪೋರ್ಟ್ ಪು. ೨೭

ಆರ್ಥಿಕ ವೈಚಾರಿಕತೆಯ ಗೊಂದಲದ ಯುಗದಲ್ಲಿ ಡೈರೆಕ್ಟರುಗಳು ಬದುಕುತ್ತಿದ್ದರು; ಕಾಗದ ಹಣದಿಂದ ಸಂಪೂರ್ಣವಾಗಿ ತೃಪ್ತರಾಗಿದ್ದ ಅವರು ಚಿನ್ನದ ಒಳಹರಿವಿಗೋಸ್ಕರ ಕಾತುರರಾಗಿರಲಿಲ್ಲ. ಈ ಯಾವುದೇ ಸಂದರ್ಭಗಳು ಫೌಲರ್ ಸಮಿತಿಯ ಅಸಂಬದ್ಧತೆಯನ್ನು ಕ್ಷಮಿಸಲಾರವು. ಬ್ಯಾಂಕಿನ ಡೈರೆಕ್ಟರುಗಳು ಯಾವುದನ್ನು ಸಿದ್ಧಸೂತ್ರವೆಂದು ಭಾವಿಸಿದ್ದರೋ ಅದಕ್ಕೆ ವಿರುದ್ಧವಾದ ಕಾಲದಲ್ಲಿ ಅವರು ತಮ್ಮ ಶಿಫಾರಸುಗಳನ್ನು ರೂಪಿಸಿದ್ದರು. ಜೊತೆಗೆ, ಭಾರತದ ಕರೆನ್ಸಿಯಲ್ಲಿ ಚಿನ್ನದ ಒಳಹರಿವಿನ ಬಗ್ಗೆ ಅವರು ಕಾತುರರಾಗಿರಲಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಪ್ರತಿಯಾಗಿ ಅವರು ನಿರೀಕ್ಷಿಸುತ್ತಿದ್ದುದೂ ಅದನ್ನೇ. ಪರಿಣಾಮವಾಗಿ ಅವರು ತಮ್ಮ ಅಭಿಪ್ರಾಯಗಳನ್ನು ಜಾಗರೂಕವಾಗಿ ತೂಗಿ ನೋಡಬೇಕಾಗಿತ್ತು ಮತ್ತು ತಮ್ಮ ಮುಖ್ಯ ಉದ್ದೇಶಕ್ಕೆ ಅಸಂಗತವಾದುದನ್ನು ತಿರಸ್ಕರಿಸಬೇಕಾಗಿದ್ದಿತು. ಗ್ರೇಹಮನ ನಿಯಮವೆಂದು ಹೆಸರಾಗಿರುವ ಮೂಲಭೂತ ತತ್ವಕ್ಕೆ ಸಾಕಷ್ಟು ಗಮನ ಕೊಡದಿದ್ದುದರಿಂದ ಸಮಿತಿಯ ಸ್ಥಿತಿ ಹಾಸ್ಯಾಸ್ಪದವಾಯಿತಲ್ಲದೆ ಅದರ ವರದಿಯ ಮೊದಲ ಭಾಗದಲ್ಲಿ ನಿರೂಪಿಸಲಾಗಿದ್ದ ಮುಖ್ಯ ಧ್ಯೇಯವನ್ನು ನಿಷ್ಫಲಗೊಳಿಸಿತು.

ಎರಡನೆಯದಾಗಿ, ರೂಪಾಯಿಯನ್ನು ನಾಣ್ಯವನ್ನಾಗಿ ಮಾಡುವ ಅಧಿಕಾರವನ್ನು ಸರ್ಕಾರಕ್ಕೆ ಕೊಡುವುದು ಆವಶ್ಯಕವಾಗಿತ್ತೇ? ಸಮಿತಿಯು ತೀರ್ಮಾನಿಸಬೇಕೆಂದು ಕೇಳಿಕೊಳ್ಳಲಾದ ಸಮಸ್ಯೆಯ ಸ್ವರೂಪವೇನು ? ಅದನ್ನು ನಾವು ಮತ್ತೊಮ್ಮೆ ಗಮನಿಸೋಣ. ೧೮೯೩ರಲ್ಲಿ ಭಾರತ ಸರ್ಕಾರದ ಪ್ರಸ್ತಾಪಗಳನ್ನು ಮಾರ್ಪಾಟು ಮಾಡುವ ಮೂಲಕ ಹರ್ಷೆಲ್ ಸಮಿತಿಯು[೧] ಒಂದು ಕಟ್ಟುಪಾಡನ್ನು ಜಾರಿಗೆ ತಂದಿತ್ತು. ಇದರ ಪ್ರಕಾರ, ಸಾರ್ವಜನಿಕರಿಗಾಗಿ ಟಂಕಸಾಲೆಗಳನ್ನು ಮುಚ್ಚಿದ್ದರೂ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಲು ಸರ್ಕಾರಕ್ಕಾಗಿ ಟಂಕಸಾಲೆಗಳು ತೆರೆದಿದ್ದವು. ಪ್ರಾಸಂಗಿಕವಾಗಿ ಹೇಳಬೇಕೆಂದರೆ, ತೀವ್ರ ಸಮೀಕ್ಷೆಯ ಕೊನೆಗೆ ತಾನು ವಿಚಾರಣೆ ನಡೆಸಿದ ಹಣದ ಪದ್ಧತಿಗಳಲ್ಲಿ ಅಲ್ಪಸ್ವಲ್ಪ ಚಿನ್ನವಿದ್ದರೂ ಅಥವಾ ಚಿನ್ನ ಇಲ್ಲದಿದ್ದರೂ ಚಿನ್ನದೊಂದಿಗೆ ಕರೆನ್ಸಿ ಸಮತೆಯನ್ನು ಏಕೆ ರಕ್ಷಿಸಲಾಯಿತೆಂಬ ರಹಸ್ಯದ ಬಗ್ಗೆ ಸಮಿತಿಗೆ ಅರಿವೇ ಇರಲಿಲ್ಲ. ಚಲಾವಣೆಯ ಮಿತಿಯೇ ಈ ಸಮತೆಯನ್ನು ಸಂರಕ್ಷಿಸುತ್ತಿತ್ತು ಎಂಬುದನ್ನು ಸಮಿತಿಯು ತಿಳಿದಿದ್ದರೆ ಮೇಲೆ ಹೇಳಿದ ಕಟ್ಟುಪಾಡನ್ನು ಅದು ತರುತ್ತಲೇ ಇರಲಿಲ್ಲ. ಈ ಕಟ್ಟುಪಾಡು ಎಷ್ಟೇ ವಿನಾಶಕಾರಿಯಾಗಿದ್ದರೂ ಸಮಿತಿಯನ್ನು ಅದರ ಅನೌಚಿತ್ಯಕ್ಕಾಗಿ ಕ್ಷಮಿಸಲೇಬೇಕು. ಏಕೆಂದರೆ ಟಂಕಸಾಲೆಯ ಮುಚ್ಚುವಿಕೆಯಿಂದ ಹಠಾತ್ತಾಗಿ ಕರೆನ್ಸಿ ಕುಗ್ಗುವಿಕೆಯುಂಟಾಗಬಹುದೆಂದು ಸಮಿತಿಯು ಹೆದರಿತ್ತು ಮತ್ತು ಚಿನ್ನವನ್ನು ಸಾಮಾನ್ಯ ಶಾಸನಬದ್ಧ ಹಣವನ್ನಾಗಿ ಮಾಡಿಲ್ಲದಿದ್ದುದರಿಂದ ಕರೆನ್ಸಿಯನ್ನು ಆವಶ್ಯಕ ಪ್ರಮಾಣದಲ್ಲಿ ಹೆಚ್ಚಿಸುವುದಕ್ಕೆ ಏರ್ಪಾಡು ಮಾಡಬೇಕಾಗಿದ್ದಿತು. ಸರ್ಕಾರವು ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದರ ಮೂಲಕ ಈ ಏರ್ಪಾಟನ್ನು ಅತ್ಯುತ್ತಮವಾಗಿ ನಿರ್ವಹಿಸಲು ಸಾಧ್ಯವಾಗುತ್ತದೆ ಎಂದು ಸಮಿತಿಯು ಭಾವಿಸಿತು. ಅದೃಷ್ಟವಶಾತ್, ಸ್ವಲ್ಪ ಕಾಲದವರೆಗೆ, ಅಂದರೆ ೧೮೯೮ರವರೆಗೆ ಕರೆನ್ಸಿಯನ್ನು ಅಧಿಕಗೊಳಿಸುವ ಸಂದರ್ಭವು ಸರ್ಕಾರಕ್ಕೆ ಬರಲಿಲ್ಲ ಮತ್ತು ಆ ಅಧಿಕಾರವನ್ನು ಚಲಾಯಿಸುವ ಪ್ರಮೇಯವೇ ಇರಲಿಲ್ಲ. ಆದರೆ ಅಂತಹ ಸಂದರ್ಭ ಹುಟ್ಟಿಕೊಂಡಾಗ ಸರ್ಕಾರವು ಮುಂಚೆಯೇ ತಿಳಿಸಿದಂತೆ, ತನ್ನ ಅಧಿಕಾರವನ್ನು ಚಲಾಯಿಸಲಿಲ್ಲ. ಅಷ್ಟೇ ಅಲ್ಲ, ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದಕ್ಕೆ ಬದಲಾಗಿ ಚಿನ್ನದ ಒಳಹರಿವಿನ ಮೂಲಕ ಭಾರತದ ಕರೆನ್ಸಿಯನ್ನು ಹೆಚ್ಚಿಸಬೇಕೆಂಬ ಅಭಿಪ್ರಾಯಕ್ಕೆ ಸರ್ಕಾರವು ಅಂಟಿಕೊಂಡಿತು. ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದನ್ನು ಕೈಗೊಳ್ಳುವುದರ ಮೂಲಕ ಆವಶ್ಯಕವಾದ ಹೆಚ್ಚಳವನ್ನು ನಿರ್ಮಿಸುವುದು ಸುರಕ್ಷಿತ ಮತ್ತು ಮಿತವ್ಯಯಕಾರಿ ಎಂಬ ದೃಷ್ಟಿಯಿಂದ

೧. ನೋಡಿ. ಅಧ್ಯಾಯ IV, ಮೇಲೆ ಹೇಳಿದ್ದೇ, ಪು. ೪೭೧

ಸರ್ಕಾರವನ್ನು ಒತ್ತಾಯಿಸಲು ವಾದ ಮಾಡಿದ ಲಿಂಡ್ಸೆಯವರ ಬಗ್ಗೆ ಸರ್ಕಾರವು ಕಟ್ಟಾ ವಿರೋಧವನ್ನು ಹೊಂದಿತ್ತು. ಇಂಥ ಹೆಚ್ಚಳವನ್ನು ಸೃಷ್ಟಿಸಲು ಒಂದು ಕಡೆ ಚಿನ್ನದ ನಾಣ್ಯಗಳನ್ನು ಮಾಡಬೇಕೆಂಬ ಅಪೇಕ್ಷೆ ಹೊಂದಿದ್ದ ಸರ್ಕಾರಕ್ಕೂ, ಮತ್ತೊಂದು ಕಡೆ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಬೇಕೆಂಬ ಲಿಂಡ್ಸೆಯವರಿಗೂ ನಡುವೆ ಉದ್ಭವಿಸಿದ ವಿವಾದಕ್ಕೆ ತೀರ್ಪು ನೀಡಲು ಫೌಲರ್ ಸಮಿತಿಯನ್ನು ಕೇಳಿಕೊಳ್ಳಲಾಯಿತು. ಚಿನ್ನದ ಒಳ ಹರಿವಿಗೆ ಬದಲಾಗಿ ಹೆಚ್ಚು ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದರ ಮೂಲಕ ಕರೆನ್ಸಿಯನ್ನು ಹೆಚ್ಚಿಸಲು ಸರ್ಕಾರವು ಕಾತರವಾಗಿದ್ದರೆ ಫೌಲರ್ ಸಮಿತಿಯನ್ನು ನೇಮಕ ಮಾಡುವ ಆವಶ್ಯಕತೆಯೇ ಇರಲಿಲ್ಲ. ಅಂಥ ಅಧಿಕಾರವನ್ನು ಹರ್ಷಲ್ ಸಮಿತಿಯು ಸರ್ಕಾರಕ್ಕೆ ಆಗಲೇ ಕೊಟ್ಟಿತ್ತು. ಆ ಹಾನಿಕರ ಅಧಿಕಾರವನ್ನು ಚಲಾಯಿಸಲು ಸರ್ಕಾರಕ್ಕೆ ಒಲವಿಲ್ಲದ್ದರಿಂದ ಹೊಸ ಸಮಿತಿಗೆ ಈ ಕುರಿತು ಮನವಿ ಮಾಡಿಕೊಳ್ಳುವುದು ಆವಶ್ಯಕವಾಯಿತು. ಹಣದ ಕೊರತೆಯನ್ನು ನೀಗಲು ಕರೆನ್ಸಿಯನ್ನು ಉತ್ತಮವಾಗಿ ಎಷ್ಟು  ವಿಸ್ತರಿಸಬಹುದೆಂಬ ಸದ್ಯದ ಸಮಸ್ಯೆಗೆ ಪರಿಹಾರೋಪಾಯವಾಗಿ ಚಿನ್ನವನ್ನು ಶಾಸನಬದ್ಧ ಹಣವನ್ನಾಗಿ ಮಾಡಬೇಕೆಂದು ಸಮಿತಿಯು ತನ್ನ ವರದಿಯ ಒಂದು ಭಾಗದಲ್ಲಿ ವಿಧಿಸಿತು. ಪರಿಣಾಮವಾಗಿ, ರೂಪಾಯಿಯನ್ನು ಪಡೆಯಲಾಗದ ಸಾಲಗಾರನು ತನ್ನ ಸಾಲಿಗನಿಗೆ ಚಿನ್ನದ ಮೂಲಕ ಪಾವತಿ ಮಾಡುವ ಆಯ್ಕೆಯನ್ನು ಹೊಂದಲು ಸಾಧ್ಯವಾಯಿತು. ಚಿನ್ನವು ಸಾಮಾನ್ಯ ಮಾಧ್ಯಮವಾಗಿರಲು ಅವಕಾಶವಿದ್ದರೆ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವ ಪ್ರಸ್ತಾಪವು ಅನಗತ್ಯವಾಗಿತ್ತಲ್ಲವೆ?

ಮೂರನೆಯದಾಗಿ, ಚಿನ್ನದ ಕಾಪುನಿಧಿಯನ್ನು ನಿರ್ಮಿಸುವ ಸಾಧನವಾಗಿ ರೂಪಾಯಿಗಳನ್ನು ನಾಣ್ಯಮಾಡುವ ಪ್ರಸ್ತಾಪವನ್ನು ರೂಪಾಯಿಯ ಮೌಲ್ಯ ಸಂರಕ್ಷಿಸುವ ಲೆಕ್ಕಾಚಾರದಿಂದ ಸಮರ್ಥಿಸಿಕೊಳ್ಳಲು ಸಾಧ್ಯವೇ? ರೂಪಾಯಿಯ ಮೌಲ್ಯವನ್ನು ಸಂರಕ್ಷಿಸುವುದಕ್ಕೆ ಅದರ ಚಲಾವಣೆಯನ್ನು ಮಿತಿಗೊಳಿಸುವುದು ಒಂದು ಪ್ರಮುಖ ಅಂಶವಾಗಿದೆ. ಷಿಲಿಂಗಿನ ಮೌಲ್ಯವನ್ನು ಅದರ ಚಲಾವಣೆಯ ಮಿತಿಯ ಫಲವಾಗಿ ಸಂರಕ್ಷಿಸಲಾಗುತ್ತಿದೆಯೆಂಬುದನ್ನು ವಿದ್ಯುತ್‌ಪೂರ್ಣವಾಗಿ ಈ ಸಮಿತಿಯು ಚರ್ಚಿಸಿತು. ಆದರೆ, ಷಿಲಿಂಗಿನ ಪ್ರಮಾಣವನ್ನು ಹೇಗೆ ಮಿತಿಗೊಳಿಸಿ ನಡೆಸಿಕೊಂಡು ಬರಲಾಯಿತೆಂಬುದನ್ನು ಅದು ಅರ್ಥ ಮಾಡಿಕೊಂಡಿದ್ದಿತೇ? ಶಾಸನಬದ್ಧ ಹಣವಾಗಿರುವುದಕ್ಕೆ ಮಿತಿಯಿಲ್ಲ, ಆದರೆ ಅದರ ಒಟ್ಟು ಗಾತ್ರದ ಮೇಲಿನ ಮಿತಿಯಿಂದಾಗಿ ಷಿಲಿಂಗಿನ ಮೌಲ್ಯವನ್ನು ಸಂರಕ್ಷಿಸಲಾಯಿತೆಂಬುದು ನಿಜವಾದರೆ ಷಿಲಿಂಗನ್ನು ಅನಿಯತ ಪ್ರಮಾಣದಲ್ಲಿ ಚಲಾವಣೆಗೆ ತರುತ್ತಿಲ್ಲ ಎಂದು ಅರ್ಥವಾಗುವುದಿಲ್ಲವೆ? ರೂಪಾಯಿಯ ತಯಾರಿಕೆಯಷ್ಟೇ ಷಿಲಿಂಗಿನ ತಯಾರಿಕೆಯೂ ಲಾಭದಾಯಕವಾಗಿದೆ. ಬ್ರಿಟಿಷ್ ಸರ್ಕಾರವು ಷಿಲಿಂಗನ್ನು ನಾಣ್ಯವನ್ನಾಗಿ ಏಕೆ ಮಾಡುತ್ತಿಲ್ಲ? ಇದಕ್ಕೆ ಒಂದೇ ಕಾರಣವೆಂದರೆ, ಷಿಲಿಂಗುಗಳನ್ನು ಅನಿಯತ ಪ್ರಮಾಣದಲ್ಲಿ ಪಾವತಿ ಮಾಡಲು ಸಾಧ್ಯವಿಲ್ಲ. ಸರ್ಕಾರವು ತನ್ನ ರಾಜ್ಯಕೋಶಾಧ್ಯಕ್ಷನಿಗೆ, ಮಂತ್ರಿಗಳಿಗೆ ಮತ್ತು ಅಧಿಕಾರಿ ಹಾಗೂ ನೌಕರ ವರ್ಗಕ್ಕೆ ಪಾವತಿ ಮಾಡಬಹುದಾದರೆ ಮತ್ತು ಅವರು ಪುನಃ ವ್ಯಾಪಾರಿಗಳಿಗೆ, ಹಾಲು ಮಾರುವವರಿಗೆ, ಮದ್ಯ ತಯಾರಿಸುವವರಿಗೆ ಮತ್ತು ಕಸಾಯಿ ವ್ಯಾಪಾರಿಗಳಿಗೆ ಷಿಲಿಂಗುಗಳಲ್ಲೇ ಪಾವತಿ ಮಾಡಬಹುದಾದರೆ ಷಿಲಿಂಗುಗಳ ಅತಿ ಚಲಾವಣೆಯನ್ನು ತಡೆಹಿಡಿಯಲು ಯಾವುದೇ ಮಾರ್ಗವಿಲ್ಲ. ಆದರೆ ಅನಿಯತ ಪ್ರಮಾಣದಲ್ಲಿ ಷಿಲಿಂಗುಗಳ ಮೂಲಕ ಪಾವತಿ ಮಾಡಲು ಸಾಧ್ಯವಿರುವ ಕಾರಣದಿಂದಾಗಿಯೇ ಯಾರೊಬ್ಬರೂ ಅವುಗಳನ್ನು ಅನಿಯತ ಪ್ರಮಾಣದಲ್ಲಿ ಹೊಂದಿರಲು ಸಾಧ್ಯವಿಲ್ಲ. ಸಗಟು ಮಾರುಕಟ್ಟೆಯು ಇಲ್ಲದಿರುವುದರಿಂದ ಅಂದರೆ ಶಾಸನಬದ್ಧ ಹಣಕ್ಕೆ ಮಿತಿಯಿರುವುದರಿಂದ, ಸರ್ಕಾರವು ಷಿಲಿಂಗುಗಳ ಅನಿಯತ ಚಲಾವಣೆಯಲ್ಲಿ

ತೊಡಗುವುದನ್ನು ಪ್ರತಿಬಂಧಿಸುತ್ತದೆ. ಆದುದರಿಂದ, ಶಾಸನಬದ್ಧ ಹಣದ ಮೇಲಿನ ಮಿತಿಯು ಷಿಲಿಂಗಿನ ಮೌಲ್ಯವನ್ನು ಸಂರಕ್ಷಿಸುವುದರಲ್ಲಿ ಯಾವ ಸಂಬಂಧವನ್ನೂ ಹೊಂದಿಲ್ಲವೆಂದು ಹೇಳುವಲ್ಲಿ ಸಮಿತಿಯು ತಪ್ಪು ಮಾಡಿದೆ. ಪ್ರತಿಯಾಗಿ, ಸಂಕೇತ ನಾಣ್ಯದ ಮೌಲ್ಯವನ್ನು ರಕ್ಷಿಸುವುದರಲ್ಲಿ ಚಲಾವಣೆಯ ಮಿತಿ ಒಂದು ಮುಖ್ಯ ಷರತ್ತಾಗಿದ್ದರೆ ಆ ಮಿತಿಯನ್ನು ಪರಿಣಾಮಕಾರಿಯಾಗಿ ಮಾಡುವ ಸಲುವಾಗಿ ನಾಣ್ಯವನ್ನು ಶಾಸನಬದ್ಧವಾಗಿ ಬಳಸುವುದರ ಮೇಲೆ ಮಿತಿಯನ್ನು ವಿಧಿಸುವುದು ಒಂದು ಮಾರ್ಗವಾಗಿದೆ.

ಪರಿವರ್ತನೆಯನ್ನು ಕುರಿತಂತೆ ಸಮಿತಿಯ ಅಭಿಪ್ರಾಯಗಳನ್ನು ತೆಗೆದುಕೊಂಡರೆ ಅದರ ಆಲೋಚನಾ ಕ್ರಮವು ತೀರಾ ಗೊಂದಲಮಯವಾಗಿದ್ದಿತು. ಫ್ರಾನ್ಸ್ ಮತ್ತು ಅಮೆರಿಕೆಗಳಿಗೆ ಯಾವುದು ಯೋಗ್ಯವೋ ಅದು ಭಾರತಕ್ಕೂ ಯೋಗ್ಯವಾಗಿರಲೇಬೇಕೆಂದು ಹೇಳಿದರೆ ಅದು ಒಬ್ಬ ಕುರುಡ ಮತ್ತೊಬ್ಬ ಕುರುಡನಿಗೆ ದಾರಿ ತೋರಿದಂತಾಗುತ್ತದೆ. "ವಿದೇಶಿ ವಿನಿಮಯಗಳ ಮೂಲಕ ಕಾರ್ಯ ನಡೆಸುವುದರಿಂದ ಅವರ ಕರೆನ್ಸಿಯ ಇಡೀ ಮೊತ್ತವನ್ನು ಅದರ ಮುಖಬೆಲೆಗೆ ಆಂತರಿಕ ಉದ್ದೇಶಗಳಿಗೋಸ್ಕರ ಸಂರಕ್ಷಿಸುವುದು ಅವರ ಚಿನ್ನವೇ ಹೊರತು ಕರೆನ್ಸಿಯ ಪರಿವರ್ತನೆಯಲ್ಲ" ಎಂದು ವಾದಿಸುವುದು ತಪ್ಪಾಗಿದ್ದಿತು.

ಇದಕ್ಕೆ ತೀರಾ ವಿರುದ್ಧವಾಗಿ, ಫ್ರಾನ್ಸ್ ಮತ್ತು ಅಮೆರಿಕೆ ದೇಶಗಳು ತಮ್ಮ ಕರೆನ್ಸಿಯನ್ನು ರಕ್ಷಿಸಲು ಪರಿವರ್ತನೆಯ ಅಗತ್ಯವನ್ನು ಹೊಂದಿರಲಿಲ್ಲ. ಏಕೆಂದರೆ, ಬೆಳ್ಳಿ ಫ್ರ್ಯಾಂಕ್ ಮತ್ತು ಬೆಳ್ಳಿ ಡಾಲರು ನಿರಪೇಕ್ಷವಾಗಿ ಮಿತ ಪ್ರಮಾಣದಲ್ಲಿದ್ದುವು. ವಾಸ್ತವವಾಗಿ, ಚಿನ್ನದ ಒಳಹರಿವಿನ ಮೂಲಕ ರಕ್ಷಿಸಲ್ಪಡುವುದಕ್ಕೆ ಬದಲಾಗಿ, ಎಲ್ಲಿಯವರೆಗೆ ಅತಿ ಚಲಾವಣೆಯನ್ನು ಹತೋಟಿಯಲ್ಲಿಡುವ ಇತರೆ ಮಾರ್ಗಗಳು ಇರುವುವೋ ಅಲ್ಲಿಯವರೆಗೂ ಶಾಸನಬದ್ಧ ಮಿತಿಯನ್ನು ಅಥವಾ ಪರಿವರ್ತನೆಯನ್ನು ರೂಪಾಯಿಗೆ ಸಂಬಂಧಿಸಿದಂತೆ ವಿಧಿಸುವ ಅಗತ್ಯವಿರಲಿಲ್ಲ ಎಂಬುದನ್ನು ಸಮಿತಿಯು ಒತ್ತಾಯಿಸಬೇಕಾಗಿದ್ದಿತು. ಶಾಸನಬದ್ಧ ಹಣದ ಮಿತಿ ಅಥವಾ ಪರಿವರ್ತನೆಯು ಅತ್ಯಾವಶ್ಯಕವೆಂದು ಹೇಳಬಹುದು. ಏಕೆಂದರೆ, ಅವುಗಳು ಮಾತ್ರ ಚಲಾವಣೆಯ ಮಿತಿಯನ್ನು ತರುವ ಸಾಧನಗಳಾಗಿವೆ ಮತ್ತು ಇತರೆ ಮಾರ್ಗಗಳ ಮೂಲಕ ಚಲಾವಣೆಯ ಅಗತ್ಯ ಮಿತಿಯನ್ನು ಒದಗಿಸಿದರೆ ಯಾವ ಉದ್ದೇಶಕ್ಕಾಗಿ ಪರಿವರ್ತನೆ ಅಥವಾ ಶಾಸನಬದ್ಧ ಹಣದ ಮಿತಿಯನ್ನು ಕೋರಿದ್ದೇವೊ ಅದನ್ನು ಸಾಧಿಸಿದಂತಾಗುತ್ತದೆ. ಈಗ ರೂಪಾಯಿಯ ಗಾತ್ರದ ಮಿತಿಗೆ ಟಂಕಸಾಲೆಗಳ ಮುಚ್ಚುವಿಕೆಯೇ ಸಾಲದೇ? ವಾಸ್ತವವಾಗಿ, ರೂಪಾಯಿಯ ಚಲಾವಣೆಯ ಮಿತಿಗೆ ಟಂಕಸಾಲೆಯ ಮುಚ್ಚುವಿಕೆಯು ಪರಿಣಾಮಕಾರಿಯಲ್ಲದಿದ್ದರೆ ಮತ್ತೆ ಯಾವುದು ಪರಿಣಾಮಕಾರಿಯಾಗಲು ಸಾಧ್ಯ ?

ಕಾಗದ ಕರೆನ್ಸಿಗಳನ್ನು ನಿಯಂತ್ರಣದ ವಿಷಯಕ್ಕೆ ಸಂಬಂಧಿಸಿದ ಪ್ರಖ್ಯಾತ ನಿರ್ದಿಷ್ಟ ಚಲಾವಣಾ ಪದ್ಧತಿಯ ಸೂತ್ರದಂತೆಯೇ ಟಂಕಸಾಲೆಯ ಮುಚ್ಚುವಿಕೆಯೂ ಕೂಡ ಕರೆನ್ಸಿಯನ್ನು ನಿಯಂತ್ರಿಸುವುದಲ್ಲವೇ? ಅದು ಹಾಗೆಯೇ ಇದ್ದಿತು ಎಂಬುದನ್ನು ತಿರಸ್ಕರಿಸಲು ಸಾಧ್ಯವಿಲ್ಲ. ಹಾಗಿದ್ದ ಪಕ್ಷದಲ್ಲಿ ದೇಶದ ಆಂತರಿಕ ಚಲಾವಣೆಗಾಗಿ ಯಾವಾಗಲೂ ಅತ್ಯಾವಶ್ಯಕವಾದ ಶಾಸನಬದ್ಧ ಹಣದ ಕನಿಷ್ಠ ಮೊತ್ತಕ್ಕಿಂತಲೂ ಈಗಾಗಲೇ ಚಲಾವಣೆಯಲ್ಲಿರುವ ರೂಪಾಯಿಯ ಮೊತ್ತವು ವಿಶಿಷ್ಟವಾಗಿ ಕಡಿಮೆಯಾಗಿದ್ದಿತೇ ಎಂಬುದು ಮಾತ್ರ ಪ್ರಶ್ನೆಯಾಗಿದ್ದಿತು. ಅಂಥ ಕನಿಷ್ಠ ಮೊತ್ತಕ್ಕಿಂತ ಚಲಾವಣೆಯಲ್ಲಿರುವ ರೂಪಾಯಿಯ ಗಾತ್ರವು ಅಧಿಕವಾಗಿದ್ದಿತೆಂಬುದನ್ನು ಸರ್ಕಾರವು ನಿರೀಕ್ಷಿಸುತ್ತಿದ್ದಿತು ಮತ್ತು ಅದಕ್ಕೆ ಅನುಸಾರವಾಗಿ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡಿತ್ತು. ೧೮೯೮ರ ಮಾರ್ಚ್ ೩ರ ಪತ್ರದಲ್ಲಿ ತನ್ನ ಯೋಜನೆಗಳ ರೂಪುರೇಷೆಯನ್ನು ಕೊಡುತ್ತಾ ಸರ್ಕಾರವು ಹೀಗೆ ಅಭಿಪ್ರಾಯಪಟ್ಟಿತು.

“೯....... ಈ ವಿಫಲತೆಗೆ (ರೂಪಾಯಿಯ ವಿನಿಮಯ ಮೌಲ್ಯವನ್ನು ಸಂರಕ್ಷಿಸುವುದು) ಮುಖ್ಯ ಕಾರಣಗಳಲ್ಲಿ ಒಂದನ್ನು ಈಗ ನಾವು ತಿಳಿದಿದ್ದೇವೆ. ಅದು ಯಾವುದೆಂದರೆ, ವ್ಯಾಪಾರದ ಎಲ್ಲಾ ಬೇಡಿಕೆಗಳನ್ನು ಪೂರ್ತಿಯಾಗಿ ಮತ್ತು ಅದಕ್ಕಿಂತಲೂ ಹೆಚ್ಚಾಗಿ ನಮ್ಮ ರೂಪಾಯಿಯ ಚಲಾವಣೆಯನ್ನು ಟಂಕಸಾಲೆಗಳನ್ನು ಮುಚ್ಚುವುದಕ್ಕೆ ಮುಂಚೆಯೇ ಏರಿಸಲಾಗಿತ್ತು. ಮತ್ತು ಅದರಿಂದಾಗಿ ಚಿನ್ನದ ರೂಪದಲ್ಲಿ ಇನ್ನೂ ಹೆಚ್ಚು ರೂಪಾಯಿಯನ್ನು ಚಲಾವಣೆಗೆ ತರುವುದಕ್ಕೆ ಅವಕಾಶ ಕೊಡಲಿಲ್ಲ. ಎರಡು ರಾಷ್ಟ್ರಗಳ ನಡುವಿನ ನಿರ್ದಿಷ್ಟ ವಿನಿಮಯ ದರದ ಪ್ರಮುಖ ಷರತ್ತು ಯಾವುದೆಂದರೆ ಯಾವಾಗ ಒಂದು ರಾಷ್ಟ್ರದ ಕರೆನ್ಸಿಯು ಮತ್ತೊಂದಕ್ಕೆ ಹೋಲಿಸಿದರೆ ಸಮೃದ್ಧವಾಗುವುದೋ ಆ ಸಮೃದ್ಧಿಯನ್ನು ಸ್ವಲ್ಪ ಕಾಲದವರೆಗೆ ಹೆಚ್ಚಳ ನಾಣ್ಯಗಳನ್ನು ವಾಪಸು ಪಡೆಯುವುದರ ಮೂಲಕ ನಿವಾರಿಸಬಹುದು. ನಮ್ಮ ಚಲಾವಣೆಯ ಮಾಧ್ಯಮದಲ್ಲಿ..... ದೇಶದ ಹೊರಗೆ ಸರಿಸಮವಾದ ಮೌಲ್ಯವನ್ನು ಹೊಂದಿರದ ಬೆಳ್ಳಿಯ ನಾಣ್ಯಗಳನ್ನು ಪೂರ್ಣವಾಗಿ ಹೊಂದಿಲ್ಲದಿರುವಾಗ, ಆದರೆ ಬೇರೆಯ ಕಡೆ ಚಿನ್ನವನ್ನು ನಾಣ್ಯವನ್ನಾಗಿ ಬಳಸುವ ಸಾಮರ್ಥ್ಯವಿರುವ ಅಂಶವನ್ನು ಒಳಗೊಂಡಿದ್ದರೆ ಮತ್ತು ಅದು ಸ್ವಾಭಾವಿಕವಾಗಿ ಅಗತ್ಯವಿರುವ ಕಡೆಗೆ ಪ್ರವಹಿಸುವಂತಿದ್ದರೆ ಮಾತ್ರ ಈ ಪರಿಸ್ಥಿತಿಯನ್ನು ತಲುಪಲು ನಾವು ಇಚ್ಚೆಪಡುತ್ತೇವೆ. ಸದ್ಯದಲ್ಲಿ ನಮ್ಮ ಒಟ್ಟು ಕರೆನ್ಸಿಯು ಸುಮಾರು ೧೨೦ ಕೋಟಿ ರೂಪಾಯಿಗಳಷ್ಟು ಎಂದು ಅಂದಾಜು ಮಾಡಲಾಗಿದೆ. ಇದಕ್ಕೆ ವಿಶ್ವಾಸಾರ್ಹ ಚಲಾವಣೆಯ ೧೦ ಕೋಟಿಗಳ ಕರೆನ್ಸಿ ನೋಟುಗಳನ್ನು ಕೂಡಿಸಬೇಕಾಗುತ್ತದೆ.

“೧೦..... ಯಾವ ಮೊತ್ತದಷ್ಟು ರೂಪಾಯಿಯ ಚಲಾವಣೆಯನ್ನು ಅದರ ಸಮೃದ್ಧಿಯನ್ನು ನಿವಾರಿಸುವ ಸಲುವಾಗಿ ಕಡಿಮೆ ಮಾಡಬೇಕು ಎಂಬುದನ್ನು ನಿಷ್ಕೃಷ್ಟವಾಗಿ ಹೇಳಲು ಸಾಧ್ಯವಿಲ್ಲ ಮತ್ತು ಅದನ್ನು ವಾಸ್ತವ ಅನುಭವದ ಮೂಲಕ ಮಾತ್ರ ತಿಳಿದುಕೊಳ್ಳಬಹುದು....... ಆ ಮೊತ್ತವು ಸ್ಪಷ್ಟವಾಗಿ ನಿರ್ವಹಿಸಬಲ್ಲ ಮಿತಿಯೊಳಗೆ ಇದೆಯೆಂಬುದನ್ನು ಕೆಲವು ಎಣಿಕೆಗಳು ಸೂಚಿಸುತ್ತವೆ. ಉದಾಹರಣೆಗೆ, ನಮ್ಮ ಖಜಾನೆಗಳು ಹೊಂದಿರುವ ಮೊತ್ತಗಳನ್ನು ತೆಗೆದುಕೊಂಡರೆ ಚಲಾವಣೆಯಲ್ಲಿ ಹೆಚ್ಚು ಕಡಿಮೆ ೨೪ ಕೋಟಿ ಕರೆನ್ಸಿ ನೋಟುಗಳು ಚಲಾವಣೆಯಲ್ಲಿವೆ. ಕರೆನ್ಸಿ ನೋಟುಗಳ ರೂಪದಲ್ಲಿ ಪ್ರಸಕ್ತ ಚಲಾವಣೆಯಲ್ಲಿರುವ ಆ ಮೊತ್ತವನ್ನು ಹಠಾತ್ತಾಗಿ ಚಿನ್ನದ ರೂಪದಲ್ಲಿ ೧೬,೦೦೦,೦೦೦ ಪೌಂಡುಗಳಾಗಿ ಪರಿವರ್ತಿಸಲಾಗಿದೆಯೆಂದು ನಾವು ಕಲ್ಪಿಸಿಕೊಂಡರೆ, ಆ ಮೊತ್ತದ ಕೊನೆಯ ಪಕ್ಷ ಒಂದು ಭಾಗವನ್ನು ವಾಸ್ತವವಾಗಿ ಚಲಾವಣೆಯಲ್ಲಿಟ್ಟುಕೊಳ್ಳದೆ ಭಾರತೀಯ ವ್ಯಾಪಾರವನ್ನು ಮುಂದುವರಿಸಿಕೊಂಡು ಬರಲು ಸಾಧ್ಯವಾಗುವುದಿಲ್ಲವೆಂದು ತೋರುತ್ತದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ರಫ್ತು ಹೊಳೆಯನ್ನು ತಡೆಯುವ ಬಿಂದುವಿಗೆ ರೂಪಾಯಿಯ ಮೌಲ್ಯವನ್ನು ಬಲಾತ್ಕರಿಸಿದ ಹಾಗೆ, ಆ ಮೊತ್ತದ ಚಿನ್ನವನ್ನು ದೇಶದ ಹೊರಗೆ ಪಾವತಿ ಮಾಡಲು ಸಾಧ್ಯವಾಗುವುದಿಲ್ಲ. ಹಾಗಿದ್ದರೆ, ಚಿನ್ನದ ವಾಸ್ತವ ಚಲಾವಣೆಯ ಸಹಿತ ಸ್ಥಿರವಿನಿಮಯವಾದ ೧೬ ಪೆನ್ಸ್‌ಗಳನ್ನು ಪರಿಚಯಿಸಲು ಕರೆನ್ಸಿ ನೋಟುಗಳನ್ನು ಆ ಚಿನ್ನಕ್ಕೆ, ಆ ಮಟ್ಟದ ಸಾಪೇಕ್ಷ ಬೆಲೆಗೆ ಪರಿವರ್ತಿಸುವುದು. ಇದಕ್ಕೆ ಬೇಕಾಗುವ ಮೊತ್ತಕ್ಕೆ ೨೪ ಕೋಟಿ ರೂಪಾಯಿಗಳು ಗರಿಷ್ಠಮಿತಿಯಾಗಿದೆ ಮತ್ತು ಪರಿವರ್ತನೆಗೆ ಬೇಕಾಗುವ ರೂಪಾಯಿಗಳ ಮೊತ್ತವು ಗರಿಷ್ಠಮಿತಿಯ ಮೊತ್ತಕ್ಕಿಂತ ನಿಜವಾಗಿಯೂ ಬಹಳಷ್ಟು ಕಡಿಮೆಯಾಗಬಹುದಾದ ಸಾಧ್ಯತೆಯಿದೆ.

“೧೧....... ೧೮೯೩ರಲ್ಲಿ ಕಾರ್ಯರೂಪಕ್ಕೆ ತಂದಂಥ ರೀತಿಯಲ್ಲಿಯೇ ಕೇವಲ ಚಲಾವಣೆಯ ಕುಗ್ಗುವಿಕೆಯನ್ನು ಕಾರ್ಯರೂಪಕ್ಕೆ ತರಬಹುದು. ಅಂದರೆ, ನಮ್ಮ ಸಾಮಾನ್ಯ ಶಿಲ್ಕಿಗಿಂತ ಹೆಚ್ಚಾಗಿ ೨೦ ಕೋಟಿಗಳಷ್ಟು ಸಂಗ್ರಹಣೆಯನ್ನು ಹೊಂದುವವರೆಗೆ ಕೌನ್ಸಿಲ್ ಹುಂಡಿಗಳ ವಾಪಸಾತಿಯನ್ನು ಮಾಡದಿದ್ದರೆ

ಚಲಾವಣೆಯ ಕುಗ್ಗುವಿಕೆಯನ್ನು ಕಾರ್ಯರೂಪಕ್ಕೆ ತರಬಹುದು. ಆದರೆ ಈ ಮಾರ್ಗವು ದುಬಾರಿಯಾದುದು ಮತ್ತು ನಾವು ಭಾವಿಸಿದಂತೆ ಪರಿಣಾಮಕಾರಿಯಾದುದಲ್ಲ. ಮೊದಲನೆಯದಾಗಿ, ೨೦ ಕೋಟಿ ರೂಪಾಯಿಗಳನ್ನು ಶಾಶ್ವತವಾಗಿ ಭದ್ರಪಡಿಸುವುದರಿಂದ ಆ ಮೊತ್ತದ ಮೇಲಿನ ಅಥವಾ ಹಿಂತೆಗೆತಗಳನ್ನು ರದ್ದುಮಾಡಿರುವ ಅವಧಿಯಲ್ಲಿ ಇಂಗ್ಲೆಂಡಿನಿಂದ ಸಾಲವಾಗಿ ಪಡೆದ ಚಿನ್ನದ ಮೊತ್ತದ ಮೇಲಿನ ಬಡ್ಡಿಯಷ್ಟು ವೆಚ್ಚ ನಮಗೆ ತಗಲುತ್ತದೆ. ಎರಡನೆಯದಾಗಿ, ಬೆಳ್ಳಿಯ ನಾಣ್ಯದ ಈ ಶೇಖರಣೆಯ ಅಸ್ತಿತ್ವವು ವಿನಿಮಯ ಮಾರುಕಟ್ಟೆಗೆ ಯಾವಾಗಲೂ ಆತಂಕಕಾರಿಯಾಗಿರುತ್ತದೆ ಮತ್ತು ರೂಪಾಯಿಯ ಭವಿಷ್ಯದ ಬಗ್ಗೆ ಯಾವುದೇ ನಂಬಿಕೆಯನ್ನು ಸಂಪೂರ್ಣವಾಗಿ ತೊಡೆದುಹಾಕುತ್ತದೆ. ಚಲಾವಣೆಯಿಂದ ಮೊತ್ತವನ್ನು ಹಿಂತೆಗೆದುಕೊಳ್ಳುವುದಷ್ಟೇ ಅಲ್ಲ, ಜೊತೆಗೆ ನಾವು ಅನುಸರಿಸುವ ವಿಧಾನದಿಂದ, ಅದು ನಾಣ್ಯರೂಪದಲ್ಲಿ ಅಸ್ತಿತ್ವದಲ್ಲಿರಕೂಡದು ಮತ್ತು ಅದರ ಸ್ಥಾನವನ್ನು ನಾಣ್ಯವಾಗಿ ಚಿನ್ನವು ತೆಗೆದುಕೊಳ್ಳಬೇಕು ಎಂಬ ನಮ್ಮ ಉದ್ದೇಶವನ್ನು ನಾವು ತೋರಿಸಬೇಕು. ಆದುದರಿಂದ ಬೆಳ್ಳಿಯ ಸ್ಥಾನವನ್ನು ತೆಗೆದುಕೊಳ್ಳುವ ಪ್ರಾಯೋಗಿಕ ಉದ್ದೇಶಕ್ಕಾಗಿ ಮತ್ತು ಕೈಗೊಂಡ ನಮ್ಮ ಕ್ರಮಗಳಲ್ಲಿ ನಂಬಿಕೆಯನ್ನು ಮೂಡಿಸುವುದಕ್ಕೋಸ್ಕರ ಚಿನ್ನದ ಕಾಪುನಿಧಿಯನ್ನು (ಸಾಲದ ಮೂಲಕ) ಮೊದಲಿಗೆ ಒದಗಿಸಿ ಪ್ರಸಕ್ತ ರೂಪಾಯಿಗಳನ್ನು ಕರಗಿಸಬೇಕೆಂಬುದೇ ನಮ್ಮ ಯೋಜನೆಯಾಗಿದೆ".

ಸಮಿತಿಯು ವರದಿ ಮಾಡಿದ ಸಂದರ್ಭದಲ್ಲಿ ವಿನಿಮಯವು ಏರುತ್ತಿತ್ತು ಮತ್ತು ಚಿನ್ನವು ಒಳಹರಿಯುತ್ತಿತ್ತು ಎಂಬ ಸಂಗತಿಯಿಂದ ಗೊತ್ತಾದಂತೆ ರೂಪಾಯಿಯ ಗಾತ್ರವು ಚಲಾವಣೆಯಲ್ಲಿ ಸಮೃದ್ಧವಾಗಿರಲಿಲ್ಲ. ಟಂಕಸಾಲೆಯ ಮುಚ್ಚುವಿಕೆಯು ಪರಿಣಾಮಕಾರಿ ಮಿತಿಯನ್ನು ತಂದಿದ್ದಿತು ಎನ್ನುವುದು ನಿರ್ವಿವಾದವಾಗಿದ್ದು, ಅದನ್ನು ಚೇಂಬರ್‌ಲಿನ್ ಸಮಿತಿಯೂ ಕೂಡ ಒಪ್ಪಿಕೊಂಡಿತು.[೧] ಒಂದು ಪಕ್ಷ ಟಂಕಸಾಲೆಗಳ ಮುಚ್ಚುವಿಕೆಯು ಚಲಾವಣೆಯಲ್ಲಿನ ರೂಪಾಯಿಗಳ ಗಾತ್ರದ ಮೇಲೆ ಪರಿಣಾಮಕಾರಿ ಮಿತಿಯಾಗಿರದಿದ್ದರೆ ಯಾವ ಪರಿಹಾರವಿತ್ತು? ಹೆಚ್ಚು ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದರ ಮೂಲಕ ಚಿನ್ನದ ಕಾಪುನಿಧಿಯನ್ನು ಪಡೆಯಬಹುದಾಗಿತ್ತು ಎನ್ನುವುದಾದರೆ ಆ ಉದ್ದೇಶಕ್ಕೆ ಉತ್ತೇಜನ ಕೊಡುವ ಚಿನ್ನದ ಕಾಪುನಿಧಿಯ ಯೋಜನೆಯನ್ನು ಯೋಜಿಸಲಾಗಿತ್ತೇ? ಷಿಲಿಂಗಿನ ಮೌಲ್ಯವನ್ನು ಸಂರಕ್ಷಿಸುತ್ತಿದ್ದ ಹಾಗೆಯೇ ರೂಪಾಯಿಗಳ ಮಿತಿಯು ಅವುಗಳ ಮೌಲ್ಯವನ್ನು ಸಂರಕ್ಷಿಸುವ ಹಾಗಿದ್ದರೆ ಯಾವುದನ್ನು ಮಿತಿಮೀರಿದೆ ಎನ್ನದಿದ್ದರೂ ಅತಿಸಮೃದ್ಧ ಎಂದು ಸಮಿತಿಯು ಹೆದರಿತ್ತೋ ಆ ರೂಪಾಯಿಗಳ ಗಾತ್ರವನ್ನು ಚಿನ್ನದ ಕಾಪುನಿಧಿಗೋಸ್ಕರವಾಗಿ ಹೆಚ್ಚಿಸಲು ಅನುಮತಿಯನ್ನು ರೂಪಿಸಲಾಗಿದ್ದಿತೇ?

ಫೌಲರ್ ಸಮಿತಿಯ ವರದಿಯನ್ನು ಯಾವುದೇ ಶಂಕೆ, ಆತಂಕಗಳಿಲ್ಲದೆ ಓದುವುದು ಕಷ್ಟ. ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಲು ಕೊಟ್ಟ ಅನುಮತಿಯು ಎಲ್ಲಾ ದೃಷ್ಟಿಯಿಂದಲೂ ಹಾನಿಕರವೇ ಆಗಿತ್ತು. ಅದು ವಾಸ್ತವವಾಗಿ ಸುವರ್ಣ ಪ್ರಮಿತಿಗೆ ವಿನಾಶಕಾರಕವಾಗಿತ್ತು. ಹಣದ ಕೊರತೆಗೆ ವಿರುದ್ಧವಾಗಿ ಸುವರ್ಣ ಪ್ರಮಿತಿಗೆ ವಿನಾಶಕಾರಕವಾಗಿತ್ತು. ಹಣದ ಕೊರತೆಗೆ ವಿರುದ್ಧವಾಗಿರುವ ಒಂದು ಪರಿಹಾರವಾಗಿ ಅದು ಬೇಕಾಗಿರಲಿಲ್ಲ ಮತ್ತು ರೂಪಾಯಿಯ ಮೌಲ್ಯವನ್ನು ಇಳಿಸಲು ಅದನ್ನು ಯೋಜಿಸಲಾಗಿತ್ತು. ಸುವರ್ಣ ಪ್ರಮಿತಿ ಮತ್ತು ಕರೆನ್ಸಿಗೆ ಸಮಿತಿಯು ನಿಸ್ಸಂದೇಹವಾಗಿಯೂ ಕಾತುರವಾಗಿದ್ದಿತು. ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡುವುದನ್ನು ನಿರಪೇಕ್ಷವಾಗಿ ನಿಲ್ಲಿಸಬೇಕಾಗಿದ್ದಿತು ಮತ್ತು ಚಿನ್ನಕ್ಕೆ ರೂಪಾಯಿಯನ್ನು ಕೊಡಲು ಸರ್ಕಾರವು ಸಿದ್ಧವಾಗಿರಬೇಕೆಂಬ ಪ್ರಕಟನೆಯನ್ನು ತಡೆಯಬೇಕಾಗಿತ್ತು. ಹಾಗೆ ಮಾಡದಿದ್ದುದರಿಂದ

---

೧. ರಿಪೋರ್ಟ್, ಪ್ಯಾರಾ ೧೭.

ರಾಷ್ಟ್ರಕ್ಕೆ ಒಂದು ಆರೋಗ್ಯಕರವಾದ ಪದ್ಧತಿ ಲಭಿಸುವುದನ್ನು ಸಮಿತಿಯ ಈ ಕ್ರಮವು ತಪ್ಪಿಸಿತಲ್ಲದೆ ಭಾರತದ ಇಡೀ ಕರೆನ್ಸಿಯನ್ನು ಕಾಗದ ಹಣವೂ ಸೇರಿದಂತೆ, ಅಪರಿವರ್ತನೀಯ ರೂಪಾಯಿಯ ಆಧಾರದ ಮೇಲೆ ನಿಲ್ಲಲು ತನಗೆ ಅರಿವಿಲ್ಲದೆಯೇ ಸಹಾಯ ಮಾಡಿತ್ತು. ಹರ್ಷೆಲ್ ಸಮಿತಿಯು ಪರಿಚಯಿಸಿದ ಮತ್ತು ಫೌಲರ್ ಸಮಿತಿಯಿಂದ ನಿರ್ದಾಕ್ಷಿಣ್ಯವಾಗಿ ಎತ್ತಿಹಿಡಿಯಲಾದ ಈ ಹಾನಿಕಾರಕ ನಿಬಂಧನೆಯ ನಿರ್ದಿಷ್ಟ ಮಹತ್ವ ಯಾರೊಬ್ಬರ ಪ್ರಜ್ಞೆಗೂ ಹೊಳೆಯಲಿಲ್ಲವೆಂದು ತೋರುತ್ತದೆ. ಈ ನಿಬಂಧನೆ ಯಾವುದೆಂದರೆ, ಚಿನ್ನಕ್ಕೆ ರೂಪಾಯಿಯನ್ನು ಕೊಡಲು ಸರ್ಕಾರವು ಸದಾ ತಯಾರಾಗಿರಬೇಕು. ಆದರೆ ಪ್ರತಿನಿಬಂಧನೆ ಇಲ್ಲದಿರುವಾಗ ಅಂದರೆ ರೂಪಾಯಿಗೆ ಚಿನ್ನವನ್ನು ಸರ್ಕಾರವು ಕೊಡಬೇಕೆಂಬ ಬಾಧ್ಯತೆ ಇಲ್ಲದಿರುವಾಗ ಅಪರಿವರ್ತನೀಯ ನೋಟುಗಳನ್ನು ಅನಿಯತ ಪ್ರಮಾಣದಲ್ಲಿ ಚಲಾವಣೆಗೆ ತರುವುದಕ್ಕೆ ಬ್ಯಾಂಕು ನಿಯಂತ್ರಣವು ಬ್ಯಾಂಕ್ ಆಫ್ ಇಂಗ್ಲೆಂಡಿಗೆ ಅಧಿಕಾರ ಕೊಟ್ಟ ರೀತಿಯಲ್ಲಿಯೇ ಅನಿಯತ ಶಾಸನಬದ್ಧ ಈ ನಿಬಂಧನೆಯು ಭಾರತ ಸರ್ಕಾರಕ್ಕೆ ಅಧಿಕಾರ ಕೊಟ್ಟಿದೆ ಎಂಬುದರಲ್ಲಿ ಸ್ವಲ್ಪವೂ ಸಂದೇಹವಿಲ್ಲ. ಈ ವರದಿಯನ್ನು ರದ್ದು ಮಾಡುವುದು ಮತ್ತು ಉಲ್ಲೇಖಿಸಿದ ಪತ್ರದಲ್ಲಿ ರೂಪಿಸಲಾಗಿರುವ ಭಾರತ ಸರ್ಕಾರದ ಸುರಕ್ಷಿತ ಹಾಗೂ ಸ್ವಸ್ಥ ಪ್ರಸ್ತಾಪಗಳಿಗೆ ಶೀಘ್ರವಾಗಿ ಹಿಂತಿರುಗುವುದೇ ಸರಿಯಾದ ದಿಕ್ಕಿನಲ್ಲಿ ಮೊದಲನೆಯ ಹೆಜ್ಜೆಯಾಗಿದೆ. ಟಂಕಸಾಲೆಗಳನ್ನು ನಾಣ್ಯವನ್ನಾಗಿ ಮಾಡುವುದನ್ನು ನಿಲ್ಲಿಸಬೇಕೆಂಬುದು ಮೂಲಭೂತವಾದ ಷರತ್ತಾಗಿದೆ. ರೂಪಾಯಿಯ ಒಂದು ಭಾಗವನ್ನು ಕರಗಿಸುವುದು ಆವಶ್ಯಕವೇ ಎಂಬುದು ರೂಪಾಯಿಗೆ ಚಿನ್ನದ ಯಾವ ಮೌಲ್ಯ ಇರಬೇಕೆಂಬ ಅಪೇಕ್ಷೆಯ ಮೇಲೆ ಅವಲಂಬಿತವಾಗಿದೆ. ಒಂದು ಬಾರಿ ರೂಪಾಯಿಯ ಒಟ್ಟು ಸಂಕೋಚನವನ್ನು ಗೊತ್ತುಪಡಿಸಿದ ಮೇಲೆ ಮತ್ತು ಇನ್ನೂ ನಾಣ್ಯವನ್ನಾಗಿ ಮಾಡುವುದನ್ನು ನಿಲ್ಲಿಸಿದ ಮೇಲೆ ಚಿನ್ನದ ಮುಕ್ತ ಒಳಹರಿವು ಮತ್ತು ಹೊರಹರಿವಿನ ಆಧಾರದ ಮೇಲೆ ಭಾರತವು ಪರಿಣಾಮಕಾರಿ ಸುವರ್ಣ ಪ್ರಮಿತಿಯನ್ನು ಹೊಂದುವ ಸ್ಥಿತಿಯಲ್ಲಿರುತ್ತದೆ. ಶಾಸನಬದ್ಧ ಹಣವಾಗಿ ರೂಪಾಯಿಯನ್ನು ಕುಗ್ಗಿಸುವ ಮತ್ತು ಅದರ ಪರಿವರ್ತನೆಗೆ ಅವಕಾಶ ಮಾಡಿಕೊಡುವ ಅಗತ್ಯವೇ ಇರುವುದಿಲ್ಲ. ಕನಿಷ್ಠ ಬೇಡಿಕೆಗಿಂತಲೂ ಯಾವಾಗಲೂ ಕಡಿಮೆಯಾಗಿರುವಂತೆ ಚಲಾವಣೆಯಲ್ಲಿರುವ ಗಾತ್ರವನ್ನು ಕುಗ್ಗಿಸಿದ ಪಕ್ಷದಲ್ಲಿ, ರೂಪಾಯಿಯ ಗಾತ್ರದ ಮಿತಿಯ ಬಲದಿಂದಾಗಿಯೇ ಅದರ ಮೌಲ್ಯವನ್ನು ಕುಂದಿಲ್ಲದೆ ರಕ್ಷಿಸಬಹುದು.

ಚಾಲ್ತಿಯಲ್ಲಿರುವ ರೂಪಾಯಿ ಕರೆನ್ಸಿ ಪದ್ಧತಿಯ ಬೆಂಬಲಿಗರು ರೂಪಾಯಿ ಕರೆನ್ಸಿಯು ಮಿತವ್ಯಯವೂ ಮತ್ತು ಸುರಕ್ಷಿತವೂ ಆಗಿದೆ ಎಂಬುದಾಗಿ ಸಮರ್ಥಿಸಿದ್ದಾರೆ. ಈ ಅಧ್ಯಾಯದ ಮಧ್ಯೆ ಮತ್ತು ಹಿಂದಿನ ಅಧ್ಯಾಯಗಳಲ್ಲಿ ಚಿನ್ನ ಮತ್ತು ಸರಕುಗಳಿಗೆ ಸಂಬಂಧಿಸಿದಂತೆ ರೂಪಾಯಿ ಕರೆನ್ಸಿಯ ಸುಭದ್ರತೆಯನ್ನು ಪರಿಶೀಲಿಸಲಾಗಿದೆ ಮತ್ತು ಆಧಾರಗಳನ್ನು ವಿಶ್ಲೇಷಿಸಲಾಗಿದೆ. ಈ ಅಧ್ಯಾಯಗಳಲ್ಲಿ ಸುಭದ್ರ ಕರೆನ್ಸಿಯ ತೀವ್ರ ಕೊರತೆಯು ರೂಪಾಯಿಯಲ್ಲಿರುವುದನ್ನು ಎತ್ತಿ ತೋರಿಸಲಾಗಿದೆ. ಅದು ಮಿತವ್ಯಯವಾಗಿದೆಯೇ ಎಂಬುದನ್ನು ನಿರ್ಧರಿಸಲು ನಾವು ಪ್ರಯತ್ನಿಸಬೇಕು. ಹಾಗೆ ನಿಜವಾಗಿಯೂ ಆಗಿದ್ದರೆ ಅದು ಅದರ ವಿರೋಧಿಗಳಿಗೆ ಸಹಾಯಕವಾಗದ ಗಮನಾರ್ಹ ಅಂಶವಾಗಿರಬಹುದು. ಆದುದರಿಂದ ರೂಪಾಯಿ ಕರೆನ್ಸಿಯಿಂದಾಗಿ ಜಾರಿಗೆ ಬಂದ ಆರ್ಥಿಕತೆಯನ್ನು ನಾವು ಪರಿಶೀಲಿಸಬೇಕಾಗುತ್ತದೆ.

ಈ ಸಂಬಂಧವಾಗಿ ಕೆಮ್‌ರರ್ ಅವರು ಹೇಳುತ್ತಾರೆ.[೧]

"ಅಮೂಲ್ಯ ಲೋಹಗಳನ್ನು ಅದು ಮಿತವ್ಯಯಗೊಳಿಸುತ್ತದೆ ಮತ್ತು ಸಮಾಜಕ್ಕೆ ಉಳಿತಾಯವನ್ನು

೧. ಮನಿ ಅಂಡ್ ಕ್ರೆಡಿಟ್ ಇನ್ಸ್ಟ್ರುಮೆಂಟ್ಸ್ ಇನ್ ರಿಲೇಷನ್ ಟು ಪ್ರೈಸಸ್, ಪು. ೬೩.

ಸಾಧ್ಯವಾಗಿಸುತ್ತದೆ ಎಂಬ ಅಂಶದಲ್ಲಿ ಪರಿವರ್ತನೀಯ ಹಣವು ತನ್ನ ಅಸ್ತಿತ್ವಕ್ಕೆ ಮೂಲ ಕಾರಣವನ್ನು ಕಂಡುಕೊಳ್ಳುತ್ತದೆ. ಕಾಗದ ಹಣ ಅಥವಾ ಸಾಂಕೇತಿಕ ಹಣವನ್ನು ಪ್ರಾಥಮಿಕ ಹಣಕ್ಕೆ ಬದಲಾಯಿಸಿದರೆ, ಅವುಗಳ ಬದಲಾವಣೆಯು ಪರಿಚಯಿಸಿದ ಸಾಂಕೇತಿಕ ನಾಣ್ಯದಲ್ಲಿ ಬಳಸಲಾದ ಲೋಹದ ಮೊತ್ತ ಮತ್ತು ವಿಮೋಚನಾ ನಿಧಿಗೆ ಅಗತ್ಯವಾಗಿರುವ ಪ್ರಾಥಮಿಕ ಹಣದಲ್ಲಿ ಅಡಗಿರುವ ಲೋಹದ ಮೊತ್ತ ಇವುಗಳ ನಡುವೆಯಿರುವ ವ್ಯತ್ಯಾಸದಷ್ಟು ಅಮೂಲ್ಯ ಲೋಹಗಳಿಗೆ ಬೇಡಿಕೆಯನ್ನು ಕುಗ್ಗಿಸುತ್ತದೆ. ಅಮೂಲ್ಯ ಲೋಹಗಳ ಈ ಮಿತವ್ಯಯವು ಹೆಚ್ಚಿನ ನೀಡಿಕೆಯನ್ನು ಮಾರುಕಟ್ಟೆಗೆ ಒಗೆಯುವಂತೆ ಮಾಡುತ್ತದೆ". (ಆ ನೀಡಿಕೆಯು ವಿದೇಶಕ್ಕೆ ಹೋಗುತ್ತದೆ ಮತ್ತು ರಾಷ್ಟ್ರದ ಕರೆನ್ಸಿಯೇತರ ಸಂಪತ್ತನ್ನು ಅಷ್ಟೇ ಪ್ರಮಾಣದಲ್ಲಿ ಹೆಚ್ಚಿಸುತ್ತದೆ, ಲೋಹದ ಮಿತವ್ಯಯದಿಂದಾಗಿ ಪಡೆದ ಚಿನ್ನವು ಸಮಾಜದ ನಿವ್ವಳ ಲಾಭವನ್ನು ಸೂಚಿಸುತ್ತದೆ).

ಇದೇ ಬಗೆಯ ಲಾಭವು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಅಪರಿವರ್ತನೀಯ ಹಣದ ಬಳಕೆಗೂ ಅನ್ವಯವಾಗುತ್ತದೆ ಎಂಬುದಾಗಿ ಕೆಮ್ಮರರ್ ಅವರು ಹೇಳುತ್ತಾರೆ. ಏಕೆಂದರೆ, ಪರಿವರ್ತನೀಯ ಹಣವಿದ್ದಾಗ ಬೇಕಾಗುವ ವಿಮೋಚನಾ ನಿಧಿಗಾಗಿ ಪ್ರಾಥಮಿಕ ಹಣದ ಅಗತ್ಯವಿಲ್ಲ. ಇಂಥ ಅಭಿಪ್ರಾಯಗಳು ಭಾರತದ ಕರೆನ್ಸಿ ಪದ್ಧತಿಯು ಅರ್ಥವ್ಯವಸ್ಥೆಯ ಅದ್ಭುತ ಮತ್ತು ಇತರೆ ಹೆಚ್ಚು ಮುಂದುವರಿದ ರಾಷ್ಟ್ರಗಳು ಇದನ್ನು ಉಪಯುಕ್ತವಾಗಿ ಅನುಸರಿಸಬಹುದು ಎಂಬ ಕೇನ್ಸ್ ಅವರ ಅಭಿಪ್ರಾಯಕ್ಕೆ ಮಾರ್ಗ ಮಾಡಿಕೊಟ್ಟಿವೆ. ಈ ಅಭಿಪ್ರಾಯದಿಂದ ಯಾವ ಅಳಕೂ ಇಲ್ಲದೆ ಅತ್ಯಂತ ಮಿತವ್ಯಯ ಕರೆನ್ಸಿಯಾದ ಅಪರಿವರ್ತನೀಯ ಕಾಗದದ ಹಣವನ್ನು ರಾಷ್ಟ್ರವು ಅಳವಡಿಸಿಕೊಳ್ಳಲೇಬೇಕು ಎಂಬುದಾಗಿ ಕೇನ್ಸ್ ಆಗಲೀ ಅಥವಾ ಕೆಮ್ಮರರ್ ಆಗಲೀ ಶಿಫಾರಸು ಮಾಡಿರುವರು ಎಂಬ ಕಟುವಾದ ತೀರ್ಮಾನವನ್ನು ನಾವು ತೆಗೆದುಕೊಳ್ಳುವುದಲ್ಲ. ರೂಪಾಯಿ ಕರೆನ್ಸಿಯು ವಾಸ್ತವವಾಗಿ ಮಿತವ್ಯಯವೇ ಎಂಬುದನ್ನು ಕಂಡುಹಿಡಿಯುವುದರಲ್ಲಿ ನಾವು ಆಸಕ್ತರಾಗಿದ್ದೇವೆ. ರೂಪಾಯಿಯು ಅಸ್ತಿತ್ವಕ್ಕೆ ಬರುವ ವಿಧಾನವನ್ನು ಜಾಗರೂಕವಾಗಿ ವಿಶ್ಲೇಷಿಸಿದಾಗ ಭಾರತದ ಕರೆನ್ಸಿಯು ಮಿತವ್ಯಯದ ಕರೆನ್ಸಿಯಾಗಿದೆ ಎಂಬ ವಾದವನ್ನು ಗಂಭೀರವಾಗಿ ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಎಲ್ಲಕ್ಕಿಂತ ಮೊದಲಿಗೆ ಲಂಡನ್ನಿನಲ್ಲಿರುವ ಸೆಕ್ರೆಟರಿ ಆಫ್ ಸ್ಟೇಟ್‌ಗೆ ಆತನ ಕೌನ್ಸಿಲ್ ಹುಂಡಿಗಳಿಗಾಗಿ ಚಿನ್ನವನ್ನು ಸಲ್ಲಿಸಲಾಗುತ್ತದೆ ಅಥವಾ ಭಾರತದಲ್ಲಿ ಭಾರತ ಸರ್ಕಾರಕ್ಕೆ ತೆರಿಗೆ ಅಥವಾ ಇತರೆ ಪಾವತಿಗಳಿಗಾಗಿ ಚಿನ್ನವನ್ನು ಸಲ್ಲಿಸಲಾಗುತ್ತದೆ. ಈ ಚಿನ್ನದಿಂದ ಸೆಕ್ರೆಟರಿ ಆಫ್ ಸ್ಟೇಟ್ ಬೆಳ್ಳಿಯನ್ನು ಕೊಳ್ಳುತ್ತಾನೆ ಮತ್ತು ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಲಾಗುತ್ತದೆ. ಬೆಳ್ಳಿಯ ಬೆಲೆಯು ಅನುಪಾತಕ್ಕಿಂತ ಕಡಿಮೆಯಾಗಿರುವುದರಿಂದ ರೂಪಾಯಿಯ ಅಸಲು ಬೆಲೆಗೂ ಮತ್ತು ಚಿನ್ನದ ರೂಪದಲ್ಲಿ ಅದರ ಮಾರುವ ಬೆಲೆಗೂ ವ್ಯತ್ಯಾಸ ಹುಟ್ಟಿಕೊಳ್ಳುತ್ತದೆ.

ಈ ವ್ಯತ್ಯಾಸದ ಪ್ರಮಾಣದಷ್ಟು ಲಾಭವು ನಿಸ್ಸಂದೇಹವಾಗಿ ಇದೆ. ಆದರೆ ಈ ಲಾಭ, ಅಥವಾ ನಾಣ್ಯವನ್ನಾಗಿ ಮಾಡುವುದರಿಂದ ಲಾಭ ಎಂದು ಹೇಳುವುದು ಸಮಾಜಕ್ಕೆ ಯಾವ ರೀತಿಯಲ್ಲೂ ಉಪಯುಕ್ತವಲ್ಲ. ಅದು ಒಂದು ಬಗೆಯ ಶೇಖರಣೆ ಮತ್ತು ಅಷ್ಟು ಮಾತ್ರಕ್ಕೆ ಅದು ಸಂಪತ್ತಿನ ನಿಷ್ಪ್ರಯೋಜಕ ಅಮೂರ್ತ ಸ್ವರೂಪವನ್ನು ಪ್ರತಿನಿಧಿಸುತ್ತದೆ. ಸಮಾಜದ ಪ್ರಸಕ್ತ ಉದ್ದೇಶಗಳಿಗೆ ಲಾಭವನ್ನು ಬಳಸಕೂಡದೆಂದರೆ ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡದಿರುವುದೇ ಉಚಿತವಾದುದು. ಆದ್ದರಿಂದ ಎಲ್ಲಿಯವರೆಗೆ ಲಾಭಗಳನ್ನು ಭಾರತದ ಆದಾಯ ಸಂಪನ್ಮೂಲಗಳಿಂದ ಪ್ರತ್ಯೇಕವಾಗಿ ತೆಗೆದಿರಿಸಲಾಗುತ್ತದೆಯೋ ಅಲ್ಲಿಯವರೆಗೆ ರೂಪಾಯಿ ಕರೆನ್ಸಿಯಲ್ಲಿ ಹೇಳಿಕೊಳ್ಳುವಷ್ಟು ಮಿತವ್ಯಯವಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಮತ್ತೊಂದು ದೃಷ್ಟಿಯಿಂದ ಭಾರತದ ಕರೆನ್ಸಿಯು ಸಮಾಜಕ್ಕೆ ನಿಷ್ಪ್ರಯೋಜಕ ಲೇಣಿಯಾಗಿದೆ. ಲೋಹನಾಣ್ಯದ ಕರೆನ್ಸಿಯು

ಮೂಲಭೂತವಾಗಿ ಸಾಮಾಜಿಕ ಹೂಡಿಕೆಯ ಒಂದು ರೂಪವನ್ನು ಪ್ರತಿನಿಧಿಸುವ ಬಂಡವಾಳ ಸರಕಾಗಿದೆ. ಪರಿಣಾಮವಾಗಿ, ಕರೆನ್ಸಿಯ ಬಂಡವಾಳ ಮೌಲ್ಯವನ್ನು ಸಂರಕ್ಷಿಸುವಂತೆ ನೋಡಿಕೊಳ್ಳುವುದು ಆವಶ್ಯಕವಾಗಿದೆ. ಭಾರತ ಸರ್ಕಾರವು ತನ್ನ ಕಾಗದ ಕರೆನ್ಸಿ ಕಾಪುನಿಧಿಗೆ ಸಂಬಂಧಿಸಿದ ಈ ಪ್ರಶ್ನೆ ಕುರಿತು ಸ್ಪಂದಿಸುತ್ತಿದೆ ಎಂಬುದು ಸಂತೋಷದ ಸಂಗತಿಯಾಗಿದೆ.

ಭಾರತ ಸರ್ಕಾರವು ತನ್ನ ಕಾಪುನಿಧಿಯ ಬಂಡವಾಳ ಮೌಲ್ಯವನ್ನು[೧] ಕಾಪಾಡುವುದಕ್ಕೋಸ್ಕರ ಒಂದು ಸವಕಳಿ ನಿಧಿಯನ್ನು ಇತ್ತೀಚೆಗೆ ಸ್ಥಾಪಿಸಿದೆ. ಪ್ರಕೃತ, ಕಾಗದದ ಕರೆನ್ಸಿಗೆ ಅನ್ವಯವಾಗುವ ವಿಚಾರಗಳೆಲ್ಲವೂ ರೂಪಾಯಿ ಕರೆನ್ಸಿಗೂ ಕೂಡ ಅನ್ವಯವಾಗಲೇಬೇಕು. ರೂಪಾಯಿ ಕರೆನ್ಸಿಯು ತನ್ನ ಬಂಡವಾಳ ಮೌಲ್ಯವನ್ನು ಕಾಪಾಡಿಕೊಂಡು ಬಂದಿದೆಯೇ? ಅದರ ಚಿನ್ನದ ಭಾಗವೆಂದು ಕರೆಯಲಾದ ಸುವರ್ಣ ಪ್ರಮಿತಿಯ ಕಾಪುನಿಧಿಯನ್ನು ಬಡ್ಡಿ ದೊರೆಯುವ ಸೆಕ್ಯೂರಿಟಿಗಳಲ್ಲಿ ಹೂಡಲಾಗಿದೆ. ನಿಜವಾಗಿಯೂ ಬಡ್ಡಿಯು ಲಾಭದ ಒಂದು ಮೂಲ ಎಂದಾದರೆ ಸೆಕ್ಯೂರಿಟಿಗಳು ತಮ್ಮ ಬಂಡವಾಳ ಮೌಲ್ಯವನ್ನು ಕಾಪಾಡಿಕೊಂಡು ಬಂದಿವೆಯೇ? ಖಂಡಿತವಾಗಿಯೂ ಇಲ್ಲ. ಅರ್ಧ ರೂಪಾಯಿ ಕರೆನ್ಸಿಗೆ ಗಮನ ಹರಿಸಿ. ರೂಪಾಯಿಯಲ್ಲಿನ ಚಿನ್ನ ತನ್ನ ಬಂಡವಾಳ ಮೌಲ್ಯವನ್ನು ಕಾಪಾಡಿಕೊಂಡು ಬಂದಿದೆಯೇ? ಗಾಂಭೀರ್ಯರಹಿತ ಅರ್ಥಶಾಸ್ತ್ರಜ್ಞರು ಎಳೆದಿರುವ ಅಸಂಖ್ಯಾತ ರೇಖಾಪಟಗಳು ಮತ್ತು ರೇಖಾಚಿತ್ರಗಳಲ್ಲಿ ರೂಪಾಯಿಯ ಮುಖಬೆಲೆಯನ್ನು ತೋರಿಸುವ ಕಪ್ಪುರೇಖೆಯು ಮೇಲುಗಡೆ ಉಳಿದಿದ್ದರೆ ರೂಪಾಯಿಯ ಚಿನ್ನದ ಗಟ್ಟಿ ಮೌಲ್ಯವನ್ನು ತೋರಿಸುವ ಕೆಂಪು ರೇಖೆಯು ಬೆಳ್ಳಿಯ ಚಿನ್ನದ ಮೌಲ್ಯವು ಕಡಿಮೆಯಾದಂತೆ ಇಳಿಮುಖವಾಗಿದೆ. ಅದರ ಅರ್ಥ ಏನು? ಸರಳವಾಗಿ ಹೇಳಬೇಕೆಂದರೆ ರೂಪಾಯಿಯು ಒಂದು ನಿರರ್ಥಕ ಲೇಣಿಯಾಗಿದೆ ಮತ್ತು ಮುಂದಿನ ದಿನಗಳಲ್ಲಿ ಅದರ ಮೌಲ್ಯವು ಅದನ್ನು ತಯಾರಿಸಿದಾಗ ಸಮಾಜಕ್ಕೆ ತಗಲಿದ್ದ ವೆಚ್ಚದಷ್ಟೂ ಇರುವುದಿಲ್ಲ.

ಖಂಡಿತವಾಗಿಯೂ ಭಾರತದ ಕರೆನ್ಸಿಯಲ್ಲಿರುವುದಕ್ಕಿಂತ, ಹೆಚ್ಚು ಮಿತವ್ಯಯತೆ, ಹಂದಿಯನ್ನು ಬೇಯಿಸಲು ತನ್ನ ಮನೆಯನ್ನೇ ಸುಟ್ಟ ಹುಚ್ಚ ಚೀನಿಯನ ಯೋಜನೆಯಂತಿತ್ತು ಎಂದು ಹೇಳಬೇಕಾಗುತ್ತದೆ. ಆತನ ಮನೆ ಅತಿ ಹಳೆಯದಾಗಿದ್ದು ವಾಸಯೋಗ್ಯವಾಗಿರಲಿಲ್ಲವೆಂದು ತೋರುತ್ತದೆ. ಹೇಗಾದರೂ, ಚಿನ್ನದ ಹಣವನ್ನು ಬೆಳ್ಳಿಯ ಹಣವನ್ನಾಗಿ ಪರಿವರ್ತಿಸುವುದಕ್ಕೆ ಇದೇ ರೀತಿ ಹೇಳಲಾಗುವುದಿಲ್ಲ. ಏಕೆಂದರೆ, ಚಿನ್ನಕ್ಕೆ ಹೋಲಿಸಿದರೆ ಬೆಳ್ಳಿಯು ಕೆಳಮಟ್ಟದ ಹೂಡಿಕೆಯೆಂಬುದು ನಮಗೆ ಗೊತ್ತು. ಈ ದೃಷ್ಟಿಯಿಂದ ನಮ್ಮದು ಸ್ವಲ್ಪವೂ ಮಿತವ್ಯಯದ ಕರೆನ್ಸಿಯಾಗಿಲ್ಲ. ಜನರು ಕೇವಲ ರೂಪಾಯಿಯನ್ನು ಗಮನಿಸುವುದರಿಂದ ಭಾರತದ ಕರೆನ್ಸಿಯು ಮಿತವ್ಯಯದ ಕರೆನ್ಸಿಯಾಗಿ ತೋರುತ್ತದೆ. ಆದರೆ, ಸುವರ್ಣ ಪ್ರಮಿತಿ ಕಾಪುನಿಧಿಗೆ ರೂಪಾಯಿ ಕರೆನ್ಸಿಯ ವೆಚ್ಚವನ್ನು ಕೂಡಿಸಿ ರೂಪಾಯಿ ಕರೆನ್ಸಿಗೆ ಬದಲಾಗಿ ಚಿನ್ನದ ಕರೆನ್ಸಿಯನ್ನು ಹೊಂದಿದ್ದರೆ ಭಾರತಕ್ಕೆ ಚಿನ್ನದ ಅಗತ್ಯ ಹೆಚ್ಚು ಇರುತ್ತಿತ್ತು ಎಂದು ಹೇಳಬಹುದೇ? ರೂಪಾಯಿಗಳ ಚಲಾವಣೆಗೆ ನಿರ್ದಿಷ್ಟ ಮಿತಿಯಿದ್ದಾಗ ಚಿನ್ನದ ಕಾಪುನಿಧಿ ಇರಬೇಕಾದ ಅಗತ್ಯವೇ ಇಲ್ಲ ಎಂಬುದನ್ನು ಗಮನಿಸಿದರೆ, ರೂಪಾಯಿಯನ್ನು ನಾಣ್ಯವನ್ನಾಗಿ ಮಾಡುವುದನ್ನು ನಿಲ್ಲಿಸುವುದರಿಂದ, ಉಂಟಾಗುತ್ತಿದ್ದ ಒಂದು ಪರಿಣಾಮ ಎಂದರೆ, ಈಗಿನ ಹಾಗಲ್ಲದೆ, ಚಿನ್ನವು ಭಾಗಶಃ ಋಣವಿಮೋಚನಾನಿಧಿಗೆ ಕಾಯ್ದಿರಿಸಲ್ಪಟ್ಟು ಮತ್ತು ಭಾಗಶಃ

---

೧. ಹೋಲಿಸಿ : ಹಣಕಾಸಿನ ಮಂತ್ರಿಯಾದ ಮಾನ್ಯ ಹೈಲಿಯವರ ಇಂಡಿಯನ್ ಪೇಪರ್ ಕರೆನ್ಸಿ ಬಿಲ್ (ಅಮೆಂಡ್‌ಮೆಂಟ್) ಕುರಿತ ಭಾಷಣ, ದಿನಾಂಕ ಸೆಪ್ಟೆಂಬರ್ ೧೬, ೧೯೨೦ ಎಸ್.ಎಲ್.ಸಿ.ಪಿ. ಸಂಪುಟ LIX ಪು. ೩೦೮–೩೦೯.

ರೂಪಾಯಿ ಕರೆನ್ಸಿಗೆ ಪರಿವರ್ತಿಸಲ್ಪಟ್ಟು, ಈ ಹಾನಿಕಾರಕ ಮತ್ತು ಪೋಲಾಗುವ ವಿಧಾನಕ್ಕೆ ಒಳಪಡುವ ಚಲಾವಣೆಯಲ್ಲಿ ಸೇರುತ್ತಿತ್ತು.

ಒಂದು ಪರಿಸ್ಥಿತಿಯಲ್ಲಿ ಮತ್ತೊಂದಕ್ಕಿಂತಲೂ ಚಿನ್ನದ ಆವಶ್ಯಕತೆ ಹೆಚ್ಚು ಇರುವುದಿಲ್ಲ. ರೂಪಾಯಿಯನ್ನು ನಾಣ್ಯವನ್ನಾಗಿ ಮಾಡುವುದನ್ನು ಸಂಪೂರ್ಣವಾಗಿ ನಿಲ್ಲಿಸುವುದರಿಂದ ಭಾರತದ ಕರೆನ್ಸಿಯು ನಿಜವಾಗಿಯೂ ಮಿತವ್ಯಯದ ಕರೆನ್ಸಿಯಾಗುವುದು, ಬೆಲೆಗಳೂ ಹೆಚ್ಚು ಸ್ಥಿರವಾಗುವುದು ಮತ್ತು ನಿಜವಾಗಿಯೂ ಸುಭದ್ರವೆಂದು ಹೇಳಬಹುದಾದ ರೀತಿಯಲ್ಲಿ ವಿನಿಮಯವು ನೆಲೆಯಾಗಿರುವುದು. ರೂಪಾಯಿಯು ಅಪರಿವರ್ತನೀಯವಾಗಿದ್ದರೂ (೧೮೭೩ ರಿಂದ ಸಮಸ್ಯೆಯಾಗಿದ್ದರೂ) ಒಂದು ಸಮಸ್ಯೆಯೇ ಆಗುವುದಿಲ್ಲ ಎಂಬ ನಿರಾತಂಕವಾದ ತೀರ್ಮಾನಕ್ಕೆ ನಾವು ಬರಬಹುದು.

ಆದರೆ ಇದರಿಂದ ದೇಶಕ್ಕಷ್ಟೇ ಅನುಕೂಲವೇ? ಖಂಡಿತವಾಗಿಯೂ ಇಲ್ಲ. ೧೯೨೦ರ ಕಾಗದದ ಪೌಂಡನ್ನು ೧೯೧೪ರ ಕಾಗದದ ಪೌಂಡಿಗೆ ಹೋಲಿಸಿ ಅದರಿಂದ ಹೊರಹೊಮ್ಮುವ ನೀತಿಯನ್ನು ಪ್ರೊ. ಕ್ಯಾನನ್[೧] ಅವರು ಹೀಗೆ ಸೂಚಿಸುತ್ತಾರೆ:–

"ಯಾವ ಸಮುದಾಯವೂ ಒಂದು ಸಂಸ್ಥೆಗೆ ಒಪ್ಪಿಸಲೇಬಾರದ ಪ್ರಯೋಗವನ್ನು ಅಂದರೆ ಯಾವ ಮಿತಿಯೂ ಇಲ್ಲದೆ ಹಣ ಸೃಷ್ಟಿಸುವ ಅಧಿಕಾರವನ್ನು ಬ್ಯಾಂಕ್ ಆಫ್ ಇಂಗ್ಲೆಂಡಿಗೆ ಒಪ್ಪಿಸಲಾಗಿದೆ. ಈ ಪ್ರಯೋಗವು ಅದೇ ಅಧಿಕಾರವನ್ನು ಸರ್ಕಾರಕ್ಕೆ ಅಥವಾ ಸರ್ಕಾರದ ಪೂರ್ಣ ನಿಯಂತ್ರಣದಲ್ಲಿರುವ ರಾಜ್ಯ ಬ್ಯಾಂಕಿಗೆ ಒಪ್ಪಿಸುವ ಆಧುನಿಕ ಯೋಜನೆಗಿಂತಲೂ ತೌಲನಿಕವಾಗಿ ಅತ್ಯಂತ ಅನುಕೂಲ ಎಂಬುದು ಈ ದಿನಗಳಲ್ಲಿ ನಿರ್ವಿವಾದವಾದ ಸಂಗತಿ. ಸಾಪೇಕ್ಷವಾಗಿ ೧೯೧೪–೧೮ರ ಅಲ್ಪಾವಧಿ ಯುದ್ಧದಲ್ಲಿ ರಫ್ತು ಮಾಡಬಹುದಾದ ನಾಣ್ಯಕ್ಕೆ "ಇಚ್ಛೆಯಂತೆ ಪರಿವರ್ತನೆಯಾಗದ ಕರೆನ್ಸಿಗಳನ್ನು" ಸರ್ಕಾರಗಳು ಮತ್ತು ಸರ್ಕಾರಿ ಬ್ಯಾಂಕುಗಳು ಚಲಾವಣೆಗೆ ತಂದ ಮೊತ್ತಗಳನ್ನು ೧೩ ವರ್ಷಗಳಲ್ಲಿ ಶೇಕಡಾ ೧೦೦ ರಷ್ಟು ಹೆಚ್ಚಿನ ಮೊತ್ತಕ್ಕೆ ಹೋಲಿಸಿದರೆ, ಅವು ನಿರಪೇಕ್ಷವಾಗಿ ಕ್ಷುಲ್ಲಕವಾಗಿ ಕಾಣುತ್ತವೆ ಎಂದು ೧೮೧೦ರಲ್ಲಿ ಬುಲಿಯನ್ ಸಮಿತಿಯು ತೀವ್ರವಾಗಿ ಆಕ್ಷೇಪಿಸಿತು.

ಈ ಆಪಾದನೆಯು ಭಾರತ ಸರ್ಕಾರಕ್ಕೆ ಅನ್ವಯವಾಗಲಿಲ್ಲ ಎಂದು ಹೇಳಬಹುದಾದ ಕಾಲವೊಂದಿತ್ತು. ಒಂದು ಕಾಲದಲ್ಲಿ ಭಾರತ ಸರ್ಕಾರ ಕರೆನ್ಸಿ ನಿರ್ವಹಣೆಯು ಒಳಗೊಳ್ಳುವ ಜವಾಬ್ದಾರಿಗಳಿಂದ ದೂರವಾಗಿದ್ದಂತೆ ತಾವೂ ಇರಬೇಕೆಂದು ಕಾತರಿಸುವ ಸರ್ಕಾರಗಳು ಇರುವುದು ಅಪರೂಪ. ೧೮೬೧ರಲ್ಲಿ ಮೊದಲಿಗೆ ಭಾರತದಲ್ಲಿ ಸರ್ಕಾರವು ಕಾಗದ ಹಣದ ಚಲಾವಣೆಯನ್ನು ಜಾರಿಗೆ ತಂದಾಗ ಅದು ತೀವ್ರವಾದ ಆತಂಕವನ್ನು ಪ್ರದರ್ಶಿಸಿದ್ದು ಗಮನಾರ್ಹ. ಸಿಪಾಯಿ ದಂಗೆಯ ಹೊರೆಯಿಂದ ಸೋತುಹೋಗಿದ್ದ ಧನರಹಿತ ಸರ್ಕಾರವು ಲಾಭದ ಮೂಲವಾಗಿ ಕಾಗದ ಕರೆನ್ಸಿಯ ಯೋಜನೆಯನ್ನು ಸ್ವಾಗತಿಸಬೇಕಾಗಿದ್ದಿತು. ಆದರೆ ಜವಾಬ್ದಾರಿಯ ಪ್ರಜ್ಞೆ ಎಷ್ಟು ಉನ್ನತವಾಗಿತ್ತೆಂದರೆ, ಅತಿ ಚಲಾವಣೆಗೆ ತಡೆಯಾಗಿ ಪರಿವರ್ತನೆಯಷ್ಟನ್ನೇ ಒಪ್ಪಲು ಜವಾಬ್ದಾರಿಯುಳ್ಳ ಸರ್ಕಾರವು ಸಹಜವಾಗಿಯೇ ತಿರಸ್ಕರಿಸಿತು. ಕಟ್ಟುನಿಟ್ಟಿನ ಹಣಕಾಸಿನ ವಿಚಕ್ಷಕರಾದ ವಿಲ್ಸನ್ ಅವರು ೧೮೬೦ರಲ್ಲಿ ಭಾರತದ ಹಣಕಾಸಿನ ಪರಿಸ್ಥಿತಿಯನ್ನು ಉತ್ತಮಪಡಿಸುವ ಮಾರ್ಗೋಪಾಯಗಳನ್ನು ಹುಡುಕುವಾಗ ಕಾಗದ ಕರೆನ್ಸಿಯ ಹತಾಶೆಯ ಯೋಜನೆಯನ್ನು ತಿರಸ್ಕರಿಸಲು ಮುಖ್ಯ ಕಾರಣಗಳಲ್ಲೊಂದನ್ನು ಅವರ ಉತ್ತರಾಧಿಕಾರಿ ಮಾನ್ಯ ಲೈಂಗ್ ಅವರು ಬಹು ಸ್ಪಷ್ಟವಾಗಿ ನಿರೂಪಿಸಿದರು. ಈಗಿನ ಭ್ರಮಾವೇಶದ

---

೧. ದಿ ಪೇಪರ್ ಪೌಂಡ್ ಆಫ್ ೧೯೨೭, ಇಂಟ್ರಡಕ್ಷನ್, ಪು XXXIX

ಹಣಕಾಸಿನ ದಿನಗಳಲ್ಲಿ ಅವರ ಅಭಿಪ್ರಾಯಗಳನ್ನು ಹಾಗೆಯೇ ಪೂರ್ಣವಾಗಿ ಪುನರುಚ್ಚರಿಸುವುದು ಉಚಿತವಾಗಿದೆ.[೧]

"ಸರ್ ಚಾರ್ಲ್ಸ್‌ವುಡ್ ಅವರ ತತ್ವವು ಏಕೆ ಅತ್ಯಂತ ಆರೋಗ್ಯಕರವೆಂಬುದಾಗಿ ಮಾನ್ಯ ಲೈಂಗ್ ಅವರು ಯೋಚಿಸಿದರೆಂಬುದಕ್ಕೆ ಮತ್ತೊಂದು ಮುಖ್ಯ ಕಾರಣವಿದೆ. ಸ್ಥಳಾಂತರವಾದ ಲೋಹದ ಕರೆನ್ಸಿಗೆ ಕಾಗದ ಕರೆನ್ಸಿಯು ಅನನ್ಯವಾಗಿರಲೇಬೇಕೆಂದು ಎಲ್ಲಾ ಪಕ್ಷಗಳು ಒಪ್ಪಿಕೊಂಡಿದ್ದವು. ಮಾನ್ಯ ವಿಲ್ಸನ್ ಅವರು ಪ್ರಸ್ತಾಪಿಸಿದ ಹಾಗೆ ೨/೩ ರಷ್ಟು ಸೆಕ್ಯೂರಿಟಿಗಳ ಮತ್ತು ೧/೩ ರಷ್ಟು ಚಿನ್ನದ ಆಧಾರದ ಚಲಾವಣಾ ಪದ್ಧತಿಯು ಈ ಬಗೆಯ ಅನನ್ಯತೆಯನ್ನು ಸದಾ ರಕ್ಷಿಸುವುದಿಲ್ಲ ಮತ್ತು ಸ್ಥಿತಿಸ್ಥಾಪಕತೆಯುಳ್ಳ ಮತ್ತು ಸಟ್ಟಾ ಸ್ಥಿತಿಯಲ್ಲಿ ಚಲಾವಣೆಯು ಅನಾವಶ್ಯಕವಾಗಿ ವಿಸ್ತರಿಸಲ್ಪಡುವ ಗಣನೀಯ ಪ್ರಮಾಣದ ಗಂಡಾಂತರವಿತ್ತು. ಅದನ್ನು ಸಾಕಷ್ಟು ಪ್ರಮುಖ ಅಂಶವೆಂಬುದಾಗಿ ಅವರು ಯೋಚಿಸಿದ್ದರು. ಏಕೆಂದರೆ, ಕಳೆದ ಮೂರು ವರ್ಷಗಳಲ್ಲಿ ಭಾರತದಲ್ಲಿ ಏನು ನಡೆದಿತ್ತೆಂಬುದನ್ನು ನಾವು ಗಮನಿಸಿದರೆ ಪರಿಶ್ರಮದ ಕೂಲಿಗಳಲ್ಲಿ ಮತ್ತು ಸರಕುಗಳ ಬೆಲೆಗಳಲ್ಲಿ ಅಧಿಕ ಏರಿಕೆಯು ಉಂಟಾಗಿತ್ತೆಂಬುದನ್ನು ನಾವು ಕಾಣುತ್ತೇವೆ. ಇವುಗಳು ಕರೆನ್ಸಿಯ ಕೃತಕ ಉಬ್ಬರದಿಂದ ಈಗಾಗಲೇ ಶೀಘ್ರವಾಗಿ ಮುಂದುವರಿಯುತ್ತಿರುವ ವಿಧಾನವನ್ನು ಚುರುಕುಗೊಳಿಸಿದ ಪಕ್ಷದಲ್ಲಿ ಪರಿಣಾಮಗಳೇನಾಗಬಹುದೆಂಬ ಬಗ್ಗೆ ನಮ್ಮನ್ನು ಎಚ್ಚರಿಸಬೇಕು. ಕಾಗದ ಹಣದ ಅತಿ ಚಲಾವಣೆಯಿಂದ ನೀವು ಬೆಲೆಗಳ ಏರಿಕೆಯನ್ನು ಅಸ್ವಾಭಾವಿಕವಾಗಿ ಪ್ರಚೋದಿಸಿದರೆ ವಾಣಿಜ್ಯದ ಸ್ವಸ್ಥ ಚಟುವಟಿಕೆಯನ್ನು ಉದ್ರೇಕಿತ ಕೋಲಾಹಲವನ್ನಾಗಿ ಬದಲಿಸುವುದಿರಿಂದ ಉಂಟಾಗುವ ಪ್ರತಿಕ್ರಿಯೆ ಗಂಡಾಂತರಕ್ಕೆ ಈಡಾಗುತ್ತೀರಿ. ಕಳೆದ ಎರಡು ಅಥವಾ ಮೂರು ವರ್ಷಗಳಲ್ಲಿ ಮಾಡಿದಂತೆ ನಾವು ಮುಂದುವರಿದ ಪಕ್ಷದಲ್ಲಿ ಆಗುವ ಪರಿಣಾಮವೇನೆಂದರೆ ಭಾರತದ ಉತ್ಪಾದನೆಯ ಬಹಳ ಸರಕುಗಳು ಇತರೆ ರಾಷ್ಟ್ರಗಳ ಪೈಪೋಟಿಯಿಂದಾಗಿ ಮಾರುಕಟ್ಟೆಯಿಂದ ಹೊರದೂಡಲ್ಪಡಬಹುದು. ಆದುದರಿಂದ ಚಿನ್ನದ ಗಟ್ಟಿಯಲ್ಲದ ಗಣನೀಯ ಪ್ರಮಾಣದಷ್ಟು ಸೆಕ್ಯೂರಿಟಿಗಳನ್ನು ಪ್ರತಿನಿಧಿಸುವ ಕಾಗದ ಕರೆನ್ಸಿ ಪದ್ಧತಿಯ ಪರಿಸ್ಥಿತಿಯಲ್ಲಿ ಸಂಭವಿಸುವಂತೆ, ಸಾಮಾನ್ಯ ಪ್ರಗತಿಯ ಬಲವನ್ನು ಅನಾವಶ್ಯಕವಾಗಿ ಉತ್ತೇಜನಗೊಳಿಸಬಹುದಾದ ಯಾವುದೇ ಕ್ರಮವನ್ನು ಹೇಗೆ ಕೈಗೊಂಡಿತೆಂಬ ಬಗ್ಗೆ ಸರ್ಕಾರವು ಅತಿ ಜಾಗರೂಕವಾಗಿರಲೇಬೇಕೆಂದು ಅವರು ಯೋಚಿಸಿದರು. ಕೂಲಿಗಳ ದರ ಮತ್ತು ಜೀವನವೆಚ್ಚದ ಸಾಮಾನ್ಯ ಏರಿಕೆಯು ಪ್ರಸಕ್ತ ವೇತನಶ್ರೇಣಿ ಮತ್ತು ಸೇನೆಯ ವೇತನವನ್ನು ಸಾಲದಾಗಿಸಿದರೆ ಸರ್ಕಾರವನ್ನು ಪೇಚಿಗೆ ಸಿಕ್ಕಿಸುವ ಘಟ್ಟವನ್ನು ಅಂಥ ಪ್ರಗತಿಯು ತಲುಪಬಹುದು.[೨] ಈ ಕಾರಣಗಳಿಂದಾಗಿ ಸರ್ ಚಾರ್ಲ್ಸ್‌ವುಡ್ ಅವರು ರವಾನಿಸಿದ ಪತ್ರದಲ್ಲಿ ರೂಪಿಸಿದಂತೆ ಇಂಗ್ಲೆಂಡಿನಲ್ಲಿ ಅಳವಡಿಸಿಕೊಳ್ಳಲಾದ ಕಾಗದ ಕರೆನ್ಸಿಯ ತತ್ವವನ್ನು ಅನುಸರಿಸುವುದೇ ಅತ್ಯಂತ ಬುದ್ಧಿವಂತಿಕೆಯ ಮಾರ್ಗವೆಂಬುದಾಗಿ ಅವರು ಯೋಚಿಸಿದರು".

ಚಲಾವಣೆಯ ಮೇಲೆ ಅದಕ್ಕೂ ಹೆಚ್ಚಾಗಿ ಅದನ್ನು ಪರಿವರ್ತಿಸುವುದರ ಮೇಲೆ ಮಿತಿಯನ್ನು ವಿಧಿಸುವುದಕ್ಕೆ ಸರ್ಕಾರವು ಕಾತರವಾಗಿದ್ದಿತಲ್ಲದೆ ನೋಟು ಚಲಾವಣೆಯ ಶಾಸನಬದ್ಧ ಅಧಿಕಾರವನ್ನು

---

೧. ೧೮೬೧ರ ಫೆಬ್ರವರಿ ೧೬ರ ದಿನಾಂಕ, 'ಪೇಪರ್ ಕರೆನ್ಸಿ ಬಿಲ್' ಕುರಿತ ಅವರ ಭಾಷಣ ಎಸ್.ಎಲ್.ಸಿ.ಪಿ. ಸಂಪುಟ VII, ಪು. ೬೬-೭.

೨. ಇಂಗ್ಲೆಂಡಿನ ಬ್ಯಾಂಕು ಅಮಾನತ್ತು ಅವಧಿಯಲ್ಲಿ ಅತೃಪ್ತಿಯುಂಟಾಗಬಹುದೆಂಬ ಭಯದಿಂದ ಸೇನೆ ಮತ್ತು ನೌಕಾದಳಕ್ಕೆ ಚಿನ್ನದ ರೂಪದಲ್ಲಿ ಪಾವತಿ ಮಾಡಲಾಯಿತೆಂಬುದನ್ನು ಇಲ್ಲಿ ಗಮನಿಸಬೇಕಾಗಿದೆ.

ತನ್ನಲ್ಲಿರಿಸಿಕೊಳ್ಳುವುದಕ್ಕೆ ಅದು ಇಷ್ಟಪಡಲಿಲ್ಲ. ಸೆಕ್ರೆಟರಿ ಆಫ್ ಸ್ಟೇಟ್‌ಅನ್ನು ಉದ್ದೇಶಿಸಿದ ದಿನಾಂಕ ಏಪ್ರಿಲ್ ೨೭, ೧೮೫೯ರ[೧] ಪತ್ರದಲ್ಲಿ ಸರ್ಕಾರವು ಹೀಗೆ ಹೇಳಿತು.

"ಅತಿ ಚಲಾವಣೆಯನ್ನು ತಡೆಯುವುದಕ್ಕೆ ಬೇಡಿದಾಗ ನೋಟುಗಳ ಪರಿವರ್ತನೆಯು ಸಮರ್ಥ ಭರವಸೆಯಾಗಿಲ್ಲ ಎಂಬುದಾಗಿ ನಾವು ನಂಬುತ್ತೇವೆ. ಕಾಗದದ ಕರೆನ್ಸಿಯಲ್ಲಿ ಸಾರ್ವಜನಿಕ ನಂಬಿಕೆಯು ನೆಲೆಗೊಂಡಾಗ, ಹಣ ಚಲಾವಣೆಯ ಅಧಿಕಾರವು ಭಾರತ ಸರ್ಕಾರದ ಸಂಪೂರ್ಣ ಅಧೀನದಲ್ಲಿಯೇ ಇದ್ದರೆ, ಆ ನಂಬಿಕೆಯ ಅಪಾಯಕಾರಿ ಅನುಕೂಲವನ್ನು ಕಷ್ಟ ಪರಿಸ್ಥಿತಿಯಲ್ಲಿ ಪಡೆದುಕೊಳ್ಳುವ ಪ್ರಲೋಭನೆಯು ಹೆಚ್ಚಾಗಿರುತ್ತದೆ. ನಿರಪೇಕ್ಷವಾಗಿ ಒಂದು ಗೊತ್ತಾದ ಮೊತ್ತದ ಚಲಾವಣೆಗೆ ಅಥವಾ ಭಾರತದಲ್ಲಿನ ಶಿಲ್ಕುಗಳಿಗೆ ಸಂಬಂಧಿಸಿದಂತೆ ನಿರ್ಣಯವಾದ ಯಾವುದೇ ಮೊತ್ತಕ್ಕೆ ವಿಧಾಯಕ ತಡೆಯು ನಮ್ಮ ಅಭಿಪ್ರಾಯದಲ್ಲಿ ಆವಶ್ಯಕವಾಗುತ್ತದೆ. ಅಂಥ ಶಾಸನವು ಲೆಜಿಸ್ಲೇಟಿವ್ ಕೌನ್ಸಿಲ್ ಆಫ್ ಇಂಡಿಯಾದಲ್ಲಿಯಲ್ಲದೆ ಪಾರ್ಲಿಮೆಂಟಿನಿಂದ ಮಂಜೂರಾಗಬೇಕು".

೧೮೭೬ರಲ್ಲಿ ರೂಪಾಯಿ ಕರೆನ್ಸಿ ಬಗ್ಗೆ ಸರ್ಕಾರದ ದೃಷ್ಟಿಕೋನವು ವಿವೇಕಯುತವಾಗಿತ್ತು. ಬೆಳ್ಳಿಯ ಮುಕ್ತ ನಾಣ್ಯೀಕರಣಕ್ಕೆ ಟಂಕಸಾಲೆಗಳನ್ನು ಮುಚ್ಚಲು ಮತ್ತು ಚಿನ್ನದ ಮುಕ್ತ ನಾಣ್ಯೀಕರಣಕ್ಕೆ ಅವುಗಳನ್ನು ತೆರೆಯದಿರಲು ಬೆಂಗಾಲ್ ಛೇಂಬರ್ ಆಫ್ ಕಾಮರ್ಸ್ ಭಾರತ ಸರ್ಕಾರದ ಮೇಲೆ ಒತ್ತಾಯಿಸಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು. ಭಾರತ ಸರ್ಕಾರವು ರೂಪಾಯಿ ಕರೆನ್ಸಿಯ ನಿರ್ವಹಣೆಯನ್ನು ವಹಿಸಿಕೊಳ್ಳಲೇಬೇಕು ಎಂಬುದೇ ವಾಸ್ತವವಾಗಿ ಈ ಯೋಜನೆಯ ಉದ್ದೇಶವಾಗಿತ್ತು. ಪ್ರತಿಯಾಗಿ ಭಾರತ ಸರ್ಕಾರವು ಇದನ್ನು ಉಗ್ರವಾಗಿ ಖಂಡಿಸುತ್ತಾ ಹೀಗೆ ಘೋಷಿಸಿತು:–[೨]

"೮..... ಅನಿರ್ದಿಷ್ಟವಾಗಿ ರೂಪಾಯಿಯ ಮೌಲ್ಯವನ್ನು ಹೆಚ್ಚಿಸಲು ಯುಕ್ತ ಕ್ರಮವನ್ನು ಕೈಗೊಳ್ಳುವಂತೆ ಬೆಂಗಾಲ್ ಛೇಂಬರ್ ಆಫ್ ಕಾಮರ್ಸ್ ಸರ್ಕಾರವನ್ನು ಆಹ್ವಾನಿಸುತ್ತದೆ. ಈ ಉದ್ದೇಶಕ್ಕಾಗಿ ರಾಜ್ಯದ ಮೇಲ್ವಿಚಾರಣೆಯಲ್ಲಿ ಎಲ್ಲರೂ ಏಕರೀತಿಯ ಷರತ್ತುಗಳ ಮೇಲೆ ಬೆಳ್ಳಿಯ ಗಟ್ಟಿಯನ್ನು ಶಾಸನಬದ್ಧ ಹಣವನ್ನಾಗಿ ತಯಾರಿಸಿ ಪಡೆಯಬೇಕೆಂಬ ಬಹುಕಾಲದಿಂದಿರುವ ವಿಧಾಯಕ ಹಕ್ಕನ್ನು ರದ್ದುಮಾಡಬೇಕು ಮತ್ತು ರಾಜ್ಯದ ಸ್ವಂತ ವಿವೇಚನೆಯ ಮೇರೆಗೆ ತಾತ್ಕಾಲಿಕವಾಗಿ ನಾಣ್ಯ ಪದ್ಧತಿಯನ್ನು ಬದಲಿಸಬೇಕು....."

"೧೧..... ಸ್ವಯಂಚಲನ ಲಕ್ಷಣವು ಕರೆನ್ಸಿಯ ಸ್ವಸ್ಥ ಪದ್ಧತಿಯ ಜಾರಿಗೆ ಅತ್ಯಾವಶ್ಯಕವಾಗಿದೆ. ಒಂದು ನಿರ್ದಿಷ್ಟ ಕಾಲದಲ್ಲಿ ಇಡೀ ಸಮುದಾಯದ ಹಿತಾಸಕ್ತಿಗೆ ಕರೆನ್ಸಿ ಏರಿಕೆ ಅಥವಾ ಇಳಿಕೆ ಅಗತ್ಯವೇ ಅಥವಾ ಇಲ್ಲವೇ ಎಂಬುದನ್ನು ಗೊತ್ತುಮಾಡಲು ಯಾವ ವ್ಯಕ್ತಿಗೂ ಅಥವಾ ಜನಸಮೂಹಕ್ಕೂ ಆಗುವುದಿಲ್ಲ; ಯಾವುದೇ ಕಾಲದಲ್ಲಿ ಎಷ್ಟು ಏರಿಕೆ ಅಥವಾ ಇಳಿಕೆ ನಿಷ್ಕೃಷ್ಟವಾಗಿ ಬೇಕಾಗಿದೆ ಎಂಬುದನ್ನಂತೂ ಗೊತ್ತುಮಾಡಲು ಆಗುವುದಿಲ್ಲ. ತನ್ನ ಕರೆನ್ಸಿಯನ್ನು ಸ್ವಸ್ಥ ಸ್ಥಿತಿಯಲ್ಲಿರಿಸಬೇಕೆಂದು ಅಪೇಕ್ಷಿಸುವ ಯಾವ ಸರ್ಕಾರವೇ ಆಗಲಿ ಅಂಥ ಅಸಾಧ್ಯ ಕಾರ್ಯಭಾರದಲ್ಲಿ ತೊಡಗುವುದನ್ನು ಅಥವಾ ನಿರ್ದಿಷ್ಟ ಲೋಹದ ಮೌಲ್ಯದ ಮಾನದಂಡವಿಲ್ಲದೆ ಸಮಾಜವನ್ನು ಸ್ವಲ್ಪ ಕಾಲದವರೆಗಾದರೂ ಬಿಟ್ಟುಕೊಡುವುದನ್ನು ನ್ಯಾಯಸಮ್ಮತವೆಂದು ಸಮರ್ಥಿಸಿಕೊಳ್ಳುವುದಿಲ್ಲ. "ಮುಕ್ತ ನಾಣ್ಯ ಪದ್ಧತಿಯಲ್ಲಿ ಅಧಿಕೃತ ಮಧ್ಯಪ್ರವೇಶವಿಲ್ಲದೆಯೇ ಈ ವಿಷಯಗಳೂ ತಾವಾಗಿಯೇ ನಿಯಂತ್ರಣಕ್ಕೆ ಒಳಪಡುತ್ತವೆ."

---

೧. ಅದರ ಪ್ರತಿಗಾಗಿ, ನೋಡಿ, ಕಾಮನ್ಸ್ ಪೇಪರ್, ೧೮೩, ೧೮೬೦ರ ಪು. ೧

೨. ಬೆಳ್ಳಿಯ ಮೌಲ್ಯದ ಇಳಿತಾಯಕ್ಕೆ ಸಂಬಂಧಿಸಿದ ಭಾರತ ಸರ್ಕಾರದ ನಿರ್ಣಯ, ದಿನಾಂಕ ಸೆಪ್ಟೆಂಬರ್ ೨೨, ೧೮೭೦, ಕಾಮನ್ಸ್ ಪೇಪರ್ ೧೮೯೩ರ ಪು. ೪೪೯.

ಇದರ ಜೊತೆಗೆ, ಕಾಗದದ ಕರೆನ್ಸಿ ಮತ್ತು ರೂಪಾಯಿ ಕರೆನ್ಸಿಯನ್ನು ನಿರ್ವಹಿಸುವ ನಿಯಮಗಳಿಗೆ ಸಂಬಂಧಿಸಿದಂತೆ ಸರ್ಕಾರದ ಈಚಿನ ಘೋಷಣೆಗಳನ್ನು ಹೋಲಿಸಿ ಯುದ್ಧಕಾಲದಲ್ಲಿ ಕಾಗದದ ಚಲಾವಣೆಯ ವಿಸ್ತರಣೆಯನ್ನು ಸರ್ಕಾರ ಕೈಗೊಂಡಾಗ ಅದು ಬೆಲೆಗಳ ಮೇಲೆ ಬೀರುವ ಪರಿಣಾಮಗಳನ್ನು ಸುಪ್ರೀಂ ಲೆಜಿಸ್ಲೇಟಿವ್ ಕೌನ್ಸಿಲ್‌ನ ಸದಸ್ಯರುಗಳು ಸೂಚಿಸಿದರು. ಆದರೆ ಕಳೆದ ಯುದ್ಧದ ಸಮಯದಲ್ಲಿ ವಿತ್ತಮಂತ್ರಿಯಾಗಿ ಭಾರತದ ಹಣಕಾಸನ್ನು ನಿರ್ವಹಿಸಿದ ದಿವಂಗತ ಸರ್ ವಿಲಿಯಂ ಮೇಯರ್ ಅವರು ಇಂಡಿಯನ್ ಪೇಪರ್ ಕರೆನ್ಸಿ ಬಿಲ್ (ಅಮೆಂಡ್‌ಮೆಂಟ್) ಕುರಿತು ಸೆಪ್ಟೆಂಬರ್ ೫, ೧೯೧೬ ರಂದು ಮಾಡಿದ ಭಾಷಣದಲ್ಲಿ ಹೀಗೆ ಉತ್ತರಿಸಿದರು:–[೧]

"ಯುದ್ಧಕ್ಕೆ ಮುಂಚೆ ನೋಟು ಚಲಾವಣೆಯು ೬೦ ಕೋಟಿಯಷ್ಟಿತ್ತು ಮತ್ತು ಅದು ಈಗ ೧೦೦ ಕೋಟಿಗಳಷ್ಟಿದೆ. ಆದರೆ ಗೌರವಾನ್ವಿತ ಶರ್ಮಾ ಅವರು ಹಣದುಬ್ಬರದ ಕಲ್ಪನೆಗೆ ನಡುಗಿದರು. ನೋಟು ಚಲಾವಣೆಯನ್ನು ಪೂರ್ಣವಾಗಿ ರಕ್ಷಿಸದಿದ್ದಾಗ ಮಾತ್ರ ಕಾಗದ ಕರೆನ್ಸಿಯ ಕೃತಕ ಉಬ್ಬರವು ಕಂಡು ಬರುತ್ತದೆಯೆಂಬ ಅರ್ಥಶಾಸ್ತ್ರಜ್ಞರ ಸ್ವೀಕೃತ ತತ್ವವೊಂದನ್ನು ಅವರಿಗೆ ನಾವು ನೆನಪಿಸಬಹುದು. ಈಗ ಚಲಾವಣೆಯಲ್ಲಿರುವ ಪ್ರತಿ ರೂಪಾಯಿಯನ್ನು ನಾವು ರಕ್ಷಿಸಿದ್ದೇವೆ. ಸೆಕ್ಯೂರಿಟಿಗಳಲ್ಲಿ......" (ಹಣದುಬ್ಬರ ಹೇಗೆ ಸಾಧ್ಯ?)

ರೂಪಾಯಿ ಕರೆನ್ಸಿ ಬಗ್ಗೆ ಸರ್ಕಾರದ ಅಭಿಪ್ರಾಯದಲ್ಲಿ ಉಂಟಾದ ಬದಲಾವಣೆಯು, ಅಷ್ಟೇ ಗಮನಾರ್ಹವಾಗಿದೆ. ೧೯೦೮ರಲ್ಲಿ ರೂಪಾಯಿ ವಿನಿಮಯ ಮೌಲ್ಯವು ಸಮತೆಗಿಂತ ಕಡಿಮೆಯಾದಾಗ ಅದು ರೂಪಾಯಿಯ ಅತಿನಾಣ್ಯೀಕರಣದ ಫಲವಾಗಿ ಉಂಟಾಯಿತೆಂಬುದನ್ನು ಸರ್ಕಾರಕ್ಕೆ ನೆನಪಿಸಲಾಯಿತು. ಆದರೆ, ೧೮೬೬ರಲ್ಲಿ ವಾಣಿಜ್ಯದ ಅಗತ್ಯಗಳಿಗೆ ಹೊಂದಿಕೊಳ್ಳುವಂತೆ ಕರೆನ್ಸಿಯನ್ನು ಹೆಚ್ಚಿಸುವುದಕ್ಕೆ ಅಥವಾ ಕುಗ್ಗಿಸುವುದಕ್ಕೆ ಸಾಧ್ಯವಾಗುತ್ತದೆಯೆಂಬುದನ್ನು ಸರ್ಕಾರವು ಯೋಚಿಸದಿದ್ದರೂ ೧೯೦೮ರಲ್ಲಿ ಸರ್ಕಾರವು ವಿರುದ್ಧ ಅಭಿಪ್ರಾಯವನ್ನು ಮುಂದೊಡ್ಡಿತು. ವಿತ್ತಮಂತ್ರಿ, ಗೌರವಾನ್ವಿತ ಬೇಕರ್ ತಮ್ಮ ಉತ್ತರದಲ್ಲಿ ವಾದಿಸುತ್ತಾ ಹೀಗೆ ಮುಂದುವರಿದರು.:[೨]

"ಮೊದಲನೆಯದಾಗಿ, ಈ ಅವಧಿಯಲ್ಲಿ ವಾಣಿಜ್ಯ ಬೇಡಿಕೆಯನ್ನು ಪೂರೈಸುವುದಕ್ಕೆ ಮಾತ್ರ ಇಡೀ ಹೊಸ ನಾಣ್ಯವನ್ನು ನಾವು ಕೈಗೊಂಡಿದ್ದೇವೆ. ಈ ಬೇಡಿಕೆಗಳನ್ನು ಪೂರೈಸುವುದಕ್ಕೆ ಬೇಕಿರುವುದಕ್ಕಿಂತ ಹೆಚ್ಚಿಗೆ ಒಂದು ರೂಪಾಯಿಯನ್ನೂ ಚಲಾವಣೆಗೆ ಕೂಡಿಸಿಲ್ಲ........"

ಈಗ, ಕರೆನ್ಸಿ ನಿರ್ವಹಣೆಯ ಅಧಿಕಾರವನ್ನು ಸರ್ಕಾರಕ್ಕೆ ವಹಿಸಿಕೊಡುವುದು ಅಪಾಯಕಾರಿಯಾದರೆ, ಇಂಥ ತತ್ವಗಳ ಮೇಲೆ ಭರವಸೆಯನ್ನು ಕಾರ್ಯಗತಗೊಳಿಸುವುದಾಗಿ ಹೇಳುವ ಭಾರತ ಸರ್ಕಾರಕ್ಕೆ ಅದನ್ನು ವಹಿಸಿಕೊಡುವುದು ಇನ್ನೂ ಹೆಚ್ಚು ಅಪಾಯಕಾರಿಯಾಗಿದೆ ಅಲ್ಲವೆ! ಈ ದಿನಗಳಲ್ಲಿ ಇವುಗಳನ್ನು ಉತ್ತಮ ನಿಯಮಗಳೆಂದು ಭಾವಿಸುವಂತೆ ಯಾರಿಗೂ ದುರ್ಬೋಧಿಸಲಾಗಿಲ್ಲ. ಸುರಕ್ಷತೆಯು ಸಾಕೆನಿಸಿದರೆ ಪರಿವರ್ತನೆಗೆ ಯಾವ ಅಗತ್ಯವಿದೆ? ವಾಣಿಜ್ಯ ಬೇಡಿಕೆಗೆ ಅನುಗುಣವಾಗಿ ಕರೆನ್ಸಿಯನ್ನು ಚಲಾವಣೆಗೆ ತಂದರೆ ಅತಿ ಚಲಾವಣೆಯ ಹೆದರಿಕೆ ಏಕಿರುತ್ತದೆ? ಅಂಥ ತತ್ವದ ಆಧಾರದ ಮೇಲೆ ವರ್ತಿಸುವ ಸರ್ಕಾರವು ಯಾವ ಅಳುಕೂ ಇಲ್ಲದೆ ಅನಿರ್ದಿಷ್ಟವಾಗಿ ಕರೆನ್ಸಿಯನ್ನು ಹೆಚ್ಚಿಸುತ್ತಾ ಮುಂದುವರೆಯಬಹುದು.

---

೨. ಎಸ್.ಎಲ್.ಸಿ.ಪಿ. ಸಂಪುಟ LVI ಪು.೩೫

೧. ಹೋಲಿಸಿ, ೧೯೦೮–೯ ಫೈನಾನ್ಷಿಯಲ್ ಸ್ಟೇಟ್‌ಮೆಂಟ್, ಪು. ೨೯

ಇಂಥ ನಿಷ್ಕಪಟ ನಿಯಮಗಳನ್ನು ಆಧರಿಸಿದ ಕರೆನ್ಸಿಗಳ ನಿರ್ವಹಣೆಯಿಂದ ವಿನಾಶ ಉಂಟಾಗಿದೆಯೆಂಬುದಕ್ಕೆ ಇತಿಹಾಸದಲ್ಲಿ ಬಹಳಷ್ಟು ನಿದರ್ಶನಗಳಿವೆ.[೧] ದೇಶದ ಅದೃಷ್ಟವೋ ಎಂಬಂತೆ, ೧೯೨೦ರಲ್ಲಿ ಅತಿಯಾಗಿ ಬದಲಾಯಿಸಿಬಿಡಲಾಗದ ಕಾಗದ ಕರೆನ್ಸಿಯ ಆಧಾರವು ವಿತ್ತಮಂತ್ರಿಯು ಪ್ರತಿಪಾದಿಸಿದ ಸಿದ್ಧಾಂತದ ಮೇಲೆ ನಿಯಂತ್ರಿಸಲಾಗಿರುವ ಕರೆನ್ಸಿಗಳಿಗಿಂತ ಈಗಲೂ ಭಿನ್ನವಾಗಿದೆ. ಟಂಕಸಾಲೆಯು ಮುಚ್ಚಿದಂದಿನಿಂದ ರೂಪಾಯಿ ಕರೆನ್ಸಿಯು ಮುಖ್ಯವಾಗಿ, ಅದರ ಚಲಾವಣೆಯ ನಿರ್ವಹಣೆಯ ನಿಯಮದಿಂದಾಗಿ, ಭಾರತೀಯರ ಸುಸ್ಥಿತಿಗೆ ಅಪಾಯದ ಮೂಲ ಕಾರಣವಾಗಿದೆ.

ಆ ನಿಯಮವು, ಪ್ರೊ. ಕೇನ್ಸ್,[೨] ಷಿರಾಸ್[೩] ಮತ್ತು ಚೇಂಬರ್‌ಲಿನ್ ಸಮಿತಿ[೪]ಯಂತಹ ಅರ್ಥಶಾಸ್ತ್ರಜ್ಞರ ಬೆಂಬಲ ಹೊಂದಿದೆ – ಅದೇ ಒಂದು ಆಶ್ಚರ್ಯದ ಸಂಗತಿ – ಎಂಬ ಕಾರಣದಿಂದ ರೂಪಾಯಿ ಕರೆನ್ಸಿಯ ನಿರ್ವಹಣೆಯ ಈ ಅಧಿಕಾರವನ್ನು ಸರ್ಕಾರದಿಂದ ಕಸಿದುಕೊಳ್ಳಬೇಕು ಎಂಬ ವಾದವನ್ನು ಬದಲಾಯಿಸಲು ಸಾಧ್ಯವಿಲ್ಲ. ಏಕೆಂದರೆ, ಈ ನಿಯಮವು ಮೂಲತಃ ದೋಷಪೂರ್ಣವಾಗಿದೆ. ವಾಣಿಜ್ಯ ಬೇಡಿಕೆಗೆ ಅನುಗುಣವಾಗಿ ರೂಪಾಯಿಗಳನ್ನು ಚಲಾವಣೆಗೆ ತರುವುದರಿಂದ ಅವುಗಳ ಹೆಚ್ಚಳ ಉಂಟಾಗುವ ಸಾಧ್ಯತೆಯಿಲ್ಲ ಎಂಬ ತರ್ಕದಲ್ಲಿನ ದೋಷವು ಹಣದ ವಿಚಿತ್ರ ಸ್ವಭಾವದಿಂದಾಗಿ ಮೇಲ್ನೋಟಕ್ಕೆ ಕಂಡುಬರುವುದಿಲ್ಲ. ಕೊಳ್ಳುವ ಶಕ್ತಿಯುಳ್ಳ ಕಾರಣಕ್ಕಾಗಿಯೇ ಹಣವು ಆವಶ್ಯಕವಾಗಿದೆ ಎಂದು ಹೇಳಲಾಗಿದೆ. ಅದು ನಿಸ್ಸಂದೇಹವಾಗಿಯೂ ನಿಜ; ಆದರೆ ಹಣದ ಮೌಲ್ಯವು ಅಷ್ಟು ಅಸ್ಥಿರವೆಂದು ಜನರಿಗೆ ಗೊತ್ತಿದ್ದರೂ ಜನರು ಏಕೆ ನಿರಂತರವಾಗಿ ಹಣವನ್ನು ಅಪೇಕ್ಷಿಸುತ್ತಾರೆಂಬುದನ್ನು ಅದು ಸ್ಪಷ್ಟವಾಗಿ ವಿವರಿಸುವುದಿಲ್ಲ. ವಾಸ್ತವವಾಗಿ ಕೊಳ್ಳುವ ಶಕ್ತಿಯೊಂದೇ ಆಧಾರವಾಗಿದ್ದ ಪಕ್ಷದಲ್ಲಿ ಕೊಳ್ಳುವಿಕೆಯ ಪ್ರಸಕ್ತ ಸಾಧನಕೋಸ್ಕರ ನಾವು ಅಪೇಕ್ಷಿಸುವುದಿಲ್ಲ.

ಆ ಅಪೇಕ್ಷೆಗೆ ಹಣವು ಇತರೆ ಸರಕುಗಳ ಮೇಲೆ ಹೊಂದಿರುವ ವೈಶಿಷ್ಟ್ಯಪೂರ್ಣ ಅನುಕೂಲವೊಂದು ಕಾರಣವಾಗಿದೆ. ಅಂದರೆ, ಮೆಂಜರ್ ಹೇಳಿದ ಹಾಗೆ, ಹಣವು ಅತ್ಯುಚ್ಚ ಶ್ರೇಣಿಯ ಮಾರಾಟದ ಸಾಧ್ಯತೆಯ ಲಕ್ಷಣವನ್ನು ಹೊಂದಿದೆ. ಅನೇಕ ವೇಳೆ ಒಬ್ಬನು ಮಾರುವಾಗ ಮಾಡುವ ಚೌಕಾಶಿಗಿಂತ ಕೊಳ್ಳುವಾಗ ಚೌಕಾಶಿ ಮಾಡುತ್ತಾನೆ. ಸರಳವಾಗಿ ಇನ್ನೊಂದು ರೀತಿಯಲ್ಲಿ ನಿರೂಪಿಸುವುದಾದರೆ, ಪ್ರತಿಯೊಬ್ಬನೂ ತನ್ನ ಸಂಪನ್ಮೂಲವನ್ನು ಆದಷ್ಟುಮಟ್ಟಿಗೆ ಮಾರಾಟ ಮಾಡಬಹುದಾದ ಅಥವಾ ವರ್ಗಾಯಿಸಬಹುದಾದ ಹಣದ ರೂಪದಲ್ಲಿ ಶೇಖರಿಸಲು ಇಚ್ಛಿಸುತ್ತಾನೆ. ಈ ಅರ್ಥದಲ್ಲಿ ಬೇಡಿಕೆಯನ್ನು ಮೀರಿ ಹೆಚ್ಚು ಹಣವನ್ನು ಚಲಾವಣೆಗೆ ತರಲಾಗದು ಎಂಬುದು ನಿರಪೇಕ್ಷ ಸತ್ಯವಾಗಿದೆ. ಆದರೆ ಈ ಅರ್ಥದಿಂದಲೇ ಒಂದು ನಿರ್ದಿಷ್ಟ ಕಾಲದಲ್ಲಿ ಕೇವಲ ಕರೆನ್ಸಿ ಆವಶ್ಯಕತೆಗಳಿಗಾಗಿ ಹಣದ ಅತಿ ಚಲಾವಣೆಯ ಸಾಧ್ಯತೆಯಿಲ್ಲ ಎಂದು ಹೇಳಲಾಗುವುದಿಲ್ಲ. ವಾಣಿಜ್ಯ ಅಥವಾ ಸೇವೆಗಳಿಗೆ ಹಣವನ್ನೇ ಪಡೆಯಲಾಗುತ್ತದೆ. ಆದರೆ ಪಡೆದ ಎಲ್ಲ ಹಣವನ್ನು ಕರೆನ್ಸಿ ರೂಪದಲ್ಲಿ ಇಟ್ಟುಕೊಳ್ಳುವುದಿಲ್ಲ. ಎಲ್ಲ ಸರಕುಗಳನ್ನು ವಾಸ್ತವವಾಗಿ ಹಣಕ್ಕೆ ವಿನಿಮಯ ಮಾಡಿಕೊಳ್ಳಲಾಗುತ್ತದೆ. ಏಕೆಂದರೆ, ಇತರ ಉದ್ದೇಶಗಳಿಗಾಗಿ ಬಳಸಿಕೊಳ್ಳುವುದಕ್ಕೆ ಆಯ್ಕೆಯ ಸ್ವಾತಂತ್ರ್ಯವನ್ನು ಹಣವು ಒದಗಿಸುತ್ತದೆ.

---

೧. ಇ.ಆರ್. ಸೆಲಿಗ್‌ಮನ್, 'ಕರೆನ್ಸಿ ಇನ್‌ಫ್ಲೇಷನ್ ಅಂಡ್ ಪಬ್ಲಿಕ್ ಡೆಬ್ಟ್ಸ್; ನ್ಯೂಯಾರ್ಕ್, ೧೯೨೨, ಹರಡಿದೆ.
೨. ಇ.ಆರ್. ಸೆಲಿಗ್‌ಮನ್, 'ಕರೆನ್ಸಿ ಇನ್‌ಫ್ಲೇಷನ್ ಅಂಡ್ ಪಬ್ಲಿಕ್ ಡೆಬ್ಟ್ಸ್; ನ್ಯೂಯಾರ್ಕ್, ಪು. ೧೧
೩. ಮೇಲೆ ಹೇಳಿದ ಪು. ೩೯
೪. ರಿಪೋರ್ಟ್ ಪ್ಯಾರಾ ೬೬

ರೂಪಾಯಿಯ ವಿಷಯದಲ್ಲಿ ಬಳಕೆಯ ಆಯ್ಕೆಯ ಲಕ್ಷಣವು ಇಲ್ಲ. ಪರಿಣಾಮವಾಗಿ, ವಾಣಿಜ್ಯ ಬೇಡಿಕೆಗೆ ಪ್ರತಿಯಾಗಿ ಚಲಾವಣೆಗೆ ತಂದರೂ, ರೂಪಾಯಿಯು ಬೇಕಿರಲಿ ಅಥವಾ ಇಲ್ಲದಿರಲಿ ಕರೆನ್ಸಿ ರೂಪದಲ್ಲಿಯೇ ಇರುತ್ತದೆ ಮತ್ತು ರೂಪಾಯಿಯ ಇಳಿತಾಯವು ಆದರಿಂದಲೇ ಉಂಟಾಗುತ್ತದೆ, ವಾಣಿಜ್ಯ ಬೇಡಿಕೆಗೆ ಪ್ರತಿಯಾಗಿ ಮಾತ್ರ ರೂಪಾಯಿಗಳನ್ನು ಚಲಾವಣೆಗೆ ತರಲಾಗುತ್ತದೆಯೆಂದು ಸಮರ್ಥಿಸುವವರೂ ಕೂಡ ಅಂಥ ಇಳಿತಾಯದ ಸಾಧ್ಯತೆಯನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಅದು ಹಾಗಲ್ಲದಿದ್ದರೆ, ದೇಶದ ಕಾಪುನಿಧಿಯನ್ನು ಹೆಚ್ಚಿಸುವುದಕ್ಕೋಸ್ಕರ ಅವರು ಏಕೆ ಅಷ್ಟೊಂದು ಕಾತುರರಾಗಬೇಕಿತ್ತು? ಆದರೆ ಕೇವಲ ಸರ್ಕಾರದ ಅವಿಚಾರತೆಯ ದೆಸೆಯಿಂದ ರೂಪಾಯಿ ಕರೆನ್ಸಿಗೆ ಅಪಾಯ ಸಂಭವಿಸುವುದಿಲ್ಲ. ಸರ್ಕಾರದ ಜೊತೆಗೆ, ಪ್ರಜೆಗಳ ಯೋಗಕ್ಷೇಮದ ಬಗ್ಗೆ ಕಾಳಜಿಯುಳ್ಳ ರಾಜನೀತಿಜ್ಞರು ಅನೇಕ ಸಂದರ್ಭಗಳಲ್ಲಿ ಸರ್ಕಾರವನ್ನು ಆಕ್ಷೇಪಿಸಿದ್ದಾರೆ. ಏಕೆಂದರೆ, ರೂಪಾಯಿಗಳನ್ನು ನಾಣ್ಯವನ್ನಾಗಿ ಮಾಡಿ ದೊರೆಯುವ ಲಾಭವನ್ನು ದೇಶದ ನೈತಿಕ ಮತ್ತು ಆರ್ಥಿಕ ಪ್ರಗತಿಯ ಮುಂದುವರಿಕೆಗೆ ಒದಗಿಸದೆ ಇದ್ದುದಕ್ಕಾಗಿ ಅವರು ಸರ್ಕಾರವನ್ನು ಆಕ್ಷೇಪಿಸಿದ್ದಾರೆ[೧] ಮತ್ತು ೧೯೦೭ರಲ್ಲಿ ರೂಪಾಯಿಗಳ ಮೇಲಿನ ಲಾಭವನ್ನು ವಾಸ್ತವವಾಗಿ ರೈಲ್ವೆ ವಿಸ್ತರಣೆಗಾಗಿ ಬಳಸಲಾಯಿತು. ಅಂಥ ಉದ್ದೇಶಗಳಿಗಾಗಿ ಕರೆನ್ಸಿಯನ್ನು ಜಾಣ್ಮೆಯಿಂದ ಬಳಸುವುದರಿಂದ ಉದ್ಭವಿಸುವ ಪರಿಣಾಮಗಳ ಬಗ್ಗೆ ಪ್ರತಿಯೊಬ್ಬರ ಆಲೋಚನೆಯೂ ಭಯ ಮತ್ತು ನಿರಾಶೆಯಿಂದ ತುಂಬಿರುತ್ತದೆ. ರೂಪಾಯಿ ಕರೆನ್ಸಿಯನ್ನು ನಿರ್ವಹಿಸುವ ಈ ಅಧಿಕಾರವನ್ನು ಸರ್ಕಾರದಿಂದ ತಪ್ಪಿಸಿ, ಈ ಭಯದ ಮತ್ತು ಪ್ರಲೋಭನೆಯ ಮೂಲವನ್ನು ಕಿತ್ತೊಗೆಯುವುದಕ್ಕೆ ಇದು ಸಕಾಲವಲ್ಲವೇ? ಆದರೆ ಇದನ್ನು ಕಾರ್ಯಗತಗೊಳಿಸುವ ಸಾಧನ ಯಾವುದು? ಈ ನಿರ್ವಹಣೆಯನ್ನು ಪೂರ್ಣವಾಗಿ ಕೈಬಿಡಲು ಬಯಸಿದರೆ ಆಗ ಪರಿವರ್ತನೆಯು ತಕ್ಕ ಕ್ರಮವಾಗುವುದಿಲ್ಲ. ಏಕೆಂದರೆ, ಪರಿವರ್ತನೆಯಿದ್ದರೂ ಸಹ ರೂಪಾಯಿಯು ನಿರ್ವಹಣೆಗೊಂಡ ರೂಪಾಯಿಯಾಗಿಯೇ ಉಳಿಯುತ್ತದೆ. ರೂಪಾಯಿಯ ನಾಣ್ಯೀಕರಣದ ಸಂಪೂರ್ಣ ನಿಲ್ಲಿಸುವಿಕೆಯು ಮಾತ್ರ, ಭಾರತದ ಕರೆನ್ಸಿ ನಿರ್ವಹಣೆಯಲ್ಲಿ ಸರ್ಕಾರದ ಹಸ್ತಕ್ಷೇಪವನ್ನು ತೆಗೆದುಹಾಕುತ್ತದೆ. ಆದುದರಿಂದ ಇದನ್ನೇ ನಾವು ಕೇಳಬೇಕಾಗಿದೆ.

ಅದು ವಿಲಕ್ಷಣ ಎಂದು ಕಾಣಬಹುದಾದರೂ, ಚಲಾವಣೆಯ ನಿರ್ದಿಷ್ಟ ಮಿತಿಯಿರುವ ಒಂದು ಅಪರಿವರ್ತನೀಯ ರೂಪಾಯಿಯಲ್ಲಿ ಸುಭದ್ರತೆಯಿದೆ.

---

೧. ಈ ವಿಷಯದ ಬಗ್ಗೆ ಶಾಂತಚಿತ್ತದ ರಾಜಕಾರಣಿಯಾದ ದಿವಂಗತ ಗೋಖಲೆಯವರು ಮುಂದಾಳುತನ ವಹಿಸಿದ್ದರು. ಹೋಲಿಸಿ: ೧೯೦೭-೦೮ರ ಫೈನಾನ್ಷಿಯಲ್ ಸ್ಟೇಟ್‌ಮೆಂಟ್‌ನಲ್ಲಿರುವ ಭಾಷಣ ಪು. ೨೦೫-೨೦೪, ಮತ್ತು ಇದೇ ಅವಿಚಾರತೆಯನ್ನು ಪ್ರೊ. ವಿ.ಜಿ. ಕಾಳೆಯವರು ತಮ್ಮ "ಕರೆನ್ಸಿ ರಿಫಾರಮ್ ಇನ್ ಇಂಡಿಯಾ" ಎಂಬುದರಲ್ಲಿ ಪುನಃ ಹೇಳಿದ್ದಾರೆ; ೧೯೧೯ ಪು. ೭೫

# ವಿಭಾಗ – V

## ಸಂಕೀರ್ಣ ಲೇಖನಗಳು

* ಹೇಳಿಕೆಗಳು
* ಸಾಕ್ಷ್ಯಗಳು
* ವಿಮರ್ಶೆಗಳು
* ಮುನ್ನುಡಿಗಳು ಇತ್ಯಾದಿ

# ಟಿಪ್ಪಣಿ

ದಿ ರಾಯಲ್ ಕಮಿಷನ್ ಆನ್ ಇಂಡಿಯನ್ ಕರೆನ್ಸಿ ಅಂಡ್ ಫೈನಾನ್ಸ್ ಭಾರತದ ಹಣ ವ್ಯವಸ್ಥೆಯ ಪರಿಶೀಲನೆಗಾಗಿ ಮತ್ತು ಅದರ ಹಣ ಚಲಾವಣೆಯ ಸುಧಾರಣೋಪಾಯಗಳನ್ನು ಸೂಚಿಸಲು ೧೯೨೪–೨೫ರಲ್ಲಿ ಭಾರತಕ್ಕೆ ಭೇಟಿನೀಡಿತು. ಆಯೋಗ ಕೆಳಕಾಣಿಸಿದ ಸದಸ್ಯರುಗಳನ್ನೊಳಗೊಂಡಿತ್ತು:

**ಇ. ಹಿಲ್ಟನ್ ಯಂಗ್, ಅಧ್ಯಕ್ಷ**
**ಆರ್. ಎನ್. ಮುಖರ್ಜಿ**
**ನಾರ್ಕೋಟ್ ವಾರೆನ್**
**ಆರ್.ಎ. ಮಾಂಟ್**
**ಎಮ್.ಬಿ. ದಾದಾಭಾಯ್**
**ಹೆನ್ರಿ ಸ್ಟ್ರಾಕೋಷ್**
**ಅಲೆಕ್ಸ್ ಆರ್. ಮರ್ರೇ**
**ಪುರುಷೋತ್ತಮ ದಾಸ್ ಠಾಕೂರ್‌ದಾಸ್**
**ಜೆ.ಸಿ. ಕೋಯಾಜಿ**
**ಡಬ್ಲ್ಯು.ಇ. ಪ್ರೆಸ್ಟನ್**
**ಜಿ.ಹೆಚ್. ಬಾಕ್ಸ್‌ಟರ್, ಕಾರ್ಯದರ್ಶಿ**
**ಎ. ಅಯ್ಯಂಗಾರ್, ಕಾರ್ಯದರ್ಶಿ**

ಡಾ. ಅಂಬೇಡ್ಕರ್ ಅವರು ಆಯೋಗವು ಹೊರಡಿಸಿದ್ದ ಪ್ರಶ್ನಾವಳಿಯ ಮೇಲೆ ತಮ್ಮ ಅಭಿಪ್ರಾಯಗಳನ್ನು ಆಯೋಗಕ್ಕೆ ಸಲ್ಲಿಸಿದ ಹೇಳಿಕೆಯಲ್ಲಿ ವಿವರಿಸಿದ್ದರು. ಅವರ ಹೇಳಿಕೆ ಮತ್ತು ಅವರು ಆಯೋಗಕ್ಕೆ ನೀಡಿದ ಸಾಕ್ಷ್ಯಗಳನ್ನು ಪ್ರಶ್ನಾವಳಿಯೊಂದಿಗೆ ಇಲ್ಲಿ ಕೊಡಲಾಗಿದೆ.

# ೧
# ಹಿಲ್ಟನ್-ಯಂಗ್ ಆಯೋಗವು ಭಾರತದ ಸಾಕ್ಷಿಗಳಿಗೆ ಹಂಚಿದ ಮನವಿಪತ್ರದ ಪ್ರತಿ*

ಆಯೋಗವು ವಿಚಾರಿಸಲಿರುವ ಮುಖ್ಯ ಪ್ರಶ್ನೆಗಳನ್ನು ಒಳಗೊಂಡಿರುವ ಕೆಳಗೆ ತೋರಿಸಲಾದ ಮನವಿಪತ್ರವು ಸಾಕ್ಷ್ಯ ಹೇಳುವವರು ತಮ್ಮ ಸಾಕ್ಷ್ಯಾಧಾರಗಳನ್ನು ತಯಾರಿಸಲು ಸಹಾಯಕವಾಗಲೆಂಬ ಉದ್ದೇಶದಿಂದ ಪ್ರಕಟಿತವಾಗಿದೆ. ಇದು ಸರ್ವವಿಷಯ-ವ್ಯಾಪಕವಲ್ಲ. ಪ್ರತಿ ಸಾಕ್ಷಿಯೂ ಪ್ರತಿ ಪ್ರಶ್ನೆಗೂ ಉತ್ತರಿಸಬೇಕೆಂದೂ ಇಲ್ಲ:-

೧) ರೂಪಾಯಿಯ ಮೌಲ್ಯದ ಸ್ಥಿರೀಕರಣ ಅಥವಾ ಮತ್ತಿತರ ಕ್ರಮಗಳಿಂದ ಭಾರತದ ಹಣಪದ್ಧತಿ ಮತ್ತು ಹಣಕಾಸಿನ ಆಡಳಿತದ ಸಮಸ್ಯೆಗಳ ಪರಿಹಾರಕ್ಕೆ ಸೂಕ್ತ ಸಮಯ ಕೂಡಿಬಂದಿದೆಯೇ? ಆಂತರಿಕ ಬೆಲೆಗಳ ಸ್ಥಿರತೆ ಮತ್ತು ವಿದೇಶೀ ವಿನಿಮಯ ದರದ ಸ್ಥಿರತೆ ಇವುಗಳ ತುಲನಾತ್ಮಕ ಮಹತ್ವವೇನು?

ರೂಪಾಯಿಯ ಮೌಲ್ಯದಲ್ಲಿ ಏರಿಕೆ ಮತ್ತು ಇಳಿತಗಳಿಂದ ಉಂಟಾಗುವ ಪರಿಣಾಮಗಳಾವುವು? ರೂಪಾಯಿಯ ಸ್ಥಿರತೆ, ಹೆಚ್ಚಿದ ಮೌಲ್ಯ, ಕಡಿಮೆಯಾದ ಮೌಲ್ಯ ಇವುಗಳಿಂದ ವಾಣಿಜ್ಯ, ಉದ್ದಿಮೆ ಮತ್ತು ಒಕ್ಕಲುತನಗಳ ಮೇಲೆ ಯಾವ ಪರಿಣಾಮಗಳಾಗುವುವು?

೨) ಯಾವ ಪ್ರಮಿತಿಯನ್ನು ಸ್ವೀಕರಿಸಬೇಕು? ರೂಪಾಯಿಯ ವಿನಿಮಯ ದರವನ್ನು ಸ್ಥಿರವಾಗಿ ಇಡಬೇಕೇ, ಬೇಡವೇ? ಸ್ಥಿರವಾಗಿ ಇರಿಸುವುದಾದರೆ ಯಾವ ದರವನ್ನು ಸ್ಥಿರವಾಗಿ ಇಡಬೇಕು?

ಸ್ಥಿರತೆಯ ಬಗ್ಗೆ ನಿರ್ಣಯವನ್ನು ಯಾವಾಗ ಜಾರಿಗೆ ತರಬೇಕು?

೩) ಆಯ್ಕೆ ಮಾಡಿದ ರೂಪಾಯಿಯ ವಿನಿಮಯ ದರ ಈಗಿನ ದರಕ್ಕಿಂತ ತೀರಾ ಭಿನ್ನವಾದರೆ ಪರಿವರ್ತನೆಯನ್ನು ಹೇಗೆ ಸಾಧಿಸಬೇಕು?

೪) ಆಯ್ಕೆ ಮಾಡಿದ ವಿನಿಮಯ ದರವನ್ನು ಕಾಯ್ದುಕೊಂಡು ಹೋಗಲು ಯಾವ ಕ್ರಮಗಳು ಆವಶ್ಯಕವಾಗಿವೆ?

ಯುದ್ಧಪೂರ್ವದಲ್ಲಿದ್ದ ಸುವರ್ಣ ವಿನಿಮಯ ಪ್ರಮಿತಿಯನ್ನು ಮೊದಲು ಇದ್ದ ರೂಪದಲ್ಲಿಯೇ ಏಕೆ ಮರಳಿ ಸ್ಥಾಪಿಸಬೇಕು? ಅಲ್ಪ-ಸ್ವಲ್ಪ ಮಾರ್ಪಾಡುಗಳು ಅವಶ್ಯವೆಂದು ಎನಿಸಿದರೆ ಈ ಮಾರ್ಪಾಡುಗಳು ಯಾವುವು?

ಸುವರ್ಣ ಪ್ರಮಿತಿಯ ಕಾಯ್ದಿಟ್ಟ ನಿಧಿಯ ರಚನೆ ಹೇಗಿರಬೇಕು? ಆ ನಿಧಿಯ ಮೊತ್ತ ಎಷ್ಟು ಇರಬೇಕು ಹಾಗೂ ಅದನ್ನು ಎಲ್ಲಿ ಸ್ಥಾಪಿಸಬೇಕು? ಆ ನಿಧಿಯನ್ನು ಹೇಗೆ ಉಪಯೋಗಿಸಬೇಕು?

೫) ಕಾಗದದ ಹಣವನ್ನು ಚಲಾವಣೆಗೆ ತರುವ ಅಧಿಕಾರವನ್ನು ಯಾರಿಗೆ ಒಪ್ಪಿಸಿಕೊಡಬೇಕು? ಯಾವ

---

* ರಿಪೋರ್ಟ್ ಆಫ್ ದಿ ರಾಯಲ್ ಕಮಿಷನ್ ಆಫ್ ಇಂಡಿಯನ್ ಕರೆನ್ಸಿ ಅಂಡ್ ಫೈನಾನ್ಸ್ ಸಂ. III, ಅನುಬಂಧ ೯೫ಎ, ಪು. ೬೧೨

ತತ್ವದ ಆಧಾರದ ಮೇಲೆ ಈ ಹಣವನ್ನು ಚಲಾವಣೆಯಲ್ಲಿ ತರಬೇಕು? ಈ ಹಣದ ನಿಯಂತ್ರಣದ ಅಧಿಕಾರವನ್ನು ಭಾರತದ ಇಂಪೀರಿಯಲ್ ಬ್ಯಾಂಕುಗಳಿಗೆ ವರ್ಗಾಯಿಸಬೇಕೆ? ವರ್ಗಾಯಿಸುವುದಾದರೆ ಯಾವ ಕರಾರುಗಳನ್ನು ಹಾಕಬೇಕು?

೬) ಭಾರತದಲ್ಲಿ ಚಿನ್ನದ ನಾಣ್ಯಗಳನ್ನು ಟಂಕಿಸುವ ಬಗ್ಗೆ, ಮತ್ತು ಇಂಥ ನಾಣ್ಯಗಳ ಚಲಾವಣೆಯ ಬಗ್ಗೆ ಯಾವ ಧೋರಣೆಯನ್ನು ಸ್ವೀಕರಿಸಬೇಕು? ರೂಪಾಯಿಗೆ ವಿನಿಮಯವಾಗಿ ಬಂಗಾರವನ್ನು ಕೊಡುವ ಹೊಣೆಯನ್ನು ಸ್ವೀಕರಿಸಬೇಕೆ?

೭) ಭಾರತ ಸರ್ಕಾರದ ಹಣ-ರವಾನೆಯ ಕಾರ್ಯವನ್ನು ನಿರ್ವಹಿಸಲು ಯಾವ ವಿಧಾನಗಳನ್ನು ಅನುಸರಿಸಬೇಕು?

ಈ ಕಾರ್ಯವನ್ನು ಇಂಪೀರಿಯಲ್ ಬ್ಯಾಂಕು ನಿರ್ವಹಿಸಬೇಕೆ?

೮) ಋತುಮಾನಕ್ಕೆ ಅನುಸಾರವಾಗಿ ಉಂಟಾಗುವ ಹಣದ ಬೇಡಿಕೆಯನ್ನು ಪೂರೈಸುವಲ್ಲಿ ಸೂಕ್ತವಾಗಿ ಬದಲಾವಣೆಗಳನ್ನು ಮಾಡಲು ಕ್ರಮಗಳನ್ನು ತೆಗೆದುಕೊಳ್ಳುವುದು ಅಪೇಕ್ಷಣೀಯವೇ? ಅಪೇಕ್ಷಣೀಯ ಎಂದೆನಿಸಿದರೆ ಯಾವ ಕ್ರಮಗಳು ಅಪೇಕ್ಷಣೀಯ ಎನಿಸುತ್ತವೆ?

ಹುಂಡಿಗಳ ಆಧಾರದ ಮೇಲೆ ಹಣವನ್ನು ಚಲಾವಣೆಗೆ ತರುವಾಗ ಷರತ್ತುಗಳನ್ನು ಹಾಕಬೇಕೆ? ಹೀಗೆ ಕರಾರುಗಳನ್ನು ಹಾಕುವುದು ಯೋಗ್ಯವೆಂದೆನಿಸಿದರೆ ಯಾವ ಕಾರಾರುಗಳನ್ನು ಹಾಕಬೇಕು?

೯) ಈಗಿದ್ದ ಬೆಳ್ಳಿ-ಖರೀದಿಯ ವಿಧಾನಗಳಲ್ಲಿ ಬದಲಾವಣೆಗಳನ್ನೇನಾದರೂ ಮಾಡಬೇಕೆ?

**ಟಿಪ್ಪಣಿ:-**

ಭಾರತದಲ್ಲಿಯ ಸಾಕ್ಷಿಗಳಿಗೆ ಈ ಪ್ರಶ್ನೆಗಳನ್ನು ವಿತರಿಸಲಾಗಿತ್ತು. ಭಾರತದಲ್ಲಿ ದೊರೆತ ಮೌಖಿಕ ಮತ್ತು ಲಿಖಿತ ಸಾಕ್ಷ್ಯಾಧಾರಗಳಿಂದ ವಿವಿಧ ವಿಷಯಗಳಿಗೆ ನೀಡಬೇಕಾದ ತುಲನಾತ್ಮಕ ಮಹತ್ವ ಹೆಚ್ಚು ಸ್ಪಷ್ಟವಾಗಿವೆ. ಆ ಮೇರೆಗೆ ಈ ಮನವಿ-ಪತ್ರವನ್ನೂ ಮತ್ತು "ಅಧ್ಯಕ್ಷರು ಕೇಳುವ ಪೂರಕ ಪ್ರಶ್ನಾವಳಿ"ಯನ್ನೂ ಸಾಕ್ಷಿಗಳ ಮಾಹಿತಿಗಾಗಿ ತಯಾರಿಸಲಾಗಿದೆ.

# ೨
# ಲಿಖಿತ ಹೇಳಿಕೆ*

ಡಾ. ಬಿ.ಆರ್. ಅಂಬೇಡ್ಕರ್, ಬಾರ್–ಎಟ್–ಲಾ ಅವರು ಭಾರತದ ಹಣ ವ್ಯವಸ್ಥೆಯ ಬಗ್ಗೆ ಬ್ರಿಟಿಷ್ ಸಾಮ್ರಾಟರಿಂದ ನಿಯಮಿಸಲ್ಪಟ್ಟ ಹಿಲ್ಟನ್–ಯಂಗ್ ಆಯೋಗಕ್ಕೆ ಸಲ್ಲಿಸಿದ್ದು.

೧. ಆಯೋಗವು ಹೊರಡಿಸಿದ ಪ್ರಶ್ನಾವಳಿಗೆ ಉತ್ತರರೂಪವಾಗಿ ನನ್ನ ಅಭಿಪ್ರಾಯಗಳನ್ನು ಒಳಗೊಂಡ ಹೇಳಿಕೆಯನ್ನು ಕೆಳಗೆ ಕಾಣಿಸಿದ್ದೇನೆ. ಆಯೋಗವು ನಿರ್ದಿಷ್ಟ ಪರಿಹಾರ ಸೂಚಿಸಬೇಕಾದ ಮುಖ್ಯ ಸಮಸ್ಯೆಯು ೪ನೆಯ ಪ್ರಶ್ನೆಗೆ ಸಂಬಂಧಿಸಿರುವುದೆಂದು ನಾನು ತಿಳಿದಿರುವೆ. ಆದ್ದರಿಂದ ನಾನು ಆ ಪ್ರಶ್ನೆಯ ಉತ್ತರದಿಂದಲೇ ಪ್ರಾರಂಭಿಸುತ್ತೇನೆ.

೨. ಸುವರ್ಣ ವಿನಿಮಯ ಪ್ರಮಿತಿಯು ಕೆಳಗೆ ಕಾಣಿಸಿದ ಕಾರಣಗಳಿಂದ ಭಾರತಕ್ಕೆ ಯಾವುದೇ ರೀತಿ ಲಾಭದಾಯಕವಾಗದು ಎಂದು ನನ್ನ ಖಚಿತ ಅಭಿಪ್ರಾಯ.

(i) ಈ ಪ್ರಮಿತಿಯು ಶುದ್ಧ ಸುವರ್ಣ ಪ್ರಮಿತಿಯ ಸ್ವಾಭಾವಿಕ ಸ್ಥಿರತೆಯನ್ನು ಹೊಂದಿಲ್ಲ :– ಶುದ್ಧ ಸುವರ್ಣ ಪ್ರಮಿತಿಯಲ್ಲಿ ಚಲಾವಣೆಯಲ್ಲಿರುವ ಬಂಗಾರವು ದೊಡ್ಡ ಪ್ರಮಾಣದ್ದಾಗಿದ್ದು ಈ ಸಂಗ್ರಹಕ್ಕೆ ಹೋಲಿಸಿದಲ್ಲಿ ಹೊಸತಾಗಿ ಚಲಾವಣೆಗೆ ತಂದ ಹೆಚ್ಚುವರಿ ಬಂಗಾರ ಅತ್ಯಲ್ಪ ಪ್ರಮಾಣದ್ದಿರುತ್ತದೆ. ಈ ಕಾರಣದಿಂದಲೇ ಶುದ್ಧ ಸುವರ್ಣ ಪ್ರಮಿತಿಯು ಸ್ಥಿರತೆಯನ್ನು ಒದಗಿಸುತ್ತದೆ. ಆದರೆ ಸುವರ್ಣ ವಿನಿಮಯ ಪ್ರಮಿತಿಯಲ್ಲಿ ಹೊಸತಾಗಿ ಚಲಾವಣೆಗೆ ಬರುವ ಹೆಚ್ಚಳವು ಹಣವನ್ನು ಚಲಾವಣೆಗೆ ತರುವ ಅಧಿಕಾರಿಯ ಇಚ್ಛೆಯನ್ನೇ ಅವಲಂಬಿಸಿದ್ದು, ಈ ಹೆಚ್ಚಳದ ಪ್ರಮಾಣವು ಪ್ರಮಿತಿಯ ಸ್ಥಿರತೆಗೆ ಗಣನೀಯವಾಗಿ ಧಕ್ಕೆಯನ್ನುಂಟುಮಾಡಬಹುದು.

(ii) ಹೊಸತಾಗಿ ಚಲಾವಣೆಯಲ್ಲಿ ಬರುವ ಹಣದ ಮೊತ್ತವು ಚಲಾವಣೆಗೆ ತರುವವರ ಇಚ್ಛೆಗೆ ಅನುಗುಣವಾಗಿರುತ್ತದೆ. ಮತ್ತು ಅಂತಹ ಇಚ್ಛೆಗೆ ಯಾವುದೇ ನಿಯಂತ್ರಣವಿರುವುದಿಲ್ಲ. ಶುದ್ಧ ಸುವರ್ಣ ಪ್ರಮಿತಿಯು ಬದಲಾಗುತ್ತಿರುವ ಮಾನವಿಕ ವ್ಯವಹಾರಗಳನ್ನು ಮನುಷ್ಯರು ನಿಯಂತ್ರಿಸಲಾಗದ ನಿಸರ್ಗ–ಚಕ್ರಕ್ಕೆ ಕಟ್ಟಿ ಹಾಕುವುದೆಂದು ಕೆಲವರು ಹೇಳುತ್ತಾರೆ. ಈ ಕಾಠಿಣ್ಯವನ್ನು ತಪ್ಪಿಸಲು ಸುವರ್ಣ ವಿನಿಮಯ ಪ್ರಮಿತಿಯು ಒಂದು ಸಾಧನವನ್ನು ಒದಗಿಸಬಲ್ಲದೆಂಬುದು ಅವರ ನಂಬಿಕೆ. ಆದರೆ ಚಲಾವಣೆಯಲ್ಲಿ ತರುವ ಹಣದ ಗಾತ್ರವನ್ನು ನಿರ್ಣಯಿಸುವ ವಿವೇಚನಾಶಕ್ತಿಯನ್ನು ಸರಿಯಾಗಿ ನಿಯಂತ್ರಿಸುವ ವಿಧಾನಗಳನ್ನು ರೂಪಿಸಿದಾಗ ಮಾತ್ರ ಅದು ವಿವೇಚನಾಯುಕ್ತ ಹಣವ್ಯವಸ್ಥೆ ಎಂದೆನಿಸುತ್ತದೆ. ಹಣ ಚಲಾವಣೆಯಲ್ಲಿ ತರುವ ಅಧಿಕಾರಿಯ ವಿವೇಚನೆಯ ಮೇಲೆ ಕೆಲವು ನಿಯಂತ್ರಣಗಳಿರಲೇಬೇಕು.

---

* ಬ್ರಿಟಿಷ್ ಅರಸರಿಂದ ನಿಯಮಿಸಲಾದ ಭಾರತದ ಹಣ ಮತ್ತು ಹಣಕಾಸು ವ್ಯವಸ್ಥೆಯ ಬಗೆಗಿನ ವರದಿ ಸಂಪುಟ II, ೨೯ನೆಯ ಪುರವಣಿ ಹಿಸ್ ಮೆಜೆಸ್ಟೀಸ್ ಸ್ಟೇಶನರಿ ಆಫೀಸ್, ಲಂಡನ್ ೧೯೨೬, ಪುಟಗಳು ೨೩೫–೨೫೯.

ಈ ದೃಷ್ಟಿಕೋನದಿಂದ ವಿನಿಮಯ ಪ್ರಮಿತಿಗಿಂತ ಪರಿವರ್ತನೀಯ ಪ್ರಮಿತಿಯು ಉತ್ತಮ. ಹಣವನ್ನು ಚಲಾವಣೆಗೆ ತರುವಲ್ಲಿ ವಿವೇಚನಾ ಪ್ರಧಾನವಿರುವ ಮಟ್ಟಿಗೆ ಪರಿವರ್ತನೀಯ ಪ್ರಮಿತಿಗೂ ವಿನಿಮಯ ಪ್ರಮಿತಿಗಳಿಗೂ ಸಾಮ್ಯ ಇದೆ. ಆದರೆ ಪರಿವರ್ತನೀಯ ಪ್ರಮಿತಿಯು ಹಣ-ಚಲಾವಣೆಯ ಅಧಿಕಾರವುಳ್ಳವರ ವಿವೇಚನೆಯನ್ನು ನಿಯಂತ್ರಿಸುತ್ತದೆಂಬ ಕಾರಣದಿಂದಲೇ ವಿನಿಮಯ ಪ್ರಮಿತಿಗಿಂತ ಶ್ರೇಷ್ಠವೆನಿಸುತ್ತದೆ. ವಿನಿಮಯ ಪ್ರಮಿತಿಯಲ್ಲಿ ಈ ಅಧಿಕಾರ ಅನಿಯಂತ್ರಿತವಾಗಿದೆ. ವಿದೇಶೀ ಹಣ ವಿನಿಮಯದಿಂದ ವಿನಿಮಯ ಪ್ರಮಿತಿಯಲ್ಲಿಯೂ ನಿಯಂತ್ರಣ ಉಂಟೆಂಬುದು ನಿಜ. ನಿಯಂತ್ರಣದ ಸಂಪೂರ್ಣ ಅಭಾವಕ್ಕಿಂತ ಈ ನಿಯಂತ್ರಣ ಒಳ್ಳೆಯದಾದರೂ ಇಂಥ ನಿಯಂತ್ರಣದ ವಿಧಾನವು ಪರೋಕ್ಷ ಮತ್ತು ಸಡಿಲವಾಗಿರುವುದರಿಂದ ಎಲ್ಲ ತರಹದ ಪರಿಸ್ಥಿತಿಗಳಲ್ಲಿ ಭರವಸೆಗೆ ಅರ್ಹವಾಗಲಾರದು.

(iii) ಅದು ಮಿತವ್ಯಯಕಾರಿಯಾಗಿದೆ, ಆದರೆ ಇದೇ ಕಾರಣದಿಂದ ಅಭದ್ರವೂ ಆಗಿದೆ:- ಬಂಗಾರದ ಉಪಯೋಗದಲ್ಲಿ ತಕ್ಕಮಟ್ಟಿಗೆ ಮಿತವ್ಯಯ ಸಾಧಿಸುವುದೆಂಬ ಕಾರಣದಿಂದ ಹಲವು ಲೇಖಕರು ವಿನಿಮಯ ಪ್ರಮಿತಿಯನ್ನು ಮೆಚ್ಚುತ್ತಾರೆ. ಆದರೆ ಈ ಪದ್ಧತಿ ಭದ್ರತೆಯನ್ನೊದಗಿಸಬಲ್ಲದೆ? ಯಾವುದೇ ಹಣದ ವ್ಯವಸ್ಥೆ ಮಿತವ್ಯಯ ಮತ್ತು ಭದ್ರತೆ ಎರಡನ್ನೂ ಒದಗಿಸಬೇಕು. ಮಿತವ್ಯಯಕಾರಿಯಾಗಿ ಇರದಿದ್ದರೂ ನಡೆದೀತು. ಆದರೆ ಭದ್ರತೆ ಇಲ್ಲದೇ ವ್ಯವಹಾರ ಸಾಗದು. ಕಾಗದವನ್ನಾಗಲಿ, ರೂಪಾಯಿಯನ್ನಾಗಲಿ ವಿನಿಮಯದ ಮಾಧ್ಯಮ (ಹಣ) ಎಂದು ಉಪಯೋಗಿಸುವುದು ಬಂಗಾರವನ್ನು ಉಪಯೋಗಿಸುವುದಕ್ಕಿಂತ ಮಿತವ್ಯಯಕರ ಎಂಬುದು ಸ್ಪಷ್ಟ; ಇದರಂತೆಯೇ ಬಂಗಾರವನ್ನು ಹಣದಂತೆ ಉಪಯೋಗಿಸುವಲ್ಲಿ ಮಿತವ್ಯಯವು ಬಂಗಾರದ ಮೌಲ್ಯದ ಪ್ರಮಾಣವಾಗಿ ಕಾರ್ಯಮಾಡುವುದಕ್ಕೆ ಮಾರಕ ಎನ್ನುವದೂ ಅಷ್ಟೇ ಸರಳ ಹಾಗೂ ಸ್ಪಷ್ಟ. ಹಣದ ರೂಪದಲ್ಲಿ ಬಂಗಾರದ ಚಲಾವಣೆ ನಿಲ್ಲಿಸುವುದರ ಅರ್ಥವೇನು? ಹೀಗೆ ಬಂಗಾರದ ಉಪಯೋಗದಲ್ಲಿ ಮಿತವ್ಯಯ ಸಾಧಿಸಿದರೆ ನೇರವಾಗಿ ಬಂಗಾರದ ಪೂರೈಕೆಯನ್ನು ಹೆಚ್ಚಿಸಿದಂತಾಗುತ್ತದೆ. ಇಂಥ ಹೆಚ್ಚಳದಿಂದ ಬಂಗಾರದ ಮೌಲ್ಯ ಕಡಿಮೆ ಆಗುವುದು. ಅರ್ಥಾತ್ ಬಂಗಾರದ ಮಿತವ್ಯಯದಿಂದ ಅದು ಅಪಮೌಲ್ಯ ಹೊಂದುವ ಸರಕು ಆಗುವುದರಿಂದ ಅದು ಮೌಲ್ಯದ ಪ್ರಮಾಣವಾಗಿ ಕಾರ್ಯಮಾಡಲು ಅಷ್ಟರಮಟ್ಟಿಗೆ ಅನರ್ಹವಾಗುವುದು ಆದ್ದರಿಂದ ನೀವು ಬಂಗಾರದ ಉಪಯೋಗದಲ್ಲಿ ಮಿತವ್ಯಯ ಮಾಡಿ ಅದನ್ನೇ ಮೌಲ್ಯ ಪ್ರಮಾಣವೆಂದು ಉಪಯೋಗಿಸಲಾಗದು. ಬಂಗಾರದ ಮಿತವ್ಯಯ ಮಾಡಬೇಕಾದರೆ ಅದನ್ನು ಮೌಲ್ಯಪ್ರಮಾಣವೆಂದು ಉಪಯೋಗ ಮಾಡುವುದನ್ನು ಕೈಬಿಡಬೇಕು. ವಿನಿಮಯ ಪ್ರಮಿತಿಯ ಮಿತವ್ಯಯ ಎಂಬ ಗುಣವು ಹಣದ ಭದ್ರತೆಗೆ ವಿರೋಧವಾಗಿದೆ.

೩. ಆದ್ದರಿಂದ ಶುದ್ಧ ಸುವರ್ಣ ಪ್ರಮಿತಿ ಮತ್ತು ವಿನಿಮಯ ಪ್ರಮಿತಿ ಇವೆರಡರಲ್ಲೊಂದನ್ನು ಆರಿಸಿಕೊಳ್ಳುವ ಪ್ರಶ್ನೆಯೇ ಇಲ್ಲ. ನಮಗೆ ಸುವರ್ಣ ಪ್ರಮಿತಿ ಬೇಡವಾದಲ್ಲಿ ಫಿಶರ್ ಪ್ರತಿಪಾದಿಸಿದ ಪರಿಹಾರಯುತ ಪ್ರಮಿತಿ (Compensating Standard), ಅಥವಾ ಪ್ರೊ. ಜೆವನ್ಸ್ ಪ್ರತಿಪಾದಿಸಿದ ಸೂಚಕಾಂಕ ಪ್ರಮಿತಿಯನ್ನು (Tabular Standard) ಆಯ್ದುಕೊಳ್ಳಬೇಕು. ಇವೆರಡೂ ಪ್ರಮಿತಿಗಳು ಸುವರ್ಣ ಪ್ರಮಿತಿಗಿಂತ ಉತ್ತಮ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಅವು ಕಾರ್ಯರೂಪದಲ್ಲಿ ಬರಬೇಕಾದರೆ ಮನುಕುಲ ಈಗಿನದಕ್ಕಿಂತ ಹೆಚ್ಚು ತತ್ವಜ್ಞಾನಯುತವಾಗಬೇಕು ಅಲ್ಲಿಯವರೆಗೆ ಸುವರ್ಣ ಪ್ರಮಿತಿ "ತಪ್ಪು ಎಸಗಲೂ

ಮತ್ತು ಮೋಸ ಮಾಡಲೂ" ಅವಕಾಶ ನೀಡದ ಹಣ ಪದ್ಧತಿ ಮಾತ್ರ ಎಂದು ನನ್ನ ಅನಿಸಿಕೆ.

೪. ಇನ್ನು ಮುಂದಿನ ಮಹತ್ವದ ಪ್ರಶ್ನೆ ಕಾಯ್ದಿಟ್ಟ ಬಂಗಾರ–ನಿಧಿಯದು. ಈ ನಿಧಿಯ ಸ್ಥಳ, ರಚನೆ ಮುಂತಾದ ವಿಷಯಗಳನ್ನು ಚರ್ಚಿಸುವ ಮೊದಲು ಇಂಥ ನಿಧಿ ನಮಗೆ ಬೇಕೇ ಎಂಬುದನ್ನು ನಿರ್ಣಯಿಸುವುದು ಅವಶ್ಯ. ಸುವರ್ಣ ಪ್ರಮಿತಿಯನ್ನು ನಾವು ಜಾರಿಗೆ ತರಬೇಕಾಗಿರುವ ರೂಪದ ಮೇಲೆ ಈ ಪ್ರಶ್ನೆಗೆ ಉತ್ತರ ಅವಲಂಬಿಸಿದೆ. ಹಲವು ಜನರು ಟಂಕಸಾಲೆ ಸ್ಥಾಪಿಸಿ ಚಿನ್ನದ ನಾಣ್ಯ ಹೊರತಂದರೆ ಅದು ಸುವರ್ಣ ಪ್ರಮಿತಿ ಆಯಿತೆಂದು ಭಾವಿಸಿದ್ದಾರೆ. ಇದಕ್ಕಿಂತ ಹೆಚ್ಚಿನ ತಪ್ಪುಕಲ್ಪನೆ ಇನ್ನೊಂದಿಲ್ಲ. ಸುವರ್ಣ ಪ್ರಮಿತಿ ಎಂದರೆ ಬರೀ ಸುವರ್ಣದ ಟಂಕಸಾಲೆ ಪ್ರಾರಂಭಿಸುವುದಲ್ಲ. ಸುವರ್ಣವನ್ನು ಚಲನೆಯಲ್ಲಿ ತರುವುದೇ ಮುಖ್ಯ. ಏಕೆಂದರೆ ಚಲನೆಯಲ್ಲಿರುವ ಹಣವೇ ಪ್ರಮಿತಿಯಾಗುತ್ತದೆ. ಬಂಗಾರದ ಚಲನೆಬೇಕಿದ್ದರೆ ಇತರ ರೂಪದ ಹಣದ (ತಾಮ್ರ ನಾಣ್ಯ. ಕಾಗದದ ನೋಟು ಇತ್ಯಾದಿ) ಮೊತ್ತವನ್ನು ಮಿತಿಯಲ್ಲಿ ಇಡಬೇಕು. ಇಂಥ ಹಣವನ್ನು ಮಿತಿಗೊಳಿಸಲು ಎರಡು ಉಪಾಯಗಳಿವೆ. ಮೊದಲನೆಯದು ಇಂಥ ಹಣವನ್ನು ಪರಿವರ್ತನೀಯವನ್ನಾಗಿ ಮಾಡುವುದು, ಎರಡನೆಯದು ಇಂಥ ಹಣದ ಮೊತ್ತದ ಮೇಲೆ ನಿರ್ದಿಷ್ಟ ಮಿತಿಯನ್ನು ಹೇರುವುದು. ಹಣವನ್ನು ಪರಿವರ್ತನೀಯವಾಗಿಟ್ಟರೆ ಕಾಯ್ದಿಟ್ಟ ಬಂಗಾರ–ನಿಧಿ ಅವಶ್ಯ. ಹಣದ ಮೊತ್ತದ ಮೇಲೆ ನಿರ್ದಿಷ್ಟ ಮಿತಿ ಹೇರಿದರೆ ಈ ನಿಧಿ ಅನಾವಶ್ಯಕ. ಇವೆರಡು ಉಪಾಯಗಳಲ್ಲಿ ಎರಡನೆಯ ಪದ್ಧತಿ (ಹಣದ ಮೊತ್ತದ ಮೇಲೆ ನಿರ್ದಿಷ್ಟ ಮಿತಿ ಹೇರುವುದು) ನನಗೆ ಮೆಚ್ಚಿಗೆಯಾಗಿದೆ. ಇದಕ್ಕೆ ಎರಡು ಕಾರಣಗಳಿವೆ:–

(i) ನಿರ್ವಹಣೆಯು ವಿನಿಮಯ ಪ್ರಮಿತಿಯ ಮುಖ್ಯ ದೋಷಗಳಲ್ಲೊಂದು. ಪರಿವರ್ತನೀಯ ಹಣ ಪದ್ಧತಿ ಸಹ ನಿರ್ವಹಣೆಗೆ ಒಳಪಟ್ಟಿದೆ. ಆದ್ದರಿಂದ ಈ ಪದ್ಧತಿಯನ್ನು ಅನುಸರಿಸಿದರೆ ಸದ್ಯದ ಹಣವ್ಯವಸ್ಥೆಯ ಪ್ರಮುಖ ದೋಷವಾದ ನಿರ್ವಹಣೆಯನ್ನು ನಿವಾರಿಸಲು ಶಕ್ಯವಿಲ್ಲ. ಇದಲ್ಲದೇ ಹಣದ ಆಡಳಿತ ಸರ್ಕಾರದ ಹಿಡಿತದಲ್ಲಿದ್ದರೆ ಆಡಳಿತಕ್ಕೆ ಅವಕಾಶವುಳ್ಳ ಹಣದ ವ್ಯವಸ್ಥೆಯನ್ನು ಸಂಪೂರ್ಣ ಕೈ ಬಿಡಬೇಕು. ಹಣದ ಆಡಳಿತ ಬ್ಯಾಂಕಿನ ಹಿಡಿತದಲ್ಲಿ ಇದ್ದಾಗ ದುರಾಡಳಿತದ ಸಂಭವ ಕಡಿಮೆ. ಏಕೆಂದರೆ ಅದು ಹಣವನ್ನು ಚಲನೆಗೆ ತರುವಾಗ ತಪ್ಪು ಮಾಡಿದರೆ ಅಥವಾ ಅವ್ಯವಸ್ಥೆ ಉಂಟುಮಾಡಿದರೆ ಬ್ಯಾಂಕಿನ ಮಾಲೀಕನ ಆಸ್ತಿಗೇ ಸಂಚಕಾರ ಉಂಟಾಗುವುದು. ಆದರೆ ಸರ್ಕಾರವೇ ಹಣವನ್ನು ಚಲನೆಗೆ ತಂದಾಗ ಅವ್ಯವಸ್ಥೆ ಅಥವಾ ದುರಾಡಳಿತದ ಸಂಭವ ಹೆಚ್ಚು. ಏಕೆಂದರೆ ಸರ್ಕಾರೀ ಹಣವನ್ನು ಚಲನೆಗೆ ತರುವ ಅಧಿಕಾರಿಗಳಿಗೆ ತಪ್ಪು ನಿರ್ಣಯಗಳಿಂದಾಗಲೀ, ಅವ್ಯವಸ್ಥೆಯ ಆಡಳಿತದಿಂದಾಗಲೀ ವೈಯಕ್ತಿಕ ಹಾನಿಯೇನೂ ಇಲ್ಲ ಮತ್ತು ವೈಯಕ್ತಿಕ ಜವಾಬುದಾರಿ ಕೂಡಾ ಇರುವುದಿಲ್ಲ.

(ii) ನಿರ್ದಿಷ್ಟ ಮಿತಿಯುಳ್ಳ ಹಣವ್ಯವಸ್ಥೆಗೆ ನಿರ್ವಹಣೆಯ ಅಗತ್ಯವಿರುವುದಿಲ್ಲ ಮತ್ತು ಅದು ಹಣದ ಚಲನೆಯಲ್ಲಿ ಹೆಚ್ಚು ಬಂಗಾರದ ಬಳಕೆಗೆ ಅವಕಾಶ ನೀಡುತ್ತದೆ. ಹಣದ ಚಲನೆಯಲ್ಲಿ ಬಂಗಾರದ ಅಧಿಕ ಬಳಕೆ ಮಹತ್ವದ ವಿಷಯವಾಗಿದೆ. ಬಂಗಾರದ ಅಪಮೌಲ್ಯೀಕರಣದಿಂದ ಉಂಟಾದ ಎಡೆಬಿಡದ ಬೆಲೆ–ಏರಿಕೆಯಿಂದ ಜಗತ್ತೇ ಬಳಲುತ್ತಿದೆ. ಬಂಗಾರದ ಮೌಲ್ಯ ಹೆಚ್ಚಿಸುವ ಯಾವುದೇ ಕ್ರಮ ಹಿತಕಾರಿಯಾಗಿದೆ. ಬಂಗಾರದ ಮೌಲ್ಯ ಹೆಚ್ಚಾಗಲು ಹೆಚ್ಚು ಬಂಗಾರವನ್ನು ಬಳಕೆಯಲ್ಲಿ ತರಬೇಕು. ಅಲ್ಲದೇ ಹಣದ ಚಲನೆ ಅತ್ಯಧಿಕವಾಗಿರುವ ಈ ಕಾಲದಲ್ಲಿ ಬಂಗಾರದ ಬಳಕೆಯ ಮಿತವ್ಯಯ ಅವಶ್ಯವಿಲ್ಲ. ತದ್ವಿರುದ್ಧವಾಗಿ ಹಣದ ವ್ಯವಸ್ಥೆಯಲ್ಲಿ ಬಂಗಾರದ ಬಳಕೆಯನ್ನು ಹೆಚ್ಚಿಸಿದಷ್ಟೂ ಒಳ್ಳೆಯದು.

ಈ ದೃಷ್ಟಿಕೋನದಿಂದ ಹಿಂದೊಮ್ಮೆ ಹಿತಕರವೆನಿಸಿದ್ದ ಸುವರ್ಣ ವಿನಿಮಯ ಪ್ರಮಿತಿ ಈಗ ಅನಿಷ್ಟವಾಗಿದೆ. ಮುಂಚೆ ಕೆಲಕಾಲ ಅದು ಉಪಯುಕ್ತವಾಗಿತ್ತು. ೧೮೭೩ ರಿಂದ ಬಂಗಾರದ ಉತ್ಪಾದನೆ ಕಡಿಮೆಯಾದಾಗ ಈ ಪ್ರಮಿತಿ ಸಾಧಿಸಿದ ಬಂಗಾರದ ಮಿತವ್ಯಯ ಒಳ್ಳೇ ಪರಿಣಾಮವನ್ನು ನೀಡಿತು. ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಹಿಂಜರಿತ ಆದ ಈ ಸಮಯದಲ್ಲಿ ಸುವರ್ಣ ಪ್ರಮಿತಿಯು ಇದ್ದ ದೇಶಗಳೆಲ್ಲ ಬಂಗಾರದ ಹಣವನ್ನೇ ಚಲನೆಯಲ್ಲಿ ಇಡಬಯಸಿದ್ದರೆ ಬೆಲೆಗಳ ಕುರಿಸಿತವನ್ನು ತಡೆಯಲು ಸಾಧ್ಯವಾಗುತ್ತಿದ್ದಿಲ್ಲ. ಈ ಪರಿಸ್ಥಿತಿಯಲ್ಲಿ ವಿನಿಮಯ ಪ್ರಮಿತಿಯು ಬಂಗಾರದ ಬಳಕೆಯನ್ನು ಮಿತಗೊಳಿಸಿ, ಚಲನೆಯ ಹಣದ ಮೊತ್ತವನ್ನು ಹೆಚ್ಚಿಸಿ ಅಂತರರಾಷ್ಟ್ರೀಯ ಬೆಲೆಗಳ ಸ್ಥಿರತೆಯನ್ನು ಕಾಯ್ದುಕೊಳ್ಳಲು ಸಹಾಯಮಾಡಿತು. ಆದರೆ ೧೯೧೦ರ ನಂತರ ಪರಿಸ್ಥಿತಿ ಬದಲಾಗಿ ಬಂಗಾರದ ಉತ್ಪಾದನೆ ಹೆಚ್ಚಿದಾಗ ಸುವರ್ಣ ವಿನಿಮಯ ಪ್ರಮಿತಿಯು ಬೆಲೆ ಏರಿಕೆಯನ್ನು ತಡೆಯಲು ಸಹಾಯಕವಾಗಲಿಲ್ಲ. ಇದಕ್ಕೆ ವಿರುದ್ಧವಾಗಿ ಬೆಲೆ ಏರಿಕೆಗೆ ತಾನೂ ಕಾರಣವಾಯ್ತು. ಹಣದ ರೂಪದಲ್ಲಿ ಬಂಗಾರದ ಬಳಕೆ ಕಡಿಮೆಮಾಡಿದ್ದರಿಂದ, ಅತ್ಯಧಿಕ ಉತ್ಪಾದನೆಯಿಂದ ಹೆಚ್ಚಿದ್ದ ಬಂಗಾರದ ಪೂರೈಕೆ ಈಗ ಮತ್ತಷ್ಟು ಹೆಚ್ಚಿತು. ಮೊದಲನೆಯ ಮಹಾಯುದ್ಧ ಕಾಲದಲ್ಲಿ ಕಾಗದದ ಹಣವನ್ನು ದೊಡ್ಡ ಪ್ರಮಾಣದಲ್ಲಿ ಚಲನೆಯಲ್ಲಿ ತರುವ ಮೂಲಕ ಸಾಧಿಸಿದ ಬಂಗಾರದ ಮಿತವ್ಯಯವೇ ಬಂಗಾರದ ಮೌಲ್ಯ ಮತ್ತಷ್ಟು ಕುಸಿಯಲು ಕಾರಣವಾಯಿತು. ಆದ್ದರಿಂದ ಪ್ರೊ. ಕ್ಯಾನನ್ ಹೇಳಿದಂತೆ "ಸದ್ಯೋಭವಿಷತ್ತಿನಲ್ಲಿ ಬಂಗಾರದ ಬಳಕೆಯಲ್ಲಿ ಮಿತವ್ಯಯ ಅಪೇಕ್ಷಣೀಯವಲ್ಲ. ಕಳೆದ ಶತಮಾನದ ಕೊನೆಯ ಕೆಲವು ವರ್ಷಗಳಲ್ಲಿ ಬಂಗಾರ ಉತ್ಪಾದನೆ ಅತಿ ಹೆಚ್ಚಾಗಿದ್ದರಿಂದ ಅದರ ಮೌಲ್ಯವನ್ನು ಕಾಯ್ದುಕೊಳ್ಳಲೂ, ತನ್ಮೂಲಕ ಬಂಗಾರವನ್ನು ಸ್ಥಿರ ಮೌಲ್ಯದ ಪ್ರಮಾಣವಾಗಿಡಲೂ ಅಸಾಧ್ಯವಾಯ್ತು. ಬಂಗಾರದ ನಿಧಿಯನ್ನು ಹೆಚ್ಚು ಸಂಗ್ರಹಿಸಲು ಸಿದ್ಧರಾದ ಹಳೇ ಅಥವಾ ಹೊಸ ಗ್ರಾಹಕರಿಲ್ಲವಾದರೆ ಬಂಗಾರದ ಮೌಲ್ಯ ಖಂಡಿತ ಕುಸಿಯುವುದು. ಯುದ್ಧಪೂರ್ವದಲ್ಲಿ ಯುರೋಪಿನ ಹಲವು ಕೇಂದ್ರ ಬ್ಯಾಂಕುಗಳು ಹೊಸ ಬಂಗಾರದ ಉತ್ಪಾದನೆಯಲ್ಲಿ ಬಹು ಭಾಗವನ್ನು ತಮ್ಮ ಕಾಯ್ದಿಟ್ಟ ನಿಧಿಯ ಹೆಚ್ಚಳಕ್ಕಾಗಿ ಉಪಯೋಗಿಸಿ ಬೆಲೆ ಏರಿಕೆಯನ್ನು ತಡೆದವು". ಇಂಥ ಬೇಡಿಕೆ ಇಲ್ಲದಾಗ ಭಾರತ ಮತ್ತು ಪೌರ್ವಾತ್ಯ ದೇಶಗಳಲ್ಲಿ ಚಿನ್ನದ ನಾಣ್ಯಗಳನ್ನು ಚಲಾವಣೆಗೆ ತರುವುದೇ ಉತ್ತಮ. ನಿರ್ದಿಷ್ಟ ಮಿತಿಯ ಹಣ ಚಲಾವಣೆ ವ್ಯವಸ್ಥೆಯ ಮೂಲಕ ಚಿನ್ನದ ನಾಣ್ಯಗಳ ಚಲಾವಣೆಯ ಹೆಚ್ಚಳವನ್ನು ಪರಿವರ್ತನೀಯ ಪದ್ಧತಿಗಿಂತ ಹೆಚ್ಚು ಸರಳ ಮತ್ತು ಸುಲಭವಾಗಿ ಸಾಧಿಸಬಹುದು. ಏಕೆಂದರೆ ಮೊದಲನೆಯ ವ್ಯವಸ್ಥೆ ಎರಡನೆಯ ವ್ಯವಸ್ಥೆಗಿಂತ ಬಂಗಾರದ ಹಣದ ಚಲನೆಗೆ ಹೆಚ್ಚು ಅವಕಾಶ ನೀಡುವುದು.

೫. ಸಮಸ್ಯೆಯ ಪರಿಹಾರದ ಬಗ್ಗೆ ನನ್ನ ದೃಷ್ಟಿಕೋನ ಮೇಲ್ಕಾಣಿಸಿದಂತೆ ಇರುವುದರಿಂದ ವಾಸ್ತವಿಕವಾಗಿ ಹಣದ ಸ್ಥಿರತೆಯನ್ನು ಕಾಯ್ದುಕೊಳ್ಳಲು ಅಸಮರ್ಥವಾದ ಬಂಗಾರದ ಕಾಯ್ದಿಟ್ಟ ನಿಧಿಯನ್ನು ತೆಗೆದುಹಾಕಬೇಕೆಂದು ನನ್ನ ಅಭಿಪ್ರಾಯ. ಇಂಥ ನಿಧಿಯನ್ನು ಅಳಿಸಿಹಾಕಲು ಇನ್ನೂ ಒಂದು ಕಾರಣವಿದೆ. ಆಸ್ತಿಗೂ (ಬಂಗಾರದ ನಿಧಿ) ಹೊಣೆಗೂ (ಚಲಾವಣೆಯಲ್ಲಿರುವ ರೂಪಾಯಿಗಳ ಮೊತ್ತ) ಅಪಾಯಕರ ಸಂಬಂಧವಿರುವುದೇ ಬಂಗಾರದ ಕಾಯ್ದಿಟ್ಟ ನಿಧಿಯ ವೈಶಿಷ್ಟ್ಯ. ರೂಪಾಯಿಗಳ ರೂಪದ ಹಣದಲ್ಲಿ ಹೆಚ್ಚಳವಾಗದೇ ಬಂಗಾರದ ನಿಧಿ ಹೆಚ್ಚಲಾರದು. ರೂಪಾಯಿಗಳ ಮುದ್ರಣದಿಂದಾಗುವ ಲಾಭದಿಂದಲೇ ಈ ನಿಧಿಯ ರಚನೆಯಾಗುವುದರಿಂದ ಈ ಅನಿಷ್ಟ ಪರಿಸ್ಥಿತಿ

ಉಂಟಾಗಿದೆ. ಈ ಕಾರಣದಿಂದ ರೂಪಾಯಿಗಳ ಮುದ್ರಣ ಹೆಚ್ಚಾದರೆ ಬಂಗಾರದ ನಿಧಿ ಹೆಚ್ಚುತ್ತದೆ. ಈಗ ಪ್ರೊ. ಕ್ಯಾನನ್ ವರ್ಣಿಸಿದಂತೆ "ಸುವರ್ಣ ಪ್ರಮಿತಿಯ ಸ್ವರೂಪವನ್ನು ಅರಿತ ಶಾಸಕರ ಮತ್ತು ಆಡಳಿತಗಾರರ ಪ್ರಮಾಣ ಬಹು ಕಡಿಮೆ ಎನಿಸಿದರೂ ಅದು ಸುವರ್ಣ ವಿನಿಮಯ ಪ್ರಮಿತಿಯ ಸ್ವರೂಪವನ್ನು ತಿಳಿದವರಿಗಿಂತ ಹತ್ತಿಪ್ಪತ್ತು ಪಟ್ಟು ಹೆಚ್ಚು ಇದ್ದೀತು". ಶುದ್ಧ ಸುವರ್ಣ ಪ್ರಮಿತಿಗೆ ಹೋಲಿಸಿದಾಗ ಸುವರ್ಣ ವಿನಿಮಯ ಪ್ರಮಿತಿಯು ಅಜ್ಞಾನ ಅಥವಾ ಭ್ರಷ್ಟಾಚಾರದಿಂದ ಹಣವ್ಯವಸ್ಥೆಯನ್ನು ವಿಕೃತಗೊಳಿಸುವ ಸಂಭವ ಹೆಚ್ಚು. ದುರ್ದೈವದಿಂದ ಭಾರತ ದೇಶದಲ್ಲಿ ಈ ರೀತಿ ಹಣವ್ಯವಸ್ಥೆಯನ್ನು ವಿಕೃತಗೊಳಿಸಿದ ಬಗ್ಗೆ ಸಾಕಷ್ಟು ಪುರಾವೆಗಳಿವೆ. ಬಂಗಾರದ ನಿಧಿ ಅತ್ಯವಶ್ಯವೆಂಬ ಭ್ರಮೆಗೊಳಗಾಗಿ ಈ ಉದ್ದೇಶದಿಂದ ವಿವೇಚನೆ ಇಲ್ಲದೇ ಹಣದ ಚಲಾವಣೆಯನ್ನು ಹೆಚ್ಚಿಸಿದ ಮೂರ್ಖ ಆಡಳಿತಗಾರರು ನಮ್ಮ ದೇಶದಲ್ಲಿ ಆಗಿಹೋಗಿದ್ದಾರೆ. ಉತ್ಪಾದನೆ–ವ್ಯವಹಾರಗಳಿಗೆ ಉತ್ತೇಜನ ನೀಡುವುದೇ ಈ ಕಾಯ್ದಿಟ್ಟ ನಿಧಿಯ ಉದ್ದೇಶವೆಂಬ ಭ್ರಾಂತಿಯುಳ್ಳ, ಹಣದ ಸ್ವರೂಪವನ್ನೇ ತಿಳಿಯದ ಬುದ್ಧಿಹೀನ ವಾಣಿಜ್ಯೋದ್ದಿಮೆದಾರರಿಗೂ ನಮ್ಮಲ್ಲಿ ಕೊರತೆ ಇಲ್ಲ. ಅದೇ ಪ್ರಕಾರ ತಾವೇ ಜನತೆಯ ನೈಜ ಹಿತೈಷಿಗಳೆಂದು ಪ್ರಚಾರ ಮಾಡಬಯಸುವ ತಿಳಿಗೇಡಿ ರಾಜಕಾರಣಿಗಳು ಈ ನಿಧಿಯನ್ನು ಜನತೆಯ ವಿದ್ಯಾಭ್ಯಾಸಕ್ಕಾಗಿ ಉಪಯೋಗಿಸಬೇಕೆಂದು ಹೇಳುವುದನ್ನೂ ನಮ್ಮಲ್ಲಿ ಕಾಣುತ್ತೇವೆ. ಈ ಮೂರು ವರ್ಗದ ಜನರಲ್ಲಿ ಯಾರೇ ಆದರೂ ಹಿತಸಾಧನೆಯ ಸೋಗಿನಲ್ಲಿ ಅನಾಹುತಕ್ಕೆ ಕಾರಣರಾಗಬಹುದು, ಹಣ ಚಲಾವಣೆಯ ತತ್ವಗಳನ್ನು ಅರಿಯದೇ ಅನಿಷ್ಟ ಪರಿಹಾರ ಉಂಟುಮಾಡಬಹುದು. ಆದ್ದರಿಂದ ಸುವರ್ಣ ವಿನಿಮಯ ಪ್ರಮಿತಿಯನ್ನು ಅಳಿಸಿ ಹಾಕುವುದಲ್ಲದೆ, ಅನರ್ಥಕಾರಿಯಾಗಿ ಪರಿಶ್ರಮಿಸಬಹುದಾದ ಸುವರ್ಣ ಪ್ರಮಿತಿಯ ನಿಧಿಯನ್ನು ಸಹ ತೆಗೆದುಹಾಕಬೇಕು.

೬. ಭಾರತದ ಹಣ–ವ್ಯವಸ್ಥೆಗಾಗಿ ನನ್ನ ಯೋಜನೆಯ ಪ್ರಕಾರ ಕೆಳಗಿನ ಕ್ರಮಗಳು ಆವಶ್ಯಕ:

(i) ಸಾರ್ವಜನಿಕರ ಅಥವಾ ಸರ್ಕಾರದ ಬೇಡಿಕೆಯಂತೆ ರೂಪಾಯಿ–ನಾಣ್ಯಗಳನ್ನು ಟಂಕಿಸುವುದನ್ನು ಟಂಕಸಾಲೆಗಳು ನಿಲ್ಲಿಸಬೇಕು.

(ii) ಸಮರ್ಪಕವಾದ ಚಿನ್ನದ ನಾಣ್ಯಗಳನ್ನು ಹೊರಡಿಸಲು ಟಂಕಸಾಲೆಯನ್ನು ತೆರೆಯಬೇಕು.

(iii) ಚಿನ್ನದ ನಾಣ್ಯ ಹಾಗೂ ರೂಪಾಯಿಗಳ ವಿನಿಮಯದ ದರವನ್ನು ನಿರ್ಧರಿಸಬೇಕು.

(iv) ಹಣ–ವ್ಯವಸ್ಥೆಯ ಅಧಿಕಾರಿಗಳು ರೂಪಾಯಿಯನ್ನು ಬಂಗಾರವಾಗಿ, ಬಂಗಾರವನ್ನು ರೂಪಾಯಿಯಾಗಿ ಪರಿವರ್ತಿಸಬಾರದು: ರೂಪಾಯಿ ಮತ್ತು ಚಿನ್ನದ ನಾಣ್ಯಗಳು ಕಾನೂನು ನಿರ್ಧರಿಸಿದ ವಿನಿಮಯ ದರದಂತೆ ಚಲಾವಣೆಯಲ್ಲಿರಬೇಕು.

೭. ಈಗಾಗಲೇ ಸಂಗ್ರಹಿಸಿದ ಬಂಗಾರದ ಕಾಯ್ದಿಟ್ಟ ನಿಧಿಯನ್ನು ಹೇಗೆ ಬಳಸಬೇಕು? ಸರ್ಕಾರವು ಈ ನಿಧಿಯನ್ನು ಸಾಮಾನ್ಯ ಕಂದಾಯದ ಉಳಿತಾಯದಂತೆ ಯಾವುದೇ ಜರೂರು ಸಾರ್ವಜನಿಕ ಉದ್ದೇಶಕ್ಕಾಗಿ ಉಪಯೋಗಿಸಬೇಕೆಂದು ನನ್ನ ಮತ. ಆದರೆ ಈ ಸುಧಾರಿತ ಹಣದ ವ್ಯವಸ್ಥೆಯಲ್ಲಿ ಸಹ ಕೆಲ ದೌರ್ಬಲ್ಯಗಳು ಉಳಿಯಬಹುದು ಎಂಬುದನ್ನು ನಾವು ತಿಳಿದಿರಬೇಕು. ಫೌಲರ್ ಸಮಿತಿಯ ಅಭಿಪ್ರಾಯ ವಿರುದ್ಧವೆನಿಸಿದರೂ ರೂಪಾಯಿಯ ರೂಪದ ಹಣದ ಮೊತ್ತವನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಿದಲ್ಲಿ ಯಾವುದೇ ನಿಧಿಯ ಅಭಾವದಲ್ಲಿ ಸಹ ರೂಪಾಯಿಯ ಮೌಲ್ಯವನ್ನು ಕಾಯ್ದುಕೊಳ್ಳಬಹುದುದೆಂದು ನನ್ನ ದೃಢವಾದ ನಂಬಿಕೆ. ಅದರೆ ಒಂದು ಅನಿರೀಕ್ಷಿತ ಸಂದರ್ಭ ಬರಬಹುದು. ಈಗಿರುವ ರೂಪಾಯಿಗಳ ದೊಡ್ಡ ಮೊತ್ತ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ

ಬಹಳ ಅಧಿಕವೆನಿಸಿ ತನ್ಮೂಲಕ ರೂಪಾಯಿಯು ತನ್ನ ಮೌಲ್ಯವನ್ನು ಕಳೆದುಕೊಳ್ಳಬಹುದು. ಇಂಥ ಸಂದರ್ಭದಲ್ಲಿ ಸರ್ಕಾರವು ಬಂಗಾರದ ನಿಧಿಯನ್ನು ರೂಪಾಯಿಗಳ ಮೊತ್ತವನ್ನು ಸಾಕಷ್ಟು ಕಡಿಮೆ ಮಾಡಲು ಉಪಯೋಗಿಸಬೇಕೆಂದು ನನ್ನ ಸೂಚನೆ. ಇದರಿಂದ ಪ್ರಬಲ ಮುಗ್ಗಟ್ಟಿನ ಕಾಲದಲ್ಲಿ ಆವಶ್ಯಕತೆ ಇರುವಷ್ಟು ಮಾತ್ರ ಹಣದ ಪೂರೈಕೆ ಉಂಟಾಗುತ್ತದೆ. ನೋಟು ಕಾಪು(ಕಾಯ್ದಿಟ್ಟ) ನಿಧಿಯ ವಿಲಕ್ಷಣ ರಚನೆಯ (ಸಂಯೋಜನೆ) ಇನ್ನೊಂದು ದೌರ್ಬಲ್ಯವೇನೆಂದರೆ "ಸೃಷ್ಟಿಸಿದ ಸಾಲಪತ್ರಗಳು". ನೋಟು ಕಾಪು ನಿಧಿಯ ಈ ಭಾಗವನ್ನು ಎಷ್ಟು ಬೇಗ ತೆಗೆದುಹಾಕಿದರೆ ಅಷ್ಟು ಒಳ್ಳೆಯದು. ಏಕೆಂದರೆ ಈ ಸಾಲಪತ್ರಗಳನ್ನು ತೆಗೆದುಹಾಕದಿದ್ದರೆ ಕಾಗದರೂಪದ ಹಣವನ್ನು ಅಗತ್ಯವಿದ್ದಷ್ಟು ಸುರಕ್ಷಿತವನ್ನಾಗಿ ಮಾಡಲು ಸಾಧ್ಯವಿಲ್ಲ. ಆದ್ದರಿಂದ ಸುವರ್ಣ ಪ್ರಮಿತಿಯ ನಿಧಿಯನ್ನು "ಸೃಷ್ಟಿಸಿದ ಸಾಲಪತ್ರಗಳ" ರದ್ಧತಿಗಾಗಿ ವಿನಿಯೋಗಿಸಬೇಕೆಂದು ನನ್ನ ಸಲಹೆ.

೮. ಪ್ರಮಿತಿಯ ಸ್ವರೂಪದ ಮತ್ತು ವಿನ್ಯಾಸದ ಬಗ್ಗೆ ನನ್ನ ಅಭಿಪ್ರಾಯಗಳನ್ನು ನಿರೂಪಿಸಿ ಮುಂದಿನ ಪ್ರಮುಖ ಪ್ರಶ್ನೆಯಾದ "ಬಂಗಾರ ಮತ್ತು ರೂಪಾಯಿಯ ವಿನಿಮಯದ ಅನುಪಾತ"ವನ್ನು ಚರ್ಚಿಸುತ್ತೇನೆ. ಮಹಾಯುದ್ಧದ ಪರಿಣಾಮವಾಗಿ ಸುವರ್ಣ ಪ್ರಮಿತಿಯನ್ನು ಅನುಸರಿಸುವ ಯಾವ ದೇಶವೂ ಯುದ್ಧಪೂರ್ವದ ಬಂಗಾರ–ಸಮಾನ ಬೆಲೆಯನ್ನು (Gold parity) ಕಾಯ್ದುಕೊಂಡಿಲ್ಲ. ಕೆಲ ದೇಶಗಳಂತೂ ದೋಷಪೂರಿತ ಕ್ರಮಗಳಿಂದ ಮೊದಲಿನ ಸಮಾನ ಬೆಲೆಗಿಂತ ಎಷ್ಟು ಮಟ್ಟಿಗೆ ದೂರ ಸರಿದಿವೆ ಎಂದರೆ ಯುದ್ಧಪೂರ್ವ ಸಮಾನ–ಬೆಲೆಯನ್ನು ಮರಳೀ ತರಲು ಎಷ್ಟರ ಮಟ್ಟಿಗೆ ಸಾಧ್ಯವಾದೀತು ಎಂಬುದನ್ನು ಹೆಚ್ಚು ಕಡಿಮೆ ಸರಿಯಾದ ಅಂದಾಜು ಮಾಡಲೂ ಅಸಾಧ್ಯವಾಗಿದೆ. ಹೀಗೆ ಅಸಾಧ್ಯವೂ ಅವಿವೇಕವೂ ಎನಿಸಿದರೂ ಸಾಮಾನ್ಯವಾಗಿ ಎಲ್ಲ ದೇಶಗಳೂ ಯುದ್ಧಪೂರ್ವ ಸಮಾನ ಬೆಲೆಯನ್ನು ಮತ್ತೆ ಸ್ವೀಕರಿಸುವ ಹವಣಿಕೆಯಲ್ಲಿವೆ. ಆದರೆ ಭಾರತ ಮತ್ತು ಇತರ ದೇಶಗಳ ನಡುವೆ ಒಂದು ವ್ಯತ್ಯಾಸವಿದೆ. ಇತರ ದೇಶಗಳು ಯುದ್ಧಪೂರ್ವ ಸಮಾನ ಬೆಲೆಯನ್ನು ಮೀರಿ ಹೋಗಿದೆ. ಆದ್ದರಿಂದ ಭಾರತದ ಸಮಸ್ಯೆಗಳು ಇತರ ದೇಶಗಳ ಸಮಸ್ಯೆಗಿಂತ ಭಿನ್ನವಾಗಿವೆ. ಐರೋಪ್ಯ ದೇಶಗಳು ತಮ್ಮ ಹಣದ ಮೌಲ್ಯವನ್ನು ಹೇಗೆ ಹೆಚ್ಚಿಸಬೇಕು, ಅರ್ಥಾತ್ ಬೆಲೆಗಳನ್ನು ಹೇಗೆ ಇಳಿಸಬೇಕು ಎಂಬ ಸಮಸ್ಯೆಯನ್ನು ಎದುರಿಸುತ್ತಿವೆ. ಭಾರತದಲ್ಲಿಯ ಸಮಸ್ಯೆ ಹಣದ ಮೌಲ್ಯವನ್ನು ಕಡಿಮೆ ಮಾಡುವುದು ಅಥವಾ ಬೆಲೆಗಳನ್ನು ಹೆಚ್ಚಿಸುವುದಾಗಿದೆ. ರೂಪಾಯಿಯ ವಿನಿಮಯ ದರವನ್ನು ೧ ಷಿಲಿಂಗ್ ೬ ಪೆನ್ಸ್‌ದಿಂದ ೧ ಷಿಲಿಂಗ್ ೪ ಪೆನ್ಸ್‌ಗೆ ಇಳಿಸುವುದರ ಅರ್ಥ ಇದೇ ಆಗಿದೆ (ಬೇರೆ ಆಗಲಾರದು). ಯುದ್ಧಪೂರ್ವದ ಸಮಾನ ಬೆಲೆಯನ್ನು ಹೆಚ್ಚಿಸಬೇಕೇ? ಯುದ್ಧಪೂರ್ವದ ಬೆಲೆಗಳ ಮಟ್ಟ ಪುನಃ ನೆಲೆಗೊಳ್ಳುತ್ತದೆ ಮತ್ತು ನ್ಯಾಯಯುತವೂ ಆಗುತ್ತದೆ ಎಂದು ಕೆಲವರ ಕಲ್ಪನೆ ಇದೆಯಾದರೂ ಇದು ತಪ್ಪು. ಮೊದಲನೆಯದಾಗಿ, ಯುದ್ಧಪೂರ್ವದ ಸಮಾನ ಬೆಲೆಯ (Parity) ಮೂಲಕ ಹಣದ ಮೌಲ್ಯ (ಬೆಲೆಗಳ ಮಟ್ಟ) ಸಹ ಯುದ್ಧಪೂರ್ವದಲ್ಲಿದ್ದಂತೆ ಆಗುವುದೆಂದು ತಿಳಿಯಲಾಗದು. ಎರಡು ದೇಶಗಳ ಹಣಗಳ ವಿನಿಮಯ ದರದಲ್ಲಿ ಬದಲಾವಣೆ ಇಲ್ಲದಿದ್ದರೂ ಎರಡು ದೇಶಗಳ ಹಣಗಳ ಹಣದ ಮೊತ್ತದಲ್ಲಿ ಅದೇ ದಿಶೆಯಲ್ಲಿ ಸರಿಸಮಾನ ಬದಲಾವಣೆ (ಹೆಚ್ಚಳ ಅಥವಾ ಇಳಿತ) ಆಗಿರಬಹುದು: ಯುದ್ಧಪೂರ್ವದ ಸಮಾನ ಬೆಲೆಯ ಪುನಃ ಸ್ಥಾಪನೆಯ ಅರ್ಥವು ಯುದ್ಧಪೂರ್ವದ ಬೆಲೆಗಳ ಮಟ್ಟದ ಪುನಃ ಸ್ಥಾಪನೆ ಎಂದು ಭಾವಿಸಿದರೆ, ರೂಪಾಯಿಯ ವಿನಿಮಯ ದರವನ್ನು ೧ ಷಿಲಿಂಗ್ ೬ ಪೆನ್ಸ್‌ದಿಂದ ೧ ಷಿಲಿಂಗ್ ೪

ಪೆನ್ಸ್‌ಗೆ ಇಳಿಸುವ ಬದಲು ೨ ಷಿಲಿಂಗುಗಳಿಗೆ ಹೆಚ್ಚಿಸಬೇಕು. ಇದರ ಅರ್ಥ ಹಣದ ಮೊತ್ತವನ್ನು ಹೆಚ್ಚಿಸುವ ಬದಲಾಗಿ ಅದನ್ನು ಮತ್ತಷ್ಟು ಕಡಿಮೆ ಮಾಡಬೇಕು. ಎರಡನೆಯದಾಗಿ, ನಾಮಮಾತ್ರಕ್ಕೆ ಯುದ್ಧಪೂರ್ವ ಬಂಗಾರದ ಸಮಾನ ಬೆಲೆಯನ್ನು ಪುನಃ ಸ್ಥಾಪಿಸುವುದರಿಂದ ಅನ್ಯಾಯದ, ಮತ್ತು ಅನಿಷ್ಟ ಪರಿಣಾಮಗಳಾಗುತ್ತದೆ. ಮುಂದೂಡಿದ ಪಾವತಿಯ ಸಾಧನ (Standard of Deferred Payments) ಎನಿಸಿದ ಹಣಕಾಸಿನ ಒಡಂಬಡಿಕೆಗಳಿಗೆ ಧಕ್ಕೆ ಉಂಟುಮಾಡಬಾರದು. ಈಗಿರುವ ಎಲ್ಲ ಸಾಲಗಳನ್ನು ೧೯೨೫ರಲ್ಲಿ ತೆಗೆದುಕೊಳ್ಳಲಾಗಿದ್ದರೆ ೧೯೨೫ ರ ಸಮಾನ ಬೆಲೆಯೇ ನ್ಯಾಯಸಮ್ಮತವೆನಿಸುತ್ತದೆ. ಈಗ ನಾವು ಎರಡು ವಿಷಯಗಳನ್ನು ಲಕ್ಷ್ಯದಲ್ಲಿಡಬೇಕು. ಈಗಿರುವ ಒಡಂಬಡಿಕೆಗಳು ಹಿಂದೆ ಆದ ವಿನಿಮಯದ ದರದ ಇಳಿತದ ಪ್ರತಿಯೊಂದು ಹಂತದಲ್ಲಿ ಮಾಡಿಕೊಂಡಿದ್ದವಾಗಿವೆ. ಪ್ರತಿಯೊಂದು ಒಡಂಬಡಿಕೆಯನ್ನು ಪ್ರತ್ಯೇಕವಾಗಿ ವಿಚಾರಣೆ ಮಾಡಿ ನ್ಯಾಯ ನೀಡುವುದು ಅವ್ಯಾವಹಾರಿಕ ಹಾಗೂ ಅಸಾಧ್ಯ. ಜಾರಿಯಲ್ಲಿರುವ ಒಡಂಬಡಿಕೆಗಳು ಬೇರೆ ಬೇರೆ ವಯೋಮಾನದವು ಇದ್ದರೂ ಹೆಚ್ಚಿನದವು ಇತ್ತೀಚಿನವೇ ಇದ್ದು ಬಹುಶಃ ಒಂದು ವರ್ಷಕ್ಕಿಂತ ಹಳೆಯವು ಇರಲಿಕ್ಕಿಲ್ಲ. ಆದ್ದರಿಂದ ಒಟ್ಟಾರೆ ಒಡಂಬಡಿಕೆಗಳ ಕೇಂದ್ರಬಿಂದುವು ವರ್ತಮಾನಕಾಲದ ಸಮೀಪಕ್ಕೇ ಇರುವುದು. ಇವೆರಡೂ ಸಂಗತಿಗಳನ್ನು ಅವಲೋಕಿಸಿದರೆ ಮೊದಲಿನ ೧ ಷಿಲಿಂಗ್ ೪ ಪೆನ್ಸ್ ಮತ್ತು ಈಗಿನ ೧ ಷಿಲಿಂಗ್ ೬ ಪೆನ್ಸ್ ಇವುಗಳ ಮಧ್ಯದ ಸರಾಸರಿ ಸಮಾನ ಬೆಲೆಯನ್ನು ಸ್ವೀಕರಿಸುವುದೇ ಸಮರ್ಪಕವೂ ನ್ಯಾಯಸಮ್ಮತವೂ ಎನಿಸುತ್ತದೆ. ಪ್ರೊ. ಫಿಷರ್ ಅವರ ಅಭಿಪ್ರಾಯ ಸಹ ಹೀಗೆ ಇದೆ: ಅವರು " ನ್ಯಾಯಸಮ್ಮತ ಹಣದ ಪ್ರಮಿತಿಯು ಹಿನ್ನೋಟದ್ದು ಇರುವುದಕ್ಕಿಂತ ದೂರದೃಷ್ಟಿಯುಳ್ಳದ್ದಾಗಿ ಇರುವುದೇ ಉತ್ತಮ. ಅದು ಸದ್ಯದ ವ್ಯವಹಾರವನ್ನೇ ಆಧಾರ ಎಂದು ಇಟ್ಟುಕೊಂಡು ಸಮಾನ ಬೆಲೆಯ ಬಗೆಗೆ ಮುಂದಿನ ಕ್ರಮ ನಿರ್ಧರಿಸುವುದು. ಕಲ್ಪಿತವಾದ ಯುದ್ಧಪೂರ್ವ ಸಮಾನ ಬೆಲೆಯನ್ನು ಇಟ್ಟುಕೊಳ್ಳುವುದಕ್ಕಿಂತ ನ್ಯಾಯಸಮ್ಮತ. ಮೊದಲಿನ ಬೆಳ್ಳಿಯ ಪೌಂಡು ಅಥವಾ ಗ್ರೀಕ್ ಇಲ್ಲವೇ ರೋಮನ್ ಕಾಲದ ಹಣದ ವ್ಯವಸ್ಥೆ ಮರಳಿ ತರುವ ವಿಚಾರ ಎಷ್ಟು ಅವಾಸ್ತವವೋ ಅಷ್ಟೇ ಯುದ್ಧ-ಪೂರ್ವದ ಸಮಾನ ಬೆಲೆಯ ಪುನಃ ಸ್ಥಾಪನೆಯೂ ಅಷ್ಟೇ ಅವಾಸ್ತವ." ಹಣದ ವಿಷಯದಲ್ಲಿ ಸದ್ಯದ ನೈಜಸ್ಥಿತಿಯೇ ಸಾಮಾನ್ಯ, ಹಾಗೂ ಇದೇ ಕಾರಣದಿಂದ ನ್ಯಾಯಸಮ್ಮತ.

೯. ರೂಪಾಯಿಯ ವಿನಿಮಯ ದರದ ಬದಲಾವಣೆಗಳ ಪರಿಣಾಮಗಳನ್ನು ಚರ್ಚಿಸುವಾಗ ತಗ್ಗಿದ ವಿನಿಮಯ ದರವು ವ್ಯಾಪಾರ, ಉದ್ದಿಮೆಗಳಿಗೆ ಉತ್ತೇಜಕವೆಂದು ಹೇಳಲಾಗುತ್ತಿದೆ. ಆದರೆ ಇದು ಮಹತ್ವದ ಅಂಶವಲ್ಲ. ಕುಗ್ಗಿದ ವಿನಿಮಯ ದರದಿಂದ ಲಾಭವಾದಾಗ ಯಾವ ರೀತಿ, ಯಾರಿಗೆ ಲಾಭವಾಗುತ್ತದೆ ಎಂಬುದೇ ಮಹತ್ವದ ಪ್ರಶ್ನೆ. ಈ ದರ ಇಳಿದಾಗ ನಿರ್ಯಾತ ವ್ಯಾಪಾರಕ್ಕೆ ಲಾಭ ಉಂಟು ಎಂದು ಹಲವು ವ್ಯವಹಾರಸ್ಥರ ನಂಬಿಕೆ. ಬಹಳ ಜನರು ಇದರಿಂದ ಇಡೀ ರಾಷ್ಟ್ರಕ್ಕೆ ಲಾಭವಾಗುವುದು ಎಂದು ಕಣ್ಣುಮುಚ್ಚಿ ನಂಬಿದ್ದಾರೆ. ಆದರೆ ಇಳಿದ ವಿನಿಮಯ ದರದಿಂದ ಆಂತರಿಕ ಬೆಲೆಗಳು ಏರುತ್ತವೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು. ಇಂತಹ ದರದಿಂದಾಗುವ ಲಾಭ ಒಂದು ವರ್ಗದ ಶೋಷಣೆಯಿಂದ ಇನ್ನೊಂದು ವರ್ಗಕ್ಕೆ ಉಂಟಾಗುವ ಲಾಭವೇ ಹೊರತು ವಿದೇಶಗಳಿಂದ ಬರುವ ಲಾಭವಲ್ಲ. ನಿಜವಾಗಿ ಹಾನಿ ಹೊಂದುವ ವರ್ಗವೆಂದರೆ ಬಡ ಕೂಲಿಕಾರ ವರ್ಗ, ಈ ವರ್ಗದ ಹಾನಿಯೇ ಸಿರಿವಂತ ವಾಣಿಜ್ಯ ವರ್ಗದ ಲಾಭವಾಗಿ ಪರಿಣಮಿಸುತ್ತದೆ. ಬಡವರಿಂದ ಸಿರಿವಂತರಿಗೆ ವರ್ಗಾಯಿಸಲ್ಪಟ್ಟ ಸಂಪತ್ತು ದೇಶದ ಸಾಮಾನ್ಯ ಹಿತಸಂಬಂಧಗಳಿಗೆ

ಎಂದೂ ಪೋಷಕವಾಗಲಾರದು. ಆದ್ದರಿಂದ ಏರಿಕೆಯ ಬೆಲೆಗಳನ್ನು ಮತ್ತು ಕುಗ್ಗಿದ ವಿನಿಮಯ ದರಗಳನ್ನು ನಾನು ವಿರೋಧಿಸುತ್ತೇನೆ, ಯಾವುದೇ ಸದ್ಭಾವನೆಯುಳ್ಳ ಸರ್ಕಾರ ಈ ತರಹ ಬಡವರ ಕಿಸೆಯನ್ನು ಕತ್ತರಿಸುವುದಕ್ಕೆ ಅವಕಾಶ ನೀಡಬಾರದು.

೧೦. ಇನ್ನು ಋತುಮಾನ ಅನುಸಾರ ಭಾರತದ ಹಣ ಪೇಟೆಗಳ ಬೇಡಿಕೆಗಳನ್ನು ಪೂರೈಸುವ ಪ್ರಶ್ನೆಯ ಬಗ್ಗೆ ವಿಚಾರಿಸುವಾ. ಹಣದ ವ್ಯವಸ್ಥೆ ಸ್ಥಿರತೆಯನ್ನೂ ಸ್ಥಿತಿ–ಸ್ಥಾಪಕತ್ವವನ್ನೂ ಹೊಂದಿರಬೇಕು. ಇದೇ ಕಾರಣದಿಂದ ಬಹಳ ದೇಶಗಳಲ್ಲಿ ಚಲಾವಣೆಯಲ್ಲಿದ್ದ ಹಣ ಲೋಹ ರಚಿತ ಮತ್ತು ಕಾಗದದ ಮುದ್ರಿತ ಹಣದ ಮಿಶ್ರಣವಾಗಿದೆ. ಇವುಗಳಲ್ಲಿ ಲೋಹ ರಚಿತ ಹಣವು ಸ್ಥಿರತೆಯನ್ನೂ, ಕಾಗದದ ಹಣವು ಸ್ಥಿತಿಸ್ಥಾಪಕತ್ವವನ್ನೂ ಒದಗಿಸುವ ಉದ್ದೇಶ ಹೊಂದಿವೆ. ದುರ್ದೈವದಿಂದ ಭಾರತದ ಹಣವ್ಯವಸ್ಥೆ ಸ್ಥಿತಿಸ್ಥಾಪಕವಿರುವಂತೆ ರಚಿತವಾಗಿಲ್ಲ. ಇಂಗ್ಲೆಂಡ್‌ನಲ್ಲಿ ಕಾಗದದ ಹಣವ್ಯವಸ್ಥೆಯಲ್ಲಿ ಉತ್ತಮ ವಾಣಿಜ್ಯ ಸಾಲಪತ್ರದ ಆಧಾರದ ಮೇಲೆ ರಚನೆಯಾದ ಬ್ಯಾಂಕ್ ಠೇವಣಿಗಳ ರೂಪದ ಹಣ ಸ್ಥಿತಿಸ್ಥಾಪಕತ್ವನ್ನು ಒದಗಿಸುತ್ತದೆ. ವಿವಿಧ ಕಾರಣಗಳಿಂದ ಭಾರತದಲ್ಲಿ ಠೇವಣಿರೂಪದ ಹಣದ ವೃದ್ಧಿಯಾಗಿಲ್ಲವಾದ್ದರಿಂದ ಇಲ್ಲಿನ ಹಣದಲ್ಲಿ ಸ್ಥಿತಿಸ್ಥಾಪಕತ್ವ ಇಲ್ಲವಾಗಿದೆ. ಆದ್ದರಿಂದ ಒಳ್ಳೆಯ ವಾಣಿಜ್ಯ ಸಾಲಪತ್ರಗಳನ್ನು (ಹುಂಡಿ ಇತ್ಯಾದಿ) ಹಣಕ್ಕೆ ಪರಿವರ್ತಿಸಿ ಋತುಮಾನದ ಅನುಸಾರ ಹಣದ ಬೇಡಿಕೆಗಳನ್ನು ಪೂರೈಸಲು ಅನುಕೂಲ ಮಾಡಿಕೊಡಬೇಕು. ಇದಕ್ಕಾಗಿ ನೋಟು–ಕಾಪು ನಿಧಿಯನ್ನು ಹೆಚ್ಚಿಸಿ ಮೇಲ್ಕಾಣಿಸಿದಂತೆ ಉಪಯೋಗಿಸಬೇಕು.

# ೩
# ಸಾಕ್ಷ್ಯಾಧಾರ*

೧೫, ಡಿಸೆಂಬರ್ ೧೯೨೫ ರಂದು ಭಾರತದ ಹಣ–ವ್ಯವಸ್ಥೆ ಮತ್ತು ಹಣಕಾಸಿನ ಬಗ್ಗೆ ಬ್ರಿಟಿಷ್ ಅರಸರಿಂದ ನಿಯಮಿಸಲಾದ (ಹಿಲ್ಟನ್–ಯಂಗ್) ಆಯೋಗದೆದುರು ನುಡಿದದ್ದು.

ಡಾ. ಬಿ.ಆರ್. ಅಂಬೇಡ್ಕರ್ ಅವರನ್ನು ಕರೆದು ವಿಚಾರಿಸಲಾಯಿತು.

೬೦೪೭. (ಅಧ್ಯಕ್ಷರು) ಡಾ. ಅಂಬೇಡ್ಕರ್ ಅವರೇ, ತಾವು ಬ್ಯಾರಿಸ್ಟರ್ ಇರುವಿರಿ ಹಾಗೂ ಆಯೋಗಕ್ಕೆ ಭಾರತದ ಹಣ–ವ್ಯವಸ್ಥೆ ಕುರಿತು ನಿಮ್ಮ ವಿವರವಾದ ಸೂಚನೆಗಳನ್ನೊಳಗೊಂಡ ಲಿಖಿತ ಹೇಳಿಕೆಯ ನಿವೇದನವನ್ನು ಸಲ್ಲಿಸಿದ್ದೀರಿ. ಸಾಮಾಜಿಕ ಮತ್ತು ರಾಜಕೀಯ ವಿಜ್ಞಾನ ಸಂಸ್ಥೆಯ ಪ್ರತಿನಿಧಿಯಾಗಿ ಸಹ ನಾಮಕರಣಗೊಂಡಿದ್ದೀರಿ ಎಂದು ತಿಳಿದಿರುವೆ?

– ಹೌದು

೬೦೪೮. ಈ ಸಂಸ್ಥೆಯ ಅಭಿಪ್ರಾಯಗಳು ಇನ್ನೊಂದು ಪ್ರತ್ಯೇಕ ಮನವಿಪತ್ರದಲ್ಲಿ ವ್ಯಕ್ತವಾಗಿದೆ, ಅಲ್ಲವೆ?

– ಹೌದು.

೬೦೪೯. ಈ ವಿಷಯ (ಹಣ–ವ್ಯವಸ್ಥೆ) ಕುರಿತು ನೀವು ಆಳವಾಗಿ ಅಭ್ಯಾಸ ಮಾಡುತ್ತಿರುವಿರಲ್ಲವೆ?

– ಎರಡು ವರ್ಷಗಳ ಹಿಂದೆ ನಾನು ಈ ವಿಷಯಗಳ ಬಗ್ಗೆ ಹೆಚ್ಚು ಆಸಕ್ತಿಯಿಂದ ಅಭ್ಯಸಿಸುತ್ತಿದ್ದೆ. ಆದರೆ ನಂತರ ವಕೀಲಿ ವೃತ್ತಿಯನ್ನು ಆರಂಭಿಸಿದಾಗಿನಿಂದ ಇತ್ತೀಚೆಗೆ ಆ ವಿಷಯದ ಬಗ್ಗೆ ಆಗಿರುವ ಬೆಳವಣಿಗೆಗಳಿಗೆ ನಾನು ಸಾಕಷ್ಟು ಲಕ್ಷ್ಯ ನೀಡಿಲ್ಲ. ಆದರೆ ಸಿದ್ಧಾಂತದ ದೃಷ್ಟಿಕೋನದಿಂದ ಈ ವಿಷಯದ ಯಾವುದೇ ಅಂಶವನ್ನು ಚೆನ್ನಾಗಿ ವಿಮರ್ಶಿಸಬಲ್ಲೆನೆಂದು ನನಗೆ ವಿಶ್ವಾಸವಿದೆ.

೬೦೫೦. ನೀವು ರಾಜ್ಯಶಾಸ್ತ್ರದ ವಿದ್ಯಾರ್ಥಿಗಳಾಗಿದ್ದಿರಾ?

– ನಾನು ಸಿಡನ್‌ಹ್ಯಾಮ್ ಕಾಲೇಜಿನಲ್ಲಿ ಎರಡು ವರ್ಷ ಪ್ರಾಧ್ಯಾಪಕನಾಗಿದ್ದೆ ಹಾಗೂ "ರೂಪಾಯಿಯ ಸಮಸ್ಯೆ" ಕುರಿತು ಒಂದು ಪುಸ್ತಕ ಸಹ ಬರೆದಿದ್ದೇನೆ.

೬೦೫೧. ನಿಮ್ಮ ಲಿಖಿತ ಹೇಳಿಕೆಯಲ್ಲಿ ನೀವು ವ್ಯಕ್ತಮಾಡಿದ ಕೆಲವು ವೈಯಕ್ತಿಕ ಅಭಿಪ್ರಾಯಗಳ ಬಗ್ಗೆ ಕೆಲ ಪ್ರಶ್ನೆಗಳನ್ನು ಕೇಳಬಯಸುತ್ತೇನೆ. ೨ನೇ ಪರಿಚ್ಛೇದದ(i)ನೇ ಉಪ–ಪರಿಚ್ಛೇದದಲ್ಲಿ ನೀವು "ಶುದ್ಧ ಸುವರ್ಣ ಪ್ರಮಿತಿಯಲ್ಲಿ..... ಬಂಗಾರವು ದೊಡ್ಡ ಪ್ರಮಾಣದ್ದು ಆಗಿದ್ದು.......... ಈ ಕಾರಣದಿಂದಲೇ ಶುದ್ಧ ಸುವರ್ಣ ಪ್ರಮಿತಿಯು ಸ್ಥಿರತೆಯನ್ನು ಒದಗಿಸುತ್ತದೆ" ಎಂದು ಹೇಳಿದ್ದೀರಿ. ಈ ಸಂದರ್ಭದಲ್ಲಿ "ಶುದ್ಧ ಸುವರ್ಣ ಪ್ರಮಿತಿ" ಎನ್ನುವುದರ ಅರ್ಥವೇನು?

---

* ಬ್ರಿಟಿಷ್ ಅರಸರಿಂದ ನಿಯಮಿಸಲಾದ ಭಾರತದ ಹಣ ಮತ್ತು ಹಣಕಾಸು ವ್ಯವಸ್ಥೆಯ ಬಗೆಗಿನ ವರದಿ, ಸಂ. ೪ನೆಯ ಪುರವಣಿ ಹೀಸ್ ಮೆಜೆಸ್ಟೀಸ್ ಸ್ಟೇಶನರಿ ಆಫೀಸ್, ಲಂಡನ್, ೧೯೨೬, ೩೧೩–೩೨೨ ಪುಟಗಳು. (ರಾಯಲ್ ಕಮಿಷನ್ ಆನ್ ಇಂಡಿಯನ್ ಕರೆನ್ಸಿ ಅಂಡ್ ಫೈನಾನ್ಸ್)

– ಶುದ್ಧ ಸುವರ್ಣ ಪ್ರಮಿತಿ ಎಂದರೆ ಬಂಗಾರದ ಹಣವೇ ಮೌಲ್ಯದ ಪ್ರಮಾಣವಾಗಿರುವ ಹಣ–ವ್ಯವಸ್ಥೆ.

೬೦೫೨. ಬಂಗಾರದ ನಾಣ್ಯ (ಹಣವೇ) ಚಲಾವಣೆಯಲ್ಲಿರುವಂಥ ವ್ಯವಸ್ಥೆ ಎಂದು ನಿಮ್ಮ ಅರ್ಥವೋ?

– ಚಲಾವಣೆಯಲ್ಲಿದ್ದ ಹಣದ ಹೆಚ್ಚಿನ ಭಾಗ ಬಂಗಾರದ್ದೇ ಇರಬೇಕು.

೬೦೫೩. ಅಂದರೆ ಹಣದಲ್ಲಿ ಪೂರಕವಾಗಿ ಸ್ವಲ್ಪ ಭಾಗ ಸಾಂಕೇತಿಕ ಹಣವೂ ಇರಬಹುದೋ?

– ಇರಬಹುದು.

೬೦೫೪. ನಿಮ್ಮ ಅಭಿಪ್ರಾಯವು ವಿವಿಧ ದೇಶಗಳ ಅನುಭವದ ಆಧಾರದ ಮೇಲಿಂದ ರಚಿತವಾಗಿದ್ದರೆ, ಹೆಚ್ಚಾಗಿ ಬಂಗಾರದ ನಾಣ್ಯಗಳೇ ಹಣವೆಂದು ಚಲಾವಣೆಯಲ್ಲಿರುವ ದೇಶವನ್ನು ಉದಾಹರಿಸಬಲ್ಲಿರಾ?

– ಜರ್ಮನಿಯಲ್ಲಿ ಇಂಥ ಹಣದ ವ್ಯವಸ್ಥೆಯುಂಟು. ಇಂಗ್ಲೆಂಡ್‌ನಲ್ಲಿ ಸಹ ಠೇವಣಿ ರೂಪದ ಹಣವನ್ನು ಹೊರತುಪಡಿಸಿದರೆ ಉಳಿದ ರೂಪದ ಹಣ ಹೆಚ್ಚಾಗಿ ಚಿನ್ನದ ನಾಣ್ಯದ ರೂಪದಲ್ಲಿಯೇ ಇದೆ.

೬೦೫೫. ಇವೆರಡೂ ದೇಶಗಳಲ್ಲಿ ಬಂಗಾರ ನಾಣ್ಯರೂಪದಲ್ಲಿ ಚಲಾವಣೆಯಲ್ಲಿರುವ ಹಣದ ಪ್ರಮಾಣ ಬೇರೆ ತರದ ಹಣದ ಗಾತ್ರಕ್ಕೆ ಹೋಲಿಸಿದಲ್ಲಿ ಕಡಿಮೆ ಎನ್ನಿಸುವುದಿಲ್ಲವೆ?

– ನಾನು ಒತ್ತಿಹೇಳಬಯಸುವುದೇನೆಂದರೆ ಚಲಾವಣೆಯಲ್ಲಿರುವ ಒಟ್ಟು ಹಣದ ಪೂರೈಕೆಗೆ ಹೋಲಿಸಿದರೆ ಹೊಸ ಹೆಚ್ಚಳದ ಪ್ರಮಾಣವು ಅತಿ ಅಲ್ಪವಾಗಿರುವುದರಿಂದ ಬೆಲೆಗಳ ಮಟ್ಟದಲ್ಲಿ ಹೆಚ್ಚಿನ ವ್ಯತ್ಯಾಸವು ಆಗಲಾರದು. ಆ ಪರಿಚ್ಛೇದದಲ್ಲಿ ನಾನು ನಿಜವಾಗಿ ಹೇಳಬಯಸಿದ್ದು ಇದೇ ಮಾತು. ಹಣದ ಪೂರೈಕೆಯು ಕೇವಲ ಹಣದ ಚಲಾವಣೆಗೆ ತರುವ ಅಧಿಕಾರಿಯ ಇಚ್ಛೆಯನ್ನೇ ಅವಲಂಬಿಸಿದರೆ ಹೊಸ ಹೆಚ್ಚಳದ ಮೊತ್ತವು ಬೆಲೆಗಳ ಮಟ್ಟವನ್ನು ಗಣನೀಯವಾಗಿ ಕದಡುವಷ್ಟು ದೊಡ್ಡದು ಆಗಬಹುದು.

೬೦೫೬. ನಿಮ್ಮ ಹೇಳಿಕೆಯಲ್ಲಿ ಉಲ್ಲೇಖಿತವಾದ ಹೆಚ್ಚಳದ ಅರ್ಥವು ಆರ್ಥಿಕ ವಿಕಾಸದಿಂದ ಆವಶ್ಯಕವೆನಿಸುವ ಹಣದ ಹೆಚ್ಚಳ ಎಂದು ಆಗುವುದಿಲ್ಲವೇ?

– ಇಲ್ಲ: ಚಿನ್ನದ ಗಣಿಗಳ ಉತ್ಪಾದನೆಯಿಂದ ಬಂಗಾರದ ಹಣ (ನಾಣ್ಯ) ಪೂರೈಕೆಯಲ್ಲಿ ಉಂಟಾದ ಹೆಚ್ಚಳ ಎಂಬ ಅರ್ಥದಲ್ಲಿ ನಾನು ಹೇಳಿದ್ದೇನೆ.

೬೦೫೭. ಹಾಗಾದರೆ ಬಂಗಾರದ ಪೂರೈಕೆಯ ವಾರ್ಷಿಕ ಹೆಚ್ಚಳ ಇಷ್ಟು ಕಡಿಮೆ ಎನ್ನುವಿರಾ?

– ಹೌದು; ಇಂಥ ಹೆಚ್ಚಳವು ಈಗಿರುವ ಬಂಗಾರದ ಸಂಗ್ರಹಕ್ಕೆ ಹೋಲಿಸಿದರೆ ಬೆಲೆಗಳ ಮಟ್ಟವನ್ನು ಗಣನೀಯವಾಗಿ ಕದಲಿಸುವ ಗಾತ್ರದ್ದಾಗಿಲ್ಲ.

೬೦೫೮. ಆಂತರಿಕ ಹಣಕ್ಕೂ ಬಂಗಾರಕ್ಕೂ ಸ್ಥಿರವಾದ ಸಂಬಂಧವಿರುವ ವಿವಿಧ ಹಣದ ವ್ಯವಸ್ಥೆಗಳಲ್ಲಿ ನೀವು ಹೇಳಿದ ಅಂಶ ಯಾವ ವ್ಯತ್ಯಾಸವನ್ನು ಮಾಡುವುದು?

– ನೀವು ಕೇಳಿದ್ದು ನನಗೆ ಸರಿಯಾಗಿ ಅರ್ಥವಾಗಿಲ್ಲ.

೬೦೫೯. ಜಾಗತಿಕ ಬಂಗಾರದ ಸಂಗ್ರಹದಲ್ಲಿ ವಾರ್ಷಿಕ ಉತ್ಪಾದನೆಯಿಂದ ಆಗುವ ಹೆಚ್ಚಳದ ಪ್ರಮಾಣವು ಕಡಿಮೆಯಾಗಿರುವ ಸಂಗತಿಯಿಂದ ಬಂಗಾರದ ಹಣದ (ನಾಣ್ಯ) ಚಲಾವಣೆ ಇರುವ ವ್ಯವಸ್ಥೆಗೂ ಸುವರ್ಣ ವಿನಿಮಯ ಪ್ರಮಿತಿ ಇರುವ ಹಣದ ವ್ಯವಸ್ಥೆಗೂ ಸ್ಥಿರತೆಯ ವಿಷಯದಲ್ಲಿ ಏನು

ವ್ಯತ್ಯಾಸವಾಗುವುದು? ಇದನ್ನು ೨ನೆಯ ಪರಿಚ್ಛೇದದ ಮುಂದಿನ ಭಾಗದಲ್ಲಿ ಹೇಳಿದ್ದೀರಿ?

– ಅಲ್ಲಿ ನಾನು ಹೇಳಿದ್ದೇನೆಂದರೆ, ಒಂದು ಬೆಲೆಗಳ ಮಟ್ಟವನ್ನು ನಾವು ಆಧಾರವೆಂದು ಇಟ್ಟುಕೊಂಡಾಗ, ಕೇವಲ ಹಣವನ್ನು ಚಲಾವಣೆಗೆ ತರುವ ಅಧಿಕಾರಿಯ ಇಚ್ಛೆಯ ಮೇಲೆ ಹಣದ ಹೆಚ್ಚಳವು ಅವಲಂಬಿಸಿದ್ದರೆ, ಆ ಅಧಿಕಾರಿಯು ಬೆಲೆಗಳ ಮಟ್ಟವನ್ನು ಗಣನೀಯವಾಗಿ ಕದಡುವಷ್ಟು ಹಣ–ಚಲಾವಣೆಯನ್ನು ಹೆಚ್ಚಿಸಬಹುದು. ಯುದ್ಧದಲ್ಲಿ (ಮೊದಲನೇ ಮಹಾಯುದ್ಧ) ಭಾಗವಹಿಸಿದ ಬಹುತೇಕ ಎಲ್ಲಾ ದೇಶಗಳು ಈ ರೀತಿ ಹೊಸತಾಗಿ ಹಣವನ್ನು ಚಲಾವಣೆಗೆ ತಂದು ಹಣ ಪೂರೈಕೆಯನ್ನು ಹೆಚ್ಚಿಸಿವೆ.

೬೦೬೦. ಈಗ ಒಂದು ದೇಶದಲ್ಲಿ ಬಂಗಾರದ ನಾಣ್ಯಗಳ ಸಂಗಡ ಪೂರಕವಾಗಿ ಕಾಗದದ ನೋಟುಗಳ ಚಲಾವಣೆಯೂ ಇರುವುದೆಂದು ಭಾವಿಸೋಣ; ನೀವು ತೋರಿಸುತ್ತಿರುವ ಸೂಚನೆಯು ಇದೇ ಮಾದರಿಯದೆಂದು ತಿಳಿಯೋಣವೇ?

– ಒಂದು ರೀತಿಯಲ್ಲಿ ಹೌದು.

೬೦೬೧. ಇನ್ನು ಸುವರ್ಣ ವಿನಿಮಯ ಪ್ರಮಿತಿಯ ಬಗ್ಗೆ ವಿಚಾರಿಸುವಾ: ಬಂಗಾರದ ಹಣ ಚಲಾವಣೆಯಲ್ಲಿರುವಾಗ (ಶುದ್ಧ ಸುವರ್ಣ ಪ್ರಮಿತಿಯಲ್ಲಿ) ಸುವರ್ಣ ವಿನಿಮಯ ಪ್ರಮಿತಿಗಿಂತ ಹಣದುಬ್ಬರದ ಶಕ್ಯತೆ ತೀರಾ ಕಡಿಮೆ ಎಂದು ನಿಮ್ಮ ಹೇಳಿಕೆ. ಹೀಗೆ ಶುದ್ಧ ಸುವರ್ಣ ಪ್ರಮಿತಿ ಇರುವಾಗ ಹಣದುಬ್ಬರದ ಶಕ್ಯತೆ ಕಡಿಮೆ ಏಕೆ?

– ಏಕೆಂದರೆ ಚಿನ್ನದ ನಾಣ್ಯಗಳ ಚಲಾವಣೆಯೊಂದಿಗೆ ಕಾಗದದ ಹಣದ ಚಲಾವಣೆ ಇದ್ದರೂ, ಶುದ್ಧ ಸುವರ್ಣ ಪ್ರಮಿತಿಯ ನಿಯಮದ ಪ್ರಕಾರ ಕಾಗದದ ನೋಟಿನ ಧಾರಕನು ಕೇಳಿದಾಗ ಬಂಗಾರದ ರೂಪದಲ್ಲಿ ಪರಿವರ್ತಿಸುವ ಹೊಣೆಯನ್ನು ಹಣ–ವ್ಯವಸ್ಥೆಯ ಅಧಿಕಾರಿಗಳು ಹೊರಲೇಬೇಕು. ಆದ್ದರಿಂದ ಈ ಅಧಿಕಾರಿಗಳು ಕಾಗದದ ಹಣವನ್ನು ಮಿತಿಯಲ್ಲಿ ಇಡಲೇಬೇಕಾಗಿರುತ್ತದೆ. ಈ ಪರಿವರ್ತನೆಗೆ ಸಾಕಾಗುವಷ್ಟು ಕಾಯ್ದಿಟ್ಟ ಸುವರ್ಣ ನಿಧಿ ಇಲ್ಲದೇ ಹೆಚ್ಚು ಕಾಗದದ ಹಣವನ್ನು ಚಲಾವಣೆಗೆ ತರುವುದು ಅಸಾಧ್ಯ. ಆದರೆ ಭಾರತದಲ್ಲಿರುವಂತಹ ಸುವರ್ಣ ವಿನಿಮಯ ಪ್ರಮಿತಿ ಇದ್ದರೆ ಚಲಾವಣೆಯಲ್ಲಿದ್ದ ಹಣವನ್ನು ಬಂಗಾರ ರೂಪದಲ್ಲಿ ಪರಿವರ್ತಿಸುವ ಹೊಣೆಯೇ ಇಲ್ಲವಾದ್ದರಿಂದ ಬೇಕಾದಷ್ಟು ಕಾಗದದ ಹಣವನ್ನು ಮುದ್ರಿಸಿ ಚಲಾವಣೆಯಲ್ಲಿ ತರಬಹುದು.

೬೦೬೨. ಸುವರ್ಣ ವಿನಿಮಯ ಪ್ರಮಿತಿಯಲ್ಲಿ ಆಂತರಿಕ ಹಣವನ್ನು ಬಂಗಾರ ಅಥವಾ ತತ್ಸಮಾನ ವಸ್ತುವಿನ ರೂಪದಲ್ಲಿ ಪರಿವರ್ತಿಸುವ ಹೊಣೆ ಉಂಟು ಎಂದು ಗ್ರಹಿಸುವಾ. ಹೀಗಿದ್ದರೆ ಶುದ್ಧ ಸುವರ್ಣ ಪ್ರಮಿತಿ ಹಾಗೂ ಸುವರ್ಣ ವಿನಿಮಯ ಪ್ರಮಿತಿ ಇವೆರಡೂ ಹಣದುಬ್ಬರವನ್ನು ತಡೆಯಲು ಸಮಾನ ಶಕ್ತಿಯುಳ್ಳವು ಆಗುವುದಿಲ್ಲವೆ.

– ಪರಿವರ್ತನೆಯ ಹೊಣೆಯನ್ನು ಹೊರುವ ರೀತಿಯ ಮೇಲೆ ಈ ಶಕ್ತಿ ಅವಲಂಬಿಸಿರುತ್ತದೆ.

೬೦೬೩. ಹಣದ ಚಲಾವಣೆಯ ಅಧಿಕಾರಿಗೆ ಕಾನೂನಿನಿಂದಲೇ ಆಂತರಿಕ ಕಾಗದದ ಹಣವನ್ನು ಬಂಗಾರ ಅಥವಾ ತತ್ಸಮಾನ ವಿದೇಶೀ ಹಣದ ರೂಪದಲ್ಲಿ ಪರಿವರ್ತಿಸುವ ಹೊಣೆ ಇದೆ ಎಂದು ನಾನು ಗ್ರಹಿಸುತ್ತೇನೆ. ಹೀಗಿದ್ದಾಗ ಹಣದುಬ್ಬರವನ್ನು ತಡೆಯಲಾಗದೇ?

– ನಿಮ್ಮ ಮೇಲೆ ಯಾವುದೇ ಪ್ರಶ್ನೆ ಅಥವಾ ಕರಾರು ಇಲ್ಲದೇ ಹಣವನ್ನು ಬಂಗಾರದ

ರೂಪಕ್ಕೆ ಪರಿವರ್ತಿಸಿಕೊಡುವ ಹೊಣೆ ಇದ್ದರೆ ಸಾಕು. ಪರಿವರ್ತನೀಯತೆಯು ಮನಸ್ಸಾಕ್ಷಿ ಇದ್ದಂತೆ, ಬೇರೆಬೇರೆ ಮಟ್ಟದ್ದು ಇರಬಹುದು: ಹಣದ ಗಾತ್ರವನ್ನು ನಿಯಂತ್ರಿಸುವಲ್ಲಿ ಅದರ ಕಾರ್ಯಸಾಧಕ ಶಕ್ತಿಯು ಅದರಲ್ಲಿರುವ ಪರಿವರ್ತನೀಯತೆಯನ್ನು ಅವಲಂಬಿಸಿರುತ್ತದೆ. ಪರಿವರ್ತನೆಯ ಹೊಣೆ ವಿದೇಶೀ ವಿನಿಮಯ ದೊರಕಿಸುವ (ಆಯಾತಗಳಿಗಾಗಿ ಹಣ ತೆರಲಿಕ್ಕೆ) ಏಕಮಾತ್ರ ಉದ್ದೇಶಕ್ಕಾಗಿ ಸೀಮಿತವಾಗಿದ್ದರೆ ಹಣದ ಹೆಚ್ಚಳದ ಮೇಲೆ ಸಾಕಷ್ಟು ನಿಯಂತ್ರಣವಾಗಲಾರದು.

೬೦೬೪. ಆಂತರಿಕ ಹಣವನ್ನು ಬಂಗಾರ ಅಥವಾ ಬಂಗಾರವನ್ನು ಆಧರಿಸಿದ ವಿದೇಶೀ ಹಣದ ರೂಪದಲ್ಲಿ ಪರಿವರ್ತಿಸುವ ಹೊಣೆ ಹೊತ್ತುಕೊಂಡಾಗ ಹಣದುಬ್ಬರವನ್ನು ತಪ್ಪಿಸಲು ಸಾಧ್ಯವಿಲ್ಲ ಎಂದು ಏಕೆ ಹೇಳುತ್ತೀರಿ?

– ಏಕೆಂದರೆ ವಿದೇಶೀ ವಿನಿಮಯದ ದರವು ಆಂತರಿಕ ಹಣದುಬ್ಬರದ ಅಳತೆಗೋಲು ಆಗಿಯೇ ತೀರುತ್ತದೆ ಎಂದು ಹೇಳಲಾಗದು. ಭಾರತದಲ್ಲಿ ನಮ್ಮ ಅನುಭವದಂತೆ, ಹಾಗೂ ಪ್ರೊ. ಕೇನ್ಸ್‌ರೂ ಕಂಡುಹಿಡಿದಂತೆ, ರೂಪಾಯಿಯ ವಿನಿಮಯ ದರವು ೧ ಷಿಲಿಂಗ್ ೪ ಪೆನ್ನಿಯ ಮಟ್ಟಕ್ಕೆ ಬಹುಕಾಲ ಸ್ಥಿರವಾಗಿದ್ದರೂ, ಭಾರತದಲ್ಲಿನ ಬೆಲೆಗಳ ಮಟ್ಟ ಮತ್ತು ಇಂಗ್ಲೆಂಡಿನಲ್ಲಿನ ಬೆಲೆಗಳ ಮಟ್ಟಗಳಲ್ಲಿ ಬಹಳ ವ್ಯತ್ಯಾಸ ಇದ್ದಿತು. ಒಂದು ದೇಶದ ಹಣದ ವಿನಿಮಯ ದರವು ಆಂತರಿಕ ಬೆಲೆಗಳ ಮಟ್ಟಕ್ಕೆ ಅನುಗುಣವಾಗಿಯೇ ಇರುತ್ತದೆ ಎಂದು ಹೇಳಲು ಸಾಧ್ಯವಿಲ್ಲ. ಈ ದರವು ವಿದೇಶೀ ವ್ಯಾಪಾರದ ಕಕ್ಷೆಯಲ್ಲಿ ಬರುವ ವಸ್ತುಗಳ ಬೆಲೆಗಳಿಗೆ ಮಾತ್ರ ಸಂಬಂಧ ಹೊಂದಿರುತ್ತದೆ; ಎಲ್ಲವೂ ವಿದೇಶೀ ವ್ಯಾಪಾರದಲ್ಲಿ ಸೇರುವ ವಸ್ತುಗಳ ಪ್ರಮಾಣ ಮತ್ತು ಗಾತ್ರಗಳನ್ನು ಅವಲಂಬಿಸಿರುತ್ತದೆ. ಒಂದು ದೇಶದಲ್ಲಿ ಆಂತರಿಕ ವ್ಯಾಪಾರವು ವಿದೇಶೀ ವ್ಯಾಪಾರಕ್ಕಿಂತ ಬಹಳ ಹೆಚ್ಚಾಗಿರುವ ಪರಿಸ್ಥಿತಿಯಲ್ಲಿ ....................

೬೦೬೫. ವಿದೇಶೀ ವ್ಯಾಪಾರಕ್ಕಿಂತ ಆಂತರಿಕ ವ್ಯಾಪಾರವೇ ದೊಡ್ಡ ಪ್ರಮಾಣದ್ದು ಎಂದರೆ ಏನು ಅರ್ಥ?

– ಒಂದು ದೇಶದಲ್ಲಿನ ಎಲ್ಲಾ ವಸ್ತುಗಳು ಅಥವಾ ವ್ಯವಹಾರಗಳು ವಿದೇಶೀ ವ್ಯಾಪಾರದ ಉದ್ದೇಶಕ್ಕೆ ಸಂಬಂಧಿಸಿರುವುದಿಲ್ಲ. ನಿಜವಾಗಿ ಒಂದು ದೇಶದ ವಿದೇಶೀ ವ್ಯಾಪಾರ ಅತಿ ಕಡಿಮೆ ಪ್ರಮಾಣದ್ದು ಇರುವಾಗ ದೇಶದೊಳಗೆ ಮಾತ್ರ ಮಾರಾಟವಾಗುವ ವಸ್ತುಗಳ ಬೆಲೆಗಳಿಗೂ ವಿದೇಶೀ ವ್ಯಾಪಾರದಲ್ಲಿ ಸೇರುವ ವಸ್ತುಗಳ ಬೆಲೆಗಳಿಗೂ ನಿಕಟ ಸಂಬಂಧ ಇರಲಿಕ್ಕಿಲ್ಲ.

೬೦೬೬. ನನ್ನ ಪ್ರಶ್ನೆಯನ್ನು ವಿಶಾಲ ದೃಷ್ಟಿಯಲ್ಲಿ ಕೇಳಬಯಸುತ್ತೇನೆ: ಬಂಗಾರದ ಹಣ (ನಾಣ್ಯ) ಮತ್ತು ಕಾಗದದ ನೋಟುಗಳು ಚಲಾವಣೆಯಲ್ಲಿರುವ ಸುವರ್ಣಪ್ರಮಿತಿಯೇ ಇರಲಿ ಅಥವಾ ಆಂತರಿಕ ಹಣವು ವಿದೇಶೀ ಹಣದಲ್ಲಿ ಪರಿವರ್ತನೀಯವಾಗಿರುವ ಸುವರ್ಣ ವಿನಿಮಯ ಪ್ರಮಿತಿಯೇ ಇರಲಿ, ಆಂತರಿಕ ಹಣದ ಗಾತ್ರವು ಕಾಯ್ದಿಟ್ಟ ನಿಧಿ ಮತ್ತು ಚಲಾವಣೆಯಲ್ಲಿ ಇರುವ ಸಾಂಕೇತಿಕ ಹಣ ಇವುಗಳ ನಡುವೆ ನಿರ್ಣಯಿತವಾದ ಅನುಪಾತವನ್ನು ಕಾಯ್ದುಕೊಳ್ಳುವ ಆವಶ್ಯಕತೆಯಿಂದ ಸೀಮಿತವಾಗುವುದಿಲ್ಲವೇ? ಕಾಯ್ದಿಟ್ಟ ನಿಧಿ ಮತ್ತು ಸಾಂಕೇತಿಕ ಹಣದ ನಡುವೆ ಈ ರೀತಿಯ ಸಂಬಂಧವನ್ನು ಒಂದು ತರಹದ ಪ್ರಮಿತಿಗಿಂತ ಮತ್ತೊಂದು ತರಹದ ಪ್ರಮಿತಿಯಲ್ಲಿ

ಕಾಯ್ದುಕೊಳ್ಳಲು ಹೆಚ್ಚು ಸುಲಭವಾದೀತೇ?

– ನಾನು ವಿದೇಶೀ ವಿನಿಮಯ ದರಗಳಿಗಿಂತ ಆಂತರಿಕ ಬೆಲೆಗಳ ಬಗ್ಗೆಯೇ ವಿಚಾರ ಮಾಡುತ್ತಿದ್ದೇನೆ. ಈ ದರಗಳು ಸ್ಥಿರವಾಗಿದ್ದಾಗ ಕೂಡಾ ಎರಡು ದೇಶಗಳ ಆಂತರಿಕ ಬೆಲೆಗಳಲ್ಲಿ ವ್ಯತ್ಯಾಸವಿರಬಹುದೆಂದು ಒಪ್ಪಿಕೊಳ್ಳುತ್ತೇನೆ.

೬೦೬೭. ಯಾವ ಎರಡು ದೇಶಗಳು?

– ಯಾವುದೇ ಎರಡು ದೇಶಗಳನ್ನು ತೆಗೆದುಕೊಳ್ಳಿರಿ: ಉದಾಹರಣೆಗೆ ಇಂಗ್ಲೆಂಡ್ ಮತ್ತು ಭಾರತವನ್ನು ತೆಗೆದುಕೊಳ್ಳೋಣ : ಬಂಗಾರ ಮತ್ತು ರೂಪಾಯಿ ಅಥವಾ ಪೌಂಡ್–ಸ್ಟರ್ಲಿಂಗ್ ಮತ್ತು ರೂಪಾಯಿ ಇವುಗಳ ಅನುಪಾತವು ಸ್ಥಿರವಾಗಿರಬಹುದು. ದೀರ್ಘಕಾಲದವರೆಗೆ ಸ್ಥಿರವಾಗಿಯೇ ಇದ್ದಿತು. ಆದರೆ ಇವೆರಡೂ ದೇಶಗಳ ಆಂತರಿಕ ಬೆಲೆಗಳ ಮಟ್ಟಗಳಲ್ಲಿ ವ್ಯತ್ಯಾಸವಾಯಿತು. ಕೆಲ ಸಮಯಾವಕಾಶದ ನಂತರ ಹೆಚ್ಚು ಪ್ರಭಾವಶಾಲಿಯಾದ ಆಂತರಿಕ ಬೆಲೆಗಳ ಮಟ್ಟವು ವಿದೇಶೀ ವಿನಿಮಯದ ಅನುಪಾತವನ್ನು ಉಚಿತವೆಂದೆನಿಸುವ ಮಟ್ಟಕ್ಕೆ ತರುವುದು.

೬೦೬೮. ನೀವು ಹೇಳುತ್ತಿರುವ ವಿಷಯಗಳು ಸಮಂಜಸವಾಗಿದ್ದರೂ ನನ್ನ ಪ್ರಶ್ನೆಯಲ್ಲಿನ ಅಂಶವನ್ನು ದಾಟಿ ನೀವು ದೂರ ಸಾಗುತ್ತಿದ್ದೀರಿ. ಇನ್ನೊಂದು ದೃಷ್ಟಿಕೋನದಿಂದ ನೋಡುವಾ. ನೀವು ಸೂಚಿಸಿದ ಹಣ–ವ್ಯವಸ್ಥೆ (ಶುದ್ಧ ಸುವರ್ಣ ಪ್ರಮಿತಿ) ಸ್ವೀಕರಿಸಿದ ದೇಶಗಳನ್ನೇ ಪರಿಶೀಲಿಸಿದರೂ ಅವಶ್ಯ ಎನಿಸಿದಾಗ ಅವು ಹಣದ ಪೂರೈಕೆಯನ್ನು ಹೆಚ್ಚಿಸಲು ಎಳ್ಳಷ್ಟಾದರೂ ತೊಂದರೆಯಾಗಿದೆಯೇ? ಯುದ್ಧಕಾಲದಲ್ಲಿ, ಸುವರ್ಣ ಪ್ರಮಿತಿಯನ್ನು ಸ್ವೀಕರಿಸಿದ ದೇಶಗಳ ಅನುಭವವನ್ನು ನೋಡಿದರೆ ಸುವರ್ಣದಿಂದಲೇ ಹಣದುಬ್ಬರ ಆಗಲಿಲ್ಲವೇ? ಅಮೆರಿಕದಲ್ಲಿ ಬಹು ದೊಡ್ಡ ಮೊತ್ತದ ಬಂಗಾರ ಚಲಾವಣೆಯಲ್ಲಿರುವುದೇ ಹಣದುಬ್ಬರಕ್ಕೆ ಕಾರಣವಾಗಲಿಲ್ಲವೇ?

– ಬೇರೆ ವಿಧದಲ್ಲಿ ಉತ್ತರಿಸುತ್ತೇನೆ : ನಾನು ನಿಶ್ಚಯಪೂರ್ವಕ ಹೇಳುವುದೇನೆಂದರೆ, ವಿದೇಶೀ ಹಣದ ರೂಪದಲ್ಲಿ ಆಂತರಿಕ ಹಣ ಪರಿವರ್ತನೀಯವಾಗಿದ್ದರೆ ಸಾಲದು. ಪರಿವರ್ತನೀಯತೆ ಪರಿಣಾಮಕಾರಿಯಾಗಬೇಕಾದರೆ ಅದು ಕರಾರುರಹಿತವಾಗಿರಬೇಕು. ನನ್ನ ಲಿಖಿತ ಹೇಳಿಕೆಯನ್ನು ಪರಿಶೀಲಿಸಿದರೆ, ನಾನು ಪರಿವರ್ತನೀಯ ಹಣ–ವ್ಯವಸ್ಥೆಗೆ ವಿರೋಧವಾಗಿರುವುದು ಸ್ಪಷ್ಟವಿದೆ. ಆದರೆ ಪರಿವರ್ತನೀಯತೆ ಇರುವುದಾದರೆ, ಅದು ಪ್ರಶ್ನಾತೀತವಾಗಿರಬೇಕು, ಕೆಲವೇ ಉದ್ದೇಶಗಳಿಗೆ ಸೀಮಿತವಾಗಿರಕೂಡದು.

೬೦೬೯. ಆಂತರಿಕ ಮತ್ತು ಬಾಹ್ಯ ಪರಿವರ್ತನೀಯತೆ ಎಂಬ ವಿಚಾರಗಳಿಂದ ಸ್ವಲ್ಪ ವೈಚಾರಿಕ ಗೊಂದಲವಾಗುವ ಶಕ್ಯತೆ ಇದೆ. ಅಂತರರಾಷ್ಟ್ರೀಯ ಸಾಲಗಳನ್ನು ಮುಟ್ಟಿಸುವ ಮಾಧ್ಯಮವೆಂದು ಬಂಗಾರವನ್ನು ಸ್ವೀಕರಿಸಿದ ಈ ಕಾಲದಲ್ಲಿ, ದೃಢವೆನಿಸುವ ಹಣದ ವ್ಯವಸ್ಥೆಯಲ್ಲಿ ಆಂತರಿಕ ಹಣವನ್ನು ನಿರ್ದಿಷ್ಟ ಬಂಗಾರದ ಮೊತ್ತಕ್ಕೆ ಸಮ ಆಗುವಂತೆ ಸ್ಥಿರಗೊಳಿಸುವುದು. ಆವಶ್ಯಕವಲ್ಲವೇ?

– ಈ ಅಭಿಪ್ರಾಯವನ್ನು ನಾನು ಒಪ್ಪಲಾರೆ : ಅಂತರರಾಷ್ಟ್ರೀಯ ಉದ್ದೇಶಗಳಿಗಾಗಿ ವಿನಿಮಯದ ಅನುಪಾತವು ಸ್ಥಿರವಾಗಿದ್ದರೂ ಆಂತರಿಕ ಬೆಲೆಗಳ ಸ್ಥಿರತೆಯನ್ನು ಸಾಧಿಸದೇ ಇರಬಹುದು.

೬೦೭೦. ನನ್ನ ಪ್ರಶ್ನೆಯ ನೈಜಸ್ವರೂಪ ಅರ್ಥವಾದಂತಿಲ್ಲ. ಆಂತರಿಕ ಹಣ ಮತ್ತು ನಿರ್ದಿಷ್ಟ ಮೊತ್ತದ ಬಂಗಾರ ಇವುಗಳ ನಡುವೆ ಸ್ಥಿರವಾದ ಸಂಬಂಧ ಇರಬೇಕೆಂದೇ ನಿಮ್ಮ ಸೂಚನೆ ಎಂದು ನಾನು ತಿಳಿದದ್ದು ಸರಿಯಲ್ಲವೇ?

– ನಿಜವಾಗಿ ಹೆಚ್ಚು ಬಂಗಾರವನ್ನು ಬಳಕೆಗೆ ತರಬೇಕೆಂದು ನನ್ನ ಅಭಿಪ್ರಾಯ. ಸದ್ಯದ ಪರಿಸ್ಥಿತಿಯಲ್ಲಿ ಬಂಗಾರದ ಬಳಕೆಯ ಮಿತವ್ಯಯವನ್ನು ನಾನು ವಿರೋಧಿಸುವೆ. ಏಕೆಂದರೆ, ಇಂಥ ಮಿತವ್ಯಯದಿಂದ ಬೆಲೆಗಳ ಸ್ಥಿರತೆಗೆ ಧಕ್ಕೆ ಉಂಟಾಗುತ್ತದೆ. ಇತರರ ಅಭಿಪ್ರಾಯಕ್ಕಿಂತ ಭಿನ್ನವಾಗಿರುವ ಈ ನನ್ನ ಅಭಿಪ್ರಾಯ ಸ್ವಲ್ಪ ಒರಟು ಎನಿಸಬಹುದು.

೬೦೭೧. ಹಾಗೇನಿಲ್ಲ. ನಿಜವಾಗಿ ನಿಮ್ಮ ವಿಚಾರ ಏನಿದೆ ಎಂಬುದನ್ನು ಪರೀಕ್ಷಿಸೋಣ. ಒಂದು ದೇಶದ ಹಣ-ವ್ಯವಸ್ಥೆಯನ್ನು ಸಂಘಟಿಸುವಾಗ ನಿಮ್ಮ ಧ್ಯೇಯ ಏನು? ಆಂತರಿಕ ಹಣದ ಮೌಲ್ಯ ಮತ್ತು ಬಂಗಾರದ ಮೊತ್ತಗಳ ನಡುವೆ ಸ್ಥಿರಸಂಬಂಧ ಇರಬೇಕೆಂದಲ್ಲವೇ?

– ಹೌದು. ಆಂತರಿಕ ಹಣದ ವಿನಿಮಯ ಮೌಲ್ಯ ಸ್ಥಿರವಾಗಿರಬೇಕು : ಆದರೆ ಬಂಗಾರಕ್ಕೆ ಸಂಬಂಧಿಸಿದಂತೆ ಅಲ್ಲ, ವಸ್ತುಗಳಿಗೆ ಸಂಬಂಧಿಸಿದಂತೆ ಹಣದ ಮೌಲ್ಯವು ಸ್ಥಿರವಾಗಿರಬೇಕು.

೬೦೭೨. ಯಾವ ವಿಧಾನಗಳಿಂದ ಭಾರತದ ಹಣದ ಮೌಲ್ಯವು ಸ್ಥಿರವಾಗಿರಬೇಕು : ಆದರೆ ಬಂಗಾರಕ್ಕೆ ಸಂಬಂಧಿಸಿದಂತೆ ಅಲ್ಲ, ವಸ್ತುಗಳಿಗೆ ಸಂಬಂಧಿಸಿದಂತೆ ಹಣದ ಮೌಲ್ಯವು ಸ್ಥಿರವಾಗಿರಬೇಕು.

೬೦೭೨. ಯಾವ ವಿಧಾನಗಳಿಂದ ಭಾರತದ ಹಣದ ಮೌಲ್ಯವನ್ನು ಸ್ಥಿರಗೊಳಿಸಬೇಕು? ಅಂದರೆ ಯಾವ ವಸ್ತುವಿನ ಸಂಬಂಧದಲ್ಲಿ ಈ ಸ್ಥಿರತೆ ಇರಬೇಕು? ಇದಕ್ಕಾಗಿ ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು?

– ಬಂಗಾರಕ್ಕೆ ಸಂಬಂಧಿಸಿದಂತೆ ಹಣದ ಮೌಲ್ಯ ಸ್ಥಿರವಾಗಿರುವುದಕ್ಕಿಂತ ವಸ್ತುರೂಪ ಮೌಲ್ಯ ಸ್ಥಿರವಾಗಿರುವುದೇ ಶ್ರೇಷ್ಠ. ಈ ಉದ್ದೇಶಕ್ಕಾಗಿ ರೂಪಾಯಿಗಳನ್ನು ಟಂಕಿಸುವುದನ್ನು ನಿಲ್ಲಿಸಿ ಬಂಗಾರದ ಬಳಕೆಯನ್ನೇ ಕಡ್ಡಾಯಗೊಳಿಸಬೇಕೆಂದು ನನ್ನ ಅಭಿಪ್ರಾಯ.

೬೦೭೩ ಆಂತರಿಕ ಹಣದ ವ್ಯವಸ್ಥೆಗೆ ಬಂಗಾರವನ್ನು ಪ್ರಮಾಣವನ್ನಾಗಿ ಇಟ್ಟುಕೊಳ್ಳಬಾರದೆಂದು ನಿಶ್ಚಯಿಸಿದರೆ ಬೇರೆ ಯಾವ ಪ್ರಮಿತಿಯನ್ನು ಸ್ವೀಕರಿಸಬೇಕು?

– ನನ್ನ ಲಿಖಿತ ಹೇಳಿಕೆಯನ್ನು ಹೇಳಿದ್ದೇನೆ: ನಾವು ಪ್ರೊ. ಫಿಷರ್ ಅವರ ಪರಿಹಾರಯುತ ಪ್ರಮಿತಿಯನ್ನು ಅಥವಾ ಪ್ರೊ. ಜೇವನ್ಸ್ ಅವರ ಸೂಚಕಾಂಕೀ ಪ್ರಮಿತಿಯನ್ನು ಸ್ವೀಕರಿಸಬೇಕು.

೬೦೭೪. ಪ್ರೊ. ಫಿಷರ್ ಅವರ ಪ್ರಮಿತಿಯ ಬಗ್ಗೆ ನನಗೆ ಹೆಚ್ಚು ಪರಿಚಯವಿಲ್ಲ. ಆದರೆ ಇವೆರಡೂ ಪ್ರಸ್ತಾಪಗಳು ಒಂದೇ ತರ ಇಲ್ಲವೇ?

– ಒಂದೇ ನಾಣ್ಯದ ಎರಡು ಮುಖಗಳಂತೆ ಈ ಎರಡೂ ಪ್ರಸ್ತಾಪಗಳಿವೆ: ಪ್ರೊ. ಫಿಷರ್ ಅವರ ಪ್ರಕಾರ ಚಿನ್ನದ ನಾಣ್ಯದಲ್ಲಿನ ಚಿನ್ನದ ಪ್ರಮಾಣವನ್ನು ನಿರ್ದಿಷ್ಟ ಸೂಚ್ಯಾಂಕದಲ್ಲಿ ಬದಲಾವಣೆಯಾದ ಪ್ರಮಾಣದಲ್ಲಿ ಬದಲಾಯಿಸಬೇಕು. ಆದರೆ ಪ್ರೊ. ಜೇವನ್ಸ್ ಅವರ ಪ್ರಕಾರ ನಿರ್ದಿಷ್ಟ ಸೂಚ್ಯಾಂಕದಲ್ಲಿ ಬದಲಾವಣೆಯಾದ ಪ್ರಮಾಣದಲ್ಲಿ ನಾಣ್ಯಗಳನ್ನು ಹೆಚ್ಚಾಗಲಿ, ಕಡಿಮೆಯಾಗಲಿ ಕೊಡಬೇಕು. ಇವೆರಡರ ನಡುವೆ ವ್ಯತ್ಯಾಸ ಇಷ್ಟೇ ಇದೆ. ಆದರೆ ಇವೆರಡೂ ಬಹಳ ತೊಡಕಿನ ವ್ಯವಸ್ಥೆಗಳೆಂಬುದು ನನ್ನ ಅನಿಸಿಕೆ. ವಾಸ್ತವಿಕವಾಗಿ

ಶುದ್ಧ ಸುವರ್ಣ ಪ್ರಮಿತಿಯು ನಮ್ಮ ಉದ್ದೇಶ ಸಾಧನೆಗೆ ಸಾಕಷ್ಟು ಉಪಯುಕ್ತವಾಗುವುದೆಂದು ನನ್ನ ವೈಯಕ್ತಿಕ ಅಭಿಪ್ರಾಯ.

೬೦೭೫. ವ್ಯಾವಹಾರಿಕವಾಗಿರುವುದನ್ನು ಯೋಚಿಸಿದಾಗ ಭಾರತದ ಹಣದ ಮೌಲ್ಯವನ್ನು ಬಂಗಾರದ ನಿರ್ದಿಷ್ಟ ಮೊತ್ತ ರೂಪದಲ್ಲಿ ನಿರ್ಧರಿಸಬೇಕೆಂದು ನಿಮ್ಮ ಮತವೋ?

– ಭಾರತದಲ್ಲಿ ಚಿನ್ನದ ನಾಣ್ಯಗಳು ಚಲಾವಣೆಯ ಹಣ ಆಗಬೇಕು; ಬಂಗಾರವು ಬರೀ ಹಣದ ಮೌಲ್ಯದ ಅಳತೆಗೋಲು ಆಗಕೂಡದು.

೬೦೭೬. ಈಗ ಇನ್ನೊಂದು ಪ್ರಶ್ನೆ ಕೇಳೋಣ. ನಿಮ್ಮ ಲಿಖಿತ ಸಾಕ್ಷ್ಯಾಧಾರದ ೪ನೇ ಪರಿಚ್ಛೇದದ ೨ನೇ ಉಪ–ಪರಿಚ್ಛೇದದಲ್ಲಿ ನೀವು "ಬಂಗಾರದ ಅಪಮೌಲ್ಯೀಕರಣದಿಂದ ಉಂಟಾದ ಎಡೆಬಿಡದ ಬೆಲೆ ಏರಿಕೆಯಿಂದ ಇಡೀ ಜಗತ್ತೇ ಬಳಲುತ್ತಿದೆ.....

ಬಂಗಾರದ ಮೌಲ್ಯ ಹೆಚ್ಚಾಗಬೇಕಾದರೆ ಹಣದ ರೂಪದಲ್ಲಿ ಬಂಗಾರದ ಬಳಕೆ ಹೆಚ್ಚಬೇಕು" ಎಂದು ಹೇಳಿಕೆ ನೀಡಿದ್ದೀರಿ. ಸುವರ್ಣ ವಿನಿಮಯ ಪ್ರಮಿತಿಯು ಬಂಗಾರದ ಬಳಕೆಯಲ್ಲಿ ಮಿತವ್ಯಯವನ್ನು ಸಾಧಿಸುತ್ತದೆ. ಇಂಥ ಮಿತವ್ಯಯವು ಸೂಕ್ತವೂ ಸಮಯೋಚಿತವೂ ಅಲ್ಲವಾದ್ದರಿಂದ ದೋಷಯುತ ಎಂಬುದೇ ನಿಮ್ಮ ಹೇಳಿಕೆಯ ಸರಿಯಾದ ಅರ್ಥವಲ್ಲವೇ?

– ಹೌದು.

೬೦೭೭. ಭವಿಷ್ಯದಲ್ಲಿನ ಬಂಗಾರದ ಬೇಡಿಕೆ ಮತ್ತು ಪೂರೈಕೆಯ ಬಗೆಗೆ ನಿಮ್ಮ ಅಂದಾಜಿನ ಆಧಾರದಿಂದಲೇ ಈ ಹೇಳಿಕೆ ಉಂಟೋ?

– ಹೌದು.

೬೦೭೮. ಮುಂಬರುವ ವರ್ಷಗಳಲ್ಲಿ ಬಂಗಾರದ ಪೂರೈಕೆಯು ಬೇಡಿಕೆಗೆ ಹೋಲಿಸಿದಲ್ಲಿ ಹೆಚ್ಚು ಎಂದು ನಿಮ್ಮ ಮತವೋ?

– ಇಲ್ಲ; ಪೂರೈಕೆ ಹೆಚ್ಚುವುದೆಂದು ಅಲ್ಲ. ಬಹಳ ಜನರು ಬಂಗಾರವನ್ನು ಬಳಸಲು ಶಕ್ತರಲ್ಲ ; ಬಳಸುವುದೂ ಇಲ್ಲ. ಅದರ ಬದಲು ಕಾಗದದ ಹಣವನ್ನು ಉಪಯೋಗಿಸುತ್ತಿದ್ದಾರೆ. ಆದ್ದರಿಂದ ಬಂಗಾರದ ಮೊತ್ತ ದೊಡ್ಡದಾಗಿಯೇ ಉಳಿಯುವುದು.

೬೦೭೯. ಈ ಬಗೆಗೆ ಒಂದು ಪ್ರಶ್ನೆ ಕೇಳುತ್ತೇನೆ. ನೀವು ಭಾರತದ ಹಿತಾಸಕ್ತಿಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಿದ್ದೀರೋ ಅಥವಾ ಭಾರತದಿಂದ ವಿಶ್ವಕ್ಕೆ ಆಗಬಹುದಾದ ಸೇವೆಯನ್ನು ಅನುಲಕ್ಷಿಸಿದ್ದೀರೋ?

– ನನ್ನ ಲಕ್ಷ್ಯದಲ್ಲಿ ಇವೆರಡೂ ಇವೆ.

೬೦೮೦. ಹಾಗಾದರೆ ಇದರಿಂದ ಭಾರತದ ಸ್ವಾರ್ಥ, ಪರಾರ್ಥ ಎರಡೂ ಸಾಧಿಸುತ್ತವೆ ಎಂದು ನಿಮ್ಮ ಮತ. ಬಂಗಾರದ ನಾಣ್ಯಗಳ ಬಳಕೆಯ ಪದ್ಧತಿಯು ದುಬಾರಿ, ಅದಕ್ಕೆ ಹೆಚ್ಚು ಬೆಲೆ ತೆರಬೇಕಾಗುತ್ತದೆ ಎಂಬ ಸಾಮಾನ್ಯ ಅಭಿಪ್ರಾಯಕ್ಕೆ ನಿಮ್ಮ ಒಪ್ಪಿಗೆ ಇದೆಯೇ?

– ಹೌದು.

೬೦೮೧. ಆದ್ದರಿಂದ ಭಾರತವು ಸಹಿಸಬೇಕಾದ ನಷ್ಟಗಳನ್ನೂ ನಾವು ಲಕ್ಷ್ಯದಲ್ಲಿಟ್ಟುಕೊಳ್ಳಬೇಕು. ಈ ನಷ್ಟಕ್ಕೆ ಪರಿಹಾರ ತುಂಬಿಕೊಡುವಂಥ ಯಾವ ಮಾರ್ಗಗಳಿವೆ?

– ಪ್ರೊ. ಕ್ಯಾನನ್ ಹೇಳಿದಂತೆ ಜನತೆಗೆ ಹೆಚ್ಚು ಸ್ಥಿರತೆಯನ್ನು ನೀಡುವ, ಮೋಸಕ್ಕೂ ಮುರ್ಖತನಕ್ಕೂ ಆಸ್ಪದ ಕೊಡದಿರುವ ಪ್ರಮಿತಿ ದೊರೆಯುತ್ತದೆ.

೬೦೮೨. ಈಗ ಭವಿಷ್ಯದ ಪ್ರತೀಕ್ಷೆಯ ಬಗ್ಗೆ ನೋಡೋಣ. ನಿಮ್ಮ ತರ್ಕ ಮತ್ತು ವಾದದ ಬಲವು ಭವಿಷ್ಯತ್ಕಾಲದಲ್ಲಿ ಬಂಗಾರದ ಜಾಗತಿಕ ಪೂರೈಕೆಯ ಬಗ್ಗೆ ನಿಮ್ಮ ನಿರೀಕ್ಷಣೆಗಳನ್ನೇ ಅವಲಂಬಿಸಿದೆಯಲ್ಲವೇ?

– ಹೌದು.

೬೦೮೩. ನಿಮ್ಮ ನಿರೀಕ್ಷಣೆಗೆ ವಿಪರೀತವಾಗಿ ಬಂಗಾರದ ಜಾಗತಿಕ ಪೂರೈಕೆ ತುಲನಾತ್ಮಕವಾಗಿ ಕಡಿಮೆಯಾಗಿ, ಬಂಗಾರದ ಜಾಗತಿಕ ಬೆಲೆ ಏರಿಕೆಯಾದರೆ, ಭಾರತದ ಮತ್ತು ಇತರ ದೇಶಗಳಿಗೆ ಬಂಗಾರದ ಮಿತವ್ಯಯವೇ ಯೋಗ್ಯ ಮತ್ತು ಲಾಭಕರವೆನಿಸುವುದಿಲ್ಲವೇ?

– ಅನಿರ್ದಿಷ್ಟ ಹಣದ ಕುಗ್ಗುವಿಕೆಗೆ ನಾವು ಅಂಜಬಾರದು: ಬೇಕೆನಿಸಿದಾಗ ಹಣದ ಹೆಚ್ಚಳ ಮಾಡಲು ಹಲವು ಮಾರ್ಗಗಳಿವೆ. ಅನಿರ್ದಿಷ್ಟ ಹಣದ ಉಬ್ಬರವು ಸಲೀಸಾಗಿ ಉಂಟಾಗುತ್ತದೆ. ಇಂಥ ಸಂದರ್ಭಗಳು ಉಂಟಾಗದಂತೆ ನಾವು ಎಚ್ಚರವಹಿಸಬೇಕು ಎಂಬುದೇ ನನ್ನ ಉತ್ತರ.

೬೦೮೪. ಶುದ್ಧ ಸುವರ್ಣ ಪ್ರಮಿತಿಯ ಮುಖಾಂತರ ಭಾರತದ ಹಣವನ್ನು ಬಂಗಾರಕ್ಕೆ ತಳುಕು ಹಾಕಿದ ಮೇಲೆ, ಬಂಗಾರದ ಪೂರೈಕೆ ಕಡಿಮೆಯಾದಾಗ ಇತರ ದೇಶಗಳಂತೆ ಭಾರತವೂ ಸಹ ಬೆಲೆಗಳ ಮಟ್ಟದ ಇಳಿತದ ದುಷ್ಪರಿಣಾಮಗಳನ್ನು ಅನುಭವಿಸಬೇಕಾಗುವುದಿಲ್ಲವೇ?

– ಹೌದು. ಆದರೆ ನಮ್ಮ ಕಾಗದದ ಹಣದ ಮೊತ್ತವನ್ನು ಹೆಚ್ಚಿಸಿ ಈ ದುಷ್ಪರಿಣಾಮಗಳನ್ನು ಸ್ವಲ್ಪಮಟ್ಟಿಗೆ ನಿವಾರಿಸಬಹುದು.

೬೦೮೫. ಈ ಬೆಲೆಯನ್ನು ತೆರಲೆಂದೇ ನೀವು ಬಂಗಾರದ ಹಣದ ಚಲಾವಣೆಯುಳ್ಳ ವ್ಯವಸ್ಥೆಯನ್ನು ಆಯ್ಕೆ ಮಾಡಿಲ್ಲವೇ?

– ಇಲ್ಲ. ಅನಿರ್ದಿಷ್ಟ ಹಣದುಬ್ಬರವನ್ನು ತಪ್ಪಿಸುವ ಉದ್ದೇಶದಿಂದ ಚಿನ್ನದ ನಾಣ್ಯಗಳ ಚಲಾವಣೆಯನ್ನು ನಾನು ಪ್ರತಿಪಾದಿಸಿರುತ್ತೇನೆ. ಈ ಮೊದಲೇ ನಾನು ಹೇಳಿದಂತೆ ಅನಿರ್ದಿಷ್ಟ. ಹಣದ ಕುಗ್ಗುವಿಕೆ ಆಗದಂತೆ ಮುನ್ನೆಚ್ಚರಿಕೆ ವಹಿಸಬಹುದು. ಇಳಿಯುತ್ತಿರುವ ಬೆಲೆಗಳ ಮಟ್ಟವನ್ನು ನಿಯಂತ್ರಿಸಬಹುದು.

೬೦೮೬. ಬಂಗಾರದ ಮೌಲ್ಯವನ್ನು ಹೆಚ್ಚಿಸುವ ಯಾವುದೇ ಕ್ರಮಗಳು ಉತ್ತಮ ಎಂಬ ನಿಮ್ಮ ಅಭಿಪ್ರಾಯದ ಬಗ್ಗೆ ಕೇಳೋಣ. ಬರುವ ವರ್ಷಗಳಲ್ಲಿ ಬಂಗಾರದ ಪೂರೈಕೆ ಮತ್ತು ಬೇಡಿಕೆಗಳ ಏರುಪೇರುಗಳ ಸಂಬಂಧ ಹೇಗಾದೀತು ಎನ್ನುವ ಬಗೆಗೆ ನೀವೇನಾದರೂ ಸಾಂಖ್ಯಿಕ ಅಂದಾಜುಗಳನ್ನು ಮಾಡಿದ್ದೀರಾ?

– ೧೯೨೩ರಲ್ಲಿ ನಾನು ಈ ವಿಷಯದ ಕುರಿತು ಪುಸ್ತಕವನ್ನು ಬರೆಯುವಾಗ, "ಹಾರ್ವರ್ಡ್ ಬಿಜಿನೆಸ್ ಬ್ಯಾರೋಮೀಟರ್ ಸೀರಿಸ್" ಎಂಬ ನಿಯತಕಾಲಿಕೆಯಲ್ಲಿನ ಕೆಲವು ಲೇಖನಗಳನ್ನು ಪರಿಶೀಲಿಸಿದೆ: ಈ ಪರಿಶೀಲನೆಯಿಂದ ಬಂಗಾರದ ಉತ್ಪಾದನೆಯು ಕಡಿಮೆಯಾಗುವ ಸಂಭವವಿಲ್ಲ ಎಂದು ನನಗನಿಸಿತು. ಇದಲ್ಲದೇ ಸಾಮಾನ್ಯವಾಗಿ ಎಲ್ಲ ದೇಶಗಳು ಕಾಗದದ ಹಣವನ್ನು ಎಷ್ಟೊಂದು ಅಧಿಕ ಪ್ರಮಾಣದಲ್ಲಿ ಉಪಯೋಗಿಸುತ್ತವೆ

ಎಂದರೆ ತುಲನಾತ್ಮಕವಾಗಿ ನಮ್ಮ ಬಂಗಾರದ ಪೂರೈಕೆ ಹೆಚ್ಚೆಂದೇ ಎನಿಸುತ್ತದೆ. ಆದ್ದರಿಂದ ಯಾವ ದೇಶಗಳಿಗೆ ಬಂಗಾರದ ಮಿತಬಳಕೆ ಅನಾವಶ್ಯಕವೋ, ಆ ದೇಶಗಳು ಬಂಗಾರದ ಮಿತವ್ಯಯವನ್ನು ಬಿಡುವುದರಿಂದ ಸ್ವಾರ್ಥ, ಪರಾರ್ಥಗಳೆರಡನ್ನೂ ಸಾಧಿಸಬಹುದು.

೬೦೮೭. ನಿಮ್ಮ ಉತ್ತರದಲ್ಲಿ ಕಡೆಯ ಭಾಗ ನನಗೆ ಸರಿಯಾಗಿ ಅರ್ಥವಾಗಿಲ್ಲ.

– ನಾನು ಹೇಳುವುದೇನೆಂದರೆ, ಬಂಗಾರಕ್ಕೆ ಬದಲಿ ಎನಿಸುವ ವಸ್ತುಗಳ (ಬ್ಯಾಂಕ್ ಠೇವಣಿಗಳು, ಕಾಗದದ ನೋಟು ಇತ್ಯಾದಿ) ಬಳಕೆಯ ಪ್ರಮಾಣದಲ್ಲಿ ಅಪಾರ ಹೆಚ್ಚಳವಾಗಿದೆ. ಆದ್ದರಿಂದ ಇನ್ನೂ ಬಹುಕಾಲದವರೆಗೆ ಗಣಿಗಳಿಂದ ಬಂಗಾರದ ಪೂರೈಕೆಯಲ್ಲಿ ಹೆಚ್ಚಳ ಆಗದಿದ್ದರೂ ಈಗಾಗಲೇ ಚಲಾವಣೆಯಲ್ಲಿರುವ ಬಂಗಾರದ ಮೊತ್ತ ಮುಂದಕ್ಕೆ ಸಹ ಸಾಕಾಗುವಷ್ಟು ಇದೆ.

೬೦೮೮. ಭವಿಷ್ಯತ್ಕಾಲದ ಬಂಗಾರದ ಪೂರೈಕೆಯ ಬಗೆಗೆ ಮತ್ತೆ ಯಾವುದಾದರೂ ಸಾಂಖ್ಯಿಕ ಗಣನೆಗಳನ್ನು ಮಾಡಿದ್ದೀರಾ?

– ಇಲ್ಲ, ಬೇರೆ ಯಾವ ಅಂದಾಜುಗಳನ್ನೂ ನಾನು ಮಾಡಿಲ್ಲ.

೬೦೮೯. ಆಯೋಗದ ದೃಷ್ಟಿಯಿಂದ ಈ ವಿಷಯ ಬಹಳ ಮಹತ್ವದ್ದಾಗಿರುವ ಕಾರಣ, ಬೇರೆ ಮೂಲಗಳಿಂದ ನಮಗೆ ಬಂದಿರುವ ಒಂದೆರಡು ಅಂದಾಜುಗಳನ್ನು ನಿಮ್ಮ ಮುಂದಿಡಬಯಸುತ್ತೇನೆ. ಬರುವ ಹಲವು ವರ್ಷಗಳಲ್ಲಿ ಬಂಗಾರದ ಬೇಡಿಕೆ ಮತ್ತು ಪೂರೈಕೆಯ ಏರುಪೇರುಗಳು, ಅವುಗಳಿಂದ ಬಂಗಾರದ ಬೆಲೆಯ ಮೇಲೆ ಆಗುವ ಪರಿಣಾಮಗಳು ಯಾವ ರೀತಿ ಆಗಬಹುದು ಎಂಬ ವಿಷಯದ ಬಗೆಗೆ ತಜ್ಞರ ಅಂದಾಜುಗಳಿವೆ. ಬೇರೆ ಬೇರೆ ಕಾಲಗಳಲ್ಲಿ ಈ ತಜ್ಞರು ಅಂದಾಜುಗಳನ್ನು ಮಾಡಿದ್ದರೂ ಇವು ೧೯೩೦ರಲ್ಲಿ ಈ ವಿಷಯಕ್ಕೆ ಸಂಬಂಧಿಸಿದಂತೆ ಬೆಳವಣಿಗೆಗಳ ಬಗೆಗೆ ಮುನ್ಸೂಚನೆ ನೀಡುತ್ತವೆ. ೧೯೧೩ ಆಧಾರ ವರ್ಷವೆಂದು ಗ್ರಹಿಸಿ ಆ ವರ್ಷದ ಬೆಲೆಗಳ ಮಟ್ಟವನ್ನು ಪ್ರಮಾಣವನ್ನು ೧೦೦ ಎಂದು ಪರಿಗಣನೆ ಮಾಡಿ ನಂತರ ಬಂಗಾರದ ಪೂರೈಕೆಯ ಏರುಪೇರುಗಳಿಂದ ೧೯೩೦ರಲ್ಲಿ ಬೆಲೆಗಳ ಮಟ್ಟ ಏನಾಗಬಹುದು ಹಾಗೂ ಜಾಗತಿಕ ಪರಿಣಾಮಗಳೇನು ಎಂಬುದನ್ನು ಇವು ವಿಚಾರಿಸುತ್ತವೆ. ೧೯೨೧ ರಲ್ಲಿ ಸರ್ ಜೇಮ್ಸ್ ವಿಲ್ಸನ್ ಅವರು ಮಾಡಿದ ಅಂದಾಜು ಇಲ್ಲಿ ನನ್ನ ಮುಂದೆ ಇದೆ: ಅದರ ಪ್ರಕಾರ ಇವೆಲ್ಲ ಅಂಶಗಳ ಪರಿಣಾಮವಾಗಿ ೧೯೩೦ರಲ್ಲಿ ಸಾಮಾನ್ಯ ಬೆಲೆಗಳ ಮಟ್ಟ ೧೧೫ಕ್ಕೆ ಸ್ಥಿರವಾಗುವುದು. ಸುಮಾರು ೧೫೮ಕ್ಕೆ ಇರುವ ಈಗಿನ ಮಟ್ಟಕ್ಕೆ ಹೋಲಿಸಿದಲ್ಲಿ ಇದು ಗಣನೀಯ ಬೆಲೆ ಇಳಿಕೆ ಎನಿಸುವುದು. ನೀವೇ ಉಲ್ಲೇಖಿಸಿದ "ಹಾರ್ವರ್ಡ್ ಬಿಜಿನೆಸ್ ಬಾರೋಮೀಟರ್" ದಲ್ಲಿನ ಅಂದಾಜುಗಳ ಪ್ರಕಾರ ಸಾಮಾನ್ಯ ಬೆಲೆಗಳ ಮಟ್ಟ ೧೫೦ಕ್ಕೆ ಸ್ಥಿರವಾಗಬಹುದು. ನಂತರ ಪ್ರೊ. ಗ್ರೆಗರಿಯವರು ಮೇ. ೧೯೨೫ ರಲ್ಲಿ ಮಾಡಿದ ಅಂದಾಜು ಇದೆ: ಅದರ ಪ್ರಕಾರ ಸಾಮಾನ್ಯ ಬೆಲೆಗಳ ಮಟ್ಟ ೧೯೩೦ಕ್ಕೆ ೧೬೭ಕ್ಕೆ ಮುಟ್ಟಿ ಇನ್ನೂ ಏರುತ್ತ ಹೋಗುವುದು. ಗ್ರೆಗರಿಯವರ ಅಭಿಪ್ರಾಯ ಮತ್ತು ನಿರೀಕ್ಷೆ ನಿಮ್ಮ ಅಭಿಪ್ರಾಯಗಳಂತೆಯೇ ಇವೆ. ಕೊನೆಯದಾಗಿ ಖ್ಯಾತ ತಜ್ಞರಾದ ಪ್ರೊ. ಜೋಸೆಫ್ ಕಿಚಿನ್‌ರ ಅಂದಾಜುಗಳಿವೆ: ಜುಲೈ ೧೯೨೫ರಲ್ಲಿ ತಯಾರಿಸಿದ ಅವರ ಅಂದಾಜುಗಳ ಪ್ರಕಾರ ಸಾಮಾನ್ಯ ಬೆಲೆಗಳ ಮಟ್ಟವು ೧೨೦ಕ್ಕೆ ತಲುಪಿ ಇಳಿಯತೊಡಗುವುದು. ಈ ನಾಲ್ಕು ಅಂದಾಜುಗಳಲ್ಲಿ ಮೂರರ ಪ್ರಕಾರ ಬೆಲೆಗಳು ಇಳಿಯುತ್ತವೆ : ಎರಡು ಅಂದಾಜುಗಳಂತೆ ಆ ಕೆಳಮಟ್ಟದಲ್ಲೇ

ಬೆಲೆಗಳು ಸ್ಥಿರವಾಗಿ ಉಳಿಯುತ್ತವೆ. ಪ್ರೊ. ಕಿಚಿನ್ ಒಬ್ಬರು ಆ ಕೆಳಮಟ್ಟದಿಂದ ಬೆಲೆಗಳು ಮುಂದೆ ಸಹ ಇಳಿಯುತ್ತದೆ ಎಂದು ನಂಬಿದ್ದಾರೆ. ಒಂದೇ ಅಂದಾಜು ಮಾತ್ರ ೧೯೩೦ರ ವೇಳೆಗೆ ಬೆಲೆ ಏರಿಕೆಯಾಗುತ್ತದೆ, ಮತ್ತು ಮುಂದೆ ಸಹ ಏರಿಕೆಯಾಗುತ್ತಿರುವುದೆಂದು ಸೂಚಿಸುತ್ತದೆ. ಜಾಗರೂಕತೆಯಿಂದ ತಯಾರಿಸಿದ ಈ ಅಂದಾಜುಗಳನ್ನು ನೋಡಿದಾಗ, ಬೆಲೆಗಳ ಸ್ಥಿರತೆಯನ್ನು ಕಾಯ್ದುಕೊಳ್ಳಲಿಕ್ಕೆ ಬಂಗಾರದ ಮಿತವ್ಯಯವು ಅನವಶ್ಯ ಎಂಬ ಗ್ರಹಿಕೆಯನ್ನು ಮಾಡುವಾಗ ನಾವು ಬಹಳ ಎಚ್ಚರವಹಿಸಬೇಕೆಂದು ನಿಮಗೆನಿಸುವುದಿಲ್ಲವೇ?

– ಬೆಲೆಗಳ ಏರಿಕೆಯಾಗುವುದಕ್ಕಿಂತ ಬೆಲೆಗಳ ಇಳಿತವೇ ಹಿತಕರ ಎಂದು ನನ್ನ ಮತ. ಬೆಲೆಗಳು ಇಳಿದಷ್ಟೂ ಹಾಗೂ ಬೇಗ ಇಳಿದಷ್ಟೂ ನನಗೆ ಸಂತೋಷವೇ. ಬೆಲೆ ಏರಿಕೆಗಿಂತ ಬೆಲೆಗಳ ಇಳಿತವು ದೇಶಕ್ಕೆ ಲಾಭಕರವೆಂದು ನನ್ನ ಅನಿಸಿಕೆ. ಆದ್ದರಿಂದ ಈ ಅಂದಾಜುಗಳು ನನ್ನ ಸೂಚನೆಗಳನ್ನು ಬದಲಾಯಿಸುವುದಿಲ್ಲ.

೬೯೦. ಇತರರಿಗಿಂತ ಭಿನ್ನವಾಗಿರುವ ನಿಮ್ಮ ಅಭಿಪ್ರಾಯಕ್ಕೆ ಬೇರೆ ಆಧಾರವುಂಟೇ?

– ತಾವು ಉಲ್ಲೇಖಿಸಿದ ಅಭಿಪ್ರಾಯವನ್ನು ತಕ್ಕ ಗೌರವದಿಂದ ಪರಿಶೀಲಿಸಿದ್ದೇನೆ. ನಾನು ಸ್ವತಃ ಯಾವ ಅಂದಾಜುಗಳನ್ನೂ ಮಾಡಿಲ್ಲ. ಆದ್ದರಿಂದ ನೀವು ಹೇಳಿದ ಅಂದಾಜುಗಳನ್ನು ಅಲ್ಲಗಳೆಯುವ ಸ್ಥಿತಿಯಲ್ಲಿ ನಾನಿಲ್ಲ. ಆದರೂ, ಈಗಾಗಲೇ ಚಲಾವಣೆಯಲ್ಲಿರುವ ಬಂಗಾರದ ಮೊತ್ತ ಸಾಕಷ್ಟು ದೊಡ್ಡದಾಗಿದೆ ಮತ್ತು ಬಹಳ ದೇಶಗಳಿಗೆ ಇಂಥ (ಬಂಗಾರದ) ಹಣವನ್ನು ಬಳಸುವ ಶಕ್ತಿ ಸೀಮಿತವಾಗಿದೆ. ಆದ್ದರಿಂದ ಬಂಗಾರದ ಪೂರೈಕೆ ಬೇಡಿಕೆಯ ಮಾನದಿಂದ ಸಾಕಷ್ಟು ದೊಡ್ಡದಾಗಿಯೇ ಉಳಿಯುವುದು. ಹೀಗಾಗಿ ಬೆಲೆಗಳ ಮಟ್ಟ ಇಳಿಯುವ ಸಂಭವ ಕಡಿಮೆ ಎಂದು ನನ್ನ ಅಭಿಪ್ರಾಯ.

೬೯೧. ಮತ್ತೊಂದು ಪ್ರಶ್ನೆ. ಅದಕ್ಕಿಂತ ಪೂರ್ವದಲ್ಲಿ ನಾನು ಕೇಳುವುದು; ನೀವು ಸುವರ್ಣ ವಿನಿಮಯ ಪ್ರಮಿತಿಯ ಉಚ್ಚಾಟನೆಯಾಗಬೇಕೆಂದು ವಾದಮಾಡಿರುವಿರಲ್ಲವೇ?

– ಹೌದು.

೬೯೨. ೫ನೇ ಪರಿಚ್ಛೇದದಲ್ಲಿ ನಿಮ್ಮ ಹೇಳಿಕೆ ಇಂತಿದೆ: "ಆಸ್ತಿಗೂ (ಬಂಗಾರದ ನಿಧಿ) ಹೊಣೆಗಳಿಗೂ (ಚಲಾವಣೆಯಲ್ಲಿರುವ ಹಣದ ಮೊತ್ತ) ಅಪಾಯಕರ ಸಂಬಂಧವಿರುವುದೇ ಬಂಗಾರದ ಕಾಯ್ದಿಟ್ಟ ನಿಧಿಯ ವೈಶಿಷ್ಟ್ಯ. ರೂಪಾಯಿಗಳ ರೂಪದಲ್ಲಿ ಹಣದ ಹೆಚ್ಚಳವಾಗದೇ ಬಂಗಾರದ ನಿಧಿ ಹೆಚ್ಚಲಾರದು". ಈ ವಿಷಯದಲ್ಲಿ ನಾನು ವಿವರಗಳನ್ನು ಕೇಳಬಯಸುತ್ತೇನೆ. ನಿಮ್ಮ ಹೇಳಿಕೆಯ ಟೀಕಾಕಾರರು "ಚಲಾವಣೆಗೆ ಬರುವ ರೂಪಾಯಿಗಳ ಹೆಚ್ಚಳವಿಲ್ಲದೇ ನಿಧಿ ಹೆಚ್ಚದೆಂದು ನೀವು ಹೇಳುತ್ತೀರಿ. ಅದು ಏಕೆ ಹೆಚ್ಚಬೇಕು? ಅದರಂತೆಯೇ, ನಿಧಿಯ ಹೆಚ್ಚಳವಿಲ್ಲದೆ ರೂಪಾಯಿಗಳ(ಹಣದ) ಚಲಾವಣೆ ಹೆಚ್ಚದು ಎಂಬ ಪರಿಸ್ಥಿತಿ ಇದ್ದರೆ, ಅದು ಒಳ್ಳೆಯದೇ ಅಲ್ಲವೇ?" ಎಂದು ಟೀಕೆ ಮಾಡಿದರೆ, ನಿಮ್ಮ ಉತ್ತರವೇನು?

– ಅದನ್ನು ನಾನು ಈ ರೀತಿ ವಿವರಿಸುವೆ. ಉದಾಹರಣೆಗೆ ಒಂದು ಬ್ಯಾಂಕು ಚಲಾವಣೆಗೆ ತಂದ ನೋಟುಗಳು ಮತ್ತು ಅದರ ನಿಧಿ – ಇವುಗಳ ನಡುವಿನ ಸಂಬಂಧವನ್ನೇ ತೆಗೆದುಕೊಳ್ಳೋಣ. ಈ ಸಂಬಂಧವನ್ನು ವೀಕ್ಷಿಸಿದಾಗ ಬ್ಯಾಂಕು ಹೊರಡಿಸಿದ ನೋಟುಗಳನ್ನು ಕಡಿಮೆ ಮಾಡಿದಾಗ (ಹಿಂತೆಗೆದುಕೊಂಡಾಗ) ಅದರ ನಗದು ನಿಧಿ

ಹೆಚ್ಚಾಗುತ್ತದೆ ಹಾಗೂ ನೋಟುಗಳನ್ನು ಹೆಚ್ಚಿಸಿದಾಗ ಅದರ ನಿಧಿ ಕಡಿಮೆಯಾಗುತ್ತದೆ. ಆದರೆ, ಸರ್ಕಾರವು ಟಂಕಿಸಿದ ರೂಪಾಯಿಗಳ ಮೊತ್ತ ಹೆಚ್ಚು ಆದಾಗ ಸರ್ಕಾರದ ನಿಧಿಯಲ್ಲಿಯೂ ಹೆಚ್ಚಳವಾಗುತ್ತದೆ. ಅದರಂತೆ ನಿಧಿಯನ್ನು ಕಡಿಮೆ ಮಾಡದೇ ರೂಪಾಯಿಗಳ ಚಲಾವಣೆಯನ್ನು ಕಡಿಮೆ ಮಾಡುವುದೂ ಅಸಾಧ್ಯ.

೬೦೯೩. ಸರಿ. ಆದರೆ ಈ ವಿಷಯವನ್ನು ಇನ್ನೊಂದು ದೃಷ್ಟಿಕೋನದಿಂದ ನೋಡೋಣ. ರೂಪಾಯಿಗಳ ಚಲಾವಣೆಯನ್ನು ಕಡಿಮೆ ಮಾಡದೇ ನಿಧಿಯನ್ನು ಕಡಿಮೆ ಮಾಡಲು ಅಸಾಧ್ಯವೆಂಬ ಗುಣವೇ ನನಗೆ ಮೆಚ್ಚಿಗೆಯಾಗಿದೆ. ನಾವೆಲ್ಲ ಬಯಸುವುದು ಇದನ್ನೇ ಅಲ್ಲವೇ?

– ಇದನ್ನು ನಾನು ಸ್ವೀಕರಿಸುತ್ತೇನೆ. ಆದರೆ ನನ್ನ ನಿವೇದನೆ ಕೆಳಗಿನಂತಿದೆ. ಕಾಯ್ದಿಟ್ಟ ನಿಧಿಯಿಂದ ಉಪಯೋಗ ಏನು? ನಿಮ್ಮಲ್ಲಿ ಬಹುದೊಡ್ಡ ಕಾಯ್ದಿಟ್ಟ ನಿಧಿಯೂ, ಅದರ ಜೊತೆಗೆ ಚಲಾವಣೆಯಲ್ಲಿರುವ ಹಣದ ಮೊತ್ತವೂ ಬಹು ದೊಡ್ಡದಿದೆ ಎಂದು ಊಹಿಸೋಣ. ನಿಮ್ಮ ನಿಧಿ ಬಹು ದೊಡ್ಡದಿದೆ ಎಂದ ಮಾತ್ರಕ್ಕೆ ಆ ನಿಧಿಯಿಂದ ಹಣದ ಮೌಲ್ಯದ ಮೇಲೆ ಯಾವ ಪರಿಣಾಮವೂ ಇಲ್ಲ. ಹಣದ ವ್ಯವಸ್ಥೆಯಲ್ಲಿ ಸಂಪೂರ್ಣ ಗೊಂದಲದ ಪರಿಸ್ಥಿತಿ ಉಂಟಾದಾಗ ಮಾತ್ರ ನಿಧಿಯು ಜನರಲ್ಲಿ ಹಣದ ಬಗೆಗೆ ವಿಶ್ವಾಸವನ್ನು ಹುಟ್ಟಿಸಲು ಸಹಾಯಕವಾಗುತ್ತದೆ. ಈ ತರದ ಗೊಂದಲ, ಅವ್ಯವಸ್ಥೆ. ಹಣದುಬ್ಬರದ ಕಾಲದಲ್ಲಿ ಮಾತ್ರ ಕಂಡುಬರುವುದು.

೬೦೯೪. ಹಣದ ಮೌಲ್ಯವು ಅಂತಿಮವಾಗಿ ಅದರ ಮೊತ್ತ ಮತ್ತು ವ್ಯಾಪಾರ–ವ್ಯವಹಾರದ ಪ್ರಮಾಣದ ಮೇಲಿಂದ ನಿರ್ಣಯವಾಗುತ್ತದೆ ಎಂಬುದನ್ನು ಒಪ್ಪಿದರೆ?

– ಈ ತರದ ಸಂಬಂಧವೇ ಅಪಾಯಕಾರಿ ಎಂದು ನನ್ನ ವಾದ; ಬಂಗಾರದ ಕಾಯ್ದಿಟ್ಟ ನಿಧಿ ಉಂಟೆಂದ ಮಾತ್ರಕ್ಕೆ ರೂಪಾಯಿ ನಾಣ್ಯಗಳನ್ನು ಮತ್ತಷ್ಟು ಟಂಕಿಸುತ್ತಾ ಹೋಗುವುದು ಯೋಗ್ಯವಲ್ಲ. ಈ ವಿಷಯದ ಬಗೆಗೆ ಇತಿಹಾಸವನ್ನು ಪರಿಶೀಲಿಸಿದಾಗ ಹಣದ ಚಲಾವಣೆಗೆ ಜವಾಬ್ದಾರರಿದ್ದ ಅಧಿಕಾರಿಗಳು ಕಾಯ್ದಿಟ್ಟ ನಿಧಿಯೇ ಬಹಳ ಮಹತ್ವದ್ದೆಂಬ ಭ್ರಮೆಯಲ್ಲಿ ನಿಧಿಯನ್ನು ಹೆಚ್ಚಿಸುವ ಉದ್ದೇಶದಿಂದಲೇ ರೂಪಾಯಿಗಳನ್ನು ಅಧಿಕವಾಗಿ ಟಂಕಿಸುತ್ತಾ ಇದ್ದ ಸಂಗತಿ ಕಾಣಬರುವುದು. ೧೮೯೩ ಮತ್ತು ೧೮೯೮ರಲ್ಲಿ ಫೌಲರ್ ಸಮಿತಿಯ ವರದಿಗೆ ಅನುಗುಣವಾಗಿ ರೂಪಾಯಿಯ ನಾಣ್ಯಗಳನ್ನು ಟಂಕಿಸಿದ್ದು ಸಹ ಇದಕ್ಕೆ ಉದಾಹರಣೆಯಾಗಿದೆ. ಸರ್ ಎಡ್ವರ್ಡ್ ಲಾ ಅವರು ಸಹ ಇದೇ ಭ್ರಮೆಗೊಳಗಾಗಿ ಭಾರತ ಸರ್ಕಾರಕ್ಕೆ ರೂಪಾಯಿ ನಾಣ್ಯಗಳನ್ನು ಟಂಕಿಸಲು ಅನುಮತಿ ನೀಡಬೇಕೆಂದು ಬ್ರಿಟಿಷ್ ಸರ್ಕಾರಕ್ಕೆ ಸೂಚಿಸಿದ್ದರು. ಹಣದ ಮೊತ್ತವನ್ನು ಮಿತಿಯಲ್ಲಿಟ್ಟರೆ ಹಣದ ಮೌಲ್ಯವನ್ನು ಸಹಜವಾಗಿ ಕಾಪಾಡಿಕೊಳ್ಳಬಹುದು ಎಂಬ ಅರಿವು ಅವರಿಗೆ ಇದ್ದಿದ್ದರೆ, ಅವರು ಹಣದ ಮೊತ್ತವನ್ನು ಹೆಚ್ಚಿಸುತ್ತಿರಲಿಲ್ಲ. ೧೮೯೩ರಲ್ಲಿ ಭಾರತ ಸರ್ಕಾರವು ಬ್ರಿಟಿಷ್ ಸರ್ಕಾರದ ಭಾರತ ಶಾಖೆಯ ಮಂತ್ರಿಗಳಿಗೆ ಸೂಚಿಸಿದ್ದನ್ನೇ ನಾನು ಸೂಚಿಸುತ್ತಿದ್ದೇನೆ.

೬೦೯೫. ಪ್ರಸ್ತುತ ವಿಷಯದ ಬಗೆಗೆ ಈ ಪರಿಸ್ಥಿತಿಯಲ್ಲಿ ಸ್ಥಿರತೆಯನ್ನು ಕಾಯ್ದುಕೊಳ್ಳುವುದೇ ಕಾಯ್ದಿಟ್ಟ ನಿಧಿಯು ಮಾಡತಕ್ಕ ಕಾರ್ಯವಲ್ಲವೇ?

– ಇಂಥ ನಿಧಿ ಇರಬಾರದು ಎಂದೆ ನನ್ನ ಅಭಿಪ್ರಾಯ. ಯಾವುದೇ ಸಾಮಾನ್ಯ ಸರಕಿನಂತೆ ಹಣದ ಮೌಲ್ಯವೂ ಬೇಡಿಕೆ ಮತ್ತು ಪೂರೈಕೆಯ ನಿಯಮಗಳಿಂದ ನಿಶ್ಚಯಿಸಲ್ಪಡುತ್ತದೆ.

೬೮೬. ಸ್ಥಿರತೆಯನ್ನು ಕಾಯ್ದುಕೊಳ್ಳುವುದೇ ನಿಧಿಯ ಕಾರ್ಯ ಎಂಬ ವಾದವನ್ನು ನೀವು ತಿರಸ್ಕರಿಸುವಿರಾ?

– ಹೌದು. ನಿಧಿಯಿಂದ ಯಾವ ಕಾರ್ಯವೂ ಆಗದು ಎಂದು ನಾನು ತಿಳಿದಿರುವೆ. ಹಣದ ಮೊತ್ತ ಮಿತವಾಗಿ ಇದ್ದಾಗ, ನಿಧಿಯು ತನ್ನನ್ನು ತಾನೇ ಕಾಯ್ದುಕೊಳ್ಳುತ್ತದೆ. ಅದು ಹಣದ ಮೌಲ್ಯವನ್ನು ರಕ್ಷಿಸಲಾರದು.

೬೮೭. ಇನ್ನು ಹಣದ ವ್ಯವಸ್ಥೆಯ ಸುಧಾರಣೆಗಾಗಿ ನೀವು ಹೇಳಿದ ವಾಸ್ತವಿಕ ಸೂಚನೆಗಳನ್ನು ಪರಿಶೀಲಿಸೋಣ. ೧) ಸಾರ್ವಜನಿಕರ ಅಥವಾ ಸರ್ಕಾರದ ಬೇಡಿಕೆಯಂತೆ ಟಂಕಸಾಲೆಗಳು ರೂಪಾಯಿ–ನಾಣ್ಯಗಳನ್ನು ಟಂಕಿಸುವುದನ್ನು ನಿಲ್ಲಿಸಬೇಕು. ೨) ಸಮರ್ಪಕವಾದ ಚಿನ್ನದ ನಾಣ್ಯಗಳನ್ನು ಹೊರಡಿಸಲು ಟಂಕಸಾಲೆಯನ್ನು ತೆರೆಯಬೇಕು. ೩) ಚಿನ್ನದ ನಾಣ್ಯ ಹಾಗೂ ರೂಪಾಯಿಗಳ ವಿನಿಮಯ ದರವನ್ನು ನಿರ್ಧರಿಸಬೇಕು. ೪) ರೂಪಾಯಿಗಳನ್ನು ಬಂಗಾರದ ರೂಪದಲ್ಲಿ ಹಾಗೂ ಬಂಗಾರವನ್ನು ರೂಪಾಯಿಗಳ ರೂಪದಲ್ಲಿ ಪರಿವರ್ತಿಸಬಾರದು. ರೂಪಾಯಿ ಮತ್ತು ಚಿನ್ನದ ನಾಣ್ಯಗಳೆರಡೂ ಕಾನೂನು ನಿರ್ಧರಿಸಿದ ದರದಂತೆ ಚಲಾವಣೆಯಲ್ಲಿ ಇರಬೇಕು. ಇಲ್ಲಿ ವ್ಯಾವಹಾರಿಕ ಪ್ರಶ್ನೆಯೊಂದು ಉದ್ಭವಿಸುತ್ತದೆ. ನಿಮ್ಮ ಸೂಚನೆಗಳು ಜಾರಿಗೆ ಬಂದ ನಂತರ ರೂಪಾಯಿ ಮತ್ತು ಚಿನ್ನದ ನಾಣ್ಯ ಇವುಗಳ ಮಧ್ಯ ನಿರ್ಣಯಿಸಿದ ಅನುಪಾತವನ್ನು ಹೇಗೆ ಕಾಯ್ದುಕೊಳ್ಳುವಿರಿ? ದೇಶದ ಆಯಾತ–ನಿರ್ಯಾತಗಳ ಮೌಲ್ಯಾಂತರಕ್ಕೆ (Balance of Trade) ಅನುಗುಣವಾಗಿ ರೂಪಾಯಿಯ ಅಥವಾ ಬಂಗಾರದ ನಾಣ್ಯದ ತುಲನಾತ್ಮಕ ಮೌಲ್ಯದಲ್ಲಿ ಬದಲಾವಣೆಗಳನ್ನು ಹೇಗೆ ತಪ್ಪಿಸುತ್ತೀರಿ?

– ರೂಪಾಯಿ ನಾಣ್ಯಗಳ ಮೊತ್ತದ ಮಿತಿ ಇರುವುದರಿಂದ ರೂಪಾಯಿ ತನ್ನ ಮೌಲ್ಯವನ್ನು ತಾನೇ ಕಾಯ್ದುಕೊಳ್ಳುತ್ತದೆ. ಏಕೆಂದರೆ ಹೊಸತಾಗಿ ರೂಪಾಯಿಯ ನಾಣ್ಯಗಳನ್ನು ಚಲಾವಣೆಗೆ ತರುವಂತಿಲ್ಲ.

೬೮೮. ರೂಪಾಯಿಯ ಮೌಲ್ಯ ಅನುಪಾತಕ್ಕಿಂತ ಹೆಚ್ಚು ಆಗದಂತೆ ಏನು ಮಾಡುತ್ತೀರಿ?

– ರೂಪಾಯಿಯ ಮೌಲ್ಯ ಅನುಪಾತಕ್ಕಿಂತ ಹೆಚ್ಚಾಗದು. ಏಕೆಂದರೆ ಅದರ ಬದಲು ಚಿನ್ನದ ನಾಣ್ಯಗಳು ಇದ್ದೇ ಇರುತ್ತವೆ. ಹೆಚ್ಚುವರಿ ರೂಪಾಯಿಗಳನ್ನು ಟಂಕಿಸುವುದಿಲ್ಲವಾದ್ದರಿಂದ ರೂಪಾಯಿಯ ಮೌಲ್ಯ ಅನುಪಾತಕ್ಕಿಂತ ಕೆಳಗೂ ಇಳಿಯಲಿಕ್ಕೆ ಸಾಧ್ಯವಿಲ್ಲ; ರೂಪಾಯಿಯ ಬದಲು ಚಿನ್ನದ ನಾಣ್ಯಗಳನ್ನು ವಾಣಿಜ್ಯ–ವ್ಯವಹಾರಗಳಲ್ಲಿ ಉಪಯೋಗಿಸಲು ಅವಕಾಶವಿರುವುದರಿಂದ ರೂಪಾಯಿಯ ಮೌಲ್ಯವು ಅನುಪಾತಕ್ಕಿಂತ ಹೆಚ್ಚಿಗೆ ಆಗಲೂ ಸಾಧ್ಯವಿಲ್ಲ.

೬೮೯. ನೀವು ಹೇಳಿದ್ದು ಹೀಗಿದೆ : "ಈಗಿರುವ ರೂಪಾಯಿಗಳ ಮೊತ್ತ ಆರ್ಥಿಕ ಮುಗ್ಗಟ್ಟಿನ ಸಮಯದಲ್ಲಿ ಬಹಳ ಅಧಿಕವೆನಿಸಿ ರೂಪಾಯಿಯು ತನ್ನ ಮೌಲ್ಯವನ್ನು ಕಳೆದುಕೊಳ್ಳಬಹುದು. ಇಂಥ ಸಂದರ್ಭದಲ್ಲಿ ಸರ್ಕಾರವು ಬಂಗಾರದ ನಿಧಿಯನ್ನು ಮತ್ತು ರೂಪಾಯಿಗಳ ಮೊತ್ತವನ್ನು ಸಾಕಷ್ಟು ಕಡಿಮೆಮಾಡಲು ಉಪಯೋಗಿಸಬೇಕೆಂದು ನನ್ನ ಸೂಚನೆ". ಸಂದರ್ಭಕ್ಕೆ ತಕ್ಕಂತೆ ಈ ಸೂಚನೆಯನ್ನು ಹೇಗೆ ಜಾರಿಗೆ ತರುವಿರಿ?

– ನಿರ್ದಿಷ್ಟ ಮೊತ್ತದವರೆಗೆ ರೂಪಾಯಿಗಳನ್ನು ಚಲಾವಣೆಯಿಂದ ಹಿಂತೆಗೆಯುವ ಮೂಲಕ ಅವುಗಳ ಮೊತ್ತವನ್ನು ಕಡಿಮೆ ಮಾಡಬೇಕು ಹಾಗೂ ಮತ್ತೆ ಚಲಾವಣೆಗೆ ತರಬಾರದು.

೬೧೦೦. ಅಷ್ಟರಮಟ್ಟಿಗೆ ರೂಪಾಯಿಗಳನ್ನು ಬಂಗಾರದ ರೂಪದಲ್ಲಿ ಪರಿವರ್ತಿಸುವ ಸಂಭವ ಇರಲಾರದು ಎಂದು ಹೇಳುತ್ತೀರಾ?

– ಹಣದ ವ್ಯವಸ್ಥೆಯ ಅಧಿಕಾರಿಗಳು ರೂಪಾಯಿಯನ್ನು ಬಂಗಾರದ ರೂಪದಲ್ಲಿ ಪರಿವರ್ತಿಸುವುದೇ ಇಲ್ಲ. ಹಾಗೆಯೇ ಚಿನ್ನದ ನಾಣ್ಯಗಳನ್ನು ರೂಪಾಯಿಗಳಾಗಿ ಪರಿವರ್ತಿಸುವುದಿಲ್ಲ. ರೂಪಾಯಿಯ ಮೌಲ್ಯ ಅನುಪಾತಕ್ಕಿಂತ ಕಡಿಮೆಯಾದೀತೆಂಬ ಭಯ ನನಗಿಲ್ಲ. ಆದರೂ ಅಕಸ್ಮಾತ್ ಹೀಗೆ ರೂಪಾಯಿಯ ಮೌಲ್ಯ ಕಡಿಮೆಯಾದರೆ ರಕ್ಷಣೆ ಇರಲಿ ಎಂಬ ಉದ್ದೇಶದಿಂದ ನನ್ನ ಸೂಚನೆಯನ್ನು ಮಾಡಿದ್ದೇನೆ.

೬೧೦೧. ಅನುಪಾತದ ವಿಷಯದ ಬಗ್ಗೆ ನೀವು ಹೇಳಿದ್ದು "ಯುರೋಪಿಯನ್ ದೇಶಗಳು ತಮ್ಮ ಹಣದ ಮೌಲ್ಯವನ್ನು ಹೇಗೆ ಹೆಚ್ಚಿಸಬೇಕು ಅಥವಾ ಬೆಲೆಗಳನ್ನು ಹೇಗೆ ಇಳಿಸಬೇಕು ಎಂಬ ಸಮಸ್ಯೆಯನ್ನು ಎದುರಿಸುತ್ತಿವೆ. ಆದರೆ ಭಾರತದ ಸಮಸ್ಯೆ ಹಣದ ಮೌಲ್ಯವನ್ನು ಕಡಿಮೆ ಮಾಡುವುದು ಅಥವಾ ಬೆಲೆಗಳನ್ನು ಹೆಚ್ಚಿಸುವುದಾಗಿದೆ. ರೂಪಾಯಿಯ ವಿನಿಮಯ ದರವನ್ನು ೧ ಷಿಲಿಂಗ್ ೬ ಪೆನ್ಸ್‌ದಿಂದ ೧ ಷಿಲಿಂಗ್ ೪ ಪೆನ್ಸ್‌ಗೆ ಇಳಿಸುವುದರ ಅರ್ಥ ಇದೇ ಆಗಿದೆ". ನಂತರ, "ಬಂಗಾರದ ಬೆಲೆಯಲ್ಲಿ ಬದಲಾವಣೆಗಳಾಗಿರುವ ಕಾರಣ ಯುದ್ಧಪೂರ್ವದ ಅನುಪಾತವನ್ನು ಮರಳಿ ತಂದರೆ ಯುದ್ಧಪೂರ್ವ ಬೆಲೆಗಳ ಮಟ್ಟವನ್ನೂ ಪುನಃ ಸ್ಥಾಪಿಸಿದಂತೆ ಆಗುವುದಿಲ್ಲ" ಎಂದು ಹೇಳಿದ್ದೀರಲ್ಲವೇ?

– ಹೌದು.

೬೧೦೨. ಇದರ ನಂತರ ನೀವು ಹೇಳಿದ್ದು : "ಈಗಿರುವ ಒಡಂಬಡಿಕೆಗಳು ವಿನಿಮಯ ದರದ ಇಳಿತದ ವಿವಿಧ ಹಂತಗಳಲ್ಲಿ ಮಾಡಿಕೊಂಡವು ಆಗಿವೆ. ಪ್ರತಿಯೊಂದು ಒಡಂಬಡಿಕೆಯನ್ನು ಪ್ರತ್ಯೇಕವಾಗಿ ವಿಚಕ್ಷಣೆ ಮಾಡಿ ನ್ಯಾಯ ನೀಡುವುದು ಅವ್ಯಾವಹಾರಿಕ ಮತ್ತು ಅಸಾಧ್ಯ". ಇಲ್ಲಿ, ರೂಪಾಯಿಯ ಮೌಲ್ಯದಲ್ಲಿ ಜೋರಾದ ಏರುಪೇರುಗಳಾಗಿದ್ದರಿಂದ ವಿವಿಧ ಕಾಲಕ್ಕೆ ಒಡಂಬಡಿಕೆ ಮಾಡಿಕೊಂಡ ಎಲ್ಲರಿಗೂ ನ್ಯಾಯವನ್ನು ನೀಡುವಂಥ ಅನುಪಾತವನ್ನು ನಿಶ್ಚಯಿಸುವುದು ಅಸಾಧ್ಯ ಎನ್ನುವ ಅಭಿಪ್ರಾಯವನ್ನು ವ್ಯಕ್ತಮಾಡಿದ್ದೀರಲ್ಲವೇ?

– ಹೌದು.

೬೧೦೩. ನಂತರ, ಜಾರಿಯಲ್ಲಿರುವ ಒಡಂಬಡಿಕೆಗಳು ಹೆಚ್ಚಾಗಿ ಇತ್ತೀಚಿನವೇ ಇರುತ್ತವೆ ಎಂದು ಹೇಳಿದ್ದೀರಲ್ಲವೇ?

– ಹೌದು. ಪ್ರೊ. ಕ್ಯಾನನ್ ಅವರು "ಸ್ಟ್ಯಾಟಿಸ್ಟಿಕಲ್ ಜರ್ನಲ್" ಎಂಬ ನಿಯತಕಾಲಿಕೆಯಲ್ಲಿ ಬರೆದ ಲೇಖನದಲ್ಲಿನ ಲಘು ಟಿಪ್ಪಣಿಯ ಆಧಾರದ ಮೇಲಿಂದ ಆ ಹೇಳಿಕೆಯನ್ನು ಕೊಟ್ಟಿರುವೆ.

೬೧೦೪. ಈ ಬಗೆಗೆ ಅಂಕಿ–ಸಂಖ್ಯೆಗಳು ಸಿಕ್ಕುವಂತಿದ್ದರೆ ಒಡಂಬಡಿಕೆಗಳ ಸಂಖ್ಯೆಯ ಬಗ್ಗೆ ಸರಿಯಾದ ಅಂದಾಜು ಮಾಡಬಹುದಲ್ಲವೇ?

– ವ್ಯವಹಾರಜ್ಞಾನದ ಮೇಲಿಂದ ಸಹ ತಕ್ಕಮಟ್ಟಿಗೆ ಸರಿಯಾದ ಅಂದಾಜನ್ನು ಮಾಡಬಹುದು.

೬೧೦೫. ಒಟ್ಟಾರೆ ಒಡಂಬಡಿಕೆಗಳ ಗುರುತ್ವಾಕರ್ಷಣೆಯ ಕೇಂದ್ರಬಿಂದುವು ವರ್ತಮಾನಕಾಲದ ಸಮೀಪಕ್ಕೆ

ಇರುವುದೆಂಬ ನಿಮ್ಮ ಮತದ ಮತ್ತು ಪ್ರೊ. ಕ್ಯಾನನ್ ಅವರ ಅಂದಾಜಿನ ಆಧಾರದ ಮೇಲೆಯೇ ನೀವು ೧ ಷಿಲಿಂಗ್ ೪ ಪೆನ್ಸ್ ಮತ್ತು ೧ ಷಿಲಿಂಗ್ ೬ ಪೆನ್ಸ್ ಈ ಅನುಪಾತಗಳ ಮಧ್ಯದ ಸರಾಸರಿಯನ್ನು ಆಯ್ದುಕೊಳ್ಳುವುದೇ ಸೂಕ್ತವೆಂದು ಹೇಳಿದ್ದೀರಿ. ಇದಲ್ಲದೇ ೧ ಷಿಲಿಂಗ್ ೬ ಪೆನ್ಸ್‌ದ ಸಮೀಪದ ಅನುಪಾತವೇ ಆದರ್ಶ ಪರಿಹಾರವಾದೀತು ಎಂದೂ ಹೇಳಿದ್ದೀರಿ. ಇದು ನನಗೆ ಅರ್ಥವಾಗಲಿಲ್ಲ. ನಿಮ್ಮ ವಾದಸರಣಿಯ ಮೇಲಿನಿಂದ ನೀವು ೧ ಷಿಲಿಂಗ್ ೬ ಪೆನ್ಸ್ ಅನುಪಾತವನ್ನು ಬೆಂಬಲಿಸುತ್ತೀರಿ ಎಂದು ಹೇಳಬಹುದೇನೋ?

– ಆದರ್ಶ ದರವು ೧ ಷಿಲಿಂಗ್ ೬ ಪೆನ್ನಿಗೆ ಸಮೀಪ ಇರಬಹುದೆಂದು ನನ್ನ ಹೇಳಿಕೆ.

೬೧೦೬. ನೀವು ಯಾವ ಅನುಪಾತವನ್ನು ಸೂಚಿಸುತ್ತೀರಿ ?

– ಇದಕ್ಕೆ ಉತ್ತರ ಕೊಡುವುದು ಕಠಿಣ. ೧ ಷಿಲಿಂಗ್ ೬ ಪೆನ್ಸ್ ಎಂದು ನಿಶ್ಚಯಿಸಿದರೂ ಸರಿಯಾದೀತು. ಅದರಿಂದ ಯಾರಿಗೂ ಹೆಚ್ಚಿನ ತೊಂದರೆಯಾಗದು.

೬೧೦೭. ರೂಪಾಯಿಯ ಅನುಪಾತದಲ್ಲಿ ಏರಿಕೆ ಮತ್ತು ಇಳಿತಗಳ ಬಗೆಗೆ ನಿಮ್ಮ ಅಭಿಪ್ರಾಯವು ೯ನೆಯ ಪರಿಚ್ಛೇದದಲ್ಲಿ ಸಂಕ್ಷಿಪ್ತವಾಗಿ ವ್ಯಕ್ತವಾಗಿದೆ. "ಕುಗ್ಗಿದ ವಿನಿಮಯ ದರದಿಂದ ಆಂತರಿಕ ಬೆಲೆಗಳು ಏರುತ್ತವೆ ಎಂಬುದನ್ನು ಲಕ್ಷ್ಯದಲ್ಲಿಡಬೇಕು. ಇಂಥ ದರದಿಂದಾಗುವ ಲಾಭ ಒಂದು ವರ್ಗದ ಶೋಷಣೆಯಿಂದ ಇನ್ನೊಂದು ವರ್ಗಕ್ಕೆ ಆಗುವ ಲಾಭವೇ ಹೊರತು ವಿದೇಶಗಳಿಂದ ಬರುವ ಲಾಭವಲ್ಲ" ಎಂದು ನಿಮ್ಮ ಹೇಳಿಕೆ. ಯಾವ ವರ್ಗಕ್ಕೆ ಲಾಭ ಮತ್ತು ಯಾವ ವರ್ಗಕ್ಕೆ ಹಾನಿಯುಂಟು?

– ವ್ಯಾಪಾರ, ಉದ್ಯೋಗಗಳಲ್ಲಿ ತೊಡಗಿದವರಿಗೆ, ಲಾಭ, ಶ್ರಮಿಕ ವರ್ಗಕ್ಕೆ ಹಾನಿ ಉಂಟಾಗುತ್ತವೆ. ಎಲ್ಲ ಉತ್ಪಾದನೆಯ ಸಾಧನೆಗಳ ಬೆಲೆಗಳು ಸಮನಾಗಿ ಬದಲಾಗುವುದಿಲ್ಲ. ವಸ್ತುಗಳ ಬೆಲೆಗಳಷ್ಟು ವೇಗದಿಂದ ಶ್ರಮದ ಬೆಲೆಗಳು ಏರುವುದಿಲ್ಲವಾದ್ದರಿಂದ ಶ್ರಮಿಕ ವರ್ಗಕ್ಕೆ ಹಾನಿಯಾಗುವುದು.

೬೧೦೮. ಸಿದ್ಧಾಂತದ ದೃಷ್ಟಿಕೋನದಿಂದಾಗಲಿ ಅಥವಾ ವ್ಯಾವಹಾರಿಕ ದೃಷ್ಟಿಕೋನದಿಂದಾಗಲಿ ಹಣದ ವ್ಯವಸ್ಥೆಯಲ್ಲಿ ಸ್ಥಿತಿ ಸ್ಥಾಪಕತ್ವವನ್ನುಂಟುಮಾಡಲು ನೀವು ಯಾವುದೇ ಮಹತ್ವದ ನಿಯಮಾವಳಿಗಳನ್ನು ಸೂಚಿಸುತ್ತೀರಾ?

– ನಾನು ಈ ಮೊದಲೇ ಸೂಚಿಸಿದಂತೆ ಸರ್ಕಾರೀ ಸಾಲಪತ್ರಗಳ ಬದಲು ವಾಣಿಜ್ಯದ ಸಾಲಪತ್ರಗಳನ್ನು (ಹುಂಡಿ ಇತ್ಯಾದಿ) ಹೇಗಾದರೂ ಮಾಡಿ ಹಣವನ್ನಾಗಿ ಪರಿವರ್ತಿಸಬೇಕು. ಹೊಸತಾಗಿ ಹಣವನ್ನು ಚಲಾವಣೆಗೆ ತರಲು ಸರ್ಕಾರೀ ಸಾಲಪತ್ರಗಳಿಗಿಂತ ವಾಣಿಜ್ಯದ ಸಾಲಪತ್ರಗಳೇ ಉತ್ತಮ ಆಧಾರವೆಂದು ನನಗನಿಸುತ್ತದೆ. ಜರ್ಮನ್ ಇಂಪೀರಿಯಲ್ ಬ್ಯಾಂಕ್ ಸ್ವೀಕರಿಸಿದ ಪ್ರಸ್ತಾಪಗಳನ್ನೇ ಸ್ವೀಕರಿಸುವುದು ಭಾರತದ ದೃಷ್ಟಿಯಿಂದ ಯೋಗ್ಯವೆಂದು ನನ್ನ ಅನಿಸಿಕೆ. ಆ ಬ್ಯಾಂಕಿನ ಅಧಿನಿಯಮಗಳು ಇಂಗ್ಲೆಂಡಿನ ೧೮೪೪ರ ಬ್ಯಾಂಕಿಂಗ್ ಕಾನೂನಿನ ನಿಯಮಗಳನ್ನೇ ಹೋಲುತ್ತವೆ. ಋತುಮಾನಕ್ಕೆ ಅನುಸಾರವಾದ ಹಣದ ಬೇಡಿಕೆಯ ಬದಲಾವಣೆಗಳಿಗೆ ಸಮರ್ಪಕವಾಗಿ ವ್ಯತ್ಯಾಸಗಳೂ ಜರ್ಮನ್ ನಿಯಮಗಳಲ್ಲಿವೆ.

೬೧೦೯. ಕಾಗದದ ಹಣದ ವಿಸ್ತರಣೆಗೆ (ಹೆಚ್ಚಳಕ್ಕೆ) ಅವಕಾಶ ಇದೆಯಲ್ಲವೇ?

– ಕೆಲವು ನಿಯಮಗಳಿಗೆ ಅನುಸಾರವಾಗಿ ಕಾಗದದ ಹಣವನ್ನು ತಾತ್ಪೂರ್ತಿಕವಾಗಿ ವಿಸ್ತರಿಸಲು ಅವಕಾಶ ಉಂಟು.

೬೧೧೦. ಅದು ವಿಶ್ವಾಸಾವಲಂಬಿಯಾದ ಹಣದ ವಿಸ್ತರಣೆಯ (fiduciary issue) ಅವಕಾಶವಲ್ಲವೇ?

– ಹೌದು ನಿಶ್ಚಯವಾಗಿ.

೬೧೧೧. ಈ ತರಹದ ಹಣದ–ವಿಸ್ತರಣೆ ಮಾಡುವಾಗ ಹೆಚ್ಚಳದ ಪ್ರಮಾಣದಲ್ಲಿ ಹಣ–ವ್ಯವಸ್ಥೆಯ ಅಧಿಕಾರಿಗಳು ಕರ ತೆರಬೇಕಾಗುವುದಿಲ್ಲವೇ?

– ಹೌದು. ಎರಡೂ ವರ್ಗದವರಿಗೆ ರಕ್ಷಣೆಯೊದಗಿಸಲು ಇಂತಹ ನಿಯಮವಿದ್ದರೆ ಸಾಕು.

೬೧೦೨. (ಪ್ರೊ. ಕೋಯಾಜೀ.) ನಿಮ್ಮ ಅಭಿಪ್ರಾಯದಂತೆ, ಬೆಲೆಗಳ ಏರುಪೇರುಗಳ ಮೇಲೆ ನಿರ್ದಿಷ್ಟ ನಿಯಂತ್ರಣಗಳನ್ನು ಹೇರುತ್ತದೆ ಎಂಬುದೇ ಸುವರ್ಣ ಪ್ರಮಿತಿಯ ಮುಖ್ಯ ಅರ್ಹತೆಯಲ್ಲವೇ?

– ಸರಿಯಾಗಿ ಹೇಳಿದಿರಿ.

೬೧೧೩. ಆದರೆ ಬಂಗಾರದ ಗಣಿಗಳ ಉತ್ಪಾದನೆಯು ದೇಶದ ಅಗತ್ಯವನ್ನು ಅವಲಂಬಿಸಿರುವುದಿಲ್ಲ. ಅಲ್ಲವೇ?

– ನಿಜ. ಪರಿಹಾರಯುತ ಪ್ರಮಿತಿಗಳನ್ನು ವ್ಯವಹಾರದಲ್ಲಿ ಕಾರ್ಯರೂಪಕ್ಕೆ ತರಲು ಸಾಧ್ಯವಿಲ್ಲವೆಂದೇ ನಾನು ಸುವರ್ಣ ಪ್ರಮಿತಿಯ ಪರವಾಗಿ ಇದ್ದೇನೆ. ಪರಿಹಾರಯುತ ಪ್ರಮಿತಿಗಳನ್ನು ಜಾರಿಗೆ ತರುವುದು ಶಕ್ಯವಿದ್ದರೆ ನಾನು ಆಗಲೇ ಸುವರ್ಣ ಪ್ರಮಿತಿಯನ್ನು ತಿರಸ್ಕರಿಸುತ್ತಿದ್ದೆ. ಸುವರ್ಣ ಪ್ರಮಿತಿಯ ಮೇಲೆ ನನಗೆ ವಿಶೇಷ ಮೋಹವೇನೂ ಇಲ್ಲ.

೬೧೧೪. ಸುವರ್ಣ ಪ್ರಮಿತಿಯಿಂದ ವ್ಯಾಪಾರ ಚಕ್ರದ (Trade Cycle) ಅನಿಷ್ಟ ಪರಿಣಾಮಗಳನ್ನು ತಪ್ಪಿಸಲು ಸಾಧ್ಯವಿಲ್ಲವೇ?

– ಸಾಧ್ಯವಿಲ್ಲ.

೬೧೧೫. ಹಾಗಾದರೆ ಇನ್ನು ಒಂದೇ ಅಂಶ ಉಳಿಯಿತು. ೫ನೆಯ ಪರಿಚ್ಛೇದದಲ್ಲಿ "ಹಣದ ಸ್ಥಿರತೆಯನ್ನು ಕಾಯ್ದುಕೊಳ್ಳಲು ಅಸಮರ್ಥವಾದ ಬಂಗಾರದ ಕಾಯ್ದಿಟ್ಟ ನಿಧಿಯನ್ನು ತೆಗೆದು ಹಾಕಬೇಕೆಂದು ನನ್ನ ಅಭಿಪ್ರಾಯ" ಎಂದು ನೀವು ಹೇಳಿದ್ದೀರಿ. ಅದೇ ಪ್ರಕಾರ ಕಾಗದ ಹಣದ ಕಾಯ್ದಿಟ್ಟ ನಿಧಿಯನ್ನೂ ಏಕೆ ತೆಗೆದುಹಾಕಬಾರದು?

– ಸರ್ವಥಾ.

೬೧೧೬. ಹಾಗಾದರೆ ನೀವು ಕಾಗದದ ಹಣದ ನಿಧಿಯನ್ನು ತೆಗೆದುಹಾಕುವಿರಾ?

– ಇಲ್ಲ. ಏಕೆಂದರೆ ನಾವು ಕಾಗದದ ಹಣವನ್ನು ಚಲಾವಣೆಯಲ್ಲಿ ತರುವುದರ ಮೇಲೆ ನಿರ್ದಿಷ್ಟ ಮಿತಿಯನ್ನು ಹೇರಬಯಸುವುದಿಲ್ಲ. ಸುವರ್ಣ ವಿನಿಮಯ ಪ್ರಮಿತಿಯನ್ನು ಹೇರಬಯಸುವುದಿಲ್ಲ. ಸುವರ್ಣ ವಿನಿಮಯ ಪ್ರಮಿತಿಯನ್ನು ತಿರಸ್ಕರಿಸಬೇಕೆಂದು ವಾದಿಸುವಾಗ ರೂಪಾಯಿ ನಾಣ್ಯಗಳನ್ನು ಟಂಕಿಸುವುದನ್ನು ನಿಲ್ಲಿಸಬೇಕೆಂದು ನಾನು ಸೂಚಿಸಿದ್ದೇನೆ. ಕಾಗದದ ಹಣದ ವಿಷಯವನ್ನು ಸರ್ಕಾರದ ವಿವೇಚನೆಗೆ ಬಿಟ್ಟುಕೊಡಬೇಕೆಂದು ನನ್ನ ಅಭಿಪ್ರಾಯ.

೬೧೦೭. ಇದು ಶಕ್ಯವಾದೀತೇ? ಏಕೆಂದರೆ ಜನರ ಉತ್ಪನ್ನ ಕಡಿಮೆ ಇರುವುದರಿಂದ ಜನಸಂಖ್ಯೆ ಹೆಚ್ಚಾದಂತೆ ರೂಪಾಯಿ ನಾಣ್ಯಗಳ ಉಪಯೋಗಕ್ಕೆ ಅವಕಾಶ ಹೆಚ್ಚುತ್ತದೆ. ಕಡೆಯ ತನಕ ನಾವು ರೂಪಾಯಿ

ನಾಣ್ಯಗಳನ್ನು ಟಂಕಿಸುವುದಿಲ್ಲ, ಚಿನ್ನದ ನಾಣ್ಯಗಳನ್ನು ಮಾತ್ರ ಟಂಕಿಸುತ್ತೇವೆ. ಚಿನ್ನದ ನಾಣ್ಯಗಳ ಮೊತ್ತ ರೂಪಾಯಿಗಳ ಮೊತ್ತಕ್ಕಿಂತ ಹತ್ತುಪಟ್ಟು ಆದರೂ ಪರವಾಗಿಲ್ಲ. ಎಂದು ಹೇಳುವುದು ದೇಶಹಿತದ ದೃಷ್ಟಿಯಿಂದ ಯೋಗ್ಯವಾದೀತೇ?

– ಅನುಕೂಲವೇ ಆಗುವುದೆಂದು ನನ್ನ ಭಾವನೆ. ಇಂಥ ಪರಿಸ್ಥಿತಿಯಲ್ಲಿ ಚಿನ್ನದ ನಾಣ್ಯಗಳ ಬದಲು ಚಿನ್ನದ ಆಧಾರವುಳ್ಳ ಕಾಗದದ ನೋಟುಗಳನ್ನು ಉಪಯೋಗಿಸಬೇಕು ಎಂದು ನನ್ನ ಅಭಿಪ್ರಾಯ. ದಿನನಿತ್ಯದ ಬಳಕೆಗೆ ಚಿನ್ನದ ನಾಣ್ಯಗಳನ್ನು ಉಪಯೋಗಿಸಬೇಕು ಎಂದು ನಾನು ಹೇಳುವುದಿಲ್ಲ.

೬೧೧೮. (ಸರ್ ನಾರ್‌ಕಾಟ್ ವ್ಯಾರೆನ್) ನಿಮ್ಮ ಲಿಖಿತ ಸಾಕ್ಷ್ಯಾಧಾರದ ೮ನೆಯ ಪರಿಚ್ಛೇದದ ಕೊನೆಯ ಭಾಗದ ಮೇಲಿಂದ ನೀವು ೧ ಷಿಲಿಂಗ್ ೬ ಪೆನ್ಸ್ ದರವನ್ನೇ ಮೆಚ್ಚುತ್ತೀರಿ ಎಂದು ತಿಳಿಯೋಣವೇ?

– ೧ ಷಿಲಿಂಗ್ ೬ ಪೆನ್ಸ್ ದರದ ಕಡೆಗೆ ನನ್ನ ಮನಸ್ಸಿನ ಒಲವು ಇದೆ ಎಂದು ಒಪ್ಪಿಕೊಳ್ಳುವೆ.

೬೧೧೯. (ಸರ್ ಅಲೆಕ್ಸಾಂಡರ್ ಮರೇ.) ಡಾ. ಅಂಬೇಡ್ಕರ್ ಅವರೇ, ಅಧ್ಯಕ್ಷರು ಕೇಳಿದ ಪ್ರಶ್ನೆಗಳಿಗೆ ಉತ್ತರಿಸುವಾಗ ನೀವು ಒಂದು ಅಂಶವನ್ನು ಹೇಳಿದಿರಿ. ರೂಪಾಯಿಯ ಲೋಹದ ಬೆಲೆ ಮತ್ತು ಹಣದ ರೂಪದ ಬೆಲೆಗಳಲ್ಲಿರುವ ವ್ಯತ್ಯಾಸದಿಂದ ಲಾಭ ಪಡೆಯಲು ಭಾರತ ಸರ್ಕಾರವು ರೂಪಾಯಿ-ನಾಣ್ಯಗಳನ್ನು ಟಂಕಿಸುತ್ತ ಸಾಗಿತ್ತು ಎಂದು ನೀವು ಸೂಚಿಸಿದಂತಾಯ್ತು. ನೀವು ಹೇಳಿದ್ದು ಹೀಗೇ ತಾನೆ?

– ಐತಿಹಾಸಿಕ ಸತ್ಯವನ್ನೇ ಹೇಳಿದ್ದೇನೆ. ಉದಾಹರಣೆಗೆ, ಫೌಲರ್ ಸಮಿತಿಯು ಸೂಚಿಸಿದ ಸುಧಾರಣೆಗಳನ್ನು ಜಾರಿಗೆ ತರುವಾಗ ದೊಡ್ಡ ಪ್ರಮಾಣದಲ್ಲಿ ಚಲಾವಣೆಯಲ್ಲಿದ್ದ ರೂಪಾಯಿಗಳಿಗೆ ಯಾವ ಕಾಯ್ದಿಟ್ಟ ನಿಧಿಯ ಆಧಾರವೂ ಇಲ್ಲವೆಂದು ಭಾರತ ಸರ್ಕಾರವು ಶಂಕೆಯನ್ನು ವ್ಯಕ್ತಪಡಿಸಿತ್ತು. ಫೌಲರ್ ಸಮಿತಿಯು ತನ್ನ ವರದಿಯ ೬೦ನೆಯ ಪರಿಚ್ಛೇದದಲ್ಲಿ ಭಾರತ ಸರ್ಕಾರವು ರೂಪಾಯಿ ನಾಣ್ಯಗಳನ್ನು ಹೊರಡಿಸಿ ಲಾಭವನ್ನು ಮಾಡಿಕೊಂಡಾಗ ಆ ಲಾಭವನ್ನು ಕಾಯ್ದಿಟ್ಟ ನಿಧಿಯಾಗಿ ವಿನಿಯೋಗಿಸಬೇಕೆಂದು ಸೂಚಿಸಿತ್ತು. ೧೯೦೧ ರಲ್ಲಿ ರೂಪಾಯಿ ನಾಣ್ಯಗಳನ್ನು ಟಂಕಿಸಲು ಆರಂಭಿಸಿದಾಗ ಸರ್ ಎಡ್ವರ್ಡ್ ಲಾ ಅವರು ಇಂಥ ನಾಣ್ಯಗಳ ಮೊತ್ತ ಬಹು ದೊಡ್ಡದು ಇರುವುದರಿಂದ ಅದಕ್ಕೆ ತಕ್ಕ ಮೊತ್ತದ ನಿಧಿ ಅವಶ್ಯವೆಂದು ಭಾವಿಸಿದರು. ಇಂಥ ನಿಧಿಯ ಆವಶ್ಯಕತೆಯನ್ನು ಅನುಲಕ್ಷಿಸಿ, ರೂಪಾಯಿ ನಾಣ್ಯಗಳನ್ನು ಟಂಕಿಸದೇ ನಿಧಿಯನ್ನು ಸಂಗ್ರಹಿಸಲು ಬೇರೆ ದಾರಿ ಇಲ್ಲವೆಂದು ತಿಳಿದು ರೂಪಾಯಿಗಳನ್ನು ಅನವರತವಾಗಿ ಟಂಕಿಸುತ್ತ ಸಾಗಿದರೆಂದು ನನ್ನ ಅನಿಸಿಕೆ.

೬೧೨೦. ಇದು ನಿಮ್ಮ ಅನಿಸಿಕೆ ಮಾತ್ರವಲ್ಲವೇ?

– ಅಲ್ಲ. ನಾನು ಸರ್ ಎಡ್ವರ್ಡ್ ಲಾ ಸಾಹೇಬರು ರವಾನಿಸಿದ ಪತ್ರವನ್ನು ಬಹು ಜಾಗರೂಕತೆಯಿಂದ ಪರಿಶೀಲಿಸಿರುತ್ತೇನೆ. ಆ ಪತ್ರದಲ್ಲಿ ಅವರು ಜನತೆಗೆ ಚಿನ್ನದ ನಾಣ್ಯಗಳಾಗಲಿ ಇತರ ರೂಪದ ಹಣವಾಗಲಿ ಬೇಡವಾಗಿರುವುದರಿಂದ ರೂಪಾಯಿಯ ಮೌಲ್ಯ ಹೆಚ್ಚು ಎಂಬ ಕಾರಣವನ್ನು ತೋರಿಸಿದ್ದರೆ, ಜನತೆಯ ಬೇಡಿಕೆಯ ಹೆಚ್ಚಳದಿಂದಲೇ ರೂಪಾಯಿಯ ಮೊತ್ತವನ್ನು ಅವರು ಹೆಚ್ಚಿಸಿದರೆಂದು ನಾನು ತಿಳಿಯುತ್ತಿದ್ದೆ. ಆದರೆ ಆ

ಪತ್ರದಲ್ಲಿ ಇಂಥ ಯಾವ ಉಲ್ಲೇಖವೂ ಇಲ್ಲ. ಅವರು ತಾವು ಸುಧಾರಣೆಗಳನ್ನು ಪ್ರಾರಂಭಿಸಿದಾಗ ಫೌಲರ್ ಸಮಿತಿಯ ವರದಿಯ ೬೦ನೆಯ ಪರಿಚ್ಛೇದವನ್ನು ಗಮನಿಸಿರಲಿಲ್ಲ ಎಂದು ಮಾತ್ರ ಅವರು ಹೇಳಿದ್ದುಂಟು.

೬೧೨೧. ಆದರೆ ನೀವು ಉಲ್ಲೇಖಿಸಿದ ಪತ್ರದಲ್ಲಿ ಸರ್ ಲಾ ಅವರು ಸುಮಾರು ೭ ದಶಲಕ್ಷ ಪೌಂಡ್ ಬಂಗಾರದ ನಿಧಿ ಇರಬೇಕೆಂದೂ ಸೂಚಿಸಿದ್ದರೆಂದು ಕಾಣುತ್ತದೆ. ಈ ನಿಧಿಯ ಆಧಾರದ ಮೇಲಿಂದ ಅವರು ರೂಪಾಯಿಗಳನ್ನು ಟಂಕಿಸುತ್ತಿದ್ದರಲ್ಲವೇ?

– ನೀವು ಹೇಳಿದ್ದು ನಿಜ. ಸುವರ್ಣ ಪ್ರಮಿತಿಯ ನಿಧಿಯು ಬಂಗಾರದ ರೂಪದಲ್ಲಿಯೇ ಇತ್ತು. ಆದರೆ ನನ್ನ ಅಭಿಪ್ರಾಯದ ಪ್ರಕಾರ ಇಂಥ ಕಾಯ್ದಿಟ್ಟ ನಿಧಿಯ ಆವಶ್ಯಕತೆ ಇರಲಿಲ್ಲ.

೬೧೨೨. ನೀವು ಈ ಸಂದರ್ಭದಲ್ಲಿ ಕೆಳಗಿನಂತೆ ಸಾಮಾನ್ಯ ಹೇಳಿಕೆ ಕೊಟ್ಟಿದ್ದೀರಿ: "ದುರ್ದೈವದಿಂದ ಭಾರತ ದೇಶದಲ್ಲಿ ಈ ರೀತಿ ಹಣವ್ಯವಸ್ಥೆಯನ್ನು ವಿಕೃತಗೊಳಿಸಿದ ಬಗೆಗೆ ಸಾಕಷ್ಟು ಪುರಾವೆಗಳಿವೆ. ಬಂಗಾರದ ನಿಧಿ ಅತ್ಯಾವಶ್ಯಕವೆಂಬ ಭ್ರಮೆಗೊಳಗಾಗಿ ಈ ಉದ್ದೇಶದಿಂದ ವಿವೇಚನೆ ಇಲ್ಲದೇ ಹಣದ ಚಲಾವಣೆಯನ್ನು ಹೆಚ್ಚಿಸಿದ ಮೂರ್ಖ ಆಡಳಿತಗಾರರು ನಮ್ಮ ದೇಶದಲ್ಲಿ ಆಗಿಹೋಗಿದ್ದಾರೆ". ಇದೇ ಹೇಳಿಕೆಯನ್ನು ಅಧ್ಯಕ್ಷರೆದುರು ಪುನರುಚ್ಚರಿಸುತ್ತೀರಾ?

– ಪ್ರೊ. ಕ್ಯಾನನ್ ಅವರು ತಮ್ಮ ಪುಸ್ತಕದಲ್ಲಿ ಉಪಯೋಗಿಸಿದ ಶಬ್ದಗಳಿಗಿಂತ ಮೃದು ಶಬ್ದಗಳನ್ನು ನಾನು ಉಪಯೋಗಿಸಿದ್ದೇನೆ.

೬೧೨೩. ಆದರೆ ೧೮೯೫ ರಲ್ಲಿಯೇ ಮುಂಬೈನ ಒಬ್ಬ ಪ್ರಸಿದ್ಧ ಸಾಹುಕಾರರು ಅದನ್ನು ಸೂಚಿಸಿದ್ದರು ಹಾಗೂ ವಿತ್ತಮಂತ್ರಿಗಳು ಆ ಸೂಚನೆಯನ್ನು ತಿರಸ್ಕರಿಸಿದ್ದರು. ಇದು ನಿಜವಲ್ಲವೇ?

– ನಾನು ಈ ಸಂಗತಿಯನ್ನು ವಿತ್ತಮಂತ್ರಿಗಳು ಬರೆದ ಪತ್ರದಲ್ಲಿ ಓದಿದ್ದೇನೆ.

೬೧೨೪. ಒಂದು ನಿಮಿಷ ತಾಳಿರಿ. ನಿಮ್ಮ ಪುಸ್ತಕದಲ್ಲಿ ನೀವು ಆ ಮುಂಬೈ ಸಾಹುಕಾರರ ಹೆಸರನ್ನೂ ಅವರ ಸೂಚನೆಯನ್ನು ತಳ್ಳಿಹಾಕಿದ ವಿತ್ತಮಂತ್ರಿಯ ಹೆಸರನ್ನೂ ಉಲ್ಲೇಖಿಸಿದ್ದೀರಲ್ಲವೇ?

– ಹೌದು.

೬೧೨೫. ಅದೇ ಸೂಚನೆಯನ್ನು ೧೯೦೭–೦೮ ರಲ್ಲಿ ಮಾಡಿದ ಒಬ್ಬ ಖ್ಯಾತ ರಾಜಕಾರಣಿಯ ಹೆಸರನ್ನೂ ಆ ಸೂಚನೆಯನ್ನು ಭಾರತ ಸರ್ಕಾರ ತಳ್ಳಿ ಹಾಕಿದ ಸಂಗತಿಯನ್ನೂ ಹಾಗೂ ಇನ್ನೊಬ್ಬ ಖ್ಯಾತ ಅರ್ಥಶಾಸ್ತ್ರಜ್ಞರ ಹೆಸರನ್ನೂ ನಿಮ್ಮ ಪುಸ್ತಕದಲ್ಲಿ ಉಲ್ಲೇಖಿಸಿದ್ದೀರಿ. ಹೀಗಿದ್ದೂ ಅಧ್ಯಕ್ಷರ ಎದುರು ಭಾರತ ಸರ್ಕಾರದ ಆಡಳಿತಗಾರರು ಈ ಸೂಚನೆಯನ್ನು ತಳ್ಳಿಹಾಕಿಲ್ಲ ಎಂದು ನೀವೇಕೆ ಹೇಳುತ್ತೀರಿ?

– ಇದಕ್ಕೆ ನನ್ನ ಉತ್ತರ ಇಷ್ಟೇ. ಸರ್ ಎಡ್ವರ್ಡ್ ಲಾ ಅವರಿಗಿಂತ ಮೊದಲಿನ ಪ್ರತಿಯೊಬ್ಬ ವಿತ್ತಮಂತ್ರಿಯ ಅಂದಾಜು–ಪತ್ರಿಕೆಯ ಮೇಲಿನ ಭಾಷಣಗಳನ್ನು ಓದಿದರೆ ಸಾಕು. ನಾನು ಅವುಗಳಿಂದ ಉದಾಹರಣೆಗಳನ್ನೂ ಕೊಡಬಲ್ಲೆ. ಆ ಮಂತ್ರಿಗಳ ಹೆಸರುಗಳನ್ನು ಮರೆತಿರುವೆ.

೬೧೨೬. ಸರ್ ಜೇಮ್ಸ್ ವೆಸ್ಟ್‌ಲ್ಯಾಂಡ್ ಮತ್ತು ಸರ್ ಕ್ಲಿಂಟನ್ ಡಾಕಿನ್ಸ್ ಅಲ್ಲವೇ?

– ಆದರೆ ಇವರಿಬ್ಬರೂ ಅದನ್ನು ಒಪ್ಪಲಿಲ್ಲ.

೬೧೨೭. ಭಾರತೀಯರೊಬ್ಬರು ಇದನ್ನು ವೆಸ್ಟ್‌ಲ್ಯಾಂಡ್‌ರಿಗೂ, ಅನಂತರ ಡಾಕಿನ್ಸರಿಗೂ ಸೂಚಿಸಿದ್ದರು, ಆದರೆ ಅವರು ಆ ಸೂಚನೆಯನ್ನು ತಳ್ಳಿಹಾಕಿದರಲ್ಲವೇ?

– ನಿಮ್ಮ ಅರ್ಥವಿವರಣೆಗೆ ತಕ್ಕ ಗೌರವ ಕೊಟ್ಟು ಹೇಳಬಯಸುತ್ತೇನೆ. ಸರ್ ಲಾ ಅವರು ರೂಪಾಯಿಗಳ ಮತ್ತು ಕಾಗದದ ಹಣದ (ನೋಟು) ಮೊತ್ತಕ್ಕೆ ಕಾಯ್ದಿಟ್ಟ ನಿಧಿ ಇರತಕ್ಕದ್ದು ಎಂದು ಹೇಳಿದ್ದಾರೆ, ಇದನ್ನು ನಾನು ಅಲ್ಲಗಳೆಯುವುದಿಲ್ಲ. ಆದರೆ ನನ್ನ ಹೇಳಿಕೆ ಇಷ್ಟೇ, ಇತರ ಹಣಕಾಸಿನ ತಜ್ಞರು ಕಾಯ್ದಿಟ್ಟ ನಿಧಿ ಬೇಕಿಲ್ಲ, ರೂಪಾಯಿಯು ತನ್ನ ಮೌಲ್ಯವನ್ನು ತಾನೇ ಕಾಯ್ದುಕೊಳ್ಳುವುದೆಂದು ಹೇಳಿದರೂ ಲಾ ಅವರು ಇಂಥ ನಿಧಿ ಅವಶ್ಯವೆಂದು ಭಾವಿಸಿದರು. ಅಂಥ ನಿಧಿಯನ್ನು ಸಂಗ್ರಹಿಸಲೆಂದೇ ರೂಪಾಯಿಗಳನ್ನು ಟಂಕಿಸಿದರು. ವೆಸ್ಟ್‌ಲ್ಯಾಂಡ್ ಮತ್ತು ಡಾಕಿನ್ಸ್ ಇಂಥ ಸೂಚನೆಯನ್ನು ತಳ್ಳಿಹಾಕಿದ್ದರು. ಅವರ ವಿಚಾರಧಾರೆಯ ಬಗೆಗೆ ನಾನು ಸಾಕಷ್ಟು ಮೆಚ್ಚುಗೆ ಸೂಚಿಸಿದ್ದೇನೆ. ಅವರ ವಿಚಾರಗಳು ಸರಿಯಾಗಿದ್ದವು ಹಾಗೂ ಲಾ ಅವರ ವಿಚಾರಗಳು ನಿಶ್ಚಯವಾಗಿಯೂ ತಪ್ಪು.

೬೧೨೮. ಕಾಯ್ದಿಟ್ಟ ನಿಧಿಯನ್ನು ಕೂಡಿಹಾಕಲಿಕ್ಕೆಂದೇ ರೂಪಾಯಿಗಳನ್ನು ಟಂಕಿಸುವುದಾಗಿ ಸರ್ ಎಡ್ವರ್ಡ್ ಲಾ ಅವರು ಹೇಳಿರಲಿಲ್ಲ. ಅವರು ಚಲಾವಣೆಯಲ್ಲಿರುವ ರೂಪಾಯಿಗಳಿಗೆ ಆಧಾರವೆಂದು ಅಂಥ ನಿಧಿಯನ್ನು ಇಟ್ಟುಕೊಳ್ಳಬಯಸಿದರು. ನಿಧಿಯ ನಿರ್ಮಾಣಕ್ಕಾಗಿಯೇ ರೂಪಾಯಿಗಳನ್ನು ಟಂಕಿಸಿದರೆಂಬುದು ನಿಮ್ಮದೇ ಅರ್ಥವಿವರಣೆಯಲ್ಲವೇ?

– ಲಾ ಅವರು ನಾನು ಉಲ್ಲೇಖಿಸಿದ ಪತ್ರದಲ್ಲಿ ಹಾಗೆ ಹೇಳಿದ್ದಾರೆ. ಬಂಗಾರದ ಕಾಯ್ದಿಟ್ಟ ನಿಧಿಯ ಬಗೆಗೆ ಫೌಲರ್ ಸಮಿತಿಯ ಎದುರು ಹಲವು ಸೂಚನೆಗಳಿದ್ದವು. ಆದರೆ ಆ ಸಮಿತಿಯು ಅವೆಲ್ಲ ಸೂಚನೆಗಳು ಬಹಳ ವೆಚ್ಚದವು ಎಂದು ತಿಳಿದು, ಅವಶ್ಯವೆನಿಸಿದರೆ ರೂಪಾಯಿಗಳನ್ನು ಟಂಕಿಸುವ ಮೂಲಕ ಇಂಥ ನಿಧಿಯನ್ನು ಸಂಗ್ರಹಿಸಬೇಕೆಂದು ಸೂಚಿಸಿದರು. ಲಾ ಅವರಿಗಿಂತ ಮೊದಲಿನ ವಿತ್ತಮಂತ್ರಿಗಳು ಇಂಥ ನಿಧಿ ಅನಾವಶ್ಯಕವೆಂದರು. ಲಾ ಅವರು ನಿಧಿ ಆವಶ್ಯಕವೆಂದು ಹೇಳಿ ರೂಪಾಯಿಗಳನ್ನು ಟಂಕಿಸಿದರು. ನಾನೇನೂ ಒಟ್ಟಾರೆಯಾಗಿ ಆಪಾದನೆಯನ್ನು ಮಾಡುತ್ತಿಲ್ಲ, ಎಲ್ಲಿ ಯೋಗ್ಯವೋ ಅಲ್ಲಿ ಮೆಚ್ಚಿಗೆಯನ್ನೂ ತೋರಿದ್ದೇನೆ. ಬೇಕಾದರೆ ಇಂಥ ಆಧಾರಗಳನ್ನೂ ಉಲ್ಲೇಖಿಸಬಲ್ಲೆನು.

೬೧೨೯. ನೀವು ನೀಡಿದ ಆಧಾರಗಳನ್ನು ನಾನು ಪ್ರಮಾಣಿಸಿ ನೋಡಬಲ್ಲೆ. ಅಲ್ಲಿ ನೀವು ಏನನ್ನು ಶೋಧಿಸಬೇಕೆಂದು ಬಯಸಿದ್ದೀರಿ?

– ಫೌಲರ್ ಸಮಿತಿಯು ಭಾರತ ಸರ್ಕಾರಕ್ಕೆ ರೂಪಾಯಿ ನಾಣ್ಯಗಳನ್ನು ಟಂಕಿಸಿ ಬಂಗಾರದ ನಿಧಿಯನ್ನು ಸಂಗ್ರಹಿಸಬಹುದೆಂದು ಸೂಚಿಸಿದ್ದರೂ, ವೆಸ್ಟ್‌ಲ್ಯಾಂಡ್ ಮತ್ತು ಡಾಕಿನ್ಸ್ ಅವರು ಆ ಸಲಹೆಗಳನ್ನು ಲಕ್ಷಿಸಲಿಲ್ಲ. ಏಕೆಂದರೆ ಇಂಥ ನಿಧಿಯು ಅನಗತ್ಯ, ಇದಲ್ಲದೇ ರೂಪಾಯಿಯ ಮೊತ್ತವನ್ನು ಮಿತಿಯಲ್ಲಿಟ್ಟರೆ ಅದು ತನ್ನ ಮೌಲ್ಯವನ್ನು ಕಾಯ್ದುಕೊಳ್ಳಬಲ್ಲದು ಎಂದು ಅವರು ದೃಢವಾಗಿ ನಂಬಿದ್ದರು. ಆದರೆ ಸರ್ ಎಡ್ವರ್ಡ್ ಲಾ ಅವರು ತಾವು ವಿತ್ತಮಂತ್ರಿಯಾದ ಮೇಲೆ ಇಂಥ ನಿಧಿ ಅವಶ್ಯವೆಂದರು.

೬೧೩೦. ಫೌಲರ್ ಸಮಿತಿಯ ವರದಿ ಹೊರಬೀಳುವ ಮುನ್ನವೇ ವೆಸ್ಟ್‌ಲ್ಯಾಂಡ್ ಅವರು ವಿತ್ತ-ಮಂತ್ರಿಗಳಾಗಿದ್ದರು. ಅವರ ನಂತರ ಡಾಕಿನ್ಸ್ ಅವರು ವಿತ್ತ-ಮಂತ್ರಿಗಳಾಗಿದ್ದರು. ಅವರ ನಂತರ

ಡಾಕಿನ್ಸ್ ಅವರು ವಿತ್ತ–ಮಂತ್ರಿಯ ಪದವಿಯನ್ನು ವಹಿಸಿಕೊಂಡಾಗ ಫೌಲರ್ ವರದಿ ಬಿಡುಗಡೆಯಾಯ್ತು. ಆದರೆ ಭಾರತೀಯ ರಾಜಕಾರಣಿಗಳ ಸೂಚನೆಗಳನ್ನು ಇವರಿಬ್ಬರೂ ತಿರಸ್ಕರಿಸಿದರಲ್ಲವೇ?

– ಈ ಅಂಶವನ್ನು ಕುರಿತು ನಮ್ಮ–ನಿಮ್ಮಲ್ಲಿ ಭಿನ್ನಾಭಿಪ್ರಾಯವಿಲ್ಲ.

೬೧೩೧. ವ್ಯತ್ಯಾಸವಿರುವುದು ಒಂದೇ ವಿಷಯದಲ್ಲಿ. ಸರ್ ಎಡ್ವರ್ಡ್ ಲಾ ಅವರು ಬಂಗಾರ ನಿಧಿಯನ್ನು ಸಂಗ್ರಹಿಸುವ ಉದ್ದೇಶದಿಂದ ರೂಪಾಯಿ ಟಂಕಿಸಿದರೆಂದು ನೀವು ಆರೋಪಿಸಿದ್ದೀರಿ. ಅವರು ಹಾಗೆ ಮಾಡಿಲ್ಲವೆಂದು ನನ್ನ ಮತ. ಅವರು ಕಳುಹಿಸಿದ ಪತ್ರದಲ್ಲಿ, ೭ ದಶಲಕ್ಷ ಪೌಂಡುಗಳ ಬಂಗಾರ ನಿಧಿ ಇದೆ ಎಂದು ಮಾತ್ರ ಹೇಳಿದ್ದರಲ್ಲವೇ?

– ಹಾಗಿದ್ದರೆ ನಮ್ಮಿಬ್ಬರ ಅಭಿಪ್ರಾಯದಲ್ಲಿ ವ್ಯತ್ಯಾಸ ಉಂಟು.

೬೧೩೨. (ಅಧ್ಯಕ್ಷರು) ನಿಧಿಯನ್ನು ಹೆಚ್ಚಿಸುವುದರಿಂದ ಯಾವ ಪ್ರಯೋಜನವೂ ಇಲ್ಲ ಎಂದ ಮೇಲೆ ಬರೀ ಚೇಷ್ಟೆಗಾಗಿ ನಿಧಿಯ ಹೆಚ್ಚಳ ಮಾಡುವುದು ಯಾರ ಲಾಭಕ್ಕಾಗಿ?

– ಸರಿಯಾಗಿ ಹೇಳಿದಿರಿ, ನಿಧಿಯ ಅವಶ್ಯವಿದೆ, ಅದು ಇಲ್ಲದೇ ಹಣದ ಚಲಾವಣೆ ಆಗಲಾರದು ಎಂಬ ಭ್ರಮೆ ಜನರಲ್ಲಿ ಉಂಟು. ಇದು ಸಾಮಾನ್ಯವಾದ ಮೂಢನಂಬಿಕೆಯಾದರೂ ಆ ನಂಬಿಕೆಯ ಅಸ್ತಿತ್ವದಲ್ಲಿ ಇದೆ.

೬೧೩೩ (ಸರ್ ಅಲೆಕ್ಸಾಂಡರ್ ಮರೇ.) ನಿಮಗೆ ಆಧಾರವನ್ನು ಕೊಡಬಲ್ಲೆ. ನಿಮ್ಮ "ಪ್ರಾಬ್ಲಮ್ ಆಫ್ ದಿ ರುಪೀ" ಎಂಬ ಪುಸ್ತಕದ ೨೭೬–೨೭೮ ಪುಟಗಳಲ್ಲಿ ಇಲ್ಲವೇ?

– ಹೌದು. ೨೭೬ನೆಯ ಪುಟದಲ್ಲಿ ಹಣ–ವ್ಯವಸ್ಥೆಯ ಸುಧಾರಣೆಗಳನ್ನು ಜಾರಿಯಲ್ಲಿ ತಂದಾಗ ವೆಸ್ಟ್‌ಲ್ಯಾಂಡ್ ಅವರು ವಿತ್ತಮಂತ್ರಿಗಳಾಗಿದ್ದ ಉಲ್ಲೇಖವಿದೆ.

೬೧೩೪. ಯಾವ ದಿನಾಂಕವು ಅದು?

– ಸುಧಾರಣೆಗಳನ್ನು ಪ್ರಾರಂಭಿಸಿದ ಮೇಲೆ ೧೮೯೮–೯೯ರ ಅಂದಾಜು ಪತ್ರಿಕೆಯ ಭಾಷಣದಲ್ಲಿದೆ.

೬೧೩೫. ಅದು ಆಗಿದ್ದು ೧೮೯೪–೯೫ ರಲ್ಲಿ?

– ಅಲ್ಲ ಡಾಕಿನ್ಸ್ ಅವರು ಮುಂದಿನ ಪುಟದಲ್ಲಿ ಕಾಣಿಸಿಕೊಳ್ಳುತ್ತಾರೆ. ನಾನು ಉಲ್ಲೇಖಿಸಿದ್ದು ೨೮೬ನೆಯ ಪುಟದಲ್ಲಿಯ ೧೮೯೮–೯೯ರ ಹಣಕಾಸಿನ ಜಮಾ–ಖರ್ಚು ಪಟ್ಟಿ. ಅದರ ನಂತರ ಸರ್ ಎಡ್ವರ್ಡ್ ಲಾ ಅವರ ಭಾಷಣದ ಭಾಗ ಮುಂದೆ ೨೭೮ನೆಯ ಪುಟದಲ್ಲುಂಟು.

೬೧೩೬. ನಿಮ್ಮ ತಪ್ಪು ತಿದ್ದಬೇಕಾಗಿದೆ, ಕ್ಷಮಿಸಿ. ನೀವು ೧೮೯೮–೯೯ ಅಂದಾಜು ಪತ್ರಿಕೆಯ ಭಾಷಣವನ್ನು ಉಲ್ಲೇಖಿಸಿರುವುದಾಗಿ ಹೇಳಿದಿರಿ. ಆದರೆ ನೀವು ಹೇಳಿದ ಉಲ್ಲೇಖ ೧೮೯೪–೯೫ರ ಅಂದಾಜು ಪತ್ರಿಕೆಯ ಭಾಷಣದಲ್ಲಿಯದು, ಅಲ್ಲವೆ?

– ೧೮೯೯ರಲ್ಲೂ ಅವರೇ ವಿತ್ತಮಂತ್ರಿಗಳಾಗಿದ್ದರು.

೬೧೩೭. ಅವರು ೧೮೯೪–೯೫ ರಲ್ಲಿ ಅದನ್ನು ತಳ್ಳಿ ಹಾಕಿದ್ದರೇ?

– ನಾನು ಹೇಳಬಯಸುವುದೇನೆಂದರೆ, ಹರ್ಶೆಲ್ ಸಮಿತಿ ಮತ್ತು ಫೌಲರ್ ಸಮಿತಿ ಇವುಗಳ ಮಧ್ಯೆ ಗಣನೀಯ ವ್ಯತ್ಯಾಸವಿರಲಿಲ್ಲ ಎಂದು. ನಾನು ಅದರ ವಿರುದ್ಧ

ಕೀಳುಮಟ್ಟದ ಆಪಾದನೆಯನ್ನು ಮಾಡಿದ್ದೇನೆ ಎಂದು ನೀವು ತಿಳಿದರೆ ನಾನು ಖೇದ ವ್ಯಕ್ತಪಡಿಸುತ್ತೇನೆ.

೬೧೩೯. (ಸರ್ ಅಲೆಕ್ಸಾಂಡರ್ ಮರೇ) ನಾನು ನಿಮ್ಮ ಲಿಖಿತ ಸಾಕ್ಷ್ಯದ ೫ನೆಯ ಪರಿಚ್ಛೇದದಲ್ಲಿ ಮಾಡಿದ ಹೇಳಿಕೆಯನ್ನು ಉಲ್ಲೇಖಿಸುವುದರ ಹೊರತು ಮತ್ತೇನೂ ಮಾಡಿಲ್ಲ, ಅಲ್ಲವೆ?

– ಯಾರಾದರೂ ಇಂಥ ಶಬ್ದಜಾಲದಲ್ಲಿ ಬೀಳುವ ಸಂಭವವಿದೆ.

೬೧೪೦. (ಅಧ್ಯಕ್ಷರು) ನೀವು ಈ ವಿಖ್ಯಾತ ಮುತ್ಸದ್ದಿಗಳನ್ನು ಸಮರ್ಥಿಸಿದ್ದೇನೆ ಎಂದು ಹೇಳುವಿರಾ?

– ಹೌದು.

೬೧೪೧. (ಸರ್ ಪುರುಷೋತ್ತಮದಾಸ್ ಠಾಕೂರ್‌ದಾಸ್) ೮ನೆಯ ಪರಿಚ್ಛೇದದಲ್ಲಿ ನೀವು ವಿವಿಧ ದೇಶಗಳನ್ನು ಕುರಿತು ಸಾಮಾನ್ಯವಾಗಿ ಎಲ್ಲ ದೇಶಗಳೂ ಯುದ್ಧಪೂರ್ವ ಸಮಾನ ಬೆಲೆಯನ್ನು ಮರಳಿ ಸ್ಥಾಪಿಸಲು ಕಾತುರವಾಗಿವೆ ಎಂದು ಹೇಳಿದ್ದೀರಿ. ಮುಂದುವರಿದು ಭಾರತ ಮತ್ತು ಇತರ ದೇಶಗಳ ನಡುವೆ ಒಂದು ವ್ಯತ್ಯಾಸವಿದೆ. ಇತರ ದೇಶಗಳು ಯುದ್ಧಪೂರ್ವ ಸಮಾನ ಬೆಲೆಯನ್ನು ಸಹ ತಲುಪಿಲ್ಲ. ಆದರೆ ಭಾರತವು ಆ ಸಮಾನ ಬೆಲೆಯನ್ನು ಮೀರಿ ಹೋಗಿದೆ ಎಂದು ಹೇಳಿದ್ದೀರಿ. ನೀವು ಉಲ್ಲೇಖಿಸಿದ ದೇಶಗಳ ಹಣಗಳು ತಮ್ಮ ಮೌಲ್ಯವನ್ನು ಕಳೆದುಕೊಂಡಿದ್ದವೆಂದು ನಿಮ್ಮ ಅಭಿಪ್ರಾಯವೋ?

– ಖಂಡಿತವಾಗಿ ಹೌದು.

೬೧೪೨. ಹಣಕಾಸಿನ ಸ್ಥಿತಿ ಉತ್ತಮವಿದ್ದ ದೇಶಗಳೂ ಇದೇ ಪರಿಸ್ಥಿತಿಯಲ್ಲಿ ಇವೆಯೋ?

– ಯುದ್ಧಪೂರ್ವ ಸಮಾನ ಬೆಲೆಯನ್ನು ಸಮೀಪ ತಲುಪಿರುವ ದೇಶಗಳು ಸಹ ಮೊದಲಿನ ಸಮಾನ ಬೆಲೆಯನ್ನು ಮರಳಿ ತರುವುದಾದರೆ ತೊಂದರೆಗಳನ್ನು ಅನುಭವಿಸಬೇಕಾದೀತು ಎಂದು ನನಗೆ ಅನಿಸುತ್ತದೆ.

೬೧೪೩. ಇದರ ಬಗ್ಗೆ ಯಾವ ದೇಶಗಳ ಉದಾಹರಣೆಗಳನ್ನು ಕೊಡಬಲ್ಲಿರಿ?

– ಜಿನಿವಾ ಸಮ್ಮೇಳನದಲ್ಲಿ ನಡೆದ ವಿಚಾರ ವಿನಿಮಯಗಳ ಬಗೆಗೆ ನಾನು ಮಾತನಾಡುತ್ತಿದ್ದೆ. ನನ್ನ ವಿಚಾರದಲ್ಲಿ ಇಟಲಿಯಂಥ ದೇಶಗಳಿವೆ. ಫ್ರಾನ್ಸ್ ಸಹ ಒಂದು ಕಾಲದಲ್ಲಿ ಯುದ್ಧ ಪೂರ್ವದ ಸಮಾನ ಬೆಲೆಯ ಸಮೀಪ ಬಂದಿತ್ತು.

೬೧೪೪. ಇವೆಲ್ಲ ದೇಶಗಳಲ್ಲಿ ಈಗ ಫ್ರಾನ್ಸ್ ಅತಿ ನಿಕೃಷ್ಟ ಪರಿಸ್ಥಿತಿಯಲ್ಲಿದೆ. ಆದ್ದರಿಂದ ಭಾರತದ ಮತ್ತು ಹಣವ್ಯವಸ್ಥೆ ಹದಗೆಟ್ಟ ಇತರ ದೇಶಗಳ ನಡುವೆ ಇರುವ ವ್ಯತ್ಯಾಸವನ್ನು ಎತ್ತಿ ತೋರಿಸಿದ್ದೀರಾ?

– ನಾನು ಎತ್ತಿ ತೋರಿಸುವ ಅಂಶವೇನೆಂದರೆ, ನಾವು ಪೂರ್ವದಲ್ಲಿದ್ದ ಸಮಾನ ಬೆಲೆಯನ್ನು ಪುನಃ ಸ್ಥಾಪಿಸುವುದು ಶಕ್ಯವಿದ್ದರೂ ಅಥವಾ ಅದರ ಸಮೀಪ ಬಂದಿದ್ದರೂ, ಅದರ ಪುನಃ ಸ್ಥಾಪನೆ ಸಮರ್ಪಕ ಅಥವಾ ಯೋಗ್ಯವಾಗಿರಲಿಕ್ಕಿಲ್ಲ.

೬೧೪೫. ನಂತರ ಆ ಅಂಶವನ್ನು ವಿಚಾರಿಸೋಣ, ಭಾರತ ಮತ್ತು ಇತರ ದೇಶಗಳಲ್ಲಿರುವ ಹಣವ್ಯವಸ್ಥೆಯ ಪರಿಸ್ಥಿತಿ ಮತ್ತು ಸಮಸ್ಯೆಗಳಲ್ಲಿ ಹೋಲಿಕೆ ಇಲ್ಲವೆಂಬುದೇ ನನ್ನ ಹೇಳಿಕೆ. ಹಣದ ಮೌಲ್ಯವನ್ನು ಕಳೆದುಕೊಂಡ ದೇಶಗಳೂ ಯುದ್ಧಪೂರ್ವ ಸಮಾನ ಬೆಲೆಯನ್ನು ಮರಳಿ ಸ್ಥಾಪಿಸಲು ಬಯಸಿದರೂ ಸಾಧ್ಯವಿಲ್ಲ. ಹೀಗಿದ್ದಾಗ ನಾವು ನಮ್ಮ ಹಣದ ಸಮಾನ ಬೆಲೆಯನ್ನು ಯುದ್ಧಪೂರ್ವದ ಮಟ್ಟಕ್ಕೆ ತರುವುದು ಸಾಧ್ಯವೂ ಅಲ್ಲ, ಸಾಧುವೂ ಅಲ್ಲ ಎನ್ನುತ್ತೀರಾ?

– ನೀವು ನನಗಿಂತ ಚೆನ್ನಾಗಿ ಈ ಅಭಿಪ್ರಾಯವನ್ನು ಹೇಳಿದಿರಿ.

೬೧೪೬. ಭಾರತವನ್ನು ಉಳಿದ ದೇಶಗಳೊಡನೆ ಹೋಲಿಸುವಾಗ ಯುದ್ಧಪೂರ್ವ ಸಮಾನ ಬೆಲೆಯನ್ನೇ ಪುನಃ ಸ್ಥಾಪಿಸಿದ ದೇಶಗಳಿಗೂ ಹೋಲಿಸಿರುವಿರಾ?

– ಹೌದು. ಇಂಗ್ಲೆಂಡಿನದ್ದೇ ಇದಕ್ಕೆ ಉದಾಹರಣೆ. ಆದರೆ ಇಂಗ್ಲೆಂಡಿನಲ್ಲಿ ಸಹ ಇಂಥ ಸಮಾನ ಬೆಲೆಯನ್ನು ಪುನಃ–ಸ್ಥಾಪನೆ ಮಾಡಲು ಬಲವಾಗಿ ವಿರೋಧಿಸುವ ವಿಚಾರಧಾರೆ ಇತ್ತು.

೬೧೪೭. ನೀವು ಹೇಳಿದಂತೆ ದೃಢ ವಿರೋಧವಿದ್ದರೂ, ಇಂಗ್ಲೆಂಡ್‌ನ ಜನತೆ ಈಗ ಯುದ್ಧಪೂರ್ವದ ಸಮಾನತೆಗೆ ಹೊಂದಿಕೊಂಡಿದ್ದಾರೆ. ಮೊದಲಿನ ಸಮಾನ ಬೆಲೆಗೆ ಈಗೇನೂ ತಕರಾರು ಕೇಳಿಬರುವುದಿಲ್ಲ?

– ಹಾಗೆ ನಾನು ಹೇಳಲಾರೆ.

೬೧೪೮. ಈ ಬಗ್ಗೆ ನಿಮಗೆ ಗೊತ್ತಿಲ್ಲವೆಂದು ಕಾಣುತ್ತದೆ. ಮರಳಿ ಯುದ್ಧ ಪೂರ್ವದ ಸಮಾನ ಬೆಲೆಯನ್ನು ಸ್ಥಾಪಿಸಿದವರು ತಪ್ಪು ಮಾಡಿದ್ದಾರೆ ಎನ್ನದ ಹೊರತು ಭಾರತದಲ್ಲಿನ ಅದೇ ಸಮಾನ ಬೆಲೆಯ ಸಮರ್ಥಕರ ವಿರುದ್ಧ ನಿಮ್ಮ ಆಕ್ಷೇಪ ಮತ್ತೇನೂ ಇಲ್ಲವೇ?

– ನಾನು ಹಾಗೆ ಹೇಳಲಾರೆ. ನಾನು ಎತ್ತಿದ ಪ್ರಶ್ನೆ ಆ ಸಮಾನ ಬೆಲೆ–ಈಗಿನ ಪರಿಸ್ಥಿತಿಯಲ್ಲಿ ಅಪೇಕ್ಷಣೀಯವೋ ಇಲ್ಲವೋ ಎಂಬುವುದು.

೬೧೪೯. ಆ ಪ್ರಶ್ನೆಯ ಕುರಿತು ನೀವು ಲಿಖಿತ ಸಾಕ್ಷ್ಯದ ಆನಂತರದ ಭಾಗದಲ್ಲಿ ಯುದ್ಧಪೂರ್ವ ಸಮಾನ ಬೆಲೆಯಿಂದ ಯುದ್ಧಪೂರ್ವ ಬೆಲೆಗಳ ಮಟ್ಟವನ್ನು ಮರಳಿ ತರುವುದು ಅಶಕ್ಯ ಎಂದು ಹೇಳಿದ್ದೀರಿ. ಹಣದ ವಿನಿಮಯ ದರವನ್ನು ನಮಗೆ ಸರಿ ಎನಿಸಿದ ಬೆಲೆಗಳ ಮಟ್ಟವನ್ನು ಸ್ಥಾಪಿಸಲು ಸಾಧನವಾಗಿ ಉಪಯೋಗಿಸಬೇಕು ಎನ್ನುವಿರಾ?

– ಇಲ್ಲ.

೬೧೫೦. ಹಾಗಾದರೆ ಯುದ್ಧಪೂರ್ವ ಸಮಾನ ಬೆಲೆಯನ್ನು ಮರಳಿ ತರುವುದು ಅಷ್ಟೇನೂ ದೊಡ್ಡ ತಪ್ಪು ಅಲ್ಲ ಎಂದು ಅರ್ಥವಾಗುವುದಿಲ್ಲವೇ?

– ಅಲ್ಲ, ನಾನು ಹೇಳುವುದು ವಿನಿಮಯ ದರ ಮತ್ತು ಬೆಲೆಗಳ ಮಟ್ಟ ಒಂದೇ ದಿಶೆಯಲ್ಲಿ ಚಲಿಸದಿದ್ದರೂ............

೬೧೫೧. ಕ್ಷಮಿಸಿ. ನನ್ನ ಪ್ರಶ್ನೆ ಇರುವುದೇನೆಂದರೆ, ವಿನಿಮಯ ದರವನ್ನು ಬೆಲೆಗಳ ಮಟ್ಟದ ಸಮರ್ಪಕ ಹೊಂದಾಣಿಕೆ (ಬದಲಾವಣೆ)ಗಾಗಿ ಉಪಯೋಗಿಸಬೇಕೆಂದು ನೀವು ಸೂಚಿಸುತ್ತೀರಾ?

– ಇಲ್ಲ. ನಾನು ಹಾಗೆ ಹೇಳುವುದಿಲ್ಲ.

೬೧೫೨. ಆದ್ದರಿಂದ ಆ ದೃಷ್ಟಿಕೋನದಿಂದ, ಬೆಲೆಗಳ ಮಟ್ಟದ ಹೊಂದಾಣಿಕೆಯ ಸಾಧನವೆಂದು ಅನುಪಾತದ ಬದಲಾವಣೆಯ ವಿನಿಯೋಗವು ಅನಪೇಕ್ಷಣೀಯವಿತ್ತು. ಅಲ್ಲವೇ?

– ಹೌದು. ಆ ರೀತಿಯ ವಿನಿಯೋಗ ಅಪೇಕ್ಷಣೀಯವಲ್ಲ.

೬೧೫೩. ಹಾಗೆ ಯಾವ ದೇಶವೂ ಮಾಡಿಲ್ಲ. ಇದಕ್ಕೆ ಅಪವಾದವಾಗಿ ಭಾರತದ ದೃಷ್ಟಿಯಿಂದ ಮಾತ್ರ ಹೆಚ್ಚು ಅಪೇಕ್ಷಣೀಯವೆಂದು ಹೇಳುತ್ತೀರಾ?

– ಆದರೆ ಎಲ್ಲ ದೇಶಗಳೂ ಮಾಡಿವೆ.

೬೧೫೪. ಯಾವ ದೇಶಗಳು?

– ಎಲ್ಲ ದೇಶಗಳು.

೬೧೫೫. ನನ್ನ ಪ್ರಶ್ನೆಯನ್ನು ಹೆಚ್ಚು ಸ್ಪಷ್ಟ ರೀತಿ ಹೇಳಲೇ?

– ನಿಮ್ಮ ಪ್ರಶ್ನೆ ಸಾಕಷ್ಟು ಸ್ಪಷ್ಟವೆಂದೆನಿಸುವುದಿಲ್ಲ.

೬೧೫೬. ನಾನು ನನ್ನ ಪ್ರಶ್ನೆಗಳನ್ನು ಕೆಲವೊಮ್ಮೆ ಬಹಳ ಸ್ಪಷ್ಟರೂಪವಾಗಿ ಕೇಳಿರುವುದಿಲ್ಲ ಎಂದು ಒಪ್ಪಿಕೊಳ್ಳುತ್ತೇನೆ. ಯುದ್ಧಪೂರ್ವದ ಸಮಾನ ಬೆಲೆಯನ್ನು ಮರಳಿ ಸ್ಥಾಪಿಸಲು ಶಕ್ತವಾದ ಯಾವ ದೇಶಗಳು ಸ್ವಸಂತೋಷದಿಂದ ತಮ್ಮ ಆಂತರಿಕ ಬೆಲೆಗಳ ಮಟ್ಟದ ಹೊಂದಾಣಿಕೆ ಮಾಡುವ ಉದ್ದೇಶದಿಂದ ಯುದ್ಧಪೂರ್ವ ಸಮಾನ ಬೆಲೆಯನ್ನು ಮೀರಿ ಸಾಗಿದವು?

– ಯಾವ ದೇಶಗಳೂ ಹಾಗೆ ಮಾಡಿಲ್ಲ.

೬೧೫೭. ಆದ್ದರಿಂದ ದೋಷಪೂರ್ಣವಾದ ತರ್ಕ ಎಲ್ಲಿದೆ?

– ಇಲ್ಲಿ ತರ್ಕದ ದೋಷ ಹೀಗಿದೆ. ಕೆಲವರು ಮೊದಲಿನ ಅನುಪಾತದ ಪುನಃ ಸ್ಥಾಪನೆಯಿಂದ ಮೊದಲಿನ ಬೆಲೆಗಳ ಮಟ್ಟವೂ ಮರಳಿ ಸ್ಥಾಪಿತವಾಗುವುದೆಂಬ ಭ್ರಮೆಯಲ್ಲಿರುತ್ತಾರೆ. ಇದೇ ಅವರ ತಪ್ಪು ಏಕೆಂದರೆ ೧೯೧೪ರಲ್ಲಿನ ೧ ಷಿಲಿಂಗ್ ೪ ಪೆನ್ಸ್ ಮತ್ತು ೧೯೨೫ರ ೧ ಷಿಲಿಂಗ್ ೪ ಪೆನ್ಸ್ ಮೌಲ್ಯದಲ್ಲಿ ಸರಿಸಮವಾಗಲಾರವು.

೬೧೫೮. ೧ ಷಿಲಿಂಗ್ ೪ ಪೆನ್ಸ್ ಅನುಪಾತವನ್ನು ಬೆಲೆಗಳ ಮಟ್ಟದ ಲಕ್ಷ್ಯವಿಲ್ಲದೇ ಸಮರ್ಥಿಸುವವರು ಈ ತಪ್ಪನ್ನು ಮಾಡಿದಂತಾಗುವುದಿಲ್ಲ?

– ಅವರು ಈ ತಪ್ಪನ್ನು ಮಾಡಿಲ್ಲ.

೬೧೫೯. ಆ ಪರಿಚ್ಛೇದದ ನಂತರದ ಭಾಗದಲ್ಲಿ ನಿಮ್ಮ ವಾದ ಇಂತಿದೆ. 'ಯುದ್ಧಪೂರ್ವದ ಸಮಾನ ಬೆಲೆಯ ಪುನಃ ಸ್ಥಾಪನೆ ಎಂದು ಭಾವಿಸಿದರೆ, ರೂಪಾಯಿಯ ವಿನಿಮಯ ದರವನ್ನು ೧ ಷಿಲಿಂಗ್ ೬ ಪೆನ್ಸ್‌ದಿಂದ ೧ ಷಿಲಿಂಗ್ ೪ ಪೆನ್ಸ್‌ಗೆ ಇಳಿಸುವ ಬದಲು ೨ ಷಿಲಿಂಗಿನ ದಿಶೆಯಲ್ಲಿ ಹೆಚ್ಚಿಸಬೇಕು'. ಇದಲ್ಲದೇ 'ನಾಮಮಾತ್ರಕ್ಕೆ ಯುದ್ಧಪೂರ್ವದ ಬಂಗಾರದ ಸಮಾನ ಬೆಲೆಯನ್ನು ಪುನಃ ಸ್ಥಾಪಿಸುವುದರಿಂದ ಅನ್ಯಾಯದ, ಅನಿಷ್ಟ ಪರಿಣಾಮಗಳಾಗುತ್ತವೆ'. ಎಂದು ಹೇಳಿದ್ದೀರಿ. ಇಲ್ಲಿ 'ನಾಮಪತ್ರಕ್ಕೆ' ಎನ್ನುವುದರ ಅರ್ಥವೇನು?

– 'ಬೆಲೆಗಳ ಮಟ್ಟವನ್ನು ಲಕ್ಷಿಸದೇ' ಎಂದು ಅರ್ಥ.

೬೧೬೦. ನೀವು ಒಪ್ಪಿದ್ದೀರೆಂದು ತಿಳಿದಿದ್ದೇನು..... ?

– ೧೯೧೪ರಲ್ಲಿ ಇದ್ದಂತೆ ೧೯೨೫ ರಲ್ಲಿ ೧ ಷಿಲಿಂಗ್ ೪ ಪೆನ್ಸ್‌ದ ಅನುಪಾತ ಇದ್ದರೆ ಅದು ನಾಮಪತ್ರಕ್ಕೆ ಬದಲಾವಣೆಯಾದಂತೆ, ಏಕೆಂದರೆ ಬೆಲೆಗಳ ಮಟ್ಟಗಳು ಬದಲಾಯಿಸಿರುತ್ತದೆ.

೬೧೬೧. ಯುದ್ಧಪೂರ್ವದ ದರವಾದ ೧ ಷಿಲಿಂಗ್ ೪ ಪೆನ್ಸ್ ಇರಬೇಕೆಂದು ಕೇಳಿದರೆ 'ನಾಮಮಾತ್ರಕ್ಕೆ' ಹೇಗೆ ಆಗುತ್ತದೆ?

– ನೀವು ೧ ಷಿಲಿಂಗ್ ೬ ಪೆನ್ಸ್‌ದಿಂದ ೧ ಷಿಲಿಂಗ್ ೪ ಪೆನ್ಸ್ ದರಕ್ಕೆ ಬದಲಾವಣೆ ಕೇಳುತ್ತಿದ್ದೀರಿ. ನನ್ನ ಲಿಖಿತ ಸಾಕ್ಷ್ಯದ ೮ನೆಯ ಪರಿಚ್ಛೇದದ ಕೊನೆಗೆ ಹೇಳಿದಂತೆ, 'ಈಗಿರುವ ವ್ಯವಹಾರವನ್ನೇ ಆಧಾರವಾಗಿ ಇಟ್ಟುಕೊಂಡು ಮುಂದಿನ ಕ್ರಮ (ಸಮಾನ

ಬೆಲೆಯನ್ನು) ನಿರ್ಧರಿಸುವುದು ಕಲ್ಪಿತವಾದ ಯುದ್ಧಪೂರ್ವ ಸಮಾನ ಬೆಲೆಯನ್ನಿಟ್ಟುಕೊಳ್ಳುವುದಕ್ಕಿಂತ ನ್ಯಾಯಸಮ್ಮತವೆನಿಸುವುದು. ಆದ್ದರಿಂದ ಈಗಿರುವ ೧ ಷಿಲಿಂಗ್ ೬ ಪೆನ್ಸ್ ದರವೇ ಕ್ರಮಬದ್ಧ ಎಂದು ತಿಳಿದು ಆ ಹಂತದಿಂದಲೇ ಮುಂದುವರಿಯಬೇಕು ಎಂದು ನನ್ನ ಅಭಿಪ್ರಾಯ.

೬೧೬೨. ಈಗ ನಾವು ಈ ಬಗೆಗೆ ಚರ್ಚಿಸುವಾಗ ೧ ಷಿಲಿಂಗ್ ೮ ಪೆನ್ಸ್ ವಿನಿಮಯದರವೇ ಇದ್ದರೆ, ಇದೀಗ ನೀವು ೧ ಷಿಲಿಂಗ್ ೬ ಪೆನ್ಸ್ ದರಕ್ಕಾಗಿ ವಾದಿಸಿದಂತೆ ೧ ಷಿಲಿಂಗ್ ೮ ಪೆನ್ಸ್ ದರವನ್ನೇ ದೃಢೀಕರಿಸಿಬೇಕೆಂದು ಹೇಳುವಿರಾ?

– ಹೌದು.

೬೧೬೩. ಹಾಗಾದರೆ ವಿನಿಮಯ ದರವು ೧ ಷಿಲಿಂಗ್ ೬ ಪೆನ್ನಿಗೆ ಏರಲಿ ಅಥವಾ ಬಿಡಲಿ, ಉಳಿದ ದೇಶಗಳು ಏನು ಮಾಡಿವೆ ಎಂಬುದನ್ನೂ ಸಹ ವಿಚಾರಿಸದೆ, ೧ ಷಿಲಿಂಗ್ ೬ ಪೆನ್ಸ್‌ನ ಮಟ್ಟಕ್ಕೆ ಹೇಗೆ ಏರಿತು ಎಂಬುದನ್ನು ಲಕ್ಷಿಸದೇ ಅದೇ ಇರಬೇಕು ಎಂದು ಹೇಳುತ್ತೀರಾ?

– ನನ್ನದೇ ರೀತಿಯಲ್ಲಿ ವಿವರಿಸಲೇ?

೬೧೬೪. ಹೇಳಿ.

– ಈ ಸಮಸ್ಯೆಯನ್ನು ಕುರಿತು ನನ್ನ ದೃಷ್ಟಿಕೋನ ಹೀಗಿದೆ. ಇವತ್ತು ವಿನಿಮಯದರ ೧ ಷಿಲಿಂಗ್ ೬ ಪೆನ್ಸ್ ಇದೆ. ಈ ದರವು ಒಂದು ತಿಂಗಳ ಬೆಲೆಗಳ ಮಟ್ಟವನ್ನು ಪ್ರತಿನಿಧಿಸುತ್ತದೆ. ನಾವು ೧ ಷಿಲಿಂಗ್ ೪ ಪೆನ್ಸ್ ದರಕ್ಕೆ ಮರಳಿ ಹೋಗುವುದಾದರೆ ಬೆಲೆಗಳನ್ನು ಏರಿಸಬೇಕಾಗುವುದು ಎಂದು ನನಗೆನಿಸುತ್ತದೆ. ಹಣದ ಮೊತ್ತವನ್ನು ಹೆಚ್ಚಿಸದೇ ಬಂಗಾರ ರೂಪದ ೧ ಷಿಲಿಂಗ್ ೪ ಪೆನ್ಸ್ ದರವನ್ನು ನಾವು ಸ್ಥಾಪಿಸುವುದು ಅಶಕ್ಯ. ಆದ್ದರಿಂದ ನನ್ನ ದೃಷ್ಟಿಯಲ್ಲಿ ಮುಖ್ಯ ಪ್ರಶ್ನೆಯು '೧ ಷಿಲಿಂಗ್ ೪ ಪೆನ್ಸ್ ದರವನ್ನು ಸ್ಥಾಪಿಸುವುದಕ್ಕಾಗಿ ನಾವು ಬೆಲೆಗಳನ್ನು ಹೆಚ್ಚಿಸೋಣವೇ' ಎಂಬುದು. ಶ್ರಮಿಕ ವರ್ಗದವನಾದ ನನ್ನಂತವರಿಗೆ ಬೆಲೆಗಳ ಮಟ್ಟ ಇಳಿಯುವುದೇ ಉತ್ತಮ ಎಂದು ನನ್ನ ಅಭಿಪ್ರಾಯ.

೬೧೬೫. ಇನ್ನೊಂದು ರೀತಿಯಲ್ಲಿ ತೆಗೆದುಕೊಳ್ಳೋಣ. ನೀವು ಶ್ರಮಿಕ ವರ್ಗದವರೆಂಬ ದೃಷ್ಟಿಕೋನವನ್ನಿಟ್ಟುಕೊಂಡಾಗ ನಿಮ್ಮ ಹೇಳಿಕೆಯ ಅರ್ಥ ಶ್ರಮಿಕ ವರ್ಗದವರಿಗೆ ಈ ಕ್ರಮದಿಂದ ತೊಂದರೆಯಾಗುವುದು ಎಂದಲ್ಲವೇ?

– ಹೌದು. ನಾನು ಇನ್ನೊಂದು ಹೆಜ್ಜೆ ಮುಂದೆ ಹೋಗಿ ರಾಷ್ಟ್ರದ ಹಿತದ ದೃಷ್ಟಿಯಿಂದ ಸಹ ಇಳಿಯುತ್ತಿರುವ ಬೆಲೆಗಳು ಏರುತ್ತಿರುವ ಬೆಲೆಗಳಿಗಿಂತ ಉತ್ತಮ ಎಂದು ಹೇಳುತ್ತೇನೆ.

೬೧೬೬. ಕಳೆದ ೧೫–೨೦ ವರ್ಷಗಳವರೆಗೆ ಸ್ಥಿರವಾಗಿದ್ದ ಮಟ್ಟಕ್ಕಿಂತ ಹೆಚ್ಚಾದ ವಿನಿಮಯ ದರವು ಉತ್ಪಾದಕರ ದೃಷ್ಟಿಯಿಂದ ಅನಪೇಕ್ಷಣೀಯ ಎಂಬ ವಾದವನ್ನು ನೀವು ಕೇಳಿದ್ದೀರಿ ಎಂದು ನಾನು ತಿಳಿಯುತ್ತೇನೆ. ಇದಕ್ಕೆ ನೀವೇನು ಹೇಳುವಿರಿ?

– ಇದರ ಅರ್ಥ ಏನೆಂದರೆ ಲಾಭಾಂಶವು ಕಡಿಮೆಯಾಗುವುದೆಂದು. ಎಷ್ಟರ ಮಟ್ಟಿಗೆ – ಈ ವಿಚಾರವನ್ನು ಜನ ಮೆಚ್ಚುತ್ತಾರೋ ನಾನರಿಯೆ. ಆದರೆ ಔದ್ಯೋಗಿಕ ಕುಸಿತ ಮತ್ತು ಲಾಭಾಂಶದ ಕುಸಿತ ಇವುಗಳ ನಡುವೆ ಭೇದಭಾವವನ್ನು ಮಾಡುತ್ತೇನೆ. ಇದೇ ತರದ ಭೇದಭಾವವನ್ನು ಪ್ರೊ. ಮಾರ್ಶಲ್ ಅವರು ಸುವರ್ಣ ಮತ್ತು ರಜತ ಆಯೋಗದ

(Gold & Silver Commission) ಎದುರು ತೋರಿಸಿದ್ದರು. ಲಾಭಾಂಶ ಕುಸಿಯಬಹುದು; ಅರ್ಥಾತ್ ಉದ್ಯಮಿ–ವರ್ಗಕ್ಕೆ ಬೆಲೆ ಏರಿಕೆಯ ಸಮಯಕ್ಕೆ ಸಿಕ್ಕುವಷ್ಟು ಲಾಭ ಸಿಕ್ಕಿರಲಿಕ್ಕಿಲ್ಲ. ಆದರೆ ಅದರಿಂದ ಉದ್ದಿಮೆಗಳೇ ಕುಸಿದು ಮುಚ್ಚಿಬಿಡುತ್ತವೆ ಎನ್ನಲಾಗದು.

೬೧೬೭. ಕ್ಷಮಿಸಿ. ಹಣ ತೊಡಗಿಸಿದವರ ಬಗೆಗೆ ನಂತರ ವಿಚಾರಿಸೋಣ. ಈಗ ಉತ್ಪಾದಕರ ಪರಿಸ್ಥಿತಿಯನ್ನು ಕುರಿತು ಕೇಳುತ್ತಿದ್ದೇನೆ. ವಿನಿಮಯ ದರವು ಹೆಚ್ಚಿದಂತೆ ಉತ್ಪಾದಕನಿಗೆ ಕಡಿಮೆ ರೂಪಾಯಿಗಳು ಸಿಕ್ಕುವುದಿಲ್ಲವೇ?

– ಇದರಿಂದ ದುಷ್ಪರಿಣಾಮವೇನೂ ಆಗುವುದಿಲ್ಲ. ಏಕೆಂದರೆ ಸರಕುಗಳ ಬೆಲೆಗಳ ಸಂಗಡ ಉತ್ಪಾದಕನ ಉತ್ಪಾದನೆಯ ವೆಚ್ಚವೂ ಕಡಿಮೆಯಾಗುವುದು. ಮೊದಲು ಅವನಿಗೆ ೧೫ ರೂಪಾಯಿ ದೊರೆಯುತ್ತಿದ್ದವು. ಆ ಹಣದಿಂದ ಅವನಿಗೆ ನಿರ್ದಿಷ್ಟ ಪ್ರಮಾಣದ ಸರಕುಗಳು ದೊರೆಯುತ್ತಿದ್ದವು ಎಂದು ಗ್ರಹಿಸುವ. ಅವನಿಗೆ ೫ ವರ್ಷಗಳ ನಂತರ ೧೦ ರೂಪಾಯಿಗಳು ಮಾತ್ರ ದೊರೆತು, ಅಷ್ಟೇ ಹಣದಿಂದ ಮೊದಲಿನಷ್ಟು, ಸರಕುಗಳು ದೊರೆತರೆ ಏನೂ ವ್ಯತ್ಯಾಸವಾಗುವುದಿಲ್ಲ. ಏಕೆಂದರೆ ಅವನು ಗಳಿಸಿದ ಹಣವನ್ನೆಲ್ಲ ವೆಚ್ಚಮಾಡಿಬಿಡುತ್ತಾನೆ.

೬೧೬೮. ಆದರೆ ನೀವು ಹೇಳಿದ್ದು ಅರ್ಥವ್ಯವಸ್ಥೆ ಪೂರ್ಣ ಹೊಂದಾಣಿಕೆಯಾದ ನಂತರದ ಸ್ಥಿತಿ ಅಲ್ಲವೇ? ಅಲ್ಲಿಯವರೆಗೆ ಅಶಾಂತಿಯುಂಟಾಗುವುದಿಲ್ಲವೇ?

– ಹೌದು, ಉಂಟಾಗುತ್ತದೆ.

೬೧೬೯. ಸದ್ಯದ ಪರಿಸ್ಥಿತಿಯನ್ನು ನೋಡುವಾ. ಸಾಮಾನ್ಯವಾಗಿ ಭಾರತದ ಸಾಗುವಳಿದಾರನು ಬೇರೆ ಕೂಲಿಕಾರರನ್ನು ನಿಯಮಿಸಿಕೊಳ್ಳದೇ ಸ್ವಂತ ಪರಿಶ್ರಮದಿಂದ ಸಾಗುವಳಿ ಮಾಡುತ್ತಾನೋ?

– ಸ್ವಲ್ಪಮಟ್ಟಿಗೆ ಕೂಲಿ ಆಳುಗಳನ್ನು ನಿಯಮಿಸಿಕೊಳ್ಳಬಹುದು.

೬೧೭೦. ಸಾಮಾನ್ಯವಾಗಿ ಹೊಂದಾಣಿಕೆ ಪೂರ್ಣವಾದಾಗ ಅವನು ಕೊಡುವ ಕೂಲಿ ದರಗಳೂ ಸಹ ಇಳಿದಾವು ಎಂದು ನಿರೀಕ್ಷಿಸಬಹುದಲ್ಲವೇ?

– ಹೌದು. ಸಾಗುವಳಿದಾರನಿಗೆ ಮೊದಲಿನಷ್ಟೇ ಲಾಭ ದೊರೆಯಬೇಕಾದರೆ ಕೂಲಿ ದರಗಳೂ ಇಳಿಯಬೇಕು.

೬೧೭೧. ಸರಿ. ಸಾಗುವಳಿದಾರನು ನಿಯಮಿಸಿಕೊಂಡ ಕೂಲಿಕಾರರ ವೇತನ ಇಳಿಯದಿದ್ದರೆ, ಅಷ್ಟರಮಟ್ಟಿಗೆ ಅವನಿಗೆ ಕಡಿಮೆ ಲಾಭವಾಗುವುದೆಂದು ಒಪ್ಪುವಿರಾ?

– ಹೌದು ಹಾಗೆ ಆಗುತ್ತದೆ ಎಂದು ಒಪ್ಪುತ್ತೇನೆ.

೬೧೭೨. ಉತ್ಪನ್ನ, ಖರ್ಚು ಎರಡೂ ಸಮವಾಗಿ ಇದ್ದಾಗ ಸಾಗುವಳಿದಾರನಿಗೆ ಹಾನಿಯಾಗುವುದಿಲ್ಲವೇ?

– ಇಲ್ಲ. ಅವನಿಗೆ ಲಾಭವೂ ಇಲ್ಲ, ಹಾನಿಯೂ ಇಲ್ಲ. ಲಾಭದ ಸ್ವರೂಪ ಬೇರೆ. ಅದು ಖರ್ಚೆಲ್ಲ ಮಿಕ್ಕಿದ ನಂತರದ ಉಳಿತಾಯ.

೬೧೭೩. ಒಂದು ಜಿಲ್ಲೆಯಲ್ಲಿ ಒಬ್ಬ ಸಾಗುವಳಿದಾರನ ಅಥವಾ ಸಾಗುವಳಿದಾರರ ವರ್ಗದ ವೆಚ್ಚ ಸಿಗುವಷ್ಟು ಮಾತ್ರ ಉತ್ಪನ್ನ ಇದ್ದಾಗ, ಉತ್ಪಾದಿಸಿದ ಸರಕುಗಳ ಬೆಲೆಯ ಇಳಿತದ ಪ್ರಮಾಣದಲ್ಲಿ ಕೂಲಿ ದರಗಳು ಇಳಿಯದಿದ್ದರೆ ಅವರಿಗೆ ಹಾನಿಯಾಗುವುದಿಲ್ಲವೇ?

– ನೀವು ಲಾಭವನ್ನು ಹೇಗೆ ವ್ಯಾಖ್ಯಾನಿಸುತ್ತೀರೋ ನನಗೆ ತಿಳಿಯದು. ನನ್ನ ದೃಷ್ಟಿಯಲ್ಲಿ

ಲಾಭ ಎಂದರೆ ಹೆಚ್ಚುವರಿ ಆದಾಯ.

೬೧೭೪. ಉತ್ಪಾದನೆಯ ಎಲ್ಲ ವೆಚ್ಚಗಳನ್ನೂ ಪಾವತಿ ಮಾಡಿ ಉಳಿದದ್ದು ಅಲ್ಲವೇ?

– ಹೌದು.

೬೧೭೫. ೧೯೨೧ ರಲ್ಲಿ ಒಬ್ಬ ಸಾಗುವಳಿದಾರನ ಉತ್ಪನ್ನ, ಖರ್ಚು ಸಮವಾಗಿದ್ದವೆಂದು ತಿಳಿಯೋಣ. ೧೯೨೪ರಲ್ಲಿ ವಿನಿಮಯ ದರವು ೧ ಷಿಲ್ಲಿಂಗ್ ೬ ಪೆನ್ಸಿಗೆ ಸ್ಥಿರಗೊಂಡಾಗ ಅವನ ಹುಟ್ಟುವಳಿಯ ಬೆಲೆಗಳು ಇಳಿದವು. ಆದರೆ ಕೂಲಿ ವೆಚ್ಚ ಕಡಿಮೆಯಾಗದಿದ್ದರೆ ಅವನಿಗೆ ಹಾನಿಯಾಗುವುದಿಲ್ಲವೇ?

– ಅವನ ಲಾಭದಲ್ಲಿ ಕೆಲವು ಭಾಗ ಕಡಿಮೆಯಾಗುವುದು.

೬೧೭೬. ಅವನ ಉಳಿತಾಯ ಕಡಿಮೆಯಾಗುವುದು ಎನ್ನುವಿರಾ?

– ನಾನು 'ಲಾಭ' ಎಂಬ ಶಬ್ದವನ್ನೇ ಹೆಚ್ಚು ಮೆಚ್ಚುತ್ತೇನೆ.

೬೧೭೭. ಅವನಿಗೆ ಲಾಭ ಕಡಿಮೆಯಾಗುವುದು ಎಂದು ಹೇಳುತ್ತೀರಾ?

– ಹೌದು, ಲಾಭದಲ್ಲಿ ಕುಸಿತವಾಗುವುದು.

೬೧೭೮. ಅಷ್ಟರಮಟ್ಟಿಗೆ ಉತ್ಪಾದಕನು ಹಾನಿಗೊಳಗಾಗುವನು, ಅಲ್ಲವೇ?

– ಅವನಿಗೆ ಈ ಲಾಭವನ್ನು ಪಡೆಯಲು ನ್ಯಾಯಸಮ್ಮತ ಹಕ್ಕು ಇದೆ ಎಂದು ನೀವು ತಿಳಿದರೆ, ಹಾನಿಯಾಗುವುದೆಂದು ನೀವು ಹೇಳಿದ್ದು ಸರಿಯಾದೀತು. ಆದರೆ ಭೇದಾತ್ಮಕ (ಹೆಚ್ಚುವರಿ) ಸಂಪಾದನೆಯೇ ಲಾಭ ಎನ್ನುವುದಾದರೆ ನಿಮ್ಮ ಹೇಳಿಕೆ ಸರಿಯಲ್ಲ.

೬೧೭೯. ೧ ಶಿಲಿಂಗ್ ೪ ಪೆನ್ಸ್ ದರದಿಂದ ಹೆಚ್ಚುವರಿ ಸಂಪಾದನೆ ಇತ್ತೇ?

– ಹೌದು.

೬೧೮೦. ಆ ವಿನಿಮಯ ದರವು ೨೫ ಅಥವಾ ೨೩ ವರ್ಷಗಳಷ್ಟು ಕಾಲ ಇದ್ದರೂ?

– ಈಗಾಗಲೇ ನಾನು ಹೇಳಿದಂತೆ ಅದು ನಿಮ್ಮ ವ್ಯಾಖ್ಯೆಯನ್ನು ಅವಲಂಬಿಸಿರುತ್ತದೆ.

೬೧೮೧. ಅದರ (ಲಾಭದ) ವ್ಯಾಖ್ಯೆಯನ್ನು ನೀವು ಹೇಗೆ ಕೊಡುವಿರಿ?

– ಎಲ್ಲಿಯವರೆಗೆ ಉತ್ಪಾದಕನು ಉತ್ಪಾದನೆಯ ವೆಚ್ಚವನ್ನೆಲ್ಲ ಪಡೆಯುವನೋ, ಅಲ್ಲಿಯವರೆಗೆ ಅವನಿಗೆ ಹಾನಿಯಾಗುವುದೆಂದು ನಾನು ಹೇಳಲಾರೆ.

೬೧೮೨. ಈ ಅಳತೆಗೋಲನ್ನು ನೀವು ಎಲ್ಲರಿಗೂ ಹಚ್ಚುವಿರಾ?

– ಅವನ ಆಯ ಮತ್ತು ವ್ಯಯಗಳು ಸಮನಾಗಿದ್ದರೆ ಹಾಗೆ ಮಾಡುತ್ತೇನೆ.

೬೧೮೩. ಸಾಮಾನ್ಯ ನಾಗರಿಕನೂ ಇದೇ ರೀತಿ ಅರ್ಥ ಮಾಡಬಹುದೇ?

– ಇದರ ಮೇಲೆ ನಾನು ಅಭಿಪ್ರಾಯ ಕೊಡಲಾರೆ.

೬೧೮೪. ೮ನೆಯ ಪರಿಚ್ಛೇದದಲ್ಲಿ ನೀವು "ಈಗ ನಾವು ಎರಡು ವಿಷಯಗಳನ್ನು ಲಕ್ಷ್ಯದಲ್ಲಿಡಬೇಕು" ಆನಂತರ ಈಗಿರುವ ಒಡಂಬಡಿಕೆಗಳೂ ವಿವಿಧ ಅವಧಿಗಳಲ್ಲಿ ಮಾಡಿಕೊಂಡವು ಆಗಿರುತ್ತವೆ ಎಂದೂ ಹೇಳಿದ್ದೀರಿ. ಇಲ್ಲಿ ಯಾವ ತರದ ಒಡಂಬಡಿಕೆಗಳನ್ನು ಮನದಲ್ಲಿಟ್ಟುಕೊಂಡಿದ್ದೀರಿ?

– ಗುತ್ತಿಗೆ, ಗೇಣಿ, ಕಟ್ಟಡಗಳನ್ನು ಕಟ್ಟುವ ಕರಾರು ಇತ್ಯಾದಿ.

೬೧೮೫. ವಿನಿಮಯ ವಿಷಯವಿದ್ದಾಗ ಇವೆಲ್ಲ ಹೇಗೆ ಬರುತ್ತವೆ?

– ಇವೆಲ್ಲ ಹಣದೊಂದಿಗೆ ಸಂಬಂಧವಿರುವ ಒಡಂಬಡಿಕೆಗಳು.

೬೧೮೬. ಹಾಗಾದರೆ ನೀವು ಇಂಥ ಎಲ್ಲ ಒಡಂಬಡಿಕೆಗಳನ್ನು ಸೇರಿಸುತ್ತೀರಾ?

– ಹೌದು.

೬೧೮೭. ಗ್ರಾಮಾಂತರ ಪ್ರದೇಶದಲ್ಲಿ ಒಬ್ಬ ಮನುಷ್ಯನು ೪೦೦೦ ರೂಪಾಯಿಗಳಿಗೆ ಮನೆ ಕಟ್ಟಿಕೊಡುತ್ತಿದ್ದರೆ, ಅದು ಸಹ ಈ ವರ್ಗಕ್ಕೆ ಸೇರುವುದೋ?

– ಹೌದು. ಇದು ಸಹ ಹಣ ತೊಡಗಿಸಿದ ಆಸ್ತಿಯೇ.

೬೧೮೮. ಹಣ ತೊಡಗಿಸಿದ ಪ್ರತಿಯೊಂದನ್ನೂ ನೀವು ಈ ವರ್ಗದಲ್ಲಿ ಸೇರಿಸುತ್ತೀರಾ?

– ಹೌದು, ಇಂಥ ಪ್ರತಿ ಕರಾರಿಗೂ ಹಣದ ರೂಪದಲ್ಲಿ ಬೆಲೆ ಇದೆ.

೬೧೮೯. ನಂತರ ನೀವು ಹೀಗೆ ಹೇಳಿದ್ದೀರಿ. "ಮೊದಲಿನ ೧ ಷಿಲಿಂಗ್ ೪ ಪೆನ್ಸ್ ಮತ್ತು ಈಗಿನ ೧ ಷಿಲಿಂಗ್ ೬ ಪೆನ್ಸ್ ಇವುಗಳ ಮಧ್ಯೆ ಸರಾಸರಿ ಸಮಾನ ಬೆಲೆಯನ್ನು ಸ್ವೀಕರಿಸುವುದೇ ಸಮರ್ಪಕವೂ, ನ್ಯಾಯಸಮ್ಮತವೂ ಎನಿಸುತ್ತದೆ". ೧ ಷಿಲಿಂಗ್ ೬ ಪೆನ್ಸ್‌ನ ಬದಲು ಸರಾಸರಿಯನ್ನೇ ಏಕೆ ಹೇಳಿದ್ದೀರಿ?

– ಏಕೆಂದರೆ ೧೯೨೫ರಲ್ಲಿ ಚಾಲ್ತಿಯಲ್ಲಿರುವ ಒಡಂಬಡಿಕೆಗಳಲ್ಲಿ ಕೆಲವು ೧ ಷಿಲಿಂಗ್ ೪ ಪೆನ್ಸ್ ದರವಿದ್ದಾಗ ಮಾಡಿಕೊಂಡವು ಇರಬಹುದು. ಆದ್ದರಿಂದ ಎಲ್ಲರಿಗೂ ನ್ಯಾಯ ದೊರೆಯಬೇಕು ಎಂಬ ದೃಷ್ಟಿಯಿಂದ ಈ ಮಾರ್ಗವು ನನಗೆ ಯೋಗ್ಯವೆನಿಸಿತು.

೬೧೯೦. ೧೯೧೪ರ ಪೂರ್ವದಲ್ಲಿ ಮಾಡಿಕೊಂಡ ಸಾಲಗಳ ಕರಾರುಗಳ ಬಗೆಗೆ ನೀವೇನು ಹೇಳುವಿರಿ?

– ಈಗ ಚಾಲ್ತಿಯಲ್ಲಿರುವ ಕರಾರುಗಳಲ್ಲಿ ಅಂಥ ಕರಾರುಗಳು ಬಹಳ ಕಡಿಮೆ ಎಂದು ನನ್ನ ಅನಿಸಿಕೆ.

೬೧೯೧. ಸಾಗುವಳಿದಾರರು ಸಾಹುಕಾರರಿಗೆ ಕೊಡತಕ್ಕ ಸಾಲಗಳೆಲ್ಲ ನಿರ್ದಿಷ್ಟ ಅವಧಿಯಲ್ಲಿ ತೀರಿಸಲ್ಪಡುತ್ತವೆಯೋ?

– ಸಾಮಾನ್ಯವಾಗಿ ಯಾವ ವಾಣಿಜ್ಯ ಕರಾರುಗಳೂ ೫ ವರ್ಷಕ್ಕಿಂತ ಹೆಚ್ಚು ಅವಧಿಯವಾಗಿ ಇರುವುದಿಲ್ಲ. ಹೆಚ್ಚು ಅವಧಿಯ ಕರಾರುಗಳ ಪ್ರಮಾಣ ತೀರಾ ಕಡಿಮೆ. ಈ ಬಗ್ಗೆ ಅಂಕಿ-ಸಂಖ್ಯೆಗಳು ದೊರೆಯುವುದಿಲ್ಲ. ಪ್ರೊ. ಫಿಷರ್ ತಮ್ಮ ಪುಸ್ತಕದಲ್ಲಿ ಕೆಲವು ಅಂದಾಜುಗಳನ್ನು ಮಾಡಿದ್ದಾರೆ. ಅವರ ಹೇಳಿಕೆಯ ಪ್ರಕಾರ, ಬೆಲೆಗಳಿಗೂ ಬಡ್ಡಿ ದರಗಳಿಗೂ ನಿಕಟ ಸಂಬಂಧವಿರುವ ಕಾರಣ ಬೆಲೆಗಳ ಏರಿಳಿತಗಳೊಂದಿಗೆ ಬಡ್ಡಿ ದರಗಳೂ ಬದಲಾಗುತ್ತವೆ. ಆದ್ದರಿಂದ ವ್ಯಾಪಾರೀ ಕರಾರು (ಒಡಂಬಡಿಕೆ)ಗಳಲ್ಲಿ ಹೆಚ್ಚಿನವು ಇತ್ತೀಚಿನವೇ ಇರುತ್ತವೆ ಎಂದು ಅವರು ತೀರ್ಮಾನಿಸಿದ್ದಾರೆ.

೬೧೯೨. ಭಾರತದ ಬಗೆಗೂ ಇದೇ ತೀರ್ಮಾನವೇ?

– ಇದು ಸಾಮಾನ್ಯ ತೀರ್ಮಾನ. ಭಾರತದ ಬಗೆಗೆ ಹೀಗೆ ತೀರ್ಮಾನಿಸಿದ್ದಾರೇನೋ ನನಗೆ ಗೊತ್ತಿಲ್ಲ. ಆದರೆ ಈ ತೀರ್ಮಾನ ಭಾರತಕ್ಕೆ ಅನ್ವಯಿಸಲಾರದಂತಹ ಯಾವ ವೈಚಿತ್ರ್ಯ ಭಾರತದಲ್ಲಿ ಇದೆಯೋ ನನಗೆ ತಿಳಿಯದು.

೬೧೯೩. ಭಾರತದಲ್ಲಿ ಪರಿಸ್ಥಿತಿ ಬೇರೆ ಇರಬಹುದು ಎಂದು ನಿಮಗೆ ಅನ್ನಿಸುತ್ತದೆಯೇ?

– ಅಲ್ಲಿನ ಪರಿಸ್ಥಿತಿ ಬೇರೆ ಎಂದು ಸಿದ್ಧಮಾಡುವ ಪುರಾವೆಗಳಿಲ್ಲದೇ ನಾನು ಈ ಹೇಳಿಕೆಯನ್ನು ಒಪ್ಪಲಾರೆ.

೬೧೯೪. ಭಾರತದ ಸಮಸ್ಯೆಗಳು ಪಾಶ್ಚಾತ್ಯ ದೇಶಗಳಿಗಿಂತ ಭಿನ್ನವಾಗಿಲ್ಲವೆಂದು ನಿಮಗೆನ್ನಿಸುವುದೋ?

– ಯಾಕೆ ಭಿನ್ನವಾಗಿರಬೇಕೆಂಬುದು ನನಗೆ ಗೊತ್ತಿಲ್ಲ.

೬೧೯೫. ಆ ಸಮಸ್ಯೆಗಳು ಬೇರೆಬೇರೆಯಾಗಿವೆ ಎಂದು ಒಪ್ಪಿಕೊಂಡಿದ್ದರೆ ನಿಮಗೆ ಆಶ್ಚರ್ಯವಾದೀತೇ?

– ನನಗೆ ಆಶ್ಚರ್ಯವಾಗುವುದು.

೬೧೯೬. ಬೆಲೆಗಳ ಮಟ್ಟದ ಹೊಂದಾಣಿಕೆಯ ಬಗೆಗೆ ಮಾತಾಡುವ. ವಿನಿಮಯ ದರವು ೧ ಷಿಲಿಂಗ್ ೪ ಪೆನ್ಸ್‌ನಿಂದ ೧ ಷಿಲಿಂಗ್ ೬ ಪೆನ್ಸ್‌ಗೆ ಬದಲಾದ ಬಳಿಕ ಈ ಅರ್ಥವ್ಯಸ್ಥೆಯಲ್ಲಿ ಪೂರ್ಣ ಹೊಂದಾಣಿಕೆ ಆಗಿದೆಯೇ?

– ಸ್ವಲ್ಪ ಗೊಂದಲವಾಗುತ್ತದೆ. ೧ ಷಿಲಿಂಗ್ ೬ ಪೆನ್ಸ್‌ನಿಂದ ೧ ಷಿಲಿಂಗ್ ೪ ಪೆನ್ಸ್‌ಗೆ ನಾನು ಮರಳಿ ಬಂದರೆ ಶ್ರಮಿಕ ವರ್ಗಕ್ಕೆ ನಷ್ಟವಾಗುತ್ತದೆ.

೬೧೯೭. ೧ ಷಿಲಿಂಗ್ ೪ ಪೆನ್ಸ್‌ನಿಂದ ೧ ಷಿಲಿಂಗ್ ೬ ಪೆನ್ಸ್‌ಗೆ ದರ ಏರಿದರೆ ಅರ್ಥವ್ಯವಸ್ಥೆಯಲ್ಲಿ ಗೊಂದಲವಾಗುತ್ತಿದೆಯೆ?

– ಇದರ ಪರಿಣಾಮವು ಶ್ರಮಿಕ ವರ್ಗಕ್ಕೆ ಅನುಕೂಲವಾಗಿದೆ.

೬೧೯೮. ಈಗ ಅರ್ಥವ್ಯವಸ್ಥೆಯಲ್ಲಿ ಈ ವಿನಿಮಯ ದರದ ಏರಿಕೆಗೆ ಪೂರ್ಣ ಹೊಂದಾಣಿಕೆ ಆಗಿದೆಯೋ?

– ಇದಕ್ಕೆ ಉತ್ತರಿಸಲು ಕ್ರಮಬದ್ಧವಾದ ಅಂಕಿ–ಅಂಶಗಳ ಸಂಶೋಧನೆ ಅಗತ್ಯ. ಇಂತಹ ಸಂಶೋಧನೆಯನ್ನು ನಾನು ಮಾಡಿಲ್ಲವಾದ್ದರಿಂದ ಹೊಂದಾಣಿಕೆ ಪೂರ್ಣವಾಗಿದೆಯೋ ಇಲ್ಲವೋ ಎಂಬುದನ್ನು ಹೇಳಲಾರೆ. ಆದರೆ ಈಗಿನ ೧ ಷಿಲಿಂಗ್ ೬ ಪೆನ್ಸ್ ದರ ದೀರ್ಘಕಾಲ ಸ್ಥಿರವಾಗಿ ನಿಂತಿದೆ.

೬೧೯೯. ಸ್ಥಿರವಾಗಿ ನಿಂತು ಎಷ್ಟು ಸಮಯವಾಯ್ತು?

– ನಿರ್ದಿಷ್ಟವಾಗಿ ಹೇಳಲಾರೆ. ಆದರೆ ಆ ದರ ಸ್ಥಿರವಾಗಿ ನಿಲ್ಲುವ ಚಿಹ್ನೆಗಳನ್ನು ತೋರುತ್ತದೆ.

೬೨೦೦. ಎಷ್ಟು ಅವಧಿಯಿಂದ ಎಂಬುದರ ಬಗೆಗೆ ನಿಮಗೇನಾದರೂ ಕಲ್ಪನೆ ಇದೆಯೇ? ಕೆಲವು ಸಾಕ್ಷಿದಾರರು ೬ ತಿಂಗಳಿಂದ ೮ ತಿಂಗಳಿಂದ ಎಂದಿದ್ದಾರಲ್ಲ?

– ಸುಮಾರು ಅಷ್ಟೇ ಅವಧಿಯಿಂದ.

೬೨೦೧. ಸ್ಥಿರತೆಯ ಬಗ್ಗೆ ತೀರ್ಮಾನಿಸಲು ಆರು ಅಥವಾ ಎಂಟು ತಿಂಗಳ ಸಮಯಾವಕಾಶ ಸಾಕೆಂದು ನಿಮಗನ್ನಿಸುವುದೇ?

– ಇಷ್ಟು ಅವಧಿ ಸ್ಥಿರತೆ ಇದ್ದುದಕ್ಕೆ ತಕ್ಕ ಮಹತ್ವವನ್ನು ನೀಡಬೇಕು. ನಾನು ಸರಾಸರಿಯನ್ನು ಸ್ವೀಕರಿಸಬೇಕೆಂದು ಹೇಳಿದ್ದು ಇದಕ್ಕಾಗಿಯೇ.

೬೨೦೨. ಮೌಖಿಕ ಸಾಕ್ಷಿ ಹೇಳುವಾಗ ನೀವು ೧ ಷಿಲಿಂಗ್ ೬ ಪೆನ್ಸ್ ದರಕ್ಕೆ ಒಪ್ಪಿಗೆ ತೋರಿದಿರಿ, ಅಲ್ಲವೇ?

– ಹೌದು. ದೇಶಕ್ಕೆ ಆ ವಿನಿಮಯ ದರವು ಉತ್ತಮ. ಅದರಿಂದ ಹಣದುಬ್ಬರವಾಗದು. ೧ ಷಿಲಿಂಗ್ ೬ ಪೆನ್ಸ್ ದರ ತಲುಪಿದ ನಂತರ, ಹೊಂದಾಣಿಕೆಯ ಪ್ರಕ್ರಿಯೆ ಅಪೂರ್ಣ ಎಂದೆನಿಸಿದರೂ ಅದೇ ದರವನ್ನು ಸ್ಥಾಪಿಸಬೇಕು.

೬೨೦೩. ಇಲ್ಲಿನ ಉದ್ದಿಮೆಗಳ ಹೊಂದಾಣಿಕೆಗಳ ಬಗೆಗೆ ನಿಮಗೇನಾದರೂ ಕಲ್ಪನೆ ಇದೆಯೇ? ನಿವೇನಾದರೂ ಅಭಿಪ್ರಾಯ ಕೊಡಬಲ್ಲಿರಾ?

– ಈ ಕುರಿತು ಯಾವ ಅಭಿಪ್ರಾಯವನ್ನೂ ವ್ಯಕ್ತಪಡಿಸಲಾರೆ.

೬೨೦೪. (ಶ್ರೀ ಪ್ರೆಸ್ಟನ್) ನೀವು ಸರ್ ಅಲೆಕ್ಸಾಂಡರ್ ಮರೇಯವರಿಗೆ ಸುವರ್ಣಪ್ರಮಿತಿಯ ಕಾಯ್ದಿಟ್ಟ ನಿಧಿಯನ್ನು ಕುರಿತು ನೀಡಿದ ಉತ್ತರಗಳ ಬಗೆಗೆ ತಪ್ಪು ಅಭಿಪ್ರಾಯ ಉಂಟಾಗಬಾರದೆಂಬ ದೃಷ್ಟಿಯಿಂದ ಕೆಲವು ವಾಸ್ತವ ಸಂಗತಿಗಳನ್ನು ಅಭಿಲೇಖದಲ್ಲಿ ಇಡುವುದು ಯೋಗ್ಯವೆನಿಸುತ್ತದೆ. ಸುವರ್ಣ ಪ್ರಮಿತಿಯ ನಿಧಿಯು ೧೯೦೧ರಿಂದ ಅಸ್ತಿತ್ವಕ್ಕೆ ಬಂದಿತು ಮತ್ತು ಅದು ೧೯೦೦ರ ಏಪ್ರಿಲ್ ೧ರಿಂದ ಆರಂಭವಾದ ವರ್ಷದಲ್ಲಿ ಬಂದ ಲಾಭದ ಪರಿಣಾಮವಾಗಿತ್ತು. ಈಗ ಅದರಲ್ಲಿ ಶಿಲ್ಕು ೪ ಕೋಟಿ ಪೌಂಡ್ ಸ್ಟರ್ಲಿಂಗ್ ಇದೆಯಲ್ಲವೇ?

– ಹೌದು. ಸುಮಾರು ಅಷ್ಟು ಇದ್ದೀತೆಂದು ಎನಿಸುತ್ತದೆ.

೬೨೦೪. ಕಳೆದ ವರ್ಷ ವಿತ್ತಮಂತ್ರಿಗಳು ಹಣಕಾಸಿನ ಬಗೆಗೆ ವರದಿ ನೀಡುತ್ತ "ನಾವು ಖರೀದಿಸಿದ ಸಾಲಪತ್ರಗಳೆಲ್ಲ ಬರುವ ಕೆಲವೇ ವರ್ಷಗಳಲ್ಲಿ ಮರುಪಾವತಿ ಆಗಲಿವೆ. ನಿಧಿಯ ಮೊತ್ತದಲ್ಲಿ ೨೭,೪೪೯,೯೫೦ ಪೌಂಡಿನಷ್ಟು ನಾಣ್ಯ ಟಂಕಿಸುವುದರಿಂದಾದ ಲಾಭವನ್ನೂ, ಶೇಷಭಾಗವು ಸಾಲಪತ್ರಗಳ ಮೇಲೆ ದೊರೆತ ಬಡ್ಡಿಯನ್ನೂ ಪ್ರತಿನಿಧಿಸುತ್ತವೆ". ಹೆಚ್ಚು ರೂಪಾಯಿಗಳನ್ನು ಟಂಕಿಸದೇ ನಿಧಿಯ ಹೆಚ್ಚಳವಾಗಲಾರದೆಂದು ನಿಮ್ಮ ಹೇಳಿಕೆ. ಈಗ ೧/೩ ರಷ್ಟು ಹೆಚ್ಚಳ ಹೇಗಾಯ್ತು?

– ಹಣ ತೊಡಗಿಸಿದ ಆಸ್ತಿಗಳ ಮೇಲಿನ ಬಡ್ಡಿಯಿಂದ.

೬೨೦೫. ಹಾಗಾದರೆ, ನಿಧಿಯ ಮೇಲಿನ ಬಡ್ಡಿಯನ್ನು ಸಂಗ್ರಹಿಸುತ್ತ, ನೀವು ಕಟುವಾಗಿ ನಿಂದಿಸಿದ ವಿಧಾನಗಳನ್ನುಪಯೋಗಿಸದೇ, ಪ್ರಯೋಜನಕಾರಿ ಉದ್ದೇಶಗಳಿಗಾಗಿ ನಿಧಿಯನ್ನು ಹೆಚ್ಚಿಸಿದಂತಾಗುವುದಿಲ್ಲವೇ?

– ನಿಸ್ಸಂಶಯವಾಗಿ ಹೌದು.

೯೨೦೬. ಆ ನಿಧಿಯ ಕುರಿತು ಇನ್ನೊಂದು ಪ್ರಶ್ನೆ ೧೯೦೮ ರಲ್ಲಿ ಜಾಗತಿಕ ಅರ್ಥವ್ಯವಸ್ಥೆಯಲ್ಲಿ ಕುಸಿತವಾದಾಗ, ಅಂಥ ನಿಧಿ ಇಲ್ಲದಿದ್ದರೆ ನಮ್ಮ ಹಣದ ವಿನಿಮಯ ದರವನ್ನು ಸ್ಥಿರವಾಗಿಟ್ಟುಕೊಳ್ಳಲು ಸಾಧ್ಯವಾಗುತ್ತಿರಲಿಲ್ಲ ಎಂಬುದನ್ನು ಒಪ್ಪಿಕೊಳ್ಳುತ್ತೀರಾ?

– ಹೌದು.

೬೨೦೭. ಧನ್ಯವಾದಗಳು.

– ಆದರೂ ಇದರಲ್ಲಿ ನಾನು ಆಕ್ಷೇಪಿಸಬೇಕಾದ ಅಂಶ ಸೇರಿದೆ. ಅದೆಂದರೆ "ನಿಧಿಯ ಹಣವನ್ನು ಆಸ್ತಿಗಳಲ್ಲಿ ಹಾಕಿ ನಿಧಿಯನ್ನು ಹೆಚ್ಚಿಸುವುದಕ್ಕೆ ನಾನು ಪರವಾಗಿ ಇದ್ದೇನೆ ಎಂಬುದು. ನಿಧಿಯ ಹಣವನ್ನು ಹೀಗೆ ವಿನಿಯೋಗಿಸಿದ ಮೇಲೆ ನಿಧಿಯು ಇಲ್ಲದಂತೆಯೇ ಆಯ್ತು.

೬೨೦೮. (ಸರ್ ರೆಜಿನಾಲ್ಡ್ ಮ್ಯಾಂಟ್) ನೀವು ಆಂತರಿಕ ಬೆಲೆಗಳ ಸ್ಥಿರತೆಗೆ ಪ್ರಾಮುಖ್ಯ ಕೊಡತಕ್ಕದ್ದಾಗಿ ಹೇಳುತ್ತೀರೆಂದು ತಿಳಿಯೋಣವೇ?

– ಖಂಡಿತವಾಗಿ.

೬೨೦೯. ಆ ಸ್ಥಿರತೆಗೂ ಬಂಗಾರದ ಬೆಲೆಗಳಿಗೂ ನಿಕಟ ಸಂಬಂಧವಿದೆಯಲ್ಲವೇ? ಬಂಗಾರದ ಬೆಲೆಗಳು ಬದಲಾದೊಡನೆ ಆಂತರಿಕ ಬೆಲೆಗಳೂ ಬದಲಾಗುತ್ತವೆಯಲ್ಲವೇ?

– ಹೌದು.

೬೨೧೦. ಆಂತರಿಕ ಬೆಲೆಗಳಿಗೂ ಬಂಗಾರದ ಬೆಲೆಗಳಿಗೂ ನಿಕಟ ಸಂಬಂಧವಿದೆಯಲ್ಲವೇ? ಬಂಗಾರದ ಬೆಲೆ ಬದಲಾದೊಡನೆ ಆಂತರಿಕ ಬೆಲೆಗಳೂ ಬದಲಾಗುತ್ತವೆಯಲ್ಲವೇ?

– ಹೌದು.

೬೨೧೧. ಇದೇ ಉದ್ದೇಶದಿಂದ (ಸ್ಥಿರತೆಗಾಗಿ) ಹಲವು ತಜ್ಞರು ಬಂಗಾರದ ನಾಣ್ಯಗಳ ಚಲಾವಣೆ ಇಲ್ಲದೆ ಸುವರ್ಣ ವಿನಿಮಯ ಪ್ರಮಿತಿಯನ್ನು ಸೂಚಿಸಿದ್ದಾರೆ. ಆದರೆ ಆ ಪ್ರಮಿತಿ ಈ ಉದ್ದೇಶವನ್ನು ಸಾಧಿಸಲಾರದು ಎಂದು ನಿಮ್ಮ ಅಭಿಪ್ರಾಯವೇ?

– ಭಾರತಕ್ಕಾದ ಅನುಭವದಿಂದ ಆ ಪ್ರಮಿತಿಯು ಬೆಲೆಗಳ ಸ್ಥಿರತೆಯ ಉದ್ದೇಶವನ್ನು ಸಾಧಿಸಲಿಲ್ಲವೆಂದು ನನಗೆನಿಸುತ್ತದೆ.

೬೨೧೨. ಆಗಿಹೋದ ಸಂಗತಿಗಳ ಬಗೆಗೆ ನಾನು ಮಾತಾಡುತ್ತಿಲ್ಲ; ಸುವರ್ಣ ವಿನಿಮಯ ಪ್ರಮಿತಿಯನ್ನು ಸ್ವಯಂಚಾಲಿತವಾಗುವಂತೆ ಮಾಡಿದರೆ ಈ ಉದ್ದೇಶ ಸಾಧಿಸಬಹುದೆಂದು ಕೆಲವರು ನಮಗೆ ಮನವಿ ಸಲ್ಲಿಸಿದ್ದಾರೆ. ಆದರೆ ಈ ಅಭಿಪ್ರಾಯಕ್ಕೆ ನಿಮ್ಮ ಸಮ್ಮತಿ ಇಲ್ಲವೆಂದು ನಾನು ತಿಳಿಯುತ್ತೇನೆ?

– ನನಗೆ ಗೊತ್ತಿಲ್ಲ. ಕೆಲವರ ಅಭಿಪ್ರಾಯ ಹಾಗೂ ಇರಬಹುದು, ಆದರೆ ಈ ಅಭಿಪ್ರಾಯವನ್ನು ಅವರು ಹೇಗೆ ರೂಪಿಸಿಕೊಂಡರೋ ನನಗೆ ತಿಳಿಯದು.

೬೨೧೩. ಬಂಗಾರದ ನಾಣ್ಯಗಳ ಚಲಾವಣೆ ಇರುವ ಪ್ರಮಿತಿಯು ಈ ಉದ್ದೇಶವನ್ನು ಸಾಧಿಸಬಲ್ಲದು. ಆದರೆ ಸುವರ್ಣ ವಿನಿಮಯ ಪ್ರಮಿತಿ ಸಾಧಿಸಲಾರದು ಎನ್ನುತ್ತೀರಿ. ಹೇಗೆ ಎಂಬುದನ್ನು ಸ್ಪಷ್ಟೀಕರಿಸುವಿರಾ?

– ಮೊದಲನೆಯದಾಗಿ ವಿನಿಮಯ ಪ್ರಮಿತಿಯಿಂದ ಬಂಗಾರದ ಬೆಲೆ ಇಳಿಯುತ್ತದೆ, ತತ್ಪರಿಣಾಮವಾಗಿ ಬಂಗಾರವು ಮೌಲ್ಯದ ಪ್ರಮಾಣವೆಂದು ಕಾರ್ಯಮಾಡುವುದಿಲ್ಲ. ಬಂಗಾರದ ಬಳಕೆಯಲ್ಲಿ ಮಿತವ್ಯಯ ಸಾಧಿಸುವ ಮೂಲಕ, ಸುವರ್ಣ ವಿನಿಮಯ ಪ್ರಮಿತಿ ಬಂಗಾರದ ಪೂರೈಕೆಯನ್ನು ಅತಿಯಾಗುವಂತೆ ಮಾಡುತ್ತದೆ.

೬೨೧೪. ನೀವು ಹೇಳಿದ್ದನ್ನೇ ಇನ್ನೊಂದು ರೀತಿಯಾಗಿ ಚಿನ್ನದ ನಾಣ್ಯಗಳ ಚಲಾವಣೆಯಿಂದ ಬಂಗಾರದ ಬೆಲೆಯ ಹೆಚ್ಚಳವಾಗುತ್ತದೆ ಎಂದು ಹೇಳಬಹುದಲ್ಲವೇ?

– ಹೌದು, ಹೇಳಬಹುದು. ಆದ್ದರಿಂದ ಈಗಿನ ಪರಿಸ್ಥಿತಿಯಲ್ಲಿ ಬಂಗಾರವೇ ಹೆಚ್ಚು ಉತ್ತಮವಾಗಿ ಮೌಲ್ಯದ ಪ್ರಮಾಣವೆಂದು ಕಾರ್ಯಮಾಡಬಲ್ಲದು ವಿನಿಮಯ ಪ್ರಮಿತಿಯಿಂದ ನಿಜವಾಗಿ ಮಿತವ್ಯಯವನ್ನು ಸಾಧಿಸುತ್ತೇವೆಯೇ ಎಂಬುದು ನನ್ನ ಪ್ರಶ್ನೆ.

೬೨೧೫. ನಾನು ಮಿತವ್ಯಯದ ಪ್ರಶ್ನೆಯನ್ನು ಎತ್ತಿರಲಿಲ್ಲ. ಸುವರ್ಣ ನಾಣ್ಯಗಳ ಚಲಾವಣೆ ಇರುವ ವ್ಯವಸ್ಥೆಯ ಹೊರತು ಬೇರೆ ಯಾವುದೇ ವ್ಯವಸ್ಥೆಯಿಂದ ಆಂತರಿಕ ಬೆಲೆಗಳನ್ನು ಬಂಗಾರದ ಬೆಲೆಯೊಡನೆ ಜೋಡಿಸಲು ಅಸಾಧ್ಯವೆಂಬ ನಿಮ್ಮ ಅಭಿಪ್ರಾಯಕ್ಕೆ ಕಾರಣಗಳನ್ನು ಕೇಳುತ್ತಿದ್ದೆ.

– ಸುವರ್ಣ ವಿನಿಮಯ ಪ್ರಮಿತಿಗಿಂತಲೂ ಚಿನ್ನದ ನಾಣ್ಯ ಚಲಾವಣೆಯ ಪದ್ಧತಿಯು ಆಂತರಿಕ ಬೆಲೆಗಳನ್ನು ಹೆಚ್ಚು ಸ್ಥಿರವಾಗಿಡಬಲ್ಲದೆಂದು ನಾನು ಹೇಳಿದೆ. ಸುವರ್ಣ ಪ್ರಮಿತಿ ಇದ್ದಾಗ ಆಂತರಿಕ ಬೆಲೆಗಳು ಪೂರ್ಣ ಸ್ಥಿರತೆಯನ್ನು ಹೊಂದುತ್ತವೆ ಎಂದು ನಾನೇನೂ ಹೇಳಿಲ್ಲ. ಆದರೆ ಆಂತರಿಕ ಬೆಲೆಗಳು ವಿನಿಮಯ ಪ್ರಮಿತಿ ಇದ್ದಾಗಿನದ್ದಕ್ಕಿಂತ ಹೆಚ್ಚು ಸ್ಥಿರವಾಗಿರಬಲ್ಲವು.

೬೨೧೬. ಹೆಚ್ಚು ಬಂಗಾರವನ್ನು ವಿನಿಯೋಗಿಸುತ್ತೇವೆ ಎಂಬ ಕಾರಣದಿಂದ?
– ಹೌದು.

೬೨೧೭. ನೀವು ಇವೆರಡೂ ಪ್ರಮಿತಿಗಳಲ್ಲಿ ಈ ಕಾರಣವೊಂದರಿಂದಲೇ ವ್ಯತ್ಯಾಸ ಮಾಡುತ್ತೀರಾ?
– ಹೌದು.

೬೨೧೮. (ಸರ್ ಮಾಣಿಕ್‌ಜೀ ದಾದಾಭಾಯಿ) ನೀವು ಸರ್ ಪುರುಷೋತ್ತಮದಾಸ್ ಠಾಕೂರದಾಸ್ ಅವರಿಗೆ ನೀಡಿದ ಉತ್ತರದ ಬಗೆಗೆ ವಿಚಾರಿಸೋಣ. ೮ನೆಯ ಪರಿಚ್ಛೇದದಲ್ಲಿ ನಿಮ್ಮ ಹೇಳಿಕೆ "ಈಗಿರುವ ಒಡಂಬಡಿಕೆಗಳು ಹೆಚ್ಚಾಗಿ ಇತ್ತೀಚಿನವೇ ಇರುತ್ತವೆ" ಎಂದು ಇದೆ. ಹೆಚ್ಚಿನ ಒಡಂಬಡಿಕೆಗಳು ಬಹುಶಃ ಒಂದು ವರ್ಷ ಮೊದಲಿನ ಅವಧಿಯವೇ ಇರುತ್ತವೆ ಎಂದೂ ಹೇಳಿದ್ದೀರಿ. ಹೀಗೆ ಹೇಳಲು ನಿಮಗೆ ನಿರ್ದಿಷ್ಟ ಅಂಕಿ–ಸಂಖ್ಯೆಗಳ ಆಧಾರವಿಲ್ಲ?
– ಹೌದು. ಪ್ರೊ. ಫಿಷರ್ ಅವರು ಈ ಬಗೆಗೆ ಅಂದಾಜು ಮಾಡಿದ್ದಾರೆ ಎಂದು ನಾನು ಹೇಳಿದೆ.

೬೨೧೯. ನೀವು ಹೇಳಿದ್ದು ಒಂದು ತರದ ಸಾಮಾನ್ಯ ಸೂತ್ರದ ನಿರೂಪಣೆ ತಾನೇ?
– ಹೌದು. ನನಗೆ ನಿರ್ದಿಷ್ಟ ಮಾಹಿತಿ ದೊರೆತಿಲ್ಲ.

೬೨೨೦. ಒಟ್ಟು ಜಾರಿಯಲ್ಲಿರುವ ಕರಾರುಗಳ ಕೇಂದ್ರಬಿಂದುವು ವರ್ತಮಾನ ಕಾಲವೇ ಆಗಿದೆ ಎಂಬ ನಿಮ್ಮ ಹೇಳಿಕೆ ಅನಿರ್ದಿಷ್ಟವೆನಿಸುತ್ತದೆ. ಆ ಕೇಂದ್ರ ಬಿಂದು ೧೨ ತಿಂಗಳ ಪರಿಧಿಯಲ್ಲಿ ಬರುವುದೇ?
– ಹೌದು, ಹೆಚ್ಚಿನ ಒಡಂಬಡಿಕೆಗಳು ಒಂದು ವರ್ಷ ಮೊದಲಿನವು ಇರುತ್ತವೆ ಎಂದು ನಾನು ಹೇಳಿದ್ದೇನೆ.

೬೨೨೧. ಹಾಗಾದರೆ ೧೨ ತಿಂಗಳ ಪೂರ್ವದಲ್ಲಿ ಒಂದು ಅನುಪಾತ ಇದ್ದರೆ, ನಿಮ್ಮ ತರ್ಕಸರಣಿಯಂತೆ ಅದನ್ನು ಸ್ವೀಕರಿಸುವುದು ೧ ಷಿಲಿಂಗ್ ೬ ಪೆನ್ಸ್ ದರವನ್ನು ಸ್ವೀಕರಿಸುವಷ್ಟೇ ನ್ಯಾಯಸಮ್ಮತವೆಂದು ನಿಮ್ಮ ಅಭಿಪ್ರಾಯವೋ?
– ಖಂಡಿತವಾಗಿ ಹೌದು.

೬೨೨೨. ಹಾಗಾದರೆ ಅದನ್ನು ಸ್ವೀಕರಿಸುವುದು ಅಷ್ಟೇ ಯೋಗ್ಯವೆನ್ನುತ್ತೀರಾ?
– ಹೌದು.

೬೨೨೩. ಈ ವಿಷಯವನ್ನು ಚರ್ಚಿಸುವಾಗ ನೀವು ೧ ಷಿಲಿಂಗ್ ೬ ಪೆನ್ಸ್ ಅನುಪಾತದ ಪರವಾಗಿ ವಾದಿಸಿದ್ದು ಪ್ರೊ. ಫಿಷರ್ ಅವರ ಸೂತ್ರದ ಆಧಾರದಿಂದ ಎಂದು ತಿಳಿಯೋಣವೇ?
– ಹೌದು.

೬೨೨೪. ಪ್ರೊ. ಫಿಷರ್‌ರ ಸೂತ್ರ ಹೀಗಿದೆ. "ನ್ಯಾಯಸಮ್ಮತವೆನಿಸುವ ಹಣದ ಪ್ರಮಿತಿಯ ಸಮಸ್ಯೆಯು ಗತಕಾಲದ ಪರಿಸ್ಥಿತಿಗಿಂತ ಭವಿಷ್ಯತ್ಕಾಲದ ಕಡೆಗೆ ನೋಡುತ್ತದೆ. ಅದನ್ನು ವರ್ತಮಾನಕಾಲದ ವ್ಯವಹಾರದಿಂದಲೇ ಪ್ರಾರಂಭಿಸಬೇಕು, ಯುದ್ಧಪೂರ್ವದ ಕಾಲ್ಪನಿಕ ಸಮಾನ ಬೆಲೆಗಳಿಂದ ಅಲ್ಲ"
– ಸರಿಯಾಗಿ ಹೇಳಿದಿರಿ.

೬೨೨೫. ಪ್ರೊ. ಫಿಷರ್ ಅವರು ತಮ್ಮ ಸೂತ್ರವನ್ನು ಹೇಳಿದಾಗ ಕೇವಲ ಐರೋಪ್ಯ ದೇಶಗಳನ್ನು ತಮ್ಮ

ದೃಷ್ಟಿಯಲ್ಲಿ ಇಟ್ಟುಕೊಂಡಿದ್ದರೆಂದು ನಿಮಗನಿಸುವುದಿಲ್ಲವೇ?

– ಹೌದು. ಆದರೆ ಈ ಸೂತ್ರ ಸುಮಾರು ಎಲ್ಲ ದೇಶಗಳಿಗೂ ಅನ್ವಯಿಸುತ್ತದೆ. ಅದು ಸಾರ್ವತ್ರಿಕ ಪ್ರಮೇಯವಾಗಿದೆ.

೬೨೨೬. ಅವರ ದೃಷ್ಟಿಕೋನದಲ್ಲಿ ಕೇವಲ ಐರೋಪ್ಯ ದೇಶಗಳು ಇರಲಿಲ್ಲವೇ ಎಂದು ನಾನು ಕೇಳಿದೆ?

– ಅದನ್ನು ನಾನು ಹೇಳಲಾರೆ.

೬೨೨೭. (ಅಧ್ಯಕ್ಷರು) ಹೇಳಿಕೆದಾರರು ಆ ಸೂತ್ರ ಎಂಥ ಸ್ಥಿತಿಯಲ್ಲಿಯೂ ಅನ್ವಯಿಸುವುದೆಂದರಲ್ಲವೇ?

– ಹೌದು. ಅದು ಸಾರ್ವತ್ರಿಕ ಪ್ರಮೇಯವಾಗಿದೆ.

೬೨೨೮. (ಸರ್ ಮಾಣಿಕ್‌ಜೀ ದಾದಾಭಾಯಿ) ಫಿಷರ್ ಅವರ ಶಬ್ದಗಳಿಂದ ಆ ರೀತಿ ತೀರ್ಮಾನಕ್ಕೆ ಬರುವುದು ಸಮರ್ಥನೀಯವೆನಿಸುವುದೋ?

– ಸಮರ್ಥನೀಯವೆಂದು ನನಗನಿಸುವುದು.

೬೨೨೯. ಕಳೆದ ೧೬ ತಿಂಗಳುಗಳಿಂದ ಈ ೧ ಷಿಲಿಂಗ್ ೬ ಪೆನ್ಸ್ ಅನುಪಾತ ಮುಂದುವರೆದಿದೆ ಎಂಬುದನ್ನು ನೀವು ಚೆನ್ನಾಗಿ ಬಲ್ಲಿರಿ. ಭಾರತದ ಸ್ಥಿತಿಯಲ್ಲಿ ಈ ಅವಧಿಯನ್ನು ಅವಲೋಕಿಸುವಾಗ ಕಾಲ್ಪನಿಕ ಯುದ್ಧಪೂರ್ವದ ಸಮಾನ ಬೆಲೆಗಳ ಕುರಿತು ನೀವೇನು ಹೇಳುವಿರಿ? ಭಾರತದಲ್ಲಿ ಈ ೧೬ ತಿಂಗಳ ಅವಧಿಯ ಅನುಭವವು ನಿರ್ಣಯಕ್ಕೆ ಬರುವಲ್ಲಿ ಏನಾದರೂ ಗಣನೀಯ ವ್ಯತ್ಯಾಸವನ್ನು ಮಾಡಬಲ್ಲದೇ? ಅವರು (ಫಿಷರ್ ಅವರು) ಯುದ್ಧಪೂರ್ವದ ಕಾಲ್ಪನಿಕ ಸಮಾನ ಬೆಲೆಗಳನ್ನು ಉಲ್ಲೇಖಿಸುತ್ತಿದ್ದಾರೋ, ಅಥವಾ ಇನ್ನೂ ದೀರ್ಘ ಅವಧಿಯನ್ನೋ?

– ಅಲ್ಲ. ಅವರು ೧೯೧೪ ರಲ್ಲಿ ಇದ್ದ ಸಮಾನ ಬೆಲೆಯನ್ನು ಉಲ್ಲೇಖಿಸುತ್ತಿದ್ದಾರೆ. ನಮ್ಮ ಎದುರು ಇರುವ ಮಾಹಿತಿಯ ಪ್ರಕಾರ ೧ ಷಿಲಿಂಗ್ ೬ ಪೆನ್ಸ್ ದರವು ೧೬ ತಿಂಗಳವರೆಗೆ ತಾಳಿದೆ ಎಂದು ಇದ್ದರೆ, ಅದನ್ನೇ ಕಾಯಂ ಮಾಡಬೇಕೆಂದು ನಾನು ಹೇಳುವುದು.

೬೨೩೦. ಹೌದು. ಆದರೆ, ಇದಕ್ಕೂ ಮೊದಲು, ಸ್ವಲ್ಪ ಮಧ್ಯಂತರ ಅವಧಿಯನ್ನು ಬಿಟ್ಟರೆ ೩೦ ವರ್ಷ ಕಾಲ ೧ ಷಿಲಿಂಗ್ ೪ ಪೆನ್ಸ್ ದೃಢವಾಗಿದ್ದರೂ ಈ ಸಂಗತಿಗಳನ್ನೆಲ್ಲ ಕಡೆಗಣಿಸುವಿರಾ?

– ಹೌದು. ಏಕೆಂದರೆ ೩೦ ವರ್ಷಗಳ ಹಿಂದೆ ಇದ್ದ ಒಡಂಬಡಿಕೆಗಳೂ ಈಗ ಜಾರಿಯಲ್ಲಿ ಇಲ್ಲ.

೬೨೩೧. ಇದೇ ನಿಮ್ಮ ವಾದವೋ? ಈಗಿನ ವಿನಿಮಯ ದರದಿಂದ ಒಕ್ಕಲುತನ ಮತ್ತು ಉದ್ಯೋಗಗಳ ಮೇಲೆ ಆಗುವ ಆರ್ಥಿಕ ಪರಿಣಾಮಗಳನ್ನೂ ಕಡೆಗಣಿಸುವಿರಾ?

– ಅದರಿಂದ ಒಳ್ಳೆಯ ಪರಿಣಾಮಗಳೇ ಆಗುವುವೆಂದು ನನ್ನ ಹೇಳಿಕೆ. ಸಮಾನ ಬೆಲೆಯನ್ನು ೧ ಷಿಲ್ಲಿಂಗ್ ೬ ಪೆನ್ಸ್‌ಗೆ ತರುವುದರಿಂದ ಲಾಭದಲ್ಲಿ ಸ್ವಲ್ಪ ಕುಸಿತವಾಗಬಹುದು, ಆದರೆ ಉದ್ಯೋಗಗಳಲ್ಲಿ ಕುಸಿತವಾಗುವುದಿಲ್ಲ.

೬೨೩೨. ಸರಿ, ನೀವು ಈ ಅಂಶಗಳಿಗೆ ಹೆಚ್ಚಿನ ಮಹತ್ವ ಕೊಡುವುದಿಲ್ಲ. ಒಟ್ಟಾರೆ ಅದರಿಂದ (೧ ಷಿಲಿಂಗ್ ೬ ಪೆನ್ಸ್ ದರದಿಂದ) ದೇಶಕ್ಕೆ ಹಿತವಾಗುವುದೆಂದು ನಿಮಗನಿಸುತ್ತದೆಯೋ?

– ಹೌದು.

೬೨೩೩. ಸ್ವಲ್ಪ ಕಾಲ್ಪನಿಕವಾದ ಇನ್ನೊಂದು ಪ್ರಶ್ನೆಯನ್ನು ಕೇಳುತ್ತೇನೆ. ನಾವು ನಮ್ಮ ವರದಿಯನ್ನು ಬರೆಯಲು ಇನ್ನೂ ೬ ತಿಂಗಳು ತೆಗೆದುಕೊಳ್ಳುತ್ತೇವೆ. ಮುಂದಿನ ೬ ತಿಂಗಳ ಅವಧಿಯಲ್ಲಿ ಅನುಪಾತವು ೧

ಷಿಲಿಂಗ್ ೮ ಪೆನ್ಸ್ ಆದರೆ ನೀವು ಅದೇ ಅನುಪಾತವನ್ನು ಮೂಲಾಧಾರವಾಗಿ ತೆಗೆದುಕೊಳ್ಳುವುದು ಸಮರ್ಥನೀಯವಾದೀತೆ?

– ಹಾಗಾದರೆ ನಾನು ಸರಾಸರಿಯನ್ನು ತೆಗೆದುಕೊಳ್ಳಬೇಕೆಂದು ಹೇಳುವೆನು.

೬೨೫೪. ೧ ಷಿಲಿಂಗ್ ೮ ಪೆನ್ಸ್ ಮತ್ತು ೧ ಷಿಲಿಂಗ್ ೬ ಪೆನ್ಸ್ ಮಧ್ಯದ ಸರಾಸರಿಯನ್ನೋ, ಅಥವಾ ೧ ಷಿಲಿಂಗ್ ೮ ಪೆನ್ಸ್ ಮತ್ತು ೧ ಷಿಲಿಂಗ್ ೪ ಪೆನ್ಸ್‌ನ ಮಧ್ಯದ ಸರಾಸರಿಯನ್ನೋ ?

– ೧ ಷಿಲಿಂಗ್ ೮ ಪೆನ್ಸ್ ಮತ್ತು ೧ ಷಿಲಿಂಗ್ ೬ ಪೆನ್ಸ್‌ನ ಮಧ್ಯದ ಸರಾಸರಿಯನ್ನು.

೬೨೫೫. ಇದು ತರ್ಕಬದ್ಧ ಹಣಕಾಸಿನ ಧೋರಣೆಯಾಗುವುದೆಂದು ನೀವು ಭಾವಿಸುವಿರಾ?

– ಇದನ್ನು –ಹೇಳಲಾರೆ. ನೀವು ಒಂದು ತರಹದ ಸರಾಸರಿಯನ್ನು ನಿರ್ಧರಿಸಬೇಕಾಗುವುದು. ಅದರಿಂದ ಎಲ್ಲ ವ್ಯಕ್ತಿಗಳಿಗೂ ನ್ಯಾಯ ದೊರೆಯುವುದಿಲ್ಲ. ಪ್ರತಿ ಕರಾರಿನಲ್ಲಿಯೂ ನ್ಯಾಯ ಒದಗಿಸಲು ಅಸಾಧ್ಯ. ಉದಾಹರಣಾರ್ಥವಾಗಿ, ಅಮೆರಿಕೆಯ ಸ್ವಾತಂತ್ರ್ಯ ಸಂಗ್ರಾಮದ ಸಮಯದಲ್ಲಾದ ಹಣದ ಏರುಪೇರುಗಳನ್ನು ಅವಲೋಕಿಸಿದಾಗ ಇಷ್ಟನ್ನೇ ಮಾಡಲು ಶಕ್ಯವಿತ್ತು. ಅರ್ಥಾತ್ ಸರಾಸರಿಯ ಆಧಾರದ ಮೇಲೆಯೇ ಪ್ರತಿಯೊಬ್ಬ ವ್ಯಕ್ತಿಯ ಕರಾರನ್ನು ಕೊನೆಗಾಣಿಸಿಬಿಡುವುದು. ಅವರು ಪ್ರತಿಯೊಂದು ವೈಯಕ್ತಿಕ ಕರಾರಿಗೆ ನ್ಯಾಯ ನೀಡುವುದು ಅಸಾಧ್ಯವೇ ಆಗಿತ್ತು.

೬೨೫೬. (ಸರ್ ಹೆನ್ರಿ ಸ್ಟ್ರಾಕೋಶ್) ಡಾ. ಅಂಬೇಡ್ಕರ್, ನೀವು ಸುವರ್ಣ ವಿನಿಮಯ ಪ್ರಮಿತಿಯ ಅನಪೇಕ್ಷಣೀಯತೆಯ ಬಗೆಗೆ ಮಾಡಿದ ಕೆಲವು ಹೇಳಿಕೆಗಳನ್ನು ಉಲ್ಲೇಖಿಸಬಯಸುತ್ತೇನೆ. ಸಾಕ್ಷ್ಯ ನುಡಿಯುತ್ತ ನೀವು ಒಂದು ಸಲ, ಹಣವನ್ನು ವಿದೇಶೀ ವಿನಿಮಯಕ್ಕೆ ಪರಿವರ್ತನೀಯವಾಗಿ ಇಡುವುದರಿಂದ ಹೆಚ್ಚು ಹಣವನ್ನು ಹೊರಡಿಸುವುದರ ಮೇಲೆ ಮಿತಿ ಇಡಲು ಸಾಧ್ಯವಿಲ್ಲ. ಆದ್ದರಿಂದ ಆ ಪ್ರಮಿತಿಯಿಂದ ಆಂತರಿಕ ಬೆಲೆಗಳ ಸ್ಥಿರತೆಯನ್ನು ಕಾಯ್ದುಕೊಳ್ಳಲು ಅಸಾಧ್ಯ ಎಂದು ಹೇಳಿದಿರಿ. ನಿಮ್ಮ ಆಕ್ಷೇಪಣೆಗಳಲ್ಲಿ ಅದೂ ಒಂದು; ನಂತರ ಸುವರ್ಣ ವಿನಿಮಯ ಪ್ರಮಿತಿ ಇರುವಾಗ ಬೆಲೆಗಳೂ ಪರಿಪೂರ್ಣ ಸುವರ್ಣ ಪ್ರಮಿತಿ ಇರುವಾಗಿದ್ದಕ್ಕಿಂತ ಹೆಚ್ಚು ಅಸ್ಥಿರವಾಗುತ್ತವೆ ಎಂದೂ ಹೇಳಿದಿರಲ್ಲವೇ?

– ಹೌದು.

೬೨೫೭. ನೀವು ಆರ್ಥಿಕ ವಿಷಯಗಳ ಅಭ್ಯಾಸಿಯಾಗಿದ್ದೀರಿ. ಅದಲ್ಲದೇ ಜಿನೀವಾ ಸಮ್ಮೇಳನದ ಕಾರ್ಯಕಲಾಪಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದೀರಿ.

– ಹೌದು. ನಾನು ಲಂಡನ್‌ನಲ್ಲಿದ್ದಾಗ ಅವುಗಳನ್ನು ಅವಲೋಕಿಸಿದ್ದೆ. ಇತ್ತೀಚೆಗೆ ಮಾತ್ರ ಅವನ್ನು ಅವಲೋಕಿಸಿಲ್ಲ. ಆದರೆ ಸುವರ್ಣ ವಿನಿಮಯ ಪ್ರಮಿತಿಯನ್ನು ಸೂಚಿಸಲಾಯ್ತು ಎಂಬುದನ್ನು ಬಲ್ಲೆ.

೬೨೫೮. ಅಂತರರಾಷ್ಟ್ರೀಯ ಸ್ವರೂಪದ್ದಾಗಿರುವ ಜಿನೀವಾ ಸಮ್ಮೇಳನವು ಸುವರ್ಣ ವಿನಿಮಯ ಪ್ರಮಿತಿಯು ಬಂಗಾರದ ಬೆಲೆಯನ್ನು ಸ್ಥಿರವಾಗಿಡುವುದೆಂಬ ಕಾರಣದಿಂದ ಅದನ್ನೇ ಸ್ವೀಕರಿಸಬೇಕೆಂದೂ, ಈ ಉದ್ದೇಶಕ್ಕಾಗಿ ಎಲ್ಲ ಕೇಂದ್ರ ಬ್ಯಾಂಕುಗಳು ಸಹಕರಿಸಬೇಕೆಂದೂ ಸರ್ವಾನುಮತದಿಂದ ಸೂಚಿಸಿತ್ತು, ಅಲ್ಲವೇ?

– ಬಂಗಾರದ ಮೌಲ್ಯವನ್ನು ಸ್ಥಿರವಾಗಿಡಬೇಕೆಂಬ ಉದ್ದೇಶದಿಂದ ಅವರು ಈ ಸೂಚನೆಯನ್ನು

ಮಾಡಿದರೆಂದು ನನಗನಿಸುವುದಿಲ್ಲ; ತಮ್ಮ ಹಣವನ್ನು ಸ್ಥಿರವಾಗಿ ಇಡುವ ಉದ್ದೇಶದಿಂದ ಅವರು ಹೀಗೆ ಶಿಫಾರಸು ಮಾಡಿರುವರು.

೬೨೩೯. ಬಂಗಾರದ ಮೌಲ್ಯವನ್ನು ಸ್ಥಿರವಾಗಿಡಲೆಂದು ಈ ಸೂಚನೆಯನ್ನು ಮಾಡಲಾಗಿದೆ ಎಂದು ಅವರು ಸ್ಪಷ್ಟವಾಗಿ ಹೇಳಿದ್ದಾರೆ. ಈ ವಿಷಯದಲ್ಲಿ ನೀವು ನನ್ನನ್ನು ನಂಬಿ. ಈಗ ಅಂತರರಾಷ್ಟ್ರೀಯ ಸಂಘಟನೆ ಎಂದೆನಿಸಿರುವ ಅದು ಈ ನಿರ್ಣಯವನ್ನು ಸ್ವೀಕರಿಸಿದೆ ಮತ್ತು ಅದು ಸುವರ್ಣ ಪ್ರಮಿತಿಯಷ್ಟು ಆಂತರಿಕ ಸ್ಥಿರತೆಯನ್ನು ಸುವರ್ಣ ವಿನಿಮಯ ಪ್ರಮಿತಿಯು ಒದಗಿಸಲಾರದೆಂಬ ನಿಮ್ಮ ಅಭಿಪ್ರಾಯವನ್ನು ಒಪ್ಪುವುದಿಲ್ಲವಲ್ಲ?

– ಇಲ್ಲ. ಇಲ್ಲಿ ನಾವು ಸುವರ್ಣ ವಿನಿಮಯ ಪ್ರಮಿತಿಯನ್ನು ಅಪರಿವರ್ತನೀಯ ಪ್ರಮಿತಿಯೊಂದಿಗೆ ಹೋಲಿಸುತ್ತಿದ್ದೇವೆ ಎಂದು ನನ್ನ ನಿವೇದನೆ. ಯುದ್ಧದಲ್ಲಿ ಭಾಗವಹಿಸಿದ ದೇಶಗಳು ಯುದ್ಧಕಾಲದಲ್ಲಿ ಪೂರ್ಣವಾಗಿ ಅಪರಿವರ್ತನೀಯವಾದ ಪ್ರಮಿತಿಯನ್ನೇ ಅಂಗೀಕರಿಸಿದ್ದವು. ಇಂತಹ ಅಪರಿವರ್ತನೀಯ ಪ್ರಮಿತಿಯು ಪರಿವರ್ತನೀಯತೆಯನ್ನು ಒದಗಿಸುವ ವಿನಿಮಯ ಪ್ರಮಿತಿಗಿಂತ ಅತಿ ಕೆಟ್ಟದು. ಅವರು ಸುವರ್ಣ ವಿನಿಮಯ ಪ್ರಮಿತಿಯನ್ನು ಸುವರ್ಣ ಪ್ರಮಿತಿಯೊಂದಿಗೆ ಹೋಲಿಸುತ್ತಿರಲಿಲ್ಲ. ತಮ್ಮಲ್ಲಿರುವ ಅಪರಿವರ್ತನೀಯ ಕಾಗದದ ಹಣ ವ್ಯವಸ್ಥೆಯೊಂದಿಗೆ ಹೋಲಿಸುತ್ತಿದ್ದರು.

೬೨೪೦. ಆದರೆ ಅವರು ಹೋಲಿಸಲೇ ಇಲ್ಲ ಎಂದು ನಾನು ಅರಿಕೆ ಮಾಡುತ್ತೇನೆ. ಅವರು ಶಿಫಾರಸನ್ನು ಮಾತ್ರ ಮಾಡಿದ್ದರು?

– ಆಗ ಇದ್ದ ಪರಿಸ್ಥಿತಿಯಲ್ಲಿ ನಾನು ಹಾಗೆಯೇ ಅರ್ಥ ಮಾಡಬೇಕಾಗುವುದು.

೬೨೪೧. ನಿಜವಾಗಿ ಇದ್ದ ಸಂಗತಿಯನ್ನು ಹೇಳಿದ್ದೇನೆ. ಅದನ್ನು ಬಿಡಿ. ಈಗ ಬಂಗಾರದ ಮೌಲ್ಯವನ್ನು ಹೊರತುಪಡಿಸಿದರೆ, ಸುವರ್ಣ ವಿನಿಮಯ ಪ್ರಮಿತಿಯು ಸುವರ್ಣ ಪ್ರಮಿತಿಯಷ್ಟು ಸ್ಥಿರತೆಯನ್ನು ಏಕೆ ಒದಗಿಸಲಾರದೆಂದು ನನಗೆ ಖಾತರಿಯಾಗಿಲ್ಲ. ಅದು ನನಗೆ ಸ್ಪಷ್ಟವಾಗಲೊಲ್ಲದು; ನೀವು ಉತ್ತರಿಸುವ ಮೊದಲು ಸುವರ್ಣ ವಿನಿಮಯ ಪ್ರಮಿತಿಯ ವ್ಯಾಖ್ಯೆಯನ್ನು ನನಗೆ ತಿಳಿದಂತೆ ನೀಡಬಯಸುತ್ತೇನೆ. ಸುವರ್ಣ ವಿನಿಮಯ ಪ್ರಮಿತಿ ಎಂದರೆ ಯಾವ ಪ್ರಮಿತಿಯಲ್ಲಿ ಚಲಾವಣೆಯಲ್ಲಿರುವ ಹಣವನ್ನು ಆಂತರಿಕ ವ್ಯವಹಾರಕ್ಕಾಗಿ ಪರಿವರ್ತಿಸಲು ಬರುವುದಿಲ್ಲ, ಆದರೆ ವಿದೇಶಗಳೊಡನೆ ವ್ಯವಹಾರಕ್ಕಾಗಿ ವಿದೇಶೀ ಹಣವನ್ನಾಗಿ ಪರಿವರ್ತಿಸಲಾಗುವುದು; ಹಾಗೂ ಆ ವಿದೇಶೀ ಹಣವನ್ನು ನೀವು ಬಂಗಾರದ ರೂಪದಲ್ಲಿ ಪರಿವರ್ತಿಸಬಲ್ಲಿರಿ ಇಂತಹ ಪ್ರಮಿತಿಯು ಸುವರ್ಣ ಪ್ರಮಿತಿಯಷ್ಟು ಸ್ಥಿರತೆಯನ್ನು ಕಾಯ್ದುಕೊಳ್ಳಲು ಏಕೆ ಸಾಧ್ಯವಿಲ್ಲ ಎಂಬುದನ್ನು ಹೇಳುವಿರಾ?

– ನಿಮ್ಮ ಪ್ರಶ್ನೆ ನನಗೆ ತಿಳಿಯಿತು. ನನ್ನ ಉತ್ತರ ಹೀಗಿದೆ. ಪರಿವರ್ತನೀಯತೆಯು ಹಣದ ಮೊತ್ತವನ್ನು ದೇಶದ ಆವಶ್ಯಕತೆಗಳಿಗೆ ಬೇಕಾಗುವಷ್ಟಕ್ಕೆ ಮಿತಗೊಳಿಸುವ ಸಾಧನವಾಗಿದೆ. ಯಾವ ಪರಿವರ್ತನೀಯತೆ ವಿದೇಶೀ ವ್ಯವಹಾರಗಳಿಗೆ ಸೀಮಿತವಾಗಿದೆಯೋ, ಅಂತಹ ಪರಿವರ್ತನೀಯತೆಯು ಹಣದ ಮೊತ್ತವನ್ನು ಮಿತಿಯಲ್ಲಿಡಲು ಸಾಕಷ್ಟು ಪರಿಣಾಮಕಾರಿಯಾಗಲಾರದು. ಆದ್ದರಿಂದ ಇಂತಹ ಹಣ–ವ್ಯವಸ್ಥೆ ಇರುವಾಗ ಆಂತರಿಕ ಬೆಲೆಗಳ ಸ್ಥಿರತೆ ಉಳಿಯಲಾರದು.

೭೫೨. ಆಂತರಿಕ ಪರಿವರ್ತನೀಯತೆಗಿಂತ ಅದು ಕಡಿಮೆ ಪರಿಣಾಮಕಾರಿಯಾಗುವುದೆಂದು ಏಕೆ ಹೇಳುವಿರಿ?

– ಏಕೆಂದರೆ ಪ್ರಬಲವಾಗಿ ಪರಿಣಾಮಕಾರಿಯಾಗಬೇಕಾದರೆ ಪರಿವರ್ತನೀಯತೆ ನಿರ್ಬಂಧರಹಿತವಾಗಿರಬೇಕು.

೭೫೩. ಆದರೆ ಅದು ನಿರ್ಬಂಧರಹಿತವಾಗಿಯೇ ಇದೆಯಲ್ಲ?

– ಹಾಗೆ ಇರುವುದಿಲ್ಲ.

೭೫೪. ಆದರೆ ಅದು ಸ್ಪಷ್ಟವಾಗಿ ಅನಿರ್ಬಂಧಿತ ಇದೆ. ಒಂದು ಪ್ರಮಿತಿಯಲ್ಲಿ ಅಂತರರಾಷ್ಟ್ರೀಯ ಹಣವನ್ನು ಅಂತರರಾಷ್ಟ್ರೀಯ ಉದ್ದೇಶಗಳಿಗಾಗಿ ಪರಿವರ್ತಿಸುತ್ತೀರಿ, ಇನ್ನೊಂದರಲ್ಲಿ ದೇಶದಲ್ಲಾಗಲೀ ವಿದೇಶದಲ್ಲಾಗಲೀ ಚಲಾವಣೆಯಾಗಬಲ್ಲ ಅಂತರರಾಷ್ಟ್ರೀಯ ಹಣದ ರೂಪದಲ್ಲಿ ಪರಿವರ್ತಿಸುತ್ತೀರಿ. ಇಷ್ಟೇ ವ್ಯತ್ಯಾಸ ತಾನೇ?

– ಖಂಡಿತವಾಗಿಯೂ ಅಲ್ಲ, ನಿಮ್ಮ ಹೊಣೆಯು ಪರಿವರ್ತನೆಯ ವಿನಿಮಯ ಪ್ರಮಿತಿಗೆ ಮಾತ್ರ ಸೀಮಿತವಾಗಿದ್ದರೆ, ಆತಂಕವಿಲ್ಲದೇ ಹೆಚ್ಚು ಹಣವನ್ನು ಚಲಾವಣೆಗೆ ತರುವ ಅವಕಾಶ ನಿಮಗಿರುತ್ತದೆ.

೭೫೫. ಆದರೆ ಇದೀಗ, ಪರಿವರ್ತಿಸುವ ಹೊಣೆಯು ಎರಡೂ ಪ್ರಮಿತಿಗಳಲ್ಲಿ ಹಣ ಹೊರಡಿಸುವುದನ್ನು ನಿಯಂತ್ರಿಸುತ್ತದೆ ಎಂದು ನೀವು ಹೇಳಿದಿರಲ್ಲ?

– ಹೌದು, ಆದರೆ ಪರಿವರ್ತಿಸುವುದು ಸಾಧನಗಳ ಕ್ರಿಯಾಶಕ್ತಿಯ ಮೇಲೆ ಅವಲಂಬಿಸಿರುತ್ತದೆ. ಪರಿವರ್ತನೀಯತೆ ಅನಿರ್ಬಂಧವಾಗಿದ್ದರೆ, ಅಥವಾ ಹಣ ಹೊರಡಿಸುವವನು ಹಣವನ್ನು ಧಾರಕನಿಗೆ ಬೇಕಾದಾಗ ಪರಿವರ್ತಿಸಲೇಬೇಕಾದ ಹೊಣೆಯನ್ನು ಹೊತ್ತರೆ ಮಾತ್ರ, ಪರಿವರ್ತನೀಯತೆ ಅನಿರ್ಬಂಧಿತವೆನಿಸುತ್ತದೆ.

೭೫೬. ಆದರೆ ಸುವರ್ಣ ವಿನಿಮಯ ಪ್ರಮಿತಿಯು ಹಣ ಹೊರಡಿಸುವ ಅಧಿಕಾರಿಗಳ ಮೇಲೆ ಆಂತರಿಕ ಸಾಂಕೇತಿಕ ಹಣವನ್ನು ಅಂತರರಾಷ್ಟ್ರೀಯ ಉದ್ದೇಶಗಳಿಗಾಗಿ ಪರಿವರ್ತಿಸುವ ಹೊಣೆಯನ್ನು ಹೊರಿಸುತ್ತದೆ ಎಂದು ನನ್ನ ಅಭಿಸೂಚನೆ ಇದೆಯಲ್ಲ?

– ಎಲ್ಲ ಉದ್ದೇಶಗಳಿಗೂ ಪರಿವರ್ತಿಸುವುದಿಲ್ಲ.

೭೫೭. ಈಗ ಸಾಂಕೇತಿಕ ಹಣವನ್ನು ಆಂತರಿಕ ಉದ್ದೇಶಗಳಿಗಾಗಿ ಪರಿವರ್ತಿಸುವ ಹೊಣೆಯು ಆ ಹಣದ ಆಂತರಿಕ ಮೌಲ್ಯದ ಸ್ಥಿರತೆಯನ್ನು ಹೇಗೆ ಹೆಚ್ಚಿಸುತ್ತದೆ ಎಂಬುದನ್ನು ತಿಳಿಯಬಯಸುವೆ?

– ಏಕೆಂದರೆ ಹಣವೂ ಸೇರಿದಂತೆ ಯಾವುದೇ ವಸ್ತುವು ಪೂರೈಕೆಯು ಮಿತಿಯಿಂದಲೇ ತನ್ನ ಮೌಲ್ಯವನ್ನು ಕಾಯ್ದುಕೊಳ್ಳುತ್ತದೆ ಎಂಬುದೇ ಅರ್ಥಶಾಸ್ತ್ರದ ಪ್ರಾಥಮಿಕ ತತ್ವ. ವಸ್ತುವಿನ ಪೂರೈಕೆಯು ಮಿತವಾಗಿರದಿದ್ದರೆ, ಅದರ ಮೌಲ್ಯ ಕುಸಿಯುವುದು ಖಂಡಿತ.

೭೫೮. ಹಾಗಾದರೆ ನೀವು ಚಿನ್ನದ ನಾಣ್ಯ-ಚಲಾವಣೆ ಇರುವ ಸುವರ್ಣ ಪ್ರಮಿತಿಯಲ್ಲಿ ಚಿನ್ನದ ನಾಣ್ಯಗಳ ಹೊರತು ಬೇರೆ ಹಣವಿರಬಾರದೆಂದು ಹೇಳುವಿರಾ?

– ಇಲ್ಲ. ರೂಪಾಯಿಯೂ ಚಲಾವಣೆಯಲ್ಲಿರಬೇಕೆಂದು ನಾನು ಹೇಳುವೆ.

೭೫೯. ಬ್ಯಾಂಕ್ ನೋಟುಗಳಲ್ಲ?

– ಹೌದು, ಬ್ಯಾಂಕ್ ನೋಟುಗಳೂ ಇರಬೇಕು. ಏಕೆ ಇರಬಾರದು?

೬೨೫೦. ಹಾಗಾದರೆ ಆಂತರಿಕ ಹಣದ ಚಲಾವಣೆಯನ್ನು ಇಂಥ ಪ್ರಮಿತಿಯಲ್ಲಿ ಬೇರೊಂದರಲ್ಲಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಹೇಗೆ ಮಿತಗೊಳಿಸುವಿರಿ ಎಂಬುದು ನನಗೆ ಅರ್ಥವಾಗಲಿಲ್ಲ.

– ಏಕೆಂದರೆ ರೂಪಾಯಿಯ ಟಂಕಸಾಲೆಯನ್ನು ಮುಚ್ಚಬೇಕೆಂದು ಹೇಳುತ್ತೇನೆ.

೬೨೫೧ ನೋಟುಗಳನ್ನು ಹೊರಡಿಸುವ ಬಗೆಗೆ?

– ಅವುಗಳಿಗೆ ಆಧಾರವಿರುತ್ತದೆ. ಆಧಾರವುಳ್ಳ ನೋಟಿನಿಂದ ಚಲಾವಣೆಯಲ್ಲಿರುವ ಹಣದ ಹೆಚ್ಚಳವಾಗುವುದಿಲ್ಲ. ನೀವು ನಿರ್ದಿಷ್ಟ ಬಂಗಾರದ ಮೊತ್ತವನ್ನು ಇಟ್ಟುಕೊಂಡು ಅಷ್ಟು ಹಣವನ್ನು ಹೊರಡಿಸಿದರೆ ಆ ಹಣವು ಹಣದ ಹೆಚ್ಚಳವೆನಿಸಲಾರದು.

೬೨೫೨. ನೋಟುಗಳಿಗೆ ನೂರಕ್ಕೆ ನೂರರಷ್ಟು ಬಂಗಾರದ ಆಧಾರವಿರಬೇಕು ಎನ್ನುತ್ತೀರಾ?

– ಹಾಗೆ ನಾನೆನ್ನುವುದಿಲ್ಲ.

೬೨೫೩. ಹಾಗಿದ್ದರೆ ಹಣವನ್ನು ಹೇಗೆ ಮಿತಿಯಲ್ಲಿಡುವಿರಿ?

– ಪರಿವರ್ತನೀಯತೆಯು ಹಣವನ್ನು ಮಿತಿಯಲ್ಲಿಡುವ ಸಾಧನವೆಂದು ನನ್ನ ಹೇಳಿಕೆಯ ಅರ್ಥ. ನಾನು ರೂಪಾಯಿಯ ಮೊತ್ತವನ್ನು ಪೂರ್ತಿ ಸ್ಥಿರವಾಗಿಡುತ್ತೇನೆ ಮತ್ತು ಕಾಗದದ ಹಣವನ್ನು ಯಾವುದೇ ನಿರ್ಬಂಧವಿಲ್ಲದೇ ಪರಿವರ್ತಿಸುವೆನು. ಇದರಿಂದ ರೂಪಾಯಿಯ ಮೌಲ್ಯವೂ ಸ್ಥಿರವಾಗಿ ಉಳಿಯುತ್ತದೆ ಮತ್ತು ಪರಿವರ್ತನೀಯತೆಯ ಕಾರಣದಿಂದ ಕಾಗದದ ಹಣದ ಮೌಲ್ಯವೂ ಸ್ಥಿರವಾಗಿರುವುದು.

೬೨೫೪. ಋತುಮಾನಕ್ಕೆ ತಕ್ಕಂತೆ ಹಣದ ಬೇಡಿಕೆಯನ್ನು ಹೇಗೆ ನಿರ್ವಹಿಸುವಿರಿ?

– ಋತುಮಾನದ ಅಧಿಕ ಬೇಡಿಕೆಯನ್ನು ಹಣದ ವಿಶ್ವಾಸಾವಲಂಬೀ ಭಾಗವನ್ನು ಹೆಚ್ಚಿಸುವ ಮೂಲಕ ಸಾಲಪತ್ರಗಳ ಆಧಾರದ ಮೇಲೆ ಅಧಿಕ ಹಣವನ್ನು ಹೊರತರಬಹುದು.

೬೨೫೫. ಇದರಿಂದ ಈ ಹಣದ ಹೆಚ್ಚಳವನ್ನು ಹಣ ಹೊರತರುವವನ ವಿವೇಚನೆ ಮತ್ತು ಇಚ್ಛೆಗೆ ಬಿಟ್ಟಂತೆ ಆಗುವುದಿಲ್ಲವೇ?

– ಹೌದು, ಆದರೆ ಅವನ ವಿವೇಚನೆ ಮತ್ತು ಇಚ್ಛೆಯ ಮೇಲೆ ಪರಿವರ್ತನೆಯ ರೂಪದ ಕಡಿವಾಣವಿದೆ. ಪರಿವರ್ತನೀಯತೆಯು ಹಣ ಹೊರತರುವವನ ವಿವೇಚನೆಯನ್ನು ಯಾವ ಅಪಾಯವಿಲ್ಲದೆ ನಿಯಂತ್ರಿಸುತ್ತದೆ. ಆದರೂ ಸುವರ್ಣ ಪ್ರಮಿತಿಯಲ್ಲಿ ಸಹ ಬಂಗಾರವು ಚಲಾವಣೆಯಿಂದ ಪೂರ್ತಿ ಹೊರಟು ಹೋಗಿ, ದೇಶದ ತುಂಬ ಬರೀ ಕಾಗದದ ನೋಟುಗಳೇ ಉಳಿಯಬಹುದೆಂದು ನಾನು ಒಪ್ಪಿಕೊಳ್ಳುತ್ತೇನೆ.

೬೨೫೬. ಎರಡು ನಿರ್ದಿಷ್ಟ ಚಿನ್ನ ಬಿಂದುಗಳಂತೆ (Gold Points) ಅಂತರರಾಷ್ಟ್ರೀಯ ಹಣದ ರೂಪದಲ್ಲಿ ಪರಿವರ್ತಿಸುವ ಹೊಣೆಯನ್ನು ಹೇರಿದರೆ ಹಣದ ಸ್ಥಿರತೆಯನ್ನು ಕಾಪಾಡಲು ಸಾಕು ಎನ್ನುತ್ತೀರಾ ನೀವು ಆಂತರಿಕ ಚಲಾವಣೆಯಲ್ಲಿದ್ದ ಹಣವನ್ನು ಅತಿ ಹೆಚ್ಚಿಸಿದರೆ, ಬಂಗಾರದ ಮೌಲ್ಯಕ್ಕೆ. ಅನ್ವಯಿಸುವಂತೆ ನಿಮ್ಮ ಹಣದ ಮೌಲ್ಯ ಕುಸಿಯುವುದೇ?

– ಹೌದು, ಇದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಇದು ದೀರ್ಘ ಅವಧಿಯ ನಂತರ ಆಗುವುದು. ಇಂಥ ಮೌಲ್ಯ ಕುಸಿತಕ್ಕೆ ಮತ್ತು ಹಣದ ತೀವ್ರ ಹೆಚ್ಚಳಕ್ಕೆ ದೀರ್ಘ ಮಧ್ಯಂತರವಿದೆ, ಹಾಗೂ ಕೆಲವು ದೇಶಗಳಲ್ಲಿ ಹೀಗೆ ಕುಸಿತವೂ ಆಗಲಿಕ್ಕಿಲ್ಲ.

೬೨೫೭. ಐರೋಪ್ಯ ಮತ್ತು ಇತರ ದೇಶಗಳಲ್ಲಿ ಸುವರ್ಣ ಪ್ರಮಿತಿಯು ಯುದ್ಧಪೂರ್ವದಲ್ಲಿ ಹೇಗೆ

ಕಾರ್ಯಮಾಡುತ್ತಿತ್ತು?

– ಅದು ಪೂರ್ಣ ಪರಿವರ್ತನೀಯತೆಯ ಆಧಾರದ ಮೇಲೆ ಕಾರ್ಯಮಾಡುತ್ತಿತ್ತು, ಬರೀ ಬಾಹ್ಯ ಉದ್ದೇಶಗಳಿಗಾಗಿ ಪರಿವರ್ತನೆಯ ಆಧಾರದ ಮೇಲೆ ಅಲ್ಲ.

೬೨೫೮. ಆದರೆ ಆ ಪ್ರಮಿತಿಯಲ್ಲಿ ಮುಖ್ಯವಾಗಿ ಕೇಂದ್ರ ಬ್ಯಾಂಕುಗಳು ಹಣವನ್ನು ಬಂಗಾರವಾಗಿ ಪರಿವರ್ತಿಸದೇ, ವಿದೇಶೀ ವಿನಿಮಯವನ್ನು ಸಂಗ್ರಹಿಸಿ ವಿನಿಯೋಗಿಸುವ ಮೂಲಕವೇ ಕಾರ್ಯನಿರ್ವಹಿಸುತ್ತಿದ್ದವು ಮತ್ತು ಅನಿವಾರ್ಯವಾದಾಗ ಮಾತ್ರ ಬಂಗಾರವು ಒಂದು ಕೇಂದ್ರದಿಂದ ಇನ್ನೊಂದಕ್ಕೆ ಹರಿದು ಹೋಗುತ್ತಿತ್ತು. ಅಲ್ಲವೇ?

– ಆದರೆ ಪರಿವರ್ತನೀಯತೆಯ ಬಗೆಗೆ ಅವರ ವ್ಯವಸ್ಥೆಗಳು ಪರಿಪೂರ್ಣ ಹಾಗೂ ಅನಿರ್ಬಂಧಿತವಾಗಿದ್ದವು.

೬೨೫೯. ಹಲವಾರು ಯುರೋಪ್ ಖಂಡದ ದೇಶಗಳೂ ಬಹುಮಟ್ಟಿಗೆ ಬಂಗಾರದ ಚಲಾವಣೆ ಇಲ್ಲದೇ ಸಂಪೂರ್ಣ ಸ್ಥಿರತೆಯುಳ್ಳ ಹಣವನ್ನು ಒದಗಿಸಿದ್ದು ಸಹ ನಿಮಗೆ ಗೊತ್ತು ಅಲ್ಲವೇ?

– ಹೌದು, ಹಾಗೇ ಇದ್ದಿತು.

೬೨೬೦. (ಅಧ್ಯಕ್ಷರು) ಡಾಕ್ಟರರೆ, ನೀವು ಸಂಪೂರ್ಣ ಸಹಾಯ ನೀಡಿದ್ದಕ್ಕಾಗಿ ಬಹಳ ಕೃತಜ್ಞರಾಗಿದ್ದೇವೆ. (ಹೇಳಿಕೆದಾರರು ಮರಳಿಹೋದರು)

# ೪
# ಭಾರತದ ಹಣವ್ಯವಸ್ಥೆಯಲ್ಲಿ ಸದ್ಯದ ಸಮಸ್ಯೆ – I*

**೨ ಷಿಲಿಂಗ್‌ಗಳ ಹಾಗೂ ೧ ಷಿಲಿಂಗ್ ೪ ಪೆನ್ಸ್ ನಡುವಿನ ಅನುಪಾತ**

ಯುರೋಪಿನ ಮಹಾಯುದ್ಧವು ಬದುಕುಳಿದವರ ಜನರ ನೆನಪಿನಲ್ಲಿ ಅತಿ ಅಸಾಮಾನ್ಯ ಘಟನೆಯಾಗಿದ್ದಿತು. ಅದರ ಆಪತ್ಕಾರಕ ಗತಿಯಲ್ಲಿ ಕದಡದ ಸಂಗತಿಯೇ ಇರಲಿಲ್ಲ. ಅದರಿಂದ ಉಳಿದೆಲ್ಲ ಅಂಶಗಳಿಗಿಂತ ಹಣದ ವ್ಯವಸ್ಥೆಗೆ ಪ್ರಚಂಡ ಧಕ್ಕೆಯುಂಟಾಯಿತು. ಪರಿಣಾಮವಾಗಿ ಜರ್ಮನ್ ಮಾರ್ಕ್, ಆಸ್ಟ್ರಿಯ ಕ್ರೌನ್, ರಷ್ಯದ ರೂಬೆಲ್, ಫ್ರೆಂಚ್ ಫ್ರಾಂಕ್, ಇಟಲಿಯ ಲಿರಾ ಮೊದಲಾದ ಪ್ರಮುಖ ಹಣಗಳು ತಮ್ಮ ನೆಲೆಗಳನ್ನು ಕಳೆದುಕೊಂಡು ಮೊದಲಿದ್ದ ಸಮಾನ ಬೆಲೆಗಳಿಂದ (parties) ಬಹು ದೂರ ಸರಿದಿವೆ. ಬ್ರಿಟಿಷ್ ಪೌಂಡು ಸಹ ಇದಕ್ಕೆ ಬಲಿಯಾಗಿದೆ. ಯುದ್ಧದ ಮಧ್ಯದಲ್ಲಿ ಎಂದೂ ಸಿಕ್ಕಿಬೀಳದ ಭಾರತದ ಹಣವೂ ಸ್ಥಿರತೆಯ ದೃಷ್ಟಿಯಿಂದ ತನ್ನ ಆಡಳಿತಗಾರರು ಹಾಕಿದ ಕಟ್ಟುಗಳಿಂದ ತಪ್ಪಿಸಿಕೊಂಡಿತು.

ಯುದ್ಧ ಮುಕ್ತಾಯವಾದ ನಂತರ ಪ್ರಾರಂಭವಾದ ಪುನರ್ನಿರ್ಮಾಣದ ಮಾರ್ಗದಲ್ಲಿ ಬಹು ಜನರು ಯುದ್ಧಪೂರ್ವ ಹಣದ ಸ್ಥಿತಿಯನ್ನು ಪುನಃ ಸ್ಥಾಪಿಸಲು ಉತ್ಸುಕರಾಗಿರುವುದು ಸಹಜವೆ. ಈ ಸಾರ್ವಜನಿಕ ಬೇಡಿಕೆಗೆ ಅನುಗುಣವಾಗಿ ಭಾರತದಲ್ಲಿ ಇದೇ ಉದ್ದೇಶದಿಂದ ನಿರ್ದಿಷ್ಟ ಕಾರ್ಯಕ್ರಮವನ್ನಿಟ್ಟುಕೊಂಡ ಒಂದು ಪಕ್ಷವು ಉದಯವಾಗಿದೆ. ಭಾರತದ ಹಣದ ಅನುಪಾತವನ್ನು ೧ ಷಿಲಿಂಗ್ ೪ ಪೆನ್ಸ್‌ನ ಮಟ್ಟಕ್ಕೆ ಸ್ಥಿರವಾಗಿಡಬೇಕೆಂದೇ ಈ ಪಕ್ಷದ ಅಭಿಪ್ರಾಯ, ಭಾರತ ಸರ್ಕಾರ ಈ ಬೇಡಿಕೆಯನ್ನು ವಿರೋಧಿಸುವಂತೆ ಕಾಣುತ್ತದೆ. ವಿರೋಧಕ್ಕೆ ಕಾರಣ ಆ ಅನುಪಾತ ಒಳ್ಳೆಯದಲ್ಲ ಎಂಬುದಲ್ಲ. ಸರ್ಕಾರದ ಅಭಿಪ್ರಾಯದಂತೆ ಈ ಅನುಪಾತ ಹೆಚ್ಚು ಉತ್ತಮವಲ್ಲ. ಅದು ೨ ಷಿಲಿಂಗ್ ಅನುಪಾತವನ್ನು ಸ್ಥಾಪಿಸುವ ಗುರಿಯನ್ನು ಇಟ್ಟುಕೊಂಡಿದೆ. ಹಲವು ಐರೋಪ್ಯ ಸರ್ಕಾರಗಳು ತಮ್ಮ ಹಣಗಳನ್ನು ಬರೀ ಯುದ್ಧಪೂರ್ವ ಮಟ್ಟದ ಅನುಪಾತಗಳಿಗೆ ತರಲು ಶಕ್ಯವಾದರೂ ಸಹ ತೃಪ್ತಿ ಹೊಂದುತ್ತದೆ (ಆ ವಿಚಾರದ ಬುದ್ಧಿವಂತಿಕೆ ಎಷ್ಟೇ ಇರಲಿ). ಭಾರತದ ಹಣ ಮಾತ್ರ ಈಗಲೇ ಯುದ್ಧಪೂರ್ವದ ಅನುಪಾತವನ್ನು ತಲುಪಿದೆ. ಈ ಹಿನ್ನೆಲೆಯಲ್ಲಿ ಯುದ್ಧಪೂರ್ವದ ಸ್ಥಿತಿಯಿಂದ ಸಮಾಧಾನವಾಗದ ಭಾರತ ಸರ್ಕಾರದ ಮನೋಭಾವವು ಯಾವಾಗಲೂ ಇನ್ನೂ ಬೇಕು ಎನ್ನುತ್ತಿರುವ ತುಂಟ ಮಗುವಿನ ಭಾವದಂತೆ ಕಾಣುತ್ತದೆ.

ಇದೇ ವಾದ–ವಿವಾದವನ್ನು ನನ್ನ ಪ್ರಬಂಧದ ವಿಷಯವನ್ನಾಗಿ ಇಟ್ಟುಕೊಳ್ಳಬಯಸುತ್ತೇನೆ. ಪ್ರಾರಂಭದಲ್ಲಿ ಈ ವಾಗ್ವದದ ಅಂತರಾಳದಲ್ಲಿ ಎರಡು ಪ್ರಶ್ನೆಗಳು ಅಡಕವಾಗಿವೆ. ೧) ನಾವು ನಮ್ಮ ಹಣದ ವಿನಿಮಯ ದರವನ್ನು ಸ್ಥಿರವಾಗಿ ಇಡಬೇಕೆ? ಮತ್ತು ೨) ಅದನ್ನು ಸ್ಥಿರವಾಗಿಡುವುದಾದರೆ ಯಾವ ಮಟ್ಟದಲ್ಲಿ ಸ್ಥಿರೀಕರಿಸಬೇಕು? ಈ ಪ್ರಶ್ನೆಗಳು ಪ್ರತ್ಯೇಕವಾದುವು. ಆದರೆ ಎರಡೂ ಪಕ್ಷದವರ ಹೇಳಿಕೆಗಳನ್ನು ಓದಿದರೆ ಭಾರತ ಸರ್ಕಾರವೇ ಆಗಲಿ, ಪ್ರತಿಪಕ್ಷವೇ ಆಗಲಿ, ತಮ್ಮ ಗುರಿಯು ಹಣದ ವಿನಿಮಯ ಮೌಲ್ಯವನ್ನು ಬದಲಾಯಿಸುವುದೋ ಅಥವಾ ಈಗಿದ್ದ ಮೌಲ್ಯವನ್ನೇ ಸ್ಥಿರವಾಗಿ ನಿಲ್ಲಿಸುವುದೋ ಎಂಬುದನ್ನು ಸ್ಪಷ್ಟೀಕರಿಸಿಲ್ಲ.

---

* "ದಿ ಸರ್ವೆಂಟ್ ಆಫ್ ಇಂಡಿಯಾ" ಪತ್ರಿಕೆ ಏಪ್ರಿಲ್ ೧, ೧೯೨೫.

ಈ ಎರಡೂ ಪ್ರಶ್ನೆಗಳನ್ನು ಬೇರ್ಪಡಿಸದೇ ನಮ್ಮ ಹಣ–ವ್ಯವಸ್ಥೆಯ ಪುನರ್ಘಟನೆಯ ದಿಶೆಯಲ್ಲಿ ಗಣನೀಯ ಪ್ರಗತಿಯಾಗಲಾರದು. ಏಕೆಂದರೆ ಒಂದು ಹಣದ ವಿನಿಮಯ ಮೌಲ್ಯವನ್ನು ಬದಲಾಯಿಸುವ ಗುರಿಯು ಇದ್ದ ಮೌಲ್ಯವನ್ನೇ ಸ್ಥಿರಗೊಳಿಸುವ ಗುರಿಗಿಂತ ಬೇರೆಯಾಗಿದೆ.

ಆದರೆ ಪರಿಸ್ಥಿತಿಯಲ್ಲಿ ಇನ್ನೂ ಸ್ಥಿರತೆ ಇಲ್ಲದ ಮಧ್ಯಂತರದ ಅವಧಿಯಲ್ಲಿ ನಾವೇ ಹಣದ ಮೌಲ್ಯವನ್ನು ಬದಲಾಯಿಸುತ್ತಿರುವಾಗ ಅದನ್ನು ಸ್ಥಿರವಾಗಿರಿಸುತ್ತೇವೆ ಎಂದು ಹೇಳುವುದು ಮಾನಸಿಕ ಗೊಂದಲಕ್ಕೆ ಕಾರಣವಾಗುತ್ತದೆ. ಏಕೆಂದರೆ, ಮೊದಲನೆಯ ಧೋರಣೆಯಲ್ಲಿ ಅನುಪಾತದ ಉದ್ದೇಶಪೂರ್ವಕ ಬದಲಾವಣೆಯೂ, ಎರಡನೆಯ ಧೋರಣೆಯಲ್ಲಿ ಉದ್ದೇಶಪೂರ್ವಕ ಅನುಪಾತದ ಸ್ಥಿರೀಕರಣವೂ ಅಡಕವಾಗಿದೆ.

ಈ ಎರಡು ಪ್ರತ್ಯೇಕವಾಗಿರುವ ಪ್ರಶ್ನೆಗಳನ್ನು ಚರ್ಚಿಸುವ ಪೂರ್ವದಲ್ಲಿ ವಿನಿಮಯದ ಅನುಪಾತವು ಹೇಗೆ ನಿರ್ಧರಿಸಲ್ಪಡುವುದು ಎಂಬುದನ್ನು ಖಚಿತವಾಗಿ ತಿಳಿದುಕೊಳ್ಳುವುದು ಅವಶ್ಯ. ಈ ಬಗೆಗೆ ಸ್ಪಷ್ಟ ಅರಿವು ಇಲ್ಲದೆ, ಮೇಲ್ಕಾಣಿಸಿದ ಎರಡು ತರಹದ ಪ್ರಶ್ನೆಗಳಿಗೆ ಸರಿಯಾದ ಉತ್ತರ ಸಿಗಲಾರದು, ಹಾಗೂ ಯಾವ ಸಂಬಂಧಗಳು ಯಾವ ಧೋರಣೆಯಲ್ಲಿ ಅಡಕವಾಗಿವೆ, ಯಾವ ಧೋರಣೆಯಿಂದ ಎಂತಹ ಪರಿಣಾಮಗಳು ಆಗಬಹುದು ಮುಂತಾದ ಸಂಗತಿಗಳು ತಿಳಿಯುವುದಿಲ್ಲ. ಸರಳವಾಗಿ ಹೇಳುವುದಾದರೆ, ಎರಡು ಹಣಗಳ ವಿನಿಮಯದ ಅನುಪಾತವೆಂದರೆ ಎರಡನೆಯ ಹಣಕ್ಕೆ ಅನ್ವಯಿಸುವಂತೆ ಮೊದಲನೆಯ ಹಣದ ಮೌಲ್ಯವು ಅಪರೂಪವಾಗಿ ಒಂದು ನಾಣ್ಯ ಅಥವಾ ಹಣಕ್ಕೆ ಅಪೂರ್ವ ಕಲಾಕೃತಿ ಎಂದೋ, ವೈಚಿತ್ರ್ಯವೆಂದೋ, ಬಹು ಪುರಾತನವೆಂದೋ, ಮೌಲ್ಯ ಇರಬಹುದು. ಆದರೆ ಸಾಮಾನ್ಯವಾಗಿ ಒಂದು ಹಣಕ್ಕೆ ಸರಕುಗಳನ್ನು ಖರೀದಿಸುವ ಶಕ್ತಿ ಇರುವುದರಿಂದಲೇ ಬೇಡಿಕೆ ಇರುತ್ತದೆ, ಬೇರೆ ಕಾರಣದಿಂದಲ್ಲ, ವಾಸ್ತವಿಕವಾಗಿ ರೂಪಾಯಿಗಳು ಎಷ್ಟರಮಟ್ಟಿಗೆ ಭಾರತದ ಸರಕುಗಳನ್ನು ಕೊಳ್ಳಬಹುದೋ ಅಷ್ಟರಮಟ್ಟಿಗೆ ರೂಪಾಯಿಗಳಿಗಾಗಿ ಇಂಗ್ಲಿಷರ ಬೇಡಿಕೆ ಇರುತ್ತದೆ. ಅದರಂತೆಯೇ ಇಂಗ್ಲೆಂಡಿನ ಪೌಂಡು ಎಷ್ಟರಮಟ್ಟಿಗೆ ಇಂಗ್ಲಿಷ್ ಸರಕುಗಳನ್ನು ಕೊಳ್ಳಬಹುದೋ ಅಷ್ಟರಮಟ್ಟಿಗೆ ಪೌಂಡುಗಳಿಗಾಗಿ ಭಾರತೀಯರ ಬೇಡಿಕೆ ಇದೆ.

ಆದ್ದರಿಂದ ರೂಪಾಯಿಯ ಕೊಳ್ಳುವ ಶಕ್ತಿಯು ತುಲನಾತ್ಮಕವಾಗಿ ಪೌಂಡಿನ ಕೊಳ್ಳುವ ಶಕ್ತಿಗಿಂತ ಹೆಚ್ಚಾದರೆ (ಅಥವಾ ಇಂಗ್ಲೆಂಡ್‌ನಲ್ಲಿನ ಬೆಲೆಗಳು ಭಾರತದಲ್ಲಿ ಬೆಲೆಗಳಿಗಿಂತ ತುಲನಾತ್ಮಕವಾಗಿ ಹೆಚ್ಚು ಆದರೆ) ಕಡಿಮೆ ರೂಪಾಯಿಗಳ ಮೌಲ್ಯವು ಒಂದು ಪೌಂಡಿನ ಮೌಲ್ಯಕ್ಕೆ ಸಮ ಆಗುವುದು, ಅಥವಾ ಭಾರತದಲ್ಲಿ ಬೆಲೆಗಳು ಇಳಿದಾಗ ಪೌಂಡಿಗೆ ಅನ್ವಯಿಸುವಂತೆ ರೂಪಾಯಿಯ ವಿನಿಮಯ ಮೌಲ್ಯ ಹೆಚ್ಚಾಗುವುದು. ಅದಕ್ಕೆ ಪ್ರತಿಯಾಗಿ ಭಾರತದಲ್ಲಿ ಬೆಲೆಗಳು ತುಲನಾತ್ಮಕವಾಗಿ ಇಂಗ್ಲಿಷ್ ಬೆಲೆಗಳಿಗಿಂತ ಏರಿದರೆ, ರೂಪಾಯಿಯ ವಿನಿಮಯದರವು ಇಳಿಯುತ್ತದೆ. ಇದರಿಂದ ಸಾಮಾನ್ಯವಾಗಿ, ಎರಡು ಹಣಗಳ ವಿನಿಮಯದ ಅನುಪಾತವು ಅವುಗಳ ಕೊಳ್ಳುವ ಶಕ್ತಿಗಳನ್ನು ಸರಿಸಮವಾಗಿಸುವಂತೆ ಇರುತ್ತದೆ. ಸಂಕ್ಷಿಪ್ತವಾಗಿ, ಇದೇ ಕೊಳ್ಳುವ ಶಕ್ತಿಯ ಸಮಾನತೆಯ (Purchasing Power Parity) ಸಿದ್ಧಾಂತ. ಎರಡು ಹಣಗಳ ನಡುವೆ ಒಂದು ನಿರ್ದಿಷ್ಟ ವಿನಿಮಯದ ಅನುಪಾತವು ಏಕೆ ಇರುತ್ತದೆ ಎಂಬುದನ್ನು ಈ ಸಿದ್ಧಾಂತ ವಿವರಿಸುತ್ತದೆ. ಈ ಸಿದ್ಧಾಂತವನ್ನು ಸರಿಯಾಗಿ ಅರಿತುಕೊಳ್ಳುವುದು ಅತಿ ಅವಶ್ಯ. ಏಕೆಂದರೆ ನಮ್ಮಲ್ಲಿ ಹಲವು ಬುದ್ಧಿವಂತರು ಸಹ ಆಮದು–ರಫ್ತುಗಳ ಮೌಲ್ಯಾಂತರವು ವಿನಿಮಯದ ಅನುಪಾತವನ್ನು ನಿರ್ಧರಿಸುತ್ತದೆ ಎಂದು ತಿಳಿದುಕೊಂಡಂತೆ ಕಾಣುತ್ತದೆ. ಈ ತಪ್ಪು ತಿಳಿವಳಿಕೆ ಹೇಗೆ ಆಯಿತೆಂಬುದನ್ನು ತಿಳಿಯುವುದು ಕಠಿಣ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ರಫ್ತುಗಳಿಂದ ಆಮದುಗಳ ಮೌಲ್ಯವನ್ನು ಪಾವತಿ ಮಾಡುತ್ತಾರೆ.

ಆದ್ದರಿಂದ ಅದನ್ನು ಪಾವತಿಯಾಗದ ಶಿಲ್ಕು ಎನ್ನಲಾಗದು. ಆಮದು–ರಫ್ತುಗಳ ಮೌಲ್ಯಾಂತರದಲ್ಲಿ ಸ್ವಲ್ಪ ಭಾಗವು ಹಣಕೊಟ್ಟು ಮುಟ್ಟಿಸಲ್ಪಡುತ್ತದೆ ಎಂಬುದು ನಿಜವಾದರೂ ಅದನ್ನು ಬಾಕಿ (ಶಿಲ್ಕು) ಎನ್ನಲು ಕಾರಣವಿಲ್ಲ. ಉಳಿದ ಸರಕುಗಳಂತೆ ಹಣವೂ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಪ್ರವೇಶಿಸುತ್ತದೆ ಎಂದು ಮಾತ್ರ ಇದರ ಅರ್ಥ. ಇದರಲ್ಲಿ ಹಣದ ವಿಶಿಷ್ಟತೆ ಏನೂ ಇಲ್ಲ. ಇದೇ ಪ್ರಕಾರ ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಭಾಗವಹಿಸುವ ಹಣದ ಮೊತ್ತದಲ್ಲಿ ಆಗುವ ಬದಲಾವಣೆಗಳಿಗೂ ವಿಶಿಷ್ಟತೆ ಇಲ್ಲ. ವ್ಯಾಪಾರ, ವ್ಯವಹಾರಗಳಲ್ಲಿ ಇತರ ಸರಕುಗಳಿಗೆ ಅನ್ವಯವಾಗುವ ನಿಯಮವೇ ಹಣಕ್ಕೂ ಅನ್ವಯಿಸುತ್ತದೆ. ತುಲನಾತ್ಮಕವಾಗಿ ಕಡಿಮೆ ಬೆಲೆಗೆ ಮಾರಾಟವಾಗುತ್ತಿದ್ದ ಸರಕುಗಳು ಹೆಚ್ಚು ಪ್ರಮಾಣದಲ್ಲಿ ರಫ್ತು ಆಗುತ್ತವೆ. ಒಂದು ಕಾಲಕ್ಕೆ ಚೂರಿ–ಕತ್ತರಿಗಳಿರಬಹುದು, ಇನ್ನೊಂದು ಕಾಲಕ್ಕೆ ಕಿತ್ತಳೆ ಹಣ್ಣುಗಳಿರಬಹುದು, ಮತ್ತು ಮೂರನೆಯ ಕಾಲದಲ್ಲಿ ಹಣ ಇರಬಹುದು.

ಕೆಲ ಸಮಯದ ನಂತರ ಸಮತೋಲನವಾದ ಮೇಲೆ ಕಿತ್ತಳೆ ಹಣ್ಣಿನಂತಹ ಸರಕು ಹೆಚ್ಚು ಪ್ರಮಾಣದಲ್ಲಿ ರಫ್ತು ಆದಾಗ ಯಾರೂ ಕಿತ್ತಳೆ ಹಣ್ಣಿನ ರೂಪದಲ್ಲಿ ಆಮದು–ರಫ್ತುಗಳ ಮೌಲ್ಯಾಂತರ ಎಂದು ಹೇಳುವುದಿಲ್ಲ. ಅದರಂತೆಯೇ ಹೆಚ್ಚು ಹಣ ವಿದೇಶಕ್ಕೆ ರಫ್ತು ಆದಾಗ ಹಣದ ರೂಪದಲ್ಲಿ ಆಮದು–ರಫ್ತುಗಳ ಮೌಲ್ಯಾಂತರ ಎಂದು ಹೇಳುವುದೂ ಅಷ್ಟೇ ಅವಿವೇಕವಾಗಿರುತ್ತದೆ. ಆದರೆ ಈ ರೀತಿ ಹೇಳುವುದು ಹಳೆಯ ವ್ಯಾಪಾರೀ ಯುಗದ (Mercantilist Period) ಲೋಕರೂಢಿ ಎಂದು ಕ್ಷಮ್ಯವಾಗಿದೆ. ಆದರೆ ಒಂದು ಹಣದ ವಿನಿಮಯದ ಅನುಪಾತವು ಅದರ ಕೊಳ್ಳುವ ಶಕ್ತಿಯ ಮೇಲೆ ಅವಲಂಬಿಸಿಲ್ಲ. ಆಮದು ರಫ್ತುಗಳ ಮೌಲ್ಯಾಂತರವನ್ನು ಅವಲಂಬಿಸಿರುತ್ತದೆ ಎಂದು ಹೇಳುವುದು ಅತೀವ ಮೂರ್ಖತನ. ಈ ಹೇಳಿಕೆ, ಕಾರಣ ಮತ್ತು ಪರಿಣಾಮಗಳನ್ನು ಹಿಂದುಮುಂದು ಮಾಡುತ್ತದೆ. ವಿನಿಮಯದ ಅನುಪಾತದ ಇಳಿತವು ಪ್ರತಿಕೂಲ ಆಮದು–ರಫ್ತುಗಳ ಮೌಲ್ಯಾಂತರದೊಡನೆಯೂ ಅನುಪಾತದ ಏರಿಕೆಯು ಅನುಕೂಲಕರ ಆಮದು–ರಫ್ತುಗಳ ಮೌಲ್ಯಾಂತರದೊಡನೆಯೂ ಜೊತೆಯಾಗಿರುತ್ತದೆ ಎಂಬುದು ನಿಜ. ಆದರೆ ಪ್ರತಿಕೂಲ ಆಮದು–ರಫ್ತುಗಳ ಮೌಲ್ಯಾಂತರದ ಲಕ್ಷಣಗಳಾದ ಇಳಿತದಲ್ಲಿರುವ ರಫ್ತು ಮತ್ತು ಏರಿಕೆಯಲ್ಲಿರುವ ಆಮದುಗಳು ಸರಕುಗಳನ್ನು ಮಾರಲಿಕ್ಕೆ ಆ ದೇಶವು ಉತ್ತಮ ಪೇಟೆ, ಆದರೆ ಕೊಳ್ಳಲು ಹಾನಿಕರ ಪೇಟೆ, ಎನ್ನುವುದನ್ನು ತೋರಿಸುತ್ತವೆ. ಒಂದು ಪೇಟೆ ಮಾರಾಟಕ್ಕೆ ಉತ್ತಮವೂ, ಕೊಳ್ಳಲಿಕ್ಕೆ ಹಾನಿಕರವೂ ಆಗುವುದು ಅಲ್ಲಿನ ಬೆಲೆಗಳು ಹೊರಗಿನ ಪೇಟೆಗಳಿಗಿಂತ ಹೆಚ್ಚು ಆದಾಗ ಮಾತ್ರ; ಇಂಥ ಪೇಟೆಯಲ್ಲಿ ಇಳಿಯುತ್ತಿರುವ ವಿನಿಮಯದ ದರ ಕಂಡುಬರುತ್ತದೆ. ಹಾಗೆಯೇ ಒಂದು ಪೇಟೆ ಕೊಳ್ಳಲಿಕ್ಕೆ ಉತ್ತಮ ಮತ್ತು ಮಾರಲಿಕ್ಕೆ ಹಾನಿಕರವಾಗುವುದು ಅಲ್ಲಿನ ಬೆಲೆಗಳು ಹೊರಗಿನ ಪೇಟೆಗಳ ಬೆಲೆಗಳಿಗಿಂತ ಕಡಿಮೆಯಾದಾಗ ಮಾತ್ರ; ಇಂಥ ಪೇಟೆಯಲ್ಲಿ ವಿನಿಮಯದ ದರ ಏರಿಕೆಯಲ್ಲಿರುತ್ತದೆ. ಇದನ್ನೇ ಮತ್ತೊಂದು ರೀತಿ ಹೇಳಬೇಕಾದರೆ, ಸರಕುಗಳ ಬೆಲೆಗಳ ಇಳಿತದಿಂದ ವಿನಿಮಯದ ದರದಲ್ಲಿ ಏರಿಕೆ ಮತ್ತು ಅನುಕೂಲ ಆಮದು–ರಫ್ತುಗಳ ಮೌಲ್ಯಾಂತರವೂ, ಸರಕುಗಳ ಬೆಲೆ ಏರಿಕೆಯಿಂದ ವಿನಿಮಯದ ದರದಲ್ಲಿ ಇಳಿತ ಮತ್ತು ಪ್ರತಿಕೂಲ ಆಮದು–ರಫ್ತುಗಳ ಮೌಲ್ಯಾಂತರವೂ ಉಂಟಾಗುತ್ತವೆ. ಇದರ ಅರ್ಥ ಆಮದು–ರಫ್ತುಗಳ ಮೌಲ್ಯಾಂತರವು ವಿನಿಮಯದ ದರದಲ್ಲಾದ ಬದಲಾವಣೆಗಳ ಪರಿಣಾಮವಾಗಿ ಆಗುತ್ತದೆ, ಹಿಂದುಮುಂದಾಗಿ ಅಲ್ಲ; ಇದಲ್ಲದೇ ವಿನಿಮಯದ ದರದ ಬದಲಾವಣೆ ಸರಕುಗಳ ಬೆಲೆಯಲ್ಲಾದ ಬದಲಾವಣೆಗಳ ಪರಿಣಾಮವಾಗಿರುತ್ತದೆ ಎನ್ನುವುದು ಈ ಸಂಗತಿಯ ಅರ್ಥ. ಆದ್ದರಿಂದ ಆಮದು–ರಫ್ತುಗಳ ಮೌಲ್ಯಾಂತರವು ವಿನಿಮಯದ ದರಗಳ ಪರಿಣಾಮವಾಗಿದೆ, ಕಾರಣವಲ್ಲ; ಇದು ಆಧಾರಭೂತ ಸಂಗತಿ. ಕೆಲವರು ನನ್ನ ವಿವರಣೆ ಮಗುವಿಗೆ ಬಾಟಲಿಯ ಹಾಲು ಕುಡಿಸಿದ ಹಾಗಿದೆ

ಎಂದು ಅಸಮಾಧಾನಗೊಂಡರೂ, ಇದು ಆವಶ್ಯಕವೆಂದು ನಾನು ತಿಳಿದಿರುವೆ. ಏಕೆಂದರೆ, ಹಲವು ಜನರು ವಿನಿಮಯದ ದರದ ಸ್ಥಿರೀಕರಣ, ಮತ್ತು ಮನಬಂದಂತೆ ವಿನಿಮಯದ ದರದ ಆಯ್ಕೆ ಎಂದು ತೀರಾ ಅಸಂಬದ್ಧ ಪ್ರಲಾಪ ಮಾಡುತ್ತಿದ್ದಾರೆ. ವಾಸ್ತವಿಕವಾಗಿ ವಿನಿಮಯದ ದರದ ಬದಲಾವಣೆಗಳು ಅಂತಿಮವಾಗಿ ಬೆಲೆಗಳ ಬದಲಾವಣೆಗಳಾಗಿದ್ದು ಜನತೆಯ ಆರ್ಥಿಕ ಹಿತದ ಮೇಲೆ ಅಗಾಧ ಪರಿಣಾಮಗಳನ್ನು ಉಂಟುಮಾಡುತ್ತದೆ. ಹಣದ ಕೊಳ್ಳುವ ಶಕ್ತಿಯ ನಿಯಂತ್ರಣದಿಂದಲೇ ವಿನಿಮಯದ ದರದ ನಿಯಂತ್ರಣವಾಗುತ್ತದೆ ಎಂಬುದನ್ನು ಅನುಲಕ್ಷಿಸಿ ನಾವು ಈ ವಾದ-ವಿವಾದದಲ್ಲಿ ಅಡಕವಾದ ಎರಡು ಮುಖ್ಯ ಪ್ರಶ್ನೆಗಳನ್ನು ಚರ್ಚಿಸಲು ಆರಂಭಿಸುತ್ತೇವೆ.

ಮೊದಲನೆಯದಾಗಿ ನಾವು ನಮ್ಮ ಹಣದ ವಿನಿಮಯದ ದರವನ್ನು ಸ್ಥಿರೀಕರಿಸಬೇಕೇ ಎಂಬ ಪ್ರಶ್ನೆಯನ್ನು ವಿಚಾರಿಸೋಣ. ವಿನಿಮಯದ ದರಗಳು ಒಂದು ದೇಶದ ಹಣದ ಮೌಲ್ಯವನ್ನು ಇತರ ದೇಶಗಳ ಹಣಗಳ ಮೌಲ್ಯಗಳೊಡನೆ ಹೋಲಿಸುತ್ತವೆ. ಆದ್ದರಿಂದ ಯಾವುದೇ ಎರಡು ದೇಶಗಳ ಹಣಗಳ ವಿನಿಮಯದ ದರವು ಯಾರು ಅದೇ ದೇಶದಲ್ಲಿ ಖರೀದಿ ಮತ್ತು ಮಾರಾಟ ಮಾಡುವುದಿಲ್ಲವೋ ಅಂಥ ವ್ಯಾಪಾರಿಗಳಿಗೆ ಮಹತ್ವದ್ದು. ಈ ವಿನಿಮಯದ ದರ ಎಷ್ಟು ಇದೆ ಎನ್ನುವುದು ಅವರಿಗೆ ಪ್ರಾಮುಖ್ಯವಲ್ಲದ ವಿಷಯ. ಈ ದರ ೧ ಷಿಲಿಂಗೇ ಇರಲಿ, ೨ ಷಿಲಿಂಗೇ ಇರಲಿ, ಅವರಿಗೆ ನಿರ್ದಿಷ್ಟ ದರವು ಸ್ಥಿರವಾಗಿ ಮತ್ತು ಮುಂಚಿತವಾಗಿ ತಿಳಿದಿದ್ದರೆ ಸಾಕು. ವಿನಿಮಯದ ದರದಲ್ಲಿ ಬದಲಾವಣೆಗಳು ಅಥವಾ ಏರುಪೇರುಗಳು ಮಾತ್ರ ಅವರಿಗೆ ಮಹತ್ವದ ಸಂಗತಿ. ಅವರಿಗೆ ಬೇಕಾದದ್ದು ಈ ದರದ ಸ್ಥಿರತೆ. ಈ ಸ್ಥಿರತೆಯನ್ನೊದಗಿಸುವುದೇ ಸ್ಥಿರೀಕರಣದ ಸಮಸ್ಯೆ. ಈಗಿನ ಪರಿಸ್ಥಿತಿಯಲ್ಲಿ ಇಂತಹ ವ್ಯಾಪಾರಿಗಳಿಗೆ ವಿನಿಮಯದ ದರದಲ್ಲಿ ಸ್ಥಿರತೆಯ ಖಾತರಿಯನ್ನು ಹೇಗೆ ಕೊಡಬಲ್ಲೆವು? ಈ ಪ್ರಶ್ನೆಗೆ ಉತ್ತರ ನೀಡಲು ನಾವು ಕೊಳ್ಳುವ ಶಕ್ತಿಯ ಸಮಾನತೆಯ ಸಿದ್ಧಾಂತದ ಮೂಲ ವಿಚಾರಗಳಿಗೇ ಮೊರೆಹೋಗಬೇಕು. ನೀವು ವಿನಿಮಯದ ದರವನ್ನು ಸ್ಥಿರವಾಗಿಡಬೇಕಾದರೆ ಎರಡೂ ಹಣಗಳ ಕೊಳ್ಳುವ ಶಕ್ತಿಯನ್ನು ಸ್ಥಿರೀಕರಿಸಬೇಕೆಂದು ಈ ಸಿದ್ಧಾಂತ ಸ್ಪಷ್ಟವಾಗಿ ತಿಳಿಸಿಕೊಡುತ್ತದೆ. ಈ ಉದ್ದೇಶಕ್ಕಾಗಿ ನಿಮಗೆ ಯಾವ ಸಾಧನದ ಸಹಾಯದಿಂದ ಎರಡು ಹಣಗಳನ್ನೂ ಅದೇ ಪ್ರಮಾಣದಲ್ಲಿ ಅದೇ ದಿಶೆಯಲ್ಲಿ ಬದಲಾಯಿಸಬಹುದೋ ಅಂತಹ ಸಾಧನವಿರಬೇಕು. ಈ ಮೊದಲು ಈ ಮಾದರಿಯ ಒಳ್ಳೆಯ ಸಾಧನ ದೊರೆತಿತ್ತು. ಅದೇ ಸಾರ್ವತ್ರಿಕ ಸುವರ್ಣ ಪ್ರಮಿತಿ. ಈಗ ಅಮೇರಿಕೆಯ ಸಂಯುಕ್ತ ಸಂಸ್ಥಾನಗಳನ್ನು (U.S.A.) ಹೊರತುಪಡಿಸಿ ಇತರ ಎಲ್ಲ ದೇಶಗಳಲ್ಲಿ ಸುವರ್ಣ ಪ್ರಮಿತಿ ನಾಶವಾಗಿದೆ. ಆದ್ದರಿಂದ ಸುವರ್ಣ ಪ್ರಮಿತಿಯ ಆಧಾರದ ಮೇಲೆ ಸ್ವಯಂಚಾಲಿತ ವಿನಿಮಯ ದರಗಳ ಸ್ಥಿರತೆಯನ್ನು ಸಾಧಿಸಲು ಯು.ಎಸ್.ಎ. ದ ಹೊರತು ಉಳಿದ ಯಾವ ದೇಶಗಳಿಗೂ ಶಕ್ಯವಿಲ್ಲ.

ಕಾಗದದ ಹಣವೇ ಆಧಾರವಾಗಿರುವ ದೇಶಗಳಲ್ಲಿ ಎರಡು ನಿಯಮಗಳನ್ನು ಪಾಲಿಸಿದರೆ ಮಾತ್ರ ವಿನಿಮಯದ ದರವನ್ನು ಸ್ಥಿರಗೊಳಿಸುವುದು ಶಕ್ಯವಾಗುತ್ತದೆ. ೧) ವಿದೇಶೀ ಹಣವು ನಮ್ಮ ನಿಯಂತ್ರಣದಲ್ಲಿ ಇರುವುದಿಲ್ಲವಾದ್ದರಿಂದ ವಿದೇಶೀ ಹಣದ ಮೌಲ್ಯ ಏರಿದಾಗ ನಮ್ಮ ಹಣದ ಮೌಲ್ಯವನ್ನು ಇಳಿಸುವ ಮೂಲಕ, ಹಾಗೂ ವಿದೇಶೀ ಹಣದ ಮೌಲ್ಯ ಇಳಿದಾಗ ಹಣದ ಮೌಲ್ಯವನ್ನು ಏರಿಸುವ ಮೂಲಕ ಜಾಣತನದಿಂದ ನಮ್ಮ ಹಣದ ನಿರ್ವಹಣೆ ಮಾಡಬೇಕು. ೨) ನಮ್ಮ ಹಣದ ಇಡೀ ಮೊತ್ತವನ್ನು ಬದಲಾಯಿಸದೇ, ವಿದೇಶೀ ಹಣವನ್ನು ಸ್ಥಿರವಾದ ಅನುಪಾತದಂತೆ ಕೊಳ್ಳಲು ಮತ್ತು ಮಾರಲು ಸಿದ್ಧವಿರಬೇಕು. ಇವೆರಡು ನಿಯಮಗಳೂ ದೇಶಕ್ಕೆ ಹಾನಿಕರ ಮತ್ತು ಅಪಾಯಕಾರಿಯಾಗಿರುವುದರಿಂದ ತಿರಸ್ಕರಣೀಯ. ವಿನಿಮಯದ ದರಗಳ ಸ್ಥಿರತೆ ಅಂತರರಾಷ್ಟ್ರೀಯ ವ್ಯವಹಾರಗಳಿಗೆ ಮತ್ತು ಬಂಡವಾಳವು ಹೆಚ್ಚು ಅವಶ್ಯವಾಗಿರುವ

ಬಡ ದೇಶಗಳಿಗೆ ಹೋಗುವಂತೆ ಮಾಡಲಿಕ್ಕೆ ಸಹಾಯಕವಾಗಿದೆ ಎಂಬುದು ನಿಜ. ಈ ಸ್ಥಿರತೆಯಿಂದ ಯುದ್ಧಪೂರ್ವದ ಆರ್ಥಿಕ ಸಂಘಟನೆಯ ಬಹು ಮುಖ್ಯ ಭಾಗವನ್ನು ಮರಳಿ ಸ್ಥಾಪಿಸಿ ಅನಿಶ್ಚಿತತೆಯ ಅಂಶವನ್ನು ನಿರ್ಮೂಲನ ಮಾಡಿದಂತಾಗುತ್ತದೆ. ಇದರ ಪರಿಣಾಮವಾಗಿ ಕಳೆದುಕೊಂಡ ಪೇಟೆಗಳು ಮರಳಿ ದೊರೆತು ವ್ಯಾಪಾರ ಹಾಗೂ ಉದ್ದಿಮೆಗಳಿಗೆ ಪ್ರೋತ್ಸಾಹ ದೊರೆಯುವುದು. ಆದರೆ ಈ ಕ್ರಮದಿಂದ ನಮಗೆ ದೊರೆಯುವ ಲಾಭ ನಾವು ತೆರಬೇಕಾದ ಬೆಲೆಗಿಂತ ಕಡಿಮೆ ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ನಮ್ಮ ಆಂತರಿಕ ವ್ಯವಹಾರಗಳಿಗೆ ಹೋಲಿಸಿದರೆ ಬಾಹ್ಯ ವ್ಯವಹಾರಗಳು ಅತ್ಯಲ್ಪವಿರುತ್ತವೆ.

ಬಾಹ್ಯ ಅನುಪಾತದ ಸ್ಥಿರತೆಗಾಗಿ ಆಂತರಿಕ ಬೆಲೆಗಳ ನಿರಂತರ ಬದಲಾವಣೆಗಳನ್ನು ಹೊರಿಸಿ ಆಂತರಿಕ ವ್ಯವಸ್ಥೆಗಳನ್ನು ಪಲ್ಲಟಗೊಳಿಸುವುದು ಅಲ್ಪ ಲಾಭ ಪಡೆಯಲಿಕ್ಕೆ ಅತಿ ಹೆಚ್ಚು ಬೆಲೆಯನ್ನು ತೆತ್ತಂತೆ. ಏಕೆಂದರೆ ಸ್ಥಿರತೆ ಬಹು ಅನುಕೂಲವೆನಿಸಿದರೂ ಅದರ ಅಭಾವದಿಂದ ಅಂತರರಾಷ್ಟ್ರೀಯ ವ್ಯಾಪಾರ ನಿಲ್ಲುವುದಿಲ್ಲ ಎಂಬುದನ್ನು ನಮ್ಮ ವ್ಯಾಪಾರಿಗಳೂ ನೆನಪಿನಲ್ಲಿಡಬೇಕು. ನಮ್ಮ ಹಣ ವ್ಯವಸ್ಥೆಯ ಇತಿಹಾಸದಲ್ಲಿಯೇ ಇದರ ಉದಾಹರಣೆಯನ್ನು ಕಾಣಬಹುದು. ೧೮೭೨ ರಿಂದ ೧೮೯೨ರ ವರೆಗೆ ಎರಡು ದಶಕಗಳಷ್ಟು ಕಾಲದಲ್ಲಿ ಭಾರತದ ಹಣದ ಸಮಾನ ಬೆಲೆಯಲ್ಲಿ ಅತ್ಯಧಿಕ ಏರುಪೇರುಗಳಾದವು. ಈಗಿನಂತೆ ಆಗ ಸಹ ವ್ಯಾಪಾರಿಗಳೂ ವಿನಿಮಯದ ದರದ ಅಸ್ಥಿರತೆಯು ವ್ಯಾಪಾರಕ್ಕೆ ಅಡ್ಡಿಯಾಗುವುದೆಂದು ರಂಪ ಮಾಡಿದರು; ಆದರೆ ಈ ದರದ ಏರಿಳಿತ ನಡೆದಾಗ ಸಹ ಅಭಿವೃದ್ಧಿ ಹೊಂದಿದರು. ಅಂಥದೇ ಪರಿಸ್ಥಿತಿಯಲ್ಲಿ ಅವರ ಮಕ್ಕಳು ಹಾಗೇ ಅಭಿವೃದ್ಧಿ ಹೊಂದುವರೆಂದು ಅಪೇಕ್ಷಿಸಬಹುದು. ಈ ವಿಚಾರವು ಮನವರಿಕೆ ಆಗದಿದ್ದರೆ ಹಣದ ನಿರ್ವವಣೆಯ ಅಗತ್ಯವಾದರೂ, ನಮ್ಮ ಬೆಲೆಗಳ ಬದಲಾವಣೆಯನ್ನು ಸೂಚಿಸಬಹುದಿತ್ತು. ಆದರೆ ಯುರೋಪದಲ್ಲಿ ಸರ್ಕಾರಗಳು ಬಹಳ ಕಂಗಾಲು ಸ್ಥಿತಿಯಲ್ಲಿರುವುದರಿಂದ ಇದು ಯೋಗ್ಯವೆನಿಸಲಾರದು. ಈಗಿನ ಪರಿಸ್ಥಿತಿಯಲ್ಲಿ ಅವರ ಬೆಲೆಗಳ ಮಟ್ಟಕ್ಕೆ ತಕ್ಕಂತೆ ನಮ್ಮ ಬೆಲೆಗಳ ಬದಲಾವಣೆ ಮಾಡಲು ಒಪ್ಪಿಕೊಂಡರೆ ದಿವಾಳಿಯೆದ್ದ ಸರ್ಕಾರಗಳ, ಹಾಗೂ ಅವುಗಳ ವಿತ್ತಮಂತ್ರಿಗಳ ಕೈಯಲ್ಲಿ ನಮ್ಮ ಹಿತಾಸಕ್ತಿಗಳನ್ನು ಒಪ್ಪಿಸಿದಂತಾಗುವುದು. ಶಾಸ್ತ್ರೀಯ ರೀತಿ ನಿಯಂತ್ರಿತವಾಗುವ, ನಿರ್ವಹಣೆಯಾಗುವ ಹಣವ್ಯವಸ್ಥೆ ಉತ್ತಮ. ವ್ಯಾಪಾರದ ಆವಶ್ಯಕತೆಗಳಿಗೆ ಅನುಗುಣವಾಗಿ ನಿರ್ವಹಣೆಯಾಗುವ ಹಣದೊಡನೆ ಜೋಡಿಸಲ್ಪಟ್ಟ ಹಣವ್ಯವಸ್ಥೆ ಮಧ್ಯಮ. ಆದರೆ ನಮ್ಮ ಹಣವ್ಯವಸ್ಥೆಯನ್ನು ವರಮಾನ ಖರ್ಚುಗಳನ್ನು ಸರಿದೂಗಿಸಲಾಗದ ಪಾಲುದಾರನೊಂದಿಗೆ ಜೋಡಿಸುವುದು ಅಸಹನೀಯ ಎನಿಸುತ್ತದೆ.

# ೫
# ಭಾರತದ ಹಣವ್ಯವಸ್ಥೆಯಲ್ಲಿ ಸದ್ಯದ ಸಮಸ್ಯೆ – II*

**೨ ಷಿಲಿಂಗುಗಳ ವಿರುದ್ಧ ೧ ಷಿಲಿಂಗ್ ೪ ಪೆನ್ಸ್ ಅನುಪಾತ**

ಈ ವರೆಗೆ ಮೊದಲನೆಯ ಪ್ರಶ್ನೆಯನ್ನು ಚರ್ಚಿಸಿದ್ದಾಯ್ತು. ಇನ್ನು ಈ ವಾದ ವಿವಾದದಲ್ಲಿ ಉದ್ಭವಿಸಿದ ಎರಡನೆಯ ಪ್ರಶ್ನೆಯನ್ನು ವಿಚಾರಿಸೋಣ; ಈ ಪ್ರಶ್ನೆ ನಮ್ಮ ಹಣದ ವಿನಿಮಯ ದರವನ್ನು ಯಾವ ನಿರ್ದಿಷ್ಟ ಅನುಪಾತಕ್ಕೆ ಸ್ಥಿರಗೊಳಿಸಬೇಕು ಎಂಬುದು. ಕೊಳ್ಳುವ ಶಕ್ತಿಯ ರೂಪದಲ್ಲಿ ಈ ಪ್ರಶ್ನೆ ಹೇಗೆ ಆಗುವುದೆಂದರೆ, ನಾವು ನಮ್ಮ ಸದ್ಯದ ಬೆಲೆಗಳ ಮಟ್ಟವನ್ನು ಇಳಿಸೋಣವೇ (ನಮ್ಮ ಹಣದ ಕೊಳ್ಳುವ ಶಕ್ತಿಯನ್ನು ಹೆಚ್ಚಿಸೋಣವೇ) ಹಾಗೂ ಈ ಕ್ರಮದಿಂದ ನಮ್ಮ ಹಣದ ವಿನಿಮಯ ಮೌಲ್ಯವನ್ನು ಹೆಚ್ಚಿಸೋಣವೇ? ಈಗ, ಹಣದ ಮೌಲ್ಯದಲ್ಲಿ ಆದ ಬದಲಾವಣೆಗಳು ಎಲ್ಲ ವ್ಯವಹಾರಗಳ ಮೇಲೆ, ಎಲ್ಲ ವರ್ಗಗಳ ಮೇಲೆ ಸಮಾನವಾಗಿ ಪರಿಣಾಮಬೀರುವಂತಿದ್ದರೆ, ಅವುಗಳಿಗೆ ಯಾವ ಮಹತ್ವವೂ ಇರುತ್ತಿದ್ದಿಲ್ಲ, ಇಂಥ ಬದಲಾವಣೆಗಳು ಚರ್ಚಾಸ್ಪದವೂ ಅಲ್ಲ. ಆದರೆ ವಾಸ್ತವಿಕವಾಗಿ ಹಣದ ಮೌಲ್ಯದ ಬದಲಾವಣೆಯು ಎಲ್ಲ ಬೆಲೆಗಳನ್ನು ಸಮನಾದ ಪ್ರಮಾಣದಲ್ಲಿ ಬದಲಾಯಿಸುವುದಿಲ್ಲ. ಆದ್ದರಿಂದ ಪ್ರತಿಯೊಬ್ಬನ ಉತ್ಪನ್ನ ಮತ್ತು ಖರ್ಚುಗಳು ಸಮನಾದ ಪ್ರಮಾಣದಲ್ಲಿ ಬದಲಾಗುವುದಿಲ್ಲ. ಆದಕಾರಣ ಯಾವ ದಿಶೆಯಲ್ಲಿ ನಮ್ಮ ಬೆಲೆಗಳನ್ನು ಬದಲಾಯಿಸಬೇಕು ಎಂಬುದನ್ನು ನಿರ್ಣಯಿಸುವ ಪೂರ್ವದಲ್ಲಿ ಈ ಬದಲಾವಣೆಯ ಹೊರೆಗಳಿಂದ ಸಮಾಜದ ವಿವಿಧ ವರ್ಗಗಳ ಮೇಲೆ ಆಗುವ ಪರಿಣಾಮಗಳು ಉಚಿತ ಮತ್ತು ನ್ಯಾಯಸಮ್ಮತವಾಗುವಂತೆ ಖಾತರಿ ಮಾಡಿಕೊಳ್ಳಬೇಕು.

ಸದ್ಯದ ಸಾಮಾಜಿಕ ವ್ಯವಸ್ಥೆಯಲ್ಲಿ ಮೂರು ಭಾಗಗಳುಳ್ಳ ವರ್ಗೀಕರಣವನ್ನು ಮಾಡಬಹುದು. ೧) ಬಂಡವಾಳ ಹೂಡುವ ವರ್ಗ ೨) ವ್ಯಾಪಾರಿ ವರ್ಗ ಮತ್ತು ೩) ದುಡಿತದ ಪ್ರತಿಫಲವಾಗಿ ಹಣ ಸಂಪಾದಿಸುವ ವರ್ಗ (ದುಡಿಯುವ ವರ್ಗ.) ಈ ವರ್ಗೀಕರಣವು ನೈಜವಾಗಿರುವ ಸಾಮಾಜಿಕ ಭೇದಗಳನ್ನೂ ಹಿತಾರ್ಥಗಳ ವ್ಯತ್ಯಾಸವನ್ನೂ ಪ್ರತಿಬಿಂಬಿಸುತ್ತದೆ. ವಾಸ್ತವಿಕ ಪರಿಸ್ಥಿತಿಯಲ್ಲಿ ವ್ಯಾಪಾರಿ ವರ್ಗವು ಎಲ್ಲ ಆರ್ಥಿಕ ಚಟುವಟಿಕೆಗಳಿಗೆ ಕೇಂದ್ರ ಬಿಂದುವಾಗಿದೆ. ಒಂದು ಕಡೆ ಅದು ಬಂಡವಾಳ ಹೂಡುವ ವರ್ಗದಿಂದ ಹಣವನ್ನು ಸಾಲವಾಗಿ ಪಡೆಯುತ್ತದೆ ಮತ್ತು ಇನ್ನೊಂದು ಕಡೆ ದುಡಿಯುವ ವರ್ಗಕ್ಕೆ ಉದ್ಯೋಗವನ್ನು ಕೊಡುತ್ತದೆ. ವ್ಯವಹಾರದಲ್ಲಿ ಹಣದ ರೂಪದ ಒಡಂಬಡಿಕೆಗಳು ಅಥವಾ ನಿರ್ದಿಷ್ಟ ಮೊತ್ತದ ಹಣವನ್ನು ಕೊಡುವ ಕರಾರುಗಳಿರುತ್ತವೆ. ಈ ಕರಾರುಗಳು ಆದ ನಂತರ ಹಣದ ಏರಿಕೆ ಅಥವಾ ಇಳಿತವಾದರೆ (ಅಂದರೆ ಬೆಲೆಗಳು ಏರಿದರೆ) ಬಂಡವಾಳ ಹೂಡುವ ವರ್ಗಕ್ಕೆ ಮತ್ತು ದುಡಿಯುವ ವರ್ಗಕ್ಕೆ ಹಣ ದೊರೆಯುತ್ತದೆ ಎಂಬುದು ನಿಜ. ಆದರೆ ಬೆಲೆ ಏರಿಕೆಯ ಕಾಲಕ್ಕೆ ವ್ಯಾಪರಿಯು ಹಣದ ಮೌಲ್ಯ ಸ್ಥಿರವಾಗಿದ್ದರೆ ದೊರಕುವ ಮೊತ್ತಕ್ಕಿಂತ ಹೆಚ್ಚು ಹಣವನ್ನು ತನ್ನ ಸರಕುಗಳಿಗೆ ಪಡೆಯುವುದಷ್ಟೇ ಅಲ್ಲ, ಇತರ ವರ್ಗದವರಿಗೆ ಕಡಿಮೆ ಮೌಲ್ಯದ ಹಣವನ್ನು ಕೊಡುತ್ತಾನೆ. ಅದೇ ಪ್ರಕಾರ, ಹಣದ ಮೌಲ್ಯ ಹೆಚ್ಚಾದಾಗ (ಅಂದರೆ

---

* "ದಿ ಸರ್ವೆಂಟ್ ಆಫ್ ಇಂಡಿಯಾ" ಪತ್ರಿಕೆ ಏಪ್ರಿಲ್ ೧೬, ೧೯೨೫.

ಬೆಲೆಗಳು ಇಳಿದಾಗ) ವ್ಯಾಪಾರಿ ವರ್ಗಕ್ಕೆ ಹಾನಿ, ಮತ್ತು ಬಂಡವಾಳ ಹೂಡುವ ವರ್ಗಕ್ಕೆ ಹಾಗೂ ದುಡಿಯುವ ವರ್ಗಕ್ಕೆ ಲಾಭ, ಉಂಟಾಗುತ್ತವೆ. ಇದಲ್ಲದೆ ಬೆಲೆಗಳ ಇಳಿತದಿಂದ ವ್ಯಾಪಾರಿಯು ಉಳಿದ ಎರಡೂ ವರ್ಗದವರಿಗೆ ಅಷ್ಟೇ ಮೊತ್ತದ ಹಣವನ್ನು ಕೊಟ್ಟರೂ ಹೆಚ್ಚು ಮೌಲ್ಯದ ಹಣವನ್ನು ಕೊಡುತ್ತಾನೆ. ಈ ಸಂಗತಿಗಳೆಲ್ಲಾ ಸ್ಪಷ್ಟ, ವಾಸ್ತವಿಕ ಸತ್ಯಗಳಾಗಿವೆ.

ಆದ್ದರಿಂದ ನಾವು ೨ ಷಿಲಿಂಗ್ ಅನುಪಾತದ ದಿಶೆಯಲ್ಲಿ ಹೊರಟರೆ, ಅಂದರೆ ಬೆಲೆಗಳನ್ನು ಇಳಿಸಿದರೆ, ಬಂಡವಾಳ ಹೂಡುವ ಮತ್ತು ದುಡಿಯುವ ವರ್ಗಗಳಿಗೆ ಅನುಕೂಲ ಮಾಡಿದಂತಾಗುವುದು. ಇದರ ವಿರುದ್ಧವಾಗಿ ೧ ಷಿಲಿಂಗ್ ೪ ಪೆನ್ಸ್ ಅನುಪಾತದ ದಿಶೆಯಲ್ಲಿ ಹೊರಟರೆ ವ್ಯಾಪಾರಿ ವರ್ಗಕ್ಕೆ ಲಾಭ ಮಾಡಿದಂತೆ ಆಗುತ್ತದೆ. ನ್ಯಾಯವನ್ನೇ ನೀಡಬೇಕಾದರೆ, ಒಂದೆಡೆ ಸರ್ಕಾರ ಮತ್ತು ವ್ಯಾಪಾರಿ ವರ್ಗ, ಇನ್ನೊಂದೆಡೆ ಬಂಡವಾಳ ಹೂಡುವ ವರ್ಗ ಮತ್ತು ದುಡಿಯುವ ವರ್ಗ – ಇವರ ನಡುವಿನ ಚಾಲ್ತಿ ಇರುವ ಹಣದ ಕರಾರುಗಳನ್ನೆಲ್ಲ ಅವುಗಳ ವಯೋಮಾನದ ಪ್ರಕಾರ ವರ್ಗೀಕರಿಸಿ, ಸಮಗ್ರ ಅಂದಾಜನ್ನು ಮಾಡಬೇಕು. ಯಾವುದೇ ಒಂದು ಕಾಲದಲ್ಲಿ ಚಾಲ್ತಿ ಇರುವ ಕರಾರುಗಳನ್ನು ಪರೀಕ್ಷಿಸಿದರೆ, ಅವುಗಳಲ್ಲಿ ಕಳೆದ ನೂರು ವರ್ಷಗಳಿಂದ ಆಗಿರುವಂತಹ ಹಣದ ಮೌಲ್ಯದ ಏರಿಕೆ, ಇಳಿತಗಳ ವಿವಿಧ ಹಂತದಲ್ಲಿ ಆಗಿರುವ ಹಲವಾರು ಕರಾರುಗಳು ಕಂಡುಬರುತ್ತವೆ. ಪ್ರತಿಯೊಂದು ಕರಾರಿನಲ್ಲಿಯೂ ಉಭಯ ಪಕ್ಷದವರಿಗೆ ನ್ಯಾಯ ಒದಗಿಸುವುದಾದರೆ, ಕರಾರು ಆದ ಸಮಯದಲ್ಲಿದ್ದ ಹಣದ ಮೌಲ್ಯದ ಪ್ರಕಾರ ಬೇರೆ ಬೇರೆ ಪ್ರಮಾಣಗಳನ್ನು ಉಪಯೋಗಿಸಬೇಕಾಗುವುದು. ಇಂತಹ ಕ್ರಮಗಳು ವಸ್ತುತಃ ಅಸಾಧ್ಯ. ಚಾಲ್ತಿ ಇರುವ ಎಲ್ಲ ಕರಾರುಗಳೂ ೧೯೧೪ ರಲ್ಲಿ ಆಗಿದ್ದರೆ, ಸ್ವಭಾವಸಿದ್ಧ ನ್ಯಾಯದ ಪ್ರಕಾರ ಈಗಿರುವ ಬೆಲೆಯ ಮಟ್ಟವನ್ನು ೧೯೧೪ ರಲ್ಲಿಯ ಬೆಲೆಗಳ ಮಟ್ಟಕ್ಕೆ ತಗ್ಗಿಸುವಷ್ಟು ಅಪಸ್ಫೀತೀಕರಣ (Deflation) ಮಾಡಬೇಕಾಗುತ್ತದೆ. ಆದರೆ ಎಲ್ಲ ಕರಾರುಗಳೂ ೧೯೨೪ ರಲ್ಲಿ ಆಗಿದ್ದರೆ ನ್ಯಾಯವಾಗಿ ನಾವು ಇವೆರಡೂ ಕಟ್ಟಕಡೆಯ (ಅಂತಿಮ) ಬಿಂದುಗಳ ನಡುವೆ ಇರಬೇಕೆಂಬ ನಿರ್ಣಯವೇ ಉತ್ತಮ. ಈ ಅವಧಿಯಲ್ಲಿ ರೂಪಾಯಿಯ ವಿನಿಮಯ ಮೌಲ್ಯದ ಕನಿಷ್ಠ ಮತ್ತು ಗರಿಷ್ಠ ೧ ಷಿಲಿಂಗ್ ೩ ೩/೮ ಪೆನ್ಸ್ ಮತ್ತು ೧ ಷಿಲಿಂಗ್ ೬ ಪೆನ್ಸ್ ಇರುತ್ತವೆ. ಕೆಲವರಿಗೆ ಇದು ಆಶ್ಚರ್ಯವೆನಿಸಬಹುದು. ಏಕೆಂದರೆ ಒಂದು ಕಾಲಕ್ಕೆ ರೂಪಾಯಿಯ ಮೌಲ್ಯ ೩ ಷಿಲಿಂಗುಗಳ ವರೆಗೆ ಏರಿತ್ತು ಹಾಗೂ ಪರಿನಿಯಮಗಳು ೨ ಸುವರ್ಣ ಷಿಲಿಂಗುಗಳು ಎಂದು ಮಾನ್ಯತೆ ಕೊಡುತ್ತವೆ. ಆದರೆ ನನ್ನ ಅಭಿಪ್ರಾಯದ ಪ್ರಕಾರ ಇದನ್ನು ನಾವು ಪೂರ್ಣವಾಗಿ ಅಲಕ್ಷಿಸಬೇಕು. ವಿವಿಧ ಸಮಯಗಳಲ್ಲಿ ಭಾರತದ ಹಣದ ಬಗೆಗೆ ಪರೀಕ್ಷಿಸಲು ನಿಯಮಿಸಲ್ಪಟ್ಟ ಎಲ್ಲ ಸಮಿತಿಗಳಲ್ಲಿ ಬೆಬಿಂಗ್‌ಟನ್ ಸ್ಮಿಥ್ ಸಮಿತಿಯಷ್ಟು ಮೂಢವಾಗಿದ್ದದ್ದು ಇನ್ನೊಂದಿಲ್ಲ. ಮೇಲೆ ಉಲ್ಲೇಖಿಸಿದ ಪರಿನಿಯಮಗಳು ಇದೇ ಸಮಿತಿಯ ಶಿಫಾರಸುಗಳನ್ನಾಧರಿಸಿ ಮಾಡಲ್ಪಟ್ಟಿದ್ದವು. ಆ ಸಮಿತಿಯು ತಾನು ವಿಚಾರಿಸಬೇಕಾದ ಸಮಸ್ಯೆಗಳನ್ನು ತಿಳಿದುಕೊಳ್ಳಲು ಅಸಮರ್ಥವೆನಿಸುವಷ್ಟು ಮಂಕಾಗಿತ್ತು. ಆದ್ದರಿಂದ ಅವ್ಯವಸ್ಥೆಯನ್ನೇ ಮಾಡಿ ಕಾರ್ಯವನ್ನು ಮುಗಿಸಿತು. ಆ ಸಮಿತಿಯು ರೂಪಾಯಿಯ ಮೌಲ್ಯವನ್ನು ೨ ಷಿಲಿಂಗ್ ಸುವರ್ಣಕ್ಕೆ ಏರಿಸಬೇಕೆಂದು ವರದಿ ಮಾಡಿದ್ದು ಬಹುಜನರಿಗೆ ಗೊತ್ತಿದೆ. ರೂಪಾಯಿಯ ಮೌಲ್ಯ ಹೆಚ್ಚಿರುವುದು ಎಂದೇ ಇದರ ಅರ್ಥವಾಗುತ್ತದೆ. ವಾಸ್ತವಿಕ ಸತ್ಯಸಂಗತಿ ಏನಿದೆ ಎಂಬುದನ್ನು ಕೆಳಗೆ ಕೊಟ್ಟಿರುವ ಪಟ್ಟಿಯಿಂದ ಸ್ಪಷ್ಟವಾಗಿ ತಿಳಿದುಕೊಳ್ಳಬಹುದು.

| ದಿನಾಂಕ | ಭಾರತದಲ್ಲಿ ಬಂಗಾರದ ಗಟ್ಟಿಯ ಬೆಲೆ (ಮುಂಬಯಿಯಲ್ಲಿ) ೧೮೦ ಗ್ರೇನುಗಳ ತೊಲಕ್ಕೆ | ಭಾರತದಲ್ಲಿ (ಮುಂಬಯಿಯಲ್ಲಿ) ಬೆಳ್ಳಿಯ ಬೆಲೆ ೧೦೦ ತೊಲಕ್ಕೆ | ಭಾರತದಲ್ಲಿ ಬೆಲೆಗಳ ಸೂಚ್ಯಂಕ ೧೯೧೩=೧೦೦ |
|---|---|---|---|
| | ರೂಪಾಯಿ ಆಣೆ | ರೂಪಾಯಿ ಆಣೆ | |
| ೧೯೧೪ | ೨೪. - ೧೦ | ೬೫ - ೧೧ | - |
| ೧೯೧೫ | ೨೪ - ೧೪ | ೬೧ - ೨ | ೧೧೨ |
| ೧೯೧೬ | ೨೭ - ೨ | ೭೮ - ೧೦ | ೧೨೫ |
| ೧೯೧೭ | ೨೭ - ೧೧ | ೬೪ - ೧೦ | ೧೪೨ |
| ೧೯೧೮ (ಜುಲೈ) | ೩೪ - ೦ | ೧೧೭ - ೨ | ೧೭೮ |
| ೧೯೧೮ (ಆಗಸ್ಟ್) | ೩೦ - ೦ | - | - |
| ೧೯೧೮ (ಸೆಪ್ಟೆಂಬರ್) | ೩೨ - ೪ | - | - |
| ೧೯೧೯ (ಮಾರ್ಚ್) | ೩೨ - ೩ | ೧೧೩ - ೦ | ೨೦೦ |

ಈ ಪಟ್ಟಿಯ ಅವಲೋಕನದಿಂದ ರೂಪಾಯಿಯ ಮೌಲ್ಯವು ಹೆಚ್ಚಾಗಿಲ್ಲವೆಂಬುದಷ್ಟೇ ಅಲ್ಲ, ಗಣನೀಯವಾಗಿ ಇಳಿದಿರುತ್ತದೆ ಎಂಬ ಸಂಗತಿ ಸ್ಪಷ್ಟವಾಗಿ ಕಾಣುತ್ತದೆ. ನಿಸ್ಸಂಶಯವಾಗಿ ಬೆಳ್ಳಿಯ ಬೆಲೆ ಅತಿ ಹೆಚ್ಚಾಗಿತ್ತು. ಅಷ್ಟೇ ಆಧಾರದಿಂದ ಆ ಸಮಿತಿಯು ರೂಪಾಯಿಯ ಮೌಲ್ಯ ಏರಿದೆ ಎಂದು ತೀರ್ಮಾನವನ್ನು ಕೊನೆಗೆ ಕೊಟ್ಟಿತು. ವಾಸ್ತವಿಕ ಸಂಗತಿ ಏನೆಂದರೆ ಇದೇ ಆಧಾರವು ರೂಪಾಯಿಯ ಮೌಲ್ಯವು ಬೆಳ್ಳಿಯ ರೂಪದಲ್ಲೂ, ಸರಕುಗಳ ರೂಪದಲ್ಲೂ ಕಡಿಮೆಯಾದದ್ದಕ್ಕೆ ಸ್ಪಷ್ಟ ಪ್ರಮಾಣವಾಗಿದೆ. ಅಷ್ಟೇ ಬೆಳ್ಳಿಯನ್ನು ಕೊಳ್ಳಲು ೧೯೧೩ ರಲ್ಲಿಗಿಂತ ಹೆಚ್ಚು ರೂಪಾಯಿಗಳನ್ನು ಖರ್ಚು ಮಾಡಬೇಕಾಗುವುದು ಎಂದರೆ, ಇದರ ಅರ್ಥ ರೂಪಾಯಿಯ ಮೌಲ್ಯ ಇಳಿದಿದೆ, ಎಂದು ಆಗುತ್ತದೆ. ರೂಪಾಯಿಗೆ ಎರಡು ಸ್ವರೂಪಗಳಿವೆ. ೧) ಅದು ಚಲಾವಣೆಯ ಹಣ ಮತ್ತು ಮೌಲ್ಯದ ಪ್ರಮಾಣವಾಗಿದೆ. ಮತ್ತು ೨) ರೂಪಾಯಿ ನಾಣ್ಯವು ಬೆಳ್ಳಿ ಎಂಬ ಲೋಹದ ಗಟ್ಟಿ ಆಗಿದೆ. ರೂಪಾಯಿಯ ಈ ಎರಡು ಸ್ವರೂಪಗಳಲ್ಲಿ ವ್ಯತ್ಯಾಸವನ್ನು ಮಾಡದೇ ಸಮಿತಿಯು ಪ್ರಮಾದವನ್ನು ಮಾಡಿತು. ೨ ಷಿಲಿಂಗ್ ಸುವರ್ಣ ಎಂಬ ವಿನಿಮಯ ದರವು ಎಂದಿಗೂ ವಾಸ್ತವಿಕ ಸಂಗತಿಯಾಗಿರಲಿಲ್ಲ ಎಂಬುದೇ ಸದ್ಯದ ಸಮಸ್ಯೆಯ ಪರಿಹಾರದ ವಿಚಾರದಲ್ಲಿ ನಾವು ಆ ಗರಿಷ್ಠ ದರವನ್ನು ಅಲಕ್ಷಿಸಿದ್ದು ಪೂರ್ತಿ ಸಮರ್ಥನೀಯ ಎಂಬುದಕ್ಕೆ ಪುರಾವೆಯಾಗಿದೆ. ೧ ಷಿಲಿಂಗ್ ೪ ಪೆನ್ಸ್ ಅನುಪಾತವಾದರೆ ಯುದ್ಧಪೂರ್ವ ಸ್ಥಿತಿಗೆ ಮರಳಿದಂತೆ ಆಗುವುದೆಂಬ ಭಾವನೆಯಿಂದ ನಮ್ಮಲ್ಲಿ ಕೆಲವರು ಅದನ್ನು ಬಯಸುತ್ತಾರೆ. ಈಗ ಯುದ್ಧಪೂರ್ವ ಸ್ಥಿತಿಯನ್ನೇ ಬಯಸುವುದಾದರೆ ಬೆಲೆಗಳ ಪ್ರಕಾರ

ಪ್ರಮಾಣಿಸಿ ನೋಡಿದರೆ ೧೯೨೪ರ ೧ ಷಿಲಿಂಗ್ ೪ ಪೆನ್ಸ್ ಮೊತ್ತ ೧೯೧೩ರ ೧ ಷಿಲಿಂಗ್ ೪ ಪೆನ್ಸ್ ಅಲ್ಲ ಎಂದು ಸರ್ಕಾರವು ದೃಢವಾಗಿ ಹೇಳಬಹುದು. ಎಷ್ಟೋ ಜನರಿಗೆ ಈ ಸಂಗತಿಯ ಅರಿವು ಇದ್ದಂತೆ ಕಾಣುವುದಿಲ್ಲ. ಆದರೆ ಇದು ನಿರ್ವಿವಾದ ಸತ್ಯ. ೧೯೧೪ರಲ್ಲಿ ಮತ್ತು ೧೯೨೪ ರಲ್ಲಿ ಅದೇ (೧ ಷಿಲಿಂಗ್ ೪ ಪೆನ್ಸ್) ದರ ಇದ್ದಿತು. ಆದರೆ ಮಾರಾಟದ ಬೆಲೆಗಳ ಸೂಚ್ಯಂಕ ೧೯೧೪ ರಲ್ಲಿ ೧೦೦ ಇದ್ದದ್ದು ಡಿಸೆಂಬರ್ ೧೯೨೪ರ ವೇಳೆಗೆ ೧೭೬ಕ್ಕೆ ಏರಿತ್ತು. ಇದರಿಂದ ೧ ಶಿಲಿಂಗ್ ೪ ಪೆನ್ಸನ್ನು ರೂಪಾಯಿಯ ವಿನಿಮಯ ಮೌಲ್ಯವಾಗಿ ಸ್ಥಿರಪಡಿಸುವುದರಿಂದ ಯುದ್ಧಪೂರ್ವ ಸ್ಥಿತಿಗೆ ಮರಳುವುದು ಸಾಧ್ಯವಿಲ್ಲ ಎಂದು ಸಿದ್ಧವಾಗುತ್ತದೆ. ಆ ಸ್ಥಿತಿಗೆ ಮರಳಲು ನಾವು ಸದ್ಯದ ಬೆಲೆಗಳನ್ನು ೭೬% ರಷ್ಟು ಹೆಚ್ಚಿಸಬೇಕು. ಅಂದರೆ ರೂಪಾಯಿಯ ಮೌಲ್ಯವನ್ನು ೭೬% ರಷ್ಟು ಹೆಚ್ಚಿಸಬೇಕು. ಇಂಥ ಕ್ರಮದ ಅಂತಿಮ ಅರ್ಥ ೨ ಷಿಲಿಂಗ್‌ಗಳ ಅನುಪಾತವಾಗುತ್ತದೆ. ಆದರೆ ನಾವು ಯುದ್ಧಪೂರ್ವ ಸ್ಥಿತಿಯನ್ನೇ ಬಯಸುವ ಔಚಿತ್ಯವೇನು ಎಂದು ಪ್ರಶ್ನಿಸಬಹುದು. ಈ ಸ್ಥಿತಿಗೆ ಮರಳುವ ಆವಶ್ಯಕತೆ ಇಲ್ಲ. ಹಳೆಯ ಕರಾರುಗಳು ಈಗ ಚಾಲ್ತಿಯಲ್ಲಿರುವುದಿಲ್ಲ. ಅವುಗಳಲ್ಲಿ ಹೆಚ್ಚಿನವು ಈಗಾಗಲೇ ಮುಗಿದುಹೋಗಿದ್ದು ಅವುಗಳಿಂದ ಆಗಿಹೋದ ಅನ್ಯಾಯಕ್ಕೆ ಪರಿಹಾರವಿಲ್ಲ. ಇದಲ್ಲದೇ ಯಾವುದೇ ಒಂದು ಕಾಲದಲ್ಲಿ ಚಾಲ್ತಿಯಿರುವ ಹಣದ ಕರಾರುಗಳಲ್ಲಿ ಕೆಲವನ್ನು ಒಂದೇ ದಿವಸ ಹಿಂದೆ ಮಾಡಿಕೊಂಡಿರಬಹುದು, ಕೆಲವು ಕರಾರುಗಳನ್ನು ಒಂದು ತಿಂಗಳ ಹಿಂದೆ ಮಾಡಿಕೊಂಡಿರಬಹುದು. ಕೆಲವನ್ನು ಕೆಲವು ವರ್ಷಗಳ ಹಿಂದೆ ಮಾಡಿಕೊಂಡಿರಬಹುದು, ಮತ್ತೆ ಕೆಲವು ನೂರು ವರ್ಷ ಹಳೆಯವು ಇರಬಹುದು. ಆದರೂ ಚಾಲ್ತಿ ಇದ್ದ ಕರಾರುಗಳಲ್ಲಿ ಬಹುಪಾಲು ಇತ್ತೀಚಿನವೇ ಇರುತ್ತವೆ ಎಂಬುದನ್ನು ನಾವು ಮರೆಯಕೂಡದು. ನಿಜ ಸ್ಥಿತಿ ಹೀಗಿರುವಾಗ ಹೊಸದಾಗಿ ಮೌಲ್ಯದ ಆಯ್ಕೆ ಮಾಡುವುದಕ್ಕೆ ಸದ್ಯದ ವ್ಯವಹಾರಗಳ ಮಟ್ಟವನ್ನೇ ಪ್ರಾರಂಭದ ಆಧಾರವನ್ನಾಗಿ ಮಾಡಿಕೊಂಡು ಸಾಗಬೇಕು. ಬೆಲೆಗಳ ಮಟ್ಟವನ್ನು ಇಳಿಸುವ ಉದ್ದೇಶದಿಂದ ನಾವು ಬೇರೆ ರೀತಿಯಿಂದ ನಡೆದರೆ ನಮ್ಮ ವ್ಯಾಪಾರ ಮತ್ತು ಉದ್ದಿಮೆಗಳಿಗೆ ಧಕ್ಕೆಯಾಗಿ ನಮ್ಮ ಅಭಿವೃದ್ಧಿಗೆ ಅಪಾಯವಾಗುತ್ತದೆ. ನಮ್ಮ ಹಣದ ಮೌಲ್ಯವನ್ನು ಈಗಿನಕ್ಕಿಂತ ೭೬% ರಷ್ಟು ಹೆಚ್ಚಿಸುವುದರಿಂದ ಪ್ರತಿ ವ್ಯಾಪಾರಿ ಮತ್ತು ಉದ್ದಿಮೆದಾರನಿಗೆ ತನ್ನ ಸರಕುಗಳ ಮಾರಾಟದಿಂದ ೭೬% ರಷ್ಟು ಕಡಿಮೆ ಉತ್ಪನ್ನ ದೊರೆಯುವುದು. ಇದಲ್ಲದೇ ಅವನು, ಬಂಡವಾಳ ಹೂಡಿದ ಸಾಲಿಗನಿಗೆ ಮತ್ತು ನಿಯಮಿಸಿಕೊಂಡ ಕೆಲಸಗಾರರಿಗೆ ೭೬% ರಷ್ಟು ಹೆಚ್ಚು ಕೊಡಬೇಕಾಗುವುದು. ಇದರಿಂದ ಸಮಾಜದ ಕಾರ್ಯಶೀಲ ಮತ್ತು ದುಡಿಯುವ ವರ್ಗಗಳ ಮೇಲೆ ಅಸಹನೀಯ ಭಾರ ಬೀಳುತ್ತದೆ. ನಾವು ಒಂದು ತರದ ತಪ್ಪು ತಿಳಿವಳಿಕೆಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ನಾನು ಬೆಲೆಗಳ ಇಳಿತಕ್ಕೆ ವಿರೋಧಿಸಿದ ಮಾತ್ರಕ್ಕೆ ಬೆಲೆಗಳ ಏರಿಕೆಗೆ ಪರವಾಗಿ ಇರುವೆನು ಎಂದು ಯಾರೂ ತಿಳಿದುಕೊಳ್ಳಬಾರದು. ಒಮ್ಮೆ ಬೆಲೆಗಳು ಏರಿ ಒಂದು ಮಟ್ಟಕ್ಕೆ ಸ್ಥಿರಗೊಂಡ ಬಳಿಕ ನಾವು ಏರಿದ ಬೆಲೆಗಳ ವಿರುದ್ಧ ಆಕ್ಷೇಪಣೆಗಳನ್ನು ಮಾಡಬಾರದು ಎಂದು ಮಾತ್ರ ನಾನು ಒತ್ತಿ ಹೇಳುತ್ತೇನೆ. ಒಮ್ಮೆ ಸ್ಥಿರಗೊಂಡ ಬಳಿಕ ಆ ಸ್ಥಿತಿಯು ಸಾಮಾನ್ಯ ಮಟ್ಟದ್ದಾಗುತ್ತದೆ. ಯುದ್ಧಪೂರ್ವದ ಮಟ್ಟವು ಅಸಹಜ (ಅಸಾಮಾನ್ಯ) ವಾಗುತ್ತದೆ ಎಂಬ ಕಾರಣದಿಂದಲೇ ಅದನ್ನು ತಿರಸ್ಕರಿಸಬೇಕು.

ಆದ್ದರಿಂದ ೧ ಷಿಲಿಂಗ್ ೩$^{೭}/_{೮}$ ಪೆನ್ಸ್ ಮತ್ತು ೧ ಷಿಲಿಂಗ್ ೬ ಪೆನ್ಸ್ ಇವೆರಡರಲ್ಲಿ ಒಂದನ್ನು ಆಯ್ಕೆ ಮಾಡಬೇಕು. ಆಯ್ಕೆ ಮಾಡುವಾಗ ನ್ಯಾಯಯುತ ಮತ್ತು ನಿಷ್ಪಕ್ಷಪಾತ ಎಂದೆನಿಸುವ ನಿರ್ಣಯವನ್ನೇ ತೆಗೆದುಕೊಳ್ಳಬೇಕು. ಹಣ ಸಂಗ್ರಹಿಸುವುದಕ್ಕಿಂತ ಔದ್ಯೋಗಿಕ ಸಾಹಸಕ್ಕೆ ನಾವು ಹೆಚ್ಚು ಪ್ರೋತ್ಸಾಹ ಕೊಡಬೇಕು. ಅದರಿಂದ ಶ್ರೀಮಂತರು ಹೆಚ್ಚು ಸಿರಿವಂತರಾಗುವುದನ್ನು ಬಹುಶಃ ನಾವು ಬಯಸಿದಂತೆ ಆಗುತ್ತದೆ. ಆದರೆ

ಉಳ್ಳವನಾಗಬೇಕೆಂಬ ಸಹಜ ಪ್ರವೃತ್ತಿಯು ಬಂಡವಾಳಕ್ಕೆ ಆಧಾರವಾಗಿದೆ, ಇದನ್ನು ಕಡೆಗಣಿಸಬೇಕೆಂದಾಗಲಿ, ಬಡವರು ಮತ್ತಷ್ಟು ಬಡವರಾಗಬೇಕೆಂದಾಗಲಿ ನಮ್ಮಲ್ಲಿ ಯಾರೂ ಬಯಸುವುದಿಲ್ಲವೆಂದು ನನಗೆ ಭರವಸೆ ಇದೆ. ಆದರೆ ೧ ಷಿಲಿಂಗ್ ೬ ಪೆನ್ಸ್‌ನ ದರದೆಡೆಗೆ ನಾವು ಸಾಗಿದರೆ ಈ ಪರಿಣಾಮ ಉಂಟಾಗುತ್ತದೆ. ಮತ್ತೊಂದು ಕಡೆ ನಾವು ಬಂಡವಾಳ ಬೆಳೆಯಬೇಕು, ಬಡವರ ಸ್ಥಿತಿ ಸುಧಾರಿಸಬೇಕು ಎಂದು ಇಚ್ಛಿಸುತ್ತಿದ್ದರೂ ಉದ್ದಿಮೆಗಳನ್ನು ಕಡೆಗಣಿಸಲು ಯಾರೂ ಬಯಸುತ್ತಿಲ್ಲ. ಆದರೆ ೧ ಷಿಲಿಂಗ್ ೪ ಪೆನ್ಸ್ ದರವನ್ನೇ ಇಟ್ಟುಕೊಳ್ಳುವುದರಿಂದ ಉದ್ದಿಮೆಗಳ ಸ್ಥೈರ್ಯವನ್ನು ಕೆಡಿಸುತ್ತೇವೆ.

ನನ್ನ ಇಚ್ಛೆಗೆ ಬಿಟ್ಟಲ್ಲಿ ಶಕ್ಯವಿದ್ದರೆ ೧ ಷಿಲಿಂಗ್ ೬ ಪೆನ್ಸ್ ಅನುಪಾತವನ್ನೇ ಆಯ್ಕೆಮಾಡಿ ಆ ಮಟ್ಟಕ್ಕೆ ಸ್ಥಿರವಾಗಿ ಇಡುತ್ತಿದ್ದೆ. ಈ ಆಯ್ಕೆಯನ್ನು ನಾನು ಮಾಡಲಿಕ್ಕೆ ಕಾರಣಗಳು ಹೀಗೆ ಇವೆ. ೧) ಅದು ಬಂಡವಾಳ ಹೂಡುವ ಮತ್ತು ದುಡಿಯುವ ವರ್ಗಗಳಿಗೆ ಹಾನಿಯಾಗದಂತೆ ಅವರ ಸ್ಥಿತಿಯನ್ನು ರಕ್ಷಿಸುವುದು, ೨) ವ್ಯಾಪಾರಿ ವರ್ಗಕ್ಕೆ ಹೆಚ್ಚಿನ ಭಾರವಾಗದಂತೆ ಮಾಡಿ ವ್ಯಾಪಾರಕ್ಕೆ ಮತ್ತು ಆರ್ಥಿಕ ಉನ್ನತಿಗೆ ವಿಪತ್ತು ಬಾರದಂತೆ ನೋಡಿಕೊಳ್ಳುತ್ತದೆ. ಮತ್ತು ೩) ಈಚಿನ ಅನುಪಾತವೇ ಆಗಿರುವ ಕಾರಣದಿಂದ, ಹೆಚ್ಚಾಗಿ, ಇತ್ತೀಚಿನವೇ ಆಗಿರುವ ಹಣದ ಕರಾರುಗಳಲ್ಲಿನ ಉಭಯ ಪಕ್ಷದವರಿಗೆ ನ್ಯಾಯಸಮ್ಮತವೆನಿಸುತ್ತವೆ.

ಸುದೈವದಿಂದ ಅನುಪಾತದ ಸ್ಥಿರೀಕರಣಕ್ಕಾಗಿ ಬೇರೆ ದೇಶಗಳ ಮೇಲೆ ಅವಲಂಬಿಸಿದಂತೆ ಆಂತರಿಕ ಬೆಲೆಗಳ ಮಟ್ಟದ ಸ್ಥಿರತೆಗಾಗಿ ನಾವು ಪರಾವಲಂಬಿಗಳಾಗಬೇಕಾಗಿಲ್ಲ. ಅನುಪಾತದ ಸ್ಥಿರೀಕರಣಕ್ಕಾಗಿ ನಾವು ಅಪೇಕ್ಷಿಸಿದರೂ ಸ್ವಾವಲಂಬಿಗಳಾಗಲು ಸಾಧ್ಯವಿಲ್ಲ. ನಮ್ಮಲ್ಲಿನ ಬೆಲೆಗಳನ್ನೂ ಅನುಪಾತವನ್ನೂ ಜೊತೆಯಾಗಿಯೇ ಸ್ಥಿರವಾಗಿಡಲು ಸಾಧ್ಯವಿದ್ದರೆ ಇನ್ನೂ ಚೆನ್ನಾಗಿ ಇರುತ್ತಿತ್ತು. ಆದರೆ ಇತರ ದೇಶಗಳಿಗೆ ತಮ್ಮ ಬೆಲೆಗಳ ಮಟ್ಟವನ್ನು ಸ್ಥಿರವಾಗಿಡಲು ಶಕ್ಯವಾಗದು ಎಂಬ ಕಾರಣದಿಂದ ನಮ್ಮ ಬೆಲೆಗಳ ಸ್ಥಿರತೆಯನ್ನು ಕಾಪಾಡಿಕೊಳ್ಳಲು ಅಗತ್ಯವಾದ ಕ್ರಮಗಳನ್ನು ಕೈಬಿಡಬಾರದು. ಹಣದ ಮಾಧ್ಯಮದಿಂದ ಹೆಚ್ಚೆಂದರೆ ಬೆಲೆಗಳ ಸ್ಥಿರತೆಯನ್ನೇ ಅಪೇಕ್ಷಿಸಬಹುದು. ರೂಪಾಯಿಯ ವಿನಿಮಯ ದರವನ್ನು ೧ ಷಿಲಿಂಗ್ ೬ ಪೆನ್ಸ್ ಸ್ಟರ್ಲಿಂಗ್ ಮಟ್ಟದಲ್ಲಿ ಸ್ಥಿರವಾಗಿಡುವ ಮೂಲಕ ನಾವು ಈಗಲೇ ಆಂತರಿಕ ಬೆಲೆಗಳನ್ನು ಸ್ಥಿರಗೊಳಿಸಬೇಕೆಂದು ನನ್ನ ಅಭಿಪ್ರಾಯ. ಐರೋಪ್ಯ ದೇಶಗಳು ಹಣದ ವಿಷಯಗಳಲ್ಲಿ ವಾಸ್ತವಿಕವಿರುವುದೇ ನೈಸರ್ಗಿಕ ಮತ್ತು ಸಾಮಾನ್ಯವೆಂಬುದನ್ನೂ ಯುದ್ಧಪೂರ್ವದ ಅನುಪಾತಗಳನ್ನೇ ಬಯಸುವುದು ಹುಚ್ಚುತನವೆಂಬುದನ್ನೂ ತಿಳಿದುಕೊಳ್ಳುತ್ತವೆ. ನಮ್ಮ ನಿರೀಕ್ಷೆಗಿಂತ ಬೇಗ ಈ ದೇಶಗಳು ಇದನ್ನು ಅರಿತುಕೊಂಡರೆ ಈಗಿರುವ ಮಟ್ಟದಲ್ಲಿಯೇ ಬಂಗಾರಕ್ಕೆ ಸಂಬಂಧಿಸಿದಂತೆ ತಮ್ಮ ಹಣದ ಮೌಲ್ಯವನ್ನು ಸ್ಥಿರಗೊಳಿಸುತ್ತವೆ. ಹೀಗಾದರೆ ಬಂಗಾರವು ಅಂತರರಾಷ್ಟ್ರೀಯ ಮೌಲ್ಯದ ಪ್ರಮಾಣವಾಗಿ ಮತ್ತೆ ಕಾರ್ಯನಿರ್ವಹಿಸಲು ಪ್ರಾರಂಭಿಸುತ್ತದೆ ಮತ್ತು ನಾವೆಲ್ಲ ವಿನಿಮಯದ ದರದ ಸ್ಥಿರತೆಯನ್ನು ಸಾಧಿಸುವೆವು. ಆದರೆ ಇದಾಗುವ ಮೊದಲೇ ನಾವು ಬಂಗಾರಕ್ಕೆ ಸಂಬಂಧಿಸಿದಂತೆ ಬೆಲೆಗಳನ್ನು ಸ್ಥಿರವಾಗಿಟ್ಟುಕೊಂಡರೆ ಅದರಿಂದ ಯಾವ ನಷ್ಟವೂ ಇಲ್ಲ.

ಸದ್ಯದಲ್ಲಿ ನಿರ್ವಹಿಸಲ್ಪಡುವ ಹಣದ ವ್ಯವಸ್ಥೆಯ (Managed Currency) ಬದಲು ಹೊಸ ಸ್ವಯಂಚಾಲಿತ (Automatic) ಹಣದ ವ್ಯವಸ್ಥೆಯನ್ನು ಸ್ಥಾಪಿಸುವ ಮುನ್ನ, ತಮ್ಮ ಹಣದ ಪುನಾರಚನೆಯ ಯಾವ ಕ್ರಮಗಳನ್ನೂ ತೆಗೆದುಕೊಳ್ಳಬಾರದು ಎನ್ನುವ ಒಂದು ಹೊಸ ದೃಷ್ಟಿಕೋನವು ಈ ವಾದ ವಿವಾದವು ನಡೆದಾಗಲೇ ಹುಟ್ಟಿಕೊಂಡಿದೆ. ಈ ದೃಷ್ಟಿಕೋನದ ಬಗೆಗೆ ನನಗೆ ಸಾಕಷ್ಟು ಸಹಾನುಭೂತಿ ಇದೆ. ಇದಕ್ಕೆ ಕಾರಣ ಸ್ವಯಂಚಾಲಿತ ಹಣ-ವ್ಯವಸ್ಥೆ ಯಾವಾಗಲೂ ನಿರ್ವಹಿಸಲ್ಪಡುವ ಹಣದ ವ್ಯವಸ್ಥೆಗಿಂತ ಹೆಚ್ಚು ಸ್ಥಿರತೆ ತರುವುದು ನಿಶ್ಚಿತ ಎಂದಲ್ಲ. ಆದರೆ ಈ ದೃಷ್ಟಿಕೋನವು ಸ್ಥಿರತೆಯನ್ನು ಸಾಧಿಸುವುದಕ್ಕಿಂತ, ಸಾಧಿಸಿದ

ಸ್ಥಿರತೆಯನ್ನು ಕಾಯ್ದುಕೊಳ್ಳುವುದು ಹೇಗೆ ಎಂಬ ಪ್ರಶ್ನೆ ಹೆಚ್ಚು ಮಹತ್ವದ್ದಾಗಿದೆ ಎಂಬುದನ್ನು ನೆನಪಿಸುತ್ತದೆ. ಈ ಕಾರಣದಿಂದಲೇ ಅದಕ್ಕೆ ನನ್ನ ಸಹಾನುಭೂತಿ ಉಂಟು. ಆದರೆ ಹಿತ ಹಣದ ವ್ಯವಸ್ಥೆ ಮತ್ತು ಸ್ವಯಂಚಾಲಿತ ಹಣದ ವ್ಯವಸ್ಥೆ ಇವುಗಳಲ್ಲೊಂದನ್ನು ಆರಿಸಿಕೊಳ್ಳುವ ನಿರ್ಣಯವು ಆಗುವತನಕ ನಮ್ಮ ಬೆಲೆಗಳನ್ನು ಸ್ಥಿರವಾಗಿಡಲು ಯಾವ ಯತ್ನವನ್ನೂ ಮಾಡಬಾರದೆಂಬ ಸೂಚನೆ ಹೇಗಿದೆಯೆಂದರೆ, ದೇವತೆಗಳು ಭೂಮಿಯನ್ನು ಸ್ವರ್ಗವನ್ನಾಗಿ ಮಾಡಲು ಒಪ್ಪಲಿಲ್ಲ ಎಂಬ ಕಾರಣಕ್ಕಾಗಿ ಅದನ್ನು ನರಕವನ್ನಾಗಿ ಮಾಡುವ ಸೂಚನೆಯಂತಿದೆ. ಆದ್ದರಿಂದ ಅದು ಪೂರಾ ಭಿನ್ನವಾದ ಆಲೋಚನಾ ವಿಷಯ ಎಂದು ನಾನು ತಿಳಿದಿರುವೆ. ಮುಂದೆ ಯಾವಾಗಲಾದರೂ ಅದರ ಬಗೆಗೆ ವಿಮರ್ಶೆ ಉಪಯುಕ್ತವಾದೀತು, ಆದರೆ ಈಗ ಅಲ್ಲ.

# ದಿ ಇಕನಾಮಿಕ್ ಜರ್ನಲ್

## ದಿ ಜರ್ನಲ್ ಆಫ್ ದಿ ರಾಯಲ್ ಇಕನಾಮಿಕ್ ಸೊಸೈಟಿ

ಸಂಪಾದಕರು :

**ಜೆ.ಎಮ್. ಕೀನ್ಸ್ ಮತ್ತು ಡಿ.ಎಚ್. ಮ್ಯಾಕ್ ಗ್ರೇಗಾರ್**

**ಸಂಪುಟ XXXVI**

**ಲಂಡನ್, ಮ್ಯಾಕ್‌ಮಿಲನ್ ಅಂಡ್ ಕಂ. ಲಿಮಿಟೆಡ್**
**ನ್ಯೂಯಾರ್ಕ್, ದಿ ಮ್ಯಾಕ್‌ಮಿಲನ್ ಕಂಪನಿ**
**೧೯೨೬**

### ವಿಮರ್ಶೆ :
### ೧. 'ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಣಕಾಸಿನ ವಿಕಾಸ'

ಬಿ.ಆರ್. ಅಂಬೇಡ್ಕರ್ ಇವರಿಂದ

(ಲಂಡನ್ : ಪಿ.ಎಸ್. ಕಿಂಗ್ ಅಂಡ್ ಸನ್ಸ್, ಪುಟಗಳು XXI + ೨೮೫, ೧೫ ಷಿಲಿಂಗ್)

ಈ ಗುಂಪಿನಲ್ಲಿ ಎರಡೇ ಕೃತಿಗಳು ಭಾರತದ ಬಗ್ಗೆ ನಮ್ಮ ಜ್ಞಾನವನ್ನು ಹೆಚ್ಚಿಸುತ್ತವೆ. ಉಳಿದವುಗಳು ಭಾರತೀಯ ವಿದ್ಯಾರ್ಥಿಗಳ ಸಲುವಾಗಿ ಬರೆದ ಪಠ್ಯಪುಸ್ತಕಗಳಾಗಿರುವವು. ಶ್ರೀ ಅಂಬೇಡ್ಕರರಲ್ಲಿ ನೀರಸವಾದ ವಿಷಯಗಳನ್ನು ಆಕರ್ಷಣೀಯಗೊಳಿಸುವ ಸಾಮರ್ಥ್ಯವಿದ್ದು ಅವರು ಬಹಳ ವಾಚನೀಯ ಗ್ರಂಥವನ್ನು ಬರೆದಿದ್ದಾರೆ. ಹಣಕಾಸಿನ ವಿಷಯಗಳ ಮೇಲೆ ಬರೆದಿರುವ ಲೇಖಕರು ಇಲ್ಲಿಯವರೆಗೆ ಭಾರತದಲ್ಲಿ ಪ್ರಾಂತೀಯ ಹಣಕಾಸು ವಿಷಯವನ್ನು ಸಂಪೂರ್ಣವಾಗಿ ಅಲಕ್ಷಿಸಿದ್ದಾರೆ. ಸರ್ಕಾರದ ನೀಲಿ ಪುಸ್ತಕ ಮತ್ತು ನೆನಪಿನ ಟಿಪ್ಪಣಿಗಳನ್ನು ಹೊರತುಪಡಿಸಿ ಮತ್ತಾವುದೂ ಪ್ರಕಟವಾಗಿಲ್ಲ. ಈ 'ಬ್ರಿಟಿಷ್ ಭಾರತದಲ್ಲಿ ಪ್ರಾಂತೀಯ ಹಣಕಾಸು' ಹೊತ್ತಿಗೆಯು ಐತಿಹಾಸಿಕ ದೃಷ್ಟಿಕೋನದಿಂದ ಬರೆಯಲಾದ ಮೊದಲ ಉಪಯುಕ್ತ, ಪರಿಚಯಾತ್ಮಕ ಗ್ರಂಥವಾಗಿದೆ. ಅದು ಸಮಗ್ರ ಕೃತಿಯಾಗಿರದಿದ್ದರೂ, ಅಗತ್ಯವಾಗಿ ಮೂಲಕೃತಿಯಾಗಿದೆ. ಇದರಲ್ಲಿ ನಾಲ್ಕು ಭಾಗಗಳಿವೆ. ಭಾಗ I ಹೊಸ ಆಡಳಿತ ಪ್ರಾರಂಭವಾದ ೧೮೩೩–೭೧ರ ಅವಧಿಯ ಇತಿಹಾಸವನ್ನು ಚಿತ್ರಿಸುತ್ತದೆ. ಕೇಂದ್ರೀಕರಣ ವಿಫಲವಾದದ್ದರಿಂದ ಆ ವ್ಯವಸ್ಥೆಯ ವಿರೋಧಿಗಳು "ಪ್ರಸಕ್ತ ಸುಧಾರಣೆಗಳನ್ನು ನಿರೀಕ್ಷಿಸಿ ಪ್ರಾಂತೀಯ ಸರ್ಕಾರಗಳನ್ನು ಏಜೆಂಟ್ ಮತ್ತು ಸೇವಕ ದರ್ಜೆಯಲ್ಲಿಡದೇ ಭಾರತೀಯ ಹಣಕಾಸಿನ ಬೃಹತ್ ಸಂಯುಕ್ತ ನಿಧಿಪತ್ರದ ಪಾಲುದಾರರನ್ನಾಗಿ ಮಾಡಲಿಚ್ಛಿಸಿದರು. ಆದರೆ ವಿರೋಧವು ತೀವ್ರವಾದದ್ದರಿಂದ ಮತ್ತು ಪರಿಹಾರವು ರಾಜೀಸೂತ್ರವಾಗಿದ್ದುದರಿಂದ ಅದರ ವಿವರಣೆಗಳನ್ನು ಭಾಗ II ರಲ್ಲಿ ನೀಡಲಾಗಿದೆ.

ಇದರಲ್ಲಿ "ಕಾರ್ಯನಿಯೋಜನೆ ಮುಂಗಡಪತ್ರ", "ಕಾರ್ಯನಿಯೋಜನಾ ರಾಜ್ಯಾದಾಯ ಮುಂಗಡಪತ್ರ", "ವಿತರಿಸಲಾದ ರಾಜ್ಯಾದಾಯ ಆಯವ್ಯಯ ಪತ್ರ" ಇತ್ಯಾದಿ ವಿಧಾನಗಳನ್ನು ವರ್ಣಿಸಲಾಗಿದೆ. ಇಚ್ಚಿತ ಫಲಿತಾಂಶವನ್ನು ನೀಡುವಲ್ಲಿ ಇವು ಯಾವುವೂ ಯಶಸ್ವಿಯಾಗಲಿಲ್ಲ. 'ಕೇಂದ್ರ ಹಾಗೂ ಪ್ರಾಂತೀಯ ಸರ್ಕಾರಗಳ ನಡುವಿನ ಹಣಕಾಸು ಸಂಬಂಧವೇನೇ ಇದ್ದರೂ, ಪ್ರಾಂತೀಯ ಸರ್ಕಾರಗಳು ಕಾಯಿದೆಗೆ ಬದ್ಧವಾಗಿರದೆ ಅಥವಾ ವಾಸ್ತವಿಕವಾಗಿ ಸ್ವತಂತ್ರವಿರದೆ ತೀವ್ರ ನಿಯಂತ್ರಣಕ್ಕೊಳಪಟ್ಟಿದ್ದವು. ಭಾಗ **III** ವಿಶ್ಲೇಷಣಾತ್ಮಕವಿದ್ದು, ಅದು ಈ ದಿಶೆಯಲ್ಲಿ ವಿವರವನ್ನು ನೀಡುವ ಪ್ರಯತ್ನವಾಗಿದೆ. ಈ ಕೃತಿಯು ಸ್ವಾರಸ್ಯಪೂರ್ಣವಾಗಿದ್ದರೂ, ಲೇಖಕರು ಭಾವಿಸಿದಷ್ಟು ಮಹತ್ವದ್ದಾಗಲಿಕ್ಕಿಲ್ಲ. ಭಾಗ IV ಹೊಸ ಸುಧಾರಣೆಗಳು ಆರಂಭವಾದಾಗಿನಿಂದ ಈಚೆಗಿನ ಹಣಕಾಸು ವಿಷಯವನ್ನು ಚರ್ಚಿಸುತ್ತದೆ. ವಿಷಯವು ಬಹಳ ಜಟಿಲವಿರುವುದರಿಂದ ಮತ್ತು ಅದಕ್ಕೆ ಅತಿ ಕಡಿಮೆ ಸ್ಥಳವನ್ನು ನೀಡಿರುವುದರಿಂದ, ನಿರೂಪಣೆಯು ಅಷ್ಟು ಚೆನ್ನಾಗಿಲ್ಲ. ದ್ವಿ–ಸರ್ಕಾರ ವ್ಯವಸ್ಥೆಯಲ್ಲಿ ಉತ್ತಮ ಹಣಕಾಸು ಪದ್ಧತಿಯನ್ನು ಅಪೇಕ್ಷಿಸಲಾಗದು ಎಂಬ ತೀರ್ಮಾನಕ್ಕೆ ಬರಲಾಗಿದೆ.

ವಿವಾದಾತ್ಮಕವಾದ ಈ ವಿಷಯವನ್ನು ಉತ್ಕೃಷ್ಟವಾಗಿ ಮತ್ತು ನಿಷ್ಪಕ್ಷಪಾತ ರೀತಿಯಲ್ಲಿ ಚರ್ಚಿಸಿರುವ ಲೇಖಕರಿಗೆ ಅಭಿನಂದನೆಗಳು ಸಲ್ಲಬೇಕು.

**–ಡಬ್ಲ್ಯೂ.ಎಸ್. ಥ್ಯಾಚರ್**

# ವಿಮರ್ಶೆ

## ೨. ಕರೆನ್ಸಿ ಅಂಡ್ ಎಕ್ಸ್‌ಚೇಂಜಸ್*
## ಇಂಡಿಯನ್ ಕರೆನ್ಸಿ ಅಂಡ್ ಎಕ್ಸ್‌ಚೇಂಜ್

**ಲೇಖಕರು : ಎಚ್.ಎಲ್. ಚಬ್ಲಾನಿ. ಎಂ.ಎ.**
(ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಮುಂಬಯಿ). ೧೯೨೫.
೧೮೪ ಪುಟಗಳು. ಬೆಲೆ: ನಾಲ್ಕು ರೂಪಾಯಿ ಎಂಟಾಣೆ

ಈ ಪುಸ್ತಕವು ಒಂದು ನಿಕೃಷ್ಟ ಕೃತಿಯಾಗಿದೆ. ಲೇಖಕರಿಂದ ತಕ್ಕಮಟ್ಟಿಗೆ ಜಟಿಲವಾದ ವಿಷಯದ ಬಗೆಗೆ ಅವಸರದಿಂದ ಬರೆಯಲಾದ ೧೮೦ ಪುಟಗಳ ಸಣ್ಣ ಮಿತಿಯಲ್ಲಿ ಸಾಕಷ್ಟು ವಿಷಯ ಸಂಗ್ರಹವೂ ಇಲ್ಲ, ವಿಷಯದ ಮೇಲೆ ಬೆಳಕನ್ನೂ ಚೆಲ್ಲಿಲ್ಲ. ಕ್ರಮಬದ್ಧವಾದ ವಿಧಾನಗಳ ಅಭಾವ ಎದ್ದು ಕಾಣುವಂತಿದೆ. ಪುಸ್ತಿಕೆಯಲ್ಲಿ ವಿಪುಲವಾಗಿರುವ ವಿಕ್ಷಿಪ್ತ ಅಭಿಪ್ರಾಯಗಳನ್ನೂ ಪರಸ್ಪರ ವಿರೋಧಿ ಹೇಳಿಕೆಗಳನ್ನೂ ಅವಲೋಕಿಸಿದಾಗ ಲೇಖಕರ ಖಚಿತ ಅಭಿಪ್ರಾಯಗಳನ್ನು ಅರಿಯುವುದೇ ಕಷ್ಟ. ಒಂದೆಡೆ ಅವರು ಭಾರತ ಬಡ ದೇಶವಾಗಿರುವುದರಿಂದ ಇಲ್ಲಿ ಬಂಗಾರದ ಚಲಾವಣೆ ಆಗಲಾರದೆಂದು ಹೇಳುತ್ತಾರೆ. ಇನ್ನೊಂದೆಡೆ ರೂಪಾಯಿಯ ಚಲಾವಣೆ ಇರುವುದರಿಂದ ಭಾರತದಲ್ಲಿ ಬಂಗಾರದ ಚಲಾವಣೆ ಆಗಲಾರದೆಂದು ಹೇಳುತ್ತಾರೆ. ಅರ್ಥಶಾಸ್ತ್ರದ ಅತೀ ಸರಳ, ಸ್ಪಷ್ಟವಾದ ಪ್ರಸ್ತಾಪವೆನಿಸಿದ ಹಣದ ಪರಿಮಾಣ ಸಿದ್ಧಾಂತವನ್ನು (Quantity Theory of Money) ಚರ್ಚಿಸಲು ಒಂದು ಇಡೀ ಅಧ್ಯಾಯವನ್ನೇ ವಿನಿಯೋಗಿಸಿದ ಬಳಿಕ ೧೮೭೩ರ ನಂತರ ರೂಪಾಯಿಯ ಮೌಲ್ಯದ ಏರಿಕೆಗೆ ಟಂಕಸಾಲೆಯಲ್ಲಿ ರೂಪಾಯಿಗಳನ್ನು ಹೊರತರುವುದರ ಮೇಲಿನ ಮಿತಿಯು ಕಾರಣವಲ್ಲ ಎಂಬುದು ಅವರ ಹೇಳಿಕೆ. ವಿದೇಶೀ ವಿನಿಮಯಗಳ ಬಗೆಗಿನ ಅಧ್ಯಾಯದಲ್ಲೂ ಇದೇ ತರಹದ ಪರಸ್ಪರ ವಿರೋಧಿ ಹೇಳಿಕೆಗಳು ಉಂಟು. ಈ ಅಧ್ಯಾಯದಲ್ಲಿ ಕೊಳ್ಳುವ ಶಕ್ತಿಯ ಸಮಾನತೆಯ ಸಿದ್ಧಾಂತವನ್ನು (Purchasing Power Parity Theory) ಆಮದು–ರಫ್ತುಗಳ ಮೌಲ್ಯಾಂತರದ ಸಿದ್ಧಾಂತದೊಡನೆ (Balance of Trade Theory) ಹೋಲಿಸಿ ವ್ಯತ್ಯಾಸಗಳನ್ನು ತೋರಿಸಿ, ಇವೆರಡರಲ್ಲಿ ಮೊದಲನೆಯದೇ ಸರಿಯಾಗಿದೆಯೆಂದು ತಮ್ಮ ನಿರ್ಣಯವನ್ನು ಕೊಟ್ಟಿದ್ದಾರೆ. ಆದರೆ ಗ್ರಂಥದುದ್ದಕ್ಕೂ ಅವರು ತಾವೇ ಹೇಳಿದಂತೆ ತಪ್ಪು ಸಿದ್ಧಾಂತವಾದ ವ್ಯಾಪಾರ ಬಾಕಿ ಸಿದ್ಧಾಂತವನ್ನಾಧರಿಸಿಯೇ ವಾದಿಸಿದ್ದಾರೆ. ತಮ್ಮ ಪ್ರಾರಂಭಿಕ ಅಧ್ಯಾಯದಲ್ಲಿ ಬೆಳ್ಳಿ ಪ್ರಮಿತಿಗೆ ಮರಳಿದರೆ ಏನೂ ಅಸಂಬದ್ಧತೆ ಇಲ್ಲ ಎಂದು ಹೇಳಿದ್ದಾರೆ. ಲೇಖಕರ ಮತದಲ್ಲಿ ಹಣದ ನಿರ್ವಹಣೆಯು ನಮ್ಮ ಹಣ ವ್ಯವಸ್ಥೆಯ ಅತೀ ಮುಖ್ಯ ದೋಷವಾಗಿದೆ. ಹೀಗಿದ್ದೂ ಈ ದೋಷದ ನಿವಾರಣೆಗಾಗಿ ಅವರು ಪರಿವರ್ತನೀಯ ರೂಪಾಯಿಯನ್ನು ಶಿಫಾರಸು ಮಾಡುತ್ತಾರೆ.

---

೧. 'ದಿ ಸರ್ವೆಂಟ್ ಆಫ್ ಇಂಡಿಯಾ', ಜೂನ್ ೨೫, ೧೯೨೫

ಲೇಖಕರ ರಾಜೀಮನೋಭಾವಕ್ಕೆ ಭಾರತದ ಹಣವ್ಯವಸ್ಥೆಯ ಪುನರ್ರಚನೆಗಾಗಿ ಮಾಡಲಾದ ಎಲ್ಲ ಸೂಚನೆಗಳನ್ನು ಅವರು ಸ್ವೀಕರಿಸಿರುವುದೇ ಸಾಕ್ಷಿಯಾಗಿದೆ. ಅವರ ಅಭಿಪ್ರಾಯದಲ್ಲಿ ಡಾ. ಫಿಷರ್ ಅವರ ಯೋಜನೆ ಒಳ್ಳೆಯದು, ಬೆಳ್ಳಿ ಪ್ರಮಿತಿಯ ಮರು–ಸ್ಥಾಪನೆಯು ಒಳ್ಳೆಯದು ಹಾಗೂ ಅಂತರರಾಷ್ಟ್ರೀಯ ಸುವರ್ಣ ಪ್ರಮಿತಿಯು ಒಳ್ಳೆಯದೇ. ಆದರೂ ಅವರದೇ ಅಚ್ಚುಮೆಚ್ಚಿನ ಒಂದು ಯೋಜನೆ ಸಹ ಉಂಟು, ಅದಾವುದೆಂದರೆ 'ಪರಿವರ್ತನೀಯ ರೂಪಾಯಿ' – ರೂಪಾಯಿಯನ್ನು ಬಂಗಾರದ ಗಟ್ಟಿಯ ರೂಪದಲ್ಲಿ ಮಾತ್ರ ಪರಿವರ್ತಿಸುವ ವ್ಯವಸ್ಥೆ. ಲೇಖಕರು ಅದನ್ನು ಬಹಿರಂಗವಾಗಿ ಹೇಳದಿದ್ದರೂ, ಈ ಯೋಜನೆಯನ್ನು ರಿಕಾರ್ಡೋ ತಮ್ಮ "ಪ್ರಪೋಸಲ್ಸ್ ಫಾರ್ ಎನ್ ಇಕನಾಮಿಕಲ್ ಅಂಡ್ ಸೆಕ್ಯೂರ್ ಕರೆನ್ಸಿ" ಎಂಬ ಲೇಖನದಲ್ಲಿ ಸೂಚಿಸಿದ್ದರು. ಇಂಗ್ಲೆಂಡಿನ ಸುದೈವದಿಂದ ಅದು ಸ್ವೀಕೃತವಾಗಲಿಲ್ಲ. ಈ ನಿರಾಕರಣಕ್ಕೆ ಸರಳ ಕಾರಣಗಳಿದ್ದವು. ನೋಟುಗಳನ್ನು ನಿರ್ದಿಷ್ಟ ತೂಕದ ಬಂಗಾರದ ಗಟ್ಟಿಗಳ ರೂಪದಲ್ಲಿ ಮಾತ್ರ ಪರಿವರ್ತಿಸಲಾಗುವುದೆಂದು ಕಾನೂನು ಮಾಡಿದರೆ ಬಂಗಾರದ ಗಟ್ಟಿಗಳ ಮೌಲ್ಯದಷ್ಟು ನೋಟುಗಳಿದ್ದವರು ಮಾತ್ರ ಪರಿವರ್ತಿಸಬಲ್ಲರು. ಉಳಿದವರು ಪರಿವರ್ತಿಸಲಾರರು ಎಂದೇ ಅರ್ಥ. ಇಂಥ ಪದ್ಧತಿಯು ಪರಿವರ್ತನೀಯತೆಯ ಶಕ್ತಿಯನ್ನು ಕುಂದಿಸಿ ಹಣದುಬ್ಬರಕ್ಕೆ ದಾರಿ ಮಾಡಿಕೊಡುವುದೆಂದು ಜನಮತವಿತ್ತು. ಬಹುಜನರು ಇಂಥ ಪದ್ಧತಿ ಸಾಕಷ್ಟು ಭದ್ರವಲ್ಲ ಎಂಬ ಅಭಿಪ್ರಾಯದವರಾಗಿದ್ದರು. ಈ ಪ್ರಸ್ತಾಪ ಮಿತವ್ಯಯಕಾರಿ ಹೌದೋ, ಅಲ್ಲವೋ ಎನ್ನುವ ಅಂಶದ ಬಗೆಗೆ ಆ ಕಾಲಕ್ಕೆ ಚರ್ಚೆಯಾಗಲಿಲ್ಲ. ಈಗ ಅದನ್ನು ಚರ್ಚಿಸುವುದು ಪ್ರಸ್ತುತ ಆಗಬಹುದು. ಏಕೆಂದರೆ ಈ ಪುಸ್ತಿಕೆಯ ಲೇಖಕರನ್ನೊಳಗೊಂಡು ಹಲವು ಲೇಖಕರು ತಾವು ಸುಸಂಸ್ಕೃತರೆಂದು ತೋರಿಸಿಕೊಳ್ಳಲು ಬಂಗಾರವನ್ನು ಹಣವನ್ನಾಗಿ ಉಪಯೋಗಿಸುವ – ಬರ್ಬರ ಎಂದು ಕರೆಯಲಾದ – ಪದ್ಧತಿಯನ್ನು ದೂಷಿಸುತ್ತಿದ್ದಾರೆ. ಈ ವಿಷಯದ ಮೇಲಿನ ಈ ಸುಸಂಸ್ಕೃತ ಲೇಖಕರು ಕಾಗದವನ್ನು ವಿನಿಮಯದ ಸಾಧನದಂತೆ (ಹಣದಂತೆ) ಉಪಯೋಗಿಸುವುದು ಬಂಗಾರವನ್ನು ಉಪಯೋಗಿಸುವುದಕ್ಕಿಂತ ಹೆಚ್ಚು ಮಿತವ್ಯಯಕಾರಿ, ಎಂಬ ನಿರ್ವಿವಾದ ಮತ್ತು ಸ್ವಯಂಸಿದ್ಧವಾದ ಪ್ರಸ್ತಾಪವನ್ನು ಸಿದ್ಧಪಡಿಸಲು ತಮ್ಮ ಶಕ್ತಿಸಾಮರ್ಥ್ಯಗಳನ್ನೆಲ್ಲ ವಿನಿಯೋಗಿಸುತ್ತಿದ್ದಾರೆ. ಆದರೆ ಈ ಲೇಖಕರಿಗೆ ಇಂಥ ಯೋಜನೆಯು ಮಿತವ್ಯಯಕಾರಿಯಾಗಿರುವುದಲ್ಲದೇ ಸುಭದ್ರವಾಗಿದೆ, ಎಂದರೆ ಬೆಲೆಗಳ ಸ್ಥಿರತೆಯ ಭರವಸೆ ಕೊಡುತ್ತದೆ ಎಂದು ಸಿದ್ಧಮಾಡಿ ತೋರಿಸುವ ಯೋಚನೆಯೇ ಇಲ್ಲ. ಬರೀ ಮಿತವ್ಯಯಕಾರಿಯಾಗಿದ್ದು ಭದ್ರತೆಯ ಖಾತರಿ ನೀಡಲಾಗದ ಯೋಜನೆ ನಿರುಪಯೋಗಿ. ಹಣದ ಯೋಜನೆ ಸ್ವೀಕಾರಾರ್ಹ ಎಂದೆನಿಸಬೇಕಾದರೆ ಮಿತವ್ಯಯಕಾರಿಯೂ ಇರಬೇಕು, ಸುಭದ್ರವಾಗಿಯೂ ಇರಬೇಕು. ಅದು ಮಿತವ್ಯಯಕಾರಿ ಇಲ್ಲದಿದ್ದರೂ ಸಹಿಸಿಕೊಳ್ಳಬಹುದು; ಆದರೆ ಭದ್ರತೆಯನ್ನು ಒದಗಿಸದಿದ್ದರೆ ಅಸಹನೀಯವಾಗುತ್ತದೆ. ಈಗ ಬಂಗಾರವನ್ನು ಹಣವಾಗಿ ಉಪಯೋಗಿಸುವಲ್ಲಿ ಮಿತವ್ಯಯ ಸಾಧಿಸುವುದು ಮೌಲ್ಯದ ಪ್ರಮಾಣವೆಂದು ಗಣಿಸಲ್ಪಟ್ಟಿರುವ ಅದರ ಕಾರ್ಯನಿರ್ವಹಿಸುವ ಶಕ್ತಿಯನ್ನು ಕುಗ್ಗಿಸುತ್ತದೆ ಎನ್ನುವ ಪ್ರಸ್ತಾಪವು, ವಿನಿಮಯದ ಸಾಧನವೆಂದು ಉಪಯೋಗಿಸಲು ಬಂಗಾರಕ್ಕಿಂತ ಕಾಗದವು ಹೆಚ್ಚು ಮಿತವ್ಯಯಕಾರಿ ಎಂದು ಸುಸಂಸ್ಕೃತ ಲೇಖಕರು ಹೇಳಿದ ಪ್ರಸ್ತಾಪದಷ್ಟೆ ಸ್ವಯಂಸಿದ್ಧವಿದೆ ಎಂದು ನಾನು ಪ್ರಸ್ತಾಪಿಸುತ್ತೇನೆ. ಚಲಾವಣೆಯ ಹಣದಿಂದ ಬಂಗಾರವನ್ನು ತೆಗೆದುಹಾಕುವುದೆಂದರೇನು? ಇದರ ಅರ್ಥ ಇಷ್ಟೇ ಬಂಗಾರದ ಬಳಕೆಯಲ್ಲಿ ಮಿತವ್ಯಯ ಸಾಧಿಸುವುದರಿಂದ ನೀವು ಅದರ ಪೂರೈಕೆಯನ್ನು ಹೆಚ್ಚಿಸಿದಂತಾಗುತ್ತದೆ. ಪೂರೈಕೆಯ ಹೆಚ್ಚಳದಿಂದ ಅದರ ಮೌಲ್ಯ ಕಡಿಮೆಯಾಗುತ್ತದೆ. ಬಂಗಾರದ ಮೌಲ್ಯ ಕಡಿಮೆಯಾಗುವುದರಿಂದ ಅದು ಅಪಮೌಲ್ಯಗೊಂಡ ಸರಕು ಆಗಿ ಅಷ್ಟರ ಮಟ್ಟಿಗೆ ಮೌಲ್ಯದ ಪ್ರಮಾಣವಾಗಿ ಕಾರ್ಯಮಾಡಲು

ಅಯೋಗ್ಯವಾಗುವುದು. ಕಾಗದದ (ಅಥವಾ ಬೇರೆ ಯಾವುದೇ ಬದಲಿ ವಸ್ತುವಿನ) ಹಣವನ್ನು ಹೊರಡಿಸುವುದರಿಂದ ಲೋಹದ ಹಣಕ್ಕಿರುವ ಬೇಡಿಕೆ ಕಡಿಮೆಯಾಗುತ್ತದೆ ಎಂಬುದನ್ನು ಅಲ್ಲಗಳೆಯಲು ಸಾಧ್ಯವಿಲ್ಲ. ಕಾಗದದ ಹಣಕ್ಕೆ ಪರಿವರ್ತನೀಯತೆ ಇದೆಯೋ ಇಲ್ಲವೋ ಎನ್ನುವುದರ ಮೇಲೆ ಲೋಹದ ಹಣದ ಬೇಡಿಕೆ ಅವಲಂಬಿಸಿದೆ ಎಂದು ಸಂಶಯಿಸುವ ಜನರೂ ಇದ್ದಾರೆ, ಆದರೆ ಇದು ತಪ್ಪು. ಚಲಾವಣೆಗೆ ತಂದ ಕಾಗದದ ಹಣಕ್ಕೆ ಲೋಹದ ನಿಧಿಯ ರಕ್ಷಣೆ ಇದೆಯೋ ಇಲ್ಲವೋ ಎಂಬುದೇ ನಿಜವಾದ ಪ್ರಮಾಣ. ಇಂತಹ ರಕ್ಷಣೆ ಇದ್ದರೆ ಲೋಹದ ಹಣದ ಬೇಡಿಕೆಯ ಮೇಲೆ ಪರಿಣಾಮವಾಗುವುದಿಲ್ಲ. ಆದರೆ ಈ ರಕ್ಷಣೆ ಇರದಿದ್ದರೆ ಪರಿವರ್ತನೀಯತೆ ಇರಲಿ, ಬಿಡಲಿ ಲೋಹದ ಹಣದ ಬೇಡಿಕೆಯ ಮೇಲೆ ಪರಿಣಾಮವಾಗಿಯೇ ಆಗುತ್ತದೆ. ಇದಕ್ಕೆ ಕಾರಣ ಏನೆಂದರೆ ರಕ್ಷಣೆ ಇದ್ದ ನೋಟುಗಳು ಲೋಹದ ಹಣವನ್ನು ಪ್ರತಿನಿಧಿಸುತ್ತವೆ. ಆದರೆ ರಕ್ಷಣೆ ಇಲ್ಲದ ನೋಟುಗಳು ಹಣದ ಪೂರೈಕೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ ಬಂಗಾರದ ಮಿತವ್ಯಯವನ್ನೂ ಮಾಡುವೆವು, ಅದನ್ನು ಹಣವೆಂದೂ ಉಪಯೋಗಿಸುತ್ತೇವೆ ಎಂದರೆ ಶಕ್ಯವಿಲ್ಲ. ಬಂಗಾರದ ಮಿತವ್ಯಯ ಮಾಡಬೇಕಾದರೆ ಅದನ್ನು ಮೌಲ್ಯದ ಪ್ರಮಾಣವೆಂದು ಉಪಯೋಗಿಸುವ ವಿಚಾರವನ್ನು ಕೈಬಿಡಬೇಕು. ಇದಲ್ಲದೇ ಈಗಿನ ಕಾಲದಲ್ಲಿ ಹಣದ ಚಲಾವಣೆ ಅತಿ ಹೆಚ್ಚು ಇರುವ ಕಾರಣ ಬಂಗಾರದ ಮಿತವ್ಯಯದ ಆವಶ್ಯಕತೆಯೂ ಇಲ್ಲ. ನಿಜವಾಗಿ ಬಂಗಾರದ ಮಿತವ್ಯಯ ಕಡಿಮೆಯಾದಷ್ಟು ಒಳ್ಳೆಯದು. ಈ ದೃಷ್ಟಿಕೋನದಿಂದ ಒಂದು ಕಾಲದಲ್ಲಿ ವರವೆನಿಸಿದ ಸುವರ್ಣ ವಿನಿಮಯ ಪ್ರಮಿತಿ ಈಗ ಶಾಪವಾಗಿದೆ. ಮೊದಲು ಕೊಂಚಕಾಲ ಅದು ಬಹಳ ಉಪಯುಕ್ತವಾಗಿದ್ದಿತು. ೧೮೭೩ ರಿಂದ ಬಂಗಾರದ ಉತ್ಪಾದನೆ ಕಡಿಮೆಯಗಿತ್ತು. ಆ ಸಮಯದಲ್ಲಿ ಸುವರ್ಣ ವಿನಿಮಯ ಪ್ರಮಿತಿ ಸಾಧಿಸಿದ ಮಿತವ್ಯಯ ಸ್ವಾಗತಾರ್ಹವೆನಿಸಿತ್ತು. ವ್ಯಾಪಾರ ಕುಸಿಯುತ್ತಿರುವ ಆ ಸಮಯದಲ್ಲಿ ವಿವಿಧ ದೇಶಗಳಿಗೆ ತಮ್ಮ ಹಣ ಪೂರೈಕೆಯನ್ನು ಹೆಚ್ಚಿಸಲು ಈ ಮಿತವ್ಯಯ ಅವಕಾಶ ನೀಡಿ ತನ್ಮೂಲಕ ಬೆಲೆಗಳ ಸ್ಥಿರತೆಯನ್ನು ಕಾಪಾಡಿತು. ಅಂಥ ಕಾಲದಲ್ಲಿ ಬಂಗಾರದ ನಾಣ್ಯದ ಚಲಾವಣೆಯುಳ್ಳ ಸುವರ್ಣ ಪ್ರಮಿತಿಯೇ ಜಾರಿಯಲ್ಲಿದ್ದರೆ, ಬೆಲೆಗಳ ಇಳಿತ, ಮತ್ತು ಆ ಕಾರಣದಿಂದ ಅರ್ಥವ್ಯವಸ್ಥೆಯ ಕುಸಿತ ಅನಿವಾರ್ಯವಾಗುತ್ತಿತ್ತು. ಆದರೆ ೧೯೧೦ರ ನಂತರ ಪರಿಸ್ಥಿತಿ ಬದಲಾಯಿಸಿತು ಹಾಗೂ ಬಂಗಾರದ ಉತ್ಪಾದನೆ ಹೆಚ್ಚಾಯಿತು. ಇದರಿಂದ ಸುವರ್ಣ ವಿನಿಮಯ ಪ್ರಮಿತಿ ಜಾರಿಯಲ್ಲಿದ್ದ ಎಲ್ಲ ದೇಶಗಳಿಗೆ ಬೆಲೆ ಏರಿಕೆಯನ್ನು ತಡೆಯಲು ಅಸಾಧ್ಯವಾಯಿತು. ಇಷ್ಟೇ ಅಲ್ಲದೇ ಈಗಾಗಲೇ ಮಿತಿಮೀರಿ ಉತ್ಪಾದನೆಯಾದ ಬಂಗಾರದ ಪೂರೈಕೆಯಲ್ಲಿ ಬಂಗಾರದ ಮಿತವ್ಯಯದಿಂದ ಮತ್ತಷ್ಟು ಹೆಚ್ಚಳವಾಗಿ ಬೆಲೆಗಳ ಏರಿಕೆಗೇ ಸಹಾಯಕವಾಯ್ತು. ಪುಸ್ತಿಕೆಯ ಲೇಖಕರು ಪ್ರೊ. ಫಿಷರ್ ಮತ್ತು ಇತರ ಲೇಖಕರು ೧೯೧೧ರ ನಂತರದ ಬೆಲೆ ಏರಿಕೆಗಾಗಿ ಸುವರ್ಣ ಪ್ರಮಿತಿಯನ್ನು ದೂಷಿಸಿದ್ದನ್ನು ಮೆಚ್ಚಿಕೆಯಿಂದ ಉಲ್ಲೇಖಿಸಿದ್ದಾರೆ. ಆದರೆ ಬೇರೆ ದೇಶಗಳಲ್ಲಿ ಸುವರ್ಣ ವಿನಿಮಯ ಪ್ರಮಿತಿಯನ್ನು ಮುಂದುವರಿಸಿದ್ದರಿಂದಲೇ ಬಂಗಾರವು ಮೌಲ್ಯದ ಪ್ರಮಾಣವೆಂದು ಕಾರ್ಯಮಾಡಲು ಅಪ್ರಯೋಜಕವಾಯ್ತು, ಎಂಬ ಸತ್ಯ–ಸಂಗತಿಯನ್ನು ಪ್ರೊ. ಫಿಷರ್ ಮರೆತಿದ್ದಾರೆ. ಏಕೆಂದರೆ ೧೯೧೧ರ ನಂತರ ಎಲ್ಲ ದೇಶಗಳು ಸುವರ್ಣ ವಿನಿಮಯ ಪ್ರಮಿತಿಯನ್ನು ಬಿಟ್ಟುಕೊಟ್ಟು ಬಂಗಾರದ ವಿನಿಯೋಗವನ್ನು ಹೆಚ್ಚಿಸಿದ್ದರೆ ಬಂಗಾರದ ಪೂರೈಕೆ ಮಿತಿಮೀರಿ ಹೆಚ್ಚುತ್ತಿರಲಿಲ್ಲ, ಮತ್ತು ಬಂಗಾರದ ಮಿತವ್ಯಯದ ಪರಿಣಾಮವಾದ ಬೆಲೆ ಏರಿಕೆಯೂ ನಿಲ್ಲುತ್ತಿತ್ತು. ಈ ದೃಷ್ಟಿಕೋನದಿಂದ ಸುವರ್ಣ ವಿನಿಮಯ ಪ್ರಮಿತಿಯೂ ಈ ಕಾಲದಲ್ಲಿ ಅಸಮರ್ಪಕ ಮತ್ತು ನಿರುಪಯೋಗಿ ಆಗಿರುವುದಲ್ಲದೇ ವಾಸ್ತವಿಕವಾಗಿ ತೊಂದರೆಯನ್ನೇ ಕೊಡುತ್ತದೆ. ಇವೆಲ್ಲ ಕಾರಣಗಳಿಂದ ಬಂಗಾರದ ಮಿತವ್ಯಯ ಮಾಡಬೇಕೆಂದು ಸೂಚಿಸಿ,

ಆದರೂ ಅದೇ ಕಾಲಕ್ಕೆ ಅದನ್ನು ಮೌಲ್ಯದ ಪ್ರಮಾಣವೆಂದು ಕಾಯ್ದುಕೊಳ್ಳುವ ವಿಚಾರಸರಣಿಯು ಸಹಾನುಭೂತಿಗೆ ತಕ್ಕದ್ದಲ್ಲ.

ಬಂಗಾರದ ಗಟ್ಟಿಯ ರೂಪದಲ್ಲಿ ಪರಿವರ್ತನೀಯತೆಯನ್ನು ಸ್ಥಾಪಿಸುವ ತಮ್ಮ ಯೋಜನೆಯನ್ನು ರೂಪಿಸಿಕೊಳ್ಳುವಾಗ ಈ ಗ್ರಂಥಕರ್ತರು ಮೇಲಿನ ಅಂಶಗಳ ಬಗೆಗೆ ವಿಚಾರ ಮಾಡಿದಂತೆ ಕಾಣುವುದಿಲ್ಲ. ಆದರೆ ಅವರ ಯೋಜನೆ ಇಷ್ಟಕ್ಕೇ ಮುಗಿದಿಲ್ಲ. ಪರಿವರ್ತನೆಯ ಸಂಗಡ ರೂಪಾಯಿಗಳ ಮತ್ತು, ಸಣ್ಣ ಮೊತ್ತದ ನೋಟುಗಳ ಚಲಾವಣೆಯ ಮೇಲೆ ಮಿತಿ ಹೇರಬೇಕೆಂದು ಅವರು ಹೇಳಿದ್ದಾರೆ. ದೇಶದಲ್ಲಿ ಚಲಾವಣೆಯಲ್ಲಿದ್ದ ಹಣದ ಮೊತ್ತವನ್ನು ವ್ಯವಹಾರದ ಸಾಮಾನ್ಯ ಹೆಚ್ಚಳದ ಪ್ರಮಾಣಕ್ಕೆ ಅನುಗುಣವಾಗಿ ಪ್ರತಿಶತ ಸಣ್ಣ ಪ್ರಮಾಣದಲ್ಲಿ ಹೆಚ್ಚಿಸಲು ಸರ್ಕಾರಕ್ಕೆ ಅನುಮತಿ ಇರಬೇಕು, ಆ ಪ್ರಮಾಣಕ್ಕಿಂತ ಹೆಚ್ಚಿನ ಹಣ ಹೊರಡಿಸಲು ಅನುಮತಿ ಇರಲಾರದು ಎಂದೂ ಸೂಚಿಸಿದ್ದಾರೆ. ಈ ಪ್ರಕಾರ ರೂಪಾಯಿಗಳ ಮತ್ತು ಸಣ್ಣ ಮೊತ್ತದ ನೋಟುಗಳ ಚಲಾವಣೆಯ ಹೆಚ್ಚಳದ ಮೇಲೆ ಬದಲಾಯಿಸುತ್ತ ಇರುವ ಮಿತಿ ಹೇರುವುದನ್ನು ಸಮರ್ಥಿಸುತ್ತ ಅವರು "ಪರಿವರ್ತನೀಯ ರೂಪಾಯಿಯು ಸಣ್ಣ ಮೊತ್ತದ್ದಾಗಿರುವುದರಿಂದ ಹಣದುಬ್ಬರದಿಂದ ಸಾಕಷ್ಟು ರಕ್ಷಣೆ ನೀಡಲಾರದು. ಏಕೆಂದರೆ ಹಳೆಯ ಅರ್ಥಶಾಸ್ತ್ರಜ್ಞರು ಸ್ಪಷ್ಟವಾಗಿ ತೋರಿಸಿದಂತೆ ನಿಜವಾಗಿಯೂ ಸಣ್ಣ ನೋಟುಗಳ ತಡೆಹಿಡಿದ ಪರಿವರ್ತನೀಯತೆಯು ಆ ನೋಟುಗಳನ್ನು ವಾಸ್ತವವಾಗಿ ಅಪರಿವರ್ತನೀಯವಾಗಿ ಮಾಡುತ್ತದೆ ಮತ್ತು ಅವುಗಳನ್ನು ವಾಸ್ತವವಾಗಿ ಅಪರಿವರ್ತನೀಯವಾಗಿ ಮಾಡುತ್ತದೆ ಮತ್ತು ಅವುಗಳನ್ನು ಮಿತಿಮೀರಿ ಹೊರಡಿಸುವುದು ಅಪರಿವರ್ತನೀಯ ಕಾಗದದ ಹಣವನ್ನು ಮಿತಿಗೆಟ್ಟು ಹೊರಡಿಸುವಷ್ಟೇ ಸಂಭವನೀಯವೆನಿಸುತ್ತದೆ" ಎಂದು ಹೇಳಿದ್ದಾರೆ. ಇದೆಲ್ಲ ವಿಚಿತ್ರವೂ ವಿಲಕ್ಷಣವೂ ಆಗಿದೆ. ಇದು ಏಕೆ ವಿಚಿತ್ರವೆಂದರೆ ಒಂದೆಡೆ ಲೇಖಕರು "ಪರಿವರ್ತನೀಯತೆಯು ಹಣದ ಮಿತಿಮೀರಿದ ಹೊರಡಿಸುವಿಕೆ ಆಗದಂತೆ ಮಾಡುವ ಅತ್ಯುತ್ತಮ ರಕ್ಷಣೋಪಾಯ, ಹಣದ ಅತಿ ಪ್ರಸರಣದಲ್ಲಿ ತೊಡಗಿದ ಸರ್ಕಾರಕ್ಕೆ ಇದು ಸ್ವಯಂಚಾಲಿತ ಅಪಾಯಸೂಚಕ ಸಂಕೇತ" ಎಂದು ಹೇಳಿದ್ದಾರೆ. ಹೀಗಿದ್ದರೆ, ಪರಿವರ್ತನೀಯ ರೂಪಾಯಿಯು ಲೇಖಕರು ಬಯಸಿದ ಉದ್ದೇಶಕ್ಕೆ ಏಕೆ ಸಾಕಾಗುವುದಿಲ್ಲ? ಹಳೆಯ ಅರ್ಥಶಾಸ್ತ್ರಜ್ಞರು ಸಣ್ಣ ನೋಟುಗಳ ಪರಿವರ್ತನೀಯತೆ ಮಿತಿಗೆಟ್ಟ ನೋಟುಗಳ ಹೊರಡಿಸುವಿಕೆಯಿಂದ ಸಾಕಷ್ಟು ರಕ್ಷಣೆಯನ್ನು ನೀಡಲಾರದೆಂದು ನಂಬಿದ್ದರು ಎನ್ನುವ ಲೇಖಕರ ಹೇಳಿಕೆ ಸರ್ವಥಾ ತಪ್ಪು. ಗ್ರಂಥಕರ್ತರು ಹೇಳಿದಂತೆ ಬ್ಯಾಂಕುಗಳಿಗೆ ಸಣ್ಣ ಮೊತ್ತದ ನೋಟುಗಳನ್ನು ಹೊರಡಿಸಲು ಅನುಮತಿ ನೀಡಿದರೆ, ಪರಿವರ್ತನೀಯತೆ ಬಂಗಾರವನ್ನು ಚಲಾವಣೆಯಲ್ಲಿಡಲು ಸಾಲದು ಎಂಬ ಹೆದರಿಕೆ ಹಳೆಯ ಅರ್ಥಶಾಸ್ತ್ರಜ್ಞರಿಗೆ ಇರಲಿಲ್ಲ. ಹಾಗೆಯೇ ಲೇಖಕರು ಹೇಳಿದಂತೆ ಆ ಅರ್ಥಶಾಸ್ತ್ರಜ್ಞರು ನೋಟು ಹೊರಡಿಸುವುದರ ಮೇಲೆ ಮಿತಿ ಹೇರಬೇಕು ಎಂದು ಹೇಳಿರಲಿಲ್ಲ. ಆ ಹಳೆಯ ಅರ್ಥಶಾಸ್ತ್ರಜ್ಞರು ಸಣ್ಣ ಮೊತ್ತದ ನೋಟುಗಳನ್ನು ಹೊರಡಿಸುವುದನ್ನು ಪೂರ್ತಿಯಾಗಿ ನಿರ್ಬಂಧಿಸಬೇಕು ಎಂದೇ ಒತ್ತಿ ಹೇಳಿದ್ದಾರೆ. ಆದ್ದರಿಂದಲೇ ೫ ಪೌಂಡಿಗಿಂತ ಸಣ್ಣ ಮೊತ್ತದ ನೋಟುಗಳನ್ನು ಹೊರಡಿಸಲು ಬ್ಯಾಂಕ್ ಆಫ್ ಇಂಗ್ಲೆಂಡ್ ಶಾಸನದಿಂದಲೇ ನಿರ್ಬಂಧಿಸಿದ್ದುದು ಕಂಡುಬರುತ್ತದೆ.

ಸುಸಂಗತವಿರಬೇಕಾದರೆ, ಲೇಖಕರು ೫ ರೂಪಾಯಿಗಿಂತ ಕಡಿಮೆ ಮೌಲ್ಯದ ನೋಟುಗಳನ್ನಾಗಲಿ, ರೂಪಾಯಿಗಳನ್ನಾಗಲಿ, ಭಾರತ ಸರ್ಕಾರವು ಹೊರತರಬಾರದು ಎಂಬ ಸಲಹೆಯನ್ನು ನೀಡಬೇಕಾಗಿತ್ತು. ಇದರ ಬದಲು ಅವರು ವಿಚಾರವಿಲ್ಲದೇ, ಕಾರ್ಯರೂಪಕ್ಕೆ ತರಲು ಅಸಾಧ್ಯವಾದ ಯೋಜನೆಯನ್ನು ಶಿಫಾರಸು ಮಾಡಿದ್ದಾರೆ. ರೂಪಾಯಿ ಮತ್ತು ಸಣ್ಣಮೊತ್ತದ ಹಣದ ಹೆಚ್ಚಳದ ಮೇಲೆ ಮಿತಿ ಹೇರುವ

ಯೋಜನೆಯಲ್ಲಿ ಈ ಮಿತಿಯನ್ನು ಯಾವ ವಿಧಾನಗಳಿಂದ ನಿರ್ಧರಿಸಬೇಕೆಂದು ಅವರು ಹೇಳಿಲ್ಲ. ಹಾಗೂ ಆ ಪ್ರತಿಶತ ಹೆಚ್ಚಳವು ಸಾರ್ವಕಾಲಿಕವಾಗಿ ಇರಬೇಕೋ ಅಥವಾ ಹಣಕಾಸಿನ ವರ್ಷಾಂತ್ಯಕ್ಕೆ ಈ ಮಿತಿಯನ್ನು ಮೀರಿಲ್ಲ ಎಂದು ಕಂಡುಬಂದರೆ ಸಾಕೋ ಎಂಬುದನ್ನು ಹೇಳಿಲ್ಲ. ಅವರ ಯೋಜನೆ ಎರಡನೆಯ ಪ್ರಕಾರದ್ದಾದರೆ ವರ್ಷಾಂತ್ಯಕ್ಕೆ ಪ್ರತಿಶತ ಹೆಚ್ಚಳದ ಮಿತಿಯನ್ನು ಮೀರದಿದ್ದರೆ ಸಾಕು. ಮಧ್ಯದ ಅವಧಿಯಲ್ಲಿ ಬೇಕಾದಷ್ಟು ಹಣದ ಚಲಾವಣೆಯನ್ನು ಏರಿಸಬಹುದು, ಇಳಿಸಲೂಬಹುದು. ಇನ್ನು ಈ ಸಾಮಾನ್ಯ ಹಣದ ಹೆಚ್ಚಳದ ಮಿತಿ ಯಾವಾಗಲೂ ಸ್ಥಿರವಾಗಿರಬೇಕೋ ಅಥವಾ ಬದಲಾಯಿಸಬಹುದೋ? ಬದಲಾಯಿಸಲು ಬರುವಂತಿದ್ದರೆ ಯಾವ ವಿಧಾನಗಳಿಂದ ಬದಲಾಯಿಸಬೇಕು, ಬದಲಾಯಿಸುವ ಅಧಿಕಾರವನ್ನು ಯಾರಿಗೆ ಕೊಡಬೇಕು ಮುಂತಾದ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳಿಲ್ಲದೆ ಯೋಜನೆ ಸ್ವೀಕಾರಾರ್ಹವಾಗುವುದಿಲ್ಲ. ಇಂಥ ಕಲ್ಪನಾಚಾತುರ್ಯವನ್ನು ತೋರಿಸುವುದಕ್ಕಿಂತ ಲೇಖಕರು ಸಾಮಾನ್ಯವಾಗಿರುವಂತೆ ಪೂರಾ ಪರಿವರ್ತನೀಯವಾದ ರೂಪಾಯಿ, ಇಲ್ಲವೇ ಹೊರಡಿಸುವ ಅಧಿಕಾರದ ಮೇಲೆ ನಿರ್ದಿಷ್ಟ ಮಿತಿಯುಳ್ಳ, ಆದರೆ ಅಪರಿವರ್ತನೀಯವಾದ ರೂಪಾಯಿಯನ್ನೇ ಶಿಫಾರಸು ಮಾಡಿದ್ದರೆ ಚೆನ್ನಾಗಿರುತ್ತಿತ್ತೋ ಏನೋ?

ಲೇಖಕರು ಮುಂಬಯಿಯ ಎಲ್‌ಫಿನ್‌ಸ್ಟನ್ ಕಾಲೇಜಿನಲ್ಲಿ, ಹಾಗೂ ಬನಾರಸ್‌ನ ಸೆಂಟ್ರಲ್ ಹಿಂದೂ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾಗ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾಡಿದ ಉಪನ್ಯಾಸಗಳೇ ಪ್ರಸ್ತುತ ಪುಸ್ತಕದ ರೂಪದಲ್ಲಿ ಹೊರಬಿದ್ದಿವೆ. ಪುಸ್ತಕವು ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ. ಹೆಚ್ಚಾಗಿ ಬೋಧಪ್ರದವಾದ ಭಾಗ–I "ಅರ್ಥಶಾಸ್ತ್ರ ವಿಷಯದಲ್ಲಿ ಬಿ.ಎ. ಪಾಸ್ ಪದವಿ ಪರೀಕ್ಷೆಗೆ ತಯಾರಿ ಮಾಡುತ್ತಿರುವ ವಿದ್ಯಾರ್ಥಿಗಳು ಉಪಯೋಗಿಸಲೆಂಬ ಉದ್ದೇಶದ್ದು" ಎಂದು ಲೇಖಕರೇ ಹೇಳಿದ್ದಾರೆ. ಭಾಗ–II ಮುಖ್ಯವಾಗಿ "ವಿಮರ್ಶಾತ್ಮಕ" ಮತ್ತು "ಆನರ್ಸ್ ಪದವಿಯ ಅಭ್ಯರ್ಥಿಗಳ ಸಲುವಾಗಿ" ಇರುತ್ತದೆ. ಲೇಖಕರೇ ಮುಗ್ಧ ರೀತಿಯಿಂದ ಸೂಚಿಸಿದಂತೆ ಈ ಎರಡೂ ವಿದ್ಯಾರ್ಥಿ ವರ್ಗಗಳ ಬುದ್ಧಿಗೆ ಕೊಡುವ ಆಹಾರವೇ ಬೇರೆಬೇರೆ. ಈ ಆಹಾರ ಸಹ ವಿಪುಲವೂ ಅಲ್ಲ, ನೆಚ್ಚಿಕೆಯದೂ ಅಲ್ಲ. ನಾನು ಅರ್ಥಶಾಸ್ತ್ರದಲ್ಲಿ ಪರೀಕ್ಷಕನಾಗಿ ಕೆಲಸ ಮಾಡುವಾಗ ಆ ವಿಷಯದಲ್ಲಿ ಪಾಸ್ ಆದ ಪದವಿಯ ವಿದ್ಯಾರ್ಥಿಗಳ ಉತ್ತರಗಳು ಬಾಲಕರ ಶಾಲೆಯಲ್ಲಿ ಕಲಿಸುವ ಕಟ್ಟುಕತೆಗಳಂತೆ, ಮತ್ತು ಆನರ್ಸ್ ವಿದ್ಯಾರ್ಥಿಗಳ ಉತ್ತರಗಳೂ ಕಡ ತೆಗೆದುಕೊಂಡ ಟಿಪ್ಪಣಿಗಳ ತಿರುಚಿದ ವೈಯಕ್ತಿಕ ವರದಿಗಳಂತೆ ಏಕಿವೆ? ಎಂದು ಆಶ್ಚರ್ಯಪಡುತ್ತಿದ್ದೆ. ಈ ಪುಸ್ತಕವನ್ನು ಓದಿದಾಗ ನನಗೆ ಆ ಪ್ರಶ್ನೆಗೆ ಸ್ಪಷ್ಟ ಉತ್ತರ ದೊರೆಯಿತು.

## ವಿಮರ್ಶೆ

### [1]೩. ತೆರಿಗೆ ವಿಚಾರಣಾ ಸಮಿತಿಯ ವರದಿ – ೧೯೨೬
### ತೆರಿಗೆ ವಿಚಾರಣಾ ಸಮಿತಿಯ ವರದಿ ೧೯೨೬–೧

ವರದಿಗಳನ್ನು ಸಲ್ಲಿಸಲು, ವಿಚಾರಗಳನ್ನು ನಡೆಸಲು ಆಯೋಗಗಳನ್ನು ಮತ್ತು ಸಮಿತಿಗಳನ್ನು ನಿಯಮಿಸುವ ಪದ್ಧತಿ ಇಂಗ್ಲೆಂಡಿನ ಸರ್ಕಾರ ವ್ಯವಸ್ಥೆಯ ವೈಶಿಷ್ಟ್ಯವಾಗಿದೆ. ಆಂಗ್ಲ ಸಂಸತ್ತಿನಲ್ಲಿ ಅನುಸರಿಸಲಾಗುವ ಒಂದು ಮುಖ್ಯ ತತ್ವವೇನೆಂದರೆ, ಸಾಮಾಜಿಕ ಮತ್ತು ಆರ್ಥಿಕ ಶಾಸನಗಳನ್ನು ರಚಿಸುವಾಗ ಎಂದೂ ದುಡುಕದಿರುವುದು. ಸಂಸತ್ತು ಇಂಥ ಶಾಸನದ ಅಧಿನಿಯಮಗಳನ್ನು ಅನುಮೋದಿಸುವ ಪೂರ್ವದಲ್ಲಿ ಆಯೋಗ ಅಥವಾ ಸಮಿತಿಗಳ ರಚನೆ ಒಂದು ಆವಶ್ಯಕ ಪ್ರಾರಂಭಿಕ ಹೆಜ್ಜೆಯಾಗಿದೆ. ಈ ವಿಷಯದಲ್ಲಿ ಸಂಸತ್ತು 'ಜ್ಞಾನವೇ ಶಕ್ತಿ' ಎಂಬ ಸೂತ್ರವನ್ನು ಅನುಸರಿಸುತ್ತದೆ. ಆಂಗ್ಲ ಸಂಸತ್ತಿನ ಈ ತತ್ವವನ್ನು ಭಾರತದಲ್ಲೂ ಅನುಸರಿಸಲಾಗುತ್ತಿರುವುದು ಸಂತೋಷದ ಸಂಗತಿ, ಇಂಥ ಆಯೋಗಗಳು ಮತ್ತು ಸಮಿತಿಗಳ ನೇಮಕಾತಿಯನ್ನು ಹಲವು ಸಲ ವಿರೋಧಿಸುತ್ತಿರುವ ನಮ್ಮ ರಾಜಕಾರಣಿಗಳು ದೇಶದ ಹಿತಾಸಕ್ತಿಗಳಿಗೆ ಅನುಕೂಲವಾಗುವಂತೆ ನಡೆಯುತ್ತಿದ್ದಾರೆಂದು ಹೇಳಲಾಗದು.

ತೆರಿಗೆ ವಿಚಾರಣಾ ಸಮಿತಿಯ ಬಗೆಗೆ ಮಾತ್ರ, ಸರ್ಕಾರವೇ ಅದರ ರಚನೆಯನ್ನು ವಿರೋಧಿಸಲು ಪ್ರಯತ್ನಿಸುತ್ತಿತ್ತು, ಕೊನೆಗೆ ವಿಚಾರಣೆಯನ್ನು ನಡೆಸುವ ವ್ಯವಸ್ಥೆ ಮಾಡಿದಾಗ ವಿಚಾರಣೆ ಶಾಸನಸಭೆಯ ಬೇಡಿಕೆಯಂತೆ ಇರಲಿಲ್ಲ. ಜನತೆಯ ಕರಭಾರವನ್ನು ಹೊರುವ ಶಕ್ತಿಯ ಬಗೆಗೆ ವಿಚಾರಣೆ ನಡೆಯಲೆಂದು ಶಾಸನಸಭೆ ಅಪೇಕ್ಷಿಸಿತ್ತು, ಆದರೆ ಜನತೆಯ ಮೇಲಿನ ಕರಗಳ ಭಾರ ಅವರ ಕರ ಹೊರುವ ಸಾಮರ್ಥ್ಯಕ್ಕೆ ಸರಿಯಾದ ಪ್ರಮಾಣದಲ್ಲಿ ಇರಲಿಲ್ಲವಾದ್ದರಿಂದ ಸರ್ಕಾರವು ಇಂಥ ವಿಚಾರಣೆಯನ್ನು ಎದುರಿಸಲು ಸಿದ್ಧವಿರಲಿಲ್ಲ. ಸಾರ್ವಜನಿಕ ಅಭಿಪ್ರಾಯದ ಒತ್ತಡಕ್ಕೆ ಮಣಿದು ಈ ತರಹದ ವಿಚಾರಣೆ ನಡೆಸಲೇ ಬೇಕಾದಾಗ ಸರ್ಕಾರವು ಗತ್ತುಗಾರಿಕೆಯನ್ನು ತೋರಿ ವಿಚಾರಣೆಯನ್ನು ಎರಡು ಭಾಗಗಳಾಗಿ ವಿಭಾಗಿಸಿತು: ೧) ತೆರಿಗೆ ವಿಚಾರಣಾ ಸಮಿತಿ, ೨) ಆರ್ಥಿಕ ವಿಚಾರಣಾ ಸಮಿತಿ. ಇದರ ಪರಿಣಾಮ ಎರಡೂ ಸಮಿತಿಗಳ ವರದಿಗಳ ಉಪಯುಕ್ತತೆ ಗಣನೀಯವಾಗಿ ಕಡಿಮೆಯಾಯ್ತು.

ತೆರಿಗೆ ವಿಚಾರಣಾ ಸಮಿತಿಯ ನಿರ್ದೇಶನದ ಅಂಶಗಳು ಕೆಳಗಿನಂತಿವೆ.

೧) ಜನಸಂಖ್ಯೆಯ ವಿವಿಧ ವರ್ಗಗಳಲ್ಲಿ ತೆರಿಗೆಗಳ ಭಾರವನ್ನು ಹಂಚಲಾದ ರೀತಿಯನ್ನು ಪರೀಕ್ಷಿಸುವುದು.

೨) ಸಮಗ್ರ ತೆರಿಗೆಗಳ ವ್ಯವಸ್ಥೆ ನ್ಯಾಯಸಮ್ಮತ ಹಾಗೂ ಆರ್ಥಿಕ ತತ್ವಗಳಿಗೆ ಅನುಸಾರವಾಗಿ ಇದೆಯೋ, ಇಲ್ಲವೋ ಎಂಬುದನ್ನು ವಿಚಾರಿಸುವುದು, ಹಾಗೂ ಹಾಗೆ ಇಲ್ಲವಾದರೆ ಯಾವ ಅಂಶಗಳು ದೋಷಯುತವಾಗಿವೆ ಎಂಬುದನ್ನು ಪರೀಕ್ಷಿಸುವುದು, ಮತ್ತು

---

೧. 'ದಿ ಸರ್ವೆಂಟ್ ಆಫ್ ಇಂಡಿಯಾ', ಸಂ IX, ಸಂಖ್ಯೆ ೧೩, ಏಪ್ರಿಲ್ ೨೯, ೧೯೨೬ ಪುಟಗಳು : ೧೬೩–೬೪.

೩) (ಈಗಿದ್ದ ಕರಗಳಿಗೆ) ಬದಲಿ ಕರಗಳ ಯುಕ್ತಾಯುಕ್ತತೆಯ ಬಗೆಗೆ ವರದಿ ಮಾಡುವುದು. ತನ್ನ ವರದಿಯನ್ನು ತಯಾರಿಸುವಾಗ ಸಮಿತಿಯು ಈ ಮೂರು ವಿಷಯಗಳ ವಿಚಾರಣೆಗೆ ಸ್ಥಳಾವಕಾಶ ನೀಡುವಲ್ಲಿ ಸಾಕಷ್ಟು ಚಾತುರ್ಯವನ್ನು ತೋರಿಸಿಲ್ಲ. ಸಮಿತಿಗೊಪ್ಪಿಸಿದ ಈ ಮೂರು ಪ್ರಧಾನ ಪ್ರಶ್ನೆಗಳಲ್ಲಿ ಮೊದಲನೆಯ ಪ್ರಶ್ನೆಯೇ ಅತ್ಯಂತ ಮಹತ್ವದ್ದು ಎನ್ನುವುದು ಸ್ಪಷ್ಟವಿದೆ. ಹೀಗಿದ್ದರೂ ೪೪೭ ಪುಟಗಳ ಈ ವರದಿಯಲ್ಲಿ ಅದರ ವಿಚಾರಣೆಗೆ ದೊರೆತದ್ದು ಕೇವಲ ೧೩ ಪುಟಗಳು. ಇದಲ್ಲದೇ ವಿಷಯದ ಪ್ರತಿಪಾದನೆ ಕೂಡ ಸಮಾಧಾನಕರವಿಲ್ಲ. ಯಾವುದೇ ಕಾರಣವನ್ನು ಸಹ ನೀಡದೇ ಸಮಿತಿಯು ಜನತೆಯನ್ನು ೧೧ ವರ್ಗಗಳಲ್ಲಿ ವಿಭಾಗಿಸಿದೆ. ಆ ವಿಭಾಗಗಳ ಮೇಲೆ ಬೀಳುವ ಕರಭಾರವನ್ನು ಉಳಿದೆಲ್ಲ ಪ್ರಶ್ನೆಗಳಿಗಿಂತ ಅತಿ ಮಹತ್ವದ್ದಾದ ವಿವಿಧ ವರ್ಗಗಳಲ್ಲಿ ಕರಗಳ ಭಾರದ ಹಂಚಿಕೆಯ ಪ್ರಶ್ನೆಯನ್ನು ಪ್ರಸ್ತಾಪ ಕೂಡಾ ಮಾಡದೇ ೧೦½ ಪುಟಗಳಲ್ಲಿ ಚರ್ಚಿಸಿ ಮುಗಿಸಿದೆ. ಈ ೧೧ ವರ್ಗಗಳಾಗಿ ವಿಭಾಗಿಸಿದ್ದೇ ಸಂಪೂರ್ಣ ವಿಂಗಡಿಕೆ ಎಂದು ಸಮಿತಿಯು ಏಕೆ ಅಭಿಪ್ರಾಯಪಟ್ಟಿತು? ಹೆಚ್ಚು ವರ್ಗಗಳನ್ನೂ ಗುರುತಿಸಬಹುದಾದರೆ, ೧೩ ವರ್ಗಗಳೇಕೆ ಬೇಡ? ಇದಲ್ಲದೇ ವ್ಯಾಪಾರಿಯು ಹೊರುವ ಕರಭಾರ ಎಷ್ಟು ಎಂಬುದನ್ನು ಸಮಿತಿ ಹೇಗೆ ಹೇಳಬಲ್ಲದು? ವೈಯಕ್ತಿಕ ಕರಗಳ ಭಾರದ ಹಂಚಿಕೆಯನ್ನು ಸಮಿತಿಯು ಪರೀಕ್ಷಿಸಿದ್ದರೆ ವ್ಯಾಪಾರಿಯು ಯಾವ ಕರಭಾರವನ್ನೂ ಹೊರುವುದಿಲ್ಲ ಎಂದು ಅವರು ಕಂಡುಹಿಡಿಯಬಹುದಿತ್ತು. ಇನ್ನೂ ಒಂದು ನಿರ್ದಿಷ್ಟ ಉದಾಹರಣೆ ತೆಗೆದುಕೊಳ್ಳೋಣ. ಇದು ಗಿರಣಿಯಲ್ಲಿ ತಯಾರಾದ ಹತ್ತಿ ಬಟ್ಟೆಗಳ ತಯಾರಿಕೆಯ ಮೇಲಿನ ಸುಂಕದ ಬಗ್ಗೆ. ಸಮಿತಿಯು ಯಾವುದೇ ಅನುಮಾನವಿಲ್ಲದೆ ಅದನ್ನು ತೆಗೆದುಹಾಕುವುದರಿಂದ ಕೂಲಿಕಾರ ವರ್ಗಕ್ಕೆ ಲಾಭವಾಗುತ್ತದೆ ಎಂದು ಸರಳವಾಗಿ ಹೇಳಿದೆ. ಆದರೆ ಈ ಕರದ ಭಾರವನ್ನು ಬಳಕೆದಾರನಿಗೆ ಹೊರಿಸಿದೆ ಎಂದು ಸಮಿತಿಗೆ ಖಾತರಿ ಇದೆಯೇ? ನಾನೇನೂ ಸಮಿತಿಗೆ ಅನ್ಯಾಯ ಬಗೆಯಲು ಬಯಸುವುದಿಲ್ಲ. ಆದರೆ ಈ ವಿಷಯದಲ್ಲಿ ಸಮಿತಿಯ ವರದಿ ಅತ್ಯಂತ ನಿರಾಶಾದಾಯಕ ದಾಖಲೆಯಾಗಿದೆ ಎಂದು ಹೇಳದೆ ನನಗೆ ನಿರ್ವಾಹವಿಲ್ಲ. ಸಮಿತಿಯು ಭಾರತದ ವಿವಿಧ ಕರಗಳ ಮೂಲಗಳ ಇತಿಹಾಸವನ್ನು ವಿವರವಾಗಿ ಚರ್ಚಿಸಲಿಕ್ಕೆ ಸಾಕಷ್ಟು ಸ್ಥಳಾವಕಾಶವನ್ನು ವಿನಿಯೋಗಿಸಿದೆ. ಇದು ಅಷ್ಟರಮಟ್ಟಿಗೆ ಒಳ್ಳೆಯದೇ. ಆದರೆ ಇದರ ಅರ್ಧದಷ್ಟು ಸ್ಥಳವನ್ನು ಪ್ರತಿಯೊಂದು ಕರಭಾರದ ಹಂಚಿಕೆಯ ಬಗ್ಗೆ ಚರ್ಚಿಸಲು ಉಪಯೋಗಿಸಿದ್ದರೆ ಇನ್ನೂ ಬಹಳ ಉತ್ತಮವೆನಿಸುತ್ತಿತ್ತು. ಆದರೆ ಸಮಿತಿ ಈ ಕಾರ್ಯವನ್ನು ಪೂರ್ತಿಯಾಗಿ ಕೈಬಿಟ್ಟಿದೆ. ಅದನ್ನು ಮಾಡಿದ್ದರೆ ತೆರಿಗೆಗಳ ಭಾರದ ವಿತರಣೆ, ಮತ್ತು ಅನ್ಯಾಯಯುತ ತೆರಿಗೆಗಳನ್ನು ತೆಗೆದುಹಾಕುವ ಪ್ರಶ್ನೆಗಳ ಬಗ್ಗೆ ಹೆಚ್ಚು ಸಮರ್ಪಕವಾಗಿ ವಿಚಾರಣೆ ಮಾಡಲು ಸಮರ್ಥವಾಗುತ್ತಿತ್ತು. ತನ್ನ ವಿಚಾರಣೆಯ ಅತಿ ಮುಖ್ಯ ಭಾಗವಾದ ಕರಗಳ ಹೊರೆಯ ಹಂಚಿಕೆಯ ಪ್ರಶ್ನೆಯ ವಿಚಾರಣೆಯನ್ನು ಮರೆತುಬಿಟ್ಟ ಕಾರಣದಿಂದಲೇ ದೇಶಕ್ಕೆ ಸುಮಾರು ೪½ ಲಕ್ಷ ರೂಪಾಯಿ (ಮುದ್ರಣದ ವೆಚ್ಚವನ್ನು ಬಿಟ್ಟು) ಖರ್ಚು ಮಾಡಿಸಿಯೂ ಸಮಿತಿಯೂ ಅಪೇಕ್ಷಿಸಿದಷ್ಟು ಸರಿಯಾಗಿ ಕಾರ್ಯನಿರ್ವಹಿಸಿಲ್ಲವೆಂದು ಹೇಳಬೇಕಾಗುತ್ತದೆ.

ಸಮಿತಿಯು ನುರಿತವರಲ್ಲದಂತಹ ಸದಸ್ಯರಿಂದ ಕೂಡಿದ್ದರಿಂದಲೇ ತನ್ನ ಮುಖ್ಯ ಸಮಸ್ಯೆಯನ್ನು ನಿರ್ವಹಿಸಲು ಅಸಮರ್ಥವಾಯಿತು. ಅವರಿವರು ಆಡುವ ಮಾತೇ ನಿಜವಾಗಿದ್ದರೆ, ಅವರಲ್ಲಿ ಬಹು ಜನರು ಸಮಿತಿಗೆ ನಾಮಕರಣವಾದ ನಂತರವೇ ಸಾರ್ವಜನಿಕ ಹಣಕಾಸಿನ ವಿಷಯದ ಬಗೆಗೆ

ಮೂಲಪಾಠಗಳನ್ನು ಕಲಿಯಲಾರಂಭಿಸಿದರಂತೆ. ಇಂಥ ಗುಂಪಿನಿಂದ ತಯಾರಾದ ವರದಿಯು ವಿಷಯದ ಅಭ್ಯಾಸಿಗಳಿಗೆ ವ್ಯರ್ಥ ಶ್ರಮವಾಗಿ ಕಂಡರೆ ಆಶ್ಚರ್ಯವೇನಲ್ಲ. ಆದರೂ ಈ ವರದಿಯ ಪರವಾಗಿ ಒಂದು ಮಾತನ್ನು ಹೇಳಬಹುದು. ವರದಿಯು ಅಚ್ಚುಕಟ್ಟಾಗಿ ವ್ಯವಸ್ಥೆಯುಳ್ಳ ವ್ಯವಹಾರಜ್ಞಾನದಿಂದ ತುಂಬಿದೆ. ಅಭ್ಯಾಸಿಗೆ ಸಮಾಧಾನಕರ ಎನಿಸದಿದ್ದರೂ ಅವರ ಬೌದ್ಧಿಕ ಕಾರ್ಯಗಳಿಗೆ ತಳಹದಿಯಾಗಿ ಉಪಯುಕ್ತವಾಗುವುದು ನಿಸ್ಸಂದೇಹ. ನಂತರ ನಾನು ಬರೆಯಲಿರುವ ಲೇಖನಗಳಲ್ಲಿ ಸಮಿತಿಯ ಸೂಚನೆಗಳನ್ನು ಪರೀಕ್ಷಿಸುವ ಉದ್ದೇಶವನ್ನಿಟ್ಟುಕೊಂಡಿರುವೆ. ಸದ್ಯಕ್ಕೆ ವರದಿಯ ಸಾಮಾನ್ಯ ರೂಪುರೇಷೆಯ ಬಗೆಗೆ ನನ್ನ ಅಭಿಪ್ರಾಯಗಳ ಮಂಡನೆಯನ್ನು ಇಲ್ಲಿಗೆ ಮುಗಿಸುತ್ತೇನೆ.

# ಮುನ್ನುಡಿಗಳು*

## ೧. ಕಮೋಡಿಟಿ ಎಕ್ಸ್‌ಚೇಂಜ್

ಶ್ರೀಯುತ ಸಾಳ್ವಿಯವರ ವಿನಂತಿಯಂತೆ ಭಾರತದಲ್ಲಿ 'ಕಮೋಡಿಟಿ ಎಕ್ಸ್‌ಚೇಂಜ್' ಕುರಿತು ಅವರು ಬರೆದ ಪುಸ್ತಕಕ್ಕೆ ಮುನ್ನುಡಿಯನ್ನು ಬರೆಯಲು ನನಗೆ ಸಂತೋಷವೆನಿಸುತ್ತದೆ. ಈ ವಿಷಯದ ಬಗೆಗೆ ಇದು ಮೂಲ ಪರಿಶೋಧನೆ ಎನಿಸದಿದ್ದರೂ ಇದುವರೆಗೆ ಪ್ರಕಟಣೆಯಾದ ಇತರ ಎಲ್ಲ ಕೃತಿಗಳಿಗಿಂತ ಹೆಚ್ಚು ಸಮಗ್ರ ಕೃತಿಯಾಗಿದೆ. ಒಂಬತ್ತು ಅಧ್ಯಾಯಗಳಲ್ಲಿ ಅವರು ಸರಕು ವಿನಿಮಯ ಕೇಂದ್ರಗಳ ಎಲ್ಲ ಮಗ್ಗಲುಗಳನ್ನು ಸಮಗ್ರವಾಗಿ ಪರೀಕ್ಷಿಸಿ ಅಸ್ಫುಟವಾದ ವಿಷಯದ ಮೇಲೆ ಸಾಕಷ್ಟು ಬೆಳಕು ಬೀರಿದ್ದಾರೆ. ಸರಕು ವಿನಿಮಯ ಕೇಂದ್ರಗಳ ವಿಷಯಕ್ಕೆ ವ್ಯವಸಾಯದೊಡನೆ ನಿಕಟ ಸಂಬಂಧವಿದೆ. ಭಾರತವು ವ್ಯವಸಾಯ ಪ್ರಧಾನವಾದ ದೇಶವಾಗಿದ್ದರೂ ಈ ವಿಷಯವನ್ನು ಬಹುಮಟ್ಟಿಗೆ ಅಲಕ್ಷಿಸಲಾಗಿದೆ. ಭಾರತದ ಬೇಸಾಯಗಾರರ ಹಿತಾಸಕ್ತಿಗಳಲ್ಲಿ ಹೆಚ್ಚು ಆಸ್ಥೆಯುಳ್ಳವರೆಲ್ಲ ಈ ಸಮಗ್ರ ಮತ್ತು ಉದ್ಬೋಧಕವಾದ ಅಭ್ಯಾಸಪೂರ್ಣ ಕೃತಿಯನ್ನು ಸ್ವಾಗತಿಸದೇ ಇರಲಾರರು.

ಮುಂಬಯಿ, ೨೯ ಡಿಸೆಂಬರ್ ೧೯೪೬.

**ಬಿ.ಆರ್. ಅಂಬೇಡ್ಕರ್**

---

ಲೇಖಕರು :
**ಪಿ.ಜಿ. ಸಾಳ್ವಿ ಎಂ.ಎ.**
ದಿ ಕೋ ಆಪರೇಟರ್ಸ್ ಬುಕ್ ಡಿಪೋ,
೯ ಬೇಕ್‌ಹೌಸ್ ಲ್ಯಾಂಡ್, ಪೋರ್ಟ್
ಮುಂಬಯಿ, ೧೯೪೭

# ಮುನ್ನುಡಿ*

## ೨. ಭಾರತದಲ್ಲಿ ಸಾಮಾಜಿಕ ವಿಮೆ (ಸೋಷಿಯಲ್ ಇನ್ಸುರೆನ್ಸ್ ಅಂಡ್ ಇಂಡಿಯಾ)

ಶ್ರೀಯುತ ಎಂ.ಆರ್. ಇಡಗುಂಜಿಯವರು ರಚಿಸಿದ 'ಸೋಷಿಯಲ್ ಇನ್ಸುರೆನ್ಸ್ ಅಂಡ್ ಇಂಡಿಯಾ' ಸುಯೋಚಿತ ಗ್ರಂಥವಾಗಿದೆ.

ಇದನ್ನು ಎರಡು ಭಾಗಗಳಲ್ಲಿ ವಿಭಾಗಿಸಲಾಗಿದೆ. ಭಾಗ–I ಸಾಮಾನ್ಯವಿದ್ದು ಸಾಮಾಜಿಕ ವಿಮೆಯ ಎರಡು ಮುಖ್ಯ ಶಾಖೆಗಳು, ಎಂದರೆ ೧) ಕಾರ್ಮಿಕರ ಪರಿಹಾರ (workmen's compensations) ೨) ಸಾಮಾಜಿಕ ವಿಮೆಯ ಸಂಪನ್ಮೂಲಗಳು, ವಿಮಾ–ಗಣಕ ಶಾಸ್ತ್ರದ ತಂತ್ರಗಳು, ಮತ್ತು ಹಣಕಾಸಿನ ನಿರ್ವಹಣೆ ಮುಂತಾದವುಗಳ ಬಗೆಗೆ ವಿಚಾರಿಸುತ್ತದೆ. ಸಾಮಾಜಿಕ ವಿಮೆಯ ಹಣಕಾಸಿನ ಸಂಬಂಧಗಳ ಬಗೆಗಿನ ಚರ್ಚೆಯು ಸಾಮಾಜಿಕ ವಿಮೆಯ ಯೋಜನೆಗಳನ್ನು ಜಾರಿಗೆ ತರಲು ಬೇಕಾಗುವ ಸಂಪನ್ಮೂಲಗಳು, ಈ ಯೋಜನೆಗಳು ಸರಿಯಾಗಿ ನಡೆಯುವಂತೆ ಸಂಘಟಿಸುವ ವಿವಿಧ ವ್ಯವಸ್ಥೆಗಳು ಮತ್ತು ಹಣಕಾಸಿನ ನಿರ್ವಹಣೆ ಮುಂತಾದ ಸಮಸ್ಯೆಗಳನ್ನು ವಿಶದವಾಗಿ ತಿಳಿಸುತ್ತದೆ.

ಭಾಗ–II ಭಾರತದ ಪರಿಸ್ಥಿತಿಯಲ್ಲಿ ಸಾಮಾಜಿಕ ವಿಮೆಯ ಸಮಸ್ಯೆಯನ್ನು ವಿಚಾರಿಸುತ್ತದೆ. ಈ ಭಾಗದಲ್ಲಿ ಕಾರ್ಮಿಕರ ಪರಿಹಾರ ಅಧಿನಿಯಮ ೧೯೨೩ರ ಉಪಬಂಧಗಳನ್ನು ಮತ್ತು ರೋಗ ವಿಮೆಯ ವ್ಯವಸ್ಥೆಯನ್ನು ವಿಮರ್ಶಾತ್ಮಕವಾಗಿ ಚರ್ಚಿಸಲಾಗಿದೆ. ಇದಲ್ಲದೆ ಲಾರ್ಡ್ ಬೆವರಿಜ್‌ರ ಸಾಮಾಜಿಕ ಭದ್ರತೆಯ ಯೋಜನೆ, ಮತ್ತು ನ್ಯೂಜಿಲ್ಯಾಂಡ್‌ನಲ್ಲಿ ಸ್ವೀಕೃತವಾದ ಸಾಮಾಜಿಕ ವಿಮೆಯ ಯೋಜನೆಗಳನ್ನು ಚರ್ಚಿಸಲಾಗಿದೆ. ಈ ಚರ್ಚೆಯು ಭಾರತದಲ್ಲಿ ಸಾಮಾಜಿಕ ವಿಮೆಯ ಕ್ರಮಗಳನ್ನು ಜಾರಿಗೆ ತರುವ ಶಕ್ಯತೆಗಳನ್ನು ಶೋಧಿಸುವುದರೊಂದಿಗೆ ಮುಕ್ತಾಯವಾಗುತ್ತದೆ. ಕೆಲವು ಆಧಾರಭೂತವಾದ ತೊಂದರೆಗಳನ್ನು ನಿವಾರಿಸಿ, ಗಣನೀಯ ಆರ್ಥಿಕ ಪ್ರಗತಿಯನ್ನು ಸಾಧಿಸಿ, ಸದ್ಯದ ಕಡು ಬಡತನವನ್ನು ನಿರ್ಮೂಲನ ಮಾಡದ ಹೊರತು ಸರಿಯಾದ ಸಾಮಾಜಿಕ ವಿಮೆಯ ಕ್ರಮಗಳನ್ನು ಜಾರಿಗೆ ತರುವುದು ಅಸಾಧ್ಯವೆಂಬುದು ಲೇಖಕರ ಅಭಿಪ್ರಾಯ. ಅವರು ತಮ್ಮ ನಿಲುವಿಗೆ ಆಧಾರವಾದ ಕಾರಣಗಳನ್ನು ಸ್ಪಷ್ಟ ಹಾಗೂ ನಿರ್ಭಯ ರೀತಿಯಿಂದ ಮಂಡಿಸಿದ್ದಾರೆ. ಭಾರತವು ಮುಖ್ಯವಾಗಿ ವ್ಯವಸಾಯವನ್ನು ಅವಲಂಬಿಸಿದೆ. ಗ್ರಾಮೀಣ ಜನತೆಗೆ ರಕ್ಷಣೆಯು ಅತಿ ಅವಶ್ಯ ಎಂಬುದನ್ನು ಅರಿತು ಅವರು ಸಾಮಾಜಿಕ ತತ್ವಗಳನ್ನಾಧರಿಸಿದ ಬೆಳೆಗಳ

---

ಲೇಖಕರು :
**ಮನೋಹರ ಆರ್. ಇಡಗುಂಜಿ**
ಥ್ಯಾಕರ್ ಅಂಡ್ ಕಂಪನಿ ಲಿಮಿಟೆಡ್, ಮುಂಬಯಿ
ಮೊದಲ ಪ್ರಕಟವಾದದು ೧೯೪೮

ವಿಮಾ ಯೋಜನೆಯೊಂದನ್ನು ಸೂಚಿಸಿದ್ದಾರೆ. ಅವರ ಸೂಚನೆಗಳನ್ನು ಅನುಸರಿಸಿ ಒಂದು ಬೆಳೆಗಳ ವಿಮಾ ಯೋಜನೆಯನ್ನು ತಯಾರಿಸಿ ಕ್ರಮವಾಗಿ ಜಾರಿಗೆ ತಂದರೆ ಗ್ರಾಮೀಣ ಜನತೆಯ ಸ್ಥಿತಿಯನ್ನು ಸುಧಾರಿಸಲು ಮತ್ತು ಬರಗಾಲಗಳ ಭಯವನ್ನು ಕಡಿಮೆಮಾಡಲು ಬಹಳ ಸಹಾಯವಾಗಬಹುದು.

ಭಾರತದಲ್ಲಿ ಸಾಮಾಜಿಕ ವಿಮೆ ಹೊಸತಾದ ವಿಷಯ, ಈ ವಿಷಯಕ್ಕೆ ಭಾರತೀಯರ ಕೊಡುಗೆ ಅತ್ಯಲ್ಪವಾಗಿದೆ. ಈ ಪರಿಸ್ಥಿತಿಯಲ್ಲಿ ಶ್ರೀ ಇಡಗುಂಜಿಯವರ ಕೃತಿ ಈ ವಿಷಯದ ಬಗೆಗಿನ ಅಲ್ಪ ಸಾಹಿತ್ಯಕ್ಕೆ ನೀಡಲಾದ ವಿಸ್ತರಣೆ ಎಂದೂ, ವಿಷಯಕ್ಕೆ ಸಂಬಂಧಿಸಿದ ಸಮಸ್ಯೆಗಳ ವಿಮರ್ಶಾತ್ಮಕ ಚರ್ಚೆ ಎಂಬ ದೃಷ್ಟಿಕೋನದಿಂದಲೂ ಈ ವಿಷಯದ ಜಿಜ್ಞಾಸುಗಳು ಇದನ್ನು ಸ್ವಾಗತಿಸುವುದರಲ್ಲಿ ಸಂದೇಹವಿಲ್ಲ. ಅವರ ಶೈಲಿ ಮತ್ತು ವಿವರಣೆಗಳು ಸ್ಪಷ್ಟವಾಗಿದೆ.

**ಬಿ.ಆರ್. ಅಂಬೇಡ್ಕರ್**

## ಒಂದು ಎಚ್ಚರಿಕೆ

ಜನವರಿ ೨೬, ೧೯೫೦ ರಂದು ನಾವು ಒಂದು ವಿರೋಧಾಭಾಸದ ಜೀವನವನ್ನು ಪ್ರವೇಶಿಸಲಿದ್ದೇವೆ. ರಾಜಕೀಯದಲ್ಲಿ ಸಮಾನತೆ ಮತ್ತು ಸಾಮಾಜಿಕ ಹಾಗೂ ಆರ್ಥಿಕ ಜೀವನದಲ್ಲಿ ಅಸಮಾನತೆಯನ್ನು ಹೊಂದಲಿದ್ದೇವೆ. ರಾಜಕೀಯದಲ್ಲಿ, ಒಬ್ಬನಿಗೆ ಒಂದೇ ಮತ ಮತ್ತು ಒಂದು ಮತಕ್ಕೆ ಒಂದು ಬೆಲೆ ಎಂಬ ತತ್ವವನ್ನು ಮಾನ್ಯ ಮಾಡಲಿದ್ದೇವೆ. ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ನಮ್ಮ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಯ ಕಾರಣದಿಂದ ಪ್ರತಿಯೊಬ್ಬನಿಗೂ ಸಮಾನ ಬೆಲೆಯ ತತ್ವವನ್ನು ನಿರಾಕರಿಸಲಿದ್ದೇವೆ.

ಎಲ್ಲಿಯವರೆಗೆ ನಾವು ಇಂತಹ ವಿರೋಧಾತ್ಮಕ ಜೀವನವನ್ನು ನಡೆಸಲು ಸಾಧ್ಯ? ಎಲ್ಲಿಯವರೆಗೆ ನಮ್ಮ ಸಾಮಾಜಿಕ ಮತ್ತು ಆರ್ಥಿಕ ಜೀವನದಲ್ಲಿ ಸಮಾನತೆಯನ್ನು ನಿರಾಕರಿಸಲಿದ್ದೇವೆ?

ನಾವು ಸಮಾನತೆಯನ್ನು ಎಲ್ಲಿಯವರೆಗೆ ನಿರಾಕರಿಸುತ್ತೇವೆಯೋ ಅಲ್ಲಿಯವರೆಗೆ ನಮ್ಮ ಪ್ರಜಾಪ್ರಭುತ್ವವನ್ನು ಗಂಡಾಂತರಕ್ಕೆ ಸಿಲುಕಿಸಿರುತ್ತೇವೆ. ನಾವು ಈ ವಿರೋಧಾಭಾಸವನ್ನು ಆದಷ್ಟು ಶೀಘ್ರವಾಗಿ ತೊಡೆದು ಹಾಕಬೇಕು. ಇಲ್ಲವಾದರೆ ಈ ಅಸಮಾನತೆಯಿಂದ ತೊಳಲುವ ಜನರು ಈ ಸಭೆಯು ಪರಿಶ್ರಮದಿಂದ ಕಟ್ಟಿರುವ ಈ ರಾಜಕೀಯ ಪ್ರಜಾಸತ್ತೆಯ ವ್ಯವಸ್ಥೆಯನ್ನು ಧ್ವಂಸ ಮಾಡುತ್ತಾರೆ.

(ಡಾ. ಬಿ.ಆರ್. ಅಂಬೇಡ್ಕರ್‌ರವರು ನವೆಂಬರ್ ೨೫, ೧೯೪೯ ರಂದು ಸಂವಿಧಾನ ಸಭೆಯಲ್ಲಿ ಮಾಡಿದ ಭಾಷಣದಿಂದ.)

* * * *

# ವಿಷಯಸೂಚಿ


**ಅ**

ಅಂಗೋಲ್ ೧೧೪
ಅಂಬೇಡ್ಕರ್ ೫೧, ೫೨, ೫೯೧, ೫೯೯, ೬೧೪, ೬೩೦, ೬೪೬, ೬೫೬, ೬೫೮, ೬೫೯
ಅಕ್ಬರ್ ೩೦, ೩೦೧, ೩೦೩
ಅಜ್‌ಮೇರ್ ೧೬೮
ಅಟ್ಟೋಮರ್ ೪೨೮
ಅಟ್ಲಾಂಟಿಕ್ ೩೭೧
ಅಡಮ್ಸ್ ೨೪
ಅಫಘಾನ ೩೪
ಅಫೀನಿಂದ ೧೬
ಅಫೀಮು ೧೬, ೧೭, ೧೮, ೨೧, ೮೨, ೧೦೧, ೨೫೪, ೩೮೬
ಅಬಿಸೀನಿಯನ್ ೯೮
ಅಬುಲ್ ೩೦
ಅಮೆರಿಕನ್ ೩೯೫, ೪೩೦, ೪೮೫
ಅಮೆರಿಕಾ ೫೧, ೫೨, ೭೯, ೮೫, ೨೯೯, ೩೨೧, ೩೩೯, ೩೭೧, ೩೭೨, ೪೨೮, ೪೩೦, ೪೩೪, ೪೩೫, ೪೩೭, ೪೩೮, ೪೪೩, ೪೪೪, ೪೪೫, ೪೫೩, ೪೫೪, ೫೦೫, ೫೦೬, ೫೨೯, ೫೩೬, ೫೪೦, ೫೬೮, ೫೬೯, ೫೭೩, ೬೦೩, ೬೩೦, ೬೩೮
ಅರ್ಕಾಟ್ ೩೧೦, ೩೧೫
ಅರ್ಜೆಂಟೈನಾ ೫೧
ಅರ್ಲ್ ೪೧
ಅಲಹಾಬಾದ್ ೨೭, ೩೦೩
ಅಲೆಕ್ಸಾಂಡರ್ ೬೧೪, ೬೧೭, ೬೧೮, ೬೨೫
ಅಲೋಯೆನ್ಸಸ್ ೧೫೬
ಅಸ್ಸಾಂ ೧೧೩, ೧೧೪, ೧೧೯, ೧೨೧, ೧೨೨, ೧೪೨, ೧೪೪, ೧೪೬, ೧೪೯, ೧೫೦, ೧೫೮, ೧೬೨, ೧೬೩, ೧೬೪, ೧೬೫, ೧೬೬, ೧೬೮, ೧೭೩, ೧೭೪, ೧೭೫, ೧೭೬, ೧೭೮, ೧೮೫, ೨೩೨, ೨೫೮, ೨೬೫, ೨೬೭, ೨೬೮, ೨೬೯, ೨೭೦, ೨೮೦, ೨೮೫, ೨೮೬, ೨೮೭, ೨೮೮
ಅಹಮದ ೩೦೩
ಅಹಮದಾಬಾದ್ ೩೦೩

**ಆ**

ಆಂಗ್ಲಜನ ೩೮೭
ಆಕ್ಟ್‌ಗಳು ೪೬೮
ಆಕ್ಟ್‌ನ ೧೧೭
ಆಕ್ಬರಿ ೩೦೩
ಆಗ್ರಾ ೨೬, ೩೦೩
ಆಡಂ ೬೪
ಆಡಂಸ್ಮಿಥ್ ೬೬
ಆಫ್‌ಘನ್ ೭೨
ಆಫ್‌ಘಾನಿಸ್ತಾನ ೧೪೩
ಆಫ್ರಿಕಾ ೫೧, ೫೦೫
ಆಫ್. ೪೮೩, ೫೪೮, ೫೫೬
ಆ್ಯಡಂ ೨೯
ಆರಾಣೆ ೩೮೬
ಆರ್ಕಾಟ್ ೩೧೨, ೩೧೩
ಆಲಮ್ ೩೦೩
ಆಲಮ್‌ಗೀರ್ ೩೦೩

ಆಲಿಸನ್ ೪೨೮, ೪೩೭
ಆಲ್ಬುಕರ್ಕ್ ೧೨
ಆಸ್ಟೀನ್ ೨೯೭
ಆಸ್ಟ್ರಿಯನ್ ೫೪೪
ಆಸ್ಟ್ರಿಯಾ ೩೭೧, ೬೩೫
ಆಸ್ಟ್ರೇಲಿಯಾ ೫೧, ೫೨, ೩೨೦, ೩೨೨, ೩೪೦, ೩೭೯, ೪೫೦, ೪೭೭, ೫೦೫, ೫೪೮



## ಇ


ಇಂಗ್ಲಿಷರು ೩೬, ೪೦, ೮೯, ೩೨೮, ೫೩೭, ೬೩೬
ಇಂಗ್ಲೀಷ್ ೧೪, ೨೯, ೩೪, ೩೬, ೩೮, ೪೩, ೫೭, ೫೯, ೬೭, ೮೭, ೨೨೮, ೨೨೯, ೨೮೪, ೨೯೭, ೨೯೮, ೩೦೬, ೩೦೯, ೩೨೪, ೩೩೩, ೩೫೮, ೩೫೯, ೩೬೦, ೩೬೧, ೩೮೭, ೩೯೪, ೪೦೦, ೪೦೧, ೪೦೩, ೪೦೪, ೪೦೭, ೪೦೯, ೪೧೫, ೪೧೬, ೪೩೮, ೪೪೩, ೪೪೪, ೪೫೧, ೪೫೪, ೪೫೫, ೪೫೬, ೪೬೫, ೪೭೧, ೪೮೮, ೫೩೭, ೬೩೬
ಇಂಗ್ಲೆಂಡ್ ೭, ೮, ೧೨, ೧೪, ೧೯, ೨೫, ೨೭, ೩೨, ೩೩, ೩೪, ೩೫, ೩೬, ೩೭, ೩೮, ೩೯, ೪೦, ೪೩, ೫೭, ೬೪, ೬೭, ೮೪, ೮೫, ೯೬, ೧೮೪, ೧೯೪, ೨೦೩, ೨೨೩, ೨೩೮, ೨೪೯, ೨೭೬, ೩೦೪, ೩೨೩, ೩೨೪, ೩೨೫, ೩೨೭, ೩೪೦, ೩೫೯, ೩೬೦, ೩೬೬, ೩೬೭, ೩೮೨, ೩೮೪, ೩೮೫, ೩೮೭, ೩೯೨, ೩೯೪, ೩೯೭, ೪೦೪, ೪೦೬, ೪೦೭, ೪೦೯, ೪೧೬, ೪೧೯, ೪೩೦, ೪೩೪, ೪೩೫, ೪೩೬, ೪೩೯, ೪೪೧, ೪೪೩, ೪೪೪, ೪೪೬, ೪೪೭, ೪೪೯, ೪೫೦, ೪೫೨, ೪೫೩, ೪೫೪, ೪೫೫, ೪೬೦, ೪೬೫, ೪೬೮, ೪೭೨, ೪೭೪, ೪೭೫, ೪೮೮, ೫೨೫, ೫೨೯, ೫೩೦, ೫೩೨, ೫೩೬, ೫೪೦, ೫೪೬, ೫೪೭, ೫೪೮, ೫೭೦, ೫೭೫, ೫೭೬, ೫೭೯, ೫೮೦, ೫೯೮, ೬೦೦, ೬೦೨, ೬೦೩, ೬೧೨, ೬೧೯, ೬೩೬, ೬೪೯, ೬೫೧, ೬೫೩
ಇಂಚಕೇಪ್ ೫೦೦
ಇಂಡಿಯನ್ ೬೪೮
ಇಂಡಿಯಾ ೭, ೮, ೯, ೧೦, ೧೧, ೧೨, ೧೩, ೧೪, ೧೬, ೧೮, ೨೦, ೨೩, ೨೪, ೨೫, ೨೬, ೨೭, ೨೮, ೩೦, ೩೨, ೩೩, ೩೪, ೩೫, ೩೬, ೩೭, ೩೮, ೩೯, ೪೧, ೪೨, ೪೩, ೫೭, ೫೮, ೬೪, ೭೨, ೮೫, ೮೭, ೧೧೭, ೧೧೯, ೧೨೪, ೧೩೯, ೧೭೯, ೧೮೭, ೧೯೨, ೨೦೨, ೨೦೩, ೨೦೪, ೨೦೬, ೨೦೭, ೨೨೯, ೨೩೬, ೨೩೯, ೨೯೪, ೩೦೨, ೩೦೬, ೩೧೪, ೩೨೦, ೩೯೪, ೪೨೪, ೪೫೧, ೪೬೧, ೪೭೪, ೪೮೨, ೪೯೬, ೪೯೭, ೫೩೩, ೫೩೯, ೫೪೦, ೫೪೬, ೫೪೭, ೫೫೧, ೫೫೭, ೫೮೧, ೫೮೨, ೬೫೭
ಇಂಡೀಸ್ ೯, ೧೦
ಇಕ್ವಿಟಿ ೮೦
ಇಟಲಿ ೩೨೧, ೩೭೦, ೫೪೪, ೬೧೮, ೬೩೫
ಇನಾಂದಾರಿ ೧೩೯



## ಈ


ಈಜಿಪ್ತ್ ೪೪೪, ೫೪೮



## ಎ


ಎಗ್ರಿಗೇಟ್ ೮೨
ಎಟ್‌ಸೆಟ್ರಾ ೧೨೧
ಎಡಿಸ್ಕಾಂಬೆ ೧೨
ಎಡ್ವರ್ಡ್ ೫೬೨, ೫೬೩, ೫೬೫, ೫೬೬, ೫೬೭, ೬೦೯, ೬೧೪, ೬೧೫, ೬೧೬, ೬೧೭
ಎಡ್ವಿನ್ ೫೨
ಎನ್‌ಕ್ವೈರಿ ೪೯೮
ಎಲಿಸನ್ ೪೩೪

ಎಲೆನ್‌ಬರೋ ೭೭
ಎಲ್‌ಫಿನ್‌ಸ್ಟನ್ ೬೫೨
ಎಲ್ಬರ್ಟರು ೨೩೮

**ಏ**

ಏಷಿಯನ್ ೨೮
ಏಷ್ಯಾ ೮೫, ೩೨೮

**ಐ**

ಐರಿಷ್ ೨೨೮, ೫೨೫, ೫೨೬
ಐರೋಪ್ಯ ೨೮, ೨೯, ೩೯, ೫೮, ೫೯, ೬೮, ೭೨, ೭೪, ೫೯೬, ೬೨೮, ೬೨೯, ೬೩೩, ೬೩೫, ೬೪೪
ಐರ್ಲೆಂಡ್ ೫೨೫

**ಒ**

ಒರಿಸ್ಸಾ ೧೩, ೨೬೫, ೨೬೭, ೨೬೮, ೨೮೦, ೨೮೫, ೨೮೬, ೨೮೭, ೨೮೮, ೩೦೪
ಓಪಿಯಮ್ ೨೦೩
ಓವರ್‌ಸ್ಟೋನ್ ೪೫೫, ೪೫೬

**ಔ**

ಔಧ್ ೧೦೫, ೧೦೭, ೧೧೯, ೧೨೧, ೧೩೧, ೧೩೨, ೧೪೨, ೧೪೪, ೧೪೭, ೧೫೨, ೧೫೭, ೧೫೮, ೧೬೩, ೧೬೫, ೧೬೭, ೧೭೨, ೨೩೨
ಔನ್ಸ್ ೩೭೨, ೪೧೮, ೪೮೨, ೪೮೩

**ಕ**

ಕಟಕ್ ೧೭
ಕಮಡು ೪೩೪
ಕರ್ಜನ್ ೫೫೯
ಕಲ್ಕತ್ತಾ ೧೧, ೧೭, ೨೬, ೫೭, ೮೧, ೧೧೦, ೨೦೩, ೨೫೩, ೨೫೭, ೩೪೦, ೩೯೨, ೪೧೯, ೪೪೨, ೪೪೩, ೪೯೪, ೫೪೭
ಕಸ್ಟಂ ೧೩೩, ೧೩೪, ೧೫೨
ಕಸ್ಟಂಸ್ ೧೩೮, ೧೫೨, ೧೫೫, ೧೬೦, ೧೬೧
ಕಸ್ಟೋಡಿಯನ್ ೫೧೫
ಕಾಂಗ್ರೆಸ್ ೨೪೧, ೨೪೨, ೨೪೪
ಕಾಂಗ್ರೇವ್ ೩೬
ಕಾಫರ್ ೩೮
ಕಾಮನ್ವೆಲ್ತ್ ೫೧
ಕಾಮಾ ೧೨
ಕಾಯಿನೇಜ್ ೪೫೧
ಕಾರ್ನವಾಲಿಸ್ ೧೩, ೧೪
ಕಾವೇರಿ ೨೫
ಕಾಸ್‌ಪುರ್ ೧೬೧
ಕಿಂಗ್ ೬೪೬
ಕಿಂಗ್‌ಡಂ ೫೬೮
ಕಿಚನ್ ೬೦೮
ಕಿಚನ್‌ರ ೬೦೭
ಕೀನ್ಸ್ ೬೪೬
ಕೃಷ್ಣಾ ೨೫
ಕೆಥೊಲಿಕ್ ೨೩೩
ಕೆನಡಾ ೩೮, ೫೧, ೨೭೬, ೫೦೫
ಕೆಮ್‌ರ್ ೫೭೭
ಕೆಮ್‌ರರ್ ೫೩೪, ೫೩೭, ೫೭೬, ೫೭೭
ಕೇನ್ಸ್ ೪೭೪, ೪೯೧, ೫೦೧, ೫೧೮, ೫೨೦, ೫೩೩, ೫೩೪, ೫೩೬, ೫೩೯, ೫೪೦, ೫೭೭, ೫೮೩, ೬೦೨
ಕೇರ್ನ್ಸ್ ೩೭೯
ಕೋಯಾಜೀ ೬೧೩
ಕ್ಯಾನನ್ ೫೭೯
ಕ್ಯಾನಿಗ್ ೨೮೨
ಕ್ಯಾರಟ್ಟಿನ ೩೭೯

ಕ್ಯಾಲಿಫೋರ್ನಿಯಾ ೩೨೦, ೩೨೨, ೩೭೯
ಕ್ಯಾಸೆಲ್ ೩೩೦, ೩೩೧
ಕ್ಯಾಸೆಲ್ಸ್ ೩೩೯
ಕ್ಯಾಸ್ಲರೀಗ್ ೪೯೯
ಕ್ರೋಮರ್ ೪೦೯
ಕ್ರೌನ್ ೬೩೫
ಕ್ಲಿಂಟನ್ ೬೧೫
ಕ್ಲೈವ್ ೧೨, ೨೯

## ಖ

ಖೋತಾದ ೫೬೦

## ಗ

ಗಂಗಾ ೨೫
ಗನರ್ವರ್ ೨೫೬
ಗಯಾ ೧೬೧
ಗಿಫೆನ್‌ರು ೪೨೫
ಗೆಜೆಟಿಯರ್ ೧೩೩, ೧೫೫
ಗೋಖಲೆ ೨೭೪, ೫೪೧
ಗೋದಾವರಿ ೨೫
ಗೋಶ್ಚೆನ್ ೪೩೭
ಗ್ರಾಚುಯಿಟಿ ೧೪೧
ಗ್ರಾಮಕರಣಿಕ ೧೪
ಗ್ರಾಸ್ ೨೮
ಗ್ರೀಕ್ ೫೯೭
ಗ್ರೀನಾಕ್ ೩೯೪
ಗ್ರೀನ್‌ಬ್ಯಾಂಕ್ ೫೪೦, ೫೨೯
ಗ್ರೆಗರಿ ೬೦೭
ಗ್ರೆಶಮ್ ೪೩೩
ಗ್ರೇಗಾರ್ ೬೪೬
ಗ್ರೇಹಮನ ೫೭೧
ಗ್ಯಾಟನ್ ೨೨೮
ಗ್ರ್ಯಾಮ್ ೩೭೭
ಗ್ಲ್ಯಾಡ್‌ಸ್ಟನ್ ೪೧

## ಚ

ಚಟ್ಟೀಸ್‌ಗರ್ ೧೬೧
ಚಬ್ಲಾನಿ ೬೪೮
ಚಾನ್ಸ್‌ಲರ್ ೩೬, ೨೦೩
ಚಾರ್ಟರ್ ೩೨೪, ೩೫೯, ೪೫೯, ೪೬೮, ೪೭೦, ೪೭೧, ೫೬೩
ಚಾರ್ಲ್‌ಸ್‌ವುಡ್ ೨೮೨
ಚಿತ್ತಗಾಂವ್ ೧೭
ಚೀನಾ ೨೩೫, ೩೭೦
ಚೀನಿಯನ ೫೭೮
ಚೆಸ್ನೀ ೮೪
ಚೇಂಬರ್ ೪೪೧
ಚೇಂಬರ್ಲಿನ್ ೪೫೭, ೪೫೯, ೪೭೧, ೪೭೩, ೪೭೭, ೫೧೨, ೫೨೦, ೫೨೪, ೫೨೬, ೫೩೩, ೫೩೪, ೫೩೯, ೫೪೩, ೫೪೬, ೫೫೫, ೫೫೭, ೫೬೧, ೫೬೭, ೫೭೫, ೫೮೩
ಚೇಲಮ್ಸ್ ೨೪೪

## ಛ

ಛಾರ್ಜ್ ೧೩೫
ಛಾರ್ಜಸ್ ೩೯

## ಜ

ಜಪಾನ್ ೨೯೯
ಜರ್ಮನ್ ೨೦೨, ೩೬೯, ೪೨೮, ೬೧೨, ೬೩೫
ಜರ್ಮನಿ ೫೧, ೫೨, ೮೫, ೨೭೬, ೩೬೮, ೩೬೯, ೪೨೮, ೪೩೪, ೬೦೦
ಜಹಾಂಗಿರಿ ೩೦೩
ಜಾರ್ಜ್ ೧೦, ೪೫೨

ಜಿನೀವಾ ೬೧೮, ೬೩೦
ಜೇಮ್ಸ್ ೮೭, ೨೦೭, ೨೦೮, ೨೮೯, ೩೦೬, ೫೦೦, ೫೫೯, ೫೬೦, ೫೬೧, ೬೦೭, ೬೧೫
ಜೇವನ್ಸ್ ೩೦೧, ೩೫೯, ೩೭೮, ೩೮೨, ೪೨೭, ೪೩೪, ೪೫೬, ೫೨೩, ೫೯೨, ೬೦೪
ಜೊಮಿನಿ ೩೦
ಜೋಸೆಫ್ ೬೦೭

## ಟ

ಟಾರ್ಪೆಡೋದಂತೆ ೩೬
ಟೆಂಪಲ್ ೧೨೪, ೧೨೭, ೪೧೫, ೪೧೬
ಟೈಮ್ಸ್‌ನಿಂದ ೪೮೧
ಟ್ರಾಯ್ ೩೦೧, ೩೦೯, ೩೧೦
ಟ್ರಾಯ್‌ಗ್ರಾಂ ೪೭೭, ೪೮೫
ಟ್ರಾವೇಲ್ಯಾನ್ ೩೫೯
ಟ್ರಿಬ್ಯೂಟ್ಸ್ ೧೫೨
ಟ್ರೆವೆಲಿಯನ ೪೧೭
ಟ್ರ್ಯಾಮ್ ೨೫೩, ೨೫೪

## ಠ

ಠಾಕೂರ್‌ದಾಸ್ ೬೧೮, ೬೨೮

## ಡ

ಡಂಡೀ ೪೦೦
ಡರ್ಬಿ ೩೬, ೪೧, ೪೨
ಡಾಕಾ ೩೦೩
ಡಾಕಿನ್ಸ್ ೫೫೯, ೫೬೧, ೫೬೨, ೬೧೫, ೬೧೬, ೬೧೭
ಡಾರ್ವಿನ್ ೪೫೦
ಡಾಲ್‌ಹೌಸಿ ೨೫
ಡಿಜೂರೇ ೭೬
ಡಿಸ್ರೇಲಿ ೩೬, ೩೭, ೬೩
ಡುರಾಂಡ್ ೮೫
ಡೆಕ್ಕನ್ ೧೮
ಡೆನ್ಮಾರ್ಕ್ ೩೬೯
ಡೇವನ್ ೫೪೧
ಡೇವಿಡ್ ೩೨೫
ಡೈಸೇ ೨೯೮

## ತ

ತಕ್ಷೀರು ೫೯
ತಾಮಲುಕ್ ೧೭
ತಿಜೋರಿಗಳ ೩೨೨
ತೆರಾಯ್ ೧೩೧, ೧೫೨

## ಥ

ಥಾರ್ನ್‌ಟೆಸ್ ೫೨೫
ಥ್ಯಾಕರ್ಸ್ ೫೫೨, ೫೫೭
ಥ್ಯಾಚರ್ ೬೪೭

## ದ

ದಲಾಲಿ ೨೬೦
ದಾದಾಭಾಯಿ ೬೨೮, ೬೨೯
ದಾಮಾಶಾ ೨೦, ೨೧, ೨೨
ದಿಲಾಲೀ ೧೨
ದಿಲ್ಲಿ ೩೦೩
ದುವಾಬ್ ೨೫

## ನ

ನಾಗಪುರ ೧೬೧
ನಾರ್‌ಕಾಟ್ ೬೧೪
ನಾರ್ಥ್‌ಕೋಟ್ ೨೮೨
ನಾರ್ವೆ ೩೬೯
ನಿಕಲ್ ೫೦೫

ನಿಕಲ್ಸನ್ ೪೨೧
ನೆಪೋಲಿಯನ್ ೪೩೪
ನೇಟೀವ್ ೬೯
ನೇತಾರರ ೨೭೪
ನೇಪಲ್ಸ್ ೩೬
ನೇಪಾಳಯುದ್ಧ ೩೩
ನೇಪಿಯರ್ ೮೩, ೯೬
ನೊಪೋಲಿಯನ್ ೪೯೯
ನ್ಯೂಯಾರ್ಕ್ ೪೮೫, ೪೮೭, ೬೪೬

**ಪ**

ಪಂಜಾಬ್ ೧೭, ೨೫, ೮೨, ೮೩, ೧೦೦, ೧೦೫, ೧೦೭, ೧೧೯, ೧೨೧, ೧೨೨, ೧೪೦, ೧೪೧, ೧೪೨, ೧೪೪, ೧೪೭, ೧೫೦, ೧೫೮, ೧೬೨, ೧೬೩, ೧೬೪, ೧೬೫, ೧೬೬, ೧೬೭, ೧೭೨, ೧೭೩, ೧೭೪, ೧೭೬, ೧೭೭, ೧೭೮, ೧೮೫, ೨೬೫, ೨೬೭, ೨೬೮, ೨೬೯, ೨೭೦, ೨೮೦, ೨೮೫, ೨೮೬, ೨೮೭, ೨೮೮
ಪಂಡಾರಿ ೧೬೮
ಪಗೋಡಾ ೩೦೨, ೩೧೧, ೩೧೨, ೩೧೩, ೩೧೫
ಪಟವಾರಿ ೩೮೬
ಪಟ್ವಾರಿ ೧೬೮
ಪಠಾಣ ೧೪
ಪಣಮ್ ೬೯
ಪತನಾ ೩೦೩
ಪರ್ಷಿಯನ್ ೩೦೩
ಪಲ್ಲರೆ ೭೨
ಪವರ್ಸ್ ೧೨೧
ಪಾಟ್ನಾ ೧೬೧
ಪಾಮರ್ಸ್‌ಟನ್ ೩೫
ಪಾಮರ್ಸ್ಟನ್ ೩೬, ೩೭
ಪಾಯಿಸನ್ ೧೧೪
ಪಾರ್ನೆಲ್ ೫೨೫
ಪಾಳ್ಯಂ ೬೯
ಪಿಟ್ ೨೭
ಪಿಟ್ಸ್‌ಮನ್ ೫೦೬
ಪಿಯರ್ಸನ್ ೪೨೬, ೪೫೩
ಪೀಲ್ ೩೨೪, ೩೨೭, ೩೩೦, ೪೧೩, ೪೪೯
ಪುರುಷೋತ್ತಮದಾಸ್ ೬೧೮, ೬೨೮
ಪೂರ್ವಬಂಗಾಳ ೧೬೧, ೧೭೮, ೧೮೫
ಪೂಲ್ ೩೨೫
ಪೆಟ್ರಿ ೩೨೩, ೩೨೮
ಪೆನ್ಸ್ ೬೯, ೩೬೬, ೪೪೧, ೪೪೫, ೫೪೭, ೫೫೧, ೫೫೭, ೫೬೨, ೫೭೪, ೫೯೬, ೫೯೭, ೬೧೧, ೬೧೨, ೬೧೪, ೬೨೦, ೬೨೧, ೬೨೩, ೬೨೪, ೬೨೫, ೬೨೮, ೬೨೯, ೬೩೦, ೬೩೫, ೬೪೦, ೬೪೧, ೬೪೨, ೬೪೩, ೬೪೪
ಪೆಸೆಟಾಸ್ ೫೧೩
ಪೇಪರ್‌ಕರೆನ್ಸಿ ೫೧೭
ಪೇಶಾವರ ೨೬
ಪೈಲೊಟೇಜ್ ೧೩೪
ಪೋಪ್ ೨೩೩
ಪೋರ್ಚುಗಲ್ ೩೮೨
ಪೋರ್ಚುಗೀಸ್ ೧೭, ೧೫೫, ೪೪೨
ಪ್ಯಾರಿಸ್ ೩೬೭, ೩೬೮, ೩೭೦
ಪ್ರಾಮಿಸರಿನೋಟು ೧೯
ಪ್ರೆಸ್ಟನ್ ೬೨೫
ಪ್ರೈಸ್ ೪೯೮
ಪ್ರೊಬಿನ್ ೪೪೭, ೪೪೮, ೪೪೯, ೪೫೦
ಪ್ರೊವಿನ್ಷಿಯಲ್ ೧೨೫
ಪ್ರೋಮ್ ೨೬
ಪ್ಲಿನಿ ೪೨೭

## ಫ

ಫರೂಖಾಬಾದ್ ೩೧೦, ೩೧೫
ಫಲ್ಲರ್ಟನ್ ೨೮
ಫಾಜಲ್ ೩೦
ಫಾನ್ಸ್ ೪೪೫
ಫಾರಂಸ್ಟೋರ್ ೧೧೪
ಫಿಲಿಪೈನ್ಸ್ ೪೮೩
ಫಿಷರ್ ೫೩೫, ೬೨೮
ಫೀಸಿನ ೧೮
ಫೆಡರಲ್‌ವಾದ ೭೯, ೮೦, ೮೫
ಫೆಡರಲ್‌ವಾದಿ ೮೦, ೮೨
ಫೊರ್ಡ್ ೨೪೪
ಫೌಲರ್ ೪೪೯, ೪೫೬, ೪೫೭, ೪೫೯, ೪೬೮, ೫೨೫, ೫೪೬, ೫೪೮, ೫೫೧, ೫೫೨, ೫೫೫, ೫೬೦, ೫೬೬, ೫೬೭, ೫೬೮, ೫೭೦, ೫೭೧, ೫೭೨, ೫೭೫, ೫೭೬, ೫೯೫, ೬೦೯, ೬೧೪, ೬೧೫, ೬೧೬, ೬೧೭
ಫ್ರಾಂಕ್ ೩೨೨, ೪೨೩, ೪೫೪, ೬೩೫
ಫ್ರಾನ್ಸ್ ೧೨, ೫೧, ೬೯, ೩೨೧, ೩೬೮, ೩೭೯, ೩೮೨, ೪೨೩, ೪೩೦, ೪೩೧, ೪೩೨, ೪೩೪, ೪೪೩, ೪೪೪, ೪೪೫, ೪೪೭, ೪೫೩, ೪೫೪, ೪೫೫, ೪೫೬, ೫೬೮, ೫೬೯, ೫೭೩, ೬೧೮
ಫ್ರೆಂಚ್ ೬೪, ೩೬೮, ೩೭೯, ೩೮೦, ೪೫೪, ೪೫೫, ೪೫೬, ೬೩೫
ಫ್ರ್ಯಾಂಕ್ ೩೭೦, ೪೨೮, ೪೩೪, ೪೫೩, ೪೫೪, ೪೫೫, ೫೬೮, ೫೭೩
ಫ್ಲೋರಿನ್ ೪೪೦

## ಬ

ಬಂಗಾಲ ೨೦೬, ೨೦೬, ೨೧೫, ೨೩೨, ೨೫೩, ೨೫೮, ೨೬೨, ೨೬೫, ೨೮೩, ೩೧೧, ೩೧೨, ೩೧೫, ೩೧೭, ೩೪೩, ೪೧೯, ೪೪೦
ಬಂಗಾಳ ೧೦, ೧೧, ೧೩, ೧೪, ೧೬, ೧೭, ೧೮, ೧೯, ೨೫, ೨೭, ೨೮, ೨೯, ೫೭, ೬೦, ೬೧, ೭೭, ೮೧, ೮೨, ೮೩, ೮೯, ೧೦೦, ೧೦೫, ೧೦೬, ೧೦೭, ೧೧೯, ೧೨೧, ೧೨೨, ೧೨೫, ೧೩೩, ೧೩೪, ೧೩೫, ೧೪೨, ೧೪೪, ೧೪೭, ೧೪೯, ೧೫೦, ೧೫೫, ೧೫೬, ೧೫೭, ೧೫೮, ೧೬೧, ೧೬೨, ೧೬೩, ೧೬೪, ೧೬೫, ೧೬೬, ೧೬೭, ೧೭೩, ೧೭೪, ೧೭೫, ೧೭೬, ೧೭೮, ೧೮೫, ೨೬೭, ೨೬೮, ೨೬೯, ೨೭೦, ೨೮೦, ೨೮೧, ೨೮೨, ೨೮೪, ೨೮೫, ೨೮೬, ೨೮೭, ೨೮೮, ೩೦೪, ೩೧೨, ೩೧೭, ೪೧೯, ೪೨೦
ಬಂತರ ೩೨೭
ಬಟವಾಡೆ ೩೦೫, ೩೩೯
ಬಟಾನಿಕಲ್ ೧೧೪
ಬನಾರಸ್ ೩೧೦, ೩೧೫, ೬೫೨
ಬರ್ಕ್ ೨೩೭, ೨೯೪
ಬರ್ಖಾಸ್ತು ೧೩೩
ಬರ್ಗ್ ೩೫೮
ಬರ್ಡ್ವಾನ್ ೧೧೧
ಬರ್ದ್ವಾನ್ ೨೬
ಬರ್ಮಾ ೩೩, ೭೨, ೮೨, ೯೩, ೧೦೫, ೧೦೭, ೧೧೯, ೧೨೦, ೧೪೨, ೧೪೪, ೧೪೬, ೧೪೭, ೧೪೮, ೧೪೯, ೧೫೦, ೧೫೨, ೧೫೬, ೧೫೭, ೧೫೮, ೧೬೦, ೧೬೨, ೧೬೩, ೧೬೪, ೧೬೫, ೧೬೬, ೧೬೭, ೧೭೧, ೧೭೨, ೧೭೩, ೧೭೪, ೧೭೮, ೧೮೫, ೨೩೨, ೨೫೮, ೨೬೫, ೨೬೭, ೨೬೮, ೨೬೯, ೨೭೦, ೨೮೦, ೨೮೧, ೨೮೫, ೨೮೬, ೨೮೭, ೨೮೮, ೫೦೨
ಬರ್ಮಿಂಗ್‌ಹ್ಯಾಂ ೩೯೪
ಬರ್ಲಿನ್ ೩೬೭
ಬಲಾಸೋರ್ ೧೭
ಬಲ್ಲೂತಾ ೧೮

ಬಾಂಬೆ ೧೦೫, ೧೫೫, ೨೦೩, ೨೫೦, ೨೫೮, ೨೫೯, ೨೬೨, ೨೬೩, ೨೬೪, ೨೬೫, ೨೬೭
ಬಾಬಿಂಗ್‌ಟನ್ ೪೮೪
ಬಿನ್ ೪೪೯
ಬಿನ್ನವತ್ತಳೆಯಲ್ಲಿ ೩೨೪
ಬಿಷಪ್ ೨೮, ೧೩೩
ಬಿಹಾರ ೧೩, ೨೯, ೨೬೫, ೨೬೭, ೨೬೮, ೨೮೦, ೨೮೫, ೨೮೬, ೨೮೭, ೨೮೮, ೩೦೪
ಬುಬ್ಬುಗಳೆಂದರೆ ೧೭೯
ಬುರವ ೯೪
ಬುಲಿಯನ್ ೪೫೦, ೫೨೭, ೫೪೨, ೫೭೯
ಬುಷಾನನ್ ೬೯
ಬುಷೆಲ್ ೪೧೩
ಬುಸ್ಸೇ ೧೨
ಬೆಂಗಳೂರು ೨೬
ಬೆಂಗಾಲ್ ೪೯೭, ೫೮೧
ಬೆಂಥಾಮ್ ೩೦
ಬೆನೆವೊಲೆನ್ಸ್ ೪೯೬
ಬೆಬಿಂಗ್‌ಟನ್ ೬೪೧
ಬೆರಾರ್ ೧೭೭, ೨೬೯, ೨೭೦
ಬೆಲ್ಜಿಯಮ್ ೩೨೧, ೩೬೯, ೩೭೦
ಬೆವರಿಜ್ ೬೫೭
ಬೆಳ್ಳಿಗಟ್ಟಿ ೪೧೯, ೪೨೮, ೪೪೧, ೫೩೫
ಬೆಳ್ಳಿಗಳ ೩೦೭, ೩೨೨, ೩೪೮, ೩೪೯, ೩೬೬, ೩೬೭, ೩೭೧, ೩೭೨, ೩೭೯, ೩೮೦, ೩೮೧, ೩೮೨, ೪೦೧, ೪೧೫, ೪೩೧, ೪೪೪
ಬೆಳ್ಳಿಗಳು ೩೭೮, ೪೩೧
ಬೆಳ್ಳಿಗಳೆರಡು ೪೩೪
ಬೆಳ್ಳಿಗಿಂತ ೩೬೯
ಬೆಳ್ಳಿಗಿಂತಲೂ ೪೨೦, ೫೪೬
ಬೇಗ್ ೪೨೫, ೪೨೭, ೫೭೦
ಬೇಗ್‌ಹ್ಯಾಟ್ ೫೭೦
ಬೊಂಬಾಯಿ ೯೮, ೧೪೦, ೧೪೩, ೧೫೬, ೧೬೧, ೧೬೭, ೧೮೫, ೩೯೨, ೪೪೨, ೪೪೩, ೫೦೫, ೫೧೨, ೫೫೫
ಬೋನ್ಸ್ ೪೩೯
ಬೋರಿ ೨೫
ಬ್ಯಾಂಕರನ್ ೩೬೦, ೩೬೧
ಬ್ಯಾಂಕೋನ ೧೨
ಬ್ಯಾಂಡ್ ೪೩೭
ಬ್ಯಾರಿಸ್ಟರ್ ೫೪೯
ಬ್ಯಾರೋಮೀಟರ್ ೬೦೬
ಬ್ರಸೆಲ್ಸ್ ೩೬೭, ೪೩೦
ಬ್ರಿಗ್ಸ್ ೨೮
ಬ್ರಿಟನ್ ೮, ೨೮, ೩೮, ೩೯, ೫೮, ೬೨, ೯೦, ೩೬೮, ೪೩೫, ೪೩೬, ೪೩೭, ೪೪೪, ೪೪೮, ೪೫೦
ಬ್ರಿಟಿಷ್ ೧೯೧, ೨೧೪
ಬ್ರಿಟಿಷರ ೯, ೩೨, ೩೯, ೭೩, ೩೦೧, ೩೨೬, ೩೨೭
ಬ್ರಿಟಿಷರು ೧೭, ೨೭, ೪೩, ೫೮, ೫೯, ೭೩, ೨೩೫, ೩೧೯, ೩೨೬, ೩೨೭, ೪೩೬, ೪೩೭, ೫೬೬
ಬ್ರೆಜಿಲ್ ೫೧
ಬ್ರೈಟರು ೨೫, ೩೯, ೪೦
ಬ್ಲ್ಯಾಂಡ್ ೪೨೮, ೪೩೪

## ಭ

ಭಾಬಾರ್ ೧೫೨
ಭಾರ ೨೪
ಭಾರತ ೧೦, ೧೨, ೧೩, ೧೪, ೧೭, ೧೮, ೨೦, ೨೧, ೨೨, ೨೩, ೨೫, ೨೮, ೨೯, ೩೨, ೩೩, ೩೪, ೩೫, ೩೬, ೩೭, ೩೮, ೩೯, ೪೦, ೪೧, ೪೨, ೪೩, ೪೯, ೫೦, ೫೧, ೫೭, ೫೮, ೫೯, ೬೦, ೬೧, ೬೨, ೬೩, ೬೪, ೬೫, ೬೬, ೬೭,

೭೨, ೭೩, ೭೫, ೭೯, ೮೦, ೮೨, ೮೩, ೮೪, ೮೫, ೮೬, ೮೭, ೮೮, ೮೯, ೯೧, ೯೩, ೯೬, ೯೭, ೧೦೦, ೧೦೯, ೧೧೭, ೧೧೮, ೧೩೪, ೧೪೭, ೧೫೦, ೧೫೫, ೧೫೬, ೧೫೭, ೧೮೩, ೧೮೪, ೧೯೧, ೧೯೭, ೧೯೮, ೧೯೯, ೨೦೨, ೨೦೩, ೨೦೪, ೨೦೮, ೨೦೯, ೨೧೦, ೨೧೧, ೨೧೪, ೨೧೫, ೨೧೬, ೨೧೮, ೨೧೯, ೨೨೨, ೨೨೩, ೨೨೫, ೨೨೬, ೨೨೭, ೨೨೮, ೨೨೯, ೨೩೦, ೨೩೧, ೨೩೨, ೨೩೩, ೨೩೫, ೨೩೬, ೨೩೭, ೨೩೮, ೨೪೦, ೨೪೧, ೨೪೨, ೨೪೪, ೨೪೭, ೨೪೮, ೨೪೯, ೨೫೦, ೨೫೧, ೨೫೨, ೨೫೩, ೨೫೪, ೨೫೫, ೨೫೬, ೨೫೭, ೨೫೮, ೨೬೦, ೨೬೩, ೨೬೪, ೨೭೧, ೨೭೩, ೨೭೪, ೨೭೬, ೨೭೭, ೨೭೮, ೨೭೯, ೨೮೨, ೨೮೩, ೨೮೪, ೨೯೦, ೨೯೪, ೨೯೭, ೨೯೮, ೨೯೯, ೩೦೧, ೩೦೨, ೩೦೪, ೩೦೫, ೩೦೬, ೩೦೭, ೩೦೯, ೩೧೭, ೩೧೮, ೩೧೯, ೩೨೦, ೩೨೨, ೩೨೩, ೩೨೫, ೩೨೬, ೩೨೭, ೩೨೮, ೩೩೦, ೩೩೧, ೩೩೮, ೩೩೯, ೩೪೦, ೩೪೩, ೩೪೪, ೩೪೯, ೩೫೦, ೩೫೨, ೩೫೪, ೩೫೫, ೩೫೭, ೩೫೮, ೩೫೯, ೩೬೦, ೩೬೬, ೩೭೩, ೩೮೪, ೩೮೫, ೩೮೬, ೩೮೯, ೩೯೧, ೩೯೨, ೩೯೩, ೩೯೪, ೩೯೭, ೩೯೯, ೪೦೦, ೪೦೪, ೪೦೬, ೪೦೭, ೪೦೯, ೪೧೫, ೪೧೬, ೪೧೭, ೪೧೮, ೪೨೧, ೪೨೨, ೪೨೩, ೪೨೪, ೪೨೫, ೪೨೬, ೪೨೭, ೪೩೫, ೪೩೬, ೪೩೭, ೪೩೮, ೪೩೯, ೪೪೦, ೪೪೧, ೪೪೩, ೪೪೪, ೪೪೫, ೪೪೬, ೪೪೭, ೪೪೮, ೪೪೯, ೪೫೦, ೪೫೧, ೪೫೨, ೪೫೩, ೪೫೭, ೪೫೮, ೪೫೯, ೪೬೦, ೪೬೧, ೪೬೫, ೪೬೭, ೪೬೮, ೪೬೯, ೪೭೨, ೪೭೪, ೪೭೫, ೪೭೭, ೪೮೨, ೪೮೩, ೪೮೮, ೪೯೧, ೪೯೩, ೪೯೪, ೪೯೫, ೪೯೬, ೪೯೭, ೪೯೮, ೪೯೯, ೫೦೦, ೫೦೨, ೫೦೩, ೫೦೫, ೫೦೭, ೫೧೨, ೫೧೭, ೫೧೮, ೫೨೧, ೫೨೪, ೫೨೬, ೫೩೦, ೫೩೧, ೫೩೨, ೫೩೩, ೫೩೪, ೫೩೫, ೫೩೬, ೫೩೭, ೫೩೮, ೫೪೦, ೫೪೧, ೫೪೨, ೫೪೩, ೫೪೪, ೫೪೫, ೫೪೬, ೫೪೭, ೫೪೮, ೫೫೧, ೫೫೨, ೫೫೫, ೫೫೬, ೫೫೭, ೫೫೮, ೫೫೯, ೫೬೦, ೫೬೨, ೫೬೩, ೫೬೫, ೫೬೬, ೫೬೭, ೫೬೯, ೫೭೧, ೫೭೩, ೫೭೬, ೫೭೭, ೫೭೮, ೫೭೯, ೫೮೦, ೫೮೧, ೫೮೨, ೫೮೪, ೫೮೯, ೫೯೦, ೫೯೧, ೫೯೫, ೫೯೬, ೫೯೮, ೫೯೯, ೬೦೧, ೬೦೨, ೬೦೩, ೬೦೪, ೬೦೫, ೬೦೬, ೬೧೧, ೬೧೨, ೬೧೮, ೬೧೯, ೬೨೨, ೬೨೪, ೬೨೭, ೬೨೯, ೬೩೫, ೬೩೬, ೬೩೯, ೬೪೦, ೬೪೧, ೬೪೬, ೬೪೮, ೬೪೯, ೬೫೩, ೬೫೪, ೬೫೬, ೬೫೭, ೬೫೮

## ಮ

ಮದರಾಸು ೧೦, ೧೧, ೧೨, ೧೭, ೧೮, ೧೯, ೨೦, ೨೫, ೨೬, ೨೮, ೨೯, ೪೨, ೫೭, ೬೦, ೬೧, ೬೯, ೭೬, ೮೧, ೮೨, ೮೩, ೯೬, ೯೮, ೧೦೦, ೧೦೫, ೧೦೭, ೧೧೭, ೧೧೮, ೧೧೯, ೧೨೧, ೧೨೨, ೧೪೨, ೧೪೪, ೧೪೬, ೧೫೫, ೧೫೮, ೧೬೧, ೧೬೨, ೧೬೩, ೧೬೪, ೧೬೫, ೧೬೬, ೧೬೭, ೧೭೪, ೧೭೫, ೧೭೬, ೧೭೯, ೧೮೫, ೨೦೯, ೨೫೯, ೨೬೨, ೨೬೫, ೨೬೭, ೨೬೮, ೨೬೯, ೨೭೦, ೨೮೦, ೨೮೫, ೨೮೬, ೨೮೭, ೨೮೮, ೩೧೧, ೩೧೨, ೩೧೩, ೩೧೫, ೩೧೭, ೩೨೮, ೩೩೨, ೩೩೭, ೩೩೮, ೫೪೭
ಮನ್ರೋ ೨೯
ಮರಾಠ ೧೪, ೨೮, ೩೩, ೭೨, ೮೩
ಮರೇ ೬೧೪, ೬೧೭, ೬೧೮, ೬೨೫
ಮಹೋಗನಿ ೭೮

ಮಾಂಟೆಗ್ಯೂ ೨೪೪, ೪೫೦
ಮಾಣಿಕಜೀ ೬೨೮, ೬೨೯
ಮಾರ್ಕ್ ೬೩೫
ಮಾರ್ಚಿಯ ೫೫೯
ಮಾರ್ಟಿನ್ ೨೯
ಮಾರ್ಲೆ ೨೩೯, ೨೪೧, ೨೪೪, ೨೫೦
ಮಾರ್ಷಲ್ ೪೦೪, ೪೩೨, ೪೯೧, ೫೩೯, ೬೨೧
ಮಾಲ್ಕೋಮ್ ೧೨
ಮಾಲ್ಟ್ ೩೮೬
ಮಾಳವದ ೧೬
ಮಾಳ್ವ ೮೨, ೩೮೬
ಮಿಂಟ್ ೨೦, ೧೫೬, ೫೫೫, ೫೫೬
ಮಿಂಟೋ ೨೪೪, ೨೫೦
ಮಿಚೆಲ್ ೫೨೯, ೫೪೦
ಮಿಜಾಪುರ್ ೧೩೧
ಮಿಡ್ನಾಪುರ ೧೧೦
ಮಿಲಿಟರಿ ೭೨, ೭೩, ೮೪, ೨೫೩
ಮಿಲ್ಲೆಗೆ ೩೪೮
ಮೀರ ೧೭೫
ಮುಂಬಯಿ ೧೧, ೧೬, ೧೭, ೧೮, ೧೯, ೨೫, ೨೬, ೫೭, ೮೧, ೮೨, ೧೫೨, ೩೧೧, ೩೧೩, ೩೧೪, ೩೧೫, ೩೩೨, ೩೩೭, ೩೩೮, ೩೩೯, ೬೧೫, ೬೫೨
ಮುರ್ಶಿದಾಬಾದ್ ೩೦೩
ಮುಸಲ್ಮಾನ ೨೭, ೧೧೩, ೨೩೩, ೩೦೧
ಮುಸ್ಲಿಮ್ ೨೪೧
ಮೆಂಚೆಸ್ಟರ್ ೨೫
ಮೆಂಜರ್ ೫೮೩
ಮೆಕೇ ೫೦೦
ಮೆಕ್ಸಿಕೋ ೪೮೩
ಮೆಗ್ನಾಕಾರ್ತಾ ೪೨
ಮೆಮಾಯಿರ್ಸ್ ೧೫೫
ಮೆರೀನ್ ೧೩೩, ೧೩೮, ೧೫೩, ೧೫೫
ಮೆರ್ಚಿಸ್ಟನ್ ೯೬
ಮೆಸ್ಟನ್ ೨೬೩, ೫೫೯
ಮೇಜ್‌ಪುರ್ ೧೧೪
ಮೇಯೋ ೯೭, ೯೮, ೯೯
ಮೊಘಲ್ ೧೪, ೨೩೫, ೩೦೧, ೩೦೨, ೩೦೩, ೩೦೬, ೩೦೭, ೩೦೯, ೩೧೧, ೩೧೮, ೩೧೯
ಮೊತುರ್ಫಾ ೬೮
ಮೊತುರ್ಫಾ ೬೯
ಮೊಹರು ೩೦೨, ೩೧೧, ೩೧೩, ೩೧೪, ೩೧೭, ೩೧೮, ೪೧೫, ೪೧೬, ೫೦೫
ಮೊಹ್ತುರ್ಫಾ ೧೮
ಮ್ಯಾಂಟ್ ೬೨೬
ಮ್ಯಾಂಡಮಸ್ ೧೮೪
ಮ್ಯಾಕ್ ೬೪೬
ಮ್ಯಾಕ್‌ಬೆತ್ ೧೨
ಮ್ಯಾಕ್‌ಮಿಲನ್ ೬೪೬
ಮ್ಯಾಸ್ಸೇ ೮೮, ೯೩, ೯೪
ಮ್ಯೂರ್ ೪೧೯


## ಯ


ಯೂರೂ ೨೩೨
ಯಮುನಾ ೨೫
ಯಾದವೀ ೩೩೯
ಯುರೋಪ್ ೧೨, ೮೭, ೮೯, ೧೫೭, ೨೧೨, ೨೨೨, ೩೧೨, ೩೨೮, ೩೩೧, ೩೪೪, ೩೭೯, ೩೮೨, ೪೦೬, ೪೦೭, ೪೨೬, ೪೨೭, ೪೩೪, ೪೩೫, ೪೪೯, ೪೭೩, ೪೭೪, ೫೨೧, ೫೯೪, ೬೩೪, ೬೩೫, ೬೩೯
ಯುರೋಪಿಯನ್ ೮೫, ೯೦, ೧೧೨, ೨೫೭, ೩೨೮, ೩೮೪, ೩೯೨, ೩೯೯, ೪೦೦, ೪೦೯, ೪೮೦, ೬೧೧

## ರ

ರಂಗೂನ್ ೨೬, ೫೬೪
ರಘುವಯ್ಯಂಗಾರರು ೬೯
ರಮೇಶಚಂದ್ರ ೩೨
ರಷ್ಯಾ ೨೧೨, ೩೨೭, ೩೭೦, ೬೩೫
ರಾಜಪುತಾನ ೧೭, ೧೮, ೮೨
ರಾಬರ್ಟ್ ೩೨೭, ೪೨೫
ರಾಬಿನ್ಸನ್ ೫೦
ರಾಯಲ್ ೧೮೩, ೨೦೩, ೨೦೪, ೨೭೪, ೩೨೪, ೩೯೨, ೩೯೩, ೪೫೦, ೪೫೧, ೪೬೦, ೫೫೫, ೫೫೬, ೬೪೬
ರಿಕಾರ್ಡೋ ೩೦, ೩೨೫, ೬೪೯
ರಿಚರ್ಡ್ ೩೬, ೧೨೪, ೧೨೭
ರಿಡೆಂಶನ್ ೩೫
ರಿಪ್ಪನ್ ೩೯೧
ರೂಬೆಲ್ ೬೩೫
ರೆಜಿನಾಲ್ಡ್ ೬೨೬
ರೆಜೀಮ್ ೧೨
ರೆಡಲಿಕ್ ೨೪೦
ರೋತ್ಸ್‌ಚೈಲ್ಡ್ ೪೫೦
ರೋಮನ್ ೨೩೩, ೫೯೭
ರೋಹಿಲರು ೮೩
ರ್ಯಾಫೆಲ್ ೪೫೦

## ಲ

ಲಂಡನ್ ೫೦, ೧೫೩, ೨೦೩, ೨೨೯, ೩೬೭, ೩೮೯, ೩೯೪, ೪೩೯, ೪೪೦, ೪೪೬, ೪೪೮, ೪೪೯, ೪೫೩, ೪೫೭, ೪೫೮, ೪೭೭, ೪೮೩, ೪೮೫, ೪೮೭, ೫೦೩, ೫೦೫, ೫೦೭, ೫೧೨, ೫೧೭, ೫೨೫, ೫೪೮, ೫೫೧, ೫೫೬, ೫೫೭, ೫೫೮, ೫೭೭, ೬೩೦, ೬೪೬
ಲಾಯಿಂಗ್ ೮೮, ೯೨
ಲಾರೆನ್ಸರು ೨೮೨
ಲಾರ್ಡ್‌ಕ್ಯಾನಿಂಗ್ ೨೩೮
ಲಾಹೋರ ೩೦೩
ಲಿಂಡ್ಸೇ ೪೪೭, ೪೪೮, ೪೪೯, ೪೫೦, ೪೫೭, ೪೫೮, ೪೫೯, ೫೨೫, ೫೨೬, ೫೬೧, ೫೭೨
ಲಿಕ್ಕರ್ ೩೮೬
ಲಿಡನ್ ೩೫
ಲಿರಾ ೬೩೫
ಲಿವರ್‌ಪೂಲ್ ೩೨೩, ೩೨೫, ೩೩೯, ೩೯೪, ೪೭೫
ಲುಬ್ಬೋಕ್ ೪೫೦
ಲೆಗ್ರಿಯ ೩೬
ಲೆಜಿಸ್ಲೇಟೀವ್ ೧೧೭
ಲೆವಿ ೩೮೫
ಲೇಂಗ್ ೩೩೭
ಲೈಂಗ್ ೫೭೯, ೫೮೦
ಲೈಕರಗಸ್ ೩೦೬
ಲೈಟ್‌ಷಿಪ್ಸ್ ೧೧೪
ಲೈಟ್‌ಹೌಸ್ ೧೧೪
ಲೈಸನ್ಸನ್ನು ೫೮
ಲೋಯರ್ ೧೬೩, ೧೬೪, ೧೬೬
ಲ್ಯಾಂಕ್‌ಶೈರ್ ೪೦೦, ೪೩೭
ಲ್ಯಾಟಿನ್ ೩೨೨, ೩೬೮, ೩೬೯, ೩೭೦, ೩೮೨, ೪೨೮, ೪೩೪
ಲ್ಯಾಸೆಡೆಮೋನಿಯನ್ನರು ೩೦೬

## ವ

ವಾಲ್ಟರ್ ೪೨೫
ವಿಐಸಿ ೩೮೭
ವಿಕ್ಟೋರಿಯಾ ೧೧, ೪೨, ೧೧೭, ೨೫೭
ವಿನ್‌ಗೇಟ್ ೩೭, ೩೮

ವಿಮೆ ೬೫೭
ವಿಲಿಯಮ್ ೧೦, ೨೭, ೬೦, ೪೧೯, ೫೮೨
ವಿಲ್ಸನ್ ೮೭, ೮೮, ೯೧, ೯೨, ೧೯೯, ೨೮೯, ೩೦೬, ೩೩೭, ೩೩೯, ೩೪೦, ೫೭೯, ೫೮೦, ೬೦೭
ವೀರರಾಯ ೬೯
ವೀರರಾಯಪಣಮ್ ೬೯
ವುಡ್ ೫೮೦
ವೆಚ್ ೫೫೭
ವೆನೆಶಿಯನ್ ೩೧೩
ವೆಲ್ಲೂರು ೨೬
ವೆಲ್ಲೆಸ್ಲಿ ೩೩
ವೆಸ್ಟ್ಇಂಡಿಯನ್ ೩೮
ವೆಸ್ಟೆಡ್ ೬೦
ವೆಸ್ಟ್ಫಲ್ಯಾಂಡ್ ೨೦೭, ೨೦೮, ೫೬೦, ೫೬೧, ೬೧೫, ೬೧೬, ೬೧೭
ವೈಸ್‌ರಾಯ್ ೭೭, ೮೭, ೪೩೫
ವೊಲೋವಸ್ಕಿ ೩೮೦
ವ್ಯಾನ್‌ಬರ್ಗ್ ೩೫೫
ವ್ಯಾರೆನ್ ೬೧೪
ವ್ಯಾಸರಾಯ್ ೯೭

## ಶ

ಶರದೃತು ೩೫೬
ಶರ್ಮಾ ೫೮೨
ಶಹಾ ೩೦೩
ಶಹಾಜಹಾನಿ ೩೦೩
ಶಾಹಿ ೩೦೩
ಶಿರಾಸ್ ೪೯೧
ಶಿಲಿಂಗ್ ೬೨೩, ೬೪೩
ಶೇಕ್ಸ್‌ಪಿಯರ್ ೧೨
ಶ್ರೀಮತಿ ೩೬

## ಷ

ಷಿರಾಸ್ ೫೩೪, ೫೮೩
ಷಿಲಿಂಗ್ ೨೭, ೨೯, ೩೮, ೩೬೬, ೪೨೩, ೪೨೪, ೪೪೦, ೪೪೧, ೪೪೩, ೪೭೭, ೪೮೧, ೪೮೫, ೪೮೭, ೫೩೪, ೫೫೧, ೫೫೭, ೫೬೨, ೫೬೮, ೫೭೨, ೫೭೩, ೫೭೫, ೫೯೬, ೫೯೭, ೬೦೨, ೬೧೧, ೬೧೨, ೬೧೪, ೬೨೦, ೬೨೧, ೬೨೩, ೬೨೪, ೬೨೫, ೬೨೮, ೬೨೯, ೬೩೦, ೬೩೫, ೬೩೮, ೬೪೦, ೬೪೧, ೬೪೨, ೬೪೩, ೬೪೪, ೬೪೬
ಷೆಫೀಲ್ಡ್ ೩೯೪

## ಸ

ಸದ್ದರ್ ೧೧೧
ಸಮ್ನರ್ ೪೬೬
ಸವರನ್ ೩೩೩, ೩೪೦, ೩೪೩, ೩೪೪, ೪೦೧, ೪೦೪, ೪೧೫, ೪೧೬, ೪೧೮, ೪೧೯, ೪೪೨, ೪೪೬, ೪೫೦, ೪೫೧, ೪೫೨, ೪೫೩, ೪೫೪, ೪೫೮, ೪೬೫, ೪೭೭, ೪೭೯, ೪೮೫, ೪೮೭, ೪೯೪, ೪೯೬, ೫೪೮, ೫೫೧, ೫೫೨, ೫೫೫, ೫೬೩, ೫೬೪, ೫೬೫, ೫೬೬
ಸಾಂಭೂರ್ ೧೮
ಸಾದಿಲ್ವಾರು ೧೧೪
ಸಾದ್ವಿಲಾರು ೧೩೨
ಸಾದ್ವಿಲ್ವಾರು ೧೧೧
ಸಾಲ್ಪ್ ೧೫೫
ಸಾಳ್ವಿಯ ೬೫೬
ಸಿಂಧ್ ೧೭
ಸಿಂಧ್‌ಯುದ್ಧ ೩೩
ಸಿಖ್ ೧೪
ಸಿಖ್ಖಯುದ್ಧ ೩೩
ಸಿಡನ್‌ಹ್ಯಾಮ್ ೫೯೯

ಸಿಮ್ಲಾ ೧೨೬, ೨೮೧
ಸಿಲೋನ್ ೩೮
ಸೀಜರನು ೨೩೩
ಸೀರಿಸ್ ೬೦೬
ಸುಪ್ರೀಂ ೧೦, ೧೧, ೧೫೬, ೫೫೨, ೫೫೫, ೫೬೦, ೫೮೨
ಸುಬೇದಾರ್ ೧೩, ೫೪೬
ಸುಲಿವಾನ್ ೨೯
ಸುಲ್ತಾನನು ೨೩೩
ಸೂರತ್ ೩೦೩, ೩೧೦, ೩೧೪
ಸೂರ್ಯನ ೧೭
ಸೆಂಟೆಮ್ಸ್ ೩೨೨
ಸೆನೊರೇಜ್ ೨೦
ಸೆಲಿಗ್ಮನ್ ೫೦, ೫೨, ೨೭೫, ೨೭೬
ಸೇಯರ್ ೧೮
ಸೈಂಟ್ ೧೦
ಸೋನತ್ ೩೦೩
ಸೌಥ್‌ಸೀ ೮
ಸೌರ್‌ಬೆಕ್ ೫೩೬
ಸ್ಕೆಚ್ ೭೭
ಸ್ಕ್ಯಾಂಡಿನೇವಿಯನ್ ೩೬೯
ಸ್ಟ್ರೋಪ್ ೪೮೯
ಸ್ಟರ್ಲಿಂಗ್ ೮೯, ೯೩, ೯೪, ೯೭, ೯೮, ೯೯, ೧೦೦, ೧೦೧, ೧೦೫, ೧೦೭, ೧೨೦, ೩೩೧, ೩೩೯, ೩೬೬, ೩೬೭, ೩೮೪, ೩೮೬, ೩೮೯, ೩೯೧, ೩೯೩, ೪೧೧, ೪೨೩, ೪೪೮, ೪೮೦, ೪೮೪, ೪೮೫, ೪೮೭, ೪೯೧, ೪೯೩, ೪೯೪, ೫೦೫, ೫೧೩, ೫೩೪, ೬೦೩, ೬೨೬, ೬೪೪
ಸ್ಟಾಚ್ಯೂಟ್ ೫೭
ಸ್ಟಾಟಿಸ್ಟಿಕಲ್ ೧೫೫
ಸ್ಟುವರ್ಟ್ ೩೫
ಸ್ಟುವರ್ಟ್‌ಮಿಲ್ ೩೬
ಸ್ಟೆಫೋರ್ಡ್ ೨೮೨
ಸ್ಟೋವೆ ೩೬
ಸ್ಟ್ಯಾಚೂಟ್ ೧೧
ಸ್ಟ್ಯಾಟಿಸ್ಟಿಕಲ್ ೬೧೧
ಸ್ಟ್ಯಾನ್ಲೀ ೩೬, ೪೧
ಸ್ಟ್ರಾಕೋಶ್ ೬೩೦
ಸ್ಟ್ರಾಚ್ ೧೨೦, ೧೨೬, ೧೨೭
ಸ್ನೇಕ್ ೧೧೪
ಸ್ಪಾನಿಷ್ ೫೧೩
ಸ್ಪಿರಿಟ್‌ಗಳು ೧೯೬
ಸ್ಪ್ರಿಂಗ್ ೨೧೩
ಸ್ಮಿತ್ ೨೯, ೬೪, ೪೮೪, ೪೯೧, ೫೩೪
ಸ್ಮಿಥ್ ೪೧೭, ೪೧೯, ೪೨೦, ೪೨೪, ೪೩೮, ೪೩೯, ೪೪೦, ೫೪೬, ೬೪೧
ಸ್ಯಾಮ್ಯೂಯಲ್ ೮೮, ೪೫೦
ಸ್ವಿಟ್ಜರ್‌ಲ್ಯಾಂಡ್ ೫೧, ೫೨, ೩೨೧
ಸ್ವೀಡನ್ ೩೬೯

## ಹ

ಹರ್ನರವರು ೨೯೫
ಹರ್‌ಶ್ಚೆಲ್ ೪೪೧, ೪೪೨
ಹರ್ಷಲ್ ೫೭೧, ೫೭೨, ೫೭೬, ೬೧೭
ಹಸ್ಕಿಸನ್ ೩೨೪, ೪೪೪
ಹಾಟ್‌ರವರು ೪೨೫
ಹಾಟ್ರೆ ೪೭೩
ಹಾರ್ನರ್ ೪೯೯, ೫೩೨
ಹಾರ್ವರ್ಡ್ ೬೦೬, ೬೦೭
ಹಾಲ್ ೩೫
ಹಾಲೆಂಡ್ ೩೨೪, ೩೨೫, ೩೬೯
ಹಾಲ್‌ನಲ್ಲಿಯ ೨೦೮
ಹಿರಾಕಾವ್ ೧೭
ಹಿಲ್ಟನ್ ೫೮೯, ೫೯೧, ೫೯೯

ಹಿಸ್ ೧೧೭, ೧೧೮
ಹಿಸ್ಸೆ ೧೪೮, ೧೫೪, ೧೬೦, ೧೬೪, ೧೬೬, ೧೬೭, ೧೬೮, ೧೭೫, ೧೭೭, ೧೭೮, ೧೭೯, ೧೮೩, ೧೮೪, ೧೮೫, ೨೬೩, ೨೭೭
ಹೀಟಾ ೨೯೯
ಹೀಬರ್ ೨೮
ಹೆಂಡಿಕ್ಸ್ ೨೬
ಹೆಂಡ್ರಿಕ್ಸ್ ೬೯
ಹೆನ್ರಿ ೪೪೯, ೬೩೦
ಹೆಯಿಲಿಬರ್ಗ್ ೧೨
ಹೋಮ್‌ಬಾಂಡ್ ೩೪
ಹೌರಾ ೧೧೧, ೧೧೨, ೧೧೩
ಹೌಸ್‌ಇನ್ ೧೧೭
ಹ್ಯಾಟ್ ೫೭೦
ಹ್ಯಾಮಿಲ್ಟನ್ ೪೫೨
ಹ್ಯಾರಿಸ್ ೩೨೩
ಹ್ಯಾಲಿಫೆಕ್ಸರು ೪೧೬